MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

REEL-20

SWADESHA BHIMANI

CONTD. FROM:

5, JUNE - 1942

D.V.
3.4.80

ESTD SWADESHABHIMANI 1906

[ಸಂಪುಟ 36] ತಾರೀಖು 5—6—1942 [ಸಂಚಿಕೆ 23]

ಮದ್ರಾಸು ಸರಕಾರದ ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮದ್ರಾಸು ಫೋರ್ಟ್ ಸೈಂಟ್ ಜೋರ್ಜ್ ಗಜೇಟು ನಂಬ್ರ 22 A. Part I & Part II (2--6--1942)

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟದ್ದು.

ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡ್ಪಿ.

		ಗಜೇಟು ಪುಟ Part II
Iನೇ ಫೋರ್ಮಿಗೆ	0—12—0	75
IIನೇ ಫೋರ್ಮಿಗೆ	0—12—0	75

ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಬಿ. ಭವಾನಿರಾವ್ ಬಿ. ಎ. ಎಲ್. ಟಿ.

IIIನೇ ಫೋರ್ಮಿಗೆ 0—12—0 ಗಜೇಟು ಪುಟ 75

ಬಾಲಕರ ಲಘುಗಣಿತ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ.

ಬಿ ಭವಾನಿರಾವ್, ಬಿ. ಎ, ಎಲ್. ಟಿ.

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I	II
ನಾಲ್ಕನೇ ದರ್ಜೆಗೆ	0—7—0	61	75
ಐದನೇ ದರ್ಜೆಗೆ	0—8—0	61	75

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ (Dip. Geog)

ಗಣಪತಿ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I
ನಾಲ್ಕನೇ ದರ್ಜೆಗೆ	0—6—0	50
ಐದನೇ ದರ್ಜೆಗೆ	0—7—0	50

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ.

ಬೋರ್ಡ್ ಹ್ಯಾಸ್ಕೂಲ್, ಕಾರ್ಕಳ.

		ಗಜೇಟು ಪುಟ Part I
ಆರನೇ ದರ್ಜೆಗೆ	0—6—0	69
ಏಳನೇ ದರ್ಜೆಗೆ	0—6—0	69
ಎಂಟನೇ ದರ್ಜೆಗೆ	0—6—0	68

ವ್ಯಾಕರಣ ಮತ್ತು ಪ್ರಬಂಧ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ

ಕೆ. ಕೆ. ರೈ ವಿದ್ವಾನ್. ಗಜೇಟು ಪುಟ

		Part I	II
4 ಮತ್ತು 5ನೇ ದರ್ಜೆಗೆ	0—2—0	112	140
ಆರನೇ ದರ್ಜೆಗೆ ಅಥವಾ I ಫೋರ್ಮಿಗೆ	0—3—0	113	140
ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ	0—3—6	113	140
ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ	0—4—0	113	140

ಮಕ್ಕಳ ಪದ್ಯಮಂಜರಿ

ಕೆ ಕೆ. ರೈ ವಿದ್ವಾನ್

		ಗಜೇಟು ಪುಟ Part I
ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ	0-2-0	111
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ	0-2-6	111

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್

		ಗಜೇಟು ಪುಟ Part I
ಮೂರನೇ ದರ್ಜೆಗೆ	0—1—6	41
ನಾಲ್ಕನೇ ದರ್ಜೆಗೆ	0—2—0	41
ಐದನೇ ದರ್ಜೆಗೆ	0—2—6	41

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ರೈ ವಿದ್ವಾನ್

ಆರನೇ ದರ್ಜೆಗೆ	0—3—0	42
ಏಳನೇ ದರ್ಜೆಗೆ	0—3—0	42
ಎಂಟನೇ ದರ್ಜೆಗೆ	0—3—0	42

ಚರಿತ್ರೆ ಮತ್ತು ಕಥೆಗಳು

		ಗಜೇಟು ಪುಟ Part I
ಮೂರನೇ ದರ್ಜೆಗೆ	0—2—6	
ನಾಲ್ಕನೇ ದರ್ಜೆಗೆ	0—3—0	54

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್, ಎಂ. ಎ ಎಲ್ ಟಿ

ಗಣಪತಿ ಹೈಸ್ಕೂಲ್, ಮಂಗಳೂರು

	ಕ್ಲಾಸ್ ಲ್ಯಾಬ್ರೆರಿ	ಗಜೇಟು ಪುಟ
ನಾಲ್ಕನೇ ದರ್ಜೆಗೆ	0—3—0	72
ಐದನೇ ದರ್ಜೆಗೆ	0—3—6	72

ಐದನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರ

ಎಮ್. ವಾಸುದೇವರಾವ್, ಎಂ. ಎ ಎಲ್. ಟಿ. (Dip. Geog)

II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

KANNADA ILLUSTRATED WEEKLY

ಗಾಂಧಿಜೀ, ಇನ್ನೊಂದು ಆಂದೋಲನ ಆರಂಭಿಸುತ್ತೀರಾ?

‘ಅಂಥಾ ಹಲವು ವಿಚಾರ ನನ್ನ ತಲೆಯಲ್ಲಿದೆ’

— ಸುದ್ದಿಗಾರನೊಡನೆ ಗಾಂಧಿಜಿ ಹೇಳಿದರು —

‘ನೀವು ಒಂದು ಹೊಸ ರಾಜಕೀಯ ಆಂದೋಲನವನ್ನು ಪ್ರಾರಂಭಿಸಲಿರುವರೆಂದು ಸುದ್ದಿಯಿದೆ. ಇದು ನಿಜವೆ? ನಿಜವಿದ್ದರೆ ನಿಮ್ಮ ಕಾರ್ಯಕ್ರಮವೇನು?’ ಎಂದು ಪತ್ರಿಕಾ ವರದಿಗಾರನು ಕೇಳಲು ಗಾಂಧಿಜಿ ಹೀಗೆ ಹೇಳಿದರು —

‘ನಾನು ಯಾವ ಕೆಲಸವನ್ನೂ ಗುಪ್ತವಾಗಿ ಮಾಡಿಲ್ಲ ಈಗಲಾದರೂ ಮಾಡುವುದಿಲ್ಲ. ನನ್ನ ತಲೆಯಲ್ಲಿ ಎಷ್ಟೋ ಯೋಜನೆಗಳಿವೆ. ಸದ್ಯಕ್ಕೆ ಅವು ಇನ್ನೂ ತಲೆಯಲ್ಲಿಯೇ ಇರುವುವು ಮೊದಲು ನಾನು ಹಿಂದುಸ್ಥಾನದ ಮತ್ತು ಜಗತ್ತಿನ ಜನರ ಅಭಿಪ್ರಾಯವನ್ನು ನನ್ನ ಕಡೆಗೆ ಒಲಿಸಿಕೊಳ್ಳಬೇಕಾಗಿದೆ. ಈ ಕೆಲಸವು ನನ್ನ ಮನಸ್ಸಿಗೆ ಸಮಾಧಾನವಾಗುವಂತೆ ಆದರೆ ಆ ಮೇಲೆ ನಾನು ಏನಾದರೂ ಅಲ್ಪಕಾರ್ಯ ಮಾಡಬಹುದು ಕಾಂಗ್ರೆಸ್ಸು ಮತ್ತು ಜನತೆಯು ಇದಕ್ಕೆ ಬೆಂಬಲಕೊಟ್ಟರೆ, ಈ ‘ಅಲ್ಪಕಾರ್ಯ’ವೇ ಮಹತ್ಕಾರ್ಯವಾಗಬಹುದು

‘ನಾನು ಈ ಕಾರ್ಯವನ್ನು ಮಾಡುವ ಮೊದಲು ಅದರ ಸಂಪೂರ್ಣ ಮಾಹಿತಿಯನ್ನು ಬ್ರಿಟಿಷ್ ಅಧಿಕಾರಿಗಳಿಗೆ ಮೊದಲೇ ತಿಳಿಸುವೆನು ಆದರೆ ನಾನಿನ್ನೂ ಕಾಂಗ್ರೆಸ್ ಅಧ್ಯಕ್ಷರನ್ನು ನೋಡಬೇಕಾಗಿದೆ. ಜವಾಹರಲಾಲರೊಡನೆ ಸಹ ನನ್ನ ಮಾತುಕತೆ ಮುಗಿದಿಲ್ಲ ಸ್ನೇಹಮಯವಾದ ವಾತಾವರಣದಲ್ಲಿ ನಾವಿಬ್ಬರೂ ಚರ್ಚೆ ಮಾಡಿದೆವಲ್ಲದೆ ನಮ್ಮ ಅಭಿಪ್ರಾಯಗಳು ಬಹಳ ಮಟ್ಟಿಗೆ ಒಂದಾದವು ನನ್ನ ಸ್ವಾತಂತ್ರ್ಯದ ಕಲ್ಪನೆಯು ಸಂಕುಚಿತವಿರುವದಿಲ್ಲ ಆದರೆ ಕಾಂಗ್ರೆಸ್ಸು ಮತ್ತು ಇಡೀ ಹಿಂದುಸ್ಥಾನದ ಬೆಂಬಲ ಪಡೆಯಬೇಕೆಂದು ನನ್ನ ಅಭಿಪ್ರಾಯವಿರುವದು ಆದ್ದರಿಂದ ಪೂರ್ಣ ವಿಚಾರ ಮಾಡದೆ ನಾನು ಏನನ್ನೂ ಮಾಡುವದಿಲ್ಲ

“ಚೀನದ ಮಿತ್ರರೆಂದು ತಾವು ಹಿಂದೆ ಸಾರಿಲ್ಲವೆ? ತಮ್ಮ ಈಗಿನ ನೀತಿಯು ಅದಕ್ಕೆ ವಿರುದ್ಧವಾಗಿಲ್ಲವೆ? ಎಂದು ಗಾಂಧಿಯವರನ್ನು ಕೇಳಲಾಗಿ ಅದಕ್ಕೆ ಅವರು ಹೀಗೆಂದರು

‘ನಾನು ಈಗಲೂ ಚೀನದ ಆಪ್ತಮಿತ್ರನು ಸ್ವಾತಂತ್ರ್ಯದ ನಷ್ಟವೆಂದರೇನೆಂಬುದು ನನಗೆ ಗೊತ್ತು ಆದ್ದರಿಂದ ದುಃಖದಲ್ಲಿ ಮುಳುಗಿರುವ ನನ್ನ ನೆರೆಹೊರೆಯ ಚೀನದೊಂದಿಗೆ ಸಹಾನುಭೂತಿಯುತನಾಗಿರದೆ ಅನ್ಯ ಮಾರ್ಗವಿಲ್ಲ ಹಿಂಸೆಯಲ್ಲಿ ನನಗೆ ನಂಬಿಕೆ ಇದ್ದುದೇ ಆಗಿದ್ದರೆ ಜನ್ನ ಪ್ರಭಾವ ಭಾರತೀಯರ ಮೇಲೆ ಇರುವುದೇ ಆಗಿದ್ದರೆ ಚೀನದ ಸ್ವಾತಂತ್ರ್ಯ ರಕ್ಷಣೆಗಾಗಿ ನನ್ನ ಕೈಲಾದ ಸಹಾಯವನ್ನು ಕೊಡಲು ಶ್ರಮಪಡುತ್ತಿದ್ದೆ ಬ್ರಿಟಿಷರು ಹಿಂದುಸ್ಥಾನವನ್ನು ಬಿಟ್ಟು ಹೋಗಬೇಕೆಂದು ಸೂಚಿಸುತ್ತಿರುವಾಗ ಚೀನದ ಪರಿಸ್ಥಿತಿಯನ್ನು ನಾನು ಮರೆತಿಲ್ಲ ಚೀನದ ವಿಷಯವು ನನ್ನ ತಲೆಯಲ್ಲಿ ಇರುವುದರಿಂದಲೇ ಅದಕ್ಕೆ ಭಾರತವು ಏನಾದರೂ ಪರಿಣಾಮಕಾರಿಯಾದ ಸಹಾಯ ನೀಡಬೇಕಾದರೆ ಗ್ರೇಟ್ ಬ್ರಿಟನು ಭಾರತವನ್ನು ಸ್ವತಂತ್ರ ಮಾಡಬೇಕು ಹಾಗೆ ಸ್ವತಂತ್ರವಾದ ಭಾರತವೇ ಯುದ್ಧದಲ್ಲಿ ಸಂಪೂರ್ಣ ಭಾಗಿಯಾಗಬಲ್ಲದು ಪಾರತಂತ್ರ್ಯಕ್ಕೊಳಗಾದ ಭಾರತಕ್ಕಿಂತ ಸ್ವತಂತ್ರ ಭಾರತವು ಮಾನವ ಕುಲದ ಹಿತದೃಷ್ಟಿಯಿಂದ ಅತ್ಯಂತ ಬಲಶಾಲಿಯಾದ ರಾಷ್ಟ್ರವಾಗುವುದು ’

‘ನಾನು ಜಪಾನರ ಪರ ಇರುವೆನೆಂದು ಲಾಹೋರ್ ಮತ್ತು ಡಿಲ್ಲಿಯ ಜನರು ಮಾತಾಡಿಕೊಳ್ಳುತ್ತಿರುವುದಾಗಿ ನೆಹರುಗಳು ನನಗೆ ಹೇಳಿದರು ಆ ಮಾತನ್ನು ಕೇಳಿ ನನಗೆ ನಗು ಬರುತ್ತದೆ ನನ್ನ ಸ್ವಾತಂತ್ರ್ಯಪ್ರೇಮವು ನಿರ್ವ್ಯಾಜವಾದದ್ದೇ ಆದರೆ ತಿಳಿದೇ ಆಗಲಿ ಅಥವಾ ತಿಳಿಯದೆ ಆಗಲಿ ನಾನು ಭಾರತದ ಆಡಳಿತವನ್ನು ಒಬ್ಬರ ಕೈಯಿಂದ ಮತ್ತೊಬ್ಬರ ಕೈಗೆ ಬದಲಾಯಿಸುವಂತಹ ಕಾರ್ಯವನ್ನು ಮಾಡಲಿಕ್ಕಿಲ್ಲ ಜಪಾನರ ಭೀತಿ ಭಾರತಕ್ಕೆ ಇದೆಯೆಂದು ನಾನು ಈ ಮೊದಲೆ ಒಪ್ಪಿಕೊಂಡಿದ್ದೇನೆ. ನನ್ನ ಸರ್ವ ಪ್ರಯತ್ನಗಳಿಗೂ ಮೀರಿ ಜಪಾನರಿಂದೇನಾದರೂ ಹಾನಿ ಸಂಭವಿಸಿದಲ್ಲಿ ಆ ಹೊಣೆ ಬ್ರಿಟಿಷರಿಗೆ ಸೇರುತ್ತದೆ ಇದರಲ್ಲಿ ನನಗೇನೂ ಸಂದೇಹವಿಲ್ಲ ಬ್ರಿಟಿಷರಿಗೆ ಅಥವಾ ಚೀನರ ಹಿತಕ್ಕೆ ಧಕ್ಕೆಯಾಗುವಂತಹ ಒಂದು ಸೂಚನೆಯನ್ನೂ ನಾನು ಇದುವರೆಗೆ ಮಾಡಿಲ್ಲ ಚೀನದೊಡನೆ ಕೂಡಿಕೊಂಡು ಈ ಯುದ್ಧವನ್ನು ನಡೆಸುವುದಕ್ಕೆ ಹಿಂದುಸ್ಥಾನಕ್ಕೆ ಅವಕಾಶ ಸಿಗಲಿಲ್ಲವೆಂಬುದು ಸ್ಪಷ್ಟವಾಗಿದೆ ಬ್ರಿಟಿಷರು ಹಿಂದುಸ್ಥಾನದಿಂದ ತೆರಳಿದರೆ ಹಿಂದುಸ್ಥಾನದಲ್ಲಿ ಶಾಂತಿರಕ್ಷಣೆ ಮಾಡುವ ಜವಾಬ್ದಾರಿಯಿಂದ ಅವರು ಹೋದಂತಾಗುವುದು, ಇಷ್ಟೇ ಅಲ್ಲ, ಸ್ವತಂತ್ರ ಹಿಂದುಸ್ಥಾನದ ಸಹಾಯವೂ ಅವರಿಗೆ ಸಿಗುವುದು.’ ಸಾಮ್ರಾಜ್ಯ ಕಾರ್ಯಕ್ಕೆ ಸಹಾಯ ಸಿಗಲಿಕ್ಕಿಲ್ಲ ಯಾಕಂದರೆ ಬ್ರಿಟಿಷರು ಅಷ್ಟು ಹೊತ್ತಿಗೆ ಸಾಮ್ರಾಜ್ಯವನ್ನೆಲ್ಲ ತ್ಯಾಗಮಾಡಿರುವರು ಆದರೆ ನಿಜವಾದ ಮಾನವ ಸ್ವಾತಂತ್ರ್ಯದ ಸಂರಕ್ಷಣೆಗೆ ಹಿಂದುಸ್ಥಾನದಿಂದ ಸಹಾಯ ಸಿಗುವುದು ಇದೇ ಉದ್ದೇಶದಿಂದಲೇ ನಾನು ಇತ್ತೀಚೆಗೆ ಈ ವಿಷಯವನ್ನು ಕುರಿತು ಲೇಖಗಳನ್ನು ಬರೆಯುತ್ತಿದ್ದೇನೆ’

ಮಹಾತ್ಮರು ಸುಮ್ಮನಿರುವುದು ಸಾಧ್ಯವಿಲ್ಲ

ಸರಕಾರಕ್ಕೆ ನೆಹರುಗಳ ಎಚ್ಚರಿಕೆ

ಪಂಡಿತ ನೆಹರು, ಝಾಂಶಿಯಲ್ಲಿ ಒಂದು ಭಾಷಣ ಮಾಡುತ್ತಾ, ಬ್ರಿಟಿಷ್ ಸರಕಾರದೊಡನೆ ಬೇಕೆಂದೇ ಜಗಳ ತೆಗೆದು, ಸತ್ಯಾಗ್ರಹ ಹೂಡಬೇಕೆಂದು ಕಾಂಗ್ರೆಸಿಗಾಗಲಿ ಮಹಾತ್ಮ ಗಾಂಧಿಯವರಿಗಾಗಲಿ ಇಚ್ಛೆಯಿಲ್ಲವೆಂದು ತಿಳಿಸಿ, ಸರಕಾರದ ಧೋರಣವು ಉಗ್ರವಾಗುತ್ತಿರುವುದನ್ನು ನೋಡಿದರೆ ಮಹಾತ್ಮರು ಸುಮ್ಮನಿರಲಾರರೆಂದು ಎಚ್ಚರವಿತ್ತಿದ್ದಾರೆ ‘ಸರಕಾರದವರು ಪ್ರಾಂತಗಳಲ್ಲಿ ದಬ್ಬಾಳಿಕೆ ಪ್ರಾರಂಭಿಸಿದರೆ ನಾವದನ್ನು ಎದುರಿಸಲೇ ಬೇಕಾಗುವುದು, ನಮ್ಮ ಜನರ ಮನೋದಾರ್ಢ್ಯವನ್ನು ಕುಗ್ಗಿಸಲು ನಾವೆಂದಿಗೂ ಆಸ್ಪದ ಕೊಡುವುದಿಲ್ಲ ಅಂತರಿಕ ಶಾಂತಿಯನ್ನು ಈಗ ರಕ್ಷಿಸಬೇಕಾಗಿದೆ ಸದ್ಯದ ಪರಿಸ್ಥಿತಿಯಲ್ಲಿ ಅಹಿಂಸಾ ಅಸಹಕಾರವೊಂದೇ ಉಪಾಯ ಎಂದು ಹೇಳಿದರು

ಈ ಯುದ್ಧವು ನಮ್ಮದೆಂದು ಮಾಡಿರಿ ಧೈರ್ಯದಿಂದ ಹೋರಾಡುವೆವು

ನೆಹರು ವಾಣಿ

ಈ ಯುದ್ಧವು ತಮ್ಮದೆಂದೂ, ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೂಡಲ್ಪಟ್ಟಿರುವುದೆಂದೂ ಭಾರತೀಯರಿಗೆ ಮನಗಾಣಿಸಿಕೊಟ್ಟರೆ, ರಶ್ಯ, ಚೀನ, ಅಮೆರಿಕಗಳ ಜನರಂತೆ ಭಾರತೀಯರಾದರೂ ಪ್ರಜಾಪ್ರಭುತ್ವದ ಸಲುವಾಗಿ ಸರ್ವಶಕ್ತಿಯಿಂದ ಹೋರಾಡುವರೆಂದೂ ಲಖನೌದಲ್ಲಿ ನೆಹರು ಭಾಷಣ ಮಾಡುತ್ತಾ ಹೇಳಿದರು ನೆಹರು ಮುಂದುವರಿಸುತ್ತಾ ಅದರ ಪರಿಸ್ಥಿತಿಯಲ್ಲಿ ರಾಷ್ಟ್ರಕ್ಕಾಗಿ ಹೋರಾಡಲು ಪ್ರತಿಯೊರ್ವ ಸ್ತ್ರೀಪುರುಷರೂ, ಮಗುವೂ ಮುಂದೆ ಬರುವುದು ಗಂಡಾಂತರ ಪರಿಸ್ಥಿತಿಯೊಗ ಬಂದಿದ್ದರೂ, ಭಾರತೀಯರ ಕೈಗೆ ಶಸ್ತ್ರಕೊಡಲು ಬ್ರಿಟಿಷ್ ಸರಕಾರ ಒಪ್ಪುವುದಿಲ್ಲ ಅವರ ವಿಶ್ವಾಸ ಗಳಿಸಲು ಯತ್ನಿಸುವುದಿಲ್ಲ ೧೯ನೇ ಶತಮಾನದ ಬ್ರಿಟಿಷರ ಬುದ್ಧಿಯು ೨೦ ಶತಮಾನಕ್ಕೆ ಹೊಂದಿಕೊಳ್ಳಲಾರದಾಗಿದೆ’ ಎಂದರು.

HALFTONE & LINE
BLOCK MAKING
UNDERTAKEN
Sharada Press,
MANGALORE

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದ. ಶ್ರೀ ಸ್ವಾಮಿ ಪ್ರಣವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಹೀಗೆ ಹೇಳಿಯೇ ಭಗವತ್ ಪ್ರಸಂಗವನ್ನೆತ್ತಿ ನಾನಾ ಉಪದೇಶಗಳನ್ನೂ ಹೇಳತೊಡಗಿದರು. ಸ್ತ್ರೀ ಭಕ್ತರೂ ಕೂಡ ಸ್ತ್ರೀ ಪುರುಷ ಭೇದವನ್ನು ಮರೆತು ನಿಸ್ಸಂಕೋಚವಾಗಿ ಪ್ರಶ್ನೆ ಕೇಳಲೂ, ಅವರ ಉಪದೇಶಗಳನ್ನು ಗ್ರಹಿಸಲೂ ಮನಸ್ಸು ಕೊಟ್ಟರು. ಬಹಳ ಹೊತ್ತಿನ ತನಕ ಮಾತನಾಡಿ ಮನೆಗೆ ಹೊರಟುಹೋಗುವಾಗ ಶ್ರೀ ಪರಮಹಂಸರು ಅವರನ್ನು ಕುರಿತು ಹೀಗೆಂದರು.— ಏಳು ದಿನಕ್ಕೊಮ್ಮೆ ಒಂದು ಸಲವಾದರೂ ಇಲ್ಲಿ ಬರಬೇಕು ಹೊಸಹೊಸತಾಗಿ ಬರುವವರು, ಇಲ್ಲಿ ಆಗಾಗ ಬರುತ್ತಾ ಹೋಗಬೇಕು ಸದ್ವಂಶದವರಾದರೂ ಬಡವರಾದುದರಿಂದ ದೋಣಿ ಅಥವಾ ಗಾಡಿ ಬಾಡಿಗೆಗೆ ಹಣ ಖರ್ಚು ಮಾಡಲು ಅನಾನುಕೂಲವೆಂದೆಣಿಸಿ ಶ್ರೀ ಪರಮಹಂಸರು ಪುನಃ—‘ಬರುವಾಗ ಮೂರು ನಾಲ್ಕು ಜನರು ಕೂಡಿ ದೋಣಿಮಾಡಿ ಬರಬಹುದು ಇಲ್ಲಿಂದ ಮನೆಗೆ ಹೋಗುವಾಗ ವರಾಹನಗರದ ತನಕ ಕಾಲ್ನಡೆಯಿಂದ ಹೋಗಿ ಅಲ್ಲಿಂದ ಗಾಡಿ ಬಾಡಿಗೆಗೆ ಮಾಡಿಕೊಂಡು ಹೋಗಬಹುದು ಎಂದು ಹೇಳಿದರು. ಸ್ತ್ರೀ ಭಕ್ತರು ಅಂದಿನಿಂದ ಹಾಗೆಯೇ ಮಾಡಲಾರಂಭಿಸಿದರು

೨ನೇ ದೃಷ್ಟಾಂತ

ಒಂದು ದಿನ ಇನ್ನೊಬ್ಬಳು ನಮಗೆ ಹೀಗೆಂದು ಹೇಳುತ್ತಿದ್ದಳು —‘ಭೋಲಾನಾಥರ ಮಿಠಾಯಿ ಅಂಗಡಿಯಲ್ಲಿ ಒಳ್ಳೆ ಹಾಲುಕೆನೆ ಮಾಡಿದ್ದರು ಶ್ರೀಪರಮಹಂಸರು ಹಾಲುಕೆನೆ ತಿನ್ನಲು ಪ್ರೀತಿಸುತ್ತಿದ್ದರೆಂದು ತಿಳಿದಿತು ಆದ್ದರಿಂದ ಒಂದು ದೊಡ್ಡ ಮಣ್ಣಿನ ಮಡಕೆ ತುಂಬಾ ಹಾಲುಕೆನೆ ಕೊಂಡುಕೊಂಡು ನಾವು ಒಂದು ದೋಣಿ ಹತ್ತಿ ದಕ್ಷಿಣೇಶ್ವರಕ್ಕೆ ಬಂದೆವು ಆದರೆ ಶ್ರೀ ಪರಮಹಂಸರು ಆ ದಿನ ಕಲ್ಕತ್ತೆಗೆ ಹೋಗಿದ್ದರೆಂದು ಕೇಳಿದೆವು ಎಲ್ಲರೂ ಸ್ವಲ್ಪ ಹೊತ್ತು ಕುಳಿತುಕೊಂಡಿದ್ದೆವು—ಇನ್ನು ಮಾಡುವುದೇನು ಅಲ್ಲಿ ಶ್ರೀರಾಮಕೃಷ್ಣ ದೇವರ ಸಹೋದರ ಪುತ್ರ ‘ರಾಮಲಾಲದಾದಾ ಇದ್ದರು ಅವರೊಡನೆಕೇಳಲು, ಶ್ರೀ ಪರಮಹಂಸರು ಕಂಬುಲಿ ಟೋಲಿಯಲ್ಲಿ ಮಾಸ್ಟರ್ ಮಹಾಶಯರ ಮನೆಗೆ ಹೋಗಿದ್ದಾರೆಂದು ಹೇಳಿದರು ಇದನ್ನು ಕೇಳಿ, ಅ—ನ ತಾಯಿಯು ತನಗೆ ಆ ಮನೆ ಗೊತ್ತುಂಟೆಂದೂ ತನ್ನ ತವರು ಮನೆಯು ಹತ್ತಿರವೆಂದೂ ಹೇಳಿದಳು ಇಲ್ಲಿದ್ದು ಇನ್ನು ಮಾಡುವುದೇನೆಂದು ಹೇಳಿ, ಎಲ್ಲರೂ ಅಲ್ಲಿ ಹೋಗಲು ಸಮ್ಮತಿಸಿದರು ಹಾಲುಕೆನೆಯ ಮಡಕೆ ರಾಮಲಾಲ್ ದಾದಾರವರ ಕೈಯಾ ಕೊಟ್ಟು ಶ್ರೀ ಪರಮಹಂಸರಿಗೆ ಕೊಡಲು ಹೇಳಿಹೋದೆವು ದೋಣಿಯವನನ್ನು ಕಳುಹಿಸಿಕೊಟ್ಟಿದ್ದೆವು ಆದ್ದರಿಂದ ಕಾಲ್ನಡೆಯಿಂದಲೇ ಹೋದೆವು ಆದರೆ ಶ್ರೀ ದೇವರ ಇಚ್ಛೆಯಿಂದ ಆಲಂಬಜಾರಿನಲ್ಲಿ ಒಂದು ಕಲ್ಕತ್ತೆಗೆ ಹೋಗುವ ಖಾಲಿಗಾಡಿ ಸಿಕ್ಕಿತು ಅದರಲ್ಲಿ ಕುಳಿತು ಶ್ಯಾಮ್ ಬಜಾರಿಗೆ ಹೋದೆವು ಅಲ್ಲಿಗೆ ಹೋಗಿಯೂ ಕೂಡ ಮನೆಯು ಸಿಕ್ಕಲಿಲ್ಲ ಅ—ನ ತಾಯಿಗೆ ಮನೆ ಗುರುತು ಸಿಕ್ಕಲಿಲ್ಲ ಕೊನೆಗೆ ಅವಳ ತವರು ಮನೆಯ ಹತ್ತಿರ ಗಾಡಿ ನಿಲ್ಲಿಸಿ ಒಬ್ಬ ಚಾಕರನನ್ನು ಕರೆದುಕೊಂಡು ಆ ಮನೆಯ ಗುರುತು ಹಿಡಿದೆವು ಅ—ನ ತಾಯಿಯ ದೋಷವೇನೂ ಇಲ್ಲ ಅವಳು ನಮಗಿಂತ ಮೂರು ನಾಲ್ಕು ವರ್ಷಕ್ಕೆ ಚಿಕ್ಕವಳು ಅವಳಿಗೆ ಆಗ—ಇಪ್ಪತ್ತಾರು ಇಪ್ಪತ್ತೇಳು ವರ್ಷ ವಯಸ್ಸು ಯೌವನಸ್ಥಳು—ಅವಳಿಗೆ ಮನೆಯಿಂದ ಹೊರಗೆ ಹೋಗುವ ಅಭ್ಯಾಸ ಇದ್ದಿಲ್ಲ. ಒಂದು ಗಲ್ಲಿಯೊಳಗೆ ಆ ಮನೆ—ಅವಳು ಗುರುತು ಹಿಡಿಯುವುದಾದರೂ ಹೇಗೆ?

“ಹೇಗಾದರೂ ತಲ್ಪಿದೆವು ಆಗ ಮಾಸ್ಟರ್ ಮಹಾಶಯರ ಮನೆಯವರ ಪರಿಚಯವೂ ಇರಲಿಲ್ಲ ಮನೆಹೊಕ್ಕುನೋಡಿದಾಗ ಶ್ರೀ ಪರಮಹಂಸರೊಬ್ಬರೇ ಒಂದು ಸಣ್ಣ ಮಂಚದ ಮೇಲೆ ಕುಳಿತಿದ್ದಾರೆ ಹತ್ತಿರ ಯಾರೂ ಇರಲಿಲ್ಲ ನಮ್ಮನ್ನು ನೋಡಿಯೇ ನಕ್ಕು ‘ನೀವೆಲ್ಲ ಇಲ್ಲಿ ಹೇಗೆ ಬಂದಿರಿ ಅಮ್ಮಾ? ಎಂದು ಕೇಳಿದರು. ನಾವು ಅವರಿಗೆ ಪ್ರಣಾಮ ಮಾಡಿ ನಡೆದ ಸಂಗತಿಯನ್ನೆಲ್ಲ ಹೇಳಿದೆವು. ಅವರಿಗೆ ಬಹಳ ಸಂತೋಷವಾಯಿತು. ನಮ್ಮನ್ನು ಕೂರಲು ಹೇಳಿದರು, ಮತ್ತು ನಮ್ಮೊಡನೆ ಬಹಳ ಆಲಾಪಿಸಿದರು ಅವರು ಹೆಂಗಸ ಮುಟ್ಟಲೂ ಅಥವಾ ಹತ್ತಿರ ಕೂತುಕೊಳ್ಳಲೂ ಬಿಡುತ್ತಿದ್ದಿಲ್ಲವೆಂದು ಕೆಲವರು ಹೇಳುತ್ತಾರೆ ಇವರ ಮಾತನ್ನು ಕೇಳಿ ನಮಗೆ ನಗೆ ಬರುತ್ತಿತ್ತು, ನಾವು ಈಗಲೂ ಜೀವಿಸಿದ್ದೇವೆ ಅವರು ಮಾಡುವುದನ್ನೂ ನಾವು ಸ್ವತಃ ಕಂಡಿದ್ದೇವೆ ಅವರ ದಯೆ ಅಪಾರವಾಗಿತ್ತು. ಯಾರು ತಾನೆ ತಿಳಿಯಬಲ್ಲರು! ಸ್ತ್ರೀ ಪುರುಷರಲ್ಲಿ ಅವರಿಗೆ ಸಮಾನಭಾವ! ಪರಂತು ಹೆಂಗುಸರ ಸಹವಾಸದಲ್ಲಿ ಅವರು ಬಹಳ ಹೊತ್ತು ಇರುತ್ತಿದ್ದಿಲ್ಲ ಹೆಚ್ಚು ಹೊತ್ತು ಇರುತ್ತಿದ್ದರೆ ‘ಈಗ ನೀವು ಮಂದಿರಕ್ಕೆ ಹೋಗಿ ದೇವರ ದರ್ಶನ ಮಾಡಿ ಬನ್ನಿ’ ಎಂದು ಹೇಳುತ್ತಿದ್ದರು ಗಂಡಸರಿಗೂ ಹೀಗೆ ಹೇಳುತ್ತಿದ್ದುದನ್ನು ನಾವು ಕೇಳಿದ್ದೇವೆ

‘ಅದಂತಿರಲಿ ನಾವು ಕುಳಿತುಕೊಂಡು ಅವರ ಮಾತನ್ನು ಕೇಳುತ್ತಿದ್ದೆವು ನಮ್ಮಲ್ಲಿ ಇಬ್ಬರು ಸ್ವಲ್ಪ ಹೆಚ್ಚು ವಯಸ್ಸಿನವರು ಬಾಗಿಲ ಮುಂದೆಯೇ ಕೂತಿದ್ದರು, ನಾವು ಮೂವರೂ ಕೋಣೆಯೊಳಗೆ ಒಂದು ಪಕ್ಕದಲ್ಲಿ ಕುಳಿತಿದ್ದೆವು ಅಷ್ಟರಲ್ಲಿ ಪ್ರಾಣಕೃಷ್ಣ ಮುಖೋಪಾಧ್ಯಾಯರು (ಶ್ರೀ ರಾಮಕೃಷ್ಣ ದೇವರು ಅವರಿಗೆ ‘ಘೋಟ ಬ್ರಾಹ್ಮಣ ಎಂದು ಕರೆಯುತ್ತಿದ್ದರು) ಅಲ್ಲಿ ಬಂದರು ಎಲ್ಲಿಗೆ ಹೋಗಲಿ? ಹೊರಗೆ ಹೋಗಲೂ ಉಪಾಯವಿಲ್ಲ ಮುದುಕಿಯರು ಬಾಗಿಲ ಮುಂದೆಯೇ ಒಂದು ಕಿಟಕಿಯಿತ್ತು, ಅದರ ಮೇಲೆ ಕುಳಿತರು ನಾವು ಮೂವರೂ ಶ್ರೀ ಪರಮಹಂಸರು ಕೂರಿದ ಮಂಚದ ಕೆಳಗೆ ನುಗ್ಗಿ ಅಡ್ಡವಾಗಿ ಮಲಗಿದೆವು. ಸೊಳ್ಳೆಕಚ್ಚಿ ಮೈಯೆಲ್ಲಾ ಉಬ್ಬಿತು ಅಲ್ಲಾಡಲು ಉಪಾಯವಿಲ್ಲ, ಮಾಡುವುದೇನು, ಅಲ್ಲಿಯೇ ಬಿದ್ದುಬಿಟ್ಟೆವು ಬ್ರಾಹ್ಮಣ ಭಕ್ತರು ಮಾತನಾಡಿ ಸುಮಾರು ಒಂದು ಗಂಟೆಯ ಮೇಲೆ ಹೊರಟು ಹೋದರು ಆಗ ನಾವು ಕೂಡ ಹೊರಗೆ ಬಂದೆವು ಮತ್ತು ನೆಗಾಡಿದೆವು

ಕೆಮ್ಮು ಎದೆನೋವು ಮತ್ತು ಗಂಟಲು ಬೇನೆಗಳಿಗೆ
ಉತ್ತಮವಾದ ಶ್ವಾಸಯೋಗ್ಯ ಚಿಕಿತ್ಸೆ ಪೆಪ್ಸ ಶ್ವಾಸಯೋಗ್ಯ ಬಿಲ್ಲೆಗಳನ್ನು ಸೇವಿಸಿರಿ.
ಪೆಪ್ಸ ನಿಮ್ಮ ಬಾಯಲ್ಲಿ ಕರಗಿ, ಅದರ ಅಮೂಲ್ಯ ಔಷಧಿಯ ಸಾರಗಳು ಗಂಟಲುರಿಯನ್ನು ಉಪಶಮನಗೊಳಿಸಿ, ಶ್ವಾಸನಾಳಗನ್ನು ಸಂಪಡಿಸಿ, ನೆಗಡಿ ಮತ್ತು ಇನ್ಫ್ಲುಯೆಂಜಾ ಉಂಟುಮಾಡುವ ವಿಷಾಣುಗಳನ್ನು ನಾಶಪಡಿಸುತ್ತದೆ. ಕ್ರಯ ಒಂದು ರೂಪಾಯಿ.

ಪೆಪ್ಸ ಕೊಂಡುಕೊಳ್ಳಿರಿ
PEPS
ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

5—6—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೫—೬—೧೯೪೨]

ಸಮರ ಭೂಮಿಯ ಸಂಚಾರ

ಕಳೆದ ವರ್ಷ ರಶ್ಯದ ವಿಶಾಲ ಭೂಪ್ರದೇಶದಲ್ಲಿ ಜರ್ಮನ್ ಫ್ಯಾಸಿಸ್ಟ್ ಸೈನ್ಯವು ದೊಡ್ಡ ಪ್ರವಾಹದಂತೆ ಎಲ್ಲೆಡೆಗಳಲ್ಲಿಯೂ ಏಕಪ್ರಕಾರ ಹರಿದು ಮುನ್ನುಗ್ಗಿತು! ಯುಕ್ರೇನನ್ನು ಪೂರ್ಣ ಸ್ವಾಹಾ ಮಾಡಿಕೊಂಡಿತು! ಹಾಗೆಯೇ ಮುಂದುವರಿಯುತ್ತಿದ್ದರೆ ಇಷ್ಟರಲ್ಲಿ ರಶ್ಯದ ಹೆಸರಿತ್ತೋ ನಾವಿಂದು ಹೇಳಲಾರೆವು ಅಷ್ಟರಲ್ಲಿ ಹಿಮಗಾಲವು ಕಾಲಿಟ್ಟಿತು! ಜರ್ಮನರ ರಾಕ್ಷಸೀ ಮಹತ್ವಾಕಾಂಕ್ಷೆಗೆ ಪ್ರಕೃತಿಯೇ ಪ್ರಕೋಪಗೊಂಡಂತೆ ಕಂಡಿತು! ಜರ್ಮನರು ರಾಸ್ಟೋವ್ ಕಡೆಗೆ ಕಾಲು ಚಾಚಿದ್ದರು. ರಾಸ್ಟೋವ್ ಕಾಕಸಸ್‌ಗೆ ಹೆದ್ದಾರಿಯಂತಿದೆ ಆದರೆ ಅದಕ್ಕೆ ಸರಿಯಾಗಿ ಯುಕ್ರೇನಿನಲ್ಲಿ ಜರ್ಮನ್ ಸೈನ್ಯ ಮುಂದುವರಿಯಲಿಲ್ಲ ಹಿಮಗಾಲದ ಕಾಳಗದ ಆರಂಭದಲ್ಲಿ ರಾಸ್ಟೋವ್ ಬಹುಕಾಲ ಜರ್ಮನರ ಕೈವಶವುಳಿಯಲಿಲ್ಲ ರಶ್ಯನರು ಅವರನ್ನು ಹೊಡದೋಡಿಸಿದರು ರಶ್ಯನ್ ಸೇನಾಪತಿ ಮಾರ್ಶಲ್ ಟಿಮುಶಂಕೋ ಜರ್ಮನರನ್ನು ಯುಕ್ತಿಯಾಗಿ ಪ್ರತಿಭಟಿಸಿ ಹಿಂದೋಡಿಸಿದನು ಜರ್ಮನರು ಹಿಮಗಾಲದಲ್ಲಿ ಸೋತರೂ, ಕರ್ಚ್, ಖಾರ್ಕೋವ್, ಟಾಗನ್‌ರಾಗ್, ಸ್ಟಾಲಿನೋ, ಓರೆಲ್, ವ್ಯಾಜ್‌ಮಾ ಮುಂತಾದ ಪ್ರಾಮುಖ್ಯ ಸ್ಥಳಗಳನ್ನು ಮಾತ್ರ ಬಿಟ್ಟುಕೊಡಲಿಲ್ಲ ಅಲ್ಲಿ ರಶ್ಯನರ ತೀವ್ರಘಾತಕ್ಕೂ ಬಗ್ಗಿ ಶರಣಾಗಲಿಲ್ಲ ರಶ್ಯನ್ ಸೈನ್ಯವು ಆಗ ವರ್ತುಲಾಕಾರವಾಗಿ ಒಳನುಗ್ಗಿ ಜರ್ಮನರೊಡನೆ ಹೋರಾಟ ಹೂಡಿತು ಆದರೂ ಜರ್ಮನರು ಹಿಮಗಾಲ ಮುಗಿದ ಮೇಲೆ ರಶ್ಯನರ ಮೇಲೇರಿ ಹೋಗಲು ಅವಶ್ಯಕವಾಗಿದ್ದ ಈ ಸ್ಥಳಗಳನ್ನು ಜೀವದಾಶೆ ತೊರೆದು ರಕ್ಷಿಸುತ್ತಾ ಬಂದರು

ಹಿಮಗಾಲ ಮುಗಿದು ವಸಂತ ಸಮಯ ಬಂದದ್ದೇ ತಡ, ಹಿಟ್ಲರ್ ರಶ್ಯದಲ್ಲಿಯೂ ಲಿಬಿಯದಲ್ಲಿಯೂ ಪ್ರಚಂಡ ಯುದ್ಧಗಳನ್ನು ಆರಂಭಿಸಿದನು! ರಶ್ಯದಲ್ಲಿ ಕರ್ಚ್ ಕಾಳಗವು ಕೊನೆಗೊಂಡಿದೆ ಖಾರ್ಕೋವಿನಲ್ಲಿ ಇನ್ನೂ ಭೀಷಣ ಸಂಗ್ರಾಮ ನಡೆಯುತ್ತಿದೆ ಡೊನೆಟ್ಸ್ ನದಿಯ ದಡದಲ್ಲಿ ಟಿಮುಶಂಕೋ ಬಹಳಕಾಲದಿಂದ ಸೈನ್ಯಸಂಗ್ರಹಿಸಿದ್ದನು, ನದಿಯ ಆಚೆಯ ತೀರದಲ್ಲಿ ಜರ್ಮನರ ಸೈನ್ಯವೂ ತಳವೂರಿದ್ದು ಇವುಗಳೊಳಗೆ ಖಾಡಾಖಾಡಿ ಕಾಳಗ ನಡೆಯಿತು ಕರ್ಚ್ ಕಾಳಗ ಮುಗಿಸಿದ ಬಳಿಕ ಒಮ್ಮೆಲೇ ಕಾಕಸಸ್ ಕಡೆಗೆ ದಂಡಯಾತ್ರೆ ತೆರಳಬೇಕೆಂದು ಜರ್ಮನರು ಬಗೆದಿದ್ದರೂ ಇರಬಹುದು, ಆದರೆ ಕರ್ಚ್ ಯುದ್ಧ ಮುಗಿವ ಮುನ್ನವೇ ಟಿಮುಶಂಕೋ ಎರಡನೆಯ ಕಡೆ ಯುದ್ಧ ಪ್ರಾರಂಭಿಸಿ ಜರ್ಮನರ ಮುನ್ನಡೆಯನ್ನು ತಡೆದುಬಿಟ್ಟನು ಜರ್ಮನರು ಖಾರ್ಕೋವ್ ಬಳಿ ಅಸಿದ್ಧರಾಗಿದ್ದರೋ ಏನೋ ಮೊದಲು ಅಲ್ಲಿನ ಕಾಳಗದಲ್ಲಿ ಅವರು ಹಿಂಜರಿಯಬೇಕಾಗಿ ಬಂದರೂ ಮತ್ತೆ ಇಜ್‌ಯಾಮ್ ಮತ್ತು ಬರ್ವೆಂಕೋವೋ ಎಂಬೀ ಸ್ಥಳಗಳಲ್ಲಿ ಭೀಕರ ಪ್ರತಿ ಯುದ್ಧವನ್ನು ಆರಂಭಿಸಿದರು. ಆ ರಣರಂಗದಲ್ಲಿ ಟಿಮುಶಂಕೋ ಸೈನ್ಯವ್ಯೂಹವು ಭೇದಿಸಲ್ಪಟ್ಟು, ಜರ್ಮನರು ಮುನ್ನುಗ್ಗಿದರು. ಅಲ್ಲಿ ಒಂದು ವಾರಗಳವರೆಗೆ ಟೇಂಕ್ ಕಾಳಗವು ಘನಘೋರವಾಗಿ ನಡೆಯಿತು ರಶ್ಯನರು ಸ್ವಲ್ಪ ಹಿಮ್ಮೆಟ್ಟಿ ನಿಂತಂತೆ ತೋರಿತು, ಅಷ್ಟರಲ್ಲಿ ಜರ್ಮನರ ಹೊಸ ಸೈನ್ಯವೂ ಅಲ್ಲಿಗೆ ಬಂದು ಕೂಡಿತು. ಅಂತೂ ಅಲ್ಲಿ ಇಂದು ಗಂಡಾಂತರ ಪರಿಸ್ಥಿತಿ ಬಂದೊದಗಿರುವುದಾಗಿ ಯುದ್ಧ ಸುದ್ದಿ ಸಾರುತ್ತಿದೆ ಎರಡು ವಾರಗಳ ವರೆಗೆ ನಡೆದ ಖಾರ್ಕೋವ್ ಕಾಳಗವು ಈ ಸಲದ ರಶ್ಯ ಜರ್ಮನ್ ಯುದ್ಧದಲ್ಲಿ ಅನುಪಮವಾಗಿದ್ದು ಪ್ರಪಂಚವೇ ಇದನ್ನು ನೋಡಿ ಬೆರಗಾಯಿತು

ಲಿಬಿಯದ ಯುದ್ಧವನ್ನು ಈ ಸಲ ಜರ್ಮನರು ಪ್ರಾರಂಭಿಸಿದ್ದಾರೆ ಇಷ್ಟರ ವರೆಗೆ ಲಿಬಿಯದಲ್ಲಿ ಐದುಸಲ ಆಕ್ರಮಣವಾಗಿದೆ ಬ್ರಿಟಿಷರು ಎರಡು ಸಲ ಮುನ್ನುಗ್ಗಿ ಹಿಂದೆ ಸರಿದರು ಜರ್ಮನರು ಮೂರು ಸಲ ಮುಂದುವರಿದು ಸೋತುಬಿಟ್ಟಿದ್ದರು. ಜರ್ಮನರು ಈಗ ನಾಲ್ಕನೆಯ ಸಲ ಮುನ್ನುಗ್ಗಿ ಹೋರಾಡುತ್ತಿದ್ದಾರೆ ಕಳೆದ ನವಂಬರಿನಲ್ಲಿ ಬ್ರಿಟಿಷ್ ಸೇನಾಪತಿ ಅಚ್ನ್ ಲೆಕ್ಕನು ಜರ್ಮನ್ ಸೇನಾಪತಿ ರೊಮೆಲನ ಸೈನ್ಯವನ್ನು ಬೆಂಗಾಜಿ ವರೆಗೆ ಬೆನ್ನಟ್ಟಿ ಹೋಗಿದ್ದನಷ್ಟೆ? ಅಷ್ಟರಲ್ಲಿ ಜರ್ಮನರಿಗೆ ಸಾಕಷ್ಟು ಸಹಾಯ ಬಂದುದರಿಂದ ಬ್ರಿಟಿಷರು ಕಾಲ್ಕಿಗೆದು ಗಾರ್ಝೂಲಾದ ವರೆಗೆ ಹಿಂಜರಿಯಬೇಕಾಗಿ ಬಂತು ಅಂತೂ ಕಳೆದ ನೂರು ನಾಲ್ಕು ತಿಂಗಳಲ್ಲಿ ಈ ರಣರಂಗವು ಪ್ರಶಾಂತವಾಗಿದ್ದು ಈಗ ಪುನಃ ಹೋರಾಟಕ್ಕೆ ಕಳೆಯೇರಿದೆ. ಲಿಬಿಯದಲ್ಲಿ ಜರ್ಮನ್ ಸೈನ್ಯಗಳು ಸೇನಾಪತಿಗಳಾದ ಬಿಸ್ಮಾರ್ಕ್ ಮತ್ತು ನೆಹ್ರಿಂಗರ ಮುಂದಾಳುತನದಲ್ಲಿ ದಕ್ಷಿಣ ದಿಕ್ಕಿಗೆ ಹೊರಟು, ತೋಬ್ರುಕದ ನೈಋತ್ಯಕ್ಕೆ ಬರುತ್ತಿವೆ. ತೋಬ್ರುಕನ್ನು ಮುತ್ತಬೇಕೆಂದು ಅವರ ಉದ್ದೇಶವಿರಬೇಕು. ತೋಬ್ರುಕ್ ಬಹಳ ದುರ್ಗಮವಾದ ಕೋಟೆಯಾಗಿದೆ ಹಿಂದೆ ನಾಲ್ಕೈದು ಸಲ ಮುತ್ತಿ ಜರ್ಮನರು ಮರಳಿ ಬರಬೇಕಾಗಿ ಬಂದಿದೆ. ಲಿಬಿಯ ಮರುಭೂಮಿಯ ಬಿಸಿಲು, ನೀರಿನ ಅಭಾವಗಳಿರಡೂ ಜರ್ಮನರಿಗೆ ಸೋಲಿನ ಕಾರಣಗಳಾಗಿರುವವು ಆದರೂ ಅದನ್ನು ಲೆಕ್ಕಿಸದೆ ಅವರು ಹೋರಾಡುತ್ತಿದ್ದಾರೆ. ಜರ್ಮನರು ಇಲ್ಲಿ ಬಹಳ ಸೈನ್ಯ ಸಂಗ್ರಹಿಸಿಟ್ಟಿರುವರೆಂದು ಹೇಳಲಾಗುತ್ತದೆ. ಇಟಲಿಯ ಸೈನ್ಯಗಳೂ ಈ ಸಲ ಲಿಬಿಯ ಯುದ್ಧದಲ್ಲಿ ಜರ್ಮನರಿಗೆ ಸಹಾಯ ಕೊಡುತ್ತಿವೆ.

ಇತ್ತ ಏಶ್ಯದಲ್ಲಿ, ಚೀನಾ ಯುದ್ಧವು ಘೋರವಾಗುತಿದೆ. ಜಪಾನರು ಚೀನವನ್ನು ಎರಡು ದಿಕ್ಕಿನಿಂದ ಮುತ್ತಿದ್ದು, ಮೂರನೆಯ ದಿಕ್ಕಿನಲ್ಲಿ ಅಪರಿಮಿತ ಸಿದ್ಧತೆ ಮಾಡುತ್ತಿದ್ದಾರೆ ಬರ್ಮವನ್ನು ಆಕ್ರಮಿಸಿ, ಅಲ್ಲಿಂದ ಬ್ರಿಟಿಷ್ ಸೈನ್ಯವನ್ನು ಹೊರಗಟ್ಟಿ (ಬರ್ಮವನ್ನು ಸಂರಕ್ಷಿಸಲು ಹೋಗಿದ್ದು, ಅದು ಜಪಾನರ ಸ್ವಾಧೀನವಾದ ಮೇಲೆ, ಬ್ರಿಟಿಷ್ ಸೈನ್ಯವನ್ನು ಚಂದದಿಂದ ಹಿಂದೆಗೆದುಕೊಂಡು ಬಂದು ಸುರಕ್ಷಿತವಾಗಿ ಹಿಂದುಸ್ಥಾನಕ್ಕೆ ಮುಟ್ಟಿಸಿದ ಸಾಹಸಕ್ಕಾಗಿ ಸೇನಾಪತಿ ಅಲೆಕ್ಸಾಂಡರರಿಗೆ ಎಲ್ಲರೂ ಅಭಿನಂದನೆ ಸಲ್ಲಿಸಬೇಕು!) ಜಪಾನರು ಈಗ ಯುನಾನ್ ಪ್ರಾಂತದಲ್ಲಿ ಚೀನೀಯರೊಡನೆ ಹೋರಾಡುತ್ತಾರೆ ಬರ್ಮದಲ್ಲಿ ಹತ್ತು ಡಿವಿಜನ್ ಸೈನ್ಯವನ್ನಿಟ್ಟಿದ್ದು, ಜಪಾನರು ಯುನಾನ್ ಪ್ರಾಂತದಲ್ಲಿ ಹತ್ತು ಸಾವಿರ ಮಂದಿ ಕಾದಾಡುತ್ತಿರುವರೆಂದು ತಿಳಿದಿದೆ ಯಾವ ಬರ್ಮಾ ಮಾರ್ಗದಿಂದ ಚೀನಕ್ಕೆ ಇತರ ಕಡೆಗಳಿಂದ ಸಹಾಯ ಬರುತ್ತಿತ್ತೋ ಅದೇ ರಸ್ತೆಯಲ್ಲಿ ಜಪಾನರಿಂದು ಚಲಿಸುತ್ತಿದ್ದಾರೆ ಬರ್ಮಾ ರಸ್ತೆಯು ಹೋಗುವ ಕಾಡುಗುಡ್ಡಗಳಲ್ಲಿ ಕಾಳಗನಾಗುತ್ತಲಿದೆ ಯೂನಾನಿಂದ ಒಂದುವರೆ ಸಾವಿರ ಮೈಲು ಪೂರ್ವದಲ್ಲಿರುವ ಚೀನದ ಪೂರ್ವ ತೀರ ಪ್ರಾಂತವಾದ ಚೆಕಿಯಾಂಗ್ ಪ್ರಾಂತದಲ್ಲಿಯೂ ಒಂದು ಲಕ್ಷ ಜಪಾನರು ಭೀಷಣ ಯುದ್ಧ ಪ್ರಾರಂಭಿಸಿದ್ದಾರೆ ಜಪಾನರು ಚೀನದ ರಣರಂಗದಲ್ಲಿ ಯಂತ್ರ ಯುದ್ಧವನ್ನು ಬಲಪಡಿಸುವಂತೆ ತೋರುತ್ತದೆ ಕಳೆದ ನಾಲ್ಕೈದು ವರ್ಷಗಳಿಂದಲೂ ಹೋರಾಡುವ ಚೀನರನ್ನುಗೆಲಲಾರದೆ ಅಪಮಾನವನ್ನುಹೊತ್ತ ಜಪಾನರು ಈ ಸಲ ಅದನ್ನು ತೊಳೆದುಬಿಡಬೇಕೆಂದು ಮನಮಾಡಿದಂತೆ ತೋರುತ್ತದೆ.

ಖಾರ್ಕೋವ್ ಕಾಳಗ ಮುಗಿಯಿತೆಂದು ಜರ್ಮನರು ಹೇಳುತ್ತಾರೆಂಬುದಾಗಿ ಈಗ ಸುದ್ದಿ ಬಂದಿದೆ ಆದರೆ ಇತ್ತೀಚೆಗೆ ರಶ್ಯಾದಿಂದ ಬಂದ ಸುದ್ದಿಗಳ ಪ್ರಕಾರ, ಇಝ್ಯುಯಾಮದಲ್ಲಿ ಇನ್ನೂ ಕಾಳಗ ನಡೆಯುತ್ತಿದೆಯೆಂದು ತಿಳಿದು ಬರುವುದು, ಅಂತೂ ಟಿಮುಶಂಕೋ ಖಾರ್ಕೋವಿನಲ್ಲಿ ವಿಜಯಿಯಾಗಿರುವುದಿಲ್ಲವೆಂಬುದು ಖಂಡಿತವಾಗಿದೆ ರಶ್ಯನ್ ಸೈನ್ಯವನ್ನು ಸಂಪೂರ್ಣ ನಾಶಮಾಡಿ ಬಿಟ್ಟೆವೆಂದು ಜರ್ಮನರು ಜಂಭ ಕೊಚ್ಚುತ್ತಾರೆ ಖಾರ್ಕೋವಿನಲ್ಲಿ ಈಗ ಆಗುವ ಯುದ್ಧವು ಬಿರುಗಾಳಿಯೊಡಗೂಡಿ ಜರುಗುತಿದೆ, ಆಗಾಗ ಬಿರುಗಾಳಿಯೂ ಸುರಿಯುತ್ತಿದೆಯಂತೆ, ಜರ್ಮನರು ಹೊಸ ಹೊಸ ಟೇಂಕ್, ಫಿರಂಗಿ ವಿಮಾನಗಳನ್ನು ತರುತ್ತಲಿದ್ದಾರೆ ಕಾಲಿನಿನ್ ಇಲ್ಮೆನ್ ಮತ್ತು ಲೆನಿನ್‌ಗ್ರಾಡ್‌ನ ದಕ್ಷಿಣದಲ್ಲಿಯೂ ಯುದ್ಧ ನಡೆಯುತಲಿದೆ ಇಷ್ಟರಲ್ಲಿ ಬ್ರಿಟಿಷ್ ಬಾಂಬರು ವಿಮಾನಗಳು ಸುಮಾರು ಸಾವಿರ ಸಂಖ್ಯೆಯಿಂದ ಜರ್ಮನಿಯ ರೂರ್, ರಾಯಿನ್‌ಲೇಂಡ್ ಮತ್ತು ಕೊಲೋನ್‌ಗಳ ಮೇಲೆ 3000 ಟನ್ ಬಾಂಬು ಸುರಿಸುವ ಸಾಹಸ ಮಾಡಿರುವೆಂದು ವಾರ್ತೆಯಿದೆ ಕೊಲೋನ್ ನಗರದ ಧಾಳಿಯು ಜರ್ಮನಿ ಮೇಲೆ ಇದುವರೆಗೆ ಮಾಡಿದ ಧಾಳಿಗಿಂತ ಉಗ್ರವಾಗಿತ್ತೆಂದು ಕೇಳಲಾಗುತದೆ ಲಿಬಿಯದಲ್ಲಿ ಟೇಂಕ್ ಯುದ್ಧವು ಭೀಕರವಾಗ ತ್ತಲಿದೆಯೆಂದೂ ಉಭಯ ಸೈನ್ಯಗಳಿಗೂ ಬಹಳ ಹಾನಿಯಾಗಿರುವುದರಿಂದ, ಈ ತರದ ಯುದ್ಧ ಬಹಳಕಾಲದ ತನಕ ಹೀಗೆಯೇ ನಡೆಯಲಾರದೆಂದೂ, ಎರಡು ಸೈನ್ಯಗಳೂ ತೀರಾ ದಣಿದಿರುವುದರಿಂದ ಬೇಗನೇ ಲಿಬಿಯ ಯುದ್ಧದ ಕೊನೆಯ ನಿರ್ಣಯವಾಗಲಿದೆಯೆಂದೂ ತಿಳಿದುಬರುತ್ತದೆ ಅತ್ತ ಚೀನದಲ್ಲಿ ಜಪಾನರು ಚೆಕಿಯಾಂಗ್ ಚೀನೀ ಕರಾವಳೀ ಪ್ರಾಂತವಾದ ಯುದುವಾನದಲ್ಲಿ ಬಂದಿಳಿದರೆಂದು ಸುದ್ದಿ ಬಂದಿದೆ ಕಿನ್‌ಹ್ವಾದಲ್ಲಿ ನಡೆದ ಆರು ದಿನಗಳ ಯುದ್ಧದಿಂದ ಹದಿನಾಲ್ಕು ಸಾವಿರ ಜಪಾನರ ಸಂಹಾರವಾಯಿತೆಂದು ಪ್ರಕಟವಾಗಿದೆ ಹೀಗೆ ಖಾರ್ಕೋವ್‌ನಲ್ಲಿ, ಲಿಬಿಯದಲ್ಲಿ, ಚೀನದಲ್ಲಿ ಈ ಮೂರು ರಣರಂಗಗಳಲ್ಲಿ ಈ ವಾರ ಭೀಕರ ಸಂಗ್ರಾಮ ಸಾಗುತ್ತಿದೆ



ಬ್ರಿಟಿಷರ ಯುದ್ಧ ಹಡಗು

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 5—6—1942

ರಾಜಾಜಿ ಬೆಂಬಲಿಗರಿಗೆ-

ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರ ಪ್ರಚಾರದಲ್ಲಿ ಅವರಿಗೆ ಬೆಂಬಲ ಕೊಡುವ ಕಾಂಗ್ರೆಸಿನ ಅಧಿಕಾರ ಸ್ಥಾನದಲ್ಲಿರುವ ಕಾರ್ಯಕರ್ತರಿಗೆ ಹಾಗೂ ಕಾಂಗ್ರೆಸ್ ಕಮಿಟಿಗಳಿಗೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಒಂದು ಎಚ್ಚರಿಕೆ ಕೊಡುವ ಪ್ರಕಟಣೆಯನ್ನು ಹೊರಡಿಸಿದೆ. ರಾಜಾಜಿಯವರ ಅಭಿಪ್ರಾಯಕ್ಕೆ ಬೆಂಬಲ ಕೊಡುವ ವಿಷಯ ಪ್ರತಿಯೊಬ್ಬನೂ ಅವನ ಇಚ್ಛೆಯಂತೆ ಮಾಡಲು ಯಾರೂ ಪ್ರತಿಬಂಧಿಸಲಾರರು. ಅಂತೆಯೇ ಕಾಂಗ್ರೆಸಾದರೂ ಹಾಗೆ ಅಭಿಪ್ರಾಯವುಳ್ಳವರು ಅವರ ಅಭಿಪ್ರಾಯವನ್ನು ಪ್ರಕಟಿಸಬಾರದಾಗಿ ತಿಳಿಸಿಲ್ಲ. ಕಾಂಗ್ರೆಸ್ ಸದಸ್ಯರಾಗಿದ್ದೇ ಅವರು ರಾಜಾಜಿಗೆ ಬೆಂಬಲಕೊಡಬಹುದು. ಆದರೆ, ರಾಜಾಜಿಯೇ ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ರಾಜಿನಾಮೆಕೊಟ್ಟು ಹೊರಬಂದು ಪ್ರಚಾರ ನಡೆಸಿ ದಾರಿತೋರಿಸಿದಂತೆ, ಅವರ ಬೆಂಬಲಿಗರಾದರೂ ಕಾಂಗ್ರೆಸ್ ಅಧಿಕಾರಸ್ಥಾನಗಳಿಗೆ ರಾಜಿನಾಮೆ ಕೊಟ್ಟು ಹೊರಬಂದು ಪ್ರಚಾರ ನಡೆಸುವುದು ಅವರಿಗೆ ಗೌರವವೂ, ಸಂಸ್ಥೆಗೆ ಕೀರ್ತಿಯೂ ತರುವ ಕಾರ್ಯವಾಗಿದೆ.

ಯಾವುದೇ ಒಂದು ನಿರ್ಣಯದ ವಿಷಯದಲ್ಲಿ ಮತ ತೆಗೆಯುವ ಮೊದಲು ಅದರ ಪರವಾಗಿಯಾಗಲಿ ವಿರೋಧವಾಗಿಯಾಗಲಿ ಸಂಸ್ಥೆಯ ಸದಸ್ಯರು ವಾದಿಸಬಹುದು. ಆದರೆ ಹಾಗೆ ವಾದಿಸಿ ನಿರ್ಣಯವು ಬಹುಮತದಿಂದ ಬಿದ್ದುಹೋದ ಮೇಲೆ ಬಿದ್ದುಹೋದ ನಿರ್ಣಯದ ಕುರಿತು ಆ ಸಂಸ್ಥೆಯ ಅಧಿಕಾರ ಸ್ಥಾನದಲ್ಲಿದ್ದವರು ವಾದಿಸುವುದು ಶಿಸ್ತಿನ ದೃಷ್ಟಿಯಿಂದ ವಿಹಿತವಾಗುವುದಿಲ್ಲ. ಅಲ್ಲಿಯೂ ಸದಸ್ಯರಿಗೆ ಬೇಕಾದಂತಹ ವಾಕ್‌ಸ್ವಾತಂತ್ರ್ಯವಿತ್ತರೆ ಸಂಸ್ಥೆಯ ಗೌರವವೇ ಉಳಿಯಲಾರದು. ಮತ್ತೂ ಅದರ ಯಾವುದಾದರೂ ಸದಸ್ಯರಿಗೆ ಬಿದ್ದುಹೋದ ನಿರ್ಣಯದ ವಿಷಯ ಪ್ರಚಾರ ಮಾಡಬೇಕೆಂದಿದ್ದರೆ ಸಂಸ್ಥೆಯ ಅಧಿಕಾರಕ್ಕೆ ರಾಜಿನಾಮೆ ಕೊಟ್ಟು ಹೊರಬಂದು ಹಾಗೆ ಮಾಡಬಹುದು. ಅಂತೆಯೇ ರಾಜಾಜಿಯವರು ಮತ್ತು ಅವರ ಬೆಂಬಲಿಗರಾದರೂ ತಮ್ಮ ನಿರ್ಣಯವನ್ನು ಕಾಂಗ್ರೆಸ್ ಕಮಿಟಿಯ ಮುಂದೆ ತಂದು ಮತಗಣನೆಯಾಗುವ ವರೆಗೆ ವಾದಿಸಿದ್ದು ನ್ಯಾಯವೂ ಪ್ರಸಂಗೋಚಿತವೂ ಆಗಿತ್ತು; ಆದರೆ ಯಾವಾಗ ಅದು ಬಹುಮತದಿಂದ ಬಿದ್ದುಹೋಯಿತೋ ಇನ್ನು ಅದರ ಕುರಿತು ವಾದಿಸಬೇಕಾದರೆ ಅವರು ಅಧಿಕಾರ ಸ್ಥಾನಕ್ಕೆ ರಾಜಿನಾಮೆ ಕೊಡಬೇಕೆಂದು ಕಾಂಗ್ರೆಸ್ ತಿಳಿಸಿದ್ದು ಸಂಪೂರ್ಣ ನ್ಯಾಯವಿರುತ್ತದೆ.

ಇದರಿಂದ ರಾಜಾಜಿಯವರ ಬೆಂಬಲಿಗರಿಗೆ ಕಾಂಗ್ರೆಸ್ ಕಮಿಟಿ ಪ್ರತಿಬಂಧಹಾಕಿತೆನ್ನುವ ಬದಲು ಮುಕ್ತದ್ವಾರ ಮಾಡಿಕೊಟ್ಟಂತಾಗಿದೆ. ಯಾವುದೇ ಒಂದು ತತ್ವದ ವಿಷಯ, ನಿರ್ಣಯದ ವಿಷಯ ಮನಃಪೂರ್ವಕ ಸಮ್ಮತಿಗೊಂಡು ಮಾತನಾಡುವವನು ಆ ತತ್ವ ನಿರ್ಣಯಗಳ ಪ್ರಚಾರಕ್ಕಾಗಿ ಅಧಿಕಾರ ಸ್ಥಾನಗಳನ್ನು ತಿರಸ್ಕರಿಸಿಯಾದರೂ ಹೊರಬಂದು ಪ್ರಚಾರ ಮಾಡುವಷ್ಟು ಎದೆಗಾರನಿರಬೇಕು. ರಾಜಾಜಿ ಬೆಂಬಲಿಗರು ಈ ಪಂಥವನ್ನು ವಿವೇಕದಿಂದಲೂ, ತಾಳ್ಮೆಯಿಂದಲೂ ಎದುರಿಸಿ ತಮ್ಮ ತತ್ವದ ಸಲುವಾಗಿ ಹೋರಾಡುವಷ್ಟು ಧೈರ್ಯವನ್ನು ತೋರಿಸಿದರೆ ನಾವು ಅವರನ್ನು ನಿಜವಾಗಿಯೂ ಅಭಿನಂದಿಸುವೆವು.

ವರ್ಧಾದಲ್ಲಿ

ವರ್ಧಾದಲ್ಲಿ ತಿರುಗಿ ಈಗ ವಿಶೇಷ ಚಟುವಟಿಕೆಗಳು ಆರಂಭವಾಗಿದ್ದು ಭಾರತೀಯರ ಗಮನವು ಆ ಕಡೆಗೆ ಹರಿದಿದೆ. ಗಾಂಧಿಜಿ ಇನ್ನೊಂದು ಆಂದೋಲನವನ್ನು ಆರಂಭಿಸುವರೆಂಬ ಸುದ್ದಿಯೊಂದು ದೇಶ ಸರ್ವತ್ರ ಹರಡಿರುವುದು. ಮೊನ್ನೆ 'ಹಿಂದು' ಪತ್ರಿಕೆಯ ವರದಿಗಾರನೊಡನೆ ಗಾಂಧಿಜಿ ಮಾತನಾಡುತ್ತಾ ಅಂತಹ ಹಲವು ಯೋಜನೆಗಳು ತನ್ನ ತಲೆಯಲ್ಲಿರುವುದಾಗಿ ಹೇಳಿರುವರೆಂದೂ ಪ್ರಕಟವಾಗಿದೆ. ವರ್ಧಾದ ಕಡೆಗೆ ಪುನಃ ಈಗ ಹಿಂದೀಯರ ದೃಷ್ಟಿ ಹರಿಯಲು ಇದೊಂದು ಪ್ರಧಾನ ಕಾರಣವಾಗಿದೆ.

ಮೊನ್ನೆ ತಾನೇ ನೆಹರು ಗಾಂಧಿಜಿಯನ್ನು ವರ್ಧಾದಲ್ಲಿ ಕಂಡು ಭೇಟಿಯಾದರು. ಸದ್ಯದ ರಾಜಕೀಯದ ಕುರಿತು ಅವರು ಪ್ರಾಮುಖ್ಯ ಮಾತುಕತೆಗಳನ್ನು ನಡೆಸಿದರೆಂದು ತಿಳಿದುಬಂದಿದೆ; 'ಗಾಂಧಿಜಿ ಸುಮ್ಮಗಿರಲು ಸಾಧ್ಯವಿಲ್ಲ' ಎಂದು ನೆಹರು ಝಾಂಸಿಯಲ್ಲಿ ಮಾತನಾಡುತ್ತಾ ಇತ್ತೀಚೆಗೆ ಬ್ರಿಟಿಷ್ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ರಾಜಾಜಿಯ ಹೊಸ ಸೂಚನೆಯ ವಿಚಾರವಾಗಿಯೂ ಅವರು ತರ್ಕಿಸಿರಬಹುದೆಂದು ಊಹಿಸಬಹುದು. ಈ ಸಂದರ್ಭದಲ್ಲಿ ನೆಹರು ಅಮೆರಿಕಕ್ಕೆ ತೆರಳುವರೆಂಬ ಸುದ್ದಿಯೊಂದೂ ಹರಡಿದ್ದು ನೆಹರು ಗಾಂಧಿ ಭೇಟಿಯಿಂದ ವರ್ಧಾದ ವಾರ್ತೆ ಕುತೂಹಲಪೂರ್ಣವಾಗಿದೆ.

ಅಂತೂ ಮಹಾತ್ಮರಿಂದು ಮೌನವಾಗಿರುವುದಿಲ್ಲವೆಂದು ನಾವು ತಿಳಿದುಕೊಳ್ಳಬಹುದು. ದೇಶದ ಹಿತದದೃಷ್ಟಿಯಿಂದ ಏನಾದರೊಂದು ಕಾರ್ಯಕ್ರಮವನ್ನು ಅವರು ಕೈಕೊಳ್ಳಲಿರುವರೆಂಬುದಾಗಿಯೇ ಕಂಡುಬರುತ್ತದೆ. ಗಾಂಧಿಜಿಗೇ ಈಗ ಕಾಂಗ್ರೆಸಿನ ಮುಂದಾಳುತನವೊಪ್ಪಿಸಬೇಕಾಗಿ ಹಲವು ಕಡೆಗಳಿಂದ ಸೂಚನೆಗಳೂ ಬರುತ್ತಿವೆ. ಕಾಂಗ್ರೆಸ್ ಪ್ರಧಾನ ಮಂಡಳಿಯನ್ನು ನೋಡಿದರೂ ಇಂದು ಗಾಂಧಿಜಿಯ ಬೆಂಬಲಿಗರೇ ಅಲ್ಲಿ ಬಹುಮಂದಿಯಿರುವರು. ದೇಶವು ವಿಷಮ ಗಂಡಾಂತರವನ್ನೆದುರಿಸಬೇಕಾದೀ ಕಾಲದಲ್ಲಿ, ನಮ್ಮ ರಾಷ್ಟ್ರದ ಅದೃಷ್ಟವನ್ನು ಗಾಂಧಿಜಿಯಂತಹ ಮಹಾಪುರುಷರ ಕೈಯಲ್ಲಿ ಕೊಡುವುದು ಕ್ಷೇಮಕರವಾಗಿರುವುದು.

ಉಪ್ಪಿನ ಅಭಾವ

ಈ ವಾರದ ಹರಿಜನದಲ್ಲಿ ಗಾಂಧಿಜಿಯವರು, ಬಡವರಾದರೂ ಯಾವ ವಸ್ತು ಇಲ್ಲದೆ ಜೀವನ ನಿರ್ವಾಹ ಮಾಡಲಾರರೋ ಅಂತಹ ಉಪ್ಪು, ಹಲವು ಪ್ರಾಂತಗಳಲ್ಲಿ ಸರಿಯಾಗಿ ಸಿಗದೆ ಇರುವ ವಿಷಯದಲ್ಲಿ ಒಂದು ಲೇಖನ ಪ್ರಕಟಿಸಿದ್ದಾರೆ. ಅದರಲ್ಲೂ ಬಂಗಾಳ, ಬೀಹಾರ ಈ ಪ್ರಾಂತಗಳ ಪರಿಸ್ಥಿತಿಯು ಬಹಳ ಶೋಚನೀಯವಿರುತ್ತದೆ. ರಾಜೇಂದ್ರ ಪ್ರಸಾದರು ಇತ್ತೀಚೆಗೆ ಈ ಪ್ರಾಂತಗಳ ಹಳ್ಳಿಗಳಲ್ಲಿ ಸಂಚರಿಸಿ ಒಂದು ವರದಿಯನ್ನು ಪ್ರಕಟಿಸಿದ್ದಾರೆ. ಎಷ್ಟರಮಟ್ಟಿಗೆ ಜನರು ಉಪ್ಪಿನ ಅಭಾವದಿಂದ ನರಳುತ್ತಿರುವರೆಂಬುದು ಅದರಿಂದ ಸ್ಪಷ್ಟವಾಗದಿರದು.

'ಮನೆಗೆ ಬೇಕಾಗುವಷ್ಟು ಉಪ್ಪನ್ನು ಸಂಗ್ರಹಿಸುವುದು ಗಾಂಧಿ ಅರ್ವಿನ್ ಒಪ್ಪಂದದಲ್ಲಿದೆ. ಶಕ್ಯವಿದ್ದ ಮಟ್ಟಿಗೆ ಜನರು ತಮಗೆ ಬೇಕಾದ ಉಪ್ಪನ್ನು ತಾವೇ ಸಂಪಾದಿಸಿಕೊಳ್ಳುವಂತೆ ಸರಕಾರದವರು ರಿಯಾಯಿತಿ ಕೊಡುವುದೇ ನ್ಯಾಯವಿದೆ. ಬಡಜನರ ಕಡೆಗೆ ನೋಡಿ, ಈ ಕಾಯಿದೆಯಲ್ಲಿ ಸ್ವಲ್ಪ ಶೈಥಿಲ್ಯಮಾಡಿದರೆ ಉಪ್ಪಿನಿಂದ ಬರತಕ್ಕ ಉತ್ಪನ್ನಕ್ಕೆ ಅಷ್ಟೊಂದು ಪೆಟ್ಟು ಬೀಳಲಿಕ್ಕಿಲ್ಲ' ಎಂಬುದಾಗಿ ಈ ವಿಷಯದಲ್ಲಿ ಗಾಂಧಿಜಿ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಉಪ್ಪಿಲ್ಲದೆ ಇರುವುದರಿಂದ ಉಂಟಾಗುವ ದಾರಿದ್ರ್ಯರೋಗ್ಯ, ಸಂಕಷ್ಟ, ಮೊದಲಾದ ಹಾನಿಗಳ ಕಡೆಗೆ ನೋಡಿದರೆ, ಸರಕಾರವು ಇಂತಹ ಸೌಕರ್ಯವನ್ನು ಕೊಡುವುದು ಅತ್ಯಾವಶ್ಯವೆಂದು ಹೇಳಲೇಬೇಕಾಗುತ್ತದೆ.

"ನಾನು ಭೇಟಿಯಿತ್ತ ಹೆಚ್ಚಿನ ಹಳ್ಳಿಗಳಲ್ಲಿ ಉಪ್ಪಿನ ಕೊರತೆ ಬಹಳವಾಗಿತ್ತು. ಕೇವಲ ಉಪ್ಪಿನಿಂದಲೇ ತಂಗಳನ್ನ ತಿಂದು ಜೀವಿಸುತ್ತಿದ್ದವರಿಗೆ ಹೇಳಲಾರದ ಸಂಕಷ್ಟ ಬಂದಿದೆ. ಅತ್ಯಂತ ಅವಶ್ಯವಿದ್ದ ಪದಾರ್ಥಗಳನ್ನು ಸಾಕಷ್ಟು ಒದಗಿಸಿಕೊಡದೆ ಅದರ ಬೆಲೆ ನಿರ್ಬಂಧಿಸುವುದು ಸದೋಷವಾಗಿದೆ. ಸರಕಾರದವರು ಗೊತ್ತುಪಡಿಸಿದ ಬೆಲೆಯನ್ನು ಗಣಿಸದೆ ವಿಶೇಷತಃ ಹಳ್ಳಿಗಳಲ್ಲಿ ಹೆಚ್ಚು ಬೆಲೆಗೇ ಎಷ್ಟು ಮಾರಾಟವಾಗುತ್ತದೆ. ವ್ಯಾಪಾರಸ್ಥರಿಗಾದರೂ ಉಪ್ಪು ಬೇಕಾದರೆ ಗೊತ್ತುಪಡಿಸಿದಕ್ಕಿಂತ ಹೆಚ್ಚಿನ ಬೆಲೆ ಅವರು ಕೊಡಬೇಕಾಗುವುದು. ಉಪ್ಪು ಸಾಗಿಸಲು ಬಂಡಿಗಳು ದೊರಕುವುದೂ ಕಷ್ಟವಾಗಿದೆ." ಹೀಗೆಂದು ರಾಜೇಂದ್ರ ಪ್ರಸಾದರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಇದನ್ನು ನೋಡಿದರೆ ಉಪ್ಪಿನ ಅಭಾವದ ಭೀಕರ ದೃಶ್ಯ ತೋರಿಬರುತ್ತದೆ. ಸರಕಾರದವರು ಈ ಕಡೆ ಬೇಗನೇ ಯೋಗ್ಯ ಲಕ್ಷ್ಯಕೊಡುವುದು ಅತ್ಯವಶ್ಯವಿದೆ.

The Canara Industrial & Banking Syndicate, Ltd.

(Incorporated in British India. Liability of shareholders limited)

Estd:] Head Office:— UDIPI (S. India). [1925.

Authorised Capital	Rs. 36,00,000.
Suscribed Capital	Rs. 14,69,015
Paid up Capital	Rs. 6,59,183.
Reserves	Rs. 2,11,000.

Savings Bank Accounts are opened and interest allowed With drawals by cheques. Accounts transferred from one Branch to another free of charge Enquire for rules.

Cheques & Drafts are issued on numerous places and Bills etc negotiated on terms which will be quoted on enquiry.

Advances made at low rates of interest against gold, Government Securities, approved shares, accepted bills, life insurance policies and marketable goods

Every business receives quick and courteous attention.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 30/1942.

ಅರ್ಜಿದಾರ – ಶ್ಯಾನರ್ ಸುಬ್ರಾಯ ಮಯ್ಯ.

ಯೆದ್ರಿ – ಇಲ್ಲ.

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ:

ಅರ್ಜಿದಾರನ ತಂದೆ ಮೃತ ಜನಾರ್ಧನಮಯ್ಯನು National Insurance Co. Ltd., Calcutta ಇದರಲ್ಲಿ ನಂಬ್ರ 25046ನೆಗೆ ಇನ್ಸೂರು ಮಾಡಿದ ಬಾಬ್ತು ರೂ. 159-12-0ನ್ನು ಪಡೆಯುವರೇ ತಾನು ಅರಹನೆಂತ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕುರಿತು ಯಾರದ್ದಾದರು ಆಕ್ಷೇಪಣೆಗಳಿದ್ದರೆ ತಾರೀಕು 8-6-1942ನೇ ದಿನ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡತಕ್ಕದ್ದು. ಇಲ್ಲವಾದರೆ ಅರ್ಜಿದಾರಗೆ ವಾರಿಸು ಸರ್ಟಿಫಿಕೇಟನ್ನು ಕೊಡಲಾಗುವುದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

ಕುಂದಾಪುರ 28-5-1942 } M. M. Urala
ಅರ್ಜಿದಾರನ ಎಡ್ವೊಕೇಟ್.

ಹರಿಜನವಾಣಿ

ಬೇಡವಾದ ಸರಕಾರ ಬಿಟ್ಟು ಹೋಗಬೇಕು

ದ್ವೇಷಭಾವನೆ ಮಾಯವಾಗಬೇಕಾದರೆ-

ಮಹಾತ್ಮರ ಗೆಳೆತನದ ಸೂಚನೆ

ರಾಜಾಜಿ ವಿಷಯ ಗಾಂಧಿಜಿ ಲೇಖನ

'ಬ್ರಿಟಿಷರ ಅಧಿಕಾರದಿಂದ ಮುಕ್ತರಾಗಲು ಭಾರತೀಯರು ಯಾವಕಾರಣದಿಂದಲೂ ಜಪಾನರ ಸಹಾಯವನ್ನಪೇಕ್ಷಿಸತಕ್ಕದಲ್ಲ. ಹಾಗೆ ಮಾಡಿದರೆ, ರೋಗಕಿಂತ ಮದ್ದೇ ಹೆಚ್ಚು ಹಾನಿಕರವಾದೀತು ಈ ಹೋರಾಟದಲ್ಲಿ ಭಯಂಕರ ರೋಗದಿಂದ ನಾವು ಮುಕ್ತರಾಗಬೇಕಾದರೆ ಪ್ರತಿಯೊಂದು ತರದ ಗಂಡಾಂತರವನ್ನು ಎದುರಿಸಲೇಬೇಕು. ಈ ಭಯಂಕರ ರೋಗದಿಂದ ನಮ್ಮ ಪೌರುಷವೇ ಹಾಳಾಗಿ ಹೋಗಿದೆಯಲ್ಲದೆ ಕೊನೆಯವರೆಗೂ ನಾವು ದಾಸರಾಗಿಯೇ ಉಳಿದರೆ ಸಾಕು ಎಂಬ ಭಾವನೆ ನಮ್ಮಲ್ಲಿ ಹುಟ್ಟಿದೆ ಇದು ಅಸಹ್ಯವಾದುದು, ಈ ರೋಗದಿಂದ ಮುಕ್ತರಾಗಲು ಬಹಳ ಸ್ವಾರ್ಥತ್ಯಾಗವಮಾಡಬೇಕು ದಾಸ್ಯದಿಂದ ಮುಕ್ತರಾಗಬೇಕಾದರೆ ಎಷ್ಟು ಸ್ವಾರ್ಥತ್ಯಾಗವಮಾಡಿದರೂ ಸಾಲದು" ಹೀಗೆಂದ ಗಾಂಧಿಜಿ ಈ ವಾರದ ಹರಿಜನದಲ್ಲಿ ಒಂದು ಲೇಖನ ಬರೆದು ತಿಳಿಸುತ್ತಾರೆ. ಅವರು ಅದರಲ್ಲಿ ತಮಗೆ ಒಬ್ಬ ಗೆಳೆಯರಿಂದ ಬಂದ ಪತ್ರವನ್ನೆತ್ತಿ ಹೇಳಿ, ಆ ಪತ್ರದಲ್ಲಿ ಗಾಂಧಿಜಿ ಬ್ರಿಟಿಷರು ಇಲ್ಲಿಂದ ಬಿಟ್ಟು ಹೋಗಬೇಕೆಂದು ಹೇಳಿದ ವಿಷಯವನ್ನು ಸಮರ್ಥಿಸಿದುದನ್ನೂ ಆದರೆ ಜನರು ಜಪಾನರ ಪರವಾಗಿ ಅಭಿಪ್ರಾಯಪಡುತ್ತಿರುವುದನ್ನು ತಿಳಿಸಿ, ನಾವು ಬ್ರಿಟಿಷ್ ದ್ವೇಷದಿಂದ ಜಪಾನರಿಗೆ ಸಹಕಾರ ಕೊಡಬಾರದೆಂದು ವಿವರಿಸಿದುದನ್ನು ಉದ್ಧರಿಸಿದ್ದಾರೆ. ಮತ್ತು ಗಾಂಧಿಜಿ ಹೀಗೆಂದು ಬರೆಯುವುದು

"ನನಗೆ ಸತ್ಯವಾಗಿ ತೋರಿದ ರೀತಿಯಲ್ಲಿ ನಾನು ಗಂಡಾಂತರವನ್ನೆದುರಿಸಲು ಜನರಲ್ಲಿ ಹೇಡಿತನವನ್ನು ಹೋಗಲಾಡಿಸಲು, ಬ್ರಿಟಿಷ್ ದ್ವೇಷದಿಂದ ಜಪಾನರ ಸಹಕಾರ ಭಾವನೆ ಬರದಂತೆ ಮಾಡಲು ಹಿಂದೂಮುಸ್ಲಿಂ ಐಕ್ಯಸಾಧನ ಪ್ರಯತ್ನ ಮಾಡುವೆನು ವಿಚಾರವನ್ನು ಬದಲಾಯಿಸುವುದರಿಂದ ಇಂದಿನ ಗಂಡಾಂತರದ ಪರಿಸ್ಥಿತಿಯಲ್ಲಿ ಜನತೆಗೆ ದೊಡ್ಡ ಭಾರ ಬಿದ್ದಂತಾಗುವುದು. ನಾನು ಸತ್ಯವನ್ನೇ ನುಡಿದು ಸತ್ಯಪಕ್ಷಪಾತವನ್ನು ಕಾಯ್ದುಕೊಳ್ಳಬೇಕು ಜನರು ಹುಚ್ಚನೆಂದರೂ ಚಿಂತೆಯಿಲ್ಲ ಯುದ್ಧಕ್ಕೆ ಇದರಿಂದಲೇ ಹೆಚ್ಚಿನ ಸಹಾಯವಾಗುವುದು, ಹಿಂದು ಮುಸ್ಲಿಂ ಐಕ್ಯವೂ ಅಂತೆಯೇ. ಅದು ಹೇಗಾಗುವದೆಂದು ಯಾರೂ ಕಾಣರು, ಆದರೆ ಈ ವರೆಗಿನಂತೆ ಅದು ವ್ಯರ್ಥವಾಗಲಾರದು. ಯಾವುದೇ ಮುಂದಿನ ಹೆಜ್ಜೆಯನ್ನು ತೆಗೆದುಕೊಳ್ಳುವ ಮೊದಲು ಹೇಡಿತನವನ್ನು ಸಂಪೂರ್ಣವಾಗಿ ಅಟ್ಟಿಬಿಡುವೆನೆಂದು ನಿಶ್ಚಿತವಾಗಿ ಹೇಳಲಾರೆ. ಬಹಳ ಪ್ರಯಾಸವಿಲ್ಲದೆ ಹೇಡಿತನ ಹೋಗಲಾರದು. ಮತ್ಸರಭಾವವು ಮಾಯವಾಗುವವರೆಗೆ ದಾರಿ ಕಾಯುವುದೂ ಸಾಧ್ಯವಿಲ್ಲ. ಹೀನವಾದೀ ಮತ್ಸರ ಭಾವವು ಮಾಯವಾಗಬೇಕಾದರೆ ಅಪ್ರಿಯವಾದೀ ಸರಕಾರವು ಹೊರಟು ಹೋಗುವುದೊಂದೇ ಉಪಾಯ. ಆಗ ದ್ವೇಷದ ಕಾರಣವೇ ಮಾಯವಾಗಬೇಕು"

ರಾಜಾಜಿಯವರಿಗೆ ಗಾಂಧಿಜಿ ಸೂಚನೆ

ರಾಜಾಜಿ ಉದ್ದೇಶವು ಉದಾತ್ತ, ಅವರ ಸಭೆಗಳಲ್ಲಿ ಜನರು ಗುಲ್ಲೆಬ್ಬಿಸಬಾರದು, ಅದನ್ನು ಕೇಳಬೇಕು. ಎರಡನೆ ಪಕ್ಷದವರ ಮಾತನ್ನು ಕೇಳುವುದು ಪ್ರಜಾಪ್ರಭುತ್ವದ ತತ್ವ. ಮತ್ತೆ ನಮ್ಮ ಬುದ್ಧಿಶಕ್ತಿಗೆ ಸರಿಕಂಡಂತೆ ಮಾಡಬೇಕು. ಅಂತಹ ವಿಶಾಲ ಹೃದಯದಿಂದ ಸತ್ಯವು ಸಿದ್ಧವಾಗುವುದು. ಆದರೆ ರಾಜಾಜಿ ತಪ್ಪು ಮಾಡುತ್ತಿರುವರೆಂದು ನನ್ನ ಅಭಿಪ್ರಾಯವಾಗಿದೆ ಪಾಕಿಸ್ಥಾನದಲ್ಲಿ ಅವರಿಗೂ ವಿಶ್ವಾಸವಿಲ್ಲ ಬೇರೆಯಾಗಬೇಕೆಂಬ ಮುಸಲ್ಮಾನರ ಬೇಡಿಕೆಯಿಂದ ಅವರನ್ನು ಪರಾವೃತ್ತ ಮಾಡಲು ಇದೇ ಉಪಾಯವೆಂದು ಅವರು ನಂಬುತ್ತಾರೆ ಸಂದೇಹ ಸ್ವರೂಪ ಸೌಕರ್ಯಕ್ಕಾಗಿ ಮುಸಲ್ಮಾನರನೇಕರು ಸಂತೋಷ ಪಡುವುದನ್ನು ನೋಡಿ ನನಗೆ ಆಶ್ಚರ್ಯವಾಗಿದೆ. ಇದರಲ್ಲಿ ಕಲಹ ಬೀಜಗಳೇ ನನಗೆ ಕಾಣುತ್ತವೆ. ಮುಸಲ್ಮಾನರಿಗೆ ಅದೇ ಬೇಕಿದ್ದರೆ ಅವರನ್ನು ಯಾರೂ ತಡೆಯಲಾರರೆಂದು ಒಪ್ಪಿದರೆ ಸಾಕು ಪಂಚಾಯತಿಗೆ ಅವರು ಒಪ್ಪದಿದ್ದರೆ ಮತಗಣನೆಯಿಂದಾಗಲೀ, ಖಡ್ಗಧಾರೆಯಿಂದಾಗಲಿ ಅವರದನ್ನು ಪಡೆಯುವರು. ಆದರೆ ಬ್ರಿಟಿಷರು ಹೊರಟು ಹೋದನಂತರ, ಜಪಾನರ ಹಾವಳಿನಂತರನಂತರವೇ ಇದೆಲ್ಲ ಸಂಭವಿಸುವುದು ಇಂದು ಇಂಗ್ಲಿಷರ ಸ್ಥಾನವಿದೆ, ಎಚ್ಚರತಪ್ಪಿದರೆ ಜಪಾನ್ ಸ್ಥಾನವಾಗುವುದು. ಈಗ ಪಾಕಿಸ್ಥಾನವಾಗಲಿ ಹಿಂದುಸ್ಥಾನವಾಗಲಿ ಮಾತಾಡಲು ಎಡೆಯಿಲ್ಲ ಅದ್ದರಿಂದ ಹಿಂದುಸ್ಥಾನವನ್ನು ಮಾತೃಭೂಮಿಯೆಂದು ನಂಬುವವರೆಲ್ಲ ಇದನ್ನು ಇಂದಿನ ಮತ್ತು ಮುಂದಿನ ಗಂಡಾಂತರದಿಂದ ತಪ್ಪಿಸಲು ಸಕಲ ಪ್ರಯತ್ನಗಳನ್ನು ಮಾಡಬೇಕು. ಮೂರನೆಯ ಪಕ್ಷವು ನಮ್ಮ ಹಣೆಬರವನ್ನು ನಿರ್ಣಯಿಸಕೂಡದು. ವಿವೇಕವಿಲ್ಲವೇ ಖಡ್ಗವು ಹಾಗೆ ನಿರ್ಣಯಿಸುವುದು."

ನಿಜವಾದರೆ ಇದು ಭಯಂಕರ!

ಗಾಂಧಿಜಿ ಪ್ರಕಟಣೆ

ಖುರ್ಜಾದಿಂದ ವ್ಯವಸ್ಥಿತ ಅರಾಜಕತೆಯ ಭಯಂಕರ ಸುದ್ದಿ ಬಂದಿದೆ, ತನಗೆ ತಿಳಿದ ರೀತಿಯಲ್ಲಿ ಯಾವುದೇ ಕಾರಣವಿಲ್ಲದೆ ಅಲ್ಲಿನ ಎಲ್ಲಾ ದಿನವಹಿ ಚಟುವಟಿಕೆಗಳು ನಿಂತುಹೋಗಿವೆಯೆಂದು ಒಬ್ಬನು ಪತ್ರ ಬರೆಯುತ್ತಾನೆ. ಸ್ವಲ್ಪ ನೆವಸಿಕ್ಕಿದರೂ ಕೂಡಾ ಜನರಿಂದ ಹಣ ಎತ್ತಲಾಗುತ್ತದೆ ಅಲ್ಲಿ ಭಯಂಕರ ಆಳುವಿಕೆ ನಡೆದಿದೆ ಈ ಬಗ್ಗೆ ಪೂರ್ಣ ವಿಚಾರಣೆಯಾಗಬೇಕೆಂದೂ ನಿಜವಿದ್ದರೆ ಹೆಚ್ಚಿನ ಹಾನಿಯಾಗದಂತೆ ನೋಡಿಕೊಳ್ಳಲೆಂದು ನಾನು ಇದನ್ನು ಬರೆದಿರುವೆನು" ಎಂದು ಗಾಂಧಿಜಿ ಹರಿಜನದಲ್ಲಿ ಒಂದು ಟಿಪ್ಪಣಿ ಬರೆದಿರುವರು.

ಸಿಪಾಯಿಗಳ ಸ್ವಚ್ಛಂದ ವೃತ್ತಿ

ಬಂಗಾಳದ ಒಂದು ಭೀಕರ ವರದಿ

ಗಾಂಧಿಜಿ ಪ್ರಕಟಣೆ

ಬಂಗಾಲದ ನಿವೋಧಾಯಿಯಲ್ಲಿ ಮೇ ೧೭-೧೮ನೇ ತಾರೀಕುಗಳಲ್ಲಿ ಇಂಡಿಯನ್ ಸಿಗ್ನಲ್ ಕೋರಿನ ಸಿಪಾಯಿಗಳು ಮಾಡಿದರೆಂದು ಹೇಳಲಾಗುವ ಗುಂಡು ಹಾರಿಸುವಿಕೆಯ ಸಂಬಂಧ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಿಂದ ಬರೆದ ವರದಿಯ ಕೆಳಗಿನ ಅಂಶಗಳನ್ನು ಗಾಂಧಿಜಿ ಹರಿಜನದಲ್ಲಿ ಪ್ರಕಟಿಸಿರುತ್ತಾರೆ

"ಹಿಂದೀ ಸಿಪಾಯಿಗಳ ೭-೮ ಜನರ ಒಂದು ಗುಂಪು ಮೇ ೧೭ಕ್ಕೆ ರವಿಂದ್ರನಾಥ ಬೋಸರ ತೋಟವನ್ನು ಹೊಕ್ಕು ಹಣ್ಣುಗಳನ್ನು ಕೊಯ್ದು ಬೇಕಾದಂತೆ ಮಾವಿನಕಾಯಿಗಳನ್ನು ಮತ್ತು ಹಲಸಿನ ಕಾಯಿಗಳನ್ನು ತೆಗೆದು ಬಹಳ ಹಾನಿ ಮಾಡಿತು. ಇದಕ್ಕೆ ರವೀಂದ್ರರು ಮತ್ತು ಶಶೀಂದ್ರರು ಬಹಳ ವಿರೋಧ ಮಾಡಿದರು ಕೂಡಲೇ ಸಿಪಾಯಿಗಳುಅವರ ಮೇಲೆ ಬಿದ್ದು ಶಶೀಂದ್ರರನ್ನು ಒದ್ದರು. ಅವರು ನೆಲಕ್ಕೆ ಬಿದ್ದರು. ತುಳಸಿದಾಸ್ ಸರಕಾರರೆಂಬ ಸ್ಥಳೀಕ ಡಾಕ್ಟರರು ಅವರನ್ನು ಉಪಚರಿಸಿದರು. ಸಿಪಾಯಿಗಳು ಚರಣದಾಸ್ ಮತ್ತು ಶಂಕರದಾಸರೆಂಬವರ ಮನೆಗಳನ್ನು ನುಗ್ಗಿ ಅಡಿಗೆಯ ಮತ್ತು ಉಳಿದ ಪಾತ್ರೆಗಳನ್ನು ನಾಶಮಾಡಿ ಅಲ್ಲಿನ ನಿವಾಸಿಗಳಿಗೆ ಪ್ರಾಣ ಕಳಕೊಳ್ಳಬೇಕಾದೀತು ಎಂದು ಬೆದರಿಸಿದರು

ಯೂನಿಯನ್ ಬೋರ್ಡಿನ ಪಂಚ್ಯ, ಗೋಪಾಲ ಮುಖರ್ಜಿ ಆನರರಿ ಮೇಜಿಸ್ಟ್ರೇಟ್ ಸುರೇಶಚಂದ್ರ, ತುಳಸೀದಾಸ ಸರಕಾರರು ಬಾರಸಾತ ಠಾಣಾಕ್ಕೆ ಮತ್ತು ಸಬ್ ಡಿವಿಜನಲ್ ಆಫೀಸರರಿಗೆ ಅಂದಿನ ಸಂಗತಿಗಳನ್ನು ತಿಳಿಸಿ ಆ ದಿನ ಸಂಜೆ ಅವರ ರಕ್ಷಣೆಯನ್ನು ಕೋರಿದರು. ಅನಂತರ ತಾ. ೧೮ ಮತ್ತು ೧೯ಕ್ಕೆ ನಿವೋಧಾಯಿ ಹಳ್ಳಿಯಲ್ಲಿ ೪ ಜನ ಪೋಲಿಸರನ್ನು ಇಡಬೇಕೆಂದು ಎಸ್. ಡಿ. ಓ. ರವರು ಠಾಣಾಧಿಕಾರಿಗಳಿಗೆ ವಿಧಿಸಿದರು. ಫಿರ್ಯಾದಿಗಳು ಸಬ್ ಡಿವಿಜನಲ್ ಆಫೀಸರರಿಂದ ಠಾಣಾಧಿಕಾರಿಗಳಿಗೆ ಲಿಖಿತ ಸೂಚನೆಗಳನ್ನು ತೆಗೆದುಕೊಂಡು ಹೋದರು. ಆದರೆ ದುರ್ದೈವದಿಂದ ೧೮ನೇ ತಾರೀಕು ಮುಂಜಾನೆ ಆ ಹಳ್ಳಿಯಲ್ಲಿ ಯಾವ ಪೋಲಿಸ್ ಕಾನಸ್ಟೇಬಲನೂ ಇರಲಿಲ್ಲ. ಆ ದೆಸೆಗೆಟ್ಟ ಗುಂಡುಹಾರಿಸುವಿಕೆಯೂ ಸಂಭವಿಸಿತು. ಮರುದಿನ ಮೇ. ೧೮ಕ್ಕೆ ಮುಂಜಾನೆ ಸುಮಾರು ೨೫ ಜನ ಸಿಪಾಯಿಗಳು ಆ ಸ್ಥಳಕ್ಕೆ ಬಂದರು ಇವರಲ್ಲಿ ಸುಮಾರು ೧೨-೧೫ ಜನರು ನಿವೋಧಾಯಿ ಹಳ್ಳಿಯನ್ನು ಹೊಕ್ಕರು ಹಳ್ಳಿಯ ಜನರನ್ನು ಮತ್ತು ಹೆಣ್ಣು ಮಕ್ಕಳನ್ನು ಬಾಯಿಗೆ ಬಂದಂತೆ ಬೈಯುತ್ತ ಹಳ್ಳಿಯ ಬೀದಿಗಳಲೆಲ್ಲ ಅಡ್ಡಾಡತೊಡಗಿದರು, ಅಲ್ಲದೆ ತಮ್ಮ ಪಿಸ್ತೂಲ್ ಗುಂಡುಗಳಿಂದ ಜನರನ್ನು ಬೆದರಿಸಹತ್ತಿದರು ಅವರು ರತನ್‌ದಾಸನೆಂಬ ಸಿಂಪಿಗನ ಮನೆಯನ್ನು ಹೊಕ್ಕು ಅವನಿಗೆ ಹೊಡೆದರು. ಅವರು ಮತ್ತೆ ರಬೀನ ಬೋಸರ ತೋಟವನ್ನು ಹೊಕ್ಕು ಮನೆಯ ಬಾಗಿಲನ್ನು ಒದ್ದು ಮನೆಯಲ್ಲಿಯ ಹೆಣ್ಣುಮಕ್ಕಳ ಮೇಲೆ ಕೈಮಾಡುವುದಾಗಿ ಬೆದರಿಕೆ ಹಾಕಲು ಗಾಬರಿಗೊಂಡು ಮನೆಯವರು ಗೋಳಿಟ್ಟರು. ಹಳ್ಳಿಯ ಸುಮಾರು ೪೦-೫೦ ಜನರು ಅವರನ್ನು ಬಿಡಿಸಲು ಅಲ್ಲಿಗೆ ಧಾವಿಸಿದರು. ಕೂಡಲೇ ಆ ಸೈನಿಕರು ಸಮೀಪದಲ್ಲಿಯೇ ಬಿಡಾರಮಾಡಿಕೊಂಡು ನಿಂತ ಉಳಿದ ಸೈನಿಕರಿಗೆ ಬರಲು ಸೀಟಿಯನ್ನೂದಿದರು. ಕೂಡಲೇ ಅವರು ಆ ಸ್ಥಳಕ್ಕೆ ಬಂದರು.

ಸುಶಿಲ್ ಮತ್ತು ಕಾಂಚಿಲಾಲ್ ವಿಜಯ ಕುಮಾರ್ ಮೂಕರ್ಜಿ ಶಂಭೂನಾಥ ದತ್ತ ಮತ್ತು ಸಂತೋಷನಾಥರೆಂಬ ನಾಲ್ಕೈದು ತರುಣರು ಸೈನಿಕರ ಸಮೀಪಕ್ಕೆ ಹೋಗಿ ನಿರಪರಾಧಿ ಜನರನ್ನು ಈ ರೀತಿ ಗಾಬರಿಗೊಳಿಸಬೇಡಿರೆಂದು ಬಿನ್ನವಿಸಿಕೊಂಡು ಅವರು ಆ ಸ್ಥಳವನ್ನು ಬಿಟ್ಟು ಹೋಗಲು ಕೇಳಿಕೊಂಡರು. ಸೈನಿಕರು ಸಿಟ್ಟಿಗೆದ್ದು, ಸುಶಿಲ್ ಮತ್ತು ಕಾಂಚಿಲಾಲನ ತಲೆಗೆ ತಮ್ಮ ಬಂದೂಕಿನ ಮೊನೆಯಿಂದ ಬಲವಾಗಿ ಹೊಡೆದರು. (ಅವರೀಗ ಕಲಕತ್ತಾ ಮೆಡಿಕಲ್ ಸ್ಕೂಲ್‌ಹಾಸ್ಪಿಟಲ್‌ನಲ್ಲಿ ಚಿಕಿತ್ಸೆ ಹೊಂದುತ್ತಾರೆ.) ಅದರಿಂದ ಹಳ್ಳಿಗರೆಲ್ಲರೂ ಗಾಬರಿಗೊಂಡರು ಮತ್ತು ಓಡಿಹೋಗಲು ಪ್ರಯತ್ನಿಸಿದರು, ಆಗ ವಿಜಯ ಮುಕರ್ಜಿಯೆಂಬವನನ್ನು ಸಿಪಾಯಿಗಳು ಕೆಳಗೆಕೆಡಹಿದರು ಇಬ್ಬರಲ್ಲಿಯೂ ದ್ವಂದ್ವ ನಡೆಯಿತು ಅವನು ಸಮೀಪದ ಕೆರೆಯಲ್ಲಿ ಬಿದ್ದನು. ಸಿಪಾಯಿಗಳು ಅವನನ್ನು ಹಿಡಿದು ನೀರಿನಲ್ಲಿ ಮುಳುಗಿಸಿದರು ಅನಂತರ ಹಳ್ಳಿಗರು ಕೋಪೋದ್ರಿಕ್ತರಾಗಿ ಅವನ ಸಹಾಯಕ್ಕೆ ಧಾವಿಸಿದರು ಅವರಲ್ಲಿ ಕೆಲವರು ಸಿಪಾಯಿಗಳ ಮೇಲೆ ಕಲ್ಲುಗಳನ್ನು ಎಸೆದರು, ಸಿಪಾಯಿಗಳು ವಿಜಯನನ್ನು ಕೆರೆಯಲ್ಲಿಯೇ ಬಿಟ್ಟು ೬ ಸುತ್ತು ಗೋಳಿಬಾರು ಮಾಡಿದರು. ಇದರಿಂದ ವಿಜಯನಿಗೆ ಗಾಯವಾಗಿ ಅವನು ಕೆಳಗೆ ಬಿದ್ದನು. ಸಂತೋಷನಾಥ ಮತ್ತು ಶಂಭುದತ್ತರಿಗೂ ಗಾಯಗಳಾದವು. ಇವರನ್ನು ಕಲ್ಕತ್ತಾ ಮೆಡಿಕಲ್ ಸ್ಕೂಲ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸಾಗಿಸಲಾಗಿದೆ. ಸಂತೋಷನಾಥರ ಸ್ಥಿತಿ ತೀರಾ ಚಿಂತಾಜನಕವಾಗಿದೆ. ಗೋಳಿಬಾರು ಮಾಡಿದ ಕೂಡಲೇ ಸೈನಿಕರು ಮಿಲಿಟರಿ ಲಾರಿ ಇದ್ದ ಸ್ಥಳದವರೆಗೆ ವಿಜಯನನ್ನು ಎಳೆದುಕೊಂಡು ಹೋಗಿ ಆ ಸ್ಥಳವನ್ನು ಬಿಟ್ಟರು. ಸಿಪಾಯಿಗಳು ಹೊರಟು ಹೋದನಂತರ ಹಳ್ಳಿಗರು ಅವನನ್ನು ಹುಡುಕಹತ್ತಿದರು, ಸುದರ್ಶನ ಮುಕರ್ಜಿ, ಶ್ರೀಪಾದ ಮುಕರ್ಜಿ, ಬಜಮೋಹನ ಬೋಸ ಮತ್ತು ಉಳಿದವರು ಹುಡುಕಹತ್ತಿದರು. ವಿಜಯಕುಮಾರನನ್ನು ರೈಲ್ವೆ ಹೋಮ್ ಸಿಗ್ನಲ್‌ನ ಹತ್ತಿರ ರಬೀಂದ್ರರ ತೋಟದ ಸಮೀಪದಲ್ಲಿ ಒಂದು ಕಂದಕದ ಕಂಟಿಯಲ್ಲಿ ನರಳುತ್ತ ಬಿದ್ದುದು ಅವರಿಗೆ ಕಂಡುಬಂತು ಅವನ ಕರುಳುಗಳನ್ನೆಲ್ಲಾ ಹಿರಿದು ಹೊರಗೆ ತೆಗೆದಿದ್ದು ಅವನು ಸಾಯುವ ಸ್ಥಿತಿಯಲ್ಲಿದ್ದನು. ಸಮೀಪದ ಶಾಲೆ ಬರಿಗೆ ಅವನನ್ನು ಕರೆದುಕೊಂಡು ಹೋಗಲಾಯಿತು. ಆವನು ಅಲ್ಲಿ ಮರಣಹೊಂದಿದನು ಸಾಯುವಾಗ ನನ್ನನ್ನು ಎಳೆದುಕೊಂಡುಹೋಗಿ ಬೂಟ್‌ಗಾಲಿನ ಸೈನಿಕರು ಎದೆಯ ಮೇಲೆ ಬೆನ್ನಿಗೆ ತುಳಿದಾಡಿದರು, ದೇಹದ ಉಳಿದ ಭಾಗಗಳ ಮೇಲೆಯೂ ಬೂಟಿನ ಒದೆತ ಬಿದ್ದವು, ಅಲ್ಲದೆ ಬರ್ಚಿಯಿಂದಲೂ, ಇರಿಯಲಾಯಿತು ಎಂದ. ಅವನಿಗೆ ಹೆಚ್ಚಿನದೇನೂ ಹೇಳಲಾಗಲಿಲ್ಲ ಕೂಡಲೇ ಅವನು ಮರಣ ಹೊಂದಿದನು

ಇದೊಂದು ಬೇಕೆಂದೇ ಮಾಡಿದ ಅಮಾನುಷ ಕೊಲೆ, ಇಡೀ ಹಳ್ಳಿಯು ಗಾಬರಿಗೊಂಡಿದೆ, ಪೋಲಿಸ್ ಅಧಿಕಾರಿಗಳು ಇದಕ್ಕೂ ಸ್ವಲ್ಪ ಹೆಚ್ಚಾಗಿ ದಕ್ಷರಾಗಿದ್ದರೆ ಗಂಡಾಂತರವನ್ನು ತಪ್ಪಿಸಬಹುದಿತ್ತು ಚಿಂತಾಜನಕ ಪರಿಸ್ಥಿತಿಯಲ್ಲಿದ್ದ ಸಂತೋಷನಾಥರು ತಾ ೨೦ನೇ ಮುಂಜಾನೆ ಕಲ್ಕತ್ತಾ ಮೆಡಿಕಲ್ ಸ್ಕೂಲ್ ಹಾಸ್ಪಿಟಲ್‌ನಲ್ಲಿ ಮರಣ ಹೊಂದಿದರು"

-ಈ ವರದಿಯು ಸತ್ಯವಾಗಿದ್ದರೆ ಭಾರತರಕ್ಷಣೆಗಾಗಿರುವವೆಂದು ಹೇಳಲ್ಪಡುವ ಸಿಪಾಯಿಗಳ ಈ ಸ್ವಚ್ಛಂದವೃತ್ತಿಯ ಒಗ್ಗೆ ಟೀಕೆಮಾಡುವ ಅವಶ್ಯವಿಲ್ಲ

ಪಿರ್ ಪಗಾರೋರನ್ನು ಗಾಂಧಿಜಿ ಭೇಟಿಯಾಗುವರೆ?

"ಹೈದರಾಬಾದಿನಿಂದ ನನಗೊಂದು ತಂತಿ ಬಂದಿದೆ, ಅದರಲ್ಲಿ ನನ್ನೊಡನೆ ಸಿಂಧಿಗೆ ಹೋಗಲು, ಅಥವಾ ಪಿರ್‌ಗಾರ್ ಸೆರೆಯಲ್ಲಿರುವ (ಹುರರ ಮುಖಂಡರು) ವರನ್ನು ಭೇಟಿಯಾಗಲು ಕೇಳಿಕೊಂಡಿರುವರು. ನನಗೆ ಸಿಂಧಿಗೆ ಹೋಗಲು ಆಗುವುದಿಲ್ಲವೋ ಎಂದು ನನ್ನ ಅಂಜಿಕೆಯಿದೆ; ಪ್ರಯತ್ನಮಾಡಿದರೆ ಜಯಕಾರಿಯಾಗುವ ದಾರಿ ನಾನು ತಿಳಿಸಿದೇನೆ ಪಿರ್ ಪಿಗಾರೋರರನ್ನು ನೋಡುವ ವಿಷಯದಲ್ಲಿ, ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಏರ್ಪಾಡು ಮಾಡಿದರೆ ನಾನು ಸಂತೋಷದಿಂದ ಭೇಟಿಯಾಗುವೆನು"

- ಗಾಂಧಿಜಿ

ಶ್ರೀ ಎನ್. ಎಲ್. ಉಪಾಧ್ಯಾಯ

ಅವರು ಕಲ್ಲಿಕೋಟೆಯಲ್ಲಿ ತಾ. ೩ರ ತನಕ ಫ್ಯಾಸಿಸ್ಟ್ ವಿರೋಧ ಉತ್ಸವದಲ್ಲಿ ಭಾಗಿಯಾಗಲು ತೆರಳಿರುವರು. ಇವರ ತಮ್ಮ ಶ್ರೀ ಎನ್. ಕೆ. ಉಪಾಧ್ಯಾಯರು ದ. ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿ ಗರಿಲ್ಲಾ ಯುದ್ಧ ಶಿಕ್ಷಣವನ್ನು ಪಡೆಯಲು ಲಾಹೋರಿಗೆ ಹೋಗಿರುವರು

ಜರ್ಮನಿ ಮೇಲೆ ಬ್ರಿಟಿಷರು ಧಾಳಿಯಿಟ್ಟರು!

ಖಾರ್ಕೋವ್ ಕಾಳಗವು ಕೊನೆಗೊಂಡಿತೆ?

ಲಿಬಿಯದಲ್ಲಿ ಭೀಕರ ಟ್ಯಾಂಕ್ ಯುದ್ಧ

ಅಮೇರಿಕದ ಹಡಗ ತಯಾರಿಕೆ

ಮೇ 22ರಂದು ಅಮೇರಿಕದಿಂದ 19 ಹಡಗು ಕೇಂದ್ರದಿಂದ 30 ಕಾರ್ಗೋ ಹಡಗುಗಳು ಹೊರಗೆ ಕಳುಹಿಸಲ್ಪಟ್ಟವು ಮೊದಲು ಸಪ್ಟಂಬರ 27ರಲ್ಲಿ 14 ಹಡಗುಗಳು ಹೊರಗೆ ಕಳುಹಿಸಲ್ಪಟ್ಟವೆ. ಇಂದು ದಿವಸಕ್ಕೆರಡರಂತೆ ತಯಾರಾಗುತ್ತಿವೆ ಮುಂದೆ ದಿನಕ್ಕೆ ಮೂರರಂತೆ ಮಾಡುವ ಯೋಜನೆ ಇದೆ ಈ ವರ್ಷ ಜನವರಿ ಮತ್ತು ಮೇ ತಿಂಗಳಲ್ಲಿ ಅಮೇರಿಕ 120 ಹಡಗ ಕಟ್ಟಿರುವುದು ಹಿಂದೆ ಒಂದೊಂದು ಹಡಗ ಕಟ್ಟಲು ವರ್ಷ 1 ಹಿಡಿಯುತಿತ್ತು ಈಗ 90 ದಿನಗಳೊಳಗೆ ಮುಗಿಯುತ್ತದೆ ಇನ್ನುಮುಂದೆ 75 ದಿವಸ ತಾಗಬಹದು ಎಲ್ಲೋರಿನ್ ಎಂಬ ಕಾರ್ಖಾನೆಯಲ್ಲಿ ಹಲವು ವಿಮಾನಗಳು ತಯಾರಾಗುತ್ತಿವೆ

ಮಿತ್ರ ಮತ್ತು ಅಕ್ಷ ರಾಷ್ಟ್ರಗಳ ವಿಮಾನ ಉತ್ಪತ್ತಿ

ಮಿತ್ರರಾಷ್ಟ್ರಗಳು ತಿಂಗಳೊಂದರ 8,600 ವಿಮಾನಗಳನ್ನು ತಯಾರಿಸುತ್ತ ದೆಂದೂ ಅಕ್ಷರಾಷ್ಟ್ರಗಳು ತಿಂಗಳೊಂದರ 4100 ವಿಮಾನಗಳಾಗುತ್ತಿವೆಯೆಂದೂ ಲೆಕ್ಕಹಾಕಿದೆ ಜರ್ಮನಿ ಮತ್ತು ನಾಜಿ ಆಕ್ರಮಿತ ರಾಷ್ಟ್ರಗಳ ತಿಂಗಳೊಂದರ 2900, ಇಟಲಿ 700 ಜಪಾನು 500 ವಿಮಾನಗಳನ್ನು ತಯಾರಿಸುತ್ತಿವೆ ಅಮೆರಿಕದಲ್ಲಿ ತಿಂಗಳೊಂದರ 3300, ಬ್ರಿಟನಿನಲ್ಲಿ 2400 ಮತ್ತು ರಶ್ಯದಲ್ಲಿ 2900 ವಿಮಾನಗಳು ತಯಾರಾಗುತ್ತಿವೆ ಅಮೆರಿಕವೊಂದೇ 1942ರಲ್ಲಿ 60,000 ವಿಮಾನ ತಯಾರಿಸುವ ಯೋಜನೆ ಮಾಡಿದೆ,

ಬ್ರಿಟನಿನ ಯುದ್ಧಪ್ರಯತ್ನ

14ರಿಂದ 65 ವಯಸ್ಸಿನೊಳಗಿನ ಬ್ರಿಟನಿನ 33,000000 ಜನರಲ್ಲಿ 22, 000,000 ಮಂದಿ ಯುದ್ಧಪ್ರಯತ್ನದಲ್ಲಿ ನಿರತರಾಗಿದ್ದಾರೆ ಅಲ್ಲದೆ ಗೌರವಾರ್ಥ ಕೆಲಸಮಾಡುವ ಮಿಲಿಯಾಂತರ ಮಂದಿ ಬೇರೆ ಇದ್ದಾರೆ

ಅರ್ಧ ಮಿಲಿಯ ಜರ್ಮನರ ಕೊಲೆ

1939ನೇ ಸಪ್ಟಂಬರದಿಂದ ಜರ್ಮನರಾಗಿದ್ದ ರಾಷ್ಟ್ರಗಳಲ್ಲಿ ಅರ್ಧ ಮಿಲಿಯಕ್ಕಿಂತ ಮಿಕ್ಕಿದ ಜನರು ಗಂಡಿನೇಟಿಗೆ ಬಲಿಯಾಗಿರುವರೆಂದು ಹೇಳಲಾಗುತ್ತಿದೆ ರಶ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳಲ್ಲಿ 40,000 ಮಡಿದಿರುವರಂತೆ ಪೋಲೆಂಡಿನಲ್ಲಿ 87,500, ಯುಗೊಸ್ಲವಿಯದಲ್ಲಿ 30,000 ಫ್ರಾನ್ಸ್ ಮತ್ತು ಬೆಲ್ಜಿಯಂಗಳಲ್ಲಿ 1500, ಹೊಲೆಂಡಿನಲ್ಲಿ 800, ನೋರ್ವೆಯಲ್ಲಿ 150, ಗ್ರೀಸಿನಲ್ಲಿ 150 ಮಂದಿ ಕೊಲೆಮಾಡಲ್ಪಟ್ಟಿರುವರೆಂದು ಅಂದಾಜುಮಾಡಲಾಗಿದೆ.

ಅಮೇರಿಕದ ಪ್ರಚಂಡ ಯುದ್ಧ ಯತ್ನ

ಈ ವರ್ಷದ ಅಂತ್ಯದೊಳಗೆ ಅಮೇರಿಕದಲ್ಲಿ 17,400,000 ಜನರು ಯುದ್ಧೋದ್ಯಮದಲ್ಲಿ ನಿರತರಾಗಿರುವರು. 4 ಮಿಲಿಯಕ್ಕೆ ಮಿಕ್ಕಿದವರು ಸೇನೆಗೆ ಸೇರುವರು. ಯುದ್ಧಾರಂಭದಲ್ಲಿ ಶೇಕಡಾ 30 ಮಂದಿ ಕೆಲಸಗಾರರು ಯುದ್ಧ ಕೈಗಾರಿಕೆ ಕೆಲಸಮಾಡುತ್ತಿದ್ದರು. ಈಗ ಆ ಪ್ರಮಾಣ ಶೇಕಡಾ 60ಕ್ಕೆ ಏರಿದೆ

ಚೀನಕ್ಕೆ ವಿಮಾನಮಾರ್ಗದಿಂದ ಸಹಾಯ.

ಜಪಾನರು ಬರ್ಮಾ ರಸ್ತೆಯನ್ನು ಮುರಿದರೂ, ಚೀನಕ್ಕೆ ಯುದ್ಧಸಾಮಗ್ರಿಗಳು ಅತ್ಯಂತ ಶೀಘ್ರವಾಗಿ ಕಾರ್ಗೋ ಮೂಲಕ ಅಮೇರಿಕನರ. ವಿಮಾನ ಮೂಲಕ ಸಾಗಿಸುತ್ತಿರುವರೆಂದು ಕೇಳಿ ಬರುತ್ತಿದೆ.

ಇಂಗ್ಲೆಂಡಿಗೆ ಅಮೇರಿಕದ ಸೈನ್ಯ

ಟೇಂಕ್ ಫಿರಂಗಿ ಮೊದಲಾದ ಶಸ್ತ್ರಸಜ್ಜಿತ ಅಮೇರಿಕನ್ ಸೈನ್ಯವು ಬ್ರಿಟನಿಗೆ ಬಂದು ಮುಟ್ಟಿರುವುದಾಗಿ ಸುದ್ದಿ, ದೊಡ್ಡ ಅಮೇರಿಕನ್ ಸೇನೆಯೊಂದು ಈಚೆಗೆ ಉತ್ತರ ಆಯರ್ಲೆಂಡಿಗೆ ಬಂದಿರುವುದು.

ಲಾವಲರ ಮೇಲೆ ಹಿಟ್ಲರನ ಒತ್ತಾಯ

ಫ್ರಾನ್ಸಿಗೆ ಸೇರಿದ್ದ ಮಡಗಾಸ್ಕರ್ ಮತ್ತು ಮಾರ್ಟಿನಿಕ್ ದ್ವೀಪಗಳನ್ನು ಮಿತ್ರರಾಷ್ಟ್ರಗಳು ವಶಪಡಿಸಿಕೊಂಡವಷ್ಟೆ? ಅದಕ್ಕೆ ಪ್ರತಿಯಾಗಿ ಉತ್ತರ ಆಫ್ರಿಕದ ಟ್ಯೂನಿಸನನ್ನು ಲಾವಲರು ಅಕ್ಷರಾಷ್ಟ್ರಗಳ ಸೇನಾನೆಲೆಯಾಗಿ ಮಾಡಲು ಬಿಟ್ಟುಕೊಡಬೇಕೆಂದು ಹಿಟ್ಲರನ ಒತ್ತಾಯವಂತೆ

ಮೆಕ್ಸಿಕೋ ಯುದ್ಧ ಘೋಷಿಸಿದೆ.

ಅಕ್ಷರಾಷ್ಟ್ರಗಳ ವಿರುದ್ಧ ಮೆಕ್ಸಿಕೋ ಸರಕಾರವು ಯುದ್ಧ ಸಾರಿರುವುದಾಗಿ ಪ್ರಕಟವಾಗಿದೆ

ಜಪಾನರು ವಿಷಪ್ರಯೋಗ ಮಾಡಿದರೆ?

ಚೀನಾ ಯುದ್ಧದಲ್ಲಿ ವಿಷವಾಯು ಪ್ರಯೋಗಿಸಿ ಚೀನೀಯರನ್ನು ಹಾನಿಗೊಳಿಸಿದರೆಂದು ಸುದ್ದಿ ಪ್ರಕಟವಾಗಿದೆ

ಲಿಬಿಯ ಸಂಗ್ರಾಮ

ಜರ್ಮನ್ ಸೈನ್ಯಗಳು ಲಿಬಿಯದಲ್ಲಿ ಬ್ರಿಟಿಷ್ ಸೇನೆಗಳನ್ನು ಎದುರಿಸಿವೆ ಅಲ್ಲಿ ಟೇಂಕ್ ಕಾಳಗ ಅತ್ಯುಗ್ರವಾಗಿದೆ. ತೋಬ್ರುಕನ್ನು ವಶಪಡಿಸಿಕೊಳ್ಳಬೇಕೆಂದು ಸೇನಾಪತಿ ರೋಮೆಲನ ಉದ್ದೇಶವಿದೆ ಭೂಮಧ್ಯ ಸಮುದ್ರದಲ್ಲಿ ನೌಕಾ ಕಾಳಗ ನಡೆಯುವಷ್ಟಿದೆ. ಬ್ರಿಟಿಷ ಸಬ್‌ಮೇರಿನ್ ೧,೨೦೦ ಟನ್ ಭಾರದ ಒಂದು ಶತ್ರು ಹಡಗವನ್ನು ಮುಳುಗಿಸಿತೆಂದೂ ತಿಳಿದುಬರುತ್ತದೆ. ಜರ್ಮನರಿಗೆ ಲಿಬಿಯದಲ್ಲಿ ನೀರಿನ ಸರಬರಾಯಿ ಬಹಳ ಕಷ್ಟಕರವಾಗಿದೆ. ಅಲ್ಲಿನ ಉರಿಬಿಸಿಲೂ ಅವರಿಗೆ ಅನುಕೂಲವಾಗಿಲ್ಲ

ಅಮೇರಿಕನರು ಫ್ರಾನ್ಸಿಗೆ ಬಂದಿಳಿವರೆ?

ಅಮೇರಿಕದ ಸೇನೆಯು ಫ್ರಾನ್ಸನಲ್ಲಿ ಬಂದಿಳಿದಿದೆಯೆಂದು ಜನರಲ್ ಮಾರ್ಶಲರು ಹೇಳಿದ ವಾರ್ತೆ ಹಬ್ಬಿಸಲಾಗಿದೆ, ಇಂದು ಅಮೇರಿಕದ ಸೈನಿಕ ಸಂಖ್ಯೆಯು ಬಹಳ ಹೆಚ್ಚಿರುವುದು

ಜಪಾನಿನಲ್ಲಿ ಜನಸಂಖ್ಯೆ ಹೆಚ್ಚಿಸುವ ಯತ್ನ

ಜಪಾನಿನಲ್ಲಿ ಜನಸಂಖ್ಯೆ ಹೆಚ್ಚಿದ್ದು, ತಮಗೆ ಉಳಕೊಳ್ಳಲು ವಸಾಹತು ಬೇಕೆಂದು ಹಿಂದೆ ಜಪಾನ್ ಅಧಿಕಾರಿಗಳು ಹೇಳುತ್ತಿದ್ದರಷ್ಟೆ? ಆದರೆ ಈಗ ಅಲ್ಲಿ ಜನಸಂಖ್ಯೆ ಹೆಚ್ಚಿಸಲು ಪ್ರೋತ್ಸಾಹ ಕೊಡಲಾಗುತ್ತದೆ ಸಣ್ಣ ಪ್ರಾಯದಲ್ಲಿ ಮದುವೆ, ಹೆಚ್ಚು ಮಕ್ಕಳನ್ನು ಮಾಡಲು ಪ್ರಚಾರ, ಹೆತ್ತವರ ದಿನ, ಕುಟುಂಬ ದಿನ ಮೊದಲಾದವು ಆಚರಣೆಗೆ ಬಂದಿವೆ

ಹೈಡ್ರಿಕರ ಕೊಲೆ ಯತ್ನ!
6 ಜನರಿಗೆ ಮರಣ ದಂಡನೆ

ಮೊರೇವಿಯಾ ಬೊಹೇಮಿಯಾಗಳ ಪ್ರೊಟೆಕ್ಟರರಾದ ಗೆಸ್ಟಪೋ ಮುಖಂಡರಾಗಿದ್ದ ಹೈಡ್ರಿಕರು ಪ್ರಾಗಿನಲ್ಲಿ ಪ್ರಾಣಾಪಾಯಕ್ಕೆ ಬಲಿಬಿದ್ದು ವಿಷಮ ಪರಿಸ್ಥಿತಿಯಲ್ಲಿದ್ದಾರೆ. ಇವರ ಕೊಲೆಯ ಯತ್ನ ಮಾಡಿದ ಆರೋಪದಲ್ಲಿ ಪ್ರಾಗಿನಲ್ಲಿ 6 ಜನರನ್ನು ಗಲ್ಲಿಗೇರಿಸಲಾಗಿದೆಯೆಂದೂ ಇವರಲ್ಲಿ ಇಬ್ಬರು ಮಹಿಳೆಯರಿರುವರೆಂದೂ ವಾರ್ತೆ ಅವರ ಸ್ಥಾನದಲ್ಲಿ ಬೇರೊಬ್ಬ ಪ್ರೊಟೆಕ್ಟರರನ್ನು ನೇಮಿಸಲಾಗಿದೆ.

ಇಟಲಿಯೊಡನೆ ವಿಚಿ ಸಂಧಾನ

ನೀಸ್, ಕಾರ್ಸಿಕಾ ಮತ್ತು ಟ್ಯುನಿಸ್‌ಗಳನ್ನು ತನಗೆ ಕೊಡಬೇಕೆಂದು ಇಟಲಿಯು ಕೇಳುತ್ತಿರುವ ವಿಷಯ ಸಂಧಾನ ನಡೆಸಲು ಲಾವಲರ ಕಾರ್ಯದರ್ಶಿ ರೋಮಿಗೆ ತೆರಳಿದ್ದಾರೆ

1943ರ ಅಂತ್ಯದಲ್ಲಿ ಯುದ್ಧದ ಕೊನೆ

ಎಂಬುದಾಗಿ ಅಮೇರಿಕದಲ್ಲಿ ಅಭಿಪ್ರಾಯವಿದೆಯೆಂದು ಡೈಲಿ ಮೈಲ್ ಪ್ರಕಟಿಸುವುದು.

ವಾಶಿಂಗ್‌ಟನಿಗೆ ಲೂಯಿಸರ ಆಗಮನ!
ರೂಸ್‌ವೆಲ್ಟರೊಡನೆ ಬಾಜಪೇಯವರ ಮಾತುಕತೆ!

ಅಮೇರಿಕದ ರಾಯಭಾರಿಯಾಗಿ ಬಂದಿದ್ದ ಕರ್ನಲ್ ಲೂಯಿಸರು ಈಗ ವಾಶಿಂಗ್‌ಟನಿಗೆ ಬಂದಿರುವರು. ಅಲ್ಲಿ ಇಂಡಿಯನ್ ಏಜಂಟ್ ಜನರಲರಾಗಿರುವ ಸರ್ ಗಿರಿಜಾಶಂಕರ ಬಾಜಪೇಯವರು ಅಧ್ಯಕ್ಷ ರೂಸ್‌ವೆಲ್ಟರನ್ನು ಕಂಡು ಮಾತನಾಡಿದ್ದರು ತಾವು ಪರಸ್ಪರ ಹಿತಗಳ ಸಂಬಂಧದ ಮಾತುಕತೆ ನಡೆಸಿದೆಯೆಂದು ಬಾಜಪೇಯವರು ತಿಳಿಸಿದರು

ನೋಟೀಸು

ಮಂಗಳೂರು

ಡಿ। ಮು। ಕೋರ್ಟಿನಲ್ಲಿ

R E A No 127/42.
R E P No 816/31.

ಶೀತಮ್ಮ — ಅರ್ಜಿದಾರಳು
ಶಿಮಾಂ ಕುಂಞ — ರೆಸ್ಪೋಂಡೆಂಟರು

ಸದ್ರಿ ವ್ಯವಹರಣೆಯ ೨ನೇ ರೆಸ್ಪೋಂಡೆಂಟ ಮರಿಯಾನ ಸೋಜಬಾಯಿಗೆ—ಶಿಮಾಂ ಕುಞಿಂಞರ ಹೆಂಡ್ತಿ— ಮಂಗ್ಳೂರು ತಾಲ್ಲೂಕು ನರಿಂಗಾನ ಗ್ರಾಮದ ದೋಳಯೆಂಬಲ್ಲಿ—

ಮೇಲಣ R E P 816/31ನೇ ಅಮಲ್ದಾರಿಯಲ್ಲಿ ಕೊಡಲ್ಪಟ್ಟ ಸೇಲ್ ಸರ್ಟಿಫಿಕೇಟು ದುರುಸ್ತಿ ಪಡಿಸಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ R E A 127/42ನೇ ಅರ್ಜಿಯು ತಾ 10—6—42ಕ್ಕೆ ತನ್ನಿಗೆಯಲ್ಲಿದೆ ಆ ಬಗ್ಗೆ ನಿಮ್ಮ ಆಕ್ಷೇಪಗಳೇನಾದ್ರೂಯಿದ್ದರೆ ಅದನ್ನು ಆ ದಿವಸ ಕೋರ್ಟಿನ ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಜಾಹೀರುಮಾಡಿ ಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ಎಕ್ಸಪಾರ್ಟಿಯಾಗಿ ತೀರ್ಮಾನಿಸಲ್ಪಡುವುದು.

(By order of Court)

ಮಂಗಳೂರು } K Vyasa Rao,
ತಾ 4-5-42 } Advocate for Petr

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S 75/1942

ಉಳ್ಳಾಲ ರಮಾನಾಥ ಮಲ್ಯ—ವಾದಿ

ಮತ್ತು

ಉಚ್ಚ ಬ್ಯಾರಿ ಸಹಾ—ಪ್ರತಿವಾದಿರು

ಇವರೊಳಗೆ

೩ನೇ ಪ್ರತಿವಾದಿ ಕಟ್ಟ ಬೆಲ್ಲಚ—ಮುಂಡಪ್ಪ ಬೆಲ್ಲಚರ ಮಗ ಮಂಗಳೂರು ತಾಲೂಕು ಉಳ್ಳಾಲ ಗ್ರಾಮದ ಮಂಚಿಲ ಎಂಬಲ್ಲಿರುವವರಿಗೆ—

ಈ ಮೂಲಕ ತಿಳಿಯಪಡಿಸುವುದೇನಂದ್ರೆ ವಾದಿಯು ದಾವಾ ಆಸ್ತಿ ಸ್ವಾಧೀನತೆ ಗೇಣಿ ಬಾಕಿ, ಮಗ್ತೆ ವಗೈರೆ ನಿವೃತ್ತಿಗಳಿಗೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 25-6-42ಕ್ಕೆ ನಿಮ್ಮ ಜವಾಬಿನ ಬಗ್ಗೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ದಿವ್ಸ ನೀವು ಈ ಕೋರ್ಟಿನ ಮುಂದೆ ಹಗಲು ಘಂಟೆ 10-30ಕ್ಕೆ ಖುದ್ದು ನಿಂದಾಗಲೀ ಯಾ ವಕೀಲರ ಮುಖಾಂತರ ವಗೈರೆ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನವಾಗುವುದು.

By order of court

Mangalore } Janardan Malya
5-6-1942 } Pleader for Plaintiff

ಭಾರತದ ವಿಭಜನೆಯು ನನ್ನ ಉದ್ದೇಶವಲ್ಲ

ಭಾರತದ ವಿಭಜನೆ ನನ್ನ ಉದ್ದೇಶವಿಲ್ಲ

ರಾಜಾಜಿಯವರ ಪ್ರಕಟನೆ

ಶ್ರೀ ಸಿ. ರಾಜಗೋಪಾಲಾಚಾರ್ಯರು ದಕ್ಷಿಣ ಜಿಲ್ಲೆಗಳಲ್ಲಿಯ ತಮ್ಮ ಪ್ರವಾಸ ಕುರಿತು ಪತ್ರಿಕೆಗಳಿಗೆ ಒಂದು ಪ್ರಕಟನೆ ಕೊಟ್ಟು ತಮ್ಮ ಸಭೆಗಳಿಗೆ ಕೂಡಿದ ಜನಸಮ್ಮರ್ದ ನೋಡಲಾದುವುಗಳ ಉಲ್ಲೇಖ ಮಾಡಿ ದೇಶವನ್ನು ಶಾಯಂ ನಾಶದಿಂದ ಉಳಿಸಿಕೊಳ್ಳಲು ತಮ್ಮ ಮಾರ್ಗ ಒಂದರಿಂದಲೇ ಸಾಧ್ಯವಿದೆಯೆಂದು ತಮಗೆ ಮತ್ತಷ್ಟು ಹೆಚ್ಚು ಮನವರಿಕೆಯಾಗಿರುವದೆಂದು ಕಾಣಿಸಿದುವರು. ಹಿಂದುಸ್ಥಾನಕ್ಕೆ ಗಂಡಾಂತರವು ಪ್ರಾಪ್ತವಾಗುವದರೊಳಗಾಗಿ ಯುದ್ಧಮಾನ ರಾಷ್ಟ್ರಗಳಲ್ಲಿ ಒಪ್ಪಂದವುಂಟಾಗುವುದೆಂದು ತೋರುವುದಿಲ್ಲ ನನಗೆ ಇದು ಸ್ಪಷ್ಟವಾಗಿಯೇ ತೋರುತ್ತಿರುವುದು, ಆದರೆ ನನ್ನ ಜೊತೆಗಾರರಿಗೆ ಇದು ತೋರದಿರುವುದು ದುರ್ದೈವದ್ದಾಗಿದೆ, ಹೆಚ್ಚೆಂದರೆ ಗಾಂಧಿಜೀಯವರು ನನ್ನ ಸೂಚನೆಗೆ ವಿರುದ್ಧವಿರುವುದು, ಮುಂತಾಗಿ ಉಲ್ಲೇಖಿಸಿದ್ದಾರೆ

ಇದೇ ಪ್ರಕಟನೆಯಲ್ಲಿ ರಾಜಾಜಿಯವರು ತಮ್ಮ ಸೂಚನೆಯ ಸಮರ್ಥನಾರ್ಥವಾಗಿ ೪-೯-೪೦ನೇ ಇಸ್ವಿಯ ಹರಿಜನದಲ್ಲಿಯ ಕೆಲವು ಅವತರಣಿಕೆಗಳನ್ನು ಕೊಟ್ಟಿರುವರು ಅದರಲ್ಲಿ ಗಾಂಧಿಯವರು ಈ ರೀತಿ ಉಲ್ಲೇಖಿಸಿರುವರು "ಹಿಂದೂ ಹಾಗು ಉಳಿದ ಜನರಿಗೂ ನಮಗೂ ಏನೂ ಸಾಮಾನ್ಯ ಸಂಬಂಧವಿಲ್ಲವೆಂದು ಆ ಕೋಟಿ ಮುಸಲ್ಮಾನರು ಹೇಳುವರೆಂದು ನನಗನಿಸುವುದಿಲ್ಲ ಅವರ ಮನಸಿನೊಳಗಿದ್ದುದನ್ನು ತಿಳಿದುಕೊಳ್ಳಬೇಕಾದರೆ ಸ್ಪಷ್ಟವಾಗಿ ಅವರಿಗೆ ತಿಳಿಸಿ ಮತಗಣನೆ ಮಾಡಬೇಕು ಇಂಥ ವಿಷಯಗಳನ್ನು ಪಂಚಾಯಿತಿಯಿಂದ ಬಗೆಹರಿಸುವದು ಸಾಧ್ಯವಿಲ್ಲ ಯಾಕಂದರೆ ಇದು ಸ್ವಯಂ ನಿರ್ಣಯದ ವಿಷಯವಿರುವುದು"

ನನ್ನ ಸೂಚನೆಯ ಉದ್ದೇಶವಾದರೂ ಹಿಂದುಸ್ಥಾನದ ಆ ಕೋಟಿ ಮುಸಲ್ಮಾನರನ್ನು ಪ್ರತ್ಯೇಕ ರಾಷ್ಟ್ರದಲ್ಲಿ ವಿಭಾಗಿಸುವದಿರುವದಿಲ್ಲ ಮುಸಲ್ಮಾನರ ಬಹುಸಂಖ್ಯಾಕರಿದ್ದ ಪ್ರದೇಶಗಳಿಗೆ ಸ್ವಯಂ ನಿರ್ಣಯದ ಅಧಿಕಾರ ಕೊಡುವುದೇ ಅದರ ಉದ್ದೇಶವಿರುವುದು ಕಾಂಗ್ರೆಸ್ ಲೀಗಗಳಲ್ಲಿ ಒಪ್ಪಂದವಾಗದೆ ಹಿಂದು ಮುಸ್ಲಿಂ ಐಕ್ಯವು ಸಾಧ್ಯವಿದೆಯೆಂದು ಯಾರಾದರೂ ನಂಬಿರುವರೇ ಹೇಗೆ? ಇನ್ನು ೪ ವರ್ಷ ಸುಮ್ಮನೆ ಕೂಡಿರೆಂದು ಯಾರಾದರು ಹೇಳಿದರೆ ಹಿಂದಿ ರಾಜಕಾರಣಿಗಳು ಅದರಲ್ಲಿ ವಿಶ್ವಾಸವಿಟ್ಟು ಸುಮ್ಮನೆ ಕೂಡುವರೇನು?

ಕನ್ನಡದಲ್ಲಿ ಹರಿಜನ ಪತ್ರಿಕೆ

ಹರಿಜನ ಪತ್ರಿಕೆಯ ಕನ್ನಡ ಪ್ರಕಟಣೆಯನ್ನು ಹುಬ್ಬಳ್ಳಿಯಿಂದ ಶ್ರೀ ಆರ್ ಆರ್ ದಿವಾಕರರು ಹೊರಡಿಸುವರೆಂದು ಶ್ರೀ ಮಹಾದೇವ ದೇಸಾಯಿಯವರು ಪ್ರಕಟಿಸಿದ್ದಾರೆ

ಸರ್ ಮಿರ್ಜಾ ಇಸ್ಮಾಯಿಲರು ಜಯಪುರದ ಪ್ರಧಾನ ಮಂತ್ರಿ

ಸರ್ ಮಿರ್ಜಾ ಇಸ್ಮಾಯಿಲರಿಗೆ ಜಯಪುರದ ಪ್ರಧಾನ ಮಂತ್ರಿ ಪದವಿ ದೊರಕಿದೆಯೆಂದು ತಿಳಿದಿದೆ

ರಾಜಾಜಿಯವರ ಬೆಂಬಲಿಗರು ರಾಜಿನಾಮೆ ಕೊಡಬೇಕು

ಎ ಐ ಸಿ ಸಿ. ಪ್ರಕಟಣೆ

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯಕ್ಕೆ ವಿರುದ್ಧವಾಗಿ ಪ್ರಚಾರ ಮಾಡುತ್ತಿರುವ ಶ್ರೀ ರಾಜಗೋಪಾಲಾಚಾರ್ಯರಿಗೆ ಬೆಂಬಲ ಕೊಡುವವರು ಕಾಂಗ್ರೆಸಿನ ಜವಾಬ್ದಾರಿ ಸ್ಥಳಗಳಿಗೆ ರಾಜಿನಾಮೆ ಕೊಡಬೇಕೆಂದು ಎ. ಐ. ಸಿ. ಸಿ. ಕಾರ್ಯದರ್ಶಿಗಳು ಒಂದು ಪರಿಪತ್ರ ಹೊರಡಿಸಿ

ಸ್ವಯಂ ನಿರ್ಣಯಾಧಿಕಾರ ಕೊಡುವುದು

ರಾಜಾಜಿ ಹೇಳುತ್ತಾರೆ

'ಕ್ರಿಪ್ಸ್ ಸಂಧಾನ ಮುರಿದದ್ದು ಸಂರಕ್ಷಣಾ ಖಾತೆಯ ವಿಚಾರದಲ್ಲಿ'

ರಾಜಾಜಿಗೆ ರಾಷ್ಟ್ರಪತಿಗಳ ಉತ್ತರ

ರಾಜಾಜಿ ಕೊಯಂಬುತ್ತೂರು ಸಭೆಯೊಂದರಲ್ಲಿ ಮಾತನಾಡುತ್ತಾ ಕ್ರಿಪ್ಸ್ ಸಂಧಾನ ಮುರಿದದ್ದು ಸಂರಕ್ಷಣೆ ಖಾತೆಯ ವಿಚಾರದಲ್ಲಿ ಅಲ್ಲ ಎಂದು ಹೇಳಿದ್ದಕ್ಕೆ, ರಾಷ್ಟ್ರಪತಿ ಅಜಾದರು ಉತ್ತರಕೊಡುತ್ತಾ ರಾಜಾಜಿ ಹೇಳಿದ್ದು ಸರಿಯಲ್ಲವೆಂದೂ, ಕ್ರಿಪ್ಸ್ ಮತ್ತು ತನ್ನೊಳಗೆ ನಡೆದ ಮಾತುಕತೆ ಪತ್ರವ್ಯವಹಾರಗಳನ್ನು ಪರಿಶೀಲಿಸಿದರೆ, ಸಂರಕ್ಷಣೆ ಖಾತೆಯ ವಿಚಾರದಲ್ಲಿ ಅದು ಮುರಿದುಹೋದುದೆಂದು ತಿಳಿದು ಬರುತ್ತದೆಂದೂ ಹೇಳಿದ್ದಾರೆ ಮುಂದುವರಿಸುತ್ತಾ ಮೌಲಾನರು "ನನ್ನ ಗೆಳೆಯರು ಅಕಸ್ಮಾತಾಗಿ ಹೊಸತೊಂದು ತತ್ವವನ್ನು ಕಂಡು ಹುಡುಕಿ, ನಮಗೇನು ಸಿಗದಿದ್ದರೂ ಚಿಂತೆಯಿಲ್ಲ, ಪ್ರಾಂತಿಕ ಆಡಳಿತ ಸಿಕ್ಕಿದರೆ ಸಾಕು ಎಂದು ಹೇಳುವುದನ್ನು ನೋಡಿದರೆ ಹೀಗೆ ಹೇಳುವುದೇನೂ ಆಶ್ಚರ್ಯವಲ್ಲವೆಂದಿರುವರು.

ನೇಶನಲ್ ಹೆರಾಲ್ಡಿಗೆ ಸಹಾಯ

ನೆಹರು ವಿನಂತಿ

ನೇಶನಲ್ ಹೆರಾಲ್ಡಿಗೆ ಸರಕಾರವು ಹಾಕಿದ ಜುಲ್ಮಾನೆಯನ್ನು ತುಂಬಲು ಸಾರ್ವಜನಿಕರು ಸಹಾಯಕೊಡಬೇಕಾಗಿ ಪಂಡಿತ ಜವಾಹಿರಲಾಲ ನೆಹರುಗಳು ಒಂದು ಬಿನ್ನಹ ಹೊರಡಿಸಿದ್ದಾರೆ

ಎಲ್ಲಾ ಸಾಧ್ಯವಾದ ಸಹಾಯ ಕಳುಹಿಸುವೆವು

ಕಾಮನ್ಸಿನಲ್ಲಿ ಅಟ್ಲಿಯವರ ಪ್ರಕಟಣೆ

ಡೆಪ್ಯುಟಿ ಪ್ರೈಮ್ ಮಿನಿಸ್ಟರರಾದ ಅಟ್ಲಿಯವರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಚೈನಕ್ಕೆ ಬ್ರಿಟನು ಎಲ್ಲಾ ಸಾಧ್ಯವಾದ ಸಹಾಯಗಳನ್ನು ಕಳುಹಿಸುವುದೆಂದು ಹೇಳಿದರು

ಹಿಂದು ವಿವಾಹ ಕಾನೂನು

ಬಹುಪತ್ನಿತ್ವ ನಿಷೇಧ

ಹಿಂದೂ ವಿವಾಹ ಕಾನೂನಿನಲ್ಲಿ ಬಹುಪತ್ನೀತ್ವ ಪದ್ಧತಿಯನ್ನು ತೆಗೆದುಹಾಕುವಂತೆ ಶಾಸನದಲ್ಲಿ ಬದಲಾವಣೆ ಮಾಡಲಾಗುವುದೆಂದು ರಾವ್ ಕಮಿಟಿ ಸೂಚನೆಯಿದೆ

ಕೇಂದ್ರ ಎಸೆಂಬ್ಲಿಗೆ ತಿರುಗಿ ಜೀವದಾನ

ಕೇಂದ್ರ ಎಸೆಂಬ್ಲಿ ಹಾಗೂ ಕೌನ್ಸಿಲ್ ಒಫ್ ಸ್ಟೇಟಿಗೆ ಅವಧಿಯನ್ನು ಬೆಳೆಸಿದ್ದು ಅದು ಬೇಗನೇ ಪ್ರಕಟಿಸಲ್ಪಡುವುದೆಂದು ತಿಳಿದಿದೆ ಅಸೆಂಬ್ಲಿ ಅವಧಿ ಹೀಗೆ ನಾಲ್ಕು ಸಲ ಬೆಳೆಸಲ್ಪಟ್ಟಿತು ನಾಲ್ಕನೇ ಸಲದ ಅವಧಿ ಈ ವರ್ಷದ ಸಪ್ಟೆಂಬರ ಕೊನೆಗೆ ಮುಗಿಯುವುದು ಇದರಂತೆ ಕೌನ್ಸಿಲ್ ಒಫ್ ಸ್ಟೇಟಿನ ೫ ವರ್ಷದ ಅವಧಿ ಈ ವರ್ಷ ಮುಗಿಯುವುದು ಕೇಂದ್ರ ಎಸೆಂಬ್ಲಿಯ ಶರದೃತು ಅಧಿವೇಶನವು ಅಕ್ಟೋಬರಿನಲ್ಲಿ ಕೂಡಬಹುದೆಂದು ತೋರುತ್ತದೆ

ರಂಗೂನ್ ಮೇಲೆ ಅಮೆರಿಕನ್ ವಿಮಾನಗಳ ಧಾಳಿ

ಅಮೇರಿಕದ ವಿಮಾನದಲದ ಬಾಂಬರ್ ವಿಮಾನಗಳು ಉತ್ತರ ಮತ್ತು ದಕ್ಷಿಣ ಬರ್ಮ ದೇಶದ ಮೇಲೆ ಹೋಗಿ ಧಾಳಿಯಿಟ್ಟವು ರಂಗೂನಿನ ನೌಕಾ ರಾಣ್ಯದ ಹಡಗದ ಮೇಲೆ ಬಾಂಬು ಒಗೆಯಲಾಗಿತ್ತು, ಧಾಳಿಯು ಸರಿಯಾಗಿ ಒಂದು ಎಣ್ಣೆ ಹಡಗವು ಜಲಸಮಾಧಿಹೊಂದಿದೆ. ಉಳಿದವುಗಳಿಗೆ ಹಾನಿಯೊದಗಿದೆ ಉತ್ತರದೇಶದ ಮಿಟಿಕಾಯಿನಾದಲ್ಲಿನ ವಿಮಾನಗಳ ಮೇಲೂ ಬಾಂಬು ಸುರಿಸಲಾಯಿತು

ಹಿಂದೂದೇಶದ ವಿಚಾರ ಅಂತರ್‌ರಾಷ್ಟ್ರೀಯ ಪಂಚಾಯತಿ

ರೂಸ್‌ವೆಲ್ಟರು ಮಧ್ಯಸ್ಥರಾಗಿ ಇಂದೋರ್ ಮಹಾರಾಜರ ಪತ್ರ

ಭಾರತಕ್ಕೂ ಬ್ರಿಟನಿಗೂ ಇರುವ ವೈಮನಸ್ಸನ್ನು ಅಧ್ಯಕ್ಷ ರೂಸ್‌ವೆಲ್ಟರು ಚೀನ ರಷ್ಯಗಳನ್ನು ಕೂಡಿಸಿಕೊಂಡು ಮಧ್ಯಸ್ಥಿಕೆಯಿಂದ ತೀರ್ಮಾನಿಸಬೇಕೆಂದೂ, ಅಮೇರಿಕವು ಭಾರತಕ್ಕೆ ರಾಜಕೀಯ ಮತ್ತು ಸೈನ್ಯದೃಷ್ಟಿಯಿಂದ ಸಹಾಯ ಮಾಡಬಹುದೆಂದೂ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರಿಗೆ ಇಂದೋರ್ ಮಹಾರಾಜರು ಒಂದು ಬಹಿರಂಗ ಪತ್ರ ಬರೆದಿರುವರು

ಜರ್ಮನಿಯ ಮೇಲೆ ಬ್ರಿಟಿಷರ ವಿಮಾನ ಧಾಳಿ

ಜರ್ಮನಿ ಮೇಲೆ ಸಾವಿರಾರು ಸಂಖ್ಯೆಯಿಂದ ಬ್ರಿಟಿಷ ವಿಮಾನಗಳು ಧಾಳಿಯಿಟ್ಟವು ಮೊದಲನೆ ಸಲ ಸಾವಿರ ವಿಮಾನಗಳು, ಎರಡನೆ ಸಲ ಸಾವಿರದ ಮೂವತ್ತಾರು ವಿಮಾನಗಳು ಭಾಗವಹಿಸಿದ್ದವು ಕೊಲೋನ್ ನಗರಕ್ಕೆ ಧಾಳಿಯಿಟ್ಟದರಲ್ಲಿ ೨೦,೦೦೦ ಜನರು ಮರಣಪಟ್ಟು ೫೪೦೦೦ ಜನರಿಗೆ ಗಾಯವಾಗಿದೆಯೆಂದು ಪ್ರಕಟಿಸಲಾಗಿದೆ.

ವಿಮಾನ ವಿಧ್ವಂಸಕ ಪಿರಂಗಿಗಳು ಸಮುದ್ರದಲ್ಲಿ

ಕಲಿಯುಗವು ಎಂದು ಅಂತ್ಯವಾಗುವುದು? ಕೃತಯುಗದಾರಂಭವೆಂದು?

ಕಲ್ಕ್ಯವತಾರವು ಈಗಾಗಲೇ ಆಗಿರುವುದೇ?

ಶಂಭಳ ಗ್ರಾಮದಲ್ಲಿ ಕಲ್ಕಿ ಭಗವಾನ್ ಜನ್ಮವೆತ್ತಿದನು!

ಈ ವಿಚಾರಗಳು ನಿಮಗೆ ತಿಳಿಯಬೇಕೆಂದಾದರೆ, ಓದಿನೋಡಿರಿ

ವಿದ್ವಾನ್ ಕೆ. ಎಂ. ಕರಿಬಸವ ಶಾಸ್ತ್ರಿಗಳಿಂದ ವಿರಚಿತವಾದ

ಕೃತಯುಗಾಂತ ಕೃತಯುಗಾರಂಭ ವಿಚಾರ

(ಮೂಲ ಹಿಂದೀ ಚೇತಾವನಿ)

ಬೆಲೆ: ಆಣೆ ೮

ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಮನೋರಂಜಕ ಬೋಧಪ್ರದ ಪುಸ್ತಕ

"ಕಲಿಯುಗದ ಲಾವಣಿ"

ಕ್ರಯ 0-0-9

ವಿಚಾರಪೂರಿತ, ಅನುಭವಪೂರ್ಣ, ಜ್ಯೋತಿಷ್ಯ ವಿದ್ಯಾ ಸಂಸ್ಕಾರಶುದ್ಧವಾದ

೧೯೪೩ನೇ ವರ್ಷದ ಪ್ರಪಂಚದ ಭವಿಷ್ಯತ್ತು

ಕ್ರಯ: 0-4-0

ಸೋಲ್ ಏಜಂಟ್ಸ್ ಯಜಮಾನ್ ಎಂಡ್ ಬ್ರದರ್ಸ್, ಬುಕ್‌ಸೆಲ್ಲರ್ಸ್ ಬಳ್ಳಾರಿ.

ಮಂಗಳೂರಲ್ಲಿ ಸಿಗುವ ಸ್ಥಳ

ಬಾಲಸಾಹಿತ್ಯ ಮಂಡಲ . ಸ್ಕೂಲ್ ಬುಕ್ ಕಂಪೆನಿ ಯು. ಆರ್ ಶೆಣೈ

ಜಿಲ್ಲಾ ಸಮಾಚಾರಗಳು

ಮಂಗಳೂರು

ನೇಮಕ—ವರ್ಗಾವರ್ಗಿ

ಶ್ರೀ ಡಿ. ರಂಗಯ್ಯ ಬಿ. ಎ. ಬಿ. ಎಲ್. ಮತ್ತು ಶ್ರೀ ಬಿ. ನಾಗಿರೆಡ್ಡಿ ಎಂ. ಎ. ಬಿ. ಎಲ್. ಇವರು ಕಾಸರಗೋಡಿನ ಪ್ರಿನ್ಸಿಪಲ್ ಮತ್ತು ಎಡ್ಡಿಶನಲ್ ಮುನ್ಸಿಫರಾಗಿ ನೇಮಕರಾಗಿದ್ದಾರೆ.

ಶ್ರೀ ಎಂ. ಪಿ. ಪೈ ಐ. ಸಿ. ಎಸ್. ರವರ ಸ್ಥಾನಕ್ಕೆ ಮಿ। ಫೆಡ್ರಿಕ್ ಜೇಮ್ಸ್, ಎಂ. ಎಲ್. ಎ. ರವರು ಕಾಫಿ ಕಂಟ್ರೋಲರರಾಗಿ ನೇಮಕ ಪಟ್ಟಿದ್ದಾರೆ.

ಮದ್ರಾಸಿನ ಸ್ಟಾನ್ಲಿ ಆಸ್ಪತ್ರೆಯಲ್ಲಿದ್ದ ಡಾ. ಎನ್. ವಿ. ಕಾಮತರು ಕೊಳ್ಳೇಗಾಲಿಗೆ ವರ್ಗಹೋದಿದ್ದಾರೆ. ಡಾ. ಕೆ. ಕೆ. ಹೆಗ್ಗಡೆರವರು ಮಂಗಳೂರಿನ ಎ. ಆರ್. ಪಿ. ಮೆಡಿಕಲ್ ಆಫೀಸರರಾಗಿ ನೇಮಕ ಪಟ್ಟಿದ್ದಾರೆ.

ಬಡವರ ಬಂಧು ಸಂಪಾದಕರಾದ ಶ್ರೀ. ಎಂ. ಜಾರಪ್ಪನವರು ಮಂಗಳೂರಿನ ಸ್ಪೆಶ್ಯಲ್ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ಶ್ರೀ. ನಟ್ಟೋಜಿ ಶ್ರೀನಿವಾಸರಾಯರು. ಪುತ್ತೂರಿನ ಸ್ಪೆಶ್ಯಲ್ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ನೇಮಕರಾಗಿದ್ದಾರೆ.

ರಾವ್ ಬಹದ್ದೂರ್ ಕೆ. ಪಿ. ಜನಾರ್ದನ ರಾಯರು ಸಿಲೆಕ್ಷನ್ ಗ್ರೇಡಿನ ಡಿ. ಎಸ್. ಪಿ. ಸ್ಥಾನಕ್ಕೆ ಬಡ್ತಿ ಹೊಂದಿರುವರು.

ಪಾಲ್ಘಾಟಿನ ಅ। ಪೋ। ಸುಪರಿಂಟೆಂಡೆಂಟರಾಗಿದ್ದ ಶ್ರೀ. ಎಸ್. ನಾರಾಯಣ ಯ್ಯರವರು ಆಕ್ಟಿಂಗ್ ಡಿಸ್ಟ್ರಿಕ್ಟ್ ಸುಪರಿಂಟೆಂಡೆಂಟರಾಗಿ ತಿರುಚಿನಾಪಳ್ಳಿಗೆ ವರ್ಗಪಟ್ಟಿದ್ದಾರೆ.

ಮಂಗಳೂರಿನ ಪೋ। ಇನಸ್ಪೆಕ್ಟರಾಗಿದ್ದ ಶ್ರೀ। ಗಣೇಶಸುಂದರ ರಾಯರು ಉಡ್ಪಿಗೂ, ಉಡಿಯಿಂದ ಶ್ರೀ। ಕೆ. ರಾಮರವರು ಕೊಳ್ಳೇಗಾಲಿಗೂ ಕಾಸರಗೋಡಿನ ಶ್ರೀ। ಉ. ನಾಗೇಶನವರು ಶೀಲಗಿರಿಗೂ, ಮಲಬಾರಿನಿಂದ ಶ್ರೀ. ಕೃಷ್ಣ ಪಣಿಕ್ಕರವರು ಕಾಸರಗೋಡಿಗೂ ವರ್ಗಪಟ್ಟಿದ್ದಾರೆ.

ಟ್ರಿಚಿ ಡಿವಿಜನಿನ ಪೋಸ್ಟಾಫೀಸುಗಳ ಸುಪರಿಂಟೆಂಡೆಂಟರಾಗಿದ್ದ ಶ್ರೀ। ಕೆ. ಜನಾರ್ದನ ಎಂ. ಎ ಅವರು ಮಲಬಾರ್ ಡಿವಿಜನಿನ ಪೋಸ್ಟಾಫೀಸುಗಳ ಹಂಗಾಮಿ ಸುಪರಿಂಟೆಂಡೆಂಟರಾಗಿ ನೇಮಕ ಹೊಂದಿ, ತಾ. ೩ರಲ್ಲಿ ಚಾರ್ಜು ವಹಿಸಿರುವರು.

ನಗರ ಸಭೆ

ಯ ಸಾಮಾನ್ಯ ಸಭೆಯೊಂದು ತಾ. ೨೭ರಂದು ಸಂಜೆ ೫-೩೦ ಗಂಟೆಗೆ ನಗರ ಸಭಾಧ್ಯಕ್ಷ ಶ್ರೀ ಬಿ. ವಿ. ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಹ್ಯೊಗೆ ಬಜಾರಿನಲ್ಲಿ ನಗರ ಸಭೆಯ ಕೂಲಿಗಳಿಗೆ ವಸತಿಗಳನ್ನು ಕಟ್ಟಿಸಲು ೧೭೫೦ ರೂ.ಗಳನ್ನು ಸೆಂಟ್ರಲ್ ವಾರ್ಡ್ ಹುಡುಗರ ಹಾ. ಎ. ಶಾಲೆಗೆ ಹೊಸ ಕಟ್ಟಡವನ್ನು ಕಟ್ಟಿಸಲು ೧೭೫೦ ರೂ.ಗಳನ್ನು ಮಂಜೂರು ಮಾಡಲಾಯಿತು. ಕುರಿಗಳ ಕಸಾಯಿ ಮನೆಯಲ್ಲಿ ಸುಧಾರಣೆ ಮಾಡುವ ಆವಶ್ಯಕತೆಯನ್ನು ವಿಚಾರಿಸಲು ನೇಮಿಸಲ್ಪಟ್ಟಿದ್ದ ಸಮಿತಿಯ ಅಭಿಪ್ರಾಯದಂತೆ ರೂ. ೭೦೦ ಅದಕ್ಕಾಗಿ ಮಂಜೂರು ಮಾಡಲ್ಪಟ್ಟಿತು. ಸರಕಾರವು ಸೂಚಿಸಿದ ಸ್ಥಳಗಳಿಂದ ಹೊರಟುಹೋಗಬೇಕಾದ ಸರಕಾರೀ ನೌಕರರಿಗೆ ಸಂಬಳವನ್ನು ಮೊದಲಾಗಿಯೇ ಕೊಡಬೇಕೆಂಬ ಸರಕಾರದ ಸೂಚನೆಯ ಕುರಿತು ವಿವೇಚಿಸಿ ಈ ಆಜ್ಞೆಯು ನಗರಸಭೆಗಳಿಗೂ ಲೋಕಲ್ ಬೋರ್ಡುಗಳಿಗೂ ಅನ್ವಯಿಸುವಂತೆ ಮಾಡಬೇಕೆಂದು ಕೇಳಿಕೊಳ್ಳಲು ನಿರ್ಧಾರವಾಯಿತು. ೧೯೪೧ರಲ್ಲಿ ಮಂಗಳೂರು ನಗರವಾಸಿಗಳ ಆರೋಗ್ಯದ ಕುರಿತಾದ ವರದಿಯನ್ನೂ ಹಿಂದೂಸ್ಥಾನ ಸ್ಕೌಟ್ ಸಂಸ್ಥೆಯವರು ಕಳುಹಿಸಿದ ಪ್ರಾಂತಿಕ ಸಮಿತಿಯ ವರದಿಯನ್ನೂ ರಿಕಾರ್ಡುಮಾಡಿ, ಭಗಿನಿ ಸಮಾಜದವರ ಮತ್ತು ಜಿಲ್ಲಾ ಹರಿಜನಸೇವಕ ಸಂಘದವರ ಅರಿಕೆಗಳಂತೆ ರೂ. ರೂ. ೭೦೦ ಮತ್ತು ರೂ. ೨೫೦ನ್ನು ಪ್ರತ್ಯೇಕವಾಗಿ ೪೨, ೪೩ನೇ ವರ್ಷದ ಬಜೆಟಿನಲ್ಲಿ ತೆಗೆದಿಡಲಾಯಿತು. ಗುಳಿಗ ಚಿತ್ತಲಿನ ಅಕ್ಕಪಕ್ಕದ ಪ್ರದೇಶಗಳ ಬೆಲೆ ಈಗ ಏರಿದ ಸಂಬಂಧ ಅ ನಿವಾಸಿಗಳ ಮೇಲೆ ಹೇರಲಾದ ಹೆಚ್ಚಿನ ತೆರಿಗೆಯ

ಕುರಿತು ಅವರಲ್ಲಿ ಕೆಲವರು ಮಾಡಿಕೊಂಡ ಅಪೀಲುಗಳ ಕೊನೆಯ ತೀರ್ಮಾನಕ್ಕೆ ಅಗತ್ಯವಾದ ಅಧಿಕಾರವನ್ನು ಟೌನ್ ಪ್ಲಾನಿಂಗ್ ಟ್ರಸ್ಟ್ ಕಮಿಟಿಗಳ ಸದಸ್ಯರಿಗೆ ಕೊಡಲಾಯಿತು.

ಶ್ರೀ ಶ್ರದ್ಧಾನಂದ ಅನಾಥಾಶ್ರಮ

ಮಂಗಳೂರು ಅನಾಥ ಹಿಂದೂ ಮಕ್ಕಳನ್ನು ರಕ್ಷಿಸಿ ಅವರಿಗೆ ವಿದ್ಯೆ ಬುದ್ಧಿಯನ್ನೂ ಕೈಗಾರಿಕೆ ಶಿಕ್ಷಣವನ್ನೂ ಇಲ್ಲಿ ಕೊಡುವ ವ್ಯವಸ್ಥೆಯಿದೆಯೆಂದೂ ಆಶ್ರಮದಲ್ಲಿ ೧೪ ಮಂದಿ ಆಶ್ರಯ ಹೊಂದುತ್ತಿದ್ದಾರೆಂದೂ ಜಿಲ್ಲೆಯ ಯಾವ ಭಾಗದಲ್ಲೇ ಆಗಲಿ ಅನಾಥ ಹಿಂದೂ ಬಾಲಕರು ಇದ್ದರೆ ಅವರನ್ನು ಇಲ್ಲಿಗೆ ಕಳುಹಿಸಬೇಕಾಗಿ ಆಶ್ರಮ, ಸಂಚಾಲಕರ ವಿನಂತಿಯಿದೆ.

ನಾಟಕ ಪ್ರದರ್ಶನ

ಕಳೆದವಾರ ವಿದ್ಯಾಬೋಧಿನಿ ಶಾಲೆಯಲ್ಲಿ ಕದ್ರಿ ಶ್ರೀ। ಮಂಜುನಾಥ ಕೃಪಾ ಪೋಷಿತ ಬಾಲಕ ನಾಟಕ ಮಂಡಳಿಯವರು ತಮ್ಮ ಮಂಡಳಿಯ ಮೂರನೆಯ ವಾರ್ಷಿಕೋತ್ಸವವನ್ನು ಪಂಡಿತ ನಿಡ್ಲೋಡಿ ಅನಂತ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿಸಿದರು. ವರದಿ ವಾಚನವಾದ ತರುವಾಯ ನಾಟಕ ಪ್ರಹಸನ ಇತ್ಯಾದಿಗಳು ಪ್ರದರ್ಶಿಸಲ್ಪಟ್ಟವು.

ಯುನಿವರ್ಸಿಟಿ ಪರೀಕ್ಷೆ, ಸ್ಯೆ। ಎ। ಕಾಲೇಜ್

ಮಂಗಳೂರು ಸೈಂಟ್ ಎಲಾಶಿಯಸ್ ಕಾಲೇಜಿನಲ್ಲಿ ಈ ವರ್ಷ ಬಿ. ಎ.,ಗೆ ಕುಳಿತುಕೊಂಡ ೭೭ ಮಂದಿಯಲ್ಲಿ ೪೬ ಮಂದಿ (ಶೇಕಡಾ ೭೦-೫) ತೇರ್ಗಡೆ ಹೊಂದಿರುವರು. ಇವರಲ್ಲಿ ೨೬ ಮಂದಿ I ಕ್ಲಾಸಿನಲ್ಲಿ; ೩೬ ಮಂದಿ II ಕ್ಲಾಸಿನಲ್ಲಿ. ಇಂಟರಮೀಡಿಯೆಟಗೆ ಕುಳಿತುಕೊಂಡ ೧೫೨ ಮಂದಿಯಲ್ಲಿ ೫೪ ಮಂದಿ I ಕ್ಲಾಸಿನಲ್ಲಿ ೪೯ ಮಂದಿ II ಕ್ಲಾಸಿನಲ್ಲಿ, ಒಟ್ಟು ೧೦೨ ಮಂದಿ (ಶೇಕಡಾ ೬೭-೧) ತೇರ್ಗಡೆ ಹೊಂದಿರುವರು.

ಪ್ರೊ। ಡಿ. ಟಿ. ಸುವರ್ಣರಿಗೆ ಸತ್ಕಾರಕೂಟ

ಹ್ಯೊಗೆ

ಬರೋಡದಿಂದ ಬಂದ ಕರ್ನಾಟಕದ ಕುಮಾರ ಭೀಮ ಪ್ರೊ। ಡಿ. ಟಿ. ಸುವರ್ಣ ಇವರ ಗೌರವಾರ್ಥವಾಗಿ, ಹ್ಯೊಗೆ, ಜ್ಞಾನೋದಯ ಸಮಾಜ ಮಂದಿರದಲ್ಲಿ ಒಂದು ಸಭೆಯು ತಾ. ೧ರಂದು ನೆರವೇರಿತು. ಅಧ್ಯಕ್ಷರು ಶ್ರೀ। ಎಂ. ಆರ್. ಭಟ್‌ರ ಭಾಷಣವಾದ ಮೇಲೆ ಶ್ರೀ ಕುಂಞಿಪುತ್ರನ್, ಪ್ರೊ। ಸುವರ್ಣರ ಭಾಷಣ, ಶ್ರೀ. ಬಿ. ಎಂ. ತಿಂಗಳಾಯರ ಧನ್ಯವಾದಗಳಿಂದ ಸಭೆ ಮುಕ್ತಾಯವಾಯಿತು.

ಬೆಂಗ್ರೆ

ತಾ. ೨ರಂದು ವೀರಮಾರುತಿ ವ್ಯಾಯಾಮ ಶಾಲೆಯಲ್ಲಿ ಶ್ರೀ. ಆರ್. ಆರ್. ತಲ್ಪೇರಿಕರರ ಅಧ್ಯಕ್ಷತೆಯಿಂದ ಪ್ರೊ. ಡಿ. ಟಿ. ಸುವರ್ಣರ ಗೌರವಾರ್ಥ ಒಂದು ಸತ್ಕಾರಕೂಟವು ಏರ್ಪಟ್ಟಿತು. ಅಧ್ಯಕ್ಷರ ಭಾಷಣ, ಶ್ರೀ. ಕುಂಞಿಪುತ್ರನ್, ಶ್ರೀ. ಎಚ್. ಕೆ. ತಿಂಗಳಾಯ, ಪ್ರೊ. ಸುವರ್ಣ ಇವರ ಭಾಷಣಗಳಾದ ಮೇಲೆ ಸಂಘದ ಕಾರ್ಯದರ್ಶಿಯವರ ಧನ್ಯವಾದಗಳಿಂದ ಸಭೆ ಕೊನೆಗೊಂಡಿತು.

ಸ್ಥಳೀಯ ಕೋರ್ಟುಗಳು

ಬೇಸಿಗೆಯ ರಜೆಯ ನಿಮಿತ್ತ ಮುಚ್ಚಲ್ಪಟ್ಟಿದ್ದ ಸ್ಥಳೀಯ ಮುನ್ಸಿಫ್ ಕೋರ್ಟು ಕಳೆದ ತಾ. ೨೪ರಲ್ಲಿ ತಿರುಗಿ ಆರಂಭವಾಗಿದೆ. ಜಿಲ್ಲಾ ಕೋರ್ಟು ಮತ್ತು ಸಬ್ ಕೋರ್ಟುಗಳು ಇದೇ ಜೂನ್ ತಾ. ೧೩ಕ್ಕೆ ತೆರೆಯಲ್ಪಡಲಿವೆ.

ಫರಂಗಿಪೇಟೆ

ಇಲ್ಲಿಯ ಶ್ರೀ ರಾಮಾ ಹಾ. ಎ. ಶಾಲೆಯ ಹಳೆ ವಿದ್ಯಾರ್ಥಿಗಳು ತಾ. ೧೩ನೇ ದಿನ ರಾತ್ರಿ ಸೇರಿ ಒಂದು ಸಂಘವನ್ನು ಸ್ಥಾಪಿಸಿದರು.

ಕಾಸರಗೋಡು

ಕಾಲರಾ

ಇಲ್ಲಿಯ ನೆರೆಹೊರೆಯಲ್ಲಿ ಕಾಲರಾ ರೋಗದ ಸುಳಿವು ಒಂದಿಷ್ಟು ತೋರುತ್ತದೆ. ಕೆಲವು ಮರಣಗಳಾಗಿವೆಯೆಂದು ಸುದ್ದಿಯಿದೆ. ಆರೋಗ್ಯ ಇಲಾ

ಖಾಧಿಕಾರಿಗಳು ಕ್ರಮಶಃ ಭಾಗವಹಿಸುವರೆಂದು ನಂಬಿಕೆ.

ಚೆರ್ವತ್ತೂರು

ರಾಜಾಜಿಯವರಿಗೆ ಸ್ವಾಗತ

ಮಂಗಳೂರಿಗೆ ಹೋಗುತ್ತಿದ್ದ ರಾಜಾಜಿಯವರನ್ನು ಸ್ವಾಗತಿಸಿ, ಅವರ ಹೊಸ ಧೋರಣೆಯನ್ನು ಅನುಮೋದಿಸಿ ಅವರಿಗೆ ಮಾನಪತ್ರವನ್ನು ಸಮರ್ಪಿಸಲು, ಚೆರ್ವತ್ತೂರು ಸ್ಟೇಶನಿನ ಬಳಿ ಸೇರಿದ ಸಭೆಗೆ ನೆರೆಕೆರೆಯ ಹಳ್ಳಿಗಳಿಂದ ರೈತರೂ ಮತ್ತು ಇತರ ಮುಸ್ಲಿಂ ಸಹೋದರರೂ, 'ಜಾಥ'ಗಳಾಗಿ ಸಾವಿರ ಗಟ್ಟಲೆಯಲ್ಲಿ ಬಂದು ಸೇರಿದ್ದರು. ಶ್ರೀ। ವಿ. ಮಿ. ಕಣ್ಣಂಬು ಮತ್ತು ಇತರ ಕಾಂಗ್ರೆಸ್ ಕೆಲಸಗಾರರೂ ಸೇರಿ ರಾಜಾಜಿಯವರನ್ನು ಸ್ವಾಗತಿಸಿ ಹಾರತುರಾಯಿಗಳನ್ನು ಸಮರ್ಪಿಸಿ ಸಭಾ ಸ್ಥಳಕ್ಕೆ ಕರೆದೊಯ್ದರು. ರಾಜಾಜಿಯವರು ಮಾನಪತ್ರವನ್ನು ಸ್ವೀಕರಿಸಿ ತಮಗಿತ್ತ ಈ ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ನೀಲೇಶ್ವರ

ತಾ. ೩೧ರಲ್ಲಿ ಇಲ್ಲಿ ಮೈದಾನಿನಲ್ಲಿ ಸೇರಿದ ಸಭೆಯಲ್ಲಿ ಕೇರಳ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ। ಸಿ. ಕೆ. ಗೋವಿಂದ ನಾಯರರು ಶಾಂತಿ ದಳದ ಅವಶ್ಯಕತೆಯ ಕುರಿತು ಭಾಷಣಮಾಡಿದರು.

ಉಡುಪಿ

ನಗರಸಭೆ

ಕಳೆದವಾರ ಚೆಯರ್‌ಮೆನ್ ಶ್ರೀ। ಎ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ನಗರಸಭೆಯಲ್ಲಿ ನಗರ ಸಭೆಯ ಮೇಲೆ ಮಂಗಳೂರಿನ ಬಿಶಪರು ಹೂಡಿದ ದಾವಾ ನೋಟೀಸನ್ನೂ ತತ್ಸಂಬಂಧ ವಕೀಲ ವೃತ್ತಿಯ ಸದಸ್ಯರೆಲ್ಲರಿಗೂ ಬರೆದ ಆಫೀಸು ಪತ್ರವ್ಯವಹಾರವನ್ನೂ ಮುನಿಸಿಪಾಲಿಟಿಯ ಪರವಾಗಿ ಧರ್ಮಾರ್ಥ ವ್ಯವಹರಿಸಲು ತಾನು ಸಿದ್ಧನಿರುವೆನೆಂದು ಎಡ್ವಕೇಟ್ ಶ್ರೀ। ನರಸಿಂಹ ವಿಠಲ ಕಾಮರು ಬರೆದ ಉತ್ತರವನ್ನೂ ಚೆಯರ್‌ಮೇನ್ ತನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿದುದನ್ನೂ ಸದಸ್ಯರ ಅವಗಾಹನೆಗೆ ತಂದ ಮೇಲೆ ದಾವೆಯನ್ನು ಎದುರಿಸಬೇಕೆಂದು ಕೌನ್ಸಿಲಿನ ನಿರ್ಣಯವಾಯಿತು.

ನೂತನ ಕಟ್ಟಡ ಪ್ರವೇಶೋತ್ಸವ ಹಾಗೂ ಶಾಲಾವರ್ಧಂತಿ

ಕಡಿಯಾಳಿ ಹಾಯರ್ ಎ. ಶಾಲೆಯ ನೂತನ ಕಟ್ಟಡದ ಪ್ರವೇಶೋತ್ಸವವನ್ನು ಕಳೆದ ತಾ. ೨೪ರಲ್ಲಿ ಶ್ರೀ। ಸಂಜೀವ ಭಟ್ಟರು ನೆರವೇರಿಸಿದರು. ಅಂದೇ ಶಾಲಾ ವರ್ಧಂತಿ ಸಮಾರಂಭವು ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರದಿಯನ್ನು ಹೆಡ್ಮಾಸ್ತರ್ ಶ್ರೀ. ಫೆರ್ನಾಂದಿಸರು ಓದಿದರು. ಶ್ರೀ. ಕೆ. ಕಮಲಾಕ್ಷ ಪೈಗಳು ಶಾಲಾ ಸ್ವಸ್ತಿ ವಾಚನವನ್ನು ಮಾಡಿದರು. ಈ ಶಾಲೆಯ ಸಂಸ್ಥಾಪಕರಾದ ಶ್ರೀ। ವಿಠಲಯ್ಯನವರ ಭಾವಚಿತ್ರದ ಅನಾವರಣ ಸಮಾರಂಭವು ಈ ಸಮುಹೂರ್ತದಲ್ಲಿಯೇ ನಡೆಯಿತು. ವಿವಿಧ ವಿನೋದಾವಳಿಗಳು ನಡೆದು ಸಮಾರಂಭವು ಮುಕ್ತಾಯವಾಯಿತು.

ಶಾರೀರಿಕ ಶಿಕ್ಷಣ ಶಿಬಿರ

ಹಿಂದುಸ್ಥಾನ್ ಸ್ಕೌಟ್ ಎಸೋಸಿಯೇಶನಿನ ನೇತೃತ್ವದಲ್ಲಿ ತೆರೆಯಲ್ಪಟ್ಟ ಎಲಿಮೆಂಟರಿ ಶಾಲಾ ಮಾಸ್ತರುಗಳ ಶಾರೀರಿಕ ಶಿಕ್ಷಣ ಶಿಬಿರ ಮುಕ್ತಾಯದ ಪ್ರದರ್ಶನವು ಇದೇ ತಾ. ೨೫ರಲ್ಲಿ ಬೋರ್ಡು ಹ್ಯಾಸ್ಕೂಲ್ ಮಯಿದಾನದಲ್ಲಿ ಡಾ। ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು.

ಪರ್ಕಳ

ಕಳೆದವಾರ ಇಲ್ಲಿ ಶ್ರೀ। ಬಾಳ್ಕಟ್ಟಬೀಡ ಕೃಷ್ಣಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರಗಿತು. ಮದ್ರಾಸಿನ ಮಾಜಿ ಪ್ರಧಾನರಾದ ಶ್ರೀ। ರಾಜಗೋಪಾಲಾಚಾರ್ಯರು ದೇಶದ ಮುಂದಿರಿಸಿದ ಸೂಚನೆಗಳನ್ನು ಸಮರ್ಥಿಸಿ ಅನೇಕ ಮಹನೀಯರು ಭಾಷಣಗಳನ್ನಿತ್ತರು.

ಕಾರ್ಕಳ

ಗೌ. ಸಾ. ಬ್ರಾ. ಪರಿಷದ್ ಶಾಖೆ

ಗೌಡಸಾರಸ್ವತ ಬ್ರಾಹ್ಮಣ ಪರಿಷದಿನ ಇಲ್ಲಿಯ ಸದಸ್ಯರ ಒಂದು ಸಾರ್ವಜನಿಕ ಸಭೆಗೂಡಿ ಆ ಪರಿಷದದ ಒಂದು ಶಾಖೆಯನ್ನು ಇಲ್ಲಿ ಸ್ಥಾಪಿಸಬೇಕೆಂದು ಸರ್ವಾನುಮತಿಯ ನಿರ್ಧಾರವಾದುದೆಂದು ಮಾತ್ರವಲ್ಲದೆ, ಶ್ರೀಗಳಾದ ವಕೀಲ ಕೆ. ಲಕ್ಷ್ಮಣ ಕುಡ್ವ ಮತ್ತು ಕೆ. ಕೃಷ್ಣಯ್ಯನವರು ಆ ಶಾಖೆಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರಾಗಿ ಆರಿಸಲ್ಪಟ್ಟರು.

ಹರಿಜನ ಸೇವಾ ಸಂಘ

ಕಾರ್ಕಳ ಹರಿಜನ ಸೇವಾ ಸಂಘದ ಕಳೆದ ವರ್ಷದ ವರದಿ ಮತ್ತು ಪರಿಶೋಧಿತ ಲೆಕ್ಕಪತ್ರಗಳ ಪ್ರಕಟವಾಗಿವೆ. ಸಂಘದ ಆರ್ಥಿಕ ಸ್ಥಿತಿಯು ಅಷ್ಟು ಉತ್ತಮವಾಗಿಲ್ಲವಾದರೂ ಕೂಡ ಸಂಘವು ವರದಿ ವರ್ಷದಲ್ಲಿ ಹರಿಜನೋದ್ಧಾರದ ಅನೇಕ ಉಪಯುಕ್ತ ಕೆಲಸಗಳನ್ನೆಲ್ಲ ಮಾಡಿ ಯಶಸ್ವಿಯಾಗಿರುವರು ಸ್ತುತ್ಯ.

ಶಾಲಾ ವರ್ಧಂತಿ

ಶ್ರೀ ಕುಕ್ಕುಂದೂರು ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. ೩ರಂದು ಇನ್ಸಪೆಕ್ಟರ್ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಹಾಯ ನಾಟಕ

ಕಾರ್ಕಳ ಬೋರ್ಡು ಹ್ಯಾಸ್ಕೂಲಿನ ವ್ಯಾಯಾಮ ಶಾಲೆಯ ಸ್ಥಾಪನೆಯ ಬಗ್ಗೆ ನಾಳೆ ತಾ. ೬ರ ದಿನ ಬೋರ್ಡು ಮ್ಯೆನ್ ಎಲಿಮೆಂಟರಿ ಶಾಲೆಯಲ್ಲಿ "ವೀರ ಅಭಿಮನ್ಯು" ಎಂಬ ಸಹಾಯ ನಾಟಕವನ್ನು ಆಡುವರು.

ಸಹಕಾರಿಗಳ ಸಭೆ

ಕಾರ್ಕಳ ಸಹಕಾರ ಸಂಘದ ವರ್ಷಾವಧಿಯ ಮಹಾ ಸಭೆಯು ತಾ ೩೧ರ ದಿನ ಡಾಕ್ಟರ್ ಯನ್ ಯಮ್ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಕೂಡಿ ಕಾರ್ಯಕಾರಿ ಮಂಡಳಿಯಿಂದ ನಿವೃತ್ತರಾದ ಶ್ರೀ ಎಂ ಜನಾರ್ದನ ಕಾಮತ್ ಮತ್ತು ಶ್ರೀ ಎ ಯನ್ ಎಸ್ ಆಚಾರ್ಯರವರ ಸ್ಥಾನಕ್ಕೆ ಅವರೇ ಪುನಃ ಆರಿಸಲ್ ಪಟ್ಟವರು. ಜನಾಬ್, ಮೀರ್ ಹಮ್ಮೀದರ ಸ್ಥಾನದಲ್ಲಿ ಜನಾಬ್ ಯಮ್ ಯಸ್ ಹುಸ್ಸೇನರವರ ಚುನಾವಣೆಯಾಯಿತು.

ಮುಂಬಯಿ ಶ್ರೀ ಬಗ್ವಾಡಿ ಹೋಬಳಿಯ ಮೊಗವೀರ ಸಂಘ

ಮೇಲಿನ ಸಂಘದ ಪ್ರಥಮ ವಾರ್ಷಿಕ ಮಹಾ ಸಭೆಯು ಇದೇ ಕಳೆದ ತಾ. ೨೫-೬-೪೨ರಲ್ಲು ನಂಬ್ರ ೧೨೪ನೇ, ಕವಾಸ್ಜಿ ಪಟೇಲ್, ರಸ್ತೆಯಲ್ಲಿರುವ "ದಾದಿ ಶೇಟ್‌ಹಾಉಸ್"ನ ೧ನೇ ಮಾಳಿಗೆಯಲ್ಲಿ ಶ್ರೀಯುತ ಬೆಂಗ್ರೆ ನಾರಾಯಣ ಎ. ಕರ್ಕೇರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿಸಲಾಯಿತು. ಶ್ರೀ. ಜಿ ಎಸ್ ಮಂಜುನಾಥ ಮತ್ತು ಕೆಲವರು ಸಂಘದ ಮುಂದಿನ ಅಭಿವೃದ್ಧಿಯ ಕುರಿತು ಭಾಷಣವಿತ್ತರು. ಮಂಗಳಗೀತೆಯೊಂದಿಗೆ ಸಭೆಯು ಕೊನೆಗೊಂಡಿತು.

ಗೌಡಸಾರಸ್ವತ ಬ್ರಾಹ್ಮಣರ ಸ್ಕಾಲರ್ ಶಿಪ್ ಲೀಗ್, ಬೊಂಬಾಯಿ

ಹೈಸ್ಕೂಲಲ್ಲಿ ಕಲಿಯುವ ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಗೌಡಸಾರಸ್ವತ ಬ್ರಾಹ್ಮಣ ಜಾತಿಯ ವಿದ್ಯಾರ್ಥಿಗಳಿಂದ ಧನ ಸಹಾಯಾಪೇಕ್ಷೆಗೆ ೩ನೇ ಜೂನ್ ೧೯೪೨ರ ಒಳಗೆ ಅರ್ಜಿಗಳನ್ನು ಅಪೇಕ್ಷಿಸಲಾಗಿದೆ. ವಿಳಾಸ, ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರ್ ಶಿಪ್ ಲೀಗ್, c/o ಸಾರಸ್ವತ ಬ್ರಾಹ್ಮಣ ಸಮಾಜ, ನೈಕಾಟ್ ಲೇನ್ ಗಿರಿಗಾಂ, ಬೊಂಬಾಯಿ; ಈ ವರ್ಷಕ್ಕೆ ಡಾಂಗಿ ಮೆಮೋರಿಯಲ್ ಪ್ರೈಜಿನ ರೂ ೨೦/ರ ಬಹುಮಾನಕ್ಕೂ ಅರ್ಜಿ ಅಪೇಕ್ಷಿಸಲಾಗಿದೆ. ಅರ್ಜಿದಾರನು ದಕ್ಷಿಣ ಅಥವಾ ಉತ್ತರ ಕನ್ನಡ ಜಿಲ್ಲೆಗಳವನಾಗಿದ್ದು ಬೊಂಬಯಿ ಪ್ರಾಂತದ ಯಾವುದಾದರೊಂದು ಸಂಸ್ಥೆಯಲ್ಲಿ ಟೆಕ್ನಿಕಲ್ ಅಥವಾ ಇಂಡಸ್ಟ್ರಿಯಲ್ ಶಿಕ್ಷಣ ಹೊಂದುತ್ತಿರುವನಾಗಿರಬೇಕು. ಮಾತ್ರವಲ್ಲದೆ ತಿಂಗಳೊಂದರ ರೂ. ೫೦ರ ಸ್ಕಾಲರ್‌ಶಿಪ್‌ಗೂ ಇಂಡಸ್ಟ್ರಿಯಲ್ ಸ್ಕಾಲರ್‌ಶಿಪಗೂ ಅರ್ಜಿ ಅಪೇಕ್ಷಿಸಲಾಗಿದೆ; ಅರ್ಜಿದಾರನು ಸರಕಾರದ ರಿಕೋಗ್ನಿಶನ್ ಪಡೆದ ಬೊಂಬಾಯಿ ಪ್ರಾಂತದ ಯಾವುದಾದರೊಂದು ಇಂಡಸ್ಟ್ರಿಯಲ್ ಸಂಸ್ಥೆಯಲ್ಲಿ ಶಿಕ್ಷಣ ಹೊಂದುವವನಾಗಿರಬೇಕು.

ರಾಜನೀತಿಯ ಉದ್ದೇಶವೇನು?

ಜೆ. ಸಿ ಕುಮಾರಪ್ಪನವರ ಲೇಖನ

'ರಾಜನೀತಿಯ ಕೊನೆಯು ಯುದ್ಧವೆ? ಇಲ್ಲ, ಕಂಠಶೋಷಣೆಗಾಗಿ ಶಾಸನ ಸಭೆಗಳಲ್ಲಿ ಪ್ರಾತಿನಿಧ್ಯ ಪಡೆವುದು ಅದರ ಉದ್ದೇಶವೊ? ಅಲ್ಲ, ನಮ್ಮ ಮಿತ್ರರಿಗೆ ಹಾಗೂ ನಮ್ಮ ಜಾತಿಯವರಿಗೆ ದೊಡ್ಡ ನೌಕರಿಗಳನ್ನು ಕೊಡಿಸಿ ನಮ್ಮ ಸ್ವಾರ್ಥವನ್ನು ನಾವೇ ಹೊಗಳುವುದು ರಾಜನೀತಿಯ ಉದ್ದೇಶವೊ?' ಹೀಗೆಂದು ಪ್ರಶ್ನಿಸುತ್ತಾ ಜೆ. ಸಿ. ಕುಮಾರಪ್ಪನವರು 'ಹರಿಜನ'ದಲ್ಲಿ ಉದ್ದೇಶಪೂರ್ವಕ ರಾಜನೀತಿ ಎಂದು ಲೇಖನದಲ್ಲಿ ಕೆಳಗಿನ ವಿಷಯಗಳನ್ನು ವಿವರಿಸುತ್ತಾರೆ.

'ಇಂದಿನ ವಾತಾವರಣವು ರಾಜನೀತಿಯಿಂದ (ಪೊಲಿಟಿಕ್ಸ್) ತುಂಬಿದೆ. ಹೀಗಾಗಲು ಕಾರಣವೇನು? ಯಾವ ಉದ್ದೇಶ ಸಾಧನೆಗಾಗಿ ಹೀಗಾಗಿದೆ? ಜಪಾನು ಬಾಂಬುಗಳಿಂದ ಹೆದರಿ, ಬ್ರಿಟನಿನ ಸಾಮ್ರಾಜ್ಯೋದ್ಧಾರಕ ಯುದ್ಧದ ಆಶ್ರಯದಲ್ಲಿ ತಮ್ಮ ರಕ್ಷಣೆ ಮಾಡಿಕೊಳ್ಳಲು ಕೆಲವರು ಹಾರೈಸಬಹುದು. ಕೆಲವರು ಬ್ರಿಟನಿನ ಅಭಯ ಹಸ್ತವನ್ನು ನಿರಾಕರಿಸಿದರೂ ತಾವು ಮುಣ್ಣಿನ ಕಾಲಿನ ಮೇಲೆ ನಿಂತಿರುವೆನೆಂಬುದನ್ನು ಮರೆತು ಚೀನಾ ರಷ್ಯಗಳಿಗೆ ಸಹಾಯ ಮಾಡಲು ಆತುರತೆ ತೋರಿಸಬಹುದು. ನಾವೇ ಗುಲಾಮರಾಗಿದ್ದಾಗ ನಮ್ಮ ಸ್ವಾತಂತ್ರ್ಯವನ್ನು ಪಡೆಯದೆ ನಾವು ಅನ್ಯರಿಗೆ ಸಹಾಯ ಕೊಡಲಾರೆವು.

'ಸ್ವಾತಂತ್ರ್ಯ ಸಂಪಾದನೆಗಾಗಿ ರಾಜನೀತಿಯಿದೆಯೆಂದು ಕೆಲವರು ಸರಿಯಾದ ಉತ್ತರವೀಯುವರು. ಯಾವುದಕ್ಕಾಗಿ ಸ್ವಾತಂತ್ರ್ಯ? ಅದು ಏತರಿಂದ? ನಿಜವಾದ ಸ್ವಾತಂತ್ರ್ಯ ಲೋಕದ ಅಭಿವೃದ್ಧಿಗಾಗಿದೆ. ಠಾಗೂರರ ಅಭಿಪ್ರಾಯದಂತೆ ಸ್ವಾತಂತ್ರ್ಯದ ಅರ್ಥ ಹೀಗಿರುವುದು:

'ಮನಸ್ಸು ಎಲ್ಲಿ ನಿರ್ಭಯವಾಗಿರುವುದೋ, ಎಲ್ಲಿ ಜನ ತಲೆ ಎತ್ತಿ ತಿರುಗಬಲ್ಲುದೋ, ಜ್ಞಾನಾಭಿವೃದ್ಧಿಗೆ ಎಲ್ಲಿ ತಡೆಯಿಲ್ಲವೋ, ಸಂಕುಚಿತ ಭೇದಭಾವಗಳಿಂದ ಜಗತ್ತು ಎಲ್ಲಿ ಛಿದ್ರಛಿದ್ರವಾಗಿ ಹೋಗಿಲ್ಲವೋ, ಶಬ್ದಗಳು ಎಲ್ಲಿ ಸತ್ಯದ ಕೆರೆಯಿಂದ ಬರುವವೋ, ಅವಿಶ್ರಾಂತ ಪ್ರಯತ್ನದ ತೋಳುಗಳಲ್ಲಿ ಪರಿಪೂರ್ಣತೆಯ ವರೆಗೆ ಚಾಚಿವಿಯೋ ಅಲ್ಲಿ ಸ್ವಾತಂತ್ರ್ಯ'; ಅದು ಸ್ವಾತಂತ್ರ್ಯ.

ಇಂತಹ ಸ್ವಾತಂತ್ರ್ಯ ಸಿಕ್ಕಿದರೂ ಅದರಿಂದ ನಾವು ಮಾಡುವುದೇನು? ಪ್ರಜೆಗಳ ನಿಯೋಜಿತ ಶಾಶ್ವತ ಭಾಗವು ಸರಕಾರ. ಆದ್ದರಿಂದ ಸ್ವತಂತ್ರ ಜನರು ಸರಕಾರವನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಯತ್ನಿಸುತ್ತಾರೆ. ಸರಕಾರದಂತಹ ದೊಡ್ಡ ಯಂತ್ರವನ್ನು ನಡೆಸುವ ಸನ್ನೆ (Lever) ಯೇ ರಾಜನೀತಿ. ಇದು ಪ್ರಜೆಗಳ ಮನಸ್ಸಿನಂತೆ ಕೆಲಸ ಮಾಡಬೇಕು. ಪ್ರಜಾ ಶಿಕ್ಷಣದ ಸಂಚಾಲಕವಾಗಬೇಕು. ಪ್ರಜೆಗಳ ವ್ಯವಹಾರದ ಹಿರಿಯ ಭಾಗವಾಗಬೇಕು. ಅವರ ಕಲಹವನ್ನು ಬಗೆಹರಿಸುವ ನಿರ್ಣಯಾಧಿಕಾರಿಯಾಗಬೇಕು. ವಿವಿಧ ರೀತಿಯ ಸಾಮಾಜಿಕ ಪಂಚಾಯಿತಿಯಾಗಿರಬೇಕು. ಒಂದು ರಾಷ್ಟ್ರದ ತಲೆ, ಕೈ, ಕಾಲು ಹೃದಯವೇ ಸರಕಾರ.

ಒಂದು ಸರಕಾರ ಆ ರೀತಿ ಕೆಲಸಮಾಡಬೇಕಾದರೆ ಅದು ತನ್ನ ಜನರ ಚೈತನ್ಯ ಸಂಸ್ಕೃತಿಗಳಿಂದ ಕೂಡಿರಬೇಕು. ಬ್ರಿಟಿಷರು ಉದ್ದೇಶಪೂರ್ವಕವಾಗಿಯೇ ಭಾರತೀಯರಿಂದ ದೂರವಾಗಿದ್ದಾರೆ. ಆದ್ದರಿಂದ ಅವರಿಗೆ ನಿಜವಾದ ಸರಕಾರದ ಪಾತ್ರವನ್ನು ನಿರ್ವಹಿಸಲು ಸಾಧ್ಯವಿಲ್ಲ. ಸ್ವತಂತ್ರ ಜನಾಂಗದಿಂದ ಕೂಡಿದ ಸರಕಾರದಿಂದಲೇ ರಾಷ್ಟ್ರದ ಏಳಿಗೆಯಾಗುವುದು ಸಾಧ್ಯ.

ಭಾರತದ ಹಿತಕ್ಕಾಗಿ ಬ್ರಿಟಿಷರು ಹಿಂದುಸ್ಥಾನವನ್ನಾಳಬೇಕೆಂಬುದು ಮಾನವ ಸ್ವಭಾವಕ್ಕೆ ವಿರುದ್ಧವಾದುದು. ಆದ್ದರಿಂದ ಇಂತಹ ಅಸಾಧ್ಯ ಪರಿಸ್ಥಿತಿಯಲ್ಲಿ ಬ್ರಿಟನು ಭಾರತದ ಆಡಳಿತ ವಹಿಸುತ್ತಿರುವುದು ನ್ಯಾಯವಲ್ಲ. ನಮ್ಮ ಆಡಳಿತದ ಮುಖ್ಯ ಮುಖ್ಯ ಸ್ಥಾನಗಳಲ್ಲಿ ನಾವೇ ನಿಂತು ನಮ್ಮ ಜನರಿಗೆ ಅವಶ್ಯವಾದ ಸಹಾಯ ಸಹಕಾರಗಳನ್ನು ನೀಡಿ ಅವರ ಅಭಿವೃದ್ಧಿಯಾಗಲು ಅವಕಾಶ ಕಲ್ಪಿಸಿಕೊಡುವುದೇ. ನಮ್ಮ ರಾಜನೀತಿಯ ಉದ್ದೇಶವಾಗಿದೆ.

ಬೇಕಾಗಿದ್ದಾರೆ

ಕಾಸರಗೋಡು ತಾಲೂಕು ಪಾತೂರು ಗ್ರಾಮದಲ್ಲಿರುವ ಬಾಕ್ರಬೈಲು ಎಯಿಡೆಡ್ ಎಲಿಮೆಂಟರಿ ಶಾಲೆಗೆ ಒಬ್ಬ ಹಯರ್‌ಗ್ರೇಡ್ ಟ್ರೈಂಡ್ ಉಪಾಧ್ಯಾಯರು ಬೇಕಾಗಿದ್ದಾರೆ. ದಯವಿಟ್ಟು ಮೆನೇಜರರಿಗೆ ಬರೆಕೊಳ್ಳಿರಿ.

G. Shankeranarayana
Manager.
Bakrabail Aided School
Post Koselamuguru.

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.25 ಬೆಳಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.30 ಬೆಳಗ್ಗೆ	6.45 ಸಾಯಂ
ಜಾಲಾರ್ ಪೇಟೆ ಪೆಸೆಂಜರ್	11.30 ಮಧ್ಯಾಹ್ನ	8.45 ಸಾಯಂ.
ಕಣ್ಣನೂರು	6.0 ಸಾಯಂ.	9.30 ಪೂರ್ವಹ್ನ

ಮಲಬದ್ಧತೆಯನ್ನು ಹೋಗಲಾಡಿಸಲು ನಾನೇನು ಮಾಡಲಿ?

ದೇಹದ ಒಳಭಾಗವು ನಿರ್ಮಲವಾಗಿದೆಯೋ ಎಂದು ವಿಚಾರಿಸಿರಿ

ದೇಹದೊಳಭಾಗದ ನೈರ್ಮಲ್ಯವು ಆರೋಗ್ಯ ಜೀವನಕ್ಕೆ ಪ್ರಧಾನ. ನಮ್ಮ ಆರೋಗ್ಯವನ್ನು ಕಾಪಾಡಬೇಕಾದರೆ ದೇಹದೊಳಭಾಗವು ನಿರ್ಮಲವಾಗಿರಬೇಕು. ಪ್ರತಿದಿನವು ಒಂದು ಗ್ಲಾಸು ರುಚಿಕರವಾದ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಂಡರೆ ದೇಹದ ಒಳಭಾಗವನ್ನು ಶುಚಿಯಾಗಿರಿಸಿ, ಅದು ಅನಾರೋಗ್ಯವನ್ನು ಹುಟ್ಟಿಸುವ ಅನೇಕ ಅಪಕಾರಿ ವಸ್ತುಗಳನ್ನು ಹೊರಹಾಕಿ ದೇಹದೊಳಭಾಗವನ್ನು ನಿರ್ಮಲವಾಗಿರಿಸುವುದು. ಅದು ತಂಪನ್ನು ಕೊಡುವುದು. ರಕ್ತವನ್ನು ಶುದ್ಧಿಗೊಳಿಸುವುದು. ಇಡೀ ಶರೀರಕ್ಕೆ ಉಲ್ಲಾಸವನ್ನೂ ಚೈತನ್ಯವನ್ನೂ ಉಂಟು ಮಾಡುವುದು. ದಿನನಿತ್ಯವೂ ಒಂದು ಗ್ಲಾಸು ಎಂಡ್ರೂಸ್ ಸಾಲ್ಟನ್ನು ಕುಡಿದು ಸುಖಪಡಿರಿ. ದಿನಕ್ಕೆ ಒಂದು ಸಣ್ಣ ಡೋಸ್ ಸಾಕಾಗುವುದು.

ANDREWS LIVER SALT

ಶುದ್ಧಿಗೊಳಿಸುವುದು—ತಂಪುಕೊಡುವುದು—ಉಲ್ಲಾಸವೀಯುವುದು—ಶಕ್ತಿಕೊಡುವುದು.

The Canara Banking Corporation Ltd.

(Incorporated in British India with limited liability

Estd. 1906.

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2½%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

The Bank of Mangalore Limited

HEAD OFFICE	*BRANCHES*
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly.

ಸಿನಿಮಾ ಸುದ್ದಿ

ಗ್ಲಿಸರಿನ್ ಹಚ್ಚಿ ಅಳುತ್ತಾಳೆ—ಲೀಲಾ ಚಿಟ್ನಿಸ್

ಬಾಂಬೆ ಟಾಕೀಸಿನವರ 'ಅಝಾದ್', 'ಕಂಗನ್', 'ಬಂಧನ್', 'ಝೂಲಾ'ಗಳಿಂದ ಲೀಲಾ ಚಿಟ್ನೀಸ್ ಹೆಚ್ಚು ಪ್ರಸಿದ್ಧಿಗೆ ಬಂದಳು. ಮೊನ್ನೆ ತಾನೆ ಇವಳೊಂದು ಸಿನೆಮಾ ಕಥೆ ಬರೆದು ಸಿನೆಮಾ ಸಾಹುಕಾರಗಳ ಬಾಯಲ್ಲೆಲ್ಲ ನಲಿದಾಡುತ್ತಿದ್ದಾಳೆ.

ಬಾಬುರಾವ್ ಪಟೇಲರು ಲೀಲಾ ಚಿಟ್ನೀಸಳು ಇನ್ನು ಮುಂದೆ ಸಿನೆಮಾ ಕಥೆ ಬರೆಯಬಾರದೆಂದು ಬುದ್ಧಿವಾದ ಹೇಳಿದರೂ ಮುಂದೆ ಇನ್ನೂ ಹೆಚ್ಚಾಗಿ ಸಿನೆಮಾ ಕಥೆ ಬರೆಯುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡಿದ್ದಾಳೆ.

ಲೀಲಾ ಧಾರವಾಡದಲ್ಲಿ ಹುಟ್ಟಿದಳು. (ಯಾವ ವರ್ಷವೋ ಗೊತ್ತಿಲ್ಲ.) ಇವಳ ತಂದೆಯವರು ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯದ ಪ್ರೊಫೆಸರರಾಗಿದ್ದರು. ಇವರು ಬ್ರಹ್ಮೋ ಸಮಾಜದವರಾಗಿದ್ದರು.

ಲೀಲಾ ತನ್ನ ತಂದೆತಾಯಿಗಳಿಗೆ ನಾಲ್ಕನೆಯ ಮಗಳು. ಇವಳಿಗೆ ಮೂವರು ಅಕ್ಕಂದಿರೂ ಇಬ್ಬರು ಅಣ್ಣಂದಿರೂ ಇದ್ದಾರೆ. ಇವಳು ಮುಂಬಯಿಗೆ ಹೋದಾಗ ಇವಳು ಎಂಟು ವರ್ಷದವಳಿದ್ದಳು. ಇವಳ ಶಿಕ್ಷಣ ರಾಮಮೋಹನ ಶಾಲೆಯಲ್ಲಿ ಹಾಗು ವಿಲ್ಸನ್ ಕಾಲೇಜಿನಲ್ಲಿ ನಡೆಯಿತು. ಮ್ಯಾಟ್ರಿಕ್ ಪಾಸಾದೊಡನೆಯೇ ಲೀಲೆಯ ವಿವಾಹವಾಯಿತು. ವಿವಾಹವಾದರೂ ಇವಳು ತನ್ನ ಕಾಲೇಜ್ ಅಭ್ಯಾಸ ಮುಂದುವರಿಸಿದಳು. ಬಿ. ಎ. ವರೆಗೂ ಇವಳ ಕಾಲೇಜು ಶಿಕ್ಷಣವಾಯಿತು. ಗೃಹಿಣಿಯಾಗಿ ಸಂಸಾರದಲ್ಲಿ ಬೀಳುವದು ಇವಳಿಗೆ ಸೇರದಂತಾಯಿತು. ಇಷ್ಟು ಕಲಿತೂ ಗೃಹ ಜೀವನ ಸಾಗಿಸಬೇಕಾಗುವುದಲ್ಲಾ ಎಂದು ವ್ಯಸನ ಪಡತೊಡಗಿದಳು.

ಇವಳ ಪತಿಯ ಗೆಳೆಯರಾದ ಸೇಟ್ ಗೋಕುಲದಾಸ ಎಂಬವರು "ಆದರ್ಶ ಚಿತ್ರ" ಎಂಬ ಚಿತ್ರಪಟ ಸಂಸ್ಥೆಯ ಒಡೆಯರಾಗಿದ್ದರು. ಅವರು ಲೀಲೆಗೆ ಸಿನಿಮಾ ನಟಿಯಾಗಲು ಕೇಳಿದರು. ತಾನು ಸಿನೆಮಾ ನಟಿಯಾಗಬೇಕೆಂಬ ವಿಚಾರ ಇವಳ ಕನಸು-ಮನಸ್ಸಿನಲ್ಲಿಯೂ ಆಗ ಇರಲಿಲ್ಲ. ಯಾಕೆಂದರೆ ಇವಳ ತಂದೆಯವರು ತುಂಬ ಧಾರ್ಮಿಕ ವೃತ್ತಿಯವರಾಗಿದ್ದರು.

ಇವಳು ಸಿನೆಮಾ ನಟಿಯಾಗಲು ಒಪ್ಪಿಕೊಂಡಳು. ಇವಳ (ಮೊದಲಿನ) ಪತಿ ಲೀಲೆಯ ಈ ಹೊಸ ವೃತ್ತಿಗೆ ಅಸೂಯೆಪಡಲಿಲ್ಲ. 'ಧುನ್ಕಾಧಾರ' ಎಂಬ ಚಿತ್ರಪಟದಲ್ಲಿ ಇವಳು ಅದೇ ಮೊದಲು ಅಭಿನಯಿಸಿದಳು. ಇವಳಿಗಾಗ "ಮೇಕಪ್" ಇತ್ಯಾದಿಗಳಾವೂ ಗೊತ್ತಿರಲಿಲ್ಲ. ಆದರಿಂದಾಗಿ ಮೊದಮೊದಲಿಗೆ ಇವಳು ಸಿನೆಮಾ ಜೀವನಕ್ಕೆ ಅಧೈರ್ಯಪಟ್ಟಳು. ಒಮ್ಮೊಮ್ಮೆ ಸಂಸಾರಿಕ ಜೀವನ ಸಾಗಿಸಬೇಕೆಂದು ಮನಸ್ಸಾಗುತ್ತಿತ್ತು. ಮುಂದೆ ಕೆಲ ಚಿತ್ರಪಟಗಳಲ್ಲಿ ಕೆಲಸ ಮಾಡಿದಳು. ಸಿನೆಮಾ ಮೇಕಪ್ ಬಗ್ಗೆ ತಜ್ಞರ ಸಲಹೆ ಪಡೆದು ಮುಂದೆ ಸಿನೆಮಾ ಕೆಲಸದಲ್ಲಿ ನಿರತಳಾದಳು.

ಆ ಮೇಲೆ ಇವಳು ಕರಾಚಿ ಸಿಂದ್ ಫಿಲ್ಮ್ ಕಾರ್ಪೋರೇಶನಿನಲ್ಲಿ 'ಛೋಟೀಸಿ ದುನಿಯಾ' ಎಂಬ ಚಿತ್ರಪಟದಲ್ಲಿ ಅಭಿನಯಿಸಿದಳು. ಈ ಚಿತ್ರಪಟವು ಯಶಸ್ವಿಯಾಗದ್ದರಿಂದ ಕಂಪೆನಿಯೂ ಬಿದ್ದುಹೋಯಿತು. ಲೀಲೆ ಆಗ ಕೊಲ್ಹಾಪುರದ 'ಹಂಸ'ದಲ್ಲಿ ಸೇರಿದಳು. ಇವಳು 'ಛಾಯಾ' ಚಿತ್ರಪಟದಲ್ಲಿ ಅಭಿನಯಿಸಿದಳು. ಚಿತ್ರಪಟವು ತಕ್ಕಮಟ್ಟಿಗೆ ಯಶಸ್ವಿಯಾಯಿತು.

ಪುಣೆಯ 'ಪ್ರಭಾತ ಕಂಪೆನಿ'ಯ 'ಕ್ಷಿತಿಜದ ಆಚೆ' ಎಂಬ ಚಿತ್ರಪಟದಲ್ಲಿ ಲೀಲಾ ಅಭಿನಯಿಸಿದಳು. ಅದು ಅಷ್ಟು ಯಶಸ್ವಿಯಾಗದೆ ಬರೇ ಎಳೇ ವಾರ ನಡೆಯಿತು.

ಅನಂತರ ಇವಳು ಮುಂಬಯಿಯ 'ದರ್ಯಾನಿ ಪ್ರೊಡಕ್ಷನ್' ಸೇರಿ ಹಲಕೆಲವು ಸಾಹಸಿ ಚಿತ್ರಪಟಗಳಲ್ಲಿ ಅಭಿನಯಿಸಿದಳು. 'ಜಂಟಲ್‌ಮೇನ್ ಡಾಕು' ಹಾಗು 'ಇನ್ಸಾಫ್' ಚಿತ್ರಪಟಗಳೇ ಇವಳು ಅಭಿನಯಿಸಿದ ಚಿತ್ರಪಟಗಳು. ಈ ಬಗೆಯ ಸ್ಟಂಟ್ ಚಿತ್ರಪಟಗಳಲ್ಲಿ ಕೆಲಸಮಾಡಲು ಇವಳಿಗೆ ಮೊದಲೇ ಮನಸ್ಸಿರಲಿಲ್ಲ. ಇವಳ ಸಲುವಾಗಿ ಒಬ್ಬ ಹುಡುಗ ಸಾಹಸ ಕೆಲಸಗಳನ್ನು ಮಾಡುತ್ತಿದ್ದ.

ಮಿನರ್ವಾದವರ 'ಜೈಲರು' ಚಿತ್ರಪಟದಲ್ಲಿ ಲೀಲಾ ಅಭಿನಯಿಸಿದ್ದಾಳೆ. ಕಲ್ಕತ್ತೆಯಲ್ಲಿ ಒಂದು ವರ್ಷದ ವರೆಗೆ ನಡೆದು ಪ್ರಸಿದ್ಧಿ ಪಡೆದ 'ತುಳಸಿದಾಸ' ಚಿತ್ರಪಟದಲ್ಲಿ ಇವಳು ಅಭಿನಯಿಸಿರುವಳು.

ಶ್ರೀಮತಿ ಲೀಲಾ ಚಿಟ್ನೀಸಳ ದೃಷ್ಟಿಯಲ್ಲಿ ಅಶೋಕ ಕುಮಾರ ಅತ್ಯುತ್ತಮ ನಟ. ಚಿತ್ರಪಟದಲ್ಲಿ ಅಳಬೇಕಾದ ಸಂದರ್ಭದಲ್ಲಿ ಇವಳು ಗ್ಲಿಸರಿನ್ ಉಪಯೋಗಿಸುವಳು.

"ನಾನು ನಿಜವಾಗಿಯೂ ಅತ್ತು ಕಣ್ಣೀರು ಸುರಿಸಿದರೆ ನನಗೆ ಆದೆಷ್ಟೊ ಆಯಾಸವಾಗುವದು. ಯಾಕೆಂದರೆ ನಾವು ಪ್ರತಿಯೊಂದು ಚಿತ್ರಪಟದಲ್ಲಿ ಅಳಬೇಕಾಗುವದು" ಎಂದು ಆಕೆ ನುಡಿಯುತ್ತಾಳೆ.

ಈಗ ಅವಳು ತನ್ನ ಎರಡನೆಯ ಪತಿಯೊಂದಿಗೆ ಸಿಲೋನ್‌ನಲ್ಲಿರುವಳು. ಅವಳಿಗೆ ನಾಲ್ವರು ಮಕ್ಕಳಿದ್ದು ಅವರ ಬಗ್ಗೆ ಆಕೆ ತುಂಬ ಅಭಿಮಾನಪಡುತ್ತಾಳೆ. ಅವಳು ಸಮಾಜದಲ್ಲಿ ಅಷ್ಟೊಂದು ಬೆರೆಯುವುದಿಲ್ಲ.

ಅವಳಿಗೆ ವಾಚನಾಭಿರುಚಿಯೂ ಇದೆ. ನಾಟಕಗಳನ್ನೇ ಹೆಚ್ಚಾಗಿ ಓದುವಳು. ಷೋಕಿಗಾಗಿ ವಾಸನೆಯ ಎಣ್ಣೆ ಉಪಯೋಗಿಸುವಳು. 'ಖಸ್'ನ್ನೇ ಹೆಚ್ಚಾಗಿ ಉಪಯೋಗಿಸುವಳು! ಪೋಷಾಕಿನಲ್ಲಿಯಂತೂ ಇವಳಿಗೆ ತುಂಬ ಪ್ರೀತಿ. ಆಭರಣಗಳಲ್ಲಿ ಅಷ್ಟೊಂದು ಆದರವಿಲ್ಲ.

ರಣಜಿತ್ ಮುವಿಟೋನ್

'ದಿ ಗೆಸ್ಟ್' ಎಂಬ ಚತುರ್ಭುಜ ದೇಸಾಯಿಯವರ ನಿದರ್ಶನದ ಚಿತ್ರ ಬೇಗನೇ ಪ್ರದರ್ಶಿತವಾಗಲಿದೆ. ನಿರ್ದೇಶಕ ಕೇದಾರ ಶರ್ಮರು ಮೋತಿಲಾಲ್, ಖುರ್ಶಿದ್ ಇವರ ನಟನೆಯುಳ್ಳ ಅರ್ಮಾನ್ ಚಿತ್ರ ತಯಾರಿಸಿರುವರು. ನಿರ್ದೇಶಕ ಕಿಮುದಯಾರ್ನಿಯವರು 'ಸುಖದುಃಖ' ಚಿತ್ರವನ್ನು ಮಾಡುತ್ತಿದ್ದಾರೆ. 'ರಿಟರ್ನ್ ಆಫ್ ಟುಫಾನ್ ಮೈಲ್' ಎಂಬುದು ರಣಜಿತ್ ಮತ್ತು ವಾಡಿಯಾ ಸ್ಟುಡಿಯೋಗಳಲ್ಲಿ ತಯಾರಾಗುತ್ತಿದೆ.

ವಾಡಿಯಾ ಮುವಿಟೋನ್

ಈಗ ಇತರರ ಅನೇಕ ಚಿತ್ರಗಳನ್ನು ತಯಾರಿಸುವುದರಲ್ಲಿ ನಿರತವಾಗಿದೆ. ಅವರ ಸ್ವಂತ ಚಿತ್ರ 'ಮುಕಾಬಿಲಾ' ಈಗ ಪೂರ್ಣವಾಗುತ್ತಿರುವುದು.

ಕರ್ದಾರ್ ಪ್ರೊಡಕ್ಷನ್

ನಿರ್ದೇಶಕ ಕರ್ದಾರರು ಮುಂದಿನ ಮೂರು ಚಿತ್ರಗಳ ತಯಾರಿ ಮಾಡುತ್ತಿದ್ದಾರೆ. ಮೊದಲನೆಯದು 'ಶ್ರಾದ್ಧ' ಎಂಬುದು. ನಾಜೀರರು ಈ ಸಾಮಾಜಿಕ ಕಥೆ ಬರೆದವರು. ಎರಡನೆಯದು 'ಬಂಧಿಯಾ' ಎಂಬುದು. ಪಂಡಿತ ಇಂದ್ರರು ಕಥಾ ಲೇಖಕರು. ಮೂರನೆಯದು 'ಮುನ್ಶಿಜಿ' ನಾದೀಕರು ಕಥೆಗಾರರು. 'ಶಾಜಹಾನ್' ಎಂಬ ದಿವಾನ್ ಶಾರಾರ ಐತಿಹಾಸಿಕ ಚಿತ್ರವನ್ನು ಕರ್ದಾರರು ತಯಾರಿಸುತ್ತಲಿದ್ದಾರೆ.

ನ್ಯೂ ಥಿಯೇಟರ್ಸ್ 'ಕಾಶಿನಾಥ್'

'ಸೋಗಂಧ' ಚಿತ್ರವನ್ನು ಮುಗಿಸಿದ ನ್ಯೂ ಥಿಯೇಟರ್ಸಿನವರು ಮುಂದೆ 'ಕಾಶಿನಾಥ್' ಎಂಬ ಚಿತ್ರ ತಯಾರಿಸುವರೆಂದು ತಿಳಿದಿದೆ. ಇದನ್ನು ನಿತಿನ್ ಬೋಸರು ನಿರ್ದೇಶಿಸುವರು. ಸೋಗಂಧದಲ್ಲಿನ ಭಾರತೀ ದೇವಿ, ಪಹರಿ, ಚಂದ್ರಾವತಿ ದೇವಿ ಮೊದಲಾದವರು ನಟಿಸುತ್ತಾರೆ.

ನಾವೆಲ್ಲರೂ ಅದನ್ನು
ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾದದೆ. ಕುಟಿಕೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಅಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.
ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ್ ಪೌಡರ್

CUTICURA TALCUM POWDER

FURTHER REDUCTIONS
IN
LENDING RATES

The busy trade season is coming to a close. Lending rates are naturally tending to be reduced. Even at the beginning of the season we had lowered our rates on loans and advances as our contribution to better business. A further reduction in accordance with seasonal conditions will be made early if the present conditions continue....

CANARA BANK, LIMITED.
ESTD. 1906.

ವಿಚಿತ್ರ-ವಿಜ್ಞಾನ

ನಾಜೀ ಪಕ್ಷದ ಸ್ಥಾಪಕನ ಮರಣ

ಪ್ರಪಂಚವನ್ನೇ ನುಂಗುತ್ತಿರುವ ನಾಜಿಸಂಘದ ಸ್ಥಾಪಕನು ಯಾರೆಂದು ಬಹುಜನರಿಗೆ ಗೊತ್ತಿಲ್ಲ. ಹಿಟ್ಲರನು ಅದರ ಇಂದಿನ ಮುಂದಾಳು ನಿಜ. ಆದರೆ ಇದನ್ನು ಸ್ಥಾಪಿಸಿದವನು ಎಂಟನ್ ಡ್ರೆಕ್ಸ್ಲರ್ ಎಂಬಾತನು. ಈತನು ಮ್ಯುನಿಕಿನ ಒಬ್ಬ ರೈಲ್ವೆ ಕೆಲಸಗಾರನಿದ್ದ. ಮೊದಲನೆಯ ಯುದ್ಧಕಾಲದಲ್ಲಿ ಸೈನ್ಯಕ್ಕೆ ಸೇರಿ ಕೆಲಸ ಮಾಡುತ್ತಿದ್ದನು. ಆತನು ಟ್ರೇಡ್ ಯೂನಿಯನ್‌ಗಳನ್ನು ವಿರೋಧಿಸುತ್ತಿದ್ದನು. ಮಾರ್ಕ್ಸ್‌ವಾದ ಪ್ರತಿಭಟಿಸುತ್ತಿದ್ದನು; ಜರ್ಮನಿಯು ಪ್ರಬಲವಾಗದಿದ್ದರೆ ಅಂತರ್‌ರಾಷ್ಟ್ರೀಯ ಆರ್ಥಿಕ ಗೊಂದಲದಿಂದ ಅದು ನಾಶವಾಗುವುದೆಂದು ನಂಬಿಕೆಯುಳ್ಳವನಾಗಿದ್ದನು. ಮಾರ್ಚ್ ೧೯೧೮ರಲ್ಲಿ ಆತನು ೪೦ ಮಂದಿ ಜರ್ಮನರನ್ನು ಮ್ಯುನಿಕ್ ಬೀರಿನಲ್ಲಿ ಒಟ್ಟುಗೂಡಿಸಿ "ಸ್ವತಂತ್ರ ಕೆಲಸಗಾರರು" ಎಂಬ ಸಮಿತಿಯನ್ನು ರಚಿಸಿದನು. ಅದೇ ಸಮಿತಿ ಮುಂದಿನ ವರ್ಷದಲ್ಲಿ 'ಜರ್ಮನ್ ಕೆಲಸಗಾರ ಪಕ್ಷ' ಎಂಬ ಹೆಸರುಗೊಂಡಿತು. ಆ ಸಂಘಕ್ಕೆ ಹಿಟ್ಲರನು ಏಳನೇ ಸದಸ್ಯನಾಗಿ ಸೇರಿಸಲ್ಪಟ್ಟನು. 'ಆ ಪಕ್ಷದ ಹೆಸರು ೧೯೨೦ರಲ್ಲಿ ರಾಷ್ಟ್ರೀಯ ಸಮತಾವಾದ ಜರ್ಮನ್ ಕೆಲಸಗಾರ ಪಕ್ಷ' ಎಂದು ಬದಲಾಯಿತು. ಆ ಮೇಲೆ ಹಿಟ್ಲರನು ಡ್ರೆಕ್ಸ್ಲರನನ್ನು ಅಧಿಕಾರದಿಂದ ಕೆಳತಳ್ಳತೊಡಗಿದನು. ೧೯೨೩ರಲ್ಲಿ ಡ್ರೆಕ್ಸ್ಲರನು ನಾಜಿಪಕ್ಷದಿಂದ ತೊಲಗಿದನು. "ಕೇವಲ ಒಬ್ಬ ಕೂಲಿಗಾರನಾಗಿ, ಏನೂ ಪ್ರಸಿದ್ಧಿಯಿಲ್ಲದೆ, ಸಿಪಾಯಿಯೂ ಕೂಡ ಆಗಿರದೆ, ದುರ್ಬಲನಾಗಿ ಅನಿಶ್ಚಿತನಾಗಿ" ಆತನಿರುವನೆಂದು ಹಿಟ್ಲರನು ತನ್ನ ಆತ್ಮಚರಿತೆಯಲ್ಲಿ ಅವನ ವಿಷಯ ಬರೆದಿರುವನು. ನಾಜಿಪಕ್ಷ ಬಿಟ್ಟುಬಂದವನೇ 'ರಾಷ್ಟ್ರೀಯ ಸಂಘ'ವೊಂದನ್ನು ಸ್ಥಾಪಿಸಿದ. ಅದು ಕೆಲವೇ ಕಾಲದಲ್ಲಿ ನಾಮಾವಶೇಷವಾಯಿತು. ಹಿಟ್ಲರನು ಅಧಿಕಾರಕ್ಕೆ ಬಂದ ಮೇಲಂತೂ ಡ್ರೆಕ್ಸ್ಲರನು ರಾಜಕೀಯದಲ್ಲಿ ಅಪ್ರಾಮುಖ್ಯನಾಗಿಯೇ ಇದ್ದನು. ಆತನು ಕೆಲವು ತಿಂಗಳಲ್ಲಿ ಮ್ಯುನಿಕಿನಲ್ಲಿ ತೀರಿಹೋದನು.

ಮೂರು ತಲೆಮಾರಿನ 'ಆಸಿದ್ಧನದ' ಉತ್ತರಾಧಿಕಾರಿ!

ಬೊಂಬಾಯಿ ಪ್ರಾಂತದ ನಾಡಿಯಾದಿನ ಸುದ್ದಿಯಿದ್ದು, ಮೂರು ತಲೆಮಾರಿನಿಂದ ಪೋಸ್ಟಾಫಿಸಿನಲ್ಲಿ ಕೂಡಿಸಿಟ್ಟ ಆಪನ್ನಿಧಿಯ ಉತ್ತರಾಧಿಕಾರಿಯೊಬ್ಬನು ದೊರೆತಿದ್ದಾನೆ. ಆತನ ತಂದೆ ಅಜ್ಜ ಮುತ್ತಜ್ಜ ಇವರು ಕೂಡಿಸಿಟ್ಟ ಹಣದ ವಿಷಯ ಹಳೇ ರಿಕಾರ್ಡು ಹುಡುಕುವಾಗ ಪತ್ರ ದೊರೆತುದರಿಂದ ಆತನು ಪೋಸ್ಟಾಫಿಸಿಗೆ ಹೋಗಿ ಅದನ್ನೊಪ್ಪಿಸಿದ್ದಾನೆ. ೧೮೪೭ರಿಂದ ಆ ಹಣವು ಕೂಡಿಸಲ್ಪಡುತ್ತದೆ. ಅರ್ಧ ಶತಮಾನಗಳು ದಾಟಿದ ಬಳಿಕ ಈ ಹಣದ ಉತ್ತರಾಧಿಕಾರಿಯೊಬ್ಬನು ದೊರೆತನು. ಒಟ್ಟು ಹಣ ರೂ ೩,೬೦೦ ಮಾತ್ರ; ಆದರೆ ಅದರ ಬಡ್ಡಿ ಆ ಮೌಲ್ಯದ ಎರಡರಷ್ಟು ಆಗುತ್ತದೆ. ಮೊದಲನೆಯ ಎರಡು ಜನರ ಹಣಕ್ಕೆ ೫೫ ವರ್ಷದ ಬಡ್ಡಿ ಸಲ್ಲಬೇಕಾಗಿದೆ. ಕೊನೆಯದಕ್ಕೆ ೧೫ ವರ್ಷದ ಬಡ್ಡಿ ಸಲ್ಲಬೇಕಾಗಿದೆ. ಕೊನೆಯದಕ್ಕೆ ೧೫ ವರ್ಷದ ಬಡ್ಡಿ ಸಲ್ಲುತ್ತದೆ. ಆತನ ಮುತ್ತಜ್ಜ ೧೮೯೭ರಲ್ಲಿ ತೀರಿದನು. ಅಜ್ಜ ೧೯೧೦ರಲ್ಲಿ ತೀರಿಹೋದನು. ತಂದೆ ೧೯೪೧ರಲ್ಲಿ ಮರಣಹೊಂದಿದನು. ಈ ಉತ್ತರಾಧಿಕಾರಿಗೆ ಆಧಾರ ಪತ್ರಗಳು ಆಕಸ್ಮಿಕವಾಗಿ ದೊರೆತವಂತೆ!

ಮಿಲ್ಲಿನ ಅಕ್ಕಿಯಲ್ಲಿ ಆಹಾರ ಸತ್ವವಿಲ್ಲ

ಸರಕಾರವು ಮಿಲ್ಲನ್ನು ನಿರ್ಬಂಧಿಸುವುದೇ?

ಮಿಲ್ಲ್ ಅಕ್ಕಿ ಕಣ್ಣಿಗೆ ಶುಭ್ರವಾಗಿ ಕಂಡರೂ ಅದರಲ್ಲಿ ಹಲವು ಬಗೆಯಿಂದ ಹಾನಿಯುಂಟಾಗುತ್ತದೆ. ಮುಖ್ಯವಾಗಿ ನಮ್ಮ ಶರೀರಕ್ಕೆ ಬೇಕಾದ ಅನೇಕತರದ ಅಕ್ಕಿಯಲ್ಲಿರುವ ಆಹಾರ ಸತ್ವಗಳು ಇರುವುದಿಲ್ಲ. ಮಿಲ್ಲಿನಲ್ಲಿ ಭತ್ತ ಮಡಿಯಾಗುವಾಗ ಸತ್ವಹಾಳಾಗಿಹೋಗುತ್ತವೆ. ಕೈಯಲ್ಲಿ ಕುಟ್ಟಿದ ಅಕ್ಕಿ ಮಾಡುವನಮ್ಮ ಹಳ್ಳಿಗಳ ಕ್ರಮವು ನಿಜವಾಗಿಯೂ ಒಳ್ಳೆಯದಾಗಿರುವುದು. ಆದರಿಂದ ಜನರು ಮಿಲ್ಲ್ ಅಕ್ಕಿಯನ್ನು ಕೊಂಡುಕೊಳ್ಳುವುದನ್ನು ಬಿಟ್ಟು ಕೈಯಲ್ಲಿ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುವುದು ವಿಹಿತವಾದುದು, ಹೀಗೆಂದು ಅನೇಕ ಆಧಾರಗಳನ್ನು ಕೊಟ್ಟು ಕೇಂದ್ರ ಪ್ರಾಂತಿಕ ಸರಕಾರವು ಒಂದು ಪ್ರಕಟನೆ ಹೊರಡಿಸಿದೆ. ಇದರಲ್ಲಿ ಅನೇಕ ವಿಜ್ಞಾನ ಪಂಡಿತರ ಅಭಿಪ್ರಾಯಗಳು ಎತ್ತಿ ಕೊಡಲಾಗಿವೆ. ಮಾತ್ರವಲ್ಲದೆ ಅಕ್ಕಿಯನ್ನು ಬೇಯಿಸಿದ ಮೇಲೆ ಗಂಜಿತಿಳಿಯನ್ನು ಚೆಲ್ಲುವ ಪದ್ಧತಿಯೂ ತೀರಾ ತಪ್ಪೆಂದೂ ಅದರಲ್ಲಿ ತಿಳಿಸಲಾಗಿದೆ. ಸರಕಾರವು ಈ ರೀತಿ ಪ್ರಕಟಿಸಿದ ವಿಷಯವನ್ನು ವಾರ್ಧಾದಲ್ಲಿ ಗಾಂಧಿಜಿಯವರ ಆಶ್ರಯದಲ್ಲಿ ಸ್ಥಾಪಿತವಾದ ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು ಅನೇಕ ಕಾಲಗಳಿಂದ ಹೇಳುತ್ತಾ ಬಂದಿದ್ದಾರೆ. ಅನೇಕ ಮಂದಿ ಆಹಾರ ವಿಜ್ಞಾನಿಗಳು ಡಾಕ್ಟರರು ಕೆಲಕಾಲದಿಂದ ಉಪದೇಶಿಸುತ್ತಾ ಬಂದಿರುವರು. ಮಿಲ್ಲ್ ಅಕ್ಕಿಯನ್ನು (ಸತ್ವವಿರುವುದರಿಂದ) ಸದಾಕಾಲ ಉಪಯೋಗಿಸಿದರೆ ಅದು ಕ್ಷಯರೋಗ, ಬೆರಿಬೆರಿ ಮತ್ತಿತರ ಅನೇಕ ರೋಗಗಳನ್ನುಂಟುಮಾಡುತ್ತದೆಂದು ಹೇಳಲಾಗಿದೆ. ಯಾಂತ್ರಿಕ ದೇಶಗಳಲ್ಲಿ ಕೂಡಾ ಆಹಾರಕ್ಕಾಗಿ ಅಕ್ಕಿಯನ್ನು ಕೈಯಿಂದ ಕುಟ್ಟುವುದೇ ವಿಹಿತವಾಗಿರುವುದೆಂದು ಆಹಾರ ತಜ್ಞರಾದ ಡಾಕ್ಟರರು ಹೇಳುತ್ತಿದ್ದಾರೆ. ಹೀಗೆ ಕೇಂದ್ರ ಪ್ರಾಂತಿಕ ಸರಕಾರವು ಹೊರಡಿಸಿದ ಪ್ರಕಟಣೆಯನ್ನು ಇತರ ಪ್ರಾಂತಿಕ ಸರಕಾರಗಳು ಅನುಸರಿಸಿ ದೇಶದ ಹಿತಮಾಡಲಾರವೆ?

ತಲೆನೋವು ರೋಗಸೂಚಕ

ತಲೆನೋವು ಒಂದು ರೋಗವೆಂದು ಹಲವರು ತಿಳಿದುಕೊಳ್ಳುತ್ತಾರೆ. ಆದರೆ ಅದು ಕೇವಲ ರೋಗಸೂಚಕ ಮಾತ್ರ. ಯಾವುದಾದರೊಂದು ರೋಗವು ನಮ್ಮ ದೇಹದೊಳಗಿದೆಯೆಂಬುದನ್ನು ತಲೆನೋವು ನಮಗೆ ಮೊದಲಾಗಿ ತಿಳಿಸುತ್ತದೆ. ಹತ್ತು ವರ್ಷಗಳವರೆಗೆ ಈ ವಿಷಯದಲ್ಲಿ ಅಭ್ಯಾಸಮಾಡಿದ ಅಮೆರಿಕನ್ ಡಾಕ್ಟರರೊಬ್ಬರು ಹೇಳುವುದೇನೆಂದರೆ, ತಲೆನೋವು ಮೆದುಳಿನ ರೋಗವಲ್ಲ; ಏಕೆಂದರೆ ಮೆದುಳಿನ ನರಗಳಿಗೆ ನೋವನ್ನು ಕೊಡುವ ಶಕ್ತಿಯಿಲ್ಲವೆಂದು. ಅದರ ಬದಲು ಹೃತ್ಕೋಶದ ನರಗಳು ಕೆಲವು ತಲೆಯ ಮತ್ತು ಕುತ್ತಿಗೆಯ ನರಗಳು ನೋವನ್ನುಂಟುಮಾಡುತ್ತಿವೆಯೆಂದು ಅವರ ಹೇಳಿಕೆಯಾಗಿರುವುದು. ಇಂತಹ ತಲೆನೋವಿನಲ್ಲಿ ಕೆಟ್ಟದೆಂದರೆ ಒಂದು ಭಾಗದ ತಲೆನೋವು; ಇದರಿಂದ ಬೆಳಕನ್ನು ನೋಡುವುದು ಶಬ್ದವನ್ನು ಕೇಳುವುದು ಕಷ್ಟವಾಗುತ್ತದೆ. ಇಂತಹವುಗಳಿಗೆ ವಿಟಮಿನ್ ಬಿ. ಇಂಜೆಕ್ಷನ್‌ಗಳು ಕೊಟ್ಟರೆ ಗುಣವಾಗುತ್ತದೆ. ಸಾಮಾನ್ಯವಾಗಿ ತಲೆನೋವಿಗೆ ಕೊಡುವ ಮದ್ದುಗಳು ತಲೆನೋವನ್ನು ಗುಣಪಡಿಸುವುದಿಲ್ಲ; ನರಗಳನ್ನು ಶಕ್ತಿಹೀನವಮಾಡಿ ನೋವು ನಮಗೆ ತಿಳಿಯದಂತೆ ಮಾತ್ರ ಮಾಡುತ್ತದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 1047/1941.
O. S. 117/1938.

ವಾದಿ— ಎನ್. ಲಕ್ಷ್ಮೀನಾರಾಯಣ ಕಾಮತ್

ಪ್ರತಿವಾದಿ—ಸ್ಯಾಕಿಸಿದ್ದಿ ಮಹಮ್ಮದ್ ಸ್ಯಾಬ ಮೈದಿನ್ ಸ್ಯಾಬರ ಮಗ—ಕುಂದಾಪುರ ತಾಲೂಕು ಕಂಡ್ಲೂರು ಗ್ರಾಮ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸದ್ರಿ ವಾದಿಯು ಪ್ರತಿವಾದಿಯ ಜಾಬ್ತ ಸ್ಥಿರಾಸ್ತಿಗಳನ್ನು ಲೈಲಾಮಿಗೆ ತರುವರೇ ಸದ್ರಿ ಅಮಲ್ದಾರಿಯಲ್ಲಿ ಏಲಂ ಇಸ್ತಿಹಾರು ದಾಖಲು ಮಾಡಿರುತ್ತಾನೆ. ಸದ್ರಿ ಏಲಂ ಇಸ್ತಿಹಾರಿನ ಶರ್ತ ನಿರ್ಣಯಿಸುವರೆ ತಾರೀಕು 18-6-1942ಕ್ಕೆ ಇಟ್ಟಿದೆ. ಆ ಕುರಿತು ಏನಾದರೂ ಆಕ್ಷೇಪ ಇದ್ದರೆ ಸದ್ರಿ ತಾರೀಕಿನಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಜಾಬ್ತಾಗಿ ಹ್ಯಾಜೀರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟಿಯಿಂದ ಮುಂದಿನ ಕ್ರಮ ನಡಿಸಲಾಗುತ್ತದೆ.

ಮೊಕ್ಕಾಂ ಕುಂದಾಪುರ 29-5-1942 } K. Raghunath Shenoy, ವಾದಿ ಕಡೆ ವಕೀಲ್

ಕಡಿಮೆ ಖರ್ಚು

ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು.

ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸಾಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

[illegible] ರೂ. 2—13—0 Regd. No. M 3460
ತಾರೀಖು [illegible]

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಯ
ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಿಶ್ವವಾತ, ಮೊಡವೆ ಮೊದಲ
ಎಲಾ ರೋಗಗಳಿಗೂ ಸಿದ್ಧೌಷಧ.

ಹುಳುಕಡ್ಡಿ ಮದ್ದು

ತ್ವ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ
ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ
ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

(Regd)

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ, ಹುಬ್ಬಳ್ಳಿ.
2. 36 ಕ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by the A. S. Kamath at Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 12—6—1942 [ಸಂಚಿಕೆ 24]

ಮದ್ರಾಸು ಸರಕಾರದ ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮದ್ರಾಸು ಫೋರ್ಟ್ ಸೈಂಟ್ ಜೋರ್ಜ್ ಗಜೇಟು ನಂಬ್ರ **22 A. Part I & Part II (2--6--1942)**

ಮಾಧ್ಯಮಿಕ ಶಾಲಾ ಲಘುಗಣಿತ

ಮಾಧ್ಯಮಿಕ ಶಾಲೆಗಳಲ್ಲಿ 1942ನೇ ಜೂನ್ ತಿಂಗಳಿಂದ ಅನುಸರಿಸಬೇಕಾದ ಸರಕಾರದ ಹೊಸ ಪಾಠಪಟ್ಟಿಗನುಸಾರವಾಗಿ ಬರೆಯಲ್ಪಟ್ಟಿದ್ದು

ಎಂ ಪಿ ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡ್ರಿ

		ಗಜೇಟು ಪುಟ Part II
Iನೇ ಫೋರ್ಮಿಗೆ	0—12—0	75
IIನೇ ಫೋರ್ಮಿಗೆ	0—12—0	75

ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ. ಭವಾನಿರಾವ್ ಬಿ ಎ ಎಲ್ ಟಿ

IIIನೇ ಫೋರ್ಮಿಗೆ 0—12—0 ಗಜೇಟು ಪುಟ 75

ಬಾಲಕರ ಲಘುಗಣಿತ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ

ಬಿ ಭವಾನಿರಾವ್, ಬಿ ಎ, ಎಲ್ ಟಿ

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I	II
ನಾಲ್ಕನೇ ದರ್ಜೆಗೆ	0—7—0	61	75
ಐದನೇ ದರ್ಜೆಗೆ	0—8—0	61	75

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ (Dip Geog)

ಗಣಪತಿ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ Part I
ನಾಲ್ಕನೇ ದರ್ಜೆಗೆ	0—6—0	50
ಐದನೇ ದರ್ಜೆಗೆ	0—7—0	50

ಪ್ರಾಥಮಿಕ ಲಘುವಿಜ್ಞಾನ

ಎಸ್ ರಾಮಕೃಷ್ಣಾಚಾರ್, ಬಿ ಎ ಎಲ್ ಟಿ

ಬೋರ್ಡ್ ಹೈಸ್ಕೂಲ್, ಕಾರ್ಕಳ

		ಗಜೇಟು ಪುಟ Part I
ಆರನೇ ದರ್ಜೆಗೆ	0—6—0	69
ಏಳನೇ ದರ್ಜೆಗೆ	0—6—0	69
ಎಂಟನೇ ದರ್ಜೆಗೆ	0—6—0	68

ವ್ಯಾಕರಣ ಮತ್ತು ಪ್ರಬಂಧ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ

ಕೆ ಕೆ ರೈ. ವಿದ್ವಾನ್ ಗಜೇಟು ಪುಟ

		Part I	II
4 ಮತ್ತು 5ನೇ ದರ್ಜೆಗೆ	0—2—0	112	140
ಆರನೇ ದರ್ಜೆಗೆ ಅಥವಾ I ಫೋರ್ಮಿಗೆ	0—3—0	113	140
ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ	0—3—6	113	140
ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ	0—4—0	113	140

ಮಕ್ಕಳ ಪದ್ಯಮಂಜರಿ

ಕೆ ಕೆ ರೈ ವಿದ್ವಾನ್

		ಗಜೇಟು ಪುಟ Part I
ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ	0-2-0	111
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ	0-2-6	111

ಸಿವಿಕ್ಸ್

ಎಂ ಗಣಪತಿರಾವ್ ಐಗಳ್

		ಗಜೇಟು ಪುಟ Part I
ಮೂರನೇ ದರ್ಜೆಗೆ	0—1—6	41
ನಾಲ್ಕನೇ ದರ್ಜೆಗೆ	0—2—0	41
ಐದನೇ ದರ್ಜೆಗೆ	0—2—6	41

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ರೈ ವಿದ್ವಾನ್

ಆರನೇ ದರ್ಜೆಗೆ	0—3—0	42
ಏಳನೇ ದರ್ಜೆಗೆ	0—3—0	42
ಎಂಟನೇ ದರ್ಜೆಗೆ	0—3 0	42

ಚರಿತ್ರೆ ಮತ್ತು ಕಥೆಗಳು

		ಗಜೇಟು ಪುಟ Part I
ಮೂರನೇ ದರ್ಜೆಗೆ	0—2—6	
ನಾಲ್ಕನೇ ದರ್ಜೆಗೆ	0—3—0	54

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ ವಾಸುದೇವರಾವ್, ಎಂ ಎ ಎಲ್ ಟಿ

ಗಣಪತಿ ಹೈಸ್ಕೂಲ್, ಮಂಗಳೂರು

		ಗಜೇಟು ಪುಟ
ಕ್ಲಾಸ್ ಲೈಬ್ರೆರಿ		
ನಾಲ್ಕನೇ ದರ್ಜೆಗೆ	0—3—0	72
ಐದನೇ ದರ್ಜೆಗೆ	0—3—6	72
ಐದನೇ ದರ್ಜೆಯ ಚರಿತ್ರೆ ಮತ್ತು ಕಥೆಗಳು	0—3—6	

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರಣೆ

ಎಮ್. ವಾಸುದೇವರಾವ್, ಎಂ. ಎ. ಎಲ್ ಟಿ (Dip Geog)

II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

KANNADA ILLUSTRATED WEEKLY

ಹರಿಜನವಾಣಿ

'ನಮ್ಮ ಮಾರ್ಗವು ತೀರಾ ವಿರುದ್ಧವಿದೆ'

ರಾಜಾಜಿ ಕುರಿತು ಗಾಂಧಿಜಿ ಸ್ಪಷ್ಟೀಕರಣ

"ಬ್ರಿಟಿಷರು ಏಶ್ಯಾಧ ವಸಾಹತುಗಳಿಂದ ಕನಿಷ್ಟಪಕ್ಷ ಹಿಂದುಸ್ಥಾನದಿಂದಾದರೂ ಹೊರಟು ಹೋಗಬೇಕೆಂದು ನೀವು ಇತ್ತೀಚೆಗೆ ಕೊಟ್ಟ ಸಲಹೆ ಹಿಂದುಸ್ಥಾನದ ಸರ್ವಸಾಮಾನ್ಯ ಜನರು ಸ್ಪಷ್ಟಗೊಳಿಸದಿರುವ ಅಭಿಪ್ರಾಯಕ್ಕೆ ಅನುಸಾರವಾಗಿದೆ. ಬ್ರಿಟಿಷರು ಕಡೆಗೆ ಈ ಸಲಹೆಗೆ ಸಮ್ಮತಿಸಿದರೂ ಜಪಾನರು ನಮ್ಮ ಮೇಲೆ ಧಾಳಿಯಿಡಲಾರರೆಂದು ನೀವು ಭಾವಿಸುವುದಿಲ್ಲ. ಆಗ ನಾವು ಅಹಿಂಸಾತ್ಮಕ ಸಂಗ್ರಾಮ ಹೂಡಬೇಕೆಂದು ನಿಮ್ಮ ಸಲಹೆಯಿದೆ. ಆದರೆ ಬ್ರಿಟಿಷರು ಶತ್ರುಗಳ ವಿರುದ್ಧ ನಮ್ಮ ದೇಶದಲ್ಲಿ ಹೋರಾಟವನ್ನು ಕೇವಲ ಸೈನಿಕ ಕಾರ್ಯಕ್ಕಾಗಿಯಾದರೂ ಹಾಗೆಯೇ ಸಾಗಿಸುವರು. ಧಾಳಿಗಾರರೊಡನೆ ನಾವು ಅಹಿಂಸಾತ್ಮಕ ವಿರೋಧ ಮಾಡಿದರೂ ನಮ್ಮ ದೇಶದಲ್ಲಿ ನಮ್ಮ ತಲೆಮೇಲೆ ನಡೆಯುತ್ತಿರುವ ಭೀಕರ ಮರಣ ವಿನಾಶಗಳನ್ನು ತಡೆವುದು ನಮಗೆ ಸಾಧ್ಯವಾಗಲಾರದು. ಬ್ರಿಟಿಷರೊಡನೆ ಸಹಕಾರ ಮಾಡಿದರೂ ಚಿಂತೆಯಿಲ್ಲ, ಇಡೀ ದೇಶದಲ್ಲಿ ಶತ್ರುವನ್ನೆದುರಿಸಲು ಪ್ರಚಂಡ ಸಂಘಟನೆ ಮಾಡಬೇಕೆಂದು ರಾಜಾಜಿ ನಡೆಸಿದ ಪ್ರಯತ್ನವು ವ್ಯರ್ಥ ಸಂಕಷ್ಟವನ್ನು ತಡೆಯಲಿಕ್ಕಾಗಿರುವುದು. ಅವರ ಯೋಜನೆಯಲ್ಲಿಯೂ ಸಂಕಷ್ಟಗಳಿದ್ದರೂ ಪರಕೀಯರ ಧಾಳಿಯಿಂದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕಾಗಿ ಈ ಪ್ರಯತ್ನವಿರುವುದರಿಂದ ಜನರು ಒಳ್ಳೆ ಉತ್ಸಾಹದಿಂದ ಹೆಚ್ಚು ಸಿದ್ಧತೆಯಿಂದ ಈ ಸಂಕಟವನ್ನೆದುರಿಸಬಹುದು. ನಮ್ಮ ಶಕ್ತಿಯ ಬಗ್ಗೆ ಅವರಿಗಾದರೂ ಗೌರವವುಂಟಾಗಿ ಭಾರತೀಯರ ಬೇಡಿಕೆಯನ್ನು ಇನ್ನು ಮುಂದೆ ನಿರಾಕರಿಸುವುದರಿಂದ ಪ್ರಯೋಜನವಾಗದೆಂಬ ಭಾವನೆ ಅವರಲ್ಲಿ ಹುಟ್ಟಬಹುದೆಂದು ರಾಜಾಜಿಗೆ ಅನಿಸುತ್ತದೆ. ಹಾಗಾದರೆ ನಿಮ್ಮ ಮತ್ತು ರಾಜಾಜಿಯವರ ಧೋರಣದಲ್ಲಿ ಮೂಲಭೂತ ಭೇದವೇನೂ ಇಲ್ಲ"

ಇದು ಗಾಂಧೀಜಿಯವರಿಗೆ ಅವರ ಮತ್ತು ರಾಜಾಜಿ ಮತಭೇದವನ್ನು ಸರಿಪಡಿಸಬೇಕೆಂದು ಆತುರ ಉಳ್ಳ ಗೆಳೆಯರೊಬ್ಬರಿಂದ ಬಂದ ಪತ್ರದ ಸಾರಾಂಶ. ಗಾಂಧಿಜಿ ಅದಕ್ಕೆ ಕೊಟ್ಟ ಉತ್ತರ ಹೀಗಿದೆ. "ದೇಶವನ್ನು ನಾವಿಬ್ಬರೂ ಬಹಳವಾಗಿ ಪ್ರೀತಿಸುತ್ತೇವೆ. ಆದರೆ ನಮ್ಮ ಸೇವಾಮಾರ್ಗವು ತೀರಾ ವಿರುದ್ಧವಿದೆ. ಬೆದರಿಸುತ್ತಿರುವ ಜಪಾನರ ಧಾಳಿಯನ್ನು ಬ್ರಿಟಿಷ್ ಸಹಾಯದಿಂದ ಎದುರಿಸಬಹುದೆಂದು ಅವರು ನಂಬುತ್ತಾರೆ. ಆದರೆ ಕಡೆಗೆ ಇದು ಸಾಧ್ಯವಲ್ಲವೆಂದು ನನ್ನ ನಂಬಿಕೆ. ಹಿಂದುಸ್ಥಾನವು ಬ್ರಿಟಿಷರ ವಾಸಸ್ಥಾನವಲ್ಲ. ಅವರ ಮೇಲೆ ಅಪಾಯಬಂದರೆ, ಸಿಂಗಾಪುರ, ಮಲಯ, ರಂಗೂನುಗಳಂತೆ ಅವರು ಇಲ್ಲಿಂದಲೂ ಹೊರಟು ಹೋಗಬಹುದು. ಇದರಿಂದ ಅವರ ಶೌರ್ಯವನ್ನು ಹೀನೈಸುವುದಲ್ಲ. ಆದರೆ ಬಹುಶಃ ಹಿಂದುಸ್ಥಾನದಿಂದ ಅವರು ಹಿಂದೀ ಸೈನ್ಯವನ್ನು ತೆಗೆದುಕೊಂಡು ಹೋಗಲಿಕ್ಕಿಲ್ಲ. ಜಪಾನರ ಎದುರು ಹೋರಾಡಲು ಅವರಿಗೆ ಹೇಳಬಹುದು. ಹೊರಗಿನಿಂದಲೇ ಜಪಾನರಿಗೆ ಸಾಕಷ್ಟು ತೊಂದರೆ ಕೊಡಬಹುದು. ಆದರೆ ನನ್ನ ಸೂಚನೆಯೆಂದರೆ, ಮೊದಲೇ ಬ್ರಿಟಿಷರು ವ್ಯವಸ್ಥಿತ ರೀತಿಯಿಂದ ಹೊರಟು ಹೋಗಬೇಕು. ಇದರಿಂದ ಹಿಂದೂಸ್ಥಾನದ ಕೋಟ್ಯಾಂತರ ಜನರಿಗೆ ಸಂತೋಷವಾಗುವುದು. ಅನಂತರ ದ್ವೇಷಿಸಲ್ಪಡುವ ಬ್ರಿಟಿಷರು ಮಿತ್ರರಾಗುವರು. ಅನಂತರ ಅವರು ಚೀನದವರೊಡನೆ ಮಾಡುವಂತೆ ಮಿತ್ರಭಾರತೀಯರೊಡನೆ ವಿಚಾರವಮಾಡಿ ವ್ಯವಸ್ಥಿತವಾದ ಒಂದು ಪ್ರಬಲ ಸೈನ್ಯವನ್ನು ಕೂಡಿಸಿ ಶತ್ರುವನ್ನು ಎದುರಿಸಬಹುದು. ಇದು ಇನ್ನೊಬ್ಬರಿಗೂ ಸಹಾಯವಾಗುವುದು.

"ಮೂರನೆಯ ಪಕ್ಷವು ಹೊರಟು ಹೋದ ಕೂಡಲೇ ರಾತ್ರಿ ಮುಗಿದ ಬಳಿಕ ಹಗಲು ಬರುವಂತೆ ಜಾತೀಯ ಐಕ್ಯವಾಗುವುದು. ಜಾತೀಯ ಐಕ್ಯವು ಸ್ವಾತಂತ್ರ್ಯಕ್ಕಿಂತ ಮೊದಲು ಸಾಧ್ಯವಾಗಲಾರದು. ಸ್ವಾತಂತ್ರ್ಯ ಸಂಪಾದನೆಯ ಕೆಲಸದಲಿ ಸಹಕರಿಸುವುದಕ್ಕಾಗಿ ನೀವು ಲೀಗಿಗೆ ಇಂದು ಲಂಚಕೊಡಲಾರಿರಿ. ಹಿಂದುಸ್ಥಾನವು ಹಿಂದುಗಳಂತೆ ಮುಸ್ಲಿಮರದೂ ಮಾತೃಭೂಮಿಯೆಂದು ಲೀಗು ನಂಬಿದರೆ, ಮೊದಲು ಮಾತೃಭೂಮಿಯನ್ನು ದಾಸ್ಯದಿಂದ ಮುಕ್ತಮಾಡಲು ಯತ್ನಿಸಬೇಕು. ಹಿಂದುಸ್ಥಾನವು ದಾಸ್ಯದಿಂದ ಮುಕ್ತವಾದ ಬಳಿಕ ಲೀಗು ಆಗ್ರಹದಿಂದ ಬಯಸಿದರೆ, ವಿಚಾರ ವಿನಿಮಯ ಇಲ್ಲವೇ ಶಕ್ತಿಯಿಂದ ಹಿಂದುಸ್ಥಾನವನ್ನು ವಿಭಜಿಸಬಹುದು. ನನ್ನ ಅಭಿಪ್ರಾಯದಂತೆ ರಾಜಾಜಿ ಯೋಜನೆಯು ಪೂರ್ಣ ಅಸ್ವಭಾವಿಕವಿರುವುದು. ಬ್ರಿಟಿಷರ ಮೇಲೆ ಒತ್ತಾಯ ಹಾಕಲು ಅವರು ಲೀಗಿಗೆ ಸ್ವಯಂ ನಿರ್ಣಯಾಧಿಕಾರ ಕೊಡಲೊಪ್ಪುತ್ತಾರೆ. ಸ್ವಯಂ ನಿರ್ಣಯಾಧಿಕಾರವು ಪ್ರತಿಯೊಂದು ವ್ಯಕ್ತಿಗೂ ಇದ್ದೇ ಇದೆ. ದೇಶ ವಿಭಜನೆ ರಾಜಾಜಿಗೂ ಇಷ್ಟವಿಲ್ಲ. ರಾಜಾಜಿ ಮತ್ತು ನಮ್ಮಲ್ಲಿ ಪರಸ್ಪರ ಪರಿಚಯವಿದೆ ಪ್ರೇಮವಿದೆ. ತಪ್ಪಿಯಾರದೇ ಇದ್ದರೂ ಕಾಲವು ಅದನ್ನು ಸರಿಪಡಿಸುವುದು."

ಸಿಂಧಿನಲ್ಲಿ ಮಾರ್ಶಲ್ ಲಾ

ಜಾರಿಯಾಗಿದೆ. ಮಾರ್ಶಲ್ ಲಾ ಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸಲಾಗಿದೆಯೆಂದು ತಿಳಿದಿದೆ. ಈ ಎಲ್ಲಾ ಭಾಗದಲ್ಲಿ ರಾತ್ರಿ ೮ ಗಂಟೆಯಿಂದ ಮುಂಜಾನೆ ೫-೩೦ರ ವರೆಗೆ ಯಾರೂ ಸಂಚರಿಸಬಾರದಾಗಿ ಆಜ್ಞೆ ಹೊರಡಿಸಲಾಗಿದೆ.



ಕೋಮಲವಾದ ಚರ್ಮಕ್ಕೆ

ಹೆಚ್ಚು ಪಾಲನೆಯ ಅವಶ್ಯವಿದೆ

ನಿಮ್ಮ ಮಕ್ಕಳ ಕೋಮಲವಾದ ಚರ್ಮಕ್ಕೆ ಕುಟಿಕೂರಾ ಟ್ಯಾಲೆಟ್ ಸಾಬೂನು—(Cuticura Toilet Medicaetd Soap) ಹೆಚ್ಚಿನ ಮನ್ನಣೆಯ ಸಂರಕ್ಷಣೆಯ ಸಾಬೂನುಗಳು ಮಕ್ಕಳ ಚರ್ಮದ ಕೋಮಲತ್ವವನ್ನೇ ನಾಶಮಾಡುವುವು. ಆದರೆ ಕುಟಿಕೂರಾ ಸಾಬೂನಿನಲ್ಲಿರುವ (Cuticura Soap) ಕ್ರಿಮಿನಾಶಕ ಗುಣವಿದೆ. ಇಂಥ ಗುಣವುಳ್ಳ ಔಷಧಿಯು ಮೈಯ ಚರ್ಮವನ್ನು ನಿರ್ಮಲವಾಗಿರಿಸಿ ಮೈಯನ್ನು ತಂಪಾಗಿರಿಸುತ್ತಿರುವುದು.

ಮಗುವಿನ ಸ್ನಾನವು ಸಂಪೂರ್ಣವಾಗಬೇಕಾದರೆ ಅತ್ಯಂತ ನುಣುಪಾದ ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powd) ಹಾಕಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಸೋಪ್

CUTICURA SOAP

ಕಲಿಯುಗವು ಎಂದು ಅಂತ್ಯವಾಗುವುದು? ಕೃತಯುಗದಾರಂಭವೆಂದು?

ಕಲ್ಕ್ಯವತಾರವು ಈಗಾಗಲೇ ಆಗಿರುವುದೇ?

ಶಂಭಳ ಗ್ರಾಮದಲ್ಲಿ ಕಲ್ಕಿ ಭಗವಾನ್ ಜನ್ಮವೆತ್ತಿದನು!

ಈ ವಿಚಾರಗಳು ನಿಮಗೆ ತಿಳಿಯಬೇಕೆಂದಾದರೆ, ಓದಿನೋಡಿರಿ:

ವಿದ್ವಾನ್ ಕೆ. ಎಂ. ಕರಿಬಸವ ಶಾಸ್ತ್ರಿಗಳಿಂದ ವಿರಚಿತವಾದ

ಕೃತಯುಗಾಂತ್ಯ ಕೃತಯುಗಾರಂಭ ವಿಚಾರ

(ಮೂಲ ಹಿಂದೀ ಚೇತಾವನಿ)

ಬೆಲೆ: ಆಣೆ ೮

ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಮನೋರಂಜಕ ಬೋಧಪ್ರದ ಪುಸ್ತಕ

"ಕಲಿಯುಗದ ಲಾವಣಿ"

ಕ್ರಯ: 0-0-9.

ವಿಚಾರಪೂರಿತ, ಅನುಭವಪೂರ್ಣ, ಜ್ಯೋತಿಷ್ಯ ವಿದ್ಯಾ ಸಂಸ್ಕಾರಶುದ್ಧವಾದ

೧೯೪೨ನೇ ವರ್ಷದ ಪ್ರಪಂಚದ ಭವಿಷ್ಯತ್ತು

ಕ್ರಯ: 0-4-0.

ಸೋಲ್ ಏಜಂಟ್ಸ್: ಯುಜಮಾನ್ ಎಂಡ್ ಬ್ರದರ್ಸ್, ಬುಕ್‌ಸೆಲ್ಲರ್ಸ್, ಬಳ್ಳಾರಿ.

ಮಂಗಳೂರಲ್ಲಿ ಸಿಗುವ ಸ್ಥಳ

ಬಾಲಸಾಹಿತ್ಯ ಮಂಡಲ . . . ಸ್ಕೂಲ್ ಬುಕ್ ಕಂಪೆನಿ . . . ಯು. ಆರ್. ಶೆಣೈ.

The Canara Banking Corporation Ltd.

(Incorporated in British India with limited liability

Estd. 1906.

OUR RATES OF INTEREST ON DEPOSITS

Current	1%	p. a.
Savings Bank	2½%	„
Short-term	1¾%	„
FIXED FOR 3 MONTHS	2%	„
6 „	2½%	„
9 „	2¾%	„
12 „	3%	„
24 „	3½%	„

Advances made at cheap rates of interest against approved securities and Banking business of every description transacted.

The Bank of Mangalore Limited

HEAD OFFICE	*BRANCHES*
Mangalore.	Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%

Two years or above 4½%

Interest Payable Quarterly

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

12-6-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೨—೬—೧೯೪೨]

ಸಮರ ಭೂಮಿಯ ಸಂಚಾರ

ಕಳೆದ ವಾರ ಪ್ರಚಂಡವಾಗಿ ನಡೆದ ಖಾರ್ಕೋವ್ ಯುದ್ಧವೀಗ ಕೊನೆಗೊಂಡಂತಾಗಿದೆ ಟಿಮಶೆಂಕೋ ಎಷ್ಟೊಂದು ವೀರಾವೇಶದಿಂದ ಕಾದಾಡಿದರೂ ಜರ್ಮನರ ಕೈಯಿಂದ ಖಾರ್ಕೋವನ್ನು ಕಸಕೊಳ್ಳುವುದಾಗಲಿಲ್ಲ. ಜರ್ಮನರನ್ನು ಖಾರ್ಕೋವಿನಿಂದ ಓಡಿಸುವುದು ತಮ್ಮ ಉದ್ದೇಶವಿರಲಿಲ್ಲವೆಂದೂ, ಅವರ ಮುಂದಿನ ಪ್ರಚಂಡ ಸಿದ್ಧತೆಗಳನ್ನು ಮುರಿದು ಜರ್ಮನರನ್ನು ದುರ್ಬಲರನ್ನಾಗಿ ಮಾಡುವುದೇ ತಮ್ಮ ಉದ್ದೇಶವಿದ್ದಿತೆಂದೂ, ಅದರಲ್ಲಿ ತಾವು ಕೃತಾರ್ಥರಾಗಿರುವೆವೆಂದೂ ರಶ್ಯನರು ಹೇಳಿಕೊಳ್ಳುತ್ತಾರೆ ಅಂತೂ ಖಾರ್ಕೋವ್ ಕದನದಲ್ಲಿ ಜರ್ಮನರಿಗೆ ಪ್ರಚಂಡ ಹಾನಿಯುಂಟಾಗಿದೆಯೆಂಬುದಕ್ಕೆ ಯಾವದೇ ತರದ ಸಂದೇಹವೂ ಇಲ್ಲ ಹೀಗೆ ಬಹಳ ನಷ್ಟಕಷ್ಟಗಳುಂಟಾದುದರಿಂದ ಶತ್ರುವು ಬೇಗನೇ ಮುನ್ನಡೆಯುವುದಂತೂ ಸಾಧ್ಯವಿಲ್ಲ. ಆದರೆ ಇದರಿಂದ ಜರ್ಮನರಂತೆ ರಶ್ಯನರಿಗೂ ಅಪಾರ ಹಾನಿಯೊದಗಿದೆಯೆಂಬ ವಿಷಯವನ್ನು ಮರೆಯಬಾರದು ಅಂತೂ ಎರಡು ವಾರಗಳ ವರೆಗೆ ಖಾರ್ಕೋವ್ ಯುದ್ಧವು ಪ್ರಚಂಡವಾಗಿ ಸಾಗಿತು ಈ ಯುದ್ಧವು ಇಂದಿನ ಯುದ್ಧ ಇತಿಹಾಸದಲ್ಲಿಯೇ ಪ್ರಚಂಡವೆನಿಸಿ ನಡೆದಿದ್ದರೂ ಇದರ ಫಲಿತಾಂಶವು, ಅಷ್ಟೇನೂ ಮಹತ್ವದಾಗಿಲ್ಲ ರಶ್ಯನರೂ ಇದರಿಂದ ವಿಜಯಿಗಳಾಗಿಲ್ಲ ಜರ್ಮನರೂ ಅಲ್ಲಿಂದ ಮುಂದುವರಿದಿಲ್ಲ ವಿಜಯ ಪರಾಜಯಗಳೇನೂ ಇಲ್ಲದೆ ಉಭಯ ಪಕ್ಷದವರೂ ವಿನಾಶಕಾರ್ಯವನ್ನೇ ಚೆನ್ನಾಗಿ ಪೂರೈಸಿದರು ಹೇಗಿದ್ದರೂ ರಶ್ಯ ಜರ್ಮನರ ಕಾಳಗವು ಎಷ್ಟು ಅದ್ಭುತ ಪ್ರಚಂಡತರವಿರುವುದೆಂಬುದನ್ನು ಇಡೀ ಜಗತ್ತೇ ನೋಡಿ ಬೆರಗಾಗುವಂತಾಯಿತು!

ಕಳೆದ ವರ್ಷ ಜೂನ್ ತಿಂಗಳಲ್ಲಿ ಹಿಟ್ಲರನು ಪ್ರಚಂಡ ಧಾಳಿಯನ್ನು ಕೈಕೊಂಡಿದ್ದನು ಆದರೆ ಈ ಜೂನ್‌ನಲ್ಲಿ ಅಂತಹ ಆಕ್ರಮಣ ಕಾರ್ಯವನ್ನು ಕೈಕೊಳ್ಳುವಷ್ಟು ಜರ್ಮನರು ಸಿದ್ಧರಿಲ್ಲವೆಂದು ತೋರುತ್ತದೆ ಖಾರ್ಕೋವಿನ ಯುದ್ಧದಿಂದಲೂ ಅವರ ಪ್ರಗತಿಗೆ ದೊಡ್ಡ ಪೆಟ್ಟು ಬಿದ್ದಂತಾಯಿತು ರಶ್ಯದ ರಣರಂಗದಲ್ಲಿ ರಶ್ಯನರು ತಮ್ಮ ತಾಯ್ನೆಲದಲ್ಲೇ ನಿಂತಿರುವುದರಿಂದ ಎಷ್ಟು ದಿನಗಳ ವರೆಗೂ ತಡೆಗಟ್ಟಿ ಯುದ್ಧವನ್ನು ಮುಂದುವರಿಸಬಹುದು, ಯುದ್ಧವೆಷ್ಟು ಮುಂದುವರಿದರೂ ಕೊನೆಗೆ ಹೊಸಶಕ್ತಿಯಿಂದ ಹೋರಾಡಲೂ ಬಹುದು ಆದರೆ ಜರ್ಮನರಿಗೆ ಅದು ಸಾಧ್ಯವಿಲ್ಲ ಎಷ್ಟೆಂದರೂ ಅವರು ಪರಕೀಯರು, ಪರರಾಷ್ಟ್ರವನ್ನು ಹೊಕ್ಕು ದಿನ ಹೋದಂತೆ ಕಾದಾಟ ಮುಂದರಿಯುತ್ತಾ ಇದ್ದರೆ ಅವರ ಶಕ್ತಿ ಕುಂದುತ್ತಾ ಬರಲೇಬೇಕು ಇದರಿಂದಲೇ ಹಿಟ್ಲರನು ಇದುವರೆಗೆ ಎಲ್ಲೆಲ್ಲಿಯೂ ಮಿಂಚಿನ ಯುದ್ಧವನ್ನೇ ಮಾಡಿಕೊಂಡಿದ್ದನು. ಆದರೆ ರಶ್ಯನರು ಮಿಂಚಿನ ಗತಿಗೆ ಮೋಸ ಹೋಗುವಷ್ಟು ದುರ್ಬಲರಿರುವುದಿಲ್ಲವೆಂಬುದು ಹಿಟ್ಲರನಿಗಾದರೂ ಈಗ ಚನ್ನಾಗಿ ಅನುಭವವಾಯಿತು

ಹೇಗಿದ್ದರೂ ಹಿಟ್ಲರನು ಸುಮ್ಮಗೆ ಇರುವ ಸ್ವಭಾವದವನಲ್ಲ, ಹೊಸತೊಂದು ಹಂಚಿಕೆ ಹೂಡದೆ ಇರಲಾರನು. ಜರ್ಮನರ ಮುಂದಿನ ಯೋಜನೆಯೇನಿರಬಹುದೆಂದು ಹಲವರು ಕುತೂಹಲಾವಿಷ್ಟರಾಗಿ ನಿರೀಕ್ಷಿಸುತ್ತಲಿದ್ದಾರೆ ಟರ್ಕಿಯನ್ನು ಯುದ್ಧರಂಗಕ್ಕೆ ಎಳೆಯಬೇಕೆಂದು ಹಿಟ್ಲರ್ ಮೊದಲಿಂದಲೇ ಹಂಚಿಕೆ ಹೂಡುತ್ತಿದ್ದಾನೆ ಅನೇಕ ಪ್ರಯತ್ನಗಳನ್ನು ಮಾಡಿದ್ದಾನೆ ಜರ್ಮನಿಯು ಹತ್ತು ಕೋಟಿ ಮಾರ್ಕ್ ಗಳಷ್ಟು ಬೆಲೆಯ ಯುದ್ಧ ಸಾಮಗ್ರಿಗಳನ್ನು ಹೆಚ್ಚಿಸುವ ವಸುಗಳನ್ನು ಕೊಡಲು ಒಪ್ಪಿರುವುದೆಂಬ ಸುದ್ದಿಯೊಂದು ಬಂದಿರುವುದು ಇದನ್ನು ನಂಬಬಹುದಾದರೆ, ಟರ್ಕಿಯನ್ನು ಹಿಟ್ಲರ್ ತನ್ನ ಬಗಲೊಳಗೆ ಹಾಕಿಕೊಂಡನೆಂದೇ ಹೇಳಬೇಕು ಆದರೆ ಟರ್ಕಿ ಬ್ರಿಟನುಗಳ ಒಪ್ಪಂದದಂತೆ ಟರ್ಕಿಗೆ ಬ್ರಿಟನೂ ಯುದ್ಧ ಸಾಮಗ್ರಿಗಳನ್ನು ಕಳುಹಿಸಿಕೊಡಬೇಕು ಅಸಂಬಂಧವೂ ಮುಂದುವರಿಯುತ್ತಾ ಇದ್ದು ಟರ್ಕಿ ಹೇಗೆ ರಣರಂಗವನ್ನು ಪ್ರವೇಶಿಸುವುದೋ ತಿಳಿಯಲೊಲ್ಲದು, ರಶ್ಯನ್ ರಣಕ್ಷೇತ್ರದಲ್ಲಿಯೇ ಜರ್ಮನರು ಬೇಗನೇ ದೊಡ್ಡ ಪ್ರಮಾಣದಿಂದ ಯುದ್ಧ ಪ್ರಾರಂಭಿಸುವರೆಂದು ಅಮೆರಿಕದ ಸುದ್ದಿಗಾರನೊಬ್ಬನು ಊಹಿಸುತ್ತಾನೆ ಟರ್ಕಿ ಇರಾಣ ಮಾರ್ಗವಾಗಿ ಮುನ್ನುಗ್ಗಲು ಹಿಟ್ಲರನಿಗೆ ಆಸೆಯಿದೆಯಂತೆ. ಅದಕ್ಕಾಗ ಅಯೋನಿನ್ ಸಮುದ್ರದಲ್ಲಿ ಸೈನ್ಯವಾಹಕ ಹಡಗಗಳನ್ನು ಕಟ್ಟುವ ಕೆಲಸವನ್ನು ಹಿಟ್ಲರ್ ಪ್ರಾರಂಭಿಸಿರುವನೆಂದೂ, ಈ ಹಡಗಗಳ ಪ್ರಯೋಜನವನ್ನು ಡಾರ್ಡನಲ್ಸ್ ಧಾಳಿಯಲ್ಲಿ ಮಾಡಿಕೊಳ್ಳಬೇಕೆಂದು ಆತನ ಅಪೇಕ್ಷೆಯಿರುವುದೆಂದೂ ಹೇಳಲಾಗಿದೆ ಅಂತೂ ಹಿಟ್ಲರನ ಮುಂದಿನ ಯೋಜನೆಯ ವಿಚಾರವು ಬೇಗನೇ ಎಂದರೆ ಮುಂದಿನ ವಾರವೇ ನಮಗೆ ತಿಳಿದು ಬರಬಹುದೆಂದು ನಮ್ಮ ಊಹೆಯಿದೆ

ಲಿಬಿಯದ ಯುದ್ಧದ ರೀತಿಯೇ ಬೇರೆಯಾಗಿದೆ ಇದು ಹೊಯಿಗೆ ನೆಲದ ಮೇಲೆ ಮಾಡುವ ಯುದ್ಧ ಬೇಸಿಗೆಯ ಬೇಗೆ, ಉರಿಬಿಸಿಲ ಝಳದಿಂದ ಉಭಯ ಪಕ್ಷದವರೂ ಕಂಗೆಡುತ್ತಿರುವಾಗಲೂ ಭರದಿಂದ ಹೂಡುವ ಹೋರಾಟ ಒಮ್ಮೆ ಬ್ರಿಟಿಷರೂ ಒಮ್ಮೆ ಜರ್ಮನರೂ ಮುಂದೆ ಹೋಗಿ ಹಿಂದೆ ಸರಿದು ಅನೇಕ ಸಲ ಕಷ್ಟಪಟ್ಟರೂ ಮತ್ತೂ ಬಿಡದೆ ಕಾಳಗ ಕೊಡುತ್ತಾ ಇದ್ದಾರೆ ಒಂದೇ ಸವನ ಮುನ್ನುಗ್ಗಿ ತೋಬ್ರುಕನ್ನು ಕೈವಶಪಡಿಸಿ ಬಿಡಬೇಕೆಂದು ಹಿಟ್ಲರ್ ಈ ಸಲ ಬಗೆದಿದ್ದನು ಆದರೆ ಅವನ ಆಸೆ ಬಯಲಾಗಿದೆ ಸೇನಾಪತಿ ರೋಮೆಲನು ಅತುಲ ಸಾಹಸದಿಂದ ಹೋರಾಡಿದರೂ ವಿಜಯ ಲಕ್ಷ್ಮಿ ಅವನಿಗೆ ಇದುವರೆಗೆ ಹೂಮಾಲೆ ಹಾಕಲಿಲ್ಲ ಲಿಬಿಯ ಯುದ್ಧದ ವರದಿಯನ್ನು ಬ್ರಿಟಿಷ್ ಸೇನಾಪತಿ ಅಚಿನ್ ಲೆಕ್ಕರು ಮುಖ್ಯ ಮಂತ್ರಿಗಳಿಗೆ ಕಳುಹಿಸಿದ್ದು ಅದನ್ನು ಚರ್ಚಿಲರು ಕಾಮನ್ಸ್ ಸಭೆಯಲ್ಲಿ ಓದಿ ವೀರ ಸೈನಿಕರನ್ನು ಬಹಳ ಹೊಗಳಿದರು ಅಂತೂ ಲಿಬಿಯ ರಣಕ್ಷೇತ್ರದಲ್ಲಿ ಜರ್ಮನ ಭೀಕರ, ಕಾಳಗಕ್ಕೆ ಎದೆಗೊಟ್ಟು ಅವರಿಗೆ ಪ್ರಬಲ ಆಘಾತವನ್ನುಂಟುಮಾಡಿ ಜಗ್ಗದೆ ಎದುರಾಡುವ ವೀರ ಯೋಧರೆಂದರೆ ಭಾರತೀಯರು! ಲಿಬಿಯದ ರಣಭೂಮಿಯಲ್ಲಿ ಈ ಸಲ ಪ್ರಚಂಡ ಟೇಂಕ್ ಕಾಳಗ ನಡೆಯಿತು! ಟೇಂಕ್ ಕಾಳಗದಲ್ಲಿ ರೋಮೆಲನು ಬಹಳ ನಿಪುಣನಿದ್ದಂತೆ ತೋರುತ್ತದೆ ಹಾಗೂ ಲಿಬಿಯ ಯುದ್ಧವು ಇನ್ನೂ ನಿರ್ಣಾಯಕ ಪರಿಸ್ಥಿತಿಗೆ ಬಂದಿಲ್ಲ — ಮರುಳುಭೂಮಿಯ ಕಾಳಗವು ನಿಮಿಷ ನಿಮಿಷಕ್ಕೆ ಹೊಸ ಹೊಸ ರೂಪ ತಾಳುತ್ತಾ ಬಂದಿದೆ ಈ ಸಲ ಹೇಗಾಗುವುದೋ ಮುಂದೆ ನೋಡಬೇಕು

ಬ್ರಿಟಿಷ್ ವಿಮಾನಗಳು ಸಾವಿರಾರು ಸಂಖ್ಯೆಯಿಂದ ಜರ್ಮನಿ ಮೇಲೆ ಹಾರಾಡಿ ಮಾಡಿದ ಹಾಳಿಯ ವಿವರವು ಬಹಳ ಪ್ರಚಂಡವಾಗಿದೆ ಜರ್ಮನರು ಬ್ರಿಟನಿನ ಮೇಲೆ ಮಾಡಿದ ಆಕ್ರಮಣ ಕಾಳಗಕ್ಕಿಂತಲೂ ಇದು ಭೀಕರತರವಿತ್ತೆಂದು ಹೇಳುತ್ತಾರೆ ಕಳೆದ ೩೦ನೆಯ ತಾರೀಕಿನ ದಿನ ರಾತ್ರಿ ಹಾಲು ಚೆಲ್ಲಿದಂತೆ ಬೆಳದಿಂಗಳು ಹರಡಿದ್ದಾಗ ಸಾವಿರಾರು ಸಂಖ್ಯೆಯಿಂದ ಬ್ರಿಟಿಷ್ ವಿಮಾನಗಳು ಬಂದು ಜರ್ಮನಿಯ ಹೂರ್ ಮತ್ತು ರಯಿನ್‌ಲೇಂಡುಗಳ ಮೇಲೆ ಒಮ್ಮೆಲೇ ಧಾಳಿಯಿಟ್ಟು ೩೦೦೦ ಟನ್ ಭಾರದ ಬಾಂಬುಗಳನ್ನೊಗೆದವು ಈ ಧಾಳಿಯಲ್ಲಿ ಕೋಲೋನ್ ನಗರವು ವಿಶೇಷ ಹಾನಿಗೊಳಗಾಯಿತು ಇಲ್ಲಿ ಒಗೆದ ಬಾಂಬಿನ ಬೆಂಕಿಯ ಜ್ವಾಲೆ ಸುಮಾರು ೧೫೦ ಮೈಲುಗಳಂತರದಿಂದ ಎಂದರೆ ಡಚ್ ದಂಡೆಯ ಮೇಲಿಂದ ಕಾಣಿಸುತ್ತಿತ್ತೆಂದು ವರದಿಯಿದೆ ಇದರಿಂದಾಗಿ ಜರ್ಮನ್ ನಗರದಿಂದ ಜನರು ಊರು ಬಿಡುತ್ತಿರುವರೆಂದೂ ಸುದ್ದಿ ಜರ್ಮನಿಯ ಪ್ರಸಿದ್ಧ ಕಾರಖಾನೆಯಾದ ಕ್ರುಪ್ಸ್ ಕಾರಖಾನೆಗೂ ಬಹಳ ಹಾನಿಯೊದಗಿದೆಯಂತೆ ತಿರುಗಿ ಕಳೆದ ೩ನೆಯ ತಾರೀಕಿನ ದಿವಸವೂ ಸಾವಿರಾರು ಬ್ರಿಟಿಷ್ ವಿಮಾನಗಳು ಜರ್ಮನಿ ಮೇಲೆ ಹಾರಿ ಎರಡನೆ ಸಲ ದಾಳಿಯಿಟ್ಟವು ಜರ್ಮನ್ ಸಮುದ್ರದಲ್ಲಿ ಬ್ರಿಟಿಷ್ ವಿಮಾನಗಳು ತೋಟೆಗಳನ್ನೊಗೆದವು ಜರ್ಮನ್ ಆಕ್ರಮಿತ ಪ್ರದೇಶಗಳ ಮೇಲೆಯೂ ಬ್ರಿಟಿಷ್ ವಿಮಾನಗಳು ಬಾಂಬೆಸೆದವು ಇದರ ಪ್ರತಿಯಾಗಿ ಜರ್ಮನ್ ವಿಮಾನಗಳು ತಾ ೧ರಂದು ಬ್ರಿಟನಿನ ಕೇಂಟರ್‌ಬರಿ ನಗರದ ಮೇಲೆ ಬಾಂಬುಹಾಕಿದವು ಇದರಿಂದ ಅನೇಕ ಹಾನಿಯು ಉಂಟಾಗಿದೆ ಹೀಗೆ ಜರ್ಮನಿ ಮೇಲೆ ಬ್ರಿಟಿಷರೂ ಬ್ರಿಟನಿನ ಮೇಲೆ ಜರ್ಮನರೂ ಬಾಂಬೆಸೆಯುವ ಚಿತ್ರ ಅತ್ಯಂತ ಭೀಕರವಾಗಿ ತೋರುತ್ತಿತ್ತು! ಅಂತೂ ಶತ್ರು ವಿಮಾನಗಳು ಬಂದು ಧಾಳಿಯಿಡುವುದರಿಂದ ಅನೇಕ ಮಂದಿ ನಾಗರಿಕರೂ ನಿರಪರಾಧಿ ಜನರೂ ಬಹಳ ಹಾನಿಗೀಡಾಗುತ್ತಾರೆ, ಮರಣ ಹೊಂದುತ್ತಾರೆ ಆಸ್ತಿ ಒಡವೆಗಳನ್ನು ಕಳಕೊಳ್ಳುತ್ತಾರೆ ದೇಶಭ್ರಷ್ಟರಾಗಿ ಸಂಕಟಪಡುತ್ತಾರೆ

ಚೀನದಲ್ಲಿ ತೀವ್ರ ಹೋರಾಟ ನಡೆಯುತ್ತಿದೆ ಚೆಕಿಯಾಂಗ್ ಪ್ರಾಂತದ ರಾಜಧಾನಿ ಕಿನ್ಹಾ ನಗರವನ್ನು ಜಪಾನರು ಕಾಳಗದಲ್ಲಿ ಕೈವಶ ಮಾಡಿಕೊಂಡರು ಅಲ್ಲಿಂದ ಅವರು ಪಶ್ಚಿಮಕ್ಕೆ ನುಗ್ಗಿ ಚುಸೀನ್ ನಗರವನ್ನು ಆಕ್ರಮಿಸಲು ಪ್ರಯತ್ನಿಸುತ್ತಿರುವರು ಚುಸೀನ್ ಒಳ್ಳೆಯ ಆಯಕಟ್ಟಿನ ಸ್ಥಳವಾಗಿದೆ ಇಲ್ಲಿಂದ ಜಪಾನಿನ ರಾಜಧಾನಿಯಾದ ಟೋಕಿಯೋ ನಗರವು ಕೇವಲ ೩೨೫ ಮೈಲುಗಳ ಅಂತರದಲ್ಲಿದೆ ಟೋಕಿಯೋದ ಮೇಲೆ ವಿಮಾನ ಧಾಳಿಮಾಡಲು ಈ ನಗರವು ಜಪಾನರಿಗೆ ಬೇಕಾಗಿದೆ. ಈ ಕಾರಣದಿಂದಲೇ ಚುಸೀನನ್ನು ಜಪಾನರಿಗೆ ಬಿಟ್ಟುಕೊಡಬಾರದರಿಂದ ಚೀನೀಯರು ಜೀವದ ಹಂಗು ತೊರೆದು ಹೋರಾಡುತ್ತಾರೆ. ಚುಸೀನ್ ನಗರದ ಆಗ್ನೇಯಕ್ಕಿರುವ ಪ್ರದೇಶಗಳನ್ನು ರಕ್ಷಿಸುತ್ತಿರುವ ಚೀನೀ ಸೈನಿಕರ ಮೇಲೆ ಜಪಾನರು ವಿಷವಾಯು ಪ್ರಯೋಗಿಸಿದರೆಂದು ಸುದ್ದಿ ಹರಡಲಾಗಿದೆ ಈ ಕುರಿತು ಅಧ್ಯಕ್ಷ ರೂಸ್‌ವೆಲ್ಟರು ಜಪಾನರನ್ನು ಎಚ್ಚರಿಸಿದ್ದಾರೆ ಜಪಾನರು ರೂಸ್‌ವೆಲ್ಟರ ಎಚ್ಚರಿಕೆಯ ಮಾತಿನಿಂದ ತಟಸ್ಥರಾಗುವರೋ ಎಂಬುದು ಸಂದೇಹ. ಅತ್ತ ದಕ್ಷಿಣಕ್ಕೆ ಕ್ವಾಟಂಗ್ ರಣಭೂಮಿಯಲ್ಲಿ ಪ್ರಾರಂಭಿಸಿದ ಜಪಾನರ ಮೂರು ಕಡೆಯ ನುಗ್ಗುವಿಕೆಯು ಈಗ ಮಂದಗತಿಯಿಂದ ಮುಂದೆ ಸಾಗಿದೆ ಕಿನ್ಹದ ಪಶ್ಚಿಮಕ್ಕಿರುವ ಪೂಚೌವನ್ನು ಜಪಾನರು ಸ್ವಾಧೀನಪಡಿಸಿಕೊಂಡಿದ್ದು, ಇಲ್ಲಿ ೬೦ ೭೦ ಸಾವಿರ ಜಪಾನೀ ಸೈನಿಕರು ತಳವೂರಿದ್ದಾರೆ ಚೀನರ ದಳಪತಿ ಕೈಶೇಕರು ತಮಗೆ ಸಹಾಯ ನೀಡಿರೆಂದು ಮಿತ್ರರಾಷ್ಟ್ರದವರೊಡನೆ ಮೊರೆಯಿಟ್ಟಿದ್ದಾರೆ, ಮಿತ್ರರಾಷ್ಟ್ರದವರಾದರೂ ಸಹಾಯದ ಭರವಸೆಕೊಡುತಲೇ ಇರುವರು ಚೀನಿಯರೂ ಕೆಲವು ವಿಜಯಗಳನ್ನು ಹೊಂದಿದ್ದಾರೆ ಯಾಂಗ್‌ತ್ಸೀ ನದಿಯ ದಂಡೆಯ ಮೇಲಿರುವ ಇಚಾಂಗದ ಕೆಳಗಿನ ಶಾಸಿ ಎಂಬ ಮಹತ್ವದ ಬಂದರವನ್ನು ಅವರು ಪ್ರವೇಶಿಸಿದ್ದಾರೆಂದು ಸುದ್ದಿ ಬಂದಿದೆ ಚೆಕಿಯಾಂಗಿನಲ್ಲೂ ಎರಡು ವಿಜಯಗಳನ್ನು ಪಡೆದಿರುವರು ಅದೇ ಪ್ರಾಂತದಲ್ಲಿರುವ ಲೆಂಗ್‌ಶೀನ ಪ್ರಾಂತವನ್ನು ಚೀನೀಯರು ತಿರುಗಿ ತಮ್ಮ ವಶಪಡಿಸಿಕೊಂಡರು ಕಿನ್ಹಾಯದ ಆಗ್ನೇಯಕ್ಕೆ ೩೦ ಮೈಲುಗಳ ಅಂತರದಲ್ಲಿರುವ ಯುಂಕಿಯಾಂಗನ್ನು ಚೀನೀಯರು ಪುನಃ ತಮ್ಮ ಅಧೀನ ಮಾಡಿಕೊಂಡರು ಸಾಲ್ವಿನ್ ನದಿಯನ್ನು ದಾಟಿ ಯುನಾನಿನಲ್ಲಿರುವ ಪಾವೋಶಾನನ್ನು ಕೈವಶಪಡಿಸಿಕೊಳ್ಳಬೇಕೆಂಬುದು ಜಪಾನರ ಪ್ರಯತ್ನವಿದೆ

ಅಮೆರಿಕನ್ ಸೈನ್ಯದ ವಿಮಾನ ದಳದ ಕೆಲವು ಬಾಂಬರುಗಳು ರಂಗೂನಿನ ಮೇಲೆ ಹಾರಿ ಬಾಂಬೆಸೆದವು ಜಪಾನರ ವಿಮಾನಗಳು ಅವುಗಳನ್ನೆದುರಿಸಿವೆ ಆಸ್ಟ್ರೇಲಿಯನ್ ಸಮುದ್ರದಲ್ಲಿ ಜಪಾನೀ ಜಲಾಂತರ್ಗಾಮಿಗಳು ವ್ಯಾಪಾರ ಹಡಗಗಳ ಮೇಲೆ ಧಾಳಿಯಿಟ್ಟವು ಜಪಾನರು ಯುದ್ಧಾರಂಭಿಸಿದಂದಿನಿಂದ ಆಸ್ಟ್ರೇಲಿಯನ್ ಸಮುದ್ರದಲ್ಲಿ ಹಾವಳಿ ಮಾಡಿದ್ದು ಇದೇ ಮೊದಲನೆಯ ಸಲ ಸಿಲೋನ್ ಕರಾವಳಿಯಲ್ಲಿಯೂ ಜಪಾನರ ಒಂದು ವಿಮಾನ ಕಾಣಿಸಿಕೊಂಡ ಸುದ್ದಿಯಿದೆ ಅಂಡಮಾನ್ ದ್ವೀಪದಲ್ಲಿ ಜಪಾನರು ವಿಮಾನ ಠಾಣೆಯನ್ನೇ ಮಾಡಿಕೊಂಡಿರುವರು ಆಸ್ಟ್ರೇಲಿಯಾ ಪೂರ್ವ ಕರಾವಳಿಯಲ್ಲಿ ಜಪಾನರ ಜಲಾಂತರ್ಗಾಮಿಗಳೆರಡು ಮುಳುಗಿಸಲ್ಪಟ್ಟವೆಂದು ಸುದ್ದಿ ಮದಗಾಸ್ಕರಿನಲ್ಲಿ ಕ್ವೀನ್ ಎಲಿಜಬೇತ್ ಮಾದರಿಯ ಒಂದು ಯುದ್ಧ ಹಡಗ ಮತ್ತು ಒಂದು ಕ್ರೂಸರನ್ನು ನಾಶಗೊಳಿಸಿದೆವೆಂದು ಜಪಾನರ ಹೇಳಿಕೆ ಜಪಾನರ ಮುಂದಿನ ಧಾಳಿ ಆಸ್ಟ್ರೇಲಿಯದ ಮೇಲೋ ಹಿಂದುಸ್ಥಾನದ ಮೇಲೋ ಇನ್ನೂ ನಿಶ್ಚಯವಾಗಿ ತಿಳಿದಿಲ್ಲ ಅಂತೂ ಎಲ್ಲಾ ಕಡೆಗಳಲ್ಲಿ ಅವರ ಚಟುವಟಿಕೆ ಬಹಳ ಜೋರಾಗಿ ನಡೆಯುತ್ತಲಿವೆ ಮೆಕ್ಸಿಕೋವು ಅಕ್ಷರಾಷ್ಟ್ರಗಳ ವಿರುದ್ಧ ಯುದ್ಧ ಸಾರಿರುತ್ತದೆ. ಇತ್ತ ಅಮೆರಿಕವೂ, ಬಲ್ಗೇರಿಯಾ ರುಮೇನಿಯಾ ಮತ್ತು ಹಂಗೇರಿಗಳ ಮೇಲೆ ಯುದ್ಧ ಸಾರಲು ನಿಶ್ಚಯಿಸಿದೆ ಅಂತೂ ಇನ್ನೂ ರಣಜ್ವಾಲೆ ಮತ್ತಷ್ಟು ಪ್ರಜ್ವಲಿಸುತ್ತಲೇ ಉಂಟು.

ಸ್ವದೇಶಾಭಿಮಾನಿ

ತಾರೀಕು 12—6—1942

ದುರಂತಗಳು

'ಕಾಂಗ್ರೆಸಿನ ಸದ್ಯದ ಧೋರಣವು ಏನಿರುವುದೆಂದು ನನಗೆ ಸ್ಪಷ್ಟವಿರುವುದು. ಆಕ್ರಮಣಗಾರರಿಗೆ ಸಹಾಯವಾಗುವ ಯಾವುದೇ ಕಾರ್ಯಕ್ರಮವನ್ನು ನಾನಿಂದು ಕೈಕೊಳ್ಳಲಾರೆನು. ಕಾಂಗ್ರೆಸು ಸದ್ಯದಲ್ಲಿ ಸ್ವರಕ್ಷಣೆ ಮತ್ತು ಸ್ವಾವಲಂಬನ ಕಾರ್ಯಕ್ರಮಗಳಲ್ಲಿ ತಲ್ಲೀನವಾಗಿರಬೇಕೆಂದು ನಾನು ಆಶಿಸಿದ್ದೇನೆ. ಇದಲ್ಲದೆ ನಮಗೆ ಬೇರೆ ದಾರಿಯಿಲ್ಲ. ಆದರೆ ಪ್ರಾಂತಿಕ ಸರಕಾರಗಳು ಇಂಥಾ ದಬ್ಬಾಳಿಕೆಯನ್ನು ಕೈಕೊಂಡರೆ, ನಮ್ಮ ಅಭಿಲಾಷೆಯು ಪೂರೈಸುವುದಿಲ್ಲವೆಂಬುದು ನಿಶ್ಚಯ ನಮ್ಮ ಧೋರಣೆಯನ್ನು ಮುಂದಿನ ಘಟನೆಗಳು ಮಾರ್ಪಡಿಸುವುವು, ಅದರ ಪರಿಣಾಮಗಳಿಗೆ ದಬ್ಬಾಳಿಕೆಯನ್ನು ಕೈಕೊಂಡ ಸರಕಾರವೇ ಹೊಣೆಯಾಗಿರುವುದು.' ಹೀಗೆಂದು ರಾಷ್ಟ್ರಪತಿ ಅಜಾದರು ಸಂಯುಕ್ತ ಪ್ರಾಂತದ ಸರಕಾರವು ಕಾಂಗ್ರೆಸಿನ ಮೇಲೆ, ಕಾಂಗ್ರೆಸ ಸಂಸ್ಥೆ ವ್ಯಕ್ತಿಗಳ ಮೇಲೆ ಮಾಡತೊಡಗಿದ ದಬ್ಬಾಳಿಕೆಯನ್ನು ಖಂಡಿಸುತ್ತಾ ಉದ್ಘೋಷಿಸಿದ್ದಾರೆ

ಕಾಂಗ್ರೆಸ್ ಪ್ರಮುಖರಾದ ಶ್ರೀ ರಫಿ ಅಹಮ್ಮದ್ ಕಿದ್ವಾಯಿಯವರನ್ನು ಸರಕಾರವು ಸಂರಕ್ಷಕ ಕಾಯಿದೆಯ ನ್ವಯ ಬಂಧಿಸಿ ಸೆರೆಮನೆಗೊಯ್ದ ವಿಚಾರ ಇಡೀ ದೇಶವೇ ತಳಮಳಗೊಂಡಿತ್ತು. ಅಷ್ಟರಲ್ಲಿ ಅಲ್ಲಿನ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಪಾಲಿವಾಲರನ್ನೂ ಇನ್ನೊಬ್ಬ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಮಹಾವೀರಸಿಂಹ ತ್ಯಾಗಿಗಳನ್ನೂ ಸೆರೆಮನೆ ಸೇರಿಸಲಾಗಿದೆ. ಇನ್ನೂ ಅನೇಕ ಮಂದಿ ಕಾಂಗ್ರೆಸ್ ಕೆಲಸಗಾರರು ಬಂಧಿಸಲ್ಪಟ್ಟಿದ್ದಾರೆ ಅವರು ಮಾಡಿದ ಅನ್ಯಾಯವೇನೆಂದು ಜನತೆಗೊಂದೂ ತಿಳಿದಿಲ್ಲ ಇಷ್ಟು ಮಾತ್ರವಲ್ಲ, ಜವಾಹರಲಾಲ ನೆಹರುಗಳು ಸ್ಥಾಪಿಸಿದ ರಾಷ್ಟ್ರೀಯ ಪತ್ರಿಕೆಯಾದ 'ನೇಶನಲ್ ಹೆರಾಲ್ಡ್'ನ ಮೇಲೆ ಒಂದೇ ಸವನೆ ದಂಡ ವಿಧಿಸಲಾಗುತ್ತದೆ. ಸಾಲದ್ದಕ್ಕೆ ಮೊನ್ನೆ ಅಖಿಲಭಾರತ ಕಾಂಗ್ರೆಸ್ ಕಮಿಟಿ ಆಫೀಸನ್ನು ಅಪಮಾನಕಾರಕ ರೀತಿಯಲ್ಲಿ ಜಡ್ತಿ ಮಾಡಲಾಯಿತು ಈ ಎಲ್ಲಾ ಕೃತ್ಯಗಳೂ ಜನತೆಯನ್ನು ಉದ್ವೇಗಗೊಳಿಸಲು ಸಾಕಾಗುತ್ತಾ ಸಂಯುಕ್ತಪ್ರಾಂತ ಸರಕಾರವು ಈ ತರದ ದಬ್ಬಾಳಿಕೆ ಮಾಡುವುದರ ಅರ್ಥವೇನೆಂದು ನಮಗೆ ತಿಳಿಯದಾಗಿದೆ

ಈ ಕುರಿತು ಗಾಂಧಿಜಿಯವರೂ ತೀರಾ ಅಸಮಾಧಾನ ತೋರ್ಪಡಿಸಿದ್ದಾರೆ 'ನೇಶನಲ್ ಹೆರಾಲ್ಡ್' ಪತ್ರಿಕೆಯಂತಹ ರಾಷ್ಟ್ರೀಯ ಸಂಸ್ಥೆಯ ಮೇಲೆ, ದಂಡ ವಿಧಿಸುವುದು ಕೇವಲ ಹಿಂದುಸ್ಥಾನದಂತಹ ಗುಲಾಮಗಿರಿಯ ರಾಷ್ಟ್ರದಲ್ಲಿ ಮಾತ್ರವೆಂದು ಬರೆದಿದ್ದಾರೆ. ಜವಾಹರಲಾಲ ನೆಹರುಗಳ ಮಾತನ್ನು ಸಂದರ್ಭ ಸೂಚಿಸದೆಯೇ ಉದ್ಧರಿಸಿ, ಯುದ್ಧ ಪ್ರಯತ್ನಕ್ಕಾಗಿ ಉಪಯೋಗಿಸುತ್ತಿರುವ ಸರಕಾರವು ಅವರು ಸ್ಥಾಪಿಸಿದ ಪತ್ರಿಕೆಯ ಮೇಲೆ ವಕ್ರದೃಷ್ಟಿಯಿಡುವುದಕ್ಕಾಗಿ ಖಂಡಿಸಿದ್ದಾರೆ. ಕಿದ್ವಾಯಿಯವರ ಬಂಧನ, ಎ ಐ.ಸಿ ಸಿ. ಕಚೇರಿಯ ಅಪಮಾನಕರ ಜಡ್ತಿ ಇವೆಲ್ಲವೂ ರಾಷ್ಟ್ರೀಯ ಯುದ್ಧ ಯತ್ನಕ್ಕೆ ಸಹಾಯವಾಗಲಾರವೆಂದು ಗಾಂಧಿಜಿ ಎಚ್ಚರಿಸುತ್ತಾ, ಹಿಂದುಸ್ಥಾನಕ್ಕೆ ಬರಲು ಜಪಾನರಿಗೆ ಈ ಎಲ್ಲಾ ಕೃತ್ಯಗಳೂ ಆಮಂತ್ರಣ ಕೊಡುವಷ್ಟು ಹುಚ್ಚುತನದ್ದಾಗಿದೆ! ಎಂದು ಉಲ್ಲೇಖಿಸಿರುವರು ಸಂಯುಕ್ತ ಪ್ರಾಂತ ಸರಕಾರದ ಈ ಅನುಚಿತ ದಬ್ಬಾಳಿಕೆಯ ವಿಷಯ ಇದಕ್ಕಿಂತ ಹೆಚ್ಚಿನ ಟೀಕೆ ಬೇರೆ ಅವಶ್ಯವಿಲ್ಲ ಶತ್ರುವು ಬಾಗಿಲಬಳಿ ಬಂದಿರುವಾಗ, ರಾಷ್ಟ್ರದ ಜನತೆಯ ಮನಸ್ಸನ್ನು ಕೆರಳಿಸುವ ಇಂತಹ ಕಾರ್ಯ ಕೈಕೊಳ್ಳುವುದು ಯುದ್ಧ ಪ್ರಯತ್ನಕ್ಕೆ ಕೇವಲ ಆತಂಕವನ್ನು ಆಮಂತ್ರಿಸುವಂಥಾದ್ದು ಮಾತ್ರವಲ್ಲ ತೀರಾ ಪ್ರಮಾದಕರವಾದ ದುರಂತವಾಗಿರುವುದು.

ವಿಶ್ವವಿದ್ಯಾಲಯ ಪರಿಷತ್ತು

ಬೆಳಗಾವಿಯಲ್ಲಿ, ಶ್ರೀ ರಂಗಾಚಾರ್ಯ ಜಹಗೀರ್‌ದಾರರ ಅಧ್ಯಕ್ಷತೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪರಿಷತ್ತು ಅತ್ಯಂತ ವಿಜೃಂಭಣೆಯಿಂದ ಜರಗಿತು ಈ ಪರಿಷತ್ತಿಗೆ ಕರ್ನಾಟಕದ ವಿವಿದ ಭಾಗಗಳಿಂದ ಅನೇಕ ಮಂದಿ ಕನ್ನಡಿಗರು ಬಂದಿದ್ದರು. ಸರ್. ಸಿದ್ದಪ್ಪ ಕಂಬಳಿಯವರು ಪರಿಷದುದ್ಘಾಟನೆ ಮಾಡಿದರು ಜೋಶಿ ನಾರಾಯಣರಾಯರು ತಮ್ಮ ಸ್ವಾಗತ ಭಾಷಣದಲ್ಲಿ ಕರ್ನಾಟಕಕ್ಕೊಂದು ವಿಶ್ವವಿದ್ಯಾಲಯವಾಗಬೇಕಾದ ಸೂಚನೆಯನ್ನು ಸ್ಪಷ್ಟೀಕರಿಸಿದರು, ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಶ್ವವಿದ್ಯಾಲಯ ಸೂಚನೆಯನ್ನು ಪುಷ್ಟೀಕರಿಸಿ ಮಾತನಾಡಿದರು ವಿಶ್ವವಿದ್ಯಾಲಯ ಸ್ಥಾಪನೆಯ ವಿಷಯವಾಗಿ ಅನೇಕ ನಿರ್ಣಯಗಳು ಮಂಜೂರಾದವು, ಕರ್ನಾಟಕ ವಿಶ್ವವಿದ್ಯಾಪೀಠ ಮಂಡಳವೊಂದನ್ನು ಸ್ಥಾಪಿಸಿ ಅದರ ನಿಯಮಾವಳಿಗಳನ್ನು ಮಾಡಿ ಅದನ್ನು ರಿಜಿಸ್ಟರ್ ಮಾಡುವುದಕ್ಕಾಗಿ ಒಂದು ಸಮಿತಿ ರಚಿತವಾಗಿದೆ.

ಹೀಗೆ ಕನ್ನಡಿಗರು ತಮ್ಮದೇ ಆದ ಸ್ವತಂತ್ರ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಚಾರದಲ್ಲಿ ಕಾರ್ಯರಂಗಕ್ಕಿಳಿದಿದ್ದಾರೆ ಮೈಸೂರಲ್ಲಿ ಇಂದು ಕನ್ನಡ ವಿಶ್ವವಿದ್ಯಾಲಯವಿದ್ದರೂ, ರಾಜಕೀಯ ಕಾರಣದಿಂದ ಅದು ಇಂದು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವಾಗಿಲ್ಲ, ಹಾಗೆ ಮಾರ್ಪಡಿಸುವುದೂ ಪ್ರಕೃತಕ್ಕೆ ಸಾಧ್ಯವಿಲ್ಲ. ಉಳಿದ ಬ್ರಿಟಿಷ್ ಕನ್ನಡದ ಅಂಶಗಳು ಕೆಲವು ಮದ್ರಾಸು ವಿಶ್ವವಿದ್ಯಾಲಯಕ್ಕೆ, ಬಾಕಿಯವು ಮುಂಬಯಿ ವಿಶ್ವವಿದ್ಯಾನಿಲಯಕ್ಕೆ ಸೇರಿ ಜೋತಾಡುತ್ತವೆ. ಮದ್ರಾಸು ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಎಷ್ಟರ ಮನ್ನಣೆ ಪ್ರೋತ್ಸಾಹ ದೊರಕುತ್ತಿದೆಯೆಂದು ಈ ಕಡೆಯ ಕನ್ನಡಿಗರಿಗೆ ಚನ್ನಾಗಿ ಗೊತ್ತು, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಆ ಕಡೆಯ ಕನ್ನಡಿಗರಿಗೆ ಆಗುತ್ತಿರುವ ತೊಂದರೆಗಳನ್ನು ಅಲ್ಲಿನವರು ಹೇಳುತ್ತಾ ಬಂದಿದ್ದಾರೆ; ಅಂತೂ ಪರಪ್ರಾಂತದ ಭಾಷಾಜನರ ಕೈಕೆಳಗೆ ಈ ಕನ್ನಡಿಗರು ಇಂದು ಸಂಕಟಪಡುತ್ತಾರೆ, ಕನ್ನಡ ಭಾಷೆ ಸಂಸ್ಕೃತಿಗಳೂ ಸಂಕಟಪಡುತ್ತಿವೆ, ಇದನ್ನು ಪರಿಹರಿಸಲು ಸ್ವತಂತ್ರ ವಿಶ್ವವಿದ್ಯಾಲಯವಾಗುವುದು ಅವಶ್ಯವಿದೆ

ಈ ವಿಚಾರವನ್ನೆತ್ತಿ ಹಿಂದೊಮ್ಮೆ ನಾವು ಲೇಖನ ಬರೆದಿದ್ದೆವು, ಅದರಲ್ಲಿಯೂ ಬ್ರಿಟಿಷ್-ಕರ್ನಾಟಕಕ್ಕೆ ಬೇರೊಂದು ಸ್ವತಂತ್ರ ವಿಶ್ವವಿದ್ಯಾಲಯವಾಗಬೇಕೆಂಬ ವಿಚಾರ ಸಮರ್ಥಿಸಿ ಬರೆದಿದ್ದೆವು ಅದರ ಸಲುವಾಗಿ ಅಖಿಲ ಕರ್ನಾಟಕದಲ್ಲಿ ಸಹಾನುಭೂತಿ ಹುಟ್ಟುವುದು, ಕಾರ್ಯಕಲಾಪಗಳು ಜರಗುವುದು ಸಾಧ್ಯವಿದೆ, ವಿಶ್ವವಿದ್ಯಾಲಯ ರಚನೆಯು ಪ್ರಾಂತ ನಿರ್ಮಾಣದಂತೆ ಮಹತ್ವಾದ ಕಾರ್ಯ, ಇದಕ್ಕಾಗಿ ಹುರುಪಿನ ಕಾರ್ಯಕರ್ತರು, ಉದಾರಿ ಶ್ರೀಮಂತರು ಮುಂದೆ ಬಂದು ಈ ಮಹತ್ವಾದ ಕೆಲಸವನ್ನು ಪೂರ್ತಿಗೊಳಿಸಿ ಕನ್ನಡಕ್ಕೆ ಕೀರ್ತಿ ತರಬೇಕು, ಕನ್ನಡನಾಡನ್ನು ಬೆಳಗಿಸಬೇಕು.

ಕಾಲಿನ ಹುಣ್ಣು ಮತ್ತು ತುರಿಕಜ್ಜಿಗಳು ನಿಮ್ಮನ್ನು ಬಾಧಿಸದಿರಲಿ

ಜಾಂಬಕ್ ನೋವನ್ನು ಮಾಂತ್ರಿಕ ಶಕ್ತಿಯಂತೆ ಗುಣಪಡಿಸುವುದು.

ಕಾಲಿನ ಹುಣ್ಣು ತುರಿಕಜ್ಜಿ ಮೊದಲಾದವುಗಳನ್ನು ಜಾಂಬಕ್ ಹೇಗೆ ಗುಣಪಡಿಸಿ, ಗಾಯವನ್ನು ಸರಿಗೊಳಿಸುವುದೆಂಬುದನ್ನು ತಿಳಿದು ನಿಮಗೆ ಆಶ್ಚರ್ಯವಾಗಬಹುದು. ನೀವು ಜಾಂಬಕನ್ನು ಗಾಯವಿದ್ದಲ್ಲಿಗೆ ತಾಗಿಸಿ ವಸ್ತ್ರ ಕಟ್ಟಿರಿ. ಜಾಂಬಕಿನಲ್ಲಿರುವ ಉತ್ತಮ ರಸೌಷಧಿ ಸತ್ವವು ಚರ್ಮಕ್ಕೆ ಬೇಗನೇ ಎಳೆಕೊಳ್ಳಲ್ಪಡುವುದು, ಹಾಗಾಗಿ ನೋವು ಮತ್ತು ಗಾಯಗಳು ಕೂಡಲೇ ಮಾಸುವುವು ಜಾಂಬಕ್ ಕಲೆ ಉಳಿಯದೆ ಗುಣಪಡಿಸುವುದು ಜಾಂಬಕ್ ಲೇಪಕ್ಕೆ ರೂಪಾಯಿ ಒಂದು ಅಥವಾ ರೂ. 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್ —

ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜಾಂಬಕನ್ನು ಪಯೋಗಿಸಿರಿ

ZAM-BUK.

ಪ್ರಾಣಿಕೊಬ್ಬು ವಿರಹಿತವಾದುದು

ನೋಟಿಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 480/1940
R F. P No 143/1942.
R E A No 162/1942.

ರುಜಾರಿಖಾನ್ ಸಹಾ . . . . ವಾದಿರು
. . . ಅರ್ಜಿದಾರರು

ಮತ್ತು

ಉಮ್ಮಕ್ಕೆ ಶೆಡ್ತಿ ಸಹಾ . ಪ್ರತಿವಾದಿಗಳು
. . . ಎದ್ರಿರ್ಗು

ಇವರೊಳಗೆ

1ರಿಂದ 4ನೇವರೆಗಿನ ಎದ್ರಿರು-1 ಉಮ್ಮಕ್ಕೆ ಶೆಡ್ತಿ ಪರಮೇಶ್ರಿ ಶೆಡ್ತಿ ಮಗಳು 2 ನದ್ದು ಸೆಟ್ಟಿ 3 ದೇವಕ್ಕು ಶೆಡ್ತಿ 4 ಕಮಲು ಶೆಡ್ತಿ 1ನೇ ಎದ್ರಿಳ ಮಕ್ಕಳು ಉಡ್ಪಿತಾಲೂಕು ಸಾಂತೂರು ಗ್ರಾಮದ ಪರಾರಿಯಲ್ಲಿರುವವರು

ಮೇಲ್ಕಂಡ ಡಿಕ್ರಿ ಅಮ್ಲಜಾರಿಯಲ್ಲಿ ಡಿಕ್ರಿ ಹಣಕ್ಕೆ ಜವಾಬದಾರಿ ಇರುವ ಸ್ಥಿರಾಸ್ತಿಯನ್ನು ಏಲಂ ಅಪೇಕ್ಷಿಸಿ ಅರ್ಜಿದಾರರು ದಾಖ್ಲು ಮಾಡಿದ ಯೇಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೂ ಮತ್ತು ಸದ್ರಿ ಯೇಲಂ ಸಮಯ ಅರ್ಜಿದಾರರಿಗೆ ಯೇಲಂನಲ್ಲಿ ಸಲ್ಲುವರೆ ಮತ್ತು ಡಿಕ್ರಿ ಹಣವನ್ನು ಏಲಮಿನ ಹಣಕ್ಕೆ ಮುದ್ರೆ ಮಾಡುವರೆ ಕೂಡಾ ಅನುಮತಿ ಕೊಡಬೇಕಾಗಿ ಅರ್ಜಿದಾರರು ದಾಖ್ಲು ಮಾಡಿದ ಅರ್ಜಿ ಸಹಾ ತನ್ನಿ ಬಗ್ಗೆ ತಾ. 23—6—1942ಕ್ಕೆ ಇಟ್ಟಿದು ತ್ತದೆ. ಆದುದರಿಂದ 1ರಿಂದ 4ನೇ ವರೆಗಿನ ಎದ್ರಿರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಇದೇ 23 6-42ನೇ ದಿವಸ ಹಗಲು 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು, ಇಲ್ಲವಾದರೆ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಪ್ರಕಟಿಸಿಯದೆ.

ಕಾರ್ಕಳ, 5-6-1942 — K Vasudeva Kamath, Advocate for petitioners

ಜಿಲ್ಲಾ ಸಮಾಚಾರಗಳು

ಶೆಡ್ಯೂಲ್ಡ್ ಜಾತಿಯವರಿಗೆ

ಶಾಲಾ ಸಂಬಳ

ಒಂದು ವರ್ಷ ತೇರ್ಗಡೆಯಾಗದಿದ್ದರೆ, ಶಾಲಾ ಸಂಬಳದಲ್ಲಿ ರಿಯಾಯತಿ ತೋರಿಸಬಾರದೆಂಬ ಮದ್ರಾಸು ವಿದ್ಯಾನಿಯಮಗಳಲ್ಲಿ ೯೨ ನೆಯ ಕಾನೂನನ್ನು, ಕ್ಲಾಸಿನ ಶೆಡ್ಯೂಲ್ಡ್ ಪಂಥದವರ ಮಟ್ಟಿಗೆ ಜ್ಯಾರಿಮಾಡದೆ ಇರುವುದಕ್ಕೆ ಸರಕಾರವು ನಿರ್ಧರಿಸಿದೆ. ಈ ನಿರ್ಧಾರದ ಫಲವಾಗಿ ಒಂದು ವರ್ಷ ಅನುತ್ತೀರ್ಣನಾದ ಶೆಡ್ಯೂಲ್ಡ್ ವಿದ್ಯಾರ್ಥಿಯು ಇನ್ನೊಂದು ವರ್ಷವೂ ಕೂಡಾ ಸೆಕಂಡರಿ ಶಾಲೆಯಲ್ಲಿ ರಿಯಾಯತಿಯನ್ನನುಭವಿಸುವನು. ಎರಡನೇ ವರ್ಷವೂ ತೇರ್ಗಡೆಯಾಗದಿದ್ದರೆ ರಿಯಾಯತಿಯು ಕಳೆದುಕೊಳ್ಳಬೇಕಾಗುವುದು.

ಕೋರ್ಟು ಪ್ರಾರಂಭ

ರಜೆಗಾಗಿ ಮುಚ್ಚಲ್ಪಟ್ಟಿದ್ದ ಸ್ಥಳೀಯ ಮುನ್ಸಿಫ್ ಕೋರ್ಟು ಕಳೆದ ತಾ. ೩ರಲ್ಲಿ ಆರಂಭವಾಗಿದೆ. ಜಿಲ್ಲಾ ಮತ್ತು ಸಬ್ ಕೋರ್ಟುಗಳು ಜೂನ್ ತಾ. ೧೫ಕ್ಕೆ ತೆರೆಯಲ್ಪಡುವುವು.

ನೇಮಕ—ವರ್ಗಾವರ್ಗಿ

ರಜೆ ಮೇಲಿದ್ದ ಕಾಸರಗೋಡಿನ ತಹಶೀಲ್ದಾರ್ ಶ್ರೀ. ಬಿ. ಗಣೇಶ ಬಿ. ಎ. ಇವರು ಪುತ್ತೂರಿನ ತಹಶೀಲ್ದಾರರಾಗಿಯೂ ಶ್ರೀ. ಬಿ. ನಾರಾಯಣ ಹೆಗ್ಗಡೆ ಬಿ. ಎ. ಇವರು ಇವರು ಕಾಸರಗೋಡಿನ ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟರಾಗಿಯೂ ನೇಮಕಪಟ್ಟಿದ್ದಾರೆ.

ಶ್ರೀಗಳಾದ ಇ. ಮಹಾಲಿಂಗ ಭಟ್ಟ, ಕೆ. ಎನ್. ನಾಯಕ, ಕುಞಾರಾಮನ್ ವೈದ್ಯರ್, ಮತ್ತು ಎಚ್. ರಾಮನಾಯ್ಕರು ಕಾಸರಗೋಡಿನ ಒನರರೀ ಬೆಂಚ್ ಮಾಜಿಸ್ಟ್ರೇಟರಾಗಿಯೂ ಶ್ರೀಗಳಾದ ಕಂಬಳಬೆಟ್ಟು ಬದ್ದ ಕುಂಞಾಬ್ಯಾರಿ ಸಾಹೇಬರು ಮತ್ತು ಪುತ್ತೂರು ಕೃಷ್ಣಯ್ಯ ಹೆಗ್ಗಡೆಯವರು ಪುತ್ತೂರಿನ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ಮೊಕರೂರಾಗಿರುತ್ತಾರೆ.

ಕೊಳ್ಳೆಗಾಲಿಗೆ ವರ್ಗಾಯಿಸಲ್ಪಟ್ಟ ಡಾ. ಎಮ್. ವಿ. ಕಾಮತ್ ಎಂ. ಬಿ. ಬಿ. ಎಸ್. ಇವರು ಮದ್ರಾಸಿನ ಸ್ಟೆಂಡ್ಲೆ ಮೆಡಿಕಲ್ ಕಾಲೇಜಿನ ಸರ್ಜಿಕಲ್ ರಿಜಿಸ್ಟ್ರಾರರಾಗಿಯೂ ಮೊಕರೂರಾಗಿರುತ್ತಾರೆ.

ಪುತ್ತೂರು

ಪಂಚಾಯತ ಬೋರ್ಡು ಸಭೆ

ತಾ. ೩೦ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಪ್ರೆಸಿಡೆಂಟರಾದ ಶ್ರೀ. ಎಂ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಮನೆಯ ತೆರಿಗೆಯ ವಿಷಯ ಪರ್ಯಾಲೋಚಿಸಲು ಶ್ರೀಗಳಾದ ಸದಾಶಿವರಾವ್, ಎನ್. ವಿ. ಕೊಳತ್ತಾಯ, ಎಸ್. ಅನಂದರಾವ್ ಇವರುಗಳಿಂದ ಕೂಡಿದ ಒಂದು ಕಮಿಟಿಯನ್ನು ಆರಿಸಲಾಯಿತು. ಬಸ್ ಸ್ಟೇಂಡಿನ ಬಳಿ ಪ್ರಯಾಣಿಕರ ಶೆಡ್ ಮತ್ತು ಇತರ ಕಟ್ಟಡಗಳನ್ನು ರಚಿಸಲು ೧೫೦೦ ರೂ. ಗೆ ಮಿಕ್ಕದ ಐವೇಜನ್ನು ಕೊಡಬಹುದಾಗಿ ನಿರ್ಣಯಿಸಿದರು.

ವರ್ಗ

ಸ್ಥಳೀಯ ಬೋ. ಹೈಸ್ಕೂಲು ಉಪಾಧ್ಯಾಯರಾದ ಶ್ರೀ. ಗೋಪಾಲ ನಾಯ್ಕರು ಕಾಸರಗೋಡಿಗೂ, ಕಾಸರಗೋಡು ಹೈಸ್ಕೂಲಿನ ಶ್ರೀ. ಕೆ. ಭವಾನಿ ಶಂಕರರಾಯರು ಇಲ್ಲಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಸುಳ್ಯ

ದ ಸವಿಾಪ ಲೋರಿಯೊಂದರ ಸ್ವಾಧೀನತೆಗೆ ಬಲತ್ಕಾರ ಮಾಡಿದ ಆರೋಪಣೆಯಿಂದ ೧೦ ಜನರನ್ನು ಕೈದುಮಾಡಿದ್ದಾರೆಂದೂ ಡ್ರೈವರನಿಗೆ ಗಾಯಗಳಾಗಿವೆಯೆಂದೂ ತಿಳಿದುಬಂದಿದೆ.

ಬೆಳ್ಳಾರೆ

ಯ ವರ್ಧಂತಿಯು ಶ್ರೀ. ಕೆ. ಐತಪ್ಪ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಜರುಗಿತು.

ಏತಡ್ಕ

ಏಡೆಡ್ ಶಾಲೆಯ ವರ್ಧಂತ್ಯುತ್ಸವವೂ ರಕ್ಷಕರ ಸಭೆಯೂ ಶ್ರೀ. ಬಿ. ಸುಬ್ರಹ್ಮಣ್ಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದುವು.

ಧರ್ಮತ್ತಡ್ಕ

ಏಡೆಡ್ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ರಕ್ಷಕರ ಕೂಟದ ಮಾಸಿಕ ಸಭೆ ಶ್ರೀ. ಬಿ. ಜಗನ್ನಾಥರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ಚಟುವಟಿಕೆ, ನಾಟಕ ಇತ್ಯಾದಿ ಪ್ರದರ್ಶನದೊಂದಿಗೆ ಸಭೆ ಅಂತ್ಯವಾಯಿತು.

ಉಡುಪಿ

ತಾಲೂಕು ಎಯಿಡೆಡ್

ಶಾಲೆಗಳ ಮೇನೆಜರ ಸಭೆಯು ಕಳೆದ ತಾ. ೧ರಲ್ಲಿ ಮ್ಯುನಿಸಿಪಲ್ ಮೈನ್ ಶಾಲೆಯಲ್ಲಿ ಶ್ರೀ. ಪಿ. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಏಳನೇ ಎಡ್ವರ್ಡ್ ಪ್ರಭುಗಳ ರೂಪಾಯಿ ನಾಣ್ಯ

ಏಳನೇ ಎಡ್ವರ್ಡ್ ಪ್ರಭುಗಳ ರೂಪಾಯಿ ಮತ್ತು ಅರ್ಧ ರೂಪಾಯಿಗಳ ನಾಣ್ಯಗಳು ಕಳೆದ ಮೇ. ತಾ. ೩೧ರಿಂದ ಚಲಾವಣೆಯಲ್ಲಿ ಇಲ್ಲವಾದರೂ ಇದೇ ಬರುವ ಸಪ್ಟಂಬರ ತಾ. ೩೦ರ ವರೆಗೆ ಅವು ಯಾವತ್ತೂ ಸರಕಾರೀ ಟ್ರೆಜರಿ, ಪೋಸ್ಟ್ ಆಫೀಸ್ ಮತ್ತು ರೈಲ್ವೆ ಸ್ಟೇಶನುಗಳಲ್ಲಿ ಸ್ವೀಕರಿಸಲ್ಪಡುತ್ತವೆ.

ಕರ್ನಾಟಕ

ಕರ್ನಾಟಕ ವಿಶ್ವ ವಿದ್ಯಾಲಯ ಪರಿಷತ್ತು

ಬೆಳಗಾವಿಯಲ್ಲಿ ತಾರೀಕು ೩೧ರಂದು ಸಂಜೆ ಮುಂಬಾಯಿ ಶ್ರೀ. ರಂಗಾಚಾರ್ಯ. ಜಹಗೀರ್ದಾರರ ಅಧ್ಯಕ್ಷತೆಯಲ್ಲಿ ಜರಗಿತು. ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಸರ್ ಕಂಬಳಿಯವರು ಇಗ್ಲೀಷಿನಲ್ಲಿ ಭಾಷಣವಿತ್ತು, ಪರಿಷತ್ತಿನ ಉದ್ಘಾಟನೆ ಮಾಡಿದರು. ಸ್ವಾಗತಾಧ್ಯಕ್ಷರಾದ ಶ್ರೀ. ನಾರಾಯಣ ಜೋಶಿ ಅವರು ತಮ್ಮ ಭಾಷಣದಲ್ಲಿ ರಾಜಕೀಯ ಕಾರಣಗಳಿಂದ ಮೈಸೂರು ವಿದ್ಯಾಪೀಠವು ಅಖಿಲ ಕರ್ನಾಟಕದ ವಿದ್ಯಾಪೀಠವಾಗುವುದು ಶಕ್ಯವಿಲ್ಲವೆಂದೂ ಇನ್ನೊಂದು ವಿದ್ಯಾಪೀಠದ ಆವಶ್ಯಕತೆಯಿದೆಂದೂ, ಅದರ ಸ್ಥಾಪನೆಗಾಗಿ ೩೫ ಲಕ್ಷ ರೂ. ಸಂಗ್ರಹವಾಗಬೇಕೆಂದು ಹೇಳಿದರು. ಪ್ರಾದೇಶಿಕ ಪೀಠಗಳ ಮತ್ತು ಕನ್ನಡ ವಿದ್ಯಾಪೀಠದ ಆಂದೋಲನದ ಅವಶ್ಯತೆಯನ್ನು ವಿವರಿಸಿ ಅಧ್ಯಕ್ಷರು "ಈ ವಿಚಾರವಾಗಿ ಕರ್ನಾಟಕದಲ್ಲಿ ಪ್ರಚಂಡ ಜನಜಾಗೃತಿಯನ್ನುಂಟುಮಾಡಿ ಅದರ ಬಲದಿಂದ ಸರಕಾರವನ್ನು ಒತ್ತಾಯಪಡಿಸಬೇಕು. ಈ ಕೆಲಸಕ್ಕಾಗಿ ಒಂದು ಕರ್ನಾಟಕ ವಿಶ್ವವಿದ್ಯಾಲಯ ಮಂಡಲವನ್ನು ಸ್ಥಾಪಿಸಬೇಕು" ಎಂದು ತನ್ನ ಭಾಷಣದಲ್ಲಿ ಹೇಳಿದರು.

ಮಹಾರಾಷ್ಟ್ರ ವಿದ್ಯಾಪೀಠ ಸ್ಥಾಪನೆಯ ಯತ್ನದಲ್ಲಿ ಯಶಸ್ವಿಗಳಾದುವಕ್ಕೆ ಅವರಿಗೆ ಅಭಿವಂದನೆ; ಬೆಳಗಾವಿಯನ್ನು ಮಹಾರಾಷ್ಟ್ರದ ಭಾಗವೆಂದೇ ಭಾವಿಸಬಾರದಾಗಿ ಸೂಚನೆ; ಕ. ವಿದ್ಯಾಪೀಠ ಸ್ಥಾಪನೆಯ ಕೆಲಸಕ್ಕೆ ಒಂದು ಮಂಡಲಿಯ ರಚನೆ ಈ ಮೂರು ನಿರ್ಣಯಗಳು ಸರ್ವಾನುಮತದಿಂದ ಸ್ವೀಕೃತವಾದುವು.

ನೀವು

ಸಂಸರ್ಗದೋಷವನ್ನು

ಹರಡುತ್ತಿದ್ದಿರೊ?

ಈ ದೇಶದಲ್ಲಿ ಭಯಂಕರವಾದ ಒಂದು ರೋಗವಿದೆ. ಈ ರೋಗವು ಮನುಷ್ಯನ ಮನಸ್ಸನ್ನು ಕೆಡಿಸುವುದಲ್ಲದೆ ಅವನನ್ನು ಧೈರ್ಯಹೀನನಾಗಿ ಮಾಡುತ್ತದೆ. ಈ ವದಂತಿಗಳೆಂಬ ರೋಗವು ಸಾರ್ವಜನಿಕ ಶತ್ರುವಾದ ಜಪಾನಿಯನಿಂದ ಸುರುಆಗಿದೆ. ನೀವು ಈ ರೋಗವನ್ನು ನಿಮ್ಮ ಸ್ನೇಹಿತರಲ್ಲಿ ಹರಡಬೇಡಿರಿ.

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ಇಂಡಿಯಾ ದೇಶದ ಯುದ್ಧಮುಖವನ್ನು ರಚಿಸಿರಿ.

NOTICE

In the court of the District Judge of S. K.

O. P. No. 31/1942

In the matter of the debts due to Kajumma, deceased K. Venkatramana Bhatta and others.........*Petitioners*

Notices is hereby given that the Petitioners have applied to the District Judge for the grant of a certificate under Part X of the Indian Succession Act in favour of the 1st Petitioner to collect the Insurance amount of their deceased mother in the East & west Insurance Co. Ltd and the said petition stands posted to 16–6–1942 at 10. 30 A. M. in the above court. Any one interested in the said matter may appear in person or pleader and contest the same or else it will be decided exparte.

(by order of Court)

Mangalore, 8-6 1942 } A. Shanker Alva, Vakil for Petitioners

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 11/1942. O.S.13/1940.

ಪಾಳಂಜೆ ವೆಂಕಟೇಶ ಭಟ್ಟ—ಅರ್ಜಿದಾರ

1ನೇ ಪ್ರತಿವಾದಿ ಪದ್ಮನಾಭ ಶಬರಾಯ, ಗುಂಡಿಮಾಡು ಕೃಷ್ಣ ಶಬರಾಯರ ಮಗ ಪುತ್ತೂರು ತಾಲ್ಲೂ ಕೌಕ್ರಾಡಿ ಗ್ರಾಮದ ಮುಂಡೆಗುಂಡಿ ಎಂಬಲ್ಲಿರುವವ—2ನೇ ಪ್ರತಿವಾದಿ ಅನಂತ ಶಬರಾಯ ಪದ್ಮನಾಭ ಶಬರಾಯರ ಮಗ, ಶಿಬಾಜೆ ಗ್ರಾಮದ ಬಂಡಿಹೊಳೆ ಹಾಳ್ಯದಲ್ಲಿರ್ಪವ—3ನೇ ಪ್ರತಿವಾದಿ ಮಾಧವ ಶಬರಾಯ ನಾರಾಯಣ ಶಬರಾಯರ ಮಗ ಕೊಕ್ಕಡ ಗ್ರಾಮದಲ್ಲಿರ್ಪವ— } ಪ್ರತಿ

ಮೇಲ್ಕಂಡ 1, 2 ಮತ್ತು 3ನೇ ಎದ್ರಿರೀಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

ಮೇಲೆ ಹೇಳಲ್ಪಡಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಅದುದರಿಂದ ವಿಕ್ರಯದ ಇಸ್ತಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1942ನೇ ಯಿಸ್ವಿ ಜೂನು ತಿಂಗಳ 19ನೇ ತಾರೀಕು ನಿಶ್ಚಯಿಸಲ್ಪಟ್ಟಾಗಿಯದೆಂತ ನಿಮಗೆ ಇದರಿಂದ ತಿಳಿಸಲಾಗುತ್ತದೆ.

(By Order of the court.)

ಮೊಕ್ಕಾಂ ಪುತ್ತೂರು 5–6–1942 } S. Soorappaya, Vakil for petr.

HOW USEFUL ARE YOUR SAVINGS?

One saves for a rainy day and if when the rainy day comes you can get at your savings only in driblets of Rs. 100 or Rs. 200 a week it is no helpful savings to you.

A sevings account with us not only helps you to save and accumulate but when an unforeseen contingency comes you can withdraw all the balance to your cerdit in one lump sum if necessary.

Interest allowed 2%

CANARA BANK, LIMITED.

ESTD 1906.

"ನಮ್ಮ ಸ್ನೇಹಿತರಾಗಿರಿ . . .



ನಿಮ್ಮ ಮನೆಯೊಳಗೆ ನಾವು ಪ್ರವೇಶಿಸುವವರೆಗೆ"

ಜಪಾನಿಯರ "ಸ್ನೇಹವು" ಒಂದು ಹೊಸರಣಕೌಶಲ್ಯ. ಜಪಾನಿಯರು ನಮ್ಮ ಹಿತಕ್ಕಾಗಿ ಇಂಡಿಯಾ ದೇಶಕ್ಕೆ ಬರುತ್ತಾರೆಂದು ಯಾವಾಗಲೂ ನಂಬಬೇಡಿ ಅವರು ಒಂದು ಹೊಸರಣಕೌಶಲ್ಯವನ್ನು ಕಂಡುಹಿಡಿದಿದ್ದಾರೆ ಅದೇನೆಂಬುದನ್ನು ನಾವು ಜಾಗ್ರತೆಯಾಗಿ ತಿಳಿದುಕೊಂಡು ಎಚ್ಚರಿಕೆಯಿಂದಿರಬೇಕು ಅವರ ಸವಿನುಡಿಗಳು, ರೇಡಿಯೊ ಮೂಲಕ ಅವರು ಮಾಡುವ ವಾಗ್ದಾನಗಳು, ಅವರ ಏಜೆಂಟುಗಳು ನಮ್ಮ ಮಧ್ಯೆದಲ್ಲಿ ಹರಡುತ್ತಿರುವ ವದಂತಿಗಳು ಇವೆಲ್ಲಾ ಒಂದು ಉದ್ದೇಶದೊಡನೆಯೇ—ಏನೆಂದರೆ ನಮ್ಮನ್ನು ಮೋಸಮಾಡಿ ನಮ್ಮನ್ನು ಬಲಹೀನರಾಗಿ ಮಾಡಿ ಜಪಾನಿಯ ಸಿಪಾಯಿಯು ನಮ್ಮ ದೇಶದೊಳಗೆ ಪ್ರವೇಶಿಸುವುದಕ್ಕೆ ನಾವು ಸಹಾಯಕರಾಗುವ ಹಾಗೆ ನಮ್ಮನ್ನು ಪುಸಲಾಯಿಸುವುದು—ಎಲ್ಲಾ ಅವನ ಹಿತಕ್ಕಾಗಿ ಆದರೆ ಜಪಾನಿಯ ಸಿಪಾಯಿಗಳಿಗೆ ಇಂಡಿಯಾವಿನಲ್ಲಿ ಸ್ವಾಗತಕ್ಕೆ ಬದಲಾಗಿ ಮರಣವೇ ದೊರಕುವುದು ವಿಮಾನಗಳು, ಸಿರಂಗಿಗಳು ಮತ್ತು ಸೈನ್ಯಗಳು ಅವರನ್ನು ಎದುರಿಸುವುದಕ್ಕಾಗಿ ಕಾದುಕೊಂಡಿವೆ ನಮ್ಮ ಗ್ರಾಮವಾಸಿಗಳು ಕೂಡ ಅವರನ್ನು ಉಪಾಯದಿಂದ ತಡೆಗಟ್ಟುವರು ನೀವು ನಿಮ್ಮಿಂದಾದ ಸಹಾಯವನ್ನು ಮಾಡಲು ತಯಾರಾಗಿರುವಿರಾ? ನಮ್ಮ 380,000,000 ಜನಗಳು ಯುದ್ಧ ಮಾಡಿ, ಯುದ್ಧೋದ್ಯಮಗಳಲ್ಲಿ ಸಹಾನುಭೂತಿಗಳಾಗಿ, ಎಲ್ಲರೂ ಒಟ್ಟುಗೂಡಿ, ನಮ್ಮ ಬುದ್ಧಿಕೌಶಲ್ಯಗಳನ್ನು ಉಪಯೋಗಿಸಿದರೆ ನಾವು ಯಾವಾಗಲೂ ಸೋಲಲಾರೆವು ಇಂದೇ ಪ್ರಾರಂಭಿಸಿ

ಚೀನಾ ದೇಶವನ್ನು ಜ್ಞಾಪಕದಲ್ಲಿಡಿ!

ಜಪಾನಿಯರು ಚೀನಾ ದೇಶದಲ್ಲಿ "ಬಂಧವಿಮೋಚನ" ದ ಹೆಸರಿನಲ್ಲಿ ಮಾಡಿರುವ ಘೋರತನವನ್ನು ಜ್ಞಾಪಕದಲ್ಲಿಟ್ಟುಕೊಂಡಿರಿ ನೀವು ಸ್ವಾತಂತ್ರ್ಯದಿಂದ ಜೀವಿಸಬೇಕಾದರೂ ಅಥವಾ ನಿಮ್ಮ ಹೆಂಡತಿಯನ್ನು ಕಾಪಾಡಿಕೊಳ್ಳಬೇಕಾದರೂ, ಜಪಾನಿಯರ ಅಧೀನಕ್ಕೆ ಒಳಗಾಗ ಕೂಡದು ಚೀನೀಯರು ಅನುಭವದಿಂದ ಇದನ್ನು ಕಲಿತುಕೊಂಡಿದ್ದಾರೆ ಜಪಾನಿಯರ "ಸ್ನೇಹ"ಕ್ಕೆ ಒಂದೇ ಉತ್ತರ —ಯುದ್ಧ ಮಾಡುವುದು. ೮ ವರ್ಷಗಳಿಂದಲೂ ಚೀನೀಯರು ಈ ಉತ್ತರವನ್ನು ಕೊಡುತ್ತಿದ್ದಾರೆ ಅವರ ಸೈನ್ಯಗಳ ಶೌರ್ಯದಿಂದ ಅವರ ಹೆಂಗಸರು ಸುರಕ್ಷಿತರಾಗಿದ್ದಾರೆ ಧೈರ್ಯವು ತುಂಬ ತುಳುಕುತ್ತಿದೆ ಮತ್ತು ಅವರು ಚೀನಾ ದೇಶಕ್ಕೆ ಒಂದು ಹೊಸ ಜೀವಿತವನ್ನು ಏರ್ಪಡಿಸುತ್ತಿದ್ದಾರೆ



ಜಪಾನಿಯರನ್ನು ಎದುರಿಸುವುದಕ್ಕೆ ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಫಿನ್‌ಲ್ಯಾಂಡಿಗೆ ಹಿಟ್ಲರನ ಭೇಟಿ

ಹಿಟ್ಲರರು ಫಿನ್‌ಲ್ಯಾಂಡಿಗೆ ವಿಮಾನದಲ್ಲಿ ತೆರಳಿ, ಅಲ್ಲಿ ಮೆನರ್ ಹಿಂ ಮೊದಲಾದವರೊಡನೆ ಭೇಟಿಕೊಟ್ಟು ಮಾತುಕಥೆ ನಡೆಸಿ ಮ್ಯಾನರ್ ಹಿಂರನ್ನು ಬಹುಮಾನ ಪದಕದಿಂದ ಸನ್ಮಾನಿಸಿ ಮರಳಿರುವರೆಂದು ವಾರ್ತೆ. ಮ್ಯಾನರ್‌ಹಿಂ ಈಗ ಫಿನ್‌ಲ್ಯಾಂಡಿನ ಮಾರ್ಶಲರಾಗಿ ನೇಮಕ ಹೊಂದಿದ್ದಾನೆ.

ಬೀರ್ ಹಕೀಮ್‌ನ ಬಳಿ

ಬೀರ್ ಹಕೀಮಿನ ಬಳಿ ಇಂಡಿಯದ ಸೇನೆಗಳು ಪರಾಕ್ರಮದಿಂದ ಕಾದಾಡುತ್ತಿರುವುದರ ಪರಿಣಾಮವಾಗಿ ಏಕ್ಸಿಸ್ ಸೇನೆಗಳು ಹಿಮ್ಮೆಟ್ಟುತ್ತಿವೆ. ಏಕ್ಸಿಸ್‌ನವರ ಟ್ಯಾಂಕುಗಳ ಸಂಖ್ಯೆಯಲ್ಲಿ ಅರ್ಧಪಾಲು ನಷ್ಟವಾಯಿತು ಜನರಲ್ ರೊಮ್ಮೆಲರು ಮುಂದೆ ಈಗ ಹಲವು ಹೊಸ ಸಮಸ್ಯೆಗಳು ಎದ್ದಿವೆ

ವಿಮಾನ ನಿಲ್ದಾಣಕ್ಕಾಗಿ ಘೋರ ಕಾಳಗ

ಚೈಕಿಂಗ್ ಪ್ರಾಂತದ ಬಾಂಬು ಹಾರಿಸಬಲ್ಲ ಚಾಚೆಕ್ಷಿಗಾಗಿ ಜಪಾನಿಯರಿಗೂ ಚೀನಿಯರಿಗೂ ಘೋರ ಕಾದಾಟ ನಡೆಯುತ್ತಿದೆ. ಅಲ್ಲಿ ಜಪಾನರು ೧ ಲಕ್ಷ ಮಂದಿಯ ತಮ್ಮ ಸೇನೆಗಳನ್ನು ಉಪಯೋಗಿಸಿಕೊಂಡು ಆ ನಿಲ್ದಾಣವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಜಪಾನೀಯರೀ ಯುದ್ಧದಲ್ಲಿ ವಿಷವಾಯುವನ್ನು ಉಪಯೋಗಿಸುತ್ತಿರುವರಾಗಿ ಸುದ್ಧಿ. ಇತ್ತ ಚೀನಿಯರು ಪಾನ್ ಸಂಸ್ಥಾನದ ಒಂದು ಮುಖ್ಯ ನಗರವಾದ ಕೆಂಗ್‌ಟೆಂಗ್‌ನ್ನು ಹಿಡಿದಿದ್ದಾರೆ.

ಇಂಡಿಯಕ್ಕೆ ಸಹಾಯ

ಕಳೆದ ತಿಂಗಳಲ್ಲಿ ಬ್ರಿಟನಿಂದ ಭಾರತಕ್ಕೆ ಯುದ್ಧ ಸಾಮಗ್ರಿ ಮತ್ತು ಸೋಲ್ಜರುಗಳಿಂದ ಕೂಡಿದ ಬಹು ದೊಡ್ಡ ಹಡಗುಗಳು ಸುರಕ್ಷಿತವಾಗಿ ತಲುಪಿರುವುವೆಂದು ಈಗ ಪ್ರಕಟವಾಗಿದೆ.

ಸಿನೇಮಾ ಸುದ್ದಿ

ಶಾಂತಾ ಆಪ್ಟೆ ಹೀಗೇಕೆ ಉಗ್ರಳಾಗುತ್ತಾಳೆ?

ಭಲ್‌ಜೀ ಪಂಚೋಲಿಯವರ 'ಜಮೀನ್ದಾರ್' ಚಿತ್ರದಲ್ಲಿ ಸುಪ್ರಸಿದ್ಧ ತಾರಾಮಣಿ ಶಾಂತಾ ಆಪ್ಟೆ ಅಭಿನಯಿಸುತ್ತಾಳೆಂದು ಪ್ರಸಿದ್ಧವಾಗಿತ್ತಷ್ಟೆ? ಶಾಂತಾ ಆ ಕಂಪೆನಿಯವರೊಡನೆ ಮಾಡಿಕೊಂಡ ಕರಾರನ್ನು ಅರ್ಧದಲ್ಲಿ ಮುರಿದುದಕ್ಕಾಗಿ, ಈಗ ಆ ಕಂಪೆನಿಯವರು ವ್ಯಾಜ್ಯ ಮಾಡಬೇಕಾಗಿ ಬಂದಿದೆಯೆಂದು "ಹಿಂದುಸ್ಥಾನ್ ಟೈಮ್ಸ್" ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಶಾಂತಾ ಆಪ್ಟೆ ಪಂಚೋಲಿಯವರ ಚಿತ್ರದಲ್ಲಿ ವಿನಾ ಬೇರಾವ ಚಿತ್ರಕಂಪೆನಿಯಲ್ಲೂ ನಟಿಸಬಾರದೆಂದೂ, ಯಾವ 'ಪಾರ್ಟಿ'ಯಲ್ಲಾಗಲಿ ಹಾಡಬಾರದೆಂದೂ ಪಂಚೋಲಿಯವರು ನ್ಯಾಯಸ್ಥಾನದಿಂದ ತೀರ್ಪು ಪಡೆದಿರುವರಂತೆ. ಕೋರ್ಟಿನ ಪೇದೆ ಶಾಂತಳಿಗೆ 'ಸಮನ್ಸ್' ತಂದಿದ್ದನು. ಅವಳು ಅವನನ್ನು ಬೈದು ಭಂಗಿಸಿ ಕಳುಹಿಸಿದಳೆಂದೂ ಆದರಿಂದಾಗಿ ಅವಳ ಮೇಲೆ ಕೋರ್ಟಿನವರು ಹೆಚ್ಚಿನ ಆರೋಪ ಮಾಡಿರುವರೆಂದೂ ವದಂತಿಯಿರುವುದು.

ಹೆಸರೇನೋ ಶಾಂತಾ! ಆದರೆ ಸ್ವಭಾವ ತದ್ವಿರುದ್ಧ! ಹೋದಲ್ಲೆಲ್ಲಾ ಈಕೆ ಹೀಗೆ ಜಗಳ ಹಚ್ಚುವ ಕಾರಣವಾದರೂ ಏನು? "ಮದುವೆಯಾಗದೆ ಹುಚ್ಚು ಬಿಡದು, ಹುಚ್ಚು ಬಿಡದೆ ಮದುವೆಯಾಗದು" ಎಂಬ ಗಾದೆಯಂತಾಗಿದೆ ಅವಳ ಅವಸ್ಥೆ. ಶಾಂತಳಿನ್ನೂ ಅವಿವಾಹಿತಳಾಗಿಯೇ ಇದ್ದಾಳೆ! ವಿವಾಹ ವಯಸ್ಸು ದಾಟಿದ ಈ ತರುಣಿ, ಇನ್ನಾದರೂ ಮದುವೆಯಾಗುವ ಮನಸ್ಸು ಮಾಡಿದರೆ ಈ ಕೋಪತಾಪಗಳು ಅಡಗಿ ಶಾಂತಾ ನಿಜವಾಗಿಯೂ ಶಾಂತಳಾಗುತ್ತಾಳೋ ಏನೋ?

ಶಾಂತಾಳ ಈ ತರದ ದಿಟ್ಟ ವರ್ತನೆ ಮೊಟ್ಟಮೊದಲು ಆರಂಭವಾದದ್ದು, ಫಿಲ್ಮ್ ಇಂಡಿಯಾ, ಆಫೀಸಿನಲ್ಲಿ, ಅದರ ಸಂಪಾದಕ ಬಾಬುರಾವ್ ಪಟೇಲರಿಗೇ ಅವರ ಆಫೀಸಿಗೆ ಬಂದು ತಪರಾಕಿ ಏರಿಸಿದಾಗ. ಆ ಮೇಲೆ 'ಪ್ರಭಾತ್' ಕಂಪೆನಿಯೊಡನೆ ಕಲಹವಾಡಿ, ಸತ್ಯಾಗ್ರಹವನ್ನು ಹೂಡಿದ ಪ್ರಕರಣವಂತೂ ಫಿಲ್ಮ್ ಲೋಕದಲ್ಲಿಯೇ ಪ್ರಸಿದ್ಧವಾದೊಂದು ಘಟನೆ. ಮತ್ತೆ ಶಾಂತಾ ತಮಿಳು ಚಿತ್ರ ನಟನೆಗೆ ಪ್ರಾರಂಭಿಸಿ 'ಸಾವಿತ್ರಿ'ಯಲ್ಲಿ ನಟಿಸುವಾಗ, ನಿರ್ದೇಶಕ ವೈ. ವಿ. ರಾಯರೊಡನೆ ಹೋರಾಡಿ, ಆ ಚಿತ್ರವು ಎಲ್ಲಿ ಅರ್ಧದಲ್ಲಿಯೇ ಮುರಿದುಬೀಳುತ್ತದೋ ಎಂಬಂತಾಗಿದ್ದು ಮತ್ತೆ ಹೇಗಾದರೂ ಶಾಂತಳನ್ನು ವೈ. ವಿ. ರಾವ್ ಸುಧರಿಸಿಕೊಳ್ಳಬೇಕಾಯಿತು. ಬಳಿಕ 'ಅಪ್ನಾ ಘರ್' ಮುಗಿಯಬೇಕಾದರೆ, ಸಿಕೋರ್ ಕಂಪೆನಿಯ ಒಡವೆ ವಸ್ತುಗಳನ್ನು ಹೆಚ್ಚು ಬೆಲೆಬಾಳುವ ರವಕೆ ಸೀರೆ ಆಭರಣಗಳನ್ನು ಅವರಿಗೆ ತಿರುಗಿ ಕೊಡಲೊಪ್ಪಲಿಲ್ಲವೆಂದೂ ಪ್ರಸಿದ್ಧವಾಯಿತು. ಕಡೆಗೆ ಈಗ ಪಂಚೋಲಿಯವರೊಡನೆ ಈ ವ್ಯಾಜ್ಯ ನಡೆಯಿತು.

ಶಾಂತಾ ಆಪ್ಟೆ ದುಡುಕು ಸ್ವಭಾವದವಳೆಂದು ಅವಳನ್ನು ದೂರುವ ಸಲುವಾಗಿ ಹೀಗೆ ಅವಳ ದ್ವೇಷಿಗಳು ಕಲಹ ಕಾರಣವನ್ನುಂಟು ಮಾಡುತ್ತಾರೋ ತಿಳಿಯದು. ಪಾಪ! ಹೆಂಗುಸೊಬ್ಬಳನ್ನು ಕೆಟ್ಟವಳೆಂದು ಪ್ರಚಾರಮಾಡಿ ಕೆಡಿಸುವ ಹೀನ ಮಾನವರೂ ಕೆಲವರು ಇದ್ದಾರೆ. ಅವರ ಕೈಚಳಕವಾಗಿ ಈ ತರದ ಪ್ರಚಾರ, ಕಲಹ ಕಾರಣಗಳು ಉಂಟಾಗಿ ಸುದ್ದಿ ಹಬ್ಬಿದ್ದರೂ ಇರಬಹುದು.

'ಅಕ್ಬರ್ ದಿ ಗ್ರೇಟ್'

ಎಂಬೀ ಹೆಸರಿನ ಐತಿಹಾಸಿಕ ಚಿತ್ರವನ್ನು ನೇಶನಲ್ ಸ್ಟುಡಿಯೋದವರು ತಯಾರಿಸಲಿದ್ದಾರೆ. ಚಂದ್ರಮೋಹನನು ಇದರಲ್ಲಿ ಮುಖ್ಯ ನಾಯಕ ಪಾತ್ರ ವಹಿಸುವನು. ಮೆಹಬೂಬರು ಇದನ್ನು ನಿರ್ದೇಶಿಸುವರು. ಇವರ 'ರೋಟಿ' ಬೇಗನೆ ಪೂರ್ಣವಾಗುವುದು. ಲಕ್ನೋದ ಪ್ರಸಿದ್ಧ ಗಾಯಕಿ 'ಅಖ್ತಾರಿಬಾಯಿ ಫೈಜಾಬಾದಿ' ಎಂಬವಳು ಇದರಲ್ಲಿ ಹಾಡುತ್ತಾಳೆ.

'ಭಕ್ತ ಸೂರದಾಸ್'

ಎಂಬೀ ಸಂಗೀತ ಚಿತ್ರವನ್ನು ರಣಜಿತ್ ಮೂವಿಟೋನಿನವರು ತಯಾರಿಸುತ್ತಾರೆ. ಸೈಗಲನಿದರಲ್ಲಿ ಪಾತ್ರ ವಹಿಸುತ್ತಾನೆ. 'ನರ್ಸ್' ಎಂಬೊಂದು ಸಾಮಾಜಿಕ ಚಿತ್ರ ತಯಾರಾಗುತ್ತಿದೆ. ಖುರ್ಶಿದ್ ಇದರಲ್ಲಿ ನಾಯಕಿ ಪಾತ್ರ ವಹಿಸುತ್ತಾಳೆ. ಚತುರ್ಭುಜ ದೋಶಿಯವರು ಇದರ ನಿರ್ದೇಶಕರು.

'ಟೆನ್ ಓಕ್ಲೋಕ್'

ಎಂಬ ಸಾಮಾಜಿಕ ಚಿತ್ರವನ್ನು ಪ್ರಭಾತ ಕಂಪೆನಿಯವರು ತಯಾರಿಸುತ್ತಿದ್ದಾರೆ. ಸುರೇಶ್ ಬೆನರ್ಜಿ, ಕಲ್ಯಾಣಿ, ರತ್ನಮಾಲಾ ಎಂಬ ಹೊಸ ನಟನಟಿಯರಿದರಲ್ಲಿ ಅಭಿನಯಿಸುತ್ತಾರೆ. ಇವರ 'ರಾಮಶಾಸ್ತ್ರಿ' ಎಂಬ ಚಿತ್ರವೂ ತಯಾರಾಗುತ್ತಲಿದೆ.

'ಜೀವನ ನಾಟಕ'

ಎಂಬ ಗುಬ್ಬಿ ವೀರಣ್ಣನವರ ಕನ್ನಡ ಚಿತ್ರವು ಕೊಯಂಬುತ್ತೂರಿನ ಸೆಂಟ್ರಲ್ ಸ್ಟುಡಿಯೋದಲ್ಲಿ ತಯಾರಾಗುತ್ತಿದೆ. ಶಾಂತಾ ಹುಬ್ಳೀಕರ್ ಇದರಲ್ಲಿ ನಾಯಕಿ ಪಾತ್ರ ವಹಿಸುವಳು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

HALFTONL & LINE
BLOCK MAKING
UNDERTAKEN
Sharada Press
MANGALORE
ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

Regd. No. M 3460

ತಾರೀಖು 13-6-1942

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ...ಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿಮೆ ಮೊದಲ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಜ್ಜ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪ್ಪೋ. ಬೊಂಬ್ಯಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ : —

ಕಲ್ಲಿಕೋಟೆ, ಮದರಾಸು, ಬೆಂಗಳೂರು, ತ್ರಿವೇಂಡ್ರಂ, ಮಂಗಳೂರು, ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಪಿ. ಪಿ. ಪಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

dited Printed & Published by the A. S. Kamath at Sharada Press, Car Street, Mangalore.

ಸ್ವದೇಶಾಭಿಮಾನಿ

ESTD SWADESHABHIMANI 1906

[ಸಂಪುಟ 36] ತಾರೀಕು 19—6—1942 [ಸಂಚಿಕೆ 25]

ಸುಭಾಸಬೋಸರು ಬಳ್ಳೇರಿಯದಲ್ಲಿ ಬಂದಿಳಿದರು?

'ಹಿಟ್ಲರ್ ಮುಸಲನಿಗಳನ್ನು ಭೇಟಿಮಾಡಿಕೊಂಡು, ಸುಭಾಸಬೋಸರು ಬಳ್ಗೇರಿಯದಲ್ಲಿ ಬಂದಿಳಿದಿರುವರು'

—ಹೀಗೆಂದು ಲಂಡನಿನಿಂದ ಈಗ ಹೊಸತೊಂದು ವಿಚಿತ್ರವೂ ವಿಶೇಷವೂ ಆದ ಸುದ್ದಿ ಬಂದಿದೆ' ಸುಭಾಸಭೋಸರು ಕಲ್ಕತ್ತದ ತಮ್ಮ ಮನೆಯಿಂದ ಅದೃಶ್ಯರಾದ ಮೇಲೆ, ಹರಡಲಾದ ಹಲವಾರು ಸುದ್ದಿಗಳಲ್ಲಿ ಇದು ಇತ್ತೀಚೆಯದು'

ಅದೃಶ್ಯರಾದ ಮೇಲೆ

ಒಂದು ಮಂಗಳ ಪ್ರಭಾತದಲ್ಲಿ ಸುಭಾಸಬಾಬು ಕಲ್ಕತ್ತದಿಂದ ಅದೃಶ್ಯರಾಗಿ ಹೋದರು' ಆ ಮೇಲೆ ಭಾರತೀಯರಾರೂ ಅವರನ್ನು ಕಂಡಿಲ್ಲ, ಹಲವು ಸಮಯದ ವರೆಗೆ ಅವರು ಅದೃಶ್ಯರಾದ ವಿಷಯ ಪತ್ರಿಕೆಗಳಲ್ಲಿ ಜನತೆಯಲ್ಲಿ ನಾನಾ ವಿಧದ ವಾದ ವಿವಾದಗಳುಂಟಾದವು' ಅನೇಕರು ಅವರು ವೀರ ವಿರಕ್ತರಾಗಿ ಹಿಮಾಲಯದತ್ತ ಯೋಗಾಭ್ಯಾಸಕ್ಕೆ ತೆರಳಿರುವರೆಂದು ಊಹಿಸಿದರು ಅದಕ್ಕೆ, ಸುಭಾಸರು ಬಾಲ್ಯದಿಂದಲೇ ವೈರಾಗ್ಯದ ಕಡೆ ಆದರ ಅಕ್ಕರೆ ತೋರಿಸುತ್ತಿದ್ದ ವಿಷಯವನ್ನು ಆಧಾರವಾಗಿಟ್ಟು ವಾದಿಸಿದರು' ಇನ್ನು ಕಲವರು ಯಾವುದೋ ಒಂದು ಜಪಾನೀ ಹಡಗು ಕಲ್ಕತ್ತ ಬಂದರವನ್ನು ಬಿಟ್ಟು ಹೊರಟಿದ್ದು ಅದರಲ್ಲಿ ಅವರು ಪರದೇಶಕ್ಕೆ ಎಂದರೆ ಜಪಾನಿಗೆ ತೆರಳಿದರೆಂದು ತರ್ಕಿಸಿದರು ಅದಕ್ಕಾಗಿ ಅವರು ಅದೃಶ್ಯರಾಗುವ ಒಂದು ವಾರಗಳ ತನಕ ತನ್ನ ಮನೆಯೊಳಗೆ ಒಂದು ಕೋಣೆಯಲ್ಲಿದ್ದು ಆ ಕೋಣೆಗೆ ಯಾರೂ ಬರಕೂಡದೆಂದು ನಿಯಮಮಾಡಿದ್ದು, ಹಾಗೆ ನಿಯಮ ಮಾಡಿದ್ದೆಂದರೆ ತಾನು ತಪ್ಪಿಸಿಹೋಗುವ ಜಪಾನೀ ಹಡಗು ಶತ್ರು ರಾಷ್ಟ್ರದಿಂದ ಸುರಕ್ಷಿತವಾಗಿ, ಸ್ವಸ್ಥಾನವನ್ನು ಸೇರಲು ಅವಕಾಶ ಕೊಡುವಂತಾಗಿತ್ತೆಂದೂ ಆಧಾರಗಳನ್ನು ಕೊಟ್ಟರು ಇನ್ನು ಕೆಲವರು ಸುಬಾಸಬಾಬು ಕಲ್ಕತ್ತದಲ್ಲಿಯೇ ಎಲ್ಲಾದರೂ ತಲೆಮರೆಸಿರಬೇಕೆಂದು ವಿಚಾರಿಸಿದರು, ಏಕೆಂದರೆ ಅವರ ಮೇಲೆ ಎರಡು ಮೂರು ಆರೋಪಗಳಿದ್ದು ತನ್ನ ಶರೀರ ಸ್ವಾಸ್ಥ್ಯವಿಲ್ಲದೀಕಾಲದಲ್ಲಿ ತಿರುಗಿ ಸೆರೆಮನೆ ಸೇರಿ ಸಂಕಷ್ಟಕ್ಕೊಳಗಾಗುವುದು ಬೇಡವೆಂದು ಗ್ರಹಿಸಿ ಎಲ್ಲಿಯೋ ಬಂಗಾಳದಲ್ಲಿ ಇಲ್ಲವೇ ಭಾರತದ ಬೇರಾವುದೋ ಗುಪ್ತಸ್ಥಳವೊಂದರಲ್ಲಿ ತಲೆ ಮರೆಸಿಕೊಂಡಿರಬೇಕೆಂದು ಕತೆಕಟ್ಟಿದರು' ಇನ್ನು ಕೆಲವರು ಸುಬಾಸಬಾಬು ಆತ್ಮಹತ್ಯೆಮಾಡಿಕೊಂಡಿರಬೇಕೆಂದೂ ನಂಬಿದ್ದರು'

ಅಂತೂ ಹೀಗೆ ಹಲವು ತರದ ವಿಚಾರಗಳು ಸಂಶಯ ಸಾವಿರಗಳು ತಲೆದೋರಿದವು' ಯಾರೂ ಯಾವುದನ್ನೂ ನಂಬುವಂತೆಯೂ ನಂಬದಂತೆಯೂ ಇರಲಿಲ್ಲ' ತಮತಮಗೆ ಬೇಕಾದಂತೆ, ತಮ್ಮತಮ್ಮ ಅಭಿರುಚಿಯಂತೆ ಜನರು ಬೋಸರ ವಿಷಯ ಕತೆಕಟ್ಟುವುದು ಬೆಳೆಯುತ್ತಾ ಬಂತು, ಅಷ್ಟರಲ್ಲಿ ಬೋಸರು ಬ್ರಿಟಿಷ್ ದ್ವೇಷದಿಂದ ಶತ್ರುಪಕ್ಷಕ್ಕೆ ಸೇರಿಕೊಂಡಿರುವರೆಂಬ ಪ್ರಚಾರವೂ ಸಾಗಿತ್ತು

ಹಿಟ್ಲರ್—ಮುಸಲನಿಗಳನ್ನು ಭೇಟಿಯಾದರಂತೆ!

ಲಂಡನ್ ಸುದ್ದಿ ಹೀಗೆಂದು ಸಾರುತ್ತದೆ.

ಮೃತರಾಗಿ ಬದುಕಿದರು?

ಹೀಗೆ ನಾನಾ ಊಹೆಗಳು ವಾತಾವರಣದಲ್ಲಿ ತುಂಬಿಕೊಂಡಿದ್ದಂತೆ ಒಂದು ದಿನ ಅಕಸ್ಮಾತ್ತಾಗಿ ಅವರು ಟೋಕಿಯೋದಲ್ಲಿ ವಿಮಾನ ಸಂಚಾರ ಮಾಡುತ್ತಿದ್ದಾಗ, ವಿಮಾನ ಘಾತದಿಂದ ಮಡಿದರೆಂಬ ಮರ್ಮಾಘಾತ ವಾರ್ತೆ ಹರಡಲ್ಪಟ್ಟಿತು' ವಿಜಿ ಮೂಲಕ ದೊರಕಿತೆಂದು ಲಂಡನ್‌ನಿಂದ ಈ ಸುದ್ದಿ ಬಂದಿತು' ಈ ವಾರ್ತೆ ಸತ್ಯವಲ್ಲವೆಂದೂ ಸ್ವತಃ ಸುಭಾಸಬೋಸರೇ ಟೋಕಿಯೊ ರೇಡಿಯೋದಿಂದ ತಾನು ಜೀವಂತನಾಗಿರುವೆನೆಂದು ಹೇಳುತ್ತಿರುವರೆಂದೂ ಕೆಲದಿನಗಳಲ್ಲಿ ಅದರ ವಿರುದ್ಧ ಸುದ್ದಿ ಘಸರಿಸಿತು.

ಕಿಯೊ ಮತ್ತು ರಶ್ಯಾ ಮೂಲಕ ಬಂದರೆಂದು ಹೇಳಲಾಗಿತ್ತು, ಅವರು ರಶ್ಯದ ಮೇಲೆ ಬಂದಾಗ ರಶ್ಯವೂ ಜರ್ಮನಿಯೂ ಮಿತ್ರತ್ವದಿಂದಲೇ ಇದ್ದು, ಬೋಸರು ಭಾರತದಿಂದ ಅದೃಶ್ಯರಾದ ಮತ್ತು ಪೆಸಿಫಿಕಿನಲ್ಲಿ ಜಪಾನೀ ಕಾರ್ಯವು ಆರಂಭವಾದ ಕಾಲದೊಳಗೆ ಬೋಸರು ಬ್ರಿಟಿಷಿನ ವಿರೋಧಮಾಡಿದ ಬ್ರಾಡ್‌ಕಾಸ್ಟ್ ಭಾಷಣಗಳೆಲ್ಲವೂ ಬರ್ಲಿನ್ ರೇಡಿಯೋದಿಂದಲೇ ನಡೆದುವೆಂದೂ, ಅದೆ ಸ್ವತಂತ್ರ ಹಿಂದುಸ್ತಾನ್ ಸ್ಟೇಶನ್ ಎನಿಸಿಕೊಂಡಿತ್ತೆಂದೂ, ಜಪಾನು ಅಕ್ಷರಾಷ್ಟ್ರಗಳ ಒಪ್ಪಂದದಂತೆ ಅಕ್ಷ ರಾಷ್ಟ್ರಗಳಿಗೆ ಸಂಪೂರ್ಣ ಸಹಾಯ ಮಾಡುವ ಬದಲು ತನ್ನ

ಬೇರೆಯೇ ರೂಪತಾಳಿದ ಎಂದರೆ ಬೋಸರು ಜಗತ್ತಿನ ಸರ್ವಾಧಿಕಾರಿಗಳೊಡನೆ, ಹಿಟ್ಲರ್ ಮುಸಲನಿಗಳೊಡನೆ ಮಾತನಾಡಿ ವಿಚಾರ ವಿನಿಮಯ ಮಾಡಿರಬಹುದೆಂದೂ, ಆ ಮೇಲೆ ಅವರು ಈಗ ಬಳ್ಗೇರಿಯಕ್ಕೆ ಬಂದಿಳಿದಿರುವರೆಂದೂ ಹೇಳಲಾಗಿದೆ'

ಭಾರತದ ಪ್ರಮುಖ ಮುಂದಾಳುವೆನಿಸಿ, ಹಲವು ಮಂದಿಗೆ ಆದರ್ಶ ಪುರುಷರೆನಿಸಿ, ಯುವಕ ಜನಾಂಗದ ಸ್ಫೂರ್ತಿಮೂರ್ತಿಯೆನಿಸಿ ಮೆರೆದಿದ್ದ ಸುಭಾಸರು ಇಂದು ಹೀಗೆ ಹಲವು ತರದ ಅಭ್ಯಾಸಕ್ಕೆ ಈಡಾಗಿದ್ದಾರೆ ಹರಡಲಾದ ಸುದ್ದಿಗಳನ್ನು ಮಾತ್ರ ನಾವಿಲ್ಲಿ ಸಂಕ್ಷೇಪವಾಗಿ ಕೊಟ್ಟಿದ್ದೇವೆ ಇದರ ಕುರಿತು ನಾವು ಏನೊಂದೂ ಟೀಕೆ ಮಾಡಲು ಸಮರ್ಥರಲ್ಲ. ಅಂತೂ ಸುಭಾಸಬೋಸರು ಈಗ ಹಲವರ ದೃಷ್ಟಿಗೆ ಮಾಯಾಮನುಷ್ಯರಾಗಿದ್ದಾರೆ'

ಜರ್ಮನಿಯಲ್ಲಿ ಕೈದಿ?

ಅದು ಹಾಗೆ ಸಂಶಯದಲ್ಲೇ ಇರುವಾಗ, ಸುಬಾಸರು ಜರ್ಮನಿಯಲ್ಲಿ ಕೈದಿಯಾಗಿರುವರೆಂದು ಮತ್ತೊಂದು ಪ್ರಚಾರವಾಣಿ ಕೇಳಿಬಂತು, ಇದು ಅಮೆರಿಕದ ಪತ್ರಿಕಾ ಬಾತ್ಮೀದಾರನೊಬ್ಬನು ಜೂರಿಕ್‌ನಿಂದ ವಾಶಿಂಗ್‌ಟನಿಗೆ ಕೇಬ್‌ಲ್ ಮಾಡಿದನೆಂದು ಹೇಳಲಾದ ಸುದ್ದಿ. ಈ ಸುದ್ದಿಯಂತೆ ಬೋಸರು ಬರ್ಲಿನಿಗೆ ಟೋ

ಸ್ವಂತ ಆಕ್ರಮಣ ಕಾರ್ಯವನ್ನೇ ಮಾಡುತ್ತಿರುವುದರಿಂದ ಬೋಸರನ್ನು ಜಪಾನಿಗೆ ಕಳುಹಿಸಲು ಜರ್ಮನಿಗೆ ಇಷ್ಟವಿಲ್ಲವೆಂದೂ ಹಾಗಾಗಿ ಬೋಸರು ಜರ್ಮನಿಯಲ್ಲಿ ಕೈದಿಯಾಗಿರುವರೆಂದೂ ಆ ವಾರ್ತೆಯಲ್ಲಿ ಹೇಳಲಾಗಿತ್ತು!

ಮೂರನೆಯ ಅವೃತ್ತಿ!

ಇದೀಗ ಬೋಸರ ಸುದ್ದಿಯ ಮೂರನೆಯ ಅವೃತ್ತಿ ಪ್ರಕಟಿಸಲದಂತೆ ಈ ಅವೃತ್ತಿಯಲ್ಲಿ ಸುದ್ದಿ

ಈ ವರ್ಷದ ಮಳೆಯ ಯೋಗಗಳು

ಪ್ರಸಿದ್ಧ 'ಕೇಸರಿ' ಪತ್ರಿಕೆಯ ಸಂಪಾದಕರಾದ ಶ್ರೀ ಜನಾರ್ದನ ಸಹಸ್ರಬುದ್ಧೆಯವರು ಈ ವರ್ಷದ ಮಳೆಯ ಯೋಗಗಳನ್ನು ಪ್ರಕಟಿಸಿದ್ದಾರೆ ಇದೇ ವರ್ಷದ ರವಿ ಮತ್ತು ಹರ್ಷಲ ಇವೆರಡೂ ಗ್ರಹಗಳು ವೃಷಭ ರಾಶಿಯಲ್ಲಿ ಯುತಿಯಲ್ಲಿವೆ ಅದೇ ಪ್ರಕಾರ ರಾಹು ಸಿಂಹರಾಶಿಯಲ್ಲಿಯೂ, ಕೇತು ಕುಂಭ ರಾಶಿಯಲ್ಲಿಯೂ ಇರುತ್ತಾರೆ, ಈ ಸ್ಥಿತಿ ಮಳೆಗೆ ಅನುಕೂಲವಿಲ್ಲ ಅದಾಗ್ಯೂ ಇತರ ಗ್ರಹಗಳ ಯೋಗದಿಂದ ಮಳೆ ಬೀಳುವ ಯೋಗವುಂಟು ಜ್ಯೇಷ್ಠ ಕೃಷ್ಣ ೬ ಷಷ್ಠಿಗೆ ಭುಧಾಸ್ತ ಉಂಟು ಆದರಿಂದ ಮಳೆ ಸುಮಾರಿಗೆ ಮಳೆಗಾಲ ಪ್ರಾರಂಭವಾದೀತು ಗುರುಯುತಿ ನಿಜ-ಜ್ಯೇಷ್ಠ ಶುಕ್ಲ ೧೩ಗೆ ಉಂಟು ಆ ಸಮಯ ಮಳೆ ರಭಸದಿಂದ ಬೀಳುವುದು ಸಾಧಾರಣ ನಿಜ ಜ್ಯೇಷ್ಠ ಕೃ। ೩ಗೆ ವರೆಗೆ ಚಲೋ ಮಳೆ ಬೀಳುವುದು ನಿಜ ಜ್ಯೇಷ್ಠ ಕೃ। ಪಕ್ಷದಲ್ಲಿ ಗುರು ಉದಯ ಹೊಂದುತ್ತಾನೆ ಇದು ಮಳೆಗೆ ಅನುಕೂಲವಾದ ಯೋಗ ಆಷಾಢ ಶು। ದಲ್ಲಿ ಬುಧಾಸ್ತ ಉಂಟು ಆಗಲೂ ಚಲೋ ಮಳೆ ಬೀಳುವುದು ಆಷಾಢ ಕೃಷ್ಣ ಪಕ್ಷದಲ್ಲಿಯೂ ಸಾಧಾರಣ ಮಳೆ ಬೀಳುವ ಯೋಗ ಉಂಟು. ಶ್ರಾವಣ ಶು। ಪಕ್ಷದಲ್ಲಿ ಮಳೆ ಕಡಿಮೆಯಾಗಿ ಭಾದ್ರಪದ ಕೃಷ್ಣ ಪಕ್ಷದಲ್ಲಿ ೧೦ರ ಸುಮಾರಿಗೆ ಇರುವ ಕರ್ಕ-ಸಂಕ್ರಮಣ ಕಾಲದ ತನಕ ಮಳೆಗೆ ಜೀವವಿಲ್ಲ ಕರ್ಕ-ಸಂಕ್ರಮಣ ನಂತರ ಜಡಿ ಮಳೆ ಬೀಳುವದು ಆಶ್ವಿನ ಮಾಸದಲ್ಲೂ ಮಳೆ ಬೀಳುವದು, ಕಾರ್ತಿಕ ಮಾಸದಲ್ಲಿ ಹಲಕೆಲವು ವೃಷ್ಟಿಗಳು ಬೀಳುವವು. ಮಾರ್ಗಶೀರ್ಷ ಶುಕ್ಲದಲ್ಲಿ ಮಳೆಯು ಸಮಾಪ್ತಿ ಮಳೆ ಬೀಳುವ ತಾರೀಕುಗಳು—ಜೂನ್ ೧೩, ೧೪, ೧೬, ೧೮, ೨೧, ೨೭, ಜುಲೈ ೪, ೫, ೮, ೧೨, ೧೬, ೧೮, ೧೯, ೨೩, ೨೪, ೨೭, ೨೮, ಅಗಸ್ಟ ೨, ೬, ೮, ೧೦, ೧೧, ೧೮, ೨೪, ೨೫ ಸಪ್ಟಂಬರ ೩, ೪, ೬, ೧೦, ೧೫, ೧೬, ೨೦, ೨೮, ೪೦, ಅಕ್ಟೋಬರ ೭, ೬, ೧೦, ೧೩, ೧೪, ೧೭, ೨೮, ೨೯, ನವಂಬರ ೩, ೬, ೭, ೮, ೧೪, ೧೮, ೨೫; ಡಿಸೆಂಬರ ೫, ೧೦, ೧೧, ೨೪, ೨೫;

KANNADA ILLUSTRATED WEEKLY

ಜಪಾನಿಯರ ಮಾತುಗಳನ್ನು ನಂಬಬೇಡಿ ಜೋಕೆ!

ಅವು ಜಪಾನಿಯರ ಈಟಿಗಳಿಗೆ ದಾರಿ ಮಾಡುತ್ತವೆ

ನಿಮ್ಮ ಶತ್ರುಗಳ ಸವಿ ಮಾತುಗಳನ್ನು ನಂಬ ಬೇಡಿ! ಜೋಕೆ! ಅವರನ್ನು ಯಾರಿಂದಲೂ ಜಯಿಸಲಾಗದೆಂದು ನೀವು ಊಹಿಸುವಗೆ ಮಾಡಲು ಅವರು ಯತ್ನಿಸುವರು! ಅದನ್ನು ನಂಬ ಬೇಡಿ! ಜೋಕೆ! ಜಪಾನಿಯ ಸೈನಿಕರಿಗೆ ಇಂಡಿಯಾ ದೇಶದಲ್ಲಿ ಸಾಯಬೇಕೆಂಬ ಇಚ್ಛೆಯಿಲ್ಲ. ಆದ್ದರಿಂದ ಅವರು ನಮ್ಮ ಸ್ನೇಹಿತರೆಂದು ಪ್ರಚಾರಮಾಡುತ್ತಾರೆ. ನಮ್ಮನ್ನು ಹೆದರಿಸಿ, ನಮ್ಮನ್ನು ಕಂಗೆಡಿಸಿ, ನಮಗೆ ಬಲ ಹೀನತೆಯನ್ನುಂಟುಮಾಡುವುದಕ್ಕಾಗಿ ಅವರು ಸುಳ್ಳುಸಮಾಚಾರಗಳನ್ನು ಹರಡುತ್ತಾರೆ. ಅದು ಒಂದು ಮೋಸರಣ ಕೌಶಲ್ಯ. ಜಪಾನಿಯ ಸೈನಿಕರು ಇಂಡಿಯಾ ದೇಶದ ಮೇಲೆ ಧಾಳಿ ನಡೆಸುವಾಗ ತಮ್ಮ ಪ್ರಾಣವನ್ನು ಕಳೆದುಕೊಳ್ಳುವುದಕ್ಕೆ ಇಚ್ಛಿಸುವುದಿಲ್ಲ. ಅವರು ಜೀವಿಸಲು ಇಚ್ಛಿಸುತ್ತಾರೆ—ನಮ್ಮ ಮನೆಯಲ್ಲಿ.

ಆದರೆ ಜಪಾನಿಯರ ಸೈನಿಕರೆಲ್ಲಾ ಸಾಯುವುವರೆಂಬುವುದರಲ್ಲಿ ಸಂದೇಹವಿಲ್ಲ. ನಮ್ಮ ಸೈನಿಕರೂ, ನಮ್ಮ ಬಾಂಬುಗಳೂ, ಮತ್ತು ನಮ್ಮ ಫಿರಂಗಿಗಳೂ—ನೀವು ಸೈನ್ಯದ ಹಿಂದೆ ಧೈರ್ಯವಾಗಿ ನಿಂತು ಸಹಾಯ ಮಾಡುತ್ತಿದ್ದರೆ, ಜಪಾನಿಯರನ್ನು ಧ್ವಂಸ ಮಾಡುವುವು. 380,000,000 ಜನಗಳಿರುವ ಈ ದೊಡ್ಡ ದೇಶವನ್ನು ಜಯಿಸಲು ಯಾವಾಗಲೂ ಸಾಧ್ಯವಿಲ್ಲ—ನಾವು ಹಾಗೆ ನಿರ್ಧರಿಸಿದ್ದೇವೆ

ಚೀನಾ ದೇಶವು ಮೋಸ ಹೋಗಲಿಲ್ಲ

ಚೀಣೀಯರು ಜಪಾನಿಯರ ಪ್ರಚಾರ ಕಾರ್ಯದಿಂದ ಮೋಸ ಹೋಗಲಿಲ್ಲ ಮೊದಲು ತಮ್ಮೊಳಗೆ ತಾವೇ ಕಾದಾಡುತ್ತಿದ್ದ ಈ ಜನಾಂಗವು 5 ವರ್ಷಗಳಿಂದ ಜಪಾನಿಯರನ್ನು ಪ್ರತಿಭಟಿಸುತ್ತಿದ್ದಾರೆ ಮತ್ತು ಅವರು ಯಾವಾಗಲೂ ಜಪಾನಿಯರಿಗೆ ಅಧೀನರಾಗುವುದಿಲ್ಲ ನಾಝಿಗಳಿಗೂ ರಷ್ಯ ದೇಶದವರಿಗೂ ಮೈತ್ರತ್ವದ ಒಡಂಬಡಿಕೆಯಿದ್ದರೂ ನಾಝಿಗಳು ಅವರ ಮೇಲೆ ಬಿದ್ದರು ಆದರೆ ರಷ್ಯನರು ಮೋಸಹೋಗಲಿಲ್ಲ! ಚೀಣಾ ಮತ್ತು ರಷ್ಯಾ ದೇಶಗಳಲ್ಲಿ ನಡೆದ ಸಂಭವಗಳಿಂದ ಬುದ್ಧಿ ಕಲಿಯಿರಿ ಜಪಾನಿಯರ ಮಾತುಗಳಲ್ಲಿ ನಂಬಿಕೆಯನ್ನಿಡಬೇಡಿ



ಜಪಾನಿಯರನ್ನು ಎದುರಿಸುವುದಕ್ಕೆ— ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಬಂಗಾಳ ಕೊಲ್ಲಿಯಲ್ಲಾದ ಜನ ನಷ್ಟ

ಕಳೆದ ಎಪ್ರಿಲ್ ತಾ ೬ರಲ್ಲಿ ಬಂಗಾಲ ಕೊಲ್ಲಿಯಲ್ಲಿ ಶತ್ರುಗಳು ಮುಳುಗಿಸಿದ ಹಡಗುಗಳಲ್ಲಿದ್ದ ೧೫೦ ಮಂದಿ ನಾವಿಕರೇ ಮೊದಲಾದವರು ಸತ್ತರೆಂದು ಈಗ ತಿಳಿದುಬಂದಿದೆ

ಶ್ರೀ. ಇ ರಾಘವೇಂದ್ರರಾಯರ ರಾಜಿನಾಮೆ

ವೈಸರಾಯ್ ಕೌನ್ಸಿಲ್ ಸಿವಿಲ್ ಡಿಫೆನ್ಸ್ ಮೆಂಬರಾದ ಶ್ರೀ ಇ ರಾಘವೇಂದ್ರರಾಯರು, ತಮ್ಮ ಅನಾರೋಗ್ಯದ ಕಾರಣದಿಂದ ತಮ್ಮ ಸ್ಥಾನಕ್ಕೆ ರಾಜಿಕೊಡುವರಾಗಿ ತಿಳಿದುಬಂದಿದೆ

ಜರ್ಮನಿಯ ಪೋಲೀಸ್ ಬಲ

ಜರ್ಮನಿಯ ಗಂಡಸರ ಪೋಲೀಸ್ ಬಲಗಳು ಫ್ರಾನ್ಸ್ ನಾಡಲಾದ ಕಡೆ ಕಳುಹಿಸಲ್ಪಡಬೇಕಾದುದರಿಂದ ಜರ್ಮನಿಯ ಸಾಮಾನ್ಯವಾದ ಪೋಲೀಸ್ ಕಾರ್ಯಗಳಿಗಾಗಿ ಗಂಡಸರ ಬದಲು, ಹೆಂಗುಸರನ್ನು ನೇಮಿಸಬೇಕೆಂದು ಗೆಸ್ಟಪೋ ದಳದ ಅಧಿಪತಿಯ ಅಪ್ಪಣೆ

ಹೂರರ ಇನ್ನೊಂದು ಘೋರ ಕೃತ್ಯ

ಸಿಂಧ ಪ್ರಾಂತದ ಸಬ್ ಡಿವಿಜನಲ್ ಆಫೀಸರ್ (ಪಿ. ಡಬ್ಲ್ಯು, ಡಿ)ರಾದ ಶ್ರೀ ವಿ ಎನ್. ವಾಚಣಿ ಎಂಬವರನ್ನು ಹೂರರು ಒಂದು ಕಡೆ ಕಾದು ಕುಳಿತು ಗುಂಡು ಹಾರಿಸಿ ಕೊಂದರು.

ಬಹಿಷ್ಕಾರ

ಪಂಜಾಬ್ ಸರಕಾರವು ಲಾಹೋರಿನ ವಾರಪತ್ರಿಕೆಯಾದ ಪ್ರಕಾಶದ ಕಳೆದ ಮೇ, ತಾ. ೨೫ರ ಯಾವತ್ತೂ ಪ್ರತಿಗಳನ್ನೂ ಅದರ ಭಾಷಾಂತರ ಇತ್ಯಾದಿಗಳನ್ನೂ ಬಹಿಷ್ಕರಿಸಿ ಸಂಬಂಧಪಟ್ಟವರನ್ನು ವಿಚಾರಣೆಗೆ ಗುರಿಪಡಿಸಲಿದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

19—6—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೯—೬—೧೯೪೨]

ರಶ್ಯನ್ ರಣರಂಗದಲ್ಲಿ ಸೆಬಸ್ಟಪೋಲನ್ನು ಆಕ್ರಮಿಸುವುದಕ್ಕಾಗಿ ಜರ್ಮನರು ಹೂಡಿದ ಹೋರಾಟವು ಅತ್ಯಂತ ಪ್ರಚಂಡವಾಗಿದೆ. ಸೆಬಸ್ಟಪೋಲ್ ನಗರವು ಬಾಂಬು ಫಿರಂಗಿಗಳ ಪೆಟ್ಟಿನಿಂದ ಜರ್ಜರಿತವಾಗಿದೆ ಜರ್ಮನರು ಅಪಾರ ಹಾನಿಯನ್ನೂ ಲೆಕ್ಕಿಸದೆ ಮುಂದುವರಿದಿದ್ದಾರೆ ಸೆಬಸ್ಟಪೋಲಿನ ಹೊರವಲಯದ ವ್ಯೂಹವನ್ನು ಜರ್ಮನರು ಭೇದಿಸಿದರೆಂದು ಸುದ್ದಿಯಿತ್ತು. ಅಂತೂ ಎಲ್ಲಾ ಕಡೆಗಳಲ್ಲಿಯೂ ಯುದ್ಧ ಜೋರಾಗಿದೆ. ರಶ್ಯನರ ಪ್ರತಿಭಟನೆಯು ಬಲವಂತವಾಗಿದೆ. ಕ್ರಿಮಿಯಾದಲ್ಲಿಯೂ ಕಾಳಗ ಪ್ರಬಲವಾಗಿರುವುದು ಸ್ಮೋಲೆನ್‌ಸ್ಕ್ ಪ್ರದೇಶದಲ್ಲಿ ಹೋರಾಟ ನಡೆಯುತ್ತಲೇ ಇದೆ ಕಾಲಿನಿನ್ ಪ್ರಾಂತದಲ್ಲಿ ಜರ್ಮನರು ಪ್ರಚಂಡ ಧಾಳಿ ಮಾಡಿರುವರು ಲೆನಿನ್‌ಗ್ರಾಡ್ ರಣರಂಗದಲ್ಲಿ ಅನೇಕ ಜರ್ಮನರು ಹತರಾಗಿದ್ದಾರೆ ಖಾರ್ಕೋವಿನಲ್ಲಿಯೂ ಜರ್ಮನರು ಶತ್ರುಗಳನ್ನಿದಿರಿಸುತ್ತಿರುವರೆಂದು ತಿಳಿದಿದೆ ರಶ್ಯದಲ್ಲಿ ಯುದ್ಧ ಸಾಮಗ್ರಿಗಳ ಉತ್ಪಾದನೆ ತೀವ್ರವೇಗದಂದ ಆಗುತ್ತಿದೆ ಕಾಕಸಸ್ ಕರಾವಳಿಯನ್ನು ಆಕ್ರಮಿಸಲು ಜರ್ಮನರು ಕರ್ಚ್ ಸಾಮುದ್ರಧುನಿಯನ್ನು ದಾಟಿರುವರೆಂದು ವಿಚಿಯ ಸುದ್ದಿ ಅಂತೂ ಜರ್ಮನರು ಕಾಕಸಸ್ ವಶಪಡಿಸಿಕೊಳ್ಳಲು ಅತ್ಯಂತ ಪ್ರಯತ್ನ ಮಾಡುತ್ತಿದ್ದಾರೆ. ಕಾಕಸಸಿನ ಭೂಖನಿಜ ಸಂಪತ್ತಿನ ಮೇಲೆ ಬಹು ಕಾಲದಿಂದಲೇ ಹಿಟ್ಲರನ ದೃಷ್ಟಿಯಿರುವುದು

ಕಾಕಸಸಿಗಾಗಿ ಕಾಳಗ?

ಕಾಕಸಸ್ ಪ್ರಾಂತವು ರಶ್ಯಕ್ಕೆ ಸೇರಿದ್ದು ಇದು ಯೂರೋಪು ಮತ್ತು ಏಸ್ಯದ ಮಧ್ಯದಲ್ಲಿರುವ ಪ್ರಾಂತ ಕೆಸ್ಪಿಯನ್ ಸಮುದ್ರದಿಂದ ಕರ್ಚ್‌ಭೂಶಿರವನ್ನು ದಾಟಿ ಆಯೋವ್ ಸಮುದ್ರದವರೆಗೆ ಈ ಪ್ರಾಂತವು ಚಾಚಿದೆ ಇದು ಸುಮಾರು ಸಾವಿರ ಮೈಲು ಉದ್ದ, ಮೂವತ್ತರಿಂದ ನೂರನಾಲ್ವತ್ತೈದು ಮೈಲು ಅಗಲವುಳ್ಳ ಭೂಪ್ರದೇಶವಾಗಿದೆ ಇಲ್ಲಿ ತೈಲ ಸಂಪತ್ತು ಬಹಳವಿದೆ ಅಲ್ಲದೆ ಅನೇಕ ಭೂಖನಿಜಗಳು ಹುಟ್ಟುತ್ತವೆ. ಇಲ್ಲಿನ ತೈಲವನ್ನು ರೊಸ್ಟೋವ್ ಮೂಲಕ ಸಾಗಿಸಿ ರಶ್ಯನರು ತಮ್ಮ ಕೈಗಾರಿಗಳ ಸಲುವಾಗಿ ಉಪಯೋಗಿಸುತ್ತಿರುವರು ಯುಕ್ರೈನಿನ ಫಲವತ್ತಾದ ಭೂಮಿಯನ್ನು, ಪ್ರಸಿದ್ಧವಾದ ಅನೇಕ ಕೈಗಾರಿಕೆಯ ಕೇಂದ್ರಗಳನ್ನು ವಶಪಡಿಸಿಕೊಂಡು, ಅಪಾರ ಸಹನೆಯಿಂದ ಸಂಕಷ್ಟಗಳನ್ನೆದುರಿಸಿ ನಿಂತಿರುವ ಜರ್ಮನರು ಎಷ್ಟೊಂದು ಗಂಡಾಂತರವನ್ನನುಭವಿಸಬೇಕಾದರೂ ಕಾಕಸಸನ್ನು ಸ್ವಾಧೀನ ಮಾಡದೆ ಬಿಡಲಾರರು ಜರ್ಮನರ ಈ ಉದ್ದೇಶವನ್ನರಿತು ರಶ್ಯನರೂ ಬ್ರಿಟಿಷರೂ ತಮ್ಮ ಸೈನ್ಯಸಿದ್ಧತೆ ಮಾಡಿಕೊಂಡು ಕಾಕಸಸನ್ನು ಕಾಪಾಡುತಿದ್ದಾರೆ ಮುಂದಿನ ಕಾಕಸಸ್ ಕಾಳಗದಲ್ಲಿ ಕ್ರಿಮಿಯಾದ ರಶ್ಯನ್ ನಿಲ್ದಾಣಗಳಿಂದ ತೊಂದರೆ ಬರಕೂಡದೆಂದು ಜರ್ಮನರು ಸೆಬಸ್ಟಪೋಲನ್ನು ಮೊದಲು ಮುಗಿಸುವ ಸಾಹಸ ಮಾಡುತಿದ್ದಾರೆ

ಲಿಬಿಯದ ಭವಿಷ್ಯ?

ಲಿಬಿಯದಲ್ಲಿ ಬೀರ್‌ಹಕೀಮಿನ ಬಗ್ಗೆ ೧೬ ದಿನಗಳ ತನಕ ಭೀಕರ ಸಂಗ್ರಾಮ ನಡೆದು ಮಿತ್ರ ಪಕ್ಷದವರು ಅಲ್ಲಿಂದ ಹಿಂದೆ ಸರಿದಿರುವರೆಂದೂ, ಜರ್ಮನರು ಅದನ್ನು ಆಕ್ರಮಿಸಿರುವರೆಂದೂ ಸುದ್ದಿ ಬಂದಿದೆ ಈ ಕಾಳಗದಲ್ಲಿ ಟೆಂಕ್, ಫಿರಂಗಿ ಡೈವ್ ಬಾಂಬರುಗಳೆಲ್ಲಾ ಉಪಯೋಗಿಸಲ್ಪಟ್ಟವು. ಈ ಯುದ್ಧದಲ್ಲಿ ಸ್ವತಂತ್ರ ಫ್ರೆಂಚ್ ಸೈನಿಕರು ಮತ್ತು ಭಾರತೀಯ ಮೋಟರ್ ದಳದವರು ಪ್ರಶಂಸನೀಯ ಪರಾಕ್ರಮವನ್ನು ತೋರಿಸಿದರು ಶತ್ರುಗಳ ಬಲವಾದ ಹೊಡೆತಕ್ಕೆ ಯಾರ ಸಹಾಯವೂ ಎದುರಾಗಲಿಲ್ಲ ಜರ್ಮನರು ದುರ್ಗ ರಕ್ಷಕರ ಮೇಲೆಯೇ ಬಾಂಬು ಸುರಿಸಿ, ಬೀರ್ ಹಕೀಮನ್ನು ಸ್ವಾಧೀನ ಮಾಡಿಕೊಂಡರು ಬೀರ್ ಹಕೀಮ್ ಪತನವಾದ ಬಳಿಕ ತೋಬ್ರುಕ್ ಕಾಳಗ ಜೋರಾಗಿದೆ ತೋಬ್ರುಕ್‌ನಲ್ಲಿ ನಡೆಯುತ್ತಿರುವ ಇಂದಿನ ಭೀಷಣ ಯುದ್ಧವನ್ನು ಪರೀಕ್ಷಿಸಿದರೆ ಅದರ ಅದೃಷ್ಟ ಬೇಗನೇ ನಿಶ್ಚಯವಾಗಲಿದೆಯೆಂದು ತಿಳಿದುಬರುವುದು ಲಿಬಿಯದ ಯುದ್ಧವು ಮಧ್ಯ ಪೂರ್ವ ಹಾಗೂ ಆಫ್ರಿಕದ ಮೇಲೆ ಪರಿಣಾಮವನ್ನು ಹುಟ್ಟಿಸುವಂತಾದ್ದಾಗಿದೆ ರಶ್ಯನರು ಕಾರ್ಕೋವ್ ಕ್ರಿಮಿಯಗಳನ್ನು ಕಳಕೊಂಡರೆ ಎಷ್ಟರಮಟ್ಟಿಗೆ ನಷ್ಟ ಕಷ್ಟಗಳಿಗೀಡಾಗುವರೋ ಅಂತೆಯೇ ಬ್ರಿಟಿಷರು ಲಿಬಿಯದ ಕದನದಲ್ಲಿ ಸೋತರೂ ಹಾನಿಗೀಡಾಗುವರು ಲಿಬಿಯದ ಭವಿಷ್ಯವು ಬೇಗನೇ ನಿರ್ಧಾರವಾಗುವಷ್ಟು ಭೀಕರವಾಗಿ ಸದ್ಯದ ಸಂಗ್ರಾಮವು ಸಾಗುತ್ತಿದೆ

ಸಮರ ಭೂಮಿಯ ಸಂಚಾರ

ಆಂಗ್ಲ ರಶ್ಯ ಒಪ್ಪಂದ

ರಶ್ಯಲಿಬಿಯ ರಣರಂಗಗಳಲ್ಲಿ ಪ್ರಚಂಡ ಸಂಗ್ರಾಮವನ್ನು ಸಾಗಿಸುತ್ತಿರುವ ಜರ್ಮನರನ್ನು ಹಣ್ಣುಗೊಳಿಸುವ ಹರದಿಂದಲೋ ಎಂಬತೆ ಈಗ ಆಂಗ್ಲ ರಶ್ಯನರ ಒಂದು ಒಪ್ಪಂದವು ಸಹಿಯಾಗಿದೆ ಈ ಒಪ್ಪಂದದ ಕರಾರಿನಂತೆ ಮುಂದಿನ ಇಪ್ಪತ್ತು ವರ್ಷಗಳ ವರೆಗೆ ಉಭಯ ರಾಷ್ಟ್ರಗಳು ಅನ್ಯೋನ್ಯ ಮೈತ್ರಿಯಿಂದ ಒಮ್ಮತದಿಂದಿರಬೇಕು, ಯೂರೋಪಿನಲ್ಲಿ ಶತ್ರುವನ್ನು ಎದುರಿಸಿ ಹಣ್ಣಿಗೆ ತರಲು ದ್ವಿತೀಯ ರಣಕ್ಷೇತ್ರವೊಂದನ್ನು ತೆರೆಯಬೇಕು ಹಾಗೂ ಇಂದಿನ ಯುದ್ಧದಲ್ಲಿ ಶತ್ರುವನ್ನು ಸೋಲಿಸುವ ಕಾರ್ಯದಲ್ಲಿ ಉಭಯ ರಾಷ್ಟ್ರದವರೂ ಒಂದೇ ಧೋರಣೆಯಿಂದ ಸಾಧ್ಯ ಸಾಹಸವೆಲ್ಲವನ್ನೂ ಸಾಧಿಸಬೇಕು ಮಾತ್ರವಲ್ಲದೆ ಯುದ್ಧಾನಂತರದ ಹೊಸ ಜಗತ್ತಿನಲ್ಲಿ ಸರ್ವತ್ರ ಶಾಂತಿ ನೆಲೆಗೊಳ್ಳುವಂತೆ ಸಂಯುಕ್ತ ಕಾರ್ಯ ಕೈಕೊಳ್ಳಬೇಕು, ಮತ್ತು ಜಗತ್ತಿನಲ್ಲಿ ಅನಾಕ್ರಮಣ ಧೋರಣೆಯು ನೆಲೆಗೊಳ್ಳಬೇಕು ‘ ಎಂಬೀ ವಿಷಯಗಳು ಒಪ್ಪಂದದ ಮುಖ್ಯ ಅಂಶಗಳಾಗಿವೆ ಈ ಒಪ್ಪಂದವನ್ನು ಆಂಗ್ಲ–ರಶ್ಯನ್ ಪತ್ರಿಕೆಗಳು ಬಹಳ ಸ್ವಾಗತಿಸಿವೆ ಮಿತ್ರಪಕ್ಷದ ಮುಂದಾಳುಗಳೆಲ್ಲಾ ಹೊಗಳಿದ್ದಾರೆ ಅಂತೂ ಎರಡು ರಾಷ್ಟ್ರಗಳಿಗೂ ಸಮಾನ ಶತ್ರುವಾದ ಜರ್ಮನಿಯನ್ನು ಎದುರಿಸಲು ಇಂತಹ ಅನ್ಯೋನ್ಯ ಸಹಾಯ ಸಹಕಾರ ಒಪ್ಪಂದವಾಗುವುದು ಅವಶ್ಯವೆಂಬುದನ್ನು ಎಲ್ಲರೂ ಒಪ್ಪಲೇ ಬೇಕು ಆಂಗ್ಲ ರಶ್ಯಗಳ ಒಪ್ಪಂದಕ್ಕೆ ಅಮೆರಿಕವೂ ತನ್ನ ಸಹಾಯ ನೀಡಲು ಸಿದ್ಧವಾಗಿ ಮುಂದೆ ಬಂದಿದೆ ರಶ್ಯದ ವಿದೇಶ ಮಂತ್ರಿ ಮೋಲೋಟೋವ್ ಲಂಡನಿಗೆ ಹೋಗಿ, ಒಪ್ಪಂದದ ಕರಾರಿಗೆ ಸಹಿ ಹಾಕಿದವನೇ, ಅಲ್ಲಿಂದ ಅಮೆರಿಕಕ್ಕೂ ತೆರಳಿ ಅಧ್ಯಕ್ಷ ರೂಸ್‌ವೆಲ್ಟರನ್ನು ಸಂದರ್ಶಿಸಿ ಸ್ನೇಹಮಯ ವಿಚಾರ ವಿನಿಮಯ ಮಾಡಿಕೊಂಡಿರುವನು ಬ್ರಿಟನೂ ರಶ್ಯದೊಡನೆ ಈ ಒಪ್ಪಂದವನ್ನು ಮಾಡಿಕೊಳ್ಳುವಾಗ, ಆ ವಿಷಯವನ್ನು ಅಮೆರಿಕಕ್ಕೆ ತಿಳಿಸಿಯೇ ಕೆಲಸ ಮುಂದುವರಿಸಿರುತ್ತದೆ ಈ ಎಲ್ಲಾ ವಿವರಗಳನ್ನು ನಿರೀಕ್ಷಿಸಿದರೆ ಒಪ್ಪಂದದ ಭವಿಷ್ಯವು ಒಳ್ಳೆಯದಾಗುವುದೆಂಬುದಕ್ಕೆ ಅಡ್ಡಿಯಿಲ್ಲ

ದ್ವಿತೀಯ ರಣಕ್ಷೇತ್ರ

ಯೂರೋಪಿನಲ್ಲಿ ದ್ವಿತೀಯ ರಣಕ್ಷೇತ್ರವನ್ನು ತೆರೆಯುವ ಮಾತು ಈಗ ಪುನಃ ತಲೆ ಎತ್ತಿದೆ ಇಂದು ರಶ್ಯದಲ್ಲಿ, ಲಿಬಿಯದಲ್ಲಿ ಮಾತ್ರ ಮುಂದೊತ್ತಿ ಹೋರಾಡುತಿರುವ ಜರ್ಮನರ ಸೈನ್ಯವನ್ನು, ಈ ಹಂಚಿಕೆಯಿಂದ ಚೆದರಿ ಚೆಲ್ಲಿಹೋಗುವಂತೆ ಮಾಡಿ ಅಪಜಯಗೊಳಿಸಬೇಕೆಂದು ಅಭಿಪ್ರಾಯವಾಗಿದೆ ಈ ವಿಷಯವಾಗಿ ಕಳೆದ ವರ್ಷದಿಂದಲೇ ಸ್ಟಾಲಿನ್ ವಿನಂತಿಸಿಕೊಂಡಿದ್ದಾನೆ ಈಗ ಆದ ಆಂಗ್ಲ ರಶ್ಯ ಒಪ್ಪಂದದಲ್ಲಿಯೂ ಈ ಅಂಶವು ಸೇರಿದೆ ಆದರೆ ಇದುವರೆಗೆ ದ್ವಿತೀಯ ರಣ ಕ್ಷೇತ್ರವನ್ನು ತೆರೆಯಲು ಮಿತ್ರಪಕ್ಷದವರು ಸಾಧನ ಸಾಮಗ್ರಿ ಸಿದ್ಧರಾಗಿರಲಿಲ್ಲವಾಗಿ ಇಷ್ಟು ವಿಳಂಬವಾಯಿತೆಂದೂ, ಈಗ ಸರ್ವಸಿದ್ಧತೆಯಿಂದ ಕೂಡಿಕೊಂಡು ದ್ವಿತೀಯ ರಣಕ್ಷೇತ್ರವನ್ನು ಬೇಗನೇ ಬಲಗೊಳಿಸುವರೆಂದೂ ನಂಬಲಾಗ್ತಿದೆ ಬ್ರಿಟಿಷರು ಜರ್ಮನಿ ಮೇಲೆ ಮಾಡಿದ ವೈಮಾನಿಕ ಧಾಳಿ ಆಕ್ರಮಿತ ಫ್ರಾನ್ಸಿನ ಧಾಳಿ ಇವುಗಳ ವಿಷಯದ ಪೂರ್ವಸೂಚನೆಯಂತಿದೆ. ಅಲ್ಲದೆ ಬೆಲ್ಜಿಯಂ ಗಡಿಯ ಪಿರೇನಿಜ್ ವರೆಗೆ ನಾವು ಯಾವಾಗ ಬೇಕಾದರೂ ಧಾಳಿಯಿಡುವವರಿದ್ದೇವೆಂದು ಅಲ್ಲಿನ ನಾಗರಿಕರಿಗೆ ಎಚ್ಚರಿಕೆ ಕೊಡಲಾಗಿದೆ ಈ ದ್ವಿತೀಯ ರಣಕ್ಷೇತ್ರದಲ್ಲಿ ಹತ್ತು ಲಕ್ಷ ಸೈನಿಕರು ಬಲಿಯಾಗಬೇಕಾಗುವುದೆಂದು ಪಾರ್ಲಿಮೆಂಟ್ ಸದಸ್ಯರಾದ ಪ್ರೀಜರರೆಂಬವರು ಹೇಳಿದರು ಅಂತೂ ಇದರಿಂದ ಮಿತಪಕ್ಷದವರು ಬೇಗನೇ ದ್ವಿತೀಯ ರಣಕ್ಷೇತ್ರವನ್ನು ಸಿದ್ಧಗೊಳಿಸುವ ಹಂಚಿಕೆ ಕೈಕೊಳ್ಳುವರೆಂದು ನಂಬಲಾಗಿದೆ

ಮಿಡ್‌ವೇ ಸೋಲು

ಮಿಡ್‌ವೇ ದ್ವೀಪಗಳಿಗೆ ಜಪಾನರು ಧಾಳಿಯಿಟ್ಟು ಅಲ್ಲಿ ನಡೆಸಿದ ಹೋರಾಟವು ವರ್ಣನೀಯವಾಗಿದೆ ಕೋರಲ್ ಸಮುದ್ರ ಯುದ್ಧದಂತೆ ಇದೂ ಉಭಯತರಿಗೆ ವಿಶೇಷ ಹಾನಿಯನ್ನುಂಟುಮಾಡಿದೆ ವಿಶಾಲವಾದ ಪೇಸಿಫಿಕ್ ರಣಕ್ಷೇತ್ರದಲ್ಲಿನ ಎಲ್ಲಾ ದ್ವೀಪಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಜಪಾನು ಹಂಬಲಿಸುತ್ತಿರುವುದಾದರೂ ಅದು ಅಷ್ಟೇನೂ ಸುಲಭ ಕಾರ್ಯವಲ್ಲ. ಜಪಾನು ಮೊದಲಿನ ಹೊಡೆತದಲ್ಲಿಯೇ ತನಗೆ ಸಮೀಪವಿರುವ ಮನಿಲಾ ಗಯಾಮ್ ವೇಕ್ ದ್ವೀಪಗಳನ್ನು ಗೆದ್ದುಬಿಟ್ಟಿತು. ಆದರೆ ಪೇಸಿಫಿಕ್‌ನಲ್ಲಿ ಅಮೆರಿಕದ ಕ್ಷೇತ್ರವೂ ಹೆಚ್ಚಿರುವುದರಿಂದ ಅನೇಕ ದ್ವೀಪಗಳು ಅದರ ವಶದಲ್ಲಿವೆ ಈ ದ್ವೀಪಗಳು ಜಪಾನಿಗೆ ಬಹಳ ದೂರವಿರುವುದರಿಂದ ಅಲ್ಲಿ ಮಾಡುವ ದಾಳಿಗಳು ಅಷ್ಟು ಯಶಸ್ವಿಯಾಗುತ್ತಿಲ್ಲ ಆದರೂ ಸಾಹಸಿಗಳಾದ ಜಪಾನರು ೨೫೦೦ ಮೈಲು ಅಂತರದಲ್ಲಿರುವ ಮಿಡ್‌ವೇ ದ್ವೀಪಗಳ ಮೇಲೆ ಹಾರಿಹೋಗಿ ಧಾಳಿಯಿಟ್ಟರು ಜಪಾನರ ಯುದ್ಧ ಹಡಗುಗಳು, ವಿಮಾನ ವಾಹನಗಳು, ಕ್ರೂಜರುಗಳೆಲ್ಲಾ ಈ ಧಾಳಿಯಲ್ಲಿ ಭಾಗವಹಿಸಿದವು, ಆದರೆ ಅವೆಲ್ಲಾ ಅಲ್ಲಿ ನಿರ್ನಾಮಹೊಂದಿದ ಕಾರಣ ಜಪಾನರಿಗೆ ಅಪಜಯವಾಯಿತೆಂದು ವದಂತಿ ಬಂದಿದೆ ಈ ದ್ವೀಪವನ್ನು ಸ್ವಾಧೀನಪಡಿಸಿಕೊಂಡು, ಮುಂದೆ ಪರ್ಲ್ ಬಂದರದ ಮೇಲೆ ಧಾಳಿಮಾಡಬೇಕೆಂದು ಜಪಾನರು ಆಶಿಸಿರಬಹುದು ಇಂದು ಅಪಜಯ ಹೊಂದಿದರೂ, ಅವರ ಹೋರಾಟ ಇನ್ನೂ ನಿಂತಿಲ್ಲವೆಂದು ಕೇಳಬರುತ್ತದೆ

ಚೀನದ ಹೋರಾಟ

ಚಕಿಯಾಂಗಿನ ಪ್ರಸಿದ್ಧ ವಿಮಾನ ಕೇಂದ್ರವಾದ ಚುಸೇನನ್ನು ಸ್ವಾಧೀನಪಡಿಸಲು ಜಪಾನರು ಅತ್ಯಂತ ಸಾಹಸದಿಂದ ಹೋರಾಡುತ್ತಿದ್ದಾರೆ ಚೆಕಿಯಾಂಗ್ ಮತ್ತು ಕಿಯಾಂಗ್ಸಿ ಪೂರ್ವಭಾಗದಲ್ಲಿರುವ ರೈಲ್ವೆ ಮಾರ್ಗವೊಂದನ್ನು ನಾಶಪಡಿಸಲು ಜಪಾನರ ಸೈನ್ಯ ಸಾಗುತ್ತಿದೆ ಉತ್ತರ ಕಿಯಂಗ್ಸಿಯ ಯೂಶಾನಾವನ್ನು ಚೀನರು ಪುನಃ ವಶಪಡಿಸಿಕೊಂಡರು ಚೀನರ ಮೇಲೆ ವಿಷವಾಯು ಪ್ರಯೋಗಮಾಡಲಾಗುತ್ತೆಂಬುದನ್ನು ಜಪಾನರು ಅಲ್ಲಗಳೆದಿದ್ದಾರೆ ನಾಚಿಂಗ್‌ನ ಆಗ್ನೇಯಕ್ಕಿರುವ ಟೆಂಗಕಿಯಾಂಗನ್ನು ಬಿಟ್ಟುಕೊಟ್ಟು ಚೀನೀಯರು ಹಿಂದಸರಿದಿದ್ದಾರೆ ಬ್ರಿಟಿಷ್ ಮತ್ತು ಅಮೇರಿಕನ್ ವಿಮಾನ ದಲಗಳು ಚೀನಕ್ಕೆ ಬಂದಿವೆಯೆಂದೂ ಅದರಿಂದ ಹೋರಾಟ ಹುರುಪುಗೊಳ್ಳುತ್ತಿದೆಯೆಂದೂ ಸುದ್ದಿಯಿದೆ ಅಮೆರಿಕಕ್ಕೂ ಈಶಾನ್ಯ ಏಶ್ಯಕ್ಕೂ ದಂಡೆಯಂತಿರುವ, ಜಪಾನಿನ ಮೇಲೆ ಅಮೇರಿಕದ ಧಾಳಿಯಾಗಲು ಅತ್ಯಂತ ಸಮೀಪದ ಮಾರ್ಗವಾದ, ಅಮೆರಿಕಕ್ಕೆ ಸೇರಿದ ಎಲ್ಯೂಶಿಯನ್ ದ್ವೀಪದ ಬಂದರುಗಳಿಗೆ ಜಪಾನೀ ವಿಮಾನಗಳು ಧಾಳಿಯಿಟ್ಟವು ಜಪಾನಿ ಜಲಾಂತರ್ಗಾಮಿಗಳು ಆಸ್ಟ್ರೇಲಿಯದ ಸಿಡ್ನಿ ಮತ್ತು ನ್ಯೂಕಾಸ್‌ಲ್‌ಗಳ ಮೇಲೂ ಹಿಂದು ಸಾಗರದ ಪಶ್ಚಿಮಕ್ಕಿರುವ ಮಡಗಾಸ್ಕರ್ ದ್ವೀಪದಲ್ಲಿ ಬ್ರಿಟಿಷರು ಹಿಡಿದಿರುವ ಡಿಯಾಗೋ ಸೂರುರೇಜ್ ಬಂದರಿನ ಮೇಲೂ ಬಾಂಬು ಸುರಿಸಿದವು ಹೀಗೆ ಇಂದು ಪೆಸಿಫಿಕಿನಲ್ಲಿ, ಚೀನದ ರಣಕ್ಷೇತ್ರದಲ್ಲಿ, ಲಿಬಿಯದ ರಣ ಭೂಮಿಯಲ್ಲಿ ರಶ್ಯದ ಸಂಗ್ರಾಮ ರಂಗದಲ್ಲಿ ಅತ್ಯಂತ ಭೀಷಣವೆನಿಸಿದ ಯೋಧ ರಾರ್ಭಟಗಳು ಕೇಳಿಬರುತ್ತಿದೆ!

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 19—6—1942

ವರ್ಧಾ ಮಾತುಕತೆ

ವರ್ಧಾದಲ್ಲಿ, ಗಾಂಧಿಜಿ, ಅಜಾದ್, ನೆಹರುಗಳು, ಭಾರತದ ಭವಿಷ್ಯ ಭಾಗ ನಿರ್ಮಾತರು ಕೂಡಿ ಸುದೀರ್ಘ ಮಾತುಕತೆ ನಡೆಸುತ್ತಿದ್ದಾರೆ; ಭಾರತದ ರಾಜಕೀಯ ವಿಷಯವಾಗಿ ವಿಚಾರ ವಿನಿಮಯ ಮಾಡುತ್ತಿದ್ದಾರೆ. ರಾಷ್ಟ್ರವು ಉನ್ನತಿಯ ಮಾರ್ಗದಲ್ಲಿ ಸ್ವಾತಂತ್ರ್ಯ ಪಥದಲ್ಲಿ ಮುಂದುವರಿಯುವ ಹೊಸ ಹಾದಿಯನ್ನು ಕಂಡು ಹುಡುಕುವುದರಲ್ಲಿದ್ದಾರೆ; ಗಾಂಧಿಜಿ ನೆಹರು ಅಜಾದರೊಡನೆ ವಿಚಾರಿಸಿಕೊಂಡು ಹೊಸತೊಂದು ರಾಜಕೀಯ ಆಂದೋಲನವನ್ನು ಆರಂಭಿಸಲಿದ್ದಾರೆ; ಎಂಬೀ ವಿಷಯಗಳಿಗಾಗಿ, ಇಡೀ ರಾಷ್ಟ್ರದ ಗಮನವು ಸದ್ಯ ವರ್ಧಾದ ಕಡೆಗೆ ಸೆಳೆಯಲ್ಪಟ್ಟಿದೆ

ಕೆಲವು ವಾರಗಳಿಂದ, ಗಾಂಧಿಜಿಯ ಬರೆಹಗಳನ್ನೋದಿದವರು ಒಂದು ವಿಚಾರವನ್ನು ಗಮನಕ್ಕೆ ತಂದುಕೊಳ್ಳಬಹುದು. 'ಬ್ರಿಟಿಷರು ಇಲ್ಲಿಂದ ಹೊರಟು ಹೋಗಬೇಕು' ಎಂಬೀ ಒಂತಾಗಿ ಮಹಾತ್ಮರು ಇತ್ತೀಚೆಗೆ ಉದ್ಘೋಷಿಸುತ್ತಿದ್ದಾರೆ. ಈ ಮಾತನ್ನು ನೆಹರುಗಳೂ ಹಿಂದೆ ಒಂದೆರಡು ಕಡೆಗಳಲ್ಲಿ ಸಾರಿದ್ದುಂಟು; ಈ ಮಾತು ಬಹಳ ಧೀರತನದ ಮಾತು; ಇದರಿಂದಲೇ ರಾಷ್ಟ್ರದ ಸ್ವಾತಂತ್ರ್ಯವು ಸಿದ್ಧಿಸುವುದೆಂದೂ, ಜಾತೀಯ ಬಿಕ್ಕಟ್ಟು ಬಗೆಹರಿವುದೆಂದೂ, ಒಮ್ಮೆ ಅಗಚಕತೆ ಒದಗಿದರೂ [ಹಾಗಾಗುವುದು ಸಂಭವವಿಲ್ಲವೆಂದು ಗಾಂಧಿಜಿ ನಂಬಿರುವರು] ಮುಂದೆ ಶಾಶ್ವತ ಐಕ್ಯ ಸ್ವಾತಂತ್ರ್ಯಗಳು ಸಾಧಿಸುವವೆಂದೂ ಗಾಂಧಿಜಿ ವಾದಿಸತೊಡಗಿರುವರು. ಹೇಗಿದ್ದರೂ, 'ಸಕಲರೋಗಗಳಿಗೂ ಏಕಮೂಲಿಕೆ' ಯೆಂಬಂತೆ ಮಹಾತ್ಮಾಜಿಯರು 'ಬ್ರಿಟಿಷರೇ ಹೊರಟು ಹೋಗಿ' ಎಂಬ ಘೋಷಣೆಯನ್ನು ಪ್ರಾರಂಭಿಸಿದ್ದಾರೆ.

ಈ ತರದ ವಾದಸರಣಿಯಿಂದಾಗಿ ಹಲವು ವಿಚಾರಗಳು ಒಡಮೂಡಿವೆ. ಅಂತೂ ಗಾಂಧಿಜಿ, ಬ್ರಿಟಿಷರನ್ನು ಹೊರ ಹೋಗಿರೆಂದು ಹೇಳುವಾಗ, ಬ್ರಿಟಿಷ್ ಜನತೆಯ ಮೇಲೆ ತನಗೆ ಎಳ್ಳಿನಿತು ದ್ವೇಷವಿಲ್ಲವೆಂದೂ, ಅವರಲ್ಲಿ ಹಲವರು ತನ್ನ ಮಿತ್ರರಿರುವರೆಂದೂ, ಪರಕೀಯರ ಆಳುವಿಕೆಯು ಒಮ್ಮೆ ಕೊನೆಗಾಣಲೇ ಬೇಕೆಂಬ ಅಭಿಲಾಷೆಯೇ ಇದರ ಮೂಲವೆಂದೂ ವ್ಯಕ್ತಪಡಿಸಿರುವರು. ಪರಕೀಯರ ದಾಸ್ಯವನ್ನು ಕಿತ್ತೊಗೆವ ಸ್ವಾತಂತ್ರ್ಯ ಪ್ರೇಮವು ಇಂತಹ ಘೋಷಣೆಗೆ ಮೂಲವಾಗಿದ್ದರೆ, ಆಕ್ರಮಣಗಾರರಾಗಿ ಬಾಗಿಲ ಬಳಿ ಬಂದಿರುವ ಜಪಾನಿಯರಿಗಾದರೂ, ಈ ಘೋಷಣೆಯು ಭೀತಿಜನಕವೇ ಇದೆ. ಏಕೆಂದರೆ, ಇದ್ದ ಬ್ರಿಟಿಷರನ್ನು ಹೊರಟುಹೋಗಿ ಎನ್ನುವ ಸ್ವಾತಂತ್ರ್ಯ ಪ್ರೇಮವು, ಬರಲು ಮಹತ್ವಾಕಾಂಕ್ಷೆಪಡುವ ಜಪಾನರನ್ನು ಇದಿರಿಸುವಷ್ಟು ಧೀರವಾಗಿರಬೇಕೆಂಬುದಂತೂ ಖಂಡಿತವಾಗಿರುವುದು.

ಅಂತೂ, ವರ್ಧಾದಲ್ಲಿ ಗಾಂಧಿಜಿ, ಅಜಾದ್, ನೆಹರು, ತ್ರಿಮೂರ್ತಿಗಳು ಸೇರಿ ಮಾಡುತ್ತಿರುವ ಮಾತುಕತೆ, ಗಾಂಧಿಜಿಯ ಈ ವಾದಸರಣಿ, ಹೊಸ ಆಂದೋಲನದ ವಿಚಾರವಾಹಿನಿಗಳು ಸಮಸ್ತರ ಗಮನವನ್ನೂ ಆ ಕಡೆ ಸೆಳೆದಿರುವವು.

'ಧ್ವಜದಿನ'ದ ಸಂದೇಶ

ಜೂನ್ ತಿಂಗಳ ಹದಿನಾಲ್ಕನೆಯ ತಾರೀಕಿನಂದು ಅಮೇರಿಕದ 'ಧ್ವಜದಿನ'ವು ಆಚರಿಸಲ್ಪಟ್ಟಿತು; ಆ ಸಂದರ್ಭದಲ್ಲಿ ಅಧ್ಯಕ್ಷ ರೂಸ್‌ವೆಲ್ಟರು ಒಂದು ಉಜ್ವಲ ಸಂದೇಶವನ್ನಿತ್ತರು. ಮಾನವನ 'ನಾಲ್ಕು ಸ್ವಾತಂತ್ರ್ಯಗಳ' ವಿಷಯವಾಗಿ ಮಾತನಾಡಿದರು. 'ರಾಷ್ಟ್ರೀಯ ಪ್ರಾರ್ಥನೆ'ಯಲ್ಲಿ ದೇವರೊಡನೆ, ಸ್ವಾತಂತ್ರ್ಯವನ್ನು, ನ್ಯಾಯವನ್ನು, ಶಕ್ತಿಯನ್ನು ತಮಗೆ ಪಯಪಾಲಿಸುವಂತೆ ಕೇಳಿಕೊಂಡರು. ಈ ಶುಭ ದಿನವು ಮಿತ್ರ ರಾಷ್ಟ್ರಗಳ ನಾನಾ ಭಾಗಗಳಲ್ಲಿ ವಿಶೇಷ ಉತ್ಸಾಹದಿಂದ ಆಚರಿಲ್ಪಟ್ಟಿತು.

ರೂಸ್‌ವೆಲ್ಟರ 'ಧ್ವಜದಿನ'ದ ಸಂದೇಶವನ್ನು ಕೇಳಿದರೆ ಸ್ಫೂರ್ತಿಗೊಳ್ಳುವಂತಿದೆ; ಅವರ 'ರಾಷ್ಟ್ರೀಯ ಪ್ರಾರ್ಥನೆ'ಯು ಹೃದಯ ಸ್ಪರ್ಶಿಯಾಗಿದ್ದು ಸತ್ಯ ಧರ್ಮಗಳ ನೆಲೆಯಿಂದ ಕೂಡಿದಂತಿದೆ. ಆದರೆ ಈ ಎಲ್ಲಾ ಮಾತುಗಳು ಕೇವಲ ಯೂರೋಪಿನ ರಾಷ್ಟ್ರಗಳಿಗೇ, ಅದರಲ್ಲೂ ಸಾಮ್ರಾಜ್ಯವನ್ನು ಕಟ್ಟಿಕೊಂಡಿರುವ ರಾಷ್ಟ್ರಗಳಿಗೆ ಮಾತ್ರ ಅನ್ವಯಿಸುವುವೋ, ಇಲ್ಲವೇ ದಾಸ್ಯದಿಂದ ನರಳುವ ರಾಷ್ಟ್ರಗಳಿಗೂ, ಏಷ್ಯದ ಆಫ್ರಿಕದ, ಹಿಂದುಸ್ಥಾನದಂತಹ ವಸಾಹತುಗಳಿಗೂ ಅನ್ವಯಿಸುತ್ತವೋ ಎಂಬುದನ್ನು ಅಧ್ಯಕ್ಷ ರೂಸ್‌ವೆಲ್ಟರು ಒರೆಗೆ ಹಚ್ಚಿ ತಿಳಿದು ಹೇಳಿದರೆ ಚೆನ್ನಾಗಿತ್ತು.

ಇಂದು ಅಮೇರಿಕವು ಬ್ರಿಟನಿನೊಡಗೂಡಿ ಶತ್ರುಪಕ್ಷವನ್ನು ಸೋಲಿಸಲು ಸಿದ್ಧವಾಗಿದೆ. ಈ ಯುದ್ಧವು, ಸರ್ವಾಧಿಕಾರವನ್ನು ಕಿತ್ತೊಗೆಯಲು, ದಾಸ್ಯವನ್ನು ಅಳಿಸಲು, ಸ್ವಾತಂತ್ರ್ಯವನ್ನು ಪ್ರಸ್ಥಾಪಿಸಲು, ಸತ್ಯ ನ್ಯಾಯ ಧರ್ಮಗಳನ್ನು ನೆಲೆಗೊಳಿಸಲು ಎಂದು ಹೇಳಲಾಗಿದೆ. ಈ ಮಾತುಗಳು ಯೂರೋಪಿನ ದೊಡ್ಡ ದೊಡ್ಡ ರಾಷ್ಟ್ರಗಳಿಗೆ ಬ್ರಿಟನು ಅಮೇರಿಕಗಳ ಮಟ್ಟಿಗೆ ಸರಿಯಾಗಿರುವುದು. ಆದರೆ ಹಿಂದುಸ್ಥಾನದಂತಹ ವಸಾಹತುಗಳನ್ನು ಇನ್ನೂ ತನ್ನ ಮಿತ್ರ ರಾಷ್ಟ್ರವಾದ ಬ್ರಿಟನಿನ ದಾಸ್ಯ ಪಂಕದಲ್ಲಿ ಕೊಳೆಯ ಬಿಡುತ್ತಿದ್ದು, ಆ ವಿಚಾರ ಏನೆಂದೂ ಗಮನಕ್ಕೆ ತಂದುಕೊಳ್ಳದೆ ಅಧ್ಯಕ್ಷ ರೂಸ್‌ವೆಲ್ಟರು ಇಷ್ಟು ಉದಾತ್ತವಾದ ವಾಕ್ಯಗಳನ್ನು, ಉದ್ಬುದ್ಧ ಮಾತುಗಳನ್ನು ಮಾತ್ರ ಹೇಳುತ್ತಿದ್ದರೆ ಸಾಲದು. ಇಡೀ ಜಗತ್ತಿನ ಎಲ್ಲಾ ರಾಷ್ಟ್ರಗಳಿಗೂ ಅನ್ವಯಿಸುವಂತೆ ಕೂಡಲೆ ಪ್ರಯತ್ನಿಸುವರೆಂದು ನಾವು ನಂಬುತ್ತೇವೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ

ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡ್ಪಿ.

Iನೇ ಫ್ರೋರ್ಮಿಗೆ 0—12—0
IIನೇ ಫ್ರೋರ್ಮಿಗೆ 0—12—0

ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಬಿ. ಭವಾನಿರಾವ್ ಬಿ. ಎ. ಎಲ್. ಟಿ.

IIIನೇ ಫ್ರೋರ್ಮಿಗೆ 0—12—0

ಬಾಲಕರ ಲಘುಗಣಿತ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ.
ಬಿ. ಭವಾನಿರಾವ್, ಬಿ. ಎ., ಎಲ್. ಟಿ.
ಸ್ಯೇಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—7—0
ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ. ವಾಸುದೇವರಾವ್, ಎಂ. ಎ., ಎಲ್. ಟಿ. (Dip. Geog.)

ನಾಲ್ಕನೇ ದರ್ಜೆಗೆ 0—6—0
ಐದನೇ ದರ್ಜೆಗೆ 0—7—0

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ.
ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0—6—0
ಏಳನೇ ದರ್ಜೆಗೆ 0—6—0
ಎಂಟನೇ ದರ್ಜೆಗೆ 0—6—0

ವ್ಯಾಕರಣ ಮತ್ತು ಪ್ರಬಂಧ

ಸೆಕೆಂಡರಿ ಶಾಲೆಗಳಿಗೂ ಮಂಜೂರಾತಿ ಹೊಂದಿದೆ
ಕೆ. ಕೆ. ರೈ. ವಿದ್ವಾನ್.

4 ಮತ್ತು 5ನೇ ದರ್ಜೆಗೆ 0—2—0
ಆರನೇ ದರ್ಜೆಗೆ ಅಥವಾ I ಫ್ರೋರ್ಮಿಗೆ 0—3—0
ಏಳನೇ ದರ್ಜೆಗೆ ಅಥವಾ II ಫ್ರೋರ್ಮಿಗೆ 0—3—6
ಎಂಟನೇ ದರ್ಜೆಗೆ ಅಥವಾ III ಫ್ರೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ. ಕೆ. ರೈ. ವಿದ್ವಾನ್.

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0-2-6

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6
ನಾಲ್ಕನೇ ದರ್ಜೆಗೆ 0—2—0
ಐದನೇ ದರ್ಜೆಗೆ 0—2—6

ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ ವಿದ್ವಾನ್.

ಆರನೇ ದರ್ಜೆಗೆ 0—3—0
ಏಳನೇ ದರ್ಜೆಗೆ 0—3—0
ಎಂಟನೇ ದರ್ಜೆಗೆ 0—3—0

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6
ನಾಲ್ಕನೇ ದರ್ಜೆಗೆ 0—3—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್, ಎಂ. ಎ. ಎಲ್. ಟಿ.
ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0
ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರಣೆ

ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)
II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಹರಿಜನವಾಣಿ

'ನನ್ನ ಧೋರಣವನ್ನು ಸ್ಪಷ್ಟೀಕರಿಸುತ್ತೇನೆ'

—ಭಾರತದ ಭವಿಷ್ಯದ ಕುರಿತು ಗಾಂಧೀಜಿ ವಿಚಾರಗಳು—

ಅಮೇರಿಕನ್ ಪತ್ರಿಕೋದ್ಯಮಿಗಳಿಬ್ಬರಿಗೂ ಗಾಂಧೀಜಿಯವರಿಗೂ ಈ ರೀತಿ ಪ್ರಶ್ನೋತ್ತರಗಳಾದುವು:

'ಜಪಾನರ ವಿರುದ್ಧ ಪ್ರತ್ಯಕ್ಷ ವಿರೋಧವನ್ನು ಮಾಡುವದನ್ನು ಬಿಟ್ಟುಗೊಟ್ಟು ಈ ಅಹಿಂಸಾತ್ಮಕ ಅಸಹಕಾರವೇಕೆ? ಅಹಿಂಸಾತ್ಮಕ ಅಸಹಕಾರದಿಂದ ಜಪಾನಿಯರಿಗೆ ತಡೆಯುಂಟಾಗುವ ಬದಲು ಅದು ಆಮಂತ್ರಣ ಕೊಟ್ಟಂತಾಗುವುದಿಲ್ಲವೆ?'

'ಇಲ್ಲಿ ನನ್ನ ಅಹಿಂಸೆ ಮುಂದೆಬಂದಿದೆ. ಏಕೆಂದರೆ ನಮ್ಮ ಹತ್ತಿರ ಶಸ್ತ್ರಾಸ್ತ್ರಗಳಿಲ್ಲ. ನಮ್ಮಲ್ಲಿದ್ದ ಬಲುವನ್ನೆ ನಾವು ಅವಲಂಬಿಸ ಬೇಕಾಗುವದು. ನಮ್ಮ ಹತ್ತಿರ ಸೈನ್ಯವಿಲ್ಲ, ಸೈನಿಕ ಸಾಮುಗ್ರಿಗಳಿಲ್ಲ, ಹೇಳಿಕೊಳ್ಳುವಷ್ಟು ಸೈನಿಕ ಕೌಶಲ್ಯವೂ ಇಲ್ಲ. ಕೇವಲ ಅಹಿಂಸೆಯೊಂದೆ ನಮ್ಮ ಹತ್ತಿರವಿದೆ. ಅದನ್ನೆ ನಾವವಲಂಬಿಸ ಬೇಕಾಗುವದು. ಅಹಿಂಸಾತ್ಮಕ ಪ್ರತೀಕಾರವು ಸಂಪೂರ್ಣವಾಗಿ ಯಶಸ್ವಿಯಾಗಬಲ್ಲುದೆಂದು ನಾನು ತತ್ವತಃ ಸಿದ್ಧ ಮಾಡಬಲ್ಲೆನು. ಒಬ್ಬ ಜಪಾನನನ್ನು ಕೂಡ ನಾವು ಕೊಲ್ಲುವ ಅವಶ್ಯಕತೆಯಿಲ್ಲ; ಕೇವಲ ನಾವವರಿಗೆ ಆಶ್ರಯ ಕೊಡಕೂಡದು. ಭಾರತೀಯರ ಒತ್ತಾಯಕ್ಕಾಗಿ ಇಲ್ಲವೆ ಪರಿಸ್ಥಿತಿಯ ಒತ್ತಾಯದಿಂದ ಬ್ರಿಟಿಷರು ಇಲ್ಲಿಂದ ಹೊರಟುಹೋಗಬೇಕೆಂದು ನಾನು ಬಯಸುವದಿಲ್ಲ. ತಮ್ಮ ಹಿತದೃಷ್ಟಿಯಿಂದ ಮತ್ತು ತಮ್ಮ ಕೀರ್ತಿಯನ್ನುಳಿಸುವದಕ್ಕಾಗಿ ಅವರು ಹಾಗೆ ಮಾಡಬೇಕು.

'ಇಲ್ಲಿ ಅಮೇರಿಕೆಯ ಸೈನ್ಯ ಬಂದುದಕ್ಕೆ ನಿಮ್ಮ ಅಭಿಪ್ರಾಯವೇನು? ಹಿಂದುಸ್ಥಾನದ ಸ್ವಾತಂತ್ರ್ಯ ಸಂಪಾದನೆಗಾಗಿ ತಾವು ಅದಕ್ಕೆ ಸಹಾಯ ಮಾಡಬೇಕೆಂದು ಪ್ರತಿಯೊಬ್ಬ ಅಮೇರಿಕನನಿಗೆನಿಸುತ್ತದೆ.'

'ಹಿಂದುಸ್ಥಾನದ ಮೇಲೆ ಆದೊಂದು ಬಗೆಯ ಒತ್ತಾಯವಾದ್ದರಿಂದ ಅದು ಕೆಟ್ಟ ಕೆಲಸವೆಂದು ನಾನು ಹೇಳುವದು. ಅವರಿಲ್ಲಿಗೆ ಬಂದುದು ಹಿಂದುಸ್ಥಾನದ ಬಿನ್ನಹದಿಂದಲ್ಲ, ಇಲ್ಲವೆ ಹಿಂದುಸ್ಥಾನದ ಒಪ್ಪಿಗೆಯಿಂದಲ್ಲ. ಮೊದಲಿನಕ್ಕಿಂತ ಹೆಚ್ಚಾಗಿ ನಮ್ಮ ಕತ್ತನ್ನು ಹಿಚುಕುವದಕ್ಕಾಗಿಯೆ ಅಮೆರಿಕನ್ ಸೈನ್ಯವನ್ನು ತಂದುದೆಂದು ನನ್ನ ಅಭಿಪ್ರಾಯ. ಸೈನಿಕರಿಗೆ ನಿಮ್ಮ ಮನೆಗಳು ಬೇಕಾಗಿರುವದರಿಂದ ಅವುಗಳನ್ನು ಖಾಲಿಮಾಡಿ ನೀವು ಬೇರೆ ಕಡೆಗೆ ಹೋಗಿರೆಂದು ಸಾವಿರಾರು ಹಳ್ಳಿಗರಿಗೆ ಒಮ್ಮೆಲೆ ಹೇಳಿಬಿಡುತ್ತಾರೆ. 'ಅವರೆಲ್ಲಿಗೆ ಹೋಗಬೇಕೆಂದು ನಾನು ನಿಮಗೆ ಕೇಳಬಹುದು? ಸಾಕಷ್ಟು ಅವಕಾಶ ಕೂಡ ಅವರಿಗೆ ಕೊಡುವುದಿಲ್ಲ. ಯಾವದೊಂದು ಸ್ವತಂತ್ರ ದೇಶದಲ್ಲಿ ಇಂಥ ಸಂಗತಿ ಸಂಭವಿಸಲಾರವು. ಇಲ್ಲಿ ಸೈನ್ಯದಲ್ಲಿಯ ಸ್ಯಾಪರ್ಸ ಮತ್ತು ಮಾಯನರ್ಸರು ಮೊದಲು ಈ ಜನರಿಗಾಗಿ ಕಟ್ಟಡಗಳನ್ನು ಕಟ್ಟುವರು. ಅವರಿಗೆ ವಾಹನ ಸೌಕರ್ಯಗಳನ್ನು ಕೊಡಲಾಗುತ್ತದೆ. ಮನೆ ಮಾರುಗಳಿಂದ ಅವರನ್ನು ಹೊರಗೆ ಹಾಕುವ ಮೊದಲು ಕನಿಷ್ಠ ೬ ತಿಂಗಳು ಭತ್ತೆ ಕೊಡಲಾಗುವದು. 'ಜಪಾನಿಯರು ಇಲ್ಲಿಗೆ ಬರುವ ಮೊದಲೇ ಇವೆಲ್ಲ ಸಂಗತಿಗಳು ಸಂಭವಿಸಬೇಕೊ?' ನೀವು ಇಲ್ಲಿಂದ ಹೊರಟು ಹೋಗಲಿಕ್ಕೇಬೇಕೆಂದು ಹೇಳಿದ ಹೊರತು ಎರಡನೆ ಮಾರ್ಗವಿಲ್ಲ ಮತ್ತು ಬ್ರಿಟಿಷ ಆಳ್ವಿಕೆಯು ಕೊನೆಗಂಡಿತೆಂದರೆ ಆ ಸೈನಿಕ ತಳಹದಿಯಿಂದ ಅಮೇರಿಕ ಮತ್ತು ಬ್ರಿಟನು ಸಂರಕ್ಷಿಸಲ್ಪಡುವವು. ನಾನು ಹೇಳಿದಂತೆ ನಮ್ಮ ಕಣ್ಣೆದುರಿಗೆ ದಿನಾಲು ಸಂಭವಿಸುತ್ತಿರುವ ಸಂಗತಿಗಳ ಬಗ್ಗೆ ನಾವು ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಲಾರೆವು. ಜನರನ್ನು ಹಾಗೆಯೆ ಹೊರಗೆ ಹಾಕಿ ಬಿಡುತ್ತಾರೆ. ಅವರು ತಮ್ಮ ಗತಿಯನ್ನು ತಾವೇ ಕಂಡುಕೊಳ್ಳಬೇಕು! ಬರ್ಮಾದಿಂದ ಬರುವಾಗ ಸಾವಿರಾರು ಜನರಲ್ಲದಿದ್ದರೂ ನೂರಾರು ಜನರು ಅನ್ನ ನೀರು ಇಲ್ಲದೆ ದಾರಿಯಲ್ಲಿ ಮರಣ ಹೊಂದಿದರು. ಅಲ್ಲದೆ ಭೇದಭಾವ ಮಾಡುವ ಈ ನೀಚ ಮನೋವೃತ್ತಿಯು ಈ ದುಃಖೀ ಜನರನ್ನು ಕೂಡ ಗಾಸಿಗೊಳಿಸದೆ ಬಿಡಲಿಲ್ಲ. ಬಿಳಿಯರಿಗೆ ಒಂದು ಮಾರ್ಗ, ಕಪ್ಪು ಜನರಿಗೆ ಮತ್ತೊಂದು! ಬಿಳಿಯರಿಗೆ ಅನ್ನ ಆಶ್ರಯದ ವ್ಯವಸ್ಥೆಯಾದರೆ ಕಪ್ಪು ಜನರಿಗೆ ಯಾವ ವ್ಯವಸ್ಥೆ ಇಲ್ಲ!! ಹಿಂದುಸ್ಥಾನಕ್ಕೆ ಅವರು ಬಂದ ಬಳಿಕವೂ ಇದೇ ಬಗೆಯ ಭೇದಭಾವ! ಜಪಾನಿಗಳು ಇಲ್ಲಿ ಬರುವ ಮೊದಲು ಹಿಂದುಸ್ಥಾನವನ್ನು ಈ ರೀತಿ ಹಿಂಡಿ ಹಿಪ್ಪೆಮಾಡುವದಲ್ಲದೆ ಅವಮಾನಕ್ಕೊಳಪಡಿಸಲಾಗುತ್ತದೆ. ಇದೆಲ್ಲ ಹಿಂದುಸ್ಥಾನದ ರಕ್ಷಣೆಗಾಗಿಯಲ್ಲ—ಯಾರ ರಕ್ಷಣೆಗಾಗಿ ಎಂಬುದೂ ಯಾರಿಗೂ ಗೊತ್ತಿರುವದಿಲ್ಲ. ಅಂತೆಯೆ ಒಂದು ದಿನ ಪ್ರಭಾತದಲ್ಲಿ ನಾನೀ ಪ್ರಾಮಾಣಿಕವಾದ ಬಿನ್ನಹ ಮಾಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದೆನು. ದಯವಿಟ್ಟು ಹಿಂದುಸ್ಥಾನವನ್ನು ಅದರ ಪಾಡಿಗೇ ಬಿಟ್ಟುಬಿಡಿರಿ. ಸ್ವಾತಂತ್ರ್ಯದ ಗಾಳಿಯಲ್ಲಿ ಉಸುರಾಡಿಸಲು ನಮಗೆ ಅವಕಾಶ ಕೊಡಿರಿ. ಬ್ರಿಟಿಷ್ ಮತ್ತು ಅಮೇರಿಕನ್ ಸೈನ್ಯಗಳಲ್ಲಿ ನನಗೆ ಸ್ವಲ್ಪವೂ ವ್ಯತ್ಯಾಸ ತೋರುವದಿಲ್ಲ. ಇಡೀ ಧೋರಣೆಯೆಲ್ಲ ಒಂದೇ ಒಂದು ಅಭೇದ್ಯ ಧೋರಣವಾಗಿದೆ.

'ಬ್ರಿಟನು ಇದಕ್ಕೆ ಕಿವಿಗೊಡುವ ಆಸೆಯೇನಾದರೂ ಇದೆಯೋ?'

'ಆ ಆಸೆಯನ್ನು ತಿಳಿಯದೆ ನಾನು ಸಾಯುವದಿಲ್ಲ. ಮತ್ತು ನನಗೆ ಇನ್ನೂ ಆಯುಷ್ಯವು ಹೆಚ್ಚಿಗಿದ್ದರೆ ನನ್ನ ಆ ಆಸೆ ಸಫಲವಾದುದನ್ನೂ ನಾನು ನೋಡಬಲ್ಲೆ. ಏಕೆಂದರೆ ಈ ಸೂಚನೆಯಲ್ಲಿ ಅಸ್ವವಹಾರ್ಯವೇನೂ ಇರುವದಿಲ್ಲ. ಬ್ರಿಟನು ಮನಃಪೂರ್ವಕವಾಗಿ ಹಾಗೆ ಮಾಡಲು ಸಿದ್ಧವಿಲ್ಲದಿದ್ದರೆ ವಿಜಯ ಹೊಂದಲು ಅದು ಅನರ್ಹವಾಗಿದೆಂದು ನಾವು ಇಲ್ಲಿ ಹೇಳಬಯಸುತ್ತೇನೆ.'

'ಸ್ವತಂತ್ರ ಹಿಂದುಸ್ಥಾನವು ಜಪಾನಿನ ವಿರುದ್ಧ ಯುದ್ಧ ಸಾರುವದು ಅವಶ್ಯವಿಲ್ಲ. ಅದು ಮಿತ್ರ ರಾಷ್ಟ್ರಗಳ ಮಿತ್ರವಾಗುವದು ಮಾತ್ರ.

'ಜಿನ್ನಾರು ಹೇಳಿದಂತೆ ಮುಸಲ್ಮಾನರು ಹಿಂದುಗಳ ಆಡಳಿತೆಗೆ ಒಪ್ಪದಿದ್ದರೆ ಸ್ವತಂತ್ರ ಹಿಂದುಸ್ಥಾನದ ಅರ್ಥವೇನಾಗುವದು?'

'ಕಾಂಗ್ರೆಸ್ಸಿಗೆ ಇಲ್ಲವೆ ಹಿಂದುಗಳಿಗೆ ಹಿಂದುಸ್ಥಾನವನ್ನೊಪ್ಪಿಸಿ ಹೋಗಿರೆಂದು ನಾನು ಬ್ರಿಟಿಷರಿಗೆ ಕೇಳಿಕೊಂಡಿರುವದಿಲ್ಲ. ಅವರದನ್ನು ದೇವರಿಗೆ, ಆಧುನಿಕ ರೀತಿಯಲ್ಲಿ ಹೇಳಬೇಕೆಂದರೆ ಅರಾಜಕತೆಗೊಪ್ಪಿಸಿಕೊಡಲಿ. ಅನಂತರ ಎಲ್ಲ ಪಕ್ಷಗಳು ನಾಯಿಗಳಂತೆ ಒಂದಕ್ಕೊಂದು ಬಡೆದಾಡುವವು. ಇಲ್ಲದೆ ಆಗ ನಿಜವಾದ ಹೊಣೆಗಾರಿಕೆಯು ಅರಿವುಂಟಾಗಿ ನ್ಯಾಯವಾದ ಒಡಂಬಡಿಕೆ ಮಾಡಿಕೊಳ್ಳುವರು. ಆ ಅರಾಜಕತೆಯಿಂದಲೆ ಅಹಿಂಸೆಯು ಪ್ರಾದುರ್ಭೂತವಾಗುವದೆಂದು ನನ್ನ ಆಸೆ. 'ತತ್‌ಕ್ಷಣದಲ್ಲಿ ಹಿಂದೀ ಸೈನ್ಯವು ತಾನಾಗಿಯೆ ವಿಸರ್ಜನ ಹೊಂದುವದು. ಅದಷ್ಟು ಬೇಗ ಅವರು ತಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡು ಹೊರಡಲು ನಿರ್ಧರಿಸುವರು. ಇವೆಲ್ಲ ಯುದ್ಧಮುಗಿದ ಬಳಿಕ ತಾವು ಹೊರಟು ಹೋಗುವದಾಗಿ ಅವರು ಸಾರಬಹುದು. ಆದರೆ ಹಿಂದುಸ್ಥಾನದಿಂದ ಯಾವದೇ ಸಹಾಯವನ್ನವರು ಅಪೇಕ್ಷಿಸಲಾರರು, ಕರವನ್ನು ಹೇಳಲಾರರು, ರಿಕ್ರೂಟರನ್ನು ಕೂಡಿಸಲಾರರು. ಹಿಂದುಸ್ಥಾನವು ತಾನಾಗಿಯೇ ಕೊಡಬಹುದಾದ ಸಹಾಯದ ಹೊರತು ಬೇರೆ ಏನೂ ಅವರಿಗೆ ಸಿಕ್ಕದು. ಆ ಕ್ಷಣದಲ್ಲಿಯೇ ಬ್ರಿಟಿಷರ ಆಳಿಕೆ ಕೊನೆಗೊಳ್ಳುವದು, ಆ ಬಳಿಕ ಹಿಂದುಸ್ಥಾನದ ಗತಿಯೇನೇ ಆದರೂ ಚಿಂತೆಯಿಲ್ಲ; ಇಂದು ನಡೆದುದೆಲ್ಲ ಕೇವಲ ಕಪಟನಾಟಕ, ಇದೆಲ್ಲ ಕೊನೆಗೊಳ್ಳಬೇಕೆಂದು ನನ್ನ ಆಸೆ. ಇದೆಲ್ಲ ಕೃತ್ರಿಮಕೆಯು ನ್ಯಾಯವಾದಾಗಲೆ ನವಮನ್ವಂತರದ ಉದಯವಾಗುವದು.'

'ಕೂಡಲೇ ಹಿಂದುಸ್ಥಾನವನ್ನು ಬಿಟ್ಟು ಹೋಗಿರೆಂದು ನೀವು ಬ್ರಿಟಿಷರಿಗೆ ಹೇಳುತ್ತೀರಿ. ಅನಂತರ ಹಿಂದೀಯರು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬಲ್ಲರೋ? ಇಂಥ ಹಿಂದೀ ಸರಕಾರದಲ್ಲಿ ಯಾವ ಪಕ್ಷಪಂಗಡಗಳು ಭಾಗವಹಿಸಬಹುದು?'

'ಹಿಂದೀಯರು ಏನ್ನೆ ಮಾಡಲಿ ಮಾಡದಿರಲಿ ಅತ್ತ ಗಮನಿಸದೆ ಬ್ರಿಟಿಷ್ ಸರಕಾರದವರು ಕಾರ್ಯಮಾಡಬೇಕೆಂದು ನಾನು ಹೇಳಿರುವೆನು. ಅವರು ಹೊರಟು ಹೋಗುವದರಿಂದ ಕೆಲದಿನ ಅರಾಜಕತೆಯುಂಟಾಗಬಹುದೆಂದೂ ನಾನು ಭಾವಿಸಿದ್ದೇನೆ. ಆದರೆ ವ್ಯವಸ್ಥಿತ ರೀತಿಯಿಂದ ಬ್ರಿಟಿಷರು ಹೊರಟು ಹೋದರೆ ಸದ್ಯದ ಧುರೀಣರೇ ತಮ್ಮ ತಮ್ಮೊಳಗೆ ತಾತ್ಪೂರ್ತಿಕ ಸರಕಾರವನ್ನು ಸ್ಥಾಪಿಸುವ ಸಂಭವವಿದೆ. ರಾಷ್ಟ್ರದ ಬಗ್ಗೆ ಯಾವದೇ ಬಗೆಯ ವಿಚಾರವಿಲ್ಲದೆ ಕೇವಲ ತಮ್ಮ ಸ್ವಾರ್ಥವನ್ನು ನೋಡುವವರು ಅಧಿಕಾರಕ್ಕಾಗಿ ಹಂಬಲಿಸಬಹುದು. ಕೆಲವು ಪುಂಡರನ್ನು ಕೂಡಿಸಿಕೊಂಡು ಅವರು ಯಾವದೇ ರೀತಿಯಿಂದ ಮತ್ತು ಎಲ್ಲಿ ಬೇಕಾದಲ್ಲಿ ಅಧಿಕಾರ ಆಕ್ರಮಿಸಲು ಪ್ರಯತ್ನಿಸುವ ಸಂಭವವೂ ಇರುವದು. ಪೂರ್ಣವಾಗಿ ಕಾಯಂ ಆಗಿ ಮತ್ತು ಪ್ರಮಾಣಿಕ ರೀತಿಯಿಂದ ಬ್ರಿಟಿಷ ಸರಕಾರವು ಇಲ್ಲಿಂದ ಹೋದರೆ ಜಾಣರಾದ ಧುರೀಣರು ತಮ್ಮ ಹೊಣೆಯನ್ನರಿತುಕೊಂಡು ತಮ್ಮ ಮತಭೇದಗಳನ್ನೆಲ್ಲ ಮರೆತು, ಬ್ರಿಟಿಷರು ಬಿಟ್ಟುಹೋದ ಸಾಧನ ಸಾಮುಗ್ರಿಗಳ ಸಹಾಯದಿಂದ ತಾತ್ಕಾಲಿಕ ಸರಕಾರವನ್ನು ಪ್ರಸ್ಥಾಪಿಸುವರೆಂದು ನಾನು ಆಶಿಸುತ್ತೇನೆ. ಯಾವದೊಂದು ಪಕ್ಷವನ್ನು ಇಲ್ಲವೆ ವ್ಯಕ್ತಿಯನ್ನು ಕೌನ್ಸಿಲಿನಲ್ಲಿ ಸೇರಿಸಿಕೊಳ್ಳದಿರಲು ಬೇರೆ ಸರಕಾರವೆ ಇಲ್ಲದ್ದರಿಂದ ಆತ್ಮಸಂಯಮನವೆ ಮಾರ್ಗದರ್ಶಕವಾಗುವದು. ಹಾಗಾದರೆ ಬಹುತರವಾಗಿ ಕಾಂಗ್ರೆಸ್ಸು, ಲೀಗ ಮತ್ತು ಸಂಸ್ಥಾನ ಪ್ರತಿನಿಧಿಗಳಿಗೆ ಆಡಳಿತೆಯನ್ನು ನಡಿಸಲು ಅವಕಾಶ ಸಿಕ್ಕುವದು; ರಾಷ್ಟ್ರೀಯ ಸರಕಾರವು ಸ್ಥಾಪಿತವಾಗಿ ನಾನು ಅಪೇಕ್ಷಿಸಿದಂತೆ ಅದು ಕಾರ್ಯಮಾಡುವದೆಂದು ಭಾವಿಸಿದರೆ ದಾಳಿಗಾರ ರಾಷ್ಟ್ರಗಳ ವಿರುದ್ಧ ಸಂರಕ್ಷಣೋಪಾಯಗಳನ್ನು ಕೈಕೊಳ್ಳುವದಕ್ಕಾಗಿ ಸಂಯುಕ್ತ ಸರಕಾರದೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವದು ಅದರ ಮೊಟ್ಟಮೊದಲನೆಯ ಕೆಲಸವು. ಇಬ್ಬರ ಧ್ಯೇಯವೂ ಒಂದೇ ಇದ್ದುದರಿಂದ ಯಾವ ಫೆಸಿಸ್ಟ ರಾಷ್ಟ್ರದೊಡನೆ ಹಿಂದುಸ್ಥಾನವು ಸಂಬಂಧವಿಟ್ಟುಕೊಳ್ಳದೆ ಸಂಯುಕ್ತ ರಾಷ್ಟ್ರಗಳಿಗೆ ಸಹಾಯಮಾಡಲು ನೈತಿಕ ದೃಷ್ಟಿಯಿಂದ ಬದ್ಧವಾಗಿದೆ. ಆ ಕಾಲ್ಪನಿಕ ರಾಷ್ಟ್ರೀಯ ಸರಕಾರದಲ್ಲಿ ನನ್ನದೇನಾದರೂ ನಡೆಯುತ್ತಿದ್ದರೆ ಇದಕ್ಕಿಂತ ಹೆಚ್ಚಿಗೆ ಯಾವ ಸಹಾಯವೂ ಸಂಯುಕ್ತ ರಾಷ್ಟ್ರಗಳಿಗೆ ಸಲ್ಲದು. ಹಿಂದುಸ್ಥಾನದಲ್ಲಿ ಯೋಗ್ಯ ರೀತಿಯಿಂದ ಚಟುವಟಿಕೆಗಳನ್ನು ನಡೆಸುವದನ್ನು ಮಾತ್ರ ಅದು ಸಹಿಸಬಹುದು. ರಿಕ್ರೂಟನೆಂದು ಅಥವಾ (ಮುಕ್ತ) ಧನಸಹಾಯ ಮಾಡಿ ಯಾವನೊಬ್ಬ ಹಿಂದೀಯನಿಗೆ ವೈಯಕ್ತಿಕ ಸಹಾಯ ಸಲ್ಲಿಸಲು ಯಾವದೇ ಬಗೆಯ ನಿರ್ಬಂಧವಿರದಿರುವದು ಸ್ವಾಭಾವಿಕ. ಬ್ರಿಟಿಷ ಆಡಳಿತೆಯು ಇಲ್ಲಿಂದ ಹೋದ ಕೂಡಲೆ ಹಿಂದೀ ಸೈನ್ಯವು ವಿಸರ್ಜಿಸಲ್ಪಟ್ಟಿತೆಂದು ತಿಳಿಯಬೇಕಾಗುವದು ಈ ರಾಷ್ಟ್ರೀಯ ಸರಕಾರದಲ್ಲಿ ನನ್ನದೇನಾದರೂ ವರ್ಚಸ್ಸು ನಡೆಯುತ್ತಿದ್ದರೆ, ಆ ಸರಕಾರದ ಎಲ್ಲ ಅಧಿಕಾರ ವರ್ಚಸ್ಸು ಮತ್ತು ಸಾಧನಸಂಪತ್ತು ಜಗತ್ತಿನ ಶಾಂತಿ ಪ್ರಸ್ಥಾಪನೆಯಲ್ಲಿ ಉಪಯೋಗಿಸಲ್ಪಡುವವು. ಆದರೆ ರಾಷ್ಟ್ರೀಯ ಸರಕಾರವು ಸ್ಥಾಪಿಸಲ್ಪಟ್ಟ ಬಳಿಕ ನನ್ನ ಕೂಗು ಅರಣ್ಯ ರೋದನವಾಗುವ ಸಂಭವವೂ ಇದೆ. ಮತ್ತು ರಾಷ್ಟ್ರೀಯ ಹಿಂದುಸ್ಥಾನವೂ ಯುದ್ಧದ ಹುಚ್ಚು ಹಿಡಿಯಬಹುದು.

'ನನ್ನ ಧೋರಣವನ್ನು ಸ್ಪಷ್ಟೀಕರಿಸುತ್ತೇನೆ. ಮಿತ್ರ ರಾಷ್ಟ್ರಗಳಿಗೆ ವಿಜಯವು ನಿಶ್ಚಿತವಾಗಬೇಕಾದರೆ ಇಂಥ ದೊಡ್ಡ ರಾಷ್ಟ್ರದ ಅಧಃಪತನವು ಕೊನೆಗೊಳ್ಳಲಿಕ್ಕೆ ಬೇಕು. ಮಿತ್ರರಿಗೆ ನೈತಿಕ ತಳಹದಿಯಿರುವದಿಲ್ಲ. ಫೆಸಿಸ್ಟ ಇಲ್ಲವೆ ನಾಝಿ ರಾಷ್ಟ್ರಗಳಲ್ಲಿ ನನಗೆ ಯಾವದೆ ಬಗೆಯ ಭೇದ ಕಾಣುವದಿಲ್ಲ. ಎಲ್ಲರೂ ಸುಲಿಗೆಗಾರರು, ತಮ್ಮ ಉದ್ದಿಷ್ಟವನ್ನು ಸಾಧಿಸಕೊಳ್ಳುವದಕ್ಕಾಗಿ ಎಲ್ಲರೂ ಆವಶ್ಯಕ ನಿರ್ದಯತನವನ್ನು ಕೈಕೊಳ್ಳುವವರು! ಅಮೇರಿಕ ಮತ್ತು ಬ್ರಿಟನಗಳು ಬಹಳ ದೊಡ್ಡ ರಾಷ್ಟ್ರಗಳು. ಆದರೆ ಮೂಕ ಜನಾಂಗದ ಆಫ್ರಿಕೆಯದಿರಲಿ ಇಲ್ಲವೆ ಏಶಿಯದಿರಲಿ—ನ್ಯಾಯಾಸನದೆದುರಿನಲ್ಲಿ ಆ ದೊಡ್ಡತನವೆಲ್ಲ ಧೂಳಿನಂತೆ ಹಾರಿಹೋಗುವದು. ಆ ತಪ್ಪನ್ನು ಸರಿಪಡಿಸುವದಕ್ಕಾಗಿ ಅವರಿಗೆ ಮಾತ್ರ ಶಕ್ತಿಯಿದೆ. ತಮಗೆ ಹತ್ತಿದ ಕಳಂಕವನ್ನು ಹೋಗಲಾಡಿಸಿ ವಿಶುದ್ಧವಾಗುವ ವರೆಗೆ ಅವರಿಗೆ ಮಾನವೀಯ ಸ್ವಾತಂತ್ರ್ಯ ಮುಂತಾದ್ದರ ಬಗ್ಗೆ ಮಾತಾಡಲು ಅಧಿಕಾರವಿಲ್ಲ. ಈ ರೀತಿಯಾಗಿ ಅವರ ಕಳಂಕವನ್ನು ಹೋಗಲಾಡಿಸಿಕೊಂಡು ವಿಶುದ್ಧವಾಗುವದರಿಂದ ಅವರು ವಿಜಯವನ್ನು ಮಾಡಿಕೊಂಡಂತಾಗುವದು. ಏಕೆಂದರೆ ಅವರಿಗೆ ಏಶಿಯ ಮತ್ತು ಆಫ್ರಿಕೆಯಲ್ಲಿಯ ಕೋಟ್ಯಾವಧಿ ಮೂಕ ಜನರ ಶುಭಾಶಯದ ಬಲವು ಸಿಕ್ಕುವದು. ಈ ಶುಭಾಶಯಗಳು ಬಾಯಿಂದ ಉಲ್ಲೇಖಿಸಲ್ಪಡದಿದ್ದರೂ ನಿಶ್ಚಿತವಾಗಿ ಅವುಗಳ ಲಾಭ ದೊರಕುವದು."

ಹರಿಜನ ಸೇವಕ ಸಂಘ
ಮಂಗಳೂರು

ತಾ. 13-6-42ನೇ ಸಾಯಂಕಾಲ 6 ಘಂಟೆಗೆ ಕಾಸರಗೋಡಿನಲ್ಲಿ ಒಂದು ಹರಿಜನ ವಿದ್ಯಾರ್ಥಿ ಭವನವನ್ನು ತೆರೆದಿರುತ್ತದೆ. ಸ್ಥಳೀಕ ಮುನ್ಸಿಫರಾದ ಶ್ರೀ. ಜೆ. ನಾಗಿ ರೆಡ್ಡಿಯವರು ಅಧ್ಯಕ್ಷರಾಗಿದ್ದರು. ಎಡಿಶನಲ್ ಮುನ್ಸಿಫರಾದ ಪಿ. ವೆಂಕಟ್ರಾಯ ಅಯ್ಯರರು ಹಾಜರಿದ್ದರು. ಶ್ರೀ. ಬಾಬು ಶೆಟ್ಟಿ, ಶ್ರೀಯುತ ಡರ್ಬೆಯವರು ವರದಿಯನ್ನೋದಿದ ಮೇಲೆ ಶ್ರೀಯುತ ತಿಮ್ಮಪ್ಪ ಶೆಟ್ರು ಮತ್ತು ಡಾ. ಪಿ. ಯಸ್. ಭಟ್ರು ಭಾಷಣ ಮಾಡಿದ ಮೇಲೆ ಅಧ್ಯಕ್ಷರ ಭಾಷಣಗಳೊಂದಿಗೆ ಸಭೆ ಮುಕ್ತಾಯವಾಯಿತು. ಭವನವು ಈಗ ಶ್ರೀ. ಸುಶೀಲಾ ಬಾ ನಗರ್‌ಕಾರ್ ಇವರು ಧರ್ಮಾರ್ಥವಾಗಿ ಕೊಟ್ಟಿರುವ ಕಟ್ಟಡದಲ್ಲಿ ನಡೆಯುತ್ತಿದೆ. ಪ್ರಕೃತ ೮ ಮಂದಿ ವಿದ್ಯಾರ್ಥಿಗಳಿದ್ದಾರೆ.

ತಾ. 22-9-42ನೇ ಸೋಮವಾರ ಸಾಯಂ ಗಂಟೆ 5ಕ್ಕೆ ಪ್ರಕೃತದ ಸೊಸೈಟಿ ಹೋಲಿನಲ್ಲಿ ಸ್ಥಳೀಕ ಹರಿಜನ ಸೇವಕ ಸಂಘದ ಸಭೆ ಕೂಡಲಿದೆ. ಮಹನೀಯರೆಲ್ಲ ಸಹಕರಿಸಬೇಕಾಗಿ ವಿನಂತಿ.

ಬಳ್ಳಾರಿ
ಪ್ರೇಮ ವಿದ್ಯಾಪೀಠ ತುಂಗಭದ್ರಾ

ಇಲ್ಲಿಯ ಮೆಡಿಕಲ್ ಕಾಲೇಜ್ ಜುಲಾಯಿ ತಾ. ೧೫ಕ್ಕೆ ಪ್ರಾರಂಭವಾಗುವುದು. ಸೇರಲಿಚ್ಛಿಸುವವರು ಪ್ರಿನ್ಸಿಪಾಲರಿಗೆ ಬರೆದುಕೊಳ್ಳತಕ್ಕದ್ದು.

ಧಾರವಾಡ
ಶಾಂತಿ ದಳ ಶಿಬಿರ

ಈ ತಿಂಗಳ ೧೫ನೇ ತಾರೀಕಿನಿಂದ ಶಾಂತಿ ದಳ ಶಿಬಿರವನ್ನು ಪ್ರಾರಂಭ ಮಾಡಿ ೧ ತಿಂಗಳ ವರೆಗೆ ನಡೆಸುವ ವ್ಯವಸ್ಥೆಯಾಗಿದೆ. ಆ ಸಮಯದಲ್ಲಿ ಶಿಬಿರದಲ್ಲಿಯ ಸೈನಿಕರಿಗೆ ಸದ್ಯದ ಪರಿಸ್ಥಿತಿಯನ್ನನುಸರಿಸಿ ಕಾರ್ಯಮಾಡಬೇಕಾದ ಶಿಕ್ಷಣ ಕೊಡುವುದಲ್ಲದೆ ಅದರೊಂದಿಗೆ ಅವರಿಗೆ ರಾಜಕೀಯ ಸಾಮಾಜಿಕ ಆರ್ಥಿಕ, ಔದ್ಯೋಗಿಕ ಇತ್ಯಾದಿ ಹಲವು ವಿಷಯಗಳ ಪರಿಜ್ಞಾನವಾಗಬೇಕೆಂಬ ದೃಷ್ಟಿಯಿಂದ ತಜ್ಞರ ವ್ಯಾಖ್ಯಾನ ಮಾಲೆಯನ್ನು ಏರ್ಪಡಿಸಲಾಗಿದೆ. ಅದರ ಲಾಭ ಪಡೆಯಲು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ನಾಲ್ಕರಂತೆ ಒಳ್ಳೇ ಕಾರ್ಯಕರ್ತರನ್ನು ಕಳಿಸಬೇಕು, ಎಂದು ಕ. ಪ್ರಾಂ. ಕಾಂ. ಸಮಿತಿ ತಿಳಿಸುತ್ತದೆ.

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು



ಕುಟಿಕ್ಯೂರಾ ಮುಲಾಮು (Cuticura Ointment) ತನ್ನ ವಾಸಿಮಾಡ ವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವದು. ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲು ಗಾಯಗಳನ್ನು ಖಂಡಿತ ಗುಣಪಡಿಸುವುದು. ಕುಟಿಕ್ಯೂರಾ (Cuticura) ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯಮಾಡುವುದು.

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು. ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣ ಉಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗಾಯ, ಪೆಟ್ಟು, ತರಚುಪಿಳಿಕೆ, ಸುಟ್ಟಗಾಯ ಮುಂತಾದ ಮುಂತಾವ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಮನ್ನೇ (Cuticura Ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಹಿಂದೂದೇಶದಿಂದ ... ಹೊರಟುಹೋಗಲು ... ಶಾಸ್ತ್ರಾಭಿಪ್ರಾಯದಿಂದ ... ಹಿಂದೂದೇಶವು ಯುದ್ಧ ... ಆದರೂ ಗಾಂಧಿಜಿಯವರ ಮಾತು ಹೀಗೆ ಈಗ ಕ್ರಿಪ್ಸರು ಕೆಳಮುಖ ಮಾಡಿತು! ಗಾಂಧಿಜಿ ಬ್ರಿಟಿಷರು ರಾಜಕೀಯ ... ದಿಂದ ಹೊರಟುಹೋಗಬೇಕೆಂದು ವಿಚಿತ್ರದ ಸೂಚನೆ ಕೊಟ್ಟದ್ದರು!

ಪಂಜಾಬಿನಲ್ಲಿ ಜಾತೀಯ ಐಕ್ಯ ಒಪ್ಪಂದ

ಪಂಜಾಬಿನಲ್ಲಿ ಜಾತೀಯ ಐಕ್ಯ ಒಪ್ಪಂದವು ಪ್ರಸ್ತಾಪಿತವಾಗುವಂತೆ ಯುನೈಟೆಡ್ ಪಂಜಾಬ್ ಪಾರ್ಟಿ ಮುಖಂಡರಾದ ಸರ್ದಾರ್ ಬಲದೇವಸಿಂಗರಿಗೂ, ಪಂಜಾಬ್ ಪ್ರಧಾನಮಂತ್ರಿ ಸರ್ ಸಿಕಂದರರಿಗೂ ಒಪ್ಪಂದದ ಕರಾರು ಆಯಿತು! ಪಂಜಾಬ್ ಸರಕಾರದೊಡನೆ ಐಕ್ಯಸ್ಥಾಪನೆಗಾಗಿ ಎಲ್ಲಾ ಜಾತಿಗಳೂ ಮುಖ್ಯವಾಗಿ ಸಿಕ್ಖರು ಸಹಕರಿಸುವಂತೆ ಈ ಒಪ್ಪಂದವು ಸೂಚಿಸುತ್ತದೆ.

ಗಡಿನಾಡಿನಲ್ಲಿ ಕಾಂಗ್ರೆಸು ಚಟುವಟಿಕೆಗಳು

ಸರಕಾರದ ಧೋರಣೆಯ ... ಗಫರ್ ಖಾನ್ ... ಕಳೆದ ಎರಡು ವರ್ಷದಿಂದ ಈ ಪ್ರಾಂತ

ನಾವು ಹೊರಟು ಹೋಗಲಾರೆವು

ಗಾಂಧಿಜಿಯವರಿಗೆ ಕ್ರಿಪ್ಸರ ಉತ್ತರ.

ವರ್ಧಾ ಮಾತುಕತೆ ಮುಗಿಯಿತು

...ಹಲ್ಲಿ ಶಾಂತಿ ಪ್ರಸ್ಥಾಪಿತವಾಗುವಂತೆ ನಾವು (ಕಾಂಗ್ರೆಸಿನವರು) ಹಳ್ಳಿ ಹಳ್ಳಿಗಳಿಗೆ ಹೋಗಿ ಜನರಿಗೆ ಉಪದೇಶಿಸುತ್ತಾ ಬಂದಿದ್ದೇವೆ. ಆದರೆ ಸರಕಾರದವರು ನಮ್ಮ ಅಂತಹ ಕಾರ್ಯದಲ್ಲಿಯೂ ಆತಂಕವನ್ನು ತಂದೊಡ್ಡುತ್ತಿರುವರು. ನಮ್ಮೊಳಗೆ ಘರ್ಷಣೆಯಾಗದಂತೆ ನಾವು ಸಾಧ್ಯವಾದಷ್ಟು ಯತ್ನಿಸಿದ್ದೇವೆ. ಆದರೆ ನಾವೀ ತರದ ಮಾನವೋಪಯೋಗೀ ಕೆಲಸವನ್ನು ಬಿಟ್ಟುಬಿಡಲು ಸಾಧ್ಯವಿಲ್ಲ ಎಂಬುದಾಗಿ ಅಬ್ದುಲ್ ಗಫರ್ ಖಾನರು ಒಂದು ಪ್ರಕಟಣೆ ಹೊರಡಿಸಿದ್ದಾರೆ.

ವಾರ್ಧಾ ಮಾತುಕತೆ ಮುಗಿಯಿತು

ವಾರ್ಧಾದಲ್ಲಿ ಕಳೆದ ಕೆಲವು ವಾರಗಳಿಂದ ಗಾಂಧಿಜಿ ನೆಹರು ಅಜಾದರು ಕೂಡಿ ನಡೆಸುತ್ತಿದ್ದ ಮಾತುಕತೆ ಮುಗಿದಿದೆ. ಆದರೆ ಫಲಿತಾಂಶವೇನೂ ಪ್ರಕಟವಾಗಿಲ್ಲ. ಕಾಂಗ್ರೆಸಿನ ಮುಂದಿನ ಕಾರ್ಯನೀತಿಯನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ಬೇಗನೆ ಸೇರಿ ನಿರ್ಣಯಿಸುವುದೆಂದು ತಿಳಿದಿದೆ.

ರೈಲ್ವೆ ಅಪಘಾತ

ಕರಾಚಿ ಪ್ರಾಂತದ ಎನ್ ಡಬ್ಲ್ಯು ರೈಲ್ವೆಯ ಲಕಿ–ಬುಡೇಕು ರೈಲ್ವೆ ಸ್ಟೇಶನುಗಳ ನಡುವೆ ಒಂದು ಗುಡ್ಸ್ ಟ್ರೈನಿಗೂ ಮತ್ತೊಂದು ರೈಲುವೆ ಟ್ರಾಲಿಗೂ ಢಿಕ್ಕಾಢಿಕ್ಕಿಯಾಗಿ ೫ ಮಂದಿ ಸತ್ತರು. ಅವರಲ್ಲಿ ಶ್ರೀ ಕಿಶೋರಿಲಾಲ್ ಎಂಬ ರೈಲ್ವೆ ಆಫೀಸರರೂ ಒಬ್ಬರು.

ಎಲೂಶಿಯನ್ಸಿನಲ್ಲಿ ಜಪಾನರು

ಎಲೂಶಿಯನ್ಸ್‌ನ ಆಟ್ಟೂ ದ್ವೀಪವನ್ನು ಜಪಾನರು ಆಕ್ರಮಿಸಿ, ಮುಂದೆ ಕಿಸ್ಕಾ ಬಂದರಿನಲ್ಲಿ ಜಪಾನರ ಹಡಗುಗಳು ಕಾಣಿಸಿಕೊಂಡಿವೆಯೆಂದು ವಾರ್ತೆ.

ಡ್ಯೂಕ್ ಆಫ್ ಗ್ಲಸ್ಟರ್‌ರವರು

ಲೆಫ್ಟಿನೆಂಟ್ ಜನರಲ್ ಡ್ಯೂಕ್ ಆಫ್ ಗ್ಲಸ್ಟರವರು (ಚಕ್ರವರ್ತಿಗಳ ಕಿರಿಯ ಸಹೋದರರು) ಇದೇ ಈಗ ಭಾರತಕ್ಕೆ ಬಂದಿರುವರು.

ಡ್ಯೂಕರ ಸಂದರ್ಶನ

ಡ್ಯೂಕ್ ಆಫ್ ಗ್ಲಸ್ಟರವರು ಕರಾಚಿಯಲ್ಲಿನ ಸೈನ್ಯ ಪಥಕಗಳನ್ನೂ ವಿಮಾನಗಳನ್ನು ಸಂದರ್ಶಿಸಿ ಅಲ್ಲಿನ ಕಾರ್ಯಕ್ರಮವನ್ನು ಮುಗಿಸಿ ದಿಲ್ಲಿಗೆ ಹೊರಟರು.

ಖಾನ್ ಸಾಹೇಬರ ರಾಜಿನಾಮೆ

ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಿಶ್ವಾಸ ಸೂಚನೆ

ಗಡಿನಾಡಿನ ಮಾಜಿ ಪ್ರಧಾನಿ ಡಾ. ಖಾನ ಸಾಹೇಬರ ಪುತ್ರಿ ಭಾರತೀಯ ಕ್ರಿಶ್ಚಿಯನನನ್ನು ವಿವಾಹವಾದ ಕುರಿತು ಕೆಲವರು ಕುಹಕಿಗಳು ಅವರನ್ನು ನಿಂದಿಸ ತೊಡಗಿದ್ದರಿಂದ ತಾನನ್ನು ಸಾರ್ವಜನಿಕ ಸೇವೆಯಿಂದ ನಿವೃತ್ತನಾಗುವೆನೆಂದು ಅವರು ಪ್ರಾಂತಿಕ ಕಾಂಗ್ರೆಸ ಕಮಿಟಿಗೆ ರಾಜಿನಾಮೆಯಿತ್ತ ಕುರಿತು ಪ್ರಾಂತಿಕ ಕಾಂಗ್ರೆಸ್ ಸಮಿತಿ ಸಭೆ ಸೇರಿ ಅವರಲ್ಲಿ ತಮಗೆ ಪೂರ್ಣ ವಿಶ್ವಾಸವಿದೆಯೆಂದು ನಿರ್ಣಯಮಾಡಿದೆ.

ನೆಹರು — ಜಿನ್ನಾರಲ್ಲಿ ಒಪ್ಪಂದವಾಗಲಿ

ರಾಜಾಜಿ ಸೂಚನೆ

ಸಧ್ಯದ ರಾಜಕೀಯ ಬಿಕ್ಕಟ್ಟಿನಲ್ಲಿ ಬಗೆಹರಿಸಿ ದೇಶದ ಐಕ್ಯಸ್ಥಾಪನೆಗೆ ನೆಹರು ಜಿನ್ನರು ಮಾತನಾಡಿ ಒಂದು ಒಪ್ಪಂದಕ್ಕೆ ಬರಬೇಕೆಂದು ರಾಜಾಜಿ ಬಿನ್ನಹಮಾಡಿಕೊಂಡಿರುವರು. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಿರೆಂದು ಹೇಳಿದರೆ ಮಾತ್ರ ಕೆಲಸವಾಗದೆಂದೂ ಬ್ರಿಟಿಷರು ಬಿಟ್ಟು ಹೋದ ಜಾಗವನ್ನು ಜಪಾನರು ಆಕ್ರಮಿಸುವರೆಂದೂ ಆದ್ದರಿಂದ ಜಪಾನರನ್ನೆದುರಿಸಲು ನಮ್ಮಲ್ಲಿ ಕಾಂಗ್ರೆಸ್ ಲೀಗ್ ಐಕ್ಯವಾಗಬೇಕಾದುದು ಅವಶ್ಯವೆಂದೂ ಅವರ ಅಭಿಪ್ರಾಯವಿದೆ.

ಸೆಬಸ್ಟಪೋಲದಲ್ಲಿ ಬೆಂಕಿಯ ಮಳೆ

ಸೆಬಸ್ಟಪೋಲನ್ನು ಕಲಿತನದ ಕೆಚ್ಚೆದೆಯಿಂದ ರಕ್ಷಿಸುತ್ತಿರುವ ರಶ್ಯನರ ಮೇಲೆ ಜರ್ಮನರು ಬಾಂಬಿನ ಜಡಿಮಳೆ ಸುರಿಸುತ್ತಿದ್ದಾರೆ. ಖಾರ್ಕೋವ್ ರಣಭೂಮಿಯಲ್ಲಿಯೂ ಯುದ್ಧವು ವಿಕಾರರೂಪ ತಾಳಿದೆ. ಸೆಬಸ್ಟಪೋಲನ್ನು ರಶ್ಯನರು ಶತ್ರುವನ್ನು ಹಿಮ್ಮೆಟ್ಟಿಸಿದರೆಂದು ಸುದ್ದಿ ಬಂದಿದೆ.

ತೋಬ್ರುಕದಿಂದ ೩೦ ಮೈಲು ದೂರದಲ್ಲಿ

ಈ ಭೀಕರ ಕಾಳಗವಾಗುತ್ತದೆಯೆಂಬ ಸುದ್ದಿ. ಆಕ್ರೋಶ ಯುದ್ಧದ ಫಲಿತಾಂಶವಿನ್ನೂ ತಿಳಿದಿಲ್ಲ. ಗಝಾಲದಿಂದ ಬ್ರಿಟಿಷ ಸೈನ್ಯವು ಹಿಂತೆಗೆಯಲ್ಪಟ್ಟಿದೆ.

ಹಡಗಗಳ ಜಲಸಮಾಧಿ

ಅಲ್ಯೂಶಿಯನ್ಸ್ ನಡುಗುಡ್ಡೆಯ ಹತ್ತಿರ ಜಪಾನೀ ಕ್ರೂಜರು ಮುಳುಗಿಸಲ್ಪಟ್ಟಿತೆಂದೂ ಬೇರೆ ಐದು ಹಡಗಗಳೂ ಧಕ್ಕೆಯಾಗಿದೆಯೆಂದೂ ಸುದ್ದಿ. ಭೂಮಧ್ಯ ಸಾಗರದ ನೌಕಾ ಕಾಳಗದಲ್ಲಿ ಹಲವು ಬ್ರಿಟಿಷ್ ಹಡಗಗಳು ಜಲಸಮಾಧಿಹೊಂದಿದವೆಂದು ಇಟಲಿಯನರ ಹೇಳಿಕೆಯಿದೆ.

ಬರ್ಮಾದಲ್ಲಿ

ಬರ್ಮಾದಲ್ಲಿ ಜಪಾನರು ಮಿಲಿಟರಿ ಹೊಸ ರಾಜ್ಯಾಡಳಿತವನ್ನು ಜಾರಿಗೆ ತಂದಿರುವರೆಂದು ಜರ್ಮನರ ವಾರ್ತೆ. ಬರ್ಮಾದ ಕೇಂದ್ರ ಆಡಳಿತದ ಮಂಡಲವನ್ನು ಬರ್ಮಾದ ಜಪಾನೀ ಸೇನಾಪತಿಗಳು ರಚಿಸಲಿರುವರು.

ಜಿಲ್ಲಾ ಸಮಾಚಾರ

ಉಡುಪಿ

ಪುತ್ತಿಗೆ ಮಠದ ಹಿರಿಯ ಸ್ವಾಮಿಗಳವರು

ವೃದ್ಧಾಪ್ಯದ ನಿಮಿತ್ತ ತಮ್ಮ ಮಠ ಸಂಸ್ಥಾನದ ಆಡಳಿತದ ಸರ್ವಾಧಿಕಾರವನ್ನು ತಮ್ಮ ಶಿಷ್ಯರಾದ ಕಿರಿಯ ಸ್ವಾಮಿಗಳವರಿಗೆ ಬಿಟ್ಟುಕೊಟ್ಟರೆಂದಾಗಿ ತಿಳಿದಿದೆ.

ಸೆಶ್ಶನ್ಸ್ ಕೋರ್ಟಿಗೆ

ಗಂಡನ ಮನೆಗೆ ಬೆಂಕಿ ಕೊಟ್ಟಳೆಂಬ ಅಪವಾದನೆಯ ಮೇಲೆ ಕೊಲ್ಲ ಎಂಬ ಹೆಂಗಸನೂ ಚೀಂಕ್ರ ಮಡಿವಾಳ ಕೊಲೆಗೆ ಕಾರಣರೆಂಬ ಅಪವಾದನೆಯ ಮೇಲೆ ಕಷ್ಟ ಮಡಿವಾಳ ಮತ್ತು ಅಂಗರ ಮಡಿವಾಳರೆಂಬ ಇಬ್ಬರನ್ನೂ ಸ್ಥಳೀಯ ಸಬ್ ಮೆಜಿಸ್ಟ್ರೇಟರು ಸೆಶ್ಶನ್ಸ್ ಕೋರ್ಟಿಗೆ ಕಮಿಟ್ ಮಾಡಿರುವರು.

ಕೋಟ, ಮಣೂರು

ರಾಮ ಪ್ರಸಾದ ಎಲಿಮೆಂಟರಿ ಶಾಲೆ ವರ್ಧಂತಿಯು ತಾ. ೬ರಂದು ಶ್ರೀ ಸಂಜೀವ ಭಟ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಹಿತಚಿಂತಕರ ಮತ್ತು ಅಧ್ಯಕ್ಷರ ಭಾಷಣಗಳಾದ ಮೇಲೆ ಮಕ್ಕಳಿಂದ ವೀರನಾರಿ ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಕುಂದಾಪುರ

ವರ್ಗಾವರ್ಗಿ

ಸ್ಥಳೀಯ ಬೋರ್ಡ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಬಿ. ಎಸ್. ಸಾಮಗರು ಬೈಂದೂರು ಮಿಡ್ಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ನೇಮಕ ಹೊಂದಿದ್ದಾರೆ. ಶ್ರೀಗಳಾದ ಬಿ. ಎಲ್. ರಾಯರೂ ಎಮ್. ವಂಕಟರಮಣರಾಯರೂ ಮೂಲ್ಕಿ ಹೈಸ್ಕೂಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀಗಳಾದ ಬಿ. ಎಮ್. ಶೇಷಗಿರಿ ಎತ್ತ ಗೋವಿಂದರಾಯರೂ ಕುಂದಾಪುರ ಹೈಸ್ಕೂಲಿಗೆ ಬಂದಿದ್ದಾರೆ. ಬೈಂದೂರು ಮಿಡ್ಲ್ ಸ್ಕೂಲ್ ಹೆಡ್‌ಮಾಸ್ಟರ್ ಶ್ರೀ. ಸಂಜೀವ ಶೆಟ್ಟಿ ಮೂಲ್ಕಿಗೆ ವರ್ಗಾಯಿಸಲ್ಪಟ್ಟಿರುವರು.

ಪಂಚಾಯತ ಬೋರ್ಡಿನವರು

ನವೀನವಾಗಿ ರೇಡಿಯೋ ಯಂತ್ರವನ್ನು ತರಿಸಿ ಸಾರ್ವಜನಿಕ ಉಪಯೋಗಕ್ಕೆ ಅನುಕೂಲಪಡಿಸಿದ್ದಾರೆ.

ಸಿಡುಬು

ಹಂಗಲೂರಿನಿಂದ ಕೋಟೆದ ವರೆಗೆ ಸಿಡುಬು ರೋಗ ಹರಡಿದೆ. ಸಾಧಾರಣ ೧೫–೨೦ ಮಂದಿ ಮೃತರಾದರೆಂದು ತಿಳಿದು ಬರುತ್ತದೆ.

ಪುತ್ತೂರು

ವಿಟ್ಲ

ತಾ. ೮ರಲ್ಲಿ ವೊಕ್ಕೆತ್ತೂರು ಹಂ. ಬೊ. ಶಾಲೆಯಲಿ ಶ್ರೀ ಯಮ್. ಜಿ. ಡಿ. ನಜರತ್ ಅವರ ಅಧ್ಯಕ್ಷತೆಯಲಿ ಶಾಲಾ ತಿಂಗಳ ಹಬ್ಬ ಮತ್ತು ರಕ್ಷಕರ ಸಂಘದ ಉದ್ಘಾಟನಾ ಸಮಾರಂಭಗಳು ಜರಗಿಸಲ್ಪಟ್ಟವು.

ವರ್ಗ

ಡಿ. ಇನ್ಸ್‌ಪೆಕ್ಟರ್ ಶ್ರೀ ನಜರತರ ಸ್ಥಾನದಲ್ಲಿ ಶ್ರೀ ಜಿ. ಪಿ. ಕಮತ ಇವರು ನೇಮಿಸಲ್ಪಟ್ಟು ಚಾರ್ಜ ವಹಿಸಿಕೊಂಡರು.

ಬಿಲ್ಲವರ ಎಸೋಸಿಯೇಶನ್, ಮುಂಬಯಿ

ವಿದ್ಯಾರ್ಥಿ ವೇತನ

ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳು ಮೇಲಿನ ಸಂಸ್ಥೆಗೆ ವೇತನವನ್ನು ಅಪೇಕ್ಷಿಸಿ ಬರುವ ತಾ. ೧೦–೭–೪೨ ಒಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ... ವೇತನವನ್ನು ಪಡೆಯಲು ಅರ್ಹರೆಂದು ಕಂಡು ಬಂದವರಿಗೆ ವೇತನವನ್ನು ಕೊಡಲಾಗುವುದು. ಕಾಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ. ವಿಳಾಸ— General Secretary, THE BILLAVAR ASSOCIATION, 17 Rigl u ... Dalal St. 4th Floor, Fort, BOMBAY.

ವರ್ಗಾವರ್ಗಿ

...ಜೆಯ ಮೇಲಿದ್ದ ಶ್ರೀ ಕೆ. ಕೇಶವ ಕಾಸರಗೋಡಿನ ತಹಶಿಲ್ದಾರರಾಗಿಯೂ ಶ್ರೀ ... ಯು. ಪಳ್ಳಿ ಬ್ಯಾರಿಯವರು ಕಾಸರಗೋಡಿನ ಮೆಜಿಸ್ಟ್ರೇಟರಾಗಿಯೂ ಶ್ರೀ ಬಿ. ನರಾಯಣ ಹೆಗ್ಗಡೆಯವರು ಹೊಸದುರ್ಗ ಡಿಪ್ಯುಟಿ ತಹಶಿಲ್ದಾರರಾಗಿಯೂ ... ಕೋರ್ಟಿನ ಮೆಜಿಸ್ಟ್ರೇಟರಾಗಿ ... ಸುಂದರರಾಯರು ಬೆಳ್ತಂಗಡಿ ಡೆಪ್ಯುಟಿ ತಹಶೀಲ್ದಾರರಾಗಿ ವರ್ಗಾಯಿಸಲ್ಪಟ್ಟಿರುವರು.

ಕಟೀಲು

ವಾರ್ಷಿಕ ವರ್ಧಂತಿ

ಇಲ್ಲಿಯ ಶ್ರೀ ದುರ್ಗಾಪರಮೇಶ್ವರೀ ಹಾಯರ್ ಎಲಿಮೆಂಟರಿ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಶ್ರೀಮಾನ್ ಬಿ. ಮಂಜಯ್ಯ ಹೆಗ್ಡೆ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲಿ ನೆರವೇರಿತು. ಹುಡುಗಿಯರಿಂದ ಕೃಷ್ಣ ಪಾರಿಜಾತ ಎಂಬ ನಾಟಕವೂ ಹುಡುಗರಿಂದ ಯಕ್ಷಗಾನ ಒಬು ವಾಹನ ಪ್ರಸಂಗ ಅಭಿನಯಿಸಲ್ಪಟ್ಟವು.

ಮುಖಚಿತ್ರ

ಮೊದಲನೆಯ ಪುಟದಲ್ಲಿರುವ ಮುಖಚಿತ್ರವು ಇಂಗ್ಲೆಂಡಿನ ಶಸ್ತ್ರ ಕಾರ್ಖಾನೆಯಲ್ಲಿ ದುಡಿವ ಭಾರತೀಯ ಕೆಲಸಗಾರನದು.

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು ಹೊರಡುವ ಗಂಟೆ ತಲ್ಪುವ ಗಂಟೆ

ಗೂಡ್ಸು ಬಂಡಿ 6–45 ಬೆಳಿಗ್ಗೆ 7 50 ರಾತ್ರಿ

ಮಲಬಾರು ಎಕ್ಸ್‌ಪ್ರೆಸ್ (ಮೈಲ್) 8 ೨0 ಬೆಳಿಗ್ಗೆ 6 45 ಸಾಯಂ

ಜಾಲಾರ್ ಪೇಟೆ ಪೆಸೆಂಜರ್ 11 0 ಮಧ್ಯಾಹ್ನ 3 40 ಸಾಯಂ

ಕನ್ನನೂರು 6 0 ಸಾಯಂ. 9 30 ಪೂರ್ವಾಹ್ನ

Making "West End" Watches for you



ನಿಮಗಾಗಿ ವೆಸ್ಟ್ ಎಂಡ್ ವಾಚುಗಳನ್ನು ತಯಾರಿಸುವುದು — ದಿ ವೈಂಡಿಂಗ್ ಬಟನ್ — ವೆಸ್ಟ್ ಎಂಡ್ ವಾಚಿನ ಪ್ರತಿಯೊಂದು ಭಾಗವೂ ಸೂಕ್ಷ್ಮ ಕಾವ ಕೆಲಸವಾಗಿದೆ. ಆದರ ವೈಂಡಿಂಗ್ ಬಟನಿನ ವಿಷಯವನ್ನು ಪರಿಶೀಲಿಸಿರಿ. ಇದರಿಂದ ವಾಚು ತಿರುಗಿಸಲ್ಪಟ್ಟು ನಾಜೂಕಾಗಿ ಇಡಲ್ಪಡುತ್ತದಲ್ಲದೆ ಒದ್ದೆ ಧೂಳುಗಳಿಂದ ಹಾಳಾಗದಂತೆ ಮಾಡಲಾಗುತ್ತದೆ. ಇದು ವೆಸ್ಟೆಂಡಿನ ಅನೇಕ ತರದ ಪ್ರಯೋಜನಗಳಲ್ಲೊಂದು. ಧರ್ಮಾರ್ಥ ಕೆಟಲಾಗಿಗೆ ಬರೆಯಿರಿ. ನಿಮಗೆ ಬೇಕಾದ ವೆಸ್ಟೆಂಡ್ ವಾಚನ್ನು ತರಿಸಿರಿ.

ಸೆಕುಂಡ್ಸ್ ನ್ಯೂ ಕೆಲಿಬ್ರೆ ಟೋನಿಯೊ ನಿಕ್ಕಲ್ ಸಿಲ್ವರ್ ರೂ 15 ಎ ಬ್ರೈ ಸ್ಟೀಲ್ ರೂ 53 ರೋಲ್ಡ್ ಗೋಲ್ಡ್ ರೂ 60 18 ಕ್ಯಾ ಗೋಲ್ಡ್ ರೂ 138



ಸೆಕುಂಡಸ್ ನ್ಯೂಕೆಲಿಬ್ರೆ ರೆಕ್ಟೆಂಗುಲರ್

ಕ್ರಯ ಮೇಲೆ ಸೂಚಿಸಿದ್ದು

(a) ವೈಂಡಿಂಗ್ ಬಟನ್ (b) ಮೊಬೈಲ್ ನೆಕ್ (c) ಪ್ರಿಸಿಶನ್ ಫಿಟ್ಟೆಡ್ ಗ್ರೀಸ್ ಚೇಂಬರ್ (d) ಪ್ರೊಟೆಕ್ಟೆಡ್ ವೈಂಡಿಂಗ್ ಸ್ಟೆಮ್ (e) ವಾಚ್ ಕೇಸ್

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಯಿ ಮತ್ತು ಕಲ್ಕತ್ತ

WEST END WATCH CO.
BOMBAY CALCUTTA

ದೇಹದ ಒಳಭಾಗವನ್ನು ಶುಚಿಗೊಳಿಸಿರಿ.



ದೇಹದ ಹೊರಭಾಗವನ್ನು ಶುಚಿವಾಗಿಡುವುದು ಅತ್ಯಗತ್ಯ. ಆದರೆ ಅದಕ್ಕಿಂತಲೂ ಹೆಚ್ಚಿನದು ದೇಹದ ಒಳಭಾಗದ ನೈರ್ಮಲ್ಯ. ... ದೇಹದ ಒಳಭಾಗವು ಶುಚಿಯಾಗಿದ್ದರೆ ... ತಲೆತಿರುಗುವುದೇ ಮೊದಲಾದ ... ತಪ್ಪುವುದು.

ನಿಮ್ಮ ದೇಹದೊಳಭಾಗವನ್ನು ಶುಚಿಯಾಗಿಟ್ಟುಕೊಳ್ಳಲು ಒಂದು ಸುಲಭ ದಿನನಿತ್ಯದ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿ ... ಎಲ್ಲಾ ಅಶುದ್ಧತೆ ... ರಕ್ತವನ್ನು ಶುದ್ಧಿಗೊಳಿಸುತ್ತದೆ. ಆಂಡ್ರೂಸ್ ಉಪಯೋಗಿಸಿದರೆ ಅಭ್ಯಾಸವಾಗುವುದಿಲ್ಲ ... ಸಾಧ್ಯವಾಗುತ್ತದೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ

ANDREWS LIVER SALT

ಆರೋಗ್ಯಕರ ಹಾಗೂ ಘಾತಪ್ರಕೃತಿಯ ... ಇದನ್ನು ಸೇವಿಸಿರಿ ನೈರ್ಮಲ್ಯಗೊಳಿಸುವುದು ... ಶಕ್ತಿಯುಂಟುಮಾಡುವುದು.

ANNOUNCEMENT

From 1st July 1942 to 31st December 1942 the rate of interest allowed on Current Account balances will be half per cent per annum

CANARA BANK, LIMITED

ESTD 1906

(Incorporated i Br Ind a w th L m ted L abil ty)

The Bank of Mangalore Limited.

HEAD OFFICE Mangalore

BRANCHES Moodabidri & Padubidri

ANNOUNCEMENT

On and from 1st February 1942 fixed deposits will be accepted at the following attractive rates

One year	4%
Two years or above	4½%

Interest Payable Quarterly

The Canara Banking Corporation Ltd.

(Incorporated in British India with limited liability)

Estd 1906

OUR RATES OF INTEREST ON DEPOSITS

Current	1%	p a
Savings Bank	2½%	,,
Short-term	1¾%	,,
FIXED FOR 3 MONTHS	2%	,,
6 ,,	2½%	,,
9 ,,	2¾%	,,
12 ,,	3%	,,
24 ,,	3½%	,,

Advances made at cheap rates of interest against approved securities and Banking business of every description transacted.

ವಿಚಿತ್ರ-ವಿಜ್ಞಾನ

ಭಗವದ್ಗೀತೆ ಮೇಲೆ ನಿರ್ಬಂಧ!

ಯುದ್ಧ ಪ್ರಯತ್ನಕ್ಕೆ ಭಾಧಿಸುತ್ತದೆಂದು?

ರೋಯಿಟ್ಸ್ ವಾರ್ತಾ ಪತ್ರಿಕೆಯದೊಂದು ಸುದ್ದಿ ಇದು. ಇಂದಿನ ಕಾಲದಲ್ಲಿ, ಯುದ್ಧ ಸುರುವಾದ ಮೇಲಂತೂ ಹಲವು ವಿಧದ ನಿರ್ಬಂಧಗಳು ಬಂದಿವೆಯಷ್ಟೆ? ಆದರೆ ಸಂಯುಕ್ತ ಪ್ರಾಂತದ ಒಬ್ಬ ಜಿಲ್ಲಾ ಅಧಿಕಾರಿಯು ಯುದ್ಧ ಪ್ರಯತ್ನಕ್ಕೆ ತೊಂದರೆಕೊಡುತ್ತದೆಂದು ಭಗದ್ಗೀತೆಯಮೇಲೆ ನಿರ್ಬಂಧಹಾಕಿದ ವಿಷಯವು ಬಹಳ ವಿಚಿತ್ರದ್ದಾಗಿದೆ. ಆತನು ಯುದ್ಧ ಪ್ರಯತ್ನಕ್ಕೆ ಸಹಾಯಕೂಡಿಸಲು ಜಿಲ್ಲೆಯಲ್ಲಿ ತಿರುಗಾಡುತ್ತಿದ್ದಾಗ, ಆತನಿಗೆ ಯುದ್ಧ ಪ್ರಯತ್ನಕ್ಕೆ ವಿರೋಧವನ್ನುಂಟುಮಾಡುವ 'ಭಗವದ್ಗೀತೆ' ಎಂಬ ಗ್ರಂಥವೊಂದು ಸಾವಿರಾರು ಮಂದಿ ಹಳ್ಳಿಯರಿಂದ ಓದಲ್ಪಡುತ್ತದೆಂಬ ಸುದ್ದಿ ಸಿಕ್ಕಿತು. ಆದರಿಂದಾಗಿ ಆ ಪುಸ್ತಕವನ್ನು, ಪುಸ್ತಕ ಬರೆದ ಗ್ರಂಥಕರ್ತನನ್ನು ನಿರ್ಬಂಧಿಸಬೇಕೆಂದು ಅವನು ಮೇಲಿನ ಅಧಿಕಾರಿಗಳಿಗೆ ತಿಳಿಸಿದನು. ಆದರೆ ಪ್ರಾಂತಿಕ ಸರಕಾರವು ಆ ಪುಸ್ತಕ ಬರೆದ ಶ್ರೀಕೃಷ್ಣ ಭಗವಾನ್ ಸಾವಿರಾರು ವರ್ಷಗಳ ಹಿಂದೆ ಹುಟ್ಟಿದನೆಂದೂ ಅವನ ಮೇಲೆ ನಿರ್ಬಂಧ ಹಾಕುವುದು ತಮಗೆ ಸಾಧ್ಯವಿಲ್ಲವೆಂದೂ ಉತ್ತರ ಇತ್ತರಂತೆ.

ಕೃತಕ ಕಣ್ಣು ಚಲಿಸುತ್ತದೆ!

ಅಮೇರಿಕದಲ್ಲಿ ಇತ್ತೀಚೆಗೆ ಕಂಡು ಹಿಡಿದ ಕೃತಕ ಕಣ್ಣು, ಕಣ್ಣಿನ ಸ್ನಾಯುಗಳ ಚಲನೆಯಿಂದ ಸಹಜ ಕಣ್ಣಿನಂತೆ ಚಲಿಸುತ್ತದೆಯೆಂದು ತಿಳಿದಿದೆ.

ಬಟಾಟೆಯ ಪುಡಿ

ಆಹಾರ ವಸ್ತುಗಳನ್ನು ಬಹು ದಿನಗಳ ತನಕ ಕಾದಿಡುವ ಹಲವು ಪಂಚಿಕೆಯನ್ನು ಇತ್ತೀಚೆಗೆ ಪರಿಶೋಧಕರು ಕಂಡು ಹುಡುಕುತ್ತಾ ಇದ್ದಾರೆ. ಡಾ ವಾಲ್ಟರ್ ಟ್ರಾಸ್ ಎಂಬ ಲಿಥುವೇನಿಯದ ವಿಜ್ಞಾನಿಗಳೊಬ್ಬರು ಬಟಾಟೆಯನ್ನು ಪುಡಿಮಾಡಿ ಸಂಗ್ರಹಿಸುವ ಪರಿಶೋಧನೆಯನ್ನು ಮಾಡಿದ್ದಾರೆ. ಬಟಾಟೆಯನ್ನು ಮುಕ್ಕಾಲು ಪಾಲು ನೀರೇ ಇರುವುದರಿಂದ, ಜಲಾಂಶವನ್ನು ತೆಗೆದುಬಿಟ್ಟರೆ ಉಳಿದ ಭಾಗ ಕಡಿಮೆಯಾಗುವುದು. ಇದನ್ನು ಗೋಧಿ ಹಿಟ್ಟಿನಂತೆ ಪುಡಿಮಾಡಿ ಚೀಲದಲ್ಲಿ ಕಟ್ಟಿ ಸಂಗ್ರಹಿಸಿಡಬಹುದೆಂದು ಅವರು ಹೇಳುತ್ತಾರೆ. ಇಂತಹ ವ್ಯವಸ್ಥೆಮಾಡಿದರೆ ಇದು ಉತ್ತಮವಾಗಿ ವ್ಯಾಪಾರವಾಗಬಹುದೆಂದು ಅವರ ಹೇಳಿಕೆಯಿದೆ.

ಸೆರೆ ಮನೆಯಲ್ಲಿನ ಪ್ರಣಯ ಲೀಲೆ

ಏನೇನೋ ಅನ್ಯಾಯ ಮಾಡಿ ಕಳವೋ, ಕೊಲೆಯೋ ಗೈದು ಹೆಂಗುಸರೂ ಸೆರೆಮನೆ ಸೇರುತ್ತಾರೆ. ಆದರೆ ಅಲ್ಲಿಯೂ ಅವರ ವಿಲಾಸ ವಿಭ್ರಮಕ್ಕೆ ಕಡಿಮೆಯಾಗುವುದಿಲ್ಲ. ಅಲ್ಲಿ ಪೌಡರ್ ಸಿಗದಿದ್ದರೆ ಮುಖಕ್ಕೆ ಗೋಡೆಯ ಸುಣ್ಣ ಬಳಿದುಕೊಳ್ಳುವರಂತೆ. ಅಲ್ಲಿ ಅವರು ಕಾಣುವುದೆಂದರೆ ಅವರಂತೆ ಕೊಲೆ ಕಳವು ಮಾಡಿ ಬಂದ ಗಂಡುಸರನ್ನು. ಅವರನ್ನು ಒಲಿಗೆ ಕೆಡವಲು ಅವರು ಮಾಡುವ ಮಾಟಗಳು ಹಲ ತೆರದವುಗಳಿವೆ. ಒಬ್ಬ ಸ್ತ್ರೀ ಬಂಧಿಯ ಪ್ರಣಯ ಪಾಶಕ್ಕೆ ಬಲಿಬಿದ್ದ ಸೆರೆಮನೆಯ ಅಧಿಕಾರಿಯು, ಅವಳ ಬಿಡುಗಡೆಗಾಗಿ, ಒಬ್ಬ ವಕೀಲನನ್ನು ನೇಮಿಸಿ ವಾದಿಸಿ, ಬಿಡುಗಡೆ ಮಾಡಿಸಿಕೊಂಡು ವಿವಾಹವಾದನು. ಇನ್ನೊಬ್ಬಳು ಸೆರೆಮನೆಯ ಕೈದಿಗಳನ್ನು ನೋಡ ಬಂದ ನ್ಯಾಯಾಧೀಶನು ತನ್ನ ಪ್ರಣಯಕ್ಕೆ ಬಲಿಬೀಳಲಿಲ್ಲವೆಂಬ ಕೋಪದಿಂದ ಆತನು ತನ್ನ ಮಾನಕೆಡಿಸಿದನೆಂದು ಅವನ ಮೇಲೆ ಮಾನ ನಷ್ಟದ ದಾವೆ ಹೂಡಿದ್ದಾಳೆ. ಸೆರೆಮನೆಯಲ್ಲಾದರೂ ಪ್ರಣಯಲೀಲೆ ಹೇಗಿದೆ ನೋಡಿ!

ಯುದ್ಧೋಪಕರಣಗಳು

ಅವುಗಳ ಬೆಲೆ

ತುಪಾಕಿ ಗುಂಡಿನಿಂದ ಬಾಂಬು ವಿಮಾನಗಳವರೆವಿಗೆ, ಕೆಲವು ಯುದ್ಧೋಪಕರಣಗಳನ್ನು, ಅವುಗಳ ಬೆಲೆಯೊಡನೆ ಇಲ್ಲಿ ನಿರೂಪಿಸಲಾಗಿದೆ.

ನೀವು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ನಿಯೋಜಿಸುವ ಹಣವು, ಆಕ್ರಮಣಶೀಲನಾದ ವೈರಿಯ ಧಾಳಿಯಿಂದ ನಿಮ್ಮನ್ನು ಮತ್ತು ನಿಮ್ಮದೇಶವನ್ನು ರಕ್ಷಿಸಲು ಅವಶ್ಯಕವಾದ ಈ ಉಪಕರಣಗಳನ್ನು ಕೊಳ್ಳಲು ನೆರವಾಗುತ್ತದೆ.

ತುಪಾಕಿಗುಂಡು ೧ ಆಣೆ

ಮರಳಿನಚೀಲ ಒಂದಕ್ಕೆ ೨ ಆಣೆ

ಪಿಸ್ತೂಲು ರೂ ೫೦

ರೈಫಲ್ ರೂ ೧೦೦

ಟಾಮಿಗನ್ ರೂ ೬೫೦


ಮೆಷೀನ್‌ಗನ್ ರೂ ೧,೮೦೦

ಲಘು ವಿಮಾನವಿನಾಶಕ ಫಿರಂಗಿ ರೂ ೪೦,೦೦೦

ಹೋರಾಟ ವಿಮಾನ ರೂ ೧ ೪೦,೦೦೦


ಮಧ್ಯಮವರ್ಗದ ಟ್ಯಾಂಕ್ ರೂ ೨ ೦೭,೦೦೦

ಬಾಂಬು ವಿಮಾನ ರೂ. ೨,೭೦,೦೦೦

ರಕ್ಷಣೆ ಮತ್ತು ಲಾಭಕ್ಕಾಗಿ ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಪ್ರತಿರೂ.೧೦/ಗೆ ರೂ.೩/೮ ಲಾಭ ಬರುತ್ತೆ. ಪೂರ್ತಿ ವಿವರಗಳು ಪೋಸ್ಟಾಫೀಸುಗಳಿಂದ

ಇಂಡಿಯಾದ ಯುದ್ಧಶಕ್ತಿಯನ್ನು ಬೆಳೆಸಿರಿ

ಜಿಲ್ಲಾ ಸಮಾಚಾರಗಳು

ಮಂಗಳೂರು

ಎ ಆರ್ ಪಿ. ಏರ್ಪಾಡು

ಎ. ಆರ್. ಪಿ. ಏರ್ಪಾಡುಗಳು ಮಂಗಳೂರಲ್ಲಿ ನಡೆದಿವೆ. ಪಟ್ಟಣದ ಹಲವು ಭಾಗಗಳಲ್ಲಿ ವಾರ್ಡನ್ನರೂ ಹಾಗೂ ಮೆಸೆಂಜರುಗಳು ನೇಮಕಗಳಾಗಿರುವದಲ್ಲದೆ ಅನೇಕ ಮಂದಿ ತರಬೇತಿಯನ್ನೂ ಹೊಂದುತ್ತಿರುವರು. "ಫಸ್ಟ್ ಏಡ್" ತರಬೇತಿ ಕ್ಲಾಸುಗಳೂ ನಡೆಯುತ್ತಿವೆ ಶ್ರೀ. ಜಿ. ಸೋಮಶೇಖರರಾಯರು ಮುಖ್ಯ ವಾರ್ಡನ್ನರಾಗಿ ನೇಮಕ ಹೊಂದಿರುತ್ತಾರೆ

ಸೋವಿಯಟ್ ಮತ್ತು ಚೈನಾ ಸೌಹಾರ್ದ ಸಮಿತಿ:—

ತಾ ೧೪ರಂದು ಸಂಜೆ, ಥಿಯಾಸಫಿಕಲ್ ಲಾಜಿನಲ್ಲಿ ಸೋವಿಯಟ್ ರಷ್ಯ ಮತ್ತು ಚೈನಗಳೊಡನೆ ಸಹಾನುಭೂತಿ ತೋರಿಸುವವರ ಸಭೆಯೊಂದು ಶ್ರೀ ಎ ಬಿ ಶೆಟ್ಟಿ, ಎಂ. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತರು ಬಿ ವಿ ಕಕ್ಕಿಲ್ಲಾಯ, ಎಸ್. ಎಲ್. ಉಪಾಧ್ಯಾಯ, ಎಸ್ ಮುಕುಂದರಾವ್, ಕೆ ಬಿ ಜಿನರಾಜ ಹೆಗ್ಡೆ, ಎಂ ಎಲ್ ಎ [ಕೇಂದ್ರ] ಇವರು ಸೋವಿಯೆಟ್ ಮತ್ತು ಚೈನಾ ಸೌಹಾರ್ದ ಸಮಿತಿಯೊಂದನ್ನು ಸ್ಥಾಪಿಸುವುದರ ಅವಶ್ಯತೆ ಮತ್ತು ಆ ಸಮಿತಿಯು ರಷ್ಯ ಮತ್ತು ಚೈನಗಳ ವಿಚಾರದಲ್ಲಿ ಜನರಲ್ಲಿರುವ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಲು ಕೈಕೊಳ್ಳಬೇಕಾದ ಪ್ರಚಾರ ಕಾರ್ಯಗಳ ಕುರಿತು ಮಾತನಾಡಿದರು ಸಭೆಯಲ್ಲಿ ಆರಿಸಲ್ಪಟ್ಟ ಸೌಹಾರ್ದ ಸಮಿತಿಯಲ್ಲಿ ಶ್ರೀ ಎ ಬಿ ಶೆಟ್ಟರು ಅಧ್ಯಕ್ಷರಾಗಿಯೂ ಶ್ರೀ ಕೆ ಬಿ ಜಿನರಾಜ ಹೆಗ್ಡೆ ಅವರು ಉಪಾಧ್ಯಕ್ಷರಾಗಿಯೂ ಇರುವರು ಶ್ರೀಯುತರು ಬಿ ವಿ ಕಕ್ಕಿಲ್ಲಾಯ ಮತ್ತು ಕು ಶಿ ರಾಯ ಇವರು ಜತೆ ಕಾರ್ಯದರ್ಶಿಗಳು ಜನಾಬ್ ಎಂ ಸಿ ಅಹ್ಮದ್, ಅಡ್ವೋಕೇಟ್, ಶ್ರೀಗಳಾದ ಎಸ್ ಮುಕುಂದರಾವ್ ಎಂ ಎ, ಎಲ್ ಟಿ, ಎ ಕೃಷ್ಣಯ್ಯ ಶೆಟ್ಟಿ ಕೆ ಎಸ್ ಅಹ್ಮದ್ ಬ್ಯಾರಿ, ಸಿಮ್ಸನ್ ಸೋನ್ಸ್, ಕೇಶವ ಕಾಮತ್, ಕೆ ಕೇಶವ ನಾಯಕ್, ಕೆ ಕೃಷ್ಣರಾವ್, ಬಿ ಎ ವಿ ಆರ್ ಕ್ಯೊಲೂರ್ಕರ್ ಕೆ ಕೆ ಶೆಟ್ಟಿ ಮತ್ತು ಡಾ। ಎಚ್ ಎಚ್ ಮತೆಯರ್ ಇವರು ಕಾರ್ಯಕಾರಿ ಸಮಿತಿಯ ಸದಸ್ಯರು

ಕಾಂಗ್ರೆಸ್ ಕಚೇರಿಯನ್ನು ಒಯ್ಯಲಾಗಿದೆ

"ಈ ವರೆಗೆ ಪೆಲಿಕ್ಸ್‌ಪೈ ಬಜಾರಿನಲ್ಲಿದ್ದ ದ ಕ ಜಿಲ್ಲಾ ಕಾಂಗ್ರೆಸ್ ಕಛೇರಿ ಮತ್ತು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಛೇರಿಯನ್ನು ತಾ ೧೦—೬—೪೨ರಲ್ಲಿ ಕೊಡಿಯಾಲಬೈಲಿನಲ್ಲಿ ಸಿ ಪಿ ಸಿ ಕಂಪೌಂಡಿನಲ್ಲಿರುವ ಹೊಸ ಕಟ್ಟಡಕ್ಕೆ (ವಿದ್ಯಾರ್ಥಿ ಭವನಗೆದುರು) ಒಯ್ಯಲಾಗಿದೆ ಮಹಾ ಜನರು ಇನ್ನು ಮುಂದೆ ಯಾವತ್ತೂ ಪತ್ರ ವ್ಯವಹಾರವನ್ನು ಈ ಹೊಸ ವಿಳಾಸಕ್ಕೆ ಮಾಡಬೇಕಾಗಿ ಸೂಚನೆ"

ಕನ್ನಡ ನ್ಯೈಲಿ ಯುವಕ ಸಂಘದ

ಚತುರ್ಥ ವಾರ್ಷಿಕೋತ್ಸವವು ಕಳೆದ ತಾ. ೭ನೇ ಸಾಯಂಕಾಲ ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಶ್ರೀ। ಬಿ ಗಂಗಾಧರದಾಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷರಾದ ಶ್ರೀ ಬಿ. ಗಣೇಶಯ್ಯವರು ಗತ ವರ್ಷದ ವರದಿಯನ್ನೋದಿದರು. ಸಭಿಕರ ಪೈಕಿ ಶ್ರೀ। ಜೆ ಕೃಷ್ಣರಾಯರೂ ಶ್ರೀ। ಪಿ ಕೆ ನಾರಾಯಣನವರೂ ಭಾಷಣ ಮಾಡುತ್ತ ಸಂಘದ ಏಳಿಗೆಯನ್ನು ಬಯಸಿದರು. ಅನಂತರ ಸಂಗೀತ ಅಂಗಸಾಧನೆಗಳ ದೇಖಾವೆಗಳೂ, ತುಳು ನಾಟಕವೂ ಪ್ರದರ್ಶಿಸಲ್ಪಟ್ಟ ತರುವಾಯ ಧನ್ಯವಾದ ಮಂಗಳ ಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು

ಸೌಹಾರ್ದ ಸಮಿತಿ

ರಷ್ಯ ಚೈನಗಳ ನಿಜವಾದ ಸ್ಥಿತಿಯನ್ನು ಜನರಿಗೆ ತಿಳಿಸಿ ಈ ರಾಷ್ಟ್ರಗಳೊಡನೆ ಮಿತ್ರತ್ವವನ್ನು ಬೆಳೆಸುವುದಕ್ಕೆ ಸಹಾಯವಾಗುವಂತೆ ರಷ್ಯ ಚೈನ ಸೌಹಾರ್ದ ಸಮಿತಿಯೊಂದನ್ನು ಸ್ಥಾಪಿಸುವ ಉದ್ದೇಶದಿಂದ ಕಳೆದ ತಾ. ೮ನೇ ಸಾಯಂಕಾಲ ಕಾಂಗ್ರೆಸ್ ಕಚೇರಿಯಲ್ಲಿ ಒಂದು ಸಭೆ ಜರಗಿತು. ಜ ಯೆಂ. ಸಿ ಅಹ್ಮದ್ ಅವರು ಅಗ್ರಾಸನ ವಹಿಸಿದ್ದರು ಶ್ರೀ। ಬಿ ವಿ ಕಕ್ಕಿಲ್ಲಾಯರೂ ಶ್ರೀ। ಎಸ್ ಎಲ್ ಉಪಾಧ್ಯಾಯರೂ ಸೌಹಾರ್ದ ಸಮಿತಿಯ ಉದ್ದೇಶಗಳನ್ನು ವಿವರಿಸಿ ಈ ಸಂಘದಲ್ಲಿ ಎಲ್ಲ ಪಕ್ಷಗಳವರೂ ಸೇರಿ ಕೆಲಸ ಮಾಡಲವಕಾಶವಿದೆಯೆಂದು ಹೇಳಿದರು. ಅಧ್ಯಕ್ಷರು ಸಂಘದ ಉದ್ದೇಶವನ್ನು ಸಮರ್ಥಿಸಿ ಮಂಗಳೂರಿನ ಮತ್ತು ಜಿಲ್ಲೆಯ ಹೆಚ್ಚು ಮಂದಿಯನ್ನು ಈ ಸಭೆಗೆ ಸೇರುವಂತೆ ಮಾಡಬೇಕೆಂದರು. ಧನ್ಯವಾದಗಳೊಂದಿಗೆ ಸಭಾಂತ್ಯವಾಯಿತು

ನಗರ ಸಭೆ

ಯ ಸಾಮಾನ್ಯ ಸಭೆಯೊಂದು ನಗರ ಸಭಾಧ್ಯಕ್ಷ ಶ್ರೀ। ಬಿ ವಿ ಬಾಳಿಗರ ಅಧ್ಯಕ್ಷತೆಯಲ್ಲಿ ತಾ ೮ರಂದು ಸಂಜೆ ಜರಗಿತು ರಾಜ್ಯ ರಕ್ಷಣೆಗಾಗಿ ಸರಕಾರವು ಊರಿಗಳನ್ನೆಲ್ಲಾ ಕೊಂಡೊಯ್ದಾಗ ನಗರದ ಕೊಳೆ ವಸ್ತುಗಳನ್ನು ಹೇಗ ಸಾಗಿಸಬೇಕೆಂಬುದರ ಕುರಿತು ಹೆಲ್ತ್ ಇನ್ಸ್‌ಪೆಕ್ಟರರ ಸೂಚನ ಹೊಂದ ತೋಡಿ ಪಾಯಖಾನೆಗಳನ್ನು ರಚಿಸಬೇಕೆಂಬ ಅವರ ಸಲಹು, ಇವುಗಳ ಕುರಿತು ಒಂದು ನಿರ್ಧಾರಕ್ಕೆ ಬರಲು ಡಾ। ಗಳು ಯು ಪಿ ಮಲ್ಯ, ಎಚ್ ವಿ ಶಿವಪ್ಪ, ರಾಘವೇಂದ್ರ ಪೈ, ಉಪೇಂದ್ರ ಪೈ ಮತ್ತು ವಿಠಲಶೆಟ್ಟಿ ಇವರನ್ನೊಳಗೊಂಡ ಒಂದು ಸಮಿತಿಯು ರಚಿಸಲ್ಪಟ್ಟಿತು. ಪೋರ್ಟ್ ಕನ್ಸರ್ವೆನ್ಸಿ ಬೋರ್ಡಿನಲ್ಲಿ ನಗರ ಸಭೆಗೆ ಒಂದು ಸ್ಥಾನ ಕೊಡಲು ಸಾಧ್ಯವಿಲ್ಲವೆಂದು ಸರಕಾರವೂ ಹಳೆಯ ಅಗ್ನಿ ನಿರೋಧಕ ಯಂತ್ರವನ್ನು ನಗರ ಸಭೆಗೆ ಹಿಂದಿರುಗಿಸುವುದು ಸಾಧ್ಯವಿಲ್ಲವೆಂದು ಎ ಆರ್ ಪಿ ಕಂಟ್ರೋಲರೂ ಕಳುಹಿದ ಉತ್ತರಗಳು ರೆಕಾರ್ಡ್ ಮಾಡಲ್ಪಟ್ಟುವು ಮಾರ್ಕೆಟಿನ ಕೂಲಿಗರಿಗೆ ೧೯೪೧ ಆಗಸ್ಟಿನಿಂದ ದಶಂಬರದ ತನಕದ ತುಟ್ಟಿ ಭತ್ತೆಯನ್ನು ತಿಂಗಳಿಗೊಂದು ರೂಪಾಯಿಯಂತೆ ಈಗ ಕೊಡಲು ನಿರ್ಧರಿಸಲಾಯಿತು. ಹಲವರಿಂದ ಹೊಸ ಕಟ್ಟಡ ಕಟ್ಟಲು ಕಮಿಶನರು ಸಮ್ಮತಿಸದುದು — ಕಟ್ಟಿಸುದನ್ನು ತಗೆಯಲು ಆಜ್ಞಾಪಿಸಿದುದು—ಇವುಗಳ ಕುರಿತು ಬಂದಿದ್ದ ದೂರುಗಳನ್ನು ಪರ್ಯಾಲೋಚಿಸಲು ಒಂದು ಸಮಿತಿಯು ಏರ್ಪಟ್ಟಿತು ಬೊಕ್ಕಪಟ್ಣ ಹಿಂದುಸ್ಥಾನಿ ಶಾಲೆಗೆ ಹೊಸ ಕಟ್ಟಡಕ್ಕಾಗಿ ೧೬೦೦ ರೂಗಳು ಮಂಜೂರಾದುವು ಉರ್ವದಲ್ಲಿರುವ ಕ್ವಾರಂಟೈನ್ ಶೆಡ್ಡಿನ ಜಾಗ ಕೋಣಗಳು ತಮಗೆ ಅವಶ್ಯವಿದೆ ಎಂದು ಎ ಆ ಪಿ ಅಧಿಕಾರಿಗಳು ಬರೆದಿದ್ದರು ಆ ಶೆಡ್ಡಿನ ಒಂದು ಕೋಣೆಯಲ್ಲಿ ಈಗ ಇರುವ ಸ್ಪೋರ್ಟ್ಸ್ ಸಂಘವನ್ನು ಇನ್ನು ಮುಂದೆಯೂ, ಇರಗೊಡಿಸಬೇಕೆಂದು ಸಂಘದಿಂದ ಬಂದ ಒಂದು ಬಿನ್ನಹವು ಸ್ವೀಕರಿಸಲ್ಪಟ್ಟಿತು

ಸಭಾರಂಭದಲ್ಲಿ ಅಧ್ಯಕ್ಷರು, ಉದ್ಯೋಗದಿಂದ ನಿವೃತ್ತರಾಗುವುದಕ್ಕೆ ಮುಂಚೆ ೪ ವರ್ಷಗಳ ರಜೆ ಪಡೆದು ಹೋದ ಕಮಿಶನರ ವಂದನೆಗಳನ್ನು ಸಭಾಸದರಿಗೆ ಅರ್ಪಿಸಿದರು

ಬಾಲಾಜಿ ಟಾಕೀಸ್

ಇಲ್ಲಿ ತಾ 19ರಂದ 2 ದಿನಗಳ ವರೆಗೆ ಯುನೈಟೆಡ್ ಆರ್ಟಿಸ್ಟ್ಸ್‌ನವರ "ಎಡ್ವೆಂಚರ್ಸ್ ಆಫ್ ಟೋಮ್ ಸೋಯರ್" ಎಂಬ ನೈಸರ್ಗಿಕ ಚಿತ್ರವೂ, ತಾ, 21ರಿಂದ ಮೋಹನ್ ಪಿಕ್ಚರ್ಸ್‌ನವರ "ಬುಲ್‌ಬುಲೇ ಬಗ್ದಾದ್" ಚಿತ್ರವೂ ಪ್ರದರ್ಶಿಸಲ್ಪಡುವುವು ಎಡ್ವೆಂಚರ್ಸ್ ಆಫ್ ಟೋಮ್ ಸೋಯರ್ ಕಥೆ ಅಮೆರಿಕದ ಪ್ರಸಿದ್ಧ ಕಾದಂಬರಿಗಾರನಾದ ಮಾರ್ಕ್‌ಟ್ವೈನನ ಕಾದಂಬರೀ ಕಥೆ ಬುಲ್‌ಬುಲೇ ಬಗ್ದಾದಿನಲ್ಲಿ ಇಂದುರಾಣಿ ಗುಲಾಬ್ ಮೊದಲಾದವರು ಅಭಿನಯಿಸುತ್ತಾರೆ

ಡೋಂಗರೆ ಬಾಲಾಮೃತವು ಮಕ್ಕಳಿಗೆ ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಕಲಿಯುಗವು ಎಂದು ಅಂತ್ಯವಾಗುವುದು? ಕೃತಯುಗದಾರಂಭವೆಂದು?
ಕಲ್ಕ್ಯವತಾರವು ಈಗಾಗಲೇ ಆಗಿರುವುದೇ?
ಶಂಭಳ ಗ್ರಾಮದಲ್ಲಿ ಕಲ್ಕಿ ಭಗವಾನ್ ಜನ್ಮವೆತ್ತಿದನು!
ಈ ವಿಚಾರಗಳು ನಿಮಗೆ ತಿಳಿಯಬೇಕೆಂದಾದರೆ, ಓದಿನೋಡಿರಿ
ವಿದ್ವಾನ್ ಕೆ ಎಂ ಕರಿಬಸವ ಶಾಸ್ತ್ರಿಗಳಿಂದ ವಿರಚಿತವಾದ
ಕೃತಯುಗಾಂತ ಕೃತಯುಗಾರಂಭ ವಿಚಾರ
(ವ ೩೨ ಹಿಂದೀ ಟೀಕಾವಸಿ)
ಬೆಲೆ: ಆಣೆ ೮
ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಮನೋರಂಜಕ ಬೋಧಪ್ರದ ಪುಸ್ತಕ
"ಕಲಿಯುಗದ ಲಾವಣಿ"
ಕ್ರಯ 0-0-9
ವಿಚಾರಪೂರಿತ ಅನುಭವಪೂರ್ಣ ಜ್ಯೋತಿಷ್ಯ ವಿದ್ಯಾ ಸಂಸ್ಕಾರ ಪುಷ್ಟವಾದ
೧೯೪೨ನೇ ವರ್ಷದ ಪ್ರಪಂಚದ ಭವಿಷ್ಯತ್ತು
ಕ್ರಯ: 0-4-0
ಸೋಲ್ ಏಜಂಟ್ಸ್ ಯು ಜಿ ಮೂನ್ ಎಂಡ್ ಬ್ರದರ್ಸ್, [illegible]
ಮಂಗಳೂರಿನಲ್ಲಿ ಸಿಗುವ ಸ್ಥಳ
ವಾಣಿಸಾಹಿತ್ಯ ಮಂದಿರ [illegible]

ಅಕಸ್ಮಾತ ಶೀತದಿಂದ ನಿಮೋನಿಯಾ ಜ್ವರಬರಬಹುದು.
ಪೆಪ್ಸ ನಿಮ್ಮ ಬಾಯಲ್ಲಿ ಕರಗಿ, ಅದರ ಅಮೂಲ್ಯ ಔಷಧಿಯ ಸಾರಗಳು ಗಂಟಲುರಿಯನ್ನು ಉಪಶಮನಗೊಳಿಸಿ, ಶ್ವಾಸನಾಳವನ್ನು ಸರಿಪಡಿಸಿ ನೆಗಡಿ ಮತ್ತು ಇಂಪ್ಲುಯೆಂಜಾ ಉಂಟುಮಾಡುವ ವಿಷಾಣುಗಳನ್ನು ನಾಶಪಡಿಸುತ್ತದೆ ಕ್ರಯ ಒಂದು ರೂಪಾಯಿ
ಪೆಪ್ಸ ಕೊಂಡುಕೊಳ್ಳಿರಿ



PEPS
ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 1?1 1940
R F P No 2?5/1942
R E No ?6/1942

ಕಾವೂರು ಪೂಜಾರಿ—ವಾದಿಳು ಅರ್ಜಿದಾರಳು

ಮತ್ತು

ಸಂಕಯ್ಯ ಪೂಜಾರಿ ಸಹಾ—ಪ್ರತಿವಾದಿರು ಎದ್ರಿರು

ಇವರೊಳಗೆ

ಸದ್ರಿ ವ್ಯವಹರಣೆಯ ೩ನೇ ಎದ್ರಿ ವಾಮನ ಕಮ್ತಿ ದೋಳ ವೆಂಕಟೇಶ ಕಮ್ತಿ ರ ಮಗ ಕಾರ್ಕಳ ತಾಲ್ಲೂಕು ಪ್ರೋಳ ಗ್ರಾಮಸ್ಥ ಇವರಿಗೆ ಈ ಮೂಲಕ ತಿಳಿಸುವದೇನೆಂದರೆ ಮೇಲ್ಕಂಡ ಅಮಲ್ದಾರಿಯಲ್ಲಿ ಡಿಕ್ರಿಯಲ್ಲಿ ಮಾರಾಟಕ್ಕೆ ಬಾಧಿಯಿರುವ ಸ್ಥಿರಾಸ್ತಿ ಏಲಮಿಗೆ ಅಪೇಕ್ಷಿಸಿ ಅರ್ಜಿದಾರಳು ಇಸ್ತಿಹಾರು ಹಾಜ್ರುಪಡಿಸಿ ವ ಆಸ್ತಿ ಏಲಂ ಸಮಯ ಬರುವ ಸೆಟ್ ಆಫ್ ಕೂಡಾ ಪರ್ಮಿಶನ್ ಕೇಳಿ ಅರ್ಜಿ ಕೊಟ್ಟಿರುವುದರಿಂದ ಅವುಗಳ ಕುರಿತು ನಿಮಗೇನಾದ್ರು ಆಕ್ಷೇಪವಿದ್ರೆ ತಾ 15-7-42ನೆ ದಿನ ದಿನ್ನ 10 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹ ಯಾ ವಕೀಲ್‌ದ್ವಾರಾ ಹಾಜ್ರಾಗಿ ಉದಹರಿಸತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜರಿ ಸಂಬಂಧ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ

(By order of the Court)

Karkala 16-7-42 — N Mohandas Adyanthaya, Advocate for petitioner

ಶತ್ರುಗಳ ಪ್ರಚಾರವನ್ನು ನಂಬಿ ತನ್ನ ಜೀವಮಾನದಲ್ಲಿ ಉಳಿಸಿಟ್ಟದ್ದನ್ನೆಲ್ಲಾ ಅವನು ಕಳೆದುಕೊಂಡನು



1 ಜನಗಳು ಗಾಬರಿಗೊಂಡಿರುವಾಗ ಬಣಜಿಗನಿಗೆ ಸುಗ್ಗಿಯ ಕಾಲ. ಅವನಿಗೆ ಒಳ್ಳೆ ವ್ಯಾಪಾರವಾಗುವುದು ಪ್ರಸಾದ್‌ಗೆ ತನ್ನ ಬೆಲೆಯುಳ್ಳ ಸೊತ್ತುಗಳನ್ನು ಮಾರಲು ಸುಲಭವಾಗಿ ಕಾಣುತ್ತದೆ—ಅವುಗಳ ಅರ್ಧ ಬೆಲೆಗೆ.

2 ರೈಲ್ವೆ ಸ್ಟೇಷನ್ನಿನಲ್ಲಿ ಪ್ರಸಾದ್ ಮತ್ತು ಆತನ ಹೆಂಡತಿಯು ಗಾಡಿಯಲ್ಲಿ ಜಾಗಕ್ಕಾಗಿ ಹೊಡೆದಾಡುತ್ತಾರೆ ಇವರಂತೆಯೇ ಸಾವಿರಾರು ಜನಗಳು ಇತರರೂ ದಿಗಿಲು ಬಿದ್ದಿರುತ್ತಾರೆ ಸ್ಟೇಷನ್ನಿನಲ್ಲಿ ಸಾಮಾನುಗಳು ಉಳಿದು ಹೋಗುತ್ತವೆ ಮತ್ತು ಮಕ್ಕಳಿಗೆ ಘಾಯವಾಗುತ್ತದೆ

3 ದೂರ ದೇಶದಲ್ಲಿ ಕೆಲಸವಿಲ್ಲದೇಯೂ ಮತ್ತು ದುಃಖಿಯಾಗಿಯೂ ಪ್ರಸಾದ್ ಪ್ರತಿದಿನವೂ ವೃತ್ತಪತ್ರಿಕೆಗಳನ್ನು ಓದುತ್ತಾನೆ ಆದರೆ ವಾರಗಳು ಒಂದರ ಹಿಂದೆ ಒಂದಾಗಿ ಕಳೆದು ಹೋಗುತ್ತವೆ ಮತ್ತು ಪಟ್ಟಣಕ್ಕೆ ಅನಾಹುತವೇನೂ ಆಗುವುದಿಲ್ಲ ಅಷ್ಟರಲ್ಲಿ ಅವನ ಕೈಯಲ್ಲಿದ್ದ ಹಣವೆಲ್ಲಾ ಖರ್ಚಾಗಿ ಹೋಗುತಿರುತ್ತದೆ ಮತ್ತು ಅವನ ಹೆಂಡತಿಯು ಬಹು ವ್ಯಸನಪಡುತ್ತಿರುತ್ತಾಳೆ

4 ಕೊನೆಗೆ ಶತ್ರುಗಳ ರೇಡಿಯೊ ತನ್ನನ್ನು ಹೆದರಿಸುವುದಕ್ಕಾಗಿ ಸುಳ್ಳುಗಳನ್ನು ಪ್ರಚಾರಿಸುತ್ತಿದೆಯೆಂದು ತಿಳಿದುಕೊಂಡು ಪ್ರಸಾದ್ ತನ್ನ ಕೆಲಸಕ್ಕೆ ಪುನಃ ಸೇರುವುದಕ್ಕಾಗಿ ಪಟ್ಟಣಕ್ಕೆ ವಾಪಸು ಬರುತ್ತಾನೆ ಇನ್ನು ಮೇಲೆ ದಿಗಿಲು ಬೀಳುವುದಿಲ್ಲವೆಂದು ಅವನ ನಿರ್ಧರಿಸುತ್ತಾನೆ!

5 ತನ್ನ ಸಾಮಾನುಗಳಲ್ಲಿ, ಕೆಲವನ್ನು ಕೊಂಡುಕೊಳ್ಳುವುದಕ್ಕೆ ಹೋದಾಗ, ಬಣಜಿಗನು ಸಾಮಾನುಗಳನ್ನು ತಾನು ಕೊಂಡುಕೊಂಡ ಬೆಲೆಗೆ ಕೊಡುವುದಿಲ್ಲ ಪೂರಾ ಬೆಲೆಯನ್ನು ಕೇಳುತ್ತಾನೆ ಪ್ರಸಾದ್ ಅಷ್ಟು ಬೆಲೆಯನ್ನು ಕೊಟ್ಟು ಸಾಮಾನುಗಳನ್ನು ಕೊಂಡುಕೊಳ್ಳಲು ಶಕ್ತನಾಗಿರುವುದಿಲ್ಲ. ಪ್ರಸಾದ್, ತನ್ನ ಅಂಜುಬುರುಕುತನದಿಂದ ತಾನು ತನ್ನ ಜೀವಮಾನದಲ್ಲಿ ಉಳಿಸಿಟ್ಟಿದ್ದನ್ನೆಲ್ಲಾ ಕಳೆದುಕೊಂಡನೆಂದು ತಿಳಿದುಕೊಳ್ಳುತ್ತಾನೆ

ಶತ್ರುಗಳ ಪ್ರಚಾರಗಳು, ಉದ್ದೇಶಪೂರ್ವಕವಾಗಿ, ಯೋಚನಾಪರರಲ್ಲದ ಜನರನ್ನು ಹೆದರಿಸಿ ಸುಳಿಯಲ್ಲಿ ಸಿಕ್ಕಿಸುತ್ತದೆ ಅವರ ಉದ್ದೇಶವೇನೆಂದರೆ ನಿಮ್ಮನ್ನು ಹೆದರಿಸಿ, ನಿಮ್ಮ ಕೆಲಸದಿಂದ ನಿಮ್ಮನ್ನು ಓಡಿಸಿ ಇಂಡಿಯಾ ದೇಶವನ್ನು ಬಲಹೀನ ಮಾಡುವುದು ಆದರೆ ಬಿ ಬಿ ಸಿ ಮತ್ತು ಎ ಐ ಆರ್ ಪ್ರಚಾರಗಳು—ನಿಮ್ಮ ಸ್ವಂತ ಪ್ರಚಾರಗಳು—ನಿಜವಾದ ಸಂಗತಿಗಳನ್ನು ತಿಳಿಸಿ ನಿಮಗೆ ಸಹಾಯ ಮಾಡುವುದಕ್ಕಾಗಿ ಏರ್ಪಡಿಸಲ್ಪಟ್ಟಿವೆ. ನಿಮ್ಮ ಶತ್ರುಗಳನ್ನು ನಂಬದೆ, ನಿಮ್ಮ ಸ್ನೇಹಿತರನ್ನು ನಂಬಿ, ವ್ಯಸನದಿಂದಲೂ, ದ್ರವ್ಯನಷ್ಟದಿಂದಲೂ ಪಾರಾಗಿರಿ

ಬಿ.ಬಿ.ಸಿ. ಮತ್ತು ಎ.ಐ.ಆರ್.

ಸಮಾಚಾರಗಳಿಗೂ ಮತ್ತು ಪ್ರೋಗ್ರಾಮ್‌ಗಳಿಗೂ ರೇಡಿಯೋವನ್ನು ತಿರುಗಿಸಿರಿ

ವದಂತಿಗಳನ್ನು ನಂಬಬೇಡಿ

ಜಪಾನಿಯರನ್ನು ಎದುರಿಸುವುದಕ್ಕಾಗಿ ಇಂಡಿಯಾ ದೇಶದ **ಯುದ್ಧಮುಖವನ್ನು** ರಚಿಸಿರಿ

ಸಿನೆಮಾ ಪುಟ

ಗಾಡಿಯಿಂದ ಕೆಳಗೆ ಬಿದ್ದು ಶಾಂತಾ ಆಪ್ಟೆಗೆ ಗಾಯವಾಗಿದೆ!

ಲಾಹೋರಿನ ಸ್ಟುಡಿಯೋ ಒಂದರಲ್ಲಿ ಷೂಟಿಂಗ್ ನಡೆಯುತ್ತಿದ್ದಾಗ, ಶಾಂತಾ ಆಪ್ಟೆ ಗಾಡಿಯಿಂದ ಕೆಳಗೆ ಬಿದ್ದು ಎದೆ, ಕುತ್ತಿಗೆಗಳಿಗೆ ಗಾಯವಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವಳೆಂದು ಸುದ್ದಿ ಬಂದಿದೆ.

ಶಾಂತಾ ಆಪ್ಟೆ ನಡಿಸುವ ಚಿತ್ರದ ಬಗ್ಗೆ ಆಕೆ ಒಂದು ಗಾಡಿಯ ಮೇಲೆ ಹುಲ್ಲಿನ ರಾಶಿಯಲ್ಲಿ ಕುಳಿತಿದ್ದು, ಆ ಗಾಡಿಯ ಅಡಿಹಲಗೆ ಗಟ್ಟಿಯಿಲ್ಲದ ಕಾರಣ ಅದು ಮುರಿದು ಕೆಳಗೆ ಬಿದ್ದುದರಿಂದ, ಗಾಡಿ ಚಕ್ರದ ಅಡಿಗೆ ಸಿಕ್ಕದೆ ಬದುಕಿದ್ದೇ ವಿಶೇಷವೆಂದು ಆ ಸುದ್ದಿಗಾರನು ಸಾರುತ್ತಾನೆ ಆದರೆ ಇತ್ತೀಚೆಗೆಯ ಸುದ್ದಿಯೆಂದರೆ ಆಕೆಯ ಗಾಯ ಮೊದಲು ಅಭಿಪ್ರಾಯಪಟ್ಟಷ್ಟು ವಿಶೇಷದ್ದಿಲ್ಲವೆಂದು

ಕನ್ನಡದಲ್ಲಿ ಪ್ರಹ್ಲಾದ

ನಿರ್ದೇಶಕ ಶ್ರೀ ಕೆ. ಸುಬ್ರಹ್ಮಣ್ಯಂ ಇವರು ತಮ್ಮ ಮಲಿಯಾಳೀ 'ಪ್ರಹ್ಲಾದ' ಚಿತ್ರವು ಯಶಸ್ವಿಯಾದ ಧೈರ್ಯದಿಂದ ಅದನ್ನು ಕನ್ನಡದಲ್ಲಿ ತಯಾರಿಸುವ ಯೋಚನೆ ಪೂರ್ತಿಗೊಳಿಸಿದರೆಂದು ತಿಳಿದಿದೆ. ಸುಬ್ಬಯ್ಯ ನಾಯಿಡು, ರಾಜಮ್ಮ ಇಂದು ನಟಿಸುವರೆಂದೂ ಸುದ್ದಿ. ಕೊಯಂಬತ್ತೂರಿನಲ್ಲಿ ಇದರ ತಯಾರಿಯಾಗಲಿದೆಯೆಂದು ತಿಳಿದುಬರುತ್ತದೆ.

ಕಿಶೋರ ಶಾಹುವಿನ ಆತ್ಮಿಕ ಕಾದಂಬರಿ

'ಚಿತ್ರಿತ ಮುಖಗಳು' ಎಂಬ ಹೆಸರಿನಿಂದ ಸ್ನೇಹ ಪ್ರಭಾಳ ಗಂಡ, ಸಿನೆಮಾನಟ ಕಿಶೋರ ಶಾಹು ಆತ್ಮಕಥೆಯ ಕಾದಂಬರಿಯೊಂದನ್ನು ಬರೆದು ಪ್ರಕಟಿಸಿದ್ದಾನೆ

'ಶಾರದಾ-ಬಿಂದ್ಯಾ-ನಮಸ್ತೆ'

ಎಂಬೀ ಮೂರು ಚಿತ್ರಗಳನ್ನು ನಿರ್ಮಾಪಕ ನಿರ್ದೇಶಕ ಕರ್ದಾರರು ತಯಾರಿಸುವ ಯೋಜನೆ ಮಾಡಿಕೊಂಡಿದ್ದಾರೆ. ಶಾಜಹಾನ್, ಉಮರ್ ಖಯ್ಯಾಂ ಎಂಬೀ ಚಿತ್ರಗಳೂ ಅವರ ಯೋಜನೆಯಲ್ಲಿದೆಯೆಂದು ಹೇಳಲಾಗಿದೆ.

ಸ್ತ್ರೀ ದ್ವೇಷಿ ಪಹಾರಿ

'ನಾನು—ಸ್ತ್ರೀದ್ವೇಷಿ, ಅವರನ್ನು ಕಂಡರೆ ನನಗಾಗದು, ಏಕೆಂದರೆ ಅವರು ಬಹಳ ಕೆಟ್ಟವರು' ಎಂದು ಪಹಾರಿಸನ್ಯಾಲ್ ಪತ್ರಿಕೋದ್ಯಮಿಯೊಡನೆ ಹೇಳಿದನಂತೆ ಆತನು ಮದುವೆಯಾಗಿದ್ದಾನೆ, ಒಂದು ಮಗುವೂ ಇದೆ. ತನ್ನ ಹೆಂಡತಿ ವಿಷಯವಾಗಿ ಮಾತನಾಡುತ್ತಾ 'ನಾನು ಅಂಥಾ ಹೆಂಗುಸರಲ್ಲಿ ಬಹು ಉತ್ತಮಳನ್ನು ಮದುವೆಯಾದೆ' ಎಂದನಂತೆ

ಅನಂತರ ಫಲಹಾರ ಮಾಡಲು ಶ್ರೀ ಪರಮಹಂಸರನ್ನು ಒಳಕ್ಕೆ ಕರಕೊಂಡು ಹೋದರು. ನಾವು ಕೂಡ ಅವರ ಜತೆಯಲ್ಲೇ ಒಳಕ್ಕೆ ಹೋದೆವು. ತಿಂದಾದ ಬಳಿಕ ಸ್ವಲ್ಪ ಹೊತ್ತಿನ ಮೇಲೆ ಶ್ರೀ ಪರಮಹಂಸರು ದಕ್ಷಿಣೇಶ್ವರಕ್ಕೆ ಹೋಗಲು ಗಾಡಿಹತ್ತಿದರು, ನಾವು ಕೂಡ ಕಾಲ್ನಡೆಯಿಂದ ನಮ್ಮ ಮನೆಗೆ ಹೊರಟೆವು. ಆಗ ರಾತ್ರಿ ಒಂಭತ್ತು ಗಂಟೆಯಾಗಿತ್ತು.

ಸ್ತ್ರೀ ಭಕ್ತರಿಗೂ ಕೂಡ ಶ್ರೀ ಪರಮಹಂಸರು ಸಮಾನ ಭಾವದಲ್ಲಿ ಕೃಪೆ ತೋರಿಸುತ್ತಿದ್ದರು

ಮರುದಿನ ಇನ್ನೊಮ್ಮೆ ದಕ್ಷಿಣೇಶ್ವರಕ್ಕೆ ಹೋಗಿದ್ದೆವು. ಹೋದೊಡನೆಯೇ ಶ್ರೀ ಪರಮಹಂಸರು ಹತ್ತಿರ ಬಂದು ನಿಮ್ಮ ಹಾಲುಕೆನೆ ಎಲ್ಲ ತಿಂದಿದ್ದೆನು. ಇನ್ನು ಸ್ವಲ್ಪವೇ ಉಳಿದಿತ್ತು, ಹೊಟ್ಟೆ ಕೆಡಲಿಲ್ಲ. ಸ್ವಲ್ಪ ಹೊಟ್ಟೆ ಬಿಸಿಯಾಗಿತ್ತು ಮಾತ್ರ. ಅದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಅವರ ಹೊಟ್ಟೆ ಸರಿ ಇದ್ದಿಲ್ಲ. ಆದರೂ ಒಂದು ಮಡಕೆ ತುಂಬ ಹಾಲುಕೆನೆ ತಿಂದೇಬಿಟ್ಟರು! ಭಾವಾವಸ್ಥೆಯಲ್ಲಿ ತಿಂದಿದ್ದರೆಂದು ಅನಂತರ ಕೇಳಿದೆನು. ಮಾಸ್ಟರ್ ಮಹಾಶಯರ ಮನೆಯಲ್ಲಿ ತಿಂದು ರಾತ್ರಿ ಹತ್ತೂವರೆ ಗಂಟೆಗೆ ತಲ್ಪಿದ್ದರು. ಸ್ವಲ್ಪ ಹೊತ್ತಿನ ಮೇಲೆ ಅವರಿಗೆ ಭಾವಾವಸ್ಥೆ ಬಂದಿತ್ತು ಮತ್ತು ಅರ್ಧ ಬಾಹ್ಯಾವಸ್ಥೆಯಲ್ಲಿ ರಾಮಲಾಲ್ ದಾದಾ ಅವರನ್ನು ಕರೆದು 'ಬಹಳ ಹಸಿವಾಗಿದೆ, ಕೋಣೆಯಲ್ಲಿ ಏನಾದರೂ ತಿನ್ನಲಿಕ್ಕೆ ಇದ್ದರೆ ಕೊಡು' ಎಂದು ಕೇಳಿದರಂತೆ. ರಾಮಲಾಲರು ನಾನು ತಂದುಕೊಟ್ಟ ಹಾಲುಕೆನೆ ಮಡಿಕೆಯನ್ನು ತಂದು ಅವರ ಮುಂದಕ್ಕಿಟ್ಟರು. ಶ್ರೀ ಪರಮಹಂಸರು ಅದನ್ನೆಲ್ಲ ತಿಂದರು. ಭಾವಾವಸ್ಥೆಯಲ್ಲಿ ಅವರು ಆಗಾಗ ಹಾಗೆ ತಿನ್ನುವುದನ್ನೂ ತಿಂದು ಕರಗಿಸುವುದನ್ನೂ ಶ್ರೀ ಮಾತಾದೇವಿಯ ಮತ್ತು ಲಕ್ಷ್ಮೀದಿದಿಯ ಬಾಯಿಂದ ಕೇಳಿದ್ದೇವೆ— ಈ ಮಾತೇ ಈಗ ನನ್ನ ಮನಸ್ಸಿಗೆ ಸೂಚಿಸಿತು. ಇಷ್ಟೆಲ್ಲ ನಮಗೆ ಅವರು ಕೃಪೆತೋರಿಸಿದ್ದಾರೆ! ಆ ಕೃಪೆಯ ವಿಷಯವಾಗಿ ಇನ್ನು ಹೇಳಿ ಪೂರೈ

ಶ್ರೀ ರಾಮಕೃಷ್ಣ ಲೀಲಾ ವಿನೋದಗಳು

ಪರಮಹಂಸರಲ್ಲಿ ಸ್ತ್ರೀಪುರುಷ ಭಾವಗಳು

ಮೂಲ ಬಂಗಾಳಿ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು

ಸುವುದಿಲ್ಲ. ಅದೊಂದು ಅದ್ಭುತ ಆಕರ್ಷಣೆ! ಹೇಗೆ ನಾವು ಅವರ ಹತ್ತಿರ ಹೋಗಿದ್ದೆವು ಹೇಗೆಲ್ಲ ಮಾಡುತ್ತಿದ್ದೆವು ಎಂಬುದಾಗಿ ನಮಗೂ ಗೊತ್ತಿಲ್ಲ. ಈಗ ನಾವು ಹಾಗೆ ಎಲ್ಲಿಯೂ ಹೋಗುವುದೂ, ಮಾತನಾಡುವುದೂ ಇಲ್ಲ. ಅಪರಿಚಿತ ಜನರ ಮನೆಗೆ ನಾವೀಗ ಸಾಧುದರ್ಶನ ಮಾಡಲಿಕ್ಕಾಗಲಿ ಧರ್ಮಪ್ರಸಂಗವನ್ನು ಕೇಳಲಿಕ್ಕಾಗಲಿ ಹೋಗುವುದಿಲ್ಲ! ಯಾರ ಶಕ್ತಿಯಿಂದ ನಾವು ಇದನ್ನೆಲ್ಲ ಮಾಡುತ್ತಿದ್ದೆವೋ ಅದೆಲ್ಲ ಅವರ ಜೊತೆಯಲ್ಲೇ ಹೋಯಿತು. ಅವರನ್ನು ಕಳಕೊಂಡು ನಾವು ಈಗಲೂ ಜೀವಿಸಿದ್ದೇವೆ ಏಕೆಂದು ತಿಳಿಯುವುದಿಲ್ಲ!'

ಹೀಗೆಯೇ ಎಷ್ಟೋ ದೃಷ್ಟಾಂತಗಳನ್ನು ಕೊಡಬಹುದು. ಈ ಹೆಂಗಸರು ತಮ್ಮ ಮನೆಬಿಟ್ಟು ಎಂದಿಗೂ ಹೊರಪಡುತ್ತಿರಲಿಲ್ಲ—ಆದರೂ ಶ್ರೀ ಪರಮಹಂಸರು ಅವರಿಂದ ಬಜಾರಿನಿಂದ ಬೇಕಾದ ಜಿನಸುಗಳನ್ನು ತರಿಸಿಕೊಂಡಿದ್ದಾರೆ. ಅಭಿಮಾನ ಅಹಂಕಾರ ತೊರೆಯಬೇಕೆಂದು ಸಾಮಾನ್ಯ ಭಿಕ್ಷುಕರಂತೆ ಪ್ರತಿಮನೆಗೂ ಕಳುಹಿಸಿ ಭಿಕ್ಷೆ ಬೇಡಲು ಕಳುಹಿಸಿದ್ದಾರೆ. ಅವರನ್ನು ಜೊತೆಯಲ್ಲೇ ಕರಕೊಂಡು ಪೆನೆಟಿಯ ಮಹೋತ್ಸವವನ್ನು ತೋರಿಸಿ ತಂದಿದ್ದಾರೆ—ಅವರು ಕೂಡ ಮನಸ್ಸಿನಲ್ಲಿ ಒಂದಿನಿತು ಬೇಸರಪಡದೆ ಶ್ರೀ ಪರಮಹಂಸರು ಹೇಳಿದ್ದನ್ನೆಲ್ಲ ಸಾನಂದದಿಂದ ಸಾಗಿಸಿದ್ದಾರೆ. ಪರ್ಯಾಲೋಚಿಸಿ ನೋಡಿದರೆ ಇದೊಂದು ಸಾಮಾನ್ಯ ಕೆಲಸವೆಂದು ತೋರುವುದಿಲ್ಲ. ಆ ಪ್ರಬಲವಾದ ಜ್ಞಾನತರಂಗದ ಸಮ್ಮುಖದಲ್ಲಿ ಸಕಲರ ಬೇಧಭಾವ ಪ್ರಸೂತವಾದ ಸಂಕೋಚವು ಆಗಾಗಲೇ ಮರೆಯಾಗುತ್ತಿತ್ತು. ಆ ಪ್ರಜ್ವಲ ಭಾವ ಘನಮೂರ್ತಿಯಾದ ಶ್ರೀ ಪರಮಹಂಸರಲ್ಲಿ ಎಲ್ಲರೂ ತಮ್ಮ ತಮ್ಮ ಭಾವದ ಪೂರ್ಣಾದರ್ಶವನ್ನು ಕಂಡು ತಾವು ಕೃತಾರ್ಥರಾಗಿದ್ದೇವೆಂದು ಭಾವಿಸುತ್ತಿದ್ದರು. ಪುರುಷರು ಅವರಲ್ಲಿ ಪುರುಷತ್ವದ ಸಂಪೂರ್ಣ ವಿಕಾಸವನ್ನು ಕಂಡು ನತಮಸ್ತಕರಾಗಿದ್ದರು, ಸ್ತ್ರೀಯರು ತಮ್ಮ ಸಕಲ ಭಾವಗಳ ವಿಕಾಸವನ್ನು ಅವರಲ್ಲಿ ಕಂಡು ನಿಸ್ಸಂಕೋಚವಾಗಿ ಅವರನ್ನು ತಮ್ಮವರಲ್ಲಿ ಒಬ್ಬರೆಂದು ಪರಿಗಣಿಸಿದ್ದರು.

ಶ್ರೀ ಪರಮಹಂಸರು ಸ್ತ್ರೀಯರ ಹಾವಭಾವಗಳ ಅನುಕರಣೆ ಮಾಡಿದ್ದು

ಸ್ತ್ರೀಯರ ಹಾವಭಾವಗಳನ್ನು ಶ್ರೀ ಪರಮಹಂಸರು ಆಗಾಗ ನಮ್ಮ ಮುಂದೆಯೂ ಕೂಡ ನಕಲು ಮಾಡಿ ತೋರಿಸುತ್ತಿದ್ದರು. ಅವುಗಳನ್ನು ಕಂಡು ನಾವು ಬಹಳ ಆಶ್ಚರ್ಯಪಡುತ್ತಿದ್ದೆವು. ಒಬ್ಬ ಸ್ತ್ರೀ ಭಕ್ತಳು ಆ ವಿಷಯವಾಗಿ ಒಂದು ದಿನ ನಮ್ಮನ್ನು ಕುರಿತು ಹೀಗಂದರು: 'ಪರಮಹಂಸರು ಒಂದು ದಿನ ಅವರ ಸನ್ನಿಧಿಯಲ್ಲಿ ವಂಗದೇಶದ ಹೆಂಗಸರು ಪುರುಷರನ್ನು ಕಂಡರೆ ಯಾವ ರೀತಿಯಲ್ಲಿ ಹಾವಭಾವವನ್ನು ಮಾಡುತ್ತಾರೆಯೋ ಅದನ್ನು ತೋರಿಸಲಾರಂಭಿಸಿದರು. ಸಾಡಿಯ ಸೆರಗನ್ನು ತಲೆಗೆ ಎಳೆಯುವುದನ್ನೂ ಕಿವಿಯ ಪಕ್ಕದ ಕೂದಲನ್ನು ಸರಿಮಾಡುವುದನ್ನೂ ಎದೆಯ ಬಟ್ಟೆಯನ್ನು ಸೆಳೆದು ಸರಿಮಾಡುವುದನ್ನೂ ಚಮತ್ಕಾರಿಕ ವರ್ಣನೆಯಿಂದ ನಾನಾ ಮಾತನ್ನಾಡುವುದನ್ನೂ ತೋರಿಸಿದರು. ಎಲ್ಲವೂ ಸನ್ನಿವೇಶವಾಗಿತ್ತು. ನೋಡಿ ನಾವು ನೆಗಾಡಿದೆವು. ಆದರೆ ಮನಸ್ಸಿನಲ್ಲಿ ಬಹಳ ಲಜ್ಜೆಯಾಯಿತು, ಮತ್ತು ಶ್ರೀ ಪರಮಹಂಸರು ಹೀಗೆ ಹೆಂಗಸರನ್ನು ಕುಚೇಷ್ಟಿಸುತ್ತಾರೆಂದು ದುಃಖವಾಯಿತು. ಎಲ್ಲ ಹೆಂಗಸರು ಹೀಗಿರುವುದಿಲ್ಲವೆಂದು ನಮಗೆ ಗೊತ್ತು. ಆದರೂ ನಾವು ಹೆಂಗಸರು, ಹೆಂಗಸರ ವಿಷಯವಾಗಿ ಹೀಗೆ ನಿಂದೆ ಮಾಡಿದರೆ ನಮಗೂ ಕಷ್ಟವಾಗುತ್ತದೆ. ಶ್ರೀ ಪರಮಹಂಸರು ನಮ್ಮ ಮನಸ್ಸಿನ ಭಾವನೆಯನ್ನು ತಿಳಿದು 'ನೀವೂ ಕೂಡ ಹೀಗೆಂದು ನಾನು ಹೇಳುವುದಿಲ್ಲ. ನೀವು ಅವಿದ್ಯಾಶಕ್ತಿಗಳಲ್ಲ. ಇದನ್ನು ಅವಿದ್ಯಾಶಕ್ತಿಗಳೇ ಮಾಡುವುದು' ಅಂದರು.

ಶ್ರೀ ಪರಮಹಂಸರಲ್ಲಿ ಸ್ತ್ರೀ ಪುರುಷ ಭಾವಗಳೆರಡೂ ಇದ್ದುವು

ಶ್ರೀ ಪರಮಹಂಸರಲ್ಲಿ ಸ್ತ್ರೀಪುರುಷ ಭಾವಗಳೆರಡೂ ಇದ್ದುವೆಂಬುದಾಗಿ ಅವರ ಪ್ರತಿಯೊಬ್ಬ ಭಕ್ತನಿಗೂ ಅಲ್ಪಸ್ವಲ್ಪವಾದರೂ ತಿಳಿದಿತ್ತು. ಗಿರೀಶ ಚಂದ್ರಘೋಷರು ಅದನ್ನು ತಿಳಿದು ಒಂದು ದಿನ ಶ್ರೀ ಪರಮಹಂಸರನ್ನು ಕುರಿತು 'ಮಹಾಶಯರೇ ನೀವು ಪುರುಷರೋ ಅಥವಾ ಸ್ತ್ರೀಯರೋ' ಎಂದು ಕೇಳಿದರು. ಅದಕ್ಕುತ್ತರವಾಗಿ ಶ್ರೀ ಪರಮಹಂಸರು 'ಗೊತ್ತಿಲ್ಲ'ವೆಂದು ಹೇಳಿದರು. ಶ್ರೀ ಪರಮಹಂಸರು ಈ ಮಾತನ್ನು ಯಾವ ಭಾವದಲ್ಲಿ ಹೇಳಿದರೆಂದು ಹೇಗೆ ಕಂಡುಹಿಡಿಯುವುದು? ತಮ್ಮಲ್ಲಿ ಪುರುಷರು ಭಾವಿಸುವಂತೆ ಪುರುಷತ್ವವೂ ಅಲ್ಲ ಸ್ತ್ರೀಯರಾ[illegible] ಅಲ್ಲವೇ... ಭಾವದಲ್ಲಿ ಹೇಳಿದರೋ ಅಥವಾ ತಮ್ಮೊಳಗೆ ಎರಡು ಭಾವಗಳಿವೆ ಎಂಬ ಭಾವದಲ್ಲಿ ಹೇಳಿದರೋ ಏನೂ ಗೊತ್ತಿಲ್ಲ.

ಕ್ರಮಶಃ

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಕಡಿಮೆ ಖರ್ಚು
ಮಂಗಳೂರಿನಿಂದ - ಬೆಂಗಳೂರು
ತಿರುಪತಿ, ಮದರಾಸು.
ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು.

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

ಅಮೃತಾಂಜನ ... ೧—೬ Regd. No. M 3460
ತಾರೀಖು 19—6—1942

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ... ಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಚಿಬ್ಬು, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಹ್ಮ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಹುಳುಕಡ್ಡಿ ಮದ್ದು

ಅಮೃತಾಂಜನ ಡಿಪೋ.

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು — ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾಪಕರಾಗಿಯೂ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು; ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles. Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ, ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ESTD SWADESHABHIMANI 1906

[ಸಂಪುಟ 36] ತಾರೀಕು 26—6—1942 [ಸಂಚಿಕೆ 26]

ಅರಮನೆಯಿಳಿದು ಸೆರೆಮನೆಗೆ ತೆರಳಿದನು!

ಸ್ವಾತಂತ್ರ್ಯಕ್ಕಾಗಿ ಪಿತಾ-ಪುತ್ರರ ಬಲಿದಾನ

ನೆಹರು ಕುಟುಂಬದ ರೋಮಾಂಚಕ ಘಟನೆಗಳು

—ಶ್ರೀಮತಿ ಕೃಷ್ಣಾ ಹಠೀಸಿಂಗರ ಲೇಖನ—

"ಇಂಗ್ಲೆಂಡಿನಿಂದ ಮರಳಿ ಬಂದವನೇ ನನ್ನ ಸಹೋದರನು ಹೈಕೋರ್ಟಿನಲ್ಲಿ ವಕಾಲತ್ತು ಪ್ರಾರಂಭಿಸಿದ, ಆದರೆ ಕೆಲವೇ ಸಮಯದಲ್ಲಿ ಆತನಿಗೆ ಅದರಲ್ಲಿ ಅತೃಪ್ತಿ ಹುಟ್ಟಿ ಬೇಸರ ಒಂದಿತು ಅವನು ವಿಶ್ರಾಂತಿ ಇಲ್ಲದವನಾದ, ಆಗಲೇ ಆತನು ರಾಜಕೀಯಕ್ಕೆ ಕಾಲಿಟ್ಟನು. ಹೋಂರೂಲ್ ಚಳವಳವು ಶ್ರೀಮತಿ ಬೆಸಂಟರಿಂದ ಹಾಗೂ ಲೋಕಮಾನ್ಯರಿಂದ ಪ್ರಾರಂಭಿಸಲ್ಪಟ್ಟಿತು ಜವಾಹರನು ತಂದೆಯೊಡನೆ ಅದರಲ್ಲಿ ಧುಮುಕಿದನು, ಆದರೆ ಕಾರ್ಯಶಾಲಿಗೆ ಬೇಕಾದಷ್ಟು ಕೆಲಸ ಅಲ್ಲಿರಲಿಲ್ಲ ಮುಂದೆ ಗಾಂಧಿಜಿ ಸತ್ಯಾಗ್ರಹ ಪ್ರಾರಂಭ ಮಾಡಿದ್ದೇ ತಡ, ನನ್ನ ಸಹೋದರನು ತನ್ನ ಹೃದಯ ಜೀವಿತಗಳನ್ನು ಅದರಲ್ಲಿ ಅರ್ಪಿಸಿಬಿಟ್ಟ, ಕಾರ್ಯಶಾಲಿಗೆ ಬೇಕಾದಷ್ಟು ಕಾರ್ಯ ಅಲ್ಲಿ ದೊರಕಿತು."

—ಹೀಗೆಂದು ನೆಹರು ಸೋದರಿ ಶ್ರೀಮತಿ ಕೃಷ್ಣಾ ಹಾತೀ ಸಿಂಗ್ ಇವರು ಜವಾಹರಲಾಲರ ಕುರಿತು ಒಂದು ಲೇಖನ ಬರೆದು ವಿವರಿಸುತ್ತಾರೆ ಅವರ ಆ ಲೇಖನದ ಇತರ ಕೆಲವು ವಿಚಾರಗಳು ಇಂತಿವೆ

"೧೯೨೦ರ ತನಕ ನಾವು ಅರ್ಧ ಪಾಶ್ಚಾತ್ಯ ಜೀವನ ಮಾಡುತ್ತಿದ್ದೆವು, ಆದರೆ ಗಾಂಧಿಜಿ ಸತ್ಯಾಗ್ರಹ ಆಂದೋಲನ ಆರಂಭ ಮಾಡಿದಂದಿನಿಂದ ನಮ್ಮ ಜೀವನ ರೀತಿ ಕ್ರಮೇಣ ಬದಲಾಗುತ್ತಾ ಬಂತು, ಜವಾಹರನು ಗಾಂಧಿಜಿಯು ಆರಂಭಿಸಿದ ಬೀಹಾರ್ ಗುಜರಾಥ್ ಪ್ರಾಂತಗಳ ಕೃಷಿಕ ಚಳವಳದಲ್ಲಿ ತಲ್ಲೀನನಾದನು, ಆದರೆ ನನ್ನ ತಂದೆಗೆ ಜವಾಹರನು ಹೀಗೆ ದುಡುಕಿ ಪ್ರವೇಶಿಸುವುದು ಇಷ್ಟವಿರಲಿಲ್ಲ ತಂದೆ ಮತ್ತು ಮಗನಿಗೆ ಈ ಕುರಿತು ಜೋರಿನ ವಾಗ್ವಾದ ನಡೆಯುತ್ತಿತ್ತು ತಂದೆ ಜಾಗ್ರತೆ ತೆಕ್ಕೊಂಡಷ್ಟು ಜವಾಹರನು ತಲ್ಲೀನನಾಗುತ್ತಾ ಹೋದನು ಆತನು ಮಹಾತ್ಮಾ ಗಾಂಧಿಯೊಂದಿಗೆ, ತನ್ನ ಜೀವಿತವನ್ನು ದೇಶದ ಸ್ವಾತಂತ್ರ್ಯದ ಸಲುವಾಗಿ ಅರ್ಪಿಸಿ ಬಿಟ್ಟಿದ್ದ ಹಾಗಾಗಿ ಮುಂದೆ ಆತನೊಡನೆ ಚರ್ಚೆ ಮಾಡುವುದನ್ನೇ ತಂದೆ ಬಿಟ್ಟುಬಿಟ್ಟನು

ಪಿತಾ ಮತ್ತು ಪುತ್ರ

'ಮುಂದೆ ಕೆಲವೇ ದಿನಗಳಲ್ಲಿ ತಂದೆಯೂ ಗಾಂಧಿಜಿಯ ಆಂದೋಲನಕ್ಕೆ ಸೇರಿಬಿಟ್ಟನು. ಆ ಪ್ರಾಯದ ಕಾಲದಲ್ಲಿ ಹಾಗೆ ಮಾಡುವುದು ತಂದೆಗೆ ಅಷ್ಟೇನೂ ಸುಲಭವಾಗಿರಲಿಲ್ಲ ಆದರೆ ಒಮ್ಮೆ ಗಾಂಧಿಜಿಯೊಡನೆ ಸೇರಿದ್ದೇ ತಡ ಮುಂದೆ ಗಾಂಧಿಜಿಗೆ ಬಲಶಾಲೀ ಬೆಂಬಲಿಗನಾದ ಈ ಸಂದರ್ಭದಲ್ಲಿ ಇಡೀ ದೇಶವೇ ಅವಿಶ್ರಾಂತವಾಗಿತ್ತು ತಂದೆಯನ್ನು ಜವಾಹರನನ್ನು ಮನೆಯಲ್ಲಿ ಆಗ ನೋಡುವುದೇ ಅಪರೂಪವಾಯಿತು ಇಡೀ ದಿನ ಹಗಲು ರಾತ್ರಿ ಅವರು ಆಂದೋಲನ ಕಾರ್ಯದಲ್ಲಿಯೇ ಮಗ್ನರಾಗಿದ್ದರು ತಂದೆ ಮಕ್ಕಳಿಬ್ಬರೂ ತಮ್ಮ ವಕಾಲತ್ತನ್ನು ಸಂಪೂರ್ಣ ಬಿಟ್ಟುಕೊಟ್ಟ ರಾಜಕೀಯಕ್ಕೆ ಪೂರ್ಣ ತಮ್ಮನ್ನು ಅರ್ಪಣೆ ಮಾಡಿಬಿಟ್ಟರು ಜವಾಹರನು ದೇಶದಲ್ಲಿ ಸುತ್ತು ತಿರುಗಾಡುತ್ತಾ ರಭಸದಿಂದ ಕಾರ್ಯ ಸಾಗಿಸುತ್ತಿದ್ದ ಆ ಸಮಯದಲ್ಲಿಯೇ ಖಾದಿ ಆಂದೋಲನ ಆರಂಭವಾಗಿತ್ತು ಆಗ ತಾನೆ ನಾನು ಸೀರೆ ಉಡಲು ಪ್ರಾರಂಭಿಸಿದ್ದೆ, ಅಂಥ ದೊರಗು ಬಟ್ಟೆಗಳನ್ನು ಉಟ್ಟುಕೊಳ್ಳುವುದು ನನಗೆ ಬಹಳ ಕಷ್ಟವಾಗುತ್ತಿತ್ತು ಆದರೆ ತಾಯಿ ನಿರಂತರದ ಸಿಲ್ಕು ಬಟ್ಟೆಗಳನ್ನುಟ್ಟು ಅಭ್ಯಾಸವಿದ್ದಾಕೆ ಖಾದಿಯನ್ನು ಅಂಗೀಕರಿಸಿದ್ದನ್ನು ನೋಡಿ ನಾನು ಬೆರಗಾದೆ ದಪ್ಪ ಖಾದಿ ಸೀರೆಯನ್ನುಟ್ಟು ಅವಳ ನಡು ಬಗ್ಗಿದರೂ ಆಕೆ ಹಸನ್ಮುಖಳಾಗಿ ಧರಿಸುತ್ತಿದ್ದಳು ತಂದೆಯೂ ಆಂಗ್ಲ ವೇಷವನ್ನು ಬಿಟ್ಟುಕೊಟ್ಟ ಚಲುವಿನ ಸಿಲ್ಕುಗಳನ್ನು ಬದಿಗಿಟ್ಟು ಖಾದಿ ಧರಿಸತೊಡಗಿದನು ಹೀಗೆ ಮನೆಯಲ್ಲಿ ದಿನದಿಂದ ದಿನಕ್ಕೆ ತೀರಾ ಬದಲಾವಣೆಗಳಾದುವು ನಮ್ಮ ಜೀವನ ಸರಳವಾಯಿತು · ಮೊಟ್ಟಮೊದಲು ಈ ಬದಲಾವಣೆಯು ನನಗೆ ಒಪ್ಪಲಿಲ್ಲ ಆದರೆ ಮತ್ತೆ ಅದೇ ಆನಂದವೆನಿಸಿತು ಆಗ ನಮ್ಮ ಮನೆಗೆ ತುಂಬ ಖಾದಿಧಾರೀ ಅತಿಥಿಗಳು ಬರುತ್ತಿದ್ದರು. ನಮ್ಮ ಮನೆಯಲ್ಲಿ ತುಂಬ ಚಟುವಟಿಕೆ ತೋರುತಿತ್ತು, ಮೊದಲಿನ ಮೌನ ಶಾಂತಿ ಆಗ ಇರಲಿಲ್ಲ

ರಾಜಕೀಯ ಪ್ರವಾಸ

'ಒಮ್ಮೆ ಗಾಂಧಿಜಿ ಅಲೀ ಸಹೋದರರು ಮತ್ತು ಅನೇಕ ಮುಖಂಡರೊಡನೆ ನಮ್ಮ ಮನೆಯಲ್ಲಿ ಬಂದಿಳಿದಿದ್ದರು ಅವರು ಆ ಪ್ರಾಂತವನ್ನು ಜವಾಹರನೊಡನೆ ಪ್ರಯಾಣಮಾಡುವ ಕಾರ್ಯಕ್ರಮ ಮಾಡಿದರು ನನಗೂ ಅಣ್ಣನೊಡನೆ ಹೋಗಬೇಕೆಂದು ಇಷ್ಟ. ಆದರೆ ಮೊದಲು ತಾಯಿ ಅಪ್ಪಣೆ ಕೊಡಲಿಲ್ಲ ಆದರೆ ಕಡೆಗೆ ಒಪ್ಪಿದಳು ನಾನು ತಾಯಿಯ ಬಳಿ ಬಿಟ್ಟು ಹೊರಟದ್ದು ಅದೇ ಮೊದಲನೆಯ ಸಲ ನಾವು ಮೂರನೆ ತರಗತಿಯ ರೈಲುಬಂಡಿಯಲ್ಲಿ ಪ್ರಯಾಣ ಮಾಡಿದೆವು ಮೊದಲು ನನಗೆ ಅದು ಬಹಳ ಅಸಹ್ಯವೆನಿಸಿತು ಆದರೆ ಕೊನೆಗೆ ಅದು ಆನಂದವಾಯಿತು, ಏಕೆಂದರೆ ಉಚ್ಚ ರಾಜಕೀಯ ವಿಚಾರದ ಮಾತುಕತೆಗಳನ್ನು ಬಿಟ್ಟರೆ ಮುಖಂಡರೆಲ್ಲರೂ ಬಹಳ ಉಲ್ಲಾಸಿಗಳಾಗಿದ್ದರು ಆದರೆ ಅಲ್ಲಿ ಆಹಾರದ ಸಮಸ್ಯೆ ಬಹಳವಾಗಿ ತೊಂದರೆ ಕೊಟ್ಟಿತು ಎಲ್ಲರೂ ಸರಳ ಆಹಾರಿಗಳು ಗಾಂಧಿಜಿಯವರಂತೂ ಆಡಿನ ಹಾಲನ್ನು ಕುಡಿವವರು, ಅದರಿಂದ ಮಾಡಿದ ಭಕ್ಷ್ಯವನ್ನೇ ಉಣ್ಣುವವರು ಗಾಂಧಿಜಿ ಅವರ ಒಂದು ಭಕ್ಷ್ಯವನ್ನು ನನಗೂ ಜವಾಹರನಿಗೂ ಕೊಟ್ಟರು, ನಾನು ಒಂದನ್ನು ತಿಂದೆ. ಇನ್ನೊಂದನ್ನು ಬಾಯಿಗಿಡುವುದೇ ಸಾಧ್ಯವಾಗಲಿಲ್ಲ ನೆಹರು ಎರಡನೇ ತುತ್ತನ್ನು ಪ್ರಯಾಸವಾಗಿ ನುಂಗುತ್ತಾ ನನ್ನ ಕಡೆಗೆ ನೋಡಿದ ಚನ್ನಾಗಿ ನಕ್ಕುಬಿಟ್ಟ ಇಡೀ ಈ ಯಾತ್ರೆಯಲ್ಲಿ ಜವಾಹರನು ಎಷ್ಟೊಂದು ಬದಲಾವಣೆಯಾಗಿದ್ದನೆಂದು ನಾನು ತಿಳಕೊಂಡೆ ಆತನ ಭಾಷಣಗಳನ್ನು ಕೇಳಿದೆ ಮಾತನ್ನು ಬಹಳ ಗಂಭೀರವಾಗಿ ಮಾತಾಡುತ್ತಿದ್ದ, ಮಾತಿನ ಹಿಂದೆ ನಿರ್ಧಾರ ಆತ್ಮಸಾಕ್ಷಿಗಳು ಎದ್ದುತೋರುತಿದ್ದವು ಸಾವಿರಾರು ಮಂದಿ ಆತನ ಭಾಷಣ ಕೇಳಲು ಬಲು ದೂರದಿಂದಲೂ ಬಂದು ಸೇರುತ್ತಿದ್ದರು

ಅಸಹಕಾರ ಆರಂಭ

ಆಗ ಅಸಹಕಾರ ಚಳವಳ ಆರಂಭವಾಯಿತು ಜವಾಹರ ಮತ್ತು ತಂದೆ ಅಖಿಲಭಾರತ ಪ್ರವಾಸ ಕೈಕೊಂಡರು ದಿನದಿಂದ ದಿನಕ್ಕೆ ಆಂದೋಲನ ಬಲವಾಯಿತು ಪ್ರತಿಯೊಬ್ಬ ಕಾಂಗ್ರೆಸಿನವನು ಉತ್ಸಾಹಶಾಲಿಯಾಗಿದ್ದ, ಏಕೆಂದರೆ ನಾವು ನ್ಯಾಯಕ್ಕಾಗಿ, ಸತ್ಯಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಡುವವರೆಂದೂ, ಗುಲಾಮಗಿರಿಯಿಂದ ತಲೆಯೆತ್ತಿನಿಂತ ಸ್ವತಂತ್ರರೆಂದೂ ಅವರಿಗೆ ಆಗ ಅನುಭವ ಬಂದಿತ್ತು! ದೇಶವಿಡೀ ಸುದ್ದಿ ಹಬ್ಬಿತು, ಮುಖಂಡರನ್ನು ಸರಕಾರವು ಸೆರೆಹಿಡಿಯುವುದೆಂದು, ಜವಾಹರನು ನಗಾಡುತ್ತಾ ತಾಯಿಯೊಡನೆ, ತಾನು ಸೆರೆಮನೆಗೆ ಹೋಗುವ ದಿನ ಬೇಗ ಬರುವುದೆಂದು ಹೇಳಿದ ಆ ಘಟನೆ ಇಂದೂ ನನ್ನ ಸ್ಮರಣೆಯಲ್ಲಿದೆ ಆಕೆಗೆ ಗಾಬರಿಯಾಯಿತು ನಮ್ಮ ಮನೆಯಲ್ಲಿ ಅನೇಕ ಬದಲಾವಣೆಯಾಗಿದ್ದರೂ ಮಗನು ಸೆರೆಮನೆಗೆ ಹೋಗುವ ಪ್ರಸಂಗವು ಆಕೆಗೆ ಸಹಿಸಲಸದಳವೆನ್ನುವಂತೆ ಕಂಡುಬಂತು'

ಸೆರೆಮನೆ ಪ್ರವಾಸ

ದಿನಹೋದಂತೆ ಜವಾಹರನನ್ನು ಕಾಣುವುದೇ ಅಪೂರ್ವವಾಯಿತು. ಮುಖಂಡರ ಬಂಧನ ಪ್ರಾರಂಭವಾಗಿತು. ಒಂದು ಸಂಜೆ

ತಂದೆ ಕಚೇರಿಯಲ್ಲಿರುವಾಗ, ಗುಮಾಸ್ತನೊಬ್ಬನು ಬಂದು ಪೋಲೀಸು ನೌಕರನು ವಾರೆಂಟು ಸಹಿತ ಜವಾಹರನನ್ನು ಮತ್ತು ಅವನನ್ನು ಹುಡುಕುತ್ತಿರುವನೆಂದು ಸುದ್ದಿ ಹೇಳಿದನು! ಆ ಗಲಬೆಯ ವಾರ್ತೆ ಮನೆತುಂಬ ಹರಡಿತು ನಾವು ತಂದೆಯ ಕೋಣೆಯಲ್ಲಿ ತುಂಬಿದೆವು ತಾಯಿ ಬಹಳ ಗಾಬರಿಗೊಂಡಿದ್ದಳು. ಆದರೂ ಅವರ ಮುಂದೆ ಗಂಭೀರಳಾಗಿ ಧೈರ್ಯಗೊಂಡಿರುವವಳಂತೆ ಇದ್ದಳು ಜವಾಹರನ ಹೆಂಡತಿ ಕಮಲಾ ಮುಂದೇನಾಗಬಹುದೋ ಎಂದು ಶಂಕೆಗೊಂಡು ಮೂಕ ಮೌನಳಾಗಿದ್ದಳು. ನಾವು ತಂದೆ ಮತ್ತು ಸೋದರನನ್ನು ನೋಡುತ್ತಾ ನಿಂತಿದ್ದೆವು, ಅವರಿಬ್ಬರೂ ಹೊರಡುವ ಸಿದ್ಧತೆ ಮಾಡುತ್ತಿದ್ದರು ಎಲ್ಲವೂ ಸಿದ್ಧವಾದ ಮೇಲೆ ಹೊರಗೆ ನಿಂತಿದ್ದ ಕಾರಿನಲ್ಲಿ ಡಿಸ್ಟ್ರಿಕ್ಟು ಜೈಲಿಗೆ ಅವರು ಸಾಗಿಸಲ್ಪಟ್ಟರು ಪಿತಾ ಪುತ್ರರಿಬ್ಬರೂ ಮಾತೃಭೂಮಿಯ ಸೇವೆಗಾಗಿ ಅರಮನೆ ಬಿಟ್ಟು ಸೆರೆಮನೆ ಸೇರಿದರು! ಹೀಗೆ ನಮ್ಮ ಕುಟುಂಬದ ಸೆರೆಮನೆ ಪ್ರವಾಸವು ಪ್ರಾರಂಭವಾಯಿತು! ಅದು ಇಂದಿನ ವರೆಗೂ ನಡೆಯುತ್ತಲೇ ಬಂದಿದೆ

ಜಪಾನಿಯರ ಮಾತುಗಳು ಸ್ನೇಹಭಾವದಿಂದ ಕೂಡಿರುತ್ತವೆ

—ಮತ್ತು ಅವರ ಮಹತ್ವಾಕಾಂಕ್ಷೆಯೂ ಪ್ರಬಲವಾಗಿರುತ್ತದೆ

ಪೂರ್ವಕಾಲದಲ್ಲಿ ಶತ್ರುಗಳು ದ್ವೇಷ ಹುಟ್ಟಿಸುವ ಮಾತುಗಳನ್ನಾಡುತ್ತಾ ಯುದ್ಧಕ್ಕೆ ಬರುತ್ತಿದ್ದರು. ಈಗ ಜಪಾನಿಯರು ಹಾಗೆ ಮಾಡುವುದಿಲ್ಲ. ಸೈನ್ಯಗಳನ್ನು ಕಳುಹಿಸುವುದರಲ್ಲಿ ಲಾಭವಿರುವಂತೆ, ಮಾತುಗಳಲ್ಲಿಯೂ ಲಾಭವುಂಟೆಂದು ಅವರಿಗೆ ತಿಳಿದಿದೆ. ಅವರ ಸವಿಯಾದ ಮಾತುಗಳು ನಿಮ್ಮನ್ನು ಮೋಸಗೊಳಿಸಿ, ನಿಮ್ಮನ್ನು ಕಂಗೆಡಿಸಿ, ನಿಮಗೆ ಬಲಹೀನತೆಯನ್ನುಂಟುಮಾಡುವುದು. ಇದು ಹೊಸ ರಣ ಕೌಸಲ್ಯ. ಎಚ್ಚರವಿಲ್ಲದ ಜನಗಳ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡುವುದು. ಆದರೆ, ರೇಡಿಯೋ ಮೂಲಕ ಜಪಾನಿಯರು ಆಡುವ ಸ್ನೇಹಭಾವದ ಮಾತುಗಳಿಹಿಂದುಗಡೆ, ಮತ್ತು ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಜಪಾನಿಯರ ಏಜಂಟುಗಳು ಪ್ಲೇಗಿನಂತೆ ಹರಡಿಸುವ ಮಾತುಗಳ ಹಿಂದುಗಡೆ, ಜಪಾನಿಯರ ಈ ಟಗಳು, ಮತ್ತು ಅವರ ಮಹತ್ವಾಕಾಂಕ್ಷೆಯೂ ಇಂಡಿಯಾ ದೇಶವು ತನ್ನ ರಕ್ಷಣಾ ಕಾರ್ಯಕ್ರಮವನ್ನು ತಗ್ಗಿಸುವವು—ನಿಮ್ಮ ಸ್ವೊತ್ತುಗಳು ನಿಮಗೆ ಅಮೌಲ್ಯವಲ್ಲವೇ? ಇಂಡಿಯಾ ದೇಶವು ಫಲವತ್ತಾದ ಜಮೀನಲ್ಲವೇ? ಇಂಡಿಯಾ ದೇಶದ ಸ್ತ್ರೀಯರು ಸೌಂದರ್ಯವತಿಯರಲ್ಲವೇ? ಯುದ್ಧವಿಲ್ಲದೇ ಇಂಡಿಯಾ ದೇಶವನ್ನು ಪ್ರವೇಶಿಸಲು ಯಾರು ತಾನೆ ಜಪಾನಿಯರ ಸೈನ್ಯಕ್ಕೆ ಸೇರಲಾರರು!

ಚೀಣಾ ದೇಶದ ಹೆಂಗಸರಿಗೆ ತಿಳಿದಿದೆ

ಚೀಣಾ ದೇಶದ ಹೆಂಗಸರು ಜಪಾನಿಯ ಸೈನಿಕರು ಎಂಥವರೆಂಬುದನ್ನು ನಿಮಗೆ ಹೇಳಬಲ್ಲರು. ಜಪಾನಿಯರು "ನಿಮ್ಮನ್ನು ನಾವು ಬಿಡುಗಡೆಮಾಡುವುದಕ್ಕೆ ಬಂದಿದ್ದೇವೆ" ಎಂದು ಹೇಳುತ್ತಾರೆ—"ಆದರೆ ಇದು ಶುದ್ಧ ಸುಳ್ಳು" ಎಂಬುದನ್ನು ಮಡಾಮ್ ಚಾಂಗ್-ಕೈ-ಷೇಕರು ಹೇಳುತ್ತಾರೆ. ಶತ್ರುಗಳು ನಮ್ಮನ್ನು ಮುತ್ತಿದಾಗ ನಮ್ಮ ಇಂಡಿಯಾ ದೇಶದ ಸೈನ್ಯವು ಅವರನ್ನು ಎದುರಿಸುವುದಕ್ಕೆ ತಯಾರಾಗಿ ಕಾದಿದೆ. ನೀವು ಶತ್ರುಗಳನ್ನು ಸೋಲಿಸುವುದಕ್ಕೆ ತಕ್ಕಷ್ಟು ಉಪಕಾರ ಮಾಡುತ್ತಿದ್ದೀರೋ?

ಜಪಾನಿಯರನ್ನು ಎದುರಿಸುವುದಕ್ಕೆ—

ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಜಸ್ಟೀಸ್ ಪಾರ್ಟಿ ಕಾನ್ಫರೆನ್ಸ್

ತಿನ್ನವೆಲ್ಲಿ ಜಿಲ್ಲೆಯ ಜಸ್ಟೀಸ್ ಪಾರ್ಟಿ ಕಾನ್ಫರೆನ್ಸಿನ ಎರಡನೇ ಅಧಿವೇಶನವು ಕೋಯಿಲ್ ಪಟ್ಟಿಯಲ್ಲಿ ಜರುಗಿತು. ರಾವ್ ಬಹದ್ದೂರ್ ಎನ್. ಆರ್. ಸಾಮಿಯಪ್ಪ ಮೊದಲಿಯಾರ್, ಎಂ. ಎಲ್. ಸಿ. ಅವರು ಅಧ್ಯಕ್ಷರಾಗಿದ್ದರು. "ದ್ರಾವಿಡಸ್ಥಾನ ಮತ್ತು ಪಾಕಿಸ್ಥಾನಗಳ ಪ್ರಶ್ನೆಗಳ ಇತ್ಯರ್ಥವಾಗದೆ ಹಿಂದುಸ್ಥಾನದ ರಾಜಕೀಯ ಸಮಸ್ಯೆ ತೃಪ್ತಿಕರವಾಗಿ ಪರಿಹಾರವಾಗದೆಂದು" ಅವರು ತಿಳಿಸಿದರು. ದ್ರಾವಿಡ ಸ್ಥಾನದ ಒಂದು ಭೂಪಟವನ್ನು ಶ್ರೀ. ಇ. ವಿ. ರಾಮಸ್ವಾಮಿ ನಾಯಕರು ಅನಾವರಣ ಮಾಡಿದರು. ದ್ರಾವಿಡ ಸ್ಥಾನದ ಗುಂಪಿನಲ್ಲಿ ತಮಿಳು, ತೆಲುಗು, ಕನ್ನಡ ಮಲೆಯಾಳ, ತುಳು ಜನಗಳೂ ಸಾಡೂ ಸೇರತಕ್ಕದೆಂದರು. ಈ ಸಭೆಯಲ್ಲಿ ಶ್ರೀ. ರಾಜಗೋಪಾಲಾಚಾರ್ಯರ ಚಳವಳಿಕ್ಕೆ ಜಸ್ಟೀಸ್ ಪಾರ್ಟಿಯವರು ಬೆಂಬಲಕೊಡಬೇಕೆಂದೂ, ದ್ರಾವಿಡ ಸ್ಥಾನವು ಪ್ರತ್ಯೇಕವಾಗಿ ನಿರ್ಮಾಣವಾಗಬೇಕೆಂದೂ, ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ಬ್ರಾಹ್ಮಣೇತರರ ಪ್ರಮಾಣವನ್ನು ನಿರ್ಧರಿಸಬೇಕೆಂದೂ ತೀರ್ಮಾನವಾಯಿತು.

ಹೂರ ಕೈಸೆರೆ

೧೫೦೦ ಮಂದಿ ಹೂರರನ್ನು ಹಿಡಿದು ಸಿಂಧ್ ಜೈಲುಗಳಲ್ಲಿ ಇರಿಸಲಾಗಿದೆ ಎಂದೂ ಆ ಪ್ರಾಂತದ ಹಳ್ಳಿಗಳ ೬೩ ಮನೆಗಳಲ್ಲಿ ಶೋಧಿ ನಡೆಸಲಾಯಿತೆಂದೂ ತಿಳಿದುಬರುತ್ತದೆ.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

[26-6-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೬-೬-೧೯೪೨]

ಸಮರ ಭೂಮಿಯ ಸಂಚಾರ

ಕಳೆದ ವರ್ಷ ಜರ್ಮನಿ ರಶ್ಯದ ಮೇಲೆ ಆಕ್ರಮಣವನ್ನು ಕೈಕೊಂಡ ಬಳಿಕ, ಸಮಾನ ಶತ್ರುವೆಂದು ಜರ್ಮನಿಯನ್ನೆದುರಿಸಲು ಬ್ರಿಟನು ರಶ್ಯಗಳು ಮೈತ್ರಿ ಗಳಿಸಿಕೊಂಡವಷ್ಟೆ? ಈಗ ಅದು ಇನ್ನಷ್ಟು ಭದ್ರವಾಗುವಂತೆ, ಹಾಗೂ ಯೂರೋಪಿನಲ್ಲಿ ದ್ವಿತೀಯ ರಣಕ್ಷೇತ್ರವೊಂದನ್ನು ತೆರೆವಂತೆ ಅಮೇರಿಕ ಬ್ರಿಟನುಗಳೇ ಮೊದಲಾದ ಇಪ್ಪತ್ತೇಳು ರಾಷ್ಟ್ರಗಳು (ಈಗ ಮೆಕ್ಸಿಕೋವೂ ಸೇರಿರುವುದು) ಒಂದು ಒಪ್ಪಂದ ಮಾಡಿಕೊಂಡವು ಈ ಒಪ್ಪಂದವು ಇಪ್ಪತ್ತು ವರ್ಷಗಳಿಗೂ ಮೀರಿದ ಅವಧಿಯದಾಗಿದ್ದು, ಕೇವಲ ಯುದ್ಧ ನಿರ್ವಹಣ ಮಾತ್ರದಲ್ಲಿ ಕೊನೆಗೊಳ್ಳದೆ, ಮುಂದಿನ ಹೊಸ ಜಗತ್ತಿನ ನಿರ್ಮಾಣ ಕಾರ್ಯದಲ್ಲಿಯೂ ಅನ್ವಯಿಸತಕ್ಕದಿರಬೇಕೆಂದು ಅಭಿಪ್ರಾಯ ಮಾಡಲಾಗಿದೆ ಮುಂದಿನ ಹೊಸ ಜಗತ್ತಿನ ನಿರ್ಮಾಣದ ವಿಚಾರವು ದೂರದ ಮಾತು ಆದರೆ ಸದ್ಯದ ಇದರ ಪರಿಣಾಮವು ಹೀಗಿದೆ ಈ ರಾಷ್ಟ್ರಗಳು ಮಿತ್ರರಾಷ್ಟ್ರಗಳೊಡನಲ್ಲದೆ ಪ್ರತ್ಯೇಕ ಶಾಂತಿ ಸಂಧಾನ ಮಾಡಕೂಡದು, ಈ ಯುದ್ಧ ನಿರ್ವಹಣದಲ್ಲಿ ಅನ್ಯೋನ್ಯ ಸೈನ್ಯ ಸಹಾಯ ಒದಗಿಸಬೇಕು, ಸದ್ಯ ಯುರೋಪಿನಲ್ಲಿ ದ್ವಿತೀಯ ರಣಕ್ಷೇತ್ರವೊಂದನ್ನು ತೆರೆಯತಕ್ಕದ್ದು ಈ ಕಡೆಗೆ ತೀವ್ರ ಗಮನವಿತ್ತೋ ಏನೋ ಬ್ರಿಟಿಷ್ ಪ್ರಧಾನ ಮಂತ್ರಿ ಚರ್ಚಿಲರು ಈಗ ಅಮೇರಿಕಕ್ಕೆ ಹೋಗಿದ್ದಾರೆ, ಅಧ್ಯಕ್ಷ ರೂಸ್‌ವೆಲ್ಟರೊಡನೆ ಮಾತುಕತೆ ನಡೆಸುತ್ತಿದ್ದಾರೆ ಶತ್ರುವನ್ನು ಗೆಲ್ಲಲು ಉಪಾಯಗಳನ್ನು ಹುಡುಕುತ್ತಿದ್ದಾರೆ ಪ್ರಪಂಚದಲ್ಲೇ ಅತ್ಯಂತ ಪ್ರಬಲ ರಾಷ್ಟ್ರವೆನಿಸಿದ ಅಮೆರಿಕನರ ಧನ ಸಾಮಾಗ್ರಿಗಳ ಸಂಪೂರ್ಣ ಸಹಾಯವನ್ನು ದೊರಕಿಸಿಕೊಂಡು, ರೂಸ್‌ವೆಲ್ಟರ ಪೂರ್ಣ ಭರವಸೆಯನ್ನು ಪಡಕೊಂಡು ಚರ್ಚಿಲರು ಯಾವ ಮಹತ್ವದ ಕಾರ್ಯಕ್ರಮವನ್ನು ಜಗತ್ತಿನ ಮುಂದೊಡ್ಡುವರೋ ನೋಡಬೇಕು ಅಲ್ಲ, ಅದೂ ‘ಅಟ್ಲಾಂಟಿಕ್ ಘೋಷಣೆ’ಯಂತೆ ನೀರಿನ ಮೇಲಿನ ಶಾಸನವಾಗುವುದೋ ಎಂದೂ ನಿರೀಕ್ಷಿಸತಕ್ಕದ್ದಿದೆ

ತೋಬ್ರುಕ್ ಪತನ

ಲಿಬಿಯದಲ್ಲಿ ಬ್ರಿಟಿಷರ ಪ್ರಬಲ ದುರ್ಗವಾಗಿದ್ದ ತೋಬ್ರುಕ್ ಶತ್ರುವಶವಾಯಿತು ಇದು ಜರ್ಮನ್ ವಶವಾದದ್ದರಿಂದ ಲಿಬ್ಯಯದಲ್ಲಿ ಬ್ರಿಟಿಷರು ನಿಲ್ಲುವುದೇ ಕಠಿಣವಾಗುವುದು ತೋಬ್ರುಕ್ ಪತನವು ಬ್ರಿಟಿಷರಿಗೆ ಮಹತ್ವವಾದೊಂದು ಅಪಜಯವಾಗಿದೆ ಲಿಬಿಯದಲ್ಲಿ ಅಷ್ಟೇಕೆ ಇಡೀ ಪಶ್ಚಿಮ ಈಜಿಪ್ಟಿನಲ್ಲಿ ಇದರಷ್ಟು ದೊಡ್ಡ ಕೋಟೆ ಬೇರೊಂದಿಲ್ಲ ಜರ್ಮನರು ನೆಲ ಧಾಳಿ, ಆಕಾಶ ಧಾಳಿಗಳನ್ನು ಮಾಡಲು ಪ್ರಾರಂಭಿಸಿದ ಕೂಡಲೇ ಪೂರ್ವ ಯುದ್ಧರಂಗವು ತಯಾರಾದ ಎರಡು ದಿನಗಳಲ್ಲಿಯೇ ತೋಬ್ರುಕ್ ಕೋಟೆಯು ಬ್ರಿಟಿಷರ ಕೈಬಿಟ್ಟದ್ದು, ಪರಾಜಯದ ಪರಮಾವಧಿಯಾಗಿದೆ ಹಿಂದೆ ನಿರಂತರ ಆರು ತಿಂಗಳ ವರೆಗೆ ಗುಂಡಿನ ಸುರಿಮಳೆ ಬೀಳುತ್ತಿದ್ದರೂ ಅದನ್ನು ಎದುರಿಸಿ ನಿಂತಿದ್ದ ದುರ್ಗವು ಈಗ ಹೀಗಾಗುವುದೆಂದು ಯಾರೂ ಎಣಿಸಿಯೇ ಇರಲಿಲ್ಲ ಈ ಯುದ್ಧದಲ್ಲಿ ಜರ್ಮನರಿಗೆ ವಿಶೇಷ ಜಯವನ್ನುಂಟುಮಾಡಿದ್ದು ಅವರ ಟ್ಯಾಂಕುಗಳು, ರೋಮುಲನ ಟ್ಯಾಂಕುಕಾಳಗವು ಇಂದಿನ ಯುದ್ಧ ಇತಿಹಾಸದಲ್ಲಿಯೇ ಪ್ರಸಿದ್ಧವಾಗಿದೆ ಅಂತೆಯೇ ಬ್ರಿಟಿಷರಲ್ಲಿ ಟ್ಯಾಂಕ್ ಕೊರತೆಯಿದ್ದುದರಿಂದ ತೋಬ್ರುಕ್ ಪತನವಾಯಿತೆಂದೂ ಊಹಿಸಬಹುದಾಗಿದೆ ಮಾತ್ರವಲ್ಲದೆ ಜರ್ಮನರು ಈ ಸಲ ಅಪರಿಮಿತ ಸೈನ್ಯ ಸಿದ್ಧತೆಮಾಡಿದ್ದರು ಎಲ್ಲಾ ತರದ ಆಯುಧಗಳನ್ನೂ ಅಣಿಮಾಡಿಕೊಂಡು ಪ್ರಬಲವಾಗಿ ತೋಬ್ರುಕಿಗೆ ಮುತ್ತಿಗೆ ಹಾಕಿ ಕೈವಶಮಾಡಿಕೊಂಡರು. ಜರ್ಮನರು ಮೊದಲು ಅಗಲ ಕಿರಿದಾದ ವ್ಯೂಹವನ್ನು ರಚಿಸಿ, ಎಲ್ಲಾ ಶಕ್ತಿಗಳನ್ನು ಕೇಂದ್ರೀಕರಿಸಿ, ಮೊದಲು ಡೈವ್ ಬಾಂಬರುಗಳ ಧಾಳಿ ಮಾಡಿ, ಬಳಿಕ ಫಿರಂಗಿ ಮತ್ತು ಟೇಂಕ್ ಕಾಳಗವನ್ನು ಹೂಡಿ, ತಮ್ಮನ್ನು ಎದುರಿಸಲು ಬ್ರಿಟಿಷರಿಗೆ ಅವಕಾಶವನ್ನೇ ಕೊಡದೆ ಕೇವಲ ಎರಡೇ ದಿನಗಳಲ್ಲಿ ತೋಬ್ರುಕನ್ನು ಸ್ವಾಧೀನಪಡಿಸಿದ್ದು ಆಶ್ಚರ್ಯಜನಕವಾಗಿದೆ ಹೀಗೆ ಈ ಕೋಟೆಯು ಕೈ ತಪ್ಪಿದ್ದರಿಂದ ಮುಂದಿನ ಕೆಲಸಗಳನ್ನು ಮಾಡಿಕೊಳ್ಳಲು ಶತ್ರುಗಳಿಗೆ ಸುಲಭವಾಯಿತು, ಇಜಿಪ್ತಿಗೆ ಭೀತಿ ಹೆಚ್ಚಾಯಿತು ಇಜಿಪ್ತಿನ ಮೇಲೆ ಧಾಳಿಯಿಡಲು ಶತ್ರುವು ತೋಬ್ರುಕಿನಲ್ಲಿ ಬೇಕಾದಷ್ಟು ಸೈನ್ಯವನ್ನು ಸಂಗ್ರಹಿಸಿಡಬಹುದು ಈಗಾ



ಶತ್ರುರಾಷ್ಟ್ರದ ಮೇಲೆ ಧಾಳಿಯಿಡಲು ಹೊರಟಿವೆ.

ಗಲೇ ಜರ್ಮನ್ ಸೈನ್ಯದ ಒಂದು ಭಾಗವು ಬಾರ್ಡಿ ಹಾಗೂ ಕಪುಜೋ ಕೋಟೆಗಳನ್ನು ದಾಟಿ ಇಜಿಪ್ತಿನ ಗಡಿಯನ್ನು ಮುಟ್ಟಿರುತ್ತದೆಂದು ಇಜಿಪ್ಟ್ ಗಡಿನಾಡಿನ ಸೀದಿ ಅಜೀಜ್ ಎಂಬಲ್ಲಿ ಇಷ್ಟರಲ್ಲೇ ಭಾರೀ ಕಾಳಗ ನಡೆಯುತ್ತದೆಂದು ತಿಳಿದಿದೆ ಇಜಿಪ್ತಿನಲ್ಲಿ ಬ್ರಿಟಿಷರ ಸಿದ್ಧತೆ ಚನ್ನಾಗಿದ್ದರೆ ತೋಬ್ರುಕ್ ಪತನವಾದರೂ ಗಾಬರಿಗೊಳ್ಳಬೇಕಾಗಿಲ್ಲ, ಏಕೆಂದರೆ ೧೯೪೦ರಲ್ಲಿ ಇಜಿಪ್ಟ್ ಗಡಿಯಲ್ಲಿ ಮುಂದುವರಿದಿದ್ದ ಜನರಲ್ ಗ್ರಜಾನಿಯನ್ನು ಜನರಲ್ ವೇವೆಲ್ಲರು ಹಿಂದೋಡಿಸಿ ವಿಜಯ ಪಡೆದಿದ್ದರು ಆದರೆ ಈ ಸಲದ ಸೇನಾಪತಿ ರೋಮುಲನು ಅರಿಭಯಂಕರನೆನ್ನಿಸಿದ್ದಾನೆ, ಕಾಕಸಿನ ಮೇಲೆ ಕಣ್ಣಿಟ್ಟಿರುವ ಹಿಟ್ಲರನು ಸೆಬಸ್ಟಪೋಲನ್ನೂ ಸ್ವಾಧೀನ ಮಾಡಿಕೊಂಡರೆ, ಮುಂದೆ ಇರಾಕ್ ಇರಾಣ್‌ಗಳ ಮಾರ್ಗ ಹೊರಡುವನಾದ್ದರಿಂದ, ಇಜಿಪ್ತಿನಲ್ಲಿ ರೊಮೆಲನನ್ನು ಬಂದುಕೂಡಿಕೊಳ್ಳಬಹುದಾಗಿದೆ ಅದ್ದರಿಂದ ಇಜಿಪ್ತಿಗೆ ಇಂದು ಬಂದೊದಗಿದ ಗಂಡಾಂತರದ ವಿಷಯವಾಗಿ ಮಿತ್ರ ಪಕ್ಷದವರ ಗಂಭೀರ ವಿಚಾರಮಾಡಬೇಕಾಗಿರುವುದು.

ಸೆಬಸ್ಟಪೋಲ್ ಕಾಳಗ

ಅತ್ತ ರಶ್ಯದಲ್ಲಿ ಸೆಬಸ್ಟಪೋಲಿನ ಪರಿಸ್ಥಿತಿ ತೀರಾ ಚಿಂತಾಜನಕವಾಗಿದೆಯೆಂದು ಸುದ್ದಿ ಬಂದಿದೆ. ಜರ್ಮನರು ತಮಗೆ ಅಪಾರ ಹಾನಿಗಳಾಗಿದ್ದರೂ ಗಣಿಸದೆ ಮುಂಬರಿದು ಒಂದು ಕಡೆಯಲ್ಲಿ ಸೆಬಸ್ಟಪೋಲಿನ ಸಂರಕ್ಷಕ ವ್ಯೂಹವನ್ನು ಮುರಿದು ಮುನ್ನುಗ್ಗಿರುವರೆಂದು ರಶ್ಯದ ವರದಿಯಿದೆ ಶತ್ರುವಿನ ವೇಗವು ತೀವ್ರವಾಗುತ್ತಿದೆ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಭೀಕರ ಕಾಳಗ ನಡೆಯುತ್ತಿದೆ ದುರ್ಗದ ಮಧ್ಯವ್ಯೂಹವು ಶತ್ರುವಿನ ಧಾಳಿಗೆ ಹಾಗೂ ಬಾಂಬಿನ ಸುರಿಮಳೆಗೆ ಇನ್ನೂ ಎದೆಗೊಟ್ಟು ನಿಂತಿದೆ ಸಮುದ್ರ ಮಾರ್ಗವಾಗಿ ದುರ್ಗ ಸಂರಕ್ಷಕರ ಸಹಾಯ ಬರುತ್ತಿದೆಯೆಂದು ಸುದ್ದಿಯಿರುವುದು ಸೆಬಸ್ಟಪೋಲಿನ ಯುದ್ಧಪ್ರಾರಂಭವಾಗಿ ಎರಡು ವಾರಗಳು ದಾಟಿದವು ಈ ಹದಿನೈದು ದಿನಗಳು ದುರ್ಗ ಸಂರಕ್ಷಕರು ಅಪ್ರತಿಮ ಪರಾಕ್ರಮದಿಂದ ಹೋರಾಡಿ ಶತ್ರುವಿಗೂ ಅಪಾರ ಹಾನಿಯನ್ನುಂಟುಮಾಡುವುದರೊಡನೆ ತಾವೂ ಭಂಗಪಟ್ಟಿರುವರು ಅಂತೂ ಈಗ ಬಂದ ಸುದ್ದಿಯಂತೆ ಶತ್ರು ಸೆಬಸ್ಟಪೋಲ ಸಂರಕ್ಷಕ ವ್ಯೂಹವನ್ನು ಬೇಧಿಸಿ ನುಗ್ಗಿರುವುದು ನಿಜವಾದರೆ ರಶ್ಯನರಿಗೆ ಅದು ಮಹತ್ವದ ಸೋಲೆಂದೇ ಹೇಳಬೇಕಾಗಿದೆ. ಖಾರ್ಕೋವ್ ವ್ಯೂಹದಲ್ಲಿ ಜರ್ಮನರು ಪುನಃ ಧಾಳಿಯನ್ನು ಆರಂಭಿಸಿದ್ದಾರೆ ರಶ್ಯನರ ಪ್ರತಿ ಧಾಳಿಯು ಪ್ರಖರವಾಗಿರುವುದರಿಂದ ಶತ್ರು ಸೈನ್ಯಕ್ಕೆ ಹೆಚ್ಚು ಮುಂದುವರಿಯುವುದು ಸಾಧ್ಯವಾಗಲಿಲ್ಲ ಕ್ರಿಮಿಯದಲ್ಲಿ ವಸಂತ ಧಾಳಿಯನ್ನು– ಒಂದು ತಿಂಗಳ ಹಿಂದೆ–ಪ್ರಾರಂಭಮಾಡಿದ ಜರ್ಮನರು ಕರ್ಚ್ ಕಾಳಗದಲ್ಲಿ ಜಯಹೊಂದಿದ ಬಳಿಕ ಕಾಕಸಸ್‌ಗೆ ಕಾಲಿಡಲು ಮನಮಾಡಿದ್ದರು ಈ ಸಂದರ್ಭದಲ್ಲಿಯೇ ಟಿಮುಶಂಕೋವಿನ ಬಲವನ್ನು ಮುರಿಯಬೇಕೆಂದು ಖಾರ್ಕೋವ್ ಯುದ್ಧವನ್ನೂ ಸುರುಮಾಡಿದರು ಇದು ಎರಡು ಮೂರು ವಾರಗಳ ವರೆಗೆ ಬಿಡದೆ ನಡೆದು ಇಲ್ಲಿ ತಮಗೆ ಜಯವಾಯಿತೆಂದು ಜರ್ಮನರು ಹೇಳಿದರು, ಸಾಧಾರಣವಾಗಿ ಡೊನೆಟ್ಸ್ ನದಿಯಿಂದ ಖಾರ್ಕೋವ್ ಕಡೆಗೆ ನುಗ್ಗುತ್ತಿದ್ದ ರಶ್ಯನರನ್ನು ತಡೆಯಲು ಜರ್ಮನರು ಸಮರ್ಥರಾದರೂ ಅವರಿಗೆ ಖಾರ್ಕೋವ್ ಕಡೆಯಿಂದ ಮುನ್ನುಗ್ಗುವುದು ಸಾಧ್ಯವಾಗಲಿಲ್ಲ, ಮಾತ್ರವಲ್ಲದೆ ಈ ಯುದ್ಧವು ಬಹುಕಾಲ ಸಾಗಿದ್ದರಿಂದ ಜರ್ಮನರ ಕಾಕಸಸ್ ಧಾಳಿಯು ಹಿಂದೆ ಬಿದ್ದಂತಾಯಿತು. ಕರ್ಚ್ ಜಲಸಂಧಿಯನ್ನು ದಾಟಿ ಜರ್ಮನರು ಕಾಕಸಸಿನ ಒಂದು ದೊಡ್ಡ ಧಾಳಿಯನ್ನು ಪ್ರಾರಂಭಿಸಬೇಕಾದರೆ ಸೆಬಸ್ಟಪೋಲನ್ನು ರಶ್ಯನರ ಸೈನ್ಯ ನೌಕಾ ಸಂಗ ಹಡಂತೆ ಮಾಡುವುದು ಅವಶ್ಯವಾಗಿದೆ ಏಕೆಂದರೆ ಕಪ್ಪು ಸಮುದ್ರದಲ್ಲಿ ರುಷ ರಶ್ಯನ್ ನೌಕಾ ಬಲಕ್ಕೆ ಅದೊಂದೇ ಕೇಂದ್ರವಾಗಿರುವುದು ಹಾಗಾಗಿ ಸೆಬಸ್ಟಪೋಲ್ ಕಾಳಗವು ವಿಷಮವಾಗುತ್ತಲಿದೆ

ಚೀನಾ ಜಪಾನ್ ಯುದ್ಧ

ರಶ್ಯ ಲಿಬಿಯಗಳನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ವಿಶೇಷ ಗಾಬರಿಗೊಳಿಸುವ ಕಾಳಗ ನಡೆವುದಿಲ್ಲ ಜಪಾನರು ಪಶ್ಚಿಮ ಕರಾವಳಿಯ ಸ್ಥಳಗಳನ್ನು ಒಂದೊಂದಾಗಿ ಆಕ್ರಮಿಸುತ್ತಾ ಮುಂದೊತ್ತುತ್ತಿದ್ದಾರೆ ಚೆಕಿಯಾಂಗಿನಲ್ಲಿ ನುಗ್ಗಿದ ಜಪಾನರು ಕಿಪ್ಪಾಜುನ್‌ಗಳನ್ನಾಕ್ರಮಿಸಿ ಕಿಯಾಂಗ್‌ಸಿಯನ್ನು ಸೇರಿ ಅದರ ರಾಜಧಾನಿಯಾದ ನಾನ್‌ಚಂಗನ್ನು ವಶಪಡಿಸಿಕೊಂಡಿರುವರು ಕಿಯಾಂಗ್‌ಸಿಯ ಪೂರ್ವಕ್ಕಿರುವ ಯುಶಾನ್ ನಗರವನ್ನೂ ಜಪಾನರು ಸ್ವಾಧೀನ ಮಾಡಿದ್ದಾರೆ ಕ್ವಾಂಗ್‌ಟಿ ಗನ್ನೂ, ಅದರ ನೈಋತ್ಯಕ್ಕಿರುವ ಶಾಂಗಿಯೊ ಕೇಂದ್ರವನ್ನೂ ಹಿಡಿದಿದ್ದಾರೆ ಕ್ವಾಂಗ್ ಪ್ರಾಂತದಿಂದ ಹೊನಾನಿನಲ್ಲಿ ಮುನ್ನುಗ್ಗುವ ಜಪಾನ್ ಸೈನ್ಯವು ಚಾಂಗ್‌ಶಾ ವಶಪಡಿಸಿ ಹುಪೆ ಪ್ರಾಂತದಲ್ಲಿ ಮುಂದೊತ್ತಿದೆ ಅಲ್ಲಿನ ಶಾನ್ ಪ್ರಾಂತದ ಆಗ್ನೇಯಕ್ಕೆ ಯುದ್ಧ ನಡೆಯುತ್ತ ಹೊನಾನಿನಲ್ಲಿ ಜಪಾನರ ಮೇಲೆ ಮಾಡಿದ ಆಕ್ರಮಣವನ್ನು ಚೀನರು ಪ್ರತಿಭಟಿಸಿದರು ಈ ಪ್ರಾಂತದ ಲಿನ್‌ಸಿನ್ ನಗರಕ್ಕೆ ಜಪಾನರ ಪ್ರವೇಶವಾಗಿದೆ ಇಷ್ಟರಲ್ಲಿ ಅಮೇರಿಕವು ಜಪಾನ್ ಧಾಳಿಗಾಗಿ ವಿಮಾನಗಳನ್ನು ಚೀನೀ ಕರಾವಳಿಗೆ ಕಳುಹಿಸಿರುವರೆಂದು ವದಂತಿ ಒಂದಿತ್ತು. ಅದ್ದರಿಂದಲೇ ಏನೋ ಜಪಾನರು ಸದ್ಯ ಹಿಂದೂದೇಶದ ವಿಚಾರ ಮರೆತು ಬಿಟ್ಟು ಚೀನೀ ಕರಾವಳಿಗಳನ್ನು ಕೈವಶಮಾಡಿಕೊಳ್ಳುವ ಪ್ರಯತ್ನದಲ್ಲಿ ನಿರತರಾಗಿರುವಂತೆ ತೋರುತ್ತದೆ. ಚೀನದ ಪೂರ್ವ ತೀರದಿಂದ ಮಿತ್ರ ರಾಷ್ಟ್ರಗಳವರು ಯಾವ ವಿಮಾನ ನಿಲ್ದಾಣಗಳನ್ನು ಉಪಯೋಗಿಸಿಕೊಂಡು ಜಪಾನಿಗೆ ಧಾಳಿಯಿಡುವುದೋ ಅದನ್ನು ಜಪಾನರು ಸ್ವಾಧೀನ ಪಡಿಸಿಕೊಳ್ಳುವುದರಲ್ಲಿದ್ದಾರೆ ಇಂಡೋ ಚೀನ, ಬರ್ಮ, ಥೈಲೆಂಡುಗಳಲ್ಲಿ ತುಂಬಾ ಸೈನ್ಯವನ್ನು ಶೇಖರಿಸಿಟ್ಟಿದ್ದಾರೆ ಅಮೇರಿಕನರು ಅಲಾಸ್ಕಾ ಮೂಲಕ ಬಂದು ಮುತ್ತಿದ ಹಾಗೆ ಅಲ್ಯೂಶಿಯನ್ ದ್ವೀಪಗಳನ್ನು ಮುತ್ತುತ್ತಿದ್ದಾರೆ ರಶ್ಯವೇನಾದರೂ ತನ್ನ ಮೇಲೆ ಬಿದ್ದೀತೆಂದು ಮಂಚೂರಿಯ ಗಡಿನಾಡನ್ನು ಗಟ್ಟಿಮಾಡಿಕೊಂಡಿರುವರು, ನ್ಯೂಗಿನಿಯ ಮೇಲೆ ಡಾರ್ವಿನ್ ಮೇಲೆ ಹೊಸ ಹೊಸ ವಿಮಾನಗಳು ಹಾರಾಡಿ ಧಾಳಿಯಿಡುತ್ತಿವೆ. ಸೈಬೀರಿಯದ ಮೇಲೆ ಜಪಾನರ ಮುಂದಿನ ಧಾಳಿ ನಡೆಯಬಹುದೆಂದು ಪ್ರಬಲವಾದ ಒಂದು ಊಹೆಯಿರುವುದು

ಸ್ವದೇಶಾಭಿಮಾನಿ

ತಾರೀಕು 19—6—1942

ಜೋಧಪುರ ಪರಿಸ್ಥಿತಿ

'ಜೋಧಪುರದ ಸತ್ಯಾಗ್ರಹವು ಭೀಕರವಾಗಿ ವಿಕಾರ ಸ್ವರೂಪವನ್ನು ಹೊಂದಿದೆ; ದಿನದಿಂದ ದಿನಕ್ಕೆ ಬಂಧನಗಳು ಹೆಚ್ಚುತ್ತಿವೆ; ಲಾಠಿ ಪ್ರಹಾರವು ನಿತ್ಯದಂತೆ ಸಾಗುತ್ತಿದೆ; ಸತ್ಯಾಗ್ರಹಿಗಳು ಖಾಸಗಿ ಸ್ಥಳಗಳನ್ನು ಉಪಯೋಗಿಸಕೂಡದೆಂದು ನಿರ್ಬಂಧ ಹೊರಟಿದೆ. ಒಟ್ಟಿನಿಂದ, ಬ್ರಿಟಿಷ್ ಭಾರತದಲ್ಲಿ ಸತ್ಯಾಗ್ರಹಾಂದೋಲನದ ಕಾಲಕ್ಕೆ ಒದಗಿದ ಎಲ್ಲಾ ತರದ ಸಂಭವಗಳ ವಿಷಮ ಅನುಭವಗಳ ಪುನರಾವೃತ್ತಿಯು ಇಂದು ಜೋಧಪುರದಲ್ಲಿ ಆಗುತ್ತಲಿದೆ' ಹೀಗೆಂದು ಈ ಸಲದ 'ಹರಿಜನ'ದಲ್ಲಿ ಗಾಂಧಿಜಿ ಅಗ್ರಲೇಖ ಬರೆದು ತಿಳಿಸಿದ್ದಾರೆ.

'ಆದರೆ ಈ ಸಂಗತಿಗಳು ಆ ಸಂಸ್ಥಾನದ ಹೊರಗಿನ ಜನತೆಗೆ ತಿಳಿದಿಲ್ಲವೆಂಬುದು ವಿಚಾರಣೀಯವಾದುದು. ಇಂಥಾ ಎಷ್ಟೋ ದುರಂತಗಳು ಅನೇಕ ಸಲ ಯಾರಿಗೂ ತಿಳಿಯದಂತೆ ನಡೆಯುತ್ತವೆ. ಆದರೆ ಸಂಸ್ಥಾನದಲ್ಲಿ ನಡೆಯುತ್ತಿರುವ ಇಂಥ ವಿಷಾದ ಘಟನೆಗಳ ದೋಷ ಮತ್ತು ಹೊಣೆಗಾರಿಕೆಗೆ ಬ್ರಿಟಿಷ್ ಸರಕಾರವು ಬದ್ಧವಾಗಿರುವದು. ಕಾಯಿದೆಯ ಹೆಸರಿನಲ್ಲಿ, ಶಾಂತಿ ಸುವ್ಯವಸ್ಥೆಗಳ ಹೆಸರಿನಲ್ಲಿ ಆಗುವ ಈ ತರದ ಅಮಾನುಷ ಕೃತ್ಯಗಳಿಂದ ಜನತೆಯನ್ನು ರಕ್ಷಿಸಲು ಶಾಸನ ರೀತ್ಯಾ ಬ್ರಿಟಿಷ್ ಸರಕಾರವು ಬಾಧ್ಯವಾಗಿದೆ. ಸೆರೆಮನೆಗಳಲ್ಲಿ ಕೈದಿಗಳಿಗೆ ಒದಗುವ ಸಂಕಷ್ಟಗಳು, ಅನ್ನಾಹಾರಗಳ ತೊಂದರೆ, ಸಾಮಾನ್ಯ ಸೌಕರ್ಯಗಳ ಅಭಾವ ಇವುಗಳ ವಿಚಾರವು ಎಷ್ಟರಮಟ್ಟಿಗೆ ಮಿತಿಮೀರಿದೆಯೆಂಬುದು ಅಲ್ಲಿನ ಮುಖಂಡರಾದ ಶ್ರೀ ಜಯನಾರಾಯಣ ವ್ಯಾಸರ ಉಪವಾಸ ಸತ್ಯಾಗ್ರಹದ ವಿಷಯವನ್ನಾಲೋಚಿಸಿದರೆ ಮನವರಿಕೆಯಾಗದಿರದು' ಎಂಬುದಾಗಿ ಮಹಾತ್ಮರು ಆ ಲೇಖನದಲ್ಲಿ ಎಚ್ಚರವಿತ್ತಿರುವರು.

ಜೋಧಪುರದ ಆಡಳಿತವು ಪೊಲಿಟಿಕಲ್ ಡಿಪಾರ್ಟ್‌ಮೆಂಟಿನವರ ಕೈಕೆಳಗೆ ಬಂದಿದ್ದು, 'ಮಾರವಾಡ ಲೋಕ ಪರಿಷತ್ತಿ'ನಂತಹ ರಾಜಕೀಯ ಸಂಸ್ಥೆಯ ಮೇಲೆ ಅವರು ಕೈಕೊಂಡ ಹಲವು ಉಗ್ರೋಪಾಯಗಳು ಖಂಡನಾರ್ಹವಾಗಿರುವವು. ಯುದ್ಧಾರಂಭವಾದಂದಿನಿಂದ, ಶಾಂತಿ ಸುವ್ಯವಸ್ಥೆಯ ನೆವಮಾಡಿ ಪ್ರಜಾಪೇಕ್ಷೆಯನ್ನು ಹತ್ತಿಕ್ಕಲು ಸಂಸ್ಥಾನಗಳ ಆಡಳಿತದವರು ಕೈಕೊಳ್ಳುತ್ತಿರುವ ತೀವ್ರ ಧೋರಣೆಯು ಬಹಳವಾಗಿ ಗೊಂದಲಕ್ಕಿಟ್ಟಿರುವುದು. ಸಂಸ್ಥಾನ ಸರಕಾರದವರು ಅಲ್ಲಿನ ಜಾಗೀರ್‌ದಾರರನ್ನೂ ಪ್ರೋತ್ಸಾಹಿಸಿ ಲೋಕ ಪರಿಷತ್ತಿನ ವಿರುದ್ಧ ಕತ್ತಿ ಕಟ್ಟುವಂತೆ ಮಾಡುತ್ತಿರುವುದು, ಮನುಷ್ಯರನ್ನು ಹೊಡೆದು ಬಡಿದು ಧಂಗೆಸ್ಸು ಮನೆಗಳನ್ನು ಸುಟ್ಟು ಹಾನಿಗೊಳಿಸುತ್ತಿದ್ದರೂ ಬ್ರಿಟಿಷ ಸರಕಾರವು ಸುಮ್ಮಗಿರುವುದು ಈ ವಿಚಾರಗಳು ನ್ಯಾಯವಾದುದಲ್ಲವೆಂದು ಗಾಂಧಿಜಿ ಸೂಚಿಸಿರುವರು.

'ರಶ್ಯದಿನ'

ಪರರಾಷ್ಟ್ರಾಪಹಾರದ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ಕಳೆದ 1941ನೆಯ ಇಸವಿ ಜೂನ್ ತಿಂಗಳ 22ರಂದು ನಾಜಿಗಳು, ಯಾವುದೇ ನ್ಯಾಯವಿಲ್ಲದೆ, ಯಾವ ತರದ ಆರೋಪವೂ ಇಲ್ಲದೆ, ಮುಂಚಿತವಾದ ಸೂಚನೆ ಸಹಿತ ಕೊಡದೆ, 'ಅನಾಕ್ರಮಣ ಒಪ್ಪಂದ'ಕ್ಕೆ ತೀರಾ ವಿರೋಧವಾಗಿ ವರ್ತಿಸಿ ರಶ್ಯದ ಮೇಲೆ ಆಕ್ರಮಣ ಮಾಡಿದರು; ನಿರ್ದಯ ದುರ್ನೀತಿಯಿಂದ ರಶ್ಯ ರಾಷ್ಟ್ರದ ಮೇಲೆ ಜರ್ಮನರು ಬಾಂಬಿನ ಮಳೆ ಸುರಿಸಿದರು. ರಶ್ಯದ ನಗರ ಗ್ರಾಮಗಳಿಗೆ ಧಾಳಿಯಿಟ್ಟರು. ಹೀಗೆ ರಕ್ತ ಪಿಪಾಸುಗಳಾದ ಜರ್ಮನ್ ಸೈನಿಕರು ಸಮತಾ ಶಾಂತವಾಗಿದ್ದ ರಶ್ಯದ ನೆಲವನ್ನು ನುಂಗಲು ಮನಮಾಡಿದರು!

ಇದಕ್ಕಿಂತ ಘೋರವಾದ ಅಪರಾಧವು ಬೇರೆ ಇರಲಿಲ್ಲ. ತಮಗೆ, ತಮ್ಮ ರಾಷ್ಟ್ರಕ್ಕೆ, ತಮ್ಮ ಸ್ವಾತಂತ್ರ್ಯಕ್ಕೆ, ಒದಗಿದ ಈ ಅನ್ಯಾಯವನ್ನು ಅರಿತುಕೊಂಡು ರಶ್ಯನ್ ಪುತ್ರರು, ರಶ್ಯನ್ ಮಹಿಳೆಯರು ವೀರಾವೇಶಗೊಂಡರು; ವೈರಿಗೆ ಎಡೆಗೊಟ್ಟು ಎದುರಾಡಿದರು. ತಾವು ಅನುಭವಿಸುವ ಸ್ವಾತಂತ್ರ್ಯವನ್ನು ಅಪಹರಿಸಬಂದಿರುವ ಶತ್ರುವನ್ನು ತಮ್ಮ ತಾಯ್ನೆಲದಿಂದ ಹೊಡೆದೋಡಿಸಲು ಪ್ರತಿಜ್ಞೆಗೈದರು. ಈ ಕಾರ್ಯದಲ್ಲಿ ಕಳೆದ ಒಂದು ವರ್ಷದಿಂದ ರಶ್ಯನ್ ವೀರರು ತೋರಿಸಿದ ಧೈರ್ಯ, ಕಷ್ಟಸಹಿಷ್ಣುತೆ, ಪರಾಕ್ರಮ, ಬಲಿದಾನಗಳು ಇಡೀ ಜಗತ್ತನ್ನೇ ಆವೇಶಗೊಳಿಸಿಬಿಟ್ಟಿದೆ! ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜಗತ್ತಿನ ಯಾವುದೇ ರಾಷ್ಟ್ರದ ವೀರರನ್ನಾದರೂ ಇದು ಕೆರಳಿಸಿಬಿಟ್ಟಿದೆ.

ಯಾವ ಶಿಸ್ತು, ಸಹನೆ, ಧೈರ್ಯ, ಬಲಿದಾನಗಳಿಂದ ರಶ್ಯನ್ ವೀರರೂ, ರಶ್ಯನ್ ಮಹಿಳೆಯರೂ ಅಪರಿಮಿತ ಕಷ್ಟ ಸಹಿಸಿ ಆಕ್ರಮಣಗಾರನಾದ ಶತ್ರುವನ್ನು ಎದುರಿಸಿ ಹೋರಾಡಿದರೋ, ಆ ಅವರ ಧೀರ ವರ್ತನೆಗಾಗಿ ಭಾರತೀಯರಾದ ನಾವು ಇಂದು 'ರಶ್ಯದಿನ'ವನ್ನಾಚರಿಸಿ ಅವರನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ. ನಮ್ಮ ರಾಷ್ಟ್ರವೂ ಸ್ವಾತಂತ್ರ್ಯವನ್ನು ಪಡೆಯಲು ಹೂಡಿರುವ ಇಂದಿನ ಹೋರಾಟದಲ್ಲಿ ನಮಗೆ ಅವರು ತೋರಿದ ಧೀರಮಾರ್ಗವು ಆವೇಶಕಾರಿಯಾಗಿದೆ; ಅವರು ತಮ್ಮ ನಾಡಿನ ಸ್ವಾತಂತ್ರ್ಯವುಳಿಸಲು ಪಟ್ಟ ಅನುಪಮ ಸಂಕಷ್ಟಗಳಿಗಾಗಿ ನಾವವರನ್ನು ಕೊಂಡಾಡುವುದಲ್ಲದೆ ನಮ್ಮ ಸಹಾನುಭೂತಿಯನ್ನೂ ಪ್ರದರ್ಶಿಸುವೆವು. ಲೋಕದಲ್ಲಿ ಅನ್ಯಾಯದ ಆಕ್ರಮಣ ಧೋರಣವು ನಿಂತು, ಸರ್ವ ರಾಷ್ಟ್ರವೂ ಸ್ವತಂತ್ರವಾಗಲೆಂದು ಬಯಸುವುದರೊಡನೆ, ರಶ್ಯಕ್ಕೆ ವೀರವಿಜಯವುಂಟಾಗಲೆಂದೂ ಹಾರೈಸುತ್ತೇವೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ

ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡ್ಪಿ.

Iನೇ ಫೋರ್ಮಿಗೆ 0—12—0
IIನೇ ಫೋರ್ಮಿಗೆ 0—12—0

ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಬಿ. ಭವಾನಿರಾವ್ ಬಿ. ಎ. ಎಲ್. ಟಿ.

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ. ಭವಾನಿರಾವ್, ಬಿ. ಎ., ಎಲ್. ಟಿ.
ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—7—0
ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)

ನಾಲ್ಕನೇ ದರ್ಜೆಗೆ 0—6—0
ಐದನೇ ದರ್ಜೆಗೆ 0—7—0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ.
ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0—6—0
ಏಳನೇ ದರ್ಜೆಗೆ 0—6—0
ಎಂಟನೇ ದರ್ಜೆಗೆ 0—6—0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ವ್ಯಾಕರಣ ಮತ್ತು ಪ್ರಬಂಧ

ಕೆ. ಕೆ. ರೈ. ವಿದ್ವಾನ್.

4 ಮತ್ತು 5ನೇ ದರ್ಜೆಗೆ 0—2—0
ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0
ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6
ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ. ಕೆ. ರೈ. ವಿದ್ವಾನ್.

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0-2-6

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್.

ಮೂರನೇ ದರ್ಜೆಗೆ 0—1—6
ನಾಲ್ಕನೇ ದರ್ಜೆಗೆ 0—2—0
ಐದನೇ ದರ್ಜೆಗೆ 0—2—6

ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ ವಿದ್ವಾನ್.

ಆರನೇ ದರ್ಜೆಗೆ 0—3—0
ಏಳನೇ ದರ್ಜೆಗೆ 0—3—0
ಎಂಟನೇ ದರ್ಜೆಗೆ 0—3—0

(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6
ನಾಲ್ಕನೇ ದರ್ಜೆಗೆ 0—3—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್, ಎಂ. ಎ. ಎಲ್. ಟಿ.
ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0
ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರಣೆ

ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)
II ಮತ್ತು III ತರಗತಿಗಳಿಗೆ.

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಹರಿಜನವಾಣಿ

'ಭಾರತವು ಬ್ರಿಟನಿನ ಹಿಡಿತದಲ್ಲಿರುವುದು

ಚೀನವು ಜಪಾನಿನ ತುಳಿತದಲ್ಲಿದ್ದಂತೆ'

— ಗಾಂಧೀಜಿ ಸ್ಪಷ್ಟೀಕರಿಸುತ್ತಾರೆ —

ಗ್ರೀವರರೆಂಬ ಅಮೆರಿಕನ್ ಪತ್ರಿಕೋದ್ಯಮಿಯೊಡನೆ ಮಾತನಾಡುತ್ತಾ ಗಾಂಧಿಜಿಯವರು ತಮ್ಮ ಧೋರಣೆಯನ್ನು ಹೀಗೆಂದು ಸ್ಪಷ್ಟೀಕರಿಸಿದರು

"ನೀವು ಒಂದು ಹೊಸ ಚಳವಳ ನಡೆಸುತ್ತೀರೆಂಬ ವಿಷಯ ಮಾತುಕತೆಯಿದೆ; ಅದರ ಸ್ವರೂಪವೇನು?".

"ಸರಕಾರ ಮತ್ತು ಸಾರ್ವಜನಿಕರಿಂದ ದೊರಕಿದ ಬೆಂಬಲವನ್ನು ಅದು ಅವಲಂಬಿಸಿದೆ ನಾನು ಈ ವಿಷಯ ಸಾರ್ವಜನಿಕರ ಅಭಿಪ್ರಾಯ ಮತ್ತು ಬಾಹ್ಯ ಜಗತ್ತಿನಲ್ಲಿ ಅದರ ಪ್ರತಿಕ್ರಿಯೆ ಏನಾಗುತ್ತದೆಂದು ತಿಳಕೊಳ್ಳುತ್ತಿದ್ದೇನೆ! ಹಿಂದುಸ್ಥಾನದಲ್ಲಿ ಬ್ರಿಟಿಷರ ಆಡಳಿತವು ಇಂದೇ ಕೊನೆಗೊಳ್ಳಬೇಕೆಂಬ ನನ್ನ ಸೂಚನೆಗೆ ಬೆಂಬಲವೆಷ್ಟಿದೆಯೆಂಬುದನ್ನು ನಾನು ನಿರೀಕ್ಷಿಸುತ್ತಿದ್ದೇನೆ ಹಲವಾರು ವರ್ಷಗಳಿಂದ ನಾನು ಈ ಸೂಚನೆ ವಿಷಯ ಕಾರ್ಯಮಾಡುತ್ತಿದ್ದೇನೆ ಇಂದು ಅದು ಒಂದು ನಿಶ್ಚಿತ ರೂಪ ತಾಳಿದೆ ಲೋಕ ಶಾಂತಿಗಾಗಿ, ಚೀನಕ್ಕಾಗಿ, ರಶ್ಯಕ್ಕಾಗಿ, ಮಿತ್ರಪಕ್ಷದವರ ಧ್ಯೇಯದ ಸಲುವಾಗಿ, ಹಿಂದುಸ್ಥಾನದಲ್ಲಿ ಬ್ರಿಟಿಷರ ಆಳ್ವಿಕೆ ಇಂದೇ ಕೊನೆಗೊಳ್ಳಬೇಕು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ ಈ ದೇಶದಲ್ಲೆಲ್ಲಾ ಹೊಸ ಉತ್ಸಾಹ ಹುಟ್ಟುವುದು ಲೋಕದ ಇಂದಿನ ಗಂಡಾಂತರ ನಿವಾರಣೆಗಾಗಿ ಏನಾದರೂ ಮಾಡಲು ಹಿಂದೂದೇಶವು ಸ್ವತಂತ್ರವಾಗುವುದು. ಬ್ರಿಟನು ಇಂದು ದೊಡ್ಡದೊಂದು ಹೆಣದ ಭಾರವನ್ನು ಹೊತ್ತುಕೊಂಡಿದೆ ಬ್ರಿಟನಿಗೆ—ಅಷ್ಟೇ ಏಕೆ ಮಿತ್ರಪಕ್ಷದವರಿಗೆ—ಸಾಷ್ಟಾಂಗವೆರಗಿದ ದೊಡ್ಡ ಒಂದು ದೇಶದ ಭಾರ ಹೊತ್ತಿದೆ ಅಮೇರಿಕವೂ ಇದರಲ್ಲಿ ಒಳ್ಳೆಯ ಪಾಲುಗಾರವಾಗಿದೆ ಆದ್ದರಿಂದಲೇ ಅಪರಾಧದಲ್ಲಿಯೂ ಅಮೆರಿಕವು ಪಾಲುಗಾರವಾಗುವುದು! ಹಿಂದುಸ್ಥಾನವು ಸ್ವತಂತ್ರವಾದ ಬಳಿಕವೇ ಅದರಿಂದ ನಿಜವಾದ ಸಹಕಾರ ಸಿಗುವುದು ಇಂದು ಅದು ಬ್ರಿಟನಿನ ಸೊತ್ತಾಗಿರುವುದರಿಂದ ಇಂದು ಇಲ್ಲಿನ ಸಂಪತ್ತು ಅದಕ್ಕೆ ಸಿಗುತ್ತದೆ ಆದರೆ ಮುಂದೆ ಸಿಗಬಹುದಾದ ಎಲ್ಲಾ ಸಹಾಯವೂ ಸ್ವತಂತ್ರ ಹಿಂದುಸ್ಥಾನದ ನಿಜವಾದಸಹಾಯವಾಗುವುದು ಹಿಂದುಸ್ಥಾನವು ಬಂಧನದಲ್ಲಿರುವುದರಿಂದ ಜಪಾನಿನ ಧಾಳಿಯನ್ನೆದುರಿಸುವುದಕ್ಕಾಗಿ ಮಿತ್ರರು ಕೈಕೊಳ್ಳುವ ಚಟುವಟಿಕೆಗಳಿಗೆ ಅಡ್ಡಿಯಾಗುವುದು ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗಬೇಕೆಂಬ ಕರಾರಿನಿಂದ ಮಿತ್ರಪಕ್ಷದ ಸೈನಿಕರು ಇಲ್ಲಿಂದ ಹೊರಟುಹೋಗಬೇಕೆಂದು ನಾನು ಅನ್ನುವುದಿಲ್ಲ ಹಿಂದುಸ್ಥಾನವು ಸ್ವಾತಂತ್ರವಾದರೆ ಮತ್ತೆ ಅವರು ಹೊರಟುಹೋಗಬೇಕೆಂಬ ವಿಷಯವೂ ನಾನು ಒತ್ತಾಯಮಾಡುವುದಿಲ್ಲ ಏಕೆಂದರೆ, ಹಿಂದುಸ್ಥಾನಕ್ಕೆ ಬರಲು ಜಪಾನರಿಗೆ ನಾನು ಆಮಂತ್ರಣ ಕೊಡುತ್ತಿರುವೆನೆಂಬ ಆರೋಪವನ್ನು ನಾನು ಎಲ್ಲಾ ವಿಧದಿಂದಲೂ ಅಲ್ಲಗಳೆಯಬೇಕಾಗಿದೆ"

'ನಿಮ್ಮ ಸೂಚನೆಯು ತಿರಸ್ಕೃತವಾಯಿತೆಂದಾದರೆ ಮುಂದೆ ನೀವು ಯಾವ ರೀತಿಯ ಆಂದೋಲನ ಹೂಡುತ್ತೀರಿ"

"ಇಡೀ ಲೋಕಕ್ಕೇ ತಿಳಿಯುವ ಆಂದೋಲನ ಅದಾಗುವುದು ಬ್ರಿಟಿಷ್ ಸೈನಿಕರ ಕಾರ್ಯಗಳಲ್ಲಿ ಅದು ಇರುವುದಿಲ್ಲ ಆದರೆ ಬ್ರಿಟಿಷರ ಗಮನವು ಅತ್ತ ಹರಿವುದು ನಿಜ ಬ್ರಿಟನು ಗೆಲ್ಲಬಹುದು, ಇಲ್ಲವೇ ಚೀನವನ್ನು ಕಾಪಾಡಲು ಸಮರ್ಥವಾಗಬಹುದೆಂಬ ಕಾರಣದಿಂದ ಹಿಂದುಸ್ಥಾನವು ದಾಸ್ಯದಲ್ಲಿರಬೇಕೆಂದು ಬ್ರಿಟನು ಹೇಳುವುದು ತಪ್ಪು. ಆ ಅಪಮಾನಕರ ಪರಿಸ್ಥಿತಿಯನ್ನು ನನ್ನಿಂದ ಸಹಿಸುವುದು ಸಾಧ್ಯವಿಲ್ಲ ಸ್ವಾತಂತ್ರ್ಯವನ್ನು ಅನುಭವಿಸುವ ಹಿಂದುಸ್ಥಾನವು ಹಿಂದುಸ್ಥಾನಕ್ಕೆ ಹೆಚ್ಚಿನ ಸಹಾಯವಾಗುವುದು ಇಂದು ಹಿಂದುಸ್ಥಾನವು ಚೀನಕ್ಕೆ ನಿಜವಾದ ಸಹಾಯ ಮಾಡುತ್ತಿದೆಯೆಂದು ನನಗೆ ತೋರುವುದಿಲ್ಲ ಇದುವರೆಗೆ ನಾವು ಯಾವುದೇ ತರದ ತೊಂದರೆ ಕೊಡಬಾರದೆಂಬ ಧೋರಣವನ್ನು ಅವಲಂಬಿಸುತ್ತಾ ಬಂದಿರುವೆವು. ಈಗಲೂ ನಾವು ಅದನ್ನೇ ಅನುಸರಿಸುವೆವು ಹಿಂದುಸ್ಥಾನದಲ್ಲಿ ತಮ್ಮ ಸ್ಥಾನಮಾನಗಳನ್ನು ಇನ್ನೂ ಗಟ್ಟಿಮಾಡಿಕೊಳ್ಳುವುದಕ್ಕಾಗಿ, ಅದನ್ನು ಸುಲಿಗೆ ಮಾಡಲು ಬ್ರಿಟಿಷ್ ಸರಕಾರಕ್ಕೆ ಅವಕಾಶ ಕೊಡಲಾರೆವು ಇಂದು ಆ ತರದ ಪರಿಸ್ಥಿತಿಯಿರುವುದು ನಾವು ಅನುಸರಿಸುತ್ತಾ ಬಂದ ತೊಂದರೆ ಕೊಡಬಾರದೆಂಬ ಧೋರಣೆಗೆ ನಮಗೇನು ಪ್ರತಿಫಲ ದೊರಕಿದೆ. ಸಾವಿರಾರು ಜನರು ಮನೆಮಾರು ಬಿಟ್ಟುಹೋಗಬೇಕಾಯಿತು ಅವರಿಗೆ ಬೇರೆ ಆಶ್ರಯವಿಲ್ಲ ಹೊಲ ನೆಲಗಳಿಲ್ಲ ಜೀವನೋಪಾಯ ಬೇರಿಲ್ಲ ಯಾವುದೇ ಸ್ವತಂತ್ರ ರಾಷ್ಟ್ರದಲ್ಲಿ ಇಂಥಾ ಪರಿಸ್ಥಿತಿಯಿಲ್ಲ ಇಂಥಾ ಪರಿಸ್ಥಿತಿಗೆ ಹಿಂದುಸ್ಥಾನವು ತಲೆಬಾಗಬೇಕಾಗಿರುವುದನ್ನು ಸಹಿಸಲಾರೆ ಇದು ಅಪಮಾನ, ದಾಸ್ಯವೃತ್ತಿ. ಇಡೀ ದೇಶವು ಇಂತಹ ಸೇವಾ ವೃತ್ತಿಗೆ ಒಪ್ಪಿ ಬಿಟ್ಟರೆ ಮುಂದೆ ಸ್ವಾತಂತ್ರ್ಯಕ್ಕೆ ಅವಸಾನ ಬಂದಂತಾಯಿತು ನನಗೆ ಶುದ್ಧ ಸ್ವಾತಂತ್ರ್ಯಬೇಕು ಹಿಂದುಸ್ಥಾನಕ್ಕೆ ಬಿಗಿದ ಹಗ್ಗವನ್ನು ಮತ್ತಷ್ಟು ಬಿಗಿಮಾಡುವುದಕ್ಕಾಗಿ ಸೈನ್ಯ ಚಟುವಟಿಕೆ ಮಾಡಿದರೆ ಅದನ್ನು ನಾನು ಸಹಿಸಲಾರೆ ನನ್ನ ಸ್ವಾತಂತ್ರ್ಯ ಹೋದರೂ ಚಿಂತೆಯಿಲ್ಲ, ಪರರಿಗೆ ಸಹಾಯ ಮಾಡುತ್ತಾ ಹೋಗುವೆನೆಂಬಷ್ಟು ಉದಾರಿ ನಾನಲ್ಲ ಹೆಣವು ಜೀವಂತ ಪ್ರಾಣಿಗೆ ಯಾವುದೇ ಬಗೆಯ ಸಹಾಯ ಸಲ್ಲಿಸಲಾರದೆಂಬುದನ್ನು ನೀವು ತಿಳಕೊಳ್ಳಬೇಕು ಹಿಂದುಸ್ಥಾನವನ್ನು ದಾಸ್ಯದಲ್ಲಿಟ್ಟಿರುತ್ತಾ ನೀಗ್ರೋ ಮತ್ತು ಆಫ್ರಿಕದವರನ್ನು ಗುಲಾಮಗಿರಿಯಲ್ಲಿಟ್ಟಿರುತ್ತಾ ತಾವು ನ್ಯಾಯಕ್ಕಾಗಿ ಹೋರಾಡುವುದೆಂದು ಮಿತ್ರಪಕ್ಷದವರು ಹೇಳಲು ಯೋಗ್ಯರಲ್ಲ"

"ಹಿಂದುಸ್ಥಾನದಿಂದ ತಮ್ಮ ಆಳ್ವಿಕೆಯನ್ನು ತೆಗೆದು ಹೊರಟು ಹೋಗುವಂತೆ ಅಮೆರಿಕವು ಬ್ರಿಟನಿನ ಮನಸ್ಸನ್ನು ಒಲಿಸುವಲ್ಲಿ ಅಮೆರಿಕದಿಂದ ನೀವೇನು ಸಹಾಯ ಅಪೇಕ್ಷಿಸುತ್ತೀರಿ?"

"ಹಿಂದುಸ್ಥಾನದ ನ್ಯಾಯವು ಯೋಗ್ಯವಾದುದೆಂದು ಅಮೆರಿಕಕ್ಕೆ ಮನವರಿಕೆಯಾದರೆ, ಆ ನ್ಯಾಯವನ್ನು ಕೊಡಿಸಲು ಅಮೆರಿಕದಿಂದ ಸಂಪೂರ್ಣ ಸಹಾಯವನ್ನಪೇಕ್ಷಿಸಲು ನನಗೆ ಹಕ್ಕಿದೆ ಬ್ರಿಟಿಷರು ಹಿಂದುಸ್ಥಾನದಲ್ಲಿರಲು ಬದ್ಧರೆಂದು ರೂಸ್‌ವೆಲ್ಟರು ಅಮೆರಿಕದ ಜನತೆಯೂ ತಿಳಿಯುವುದಿದ್ದರೆ ಅವರಿಂದ ಹಿಂದೂದೇಶಕ್ಕೆ ಏನೂ ಸಹಾಯ ದೊರಕಲಾರದು ಬ್ರಿಟನಿನ ರಾಜನೀತಿ ವಿಲಕ್ಷಣವಿದೆ ಹಿಂದುಸ್ಥಾನದ ವಿಷಯ ಬ್ರಿಟಿಷರು ಅಮೆರಿಕದಲ್ಲಿ ತೀವ್ರವಾದ ಅಪಪ್ರಚಾರ ಮಾಡುತ್ತಾರೆ ಆದರಿಂದ, ಅಲ್ಲಿದ್ದ ಕೆಲವು ಭಾರತದ ಮಿತ್ರರ ಮಾತು ಜನತೆಯ ಮೇಲೆ ಏನೂ ಪರಿಣಾಮ ಹುಟ್ಟಿಸುವುದಿಲ್ಲ ಅಲ್ಲಿನ ರಾಜಕೀಯ ಅಷ್ಟು ದೃಢವಿರುವುದರಿಂದ ಸಾರ್ವಜನಿಕ ಅಭಿಪ್ರಾಯವು ಆಡಳಿತದ ಮೇಲೆ ಯಾವುದೇ ಪರಿಣಾಮವನ್ನು ಹುಟ್ಟಿಸುವುದಿಲ್ಲ ಸಾವಕಾಶ ಪರಿಣಾಮವಾಗಬಹುದೆಂದು ಬಹು ದಿನಗಳ ವರೆಗೆ ದಾರಿ ನೋಡಿದೆನು. ಇನ್ನು ಮುಂದೆ ದಾರಿ ನೋಡಲಾರೆ ಈ ಯುದ್ಧದಲ್ಲಿ 40 ಕೋಟಿ ಜನರಿಗೆ ಯಾವುದೇ ತರದ ಅಭಿಪ್ರಾಯ ವ್ಯಕ್ತಮಾಡಲು ಸ್ವಾತಂತ್ರ್ಯವಿಲ್ಲದಿರುವುದು ಬಹಳ ಶೋಚನೀಯ ಯುದ್ಧದಲ್ಲಿ ನಮ್ಮ ಶಕ್ತಿ ಸಾಮರ್ಥ್ಯಗಳನ್ನುಪಯೋಗಿಸುವ ಸ್ವಾತಂತ್ರ್ಯ ನಮಗಿದ್ದರೆ ಜಪಾನನ್ನು ತಡೆದು ಚೀನಕ್ಕೆ ನಾವು ನೆರವಾಗುತ್ತಿದ್ದೆವು"

"ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಾರಿದರೆ, ಅದು ಚೀನದ ರಕ್ಷಣೆಗಾಗಿ ಯಾವ ಸಹಾಯ ಸಲ್ಲಿಸುವುದು? ಅಮೆರಿಕವು ಬ್ರಿಟನನ್ನು ಒತ್ತಾಯ ಮಾಡಿದರೆ ನೀವು ಸಂಪೂರ್ಣ ಬೆಂಬಲ ಕೊಡುವಿರೆ?"

'ನಿರ್ದಿಷ್ಟವಾಗಿ ಹೇಳಬರದಿದ್ದರೂ, ಬಹಳ ಸಂಗತಿಗಳನ್ನು ಮಾಡಬಲ್ಲುದೆಂಬುದು ಖಂಡಿತ ಏಕೆಂದರೆ ಯಾವ ತರದ ಸರಕಾರವು ಇಲ್ಲಿ ಸ್ಥಾಪಿತವಾಗುವುದೆಂದು ನನಗೆ ಹೇಳಬರುವುದಿಲ್ಲ ಇಲ್ಲಿ ಬೇರೆ ಬೇರೆ ರಾಜಕೀಯ ಸಂಸ್ಥೆಗಳಿವೆ ಅವೆಲ್ಲ ಯೋಗ್ಯವಾದ ಕಾರ್ಯಕ್ರಮವನ್ನು ಕಾರ್ಯಕಾರಿ ಮಾಡಲು ಸಮರ್ಥವಾಗುವವೆಂದು ನನ್ನ ನಿರೀಕ್ಷೆ ಇಂದು ಪರಿಸ್ಥಿತಿ ಹದಗೆಟ್ಟಿದೆ ಹೆಣಕ್ಕೆ ಪುನ ಜೀವ ಬರುವುದೆಂದು ಯಾರೂ ನಂಬುವರು? ಹಿಂದುಸ್ಥಾನವು ಮಿತ್ರರಿಗೆ ಭಾರವಾಗಿದೆ ನಾನೀಗ ೭೪ ವರ್ಷದ ಮುದುಕನಾದ್ದರಿಂದ ಮಿತ್ರಪಕ್ಷಕ್ಕೆ ನನ್ನ ಸಹಾಯ ಅಷ್ಟು ಪ್ರಯೋಜನ ಬೀಳಲಿಕ್ಕಿಲ್ಲ ಆದರೆ ಸ್ವತಂತ್ರ ಹಾಗೂ ಬಲಿಷ್ಠ ರಾಷ್ಟ್ರವು ಮನಃಪೂರ್ವಕ ಕೊಡಬಲ್ಲ ಎಲ್ಲಾ ಸಹಕಾರವು ಆಗ ದೊರಕುವುದು ಪತ್ರಿಕಾರ ನಾನು ಲೇಖನಗಳ ಮೂಲಕ ಸಾಧ್ಯವಾದ ಸಹಾಯ ಕೊಡಬಲ್ಲೆ ಆದರೆ ಹಿಂದುಸ್ಥಾನದ ಶಕ್ತಿ ಬಹಳ ದೊಡ್ಡದಿದೆ ಇಂದು ಎಲ್ಲಾ ಕಡೆಗಳಲ್ಲಿ ಅಸಂತೋಷವಿರುವುದರಿಂದ ಜಪಾನಿನ ಪ್ರಗತಿಗೆ ಪರಿಣಾಮಕಾರೀ ವಿರೋಧವಿಲ್ಲ ಸ್ವತಂತ್ರವಾದ ಕ್ಷಣದಲ್ಲಿಯೇ ನಾವು ಬಲಾಢ್ಯ ರಾಷ್ಟ್ರವಾಗುವೆವು ಆದರಿಂದ ಮಿತ್ರ ಪಕ್ಷದವರಿಗೆ ಸಹಾಯವಾಗುವುದು"

'ಬರ್ಮಾ ದೇಶವು ಏನಾಗಿದೆ? ರಶ್ಯಾ ಈಗ ಏನು ಮಾಡುತ್ತಿದೆ? ಇವುಗಳಲ್ಲಿಯ ವ್ಯತ್ಯಾಸದಷ್ಟು ವ್ಯತ್ಯಾಸವಾಗುವುದೋ?'

"ಹಿಂದುದೇಶದಿಂದ ಬರ್ಮಾವನ್ನು ಬೇರೆಮಾಡಿದ ಮೇಲೆ ಅವರು ಅದಕ್ಕೆ ಸ್ವಾತಂತ್ರ್ಯ ಕೊಡಬಹುದಾಗಿತ್ತು. ಆದರೆ ಅವರು ಅಂಥದನ್ನೇನೂ ಮಾಡಲಿಲ್ಲ. ಮೊದಲಿನಂತೇ ಅದನ್ನು ಸುಲಿವ ಧೋರಣೆಯನ್ನೇ ಮುಂದುವರಿಸಿದರು. ಬರ್ಮೀಯರಿಂದ ಅವರಿಗೆ ಸ್ವಲ್ಪವೂ ಸಹಾಯ ಸಿಗಲಿಲ್ಲ. ಮಾತ್ರವಲ್ಲ ಅವರಿಂದ ವಿರೋಧವೇ ಉಂಟಾಯಿತು ಹಿಂದುಸ್ಥಾನದಿಂದ ನಿವೃತ್ತರಾಗಿ ಬೇರೆ ರಾಜ್ಯಕ್ಕೆ ಹೋಗಲು ಜಪಾನರು ಮಿತ್ರಪಕ್ಷದವರಿಗೆ ಹೇಳಿದರೆ ಇಂದೇ ಹಿಂದುಸ್ಥಾನವು ಜಪಾನಿನ ವಿರುದ್ಧ ಕತ್ತಿಯೆತ್ತುವುದೆಂದು ನಾನು ಹೇಳಲಾರೆ ಕೆಲ ಬರ್ಮೀಯರಂತೆ ಭಾರತೀಯರೂ ಅವರನ್ನು ಕೂಡುವ ನೀಚ ಕೆಲಸ ಮಾಡಬಹುದು ಕೊನೆವರೆಗೂ ಜಪಾನರಿಗೆ ಭಾರತೀಯರು ವಿರೋಧಮಾಡಬೇಕೆಂದು ನನ್ನ ಆಪೇಕ್ಷೆ ಹಿಂದುಸ್ಥಾನವು ಸ್ವತಂತ್ರವಾದರೆ ಅದು ಹಾಗೇ ಮಾಡುವುದು ನಮ್ಮನ್ನು ಬೇರೆ ಮಾಡುವ ಬ್ರಿಟಿಷ ಶಕ್ತಿ ಮಾಯವಾದ ಕೂಡಲೇ ಎಲ್ಲಾ ಪಕ್ಷಗಳೂ ಒಂದಾಗಿ ಕಾರ್ಯಮಾಡುವುವು"

'ಸಾಮಂತ ಸ್ವರಾಜ್ಯವನ್ನು ಈಗಲೇ ಕೊಡುವುದೆಂದು ಸಾರಿದರೆ ಸಾಕಾಗದೆ?'

'ಅದೇನೂ ಅಷ್ಟು ಪ್ರಯೋಜನವಿಲ್ಲ ನನಗೆ ಅರ್ಧಮರ್ಧ ಬೇಡ, ಸ್ವಾತಂತ್ರ್ಯದೊಡನೆ ಹುಡುಗಾಟಿಕೆ ಸಲ್ಲದು ಬ್ರಿಟಿಷರು ಆ ಪಕ್ಷಕ್ಕಾಗಲಿ, ಈ ಪಕ್ಷಕ್ಕಾಗಲಿ ಸ್ವಾತಂತ್ರ್ಯ ಕೊಡುವುದಲ್ಲ, ಇಡೀ ಹಿಂದುಸ್ಥಾನಕ್ಕೆ ಕೊಡುವುದು ಹಿಂದುಸ್ಥಾನವನ್ನು ಬ್ರಿಟಿಷರು ತಮ್ಮ ಸ್ವಾಧೀನ ವಿಟ್ಟುಕೊಳ್ಳುವದು ತಪ್ಪು ಅದನ್ನು ಅವರ ಪಾಡಿಗೆ ಬಿಟ್ಟುಗೊಟ್ಟು ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು

'ರಾಜಾಜಿಯವರ ಬಗ್ಗೆ ನಿಮ್ಮ ಧೋರಣವೇನು?'

ಅವರ ಕುರಿತು ನಾವು ಜನಿಕ ಚರ್ಚೆ ಮಾಡುವುದಿಲ್ಲ ಸಮೀಪ ಸಹಕಾರಿಗಳೊಡನೆ ನೀಚಾಸ್ಪದ ಚರ್ಚೆ ಮಾಡಕೂಡದು ಅವರ ಮತ್ತು ನನ್ನ ಮತಭೇದ ಹಾಗೆ ಇದೆ ಕೆಲವೊಂದು ಸಂಗತಿಗಳು ಪತ್ರಿಕೆ ಪತಿತವಿದ್ದು ಸಾರ್ವಜನಿಕ ಚರ್ಚೆ ಮಾಡಬಾರದು ಜಪಾನರ ಪ್ರಮತ್ತಿಕೆಂತ ಅವರು ಬ್ರಿಟಿಷರ ಒಡೆತನವನ್ನು ಒಪ್ಪಿಕೊಳ್ಳಲಿ ಸಿದ್ಧರು ಯುದ್ಧ ಮುಗಿವ ವರೆಗ ಅವರು ಸ್ವಾತಂತ್ರ್ಯದ ಪ್ರಶ್ನೆಯನ್ನು ಮುಂದೆ ಹಾಕಲು ಸಿದ್ಧರು ನನ್ನ ಧೋರಣೆ ಅದರ ವಿರುದ್ಧವಿದೆ ಯುದ್ಧದಲ್ಲಿ ವಿಜಯ ಸಿಗಬೇಕಾದರೆ ಹಿಂದೂದೇಶವನ್ನು ಸ್ವತಂತ್ರ ಮಾಡಲೇಬೇಕು ನಾನು ಬಹಳ ವಿಚಾರ ಮಾಡಿ ಈ ನಿರ್ಣಯಕ್ಕೆ ಬಂದಿರುವೆನು ಸಿಟ್ಟಿನ ಆವೇಗದಿಂದ ಅಥವಾ ಅವಸರದಿಂದ ನಾನು ಯಾವ ನಿರ್ಣಯವನ್ನೂ ಮಾಡುವುದಿಲ್ಲ ಜಪಾನಿಗಳನ್ನು ದೂರಮಾಡಲು ನನ್ನಲ್ಲಿ ಯಾವುದೇ ಅಭಿಪ್ರಾಯವಿಲ್ಲ ಹಿಂದುಸ್ಥಾನದ ಸ್ವಾತಂತ್ರ್ಯವೂ ಅದಕ್ಕೆ ಮಾತ್ರವಲ್ಲದೆ ಚೀನ ರಷ್ಯಗಳ ಧ್ಯೇಯ ಸಾಧನೆಗೂ ಅವಶ್ಯವಿದೆ ಹಿಂದುಸ್ಥಾನವು ಬ್ರಿಟನಿನ ಹಿಡಿತದಲ್ಲಿರುವುದು ಚೀನವು ಜಪಾನಿನ ತುಳಿತದಲ್ಲಿದ್ದಂತೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ೪೦ ಕೋಟಿ ಜನರ ಕುರಿತು ವಿಚಾರ ಮಾಡಿರಿ ಅವರೇನು ಕಾಡು ಮನುಷ್ಯರಲ್ಲ ಅವರಿಗೆ ಪ್ರಾಚೀನ ಸಂಸ್ಕೃತಿಯಿದೆ, ನಾಗರಿಕತೆಯಿದೆ. ಇಂಥ ಜನರನ್ನು ದಾಸ್ಯದಲ್ಲಿಟ್ಟ ಬಗ್ಗೆ ಬ್ರಿಟಿಷರು ನಾಚಿಕೆಪಡಬೇಕು ಯಾವುದೇ ರಾಷ್ಟ್ರವು ಮತ್ತೊಂದು ರಾಷ್ಟ್ರವನ್ನು ದಾಸ್ಯದಲ್ಲಿಡುವುದು ಸರಿಯಲ್ಲ. ಯಾವುದೇ ರಾಷ್ಟ್ರವು ಗುಲಾಮಗಿರಿಯಲ್ಲಿರಲಿಕ್ಕೆ ಅಪೇಕ್ಷಿಸಿದರೂ ಅದನ್ನು ದಾಸ್ಯದಲ್ಲಿ ಕೊಳೆಯಬಿಡುವುದು ಅಪಮಾನಕರ

"ಹಿಂದುಸ್ಥಾನ ಟೈಮ್ಸ್" ಪತ್ರಿಕೆ

"ಹಿಂದುಸ್ಥಾನ ಟೈಮ್ಸ್" ಪತ್ರಿಕೆಯ ಬಾತ್ಮೀದಾರರ ಕುರಿತಾಗಿ ಅಲ್ಲಹಾಬಾದು ಹೈಕೋರ್ಟಿನಲ್ಲಿ ಆದ ತೀರ್ಮಾನದ ಸಂಬಂಧ, ಆ ಪತ್ರಿಕೆಯ ಕಡೆಯಿಂದ ಮಾಡಿಕೊಂಡ ಅರ್ಜಿಯ ಮೇರೆಗೆ, ಪ್ರೀವಿ ಕೌನ್ಸಿಲು ಆ ಪತ್ರಿಕೆಯ ಅಪೀಲನ್ನು ಸ್ವೀಕರಿಸಲು ಒಪ್ಪಿದೆಯೆಂದಾಗಿ ವಾರ್ತೆ.

ANNOUNCEMENT

7000 Shares

5% Cumulative First Preference

LIST CLOSED

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

ಜರ್ಮನ್ ಸೇನೆಯು ಇಜಿಪ್ತ್ ಗಡಿಯನ್ನು ದಾಟಿತು!

ಸೆಬಸ್ಟಪೋಲ್ ಪರಿಸ್ಥಿತಿ ವಿಷಮವಾಗಿದೆ!

ಚರ್ಚಿಲ್—ರೂಸ್‌ವೆಲ್ಟರು ಮಾತುಕತೆ ನಡೆಸುತ್ತಿದ್ದಾರೆ.

ಚರ್ಚಿಲ್ ರೂಸ್‌ವೆಲ್ಟ್ ಮಾತುಕತೆ

ಶತ್ರುವನ್ನು ಸೋಲಿಸುವ ವಿಚಾರದಲ್ಲಿ ಹೊಸ ರಣರಂಗವನ್ನು ರಚಿಸುವ ವಿಷಯದಲ್ಲಿ ಈಗ ಚರ್ಚಿಲರಿಗೂ ರೂಸ್‌ವೆಲ್ಟರಿಗೂ ವಾಶಿಂಗ್‌ಟನಿನಲ್ಲಿ ವಿಚಾರ ವಿನಿಮಯವಾಗುತ್ತಿದೆ. ಕಳೆದ ಶುಕ್ರವಾರ, ಈ ಮಾತುಕತೆಗಳು ಆರಂಭವಾಗಿವೆ. ಬೇರೆ ಬೇರೆ ವಿಷಯಗಳ ಕುರಿತು ಅವರು ಚರ್ಚಿಸಿದರು. ಮುಖ್ಯ ಮಿತ್ರರಾಷ್ಟ್ರಗಳ ಶಕ್ತಿ ಸಂಘಟನೆ ಕುರಿತು ಆಲೋಚಿಸುತ್ತಿದ್ದಾರೆ.

ಸೆಬಸ್ಟಪೋಲ್ ವಿಷಮ ಸ್ಥಿತಿಯಲ್ಲಿದೆ.

ಸೆಬಸ್ಟಪೋಲಿನಲ್ಲಿ ರಶ್ಯನರು ಆವೇಶದಿಂದ ಹೋರಾಡುತ್ತಿದ್ದರೂ, ಜರ್ಮನರಿಗೆ ವಿಜಯವಾಗುತ್ತಾ ಬರುವುದರಿಂದ ಅಲ್ಲಿನ ಅವಸ್ಥೆ ಬೇಗನೇ ಕೆಳಿದುಬರುವಂತಿದೆಯೆಂದು ವಾರ್ತೆಯಿದೆ.

ಷಣ್ಮುಖಂ ಚೆಟ್ಟಿಯವರ ರಾಜೀನಾಮೆ

ಹಿಂದುಸ್ತಾನದ ವಿಷಯ ಸಾಮಾನುಗಳನ್ನು ಕೊಳ್ಳಲು ಅಮೇರಿಕದಲ್ಲಿರುವ ಕಮಿಟಿಯ ಅಧ್ಯಕ್ಷರಾದ ಸರ್ ಷಣ್ಮುಖಂ ಚೆಟ್ಟಿಯವರು ತಮ್ಮ ಆ ಕೆಲಸಕ್ಕೆ ರಾಜನಾಮೆಕೊಟ್ಟಿರುವುದರಿಂದ ಆ ಸ್ಥಳದಲ್ಲಿ ಕಲ್ಕತ್ತದ ಮೊರ್ಟನ್ ಕಂಪೆನಿಯ ಎ. ಸಿ. ಮಹೇಂದ್ರರು ನೇಮಕವಾಗಿದ್ದಾರೆ.

ಕಮ್ಯುನಿಸ್ಟ್ ಕೈದಿಗಳ ಬಿಡುಗಡೆ

ಸ್ಥಾನಬದ್ಧರಾದ ಕಮ್ಯುನಿಸ್ಟ್ ಕೈದಿಗಳಲ್ಲಿ ಕೆಲವರನ್ನು ಮದ್ರಾಸ್ ಸರಕಾರವು ಬಿಡುಗಡೆ ಮಾಡಿದೆ.

ಒಂದು ವರ್ಷದ ರಶ್ಯನ್ ಯುದ್ಧ ಹಾನಿಯ ವಿವರ

ಜರ್ಮನಿಯ ನಾಶವಾದ ಮತ್ತು ಕಣ್ಮರೆಯಾದ ೧ ಕೋಟಿ ಸೈನಿಕರೂ ೩೫॥ ಸಾವಿರ ಫಿರಂಗಿಗಳೂ ೨೪ ಸಾವಿರ ಟೇಂಕ್‌ಗಳೂ ೨೦ ಸಾವಿರ ವಿಮಾನಗಳೂ ಮತ್ತು ರಶ್ಯನರ ೪೫ ಲಕ್ಷ ಸೈನಿಕರೂ ೧೫ ಸಾವಿರ ಫಿರಂಗಿಗಳೂ ೧೫ ಸಾವಿರ ಟೇಂಕುಗಳೂ ೯ ಸಾವಿರ ವಿಮಾನಗಳೂ ಹಾನಿಯಾಗಿವೆ.

ಯುದ್ಧ ವಾರ್ತೆ

ಶತ್ರುಗಳು ತೋಬ್ರುಕನ್ನು ಪ್ರವೇಶಿಸಿ ಅಲ್ಲಿ ಶಕ್ಯಷ್ಟು ಸ್ಥಳವನ್ನು ಆಕ್ರಮಿಸಿ ಈಗ ಅಕ್ಷರಾಷ್ಟ್ರ ಬಲಗಳು ಬಾರ್ಡಿಯಾ ಸಮೀಪಿಸಿವೆ ಎಂದು ವಾರ್ತೆ— ಚೀನೀಯರು ಪೂರ್ವ ಚೀನದಲ್ಲಿನ ಜಪಾನರ ಮರುದಾಳಿಯ ಭರವನ್ನು ತಡೆದು ನಿಲ್ಲಿಸಿ ಅವರನ್ನು ಚೆಕ್ಯಾಂಗಿನಿಂದ ಓಡಿಸಿದ್ದಾರೆ— ಸೆಬಸ್ಟ್‌ಪೂಲ್ ಅಪಾಯ ಸ್ಥಿತಿಯಲ್ಲಿದೆ; ಮರ್‌ಮನಸ್ಕಿನ ಮೇಲೆ ಭೀಕರ ವಿಮಾನ ದಾಳಿ; ಲೆನಿನ್‌ಗ್ರಾಡಿನಲ್ಲಿ ರಷ್ಯದವರಿಗೆ ವಿಜಯವಾಗಿದೆ— ಬಂಗಾಳ ಪ್ರಧಾನರಾದ ಹಕ್ಕರು, ಜಿನ್ನರನ್ನು ಪ್ರತಿಭಟಿಸಿ, ಮುಸ್ಲಿಂ ಲೀಗಿಗೆ ಪ್ರತಿಯಾಗಿ ಇನ್ನೊಂದು ಸಂಸ್ಥೆಯನ್ನೇರ್ಪಡಿಸುವ ಯೋಜನೆಯನ್ನು ಪ್ರಕಟಿಸಿದ್ದಾರೆ.

ಚರ್ಚಿಲ್ಲರು ವಾಶಿಂಗ್‌ಟನ್ನಿನಲ್ಲಿ

ಬ್ರಿಟಿಶ್ ಪ್ರಧಾನರಾದ ಚರ್ಚಿಲ್ಲರು ವಾಶಿಂಗ್‌ಟನ್ನಿಗೆ ತೆರಳಿರುವರೆಂದು ಪ್ರಕಟವಾಗಿದೆ. ಅವರು ಪ್ರೆಸಿಡೆಂಟ್ ರುಜ್‌ವೆಲ್ಟರೊಡನೆ ಯುದ್ಧ ಕಾರ್ಯಗಳ ಕುರಿತು ಸಮಾಲೋಚಿಸಲು ಬಂದಿರುವರು. ಇಷ್ಟರಲ್ಲೇ ಅವರಿಬ್ಬರೊಳಗೆ ಮಾತುಕತೆಗೆ ಆರಂಭವಾಗಿದೆ. ಹಲವು ವಿಷಯಗಳೊಡನೆ, ಯುರೋಪಿನಲ್ಲಿ ಎರಡನೆಯ ರಣರಂಗವನ್ನೂ ಮಿತ್ರರು ರಚಿಸುವ ಈ ಮಾತುಕತೆಯು ತೀರ್ಮಾನವಾಗಲಿದೆ— ಆಗ ತಕ್ಕ ತೀರ್ಮಾನಗಳೆಲ್ಲ ಶೀಘ್ರಗತಿಯಿಂದ ಆಗುವುದೆಂದು ನಿರೀಕ್ಷೆ.

ಜಿನ್ನಾ-ರಾಜಾಜಿ ಭೇಟಿ

ಮುಂಬಯಿಗೆ ಹೋಗಿದ್ದ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಜಿನ್ನರನ್ನು ಭೇಟಿಯಾಗಿ ಬಹಳ ಹೊತ್ತಿನ ತನಕ ಮಾತನಾಡಿದರು.

ಇಜಿಪ್ತಿನ ಮೇಲೆ ಧಾಳಿಮಾಡಲು ಯೋಚನೆ

ಈಗ ಲಿಬಿಯಗಳ ಕಾಳಗ ಮುಗಿದು ಇಜಿಪ್ತ್ ಯುದ್ಧವು ಪ್ರಾರಂಭವಾಯಿತೆಂದು ಹೇಳಬೇಕಾಗಿದೆ. ಜರ್ಮನರ ಹತ್ತಿರ ಧಾಳಿಯುದ್ಧ ಸಾಮಗ್ರಿಗಳಿರುವುದರಿಂದ ಅವರು ಸುಮ್ಮನೆ ಇರುವುದಿಲ್ಲ. ಆದ್ದರಿಂದ ಈಗ ಅವರು ಇಜಿಪ್ತಿಗೆ ಧಾಳಿಯಿಡಲು ಮನಸ್ಸುಮಾಡಿದ್ದಾರೆ. ಈ ಧಾಳಿಯನ್ನೆದುರಿಸಲು ಬ್ರಿಟಿಷರೂ ಸಿದ್ಧರಾಗಿರುವರು. ಇಜಿಪ್ತ್ ಗಡಿನಾಡಿಗೆ ಜರ್ಮನ್ ಸೈನ್ಯಗಳು ಹೋಗಿದ್ದು ಅಲ್ಲಿ ಪುನರ್ಘಟನೆಯಾಗುತ್ತಿದೆ. ಟೇಂಕ್, ಫಿರಂಗಿ ಕಾಲಾಳುಗಳಿಂದ ಕೂಡಿದ ಒಂದು ಪ್ರಬಲವಾದ ಜರ್ಮನ್ ಸೈನ್ಯವು ಗಾಂಬುಟದಿಂದ ಕಾಪುಝೋ ಮತ್ತು ಹೆಲ್ಫಾಯಗಳ ಕಡೆಗೆ ಬರುತ್ತಿದೆಯೆಂದು ಸುದ್ದಿ. ಇಜಿಪ್ತಿನ ಮೇಲೆ ಭಾರೀ ಧಾಳಿ ಮಾಡಲು ರೋಮೆಲನು ಸರ್ವ ಸಿದ್ಧತೆ ಮಾಡುತ್ತಿದ್ದಾನೆ. ಕಾಪುಝೋ ಕೋಟೆಯ ಹತ್ತಿರ ಜರ್ಮನ್ ಬ್ರಿಟಿಷ ಸೈನಿಕರಿಗೆ ಕಾಳಗ ಪ್ರಾರಂಭವಾಯಿತೆಂದು ಈಗ ಸುದ್ದಿ ಬಂದಿದೆ. ರೋಮಲನ ಸೈನ್ಯವು ಗಡಿನಾಡನ್ನು ದಾಟಿ ಬಂದಿರುವುದೆಂದೂ ವಾರ್ತೆ.

ಗಡಿನಾಡಿನಲ್ಲಿ ಹೊಸ ಆಂದೋಲನ

ಅಬ್ದುಲ್ ಗಫರ್ ಖಾನರ ಸೂಚನೆ

ಖಾನ್ ಅಬ್ದುಲ್‌ಗಫರ್ ಖಾನರು ಒಂದು ಸಾರ್ವಜನಿಕ ಭಾಷಣದಲ್ಲಿ ಗಡಿನಾಡು ಪ್ರಾಂತದಲ್ಲಿ ಇಷ್ಟರಲ್ಲೇ ಒಂದು ಸತ್ಯಾಗ್ರಹವು ಆರಂಭವಾಗುವುದೆಂದು ತಿಳಿಸಿದರು. ಅವರು, ಮತ್ತೆ ಹೀಗೆಂದು ಹೇಳಿದರು.

'ನಾವು ಯಾವುದೇ ಕೆಲಸವನ್ನಾದರೂ ಗುಟ್ಟಿನಿಂದ ಮಾಡುವುದಿಲ್ಲ. ಯುದ್ಧ ಆರಂಭವಾದಂದಿನಿಂದಲೂ ಖುದಾಖಿದ್ಮತ್‌ಗಾರರು ಹಳ್ಳಿಗಳಲ್ಲಿ ಜನೋಪಕಾರೀ ಕಾರ್ಯಗಳಲ್ಲಿ ನಿರತರಾಗಿದ್ದರು. ಜನರು ಸ್ವಾವಲಂಬಿಗಳು ಹೇಗೆ ಆಗಬೇಕೆಂದು ತಿಳಿಸುತ್ತಿದ್ದರು. ಈ ಕೆಲಸವು ಸರಕಾರದವರ ಮನಸ್ಸಿಗೆ ಸರಿಯೆಂದು ತೋರಲಿಲ್ಲ. ಆದ್ದರಿಂದ ಅವರು ನಮ್ಮ ಕೆಲಸಗಾರರನ್ನು ಬಂಧಿಸುತ್ತಿರುವರು. ಈ ಕಷ್ಟಕಾಲದಲ್ಲಿ, ಜನರ ಸೇವೆ ಮಾಡುವುದು ಒಂದು ಪವಿತ್ರ ಕಾರ್ಯ. ಇದಕ್ಕೆ ಯಾರೂ ಅಡ್ಡಬರಲಾಗದು. ಸರಕಾರವು ಒಪ್ಪಲಿ, ಒಪ್ಪದಿರಲಿ, ನಾವು ನಮ್ಮ ಕೆಲಸವನ್ನು ಮುಂದುವರಿಸುವೆವು. ಎಷ್ಟು ಆತಂಕವಾದರೂ ನಾವು ಅಹಿಂಸೆಯನ್ನು ಬಿಟ್ಟು ಬಿಡುವುದಿಲ್ಲ. ಆದ್ದರಿಂದ ನಾವೀಗ ಬೇರೆ ಉಪಾಯ ಕಾಣದೆ ಸತ್ಯಾಗ್ರಹ ಹೂಡಬೇಕಾಗಿದೆ.

ಅಮೆರಿಕವು ಸೈನ್ಯಕ್ಕೆ ೧೬೦೦ ಕೋಟಿ ಡಾಲರು ಮಸೂದೆ ತಂದಿದೆ

ಈ ವರೆಗೆ ಅಮೆರಿಕದ ಇತಿಹಾಸದಲ್ಲೇ ಇಲ್ಲದಿರುವಂತಹ ೧೬೦೦ ಕೋಟಿ ಡಾಲರುಗಳನ್ನು ಸೈನ್ಯಪೂರೈಕೆ ವ್ಯವಸ್ಥೆ ಬಗ್ಗೆ ಒದಗಿಸಬೇಕೆನ್ನುವ ಮಸೂದೆಯೊಂದು ಮಂಡಿಸಲ್ಪಡುವುದಾಗಿ ತಿಳಿದು ಬಂದಿದೆ. ಈ ಯೋಜನೆಯಂತೆ [illegible]ನೆಯ ಜುಲಾಯಿ ೧ರ ಒಳಗೆ ಅಮೆರಿಕದ ಸೈನ್ಯವನ್ನು ೪೫ ಲಕ್ಷಕ್ಕೆ ಏರಿಸಬೇಕೆಂದು ಗೊತ್ತಾಗಿದೆ.

ಸೆಬಸ್ಟಪೋಲದಿಂದ ಇತ್ತೀಚೆಗೆ ಬಂದ ಸುದ್ದಿ

ರಶ್ಯನ್ ವ್ಯೂಹವನ್ನು ಒಂದೆಡೆ ಮುರಿದು ಜರ್ಮನರು ಮುನ್ನುಗ್ಗಿದ ಪರಿಸ್ಥಿತಿಯು ಈಗ ಮತ್ತಷ್ಟು ಭೀಕರವಾಗಿದೆ. ರಶ್ಯನರು ವೀರಾವೇಶದಿಂದ ಹೋರಾಡುತ್ತಾರೆ. ಜರ್ಮನರು ಕಾಯ್ದಿಟ್ಟ ಹೊಸ ಸೈನ್ಯಗಳನ್ನು ಟೇಂಕುಗಳನ್ನು ತರಿಸುತ್ತಲೇ ಇದ್ದಾರೆ. ಜರ್ಮನರ ೧೧ ದಳಗಳಿವೆ.

ಆತ್ಮಹತ್ಯ

ಲೆಜಿಸ್ಲೇಟಿವ್ ಎಸೆಂಬ್ಲಿಯ ಡಿಬೇಟ್ಸಿನ ಸಂಪಾದಕರಾದ ಶ್ರೀ ಎಸ್. ಸಿ. ಸೇನ್ ಎಂಬವರು ಹಣ ಕಾಸಿನ ತಾಪತ್ರಯಗಳಿಂದ ಆತ್ಮಹತ್ಯೆ ಮಾಡಿಕೊಂಡರೆಂದು ಹೊಸದಿಲ್ಲಿಯ ವಾರ್ತೆ.



ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೀಕಡಾ ೧೦೦ರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಸಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈಯ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಮಾಡುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ತಾಗಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಎಳಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದದ್ದು.

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

YOUR INTERESTS & OURS.

The interests of the banker and his customers are closely related. We therefore try to study all matters from your stand point. Tell us your requirements

CANARA BANK, LIMITED.

ESTD 1906.

ಫಾರ್ವರ್ಡ್ ಬ್ಲಾಕನ್ನು ಅಕ್ರಮ ಸಂಸ್ಥೆಯೆಂದು ಸಾರಲಾಗಿದೆ!

ಗಾಂಧಿಜಿ ಮೇಲೆ ಜಿನ್ನಾರ ಆರೋಪ
ಹಿಂದು ಮುಸ್ಲಿಂ ಐಕ್ಯ ಭಂಗ ಮಾಡುವವರೆಂದು!

ಪುನಃ ಜಿನ್ನರು ಗಾಂಧಿಜಿ ಮೇಲೆ ನಂಜುಕಾರಲು ತೊಡಗಿದ್ದಾರೆ! ಮಹಾತ್ಮರು ಹಿಂದು ಪ್ರಭುತ್ವವನ್ನು, ಕಾಂಗ್ರೆಸ್ ರಾಜನನ್ನು ತನ್ನ ಮುಂದಾಳುತನವನ್ನು ಪ್ರಸ್ಥಾಪಿಸಲು ಹಂಚಿಕೆ ಹೂಡುವರೆಂದು ಜಿನ್ನರು ಹೇಳುತ್ತಿದ್ದಾರೆ.

"ನಮ್ಮನ್ನು ದೂರಮಾಡುವ ಮೂರನೆಯ ಶಕ್ತಿ (ಬ್ರಿಟಿಷರ ಆಳುವಿಕೆಯು) ಹೋದ ಕೂಡಲೇ ನಾವೆಲ್ಲಾ ಜಾತಿ ಪಂಗಡದವರೂ ಒಂದಾಗಿ ಒಟ್ಟುಗೂಡಿ ಕೆಲಸಮಾಡುವೆವು." ಎಂದು ಇತ್ತೀಚೆಗೆ ಮಹಾತ್ಮರು 'ಬ್ರಿಟಿಷರು ಹಿಂದುಸ್ಥಾನ ಬಿಟ್ಟು ಹೊರಟು ಹೋಗಬೇಕು' ಎಂಬ ತಮ್ಮ ಘೋಷಣೆಯನ್ನು ಸಮರ್ಥಿಸುತ್ತಾ ಹೇಳಿದ್ದರು.

ಇದಕ್ಕಾಗಿ ಜಿನ್ನರು ಗಾಂಧಿಜಿ ಮೇಲೆ ಆರೋಪ ಹೊರಿಸುತ್ತಾರೆ. ಸ್ವಾತಂತ್ರ್ಯ ಸಿಗಲು ಹಿಂದು ಮುಸ್ಲಿಂ ಐಕ್ಯವು ಅವಶ್ಯ ಆಗಬೇಕಾಗಿದೆ ಎಂದು ಇದು ವರೆಗೆ ಹೇಳುತ್ತಾ ಬಂದ ಗಾಂಧಿಜಿಯವರು, ಈಗ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಹಿಂದು ಮುಸ್ಲಿಂ ಐಕ್ಯವಾಗುವುದೆಂದು ಹೇಳುವುದರಿಂದ ಅವರು ಐಕ್ಯ ವಿಚಾರದಲ್ಲಿ ನಿಜವಾಗಿ ಶ್ರದ್ಧಾಳುಗಳಾಗಿಲ್ಲವೆಂದು ಜಿನ್ನರ ದೂರು.

ಗಾಂಧಿಜಿಗೆ ಹಿಂದುಗಳು ಆಳಬೇಕೆಂಬ ಇಚ್ಛೆಯಲ್ಲದೆ, ನಿಜವಾಗಿ ಹಿಂದು ಮುಸ್ಲಿಂ ಐಕ್ಯ ವಿಚಾರವಿರುವುದಿಲ್ಲವಾದರಿಂದ ಅವರು 1925 ನೆಯ ಇಸವಿಯಿಂದ ತೊಡಗಿ ಇದೇ ರೀತಿಯಲ್ಲಿ ಐಕ್ಯ ಪ್ರಭುತ್ವಕ್ಕೆ ಕಲ್ಲು ಹಾಕುತ್ತಿದ್ದಾರೆಂದೂ ಜಿನ್ನರು ಹೇಳುತ್ತಿರುವರು

ಮಹಾತ್ಮರ ಹೊಸ ಆಂದೋಲನ ವೈಸರಾಯರಿಗೆ ಮೊದಲು ತಿಳಿಸುವರಂತೆ!

ಸರ್ದಾರ್ ಪಟೇಲ್, ರಾಜೇಂದ್ರ ಪ್ರಸಾದ್ ಮತ್ತು ಇನ್ನಿತರ ಕಾಂಗ್ರೆಸ್ ಮುಂದಾಳುಗಳು ಬೇಗನೇ ವಾರ್ಧಾಕ್ಕೆ ಬರಲಿರುವರು ಮುಂದೆ ನಡೆಯಬಹುದಾದ ಆಂದೋಲನದ ವಿಚಾರ ಒಳ್ಳೆಯ ಆಸಕ್ತಿಯಿಂದು ಕಂಡು ಬರುತ್ತದೆ. ತಮ್ಮ ಮುಂದಿನ ಚಟುವಟಿಕೆಗಳ ವಿಚಾರವಾಗಿ ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯ ಒಪ್ಪಿಗೆ ಪಡೆದು, ಹೊಸ ಆಂದೋಲನದ ವಿಚಾರ ವೈಸರಾಯರಿಗೆ ತಿಳಿಸಿ ಹೂಡುವರೆಂದು ತಿಳಿದಿದೆ. ಅಂತರ್‌ರಾಷ್ಟ್ರೀಯ ಸ್ಥಿತ್ಯಂತರ ಹಾಗೂ ಕಾಂಗ್ರೆಸ್ಸನ್ನು ಸಮಾಧಾನಪಡಿಸಲು ಸರಕಾರವು ಮಾಡಬಹುದಾದ ಯತ್ನಗಳಲ್ಲಿ ಈ ಬಿಕ್ಕಟ್ಟು ಬಗೆಹರಿವುದೆಂದು ನಂಬಲಾಗಿದೆ.

ಗಾಂಧಿಜಿಯನ್ನು ಕೈದು ಮಾಡುವರೆ?

'ಬ್ರಿಟಿಷರೇ ಹಿಂದುಸ್ಥಾನದಿಂದ ಹೊರಟು ಹೋಗಿ' ಎಂಬೀ ಘೋಷಣೆಯನ್ನು ಮಹಾತ್ಮರು ಇತ್ತೀಚೆಗೆ ಪ್ರಾರಂಭಿಸಿರುವುದರಿಂದ ಅವರನ್ನು ಕೈದುಮಾಡಲಾಗುವುದೇ ಎಂಬ ನಿರೀಕ್ಷೆಯಾಗ ಉಂಟಾಗಿದೆ. ಮಹಾತ್ಮರು ಹರಿಜನದಲ್ಲಿ ಅ ಕುರಿತು ಈಗ ಬಹಳ ತೀಕ್ಷ್ಣ ಲೇಖನ ಬರೆಯುತ್ತಿದ್ದರೂ ಅವರನ್ನು ಬಹಳ ಕಾಲದ ವರೆಗೆ ಕೈದುಮಾಡುವ ಸಂಭವ ತೋರಿಬರುವುದಿಲ್ಲ. ಏಕೆಂದರೆ ಅವರ ಕೈದಿನಿಂದ, ಅವರ ಲೇಖನವನ್ನೋದಿ ಆಗುವ ಪರಿಣಾಮಕ್ಕಿಂತ ಹೆಚ್ಚಿನ ಪರಿಣಾಮವಾಗುವುದೆಂದೂ, ಆದ್ದರಿಂದ ಹರಿಜನದಲ್ಲಿ ಲೇಖನ ಬರೆಯುತ್ತಿರಲು ಗಾಂಧಿಜಿಗೆ ಆಕ್ಷೇಪವಿರಲಾರದೆಂದೂ ಟ್ರಿಬ್ಯೂನ್ ಸುದ್ದಿ.

ಗಾಂಧಿಜಿ ಈಗಾಗಲೇ ನೆಹರು ಅಜಾದ್ ರಾಜಾಜಿಯವರನ್ನು ಕಂಡು ಮಾತನ್ನಾಡಿದ್ದಾರೆ.

ಗಾಂಧಿಜಿ ವೈಸರಾಯರಿಗೆ ತಿಳಿಸಿ ಸತ್ಯಾಗ್ರಹ ಹೂಡುವರೆ?
—ಜುಲೈ ೭ಕ್ಕೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ—

ಕ್ರಿಪ್ಸ್ ಸೂಚನೆ ನಿರ್ಧರಿಸಲ್ಪಟ್ಟ ಮೇಲೆ ಗಾಂಧಿಜಿಯವರಿಗೆ ತಮ್ಮ ಅನುಯಾಯಿಗಳನ್ನು ಒಂದುಗೂಡಿಸುವ ಉದ್ದೇಶವಿದ್ದು ಈ ಘೋಷಣೆಯನ್ನೀಗ ಪ್ರಾರಂಭಿಸಿರುವರೆಂದು ಸುದ್ದಿ.

ಡ್ಯೂಕ್ ಅಫ್ ಗ್ಲೊಸ್ಟರರವರು

ಲೆ॥ ಜನರಲ್ ಡ್ಯೂಕ್ ಅಫ್ ಗ್ಲೊಸ್ಟರರವರು ಬಂಗಾಳ ಪ್ರಾಂತವನ್ನು ಸಂದರ್ಶಿಸತೊಡಗಿ ಇಂಜಿನಿಯರಿಂಗ್ ವರ್ಕ್ ಶಾಪ್ ಮಿಲಿಟರಿ ಆಸ್ಪತ್ರೆ ಮೊದಲಾದುವುಗಳಿಗೆ ಭೇಟಿಕೊಟ್ಟರು ಇವರು ಜಮಶೇದಪುರದ ತಾತಾರವರ ಕಬ್ಬಿಣದ ಕಾರ್ಖಾನೆಯನ್ನು ಕಳೆದ ವಾರ ಸಂದರ್ಶಿಸಿದ್ದರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿ

ಸರ್ದಾರ್ ಪಟೇಲರೂ, ಬಾಬು ರಾಜೇಂದ್ರರೂ, "ಅಹಿಂಸಾ" ತತ್ವದ ಭಿನ್ನಾಭಿಪ್ರಾಯದ ಸಂಬಂಧ ಕಾಂ॥ ವರ್ಕಿಂಗ್ ಕಮಿಟಿಯ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟಿರುವರೆಂಬ ಈ ವದಂತಿ ನಿರಾಧಾರವೆಂದು ಪ್ರಕಟವಾಗಿದೆ. ಕಾಂಗ್ರೆಸ್ ವರ್ಕಿಂಗ್, ಕಮಿಟಿ ಸಭೆ ಜುಲೈ ೭ಕ್ಕೆ ಸೇರಲಿದೆ.

ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ನಿರ್ಧಾರ

ಈ ಕಮಿಟಿಯ ಕಾರ್ಯಕಾರಿ ಮಂಡಲಿಯ ಅಧಿವೇಶನವೊಂದು ಹುಬ್ಬಳ್ಳಿಯಲ್ಲಿ ಜರುಗಿ, ಶ್ರೀ. ಸಿ ರಾಜಗೋಪಾಲಾಚಾರ್ಯರವರ ಇಂದಿನ ಪ್ರಚಾರಕಾರ್ಯವು ಕಾಂಗ್ರೆಸಿನ ಉದ್ದೇಶಗಳಿಗೆ ವಿರೋಧವಾಗಿರುವುದರಿಂದ ಅವರ ಮೇಲೆ ಯಥಾಯೋಗ್ಯವಾದ "ಶಿಸ್ತು ಭಂಗ"ದ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಒಂದು ಠರಾವು ಮಾಡಿದೆ

ಸಂಪಾದಕರ ಕೈದು

ಅಹಮ್ಮದಾಬಾದಿನಲ್ಲಿ ಒಂದು ಸ್ಥಳೀಯ ಪತ್ರಿಕೆಯ ಸಂಪಾದಕರು "ಮುದ್ರಣ ಕಾಗದಗಳ ಕ ನೂನ್" ಮೀರಿ ತಮ್ಮ ಪತ್ರಿಕೆಯನ್ನು ಕಡಿಮೆ ದರದಲ್ಲಿ ಮಾರಿದರೆಂದು ಅವರನ್ನು "ಇಂಡಿಯಾ ರಕ್ಷಣೆಯ ಕಾನೂನಿನಂತೆ" ಕೈದು ಮಾಡಿ ಈಗ ಜಾಮೀನಿನ ಮೇಲೆ ಬಿಟ್ಟಿದೆ.

ಗೇರುಬೀಜದ ಸಿಪ್ಪೆ ಎಣ್ಣೆ

ಗೇರುಬೀಜದ (ಸಿಪ್ಪೆಯ) ಎಣ್ಣೆ ತಯಾರಿಯು, ದಕ್ಷಿಣ ಹಿಂದುಸ್ಥಾನದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆಯುವಂತೆ ಸರಕಾರವು ಆಲೋಚಿಸುತ್ತಿದೆ ಎಂದೂ ಆದರಿಂದ ವರ್ಷಕ್ಕೆ ೧ ಕೋಟಿ ರೂಪಾಯಿಗಳಷ್ಟು ಪ್ರತಿಫಲವು ದೊರೆಯಬಹುದೆಂದೂ ಪ್ರಕಟವಾಗಿದೆ

(೯ನೇ ಪುಟದಿಂದ ಮುಂದುವರಿದುದು)

ಸ್ಟೂಡೆಂಟ್ಸ್ ಫೆಡರೇಶನ್

ದ. ಕ. ಜಿಲ್ಲಾ ಸ್ಟೂಡೆಂಟ್ಸ್ ಫೆಡರೇಶನ್‌ನ ಸಭೆ ಕೊಡಿಯಾಲ್ಬೈಲ್ ಸಿ. ಪಿ. ಸಿ. ಬಿಲ್ಡಿಂಗಿನಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಬರುವ ಆದಿತ್ಯವಾರ ಸಂಜೆ ೫ ಗಂಟೆಗೆ ಸೇರಲಿರುವುದು. ಆ ದಿನ ೪ನೇ ಜಿಲ್ಲಾ ವಿದ್ಯಾರ್ಥಿ ಪರಿಷತ್ತಿನಲ್ಲಿ ಪಾಸಾದ ನಿರ್ಣಯಗಳ ಕುರಿತು ಮುಂದಿನ ವಿಚಾರಮಾಡಲಿರುವುದರಿಂದ ಆ ಸಭೆಗೆ ಎಲ್ಲರೂ ಬರಬೇಕಾಗಿ ಜನರಲ್ ಸೆಕ್ರೆಟರಿ ಶ್ರೀ. ನಾರಾಯಣ ನೆಟ್ಟಾರ್ ಇವರು ತಿಳಿಸುತ್ತಾರೆ.

ಮೂರ್ತಿ

ಯೂನಿಯನ್ ಕ್ಲಬ್ಬಿನ ೨೭ನೇ ವಾರ್ಷಿಕೋತ್ಸವವೂ, ದಿವಂಗತ ಡಾ। ಟೋಳಾ ಶ್ಯಾಮರಾಯರ ದಿನಾಚರಣೆಯೂ ಇದೇ ತಾ. ೧೬ರಲ್ಲಿ ಕಾರ್ಕಳದ ಜನಾಬ್ ಎಚ್. ಎಸ್. ಹುಸ್ಸೇನ್ ಯಂ ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು ಪ್ರಾರ್ಥನೆ, ಸ್ವಾಗತ ವರದಿ ವಾಚನಗಳಾದ ಮೇಲೆ ಅಧ್ಯಕ್ಷರ ಸಮಯೋಚಿತ ಭಾಷಣವಾಗಿ, ಧನ್ಯವಾದಾರ್ಪಣೆಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

'ಫಾರ್ವರ್ಡ್ ಬ್ಲಾಕ'ನ್ನು ಅಕ್ರಮ ಸಂಸ್ಥೆಯೆಂದು ಸಾರಲಾಗಿದೆ

ಫಾರ್ವರ್ಡ್ ಬ್ಲಾಕ್ ಪಕ್ಷವನ್ನು ಅಕ್ರಮ ಸಂಸ್ಥೆಯೆಂದು ಸಾರಲಾಗಿದೆ. ಈ ಸಂಬಂಧವಾಗಿ ಸರಕಾರದವರು ಒಂದು ಪ್ರಕಟಣೆ ಹೊರಡಿಸಿ 'ಈ ಪಕ್ಷಕ್ಕೆ ಸೇರಿದ ಜನರು ಬ್ರಿಟಿಷ್ ಸಾರ್ವಭೌಮ ಸರಕಾರದ ಮೇಲೆ ಯುದ್ಧ ಹೂಡಿರುವ ರಾಷ್ಟ್ರಗಳೊಡನೆ ಸಂಬಂಧವನ್ನಿಟ್ಟುಕೊಂಡಿರುವರೆಂದು ಸರಕಾರಕ್ಕೆ ಗೊತ್ತಾಗಿದೆ. ಇಂಥವರ ಚಟುವಟಿಕೆಗಳು ಹಿಂದುಸ್ಥಾನಕ್ಕೆ ಅಹಿತವೂ ಯುದ್ಧ ಪ್ರಯತ್ನಕ್ಕೆ ಆಂತಕವೂ ಆಗುವುದೆಂದು ಅನಿಸಿದ್ದರಿಂದ ಇಡೀ ಪಕ್ಷವನ್ನೇ ಅಕ್ರಮ ಸಂಸ್ಥೆಯೆಂದು ಸಾರಬೇಕಾಯಿತು' ಎಂದು ಅಂದಿರುವರು.

ಎಚ್. ವಿ ಕಾಮತರ ಬಂಧನ

ಅ. ಭಾ. ಫಾರ್ವರ್ಡ್‌ಬ್ಲೋಕ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎಚ್. ವಿ ಕಾಮತರನ್ನು ಈ ದಿನ ಮುಂಬಯಿಯಲ್ಲಿ ಸಂರಕ್ಷಣ ಕಾಯಿದೆಯ ಪ್ರಕಾರ ಸೆರೆಹಿಡಿಯಲಾಯಿತು

ಬಳ್ಳಾರಿ. ವೀರಶೈವ ಹೈಸ್ಕೂಲ್

ತಾ. ೮ ೬—೪೨ರ ದಿನ ಬಳ್ಳಾರಿಯಲ್ಲಿ ಮದರಾಸು ವೀರಶೈವ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಅಲ್ಲಿನ ಗಾಂಧೀನಗರದಲ್ಲಿರುವ ವೀರಶೈವ ಹಾಸ್ಟೆಲ್‌ನಲ್ಲಿ ಬಳ್ಳಾರಿ ವೀರಶೈವ ಹೈಸ್ಕೂಲ್ ಪ್ರಾರಂಭವಾಗುತ್ತದೆ ಇದರ ಪ್ರಾರಂಭೋತ್ಸವವನ್ನು ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀಮಾನ್ ಸದಾಶಿವ ರೆಡ್ಡಿಯವರು ನೆರವೇರಿಸಿದರು.

"ಖಾಲಿ ಜಮೀನುಗಳಲ್ಲಿ ಆಹಾರ ವಸ್ತುಗಳನ್ನು ಬೆಳೆಸಬೇಕು"
ಸರಕಾರದ ಸೂಚನೆ

'ರೈಲ್ವೇ ಕಂಪೆನಿಗೆ ಸೇರಿದ ಖಾಲಿ ಜಮೀನುಗಳಲ್ಲಿ ಕಂಪೆನಿಯವರು ವ್ಯವಸಾಯ ನಡೆಸಬೇಕು. ಆಹಾರ ಪದಾರ್ಥಗಳನ್ನು ಬೆಳೆಸಬೇಕು. ಸೌತ್ ಇಂಡಿಯನ್ ರೈಲ್ವೆಯವರು ತಮ್ಮ ವಶದಲ್ಲಿರುವ ಖಾಲಿ ಜಮೀನುಗಳಲ್ಲಿ ಆಹಾರ ಪದಾರ್ಥಗಳನ್ನು ಬೆಳೆಸಬೇಕು, ಎಂದು ಮದರಾಸು ಸರಕಾರದವರು ಸೂಚಿಸಿದ್ದಾರೆ ಇದಕ್ಕೆ ಕಂಪೆನಿಯವರು ಒಪ್ಪಿಕೊಂಡಿದ್ದಾರೆ. ವ್ಯವಸಾಯ ಮಾಡುವವರಿಗೆ ವರ್ಷಕಾಲ ಖಾಲಿ ಜಮೀನುಗಳನ್ನು ಕೊಡುವುದಾಗಿ ಹೇಳಿದ್ದಾರೆ. ಇವೇ ರೀತಿಯ ಕ್ರಮವನ್ನು ಸದರ್ನ್ ಮರಾಟಾ ರೈಲ್ವೆ ಕಂಪೆನಿಯವರೂ ಬಂಗಾಳ ನಾಗಪುರ ರೈಲ್ವೆಯವರು ಅನುಸರಿಸಬೇಕೆಂದು ಸರಕಾರದವರು ಸೂಚಿಸಿದ್ದಾರೆ.

ನಿಧನ
ಕೊಡಿಯಾಲಗುತ್ತು ರಾಮಯ್ಯ ಹೆಗ್ಡೆಯವರು

ಪ್ರಸಿದ್ಧ ಬಂಟಮನೆತನವಾದ ಕೊಡಿಯಾಲ ಗುತ್ತಿನ ಯಜಮಾನರಾಗಿದ್ದ ಶ್ರೀ ರಾಮಯ್ಯ ಹೆಗ್ಡೆಯವರು ತಾ 20ರಂದು ಪ್ರಾತಃಕಾಲ ಸುಮಾರು 11ಗಂಟೆ ಹೊತ್ತಿಗೆ ಕೋರ್ಟಿಗೆ ಹೋದವರು, ಅಲ್ಲಿ ಆಕಸ್ಮಾತ್ ಹೃದಯಸ್ತಂಭನವಾಗಿ ಮೃತರಾದರೆಂದು ತಿಳಿಸಲು ವಿಷಾದಪಡುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿ ಇರಲಿ!

ವಿಷ ಬಾಣಗಳು

ವದಂತಿಗಳ ವಿಚಾರಧಲ್ಲಿ

ಎಚ್ಚರಿಕೆಯಿಂದಿರಿ. ಅವು ನಿಮ್ಮ

ಮನಸ್ಸಿಗೆ ಕಳಂಕವನ್ನುಂಟು

ಮಾಡಿ ನಿಮಗೆ ಬುದ್ಧಿಭ್ರಮೆ

ಮಾಡುವುದಕ್ಕಾಗಿ ಕಳುಹಿಸಲ್ಪಟ್ಟ

ವಿಷ ಬಾಣಗಳು

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ಇಂಡಿಯಾ ದೇಶದ ಯುದ್ಧ ಮುಖವನ್ನು ರಚಿಸಿರಿ

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.25 ಬೆಳಿಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8 30 ಬೆಳಿಗ್ಗೆ	6 45 ಸಾಯಂ
ಜಾಲರ್‌ಪೇಟೆ ಪೆಸೆಂಜರ್	11.30 ಮಧ್ಯಾಹ್ನ	3 45 ಸಾಯಂ
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

ವಿಚಿತ್ರ-ವಿಜ್ಞಾನ

ಕುರಿಕೋಣದ ದನಗಳು

ಇನ್ನು ಕೆಲವು ವರ್ಷಗಳಲ್ಲಿ ದನಗಳು ಹಾಲನ್ನ ಮಾತ್ರ ಕೊಡುವುದಲ್ಲದೆ, ಉಣ್ಣೆಯನ್ನೂ ಒದಗಿಸುವವೆಂದು ಇತ್ತೀಚೆಗೆ ಜರ್ಮನಿಯ ವಿಜ್ಞಾನಿಗಳು ದನ ಕುರಿಗಳ ಸಮ್ಮೇಳನದಿಂದ ಹುಟ್ಟಿದ ಸಂತತಿಗಳನ್ನು ಪರೀಕ್ಷಿಸಿ ಹೇಳಿರುತ್ತಾರೆ. ಪ್ರೊಫೆಸರ್ ಕಾರ್ಲ್ ವಿರಕ್ಲರೆಂಬವರು ಈ ಶೋಧನೆಯಲ್ಲಿ ನಿರತರಾಗಿದ್ದಾರೆ. ಪ್ರೊಫೆಸರ್ ವಿರಕ್ಲರರು ಈಗಾಗಲೇ ಹೀಗೆ ಬೀಜ ಸಮ್ಮೇಳನದಿಂದ ಅನೇಕ ಪ್ರಾಣಿಗಳನ್ನು ಸೃಷ್ಟಿಸಿರುವರು. ಅವರು ನಿಂಬೆ ಮತ್ತು ಕಿತ್ತಳೆಗಳ ಸಂಯೋಗದ ಅವುಗಳೆರಡರ ಗುಣಾಂಶವಿರುವ ಒಂದು ಹೊಸ ಜಾತಿಯ ಹಣ್ಣನ್ನುಂಟುಮಾಡಿದ್ದಾರೆ. ಇವರು ಹಣ್ಣು ಹಂಪಲು ಬೆಳೆಗಳನ್ನು ನಾಶಪಡಿಸುವ ಕ್ರಿಮಿ ಕೀಟಾದಿಗಳನ್ನು ಕೊಲ್ಲುವ ಒಂದು ಪರಿಣಾಮಕಾರೀ ಪ್ರಯೋಗವನ್ನು ಕಂಡು ಹುಡುಕಿದ್ದಾರೆ.

ಕೆಲಸ ಸರಿಯಾಗಲು ವಿಶ್ರಾಂತಿ ಬೇಕು

ಯುದ್ಧಕಾಲದಲ್ಲಿ ಕಾರ್ಖಾನೆಗಳ ಕೆಲಸಗಾರರು ಹೆಚ್ಚು ಸಮಯಗಳ ವರೆಗೆ ದುಡಿಯಬೇಕಾಗುತ್ತದಷ್ಟೆ? ಆದರೆ ಇದರ ಫಲಿತಾಂಶವು ಒಳ್ಳೆಯದಾಗಿ ಕಂಡುಬರಲಿಲ್ಲವೆಂದು ಆರೋಗ್ಯ ಖಾತೆಯವರು ಪ್ರಕಟಿಸಿದ್ದಾರೆ. ಏಕೆಂದರೆ ಕೆಲಸಗಾರರು ವಿಶ್ರಾಂತಿಯಿಲ್ಲದೆ ದುಡಿಯುವುದರಿಂದ ಆಗಾಗ ಕಾಯಿಲೆಗಳಿಗೊಳಗಾಗಿ ಕೆಲಸ ಸರಿಯಾಗಿ ಕುಂಠಿತಸ್ಥಿತಿಯೂ ನಡೆಯುತ್ತಿಲ್ಲವೆಂದು ಈಗ ಕಂಡುಬಂದಿದೆ. ಮಾತ್ರವಲ್ಲ ಅನೇಕ ಮಂದಿಗೆ ಆಕಸ್ಮಾತ್ ಕಾಯಿಲೆಗಳುಂಟಾಗುವುದರಿಂದ ವಿಶೇಷ ಶರೀರಾಲಸ್ಯಗಳ ಕಾರಣದಿಂದ ಮೊದಲಿನ ದಿವಸ ತೀಸದೆಯೇ ಮರುದಿನ ಕೆಲಸಕ್ಕೆ ಗೈರುಹಾಜರಾಗುತ್ತಾರಾಗಿ ಕಾರ್ಖಾನೆಯಲ್ಲಿ ಹಿಂದೆ ಆಗುತ್ತಿದ್ದಷ್ಟು ಕೆಲಸವು ಆಗಲೂ ತೊಂದರೆಯಾಗುತ್ತದೆ. ಅದ್ದರಿಂದ ವಿಶ್ರಾಂತಿಯಿಲ್ಲದೆ ಕೆಲಸಗಾರರು ದುಡಿಯುವುದರಿಂದ ಕಾರ್ಖಾನೆಗಳ ಕೆಲಸವು ಸರಿ ನಡೆಯುವುದಿಲ್ಲವೆಂದು ಅವರ ಸೂಚನೆಯಾಗಿದೆ.

ಹೆಂಗುಸಿಗೆ ಹೆಂಗುಸಿನೊಡನೆ ವಿವಾಹ!

ಸ್ಕಾಟ್‌ಲೆಂಡ್ ಯಾರ್ಡಿನ ಪೋಲೀಸರು ಒಂದು ಶೋಧನೆ ಮಾಡಿ, ಬಕ್ಕಿಂಗಾಮ್ ಚರ್ಚಿನಲ್ಲಿ ಅನೇಕ ಮಿತ್ರರ ಸನ್ನಿಧಿಯಲ್ಲಿ ನಡೆದ ಒಂದು ವಿವಾಹದ ಗುಟ್ಟನ್ನು ರಟ್ಟುಮಾಡಿದ್ದಾರೆ. ಅದೇನೆಂದರೆ 'ವರನು' ಒಬ್ಬಳು ಹೆಂಗುಸು! ಅವರು ಮದುವೆಯಾದ ಬಳಿಕ ಅನ್ಯೋನ್ಯ ಗಂಡ ಹೆಂಡಿರ ರೀತಿಯಲ್ಲಿ ಪರಸ್ಪರ ಅನುರಾಗದಿಂದ ಬಾಳುವೆ ಮಾಡುತ್ತಿದ್ದರು. ಒಂದು ದಿನ ಪೋಲೀಸರು ಒಬ್ಬ ತರುಣನು ಕೈಯ್ಯಲ್ಲಿ ಹೆಂಗಸಿಗೆ ಬೇಕಾದ ಒಡವೆಗಳನ್ನೊಯ್ಯುವುದನ್ನು ನೋಡಿ ತಡೆದು ನಿಲ್ಲಿಸಿದರು. ಆತನ ಮನೆಯಲ್ಲಿ ಎಂದು ಕೇಳಿದರು. ಆತನು ಮನೆಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಹೆಂಗುಸಿನೊಡನೆ 'ಪ್ರಿಯೇ ಈ ಪೋಲೀಸರಿಗೆ ನಾನು ಯಾರೆಂದು ಹೇಳು' ಎಂದನು. ಆಗ ಮನೆಯಲ್ಲಿದ್ದ ಹೆಂಗು

ಗುರುತಿನ ಕಾರ್ಡನ್ನು ತೋರಿಸಲು ಹೇಳಿದರು. ಸು ಅದು ನನ್ನ ಗಂಡನೆಂದಳು. ಪೋಲೀಸರು ಗುರುತಿನ ಕಾರ್ಡಿನಲ್ಲಿ ಹೆಂಗುಸು ಹೆಸರಿತ್ತು. ಆದರಿಂದ ಅವರು ಮತ್ತೂ ಸಂಶಯಗೊಂಡು ತರುಣನನ್ನು ಪೋಲೀಸ್ ಸ್ಟೇಶನಿಗೆ ಕರೆದೊಯ್ದರು. ಅಲ್ಲಿ ಪರೀಕ್ಷಿಸಿ ನೋಡಲು ಆ ತರುಣನು ತರುಣಿಯಾಗಿದ್ದಳೆಂದು ತಿಳಿದುಬಂತು.

ಗಾಂಧಿಜಿಯವರ ದ್ವಾದಶ ಸೂತ್ರಗಳು

ಕೃಪಲಾನಿ ವಿವರಿಸುತ್ತಾರೆ

ಗಾಂಧಿಜಿಯವರ 'ದ್ವಾದಶ ಸೂತ್ರಗಳನ್ನು' ವಿವರಿಸುತ್ತಾ ಶ್ರೀ. ಜೆ. ಬಿ. ಕೃಪಲಾನಿಯವರು, 'ಮಹಾತ್ಮರು ಇಂದು ಹಿಂದೂದೇಶದ ಮನಸ್ಸು ಮತ್ತು ಹೃದಯಗಳ ನಿಜವಾದ ಪ್ರತಿನಿಧಿಯಾಗಿದ್ದಾರೆ' ಎನ್ನುವರು. ಆ ದ್ವಾದಶ ಸೂತ್ರಗಳು ಇಂತಿವೆ.

೧. ಈ ಯುದ್ಧವು ನಮ್ಮ ಯುದ್ಧವಲ್ಲ;

೨. ನಾವಿದರಲ್ಲಿ ಒತ್ತಾಯದಿಂದ ತಳ್ಳಲ್ಪಟ್ಟಿದ್ದೇವೆ.

೩. ನಮಗೆ ಚೀನಾ ರಷ್ಯಗಳ ಮೇಲೆ ಸಹಾನುಭೂತಿಯಿದ್ದರೂ, ನಾವಿದರಲ್ಲಿ ಸಹಕರಿಸಲಾರದವರಾಗಿದ್ದೇವೆ.

೪. ಕೆಲವು ಭಾರತೀಯರು ವಿಶೇಷ ಆಸಕ್ತಿ ತೋರಿಸಿದರೂ, ಅವರಿಗೆ, ಹಿಂದೂದೇಶವು ಸ್ವತಂತ್ರವೆಂದೂ, ಆದ್ದರಿಂದ ಈ ಯುದ್ಧವು ನಮ್ಮ ಯುದ್ಧವೆಂದೂ, ನಾವು ನ್ಯಾಯ ಧರ್ಮ ಸ್ವಾತಂತ್ರ್ಯಗಳಿಗಾಗಿ ಹೋರಾಡಬೇಕೆಂದೂ ಜನತೆಗೆ ತಿಳಿಸಲು ಅಸ್ಪದ ಕೊಡಲಿಲ್ಲ.

೫. ನಮಗೆ ಜಪಾನು, ಜರ್ಮನಿ ಇಲ್ಲವೇ ಯಾವುದೇ ಇತರ ಜನಾಂಗದೊಡನೆಯೂ ಜಗಳವಿಲ್ಲ.

೬. ಹೀಗಿದ್ದರೂ ಹಿಂದೂ ದೇಶದ ಮೇಲೆ ಯಾವುದೇ ರಾಷ್ಟ್ರವು ಆಕ್ರಮಣ ಮಾಡುವುದಿದ್ದರೆ, ಅದು ಆ ದೇಶದ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬ ಕೇಳಿಕೆ ಕೇಳುತ್ತಿದ್ದರೂ, ಅದನ್ನು ಕೊಡದಿರುವ ಬ್ರಿಟಿಷರ ಸ್ವಾಧೀನತೆಯ ಮೇಲೆ ಆಕ್ರಮಣವಾಗಿದೆ.

೭. ಇದು ನಮ್ಮ ರಾಷ್ಟ್ರ ಮತ್ತು ನಾವು ಹಳೆಯ ಅರಸರ ಸ್ಥಾನದಲ್ಲಿ ಹೊಸ ಅರಸರನ್ನು ಸ್ವಾಗತಿಸಬಾರದು.

೮. ಆದ್ದರಿಂದ ನಾವು ಆಕ್ರಮಣವನ್ನು ವಿರೋಧಿಸಬೇಕು.

೯. ವಿರೋಧೋಪಾಯವು ಅಹಿಂಸೆಯಿಂದ ಮಾತ್ರ ಸಾಧ್ಯವಿದೆ. ಇತರ ಉಪಾಯಗಳನ್ನು ಉಪಯೋಗಿಸಿದರೂ ಅಂಥವರಿಂದ ಏನೂ ಫಲಿತಾಂಶ ದೊರಕಲಾರದು.

೧೦. ಭಾರತವು 'ವಸ್ತು ಒಡವೆಗಳ ಸುಡುವಿಕೆಗೆ' (Scorched earth policy) ವಿರೋಧವಿದೆ. ಏಕೆಂದರೆ ಈ ಧೋರಣದಿಂದ ಜನರಿಗೆ ಹಾನಿಯಿಲ್ಲದೆ ಶತ್ರುವಿಗೆ ಹಾನಿಯೆಂದು ಅದು ಭಾವಿಸುವುದಿಲ್ಲ. ಬ್ರಿಟಿಷರು ಹತಾಶರಾಗಿ ಇಲ್ಲವೇ ಅಸಾಮರ್ಥ್ಯದಿಂದಾಗಿ ಇಂತಹ ವಸ್ತು ನಾಶ ತತ್ತ್ವವನ್ನು ಅಂಗೀಕರಿಸಬಹುದು.

೧೧. ಹೊಸ ಆಕ್ರಮಣಗಾರನೆದುರು ಅಹಿಂಸೆಯು ಪ್ರಯೋಜನಕಾರಿಯಾಗಲಿಕ್ಕಿಲ್ಲ. ಆದರೆ ಇದು ಜನತೆಯ ಧೈರ್ಯವನ್ನು ಕಾಪಾಡೀತು, ಮತ್ತು ಇದು ಆಕ್ರಮಣಗಾರನೆದುರು ಒಂದು ವಿರೋಧ ಪ್ರದರ್ಶನವಾದೀತು. ಹಾಗಾಗಿ ಪರಕೀಯ ಆಕ್ರಮಣ ಕಾಲದಲ್ಲಿ ತಟಸ್ಥರಾಗಿರಲು ಬಿಡಲಾರದು.

೧೨. ಈ ರಾಷ್ಟ್ರವು ಇಲ್ಲಿನ ರಕ್ಷಣೆಗೆ ವಿದೇಶೀ ಸೈನಿಕರನ್ನು ತರುವ ವಿಷಯದಲ್ಲಿ ವಿರುದ್ಧವಾಗಿದೆ. ಯಾವುದೇ ಸ್ವತಂತ್ರ ರಾಷ್ಟ್ರವಾದರೂ ಆ ದೇಶದ ರಕ್ಷಣೆಗಾಗಿದ್ದರೂ, ಅವರನ್ನು ಆ ಮಂತ್ರಿಸದ ವಿನಾ ಪರಕೀಯ ಸೈನ್ಯವು ಆ ದೇಶದಲ್ಲಿ ಬಂದಿಳಿಯಲು ಬಿಡಲಾರದು.

ಎ. ಆರ್. ಪಿ. ವ್ಯವಸ್ಥೆ

ಸ್ಥಳೀಯ ಎ. ಆರ್. ಪಿ. ವ್ಯವಸ್ಥೆ ಭರದಿಂದ ನಡೆದಿದೆ. ಪಟ್ಟಣದ ಹಲವೆಡೆ ವಾರ್ಡನರುಗಳ ಪೆಸೆಂಜರುಗಳ ನೇಮಕವಾಗಿ, ಪ್ರಥಮ ಚಿಕಿತ್ಸೆಯ ತರಬೇತಿ ಇತ್ಯಾದಿಗಳೂ ಜರುಗುತ್ತಿವೆ. ಶ್ರೀ. ಜಿ. ಸೋಮಶೇಖರರಾಯರು ಮುಖ್ಯ ವಾರ್ಡನರಾಗಿ ನೇಮಿಸಲ್ಪಟ್ಟಿದ್ದಾರೆ.

ರಷ್ಯದ ದಿನಾಚರಣೆ

ದಕ್ಷಿಣ ಕನ್ನಡ ಜಿಲ್ಲಾ ಯುದ್ಧ ಸಮಿತಿಯ ಆಶ್ರಯದಲ್ಲಿ ನಿನ್ನೆ ಸಂಜೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ, ನಮ್ಮ ಜಿಲ್ಲಾ ಜಡ್ಜರಾದ ಶ್ರೀ. ಎಲ್. ಪಾರ್ಥಸಾರಥಿ ಅಯ್ಯರರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ "ರಷ್ಯಾ ದಿನಾಚರಣೆ"ಗಾಗಿ ಸೇರಿತ್ತು. ಅಧ್ಯಕ್ಷರ ಆರಂಭ ಭಾಷಣವಾಗಿ ಶ್ರೀಗಳಾದ ಎಂ. ಕೆ. ನಂಬಿಯಾರ್, ಸತ್ಯನಾರಾಯಣ ಅವರೂ ಸಿ. ವೆಂಕಟರಾವ್, ಮಿ. ಸಿ. ಎಲ್. ಲೋಬೋ ಅವರೂ ಭಾಷಣಮಾಡಿದರು.

ಹಳ್ಳಿಗಳಲ್ಲಿ ಲೂಟಿ

ಚಿಕ್ಕಾಕೋಲಿನ ಬಳಿಯ ಪಲಾಪ, ಕಪಿ, ಬುಗ್ಗ ಮೊದಲಾದ ಕಡೆಗಳ ಕೆಲವು ಮಿಲ್ಲು, ಅಂಗಡಿಗಳಿಗೆ ಜನಗಳು ನುಗ್ಗಿ ಅಕ್ಕಿ, ಧಾನ್ಯ ಮೊದಲಾದುವನ್ನು ಲೂಟಿ ಮಾಡಿದರೆಂದು ಅವರಲ್ಲಿ ಸುಮಾರು ೪೦ ಮಂದಿಯು ಕೈದಾಗಿದೆ.





ಜಿಲ್ಲಾ ಸಮಾಚಾರಗಳು

ಮಂಗಳೂರು

ಯುದ್ಧ ಸಹಾಯನಿಧಿ

ವೈಸರಾಯರ ಯುದ್ಧ ಸಹಾಯ ನಿಧಿಗೆ ೬ ಲಕ್ಷ ಕೋಟಿ ಸ್ಟೈ ಡನ್‌ಸ್ಟನ್ ವಿಭಾಗದ ೫೯ನೇ ಚಂದಾ ಪಟ್ಟಿಗನುಸಾರ ರೂ. ೭,೫೬,೯೮೭-೧೦ ಮತ್ತು ೨೬೪ ಪೌಂಡು ೭ ಶಿ. ೧ ಪೆನ್ನಿಗಳು ವಿಮಾನನಿಧಿಗೆ (ನಾಲ್ಕನೇ ಚಂದಾ ಪಟ್ಟಿಗನುಸಾರ) ರೂ. ೬,೨೧,೬೯೧-೧೫-೬ ಸಂಗ್ರಹವಾಗಿದೆ.

ರಷ್ಯಾ ದಿನಾಚರಣೆ

ತಾ. ೨೨ರಂದು ಸಂಜೆ ಸ್ಥಳೀಯ ರಘುನಾಥಯ್ಯ ಮೆಮೋರಿಯಲ್ ಹಾಲ್‌ನಲ್ಲಿ "ಸ್ಟೂಡೆಂಟ್ಸ್ ಯೂನಿಯನ್" ಮಂಗಳೂರು, ದ. ಕ. ಕೇಂದ್ರ ಮಜೂರರ ಸಂಘ' ಮತ್ತು 'ಜಪಾನೀ ನಿರೋಧ ಸಮಿತಿ' ಇವುಗಳ ಆಶ್ರಯದಲ್ಲಿ, ಶ್ರೀ ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ., (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ 'ರಷ್ಯಾ ದಿನಾಚರಣೆ'ಯ ಸಾರ್ವಜನಿಕ ಸಭೆ ಜರುಗಿತು. ಶ್ರೀ ಕೆ. ಶಿವರಾಯರು ಕೆಂಪು ಸೇನೆಯನ್ನೂ ಎಂ. ಸ್ಟಾಲಿನರನ್ನೂ ಅಭಿನಂದಿಸುವ, ರಷ್ಯಕ್ಕೆ ವಿಜಯವನ್ನು ಹಾರೈಸುವ ಠರಾವನ್ನು ಮಂಡಿಸಲು, ಅದನ್ನು ಸಮರ್ಥಿಸಿ ಶ್ರೀಗಳಾದ ಕೆ. ಕೇಶವ ಕಾಮತ್, ಪದ್ಮನಾಭನ್, ಎ. ಕೃಷ್ಣ ಸೆಟ್ಟಿಯವರು ಭಾಷಣಮಾಡಿದ ಮೇಲೆ ಠರಾವು ಸರ್ವಾನುಮತದಿಂದ ಮಂಜೂರಾಯಿತು. ಅಧ್ಯಕ್ಷರ ಭಾಷಣ ಶ್ರೀ ವೆಂಕಣ್ಣನವರಿಂದ ವಂದನಾರ್ಪಣೆಗಳೂ ನಡೆದುವು.

ಆಹಾರ ಧಾನ್ಯಗಳ ಹತೋಟಿ ಅಪ್ಪಣೆಯ ಜಾರಿ

ತಾ. ೨೨ರಿಂದ ಈ ಅಧಿಪತ್ಯದಲ್ಲಿ ಗೋಧಿ, ಗೋಧಿಯ ಸಾಧನಗಳು, ಭತ್ತ, ಅಕ್ಕಿ ಇವುಗಳ ಮೇಲಿನ ಹತೋಟಿ ಅಪ್ಪಣೆ ಬಂದಿರುವುದು. ಆ ಅಪ್ಪಣೆಯಂತೆ ವರ್ತಕರು ಲೈಸನ್ಸ್ ಪಡೆಯಬೇಕಾಗಿದೆ. ಈ ಲೈಸನ್ಸ್‌ಗಳನ್ನು ಕೊಡಲಿಕ್ಕೆ ಅಧಿಪತ್ಯದಲ್ಲಿ ೫ ಮಂದಿ "ಗ್ರೈನ್ ಕಂಟ್ರೋಲ್ ಆಫೀಸರ"ರ ನೇಮಕವಾಗಿದೆ. ಇದರಲ್ಲಿ ಕೊಯಮುತ್ತೂರು ಸೇಲಂ, ನೀಲಗಿರಿ, ಮಲಬಾರ್, ದಕ್ಷಿಣ ಕನ್ನಡ ಜಿಲ್ಲೆಗಳಿಗೊಬ್ಬ ಆಫೀಸರರು ಇರುವರು.

ಆಹಾರ ಸಾಧನಗಳ ಬೆಲೆಯ ಹಿಡಿತ

ಕಳೆದ ಆದಿತ್ಯವಾರ ಸಂಜೆ, ದ. ಕ. ಜಿಲ್ಲಾ ಲೇಬರ್ ಸೆಂಟ್ರಲ್ ಕಮಿಟಿಯ ಆಶ್ರಯದಲ್ಲಿ, ಮಜೂರರ ಮತ್ತು ಸಾರ್ವಜನಿಕರ ಒಂದು ಮಹಾ ಸಭೆ ಫೌಕ್ಸ್ ಪೈ ಬಜಾರಿನಲ್ಲಿ ಡಾ. ಎಫ್. ಎಚ್. ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರ ಮೊದಲ ಮಾತುಗಳಾಗಿ, ಬೀಡಿ ಲೇಬರ್ ಯೂನಿಯನಿನ ಕಾರ್ಯದರ್ಶಿಗಳಾದ ಶ್ರೀ. ಕೆ. ಕೇಶವ ಕಾಮತರು, ಅಂದಿನ ಸಭೆ ಸೇರಿದ ಉದ್ದೇಶವನ್ನೂ, ಆಹಾರ-ಸಾಧನಗಳ ಬೆಲೆಯನ್ನು ಹತೋಟಿಯಲ್ಲಿರಿಸಿಕೊಳ್ಳಬೇಕಾದ ಅವಶ್ಯಕತೆಯನ್ನೂ, ಸ್ಟೋರುಗಳನ್ನು ತೆರೆದು ಅದರಿಂದ ದೊರಕಿಸಿಕೊಡಬೇಕಾದ ಪ್ರಯೋಜನಗಳನ್ನೂ ವಿವರಿಸಿ "ಸರಕಾರವು ಸ್ಟೋರುಗಳನ್ನು ತೆರೆಯಬೇಕಾದ" "ಅಕ್ಕಿ ಮೊದಲಾದ ಎಲ್ಲ ಜೀನಸುಗಳ ಬೆಲೆಯು ಮೇಲೂ ತಡೆ ಇರಿಸಬೇಕಾದ", ಮತ್ತು "ಈ ಉದ್ದೇಶಗಳು ಸಾಧಿಸಲ್ಪಡುವಂತೆ, ಮಂಗಳೂರಿನ ಪುರಜನರನ್ನು ಏಕೀಕರಿಸಿ ತಕ್ಕ ಕಾರ್ಯಕ್ರಮಗಳನ್ನು ಕೂಡಲೇ ಕೈಕೊಳ್ಳುವಂತೆ ಮಾಡಬೇಕಾದ" ಒಂದು ಠರಾವನ್ನು ಮಂಡಿಸಿದರು. ಶ್ರೀ. ವೆಂಕಣ್ಣನವರು ಈ ಠರಾವನ್ನು ಸಮರ್ಥಿಸಿದರು. ಅಧ್ಯಕ್ಷರು ಆ ಕುರಿತು ಭಾಷಣಮಾಡಿದ ಮೇಲೆ ಆ ಠರಾವು ಮಂಜೂರಾಯಿತು.

ಮಜೂರ ಕೇಂದ್ರ ಸಮಿತಿ

ದ. ಕ. ಜಿಲ್ಲಾ ಮಜೂರ ಕೇಂದ್ರ ಸಮಿತಿಯ ಸಭೆಯು ಇದೇ ತಾರೀಕು ೧೪-೬-೪೨ರಲ್ಲು ಜನಾಬ್ ಕೆ. ಯುಸ್ ಅಹಮದ್ ಬಾವಾ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಜೂನ್ ತಾ. ೨೨ರಲ್ಲು 'ಸೋವಿಯಟ್ ಯುದ್ಧ ವಾರ್ಷಿಕ ದಿನ'ವನ್ನು ಆಚರಿಸಬೇಕೆಂದು ಸಭೆಯಲ್ಲಿ ತೀರ್ಮಾನವಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ತೋಟಗಾರರಿಗೆ ಸೂಚನೆ

ಅಡಿಕೆಯ ಭಯಂಕರವಾದ ಮಹಾಳಿ-ರೋಗವು ಮಳೆಗಾಲದಲ್ಲಿ ಸಾಮಾನ್ಯವಾಗಿ ಪ್ರಾರಂಭಿಸುವುದು. ಸಕಾಲದಲ್ಲಿ ಭೋರ್ಡೋ ಮಿಶ್ರಣವನ್ನು ಚಿಮುಕಿಸುವುದರಿಂದ, ರೋಗವನ್ನು ತಡೆಗಟ್ಟಬಹುದೆಂಬ ಸಂಗತಿಯು ಎಲ್ಲರಿಗೂ ಅರಿತ ವಿಷಯ. ಈ ವರ್ಷ ಮೈಲು ತುತ್ತಿನ ಬೆಲೆಯು ಏರುವುದರಿಂದ ಮದ್ದು ಚಿಮುಕಿಸುವ ಖರ್ಚು ಕಳೆದ ವರ್ಷಗಳಿಂದ ಹೆಚ್ಚಾಗಬಹುದು. ಮಿಶ್ರಣವು ಸರಿಯಾಗಿ ಹರಡಿ, ಅಂಟಿ ಹಿಡಿಯುವಂತೆ ಈ ವರೆಗೆ ಉಪಯೋಗಿಸುತ್ತಿದ್ದ ರಾಳ, ಕೇಸಿನ್, ಎಣ್ಣೆ ಇತ್ಯಾದಿಗಳನ್ನು ಬೋರ್ಡೋ ಮಿಶ್ರಣಕ್ಕೆ ಬೆರಸುವ ಕ್ರಮವು, ವರ್ಷಕ್ಕೆ ಸರಾಸರಿ ೨೫೦ ಇಂಚು ಮಳೆ ಬೀಳುವ ಪ್ರದೇಶಗಳಲ್ಲಿ ಕೂಡ ಆವಶ್ಯವಿಲ್ಲವೆಂಬುದನ್ನು ಇತ್ತೀಚೆಗೆ ನಡಿಸಿದ ಪರೀಕ್ಷಾ ಪ್ರಯೋಗಗಳಲ್ಲಿ ಸ್ಪಷ್ಟವಾಗಿ ಕಂಡು ಹಿಡಿದಿದ್ದಾರೆ. ಆದುದರಿಂದ ಈ ವಸ್ತುಗಳಿಗಾಗಿ ಖರ್ಚುಮಾಡುವ ಹಣವನ್ನು ತೋಟಗಾರರು ಉಳಿಸಬಹುದು.

ಖಾಲಿ ಬೋರ್ಡೋ ಮಿಶ್ರಣವನ್ನು ಮಳೆ ಬೀಳುವ ಮೊದಲು ಒಮ್ಮೆ, ೬ ವಾರಗಳ ನಂತರ ಇನ್ನೊಮ್ಮೆ ಚಿಮುಕಿಸುವುದು ರೋಗವನ್ನು ತಡೆಗಟ್ಟಲು ಸಾಕಾಗುವುದು. ಕೆಲವು ಸ್ಥಳಗಳಲ್ಲಿ ೪ನೇ ಸಾರಿ ಚಿಮುಕಿಸುವುದುಂಟು; ಇದು ಅನಾವಶ್ಯಕವಿದೆ. ಪ್ರಯೋಗಗಳಿಂದ ಮತ್ತೂ ತಿಳಿದು ಬಂದುದೇನೆಂದರೆ, ಮಳೆ ಬರುವ ಮೊದಲು ಚಿಮುಕಿಸುವುದಕ್ಕೆ ಶೇಕಡಾ ಒಂದರ ಮಿಶ್ರಣವು ಸಾಕಾಗುವುದು. ಆದರೆ ಮಳೆ ಬಿದ್ದ ಮೇಲೆ ಶೇಕಡಾ ಎರಡರ ಮಿಶ್ರಣವು ಅವಶ್ಯವು.

ಆದುದರಿಂದ ತೋಟಗಾರರು, ರಾಳ ಇತ್ಯಾದಿ ಬೆರಸದ ಖಾಲಿ ಮಿಶ್ರಣವನ್ನು ಮತ್ತು ಮೊದಲನೆಯ ಚಿಮುಕಾಟಕ್ಕೆ ಶೇಕಡಾ ಒಂದರ ಮಿಶ್ರಣವನ್ನು ಉಪಯೋಗಿಸಿಕೊಂಡು, ಅದಷ್ಟು ಖರ್ಚನ್ನು ಕಮ್ಮಿಮಾಡಬಹುದು.

ವರ್ಗ

ಈ ಮೊದಲು ಬಳ್ಳಾರಿಯಲ್ಲಿ ಎಕ್ಸೈಜ್ ಇನ್ಸ್‌ಪೆಕ್ಟರಾದ ಶ್ರೀ ಎಂ. ನಾರಾಯಣ ನಂಬಿಯಾರರು ಮಂಗಳೂರಿಗೆ ವರ್ಗಾಯಿಸಲ್ಪಟ್ಟವರು.

ಶಾಂತಿದಳ ಶಿಬಿರಕ್ಕೆ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯವರು ತಾ. ೧೫-೬-೧೯೪೨ನೇ ದಿವಸ ಬೆಳಗಾವ ಜಿಲ್ಲೆಯ ಸವದತ್ತಿ ತಾಲೂಕಿನ ಮುನೊಳ್ಳಿಯ ಪಂಚಲಿಂಗದ ಮಂದಿರದಲ್ಲಿ ಶಾಂತಿ ದಳ ಶಿಬಿರವನ್ನು ಪ್ರಾರಂಭಿಸಿ ಒಂದು ತಿಂಗಳವರೆಗೆ ನಡೆಸಲು ನಿಶ್ಚಯಿಸಿರುವರು. ಈ ಶಿಬಿರದಲ್ಲಿ ತರಬೇತಿ ಹೊಂದುವರೆ ಮಂಗಳೂರಿನಿಂದ ಶ್ರೀಗಳಾದ ಪಿ. ರಾಮದಾಸ ನಾಯ್ಕ, ಗಣಪತಿ ಕಾಮತ್ ಮತ್ತು ಮರೋಳಿ ರಾಮರಾಯ ಶೆಣೆಯವರು ಸವದತ್ತಿಗೆ ಹೋಗಿರುತ್ತಾರೆ.

ಪಾಣೆಮಂಗಳೂರು

ಪ್ರಥಮ ರಾಜಕೀಯ ಪರಿಷತ್ತು

೧೯೪೨ನೇ ಎಪ್ರಿಲ್ ೨೫, ೨೬ರಲ್ಲು ಜರಗಿದ ಪಾಣೆಮಂಗಳೂರು ಸರ್ಕಲಿನ ಪ್ರಥಮ ರಾಜಕೀಯ ಪರಿಷತ್ತಿನ ಬಾಬ್ತು ವಸೂಲಾದ ಜುಮ್ಲಾ ರೂ. ೭೮೭-೧-೫ರಲ್ಲಿ ರೂ. ೭೭೨-೦-೬ ಖರ್ಚಾಗಿ ರೂ. ೧೫-೦-೧೧ ಶಿಲ್ಕು ಉಳಿದಿದೆ.

ಪಾಣೆಮಂಗಳೂರು ಪ್ರಥಮ ರಾಜಕೀಯ ಪರಿಷತ್ತಿಗೆ ಸರ್ವ ವಿಧದಿಂದಲೂ ಸಹಾಯ ಸಹಕಾರವಿತ್ತು ಪ್ರೋತ್ಸಾಹ ಕೊಟ್ಟಿರುವ ಮಹಾಜನರ ಅವಗಾಹನೆ ಬಗ್ಗೆ ಜಮಾ ಖರ್ಚಿನ ವಿವರ ಅಮೂಲ್ಯ ಟೀಪಣಿಯುಕ್ತವಾಗಿ ಪರಿಷದ್ವೃತ್ತಿಕೆ ಪ್ರಕಟಿಸುವ ಹಾಗೆ ಆಲೋಚಿಸಿದ್ದರೂ, ಸಂದಿಗ್ಧ ಸಮಯದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರ ಅನಾರೋಗ್ಯದ ಕಾರಣವಾಗಿಯೂ ಬಹಳ ವಿಳಂಬವಾಗಿ ಮೊನ್ನೆ ತಾನೆ ತಾ. ೧೫-೬-೪೨ರಲ್ಲಿ ಸಮಿತಿಯ ಸಭೆ ಸೇರಿ ಲೆಕ್ಕ ಪತ್ರಗಳನ್ನು ಪರಿಶೀಲಿಸಿ ಉಳಿದ ರೂ. ೧೫-೦-೧೧ಯನ್ನು ವಿಧಾಯಕ ಕಾರ್ಯಕ್ರಮಕ್ಕೆ ವಿನಿಯೋಗಿಸುವಂತೆ ನಿರ್ಣಯಿಸಲಾಯಿತು.

ಈ ಮಹತ್ಕಾರ್ಯಕ್ಕೆ ಎಲ್ಲಾ ವಿಧಗಳಿಂದ ಸಹಾಯವಿತ್ತು ಯಶಸ್ವಿಗೊಳಿಸಿದ ಮಹಾಜನರಿಗೂ ಪತ್ರಿಕೆಗಳಲ್ಲಿ ಪ್ರಕಟಣೆ ಇತ್ಯಾದಿ ಕೊಟ್ಟಿರುವ ಪತ್ರಿಕಾ ಕರ್ತರಿಗೂ, ನಮ್ಮ ಸರ್ಕಲ್ ಕಾಂಗ್ರೆಸ್ ಕಮಿಟಿಯು ಚಿರಋಣಿಯಾಗಿರುವುದು.

ಪುತ್ತೂರು

ಸಹಕಾರಿ ಪ್ರಚಾರ ಸಭೆ

ಕಳೆದ ತಾ. ೯ರಲ್ಲಿ ನರಿಮೊಗ್ರು ಸಂಘದ ಆಶ್ರಯದಲ್ಲಿ ಜರಗಿತು. ಶ್ರೀ ಹಿರಿಯಡ್ಕ ರಾಮರಾಯ ಮಲ್ಯರು ಸಹಕಾರಿ ಸಂಘದ ಅಭಿವೃದ್ಧಿಯ ಕುರಿತು ಭಾಷಣವಿತ್ತರು.

ವಿಟ್ಲ

ಸೆಂಟರಿನ ಉಪಾಧ್ಯಾಯರ ಸಭೆ

ಕಳೆದ ತಾ. ೧೩ರಲ್ಲಿ ಮಜಿ ಬೋ. ಶಾಲೆಯಲ್ಲಿ ಇನ್ಸ್‌ಪೆಕ್ಟರ್ ಶ್ರೀ. ಬಿ. ವಿ. ರಮಣ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ

ಸಹಾಯಾರ್ಥ ನಾಟಕ ಪ್ರದರ್ಶನ

ತಾ. ೧೪ರಲ್ಲಿ ಶ್ರೀ ರಾಮಕೃಷ್ಣ ಥಿಯೆಟರಿನಲ್ಲಿ ಹೆಬ್ರಿ ಬೋರ್ಡ್ ಶಾಲಾ ವಿದ್ಯಾರ್ಥಿನಿಯರು ಉಡುಪಿ ಬೋರ್ಡ್ ಹೈಸ್ಕೂಲಿಗೊಂದು ಕಟ್ಟಡ ಕಟ್ಟಿಸುವ ನಿಧಿಯ ಸಹಾಯಾರ್ಥವಾಗಿ 'ವೀರ ಅಭಿಮನ್ಯು' ಎಂಬ ನಾಟಕವನ್ನು ಡಾ. ಯು. ಎಚ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು.

ಮಟ್ಟಿ ತೆನ್ನಯ್ಯ ಪೂಜಾರಿ ಕೊಲೆಯ ಪ್ರಕರಣ

೧೯೪೧ನೆ ಇಸವಿ ಆಕ್ಟೋಬರ್ ತಿಂಗಳ ತಾ. ೮ರಲ್ಲಿ ಕಟಪಾಡಿ ಪೇಟೆಯಲ್ಲಿ ಮೋಟಾರ್ ಕಾರಿನಲ್ಲಾದ ಮಟ್ಟಿ ತೆನ್ನಯ್ಯ ಪೂಜಾರಿಯ ಕೊಲೆಯ ವಿಚಾರಣೆಯು ಸ್ಪೆಶಲ್ ಸಬ್‌ಮೆಜಿಸ್ಟ್ರೇಟ್, ಶ್ರೀ ಎಚ್. ಸುಂದರರಾಯರ ಕೋರ್ಟಿನಲ್ಲಿ ಮಾರ್ಚಿ ತಾ. ೧೬ರಿಂದ ಇದೇ ತಿಂಗಳ ತಾ. ೧೫ರ ತನಕ ನಡೆದು ೧೧ ಮಂದಿಯನ್ನು ಸೆಶನ್ಸ್ ಕೋರ್ಟು ವಿಚಾರಣೆಗೆ ಒಳಪಡಿಸಲಾಯಿತು. ಎಂಟು ಮಂದಿಯನ್ನು ನಿರಪರಾಧಿಗಳೆಂದು ಬಿಟ್ಟು ಬಿಡಲಾಯಿತು. ಪ್ರೊಸಿಕ್ಯೂಶನ್ ಕಡೆಯಿಂದ ೮೫ ಸಾಕ್ಷಿಗಳೂ ಡಿಫೆನ್ಸ್ ಪರವಾಗಿ ೯ ಸಾಕ್ಷಿಗಳೂ ದೊರೆತುವು. ಈ ಕೊಲೆಗೆ ಸಂಬಂಧಿಸಿದ ಈ ವಾರದು ಇನ್ನೂ ಪತ್ತೆಯಾಗಲಿಲ್ಲ.

ಗುಂಡ್ಮಿ

ಸಿ. ಪಿ. ಎಲಿಮೆಂಟರಿ ಶಾಲಾ ಬಾಲಕರ ರಕ್ಷಕರ ಸಂಘದ ಮಹಾ ಸಭೆಯು ತಾ. ೧೩ನೇ ಸಾಯಂಕಾಲ ಶ್ರೀ. ಕೆ. ಶ್ರೀನಿವಾಸ ಉಪಾಧ್ಯಾಯ, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಕಳ

ಸಂಕಲಕರಿಯ

ಇಲ್ಲಿಯ ಬಿ. ಇ. ಯಮ್. ಶಾಲೆಯ ಮಕ್ಕಳ ರಕ್ಷಕರ ಕೂಟದ ಸಭೆಯು ತಾ. ೧೨ರಲ್ಲಿ ಮುಲ್ಲಡ್ಕ ಶಾಲಾ ಮೆನೇಜರರಾದ ಶ್ರೀ. ಇಗ್ನೇಶಿಯಸ್. ಡಿ. ಮೆಲ್ಲರ ಅಧ್ಯಕ್ಷತೆಯಲ್ಲಿ ಜರಗಿತು.

ಮೂಡಬಿದ್ರೆ

ಇಲ್ಲಿಗೆ ಸಮೀಪವಾಗಿರುವ ಪ್ರದೇಶಗಳಲ್ಲಿ ಸಿಡುಬು ರೋಗವು ತಲೆಯೆತ್ತಿದೆಯಾಗಿ ವಾರ್ತೆಯಿದೆ.

(೭ನೇ ಪುಟಕ್ಕೆ ಮುಂದುವರಿದಿದೆ)

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್ ಬೋರ್ಡ್ ಶಾಲೆಗಳಿಗೆ ಪಠ್ಯಪುಸ್ತಕವಾಗಿಡಲಾಗಿದೆ

ವಿದ್ವಾನ್ ಶ್ರೀ ಕೆ. ಕೈ. ರೈ ವಿರಚಿತ.

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ	... ಬೆಲೆ	0—2—6
VI ತರಗತಿ ಅಥವಾ I ಫಾರ್ಮಿಗೆ	... "	0—3—0
VII ತರಗತಿ ಅಥವಾ II ಫಾರ್ಮಿಗೆ	... "	0—3—6
VIII ತರಗತಿ ಅಥವಾ III ಫಾರ್ಮಿಗೆ	... "	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:—

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಕ್ಷಣವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಜಾಸ್ತಿ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ.

Starting with the elements of Grammar and Composition in the Text-Book, the author take's the students gradually through the more complex aspects of the subject in the course of the other three books. The subject has been well handled.— *"HINDU" MADRAS.*

ವಿದ್ವಾನ್ ಕೆ. ಕೈ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ, ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ.

ಶ್ರೀ. ರೈಗಳು ಆಯಾ ತರಗತಿಯ ಮಕ್ಕಳಿಗೆ ಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ, ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ. 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ. ಮಂಗಳೂರು.

ಸಿನೆಮಾ ಪುಟ

ಕೋಕಿಲಕಂಠಿ ಖುರ್ಶೀದ್

ಇತ್ತೀಚೆಗೆ ಕಾನನ ಬಾಲರ ಕೀರ್ತಿ ಸ್ವಲ್ಪ ಕಡಿಮೆಯಾಗುತ್ತಲಿರುವುದರಿಂದ ಸಂಗೀತದ ವಿಷಯ ಖುರ್ಶೀದಳಿಗೆ ಪ್ರಾಧಾನ್ಯತೆ ದೊರಕಿದೆ. ಖುರ್ಶೀದಳ ಸಂಗೀತದಲ್ಲಿ ಅಂತಹ ಆಕರ್ಷಣೆಯಿದೆ, ಮಾಧುರ್ಯವಿದೆ.

ಖುರ್ಶೀದ್ ಎರಡು ವಿಷಯಗಳಿಗೆ ಬೆದರುತ್ತಾಳೆ; ರೇಡಿಯೋಕ್ಕೆ ಸಂಗೀತ ಹೇಳಲು, ಸಭೆಯಲ್ಲಿ ಕುಳಿತುಕೊಳ್ಳಲು.

ರೇಡಿಯೋ ಸಂಸ್ಥೆಯವರು ಆಕೆಯೊಡನೆ ರೇಡಿಯೋದಲ್ಲಿ ಸಂಗೀತ ಹೇಳಬೇಕೆಂದು ಕೇಳಿಕೊಂಡರು, ಮತ್ತು ಆಕೆಗೆ ಒಂದು ದಿನಕ್ಕೆ ರೂ. ೧೫೦/- ಕೊಡುವುದಾಗಿ ಹೇಳಿದರು. (ಇದೇ ಅವರು ಕೊಡುವ ಹೆಚ್ಚಿನ ಹಣ) ಆದರೆ ಖುರ್ಶೀದಳು ಈ ಬೇಡಿಕೆಯನ್ನು ನಿರಾಕರಿಸಿದಳು. ಕೊನೆಗೆ ಆಕೆಯ ಗಂಡನೂ, ಆಕೆಯ ಮೆಚ್ಚಿಗರೂ ಬಹಳ ಒತ್ತಾಯಪಡಿಸಿದ್ದರಿಂದ ರೇಡಿಯೋದಲ್ಲಿ ಸಂಗೀತ ಹೇಳಲು ಒಪ್ಪಿದಳು. ಆದರೆ ಕಡೆಗೆ 'ಖುರ್ಶೀದಳಿಗೆ ಮೈಯಲ್ಲಿ ಸ್ವಸ್ಥವಿಲ್ಲ, ಅವಳು ಹಾಡಲಾರಳು' ಎಂಬುದಾಗಿ ಆಕೆಯ ಗಂಡ ಟೆಲಿಫೋನ್ ಮಾಡಲೇಬೇಕಾಯಿತು.

ಫಿಲ್ಮ್ ಕಾಂಗ್ರೆಸ್ ಅಧಿವೇಶನದಲ್ಲಿ ಖುರ್ಶೀದಳು ಹಾಡಬೇಕೆಂದು ಗೊತ್ತಾಗಿತ್ತು. ಆಕೆಯ ಸಂಗೀತದ ಮೇಲೆಯೇ ಎಲ್ಲರ ಮನಸ್ಸೂ ಕೇಂದ್ರೀಕೃತವಾಗಿತ್ತು. ಎಷ್ಟೇ ಪ್ರೋತ್ಸಾಹಕೊಟ್ಟರೂ ಅವಳು ಹಾಡಲು ನಿರಾಕರಿಸಿದಳು. ಚಂದೂ ಲಾಲ್‌ಷಾ ಮುಂತಾದವರು ಈಕೆ ಹಾಡಲೇಬೇಕೆಂದು ಬಹುವಾಗಿ ಒತ್ತಾಯಪಡಿಸಿದ್ದರಿಂದ, ಪಾರಾಗಲು ಮಾರ್ಗ ತೋರದೆ ಆಕೆ ಹಾಡಲು ಒಪ್ಪಿದಳು. ಒಂದೇ ಒಂದು ಚಿಕ್ಕ ಹಾಡನ್ನು ಹೇಗೋ ಹೇಳಿ ಈಚೆಗೆ ಬಂದಳು. ಖುರ್ಶೀದ್ ಸ್ಟುಡಿಯೋದಲ್ಲಿ ಮೋತಿಲಾಲ ನಂತಹ ಗಂಡಸರು ಕೂಡ ನಾಚುವಂತಹ ದಿಟ್ಟತನದಿಂದ ವರ್ತಿಸುತ್ತಾಳೆ!

ಸೌಜನ್ಯ, ಸರಳತನಗಳು ಖುರ್ಶೀದಳಲ್ಲಿ ರಕ್ತಗತವಾಗಿವೆ. ಉಳಿದ ನಟಿಯರಂತೆ ತನ್ನಲ್ಲಿ, ನೂರಾರು ಸೀರೆಗಳೂ, ನೂರಾರು ಜೊತೆ ಪಾದರಕ್ಷೆಗಳೂ ಇವೆ ಎಂದು ಆಕೆ ಎಂದಿಗೂ ಜಂಬ ಕೊಚ್ಚಿಕೊಳ್ಳುವುದಿಲ್ಲ. ಸೌಂದರ್ಯೋಪಕರಣಗಳನ್ನು ಕಂಡರೆ ಈಕೆಗೆ ಓಕರಿಕೆ ಬರುತ್ತದೆ. ಖುರ್ಶೀದ್ ಸಿಗರೇಟ್ ಸೇದುವುದಿಲ್ಲ, ಕುಡಿಯುವುದೂ ಇಲ್ಲ.

ಖುರ್ಶೀದಳಿಗೆ ಮೆಚ್ಚಿಗರಿಂದ ದಿನ ಒಂದಕ್ಕೆ ೩೦ರಂತೆ ಕಾಗದಗಳು ಬರುತ್ತವೆ. ಈ ಕಾಗದಗಳನ್ನೆಲ್ಲಾ ಓರಣವಾಗಿ ಅಲಮಾರಿನಲ್ಲಿಟ್ಟು ತನ್ನ ಗಂಡನ ಸಹಾಯದಿಂದ ಇಂಗ್ಲೀಷ್‌ನಲ್ಲಿಯೂ ಉರ್ದುವಿನಲ್ಲಿಯೂ ಉತ್ತರ ಕೊಡುತ್ತಾಳೆ. ಅನೇಕ ವಿದ್ಯಾರ್ಥಿಗಳು ತಾವು ಸಿನೀಮಾಕ್ಕೆ ಸೇರಬೇಕೆಂದು ಈಕೆಗೆ ಬರೆದರೆ ತಲೆಯನ್ನು ಕೆಡಿಸಿಕೊಳ್ಳಕೂಡದೆಂದೂ ತಮ್ಮ ವ್ಯಾಸಂಗವನ್ನು ಮುಂದುವರಿಸಬೇಕೆಂದೂ ಈಕೆ ಬುದ್ಧಿವಾದ ಕೊಡುತ್ತಾಳೆ.

ಖುರ್ಶೀದಳ ಗಂಡನು ನಟ, ಕಥಾಲೇಖಕ, ಸಂಗೀತಗಾರ, ಹಾಸ್ಯಗಾರ. ಈತನು ಸಂಗೀತಗಳನ್ನು ಖುರ್ಶೀದಳಿಗೆ ರಚಿಸುತ್ತಾನೆ. ಈತನು ಪಂಜಾಬಿ 'ಪತಿಪತ್ನಿ' 'ಅಲಿಬಾಬ' ಮುಂತಾದ ಚಿತ್ರಗಳಲ್ಲಿ ಅಭಿನಯಿಸಿದ್ದಾನೆ.

ಖುರ್ಶೀದಳು ಬೆಳಗ್ಗೆ ೭-೩೦ ಗಂಟೆಗೆ ಎದ್ದು ಕೊರಾನ್‌ನನ್ನು ಓದುತ್ತಾಳೆ. ಈಕೆಗೆ ಕೊರಾನ್ ಓದುವುದನ್ನು ಹೇಳಿಕೊಡಲು ಒಬ್ಬ ಮೌಲ್ವಿಯನ್ನು ಗೊತ್ತುಮಾಡಿದ್ದಾರೆ. ಉಪಹಾರ ತೀರಿಸಿಕೊಂಡು ೧೦ ಗಂಟೆಯ ಹೊತ್ತಿಗೆ ಶ್ರೀರಣಜಿತ್ ಸ್ಟುಡಿಯೋಗೆ ಹೋಗುತ್ತಾಳೆ. ದಾದರ್‌ನಲ್ಲಿರುವ ಈಕೆಯ ಮನೆಯ ಹತ್ತಿರವೇ ರಣಜಿತ್ ಸ್ಟುಡಿಯೋ ಕಟ್ಟಡಗಳಿವೆ. ಸಾಯಂಕಾಲ ೬ ಗಂಟೆಗೆ ಮನೆಗೆ ಬಂದ ನಂತರ ಇಂಗ್ಲೀಷ್ ಅಭ್ಯಸಿಸುತ್ತಾಳೆ.

ಖುರ್ಶೀದಳಿಗೆ ೨೩ ವರ್ಷವಾಗಿದೆ. ಇದುವರೆಗೆ ಈಕೆ ೧೫ ಚಿತ್ರಗಳಲ್ಲಿ ಅಭಿನಯಿಸಿದ್ದಾಳೆ. ಈಕೆ ಲಾಹೋರಿನಲ್ಲಿಯೇ ಬೆಳೆದವಳು. ನಾಲ್ಕನೆಯ ತರಗತಿಯ ವರೆಗೆ ಓದಿದ್ದಾಳೆ. ಇವಳಿಗೆ ಇಬ್ಬರು ಸಹೋದರರೂ, ನಾಲ್ಕು ಜನ ಸಹೋದರಿಯರೂ ಇದ್ದಾರೆ. ಈಕೆಗೆ ತಂದೆ ತಾಯಿಗಳಿದ್ದಾರೆ.

ಉಷ್ಣಕಾಲದ ಕಾಲು ನೋವನ್ನು ಗುಣಪಡಿಸಿರಿ.

ಪ್ರತಿದಿನ ರಾತ್ರಿ ಜಾಂಬಕನ್ನು ಉಜ್ಜಿರಿ.

ಉಷ್ಣಕಾಲದ ಹವೆಯಿಂದ ನಿಮ್ಮ ಕಾಲು ಗಾಯವಾಗುವುದಾದರೆ ಪ್ರತಿದಿನ ರಾತ್ರೆ ಜಾಂಬಕ್ ಉಜ್ಜಿ ಅದನ್ನು ಗುಣಪಡಿಸಿರಿ. ಈ ಅತ್ಯುತ್ತಮ ವನೌಷಧಿ ರಸದಿಂದ ಮಾಡಿದ ಎಣ್ಣೆಯು ನೋವನ್ನು ಕೂಡಲೇ ಗುಣಪಡಿಸುವುದು; ಬೀಗಿ ಹೋದುದನ್ನು ಕಡಿಮೆಮಾಡುವುದು, ಗಾಯಗಳೂ ಬೇಗನೇ ಗುಣವಾಗುವುವು.

ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ 2-4-0. ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.



ಏಜಂಟ್ಸ್:—

ಮೆಸರ್ಸ್ ಬಾಧಾ ಎಂಡ್ ಕೊ., ಪಾರ್ಕ್‌ಟೌನ್ ಮದರಾಸು.

ಯಾವಾಗಲೂ ಜಾಂಬಕನ್ನು ಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಬಲಪಡಿಸಿರಿ ಈಸರಪಳಿಯನ್ನು

ತನ್ನ ವಾಸಾಹತುಗಳೊಡಗೂಡಿದ ಬ್ರಿಟನ್, ಅಮೇರಿಕ, ಇಂಡಿಯ, ರಷ್ಯ, ಚೀಣ ಈ ಬೃಹದ್ರಾಷ್ಟ್ರಗಳು ಒಂದುಗೂಡಿ, ಈ ಜಗತ್ತಿನ ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳ ದಾಳನ್ನೂ, ಸ್ವಾತಂತ್ರ್ಯವನ್ನೂ ನಾಶಮಾಡಲು ಪ್ರಯತ್ನಿಸುತ್ತಿರುವ ರಾಕ್ಷಸೀ ಶಕ್ತಿಗಳ ಆಕ್ರಮಣವನ್ನು ನಿರೋಧಿಸುತ್ತಿವೆ.

ಈ ರಾಷ್ಟ್ರಗಳವರ ಅಪಾರವಾದ ಸಾಧನ ಸಂಪತ್ತಿ, ಅವರ ಉತ್ತಮ ಪ್ರತ್ಯಾಕ್ರಮಣ ಶಕ್ತಿ, ಅವರ ವಿಜಯಸಾಧನ ನಿಷ್ಠೆ, ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಅವರ ಯುದ್ಧಧ್ಯೇಯದ ನ್ಯಾಯಶೀಲತೆ ಇವು ಕೊನೆಯಲ್ಲಿ ಈ ಸಂಯುಕ್ತ ರಾಷ್ಟ್ರಗಳವರಿಗೆ ವಿಜಯವನ್ನು ದೊರಕಿಸುವುವೆಂಬುದು ಖಂಡಿತ.

ಸ್ವಾತಂತ್ರ್ಯ ರಕ್ಷಣೆಗಾಗಿ ಕೈಗೊಳ್ಳಲ್ಪಟ್ಟಿರುವ ಈ ಗಭೀರ ಹೋರಾಟವನ್ನು ನಡೆಸಲು, ಕೋಟ್ಯಾಂತರ ರೂಪಾಯಿಗಳು ಬೇಕು. ಅದಕ್ಕಾಗಿ ನೀವು ಧನಸಹಾಯಮಾಡಿರಿ. ವಿಜಯಸಾಧನೆಯನ್ನು ತ್ವರಿತಗೊಳಿಸಲೂ ನಿಮ್ಮ ಸುರಕ್ಷತೆ, ಅಪಾಯ ನಿವಾರಣೆಗಳಿಗಾಗಿಯೂ, ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಉಳಿಸಿ, ಅದನ್ನು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳಲ್ಲಿ ವಿನಿಯೋಜಿಸಿರಿ.

ಪ್ರತಿ ರೂ. ೧೦/- ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ರೂ. ೩/೯/- ಲಾಭಕೊಡುತ್ತೆ

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ನಿಮ್ಮ ಪೋಸ್ಟಾಫೀಸಿನಲ್ಲಿ ದೊರೆಯುತ್ತದೆ

ಇಂಡಿಯಾದ ಯುದ್ಧಶಕ್ತಿಯನ್ನು ಬೆಳೆಸಿರಿ



ಖುರ್ಶೀದ್ ೧೩ ವರ್ಷದವಳಿದ್ದಾಗ ಚಿತ್ರರಂಗದಲ್ಲಿ ಕಾಲಿಟ್ಟಳು. ಹಿಂದ್ ಮಾತಾ ಸಿನೆಟೋನ್‌ದವರು ಪಂಜಾಬಿ ಭಾಷೆಯಲ್ಲಿ 'ಮಿರ್ಜಾ ಷಹಿಬಾನ್' ಎಂಬ ಚಿತ್ರವೊಂದನ್ನು ತಯಾರಿಸಿದ್ದರು. ಅದರಲ್ಲಿ ಖುರ್ಶೀದ್ ಆಕೆಯ ತಂದೆ ತಾಯಿಗಳ ಮಾತಿಗೆ ವಿರುದ್ಧವಾಗಿ ಅಭಿನಯಿಸಿದಳು. ನ್ಯಾಶನಲ್ ಕಂಪೆನಿಯವರ 'ಸ್ವರ್ಗ-ಕೀ-ಸಿಡ್ಡಿ' ಎಂಬ ಚಿತ್ರದಲ್ಲಿ ಈಕೆ ಅಭಿನಯಿಸಿದಳು. ಲಾಹೋರ್‌ನಲ್ಲಿ ತನ್ನ ಸಾಮರ್ಥ್ಯ ಪ್ರದರ್ಶಿಸಲು ಕ್ಷೇತ್ರವು ವಿಸ್ತಾರವಾಗಿಲ್ಲವೆಂದು ಬೊಂಬಾಯಿಗೆ ಬಂದಳು. ಅಂದಿನಿಂದ ಇಂದಿನವರೆಗೂ ಬೊಂಬಾಯಿಯಲ್ಲಿಯೇ ಇದ್ದಾಳೆ.

೧೯೩೮ರಲ್ಲಿ ಎಜ್ರಾಮಿರ್‌ರವರ 'ಸಿತಾರ' ಚಿತ್ರದಲ್ಲಿ ಅಭಿನಯಿಸಿದಾಗ ಸಾರ್ವಜನಿಕ ದೃಷ್ಟಿಯು ಇವಳ ಕಡೆ ಹೊರಳಿತು. ಆ ಚಿತ್ರದಲ್ಲಿ ಈಕೆ ಪಾತ್ರ ವಹಿಸಿದ್ದರಿಂದಲೇ ರಣಜಿತ್ ಕಂಪೆನಿಯಲ್ಲಿ ಅಭಿನಯಿಸಲು ಈಕೆಗೆ ಆಸ್ಪದ ದೊರಕಿತು. ಅಲ್ಲಿಂದೀಚೆಗೆ, 'ಇಶ್ ಯು ಪ್ಲೀಸ್' 'ಮೈ ಏಸ್' 'ಹೋಳಿ' 'ಮುಸಾಫಿರ್' 'ಪರದೇಶಿ' 'ಶಾದಿ' ಮತ್ತು 'ಭೇಟಿ' ಚಿತ್ರಗಳಲ್ಲಿ ಈಕೆ ಅಭಿನಯಿಸಿದ್ದಾಳೆ.

ಖುರ್ಶೀದ್ ತಾನೇ ಒಂದು ಹೊಸ ಚಿತ್ರಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದಾಳೆ. ಈ ಚಿತ್ರಗಳು ಪಂಜಾಬಿ–ಬಾಷೆಯಲ್ಲಿ ತಯಾರಿಸಲ್ಪಡುತ್ತವೆ. ಈಕೆಯ ಅಣ್ಣ ಮುನಾವರ್ ಎಚ್. ಕಾಸಿಂರವರೂ ಈಕೆಯ ಗಂಡನೂ ಈ ಚಿತ್ರಗಳನ್ನು ದಿಗ್ದರ್ಶಿಸುವರು.

ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ

[ಗುರುಭಾವ-ಪೂರ್ವಾರ್ಧ]

ಮೂಲ ಬಂಗಾಳಿ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ

ಅನುವಾದ ಶ್ರೀ ಸ್ವಾಮಿ ಪ್ರವೇಶಾನಂದರು

(ಹಕ್ಕು ಕಾದಿಡಲ್ಪಟ್ಟಿದೆ)

ಶ್ರೀ ಪರಮಹಂಸರು ಭಾವಮುಖದಲ್ಲಿದ್ದುದರಿಂದ ಸಕಲರ ಭಾವವನ್ನು ತಿಳಿಯಲು ಸಮರ್ಥರಾಗಿದ್ದರು

ಹೀಗೆ ಶ್ರೀ ಪರಮಹಂಸರು ಭಾವಮುಖದಲ್ಲಿದ್ದು ಸ್ತ್ರೀಯರ ಹತ್ತಿರ ಸ್ತ್ರೀಯಾಗಿಯೂ ಪುರುಷರ ಹತ್ತಿರ ಪುರುಷರಾಗಿಯೂ ಅವರೆಲ್ಲರ ಭಾವವನ್ನು ಸರಿಯಾಗಿ ತಿಳಿಯಲು ಸಮರ್ಥರಾಗಿದ್ದರು ನಮ್ಮಲ್ಲಿ ಕೆಲವರಿಗೆ ಈ ಮಾತನ್ನು ಸ್ವತಃ ಹೇಳಿದ್ದಾರೆ ಸ್ವಾಮಿ ಪ್ರೇಮಾನಂದಜೀಯವರ ಭಕ್ತಿಮತೀ ಮಾತೆಯು ನಮಗೆ ಹೀಗೆಂದು ಹೇಳುತ್ತಿದ್ದರು—ಶ್ರೀ ಪರಮಹಂಸರು ಅವರನ್ನು ಕುರಿತು ಒಂದು ದಿನ 'ಜನರನ್ನು ಕಂಡೇ ಯಾರು ಯಾವ ಸ್ವಭಾವದವರೆಂದು ನಾನು ತಿಳಿಯಬಲ್ಲೆನು ಯಾರು ಒಳ್ಳೆಯವರು ಯಾರು ಕೆಟ್ಟವರು—ಯಾರ ಜನ್ಮ ಒಳ್ಳೆದು ಯಾರ ಜನ್ಮ ಕೆಟ್ಟದ್ದು, ಯಾರು ಜ್ಞಾನಿಯು ಯಾರು ಭಕ್ತನು,—ಯಾರಿಗೆ ಧರ್ಮಲಾಭವಾಗುವುದು, ಯಾರಿಗಾಗುವುದಿಲ್ಲ, ಎಲ್ಲವೂ ತಿಳಿಯಬಲ್ಲೆನು, ಆದರೆ ಅವರಿಗೆ ದುಃಖವಾದೀತೆಂದು ನಾನು ಅದನ್ನು ಹೇಳುವುದಿಲ್ಲ ಅಂದರು ಅವರು ಭಾವಮುಖದಲ್ಲಿರುವುದರಿಂದ ಜಗತ್ತೆಲ್ಲ ಅವರಿಗೆ ಭಾವಮಯವೆಂದು ತೋರುತ್ತಿತ್ತು ಸ್ತ್ರೀ ಪುರುಷರು, ಪಶುಪಕ್ಷಿಗಳು, ತೃಣಕಾಷ್ಠವು ಸಕಲವೂ ವಿರಾಟ ಮನಸ್ಸಿನಲ್ಲಿ ಒಂದೊಂದಾಗಿ ಬೇರೆಬೇರೆ ಭಾವ ಸಮಷ್ಟಿ ರೂಪದಲ್ಲಿ ಏಳುತ್ತದೆ ಲೀಲಾಡುತ್ತದೆ ಮತ್ತು ಆ ಭಾವಾವರಣದೊಳಗಿನಿಂದ ಅನಂತ, ಅಖಂಡ ಸಚ್ಚಿದಾಕಾಶವು ಕೆಲವೆಡೆ ಸ್ವಲ್ಪವಾಗಿಯೂ ಕೆಲವೆಡೆ ಅಧಿಕವಾಗಿಯೂ ಪ್ರಕಾಶಿತವಾಗುತ್ತದೆ, ಮತ್ತು ಕೆಲವೆಡೆಗಳಲ್ಲಿ ಆವರಣದ ನಿಬಿಡತೆಯಿಂದ ಸಂಪೂರ್ಣವಾಗಿ ಮುಚ್ಚಿಬಿಟ್ಟು ಆ ಸಚ್ಚಿದಾಕಾರವು ಇಲ್ಲವೆಂದು ಭಾಸವಾಗುತ್ತದೆ ಆನಂದಮಯಿಯ ನಿಷ್ಕಲಂಕ ಮಾನಸಪುತ್ರ ಶ್ರೀ ಪರಮಹಂಸರು ಜಗದಂಬೆಯ ಪಾದಪದ್ಮಗಳಿಗೆ ಸ್ವೇಚ್ಛೆಯಿಂದ ಶರೀರ ಮನಸ್ಸು, ಚಿತ್ತ ವೃತ್ತಿ ಇತ್ಯಾದಿ ಸರ್ವಸ್ವವನ್ನೂ ಅರ್ಪಿಸಿ ಸಮಾಧಿಹೊಂದಿ ವಿದೇಹ ಆನಂದಸ್ವರೂಪವನ್ನು ಅನುಭವಿಸಿ, ಅವಳಲ್ಲಿ ಚಿರಕಾಲವೂ ಲೀನರಾಗಲು ಪ್ರಸ್ಥಾನ ಬೆಳೆಸಿದ್ದರು ಆದರೆ ಅಲ್ಲಿ ತಪ್ಪಿ ಜಗನ್ಮಾತೆಯ ಇಚ್ಛೆಯು ಬೇರೆ ಎಂದು ತಿಳಿದರು, ಮತ್ತು ಅವಳ ಆದೇಶವನ್ನು ಶಿರಸಾವಹಿಸಿ ದ್ವೈತಾದ್ವೈತ ವಿವರ್ಜಿತವಾದ ಅನಿರ್ವಚನೀಯ ಅವಸ್ಥೆಯಲ್ಲಿ ಲೀನವಾದ ತಮ್ಮ ಮನಸ್ಸನ್ನು ಬಲಾತ್ಕಾರದಿಂದ ವಿದ್ಯೆಯ ಆವರಣದಲ್ಲಿ ಆಚ್ಛನ್ನವಾಡಿ ನಿರಂತರವೂ ಜಗನ್ಮಾತೆಯ ಆದೇಶವನ್ನು ಪಾಲನೆಮಾಡುತ್ತಾ ಬಂದಿದ್ದರು ಅನಂತ ಭಾವಮಯಿ ಜಗಜ್ಜನನಿಯೂ ಕೂಡ ಶ್ರೀ ಪರಮಹಂಸರಿಗೆ ಪ್ರಸನ್ನಳಾಗಿ ಅವರನ್ನು ಪ್ರೇಮಸ್ಥರಾಗಿ ಇಟ್ಟಿದ್ದರೂ ಏಕತ್ವದ ಉಚ್ಚ ಪದದಲ್ಲಿ ಅವರ ಮನಸ್ಸು ಸರ್ವಕ್ಷಣವೂ ಇಟ್ಟಿದ್ದರಿಂದ ಅನಂತ ವಿರಾಟ ಮನಸ್ಸಿನಲ್ಲಿ ಉದ್ಭವಿಸುವ ಭಾವಗಳೆಲ್ಲಾ ತಮ್ಮ ಸ್ವಂತದವುಗಳೆಂದು ಎಲ್ಲ ಸಮಯದಲ್ಲಿಯೂ ಅವರಿಗೆ ಅನುಭೂತಿಯಾಗುತ್ತಿತ್ತು ಅಲ್ಲದೆ ಅವುಗಳು ಅವರ ವಶೀಭೂತವಾಗಿರುವುದರಿಂದ ಯಾರು ಜಗಜ್ಜನನಿಯೋ ಅವರೇ ಜಗಜ್ಜನನಿಯ ಶಿಶುವೆಂದೂ ಮತ್ತು ಯಾರು ಜಗಜ್ಜನನಿಯ ಶಿಶುವೋ ಅವರೇ ಜಗಜ್ಜನನಿಯೆಂದೂ ನಮ್ಮ ಮನಸ್ಸಿನಲ್ಲಿ ಸೂಚಿಸುತ್ತಿತ್ತು'—"ಚಿನ್ಮಯದಾಮ ಚಿನ್ಮಯನಾಮ ಚಿನ್ಮಯಶ್ಯಾಮ"

ನಮ್ಮಿಂದ ಹೇಳಲು ಸಾಧ್ಯವಾದಷ್ಟು ಹೇಳಿ ಹೋಗಿದ್ದೇವೆ, ಪಾಠಕರೇ, ಅನಂತ ಭಾವಸ್ವರೂಪರಾದ ಈ ಪರಮಹಂಸರು ಯಾರೆಂಬುದನ್ನು ನೀವೇ ಈಗ ಭಾವಿಸಿ ತಿಳಿಯಿರಿ!

The Bank of Mangalore Limited

HEAD OFFICE Mangalore — *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಕಲಿಯುಗವು ಎಂದು ಅಂತ್ಯವಾಗುವುದು? ಕೃತಯುಗದಾರಂಭವೆಂದು?

ಕಲ್ಕ್ಯವತಾರವು ಈಗಾಗಲೇ ಆಗಿರುವುದೇ?

ಶಂಭಳ ಗ್ರಾಮದಲ್ಲಿ ಕಲ್ಕಿ ಭಗವಾನ್ ಜನ್ಮವೆತ್ತಿದನು!

ಈ ವಿಚಾರಗಳು ನಿಮಗೆ ತಿಳಿಯಬೇಕೆಂದಾದರೆ, ಓದಿರಿ—

ವಿದ್ವಾನ್ ಕೆ ಎಂ ಕರಿಬಸವ ಶಾಸ್ತ್ರಿಗಳಿಂದ ವಿರಚಿತವಾದ

ಕಲಿಯುಗಾಂತ ಕೃತಯುಗಾರಂಭ ವಿಚಾರ

(ಮೂಲ ಹಿಂದೀ ಪುಸ್ತಕ)

ಬೆಲೆ: ಆಣೆ ೮

ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಮನೋರಂಜಕ ಬೋಧಪ್ರದ ಪುಸ್ತಕ

"ಕಲಿಯುಗದ ಲಾವಣಿ"

ಕ್ರಯ 0-0-9

ವಿಚಾರಪೂರಿತ, ಅನುಭವಪೂರ್ಣ ಜ್ಯೋತಿಷ್ಯ ಸಂಸ್ಕಾರದ ಪ್ರಭಾವ

೧೯೪೨ನೇ ವರ್ಷದ ಪ್ರಪಂಚದ ಭವಿಷ್ಯತ್ತು

ಕ್ರಯ: 0-4-0,

ಸೋಲ್ ಏಜಂಟ್ಸ್ ಯಜಮಾನ್ ಎಂಡ್ ಬ್ರದರ್ಸ್, ಬುಕ್‌ಸೆಲ್ಲರ್ಸ್ ಬೆಂಗಳೂರು

ಮಂಗಳೂರಲ್ಲಿ ಸಿಗುವ ಸ್ಥಳ

ಬಾಲಸಾಹಿತ್ಯ ಮಂಡಲ — ಸ್ಕೂಲ್ ಬುಕ್ ಕಂಪನಿ — ಯು. ಆರ್. ಶೆಣೈ

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! — ನಿರಾಯಾಸಕರ!! — ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! — ನೋಟಗಳ ಬದಲಾವಣೆ! — ಜನತೆಯ ಸಂಪರ್ಕ! — ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE. — **The Joint Booking Office,** KODIALBAIL.

Regd No. M 3460

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ...ಯ ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಜ್ವ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ. **ಹುಳುಕಡ್ಡಿ ಮದ್ದು**

ಅಮೃತಾಂಜನ ಡಿಪ್ಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರ	ಮಂಗಳೂರು
ಮದರಾಸು	ತ್ರಿವೇಂದ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷದ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ,

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened orh ibitual abortion and other uterine troubles. Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿ ಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ॥ ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾ ಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸು ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

..ited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 3—7—1942 [ಸಂಚಿಕೆ 26]

'ಜಿನೆವಾದಲ್ಲಿ ನನ್ನ ಸುಖಮಯ ದಿನಗಳು'

ಜವಾಹರನೊಡನೆ ನಾನು ಬೆಳೆದೆನು

— ನೆಹರು ಸೋದರಿಯ ಲೇಖನ —

'೧೯೩೩ರಲ್ಲಿ-ಗಾಂಧಿಜಿಯವರನ್ನುಳಿದು ಎಲ್ಲಾ ರಾಜಕೀಯ ಕೈದಿಗಳು ಬಿಡುಗಡೆ ಮಾಡಲ್ಪಟ್ಟರು. ನನ್ನ ಸೋದರನು ಆಗ ಹೆಚ್ಚಿನ ಸಮಯವನ್ನು ಮನೆಯಲ್ಲಿಯೇ ಕಳೆಯುತ್ತಿದ್ದ. ಆಗ ಆತನನ್ನು ನಾನು ಹೆಚ್ಚಾಗಿ ನೋಡುತ್ತಿದ್ದೆ. ಹೆಚ್ಚು ಪ್ರೀತಿ ಮಾಡಲು ಆರಂಭಿಸಿದೆ—ಹೀಗೆ ಮುಂದಿನ ಎರಡು ವರ್ಷಗಳು ಆತಂಕವಿಲ್ಲದೆ ದಾಟಿದವು. ೧೯೩೪ರಲ್ಲಿ ಜವಾಹರನ ಪತ್ನಿ ಕಮಲಾಳ ಆರೋಗ್ಯ ಹಾಳಾಯಿತು. ಡಾಕ್ಟರರು ಆಕೆಯನ್ನು ಯೂರೋಪಿಗೆ ಕರೆದುಕೊಂಡು ಹೋಗಬೇಕೆಂದರು. ೧೯೩೫ನೆಯ ಮಾರ್ಚಿ ತಿಂಗಳಲ್ಲಿ ಜವಾಹರನು ಹಡಗು ಹತ್ತಿದನು. ತಂದೆಯೂ ಪ್ರಕೃತಿ ಸುಧಾರಣೆಗಾಗಿ ಯೂರೋಪಿಗೆ ಹವಾ ಬದಲಾವಣೆಗೆ ಹೋಗಲು ನಿಶ್ಚಯಿಸಿದನು. ನನ್ನನ್ನೂ ಜತೆಯಲ್ಲಿ ಕರೆದುಕೊಂಡು ಹೋಗುವುದಾಗಿ ಹೇಳಿದ. ನನಗೆ ಆಗ ಅಪರಿಮಿತ ಆನಂದವಾಯಿತು; ಆದರೆ ಹೊರಟ ಎರಡೇ ವಾರಗಳಲ್ಲಿ ತಂದೆಗೆ ಒಂದು 'ಹಳೇ ವ್ಯಾಜ್ಯ'ದ ಕರೆ ಬಂದದ್ದರಿಂದ ಪ್ರಯಾಣ ನಿಲ್ಲಿಸಿ ಮರಳಬೇಕಾಗಿ ಬಂತು; ಹಾಗಾಗಿ ನಾನು ಸ್ವಿಜರ್ಲೆಂಡಿಗೆ ಹೋಗಿ ಜವಾಹರನನ್ನು ಕೂಡುವುದಾಗಿ ನಿಶ್ಚಯವಾಯಿತು. ನೇಪಲ್ಸ್‌ಗೆ ಸೋದರನು ಬಂದು ನನ್ನನ್ನು ಕರೆಕೊಂಡನು. ನಾವು ರೋಮಿನಲ್ಲಿ ಕೆಲದಿನ ಕಳೆದೆವು. ಫ್ಲೋರೆನ್ಸಿನಲ್ಲಿ ಜವಾಹರನೊಡನೆ ಸುಂದರ ದೃಶ್ಯಗಳನ್ನು ನೋಡಿ ನಾನು ಆನಂದಗೊಂಡೆನು. ಸ್ವಿಜರ್ಲೆಂಡಿನಲ್ಲಿ ಮೂರು ತಿಂಗಳ ವಾಸವಾದ ಮೇಲೆ ಆತನು ಮೈಯಲ್ಲಿ ಬಹಳ ಸುಧಾರಿಸಿದ್ದ.' ಹೀಗೆ ನೆಹರು ಸೋದರಿ ಶ್ರೀಮತಿ ಕೃಷ್ಣಾ ಹಾತೀ ಸಿಂಗ್ ಇವರು ಜವಾಹರನೊಡನೆ ತಾನು ಬೆಳೆದ ಕೆಲವು ಜೀವನ ಸ್ಮೃತಿಗಳನ್ನು ವಿವರಿಸುತ್ತಾ ಈ ರೀತಿ ಹೇಳುತ್ತಾರೆ.

ಒಂದು ಹೊಸ ಅನುಭವ

"ಒಂದು ವಾರದ ಬಳಿಕ ನಾವು ಜಿನೆವಾಕ್ಕೆ ಹೋದೆವು. ಕಮಲಾ ಅಲ್ಲಿ ಚಿಕಿತ್ಸೆ ಹೊಂದುತ್ತಿದ್ದಳು. ಜವಾಹರನು ಒಂದು ಸಣ್ಣ ಮನೆಗೆ ಮಾಡಿಕೊಂಡಿದ್ದ. ಅಲ್ಲಿ ಉಳಕೊಂಡ ಒಂದು ವಾರದಲ್ಲಿ ನನಗೆ ತಿಳಿಸಿದ, ಮನೆಕೆಲಸ ಅಡಿಗೆ ಮೊದಲಾದುವುಗಳನ್ನು ನಾನು ನೋಡಿಕೊಳ್ಳಬೇಕೆಂದು. ನನಗೆ ಅದನ್ನು ಕೇಳಿ ದಿಗಿಲಾಯಿತು. ಅಂಥಾ ಕೆಲಸ ನನಗೆ ಪರಿಚಯವೇ ಇರಲಿಲ್ಲ. ನನಗೆ ಇಷ್ಟವೂ ಇರಲಿಲ್ಲ. ನನ್ನ ಅಲ್ಲಿನ ಸೇವಕರೊಡನೆ ಮಾತನಾಡಲು ಫ್ರೆಂಚ್ ಭಾಷೆಯೂ ಬರುತ್ತಿರಲಿಲ್ಲ. ಆದರೆ ಅಣ್ಣನು ಬಿಡಲೊಲ್ಲ. ನೀನು ಅಂಥಾ ಕೆಲಸಗಳನ್ನು ಕಲಿಯುವುದು ಒಳ್ಳೆಯದು ಎಂದು ಬುದ್ಧಿವಾದ ಹೇಳಿದ. ನನಗೆ ಆ ನಗರದ ಭೂಪಟವುಳ್ಳ ಒಂದು ಗೈಡನ್ನೂ ಒಂದು ಇಂಗ್ಲಿಷ್ ಫ್ರೆಂಚ್ ಡಿಕ್ಷನರಿಯನ್ನೂ ಒಂದು ಟ್ರಾಮ್ ಕೂಪನನ್ನೂ ತೆಗೆದು ಕೊಟ್ಟ. ಇವಿಷ್ಟು ಬೇಕಾದ ಸಾಧನಗಳೆಂದು ನನಗೆ ಸೂಚಿಸಿದ. ನಾನದುವರೆಗೆ ಮನೆಬಿಟ್ಟು ಒಬ್ಬಳೇ ಹೊರಟಿರಲಿಲ್ಲ. ಹೋಗುವಷ್ಟು ಧೈರ್ಯವೂ ಇರಲಿಲ್ಲ. ಆದರೆ ಜವಾಹರನು ಹೇಳಿದ್ದು ಮಾಡದೆ ನಿರ್ವಾಹವಿರಲಿಲ್ಲ. ಮೊದಲು ಕೆಲದಿನಗಳು ನನಗೆ ಸ್ವಲ್ಪ ತ್ರಾಸವೆನಿಸಿದರೂ ಮುಂದೆ ಆ ಕೆಲಸ ನನಗೆ ಪ್ರಯಾಸವೇ ಎನಿಸಲಿಲ್ಲ. ನಾನೇ ನಮ್ಮ ಮನೆಕೆಲಸ ಅಡಿಗೆ ಮೊದಲಾದುವನ್ನು ನೋಡಿಕೊಂಡೆ.

ಜಿನೆವದಲ್ಲಿ ಶಾಲಾಭ್ಯಾಸ

"ಜವಾಹರನು ಅಲ್ಲಿಯ ಒಂದು 'ವಸಂತ ಶಾಲೆ'ಗೆ ಸೇರಿದ. ಅಂತರ್ರಾಷ್ಟ್ರೀಯ ವಸಂತ ಶಾಲೆಯೆಂದು ಅದರ ಹೆಸರು. ನಾನೂ ಅವನೊಡನೆ ಶಾಲೆಗೆ ಸೇರಿದೆ. ಅಲ್ಲಿ ೧೮ ವರ್ಷದಿಂದ ೫೫ ವರ್ಷಗಳ ವರೆಗಿನ ಲೀಗ್ ಓಫ್ ನೇಶನ್ಸ್‌ಗೆ ಬಂದಿದ್ದ ಇಂಗ್ಲೆಂಡು ಚೀನ, ಹಿಂದೂದೇಶ, ಇಟಲಿ, ಸಿಲೋನ್ ಫ್ರೆಂಚ್ ಜರ್ಮನ್ ಮತ್ತು ಬೇರೆಬೇರೆ ಜನಾಂಗಗಳ ವಿದ್ಯಾರ್ಥಿಗಳು ಕೂಡುತ್ತಿದ್ದರು. ಭಾಷಣಗಳು ವಿದ್ವಾಂಸರಿಂದ ಇಂಗ್ಲಿಷ್ ಫ್ರೆಂಚ್ ಇಟಲಿ ಭಾಷೆಗಳಲ್ಲಿ ಕೊಡಲ್ಪಡುತ್ತಿದ್ದುವು. ಜವಾಹರನು ಅಲ್ಲಿ ಒಬ್ಬ ಕಾಲೇಜ್ ವಿದ್ಯಾರ್ಥಿಯಂತೆ ಇದ್ದ. ಅಲ್ಲಿನ ವಿದ್ಯಾರ್ಥಿಗಳಲ್ಲಿ ಬಹಳ ಜನಪ್ರಿಯನಾಗಿದ್ದ. ವಾರದ ಅಂತ್ಯದ ದಿನಗಳಲ್ಲಿ ಚರ್ಚಾ ಕೂಟಗಳು ಜರಗುತ್ತಿದ್ದುವು. ಕೆಲವೇಳೆ ಕಮಲಾಳ ಅನಾರೋಗ್ಯದ ನಿಮಿತ್ತ ಅವಳನ್ನು ಏಕಾಕಿಯಾಗಿ ಬಿಟ್ಟುಹೋಗಲು ಇಷ್ಟವಿಲ್ಲದೆ—ನಾನು ಶಾಲೆಗೆ ಹೋಗುವುದು ಸಾಧ್ಯವಿರಲಿಲ್ಲ. ಆದರೆ ಇಂತಹ ಅಭ್ಯಾಸ ಚರ್ಚಾಕೂಟ ಮೊದಲಾದವು ನನಗೆ ಜವಾಹರನಲ್ಲಿ ಆದರ ಭಾವವನ್ನು ಹೆಚ್ಚಿಸಿದವು. ಇದೇ ಕೂಟದಲ್ಲಿ ಆತನೇ ಪ್ರಮುಖನಾಗಿದ್ದ. ಒಮ್ಮೊಮ್ಮೆ ನಾವು ಪರ್ವತವೇರಿ ಹೋಗುತ್ತಿದ್ದೆವು. ಮಳೆ ಬಂದರೆ ಇದೇ ಒದ್ದೆ. ಆದರೆ ಸಂಗಾತಿಗಳಿಗೆಲ್ಲಾ ಜವಾಹರನು ತನ್ನ ವಿನೋದ ಮಾತುಗಳಿಂದ ಉಲ್ಲಾಸ ಹುಟ್ಟಿಸುತ್ತಿದ್ದ. ಹೀಗೆ ನಾನು ಜಿನೆವಾದಲ್ಲಿ ನನ್ನ ಸೋದರನೊಡನೆ ನನ್ನ ಜೀವನದ ಕೆಲವು ಸುಖಮಯ ದಿನಗಳನ್ನು ಕಳೆದೆನು. ಮುಂದೆ ಮೂರು ತಿಂಗಳ ನಂತರ ಕಮಲಳನ್ನು ಸ್ವಿಜರ್ಲೆಂಡಿನ ಮೊಂಟನಾ ಎಂಬಲ್ಲಿನ 'ಸಿನಿಟೋರಿಯಂ'ಗೆ ಕರಕೊಂಡು ಹೋಗಬೇಕಾಯಿತು. ನಾವು ಅಲ್ಲಿ ಹತ್ತು ತಿಂಗಳು ಕಳೆದೆವು. ಹಿಮಗಾಲದ ಆಟಗಳಲ್ಲಿ ಜವಾಹರನು ಸೇರಿಕೊಳ್ಳುತ್ತಿದ್ದ. ಶಾಲಾ ವಿದ್ಯಾರ್ಥಿಯಾಗಿದ್ದಾಗ ಆತನಲ್ಲಿದ್ದಂತಹ ಹುರುಪು ಆಗ ಕಾಣುತ್ತಿತ್ತು.

'ಆ ಸಮಯದಲ್ಲಿ ಜವಾಹರನು ಒಮ್ಮೊಮ್ಮೆ ಲಂಡನಿಗೆ, ಪ್ಯಾರಿಸಿಗೆ, ಬ್ರುಸೆಲ್ಸಿಗೆ ಮತ್ತು ಬರ್ಲಿನ್ ಮೊದಲಾದ ಸ್ಥಳಗಳಿಗೆ ಆಮಂತ್ರಿಸಲ್ಪಟ್ಟು ಹೋಗುತ್ತಿದ್ದ. ಕೆಲ ಕಡೆಗೆ ಆತನೊಡನೆ ನಾನು ಆತನ ಸೆಕ್ರೆಟರಿಯಾಗಿ ಹೋಗುತ್ತಿದ್ದೆ. ಈ ಸಂದರ್ಭಗಳಲ್ಲಿ ಜವಾಹರನನ್ನು ನಾನು ಇನ್ನೂ ಹೆಚ್ಚು ತಿಳಕೊಂಡೆ. ನಾನು ಅನೇಕ ತರದ ಜನರನ್ನು ನೋಡಿದೆ. ಅವರಲ್ಲಿ ನನಗೆ ನೆನಪಿರುವ ಒಬ್ಬರೆಂದರೆ ಅರ್ನೆಸ್ಟ್ ಟೋಲರ್ ಎಂಬವರು. ಬರ್ಲಿನ್‌ನಲ್ಲಿ ಮತ್ತು ಬ್ರುಸೆಲ್ಸಿನಲ್ಲಿ ನಾನು ಅವರನ್ನು ಭೇಟಿಯಾದೆನು. ಬ್ರುಸೆಲ್ಸಿನಲ್ಲಿ ಸಾಮ್ರಾಜ್ಯಶಾಹೀ ವಿರುದ್ಧ ಪರಿಷತ್ತು ಸೇರಿತ್ತು. ನಾವು ಅದಕ್ಕೆ ಹೋಗಿದ್ದವರು ಹತ್ತು ದಿನ ಅಲ್ಲಿ ಉಳಕೊಂಡೆವು. ಎಲ್ಲಾ ದಿನ ಪರಿಷತ್ತು ನಡೆಯುತ್ತಿತ್ತು. ಪ್ರತಿದಿನ ಜವಾಹರನು ಅನೇಕ ಸಂಗಾತಿಗಳೊಡನೆ ಹೆಚ್ಚು ರಾತ್ರಿ ವರೆಗೆ ಮಾತನಾಡುತ್ತಾ ಹೊತ್ತು ಕಳೆಯುತ್ತಿದ್ದ. ನಾನು ಅಲ್ಲಿ ಮೂಕಳಾದ ಪ್ರೇಕ್ಷಕಳಾಗಿದ್ದರೂ ಆ ಸಂಜೆಯ ಸಮಯಗಳನ್ನು ಮರೆಯಲಾರದಾಗಿದ್ದೇನೆ. ೧೯೩೭ರಲ್ಲಿ ತಂದೆ ಯೂರೋಪಿಗೆ ಬಂದನು. ನಮಗೆಲ್ಲರಿಗೂ ಅತೀ ಸಂತೋಷವಾಯಿತು. ಅದೇ ವರ್ಷ ನವಂಬರಿನಲ್ಲಿ ನಾವು ಮೋಸ್ಕೋಗೆ ಸೋವಿಯೆಟಿನ ೧೦ನೆಯ ವಾರ್ಷಿಕೋತ್ಸವಕ್ಕೆ ಹೋದೆವು. ಬರ್ಲಿನಿನಿಂದ ಮೋಸ್ಕೋಗೆ ಹೋಗುವ ರೈಲು ಪ್ರಯಾಣ ಬಹಳ ಅಸುಖಕರವಾಗಿದ್ದರೂ, ಜತೆಯಲ್ಲಿ ಜವಾಹರನಿದ್ದದರಿಂದ ನಮಗೆ ಆನಂದವೇ ಎನಿಸಿತು. ಅದೇ ಡಿಸೆಂಬರದಲ್ಲಿ ನಾವು ಹಿಂದೂ ದೇಶಕ್ಕೆ ಮರಳಿದೆವು.

ಕಾರ್ಯರಂಗ—ಪುನಃ ಸೆರೆಮನೆ!"

೧೯೩೮ರಲ್ಲಿ ಅಖಿಲ ಭಾರತದಲ್ಲೇ ತರುಣ ಸಂಘಗಳು ಪ್ರಾರಂಭಿಸಲ್ಪಟ್ಟವು. ನಾನು ಅಲ್ಲಾಹಾಬಾದ್ ತರುಣ ಸಂಘಕ್ಕೆ ಸೇರಿದೆ. ಜವಾಹರನು ಅದರ ಅಧ್ಯಕ್ಷನಾಗಿದ್ದ. ಅನೇಕ ವೇಳೆ ಆತನಿಗೆ ಸಮಯ ದೊರಕಿದಾಗ ನಮಗೆ ಹಲವು ವಿಷಯಗಳ ಮೇಲೆ ಆತನು ಭಾಷಣ ಕೊಡುತ್ತಿದ್ದ. ಆ ದಿನಗಳಲ್ಲಿ ನನಗೆ ಸೋದರನಲ್ಲಿ ಮತ್ತಷ್ಟು ಗೌರವ ಹೆಚ್ಚುತ್ತಾ ಹೋಯಿತು! ಯೂರೋಪಿನಲ್ಲಿ ಆ ತರದ ಜೀವನ ನಡೆಸಿ ಮರಳಿದ ಬಳಿಕ ನನಗೆ ಹಿಂದೂ ದೇಶದ ಜೀವನದಲ್ಲಿ ಅಸಡ್ಡೆ ಹುಟ್ಟಿತು. ನಾನು 'ತರುಣ ಸಂಘ'ದ ಕಾರ್ಯದರ್ಶಿನಿಯಾಗಿ ಚುನಾಯಿತಳಾಗಿದ್ದರೂ ಹೆಚ್ಚು ಕೆಲಸವೇನೂ ಇರಲಿಲ್ಲ. ನನಗೆ ಯಾವುದಾದರೂ ಒಂದು ಉದ್ಯೋಗ ಮಾಡಬೇಕೆಂದು ಇಚ್ಛೆ ಇತ್ತು. ಆದರೆ ತಂದೆ ಒಪ್ಪಿಗೆ ಕೊಡಲಾರ. ಯೂರೋಪಿನಲ್ಲಿದ್ದಾಗ ನಾನು ಮೊಂಟೆಸ್ಸೋರಿ ಶಿಕ್ಷಣ ಪಡೆದಿದ್ದೆ. ಅಲ್ಲಾಹಾಬಾದಿನಲ್ಲಿ ಮೊಂಟೆಸ್ಸೋರಿ ಶಾಲೆಯೊಂದು ಪ್ರಾರಂಭವಾಯಿತು. ನಾನು ಅದಕ್ಕೆ ಸೇರಬೇಕೆಂದು ಹಠಹಿಡಿದೆ. ತಂದೆ ಕೇಳಲೇ ಇಲ್ಲ. ಆದರೆ ಜವಾಹರನು ತಂದೆಗೆ ಸಮಾಧಾನಮಾಡಿ ನನ್ನನ್ನು ಅಲ್ಲಿ ಕೆಲಸಕ್ಕೆ ಸೇರಿಸಿದ. ನನಗೆ ಬಹಳ ಆನಂದವೆನಿಸಿತು. ನಾನು ಸೇರಿದಾಗ ಅದು ಸಂಬಳವಿಲ್ಲದ ಗೌರವ ಕಾರ್ಯವೆಂಬ ಭಾವನೆಯೇ ಇತ್ತು. ಆದರೆ ಕೆಲದಿನಗಳಲ್ಲಿ ಅದರ ಸಂಚಾಲಕರು ನನ್ನ ಆಕ್ಷೇಪವಿಲ್ಲದಿದ್ದರೆ ಗೌರವ ಸಂಬಳ ಕೊಡುವುದಾಗಿ ತಿಳಿಸಿದರು. ನನಗೆ ಏನೂ ಆಕ್ಷೇಪವಿರಲಿಲ್ಲ. ಆದರೆ ಸಂಬಳಕ್ಕೆ ಕೆಲಸಮಾಡುವ ಸುದ್ದಿ ತಂದೆಗೆ ತಿಳಿದು ಸಿಟ್ಟುಬಂತು. ಕೆಲವೇ ದಿನಗಳಲ್ಲಿ ನಾನು ಆ ಕೆಲಸ ಬಿಟ್ಟುಬಿಡಬೇಕಾಗಿತ್ತು. ಆದರೆ ಜವಾಹರನು ಆಗಲೂ ನನ್ನ ಸಹಾಯಕ್ಕೆ ಬಂದು ಕೆಲಸದಲ್ಲಿರಲು ತಂದೆಯನ್ನು ಒಪ್ಪಿಸಿದ. ಮುಂದೆ ೧೯೩೦ರಲ್ಲಿ ಚಳವಳಿ ಆರಂಭವಾಗಲು ನಾನು ಕೆಲಸಕ್ಕೆ ರಾಜಿನಾಮೆ ಕೊಟ್ಟು ಸ್ವಯಂಸೇವಕಿಯಾಗಿ ಸೇರಿದೆ.

'ತಂದೆಗೆ ಆರೋಗ್ಯ ಹೀನವಾಗಿದ್ದರಿಂದ ತಂದೆಯೊಡನೆ ನಾವು ಮುಸ್ಸೂರಿಗೆ ಕೆಲಕಾಲ ಹೋಗಬೇಕಾಯಿತು. ನಾವು ಅಲ್ಲಿಂದ ಬಂದಾಗ ನಮ್ಮನ್ನು ಜವಾಹರನು ಸ್ಟೇಶನಿನಲ್ಲಿ ಭೇಟಿಯಾದ. ಮುಂದೆ ಒಂದು ತಾಸಿನಲ್ಲಿ ಒಂದು ಕೃಷಿಕ ಸಭೆಯಲ್ಲಿ ಆತನಿಗೆ ಭಾಷಣಮಾಡಬೇಕಿದ್ದುದರಿಂದ ಅಲ್ಲಿಗೆ ತೆರಳಿದನು. ಅಲ್ಲಿ ಆತನು ಬಂಧಿಸಲ್ಪಟ್ಟನು. ತಂದೆಗೆ ಇದನ್ನು ಕೇಳಿ ಬಹಳ ದುಃಖವಾಯಿತು. ಕೆಲಕಾಲ ಮಗನನ್ನು ತನ್ನೊಡನೆ ಇಟ್ಟುಕೊಳ್ಳಬೇಕೆಂದು ಅವನ ಇಷ್ಟವಿತ್ತು. ಬಂಧಿಸಲ್ಪಟ್ಟ ಎಂಟು ದಿನಗಳಲ್ಲಿ ನನಗೆ ಆತನಿಂದ ಒಂದು ಪತ್ರ ಬಂತು. ಅದರಲ್ಲಿ ಆತನು ನನ್ನ ಜನ್ಮದಿನದ ಕಾಣಿಕೆ ಕೊಡಲು ಈ ಸಲ ಸರಕಾರವು ಸೆರೆಮನೆಗೆ ಹಾಕಿ ತೊಂದರೆ ಮಾಡಿದ್ದಕ್ಕಾಗಿ ಸಂತಾಪ ಸೂಚಿಸಿದ್ದ. ತಾಯಿ ನಮ್ಮ ಜನ್ಮ ದಿನಗಳನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಿದ್ದಳು. ನನ್ನ ಸೋದರನು ಇಂತಹ ದಿನ ನಿತ್ಯದ ಕೆಲಸಗಳಲ್ಲಿಯೂ ಬಹಳ ಜಾಗರೂಕನಾಗಿರುತ್ತಾನೆ. ಇಂತಹ ಕೆಲವು ಆತನ ವೈಶಿಷ್ಟ್ಯಗಳು ಆತನನ್ನು ಹೆಚ್ಚಾಗಿ ಪ್ರೀತಿಸಲು ಕಾರಣಗಳಾಗುತ್ತವೆ.'

KANNADA ILLUSTRATED WEEKLY

ಹರಿಜನವಾಣಿ

'ನಿಮ್ಮ ಅಹಿಂಸೆಗೆ ಇದು ಪ್ರಯೋಗಕಾಲ'

'ಅರಾಜಕತೆಯಾದರೆ ನೀವೇನು ಮಾಡುವಿರಿ?'

ಗಾಂಧಿಜಿ ಉತ್ತರ ಕೊಡುತ್ತಾರೆ

ಗಾಂಧಿಜಿಯವರೊಡನೆ ಕೇಳಿದ ಕೆಲವು ಪ್ರಾಮುಖ್ಯ ಪ್ರಶ್ನೆಗಳಿಗೆ ಅವರು ಹೀಗೆಂದು ಉತ್ತರ ಕೊಡುತ್ತಾರೆ.

ಪ್ರ:—"ನಿಮ್ಮ ಆಶ್ರಮದಲ್ಲಿ ನೀವು ಅನೇಕ ಜನರಿಗೆ ಶಿಕ್ಷಣ ಕೊಡುತ್ತೀರಿ, ಅಹಿಂಸೆಯಿಂದ ಹಿಂಸೆಯನ್ನು ಎದುರಿಸಬಲ್ಲೆನೆಂದು ನೀವು ಸಾರುತ್ತೀರಿ. ಜಪಾನರು ಈಗ ಧಾಳಿಮಾಡುತ್ತಿರುವಾಗ ಪೂರರು ತೊಂದರೆ ಕೊಡುತ್ತಿರುವಾಗ ಇಂತಹ ಪರಿಸ್ಥಿತಿಯಲ್ಲಿ ನೀವು ಬಹು ದಿನಗಳಿಂದ ಬೋಧಿಸುತ್ತಿದ್ದ ತತ್ವವನ್ನು ಆಚರಣೆಗೆ ತರಲು ಯೋಗ್ಯ ಸಂದರ್ಭವಿದಲ್ಲವೆ?"

ಉ:—"ಎಲ್ಲಾ ಕಡೆ ತಿರುಗಾಡಿ ತೊಂದರೆಯಲ್ಲಿದ್ದವರನ್ನು ಸಂರಕ್ಷಿಸುವುದು ನನ್ನ ಕೆಲಸವೆಂದು ನಾನು ಭಾವಿಸುವುದಿಲ್ಲ. ತಮ್ಮ ಸ್ವಂತ ಕಷ್ಟಗಳನ್ನು ಹೇಗೆ ಸರಿಪಡಿಸಿಕೊಳ್ಳಬೇಕೆಂದು ಜನತೆಗೆ ತಿಳಿಸುವುದೇ ನನ್ನ ನಮ್ರ ಕಾರ್ಯ. ಸಿಂಧದಲ್ಲಿ ಪೂರರ ಹಾವಳಿಗೆ ತುತ್ತಾದ ಪ್ರದೇಶಗಳಿಗೆ ಹೋಗಿ ಪೂರರನ್ನು ಶಾಂತ ಮಾರ್ಗಕ್ಕೆ ತರಲು ಯತ್ನಿಸುವುದು ಪ್ರತಿಯೊಬ್ಬ ಕಾಂಗ್ರೆಸಿನವನ ಕರ್ತವ್ಯ. ಅಹಿಂಸೆಯಲ್ಲಿ ಅವರಿಗೆ ವಿಶ್ವಾಸವಿಲ್ಲದಿದ್ದರೆ ಅವರು ಅದಕ್ಕೆ ಶಸ್ತ್ರಾಸ್ತ್ರವನ್ನು ಕೂಡ ಉಪಯೋಗಿಸಬಹುದಿತ್ತು. ಸ್ವಾತಂತ್ರ್ಯಕ್ಕೆ ನಾವು ಯೋಗ್ಯರಾಗಬೇಕಾದರೆ ಹಿಂಸೆಯಿಂದಾಗಲಿ ಅಹಿಂಸೆಯಿಂದಾಗಲಿ ಆತ್ಮರಕ್ಷಣೆಗೈಯಲು ಸಮರ್ಥರಾಗಿರಬೇಕು. ಗಂಡಾಂತರದಲ್ಲಿರುವ ತನ್ನ ನೆರೆಹೊರೆಯವನಿಗೆ ಸಹಾಯ ಮಾಡುವುದು ತನ್ನ ಕರ್ತವ್ಯವೆಂದು ಪ್ರತಿಯೊಬ್ಬನೂ ಭಾವಿಸಬೇಕಾಗಿದೆ! ಹಾಗಲ್ಲದೆ ನೀವು ಹೇಳಿದಂತೆ ಕೆಲಸಮಾಡಲು ನಾವು ತೊಡಗಿದ್ದರೆ ಜನರು ಪರರನ್ನವಲಂಬಿಸಿಕೊಂಡಿರಲು ಸಹಾಯ ಮಾಡಿದಂತಾಗುತ್ತಿತ್ತು. ಆದ್ದರಿಂದ ಬೇರೆಯವರನ್ನು ರಕ್ಷಿಸಲು ನಾನು ಶಿಕ್ಷಣಮಾಡದಿರುವುದು ಒಳ್ಳೆಯದೇ ಆಗಿದೆ. ಎಂಥ ಸಂದರ್ಭದಲ್ಲೂ ಪ್ರತಿಯೊಬ್ಬನೂ ಆತ್ಮರಕ್ಷಣೆಮಾಡಿಕೊಳ್ಳಲು ಸ್ವಾವಲಂಬಿಯಾಗಲು ಕೆಲಸ ಮಾಡುವರೆ ನನ್ನ ಜೀವನದ ಅತ್ಯುತ್ತಮ ಸಮಯವನ್ನು ವ್ಯಯಿಸಿದೆನೆಂದು ಮರಣಕಾಲಕ್ಕೆ ನನಗೆ ಸಮಾಧಾನಬಂದರೆ ನನಗೆ ತೃಪ್ತಿಯಿದೆ."

ಪ್ರ:—"ನೀವು ಈ ಸಂದರ್ಭದಲ್ಲಿ ನಿಮ್ಮ ಅಹಿಂಸೆಯನ್ನು ಆಚರಣೆ ತರುವುದನ್ನು ಬಿಟ್ಟು ಹರಿಜನದಲ್ಲಿ ಲೇಖನ ಬರೆಯುತ್ತೀರಿ. ಯುದ್ಧಭೂಮಿಗೆ ಸೈನ್ಯ ಕಳುಹಿಸುವುದನ್ನು ಬಿಟ್ಟುಕೊಟ್ಟು ಹಿಟ್ಲರ್ ಮುಸಲನಿಗಳು ತಮ್ಮ ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಾ ಕೂತರೆ ಪರಿಣಾಮವೇನಾಗುವುದೆಂದು ಯೋಚಿಸಿರಿ. ರಾಜೀನಾಮೆಕೊಟ್ಟು ಪೂರರ ಮನವೊಲಿಸಲು ಹೋಗಿರೆಂದು ಸಿಂಧ್ ಅಸೆಂಬ್ಲಿಯವರಿಗೆ ಸೂಚನೆ ಕೊಡುವುದಕ್ಕಿಂತ ನಿಮ್ಮ ಸತ್ಯಾಗ್ರಹಿಗಳ ಒಂದು ಪಂಗಡವನ್ನು ಕಳಿಸಿ ನಿಮ್ಮ ತತ್ವದ ಸತ್ವ ಪರೀಕ್ಷೆಯನ್ನು ಮಾಡಬಾರದೇಕೆ?"

ಉ:—"ಗಂಡಾಂತರದಿಂದ ವಿನೋದ ಪಡುವುದು ನನ್ನ ಜೀವನದ ಉದ್ದೇಶವೆಂದು ತಪ್ಪಾಗಿ ತಿಳಿದಿರುವಿರಿ. ಸರ್ವಾಧಿಕಾರಿಗಳು ಹಾಗೆ ಜಂಭಕೊಚ್ಚಿಕೊಳ್ಳಬಹುದು. ಆದರೆ ಅವರೂ ಕಾರ್ಯ ರೂಪದಲ್ಲಿ ಮಾಡಿ ತೋರಿಸಿಲ್ಲ.

ಪ್ರ:—"ಇಡೀ ದೇಶವನ್ನೇ ಬೆದರಿಸುತ್ತಿರುವ ಗಂಡಾಂತರವನ್ನು ಹೋದ ಹೋದಲ್ಲಿ ಎದುರಿಸುವುದು ಸತ್ಯಾಗ್ರಹಿಯ ಕರ್ತವ್ಯವಲ್ಲವೆ? ಅದು ನಿಮ್ಮ ಆಶ್ರಮದ ಬಾಗಿಲಿಗೆ ಬಂದಾಗ ಮಾತ್ರ ಎದುರಿಸುವುದು ನಿಮ್ಮ ಸತ್ಯಾಗ್ರಹಿಗಳ ಕರ್ತವ್ಯವೊ? ಅದಕ್ಕಿಂತ ಮೊದಲು ಹಾಗೆ ಮಾಡುವುದು ಕರ್ತವ್ಯವಲ್ಲವೊ? ಹಾಗಾದರೆ, ನಿಮ್ಮ ತತ್ವವು ಬರಿಯ ನಿಷ್ಕ್ರಿಯಾತ್ಮಕ ತತ್ವವಾಗುವುದಿಲ್ಲವೆ?"

ಉ:—"ಅಂತಹ ಗಂಡಾಂತರ ಆಶ್ರಮಕ್ಕೆ ಬಂದರೆ ಅದನ್ನು ಒಳ್ಳೆಯರೀತಿಯಿಂದ ನಾವೆದುರಿಸುವೆವು. ಅದು ಸಂಪೂರ್ಣ ಯಶಸ್ವಿಯಾಗುವುದೆಂದು ನನಗೆ ಸಮಾಧಾನವಿದೆ. ಅಂಥ ಪರೀಕ್ಷೆ ಬಂದಾಗ ಇಷ್ಟು ಅಲ್ಪ ಜನರು ಎಂತಹ ಕೆಲಸಮಾಡುವರೆಂದು ಆಗ ನೋಡಬಹುದು. ಸಶಸ್ತ್ರಮನುಷ್ಯನು ಸ್ವಾಭಾವಿಕವಾಗಿ ತನ್ನ ಶಸ್ತ್ರಶಕ್ತಿಯನ್ನವಲಂಬಿಸುವನು. ಬುದ್ಧಿಪೂರ್ವಕವಾಗಿ ನಿಃಶಸ್ತ್ರನಾಗಿರುವ ಮನುಷ್ಯನು ಅದೃಶ್ಯ ಶಕ್ತಿಯನ್ನು ಅವಲಂಬಿಸಿರುವನು. ಕವಿಗಳು ಈ ಅದೃಶ್ಯ ಶಕ್ತಿಯನ್ನೇ ದೇವರೆಂದೂ, ವಿಜ್ಞಾನಿಗಳು 'ಅಜ್ಞಾತ'ವೆಂದೂ, ಹೇಳುವರು. ಅಜ್ಞಾತವಿರುವುದೆಲ್ಲಾ ಅಸತ್ಯವೆಂದೇನೂ ತಿಳಿಯಬೇಕಾಗಿಲ್ಲ. ಆ ಶಕ್ತಿಯನ್ನವಲಂಭಿಸದ ಅಹಿಂಸೆ ನಿಷ್ಪ್ರಯೋಜಕವಾಗುವುದು. ಕಳೆದ ಇಪ್ಪತ್ತೆರಡು ವರ್ಷಗಳಿಂದ ನಾನು ಅಹಿಂಸಾಶಿಕ್ಷಣಕೊಡುತ್ತಿದ್ದರೂ ಸಾಕಷ್ಟು ಸತ್ಯಾಗ್ರಹಿಗಳು ಸಿದ್ಧರಾಗಿಲ್ಲವೇಕೆಂದು ಕೇಳಬಹುದು. ಯಾವುದೇ ರಾಷ್ಟ್ರಕ್ಕೆ ಅಹಿಂಸೆಯಂತಹ ತತ್ವದ ಶಿಕ್ಷಣ ಕೊಡಲು ೨೨ ವರ್ಷ ಸಾಲದು. ಹಾಗೆಂದರೆ ಅವಶ್ಯಸಂದರ್ಭದಲ್ಲಿ ಅನೇಕ ಜನರು ಆ ಶಕ್ತಿ ಪ್ರದರ್ಶಿಸಲಾರರೆಂಬರ್ಥವಲ್ಲ. ಅಂಥಾ ಸಮಯವೀಗ ಬಂದೊದಗಿದಂತೆ ಕಾಣುತ್ತದೆ. ಈ ಯುದ್ಧವು ಸೈನಿಕರ ಶಕ್ತಿಯನ್ನು ಮಾತ್ರವಲ್ಲ ನಾಗರಿಕರ ಶಕ್ತಿಯನ್ನೂ ಒರೆಗೆ ಹಚ್ಚುವುದು. ಹಿಂಸಾತ್ಮಕ ಜನರ ಶಕ್ತಿಯನ್ನು ಮಾತ್ರವಲ್ಲ ಅಹಿಂಸಾತ್ಮಕ ಜನರ ಶಕ್ತಿಯನ್ನು ಪರೀಕ್ಷಿಸುವುದು."

ಪ್ರ:—"ನಿಮ್ಮ ಸೂಚನೆಯನ್ನು ಮನ್ನಿಸಿ ಬ್ರಿಟಿಷರು ಹಿಂದೂದೇಶದಿಂದ ಹೊರಟು ಹೋದರೆ, ಅನಂತರ ನೀವು ಹೇಳುವಂತೆ ಒಂದು ಪಕ್ಷ ಅರಾಜಕತೆಯಾಯಿತೆಂದಾದರೆ ಅದನ್ನು ನಿಲ್ಲಿಸಲು ನೀವೇನುಮಾಡುವಿರಿ?"

ಉ:—"ಅಂಥ ಪ್ರಸಂಗ ಬಂದರೆ ಅರಾಜಕತೆಯಿಲ್ಲದಂತೆ ಮಾಡಲು ನಾನು ನನ್ನ ಅನುಯಾಯಿಗಳೊಡನೆ ಯತ್ನಿಸುವೆನು. ಅರಾಜಕತೆ ಹುಟ್ಟಿಸುವವರಿಗೆ ಹೇಳಿ ಅವರನ್ನು ಹಾಗೆ ಮಾಡದಂತೆ ಪ್ರಯತ್ನ ಮಾಡುವೆವು. ಆ ಕಾರ್ಯದಲ್ಲಿ ಮರಣವನ್ನಾದರೂ ಸಂತೋಷದಿಂದ ಎದುರಿಸುವೆವು. ಅಹಿಂಸಕ ಅನುಯಾಯಿಗಳು ಕೆಲವರು ಸಿಕ್ಕಿದರೆ ಅರಾಜಕತೆ ಕೂಡಲೇ ಇಲ್ಲದಾಗಿ ಬಿಡುವುದು. ಇಂಗ್ಲಿಷರ ಆಡಳಿತ ಮಾಯವಾದರೆ ಹೇಡಿಗಳ ಅಹಿಂಸೆಗೆ ಆಸ್ಪದವೇ ಇಲ್ಲ. ಲೂಟಿ ಮಾಡುವವರನ್ನು ಯಾರೂ ಸೆರೆಮನೆಗೆ ಹಾಕುವವರಿಲ್ಲ; ಯಾರ ಮೇಲೂ ಅವರಿಗೆ ದಯೆಯಿಲ್ಲ. ಹೊಡಿಬಡಿಯನ್ನುವುದರ ಹೊರತು ಬೇರೇನೂ ಮಾತಿಲ್ಲ. ಅಂತಹ ಸಂದರ್ಭದಲ್ಲಿ ಅವರನ್ನು ಒಲಿಸಿಕೊಳ್ಳಲು ಬಹಳ ಬಲಿದಾನಮಾಡಬೇಕಾಗುವುದು. ಅರಾಜಕತೆಯಲ್ಲಿ ಅಹಿಂಸೆ ಮಾತ್ರವಲ್ಲ, ಲೂಟಿಮಾಡುವವರನ್ನು ನಿಲ್ಲಿಸಲು ದಂಡೋಪಾಯಗಳನ್ನುಪಯೋಗಿಸುವ ಕೆಲವು ಪಕ್ಷಗಳೂ ಹುಟ್ಟುವವು. ಅರಾಜಕತೆಯಲ್ಲಿ ಎಲ್ಲದರ ಎಲ್ಲವರ ನಿಜವಾದ ಪರೀಕ್ಷೆಯಾಗುವುದು."

'ನನಗೀಗ ಅಸಹ್ಯವಾದ ಹುಣ್ಣುಗಳಾಗಲಿ ಛಿದ್ರಗಳಾಗಲಿ ಇರುವ ಚರ್ಮವಿರುವುದಿಲ್ಲ'

ದುಬಾರಿ ಗುಣವುಳ್ಳ ಕುಟಿಕೂರಾ (Cuticura) ಸಾಬೂನನ್ನು ನಾನೀಗ ಉಪಯೋಗಿಸುತ್ತಿರುವೆ. ಇದು ಮೈಯ ಚರ್ಮವನ್ನು ಸ್ವಚ್ಛವಾಗಿರಿಸುವುದಲ್ಲದೆ, ಅಂದವಾಗಿರಿಸುವುದು. ಪರಿಮಳ ತನ್ನ ಔಷಧಿಯುಕ್ತವಾದ ಈ ಸಾಬೂನಿನಲ್ಲಿ ನೋವನ್ನು ಸಂತವಿಸಿ ವಾಸಿಮಾಡಿ ವಿಷಹಾರಕ ಗುಣವಿರುವುದು. ಈ ಸಾಬೂನಿನ ಎಣ್ಣೆಯಿಂದ ಕೂಡಿದ ಸಾರವತ್ತಾದ ನೊರೆಯು ಮೈಯ ಚರ್ಮದ ರಂಧ್ರವನ್ನು ಹೊಕ್ಕು ಚರ್ಮದಲ್ಲಿರುವ ಸಣ್ಣ ಸಣ್ಣ ಕಲ್ಮಶವನ್ನು ಕೂಡಾ ಹೊರಗೆಡುವುದು. ನಿಮ್ಮ ಕೆಮಿಸ್ಟರಿಂದ ಇಂದೇ ಕುಟಿಕೂರಾ (Cuticura) ಸಾಬೂನನ್ನು ಕೊಂಡುಕೊಳ್ಳಿರಿ!

ಕುಟಿಕುರಾ (Cuticura) ಸಾಬೂನು-ಚರ್ಮವನ್ನು ವಾಸಿಯಾಗಿರಿಸಿ ದೊರಗಾದ ಚರ್ಮವನ್ನು ಮೃದುವಾಗಿಯೂ ಇರಿಸುವುದು. ಸೌಮ್ಯವಾದ ವಿಷಹಾರಿ ಗುಣವುಳ್ಳದ್ದು—ಚರ್ಮದ ಮೇಲುಂಟಾಗಬಹುದಾದ ಮಚ್ಚೆ ಮತ್ತು ಕಲ್ಮಶವನ್ನು ಇಲದಂತೆ ಮಾಡುವುದು.

ಕುಟಿಕೂರಾ ಸೋಪ್
Cuticura Soap

ಕುಟಿಕೂರಾ ಸಾಬೂನು ಈಗ ದೊಡ್ಡ ಸೈಜಿನ ಬಿಲ್ಲೆಯ ರೂಪದಲ್ಲಿಯೂ (ವಾಯಲಿಕ್ಕೆ) ಮತ್ತು ಸಣ್ಣ ಬಿಲ್ಲೆಯ (ಪರಿಚಯದ ಸೈಜು) ಆಕಾರದಲ್ಲಿಯೂ ದೊರಕುವುದು.

ಕಲಿಯುಗವು ಎಂದು ಅಂತ್ಯವಾಗುವುದು? ಕೃತಯುಗದಾರಂಭವೆಂದು?

ಕಲ್ಕ್ಯವತಾರವು ಈಗಾಗಲೇ ಆಗಿರುವುದೇ?

ಶಂಭಳ ಗ್ರಾಮದಲ್ಲಿ ಕಲ್ಕಿ ಭಗವಾನ್ ಜನ್ಮವೆತ್ತಿದನು!

ಈ ವಿಚಾರಗಳು ನಿಮಗೆ ತಿಳಿಯಬೇಕೆಂದಾದರೆ, ಓದಿನೋಡಿರಿ:

ವಿದ್ವಾನ್ ಕೆ. ಎಂ. ಕರಿಬಸವ ಶಾಸ್ತ್ರಿಗಳಿಂದ ವಿರಚಿತವಾದ

ಕಲಿಯುಗಾಂತ ಕೃತಯುಗಾರಂಭ ವಿಚಾರ.

(ಮೂಲ ಹಿಂದೀ ಚೇತಾವನಿ)

ಬೆಲೆ: ಆಣೆ ೮

ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟ ಮನೋರಂಜಕ ಬೋಧಪ್ರದ ಪುಸ್ತಕ

"ಕಲಿಯುಗದ ಲಾವಣಿ"

ಕ್ರಯ: 0–0–9.

ವಿಚಾರಪೂರಿತ, ಅನುಭವಪೂರ್ಣ, ಜ್ಯೋತಿಷ್ಯ ವಿದ್ಯಾ ಸಂಸ್ಕಾರಶುದ್ಧವಾದ

೧೯೪೩ನೇ ವರ್ಷದ ಪ್ರಪಂಚದ ಭವಿಷ್ಯತ್ತು

ಕ್ರಯ: 0–4–0.

ಸೋಲ್ ಏಜಂಟ್ಸ್: ಯಜಮಾನ್ ಎಂಡ್ ಬ್ರದರ್ಸ್, ಬುಕ್‌ಸೆಲ್ಲರ್ಸ್ ಬಳ್ಳಾರಿ.

ಮಂಗಳೂರಲ್ಲಿ ಸಿಗುವ ಸ್ಥಳ

ಬಾಲಸಾಹಿತ್ಯ ಮಂಡಲ . . . ಸ್ಕೂಲ್ ಬುಕ್ ಕಂಪೆನಿ . . . ಯು. ಆರ್. ಶೆಣೈ.

ಸಮರ ಭೂಮಿಯ ಸಂಚಾರ

ಈ ವಾರದ ವಿಶೇಷ ಸುದ್ದಿಯೆಂದರೆ ಇಜಿಪ್ಟಿನಲ್ಲಿ ಜರ್ಮನ್ ಸೇನೆ ನಿರಾತಂಕವಾಗಿ ಸಾಗುತ್ತಿರುವದು. ಮೆರ್ಸಾ ಮೆಟ್ರೂಹವನ್ನು ಪ್ರವೇಶಿಸಿ ಬ್ರಿಟಿಷರನ್ನೋಡಿಸಿ ಅಲ್ಲಿಂದ ಜರ್ಮನ್ ಸೇನೆಯು ಪೂರ್ವ ಮತ್ತು ಆಗ್ನೇಯ ದಿಕ್ಕಿನಲ್ಲಿ ನೈಲ್ ನದಿಯ ಮಾರ್ಗವಾಗಿ ಮುನ್ನಡೆಯುತ್ತಿದೆ. ಮೆರ್ಸಾ ಮೆಟ್ರೂಹ ಮತ್ತು ಫ್ರೂಕಾಗಳಲ್ಲಿ ಕಾಳಗ ನಡೆಯಿತು. ಆದರೆ ಕೆಲವೇ ದಿನಗಳಲ್ಲಿ ಜರ್ಮನರು ನೂರಾರು ಮೈಲು ನುಗ್ಗಿ ಬಂದಿರುವರು. ಇದಕ್ಕಿಂತ ಘೋರವಾದ ಯುದ್ಧ ನಡೆಯುತ್ತಿರುವದು ರಶ್ಯದಲ್ಲಿ; ಸೆಬಾಸ್ಟಪೋಲಿನ ಒಳ ವ್ಯೂಹವನ್ನು ಜರ್ಮನರು ಭೇದಿಸಿ ಒಳನುಗ್ಗಿದರೆಂದು ಸುದ್ದಿ ಬಂದಿರುವದು. ಖಾರ್ಕೊವಕ್ಕೆ ಉತ್ತರದಲ್ಲಿ ಸುಮಾರು ನೂರು ಮೈಲು ದೂರದಲ್ಲಿ ಕುರ್ಸ್ಕದಲ್ಲಿ ಕಾಳಗ ಸಾಗುತ್ತಿದೆ. ಹೀಗೆ ಇಜಿಪ್ತ ರಶ್ಯಗಳಲ್ಲಿ ಜರ್ಮನರು ಮುಂದುವರಿಸಿ ಹೋಗುತ್ತಿರುವಾಗ, ಅತ್ತ ಬ್ರಿಟಿನಿನಲ್ಲಿ ಬಹಳ ಉದ್ವೇಗವುಂಟಾಗಿದೆ. ಚರ್ಚಿಲರು ಅಮೇರಿಕಕ್ಕೆ ತೆರಳಿ, ಪ್ರೆಸಿಡೆಂಟ್ ರೂಸ್ವೆಲ್ಟರನ್ನು ಕಂಡು ಮಾತನಾಡಿ ಮರಳಿದ್ದಾರೆ. ಇವರೇನು ಮಾತುಕತೆ ನಡೆಸಿದರೋ, ಅದರಿಂದ ಏನೇನು ಮಹತ್ವಗಳು ಮುಂದೆ ಆಗಲಿರುವವೋ ಯಾರಿಗೂ ಆ ವಿಷಯ ಸ್ಪಷ್ಟವಾಗಿ ಇದು ವರೆಗೆ ತಿಳಿದಿಲ್ಲ. ಚರ್ಚಿಲರೇ ತಮ್ಮ ಯಾತ್ರೆಯ ಕುರಿತು ಒಂದು ಹೇಳಿಕೆ ಹೊರಡಿಸಲಿರುವರೆಂದು ಗೊತ್ತಾಗಿದೆ.

ಲಿಬಿಯ ಪರಾಜಯ

ದ್ವಿತೀಯ ಮಹಾಯುದ್ಧದ ಇತಿಹಾಸದಲ್ಲಿಯೇ ಬ್ರಿಟಿಷ್ ಸಾಮ್ರಾಜ್ಯದ ಕೀರ್ತಿಗೆ ಕಳಂಕ ತರುವಂತಹ ಅಪಜಯವೊಂದು ಈಗ ಸಂಭವಿಸಿತು. ೧೯೪೨ನೆಯ ಇಸವಿಯ ಪೂರ್ವಾರ್ಧದಲ್ಲಿ ಬ್ರಿಟನು ಪೂರ್ವ ಏಶ್ಯದ ಸಾಮ್ರಾಜ್ಯವನ್ನು ಕಳೆದುಕೊಂಡಿದ್ದು, ಈಗ ಲಿಬಿಯ ಪರಾಜಯದಿಂದ ಅದು ಮಧ್ಯ ಏಶಿಯದ ಸಾಮ್ರಾಜ್ಯವನ್ನು ಕಳಕೊಳ್ಳುವ ಪ್ರಸಂಗವು ಬಂದೊದಗಿದೆ. ಲಿಬಿಯದ ಮರುಭೂಮಿಯಲ್ಲಿ ಹಿಂದೆ ಕೇವಲದೂ ಆಚಿನ್ ಲೆಕ್ಕರೂ ಮುಂದೆ ನುಗ್ಗಿ ಹಿಂದೆ ಒಂದು ನಾಲ್ಕಾರು ಸಲ ಹೋರಾಡಿದರು. ಮತ್ತೆ ರೋಮೆಲರು ಜರ್ಮನ್ ಸೇನಾಪತಿತ್ವ ವಹಿಸಿ ಹೂಡಿದ ಹೋರಾಟವು ಪ್ರಚಂಡ ತರವಾಗಿತ್ತು. ಕಳೆದ ನವಂಬರಿನಲ್ಲಿ ಬೆಂಗಾಜಿ ವರೆಗೆ ಓಡಿ ಹೋಗಿದ್ದ ಅವರು ತಮಗೆ ಸಾಕಷ್ಟು ಯುದ್ಧ ಸಾಮಗ್ರಿಗಳು ದೊರಕಲು ಒಮ್ಮೆಲೇ ಆಚಿನ್ ಲೆಕ್ಕರನ್ನು ಗಾಝೂಲದ ವರೆಗೆ ಹಿಂದೋಡಿಸಿದರು. ಮತ್ತೆ ತಮ್ಮಲ್ಲಿರುವ ಯುದ್ಧ ಸಾಮಗ್ರಿ ಮುಗಿಯಲು ಕಳೆದ ಮೂರು ತಿಂಗಳಿಂದ ಮೌನವಾಗಿದ್ದು ತಿರುಗಿ ಯುದ್ಧವನ್ನು ಒಲಗೊಳಿಸಿದರು. ಆಗ ಜರ್ಮನಿ ಇಟಲಿಯನರಿಗೆ ಅಪರಿಮಿತ ಸೈನ್ಯ ಸಾಧನಗಳೂ ಬಂದೊದಗಿದವು. ಪೂರ್ವ ಏಶ್ಯದಲ್ಲಿ ಯುದ್ಧ ಪ್ರಾರಂಭವಾದದ್ದರಿಂದ ಬ್ರಿಟನು, ಅಮೇರಿಕಗಳಿಗೆ, ಆ ಕಡೆ ಗಮನಕೊಡಬೇಕಾಗಿ ಬಂದು ಲಿಬಿಯಕ್ಕೆ ಸಾಕಷ್ಟು ಸೈನ್ಯ ಸಾಮಗ್ರಿ ಕಳುಹಿಸಲಾಗಲಿಲ್ಲ. ಇಂತಹ ಅನುಕೂಲ ಸಂದರ್ಭವನ್ನು ನೋಡಿಕೊಂಡು ರೊಮೆಲನು ಕಳೆದ ತಿಂಗಳಲ್ಲಿ ಯುದ್ಧವನ್ನು ತೀವ್ರಗೊಳಿಸಿದನು. ಲಿಬಿಯದ ರಣಭೂಮಿಯಲ್ಲಿ ಮುಂದೊತ್ತಿ ಮುಂದೊತ್ತಿ ಬಂದು, ಮೊನ್ನೆ ಮೊನ್ನೆ ತೋಬ್ರುಕ್ ದುರ್ಗವನ್ನೂ ಸ್ವಾಧೀನಪಡಿಸಿಕೊಂಡನು. ಕಳೆದ ಏಳೆಂಟು ತಿಂಗಳಿಂದ ಶತ್ರುವನ್ನೆದುರಿಸಿ ನಿಂತಿದ್ದ ತೋಬ್ರುಕ್ ಕೋಟೆಯ ಪತನವು, ಕೇವಲ ಕೆಲವೇ ಸಮಯದ ಕಾಳಗದಲ್ಲಿ ಆದದ್ದೆಂದರೆ ಬ್ರಿಟಿಷರಿಗೆ ಮಾತ್ರವಲ್ಲ ಇಡೀ ಜಗತ್ತಿಗೇ ಆಶ್ಚರ್ಯವಾಗಿದೆ. ಇದರಿಂದ ಬ್ರಿಟಿನಿನ ಜನತೆಯಲ್ಲಿ ಅಸಮಾಧಾನವುಂಟಾಗಿದೆ. ಪಾರ್ಲಿಮೆಂಟ್ ಸದಸ್ಯರು ಕೆಲವರು ಅತೃಪ್ತಿಗೊಂಡಿದ್ದಾರೆ. ಬ್ರಿಟಿಷ್ ಸರಕಾರದ ಯುದ್ಧ ನೀತಿಯ ಬಗ್ಗೆ, ಚರ್ಚಿಲರ ಆಡಳಿತೆಯ ಬಗ್ಗೆ ಹಲವು ಕಡೆಗಳಲ್ಲಿ ಅಸಂತೋಷ ಕಂಡುಬರುತ್ತಿದೆ. ಹೀಗೆ ಬ್ರಿಟಿಷರು ಅಸಮಾಧಾನ ಪಡುತ್ತಿದ್ದಂತೆ ರೊಮೆಲನು ಗಡಿನಾಡನ್ನು ದಾಟಿ ಈಜಿಪ್ಟಿನ ಹೃದಯವನ್ನು ಹೊಕ್ಕು ಮುನ್ನಡೆದಿದ್ದಾನೆ!

ಈಜಿಪ್ತಿಗೆ ವಿಪತ್ತು

ತೋಬ್ರುಕನ್ನು ನೆಲಸಮ ಮಾಡಿ, ಲಿಬಿಯದ ಯುದ್ಧವನ್ನು ಗೆದ್ದ ಜರ್ಮನ್ ಸೈನ್ಯವು ಗಡಿನಾಡನ್ನು ದಾಟಿ, ಇಷ್ಟರಲ್ಲಿಯೇ ಈಜಿಪ್ತಿನಲ್ಲಿ ನೂರಾರು ಮೈಲು ಹಾದಿ ಮುಂದುವರಿದು ಅದರ ಹೃದಯವನ್ನು ಹೊಕ್ಕು ಕದಡಿಸುತ್ತಿರುವುದೆಂಬ ವಿಷಾದಮಯ ವಾರ್ತೆಯು ಈಗ ಬಂದಿದೆ. ತಟಸ್ಥವಾಗಿದ್ದ ಈಜಿಪ್ತು ಇಂದು ಅತ್ಯಂತ ವಿಪತ್ತನ್ನು ಎದುರಿಸಬೇಕಾಗಿ ಬಂತು; ಇಂತಹ ಗಂಡಾಂತರವು ಇಷ್ಟು ಬೇಗನೇ ತಮಗೆ ಒದಗಬಹುದೆಂದು ಇಜಿಪ್ಟಿಯನರಾದರೂ ಭಾವಿಸಿರಲಿಕ್ಕಿಲ್ಲ. ಆದರೆ ಯುದ್ಧಕಾಲದ ಅದ್ಭುತಗಳಿಂದ ಯಾರು ತಾನೇ ಪಾರಾಗುವರು? ಜರ್ಮನ್ ಇಟಲಿಯನ್ ವಿಮಾನಗಳು ಇಜಿಪ್ತ ಬಂದರಗಳ ಮೇಲೆ—ಅಲೆಕ್ಸಾಂಡ್ರಿಯಾ, ಪೋರ್ಟ್ ಸೈದ್‌ಗಳ ಮೇಲೆ ಆಗಾಗ ಬಾಂಬು ಸುರಿಸಿ ಉಪಟಳ ಕೊಡುತ್ತಿದ್ದರೂ ಕೆರಳದ ಆ ರಾಷ್ಟ್ರವು ಯುದ್ಧ ವಿಮುಖವಾಗಿ ಇದುವರೆಗೆ ತಟಸ್ಥವಾಗಿಯೇ ಇತ್ತು. ಇದರಿಂದ ಅಂತರಾಷ್ಟ್ರೀಯ ರಾಜಕಾರಣಿಗಳಿಗೂ ಬಹಳ ಆಶ್ಚರ್ಯವಾಗಿತ್ತು; ತನ್ನ ಮೇಲೆ ಪೆಟ್ಟು ಬಿದ್ದರೂ ಹಿಂದೆ ಹೊಡೆಯದಂತಹ ತಾಟಸ್ಥ್ಯವನ್ನು ಈಜಿಪ್ತ ಯಾಕೆ ವಹಿಸುತ್ತಿದೆಯೆಂದು? ಹಿಂದಿನ ಮುಖ್ಯ ಮಂತ್ರಿ ಸಿರ್ರಾಪಾಶರು ಇಜಿಪ್ತನ್ನು ಯುದ್ಧರಂಗಕ್ಕೆ ಎಳೆಯಬೇಕೆಂದು ಪಟ್ಟ ಪರಿಶ್ರಮವೂ ವ್ಯರ್ಥವೇ ಆಯಿತು. ಅಂತೂ ಇದುವರೆಗೆ ಇಜಿಪ್ತ ದೇಶವು ಯುದ್ಧ ಸಾರಲು ಮನಮಾಡಲೇ ಇಲ್ಲ. ಆದರೆ ಇಂದು ಜರ್ಮನಿಯೊಡನೆ ಪ್ರತ್ಯಕ್ಷ ಯುದ್ಧಕ್ಕಿಳಿದಿರುವ ಬ್ರಿಟನಿನೊಂದಿಗೆ ೧೯೩೬ರಲ್ಲಿ ಇಜಿಪ್ತ ಮಾಡಿಕೊಂಡಿರುವ ಒಪ್ಪಂದದ ಪ್ರಕಾರ ಅದು ನಡೆಯಬೇಕಾಗಿದೆ. ಇಜಿಪ್ತಿನ ರಕ್ಷಣೆಯ ಹೊಣೆ ಹೆಚ್ಚು ಕಡಿಮೆ ಬ್ರಿಟನಿನದಾಗಿದೆ. ಅದಕ್ಕಾಗಿ ಬ್ರಿಟಿಷರು ಸೈನ್ಯ ಸಾಧನಗಳನ್ನು ಅಲ್ಲಿ ಇಟ್ಟಿದ್ದಾರೆ. ಇದರಿಂದ ಇಜಿಪ್ತ ತಾಟಸ್ಥ್ಯ ವಹಿಸಿದರೂ, ತಾಟಸ್ಥ್ಯವನ್ನು ಕಾರ್ಯತಃ ಭಂಗಗೊಳಿಸುವಂತಹ ಚಟುವಟಿಕೆಗಳು ಅಲ್ಲಿ ನಡೆಯತೊಡಗಿದವು. ಈ ಕಾರಣದಿಂದ ಯುದ್ಧ ಬೇಡವೆಂದರೂ ಇಜಿಪ್ತಿಗೆ ಯುದ್ಧ ಬಂದೇ ಬಂತು. ಅದಲ್ಲ, ಶತ್ರು ಮೈಮೇಲೆ ಬಂದು ಬಿದ್ದಿದ್ದರೂ ಇಷ್ಟರ ತನಕ ಇಜಿಪ್ಟಿಯನರು ಯಾವುದೇ ಪ್ರತಿಭಟನೆ ತೋರಿಸಿದಂತೆ ಕಂಡುಬರುವುದಿಲ್ಲ. ಶತ್ರುವಂತೂ ಮೂರು ನಾಲ್ಕು ದಿನಗಳಲ್ಲಿಯೇ ನೂರಾರು ಮೈಲುಗಳಂತರವನ್ನು ಹಾರಿಹೋಗಿರುವನು. ಬ್ರಿಟಿಷರಾದರೂ ಈ ಸಂಭವವನ್ನು ಹೇಗೆ ಇದಿರಿಸುತ್ತಾರೋ ಮುಂದೆ ನೋಡಬೇಕಾಗಿದೆ. ಈಜಿಪ್ತಿನ ಆಕ್ರಮಣದಿಂದ ಪೂರ್ವ ರಾಷ್ಟ್ರಗಳಿಗೆ ಈಗ ಗಂಡಾಂತರವು ಸಮೀಪ ಸಮೀಪವಾಗುತ್ತಲಿದೆ.

ಚರ್ಚಿಲ್ಲರ ಅವಿಶ್ವಾಸ?

ಲಿಬಿಯದ ಅಪಜಯದಿಂದ ವಿಶೇಷವಾಗಿ ತೋಬ್ರುಕ್ ಪತನದ ನಂತರ ಇಂಗ್ಲೆಂಡಿನ ಪ್ರಜಾಭಿಪ್ರಾಯವು ತೀರಾ ಅತೃಪ್ತಿಗೊಂಡಿದೆ. ಚರ್ಚಿಲ್ ಸರಕಾರದ ಮೇಲೆ ಅವಿಶ್ವಾಸ ಸೂಚಿಸುವುದು ಕಂಡುಬರುತ್ತದೆ. ಮಾಲ್ಟಕ್ಕೂ, ಅಲೆಕ್ಸಾಂಡ್ರಿಯಕ್ಕೂ ನಡುವೆ ನಿಂತಿದ್ದ ಸಾಧನ ಸಾಮಗ್ರಿ ಕೂಡಿಸುವಿಕೆಯ ಕೇಂದ್ರವಾಗಿದ್ದ ತೋಬ್ರುಕ್ ಶತ್ರು ವಶವಾದ ಮೇಲೆ ಮೆಡಿಟರೇನಿಯದಲ್ಲಿ, ಶತ್ರು ಸೈನ್ಯ ಚಟುವಟಿಕೆಗೆ ಮಾಲ್ಟಾ ವಿನಾ ಬೇರಾವ ಆತಂಕವೇ ಇಲ್ಲವಾಗಿದೆ. ಮಾಲ್ಟಾದ ಮೇಲೂ ಪ್ರಚಂಡ ಬಾಂಬಿನ ಅಗ್ನಿ ವರ್ಷ ಸುರಿಯುತ್ತಿದೆ. ಅಮೇರಿಕಕ್ಕೆ ಹೋದ ಚರ್ಚಿಲರು ಈಗ ತಿರುಗಿ ಬಂದಿದ್ದಾರೆ. ಯುರೋಪಿನಲ್ಲಿ ದ್ವಿತೀಯ ರಣಕ್ಷೇತ್ರವನ್ನು ತೆರೆಯುವುದು, ಮಿತ್ರಶಕ್ತಿಯನ್ನು ಸಂಘಟಿಸುವುದು, ಒಟ್ಟಿನಲ್ಲಿ ಶತ್ರುವನ್ನು ಸದೆಬಡಿವ ಸಕಲ ಸಾಮಗ್ರಿಗಳನ್ನೂ ಆಳವಡಿಸಿ ಮುನ್ನುಗ್ಗುವುದು ಅವರ ಮಾತುಕತೆಯ ಕಾರಣವೆಂದು ಹೇಳಲಾಗಿತ್ತು. ಆದರು ಮರಳಿ ಬಂದವರೇ ಈಗ ಬ್ರಿಟನಿನ ಅತೃಪ್ತ ಜನತೆಯ ಉದ್ವೇಗವನ್ನು ಎದುರಿಸಬೇಕಾಗಿ ಬಂದಿದೆ. ಇಜಿಪ್ತಿನ ಹೊಸ ಗಂಡಾಂತರದಿಂದ ಅಲ್ಲಿಗೆ ಸೈನ್ಯ ಸಾಮಗ್ರಿ ಕಳುಹಿಸಬೇಕಾಗಿದೆ. ಈಗ ಲಿಬಿಯ ವಂತೂ—ತಾವು ಅಮೇರಿಕದಲ್ಲಿ ಕುಳಿತು ಸುಖ ಸಂಕಥಾ ಕಾಲಕ್ಷೇಪ ಮಾಡುತ್ತಿದ್ದಂತೆಯೇ—ತಮ್ಮ ಕೈಬಿಟ್ಟು ಹೋಗಿದೆ. ಇದರಿಂದಲೇ ಮಹಾ ಪ್ರಮಾದವೊದಗಿತೆಂಬ ಬೊಬ್ಬೆ ಹುಟ್ಟಿರುವಾಗ, ಈ ಪ್ರಮಾದ ನಿವೃತ್ತಿಗಾಗಿ ಎಂತಹ ದೋರ್ದಂಡ ನಾಯಕರನ್ನೂ ಒಲಿಗೊಡಲೂ ಬ್ರಿಟಿಷ್ ಜನತೆ ಸಿದ್ಧವಿರುವಾಗ, ಈ ಅಸಾಮಾನ್ಯ ಪರಿಸ್ಥಿತಿಯನ್ನು ಚರ್ಚಿಲರು ಹೇಗೆ ಎದುರಿಸುವರೋ ನೋಡಬೇಕು. ರೂಸ್‌ವೆಲ್ಟರೊಡನೆ ತಾವು ಮಾಡಿದ ಮಾತುಕತೆಗಳ ಕುರಿತು ಹೊರಡಿಸಬೇಕೆಂದಿದ್ದ ಅಧಿಕಾರಯುತ ಪ್ರಕಟಣೆಯಲ್ಲಿ ಯಾವ ಹೊಸ ವಿಚಾರ ಹೇಳುವರೋ ಕೇಳಬೇಕು. ತಮ್ಮ ಮೇಲೆ "ಅವಿಶ್ವಾಸ ಠರಾವಿ"ನ ಅಸ್ತ್ರ ಹಿಡಿದು ನಿಂತಿರುವ ಜನತಾಶಕ್ತಿಯನ್ನು ಯಾವ ರೀತಿಗೆದ್ದು ಮೇಲೆ ಬರುವರೆಂಬುದನ್ನೇ ನಿರೀಕ್ಷಿಸಬೇಕು.

ಸೆಬಸ್ಟಪೋಲ್ ನಾಶವೆ?

ರಶ್ಯ ರಣಕ್ಷೇತ್ರದಲ್ಲಿಯೂ, ಜರ್ಮನರ ಕೈ ಮೇಲಾಗುತ್ತಿದೆ. ಸೆಬಸ್ಟಪೋಲ್ ನಾಶವಾಗಿದೆಯೆಂದು 'ರೆಡ್‌ಸ್ಟಾರ್' ಪತ್ರಿಕೆ ಪ್ರಕಟಿಸಿದೆ. ಅಂತೂ ಅದು ಕೊನೆಯ ಗಳಿಗೆಗೆ ಬಂದು ಮುಟ್ಟಿದೆ. ಶತ್ರುಗಳು ವೀರಾವೇಶದಿಂದ ಮುನ್ನುಗ್ಗಿ ನಗರವನ್ನು ನಾಶಮಾಡುತ್ತಿದ್ದಾರೆ. ಪರಾಕ್ರಮದಿಂದ ಶತ್ರುಗಳನ್ನೆದುರಿಸಿ ರಶ್ಯನ್ ವೀರರು ಮಡಿಯುತ್ತಿದ್ದಾರೆ. ರಶ್ಯನ್ ಹಡಗಗಳು ಬಂದರದಿಂದಲೇ ತಮ್ಮ ಫಿರಂಗಿಗಳಿಂದ ಮುಖ್ಯ ಮಹಿಮೆ ಕಟ್ಟಡಗಳನ್ನು ನಾಶಮಾಡಿ ಶತ್ರುಗಳಿಗೆ ಪ್ರಯೋಜನ ಸಿಗದಂತೆ ಮಾಡಿದವು. ಹತ್ತು ಡಿವಿಜನುಗಳಷ್ಟು ಸೈನ್ಯದಿಂದ ಜರ್ಮನರು ಟೇಂಕುಗಳಿಂದ, ಉಗ್ರ ವಿಮಾನಗಳಿಂದ, ಭೀಷಣ ಫಿರಂಗಿಗಳಿಂದ ಕಾದಾಡುತ್ತಿದ್ದಾರೆ. ಖಾರ್ಕೋವಿನಲ್ಲಿಯೂ ಈಗ ಕಾಳಗ ಸಾಗುತ್ತಿದೆ. ಅಲ್ಲಿಯೂ ಶತ್ರುವು ಮುನ್ನುಗ್ಗುತ್ತಲೇ ಇದ್ದಾನೆ. ಕ್ರಿಮಿಯದ ಒಂದು ಕರಾವಳಿಯಲ್ಲಿ ರಶ್ಯನರು ಬಂದಿಳಿದರೆಂದು ಸುದ್ದಿ. ರಶ್ಯನ್ ನಾವಿಕರು ಮಾಲ್ಟಾ ಮೆರಿಯವಲ್ ಮತ್ತು ಕ್ರಿಮಿಯದ ದಕ್ಷಿಣ ತೀರ ಪ್ರದೇಶಗಳಲ್ಲಿಯೂ ಇಳಿದು ಜರ್ಮನರ ಗಮನವನ್ನು ತಿರುಗಿಸುವ ಸಾಹಸ ಮಾಡಿದರು. ಸೆಬಸ್ಟಪೋಲಿನ ಪತನದ ಬಳಿಕ ಜರ್ಮನರ ಗಮನ ಕಾಕಸಸ್ ಕಡೆಗೆಂಬುದು ನಿಶ್ಚಯವಾಗಿದೆ. ಅದಕ್ಕೆ ಬೇಕಾದ ಸರ್ವ ಸಿದ್ಧತೆಗಳೂ ಆಗುತ್ತಿವೆ. ಖಾರ್ಕೋವಿನಲ್ಲಿರುವ ರಶ್ಯನ್ ವ್ಯೂಹವನ್ನು ಭೇದಿಸಿ ಜರ್ಮನರು ಮುಂದೊತ್ತುತ್ತಿದ್ದಾರೆ. ಇದರಿಂದ ಜರ್ಮನರು ಅಝೊವ್ ಸಮುದ್ರ ತೀರದಲ್ಲಿರುವ ಟಾಗನ್‌ರಾಗಿನಿಂದ ರ್‍ಯಾಸ್ಟೋವಿಗೆ ಸಾಗುವರೆಂದು ಊಹಿಸಬೇಕಾಗಿದೆ. ಇದಕ್ಕೆ ಖಾರ್ಕೋವ್ ಕ್ರಿಮಿಯಗಳಿಂದಲೂ ಬೆಂಬಲ ದೊರೆತರೆ ಕಾಕಸಸ್ ಮಹಾಯುದ್ಧವು ಪ್ರಾರಂಭವಾಗಬಹುದು.

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್‌ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ ..	ಬೆಲೆ	0—3—0
VI ತರಗತಿ ಅಥವಾ I ಫಾರ್ಮಿಗೆ	"	0—8—0
VII ತರಗತಿ ಅಥವಾ II ಫಾರ್ಮಿಗೆ ...	"	0—3—6
VIII ತರಗತಿ ಅಥವಾ III ಫಾರ್ಮಿಗೆ	"	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು :—

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಹಿಡಿದುಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ.

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled.— "*HINDU*" *MADRAS.*

ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ.

'ಶ್ರೀ. ರೈಗಳು ಆಯಾತರಗತಿಯ ಮಕ್ಕಳಿಗೆಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ. ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ ಮಂಗಳೂರು.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 19—6—1942

ಪಂಚಾಯತ ಸುಧಾರಣೆಗಳು

ಮದ್ರಾಸು ಪ್ರಾಂತದಲ್ಲಿ ಪಂಚಾಯತುಗಳ ಘಟನೆಯಲ್ಲಿ ಸುಧಾರಣೆ ಮಾಡುವ ವಿಷಯ ಇತ್ತೀಚೆಗೆ ಕೆಲವು ಕಾಲದಿಂದ ನಾವು ಸುದ್ದಿ ಕೇಳುತ್ತಾ ಇದ್ದೇವೆ. ಕಾಂಗ್ರೆಸ್ ಮಂತ್ರಿಮಂಡಲವಿದ್ದಕಾಲದಲ್ಲಿ ಶ್ರೀ. ಪ್ರಕಾಶಂರವರು ಒಂದು ಸುಧಾರಣೆಯ ಮಸೂದೆ ತಯಾರು ಮಾಡುತ್ತಿದ್ದರೆಂದೂ ನಾವು ತಿಳಿದಿರುವೆವು; ಅಂತೂ ಈಗ ಪಂಚಾಯತ್ ಸುಧಾರಣೆಯ ಬಗ್ಗೆ ಸರಕಾರವು ಆಸಕ್ತಿ ವಹಿಸಿ, ಕಾರ್ಯಕಲಾಪಗಳನ್ನು ಮುಂದುವರಿಸುವರೆ 'ಎಡ್ವೈಸರಿ ಕಮಿಟಿ'ಯೊಂದನ್ನು ಸ್ಥಾಪಿಸಿದ್ದು ಅದು, ಇದುವರೆದೆ ಏಳು ಸಲ ಕೂಡಿ ತಮ್ಮ ಕೆಲಸವನ್ನು ಸಾಮಾನ್ಯತಃ ಪೂರ್ಣಗೊಳಿಸಿರುವುದೆಂದು ತಿಳಿದು ಬರುತ್ತದೆ ಈ ಕಮಿಟಿಯು ಬರುವ ಅಗಸ್ಟ್ ತಿಂಗಳಲ್ಲಿ ಕೊನೆಯ ಸಭೆ ಸೇರಿಸಿ ಸೂಚಿಸಲಾದ ಬದಲಾವಣೆಗಳನ್ನು ವಿಚಾರಿಸಿ ಸಹಿ ಮಾಡುವುದೆಂದು ವರದಿಯಿರುವುದು

ಕಮಿಟಿಯು, ಇಡೀ ಪ್ರಾಂತದಲ್ಲಿ ಸಾವಿರ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ, ಪ್ರಾಯಸ್ಥರ ಮತದಾನ ಹಕ್ಕಿನಿಂದ ಪಂಚಾಯತ ಘಟನೆಯನ್ನು ಕಡ್ಡಾಯವಾಗಿ ಜಾರಿಗೆ ತರುವ ವಿಷಯ ಸಮ್ಮತಿಪಟ್ಟಿರುವುದೆಂದು ತಿಳಿಯುತ್ತೇವೆ ಪಂಚಾಯತ ಅಧಿಕಾರಿ ಮಂಡಳ, ನೌಕರರ ನೇಮಕ, ಕೆಲಸಗಳನ್ನು ನಡೆಸಲು ಯಾವುದಾದರೊಂದು ಪಂಚಾಯತಿಗೆ ಪ್ರತ್ಯೇಕ ನಡೆಸಿಕೊಂಡು ಬರಲು ಅಸಮರ್ಥವಾದರೆ ಕೆಲವು ಪಂಚಾಯಿತಿಗಳೊಟ್ಟುಗೂಡಿ ಕೆಲಸ ನಿರ್ವಹಣ ಮಾಡಬೇಕೆಂದೂ, ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಐದನೇ ತರಗತಿ ವರೆಗಿನ ಎಲಿಮೆಂಟರಿ ಶಾಲೆಗಳ ಆಡಳಿತವು ಪಂಚಾಯತುಗಳಿಗೆ ಕೊಡಲ್ಪಡಬೇಕೆಂದೂ ಕೆಲವು ಸೂಚನೆಗಳಿವೆ. ಪಂಚಾಯತುಗಳಿಗೆ ಈ ಬಗ್ಗೆ ಆರ್ಥಿಕ ವ್ಯವಸ್ಥೆಗೆ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ದೊರೆವ ತರದ ಗ್ರೆಂಟೂ, ಇತರಮನೆ ತೆರಿಗೆ, ವಾಹನ ತೆರಿಗೆ, ಭೂತೆರಿಗೆಗಳು ಹೆಚ್ಚಿಸಲ್ಪಡಬೇಕೆಂದೂ ಪ್ರತೀ ಪಂಚಾಯತಿಗೆ ಒಬ್ಬ ಎಕ್ಸಿಕ್ಯುಟಿವ್ ಆಫೀಸರನನ್ನು ನೇಮಿಸುವ, ಗ್ರಾಮಗಳನ್ನು ವಾರ್ಡುಗಳಾಗಿ ವಿಂಗಡಿಸುವ, ಗುಪ್ತಮತದಾನ ಪದ್ಧತಿಯನ್ನನುಸರಿಸುವ, ಡಿಪ್ರೆಸ್ಡ್ ಕ್ಲಾಸ್, ಮುಸಲ್ಮಾನ್, ಇಂಡಿಯನ್ ಕ್ರಿಶ್ಚಿಯನ್ ಜಾತಿಗಳಿಗೆ ಸ್ಥಳ ರಿಸರ್ವ್ ಮಾಡಿಡುವಂತಹ ಸೂಚನೆಗಳು ಇದರಲ್ಲಿ ಅಡಕವಾಗಿವೆಯೆಂದೂ ಗೊತ್ತಾಗಿರುವುದು

ಹೀಗೆ ಪ್ರಾಂತಿಕ ಸರಕಾರವು ಪಂಚಾಯತು ಸುಧಾರಣೆಯ ವಿಷಯ ಗಮನಕೊಡುವುದು ಬಹಳ ಪ್ರಶಂಸನೀಯ ವಿಚಾರ. ತಮ್ಮ ತಮ್ಮ ಗ್ರಾಮಗಳ ಆಡಳಿತವನ್ನು ಗ್ರಾಮಸ್ಥರೇ ನಡೆಸಿಕೊಂಡು ಬರುವ ಸಂದರ್ಭವೊದಗಿಸುವುದು ರಾಜ್ಯದ ವ್ಯವಸ್ಥೆಯಲ್ಲಿ, ನಮ್ಮ ಹಿಂದೂಸ್ಥಾನದಲ್ಲಿ ವೈದಿಕ ಕಾಲದಿಂದಲೇ ನಡೆದು ಬಂದ ಒಳ್ಳೆಯ ಸಂಪ್ರದಾಯವಾಗಿದೆ. ಇದರಿಂದಾಗಿ ರಾಜ್ಯಘಟನೆಯಲ್ಲಿ ಗ್ರಾಮಸ್ಥರು ಹೆಚ್ಚಿನಆಸಕ್ತಿ ವಹಿಸಿಕೊಂಡು ಕೆಲಸ ಮಾಡಿರಾಜ್ಯದ ಆಡಳಿತದಲ್ಲಿ ಯೋಗ್ಯತರಬೇತಿ ಹೊಂದುವರೆಂದೂ, ಅದರಲ್ಲಿ ಎದುರಿಸಬೇಕಾದ ಲೋಪದೋಷಗಳನ್ನು ನಿವಾರಿಸಿಕೊಂಡು ಮುಂದಿನ 'ಸ್ವತಂತ್ರ ಹಿಂದುಸ್ಥಾನ'ದ ಭದ್ರ ಅಸ್ತಿವಾರವನ್ನು ಕಲ್ಪಿಸಿಕೊಳ್ಳುವರೆಂದೂ ನಾವು ಹಾರೈಸುತ್ತೇವೆ

ಜಿನ್ನರ ಕೂಗು

ಮಹಾತ್ಮಾಜಿಯವರು, ಹೊಸ ಚಳವಳಿವೊಂದನ್ನು ಪ್ರಾರಂಭಿಸುವ ವಿಚಾರದಲ್ಲಿದ್ದಾರೆಂಬ ಸುದ್ದಿ ಕೇಳಿಯೇ ಜಿನ್ನರು ತಲೆಕೆಟ್ಟವರಂತೆ ಪ್ರಲಾಪಿಸುತ್ತಿದ್ದಾರೆ ಕಾಂಗ್ರೆಸಿನ ಆಶ್ರಯದಲ್ಲಿ ಆಗ ಬಹುದಾದ ಯಾವುದೇ ಹೊಸ ಆಂದೋಲನವನ್ನಾದರೂ ಮುಸ್ಲಿಂ ಲೀಗು ವಿರೋಧಿಸುವುದೆಂದು ಅವರು ಕೂಗಿ ಹೇಳುತ್ತಿದ್ದಾರೆ

ತಾನು ಪ್ರಾರಂಭಿಸಲಿರುವ ಸತ್ಯಾಗ್ರಹವು, ಯಾವ ರೂಪವನ್ನು, ಯಾವ ಮಾರ್ಪಾಡುಗಳನ್ನು ಹೊಂದುವುದು ಎಂಬೀ ವಿಷಯವಾಗಿ ಗಾಂಧಿಜಿಯೇ ಇದು ವರೆಗೆ ನಿಶ್ಚಯಿಸಿಲ್ಲವಂತೆ; ಆದರೆ ಮಹಾತ್ಮಾಜಿ ಏನೇಮಾಡಲಿ, ಕಾಂಗ್ರೆಸು ಯಾವುದೇ ಹಜ್ಜೆತೆಗೆದುಕೊಳ್ಳಲಿ ಅದನ್ನು ವಿರೋಧಿಸುವುದು ಜಿನ್ನರ-ಎಂದರೆ ಮುಸ್ಲಿಂ ಲೀಗಿನ—ಹರಸಾಧನೆಯಾಗಿದೆ!

ಕಾಂಗ್ರೆಸು ಮುಂದೆ ಯಾವ ಚಳವಳವನ್ನು ಆರಂಭಿಸಿದರೂ ಯಾವ ಚಟುವಟಿಕೆಯನ್ನು ಕೈಕೊಂಡರೂ, ಅದರ ಉದ್ದೇಶವು ಭಾರತದ ಸ್ವಾತಂತ್ರ್ಯ ಸಂಪಾದನೆಯಾಗಿವೆಯೆಂಬ ವಿಷಯ ಯಾರಿಗೂ ಭಿನ್ನಾಭಿಪ್ರಾಯವಿಲ್ಲ! ಆದರೂ ಜಿನ್ನರು ಅದನ್ನು ವಿರೋಧಿಸುವೆನೆಂದು ಮುಂಚಿತವಾಗಿಯೇ ತಿಳಿಸಿ ಬಿಟ್ಟಿದ್ದಾರೆ!

'ಆಂದೋಲನವನ್ನು ಆರಂಭಿಸುವೆನೆಂಬೀತೆರದ ಹೆದರಿಕೆಯು, ಇಂದು ಗಲಭೆಯಲ್ಲಿರುವ ಬ್ರಿಟನನ್ನು ಬೆದರಿಸಿ ಗಾಂಧಿಜಿಯವರ ಕೇಳಿಕೆಗಳಿಗೆ ಬ್ರಿಟನು ಒಪ್ಪಿಕೊಳ್ಳುವಂತೆ ಮಾಡುವ ಹಂಚಿಕೆಯಾಗಿದೆ' ಎಂದು ಜಿನ್ನಾಸಾಹೇಬರು ಸಂಶಯಾತ್ಮರಾಗಿರುವರು. ಕಪ್ಪು ಕನ್ನಡಕದಿಂದ ನೋಡುವವನಿಗೆ ಲೋಕವೆಲ್ಲವೂ ಕರಿದಾಗಿ ಕಾಣುವುದು ಸಹಜವಷ್ಟೆ? ಪಾಕಿಸ್ತಾನ್ಯ ಮುಸ್ಲಿಂ ಸಾಮ್ರಾಜ್ಯಗಳ ದುರುದ್ದೇಶ ಪ್ರೇರಿತರಾದ ಜಿನ್ನಾ ಸಾಹೇಬರಿಗೆ ಗಾಂಧಿಜಿಯ ಪ್ರತಿಯೊಂದು ಕೆಲಸದಲ್ಲಿ ಈ ತರದ ಸಂಶಯ ಹುಟ್ಟುವುದು ಅವರ ಸ್ವಭಾವಕ್ಕೆ ಅನುಗುಣವಾಗಿದೆ ಅವರ ರಾಷ್ಟ್ರ ಘಾತುಕ ಧೋರಣೆಗೆ ಯೋಗ್ಯವಾಗಿದೆ.

ಟೆಕ್ಸ್ಟ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ

ಎಂ ಪಿ ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡ್ಪಿ

Iನೇ ಫೋರ್ಮಿಗ 0—12—0

IIನೇ ಫೋರ್ಮಿಗೆ 0—12—0

ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಬಿ. ಭವಾನಿರಾವ್ ಬಿ. ಎ ಎಲ್ ಟಿ

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ ಭವಾನಿರಾವ್, ಬಿ ಎ, ಎಲ್. ಟಿ

ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು

ನಾಲ್ಕನೇ ದರ್ಜೆಗೆ 0—7—0

ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ ವಾಸುದೇವರಾವ್ ಎಂ ಎ, ಎಲ್ ಟಿ. (Dip Geog)

ನಾಲ್ಕನೇ ದರ್ಜೆಗೆ 0—6—0

ಐದನೇ ದರ್ಜೆಗೆ 0—7—0

(ಡಿಸ್ಟ್ರಿಕ್ಟ್‌ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ

ಎಸ್ ರಾಮಕೃಷ್ಣಾಚಾರ್, ಬಿ. ಎ ಎಲ್. ಟಿ

ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0—6—0

ಏಳನೇ ದರ್ಜೆಗೆ 0—6—0

ಎಂಟನೇ ದರ್ಜೆಗೆ 0—6—0

(ಡಿಸ್ಟ್ರಿಕ್ಟ್‌ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ವ್ಯಾಕರಣ ಮತ್ತು ಪ್ರಬಂಧ

ಕೆ ಕೆ ರೈ. ವಿದ್ವಾನ್

4 ಮತ್ತು 5ನೇ ದರ್ಜೆಗೆ 0—2—0

ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0

ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6

ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ ಕೆ ರೈ ವಿದ್ವಾನ್

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0-2-6

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ನಾಲ್ಕನೇ ದರ್ಜೆಗೆ 0—2—0

ಐದನೇ ದರ್ಜೆಗೆ 0—2—6

ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ ರೈ ವಿದ್ವಾನ್

ಆರನೇ ದರ್ಜೆಗೆ 0—3—0

ಏಳನೇ ದರ್ಜೆಗೆ 0—3—0

ಎಂಟನೇ ದರ್ಜೆಗೆ 0—3—0

(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲ್ಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6

ನಾಲ್ಕನೇ ದರ್ಜೆಗೆ 0—3—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ ವಾಸುದೇವರಾವ್, ಎಂ. ಎ ಎಲ್. ಟಿ.

ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರಣೆ

ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)

II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಜಿಲ್ಲಾ ಸಮಾಚಾರಗಳು

ಸೋವಿಯಟ್ ಯೂನಿಯನ್–ಚೀನಾಗಳ ಮಿತ್ರ ಸಂಘ

ಈ ಸಂಘದ ಒಂದು ಸಭೆ ಕಳೆದ ಶನಿವಾರ ಸ್ಥಳೀಯ ವಿದ್ಯಾರ್ಥಿ ಯೂನಿಯನಿನ ಕಾರ್ಯಾಲಯದಲ್ಲಿ, ಅದರ ಅಧ್ಯಕ್ಷರಾದ ಶ್ರೀ. ಎ ಬಿ ಶೆಟ್ಟಿ ಎಂ ಎಲ್ ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಉದ್ದೇಶ ಮತ್ತು ಕಾರ್ಯಕಲಾಪಗಳ ರೀತಿಗಳನ್ನು ವಿವರಿಸುವ ಒಂದು ಪ್ರಕಟಣಾ ಪತ್ರವನ್ನು ಪ್ರಕಾಶಗೊಳಿಸುವಂತೆ ನಿರ್ಧರಿಸಿ, ಆ ಪ್ರಕಟಣಾ ಪತ್ರವನ್ನು ಸಿದ್ಧಗೊಳಿಸಲು ಶ್ರೀಗಳಾದ ಎ. ಬಿ ಶೆಟ್ಟಿ, ಕೆ ಬಿ ಜಿನರಾಜ ಹೆಗ್ಗಡೆ ಎಂ ಎಲ್ ಎ. [ಕೇಂದ್ರ] ಬಿ. ವಿ ಕಕ್ಕಿಲ್ಲಾಯ ಮತ್ತು ಕೆ. ಶಿವರಾವ್ ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಯಿತು. ಸಂಘದ ಪ್ರಾರಂಭೋತ್ಸವವನ್ನು ಇದೇ ಜುಲೈ ತಾ. ೨ರಲ್ಲಿ ನೆರವೇರಿಸುವಂತೆ ನಿಷ್ಕರ್ಷಿಸಲಾಯಿತು.

ಭಾಷಣ

ಕಳೆದ ಆದಿತ್ಯವಾರ ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಶ್ರೀ. ಕೆ ಆರ್, ಕಾರಂತ, ಎಂ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಶ್ರೀ. ಯು ವಿ, ಆಚಾರ್ಯರವರು "ಸೋವಿಯೆಟ್ ರಷ್ಯ ವಿಶಕ್ಕೆ ನನ್ನನ್ನು ಆಕರ್ಷಿಸಿತು?" ಎಂಬ ವಿಚಾರದಲ್ಲಿ ಭಾಷಣ ಮಾಡಿದರು, ಭಾಷಣಾನಂತರ ಪ್ರಶ್ನೋತ್ತರಗಳಾದ್ದುವು.

ದ. ಕ. ಜಿಲ್ಲಾ ವಿದ್ಯಾರ್ಥಿಗಳ ಫೇಡರೇಶನಿನ ಕಾರ್ಯಕಾರಿ ಸಮಿತಿಯ ಸಭೆ

ಕಳೆದ ಆದಿತ್ಯವಾರ ಈ ಸಮಿತಿಯ ಸಭೆ ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀ ಡಿ ವಿಠಲ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ನಾರಾಯಣ ನೆಟ್ಟಾರ್–ಜನರಲ್ ಸೆಕ್ರಟರಿ–ಅವರಿಂದ ಒಪ್ಪಿಸಲಾದ ಈ ಸಂಘದ ನಿಯಮಾವಳಿಗಳನ್ನು ಸಮಿತಿ ಮಂಜೂರು ಮಾಡಿತು. ಅಕ್ಟೋಬರದ ಅಂತ್ಯದಲ್ಲಿ "ಡೆಲಿಗೇಟರ್ ಕನ್ ವೆನ್ ಶನ್" ಒಂದನ್ನು ನೆರೆಯಿಸಬೇಕೆಂತಲೂ ವಿದ್ಯಾರ್ಥಿಗಳ ಪೌರ ಸೈನಿಕ ದಳವೊಂದನ್ನು ವ್ಯವಸ್ಥೆಗೊಳಿಸಬೇಕೆಂತಲೂ ಈ ವಿಷಯದಲ್ಲಿ ಸಂಬಂಧಪಟ್ಟ ಯೂನಿಯನುಗಳಿಗೆ ಜನರಲ್ ಸೆಕ್ರಟರಿಗಳು ಸೂಚನೆಗಳನ್ನು ಕಳುಹಿಸಲು ಅಧಿಕೃತರಾಗಬೇಕೆಂತಲೂ ಹೈಸ್ಕೂಲುಗಳಲ್ಲಿ ೯ ಕಂತಿನ ಶಾಲಾ ಫೀಸು ೮ ಕಂತಿಗೆ ಇಳಿಸುವಂತೆ ಶಾಲಾ ಅಧಿಕಾರಿಗಳ ಬಳಿಗೆ ತಮ್ಮದೊಂದು ಶಿಷ್ಟಮಂಡಲವನ್ನು ಕಳುಹಿಸಬೇಕೆಂತಲೂ, ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಕೇಳಿಕೆಗಳ ದಿನವನ್ನು ಆಚರಿಸಬೇಕೆಂತಲೂ, ಕರ್ನಾಟಕದ ಯುನಿವರ್ಸಿಟಿ ಸ್ಥಾಪನೆಯನ್ನು ಸ್ವಾಗತಿಸಿ ಅದು ಸಾಮಾನ್ಯ ವಿಶ್ವವಿದ್ಯಾಲಯದಂತಿರದೆ ಮಹತ್ತರವಾದ ಶಕ್ತಿಯುಕ್ತವಾಗಿರಬೇಕೆಂದು ಆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಸಮಿತಿಯ ಅಧಿಕಾರಿಗಳಿಗೆ ಸೂಚಿಸಬೇಕೆಂತಲೂ ನಿರ್ಣಯಗಳಾದುವು.

ದ. ಕ. ಜಿಲ್ಲಾ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರರ ಸಂಘ

ಈ ಸಂಘದ ಸಾಮಾನ್ಯ ಸಭೆಯು ಕಳೆದ ತಾ. ೨೭ರಲ್ಲಿ ಪಾಂಡೇಶ್ವರದಲ್ಲಿ ಡಾ. ಯಂ. ಆರ್. ಭಟ್ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮದ್ರಾಸ್ ಸರಕಾರವು ಬೊಂಬಯಿ ಸಂಯುಕ್ತ ಪ್ರಾಂತಗಳಂತೆ "ಎಲ್ಲೋಪತಿ" ಮತ್ತು "ದೇಶೀಯ ವೈದ್ಯ" ಪದ್ಧತಿಗೆ ಏಕರೀತಿಯಾದ ಪ್ರೋತ್ಸಾಹ ಕೊಡದೆ, ವ್ಯತ್ಯಾಸ ಕಲ್ಪಿಸಿ, ಆ ಸಂಬಂಧ ಹಲವು ಆಜ್ಞೆ ಹೊರಡಿಸಿ, ದೇಶೀಯ ವೈದ್ಯ ಪದ್ಧತಿಯ ಕೈಯನ್ನು ಇನ್ನೂ ದುರ್ಬಲಪಡಿಸುವುದನ್ನು ಪ್ರಸ್ತಾವಿಸಿ, ಸರಕಾರವು ಆ ರೀತಿಯ ಚಳವಳಿಯನ್ನು ಹೂಡಬಾರದೆಂದೂ, ದೇಶೀಯ ವೈದ್ಯ ಪದ್ಧತಿಯ ಕೇಂದ್ರ ಸಮಿತಿ ಈ ಪದ್ಧತಿಯ ಹಕ್ಕು ಬಾಧ್ಯತೆ, ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂತೆ ಪ್ರಯತ್ನಿಸಬೇಕೆಂದೂ ಠರಾವುಗಳನ್ನು ಮಂಜೂರು ಮಾಡಿತು. ೧೯೪೨–೪೩ನೇ ವರ್ಷದ ಆಡಳಿತದ ಅಧಿಕಾರ ಮಂಡಲದಲ್ಲಿ ವೈದ್ಯರುಗಳಾದ ಪಿ. ಐ. ಕೇಳು ನಂಬಿಯಾರರನ್ನು ಅಧ್ಯಕ್ಷರನ್ನಾಗಿಯೂ, ಎಚ್ ತಿಮ್ಮಪ್ಪ ಪಂಡಿತರನ್ನು ಉಪಾಧ್ಯಕ್ಷ, ಬಿ ಆರ್. ಹರಿದಾಸರನ್ನು ಖಜಾನ್ಚಿ, ಎ. ವೆಂಕಪ್ಪಯ್ಯನವರನ್ನು ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಲಾಯಿತು.

'ಬಾಲಾಜಿ ಟಾಕಿಸ್'

'ನವಜೀವನ್'

ಸ್ಥಳೀಯ ಬಾಲಾಜಿ ಟಾಕಿಸಿನಲ್ಲಿ ತಾ. ೪ರಿಂದ ಬೊಂಬಾಯಿ ಟಾಕಿಸಿನವರ ಉಜ್ವಲ ಚಿತ್ರ 'ನವಜೀವನ್' ಪ್ರದರ್ಶಿತವಾಗಲಿದೆ.

ಸಹಕಾರಿ ಸಭೆಗಳು

ಕಳೆದ ತಾ. ೨೧ನೇ ಆದಿತ್ಯವಾರ ಸ್ಥಳೀಯ ಸೆಂ. ಕೊ. ಬೇಂಕಿನ ಕಟ್ಟಡದಲ್ಲಿ ಸೆ. ಕೊ. ಬ್ಯಾಂಕಿನ ಡೈರೆಕ್ಟರರ ಸಭೆ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಸೇರಿ, ಬೇಂಕಿನ "ಸುಪರ್ ವಿಜನ್" ಕಮಿಟಿಗೆ ದಿವಂಗತ ಡಾ. ಕರೆಂಜೆಯವರ ಬದಲಿಗೆ ಶ್ರೀ. ಬೆಳ್ತಂಗಡಿ ಮಂಗೇಶರಾಯರನ್ನು ಸದಸ್ಯರನ್ನಾಗಿ ಆರಿಸಿತು.

ಅದೇ ದಿನ ಅದೇ ಕಟ್ಟಡದಲ್ಲಿ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ನೆರದ ಕೃಷಿಕರ ಭಂಡಶಾಲೆ ಸಂಘದ ಡೈರೆಕ್ಟರರ ಸಭೆ, ಆ ಸಭೆಯ ಉಪಾಧ್ಯಕ್ಷರನ್ನಾಗಿ ಶ್ರೀ. ಎಸ್. ವಿ. ಕೊಳತ್ತಾಯರನ್ನಾರಿಸಿತು.

ಅದೇ ದಿನ ಅದೇ ಸ್ಥಳದಲ್ಲಿ ಎಡ್ವಾನ್ಸ್ಮೆಂಟ್ ಸೊಸೈಟಿಯ ಜನರಲ್ ಬೋಡಿ ಮೀಟಿಂಗ್ ಶ್ರೀ. ಎಂ. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿ ಅದರ ಅಧ್ಯಕ್ಷರಾದ ದಿವಂಗತ ಶ್ರೀ. ಯು. ಮಂಗೇಶರಾಯರ ನಿಧನದ ವಿಚಾರದಲ್ಲಿ ವಿಷಾದ ಸೂಚಿಸಿತು. ಆಯವ್ಯಯ ಪಟ್ಟಿಯ ಮಂಜೂರಾತಿ, ಡೈರೆಕ್ಟರುಗಳ ಚುನಾವಣೆ ಮೊದಲಾದ ಕಾರ್ಯಕ್ರಮಗಳು ಜರುಗಿದುವು.

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ–

ಆಶ್ರಯದಲ್ಲಿ ಜರಗಿಸಿದ ಕ್ವೀನ್ಸ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಶ್ರೀ. ಬಿ. ಸಂಜೀವರಾಯರು, ಕೆನರಾ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃಂದದೆದುರು ಭಾಷಣವಿತ್ತರು.

ಮುನ್ಸಿಪಲ್ ಕೌನ್ಸಿಲು ಮೀಟಿಂಗ್

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮೀಟಿಂಗ್, ತಾ. ೨೯ರಂದು ಸಂಜೆ ಕೌನ್ಸಿಲಿನ ವೈಸ್ ಚೆಯರ್ಮ್ಯಾನ್ ಶ್ರೀ. ಎಲ್. ಸಿ. ಪ್ಯಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಶನರಾಗಿ ಶ್ರೀ. ಕೆ ರಾಮಸ್ವಾಮಿ ಮೊದಲಿಯಾರರು ಬರಲಿರುವರೆಂದು ತಿಳಿದುಬಂತು. ಮಾರ್ಕೆಟ್ ವಾರ್ಡಿನಲ್ಲಿ ಸ್ಥಳಗಳನ್ನು ಏಲಂ ಮಾಡಿದ ಸಂಬಂಧ ಅಲ್ಲಿ ಆಕ್ಷಪಕ್ಷದ ಸ್ಥಳಗಳ ಮೇಜೆ ಕಟ್ಟಿನ ತೆರಿಗೆ ಹೇರುವ ವಿಚಾರದ ಕುರಿತು ಟೌನ್ ಪ್ಲಾನಿಂಗಿನ ಕುರಿತು ಡೈರೆಕ್ಟರರಿಗೆ ಬರೆದು ತಿಳಿದುಕೊಳ್ಳಬೇಕಾಗಿಯೂ ಅಷ್ಟರಲ್ಲಿ ಆ ಸ್ಥಳಗಳ ಬೆಲೆ ಏರಿದ್ದರೆ ಕಮಿಶನರರು ವರದಿಮಾಡಬೇಕಾಗಿಯೂ ಸೂಚಿಸಲಾಯಿತು. ಬೊಕ್ಕಪಟ್ಣದಲ್ಲಿ ಸ್ಥಳ ಸಿಗದೆ ಮಾರ್ಕೆಟ್ ತೆರೆಯುವುದಿಲ್ಲವೆಂದಾಯಿತು. ಕದ್ರಿ ಮಾರ್ಕೆಟಿನ ಭಾಗದಲ್ಲಿ ಪಿ. ಆರ್. ಪಿ. ವಾರ್ಡನರ ಸ್ಥಾನಕ್ಕೆ ಸ್ಥಳಕೊಡಬೇಕೆನ್ನುವ ಅರಿಕೆಯನ್ನು ಮುಂದೊತ್ತಲಾಗದೆಂದಾಯಿತು. ಮುನಿಸಿಪಲ್ ಉದ್ಯೋಗಿಗಳಿಗೆ ೩ ತಿಂಗಳ ಸಂಬಳ ಮುಂಗಡವಾಗಿ ಕೊಡುವ ಮತ್ತು ಸೇಕಡಾ ೨೫ರಷ್ಟು ತುಟ್ಟಿ ಭತ್ತೆಯ ವಿಚಾರಕ್ಕಾಗಿ ಒಂದು ಸಮಿತಿಯ ರಚನೆಯಾಯಿತು. ಡೊ. ಮಿ ನಿಯನ್ ಕುಷ್ಠರೋಗ ಮಂದಿರಕ್ಕೆ ರೂಪಾಯಿ ೧೫೦ ಮಂಜೂರಾಯಿತು. ಮಧ್ಯಾಹ್ನ ಫಿರಂಗಿ ಹೊಡೆಯಲೂ ಮುನಿಸಿಪಲ್ ಉದ್ಯೋಗಿಗಳಿಗೆ ಅಕ್ಕಿ ಮೊದಲಾದುವುಗಳನ್ನು ಅಸಲ್ ಖರೀದಿಗೆ ಒದಗಿಸುವಂತೆ ಸರಕಾರದ ಅನುಮತಿ ಪಡೆಯಲೂ ನಿರ್ಧಾರವಾಯಿತು.

(೬ನೇ ಪುಟಕ್ಕೆ ಮುಂದುವರಿದಿದೆ)

ANNOUNCEMENT

7000 Shares

5% Cumulative First Preference

LIST CLOSED.

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

YOUR INTERESTS & OURS.

The interests of the banker and his customers are closely related. We therefore try to study all matters from your stand point. Tell us your requirements.

CANARA BANK, LIMITED.

ESTD. 1906.

ನಿಮ್ಮ ಕಂಠ ಮತ್ತು ಶ್ವಾಸಕೋಶವನ್ನು ಸಂರಕ್ಷಿಸಿರಿ.

ನೀವು ಕಫ, ಶೀತ, ಹಿಮಬಾಧೆ, ಎದೆನೋವು, ಹಾಗೂ ಕಂಠ ನೋವುಗಳಿಂದ ನರಳುವಿರಾದರೆ ವಿಷಹಾರೀ ಶ್ವಾಸ ಯೋಗ್ಯ ಪೆಪ್ಸ ಮಾತ್ರೆಗಳನ್ನು ಉಪಯೋಗಿಸಿದರೆ ಖಂಡಿತ ಗುಣ ಹೊಂದುವಿರಿ.

ಪೆಪ್ಸ ಮಾತ್ರೆಗಳು ಬಾಯಿಗೆ ಹಾಕಿದ ಕೂಡಲೇ ಕರಗಿ ಒಳ್ಳೆಯ ಔಷಧಿರಸವನ್ನು ಹೊರಗೆಡವುತ್ತವೆ; ಅದು ಶ್ವಾಸಕೋಶಕ್ಕೆ ಹೋಗಿ, ಅಲ್ಲಿರುವ ವಿಷಕ್ರಿಮಿಗಳನ್ನು ನಾಶಗೊಳಿಸುವವು. ಶ್ವಾಸ ನಾಳದ ನೋವನ್ನು ಗುಣಪಡಿಸುವವು. ಎಂತಹ ಕಫ ಶೀತ ಬಾಧೆಗಳನ್ನು ಇಲ್ಲದೆ ಮಾಡುವವು. ಪೆಪ್ಸ ಮಾತ್ರೆಗಳು ಕಂಠ ನಾಳವನ್ನು ಸರಿಗೊಳಿಸುವವು. ಹೀಗೆ ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಉತ್ತಮ ಆರೋಗ್ಯವನ್ನುಂಟು ಮಾಡುವವು. ಪೆಪ್ಸ ಮಾತ್ರೆಗಳು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಒಂದು ರೂಪಾಯಿಗೆ ದೊರೆಯುವವು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಕ ಶ್ವಾಸನೀಯ ಗುಳಿಗೆಗಳು.

ಸ್ವದೇಶಾಭಿಮಾನಿ

ತಾರೀಖು 19—6—1942

ಪಂಚಾಯತ ಸುಧಾರಣೆಗಳು

ಮದ್ರಾಸು ಪ್ರಾಂತದಲ್ಲಿ ಪಂಚಾಯತುಗಳ ಘಟನೆಯಲ್ಲಿ ಸುಧಾರಣೆ ಮಾಡುವ ವಿಷಯ ಇತ್ತೀಚೆಗೆ ಕೆಲವು ಕಾಲದಿಂದ ನಾವು ಸುದ್ದಿ ಕೇಳುತ್ತಾ ಇದ್ದೇವೆ. ಕಾಂಗ್ರೆಸ್ ಮಂತ್ರಿಮಂಡಲವಿದ್ದ ಕಾಲದಲ್ಲಿ ಶ್ರೀ. ಪ್ರಕಾಶಂರವರು ಒಂದು ಸುಧಾರಣೆಯ ಮಸೂದೆ ತಯಾರು ಮಾಡುತ್ತಿದ್ದರೆಂದೂ ನಾವು ತಿಳಿದಿರುವೆವು; ಅಂತೂ ಈಗ ಪಂಚಾಯತ್ ಸುಧಾರಣೆಯ ಬಗ್ಗೆ ಸರಕಾರವು ಅಸಕ್ತಿ ವಹಿಸಿ, ಕಾರ್ಯಕಲಾಪಗಳನ್ನು ಮುಂದುವರಿಸುವರೆ 'ಎಡ್ವೈಸರಿ ಕಮಿಟಿ'ಯೊಂದನ್ನು ಸ್ಥಾಪಿಸಿದ್ದು ಅದು, ಇದುವರೆವೆ ಏಳು ಸಲ ಕೂಡಿ ತಮ್ಮ ಕೆಲಸವನ್ನು ಸಾಮಾನ್ಯತಃ ಪೂರ್ಣಗೊಳಿಸಿರುವುದೆಂದು ತಿಳಿದು ಬರುತ್ತದೆ. ಈ ಕಮಿಟಿಯು ಬರುವ ಅಗಸ್ಟ್ ತಿಂಗಳಲ್ಲಿ ಕೊನೆಯ ಸಭೆ ಸೇರಿಸಿ ಸೂಚಿಸಲಾದ ಬದಲಾವಣೆಗಳನ್ನು ವಿಚಾರಿಸಿ ಸಹಿ ಮಾಡುವುದೆಂದು ವರದಿಯಿರುವುದು.

ಕಮಿಟಿಯು, ಇದೀ ಪ್ರಾಂತದಲ್ಲಿ ಸಾವಿರ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ, ಪ್ರಾಯಸ್ಥರ ಮತದಾನ ಹಕ್ಕಿನಿಂದ ಪಂಚಾಯತ ಘಟನೆಯನ್ನು ಕಡ್ಡಾಯವಾಗಿ ಜಾರಿಗೆ ತರುವ ವಿಷಯ ಸಮ್ಮತಿಪಟ್ಟಿರುವುದೆಂದು ತಿಳಿಯುತ್ತೇವೆ. ಪಂಚಾಯತ ಅಧಿಕಾರಿ ಮಂಡಳ, ನೌಕರರ ನೇಮಕ, ಕೆಲಸಗಳನ್ನು ನಡೆಸಲು ಯಾವುದಾದರೊಂದು ಪಂಚಾಯತಿಗೆ ಪ್ರತ್ಯೇಕ ನಡೆಸಿಕೊಂಡು ಬರಲು ಅಸಮರ್ಥವಾದರೆ ಕೆಲವು ಪಂಚಾಯಿತಿಗಳೊಟ್ಟುಗೂಡಿ ಕೆಲಸ ನಿರ್ವಹಣ ಮಾಡಬೇಕೆಂದೂ, ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಐದನೇ ತರಗತಿ ವರೆಗಿನ ಎಲಿಮೆಂಟರಿ ಶಾಲೆಗಳ ಆಡಳಿತವು ಪಂಚಾಯತುಗಳಿಗೆ ಕೊಡಲ್ಪಡಬೇಕೆಂದೂ ಕೆಲವು ಸೂಚನೆಗಳಿವೆ. ಪಂಚಾಯತುಗಳಿಗೆ ಈ ಬಗ್ಗೆ ಆರ್ಥಿಕ ವ್ಯವಸ್ಥೆಗೆ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ದೊರೆವ ತರದ ಗ್ರೆಂಟೂ, ಇತರ ಮನೆ ತೆರಿಗೆ, ವಾಹನ ತೆರಿಗೆ, ಭೂತೆರಿಗೆಗಳು ಹೆಚ್ಚಿಸಲ್ಪಡಬೇಕೆಂದೂ ಪ್ರತೀ ಪಂಚಾಯತಿಗೆ ಒಬ್ಬ ಎಕ್ಸಿಕ್ಯುಟಿವ್ ಆಫೀಸರನನ್ನು ನೇಮಿಸುವ, ಗ್ರಾಮಗಳನ್ನು ವಾರ್ಡುಗಳಾಗಿ ವಿಂಗಡಿಸುವ, ಗುಪ್ತಮತದಾನ ಪದ್ಧತಿಯನ್ನನುಸರಿಸುವ, ಡಿಪ್ರೆಸ್ಡ್ ಕ್ಲಾಸ್, ಮುಸಲ್ಮಾನ್, ಇಂಡಿಯನ್ ಕ್ರಿಶ್ಚಿಯನ್ ಜಾತಿಗಳಿಗೆ ಸ್ಥಳ ರಿಸರ್ವ್ ಮಾಡುವಂತಹ ಸೂಚನೆಗಳು ಇದರಲ್ಲಿ ಅಡಕವಾಗಿವೆಯೆಂದೂ ಗೊತ್ತಾಗಿರುವುದು.

ಹೀಗೆ ಪ್ರಾಂತೀಯ ಸರಕಾರವು ಗ್ರಾಮ ಪಂಚಾಯತು ಸುಧಾರಣೆಯ ವಿಷಯ ಗಮನಕೊಡುವುದು ಬಹಳ ಪ್ರಶಂಸನೀಯ ವಿಚಾರ. ತಮ್ಮ ತಮ್ಮ ಗ್ರಾಮಗಳ ಆಡಳಿತವನ್ನು ಗ್ರಾಮಸ್ಥರೇ ನಡೆಸಿಕೊಂಡು ಬರುವ ಸಂದರ್ಭವೊದಗಿಸುವುದು ರಾಜ್ಯದ ವ್ಯವಸ್ಥೆಯಲ್ಲಿ, ನಮ್ಮ ಹಿಂದೂಸ್ಥಾನದಲ್ಲಿ ವೈದಿಕ ಕಾಲದಿಂದಲೇ ನಡೆದು ಬಂದ ಒಳ್ಳೆಯ ಸಂಪ್ರದಾಯವಾಗಿದೆ. ಇದರಿಂದಾಗಿ ರಾಜ್ಯಘಟನೆಯಲ್ಲಿ ಗ್ರಾಮಸ್ಥರು ಹೆಚ್ಚಿನ ಆಸಕ್ತಿ ವಹಿಸಿಕೊಂಡು ಕೆಲಸ ಮಾಡಿ ರಾಜ್ಯದ ಆಡಳಿತದಲ್ಲಿ ಯೋಗ್ಯತರ ರೀತಿ ಹೊಂದುವರೆಂದೂ, ಅದರಲ್ಲಿ ಎದುರಿಸಬೇಕಾದ ಲೋಪದೋಷಗಳನ್ನು ನಿವಾರಿಸಿಕೊಂಡು, ಮುಂದಿನ 'ಸ್ವತಂತ್ರ ಹಿಂದುಸ್ಥಾನ'ದ ಭದ್ರ ಅಸ್ತಿವಾರವನ್ನು ಕಲ್ಪಿಸಿಕೊಳ್ಳುವರೆಂದೂ ನಾವು ಹಾರೈಸುತ್ತೇವೆ.

ಜಿನ್ನರ ಕೂಗು

ಮಹಾತ್ಮಾಜಿಯವರು, ಹೊಸ ಚಳವಳವೊಂದನ್ನು ಪ್ರಾರಂಭಿಸುವ ವಿಚಾರದಲ್ಲಿದ್ದಾರೆಂಬ ಸುದ್ದಿ ಕೇಳಿಯೇ ಜಿನ್ನರು ತಲೆಕೆಟ್ಟವರಂತೆ ಪ್ರಲಾಪಿಸುತ್ತಿದ್ದಾರೆ. ಕಾಂಗ್ರೆಸಿನ ಆಶ್ರಯದಲ್ಲಿ ಆಗ ಬಹುದಾದ ಯಾವುದೇ ಹೊಸ ಆಂದೋಲನವನ್ನಾದರೂ ಮುಸ್ಲಿಂ ಲೀಗು ವಿರೋಧಿಸುವುದೆಂದು ಅವರು ಕೂಗಿ ಹೇಳುತ್ತಿದ್ದಾರೆ.

ತಾನು ಪ್ರಾರಂಭಿಸಲಿರುವ ಸತ್ಯಾಗ್ರಹವು, ಯಾವ ರೂಪದ್ದು, ಯಾವ ಮಾರ್ಗಗಳನ್ನು ಹೊಂದುವುದು ಎಂಬೀ ವಿಷಯವಾಗಿ ಗಾಂಧಿಜಿಯವರು ಇದು ವರೆಗೆ ನಿಶ್ಚಯಿಸಿಲ್ಲವಂತೆ; ಆದರೆ ಮಹಾತ್ಮಾಜಿ ಏನೇ ಮಾಡಲಿ, ಕಾಂಗ್ರೆಸು ಯಾವುದೇ ಹಜ್ಜೆ ತೆಗೆದುಕೊಳ್ಳಲಿ ಅದನ್ನು ವಿರೋಧಿಸುವುದು ಜಿನ್ನರ—ಎಂದರೆ ಮುಸ್ಲಿಂ ಲೀಗಿನ—ಹಠಸಾಧನೆಯಾಗಿದೆ!

ಕಾಂಗ್ರೆಸು ಮುಂದೆ ಯಾವ ಚಳವಳವನ್ನು ಆರಂಭಿಸಿದರೂ ಯಾವ ಚಟುವಟಿಕೆಯನ್ನು ಕೈಕೊಂಡರೂ ಅದರ ಉದ್ದೇಶವು ಭಾರತದ ಸ್ವಾತಂತ್ರ್ಯ ಸಂಪಾದನೆಯಾಗಿದೆಯೆಂಬ ವಿಷಯ ಯಾರಿಗೂ ಭಿನ್ನಾಭಿಪ್ರಾಯವಿಲ್ಲ! ಆದರೂ ಜಿನ್ನರು ಅದನ್ನು ವಿರೋಧಿಸುವೆನೆಂದು ಮುಂಚಿತವಾಗಿಯೇ ತಿಳಿಸಿ ಬಿಟ್ಟಿದ್ದಾರೆ!

'ಆಂದೋಲನವನ್ನು ಆರಂಭಿಸುವೆನೆಂಬೀ ತೆರದ ಹೆದರಿಕೆಯು, ಇಂದು ಗಲಭೆಯಲ್ಲಿರುವ ಬ್ರಿಟನನ್ನು ಬೆದರಿಸಿ ಗಾಂಧಿಜಿಯವರ ಕೇಳಿಕೆಗಳಿಗೆ ಬ್ರಿಟನು ಒಪ್ಪಿಕೊಳ್ಳುವಂತೆ ಮಾಡುವ ಹಂಚಿಕೆಯಾಗಿದೆ' ಎಂದು ಜಿನ್ನಾಸಾಹೇಬರು ಸಂಶಯಾತ್ಮರಾಗಿರುವರು. ಕಪ್ಪು ಕನ್ನಡಕದಿಂದ ನೋಡುವವನಿಗೆ ಲೋಕವೆಲ್ಲವೂ ಕರಿದಾಗಿ ಕಾಣುವುದು ಸಹಜವಷ್ಟೆ? ಪಾಕಿಸ್ಥಾನ, ಮುಸ್ಲಿಂ ಸಾಮ್ರಾಜ್ಯಗಳ ದುರುದ್ದೇಶ ಪ್ರೇರಿತರಾದ ಜಿನ್ನಾ ಸಾಹೇಬರಿಗೆ ಗಾಂಧಿಜಿಯ ಪ್ರತಿಯೊಂದು ಕೆಲಸದಲ್ಲಿ ಈ ತರದ ಸಂಶಯ ಹುಟ್ಟುವುದು ಅವರ ಸ್ವಭಾವಕ್ಕೆ ಅನುಗುಣವಾಗಿದೆ. ಅವರ ರಾಷ್ಟ್ರ ಘಾತುಕ ಧೋರಣೆಗೆ ಯೋಗ್ಯವಾಗಿದೆ.

ಟೆಕ್ಸ್ಟ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ

ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡ್ಪಿ.

Iನೇ ಫೋರ್ಮಿಗೆ 0—12—0

IIನೇ ಫೋರ್ಮಿಗೆ 0—12—0

ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಬಿ. ಭವಾನಿರಾವ್ ಬಿ. ಎ. ಎಲ್. ಟಿ.

IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ

ಬಿ. ಭವಾನಿರಾವ್, ಬಿ. ಎ., ಎಲ್. ಟಿ.
ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—7—0

ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ

ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)

ನಾಲ್ಕನೇ ದರ್ಜೆಗೆ 0—6—0

ಐದನೇ ದರ್ಜೆಗೆ 0—7—0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ.
ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0—6—0

ಏಳನೇ ದರ್ಜೆಗೆ 0—6—0

ಎಂಟನೇ ದರ್ಜೆಗೆ 0—6—0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ವ್ಯಾಕರಣ ಮತ್ತು ಪ್ರಬಂಧ

ಕೆ. ಕೆ. ರೈ. ವಿದ್ವಾನ್.

4 ಮತ್ತು 5ನೇ ದರ್ಜೆಗೆ 0—2—0

ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0

ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6

ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ

ಕೆ. ಕೆ. ರೈ ವಿದ್ವಾನ್.

ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0

ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0-2-6

ಸಿವಿಕ್ಸ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ನಾಲ್ಕನೇ ದರ್ಜೆಗೆ 0—2—0

ಐದನೇ ದರ್ಜೆಗೆ 0—2—6

ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ ವಿದ್ವಾನ್.

ಆರನೇ ದರ್ಜೆಗೆ 0—3—0

ಏಳನೇ ದರ್ಜೆಗೆ 0—3—0

ಎಂಟನೇ ದರ್ಜೆಗೆ 0—3—0

(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.)

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0—2—6

ನಾಲ್ಕನೇ ದರ್ಜೆಗೆ 0—3—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್, ಎಂ. ಎ. ಎಲ್. ಟಿ.
ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0—3—0

ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ

ನವೀನ ಭೂವಿವರಣೆ

ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)
II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಜಿಲ್ಲಾ ಸಮಾಚಾರಗಳು

ಸೋವಿಯಟ್ ಯೂನಿಯನ್—ಚೀನಾಗಳ ಮಿತ್ರ ಸಂಘ

ಈ ಸಂಘದ ಒಂದು ಸಭೆ ಕಳೆದ ಶನಿವಾರ ಸ್ಥಳೀಯ ವಿದ್ಯಾರ್ಥಿ ಯೂನಿಯನಿನ ಕಾರ್ಯಾಲಯದಲ್ಲಿ, ಅದರ ಅಧ್ಯಕ್ಷರಾದ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಉದ್ದೇಶ ಮತ್ತು ಕಾರ್ಯಕಲಾಪಗಳ ರೀತಿಗಳನ್ನು ವಿವರಿಸುವ ಒಂದು ಪ್ರಕಟಣಾ ಪತ್ರವನ್ನು ಪ್ರಕಾಶಗೊಳಿಸುವಂತೆ ನಿರ್ಧರಿಸಿ, ಆ ಪ್ರಕಟಣಾ ಪತ್ರವನ್ನು ಸಿದ್ಧಗೊಳಿಸಲು ಶ್ರೀಗಳಾದ ಎ. ಬಿ. ಶೆಟ್ಟಿ, ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. [ಕೇಂದ್ರ] ಬಿ. ವಿ. ಕಕ್ಕಿಲ್ಲಾಯ ಮತ್ತು ಕೆ. ಶಿವರಾವ್ ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಯಿತು. ಸಂಘದ ಪ್ರಾರಂಭೋತ್ಸವವನ್ನು ಇದೇ ಜುಲ್ಯಾ ತಾ. ೨ರಲ್ಲಿ ನೆರವೇರಿಸುವಂತೆ ನಿಶ್ಚಯಿಸಲಾಯಿತು.

ಭಾಷಣ

ಕಳೆದ ಆದಿತ್ಯವಾರ ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಶ್ರೀ. ಕೆ. ಆರ್. ಕಾರಂತ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಶ್ರೀ. ಯು. ವಿ. ಆಚಾರ್ಯರವರು "ಸೋವಿಯೆಟ್ ರಷ್ಯ ಏತಕ್ಕೆ ನನ್ನನ್ನು ಆಕರ್ಷಿಸಿತು?" ಎಂಬ ವಿಚಾರದಲ್ಲಿ ಭಾಷಣ ಮಾಡಿದರು. ಭಾಷಣಾನಂತರ ಪ್ರಶ್ನೋತ್ತರಗಳಿದ್ದುವು.

ದ. ಕ. ಜಿಲ್ಲಾ ವಿದ್ಯಾರ್ಥಿಗಳ ಫೇಡರೇಶನಿನ ಕಾರ್ಯಕಾರಿ ಸಮಿತಿಯ ಸಭೆ

ಕಳೆದ ಆದಿತ್ಯವಾರ ಈ ಸಮಿತಿಯ ಸಭೆ ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀ ಬಿ. ವಿಠಲ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ನಾರಾಯಣ ನೆಟ್ಟಾರ್ ಜನರಲ್ ಸೆಕ್ರೆಟರಿ ಅವರಿಂದ ಒಪ್ಪಿಸಲ್ಪಟ್ಟ ಈ ಸಂಘದ ನಿಯಮಾವಳಿಗಳನ್ನು ಸಮಿತಿ ಮಂಜೂರು ಮಾಡಿತು. ಅಕ್ಟೋಬರದ ಅಂತ್ಯದಲ್ಲಿ "ಡೆಲಿಗೇಟರ್ ಕನ್ ವೆನ್ ಶನ್" ಒಂದನ್ನು ನೆರಯಿಸಬೇಕೆಂತಲೂ ವಿದ್ಯಾರ್ಥಿಗಳ ಪೌರ ಸೈನಿಕ ದಳವೊಂದನ್ನು ವ್ಯವಸ್ಥೆಗೊಳಿಸಬೇಕೆಂತಲೂ ಈ ವಿಷಯದಲ್ಲಿ ಸಂಬಂಧಪಟ್ಟ ಯೂನಿಯನುಗಳಿಗೆ ಜನರಲ್ ಸೆಕ್ರೆಟರಿಗಳು ಸೂಚನೆಗಳನ್ನು ಕಳುಹಿಸಲು ಅಧಿಕೃತರಾಗಬೇಕೆಂತಲೂ ಹ್ಯಾಸ್ಕೂಲುಗಳಲ್ಲಿ ೯ ಕಂತಿನ ಶಾಲಾ ಫೀಸು ೮ ಕಂತಿಗೆ ಇಳಿಸುವಂತೆ ಶಾಲಾ ಅಧಿಕಾರಿಗಳ ಬಳಿಗೆ ತಮ್ಮದೊಂದು ಶಿಷ್ಟಮಂಡಲವನ್ನು ಕಳುಹಿಸಬೇಕೆಂತಲೂ, ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಕೇಳಿಕೆಗಳ ದಿನವನ್ನು ಆಚರಿಸಬೇಕೆಂತಲೂ, ಕರ್ನಾಟಕದ ಯುನಿವರ್ಸಿಟಿ ಸ್ಥಾಪನೆಯನ್ನು ಸ್ವಾಗತಿಸಿ ಅದು ಸಾಮಾನ್ಯ ವಿಶ್ವವಿದ್ಯಾಲಯದಂತಿರದೆ ಮಹತ್ತರವಾದ ಶಕ್ತಿಯುಕ್ತವಾಗಿರಬೇಕೆಂದು ಆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಸಮಿತಿಯ ಅಧಿಕಾರಿಗಳಿಗೆ ಸೂಚಿಸಬೇಕೆಂತಲೂ ನಿರ್ಣಯಗಳಾದುವು.

ದ. ಕ. ಜಿಲ್ಲಾ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರರ ಸಂಘ

ಈ ಸಂಘದ ಸಾಮಾನ್ಯ ಸಭೆಯು ಕಳೆದ ತಾ. ೨೭ರಲ್ಲಿ ಪಾಂಡೇಶ್ವರದಲ್ಲಿ ಡಾ. ಎಂ. ಆರ್. ಭಟ್ಟರವರ ಅಧ್ಯಕ್ಷತೆಯಲ್ಲಿ ಜರುಗಿತು. ಮದ್ರಾಸ್ ಸರಕಾರವು ಬೊಂಬಾಯಿ ಸಂಯುಕ್ತ ಪ್ರಾಂತಗಳಂತೆ, "ಎಲ್ಲೋಪತಿ" ಮತ್ತು "ದೇಶೀಯ ವೈದ್ಯ" ಪದ್ಧತಿಗೆ ಏಕರೀತಿಯಾದ ಪ್ರೋತ್ಸಾಹ ಕೊಡದೆ, ವ್ಯತ್ಯಾಸ ಕಲ್ಪಿಸಿ, ಆ ಸಂಬಂಧ ಹಲವು ಆಜ್ಞೆ ಹೊರಡಿಸಿ, ದೇಶೀಯ ವೈದ್ಯ ಪದ್ಧತಿಯ ಕೈಯನ್ನು ಇನ್ನೂ ದುರ್ಬಲಪಡಿಸುವುದನ್ನು ಪ್ರಸ್ತಾವಿಸಿ, ಸರಕಾರವು ಆ ರೀತಿಯ ಚಳವಳವನ್ನು ಹೂಡಬಾರದೆಂದೂ, ದೇಶೀಯ ವೈದ್ಯ ಪದ್ಧತಿಯ ಕೇಂದ್ರ ಸಮಿತಿ ಈ ಪದ್ಧತಿಯ ಹಕ್ಕು ಬಾಧ್ಯತೆ, ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂತೆ ಪ್ರಯತ್ನಿಸಬೇ...

...ಕೆಂದೂ ಠರಾವುಗಳನ್ನು ಮಂಜೂರು ಮಾಡಿತು. ೧೯೪೨—೪೩ನೇ ವರ್ಷದ ಆಡಳಿತದ ಅಧಿಕಾರ ಮಂಡಲದಲ್ಲಿ—ವೈದ್ಯರುಗಳಾದ ಪಿ. ಐ. ಕೇಳು ನಂಬಿಯಾರರನ್ನು ಅಧ್ಯಕ್ಷರನ್ನಾಗಿಯೂ, ಎಚ್. ತಿಮ್ಮಪ್ಪ ಪಂಡಿತರನ್ನು ಉಪಾಧ್ಯಕ್ಷ, ಬಿ. ಆರ್. ಹರಿದಾಸರನ್ನು ಖಜಾಂಚಿ, ಎ. ವೆಂಕಪ್ಪಯ್ಯನವರನ್ನು ಕಾರ್ಯದರ್ಶಿಯವರನ್ನಾಗಿಯೂ ಚುನಾಯಿಸಲಾಯಿತು.

'ಬಾಲಾಜಿ ಟಾಕೀಸ್'

'ನವಜೀವನ್'

ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ. ೪ರಿಂದ ಬೊಂಬಾಯಿ ಟಾಕೀಸಿನವರ ಉಜ್ವಲ ಚಿತ್ರ 'ನವಜೀವನ್' ಪ್ರದರ್ಶಿತವಾಗಲಿದೆ.

ಸಹಕಾರಿ ಸಭೆಗಳು

ಕಳೆದ ತಾ. ೨೧ನೇ ಆದಿತ್ಯವಾರ ಸ್ಥಳೀಯ ಸೆಂ. ಕೋ. ಬೇಂಕಿನ ಕಟ್ಟಡದಲ್ಲಿ ಸೆ. ಕೋ. ಬ್ಯಾಂಕಿನ ಡೈರೆಕ್ಟರರ ಸಭೆ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಸೇರಿ, ಬೇಂಕಿನ "ಸುಪರ್ ವಿಜನ್" ಕಮಿಟಿಗೆ ದಿವಂಗತ ಡಾ. ಕರೆಂಜಿಯವರ ಬದಲಿಗೆ ಶ್ರೀ. ಬೆಳ್ತಂಗಡಿ ಮಂಗೇಶರಾಯರನ್ನು ಸಭಾಸ್ಯರನ್ನಾಗಿ ಆರಿಸಿತು.

ಅದೇ ದಿನ ಅದೇ ಕಟ್ಟಡದಲ್ಲಿ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ನೆರದ ಕೃಷಿಕರ ಭಂಡಶಾಲೆ ಸಂಘದ ಡೈರೆಕ್ಟರರ ಸಭೆ, ಆ ಸಭೆಯ ಉಪಾಧ್ಯಕ್ಷರಾಗಿ ಶ್ರೀ. ಎಸ್. ವಿ. ಕೊಳತ್ತಾಯರನ್ನಾರಿಸಿತು.

ಅದೇ ದಿನ, ಅದೇ ಸ್ಥಳದಲ್ಲಿ ಎಗ್ರಿಕಲ್ಚರಿಸ್ಟ್ ಸೇಂಟ್ ಸೊಸೈಟಿಯ ಜನರಲ್ ಬೋರ್ಡಿ ಮೀಟಿಂಗ್ ಶ್ರೀ. ಎಂ. ಎಸ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿ ಅದರ ಅಧ್ಯಕ್ಷರಾದ ದಿವಂಗತ ಶ್ರೀ. ಯು. ಮಂಗೇಶರಾಯರ ನಿಧನದ ವಿಚಾರದಲ್ಲಿ ವಿಷಾದ ಸೂಚಿಸಿತು. ಆಯವ್ಯಯ ಪಟ್ಟಿಯ ಮಂಜೂರಾತಿ, ಡೈರೆಕ್ಟರುಗಳ ಚುನಾವಣೆ ಮೊದಲಾದ ಕಾರ್ಯಕ್ರಮಗಳು ಜರುಗಿದುವು.

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ—

ಆಶ್ರಯದಲ್ಲಿ ಬನಾರಿಸಿನ ಕ್ವೀನ್ಸ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಶ್ರೀ. ಬಿ. ಸಂಜೀವರಾಯರು, ಕೆನರಾ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃಂದದೆದುರು ಭಾಷಣವಿತ್ತರು.

ಮುನ್ಸಿಪಲ್ ಕೌನ್ಸಿಲು ಮೀಟಿಂಗ್

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮೀಟಿಂಗ್, ತಾ. ೨೯ರಂದು ಸಂಜೆ ಕೌನ್ಸಿಲಿನ ವೈಸ್ ಚೆಯರ್ ಮ್ಯಾನ್ ಶ್ರೀ. ಎಲ್. ಸಿ. ಪೈಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಶನರಾಗಿ ಶ್ರೀ. ಕೆ ರಾಮಸ್ವಾಮಿ ಮೊದಲಿಯ್ಯಾರರು ಬರಲಿರುವರೆಂದು ತಿಳಿದುಬಂತು. ಮಾರ್ಕೆಟ್ ವಾರ್ಡಿನಲ್ಲಿ ಸ್ಥಳಗಳನ್ನು ಏಲಂ ಮಾಡಿದ—ಸಂಬಂಧ, ಅಲ್ಲಿ ಅಕ್ಕಪಕ್ಕದ ಸ್ಥಳಗಳ ಮೇಲೆ ಹೆಚ್ಚಿನ ತೆರಿಗೆ ಹೇರುವ ವಿಚಾರದ ಕುರಿತು ಟೌನ್ ಪ್ಲಾನಿಂಗಿನ ಕುರಿತು ಡೈರೆಕ್ಟರರಿಗೆ ಬರೆದು ತಿಳಿದುಕೊಳ್ಳಬೇಕಾಗಿಯೂ ಅಷ್ಟರಲ್ಲಿ ಆ ಸ್ಥಳಗಳ ಬೆಲೆ ನಿರ್ಧರಿಸಿ ಕಮೀಶನರರು ವರದಿ ಮಾಡಬೇಕಾಗಿಯೂ ಸೂಚಿಸಲಾಯಿತು. ಬೊಕ್ಕಪಟ್ಣದಲ್ಲಿ ಸ್ಥಳ ಸಿಗದೆ ಮಾರ್ಕೆಟ್ ತೆರೆಯುವುದಿಲ್ಲವೆಂದಾಯಿತು. ಕದ್ರಿ ಮಾರ್ಕೆಟಿನ ಭಾಗದಲ್ಲಿ ಎ. ಆರ್. ಪಿ. ವಾರ್ಡನರ ಸ್ಥಾನಕ್ಕೆ ಸ್ಥಳಕೊಡಬೇಕೆನ್ನುವ ಅರ್ಜಿಯನ್ನು ಮುಂದೊತ್ತಲಾಗದೆಂದಾಯಿತು. ಮುನಿಸಿಪಲ್ ಉದ್ಯೋಗಿಗಳಿಗೆ ೩ ತಿಂಗಳ ಸಂಬಳ ಮುಂಗಡವಾಗಿ ಕೊಡುವ ಮತ್ತು ಸೇಕಡಾ ...ರಷ್ಟು ತುಟ್ಟಿ ಭತ್ತೆಯ ವಿಚಾರಕ್ಕಾಗಿ ಒಂದು ಸಮಿತಿಯ ರಚನೆಯಾಯಿತು. ಜೋಮಿನಿಯನ್ ಕುಷ್ಠರೋಗ ಮಂದಿರಕ್ಕೆ ರೂಪಾಯಿ ...ಗಳು ಮಂಜೂರಾಯಿತು. ಮಧ್ಯಾಹ್ನ ಫಿರಂಗಿ ಹೊಡೆಯಲೂ ಮುನಿಸಿಪಲ್ ಉದ್ಯೋಗಿಗಳಿಗೆ ಅಕ್ಕಿ ಮೊದಲಾದುವುಗಳನ್ನು ಅಸಲ್ ಕ್ರಯಕ್ಕೆ ಒದಗಿಸುವಂತೆ ಸರಕಾರದ ಅನುಮತಿ ಪಡೆಯಲೂ ನಿರ್ಧಾರವಾಯಿತು.

(೬ನೇ ಪುಟಕ್ಕೆ ಮುಂದುವರಿದಿದೆ)

ANNOUNCEMENT

7000 Shares

5% Cumulative First Preference

LIST CLOSED.—

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

YOUR INTERESTS & OURS.

The interests of the banker and his customers are closely related. We therefore try to study all matters from your stand point. Tell us your requirements

CANARA BANK, LIMITED.

ESTD 1906.



ನಿಮ್ಮ ಕಂಠ ಮತ್ತು ಶ್ವಾಸಕೋಶವನ್ನು ಸಂರಕ್ಷಿಸಿರಿ.

ನೀವು ಕಫ, ಶೀತ, ಹಿಮಬಾಧೆ, ಎದೆನೋವು, ಹಾಗೂ ಕಂಠ ನೋವುಗಳಿಂದ ನರಳುತ್ತಿದ್ದರೆ ವಿಷಹಾರೀ ಶ್ವಾಸ ಯೋಗ್ಯ ಪೆಪ್ಸ ಮಾತ್ರೆಗಳನ್ನು ಉಪಯೋಗಿಸಿದರೆ ಖಂಡಿತ ಗುಣ ಹೊಂದುವಿರಿ.

ಪೆಪ್ಸ ಮಾತ್ರೆಗಳು ಬಾಯಿಗೆ ಹಾಕಿದ ಕೂಡಲೇ ಕರಗಿ ಒಳ್ಳೆಯ ಔಷಧಿರಸವನ್ನು ಹೊರಗೆಡವುತ್ತವೆ; ಅದು ಶ್ವಾಸಕೋಶಕ್ಕೆ ಹೋಗಿ, ಅಲ್ಲಿರುವ ವಿಷಕ್ರಿಮಿಗಳನ್ನು ನಾಶಗೊಳಿಸುವವು. ಉಸಿರ ನಾಳದ ನೋವನ್ನು ಗುಣಪಡಿಸುವವು. ಇಂಥಹ ಕಫ ಶೀತ ಬಾಧೆಗಳನ್ನು ಇಲ್ಲದೆ ಮಾಡುವವು. ಪೆಪ್ಸ ಮಾತ್ರೆಗಳು ಕಂಠ ನಾಳವನ್ನು ಸರಿಗೊಳಿಸುವವು. ಹೀಗೆ ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಉತ್ತಮ ಆರೋಗ್ಯವನ್ನುಂಟು ಮಾಡುವವು. ಪೆಪ್ಸ ಮಾತ್ರೆಗಳು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಒಂದು ರೂಪಾಯಿಗೆ ಮಾರಲ್ಪಡುವವು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಕ ಶ್ವಾಸನೀಯ ಗುಳಿಗೆಗಳು.

ಸ್ವದೇಶಾಭಿಮಾನಿ

ತಾರೀಕು 19—6—1942

ಪಂಚಾಯತ ಸುಧಾರಣೆಗಳು

ಮದ್ರಾಸು ಪ್ರಾಂತದಲ್ಲಿ ಪಂಚಾಯತುಗಳ ಘಟನೆಯಲ್ಲಿ ಸುಧಾರಣೆ ಮಾಡುವ ವಿಷಯ ಇತ್ತೀಚೆಗೆ ಕೆಲವು ಕಾಲದಿಂದ ನಾವು ಸುದ್ದಿ ಕೇಳುತ್ತಾ ಇದ್ದೇವೆ. ಕಾಂಗ್ರೆಸ್ ಮಂತ್ರಿಮಂಡಲವಿದ್ದ ಕಾಲದಲ್ಲಿ ಶ್ರೀ. ಪ್ರಕಾಶಂರವರು ಒಂದು ಸುಧಾರಣೆಯ ಮಸೂದೆ ತಯಾರು ಮಾಡುತ್ತಿದ್ದರೆಂದೂ ನಾವು ತಿಳಿದಿರುವೆವು; ಅಂತೂ ಈಗ ಪಂಚಾಯತ್ ಸುಧಾರಣೆಯ ಬಗ್ಗೆ ಸರಕಾರವು ಆಸಕ್ತಿ ವಹಿಸಿ, ಕಾರ್ಯಕಲಾಪಗಳನ್ನು ಮುಂದುವರಿಸುವರೆ 'ಎಡ್ವೈಸರಿ ಕಮಿಟಿ'ಯೊಂದನ್ನು ಸ್ಥಾಪಿಸಿದ್ದು ಅದು, ಇದುವರೆದೆ ಏಳು ಸಲ ಕೂಡಿ ತಮ್ಮ ಕೆಲಸವನ್ನು ಸಾಮಾನ್ಯತಃ ಪೂರ್ಣಗೊಳಿಸಿರುವುದೆಂದು ತಿಳಿದು ಬರುತ್ತದೆ. ಈ ಕಮಿಟಿಯು ಬರುವ ಅಗಸ್ಟ್ ತಿಂಗಳಲ್ಲಿ ಕೊನೆಯ ಸಭೆ ಸೇರಿಸಿ ಸೂಚಿಸಲಾದ ಬದ್ರಲಾವಣೆಗಳನ್ನು ವಿಚಾರಿಸಿ ಸಹಿ ಮಾಡುವುದೆಂದು ವರದಿಯಿರುವುದು.

ಕಮಿಟಿಯು, ಇದೇ ಪ್ರಾಂತದಲ್ಲಿ ಐದು ಸಾವಿರ ಜನಸಂಖ್ಯೆಯುಳ್ಳ ಗ್ರಾಮಗಳಲ್ಲಿ, ಪ್ರಾಯಸ್ಥರ ಮತದಾನ ಹಕ್ಕಿನಿಂದ ಪಂಚಾಯತ ಘಟನೆಯನ್ನು ಕಡ್ಡಾಯವಾಗಿ ಜಾರಿಗೆ ತರುವ ವಿಷಯ ಸಮ್ಮತಿಪಟ್ಟಿರುವುದೆಂದು ತಿಳಿಯುತ್ತೇವೆ. ಪಂಚಾಯತ ಅಧಿಕಾರಿ ಮಂಡಳ, ನೌಕರರ ನೇಮುಕ, ಕೆಲಸಗಳನ್ನು ನಡೆಸಲು ಯಾವುದಾದರೊಂದು ಪಂಚಾಯತಿಗೆ ಪ್ರತ್ಯೇಕ ನಡೆಸಿಕೊಂಡು ಬರಲು ಅಸಮರ್ಥವಾದರೆ ಕೆಲವು ಪಂಚಾಯಿತಿಗಳೊಟ್ಟುಗೂಡಿ ಕೆಲಸ ನಿರ್ವಹಣ ಮಾಡಬೇಕೆಂದೂ, ಡಿಸ್ಟ್ರಿಕ್ಟ್ ಬೋರ್ಡುಗಳಿಂದ ಐದನೇ ತರಗತಿ ವರೆಗಿನ ಎಲಿಮೆಂಟರಿ ಶಾಲೆಗಳ ಆಡಳಿತವು ಪಂಚಾಯತುಗಳಿಗೆ ಕೊಡಲ್ಪಡಬೇಕೆಂದೂ ಕೆಲವು ಸೂಚನೆಗಳಿವೆ. ಪಂಚಾಯತುಗಳಿಗೆ ಈ ಬಗ್ಗೆ ಆರ್ಥಿಕ ವ್ಯವಸ್ಥೆಗೆ, ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ದೊರೆವ ತರದ ಗ್ರೆಂಟೂ, ಇತರಮನೆ ತೆರಿಗೆ, ವಾಹನ ತೆರಿಗೆ, ಭೂತೆರಿಗೆಗಳು ಹೆಚ್ಚಿಸಲ್ಪಡಬೇಕೆಂದೂ ಪ್ರತೀ ಪಂಚಾಯತಿಗೆ ಒಬ್ಬ ಎಕ್ಸಿಕ್ಯುಟಿವ್ ಆಫೀಸರನನ್ನು ನೇಮಿಸುವ, ಗ್ರಾಮಗಳನ್ನು ವಾರ್ಡುಗಳಾಗಿ ವಿಂಗಡಿಸುವ, ಗುಪ್ತಮತದಾನ ಪದ್ಧತಿಯನ್ನನುಸರಿಸುವ, ಡಿಪ್ರೆಸ್ಡ್ ಕ್ಲಾಸ್, ಮುಸಲ್ಮಾನ್, ಇಂಡಿಯನ್ ಕ್ರಿಶ್ಚಿಯನ್ ಜಾತಿಗಳಿಗೆ ಸ್ಥಳ ರಿಸರ್ವ್ ಮಾಡಿಡುವಂತಹ ಸೂಚನೆಗಳು ಇದರಲ್ಲಿ ಅಡಕವಾಗಿವೆಯೆಂದೂ ಗೊತ್ತಾಗಿರುವುದು.

ಹೀಗೆ ಪ್ರಾಂತಿಕ ಸರಕಾರವು ಪಂಚಾಯತು ಸುಧಾರಣೆಯ ವಿಷಯ ಗಮನಕೊಡುವುದು ಬಹಳ ಪ್ರಶಂಸನೀಯ ವಿಚಾರ. ತಮ್ಮ ತಮ್ಮ ಗ್ರಾಮಗಳ ಆಡಳಿತವನ್ನು ಗ್ರಾಮಸ್ಥರೇ ನಡೆಸಿಕೊಂಡು ಬರುವ ಸಂದರ್ಭವೊದಗಿಸುವುದು ರಾಜ್ಯದ ವ್ಯವಸ್ಥೆಯಲ್ಲಿ, ನಮ್ಮ ಹಿಂದೂಸ್ಥಾನದಲ್ಲಿ ವೈದಿಕ ಕಾಲದಿಂದಲೇ ನಡೆದು ಬಂದ ಒಳ್ಳೆಯ ಸಂಪ್ರದಾಯವಾಗಿದೆ. ಇದರಿಂದಾಗಿ ರಾಜ್ಯಘಟನೆಯಲ್ಲಿ ಗ್ರಾಮಸ್ಥರು ಹೆಚ್ಚಿನ ಆಸಕ್ತಿ ವಹಿಸಿಕೊಂಡು ಕೆಲಸ ಮಾಡಿ ರಾಜ್ಯದ ಆಡಳಿತದಲ್ಲಿ ಯೋಗ್ಯತರಬೇತಿ ಹೊಂದುವರೆಂದೂ, ಅದರಲ್ಲಿ ಎದುರಿಸಬೇಕಾದ ಲೋಪದೋಷಗಳನ್ನು ನಿವಾರಿಸಿಕೊಂಡು ಮುಂದಿನ 'ಸ್ವತಂತ್ರ ಹಿಂದುಸ್ಥಾನ'ದ ಭದ್ರ ಅಸ್ತಿವಾರವನ್ನು ಕಲ್ಪಿಸಿಕೊಳ್ಳುವರೆಂದೂ ನಾವು ಹಾರೈಸುತ್ತೇವೆ.

ಜಿನ್ನರ ಕೂಗು

ಮಹಾತ್ಮಾಜಿಯವರು, ಹೊಸ ಚಳವಳವೊಂದನ್ನು ಪ್ರಾರಂಭಿಸುವ ವಿಚಾರದಲ್ಲಿದ್ದಾರೆಂಬ ಸುದ್ದಿ ಕೇಳಿಯೇ ಜಿನ್ನರು ತಲೆಕೆಟ್ಟವರಂತೆ ಪ್ರಲಾಪಿಸುತ್ತಿದ್ದಾರೆ. ಕಾಂಗ್ರೆಸಿನ ಆಶ್ರಯದಲ್ಲಿ ಆಗ ಬಹುದಾದ ಯಾವುದೇ ಹೊಸ ಆಂದೋಲನವನ್ನಾದರೂ ಮುಸ್ಲಿಂ ಲೀಗು ವಿರೋಧಿಸುವುದೆಂದು ಅವರು ಕೂಗಿ ಹೇಳುತ್ತಿದ್ದಾರೆ.

ತಾನು ಪ್ರಾರಂಭಿಸಲಿರುವ ಸತ್ಯಾಗ್ರಹವು, ಯಾವ ರೂಪದನ್ನು, ಯಾವ ಮಾರ್ಪಾಡುಗಳನ್ನು ಹೊಂದುವುದು ಎಂಬೀ ವಿಷಯವಾಗಿ ಗಾಂಧಿಜಿಯೇ ಇದು ವರೆಗೆ ನಿಶ್ಚಯಿಸಿಲ್ಲವಂತೆ; ಆದರೆ ಮಹಾತ್ಮಾಜಿ ಏನೇ ಮಾಡಲಿ, ಕಾಂಗ್ರೆಸು ಯಾವುದೇ ಹೆಜ್ಜೆ ತೆಗೆದುಕೊಳ್ಳಲಿ ಅದನ್ನು ವಿರೋಧಿಸುವುದು ಜಿನ್ನರ—ಎಂದರೆ ಮುಸ್ಲಿಂ ಲೀಗಿನ— ಹಠಸಾಧನೆಯಾಗಿದೆ!

ಕಾಂಗ್ರೆಸು ಮುಂದೆ ಯಾವ ಚಳವಳವನ್ನು ಆರಂಭಿಸಿದರೂ ಯಾವ ಚಟುವಟಿಕೆಯನ್ನು ಕೈಕೊಂಡರೂ ಅದರ ಉದ್ದೇಶವು ಭಾರತದ ಸ್ವಾತಂತ್ರ್ಯ ಸಂಪಾದನೆಯಾಗಿದೆಯೆಂಬ ವಿಷಯ ಯಾರಿಗೂ ಭಿನ್ನಾಭಿಪ್ರಾಯವಿಲ್ಲ! ಆದರೂ ಜಿನ್ನರು ಅದನ್ನು ವಿರೋಧಿಸುವೆನೆಂದು ಮುಂಚಿತವಾಗಿಯೇ ತಿಳಿಸಿ ಬಿಟ್ಟಿದ್ದಾರೆ!

'ಆಂದೋಲನವನ್ನು ಆರಂಭಿಸುವೆನೆಂಬೀತೆರದ ಹೆದರಿಕೆಯು, ಇಂದು ಗಲಭೆಯುಲ್ಲಿರುವ ಬ್ರಿಟನನ್ನು ಬೆದರಿಸಿ ಗಾಂಧಿಜಿಯವರ ಕೇಳಿಕೆಗಳಿಗೆ ಬ್ರಿಟನು ಒಪ್ಪಿಕೊಳ್ಳುವಂತೆ ಮಾಡುವ ಹಂಚಿಕೆಯಾಗಿದೆ' ಎಂದು ಜಿನ್ನಾಸಾಹೇಬರು ಸಂಶಯಾತ್ಮರಾಗಿರುವರು. ಕಪ್ಪು ಕನ್ನಡಕದಿಂದ ನೋಡುವವನಿಗೆ ಲೋಕವೆಲ್ಲವೂ ಕರಿದಾಗಿ ಕಾಣುವುದು ಸಹಜವಷ್ಟೆ? ಪಾಕಿಸ್ತಾನ, ಮುಸ್ಲಿಂ ಸಾಮ್ರಾಜ್ಯಗಳ ದುರುದ್ದೇಶ ಪ್ರೇರಿತರಾದ ಜಿನ್ನಾ ಸಾಹೇಬರಿಗೆ ಗಾಂಧಿಜಿಯ ಪ್ರತಿಯೊಂದು ಕೆಲಸದಲ್ಲಿ ಈ ತರದ ಸಂಶಯ ಹುಟ್ಟುವುದು ಅವರ ಸ್ವಭಾವಕ್ಕೆ ಅನುಗುಣವಾಗಿದೆ. ಅವರ ರಾಷ್ಟ್ರ ಘಾತುಕ ಧೋರಣೆಗೆ ಯೋಗ್ಯವಾಗಿದೆ.

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ
ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡ್ಪಿ.
Iನೇ ಫೋರ್ಮಿಗೆ 0—12—0
IIನೇ ಫೋರ್ಮಿಗೆ 0—12—0
ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಶ್ರೀ. ಭವಾನಿರಾವ್ ಬಿ. ಎ. ಎಲ್. ಟಿ.
IIIನೇ ಫೋರ್ಮಿಗೆ 0—12—0

ಬಾಲಕರ ಲಘುಗಣಿತ
ಬಿ. ಭವಾನಿರಾವ್, ಬಿ. ಎ., ಎಲ್. ಟಿ.
ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0—7—0
ಐದನೇ ದರ್ಜೆಗೆ 0—8—0

ನವೀನ ಭೂವಿವರಣೆ
ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)
ನಾಲ್ಕನೇ ದರ್ಜೆಗೆ 0—6—0
ಐದನೇ ದರ್ಜೆಗೆ 0—7—0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ
ಎಸ್. ರಾಮಕೃಷ್ಣಾಚಾರ್, ಬಿ. ಎ., ಎಲ್. ಟಿ.
ಬೋರ್ಡ್ ಹೈಸ್ಕೂಲ್, ಕಾರ್ಕಳ.
ಆರನೇ ದರ್ಜೆಗೆ 0—6—0
ಏಳನೇ ದರ್ಜೆಗೆ 0—6—0
ಎಂಟನೇ ದರ್ಜೆಗೆ 0—6—0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ವ್ಯಾಕರಣ ಮತ್ತು ಪ್ರಬಂಧ
ಕೆ. ಕೆ. ರೈ. ವಿದ್ವಾನ್.
4 ಮತ್ತು 5ನೇ ದರ್ಜೆಗೆ 0—2—0
ಆರನೇ ದರ್ಜೆಗೆ ಅಥವಾ I ಫೋರ್ಮಿಗೆ 0—3—0
ಏಳನೇ ದರ್ಜೆಗೆ ಅಥವಾ II ಫೋರ್ಮಿಗೆ 0—3—6
ಎಂಟನೇ ದರ್ಜೆಗೆ ಅಥವಾ III ಫೋರ್ಮಿಗೆ 0—4—0

ಮಕ್ಕಳ ಪದ್ಯಮಂಜರಿ
ಕೆ. ಕೆ. ರೈ. ವಿದ್ವಾನ್.
ಮೊದಲನೆಯ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0
ಎರಡನೆಯ ಪುಸ್ತಕ ೪ ಮತ್ತು ೫ನೇ ದರ್ಜೆಗಳಿಗೆ 0-2-6

ಸಿವಿಕ್ಸ್
ಎಂ. ಗಣಪತಿರಾವ್ ಐಗಳ್
ಮೂರನೇ ದರ್ಜೆಗೆ 0—1—6
ನಾಲ್ಕನೇ ದರ್ಜೆಗೆ 0—2—0
ಐದನೇ ದರ್ಜೆಗೆ 0—2—6
ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ ವಿದ್ವಾನ್.
ಆರನೇ ದರ್ಜೆಗೆ 0—3—0
ಏಳನೇ ದರ್ಜೆಗೆ 0—3—0
ಎಂಟನೇ ದರ್ಜೆಗೆ 0—3—0
(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.)

ಚರಿತ್ರೆ ಮತ್ತು ಕಥೆಗಳು
ಮೂರನೇ ದರ್ಜೆಗೆ 0—2—6
ನಾಲ್ಕನೇ ದರ್ಜೆಗೆ 0—3—0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ
ಎಂ. ವಾಸುದೇವರಾವ್, ಎಂ. ಎ. ಎಲ್. ಟಿ.
ಗಣಪತಿ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0—3—0
ಐದನೇ ದರ್ಜೆಗೆ 0—3—6

ಪ್ರಕೃತಿಶಾಸ್ತ್ರ
ಎಂ. ಗಣಪತಿರಾವ್ ಐಗಳ್
ಮೂರನೇ ದರ್ಜೆಗೆ 0—1—6

ಬೇಗನೇ ಪ್ರಕಟವಾಗಲಿವೆ
ನವೀನ ಭೂವಿವರಣೆ
ಎಮ್. ವಾಸುದೇವರಾವ್, ಎಂ. ಎ. ಎಲ್. ಟಿ. (Dip. Geog)
II ಮತ್ತು III ತರಗತಿಗಳಿಗೆ

ಶಾರದಾ ಛಾಪಖಾನೆ ರಥಬೀದಿ, ಮಂಗಳೂರು.

ಜಿಲ್ಲಾ ಸಮಾಚಾರಗಳು

ಸೋವಿಯಟ್ ಯೂನಿಯನ್— ಚೀನಾಗಳ ಮಿತ್ರ ಸಂಘ

ಈ ಸಂಘದ ಒಂದು ಸಭೆ ಕಳೆದ ಶನಿವಾರ ಸ್ಥಳೀಯ ವಿದ್ಯಾರ್ಥಿ ಯೂನಿಯನಿನ ಕಾರ್ಯಾಲಯದಲ್ಲಿ; ಅದರ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟಿ ಎಂ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಉದ್ದೇಶ ಮತ್ತು ಕಾರ್ಯಕಲಾಪಗಳ ರೀತಿಗಳನ್ನು ವಿವರಿಸುವ ಒಂದು ಪ್ರಕಟಣಾ ಪತ್ರವನ್ನು ಪ್ರಕಾಶಗೊಳಿಸುವಂತೆ ನಿರ್ಧರಿಸಿ, ಆ ಪ್ರಕಟಣಾ ಪತ್ರವನ್ನು ಸಿದ್ಧಗೊಳಿಸಲು ಶ್ರೀಗಳಾದ ಎ ಬಿ ಶೆಟ್ಟಿ, ಕೆ ಬಿ ಜಿನರಾಜ ಹೆಗ್ಗಡೆ ಎಂ ಎಲ್ ಎ [ಕೇಂದ್ರ] ಬಿ ವಿ ಕಕ್ಕಿಲ್ಲಾಯ ಮತ್ತು ಕೆ ಶಿವರಾವ್ ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಯಿತು ಸಂಘದ ಪ್ರಾರಂಭೋತ್ಸವವನ್ನು ಇದೇ ಜುಲೈ ತಾ ೨ರಲ್ಲಿ ನೆರವೇರಿಸುವಂತೆ ನಿಷ್ಕರ್ಷಿಸಲಾಯಿತು

ಭಾಷಣ

ಕಳೆದ ಆದಿತ್ಯವಾರ ಸ್ಥಳೀಯ ಥಿಯಾಸಾಫಿಕಲ್ ಲಾಜಿನಲ್ಲಿ ಶ್ರೀ ಕೆ ಆರ್, ಕಾರಂತ, ಎಂ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಶ್ರೀ ಯು ವಿ, ಆಚಾರ್ಯರವರು 'ಸೋವಿಯೆಟ್ ರಷ್ಯ ಏತಕ್ಕೆ ನನ್ನನ್ನು ಆಕರ್ಷಿಸಿತು?' ಎಂಬ ವಿಚಾರದಲ್ಲಿ ಭಾಷಣ ಮಾಡಿದರು ಭಾಷಣಾನಂತರ ಪ್ರಶ್ನೋತ್ತರಗಳಿದ್ದವು

ದ ಕ. ಜಿಲ್ಲಾ ವಿದ್ಯಾರ್ಥಿಗಳ ಫೇಡರೇಶನಿನ ಕಾರ್ಯಕಾರಿ ಸಮಿತಿಯ ಸಭೆ

ಕಳೆದ ಆದಿತ್ಯವಾರ ಈ ಸಮಿತಿಯ ಸಭೆ ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀ ಡಿ ವಿಠಲ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ನಾರಾಯಣ ನೆಟ್ಟಾರ್—ಜನರಲ್ ಸೆಕ್ರಟರಿ—ಅವರಿಂದ ಒಪ್ಪಿಸಲ್ಪಟ್ಟ ಈ ಸಂಘದ ನಿಯಮಾವಳಿಗಳನ್ನು ಸಮಿತಿ ಮಂಜೂರು ಮಾಡಿತು. ಅಕ್ಟೋಬರದ ಅಂತ್ಯದಲ್ಲಿ 'ಡೆಲಿಗೇಟರ್ ಕನ್ ವೆನ್ ಶನ್" ಒಂದನ್ನು ನೆರಯಿಸಬೇಕೆಂತಲೂ ವಿದ್ಯಾರ್ಥಿಗಳ ಪೌರ ಸೈನಿಕ ದಳವೊಂದನ್ನು ವ್ಯವಸ್ಥೆಗೊಳಿಸಬೇಕೆಂತಲೂ ಈ ವಿಷಯದಲ್ಲಿ ಸಂಬಂಧಪಟ್ಟ ಯೂನಿಯನುಗಳಿಗ ಜನರಲ್ ಸೆಕ್ರಟರಿಗಳು ಸೂಚನೆಗಳನ್ನು ಕಳುಹಿಸಲು ಅಧಿಕೃತರಾಗಬೇಕೆಂತಲೂ ಹೈಸ್ಕೂಲುಗಳಲ್ಲಿ ೯ ಕಂತಿನ ಶಾಲಾ ಫೀಸು ೮ ಕಂತಿಗೆ ಇಳಿಸುವಂತೆ ಶಾಲಾ ಅಧಿಕಾರಿಗಳ ಬಳಿಗೆ ತಮ್ಮದೊಂದು ಶಿಷ್ಟಮಂಡಲವನ್ನು ಕಳುಹಿಸಬೇಕೆಂತಲೂ ಜಿಲ್ಲೆಯಲ್ಲಿ ವಿದ್ಯಾರ್ಥಿಗಳ ಕೇಳಿಕೆಗಳ ದಿನವನ್ನು ಆಚರಿಸಬೇಕೆಂತಲೂ, ಕರ್ನಾಟಕದ ಯೂನಿವರ್ಸಿಟಿ ಸ್ಥಾಪನೆಯನ್ನು ಸ್ವಾಗತಿಸಿ ಅದು ಸಂಪೂರ್ಣ ವಿಶ್ವವಿದ್ಯಾಲಯದಂತಿರದೆ ಮಹತ್ತರವಾದ ಶಕ್ತಿಯುಕ್ತವಾಗಿರಬೇಕೆಂದು, ಆ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಸಮಿತಿಯ ಅಧಿಕಾರಿಗಳಿಗೆ ಸೂಚಿಸಬೇಕೆಂತಲೂ ನಿರ್ಣಯಗಳಾದುವು

ದ. ಕ ಜಿಲ್ಲಾ ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರರ ಸಂಘ

ಈ ಸಂಘದ ಸಾಮಾನ್ಯ ಸಭೆಯು ಕಳೆದ ತಾ ೨೭ರಲ್ಲಿ ಪಾಂಡೇಶ್ವರದಲ್ಲಿ ಡಾ ಯಂ ಆರ್. ಭಟ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಮದ್ರಾಸ್ ಸರಕಾರವು ಬೊಂಬಾಯಿ ಸಂಯುಕ್ತ ಪ್ರಾಂತಗಳಂತೆ, "ಎಲ್ಲೋಪತಿ" ಮತ್ತು "ದೇಶೀಯ ವೈದ್ಯ" ಪದ್ಧತಿಗೆ ಏಕರೀತಿಯಾದ ಪ್ರೋತ್ಸಾಹ ಕೊಡದೆ, ವ್ಯತ್ಯಾಸ ಕಲ್ಪಿಸಿ, ಆ ಸಂಬಂಧ ಹಲವು ಆಜ್ಞೆ ಹೊರಡಿಸಿ, ದೇಶೀಯ ವೈದ್ಯ ಪದ್ಧತಿಯ ಕೈಯನ್ನು ಇನ್ನೂ ದುರ್ಬಲಪಡಿಸುವುದನ್ನು ಪ್ರಸ್ತಾವಿಸಿ, ಸರಕಾರವು ಆ ರೀತಿಯ ಚಳವಳವನ್ನು ಮಾಡಬಾರದೆಂದೂ, ದೇಶೀಯ ವೈದ್ಯ ಪದ್ಧತಿಯ ಕೇಂದ್ರ ಸಮಿತಿ ಈ ಪದ್ಧತಿಯ ಹಕ್ಕು ಬಾಧ್ಯತೆ, ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವಂತೆ ಪ್ರಯತ್ನಿಸಬೇಕೆಂದೂ ಠರಾವುಗಳನ್ನು ಮಂಜೂರು ಮಾಡಿತು. ೧೯೪೨—೪೩ನೇ ವರ್ಷದ ಆಡಳಿತದ ಅಧಿಕಾರ ಮಂಡಲದಲ್ಲಿ ವೈದ್ಯರುಗಳಾದ ಪಿ. ಐ ಕೇಳು ನಂಬಿಯಾರರನ್ನು ಅಧ್ಯಕ್ಷರನ್ನಾಗಿಯೂ, ಎಚ್ ತಿಮ್ಮಪ್ಪ ಪಂಡಿತರನ್ನು ಉಪಾಧ್ಯಕ್ಷ, ಬಿ ಆರ್ ಹರಿದಾಸರನ್ನು ಖಜಾಂಚಿ, ಪಿ ವೆಂಕಪ್ಪಯ್ಯನವರನ್ನು ಕಾರ್ಯದರ್ಶಿಯರನ್ನಾಗಿಯೂ ಚುನಾಯಿಸಲಾಯಿತು.

'ಬಾಲಾಜಿ ಟಾಕಿಸ'
'ನವಜೀವನ್'

ಸ್ಥಳೀಯ ಬಾಲಾಜಿ ಟಾಕಿಸಿನಲ್ಲಿ ತಾ ೪ ರಿಂದ ಬೊಂಬಾಯಿ ಟಾಕಿಸಿನವರ ಉಜ್ವಲ ಚಿತ್ರ 'ನವಜೀವನ್' ಪ್ರದರ್ಶಿತವಾಗಲಿದೆ

ಸಹಕಾರಿ ಸಭೆಗಳು

ಕಳೆದ ತಾ ೨೧ನೇ ಆದಿತ್ಯವಾರ ಸ್ಥಳೀಯ ಸೆಂ। ಕೊ। ಬೇಂಕಿನ ಕಟ್ಟಡದಲ್ಲಿ ಸೆ ಕೊ ಬ್ಯಾಂಕಿನ ಡೈರೆಕ್ಟರರ ಸಭೆ ಶ್ರೀ ಎಂ ಶಿವರಾಯರ ಅಧ್ಯಕ್ಷತೆಯಲ್ಲಿ ಸೇರಿ, ಬೇಂಕಿನ 'ಸುಪರ್ ರಿವಿಜನ್" ಕಮಿಟಿಗೆ ದಿವಂಗತ ಡಾ ಕರೆಂಜಿಯವರ ಬದಲಿಗೆ ಶ್ರೀ. ಬೆಳ್ತಂಗಡಿ ಮಂಜೇಶರಾಯರನ್ನು ಸದಸ್ಯರನ್ನಾಗಿ ಆರಿಸಿತು

ಅದೇ ದಿನ ಅದೇ ಕಟ್ಟಡದಲ್ಲಿ ಶ್ರೀ ಎಂ ಶಿವರಾಯರ ಅಧ್ಯಕ್ಷತೆಯಲ್ಲಿ ನಡೆದ ಕೃಷಿಕರ ಭಂಡಶಾಲೆ ಸಂಘದ ಡೈರೆಕ್ಟರರ ಸಭೆ, ಆ ಸಭೆಯ ಉಪಾಧ್ಯಕ್ಷರಾಗಿ ಶ್ರೀ ಎನ್ ವಿ ಕೊಳತ್ತಾಯರನ್ನಾರಿಸಿತು

ಅದೇ ದಿನ ಅದೇ ಸ್ಥಳದಲ್ಲಿ ಎಡ್ವಾನ್ಸ್ಮೆಂಟ್ ಸೊಸೈಟಿಯ ಜನರಲ್ ಬೋಡಿ ಮೀಟಿಂಗ್ ಶ್ರೀ ಎಂ ಎಸ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಜರುಗಿ ಅದರ ಅಧ್ಯಕ್ಷರಾದ ದಿವಂಗತ ಶ್ರೀ ಯು ಮಂಗೇಶರಾಯರ ನಿಧನದ ವಿಚಾರದಲ್ಲಿ ವಿಷಾದ ಸೂಚಿಸಿತು ಆಯವ್ಯಯ ಪಟ್ಟಿಯ ಮಂಜೂರಾತಿ, ಡೈರೆಕ್ಟರುಗಳ ಚುನಾವಣೆ ಮೊದಲಾದ ಕಾರ್ಯಕ್ರಮಗಳು ಜರುಗಿದುವು

ದ ಕ ಜಿಲ್ಲಾ ಟೀಚರ್ಸ್ ಗಿಲ್ಡಿನ—

ಆಶ್ರಯದಲ್ಲಿ ಬೆನಾರೆಸಿನ ಕ್ವೀನ್ಸ್ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರಾದ ಶ್ರೀ ಬಿ ಸಂಜೀವರಾಯರು, ಕೆನರಾ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃಂದದೆದುರು ಭಾಷಣವಿತ್ತರು

ಮುನ್ಸಿಪಲ್ ಕೌನ್ಸಿಲು ಮೀಟಿಂಗ್

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಮೀಟಿಂಗ್, ತಾ ೨೯ರಂದು ಸಂಜೆ ಕೌನ್ಸಿಲಿನ ವೈಸ್ ಚೆಯರ್‌ಮ್ಯಾನ್ ಶ್ರೀ ಎಲ್ ಸಿ ಪ್ಯಾಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಕಮಿಶನರಾಗಿ ಶ್ರೀ ಕೆ ರಾಮಸ್ವಾಮಿ ಮೊದಲಿಯಾರರು ಬರಲಿರುವರೆಂದು ತಿಳಿದುಬಂತು ಮಾರ್ಕೆಟ್ ವಾರ್ಡಿನಲ್ಲಿ ಸ್ಥಳಗಳನ್ನು ಏಲಂ ಮಾಡಿದ ಸಂಬಂಧ, ಅಲ್ಲಿ ಆಕ್ಕಪಕ್ಕದ ಸ್ಥಳಗಳ ಮೇಲೆ ಹೆಚ್ಚಿನ ತೆರಿಗೆ ಹೇರುವ ವಿಚಾರದ ಕುರಿತು ಟೌನ್ ಪ್ಲಾನಿಂಗಿನ ಕುರಿತು ಡೈರೆಕ್ಟರರಿಗೆ ಬರೆದು ತಿಳಿದುಕೊಳ್ಳಬೇಕಾಗಿಯೂ ಅಷ್ಟರಲ್ಲಿ ಆ ಸ್ಥಳಗಳ ಬೆಲೆ ಏರಿದ್ದರೆ ಕಮೀಶನರರು ವರದಿಮಾಡಬೇಕಾಗಿಯೂ ಸೂಚಿಸಲ್ಪಯಿತು ಬೊಕ್ಕಪಟ್ಣದಲ್ಲಿ ಸ್ಥಳ ಸಿಗದೆ ಮಾರ್ಕೆಟ್ ತೆರೆಯುವುದಿಲ್ಲವೆಂದಾಯಿತು ಕದ್ರಿ ಮಾರ್ಕೆಟಿನ ಭಾಗದಲ್ಲಿ ಪಿ. ಆರ್ ಪಿ ವಾರ್ಡನರ ಸ್ಥಾನಕ್ಕೆ ಸ್ಥಳಕೊಡಬೇಕೆನ್ನುವ ಅರಿಕೆಯನ್ನು ಮುಂದೊತ್ತಲಾಗದೆಂದಾಯಿತು ಮುನಿಸಿಪಲ್ ಉದ್ಯೋಗಿಗಳಿಗೆ ೩ ತಿಂಳ ಸಂಬಳ ಮುಂಗಡವಾಗಿ ಕೊಡುವ ಮತ್ತು ಸೇಕಡಾ ೨೫ರಷ್ಟು ತುಟ್ಟಿ ಭತ್ತೆಯ ವಿಚಾರಕ್ಕಾಗಿ ಒಂದು ಸಮಿತಿಯ ರಚನೆಯಾಯಿತು ಜೊಸೇಮಿನಿಯನ್ ಕುಷ್ಟರೋಗ ಮಂದಿರಕ್ಕೆ ರೂಪಾಯಿ ೧೫೦ ಮಂಜೂರಾಯಿತು ಮಧ್ಯಾಹ್ನ ಫಿರಂಗಿ ಹೊಡೆಯಲೂ ಮುನಿಸಿಪಲ್ ಉದ್ಯೋಗಿಗಳಿಗೆ ಆಕ್ಕಿ ಮೊದಲಾದುವುಗಳನ್ನು ಅಸಲ್ ಖರೀದಿಗೆ ಒದಗಿಸುವಂತೆ ಸರಕಾರದ ಅನುಮತಿ ಪಡೆಯಲೂ ನಿರ್ಧಾರವಾಯಿತು

(೬ನೇ ಪುಟಕ್ಕೆ ಮುಂದುವರಿದಿದೆ)

ANNOUNCEMENT

7000 Shares

5% Cumulative First Preference

LIST CLOSED

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability)

Estd 1906

YOUR INTERESTS & OURS.

The interests of the banker and his customers are closely related. We therefore try to study all matters from your stand point Tell us your requirements

CANARA BANK, LIMITED.

ESTD 1906

ನಿಮ್ಮ ಕಂಠ ಮತ್ತು ಶ್ವಾಸಕೋಶವನ್ನು ಸಂರಕ್ಷಿಸಿರಿ.

ನೀವು ಕಫ, ಶೀತ ಹಿಮಬಾಧೆ, ಎದೆನೋವು, ... ನೋವುಗಳಿಂದ ನರಳ ... ವಿಷಹಾರೀ ಶ್ವಾಸ ಯೋಗ್ಯ ಪೆಪ್ಸ್ ಮಾತ್ರೆಗಳನ್ನು ಉಪಯೋಗಿಸಿದರೆ ಖಂಡಿತ ಗುಣ ಹೊಂದುವಿರಿ

ಪೆಪ್ಸ್ ಮಾತ್ರೆಗಳು ಬಾಯಿಗೆ ಹಾಕಿದ ಕೂಡಲೆ ಕರಗಿ ... ಔಷಧಿರಸವನ್ನು ಹೊರಗೆಡಹುತ್ತವೆ, ಅದು ಶ್ವಾಸಕೋಶಕ್ಕೆ ಹೋಗಿ, ಅಲ್ಲಿರುವ ವಿಷಕ್ರಿಮಿಗಳನ್ನು ನಾಶಗೊಳಿಸುವವು ... ನಾಳದ ನೋವನ್ನು ... ಎಂತಹ ... ಶೀತ ... ಗಳನ್ನು ಇಳಿಸುವವು ಪೆಪ್ಸ್ ಮಾತ್ರೆಗಳು ಕಂಠ ನಾಳವನ್ನು ಸರಿಗೊಳಿಸುವವು. ಹೀಗೆ ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಉತ್ತಮ ಆರೋಗ್ಯವನ್ನುಂಟು ಮಾಡುವವು ಪೆಪ್ಸ್ ಮಾತ್ರೆಗಳು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಒಂದು ರೂಪಾಯಿಗೆ ದೊರೆಯುವವು

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಕ ಶ್ವಾಸನೀಯ ಗುಳಿಗೆಗಳು

(೫ನೇ ಪುಟದಿಂದ ಮುಂದುವರಿದುದು)

ಕಾರ್ಕಳ

ಬಡಜನ ಸಹಾಯ.–ಆಹಾರ ಜೀನಸುಗಳ ಬೆಲೆ ಮಿತಿಮೀರಿ ಏರಿದ ದೆಸೆಯಿಂದ ಉಂಟಾದ ವಿಷಮ ಸ್ಥಿತಿಯನ್ನು ಸುಧಾರಿಸಿ ಬಡವರಿಗೆ ಸೇರಿಗೆ 0-2-4ಯಂತೆ ಅಕ್ಕಿ ಮಾರಲಿಕ್ಕೆ ಇಲ್ಲಿ ಆಢ್ಯ ಗೃಹಸ್ಥರ ಒಂದು ಬಡಜನ ಸಹಾಯ ಸಮಿತಿಯಾಗಿ ಕಾರ್ಯಾರಂಭವಾಗಿರುವುದು.

ನೂಲುವ ಪ್ರದರ್ಶನ.–ಇಲ್ಲಿಯ ಕಾಂಗ್ರೆಸ್ ಕೆಲಸಗಾರರಲ್ಲೊಬ್ಬರಾದ ಶ್ರೀ. ಕೆ. ವಾಮನ ಪೈಗಳವರು ಒಂದು ನೂಲುವ ಪ್ರದರ್ಶನವನ್ನು ಏರ್ಪಡಿಸಿದ್ದು ಉತ್ತಮವಾಗಿ ನೂಲುವವರಿಗೆ ಬಹುಮಾನ ಕೊಡುವ ಏರ್ಪಾಡು ಮಾಡಿದ್ದಾರೆ.

ಆಳಿಗೆ ಮರಣದಂಡನೆ

ಕಾರ್ಕಳ ತಾಲೂಕು ಮರ್ನಾಡು ಗ್ರಾಮದ ಕುಪ್ಪ ಸೆಟ್ಟಿ ಎಂಬವನು ಕೋನೆಸ್ ಬ್ಯಾ ಎಂಬ ವೀಳ್ಯದೆಲೆ, ಬೆಲ್ಲ ವಗೈರೆ ವಸ್ತುಗಳನ್ನು ಮನೆ ಮನೆಗೆ ಕೊಂಡು ಹೋಗಿ ಮಾರುವ ಹೆಂಗಸೊಬ್ಬಳನ್ನು ಅವಳ ಮೈಮೇಲಿರುವ ಆಭರಣಗಳಿಗಾಗಿ ಕುತ್ತಿಗೆ ಕಡಿದು ಕೊಂದು ಅವಳ ಶವವನ್ನು ಹತ್ತಿರದಲ್ಲಿರುವ ಹಾಳು ಬಾವಿಯಲ್ಲಿ ಹುಗಿದಿಟ್ಟನೆಂಬ ಅಪಾದನೆಯ ಮೇಲೆ ಸದರಿ ಕುಪ್ಪಸೆಟ್ಟಿಯನ್ನು ಸೆಶ್ಯನ್ಸ್ ಕೋರ್ಟಿಗೆ ಕಮಿಟು ಮಾಡಲಾಗಿತ್ತು. ತನ್ನ ವೈರಿಗಳು ತನ್ನ ಮೇಲೆ ಸುಳ್ಳು ಕೇಸನ್ನು ಮಾಡಿದ್ದಾಗಿ ಆಳಿಯು ಹೇಳಿಕೆಯಾಗಿತ್ತು. ಎಲ್ಲಾ ಎಸೆಸರೂ ಆಳಿಯು ತಪ್ಪುಗಾರನೆಂತ ಅಭಿಪ್ರಾಯ ಕೊಟ್ಟಿದ್ದರು. ಅದನ್ನು ಮಂಜೂರು ಮಾಡಿ ಮಂಗಳೂರಿನ ಸೆಶ್ಯನ್ಸ್ ಜಡ್ಜರಾದ ಶ್ರೀ. ಪಾರ್ಥಸಾರಥಿ ಅಯ್ಯರ್‌ರವರು ಆಳಿಗೆ ಇ. ಪಿ. ಕೋಡಿನ ೩೦೨ನೇ ಕಲಂ ಪ್ರಕಾರ ಮರಣ ದಂಡನೆಯನ್ನು ವಿಧಿಸಿದರು. ಆಳಿಯ ಕಡೆಯಿಂದ ಕೋರ್ಟಿನಿಂದ ನೇಮಿಸಲ್ಪಟ್ಟ ಶ್ರೀ. ಯಂ. ಪಿ. ಶೆಣೆಯವರು ವಾದಿಸಿದ್ದರು.

ಉಡುಪಿ

ಉಡುಪಿ ಕ್ಲಬ್ಬಿನ ವರ್ಷಾವಧಿ ಸಭೆಯು ಶ್ರೀ. ಗಣೇಶ ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ ಜಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಸಮಿತಿಯ ರಚನೆಯಾಯಿತು.

'ರಷ್ಯಾ ದಿನಾಚರಣೆ

ಯು ಉಡ್ಪಿತಾಲೂಕು ಯುದ್ಧಸಮಿತಿಯ ನೇತೃತ್ವದಲ್ಲಿ ಮಿಸೆಸ್. ಕೆ ಕಣ್ಣನ್ ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ನಗರ ಸಭೆ

ಯು ಚೆಯರ್ ಮ್ಯಾನರ ಅಧ್ಯಕ್ಷತೆಯಲ್ಲಿ ಶ್ರೀ. ಎಲ್ ಎಸ್ ನಾಯ್ಕರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು. ತೆಂಕಣ ಹುಡುಗಿಯರ ಪ್ರಾಥಮಿಕ ಶಾಲೆಯನ್ನು ಹಾ. ಎ. ಶಾಲೆಯನ್ನಾಗಿ ಮಾರ್ಪಡಿಸಬೇಕಾಗಿಯೂ ಬಾಲ್ತಿ ವರುಷದಿಂದ ಆರನೇ ಇಯತ್ತೆಯನ್ನು ತೆರೆಯಬೇಕಾಗಿಯೂ ಠರಾವಾಯಿತು.

ಅಭಿನಂದನೆ ಸಭೆ

ಪಣಿಯಾಡಿ ವಾರ್ಡಿನಲ್ಲಿ ತೆರೆಯಲ್ಪಟ್ಟ ಶ್ರೀ. ವಿದ್ಯಾನಿಧಿತೀರ್ಥಸ್ವಾಮಿ ಎಲಿಮೆಂಟರಿ ಶಾಲೆಗೆ ಇಲಾಖಾ ಅಧಿಕಾರಿಗಳಿಂದ ಮಂಜೂರಾತಿ ದೊರೆತುದರ ಸಂತೋಷ ಸೂಚನಾರ್ಥ ಅಭಿನಂದನ ಸಭೆಯು ಕಳೆದ ಶನಿವಾರ ಡಾ. ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ ಸರ್ಕಲ್ ಕಾಂಗ್ರೆಸ್

ಕಮಿಟಿಯ ಸ್ಥಾಪನೆಯು ನಡೆಯಿತು. ಕಾರ್ಯಕಾರಿ ಮಂಡಳಿಯ ಚುನಾವಣೆಯೂ ಆಯಿತು.

ಪುತ್ತೂರು

ಹರಿಜನ ಹಾಸ್ಟೆಲ್ ಉದ್ಘಾಟನೆ

ಪುತ್ತೂರು ತಾಲೂಕಿನ ಹರಿಜನ ವಿದ್ಯಾರ್ಥಿ ಭವನವು ಕಳೆದ ತಾ. ೩೧ರಂದು ಸ್ಥಳೀಯ ದರ್ಬೆಯೆಂಬಲ್ಲಿ ಹರಿಜನ ಸೇವಕ ಸಂಘದ ಆಶ್ರಯದಲ್ಲಿ ತೆರೆಯಲ್ಪಟ್ಟಿತು. ಆ ದಿನ ಶ್ಯಾಮ ಘಂಟೆ ೫–೩೦ಕ್ಕೆ ಇಲ್ಲಿಯ ಸಹಕಾರಿ ಸಂಘದ ಕಟ್ಟಡದಲ್ಲಿ ಶ್ರೀ. ಎಮ್. ಸದಾಶಿವರಾವ್ ಅವರ ಅಧ್ಯಕ್ಷತೆಯಲ್ಲಿ ತಾಲೂಕು ಹರಿಜನ ಸೇವಕ ಸಂಘದ ಸಭೆಯು ಜರಗಿ, ಹರಿಜನ ವಿದ್ಯಾರ್ಥಿ ಭವನದ ಉದ್ಘಾಟನೆಯನ್ನು ಮಂಜೂರು ಮಾಡಿ ಅದಕ್ಕೆ ಸಂಬಂಧಪಟ್ಟ ಅಧಿಕಾರಗಳನ್ನು ಕಮಿಟಿಗೆ ಕೊಡಲಾಯಿತು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 111/1942.

ಉಳ್ಳಾಲ ವಾಸುದೇವ ಮಲ್ಯ ಸಹಾ.........

.........ವಾದಿರು

ಮತ್ತು

ಪದ್ಮಾವತಿ ಹೆಂಗ್ಸು ಸಹಾ... ಪ್ರತಿವಾದಿರು

ಇವರೊಳಗೆ

6ನೇ ಪ್ರತಿವಾದಿ ಲಕ್ಷ್ಮಿಯಾನೆ ಅಕ್ಕಮ್ಮ–ಪಣೆಕಲ ಕೋಟ್ಯಪ್ಪ ಪೂಜಾರಿ ಮಗಳು ಮತ್ತು ಆತಿ ಪೂಜಾರಿಯ ಹೆಂಡ್ತಿ ಮಂಗಳೂರು ತಾಲ್ಲು ಮೂಡ ಶೆಡ್ಡೆ ಗ್ರಾಮದಲ್ಲಿರುವವಳು—ಇವರಿಗೆ ತಿಳಿಯಪಡಿಸುವುದೇನೆಂದ್ರೆ—

ಮೃತ ಕೋಟ್ಯಪ್ಪ ಪೂಜಾರಿಯು ತಾ. 26-3-1920ಕ್ಕೆ ಬರಕೊಟ್ಟ ಅಡವು ದಸ್ತಾವೇಜಿನ ಬಾಬ್ತು ಬರತಕ್ಕ ಹಣಗಳನ್ನು ಬರಮಾಡಿಕೊಳ್ಳುವರೆ ವಾದಿರು ದಾಕ್ಲು ಮಾಡಿದ ಮೇಲಿನ ವ್ಯಾಜ್ಯವು ತಾರೀಕು 16-7-1942ಕ್ಕೆ ನಿಮ್ಮ ಹಾಜರಾತಿ ಬಗ್ಗೆಯಿಟ್ಟಿರುತ್ತದೆ. ಆದ್ದರಿಂದ ನೀವು ಸದ್ರಿ ದಿನ ಹಗಲು ಗಂಟೆ 10–30ಕ್ಕೆ ಈ ಕೋರ್ಟಿನ ಮುಂದೆ ಖುದ್ದು ಖಿಂದಾಗಲೀ ವಕೀಲರ ಮುಖಾಂತರವಾಗಲೀ ಹಾಜರಾಗಿ ಉದಹರಿಸುವರೇ ತಪ್ಪಿದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸೋಣಾಗುವುದು ತಿಳಿದಿರಲಿ.

(By order of Court)

Mangalore 26-6-42 | B. Srinivasa Rao, Pleader for plaintiffs

ನೋಟಿಸು

ದಕ್ಷಿಣ ಕನ್ನಡ ಜಿಲ್ಲೆ ಮಂಗ್ಳೂರು ತಾಲೂಕು ಸುರತ್ಕಲ್ ಗ್ರಾಮದ ದೊಡ್ಡ ಕೊಪ್ಲ ಪಟ್ಣದ ದರ್ಮಯ್ಯ ಮನೆಯಲ್ಲಿರುವ ಸೇಸು ಹೆಂಗಸು ಮತ್ತು ಅವಳ ಅಣ್ಣ ತನಿಯಪ್ಪ ಮರಕಲರಿಗೂ ವ, ಸಮಸ್ತ ಜನರಿಗೂ ಈ ಮೂಲಕ ತಾಲ್ಲು ಮಂಗ್ಳೂರು ಸುರತ್ಕಲ್ ಗ್ರಾಮದ, ಗುತ್ತು ಕೊಪ್ಲ ಪಟ್ಣದ ಉಗ್ಗಪ್ಪ ಮಂಗ ಜಾರುನ ಮನೆಯಲ್ಲಿರುವ ಸೋಮ ಮರಕಲನ ಅಳಿಯ ವೀರಪ್ಪನು ತಿಳಿಯಪಡಿಸುವುದೇನೆಂದ್ರೆ—

ನಮ್ಮ ಕುಟುಂಬಾಂತರ್ಗದ ಸುರತ್ಕಲ್ ದೊಡ್ಡಕೊಪ್ಲ ಪಟ್ಣದಲ್ಲಿರುವ ಸ್ಥಿರಾಸ್ತಿ ಸರ್ವಾದಿಯನ್ನು ಅದೇ ಮನೆಯಲ್ಲಿದ್ದು ಅದನ್ನು ಅನುಭವಿಸಿಕೊಂಡು ಬರುತ್ತಿರುವ ಮೇಲೆ ಹೆಸರು ಕಾಣಿಸಿರುವ ಸೇಸು ಹೆಂಗಸು ಮತ್ತು ಅವಳ ಅಣ್ಣ ತನಿಯಪ್ಪ ಮರಕಲನು ಕೂಡಾ ಸೇರಿ ಕುಟುಂಬದ ಇಷ್ಟತರ ಮೆಂಬರರಿಗೆ ಮೋಸ ಮಾಡುವ ಇರಾದೆಯಲ್ಲಿದ್ದು, ನಮಗೆ ತಿಳಿಸದೆ, ಅನ್ಯರಿಗೆ ಪರಾಧೀನ (ಅಡವು ವಗೈರೆ ಮಾಡುವರೆ, ಉದ್ಯುಕ್ತರಾಗಿದ್ದಾರೆಂದು ತಿಳಿದುಬರುತ್ತದೆ. ಆ ಆಸ್ತಿಯು ನಮ್ಮ ಹಿರಿಯರ ಕುಟುಂಬಾರ್ಥದ ಆಸ್ತಿಯಾಗಿದ್ದು ನಾನು ನನ್ನ ತಮ್ಮ ತನಿಯ, ತಂಗಿ ನೋಡು, ವ, ಮುಕ್ತೊಂದು ಕಡದಿನಲ್ಲಿ ಬಯ್ಯು ಹೆಂಗ್ಸು, ಅವಳ ಅಣ್ಣ ಸುಬ್ಬಪ್ಪ ಗುರಿಕಾರ, ಆತನ ತಮ್ಮ ಸೇಸು ಮರಕಲ ಮತ್ತು ನಮ್ಮ ಕಿರೀ ಮೆಂಬರರು ಕೂಡಾ ಸಮುಸಿಷ್ಟ ಹಕ್ಕುದಾರರಾಗಿರುತ್ತೇವೆ. ಆದುದರಿಂದ ನಮ್ಮ ಒಪ್ಪಿಗೆ ವಿನ್ಹಾ ಈ ಆಸ್ತಿಯನ್ನು ಯಾರಾದ್ರೂ ಪರಾಧೀನ, ಅಡವು, ದಾನ, ಮೂಲಗೇಣಿ, ದತ್ತ, ವಗೈರೆ ಮಾಡಿಕೊಂಡರೆ, ಯಾ, ಆಸ್ತಿ ಜವಾಬ್ದಾರಿಯ ಮೇಲೆ ಸಾಲಸಹ ಕೊಟ್ಟರೂ, ಅವುಗಳು ನಮಗಾಗ್ಲಿ ನಮ್ಮ ಕುಟುಂಬಾರ್ಥದ ಆಸ್ತಿಗಾಗ್ಲಿ ಬಾಧಿಸತಕ್ಕವು ಅಲ್ಲ. ಯಾರಾದ್ರು ಇದಕ್ಕೆ ವಿಪರೀತವಾಗಿ ವರ್ತಿಸಿ, ಕ್ರಯ ವಗೈರೆ ಮಾಡಿಕೊಂಡರೆ, ಅವರೇ ಆ ಕಷ್ಟನಷ್ಟಗಳಿಗೆ ಬಾಧ್ಯರಾಗಿರಬೇಕು ಎಂಬ ಸಂಗ್ತಿ ಈ ನೋಟೀಸು ಮೂಲಕ ತಿಳಿದಿರತಕ್ಕದ್ದು.

ವೀರಪ್ಪ ಗುರುವ

ಸಹಿ

ಮೂಲ್ಕಿ

ಸತ್ಕಾರ:–ಮಿಸ್ ಆರ್. ವಿಲಾಸಿನಿ ದೇವಿ ಶೆಟ್ಟಿ, ಎಂ. ಎ. [ಆನರ್ಸ್] ಬಿ. ಎಲ್. ಎಡ್ವಕೇಟ್ ಇವರ ಗೌರವಾರ್ಥವಾಗಿ ಶ್ರೀ. ಕೆ. ಯು. ಪೈಯವರು ತಮ್ಮ ಗೃಹದಲ್ಲಿ ಒಂದು ಸಂತೋಷ ಕೂಟವನ್ನು ಏರ್ಪಡಿಸಿದರು.

ಅಮ್ಮೆಂಬಳ

ಅಮ್ಮೆಂಬಳ ಸೋಮನಾಥ ಸಂಸ್ಕೃತ ಪಾಠಶಾಲೆಯ ವರ್ಧಂತ್ಯುತ್ಸವವು ಎಡ್ವಕೇಟ್ ಶ್ರೀ. ಕೆ. ಬಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.25 ಬೆಳಿಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.30 ಬೆಳಿಗ್ಗೆ	6.45 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	11.30 ಮಧ್ಯಾಹ್ನ	3.45 ಸಾಯಂ.
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ದೇಹದ ಹೊರಭಾಗವನ್ನು ಶುಚಿಗೊಳಿಸಿರಿ.

ನಿಮ್ಮ ದೇಹದೊಳಭಾಗವನ್ನು ಸದಾ ಶುಚಿಯಾಗಿಡಿರಿ. ಆದರೆ ಅದಕ್ಕೆ ನೀವೇನುಮಾಡತಕ್ಕದ್ದು? ನಿಮ್ಮ ಆರೋಗ್ಯವು ನಿಮ್ಮ ದೇಹದೊಳಗಿನ ನೈರ್ಮಲ್ಯವನ್ನು ಹೊಂದಿಕೊಂಡಿದೆ. ದೇಹದೊಳಭಾಗವು ನಿರ್ಮಲವಾಗಿಡಲು ಪ್ರತಿ ದಿನ ಎಂಡ್ರೂಸ್ ಲಿವರ್ ಸೋಲ್ಟ್ ತೆಕ್ಕೊಳ್ಳಿರಿ. ದೇಹದೊಳಗೆ ತುಂಬಿದ ವಿಷವನ್ನು ಅದು ತೊಳೆಯುವುದು. ಅಜೀರ್ಣ, ಮಲಬದ್ಧತೆ ಮೊದಲಾದ ಬಾಧೆಗಳನ್ನು ನಿವಾರಿಸುವುದು. ಅದೊಂದು ಚಟವಾಗುವುದೂ ಇಲ್ಲ. ಸಣ್ಣ ಡೋಸ್ ಯಾವಾಗಲೂ ಉತ್ತಮ.

ಆರೋಗ್ಯಕರ ಪಾನೀಯ ಮತ್ತು ಶಕ್ತಿವರ್ಧಕ

ಶುಚಿಗೊಳಿಸುವದು—ತಂಪುಗೊಡುವದು—ಚೈತನ್ಯ ತುಂಬಿಸುವದು.

ANDREWS LIVER SALT

ಉಲ್ಲಾಸವನ್ನುಂಟುಮಾಡುವುದು

ಆಹಾರ ಸಾಮುಗ್ರಿಗಳ ಬೆಲೆಯ ಹತೋಟಿಗಾಗಿ
ಮಂಗಳೂರಲ್ಲಿ ನಾಗರಿಕ ವರ್ತಕರ ಸಭೆ

ಕಳೆದವಾರ ಸ್ಥಳೀಯ ನಾಗರಿಕ ಮತ್ತು ವರ್ತಕರದೊಂದು ಸಾರ್ವಜನಿಕ ಸಭೆ "ಕೆನರಾ ಚೇಂಬರ್ ಆಫ್ ಕಾಮರ್ಸ್" ಮಂದಿರದಲ್ಲಿ ಶ್ರೀ. ಜೂಗಪ್ಪ ರೆ. ಡಿ ಆಫೀಸರ್ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಧಾನ್ಯದವಸಗಳ ಬೆಲೆಯ ಹತೋಟಿಯ ವಿಚಾರವನ್ನು ಆಲೋಚಿಸುವುದೇ ಈ ಸಭೆಯ ಉದ್ದೇಶವಾಗಿತ್ತು. ಅಕ್ಕಿ, ಸಕ್ಕರೆ, ಚಿಮಿಣಿ ಎಣ್ಣೆ, ಬೆಂಕಿ ಪೆಟ್ಟಿಗೆ ಮೊದಲಾದುವುಗಳ ಬೆಲೆಗಳ ವಿಚಾರವನ್ನೂ ಅವುಗಳ ದಾಸ್ತಾನು, ವಹಿವಾಟು, ಮಾರಾಟ ಹಾಗೂ ದರಗಳ ವಿಷಯವನ್ನೂ, ಬೆಲೆ ನಿರ್ಣಯಕ್ಕೆಂದಿರುವ ಎಡ್ವೈಜರಿ ಕಮಿಟಿಯು ಪ್ರಕಟಿಸಿರುವ ಬೆಲೆ ನಿರ್ಣಯದ ಪಟ್ಟಿಯ ವಿಚಾರವನ್ನೂ, ಅತಿ ಲಾಭವೆಂದರೇನೆಂಬುದನ್ನೂ ಯಾವ ಯಾವ ಸಂಧರ್ಭಗಳಲ್ಲಿ ಕಾನೂನು ಲಗಾವಾಗುವುದೆಂಬುದನ್ನೂ ವಿವರಿಸಿ, ಸರಕಾರದ ಉದ್ದೇಶವು ವರ್ತಕರ್ಯರೊಬ್ಬರ ಹಿಂಸೆಯಲ್ಲವೆಂದೂ ವರ್ತಕರು ಬೆಲೆಯ ಹಿಡಿತ ಕಾರ್ಯದಲ್ಲಿ ಸಹಕರಿಸಬೇಕೆಂದೂ ಅಧ್ಯಕ್ಷರು ಭಾಷಣ ಮಾಡಿದರು. ಕೋ-ಒಪರೇಟಿವ್ ಸೊಸೈಟಿಗಳ ಡೆ. ರಿಜಿಸ್ಟ್ರಾರರಾದ ಶ್ರೀ ಕೆ ಅಚ್ಯುತನ್‌ನಾಯರರವರು ಸಹಕಾರ ಸಂಸ್ಥೆಗಳಲ್ಲಿರುವ ಅಕ್ಕಿ ದಾಸ್ತಾನಿನ ವಿಚಾರ ಮಾತಾಡಿ, ನ್ಯಾಯವಾದ ಬೆಲೆಗಿಂತ ಹೆಚ್ಚು ಬೆಲೆಗೆ ಮಾರಲು ಅಪೇಕ್ಷಿಸುವವರ ಅಕ್ಕಿಯನ್ನು ಮಾಲಕರಿಗೇ ಹಿಂತಿರುಗಿಸುವುದಾಗಿ ಸೂಚಿಸಿದರು. ಅನಂತರ ಬೆಲೆಯ ಮಿತಿಯ ಕುರಿತು ಚರ್ಚೆ ಆರಂಭವಾಗಿ ಚರ್ಚಾಕಾಲದಲ್ಲಿ ವರ್ಗದಾರರ ಬೆಲೆ, ಮಲಬಾರಿನವರ ಅಕ್ಕಿಯ ವ್ಯಾಪಾರ ಮೊದಲಾದ ಹಲವು ಪ್ರಶ್ನೆಗಳು ಬಂದುವು. ಎಡ್ವೈಜರಿಕಮಿಟಿಯವರು ನಿರ್ಧರಿಸಿದ ಬೆಲೆಗೇ ಮಾರಲು ಅನುಕೂಲಿಸುವಂತೆ ರಖಮ್ ವ್ಯಾಪಾರಿಗಳು ಅಕ್ಕಿಯನ್ನು ಜಮೀನುದಾರರಿಂದ ಪಡೆಯಬೇಕೆಂದೂ, ಅದಕ್ಕಿಂತ ಹೆಚ್ಚಿಗೆ ಕ್ರಯಕೊಟ್ಟು ಪಡೆಯಬಾರದೆಂದೂ, ಅತಿ ಲಾಭದಾಸೆಯಿಂದ ಮಲಬಾರಿಗೆ ಅಕ್ಕಿ ಕಳುಹಿಸಬಾರದೆಂದೂ, ಜಮೀನದಾರರು ಅವರ ಅಕ್ಕಿ ಮಾರುವ ದರವನ್ನು ನಿರ್ಣಯಿಸುವುದಾಗಲಿ, ಮಲಬಾರಿಗೆ ಅಕ್ಕಿ ಸಾಗದಂತೆ ತಡೆಯುವದಾಗಲೀ ಸರಕಾರಕ್ಕೆ ಅಷ್ಟು ಆಗತ್ಯ ತೋರುವದಿಲ್ಲವೆಂದೂ, ಯಾವ ಸಂದರ್ಭದಲ್ಲಿಯೂ ಎಡ್ವೈಜರಿ ಕಮಿಟಿ ಈಚೆಗೆ ಪ್ರಕಟಿಸಿರುವ ತನ್ನ ಬೆಲೆ ನಿರ್ಣಯದ ಪಟ್ಟಿಯ ಬೆಲೆಯನ್ನು ಸದ್ಯ ಏರಿಸುವುದಿಲ್ಲವಾಗಿ ಅದೇ "ಪರಮಾವಧಿಯ ಬೆಲೆ" ಎಂದೂ ಕಾನೂನನ್ನು ಲಗಾವು ಮಾಡುವ ಮೊದಲು ಕೊಂಡು ತಿನ್ನುವವರು ಮತ್ತು ವ್ಯಾಪಾರಿಗಳು ಇವರ ಹಿತ ದೃಷ್ಟಿಯಿಂದ ಇಬ್ಬರಿಗೂ ನ್ಯಾಯವಾಗುವಂತೆ, ಮಧ್ಯಸ್ತಿಕೆಯಿಂದ ಒಂದು ಬೆಲೆ ನಿರ್ಣಯಿಸಲು ಮಾಡಿದ ಪ್ರಯತ್ನವಿದೆಂದೂ ಅಧ್ಯಕ್ಷರು ಪ್ರಕಟಪಡಿಸಿದರು. ಕೊನೆಗೆ ಬೆಲೆ ನಿರ್ಣಯ ಮಾಡುವ ಪ್ರಶ್ನೆಯನ್ನು ಸಂಪೂರ್ಣವಾಗಿ ವರ್ತಕರ ಪಾಲಿಗೇ ಬಿಡಲಾಗಿ, ಆ ಕುರಿತು ಚರ್ಚೆ ನಡೆದು, ರಖಮ್ ವ್ಯಾಪಾರಿಯೂ, ಚಿಲ್ಲರೆ ವ್ಯಾಪಾರಿಯೂ ಮುಡಿಯೊಂದರ ಮೇಲೆ ಪಡೆಯ ಬಹುದಾದ ಲಾಭಾಂಶವಿಷ್ಟೆಂದು ನಿರ್ಣಯವಾದುದಲ್ಲದೆ, ರಖಮ್ ವ್ಯಾಪಾರಿ ಮಸ್ಕತಿ [ದಯಂ ತರಗತಿ] ಮುಡಿಗೆ ರೂ ೭ ೫ ೦ ಗುಡ್ಡು [ದಯಂ ತರಗತಿ] ಮುಡಿಗೆ ರೂ. ೭-೨-೦, ಸುಗ್ಗಿ ಮುಡಿಗೆ ರೂ ೬ ೧೨-೦, ರಂತೆ ವಿಕ್ರಯಿಸಬಹುದಾಗಿಯೂ ಚಿಲ್ಲರೆ ವ್ಯಾಪಾರಿ ಈ ಬೆಲೆಗಳ ಮೇಲೆ ಅಲ್ಪಸ್ವಲ್ಪ ನಫೆ ಇರಿಸಿ ಮಾರಬಹುದಾಗಿಯೂ ರಾಜಿಯಾಯಿತು. ಚಿಮಿಣಿ ಎಣ್ಣೆ ನಗರದಲ್ಲಿ ಮತ್ತು ಹೊರಗಡೆ ಅನುಕ್ರಮವಾಗಿ ಬಾಟಲಿಗೆ ೧೦ ಮತ್ತು ೧೧ ದುಡ್ಡುಗಳಂತೆ ಮಾರಬಹುದಾಗಿಯೂ ಸಕ್ಕರೆ ನ್ಯಾಯವಾದ ಬೆಲೆಯಲ್ಲಿ ಮಾರುವಂತೆಯೂ ಸಕ್ಕರೆ ಸರಬರಾಯಿ ಸಿಗುವಂತೆ ಅಧಿಕಾರಿಗಳಿಗೆ ವರ್ತಕರು ಬರೆದು ಕೊಳ್ಳಬೇಕಾಗಿಯೂ ನಿರ್ಧರಿಸಿ ಸೂಚಿಸಲಾಯಿತು.

ದಮ್ಮು ಗುಣ ಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶೌಚದ ತೊಂದರೆ ಉಳಿಯುವದಿಲ್ಲ ಪಚನ ಕ್ರಿಯೆ ನೆಟ್ಟಗಾಗುವದು ಶ್ವಾಸಕೋಶವಾಗಿ ಶಕ್ತಿಯು ತುಂಬಿ ಒಂದು ಪುಪ್ಪುಸ ಗಟ್ಟಿಯಾಗುವದರಿಂದ ದಮ್ಮು ಹೆಸರುಳಿಯದೆ ಗುಣವಾಗುವದು

ರೂ ೨-೮-೦ ರೂ ೪-೨-೦ ರೂ ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ

ಪತ್ತಾ:— ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ — ಮೆ ಸರ್ಸ ವನಮಾಲಿ ಭಿಖಾ ವ ಕಂಪನಿ ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ!! ಜನತೆಯ ಸಂಪರ್ಕ! ನಿರಾಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT, MANAGERS,

The Combined Booking Agency, MANGALORE.

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year	4%
Two years or above	4½%

Interest Payable Quarterly.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ, ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು – ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಟೆಚಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂದ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ... ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷದ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್‌ನ ಏಜೆಂಟರು: –

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀಧಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ. ಯಂ. ಎಸ್. ಪ್ರಭು, M. B. B. S. ಕ್ಲಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ. ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 10—7—1942 [ಸಂಚಿಕೆ 27]

ವರ್ಧಾದಲ್ಲಿ ವರ್ಕಿಂಗ್ ಕಮಿಟಿ ಸಭೆ ಸೇರಿದೆ

ಮಹಾತ್ಮರ ಹೊಸ ಆಂದೋಲನ ವಿಚಾರ

ರಾಜಾಜಿ ಸೂಚನೆಗೆ ಒಪ್ಪಿಗೆಯುಂಟೆ?

ಗಾಂಧಿಜಿಯನ್ನು ಬಂಧಿಸಬಹುದೆ?

ಈ ವಾರ ಭಾರತದ ರಾಜಕೀಯದಲ್ಲಿ ಹೊಸ ಹುರುಪು ಹುಟ್ಟಿದೆ. ವಾರ್ಧಾದಲ್ಲಿ, ಗಾಂಧಿಜಿಯವರ ಸನ್ನಿಧಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆ ಸೇರಿದೆ. ಮಹಾತ್ಮರ ಹೊಸ ಆಂದೋಲನ, ರಾಜಾಜಿ ಸಮಸ್ಯೆ, ದೇಶದ ಸ್ವಾವಲಂಬನ ಸ್ವರಕ್ಷಣೆಗಳ ವಿಚಾರ ಇತ್ಯಾದಿಗಳು ಚರ್ಚೆಯಾಗುತ್ತಲಿವೆ. ವೈಸರಾಯರ ಕಾರ್ಯಕಾರಿ ಮಂಡಲವು ಎರಡನೆಯ ಸಲ ವಿಸ್ತರಿಸಲ್ಪಟ್ಟಿತು. ರೂಸ್‌ವೆಲ್ಟರು ಚರ್ಚಿಲರೂ ವಾಶಿಂಗ್‌ಟನಿನಲ್ಲಿ ಭಾರತದ ರಾಜಕೀಯ ವಿಚಾರವೊಂದನ್ನು ಚರ್ಚಿಸಿದ್ದರೆಂದೂ ವದಂತಿ. ಗಾಂಧಿಜಿ ಹರಿಜನದ ಉಗ್ರಲೇಖನಗಳಿಗಾಗಿ ಬಂಧಿಸಲ್ಪಡುವ ಸಂಭವವುಂಟೆ? ಎಂದು ಹಲವರಲ್ಲಿ ಸಂದೇಹ ತಲೆದೋರಿರುವುದು.

ವರ್ಕಿಂಗ್ ಕಮಿಟಿ ಕೂಡಿದೆ

'ಬ್ರಿಟಿಷರು ಇಲ್ಲಿಂದ ತೀವ್ರ ಹೊರಟು ಹೋಗಬೇಕು' ಎಂದು ಇತ್ತೀಚೆಗೆ ಒಂದೇ ಸವನೆ ಮಹಾತ್ಮರು ಹೇಳುತ್ತಿರುವುದರಿಂದ ಅವರನ್ನು ಸರಕಾರವು ನಿರ್ಬಂಧದಲ್ಲಿರಿಸುವುದೇ ಎಂಬ ವಿಚಾರದಲ್ಲಿ ಕಳೆದ ವಾರ ಹಲವು ಊಹಾಪೋಹೆಗಳು ಹುಟ್ಟಿದವು. ಆದರೆ ಅವರನ್ನು ಸೆರೆಗೆ ಹಾಕುವರೆಂಬ ವಾರ್ತೆಗೆ ಆಧಾರವಿಲ್ಲವೆಂದು ಡಿಲ್ಲಿಯ ಸುದ್ದಿ ಸಾರುತ್ತದೆ. ವೈಸರಾಯರ ಕಾರ್ಯಕಾರೀ ಮಂಡಳದ ಅಭಿಪ್ರಾಯ ಕೇಳದೆ ಗಾಂಧಿಜಿ ಮೇಲೆ ಅಸ್ತ್ರ ಎತ್ತುವುದಿಲ್ಲವೆಂದೂ, ಕಾರ್ಯಕಾರೀ ಮಂಡಳದ ಸದಸ್ಯರು ಬಂಧಿಸಲು ಅನುಕೂಲಮತದವರಾಗಿಲ್ಲವೆಂದೂ ವದಂತಿಯಿರುವುದು. ಗಾಂಧಿಜಿಯವರ 'ಹರಿಜನ'ದ ಉಗ್ರಲೇಖನೆಗಳ ಬಗ್ಗೆಯೂ ಅಧಿಕಾರೀ ಮಂಡಳದ ವಿಚಾರ ವಿಮರ್ಶೆಯಾಗುತ್ತಿದೆಯೆಂದು ತಿಳಿಯುತ್ತದೆ. ಇಷ್ಟರಲ್ಲೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯೂ ಕೂಡಿರುತ್ತದೆ. ವರ್ಕಿಂಗ್ ಕಮಿಟಿಯಲ್ಲಿ ಮಹಾತ್ಮರ ಹೊಸ ಆಂದೋಲನದ ವಿಚಾರ ಚರ್ಚೆಯಾಗಬಹುದೆಂದು ದಟ್ಟ ಸುದ್ದಿ. ಆದರೆ ಸಮತಾವಾದೀ ಸದಸ್ಯರ ಅಭಿಪ್ರಾಯದಂತಲ್ಲದೆ ಕಾಂಗ್ರೆಸು ಪ್ರತ್ಯೇಕ ನಿರ್ಣಯ ಮಾಡಲಾರದೆಂದು ಊಹಿಸಲಾಗಿದೆ. ಸಮತಾವಾದೀ ಸದಸ್ಯರು ಈಗ ಆಂದೋಲನದ ವಿಚಾರದಲ್ಲಿ ಉತ್ಸಾಹಿಗಳಿಲ್ಲ. ಅಲ್ಲಿ ರಾಜಾಜಿಯವರ ಸೂಚನೆಯ ಕುರಿತೂ ಆಲೋಚನೆಯಾಗಬಹುದು. ರಾಜಾಜಿ ಸೂಚನೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಬಹುಮತ ಸಿಗುವ ಪ್ರಶ್ನೆ ಬಲು ದೂರದ ಮಾತು. ಮಾತ್ರವಲ್ಲ ಅವರ ಮೇಲೆ ಶಿಸ್ತು ಜಾರಿಯ ಒಂದು ವದಂತಿಯೂ ಪ್ರಬಲವಾಗಿ ಹಬ್ಬಿದೆ. ಹೀಗೆ ಈಗ ಎಲ್ಲರ ದೃಷ್ಟಿ ವರ್ಕಿಂಗ್ ಕಮಿಟಿಯ ನಿರ್ಣಯದ ಕಡೆಗೆ ಹರಿದಿದೆ. ಗಾಂಧಿಜಿಯವರ ಹೊಸ ಆಂದೋಲನದ ವಿಚಾರವೇನು? ಗಾಂಧಿಜಿ ಬಂಧಿಸಲ್ಪಡಬಹುದೆ? ಸರಕಾರವು ತೀವ್ರ ಕಾರ್ಯಗಳನ್ನು ಕೈಕೊಳ್ಳಬಹುದೆ? ರಾಜಾಜಿಗೆ ಬೆಂಬಲವುಂಟೆ? ಅಥವಾ ಅವರ ಮೇಲೆ ಶಿಸ್ತು ಜಾರಿಯಾಗುವುದೆ? ಈ ಎಲ್ಲಾ ಪ್ರಶ್ನೆಗಳಿಗೆ ವರ್ಕಿಂಗ್ ಕಮಿಟಿ ಸಭೆ ಮುಗಿದ ಮೇಲೆ ನಾವು ಸಾಮಾನ್ಯವಾಗಿ ಉತ್ತರ ಹೇಳಬಲ್ಲೆವು.

ವಾಶಿಂಗ್‌ಟನಿನಲ್ಲಿ ಚರ್ಚೆಯೆ?

ಇತ್ತೀಚೆಗೆ ಚರ್ಚಿಲರು ರೂಸ್‌ವೆಲ್ಟರೊಡನೆ ಪ್ರಾಮುಖ್ಯ ರಾಜಕಾರಣದ ಕುರಿತು ವಾಶಿಂಗ್‌ಟನಿನಲ್ಲಿ ಮಾತುಕತೆ ನಡೆಸಿದರಷ್ಟೆ? ಆ ಸಂದರ್ಭದಲ್ಲಿ ರೂಸ್‌ವೆಲ್ಟರು ಚರ್ಚಿಲರೊಡನೆ ಹಿಂದೂದೇಶದ ವಿಚಾರ ಚರ್ಚೆಮಾಡಿರಬೇಕೆಂದು ವದಂತಿಯೊಂದು ಬಂದಿರುವುದು. ಇದು ಬರಿಯ ಊಹನೆಯಾದರೂ ಇದಕ್ಕೆ ಕೆಲವು ಆಧಾರಗಳು ಹೇಳಲಾಗುತ್ತವೆ. ಮೊನ್ನೆ ಹಿಂದೂದೇಶಕ್ಕೆ ರೂಸ್‌ವೆಲ್ಟರ ವಿಶೇಷ ರಾಯಭಾರಿಯಾಗಿ ಕರ್ನಲ್ ಜಾನ್ಸನರೆಂಬವರು ಬಂದಿದ್ದರಷ್ಟೆ? ಅವರು ಹಿಂದೂದೇಶದಿಂದ ಅಮೇರಿಕಕ್ಕೆ ಅವಸರವಸರವಾಗಿ ಮರಳಬೇಕಾಯಿತು. ಇದಕ್ಕೆ ಅವರ ಅನಾರೋಗ್ಯವೂ ಒಂದು ಕಾರಣವಾಗಿತ್ತು. ಅಂತೂ ಅವರು ಬಂದ ಕಾರ್ಯವು ಪೂರ್ಣವಾಗಲಿಲ್ಲವಾಗಿ ಇನ್ನೊಮ್ಮೆ ಬರುವುದಿದ್ದರೆ ಭಾರತದ ಸಮಸ್ಯೆಯನ್ನು ಪರಿಹಾರ ಮಾಡುವ ಸೂಚನೆಯನ್ನು ಹಿಡಿದುಕೊಂಡೇ ಬರುವರೆಂದೂ ವದಂತಿಯಿದೆ. ಕರ್ನಲ್ ಜಾನ್ಸನರು ಅಮೇರಿಕಕ್ಕೆ ತೆರಳುವಾಗ, ಎರಡು ಮಹತ್ವದ ಪತ್ರಗಳನ್ನು ಒಯ್ದಿರುವರಂತೆ. ಒಂದು ಗಾಂಧಿಜಿ ಚೀನದ ದಳಪತಿ ಚಿಯಾಂಗ್ ಕೈಶೇಕರಿಗೆ ಬರೆದ ಪತ್ರ, ಇನ್ನೊಂದು ಪಂಡಿತ ನೆಹರುಗಳು ರೂಸ್‌ವೆಲ್ಟರಿಗೆ ಬರೆದ ಪತ್ರ. ಗಾಂಧಿಜಿ ಕೈಶೇಕರಿಗೆ ಬರೆದ ಪತ್ರದಲ್ಲಿ ಬ್ರಿಟನ್ ಅಮೆರಿಕಗಳು ಹಿಂದುಸ್ಥಾನದಿಂದ ಹೊರಟು ಹೋದರೆ ಹಿಂದುಸ್ಥಾನವು ಚೀನಕ್ಕೆ ಸಹಾಯ ಮಾಡಬಹುದೆಂದು ಸೂಚಿಸಿರುವುದಾಗಿಯೂ, ನೆಹರು ರೂಸ್‌ವೆಲ್ಟರಿಗೆ ಬರೆದ ಪತ್ರದಲ್ಲಿ ರಾಜಕೀಯ ಸಮಸ್ಯೆಯು ವಿವರಿಸಲ್ಪಟ್ಟಿರುವುದೆಂದೂ ತಿಳಿಯುತ್ತದೆ. ಈ ವಿಷಯ, ಮೊನ್ನೆಯ ಭೇಟಿಯ ಕಾಲದಲ್ಲಿ ಚರ್ಚಿಲರೊಡನೆ ರೂಸ್‌ವೆಲ್ಟರು ಮಾತನಾಡಿರಲೂ ಬಹುದು. ಅಂತೂ ಅವರು ಅಲ್ಲಿ ಏನಾದರೂ ಹಿಂದೂದೇಶದ ಕುರಿತು ಮಾತನಾಡಿದ್ದರೆ ಬೇಗನೇ ಸರಕಾರವು ಕಾಂಗ್ರೆಸಿನೊಡನೆ ರಾಜಿಯ ಮಾತುಕತೆಗೆ ಬರಬಹುದೆಂದು ಕೆಲವರ ನಿರೀಕ್ಷೆಯಿರುವುದು.

ವೈಸರಾಯ್ ಕೌನ್ಸಿಲ್ ವಿಸ್ತರಣೆ

ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲ್ ವಿಸ್ತರಣ ಕಾರ್ಯವು ಪುನಃ ಈಗ ಆಗಿದೆ. ಬ್ರಿಟಿಷ್ ಪ್ರಭುತ್ವವು ಸದ್ಯ ಯುದ್ಧಕಾಲದಲ್ಲಿ ಹಿಂದೂದೇಶಕ್ಕೆ ಮಾಡಲಿರುವ ಮಹೋಪಕಾರವೆಂದು ಹೇಳಲಾದ ಈ ವಿಸ್ತರಣ ಕಾರ್ಯದಲ್ಲಿ ಕೆಲವು ಮಂದಿ ಹಿಂದೀ ಸದಸ್ಯರ ಪ್ರತಿಷ್ಠಿತರಾಗಿದ್ದಾರೆ. ಸರ್ ಸಿ ಪಿ ರಾಮಸ್ವಾಮಿ ಅಯ್ಯರ್, ಡಾ। ಅಂಬ್ಡೇಕರ್, ಸರ್ ಜೋಗೇಂದ್ರಸಿಂಗ್, ಸರ್ ಶ್ರೀ ವಸ್ತವ, ಸರ್ ಉಸ್ಮಾನ್ ಇವರು ಹೊಸದಾಗಿ ನೇಮಕಹೊಂದಿರುವರು. ಜ್ಞಾನಪ್ರಸಾರ ಶಾಖೆಗೆ ಸಿ ಪಿ ಯವರು, ಡಿಫೆನ್ಸ್ ಶಾಖೆಗೆ ಸರ್ ಸಿ ವಸ್ತವರು. ಸರ್ ಫಿರೋಜಖಾನನೂನರು ಡಿಫೆನ್ಸ್ ಶಾಖೆಯ ಸದಸ್ಯರು ಯುದ್ಧ ಮಂತ್ರಿಮಂಡಲದ ಭಾರತದ ಪ್ರತಿನಿಧಿಯಾಗಿ ಸರ್ ರಾಮಸ್ವಾಮಿ ಮೊದಲಿಯಾರರ, ಅವರ ಸ್ಥಾನದಲ್ಲಿ ಶ್ರೀ ಸರ್ಕಾರರು, ಲೇಬರ್ ಶಾಖೆಗೆ ಡಾ। ಅಂಬ್ಡೇಕರರು, ಸರ್ ಬೆಂತ್ಹಾಲರು ಹಾಗೂ ಸರ್ ಉಸ್ಮಾನರು ಪೋಸ್ಟ್ ವಿಮಾನಗಳ ಶಾಖೆಗೆ, ಸರ್. ಜೋಗೇಂದ್ರ ಸಿಂಗರು ವಿದ್ಯಾ ಆರೋಗ್ಯ ಮತ್ತು ಭೂಸ್ವಾಸ್ಥ್ಯಗಳ ಸದಸ್ಯರು. ಅಂತೂ ಕೆಲವರಿಗೆ ಇವರಿಂದಾಗಿ ಈಗ ದೊಡ್ಡ ಹುದ್ದೆಗಳು ದೊರಕಿವೆ, ಕೆಲವರ ಕೆಲಸದಲ್ಲಿ ಅದಲು ಬದಲು ಮಾಡಲಾಗಿದೆ. ಆದರೆ ಈ ಸದಸ್ಯರಿಗೆ, ಅವರು ಮಾಡುವ ಕೆಲಸಗಳಿಗೆ ಜನತೆಯ ಬೆಂಬಲ ದೊರಕದಿದ್ದರೆ ಇದರಿಂದೆಲ್ಲಾ ಏನು ಪ್ರಯೋಜನವಾದೀತು? ಈ ವಿಸ್ತರಣ ಕಾರ್ಯವು ಬ್ರಿಟಿಷರ ರಾಜನೀತಿಯ ಮಾಟಗಾರಿಕೆಯೆಂದು ಅನೇಕರು ಅಭಿಪ್ರಾಯಪಡುತ್ತಾರಲ್ಲದೆ ಇದರಿಂದ ಯಥಾರ್ಥ ಪ್ರಯೋಜನವೇನಾದರೂ ಆದೀತೆಂದು ಅನೇಕರು ನಂಬುವುದಿಲ್ಲ. ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಕೆಲಮಂದಿ ಭಾರತೀಯರನ್ನು ನೇಮಿಸಿದ್ದರಿಂದ ಬ್ರಿಟಿಷ್ ಪ್ರಭುತ್ವವು ಭಾರತದ ಜನತೆಯನ್ನು ತೃಪ್ತಿಪಡಿಸಿರುವುದಾಗಿ ತಿಳಕೊಂಡಿದ್ದರೆ ಅದು ಬರಿಯ ಭ್ರಾಮಕ ವಿಚಾರವಾಗಿದೆ.

ಹರಿಜನವಾಣಿ

'ಸ್ವತಂತ್ರ ಹಿಂದುಸ್ಥಾನದಲ್ಲಿ

ಮಿತ್ರಪಕ್ಷದ ಸೈನಿಕರು ಇರಬಹುದು

'ನಮ್ಮ ಮೇಲೆ ಪ್ರಭುತ್ವ ನಡೆಸಲಲ್ಲ'

ನಮ್ಮ ವೆಚ್ಚದಿಂದಲೂ ಅಲ್ಲ

—ಗಾಂಧಿಜಿ ವಿವರಿಸುತ್ತಾರೆ—

"ಮಿತ್ರ ಪಕ್ಷದ ಸೈನಿಕರು ಇಲ್ಲಿದ್ದರೆ ಹಿಂದುಸ್ಥಾನದ ಮೇಲೆ ಪ್ರಭುತ್ವ ನಡೆಸುವುದಕ್ಕಾಗಿಯಲ್ಲ ಅಥವಾ ಅವರ ವೆಚ್ಚವೂ ಹಿಂದುಸ್ಥಾನದ ಮೇಲಲ್ಲ ಸ್ವತಂತ್ರ ಹಿಂದುಸ್ಥಾನದ ಸರಕಾರದೊಡನೆ ಮಾಡಿಕೊಳ್ಳುವ ಒಪ್ಪಂದದಂತೆ ಸಂಯುಕ್ತ ಸರಕಾರಗಳ ವೆಚ್ಚದಿಂದ ಜಪಾನ್ ಧಾಳಿಯನ್ನು ಎದುರಿಸುವ ಚೀನಕ್ಕೆ ಸಹಾಯ ಮಾಡುವ ಈ ಉದ್ದೇಶದಿಂದ ಮಾತ್ರ ಅವರು ಇಲ್ಲಿ ಇರಬಹುದು" ಹೀಗೆಂದು ಗಾಂಧಿಜಿ ಪರದೇಶದ ಸೈನಿಕರು ಹಿಂದು ದೇಶದಲ್ಲಿರುವ ವಿಚಾರವಾಗಿ ಈ ವಾರದ ಹರಿಜನದಲ್ಲಿ ಬರೆಯುತ್ತಾರೆ. ಅವರು ಆ ಕುರಿತು ಬರೆದ ಬೇರೆ ಕೆಲವು ವಿವರಗಳು ಇಂತಿವೆ.

"ಯುದ್ಧಕಾಲದಲ್ಲಿ ಮಿತ್ರಪಕ್ಷದ ಸೈನಿಕರು ಇಲ್ಲಿರುವುದನ್ನು ಸಹಿಸದಿದ್ದರೆ ಹಿಂದುಸ್ಥಾನ ಚೀನಗಳನ್ನು ನಾವು ಜಪಾನಿಗೆ ಬಿಟ್ಟುಕೊಟ್ಟಂತೆ ಎಂದು ನನ್ನ ಲೇಖನದ ವಿಷಯ ಟೀಕೆ ಬಂದಿದೆ ಆದರೆ ನಾನು ಹೇಳುವುದಿಷ್ಟೆ. ಸೈನಿಕರಿರುವುದನ್ನು ಸಹಿಸಬೇಕು, ಆದರೆ ಇಂದಿನಂತಹ ಪರಿಸ್ಥಿತಿಯಲ್ಲಲ್ಲ. ಸ್ವತಂತ್ರವಾದ ಹಿಂದುಸ್ಥಾನದ ಅಪ್ಪಣೆಯಿಂದ ಅವರು ಇಲ್ಲಿರುವುದು ಒಡೆಯರೆಂದಲ್ಲ, ಗೆಳೆಯರೆಂದು ಬ್ರಿಟನು ಹಿಂದುಸ್ಥಾನವನ್ನು ಬಿಟ್ಟುಹೋಗುವ ಕಾರ್ಯವನ್ನು ಪ್ರಾಮಾಣಿಕತನದಿಂದ ಮಾಡಿದರೆ ಅದು ಈ ಯುದ್ಧದ ಮುಖವನ್ನು ಬದಲುಮಾಡಬಹುದು. ಮಿತ್ರರಂತೆ ಹಿಂದುಸ್ಥಾನಕ್ಕೂ ಜಪಾನರ ದಾಳಿಯನ್ನು ತಡೆಯಬೇಕಾಗಿದೆ. ಹೀಗಿದ್ದರೂ ಆ ಸೈನಿಕರ ವೆಚ್ಚಕ್ಕಾಗಿ ಹಿಂದುಸ್ಥಾನವು ಒಂದು ಪೈಯನ್ನು ಕೊಡಕೊಡಬಾರದು. ಬ್ರಿಟಿಷರು ನನ್ನ ಸೂಚನೆಗೆ ಒಪ್ಪುವುದರಿಂದ ಒಳ್ಳೆಯ ಗೌರವಕರವಾದ ಒಪ್ಪಂದವಾಗಿ ಸೈನಿಕರ ಸನ್ನಿವೇಶವೂ ನಿವೃತ್ತಿಯಾಗುವುದು. ಆದ್ದರಿಂದ ಬ್ರಿಟಿಷರು ಇಲ್ಲಿಂದ ಹೊರಟು ಹೋಗಬೇಕೆಂಬ ನನ್ನ ಸೂಚನೆಯ ಕಡೆಗೇ ಹೆಚ್ಚು ಲಕ್ಷ್ಯ ಕೊಡಬೇಕು. ಈ ದೊಡ್ಡ ಕೆಲಸ ಪೂರೈಸುವಂತೆ ಎಲ್ಲರೂ ಸಹಾಯಮಾಡಬೇಕು ಮೇಲೆ ತೋರಿಸಿದ ಉದ್ದೇಶಕ್ಕಾಗಿ ಹಿಂದುದೇಶದಲ್ಲಿ ಸೈನಿಕರಿದ್ದರೆ ಅವರು ಅಂಜಕೂಡದು ನನ್ನ ಸೂಚನೆಯ ಸಾರಾಂಶ ಹೀಗಿದೆ

(೧) ಬ್ರಿಟನಿನ ಮತ್ತು ಆರ್ಥಿಕ ಹೊಣೆಯಿಂದ ಹಿಂದುಸ್ಥಾನವು ಬಿಡುಗಡೆಯಾಗಬೇಕು (೨) ಬ್ರಿಟನಿಗೆ ವರ್ಷಂಪ್ರತಿ ಇಲ್ಲಿಂದ ಹೋಗುತ್ತಿದ್ದ ಸಂಪತ್ತು ನಿಲ್ಲಬೇಕು (೩) ಮುಂದೆ ಬರಬಹುದಾದ ಸರಕಾರವು ಹಾಕುವ ಕರತೆರಿಗೆಗಳಲ್ಲದೆ ಮತ್ತಾವುದೂ ಇರಕೂಡದು (೪) ಅತಿಶಕ್ತಿಯುತವಾದ ರಾಷ್ಟ್ರವು, ಲೋಕದಲ್ಲಿ ಶ್ರೇಷ್ಠವಾದ ರಾಷ್ಟ್ರವನ್ನು ದಾಸ್ಯದಲ್ಲಿಡುವ ದೊಡ್ಡ ಹೊರೆಯು ಮಾಯವಾಗಬೇಕು (೫) ಸಂಕ್ಷೇಪವಾಗಿ ಹೇಳಬೇಕೆಂದರೆ ಹಿಂದುದೇಶದ ರಾಷ್ಟ್ರೀಯ ಜೀವನದಲ್ಲಿ ಹೊಸ ಅಧ್ಯಾಯ ಆರಂಭವಾಗಬೇಕು. ಪ್ರಬಲವಾದ ಅಹಿಂಸಾಸ್ತ್ರದಿಂದ ಇದು ಯುದ್ಧದ ಮೇಲೆಯೂ ಒಳ್ಳೆಯ ಪರಿಣಾಮವನ್ನುಂಟುಮಾಡಬಹುದು. ಆ ಮೇಲೆ ಅಹಿಂಸೆಯು ಅಸಹಕಾರ ಮೊದಲಾದ ಸ್ವರೂಪವನ್ನು ಹೊಂದುವುದಿಲ್ಲ. ಒಪ್ಪಂದದ ಭಿಕ್ಷೆ ಬೇಡಲು ಅದು ಅಕ್ಷ ರಾಷ್ಟ್ರಗಳ ಕಡೆಗೆ ಹೋಗುವುದಿಲ್ಲ. ಗೌರವ ಪೂರ್ವಕ ಈ ಯುದ್ಧದ ಕೊನೆಯಾಗಬೇಕಾದರೆ ಯುದ್ಧವು ಪ್ರಯೋಜನವಿಲ್ಲವೆಂಬುದನ್ನು ತನ್ನ ಕಾರ್ಯಭಾರಿಗಳ ಮೂಲಕ ತೋರಿಸಿಕೊಡುವುದು. ಬ್ರಿಟನು ಜಗತ್ತಿನಲ್ಲಿ ಎಂದೂ ನೋಡದಿದ್ದ, ಸಂಘಟಿತ ಹಿಂಸೆಯನ್ನು ಬಿಟ್ಟುಕೊಟ್ಟಾಗಲೇ ಇದು ಸಾಧ್ಯವಾಗುವುದು.

ಇದೆಲ್ಲಾ ಒಂದು ಪಕ್ಷ ಸಂಭವಿಸದಿರಬಹುದು, ಅದಕ್ಕಾಗಿ ನಾನು ಬೇಸರಪಡುವುದಿಲ್ಲ. ಆದರೆ ಇದು ಇಡೀ ರಾಷ್ಟ್ರವನ್ನು ಹೋರಾಡಲು ಹುರಿದುಂಬಿಸುವಷ್ಟರ ಮಟ್ಟಿಗೆ ಇದೆ."

ಸಾಮ್ರಾಜ್ಯಶಾಹಿಯನ್ನು ಕೊನೆಗೊಳಿಸಲು ಇದು ಒಳ್ಳೆಯ ಸಮಯ

ಪ್ರೊ। ಲಾಸ್ಕಿಯವರ ಮತ
ಮಹಾದೇವ ದೇಸಾಯಿಯವರ ವಿಮರ್ಶೆ

ಪ್ರೊ। ಲಾಸ್ಕಿಯವರು "ಇಲ್ಲಿಂದ ನಾವೆಲ್ಲಿಗೆ ಹೋಗುವೆವು" ಎಂಬೊಂದು ಪುಸ್ತಕವನ್ನು 1940ರಲ್ಲಿ ಬರೆದಿರುವರು. ಆ ಪುಸ್ತಕದಲ್ಲಿ ಅವರು ಆಕ್ರಮಿತ ಪ್ರದೇಶಗಳಗಳ ಜನರು, ಗೆಸ್ಟಪೋದ ವಿರೋಧ ಕ್ರಾಂತಿ ಹೂಡುವುದರಲ್ಲಿ ವಿಜಯೋಪಾಯವಿರುವುದೆಂದು ಪ್ರತಿಪಾದಿಸಿರುವರಲ್ಲದೆ, ಬ್ರಿಟಿಷರು ನ್ಯಾಯ ಮತ್ತು ಸಮಾನತೆಯ ಸಮಾಜವನ್ನು ರಚಿಸಿ ಒಳ್ಳೆಯ ಪಾಠವನ್ನು ಹಾಕಿ ಕೊಟ್ಟಾಗ ಈ ಕ್ರಾಂತಿಯು ಫಲಬಹುದೆಂದು ಹೇಳಿದ್ದಾರೆ. ನಮ್ಮ ಪ್ರಜಾಪ್ರಭುತ್ವವನ್ನು ಎರಡು ಬಗೆಯಿಂದ ಶುದ್ಧಗೊಳಿಸಬೇಕೆಂದು ಅವರು ಹೇಳಿದ್ದಾರೆ. ಒಂದು ಸಾಮ್ರಾಜ್ಯಶಾಹೀ ರಾಷ್ಟ್ರನೆಂದು ನಮಗಿರುವ ದೂರು ಹೋಗಲಾಡಿಸುವುದು. ಎರಡನೆಯದು ನಾವು ನಿಜವಾಗಿ ಶಾಂತಿ ಸ್ಥಾಪಕರೆಂದು ಜಗತ್ತಿಗೆ ತಿಳಿಸುವುದು

ಪ್ರೊ। ಲಾಸ್ಕಿಯವರು ಹಿಂದುಸ್ಥಾನದ ವಿಷಯ ಹೀಗೆಂದು ಬರೆಯುತ್ತಾರೆ. "ಹಿಂದುಸ್ಥಾನವು ಈಗ ನಮ್ಮ ಮುಂದಿದೆ, ಪೋಲೆಂಡು ಜೆಕೊಸ್ಲವೇಕಿಯಾಗಳು ಜರ್ಮನಿಯಿಂದ ಸ್ವಾತಂತ್ರ್ಯ ಬೇಡುವಂತೆ ಹಿಂದುಸ್ಥಾನವೂ ನಮ್ಮಿಂದ ವಿಮೋಚನೆ ಬೇಡುತ್ತಿದೆ ಸ್ವರ್ಗಕಾಲದಲ್ಲಿ ನಾವು ಹಿರಿದು ದೇಶದ ರಾಜ್ಯಘಟನೆಯನ್ನು ಸ್ವಲ್ಪ ಬದಲಾವಣೆ ಮಾಡಿದರೂ, ನಮ್ಮ ಸಾಮ್ರಾಜ್ಯ ತತ್ವವನ್ನುಳಿಸಿಕೊಳ್ಳಬೇಕಾಗಿ ನಾವು ವಿಶೇಷಾಧಿಕಾರವನ್ನು ಇಟ್ಟುಕೊಂಡವು ಜನರನ್ನು ಸೆರೆಮನೆಗೆ ಸೇರಿಸಲು, ಲಾಠಿಯಿಂದ ಬಡಿಯಲು, ವಿಶೇಷ ಅಧಿಕಾರಗಳನ್ನು ಉಪಯೋಗಿಸಬೇಕಾಯ್ತಿತು. ನಮ್ಮ ಈ ಕೆಲಸವನ್ನು ಪ್ರಶಂಸಿಸುವ ಕೆಲವು ಜನರೂ ಇರಬಹುದು. ಆದರೆ ಅವರನ್ನು ನಾವು ಉದ್ಯೋಗದಲ್ಲಿರಿಸದಿದ್ದರೆ ಅವರು ಹಾಗೆ ಹೊಗಳುತ್ತಿರಲಿಲ್ಲ, ನಮಗೆ ವಿರೋಧ ಮಾಡುತ್ತಿದ್ದರು. ಹಿಂದುಸ್ಥಾನದಲ್ಲಿ ನಮ್ಮ ಆರ್ಥಿಕ ಸಂಬಂಧಗಳನ್ನು ರಕ್ಷಿಸುವುದಲ್ಲದೆ ಅಲ್ಲಿನ ಸಂಸ್ಥಾನಿಕರಿಗೂ ನಾವು ಬೆಂಬಲ ಕೊಡುತ್ತಿವೆ ೩೦ ವರ್ಷಗಳ ಹಿಂದೆ ಯೂರೋಪಿನಲ್ಲಿ ಕಾಯಿದೆಯಿಲ್ಲದ ಕಾಲದಲ್ಲಿದ್ದ ಹೊಲಸು ಆಡಳಿತ ಕೆಲ ಸಂಸ್ಥಾನಗಳಲ್ಲಿದೆ ಹಿಂದುಸ್ಥಾನದ ಜನತೆಯ ಅಪೇಕ್ಷೆಯ ವಿರೋಧವಾಗಿ ನಾವು ಅಲ್ಲಿ ಅಧಿಕಾರ ನಡೆಸಿರುವದರಿಂದ ಇಡೀ ಜಗತ್ತಿನ ದೃಷ್ಟಿಯಿಂದ ಅನ್ಯಾಯ ಮಾಡಿದಂತಾಗಿದೆ. ಹಿಟ್ಲರ್ ಮುಸಲನಿಗಳು ಬರುವ ಮೊದಲು ನಮ್ಮ ಆಡಳಿತವು ಸಾಮ್ರಾಜ್ಯಶಾಹಿಯ ಪ್ರತ್ಯಕ್ಷ ನಿದರ್ಶನವಾಗಿತ್ತು. ಹಿಂದುಸ್ಥಾನದಲ್ಲಿ ಸ್ವರಾಜ್ಯಕ್ಕಾಗಿ 'ಒಂದೇ ಸವನೆ ಬೇಡಿಕೆಯುಂಟಾಗಿದೆ. ಇಂದಲ್ಲ ನಾಳೆ ನಾವದನ್ನು ಕೊಟ್ಟೇ ತೀರಬೇಕು, ಆದರೆ ನಾವು ಎಲ್ಲಾ ಬಗೆಯ ನೆವನ ಹೇಳಿ ನಮ್ಮ ಹಿತ ಸಂಬಂಧಗಳನ್ನು ಪೂರೈಸುತ್ತೇವೆ. ಈ ತಂತ್ರದಲ್ಲಿ ನಾವೆಷ್ಟರಮಟ್ಟಿಗೆ ಆತ್ಮವಂಚನೆ ಮಾಡಿಕೊಳ್ಳುತ್ತಿರುವೆವೆಂದು ನನಗೆ ಗೊತ್ತಿಲ್ಲ. ಆತ್ಮವಂಚನೆಗೆ ಸಾಮ್ರಾಜ್ಯದಲ್ಲಿ ಬೇಕಾದಷ್ಟು ಅವಕಾಶವಿದೆ ಆದರೆ ಹಿಂದುಸ್ಥಾನದ ಜನತೆಯನ್ನು ಬಿಟ್ಟು ಬೇರೆ ಯಾವ ಜನತೆಯನ್ನಾದರೂ ನಾವು ವಂಚಿಸಲಾರೆವೆಂದು ನಮಗೆ ಗೊತ್ತಿದೆ."

ಈ ರೀತಿ ಲಾಸ್ಕಿಯವರು ಸತ್ಯಸಂಗತಿಗಳನ್ನು ವಿಶದಗೊಳಿಸಿರುವರು ಅವರು ಮುಂದುವರಿಸಿ ಹೇಗೆ ಬರೆದಿರುವರು "ಹಿಂದುಸ್ಥಾನದಲ್ಲಿ ನಾವು ಎಂತಹ ದುಷ್ಟ ಆಡಳಿತ ಮಾಡುತ್ತಿರುವೆವೆಂದು ವೈರಿಗಳು ಪ್ರಚಾರ ಮಾಡಿದರೆ ಅದು ಸುಳ್ಳೆಂದು ಯಾವುದೇ ಹಿಂದೀಯನ ಬಾಯಿಂದ ಹೇಳಿಸುವಷ್ಟು ನಾವು ಸಮರ್ಥರಿಲ್ಲ ಎಲ್ಲಿಯವರೆಗೆ ನಮ್ಮ ಕೃತಿಗಳ ವಿಷಯ ನ್ಯಾಯಾಧೀಶರಾಗಲು ಫೆಸಿಸ್ಟರಿಗೆ ನಾವು ಅವಕಾಶ ಕೊಡುವೆವೋ ಅಲ್ಲಿಯವರೆಗೆ ಅವರ ಕೃತಿಗಳ ನಿರ್ಣಯಮಾಡಲು ನಮಗೆ ಅಧಿಕಾರವಿಲ್ಲ. ಎಷ್ಟು ಬೇಗ ನಾವು ಈ ಸಾಮ್ರಾಜ್ಯತ್ವವನ್ನು ಕೊನೆಗಾಣಿಸುವೆವೋ ಅಷ್ಟು ಬೇಗ ನಮಗೂ ಹಿಂದೀಯರಿಗೂ ಹಿತವಾಗುವುದು. ಜಗತ್ತಿನ ಪ್ರಜಾ ಪ್ರಭುತ್ವ ಮತ್ತು ಸ್ವಾತಂತ್ರ್ಯದ ರಕ್ಷಕರು ನಾವೆಂದು ಹೇಳಿಕೊಳ್ಳುತ್ತಿರುವಾಗ ಇದನ್ನು ಕೊನೆಗಾಣಿಸಲು ಇದಕ್ಕಿಂತ ಒಳ್ಳೆಯ ಬೇರೆ ಸಮಯವಿಲ್ಲ."

ಇದು ಸತ್ಯವಾದ ಸಂಗತಿಯೆಂದು ಮಹಾದೇವ ದೇಸಾಯಿಯವರು ವಿಮರ್ಶಿಸಿದ್ದಾರೆ. ಯುದ್ಧ ನಡೆದಿರುವಾಗಲೇ ಇಲ್ಲಿಂದ ಹೊರಟು ಹೋಗಿ ಸಾಮ್ರಾಜ್ಯಶಾಹಿಯನ್ನು ಕೊನೆಗೊಳಿಸುವುದು ಬ್ರಿಟಿಷರಿಗೆ ಗೌರವ ತರುವ ಕೆಲಸವಾಗಿದೆ.

ANNOUNCEMENT

7000 Shares

5% Cumulative First Preference

LIST CLOSED.

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd 1906

ದಮ್ಮು ಗುಣಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡಕು ಆಗುತ್ತದೆ "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶೌಚದ ತೊಂದರೆ ಉಳಿಯುವದಿಲ್ಲ ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಒಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ. ೩-೮-೦. ರೂ ೪-೨-೦. ರೂ ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬ್ಬೈ ಏಜಂಟ—ಮೆಸರ್ಸ ವನಮಾಲಿ ಭಿಖಾಭಾಯಿ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬ್ಬೈ

ಪುರೋಹಿತ ಶ್ವಾಸಹಾರಿ

ಸಮರಭೂಮಿಯ ಸಂಚಾರ

ರಶ್ಯದ ಎಲ್ಲಾ ರಣಭೂಮಿಗಳಲ್ಲಿಯೂ ಕಾಳಗ ನಡೆಯುತ್ತಿದ್ದರೂ ಕುರ್ಸ್ಕ, ಖಾರ್ಕೊವ್, ವೊರೊನೆಜಗಳ ನಡುವೆ ಇರುವ ಪ್ರದೇಶದಲ್ಲಿ ಪ್ರಚಂಡ ಯುದ್ಧವಾಗುತ್ತಿದೆ. ಜರ್ಮನರು ವೊರೊನೆಜವನ್ನು ಮುಟ್ಟಿದಂತೆ ಮಾಡುವುದಕ್ಕೆ ಟಿಮೊಶೆಂಕೋ ಸೈನಿಕರು ಜೀವದ ಹಂಗು ತೊರೆದು ಹೋರಾಡಿದರು. ಜರ್ಮನ್ ಸೇನೆಯು ಡಾನ್ ನದಿಯನ್ನು ದಾಟಿ ವೊರೊನೆಜವನ್ನು ಆಕ್ರಮಿಸಿದರೆಂದು ಸುದ್ದಿ ಬಂದಿರುವುದು ಇದು ನಿಜವಾದರೆ ಜರ್ಮನರಿಗೆ ಕಾಕಸಸ್‌ಗೆ ಹೋಗುವ ಹಾದಿ ದೊರೆತಂತಾಯಿತು! ಹೀಗೆ ಅತ್ತ ಜರ್ಮನ್ ಸೇನೆ ರಶ್ಯದ ರಣರಂಗದಲ್ಲಿ ಪ್ರಚಂಡ ಯುದ್ಧ ನಡೆಸುತ್ತಿರುವಂತೆ ಇತ್ತ ಇಜಿಪ್ತಿನಲ್ಲಿ ರೊಮೆಲನು ತೀವ್ರಗತಿಯಿಂದ ಮುಂದೊತ್ತಿ ಹೋಗುತ್ತಿರುವನು

ಇಜಿಪ್ತಿನ ರಾಜಕಾರಣ

ಇಜಿಪ್ತು ಇತಿಹಾಸಪ್ರಸಿದ್ಧವಾದ ದೇಶ ಕ್ರೈಸ್ತ ಮತದ ತವರುಮನೆ ಜಗತ್ತಿನ ಅದ್ಭುತಗಳಲ್ಲಿ ಒಂದಾದ 'ಪಿರಮಿಡ್ಸ್'ಗಳೆಂಬ ಪ್ರಾಚೀನ ಗೋರಿಗಳಿರುವುದು ಇಲ್ಲಿಯೇ ಲೋಕವಿಜಯಿಯಾದ ಜೂಲಿಯಸ್ ಸೀಸರನನ್ನು ತನ್ನ ಕಟಾಕ್ಷವೀಕ್ಷಣದಿಂದ ಸೆರೆಮಾಡಿದ ಕ್ಲಿಯೋಪಾತ್ರರಾಣಿ ಇಲ್ಲಿಯೇ ಆಳಿದಳು ಅನೇಕ ಶತಮಾನಗಳಿಂದ ಆಕ್ರಮಣ, ಪುನರಾಕ್ರಮಣಗಳಿಗೆ ಎದೆಗೊಟ್ಟು ಇಜಿಪ್ತು ಈ ಚಕ್ರದ ಉರುಳಾಟಕ್ಕೆ ಸಿಲುಕಿ ಕಿರಿದಾಗುತ್ತಾ ಬಂದಿದೆ ಈ ದೇಶವು ಬಹಳ ಫಲಸಮೃದ್ಧಿಯುಳ್ಳದ್ದೂ ಆಗಿದೆ ಲೋಕದಲ್ಲೇ ದೊಡ್ಡದೆನಿಸಿದ 'ನೈಲ್' ನದಿ ಇಲ್ಲಿ ಹರಿಯುತ್ತದೆ ಇದರ ಎರಡು ಬದಿಗಳ ಹದಿಮೂರು ಮೈಲು ಚದುರ ವಿಸ್ತೀರ್ಣದ ನೆಲ ಕೃಷಿಮಯವಾಗಿದೆ ಇಂದಿನ ಇಜಿಪ್ತಿನ ವಿಸ್ತಾರವು ನಾಲ್ಕು ಲಕ್ಷ ಚದುರ ಮೈಲು ಜನಸಂಖ್ಯೆ ಒಂದೂವರೆ ಕೋಟಿಯಷ್ಟಿದೆ ಆಫ್ರಿಕದಂಥಾ ಹೊಯಿಗೆ ತುಂಬಿದ ಭೂಖಂಡದಲಿ ಇದರಷ್ಟು ಫಲವತ್ತಾದ ಪ್ರದೇಶ ಬೇರಿಲ್ಲ ಇಲ್ಲಿ ಸಾಮಾನ್ಯ ಮೂರು ನಾಲ್ಕು ಬೆಳೆಗಳಾಗುತ್ತವೆ ಇಲ್ಲಿಂದ ಸಕ್ಕರೆ ಮತ್ತು ಬೇರೆ ಉತ್ಪತ್ತಿಗಳು ಹತ್ತಿ ಪರದೇಶಗಳಿಗೆ ರಫ್ತಾಗುತ್ತವೆ ಇಲ್ಲಿನ ಸಾಮಗ್ರಿಗಳಿಗೆ ನೈಸರ್ಗಿಕ ರಪ್ತು ಸೌಕರ್ಯವಿದೆ ವಿಮಾನ ಗೃಹಗಳಾಗಿವೆ ರೈಲ್ವೆ ಪ್ರಯಾಣವು ಮಾತ್ರ ಅಷ್ಟು ಸುಲಭವಾಗಿಲ್ಲ ಸಣ್ಣ ಸಣ್ಣ ದೋಣಿಗಳ ಪ್ರವಾಸಕ್ಕೆ ತುಂಬಾ ಅನುಕೂಲತೆಯಿದೆ ಮರುಭೂಮಿಯನ್ನು ದಾಟಿದರೆ ಅನೇಕ ಸುಂದರ ದೃಶ್ಯಗಳಿವೆ ಆಯಾಸಗೊಂಡವರಿಗೆ ಅಲ್ಲಿ ಆರಾಮವೆನಿಸುತ್ತಿದೆ ಇಲ್ಲಿನ ಪ್ರಸಿದ್ಧ ಬಂದರವು ಪೋರ್ಟ್ ಸಯ್ಯದ್ ಇದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಹೆಬ್ಬಾಗಿಲಿನಂತಿದೆ ಸುವೇಜ್ ಕಾಲುವೆಯಲ್ಲಿ ಮಹತ್ವದ ಬಂದರವಿದು ಆದ್ದರಿಂದಲೇ ಈ ಬಂದರದ ಮೇಲೆ ಧಾಳಿಗಾರರ ದೃಷ್ಟಿಯಿದೆ. ಅಲೆಕ್ಸಾಂಡ್ರಿಯವೂ ನೋಡತಕ್ಕ ಸ್ಥಳ ಒಂದು ಕಾಲದಲ್ಲಿ ಇದು ಗ್ರೀಕ್ ಸಂಸ್ಕೃತಿಯ ಕೇಂದ್ರವಾಗಿತ್ತು ಇದರ ಮೇಲೆ ಅನೇಕ ಸಲ ಶತ್ರುಗಳು ಧಾಳಿ ನಡೆಸಿದ್ದರು ಅಲೆಕ್ಸಾಂಡರನೂ ನೆಪೋಲಿಯಾನನೂ ಇದರ ಮೇಲೆ ಆಕ್ರಮಣ ಮಾಡಿದ್ದರು ನಾಜಿಗಳು ಇಂಥಹ ರಾಷ್ಟ್ರಕ್ಕೆ ಧಾಳಿಯಿಟ್ಟಿದ್ದಾರೆ ಮರುಭೂಮಿಯನ್ನು ದಾಟಿಬಿಟ್ಟರೆಂದರೆ ಇಜಿಪ್ತನ್ನು ಆಕ್ರಮಿಸುವುದು ಅವರಿಗೆ ದುಸ್ಸಹವಾಗದು ಸುವೇಜ್ ಕಾಲುವೆಯೂ ಶತ್ರುವಶವಾಯಿತೆಂದರೆ ಮುಂದೆ ಬ್ರಿಟಿಷರ ಆಟವೇನಿಂತಂತೆ ಆಗುವುದು ಹಾಗಾಗಿ ಇಜಿಪ್ತ್ ಯುದ್ಧವು ಬ್ರಿಟಿಷರ ಹಾಗೂ ಅವರ ಸಾಮ್ರಾಜ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದಾಗಿದೆ

ಅಲ್ಲಿ ಎರಡು ರಾಜಕೀಯ ಪಕ್ಷಗಳಿವೆ, ಇಜಿಪ್ತಿನ ಅರಸರಾದ ಫರೂಕರು ಜನಪ್ರಿಯರು ಆದರೆ ಪ್ರಜಾಪ್ರಭುತ್ವವಾದೀ ವಫ್ಡ್ ಪಕ್ಷದ ಧುರೀಣ ನಹಾಸಪಾಶರ ಕ್ರಾಂತಿಕಾರಕ ವಿಚಾರಗಳು ಅವರಿಗೆ ಸೇರುವುದಿಲ್ಲ, ಆದರೆ ನಹಾಸಪಾಶರು ಮಂತ್ರಿ ಮಂಡಳ ಸ್ಥಾಪಿಸಿದರು. ಅವರ ಕರಾರುಗಳಿಗೆ ಫರೂಕರು ಒಪ್ಪಲೇ ಬೇಕಾಯಿತು. ವಫ್ಡ್ ಪಕ್ಷದವರು ಬ್ರಿಟಿಷರ ಕಡೆಗೆ ಪ್ರೀತಿ ಇದ್ದವರಾಗಿಲ್ಲ. ಹೇಗಿದ್ದರೂ ಬ್ರಿಟಿಷರೂ ಅವರ ಪಕ್ಷದ ಮಂತ್ರಿಮಂಡಳಕ್ಕೆ ಒಪ್ಪಿಗೆ ಕೊಡಬೇಕಾಯಿತು. ಆದರೆ ಈಗಿನ ನಹಾಸಪಾಶರು ತಮ್ಮ ಧೋರಣೆ ತಟಸ್ಥವೆಂದು ಸಾರಿದ್ದಾರೆ ತಮ್ಮ ಒಪ್ಪಂದದ ಕರಾರಿನಂತೆ ಇಜಿಪ್ತನ್ನು ರಕ್ಷಿಸುವ ಹೊಣೆ ತಮ್ಮದೆಂದು ಬ್ರಿಟಿಷ್ ಸೈನಿಕರು ಜರ್ಮನರನ್ನು ಎದುರಿಸುತ್ತಿದ್ದಾರೆ ಜರ್ಮನ್ ಸೈನ್ಯವು ಇಜಿಪ್ತಿನ ಗಡಿಯನ್ನು ಭೇದಿಸಿ ಮುಂದೆ ನುಗ್ಗುತ್ತಿದೆ ಇಜಿಪ್ತಿನಲ್ಲಿ ಮೊದಲಿನ ಕೆಲವೇ ದಿನಗಳಲ್ಲಿ ಜರ್ಮನರ ಸೇನೆ ನೂರಾರು ಮೈಲು ದಾಟಿ ಮುಂದೆ ಬಂದಿದೆ, ಬ್ರಿಟಿಷ್ ದಕ್ಷಿಣ ಆಫ್ರಿಕ, ನ್ಯೂಜಿಲೆಂಡ್ ಹಿಂದುಸ್ಥಾನಗಳಿಂದ ಬಂದ ಸೈನಿಕರು ರೊಮೆಲನನ್ನು ಇಜಿಪ್ತಿನಲ್ಲಿ ಪ್ರತಿ ಭಟಿಸಿ ಕಾದಾಡುತ್ತಿದ್ದಾರೆ ಎಲ್ ಎಲಮೇನಿನಲ್ಲಿ ರೋಮೆಲನು ಸೈನ್ಯ ಸಂಗ್ರಹಿಸಿಟ್ಟಿದ್ದು ಅಲ್ಲಿ ಭೀಕರ ಕಾಳಗ ನಡೆಯಿತು ಈಗ ರಣಭೂಮಿ ಸ್ವಲ್ಪ ಸ್ತಬ್ಧವಾಗಿ ಉಭಯಪಕ್ಷದವರೂ ಮುಂದಿನ ಸಿದ್ಧತೆಯಲ್ಲಿ ತೊಡಗಿರುವರೆಂದು ಸುದ್ದಿಯಿದೆ ಮಿತ್ರರಿಗೂ ಶತ್ರುಗಳಿಗೂ ಸಹಾಯಗಳು ಬರುತ್ತಲೇ ಇದೆ ಮುಂದಿನ ಯುದ್ಧದ ಭೀಷಣತೆಯು ಎಂತಹುದಿರುವುದೋ ನಿರೀಕ್ಷಣೀಯವಿರುವುದು

ಪಾರ್ಲಿಮೆಂಟಿನಲ್ಲಿ ಚರ್ಚೆ

ಬ್ರಿಟಿಷ್ ಜನತೆ ಲಿಬಿಯ ಪರಾಜಯದ ಬಳಿಕ ಚರ್ಚಿಲ್ ಸರಕಾರದಲ್ಲಿ ಅವಿಶ್ವಾಸವುಳ್ಳದ್ದಾಗಿರುವುದೆಂಬ ವಿಷಯವನ್ನು ನಾವು ಕಳೆದ ಸಂಚಿಕೆಯಲ್ಲಿ ಬರೆದಿದ್ದೆವು ಈ ಅವಿಶ್ವಾಸ ನಿರ್ಣಯದ ಕುರಿತು ಮೊನ್ನೆ ಪಾರ್ಲಿಮೆಂಟಿನಲ್ಲಿ ದೀರ್ಘ ಚರ್ಚೆ ನಡೆಯಿತು ಲಿಬಿಯ ಪರಾಜಯ, ಸರಿಯಾಗಿ ಯುದ್ಧ ಸಾಧನಗಳಿಲ್ಲದಿರುವುದು, ಇಜಿಪ್ತಿನ ಗಂಡಾಂತರ ಈ ವಿಚಾರಗಳು ವಿಮರ್ಶಿಸಲ್ಪಟ್ಟವು ಸರ್ ಜಾನ್‌ವಾರ್ಡ್‌ಲಾ ಮಿಲ್ನೆಯವರು ಚರ್ಚಿಲ್ ಸರಕಾರದ ಯುದ್ಧಕ್ರಮದಲ್ಲಿ ಅವಿಶ್ವಾಸ ಪ್ರಕಟಿಸುವ ಸೂಚನೆಯನ್ನು ಮುಂದೆ ತಂದರು ಈಗಿನ ಸರಕಾರದ ಯುದ್ಧ ನೀತಿ ಸರಿಯಾಗಿಲ್ಲವಾದ್ದರಿಂದ, ಈ ಸರಕಾರದ ಬದಲಾವಣೆಯಾಗಿ ತೀವ್ರ ಜಯ ಸಿಗುವಂತೆ ಮಾಡುವುದೇ ತಮ್ಮ ಉದ್ದೇಶವೆಂದು ಅವರು ಹೇಳಿದರು ನಿರ್ಣಯದ ಪರವಾಗಿಯೂ ವಿರುದ್ಧವಾಗಿಯೂ ಬಹಳ ಭಾಷಣಗಳಾದುವು ಸಂರಕ್ಷಕ ಮಂತ್ರಿಯ ಸ್ಥಾನವನ್ನು ಮುಖ್ಯ ಮಂತ್ರಿಗಳಿಂದ ಕಿತ್ತು ಬೇರೆಯವರಿಗೊಪ್ಪಿಸಬೇಕೆಂದೂ, ಸುವೇಜ್ ಕಾಲುವೆ ಎಣ್ಣೆ ಕ್ಷೇತ್ರಗಳನ್ನು ರಕ್ಷಿಸಿಕೊಳ್ಳುವ ಬಗ್ಗೆ ವಿಶೇಷ ಗಮನ ಕೊಡಬೇಕೆಂದೂ, ಅದರಂತೆ ಪ್ಯಾಲೆಸ್ತಾನ ಇಜಿಪ್ತಿನ ಜನರನ್ನು ರಕ್ಷಿಸಬೇಕೆಂದೂ ಅಪಜಯದ ಹೊಣೆಯು ಸಂಪೂರ್ಣವಾಗಿಯಲ್ಲದಿದ್ದರೂ ಹೆಚ್ಚಾಗಿ ಚರ್ಚಿಲ್ ಸರಕಾರದ ಮೇಲಿರುವುದೆಂದೂ, ಪರಾಜಯ ಪರಂಪರೆಗಳು ಹೀಗೆ ಬಿಡದೆ ಸಂಭವಿಸುತ್ತಿರುವಾಗ, ಮುಖ್ಯ ಮಂತ್ರಿಗಳು ರಾಜಿನಾಮೆ ಕೊಟ್ಟು ಬೇರೆಯವರಿಗೆ ಮಂತ್ರಿ ಮಂಡಳ ರಚಿಸಲು ಅವಕಾಶಕೊಡಬೇಕೆಂದೂ ಮುಂತಾಗಿ ಟೀಕೆಗಳಾದವು. ಮೊದಲನೆಯ ದಿನ ಹದಿನಾರು ಗಂಟೆಗಳ ತನಕ ಚರ್ಚೆ ನಡೆದು ರಾತ್ರಿ ಒಂದು ಗಂಟೆಗೆ ಸಭೆ ಮುಗಿಯಿತು ಮರುದಿನವೂ ಚರ್ಚೆ ಮುಂದುವರಿಯಿತು. ಮುಖ್ಯ ಮಂತ್ರಿಗಳಾದ ಚರ್ಚಿಲರು ಆರೋಪಗಳಿಗೆ ಉತ್ತರಕೊಟ್ಟರು. ತೋಬ್ರುಕ್ ಪರಾಜಯದ ಕಾರಣ, ರೋಮೆಲನ ಮುನ್ನಡೆಯ ವಿಚಾರ, ಲಿಬಿಯದ ಅಪಜಯದ ಹೇತು ಇವುಗಳನ್ನೆಲ್ಲಾ ವಿಶದಗೊಳಿಸಿ ಏಶ್ಯದಲ್ಲಿ ನಷ್ಟ ಸಂಭವಿಸಿದ್ದರೂ, ಲಿಬಿಯದಲ್ಲಿ ಸೋಲು ಆಗಿದ್ದರೂ ಕೊನೆಗೆ ಖಂಡಿತವಾಗಿಯೂ ನಮಗೆ ವಿಜಯದೊರಕುವುದೆಂದರು ಕೊನೆಗೆ ಮತಗಣನೆಯಾಗಲು ನಿರ್ಣಯವು ಪ್ರಬಲ ವಿರುದ್ಧ ಮತದಿಂದ ಬಿದ್ದುಹೋಯಿತು! ಚರ್ಚಿಲರು ಹೀಗೆ ಈ ಸಲವೂ ಅವಿಶ್ವಾಸ ಠರಾವನ್ನು ಉರುಳಿಸಿ ಬಿಟ್ಟರು!

ದ್ವಿತೀಯ ರಣಕ್ಷೇತ್ರವಿಲ್ಲವೇ?

ಹಿಂದಿನ ಕೆಲವು ವಾರಗಳಲ್ಲಿ, ಯುರೋಪಿನಲ್ಲಿ ಮಿತ್ರರು ದ್ವಿತೀಯ ರಣಕ್ಷೇತ್ರವೊಂದನ್ನು ತೆರೆದು ಶತ್ರುವನ್ನು ನಿಗ್ರಹಿಸುವ ಯೋಚನೆ ಮಾಡಿರುವರೆಂದು ಪ್ರಕಟವಾಗಿತ್ತಷ್ಟೆ? ಆದರೆ ಈ ವಿಚಾರದಲ್ಲಿ ಇತ್ತೀಚೆಗೆ ಏನೂ ಕಾರ್ಯಕಲಾಪಗಳು ನಡೆದದ್ದು ನಮಗೆ ಕಂಡು ಬರುವುದಿಲ್ಲ. ಚರ್ಚಿಲರು ಅಮೆರಿಕಕ್ಕೆ ಹೋಗಿ ಬಂದರು, ಅವರಾದರೂ ರೂಸ್‌ವೆಲ್ಟರೊಡನೆ ಆ ವಿಚಾರ ಮಾತನಾಡಿದ್ದರೆ? ಅದರ ವಿವರಗಳೇನೂ ಎಂಬೀ ಸಂಗತಿಗಳೊಂದೂ ನಮಗೆ ತಿಳಿದಿಲ್ಲ ರಶ್ಯಕ್ಕೆ ಹೆಚ್ಚಿನ ಸಹಾಯ ಕಳುಹಿಸುವ ವಿಚಾರವೇನಾಯಿತು? ಚೀನಕ್ಕೆ ಬೆಂಬಲ ಕೊಡುವುದು ಹೇಗೆ? ದ್ವಿತೀಯ ರಣಕ್ಷೇತ್ರವನ್ನು ಎಲ್ಲಿ ನಿರ್ಮಿಸುವುದು? ಮಧ್ಯ ಏಶ್ಯದಲ್ಲಿ ಜರ್ಮನರ ಮುನ್ನುಗ್ಗುವಿಕೆಯನ್ನು ಹೇಗೆ ಪ್ರತಿಬಂಧಿಸುವುದು ಪೆಸಿಫಿಕ್ಕಿನಲ್ಲಿ ಜಪಾನರನ್ನು ಸೋಲಿಸುವ ಉಪಾಯವೇನಾವುದು? ಈ ಮುಂತಾದ ವಿಚಾರಗಳನ್ನು ಅವರು ಆಲೋಚಿಸಿರಬೇಕು ಆದರೆ ಈ ವಿಷಯವಾಗಿ ಮಿತ್ರರು ಮುಂದೆ ಏನೇನು ಉಪಾಯಗಳನ್ನು ಕೈಕೊಳ್ಳಲಿರುವರೆಂದು ನಮಗೆ ತಿಳಿದಿಲ್ಲ ರಶ್ಯದ ಪ್ರಧಾನ ಮಂತ್ರಿ ಮೋಲೋಟೋವರು ಮೊನ್ನೆ ಇಂಗ್ಲೆಂಡು ಅಮೆರಿಕಗಳನ್ನು ಸಂದರ್ಶಿಸಿದಾಗ ದ್ವಿತೀಯ ರಣಕ್ಷೇತ್ರವನ್ನು ನಿರ್ಮಿಸುವ ವಿಚಾರ ಒತ್ತಾಯ ಮಾಡಿದರೆಂದು ಕೇಳಿದ್ದೇವೆ ಆ ಸಂಬಂಧ ಮೊನ್ನೆ ಮೊನ್ನೆ ರಶ್ಯ ಬ್ರಿಟನುಗಳಲ್ಲಿ ಒಂದು ಒಪ್ಪಂದವೂ ಆಯಿತು. ಇಂಗ್ಲೆಂಡಿಗೆ ಶಕ್ತಿ ಸಾಧನಗಳು ಹೆಚ್ಚಾಗಿ ಬರುತ್ತಿವೆಯೆಂಬ ಕೆಲಕಾಲದಿಂದ ಮಾತು ಕೇಳಿ ಬರುತ್ತದೆ ಆದರೆ ಇಂದಿನ ಪರಿಸ್ಥಿತಿಯಲ್ಲಿ ಜಪಾನನ್ನು ಪೆಸಿಫಿಕಿನಲ್ಲಿ ಪ್ರತಿಬಂಧಿಸುವ, ಜರ್ಮನ ಮುನ್ನುಗ್ಗುವಿಕೆಯನ್ನು ತಡೆಯುವ ದ್ವಿತೀಯ ರಣಕ್ಷೇತ್ರದ ಸಿದ್ಧತೆ ಎಲ್ಲಿಯೂ ನಡೆದಂತೆ ತೋರುವುದಿಲ್ಲ. ಅದರ ಬದಲು ಹಿಟ್ಲರನೇ ಇಜಿಪ್ತಿನ ಹೊಸ ರಣರಂಗವನ್ನು ಪ್ರಾರಂಭಿಸಿದ್ದಾನೆ ಅಲ್ಲಿ ಅವನನ್ನು ಮುರಿದಿಕ್ಕುವ ಮಾತೂ ಸ್ವಲ್ಪ ಸಾಹಸದ್ದೇ ಆಗಿ ತೋರುತ್ತದೆ ಯೂರೋಪಿನಲ್ಲಂತೂ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹಿಟ್ಲರನ ಕೈಯೇ ಮೇಲಾಗುತ್ತಿದೆ. ಎಲ್ಲಿಗೆ ಬೇಕೋ ಅಲ್ಲಿಗೆ ಸೈನ್ಯ ಸಾಮಗ್ರಿಗಳನ್ನು ಕಳುಹಿಸಲು ರಸ್ತೆ ಸೌಕರ್ಯಗಳೂ ಅವನಿಗಿವೆ, ಹಿಟ್ಲರನ ಟ್ಯಾಂಕ್ ಕಾಳಗವು ಜನಭೀಷಣವೆನಿಸಿದೆ. ಸಮುದ್ರ ಯುದ್ಧದಲ್ಲಿ ಅವನು ಅತಿ ಭಯಂಕರನಾಗಿದ್ದಾನೆ ಇಷ್ಟೆಲ್ಲಾ ಇರುತ್ತಾ ಸಿದ್ಧತೆಗಳನ್ನು ಮಿತ್ರರು ಬಹಳ ತ್ವರಿತದಿಂದ ಮಾಡಿ, ದ್ವಿತೀಯ ರಣಕ್ಷೇತ್ರವನ್ನೂ ಬೇಗನೇ ತೆರೆದು ಹಿಟ್ಲರನ ಬಲ ಮುರಿವುದರೊಡನೆ ಜಪಾನನ್ನೂ ತಡೆಯದಿದ್ದರೆ ಕಾರ್ಯ ಕೆಟ್ಟು ಹೋದೀತು! ಈ ವಿಚಾರ ಮಿತ್ರರಿಗೂ ಚೆನ್ನಾಗಿ ತಿಳಿದಿರಬಹುದು. ಆದರೆ ಈ ಕುರಿತು ಅವರ ಮುಂದಿನ ಸಿದ್ಧತೆಗಳೇನೋ ನಾವು ನಿರೀಕ್ಷಿಸುತ್ತಿದ್ದೇವೆ.

ಒಂದು ವಾರದೊಳಗೆ

ಪ್ರಕಟವಾಗುವುವು

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೨ನೆಯ ದರ್ಜೆಯ ಕಥೆ 0–1–6

ಮತ್ತು

೩ನೆಯ ದರ್ಜೆಯ ಭೂವಿವರಣೆ 0–2–0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 101/1942

ಅನುಸೂಯಯಯಾನೆ ಕೀತಾ ಬ್ಯಾ ವ್ಯಕಪಟ್ಟ K ರಗುರಾಮ ಪೈಯವರ ವಿಧವೆ, ವ N ಶ್ರೀನಿವಾಸ ಮಲ್ಯರ ಮಗಳು ಕಾಸ್ರಗೋಡು ಕ್ಯಬಾಗಾಮದಲ್ಲಿರುವವಳು . ಅರ್ಜಿದಾರಳು

(1) K ಅನಂತ ಪೈ ಕೋಟೆಚ್ಚೆರಿ ಮೂಲಪ್ಪ ಪೈಯವರ ಮರ್ ವ್ಯಾಪಾರಸ್ಥ (2) K ವಾಸುದೇವ ಪೈ (3) K ಕೃಷ್ಣ ಪೈ 1ನೇ ರೈಸಾಂಡೆಂಟ K ಅನಂತ ಪೈಯವರ ಮಕ್ಕಳು

. ರೈಸಾಂಡೆಂಟ್ರು

1—2ನೇಯವರು ಕಾಸರಗೋಡು ಕ್ಯಬಾಗ್ರಾಮದಲ್ಲಿಯೂ, 3ನೇ ಯವನು ಮಂಗ್ಳೂರು ಶಹರಿನಲ್ಲಿಯೂ ಇರುವವರು

ಇವರೊಳಗೆ

? —7—42

ಸದ್ರಿ ಅರ್ಜಿದ ರಳ ಕಡೆಯಿಂದ ನೋಟೀಸು

ವ್ಯಕಪಟ್ಟ K ರಘುರಾಮ ಪೈ ಮೆಂಬರಿಗ "ದೀ ಈಸ್ಟ್ ಎಂಡ್ ವೆಸ್ಟ್ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ" ಮತ್ತು ದೀ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ ಎಂಬ 2 ಕಂಪೆನಿಗಳಿಂದ ಅರ್ಜಿ ಶೆಡ್ಯೂಲಿನಲ್ಲಿ ವಿವರಿಸಿದ ತೆ ಬರತಕ್ಕ ರೂಪಾಯಿ 1500—0—0ನ್ನು ವಸೂಲ್ ಕುರಿತು ಆತನ ಪ್ರತಿನಿಧಿವಾರಿಸ್ತುದಳಾದ ಅರ್ಜಿದಾರಳು ವಾರ್ಸು ಸರ್ಟಿಫಿಕೇಟು ಅಪೇಕ್ಷಿಸಿ ದಾಖಲು ಮಾಡಿದ ಅಜಿಯು ತಾರೀಕು 2? 7 1 42ಕ್ಕೆ ಕ್ಯಾರಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ

Kasaragod | K P Madhava Rao
?—7—42 | Advocate for petitioner

ಪ್ರಕಟಣೆ

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S No 1?1/1?40
R E P No 225/1943
R E A No 2?6/1942

ಕಾವು ಪೂಜಾರ್ತಿ - ವಾದಿಳು ಅರ್ಜಿದಾರಳು

ಮತ್ತು

ಸಂಕಯ್ಯ ಪೂಜಾರಿ ಸಹಾ—ಪ್ರತಿವಾದಿರು
ಎದ್ರಿರು

ಸದ್ರಿ ವ್ಯವಹರಣೆಯು 3ನೇ ಎದ್ರಿ ಎ ಮೂನ ಶೆಟ್ಟಿ ಬೋಳ ವೆಂಕ್ಟೇಶ ಶೆಟ್ಟಿರ ಮಗ ಕಾರ್ಕಳ ತಾಲೂಕು ಬೋಳ ಗ್ರಾಮದ ಸಡಿಯಾಲು ಎಂಬಲ್ಲಿರುವವರಿಗೆ ಈ ಮೂಲಕ ತಿಳಿಸುವದೇನೆಂದ್ರೆ,

ಮೇಲ್ಕಂಡ ಡಿಕ್ರಿಯಲ್ಲಿ ಮಾರಾಟಕ್ಕೆ ಎಧಾಯಿರುವ ನಿಮ್ಮ ಹಕ್ಕಿನ ಕೂಡಾ ಸ್ಥಿರಾಸ್ತಿ ಯೇಲವಾಗಿ ಅಪೇಕ್ಷಿಸಿ ಅರ್ಜಿದಾರಳು ದಾಖಲು ಮಾಡಿದ ಮೇಲ್ಕಂಡ ಅಮಲ್ದಾರಿ ವ ಬಚ್ ಅರ್ಜಿ ಕೂಡಾ ನಿಮ್ಮ ಹಾಜರಾತಿ ಬಗ್ಗೆ ವ ಧಸ್ತಾವೇಜಿಗೆ ಆಕ್ಷೇಪ ಕೊಡುವ ಬಗ್ಗೆ ಕೂಡಾ ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 15-7-1942ಕ್ಕೆ ಇಟ್ಟಿದೆ ನೀವು ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲದ್ವಾರಾ ತಾ 15-7-42ರ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿ ಸಮ್ಮಂಧ ಸದ್ರಿ ವ್ಯವಹರಣೆಯು ತೀರ್ಮಾನಿಸಲಾದೀತು

(By order of the Court)

Karkala | N Mohandas Adyanthaya
16-6 1942 | Advocate for Petitioner

ಸ್ವದೇಶಾಭಿಮಾನಿ

ತಾ॥ ೯ಕು 10-7-1942

ಒರಿಸಾದಲ್ಲಿ

ಒರಿಸಾದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳವು ರಾಜೀಕೊಟ್ಟ ಮೇಲೆ ಹೊಸತೊಂದು ಮಂತ್ರಿ ಮಂಡಳವನ್ನು ಸ್ಥಾಪಿಸುವ ಯತ್ನ ನಡೆಯಿತು. ಒಮ್ಮೆ ಹೇಗೋ ಹೇಗೋ ಅಧಿಕಾರವೇರಿದ ಆ ಹೊಸ ಮಂತ್ರಿ ಮಂಡಳವು ಅಧಿಕಾರ ಲಾಲಸೆಗೊಂಡು ಈಗ ಹೇಗಾದರೂ ಪಟ್ಟಬಿಡದಿರಲು ಪೇಚಾಡುತ್ತಲಿದೆ! ಒರಿಸಾದ ಮಾಜಿ ಪ್ರಧಾನ ಮಂತ್ರಿ ಶ್ರೀ ವಿಶ್ವನಾಥ ದಾಸರನ್ನು ಮೊನ್ನೆ ಮೊನ್ನೆ ಬಂಧಿಸಿದ ವಿಚಾರವು, ಈ ಹೊಸ ಮಂತ್ರಿ ಮಂಡಳವು ಅಧಿಕಾರ ಪಟ್ಟವನ್ನು ಬಿಡದಿರಲು ಮಾಡುತ್ತಿರುವ ಪೇಚಾಟದ ಪರಮಾವಧಿಯಾಗಿರುವುದು!

ಕಳೆದ ಫೆಬ್ರವರಿ ತಿಂಗಳಲ್ಲಿ ಈ ಹೊಸ ಮಂತ್ರಿ ಮಂಡಳವು ಅವಿಶ್ವಾಸ ಠರಾವನ್ನು ಎದುರಿಸಬೇಕಾಗಿತ್ತು. ಆಗ ಈ ಮಂತ್ರಿಮಂಡಳವು ಕಾಂಗ್ರೆಸಿನ ಇಬ್ಬರು ಶಾಸನ ಸಭಾ ಸದಸ್ಯರನ್ನು ಡಿಫೆನ್ಸ್ ಕಾನೂನನ್ನು ಲಗಾಯಿಸಿ ಬಂಧಿಸುವುದರಿಂದ ಅವಘಡವನ್ನು ಹೇಗಾದರೂ ತಪ್ಪಿಸಿಕೊಂಡಿತು. ಆ ಸದಸ್ಯರ ಖಾಲಿಬಿದ್ದ ಸ್ಥಾನಗಳಿಗೆ ಉಪ ಚುನಾವಣೆಯಾಗುವುದನ್ನಾದರೂ, ನಮಗೆ ಅನುಕೂಲ ಚುನಾವಣೆಯಾಗಲಾರದೆಂಬ ಭೀತಿಯಿಂದ ಹಾಗೂ ಅಧಿಕಾರವನ್ನುಳಿಸಿಕೊಳ್ಳಬೇಕೆಂಬ ಲಾಲಸೆಯಿಂದ ಮುಂದುವರಿಸಲಾಯಿತು.

ಇತ್ತೀಚೆಗೆ ಹೊಸ ಮಂತ್ರಿಮಂಡಳದ ಇಬ್ಬರು ಸದಸ್ಯರು ಪಕ್ಷಕ್ಕೆ ತಮ್ಮ ಬೆಂಬಲವನ್ನು ಹಿಂದೆಗೆದುಕೊಂಡಿದ್ದಾರೆ; ಮಂತ್ರಿ ಮಂಡಳವಾದರೂ ಈಗ ಸುಮ್ಮಗಿರಲು ಸಾಧ್ಯವೆ? ತಮ್ಮ ವಿರೋಧಪಕ್ಷದಲ್ಲಿ ಬಹುಮತವಿರಬಾರದೆಂಬುದಕ್ಕಾಗಿ ಕಾಂಗ್ರೆಸ್ ಪಕ್ಷದ ಸದಸ್ಯರೊಬ್ಬರನ್ನು ಬಂಧಿಸಿಬಿಟ್ಟಿದೆ! ಮೊನ್ನೆ ಮೊನ್ನೆ ಒರಿಸದ ಮಾಜಿ ಪ್ರಧಾನರಾದ ಶ್ರೀ ವಿಶ್ವನಾಥ ದಾಸರನ್ನು ಬಂಧಿಸಿದ ವಿಚಾರದಲ್ಲಿರುವ ಈ ಗುಟ್ಟನ್ನು ಪ್ರತಿಯೊಬ್ಬನೂ ಬಲ್ಲನು.

ಇಂದಿನ ಮಂತ್ರಿ ಮಂಡಳಕ್ಕೆ ನೈತಿಕ ಬೆಂಬಲವಿಲ್ಲ; ಶಾಸನಬದ್ಧ ನ್ಯಾಯವಿಲ್ಲ. ಕಾಂಗ್ರೆಸ್ ಪಕ್ಷದೆದುರು ತಮ್ಮ ಪಕ್ಷದ ಮಂತ್ರಿಮಂಡಳವನ್ನು ಸ್ಥಾಪಿಸುವಷ್ಟು ಬೆನ್ನುಹುರಿ ಗಟ್ಟಿಯಾಗಿಲ್ಲ. ಶಾಸನ ಸಭೆಯಲ್ಲಿ ನಿಜವಾಗಿ ನೋಡಿದರೆ ಅದಕ್ಕೆ ಬಹುಮತವೇ ಇರುವುದಿಲ್ಲ. ಎಂಬ ವಿಷಯಗಳೆಲ್ಲವನ್ನೂ ಶ್ರೀ ವಿಶ್ವನಾಥ ದಾಸರು ಒರಿಸಾದ ಗವರ್ನರರಿಗೆ ವಿಶದ ಪಡಿಸಿದ್ದರೂ, ಗವರ್ನರರು ಮೂಕ ಮೌನರಾಗಿದ್ದಾರೇಕೆ? ಶ್ರೀ ವಿಶ್ವನಾಥ ದಾಸರನ್ನು ಬಿಡುಗಡೆ ಮಾಡಿ ಎಸೆಂಬ್ಲಿ ಸೇರಲು ಸಿದ್ಧತೆ ಮಾಡಬಾರದೆ? ಅದರ ಫಲಿತಾಂಶನೋಡಬಾರದೆ? ಡಿಫೆನ್ಸ್ ಒಫ್ ಇಂಡಿಯಾ ಕಾನೂನನ್ನು ಹೀಗೆ ಒಂದು ಪಕ್ಷದ ಮಂತ್ರಿ ಮಂಡಳದ ಅಧಿಕಾರ ಲಾಲಸೆಗಾಗಿ ದುರುಪಯೋಗಪಡಿಸಬೇಕೆ?

ರಾಜಾಜಿಯಲ್ಲಿ ಅವಿಶ್ವಾಸ?

ಇದೇ ತಿಂಗಳ ಹದಿನೈದನೆಯ ತಾರೀಕಿಗೆ ಸೇರಲಿರುವ ಕಾಂಗ್ರೆಸು ಪಕ್ಷದ ಮದ್ರಾಸು ಶಾಸನ ಸಭಾಸದಸ್ಯರ ಸಭೆಯಲ್ಲಿ ಮಂಡಿಸಲೆಂದು, ರಾಜಾಜಿಯವರ ಧುರೀಣತ್ವದಲ್ಲಿ ಅವಿಶ್ವಾಸ ತೋರಿಸುವ ನಿರ್ಣಯವೊಂದನ್ನು ಶ್ರೀ ಮುತ್ತುರಂಗ ಮುದಲಿಯಾರರೆಂಬ ಕಾಂಗ್ರೆಸ್ ಪಕ್ಷದ ಮದ್ರಾಸ್ ಶಾಸನ ಸಭಾಸದಸ್ಯರೊಬ್ಬರು ಸೂಚನೆ ಕೊಟ್ಟಿರುವರು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮತ್ತು ಎ. ಐ. ಸಿ. ಸಿ. ಧೋರಣವು ಕಾಂಗ್ರೆಸ್ ಪಕ್ಷದ ಮದ್ರಾಸ್ ಶಾಸನ ಸಭಾ ಸದಸ್ಯರಿಗೆ ಸಮ್ಮತಿಯಿದ್ದು, ಶ್ರೀ ರಾಜಗೋಪಾಲಾಚಾರ್ಯರ ಸೂಚನೆಯಲ್ಲಿ ವಿಶ್ವಾಸವಿಲ್ಲವೆಂದು ಅದರಲ್ಲಿ ಹೇಳಲಾಗಿದೆ.

ಇದೇ ಸಭೆಯಲ್ಲಿ ಮಂಡಿಸಲೆಂದು ಶ್ರೀ ಮುತ್ತುರಂಗ ಮುದಲಿಯಾರರು ಇನ್ನೆರಡು ನಿರ್ಣಯಗಳನ್ನು ಕಳುಹಿಸಿದ್ದಾರೆ. ಕಳೆದ ಏಪ್ರಿಲ್ ತಾರೀಕು ಇಪ್ಪತ್ತ ಮೂರಕ್ಕೆ ಸೇರಿದ್ದ ಸಭೆಯಲ್ಲಿ ಮಂಜೂರಾದ ಪಾಕಿಸ್ತಾನ ಹಾಗೂ ರಾಷ್ಟ್ರೀಯಸರಕಾರದ ಸೂಚನೆಯನ್ನು ಕಿತ್ತುಹಾಕಬೇಕೆಂದು, ಮೊದಲಿನ ಎರಡು ನಿರ್ಣಯಗಳಲ್ಲಿ ಸೂಚಿಸಲಾಗಿದೆ. ಕಾಂಗ್ರೆಸ್ ಧೋರಣದ ವಿರುದ್ಧ ಪ್ರಚಾರಮಾಡುವ ಎಲ್ಲಾ ಕಾಂಗ್ರೆಸ್ ಪಕ್ಷದ ಶಾಸನಸಭಾ ಸದಸ್ಯರ ಮೇಲೂ ಶಿಸ್ತು ಜಾರಿಮಾಡುವುದು ಮೂರನೆಯ ಸೂಚನೆಯಾಗಿದೆ. ರಾಜಾಜಿ ಈ ವಿಪತ್ತನ್ನು ಹೇಗೆ ಪರಿಹರಿಸಿಕೊಳ್ಳುವರೋ ನೋಡಬೇಕಾಗಿದೆ.

ನೋಟಗಳು....

ಹಿಂದೀ ವಿರೋಧ ಚಳವಳದ ಕಾಲದಲ್ಲಿ ಸ್ಟಾಲಿನ್ ಜಗದೀಶರೆಂಬವರು 'ಮರಣ ಪರ್ಯಂತ'ದ ಉಪವಾಸ ಆರಂಭಿಸಿ ಮೊದಲಿಗಿಂತಲೂ ದೃಢಕಾಯರಾಗಿದ್ದರು. ಸೇಲಮಿನ ಒಬ್ಬರು ಎಂ. ಎಲ್. ಎ., ಗಳಾದ ಶ್ರೀ. ಎಂ. ಸುಬ್ರಹ್ಮಣ್ಯಂ ಎಂಬವರೂ ಈಗ ರಾಜಾಜಿಯವರ ಸೂಚನೆಗೆ ಬಹುಮತ ದೊರಕಿಸಲು ಉಪವಾಸ ಕೈಕೊಂಡಿರುವರೆಂಬ ಸುದ್ದಿ ಕೇಳುತ್ತೇವೆ.

卐

ಜಗದೀಶರು 'ಮರಣ ಪರ್ಯಂತ'ದ ಉಪವಾಸವನ್ನು ಕೈಕೊಂಡಿದ್ದರಿಂದ ದೃಢಕಾಯರಾದರು! ಆದರೆ ಸೇಲಮಿನ ಈ ರಾಜಾಜಿ ಗೆಳೆಯರು ಮರಣ ಪರ್ಯಂತದ ಉಪವಾಸ ಕೈಕೊಂಡದ್ದೋ ಅಲ್ಲವೋ ಎಂದು ನಮಗಿನ್ನೂ ಸ್ಪಷ್ಟವಾಗಿ ತಿಳಿದಿಲ್ಲ.

卐

ಸ್ಟಾಲಿನ್ ಜಗದೀಶರು ಉಪವಾಸ ಕೈಕೊಂಡಾಗ ರಾಜಾಜಿ ಅದನ್ನು 'ಗುಮಾನಿ'ಸಿರಲಿಲ್ಲ. ಆದರೆ ಈ ಉಪವಾಸದ ಕುರಿತು ಅವರು ಮೌನವಾಗಿರಲು ಸಾಧ್ಯವಿಲ್ಲ!

卐

ತನ್ನ ಸೂಚನೆಗೆ ಬೆಂಬಲ ಸಿಗಬೇಕೆಂದು ರಾಜಾಜಿ ಎಲ್ಲೆಲ್ಲೂ ಸುತ್ತಾಡಿದರು! ಅವರಿಗೆ ಈಗ ಸಿಗುವ ಈ ತರದ ಬೆಂಬಲವನ್ನು ನೋಡಿದರೆ, "ನನ್ನನ್ನು ಈ ನನ್ನ ಗೆಳೆಯರಿಂದ ಒಮ್ಮೆ ಪಾರುಮಾಡಿದರೆ ಸಾಕು" ಎಂದು ರಾಜಾಜಿ ಬೊಬ್ಬಿಡುವಂತೆ ಆಗಿದೆ.

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್‌ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ	...	ಬೆಲೆ	0—2—6
VI ತರಗತಿ ಅಥವಾ I ಫಾರ್ಮಿಗೆ	...	"	0—3—0
VII ತರಗತಿ ಅಥವಾ II ಫಾರ್ಮಿಗೆ	...	"	0—3—6
VIII ತರಗತಿ ಅಥವಾ III ಫಾರ್ಮಿಗೆ	...	"	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ.

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled.— *"HINDU" MADRAS.*

ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ.

'ಶ್ರೀ. ರೈಗಳು ಆಯಾತರಗತಿಯ ಮಕ್ಕಳಿಗೆಬೇಕಾದ ಸ್ಟ್ಯಾಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ. ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮ್ಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ ಮಂಗಳೂರು.

ಪ್ರಕಟಣೆ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C. No. 250/1942.

ಹಾಸಂ ಹಾಜಿ ಗನಮುಹಾ ಬಳಗಾಂವಾಲಾ—ವಾದಿ

ಮತ್ತು

ಬಂಕಲ್ ಸುಬ್ರಾಯ ದಾಮೋದರ ಬಾಳಿಗ—ದಾಮೋದರ ಬಾಳಿಗರ ಮಗ—ಕಡೂರು ಡಿಸ್ಟ್ರಿಕ್ಟ್ ಬಂಕಲ್ ಎಂಬಲ್ಲಿ ವ್ಯಾಪಾರಸ್ಥರು— ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—ಮೇಲ್ಕಂಡ ದಾವಾ ಏವ್ಪತ್ತಿ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಸದ್ರಿ ಖ್ಯಾಜ್ಯವು ಸದ್ರಿ ಪ್ರತಿವಾದಿರ ಹಾಜರಾತಿನ ಬಗ್ಗೆ ತಾರೀಕು 23-7-1942ಕ್ಕೆ ಇಟ್ಟಿರುತ್ತದೆ. ಆದ್ದರಿಂದ ಸದ್ರಿ ದಿನ ಹಗಲು 10½ ಗಂಟೆಗೆ ಸದ್ರಿ ಪ್ರತಿವಾದಿರು ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ತಮ್ಮ ಉದಾಹರಣೆಯನ್ನು ದಾಖಲು ಮಾಡದಿದ್ದರೆ ಸದ್ರಿಯವರ ಗೈರ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

Mangalore, 6-7-1942 — **A. Moosabba,** B.A.B.L., Vakil for Plff.

卐

NOTICE

In the Court of the District Munsif of Mangalore.

Small Cause suit No. 85/1942.

Between:

Abdul Sakoor Tayoob Sait— *Plaintiff*

and

T. M. Ibrahimkunhi— *Defendant*

To

The deft. K. M. Ibrahimkunhi, Merchant. Camp Bazzar, Cannanore.

Please take notice that the above suit against you is posted to 15-7-1942 for final hearing.

You are hereby warned to appear on that day at the Court at 10-30 a. m. in person or by a pleader for the trial, or else it will be decided exparte.

(By order)

Mangalore, 3-7-1942. — **Abdur Rahim Ahmed,** Advocate for plaintiff



ಭಾರತದ ಸರ್ವಾಧಿಕಾರ ಪಟ್ಟ ಸುಭಾಷ್ ಬೋಸರಿಗೆ ಹಿಟ್ಲರ್ ಕಟ್ಟಿರುವನಂತೆ!

ಅಮೃತ್ ಬಜಾರ್ ಪತ್ರಿಕೆಯ ಲಂಡನ್ ಸುದ್ದಿಗಾರರು ಈ ಸುದ್ದಿಯನ್ನು ಪ್ರಕಟಿಸಿದ್ದಾರೆ.

ಜರ್ಮನಿಯ ಫ್ಯೂರರ್ [ಸರ್ವಾಧಿಕಾರಿ] ಹೆರ್ ಹಿಟ್ಲರ್ ಸುಭಾಷ ಚಂದ್ರಬೋಸರಿಗೆ ಭಾರತದ ಫ್ಯೂರರ್ [ಸರ್ವಾಧಿಕಾರಿ] ಪಟ್ಟವನ್ನು ಕಟ್ಟಿರುವನಂತೆ. ಶ್ರೀ. ಬೋಸರ ಅಧಿಕಾರ ಸ್ಥಾನವು ಈಗ "ವಿದೇಶಾಂಗ ರಾಯಭಾರಿ"ಗಳ ಸಮಾನವಾದುದು "ಹಿಸ್ ಎಕ್ಸಲೆನ್ಸಿ" ಎಂಬ ಗೌರವದ ಅಭಿಧಾನವನ್ನು ಅವರಿಗೆ ನೀಡಲಾಗಿದೆ ಯೆಂಬ ಸುದ್ದಿಯನ್ನು "ಸಂಡೇ ಎಕ್ಸ್‌ಪ್ರೆಸ್" ಪತ್ರಿಕೆಯ ಸ್ಟಾಕ್ ಹಾಂ ಸುದ್ದಿಗಾರರು ಕಳಿಸುತ್ತಾರೆ.

ಕಳೆದ ಶುಕ್ರವಾರ ಶ್ರೀ ಸುಭಾಷ ಚಂದ್ರ ಬೋಸರನ್ನು ವಿದೇಶ ಸುದ್ದಿಗಾರರ ಸಮ್ಮೇಳನದಲ್ಲಿ ಪರಿಚಯ ಮಾಡಿಕೊಡಲಾಯಿತು. ಆಗ ಅವರು ಕರಿ ಬಟ್ಟೆ ಧರಿಸಿದ್ದರು. ಅದು ಸಮರ ಸೈನಿಕರ ಉಡುಪು.

ಭಾರತದಲ್ಲಿ ಅವರ ಪಕ್ಷವಾದ 'ಫಾರ್‌ವರ್ಡ್ ಬ್ಲಾಕ್' ಈಗ ಅಕ್ರಮಕೂಟವೆಂದು ಸಾರಲ್ಪಟ್ಟು ಆ ಪಕ್ಷದ ನಾಯಕರೆಲ್ಲ ಬಂಧನಕ್ಕೆ ತುತ್ತಾಗುತಿದ್ದಾರೆ. ಅನೇಕ ಕಡೆಗಳಲ್ಲಿ ಪಕ್ಷದ ಕಚೇರಿಗಳನ್ನು ಶೋಧಿಸಿ, ಪೋಲೀಸರು ಕಾಗದಪತ್ರಗಳನ್ನು ವಶಪಡಿಸಿಕೊಂಡು ಹೋಗುತಿದ್ದಾರೆ.

ಎಚ್. ವಿ. ಕಾಮತರ ತಂದೆಯ ಮನೆ ಶೋಧನೆ

ಈಗ ಬಂಧಿತರಾಗಿರುವ ಅ. ಭಾ. ಫಾರ್ವರ್ಡ್ ಬ್ಲಾಕಿನ ಕಾರ್ಯದರ್ಶಿ ಶ್ರೀ. ಎಚ್. ವಿ. ಕಾಮತರ ತಂದೆಯ ಮನೆಯು ಪೋಲೀಸರಿಂದ ಶೋಧಿಸಲ್ಪಟ್ಟಿತು. ಶ್ರೀ ಕಾಮತರ ಸಂಬಂಧಿಕರಾದ ದಿವಂಗತ ಶ್ರೀ ಎಮ್ ಎನ್ ಪ್ರಭುಗಳ ಮನೆಯೂ ಶೋಧಿಸಲ್ಪಟ್ಟು ಶ್ರೀ. ಜಯ ಪ್ರಕಾಶ ನಾರಾಯಣರ 'ಸಮಾಜವಾದವೇ ಏಕೆ?' ಪುಸ್ತಕದ ಇಂಗ್ಲಿಷ್ ಪ್ರತಿಯನ್ನು ಮ. ಗಾಂಧಿಯವರು ಬರೆದ 'ಹಿಂದ್ ಸ್ವರಾಜ್' ಪುಸ್ತಕವನ್ನೂ ಪೋಲೀಸರು ಕೊಂಡು ಹೋಗಿರುವರೆಂದು ಗೊತ್ತಾಗಿದೆ.

ತೀಯಾ ಶಕ್ತಿ ಸಂಘ

೨ ಜೂನ್ ತಾ. ೨೯ರಲ್ಲಿ ಸಭೆ ಸೇರಿ, ಈ ನಿರ್ಣಯವನ್ನು ಮಾಡಿತು. 'ರಾ. ಬ. ರಂಗನಾಥ ಪೂಜಾರ ಸೂಚನೆಯು ಶ್ರೀ ಎ. ಬಿ. ಶೆಟ್ಟಿ ಮತ್ತು ಇತರ ೬ ಮಾನ್ಯ ಗೃಹಸ್ಥರು ೧೯೩೩ನೆ ಇಸವಿಯಲ್ಲಿ ತಂದ ಅಳಿಯ ಸಂತಾನ ಮಸೂದೆ ಕಾನೂನು ಆಗುವುದು ಅತೀ ಅಗತ್ಯ. ಮತ್ತು ಆ ಕಾನೂನು ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಅದರ ಹೊರಗೆ ಇರುವ ಅಳಿಯ ಕಟ್ಟು ಆಚರಿಸುವ ತೀಯರಿಗೆ ಲಾಗೂವಾಗುವುದು ಅಗತ್ಯವೆಂದು ಸಂಘದ ಅಭಿಪ್ರಾಯ.

ಜಿಲ್ಲಾ ಸಮಾಚಾರಗಳು

ಮಂಗಳೂರು

೬ ಮಂದಿ ಸಹಕಾರಿ ಕೆಲಸಗಾರರು ಬೇಕು

ದ. ಕ. ಜಿಲ್ಲಾ ಸಹಕಾರೀ ಅಭಿವೃದ್ಧಿ ಸಂಘದವರು ಜಿಲ್ಲೆಯ ೬ ತಾಲೂಕುಗಳಲ್ಲಿ ೬ ಮಾದರಿ ಗ್ರಾಮ ಕೇಂದ್ರಗಳನ್ನು ರಚಿಸುವ ಯೋಜನೆ ಮಾಡಿದ್ದು ಈ ಬಗ್ಗೆ ಕೆಲಸಗಾರರಿಗೆ ಎರಡು ತಿಂಗಳ ತರಬೇತಿ ಕ್ಲಾಸುಗಳನ್ನು ಇದೇ ಆಗೋಸ್ತು ತಾರೀಕು ೧ರಿಂದ ಆರಂಭಿಸುವರು. ತಾರೀಕು ೨೧-೭-೪೨ರ ಒಳಗೆ ಉಮೇದ್ವಾರರು ಅರ್ಜಿ ಹಾಕಬೇಕು. ಉಮೇದ್ವಾರರು ಸಾಕಷ್ಟು ಶಿಕ್ಷಣ ಹೊಂದಿದವರಿದ್ದು, ಅವರನ್ನು ಕಳುಹಿಸುವ ಗ್ರಾಮ ಕೇಂದ್ರದಲ್ಲಿ ನಿಂತು ಕೆಲಸಮಾಡಲು ಸಿದ್ಧರಿದ್ದವರಾಗಿರಬೇಕು. ೨ ತಿಂಗಳ ತರಬೇತಿ ಸಮಯದಲ್ಲಿ ಒಬ್ಬೊಬ್ಬರಿಗೆ ತಿಂಗಳೊಂದರ ರೂ. ೮ ರಂತೆ ಸಹಾಯ ಧನ ಕೊಡಲಾಗುವುದು. ಮುಂದೆ ಯೋಗ್ಯತೆಯಂತೆ ವೇತನ ನಿರ್ಣಯಿಸಲಾಗುವುದು. ಎಂದು ಕಾರ್ಯದರ್ಶಿ, ದ. ಕ. ಜಿಲ್ಲಾ ಸಹಕಾರೀ ಅಭಿವೃದ್ಧಿ ಸಂಘ, ಸೆಂಟ್ರಲ್ ಬೇಂಕು ಮಂಗಳೂರು ಇವರು ತಿಳಿಸುತ್ತಾರೆ.

ಉಡುಪಿ

ನಗರ ಸಭೆ

ಉಡುಪಿ ನಗರ ಸಭೆಯ ೧೯೪೧-೪೨ನೇ ವರುಷದ ಆಡಳಿತೆ ವರದಿಯು ಕಳೆದ ತಾ. ೨೬ ರಲ್ಲಿ ಸೇರಿದ ಮೀಟಿಂಗಿನಲ್ಲಿ ಮಂಜೂರು ಮಾಡಲ್ಪಟ್ಟು ಸ್ವೀಕರಿಸಲಾಯಿತು. ಚೆಯರ್‌ಮೇನ್ ಕೌನ್ಸಿಲರ್ಸ್ ಮತ್ತು ಕಮಿಶನರ್ ಇವರೊಳಗೆ ಪರಸ್ಪರ ಸೌಹಾರ್ದ ಸಿದ್ಧಿತೆಂಬ ಠರಾವು ಮಾಡಲಾಯಿತು. ನಗರ ವ್ಯವಹಾರಕ್ಕೆ ಕ್ಷೇತ್ರದಲ್ಲಿ ಶಾಲಾ ವಯಸ್ಸಿನ ಮಕ್ಕಳ ಸಂಖ್ಯೆಯು ೨೮೫೭ [೧೪೩೦ ಹುಡುಗರು ಮತ್ತು ೧೪೨೭ ಹುಡುಗಿಯರು] ಶಾಲಾ ವಿದ್ಯಾರ್ಥಿಗಳಿಗೆ ತಲಾ ಒಂದರ. ಗತ ವರುಷದ ರೂಪಾಯಿ ೧೧-೧೪-೧ ಪೈ ಇದ್ದುದು ವರದಿ ವರ್ಷದಲ್ಲಿ ರೂ. ೧೧-೫-೨ ಪೈಗಳಷ್ಟು ಆಗಿದೆ. ಜನರ ಮರಣಗಳ ಸಂಖ್ಯೆಯು ಕಡಿಮೆಯಾಗಿತ್ತು. ವೃತ್ತಿ ತೆರಿಗೆಯು ೨-೬-೩ರಿಂದ ರೂ. ೪-೫-೦ಗೇರಿತು.

ಆರ್ಯ ಸಮಾಜ

ಸ್ಥಳೀಯ ಆರ್ಯಸಮಾಜದ ವರ್ಷಾವಧಿ ಮಹಾ ಸಭೆಯು ಕಳೆದ ತಾ. ೨೮ರಲ್ಲಿ ಕಾರ್ಕಳದ ಶ್ರೀ. ವೆಂಕಟೇಶ ಪ್ರಭುಗಳವರ ಅಧ್ಯಕ್ಷತೆಯಲ್ಲಿ ಆರ್ಯಸಮಾಜದ ಮಂದಿರದಲ್ಲಿ ಜರಗಿತು. ವರದಿ ವಾಚನ, ಲೆಕ್ಕ ಪತ್ರಗಳ ಪರಿಶೀಲನೆಗಳಾದ ಬಳಿಕ ಚಾಲ್ತಿ ವರುಷಕ್ಕೆ ಶ್ರೀ. ಕೆ. ಲಕ್ಷ್ಮಣ ಭಟ್ಟರವರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಮಂಡಲದ ರಚನೆಯಾಯಿತು.

ಪಟೇಲರನ್ನು ಉದ್ಯೋಗದಿಂದ ತೆಗೆದರು

ಉಡುಪಿ ತಾಲೂಕು ಬ್ಯೆಂರಪಳ್ಳಿ ಗ್ರಾಮದ ಪಟೇಲರಾದ ಶ್ರೀ. ಸಾಂತ್ಯಾರು ಅನಂತಪದ್ಮನಾಭ ಭಟ್ಟರನ್ನು ಅಹಿಂಸೆಯಲ್ಲಿ ವಿಶ್ವಾಸವಿಟ್ಟು ಯುದ್ಧಕ್ಕೆ ಸಹಾಯ ಮಾಡದಿದ್ದುದಕ್ಕಾಗಿ ಕೆಲಸದಿಂದ ವಜಾ ಮಾಡಿರುವರೆಂದು ತಿಳಿದಿದೆ. ಕುಂದಾಪುರ ಡಿವಿಜನಿನ ಸಹಾಯಕ ಕಲೆಕ್ಟರರು ಶ್ರೀ. ಭಟ್ಟರ ಮೇಲೆ ಜಾರಿ ಮಾಡಿರುವ ನೋಟಿಸಿನಲ್ಲಿ ಈ ಆರೋಪಗಳನ್ನು ಹೊರಿಸಲಾಗಿದೆ ಎಂಬೂ ತಿಳಿಯುತ್ತೇವೆ. ೧. ಮದ್ರಾಸ್ ಸರಕಾರವು ಪ್ರಕಟಿಸಿದ ಯುದ್ಧದ ಪೋಸ್ಟರುಗಳನ್ನು ಗೋಡೆಗಳ ಮೇಲೆ ಹಚ್ಚದೆಯೂ ಗವರ್ನರರ ಯುದ್ಧನಿಧಿ ಲಾಟರಿಯ ಟಿಕೇಟುಗಳನ್ನು ಮಾರದೆ ಹಿಂದೆ ಕಳುಹಿಸಿಯೂ ಪಟೇಲನ ಯುದ್ಧಕ್ಕೆ ಸಂಬಂಧಿಸಿದ ಕರ್ತವ್ಯಗಳನ್ನು ನೆರವೇರಿಸದುದು. ೨. ಜಮಾ ಬಂದಿ ಆಫೀಸರರ ಮುಂದೆ ಯುದ್ಧಕ್ಕೆ ಸಹಾಯ ಮಾಡಬಾರದೆಂದು ಹೇಳಿ ಭಾಷಣವಿತ್ತುದು.

ತಮಗೆ ಅಹಿಂಸೆಯಲ್ಲಿ ಅಚಲ ವಿಶ್ವಾಸವಿದೆಯೆಂದು ಹೇಳಿ, ಆರೋಪಗಳನ್ನು ಒಪ್ಪಿಕೊಂಡುದಾಗಿಯೂ ತಾವು ಮಾತ್ರ ತಾಟಸ್ಥ್ಯ ವಹಿಸಿದ್ದಲ್ಲದೆ ಯಾರೂ ಯುದ್ಧಕ್ಕೆ ಸಹಾಯ ಮಾಡದಂತೆ ಅಡ್ಡಿ ಮಾಡಿಲ್ಲವಾಗಿಯೂ ಪಟೇಲರು ಹೇಳಿರುವರೆಂದು ನೋಟಿಸಿನಲ್ಲಿದ್ದು, ಶ್ರೀ ಭಟ್ಟರು ತಮ್ಮ ಧೋರಣೆಯನ್ನು ಬದಲಾಯಿಸುವುದಿಲ್ಲವೆಂದು ಖಂಡಿತ ಹೇಳಿದುದರಿಂದ ತಾ. ೩-೩-೪೨ರಿಂದ ಸಸ್ಪೆಂಡ್ ಮಾಡಲ್ಪಟ್ಟಿದ್ದ ಅವರನ್ನು ಡಿಸ್‌ಮಿಸ್ ಮಾಡಲಾಗಿದೆಯೆಂದು ತಿಳಿಯುತ್ತದೆ.

ಪುತ್ತೂರು

ಪುತ್ತೂರು ರೂರಲ್ ಕ್ರೆಡಿಟ್ ಸಹಕಾರಿ ಸಂಘದ ವರ್ಷಾವಧಿ ಮಹಾ ಸಭೆ

ಈ ಸ್ಥಳೀಯ ಸಹಕಾರಿ ಸಂಘದ ಕಟ್ಟಡದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬೆಳ್ಳಿ ರಾಮಚಂದ್ರರಾವ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೨೮ರಲ್ಲಿ ಜರುಗಿತು. ೧೯೪೦-೪೧ರ ವರದಿಯನ್ನು ಓದಲಾಯಿತು. ಗತವರ್ಷದ ಸದಸ್ಯರನ್ನೇ ಈ ವರ್ಷಕ್ಕೂ ಆಡಳಿತೆಗಾಗಿ ಆರಿಸಲಾಗಿದೆ.

ಯಸ್. ಯಸ್. ಯಲ್. ಸಿ. ಪರೀಕ್ಷೆ

ಇಲ್ಲಿ ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ೩೬ ವಿದ್ಯಾರ್ಥಿಗಳ ಪೈಕಿ ೨೧ ಮಂದಿ ತೇರ್ಗಡೆ ಹೊಂದಿರುತ್ತಾರೆ. ಕಳೆದ ವಾರದಿಂದ ಈ ಶಾಲೆಯಲ್ಲಿ ೪ನೇ ಫಾರ್ಮಿನಲ್ಲಿ ಪ್ರಥಮ ಬಾರಿ ೩ ಡಿವಿಜನುಗಳು ಆಗಿವೆ.

ಕಾಸರಗೋಡು

ಶಂಕು ಸ್ಥಾಪನೆ

ತಾ. ೨೬ ಸಂಜೆ ಕಾಸರಗೋಡು ತಾಳಿಪಡ್ಪು ಆಸುಪಾಸಿನ ಹೊಲ ದುರುಸ್ತಿಯ ಸಭೆಯವರು ತಾಳಿಪಡ್ಪಿನಲ್ಲಿ ಹೊಸತಾಗಿ ಕಟ್ಟಿಸಲಿರುವ ವಿಶ್ರಾಂತಿ ಗೃಹದ ಬುನಾದಿಕಲ್ಲನ್ನು ದ. ಕ. ಜಿ. ಬೋರ್ಡು ಅಧ್ಯಕ್ಷರಾದ ಶ್ರೀ ಕೆ ವಿಠ್ಠಲ ಶೆಟ್ಟರು ಇರಿಸಿದರು.

ನೀಲೇಶ್ವರ

ಮನೆ ಶೋಧನೆ—

ಸ್ಥಳೀಯ ಪಂಚಾಯತ ಬೋರ್ಡಿನ ಉಪಾಧ್ಯಕ್ಷ ಶ್ರೀ. ಎನ್. ಶಿವರಾಯ ಕಾಮತರು ಮನೆಯನ್ನು ಹೊಸದುರ್ಗದ ಪೋಲಿಸ್ ಸಬ್ ಇನ್ಸ್‌ಪೆಕ್ಟರರು ಕೆಲ ಕಾನ್ಸ್‌ಟೇಬಲ್ ಮತ್ತು ಸಿ. ಐ. ಡಿ. ಗಳೊಡನೆ ಬಂದು ತಾ. ೨೫ರಂದು ಪ್ರಾತಃಕಾಲ ಝಡತಿ ಮಾಡಿದರು. ಜಪಾನೀ ವಿರೋಧ ಸಮಿತಿಯ ಕೆಲವು ಸರ್ಕ್ಯುಲಾರುಗಳು ನೆಹರುಗಳ ಪುಸ್ತಕದ ಭಾಷಾಂತರ 'ಪಥವಿಯೋಗ', ಮತ್ತು ಅದರ ಮಳಿಯಾಳೀ ಭಾಷಾಂತರ, ಕೆಲ ಕಮ್ಯುನಿಸ್ಟ್ ಪತ್ರಿಕೆಗಳು, ಕೆಲ ಪುಸ್ತಕ ಮತ್ತು ಎರಡು ಬದಿಗಳಲ್ಲೂ ಹಿಟ್ಲರ್ ಛಾಯಾಚಿತ್ರಗಳಿದ್ದ ಮಹಾವಿಷ್ಣುವಿನದೊಂದು ಪಟ ಇವನ್ನು ಕೊಂಡು ಹೋಗಿರುವರೆಂದು ತಿಳಿದಿದೆ.



ಅಪಾಯ ವೊದಗಿದಾಗ ಇದು ತಯಾರಿರಲಿ

ಜಾಂಬಕ್ ಅತ್ಯುತ್ತಮ ಚರ್ಮದ ಔಷಧ

ಪ್ರತಿಯೊಂದು ಮನೆಯಲ್ಲಿಯೂ ಜಾಂಬಕ್ ಇರುವುದು ಅಗತ್ಯ. ನಿಮ್ಮ ಚರ್ಮದ ಎಲ್ಲಾ ತರದ ಬೇನೆಗಳನ್ನು ಈ ವಿಷಹಾರೀ ಔಷಧವು ಗುಣಪಡಿಸುವುದು. ಇದು ನೋವನ್ನು ಕಡಿಮೆ ಮಾಡುತ್ತದೆ, ಬಾವನ್ನು ಕಡಿಮೆ ಮಾಡಿ, ಮಂತ್ರದಂತೆ ಗುಣಕೊಡುತ್ತದೆ. ಎಲ್ಲಾ-ಡಾಕ್ಟರರೂ ನರ್ಸುಗಳೂ ಇದನ್ನು ಉಪಯೋಗಿಸುತ್ತಾರೆ. ಗಾಯ, ಬಾವು, ಸುಡುವಿಕೆ, ವಿಷಗಾಯ, ಇವುಗಳಿಗೆಲ್ಲಾ ಇದು ಉತ್ತಮ ಔಷಧಿ.

ಬೆಲೆ: ಒಂದು ರೂಪಾಯಿ, ಅಥವಾ ರೂ. 2-4-0. ಸೋಪಿಗೆ ಒಂದು ರೂಪಾಯಿ. ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್:—ಮೆಸ್ಸರ್ಸ್ F. ದಾದಾ ಎಂಡ್ ಕೊ., ಪಿ. ಟಿ: ಮದ್ರಾಸು.

ಯಾವಾಗಲೂ ಜಾಂಬಕನ್ನು ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಬಲಪಡಿಸಿರಿ ಈಸರಪಳಿಯನ್ನು

ತನ್ನ ನಾನಾಹತ್ತುಗಳೊಡಗೂಡಿದ ಬ್ರಿಟನ್, ಅಮೇರಿಕ, ಇಂಡಿಯ, ರಷ್ಯ, ಚೀಣ ಈ ಮಿತ್ರರಾಷ್ಟ್ರಗಳು ಒಂದುಗೂಡಿ, ಈ ಜಗತ್ತಿನ ಎಲ್ಲಾ ಶಾಂತಿಪ್ರಿಯ ರಾಷ್ಟ್ರಗಳ ಬಾಳನ್ನೂ, ಸ್ವಾತಂತ್ರ್ಯವನ್ನೂ ನಾಶಮಾಡಲು ಪ್ರಯತ್ನಿಸುತ್ತಿರುವ ರಾಕ್ಷಸೀ ಶಕ್ತಿಗಳ ಆಕ್ರಮಣವನ್ನು ನಿರೋಧಿಸುತ್ತಿವೆ.

ಈ ರಾಷ್ಟ್ರಗಳವರ ಅಪಾರವಾದ ಸಾಧನ ಸಂಪತ್ತಿ, ಅವರ ಉತ್ತಮ ಪ್ರತ್ಯಾಕ್ರಮಣ ಶಕ್ತಿ, ಅವರ ವಿಜಯಸಾಧನ ನಿಷ್ಠೆ, ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಅವರ ಯುದ್ಧಧ್ಯೇಯದ ನ್ಯಾಯಶೀಲತೆ ಇವು ಕೊನೆಯಲ್ಲಿ ಈ ಸಂಯುಕ್ತ ರಾಷ್ಟ್ರಗಳವರಿಗೆ ವಿಜಯವನ್ನು ದೊರಕಿಸುವುವೆಂಬುದು ಖಂಡಿತ.

ಸ್ವಾತಂತ್ರ್ಯ ರಕ್ಷಣೆಗಾಗಿ ಕೈಗೊಳ್ಳಲ್ಪಟ್ಟಿರುವ ಈ ಗಭೀರ ಹೋರಾಟವನ್ನು ನಡೆಸಲು, ಕೋಟ್ಯಾಂತರ ರೂಪಾಯಿಗಳು ಬೇಕು. ಆದಕ್ಕಾಗಿ ನೀವು ಧನಸಹಾಯ ಮಾಡಿರಿ. ವಿಜಯಸಾಧನೆಯನ್ನು ತ್ವರಿತಗೊಳಿಸಲೂ ನಿಮ್ಮ ಸುರಕ್ಷತೆ, ಅಪಾಯ ನಿವಾರಣೆಗಳಿಗಾಗಿಯೂ, ನಿಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಉಳಿಸಿ ಅದನ್ನು ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ನಿಯೋಜಿಸಿರಿ.

ಪ್ರತಿ ರೂ. ೧೦/- ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ ರೂ. ೩/೯/- ಲಾಭಕೊಡುತ್ತೆ

ಕೊಳ್ಳಿರಿ ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ನಿಮ್ಮ ಪೋಸ್ಟಾಫೀಸಿನಲ್ಲಿ ದೊರೆಯುತ್ತದೆ

ಇಂಡಿಯಾದ ಯುದ್ಧಶಕ್ತಿಯನ್ನು ಬೆಳೆಸಿರಿ

YOUR INTERESTS & OURS.

The interests of the banker and his customers are closely related. We therefore try to study all matters from your stand point. Tell us your requirements

CANARA BANK, LIMITED.

ESTD 1906

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಗಾಯಗಳಲ್ಲಿರುವ ಹೊಲಸು

ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಕಣ್ಣಿನಂಥ ಚುಚ್ಚುವಿಕೆ ಯಾ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೆ ವಿಷಹಾರಿ ಔಷಧಿಯನ್ನು ತಾಗಿಸದಿದ್ದರೆ ಭಯಂಕರವಾದ ಹಾನಿಯು ದೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕ್ಯುಟಿಕೂರಾ ಮುಲಾಮು (Cuticura ointment). ಕುಟಿಕೂರಾ (Cuticura) ಮುಲಾಮು ತಾಗಿಸಿದ ಭಾಗದ ಕಡೆಗಳು ನಾಟಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರೋಗ ಉಂಟಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಸ[illegible], ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳಿಗೆ ಸಾಧನವಾದ ಕುಟಿಕೂರಾ ಮುಲಾಮನ್ನು (Cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾನ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಹುಳುಕಡ್ಡಿ ಮದ್ದು

AMRUTANJAN DEPOTS BOMBAY MADRAS CALCUTTA

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

The Bank of Mangalore Limited

HEAD OFFICE Mangalore. ***BRANCHES*** Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year	4%
Two years or above	4½%

Interest Payable Quarterly.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 17—7—1942 [ಸಂಚಿಕೆ 28]

'ಗಾಡಿ ಚಕ್ರಗಳು ಕೆಸರಲ್ಲಿ ಹೂತು ಹೋಗಿವೆ!'

ರಾಜಾಜಿ ಉಪಮಾಪಾಂಡಿತ್ಯ ತೋರಿಸುತ್ತಾರೆ
ವರ್ಕಿಂಗ್ ಕಮಿಟಿಯಲ್ಲಿ ಮಹತ್ವದ ಚರ್ಚೆಗಳು

ಈ ವಾರದಲ್ಲಿ ಸರ್ವರ ದೃಷ್ಟಿಯೂ ವರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಚರ್ಚೆಯ ಕಡೆಗೆ ಹರಿದಿದೆ. ಮಹಾತ್ಮರು ಪುನಃ ಕಾಂಗ್ರೆಸಿನ ಮುಂದಾಳುತನ ವಹಿಸುವರೆ? ಗಾಂಧಿಜಿ ಪುನಃ ಸಾಮೂಹಿಕ ಆಂದೋಲನವೊಂದನ್ನು ಆರಂಭಿಸುವರೇ? ಎಂಬೀ ವಿಚಾರಗಳು ವರ್ಕಿಂಗ್ ಕಮಿಟಿಯ ಅಧಿವೇಶನದಲ್ಲಿ ವಿಮರ್ಶಿಸಲ್ಪಡುತ್ತಿವೆ. ಮಹಾತ್ಮರು ಒಂದು ನಿರ್ಣಯದ ಕರಡು ಪ್ರತಿಯನ್ನು ವರ್ಕಿಂಗ್ ಕಮಿಟಿಯ ಮುಂದೆ ಮಂಡಿಸಿದ್ದು ಅದಕ್ಕೆ ಎಲ್ಲರ ಒಪ್ಪಿಗೆ ಸಿಗಬಹುದೆಂದು ಈಗ ಊಹಿಸಲಾಗುತ್ತದೆ. ಹಿಂದುಸ್ಥಾನದಿಂದ ಬ್ರಿಟಿಷರು ಹೊರಟು ಹೋಗಬೇಕೆಂಬ ವಿಚಾರದಲ್ಲಿ ಎಲ್ಲರದೂ ಸರ್ವಸಮ್ಮತಿಯಿರುವುದಾಗಿ ತಿಳಿದಿದೆ. ರಾಜಾಜಿ ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟು ತನ್ನ ಪ್ರಚಾರವನ್ನು ಮುಂದುವರಿಸುವ ನಿರ್ಣಯವನ್ನೇ ಮಾಡಿದ್ದಾರೆ.

ರಾಜಾಜಿ ರಾಜಿನಾಮೆ

ರಾಜಾಜಿ ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟಿರುವರೆಂಬುದನ್ನು ಕೇಳಿ ಹಲವರಿಗೆ ಆಶ್ಚರ್ಯವೂ ವಿಷಾದವೂ ಆಗಿದೆ. ಆದರೆ ರಾಜಾಜಿ ಇಂದು ಅನುಸರಿಸಿದ ಧೋರಣೆಯ ಪ್ರಕಾರ ಅವರು ರಾಜಿನಾಮೆ ಕೊಡದೆ ಬೇರೆ ದಾರಿಯಿರಲಿಲ್ಲ. ಹಾಗಾಗಿ ರಾಜಿನಾಮೆ ಕೊಟ್ಟದ್ದು ಅವರಿಗೂ ಕಾಂಗ್ರೆಸಿಗೂ ಒಳ್ಳೆಯದೇ ಆಯಿತು. ಮಾತ್ರವಲ್ಲದೆ ಅಜಾದ್ ಮತ್ತು ಗಾಂಧಿಜಿಯವರು ರಾಜಾಜಿಯೊಡನೆ ರಾಜಿನಾಮೆ ಕೊಡುವರೆ ಸೂಚಿಸಿದ್ದರೆಂದೂ ಸುದ್ದಿಯಿದೆ. ರಾಜಾಜಿಯವರು 'ಮದ್ರಾಸು ನಿರ್ಣಯ'ವೊಂದನ್ನು ಮಾಡಿಕೊಂಡ ಮೇಲೆ ಅವರ ಪರಿಸ್ಥಿತಿಯೇ ವಿಪರೀತವಾಯಿತು. ಅವರ ಧೋರಣೆಯೇ ಬದಲಾಯಿತು. ಮುಸ್ಲಿಮರಿಗೆ ಪಾಕಿಸ್ತಾನವನ್ನು ಕೊಡಲು ಒಪ್ಪಿಗೆಕೊಡಬೇಕೆಂದರು, ಇದರಿಂದಾದರೂ ನಾವೀಗ ಒಂದಾಗಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದರು. ರಾಷ್ಟ್ರೀಯ ಸರಕಾರ ಸ್ಥಾಪಿಸಿ ವೈರಿಯನ್ನು ಎದುರಿಸಬೇಕೆಂದು ಅವರ ಅಭಿಪ್ರಾಯವಾಗಿದೆ. ಆದರೆ ರಾಜಾಜಿಯವರ ಈ ಸೂಚನೆಗೆ ದೇಶದ ಉದ್ದಗಲದಲ್ಲಿ ಪ್ರಬಲ ವಿರೋಧ ಪ್ರದರ್ಶನವಾಯಿತು. ಅಜಾದ್ ನೆಹರು ಗಾಂಧಿಜಿಗಳಂಥಾ ಮುಖಂಡರೇ ರಾಜಾಜಿ ಹಾದಿತಪ್ಪಿದರೆಂದರು. ಇಷ್ಟಾದರೂ ರಾಜಾಜಿಗೆ ಬುದ್ಧಿ ಬರಲಿಲ್ಲ. ಅಲ್ಲಾಬಾದಿನಲ್ಲಿ ಕೂಡಿದ ಕಾಂಗ್ರೆಸಿನ ನಿರ್ಣಯದಂತೆ ಅವರ ಧೋರಣೆ ಕಾಂಗ್ರೆಸಿಗೆ ಅಮಾನ್ಯವೆಂದು ನಿರ್ಧರಿಸಲಾಯಿತು' ಅವರು ವರ್ಕಿಂಗ್ ಕಮಿಟಿ ಸದಸ್ಯತ್ವಕ್ಕೆ ಮೊದಲೇ ರಾಜಿನಾಮೆ ಕೊಡಬೇಕಾಗಿಬಂತು. ಬಳಿಕ ಕಾಂಗ್ರೆಸ್ಸಿನ ಜವಾಬ್ದಾರೀ ಸ್ಥಳಗಳಿಗೆಲ್ಲಾ ರಾಜಿನಾಮೆ ಕೊಡಬೇಕಾಗಿ ಕಾಂಗ್ರೆಸ್ ಅಜ್ಞೆ ಹೊರಟಿತು, ಪರಿಸ್ಥಿತಿ ಇಷ್ಟು ವಿಷಮವಾದಾಗ ಇನ್ನು ಮುಂದೆ ಕಾಂಗ್ರೆಸಿನಲ್ಲಿದ್ದು ತನಗೆ ಆ ರೀತಿ ಪ್ರಚಾರ ಮಾಡಲು ನಿರ್ವಾಹವಿಲ್ಲವೆಂದು ತಿಳಿದವರಾಗಿ ರಾಜಾಜಿಯವರು ಒಮ್ಮೆಲೇ ಕಾಂಗ್ರೆಸಿನ ನಾಲ್ಕಣೆ ಸದಸ್ಯತ್ವಕ್ಕೂ ರಾಜಿನಾಮೆಕೊಟ್ಟು ಈಗ ಹೊರಬಂದಿದ್ದಾರೆ. ರಾಜಾಜಿ ಉಪಮಾ ಪಂಡಿತರೆಂಬುದು ಪ್ರಸಿದ್ಧರಷ್ಟೆ? ಕಾಂಗ್ರೆಸಿನಿಂದ ಹೀಗೆ ಹೊರಬಂದರೆ ತಾನು ಕಾಂಗ್ರೆಸನ್ನು ಬಿಟ್ಟುಹೋಗುವುದೆಂದು ಯಾರೂ ಅರ್ಥಮಾಡಿಕೊಳ್ಳಲಾಗದೆಂಬುದನ್ನು ಅವರು ಬಹಳ ಚಲೋದಾಗಿ ತಿಳಿಸಿದ್ದಾರೆ. 'ನಾನೀಗ ಗಾಡಿಯಿಂದ ಕೆಳಗಿಳಿದಿದ್ದೇನೆ; ಏಕೆಂದರೆ ಗಾಡಿಯ ಚಕ್ರಗಳು ಕೆಸರಲ್ಲಿ ಹೂತುಹೋಗಿವೆ, ಗಾಡಿ ಮುನ್ನಡೆಯುವಂತೆ ತತ್ಕಾಲಕ್ಕೆ ಅದರಿಂದ ಕೆಳಗಿಳಿದು ಅದಕ್ಕೆ ಸ್ವಲ್ಪ ಶಕ್ತಿಕೊಟ್ಟು ದೂಡಬೇಕಾಗಿದೆ. ಮತ್ತೆ ಇದೇ ಗಾಡಿಯೇರಿ ನಾನು ಸವಾರಿ ಮಾಡುವವನಿದ್ದೇನೆ' ಎಂದು ಅವರು ಹೇಳಿದ್ದಾರೆ. ಹೀಗೆ ಅವರು ಹೇಳುವುದರಲ್ಲಿ ತುಂಬಾ ಅರ್ಥವುಂಟು, ರಾಜಾಜಿಗೆ ಇಂದಿನ ಕಾಂಗ್ರೆಸ್ ಧೋರಣವು ಸರಿಯೆಂದು ತೋರುವುದಿಲ್ಲ. ಕಾಂಗ್ರೆಸಿನ ಅಭಿಪ್ರಾಯವನ್ನು ತಿದ್ದಬೇಕೆಂಬುದು ಅವರ ಪರ. ಅದಕ್ಕಾಗಿಯೇ ಅವರು ಇಷ್ಟೊಂದು ಸ್ವಾರ್ಥತ್ಯಾಗ ಮಾಡಿದ್ದಾರೆ.' ರಾಜಾಜಿ ಯಾವುದೇ ದುರುದ್ದೇಶದಿಂದ ಹೀಗೆ ಮಾಡುತ್ತಿರುವರೆಂದು ಶತ್ರುಗಳೂ ಸಂಶಯಪಡುವುದಿಲ್ಲ. ಆದರೆ 'ಹಾದಿ ತಪ್ಪಿದರಲ್ಲಾ' ಎಂದು ಹಲವರು ವಿಷಾದಿಸುತ್ತಿದ್ದಾರೆ. ಇಷ್ಟರಲ್ಲಿ ಯಾವ ಕಡೆಯ ಮೂಲಕ ಅವರು 'ಮದ್ರಾಸು ನಿರ್ಣಯ'ವನ್ನು ತಂದರೋ, ಆ ಮದ್ರಾಸಿನ ಕಾಂಗ್ರೆಸ್ ಪಕ್ಷದ ಶಾಸನ ಸಭಾಸದಸ್ಯರ ಪಕ್ಷವೇ ಅವರ ಮೇಲೆ ಅವಿಶ್ವಾಸ ನಿರ್ಣಯದ ಪ್ರಹಸ್ತ ಹಿಡಿದ್ದಂತಿದೆ. ಅಂದು ಮಾಡಿದ ನಿರ್ಣಯವನ್ನು ರದ್ದುಮಾಡುವ ಸೂಚನೆ ತರಲಾಗಿದೆ. ಹೀಗೆ ರಾಜಾಜಿ ಪಜೀತಿಯಲ್ಲಿ ಸಿಕ್ಕಿಬಿದ್ದಿದ್ದಾರೆ!

ಯುದ್ಧಕಾಲದ ಅನುಕೂಲಕ್ಕಾಗಿ, ಬ್ರಿಟಿಷ್ ಮಹಿಳೆಯೋರ್ವಳು ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದಾಳೆ!

ವರ್ಕಿಂಗ್ ಕಮಿಟಿಯಲ್ಲಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸಭೆಯು ತಾರೀಕು ಆರರಂದು ವರ್ಧಾದಲ್ಲಿ ಸೇರಿ ಇನ್ನೂ ಚರ್ಚೆ ನಡೆಸುತ್ತಲಿದೆ. ಗಾಂಧಿಜಿ ತಿರುಗಿ ಕಾಂಗ್ರೆಸಿನ ಮುಂದಾಳುತನ ವಹಿಸುವರೇ ಎಂಬುದು ಇದರಲ್ಲಿ ಎದ್ದು ತೋರುವ ವಿಷಯವಾಗಿದೆ. ಬೇಗನೆ ಗಾಂಧಿಜಿ ಹೊಸ ಆಂದೋಲನವೊಂದನ್ನು ಆರಂಭಿಸುವರೆಂದೂ, ಅದಕ್ಕೆ ವರ್ಕಿಂಗ್ ಕಮಿಟಿ ಒಪ್ಪಿಗೆಯಿತ್ತಿದೆಯೆಂದೂ ಅದರ ಸಲುವಾಗಿ ಗಾಂಧಿಜಿಗೆ ಕಾಂಗ್ರೆಸಿನ ಮುಂದಾಳುತನದ ಮಾಲೆಯನ್ನು ಪುನಃ ಹಾಕಲಿದೆಯೆಂದೂ ದಂತಕಥೆ ಪ್ರಬಲವಾಗಿದೆ. ವರ್ಧಾದಲ್ಲಿರುವ ಗಾಂಧಿಜಿಯ ಗುಡಿಸಲ ಬಳಿಯೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಈ ಮಹತ್ವದ ಅಧಿವೇಶನವೂ ಕೂಡಿರುವುದು, ಮುಂದೆ ಆರಂಭಿಸಲಿರುವ ಮಹಾ ಆಂದೋಲನದ ವಿಚಾರದಲ್ಲಿ ಗಾಂಧಿಜಿ ತಯಾರಿಸಿರುವ ಕರಡು ಪ್ರತಿಯ ವಿಚಾರವಾಗಿ ಈಗ ಗಂಭೀರ ಆಲೋಚನೆ ನಡೆಯುತ್ತಲಿದೆ. ಈ ಸಭೆಯ ಸಂಪೂರ್ಣ ವಿವರ ಹೊರಬೀಳಲು ಇನ್ನೂ ಕೆಲವು ದಿನ ಬೇಕಾಗಬಹುದು, ಗಾಂಧಿಜಿಯ ಆರೋಗ್ಯ ಅಷ್ಟೊಂದು ಚೆನ್ನಾಗಿಲ್ಲದಿರುವುದರಿಂದಲೂ ಅವರೇ ಮಹತ್ವದ ಅನೇಕ ಸಂಶಯಗಳನ್ನು ಪರಿಹರಿಸಬೇಕಾಗಿರುವುದರಿಂದಲೂ ಅಧಿವೇಶನವು ಸಾವಕಾಶವಾಗಿ ನಡೆಯುತ್ತಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಎಲ್ಲಾ ಸದಸ್ಯರೂ ಬಂದಿದ್ದರು. ಭೂಲಾಭಾಯಿಯವರು ಅನಾರೋಗ್ಯದ ನಿಮಿತ್ತ ತನ್ನ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ. ಮೊದಲು ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆ ವಿಷಯವು ಚರ್ಚಿಸಲ್ಪಟ್ಟಿತು. ರಾಮಗಢ ಅಧಿವೇಶನದ ಮೇಲೆ ಎ. ಐ. ಸಿ. ಸಿ. ಸದಸ್ಯರ ಚುನಾವಣೆ ಆಗಿಲ್ಲವಾದ್ದರಿಂದ ಅಂದಿನಿಂದ ಇಂದಿಗೆ ರಾಜಕೀಯದಲ್ಲಿ ಅನೇಕ ಬದಲಾವಣೆಗಳುಂಟಾದ್ದರಿಂದ, ಹೊಸ ಸದಸ್ಯರನ್ನು ಅಕ್ಟೋಬರ ತಿಂಗಳ ಒಳಗೆ ಚುನಾಯಿಸುವುದಾಗಿಯೂ, ಕಾಂಗ್ರೆಸ್ ಸದಸ್ಯರನ್ನು ಆಗಸ್ಟ್ ತಿಂಗಳ ವರೆಗೆ ಮಾಡಬಹುದೆಂದೂ ನಿರ್ಣಯಿಸಲಾಯಿತು. ಮತ್ತೆ ಗಾಂಧಿಜಿ 'ಬ್ರಿಟಿಷರು ಹಿಂದುಸ್ಥಾನದಿಂದ ಹೊರಟು ಹೋಗಬೇಕು' ಎಂದು ತಾವು ಈಗಾಗ ಬರೆದ 'ಹರಿಜನ'ದ ಲೇಖನದ ವಿಚಾರ ಸದಸ್ಯರಿಗೆ ವಿವರಿಸಿ ಹೇಳಿದರು. ಆ

[ನೆಯ ಪುಟಕ್ಕೆ ಮುಂದುವರಿದಿದೆ]

KANNADA ILLUSTRATED WEEKLY

ಗಾಡಿ ಚಕ್ರಗಳು ಕೆಸರಲ್ಲಿ ಹೂತು ಹೋಗಿವೆ!

(1ನೆಯ ಪುಟದಿಂದ ಮುಂದುವರಿದುದು)

ವಿಚಾರ ಸದಸ್ಯರ ಅಭಿಪ್ರಾಯ ಕೇಳಿದರು; ಸದಸ್ಯರು ಆ ಕುರಿತು ಯಾರೂ ಭಿನ್ನಾಭಿಪ್ರಾಯವುಳ್ಳವರಾಗಿಲ್ಲವೆಂದು ತಿಳಿದಿದೆ. ಮತ್ತೆ ಪ್ರಾಂತಗಳಲ್ಲಿ ಸ್ವಾವಲಂಬನ, ಸ್ವರಕ್ಷಣೆಯ ಕಾರ್ಯಕ್ರಮವನ್ನು ಕಾಂಗ್ರೆಸು ಅನುಸರಿಸಬೇಕೆಂದು ಮಾಡಿದ ಕಾರ್ಯಕ್ರಮವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೆಂದು ವಿಮರ್ಶಿಸಲಾಯಿತು. ಬಳಿಕ ರಾಜಾಜಿಯವರ ಪ್ರಚಾರದ ವಿಷಯ ಆಲೋಚಿಸಿ, ಪ್ರಾಂತಿಕ ಕಮಿಟಿಗಳು ಆ ವಿಷಯದಲ್ಲಿ ಈಗಾಗಲೇ ಯೋಗ್ಯ ಕಾರ್ಯಕ್ರಮ ಕೈಕೊಳ್ಳುತ್ತಿರುವುದರಿಂದ, ವರ್ಕಿಂಗ್ ಕಮಿಟಿಯು ಪ್ರತ್ಯೇಕ ನಿರ್ಣಯ ಮಾಡುವ ಅವಶ್ಯಕತೆಯಿಲ್ಲವೆಂದು ನಿರ್ಧರಿಸಲಾಯಿತು. ಮುಂದಿನ ಸಭೆಯಲ್ಲಿ ರಾಜಕೀಯದ ವಿಷಯವಾಗಿ ವಿಸ್ತಾರವಾದ ಚರ್ಚೆ ನಡೆಯಿತು. ಗಾಂಧಿಜಿ ತಾನು ಆರಂಭಿಸಲಿರುವ ಹೊಸ ಆಂದೋಲನದ ವಿಚಾರವನ್ನು ಹೇಳಿದರು. ಅಜಾದ್ ನೆಹರೂಗಳು ತಮ್ಮ ಅಭಿಪ್ರಾಯ ತಿಳಿಸಿದರು. ಮರುದಿನದ ಸಭೆಯಲ್ಲಿ ಒರಿಸಾ, ಬಂಗಾಲ ಮೊದಲಾದ ಕಡೆಗಳಲ್ಲಿ ಸರಕಾರದವರು ಹೊಸದಾಗಿ ಮಾಡಿದ ಶಾಸನಗಳ ವಿಷಯವನ್ನು ಅದರಲ್ಲಿಯೂ ಮುಖ್ಯವಾಗಿ ದೇಶರಕ್ಷಣೆಯ ಹೆಸರಲ್ಲಿ ನಡೆಯುತ್ತಿರುವ ಪ್ರದೇಶಗಳನ್ನು ಖಾಲಿಮಾಡಿಸುವುದೇ ಮೊದಲಾದ ವಿಚಾರಗಳನ್ನು ವಿಮರ್ಶಿಸಲಾಯಿತು. ಗಾಂಧಿಜಿ ವರ್ಕಿಂಗ್ ಕಮಿಟಿಯ ಮುಂದೆ ತಮ್ಮ ಹೊಸ ಆಂದೋಲನದ ವಿಚಾರದ ಕರಡು ಪ್ರತಿಯನ್ನು ಮಂಡಿಸಿದರಾಗಿ ತಿಳಿದುಬರುತ್ತದೆ. ಅದರಲ್ಲಿ ಕ್ರಿಪ್ಸ್ ಸಂಧಾನದ ನಂತರದ ವಿಚಾರಗಳು, ಜಪಾನರನ್ನು ಎದುರಿಸುವುದಕ್ಕೆ ಮೊದಲು ಹಿಂದುಸ್ತಾನವನ್ನು ಸ್ವತಂತ್ರಮಾಡಬೇಕಾದ ಅವಶ್ಯಕತೆ ನಾಗರಿಕ ಹಕ್ಕನ್ನು ಪ್ರತಿಪಾದಿಸುವ ಸಲುವಾಗಿ, ಸಾಮೂಹಿಕ ಶಾಸನಭಂಗ ಆಂದೋಲನೆ ಹೂಡುವ ವಿಚಾರಗಳು ಪ್ರತಿಪಾದಿಸಲ್ಪಟ್ಟಿವೆಯೆಂದು ತಿಳಿಯುತ್ತದೆ. ಅಂತೂ ಗಾಂಧಿಜಿ ಯಾವುದೇ ಹೊಸ ಕಾರ್ಯಕ್ರಮವನ್ನು ಕೈಕೊಂಡರೂ ಅದನ್ನು ಆಲೋಚಿಸಿಯೇ ಪ್ರಾರಂಭಿಸುತ್ತಾರೆ. ತಮ್ಮ ಈ ಸಲದ ಆಂದೋಲನವನ್ನು ಆರಂಭಿಸಬೇಕಾದರೆ ಅದನ್ನು ಮಿತ್ರರಾಷ್ಟ್ರಗಳಿಗೆಲ್ಲಾ—ವಿಶೇಷತಃ ಅಧ್ಯಕ್ಷ ರೂಸ್‌ವೆಲ್ಟರಿಗೆ—ತಿಳಿಸಿ, ಆಗಲೂ ಆ ರಾಷ್ಟ್ರಗಳು ಪರಿಸ್ಥಿತಿಯನ್ನು ಸಂಗೊಳಿಸಲು ಮುಂದೆ ಬರದಿದ್ದರೆ ತಾವು ಮಹಾ ಆಂದೋಲನ ಆರಂಭಿಸಲಿರುವರಾಗಿ ಒಂದು ವದಂತಿಯಿದೆ.

ರಾಜಿಕೊಟ್ಟು ಹೊರಬನ್ನಿ!

ಹೊಸ ಆಂದೋಲನ ಆರಂಭವಾಡಲಿರುವರೆಂದು ತಿಳಿದುಬಂದಿರುವುದರಿಂದ, ಗಾಂಧಿಜಿಯವರನ್ನು ಸರಕಾರವು ಬಂಧನದಲ್ಲಿರಿಸುವುದೆಂಬ ಸುದ್ದಿ ದೇಶಸರ್ವತ್ರ ಹಬ್ಬಿದೆಯಷ್ಟೆ? ಹೊಸ ಚಳವಳ ಹೂಡಿದ್ದರೆ ದಬ್ಬಾಳಿಕೆ ನಡೆಯಬಹುದೆಂಬ ಈ ಸುದ್ದಿಯ ಕುರಿತು ಆಂಧ್ರ ಮಹಾಸಭೆಯ ಅಧ್ಯಕ್ಷರಾದ ಸರ್ ವಿಜಯಕುಮಾರ್ ಎಂ.ಎಲ್.ಎ. ಇವರು ಒಂದು ಧೀರ ಪ್ರಕಟಣೆ ಹೊರಡಿಸಿದ್ದಾರೆ. "ಗಾಂಧಿಜಿಯನ್ನು ಬಂಧಿಸಲಿರುವರೆಂದು ಸುದ್ದಿ ಹಬ್ಬಿದೆ; ದಬ್ಬಾಳಿಕೆಯನ್ನು ಸರಕಾರವು ಪ್ರಾರಂಭಿಸುವುದೆಂದು ವಾರ್ತೆಯಿದೆ. ಎಲ್ಲರಿಗೂ ಸ್ವಾತಂತ್ರ್ಯ ಕೊಡಬೇಕೆಂಬ ಧ್ಯೇಯವುಳ್ಳವರೆಂದು ಹೇಳಲಾಗುವ ಬ್ರಿಟಿಷ್ ಸರಕಾರವು ಈ ತರ ಮಾಡುವುದೆಂಬುದು ಬುದ್ಧಿಗೆ ಊಹಿಸಲಸಾಧ್ಯವಾದ ವಿಚಾರವಾಗಿದೆ. ಇಂತಹ ಅನರ್ಥ ಬಂದರೆ ಇದನ್ನು ನಿವಾರಿಸಲು ವೈಸರಾಯ್ ಕಾರ್ಯಕಾರಿ ಮಂಡಳದಲ್ಲಿರುವ ಸದಸ್ಯರು ಪ್ರಯತ್ನಮಾಡಬೇಕು. ಅದು ಅವರಿಂದ ಸಾಧ್ಯವಿಲ್ಲವೆಂದಾದರೆ ರಾಜಿನಾಮೆ ಕೊಡಬೇಕು ಇಂಥ ಕಾಲದಲ್ಲೂ ಹಿಂದು ದೇಶದಲ್ಲಿ ರಾಷ್ಟ್ರೀಯ ಸರಕಾರವಿಲ್ಲದಂತಾಗಿರುವುದು ಶೋಚನೀಯ" ಎಂದು ಅವರು ಖಂಡತುಂಡ ಸೂಚಿಸಿದ್ದಾರೆ. ವೈಸರಾಯ್ ಕಾರ್ಯಕಾರೀ ಮಂಡಳದ ಈ ಹಿಂದೀಕರಣವು ಏನೂ ಪ್ರಯೋಜನವಿಲ್ಲವೆಂದು ಸರ್ ಸಪ್ರುಗಳಂಥಾ ಬ್ರಿಟಿಷ್ ಮಿತ್ರರೇ ಹೇಳತೊಡಗಿದ್ದಾರೆ. ಕಾಂಗ್ರೆಸಿನವರು, ಲೀಗಿನವರು, ಹಿಂದು ಮಹಾಸಭೆಯವರೆಲ್ಲರೂ ಮೊದಲೇ ಇದನ್ನು ತಿರಸ್ಕರಿಸಿದ್ದಾರೆ. 'ರಾಷ್ಟ್ರೀಯ ಸರಕಾರಕ್ಕೆ ಇದು ಸ್ವಲ್ಪವಾದರೂ ಸರಿಯಾಗಿಲ್ಲ. ಇದರಲ್ಲಿ ಕೆಲವರು ಸಮರ್ಥ ವ್ಯಕ್ತಿಗಳಿರಬಹುದು; ಆದರೆ ಅವರ ಕೈಯಲ್ಲಿ ನಿಜವಾದ ಅಧಿಕಾರವಿಲ್ಲ. ಆದ್ದರಿಂದ ಅಲ್ಲಿದ್ದರೂ ಅವರೇನು ಮಾಡಬಲ್ಲರು? 'ಇಂಡಿಯಾ ಆಫೀಸ'ನ ಅಧೀನ ಎಲ್ಲಾ ಅಧಿಕಾರಗಳೂ ಇರುವ ವರೆಗೆ ಇವರಿಂದ ಏನೂ ಆಗದು' ಎಂದು ಸಪ್ರು ಹೇಳಿದ್ದಾರೆ. ಲಿಬರಲ್ ಫೆಡರೇಶನಿನವರೂ ಇದೇ ರೀತಿ ಅಭಿಪ್ರಾಯ ವ್ಯಕ್ತಮಾಡಿರುವರು. ಸರಕಾರದವರು ನಿಜವಾದ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸದಿದ್ದರೆ ಯುದ್ಧ ಯತ್ನದಲ್ಲಿ ಏನೂ ಸಹಾಯ ಸಿಗಲಾರದು ಎಂದು ಹೇಳಿದ್ದಾರೆ. ಲಿಬರಲ್ ಪಕ್ಷದವರಿಗೂ ತೃಪ್ತಿಯಾಗದ ಈ ಯೋಜನೆಯು ಮತ್ತೆ ಹಿಂದುಸ್ಥಾನದಲ್ಲಿ ಯಾವ ಪಕ್ಷವನ್ನೂ ತೃಪ್ತಿಪಡಿಸಲಾರದೆಂದು ಬೇರೆ ಹೇಳಬೇಕಾಗಿಲ್ಲ. ಆಜೆ ಸರ್ಕಾರದಂಥಾ ರಾಷ್ಟ್ರೀಯ ಮನೋಭಾವದ ಸದಸ್ಯರಿಗೆ ಈ ಮಾತುಗಳು ಕೇಳುವುದಿಲ್ಲವೆ?

ದೇಹದ ಹೊರಭಾಗವನ್ನು ನಿರ್ಮಲವಿರಿಸಿರಿ

ಆದರೆ ನಿಮ್ಮ ಶರೀರದ ಒಳಭಾಗವನ್ನು ನಿರ್ಮಲವಾಗಿರಿಸಲು ನೀವೇನು ಮಾಡುವಿರಿ?

ದೇಹದ ಒಳಭಾಗದ ನೈರ್ಮಲ್ಯವು ಎಲ್ಲದಕ್ಕಿಂತಲೂ ಪ್ರಧಾನವಾದುದೆಂಬುದನ್ನು ನೆನಪಿಸಲ್ಲಿಡಿರಿ.

ತನ್ನ ಮತ್ತು ಮಗುವಿನ ಆರೋಗ್ಯ ಚೆನ್ನಾಗಿರಬೇಕೆಂದು ಬಯಸುವ ಪ್ರತಿಯೊರ್ವ ತಾಯಿಯೂ, "ದೇಹದೊಳಭಾಗವು ನಿರ್ಮಲವಾಗಿರುವುದು ಆರೋಗ್ಯಕ್ಕೆ ಮುಖ್ಯ; ಎಂಡ್ರೂಸ್ ಲಿವರ್ ಸಾಲ್ಟ್ ದೇಹದೊಳಭಾಗದ ನೈರ್ಮಲ್ಯಕ್ಕೆ ಅತ್ಯುತ್ತಮ" ಎಂಬೀ ಸರಲ ನಿಯಮವನ್ನು ತಿಳಿದಿರಬೇಕು. ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿರಿಸಿದರೆ, ದಿನಂಪ್ರತಿ ಸಂಭವಿಸುವ ಅನೇಕ ವಿಧದ ಬೇನೆಗಳಿಂದ ನೀವು ಗುಣಹೊಂದುವಿರಿ. ಪ್ರತಿದಿನವೂ ರುಚಿಕರ ಅಂಡ್ರೂಸ್ ಲಿವರ್ ಸಾಲ್ಟ್ ಒಂದು ಗ್ಲಾಸು ತೆಕ್ಕೊಳ್ಳುವುದರಿಂದ ನಿಮ್ಮ ಶರೀರದೊಳಭಾಗ ನಿರ್ಮಲವಾಗುವುದು. ಮಲಬದ್ಧತೆಯನ್ನು ಇದು ಗುಣಪಡಿಸುವುದು; ಕಾಳಿಜವನ್ನು ಸರಿಗೊಳಿಸುವುದು; ತಲೆ ತಿರುಗುವುದನ್ನು ನಿಲ್ಲಿಸುವುದು; ಅಜೀರ್ಣವನ್ನು ಹೋಗಲಾಡಿಸುವುದು. ಮಲಕೋಶವನ್ನು ಎಂಡ್ರೂಸ್ ಸಂಪೂರ್ಣ ಶುಚಿಗೊಳಿಸುತ್ತದೆ. ಅದು ಹೊಟ್ಟೆಯನ್ನು ತಂಪನ್ನಿತ್ತು ರಕ್ತವನ್ನು ಶುದ್ಧಿಗೊಳಿಸುತ್ತದೆ. ಇದು ಮಕ್ಕಳಿಗೂ ಪ್ರಾಯಸ್ಥರಿಗೂ ನಯವಾಗಿ ಉಪಯೋಗಿಸಲು ಯೋಗ್ಯವಾಗಿದೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ಪ್ರತಿನಿತ್ಯವೂ—

ANDREWS LIVER SALT

ಆರೋಗ್ಯಕರ ಮತ್ತು ಶಕ್ತಿ ವರ್ಧಕ ಪಾನೀಯವಿದನ್ನು ಸೇವಿಸಿರಿ. ಶುದ್ಧಿಗೊಳಿಸುವುದು—ತಂಪುಕೊಡುವುದು—ಉಲ್ಲಾಸವೀಯುವುದು—ಚೈತನ್ಯತುಂಬಿಸುವುದು.

ಮಳೆಗಾಲದ ಶೀತದಿಂದ ನಿವಾರಣೆ ಹೊಂದಿರಿ.

ಮಳೆಗಾಲದ ಮಳೆಯಿಂದ ಒದ್ದೆಯಾದ ವಸ್ತ್ರದ ಮೂಲಕ ಎದೆ ಮತ್ತು ಶ್ವಾಸಕೋಶಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ದಿನನಿತ್ಯ ಪೆಪ್ಸ ಮಾತ್ರೆಗಳನ್ನು ತಕ್ಕೊಂಡು ಅಂತ ಶೀತಬಾಧೆಯನ್ನು ಹೋಗಲಾಡಿಸಿರಿ. ಪೆಪ್ಸ ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳಾಗಿವೆ.

ಬಾಯಿಗೆ ಹಾಕಿದ ಕೂಡಲೇ ಕರಗಿ ಪೆಪ್ಸ ಮಾತ್ರೆಗಳು ಉತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತವೆ. ಅವು ನಿಮ್ಮ ಶ್ವಾಸದ ಮೂಲಕ ಶ್ವಾಸಕೋಶಕ್ಕೆ ಹೋಗಿ ಮಳೆಗಾಲದ ಬಾಧೆ, ಕಂಠನಾಳದ ನೋವು ಮೊದಲಾದವುಗಳಿಂದ ನಿವಾರಣೆಗೊಳಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರಕುತ್ತದೆ.

ಏಜಂಟ್ಸ್:—

ಮೆಸರ್ಸ್ ದಾದಾ ಎಂಡ್ ಕೊ., ಪಿ. ಟಿ. ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ.



PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

17-7-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೭—೭—೧೯೪೨]

ಸಮರಭೂಮಿಯ ಸಂಚಾರ

ರಶ್ಯ, ಇಜಿಪ್ಟ್, ಚೀನಗಳಲ್ಲಿ ಇಂದು ರಣಕಾಳಿ ನರ್ತಿಸುತ್ತಿದ್ದಾಳೆ! ನರಬಲಿಯಾಗುತ್ತಲಿದೆ! ಚೀನ, ಇಜಿಪ್ಟ್‌ಗಳ ಕಾಳಗಕ್ಕಿಂತಲೂ ರಶ್ಯದ ರಣರಂಗವು ತೀರಾ ಭೀಕರವಾಗಿರುವುದು! ಒಂದೇ ಸವನೆ ಜರ್ಮನರು ತೋರಿಸುತ್ತಿರುವ ಭೀಷಣ ಆಕ್ರಮಣ ಪರಾಕ್ರಮಕ್ಕೆ ಎಣೆಯಿಲ್ಲವಾಗಿದೆ. ಶತ್ರುವನ್ನೆದುರಿಸಲು ಬ್ರಿಟಿಷ್ ಅಮೆರಿಕಗಳು ಪ್ರಬಲ ಸಶಕ್ತ ರಾಷ್ಟ್ರಗಳೆಂಬುದಾಗಿ ಜಗತ್ತು ಕೊಂಡಾಡುತ್ತಿದೆ ನಿಜ! ಆದರೆ ಇದು ವರೆಗಿನ ಯುದ್ಧದಲ್ಲಿ ಪ್ರಪಂಚವೇ ಬೆರಗಾಗುವಂತಹ ಧೀರ ಶಕ್ತಿ ತೋರಿಸಿದ ರಾಷ್ಟ್ರವೆಂದರೆ ರಶ್ಯವೊಂದೇ! ಸ್ವಾತಂತ್ರ್ಯಕ್ಕಾಗಿ, ದೇಶಪ್ರೇಮಕ್ಕಾಗಿ, ಎಷ್ಟೊಂದು ಬಲಿದಾನ, ಎಷ್ಟೊಂದು ಸ್ವಾರ್ಥತ್ಯಾಗ, ಎಷ್ಟೊಂದು ಪರಾಕ್ರಮಗಳು ತೋರಿಸಲು ಸಾಧ್ಯವೋ ಅಷ್ಟನ್ನೂ ರಶ್ಯನ್ ವೀರರು ಪ್ರದರ್ಶಿಸುತ್ತಿದ್ದಾರೆ. ಅಂತೆಯೇ ಇತ್ತ ಜಪಾನರೊಡನೆ ಹೋರಾಡುವ ಚೀನೀಯರೂ ಸಾಮಾನ್ಯರಲ್ಲ. ರಶ್ಯನರಾದರೂ ಶಕ್ತಿ ಸಾಧನ ಸಾಮಗ್ರಿ ಸಂಪನ್ನರಿದ್ದರು, ಚೀನೀಯರಿಗೆ ಅಷ್ಟೂ ಇರಲಿಲ್ಲ. ಆದರೂ ಕಳೆದ ಐದು ವರ್ಷಗಳಿಂದ ಅವರು ಆಕ್ರಮಣಕಾರೀ ಜಪಾನನ್ನು ಎದುರಿಸುತ್ತಾ ಬಂದ ರೋಮಾಂಚಕ ಘಟನೆಗಳನ್ನು ನೆನೆದರೆ ನೀರಸದ ಮನಸುಗಳಲ್ಲಿ ಸ್ವಾತಂತ್ರ್ಯದ ಆವೇಶವು ಅಲೆಯಲೆಯಾಗಿ ಹುಟ್ಟಿ ಬರುವಂತಿದೆ. ಇಷ್ಟು ಹೇಳುವಾಗ, ಜರ್ಮನಿಯ ಅವಸ್ಥೆಯೇನೆಂದು ಸ್ವಲ್ಪ ಹೇಳಬೇಕು. ಯುದ್ಧ ಆರಂಭವಾದಂದಿನಿಂದ ಜರ್ಮನರ ರಣರಭಸವು ಕಡಿಮೆಯಾದುದಿಲ್ಲ, ಹಿಟ್ಲರನ ಆವೇಶ ತಗ್ಗಿದುದಿಲ್ಲ. ಆದರೆ ಇದೇ ತರದಲ್ಲಿ ಹಿಟ್ಲರನು ಬಹುಕಾಲ ಯುದ್ಧ ನಡೆಸುವುದು ಸಾಧ್ಯವಾಗಲಾರದೆಂಬುದಾಗಿ ಕೆಲವರು ಹೇಳುತ್ತಿದ್ದಾರೆ.

ಕಾಕಸಸಿಗೆ ಕಾಕದೃಷ್ಟಿ

‘ಯುರಲ್ಸ್ ಮತ್ತು ಕಾಕಸಸಿನ ಎಲ್ಲಾ ಸಂಪತ್ತು ನಮ್ಮ ವಶವಾಗಿ ಬಿಟ್ಟರೆ ನಮ್ಮ ಜರ್ಮನಿಯು ಅಜೇಯ ರಾಷ್ಟ್ರವೆನಿಸಿ ಬಹಳ ಬಲಾಢ್ಯವಾಗುವುದು!’ ಹೀಗೆಂದು ಹಿಂದೊಮ್ಮೆ ಹಿಟ್ಲರನು ನುಡಿದಿದ್ದನು! 1941ರಲ್ಲಿಯೇ ಹಿಟ್ಲರನಿಗೆ ಲೆನಿನ್‌ಗ್ರಾಡ್ ಮೊಸ್ಕೋಗಳನ್ನು ಮುಗಿಸಿ, ಕಾಕಸಸಿಗೆ ಕಾಲಿಡಬೇಕೆಂಬ ಆಸೆಯಿತ್ತು. ...ನ ಎಣ್ಣೆ, ಖನಿಜ, ಕೃಷಿ ಮೊದಲಾದ ಭೂಸಂಪತ್ತುಗಳಿಗಾಗಿಯೇ ಮಾತ್ರವಲ್ಲದೆ ಕಾಕಸಸ್ ರಾಜಕೀಯದೃಷ್ಟಿಯಿಂದಲೂ ಅತ್ಯಂತ ಮಹತ್ವದ್ದಾಗಿದೆ. ಇಂದಿನ ಯುದ್ಧಕ್ಕೆ ಬೇಕಾಗುವ ಎಣ್ಣೆ ಕಾಕಸಸಿನಲ್ಲಿ ಧಾರಾಳ ದೊರೆಕುತ್ತದೆ. ಸದ್ಯದ ಯುದ್ಧದಲ್ಲಿ ಯಾರಲ್ಲಿ ಹೆಚ್ಚಿನ ತೈಲ ಸಂಗ್ರಹವಿದೆಯೋ ಅವರು ಖಂಡಿತ ಗೆಲ್ಲಬಲ್ಲರು. ಜರ್ಮನಿಯ ರಣಯಂತ್ರಗಳಿಗಿಂದು ಕಾಕಸಸಿನ ಎಣ್ಣೆಯ ಬಾಯಾರಿಕೆಯಾಗಿದೆ. ಹಿಟ್ಲರನ ಏಶ್ಯಾ ಯುರೋಪು ಖಂಡಗಳ ದಿಗ್ವಿಜಯ ಕಾರ್ಯಕ್ಕೆ ಕಾಕಸಸಿನಿಂದ ಬೇರೆ ತೆರನಾಗಿಯೂ ಸಹಾಯವುಂಟು. ಕಪ್ಪು ಸಮುದ್ರದ ಮಾರ್ಗವಾಗಿಯೂ, ಬಾಕೋವಿನ ಹಾದಿಯಾಗಿಯೂ ಕಾಕಸಸನ್ನು ಜರ್ಮನರು ಬಂದು ನುಗ್ಗಿದರೆ, ಅವರನ್ನು ಇಂದು ತಡೆಯುವವರೂ ಯಾರೂ ಇಲ್ಲವಾಗಿದೆ. ಬ್ರಿಟಿಷ್ ಸೈನ್ಯವು ಈಗ ಈಜಿಪ್ತಿನಲ್ಲಿ ಕಾಳಗ ಕೊಡುತ್ತಿದ್ದು ನಿಮ್ನವಾಗಿರುವುದು, ರೊಮೆಲನೂ ಸುವೇಜ್ ಕಾಲುವೆಯನ್ನು ಮುಟ್ಟಿದನಾದರೆ ಕಾಕಸಸಿಗೆ ಬರಲು ಜರ್ಮನರಿಗೆ ಹೆಚ್ಚಿನ ಅನುಕೂಲವೇ ಆಯಿತು! ಇರಾಕ್, ಇರಾನ್ ಪೆಲೆಸ್ತಾಯಿನ್, ಸಿರಿಯಾಗಳನ್ನು ಗೆದ್ದಿತ್ತು ಅಲ್ಲಿಂದ ಹಿಂದುಸ್ತಾನಕ್ಕೂ ದಂಡೆತ್ತಿ ಬರಬಹುದು. ಹೀಗೆ ಆರ್ಥಿಕ ದೃಷ್ಟಿಯಿಂದಲೂ ಭೌಗೋಳಿಕ ದೃಷ್ಟಿಯಿಂದಲೂ ಕಾಕಸಸನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಇಂದು ಜರ್ಮನಿಯ ಗುರಿಯಾಗಿದೆ. ಕಾಕಸಸಿನ ಮೇಲೆ ಅದಕ್ಕಾಗಿಯೇ ಹಿಟ್ಲರನ ಕಾಕದೃಷ್ಟಿ ಬಹಳ ಕಾಲದಿಂದಲೇ ಬಿದ್ದಿರುವುದು.

ಡಾನ್ ನದಿ ದಾಟಲು

ಜರ್ಮನರು ರಶ್ಯನ್ ರಣಕ್ಷೇತ್ರದಲ್ಲಿ ಡಾನ್ ನದಿ ದಾಟಲು ವಿಷಮ ಯುದ್ಧ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ನದಿಯನ್ನು ದಾಟಿಬಿಟ್ಟಿದ್ದಾರೆಂದೂ ಸುದ್ದಿಯಿದೆ. ಕಳೆದ ವರ್ಷದ ಕಾಳಗದಲ್ಲಿಯೂ ಜರ್ಮನ್ ಸೈನಿಕರು ಇಷ್ಟು ಮುಂದುವರಿದು ಬಂದಿರಲಿಲ್ಲ. ನದಿಯ ಸಾಲಿನಲ್ಲಿ ಉದ್ದಕ್ಕೂ ಜರ್ಮನರು ತಮ್ಮ ಪ್ರಚಂಡ ಟೇಂಕ್ ಸೈನ್ಯ ಹರಿಸಿ ನಿಂತಿರುವರು. ನದಿಯಾಚೆಯಲ್ಲಿರುವ ರಶ್ಯನರು ಕಂಗಾಲಾದರೂ ಒಮ್ಮೆಲೇ ಟೇಂಕುಗಳನ್ನು ಮುಂದೊತ್ತುವ ಹಂಚಿಕೆಯಿರಬಹುದು. ರಶ್ಯನರ ಪ್ರತಿಭಟನೆಯೂ ಭಯಂಕರವಾಗಿದೆ. ಜರ್ಮನರು ಕಟ್ಟಿದ ಸೇತುವೆಗಳನ್ನು ಅವರು ಧ್ವಂಸಮಾಡುತ್ತಿರುವರು. ಈ ನದೀ ಯುದ್ಧವು ದಕ್ಷಿಣ ರಶ್ಯದ ಹಣೆಬರಹವನ್ನು ನಿರ್ಧರಿಸಬಹುದು. ದಕ್ಷಿಣ ರಶ್ಯವು ರಶ್ಯದಲ್ಲಿ ಅತ್ಯಂತ ಮುಖ್ಯ ಭಾಗವಾದ ಕಾರಣ, ಇದರಿಂದ ಇಡೀ ರಶ್ಯದ ಭವಿಷ್ಯತ್ತೇ ನಿಶ್ಚಯವಾದಂತೆಯೆಂಬುದಾಗಿ ಕೆಲವರು ಹೇಳುತ್ತಾರೆ. ವೊರೊನೇಜ್ ಪೂರ್ವಕ್ಕಿರುವ ಕೂಪಿಯನ್‌ಸ್ಕ್ ರೈಲ್ವೇ ಕೇಂದ್ರವನ್ನು ಜರ್ಮನರು ಹಿಡಿದರು. ಡಾನ್ ನದೀ ಪೂರ್ವಕ್ಕೆ ವೊರೊನೆಜ ಎಂಬ ಬಹಳ ಮುಖ್ಯ ರೈಲ್ವೇ ಕೇಂದ್ರವೊಂದಿದೆ. ಅದು ಮಾಸ್ಕೋ ಮತ್ತು ರೊಸ್ಟೋವ್‌ಗಳ ಮಧ್ಯದಲ್ಲಿದ್ದು ದಕ್ಷಿಣ ರಶ್ಯ ಸೈನ್ಯಗಳೂ ಮಧ್ಯ ರಶ್ಯ ಸೈನ್ಯಗಳೂ ಸಂಗಮವಾಗುವ ಸ್ಥಳದಲ್ಲಿದೆ. ವೊರೊನೆಜವನ್ನು ಹಿಡಿಯಲು ಈಗ ಪ್ರಚಂಡತಮ ಸಂಗ್ರಾಮವಾಗುತ್ತಿದೆ. ತಾವು ವೊರೊನೆಜ್‌ವನ್ನು ಕೈವಶಪಡಿಸಿರುವುದಾಗಿ ಜರ್ಮನರು ಈಗಾಗಲೇ ಹೇಳುತ್ತಿದ್ದಾರೆ. ಅಂತೂ ಅಲ್ಲಿನ ಸಂಗತಿ ಬಹಳ ವಿಷಮ ಸ್ಥಿತಿಗೇರಿದೆಯೆಂಬುದು ನಿಶ್ಚಯ. ರೊಸ್ಟೋವಿನ ದಕ್ಷಿಣಕ್ಕೆ ಕಾಂಟೆಮಿರ್ ವೊಕಾ ಹತ್ತಿರ ಮತ್ತು ಡಾನ್ ನದೀ ತೀರದ ಲಿಸಿಚಾನ್‌ಸ್ಕ್ ಹತ್ತಿರ ಜೋರಿನ ಹೋರಾಟ ನಡೆಯುತ್ತಿರುವುದು. ಇಷ್ಟರಲ್ಲಿ ಟೈಲ್ ಗೊರೊಡಿನಿಂದ ಹೊರಟ ಸೈನ್ಯವು ವೊರೊನೆಜಿಗೆ ನೈರುತ್ಯದಲ್ಲಿರುವ ಸ್ವಾಯಿನ್ ಒಸ್ಕಾಲ್ ಎಂಬ ಪಟ್ಟಣವೊಂದನ್ನು ಹಿಡಿದಿರುವುದು. ಹೀಗೆ ಜರ್ಮನರು ಕುರ್ಸ್ಕ, ಖಾರ್ಕೋವ್ ಮತ್ತು ವೊರೊನೆಜ್‌ಗಳ ತ್ರಿಕೋಣಾಕಾರದ ನೆಲದಲ್ಲಿ ಭೀಷಣ ರಣರಂಗವನ್ನು ಹೂಡುತ್ತಿದ್ದಾರೆ. ಕೂಸಿನ್ ಭಾಗದಲ್ಲಿ ಮೋಸ್ಕೋದ ವಾಯವ್ಯಕ್ಕೆ ಜರ್ಮನರ ರಭಸ ಹೆಚ್ಚಾಗಿದೆ. ಅಂತೂ ರಶ್ಯದ ರಣಕ್ಷೇತ್ರದಲ್ಲಿ ಇಂದು ಆಗುತ್ತಿರುವಷ್ಟು ಭೀಕರ ಸಂಗ್ರಾಮವು ಇನ್ನು ಯಾವ ಕಡೆಯಲ್ಲಿಯೂ ಆಗುತ್ತಲಿಲ್ಲ. ಜರ್ಮನರು ಮತ್ತು ರಶ್ಯನರು ಈ ರಣರಂಗದಲ್ಲಿ ತೋರಿಸಿದ ಪರಾಕ್ರಮಗಳು ಇಡೀ ಯುದ್ಧದ ಇತಿಹಾಸದಲ್ಲಿಯೇ ರಕ್ತಾಕ್ಷರದಿಂದ ಬರೆವಷ್ಟು ತೀಕ್ಷ್ಣವಾಗಿರುವುದು!

ರೊಮೆಲನಿಗೆ ತಡೆ

ಲಿಬಿಯವನ್ನು ಗೆದ್ದು ವಿಜಯೋನ್ಮತ್ತವಾದ ರೊಮೆಲನ ಸೈನ್ಯವು ರಣರಭಸದಿಂದ ಇಜಿಪ್ತಿನ ಗಡಿಯನ್ನು ದಾಟಿ ಮುನ್ನುಗ್ಗಿತ್ತು. ಮೂರು ನಾಲ್ಕು ದಿನಗಳಲ್ಲಿಯೇ ನೂರಾರು ಮೈಲು ದಾಟಿ ಬಂದದ್ದನ್ನು ನೋಡಿ ಎಲ್ಲರೂ ಬೆರಗಾದರು. ಇಜಿಪ್ತಿನ ಅವಸ್ಥೆ ಏನಾಗಿಯಿತೆಂದೇ ಬಗೆದರು. ಆದರೆ ಈಗ ಎಲ್‌ಎಲಮೀನ್ ಹತ್ತಿರ ರೊಮೆಲನ ಪೌರುಷಕ್ಕೆ ಭದ್ರವಾದ ತಡೆಯುಂಟಾಗಿದೆ. ಎಲ್‌ಎಲಾಮಿನ್ ಬ್ರಿಟಿಷ್ ವಶದಲ್ಲಿದೆ. ಶತ್ರುವು ಈಗ ಅದರ ಪಶ್ಚಿಮದಲ್ಲೂ ದಕ್ಷಿಣದಲ್ಲೂ ಬಂದು ನಿಂತಿದ್ದಾನೆ. ಎಲ್ ಅಲಮೀನನ್ನು ಆಕ್ರಮಿಸಲು ಜರ್ಮನ್ ಸೇನೆ ಮಾಡಿದ ಮೊದಲನೆಯ ಹೋರಾಟವು ವ್ಯರ್ಥವಾಯಿತು. ವಿಮಾನಯುದ್ಧ, ಫಿರಂಗಿ ಹೊಡೆತಗಳು ಎಡೆಬಿಡದೆ ಸಾಗುತ್ತಿವೆ. ದಳಪತಿ ಆಚಿನ್‌ಲೆಕ್ಕರ ಮುಂದಾಳುತನದಿಂದ ಮಿತ್ರಸೈನಿಕರು, ದಳಪತಿ ರೊಮೆಲನ ಸೈನಿಕರನ್ನು ಧೈರ್ಯದಿಂದ ಪ್ರತಿಭಟಿಸುತ್ತಿದ್ದಾರೆ. ಎಲ ಮಿನ್ ಕಾಳಗವು ಒಂದನೆಯ ತಾರೀಕಿನಿಂದಲೇ ಪ್ರಾರಂಭಿಸಿದ್ದರೂ ಶತ್ರುವಿಗೆ ಒಂದು ಹೆಜ್ಜೆ ಮುಂದಿಡಲೂ ಸಾಧ್ಯವಾಗಲಿಲ್ಲ. ಹೊಸ ಸಹಾಯ ಬರುವುದೆಂದು ರೊಮೆಲನು ದಾರಿ ಕಾಯುತ್ತಿದ್ದಾನೆ. ಅಲೆಕ್ಸಾಂಡ್ರಿಯವು ಇಲ್ಲಿಂದ ಇನ್ನೂ ಎಪ್ಪತ್ತು ಮೈಲುಗಳ ದೂರದಲ್ಲಿದೆ. ರೊಮೆಲನ ತಡೆಗೆ ಕಾರಣವಿಲ್ಲದೆಯಿಲ್ಲ. ತೊಬ್ರೂಕಿನಿಂದ ಎಲಾಮಿನ್‌ಗೆ ಮುನ್ನೂರ ಐವತ್ತು ಮೈಲು ದೂರವಿದೆ. ಆ ಮರುಭೂಮಿಯಲ್ಲಿ ಸೈನ್ಯ ಸಾಮಗ್ರಿಗಳನ್ನು ಒಮ್ಮೆಲೇ ಸಾಗಿಸಿ ತರುವುದು ಕಷ್ಟದ ಕೆಲಸ. ಆದಾಗಿ ರೊಮೆಲನು ಈಗ ತಡೆಯಲ್ಪಟ್ಟಿರುವನು. ಆದರೆ ಬ್ರಿಟಿಷರಿಗೆ ಇಂತಹ ತೊಂದರೆಯಿಲ್ಲ. ಅವರು ಹಿಂದೆ ಹಿಂದೆ ಸರಿಯುತ್ತಾ, ತಮ್ಮ ಸಂಗ್ರಹ ಸ್ಥಳಕ್ಕೇ ಬಂದಿರುವರು. ಇತ್ತ ನ್ಯೂಜಿಲೆಂಡ್, ಸಿರಿಯಾ, ಹಿಂದುಸ್ತಾನಗಳಿಂದ ಇಜಿಪ್ತ್ ರಕ್ಷಣೆಗಾಗಿ ಸೈನ್ಯಗಳೂ ಹೋಗಿದ್ದವು. ಹೀಗೆ ಸೈನ್ಯಸಾಧನ ಸಜ್ಜಿತರಾದ ಬ್ರಿಟಿಷರು ಈಗ ರೊಮೆಲನನ್ನು ತಡೆದುಬಿಟ್ಟಿದ್ದಾರೆ. ತನಗೆ ಹೊಸ ಸೈನ್ಯ ಬರುವ ತನಕ ರೊಮೆಲನೂ ಹೀಗೆಯೇ ಕಾಯುತ್ತಿರಲೂಬಹುದು. ಅಂತೂ ಸಾಕಷ್ಟು ಸಾಧನ ಸಾಮಗ್ರಿಗಳು ಬಂದ ಕೂಡಲೇ ರೊಮೆಲನು ಮುಂದಡಿಯಿಡುವನು. ಈ ಗಂಡಾಂತರದಿಂದ ಬ್ರಿಟಿಷರು ಪಾರಾಗಬೇಕಾಗಿದ್ದರೆ, ಇನ್ನೊಂದು ಕಡೆ ಜರ್ಮನರೊಡನೆ ಯುದ್ಧ ಪ್ರಾರಂಭಿಸಬೇಕೆಂದೂ, ಅಲೆಕ್ಸಾಂಡ್ರಿಯಾ, ಕೈರೋ ಮತ್ತು ಸುವೇಜ್‌ಗಳನ್ನು ರಕ್ಷಿಸಬೇಕೆಂದೂ, ಇಜಿಪ್ತಿನ ಜನರನ್ನು ಬ್ರಿಟಿಷರ ಕಡೆಗೆ ಒಲಿಸಿಕೊಳ್ಳಬೇಕೆಂದೂ ಒಬ್ಬ ಬ್ರಿಟಿಷ್ ಯುದ್ಧತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಚೀನ ಆರನೆಯ ವರ್ಷದಲ್ಲಿ

ಚೀನಾ ಜಪಾನ್ ಯುದ್ಧವು ಆರಂಭವಾಗಿ ಐದು ವರ್ಷಗಳು ಸಂದವು. ಕಳೆದ ಈ ಐದು ವರ್ಷಗಳಲ್ಲಿ ಚೀನವು ತೋರಿಸಿದ ಸಾಹಸವು ಪ್ರಶಂಸನೀಯವಾಗಿದೆ. ಇಂದಿಗೂ ವೈರಿಗೆ ಬಗ್ಗದೆ ಅದು ಆಕ್ರಮಣವನ್ನೆದುರಿಸಿ ಕಾದಾಡುತ್ತಿರುವುದು ಅಭಿನಂದನೀಯವಾದುದು. ಈ ಐದನೆಯ ವಾರ್ಷಿಕೋತ್ಸವದಂದು ಮಾತನಾಡುತ್ತಾ ಚೀನದ ದಳಪತಿ ಚಿಯಾಂಗ್ ಕೈಶೇಕರು ಜಪಾನಿನ ಪತನವು ನಿಶ್ಚಿತವೆಂದು ಗರ್ಜಿಸಿದರು. ಜಪಾನರು ಶಸ್ತ್ರಸಾಮಗ್ರಿಗಳಲ್ಲಿ ಬಲವಂತರಾದರೂ, ಸ್ವಾತಂತ್ರ್ಯ ಪ್ರೇಮಿಗಳಾದ ಚೀನೀಯರು ಗೋರಿಲ್ಲಾ ಕಾಳಗವೇ ಮೊದಲಾದ ಹೋರಾಟದಿಂದ ಜಪಾನರನ್ನು ಚೀನದ ನೆಲದಲ್ಲಿ ಕಾಲೂರಲು ಬಿಡುವುದಿಲ್ಲ. ಜಪಾನರು ಕೈವಶ ಹೊಂದಿದ್ದ ಅನೇಕ ಪ್ರದೇಶಗಳನ್ನು ಚೀನರು ಪಡೆದುಕೊಂಡಿದ್ದಾರೆ. ಈಗ ಪೂರ್ವ ಚೀನದಲ್ಲಿ ಹೆಚ್ಚಾಗಿ ಕಿಯಾಂಗ್ಸಿ ಮತ್ತು ಚಿಕಿಯಾಂಗ್ ಪ್ರಾಂತದಲ್ಲಿ ಯುದ್ಧ ನಡೆಯುತ್ತಿದೆ. ಫೂಕಿಯೆನ್ ಪ್ರಾಂತವನ್ನು ನುಗ್ಗಲು ಶತ್ರುಗಳು ಪ್ರಯತ್ನಿಸಿದರು. ಕ್ವಾಂಗ್‌ಸಿಪೆಂಗಿನ ಆಗ್ನೇಯಕ್ಕಿರುವ ಕ್ವೆಲಿಪೆಂಬಲ್ಲಿ ಚೀನೀಯರ ಪ್ರತಿಭಟನೆ ಜೋರಾಗಿದೆ. ದಕ್ಷಿಣ ಕಿಯಾಂಗ್‌ಸೀ ಪ್ರಾಂತದಲ್ಲಿಯೂ ಜಪಾನರನ್ನು ಹಿಂದಟ್ಟಲಾಗಿದೆ. ಕಿಯಾಂಗ್ಸೀ ಕಡೆ ಯುದ್ಧವ ದೂಡುತ್ತಿದ್ದ ಜಪಾನ್ ಸೈನ್ಯವು ಈಗ ದಕ್ಷಿಣಕ್ಕೆ ಹೋಗುವುದನ್ನು ಬಿಟ್ಟು ಪಶ್ಚಿಮಕ್ಕೆ ಸರಿದಿದೆ. ಬಹುಶಃ ಇದು ಕ್ಯಾಂಟನ್ ಹೇಂಕೋ ರೈಲ್ವೆ ರಸ್ತೆಯಲ್ಲಿರುವ ಚಾಂಗ್‌ಶಾ ಪಟ್ಟಣವನ್ನು ಆಕ್ರಮಿಸಲಾಗಿರಬೇಕೆಂದು ತಿಳಿದ ಜನರಲ್ ಕೈಶೇಕರು ಶತ್ರುವನ್ನು ಎದುರಿಸಲು ಅಲ್ಲಿ ಸೈನ್ಯಸಿದ್ಧತೆ ಮಾಡುತ್ತಿದ್ದಾರೆ. ಕಿಯಾಂಗ್ಸಿ ಪ್ರಾಂತದ ನೈರುತ್ಯದಲ್ಲಿರುವ ಟಂಗ್‌ಸ್ಟನ್ ಗಣಿಗಳ ಕಡೆಗೂ ಜಪಾನರು ನುಗ್ಗುತ್ತಿರುವರು. ನಾನ್‌ಚಂಗಿನ ವಾಯುವ್ಯದಲ್ಲಿರುವ ಕಾನ್ ನದಿಯ ತೀರದ ಎರಡು ಪಟ್ಟಣಗಳನ್ನು ಹಿಡಿಯುವುದಾಗಿ ಜಪಾನರು ಹೆದರಿಸುತ್ತಿದ್ದಾರೆ. ಬರ್ಮಾ ರಸ್ತೆಯನ್ನು ಕತ್ತರಿಸಿ ಬೇರೆ ಕಡೆಯಿಂದ ಸಹಾಯ ಬರುವುದನ್ನು ನಿಲ್ಲಿಸಿಬಿಟ್ಟರೆ ಚೀನವು ತಾನಾಗಿಯೇ ಶರಣಾಗುವುದೆಂದು ಜಪಾನಿನ ಆಸೆಯಿತ್ತು. ಆದರೆ ಇಂದು ಅದು ಕೇವಲ ಬಯಲ ಸಿರಿಯಾಗಿದೆ. ಎಂಥಾ ಕಷ್ಟ ಬಂದರೂ ಚೀನೀಯರು ಜಪಾನರಿಗೆ ಶರಣಾಗರೊಲ್ಲರು. ಚೀನದ ನೆಲವನ್ನು ಶತ್ರುಗಳಿಗೆ ಬಿಟ್ಟುಕೊಡಲಾರರು. ಜಪಾನರ ಸಾಮ್ರಾಜ್ಯದಾಹಕ್ಕೆ ಚೀನವನ್ನು ಅಲ್ಲಿನ ಸ್ವಾತಂತ್ರ್ಯವೀರರು ಸರ್ವಥಾ ಬಲಿಗೊಡಲಾರರು.

ಸ್ವದೇಶಾಭಿಮಾನಿ

ತಾ|| 17—7—1942

ಗಾಂಧಿಜಿಗೆ ಶರಣು?

ಪ್ರಪಂಚದ ಮಹಾ ಯುದ್ಧ, ಭಾರತದ ರಾಜಕೀಯ ಸಮಸ್ಯೆ ಜಪಾನರ ಆಕ್ರಮಣ ಭೀತಿ, ರಾಷ್ಟ್ರದ ಸ್ವಾತಂತ್ರ್ಯ ಸಂಪಾದನೆ, ಮಹಾ ಆಂದೋಲನದ ಆರಂಭ ಇವೇ ಮೊದಲಾದ ಹಲವಾರು ಪ್ರಾಮುಖ್ಯ ಪ್ರಶ್ನೆಗಳನ್ನು ಕಾಂಗ್ರೆಸು ಇದಿರಿಸಬೇಕಾಗಿ ಬಂದ ಈ ವಿಷಮ ಸಂಧಿಕಾಲದಲ್ಲಿ ರಾಷ್ಟ್ರದ ನಿಜವಾದ ನಾಯಕನಾಗಿ ಜನತೆಯನ್ನು ಮುನ್ನಡೆಸಬಲ್ಲ ಏಕೈಕ ಮುಂದಾಳುವೆಂದರೆ ಗಾಂಧಿಜಿಯೆಂಬುದನ್ನು ಕಾಂಗ್ರೆಸು ಚನ್ನಾಗಿ ಮನಗಂಡಿದೆ. ಕಳೆದ ವಾರ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ವರ್ಧಾದಲ್ಲಿ ಗಾಂಧಿಜಿಯ ಆಶ್ರಮದ ಬಳಿಯಲ್ಲಿಯೇ ಕೂಡಿ ಅವರ ಹಿತಸೂಚನೆಗಳನ್ನೆಲ್ಲಾ ಪಡಕೊಂಡು ಕೊನೆಗೆ ಗಾಂಧಿಜಿಯ ಅಭಿಪ್ರಾಯದಂತೆ 'ಬ್ರಿಟಿಷ್ ಪ್ರಭುತ್ವವು ಹಿಂದುಸ್ಥಾನದಲ್ಲಿ ಕೊನೆಗಾಣಬೇಕು' ಎಂಬ ನಿರ್ಧಾರಕ್ಕೀಗ ಬಂದಿದೆ. ಬ್ರಿಟಿಷ್ ಪ್ರಭುತ್ವದವರು, ಹಿಂದುಸ್ಥಾನದ ಸ್ವಾತಂತ್ರ್ಯದ ಸಲುವಾಗಿ ಮಾತ್ರವಲ್ಲ, ಚೀನದ ಸ್ವಾತಂತ್ರ್ಯದ ಸಲುವಾಗಿಯೂ, ಜಗತ್ತಿನ ಸ್ವಾತಂತ್ರ್ಯ ತತ್ವದ ಸಲುವಾಗಿಯೂ ಹಿಂದುಸ್ಥಾನದಿಂದ ಹೊರಟುಹೋಗಬೇಕೆನ್ನುವ ಕಾಂಗ್ರೆಸಿನ 'ಬಿನ್ನಹಕ್ಕೆ' ಕಿವಿಗೊಡದಿದ್ದ ಪಕ್ಷದಲ್ಲಿ, ಗಾಂಧಿಜಿಯವರ ಮುಂದಾಳುತನದಿಂದ ಅಹಿಂಸಾತ್ಮಕವಾದ ಸಾಮೂಹಿಕ ಚಳವಳವೊಂದನ್ನು ಪ್ರಾರಂಭಿಸಬೇಕಾಗುವುದೆಂದೂ ವರ್ಕಿಂಗ್ ಕಮಿಟಿಯು ತನ್ನ ಕೊನೆಯ ನಿರ್ಧಾರವನ್ನು ಸ್ಪಷ್ಟಪಡಿಸಿದೆ. ಅಂತೂ ರಾಷ್ಟ್ರವು ವಿಷಮ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿರುವೀ ಸಂಧಿಕಾಲ ಸಮಯದಲ್ಲಿ ಕಾಂಗ್ರೆಸು ಮುಂದಿನ ಹಾದಿ ತೋರಿಸಲು ಪುನಃ ಗಾಂಧಿಜಿಗೆ ಶರಣುಹೊಕ್ಕಿರುವುದು.

ವರ್ಕಿಂಗ್ ಕಮಿಟಿಯವರು, ಗಾಂಧಿಜಿಯ ಮುಂದಾಳುತನಕ್ಕೆ ಒಪ್ಪಿ ಕೈಕೊಂಡ ಇಂದಿನ ನಿರ್ಧಾರದ ಯುಕ್ತತೆಯ ವಿಚಾರ ಇಡೀ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ತೀವ್ರ ಚರ್ಚೆಯಾಗಬಹುದು. ಕಾಂಗ್ರೆಸು ಇಂತಹ ಒಂದು ನಿರ್ಧಾರವನ್ನು ಕೈ ಕೊಳ್ಳಲು ಕಾರಣವಾದರೂ ಏನು ಎಂಬುದನ್ನು ವಿವರಿಸುವುದು ಪ್ರಕೃತ ಅವಶ್ಯವಾಗಿದೆ. ಪರಕೀಯರ ಆಳುವಿಕೆಯಿಂದ ದೇಶವು ಮುಕ್ತವಾಗಬೇಕೆಂಬುದೇ ಸ್ವಾತಂತ್ರ್ಯಕ್ಕಾಗಿ ಹೂಡಿರುವ ಹೋರಾಟದ ಪ್ರಥಮ ಉದ್ದೇಶವಷ್ಟೆ? ಆದ್ದರಿಂದ ನಮ್ಮ ರಾಷ್ಟ್ರವು ಸ್ವತಂತ್ರವಾಗಬೇಕೆಂದರೆ, ಪರಕೀಯರ ಎಂದರೆ ಬ್ರಿಟಿಷರ ಪ್ರಭುತ್ವ ಕೊನೆಗೊಳ್ಳಬೇಕೆಂದು ಹೇಳುವುದು ಅವಶ್ಯವಾಗಿದೆ. ಆದರೆ ಕಾಂಗ್ರೆಸು ಇಂದಿನ ಗಂಡಾಂತರದ ಸಮಯದಲ್ಲಿ ಬ್ರಿಟಿಷ್ ಯುದ್ಧಯತ್ನಕ್ಕೆ ಅಡಚಣೆ ಮಾಡಕೂಡದೆಂದೇ ಆಲೋಚಿಸಿತ್ತು; ಕ್ರಿಪ್ಸರು ಸಂಧಾನಕ್ಕೆ ಬಂದಾಗ ಆದಷ್ಟು ಅವರೊಡನೆ ಸಹಕರಿಸಿ ಸದ್ಯದ ಪರಿಸ್ಥಿತಿಯಲ್ಲಿ ದೇಶದ ಬೇಡಿಕೆಗೇನಾದರು ಒಂದು ಗತಿಯಾದರೆ ಸಾಕೆಂದು ಮಾತುಕತೆ ಮುಂದುವರಿಸಲಾಯಿತು. ಆದರೆ ಕ್ರಿಪ್ಸ್ ಸಂಧಾನದ ಫಲಿತಾಂಶವಾಗಿ ಬ್ರಿಟಿಶ್ ಪ್ರಭುತ್ವವು ಎಂದೆಂದಿಗೂ ಇಲ್ಲಿಂದ ಬಿಟ್ಟು ಹೋಗುವ ಮನಸುಳ್ಳದಾಗಿಲ್ಲವೆಂದು ಕಾಂಗ್ರೆಸ್ ಮುಖಂಡರಿಗೆ ಖಚಿತವಾಯಿತು. ಇಷ್ಟರಲ್ಲಿ ಜಪಾನ್ ಆಕ್ರಮಣದ ಭೀತಿ ಹೆಚ್ಚಾಗುತ್ತಾ ಬಂತು. ಬ್ರಿಟಿಶ್ ಪ್ರಭುತ್ವದ ವಿಷಯ ಜನತೆಗೆ ಅತೃಪ್ತಿ ಹುಟ್ಟಿದಂತೆ, ಜಪಾನರನ್ನು ಪ್ರತಿಭಟಿಸುವ ಶಕ್ತಿ ಕುಂದುತ್ತಾ ಬರುವ ಸೂಚನೆ ಕಂಡಿತು. ಬರ್ಮಾ, ಮಲಯ, ಸಿಂಗಾಪುರಗಳ ಪಾಠವು ಹಿಂದೂದೇಶದಲ್ಲಿಯೂ ಪುನರಾವೃತ್ತಿಯಾಗಬಾರದೆಂದು ಕಾಂಗ್ರೆಸು ಬ್ರಿಟಿಷರಿಗೆ ಹೀಗೆ ಸೂಚನೆಯಿತ್ತಿದೆ. "ನಮ್ಮ ದೇಶವನ್ನು ನಮಗೆ ಬಿಟ್ಟುಬಿಡಿರಿ. ನಾವಿದನ್ನು ರಕ್ಷಿಸಲು ಶಕ್ತರಿದ್ದೇವೆ." ಎಂದು ಕಾಂಗ್ರೆಸು ಈಗ ಸಾರಿಹೇಳುತ್ತಿದೆ.

ಬ್ರಿಟಿಷ ಪ್ರಭುತ್ವವು ಹಿಂದೂದೇಶದಲ್ಲಿ ಕೊನೆಗಾಣಬೇಕು ಎಂಬ ಸೂಚನೆಯಿಯುವಾಗ ಕಾಂಗ್ರೆಸು ನಿರ್ಮಲ ಮನಸ್ಸಿನಿಂದ ವಿಚಾರಮಾಡಿದೆ. ಈ ಸೂಚನೆಯಲ್ಲಿ ರಾಗದ್ವೇಷಗಳಿಗೆ ಎಡೆಯಿಲ್ಲ. ಬ್ರಿಟಿಷ್ ಜನತೆಯ ಮೇಲೆ ಯಾವುದೇ ತರದ ದ್ವೇಷಭಾವನೆಯಿಲ್ಲ. ನಮ್ಮ ಮಿತ್ರರಂತೆ ಅವರೂ ಸಮಾನತೆಯ ಭಾವದಿಂದ ಇಲ್ಲಿ ಇರಬಹುದು. ಬರ್ಮಕ್ಕೆ ಮಲಯಕ್ಕೆ, ಸಿಂಗಾಪುರಕ್ಕೆ ಕೊನೆತನಕ ಸ್ವಾತಂತ್ರ್ಯ ಸಾರದೆ ಅವು ಜಪಾನರ ವಶವಾಗಿವೆಯಷ್ಟೆ? ಈಗ ಆ ದೇಶದ ಜನರು ಜಪಾನರ ದಾಸ್ಯದಲ್ಲಿ ಅದ್ದಬೇಕಾಗಿದೆ. ಅಂಥಾ ಪಾಠವನ್ನು ನಾವು ಕಲಿಯಬಾರದು; ನಾವು ಆಕ್ರಮಿಸಿ ಬರುವ ಜಪಾನರನ್ನು ತಡೆಯಬೇಕು. ಹಾಗಾಗಬೇಕಾದರೆ ನಾವು ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುವುದೆಂಬ ಸ್ಫೂರ್ತಿಯಿರಬೇಕು. ಅಂತಾಗಲು ಬ್ರಿಟಿಷರು ಭಾರತವನ್ನು ಭಾರತೀಯರಿಗೆ ಒಪ್ಪಿಸಬೇಕು ಎಂಬುದಾಗಿ ಕಾಂಗ್ರೆಸು ಈಗ ಕೊನೆಯ ನಿರ್ಧಾರಕ್ಕೆ ಬಂದಿದೆ. ಗಾಂಧಿಜಿ ಈ ಸೂಚನೆಯನ್ನು ತಂದವರು, ಆದ್ದರಿಂದ ಅವರೇ ನಮ್ಮ ಮುಂದಾಳುಗಳಾಗಿ ಮುನ್ನಡೆಸಬೇಕೆಂದು ರಾಷ್ಟ್ರವು ಈಗ ಅವರನ್ನೇ ಕೇಳಿಕೊಂಡಿದೆ. ವರ್ಕಿಂಗ್ ಕಮಿಟಿಯ ಈ ನಿರ್ಧಾರವು ಮುಂದೆ ಎ. ಐ. ಸಿ. ಸಿ. ಯಲ್ಲಿ ಚರ್ಚೆಯಾಗಲಿರುವುದು.

ಚೀನದ ಬಂಧುಗಳು

ಸಾಮ್ರಾಜ್ಯ ವಿಸ್ತರಣದ ರಾಕ್ಷಸಲಾಲಸೆಯಿಂದ, ಜಪಾನು ಐದುವರ್ಷಗಳ ಹಿಂದೆ, ಎಂದರೆ ೧೯೩೭ನೇಯ ಇಸವಿ ಜುಲೈ ಏಳನೆಯ ದಿನದಂದು ಚೀನದ ಮೇಲೆ ಅನ್ಯಾಯದ ಆಕ್ರಮಣ ಮಾಡಿತು! ದ್ವಿತೀಯ ಮಹಾ ಯುದ್ಧದ ವಿಕರಾಳ ರೂಪವನ್ನು ಜಗತ್ತು ಕಂಡದ್ದು ಜರ್ಮನಿಯು ರಣಕ್ಷೇತ್ರವನ್ನು ಹೊಕ್ಕ ಬಳಿಕವಾದರೂ, ಭೂಗರ್ಭದಲ್ಲಿ ಅಂತಹ ಜ್ವಾಲಾಮುಖಿಗಳು ಕಳೆದ ಕೆಲವು ವರ್ಷಗಳಿಂದತ್ತ ಭುಗಿಲೇಳುತ್ತಲೇ ಇದ್ದುವು. ಇದಕ್ಕೆ ಅಬಿಸೀನಿಯಾ ಯುದ್ಧ, ಸ್ಪೈನ್ ಕಾಳಗ, ಚೀನಾ ಆಕ್ರಮಣ ಮೊದಲಾದುವುಗಳು ಸಾಕ್ಷಿಗಳಾಗಿವೆ. ಹೇಗಿದ್ದರೂ ದುರ್ಬಲ ರಾಷ್ಟ್ರಗಳ ರೆಕ್ಕೆ ಮುರಿದು ತಮ್ಮ ದಿಗ್ವಿಜಯವನ್ನು ಸಾಧಿಸಬೇಕೆಂದು ಮಾಡಿದ ಪ್ರಬಲ ರಾಷ್ಟ್ರಗಳ ಮಹತ್ವಾಕಾಂಕ್ಷೆಗಳಿಗೆ ಅನ್ಯೋನ್ಯ ಘರ್ಷಣೆಯುಂಟಾಗಿ ಇಂದಿನೀ ಮಹಾ ಯುದ್ಧವು ಈ ತರದ ಭೀಕರ ಸ್ವರೂಪವನ್ನು ತಾಳಿತು! ಚೀನಾ ಜಪಾನ್ ಯುದ್ಧವು ಇದರ ಪ್ರಸ್ತಾವನೆಯಾಗಿ ಕಳೆದ ಐದು ವರ್ಷಗಳ ಹಿಂದೆ ಪ್ರಾರಂಭವಾಯಿತು!

ಅನ್ಯಾಯದಿಂದ ಆಕ್ರಮಿಸಿ ಬಂದ ಜಪಾನರನ್ನು ಚೀನೀಯರು ಅನುಪಮ ಸಾಹಸದಿಂದ ಇದಿರಿಸಿ ನಿಂತರು. ತಾವು ಶಸ್ತ್ರಸಾಮಗ್ರಿ ಸಜ್ಜಿತರಲ್ಲದಿದ್ದರೂ, ಸ್ವಾತಂತ್ರ್ಯದ ವೀರಾವೇಶದಿಂದ, ಶತ್ರುವನ್ನು ಗಣಿಸದೆ, ಕಷ್ಟ ನಷ್ಟಗಳನ್ನು ಲೆಕ್ಕಿಸದೆ ಕಳೆದ ಐದು ವರ್ಷಗಳಲ್ಲಿ ಪ್ರಬಲ ವೈರಿಯೆದುರು ಚೀನದ ಬಂಧುಗಳು ಹೂಡಿದ ಧೀರ ಹೋರಾಟವು ಅವರನ್ನು ಜಗತ್ತಿನ ಮಹಾ ವೀರರನ್ನಾಗಿ ಮಾಡಿದೆ! ಕಳೆದ ಐದು ವರ್ಷಗಳಲ್ಲಿ ಜಪಾನು ನಿರ್ದಯ ನೀತಿಗಳನ್ನೆಲ್ಲಾ ಅನುಸರಿಸಿತು. ಅನೇಕ ಪಶುಕೃತ್ಯಗಳನ್ನೆಸಗಿ ದಬ್ಬಾಳಿಕೆ ನಡೆಸಿತು; ಆದರೆ ಮಾರ್ಶಲ್ ಚಿಯಾಂಗ್ ಕೈಶೇಕರರಂಥಾ ಅಪ್ರತಿಮ ದೇಶಾಭಿಮಾನಿಯ ಧುರೀಣತ್ವದಲ್ಲಿ ಚೀನಿಯರು ಅವುಗಳೆಲ್ಲವನ್ನೂ ವೀರರಾಗಿ ಎದುರಿಸಿ, ಕಾದಾಡಿದರು!

ಜಪಾನು ೧೯೩೧ರಂದು ಮಂಚೂರಿಯವನ್ನು ಆಕ್ರಮಿಸುತ್ತಿದ್ದಾಗಲೇ ಜಗತ್ತಿನ ಶಾಂತಿ ನೀತಿಯನ್ನು ವಿರೋಧಿ ನಡೆದಿತ್ತು! ಆದರೂ ಆಗ ಇತರ ರಾಷ್ಟ್ರಗಳು ಆ ಕಡೆಗೆ ಕಣ್ಣು ಮುಚ್ಚಿ ಕುಳಿತವು. ಮುಂದೆ ೧೯೩೭ರಂದು ಮಾರ್ಕೋ ಪೋಲೋ ಬ್ರಿಜ್ಜ್ ಎಂಬಲ್ಲಿ ಓರ್ವ ಜರ್ಮನಿಯನ ಕೊಲೆಯಾಗಲು ಅದೇ ನೆವನದಿಂದ ಜಪಾನು ಚೀನದ ಮೇಲೆ ಆಕ್ರಮಣ ಆರಂಭಿಸಿ ಬಿಟ್ಟಿತು. ಚೀನಿಯರಾದರೂ ಜಪಾನಿನ ನಿರ್ದಯ ನೀತಿಯನ್ನು, ದುಷ್ಟ ದಬ್ಬಾಳಿಕೆಯನ್ನು ಇನ್ನೂ ಬಹುಕಾಲ ಸಹಿಸುತ್ತಿರುವುದು ಸಾಧ್ಯವಿಲ್ಲವೆಂದು ಧೀರರಂತೆ ಎದುರಿಸಲು ಸನ್ನದ್ಧರಾದರು. ಕಳೆದ ಐದು ವರ್ಷಗಳಿಂದಲೂ ಜಪಾನಿನ ಹೊಡೆತವನ್ನು ತಿನ್ನುತ್ತಿದ್ದರೂ ತಮ್ಮ ತಾಯ್ನೆಲವನ್ನು ಪರಕೀಯರಿಗೆ ಬಿಟ್ಟುಕೊಡಲಾರೆವೆಂಬ ದೃಢ ಪ್ರತಿಜ್ಞೆಯಿಂದ ಅವರು ಹೋರಾಡಿದರು!

ಇಂದಿನೀ ಯುದ್ಧದಲ್ಲಿ ಚೀನಿಯರು ಹೀಗೆ ಕಷ್ಟನಷ್ಟಗಳನ್ನನುಭವಿಸಿದ್ದರೂ, ತುಂಬಾ ಅನುಭವವನ್ನು ಪಡೆದಿದ್ದಾರೆ; ಶತ್ರುಗಳಲ್ಲಿ ಲಕ್ಷಾಂತರ ಮಂದಿಯನ್ನು ನಿರ್ನಾಮ ಮಾಡಿದ್ದಾರೆ. ಗೋರಿಲ್ಲಾ ಯುದ್ಧದಲ್ಲಿ ನಿಪುಣರಾಗಿ ವೈರಿ ಭಯಂಕರರಾಗಿದ್ದಾರೆ. ದೇಶಸೇವೆಗಾಗಿ ಕಷ್ಟ ಸಹಿಸಲು ಬೇಕಾದಷ್ಟು ಹುರುಪುಗೊಂಡಿದ್ದಾರೆ. ಸಾಕಾದಷ್ಟು ಬಲಿದಾನ ಮಾಡಿದ್ದಾರೆ. ಲೋಕದ ನವನಿರ್ಮಾಣದ ಕಾಲದಲ್ಲಿ ತಮ್ಮದಿಷ್ಟು ಅಳಿಲ ಸೇವೆಯೆಂದು ಸಾಮ್ರಾಜ್ಯಶಾಹೀ ಶಕ್ತಿಯನ್ನು ಮುರಿಯಲು ಸೊಂಟಕಟ್ಟಿ ನಿಂತಿದ್ದಾರೆ. ಚೀನದ ಬಂಧುಗಳ ಈ ಸ್ವಾತಂತ್ರ್ಯದ ಯುದ್ಧದಲ್ಲಿ ಭಾರತೀಯರಾದ ನಾವೂ ಸಂಪೂರ್ಣ ಸಹಾನುಭೂತಿಯುಳ್ಳವರಾಗಿರುವೆವು. ಚೀನ ಭಾರತದಂತಹ ಉಜ್ವಲ ಇತಿಹಾಸ ಸಂಸ್ಕೃತಿ ಪರಂಪರೆಗಳುಳ್ಳ ದೇಶಗಳಿಗೆ ಮುಂದಿನ ಜಗತ್ತಿನ ನವನಿರ್ಮಾಣದಲ್ಲಿ ಉನ್ನತ ಸ್ಥಾನವಿದೆಯೆಂಬುದನ್ನು ಯಾರೂ ಅಲ್ಲಗಳೆಯಲಾರರು. ಚೀನದ ಬಂಧುಗಳ ಇಂದಿನೀ ಸಾಹಸದ ಹೋರಾಟವು ವಿಜಯಪ್ರದವಾಗಲಿ ಎಂಬುದು ನಮ್ಮ ನಿತ್ಯದ ಹಾರೈಕೆಯಾಗಿದೆ.

ನೋಟಗಳು ...

ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ರಾಜಾಜಿಯ ಮೇಲೆ 'ಅವಿಶ್ವಾಸ ಠರಾವ'ನ್ನು ಮಂಡಿಸುವ ಸಿದ್ಧತೆ ಮಾಡಿದ್ದರು. ರಾಜಾಜಿ ಆ ಸಭೆ ಸೇರುವ ಮೊದಲೇ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟುಬಿಟ್ಟರು!

卐

ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ರಾಜಾಜಿಯ ಮೇಲೆ ಶಿಸ್ತು ಜಾರಿ ಯಾಕೆ ಮಾಡಬಾರದು ಎಂದು ಪ್ರಶ್ನೆ ಕೇಳಿತು; ರಾಜಾಜಿ ಕಾಂಗ್ರೆಸಿನ ನಾಲ್ಕಾಣೆ ಸದಸ್ಯತ್ವವನ್ನೂ ಬಿಟ್ಟುಬಿಟ್ಟರು!

卐

ಇತರರು ಹೊರ ಹಾಕುವುದಕ್ಕಿಂತ ತಾನಾಗಿಯೇ ಹೊರ ಬರುವುದು ಹತ್ತು ಪಾಲಿಗೂ ಉತ್ತಮ; ಶಿಸ್ತಿಗೂ ಇದರಿಂದ ಬಾಧಕವಿಲ್ಲ!

卐

ಹೀಗೆ ತಾನಾಗಿ ಹೊರ ಬಂದದ್ದರಿಂದ ಬೇಕಾದಾಗ ಕಾಂಗ್ರೆಸನ್ನು ಸೇರಲೂ ಅನುಕೂಲವಾಗುವುದು! ಆದ್ದರಿಂದಲೇ ರಾಜಾಜಿ ಹೇಳುತ್ತಾರೆ. "ನಾನು ಗಾಡಿಯಿಂದಿಳಿದದ್ದು, ಗಾಡಿ ಚಕ್ರಗಳು ಕೆಸರಲ್ಲಿ ಹೂತು ಹೋಗಿರುವುದರಿಂದ ಕೆಸರಿಂದ ಗಾಡಿ ಮೇಲೆ ಬಂದ ನಂತರ ಇದೇ ಗಾಡಿಯಲ್ಲಿ ನಾನು ಸವಾರಿ ಮಾಡುವೆನು" ಎಂದು!

卐

ರಾಜಾಜಿಯವರ ಉಪಮಾ ಪಾಂಡಿತ್ಯಕ್ಕೆ ಯಾರಾದರೂ ತಲೆದೂಗಲೇ ಬೇಕು!

ಹರಿಜನವಾಣಿ

ಬ್ರಿಟಿಷ್ ಪ್ರಭುತ್ವವನ್ನು ಕೊನೆಗೊಳಿಸುವುದು

ಮುಂದಿನ ಆಂದೋಲನದ ಉದ್ದೇಶ!'

ಪಾಕಿಸ್ತಾನ ಪ್ರಿಯರಿಗೂ ಒಂದು ಆಹ್ವಾನ!

— ಗಾಂಧಿಜಿ ವಿವರಿಸುತ್ತಾರೆ —

"ಮುಸಲ್ಮಾನರೊಡನೆ ಒಪ್ಪಂದ ಮಾಡಿಕೊಳ್ಳದೆ ಜನತಾ ಆಂದೋಲನವನ್ನು ಆರಂಭಿಸಲು ನೀವು ಹೇಗೆ ಯೋಚಿಸುತ್ತೀರಿ?" ಎಂದು ಕೆಲವು ಮುಸಲ್ಮಾನ ಮಿತ್ರರು ನನಗೆ ಪತ್ರ ಬರೆದಿರುವರು. ಒಂದು ಕಾಲದಲ್ಲಿ ನಾನೂ ಇವರಂತೆಯೇ ಆಲೋಚಿಸುತ್ತಿದ್ದೆ. ಆದರೆ ಈಗ ನಾನು ಮುಸಲ್ಮಾನರ ಮನಸ್ಸನ್ನು ಒಲಿಸಿಕೊಳ್ಳಲಾರೆನೆಂದು ನನಗೇ ತೋರುತ್ತದೆ. ಮುಸ್ಲಿಂ ಲೀಗು ನನ್ನ ಮಾರ್ಗದಲ್ಲಿ ಅಡ್ಡ ನಿಂತಿದೆ. ಲೀಗಿನ ಪತ್ರಿಕೆಗಳನ್ನೋದಲು ನಾನು ಪ್ರಯತ್ನಿಸಿರುವೆನು. ಲೀಗಿನ ಮನಸ್ಸಿನಲ್ಲೇನಿದೆಯೆಂಬುದು ಅದರಿಂದ ನನಗೆ ತಿಳಿಯುವುದು. ಅವರ ಅಭಿಪ್ರಾಯವೇನಿರುವುದೆಂದರೆ ನಾನು ನಂಬಲು ಅರ್ಹನೇ ಅಲ್ಲವೆಂದು. ಖಿಲಾಫತ್ ಚಳವಳದ ಕಾಲದಲ್ಲಿ ನಾನು ಮಾಡಿದ ಯತ್ನಗಳಲ್ಲಿಯೂ ದುರುದ್ದೇಶವಿದ್ದಿತೆಂದು ಅವರ ಮತ. ಮುಸಲ್ಮಾನರ ಯಾವುದೊಂದು ಕಾರ್ಯಕ್ಕಾಗಲಿ, ಯಾವನೇ ಒಬ್ಬ ಮುಸ್ಲಿಮನಿಗಾಗಲಿ, ಯಾವುದೇ ತರದ ಅಪಾಯ ಮಾಡಿದ್ದು ನನ್ನ ಅನುಭವದಲ್ಲಿಲ್ಲ. ಇಂದಿಗೂ ನನಗೆ ಅನೇಕ ಮುಸ್ಲಿಂ ಗೆಳೆಯರಿರುವುದಕ್ಕಾಗಿ ನಾನು ದೇವರಿಗೆ ಕೃತಜ್ಞನಾಗಿದ್ದೇನೆ."—ಹೀಗೆಂದು ಗಾಂಧಿಜಿ ಈ ಸಲದ ಹರಿಜನದಲ್ಲಿ ಒಂದು ಹೃದಯದ್ರಾವಕ ಲೇಖನ ಬರೆಯುತ್ತಾ, ಹಿಂದೀ ಮುಸ್ಲಿಂ ಸಮಸ್ಯೆಯನ್ನು ವಿಮರ್ಶಿಸಿ ಬ್ರಿಟಿಷ್ ಆಡಳಿತವನ್ನು ಕೊನೆಗೊಳಿಸುವುದೇ ಮುಂದಿನ ಚಳವಳದ ಉದ್ದೇಶವಿರುವುದೆಂದು ಸ್ಪಷ್ಟಪಡಿಸಿರುವರು. ಅವರ ಲೇಖನದ ಮುಂದಿನ ವಿವರಗಳು ಇಂತಿವೆ.

"ಅವರು ನನ್ನ ಮೇಲಿರಿಸಿದ ಆ ಅವಿಶ್ವಾಸದಿಂದ ಹೇಗೆ ವಿಮುಕ್ತನಾಗುವುದೆಂದು ನನಗೆ ತಿಳಿಯದು. 'ಪಾಕಿಸ್ತಾನವನ್ನು ಕೊಡಿರಿ' ಎಂದು ನನ್ನನ್ನು ಟೀಕಿಸುವವರು ಕೇಳುತ್ತಾರೆ. "ನಾನು ಕೊಡುವುದರಿಂದ ಅದು ಸಿಕ್ಕದು" ಎಂಬುದು ನನ್ನ ಉತ್ತರ. ಅವರ ಪಾಕಿಸ್ತಾನದ ಬೇಡಿಕೆ ನ್ಯಾಯವಾದುದೆಂದು ನನಗೆ ತೋರಿದರೆ ಲೀಗಿನ ಸಂಗಡ ಅದಕ್ಕಾಗಿ ನಾನು ಕಾರ್ಯವೆಸಗುವೆನು. ಹಾಗೆ ಯಾರಾದರೂ ನನಗೆ ಅದು ನ್ಯಾಯವೆಂದು ಬೋಧಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದರಲ್ಲಿರುವ ತೊಂದರೆ ಮುಂತಾದವುಗಳನ್ನು ಯಾರೂ ನನಗೆ ಇದುವರೆಗೆ ಹೇಳಿಲ್ಲ. ಪಾಕಿಸ್ತಾನ ವಿರೋಧ ಪತ್ರಿಕೆಗಳಲ್ಲಿ ಪ್ರಸಿದ್ಧವಾಗಿರುವ ಆ ತೊಂದರೆಗಳು ಕಲ್ಪನೆಗೂ ಘಾತುಕವಿರುತ್ತವೆ. ಆದರೆ ವಿರುದ್ಧ ಪಕ್ಷದವರಿಂದ ತೊಂದರೆಗಳನ್ನು ನಾನು ತಿಳಿದುಕೊಳ್ಳಲಾರೆನು. ತಪ್ಪುಗೇನು ಬೇಕು, ಅದರರ್ಥವೇನೆಂಬುದನ್ನು ಅದಕ್ಕಾಗಿ ಮುಂದಾಳುಗಳಾಗಿ ದುಡಿವವರೆ ಹೇಳಬಲ್ಲರು. ಈ ರೀತಿ ವಿವರಣೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ವಿರುದ್ಧ ಪಕ್ಷದವರ ಮನವೊಲಿಸಲು ಲೀಗು ಸ್ನೇಹಿತರಂತೆ ಎಂದಾದರೂ ಯತ್ನಿಸಿದೆಯೊ? ಆ ರೀತಿ ಮತಾಂತರ ಹೊಂದಲು ಕಾಂಗ್ರೆಸು ಒಪ್ಪುತ್ತದೆಯೆಂದು ನನಗೆ ಅನಿಸುತ್ತದೆ. ನನ್ನ ವಿಷಯವಂತೂ ಖಂಡಿತವಾಗಿ ಹಾಗೆಯೇ ಇದೆ.

'ಆದರೆ ಈ ಸಂಧಿಕಾಲದಲ್ಲಿ ನಾನೇನು ಮಾಡಬೇಕು? ಬ್ರಿಟಿಷರ ದಾಸ್ಯದಿಂದ ಮುಕ್ತವಾಗಬೇಕಾದರೆ ಈ ಯುದ್ಧ ಕಾಲದಲ್ಲಿ ಹಿಂದುಸ್ತಾನವು ಪರಿಣಾಮಕಾರಕ ಕಾರ್ಯ ಕೈಕೊಳ್ಳಬೇಕಾಗಿದೆ. ಕಳೆದ ಮುನ್ನೂರು ವರ್ಷಗಳಿಂದ ಸ್ವೇಚ್ಛಾವಿಹಾರ ಮಾಡಿದ ಈ ಹಿಂದುಸ್ತಾನವನ್ನು ಬಿಟ್ಟುಕೊಡಲು ಬ್ರಿಟಿಷರು ಸಿದ್ಧರಿಲ್ಲವೆಂಬ ಮಾತೊಂದನ್ನು ಬಿಟ್ಟರೆ, ಇದಕ್ಕೆ ಬೇರಾವುದೇ ಆತಂಕವಿಲ್ಲವೆಂದೂ ನನಗೆ ತೋರುತ್ತದೆ. ಬ್ರಿಟನು ಹಿಂದುಸ್ತಾನವನ್ನು ಬಿಟ್ಟರೆ ಅದು ಯುದ್ಧವನ್ನೂ ಬಿಟ್ಟುಕೊಡಬೇಕಾಗಿದೆಯೆಂದು ಸಾಮ್ರಾಜ್ಯವಾದಿಯು ಹೇಳುವನು. ಹೀಗಿದ್ದರೆ ಇಷ್ಟೆಲ್ಲಾ ಯುದ್ಧವೇಕೆ? ಬ್ರಿಟನ್ ಮತ್ತು ಜರ್ಮನಿ ಮೂಲಯೋಧರು. ಈ ಉಭಯ ರಾಷ್ಟ್ರಗಳಿಗೂ ಹಿಂದುಸ್ತಾನವೇ ಸ್ಪರ್ಧೆಯ ಗುಪ್ತ ವಿಷಯವಾಗಿತ್ತೊ? ಇದೆಲ್ಲ ಕೇವಲ ತರ್ಕ. ಇನ್ನು ಮುಂದೆ ಹಿಂದುಸ್ತಾನವನ್ನು ತಮ್ಮ ಸೊತ್ತಾಗಿ ವಹಿಸಿಕೊಳ್ಳುವುದಿಲ್ಲವೆಂದು ಬ್ರಿಟಿಷರು ಮನವರಿಕೆ ಮಾಡಿಕೊಟ್ಟರೆ, ನಮ್ಮಲ್ಲಿ ಕೆಲವರಿಗೆ ಅದು ಆಗದಿದ್ದರೂ ಬಹುಮಂದಿ ಅದರಿಂದ ಬೇಕಾದಂಥ ಸ್ವಾರ್ಥತ್ಯಾಗ ಮಾಡಲು ಸಿದ್ಧರಾಗುವರೆಂದು ನನಗೆ ನಂಬಿಕೆಯಿದೆ. ಸೈನಿಕರಿಗೆ ಹಿಂಸೆಯಲ್ಲಿ ವಿಶ್ವಾಸವಿಲ್ಲದಿರಲಿ, ಬಿಡಲಿ, ಅವರು ತಮ್ಮ ಉದ್ದೇಶಕ್ಕನುಸಾರವಾಗಿ ಕೆಲಸ ಮಾಡಬೇಕಾದಂತೆ, ಭಾರತೀಯರ ವಿಶ್ವಾಸವು ಅಹಿಂಸೆಯಲ್ಲಿರಲಿ ಬಿಡಲಿ ಅವರು ಅಹಿಂಸಾತ್ಮಕವಾಗಿಯೇ ಕೆಲಸಮಾಡಬೇಕಾಗುವುದು. ಇದೀ ಹಿಂದುಸ್ತಾನದ ಹಿತದ ದೃಷ್ಟಿಯಿಂದ ಈ ಹೋರಾಟವಾಗಿದೆ. ತೀರ ದರಿದ್ರರಿಗಿಂತ ಹೆಚ್ಚಿನದೇನೂ ಈ ಯೋಧರಿಗೆ ಸಿಗದು. ಅಧಿಕಾರಲಾಲಸೆಗಾಗಿ ಅವರು ಹೋರಾಡುವುದಿಲ್ಲ. ಎಷ್ಟೇ ಹಾನಿಯಾದರೂ ಚಿಂತೆಯಿಲ್ಲ. ಪರಕೀಯರ ಪ್ರಭುತ್ವವನ್ನು ಕೊನೆಗೊಳಿಸಬೇಕೆಂದು ಅವರು ಹೋರಾಡುವರು.

'ಇಂಥ ಪರಿಸ್ಥಿತಿ ಬಂದರೆ ಮುಂದೇನಾಗುವುದೆಂಬುದು, ಬ್ರಿಟಿಷ್ ಪ್ರಭುತ್ವವು ನಿವೃತ್ತವಾದ ಬಳಿಕ ನಾವು ಯಾವ ರೀತಿ ಕೆಲಸಮಾಡುವೆವೆಂಬುವನ್ನು ಅವಲಂಬಿಸಿದೆ. ನಾವು ನಮ್ಮ ನಮ್ಮೊಳಗೆ ಬಡಿದಾಡಬಹುದು. ಇಲ್ಲವೇ, ನಾವು ಎಲ್ಲವನ್ನೂ ಸರಿಪಡಿಸಿಕೊಂಡು ವ್ಯವಸ್ಥಿತ ರೀತಿಯಿಂದ ಜನತೆಯ ಪರವಾಗಿ ಆಡಳಿತೆ ನಡೆಸಬಹುದು. ಪ್ರಜಾಪ್ರಭುತ್ವ ಪದ್ಧತಿ ಜಾರಿಗೆ ಬರಬಹುದು. ಇಲ್ಲವೇ ಶುದ್ಧ ಸರ್ವಾಧಿಕಾರಿತ್ವ ಜಾರಿಗೆ ಬರಲೂ ಬಹುದು. ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳುವ ಕಲ್ಪನೆ ಇದರಲ್ಲಿಲ್ಲ. ಮುಖ್ಯ ಮುಖ್ಯ ಪಕ್ಷಗಳ ಒಡಂಬಡಿಕೆಯಾದಾಗಲೇ ಅದು ಸಾಧ್ಯವಾಗಬಹುದು. ಆದರೆ ನನಗೆ ತಿಳಿದಮಟ್ಟಿಗೆ ಅದೀಗ ಸಾಧ್ಯವಿಲ್ಲ. ಆದ್ದರಿಂದ ಬ್ರಿಟಿಷ್ ಸರಕಾರದೊಡನೆ ಒಪ್ಪಂದ ಮಾಡಿಕೊಳ್ಳುವ ಒಂದೇ ಒಂದು ಮಾರ್ಗವೆಂದರೆ ಅವರ ಆಳ್ವಿಕೆಯು ಕೊನೆಗೊಳ್ಳುವುದು. ಹಿಂದುಸ್ತಾನವನ್ನು ಅದರ ಪಾಡಿಗೆ ಬಿಟ್ಟುಬಿಡುವುದು. ಹೀಗೆ ಬ್ರಿಟಿಷರು ಹೋಗುವವರೆಗೆ ಬ್ರಿಟಿಷರ ಇಲ್ಲವೇ ಯಾವ ಸರಕಾರವೂ ಇಲ್ಲಿ ಉಳಿಯುವುದಿಲ್ಲ. ಸೈನಿಕ ದೃಷ್ಟಿಯಿಂದ ಪ್ರಬಲ ಶಕ್ತಿ ಸಂಪನ್ನ ಪಕ್ಷವು ಆಳ್ವಿಕೆಯನ್ನು ಆರಂಭಿಸಬಹುದು. ಮುಸಲ್ಮಾನರು ಪಾಕಿಸ್ತಾನವನ್ನು ಸಾರಬಹುದು. ಆಗ ಯಾರೂ ಅವರಿಗೆ ಅಡ್ಡ ಬರಲಾರರು. ಹಿಂದುಗಳೂ ಹಾಗೆಯೇ ಮಾಡಬಹುದು. ಸಿಕ್ಖರೂ ತಾವು ವ್ಯಾಪಿಸಿರುವಲ್ಲಿ ತಮ್ಮ ಆಡಳಿತವನ್ನು ಆರಂಭಿಸಬಹುದು. ಮುಂದಾಗಬಹುದಾದ ಘಟನೆಗಳಿಗೆ ಕೊನೆಮೊದಲಿರಲಿಕ್ಕಿಲ್ಲ. ಇವೆಲ್ಲ ಕೇವಲ ನಿರುದ್ಯೋಗಿಯ ತರ್ಕದಂತಿದೆ. ಕಾಂಗ್ರೆಸ್ ಮತ್ತು ಲೀಗುಗಳು ದೇಶದಲ್ಲಿ ಒಳ್ಳೆಯ ಸಂಘಟಿತ ಪಕ್ಷಗಳಾಗಿರುವುದರಿಂದ ಅವು ಒಪ್ಪಂದ ಮಾಡಿಕೊಳ್ಳಬಹುದು. ಎಲ್ಲರಿಗೂ ಮಾನ್ಯವಾಗುವಂಥಾ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಬಹುದು. ಅನಂತರ ಯೋಗ್ಯ ರೀತಿಯಿಂದ ಆರಿಸಲ್ಪಟ್ಟ ಜನತಾ ಸರಕಾರ ಸ್ಥಾಪಿತವಾಗಬಹುದು.

'ಬ್ರಿಟಿಷರ ಅಧಿಕಾರವು ಕೊನೆಗೊಳ್ಳಬೇಕೆಂಬ ಒಂದೇ ಒಂದು ಉದ್ದೇಶವು ಈ ಚಳವಳದಾಗಿದೆ. ಆ ಸುಖದಾಯಕ ಸಂಗತಿಯು ಸಫಲವಾದರೆ ಅದರ ನಂತರ ಒಂದು ಶಾಶ್ವತ ಸರಕಾರ ಸ್ಥಾಪಿತವಾದರೆ ಯುದ್ಧದ ಇತ್ಯರ್ಥವನ್ನು ಅದು ಖಂಡಿತವಾಗಿ ಮಾಡಬಹುದು. ಇದೂ ಅಹಿಂಸಾತ್ಮಕವಾಗಿಯೇ ಆಗಬಹುದೆಂದು ನಾನು ಆಶಿಸುತ್ತೇನೆ. ಈ ಯುದ್ಧದಲ್ಲಾದರೂ ಹಿಂದುಸ್ತಾನವು ಅಹಿಂಸೆಯನ್ನು ಬಿಟ್ಟು ಬೇರೆ ಶಕ್ತಿ ಪ್ರದರ್ಶಿಸಲಾರದು. ಪಾಕಿಸ್ತಾನದಲ್ಲಿ ವಿಶ್ವಾಸವಿದ್ದರೂ ಹಿಂದುಸ್ತಾನವು ಸ್ವತಂತ್ರವಾಗಬೇಕೆಂದು ಬಯಸುವ ಮುಸಲ್ಮಾನರು ಈ ಚಳವಳದಲ್ಲಿ ಏಕೆ ಸೇರಬಾರದು? ಆದರೆ, ಅದರ ಬದಲು, ಬ್ರಿಟಿಷರ ಸಹಾಯದಿಂದ ಮತ್ತು ಬ್ರಿಟಿಷರ ಅಧಿಕಾರದಿಂದಲೇ ಪಾಕಿಸ್ತಾನ ಸಿಗುವುದೆಂಬ ಭಾವನೆಯಿದ್ದರೆ ಆ ಮಾತೇ ಬೇರೆ; ನನಗೆ ಅದರಲ್ಲಿ ಸ್ಥಾನವಿಲ್ಲ.'

ಬಡವರಿಗಾಗಿ ಕಡಿಮೆ ಕ್ರಯದ ಅಂಗಡಿ ತೆರೆಯಬೇಕು

ಸಾಹುಕಾರರಿಗೆ ಮಹಾತ್ಮರ ಸೂಚನೆ

ಇಲ್ಲದಿದ್ದರೆ ದೇಶದಲ್ಲಿ ಊಟದ ದಂಗೆ ಏಳಬಹುದು

'ಧಾನ್ಯದ ವ್ಯಾಪಾರಿಗಳ ಒಗ್ಗಟ್ಟಿನ ಆಕ್ಷೇಪ ಮಾಡಿದ ಕೆಲವು ಕಳವಳಜನಕ ಪತ್ರಗಳು ಅನೇಕ ಬಡಜನರಿಂದ ನನಗೆ ಬಂದಿವೆ. ಸರಕಾರದವರು ನಿರ್ಣಯಿಸಿದ್ದಕ್ಕಿಂತ ಬಹಳ ಹೆಚ್ಚಿನ ಬೆಲೆಯನ್ನು ಮತ್ತು ನಮಗೆ ಅಸಾಧ್ಯವಾದ ಬೆಲೆಯನ್ನು ಕೊಡದಿದ್ದರೆ ಅವರು ನಮಗೆ ಧಾನ್ಯಗಳನ್ನು ಕೊಡದಿರುವಾಗ ಅವರ ಸೇವೆಯನ್ನು ನಾವೇಕೆ ಮಾಡಬೇಕೆಂಬುದು ಆ ಎಲ್ಲಾ ಪತ್ರಗಳ ಸಾರ. "ಈ ಪರಿಸ್ಥಿತಿಯಲ್ಲಿ ಉಪವಾಸ ಸಾಯಬೇಕು ಇಲ್ಲವೆ ಊಟಕ್ಕೆ ಪ್ರವೃತ್ತರಾಗಬೇಕು. ಬೇರೆ ಯಾವ ಮಾರ್ಗ ನಮಗಿದೆ" ಎಂದು ಅವರು ಕೇಳುತ್ತಾರೆ.

'ಈ ಆಕ್ಷೇಪಗಳು ನ್ಯಾಯ ಮತ್ತು ಸರ್ವವ್ಯಾಪಕವಾಗಿವೆ. ಈ ಬಗೆಯ ಪರಿಸ್ಥಿತಿಗೆ ಸರಕಾರನೇ ಹೆಚ್ಚು ಹೊಣೆಗಾರರೆಂಬಲ್ಲಿ ಸಂದೇಹವಿಲ್ಲ. ಅವರು ಧಾನ್ಯವನ್ನೆಲ್ಲ ಹೊರಗೆ ಕಳಿಸಿದವರು. ಮತ್ತು ದೇಶದಲ್ಲಿ ಈಗ ಉಳಿದ ಧಾನ್ಯವನ್ನು ಬೇಗ ವ್ಯವಸ್ಥೆ ಮಾಡಬೇಕೆಂಬುದು ಅವರಿಗೆ ತಿಳಿಯದಂತಾಗಿದೆ. ದರಗಳನ್ನು ನಿರ್ದಿಷ್ಟಗೊಳಿಸಬೇಕು ಮತ್ತು ಧಾನ್ಯದ ಅಂಗಡಿಗಳನ್ನು ತೆರೆಯಬೇಕು. ಪೋಸ್ಟ್ ಆಫೀಸುಗಳಿಗೆ ಹೋಗಿ ಜನರು ಟಿಕೇಟುಗಳನ್ನು ಕೊಳ್ಳುವಂತೆ ಈ ಅಂಗಡಿಗಳಿಗೆ ಹೋಗಿ ಧಾನ್ಯವನ್ನು ಕೊಳ್ಳುವಂತಾಗಬೇಕು. ಆದರೆ ಸರಕಾರದವರು ಬುದ್ಧಿಯನ್ನು ಕಳಕೊಂಡ ಮೇಲೆ ಜನರು ಉಪವಾಸ ಸಾಯಲಾಗದು. ಆದುದರಿಂದ ವ್ಯಾಪಾರಸ್ಥರು ಇವನ್ನೆಲ್ಲ ತಮ್ಮಷ್ಟಕ್ಕೆ ವಹಿಸಿಕೊಂಡು, ಬಡವರಿಗೆ ಯೋಗ್ಯ ದರಗಳಿಂದ ಧಾನ್ಯ ಪೂರೈಸುವುದು ಅವರ ಕರ್ತವ್ಯವಾಗಿದೆ. ಇಂದು ಯಾವುದೆ ಘಾತಕಮಯ ಪ್ರಯತ್ನದಲ್ಲಿ ಸರಕಾರದವರು ಆಸ್ಪದ ಮಾಡಲಾರರು, ತಾವೇ ಆವಶ್ಯವಾಗಿ ಮಾಡತಕ್ಕ ಕಾರ್ಯವನ್ನು ವ್ಯಾಪಾರಸ್ಥರು ಮಾಡಹತ್ತಿದರೆ, ಸರಕಾರದವರಿಗೆ ಸಹಜವಾಗಿಯೇ ಸಹಾಯ ಮಾಡುವಂತಾಗುವದು. ಇದು ಸಾಧ್ಯವಾಗಬೇಕಾದರೆ ಹಿಂದುಸ್ತಾನದಲ್ಲೆಲ್ಲ ವ್ಯಾಪಾರಸ್ಥರು ಸ್ವಯಂ ಪ್ರೇರಣೆಯಿಂದ ಸಹಕಾರ ಮಾಡಬೇಕಾಗುವದು. ಆದರೆ ಪ್ರಾಂತಗಳಲ್ಲಿ ಅಷ್ಟೇ ಏಕೆ ಜಿಲ್ಲೆಗಳಲ್ಲಿ ಕೂಡ ಈ ಕಾರ್ಯವು ಮೊದಲು ಪ್ರಾರಂಭಿಸಲ್ಪಡಬೇಕು. ಇದಕ್ಕೆ ತಡವಾದ್ದರಿಂದ ಪ್ರಯೋಜನವಿಲ್ಲ. ಹಸಿವು ಯಾವ ಕಾಯಿದೆಯನ್ನೂ ನೋಡದು. ಮತ್ತು ಸಕಾಲದಲ್ಲಿ ಕಲ್ಯಾಣಕರವಾದ ಉಪಾಯಗಳನ್ನು ದೇಶದಲ್ಲೆಲ್ಲ ಯೋಜಿಸದಿದ್ದರೆ ಎಲ್ಲೆಡೆಯಲ್ಲಿಯೂ ಹೊಟ್ಟೆಗಾಗಿ ಇಲ್ಲವೆ ಧಾನ್ಯಕ್ಕಾಗಿ ದೊಂಬಿಗಳೇಳುವದು ನಿಶ್ಚಿತವಾದುದು." ಎಂದು ಗಾಂಧಿಜಿಯವರು ಈ ಸಲದ ಹರಿಜನದಲ್ಲಿ ಹೇಳಿರುವರು.

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ ಕೆ ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ	..	ಬೆಲೆ 0—2—6
VI ತರಗತಿ ಅಥವಾ I ಫಾರ್ಮಿಗೆ	"	0—3—0
VII ತರಗತಿ ಅಥವಾ II ಫಾರ್ಮಿಗೆ	...	" 0—3—6
VIII ತರಗತಿ ಅಥವಾ III ಫಾರ್ಮಿಗೆ		" 0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled.— *"HINDU" MADRAS.*

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ 2, 3 ಮತ್ತು 4ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ 4 ಮತ್ತು 5ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ

ಕೆಲವು ಅಭಿಪ್ರಾಯಗಳು

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ

'ಶ್ರೀ. ರೈಗಳು ಆಯಾ ತರಗತಿಯ ಮಕ್ಕಳಿಗೆಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ, ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ ಮಂಗಳೂರು.

ಬರ್ಮಾದಿಂದ ಬರುವಾಗ ಅನ್ನವಿಲ್ಲದೆ ಸತ್ತರು!

ಬರ್ಮಾ ನಿರಾಶ್ರಿತರು ಉಪವಾಸ ದಿಂದ ಸತ್ತರು!

ಆಣೆಯವರಿಗೆ ನಿದ್ರೆ ಬಂದಿತ್ತೆ?

ಬರ್ಮಾದಿಂದ ದೇಶಬಿಟ್ಟು ಹಿಂದೂದೇಶಕ್ಕೆ ಬರುವಾಗ ಗಾಡಿಯಲ್ಲಿ ಮದ್ರಾಸಿನ ಒಬ್ಬ ಗಂಡುಸು ಮತ್ತಿಬ್ಬರು ಹುಡುಗರು ಆಹಾರ ನೀರಿಲ್ಲದೆ ಸತ್ತರು! ಹಿಂದುಸ್ತಾನ ಸರಕಾರದಂಥಾ ಬಲಾಢ್ಯ ಸರಕಾರವಿದ್ದು, ಶ್ರೀ. ಆಣೆಯವರಂಥ ದೇಶಭಕ್ತ ಅಧಿಕಾರಿಗಳಿದ್ದು ಹೀಗೆ ಅವರು ಅನ್ನ ನೀರಿಲ್ಲದೆ ಸಾಯಬೇಕಾಯಿತಲ್ಲಾ ಎಂದು ಸೋಶಿಯಲ್ ವೆಲ್‌ಫೇರ್ ಪತ್ರಿಕೆ ಬರೆದಿದೆ.

ಕಾಮನ್ಸ್ ಸಭೆಯಲ್ಲಿ ಅಮೆರಿ

ಮಾತನಾಡುತ್ತಾ ಬರ್ಮಾದ ವಿದ್ಯಮಾನಗಳ ಕುರಿತು ಅಲ್ಲಿನ ಗವರ್ನರರು ಮಾಡಿದ ವರದಿಯನ್ನು ಪ್ರಕಟಿಸುವುದಿಲ್ಲವೆಂದರು. ವಿಜಯಪ್ರಾಪ್ತಿಯಾಗುವವರೆಗೆ ಹಿಂದುಸ್ತಾನದಿಂದ ಪರಕೀಯ ಸೈನ್ಯ ಹಿಂತೆಗೆಯಲಾಗುವುದಿಲ್ಲವೆಂದು ಹೇಳಿದರು.

ತಮಿಳುನಾಡು ಕಾಂಗ್ರೆಸ್ ಕಮಿಟಿ ಮತ್ತು ರಾಜಾಜಿ

ತಮಿಳುನಾಡು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ರಾಜಾಜಿಯವರಿಗೆ ಒಂದು ಪತ್ರ ಬರೆದು, ಅವರು ಮಾಡುತ್ತಿರುವ ಪ್ರಚಾರವು ಕಾಂಗ್ರೆಸ್ ನಿರ್ಣಯಕ್ಕೆ ವಿರುದ್ಧವಿರುವುದರಿಂದ ಅವರ ಮೇಲೆ ಶಿಸ್ತು ಜಾರಿ ಮಾಡಬಾರದೇಕೆ ಎಂದು ಕೇಳಿದ್ದರು. ಅದಕ್ಕೆ ಉತ್ತರವಾಗಿ ರಾಜಾಜಿಯವರು, ಕಾಂಗ್ರೆಸಿನಲ್ಲಿ ಸ್ವಮತ ಪ್ರಕಟಣೆಗೆ ಅವಕಾಶವಿರಬೇಕೆಂದೂ, ತಾನು ಶಿಸ್ತಿಗೆ ಅನುಗುಣವಾಗಿ ಕಾಂಗ್ರೆಸಿನ ನಾಲ್ಕಾಣೆ ಸದಸ್ಯತ್ವಕ್ಕೂ ರಾಜಿನಾಮೆಯಿತ್ತಿರುವುದಾಗಿಯೂ ತಿಳಿಸಿದ್ದಾರೆ. ಅವರು ಮದ್ರಾಸ್ ಶಾಸನ ಸಭೆಯ ಸದಸ್ಯತ್ವಕ್ಕೂ ರಾಜಿಯಿತ್ತಿರುವರು. ರಾಜಾಜಿ ತಾನು ಹಿಡಿದ ತತ್ವದ ಸಲುವಾಗಿ ಹೀಗೆ ತನ್ನ ಪ್ರಿಯ ಸಂಸ್ಥೆಯಾದ ಕಾಂಗ್ರೆಸನ್ನೂ ಬಿಡಬೇಕಾಗಿ ಬಂತು.

ಟರ್ಕಿಯ ಹೊಸ ಪ್ರಧಾನರಾಗಿ

ಡಾ। ಸೇಡಮರು ನಿಧನಹೊಂದಿದ್ದರಿಂದ, ಅವರ ಸ್ಥಳದಲ್ಲಿ ಎಂ. ಸಾರೊಜೊಗ್ಲೊ ಇವರು ನೇಮಕಹೊಂದಿದ್ದಾರೆ.

ಒರಿಸಾ ಮಾಜಿ ಪ್ರಧಾನರ ಬಂಧನದ ವಿಷಯ ಅಮೆರಿ

ಯವರು ಮಾತನಾಡುತ್ತಾ, ಶಿಸ್ತು ಮತ್ತು ನ್ಯಾಯಪಾಲಿಸುವ ಜವಾಬ್ದಾರಿಯಿಂದ ಪ್ರಾಂತಿಕ ಸರಕಾರದವರು ಹಾಗೆ ಮಾಡಬೇಕಾಗಿದೆಯೆಂದು ಒರಿಸಾದ ಮಾಜಿ ಪ್ರಧಾನ ವಿಶ್ವನಾಥದಾಸರ ಬಂಧನದ ಕುರಿತು ಪಾರ್ಲಿಮೆಂಟಿನಲ್ಲಿ ಹೇಳಿದರು.

ಚೀನದಲ್ಲಿ ಜಪಾನರ ರಭಸ

ಕರಾವಳಿ ಪ್ರದೇಶಗಳನ್ನು ಆಕ್ರಮಿಸು

ಆಣೆಯವರು ನಿದ್ದೆ ಮಾಡುತ್ತಿದ್ದರೆ?

ಕಾಮನ್ಸ್ ಸಭೆಯಲ್ಲಿ ಅಮೆರಿ ರಾಗ

ವ ಸಲುವಾಗಿ ಜಪಾನರು ಬಹಳ ಸಾಹಸಮಾಡುತ್ತಿದ್ದಾರೆ. ಚೇಕಿಯಾಂಗ್ ಮತ್ತು ಫೆಕಿಯಾನ್ ಪ್ರಾಂತಗಳನ್ನು ಆಕ್ರಮಿಸಬೇಕೆಂದೂ ಅಲ್ಲಿನ ರೈಲ್ವೆಗಳನ್ನು ವಶಪಡಿಸಬೇಕೆಂದೂ ಅವರ ಯತ್ನವಾಗಿದೆ! ಮಿನ್ ನದಿಯ ಮುಖದಲ್ಲಿರುವ ಫೆಟೋನ ಎಂಬ ನಡುಗುಡ್ಡೆಯನ್ನು ಜಪಾನಿಯರು ಆಕ್ರಮಿಸಿದರು. ಫುಚಾ ಮೇಲೆ ಧಾಳಿಯಿಡಲು ಜಪಾನರಿಗೆ ಈ ನಡುಗುಡ್ಡೆಯು ಬೇಕಾಗಿರುವುದು. ಚೆಕಿಯಾಂಗ್ ವೆಂಚಾ ಬಂದರಗಳನ್ನು ಉಳಿಸಲು ಚೀನೀಯರು ಹೋರಾಡುತ್ತಿರುವರು. ಶಿಂಗಟೀನ್ ಪತನವಾಯಿತೆಂದು ಜಪಾನಿಯರು ಹೇಳುತ್ತಿದ್ದಾರೆ. ಕಿಯಾಂಗ್ಸಿ—ಚೆಕಿಯಾಂಗ್—ಕಿಯಾಂಗ್ಸಿ ರೈಲ್ವೆ ದಕ್ಷಿಣಕ್ಕೆ ಕಾಳಗ ನಡೆಯುತ್ತಿದೆ. ಶತ್ರುಸೈನ್ಯವನ್ನು ನಾನ್‌ಚಂಗದ ಕಡೆಗೆ ದೂಡಲಾಗಿದೆ. ಚಹಾರ ಭಾಗದಲ್ಲಿ ಜಪಾನರು ಕೆಲ ಸಮಯದವರೆ ಸುಮ್ಮಗಿದ್ದರು.

ನಿರಾಶ್ರಿತ ಹಣ ಸುಲಿದು ನೋಟು ಸುಟ್ಟರು!

ಬರ್ಮಾದಿಂದ ಹಿಂದೂದೇಶಕ್ಕೆ ಬರುತಿದ್ದ ನಿರಾಶ್ರಿತರ ಕೈಯಲ್ಲಿದ್ದ ಕರೆನ್ಸಿನೋಟುಗಳನ್ನು ಸರಕಾರೀ ಅಧಿಕಾರಿಗಳು ಜಪ್ತಿಮಾಡಿ ಸುಟ್ಟುಬಿಟ್ಟರಂತೆ. ನಾಣ್ಯಗಳನ್ನು ಎಳೆದು ತೆಗೆದರಂತೆ. ಆ ನೋಟುಗಳು ಬರ್ಮಾದವಾದರೂ ಹಿಂದುಸ್ತಾನದ ರಿಜರ್ವ್ ಬೇಂಕಿನದಾಗಿದ್ದುದರಿಂದ ಅವಕ್ಕೆ ಬೆಲೆಯಿದ್ದರೂ ಹೀಗೇಕೆ ಮಾಡಲಾಯಿತೋ ತಿಳಿಯುವುದಿಲ್ಲ: ಹೀಗೆ ಜನರನ್ನು ದರಿದ್ರರನ್ನಾಗಿ ಮಾಡುವ ಯತ್ನದಿಂದ ಸರಕಾರಕ್ಕೆ ಸಿಕ್ಕುವ ಲಾಭವೇನೆಂದು ಗೊತ್ತಾಗುವುದಿಲ್ಲ.

ರಶ್ಯನರು ರಜೆವದಿಂದ ಹಿಂದೆ ಸರಿದರು

ರಶ್ಯದ ಮಧ್ಯ ರಣಭೂಮಿಯಲ್ಲಿ ಮಾಸ್ಕೋದಿಂದ ಪಶ್ಚಿಮಕ್ಕೆ ೧೨೦ ಮೈಲು ದೂರದಲ್ಲಿರುವ ರಜೆವದಿಂದ ರಶ್ಯನರು ಹಿಂದೆ ಸರಿದರೆಂದು ಒಂದು ವಿಶೇಷ ಪ್ರಕಟಣೆ ಸಾರುತ್ತಿದೆ. ಬೇರೆ ಬೇರೆ ಮೂರು ಮಾರ್ಗಗಳಲ್ಲಿ ಧಾಳಿಮಾಡಲು ಜರ್ಮನರು ಯೋಚಿಸುತ್ತಿದ್ದಾರೆ. ಮೊದಲನೆಯ ಸೈನ್ಯವು ಒರೆನೆಜ್ ಮತ್ತು ಡಾನ್ ನದಿಯ ಮಧ್ಯದಲ್ಲಿರುವ ಪ್ರದೇಶವನು ವ್ಯಾಪಿಸಿರುವುದು. ಇಲ್ಲಿ ಜರ್ಮನ್ ಟೇಂಕ್‌ಗಳು ವೊರೆನೆಜವನ್ನು ಪ್ರವೇಶಿಸಲು ಯತ್ನಿಸುತ್ತಿವೆ. ಯಾಂತ್ರಿಕ ಸೈನ್ಯದಿಂದ ಕೂಡಿದ ಎರಡನೆಯ ಸೈನ್ಯವು ಬೋಗುಚಾರಾನ ಮೇಲೆ ಆಕ್ರಮಣಮಾಡುವುದು. ಮೂರನೆಯದು ಲಿಶಿಚಾನಸ್ಕದ ಆಚೆಗೆ ಭರದಿಂದ ಮುನ್ನುಗ್ಗುತ್ತಿದೆ. ಹಿಟ್ಲರನು ಕಾಕಸಸಿಗೆ ಹೋಗಲು ಭರದಿಂದ ಧುಮುಕುತ್ತಿರುವಂತೆ ತೋರುತ್ತದೆ. ಟಿಗನರಾಗನಿಂದ ಕಾಕಸಸ್ ವರೆಗೂ ಕಾಳಗವನ್ನು ಪ್ರಾರಂಭಿಸುವನೆಂದು ಒಂದು ಕಡೆಯಿಂದ ಸುದ್ದಿ ಬಂದಿರುವುದು.

ಹೊಸ ತರದ ಮೆಶಿನ್ ಗನ್

ಒಂದನ್ನು ಲಂಡನಿನಲ್ಲಿ ತಯಾರಿಸಿದ್ದರಾಗಿ ಸುದ್ದಿ. ಇದು ಅತ್ಯಂತ ಭೀಕರವಿದ್ದು ಪ್ರತಿ ವಾರ ಇದು ಸಾವಿರಾರು ಸಂಖ್ಯೆಯಿಂದ ತಯಾರಾಗುತ್ತಿದೆಯಂತೆ.

ಲೆನಿನ್‌ಗ್ರಾಡ್ ಮೋಸ್ಕೋ ರೈಲ್ವೆ ಕತ್ತರಿಸುವ ಯತ್ನ

ರಶ್ಯದ ಬೊಗುಚಾರದ ದಕ್ಷಿಣದಲ್ಲಿ ಜರ್ಮನರು ಪ್ರಚಂಡ ಧಾಳಿ ಪ್ರಾರಂಭಿಸಿರುವರು. ಒಂದು ಜರ್ಮನ್ ಸೇನೆಯು ರೊಸೆಚರಿಂದ ಬೇಗುಚಾರದ ವರೆಗೆ ಬಂದಿರುವುದು. ಇನ್ನೊಂದು ಈಶಾನ್ಯ ಧಿಕ್ಕಿನಿಂದ ಬಂದು ಬೊಗುಚಾರದ ದಕ್ಷಿಣದಲ್ಲಿ ನುಗ್ಗಿರುವುದು. ಒರೆನಿಜ್ ಮತ್ತು ಬೊಗುಚಾರಗಳಲ್ಲಿ ಹೀಗೆ ಒಮ್ಮೆಗೇ ಧಾಳಿಯಾರಂಭವಾಗಿದೆ. ಇದನ್ನು ನೋಡಿದರೆ ಜರ್ಮನರು ಮೋಸ್ಕೋ ಲೆನಿನ್‌ಗ್ರಾಡ್ ರೈಲ್ವೆ ಕತ್ತರಿಸುವ ಯತ್ನದಲ್ಲಿರುವಂತೆ ತೋರುತ್ತದೆ. ಈ ರೈಲ್ವೆ ಕೈಬಿಟ್ಟರೆ ಮೊಸ್ಕೋ ಕಾಕಸಸ್ ಸಂಬಂಧ ತಪ್ಪುವುದು.

ಸಹಿ ಇರುವ ಬೋಂಬುಗಳು

ಅಮೆರಿಕದಲ್ಲಿ ವಾರ್‌ಬೋಂಡು ಪಡೆಕೊಳ್ಳುವವರು ತಮ್ಮ ಸಹಿಹಾಕಿ ಬೋಂಬುಗಳನ್ನು ಬರ್ಲಿನ್ ಅಥವಾ ಟೋಕಿಯೋಗಳ ಮೇಲೆಸೆಯಲು ಕಳುಹಿಸುವ ಏರ್ಪಾಡು ಮಾಡಲಾಗಿದೆ. ಬೋಂಬುಗಳ ಮೇಲೆ ಸಹಿಮಾಡಲು ಪ್ರತ್ಯೇಕವಾದೊಂದು ಶಾಯಿ ಮತ್ತು ಪೇನು ತಯಾರಿಸಲಾಗಿದೆ. ಅಮೇರಿಕದಲ್ಲಿ ಹೀಗೆ ಬೋಂಬುಗಳಿಗೆ ಸಹಿಮಾಡುವ ಬಗ್ಗೆ ಅನೇಕರು ವಾರ್‌ಬೋಂಡ್‌ಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಪ್ರಸಿದ್ಧ ಶ್ರೀಮಂತ ಮನೆತನದ ಜೋನ್ ಡಿ. ರೋಕ್‌ಫೆಲ್ಲರು ಯಾಂತ್ರಿಕ ಕೆಲಸಗಾರನ ಮೂಲಕ ಪ್ರತಿ ವಾರ ೧೮ ಡೋಲರುಗಳ ಎರಡು ಬೋಂಬುಗಳನ್ನು ಪಡೆದು ಬೋಂಬುಗಳಿಗೆ ಆತನಿಂದಲೇ ಸಹಿ ಹಾಕಿಸುತ್ತಿದ್ದಾರೆ. ಇಂತಹ ೫೦,೦೦೦ ಡೊಲರುಗಳವರ ಸಹಿ ಹಾಕಿಸಲು ಅವರು ವಾಗ್ದಾನ ಮಾಡಿರುತ್ತಾರೆ. ಮಕ್ಕಳು ವಿದ್ಯಾರ್ಥಿಗಳು ಕೂಡಾ ತಮ್ಮ ತಿಂಡಿತಿನಸು ಮತ್ತು ಕಾಫಿ ವೆಚ್ಚದಿಂದ ಹಣ ಉಳಿಸಿ ವಾರ್ ಬೋಂಡು ಪಡೆದು ಬೋಂಬುಗಳಿಗೆ ಸಹಿಹಾಕುತ್ತಿದ್ದಾರೆ. ಅಂತಹ ಕ್ಲಬ್ಬುಗಳೇ ಅಮೆರಿಕದಲ್ಲಿ ಸ್ಥಾಪಿಸಲ್ಪಡುತ್ತಿವೆ.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 101/1942.

ಅನುಸೂಯಯಾನೆ ಶೀತಾ ಬಾ ಮೃತಪಟ್ಟ K. ರಗುರಾಮ ಪೈಯವರ ವಿಧವೆ, ಆ N ಶ್ರೀನಿವಾಸ ಮಲ್ಯರ ಮಗಳು ಕಾಸ್ರಗೋಡು ಕಸಬಾಗ್ರಾಮದಲ್ಲಿರುವವಳು...... ಅರ್ಜಿದಾರಳು

(1) K. ಅನಂತ ಪೈ ಕೋಟಚ್ಚಿಂ ಮಾಳಪ್ಪ ಪೈಯವರ ಮಗ ವ್ಯಾಪಾರಸ್ತ. (2) K. ವಾಸುದೇವ ಪೈ. (3) K. ಕೃಷ್ಣ ಪೈ. 1ನೇ ರೆಸ್ಪಾಂಡೆಂಟ K. ಅನಂತ ಪೈಯವರ ಮಕ್ಕಳು............

.............ರೆಸ್ಪಾಂಡೆಂಟ್ರು

1—2ನೇಯವರು ಕಾಸರಗೋಡು ಕಸಬಾಗ್ರಾಮದಲ್ಲಿಯೂ 3ನೇ ಯವನು ಮಂಗ್ಳೂರು ಶಹರಿನಲ್ಲಿಯೂ ಇರುವವರು.

ಇವರೊಳಗೆ

ತಾ. 8—7—42

ಸದ್ರಿ ಅರ್ಜಿದಾರಳ ಕಡೆಯಿಂದ ನೋಟೀಸು

ಮೃತಪಟ್ಟ K. ರಘುರಾಮ ಪೈ ಎಂಬವರಿಗೆ "ದಿ ಈಸ್ಟ್ ಇಂಡ್ ವೆಸ್ಟ್ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಬೊಂಬಾಯಿ" ಮತ್ತು "ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಬೊಂಬಾಯಿ" ಎಂಬ 2 ಕಂಪೆನಿಗಳಿಂದ ಅರ್ಜ ಕಡಸ್ಸಲಿನಲ್ಲಿ ವಿವರಿಸಿದಂತೆ ಬರತಕ್ಕ ರೂಪಾಯಿ 1500-0-0ನ್ನು ವಸೂಲ್ ಕುರಿತು ಅವನ ಪ್ರತಿನಿಧಿವಾರಿಸ್ತರಳಾದ ಅರ್ಜಿದಾರಳು ವಾರ್ಸುಸರ್ಟಿಫಿಕೇಟು ಅಪೇಕ್ಷಿಸಿ ದಾಖಲು ಮಾಡಿದ ಅರ್ಜಿಯು ತಾರೀಕು 25—7—1942ಕ್ಕೆ ತನಿಖೆಗಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

Kasaragod, 8-7-42. } K. P. Madhava Rao, Advocate for Petitioner.

ನೋಟೀಸು

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

ಕ್ರಮ ನಂಬ್ರ 21/1940.

ಕುಸುಮ .... ವಾದಿ

ಯಚ್. ಬಿ. ಎ. ಶ್ಯಾನಭಾಗ.. ಪ್ರತಿವಾದಿರು

ಹಾಲಿ ಮೃತಪಟ್ಟ ಕಲ್ಲೆ ಪೂವಪ ಹೆಗ್ಗಡೆಯವರ ಸೊತ್ತುಗಳ ಎಡ್‌ಮಿನಿಸ್ಟ್ರೇಶನ್ ಬಗ್ಗೆ ಮಾಡಿದ ಮೇಲಿನ ವ್ಯವಹರಣೆಯಲ್ಲಿ ತಾ. 29-11-1940 ರಲ್ಲಾದ ಪ್ರಿಲಿಮಿನರಿ ಡಿಕ್ರಿ ವಿಧಿ ಮೇರೆಗೆ ನನ್ನನ್ನು ರಿಸೀವರನನ್ನಾಗಿ ನೇಮಿಸಿದ್ದಲ್ಲದೆ ಸದ್ರಿ ಪೂವಪ ಹೆಗಡೆಯವರ ಆಸ್ತಿಗಳಿಂದ ಸಂದಾಯವಾಗತಕ್ಕ ಸಾಲಗಳ ಪಟ್ಟಿಯನ್ನು ತಯಾರಿಸಿ ಹಾಜರುಪಡಿಸಿ ಅದಕ್ಕೆ ಕೋರ್ಟಿನವರ ಮಂಜೂರಾತಿಯನ್ನು ಪಡೆಯುದಕ್ಕಾಗಿ ಕೋರ್ಟಿನವರು ನನಗೆ ಹುಕುಂ ಕೊಟ್ಟಿರುವುದರಿಂದ ಈ ಮೂಲಕ ಸರ್ವ ಜನರಿಗೂ ತಿಳಿಸುವುದೇನೆಂದರೆ:—

1. ಸದ್ರಿ ಪೂವಪ ಹೆಗ್ಗಡೆರ ಆಸ್ತಿಯ ಮೇಲೆ ಡಿಕ್ರಿ ಪಡೆದು ಡಿಕ್ರಿ ಸಂಪೂರ್ಣ ಸಂದಾಯವಾಗದಿರುವ ಡಿಕ್ರಿದಾರರು ವ ಇತರ ಸಾಲಗಾರರು ತಮಗೆ ಬರಬೇಕಾದವುಗಳನ್ನು ಎಷ್ಟೆಂತ ಮಂಜೂರು ನಕ್ಲುಗಳನ್ನು ಅಫಿದಾವಿತು ಸಮೇತ ಹಾಜರುಪಡಿಸಿ ರುಜುಪಡಿಸತಕ್ಕದ್ದು.

2. ಸದ್ರಿ ಪೂವಪ ಹೆಗ್ಡೆರ ಸ್ಥಿರ ಚರ ಸೊತ್ತುಗಳಿಂದ ತಮಗೆ ಬರಾ ಇತರ ಯಾವತ್ತೂ ಸಲುವಳಿಗಳನ್ನು ರುಜುಪಡಿಸತಕ್ಕದ್ದು.

3. ಸದ್ರಿ ಸಾಲಗಾರರು ವ ಸಲುವಳಿಗಳನ್ನು ಹೊಂದ ತಕ್ಕವರು ಇದೇ 1942ನೇ ಆಗೋಸ್ತು ತಾ. 8ನೇ ಶನಿವಾರ ಪ. 11ಕ್ಕೆ ನನ್ನ ಪುತ್ತೂರು ಆಫೀಸಿನಲ್ಲಿ ಸ್ವತಹಾ ಯಾ ವಕೀಲರ ಯಾ ಅಧಿಕಾರ ಹೊಂದಿದ ಏಜಂಟರ ದ್ವಾರ ತಮ್ಮ ಸಾಲ ಯಾ ಸಲುವಳಿಗಳನ್ನು ರುಜುಮಾಡತಕ್ಕದ್ದು.

4. ಈ ನೋಟೀಸಿನಂತೆ ತಮಗೆ ಬರತಕ್ಕದ್ದನ್ನು ರುಜುಪಡಿಸಲಿಕ್ಕೆ ತಪ್ಪಿದ್ದರೆ ಅವರಿಗೆ ಸಲಬೇಕಾದ್ದು ಸಂದದೆ ಎಂತ ಎಣಿಸಲಾದೀತು.

ಪುತ್ತೂರು 15-7-1942. } ಮೊಳಹಳ್ಳಿ ಶಿವರಾವ್ ರಿಸೀವರ್ (ಪ್ಲೀಡರ್)

‘ಬ್ರಿಟಿಷ್ ಸರಕಾರವು ಹಿಂದುಸ್ತಾನದಿಂದ ಹೊರಟುಹೋಗಬೇಕು’

ಭಾರತದ ರಾಜಕೀಯದ ಬಗ್ಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಾಡಿದ ನಿರ್ಣಯವು ಈಗ ಪ್ರಕಟವಾಗಿದೆ. ಕಾಂಗ್ರೆಸು ಇದು ವರೆಗೆ ಅನುಸರಿಸುತ್ತಾ ಬಂದ ಧೋರಣೆಯನ್ನು ಅದರಲ್ಲಿ ವಿವರಿಸಿ, ಬ್ರಿಟಿಷ್ ಸರಕಾರವು ಹಿಂದುಸ್ತಾನದಿಂದ ಹೊರಟು ಹೋಗಬೇಕೆಂದು ಒತ್ತಿ ಹೇಳಲಾಗಿದೆ. ಹೀಗೆ ಹೇಳುವಾಗ, ಕಾಂಗ್ರೆಸು ಅವಸರದ ನಿರ್ಣಯವನ್ನು ಮಾಡಲ್ಲವೆಂದೂ, ಮಿತ್ರರಾಷ್ಟ್ರಗಳಿಗೆ ಅಡಚಣೆಯಾಗುವಂಥಾ ಹಾದಿಯನ್ನು ಸಾಧ್ಯವಿದ್ದಷ್ಟು ತಪ್ಪಿಸಲಾಗುವುದೆಂದೂ ಸ್ಪಷ್ಟಪಡಿಸಿ, ಕಾಂಗ್ರೆಸಿನ ಸೂಚನೆಯನ್ನು ಸ್ವೀಕರಿಸಬೇಕೆಂದು ಬ್ರಿಟಿಷ್ ಸರಕಾರಕ್ಕೆ ಕೇಳಿಕೊಳ್ಳಲಾಗಿದೆ. ಈ ಬಿನ್ನಹವನ್ನು ಮನ್ನಿಸದಿದ್ದರೆ ಹಿಂದುಸ್ತಾನದ ಸ್ವಾತಂತ್ರ್ಯ ಮತ್ತು ರಾಜಕೀಯ ಹಕ್ಕುಗಳನ್ನು ಪಡೆವ ಸಲುವಾಗಿ ಕಾಂಗ್ರೆಸು ಗಾಂಧಿಜಿಯವರ ಮುಂದಾಳುತನದಿಂದ ತನ್ನ ಎಲ್ಲಾ ಅಹಿಂಸಾತ್ಮಕ ಶಕ್ತಿಯನ್ನು ಅನಿವಾರ್ಯವಾಗಿ ಉಪಯೋಗಿಸಬೇಕಾಗುವುದೆಂದೂ ಅದರಲ್ಲಿ ಕಾಣಿಸಲ್ಪಟ್ಟಿರುವುದು. ಬ್ರಿಟಿಷ್ ಸರಕಾರವು ಇಲ್ಲಿಂದ ಹೊರಟು ಹೋದ ನಂತರ ರಾಷ್ಟ್ರದ ಜವಾಬ್ದಾರಿಯುಳ್ಳ, ಎಲ್ಲಾ ಸ್ತ್ರೀಪುರುಷರೂ ಒಂದು ಕಡೆ ಸೇರಿ ಸರ್ವ ಪಕ್ಷಗಳ ಪ್ರಾತಿನಿಧ್ಯವುಳ್ಳ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸುವರೆಂದೂ, ಅನಂತರ ಎಲ್ಲರಿಗೂ ಒಪ್ಪಿಗೆಯಾಗುವ ರಾಜ್ಯಘಟನೆಯನ್ನು ರಚಿಸಿ, ಆ ಸರಕಾರವು ರಾಷ್ಟ್ರೀಯ ಘಟನಾ ಸಮಿತಿಯನ್ನೇರ್ಪಡಿಸುವುದೆಂದೂ ಈ ಠರಾವು ಅತ್ಯಂತ ಮಹತ್ವದ್ದಿರುವುದರಿಂದ ಕೊನೆಯ ನಿರ್ಣಯಕ್ಕಾಗಿ ಎ.ಐ.ಸಿ.ಸಿಗೆ ಒಪ್ಪಿಸಲಾಗುವುದೆಂದೂ, ಎ.ಐ.ಸಿ.ಸಿಯು ಬರುವ ಅಗಸ್ಟ್ ೭ರಂದು ಬೊಂಬಾಯಿಯಲ್ಲಿ ಕೂಡುವುದೆಂದೂ ಹೇಳಲಾಗಿದೆ

ಠರಾವಿನ ವಿವರ ಇಂತಿದೆ.

“ಇತ್ತೀಚೆಯ ಘಟನೆಗಳಿಂದ ಹಾಗೂ ಭಾರತೀಯರ ಅನುಭವದಿಂದ ಬ್ರಿಟಿಷರ ಪ್ರಭುತ್ವವು ಹಿಂದುಸ್ಥಾನದಲ್ಲಿ ಕೊನೆಗೊಳ್ಳಬೇಕೆಂಬ ಸಂಗತಿ ಎಲ್ಲರಿಗೂ ಖಚಿತವಾಗಿದೆ. ಪರರ ಆಳ್ವಿಕೆ ಎಷ್ಟು ಉತ್ತಮವಿದ್ದರೂ ಆತ್ಮಘಾತುಕವು. ಹಿಂದುಸ್ಥಾನವು ಗುಲಾಮಗಿರಿಯಲ್ಲಿದ್ದರೆ ತನ್ನನ್ನು ತಾನು ರಕ್ಷಿಸಿಕೊಳ್ಳಲಾರದು. ಮತ್ತು ಯುದ್ಧದ ಗತಿಯನ್ನು ಬದಲಾಯಿಸಲಾರದು. ಆದ್ದರಿಂದ ಹಿಂದುಸ್ಥಾನದ ಸ್ವಾತಂತ್ರ್ಯ ಅದರ ಸ್ವಾತಂತ್ರ್ಯದ ಸಲುವಾಗಿಯೇ ಅಲ್ಲ ಜಗತ್ತಿನ ಭದ್ರತೆಯ ಸಲುವಾಗಿಯೂ ಅವಶ್ಯವಾಗಿದೆ. ನಾಜಿಸಂ ದಬ್ಬಾಳಿಕೆ ಆಕ್ರಮಣಾದಿಗಳನ್ನು ಕೊನೆಗೊಳಿಸುವ ತತ್ವದ ಫಲುವಾಗಿಯೂ ಹಿಂದುಸ್ಥಾನವು ಸ್ವತಂತ್ರವಾಗಬೇಕಾಗಿದೆ. ಯುದ್ಧ ಪ್ರಾರಂಭವಾದಂದಿನಿಂದಲೇ ಕಾಂಗ್ರೆಸು ಯುದ್ಧ ಪ್ರಯತ್ನದಲ್ಲಿ ಅಡ್ಡಿಮಾಡಬಾರದೆಂಬ ಧೋರಣೆ ವಹಿಸಿತ್ತು. ಈ ತರದ ಧೋರಣೆಯಿಂದ ಸತ್ಯಾಗ್ರಹವು ನಿಷ್ಪ್ರಯೋಜಕವಾದಂತೆ ಕಂಡು ಬಂದರೂ ಅದು ಗಣಿಸಲಿಲ್ಲ. ಹೀಗೆ ಮಾಡಿದರೆ ಬ್ರಿಟಿಷ್ ಸರಕಾರದವರು ಮೆಚ್ಚಿ ನಿಜವಾದ ಪ್ರತಿನಿಧಿಗಳಿಗೆ ಹಿಂದುಸ್ಥಾನದ ಅಧಿಕಾರ ಒಪ್ಪಿಸುವರೆಂದೂ, ಗಂಡಾಂತರಕ್ಕೆ ತುತ್ತಾಗಿರುವ ಜಗತ್ತಿನ ಸ್ವಾತಂತ್ರ್ಯವನ್ನುಳಿಸಲು ಭಾರತೀಯರಿಗೂ ಅವಕಾಶವೊದಗುವುದೆಂದೂ ನಂಬಲಾಗಿತ್ತು. ಆದರೆ

ಕಾಂಗ್ರೆಸು ಆಂದೋಲನ ಆರಂಭಿಸಬೇಕಾಗುವುದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸ್ಪಷ್ಟ ಸೂಚನೆ

ಈ ಆಶೆಗಳೆಲ್ಲಾ ನಿರಾಶೆಗಳಾದವು. ಕ್ರಿಪ್ಸ್ ಸಂಧಾನವನ್ನು ಪರಿಶೀಲಿಸಿದರೆ ಹಿಂದುಸ್ತಾನದ ವಿಷಯ ಬ್ರಿಟಿಷ ಧೋರಣೆ ಬದಲಾಗಿಲ್ಲವೆಂದು ಸ್ಪಷ್ಟವಾಯಿತು, ಬ್ರಿಟಿಷರು ಹಿಂದುಸ್ಥಾನವನ್ನು ಬಿಟ್ಟು ಹೋಗುವುದಿಲ್ಲವೆಂದು ತಿಳಿಯಿತು. ರಾಷ್ಟ್ರದ ಬೇಡಿಕೆಯ ಸಂಬಂಧ ಸಧ್ಯಕ್ಕೆ ಎಷ್ಟು ಅವಶ್ಯವೋ ಅಷ್ಟನ್ನು ಪಡೆಯಲು ಮುಖಂಡರು ಕ್ರಿಪ್ಸ್ ಸಂಧಾನದಲ್ಲಿ ಸಹಕರಿಸಿದರು. ಆದರೆ ಅದು ನಿಷ್ಪ್ರಯೋಜಕವಾಯಿತು. ಈ ರೀತಿ ಎಲ್ಲಾ ತರದಿಂದಲೂ ನಿರಾಶೆಯಾದ್ದರಿಂದ ಬ್ರಿಟಿಷರ ಬಗ್ಗೆ ಜನರಿಗೆ ಸ್ವಲ್ಪವೂ ಸಹಾನುಭೂತಿಯಿಲ್ಲ. ಬದಲಾಗಿ ಸಂತಾಪವೇ ಹೆಚ್ಚಾಗಿದೆ. ಜಪಾನರಿಗೆ ಜಯವಾಗುತ್ತಿರುವುದನ್ನು ಕಂಡು ಅನೇಕರು ಸಂತೋಷ ತೋರಿಸುತ್ತಿರುವರು. ಜನದಲ್ಲಿ ಈ ತರದ ಮನೋವೃತ್ತಿಯುಂಟಾಗುತ್ತಿರುವುದು ನಿಜವಾಗಿಯೂ ಯೋಚನೆಮಾಡುವ ವಿಚಾರವಾಗಿದೆ. ಈ ಭಾವನೆ ಬೇಗನೇ ನಿರ್ಮೂಲವಾಗದಿದ್ದರೆ, ಆಕ್ರಮಣವನ್ನು ಸ್ವಾಗತಿಸುವ ವಿಚಾರ ಸಹ ಜನರಲ್ಲಿ ಉಂಟಾಗುತ್ತಿರುವುದು; ಆಕ್ರಮಣವು ಯಾರದೇ ಆಗಲಿ ನಾವು ಎದುರಿಸಲೇ ಬೇಕು. ಇದಕ್ಕೆ ತಲೆಬಾಗಿದರೆ ದೇಶವನ್ನು ಗುಲಾಮಗಿರಿಗೆ ಒಪ್ಪಿಸಿದಂತೆ. ಮಲಯ, ಸಿಂಗಾಪುರ, ಬರ್ಮಗಳ ಘಟನೆಗಳು ಇಲ್ಲಿ ಪುನರಾವೃತ್ತಿಯಾಗದಂತೆ ಮಾಡಬೇಕೆಂದು ಕಾಂಗ್ರೆಸಿನ ಇಚ್ಛೆಯಿದೆ. ಆದ್ದರಿಂದಲೇ ಎಲ್ಲಾ ತರದ ಪರಕೀಯರ ಆಳ್ವಿಕೆಯನ್ನು ವಿರೋಧಿಸಬೇಕೆಂದು ಹೇಳಲಾಗಿದೆ. ಹಿಂದುಸ್ಥಾನದಲ್ಲಿ ಬ್ರಿಟಿಷರ ಬಗ್ಗೆಯಿರುವ ಕೆಟ್ಟ ಭಾವನೆಗಳನ್ನೆಲ್ಲಾ ಕಾಂಗ್ರೆಸು ಕ್ಷಣಮಾತ್ರದಲ್ಲಿ ಹೋಗಲಾಡಿಸಬಲ್ಲದು. ಜಗತ್ತಿನ ಹೋರಾಟದಲ್ಲಿ ತಾನೂ ಸೇರಿ ಸುಖದುಃಖಗಳಲ್ಲಿ ಸಮಾನಭಾಗಿಯಾಗುವುದು, ಹಿಂದುಸ್ಥಾನವು ಸ್ವಾತಂತ್ರ್ಯದ ಬೆಳಕು ಕಂಡೊಡನೆ ಮಾತ್ರ ಇದು ಸಾಧ್ಯ.

“ಜಾತೀಯ ಸಮಸ್ಯೆಯನ್ನು ಬಿಡಿಸಲು ಕಾಂಗ್ರೆಸಿನವರು ಶಕ್ತಿಮೀರಿ ಯತ್ನಿಸಿದರು. ಆದರೆ ಈ ದೇಶದಲ್ಲಿ ಪರರ ಆಳುವಿಕೆಯಿರುವುದರಿಂದ ಅದು ಸಾಧ್ಯವಾಗಲಿಲ್ಲ. ವಿದೇಶಿಯರ ಆಳುವಿಕೆ ಕೊನೆಗೊಂಡ ಮೇಲೆ ಹಿಂದುಸ್ಥಾನದ ಜನರೆಲ್ಲಾ ನಿಜ ಸ್ಥಿತಿಯನ್ನು ಮನಗೊಂಡು ಒಂದಾಗಿ ರಾಷ್ಟ್ರದ ಸಮಸ್ಯೆಯನ್ನು ಬಿಡಿಸುವರು. ಈಗ ಕೇವಲ ಬ್ರಿಟಿಷರ ಆಳುವಿಕೆಯನ್ನು ಆಧರಿಸಿ, ಅದರ ಮೇಲೆ ವರ್ಚಸನ್ನು ಬೀರುವ ರಾಜಕೀಯ ಪಕ್ಷಗಳೆಲ್ಲಾ ಆಗ ಮಾಯವಾಗುವವು. ಸಂಸ್ಥಾನಿಕರು, ಜಮೀನ್ದಾರರೆಲ್ಲಾ ಬಡವರಿಂದಲೇ ತಮ್ಮ ಸಿರಿವಂತಿಕೆ ಬಂದಿದೆಯೆಂಬುದನ್ನು ಮನಗಾಣುವರು. ಬ್ರಿಟಿಷರ ಆಳ್ವಿಕೆ ಕೊನೆಗಂಡ ಮೇಲೆ ಜವಾಬ್ದಾರೀ ಜನರೆಲ್ಲಾ ಒಂದಾಗಿ ತಮಗೆ ಸಮ್ಮತವಾದ ಸರಕಾರವನ್ನು ಸ್ಥಾಪಿಸುವರು. ಬ್ರಿಟಿಷ್ ಆಳ್ವಿಕೆ ಕೊನೆಗೊಳ್ಳಬೇಕೆಂದು ಕಾಂಗ್ರೆಸಿನವರು ಹೇಳಿದರೂ, ಮಿತ್ರರಾಷ್ಟ್ರಗಳ ಯುದ್ಧ ಪ್ರಯತ್ನಕ್ಕೆ ಅಡ್ಡಿಮಾಡುವ, ಹಾಗೂ ಹಿಂದುಸ್ಥಾನದ ಮೇಲೆ ಆಕ್ರಮಣಕ್ಕೆ ಅವಕಾಶಕೊಡುವ ವಿಚಾರ ಕಾಂಗ್ರೆಸಿನದಲ್ಲ; ಮಿತ್ರ ರಾಷ್ಟ್ರಗಳ ಶಕ್ತಿ ಕುಂದಿಸಬೇಕೆಂಬ ಇಚ್ಛೆಯೂ ಇಲ್ಲ. ಆದ್ದರಿಂದಲೇ ಕಾಂಗ್ರೆಸು ಹಿಂದುಸ್ಥಾನದಲ್ಲಿ ಮಿತ್ರ ಸೈನ್ಯ ಇರಲು ಅನುಮತಿ ಕೊಟ್ಟಿರುವುದು. ಜಪಾನನ್ನು ಎದುರಿಸಿ ಚೀನವನ್ನು ರಕ್ಷಿಸಬೇಕೆಂಬ ಇಚ್ಛೆ ಇದ್ದರೆ ಅವು ಸಂತೋಷದಿಂದ ಇಲ್ಲಿರಬಹುದು. ಬ್ರಿಟಿಷರ ಆಳ್ವಿಕೆ ಕೊನೆಗಾಣಬೇಕೆಂದರೆ ಪ್ರತಿಯೊಬ್ಬ ಬ್ರಿಟಿಷನು ಹೊರಟು ಹೋಗಬೇಕೆಂದರ್ಥವಲ್ಲ, ಹಿಂದುಸ್ಥಾನವೇ ತಮ್ಮ ದೇಶವೆಂದು ಭಾವಿಸಿ ಇಲ್ಲಿ ಎಲ್ಲರಂತೆ ಸಮಾನತೆಯಿಂದಿರಬಯಸುವವರು ಇರಬಹುದು. ಬ್ರಿಟಿಷರು ಸಂತೋಷದಿಂದ ತಮ್ಮ ಆಳ್ವಿಕೆಯನ್ನು ಕೊನೆಗಾಣಿಸಿದರೆ ದೇಶದಲ್ಲಿ ಸೌಹಾರ್ದಭಾವನೆಯುಂಟಾಗುವುದು. ಹಿಂದುಸ್ಥಾನದಲ್ಲಿ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಲಿಕ್ಕೂ ಅವಕಾಶವಾಗುವುದು. ಮತ್ತು ಮಿತ್ರರಾಷ್ಟ್ರಗಳು ಆಕ್ರಮಣಗಾರರನ್ನು ತಡೆದು ಚೀನವನ್ನು ರಕ್ಷಿಸಲು ಅವಕಾಶವಾಗುವುದು. ಈ ರೀತಿ ಮಾಡುವುದರಿಂದ ವಿಪತ್ತು ಬರಬಹುದು. ಇದು ಕಾಂಗ್ರೆಸಿಗೆ ಗೊತ್ತಿದೆ. ಆದರೆ ಸ್ವಾತಂತ್ರ್ಯವನ್ನು ಪಡೆಯಲಿಚ್ಛಿಸುವ ದೇಶವು ಎಂದಾದರೊಂದು ದಿನ ವಿಪತ್ತನ್ನೆದುರಿಸಲೇಬೇಕು. ಈ ನ್ಯಾಯವಾದ ಸೂಚನೆಗಳನ್ನು ಸ್ವೀಕರಿಸುವಂತೆ ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸು ಬಿನ್ನಹ ಮಾಡುತ್ತದೆ. ದುರ್ದೈವದಿಂದ ಬ್ರಿಟಿಷ್ ಸರಕಾರವು ಈ ಸೂಚನೆಯನ್ನು ಮನ್ನಿಸದಿದ್ದರೆ ಕಾಂಗ್ರೆಸು ಸುಮ್ಮಗೆ ಇರಲಾರದು. ಹಿಂದುಸ್ತಾನದಲ್ಲಿ ನಡೆಯುವುದನ್ನೆಲ್ಲಾ ನೋಡಿ ಸುಮ್ಮಗಿರಲು ಸಾಧ್ಯವಿಲ್ಲ. ಆದರಿಂದ ಜನರಲ್ಲಿ ಪ್ರತಿಭಟನೆಯ ಶಕ್ತಿ ಕುಂದುವುದು. ಆದ್ದರಿಂದ ಕಾಂಗ್ರೆಸು ಗಾಂಧಿಜಿಯವರ ಮುಂದಾಳುತನದಲ್ಲಿ ಅಹಿಂಸಾತ್ಮಕರ ಹೋರಾಟ ಹೂಡಬೇಕಾಗುವುದು. ಈ ಠರಾವು ಮಹತ್ವದ್ದಿರುವುದರಿಂದ ಇದಕ್ಕೆ ಬೆಂಬಲಕೊಡಬೇಕೆಂದು ಅಗಸ್ಟ್ ೭ರಂದು ವರ್ಕಿಂಗ್ ಕಮಿಟಿಯು ಅ. ಭಾ. ಕಾಂ. ಕಮಿಟಿ ಸಭೆ ಕರೆದಿದೆ.”

ಬಾಲಾಜಿ ಟಾಕೀಸಿನಲ್ಲಿ

“ಮಾಲಾ”

ಪ್ರಕಾಶ ಪಿಕ್ಚರ್ಸಿನವರ ‘ಮಾಲಾ’ ಎಂಬ ಪ್ರಖ್ಯಾತ ಸಾಮಾಜಿಕ ಚಿತ್ರವು ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲಾಗುತ್ತದೆ. ರೋಸ್, ಜಯವಂತ್, ಜಯರಾಜ್ ಇವರೇ ಮೊದಲಾದ ಪ್ರಸಿದ್ಧ ನಟನಟಿಯರು ಇದರಲ್ಲಿ ಅಭಿನಯಿಸುವರು. ಮಾಲಾ ದುರ್ಭಾಗ್ಯ ತರುಣಿ! ಮರಣಕಾಲದಲ್ಲಿ ಮಾಲಳನ್ನೂ ಆಕೆಯ ತಾಯಿಯನ್ನೂ ಚಂಪತನ ಕೈಯಲ್ಲಿ ಕೊಟ್ಟು ಅವಳ ಮುದಿ ತಾತನು ಮರಣಹೊಂದುವನು. ಮಾಲಳಿಗೆ ಮೋಹನನ ಪ್ರೇಮವೊಂದೇ ಜೀವನದ ಆಧಾರವಾಗಿತ್ತು, ಆದರೆ ಮೋಹನನು ವಕೀಲಿ ಕಲಿಯಲು ಹೋಗಿದ್ದನು. ಮೋಹನನ ತಂದೆ ದಾಮೋದರನು ಕುಟಿಲ ದುರಾಚಾರಿ, ಚಂಪತನಿಗೆ ಲಂಚಕೊಟ್ಟು ಮಾಲಳನ್ನು ಕೊಂಡುಕೊಂಡನು. ದಾಮೋದರನ ಭೋಗ ತೃಷ್ಣೆಗೆ ಮಾಲಾ ಬಲಿಯಾದಳು. ಮಾಲಳ ಜೀವನದ ದುರಂತ ಸುರುವಾಗುವುದು. ಕಡೆಯ ಕಥೆ ಹೇಗೆ ಹೃದಯದ್ರಾವಕವಾಗಿದೆಯೆಂಬುದನ್ನು ಚಿತ್ರಪಟದಲ್ಲಿ ನೋಡಿರಿ.

ವಿಧವಾ—ವಿವಾಹ

ಮಂಗಳೂರು, ಆರ್ಯಸಮಾಜದಲ್ಲಿ ಕರ್ನಾಟಕ ಬ್ರಾಹ್ಮಣ ಜಾತಿಗೆ ಸೇರಿದ, ದಿವಂಗತ ಎಡ್ವೋಕೇಟ್ ಬೆಳ್ಳಿ ವೆಂಕಟರಾಯರ ಪುತ್ರ ಹಾಗೂ ಬೆಳ್ಳಿ ರಾಮಚಂದ್ರರಾಯರ ಸೋದರರಾದ ಡಾ। ಬಿ. ಎಸ್. ರಾವ್, ಎಂ. ಬಿ. ಬಿ. ಎಸ್. ಅಸಿಸ್ಟೆಂಟ್ ಮೆಡಿಕಲ್ ಸರ್ಜನ್ ಏಡನ್ (ಈಗ ಮಂಗಳೂರಲ್ಲಿದ್ದಾರೆ) ಇವರು (ಶ್ರೀಮತಿ ಸುಶೀಲಾಬಾಯಿಯವರೊಡನೆ) ಶ್ರೀ. ಸಿ. ವೇದವ್ಯಾಸ ರಾಯರ ಪುತ್ರಿ ಹಾಗೂ ದಿವಂಗತ ನೆಲ್ಲಿಕಾಯಿ ಸುಂದರ ರಾಯರ ವಿಧವೆ ತಾ. ೧೧-೭-೧೯೪೨ರಂದು ವಿವಾಹವಾಯಿತು. ಅನೇಕ ಮಂದಿ ಸಭ್ಯ ಗೃಹಸ್ಥರು ವಿವಾಹ ಸಮಾರಂಭಕ್ಕೆ ಬಂದಿದ್ದರು.

ಪುತ್ತೂರು

ವರ್ಗ

ಸ್ಥಳೀಯ ಪುತ್ತೂರು ಬೋರ್ಡ್ ಹೈಸ್ಕೂಲಿನಲ್ಲಿ ೬ನೇ ಫಾರ್ಮಿನಲ್ಲಿ ಡಿವಿಜನ್ ಆದ ನಿಮಿತ್ತ ಕಾರ್ಕಳ ಬೋರ್ಡ್ ಹೈಸ್ಕೂಲು ಉಪಾಧ್ಯಾಯರಾದ ಶ್ರೀ ಯಸ್. ರಾಮಕೃಷ್ಣ ಆಚಾರ್, ಬಿ. ಎ. ಯಲ್. ಟಿ. ಇವರನ್ನೂ, ೩ನೇ ಫೋರ್ಮಿನಲ್ಲಿ ೩ ಡಿವಿಜನುಗಳು ಆದ ನಿಮಿತ್ತ ಶ್ರೀ. ಬಿ. ಆನಂದ ರಾವ್ ಇವರನ್ನೂ ಇಲ್ಲಿಗೆ ಉಪಾಧ್ಯಾಯರುಗಳನ್ನಾಗಿ ನೇಮಿಸಿದ್ದಾರೆ. ಇದೇ ಹೈಸ್ಕೂಲಿಗೆ ಹಂಗಾಮಿಯಾಗಿ ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪಾಂಡುರಂಗರಾಯರನ್ನು ನೇಮಿಸಿರುತ್ತಾರೆ.

ಉಡುಪಿ

ಭಾಷಣ

ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಡಾ। ಎಂ. ಕೇಶವ ಪೈಗಳವರು ಭಗವದ್ಗೀತೆಯ ವಿಷಯದಲ್ಲಿ ಭಾಷಣಮಾಡುತ್ತಾ ಯಜ್ಞ, ದಾನ, ತಪಶ್ಚರ್ಯ ಇವೆಲ್ಲವನ್ನೂ ಮಾನವನು ಸಾರ್ವಜನಿಕ ಸೇವೆಯಲ್ಲಿ ಕಾರ್ಯರೂಪಕ್ಕೆ ತರಲು ಅಭ್ಯಾಸ ಮಾಡಿ ಶ್ರೇಯಸ್ಸನ್ನು ಪಡೆಯುವುದು ಉತ್ತಮವೆಂದರು.

ಮಣಿಪಾಲದ ಹಿಂದೂ ಅನಾಥ ಶಾಲೆಯ ವಸತಿ ಗೃಹ ಆರಂಭವು

ಕಳೆದ ವಾರ ಜರಗಿತು. ಕೈಗಾರಿಕೆ ಮತ್ತು ವ್ಯವಹಾರಜೀವನೋಪಾಯದ ವಿದ್ಯಾಸಂಸ್ಥೆಯು ಸಹ ಸ್ಥಾಪಿಸಲ್ಪಟ್ಟಿತು. ಈ ಸಮಾರಂಭಗಳು ಡಾ। ಕೇಶವ ಪೈಗಳವರ ಅಧ್ಯಕ್ಷತೆಯಲಿ ಜರಗಿದುವು.

ಸಾದರ ಸ್ವೀಕಾರ

ಮೊಗವೀರ ವ್ಯವಸ್ಥಾಪಕ ಮಂಡಳಿ

ಇದರ 1941ನೆಯ ವರ್ಷಕ್ಕೆ ಅಂತ್ಯವಾಗುವ ಮೂವತ್ತೊಂಬತ್ತನೆಯ ವಾರ್ಷಿಕ ವರದಿ ನಮ್ಮ ಹಸ್ತಗತವಾಗಿದೆ. ದಕ್ಷಿಣ ಕನ್ನಡದಿಂದ 150 ವರ್ಷಗಳ ಹಿಂದೆಯೇ ಮುಂಬಯಿ ನಗರಕ್ಕೆ ಹೋಗಿ ನೆಲಸಿರುವ ಮೊಗವೀರ ಬಂಧುಗಳು ಅಲ್ಲಿ ಸಂಘಟಿತರಾಗಿ ವಿದ್ಯಾ ಪ್ರಚಾರ, ಧರ್ಮಾರ್ಥ ರಾತ್ರಿ ಶಾಲೆ, ಧರ್ಮಾರ್ಥ ವಾಚನಾಲಯ, ಪತ್ರಿಕಾ ಪ್ರಕಾಶನ, ವಿದ್ಯಾರ್ಥಿವೇತನ ಕೊಡುವುದು ಮೊದಲಾದ ಸಮಾಜೋಪಯುಕ್ತ ಕಾರ್ಯಗಳನ್ನು ಈ ಸಂಘದ ಮೂಲಕ ಕಳೆದ 39 ವರ್ಷಗಳಿಂದ ಮಾಡಿಕೊಂಡು ಬರುತ್ತಿರುವುದು ತುಂಬಾ ಪ್ರಶಂಸನೀಯ. ಮಹಾಜನರ ಸಹಕಾರದಿಂದ ಸಂಘದ ಚಟುವಟಿಕೆಗಳು ಮುಂದಕ್ಕೆ ಇತೋಪ್ಯತಿಶಯವಾಗಿ ನೆರವೇರಲೆಂದು ನಮ್ಮ ಹಾರೈಕೆಯಾಗಿದೆ

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

1942ನೇ ಇಸವಿಯ ನಂಬರು 124ನೇ ವ್ಯಾಜ್ಯ.

O S 124/42.

ಮಂಜಪ್ಪ ಯಾನೆ ಎಲಿಯಪ್ಪ ಕೂಡಾ—ವಾದಿರು

ವಿರುದ್ಧ

ಕೇಶವಮ್ಮ ಕೂಡಾ— ಪ್ರತಿವಾದಿಯರು

೨ನೇ ಪ್ರತಿವಾದಿ ಪದ್ಮನಾಭ, 4ನೇ ಪ್ರತಿವಾದಿ ಆನಂದ, ಕೇಶವಮ್ಮನ ಮಕ್ಕಳು ಮಂಗಳೂರು ತಾಲೂಕು ಉಳ್ಳಾಲ ಕಸಬಾ ಗ್ರಾಮದಲ್ಲಿರುವವರು,

ವಾದಿಯರು ನಿಮ್ಮ ಮೇಲೆ ಕೈ ಪೇಟಿನಲ್ಲಿ ಕೋರ್ಟ ನಿವೃತ್ತಿಕೆಗೋಸ್ಕರ ಒಂದು ವ್ಯಾಜ್ಯ ದಾಖಲು ಮಾಡಿದ್ದಾರೆ. ಆದಕಾರಣ ಸದರೀ ದಾವೆಗೆ ಉತ್ತರ ಕೊಡುವ ಬಗ್ಗೆ ಈ ಕೋರ್ಟಿನಲ್ಲಿ ನೀವು ಖುದ್ದಾಗಿಯಾಗಲಿ ಯಾ ಕ್ರಮವಾಗಿ ಅಧಿಕಾರ ಹೊಂದಿರುವ ಪ್ಲೀಡರ ಮೂಲಕವಾಗಿಯಾಗಲೀ ಯಾ ಅವರು ಸಂಬಂಧ ಪ್ರಶ್ನೆಗಳಿಗೆಲ್ಲಾ ಜವಾಬುಕೊಡಲಿಕ್ಕೆ ಶಕ್ತನಾದ ಒಬ್ಬರ ಸಮೇತವಾಗಲೀ, 1942ನೇ ಇಸವಿ ಜುಲಾಯಿ ತಿಂಗಳು ತಾರೀಕು 31ನೇ ದಿವಸ ಹಗಲು 11 ಘಂಟೆಗೆ ಹಾಜರಾಗಲಿಕ್ಕೆ ಇದರಿಂದ ಸಮ್ಮನ್ಸ್ ಕೊಡಲಾಗಿದೆ. ಮೇಲೆ ನಮೂದಿಸಲಾದ ದಿವಸ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಸದರೀ ವ್ಯಾಜ್ಯವನ್ನು ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಫೈಸಲು ಮಾಡಲಾಗುವದೆಂತ ನೀವು ತಿಳಿದಿರತಕ್ಕದ್ದು.

ಮಂಗಳೂರು
13-7-1942

U Krishna Shetty,
Advocate for Plaintiffs

ಜಿಲ್ಲಾ ಸಮಾಚಾರಗಳು

ಮಂಗಳೂರು

"ವಾರ್—ಟೆಕ್ನೀಶಿಯನ್"ರುಗಳ ತರಬೇತಿ

ಯುದ್ಧ ಕಾಲದ "ಟೆಕ್ನೀಶಿಯನ್"ರುಗಳ ತರಬೇತಿಗಾಗಿರುವ ಇಂಡಿಯ ಸರಕಾರದ ಯೋಜನೆಗೊಳಪಟ್ಟು ಕೆಲಸ ನಿರ್ವಹಿಸುತ್ತಿರುವ ದಕ್ಷಿಣ ವಿಭಾಗದ "ಟೆಕ್ನೀಶಿಯನ್ ಟ್ರೈನಿಂಗ್" ಶಾಖೆಯ ಸೀನಿಯರ್ ರೀಜನಲ್ ಇನಸ್ಪೆಕ್ಟರರು ಕಳೆದ ತಾ ೬ರಲ್ಲಿ ಸ್ಥಳೀಯ ಗವರ್ನಮೆಂಟ್ ಟ್ರೇಡ್‌ಸ್ಕೂಲಿಗೆ ಭೇಟಿ ಕೊಟ್ಟರು ಅವರು ಏಳು ಬೇರೆ ಬೇರೆ ಕೈಗಾರಿಕೆಗಳಲ್ಲಿ, ಎರಡು ತುಕಡಿಗಳಾಗಿ ೨೦೮ ಮಂದಿ "ಟೆಕ್ನೀಶಿಯನ್" ರುಗಳನ್ನು ತರಬೇತಿ ಮಾಡುವ ಒಂದು ದೊಡ್ಡ ಯೋಜನೆಯನ್ನು ತಯಾರಿಸಿರುವರು. ಅಲ್ಲದೆ, ಸೈಂಟ್—ಜೋಸೆಫ್ ಮತ್ತು ಕಾಮನ್‌ವೆಲ್ತ್ ಇಂಜಿನಿಯರಿಂಗ್ ವರ್ಕ್ಸ್‌ಗಳಲ್ಲಿ ಈಗಿರುವ ಸಂಖ್ಯೆಯನ್ನು ಹೆಚ್ಚಿಸುವ ವಿಚಾರವೂ ನಡೆದಿದೆ. ಹೀಗೆ ಒಟ್ಟಿಗೆ ಈ ತರಬೇತಿಗಾಗಿ ಮಂಗಳೂರಲ್ಲಿ ೪೦೦ ಮಂದಿಗೆ ಸೌಕರ್ಯವೇರ್ಪಡುವುದೆಂದು ತಿಳಿದುಬಂದಿರುವುದು.

ದಿ ಹಿಂದು ಫೆಡರಲ್ ಸ್ಕೂಲ್ ಬೋರ್ಡು

ಇದರ ಆಶ್ರಯದಲ್ಲಿ ಪ್ರೊ। ಬಿ. ಸಂಜೀವ ರಾಯರು 'ಗೃಹದಲ್ಲಿ ತಾತ್ವಿಕ ಜೀವನ' ಎಂಬ ವಿಷಯದ ಕುರಿತು ಕಳೆದ ಸೋಮವಾರ ಬೆಸೆಂಟ್ ನೇಶನಲ್ ಗರ್ಲ್ಸ್ ಹೈಸ್ಕೂಲಲ್ಲಿ ಸ್ವಾಮಿ ಸುವಿಚಾರಾನಂದರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು ಶ್ರೀ ಕಜ್ಜೆ ನಾರಾಯಣರಾಯರು ಕೆಲವು ಅಭಂಗಗಳನ್ನು ಮತ್ತು ಕೀರ್ತನೆಗಳನ್ನು ಹಾಡಿದರು

ನೇಮಕ—ವರ್ಗಾವರ್ಗಿಗಳು

ಡೆಪ್ಯುಟಿ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾದ ಶ್ರೀ ಜೆ ಎಸ್ ಸುವರ್ಣರು ೪ ತಿಂಗಳ ರಜೆ ಪಡಕೊಂಡಿರುವುದರಿಂದ ಕಾರ್ಕಳ ತಹಶೀಲ್ದಾರ ಶ್ರೀ ಎನ್ ಅಪ್ಪಾರಾಯರು ಡಿ ಕ ಟೆಕ್ಸ್ ಆಫೀಸರರಾಗಿಯೂ, ಉಡ್ಪಿ ತಹಶೀಲ್ದಾರ ಶ್ರೀ ಜಿ ಎಚ್ ರೇಗೋರವರು ಕಾರ್ಕಳ ತಹಶೀಲ್ದಾರರಾಗಿಯೂ ಶ್ರೀ ಕೇಶವ ಕುಡ್ವರು ಉಡ್ಪಿ ತಹಶೀಲ್ದಾರರಾಗಿಯೂ, ಶ್ರೀ ಯು ಕಳ್ಳಿಬ್ಯಾರಿಗಳು ಕಾಸರಗೋಡಿನ ಆಕ್ಟಿಂಗ್ ತಹಶೀಲ್ದಾರರಾಗಿಯೂ, ಹಜೂರ ಆ ಟ್ರೆಜರರ್ ಶ್ರೀ ಕೆ ಸೀತಾರಾಮ ಶೆಟ್ಟರವರು ಕಾಸರಗೋಡಿನ ಸಬ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿರುವರು

ಕಾಸರಗೋಡಿನ ಅ। ಕ। ಟೆಕ್ಸ್ ಆಫೀಸರರಾದ ಶ್ರೀ ಪಿ ಎಸ್ ತಿಮ್ಮಪ್ಪ ಶೆಟ್ಟರು ಮಂಗಳೂರಿಗೂ ಶ್ರೀ ಸೊಲೊಮನ್ ಜೋಶ್ವರು ಕಾಸರಗೋಡಿಗೂ ವರ್ಗಾಯಿಸಲ್ಪಟ್ಟಿದ್ದಾರೆ

ನೆಲ್ಲೂರಿನ ಶ್ರೀ ಟಿ ಎಂ ರಂಘವಾಚಾರ್ಲುರವರು ಕಾಸರಗೋಡಿನ ಎಡಿಶನಲ್ ಡಿ ಎ ಎಸ್ಪಿಯಾಗಿ ವರ್ಗಾಯಿಸಲ್ಪಟ್ಟಿದ್ದಾರೆ ಶ್ರೀ ಎನ್ ಎಸ್ ಕೃಷ್ಣರಾಯರು ಪುತ್ತೂರಿನ ಒನರರಿ ಸ್ಪೆಶಲ್ 1 ಕ್ಲಾಸ್ ಮ್ಯಾಜಿಸ್ಟ್ರೇಟರಾಗಿಯೂ, ಶ್ರೀಮತಿ ಪುದಿಯುದತ್ ಭಾರ್ಗವಿ ಗೋವಿಂದನ್ ಮತ್ತು ಶ್ರೀ ಬಂಚಾಣ ಸಾಂತಪ್ಪ ರೈಗಳು ಕಾಸರಗೋಡಿನ ಬೆಂಚ್ ಮ್ಯಾಜಿಸ್ಟ್ರೇಟರಾಗಿಯೂ ನೇಮಕಪಟ್ಟಿದ್ದಾರೆ

ಮಂಗಳೂರು ಹೆಡ್ ಪೋಸ್ಟ್‌ಮಾಸ್ಟರ್ ಶ್ರೀ ಆರ್ ವೆಂಕಟ್ರಮಣ ಶ್ಯಾನಬಾಗರು ೪ ತಿಂಗಳ ರಜೆ ಪಡಕೊಂಡಿರುವುದರಿಂದ ಚೆಂಗಲ್ಪಟ್ಟಿನ ಪೋಸ್ಟ್‌ಮಾಸ್ಟರ್ ಶ್ರೀ ಶ್ರೀನಿವಾಸ ಅಯ್ಯಂಗಾರರು ಇಲ್ಲಿಗೆ ನೇಮಕಪಟ್ಟಿದ್ದಾರೆ

ಕುಂದಾಪುರ ಅಸಿಸ್ಟಾಂಟ್ ಕಲೆಕ್ಟರ ಶ್ರೀ ಆರ್ ಪ್ರಸಾದರು ಉತ್ತರ ಆರ್ಕಾಡ್ ಜಿಲ್ಲೆಯ ತಿರುಪತ್ತೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ

ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

ತಾ ೧೨ರಂದು ಶ್ರೀ ಎಂ ಡಿ ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ದ ಕ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಸೇರಿತ್ತು ಪ್ರಕಾರ ಕಾರ್ಯದರ್ಶಿ ಶ್ರೀ ಕೆ ಪಿ ರಾಮ ಪೊತುವಾಳ ಇವರು ಜಿಲ್ಲೆಯ ಕೆಲವು ಸರ್ಕಲುಗಳಲ್ಲಿ ಪುನರ್ರಚಿಸಿದ ಸರ್ಕಲ್ ಕಾಂಗ್ರೆಸ್ ಕಮಿಟಿಗಳನ್ನು ಮಂಜೂರು ಮಾಡುವ, ಶಾಂತಿದಲ ತರಬೇತಿ ಶಿಬಿರವನ್ನು ಮಂಗಳೂರಲ್ಲಿ ತೆರೆಯಬೇಕೆನ್ನುವ, ಈ ಶಿಬಿರದಲ್ಲಿ ಜಿಲ್ಲೆಯ ಪ್ರತಿ ಸರ್ಕಲಿನಿಂದ ಇಬ್ಬರಂತೆ ಸ್ವಯಂಸೇವಕರನ್ನು ತರಬೇತಿಗೊಳಿಸುವ ಏರ್ಪಾಡು ಮಾಡಬೇಕೆನ್ನುವ, ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ವಿಚಾರದಲ್ಲಿ ಎಲ್ಲ ಸರ್ಕಲ್ ಕಾಂಗ್ರೆಸ್ ಕಮಿಟಿಗಳು ಭರದಿಂದ ಕಾರ್ಯ ನಡೆಸಿ ಸದಸ್ಯತ್ವದ ಕಾರ್ಯವನ್ನು ಇದೇ ತಾ ೩೧—೭—೪೨ರೊಳಗೆ ಮುಗಿಸತಕ್ಕದೆನ್ನುವ, ಹಳೇ ತಾಲೂಕು ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಅಧಿಕಾರಿಗಳಲ್ಲಿ ಯಾರು ತಮ್ಮೊಡನೆ ಇರುವ ಲೆಕ್ಕಪತ್ರಗಳನ್ನೂ ಹಣವನ್ನೂ ಇನ್ನೂ ಹೊಸ ಕಮಿಟಿಗಳಿಗೆ ಒಪ್ಪಿಸಲಿಲ್ಲವೋ ಅವರೆಲ್ಲ ಅದನ್ನು ಕೂಡಲೇ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಕಳಿಸಿ ಕೊಡತಕ್ಕದೆನ್ನುವ, ದ ಕ ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷಕ್ಕೆ ಶ್ರೀ ಎಂ ಡಿ ಅಧಿಕಾರಿಯವರನ್ನು, ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಗಿ ಸದಸ್ಯರಾಗಿ ನೇಮಿಸುವ, ರಾಜಾಜಿಯವರ ವರ್ತನೆ ಬಗ್ಗೆ ಅಲ್ಲಹಾಬಾದಿನಲ್ಲಿ ಸೇರಿದ ಕಳೆದ ಕಾಂಗ್ರೆಸ್ ಕಮಿಟಿ ಸಭೆಯಲ್ಲಾದ ಠರಾವನ್ನು ಸಮರ್ಥಿಸುವ, ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಹಾತ್ಮಾಜಿಯವರೇ ಕಾಂಗ್ರೆಸಿನ ಧುರೀಣತ್ವ ವಹಿಸಿ ಜನತೆಗೆ ಮಾರ್ಗದರ್ಶಕರಾಗಬೇಕೆಂದೆನ್ನುವ ನಿರ್ಣಯಗಳಾದುವು

ಮಂಗಳೂರು ಕ್ಲಿನಿಕ್

ತಾ 15-7-42ರಂದು ಡಾ ಕೊಡ್ಯಾನ್ ನಾಗಪ್ಪ ಆಳ್ವ, ಎಂ ಬಿ ಬಿ ಎಸ್ ಇವರು ಹಂಪನ್ ಕಟ್ಟೆಯಲ್ಲಿ 'ಮಂಗಳೂರು ಕ್ಲಿನಿಕ್' ಎಂಬ ಹೊಸ ಚಿಕಿತ್ಸಾಲಯವನ್ನು ತೆರೆದಿರುವರು ಇದರ ಉದ್ಘಾಟನಾ ಸಮಾರಂಭವು ಶ್ರೀ ಎ ಬಿ ಶೆಟ್ಟಿ ಎಂ ಎಲ್ ಎ ಇವರಿಂದ ಮಾಡಲ್ಪಟ್ಟಿತು

ಡೆಟಿನ್ಯೂಗಳನ್ನು ಬಿಡಿರಿ

ಕಳೆದ ಆದಿತ್ಯವಾರ ಮಂಗಳೂರ ಮಜೂರರ ಮಹಾ ಸಭೆಯೊಂದು ರಘುನಾಥಯ್ಯ ಮೆಮೊರಿಯಲ್ ಹಾಲಿನಲ್ಲಿ ಶ್ರೀ ಕೇಶವ ಕಾಮತರ ಅಧ್ಯಕ್ಷತೆಯಲ್ಲಿ ಕೂಡಿ ಈಗ ಚಿತಗಾಂಗ್ ಮೊದಲಾದ ಕಡೆಗಳಲ್ಲಿ ದಿಗ್ಬಂಧಿತರಾಗಿರುವ ಡೆಟಿನ್ಯುಗಳನ್ನು ಬಿಡುಗಡೆ ಮಾಡುವಂತೆ ಸರಕಾರದೊಡನೆ ಕೇಳಿಕೊಳ್ಳುವ ಠರಾವು ಮಾಡಲಾಯಿತು ಶ್ರೀ ಬಿ ವಿ ಕಕ್ಕಿಲ್ಲಾಯರು ಆ ವಿಷಯ ಭಾಷಣವಿತ್ತರು

ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ

ಕಳೆದ ಶನಿವಾರ ಈ ಕಮಿಟಿ ಸಭೆಯು ಸ್ಥಳೀಯ ಕಾಂಗ್ರೆಸ್ ಆಫೀಸಿನಲ್ಲಿ ಶ್ರೀ ಕೆ ಈಶ್ವರ ಎಂ ಎಲ್ ಎ ಅವರ ಅಧ್ಯಕ್ಷತೆಯಲ್ಲಿ ಜರುಗಿ ಕಾಂಗ್ರೆಸ್ ಸದಸ್ಯರನ್ನು ಹೆಚ್ಚಿಸುವ ಕುರಿತೂ ಈ ನಗರದಲ್ಲಿ ಬಡವರಿಗಾಗಿ ಇನ್ನೇಳು ಅಕ್ಕಿ ಡಿಪೋಗಳನ್ನು ಅಲ್ಲಲ್ಲಿ ತೆರೆಯಿಸುವ ಕುರಿತೂ ನಿರ್ಧಾರವಾಡಿತು

"ರಿಫ್ರೆಶ್ಯರ್ ಕೋರ್ಸ್"

ಜಿಲ್ಲಾ ಕಲೆಕ್ಟರರಿಂದ ಕೆಲಕಾಲದ ಹಿಂದೆ ಆರಂಭಿಸಲ್ಪಟ್ಟ ಕೊ—ಓಪರೇಟಿವ್ ಇನಸ್ಪೆಕ್ಟರ್ ಹಾಗೂ ಸುಪರ್ ವೈಜರುಗಳ ಸಲುವಾಗಿದ್ದ "ರಿಫ್ರೆಶ್ಯರ್ ಕೋರ್ಸ್" ಒಂದು ವಾರ ನಡೆದು ಕಳೆದ ಆದಿತ್ಯವಾರ ಕೊನೆಗೊಂಡಿತು ಆ ಸಂದರ್ಭದಲ್ಲಿ ಜಿಲ್ಲಾ ಕೃಷಿ ಶಾಖೆಯ ಅಧಿಕಾರಿಗಳಾದ ಶ್ರೀ ಯು ವಿಠ್ಠಲ ರಾಯರು "ಆಹಾರ ಸಾಮಗ್ರಿಗಳು ಹೆಚ್ಚಾಗಿ ಬೆಳೆಸಿ" ಎನ್ನುವ ಕುರಿತೂ ಜಿಲ್ಲಾ ಅ॥ ಸಂಘದ ಅಧ್ಯಕ್ಷ ಶ್ರೀ ಎಂ ಎಸ್ ಮಾಧವರಾಯರು "ಶೆಡ್ಯೂಲ್ಡ್ ಕ್ಲಾಸಸ್ ಸಹಕಾರಿ ಸಂಘ"ಗಳ ಕುರಿತೂ ಭಾಷಣ ಕೊಟ್ಟರು

ಸಹಕಾರಿ ಸುಪರ್‌ವೈಜರುಗಳ ಸಭೆ

ಸಹಕಾರಿ ಸುಪರ್‌ವೈಜರುಗಳ ಒಂದು ಸಭೆಯು ಕಳೆದ ಆದಿತ್ಯವಾರ "ಸೆಂಟ್ರಲ್ ಬೇಂಕಿನ" ಅಧ್ಯಕ್ಷರಾದ ಶ್ರೀ ಎಂ ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ, ಗ್ರಾಮ ಸಂಘಗಳ ಸದಸ್ಯರಿಗೆ ಬೇಕಾದ ಪದಾರ್ಥಗಳನ್ನು ಸಂಘದ ಮೂಲಕ ಜಂಟೀ ಖರೀದಿಗೆ ಒದಗಿಸುವ ಏರ್ಪಾಡಿನ ಕುರಿತು ಚರ್ಚಿಸಿ ಇತ್ಯರ್ಥಿಸಲಾಯಿತು.

ಕಾಸರಗೋಡು

ಚರ್ಕತ್ತೂರು

ಕಣ್ಣನ್ನೂರು ಜೈಲಿನಿಂದ ಬಿಡುಗಡೆಯಾಗಿ ಬಂದಿರುವ ಶ್ರೀ ಟಿ ಸುಬ್ರಹ್ಮಣ್ಯನ್ ತಿರುಮುಂಬು ಅವರನ್ನು ಇಲ್ಲಿನ ರೈತರು ಯಥೋಚಿತವಾಗಿ ಸ್ವಾಗತಿಸಿ ಸನ್ಮಾನಿಸಿದರು.

ಪೆರಡಾಲ

ಮಿಡ್ಲ್ ಸ್ಕೂಲ್ ತೆರೆಯುವ ಅವಶ್ಯಕತೆ

ಪೆರ್ಡಾಲಿನ 'ಬದಿಯಡ್ಕ' ಎಂಬಲ್ಲಿ ಹಯ್ಯರ್ ಎಲಿಮೆಂಟರಿ ಶಾಲೆಯೊಂದು ಊರವರ ವಿಶೇಷ ಪ್ರಯತ್ನದಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನ ಸಹಕಾರದಿಂದಲೂ ಮೂರು ವರ್ಷಗಳ ಹಿಂದೆ ಸ್ಥಾಪಿತವಾಯಿತು ಹಯ್ಯರ್ ಎಲಿಮೆಂಟರಿ ಶಾಲೆಯು ಸ್ಥಾಪಿತವಾಗುವ ಮೊದಲು ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ನೂರಕ್ಕಿಂತಲೂ ಕಡಿಮೆ ಇದ್ದು ಈಗ ಇಲ್ಲಿ ಮುನ್ನೂರಕ್ಕೆ ಮಿಕ್ಕಿ ವಿದ್ಯಾರ್ಥಿಗಳಿದ್ದಾರೆ ಆದರೆ ಇತ್ತೀಚೆಗೆ ಡಿಪಾರ್ಟ್‌ಮೆಂಟಿನವರು ಎಂಟನೆಯ ಕ್ಲಾಸು ಕಲಿತವರಿಗೆ ಹೈಸ್ಕೂಲಿನ IV ಫಾರ್ಮಿಗೆ ಪ್ರವೇಶವಿಲ್ಲವೆಂದು ಮಾಡಿದ್ದರಿಂದ, ಈಗ ಮೇಲಿನ 7, 8ನೆಯ ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ ವಿದ್ಯಾರ್ಥಿಗಳು II ಫಾರ್ಮು III ಫಾರ್ಮುಗಳಿಗೆ ಹೈಸ್ಕೂಲುಗಳಿಗೆ ಹೋಗಿ ಸೇರುತ್ತಾರೆ. ಹೀಗೆಯೇ ಪರಿಸ್ಥಿತಿ ಮುಂದುವರಿದರೆ ಹಯ್ಯರ್ ಎಲಿಮೆಂಟರಿ ಶಾಲೆಯ ವಿಷಯ ಊರವರು ಉತ್ಸಾಹಿಗಳಾಗುವುದು ಕಡಿಮೆಯಾಗುತ್ತಾ ಹೋಗಬಹುದು. ಆದ್ದರಿಂದ ಡಿಸ್ಟ್ರಿಕ್ಟ್ ಬೋರ್ಡಿನವರು ಹಾಗೂ ಸಂಬಂಧಪಟ್ಟವರು ಇದನ್ನು ಮಿಡ್ಲ್ ಸ್ಕೂಲಾಗಿ ಮಾರ್ಪಡಿಸುವ ಯೋಜನೆಯನ್ನು ಆದಷ್ಟು ತೀವ್ರ ಕೈಗೊಂಡರೆ ಊರವರಿಗೆ ಹೆಚ್ಚಿನ ಪ್ರಯೋಜನವಾಗುತ್ತಿತ್ತು ಕಾಸರಗೋಡು ಪೇಟೆಯನ್ನು ಬಿಟ್ಟರೆ ಇಡೀ ತಾಲೂಕಿನಲ್ಲಿ ಬೇರೆ ಮಿಡ್ಲ್ ಸ್ಕೂಲ್ ಇಲ್ಲದಿರುವುದರಿಂದಲೂ ಕಾಸರಗೋಡು ನೀಲೇಶ್ವರ ಹೈಸ್ಕೂಲುಗಳಿಗೆ ಈ ಕಡೆಯಿಂದ ತುಂಬಾ ವಿದ್ಯಾರ್ಥಿಗಳು ಹೋಗುತ್ತಿರುವುದರಿಂದಲೂ ಇಲ್ಲಿ ಮಿಡ್ಲ್ ಸ್ಕೂಲ್ ಮಾಡುವುದು ಅತ್ಯಂತ ಅವಶ್ಯವಾಗಿದೆ ಪ್ರಕೃತ ಹಯ್ಯರ್ ಎಲಿಮೆಂಟರಿ ಶಾಲೆಗೆ ಎರಡು ಕಟ್ಟೋಣಗಳಿದ್ದು ಅದರಲ್ಲಿ ಮಿಡ್ಲ್ ಸ್ಕೂಲ್ ತರಗತಿಗಳನ್ನು ಏರ್ಪಡಿಸುವ ವ್ಯವಸ್ಥೆಗೂ ಸಾಕಷ್ಟು ಅನುಕೂಲತೆಯಿರುವುದು ಆದ್ದರಿಂದ ಡಿ ಬೋ ನವರು ಹಾಗೂ ಸಂಬಂಧಪಟ್ಟವರು ಈ ಕುರಿತು ತೀವ್ರ ಗಮನಕೊಡಲಾರರೆ? (ಊರಿನವ)

ಮೂಲ್ಕಿ

ಬಂಟರ ಯಾನೆ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಶಾಖೆಯೊಂದನ್ನು ಇಲ್ಲಿ ತೆರೆಯಬೇಕಾಗಿ ನಿಶ್ಚಯಿಸಿ, ತಾ ೧೧—೭—'೪೨ನೇ ಶನಿವಾರ ಸಂಘದ ಅಧ್ಯಕ್ಷರಾದ ರಾವ್ ಬಹದೂರ್ ಶ್ರೀ ಕೆ ಟಿ ಆಳ್ವರು (ರಿಟಾಯರ್ಡ್ ಡಿಪ್ಯುಟಿ ಡೈರೆಕ್ಟರ್ ಒಫ್ ಎಗ್ರಿಕಲ್ಚರ್) ಕಾರ್ನಾಡು ಮಿಶನ್ ಶಾಲೆಯ ಎದುರಿಗಿರುವ ಕಟ್ಟೋಣದಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಿದರು



ಸಿನೆಮಾ ಪುಟ

ಲೀಲಾದೇಸಾಯಿ 'ಶಾಮನ್ನ'ದಲ್ಲಿ

ಲಕ್ಷ್ಮೀ ಪ್ರೊಡಕ್ಷನಿನವರ 'ಶಾಮನ್ನ' ಚಿತ್ರದಲ್ಲಿ ಲೀಲಾ ದೇಸಾಯಿ ಅಭಿನಯಿಸುತ್ತಾಳೆ. ಜಯರಾಜ್, ಕೆ. ಸಿ. ಡೇ. ಕಿರಣ ದಿವಾನ್ ಮೊದಲಾದವರು ಉಪ ನಟರು. ಡಾ. ನರೇಶ ಸೇನಗುಪ್ತರ ಕಥೆಯನ್ನು ಆಧರಿಸಿ ಈ ಸಿನೆಮಾ ರಚಿಸಲಾಗಿದೆ.

'ದುನಿಯಾ ಏಕ್ ತಮಾಶ್'

ದುನ್ನಿಯಾ ಏಕ್ ತಮಾಶಾ (ಲೋಕವು ಒಂದು ತಮಾಷೆ) ಎಂಬೀ ಸೌಭಾಗ್ಯ ಪಿಕ್ಚರ್ಸ್ಸಿನವರ ಚಿತ್ರವು ಈಗ ಬಹಳ ಜನಪ್ರಿಯವಾಗಿರುವುದು. ಆದಿಯಿಂದ ಕೊನೆವರೆಗೆ ಇದರಲ್ಲಿ ಹಾಸ್ಯ ಶೃಂಗಾರಜನಕ ಸಂದರ್ಭಗಳೇ ಇರುತ್ತವೆ. ಅಖ್ತರ್ ಇದರಲ್ಲಿ ಮುಖ್ಯ ನಟಿಯಾಗಿದ್ದಾಳೆ.

ಸೌಗಂಧ್

ನ್ಯೂ ಥಿಯೇಟರ್ಸಿನವರ ಇತ್ತೀಚೆಯ ಚಿತ್ರ 'ಸೌಗಂಧ'ವು ಈಗ ಪ್ರಕಟವಾಗಿದೆ. ಇದು ಅಖಿಲ ಭಾರತದಲ್ಲಿ ಹೆಚ್ಚು ಜನಪ್ರಿಯವಾಗಿ ಪ್ರದರ್ಶಿಸಲಾಗುವುದೆಂದು ಊಹಿಸಲಾಗಿದೆ.

ಆಂಖ್ ಮಿಚೌಲಿ

ಅಮರ್ ಪಿಕ್ಚರ್ಸಿನವರ ಎರಡನೆಯ ಚಿತ್ರ, 'ಆಂಖ್ ಮಿಚೌಲಿ' ಇದು ಪ್ರಕಟವಾಗಿದೆ. ನಲಿನಿ ಜಯವಂತ್ ಮತ್ತು ಸುಲೋಚನಾ ಇದರಲ್ಲಿ ನಟಿಸುತ್ತಾರೆ.

ಶಾಹುಮೋಡಕ್ 'ನವಯುಗ'ದಲ್ಲಿ

'ಭರತ್ ಮಿಲಾಪ್'ನಲ್ಲಿ ಅಭಿನಯಿಸಿದ ಶಾಹುಮೋಡಕ್ ಈಗ ನವಯುಗ ಚಿತ್ರಪಟವನ್ನು ಸ್ನೇಹಪ್ರಭಾಳೊಡನೆ ಸೇರಿರುವನೆಂದು ಸುದ್ದಿಯಿದೆ. ಸ್ನೇಹಪ್ರಭಾಳ ಅಭಿನಯವುಳ್ಳ ಕೆಲವು ಚಿತ್ರಗಳನ್ನು ನವಯುಗದವರು ತಯಾರಿಸುವುದರಲ್ಲಿದ್ದಾರೆ.

ಲೀಲಾ—ಪಹಾರಿ ಸನ್ಯಾಲ್

ನ್ಯೂ ಥಿಯೇಟರ್ಸ್ 'ಸೌಗಂಧ' ಚಿತ್ರವನ್ನು ಲೀಲಾ ಕಂಡಳು. ಚಿತ್ರಮಂದಿರದಿಂದ ಹೊರಬಂದವಳಿಗೇ ಪಹಾರಿ ಸನ್ಯಾಲನ ಭೇಟಿಯಾಯಿತು, "ಕುಮಾರ ಪಾತ್ರ ವಹಿಸುವಷ್ಟು ಪ್ರತಿಭ ನಮ್ಮಲ್ಲಿರುವುದೆಂದು ನಾನು ಎಣಿಸಿರಲಿಲ್ಲ" ನಗ ತಾಸುದಿದಳು ಲೀಲಾ. ಪಹಾರಿ ಗಂಭೀರನಾಗಿ ಹೇಳಿದ 'ನನ್ನಲ್ಲಿರುವ ಅನೇಕ ತರದ ಪ್ರತಿಭೆಗಳ ವಿಷಯ ನೀವು ಇನ್ನೂ ಅರಿತಿಲ್ಲ' ಆ ಅನೇಕ ತರದ ಪ್ರತಿಭೆಗಳು ಯಾವು ಯಾವುವೊ?

'ತಸ್‌ವೀರ್' ಅತ್ರೆ ಚಿತ್ರ

ಆಚಾರ್ಯ ಅತ್ರೆಯವರು 'ತಸ್‌ವೀರ್' ಚಿತ್ರ ತಯಾರಿಸಿದ್ದಾರೆ. ದಗಿರ್ಜ ಖೋಟೆ, ಮೋತಿಲಾಲ್ ಮತ್ತು ಸುವರ್ಣಲತಾ ಮೊದಲಾದವರು ಇದರಲ್ಲಿ ಅಭಿನಯಿಸುವರು. ಅತ್ರೆಯವರು ಅನಾರೋಗ್ಯದಿಂದ ಪೂರ್ಣ ಗುಣಹೊಂದಿಲ್ಲ.

ಜಾಗೀರ್ದಾರರು ಪ್ರಭಾತಕ್ಕೆ

ಅತ್ರೆ ಪಿಕ್ಚರ್ಸಿನ ನಿರ್ದೇಶಕ ಜಾಗೀರ್ದಾರರನ್ನು ಪ್ರಭಾತ ಕಂಪೆನಿಯವರು ಕರೆದಿರುವರಂತೆ. ತಮ್ಮ 'ವಸಂತಸೇನಾ' ತಯಾರಾದ ಮೇಲೆ ಅವರು ಪ್ರಭಾತವನ್ನು ಸೇರುವರೆಂದೂ ವಾರ್ತೆ.

'ಬಸಂತ'ದ ಬಳಿಕ?

ಮುಂಬಯಿ ಟಾಕೀಸಿನವರ ಬಸಂತ್ ಚಿತ್ರವು ಈಗ ಮ ಗಿಯ ತ್ತಾ ಬಂದಿದೆ. ಮುಂದಿನ ಚಿತ್ರದ ತಯಾರಿ ನಡೆಯುತ್ತಲಿದೆ. ಇದರಲ್ಲಿ ಅಶೋಕ ಕುಮಾರ್, ಮುಮ್ತಾಜ್ ಶಾಂತಿ ಜತೆಯಾಗಿ ಅಭಿನಯಿಸುವರೆಂದು ಸುದ್ದಿಯಿದೆ.

ನೇಶನಲ್ಸ್ 'ವಿಜಯ'

ನೇಶನಲ್ ಸ್ಟುಡಿಯೋದವರ ವಿಜಯ ಚಿತ್ರವು ಮುಂಬಯಿಯಲ್ಲಿ ಪ್ರದರ್ಶಿತವಾಯಿತು. ಇದರಲ್ಲಿ ಹರೀಶ್, ದುರ್ಗಾ ಖೋಟಿ, ಮಾಯಾದೇವಿ, ಹುಸ್ನಬಾನು ಇವರು ನಟಿಸಿರುವರು.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ
ಎಂ ಪಿ ದೇವರಾವ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಉಡುಪಿ.
I ನೇ ಫೋರ್ಮಿಗೆ 0-12-0 II ನೇ ಫೋರ್ಮಿಗೆ 0-12-0
ಎಂ ಪಿ ದೇವರಾವ್ ಬಿ ಎ ಎಲ್ ಟಿ ಮತ್ತು ಭವಾನಿರಾವ್ ಬಿ ಎ ಎಲ್ ಟಿ.
III ನೇ ಫೋರ್ಮಿಗೆ 0-12-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ಬಾಲಕರ ಲಘುಗಣಿತ
ಬಿ. ಭವಾನಿರಾವ್, ಬಿ ಎ, ಎಲ್ ಟಿ ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು
ನಾಲ್ಕನೇ ದರ್ಜೆಗೆ 0-7-0 ಐದನೇ ದರ್ಜೆಗೆ 0-8-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ನವೀನ ಭೂವಿವರಣೆ
ಎಂ ವಾಸುದೇವರಾವ್ ಎಂ ಎ ಎಲ್ ಟಿ (Dip Geog)
ನಾಲ್ಕನೇ ದರ್ಜೆಗೆ 0-6-0 ಐದನೇ ದರ್ಜೆಗೆ 0-7-0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ
ಎಸ್ ರಾಮಕೃಷ್ಣಚಾರ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್, ಕಾರ್ಕಳ
ಆರನೇ ದರ್ಜೆಗೆ 0-6-0 ಏಳನೇ ದರ್ಜೆಗೆ 0-6-0 ಎಂಟನೇ ದರ್ಜೆಗೆ 0-6-0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ವ್ಯಾಕರಣ ಮತ್ತು ಪ್ರಬಂಧ
ಕೆ ಕೆ ರೈ ವಿದ್ವಾನ್
4 ಮತ್ತು 5ನೇ ದರ್ಜೆಗೆ 0 2-0 6ನೇ ದರ್ಜೆಗೆ ಅಥವಾ I ಫೋರ್ಮಿಗೆ 0-3-0
7 ನೇ ದರ್ಜೆಗೆ ಅಥವಾ II ಫೋರ್ಮಿಗೆ 0 3 6 8 ನೇ ದರ್ಜೆಗೆ ಅಥವಾ III ಫೋರ್ಮಿಗೆ 0-4-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಮಕ್ಕಳ ಪದ್ಯಮಂಜರಿ
ಕೆ ಕೆ ರೈ ವಿದ್ವಾನ್
ಮೊದಲನೆ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0 2 0 2ನೇ ಪುಸ್ತಕ ೪, ೫ನೇ ದರ್ಜೆಗಳಿಗೆ 0-2-6
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಸಿವಿಕ್ಸ್
ಎಂ ಗಣಪತಿರಾವ್ ಐಗಳ್
3ನೇ ದರ್ಜೆಗೆ 0-1-6 4ನೇ ದರ್ಜೆಗೆ 0-2 0 5ನೇ ದರ್ಜೆಗೆ 0-2-6
ಎಂ ಗಣಪತಿರಾವ್ ಐಗಳ್ ಮತ್ತು ಕೆ ಕೆ. ರೈ ವಿದ್ವಾನ್
6ನೇ ದರ್ಜೆಗೆ 0 3 0 7ನೇ ದರ್ಜೆಗೆ 0-3-0 8ನೇ ದರ್ಜೆಗೆ 0-3-0
(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ

ಚರಿತ್ರೆ ಮತ್ತು ಕಥೆಗಳು
ಮೂರನೇ ದರ್ಜೆಗೆ 0-2-6 ನಾಲ್ಕನೇ ದರ್ಜೆಗೆ 0-3-0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ
ಎಂ ವಾಸುದೇವರಾವ್ ಎಂ ಎ. ಎಲ್ ಟಿ. ಗಣಪತಿ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0-3-0 ಐದನೇ ದರ್ಜೆಗೆ 0-3-6

ಪ್ರಕೃತಿಶಾಸ್ತ್ರ
ಎಂ ಗಣಪತಿರಾವ್ ಐಗಳ್
ಮೂರನೇ ದರ್ಜೆಗೆ 0-1-6

ಶಾರದಾ ಛಾಪಖಾನೆ ರಥಬೀದಿ ಮಂಗಳೂರು.

ಇದು ನಿಮ್ಮ ಚರ್ಮವನ್ನು ತಂಪಾಗಿರಿಸುವುದು ಅಲ್ಲದೆ ಅಧಿಕ ಉಷ್ಣತೆಯಿಂದ ಚರ್ಮವನ್ನು ರಕ್ಷಿಸುವುದು.

ಅಧಿಕ ಉಷ್ಣತೆಯನ್ನು ಪರಿಹರಿಸಲು ತಕ್ಕ ಹಂಚಿಕೆಗಳಿರುವಾಗ ಅಸೌಖ್ಯವನ್ನು ಹೊಂದಿ ಯಾಕೆ ಬಳಲುತ್ತೀರಿ. ಸಾವಿರಾರು ಮಹಿಳೆಯರು ಆನಂದದಾಯಕವಾದ ಸೌಖ್ಯವನ್ನು ಪಡೆಯಲು ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum Powder) ಶೋಧನೆ ಮಾಡಿ ಉಪಯೋಗಿಸುತ್ತಿದ್ದಾರೆ. ಬಹಳ ಕೋಮಲವಾದ ಚರ್ಮವನ್ನು ಕೂಡ ಸಂತಯಿಸುವುದು. ಕುಟಿಕೂರಾ ಟಾಲ್ಕಮ್ ಪೌಡರನ್ನು (Cuticura Talcum) ವಿಶಿಷ್ಟ ರೀತಿಯಿಂದ ತಯಾರಿಸಿ ತಕ್ಕುದಾದ ಪರಿಮಳ ದ್ರವ್ಯ ಮತ್ತು ತೈಲಗಳಿಂದ ಔಷಧೀಕರಿಸಲ್ಪಟ್ಟಿದೆ. ಸಾಮಾನ್ಯ ಪೌಡರುಗಳಿಗಿಂತ ಉತ್ತಮ ಗುಣವುಳ್ಳದ್ದಾಗಿ ಚರ್ಮವನ್ನು ತಂಪಾಗಿರಿಸಿ ಸಂತಯಿಸುವ ಶಕ್ತಿ ಇರುವುದು. ಉಷ್ಣದಿಂದ ಬೆಂದಂತೆ ಚರ್ಮದ ಭಾಗಕ್ಕೆ ಸ್ವಲ್ಪ ಪೌಡರನ್ನು ಹಚ್ಚಿದಾಕ್ಷಣ ತಂಪಾದ ಸ್ಪರ್ಶದಂತೆ ಭಾಸವಾಗುತ್ತದೆ. ಜೆವರನ್ನು ಹೀರಿಕೊಂಡು ಅನೇಕ ತಾಸುಗಳ ಪರ್ಯಂತರ ಆನಂದವನ್ನೀಯುವುದು. ಎಲ್ಲಾ ಮಹಿಳೆಯರು ಇದರ ಸುಮಧುರವಾದ ಪರಿಮಳವನ್ನು ಹೆಚ್ಚುತ್ತಿರುವರು.

ಒಂದೇ ಒಂದು ಕುಟಿಕೂರಾ ಟಿನ್ನನ್ನು (Cuticura) ಕೊಂಡುಕೊಳ್ಳಿರಿ ಕುಟುಂಬದ ಪ್ರತೀ ಒಬ್ಬನಿಗೂ ಬಹು ಅಮೂಲ್ಯವಾದದ್ದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಟಾಲ್ಕಮ್ ಪೌಡರು

CUTICURA TALCUM POWDER

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು ಹೋಡುವ ಗಟಿ ತಲ್ಪುವ ಗಟಿ
ಗೂಡ್ಸು ಬಂಡಿ 6 25 ಬೆಳಗ್ಗೆ 7 30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್) 8 30 ಬೆಳಗ್ಗೆ 6.45 ಸಾಯಂ.
ಜಾಲಾರ್ ಪೇಟೆ ಪೆಸೆಂಜರ್ 11 30 ಮಧ್ಯಾಹ್ನ 3 45 ಸಾಯಂ.
ಕನ್ನನೂರು 6 0 ಸಾಯಂ. 9.30 ಪೂರ್ವಾಹ್ನ

ವಿಚಿತ್ರ-ವಿಜ್ಞಾನ

ಮುತ್ತಿನ ಮಳೆ ಬಿತ್ತು!

ಅಮೇರಿಕದ ಹಾಲಿವುಡ್ ಸಿನೆಮಾ ತಾರೆ ಮಿಸ್ ಒಲಿವಿಯಾಡಿ ಹೇವಿಲೆಂಡ್ ಎಂಬಾಕೆ ಸುರಸುಂದರಿಯೆನಿಸಿದ ನಟಿ. ಆದ್ದರಿಂದಲೇ ಆಕೆಯ ಮೇಲೆ ಮುತ್ತಿನ ಮಳೆ ಸುರಿಸಲ್ಪಟ್ಟಿತು! ಇದುವರೆಗೆ ಅವಳಿಗೆ ೧೨,೦೦೦ ಮುತ್ತುಗಳನ್ನಿತ್ತಿರುವರಂತೆ! ಪ್ರಸಿದ್ಧ ನಟಶಿರೋಮಣಿಯಾದ ಎರಾಲ್‌ಪ್ಲಿನ್ ಎಂಬಾತನೇ ಆಕೆಗೆ ೪೦೧ ಮುತ್ತುಗಳನ್ನಿತ್ತನು. ಜಾರ್ಜ್ ಬ್ರೆಂಟ್ ಎಂಬಾತನು ೭೫ ಮುತ್ತಿನ ಮಾಲೆ ಹಾಕಿದನು! ಡಿಕ್‌ಪೊವೆಲ್ ೭೦ ಸಲ ಮುತ್ತು ಸುರಿಸಿದನು! ಜೇಮ್ಸ್ ಕಾಗ್ನೆ ೩೧ ಸರ್ತಿ ಮುದ್ದಿಟ್ಟನು! ಡೇವಿಟ್ ನಿವೆನ್ ೨೨ ಸಲ ಚುಂಬಿಸಿದನು. ಹೀಗೆ ಹಲವರು ಕೂಡಿ ಆಕೆಯ ಮೇಲೆ ಹತ್ತು ಸಾವಿರ ಮುತ್ತಿನ ಮಳೆ ಸುರಿಸಿದರು! ಮುತ್ತಿಕ್ಕಿದವರೋ, ಮುತ್ತು ಪಡೆದವರೋ ಯಾರು ಭಾಗ್ಯವಂತರು?

೧೫೨ ವರ್ಷ ಬದುಕಿದ ರಾಜಕುಮಾರಿ ಆಲೀಸ್

ಮೊನ್ನೆ ಮೆಲ್ಬೋರ್ನದಲ್ಲಿ ಮೃತಳಾದ 'ರಾಜಕುಮಾರಿ ಆಲಿಸ'ಳೆಂಬ ಆನೆಗೆ ಸಾಯುವಾಗ ೧೫೨ ವರ್ಷ ತುಂಬಿತ್ತು! ಅದು ೧೮ನೆ ಶತಮಾನದ ಅಂತ್ಯಭಾಗದಲ್ಲಿ ಹುಟ್ಟಿತು. ಅದನ್ನು ಹುಟ್ಟಿದ ಒಂದೆರಡು ವರ್ಷಗಳಲ್ಲಿ ಲಂಡನಿನ ಮೃಗಾಲಯಕ್ಕೆ ಕಳುಹಿಸಲಾಗಿತ್ತು. ರಾಣಿ ವಿಕ್ಟೋರಿಯಾಳಿಗೆ ಇದನ್ನು ಕಂಡರೆ ಬಹಳ ಪ್ರೀತಿ. ಏಳನೇ ಎಡ್ವರ್ಡರು ಯುವರಾಜರಾಗಿದ್ದಾಗ ಅದನ್ನೇರಿ ಸವಾರಿ ಮಾಡುತ್ತಿದ್ದರು. ಮುಂದೆ 'ರಾಜಕುಮಾರಿ ಆಲೀಸ'ಳನ್ನು ಒಂದು ಸರ್ಕಸ್ ಕಂಪನಿಯವರು ಪಡಕೊಂಡು ಆಸ್ಟ್ರೇಲಿಯಕ್ಕೆ ಕೊಂಡೊಯ್ದರು. ಅಲ್ಲಿ ಅದು ಮೃತವಾಯಿತು. ಆನೆಗಳ ಆಯುಷ್ಯದ ಅವಧಿ ಎಷ್ಟೆಂಬುದು ಇದರಿಂದ ತಿಳಿಯಬಹುದೆ?

ತೋಟಿಯು ಮೆಟ್ರಿಕ್ ಪಾಸಾದನು!

ಬಾಟೋಲಾಲ್ ದೋಮರ್ ಎಂಬ ಢಾಕ್ಕಾದ ತೋಟಿಗಳ ಸಂಘದ ಕಾರ್ಯದರ್ಶಿಯು ಈ ವರ್ಷ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ. ಆದರೂ ಈಗಲೂ ಅದೇ ತೋಟಿ ಕೆಲಸದಲ್ಲಿಯೇ ಇದ್ದಾನೆ.

ಈತನಿಗೆ ೧೧ ವರ್ಷಗಳಿದ್ದಾಗ ತೋಟಿ ಕೆಲಸಕ್ಕೆ ಢಾಕ್ಕಾ ಮುನ್ಸಿಪಾಲಿಟಿಯಲ್ಲಿ ಇವನು ನೇಮಿಸಲ್ಪಟ್ಟಿದ್ದನು. ಆದರೆ ಅವನಿಗೆ ವಿದ್ಯಾಭ್ಯಾಸದಲ್ಲಿ ಬಹಳ ಆಶೆಯಿದ್ದುದರಿಂದ ಅವನು ಕಲಿಯುತ್ತಲೇ ಇದ್ದನು. ಈಗ ಅವನಿಗೆ ೩೦ ವರ್ಷ ಪ್ರಾಯ ಆಗಿದೆ! ಮೆಟ್ರಿಕ್ ಪರೀಕ್ಷೆಯಾದರೂ ತನ್ನ ಹಿಂದಿನ ಕಸುಬನ್ನು ಆತನು ಬಿಟ್ಟುಕೊಟ್ಟಿರುವುದಿಲ್ಲ.

ಶ್ರೀ ರಾಮಕೃಷ್ಣ ಲೀಲಾಪ್ರಸಂಗ

ಸಮಾಧಿಯೆಂಬುದು ಮಸ್ತಿಷ್ಕವಿಕಾರವಲ್ಲ!

ಅಂತರ್ದರ್ಶನದಿಂದ ಅನುಭವವಾಗುವುದು

ಮೂಲಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

ಸರ್ವಗುಹ್ಯತಮಂ ಭೂಯಃ ಶೃಣುಮೇ ಪರಮಂವಚಃ।
ಇಷ್ಟೋಽಸಿಮೆ ದೃಢಮಿತಿ ತತೋ ವಕ್ಷ್ಯಾಮಿತೇ ಹಿತಂ ॥ ಗೀತಾ 18–64

ಶ್ರೀ ಪರಮಹಂಸರು ಆವಿರ್ಭವಿಸುವ ಮೊದಲು ಶಿಕ್ಷಿತ ಅಥವಾ ಅಶಿಕ್ಷಿತ ಜನರೆಲ್ಲರೂ, ಭಾವ, ಸಮಾಧಿ, ಅಥವಾ ಆಧ್ಯಾತ್ಮಿಕ ರಾಜ್ಯದ ಅಪೂರ್ವ ದರ್ಶನ ಮತ್ತು ಅನುಭೂತಿಗಳ ವಿಚಾರವಾಗಿ ಸಂಪೂರ್ಣ ಅಜ್ಞರಾಗಿದ್ದರೆಂಬುದಾಗಿ ಹೇಳಿದರೆ ಅದೊಂದು ಅತಿಶಯೋಕ್ತಿಯಾಗಲಾರದು. ಅಶಿಕ್ಷಿತ ಸಾಮಾನ್ಯ ಜನರು ಅದೊಂದು ಭಯ, ವಿಸ್ಮಯಕಾರಕವಾದ ಅಸಂಗತ ವ್ಯಾಪಾರವೆಂದು ಪರಿಗಣಿಸಿದ್ದರು; ಮತ್ತು ಹೊಸ ಶಿಕ್ಷಿತ ಸಂಪ್ರದಾಯವು ಆಗಿನ ಧರ್ಮಜ್ಞಾನ ವಿವರ್ಜಿತ ವಿದೇಶೀ ವಿದ್ಯಾಪ್ರಭಾವಕ್ಕೆ ಸಂಪೂರ್ಣವಾಗಿ ಮನಸೋತು, ಅಂತಹ ದರ್ಶನಾದಿಗಳಾಗುವುದು ಅಸಾಧ್ಯವೆಂದೂ ಅವು ಮಸ್ತಿಷ್ಕ ವಿಕಾರಗಳೆಂದೂ ಭಾವಿಸುತಿದ್ದರು. ಆಧ್ಯಾತ್ಮಿಕ ರಾಜ್ಯದ ಭಾವಸಮಾಧಿಯಿಂದ ಉತ್ಪನ್ನವಾದ ದೈಹಿಕ ವಿಕಾರಗಳು ಅವರ ದೃಷ್ಟಿಗೆ ಮೂರ್ಛೆಯೆಂದೂ ದೈಹಿಕ ರೋಗ ವಿಶೇಷವೆಂದೂ ಕಾಣುತ್ತಿತ್ತು. ಈಗ ಆ ಭಾವನೆಯು ಬಹಳವಾಗಿ ಪರಿವರ್ತನೆಯಾಗಿದ್ದರೂ, ಭಾವ ಮತ್ತು ಸಮಾಧಿ ರಹಸ್ಯದ ಸರಿಯಾದ ತತ್ವವನ್ನರಿಯಲು, ಈಗಲೂ ಅತ್ಯಲ್ಪ ಜನರೇ ಬಲ್ಲರು. ಅಲ್ಲದೆ ಶ್ರೀರಾಮ ಕೃಷ್ಣ ದೇವರ ಭಾವ ಮುಖಾಪೇಕ್ಷೆಯ ವಿಚಾರವಾಗಿ ಸ್ವಲ್ಪವಾದರೂ ತಿಳಿಯಬೇಕಾದರೆ ಸಮಾಧಿ ತತ್ವದ ವಿಷಯವಾಗಿ ಕಿಂಚಿತ್ ಜ್ಞಾನವಿರುವುದು ಆವಶ್ಯಕವಾಗಿದೆ. ಆದುದರಿಂದ ಆ ವಿಷಯವನ್ನೇ ಅಲ್ಪಸ್ವಲ್ಪ ಪಾಠಕರಿಗೆ ತಿಳಿಸಲು ನಾವು ಇಲ್ಲಿ ಪ್ರಯತ್ನಿಸುತ್ತೇವೆ.

ಸಮಾಧಿಯು ಮಸ್ತಿಷ್ಕವಿಕಾರವಲ್ಲ.

ಸಾಮಾನ್ಯ ಮಾನವರ ಅನುಭವಕ್ಕೆ ಬಾರದ ವಿಷಯಗಳಿಗೆ ನಾವು ಸಾಧಾರಣವಾಗಿ 'ವಿಕಾರಗಳು' ಎಂದು ಹೇಳುತ್ತೇವೆ. ಆಧ್ಯಾತ್ಮಿಕ ರಾಜ್ಯದ ಸೂಕ್ಷ್ಮ ಅನುಭವಗಳೆಂದಿಗೂ ಸಾಧಾರಣ ಮನುಷ್ಯನ ಉಪಲಬ್ಧಿಯ ವಿಷಯಗಳಲ್ಲ; ಅವುಗಳನ್ನು ಅನುಭವಿಸಲು ಉಪದೇಶ ದೀಕ್ಷೆ ನಿರಂತರ ಅಭ್ಯಾಸ ಮುಂತಾದವುಗಳು ಆವಶ್ಯಕವಾಗಿವೆ. ಅಂತಹ ಅಸಾಧಾರಣವಾದ ದರ್ಶನ ಮತ್ತು ಅನುಭವಾದಿಗಳು ಸಾಧಕನನ್ನು ದಿನೇ ದಿನೇ ಪವಿತ್ರವಾಗಿ ಮಾಡುವುದು. ಅಲ್ಲದೆ ನಿತ್ಯವೂ ಹೊಸ ಚೇತನವನ್ನಿತ್ತು ಬಲಿಷ್ಟನನ್ನಾಗಿಯೂ ಹೊಸ ಹೊಸ ಭಾವಗಳಿಂದ ಕೂಡಿದವನನ್ನಾಗಿಯೂ ಮಾಡಿ ಕ್ರಮೇಣ ಸಾಧಕನು ಚಿರಶಾಂತಿಯ ಅಧಿಕಾರಿಯಾಗುಗುವನು. ಆದ್ದರಿಂದ ಅಂತಹ ದರ್ಶನಾದಿಗಳಿಗೆ 'ವಿಕಾರಗಳು' ಎಂದು ಹೇಳುವುದು ಉಚಿತವೇ? ವಿಕಾರಗಳಿಂದ ಮಾನವನು ದುರ್ಬಲನಾಗುತ್ತಾನೆ. ಅಲ್ಲದೆ ಆತನ ಬುದ್ಧಿಯು ಕೂಡಾ ಕ್ಷೀಣವಾಗುವುದು. ಆಧ್ಯಾತ್ಮಿಕ ರಾಜ್ಯದ ದರ್ಶನಾನುಭವಗಳ ಪ್ರತಿಫಲವು ಸಂಪೂರ್ಣವಾಗಿ ಬೇರೆ. ಅವುಗಳ ಕಾರಣವೂ ಕೂಡ ಬೇರೆ. ಅವುಗಳಿಗೆ ಮಸ್ತಿಷ್ಕ ವಿಕಾರ ಅಥವಾ ರೋಗವೆಂದು ಹೇಳಲು ಎಂದಿಗೂ ಆಗದು. ಸಮಾಧಿಯಿಂದಲೇ ಆ ಆಧ್ಯಾತ್ಮಿಕ ಲಾಭ ಮತ್ತು ಚಿರಶಾಂತಿ ದೊರಕುವುದು.

ವಿಶಿಷ್ಟ ಧರ್ಮಾನುಭೂತಿಗಳೆಲ್ಲ ಅಂತರ್ದರ್ಶನಾದಿಗಳಿಂದಲೇ ಚಿರಕಾಲದಿಂದಲೂ ಅನುಭವಕ್ಕೆ ಬಂದಿರುತ್ತವೆ. ಆದರೆ ಮನುಷ್ಯನ ವೃತ್ತಿಗಳೆನೆಲ್ಲಾ ನಿರೋಧಿಸಿ ಮಾನವನು ನಿರ್ವಿಕಲ್ಪಸಮಾಧಿಗೆ ಅದ್ವೈತಭಾವಕ್ಕೆ ತಲುಪದೆ ಇರುವ ತನಕ ಆತನು ಆಧ್ಯಾತ್ಮಿಕ ಜಗತ್ತಿನ ಚಿರಶಾಂತಿಯ ಅಧಿಕಾರಿಯಾಗುವುದಿಲ್ಲ. ಕಾಲಿಗೆ ಮುಳ್ಳು ಚುಚ್ಚಿದರೆ ಆ ಮುಳ್ಳನ್ನು ಬೇರೊಂದು ಮುಳ್ಳಿನ ಸಹಾಯದಿಂದ ಹೊರಪಡಿಸಿ ಎರಡೂ ಮುಳ್ಳುಗಳನ್ನೂ ಬಿಸಾಡಬಹುದು' ಎಂದು ಶ್ರೀರಾಮಕೃಷ್ಣದೇವರು ಹೇಳುತಿದ್ದರು. ಶ್ರೀ ಪರಮಾತ್ಮನನ್ನು ಮರೆತು ಈ ಜಗದ್ರೂಪ ವಿಕಾರವು ಬಂದಿರುತ್ತದೆ. ನಾನಾ ರೂಪರಸಾದಿ ಅನುಭವಗಳ ಈ ವಿಕಾರಗಳನ್ನು ಆಧ್ಯಾತ್ಮಿಕ ರಾಜ್ಯದ ಪೂರ್ವೋಕ್ತ ದರ್ಶನಾನುಭವಗಳಿಂದ ತಡೆದು ಮಾನವನಿಗೆ ಕ್ರಮೇಣ ಅದ್ವೈತಾನುಭವವನ್ನು ಕೊಡುತ್ತದೆ. ಆಗ 'ರಸೋ ವೈಸಃ' ಎಂಬ ಋಷಿವಾಣಿಯ ಉಪಲಬ್ಧಿಯನ್ನು ಪಡೆದು ಮಾನವನು ಧನ್ಯನಾಗುತ್ತಾನೆ. ಇದೇ ವಿಷಯ ಧರ್ಮ ಜಗತ್ತಿನಲ್ಲಿ ಎಷ್ಟೋ ಮತಗಳು, ಅನುಭವಗಳು ಅಥವಾ ದರ್ಶನಾದಿಗಳಿರಲಿ ಎಲ್ಲವೂ ಮಾನವನಿಗೆ, ಅದೇ ಒಂದು ಲಕ್ಷ್ಯಕ್ಕೊಯ್ಯುವುದು. ಈ ದರ್ಶನಾದಿಗಳು, ಸಾಧಕರು ಲಕ್ಷ್ಯಾಭಿಮುಖವಾಗಿ ಎಷ್ಟು ದೂರ ಮುಂದುವರಿದರೆಂಬುದಾಗಿ ಕಂಡುಹಿಡಿಯಲು ಮೈಲುಗಲ್ಲು [mile stones] ಗಳೆಂದು ಶ್ರೀ ಸ್ವಾಮಿ ವಿವೇಕಾನಂದರು ನಿರ್ದೇಶಿಸಿದ್ದಾರೆ. ಆದ್ದರಿಂದ ವಿಶಿಷ್ಟ ಭಾವದ ಪ್ರಾಬಲ್ಯದಿಂದ ಅಥವಾ ಧ್ಯಾನ ಸಹಾಯದಿಂದ ಒಂದೆರಡು ದೇವಮೂರ್ತಿಗಳ ದರ್ಶನವಾದೊಡನೆ ಧರ್ಮ ಸಾಧ್ಯವಾಯಿತೆಂದು ಪಾಠಕರು ಭಾವಿಸಬಾರದು. ಹಾಗೆ ಭಾವಿಸಿದವರು ಹೆಚ್ಚಿನ ಭ್ರಮೆಯಲ್ಲಿ ಬಿದ್ದು ಲಕ್ಷ್ಯವನ್ನು ಕಳಕೊಂಡಿದ್ದಾರೆ. ಮತ್ತು ಲಕ್ಷ್ಯಚ್ಯುತರಾಗಿ ಸ್ವಮತ ಭ್ರಾಂತಿಯಿಂದ ಪರಸ್ಪರರಲ್ಲಿ ದ್ವೇಷಹಿಂಸಾದಿಗಳಲ್ಲಿ ನಿರತರಾಗಿದ್ದಾರೆ. ಶ್ರೀ ಪರಮಾತ್ಮನಲ್ಲಿ ಭಕ್ತಿ ತೋರಿಸಲು ಹೋಗಿ, ಅಂತಹ ಭ್ರಮೆಯಲ್ಲಿ ಬಿದ್ದರೆ ಮಾನವನು ಸ್ವಮತ ಭ್ರಾಂತನಾಗುತ್ತಾನೆ. ಈ ದೋಷವೇ ಭಕ್ತಿ ಮಾರ್ಗಕ್ಕೆ ಒಂದು ದೊಡ್ಡ ವಿಘ್ನಸ್ವರೂಪವಾಗಿದೆ. ಮತ್ತು ಮಾನವನಲ್ಲಿ ಅದು ಹೀನ ಬುದ್ಧಿಯನ್ನು ಹುಟ್ಟಿಸುತ್ತದೆ.

(ಕ್ರಮಶಃ)

೩,೦೦೦ ಸ್ತ್ರೀ ವೈಮಾನಿಕರು

ಇಷ್ಟರಲ್ಲೇ ಅಮೇರಿಕದಲ್ಲಿ ಮೂರು ಸಾವಿರಕ್ಕೆ ಮಿಕ್ಕಿದಷ್ಟು ಸ್ತ್ರೀ ವೈಮಾನಿಕರು ವಿಮಾನ ಕಾರ್ಯ ಮಾಡುತ್ತಿದ್ದಾರೆ. ಸ್ತ್ರೀ ವೈಮಾನಿಕರ ಸಂಖ್ಯೆಯು ಈಗಲೂ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

ನಿಮಗೆ ಜಪಾನಿಯರ ಭಾಷೆ ತಿಳಿಯುತ್ತದೆಯೋ?

ಅನೇಕರಿಗೆ ಜಪಾನಿಯರ ಭಾಷೆ ತಿಳಿದಿದೆ.
ಅವರು ವಿಚಾರವಿಲ್ಲದ ವದಂತಿಗಳನ್ನು ಹರಡಿ,
ಮನಃ ಕ್ಲೇಶವನ್ನೂ, ಪರಿತಾಪವನ್ನೂ,
ಸ್ಟಾಕ್ ಮಾರ್ಕೆಟ್‌ಗಳಲ್ಲಿ ನಿಷ್ಕಾರಣವಾದ ದಿಗಿಲು ಮತ್ತು
ವಿಚಾರಕೆಟ್ಟ ನಷ್ಟಗಳನ್ನೂ ಉಂಟುಮಾಡುತ್ತಾರೆ.
ಈ ವದಂತಿಗಳು ಜಪಾನಿನಿಂದ ಬರುತ್ತವೆ.
ಅವಕ್ಕೆ ಲಕ್ಷ್ಯಕೊಡಬೇಡಿ
ಅವುಗಳನ್ನು ಹರಡಬೇಡಿ.
ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ಇಂಡಿಯಾ ದೇಶದ ಯುದ್ಧಮುಖವನ್ನು ರಚಿಸಿರಿ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ದಮ್ಮು ಗುಣ ಪಡಲೇ ಬೇಕು
ಎಂದು ಡಾಕ್ಟರರು
ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಆದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ, ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದು ತೆಗೆದು ಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶ್ವಾಸದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ ೨-೮-೦ ರೂ ೪-೨-೦ ರೂ ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ

ಪತ್ತಾ:-ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬಾಯಿ ಏಜಂಟ-ವೆಸರ್ಸ ನನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬಾಯಿ

ಪುರೋಹಿತ ಶ್ವಾಸಹಾರಿ

YOUR INTERESTS & OURS.

The interests of the banker and his customers are closely related. We therefore try to study all matters from your stand point. Tell us your requirements

CANARA BANK, LIMITED.
ESTD 1906

ಒಂದು ವಾರದೊಳಗೆ
ಪ್ರಕಟವಾಗುವವು
ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ
೨ನೆಯ ದರ್ಜೆಯ ಕಥೆ 0-1-6
ಮತ್ತು
೩ನೆಯ ದರ್ಜೆಯ ಭೂವಿವರಣೆ 0-2-0
ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ ನೋಟಗಳ ಬದಲಾವಣೆ ಜನತೆಯ ಸಂಪರ್ಕ ಆಯಾನ ಅನುಕೂಲತೆಗಳು

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ.

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ— ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ — ಬೆಂಗಳೂರು — ಮಂಗಳೂರು
ಮದರಾಸು — ತ್ರಿವೇಂಡ್ರಂ — ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Bhuvanendra Products Limited,

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು: —

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ESTD. SWADESHABHIMANI 1906

[ಸಂಪುಟ 16] ತಾರೀಕು 24—7—1942 [ಸಂಚಿಕೆ 29]

ಕಾಂಗ್ರೆಸು 'ಬಹಿರಂಗ ದಂಗೆ' ಹೂಡುವುದು!

ಗಾಂಧಿಜಿ ಹೇಳುತ್ತಾರೆ

ಮುಂದಿನ ಚಳವಳದ ಮಹೋಗ್ರ ರೂಪ!

ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯದ ವಿಷಯ ಈಗಾಗಲೇ ಅನೇಕ ಅಭಿಪ್ರಾಯಗಳು ಬಂದಿವೆ, ಬ್ರಿಟಿಷರು ಭಾರತದಲ್ಲಿನ ತಮ್ಮ ಪ್ರಭುತ್ವವನ್ನು ಕೊನೆಗೊಳಿಸಿ ಹೊರಟುಹೋಗುವುದರ ಮೂಲಕ ತಮ್ಮ ಸದ್ಬುದ್ಧಿಯನ್ನು ಪ್ರದರ್ಶಿಸಬೇಕೆಂದು ಎಲ್ಲಾ ಮುಖಂಡರೂ ಅಭಿಪ್ರಾಯಪಟ್ಟಿದ್ದಾರೆ ದೌರ್ಭಾಗ್ಯದಿಂದ ಹಾಗಾಗದೆ, ಇನ್ನೂ ಭಾರತವನ್ನು ತಮ್ಮ ಮುಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ಅವರು ಹಠ ಹಿಡಿದರಾದರೆ ಘರ್ಷಣೆಯುಂಟಾಗುವುದು ಅಂತಹ ಸಂದರ್ಭದಲ್ಲಿ ಕಾಂಗ್ರೆಸು ಅನಿವಾರ್ಯವೆಂದು ಮಹಾ ಆಂದೋಲನವನ್ನು ಆರಂಭಿಸಿಯೇ ಬಿಡುವುದಾಗಿ ನಿಶ್ಚಯಿಸಿದೆ ಇಟ್ಟ ಹೆಜ್ಜೆಯನ್ನು ಕಾಂಗ್ರೆಸು ಹಿಂತೆಗೆದುಕೊಳ್ಳುವಂತೆ ಕಾಣುವುದಿಲ್ಲ ಬ್ರಿಟಿಷರು ಹೊರಟುಹೋಗುವುದೂ ಹೆಚ್ಚಿನಮಟ್ಟಿಗೆ ಸಂಭವವಿಲ್ಲ ಹಾಗಾದರೆ ಮುಂದೆ ಭಾರತದಲ್ಲಿ ಉಗ್ರ ಚಳವಳ ನಡೆಯಲೇ ಬೇಕಾಗುತ್ತದೆ, ಇದರ ಕೆಲಕೆಲವು ವಿವರಗಳೂ ಇಷ್ಟರಲ್ಲಿಯೇ ಪ್ರಕಟವಾಗಿರುವವು

ಹೊಸ ಚಳವಳದ ಉಗ್ರರೂಪ!

ವರ್ಧಾದಲ್ಲಿ ಸೇರಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯವು ಈಗಾಗಲೇ ಮುಖಂಡರಿಂದ ಸಾಕಷ್ಟು ವಿವರಿಸಲ್ಪಟ್ಟಿದೆ ಸದ್ಯದ ಪರಿಸ್ಥಿತಿಯಲ್ಲಿ ಹಿಂದೂದೇಶದ ಸ್ವಾತಂತ್ರ್ಯವು ಸಾರಲ್ಪಡದಿದ್ದರೆ ರಾಷ್ಟ್ರಕ್ಕೆ ಮಹಾನರ್ಥವಿದೆಯೆಂದು ಮುಖಂಡರು ನಿಶ್ಚಯಿಸಿ, ದೇಶದ ಸ್ವಾತಂತ್ರ್ಯ ಸ್ಥಾಪನೆಯ ಪ್ರಥಮ ಮತ್ತು ಅವಶ್ಯ ಹೆಜ್ಜೆಯಾಗಿ 'ಬ್ರಿಟಿಷರೇ ಹಿಂದೂದೇಶದಿಂದ ಹೊರಟು ಹೋಗಿ' ಎಂಬ ನಿರ್ಣಯಕ್ಕೆ ಬಂದಿರುವರು ಬ್ರಿಟಿಷರು ಇಲ್ಲಿಂದ ಹೊರಟುಹೋಗದಿದ್ದರೆ ಮಹಾತ್ಮರ ಮುಂದಾಳುತನದಿಂದ ಮಹಾಚಳವಳವೊಂದು ಪ್ರಾರಂಭವಾಗುವುದಾಗಿಯೂ ನಿರ್ಣಯವಾಗಿದೆ 'ಕಾಂಗ್ರೆಸಿನ ಮುಂದೆ ಎರಡು ಪ್ರಾಮುಖ್ಯ ಸಮಸ್ಯೆಗಳು ಇದ್ದವು, ಒಂದು ರಾಷ್ಟ್ರದ ಸ್ವಾತಂತ್ರ್ಯ ಸಾಧನೆ, ಇನ್ನೊಂದು ಇಂದಿನ ಪರಿಸ್ಥಿತಿಯನ್ನು ಎದುರಿಸುವುದು ಭಾರತವು ಸ್ವತಂತ್ರವಾದರೆ ಅದರ ರಕ್ಷಣೆಯನ್ನು ಸರಿಯಾಗಿ ವ್ಯವಸ್ಥೆ ಮಾಡಬಲ್ಲುದು ಇದೊಂದು 'ಕೊನೆಯ ಮಾತು' ಅಲ್ಲ ಈ ನಿರ್ಣಯದ ಮೂಲಕ ಬ್ರಿಟಿಷ್ ಪ್ರಭುತ್ವಕ್ಕೆ ಭಾರತವು ತನ್ನ ಬೇಡಿಕೆಯನ್ನು ಇನ್ನೊಮ್ಮೆ ಹೇಳಿದೆ ಇದನ್ನು ನಿರಾಕರಿಸಿದರೆ ಮುಂದೆ ಕಾಂಗ್ರೆಸು ಆರಂಭಿಸಲಿರುವ ಚಳವಳವು ಸಾಮೂಹಿಕವಾಗಿಯೇ ಇರುವುದು' ಹೀಗೆಂದ ವರ್ಕಿಂಗ್ ಕಮಿಟಿ ನಿರ್ಣಯದ ಕುರಿತು ರಾಷ್ಟ್ರಪತಿ ಅಜಾದರು ಹೇಳಿದರು ಮಹಾತ್ಮಾಜಿಯವರು ಈ ಕುರಿತು ಈ ರೀತಿ ವಿವರಿಸಿದ್ದಾರೆ "ಬ್ರಿಟಿಷರು ಇಲ್ಲಿಂದ ಹೊರಟುಹೋಗದೆ ಸಂಧಾನದ ಮಾತುಕತೆಯೇ ಇಲ್ಲ ಒಮ್ಮೆ ಮಾಡಿದ ನಿರ್ಣಯವನ್ನು ಕಾಂಗ್ರೆಸು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ ಒಂದೋ ಬ್ರಿಟಿಷರು ಭಾರತದ ಸ್ವಾತಂತ್ರ್ಯವನ್ನು ಒಪ್ಪಬೇಕು, ಇಲ್ಲವೇ ಒಪ್ಪದಿರಬೇಕು ನಮ್ಮ ಆಂದೋಲನವು ಬಹಿರಂಗ ದಂಗೆ ಹಾಗೂ ಸಾಮೂಹಿಕ ಚಳವಳವೇ ಆಗುವುದು ಆದಷ್ಟು ಕ್ಷಿಪ್ರವಾಗಿ ಭಾರತವು ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡುವುದೇ ಈ ಚಳವಳದ ಉದ್ದೇಶ' ಇತ್ತೀಚೆಗೆ ಬಂದ ಒಂದು ಸುದ್ದಿಯಂತೆ ಈಗಾಗಲೇ ಗಾಂಧಿಜಿಯವರು ಮುಂದಿನ ಆಂದೋಲನದ ಸ್ವರೂಪವನ್ನು ಪ್ರಕಟಿಸಿರುವರೆಂದು ತಿಳಿದಿದೆ ಚಳವಳವು ಸಾಮೂಹಿಕವಾಗುವಂತೆ ಎಲ್ಲಾ ವಿಧದಿಂದಲೂ ನೋಡಲಾಗುವುದೆಂದೂ, ಅಹಿಂಸೆಯಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಶಕ್ತಿಶಾಲಿಯೆಂಬುದನ್ನು ಇಡೀ ಜಗತ್ತಿಗೆ ತೋರಿಸುವಂತೆ ಗಾಂಧಿಜಿ ವಿಚಾರಿಸುವರೆಂದೂ, ಸಾಮೂಹಿಕ ಆಂದೋಲನದ ಗರ್ಜನೆ ಅಖಿಲ ಭಾರತದ ಮೂಲೆಮೂಲೆಗಳಲ್ಲಿಯೂ ಕೇಳಬರುವಂತೆ ಮಾಡಲಾಗುವುದೆಂದೂ, ಸರಕಾರೀ ನೌಕರರು ಮತ್ತು ಕಾರ್ಖಾನೆ ಕೆಲಸಗಾರರು ಕೆಲಸ ಬಿಡುವಂತೆ ಹೇಳಲಾಗುವುದೆಂದೂ ಎ ಐ ಸಿ ಸಿ ಮುಗಿದ ಕೂಡಲೇ ಕರನಿರಾಕರಣ ಚಳವಳ ಪ್ರಾರಂಭವಾಗುವುದೆಂದೂ ಉಪ್ಪಿನ ತೆರಿಗೆ ವಿರುದ್ಧ ಚಳವಳವೇಳುವುದೆಂದೂ ಕೆಲವು ಸುದ್ದಿಗಳೂ ಬಂದಿವೆ ಈ ಸಲದ ಆಂದೋಲನದಲ್ಲಿ ಸೆರೆಮನೆಯ ಹೊರಗಿನ ಹಾಗೂ ಚಳವಳವಿರುವುದಾಗಿಯೂ ಗಾಂಧಿಜಿಯನ್ನು ಸೆರೆಮನೆಯಲ್ಲಿಟ್ಟರೆ ಅವರು ಆಮರಣಾಂತ ಉಪವಾಸ ಕೈಕೊಳ್ಳಲಿರುವರೆಂದೂ ವಾರ್ತೆಯಿರುವುದು ಗಾಂಧಿಜಿಯವರು ತಿಲಕರ ಜನ್ಮದಿನವಾದ ಆಗಸ್ಟ್ 1ಕ್ಕೆ ಶಾಸನಭಂಗ ಆರಂಭಮಾಡಬೇಕೆಂದು ಯೋಚಿಸಿದ್ದು ಇತರರ ಅಭಿಪ್ರಾಯದಂತೆ ಅದು ಆಗಸ್ಟ್ 9ಕ್ಕೆ ಮುಂದುವರಿಸಲಾಗಿದೆಯೆಂದೂ ವದಂತಿಯಿದೆ ಅಂತೂ ಮುಂಬಯಿಯಲ್ಲಿ ಅಗಸ್ಟ್ 7ಕ್ಕೆ ಸೇರಲಿರುವ ಎ ಐ ಸಿ ಸಿ ಸಭೆಯ ನಂತರ ವಿಷಯಗಳು ಸ್ಪಷ್ಟವಾಗುವವು

ತರುಣ ಭಾರತೀಯನೊಬ್ಬನು ಇಂಗ್ಲೆಂಡಿನ ಯುದ್ಧ ಕಾರ್ಖಾನೆಯಲ್ಲಿ ತರಬೇತಿ ಹೊಂದುತ್ತಾನೆ

ರಾಷ್ಟ್ರ ರಕ್ಷಣೆಗಾಗಿ ಸ್ವಾತಂತ್ರ್ಯ

ಕಾಂಗ್ರೆಸು ಇಂತಹ ಒಂದು ನಿರ್ಣಯವನ್ನು ಮಾಡಿದಾಗ, ಕೇವಲ ರಾಷ್ಟ್ರದ ಸ್ವಾತಂತ್ರ್ಯ ಮಾತ್ರ ಅದರ ಗುರಿಯಾಗಿಲ್ಲವೆಂದೂ ಜಪಾನಿನ ಆಕ್ರಮಣದ ಬೆದರಿಕೆಯಿಂದ ರಾಷ್ಟ್ರವನ್ನು ರಕ್ಷಿಸುವುದು ಅದರ ಉದ್ದೇಶವಾಗಿರುವುದೆಂದೂ ಇತ್ತೀಚೆಗೆ ಕಾಂಗ್ರೆಸ್ ಮುಖಂಡರು ಸ್ಪಷ್ಟಪಡಿಸಿದ್ದಾರೆ ಕಾಂಗ್ರೆಸಿನ ದೃಷ್ಟಿಯಲ್ಲಿ ಈ ವಿಷಯ ಸ್ಪಷ್ಟವಾಗಿದೆ ಕಾಂಗ್ರೆಸು ಇಂತಹ ಗಂಡಾಂತರ ಕಾಲದಲ್ಲಿ ಸ್ವಾತಂತ್ರ್ಯದ ವಿಷಯವನ್ನಾದರೂ ಯಾಕೆ ಎತ್ತಿದೆ ಎಂಬುದನ್ನು ವಿವರಿಸಿ ನಿರ್ಣಯ ಸ್ಪಷ್ಟಪಡಿಸಿದೆ ಜಪಾನ್ ಆಕ್ರಮಣವನ್ನೆದುರಿಸಲು ಎಲ್ಲಾ ಪಕ್ಷದವರಿಂದ ಕೂಡಿದ ತಾತ್ಕಾಲಿಕವಾಗಿ ರಾಷ್ಟ್ರ ಸರಕಾರವೊಂದು ಸ್ಥಾಪಿತವಾಗಬೇಕಾದುದು ಅವಶ್ಯವೆಂದು ಆ ನಿರ್ಣಯವೇ ವ್ಯಕ್ತಪಡಿಸಿದೆ ನೆಹರು ಅವರು ಇತ್ತೀಚೆಗೆ ವಿವರಿಸಿದಂತೆ, ಹಿಂದೂದೇಶದಲ್ಲಿಯೂ ಯಾವುದೇ ವ್ಯವಸ್ಥೆ ಆಗದೆ ಇದು ದೌರ್ಭಾಗ್ಯದಿಂದ ಜನರಲ್ಲಿರುವ ಬ್ರಿಟಿಷ್ ದ್ವೇಷ ಭಾವನೆಯು ಅಪ್ರತ್ಯಕ್ಷವಾಗಿ ಜಪಾನ್ ಪರ ಭಾವನೆಯಾಗಿ ಮಾರ್ಪಟ್ಟು ನಮ್ಮ ದೇಶವು ಬರ್ಮಾದಂತೆ ನಾಶವಾಗದಂತೆ ಒಂದು ದಾಸ್ಯ ಸಂಕಲೆಯಿಂದ ಇನ್ನೊಂದು ದಾಸ್ಯಕೂಪಕ್ಕೆ ಬೀಳುವಂತೆ ಆಗದಿರಲಿ ಎಂಬ ಉದ್ದೇಶವೇ ಈ ನಿರ್ಣಯವಾಗಿಯೂ ವ್ಯಕ್ತಮಾಡಲಾಗಿದೆ ಬ್ರಿಟಿಷರು ಇಲ್ಲಿಂದ ಹೊರಟುಹೋಗಬೇಕೆಂದು ಹೇಳುವಲ್ಲಿ ಬ್ರಿಟಿಷ್ ಜನತೆಯು ಇಲ್ಲಿಂದ ಕಾಲ್ಕಿತ್ತು ಹೊರಟು ಹೋಗಬೇಕೆಂಬ ವ್ಯಕ್ತಿಗತ ಅಥವಾ ಜನಾಂಗಗತ ದ್ವೇಷಭಾವನೆಯಿರದೆ ಕೇವಲ ಪರಕೀಯರಾದ ಬ್ರಿಟಿಷರ ಪ್ರಭುತ್ವವು ಇಲ್ಲಿಂದ ಹೋಗತಕ್ಕದೆಂದೂ, ಅದು ಹೋದ ಕೂಡಲೇ ಭಾರತೀಯರಿಗೆ ತಮ್ಮ ನಾಡಿನ ಸ್ವಾತಂತ್ರ್ಯಕ್ಕಾಗಿ ತಾವು ಹೋರಾಡಬೇಕೆಂಬ ಸ್ಫೂರ್ತಿಯುಂಟಾಗಿ ಜಪಾನ್ ಆಕ್ರಮಣಕ್ಕೆ ಹಿಂದೂದೇಶವು ತಲೆ ಬಾಗಲಾರದೆಂದೂ, ಇದರಿಂದ ಬ್ರಿಟನೆ ಅಪೇಕ್ಷೆಪಟ್ಟಂತೆ ಚೀನಕ್ಕೂ ರಶ್ಯಕ್ಕೂ ನೆರವಾಗುವುದೆಂದೂ ಗಾಂಧಿಜಿ ವ್ಯಕ್ತಪಡಿಸಿದ್ದಾರೆ ಮಾತ್ರವಲ್ಲದೆ ಬ್ರಿಟಿಷರು ಈ ರೀತಿ ಗೌರವಕರ ರೀತಿಯಲ್ಲಿ ತಮ್ಮ ಅಧಿಕಾರವನ್ನು ಕೊನೆಗೊಳಿಸಿ ಭಾರತವನ್ನು ಭಾರತೀಯರ ಕೈಗೊಪ್ಪಿಸಿದಾಗ ಬ್ರಿಟಿಷರ ಸದ್ಬುದ್ಧಿಯ ವಿಷಯ ನಮಗೆ ನಿಜವಾಗಿ ಅಭಿಮಾನವುಂಟಾಗಿ ಮುಂದೆ ಮೈತ್ರಿ ಹೆಚ್ಚಲು ಇದರಿಂದ ಕಾರಣವಾಗುವುದೆಂದೂ ಸಾರಲಾಗಿದೆ ಇಂತಹ ಸದ್ಬುದ್ಧಿ ಬ್ರಿಟಿಷರಿಗೆ ಬರದೆ ಇದ್ದರೆ, ಕಾಂಗ್ರೆಸು ಗಾಂಧಿಜಿಯ ಮುಂದಾಳುತನದಲ್ಲಿ ತನ್ನ ಎಲ್ಲಾ ಅಹಿಂಸಾತ್ಮಕ ಶಕ್ತಿಯನ್ನು ಒಟ್ಟುಗೂಡಿಸಿ ಪ್ರಚಂಡ ಆಂದೋಲನವೊಂದನ್ನು ಖಂಡಿತ ಆರಂಭಿಸಲಿರುವರು

ಅಮೆರಿ ಕಾರಣರು

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕೈಕೊಂಡ ಇಂದಿನ ನಿರ್ಣಯಕ್ಕೆ ಅಮೆರಿಯವರೇ

(2ನೆಯ ಪುಟಕ್ಕೆ ಮುಂದುವರಿಯುವುದು)

KANNADA ILLUSTRATED WEEKLY

ವರ್ಕಿಂಗ್ ಕಮಿಟಿ ನಿರ್ಣಯಕ್ಕೆ ಬೆಂಬಲ

ಶ್ರೀ. ಕೆ. ಆರ್. ಕಾರಂತರ ಭಾಷಣ

ರಶ್ಯ ಚೀನಾ ಸೌಹಾರ್ದ ಸಮಿತಿಯ ಸಭೆ

"ರಶ್ಯದೊಡನೆ ಬ್ರಿಟನು ಮಿತ್ರರಾಷ್ಟ್ರವಾಗಿರುವುದರಿಂದ, ರಶ್ಯದ ವಿಜಯವನ್ನು ಹಾರೈಸಿ, ಸಮತಾವಾದಿಗಳು, ಇಂದು ಬ್ರಿಟಿಷರೊಡನೆ ನಾವೀಗಲೇ ಜತೆಗೂಡಿ ಫೇಸಿಸಮ್ಮನ್ನು ಮುರಿಯಲು ಸಹಾಯ ಮಾಡಬೇಕೆಂದು ಹೇಳುತ್ತಾರೆ. ಆದರೆ ನಾನೀ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳವನಾಗಿದ್ದೇನೆ. ನಮ್ಮ ಸ್ವಾತಂತ್ರ್ಯವನ್ನುಸಾರದ ವಿನಾ ನಾವು ಬ್ರಿಟಿಷರೊಡಗೂಡಿ ಯುದ್ಧಕ್ಕೆ ಬೆಂಬಲ ಕೊಡುವುದು ಯೋಗ್ಯವಾಗಿಲ್ಲವೆಂದು ನನ್ನ ಅಭಿಪ್ರಾಯವಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಂಜೂರು ಮಾಡಿದ ಠರಾವನ್ನು ನಾನು ಅನುಮೋದಿಸುತ್ತೇನೆ. ವರ್ಕಿಂಗ್ ಕಮಿಟಿಯ ನಿರ್ಣಯಕ್ಕೆ ನೀವೆಲ್ಲರೂ ಬೆಂಬಲ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ" ಹೀಗೆಂದು ಶ್ರೀ ಕೆ. ಆರ್ ಕಾರಂತ, ಎಂ. ಎಲ್. ಎ. ಇವರು ಕಳೆದ ಆದಿತ್ಯವಾರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಶ್ರೀ. ಎ. ಬಿ. ಶೆಟ್ಟಿ ಎಂ. ಎಲ್. ಎ. ಇವರ ಅಧ್ಯಕ್ಷತೆಯಿಂದ ಕೂಡಿದ ಸೋವಿಯಟ್ ಯೂನಿಯನ್ ಮತ್ತು ಚೈನಾ ಸೌಹಾರ್ದ ಸಮಿತಿಯ ಪ್ರಾರಂಭ ಭಾಷಣ ಮಾಡುತ್ತಾ ಹೇಳಿದರು. ಅವರು ಪ್ರಾರಂಭದಲ್ಲಿ ಭಾರತ ಚೀನಾ, ರಶ್ಯಗಳಲ್ಲಿ ಆರ್ಥಿಕ, ಸಾಂಸ್ಕೃತಿಕ ಮೊದಲಾದ ಸಮಾನತೆ ಇರುವುದೆಂಬುದನ್ನು ವಿವರಿಸಿ ಹೇಳಿ, ರಶ್ಯದ ರಾಜಕೀಯ ಬೆಳವಣಿಗೆಯು ಹೇಗೆ ಪ್ರಪಂಚಕ್ಕೆ ಆದರ್ಶವಾಗಿರುವುದೆಂದೂ, ಪ್ರತಿಯೊಬ್ಬ ಪ್ರಜೆಯ ಹೊಟ್ಟೆ ಬಟ್ಟೆಗಳ ಸಮಸ್ಯೆಯನ್ನು ಪರಿಹರಿಸಲು ರಶ್ಯವು ಹೇಗೆ ಸಮರ್ಥವಾಯಿತೆಂದೂ ವಿವರಿಸಿ ಚೀನದವರ ಸ್ವಾತಂತ್ರ್ಯ ಹೋರಾಟವನ್ನು ಅಭಿನಂದಿಸಿ ಮಾತಾಡಿದರು. ಬ್ರಿಟಿಷರ ರಾಜನೀತಿಯನ್ನು, ಭಾರತದ ಕುರಿತು ಅವರು ತಳೆದ ಧೋರಣೆಯನ್ನು ಖಂಡಿಸಿ ಕೊನೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದರು.

ಶ್ರೀ. ಎ. ಬಿ. ಶೆಟ್ಟರು ಪ್ರಾರಂಭ ಭಾಷಣದಲ್ಲಿ, ಮೊನ್ನೆ ಭಾರತಕ್ಕೆ ಬಂದಿದ್ದ ಚೀನದ ದಳಪತಿ ಕೈಶೇಕರು ಮರಳುವಾಗ, ಭಾರತವನ್ನು ಬಂಧವಿಮೋಚನೆ ಮಾಡಬೇಕೆಂದು ಹೇಳಿದ್ದು ಇಂದೂ ಕಾರ್ಯರೂಪಕ್ಕೆ ಬರದಿರುವ ವಿಷಯ ವಿಷಾದ ಸೂಚಿಸಿ, ಕ್ರಿಪ್ಸ್ ಸಂಧಾನದ ನಿಷ್ಫಲತೆಯನ್ನು ಸಾರಿ, ಸೋವಿಯಟ್ ಯೂನಿಯನ್ ಮತ್ತು ಚೈನಾ ಸೌಹಾರ್ದ ಸಮಿತಿಯ ಸ್ಥಾಪನೆ ಉದ್ದೇಶಗಳನ್ನು ವಿವರಿಸಿ ತಿಳಿಸಿದರು. ಅನಂತರ ಶ್ರೀ. ಎಂ. ಎಸ್. ಮಾಧವರಾಯರು ಭಾಷಣ ಮಾಡಿ ಚೀನಾ ರಶ್ಯಗಳ ಸಾಂಸ್ಕೃತಿಕ ಬೆಳವಣಿಗೆ ಸಮಾಜ ರಚನೆ ಮೊದಲಾದ ವಿಷಯಗಳನ್ನು ವಿವರಿಸಿ, ಭಾರತೀಯರಾದ ನಾವು ಕೇವಲ ರಶ್ಯದ ಪದ್ಧತಿಯನ್ನು ಮೆಚ್ಚುತಿದ್ದರೆ ಸಾಲದು ನಮ್ಮ ದಿನನಿತ್ಯ ಜೀವನದಲ್ಲಿ ಸಮಾಜ ಸಮತಾವಾದಿ ಧೋರಣೆಯನ್ನನ್ನುಸರಿಸಿ ಜಾತಿ ಮತಭೇದಗಳ ನಿವಾರಣೆ, ಮಹಿಳೋದ್ಧಾರ ಮೊದಲಾದುವುಗಳನ್ನು ಮಾಡಿ ಕಾರ್ಯತಃ ಸಮತಾವಾದಿಗಳಂತೆ ವರ್ತಿಸುವುದವಶ್ಯವೆಂದರು. ಆ ಮೇಲೆ ಶ್ರೀ.ಕೆ. ಬಿ. ಜಿನರಾಜ ಹೆಗ್ಡೆ ಎಂ.ಎಲ್. ಎ. [ಕೇಂದ್ರ] ಇವರು ಮಾತನಾಡುತ್ತಾ ರಶ್ಯದಲ್ಲಿ ಹೇಗೆ ಸ್ವನಿರ್ಣಯಾಧಿಕಾರದಿಂದ ಅಲ್ಲಿನ ಪ್ರತಿಯೊಂದು ಮತ ಭಾಷೆಗಳು ಬೆಳವಣಿಗೆ ಹೊಂದಿದವೋ ಹಾಗೆಯೇ ಅದೇ ತತ್ವದಲ್ಲಿ ನಮ್ಮಲ್ಲಿಯೂ ಆಯಾಯ ಪ್ರಾಂತದ ಜನರಿಗೆ ಸ್ವನಿರ್ಣಯಾಧಿಕಾರ ಕೊಡಬೇಕೆಂದೂ ಅದೇ ತತ್ವದ ಮೇಲೆ ರಾಜಾಜಿ ಸೂಚನೆಗೆ ತಾನು ಬೆಂಬಲಕೊಡುವುದಾಗಿಯೂ ತಿಳಿಸಿದರು. ಕೊನೆಗೆ ಶ್ರೀ. ಬಿ.ವಿ. ಕಕ್ಕಿಲ್ಲಾಯರು ಚೀನ ರಶ್ಯಗಳ ರಾಜಕೀಯ ಬೆಳವಣಿಗೆಯ ಕುರಿತು ಸ್ಫೂರ್ತಿದಾಯಕ ಭಾಷಣವಿತ್ತರು.

NOTICE

In the Court of the District Munsif of Mangalore

O. S. No. 184/1942

Between

P. Srinivasa Rao son of P. Shama Rao—advocate Mangalore—— **Plaintiff**

and

Jarappa Rai nephew of Venkappa Rai residing in Annodi of Panambur village Mangalore—— **Defendant**

To the abovenamed defendant please take notice that the plaintiff above named has filed the above suit for recovery of possession of plaint property as also arrears of mulgeni rental future reserve profits due, and that the said suit stands posted to 8th August 1942 for your appearance you may appear either in person or by pleader and file your written statement if any on that date failing which the suit will be decreed exparte.

(By Order of Court)

Mangalore } B. Rama Achar B.A.B.L.
21-7-42 } advocate for plaintiff

ಕಾಂಗ್ರೆಸು ಬಹಿರಂಗ ದಂಗೆ ಹೂಡುವುದು!

(1ನೇ ಪುಟದಿಂದ ಮುಂದುವರಿದುದು)

ಕಾರಣರೆಂದು ಶ್ರೀ. ಕೆ. ಎಂ. ಮುನ್ಶಿಯವರು ಹೇಳಿದರು. ಯುದ್ಧ ಆರಂಭವಾದಂದಿನಿಂದ ಇದು ವರೆಗೆ ಹಿಂದುಸ್ಥಾನದ ವಿಷಯ ಬ್ರಿಟಿಷರು ಸ್ವೀಕರಿಸಿದ ಧೋರಣೆಯಿಂದ ಇಂದು ಜನಮತವು ರೇಗಿರುವುದೆಂದು ಅವರೆಂದರು; "ಕ್ರಿಪ್ಸ್ ಸಂಧಾನದ ಮೊದಲು ಭಾರತೀಯರ ಜನಮತವು ಬ್ರಿಟಿಷರಿಗೆ ಅನುಕೂಲವಾಗಿತ್ತು. ಆದರೆ ಆ ಮೇಲೆ ಬಹಳ ಬದಲಾವಣೆಯಾಯಿತು. ಹಿಂದುಸ್ಥಾನವು ಹೀಗೆಯೇ ದಾಸ್ಯದಲ್ಲಿ ಕೊಳೆಯಬೇಕೆಂದೂ, ಕೊನೆಗಾಣದ ದಾಸ್ಯಪಂಕದಲ್ಲಿ ಮುಳುಗಬೇಕೆಂದೂ, ಪೂರ್ತಿಸಲ್ಲದ ವಚನಗಳಲ್ಲಿ ವಿಶ್ವಾಸವಿಡಬೇಕೆಂದೂ, ಹಿಂದುಸ್ಥಾನಕ್ಕೆ ಇದಕ್ಕಿಂತ ಬೇರೆ ಭವಿಷ್ಯವಿಲ್ಲವೆಂದೂ ಬ್ರಿಟಿಷರು ನಿಶ್ಚಯಿಸಿದ್ದರು ಅಮೆರಿಕೆಯವರು ಆಗಿಂದಾಗ ಅದನ್ನೇ ಹೇಳುತ್ತಾ ಬಂದರು. ಹೀಗಾಗಿ ಕಾಂಗ್ರೆಸ್ ಇಂದು ನಿಶ್ಚಯಿಸಿದ ಈ ಸ್ವಾತಂತ್ರ್ಯದ ಹೋರಾಟಕ್ಕೆ ಅಮೆರಿಕೆಯವರೇ ಕಾರಣರಾಗಿರುವರು" ಎಂದು ಅವರ ಅಭಿಪ್ರಾಯವಾಗಿದೆ.

WANTED

Applications are invited for the post of a Manager (Parupathyagar) for the Sri Venkatramana Temple, Mulki, on a salary of Rs. 75 per month.

The applicants should have completed the age of 25 years and must belong to the Gowd Saraswath Brahmin Community.

The applicant, if selected, should furnish before taking up his appointment, security either in cash or of immovable property, for a sum of Rs. 2500.

Applications should be accompanied by true copies of testimonials, if any, and should reach the Trustees on or before 31st July 1942.

For further particulars apply to:—

Mulki, } *The Trustees,*
2-7-42. } Sri Venkatramana Temple, MULKI

YOUR INTERESTS & OURS

The interests of the banker and his customers are closely related. We therefore try to study all matters from your stand point. Tell us your requirements

CANARA BANK, LIMITED.

ESTD 1906.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನೂ ಬಲವನ್ನೂ ಕೊಡುತ್ತದೆ

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

24-7-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೪-೭-೧೯೪೨]

ಸಮರಭೂಮಿಯ ಸಂಚಾರ

ಈಗ ರಶ್ಯ, ಇಜಿಪ್ಟ್, ಚೀನಗಳಲ್ಲಿ ಯುದ್ಧ ನಡೆಯುತ್ತಿದೆ. ಇಜಿಪ್ಟ್ ಚೀನಗಳ ಯುದ್ಧಗಳಲ್ಲಿ ರಾಜಕೀಯ ಪ್ರಾಧಾನ್ಯತೆಯಿದ್ದರೂ, ಅಲ್ಲಿನ ಯುದ್ಧಗತಿಯು ರಶ್ಯದಷ್ಟು ಪ್ರಚಂಡವಾಗಿಲ್ಲ. ರಶ್ಯದಲ್ಲಿ ಡಾನ್ ನದಿ ಭಾಗದಲ್ಲಿ, ವೊರೊನೆಜ್ ಭಾಗದಲ್ಲಿ ಆಗುತ್ತಿರುವ ಕದನವು ಪ್ರಚಂಡವಾಗಿದೆ. ಮಾರ್ಶಲ್ ಟಿಮಶಂಕೋ ಜರ್ಮನರನ್ನು ಕತ್ತರಿಸುತ್ತಾ, ತತ್ತರಿಸುತ್ತಾ ತನ್ನ ರಾಷ್ಟ್ರವನ್ನು ರಕ್ಷಿಸುತ್ತಿದ್ದಾನೆ. ಜರ್ಮನರು ತಮ್ಮದೆಯ ರಕ್ತದ ಪ್ರವಾಹವನ್ನಾದರೂ ಹರಿಸಿ ವೈರಿಗಳನ್ನು ನಿರ್ನಾಮಗೊಳಿಸಲು ಸೊಂಟ ಕಟ್ಟಿದ್ದಾರೆ. ಹೀಗಿರುವಾಗ, ರಶ್ಯವು ಇಂತಹ ಗಂಡಾಂತರ ಪರಿಸ್ಥಿತಿಯಲ್ಲಿರುವಾಗ, ಮಿತ್ರರು ತಾವು ಮಾಡುತ್ತೇವೆಂದು ಭರವಸೆ ಕೊಡುತ್ತಿರುವ ದ್ವಿತೀಯ ರಣರಂಗವು ಇನ್ನೂ ಯಾಕೆ ಪ್ರಾರಂಭವಾಗಿಲ್ಲವೆಂದು ಜಗತ್ತೇ ಎದ್ದು ನಿಂತು ಪ್ರಶ್ನಿಸುತ್ತಿದೆ.

ನದಿಯಲ್ಲಿ ನೆತ್ತರಿನ ನೆರೆ!

ರಶ್ಯ ಯುದ್ಧವು ಈಗ ಪುನಃ ವಿಷಮವಾಗುತ್ತಿದೆ. ವೊರೊನೆಜ್ ನದಿ ಮತ್ತು ಮಾಸ್ಕೋ ರೋಸ್ಟೋವ್ ರೈಲ್ವೆ ಮಾರ್ಗಗಳಿಂದ ಮುನ್ನುಗ್ಗುತ್ತಿರುವ ಜರ್ಮನರ ರಣರಭಸವನ್ನು ತಡೆಯಲಾರದೆ, ಮಾರ್ಶಲ್ ಟಿಮಶಂಕೋನ ಸೈನ್ಯಗಳು ಹಿಂದೆ ಸರಿಯುತ್ತಿವೆ. ವೊರೊಶಿಲೋವ್ ಗ್ರಾಡ್ ಪಟ್ಟಣವನ್ನು ಜರ್ಮನರು ಆಕ್ರಮಿಸಿಕೊಂಡಿರುವರು. ಅದು ಮಿಲೆರೋವಕ್ಕೆ ದಕ್ಷಿಣದಲ್ಲಿದ್ದು, ಇಲ್ಲಿಗೆ ರೋಸ್ಟೋವ್ ಕೇವಲ ೧೦೦ ಮೈಲು ದೂರದಲ್ಲಿದೆ. ಆದರಿಂದ ಈಗ ಜರ್ಮನರು ಕಾಕಸಸ್ ಸಮೀಪ ಬಂದಂತಾಯಿತು. ಜರ್ಮನ್ ಸೈನಿಕರು ಲಿಸಿಚಾನ್ಸ್ಕ್ ಮತ್ತು ಮಿಲೆರೋವ್‌ಗಳಿಂದ ಅತಿವೇಗವಾಗಿ ನುಗ್ಗಿ ಬರುತ್ತಿರುವರು. ಜರ್ಮನ್ ಸೈನ್ಯಗಳು ಕೆಲವು ಕಾಮೆನಸ್ಕ್ ಕಡೆಗೆ ತೆರಳಿವೆ. ಇದು ರೋಸ್ಟೋವಿಗೆ ಕೇವಲ ೫೦ ಮೈಲು ದೂರದಲ್ಲಿರುವುದು. ಡಾನ್ ನದಿಗಳ ಭಾಗದಲ್ಲಿ ಟಿಮಶಂಕೋ ಸೈನ್ಯಗಳು ಹಿಮ್ಮೆಟ್ಟುತ್ತಿವೆ. ರೋಸ್ಟೋವ್ ಕಡೆಯಲ್ಲಿ ಜರ್ಮನರ ಧಾಳಿಯು ದಿನದಿಂದ ದಿನಕ್ಕೆ ಹೆಚ್ಚು ವಿಸ್ತಾರವಾಗುತ್ತಿದೆ. ಜರ್ಮನರು ಸ್ಟಾಲಿನ್ ಗ್ರಾಡಿಗಾಗಿ ಯುದ್ಧ ಮಾಡುವರೆಂದು ಊಹಿಸಲಾಗಿದೆ. ಡಾನ್ ನದಿಯ ವಕ್ರದಲ್ಲಿ ಮುಂಬರಿದು ಬಂದ ಮೇಲೆ ಸ್ಟಾಲಿನ್‌ಗ್ರಾಡ್ ಸಂರಕ್ಷಣೆಗೆ ಯೂರೋಪಿನ ಅತ್ಯಂತ ದೊಡ್ಡ ನದಿಯಾದ ವೋಲ್ಗಾದ ಅಡ್ಡಿಯೊಂದಿದೆ. ವೋಲ್ಗಾ ನದಿಯ ದಡದ ಮೇಲಿರುವೀ ಪಟ್ಟಣವು ಅತ್ಯಂತ ಕೈಗಾರಿಕೆ ಕೇಂದ್ರವಾಗಿದೆ. ೪,೦೦,೦೦೦ ಜನವಸತಿಯಿದೆ. ರಶ್ಯದ ವ್ಯವಸಾಯಾಭಿವೃದ್ಧಿಗೆ ಸ್ಟಾಲಿನ್‌ಗ್ರಾಡ್ ಟ್ರಾಕ್ಟರುಗಳೇ ಕಾರಣವೆಂದು ಹೇಳಬಹುದು. ಡಾನ್ ನದಿಯನ್ನು ನೆತ್ತರಿನ ನೆರೆ ಹರಿಸಿ ಜರ್ಮನರು ದಾಟುವ ಪ್ರಚಂಡ ಸಾಹಸ ಮಾಡುತ್ತಿರುವಾಗ ಸ್ಟಾಲಿನ್‌ಗ್ರಾಡಿಗೆ ಭೀತಿ ತಪ್ಪಿದ್ದಲ್ಲ. ವೊರೊನೆಜ ಭಾಗದಲ್ಲಿ ರಶ್ಯನರು ಜೀವದ ಹಂಗು ತೊರೆದು ಹೋರಾಡಿ ಶತ್ರುಗಳನ್ನು ಅವರ ರಾಜ್ಯದ ಮೇರೆಗೆ ಹಿಂದಟ್ಟಿರುವರೆಂದು ಸುದ್ದಿ ಬಂದಿದೆ.

ಒಟ್ಟಿನಿಂದ ರಶ್ಯದ ಅವಸ್ಥೆ ಬಹಳ ವಿಷಮವಾಗಿರುವುದು. ಜರ್ಮನರು ರಶ್ಯನರನ್ನು ಜಗ್ಗಿಸಿ ಮುನ್ನುಗ್ಗುತ್ತಿದ್ದಾರೆ. ರಶ್ಯನರು ಒಮ್ಮೊಮ್ಮೆ ಜೀವದ ಹಂಗು ತೊರೆದು ಕಾದಾಡುತ್ತಿದ್ದಾರೆ. ವೊರೊನೆಜವು ಇನ್ನೂ ಶತ್ರು ವಶವಾಗಿಲ್ಲವಾದರೂ ಸ್ಟಾಲಿನ್‌ಗ್ರಾಡಿಗೆ ವಿಪತ್ತು ಸನ್ನಿಹಿತವಾಗಿದೆ. ರಶ್ಯಕ್ಕೆ ಸೇರಿದಾ ಎಂಟರಷ್ಟು ಎಣ್ಣೆಯನ್ನೊದಗಿಸುವ ಕಾಕಸಸ್‌ಗೆ ಶತ್ರು ಕಾಲಿಡುವ ಯೋಜನೆ ಮಾಡಿ ಮುಂದೊತ್ತುತ್ತಿರುವನು. ಡಾನ್ ನದೀ ಯುದ್ಧವು ಅತ್ಯಂತ ಭಯಂಕರವಾಗಿದೆ. ವೋಲ್ಗಾ ನದಿಯುದ್ಧವು ಬೇಗನೇ ಪ್ರಾರಂಭವಾಗುವಂತಿದೆ. ಮಾಸ್ಕೋ ರೋಸ್ಟೋವಾ ರೈಲ್ವೆ ಯುದ್ಧವೂ ಅಸಹ್ಯವಾಗಿದೆ. ಈಗಾಗಲೇ ರಶ್ಯದ ಎಣ್ಣೆ ರಾಸ್ತೋವಿನ ತಲೆಯ ಮೇಲ್ರೆ ಜರ್ಮನರು ಬಂದು ಕೂತಿದ್ದಾರೆ! ಇದು ಮಾತ್ರವಲ್ಲದೆ ಲೆನಿನ್‌ಗ್ರಾಡ್ ಸ್ಮೊಲೆನಸ್ಕ್ ಮುರ್ಮನಸ್ಕ್‌ಗಳಲ್ಲಿ ಸಣ್ಣ ಪ್ರಮಾಣದ ಯುದ್ಧಗಳಾಗುತ್ತಿವೆ.

ದ್ವಿತೀಯ ರಣರಂಗವಿಲ್ಲವೇ?

ಹೀಗೆ ರಶ್ಯದಲ್ಲಿ ಜರ್ಮನರು ಪ್ರಚಂಡವಾಗಿ ಹೋರಾಡುತ್ತಿರುವಾಗ ದ್ವಿತೀಯ ರಣರಂಗವೊಂದನ್ನು ತೆರೆದು ರಶ್ಯವನ್ನು ರಕ್ಷಿಸುವದರೊಡನೆ ಜರ್ಮನಿಯನ್ನು ವಿನಾಶಗೊಳಿಸುವ ಯೋಜನೆಯೇನಾಯಿತು? ಬಹು ಕಾಲದಿಂದ ಬ್ರಿಟಿಷರು ದ್ವಿತೀಯ ರಣರಂಗವೊಂದನ್ನು ತೆರೆಯುವೆವೆಂದು ಬಾಯಿ ಬಡಾಯಿ ಕೊಚ್ಚುತ್ತಿರುವದು ಕಂಡು ಬಂದರೂ ಇದುವರೆಗೆ ಅದಕ್ಕೆ ಮುಹೂರ್ತವೇ ಒದಗಿಲ್ಲವೇಕೆ? ದ್ವಿತೀಯ ರಣರಂಗವೊಂದನ್ನು ಈಗಲೇ ತೆರೆಯದಿದ್ದರೆ ರಶ್ಯದ ಉಳಿಗಾಲವುಂಟೆ? ರಶ್ಯವು ನೆಲಸಮವಾದರೆ ಮಿತ್ರಪಕ್ಷದವರಿಗೆ ವಿಜಯವು ಸುಲಭವೆ? ಏಕೆ ತಡಮಾಡಲಾಗುತ್ತದೆ? ಏನು ದ್ವಿತೀಯ ರಣರಂಗವನ್ನು ಮಿತ್ರರು ತೆರೆಯುವುದಿಲ್ಲವೆ? ತೆರೆಯದಿದ್ದರೆ ಇದು ಮಹಾ ಪ್ರಮಾದವಾದೀತು! ಹೀಗೆಂದು ಇಂದು ಪ್ರಪಂಚವೇ ಕೇಳುತ್ತಿದೆ. ಜರ್ಮನರು ಡಾನ್ ವೊರೊನೆಜ್ ನದಿಯ ಬಯಲನ್ನು ಕೂಡಿಸಿಕೊಂಡು ವೋಲ್ಗ ಕಡೆಗೂ ಕಾಕಸಸ್ ಕಡೆಗೂ ಮುಂದೊತ್ತುತ್ತಿರುವಾಗಲೂ ಇಷ್ಟರವರೆಗೆ ಯೂರೋಪಿನಲ್ಲಿ ದ್ವಿತೀಯ ರಣರಂಗವೊಂದನ್ನು ಕಲ್ಪಿಸಲು ರಣ ಸನ್ನಿವೇಶವು ತೋರದಿರುವದು ಶೋಚನೀಯವಾಗಿರುವುದು. ಹೀಗೆಂದು ಯುದ್ಧಾರಂಭಕಾಲದಲ್ಲಿ ಬ್ರಿಟಿಷ್ ಸರಕಾರದ ಯುದ್ಧ ಮಂತ್ರಿಗಳಾಗಿದ್ದ ಹೊರ್ ಬೆಲಿಷರು ಮೊನ್ನೆ ಪಾರ್ಲಿಮೆಂಟಿನಲ್ಲಿ ಗರ್ಜಿಸಿದರು. 'ದ್ವಿತೀಯ ರಣರಂಗವೊಂದನ್ನು ತೆರೆಯುತ್ತೇವೆ, ಬೇಗನೇ ತೆರೆಯುತ್ತೇವೆ, ರಶ್ಯನರಿಗೆ ನಿಮಗೆ ಸಹಾಯ ಮಾಡುತ್ತೇವೆ, ಜರ್ಮನರನ್ನು ನಾಶಮಾಡುತ್ತೇವೆ" ಈ ರೀತಿಯಾಗಿ ಅನೇಕ ಸಮಯಗಳಿಂದ ಬ್ರಿಟಿಷರು ಒಂದೇ ಸಮನೆ ಪ್ರಚಾರ ಮಾಡುತ್ತಿರುವರಾದರೂ ಇದುವರೆಗೆ ಇಂತಹ ವಿಷಯಕ್ಕಾಗಲಿ ಅವರ ವ್ಯವಸ್ಥೆಯಾಗದಿರುವುದು ಅತ್ಯಂತ ಶೋಚನೀಯವಾಗಿದೆ. ಬೇಗ ಬ್ರಿಟಿಷರು ದ್ವಿತೀಯ ರಣರಂಗವೊಂದನ್ನು ಯೂರೋಪಿನಲ್ಲೆಲ್ಲಾದರೂ ಅವಸರದಿಂದಲಾದರೂ ತೆರೆದು ರಶ್ಯವನ್ನು ರಕ್ಷಿಸುವದರೊಡನೆ ತಮ್ಮನ್ನೂ ಉಳಿಸಿಕೊಳ್ಳುವುದು ಅತ್ಯಂತ ಆವಶ್ಯಕವಾದ ಕೆಲಸವಾಗಿದೆ.

ಇಜಿಪ್ಟ್ ರಣಕ್ಷೇತ್ರದಲ್ಲಿ

ಇಜಿಪ್ಟ್ ರಣಕ್ಷೇತ್ರದಲ್ಲಿ ಬ್ರಿಟಿಷರು ಕೊಂಚ ವಿಜಯವನ್ನು ಪಡೆದಿದ್ದಾರೆ. ಬ್ರಿಟಿಷ್ ಯುದ್ಧ ನೌಕೆಗಳು ಮೆಸಾಮಟ್ರೂಹಿನ ಮೇಲೆ ಭಯಂಕರ ಫಿರಂಗಿ ಧಾಳಿಗಳನ್ನು ನಡೆಸಿದವು. ದಿಗಂತವು ಇದರಿಂದ ಜಾಜ್ವಲ್ಯಮಾನವಾಗಿತ್ತು. ಮೆಸ್ರಮಟ್ರೂಹನಲ್ಲಿ ಶತ್ರುಗಳು ಸಂಗ್ರಹ ಸಾಮಗ್ರಿಗಳನ್ನು ಒಟ್ಟುಗೂಡಿಸುತ್ತಿದ್ದು ಈ ಫಿರಂಗಿ ಹೊಡೆತವು ಶತ್ರುಗಳಿಗೆ ಪ್ರಬಲ ನಾಶವನ್ನುಂಟುಮಾಡಿದೆ. ಬ್ರಿಟಿಷ್ ಸಾಮ್ರಾಜ್ಯ ಸೈನ್ಯಗಳು ಎಲ್ ಎಲಾಮೀನಿಂದ ಪಶ್ಚಿಮಕ್ಕೆ ಶತ್ರುಗಳನ್ನು ನೂಕಿಕೊಂಡು ಮುನ್ನುಗ್ಗುತ್ತಿವೆ. [illegible] ಮೈಲುಗಳವರೆಗೆ ಶತ್ರುಗಳನ್ನು ಹಿಮ್ಮೆಟ್ಟಿಸಲಾಗಿದೆ. ಬ್ರಿಟಿಷರ ಅಷ್ಟಮ ಸೇನೆಯ ದಳಪತಿ ಅಚಿನ್‌ಲೆಕ್ಕರ ಮುಂದಾಳುತನದಿಂದ ವಿಜಯೋನ್ಮತ್ತವಾಗಿದೆ. ರೋಮೆಲನೂ ಅಲ್ಲಿ ಕೋಟೆ ಕೊತ್ತಳಗಳನ್ನು ಕಟ್ಟುತ್ತಿರುವನೆಂದೂ ಬ್ರಿಟಿಷರು ಅದನ್ನು ಛೇದಿಸುವ ಸಾಹಸ ಮಾಡುವರು. ಈಜಿಪ್ಟಿನ ಕಾಳಗದಲ್ಲಿ ಅನೇಕ ಸಂದಿ ಒದರಿಯ ಯೋಧರು [illegible] ಪರಾಕ್ರಮ ತೋರಿಸಿದ್ದಾರೆ. ಅವರಲ್ಲಿ ಒಬ್ಬ ರೆಜಿಮೆಂಟ್ ರಜಪೂತಾನಾ ರೈಫಲ್ಸ್‌ನವರು ಮದ್ದುಗುಂಡುಗಳಲ್ಲಿ ವೈರಿಗಳ ಮೇಲೆ ಧಾಳಿ ನಡೆಸಿದ್ದು ಎಲ್ಲವ [illegible]

ಚೀನದಲ್ಲಿ ಜಪಾನರ ರಭಸ

ಚೀನದ ಕರಾವಳಿ ಪಟ್ಟಣಗಳನ್ನು ಒಂದೊಂದನ್ನೇ ಜಪಾನರು ಕೈವಶಪಡಿಸುತ್ತಿದ್ದಾರೆ. ಚೆಕಿಯಂಗ್ ಪ್ರಾಂತದ ವೆಂಚೌ ಬಂದರವೂ ಅವರ ಸ್ವಾಧೀನವಾಯಿತು. ಇದರ ನೈಋತ್ಯಕ್ಕಿರುವ ಜುಆಸನನ್ನೂ ಜಪಾನರು ಸ್ವಾಧೀನಪಡಿಸಿರುವುದಾಗಿ ತಿಳಿದಿದೆ. ಶಿಂಗಟ್ಸ್ ಪತನವಾಯಿತೆಂದು ಚೀನೀಯರೇ ಒಪ್ಪಿಕೊಂಡಿರುವರು. ಚೆಕಿಯಾಂಗ್ ಕಿಯಾಂಗ್ಸಿ ರೈಲ್ವೆ ದಕ್ಷಿಣಕ್ಕೆ ಯುದ್ಧ ನಡೆಯುತ್ತಿದೆ. ದಕ್ಷಿಣ ಚೀನದಲ್ಲಿ ಕ್ವಾಂಗ್ ಟುಂಗ್ ಪ್ರಾಂತದಲ್ಲಿ ಜಪಾನೀ ಸೈನ್ಯವು ಕಿಂಗ್ ಟುಂಗದಿಂದ ಸಾಗುವುದಕ್ಕೆ ಟುಂಗಚೆಂಗದ ಮಾರ್ಗವಾಗಿ ಸಾಗಿದ್ದು ಅದನ್ನು ಚೀನೀಯರು ಪ್ರತಿಭಟಿಸಿದರು. ಹೂಪೆ ಪ್ರಾಂತದ ಕ್ವಾಂಗನು ಮತ್ತು ಕ್ವಾಂಗಸಿ ಎಂಬೆರಡು ಸ್ಥಳಗಳಲ್ಲಿ ಚೀನೀಯರು ಪ್ರತಿ ಭಟಿಸುತ್ತಿದ್ದು ಜಪಾನರನ್ನು ಹಿಂದೆ ದೂಡಿಸಿದರು. ಜಪಾನ್ ವಿಮಾನದಳದವರು ಉತ್ತರ ಚೆಕಿಯಾಂಗ್, ಚೆಂಫೋ, ಕಿಯಾಂಗ್ಸಿ ಮತ್ತು ಹೊನಾ ಪ್ರಾಂತಗಳಲ್ಲಿ ಧಾಳಿ ಪ್ರಾರಂಭಿಸಿದ್ದಾರೆ. ಮಿತ್ರರ ಸೈನ್ಯಗಳು ಯಾಂಗ್ ಟ್ಸೀ ನದೀ ತೀರದ ಮೇಲಿನ ಶಿಹುಯಾಂಗ್, ವಾಂಗ್‌ಚೆಂಗ್, ಪಾಹೋ, ಲಾಂಟ್ಸೆ, ಯೊಕ್ಸಂಗ್ ಇವುಗಳಲ್ಲಿರುವ ಜಪಾನರ ಸೈನಿಕ ಕಟ್ಟಡ ಮತ್ತು ಇನ್ನುಳಿದ ಯುದ್ಧ ಸಿದ್ಧತೆಯ ಮಹತ್ವದ ಸ್ಥಾನಗಳ ಮೇಲೆಲ್ಲಾ ಬಾಂಬು ಸುರಿಸಿದರು. ಹೀಗೆ ಜಪಾನೀಯರು ಚೀನದ ಕರಾವಳಿ ಪಟ್ಟಣಗಳಲ್ಲಿ ಮುಂದುವರಿಯುತ್ತಿದ್ದಾರೆ.

ಸಂಶಯಾತ್ಮಕರಾಗಿರಿ.

ಸಂಶಯಾತ್ಮಕರೆಂದರೆ ಯಾವ ಸಮಾಚಾರವನ್ನು ಕೇಳಿದರೆ ಅದು ನಿಶ್ಚಯವೆಂದು ರುಜುವಾಗದವರೆಗೆ ಅದನ್ನು ನಂಬದವರು. ವದಂತಿಗಳ ವಿಚಾರದಲ್ಲಿ ಸಂಶಯಾತ್ಮಕರಾಗಿರಿ. ಜಪಾನಿಯರು ನಿಮ್ಮನ್ನು ಸುಳಿಯಲ್ಲಿ ಹಾಕುವುದಕ್ಕಾಗಿ ಅನೇಕ ವದಂತಿಗಳನ್ನು ಹರಡುತ್ತಾರೆ.

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ಇಂಡಿಯಾ ದೇಶದ ಯುದ್ಧಮುಖವನ್ನು ರಚಿಸಿರಿ.

[illegible]
ಸ್ವದೇಶಾಭಿಮಾನಿ

[illegible] 24—7—1942

ಬಣ್ಣಭೇದ

'ಅಮೆರಿಕ ಮತ್ತು ಬ್ರಿಟನುಗಳು ಇಂದಿನ ಈ ಯುದ್ಧದಲ್ಲಿ ವಿಷಮ ಪರಿಸ್ಥಿತಿಯಲ್ಲಿವೆ. ನಮ್ಮ ಮಿತ್ರ ರಾಷ್ಟ್ರಗಳಾದ ಭಾರತ, ಚೀನ, ಫಿಲಿಪ್ಪೈನ್ಸ್ ಮತ್ತು ಮಲಯಗಳು, ನಮ್ಮೊಡನೆ ಹೇಳಿಗೆ ಇದ್ದರೂ, ಬಿಳಿ ಜನರು ಅವರ ಬಗ್ಗೆ ತೋರಿಸುವ ಧೋರಣದ ವಿಷಯ ವಿಷಾದಗೊಂಡಿವೆ. ನಾವು ನಿಜವಾಗಿಯೂ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತೇವೆಯೆ? ಲೋಕದಲ್ಲಿ ನ್ಯಾಯವು ನೆಲಸಬೇಕೆಂದು ಬಯಸುತ್ತೇವೆಯೆ? ಜಗತ್ತಿನಲ್ಲಿ ಶಾಂತಿ ಸ್ಥಾಪನೆಯಾಗಬೇಕೆಂದು ಇಚ್ಛಿಸುತ್ತೇವೆಯೆ? ಮನುಷ್ಯ ಜನಾಂಗವು ಸಮಾನತೆಯಿಂದಿರಬೇಕೆನ್ನುತ್ತೇವೆಯೆ? ಅಥವಾ ಪ್ರಜಾಪ್ರಭುತ್ವ, ನ್ಯಾಯ, ಶಾಂತಿ ಸಮಾನತೆಗಳಿವೆಲ್ಲಾ ಬಿಳಿಯ ಜನರಿಗೆ ಮಾತ್ರವೆಂದು ಹೇಳುತ್ತೇವೆಯೆ? ಈ ಪ್ರಶ್ನೆಗಳಿಗೆ ಬೇಗನೇ ಸ್ಪಷ್ಟಮಾತಿನಿಂದ ಉತ್ತರಕೊಡಬೇಕು. ಈ ಪ್ರಶ್ನೆಯನ್ನು ತಪ್ಪಿಸುವುದೆಂದರೆ, ಈ ಪ್ರಶ್ನೆಗೆ ಉತ್ತರಕೊಡಲು ತಡಮಾಡುವುದೆಂದರೆ ನಾವು ನಿಷೇಧಾರ್ಥದ ಉತ್ತರ ಕೊಡುತ್ತೇವೆಂದೇ ಅರ್ಥವಾಗುವುದು. ಈ ಕುರಿತು ಅಮೆರಿಕವು ಈಗ ಮುಂದಾಳುತನ ವಹಿಸಿ ಮುಂದೆ ಬರಬೇಕಾಗಿದೆ. ಬಣ್ಣಭೇದವು ಜಗತ್ತಿನಲ್ಲಿ ಮಾಯವಾಗಬೇಕಾಗಿದೆ' ಹೀಗೆಂದು ಪ್ರಸಿದ್ಧ ಲೇಖಕರು ಹಾಗೂ ನೋಬೆಲ್ ಪ್ರೈಸ್ ಪಡೆದವರೂ ಆದ ಪರ್ಲ್‌ಬಕ್ ಎಂಬ ಅಮೆರಿಕದ ಮಹಿಳೆಯು 'ಏಶ್ಯಾ' ಪತ್ರಿಕೆಯಲ್ಲಿ ಒಂದು ಹೃದಯ ಸ್ಪರ್ಶಿಯಾದ ಲೇಖನ ಬರೆದಿರುತ್ತಾರೆ. ಆ ಲೇಖನದಲ್ಲಿ ಅವರು ಬಿಳಿ ಜನರ ಪ್ರಭುತ್ವದಿಂದಾಗುತ್ತಿರುವ ಅನ್ಯಾಯ, ಬಣ್ಣಭೇದಗಳು ಈ ಯುದ್ಧದ ನಂತರವೂ ಉಳಿದರೆ ಅದರಿಂದಲೇ ಇನ್ನೊಂದು ಮಹಾ ಯುದ್ಧವೂ ತಲೆಯೆತ್ತುವುದೆನ್ನುವ ವಿಚಾರವನ್ನು ತಿಳಿಸಿ ಎಚ್ಚರಿಸಿರುವರು.

'ಪೂರ್ವ ದೇಶದಲ್ಲಿರುವ ಬಿಳಿಯವನು ಬುದ್ಧಿಶೂನ್ಯನಂತೆ, ನ್ಯಾಯ ಬಾಹಿರನಂತೆ ಅನೇಕಸಲ ನಡೆಯುತ್ತಾನೆಂಬುದು ಸತ್ಯವಾಗಿದೆ. ಇದು ಮಹಾ ಪ್ರಮಾದಕರ ಮಾತ್ರವಲ್ಲ ಅಪಾಯಕರವಾದುದು; ಬಿಳಿ ಪೋಲೀಸನೊಬ್ಬನು ಶಾಂಘಾಯಿಯಲ್ಲಿ ಚೀನದ ಕೂಲಿಯೊಬ್ಬನಿಗೆ ಹೊಡೆಯುವುದನ್ನು, ಕೋಬೆಯಲ್ಲಿ ಬಿಳೀ ನಾವಿಕನೊಬ್ಬನು ಜಪಾನಿಯನಿಗೆ ತುಳಿಯುವುದನ್ನು, ಇಂಗ್ಲಿಷ್ ಕಪ್ತನನೊಬ್ಬನು ಹಿಂದೀಯನೊಬ್ಬನಿಗೆ ಚಾಟಿಯಿಂದ ಬಾಡಿಸುವುದನ್ನು-ಇಂತಹ ಪೂರ್ವದೇಶದ ಕೆಲವು ದೃಶ್ಯಗಳನ್ನು ನಮ್ಮಲ್ಲಿ ನೋಡಿದ ಯಾರು ತಾನೇ, ಆ ಜನರ ಕಪ್ಪು ಕಣ್ಣುಗಳೆಡೆಯಲ್ಲಿ ಬಿಳಿಜನರ ಕುರಿತು ತೋರುವ ಕೆಂಪು ಕಾಂತಿಯನ್ನು ಮರೆಯಬಲ್ಲರು? ಅಂತಹ ಪ್ರಸಂಗವು ದಿನ ದಿನ ಸಂಭವಿಸುತ್ತಿರುವಾಗ ಅದರ ಫಲವಾಗಿ ಭವಿಷ್ಯತ್ತು ಹೇಗೆ ಪರಿಣಮಿಸುವುದೆಂಬುದನ್ನು ಯಾರು ತಾನೇ ನಮ್ಮಲ್ಲಿ ತಿಳಿಕೊಳ್ಳಲಾರರು? ಇಂತಹ ಅಪಾಯಕರವಾದ ಬಣ್ಣ ಭೇದದ ಪರಿಣಾಮವಾಗಿ, ತುಚ್ಛ ಬಿಳಿಯನಾದರೂ ಕರಿಯವರಿರುವಲ್ಲಿ ತಾನು ಸಾಮ್ರಾಟನೆಂಬ ರೀತಿಯಲ್ಲಿ ವರ್ತಿಸುತ್ತಿದ್ದಾನೆ. ಬ್ರಿಟನು ಈ ವಿಷಯವನ್ನು ಗಮನಕ್ಕೆ ತಂದುಕೊಳ್ಳುತ್ತದೋ ಇಲ್ಲವೋ, ನಾವು ಅಮೆರಿಕನರು ಇದನ್ನು ಗಮನಕ್ಕೆ ತಂದುಕೊಳ್ಳಲೇಬೇಕು. ಸಾಮ್ರಾಜ್ಯ ಮತ್ತು ಸಾಮ್ರಾಜ್ಯಶಾಹೀ ತತ್ವದ ಮೇಲೆ ನಡೆಯುವುದು ಇನ್ನು ಮುಂದೆ ಜಗತ್ತಿನಲ್ಲಿ ಅಸಾಧ್ಯ.' ಹೀಗೆಂದು ಪರ್ಲ್‌ಬಕ್, ಆ ಲೇಖನದಲ್ಲಿ ವಾದಿಸುತ್ತಾರೆ.

'ಈ ಯುದ್ಧವು ಮುಗಿದಬಳಿಕ, ಈ ವಿಚಾರಗಳನ್ನು ನಾವು ಆಲೋಚಿಸುವ ಎನ್ನುವುದು ಸರಿಯಲ್ಲ; ಏಕೆಂದರೆ ಇಂತಹ ಅಪಾಯಕರ ಬಣ್ಣಭೇದವು ಮಾಯವಾಗದೆ ಯುದ್ಧವು ಮುಗಿಯಲಾರದು. ಎಷ್ಟೋ ಸಮಯಗಳಿಂದ ಕರಿಜನರು ತೋರಿಸಿದ ಪ್ರಗಾಢಸಹನೆ ಇಂದು ಕೊನೆಗೊಂಡಿದೆ. ಇಂದು ಅವರಲ್ಲಿ ಅಮೆರಿಕನರಿಗೆ ಹಾಗೂ ಬ್ರಿಟಿಷರಿಗಿರುವಷ್ಟು ಸ್ವಾತಂತ್ರ್ಯತಮಗೂ ಬೇಕೆಂಬ ಸಂಕಲ್ಪ ಬಂದಿದೆ; ಅದಕ್ಕೆ ಅಡ್ಡಬರುವ ಬಿಳಿ ಜನರನ್ನು ತಮ್ಮ ದೇಶದಿಂದ ಹೊರಹಾಕಬೇಕೆಂದು ಅವರು ನಿರ್ಧಾರಮಾಡಿದ್ದಾರೆ. ಹೀಗೆಂದು ಅವರು ತಮ್ಮ ಲೇಖನದಲ್ಲಿ ವಿವರಿಸಿರುವರು. ಮೇಲಿನ ಮಾತುಗಳು ಓರ್ವ ಅಮೆರಿಕದ ಪ್ರಖ್ಯಾತ ಲೇಖಕಿ ಬರೆದವುಗಳು. ಬಿಳಿ ಜನರಲ್ಲಿಯೂ ಬುದ್ಧಿವಂತರಾದವರು ಹೀಗೆಂದು ಇತ್ತೀಚೆಗೆ ಅಭಿಪ್ರಾಯಪಡುತ್ತಿರುವುದು ಸಂತೋಷಕರ. ಆದರೆ ಕೇವಲ ಸಾಮ್ರಾಜ್ಯವಾದಿಗಳಾದ ಬಿಳಿಯರು ಮಾತ್ರ ತಮ್ಮ ಹಿಂದಿನ ಧೋರಣವನ್ನು ಬದಲಿಸಲು ನಿಶ್ಚಯ ಮಾಡಿಲ್ಲ. ಬಿಳಿ ಕರಿಯ ಭೇದವು ಜಗತ್ತಿನಿಂದ ನಿರ್ನಾಮವಾಗದಿದ್ದರೆ ನಿಜವಾಗಿಯೂ ಲೋಕಶಾಂತಿಯಾಗಲಿಕ್ಕಿಲ್ಲ. ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವಕ್ಕಾಗಿ, ಶಾಂತಿ ಸಮಾನತೆಗಳಿಗಾಗಿ ತಾವು ಹೋರಾಡುವವರೆಂದು ಬ್ರಿಟನು ಅಮೆರಿಕಗಳು ಹೇಳುವ ಮಾತಿನಲ್ಲಿ ಎಳ್ಳಷ್ಟಾದರೂ ಸತ್ಯಾಂಶತೋರಬೇಕಾದರೆ ಇಂತಹ ಅಪಾಯಕಾರೀ ಬಣ್ಣಭೇದವನ್ನು ಅವರು ಕೊನೆಗೊಳಿಸಲೇಬೇಕು.

ನೋಟಗಳು....

"ಹೆಚ್ಚು ಆಹಾರ ಬೆಳೆಸಿರಿ" ಎಂದು ಈಗ ಸರಕಾರದ ಅಧಿಕಾರಿಗಳು ಪ್ರಚಾರ ಮಾಡುತ್ತಿದ್ದಾರೆ! ಯುದ್ಧದ ಗೊಂದಲದಿಂದ, ದೇಶದಲ್ಲಿ ಆಹಾರದ ದಾರಿದ್ರ್ಯವುಂಟಾಗಬಾರದೆಂದು ಹೀಗೆ ಪ್ರಚಾರ ಮಾಡುವುದು ಅವಶ್ಯವಾಗಿದೆ.

'ಕಾಲುವೆಗಳನ್ನು ಕಡಿದು ಹಾಕಿ ಭೂಮಿಯಲ್ಲಿ ಕೃಷಿಗೈಯ್ಯಲಾರದಂತೆ ಮಾಡಿದ ಸರಕಾರದವರೇ, ಐವತ್ತು ಮಂದಿ ಪ್ರಚಾರಕರನ್ನು 'ಹೆಚ್ಚು ಆಹಾರ ಬೆಳೆಸಿರಿ' ಎಂದು ಬೋಧಿಸಲು ಆ ಊರಿಗೆ ಕಳುಹಿಸಿದ್ದರು.' ಎಂಬುದಾಗಿ ಒರಿಸಾವನ್ನು ಸಂದರ್ಶಿಸಿ ಬಂದ ಮೀರಾ ಬೆನ್ನರು [illegible]!

"ಹೆಚ್ಚು ಆಹಾರ ಬೆಳೆಸಿರಿ" ಎಂಬುದಾಗಿ ಇಂಡಿಯಾ ಸರಕಾರ ಹೇಳುತ್ತಿರುವಾಗ, 'ಹೆಚ್ಚು ಮೀನು ಬೆಳೆಸಿರಿ' ಎಂದು ಬಂಗಾಳಾ ಸರಕಾರವು ಪ್ರಚಾರಮಾಡಲು ನಿಶ್ಚಯಿಸಿದೆಯಂತೆ!

ಹಕ್ಕರ ಮಿತ್ರಮಂಡಳಕ್ಕೆ ಮೀನು ತಿನ್ನುವುದರಲ್ಲಿ ಹೆಚ್ಚಿನ ಆಶೆಯಿದ್ದಂತೆ ತೋರುತ್ತದೆ! ಹಕ್ಕರಿಗೆ ಮಾತ್ರ ಎಂದೇನು? ಬಂಗಾಳಾದಲ್ಲಿ ಬ್ರಾಹ್ಮಣರು ಕೂಡಾ ಮೀನು ತಿನ್ನುತ್ತಾರಷ್ಟೆ?

ಬಂಗಾಳಾ ಕೊಲ್ಲಿಗೆ ಜಪಾನರು ಇಳಿದಿದ್ದಾರೆಂಬ ಸುದ್ದಿ ಬಂದಿರುವಾಗ, ಮೀನು ಬೆಳೆಸಿದರೂ, ಅದನ್ನು ಹಿಡಿಯಹೋಗುವುದು ಬಹಳ ಪ್ರಯಾಸವೇ ಆದೀತು.

'ಹೆಚ್ಚು ಹಂದಿ ಬೆಳೆಸಿರಿ' ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವರು ಪ್ರಚಾರ ಸುರುಮಾಡಬಾರದೇಕೆ?

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ
ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ
ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡುಪಿ.
Iನೇ ಫೋರ್ಮಿಗೆ 0–12–0 IIನೇ ಫೋರ್ಮಿಗೆ 0–12–0
ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಭವಾನಿರಾವ್ ಬಿ. ಎ. ಎಲ್. ಟಿ.
IIIನೇ ಫೋರ್ಮಿಗೆ 0–12–0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ಬಾಲಕರ ಲಘುಗಣಿತ
ಬಿ. ಭವಾನಿರಾವ್, ಬಿ. ಎ. ಎಲ್. ಟಿ. ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0–7–0 ಐದನೇ ದರ್ಜೆಗೆ 0–8–0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ನವೀನ ಭೂವಿವರಣೆ
ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)
ನಾಲ್ಕನೇ ದರ್ಜೆಗೆ 0–6–0 ಐದನೇ ದರ್ಜೆಗೆ 0–7–0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ
ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಕಾರ್ಕಳ.
ಆರನೇ ದರ್ಜೆಗೆ 0–6–0 ಏಳನೇ ದರ್ಜೆಗೆ 0–6–0 ಎಂಟನೇ ದರ್ಜೆಗೆ 0–6–0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.)

ವ್ಯಾಕರಣ ಮತ್ತು ಪ್ರಬಂಧ
ಕೆ. ಕೆ. ರೈ. ವಿದ್ವಾನ್.
4 ಮತ್ತು 5ನೇ ದರ್ಜೆಗೆ 0–2–0 6ನೇ ದರ್ಜೆಗೆ ಅಥವಾ I ಫೋರ್ಮಿಗೆ 0–3–0
7ನೇ ದರ್ಜೆಗೆ ಅಥವಾ II ಫೋರ್ಮಿಗೆ 0-3-6 8ನೇ ದರ್ಜೆಗೆ ಅಥವಾ III ಫೋರ್ಮಿಗೆ 0-4-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಮಕ್ಕಳ ಪದ್ಯಮಂಜರಿ
ಕೆ. ಕೆ. ರೈ. ವಿದ್ವಾನ್.
ಮೊದಲನೆ ಪುಸ್ತಕ ೧, ೨, ೩ನೇ ದರ್ಜೆಗಳಿಗೆ 0-2-0 2ನೇ ಪುಸ್ತಕ ೪, ೫ನೇ ದರ್ಜೆಗಳಿಗೆ 0-2-6
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಸಿವಿಕ್ಸ್
ಎಂ. ಗಣಪತಿರಾವ್ ಐಗಳ್
3ನೇ ದರ್ಜೆಗೆ 0–1–6 4ನೇ ದರ್ಜೆಗೆ 0–2-0 5ನೇ ದರ್ಜೆಗೆ 0–2–6
ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ. ವಿದ್ವಾನ್.
6ನೇ ದರ್ಜೆಗೆ 0–3–0 7ನೇ ದರ್ಜೆಗೆ 0–3–0 8ನೇ ದರ್ಜೆಗೆ 0–3–0
(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ಚರಿತ್ರೆ ಮತ್ತು ಕಥೆಗಳು
ಮೂರನೇ ದರ್ಜೆಗೆ 0–2–6 ನಾಲ್ಕನೇ ದರ್ಜೆಗೆ 0–3–0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ
ಎಂ. ವಾಸುದೇವರಾವ್ ಎಂ. ಎ. ಎಲ್. ಟಿ. ಗಣಪತಿ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0–3–0 ಐದನೇ ದರ್ಜೆಗೆ 0–3–6

ಪ್ರಕೃತಿಶಾಸ್ತ್ರ
ಎಂ. ಗಣಪತಿರಾವ್ ಐಗಳ್
ಮೂರನೇ ದರ್ಜೆಗೆ 0–1–6

ಶಾರದಾ ಛಾಪಖಾನೆ ರಥಬೀದಿ ಮಂಗಳೂರು.

ಹರಿಜನವಾಣಿ

ಯೋಗ್ಯ ಪ್ರಶ್ನೆಗಳು

— ಗಾಂಧಿಜಿ —

'ಹರಿಜನವು ನಿರ್ಬಂಧಿಸಲ್ಪಟ್ಟರೆ?'

೧. ಅಹಿಂಸಾತ್ಮಕ ಯತ್ನಗಳು ನಿಷ್ಫಲವಾಗಿ ಆದೇ ಸ್ಥಳದಲ್ಲಿ ಸಶಸ್ತ್ರ ಹಿಂಸಾತ್ಮಕ ಪ್ರಯತ್ನಗಳ ಜತೆಯಲ್ಲಿ ಅದು ಪ್ರಯೋಜನವಾಗದಿದ್ದ ಪಕ್ಷದಲ್ಲಿ ಮತ್ತು ವಿದೇಶೀ ಸೈನ್ಯವು ಹಿಂದುಸ್ತಾನದಲ್ಲಿದ್ದು ಇಲ್ಲಿಂದಲೇ ಕಾರ್ಯ ನಡೆಸುತ್ತಿರುವಾಗ ಆಕ್ರಮಣವನ್ನೆದುರಿಸಲು ಅಹಿಂಸಾತ್ಮಕ ವಿರೋಧ ಮಾಡಲು ಅವಕಾಶವಿದೆಯೆ?

೨. ಇಂದಿನ ಪರಿಸ್ಥಿತಿಯಲ್ಲಿ ಬ್ರಿಟನು ಅಮೆರಿಕಗಳ ನಿಯಂತ್ರಣದಲ್ಲಿ ಇರುವ ಸೈನಿಕರ ಶಸ್ತ್ರಾಸ್ತ್ರಗಳನ್ನೇ ಹಿಂದುಸ್ತಾನದ ಜನರ ಸ್ವಾತಂತ್ರ್ಯವು ಅವಲಂಬಿಸುವುದಾದರೆ, ಹಿಂದುಸ್ತಾನದ ಜನರಿಗೆ ತಾವು ನಿಜವಾದ ಸ್ವಾತಂತ್ರ್ಯವನ್ನವಲಂಬಿಸುವೆವೆಂಬ ಭಾವನೆಯುಂಟಾಗುವುದೆ? ಕೊನೆಗೆಂದರೆ ಯುದ್ಧಕಾಲದಲ್ಲಾದರೂ ಈ ಭಾವನೆಯುಂಟಾಗುವುದೆ?

೩. ಒಪ್ಪಂದದ ಶರ್ತಗಳೇನೇ ಇದ್ದರೂ, ಹಿಂದುಸ್ತಾನದ 'ರಕ್ಷಣೆ'ಗಾಗಿ ಆಂಗ್ಲ ಅಮೆರಿಕನ್ ಸೈನ್ಯಗಳು ಇಲ್ಲಿ ಕೆಲಸ ಮಾಡುವುದಾದರೆ, ಭಾರತೀಯರು ಈ ದೇಶದ ರಕ್ಷಣೆಯ ಕಾರ್ಯವನ್ನು ತೀರ್ರ ಕಡಿಮೆ ಪ್ರಮಾಣದಲ್ಲಿ ಮತ್ತು ಅವರಿಗೆ ಅಧೀನರಾಗಿ ಮಾಡುವರಲ್ಲದೆ ಅಷ್ಟೊಂದು ಪರಿಣಾಮಕಾರಕವಾದ ರೀತಿಯಲ್ಲಿ ಮಾಡಬಲ್ಲರೊ?

೪ ಬ್ರಿಟನು ಒಂದು ಪಕ್ಕಾ ನೈತಿಕ ಉದ್ದೇಶದಿಂದಲ್ಲದೆ ಕೇವಲ ರಾಜಕೀಯ ಮತ್ತು ಯುದ್ಧ ವಿಜಯದ ಉದ್ದೇಶದಿಂದ ಒಪ್ಪಂದ ಮಾಡಿಕೊಂಡರೆ, ಆ ಒಪ್ಪಂದದಂತೆ ಅವರು ಹಿಂದುಸ್ತಾನದಲ್ಲಿ ಸೈನ್ಯಶಕ್ತಿಯನ್ನು ಬೆಳಸಿಕೊಂಡು ಅದನ್ನು ಗಟ್ಟಿಮಾಡಲು ಸಂದರ್ಭ ದೊರೆತರೆ ಅನಂತರ ಅವರು ಇಲ್ಲಿಯೇ ಇರುವೆವೆಂದರೆ ಅವರನ್ನು ಹೇಗೆ ಇಲ್ಲಿಂದ ಹೊರಹಾಕಬಹುದು?

೫ ಸುಭಾಸಬೋಸರು ಜರ್ಮನಿ ಮತ್ತು ಜಪಾನ್ಯಗಳೊಡನೆ ಒಪ್ಪಂದ ಮಾಡಿಕೊಂಡರೆ, ಆ ಒಪ್ಪಂದದಂತೆ ಹಿಂದುಸ್ತಾನವು ಸ್ವತಂತ್ರ ರಾಷ್ಟ್ರವೆಂದು ಸಾರಲ್ಪಟ್ಟು, ಅಕ್ಷರಾಷ್ಟ್ರಗಳ ಸೈನಿಕರು ಬ್ರಿಟಿಷರನ್ನು ಹೊರಹಾಕುವುದಕ್ಕೆ ಹಿಂದುಸ್ತಾನಕ್ಕೆ ಪ್ರವೇಶ ಮಾಡಿದರೆಂದು ನಾವು ಆಲೋಚಿಸುವ ಪರಿಸ್ಥಿತಿಯೂ ಮೇಲಿನ ಪ್ರಶ್ನೆಯಿಂದ ಹುಟ್ಟಿದ ಪರಿಸ್ಥಿತಿಯೂ ಹೋಲುವುದಿಲ್ಲವೆ?

೬ ಮೌಲಾನಾ ಅಜಾದರು ಮೊನ್ನೆ ಹೇಳಿದಂತೆ, 'ಸಂರಕ್ಷಣೆಯು ಸಶಸ್ತ್ರ ಸಂರಕ್ಷಣೆ'ಯೆಂದು ಕಾಂಗ್ರೆಸು ಭಾವಿಸುವುದಾದರೆ ಬಲಿಷ್ಠ ಆಕ್ರಮಣಕಾರರನ್ನು ಸಶಸ್ತ್ರ ಎದುರಿಸುವ ಸಾಧನ ಸಾಮಗ್ರಿ ಹಿಂದುಸ್ತಾನಕ್ಕೆ ಸ್ವತಂತ್ರವಾಗಿ ಇಲ್ಲವೆಂಬ ಕಾರಣ ಅದಕ್ಕೆ ನಿಜವಾದ ಸ್ವಾತಂತ್ರ್ಯ ಸಿಕ್ಕುವ ಸಂಭವವು ಇಲ್ಲವೆ?

೭ ಸ್ವತಂತ್ರವೆಂದು ಬ್ರಿಟನು ಸಾರಿದರೂ, ಹಿಂದುಸ್ತಾನವು ಈಗ ಚೈನಕ್ಕೆ ಯಾವ ಸಹಾಯ ಕಳುಹಿಸಬಲ್ಲದು?

ಉತ್ತರಗಳು

(೧) ಈ ಪ್ರಶ್ನೆಯಲ್ಲಿ ತೋರಿಸಿಕೊಟ್ಟ ತಪ್ಪನ್ನು ಅಲ್ಲಗಳೆಯಲಾಗುವುದಿಲ್ಲ. ಸ್ವತಂತ್ರ ಹಿಂದುಸ್ತಾನವು ಮಿತ್ರಪಕ್ಷದ ಸೈನಿಕರಿರಲು ಒಪ್ಪಿಕೊಂಡರೆ ಈ ದೇಶದ ಯೋಗ್ಯತೆಯನ್ನು ಅಳಿದಂತೆ. ಇಡೀ ರಾಷ್ಟ್ರವು ಎಂದೂ ಅಹಿಂಸಾಮಯವಾಗಿರುವುದಿಲ್ಲ. ಹಿಂದುಸ್ತಾನವು ಎಲ್ಲಿಯೂ ಸಶಕ್ತರ ಅಹಿಂಸೆಯನ್ನು ಪ್ರದರ್ಶಿಸಿಲ್ಲ. ಆ ಶಕ್ತಿಯನ್ನು ನಾವು ಬೆಳಸಿದ್ದರೆ ನಾವು ಬಹು ಕಾಲಕ್ಕೆ ಹಿಂದೆಯೇ ಸ್ವಾತಂತ್ರ್ಯ ದೊರಕಿಸಿಕೊಳ್ಳುತ್ತಿದ್ದೆವು ಮತ್ತು ಹಿಂದುಸ್ತಾನದಲ್ಲಿ ಬೇರೆ ಯಾವ ಸೈನ್ಯವನ್ನಿಡುವ ಪ್ರಶ್ನೆಯೇ ಹುಟ್ಟುತ್ತಿರಲಿಲ್ಲ. ಬ್ರಿಟನು ಸ್ವತಂತ್ರ ಹಿಂದುಸ್ತಾನಕ್ಕೆ ಅಧಿಕಾರವನ್ನು ಬಿಟ್ಟುಕೊಡಬೇಕೆಂದು ಈ ಬೇಡಿಕೆಯಾಗಿಲ್ಲ. ಏಕೆಂದರೆ ಬ್ರಿಟನು ಯಾವ ಪಕ್ಷಕ್ಕೆ ಅಧಿಕಾರ ಒಪ್ಪಿಸಬೇಕೋ ಅಂಥಾ ಪಕ್ಷಗಳೇ ಇಲ್ಲ. ಆ ತರದ ಐಕ್ಯ ನಮ್ಮಲಿಲ್ಲ. ನ್ಯಾಯವಾದ ಕೆಲಸದ ಪರಿಣಾಮವನ್ನು ಸಹಿಸುವಷ್ಟು ಯೋಗ್ಯತೆ ಆ ಪಕ್ಷದಲ್ಲಿದೆಯೋ ಇಲ್ಲವೋ ಎಂಬ ವಿಚಾರವನ್ನು ಕೂಡ ಮಾಡದೆ ನ್ಯಾಯ ಕಾರ್ಯವನ್ನು ಮಾಡಬೇಕೆಂದು ಈ ಬೇಡಿಕೆಯ ಉದ್ದೇಶವಿದೆ. ಅನ್ಯಾಯದಿಂದ ಒಡವೆ ಆಸ್ತಿಗಳನ್ನು ಸೆಳೆದುಕೊಂಡರೆಂಬ ಕಾರಣದಿಂದ ಬ್ರಿಟಿಷರು ಹಾಗೆ ಸೆಳೆಕೊಂಡವರಿಗೆಸ್ತು ಒಡವೆಗಳನ್ನೊಪ್ಪಿಸುವರೊ? ತಿರುಗಿ ಸಿಕ್ಕಿದ ಆಸ್ತಿಯನ್ನುಳಿಸಿಕೊಳ್ಳಬಲ್ಲರೋ ಎಂಬುದನ್ನೂ ವಿಚಾರಮಾಡತಕ್ಕದಲ್ಲ. ಇಂಥ ದೊಡ್ಡ ನೈತಿಕ ಕೃತ್ಯವನ್ನು ಮಾಡುವುದರಿಂದ ಬ್ರಿಟಿಷರಿಗೆ ನೈತಿಕ ಬೆಂಬಲ ಸಿಗುವುದು. ಅದರಿಂದ ಅವರಿಗೆ ಜಯ ದೊರೆಯುವುದು. ಹೊರಟು ಹೋಗಿರೆಂದು ಬ್ರಿಟಿಷರಿಗೆ ಹೇಳುವಾಗ ಅವರು ಸೋಲುವುದು ಖಂಡಿತವೆಂದಾಗಿದ್ದರೆ ನನ್ನ ಹೇಳಿಕೆ ಅಪ್ರಾಮಾಣಿಕವೆಂದು ತಿರಸ್ಕರಿಸಬಹುದಾಗಿತ್ತು. ಮಿತ್ರಪಕ್ಷದ ಸೈನಿಕರು ಇಲ್ಲಿ ಕಾರ್ಯ ಮಾಡುತ್ತಿದ್ದರೆ ಇಲ್ಲಿ ಅಹಿಂಸಾಪ್ರಯೋಗಕ್ಕೇ ಅವಕಾಶವಿಲ್ಲ. ರಾಷ್ಟ್ರದ ಶರತಗಳನುಸರಿಸಿ ಅವರು ಇಲ್ಲಿ ಇರಬಹುದು.

(೨) ಬ್ರಿಟಿಷರ ಸ್ವಾತಂತ್ರ್ಯ ಘೋಷಣೆ ಪ್ರಾಮಾಣಿಕವಾಗಿದ್ದರೆ ಸೈನಿಕರು ಇಲ್ಲಿದ್ದರೂ ಅವರಿಂದ ಯಾಕೆ ತೊಂದರೆಯಾಗಬೇಕು? ನಿನ್ನೆ ನನ್ನ ಒಡೆಯನಾಗಿದ್ದವನು ಈ ಹೊತ್ತು ನನ್ನ ಹೇಳಿಕೆಯಂತೆ ನನ್ನ ಮನೆಯಲ್ಲಿದ್ದರೆ ನನ್ನ ಸ್ವಾತಂತ್ರ್ಯಕ್ಕೆ ಯಾಕೆ ತೊಂದರೆಯಾಗಬೇಕು?

(೩) ಮಿತ್ರಸೈನಿಕರು ನಮ್ಮ ರಕ್ಷಣೆಗಾಗಿ ಇಲ್ಲಿರಬೇಕಾಗಿಲ್ಲ. ನಮ್ಮ ರಕ್ಷಣೆಯನ್ನು ಹೇಗಾದರೂ ನಾವು ಮಾಡಿಕೊಳ್ಳಬಲ್ಲೆವು. ನಾವು ಅಹಿಂಸೆಯಿಂದ ರಕ್ಷಿಸಬಹುದು. ನಮ್ಮ ಭಾಗ್ಯ ಒಳ್ಳೆಯದಾದರೆ ಬ್ರಿಟಿಷರು ಹೊರಟುಹೋದ ಮೇಲೆ ಜಪಾನರಿಗೆ ಇಲ್ಲಿ ಬರಲು ಅಭಿಪ್ರಾಯವಾಗಲಾರದು. ಆಂದರೂ ಇಲ್ಲಿ ಅವರಿಗೆ ಸ್ಥಳ ಸಿಗಲಿಕ್ಕಿಲ್ಲವೆಂಬುದು ಅವರಿಗೆ ಗೊತ್ತಾಗಲೇಬೇಕು.

(೪) ಬ್ರಿಟಿಷರನ್ನು ಇಲ್ಲಿಂದ ಹೊರಗೆ ಹಾಕಬೇಕೆಂಬುದು ಮುಖ್ಯವಲ್ಲ. ಅವರು ಕೊಟ್ಟ ಮಾತುಗಳನ್ನು ಪಾಲಿಸಬೇಕೆಂಬುದು ಮುಖ್ಯ. ಅವರು ವಿಶ್ವಾಸಘಾತ ಮಾಡಿದರೆ, ಅವರ ವಚನವನ್ನು ಪರಿಪೂರ್ಣ ಮಾಡಲು ನಮ್ಮಲ್ಲಿ ಅಹಿಂಸಾತ್ಮಕ ಮತ್ತು ಹಿಂಸಾತ್ಮಕ ಶಕ್ತಿಯಿರಬೇಕು.

(೫) ಆ ಎರಡು ಸ್ಥಿತಿಗಳಲ್ಲಿ ಬಹಳ ಅಂತರವಿದೆ. ನನ್ನ ಬೇಡಿಕೆ ಈ ದೇಶವನ್ನು ಆಕ್ರಮಿಸಿದವರಿಗಾಗಿದೆ. ಆದರೆ ಅವರನ್ನು ಹೊರಹಾಕಲು ಸುಭಾಸಬೋಸರು ಜರ್ಮನರನ್ನು ತರುವರು. ಹಿಂದುಸ್ತಾನವನ್ನು ದಾಸ್ಯದಿಂದ ವಿಮೋಚನೆ ಮಾಡಬೇಕಾದ ಹೊಣೆ ಜರ್ಮನರಿಗೇನೂ ಇಲ್ಲ. ಆದ್ದರಿಂದ ಬೋಸರ ಕೃತಿಯಿಂದ ಹಿಂದುಸ್ತಾನವು ಕುದಿವ ನೀರಿನಿಂದ ಬೆಂಕಿಗೆ ಬೀಳುವುದು.

(೬) ಸಶಸ್ತ್ರ ಸೈನಿಕರ ಸಹಾಯವಿಲ್ಲದೆ ದೇಶವು ಆತ್ಮರಕ್ಷಣೆ ಮಾಡಿಕೊಳ್ಳಬಲ್ಲುದೆಂಬ ನನ್ನ ಅಭಿಪ್ರಾಯಕ್ಕೆ ಮೌಲಾನಾ ಸಾಹೇಬರು ಒಪ್ಪುವುದಿಲ್ಲವೆಂಬುದು ಸರ್ವ ವಿದಿತವಿದೆ. ಅಹಿಂಸಾತ್ಮಕವಾಗಿ ದೇಶವನ್ನು ರಕ್ಷಿಸಲು ಸಾಧ್ಯವುಂಟೆಂಬ ನನ್ನ ವಿಶ್ವಾಸದಿಂದ ಈ ಬೇಡಿಕೆಯನ್ನು ಮುಂದಿಡಲಾಗಿದೆ.

(೭) ಮಿತ್ರಪಕ್ಷದವರ ಇಷ್ಟದಂತೆ ಹಿಂದುಸ್ತಾನವು ಪೂರ್ಣ ವಿಚಾರ ಮಾಡದೆ ಸಹಾಯ ಸಲ್ಲಿಸುತ್ತದೆ. ಸ್ವತಂತ್ರ ಹಿಂದುಸ್ತಾನವು ಪೂರ್ಣ ವಿಚಾರದಿಂದ ಚೀನಕ್ಕೆ ಎಲ್ಲಾ ತರದ ಸಹಾಯ ಮಾಡಬಲ್ಲುದು. ಚೀನವು ಏಶ್ಯದ ಭಾಗವಾದ್ದರಿಂದ ಭಾರತೀಯರಿಗೆ ಅದರ ಮೇಲೆ ಪ್ರೇಮವಿದೆ. ಚೀನಕ್ಕೆ ನ್ಯಾಯದಾನ ಮಾಡಬೇಕೆಂದು ಜಪಾನಿನ ಮನವೊಲಿಸಲು ಹಿಂದುಸ್ತಾನವು ಕೃತಾರ್ಥನಾಗಲಾರದೆಂದು ಹೇಗೆ ಹೇಳುವುದು?

'ಹರಿಜನ'ವು ನಿರ್ಬಂಧಿಸಲ್ಪಟ್ಟರೆ?

ಈ ಕುರಿತು ಗಾಂಧಿಜಿಯವರೊಡನೆ ಕೇಳಿದ ಪ್ರಶ್ನೆಗೆ ಅವರು ಈ ರೀತಿ ಉತ್ತರಕೊಡುತ್ತಾರೆ:

"ಹರಿಜನವನ್ನು ನಿಲ್ಲಿಸಬೇಕೆಂದು ಸರಕಾರದ ಹುಕುಮು ಹೊರಟ ಕೂಡಲೇ ಅದನ್ನು ನಿಲ್ಲಿಸಿಬಿಡಿರೆಂದು ನಾನು ಮೇನೇಜರರಿಗೆ ಈಗಾಗಲೇ ಸೂಚಿಸಿದ್ದೇನೆ. 'ಹರಿಜನ'ವನ್ನು ಹೊರಡಿಸುವುದು ನನ್ನ ಆಂದೋಲನದ ಅಂಗವಲ್ಲ. ಹರಿಜನವನ್ನು ನಿರ್ಬಂಧಿಸಬಹುದು. ಆದರೆ ನಾನು ಜೀವಂತನಾಗಿರುವ ವರೆಗೆ ನನ್ನ ಸಂದೇಶವನ್ನು ಮಾತ್ರ ತಡೆದು ಬಿಡಲು ಸಾಧ್ಯವಿಲ್ಲ. ದೇಹವು ಮೃತಿ ಹೊಂದಿದರೂ ಚೈತನ್ಯವು ಎಲ್ಲೆಡೆಯಲ್ಲಿಯೂ ಸಸರಿಸುತ್ತಿದ್ದು ಲಕ್ಷಗಟ್ಲೆ ಜನರ ಮುಖಾಂತರ ಅದು ಮಾತನಾಡುತ್ತಿರುವುದು. ದೇಶದ ಲಕ್ಷಾಂತರ ಹಿಂದು ಮುಸ್ಲಿಮರ ಚೈತನ್ಯವು ನನ್ನಲ್ಲಿ ದೆಯೆಂದು ನಾನು ಹೇಳಿಕೊಳ್ಳುತ್ತೇನೆ. ಈ ಬಗ್ಗೆ ನಾನು ಜಿನ್ನಾ ಸಾವರ್ಕರರ ಕ್ಷಮೆ ಕೇಳುತ್ತೇನೆ. ಅಲ್ಲದೆ ಭರತಮಾತೆಯ ಮಕ್ಕಳಾಗಿರುವ ಹಿಂದು ಮುಸಲ್ಮಾನೇತರರ ಪ್ರತಿನಿಧಿಯೆಂಥೂ ನಾನು ಹೇಳುವೆನು. ಈ ದೇಶದಲ್ಲಿರುವ ಪ್ರತಿಯೊಬ್ಬ ಮಾನವನ ಸ್ವಾತಂತ್ರ್ಯಕ್ಕಾಗಿ ನಾನು ಜೀವಿಸಿದ್ದು ಅದಕ್ಕಾಗಿ ಮರಣ ಹೊಂದುವ ಶಕ್ತಿ ನನ್ನಲ್ಲಿದೆಯೆಂದು ನಾನು ಭಾವಿಸುತ್ತೇನೆ.

"ಇಂದು ಹರಿಜನವು ಇಂಗ್ಲಿಷ್, ಹಿಂದಿ, ಉರ್ದು, ತಮಿಳು, ತೆಲುಗು, ಒರಿಯಾ, ಮರಾಠಿ, ಗುಜರಾಥ್, ಕನ್ನಡ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ಬಂಗಾಲ, ಅಸಾಮ್, ಕೇರಳ, ಸಿಂಧ ಭಾಷೆಗಳಲ್ಲಿ ಪ್ರಕಟಿಸಲು ಅರ್ಜಿ ಬಂದಿದೆ. ಇಂಥ ಪತ್ರಿಕೆಯನ್ನು ನಿರ್ಬಂಧಿಸುವುದು ಸಣ್ಣ ಕೆಲಸವಲ್ಲವೆಂದು ನಾನು ಭಾವಿಸುತ್ತೇನೆ. ಹೀಗೆ ಮಾಡಿದರೆ ಜನತೆಗಿಂತ ಸರಕಾರಕ್ಕೇ ಹೆಚ್ಚಿನ ಹಾನಿಯಾಗುವದು. ಜನರಿಗೆ ಮಾರಕ್ಕೊಪ್ಪ ಒದಗುವ ಆಹಾರವು ಸಿಗದಿದ್ದರೆ ಅಧಿಕಾರಿಗಳಿಗ ಲಾಭವಾಗದು ಮತ್ತು ಹರಿಜನವು ಬ್ರಿಟಿಷ್ ವಿರೋಧಕ ಪತ್ರಿಕೆಯಲ್ಲ. ಬ್ರಿಟಿಷರಿಗೆ ಅನುಕೂಲದ್ದಾಗಿದೆ. ಬ್ರಿಟಿಷರಿಗೆ ಒಳ್ಳೆಯದಾಗಬೇಕೆಂದು ಅದು ಬಯಸುತ್ತದೆ. ಸ್ನೇಹ ಭಾವದಿಂದ ಅದು ಅವರ ತಪ್ಪನ್ನು ಸೂಚಿಸುತ್ತದೆ. ಮರಣಾವಸ್ಥೆಯಲ್ಲಿರುವ ಸಾಮ್ರಾಜ್ಯತ್ವವನ್ನು ಪ್ರತಿಪಾದಿಸುವ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಬ್ರಿಟಿಷರಿಗೆ ಅಹಿತವನ್ನೇ ಮಾಡುತ್ತವೆ. ಈ ಯುದ್ಧದಲ್ಲಿ ಬ್ರಿಟನಿಗೆ ವಿಜಯವಾದರೂ ಅಪಜಯವಾದರೂ ಸಾಮ್ರಾಜ್ಯವು ನಾಶವಾಗಲೇಬೇಕು. ಈ ದೃಷ್ಟಿಯಿಂದ ನೋಡಿದರೆ ಆಂಗ್ಲೋ ಇಂಡಿಯನ್ ಪತ್ರಿಕೆಗಳು ಬ್ರಿಟಿಷ್ ವಿರೋಧವಾದ್ದಾಗಿವೆ. ಹರಿಜನವನ್ನು ನಿರ್ಬಂಧಿಸುವಾಗ ಅಧಿಕಾರಿಗಳು ತಾವು ಯಾವುದನ್ನು ಮಾಡಲು ಮುಂದಾಗಿರುವರೆಂದು ಚೆನ್ನಾಗಿ ವಿಚಾರಿಸಿಕೊಳ್ಳತಕ್ಕದ್ದು."

ಮಂಗಳೂರು

ಚಿಮಿಣಿ ಎಣ್ಣೆಯ ಚಿಲ್ಲರೆ ಮಾರಾಟದ ಅತ್ಯಧಿಕ ದರಗಳು:— ಜಿಲ್ಲಾ ಕಲೆಕ್ಟರರು ಮಂಗಳೂರು ನಗರ, ಕಾಸರಗೋಡು ಉಡುಪಿ ಮೂಡಬಿದ್ರಿಗಳಲ್ಲಿ ಬಾಟ್ಲಿಗೆ 0 3 7, ಕಾಸರಗೋಡು ಪುತ್ತೂರುಗಳಲ್ಲಿ 0 3 9, ಕುಂದಾಪುರ, ಕಾರ್ಕಳ ತಾಲೂಕುಗಳಲ್ಲಿ 0-3 6, ರಂತೆ ಬಿಳಿ ಎಣ್ಣೆಗೂ, 0-3-2 0 3 3, 0 3 4 ಪ್ರಕಾರ ಕೆಂಪು ಎಣ್ಣೆಗೂ ದರವನ್ನು ನಿಶ್ಚಯಿಸಿದ್ದಾರೆ. ಇದಕ್ಕೆ ಮಿಕ್ಕಿ ಮಾರಿದರೆ ಮೂರು ವರುಷ ವರೆಗೆ ಸಜೆ ಮತ್ತು ಜುಲ್ಮಾನೆಯಾಗುವುದು. ಭಾರತ ರಕ್ಷಣಾ ಕಾನೂನಿನ್ವಯ ಚಿಮಿಣಿ ಎಣ್ಣೆ ವ್ಯಾಪಾರದ ಯಾವ ಸ್ಥಳವನ್ನಾದರೂ ರೆವಿನ್ಯುಖಾತೆಯ ರೆವಿನ್ಯು ಇನ್ಸ್‌ಪೆಕ್ಟರ್ ಮತ್ತು ಮೇಲಧಿಕಾರಿಗಳೂ, ಕಮರ್ಶಿಯಲ್ ಟೇಕ್ಸ್ ಖಾತೆಯ ಅಸಿಸ್ಟಂಟ್ ಕಮ್ಶಿಯಲ್ ಟೇಕ್ಸ್ ಆಫೀಸರರು ಮತ್ತು ಮೇಲಧಿಕಾರಿಗಳು ಪ್ರವೇಶಿಸಿ ಲೆಕ್ಕ ಮತ್ತು ಸ್ಟಾಕನ್ನು ಪರಿಶೋಧಿಸಬಹುದು.

ಸಕ್ಕರೆ ವ್ಯಾಪಾರಕ್ಕೆ:—ಸಂಬಂಧಪಟ್ಟ ಯಾವದೇ ಸ್ಥಳವನ್ನಾದರೂ ಮಣೆಗಾರ, ಮತ್ತು ಅವರ ಮೇಲಧಿಕಾರಿಗಳೂ, ಕಮ್ಮರ್ಶಿಯಲ್ ಟೇಕ್ಸ್ ಖಾತೆಯ ಅಸಿಸ್ಟಾಂಟ್ ಕಮ್ಮರ್ಶಿಯಲ್ ಟೇಕ್ಸ್ ಆಫೀಸರರು ಹಾಗೂ ಅವರ ಮೇಲಧಿಕಾರಿಗಳೂ ಸಂದರ್ಶಿಸಿ, ಲೆಕ್ಕ ಪತ್ರವನ್ನು ಪರಿಶೀಲಿಸಬಹುದೆಂದು ದೇಶರಕ್ಷಣಾ ಕಾನೂನಿಗನುಗುಣವಾಗಿ ಕಲೆಕ್ಟರರು ಅವರಿಗೆ ಅಧಿಕಾರವಿತ್ತಿರುವರು.

ಉಡುಪಿ

ಉಡುಪಿ ಗೌಡಸಾರಸ್ವತ ಬ್ರಾಹ್ಮಣ ಸಮಾಜದವರು ಸಮಾಜದ ಮಹಾಜನರ ಸಹಾಯ ಪಡೆದು ಉಡುಪಿ ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನದ ಬಳಿಯಲ್ಲಿ ಬಡವರಿಗೆ ಅಕ್ಕಿಯನ್ನು ಸೇರು ೧ರ ೦-೨-೪ ದರದಂತೆ ಇದೇ ಜುಲೈ ತಾ. ೫ರಿಂದ ಪ್ರತೀ ದಿನ ಮಧ್ಯಾಹ್ನ ಘಂಟೆ ೩ರಿಂದ ೬ರ ವರೆಗೆ ಮಾರಾಟ ಮಾಡುತ್ತಾರೆ. ಈ ಬಗ್ಗೆ ಶ್ರೀ ... ದ ಮೂಲ್ಕಿ ಶ್ರೀನಿವಾಸ ... ಡುವರು ೪೪ ಮುಡಿ ಅಕ್ಕಿಯನ್ನು, ... ಮಾಧವ ಪೈಗಳು ೪೦ ಮುಡಿ ಅಕ್ಕಿಯನ್ನೂ ಡಾ. ಸುಂದರರಾಮ ಪೈಗಳು ೧ ಕೋರ್ಜಿ ಅಕ್ಕಿಯನ್ನೂ, ಸಾಹುಕಾರ ಪಿ. ವಿ. ಕಾಮತರು ೧೦ ಮುಡಿ ಅಕ್ಕಿಯನ್ನೂ ಪಿ. ಎ. ಪೈಗಳು ೧೦ ಮುಡಿ ಅಕ್ಕಿಯನ್ನೂ ಕೊಟ್ಟಿರ ಮಾಗಿಯೂ ಮುಂದೆ ಶ್ರೀಗಳಾದ ವಕೀಲ ವಿಟ್ಠಲ ಕಾಮತರು, ಕೋಟೇಶ್ವರ ಒದ್ದೇಶ್ವರವರು ಕಲ್ಯಾಣ ವೆಂಕಟ್ರಾಯ ಪೈ ಮತ್ತು ... ಕೇಶವ ಕಾಮತರು ... ರಾಘವೇಂದ್ರ ಬಾಳಿಗರು, ಎಚ್. ಲಕ್ಷ್ಮಣ ಬಾಳಿಗರು, ಸಾಲಿಗ್ರಾಮ ಸುಬ್ರಾಯ ಕಾಮತರು, ವಾಸುದೇವ ಜೋಗಪ್ಪ ... ಮಾಡಲು ಸಹಾಯ ... ತ್ತೇವೆ. ಅವರು ಕೈಕೊಂಡ ಈ ಸತ್ಕಾರ್ಯಕ್ಕೆ ... ದಷ್ಟು ಹೆಚ್ಚು ದಿವಸ ನಡೆಯಲೆಂದು ಹಾರೈಸುತ್ತೇವೆ.

ದೋಣಿಯಲ್ಲಿ ಅನಾಹುತ

ಉದ್ಯಾವರ ಹೊಳೆಯಲ್ಲಿ ಇಬ್ಬರು ಸೋಮೇಶ್ವರರು ದೋಣಿ ಮಗುಚಿ ಮುಳುಗಿದ್ದು ಅವರಲ್ಲಿ ಒಬ್ಬನು ಪಾತ್ರ ಮೇಲೆ ಬಂದಿರುವನೆಂದು ಇನ್ನೊಬ್ಬನು ಮುಳುಗಿ ಹೋಗಿರುವನೆಂದೂ ವಿಷಾದಕರ ಸುದ್ದಿ ಬಂದಿದೆ.

ಕಾಂಗ್ರೆಸಿಗೆ ಸಾಂಬಮೂರ್ತಿಯವರ ರಾಜಿನಾಮೆ

ಸ್ಪೀಕರರ ಪ್ರಕಟಣವನ್ನು ಕಾಂಗೆಸ್ ವರ್ಕಿಂಗ್ ಕಮಿಟಿಯವರ ಸ್ಥರ ವಿಚಾರಿಸದ ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರೀ ಮಂಡಳಕ್ಕೆ ಒಪ್ಪಿಸಿದ್ದರ ನಿಷೇಧಾರ್ಥ ಬುಲುಸು ಸಾಂಬಮೂರ್ತಿಯವರು ಕಾಂಗ್ರೆಸಿನ ನಾಲ್ಕಾಣೆ ಸದಸ್ಯತ್ವಕ್ಕೂ ರಾಜಿನಾಮೆಯಿತ್ತಿರುವರು.

ಕೆನಡಾದಲ್ಲಿ ಹಡಗನಿರ್ಮಾಣ

ಬರುವ ಡಿಸೆಂಬರ ಅಂತ್ಯದೊಳಗೆ ೧೦೦೦೦ ಟನ್ ಭಾರದ ೭೫ ದೊಡ್ಡ ಹಡಗಗಳನ್ನು ಕಟ್ಟುವ ಕೆಲಸವು ಕೆನಡಾದಲ್ಲಿ ನಡೆಯುತ್ತಿದೆಯೆಂದು ತಿಳಿದ ಬರುತ್ತದೆ. ಕಾರ್ಯಕ್ರಮದಲ್ಲಿ ಈಗಾಗಲೇ ೧೬೨ ಹಡಗಗಳು ಇವೆ. ಇಷ್ಟರಲ್ಲೇ ೩೫ ನಿರ್ಮಾಣವಾಗಿವೆ. ಈ ಎಲ್ಲಾ ಹಡಗುಗಳನ್ನು ಕಟ್ಟಲು ೭೫೦,೦೦,೦೦೦ ಪವನುಗಳು ವೆಚ್ಚವಾಗುವುವು.

"ನಮ್ಮ ಸ್ನೇಹಿತರಾಗಿರಿ....



ನಿಮ್ಮ ಮನೆಯೊಳಗೆ ನಾವು ಪ್ರವೇಶಿಸುವವರೆಗೆ"

ಜಪಾನಿಯರ "ಸ್ನೇಹವು" ಒಂದು ಮೋಸರಣಕೌಶಲ್ಯ. ಜಪಾನಿಯರು ನಮ್ಮ ಹಿತಕ್ಕಾಗಿ ಇಂಡಿಯಾ ದೇಶಕ್ಕೆ ಬರುತ್ತಾರೆಂದು ಯಾವಾಗಲೂ ನಂಬಬೇಡಿ. ಅವರು ಒಂದು ಮೋಸರಣಕೌಶಲ್ಯವನ್ನು ಕಂಡುಹಿಡಿದಿದ್ದಾರೆ ಅದೇನೆಂಬುದನ್ನು ನಾವು ಜಾಗ್ರತೆಯಾಗಿ ತಿಳಿದುಕೊಂದು ಎಚ್ಚರಿಕೆಯಿಂದಿರಬೇಕು ಅವರ ಸಭಿನುಡಿಗಳು, ರೇಡಿಯೋ ಮೂಲಕ ಅವರು ಮಾಡುವ ವಾಗ್ದಾನಗಳು, ಅವರ ಏಜೆಂಟುಗಳು ನಮ್ಮ ಮಧ್ಯದಲ್ಲಿ ಹರಡುತ್ತಿರುವ ವದಂತಿಗಳು ಇವೆಲ್ಲಾ ಒಂದು ಉದ್ದೇಶದೊಡನೆಯೇ—ಏನೆಂದರೆ ನಮ್ಮನ್ನು ಮೋಸಮಾಡಿ ನಮ್ಮನ್ನು ಬಲಹೀನರಾಗಿ ಮಾಡಿ ಜಪಾನಿಯ ಸಿಪಾಯಿಯು ನಮ್ಮ ದೇಶದೊಳಗೆ ಪ್ರವೇಶಿಸುವುದಕ್ಕೆ ನಾವು ಸಹಾಯಕರಾಗುವ ಹಾಗ ನಮ್ಮನ್ನು ಪುಸಲಾಯಿಸುವುದು—ಎಲ್ಲಾ ಅವನ ಹಿತಕ್ಕಾಗಿ. ಆದರೆ ಜಪಾನಿಯ ಸಿಪಾಯಿಗಳಿಗೆ ಇಂಡಿಯಾವಿನಲ್ಲಿ ಸ್ವಾಗತಕ್ಕೆ ಬದುಲಾಗಿ ಮರಣವೇ ದೊರಕುವುದು ವಿಮಾನಗಳು, ಫಿರಂಗಿಗಳು ಮತ್ತು ಸೈನ್ಯಗಳು ಅವರನ್ನು ಎದುರಿಸುವುದಕ್ಕಾಗಿ ಕಾದುಕೊಂಡಿವೆ ನಮ್ಮ ಗ್ರಾಮವಾಸಿಗಳು ಕೂಡ ಅವರನ್ನು ಉಪಾಯದಿಂದ ತಡೆಗಟ್ಟುವರು ನೀವು ನಿಮ್ಮಿಂದಾದ ಸಹಾಯವನ್ನು ಮಾಡಲು ತಯಾರಾಗಿರುವಿರಾ? ನಮ್ಮ 380,000,000 ಜನಗಳು ಯುದ್ಧಮಾಡಿ, ಯುದ್ಧೋದ್ಯಮಗಳಲ್ಲಿ ಸಹಾನುಭೂತಿಗಳಾಗಿ, ಎಲ್ಲರೂ ಒಟ್ಟುಗೂಡಿ, ನಮ್ಮ ಬುದ್ಧಿಕೌಶಲ್ಯಗಳನ್ನು ಉಪಯೋಗಿಸಿದರೆ ನಾವು ಯಾವಾಗಲೂ ಸೋಲಲಾರೆವು ಇಂದೇ ಪ್ರಾರಂಭಿಸಿ

ಚೀನಾ ದೇಶವನ್ನು ಜ್ಞಾಪಕದಲ್ಲಿಡಿ!

ಜಪಾನಿಯರು ಚೀನಾ ದೇಶವನ್ನು "ಬಂಧವಿಮೋಚನ" ದ ಹೆಸರಿನಲ್ಲಿ ನಷ್ಟ ಮಾಡಿರುವ ಘೋರತನವನ್ನು ಜ್ಞಾಪಕದಲ್ಲಿಟ್ಟುಕೊಂಡಿರಿ! ನೀವು ಸಾಖ್ಯದಿಂದ ಜೀವಿಸಬೇಕಾದರೂ ಅಥವಾ ನಿಮ್ಮ ಹೆಂಡತಿ ಮಕ್ಕಳನ್ನು ಕಾಪಾಡಿಕೊಳ್ಳಬೇಕಾದರೂ, ಜಪಾನಿಯರ ಅಧೀನಕ್ಕೊಳಗಾಗ ಕೂಡದು ಚೀನೀಯರು ಅನುಭವದಿಂದ ಇದನ್ನು ತಿಳಿದುಕೊಂಡಿದ್ದಾರೆ ಜಪಾನಿಯರ 'ಸ್ನೇಹ'ಕ್ಕೆ ಒಂದೇ ಉತ್ತರ—ಯುದ್ಧ ಮಾಡುವುದು. ೫ ವರ್ಷಗಳಿಂದಲೂ ಚೀನಿಯರು ಈ ಉತ್ತರವನ್ನು ಕೊಡುತ್ತಿದ್ದಾರೆ—ಅವರ ಶೌರ್ಯದಿಂದ ಅವರ ಹೆಂಗಸರು ಸುರಕ್ಷಿತರಾಗಿದ್ದಾರೆ. ಅವರ ಸೈನ್ಯಗಳ ಧೈರ್ಯವು ತುಂಬ ತುಳುಕುತ್ತಿದೆ ಮತ್ತು ಅವರು ಚೀನಾ ದೇಶಕ್ಕೆ ಒಂದು ಹೊಸ ಜೀವಿತವನ್ನು ನಿರ್ಮಾಡಿಸುತ್ತಿದ್ದಾರೆ

ಜಪಾನಿಯರನ್ನು ಎದುರಿಸುವುದಕ್ಕೆ
ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು.

ದಿವಂಗತ ಶ್ರೀ ಇ. ಎ. ಭಾಸ್ಕರರಾಯರ ಜ್ಞಾಪಕ ಸ್ಪರ್ಧೆಗಳಲ್ಲಿ ಪ್ರಬಂಧ ಸ್ಪರ್ಧೆ

ದಿವಂಗತ ಶ್ರೀ ಇ. ಎ. ಭಾಸ್ಕರರಾಯರ ಹೆಸರಿನಲ್ಲಿ ಅವರ ತಾಯಿಯವರಾದ ಶ್ರೀಮತಿ ಎ. ಶೇಷಮ್ಮನವರು ಒಂದು ಜ್ಞಾಪಕನಿಧಿಯನ್ನು ಪರಿಷತ್ತಿಗೆ ಕೊಟ್ಟಿದ್ದು ಈ ಸಂಬಂಧದಲ್ಲಿ ಈ ವರ್ಷವೂ ಒಂದು ಪ್ರಬಂಧ ಸ್ಪರ್ಧೆಯನ್ನು ನಡೆಸಬೇಕೆಂದು ನಿಶ್ಚಯಿಸಿದೆ. ಪ್ರಬಂಧದ ವಿಷಯ. 'ಪುರಂದರ ದಾಸರ ಕೀರ್ತನೆಗಳು' ಪ್ರಬಂಧ ಸ್ವತಂತ್ರವಾಗಿರಬೇಕು, ಇದುವರೆಗೆ ಅಚ್ಚಾಗಿರಬಾರದು. ಪ್ರಬಂಧ ಫೂಲ್ಸ್‌ಕ್ಯಾಪ್ ಆಕಾರದ ೨೦ ಪುಟಗಳ ಪರಿಮಿತಿಯಲ್ಲಿ ಇರಬೇಕು; ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು. ೩೦-೯-೧೯೪೨ನೆಯ ತಾರೀಖಿನೊಳಗಾಗಿ ಪ್ರಬಂಧ ಪರಿಷತ್ತಿನ ಕಛೇರಿಗೆ ತಲಪಬೇಕು, ಉತ್ತಮವೆಂದು ಪರೀಕ್ಷಾ ಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೨೦ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದು. ಹಿಂದಿನ ವರ್ಷಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಈ ಸ್ಪರ್ಧೆಗೆ ನಿಲ್ಲಕೂಡದು. ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಯವರೊಂದಿಗೆ ನಡೆಸತಕ್ಕದ್ದು.

‘ಕೊಲ್ಲುವುದಕ್ಕಿಂತ ಮೊದಲೇ ನಾವು ಸಾಯಬೇಕೆ?’

ಒರಿಸಾದ ಹಳ್ಳಿಗರು ಕೂಗಿ ಹೇಳಿದರು

‘ಕೊಲ್ಲುವ ಮೊದಲೇ ನಾವು ಸಾಯುವುದೇ?’

ಒರಿಸಾದ ಹಳ್ಳಿಗರ ಭವಣೆ
ಸೈನಾಧಿಕಾರಿಗಳು ಕೊಟ್ಟ ಸಂಕಷ್ಟ
ಮೀರಾಬಾಯಿ ವರ್ಣಿಸುತ್ತಾರೆ

‘ಹರಿಜನ’ ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ ಮೀರಾ ಬಾಯಿಯು ಒರಿಸಾ ಪ್ರಾಂತದ ಜನರ ಕಷ್ಟಗಳನ್ನು ಹೀಗೆಂದು ವರ್ಣಿಸಿದ್ದಾರೆ.

‘ಒರಿಸಾದ ಕರಾವಳಿ ಪ್ರಾಂತಗಳಲ್ಲೆಲ್ಲಾ ಮಳೆಗಾಲದಲ್ಲಿ ನೀರು ತುಂಬಿ ಹೋಗುತ್ತದೆ. ಮನೆಗಳ ಸುತ್ತಮುತ್ತಲೂ ನೀರು ತುಂಬಿ ಅವು ದ್ವೀಪದಂತೆ ಇರುತ್ತವೆ. ಮಲಮೂತ್ರ ವಿಸರ್ಜನೆಗೆ ಹೋಗಬೇಕಾದರೂ ದೋಣಿ ಬೇಕು. ಸೈನಾಧಿಕಾರಿಗಳ ಆಜ್ಞೆಯಂತೆ ಅವರು ದೋಣಿಗಳನ್ನೆಲ್ಲಾ ಅಧಿಕಾರಿಗಳಿಗೆ ಒಪ್ಪಿಸಬೇಕು. ‘ಜಪಾನರು ನಮ್ಮನ್ನು ಕೊಲ್ಲುವ ಮೊದಲೇ ನಾವು ಸಾಯುವುದೇನು?’ ಎಂದು ಅವರು ಕೇಳುತ್ತಾರೆ. ಒರಿಸಾದಲ್ಲಿ ನೀರಿನ ಕಾಲುವೆಗಳಿವೆ. ಇದರಿಂದ ಸಾವಿರಾರು ಎಕ್ರೆ ಭೂಮಿ ಕೃಷಿಯಾಗುತ್ತದೆ. ಜನರು ಕಾಲುವೆಯಿಂದಲೇ ತಮಗೆ ಬೇಕಾದ ನೀರನ್ನು ಪೂರೈಸಿಕೊಳ್ಳುವರು. ಸರಕಾರವು ಈ ವರ್ಷ ಕಾಲುವೆಗಳಿಗೆ ನೀರು ಹರಿಯುವುದನ್ನು ನಿಲ್ಲಿಸಿಬಿಟ್ಟರು. ಜಪಾನಿಯರು ಕಾಲುವೆಯಿಂದ ಬಂದುಕೊಂಡರೆ ಕೂಟ್ಟಾರೆಂದು ಹೀಗೆ ಮಾಡಲಾಗಿದೆಯಂತೆ. ಕೃಷಿ ಭೂಮಿಗಳೆಲ್ಲಾ ಒಣಗಿಹೋಗಿವೆ. ಹೀಗಿರುತ್ತಾ ಆಹಾರ ಸಾಮಗ್ರಿ ಬೆಳೆಸಿರೆಂದು ಪ್ರಚಾರಮಾಡಲು ಅಲ್ಲಿಗೆ ಹಂ ಪಂದಿ ಪ್ರಚಾರಕರನ್ನು ಕಳುಹಿಸಲಾಗಿದೆ! ಆತ್ಮರಕ್ಷಣೆಮಾಡಲು ಸ್ವಯಂ ಸೇವಕ ದಳಗಳನ್ನು ಸಂಘಟಿಸಕೂಡದೆಂದು ಆಜ್ಞೆಯಿದೆ. ರೈಲ್ವೆ ಗಾಡಿಗಳ ಅವ್ಯವಸ್ಥೆ ಈಗಲೇ ಸುರುವಾಗಿದೆ. ಒಂದು ಸ್ಥಳದಲ್ಲಿ ವಿಮಾನ ರಾಣ್ಯ ಮಾಡಲು ಅಲ್ಲಿನವರು ಊರು ಬಿಟ್ಟು ೨-೩ ಮೈಲು ದೂರ ಹೋಗಬೇಕೆಂದು ಜೂನ್ ತಿಂಗಳ ಮೊದಲನೇ ವಾರ ನೋಟೀಸು ಕೊಡಲಾಯಿತು. ಅವರು ಹೊರಟು ಹೋಗುವಾಗ ಮಳೆಯೂ ಬಡಿಯಿತು. ಹೊಸತಾಗಿ ಹೋದಲ್ಲಿ ಮನೆಯಿಲ್ಲ, ಕೆರೆಯಿಲ್ಲ, ಬಾವಿಯಿಲ್ಲ. ಹಳ್ಳಿಗರು ಮುಷ್ಕರ ಹೂಡಿದರು. ಬಾಂಬು ಬಿದ್ದರೂ ಸಾಯುತ್ತೇವೆ, ಆದರೆ ಅಲ್ಲಿಗೆ ಹೋಗಿ ಉಪವಾಸಬಿದ್ದು ಸಾಯಲಾರೆವೆಂದು. ಮತ್ತೆ ಮೀರಾ ಬಾಯಿಯವರ ಮಧ್ಯಸ್ಥಿಕೆಯಿಂದ ಅವರು ಮಳೆಗಾಲ ಮುಗಿದ ಬಳಿಕ ಹೋಗಬೇಕೆಂದು ನಿಶ್ಚಯವಾಯಿತು. ಅಲ್ಲಿಗೆ ವಿಮಾನ ರಾಣ್ಯದ ಕೆಲಸಕ್ಕೆ ಹೊರಗಿಂದ ಜನರನ್ನು ತಂದರು. ಅವರಿಗೆ ದಿನಕ್ಕೆ ೧ ರೂ. ಸಂಬಳ, ಊರಿನವರಿಗೆ ೬ ಆಣೆ, ಹೊರಗಿನವರಿಗೆ ಊಟಬಿಡಾರಗಳೂ ಕೊಡಲಾಗುತ್ತವೆ. ಹೊರಗಿನಿಂದ ಬಂದವರೆಲ್ಲರೂ ಕೈದಿಗಳಾಗಿದ್ದರು. ಅವರಿಂದಾಗಿ ಹಳ್ಳಿಗರ ಮಧ್ಯದ ಊರಿನಲ್ಲಿ ಕಳ್ಳಿನಂಗಡಿ ಸ್ಥಾಪನೆಯಾಯಿತು. ಕೆಲವು ಕೈದಿ ಕೆಲಸಗಾರರು ಯಾವುದೋ ನೆವನಮಾಡಿ ಒಮ್ಮೆ ಒಂದು ಹಳ್ಳಿ ಲೂಟಿಮಾಡಿದರು, ಮನೆಅಂಗಡಿಗಳನ್ನು ಸುಟ್ಟರು. ವಿದೇಶೀಯರ ರಾಜ್ಯಭಾರವೇ ಈ ಅನರ್ಥಕ್ಕೆಲ್ಲಾ ಕಾರಣ.’

ಸ್ಟೇಂಡಾರ್ಡ್ ಟೈಮ್

ಒಂದು ಗಂಟೆ ಮುಂದೆ ಹಾಕಲು ಯೋಜನೆ

ಹಿಂದೂದೇಶದ ಗಡಿಯಾರಗಳಲ್ಲಿ ಕಾಲವನ್ನು ಒಂದು ಗಂಟೆ ಮುಂದೆ ಹಾಕಬೇಕೆಂದೂ, ಈ ನಿರ್ಧಾರವನ್ನು ಸಪ್ಟಂಬರ ಒಂದರಿಂದ ಪ್ರಾರಂಭಿಸಲಾಗುವುದೆಂದೂ ಸುದ್ದಿಯಿದೆ. ವಿದ್ಯುಚ್ಛಕ್ತಿಯ ಉಪಯೋಗವನ್ನು ಮಿತಪಡಿಸುವ ಉದ್ದೇಶದಿಂದ ಈ ಬದಲಾವಣೆ ಮಾಡಲಾಗುವುದೆಂದು ತಿಳಿದಿದೆ.

ಅಸಾಮಿನಲ್ಲಿ ಪುನಃ ಮಂತ್ರಿ ಮಂಡಳಿ

ಅಸಾಮಿನಲ್ಲಿ ಪುನಃ ಮಂತ್ರಿಮಂಡಳಿ ಸ್ಥಾಪಿತವಾಗುವ ಲಕ್ಷಣಗಳಿವೆಯೆಂದು ಸುದ್ದಿ. ಹಿಂದಿನ ಮುಖ್ಯ ಮಂತ್ರಿ ಸಾದುಲ್ಲಾ ಖಾನರು ಈ ಸಂಬಂಧ ಗವರ್ನರನ್ನು ಕಂಡು ಮಾತನಾಡಿದರು. ಹಿಂದಿನ ಮಂತ್ರಿಮಂಡಳದವರು ಸಭೆಸೇರಿದ್ದರು.

ತೋಬ್ರುಕಿಗೆ ‘ರೊಮೆಲ್’ ನಾಮಕರಣವೇ?

ಜಪಾನಿನ ರಾಜನೀತಿಯೇನು?

ಭಾರತದ ಸಮಸ್ಯೆಯನ್ನು ಮಿತ್ರರು ಬಿಡಿಸಬೇಕು

ಚೀನೀ ಪತ್ರಿಕೆಯ ಸಲಹೆ

ಭಾರತದ ಸಮಸ್ಯೆಯನ್ನು ಬಿಡಿಸಲು ಮಿತ್ರ ರಾಷ್ಟ್ರಗಳು ಪ್ರಯತ್ನಿಸಬೇಕೆಂದು ಚೀನಾ ಟೈಮ್ಸ್ ಪತ್ರಿಕೆ ಬರೆದಿದೆ. ಬ್ರಿಟನು ಭಾರತದ ಧೋರಣವನ್ನು ತಿದ್ದಿಕೊಳ್ಳುವಂತೆಯೂ, ಭಾರತೀಯರು ತಮ್ಮ ನಿರ್ಣಯವನ್ನು ಪುನಃ ಪರಿಶೀಲಿಸುವಂತೆಯೂ ಸಲಹೆ ಕೊಡುವ ಹಕ್ಕು ಮಿತ್ರ ರಾಷ್ಟ್ರಗಳಿಗಿರುವುದಲ್ಲದೆ ಅದು ಅವರ ಕರ್ತವ್ಯವೂ ಆಗಿರುವುದೆಂದೂ, ಸಮಸ್ಯೆಯನ್ನು ತೃಪ್ತಿಕರವಾಗಿ ಬಿಡಿಸಲಾಗುವುದೆಂದು ಮಿತ್ರರು ಸಮಾಧಾನ ಕೊಡಬೇಕೆಂದೂ, ಬ್ರಿಟನು ಹಿಂದಿನ ಸ್ಥಾನಗಳು ಮಿತ್ರರ ಮಾತಿನಲ್ಲಿ ಜವಾಬ್ದಾರಿಯಿಡಬೇಕೆಂದೂ ಅದು ಬರೆದಿದೆ.

ಜಪಾನರು ಅಮೇರಿಕವನ್ನು ಯುದ್ಧದಿಂದ ಹಿಂತಿರುಗಿಸುವರೆ?

‘ಅತ್ತ ಜರ್ಮನಿಯೂ ಬ್ರಿಟನು ಅಮೇರಿಕಗಳ ಮೇಲೆ ತನ್ನ ಸರ್ವಶಕ್ತಿಯ ನ್ನುಪಯೋಗಿಸಿಕೊಂಡು ಧಾಳಿಮಾಡುವ ಮೊದಲೇ ರಷ್ಯವನ್ನು ನಿರ್ನಾಮ ಮಾಡಬೇಕೆಂದು ಯತ್ನಿಸುತ್ತಿದೆ. ಅದೇ ರೀತಿ ಜಪಾನು ಆಸ್ಟ್ರೇಲಿಯ ಹಿಂದುಸ್ಥಾನಗಳಿಗೆ ಧಾಳಿಯಿಡುವ ಮೊದಲು ಚೀನವನ್ನು ಬಗ್ಗುಬಡಿಯಲು ಯತ್ನಿಸುತ್ತಿದೆ. ತನಗೆ ಅವಶ್ಯವಿರುವಷ್ಟು ಕಚ್ಚಾ ಸಾಮಗ್ರಿಗಳನ್ನು ಪಡೆಯುವುದಕ್ಕಾಗಿ ಮತ್ತು ಅದುವರೆಗೆ ಮಿತ್ರ ರಾಷ್ಟ್ರಗಳು ಅಡ್ಡಿಯಾಗದಂತೆ ಮಾಡುವುದಕ್ಕಾಗಿ ಜಪಾನು ಯುದ್ಧಹೂಡಿತೆಂದು ಸುದ್ದಿಯಿದೆ. ಆಸ್ಟ್ರೇಲಿಯ ಅಥವಾ ಹಿಂದುಸ್ಥಾನಗಳಿಂದ ಗಂಡಾಂತರವಿದೆಯೆಂದು ಅವರಿಗೆ ಅನಿಸಿದ್ದರೆ ಅವರು ಆ ದೇಶಗಳ ಮೇಲೆಯೂ ಧಾಳಿಯಿಡುತ್ತಿದ್ದರು. ಆದ್ದರಿಂದ ಈಗ ಅವರು ಗೆದ್ದ ಪ್ರದೇಶಗಳಿಂದ ಲಾಭಪಡೆಯುತ್ತಿರುವರು. ಈಗ ಜಪಾನು ಬರ್ಮ, ಮಲಯ, ಸಯಾಮ್ ಮತ್ತು ಡಚ್ ಇಂಡೀಸ್‌ಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡರೆ ಮತ್ತು ಚೀನವನ್ನು ದುರ್ಬಲವಾಗಿ ಮಾಡಿದರೆ ಅನಂತರ ಅದು ಜಾಣ್ಮೆಯ ಧೋರಣ ಹಿಡಿಯಬಹುದು. ಮಿತ್ರರಲ್ಲಿ ಒಡಕನ್ನು ಹುಟ್ಟಿಸಿ ಅಮೇರಿಕವು ಯುದ್ಧದಿಂದ ಹಿಂತಿರುಗುವಂತೆ ಮಾಡಬಹುದು’ ಹೀಗೆಂದು ರಾಯಟರ್ ಸುದ್ದಿಗಾರನ ಊಹನೆಗಳಾಗಿವೆ.

ತೋಬ್ರುಕಿಗೆ ರೋಮೆಲ್ ನಾಮಕರಣ

ತೋಬ್ರುಕನ್ನು ಆಕ್ರಮಿಸಿದ ನಂತರ, ಗೋರಿಂಗರು ಜೆನರಲ್ ರೋಮೆಲರಿಗೆ ಒಂದು ಪತ್ರ ಬರೆದ. ಅದರಲ್ಲಿ ಅವರನ್ನು ಅಭಿನಂದಿಸಿ ಮಾತ್ರವಲ್ಲದೆ ಇನ್ನುಮುಂದೆ ತೋಬ್ರುಕಿಗೆ ರೋಮೆಲ್ ಎಂಬ ಹೆಸರಿಡಲಾಗುವುದೆಂದೂ ತಿಳಿಸಿದ ವರ್ತಮಾನ!

ಇನ್ನೊಂದು ಧಾಳಿ ಮಾಡಲು ರೊಮೆಲನ ಸಿದ್ಧತೆ

ಅಲಾಮೇನದ ದಕ್ಷಿಣ ರುವಾಸಿಟ ಡಿಬ್ಬದ ಮೇಲೆ ಫೀಲ್ಡ್‌ಮಾರ್ಷಲ್ ಇನ್ನೊಂದು ದಾಳಿ ಮಾಡಿದ್ದನ್ನು ಪ್ರತಿಭಟಿಸಿ ಹಿಮ್ಮೆಟ್ಟಿಸಿದರು. ಈಜಿಪ್ತಿಗೆ ಅಮೇರಿಕನ್ ವಿಮಾನಗಳು ಬಂದಿದ್ದು ಅವುಗಳು ವೈರಿ ಠಾಣ್ಯಗಳ ಮೇಲೆ ಧಾಳಿಯಿಡುತ್ತವೆ.

ಜರ್ಮನ್ ಸೈನ್ಯವು ರೋಸ್ಟೋವನ್ನು ಸಮೀಪಿಸಿತು?

ಡಾನ್ ನದಿಯ ಸೇತುವೆಯನ್ನು ಭೇದಿಸಲಾಗಿದೆಯಂತೆ. ವೊರೊಶಿಲೋವ್ ಗ್ರಾಡಿನ ದಕ್ಷಿಣದಲ್ಲಿ ಟಿಮೋಶಂಕೋನ ಸೈನ್ಯಗಳನ್ನು ಸುತ್ತುಗಟ್ಟಲು ಜರ್ಮನರು ಮಾಡಿದ ಯತ್ನವು ವಿಫಲವಾಯಿತು. ವೊರೊಶಿಲೋವ್ ಗ್ರಾಡನ್ನು ಆಕ್ರಮಿಸಿಕೊಂಡು ಜರ್ಮನರು ರೋಸ್ಟೋವ್ ಸ್ಟಾಲಿನ್ ಗ್ರಾಡ್‌ಕಡೆ ತೆರಳಿರುವರೆಂದು ಸುದ್ದಿಬಂದಿದೆ. ಜರ್ಮನರು ಮೂರು ದಿಕ್ಕಿನಿಂದ ಮುತ್ತಿಗೆ ಹಾಕಿರುವರು.

ಚರ್ಮ ಮತ್ತು ಕಜ್ಜಿಗಳಿಗೆ ಜಾಂಬಕನ್ನು ನಂಬಿಕೊಂಡಿರಿ.

ಲೋಕಪ್ರಸಿದ್ಧ ವಿಷಹಾರೀ ಲೇಪ

ತುರಿಕಜ್ಜಿ, ಗಜಕರ್ಣ ಇತರ ಅನೇಕ ಚರ್ಮರೋಗಗಳಿಗೆ ಜಾಂಬಕ್ ಅತ್ಯುತ್ತಮ ಔಷಧ. ಇದು ರೋಗವನ್ನು ಹೋಗಲಾಡಿಸಿ ಚರ್ಮವನ್ನು ಪುಷ್ಟಿಸಿ ಆರೋಗ್ಯವನ್ನುಂಟುಮಾಡುತ್ತದೆ. ಜಾಂಬಕ್ ನಲ್ಲಿರುವ ಅತ್ಯುತ್ತಮ ವನೌಷಧ ಸತ್ವವು ಚರ್ಮಕ್ಕೆ ಎಳೆಯಲ್ಪಡುವುದು. ನೋವನ್ನು ಕಡಿಮೆ ಮಾಡುವುದು, ಬಾತುಹೋದುದನ್ನು ಕಡಿಮೆಮಾಡಿ ಗಾಯವನ್ನು ಒಣಗಿಸುವುದು. ಜಾಂಬಕ್ ತ್ವರಿತವಾಗಿ ಗುಣಪಡಿಸುವುದು. ಜಾಂಬಕಿಗೆ ಒಂದೂ ರೂಪಾಯಿ ಇಲ್ಲವೆ ರೂ 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ

ಏಜಂಟ್ಸ್
ಮೆಸಸ್ಸ್ ದಾಧಾ ಎಂಡ್ ಕೊ,
ಪಾರ್ಕ್ ಟೌನ್ ಮದರಾಸು

ಯಾವಾಗಲೂ ಜಾಂಬಕನ್ನುಪಯೋಗಿಸಿರಿ

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಜಿಲ್ಲಾ ಸಮಾಚಾರಗಳು

ಮಂಗಳೂರು

ದ. ಕ. ಜಿಲ್ಲಾ ಪತ್ರಿಕೋದ್ಯಮಿಗಳ ಸಂಘ

ಇದರ ವಾರ್ಷಿಕ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಿಂದ ಕಳೆದ ಆದಿತ್ಯವಾರ ಡಿ. ಸಿ. ಎಂ.ನಲ್ಲಿ ಸೇರಿತು. ಸಭಾ ಪ್ರಾರಂಭದಲ್ಲಿ ಗತಿಸಿದ ಪತ್ರಿಕೋದ್ಯಮಿ ಶ್ರೀ ಜೋರ್ಜ್ ಹರ್ಬರ್ಟರ ನಿಧನದ ಬಗ್ಗೆ ಸಂತಾಪಸೂಚಕ ಠರಾವಾಯಿತು. ಕಾರ್ಯದರ್ಶಿಗಳಾದ ಶ್ರೀ. ಕೆ. ಕೃಷ್ಣರಾಯರು ಸಂಘದ ಚಟುವಟಿಕೆಗಳ ವರದಿಯನ್ನು ಸಾರಾಂಶವಾಗಿ ಹೇಳಿದರು. ಆ ಬಳಿಕ ಈ ಕೆಳಗಿನಂತೆ ಹೊಸ ವರ್ಷದ ಆಡಳಿತ ಮಂಡಳಿಯು ಚುನಾಯಿಸಲ್ಪಟ್ಟಿತು. ಶ್ರೀ. ಹುರುಳಿ ಭೀಮರಾಯರು (ಅಧ್ಯಕ್ಷ) ಶ್ರೀ: ಯು. ವಿ. ಶೆಣೈ, (ಉಪಾಧ್ಯಕ್ಷ) ಶ್ರೀ. ಕೆ. ಶಿವರಾವ್ (ಕಾರ್ಯದರ್ಶಿ) ಶ್ರೀಗಳಾದ ಉಡುಪಿ ಗೋವಿಂದರಾವ್, ಕೆ. ಕೃಷ್ಣರಾವ್, ಶ್ರೀ. ಎಚ್. ರಾಮರಾಯ ಮಲ್ಯ, ಎಂ. ಎಸ್. ಮಾಧವರಾವ್, ಎಂ. ಎಸ್. ಶ್ರೇಷ್ಠ ಮತ್ತು ಕೆ. ಕೆ. ರೈ ಇವರು ಕಾರ್ಯಕಾರೀ ಸಮಿತಿಯ ಸದಸ್ಯರು.

ನೇಶನಲ್ ವಾರ್ ಫ್ರಂಟ್

ಕಳೆದ ಆದಿತ್ಯವಾದ ನೇಶನಲ್ ವಾರ್ ಫ್ರಂಟಿನ ಡಿ. ಆರ್ಗನೈಸರ್ ಶ್ರೀ. ಸತ್ಯನಾರಾಯಣ ಇವರು ಡಿ. ಸಿ. ಎಂ.ನಲ್ಲಿ ಜಿಲ್ಲಾ ಪತ್ರಿಕೋದ್ಯಮಿಗಳನ್ನು ಬೇಟಿಯಾಗಿ, ಪರಿಚಯಮಾಡಿಕೊಂಡ ನಂತರ, ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ 'ನೇಶನಲ್ ವಾರ್ ಫ್ರಂಟಿ'ನ ವಿಷಯ ವಿವರಿಸಿದರು.

ಅಬ್ಕಾರಿ ಸಬ್ ಇನ್ಸ್‌ಪೆಕ್ಟರರಿಗೆ ಶಿಕ್ಷೆ

ಸಹಾಯಕ ಸೆಶ್ಶನ್ಸ್ ನ್ಯಾಯಾಧೀಶರಾದ ಶ್ರೀ. ಟಿ. ಬಿ. ರಾಮಯ್ಯ ಪಂತುಲು ಅವರು, ಉಡುಪಿಯ ಅಬ್ಕಾರಿ ಸಬ್ ಇನ್ಸ್‌ಪೆಕ್ಟರರಾದ ಶ್ರೀ ಮೋರಿಸ್ ಫೆರ್ನಾಂಡಿಸರೂ, ಅವರ ತಮ್ಮ ಫಿಶರೀಸ್ ಶಾಲೆಯ ಅಧ್ಯಾಪಕ ಶ್ರೀ. ಲಿಗರಿ ಫೆರ್ನಾಂಡೀಸರೂ, ಫಲಿಮಾರು ರೂರಲ್ ಡಿಸ್ಪೆನ್ಸರಿಯ ಮಿಡ್‌ವೈಫಾದ ಮಿಸ್ ಜೊಸೆಫೈನ್ ಪಿಂಟೊ ಎಂಬವರಿಗೆ ಗಾಯಗೊಳಿಸಿ, ಒತ್ತಾಯದಿಂದ ಕೆಲ ಖಾಲಿ ಕಾಗದಗಳ ಮೇಲೂ ಕಾರ್ಡುಗಳ ಮೇಲೂ ಅವರ ಸಹಿ, ರೆಸೀಟ್ಟುಗಳನ್ನು ಪಡೆಯಲು ಯತ್ನಿಸಿದುದಕ್ಕಾಗಿ ಅವರಿಗೆ ಒಂದೊಂದು ವರ್ಷದ ಸಶ್ರಮ ಸಜೆಯನ್ನು ವಿಧಿಸಿರುವರು. ಈ ಕೆಲಸದಲ್ಲಿ ಅಪರಾಧಿಗಳಿಗೆ ಸಹಾಯಕರಾದರೆಂಬ ಅಪಾದನೆಯ ಮೇಲೆ ಬಂಧಿಸಲ್ಪಟ್ಟಿದ್ದ ಬೇರೆ ಮೂವರು ಸಾಕಷ್ಟು ರುಜುವಿಲ್ಲವೆಂಬ ಕಾರಣದಿಂದ ಖುಲಾಸೆಹೊಂದಿದರು. ಮಿಸ್ ಪಿಂಟೋ ಮಂಗಳೂರಲ್ಲಿ ವಿದ್ಯಾರ್ಥಿನಿಯಾಗಿ ಕಲಿಯುತ್ತಿದ್ದಾಗ ಶ್ರೀ. ಮೋರಿಸ್ ಫೆರ್ನಾಂಡೀಸರೊಡನೆ ಮೈತ್ರಿ ಬೆಳೆದಿತ್ತೆಂದೂ ಮಿಸ್. ಪಿಂಟೋ ಗರ್ಭವತಿಯಾದಾಗ ಶ್ರೀ. ಫೆರ್ನಾಂಡೀಸರು ಆಕೆಯನ್ನು ತಾವು ವಿವಾಹವಾಗುವುದಾಗಿ ಆಶ್ವಾಸನೆ ಕೊಟ್ಟಿದ್ದರೆಂದೂ ಅದರ ಹಾಗೆ ನಡೆಯಲಿಲ್ಲವೆಂದೂ ಮಿಸ್. ಪಿಂಟೋ ಅವರ ಮೇಲೆ ಖಟ್ಲೆ ನಡೆಸಿದರು. ದೀರ್ಘಕಾಲದ ವ್ಯವಹರಣೆಯ ಮೇಲೆ ರೂ. ೧೦೦೦ ಮತ್ತು ಖರ್ಚನ್ನು ಮಿಸ್. ಪಿಂಟೋರಿಗೆ ಕೊಡಬೇಕೆಂದು ತೀರ್ಮಾನವಾಗಿತ್ತು.

ದ. ಕ. ಪಂಡಿತ ಸಂಘ

ದ ವಾರ್ಷಿಕಾಧಿವೇಶನವು ತಾ. ೨೬ನೇ ಆ. ೪-೩೦ಕ್ಕೆ ಗಣಪತಿ ಹೈಸ್ಕೂಲಿನಲ್ಲಿ ಜರಗಲಿದೆ.

ಮುನ್ಸಿಪಲ್ ಸಭೆ

ಸ್ಥಳೀಯ ಮುನಿಸಿಪಲ್ ಕೌನ್ಸಿಲ್‌ಸಭೆ ಕಳೆದ ವಾರ ಶ್ರೀ. ಬಿ. ವೆಂಕಟರಾವ್ ಬಾಳಿಗರ ಅಧ್ಯಕ್ಷತೆಯಲ್ಲಿ ಜರುಗಿತು. ಆರಂಭದಲ್ಲಿ ಶ್ರೀ. ಎಂ. ಎಸ್. ಶ್ರೇಷ್ಠರು, ಮುನಿಸಿಪಲ್ ಕೌನ್ಸಿಲಿನ ಮತ್ತು ಹೆಲ್ತ್ ಆಫೀಸಿನ ಸಿಬಂದಿಯಲ್ಲಿ ಕಳೆದ ಒಂದು ತಿಂಗಳಲ್ಲಿ ಆದ ನೇಮಕಗಳು, ಹಾಗೆ ನೇಮಕವಾಗದ ಉದ್ಯೋಗ ಸ್ಥಾನಗಳು, ನೇಮಕ ಮಾಡುವ ವಿಧಾನ, ನೇಮಕ ಮಾಡುವ ಅಧಿಕಾರಿಗಳು ಇವುಗಳ ಕುರಿತು ಪ್ರಶ್ನಿಸಿದರು. ಚೇರ್‌ಮೇನರು ಪ್ರಶ್ನೆಗಳಿಗೆ ಉತ್ತರಕೊಡುತ್ತ, ಈ ಖಾಲಿ ಬಿದ್ದ ಉದ್ಯೋಗಗಳಿಗೆ ಸಾಕಷ್ಟು ಅರ್ಜಿಗಳು ಬಂದುದರಿಂದ ಪತ್ರಿಕೆಗಳಲ್ಲಿ ಪ್ರಕಟಿಸಲಿಲ್ಲವೆಂದೂ, ಉಮೇದುವಾರರಿಗೆ ಭೇಟಿಕೊಡಲಿಲ್ಲವೆಂದೂ, ಮುನಿಸಿಪಲ್ ಸಿಬಂದಿಯ ಅಧಿಕಾರಿಗಳೊಬ್ಬರ ಸಂಬಂಧಿಕರಿಗೊಬ್ಬರಿಗೆ ಕೆಲಸ ಕೊಡಲಾಗಿದೆಯೆಂದೂ ಹಿಂದೀ ಕ್ರೈಸ್ತರೆಷ್ಟು ಮುನ್ಸಿಪಲ್ ಆಫೀಸ್ ಮತ್ತು ಹೆಲ್ತ್ ಆಫೀಸಿನಲ್ಲಿ ಯಾವ ದಾವೂದಾಯಿಯಲ್ಲಿರುವರೆಂದೂ ತಿಳಿಸಿದರು.

ಮುನಿಸಿಪಲ್ ಡಿಸ್‌ಪೆನ್ಸರಿಗಳ ಔಷಧಗಳ ಸರಬರಾಯಿಗಾಗಿ ೧೯೪೨-೪೩ಕ್ಕೆ ರೂ. ೨೫೦೦ ಗಳನ್ನು ಮಂಜೂರು ಮಾಡಿದೆ. ಮುನ್ಸಿಪಲ್ ಸಿಬಂದಿಗೆ ತುಟ್ಟಿ ಭತ್ತೆ ಕೊಡುವ ವಿಚಾರದಲ್ಲಿ ಭತ್ತೆಯ ಮೊತ್ತದ ಕುರಿತು ಚರ್ಚೆಯಾಗಿ ವಿಷಯವು ಮುಂದೆ ಬಿತ್ತು. ಮಹಿಳಾ ಮೆಡಿಕಲ್ ಡಾಕ್ಟರರಿಗೆ ತಿಂಗಳಿಗೆ ರೂ. ೧೫ರ ಕಾರ್ ಎಲೊವೆನ್ಸ್ ಮಂಜೂರಾಯಿತು. ಕಂಕನಾಡಿಯ ಸ್ಯೆಂಟ್ ವಿನ್ಸೆಂಟ್ ಡಿ ಪಾಲ್ ಸೊಸೈಟಿಗೆ ತಿಂಗಳಿಗೆ ರೂ. ೧೦ರ ವಂತಿಗೆ ಮಂಜೂರಾಯಿತು. ಮುನ್ಸಿಪಾಲಿಟಿಯ ಬ್ಲಾಕು ನಂಬ್ರ ಹತ್ತನ್ನು ಸರಾಯಿ, ಕಳ್ಳು ಮೊದಲಾದವುಗಳ ವ್ಯಾಪಾರದಿಂದ ವಿರಹಿತಪಡಿಸಬೇಕಾಗಿ ಮಾಡಿಕೊಂಡ ಅರಿಕೆಯು ಸರಕಾರದಿಂದ ತಿರಸ್ಕೃತವಾಗಿದೆ. ನಗರದ ಹೊರಗಿನ ಲೈಸನ್ಸ್ ಬೋರ್ಡಿಗೆ ಶ್ರೀಗಳಾದ ಎಂ. ಆರ್. ಭಟ್ ಮತ್ತು ಅಂದ್ರಾದೆಯವರನ್ನು ಸದಸ್ಯರಾಗಿ ಆರಿಸಲಾಯಿತು. ಮೈದಾನಿನ ಫಿರಂಗಿ ಹೊಡೆಯುವವನೊಬ್ಬನು ನೇಮಿಸಲ್ಪಡಬೇಕೆಂದು ನಿರ್ಧಾರವಾಯಿತು.

ಹೊಸ ಕಮಿಶನರಾದ ಶ್ರೀ. ರಾಮಸ್ವಾಮಿ ನಾಯುಡುರವರು ಈ ಸಭೆಯಲ್ಲಿ ಹಾಜರಿದ್ದರು.

ವ್ಯಾಪಾರಿಗಳ ಮೇಲೆ ಖಟ್ಲೆ

ನಿರ್ಧರಿಸಿದ ಬೆಲೆಯ ಮಿತಿಯನ್ನು ಮೀರಿ ಮಂಗಳೂರಿನ ಕೆಲವು ಪ್ರಸಿದ್ಧ ವ್ಯಾಪಾರಿಗಳು ಚಿಮಣಿ ಎಣ್ಣೆ, ಸಕ್ಕರೆ, ಮತ್ತು ಬೆಂಕಿಪೆಟ್ಟಿಗೆಗಳ ವ್ಯಾಪಾರ ನಡೆಸಿದರೆಂದು ಇಂಡಿಯಾ ಡಿಫೆನ್ಸ್ ಆಕ್ಟು ಪ್ರಕಾರ ಜಿಲ್ಲಾ ಕಲೆಕ್ಟರರಿಂದ ಪ್ರಾಸಿಕ್ಯೂಶನಿಗೆ ಅಪ್ಪಣೆಯಾಗಿ ಪೋಲೀಸರು ಚಾರ್ಜ್‌ಶೀಟನ್ನೂ ಹಾಕಿರುವುದಾಗಿ ತಿಳಿದುಬರುತ್ತದೆ.

ಬೆಂಕಿಪೆಟ್ಟಿಗೆ ವ್ಯಾಪಾರದ ಸಂಬಂಧ ಬಂಟ್ವಾಳದ ಕೆಲವು ಪ್ರಸಿದ್ಧ ವ್ಯಾಪಾರಿಗಳ ಮೇಲೆ ಪ್ರೋಸಿಕ್ಯೂಶನ್ ನಡೆಸಲಾಗಿದೆ ಎಂದೂ ತಿಳಿದು ಬಂದಿದೆ.

ಮಂಗಳೂರು ಗೌರವಾರ್ಥ ಡಿವಿಜನಲ್ ಆರ್ಗನೈಜರುಗಳು

ನೇಶನಲ್ ವಾರ್ ಫ್ರಂಟಿಗೆ ಮಂಗಳೂರು ಟೌನ್ ತಾಲೂಕು ಮತ್ತು ಬಂಟ್ವಾಳ ಸಬ್ ತಾಲೂಕುಗಳ ಗೌ|| ಡಿ|| ಆರ್ಗನೈಜರರಾಗಿ ಶ್ರೀ. ಮಿ. ಸಿ. ಎಲ್. ಲೋಬೋ ಅವರೂ, ಪುತ್ತೂರು ತಾಲೂಕು ಬೆಳ್ತಂಗಡಿ ಸಬ್ ತಾಲೂಕುಗಳ ಗೌ|| ಡಿ|| ಆರ್ಗನೈಜರರಾಗಿ ಶ್ರೀ. ಬಿ. ಎಸ್. ಹೊಳ್ಳ ಕುಂದಾಪುರ ತಾಲೂಕು ಮತ್ತು ಉಡುಪಿ ತಾಲೂಕಿನಲ್ಲಿ ಮಾಬುಕಳ ಹೊಳೆಯ ವರೆಗೆ ಗೌ|| ಡಿ|| ಆರ್ಗನೈಜರಾಗಿ ಶ್ರೀ. ಕೆ. ಎಲ್. ಭಂಡಾರಿ ಅವರೂ ನೇಮಕ ಹೊಂದಿದ್ದಾರೆ.

ಸಕ್ಕರೆ ಮತ್ತು ಗೋಧಿ ವ್ಯಾಪಾರ

ಇವೆರಡರ ವ್ಯಾಪಾರದ ಕುರಿತಾದ ನಿಬಂಧನೆ, ಅವುಗಳ ಬೆಲೆ, ಇವನ್ನು ಮೀರಿದ್ದಲ್ಲಿ ವ್ಯಾಪಾರಿಗಳಿಗೆ ಆಗುವ ದಂಡನೆ ಮೊದಲಾದುವುಗಳನ್ನು ವಿವರಿಸುವ ಜಿಲ್ಲಾ ಕಲೆಕ್ಟರರ ಪ್ರಕಟಣೆಗಳೆರಡು ಪ್ರಕಟವಾಗಿವೆ.

ಜಿಲ್ಲಾ ಬೋರ್ಡು ಸಭೆ

ದ. ಕ. ಜಿಲ್ಲಾ ಬೋರ್ಡ್ ಸಭೆಯು ಇದೇ ಬರುವ ಜುಲೈ ತಾ. ೨೫ನೇ ಶನಿವಾರ ಪ್ರಾ|| ಗಂಟೆ ೧೧ಕ್ಕೆ ಜಿ|| ಬೋ|| ಆಫೀಸಿನಲ್ಲಿ ಜರಗುವುದು.

ಕಾಸರಗೋಡು

ನೀಲೇಶ್ವರ

ಡೆಟನ್ಯೂ ದಿನ—ಸರಕಾರದ ದಿಗ್ಬಂಧನಕೊಳಗಾದ ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆಪಡಿಸಬೇಕೆಂದು ಸರಕಾರದೊಡನೆ ಕೇಳಿಕೊಳ್ಳಲು ತಾ. ೧೨ರಲ್ಲಿ ಡೆಟನ್ಯೂ ದಿನ ಆಚರಿಸಲ್ಪಟ್ಟಿತು. ಶ್ರೀ. ಟಿ. ಸುಬ್ರಹ್ಮಣ್ಯನ್ ತಿರುಮುಂಬುರವರು ಅಧ್ಯಕ್ಷತೆ ವಹಿಸಿದ್ದರು. ತಮ್ಮ ಭಾಷಣದಲ್ಲಿ ಇಂದಿನ ಯುದ್ಧದಲ್ಲಿ ವಿಜಯಿಯಾಗಬೇಕೆಂಬ ಆಕಾಂಕ್ಷೆಯು ಬ್ರಿಟಿಶರಿಗಿರುವುದಾದರೆ, ಫ್ಯಾಸಿಸ್ಟ್ ವಿರೋಧಿಗಳಾದ ಎಲ್ಲಾ ಕೈದಿಗಳನ್ನೂ ಬಿಡುಗಡೆಪಡಿಸಬೇಕೆಂದರು. ಅನಂತರ ಶ್ರೀ. ಎನ್. ಜಿ. ಕಾಮತರು, ಎಲ್ಲಾ ಕಮ್ಯೂನಿಸ್ಟರನ್ನೂ ಇತರ ಫ್ಯಾಸಿಸ್ಟ್ ವಿರೋಧಿಗಳನ್ನೂ ಬಿಡುಗಡೆಪಡಿಸಲು ಈ ಸಭೆಯು ಸರಕಾರದೊಡನೆ ಕೇಳಿಕೊಳ್ಳುತ್ತಿದೆ, ಎಂಬ ಠರಾವನ್ನು ಸಭೆಯ ಮುಂದಿರಿಸಿದರು. ಠರಾವು ಸರ್ವಾನುಮತದಿಂದ ಮಂಜೂರಾಯಿತು.

ಕಾರ್ಕಳ

ಸಭೆ ಸಮಾಚಾರಗಳು

ಕಾರ್ಕಳ ತಾಲೂಕು ರಾಷ್ಟ್ರ ಭಾಷಾ ಪ್ರಚಾರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೊಂದು ಶ್ರೀ. ವಕೀಲ ಡಿ. ವಿ. ಭಟ್ಟರ ಅಧ್ಯಕ್ಷತೆಯಲ್ಲಿಯೂ ಸರ್ಕಲ್ ಕಾಂಗ್ರೆಸ್ ಕಮಿಟಿಯ ಸಭೆಯು ಶ್ರೀ. ಯಂ. ಡಿ. ಅಧಿಕಾರಿಯವರ ಅಧ್ಯಕ್ಷತೆಯಲ್ಲಿಯೂ, ಪರಪಲಿ ಅನಾಥೋದ್ಧಾರಕ ಸಭೆಯು ಶ್ರೀ. ಯಂ. ಅಣ್ಣಪ್ಪ ನಾಯಕರ ಅಧ್ಯಕ್ಷತೆಯಲ್ಲಿಯೂ ನೂಲುವ ಸ್ಪರ್ಧೆಯ ಸಭೆಯು ಶ್ರೀ. ವಕೀಲ ಕೆ. ಲಕ್ಷ್ಮಣ ಕುಡ್ವರ ಅಧ್ಯಕ್ಷತೆಯಲ್ಲಿಯೂ ಶ್ರೀ. ಸದಾಶಿವರಾಯರ ಶಾರದಾ ಸಂಗೀತ ಮಂದಿರದ ಉದ್ಘಾಟನಾ ಸಭೆಯು ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ. ಕೆ. ಆರ್. ಕೃಷ್ಣಯ್ಯ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿಯೂ, ಜೂನಿಯರ್ ರೆಡ್‌ಕ್ರಾಸ್ ಸಭೆಯು ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿಯೂ ಜರಗಿ ಸಂದರ್ಭೋಚಿತ ಕಾರ್ಯಕ್ರಮಗಳು ನಡೆದುವು.

ಬಡವರಿಗೆ ಕಡಿಮೆ ದರದ ಅಕ್ಕಿ

ಸ್ವಲ್ಪ ಸಮಯದ ಹಿಂದೆ ಇಲ್ಲಿ ಸ್ಥಾಪಿತವಾದ ಬಡಜನ ಸಹಾಯ ಸಮಿತಿಯ ಆಶ್ರಯದಲ್ಲಿ ಇಲ್ಲಿ ಬಡವರಿಗೆ ಇದೇ ತಾ. ೧೪ರಿಂದ ಸೇರಿಗೆ ೭ ದುಡ್ಡಿನ ದರದಲ್ಲಿ ಅಕ್ಕಿಯನ್ನು ಮಾರಲಾರಂಭವಾಗಿದೆ.

ಪುತ್ತೂರು

ಸಂಪಾಜೆಯಲ್ಲಿ ಆನೆ ಹಾವಳಿ

ಕಳೆದ ತಾ. ೫ನೇ ರಾತ್ರಿ ಶ್ರೀ. ಕೀಲಾರು ರಾಮಚಂದ್ರಯ್ಯನವರ ಅಡಿಕೆ ತೋಟಕ್ಕೆ ಕಾಡಾನೆಗಳ ಹಿಂಡು ಬಂದು ಕೆಲ ಅಡಿಕೆ ಮರಗಳನ್ನೂ, ಬಾಳೆಗಳನ್ನೂ ಮುರಿದು ಸಮೀಪ ನಾಟಿ ಮಾಡಿದ ಗದ್ದೆಗಳನ್ನು ಮೆಟ್ಟಿ ನಷ್ಟಪಡಿಸಿದುತ್ತವೆಯೆಂದು ತಿಳಿದಿದೆ. ಈ ರೀತಿ ಆನೆಗಳಿಂದ ರೈತರಿಗೆ ನಷ್ಟವಾಗುವುದನ್ನು ಸರಕಾರದವರು ನಿಲ್ಲಿಸುವುದು ಅಗತ್ಯವಿದೆ.

ತಲಾ ಒಂದರ ಒಂದು ಸೇರು ಅಕ್ಕಿ ಮಾರಾಟದ ವ್ಯವಸ್ಥೆ

ಉಡುಪಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಾರ್ವಜನಿಕ ಬಡಬಗ್ಗರಿಗೆ ತಲಾ ಒಂದರ ಒಂದು ಸೇರು ಅಕ್ಕಿಯನ್ನು ಏಳು ದುಡ್ಡಿನಂತೆ ಮಾರಾಟ ಮಾಡುವ ಸುವ್ಯವಸ್ಥೆ ಮಾಡಲಾಗಿದೆಯೆಂದು ತಿಳಿದಿದೆ.

ಹರಿಜನರಿಗೆ ಶಾಲೆಯನ್ನು ತೆರೆಯುವ ಸಮಾರಂಭ

ಕಳೆದ ತಾ. ೧೪ನೇ ಪೂರ್ವಾಹ್ನ ಸ್ಥಳೀಯ ಬಪ್ಪಳಿಗೆಯಲ್ಲಿದ್ದ ಪಂಚಾಯತ ಬೋರ್ಡು ಶಾಲಾ ಕಟ್ಟಡದಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರರ ಅಧ್ಯಕ್ಷತೆಯಲ್ಲಿ ಜರಗಿತು.

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ	... ಬೆಲೆ	0—2—6
VI ತರಗತಿ ಅಥವಾ I ಫಾರ್ಮಿಗೆ	... "	0—3—0
VII ತರಗತಿ ಅಥವಾ II ಫಾರ್ಮಿಗೆ	... "	0—3—6
VIII ತರಗತಿ ಅಥವಾ III ಫಾರ್ಮಿಗೆ	... "	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ.

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled.— "HINDU" MADRAS.

ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨, ೩ ಮತ್ತು ೪ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ.

'ಶ್ರೀ. ರೈಗಳು ಆಯಾತರಗತಿಯ ಮಕ್ಕಳಿಗೆಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ. ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ ಮಂಗಳೂರು.

ಸಿನೆಮಾ ಪುಟ

ನಯಶಾಲಿನಿಯಾದ ನಟಿ

ನೀನಾ

ಇನ್ನೂ ಆಕೆಯನ್ನು ಬಹುಮಂದಿ ನೋಡಿಲ್ಲ; ಆದರೂ ನೀನಾ ಇಷ್ಟರಲ್ಲೇ ಪ್ರಸಿದ್ಧಳಾಗಿದ್ದಾಳೆ. ಆಕೆ ಹಾಗೆಂದು ದೊಡ್ಡ ನಾಟಗಾರ್ತಿಯೆನ್ನುವಿರಿ? ಹಾಗೇನೂ ಅಲ್ಲ. ಅವಳು ಸಾದಾ ಜೀವನದ ಸರಳ ಸ್ವಭಾವದ ವಿನಯ ಸಂಪನ್ನಳಾದ ಒಬ್ಬ ನಟಿ

ನೀನಾ ನಮ್ರಳು, ಸೌಮ್ಯಳು ಮಾತ್ರವಲ್ಲ ಬಹಳ ಸುಂದರಿ ಆಕೆಯನ್ನು ಕಂಡವರು ಅಂತಹ ರೂಪ ದೇವತಾ ಸ್ತ್ರೀಗಲ್ಲದೆ ಮಾನವಿಯೊಬ್ಬಳಿಗಿರಬಲ್ಲುದೇ ಎಂದು ಬೆರಗಾಗುತ್ತಾರೆ. ನೀನಾ ಗಂಭೀರ ಯುವತಿ. ಸುಮಕೋಮಲೆ, ಹರಿಣಾಕ್ಷಿ, ಅರಳಿದ ಹೂ ಆಕೆ ಇನ್ನೂ ೨೨ರ ಗಡಿದಾಟಿಲ್ಲ ನವಯೌವನೆ ನೀನಾ

ಅಲಿಗಡ ಆಕೆಯ ಜನ್ಮಭೂಮಿ ಆರು ಮಂದಿ ಸೋದರ ಸೋದರಿಯರಲ್ಲಿ ನೀನಾ ಹಿರಿಯಾಕೆ ಆಕೆಯ ತಂದೆ ಸಂಯುಕ್ತ ಪ್ರಾಂತ ಸರಕಾರದ ಒಂದು ನೌಕರಿಯಲ್ಲಿದ್ದಾರೆ

ನೀನಳಿಗೆ ಸಿನೇಮಕ್ಕೆ ಸೇರುವ ಯೋಚನೆಯೇ ಇರಲಿಲ್ಲ ಎಲ್ಲಾ ಅಕಸ್ಮತ್ತಾಗಿ ಸಂಭವಿಸಿತು ಶ್ರೀ ಅಹಮ್ಮದರು ಇವರ ಸಂಸಾರಕ್ಕೆ ಅತ್ಯಂತ ಆಪ್ತರು ಅವರ ಒತ್ತಾಯದಿಂದಾಗಿ ನೀನಾ ಅಂಜುತ್ತಾ ಅಳುಕುತ್ತಾ ಸಿನೆಮಾಲೋಕಕ್ಕೆ ಕಾಲಿಟ್ಟಳು. ಸಿನೆಮಾಕ್ಕೆ ಪದ ಪ್ರವೇಶ ಮಾಡಿದ್ದೇ ತಡ ಒಮ್ಮೆಲೇ ಕೀರ್ತಿ ಶಿಖರಕ್ಕೇರಿದಳು

'ಏಕ್‌ರಾತ್' ಇಂದು ಇದನ್ನು ಬಹು ಜನರು ಕಂಡಿಲ್ಲವಾದರೂ ಯಾರು ಈ ಹೆಸರು ಕೇಳಿಲ್ಲ? ರಾಜನಟ ಪೃಥ್ವಿರಾಜನ ಜತೆಯಲ್ಲಿ ಆಕೆ ಮೊದಲನೆ ಬಾರಿಯಾಗಿ ಆ ಚಿತ್ರದಲ್ಲಿ ನಟಿಸಿ ಹೆಸರಾಂತಳು. ಆ ಚಿತ್ರದಲ್ಲಿ ಆಕೆಯ ಅದ್ಭುತನಟನಾ ವೈಭವ, ಉತ್ತಮ ಭಾಷಾ ಸಂಸ್ಕಾರಗಳನ್ನು ನೋಡಿ ಮನಮೋಹಿಸಿದ್ದಾರೆ. ಆಕೆ ಮುಂದೆ 'ಮನ್-ಕೀ-ಜೀತ್' ಚಿತ್ರದಲ್ಲಿ ಪಾತ್ರವಹಿಸುತ್ತಾಳೆ ಆಕೆಗೆ ವಿಷಾದಾಂತ ಚಿತ್ರಗಳಲ್ಲಿ ಅಭಿನಯಿಸಲು ಬಹಳ ಇಷ್ಟವಿರುವುದಂತೆ

ನೀನಾ ದಿನಂಪ್ರತಿ ೨೦೦ಕ್ಕೆ ಕಡಿಮೆಯಿಲ್ಲದಷ್ಟು ಪತ್ರಗಳನ್ನು ಪಡೆಯುತ್ತಾಳೆ ಕುದುರೆ ಜೂಜಿಗೊಮ್ಮೆ ಆಕೆ ತೆರಳಿದ್ದಾಗ ಪ್ರೇಕ್ಷಕರು ಜೂಜನ್ನು ನೋಡುವುದನ್ನು ಬಿಟ್ಟು ಅವಳನ್ನೇ ನೋಡಿ ತಲ್ಲೀನರಾಗಿ ಬಿಟ್ಟರಂತೆ!

ನೀನಾ ಅಲಂಕಾರ ಪ್ರಿಯೆ, ಸುಗಂಧ ದ್ರವ್ಯಗಳಿಗಾಗಿ ತಿಂಗಳೊಂದರ ೭೦೦ ರೂಪಾಯಿಗಳಷ್ಟು ವೆಚ್ಚಮಾಡುತ್ತಾಳೆ. ಮನೆಯನ್ನು ಅಚ್ಚುಕಟ್ಟಾಗಿಡುತ್ತಾಳೆ. ಮನೆ ಕೆಲಸದಲ್ಲಿ ನಯ ನೈಪುಣ್ಯ ತೋರಿಸುತ್ತಾಳೆ. ನೀನಾ ಮುಂದೆ ಹೆಚ್ಚಿನ ಕೀರ್ತಿ ಸಂಪಾದಿಸಲಿ

ಆಚಾರ್ಯ ಪ್ರೊಡಕ್ಷನಿನ "ಕುನ್ವಾರ ಬಾಪಾ"

ಆಚಾರ್ಯ ಪ್ರೊಡಕ್ಷನಿನ ಮೊದಲನೆಯ ಚಿತ್ರ 'ಕುನ್ವಾರ ಬಾಪಾ' (ಬ್ರಹ್ಮಚಾರಿಪಿತಾ) ಈಗ ಬೊಂಬಾಯಿಯಲ್ಲಿ ಪ್ರದರ್ಶಿತವಾಗುತ್ತಿದೆ ಕಂಗನ್, ಬಂಧನ್ ಮತ್ತು ನಯಾ ಸಂಸಾರ್ ಖ್ಯಾತಿಯ ನಿರ್ದೇಶಕ ಎನ್ ಆರ್ ಆಚಾರ್ಯರು ಇದರ ನಿರ್ದೇಶಕರು ಮತ್ತು ಮಾಲಿಕರು ಕಿಶೋರ ಶಾಹು ಇದರಲ್ಲಿ ನಟಿಸುತ್ತಾನೆ ಪ್ರತಿಮಾದಾಸ ಗುಪ್ತಾಳು ನಾಯಕಿಯಾಗಿದ್ದಾಳೆ

ಬೊಂಬಯಿ ಟಾಕೀಸ್ 'ಬಸಂತ್'

ಇದರಲ್ಲಿ ಮುಮ್ತಾಜ್, ಶಾಂತಿ, ಉಲ್ಲಾಸ್ ಇವರು ನಟಿಸುವರು ಇದು ಈಗ ಪ್ರದರ್ಶಿತವಾಗುತ್ತಿದೆ ಮುಮ್ತಾಜ್ ಶಾಂತಿ ಸಿನೆಮಾ ಲೋಕಕ್ಕೆ ಹೊಸಬಳಾದರೂ ನಾಟಕದಲ್ಲಿ ನಟಿಯಾಗಿ ನರ್ತಕಿಯಾಗಿ ಪ್ರಖ್ಯಾತಳಾಗಿದ್ದಾಳೆ.

ಬಾಲಾಜಿ ಟಾಕೀಸಿನಲ್ಲಿ 'ಕನ್ಯಾದಾನ'

ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ 25ರಿಂದ ಸುಪರ್ ಪಿಕ್ಚರ್ಸ್‌ನವರ ಸಾಮಾಜಿಕ ಚಿತ್ರ 'ಕನ್ಯಾದಾನ'ವು ಪ್ರದರ್ಶಿತವಾಗುತ್ತಿದೆ. ಹಳ್ಳಿಯ ಹುಡುಗಿಯೊಬ್ಬಳನ್ನು ರಾಜಕುಮಾರನು ವರಿಸುತ್ತಾನೆ ಇದಕ್ಕೆ ಬಂದ ಕಂಟಕಗಳು ಹೇಗೆ ಪರಿಹಾರವಾದವು ಎಂಬುದು ನಿಜವಾಗಿಯ ರೋಮಾಂಚಕವಾದ ಘಟನೆಯಾಗಿದೆ ಶಾಮೊವ್, ಅಶಿಕ್ ಹುಸೇನ್, ಕಲ್ಯಾಣಿ, ಗುಲಾಮ್ ಮಹಮ್ಮದ್ ಮೊದಲಾದವರು ಇದರಲ್ಲಿ ನಟಿಸುತ್ತಾರೆ.

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6 25 ಬೆಳಿಗ್ಗೆ	7 30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8 30 ಬೆಳಿಗ್ಗೆ	6 45 ಸಾಯಂ
ಜಾಲರ್ ಪೇಟೆ ಪೆಸೆಂಜರ್	11 30 ಮಧ್ಯಾಹ್ನ	3 45 ಸಾಯಂ
ಕನ್ನನೂರು	6 0 ಸಾಯಂ	9 30 ಪೂರ್ವಾಹ್ನ

ಮಾರಾಟಕ್ಕೆ ಸಿದ್ಧವಾಗಿದೆ!

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೨ನೆಯ ದರ್ಜೆಯ ಕಥೆಗಳು 0-1-6

ಪ್ರಕಟವಾಗಲಿದೆ

೩ನೆಯ ದರ್ಜೆಯ ಭೂವಿವರಣೆ 0-2-0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಇಮ್ಮಡಿ ಉದ್ದೇಶವಿರುವ

ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆ ಯಾ ಚಿಬ್ಬುಗಳಿರುವನೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕೆಟ್ಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ್ಯ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticur Soap) ತೊಳೆಯಿರಿ

ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ ಯಾಕಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ ಆಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ ಸೌಂದರ್ಯ ಮತ್ತು ಆರೋಗಕರವಾದ ಚರ್ಮವನ್ನು ಪಡೆಯಲು ಇದನ್ನುಪಯೋಗಿಸುವುದೇ ಉತ್ತಮ ಹಾದಿ ಕುಟಿಕೂರಾ ಮುಲಾಮು (Cuticura Ointment) ನಿಂದ ಮೊಡವೆ ಛಿದ್ರ, ಗಜ್ಜಿಗಳನ್ನು ನಾಶವಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾಗಿ ಅತ್ಯಲ್ಪ ಸಮಯದೊಳಗಾಗಿ ಚರ್ಮವನು ಗುಣಪಡಿಸುವುದು ಸ್ನಾನ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಶೈತ್ಯಕರವಾದುದು

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು

Cuticura Soap

ಕುಟಿಕೂರಾ ಸಾಬೂನುಗಳು ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರವಾಸಕ್ಕೆ) ದೊರೆಯುತ್ತದೆ

ದಮ್ಮು ಗುಣಪಡಲೇ ಬೇಕು

ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ, ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೇ ಬೇರು ಸಹಿತ ಕಿತ್ತೊಗೆದು ಗುಣವಾಡುತ್ತದೆ ಅದ ತೆಗೆದು ಕೊಳ್ಳಹತ್ತಿದ ಕೂಡಲೇ ಕೆಮ್ಮುಸಿಲ್ಲುವದು ಶೌಚದ ತೊಂದರೆ ಉಳಿಯುವದಿಲ್ಲ ಪಚನ ಕ್ರಿಯೆ ನೆಟ್ಟಗಾಗುವದ ಸಾವಕಾಶವಾಗಿ ಶಕ್ತಿಯು ತುಂಬಿ ಒಂದು ಪುಷ್ಕಳ ಗಟ್ಟಿವಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ ೨-೨-೦. ರೂ ೪-೨-೦ ರೂ ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ

ಪತ್ತಾ:—ಡಾ ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

ವಿಚಿತ್ರ-ವಿಜ್ಞಾನ

ಚಂದ್ರಲೋಕಕ್ಕೆ ಪ್ರಯಾಣ

ಚಂದ್ರಲೋಕಕ್ಕೆ ಪ್ರಯಾಣ ಮಾಡುವರೆ ವೈಜ್ಞಾನಿಕರು ಒಂದು ಹೊಸ ತರದ ಹಡಗ ಯಂತ್ರವನ್ನು ನಿರ್ಮಿಸುವ ಯೋಚನೆ ಮಾಡಿದ್ದಾರೆ. ಚಂದ್ರ ಲೋಕಕ್ಕೆ ಪ್ರಯಾಣ ಮಾಡಬೇಕೆಂದು ಅನೇಕ ವರ್ಷಗಳಿಂದ ವೈಜ್ಞಾನಿಕರು ಸಾಹಸ ಪಡುತ್ತಿದ್ದಾರಷ್ಟೆ? ಇವರ ಸಾಹಸವು ಎಂದು ಕೃತಾರ್ಥವಾಗುವುದೋ ಹೇಳ ಬರುವುದಿಲ್ಲ. ಚಂದ್ರಲೋಕದಲ್ಲಿಯೂ ಭೂಮಿಯಂತೆ ಮನುಷ್ಯ ನದಿ ಪರ್ವತಗಳಿವೆಯೆಂದು ಹಲವರ ಊಹನೆಯಾಗಿದೆ.

ಬಂಜೆತನ ಹೋಗಲಾಡಿಸುವ ವಿಟಮಿನ್

ಪಾರಾ ಎಮಿನೋ ಬೆಂಜೋಯಿಕ್ ಎಸಿಡ್ ಎಂಬ ಹೆಸರಿನಿಂದ ಕರೆಯಲ್ಪಡುವ ಒಂದು ಹೊಸ ತರದ ವಿಟಮಿನಿನಿಂದ ಬಂಜೆತನವು ಹಾಗೂ ನರೆ ಕೂದಲುಗಳು ಹೋಗುವವೆಂದು 'ಜರ್ನಲ್ ಓಫ್ ಸದರ್ನ್ ಮೆಡಿಸಿನ್ ಎಂಡ್ ಸರ್ಜರಿ' ಎಂಬ ಪತ್ರಿಕೆಯಲ್ಲಿ ಬೋಸ್ಟನ್ ಡಾಕ್ಟರ್ ಬೆಂಜಮಿನ್ ಎಫಸಿವೆ ಎಂಬವರು ಬರೆದಿರುತ್ತಾರೆ. ಅವರು ಹೊಸ ವಿಟಮಿನನ್ನುಪಯೋಗಿಸಿದ ಲಂಜನರಲ್ಲಿ ಆಧ ಫಲಿತಾಂಶ ತಿಳಿಸಿದ್ದಾರೆ. ಇದು ಹೊಸತಾಗಿ ಕಂಡುಹಿಡಿದ ವಿಟಮಿನ್ ಆಗಿದೆ.

ಸುಭಾಸರೋ ಸುಭಾನನೋ ಅಧಿಕಾರಿಗಳ ಭ್ರಮೆ

ಅಲ್ಲಾಬಾದಿನಲ್ಲಿರುವ ಒಬ್ಬ ಗೆಳೆಯನಿಗೆ ಸ್ವಿಜರ್ಲೆಂಡಿನಿಂದ ಒಬ್ಬ ಗೆಳೆಯನು ಪತ್ರ ಬರೆಯುತ್ತಾ 'ಸುಭಾನ್ ಈಗ ಹೇಗಿದ್ದಾನೆ? ಏನು ಮಾಡುತ್ತಿದ್ದಾನೆ?' ಎಂದು ಕೇಳಿದನು. ಆ ಪತ್ರವು ಸರಕಾರದ ಪತ್ರ ಸಂಶೋಧಕರ ಕೈಗೆ ಸಿಕ್ಕಿ ಅವರು ಸುಭಾನ್ ಎಂದರೆ ಸುಭಾಸರೆಂದು ಗ್ರಹಿಸಿ ಅಲ್ಲಾಬಾದಿನಲ್ಲಿ ಬೋಸರು ಅಡಗಿರುವುದು ಸ್ವಿಜರ್ಲೆಂಡಿನ ಗೆಳೆಯನಿಗೆ ಆ ವಿಷಯ ಗೊತ್ತಿರಬೇಕೆಂದೂ ಸಂಶಯದಿಂದ ತಂತಿ ಬಿಟ್ಟು ವಿಚಾರಣೆ ನಡೆಸಿ ಬಹಳ ಗಲಾಟೆ ಮಾಡಿದರು. ಕಡೆಗೆ ನೋಡುವಾಗ ಸುಭಾನನೆಂಬ ಹೆಸರಿನವನು ಅಲ್ಲಾಬಾದಿನಲ್ಲಿರವನೆಂದು ತಿಳಿದುಬಂದು ಅಧಿಕಾರಿಗಳ ಭ್ರಮೆನಿರಸನವಾಯಿತೆಂದು ನೇಶನಲ್ ಹೆರಾಲ್ಡಿನ ಸುದ್ದಿ.

ಫ್ರಾನ್ಸಿನಲ್ಲಿ ಮೊದಲು ಡೈವ್ ಬಾಂಬರ್ ಮಾಡಲ್ಪಟ್ಟಿತು

ಫ್ರಾನ್ಸಿನ ಪತನಕ್ಕೆ ಕಾರಣವಾದ ಡೈವ್ ಬಾಂಬರ್‌ಗಳನ್ನು ಮೊದಲು ಸೃಷ್ಟಿಸಿದ್ದು ಫ್ರಾನ್ಸೇ ಎಂಬುದಾಗಿ ತಿಳಿದು ಬರುತ್ತದೆ. ೧೯೩೭ರಲ್ಲಿ ಪೇರಿಸಿನಲ್ಲಿ ನಡೆದ ಅಂತರ್ರಾಷ್ಟ್ರೀಯ ವಿಮಾನ ಪ್ರದರ್ಶನದಲ್ಲಿ ಮೊದಲು ಇದು ಪ್ರದರ್ಶಿಸಲ್ಪಟ್ಟಿತು. ಯುದ್ಧ ಸುರುವಾಗುವ ಕೆಲವು ವಾರಗಳ ಮೊದಲು ಬ್ರುಸೆಲ್ಸಿನಲ್ಲಿ ಜರ್ಮನರು ಅದೇ ಪ್ರಥಮವಾಗಿ ಪ್ರದರ್ಶಿಸಿದ್ದರು. ಫ್ರೆಂಚರು ತಯಾರಿಸಿದ್ದು ಒಬ್ಬ ಕುಳಿತುಕೊಳ್ಳುವುದು; ಜರ್ಮನರದು ಎರಡು ಜನ ಕುಳಿತುಕೊಳ್ಳುವುದು.

ರಾಮಕೃಷ್ಣ ಲೀಲಾಪ್ರಸಂಗ

ತ್ಯಾಗ, ಶ್ರದ್ಧೆ, ಸದ್ಗುಣಗಳ ಪ್ರಯೋಜನ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

ದೇವ ಮೂರ್ತ್ಯಾದಿಗಳ ದರ್ಶನವಾಗದಿದ್ದರೆ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಲಾಗುವುದಿಲ್ಲವೆಂದಲ್ಲ

ಅಂತಹ ದರ್ಶನಾದಿಗಳಲ್ಲಿ ಅನೇಕರು ವಿಶ್ವಾಸವುಳ್ಳವರಾಗಿ ಅವುಗಳನ್ನು ಅನುಭವಿಸದಿದ್ದವರೆಲ್ಲ ಧಾರ್ಮಿಕರಲ್ಲವೆಂದು ಭಾವಿಸುತ್ತಾರೆ. ಅಂತಹವರು ಧರ್ಮವೂ, ಲಕ್ಷ್ಯ ವಿಹೀನ ಅದ್ಭುತ ದರ್ಶನ ಪಿಪಾಸೆಯೂ ಒಂದೇ ವಿಷಯವೆಂದು ಭಾವಿಸುತ್ತಾರೆ. ಆದರೆ ಅಂತಹ ಪಿಪಾಸೆಯಿಂದ ಧರ್ಮಲಾಭವಾಗದೆ ಮಾನವನು ದಿನೇ ದಿನೇ ಎಲ್ಲ ವಿಷಯಗಳಲ್ಲಿಯೂ ದುರ್ಬಲನಾಗುತ್ತಾನೆ. ಯಾತರಿಂದ ಮನುಷ್ಯನಿಗೆ ಏಕ ನಿಷ್ಠಾಬುದ್ಧಿ ಮತ್ತು ಸದ್ಗುಣಶೀಲತೆ ಪ್ರಾಪ್ತವಾಗುವುದಿಲ್ಲವೊ ಅಥವಾ ಆತನು ಪವಿತ್ರತೆಯ ದೃಢ ಭೂಮಿಯಿಲ್ಲಿದ್ದು ಸತ್ಯ ಲಾಭಕ್ಕೋಸ್ಕರ ಜಗತ್ತಿನ ಎಲ್ಲ ವಿಷಯಗಳನ್ನು ತುಚ್ಛೀಕರಿಸುವುದಿಲ್ಲವೊ ಅಥವಾ ಕಾಮಗಂಧಹೀನನಾಗದೆ ದಿನೇ ದಿನೇ ನಾನಾ ಕಾಮನೆ ವಾಸನೆಗಳಲ್ಲಿ ಆಸಕ್ತಿ ಪಡುತ್ತಾನೆಯೋ ಅದು ಧರ್ಮರಾಜ್ಯಕ್ಕೆ ಸೇರಿದ್ದಲ್ಲವೆಂದು ಭಾವಿಸಬೇಕು. ಅಪೂರ್ವ ದರ್ಶನಾದಿಗಳು ನಿನ್ನ ಜೀವನದಲ್ಲಿ ಅಂತಹ ಪ್ರತಿಫಲವನ್ನು ಕೊಡದ ಪಕ್ಷಕ್ಕೆ, ಮತ್ತು ದರ್ಶನಾದಿಗಳು ಕೂಡ ನಿನಗಾಗುತ್ತ ಇರುತಿದ್ದರೆ, ನೀನು ಧರ್ಮರಾಜ್ಯದ ಹೊರಗೆನೇ ಇರುತ್ತಿ ಎಂದು ಭಾವಿಸಬೇಕು. ಅಂತಹ ದರ್ಶನಾದಿಗಳು ನಿನ ಮಸ್ತಿಷ್ಕ ವಿಕಾರಗಳಿಂದಲೇ ಉತ್ಪನ್ನವಾಗಿದ್ದಾವೆ ಅವುಗಳಿಂದ ಏನೂ ಪ್ರಯೋಜನವಿಲ್ಲ, ಆದರೆ ಅಪೂರ್ವ ದರ್ಶನಾದಿಗಳನ್ನು ಕಾಣದಿದ್ದರೂ ಆ ಗುಣಗಳಿಂದ ನೀನು ಭೂಷಿತನಾಗಿದ್ದರೆ, ನೀನು ಸರಿಯಾದ ಮಾರ್ಗವನ್ನವಲಂಬಿಸುತ್ತಿದ್ದಿ ಎಂದು ಭಾವಿಸಬೇಕು. ಯೋಗ್ಯ ದರ್ಶನಾದಿಗಳು ಕೂಡಾ ಸಕಾಲಕ್ಕೆ ನಿನಗಾಗುವುವು.

ತ್ಯಾಗ, ಶ್ರದ್ಧೆ, ಸದ್ಗುಣಶೀಲತೆಗಳೇ ಆಧ್ಯಾತ್ಮಿಕ ಲಾಭದ ಚಿಹ್ನೆಗಳು

ಶ್ರೀ ರಾಮಕೃಷ್ಣ ದೇವರ ಭಕ್ತರಲ್ಲಿ ಅನೇಕರಿಗೆ ಭಾವ ಸಮಾಧಿಯ ಅನುಭವವಾಗುತ್ತಿತ್ತು ಆದರೆ ಗೋಪಾಲಚಂದ್ರ ಘೋಷನೆಂಬ ಒಬ್ಬ ಭಕ್ತನು ಬಹಳ ದಿವಸದಿಂದಲೂ ಶ್ರೀ ಪರಮಹಂಸರ ಸಂಗಲಾಭ ಮಾಡಿಯೂ, ತನಗೆ ಭಾವ ಸಮಾಧಿಯಾಗಲಿಲ್ಲವೆಂದು ಒಂದು ದಿನ ತನ್ನ ದುಃಖವನ್ನು ಕಣ್ಣೀರು ಸುರಿಸಿ ಅವರಿಗೆ ನಿವೇದನೆ ಮಾಡಿದನು ಆಗ ಶ್ರೀ ರಾಮಕೃಷ್ಣ ದೇವರು ಅವನನ್ನು ಕುರಿತು 'ನೀನು ಬುದ್ಧಿಹೀನನೇ ಸ್ವೈ ಭಾವಸಮಾಧಿಯಾದರೆ ಮುಗಿಯಿತೇ? ಅದೊಂದು ದೊಡ್ಡ ವಿಷಯವೇ? ಅದಕ್ಕಿಂತ ತ್ಯಾಗ, ಶ್ರದ್ಧೆ ದೊಡ್ಡ ವಿಷಯಗಳೆಂದು ತಿಳಿ ನರೇಂದ್ರನನ್ನು (ಸ್ವಾಮಿ ವಿವೇಕಾನಂದನನ್ನು) ನೋಡು, ಆತನಿಗೆ ಇಂತಹ ದರ್ಶನವಾಗುವುದೇ ಇಲ್ಲ ಆದರೆ ಆತನ ತ್ಯಾಗ, ಶ್ರದ್ಧೆ, ಮನಸ್ಸಿನ ತೇಜಸ್ಸು, ನಿಷ್ಠೆ ಅದ್ಭುತವಾಗಿದೆ

ಮಾಗಿದ ಮಮಕಾರ ಮತ್ತು ಶುದ್ಧ ವಾಸನೆ, ಜೀವನ್ಮುಕ್ತ, ಈಶ್ವರಕೋಟಿ ಮತ್ತು ಜೀವಕೋಟಿ ಪುರುಷರು

ಏಕನಿಷ್ಠಾಬುದ್ಧಿ, ದೃಢವಿಶ್ವಾಸ ಮತ್ತು ಏಕಾಂತ ಭಕ್ತಿ ಸಹಾಯದಿಂದ ಸಾಧಕನ ವಾಸನಾ ಸಮೂಹವು ಕ್ಷೀಣವಾಗುತ್ತಾ ಶ್ರೀ ಪರಮಾತ್ಮನಲ್ಲಿ ಅದ್ವೈತ ಭಾವದಲ್ಲಿ ಲೀನವಾಗುವ ಸಮಯ ಬಂದಾಗ, ಪೂರ್ವ ಸಂಸ್ಕಾರದ ವಶವರ್ತಿಯಾಗಿ ಕೆಲವರ ಮನಸ್ಸಿನಲ್ಲಿ 'ನಾನು ಲೋಕ ಕಲ್ಯಾಣವನ್ನು ಸಾಧಿಸುತ್ತೇನೆ' ಎಂಬ ಒಂದು ಶುದ್ಧವಾಸನೆಯು ಹುಟ್ಟುತ್ತದೆ. ಈ ಕಾಮವಾಸನೆಯ ಸಲುವಾಗಿ ಸಾಧಕನು ಸಂಪೂರ್ಣ ಅದ್ವೈತ ಭಾವದಲ್ಲಿ ಲೀನವಾಗುವುದಿಲ್ಲ ಆ ಉಚ್ಚ ಭೂಮಿಯಿಂದ ಸ್ವಲ್ಪ ಕೆಳಗಿಳಿದು 'ನಾನು ನನ್ನದು ಎಂಬ ರಾಜ್ಯಕ್ಕೆ ಪುನಃ ಬರುತ್ತಾನೆ ಆದರೆ ಆ ಮಮಕಾರವು ತಾನು ಈಶ್ವರನ ದಾಸನು ಅಥವಾ ಪುತ್ರನು' ಎಂಬ ಗಾಢವಾದ ಒಂದು ಸಂಬಂಧವನ್ನಿಟ್ಟಿರುತ್ತದೆ ಆ ಮಮಕಾರದಿಂದ ಇನ್ನು ಹಗಲಿರುಳು ಕಾಮಕಾಂಚನದ ಸೇವೆ ನಡೆಯುವುದಿಲ್ಲ. ಆ ಮಮಕಾರದಿಂದ ಶ್ರೀ ಪರಮಾತ್ಮನೇ ಸದ್ವಸ್ತುವೆಂದು ತಿಳಿದು ಸಂಸಾರದ ರೂಪರಸಾದಿ ಭೋಗ ಸುಖಗಳಲ್ಲಿ ಆಸಕ್ತಿ ಬರುವುದಿಲ್ಲ. ಆತನು ತನ್ನ ಉದ್ದೇಶ ಅಥವಾ ಲಕ್ಷ್ಯ ಸಾಧಿಸಲು ಎಷ್ಟು ರೂಪರಸಾದಿ ವಿಷಯಗಳು ಬೇಕೋ ಅಷ್ಟೇ ಸ್ವೇಚ್ಛೆಯಿಂದ ಅವುಗಳನ್ನು ಗ್ರಹಿಸುವನು. ಇದುವರೆಗೆ ಬಂಧನದಲ್ಲಿದ್ದು ಆ ನಂತರ ಸಾಧನೆ ಮಾಡಿ ಮುಕ್ತನಾಗಿ ಜೀವನದ ಅವಶಿಷ್ಟಾಂಶವನ್ನು ಹೇಗಾದರೂ ಭಗವದ್ಭಾವದಲ್ಲಿ ಕಾಲ ಕಳೆಯುವಾತನಿಗೆ 'ಜೀವನ್ಮುಕ್ತ'ನೆಂದು ಹೇಳುತ್ತಾರೆ. ಜನ್ಮಗ್ರಹಣ ಮಾಡುವಾಗಲೇ ಈಶ್ವರನೊಡನೆ ಅಂತಹದೊಂದು ಸಂಬಂಧವನ್ನಿಟ್ಟು ಈ ಜೀವನದಲ್ಲಿ ಸಾಮಾನ್ಯ ಜನರಂತೆ ಯಾವ ಬಂಧನದಲ್ಲಿಯೂ ಬೀಳದಿದ್ದವನೇ ಈಶ್ವರಕೋಟಿ ಅಥವಾ ನಿತ್ಯ ಮುಕ್ತ ಪುರುಷನೆಂದು ಹೇಳುತ್ತಾರೆ. ಮತ್ತೆ ಕೆಲವರು ಅದ್ವೈತಭಾವದಲ್ಲಿ ಲೀನರಾಗಿ ಈ ಜನ್ಮದಲ್ಲಾಗಲಿ ಅಥವಾ ಪರಜನ್ಮದಲ್ಲಾಗಲಿ ಸಂಸಾರದಲ್ಲಿ ಲೋಕಕಲ್ಯಾಣ ಸಾಧಿಸಲು ಬಾರದಿರುವವರೇ ಜೀವಕೋಟಿ ಪುರುಷರೆಂದು ಹೇಳುತ್ತಾರೆ ಇಂತಹವರ ಸಂಖ್ಯೆಯೇ ಹೆಚ್ಚೆಂದು ನಾವು ಗುರುಮುಖದಿಂದ ಕೇಳಿದ್ದೇವೆ

(ಕ್ರಮಶಃ)

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಕಡಿಮೆ ಖರ್ಚು
ಮಂಗಳೂರಿನಿಂದ - ಬೆಂಗಳೂರು
ತಿರುಪತಿ, ಮದರಾಸು.
ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

The Bank of Mangalore Limited

HEAD OFFICE Mangalore | ***BRANCHES*** Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year . . 4%
Two years or above $4\frac{1}{2}$%

Interest Payable Quarterly

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ಕಲೆ, ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ | ಬೆಂಗಳೂರು | ಮಂಗಳೂರು
ಮದರಾಸು | ತ್ರಿವೇಂಡ್ರಂ | ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

ANNOUNCEMENT

7000 Shares

5% Cumulative First Preference

LIST CLOSED.

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ಪ್ರಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಸ್ಟೋ ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ ಎಸ್ ಪ್ರಭು, M. B B. S ಸಿ ಪ್ರಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ರಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ESTD SWADESHABHIMANI 1906

[ಸಂಪುಟ 16] ತಾರೀಕು 31—7—1942 [ಸಂಚಿಕೆ 30]

ಎ. ಐ. ಸಿ. ಸಿ. ಸೇರಿದ ಎರಡು ವಾರಗಳೊಳಗೆ?

ಮಹಾ ಆಂದೋಲನ ಆರಂಭವಾಗುವುದೆ?

— ವರ್ಧಾದಲ್ಲಿ ನಡೆದ ಪ್ರಶ್ನೋತ್ತರಗಳು —

ಚಿಕಾಗೋ ಡೈಲಿ ನ್ಯೂಸ್ ಪತ್ರಿಕೆಯ ಸ್ಟೀಲರು 'ನ್ಯೂಸ್ ಕ್ರಾನಿಕಲ್' ಪ್ರತಿನಿಧಿ ಸ್ಟುವರ್ಟ್ ಎಮೆನಿ, ಚೀನ 'ನ್ಯೂಸ್ ಏಜೆನ್ಸಿ'ಯ ಪ್ರತಿನಿಧಿ ರಿಚರ್ಡ್ ಜೋನ್ ಎಂಬೀ ಮೂವರು ಪರದೇಶದ ಪತ್ರಿಕೋದ್ಯಮಿಗಳು ವರ್ಕಿಂಗ್ ಕಮಿಟಿ ಸಭೆ ಸೇರಿದ ಬಳಿಕ ಸ್ವಲ್ಪ ಸಮಯ ಉಳಿಕೊಂಡು ಗಾಂಧಿಯವರ ಭೇಟಿಯಾಗಿ ಕೆಲವು ಪ್ರಾಮುಖ್ಯ ಪ್ರಶ್ನೆಗಳನ್ನು ಕೇಳಿದರು ಕೆಳಗಡೆ ಅವರು ಕೇಳಿದ ಪ್ರಶ್ನೆ ಮತ್ತು ಅವುಗಳಿಗೆ ಗಾಂಧಿಜಿಯವರಿತ್ತ ಉತ್ತರಗಳ ಸಾರಾಂಶ ಕೊಡಲಾಗಿದೆ

'ತಮ್ಮ ಚಳವಳದ ಸ್ವರೂಪವನ್ನು ತಿಳಿಸುವಿರಾ? ಅದರಲ್ಲಿ ಉಪ್ಪಿನ ಕಾಯಿದೆ ಭಂಗ, ಸರಕಾರೀ ನೌಕರಿಯ ತ್ಯಾಗ, ಕೂಲಿಗಾರರು ಕಾರ್ಖಾನೆ ಬಿಡುವುದು ಇವೆಲ್ಲಾ ಸೇರಿರುವವೊ?'

'ಸಮುದಾಯಿಕ ಶಾಸನಭಂಗದಲ್ಲಿ ಬರುವಂಥಾ ಎಲ್ಲಾ ಅಹಿಂಸಾತ್ಮಕ ಕಾರ್ಯಗಳೂ ಇದರಲ್ಲಿ ಬರುವವು ಆದ್ದರಿಂದ ನೀವು ಕೇಳಿದ ಕಾರ್ಯಗಳು ನಿಸ್ಸಂಶಯವಾಗಿ ಬರುವವು ಆದರೆ ಬಹಳ ಉಗ್ರ ಕಾರ್ಯಕ್ರಮ ಕೈಕೊಳ್ಳುವುದು ನನ್ನ ಇಚ್ಛೆಯಿಲ್ಲ ಪರಿಸ್ಥಿತಿಯನ್ನು ಪರಿಶೀಲಿಸುವೆನು ಅರಾಜಕತೆ ಒಮ್ಮೆಗೇ ಉಂಟಾಗದಂತೆ, ಜಪಾನಿಯರ ಆಕ್ರಮಣಕ್ಕೆ ಅನುಕೂಲವಾಗದಂತೆ ಮುಂಜಾಗ್ರತೆ ತೆಗೆದುಕೊಳ್ಳುವೆನು ನಮ್ಮ ನಿರ್ಣಯ ಮೂಲಭೂತ ತತ್ವಕ್ಕಾಗಿದೆ ರಾಷ್ಟ್ರದ ಅಸ್ತಿತ್ವವನ್ನು ಉಳಿಸಲು ಸ್ವಾತಂತ್ರ್ಯ ಅವಶ್ಯ. ನಾನು ಸೌಮ್ಯದಿಂದಲೇ ಆರಂಭಿಸಬೇಕೆಂದಿರುವೆನು ಆದರೆ ಅದು ಬ್ರಿಟಿಷ್ ಸರಕಾರದ ಮೇಲೆ ಹಾಗೂ ಮಿತ್ರರಾಷ್ಟ್ರಗಳ ಮೇಲೆ ಪರಿಣಾಮ ಮಾಡದಿದ್ದರೆ ಬಹಳ ಉಗ್ರವಾಗಿ ಮಾಡಲೂ ಹಿಂಜರಿಯುವುದಿಲ ಇದಕ್ಕಿಂತ ವಿಸ್ತಾರವಾದ ಉತ್ತರಕೊಡಲು ಈಗ ಸಾಧ್ಯವಿಲ್ಲ ಇದುವರೆಗೂ ಸಂಪೂರ್ಣ ನಿಶ್ಚಿತ ಕಾರ್ಯಕ್ರಮ ಆಗಿಲ್ಲ

'ನಿಮ್ಮ ಬೇಡಿಕೆಯನ್ನು ಕೇಳದಿದ್ದರೆ ಚಳವಳ ಆರಂಭಿಸಲು ಎಷ್ಟು ಅವಧಿ ಕೊಡುವಿರಿ?'

'ಎ. ಐ. ಸಿ. ಸಿ.ಯಲ್ಲಿ ನಿರ್ಣಯವು ಮಂಜೂರಾದರೆ ಸ್ವಲ್ಪ ಮಾತ್ರ ಅವಧಿ ಕೊಡಲಾಗುವುದು ಒಂದು ಅಥವಾ ಎರಡು ವಾರ ಅವಧಿ ಕೊಡಬಹುದು.

'ನಿಮ್ಮನ್ನೂ ನಿಮ್ಮ ಸಾವಿರಾರು ಮಂದಿ ಅನುಯಾಯಿಗಳನ್ನೂ ಸೆರೆಮನೆಗೆ ಹಾಕಿದರೆ ಚಳವಳವು ನಿಂತುಹೋಗದೆ?'

'ನಿಂತುಹೋಗಲಾರದೆಂದು ನಾನು ಆಶಿಸುತ್ತೇನೆ' ಗಾಂಧಿಜಿ ಹೊಟ್ಟೆ ತುಂಬ ನಗುತ್ತಾ ಹೇಳಿದರು

'ಜಪಾನರು ಬಾಗಿಲಲ್ಲಿ ಒಂದು ನಿಂತಿರುವಾಗ ಒಪ್ಪಂದ ಮಾಡಿಕೊಳ್ಳಬಾರದೇಕೆ?'

ಬ್ರಿಟಿಷರು ಶತ್ರು ವಿಮಾನಗಳನ್ನು ಎದುರಿಸುತ್ತಿರುವರು.

'ಗಂಡಾಂತರ ಒದಗಬಾರದೆಂದೇ ಈ ಚಳವಳ ಮಾಡುವ ಯೋಚನೆ ಗೈಯ್ಯಲಾಗಿದೆ. ದಾಸ್ಯದಲ್ಲಿರುವ ಹಿಂದುಸ್ತಾನವು ಬ್ರಿಟಿಷರಿಗೆ ಇಂತಹ ವಿಷಮಕಾಲದಲ್ಲಿ ಸಹಾಯವಾಗುವ ಬದಲು ತೊಂದರೆಯಾಗುವುದು. ಜಪಾನರು ಹಿಂದುಸ್ತಾನಕ್ಕೆ ಬಂದಿಳಿದರೆ ಬರ್ಮಾ, ಮಲಯಾ, ಸಿಂಗಾಪುರಗಳಲ್ಲಿ ಆದಂತೆ ಅನೇಕ ಮಂದಿ ಹಿಂದೀಯರು ಜಪಾನರ ಪಕ್ಷ ಸೇರಬಹುದೆಂಬ ಭೀತಿಯಿದೆ. ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದರೆ ಅಂಥಾದ್ದು ಅಲ್ಲಿ ಆಗುತ್ತಿರಲಿಲ್ಲವೆಂದು ನಾನು ಎಣಿಸುತ್ತೇನೆ ಯಾವ ಹಿಂದೀಯನೂ ಜಪಾನರ ಕಡೆಗೆ ಹೋಗಬಾರದೆಂಬ ಉದ್ದೇಶದಿಂದಲೇ ಮನುಷ್ಯ ಶಕ್ತಿಗೆ ಸಾಧ್ಯವಿರುವಷ್ಟು ಸ್ವಾತಂತ್ರ್ಯವನ್ನು ಸಂಪಾದಿಸಲು ನಿರ್ಧರಮಾಡಿರುವೆವು'

'ಈ ವಿಷಮಕಾಲದಲ್ಲಿ ಚೀನಾಯರಿಗೆ ಹಾಗೂ ರಶ್ಯನರಿಗೆ ಬೆಂಬಲ ಕೊಡುವುದು ನಿಮ್ಮ ಕರ್ತವ್ಯವೆಂದು ಭಾವಿಸುವುದಿಲ್ಲವೊ?'

ವೈಯುಕ್ತಿಕ ಪ್ರಶ್ನೆಯಾಗಿದ್ದರೆ ಇದು ಸಾಧ್ಯವಾಗುತಿತ್ತು ಆದರೆ ವರ್ಕಿಂಗ್ ಕಮಿಟಿಯ ಪ್ರತಿಯೊಬ್ಬ ಸದಸ್ಯನ ವರ್ಚಸ್ಸನ್ನೆಲ್ಲಾ ಒಟ್ಟು ಮಾಡಿದರೂ ಅವರಿಗೆ ಮಿತ್ರರಾಷ್ಟ್ರಗಳ ಧ್ಯೇಯದ ವಿಷಯವಾಗಿ ಏನೂ ವಿಶ್ವಾಸವಿಲ್ಲ, ವಿಶ್ವಾಸವಿಲ್ಲದ ಧ್ಯೇಯದ ಸಲುವಾಗಿ ಅವರು ಜನತೆಯನ್ನು ಪ್ರೋತ್ಸಾಹಿಸುವುದು ಹೇಗೆ?

'ನಿಮಗೆ ವರ್ಚಸ್ಸಿದ್ದರೆ ನೀವು ಮಾಡಬಹುದಾಗಿತ್ತು ಜನತೆಯಲ್ಲಿ ಬಹಳ ವರ್ಚಸ್ಸುಳ್ಳ ನೀವು ಯಾವುದನ್ನು ಹೇಳಿದರೂ ಅವರು ಮಾಡುವರ

'ನೀವು ಹೇಳುವಂಥಾ ವರ್ಚಸ್ಸು ನನಗೆ ಇದ್ದರೆ ಒಳ್ಳೆಯದಿತ್ತೆಂದು ನನಗೂ ತೋರುತ್ತದೆ ಆದರೆ ಅಂಥಾ ವರ್ಚಸ್ಸಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ ಅಂಥಾ ವರ್ಚಸ್ಸು ನನ್ನಲ್ಲಿದ್ದರೆ ಯಾರಿಗೂ ತೊಂದರೆ ಕೊಡದೆ ಇಷ್ಟರಲ್ಲಿಯೇ ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿ ಬಿಡುತ್ತಿದ್ದೆವು ನನ್ನಲ್ಲಿ ಹಾಗೂ ವರ್ಕಿಂಗ್ ಕಮಿಟಿಯಲ್ಲಿ ಮುಸ್ಲಿಮ ಲೀಗಿನವರಿಗೆ ಮತ್ತು ಸಂಸ್ಥಾನದ ಅಧಿಪತಿಗಳಿಗೆ ವಿಶ್ವಾಸವಿಲ್ಲವೆಂಬುದು ನಿಮಗೆ ತಿಳಿದಿರಬಹುದು ಇನ್ನೊಂದು ಉದಾಹರಣೆ ಕೊಡುತ್ತೇನೆ ಕಳೆದ ಮಹಾಯುದ್ಧದ ಕಾಲದಲ್ಲಿ ನಾನು ಹ್ಯಾರ್ಡಿಂಜ್ ಸಹಾಯ ಮಾಡಿದೆನು ಪ್ರಿಟೋರಿಯ ದರ್ಬಾರಿ ಸ್ವಯಂ ಪ್ರೇರಿತ ರಿಕ್ರೂಟಿಂಗ್ ಏಜಂಟನಾಗಿದ್ದೆನು ಕೃಷಿಕರ ಸೌಕರ್ಯದ ಒಗ್ಗ ಹೆಚ್ಚಾಗಿ ನಾನು ಮುದಿಯ ಊರಿನಲ್ಲೇ ಏಜೆನ್ಸಿ ಕೆಲಸ ಮಾಡಿದೆನು ಉರಿವ ಬಿಸಿಲಿನಲ್ಲಿ ಎಷ್ಟೋ ಮೈಲುಗಳ ವರೆಗೆ ರಿಕ್ರೂಟಿಗೆ ಜನ ಸೇರಿಸಲು ನಡೆಯುತ್ತಿದ್ದೆನು ಆದರೆ ಜನರು ನನ್ನ ಮಾತನ್ನು ಆಷ್ಟೊಂದು ಕೇಳುತ್ತಿರಲಿಲ್ಲ ಹೊರಗಿನವರಿಗೆ ಜನತೆ ಮೇಲೆ ನನ್ನ ಪ್ರಭಾವ ಹೆಚ್ಚಾಗಿ ತೋರುತ್ತದೆ ಆದರೆ ನಿಜವಾಗಿ ಅಷ್ಟೊಂದು ಪ್ರಭಾವ ನನಗಿಲ್ಲ ಸಂಕಷ್ಟ ನಿವಾರಣೆಗಾಗಿ ಚಳವಳ ಮಾಡಿದರೆ ಜನರು ನನ್ನನ್ನು ಹಿಂಬಾಲಿಸುತ್ತಾರೆಂಬುದು ನಿಜ ಏಕೆಂದರೆ ಅಂಥಾ ಕೆಲಸದಲ್ಲಿ ಜನತೆಯು ಸ್ವತಃ ಸಿದ್ಧವಿದ್ದು ಒಬ್ಬ ಸಹಾಯಕನನ್ನು ಅಪೇಕ್ಷಿಸುತ್ತದೆ. ತಮಗೆ ಹಿತವಲ್ಲದ ವಿಷಯಗಳ ಬಗ್ಗೆ ಜನತೆಯಲ್ಲಿ ಉತ್ಸಾಹ ಹುಟ್ಟಿಸಲು ನನಗೇನೂ ಪ್ರಭಾವವಿಲ್ಲ'

'ವರ್ಕಿಂಗ್ ಕಮಿಟಿ ನಿರ್ಣಯದಿಂದ ಅಮೇರಿಕದ ಅಭಿಪ್ರಾಯವು ನಿಮಗೆ ವಿರುದ್ಧವಾಗುವುದೆಂದು ನೀವು ತಿಳಿಯುವುದಿಲ್ಲವೊ?'

'ನನಗೆ ಲೋಕದ ಅಭಿಪ್ರಾಯ ಅನುಕೂಲವಾಗಿರುವುದೆಂಬ ವಿಶ್ವಾಸದಿಂದ ನಾನು ಎಂದೂ ಚಳವಳ ಪ್ರಾರಂಭಿಸಿಲ್ಲ ಬದಲಾಗಿ ಪ್ರತಿಯೊಂದು ಸಂದರ್ಭದಲ್ಲಿಯೂ ನನಗೆ ಅಭಿಪ್ರಾಯ ವಿರುದ್ಧವೇ ಆಗಿದ್ದವು ದಕ್ಷಿಣ ಆಫ್ರಿಕದ ನನ್ನ ಮೊದಲನೆಯ ಸತ್ಯಾಗ್ರಹದ ಕಾಲಕ್ಕೆ ಬಾಹ್ಯ ಅಭಿಪ್ರಾಯಗಳೆಲ್ಲ ವಿರುದ್ಧವೇ ಇದ್ದವು ಈಗ ನನಗೆ ಸತ್ಯಾಗ್ರಹದ ವಿಷಯ ಇರುವಷ್ಟು ಅನುಭವ ಆಗ ಇರಲಿಲ್ಲ. ಆದರೂ ನಾವು ಅಲ್ಲಿ ಕೆಲವೇ ಜನ

(೩ನೆಯ ಪುಟಕ್ಕೆ ಮುಂದುವರಿದಿದೆ)

The Bank of Mangalore Limited

HEAD OFFICE Mangalore. ***BRANCHES*** Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲ್ಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

ANNOUNCEMENT

7000 Shares

5% Cumulative First Preference

LIST CLOSED.

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರ :—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ ಎಸ್. ಪ್ರಭು, M. B B S ಸಿ. ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮಠಾರ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ESTD SWADESHABHIMANI 1906

[ಸಂಪುಟ 16] ತಾರೀಕು 31—7—1942 [ಸಂಚಿಕೆ 30]

ಎ: ಐ ಸಿ. ಸಿ. ಸೇರಿದ ಎರಡು ವಾರಗಳೊಳಗೆ?

ಚೀಕಾಗೋ ಡೈಲಿ ನ್ಯೂಸ್ ಪತ್ರಿಕೆಯ ಸ್ಟೀಲರು 'ನ್ಯೂಸ್ ಕ್ರಾನಿಕಲ್' ಪ್ರತಿನಿಧಿ ಸ್ಟುವರ್ಟ್ ಎಮೆನಿ, ಚೀನ 'ನ್ಯೂಸ್ ಏಜೆನ್ಸಿ'ಯ ಪ್ರತಿನಿಧಿ ರಿಚರ್ಡ ಜೋನ್ಸ್ ಎಂಬೀ ಮೂವರು ಪರದೇಶದ ಪತ್ರಿಕೋದ್ಯಮಿಗಳು ವರ್ಕಿಂಗ್ ಕಮಿಟಿ ಸಭೆ ಸೇರಿದ ಬಳಿಕ ಸ್ವಲ್ಪ ಸಮಯ ಉಳಕೊಂಡು ಗಾಂಧಿಯವರ ಭೇಟಿಯಾಗಿ ಕೆಲವು ಪ್ರಾಮುಖ್ಯ ಪ್ರಶ್ನೆಗಳನ್ನು ಕೇಳಿದರು ಕೆಳಗಡೆ ಅವರು ಕೇಳಿದ ಪ್ರಶ್ನೆ ಮತ್ತು ಅವುಗಳಿಗೆ ಗಾಂಧಿಜಿಯವರಿತ್ತ ಉತ್ತರಗಳ ಸಾರಾಂಶ ಕೊಡಲಾಗಿದೆ.

'ತಮ್ಮ ಚಳವಳದ ಸ್ವರೂಪವನ್ನು ತಿಳಿಸುವಿರಾ? ಅದರಲ್ಲಿ ಉಪ್ಪಿನ ಕಾಯಿದೆ ಭಂಗ, ಸರಕಾರೀ ನೌಕರಿಯ ತ್ಯಾಗ, ಕೂಲಿಗಾರರು ಕಾರ್ಖಾನೆ ಬಿಡುವುದು ಇವೆಲ್ಲಾ ಸೇರಿರುವವೋ?'

'ಸಮುದಾಯಿಕ ಶಾಸನಭಂಗದಲ್ಲಿ ಬರುವಂಥಾ ಎಲ್ಲಾ ಅಹಿಂಸಾತ್ಮಕ ಕಾರ್ಯಗಳೂ ಅದರಲ್ಲಿ ಬರುವವು ಆದ್ದರಿಂದ ನೀವು ಕೇಳಿದ ಕಾರ್ಯಗಳು ನಿಸ್ಸಂಶಯವಾಗಿ ಬರುವವು ಆದರೆ ಬಹಳ ಉಗ್ರ ಕಾರ್ಯಕ್ರಮ ಕೈಕೊಳ್ಳುವುದು ನನ್ನ ಇಚ್ಛೆಯಿಲ್ಲ ಪರಿಸ್ಥಿತಿಯನ್ನು ಪರಿಶೀಲಿಸುವೆನು. ಅರಾಜಕತೆ ಒಮ್ಮೆಗೇ ಉಂಟಾಗದಂತೆ, ಜಪಾನಿಯರ ಆಕ್ರಮಣಕ್ಕೆ ಅನುಕೂಲವಾಗದಂತೆ ಮುಂಜಾಗ್ರತೆ ತೆಗೆದುಕೊಳ್ಳುವೆನು ನಮ್ಮ ನಿರ್ಣಯ ಮೂಲಭೂತ ತತ್ವಕ್ಕಾಗಿದೆ, ರಾಷ್ಟ್ರದ ಅಸ್ತಿತ್ವವನ್ನು ಉಳಿಸಲು ಸ್ವಾತಂತ್ರ್ಯ ಅವಶ್ಯ. ನಾನು ಸೌಮ್ಯದಿಂದಲೇ ಆರಂಭಿಸಬೇಕೆಂದಿರುವೆನು ಆದರೆ ಅದು ಬ್ರಿಟಿಷ್ ಸರಕಾರದ ಮೇಲೆ ಹಾಗೂ ಮಿತ್ರರಾಷ್ಟ್ರಗಳ ಮೇಲೆ ಪರಿಣಾಮ ಮಾಡದಿದ್ದರೆ ಬಹಳ ಉಗ್ರವಾಗಿ ಮಾಡಲೂ ಹಿಂಜರಿಯುವುದಿಲ್ಲ ಇದಕ್ಕಿಂತ ವಿಸ್ತಾರವಾದ ಉತ್ತರಕೊಡಲು ಈಗ ಸಾಧ್ಯವಿಲ್ಲ ಇದುವರೆಗೂ ಸಂಪೂರ್ಣ ನಿಶ್ಚಿತ ಕಾರ್ಯಕ್ರಮ ಆಗಿಲ್ಲ.

'ನಿಮ್ಮ ಬೇಡಿಕೆಯನ್ನು ಕೇಳದಿದ್ದರೆ ಚಳವಳ ಆರಂಭಿಸಲು ಎಷ್ಟು ಅವದಿ ಕೊಡುವಿರಿ?'

'ಎ. ಐ. ಸಿ. ಸಿ ಯಲ್ಲಿ ನಿರ್ಣಯವು ಮಂಜೂರಾದರೆ ಸ್ವಲ್ಪ ಮಾತ್ರ ಅವಧಿ ಕೊಡಲಾಗುವುದು. ಒಂದು ಅಥವಾ ಎರಡು ವಾರ ಅವಧಿ ಕೊಡಬಹುದು.

'ನಿಮ್ಮನ್ನೂ ನಿಮ್ಮ ಸಾವಿರಾರು ಮಂದಿ ಅನುಯಾಯಿಗಳನ್ನೂ ಸೆರೆಮನೆಗೆ ಹಾಕಿದರೆ ಚಳವಳವು ನಿಂತುಹೋಗದೆ?'

'ನಿಂತುಹೋಗಲಾರದೆಂದು ನಾನು ಆಶಿಸುತ್ತೇನೆ' ಗಾಂಧಿಜಿ ಹೊಟ್ಟೆ ತುಂಬ ನಗುತ್ತಾ ಹೇಳಿದರು

ಮಹಾ ಆಂದೋಲನ ಆರಂಭವಾಗುವುದೆ?

— ವರ್ಧಾದಲ್ಲಿ ನಡೆದ ಪ್ರಶ್ನೋತ್ತರಗಳು —

'ಜವಾನರು ಬಾಗಿಲಲ್ಲಿ ಬಂದು ನಿಂತಿರುವಾಗ ಒಪ್ಪಂದ ಮಾಡಿಕೊಳ್ಳಬಾರದೇಕೆ?'

ಬ್ರಿಟಿಷರು ಶತ್ರು ವಿಮಾನಗಳನ್ನು ಎದುರಿಸುತ್ತಿರುವದು.

'ಗಂಡಾಂತರ ಒದಗಬಾರದೆಂದೇ ಈ ಚಳವಳ ಮಾಡುವ ಯೋಚನೆ ಗೈಯ್ಯಲಾಗಿದೆ. ದಾಸ್ಯದಲ್ಲಿರುವ ಹಿಂದುಸ್ತಾನವು ಬ್ರಿಟಿಷರಿಗೆ ಇಂತಹ ವಿಷಮಕಾಲದಲ್ಲಿ ಸಹಾಯವಾಗುವ ಬದಲು ತೊಂದರೆಯಾಗುವುದು. ಜಪಾನರು ಹಿಂದುಸ್ತಾನಕ್ಕೆ ಬಂದಿಳಿದರೆ ಬರ್ಮಾ, ಮಲಯ, ಸಿಂಗಾಪುರಗಳಲ್ಲಿ ಆದಂತೆ ಅನೇಕ ಮಂದಿ ಹಿಂದೀಯರು ಜಪಾನರ ಪಕ್ಷ ಸೇರಬಹುದೆಂಬ ಭೀತಿಯಿದೆ. ಬ್ರಹ್ಮದೇಶಕ್ಕೆ ಸ್ವಾತಂತ್ರ್ಯ ಕೊಟ್ಟಿದ್ದರೆ ಅಂಥಾದ್ದು ಅಲ್ಲಿ ಆಗುತ್ತಿರಲಿಲ್ಲವೆಂದು ನಾನು ಎಣಿಸುತ್ತೇನೆ. ಯಾವ ಹಿಂದೀಯನೂ ಜಪಾನರ ಕಡೆಗೆ ಹೋಗಬಾರದೆಂಬ ಉದ್ದೇಶದಿಂದಲೇ ಮನುಷ್ಯ ಶಕ್ತಿಗೆ ಸಾಧ್ಯವಿರುವಷ್ಟು ಸ್ವಾತಂತ್ರ್ಯವನ್ನು ಸಂಪಾದಿಸಲು ನಿರ್ಧಾರವಾಗಿರುವೆವು'

'ಈ ವಿಷಮಕಾಲದಲ್ಲಿ ಚೀನೀಯರಿಗೆ ಹಾಗೂ ರಶ್ಯನರಿಗೆ ಬೆಂಬಲ ಕೊಡುವುದು ನಿಮ್ಮ ಕರ್ತವ್ಯವೆಂದು ಭಾವಿಸುವುದಿಲ್ಲವೊ?'

'ವೈಯುಕ್ತಿಕ ಪ್ರಶ್ನೆಯಾಗಿದ್ದರೆ ಇದು ಸಾಧ್ಯವಾಗುತಿತ್ತು ಆದರೆ ವರ್ಕಿಂಗ್ ಕಮಿಟಿಯ ಪ್ರತಿಯೊಬ್ಬ ಸದಸ್ಯನ ವರ್ಚಸ್ಸನ್ನೆಲ್ಲಾ ಒಟ್ಟು ಮಾಡಿದರೂ ಅವರಿಗೆ ಮಿತ್ರರಾಷ್ಟ್ರಗಳ ಧ್ಯೇಯದ ವಿಷಯವಾಗಿ ಏನೂ ವಿಶ್ವಾಸವಿಲ್ಲ, ವಿಶ್ವಾಸವಿಲ್ಲದ ಧ್ಯೇಯದ ಸಲುವಾಗಿ ಅವರು ಜನತೆಯನ್ನು ಪ್ರೋತ್ಸಾಹಿಸುವುದು ಹೇಗೆ?

'ನಿಮಗೆ ಮನಸ್ಸಿದ್ದರೆ ನೀವು ಮಾಡಬಹುದಾಗಿತ್ತು ಜನತೆಯಲ್ಲಿ ಬಹಳ ವರ್ಚಸ್ಸುಳ್ಳ ನೀವು ಏನಾದರನ್ನು ಹೇಳಿದರೂ ಅವರು ಮಾಡುವರು.

'ನೀವು ಹೇಳುವಂಥಾ ವರ್ಚಸ್ಸು ನನಗೆ ಇದ್ದರೆ ಒಳ್ಳೆಯದಿತ್ತೆಂದು ನನಗೂ ತೋರುತ್ತದೆ ಆದರೆ ಅಂಥಾ ವರ್ಚಸ್ಸಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ ಅಂಥಾ ವರ್ಚಸ್ಸು ನನ್ನಲ್ಲಿದ್ದರೆ ಯಾರಿಗೂ ತೊಂದರೆ ಕೊಡದೆ ಇಷ್ಟರಲ್ಲಿಯೇ ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಿ ಬಿಡುತ್ತಿದ್ದೆವು ನನ್ನಲ್ಲಿ ಹಾಗೂ ವರ್ಕಿಂಗ್ ಕಮಿಟಿಯಲ್ಲಿ ಮುಸ್ಲಿಮ ಲೀಗಿನವರಿಗೆ ಮತ್ತು ಸಂಸ್ಥಾನದ ಅರಸರಿಗೆ ವಿಶ್ವಾಸವಿಲ್ಲವೆಂಬುದು ನಿಮಗೆ ತಿಳಿದಿರಬಹುದು. ಇನ್ನೊಂದು ಉದಾಹರಣೆ ಕೊಡುತ್ತೇನೆ ಕಳೆದ ಮಹಾಯುದ್ಧದ ಕಾಲದಲ್ಲಿ ನಾನು ಪೂರ್ಣಪೂರ್ವಕ ಸಹಾಯ ಮಾಡಿದೆನು ಬ್ರಿಟಿಷರ ಪರವಾಗಿ ಸ್ವಯಂ ಪ್ರೇರಿತ ರಿಕ್ರೂಟಿಂಗ್ ಏಜಂಟನಾಗಿದ್ದೆನು ಕೃಷಿಕರ ಸೌಕರ್ಯದ ಬಗ್ಗೆ ಕೆಚ್ಚಾಗಿ ನಾನೆ ದುಡಿದ ಊರಿನಲ್ಲೇ ಏಜೆನ್ಸಿ ಕೆಲಸ ಮಾಡಿದೆನು ಉರಿವ ಬಿಸಿಲಿನಲ್ಲಿ ಎಷ್ಟೋ ಮೈಲುಗಳವರೆಗ ರಿಕ್ರೂಟಿಗೆ ಜನ ಸೇರಿಸಲು ಸಂಚರಿಸುತ್ತಿದ್ದೆನು ಆದರೆ ಜನರು ನನ್ನ ಮಾತನ್ನು ಆಲಿಸುತ್ತಿರಲಿಲ್ಲ ಹೊರಗಿನವರಿಗೆ ಜನತೆ ಮೇಲೆ ನನ್ನ ಪ್ರಭಾವ ಹೆಚ್ಚಾಗಿ ತೋರುತ್ತದೆ ಆದರ ನಿಜವಾಗಿ ಅಷ್ಟೊಂದು ಪ್ರಭಾವ ನನಗಿಲ್ಲ ಸಂಕಷ್ಟ ನಿವಾರಣೆಗಾಗಿ ಚಳವಳ ಹೂಡಿದರೆ ಜನರು ನನ್ನನ್ನು ಹಿಂಬಾಲಿಸುತ್ತಾರೆಂಬುದು ನಿಜ ಏಕೆಂದರೆ ಅಂಥಾ ಕೆಲಸದಲ್ಲಿ ಜನತೆಯು ಸ್ವತಃ ಸಿದ್ಧವಿದ್ದು ಒಬ್ಬ ನಾಯಕನನ್ನು ಅಪೇಕ್ಷಿಸುತ್ತವೆ. ತಮಗೆ ಹಿತವಲ್ಲದ ವಿಷಯಗಳ ಬಗ್ಗೆ ಜನತೆಯಲ್ಲಿ ಉತ್ಸಾಹ ಹುಟ್ಟಿಸಲು ನನಗೇನೂ ಪ್ರಭಾವವಿಲ್ಲ.'

'ವರ್ಕಿಂಗ್ ಕಮಿಟಿ ನಿರ್ಣಯದಿಂದ ಅಮೇರಿಕದ ಅಭಿಪ್ರಾಯವು ನಿಮಗೆ ವಿರುದ್ಧವಾಗುವುದೆಂದು ನೀವು ತಿಳಿಯುವುದಿಲ್ಲವೊ?'

'ನನಗೆ ಲೋಕದ ಅಭಿಪ್ರಾಯ ಅನುಕೂಲವಾಗಿರುವುದೆಂಬ ವಿಶ್ವಾಸದಿಂದ ನಾನು ಎಂದೂ ಚಳವಳ ಪ್ರಾರಂಭಿಸಿಲ್ಲ, ಬದಲಾಗಿ ಪ್ರತಿಯೊಂದು ಸಂದರ್ಭದಲ್ಲಿಯೂ ನನಗೆ ಅಭಿಪ್ರಾಯ ವಿರುದ್ಧವೇ ಆಗಿದ್ದವು ದಕ್ಷಿಣ ಅಫ್ರಿಕದ ನನ್ನ ಮೊದಲನೆಯ ಸತ್ಯಾಗ್ರಹದ ಕಾಲಕ್ಕೆ ಬಾಹ್ಯ ಅಭಿಪ್ರಾಯಗಳೆಲ್ಲಾ ವಿರುದ್ಧವೇ ಇದ್ದವು ಈಗ ನನಗೆ ಸತ್ಯಾಗ್ರಹದ ವಿಷಯ ಇರುವಷ್ಟು ಅನುಭವ ಆಗ ಇರಲಿಲ್ಲ. ಆದರೂ, ನಾವು ಅಲ್ಲಿ ಕೆಲವೇ ಜನ

(3ನೆಯ ಪುಟಕ್ಕೆ ಮುಂದುವರಿದಿದೆ)

KANNADA ILLUSTRATED WEEKLY

ಎ. ಐ. ಸಿ. ಸಿ. ಸೇರಿದ ಎರಡು ಪಾರಗಳೊಳಗೆ?

(೧ನೆಯ ಪುಟದಿಂದ ಮುಂದುವರಿದುದು)

…ೀ ಇದ್ದರೂ ನಾನು ಅವರಿಗೆ ನಮ್ಮ ಅಂತರಂ…ಕ್ತಿಯನ್ನೇ ಅವಲಂಬಿಸಿರಬೇಕೆಂದು ಹೇ…ದ್ದೆನು. ಆದರೆ ನಾವು ಅನುಂಕನರ ಮಾತ್ರವಲ್ಲ …ಬ್ರಿಟಿಷರ ಸಹಾನುಭೂತಿಯನ್ನಾದರೂ ಇದರಿಂದ …ಕೆ ಕಳಕೊಳ್ಳಬೇಕೋ ನಮಗೆ ತಿಳಿಯುವುದಿ…. ಸ್ವಾತಂತ್ರ್ಯದ ಬೇಡಿಕೆಗೆ ಅವರೇಕೆ ಅಡ್ಡಿ …ಮಾಡಬೇಕು? ಯುದ್ಧ ಪ್ರಯತ್ನಗಳಿಗೆ ಅಡ್ಡಿ …ಬಾರದೆ ಹಿಂದುಸ್ಥಾನವು ಸ್ವತಂತ್ರವೆಂದು ಬ್ರಿಟಿ…ಷ್ ಸರಕಾರದವರು ಘೋಷಿಸುವುದು ಸಾಧ್ಯ…ವಿಲ್ಲವೆಂದು ನನ್ನನ್ನು ಯಾರಾದರೂ ಬೋಧಿಸು…ತ್ತಿದ್ದರೆ, ಅವರು ಹೇಳುವ ಮಾತುಗಳನ್ನು ಕೇ…ಳುವೆನು.'

'ನಿಮಗೆ ಅಹಿಂಸೆಯಲ್ಲಿ ವಿಶ್ವಾಸವಿದೆ. …ಆದರೆ ಚೀನೀಯರಿಗೆ ಅದರಲ್ಲಿ ವಿಶ್ವಾಸ…ವಿಲ್ಲ.'

'ಚೀನವು ಎಂದೂ ಅಹಿಂಸೆಯ ಅನುಭವ …ಪಡೆದಿಲ್ಲ. ಕೆಲವು ವ್ಯಕ್ತಿಗಳಿಗೆ, ಧಾರ್ಮಿಕ …ಪುರುಷರಿಗೆ, ಯೋಗಿಗಳಿಗೆ ಮೀಸಲಾಗಿದ್ದ ಅಹಿಂ…ಸೆಯು ರಾಜಕೀಯ ಕ್ಷೇತ್ರಕ್ಕೆ ವಿಸ್ತರಿಸಲ್ಪಟ್ಟದ್ದು …ಲಕ್ಷಾವಧಿ ಜನರಿಂದ ಅನುಸರಿಸಲ್ಪಡುವುದು ಇ…ದೇ ಮೊದಲು. ಕೆಲವು ಲಕ್ಷ ಮಂದಿ ಮಾತ್ರ …ನನ್ನಲ್ಲಿ ಅಹಿಂಸೆಯನ್ನು ಸ್ವೀಕರಿಸುವುದರ ಬದ…ಲು ೪೦ ಕೋಟಿ ಜನರೂ ಅಹಿಂಸಾಪರರಾಗಿ…ದ್ದರೆ, ಅವರೆಲ್ಲರನ್ನೂ ಕೊಲ್ಲದೆ ಜಪಾನರು ಇ…ಲ್ಲಿ ಪದಾರ್ಪಣ ಮಾಡಲು ಸಾಧ್ಯವೆ? ನಮ್ಮಲ್ಲಿ …ಅಹಿಂಸೆಯಿದ್ದರೆ ಪಂಗಡಗಳಿರುತ್ತಿರಲಿಲ್ಲ. ಜಪಾ…ನರು ಆಕ್ರಮಣ ಮಾಡುತ್ತಲೂ ಇರಲಿಲ್ಲ. ಆದ…ರೆ ಅಹಿಂಸೆ ಜನರಿಗೆ ಇಂದು ಹೆಚ್ಚಿನ ಶಕ್ತಿಯನ್ನಿ…ತ್ತಿದೆ. ೧೯೧೯ನೇ ಏಪ್ರಿಲ್ ೬ನೇ ತಾರೀಕಿನಿಂ…ದು ಜನರಲ್ಲಿ ಕಂಡುಬಂದ ಜಾಗೃತಿ ನನ್ನನ್ನೇ …ಬೆರಗುಗೊಳಿಸಿದೆ! ದೇಶದ ಮೂಲೆ ಮೂಲೆಗ…ಳಿಂದ ಜನತೆ ಬೆಂಬಲ ಕೊಟ್ಟಿತು. ನಾವು ಅನೇ…ಕ ಕಡೆ ಹೋಗಿಯೇ ಇರಲಿಲ್ಲ. ಅಲ್ಲಿಗೆ ಹೋ…ಗಿ ಅವರಿಗೆ ಹೇಳಬೇಕೆಂದೂ ನಮಗೆ ಗೊತ್ತಿರ…ಲಿಲ್ಲ.'

'ತಾತ್ಕಾಲಿಕ ಸರಕಾರವನ್ನು ಸ್ಥಾಪಿಸುವುದರಲ್ಲಿ ಕಾಂಗ್ರೆಸು, ಮುಸ್ಲಿಂಲೀಗು ಇವರಲ್ಲಿ ಯಾರು ಯಾರು ಮುಂದೆ ಬರುವರು?'

'ಮುಸ್ಲಿಂ ಲೀಗಿನವರು ನಿಜವಾಗಿ ಮುಂದೆ ಬರಬಹುದು. ಕಾಂಗ್ರೆಸಿನವರೂ ಮುಂದೆ ಬರಬಹುದು. ಎಲ್ಲವೂ ಸರಿಯಾಗಿ ನಡೆದರೆ ಎಲ್ಲರೂ ಕೂಡಿ ಪ್ರಯತ್ನಿಸುವರು; ಯಾವುದೇ ಒಂದು ಪಂಗಡದವರು ಮುಂದೆ ಬರಲಾರರು.'

'ಆಗ ಯಾವ ಘಟನೆ ಜಾರಿಗೆ ಬರುವುದು?'

'೧೯೩೫ರ ಸರಕಾರದ ಘಟನೆ ಸತ್ತು ಹೋಗಿದೆ. ಐ. ಸಿ. ಎಸ್. ಜನರು ಹೋಗಬೇಕಾದೀತು. ಭಾರತೀಯರ ಜ್ಞಾನಕ್ಕೆ ಒಪ್ಪುವಂಥಾ ಹೊಸ ರಾಜ್ಯಘಟನೆಯನ್ನು ಅವರು ನಿರ್ಮಿಸುವರು; ಕಾಯಮಾದ ಘಟನೆಗೆ ವೇಳೆ ಹೋಗಬಹುದು. ಆದರೆ ತಾತ್ಕಾಲಿಕ ಸರಕಾರವು ಕಾರ್ಯ ನಡೆಸಬಹುದು. ಆಗ ಬೇರೆಯವರು ಒತ್ತಾಯದಿಂದ ಹೇರಿಸಲ್ಪಟ್ಟ ಸರಕಾರವಿರದು.'

'ವೈಸರಾಯರು ವೈಸರಾಯರಾಗಿ ಉಳಿವರೆ?'

'ಆಗ ಸಹ ನಾವು ಮಿತ್ರರಾಗಿಯೇ ಉಳಿಯುವೆವು. ಸಾರ್ವಜನಿಕರಲ್ಲಿ ತಾವೂ ಒಬ್ಬರು ಎಂಬ ಸಮಾನತೆಯಿಂದ ನಡೆವ ಸುದಿನವನ್ನು ಲಾರ್ಡ್ ಲಿನ್‌ಲಿತ್‌ಗೋರವರು ಸ್ವಾಗತಿಸುವರೆಂಬುದರಲ್ಲಿ ನನಗೆ ಸಂದೇಹವಿಲ್ಲ.'

'ಬ್ರಿಟಿಷರು ಹೊರಟು ಹೋಗುವ ಪ್ರಸಂಗ ಬಾರದೆ ಇದೆಲ್ಲಾ ಇಂದೇ ಯಾಕೆ ಆಗಬಾರದು?'

'ಇದರ ಉತ್ತರ ಸುಲಭವಿದೆ. ಸ್ವತಂತ್ರ ಮನುಷ್ಯನು ಮಾಡಬಲ್ಲ ಕೆಲಸವನ್ನು ಕೈದಿಯು ಹೇಗೆ ಮಾಡಲಾರನು? ನೀನು ಸೆರೆಮನೆಗೆ ಹೋಗಿ ಬಂದಿರಲಿಕ್ಕಿಲ್ಲ. ನಾನು ಹೋಗಿ ಬಂದಿರುವುದರಿಂದ ಎಲ್ಲಾ ನನಗೆ ಗೊತ್ತಿದೆ. ಬಂಧನವೆಂಬ …ಕಲೆ ಸ್ವಾತಂತ್ರ್ಯದ ಮೊದಲನೆಯ ಕೊಲೆ. ೧೦… ದುಸ್ಥಾನವು ನಾಗರಿಕತೆಯನ್ನು ಸಂಪೂರ್ಣ ಕಳೆಕೊಂಡಿದೆ. ನಮ್ಮಲ್ಲಿ ಈ ಅನುಭವವು ಇಲ್ಲ. …ನೀವು ಸಾವಿರಾರು ವರ್ಷಗಳ ವರೆಗೆ ದಾಸ್ಯದಲ್ಲಿ ಕೊಳೆಯುತ್ತಿರುವ ರಾಷ್ಟ್ರವೊಂದರ ಪ್ರಜೆಯಾಗಿರುವುದಿಲ್ಲ. ನಾವು ಎಂದೂ ಸ್ವತಂತ್ರರಾಗಲಾರೆವೆಂಬುದು ನಮಗೆ ಖಂಡಿತವಾಗಿಬಿಟ್ಟಿದೆ. ಸುಭಾಸಬೋಸರ ಕತೆ ನಮಗೆ ಗೊತ್ತಿದೆ. ಅವರು ಬಹಳ ಸ್ವಾರ್ಥತ್ಯಾಗಿಗಳು. ಐ. ಸಿ. ಯಸ್‌ನಲ್ಲಿ ಅವರು ಘನತೆಗೆ ಏರಬಹುದಾಗಿತ್ತು. ಅಂಥವರು ಇಂತಹ ನಿಸ್ಸಹಾಯ ಸ್ಥಿತಿಯನ್ನು ಸಹಿಸಲಾರದೆ ಸ್ವಾತಂತ್ರ್ಯಕ್ಕಾಗಿ ಜರ್ಮನಿ ಜಪಾನುಗಳ ಸಹಾಯ ಪಡೆಯಬೇಕೆಂದು ದೇಶಾಂತರ ಹೋಗಬೇಕಾಗಿದೆ.

ANNOUNCEMENT

7000 Shares

5% Cumulative First Preference

LIST CLOSED.

The Corporation tenders its most grateful thanks to all its shareholders & customers for their kind patronage in making this issue.

"A SUCCESS"

The Canara Banking Corporation Ltd.

(Incorporated in British India with limited liability

Estd. 1906.

ಟೆಕ್ಸ್ಟ್‌ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ

ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ

ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡುಪಿ.

Iನೇ ಫೋರ್ಮಿಗೆ 0–12–0 IIನೇ ಫೋರ್ಮಿಗೆ 0–12–0

ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಭವಾನಿರಾವ್ ಬಿ. ಎ. ಎಲ್. ಟಿ.

IIIನೇ ಫೋರ್ಮಿಗೆ 0–12–0

(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ಬಾಲಕರ ಲಘುಗಣಿತ

ಬಿ. ಭವಾನಿರಾವ್, ಬಿ. ಎ. ಎಲ್. ಟಿ. ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0–7–0 ಐದನೇ ದರ್ಜೆಗೆ 0–8–0

(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ನವೀನ ಭೂವಿವರಣೆ

ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)

ನಾಲ್ಕನೇ ದರ್ಜೆಗೆ 0–6–0 ಐದನೇ ದರ್ಜೆಗೆ 0–7–0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ

ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಕಾರ್ಕಳ.

ಆರನೇ ದರ್ಜೆಗೆ 0–6–0 ಏಳನೇ ದರ್ಜೆಗೆ 0–6–0 ಎಂಟನೇ ದರ್ಜೆಗೆ 0–6–0

(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.)

ವ್ಯಾಕರಣ ಮತ್ತು ಪ್ರಬಂಧ

ಕೆ. ಕೆ. ರೈ, ವಿದ್ವಾನ್.

4 ಮತ್ತು 5ನೇ ದರ್ಜೆಗೆ 0–2–0 6ನೇ ದರ್ಜೆಗೆ ಅಥವಾ I ಫೋರ್ಮಿಗೆ 0–3–0

7ನೇ ದರ್ಜೆಗೆ ಅಥವಾ II ಫೋರ್ಮಿಗೆ 0-3-6 8ನೇ ದರ್ಜೆಗೆ ಅಥವಾ III ಫೋರ್ಮಿಗೆ 0-4-0

(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಮಕ್ಕಳ ಪದ್ಯಮಂಜರಿ

ಕೆ. ಕೆ. ರೈ, ವಿದ್ವಾನ್.

ಮೊದಲನೆ ಪುಸ್ತಕ ೧, ೨, ೪ನೇ ದರ್ಜೆಗಳಿಗೆ 0-2-0 2ನೇ ಪುಸ್ತಕ ೪, ೫ನೇ ದರ್ಜೆಗಳಿಗೆ 0-2-6

(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಸಿವಿಕ್ಸ್

ಎಂ. ಗಣಪತಿರಾವ್ ಐಗಳ್

3ನೇ ದರ್ಜೆಗೆ 0–1–6 4ನೇ ದರ್ಜೆಗೆ 0–2-0 5ನೇ ದರ್ಜೆಗೆ 0–2–6

ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ, ವಿದ್ವಾನ್.

6ನೇ ದರ್ಜೆಗೆ 0–3–0 7ನೇ ದರ್ಜೆಗೆ 0–3–0 8ನೇ ದರ್ಜೆಗೆ 0–3–0

(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ಚರಿತ್ರೆ ಮತ್ತು ಕಥೆಗಳು

ಮೂರನೇ ದರ್ಜೆಗೆ 0–2–6 ನಾಲ್ಕನೇ ದರ್ಜೆಗೆ 0–3–0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ

ಎಂ. ವಾಸುದೇವರಾವ್ ಎಂ. ಎ. ಎಲ್. ಟಿ. ಗಣಪತಿ ಹೈಸ್ಕೂಲ್, ಮಂಗಳೂರು.

ನಾಲ್ಕನೇ ದರ್ಜೆಗೆ 0–3–0 ಐದನೇ ದರ್ಜೆಗೆ 0–3–6

ಪ್ರಕೃತಿಶಾಸ್ತ್ರ

ಎಂ. ಗಣಪತಿರಾವ್ ಐಗಳ್

ಮೂರನೇ ದರ್ಜೆಗೆ 0–1–6

ಶಾರದಾ ಛಾಪಖಾನೆ ರಥಬೀದಿ ಮಂಗಳೂರು.

ವ್ಯಾಯಾಮವು ನಿಮಗೆ ಒಳ್ಳೆಯದು

ಪ್ರತಿದಿನವೂ ವ್ಯಾಯಾಮ ತೆಕ್ಕೊಳ್ಳಿರಿ. ಅದು ನಿಮಗೆ ಒಳ್ಳೇಯದೂ, ಆದರೆ ದೇಹದೊಳಭಾಗದ ನೈರ್ಮಲ್ಯವು ನಿಮಗೆ ಆರೋಗ್ಯವನ್ನೂ ಅಜೀರ್ಣ, ಮಲಬದ್ಧತೆಗಳ ಬಾಧೆಯಿಂದ ನಿವೃತ್ತಿಯನ್ನೂ ಉಂಟುಮಾಡುವುದು. ದೇಹದೊಳಗೆ ವಿಷವಸ್ತು ತುಂಬದಂತೆ ಮಾಡುವುದು. ಆಂಡ್ರೂಸ್ ಲಿವರ್ ಸಾಲ್ಟ್ ಸಂಪೂರ್ಣವಾಗಿ ಮಲಕೋಶವನ್ನು ಶುಚಿಗೊಳಿಸುವುದು. ಶರೀರಕ್ಕೆ ತಂಪನ್ನೂ ರಕ್ತ ಶುದ್ಧಿಯನ್ನೂ ಉಂಟುಮಾಡುವುದು. ಇದೀ ಶರೀರಕ್ಕೆ ಚೈತನ್ಯವನ್ನುಂಟುಮಾಡುವುದು.

ದೇಹದೊಳಭಾಗದ

ನೈರ್ಮಲ್ಯಕ್ಕೆ ಸದಾ ತೆಕ್ಕೊಳ್ಳಿರಿ.

ANDREWS LIVER SALT

ಆರೋಗ್ಯಕರ ಪಾನೀಯ—ಶಕ್ತಿವರ್ಧಕ ಔಷಧ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

31—7—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೩೧—೭—೧೯೪೨]

ಸಮರಭೂಮಿಯ ಸಂಚಾರ

"ಎಂಥಾ ಗಂಡಾಂತರ ಒಂದರೂ ಎದೆಗೆಡಬೇಡಿರಿ, ರಣರಂಗದಿಂದ ಶತ್ರುವನ್ನು ಹಿಮ್ಮೆಟ್ಟಿಸುವ ಪಂಥ ಪೌರುಷದಿಂದ ಹೋರಾಡಿರಿ, ನಮ್ಮ ರಾಷ್ಟ್ರಕ್ಕೆ ಒದಗಿದ ಈ ಆಕ್ರಮಣ ಕಾರ್ಯದಲ್ಲಿ ಶತ್ರುವು ತನ್ನ ಸರ್ವ ಸೊತ್ತನ್ನೂ ಒಲಿಕೊಟ್ಟಿರುವನು ಆದರಿಂದಲೇ ನಮ್ಮ ರಾಷ್ಟ್ರದಲ್ಲಿ ಬಲು ದೂರ ಮುಂದುವರಿದು ಬಂದಿರುವನು, ಶತ್ರುವಿಗೆ ಜಗ್ಗದೆ ಕುಗ್ಗದೆ ಅವನನ್ನು ನಾವು ತಡೆಯಲೇ ಬೇಕು ಶತ್ರುವನ್ನು ಹೊಡೆದೋಡಿಸಬೇಕು, ನಾಶಮಾಡಲೇಬೇಕು, ನಮ್ಮ ದೇಶಾಭಿಮಾನವನ್ನು ಮೆರೆಸಲು ನಮಗಿದೊಂದೇ ಸುವರ್ಣ ಸಂಧಿ" ಹೀಗೆಂದು ಮೋಸ್ಕೋ ರೇಡಿಯೋ ರಶ್ಯನ್ ವೀರರಿಗೆ ಘಂಟಾಘೋಷವಾಗಿ ಸಾರಿ ಹೇಳುತ್ತದೆ ಈ ತರದ ವೀರ ವೇಶದ ಹೇಳಿಕೆ ಕೊಡಬೇಕಾಗಿದ್ದರೆ ರಶ್ಯಕ್ಕೆ ಎಂತಹ ವಿಪತ್ತು ಬಂದಿದೆಯೆಂಬುದನ್ನು ನಾವು ತಿಳಿಕೊಳ್ಳಬಹುದು ನಮ್ಮ ಕಲ್ಪನೆಗೆ ಮೀರಿದಂತಹ ಅನಾಹುತ ಪ್ರಸಂಗವಿಂದು ಅವರಿಗೆ ಬಂದೊದಗಿದೆ ವೊರೊನೆಜ್ ಭಾಗದಲ್ಲಿ ರಶ್ಯನರೇನೋ ವಿಜಯಿಗಳಾಗಿದ್ದಾರೆಂಬುದು ಸಂತೋಷದ ಸಂಗತಿಯೇ, ಆದರೆ ರೊಸ್ಟೊವ್, ನೊವೊಚರ್ಕಾಸ್ಕ್, ಸಿಮ್ಲ್ಯಾನ್ಸ್ಕಯ ಈ ರಣಭೂಮಿಗಳಲ್ಲಿಯೇ ಜರ್ಮನರ ಕೈಮೇಲಾಗುತ್ತಿದೆ ರಶ್ಯದ ಜೀವನಾಳದಂತಿರುವ ರೊಸ್ಟೊವನ್ನು ಜರ್ಮನರು ಪ್ರವೇಶಿಸಿರುವರೆಂಬ ಸುದ್ದಿ ಎಲ್ಲದಕ್ಕಿಂತಲೂ ವಿಷಮವಿರುವುದು'

ರೊಸ್ಟವ್ ಪ್ರವೇಶ!

—ಜರ್ಮನ್ ಸೇನೆ ಡಾನ್ ನದಿಯ ದಡದಲ್ಲಿರುವ ರೊಸ್ಟೊವ ಪಟ್ಟಣವನ್ನು ಬೇದಿಸಿ ಒಳನುಗ್ಗಿರುವುದೆಂಬ ಭೀಷಣ ವಾರ್ತೆ ಬಂದಿದೆ ಜರ್ಮನರು ರೋಸ್ಟೊವಿನ ಮಧ್ಯಭಾಗವನ್ನೇ ತಾವು ಮುಟ್ಟಿರುವುದಾಗಿ ಹೇಳುತ್ತಾರೆ ರಶ್ಯಕ್ಕೆ ಇದರಿಂದ ವಿಪತ್ತು ಹೆಚ್ಚಾದ ಹಾಗಾಯಿತು ರೋಸ್ಟೊವ್ ಶತ್ರುವಶವಾದರೆ ಕಾಕಸಸಿನ ಬೀಗದ ಕೈ ಅವರ ಕೈಗೆ ಬಂದಂತಾಯಿತೆಂದೇ ಹೇಳಬಹುದಾಗಿದೆ ಈ ಸಮಯದಲ್ಲಿಯೇ ಇನ್ನೊಂದು ಸೈನ್ಯವು ಡಾನ್ ನದೀ ಮೂಲಕ ಅದರ ಬದಿಯಲ್ಲಿ ಹಾಯುವ ರೈಲ್ವೇ ದಾರಿಯಾಗಿ ಸ್ಟಾಲಿನ್‌ಗ್ರಾಡಿನ ಕಡೆ ನುಗ್ಗಿ, ಅಲ್ಲಿನ ರಶ್ಯನ್ ಸೈನ್ಯಗಳನ್ನು ಸೋಲಿಸಿ ಉತ್ತರಕ್ಕೆ ನಡೆದು ವೋಲ್ಗಾ ನದೀ ಮಾರ್ಗದಲ್ಲಿ ಸರಟೋವ್ ಪಟ್ಟಣದ ವರೆಗೂ ಹೋದರೆ, ಮತ್ತೊಂದು ಸೈನ್ಯವು ಸ್ಟಾಲಿನ್ ಗ್ರಾಡಿನಿಂದ ಆಗ್ನೇಯಕ್ಕೆ ಹೊರಟು ಆಸ್ಟ್ರಾಖಾನದ ವರೆಗೆ ನಡೆದರೆ, ಚತುರ್ದಿಕ್ಕುಗಳಿಂದಲೂ ಕಾಕಸಸನ್ನು ನುಗ್ಗಲು ಸುಲಭವಾದಂತಾಯಿತು ಈಗಾಗಲೇ ಕಾಕಸಸ್ ಅಪಾಯ ಸ್ಥಿತಿಯಲ್ಲಿದೆ, ಮುಖ್ಯ ಮುಖ್ಯ ಮಾರ್ಗಗಳು ಕತ್ತರಿಸಲ್ಪಟ್ಟು ಇಂದು ಅದು ಹೆಚ್ಚಿನ ಮಟ್ಟಿಗೆ ಶೇಷ್ಯದಿಂದ ಪ್ರತ್ಯೇಕಿಸಲ್ಪಟ್ಟೇ ಇದೆ ಲೋಹ ಸಂಪತ್ಸಮೃದ್ಧಿಯುಳ್ಳ ಡೊನೆಟ್ಸ್ ಡಾನ್ ನದೀ ಪ್ರದೇಶಗಳನ್ನು ರಶ್ಯನರಿಂದು ಕಳಕೊಂಡಿರುವರು. ಕಾಕಸಸ್ ಎಣ್ಣೆಯೂ ಅವರ ದುರ್ಭಾಗ್ಯದಿಂದ ಬತ್ತಿ ಹೋದರೆ, ಶತ್ರುವಿನ ಕೈ ವಶವಾಗಿ ಬಿಟ್ಟರೆ, ಮತ್ತೆ ಉಳಿಗಾಲವಾದರೂ ಹೇಗೆಂದು ತಿಳಿಯುವುದಿಲ್ಲ ಇಂದಿನ ಯುದ್ಧದಲ್ಲಿ ಎಣ್ಣೆಯ ಮಹತ್ವ ಎಷ್ಟರ ಮಟ್ಟಿಗಿದೆಯೆಂಬುದನ್ನು ಯಾರು ತಾನೇ ಅರಿತಿಲ್ಲ?

ಕೊನೆಗೊಮ್ಮೆ ಎದುರು ನಿಂತರು'

ತೋಬ್ರುಕಿನಿಂದ ಎಲ್ಲಿಯೂ ನಿಲ್ಲದೆ ಮನ್ನೂರು ಮೈಲುಗಳ ತನಕ ಹಿಂಜರಿಯುತ್ತಾ ಬಂದ ಬ್ರಿಟಿಷ್ ಸೈನ್ಯವು ಕೊನೆಗೊಮ್ಮೆ ಎಲ ಅಲಮೇನದ ಹತ್ತಿರ ಜರ್ಮನ್ ಸೇನೆಗೆ ಎದುರು ನಿಂತಿದೆಯೆಂಬ ಸುದ್ದಿಯನ್ನು ಕೇಳಿ ನಮಗೆ ಆನಂದವಾಗಿದೆ ಅಂತೂ ಆಚಿನ್‌ಲೆಕ್ಕರು ಕೊಂಚ ಸಾಹಸ ಕೈಕೊಂಡು ಜರ್ಮನ್ ಸೇನೆಗಳ ಮೇಲೆ ಪುನರಾಕ್ರಮಣ ಮಾಡಿದರು ಇದು ಅಷ್ಟೊಂದು ಪ್ರಚಂಡವಾಗಿ ಸಾಗುತ್ತಿಲ್ಲವಾದರೂ ಬ್ರಿಟಿಷರು ವಿಜಯಿಗಳಾಗಿರುವರೆಂದು ಸುದ್ದಿಯಿದೆ ಜರ್ಮನರೂ ಪ್ರತಿಭಟನೆಯನ್ನು ತೀವ್ರಗೊಳಿಸುತ್ತಿರುವರು ಎಲಅಲಮೇನ ವರೆಗೆ ರೋಮೆಲನು ಬರುವ ವೇಗವನ್ನು ಹಿಂದಟ್ಟುತ್ತ ಬಂದಿದ್ದು ಅಲ್ಲಿ ತನ್ನ ಸೈನ್ಯವನ್ನು ಪುನರ್ಘಟಿಸುವ ಸಲುವಾಗಿ ಸ್ವಲ್ಪ ಸಮಯಗಳ ತನಕ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿದ್ದನೆಂದೂ, ಇಷ್ಟರಲ್ಲಿಯೇ ಆತನಿಗೆ ಹೊಸ ಸಾಧನ ಸಾಮಗ್ರಿಗಳು ಬಂದಿದ್ದುವೆಂದೂ ಸುದ್ದಿ ಬಂದಿರುವ ಸಮಯದಲ್ಲಿಯೇ ಆಚಿನ್‌ಲೆಕ್ಕರು ಪುನರಾಕ್ರಮಣವನ್ನು ಕೈಕೊಂಡದ್ದನ್ನು ನೋಡಿದರೆ ಇದು ಬಹಳ ಕುಶಲಿಕಾರ್ಯವೆನ್ನಲೇ ಬೇಕು ಬ್ರಿಟಿಷ್ ಬಲದಲ್ಲಿರುವ ಆಸ್ಟ್ರೇಲಿಯಾನರು ಬಹುತೇಕರು ನ್ಯೂಜಿಲೆಂಡಿನವರು ಬಹಳ ಸಾಹಸಮಯವಾದ ಹೋರಾಟವನ್ನು ನಡೆಸುತ್ತಿದ್ದಾರೆ ಆದರೆ ಇದನ್ನು ಜರ್ಮನರು ಬಲವಂತವಾಗಿ ತಡೆದಿದ್ದಾರೆ ಬ್ರಿಟಿಷರು ಬಹಳವೇನೂ ಮುಂದುವರಿದಿಲ್ಲ ಒಟ್ಟಿನಿಂದ ಹೇಳುವುದಿದ್ದರೆ ಇಜಿಪ್ತಿನಲ್ಲಿ ರಶ್ಯದಂತಹ ಘೋರ ಯುದ್ಧ ಇನ್ನೂ ಪ್ರಾರಂಭವಾಗಲಿಲ್ಲ

ಚಕ್ರವ್ಯೂಹದ ಗತಿ'

ಅತ್ತ ರಶ್ಯದಲ್ಲಿ ಇತ್ತ ಈಜಿಪ್ತಿನಲ್ಲಿ ಹೀಗೆ ಎರಡು ರಣಭೂಮಿಗಳಲ್ಲಿ ಜರ್ಮನರು ಹೋರಾಡುತ್ತಿರುವ ಸಾಹಸಮಯ ರಣರಂಗಗಳ ಅರ್ಥವೇನು? ರಶ್ಯ ಯುದ್ಧಕ್ಕೂ ಇಜಿಪ್ತ್ ಯುದ್ಧಕ್ಕೂ ಸಂಬಂಧವೇನು? ಈ ಸಾವಿರ ದು ಮೈಲುಗಳಂತರದ ರಣರಂಗಗಳಲ್ಲಿ ಪರಸ್ಪರ ಸಾಮ್ಯವಿದೆಯೆಂದು ತಿಳಕೊಳ್ಳಲು ಹೆಚ್ಚೇನೂ ಕಷ್ಟವಿಲ್ಲ ಇದು ಹಿಟ್ಲರನ ಚಕ್ರವ್ಯೂಹ ಯುದ್ಧ' ಅತ್ತ ರಶ್ಯದ ಮಾರ್ಗವಾಗಿ ಮುನ್ನಡೆದು ಕಾಕಸಸಿನ ಎಣ್ಣೆಯನ್ನು ಹೀರುವುದು ಇತ್ತ ಈಜಿಪ್ತಿನ ದಾರಿಯಾಗಿ ನುಗ್ಗಿ ಇಂಗ್ಲೀಷ ತೈಲಾಕೂಪಗಳನ್ನು ಒತ್ತಿಸುವುದು ಆತನ ಮೊದಲನೆಯ ಸಾಧನೆ ಇವೆರಡು ಸಾಧಿಸಿದರೆ ಮುಂದೆ ಯುರೋಪ್ ಖಂಡಗಳಲ್ಲಿ ಸ್ವತಂತ್ರ್ಯಾಭಿಮಾನಿಗಳನ್ನು ಶಿಲೆಯಲ್ಲಿಯೂ, ನಿವಾಸಗಳನ್ನು ಆ ಕಡೆಯಲ್ಲಿಯೂ ಭೋರ್ಗರೆಸುತ್ತಾ ಅಟ್ಟಬಹುದು. ಒಟ್ಟಿನಲ್ಲಿ ಸೋತಿದ್ದ ಹಲವು ರಾಷ್ಟ್ರಗಳಿಂದ ಬೇಕಾದಷ್ಟು ಕೊಳ್ಳೆಯನ್ನು ಪಡೆದಿದ್ದಾನೆ ಸಾಧಾರಣ ಇಡೀ ಯುರೋಪನ್ನೇ ಆವನ ಮುಷ್ಟಿಯಲ್ಲಿದೆ ಆದರೆ ಎಲ್ಲಿಯೂ ಆತನಿಗೆ ಬೇಕಾದಷ್ಟು ಎಣ್ಣೆ ಸಿಗಲಿಲ್ಲ ರುಮೇನಿಯದ ಸಣ್ಣ ಎಣ್ಣೆ ಇಂದಿನ ಆತನ ಈ ಭೀಮ ಯುದ್ಧಕ್ಕೆ ಎಷ್ಟು ಸಾಕಾಗದು ಹೀಗೆ ಎಣ್ಣೆಯ ದಾಹದಿಂದ ಮುಂದುವರಿದು ಹೋಗಿ ಒಂದು ವೇಳೆ ಜಪಾನರ ಕೈ ಸೇರಿದರೆ ಎಲ್ಲಿಯೂ ವಿಶ್ವಾಸದ ಒಂದು ಎಡೆಯಲ್ಲಿ ಸಾಧ್ಯ ಪಡೆ ಒಂದು ಸ್ಥಳದಲ್ಲಿಯೇ ಟೋಜೋನೊಡನೆ ಕೈಕುಲುಕಿಸುವ ಗುರಿಗೋಪುರ ಕಟ್ಟಿಸಿದ್ದರೂ ಇರಬಹುದು!

ಸೈಬೇರಿಯದ ಮೇಲೆ?

ಜರ್ಮನರು ಸ್ಟಾಲಿನ್‌ಗ್ರಾಡ್ ರೊಸ್ಟೊವ್‌ಗಳನ್ನು ಗೆದ್ದು ಕಾಕಸಸ್ ಕಡೆಗೆ ಪ್ರಾರಂಭವಿದ ಕೂಡಲೇ ಜಪಾನು ಸೈಬೇರಿಯದ ಮೇಲೆ ಬೀಳುವುದೆಂದು ಈಗ ಹಲವು ಕಡೆಗಳಲ್ಲಿ ಹೇಳಲಾಗುತ್ತದೆ ಜಪಾನನ್ನು ರಶ್ಯದ ಮೇಲೆ ಬೀಳುವಂತೆ ಅನೇಕ ಕಾಲದಿಂದ ಹಿಟ್ಲರನು ಪ್ರೇರಿಸುತ್ತಲಿದ್ದನು, ರಶ್ಯಕ್ಕೆ ಅಮೇರಿಕದಿಂದ ಬರುವ ಸಹಾಯವನ್ನು ನಿಲ್ಲಿಸಲು ಜಪಾನು ಆಲ್ಯೂಶಿಯನ್ ದ್ವೀಪಗಳ ಒಂದೆರಡನ್ನು ಹಿಡಿದದ್ದು ಎಲ್ಲರಿಗೂ ತಿಳಿದಿರುವ ಸಂಗತಿ ಸೈಬೇರಿಯದ ಮೇಲೆ ಧಾಳಿ ಮಾಡಿದರೆ ರಶ್ಯನರು ಮತ್ತು ಮಿತ್ರರು ಇಕ್ಕಡೆಗಳಲ್ಲಿ ಕಾದಬೇಕಾಗಿ ಬರುತ್ತದೆ ಜರ್ಮನಿಯೂ ಕಾಕಸಸಿಗೆ ಕಾಲಿಟ್ಟಾಗ ಜಪಾನಿಗೆ ಸೈಬೇರಿಯವನ್ನು ಮುತ್ತಲು ಅನುಕೂಲ ಸಂಧಿಯೊದಗುತ್ತದೆ ಜಪಾನು ಹೀಗೆ ಅದಿಂದ ವ್ಲಾಡಿವೋಸ್ಟೋಕಿನ ನೌಕಾಕೇಂದ್ರದ ಮೇಲೆ ಕಣ್ಣಿಟ್ಟು ಆಕ್ರಮಿಸುವುದು ಸಿಂಗಾಪುರವನ್ನು ಜಪಾನು ವಶಪಡಿಸಿಕೊಂಡಂತೆ ಆತನ್ನೂ ಸ್ವಾಧೀನಪಡಿಸಿ ರಶ್ಯನ್ ಸೈನ್ಯವನ್ನು ಬಂಧಿಸಿಕ್ಕಬಲ್ಲವ ಪಡೆ ಆದರಿಂದ ತನಗೆ ಅನೇಕ ಕಾಲದಿಂದ ಇದ್ದ ಭಯಕಾರಣವೊಂದನ್ನು ನೀಗಲು ಬಿಸಿಕೊಂಡಂತಾಗುವುದಲ್ಲದೆ ಜರ್ಮನಿಗೂ ಸಕಾಲೀನ ಸಹಾಯ ಸಿಕ್ಕಿದಂತಾಗುತ್ತದೆ. ಹೀಗೆ ಕಳೆದ ಎರಡು ತಿಂಗಳಿಂದ ತಟಸ್ಥಗಿದ್ದ ಟೋಜೋ ಯೋಜಿಸಿದ್ದಾನೆಂದು ರಾಜಕಾರಣಿಗಳು ಊಹಿಸುತ್ತಾರೆ ಕೊನೆಗಾಣದ ಚೀನಾ ಯುದ್ಧವನ್ನು ಮುಂದುವರಿಸುತ್ತ ಇರುವಾಗಲೆ ಬ್ರಿಟಿಷರ ಬಲವಾದ ರಕ್ಷಣೆಗಳ ಒಳ ಗಡಿಯ ಭಾರತ ಸಿಲೋನ್ ಆಸ್ಟ್ರೇಲಿಯಗಳ ಮೇಲೆ ಬೀಳುವುದಾಗಲಿ ಜಪಾನಿಗೆ ಸೈಬೇರಿಯಕ್ಕೆ ಧಾಳಿಯಿಡುವಷ್ಟು ಸುಲಭ ಸಂಗತಿಯಾಗಿಲ್ಲ

ಇಬ್ಬದಿಗಳಲ್ಲಿ ದ್ವಿತೀಯ ರಣರಂಗ

ಹೀಗೆ ಅತ್ತ ಜರ್ಮನಿಯ ಇತ್ತ ಜಪಾನಿನ ಯೋಜನೆಗಳನ್ನು ಪರ್ಯಾಲೋಚಿಸಿದರೆ ಇಂದು ಯುರೋಪಿನಲ್ಲಿ ಹಿಟ್ಲರನನ್ನು ತಡೆಯಲು ಏಷ್ಯದಲ್ಲಿ ಟೋಜೋನನ್ನು ತಡೆಯಲು ಹೀಗೆ ಇಬ್ಬದಿಗಳಲ್ಲಿ ಮಿತ್ರರು ದ್ವಿತೀಯ ರಣರಂಗಗಳನ್ನು ತೆರೆಯುವುದು ಅತ್ಯವಶ್ಯಕವೆಂದು ಕಂಡುಬರುತ್ತದೆ ರಶ್ಯ ಚೀನಾಗಳ ರಾಯಭಾರ ಮೊಲೊಟೊವ್ ಭಾವಿ ಚರ್ಚಿಲ್ ರೂಸ್‌ವೆಲ್ಟ್ ಮಾತುಕತೆ ವಾಶಿಂಗ್‌ಟನ್ ಸುದ್ದಿಗಳನ್ನು ವಿಚಾರಿಸಿದರೆ ಇಂದೋ ನಾಳೆಯೋ ದ್ವಿತೀಯ ರಣರಂಗವೊಂದು ತೆರೆಯಲ್ಪಟ್ಟು ಹಿಟ್ಲರನಿಗೆ ಹೊಡೆಯಬಹುದೆಂದು ಆಗ್ರಹದಿಂದ ಎಲ್ಲರೂ ಕಾಯ ತೊಡಗಿದ್ದು ಆದರೆ ಇದುವರೆಗೆ ಆತನ ಆದಾವ ಸೂಚನೆಯೂ ಕಂಡುಬರದಿರುವುದು ನಿಜವಾಗಿಯೂ ಪ್ರಮಾದಕರವೇ ಅಲ್ಲ ಆಶ್ಚರ್ಯಕರ ಬಹುಶಃ ದ್ವಿತೀಯ ರಣರಂಗವನ್ನು ತೆರೆಯಲು ಮಿತ್ರರು ಈಗ ಸಿದ್ಧರಿಲ್ಲವೆಂದೇ ಹಲವರು ಊಹಿಸುತ್ತಾರೆ ಸಿದ್ಧರಿಲ್ಲವಾದರೂ ಚಿಂತೆಯಿಲ್ಲ ಇಂದು ರಶ್ಯದ ಸೈನ್ಯವನ್ನು ಹಿಡಿದುಕೊಂಡು ಹಿಟ್ಲರನಿಗೆ ಹೊಡೆಯುವುದು ಸ್ವಾಭಾವಿಕವಿದ್ದರೂ ಸಾವಿರ ದಳದೊಡನೆ ಹೊಡೆದಂತೆ ಕೆಂಪು ಸೈನ್ಯವು ಜರ್ಮನರನ್ನು ಅಂಕೆಗೊಳಿಸಬೇಕೆಂದು ಜೀವದ ಹಂಗು ತೊರೆದು ಹೋರಾಡುವಾಗ ಅವರಿಗೆ ದ್ವಿತೀಯ ರಣರಂಗವು ಮಹೋಪಕಾರವಾಗುವುದಲ್ಲದೆ ಶತ್ರುವಿನ ತಲೆಗೆ ಹೊಡೆದಂತಾಗದಿರದು ಮುಂದೆ ರಶ್ಯವನ್ನೂ ನುಂಗಿಬಿಟ್ಟರೆ ಮತ್ತೆ ಬ್ರಿಟನಿಗೆ ಜೀಳಲು ಒಂದಾಗ ಎದುರಿಸಬೇಕಾಗುವುದು ಅಷ್ಟೊಂದು ಸುಲಭವೆ? ಅಂತೆಯೇ ಈ ಕಡೆಯಿಂದ ಹಿಟ್ಲರನಿಗೆ ಸಹಾಯ ಮಾಡಲೆಂದು ಜಪಾನೂ ರಶ್ಯದ ಮೇಲೆ ಬೀಳದಂತೆ ಮಾಡಬೇಕಾಗಿದೆ ಅದಕ್ಕಾಗಿ ಮಿತ್ರರು ಬರ್ಮದಲ್ಲಿ ಇನ್ನೊಂದು ದ್ವಿತೀಯ ರಣರಂಗವನ್ನು ಏಶ್ಯದಲ್ಲಿಯೂ ತೆರೆಯಬೇಕು ಅದರಿಂದ ರಶ್ಯವನ್ನು ಜಪಾನಿನ ಹೊಡೆತದಿಂದ ನಿವಾರಿಸಿದಂತಾಗುವುದಲ್ಲದೆ ಚೀನಕ್ಕೂ ಸಹಾಯ ಮಾಡಿದಂತಾಗುವುದು, ಹಿಂದುಸ್ತಾನದ ಆಕ್ರಮಣವನ್ನು ತಡೆಗಟ್ಟಿದಂತಾಗುವುದು ಇಂತಹ, ವಿಷಮವಾದರೂ, ಧೀರವಾದ ನಿರ್ಧಾರವನ್ನು ಮಿತ್ರರು ಬೇಗನೇ ಕೈಕೊಳ್ಳದಿದ್ದರೆ ಅಕ್ಷರಾಷ್ಟ್ರಗಳನ್ನು ಗೆಲ್ಲುವುದು ಮುಂದೆ ಕೇವಲ ಬಯಲಾಸೆಯಾಗುವುದೆಂದು ಹಲವರು ತರ್ಕಿಸುತ್ತಿದ್ದಾರೆ' ಮಿತ್ರರಿಗೆ ಯಾಕೆ ಈ ಹುರುಪು ಹುಟ್ಟುವುದಿಲ್ಲವೋ, ಇಂತಹ ಪರಿಸ್ಥಿತಿ ಅರ್ಥವಾಗುವುದಿಲ್ಲವೋ ನಮಗೆ ತಿಳಿಯಲೊಲ್ಲದು.

ಮಾರಾಟಕ್ಕೆ ಸಿದ್ಧವಾಗಿದೆ!
ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ
೨ನೆಯ ದರ್ಜೆಯ ಕಥೆಗಳು 0-1-6
ಪ್ರಕಟವಾಗಲಿದೆ
೩ನೆಯ ದರ್ಜೆಯ ಭೂವಿವರಣೆ 0-2-0
ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಸ್ವದೇಶಾಭಿಮಾನಿ

ತಾರೀಕು 31—7—1942

ಕ್ರಿಪ್ಸರ ಪ್ರಲಾಪ

'ನಿಮ್ಮ ದೇಶ ಮತ್ತು ನಮ್ಮ ದೇಶ, ಈ ಸಂದರ್ಭದಲ್ಲಿ ಹಿಂದೂದೇಶದ ಸಂಭವಗಳ ಕುರಿತು ವಿಶೇಷ ಆಸಕ್ತಿ ತೋರಿಸುತ್ತವೆ, ನಿಮ್ಮ ಮಕ್ಕಳು ಮತ್ತು ನಮ್ಮ ಮಕ್ಕಳು ಜಪಾನಿನ ಆಕ್ರಮಣಕ್ಕೆದುರಾಗಿ ಹೋರಾಡಿ ಹಿಂದೂದೇಶವನ್ನು ರಕ್ಷಿಸಲು ಆಸಕ್ತರಾಗಿದ್ದಾರೆ. ನಿಮ್ಮ ಧೋರಣೆ ಮತ್ತು ನಮ್ಮ ಧೋರಣೆ ಈಗ ಹಿಂದೂದೇಶವನ್ನೇ ರಕ್ಷಿಸುವುದಾಗಿದೆ, ಆದರೆ ಗಾಂಧಿ ಮತ್ತು ಅವರ ಕಾಂಗ್ರೆಸ್ ಪಕ್ಷದವರ ಆಲೋಚನೆ ಬೇರೆ ರೀತಿಯಾಗಿರುವುದು' ಹೀಗೆಂದು ಅಮೆರಿಕನರಿಗೆ ಕ್ರಿಪ್ಸರು ಬೋಧನೆ ಕೊಡುತ್ತಾ ಕೊನೆಗೆ, ಗಾಂಧಿಜಿಯವರ ಮುಂದಾಳುತನದಲ್ಲಿ ಕಾಂಗ್ರೆಸು ಆರಂಭಿಸುವುದಾಗಿ ತಿಳಿಸಿದ ಆಂದೋಲನವನ್ನು ಹತ್ತಿಕ್ಕಲು ತಾವು ತೊಡಗಲಿರುವ ದಬ್ಬಾಳಿಕೆಗೆ ಅವರ ಬೆಂಬಲವನ್ನು ಬೇಡಿದ್ದಾರೆ! ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯದ ವಿಚಾರವಾಗಿ, ಎಲ್ಲಿಯಾದರೂ ಅಮೆರಿಕದ ಜನತೆಯ ನ್ಯಾಯಬುದ್ಧಿಯು ಅನ್ನುಕೂಲವಾಗಿ ಬಿಡುವುದೋ ಎಂಬ ಭೀತಿಯಿಂದ ಸರ್ ಕ್ರಿಪ್ಸರು ಹೀಗೆ ಮೊದಲಾಗಿ ಅಮೆರಿಕನರಿಗೇ ಬಿನ್ನವಿಸಿಕೊಳ್ಳಲು ತೊಡಗಿದ್ದಾರೆ

ಸರ್ ಕ್ರಿಪ್ಸರು ಹೇಳಿದ ಅಭಿಪ್ರಾಯಗಳನ್ನು ನಾವು ಅವರ ಮಾತಿನಿಂದಲೇ ಹೀಗೆ ಸಂಗ್ರಹಿಸಿ ಹೇಳಬಹುದು ಒಂದನೆಯದು, ಜಪಾನಿಗೆದುರಾಗಿ ಯುದ್ಧ ಮಾಡಲು ಹಿಂದೂದೇಶವನ್ನು ಭದ್ರಸ್ಥಾನವಾಗಿ ಇಟ್ಟುಕೊಳ್ಳುವುದು ಅಮೆರಿಕ ಹಾಗೂ ಚೈನದ ಮಿತ್ರರ ಸಲುವಾಗಿ ಬ್ರಿಟಿಷ್ ಸರಕಾರಕ್ಕಿರುವ ಹೊಣೆಗಾರಿಕೆಯಾಗಿರುವುದಂತೆ! ಎರಡನೆಯದೆಂದರೆ ಹಿಂದೂದೇಶದಲ್ಲಿ ಅಮೆರಿಕದ ಜನ ವಿಮಾನ ಬಲಗಳ ಭದ್ರತೆಯಂತೆ! ಮೂರನೆಯದು ಅಮೆರಿಕವು ಈಗಾಗಲೇ ಈ ವಿಷಯಗಳಲ್ಲಿ ಅಂಟಿಕೊಂಡಿರುವುದರಿಂದ ಗಾಂಧಿಜಿ ಆಂದೋಲನವನ್ನು ಆರಂಭಿಸಿದರೆ, ಅದು ಅಂತಹ ವಿಷಯವನ್ನು ಗಮನಿಸದಿರಲಾಗುವುದಿಲ್ಲವಂತೆ! ಅಂತೂ ಹೀಗೆ ಹೇಳುವುದರಿಂದ, ಹಿಂದೂದೇಶದ ಮುಖಂಡರು ಇಲ್ಲಿನ ಸ್ವಾತಂತ್ರ್ಯಕ್ಕಾಗಿ ಯಾವುದೇ ಆಂದೋಲನವನ್ನು ಆರಂಭಿಸಿದರೂ ಅದನ್ನು ಎದುರಿಸಲು ಬ್ರಿಟಿಷ್ ಸರಕಾರದೊಡನೆ ಅಮೆರಿಕವೂ ಬರಬೇಕೆಂಬುದು ಕ್ರಿಪ್ಸರ ಪ್ರಲಾಪವಾಗಿದೆ!

'ನಾವು ಯುದ್ಧಾನಂತರ ಸಂಪೂರ್ಣ ಸ್ವಾತಂತ್ರ್ಯ ಕೊಡುತ್ತೇವೆಂದು ಹೇಳಿದೆವು, 'ತನ್ಮಧ್ಯೇ ನಾವು ಹಿಂದೂದೇಶದ ಚುನಾಯಿತ ಪ್ರತಿನಿಧಿಗಳಿಗೆ ವೈಸರಾಯರ ವಿಸ್ತರಿತ ಕೌನ್ಸಿಲಿನಲ್ಲಿ ಸ್ಥಾನಗಳನ್ನು ಕೊಟ್ಟೆವು; ಆ ಸ್ಥಾನಗಳೆಂದರೆ ನಿಮ್ಮ ಪ್ರೆಸಿಡೆಂಟರಿಗೆ ಸೂಚನೆ ಕೊಡುವ ಮಂತ್ರಿಗಳಿಗಿರುವಂತಹ ಸ್ಥಾನ' ಹೀಗೆನ್ನುತ್ತಾ ಕ್ರಿಪ್ಸರು ಅಮೆರಿಕನರನ್ನು ಒಲಿಸಲು ಯತ್ನಿಸಿದ್ದಾರೆ. ತನ್ನ ಸಂಧಾನದ ವಿಷಯ ಮಾತನಾಡುತ್ತಾ ಅವರು ಹಿಂದೂದೇಶದ ಪಕ್ಷಗಳು ತನ್ನ ಸೂಚನೆಗಳನ್ನೂ ಒಪ್ಪಲಿಲ್ಲ, ಅಥವಾ ಅವರಾಗಿ ತನಗೆ ಬೇರೊಂದು ಸೂಚನೆಯನ್ನು ಕೊಡಲೂ ಇಲ್ಲವೆಂದರು. ತನ್ನ ಸಂಧಾನ ಭಂಗಕ್ಕೆ, ಭಾರತದ ಮುಖಂಡರು ತನಗೆ ಬೇರೊಂದು ಸೂಚನೆಯನ್ನ ಕೊಡದೆ ಇರುವುದೂ ಒಂದು ಕಾರಣವೆಂದು ಹೇಳಿದ ಮಾತು ವಿಚಿತ್ರವೆನಬೇಕು. ಯಥಾರ್ಥವಾಗಿ ನೋಡಿದರೆ, ಕ್ರಿಪ್ಸರು ಸೂಚನೆಯನ್ನು ಮುಂದಿಡುತ್ತಾ, ಕೆಲವು ವಿಷಯಗಳಲ್ಲಿ 'ಡಿಫೆನ್ಸ್' ಖಾತೆಯ ವಿಚಾರದಲ್ಲಿ ಹಿಂದೂದೇಶದ ಎಲ್ಲಾ ಪಕ್ಷದವರೂ ಒಮ್ಮತದಿಂದ ಕೇಳಿಕೊಂಡರೂ ಅದಕ್ಕೆ ನಾವು ಒಪ್ಪುವುದಿಲ್ಲವೆಂದು ಹೇಳಿದ್ದು ಯಾರಿಗೂ ಇಷ್ಟುಬೇಗ ಮರೆತುಹೋಗಿಲ್ಲ. ಏಕೆಂದರೆ ಅಂಥಾ ಅವರ ಶರ್ತದಿಂದಲೇ ಸಂಧಾನ ಭಂಗವಾಯಿತೆಂಬುದು ಸರ್ವವಿದಿತವೇ ಇದೆ. ಎಲ್ಲಾ ಪಕ್ಷಗಳೂ ಸೇರಿ ಒಂದು ಸೂಚನೆ ಕೊಟ್ಟಿದ್ದರೆ ಬ್ರಿಟನು ಒಪ್ಪುತ್ತಿತ್ತೆ? ಹಾಗಾದರೆ ಹಾಗೆಂದು ಯಾಕೆ ಹೇಳಿರಲಿಲ್ಲ? ಕ್ರಿಪ್ಸರ ಸೂಚನೆಯನ್ನೊಪ್ಪಿದ್ದರಿಂದ ಭಾರತ ಸರಕಾರವು ಅಮೆರಿಕದ ಸರಕಾರದಂತೆ ಆಗುತ್ತಿತ್ತೆ? ಆದರೆ ಕ್ರಿಪ್ಸರು, ಅಮೆರಿಕದ ಪ್ರೆಸಿಡೆಂಟರು ಜನತೆಯಿಂದ ಚುನಾಯಿತರಾದವರಾಗಿದ್ದು, ಅವರು ಅಮೆರಿಕದ ಜನತೆಗೆ ಹೊಣೆಗಾರರೆಂದೂ ಭಾರತದ ವೈಸರಾಯರು ಹಾಗೆ ಚುನಾಯಿತರಾಗಿರದೆ ಕೇವಲ ಚರ್ಚಿಲ್ ಅಮೆರಿಗಳಿಗೆ ಹೊಣೆಗಾರರಾಗಿ ಇಲ್ಲಿ ಸರ್ವಾಧಿಕಾರ ನಡೆಸುವಷ್ಟು ಅಧಿಕಾರವುಳ್ಳವರಾಗಿದ್ದಾರೆಂಬೀ ವಿಷಯವನ್ನು ಅಮೆರಿಕನರು ಅರ್ಥಮಾಡಿಕೊಳ್ಳಲಾರರೆಂದು ವಿಚಾರಿಸಿದ್ದು ಆಶ್ಚರ್ಯಕರವಿದೆ.

ಗಾಂಧಿಜಿಯವರ ಈ ಆಂದೋಲನ ವಿಚಾರವು ಅವರ 'ಪಕ್ಷಕ್ಕೆ ಸರ್ವಾಧಿಕಾರ ಪಡೆಯಲು' ಆಗಿದೆಯೆಂದು ಕ್ರಿಪ್ಸರು ದೂರಿಡುತ್ತಾರೆ. ಆದರೆ ಕ್ರಿಪ್ಸರು ಬಂದಿದ್ದಾಗ ಕಾಂಗ್ರೆಸು ತನಗೇ ಅಧಿಕಾರ ಬಿಟ್ಟುಕೊಡಬೇಕೆಂದು ಕೇಳಿ, ಅವರ ಸಂಧಾನ ಸೂಚನೆ ಮುರಿದದ್ದಲ್ಲವೆಂದು ಅಮೆರಿಕನರು ತಿಳಕೊಳ್ಳಲಾರರೆ? ಇಂದಿನ ಯುದ್ಧವನ್ನು ವಿಜಯಿಯಾಗಿ ಗೆಲ್ಲಬೇಕಾದರೆ, ಜಪಾನರ ಆಕ್ರಮಣವನ್ನು ಜನತೆಯ ಬೆಂಬಲದಿಂದ ಎದುರಿಸಬೇಕಾದರೆ, ರಾಷ್ಟ್ರದ ಸರ್ವ ಹೊಣೆಗಾರಿಕೆಗಳನ್ನು ರಾಷ್ಟ್ರೀಯ ಸರಕಾರಕ್ಕೆ—ಕಾಂಗ್ರೆಸ ಸರಕಾರಕ್ಕಲ್ಲ—ಒಪ್ಪಿಸಿಕೊಡಿರೆಂಬುದು ಕಾಂಗ್ರೆಸಿನ ಕೇಳಿಕೆಯಾಗಿತ್ತು, ಇಂದೂ ಅದೇ ಆಗಿದೆ. ಹೀಗಿರುತ್ತಾ ಗಾಂಧಿಜಿ ಕಾಂಗ್ರೆಸಿಗೆ ರಾಜಕೀಯಾಧಿಕಾರ ಬರುವಂತೆ ಮಾಡಲು ಆಂದೋಲನ ಆರಂಭಿಸುತ್ತಾರೆನ್ನುವುದರಲ್ಲಿ ಎಷ್ಟರ ಮಟ್ಟಿಗೆ ನ್ಯಾಯ ಬುದ್ಧಿಯಿದೆ?

'ಬ್ರಿಟನು, ಅಮೆರಿಕ ಮತ್ತು ಹಿಂದುಸ್ಥಾನಗಳ ಹಿತದ ಸಲುವಾಗಿ ನಾವು ಹಿಂದೂದೇಶವನ್ನು ಬಿಟ್ಟುಹೋಗಲಾರೆವು' ಎಂದು ಕ್ರಿಪ್ಸರು ಹೇಳುತ್ತಾರೆ 'ಬ್ರಿಟನು ಅಮೆರಿಕ, ಹಿಂದುಸ್ಥಾನ ಮಾತ್ರವಲ್ಲ, ಇಡೀ ಜಗತ್ತಿನ ಹಿತದ ಸಲುವಾಗಿ ನೀವು ಇಲ್ಲಿಂದ ಹೊರಟುಹೋಗಿರಿ' ಎಂದು ಈಗ ಕಾಂಗ್ರೆಸು ಹಾಗೂ ಗಾಂಧಿಜಿ ಹೇಳತೊಡಗಿದ್ದಾರೆ ಹಿಂದೂದೇಶಕ್ಕೆ ಕ್ರಿಪ್ಸರು ಹಿತಬಯಸುತ್ತಾರೊ, ಕಾಂಗ್ರೆಸು ಹಾಗೂ ಗಾಂಧಿಜಿ ಹಿತಬಯಸುತ್ತಾರೊ, ಎಂಬೀ ವಿಷಯವನ್ನ ಭಾವೀ ಚರಿತ್ರಕಾರನೇ ಉಲ್ಲೇಖಿಸುವನು!

ಸಂರಕ್ಷಣೆಯೋ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ: ೧೯೦೬.

ನೋಟಗಳು....

ಅಮೆರಿಕದ ಮುಂದಾಳು ವೆಂಡಲ್ ವಿಲ್ಕಿಯವರು ಹಿಂದೂದೇಶಕ್ಕೆ ಬರಲಿರುವರೆಂದು ಒಂದು ಸುದ್ದಿ. ಸಂಧಾನಕ್ಕೋ ಸಂಗ್ರಾಮಕ್ಕೋ ಇನ್ನೂ ನಮಗೆ ವಿವರ ತಿಳಿದುಬಂದಿಲ್ಲ!

卐

ಭಾರತದ ಕೆಲವರು ಆಶಾವಾದಿಗಳು, ವಿಲ್ಕಿ ಸಂಧಾನಮಾಡಲು ಬರುವರೆಂದು ಹಾರೈಸುತ್ತಾರೆ; ಸರ್ ಕಿಪ್ಸರು, ಕಾಂಗ್ರೆಸು ಆರಂಭಿಸಲಿರುವ ಚಳವಳವನ್ನು ಹತ್ತಿಕ್ಕಲು ಅಮೆರಿಕನರ ಬೆಂಬಲವನ್ನೂ ಕೇಳಿದ್ದಾರೆ!

卐

ರೂಸ್‌ವೆಲ್ಟರ ರಾಯಭಾರಿಯಾಗಿ ಕರ್ನಲ್ ಜಾನ್ಸನರು ಮೊನ್ನೆಮೊನ್ನೆ ಹಿಂದೂದೇಶಕ್ಕೆ ಬಂದಿದ್ದರು! ಅವರು ಬಂದದ್ದೂ ಸಂಧಾನಕ್ಕೋ ಸಂಗ್ರಾಮಕ್ಕೋ ಇನ್ನೂ ಯಾರಿಗೂ ಗೊತ್ತಾಗಿಲ್ಲ. ಅಂತೂ ಬಂದವರಿಗೆ ಇಲ್ಲಿಂದ ಮರಳುವಾಗ ಏನೂ ಸುಖವಿರಲಿಲ್ಲ! ವಿಲ್ಕಿಯವರಿಗೆ ಅಂತಹ ಯಾವುದೇ ಆಪತ್ತು ಒದಗಲಿರಲಿ ಎಂದು ನಮ್ಮ ಹಾರೈಕೆಯಾಗಿದೆ!

卐

ಚೀನದ ಕೈಶೇಕದಂಪತಿಗಳೂ ಹಿಂದೂದೇಶಕ್ಕೆ ಬಂದರು, ಬಂದವರಿಗೆ ವೈಸರಾಯರಿಂದ ರಾಜವೈಭವದ ಆತಿಥ್ಯ ದೊರಕಿತು! ಕಾಂಗ್ರೆಸಿನವರು, ಗಾಂಧಿ ನೆಹರು ಅಜಾದರೆಲ್ಲರೂ ಗೌರವಿಸಿದರು! ಅಂತೂ ಬಂದವರಿಗೆ ಇಲ್ಲಿ ಏನೂ ತೊಂದರೆಯಾಗಲಿಲ್ಲ! ಅವರು ಯಾಕೆ ಬಂದಿದ್ದರೋ? ಬಂದವರು ಏನು ಮಾಡಿದರೋ ಎಂಬ ವಿಷಯ ನಮಗಿನ್ನೂ ತಿಳಿದಿಲ್ಲ ಆದರೆ 'ಬಂದ ದಾರಿಗೆ ಸುಂಕವಿಲ್ಲದೆ' ದಂಪತಿಗಳು ಸುಖವಾಗಿ ತಮ್ಮ ಊರಿಗೆ 'ಬಿಜಯಂ'ಗೈದರು!

卐

ಇಷ್ಟೆಲ್ಲಾ ಆಗುವಾಗ ಸರ್ ಕ್ರಿಪ್ಸರೂ ಬಂದರು! ಸರ್ ಕ್ರಿಪ್ಸರು ಅವರೇ ಹೇಳುವಂತೆ 'ಆರುಸಾವಿರ ಮೈಲುಗಳ ಪ್ರಯಾಣಮಾಡಿ' ಬಂದರು. ಬಹಳ ಆಟ್ಟಹಾಸದಿಂದ ಬಂದರು! ಅವರೇ ಹೇಳುವಂತೆ 'ಹಿಂದೂದೇಶಕ್ಕೆ ಸ್ವಾತಂತ್ರ್ಯಕೊಡಲೆಂದು ಬಂದವರು' ಬಂದವರು ಎಲ್ಲರೊಡನೆಯೂ ಎಲ್ಲಾ ಸಮಯಗಳಲ್ಲಿಯೂ ಎಲ್ಲಾ ರೀತಿಯಲ್ಲಿಯೂ ಮಾತನಾಡಿದರು! ಕೊನೆಗೆ ಅವರೇ ಹೇಳಿದಂತೆ 'ಎಲ್ಲಾ ಪಕ್ಷದವರು ಒಮ್ಮತದಿಂದ ಕೇಳಿದರೂ ಸಂರಕ್ಷಣೆಯ ಶಾಖೆ ಭಾರತೀಯರಿಗೆ ಬಿಟ್ಟುಕೊಡಲಿಲ್ಲ'' ಸಂಧಾನ ಮುರಿಯಿತು! ಅಂತೂ 'ಹಿಂದೂದೇಶಕ್ಕೆ ಸ್ವಾತಂತ್ರ್ಯಕೊಡಲು ಬಂದ' ಕ್ರಿಪ್ಸರು ಸುಖವಾಗಿ ಆರೋಗ್ಯದಿಂದ ಮರಳಿದರು!

卐

ಹೀಗೆ ಹಿಂದೂದೇಶಕ್ಕೆ ಬರುವವರೆಲ್ಲ ಕೆಲವರು ಬಂದರು! ಅವರು ಮಾತನಾಡುವುದನ್ನೆಲ್ಲಾ ಮಾತನಾಡಿದರು! ಸೌಖ್ಯವಾಗಿಯೋ ಅಸೌಖ್ಯವಾಗಿಯೋ ಮರಳಿ ಹೋದರು. ಇನ್ನೂ ಕೆಲವರು ಬರಲಿದ್ದಾರಂತೆ! ಏನೇನನ್ನೋ ಮಾತನಾಡಲಿದ್ದಾರಂತೆ! ಇದುವರೆಗೆ ಇವರಿಂದೆಲ್ಲಾ ಏನೂ ಆಗಿಲ್ಲ! ಇನ್ನು ಮುಂದಿನ ವಿಚಾರ ಯಾರಿಗೂ ಗೊತ್ತಿಲ್ಲ!

ಹರಿಜನವಾಣಿ

'ಪ್ರತಿಯೊಬ್ಬ ಜಪಾನೀಗೆ' ಗಾಂಧಿಜಿ ಹೇಳುತ್ತಾರೆ!

'ಭಾರತದಲ್ಲಿ ನಿಮಗೆ ಸ್ವಾಗತವಿಲ್ಲ'

'ಬ್ರಿಟನು ನಾಜೀ ಜಪಾನು ಸಾಮ್ರಾಜ್ಯವಾದಗಳಲ್ಲಿ ಅಂತರವಿಲ್ಲ'

ನಿಮ್ಮ ಮೇಲೆ ನನಗೆ ಯಾವ ಅಸಮಾಧಾನ ವಿರದಿದ್ದರೂ, ನೀವು ನಡೆಸಿರುವ ಚೀನಾ ಸಂಗ್ರಾಮವನ್ನು ನೋಡಿ ನನಗೆ ಅಸಹ್ಯವಾಗಿದೆ. ಉನ್ನತ ಶಿಖರದಿಂದ ನೀವು ಸಾಮ್ರಾಜ್ಯ ಲಾಲಸೆಯ ರಸಾತಳಕ್ಕೆ ಇಳಿದಿರುವಿರಿ. ನೀವು ನಿಮ್ಮ ಆಸೆಯನ್ನು ಕೈಗೂಡಿಸಲಾರಿರಿ. ಏಶ್ಯಖಂಡವನ್ನು ಹಲವು ಭಾಗಗಳಾಗಿ ಮಾಡಿ, ಆ ಬುದ್ಧಿಯಿಂದ ಲೋಕ ರಾಷ್ಟ್ರ ಸಂಘಟನೆಯನ್ನು ಮುರಿದು ಅದರಿಂದ ಜೀವಲೋಕದಲ್ಲಿ ಅಶಾಂತಿಯನ್ನುಂಟುಮಾಡುವಿರಿ.

ಐವತ್ತು ವರ್ಷಗಳ ಹಿಂದೆ ನನ್ನ ಹದಿನೆಂಟನೆಯ ವರ್ಷದ ಪ್ರಾಯದಲ್ಲಿ ನಾನು ಆಗ ಲಂಡನಿನಲ್ಲಿ ಓದುತ್ತಿದ್ದೆ. ಆಗಿನಿಂದಲೂ ಸರ್ ಎಡ್ವಿನ್ ಆರ್ನಾಲ್ಡರ ಲೇಖನಗಳನ್ನೋದುತ್ತಾ ನಿಮ್ಮ ಜನಾಂಗದ ಅನೇಕ ಉತ್ತಮಗುಣಗಳನ್ನು ನಾನು ಮೆಚ್ಚಿದ್ದೇನೆ. ನಾನು ದಕ್ಷಿಣ ಆಫ್ರಿಕದಲ್ಲಿದ್ದಾಗ, ನೀವು ರಶ್ಯದವರನ್ನು ಸಶಸ್ತ್ರ ಯುದ್ಧದಲ್ಲಿ ಸೋಲಿಸಿದ್ದನ್ನು ಕೇಳಿ ನನಗೆ ರೋಮಾಂಚನವಾಗಿತ್ತು. 1915ರಿಂದ ನಾನು ಭಾರತದಲ್ಲಿ ನೆಲೆನಿಂತ ಬಳಿಕವೂ ಆಶ್ರಮಕ್ಕೆ ಆಗಾಗ ಬಂದಿದ್ದ ಜಪಾನೀ ಭಿಕ್ಷುಗಳ ಸಮೀಪ ಪರಿಚಯವಾಗಿದೆ. ಅವರಲ್ಲಿ ಒಬ್ಬ ಭಿಕ್ಷುಕ ಸೇವಾಗ್ರಾಮದ ವ್ಯಕ್ತಿಗಳಲ್ಲಿ ಮಹತ್ತ್ವದವನಾಗಿದ್ದ. ಆತನ ಕರ್ತವ್ಯದಕ್ಷತೆ, ಗಾಂಭೀರ್ಯ, ದಿನನಿತ್ಯದ ಪ್ರಾರ್ಥನೆಯಲ್ಲಿ ಅವನ ಅಪೂರ್ವ ಶ್ರದ್ಧೆ, ಸೌಜನ್ಯ ಅನೇಕ ಸಮಯಗಳಲ್ಲಿ ಆತನು ತೋರಿಸಿದ ಅನುದ್ವೇಗ ಎಲ್ಲಕ್ಕೂ ವಿಶೇಷ ಅವನ ಸಹಜ ಮೃದು ಹಾಸ್ಯವು ಆತನ ಆಂತರಿಕ ಶಾಂತಿಗೆ ಸರಿಯಾಗಿ ನಮ್ಮೆಲ್ಲರನ್ನು ಅಭಿಮಾನಪಡುವಂತೆ ಮಾಡುತ್ತಿತ್ತು. ನೀವು ಬ್ರಿಟನಿನ ಮೇಲೆ ಯುದ್ಧ ಸಾರಿದ್ದರಿಂದ ಆತನನ್ನು ನಮ್ಮಿಂದ ಅಗಲಿಸಿದ್ದಾರೆ. ಹೋಗುವಾಗ ಆತನು ತನ್ನ ದಿನನಿತ್ಯದ ಧ್ಯಾನದ ತನ್ನ ನಗಾರಿಯನ್ನು ಬಿಟ್ಟುಹೋಗಿದ್ದಾನೆ. ಅದರ ದುಂದುಭಿ ಧ್ವನಿಯಿಂದಲೇ ನಾವು ದಿನನಿತ್ಯದ ಸಂಜೆ ಮುಂಜಾನೆಗಳ ಪ್ರಾರ್ಥನೆಗೆ ತೊಡಗುತ್ತೇವೆ. ಇಂಥ ಅಭಿಮಾನದ ನೆನಪಿನ ಜೊತೆಯಲ್ಲಿ ನೀವು ಚೀನದ ಮೇಲೆ ಹೂಡಿರುವ ನಿಷ್ಕಾರಣ ಯುದ್ಧ ನಮಗೆ ಒಂದು ಸುದ್ದಿಯನ್ನು ನಂಬಬಹುದಾದರೆ, ಆ ಪುರಾತನ ದೇಶದಲ್ಲಿ ನೀವು ದಯಾಶೂನ್ಯವಾಗಿ ನಡೆಸಿದ ಸರ್ವನಾಶಗಳನ್ನು ಯೋಚಿಸಿದರೆ ನನಗೆ ಮನನೊಂದುಗುತ್ತದೆ.

ಲೋಕದ ಮಹಾರಾಷ್ಟ್ರಗಳಿಗೆ ಸಮಸಮಾನವಾಗಿ ನಿಮ್ಮ ರಾಷ್ಟ್ರವು ನಿಲ್ಲಬೇಕೆಂಬ ನಿಮ್ಮ ಆಕಾಂಕ್ಷೆ ಉಚಿತವಾದುದು. ಆದರೆ ಚೀನದ ಆಕ್ರಮಣ, ಶತ್ರುರಾಷ್ಟ್ರಗಳೊಡನೆ ನೀವು ಮಾಡಿದ ಗೆಳೆತನ, ಇವು ಆ ಮಹತ್ವಾಕಾಂಕ್ಷೆಯ ಅನಿಷ್ಟ ಅತಿರೇಕಗಳು. ನಿಮ್ಮ ಉತ್ತಮ ಸಾಹಿತ್ಯವೆಲ್ಲ ಚೀನದ್ದು ಅದನ್ನು ನೀವು ಸ್ವೀಕರಿಸಿರುವಿರಿ. ಅಂತಹ ಪ್ರಾಚೀನ ಜನಾಂಗವು ನಿಮ್ಮ ನೆರೆಯಲ್ಲಿದೆಯೆಂಬ ಅಭಿಮಾನ ನಿಮಗಿದೆಯೆಂದು ನಾನೆಣಿಸಿದ್ದೆ. ನಿಮ್ಮ ಪರಸ್ಪರ ಇತಿಹಾಸ, ಸಾಹಿತ್ಯ, ಸಂಪ್ರದಾಯಗಳ ಜ್ಞಾನವು ನಿಮ್ಮನ್ನು ಇಂದಿನಂತೆ ಶತ್ರುಗಳಾಗಿಸುವುದರ ಬದಲು ಸ್ನೇಹದಿಂದ ಒಂದುಗೂಡಿಸಬೇಕಿತ್ತು!

'ನಾನು ಸ್ವತಂತ್ರನಾಗಿದ್ದು, ನಿಮ್ಮ ರಾಷ್ಟ್ರಕ್ಕೆ ಬರಲು ನನಗೆ ಅನುಮತಿ ಸಿಕ್ಕಿದರೆ ನನ್ನ ಆರೋಗ್ಯವನ್ನು ಲಕ್ಷಿಸದೆ, ಮರಣಕ್ಕೂ ಅಂಜದೆ ಈ ದುರ್ಬಲ ಸ್ಥಿತಿಯಲ್ಲಿಯೇ ನಿಮ್ಮ ರಾಷ್ಟ್ರಕ್ಕೆ ಬರುತ್ತಿದ್ದೆ. ಬಂದು ಚೀನಕ್ಕೂ ಪ್ರಪಂಚಕ್ಕೂ ನಿಮಗೂ ಆಗುತ್ತಿರುವ ಅನ್ಯಾಯದಿಂದ ನಿಮ್ಮನ್ನು ಪರಾಙ್ಮುಖರಾಗುವಂತೆ ಕೇಳಿಕೊಳ್ಳುತ್ತಿದ್ದೆ. ಆದರೆ ನನಗೂ ಸ್ವಾತಂತ್ರ್ಯವಿಲ್ಲ. ನಿಮ್ಮ ಸಾಮ್ರಾಜ್ಯ ನಾಜೀ ಸಾಮ್ರಾಜ್ಯಗಳಂಥ ಇನ್ನೊಂದು ಸಾಮ್ರಾಜ್ಯವನ್ನು ಎದುರಿಸಬೇಕಾದಂಥ ವಿಷಮ ಸಂದರ್ಭದಲ್ಲಿ ನಾವು ಈಗ ಇದ್ದೇವೆ. ನಿಮ್ಮ ಮತ್ತು ನಾಜೀ ಸಾಮ್ರಾಜ್ಯಗಳನ್ನು ಕಂಡರೆ ನಮಗೆಷ್ಟು ಅಸಹ್ಯವೋ ಈ ಸಾಮ್ರಾಜ್ಯವನ್ನು ಕಂಡರೂ ನಮಗಷ್ಟು ಅಸಹ್ಯ. ಮಾನವಕೋಟಿಯ ಐದರಲ್ಲೊಂದು ಪಾಲನ್ನು ಬ್ರಿಟಿಷರು ಮೆಟ್ಟಿ ನಿಂತಿದ್ದಾರೆ. ನಾವು ಅದನ್ನು ವಿರೋಧಿಸಿದರೂ ಬ್ರಿಟಿಷರಿಗೆ ತೊಂದರೆ ಕೊಡಬೇಕೆಂದು ಬಗೆಯುವುದಿಲ್ಲ. ಅವರನ್ನು ಪರಿವರ್ತನೆ ಮಾಡುವ ಅಪೇಕ್ಷೆ ನಮ್ಮದಾಗಿದೆ. ಬ್ರಿಟಿಷ್ ಪ್ರಭುತ್ವದೆದುರು ನಿಶ್ಶಸ್ತ್ರ ವಿರೋಧ ನಮ್ಮದು. ನಮ್ಮ ರಾಷ್ಟ್ರದ ಪ್ರಾಮುಖ್ಯ ಪಕ್ಷವೊಂದು ಪರಕೀಯ ಪ್ರಭುತ್ವದೆದುರು ಘೋರವಾದ ಆದರೆ ಸ್ನೇಹಮಯವಾದ ಯುದ್ಧ ನಡೆಸುತ್ತದೆ. ಇದರಲ್ಲಿ ಅವರಿಗೆ ಪರಕೀಯರ ಸ್ನೇಹ ಬೇಕಾಗಿಲ್ಲ. ನೀವು ಭಾರತವನ್ನು ಆಕ್ರಮಿಸಲಿರುವೀ ಸಂದರ್ಭದಲ್ಲಿ ಮಿತ್ರ ರಾಷ್ಟ್ರಗಳಿಗೆ ನಾವು ತೊಂದರೆಕೊಡುತ್ತಿದ್ದೇವೆಂದು ನಿಮಗೆ ತಪ್ಪಾಗಿ ತಿಳಿಸಲ್ಪಟ್ಟಿದೆ. ಬ್ರಿಟನಿನ ಕಷ್ಟದಲ್ಲಿ ನಾವು ಲಾಭ ಪಡೆಯಬೇಕೆಂದು ಬಗೆದಿದ್ದರೆ ಮೂರು ವರ್ಷಗಳ ಹಿಂದೆಯೇ ಹಾಗೆ ಮಾಡಬಹುದಿತ್ತು. 'ಬ್ರಿಟಿಷರೇ ಭಾರತವನ್ನು ಬಿಟ್ಟು ಹೊರಡಿರಿ' ಎಂಬ ನಮ್ಮ ಮಾತಿನ ಅಪಾರ್ಥ ಮಾಡಿಕೊಳ್ಳಬೇಡಿ. ಭಾರತವು ಸ್ವಾತಂತ್ರ್ಯವಾಗಲಿ ಎಂಬುದು ನಿಮ್ಮ ಸದಿಚ್ಛೆಯಂತೆ! ಆದರೆ ಭಾರತದ ಮೇಲೆ ಆಕ್ರಮಣ ಮಾಡಿ ಬರಲು ನಿಮಗೇನೂ ಕಾರಣವಿಲ್ಲವಲ್ಲ? ಚೀನದ ಆಕ್ರಮಣಕ್ಕೂ ನಿಮ್ಮ ಸದಿಚ್ಛೆಗೂ ಸರಿಹೋಗುವುದಿಲ್ಲವಲ್ಲ? ಭಾರತದಲ್ಲಿ ನಿಮಗೆ ಸ್ವಾಗತವುಂಟೆಂದು ನೀವು ಭಾವಿಸಿದ್ದರೆ ಅದು ಬರಿಯ ಬಯಲು ಭ್ರಾಂತಿ. 'ಭ್ರಾಂತಿಗೆ' ಅವಕಾಶ ಕೊಡಬೇಡಿ. 'ಬ್ರಿಟಿಷರು ಹೊರಟುಹೋಗಿ' ಎಂಬೀ ಆಂದೋಲನದ ಉದ್ದೇಶವು ಸಾಮ್ರಾಜ್ಯಾಕಾಂಕ್ಷೆ, ದಿಗ್ವಿಜಯಾ ಕಾಂಕ್ಷೆಗಳನ್ನು ಎದುರಿಸುವಂತೆ ಭಾರತವನ್ನು ಸಿದ್ಧಮಾಡುವುದು! ಆ ಸಾಮ್ರಾಜ್ಯಾ ಕಾಂಕ್ಷೆ ಬ್ರಿಟಿಷರದಿರಲಿ ನಾಜಿಗಳದಿರಲಿ ನಿಮ್ಮದಿರಲಿ ಅದನ್ನು ತಡೆಯಲು ಅಹಿಂಸೆ ಸಮರ್ಥವಿದೆಯೆಂದು ನಾವು ನಂಬಿದ್ದೇವೆ. ಹಾಗಿದ್ದೂ ಅದಕ್ಕೆ ಪ್ರತೀಕಾರ ಮಾಡದಿದ್ದರೆ ಜಗತ್ತಿನಲ್ಲಿ ನಡೆಯುತ್ತಿರುವ ಈ ಸೈನಿಕ ರಣವನ್ನು ಅಧನುರಂತೆ ನೋಡುತ್ತಾ ಕುಳಿತ ಪಾಪ ನಮ್ಮದಾಗುವುದು. ಭಾರತ ಸ್ವಾತಂತ್ರ್ಯವನ್ನೊಪ್ಪಿಕೊಳ್ಳದ ಹಿಂಸೆಯೇ ಧರ್ಮವೆಂದು ತಿಳಿದವರ ಈ ಯುದ್ಧವನ್ನು ಬ್ರಿಟನು ಗೆಲ್ಲುವುದು ಸಾಧ್ಯವಿಲ್ಲವೆಂದು ನನಗನಿಸುತ್ತದೆ. ನಿಮ್ಮನ್ನು ನಿಮಗಿಂತ ಹೆಚ್ಚಿನ ಶಸ್ತ್ರ ಬಲದಿಂದ ಅವರು ಗೆಲ್ಲಬೇಕು. ನಿಮ್ಮದೇ ನೀತಿಯನ್ನು ಅವರೂ ಅನುಸರಿಸಿದರೆ ಲೋಕ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗಾಗಿ ಹೋರಾಡುವೆವೆಂಬ ಅವರ ಘೋಷಣೆಗೆ ಅರ್ಥವಿಲ್ಲದಾಗುವುದು. ನಿಮ್ಮ ಕೆಲಸವನ್ನು ಅನುಕರಿಸದಿರಲು ಅವರಿಗೆ ಶಕ್ತಿ ಬರಬೇಕಾದರೆ, ಈಗಲೇ ಭಾರತದ ಸ್ವಾತಂತ್ರ್ಯವನ್ನೊಪ್ಪಿ, ಈಗ ಬಲಾತ್ಕಾರದಿಂದ ಸಿಗುವ ಹಿಂದೂಸ್ಥಾನದ ಸಹಕಾರವನ್ನು ಸ್ವೇಚ್ಛಾ ಸಹಕಾರವಾಗಿ ಮಾಡಿಕೊಳ್ಳಬೇಕು.

'ನ್ಯಾಯದ ಹೆಸರಲ್ಲಿ ಬ್ರಿಟನನ್ನು ಮಿತ್ರ ರಾಷ್ಟ್ರಗಳನ್ನೂ, ಅವರಾಡಿದ ಮಾತುಗಳನ್ನು ನಡೆಸಿರೆಂದು ಅವರ ಹಿತಕ್ಕಾಗಿಯೇ ಬೇಡಿಕೊಂಡಿದ್ದೇವೆ. ನಿಮ್ಮೊಡನೆ ಜೀವಲೋಕದ ಪರವಾಗಿ ಬೇಡಿಕೊಳ್ಳುತ್ತೇನೆ. ಈ ನಿಷ್ಕರುಣ ಯುದ್ಧ ಕಾರ್ಯವು ನಿಷ್ಪ್ರಯೋಜನವೆಂದು ನಿಮಗೆ ಯಾಕೆ ತಿಳಿಯುವುದಿಲ್ಲವೋ? ಮಿತ್ರ ರಾಷ್ಟ್ರಗಳಿಂದ ನಿಮ್ಮನ್ನು ಗೆಲ್ಲಲು ಒಂದು ಪಕ್ಷ ಆಗದಿದ್ದರೂ ಬೇರೆ ಯಾವುದಾದರೂ ಬಲವಂತ ರಾಷ್ಟ್ರವು ನಿಮ್ಮನ್ನು ಗೆಲ್ಲಬಹುದು. ನೀವು ಗೆದ್ದರೂ ನಿಮ್ಮ ಸಂತತಿಗೆ ಗೌರವ ತರುವ ಯಾವ ಸೊತ್ತನ್ನೂ ನೀವು ಇಟ್ಟುಹೋಗಲಾರಿರಿ. ನೀವು ಎಷ್ಟೇ ಕುಶಲತೆಯಿಂದ ವಿಜಯ ಸಂಪಾದಿಸಿದರೂ, ನಿಮ್ಮ ಆ ಕ್ರೂರಕೃತ್ಯದ ಗಾನ ಮಾಡಲು ಅವರಿಗೆ ಅಭಿಮಾನವೆನಿಸದು. ನೀವು ಗೆದ್ದರೂ ನ್ಯಾಯವು ನಿಮ್ಮದಾಗಿತ್ತೆಂದು ಸಿದ್ಧವಾಗದು. ನಿಮ್ಮ ಸಂಹಾರಶಕ್ತಿಯು ಒಳ್ಳೆ ಪರಿಣಾಮಕಾರಿಯಾಗಿತ್ತೆಂದು ಮಾತ್ರ ಸಿದ್ಧವಾಗುವುದು. ಈ ಯುದ್ಧ ಕಾರ್ಯಗಳು ಎಲ್ಲ ಗೆಲುವು ಬ್ರಿಟನ್ ಮಾಡಿ ಹಿಂದುಸ್ಥಾನಕ್ಕೆ ನ್ಯಾಯ ಮಾಡಿದ್ದರೆ ಮಿತ್ರರಿಗಾದರೂ ಇದು ಅನ್ವಯಿಸುವುದು.

ಸ್ವಾತಂತ್ರ್ಯ ಹೋರಾಟದಲ್ಲಿ ಮಿತ್ರರು ತಮ್ಮ ಸೈನ್ಯವನ್ನು ಇಡುವೆಂದು ಪ್ರತಿಜ್ಞೆ ಮಾಡಿಕೊಂಡ ಬಿನ್ನಹವಿದೆ. ಸ್ವಾತಂತ್ರ್ಯವು ದೇಶದ ಒಡೆಯರ ಕೇಡು ಮಾಡುವ ಉದ್ದೇಶವಿಲ್ಲ ಎಂಬುದನ್ನು ಸಿದ್ಧಪಡಿಸಲು ಮತ್ತು ಬ್ರಿಟನು ಬಿಟ್ಟುಹೋಗಿ ಭಾರತವನ್ನು ರಕ್ಷಿಸುವೆನೆಂದು ನೀವು ಪ್ರವೇಶ ಮಾಡಿದರೆ, ನಿಮಗೆ ತಪ್ಪದಂತೆ ಮಾಡುವ ಬಗ್ಗೆ ಹೇಳಿದ್ದಾಗಿದೆ. ನೀವು ಒಂದು ತಪ್ಪು ತಿಳಿದಿದ್ದರೆ ನಾವು ನಮ್ಮ ಶಕ್ತಿಯಿಂದ ಇದಿರಿಸುವೆವೆಂದು ನಾನು ಪುನಃ ಪುನಃ ಹೇಳಬೇಕಾಗಿಲ್ಲ. ನಮ್ಮ ಚಳವಳಿಯ ಪರಿಣಾಮದಿಂದ ನೀವು ಮತ್ತು ನಿಮ್ಮ ಸಹಕಾರಿಗಳು ಸನ್ಮಾರ್ಗವನ್ನು ಅವಲಂಬಿಸಿ ನೈತಿಕ ಅಧಃಪಾತಕ್ಕೀಡಾಗುವ ಮತ್ತು ಮನುಷ್ಯರನ್ನು ಕೇವಲ ಯಂತ್ರದಂತೆ ಕೆಲಸ ಮಾಡಿಸುವ ಈ ದುರ್ಮಾರ್ಗದಿಂದ ನೀವು ಮತ್ತು ನಿಮ್ಮ ಮಿತ್ರರು ಪರಾವರ್ತಿತರಾಗಬೇಕೆಂದು ನಿಮ್ಮಲ್ಲಿ ಈ ವಿನಂತಿ ಮಾಡಿಕೊಂಡಿದ್ದೇನೆ. ನಮ್ಮ ಬೇಡಿಕೆಯನ್ನು ಬ್ರಿಟನು ಮನ್ನಿಸುವುದೆಂಬ ಆಸೆ ನನಗಿಲ್ಲ. ನನ್ನೀ ಬಿನ್ನಹವನ್ನು ನೀವು ಮನ್ನಿಸುವಿರೆಂಬ ಆಸೆ ನನಗೆ ಇದಕ್ಕಿಂತಲೂ ಕಡಿಮೆಯಾಗುವುದು. ಬ್ರಿಟಿಷರಲ್ಲಿ ನ್ಯಾಯ ಬುದ್ಧಿ ಇದೆಯೆಂದು ನನಗೆ ಗೊತ್ತಿದೆ. ನನ್ನ ಪರಿಚಯವೂ ಅವರಿಗಿದೆ. ಆದರೆ ನಿಮ್ಮ ಬಗ್ಗೆ ನನಗೆ ಹೆಚ್ಚಿನ ಪರಿಚಯವಿಲ್ಲದಿರುವುದರಿಂದ ನಿಮ್ಮ ನ್ಯಾಯ ಬುದ್ಧಿಯನ್ನು ನಾನು ತಿಳಿಯಲಾರೆ. ಏನಿದ್ದರೂ ಬಿನ್ನಹವನ್ನು ಮನ್ನಿಸುವ ಮಾನವನ ಸ್ವಭಾವದಲ್ಲಿ ನನಗೆ ವಿಶ್ವಾಸವಿದೆ. ಆ ವಿಶ್ವಾಸದ ಬಲದಿಂದಲೇ ನಾನು ಹಿಂದುಸ್ಥಾನದಲ್ಲಿ ಭಾವೀ ಆಂದೋಲನ ಹೂಡಬೇಕೆಂದಿದ್ದೇನೆ. ಅದೇ ವಿಶ್ವಾಸ ಬಲದಿಂದಲೇ ನಿಮಗೂ ಈ ಬಿನ್ನಹ ಮಾಡಿಕೊಂಡಿರುವೆನು.

ನಿಮ್ಮ ಗೆಳೆಯ ಮತ್ತು ಹಿತೈಷಿ,

ಮೋ. ಕ. ಗಾಂಧಿ



ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ.

ಜಪಾನಿಯರ ಮಾತುಗಳನ್ನು ನಂಬಬೇಡಿ ಜೋಕೆ!

ಅವು ಜಪಾನಿಯರ ಈಟಿಗಳಿಗೆ ದಾರಿ ಮಾಡುತ್ತವೆ

ನಿಮ್ಮ ಶತ್ರುಗಳ ಸವಿ ಮಾತುಗಳನ್ನು ನಂಬ ಬೇಡಿ! ಜೋಕೆ! ಅವರನ್ನು ಯಾರಿಂದಲೂ ಜಯಿಸಲಾಗದೆಂದು ನೀವು ಊಹಿಸುವಗೆ ಮಾಡಲು ಅವರು ಯತ್ನಿಸುವರು! ಅದನ್ನು ನಂಬ ಬೇಡಿ! ಜೋಕೆ! ಜಪಾನಿಯ ಸೈನಿಕರಿಗೆ ಇಂಡಿಯಾ ದೇಶದಲ್ಲಿ ಸಾಯಬೇಕೆಂಬ ಇಚ್ಛೆಯಿಲ್ಲ. ಆದ್ದರಿಂದ ಅವರು ನಮ್ಮ ಸ್ನೇಹಿತರೆಂದು ಪ್ರಚಾರಮಾಡುತ್ತಾರೆ. ನಮ್ಮನ್ನು ಹೆದರಿಸಿ, ನಮ್ಮನ್ನು ಕಂಗೆಡಿಸಿ, ನಮಗೆ ಬಲ ಹೀನತೆಯನ್ನುಂಟುಮಾಡುವುದಕ್ಕಾಗಿ ಅವರು ಸುಳ್ಳು ಸಮಾಚಾರಗಳನ್ನು ಹರಡುತ್ತಾರೆ. ಅದು ಒಂದು ಹೊಸರಣ ಕೌಶಲ್ಯ. ಜಪಾನಿಯ ಸೈನಿಕರು ಇಂಡಿಯಾ ದೇಶದ ಮೇಲೆ ಧಾಳಿ ನಡೆಸುವಾಗ ತಮ್ಮ ಪ್ರಾಣವನ್ನು ಕಳೆದುಕೊಳ್ಳುವುದಕ್ಕೆ ಇಚ್ಛಿಸುವುದಿಲ್ಲ. ಅವರು ಜೀವಿಸಲು ಇಚ್ಛಿಸುತ್ತಾರೆ—ನಮ್ಮ ಮನೆಯಲ್ಲಿ.

ಆದರೆ ಜಪಾನಿಯರ ಸೈನಿಕರೆಲ್ಲಾ ಸಾಯುವವರೆಂಬುವದರಲ್ಲಿ ಸಂದೇಹವಿಲ್ಲ. ನಮ್ಮ ಸೈನಿಕರೂ, ನಮ್ಮ ಬಾಂಬುಗಳೂ, ಮತ್ತು ನಮ್ಮ ಫಿರಂಗಿಗಳೂ—ನೀವು ಸೈನ್ಯದ ಹಿಂದೆ ಧೈರ್ಯವಾಗಿ ನಿಂತು ಸಹಾಯ ಮಾಡುತ್ತಿದ್ದರೆ, ಜಪಾನಿಯರನ್ನು ಧ್ವಂಸ ಮಾಡುವುವು. 380,000,000 ಜನಗಳಿರುವ ಈ ದೊಡ್ಡ ದೇಶವನ್ನು ಜಯಿಸಲು ಯಾವಾಗಲೂ ಸಾಧ್ಯವಿಲ್ಲ—ನಾವು ಹಾಗೆ ನಿರ್ಧರಿ

ಚೀನಾ ದೇಶವು ಮೋಸ ಹೋಗಲಿಲ್ಲ

ಚೀನೀಯರು ಜಪಾನಿಯರ ಪ್ರಚಾರ ಕಾರ್ಯದಿಂದ ಮೋಸ ಹೋಗಲಿಲ್ಲ. ನೋಡಲು ತಮ್ಮೊಳಗೆ ತಾನೇ ಕಾದಾಡುತ್ತಿದ್ದ ಈ ಜನಾಂಗವು 5 ವರ್ಷಗಳಿಂದ ಜಪಾನಿಯರನ್ನು ಪ್ರತಿಭಟಿಸುತ್ತಿದ್ದಾರೆ ಮತ್ತು ಅವರು ಯಾವಾಗಲೂ ಜಪಾನಿಯರಿಗೆ ಅಧೀನರಾಗುವುದಿಲ್ಲ. ನಾಝಿಗಳಿಗೂ ರಷ್ಯ ದೇಶದವರಿಗೂ ಮೈತ್ರತ್ವದ ಒಡಂಬಡಿಕೆಯಿದ್ದರೂ ನಾಝಿಗಳು ಅವರ ಮೇಲೆ ಬಿದ್ದರು. ಆದರೆ ರಷ್ಯನರು ಮೋಸಹೋಗಲಿಲ್ಲ! ಚೀನಾ ಮತ್ತು ರಷ್ಯ ದೇಶಗಳಲ್ಲಿ ನಡೆದ ಸಂಭವಗಳಿಂದ ಬುದ್ಧಿ ಕಲಿಯಿರಿ. ಜಪಾನಿಯರ ಮಾತುಗಳಲ್ಲಿ ನಂಬಿಕೆಯನ್ನಿಡಬೇಡಿ.



ಜಪಾನಿಯರನ್ನು ಎದುರಿಸುವುದಕ್ಕೆ ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಕಾಸರಗೋಡು: ಆಳೆಯು ಬಿಡುಗಡೆ

ಕಾಸರಗೋಡು ತಾಲೂಕು ಪದ್ರೆ ಗ್ರಾಮದ ಗಿರಿಜೆ ಎಂಬವಳು ಅದೇ ಗ್ರಾಮದ ಶ್ರೀನಿವಾಸ ಕಡಂಬಳಿತ್ತಾಯ ಎಂಬವನನ್ನು ೧೬-೬-೪೨ನೇ ರಾತ್ರಿ ಚೂರಿಯಿಂದ ತಿವಿದು ಕೊಂದು ಇ. ಪಿ. ಕೋಡಿನ ೩೦೨ನೇ ಕಲಂ ಪ್ರಕಾರ ತಕ್ಸೀರು ಮಾಡಿದ್ದಾಳೆಂಗಿ ಅವಳನ್ನು ಸೆಶ್ಶನ್ಸ್ ಕೋರ್ಟಿಗೆ ಕಮಿಟು ಮಾಡೋಣಾಗಿತ್ತು. ಮೃತನು ಸಾಧಾರಣ ಸಂಪನ್ನನೂ, ೪೦ ವರ್ಷ ಪ್ರಾಯದವನೂ, ವಿಧುರನೂ ಆಗಿದ್ದನು. ಆಳೆಯು ೧೭ ವರ್ಷದ ತರುಣಿಯಾಗಿ ಅವನ ಮನೆಯ ಸಮೀಪದಲ್ಲಿ ಅವನ ಪಕ್ಕಲಾಗಿ ಒಂದು ಸಣ್ಣ ಮನೆಯಲ್ಲಿ ಒಬ್ಬಳೇ ವಾಸಿಸುತ್ತಿದ್ದಳು. ತಕ್ಸೀರಿನ ರಾತ್ರಿ ಮೃತನು ಅವಳಲ್ಲಿಗೆ ಹೋದವನು ಗಾಯ್ಗೊಂಡು ವಾಪಸು ತನ್ನ ಮನೆಯ ಜಗಲಿಯಲ್ಲಿ ಬಂದು ಬಿದ್ದನು. ತಕ್ಸೀರನ್ನು ಕಣ್ಣಾರೆ ಕಂಡ ಸಾಕ್ಷಿಗಾರರು ಯಾರೂ ಇರಲಿಲ್ಲ. ಮೃತನು ತನ್ನ ಮನೆಗೆ ರಾತ್ರಿ ಸಮಯ ಬಂದು ತನ್ನ ಮಾನಹರಣಕ್ಕೆ ಪ್ರಯತ್ನಿಸಿದಾಗ ತಾನು ಕೂಗಲು ಕುತ್ತಿಗೆ ಒತ್ತಿ ಹಿಡಿದ ಸಮಯ ತಾನು ಚೂರಿ ತೆಗೆದು ಬೀಸಿದ್ದೆಂತಲೂ ಆ ಮೇಲೆ ಮೃತನು ತನ್ನ ಮನೆಗೆ ಹೋದನೆಂತಲೂ ಆಳೆಯ ಹೇಳಿಕೆಯಾಗಿತ್ತು. ಮೂವರು ಎಸೆಸರರು ಆಳೆಯು ತಪ್ಪುಗಾರಳಲ್ಲ ಎಂತ ಕೊಟ್ಟ ಅಭಿಪ್ರಾಯವನ್ನು ಮಂಜೂರು ಮಾಡಿ ದ. ಕ. ಜಿಲ್ಲಾ ಸೆಶ್ಶನ್ಸ್ ಜಡ್ಜರಾದ ಶ್ರೀ ಎಲ್. ಎಸ್. ಪಾರ್ಥಸಾರಥಿ ಅಯ್ಯರವರು ಆಳೆಯನ್ನು ಬಿಡುಗಡೆ ಮಾಡಿದರು. ಕಾನೂನು ಪ್ರಕಾರ ತನ್ನ ಮಾನಹರಣಕ್ಕೆ ಯತ್ನಿಸಿದ ಪುರುಷನನ್ನು ಕೊಲ್ಲಲೂ ಕೂಡ ಸ್ತ್ರೀಗೆ ಹಕ್ಕಿರುತ್ತಾ ಆಳೆಯು ಮಾಡಿದ ಕೃತ್ಯವು ತಪ್ಪಾಗುವುದಿಲ್ಲ ಎಂಬುದಾಗಿ ಜಡ್ಜರು ಅಭಿಪ್ರಾಯಪಟ್ಟರು.

ಕ್ರಿಪ್ಸರು ಕಾಂಗ್ರೆಸು ವಿರೋಧ ಪ್ರಚಾರ ತೊಡಗಿದ್ದಾರೆ!

—ಸರ್ ಕ್ರಿಪ್ಸರು ಈಗ ಅಮೆರಿಕದಲ್ಲಿ ಭಾರತೀಯರ ಮುಂದಿನ ಚಳವಳದ ಬಗ್ಗೆ ಅಲ್ಲಿನವರಲ್ಲಿ ಸಹಾನುಭೂತಿ ಹುಟ್ಟಬಾರದೆಂದು ಕಾಂಗ್ರೆಸ್ ವಿರೋಧ ಭಾಷಣವೊಂದನ್ನು ಕೊಟ್ಟರು. ಅದರಲ್ಲಿ ಅವರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯವನ್ನು ಕಠಿಣವಾಗಿ ಟೀಕಿಸಿ, ಹಿಂದುಸ್ಥಾನದ ರಕ್ಷಣೆ ಎಲ್ಲಾ ಮಿತ್ರ ರಾಷ್ಟ್ರಗಳಿಗೂ ಆವಶ್ಯವಿರುವಾಗ ಬ್ರಿಟಿಷರು ಹಿಂದುಸ್ಥಾನವನ್ನು ಬಿಟ್ಟುಹೋಗುವುದಿಲ್ಲವೆಂದೂ, ಕಾಂಗ್ರೆಸ್ ಹಾಗೂ ಗಾಂಧಿಜಿಯವರ ಕೇಳಿಕೆಗೊಪ್ಪಿದರೆ ದೇಶದಲ್ಲಿ ಅರಾಜಕತೆಯುಂಟಾಗುವುದೆಂದೂ ತಾನು ಸಾವಿರಾರು ಮೈಲು ದೂರ ಹಾರಿ ಸಂಧಾನ ಸೂಚನೆಯೊಪ್ಪಿಸಲು ಕಾಂಗ್ರೆಸಿನವರು ಅದನ್ನು ನಿರಾಕರಿಸಿದರೆಂದೂ ವೈಸರಾಯರ ಕಾರ್ಯಕಾರೀಮಂಡಳದ ಸದಸ್ಯರಿಗೆ ಅಮೆರಿಕದ ಪ್ರೆಸಿಡೆಂಟರ ಮಂತ್ರಿಗಳಷ್ಟೇ ಅಧಿಕಾರವಿದೆಯೆಂದೂ, ಹಾಗಿದ್ದೂ ಕಾಂಗ್ರೆಸ್ಸು ಅರಾಜಕತೆಯನ್ನುಂಟುಮಾಡಲು ಚಳವಳ ಆರಂಭಿಸುವುದೆಂದೂ ಆದ್ದರಿಂದ ಈ ಚಳವಳವನ್ನು ಹತ್ತಿಕ್ಕಲಿಕೆ ನಮಗೆ ನೀವು ಎಲ್ಲಾ ಸಹಾಯಕೊಡಬೇಕೆಂದು ಮುಂತಾಗಿ ಅಮೆರಿಕನರಿಗೆ ಬಿನ್ನಯಿಸಿಕೊಂಡಿರುವರು

ಪರದೇಶಿಗಳ ಗಡಿಬಿಡಿ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ವರ್ಧಾದಲ್ಲಿ ಕೂಡಿ ಮಾಡಿದ ನಿರ್ಣಯದಿಂದಾಗಿ ವಿದೇಶಗಳಲ್ಲಿ ಎಂದರೆ ಹೆಚ್ಚಾಗಿ ಬ್ರಿಟನು ಅಮೆರಿಕಗಳಲ್ಲಿ ಬಹಳ ಗಡಿಬಿಡಿ ಹುಟ್ಟಿದೆ 'ಬ್ರಿಟಿಷರೇ ಹೊರಟು ಹೋಗಿರಿ' ಎಂಬೀ ಮಾತಿನ ಬಿಸಿ ಪಾರ್ಲಿಮೆಂಟಿಗೂ ತಾಗಿದಂತೆ ತೋರುತ್ತದೆ ಭಾರತ ಮಂತ್ರಿ ಅಮೆರಿಯವರು ಮೊನ್ನೆ ಮೊನ್ನೆ ಪಾರ್ಲಿಮೆಂಟಿನ ಕೆಲ ಸದಸ್ಯರನ್ನು ಸೇರಿಸಿ ಈ ವಿಚಾರ ಮಂತ್ರಾಲೋಚನೆ ಮಾಡಿದರಂತೆ ಬ್ರಿಟಿಷರು ಈಗ ಹಿಂದೂದೇಶವನ್ನು ಬಿಟ್ಟುಹೋದರೆ, ಶತ್ರುಗಳಿಗೆ ಇಲ್ಲಿ ಕಾಲಿಡಲು ಅವಕಾಶವಾಗುವುದೆಂದೂ, ಕಾಂಗ್ರೆಸು ಬಹಳ ದುಡುಕಿನ ನಿರ್ಣಯ ಮಾಡಿದೆಯೆಂದೂ, ಹೀಗೆ ಮಾಡಿದರೆ ಭಾರತೀಯರು ಬ್ರಿಟಿಷ್ ಕೂಲಿಗಾರರ ಸಹಾನುಭೂತಿಯನ್ನು ಕಳಕೊಳ್ಳಬೇಕಾಗುವುದೆಂದೂ ಪರದೇಶೀ ಪತ್ರಿಕೆಗಳು ಒಂದೇ ಸಮನೆ ಉಪದೇಶ ಮಾಡುತ್ತಿವೆ ಅವರ ಉಪದೇಶಕ್ಕೆ ಪಟ್ಟಾಭಿಯವರೂ ಸತ್ಯಮೂರ್ತಿಯವರೂ ಚಲೋದಾಗಿ ಉತ್ತರವಿತ್ತಿದ್ದಾರೆ "ನೀವು ನಮ್ಮ ಮೇಲೆ ವಿಶ್ವಾಸ ದ್ರೋಹದ ಆರೋಪ ಹೊರಿಸುತ್ತೀರಿ ಗುಲಾಮನು ಎಂದಾದರೂ ಯಜಮಾನನಿಗೆ ಏಕನಿಷ್ಠನಾಗಿರುವುದುಂಟೊ? ಹಾಗೆ ನಡೆದಿದ್ದರೆ ಅದು ಒತ್ತಾಯಕ್ಕೆ ಒಳಪಟ್ಟಿಲ್ಲವೆ? ಗತಕಾಲದಲ್ಲಿ ನಿಮ್ಮ ಕೂಲಿಗಾರ ಪಕ್ಷದ ರಾಮ್ಸೆಮೆಕ್ಡೊನಾಲ್ಡ್ ಮತ್ತು ಲಾರ್ಡ್ ಅರ್ವಿನರು ಮಂತ್ರಿಗಳಾಗಿದ್ದಾಗ ನೀವು ಹಿಂದುಸ್ಥಾನದ ನಿಮ್ಮ ಏಕನಿಷ್ಠ ಹಿಂದೀಯನನ್ನು (ಗಾಂಧಿಜಿ) ಸೆರೆಮನೆಗೆ ಸೇರಿಸಲಿಲ್ಲವೆ? ಗತಕಾಲದಲ್ಲಿ ಬ್ರಿಟಿಷ್ ಕೂಲಿಗಾರರು ರಾಷ್ಟ್ರೀಯ ಸರಕಾರದಲ್ಲಿ ಸೇರಿದರು. ಆಗ ಮೆಕ್‌ಡೊನಾಲ್ಡರು ಮುಖ್ಯ ಮಂತ್ರಿಗಳಾದರು ಆಗಲೂ ಗಾಂಧಿಜಿ ಬಂಧಿಸಲ್ಪಟ್ಟರು. ಹರಿಜನರಿಗೆ ನ್ಯಾಯ ದೊರಕುವಂತೆ ಮಾಡಲು ಗಾಂಧಿಜಿಯನ್ನು ಉಪವಾಸ ಬೀಳಿಸಿದಿರಿ ಇದರಿಂದಲೇ ನಾವು ನಿಮ್ಮ ಬೆಲೆಕಟ್ಟುವುದಿಲ್ಲವೆ?' ಎಂದಿದ್ದಾರೆ ಪಟ್ಟಾಭಿಯವರು' "ದಾಸ್ಯದಲ್ಲಿ ಕೊಳೆಯುತ್ತಿರುವ ಭಾರತೀಯರಿಗೆ ಸ್ವಾತಂತ್ರ್ಯವೇ ಗುರಿ, ಹಿಟ್ಲರ್ ಮುಸಲಿನಿ ಟೋಜೊ ಇವರು ವಿಜಯಿಗಳಾದರೆ ಜೀವಲೋಕ ದರಿದ್ರವಾಗುವುದು ಹಾಗೆಯೇ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗದಿದ್ದರೆ ಇಲ್ಲಿನ ಜೀವಲೋಕ ದರಿದ್ರವಾಗುವುದು ವೈರಿಗಳನ್ನೆದುರಿಸಬೇಕೆಂದು ನಮಗೂ ತೋರುತ್ತದೆ ಈ ಯುದ್ಧವನ್ನು ಗೆಲ್ಲುವುದೆಂದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗುವುದೆಂದು ಭರವಸೆ ನಮಗೆ ಬೇಕಾಗಿದೆ ನಮಗೆ ನೀವು ಉಪದೇಶ ಮಾಡುವ ಬದಲು ತನ್ನಂತೆ ಪರರನ್ನು ನೋಡಬೇಕೆಂದು ಬ್ರಿಟಿಷ್ ಸರಕಾರಕ್ಕೇ ನೀವು ಹೇಳಬೇಕು ಇಲ್ಲದೆ ಸುಮ್ಮ ಸುಮ್ಮನೆ ನಮ್ಮನ್ನು ಕೆರಳಿಸಬೇಡಿರಿ'' ಎಂದು ಸತ್ಯಮೂರ್ತಿಯವರೂ ಅಂದಿದ್ದಾರೆ

ದಬ್ಬಾಳಿಕೆ ನಡೆಸಲು ಅಮೆರಿಕೆದ ಬೆಂಬಲ ಕೇಳುತ್ತಾರೆ

— ಕಾಂಗ್ರೆಸಿನ ಕೊನೆಯ ಹೋರಾಟದ ನಿರ್ಧಾರ —

ಸಂಧಾನ ಸೂಚನೆಗಳು

ಹೀಗೆ ಬ್ರಿಟನು ಅಮೆರಿಕಗಳ ಪತ್ರಿಕೆಗಳು ಚಡಪಡಿಸುತ್ತಿರುವಾಗ ಇತ್ತ ವೈಸರಾಯ್ ವಿಸ್ತೃತ ಕೌನ್ಸಿಲಿನ ಭಾರತೀಯ ಸದಸ್ಯರು ಈ ಕುರಿತು ತೀವ್ರ ಆಲೋಚನೆ ನಡೆಸುತ್ತಿರುವರಾಗಿ ಸುದ್ದಿಯಿದೆ ಆದರೆ ಇದುವರೆಗೆ ಅವರು ಒಂದು ಒಮ್ಮತದ ಅಭಿಪ್ರಾಯಕ್ಕೆ ಬಂದಿಲ್ಲವಂತೆ' ಸರ್ ಫಿರೋಜಖಾನನೂನರು ಹೊರಡಿಸಿದ ಪ್ರಕಟಣೆ ನೋಡಿದರೆ ಅವರು 'ಮರಿ ಚರ್ಚಿಲ್ಲ'ರಂತೆ ಮಾತನಾಡಿದ್ದಾರೆ ಅವರ ಅಭಿಪ್ರಾಯ ಇತರರಿಗೆ ಒಪ್ಪಿಗೆಯಿಲ್ಲವಾಗಿಯೂ ಅವರು ತಮ್ಮತಮ್ಮ ಹೇಳಿಕೆಗಳನ್ನು ಕೊಡುವರೆಂದೂ ಕಾಂಗ್ರೆಸು ಬ್ರಿಟನುಗಳೊಳಗೆ ಒಂದು ಸಂಧಾನದ ಮಾತುಕತೆ ನಡೆಸುವ ಯತ್ನ ಮಾಡುವ ಯೋಚನೆ ಅವರಿಗಿರುವುದರಿಂದ ಮುಂಬಯಿಯಲ್ಲಿ ಬೇಗನೇ ಸೇರಲಿರುವ ಎ ಐ ಸಿ ಸಿಗೆ ಅವರು ವರ್ಧಾ ನಿರ್ಣಯವನ್ನು ಸ್ವಲ್ಪ ಹಿಡಿದಿಟ್ಟು ತಮಗೆ ಸಂಧಾನಕ್ಕೆ ದಾರಿಮಾಡಿಕೊಡಬೇಕೆಂದು ಸೂಚಿಸಲಿರುವರೆಂದೂ ಊಹನೆಯಿರುವುದು ಶ್ರೀ ನಲಿನೀರಂಜನ ಸರ್ಕಾರರು ಈಗಾಗಲೇ ಒಂದು ಪ್ರಕಟಣೆ ಹೊರಡಿಸಿ ಕಾಂಗ್ರೆಸಿನವರು ಪುನರ್ವಿಚಾರ ಮಾಡಬೇಕೆಂದಿದ್ದಾರೆ ಸಂಧಾನದ ಬಾಗಿಲು ತೆರೆದಿದೆಯೆಂದು ರಾಷ್ಟ್ರಪತಿ ಅಜಾದರೇ' ಹೇಳಿದ್ದಾರೆ ಗಾಂಧಿಜಿಯಂತೂ ಸಾವಿರ ಸಲವಾದರೂ ವೈಸರಾಯರು ಕರೆದರೆ ಹೋಗಲು ಸಿದ್ಧರು' ಆದರೆ ಕಾಂಗ್ರೆಸಿಗೆ ಸ್ವಾತಂತ್ರ್ಯ ಬೇಕಾಗಿರುವಾಗ ಬ್ರಿಟನಿಗೆ ಅದನ್ನು ಕೊಡಲು ಮನಸ್ಸಿಲ್ಲದಿದರೆ ಸಂಧಾನವಾಗುವುದೆಂತೋ ತಿಳಿಯುವುದಿಲ್ಲ ರೂಸ್‌ವೆಲ್ಟರೂ ಚಿಯಾಂಗ್ ಕೈಶೇಕರೂ ಕೂಡಿ ಹಿಂದೂದೇಶದ ವಿಷಯ ಒಂದು ಸಂಯುಕ್ತ ಘೋಷಣೆ ಹೊರಡಿಸುವರೆಂಬೂ ಒಂದು ವಾರ್ತೆ ಪ್ರಕಟವಾಗಿದೆ ಈ ಘೋಷಣೆ ಯಾವಾಗ ಬರುವುದೋ ತಿಳಿದಿಲ್ಲ

ಯುದ್ಧ ಮುಗಿದ ಬಳಿಕ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡುವುದು, ಯುದ್ಧದಲ್ಲಿ ಬ್ರಿಟಿಷರಿಗೆ ಬೆಂಬಲ ನಿಲ್ಲುವುದು ಇದೇ ಅವರ ಘೋಷಣೆಯ ವಿವರಗಳೆಂದು ಇಷ್ಟರಲ್ಲೇ ಹಲವರು ಊಹಿಸುತ್ತಾರೆ. ಹೇಗಿದ್ದರೂ ಇಷ್ಟಾದರೂ ಅವರು ಮಾಡಿದರಾದರೆ ಮಿತ್ರರು ನ್ಯಾಯವನ್ನು ಸಂಪೂರ್ಣ ತಿರಸ್ಕರಿಸುತ್ತಾರೆಂದು ಆರೋಪಿಸಲು ಆಗುವುದಿಲ್ಲ

ಕಾಂಗ್ರೆಸಿನ ಕೊನೆಯ ಹೋರಾಟ

ಇದು ಕಾಂಗ್ರೆಸಿನ ಕೊನೆಯ ಹೋರಾಟವಾಗಲಿದೆಯೆಂಬುದಾಗಿ ಮುಖಂಡರು ಹೇಳುತ್ತಿದ್ದಾರೆ ಡಿಲ್ಲಿಯಲ್ಲಿ ನೆಹರುಗಳು ಭಾಷಣಮಾಡುತ್ತಾ, ಈ ಹೋರಾಟದಲ್ಲಿ ಕಾಂಗ್ರೆಸು ನಾಶವಾದರೂ ಚಿಂತೆಯಿಲ್ಲ, ನಮ್ಮ ಸರ್ವಶಕ್ತಿಗಳನ್ನಾದರೂ ವ್ಯಯಿಸಿ ಕೊನೆಯಸಲ ಹೋರಾಡಿ ಸ್ವಾತಂತ್ರ್ಯವನ್ನು ಗಳಿಸಲೇ ಬೇಕೆಂದೂ, ಈ ಹೋರಾಟದನಂತರ ಸ್ವತಂತ್ರವೂ ಪ್ರಬಲವೂ ಆದ ಹಿಂದುಸ್ಥಾನವು ರಚಿಸಲ್ಪಡುವುದೆಂದೂ ಘೋಷಿಸಿದ್ದಾರೆ ಗಾಂಧಿಜಿಯವರು ಇದೇರೀತಿ ಹೇಳುತ್ತಾರೆ ಗಾಂಧಿಜಿಯಂತೂ ಬಹಳ ಪ್ರಾಯ ತುಂಬಿದವರಾದುದರಿಂದ ಅವರ ಜೀವಮಾನದಲ್ಲಿ ಇದು ಕೊನೆಯ ಹೋರಾಟವೇ ಆಗಬೇಕು ಪ್ರಾರಂಭದಲ್ಲಿ ಸೂಕ್ಷ್ಮವಾಗಿ, ಆಂದೋಲನ ಆರಂಭವಾದರೂ, ಅದು ಬ್ರಿಟಿಷರಿಗೂ ಮಿತ್ರರಿಗೂ ಏನೂ ಪರಿಣಾಮ ಹುಟ್ಟಿಸದಿದ್ದರೆ ಮುಂದೆ ಮಹೋಗ್ರವಾಗಲಿರುವುದೆಂದೂ, ಸಾಧ್ಯವಾದಷ್ಟು ಸುಟ್ಟಿಗೆ ಅರಾಜಕತೆ ಗೊಂದಲಗಳಾಗದಂತೆ ಅಹಿಂಸಾಶಕ್ತಿಯನ್ನು ಪಯೋಗಿಸಿ ಗಾಂಧಿಜಿ ಕೆಲಸಮಾಡುವರಾದರೂ ಮುಂದೆ ಸ್ವಾತಂತ್ರ್ಯವಡೆಯಬೇಕಾಗಿ ಅರಾಜಕತೆ ಗೊಂದಲಗಳುಂಟಾದರೂ ಅವರು ಇಟ್ಟ ಹೆಜ್ಜೆ ಹಿಂದೆಗೆಯುವುದಿಲ್ಲವೆಂದೂ ಅವರ ಲೇಖನಗಳನ್ನೋದಿದರೆ ಅರ್ಥವಾಗುತ್ತದೆ ಆದಷ್ಟು ಕ್ಷಿಪ್ರವಾಗಿ ಈ ಹೋರಾಟವನ್ನು ಮುಗಿಸಬೇಕೆಂದು ಗಾಂಧಿಜಿ ಹೇಳುತ್ತಾರೆ ಎ ಐ ಸಿ ಸಿಯಲ್ಲಿ ನಿರ್ಣಯ ಮಂಜೂರಾದರೆ ಅದು ಸೇರಿದ ಒಂದೆರಡು ವಾರಗಳೊಳಗೆ ಆಂದೋಲನ ಆರಂಭವಾಗಬಹುದೆಂದೂ ತಿಳಿಸಿದ್ದಾರೆ ಅಂತೂ ಆಗಷ್ಟ ಏಳರ ನಂತರದ ದಿನಗಳು ಬಹಳ ಉದ್ವೇಗಜನಕವಿರುತ್ತವೆ ಈ ಚಳವಳವು ಬ್ರಿಟಿಷ್ ಭಾರತದಲ್ಲಿ ಮಾತ್ರವಲ್ಲ, ಸಂಸ್ಥಾನಗಳಲ್ಲೂ ನಡೆವುದೆಂದೂ, ಇದರಲ್ಲಿ ಕಾರ್ಖಾನೆ ಕೆಲಸಗಾರರು, ಸರಕಾರೀ ನೌಕರರು, ಶಾಲಾವಿದ್ಯಾರ್ಥಿಗಳು ಎಲ್ಲರೂ ಸೇರಲು ಕರೆಕೊಡಲಾಗುವುದೆಂದೂ, ಉಪ್ಪಿನಕಾಯಿಡೆ ಬಂಗ ತೆರಿಗೆ ನಿರಾಕರಣ ಮೊದಲಾದ ಎಲ್ಲಾ ರೂಪದ ಸಾಮುದಾಯಿಕ ಶಾಸನಭಂಗವಾಗುವುದೆಂದೂ, ಗಾಂಧಿಯನ್ನು ಸೆರೆಮನೆಗೊಯ್ದರೆ ಅವರು ಅಲ್ಲಿ ಅನ್ನ ಸತ್ಯಾಗ್ರಹ ಮಾಡುವರೆಂದೂ, ಈ ಸಲದ ಸತ್ಯಾಗ್ರಹಿಗಳು ಹಿಂದಿನಂತೆ ಸೆರೆಯೊಳಗೆ ತಟಸ್ಥವಿರದೆ ಅಲ್ಲಿಯೂ ಶಾಸನಭಂಗಮಾಡುವರೆಂದೂ ದಿನದಿಂದ ದಿನಕ್ಕೆ ಉಗ್ರಉಗ್ರವಾದ ವಿವರಣೆಗಳು ಕೇಳಿಬರುತ್ತವೆ

ಬೇಕಾದರೆ 'ಓಟು ತೆಗೆಯಲಿ'

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯವನ್ನು ಸ್ಪಷ್ಟೀಕರಿಸುತ್ತಾ ನೆಹರು ಹೀಗಂದಿರುವರು. ಭಾರತವನ್ನಾಳುವ ಬ್ರಿಟಿಷ್ ಸರಕಾರದ ಮೇಲೆ ನಮಗೆ ವಿಶ್ವಾಸವಿಲ್ಲ ಎನ್ನುವ ಒಂದು ಅವಿಶ್ವಾಸ ನಿರ್ಣಯವನ್ನು ತರುವುದು. ಆ ನಿರ್ಣಯದ ಅವಸ್ಥೆ ಏನಾದೀತೆಂದು ನೀವು ಊಹಿಸುತ್ತೀರಿ? ಕಾಂಗ್ರೆಸಿನವರ ಯಾವುದಕ್ಕೆ ಓಟು ಕೊಡುತ್ತಾರೆಂದು ಜಗತ್ತಿಗೇ ಗೊತ್ತು ಮುಸ್ಲಿಂ ಲೀಗು ಹಿಂದೂಮಹಾಸಭೆ ಮುಂತಾದ ಪಕ್ಷದಲ್ಲಿದ್ದರೂ ಅವು ಕೊಡುವ ಉತ್ತರವನ್ನೂ ನಾವು ತಿಳಕೊಳ್ಳಬಹುದು ಹೀಗೆ ಭಾರತದ ಪ್ರತಿಯೊಂದು ಸಂಸ್ಥೆಗಳು ಕೊಡುವ 'ಓಟ'ನ್ನು ನೀವು ವಿಚಾರಿಸಿಕೊಳ್ಳಬಹುದು ಭಾರತದಲ್ಲಿರುವ ವಿವಿಧಭಾಷೆಯ ಮಂದಿ ಜನರು ಜಾತಿ ಮತಗಳ ಭಿನ್ನಬೇಧವಿಲ್ಲದೆ ಬ್ರಿಟಿಷರೇ ಇಲ್ಲಿಂದ ಗಂಟುಕಟ್ಟಿ ಹೊರಟು ಹೋಗಿರಿ ಎಂದು ಏಕಸ್ವರದಿಂದ ಕೂಗಿ ಹೇಳುವರು' ನಮ್ಮನ್ನು ನಮ್ಮ ಪಾಲಿಗೇ ಬಿಟ್ಟುಬಿಡಿರಿ, ನಿಮ್ಮಿಂದ ದೊರೆತಿದ ಉಪಕಾರ ಸಾಕೋ ಸಾಕು ನೀವು ಬೇಗನೇ ಹೋಗಿಬಿಡಿರಿ ಇಂತಹ ಮೇಘಗರ್ಜನೆಯನ್ನು ಕೇಳಬಹುದು' ಹೀಗೆ ಎಮ್ಮ ನಿರ್ಣಯಕ್ಕೆ ಬೆಂಬಲವಾಗಿ ಎಲ್ಲರೂ ಒಬ್ಬನೂ ಇನ್ನೊಂದು ಕಡೆಯಂತ ಓಟು ಕೊಡಲು ದೊರಕದೆ ಇರುವ ದೌರ್ಭಾಗ್ಯವನ್ನು ಬ್ರಿಟಿಷರು ಊಹಿಸಿಕೊಳ್ಳಬೇಕು ಹಾಗಾಗಿ ಎಲ್ಲಾ ಪಂಗಡದವರೂ ಏಕತ್ರೂರ್ವಕವಾಗಿ ಬ್ರಿಟಿಷರನ್ನು ಹಿಂದೂದೇಶದಿಂದ ಹೊರಹಾಕುವ ಈ ಕೆಲಸದಲ್ಲ ಕಾಂಗ್ರೆಸಿಗೆ ಬೆಂಬಲ ಕೊಡುವರೆಂಬುದು ನಿಂತಿತ "

ಉಡುಪಿ

ಮಿಶ್ರಿತ ಕಾಫಿ ಹುಡಿಯನ್ನು ಮಾರಾಟ ಮಾಡಿದುದಕ್ಕೆ

ಮೂರು ಮಂದಿ ವ್ಯಾಪಾರಿಗಳಿಗೆ ಸಬ್ ಮಜಿಸ್ಟ್ರೇಟರು ತಾ. ...ರಲ್ಲಿ ಪ್ರತಿಯೊಬ್ಬರಿಗೂ ೫೦ ರೂಪಾಯಿಯಂತೆ ದಂಡನ್ನ, ತಪ್ಪಿದ್ದಲ್ಲಿ ಎರೆಡೆರಡು ತಿಂಗಳ ಸಾದಾ ಶಿಕ್ಷೆಯನ್ನನುಭವಿಸಬೇಕಾಗಿ ವಿಧಿಸಿದರು ಒಬ್ಬರನ್ನು ಬಿಟ್ಟುಬಿಡಲಾಯಿತು.

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6 25 ಬೆಳಿಗ್ಗೆ	7 30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8 30 ಬೆಳಿಗ್ಗೆ	6 45 ಸಾಯಂ.
ಜಾಲರ್ ಪೇಟೆ ಪೆಸೆಂಜರ್	11 30 ಮಧ್ಯಾಹ್ನ	8 45 ಸಾಯಂ.
ಕನ್ನನೂರು	6 0 ಸಾಯಂ.	9.30 ಪೂರ್ವಾಹ್ನ

ಆ ಕುತ್ತಿಗೆ ನೋವನ್ನು ಗುಣಪಡಿಸಿರಿ

ನಿಮ್ಮ ಕುತ್ತಿಗೆ ನೋಯುತ್ತಿದ್ದರೆ ನಿಮಗೆ ತುತ್ತನ್ನು ನುಂಗುವಾಗ ಬೇನೆಯಾಗುವುದಿದ್ದರೆ, ಖಂಡಿತವಾಗಿ ಪೆಪ್ಸು ಮಾತ್ರೆಗಳನ್ನು ತೆಗೆದುಕೊಳ್ಳಿರಿ ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು ಕಂಠನೋವನ್ನು ಕೂಡಲೇ ಗುಣಪಡಿಸುವವು ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಮಾತ್ರೆಗಳು ಕರಗಿ, ಔಷಧಿ ಸತ್ವವನ್ನು ಹೊರಗೆಡಹಿ ಅದು ಶ್ವಾಸದೊಡನೆ ಶ್ವಾಸಕೋಶಗಳನ್ನು ಸೇರುತ್ತದೆ ಆ ಮೂಲಕ ನಿಮ್ಮ ಶ್ವಾಸಕೋಶದ ನೋವುಗಳೂ ಗುಣಹೊಂದುವವು ಪೆಪ್ಸು ಮಾತ್ರೆಗಳು ತೆಗೆದುಕೊಳ್ಳಲು ಉಲ್ಲಾಸಕರವಾಗಿವೆ ಪೆಪ್ಸು ಮಾತ್ರೆಗಳು ಗಾರ್ಗಲ್ಸ್‌ಗಳಿಗಿಂತ ಹೆಚ್ಚು ಕಾಲ ಬಾಳ್ತರವುಳ್ಳದ್ದು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಪೆಪ್ಸು ಒಂದು ರೂಪಾಯಿ ಬೆಲೆಗೆ ಸಿಗುತ್ತದೆ.

ಏಜಂಟ್ಸ್ ಮೆಸರ್ಸ್ ದಾಧಾ ಎಂಡ್ ಕೊ., ಪಾರ್ಕ್ ಟೌನ್ ಮದರಾಸು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಜಿಲ್ಲಾ ಸಮಾಚಾರಗಳು

ಮಂಗಳೂರು

ದ. ಕ. ಜಿಲ್ಲಾ ಬೋರ್ಡ್ ಸಭೆ

ಕಳೆದ ಶನಿವಾರ ಬೋರ್ಡ್ ಆಫೀಸಿನಲ್ಲಿ ಡಾ. ಕೆ. ವಿಟ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು. ಹೊಸ ಹೆಲ್ತ್ ಆಫೀಸರರಾದ ಶ್ರೀ ಕೆ. ಪಿ. ಥೋಮಸ್‌ರವರೂ ಹಾಜರಿದ್ದರು.

ಸುರತ್ಕಲ್ ಸರ್ಕಲಿನ ಹೊಸ ಬೋರ್ಡ್ ಮೆಂಬರ್ ಶ್ರೀ. ಸರ್ವೋತ್ತಮ ಪೈಯವರು ಪ್ರಮಾಣ ವಾಕ್ಯವನ್ನು ಉಚ್ಚರಿಸಿದ ಮೇಲೆ ನಮ್ಮ ಜಿಲ್ಲೆಯ ಪಂಚಾಯತು ಕ್ಷೇತ್ರದೊಳಗಿನ ಗ್ರಾಮಗಳ ಮಾರ್ಗ ಇತ್ಯಾದಿಗಳ ವೃದ್ಧಿ ಕಾರ್ಯಗಳಿಗಾಗಿ ಸರಕಾರದಿಂದ ಮಂಜೂರಾದ ೨ ಲಕ್ಷ ರೂಪಾಯಿಗಳ ಗ್ರೇಂಟಿನ ವಿಚಾರವನ್ನು ರಿಕಾರ್ಡು ಮಾಡಿ, ಬೈಂದೂರು ನಾಗೋಡಿಯ ರಸ್ತೆಯ ಶಿವಮೊಗ್ಗಾ ಜಿಲ್ಲಾ ಬೋರ್ಡಿನ ಅಂಶವನ್ನು—ಆ ಬೋರ್ಡಿನವರು ಯಾವ ವಿಧದ ತೆರಿಗೆಯನ್ನೂ ಹೇರಬಾರದೆಂಬ ಈ ಶರ್ತಕ್ಕೊಪ್ಪಿದಲ್ಲಿ—ಈ ಬೋರ್ಡ್ ಕಾಪಾಡಿಕೊಳ್ಳುವುದೆಂದಾಯಿತು. ಆ ಭಾಗದ ಖರ್ಚನ್ನು ಶಿವಮೊಗ್ಗಾ ಬೋರ್ಡ್ ತಾನೇ ತೆರುವೆನೆಂದುದನ್ನೂ ಒಪ್ಪಲಾಯಿತು. ಉಪ್ಪಿನಂಗಡಿ ಹಾ॥ ಎ॥ ಶಾಲೆಗೆ ವಿಸ್ತರಣಕ್ಕಾಗಿ ೧೯೮೫ ರೂ ಗಳನ್ನೂ ಮಂಜೂರ್ಮಾಡಿ ಮಂಜೇಶ್ವರದ ಹೆಂಗ ವಾರ್ಡಿಗೆ, ಶ್ರೀಮತಿ ಪ್ರೇಮಾ ನಿರ್ಮಲರಾಯರು ತನ್ನ ಧನಸಹಾಯವನ್ನು ನಿಲ್ಲಿಸಿರುವುದರಿಂದ, ಆ ಕೆಲಸ ಆರಂಭಿಸುವಂತೆ ರೂ. ೨೯೦೦ ಮಂಜೂರಾಯಿತು. ಬೋರ್ಡಿನ ಸೆಕೆಂಡರಿ ಶಾಲೆಗಳ ಫೀಸಿನ ರಿಯಾಯತಿ ವಿಚಾರದಲ್ಲಿ ತಿದ್ದುಪಡಿಗಳನ್ನು ಆಲೋಚಿಸುವಾಗ ಆ ರಿಯಾಯತಿ ಹ್ಯಾಸ್ಕೂಲುಗಳಲ್ಲಿ ಸೇಕಡಾ ೪೦ರಷ್ಟು, ಬೈಂದೂರು ಶಾಲೆಯಲ್ಲಿ ಮಾತ್ರ ಸೇಕಡಾ ೧೦ರಷ್ಟು ಇದೆ ಎಂದು ತಿಳಿಸಲಾಯಿತು. ಮೂಲ್ಕಿ ಶಾಲಾ ಕಮಿಟಿಯವರು ಹೊಸದಾಗಿ ಕಟ್ಟಿಸಿದ ಶಾಲಾ ಕಟ್ಟಡದ ದಾನಪತ್ರವನ್ನು ಸ್ವೀಕರಿಸಲಾಯಿತು. ಉಡುಪಿ ಹ್ಯಾಸ್ಕೂಲಿನ ವಿಚಾರವನ್ನು ಬೋರ್ಡಿನವರೇ ಅಲ್ಲಿನ ಮುನಿಸಿಪಾಲಿಟಿಯವರೊಡನೆ ವ್ಯವಹರಿಸಿ ಇತ್ಯರ್ಥಿಸಿಕೊಳ್ಳಲೆಂಬ ಸರಕಾರದ ಸೂಚನೆಯಂತೆ ಒಂದು ಕಮಿಟಿಯನ್ನು ನೇಮಿಸಿ, ಆ ಕಮಿಟಿಗೆ ಆ ತೀರ್ಮಾನವನ್ನೊಪ್ಪಿಸಲಾಯಿತು. ಕುಂದಾಪುರ ಹಾ॥ ಎ॥ ಬಾಲಿಕಾ ಶಾಲೆಯ ಹೊಸ ಕಟ್ಟಡದ ಬಗ್ಗೆ ರೂ ೩೬೨೫ ಮಂಜೂರಾಯಿತು. ಜಿಲ್ಲೆಯ ಎಲ್ಲಾ ತಾಲೂಕುಗಳ ತೆರಿಗೆ ಅಪ್ಪೀಲ್ ಕಮಿಟಿಯ ಹಿಂದಿನ ೫ ಮಂದಿ ಮೆಂಬರುಗಳನ್ನೇ ನೇಮಿಸಿ ಹಿಂದಿನ ೬ ಮೆಂಬರುಗಳಲ್ಲಿ ಮಂಗಳೂರು, ಪುತ್ತೂರು, ಉಡುಪಿ, ಕಾಸರಗೋಡು ಇಲ್ಲಿಯ ಒಬ್ಬೊಬ್ಬರನ್ನು ಆ ಮೆಂಬರಿಕೆಯಿಂದ ವಿರಹಿತಪಡಿಸಲಾಯಿತು. ಹಿಂದಿಯನ್ನು ಎರಡನೇ ಭಾಷೆಯಾಗಿ ಶಾಲೆಗಳಲ್ಲಿ ಉಪಯೋಗಿಸುವಂತೆ ಅದನ್ನು ಪ್ರವೇಶಗೊಳಿಸುವ ಅಧಿಕಾರವನ್ನು ಬೋರ್ಡಿನ ಪ್ರೆಸಿಡೆಂಟರಿಗೆ ಕೊಡಲಾಯಿತು.

ದ. ಕ. ಜಿಲ್ಲಾ ಪಂಡಿತ ಸಂಘ

ಇವರ ಮಹಾಸಭೆಯ ೬ನೇ ವಾರ್ಷಿಕಾಧಿವೇಶನವು ಕಳೆದ ಆದಿತ್ಯವಾರ ಸಂಜೆ ಸ್ಥಳೀಯ ಗಣಪತಿ ಹ್ಯಾಸ್ಕೂಲಿನಲ್ಲಿ ಶ್ರೀ ಎಚ್ ಭೀಮರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷರ ಸ್ಥಾನಯೋಚಿತವಾದ ಮೊದಲ ಮಾತುಗಳಾಗಿ ಕಾರ್ಯದರ್ಶಿಯವರು ಗತವರ್ಷದ ವರದಿಯೋದಿದರು. ಬಳಿಕ ಮುಂದಿನ ವರ್ಷದ ಕಾರ್ಯಕಾರಿ ಮಂಡಲಿಯ ಚುನಾವಣೆ ನಡೆದು, ಶ್ರೀಮತಿ ಎಂ ರಮಾಬಾಯಿಯವರು ಸಂಘದ ಅಧ್ಯಕ್ಷೆಯಾಗಿ ಚುನಾಯಿಸಲ್ಪಟ್ಟರು. ಶ್ರೀ ಕಡೆಂಗೋಡ್ಲು ಶಂಕರ ಭಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ದ. ಕ. ಹರಿಜನ ಸೇವಕ ಸಂಘ

ಸಭೆಯು ಬಿ ಸಿ ಎಂ. ಶಾಲೆಯಲ್ಲಿ ಅಧ್ಯಕ್ಷ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಜೂನಿಗೆ ಅಂತ್ಯವಾಗುವ ತ್ರೈಮಾಸಿಕ ವರದಿಯನ್ನು ಸ್ವೀಕರಿಸಿ, ಹರಿಜನ ವಿದ್ಯಾರ್ಥಿಗಳಿಗೆ ... ವೇತನಗಳನ್ನು ನಿರ್ಧರಿಸಿತು.

ದ. ಕ. ಜಿಲ್ಲಾ ಕಾಂ. ಕಮಿಟಿಯ ಕಾರ್ಯಕಾರಿ ಸಮಿತಿಯ ಸಭೆ ಮತ್ತು ಮಹಾ ಸಭೆ

ಕ್ರಮವಾಗಿ, ಆಗೋಸ್ತು ತಾ. ೧ನೇ ಆ. ಘಂಟೆ ೨ಕ್ಕೂ ಅದೇ ದಿನ ಘಂಟೆ ೫ಕ್ಕೂ ಕೊಡಿಯಾಲ್‌ಬೈಲಿನಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಜರಗುವುದು. ಸದಸ್ಯರಿಗೆ ಪ್ರತ್ಯೇಕ ನೋಟೀಸು ಕಳಿಸಲಾಗಿದೆಯೆಂದೂ ನೋಟೀಸು ತಲಪದೇ ಇದ್ದರೆ ಈ ಪ್ರಕಟನೆಯನ್ನೇ ನೋಟೀಸಾಗಿ ತಿಳಿದು, ಸದಸ್ಯರು ಸಭೆಗೆ ದಯಮಾಡಿಸಬೇಕೆಂದೂ ವಿನಂತಿಸಲಾಗಿದೆ.

ನೇಮಕ—ವರ್ಗ

ಶ್ರೀ ಎಮ್. ಅಪ್ಪುರಾಯರು ಹಜೂರು ಶಿರಸ್ತೇದಾರರಾಗಿ ನೇಮಕಪಟ್ಟಿರುತ್ತಾರೆ.

ಶ್ರೀ. ಬಿ ನಾರಾಯಣ ಹೆಗ್ಗಡೆಯವರು ಕಾಸರಗೋಡಿನ ಸ್ಟೇಷನರಿ ಮೆಜಿಸ್ಟ್ರೇಟರಾಗಿಯೂ, ಶ್ರೀ ಪಿ. ಸೀತಾರಾಮ ಶೆಟ್ಟಿಯವರು ಹೊಸದುರ್ಗ ಡಿ। ತಹಶೀಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಲ್ಲಿಕೋಟೆಯಲ್ಲಿ ಸಬ್ ಜಡ್ಜರಾಗಿದ್ದ ನಮ್ಮ ಜಿಲ್ಲೆಯವರಾದ ಶ್ರೀ ಎಂ ರಾಮಚಂದ್ರರ್‌ರವರು ದಕ್ಷಿಣ ಆರ್ಕಾಡಿನ ಆಕ್ಟಿಂಗ್ ಡಿಸ್ಟ್ರಿಕ್ಟ್ ಜಡ್ಜರಾಗಿ ಬಡ್ತಿ ಹೊಂದಿರುತ್ತಾರೆ.

ಶ್ರೀಮತಿ ಕಥೆರಿನ್ ಕೊಯೆಲ್ಹೊರವರು ಪುತ್ತೂರಿನ ಬನರರಿ ಸ್ಪೆಶಲ್ ಬೆಂಚ್ ಮ್ಯಾಜಿಸ್ಟ್ರೇಟರಾಗಿ ಆರಿಸಲ್ಪಟ್ಟಿರುವರು.

ಗೌಡ ಸಾರಸ್ವತ ಬಡಜನರಿಗೆ ಅಕ್ಕಿ

ಆಗೋಸ್ತು ೧ನೇ ತಾರೀಕು ಲಾಗಾಯ್ತು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಗೌಡ ಸಾರಸ್ವತ ಬಡಜನರಿಗೆ ಮನೆ ಒಂದಕ್ಕೆ ಮೂರು ಸೇರಿಗೆ ಮೀರದಂತೆ ಅಕ್ಕಿ ಮಾರಾಟ ಮಾಡುವ ಏರ್ಪಾಡವ ಮಾಡಿರುತ್ತಾರೆ ಕ್ರಯ ಸೇರು ಒಂದರ ೦—೨—೪.

ಸೈರೆನುಗಳ ಪರೀಕ್ಷಾ ಪ್ರಯೋಗ

ಪ್ರತಿ ಶನಿವಾರ ಪ್ರಾತಃಕಾಲ ಬೆಳಗ್ಗೆ ಗಂಟೆ ೯ರಿಂದ ೧೦ರೊಳಗೆ ಈ ನಗರದಲ್ಲಿನ ಯಾವತ್ತು ಎ. ಆರ್. ಪಿ ವಿದ್ಯುಚ್ಛಕ್ತಿ ಸೈರನುಗಳನ್ನು ಶಬ್ದ ಮಾಡಿ ಅವುಗಳ ಪರೀಕ್ಷೆಯನ್ನು ನಡೆಸಲಾಗುತ್ತಿದೆ.

ಎ ಆರ್ ಎಸ್ ಹೋಮ್

ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ, ಶ್ರೀ ಬೆನಕಲ್ ಸಂಜೀವರಾವ್, ಬಿ ಇ. ಎಸ್. ರಿಟಾಯರ್ಡ್ ಇವರು 'ಯುದ್ಧ ನಂತರದ ಜಗತ್ತು' ಎಂಬ ವಿಷಯದಲ್ಲಿ ಭಾಷಣವಿತ್ತರು ಶ್ರೀ. ಜಗನ್ನಾಥ ಶೆಟ್ರು ಧನ್ಯವಾದ ಹೇಳಿದರು.

ಸೈ. ಎ. ಕಾಲೇಜ್ ಯೂನಿಯನ್

ಇದರ ಅಧಿಕಾರಿಗಳ ಚುನಾವಣೆಯು ನಡೆದು ಶ್ರೀ ಹರಿದಾಸ್ ಪುರುಷೋತ್ತಮ್ ಅವರು ಅಧ್ಯಕ್ಷರಾಗಿಯೂ ಶ್ರೀ ಕೆ. ಕರೀಮುದ್ದೀನ್ ಅವರು ಪ್ರಧಾನ ಕಾರ್ಯದರ್ಶಿಗಳಾಗಿಯೂ ಶ್ರೀ ಪಿ. ಕೆ. ಭೀಮಯ್ಯನವರು ಜತೆಕಾರ್ಯದರ್ಶಿಗಳಾಗಿಯೂ ಶ್ರೀ ಪ್ರಭಾಕರ ರೈ ಮತ್ತು ಶ್ರೀ ಕೆ. ಕೆ. ಭಂಡಾರ್‌ಕರರು ಕ್ರಮವಾಗಿ ಅಂಡರ್ ಸೆಕ್ರೆಟರಿ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟರು. ಪ್ರಧಾನ ಕಾರ್ಯದರ್ಶಿಗಳ ಸ್ಥಾನಕ್ಕೆ ವಿನಾ ಮಿಕ್ಕ ಎಲ್ಲ ಸ್ಥಾನಗಳಿಗೂ ಸ್ಪರ್ಧೆ ಇತ್ತು. ಪ್ರೆಸಿಡೆಂಟ್ ಸ್ಥಾನದ ಚುನಾವಣೆಯಲ್ಲಿ ಶ್ರೀ ಹರಿದಾಸ ಪುರುಷೋತ್ತಮ ಇವರ ೩೭೭ ಓಟುಗಳೂ ಪ್ರತಿಸ್ಪರ್ಧಿ ಶ್ರೀ. ಗಿಲ್ಬರ್ಟ್ ಶಿಬಿಲ್ಲೋರಿಗೆ ೧೪೦ ಓಟುಗಳೂ ದೊರೆತು ಶ್ರೀ. ಹರಿದಾಸ ಪುರುಷೋತ್ತಮರು ಪ್ರಬಲ ಬಹುಮತದಿಂದ ಯೂನಿಯನ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು. ಸೈ। ಎ। ಕಾಲೇಜಿನ ಸಂಸ್ಕೃತ ಎಸೋಸಿಯೇಶನಿಗೆ ಶ್ರೀ ಬಿ ಜಿ. ರಾಮಕೃಷ್ಣರಾಯರೂ, ಕನ್ನಡ ಎಸೋಸಿಯೇಶನಿಗೆ ಶ್ರೀ ಜಿ. ಕೆ. ಮುತ್ತಣ್ಣನವರೂ ಕಾರ್ಯದರ್ಶಿಗಳಾಗಿ ಚುನಾಯಿತರಾಗಿದ್ದಾರೆ.

ಹರಿಜನ ಸೇವಕ ಸಂಘ

ಇದರ ಪರವಾಗಿ ಪ್ರಚಾರವಾಡಲು ಇಲ್ಲಿಗೆ ಶ್ರೀ ಎನ್ ಎಸ್. ಕಿಲ್ಲೆಯವರು ಬಂದಿದ್ದು ತಾ. ೨೬, ೨೭ನೇ ಸಂಜೆ ಡಾ। ಯು. ಎಲ್. ನಾರಾಯಣ ರಾಯರಲ್ಲಿ ಮಹಾಭಾರತ ವಾಚನ ಮಾಡಿದರು ಡಾ। ರಾಯರು ಸ್ಥಳೀಯ ಹರಿಜನ ವಿದ್ಯಾರ್ಥಿ ಭವನವನ್ನು ಸಂದರ್ಶಿಸಿ ಸಂತೋಷ ಸೂಚಿಸಿದರು.

ಕಾಸರಗೋಡು

ತಾ ೧೪ರಲ್ಲಿ ರಿಟಾಯರ್ಡ್ ಅ ಸರ್ಜನ್ ಶ್ರೀ ಕೆ ಮಾಧವ ನಾಯಕರ ಅಧ್ಯಕ್ಷತೆಯಲ್ಲಿ ಊರವರ ಸಭೆಯು ಜರಗಿ ಬಡವರಿಗೆ ಕಡಿಮೆ ದರದಲ್ಲಿ ಅಕ್ಕಿಯನ್ನು ಕೊಡುವ ವ್ಯವಸ್ಥೆ ಮಾಡುವ ಬಗ್ಗೆ ಒಂದು ಕಮಿಟಿ ಸ್ಥಾಪಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಶ್ರೀ ಬಿ. ವೈಕುಂಠಬಾಳಿಗರೂ, ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ ಸಭೆಯ ಉದ್ದೇಶವನ್ನು ವಿವರಿಸಿ ಭಾಷಣಮಾಡಿದರು ಅಧ್ಯಕ್ಷರೂ ಕೆಲವು ಮಾತುಗಳನ್ನಾಡಿ, ಸ್ವಹಸ್ತದಿಂದ ಅಕ್ಕಿಯನ್ನು ಮಾರುವುದಕ್ಕೆ ಆರಂಭಿಸಿದರು. ಈ ಕಾರ್ಯವನ್ನು ಮುಂದರಿಸುವ ಬಗ್ಗೆ ತಕ್ಕ ವಂತಿಗೆಗಳನ್ನು ಕೊಡಿಸಲು ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳೇ ಮೊದಲಾದ ಮಹನೀಯರಿಂದ ಕೂಡಿದ ಕಮಿಟಿಯು ಸ್ಥಾಪನೆಯಾಯಿತು.

ಉಡುಪಿ

ಸದರ್ನ್ ಇಂಡಿಯಾ ಎಕ್ಸ್‌ಚೇಂಜ್ ಬೇಂಕ್ ಲಿಮಿಟೆಡ್

ಎಂಬ ಹೆಸರಿನ ಬೇಂಕೊಂದನ್ನು ತಾ. ೨೪ರಂದು ಕಲ್ಸಂಕದ ರಿಜಿಸ್ಟರ್ಡ್ ಆಫೀಸಿನಲ್ಲಿ ಕಾರ್ಕಳದ ಶ್ರೀ. ಎಚ್. ಎಸ್ ಹುಸೇನ್ ಸಾಹೇಬ್ ಎಂ ಎಲ್. ಎ (ಕೇಂದ್ರ) ಇವರ ಅಧ್ಯಕ್ಷತೆಯಿಂದ ತೆರೆಯಲಾಯಿತು. ಇದರ ಮೇನೇಜಿಂಗ್ ಡೈರೆಕ್ಟರರಾದ ಡಾ। ಮಾಧವ ಪೈಗಳು ಸ್ವಾಗತ ಭಾಷಣ ಮಾಡಿದರು. ಸದ್ಯ ಇದರ ಶಾಖೆಯೊಂದು ಕಲ್ಲಿಕೋಟೆಯಲ್ಲಿ ತೆರೆಯಲ್ಪಡಲಿರುವುದೆಂದು ತಿಳಿದಿದೆ.

ಕುಂದಾಪುರ

ಇಲ್ಲಿಯ ಸಬ್ ಕಲೆಕ್ಟರ್ ಶ್ರೀ ಆರ್. ಪ್ರಸಾದರಿಗೆ ತಿರುಪತ್ತೂರಿಗೆ ವರ್ಗವಾಗಿದೆ. ಶ್ರೀಯುತರನ್ನು ಕುಂದಾಪುರ ಕ್ಲಬ್ಬಿನವರೂ, ಹಿಂದೀ ಪ್ರೇಮಿ ಮಂಡಲದವರೂ ಉಪಾಹಾರ ಇತ್ಯಾದಿಗಳಿಂದ ಸತ್ಕರಿಸಿದರು. ಇಲ್ಲಿಯ ಹೆಲ್ತ್ ಇನ್‌ಸ್ಪೆಕ್ಟರರಾದ ಶ್ರೀ. ಆರ್. ಶ್ರೀನಿವಾಸರಾಯರಿಗೆ ಕೊಳ್ಳೆಗಾಲಿಗೆ ವರ್ಗವಾಗಿ ಅವರ ಸ್ಥಾನಕ್ಕೆ ಕಾಸರಗೋಡಿನಿಂದ ಶ್ರೀ ವೆಂಕಟೇಶ ಸ್ವಾಮಿ ನಾಯುಡು ಅವರ ನೇಮಕವಾಗಿದೆ.

"ಕೈಯ್ಯೂರು ಕೈದಿಗಳಿಗೆ ಜೀವದಾನ ಮಾಡಿರಿ!"

ಗವರ್ನರರಲ್ಲಿ ಜಿಲ್ಲೆಯ ಸಾರ್ವಜನಿಕರ ವಿನಂತಿ

ಜಿಲ್ಲೆಯ ಎಂ ಎಲ್. ಎ.ಗಳ ಬಿನ್ನಹ

ಮಜೂರ, ವಿದ್ಯಾರ್ಥಿ, ಪತ್ರಿಕೋದ್ಯಮಿಗಳ ಕೇಳಿಕೆಗಳು!

ಕಯ್ಯೂರು ಕೈದಿಗಳಿಗೆ ಮರಣ ಶಿಕ್ಷೆ ಖಾಯಂ

ಕಳೆದ ವರುಷ ಎಪ್ರಿಲಿನಲ್ಲಿ ನೀಲೇಶ್ವರದ ಸಮೀಪ ಕಯ್ಯೂರಿನಲ್ಲಿ ನಡೆದ ಪೋಲೀಸನೊಬ್ಬನ ಕೊಲೆಗಾಗಿ ಬಂಧಿತರಾಗಿದ್ದ ೬೦ ಮಂದಿಯಲ್ಲಿ ಐವರನ್ನು ಮರಣ ದಂಡನೆಗೆ ಗುರಿಪಡಿಸಲಾಗಿತ್ತು. ಮದ್ರಾಸು ಹೈಕೋರ್ಟಿನಲ್ಲಿ ನಡೆಯುತ್ತಿದ್ದ ಆ ಮೊಕದ್ದಮೆಯ ಅಪ್ಪೀಲಿನಲ್ಲಿ ಮಂಗಳೂರು ಸೆಶ್ಶನ್ಸ್ ಕೋರ್ಟು ವಿಧಿಸಿದ ಶಿಕ್ಷೆಯನ್ನು ಖಾಯಂ ಮಾಡಿರುವುದಾಗಿ ತಿಳಿದಿದೆ

ಕೈಯ್ಯೂರು ಕೈದಿಗಳಿಗೆ ಜೀವದಾನ ವಿನಂತಿ

ಮಂಗಳೂರಲ್ಲಿ ಮಜೂರ ಮಹಾಜನ ಸಭೆ

ಪತ್ರಿಕೋದ್ಯಮಿಗಳ ಬಿನ್ನಹ

ಕೈಯ್ಯೂರು ಮೊಕದ್ದಮೆಯಲ್ಲಿ, ಮರಣ ದಂಡನೆಗೆ ಗುರಿಯಾದವರಿಗೆ ಜೀವದಾನ ಮಾಡಬೇಕೆಂದು ವಿನಂತಿಸುವ ಸಲುವಾಗಿ ಕಳೆದ ತಾ ೨೪ರಂದು ಸಂಜೆ ಮಂಗಳೂರ ಮಜೂರ ಮಹಾಜನರ ಪ್ರಚಂಡ ಸಭೆಯು ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀ ಕೃಷ್ಣಶೆಟ್ರ ಅಧ್ಯಕ್ಷತೆಯಲ್ಲಿ ಕೂಡಿ, ಗವರ್ನರರಿಗೆ ಆ ವಿಷಯ ವಿನಂತಿಮಾಡಿಕೊಳ್ಳಬೇಕೆಂದೂ, ಅವರ ಜೀವದಾನವನ್ನು ವಿನಂತಿಸಿಕೊಂಡು ಜಿಲ್ಲೆಯ ಸಾರ್ವಜನಿಕರ-ಸಹಿ ಕೂಡಿಸಿ ಒಂದು ಜನತಾ ವಿನಂತಿಯನ್ನು ಸರಕಾರಕ್ಕೆ ಕಳುಹಿಸಬೇಕೆಂದೂ ನಿರ್ಣಯವಾಯಿತು ಈ ಸಂದರ್ಭದಲ್ಲಿ ಶ್ರೀ ಗಳಾದ ರಂಗರಾವ್ ತಲ್ಲೇರಿಕರ್, ಸುಬ್ರಹ್ಮಣ್ಯ ತಿರುಮುಂಬು, ಕೆ ಶಿವರಾವ್, ಬಿ ವಿ. ಕಕ್ಕಿಲ್ಲಾಯ ಇವರೇ ಮೊದಲಾದವರು ಜಪಾನ್ ವಿರೋಧಿಗಳಾಗಿರುವ ಈ ಜನರಿಗೆ ಜೀವದಾನ ಕೊಡುವ ಅವಶ್ಯಕತೆಯ ಕುರಿತು, ಹಾಗೂ ಜೀವದಾನ ವಿನಂತಿಯ ಕೇಳಿಕೆ ದೇಶದಾದ್ಯಂತ ಹರಡಬೇಕೆಂಬ ವಿಚಾರವಾಗಿಯೂ ಭಾಷಣಗಳನ್ನಿತ್ತರು

ತಾ. ೨೫ರಂದು ದ. ಕ. ಜಿಲ್ಲಾ ಪತ್ರಿಕೋದ್ಯಮಿ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಬಿ. ಸಿ. ಎಂ. ನಲ್ಲಿ ಸೇರಿತು. ಮರಣ ಶಿಕ್ಷೆಗೆ ಗುರಿಯಾದ ಕಯ್ಯೂರು ಕೈದಿಗಳಿಗೆ ಜೀವದಾನವಮಾಡಬೇಕೆಂದು ಗವರ್ನರರನ್ನು ವಿನಂತಿಸಿಕೊಳ್ಳುವ ನಿರ್ಣಯವೊಂದು ಸರ್ವಾನುಮತದಿಂದ ಮಂಜೂರಾಗಿ ಅದನ್ನು ಗವರ್ನರರಿಗೆ ಕಳುಹಿಸಲಾಯಿತು

ದ. ಕ. ಜಿಲ್ಲೆಯ ಕೇಂದ್ರ ಮತ್ತು ಪ್ರಾಂತದ ಎಂ. ಎಲ್ ಎಗಳಾದ ಶ್ರೀ ಎ ಬಿ ಶೆಟ್ಟಿ, ಕೆ ಆರ್. ಕಾರಂತ, ಜಿನರಾಜ ಹೆಗ್ಡೆ, ಈಶ್ವರ, ಮಹಮ್ಮದ್ ಶಮ್ನಾಡ್, ಎಚ್ ಹುಸೇನ್ ಸಾಹೇಬ್ ಇವರೇ ಮೊದಲಾದವರು ಆ ಕೈಯ್ಯೂರು ಕೈದಿಗಳಿಗೆ ಜೀವದಾನವಮಾಡಬೇಕೆಂದು ಕೇಳಿಕೊಂಡು ಒಂದು ವಿನಂತಿಯನ್ನು ಗವರ್ನರರ ಕಡೆಗೂ ವೈಸರಾಯರ ಕಡೆಗೂ ಕಳುಹಿಸಿರುವರು

ಶ್ರೀಮತಿ ಕಮಲಾದೇವಿಯವರು ಈ ಸಂಬಂಧವಾಗಿ ಒಂದು ಪ್ರಕಟನೆಯನ್ನು ಕೊಟ್ಟು ಅದರಲ್ಲಿ ಗವರ್ನರರು ದಯತೋರಿಸಲು ಇದು ಒಂದು ಯೋಗ್ಯವಾದ ಕೇಸೆಂದು ತಿಳಿಸಿರುವರು.

ಮಂಗಳೂರು ವಿದ್ಯಾರ್ಥಿ ಸಂಘದ ಸಭೆಯು ತಾ. ೨೫ರಿಂದ ರಘುನಾಥಯ್ಯ ಮೆಮೊರಿಯಲ್ ಹಾಲಿನಲ್ಲಿ ಶ್ರೀ ರಾಮಚಂದ್ರ ಭಟ್ಟರ ಅಧ್ಯಕ್ಷತೆಯಲ್ಲಿ ಕೂಡಿ ಆ ಕೈಯ್ಯೂರು ಕೈದಿಗಳಿಗೆ ಜೀವದಾನಮಾಡಬೇಕೆಂದು ಗವರ್ನರರನ್ನು ಕೇಳಿಕೊಳ್ಳಬೇಕೆಂದು ಭಾಷಣ ನಿರ್ಣಯಗಳಾದುವು

ಹೊಸದುರ್ಗ ಜಪಾನೀ ವಿರುದ್ಧ ಸಮಿತಿಯವರು ಆ ಕೈಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕೆಂದು ಕೇಳಿಕೊಳ್ಳುವ ವಿನಂತಿಯೊಂದನ್ನು ಗವರ್ನರರು, ವೈಸರಾಯ್, ಗಾಂಧಿ, ಅಜಾದ್, ನೆಹರು, ಎನ್. ಎಂ. ಜೋಶಿ ಇವರಿಗೆ ಕಳುಹಿಸಿರುವರು.

ಈ ಕುರಿತು ಚೆರ್ವತ್ತೂರು, ಕೋಟಚ್ಚೇರಿ, ಕೋಟಿಕ್ಕಾಟ್ ಮೊದಲಾದ ಹಲವು ಕಡೆಗಳಲ್ಲಿ ಸಾರ್ವಜನಿಕರ ಸಭೆ ಸೇರಿ ಗವರ್ನರರಿಗೆ ವಿನಂತಿ ಕಳುಹಿಸಲಾಗಿದೆ ಹೀಗೆ ಜಿಲ್ಲೆಯ ಅದ್ಯಂತ ಈ ಕುರಿತು ತೀವ್ರ ಪ್ರಕ್ಷೋಭೆಯುಂಟಾಗಿರುವುದು.

ಸಿನೆಮಾ ಘುಟಿ

ಸಾಧನ್ ಬೋಸ್ ಮಂಗಳೂರಿಗೆ?

ಪ್ರಸಿದ್ಧ ಸಿನೆಮಾ ನಟಿಯೂ ನರ್ತಕಿಯೂ ಆದ ಸಾಧನಾ ಬೋಸಳು ಮಂಗಳೂರಿಗೆ ಬೇಗನೇ ಬರಲಿರುವಳೆಂದೂ ಆಕೆಗೆ ಇಲ್ಲಿಯ ಧನಿಕ ನಾಗರಿಕರೊಬ್ಬರು ಬರಲು ಆಮಂತ್ರಣವಿತ್ತಿರುವರೆಂದೂ ಆಕೆ ದಿವಾಳಿ ಸಮಯದಲ್ಲಿ ತನ್ನ ನಾಟ್ಯಮೇಳದೊಂದಿಗೆ ಇಲ್ಲಿಗೆ ಬರಲಿರುವಳೆಂದೂ ಆ ವಿಚಾರವನ್ನು ತನ್ನ ಮಿತ್ರರೊಬ್ಬರಿಗೆ ಆಕೆ ಪತ್ರ ಬರೆದು ತಿಳಿಸಿರುವುದಾಗಿಯೂ ಹಾಗೂ ಅವಳ ನರ್ತನ ನೋಡಲು ಪ್ರವೇಶ ಧನದ ಕನಿಷ್ಟ ದರ ರೂಪಾಯಿ ನಾಲ್ಕು ಎಂಬುದಾಗಿ ಆ ಪತ್ರದಲ್ಲಿ ಬರೆದಿದ್ದಾಳೆಂದೂ 'ಸ್ವತಂತ್ರ ಭಾರತ' ಪತ್ರಿಕೆಯಲ್ಲಿ ಶ್ರೀ. ಕೆ. ವಿ. ಭಟ್ಟರು ಬರೆಯುತ್ತಾರೆ.

ಆಂಖ್ ಮಿಚೌಲಿ

ನಲಿನೀ ಜಯವಂತಳ ಸುಶ್ರಾವ್ಯ ಸಂಗೀತಾಭಿನಯಗಳಿಂದ ಕೂಡಿದ ಅಮರ ಪಿಕ್ಚರ್ಸಿನವರ 'ಆಂಖ್ ಮಿಚೌಲಿ' ಈಗ ಜನಪ್ರಿಯವಾಗಿ ಪ್ರದರ್ಶಿತವಾಗುತ್ತಿದೆ. ಇದರ ಮೃದು ಹಾಸ್ಯಪೂರ್ಣ ಸಂಭಾಷಣೆ ಮಧುರ ಸಂಗೀತ ಹಾಗೂ ಸುಖಾಂತಗಳು ಹೃದಯ ಸ್ಪರ್ಶಿಯಾಗಿರುತ್ತವೆ.

ಕನ್ವಾರ್ ಬಾಪಾ ಮತ್ತು ಫಿರ್ ಮಿಲೇಂಗೆ

ಈ ಎರಡು ಸುಖಾಂತ ಚಿತ್ರಗಳು ಈಗ ಬೊಂಬಾಯಿಯಲ್ಲಿ ಪ್ರದರ್ಶಿತವಾಗುತ್ತಿವೆ. 'ಕನ್ವಾರ್ ಬಾಪ' ಆಚಾರ್ಯ ಪ್ರೊಡಕ್ಷನಿನ ಪ್ರಥಮ ಚಿತ್ರ. ಬಂಧನ ಖ್ಯಾತಿಯ ಶ್ರೀ. ಆಚಾರ್ಯರು ಈ ಹೊಸ ಸಂಸ್ಥೆಯ ಸ್ಥಾಪಕರು ಮತ್ತು ನಿರ್ದೇಶಕರು. ಕಿಶೋರ ಶಾಹು ನಾಯಕನಾಗಿ ಪ್ರತಿಮಾದಾಸಗುಪ್ತೆ ನಾಯಕಿಯಾಗಿ ಇದರಲ್ಲಿ ನಟಿಸುತ್ತಾರೆ.

ಜೂಲಾ ೨ನೇ ವಾರದಲ್ಲಿ

ಬೊಂಬೇ ಟಾಕೀಸಿನವರ ಜೂಲಾ ಬೊಂಬಾಯಿ ರಾಕ್ಸಿ ಟಾಕಿಸಿನಲ್ಲಿ ೨ನೇ ವಾರದಲ್ಲಿ ಈಗ ಪ್ರದರ್ಶಿತವಾಗುತ್ತಿದೆ. ಲೀಲಾ ಚಿಟ್ನಿಸ್, ಅಶೋಕ ಕುಮಾರ್, ದೇಸಾಯಿ, ಮುಷ್ತಾಕ್ ಅಲಿ, ಶಹನವಾಜ್ ಮೊದಲಾದವರು ನಟಿಸಿದ್ದಾರೆ.

ವಿಚಿತ್ರ-ವಿಜ್ಞಾನ

ಬೊಂಬಯಿಯ ಇಬ್ಬರು ಗೆಳೆಯ ಗೆಳತಿಯರು

ಮುಸ್ಲಿಂ ಹುಡುಗ ಮತ್ತು ಹಿಂದು ಹುಡುಗಿ!

ಬೊಂಬಯಿಯು ಇಪ್ಪತ್ತೆರಡು ವರ್ಷದ ಒಬ್ಬ ಕುಲೀನ ಕುಟುಂಬದ ಮುಸ್ಲಿಂ ಹುಡುಗನನ್ನೂ ಅವನೊಡನೆ ಒಬ್ಬ ಕಾಶ್ಮೀರ ಕುಟುಂಬದ ಹುಡುಗಿಯೊಬ್ಬಳನ್ನು ಆ ಕೋಲದಲ್ಲಿ ಪೋಲೀಸರು ಸೆರೆಹಿಡಿದರು: ಹುಡುಗ ಹೇಳುತ್ತಾನೆ: "ನಮ್ಮ ಗೆಳೆತನವು ಇತರರಂತಿಲ್ಲ. ನಮ್ಮ ಪ್ರೇಮದಲಿ ದೈಹಿಕ ಭೋಗಲಾಲಸೆಯಿಲ್ಲ. ದೈಹಿಕ ಭೋಗಲಾಲಸೆಯಿಲ್ಲದೆ ಹುಡುಗ ಹುಡುಗಿಯರು ಪ್ರೇಮಿಸಿಕೊಂಡಿರಲು ಸಾಧ್ಯವಿದೆಯೆಂಬುದನ್ನು ನಾವು ಪ್ರದರ್ಶಿಸುತ್ತೇವೆ" ಎಂದು. ಹುಡುಗಿ ಹೇಳುತ್ತಾಳೆ: "ಲೋಕದಲ್ಲಿರುವ ಯಾವುದೇ ಶಾಸನವಾದರೂ ನಮ್ಮಲ್ಲಿ ಬೇರೆ ಮಾಡಲಾರರು. ನಾವು ಐಕ್ಯದಿಂದಿರುವೆವು. ನಾವು ಪರಸ್ಪರ ಪ್ರೇಮಿಸುತ್ತಿರುವೆವು; ನಮ್ಮದಿದು ದೀರ್ಘಾಲೋಚನೆಯ ಹಂಚಿಕೆ. ಇದು ಪವಿತ್ರವೂ, ಕುಲೀನವೂ ಉಜ್ವಲವೂ ಇದೆ.

❀ ❀ ❀

ಹಿಂದೂದೇಶದ ವಿಷಯ ಕೆಲವು ಭವಿಷ್ಯಗಳು

'ಭಾರತದ ಅದೃಷ್ಟ! ಎಂಬ ಹೆಸರಿನ ಒಂದು ಗ್ರಂಥದಲ್ಲಿ ಪ್ರೊ। ಪಕಲ ಎಂಬವರು ಹಿಂದೂದೇಶದ ಕುರಿತು ಕೆಲವು ಭವಿಷ್ಯ ಬರೆದಿದ್ದಾರೆ. ಅದರಲ್ಲಿ ಕೆಲವು ವಿಷಯ ಹೀಗಿವೆ:

'ಹಿಂದೂದೇಶವು ಮುಂದಿನ ಹತ್ತು ವರ್ಷಗಳಲ್ಲಿಯೂ ಅಷ್ಟೊಂದು ಸುಖವನ್ನು ಹೊಂದುವುದಿಲ್ಲ. 1950ರ ನಂತರ ಮಾತ್ರ ಹಿಂದೂದೇಶಕ್ಕೇನಾದರೂ ದೊರಕುವುದು. ಅಲ್ಲಿವರೆಗೆ ಪರಕೀಯರ ನೊಗವು ನಮ್ಮ ಮೇಲಿರುವುದು. ಹಿಂದೂದೇಶದ ಅದೃಷ್ಟವು ಅನೇಕ ರೀತಿಯಿಂದ ವಿಭಾಗವಾಗುವುದು. ಪ್ರಾಂತ, ಮತ, ಧರ್ಮ ಮೊದಲಾದ ವಿಧಗಳಲ್ಲಿ. ಗಾಂಧಿಗಳಿಗೂ ಕಾಂಗ್ರೆಸ್ ಮುಖಂಡರಿಗೂ ಬೇಗನೇ ಅನೇಕ ಮತಭೇದ ಬರುವವು. ಅದರಿಂದಾಗಿ ಗಾಂಧಿಜಿಯವರ ಆರೋಗ್ಯ ಹಾಳಾಗುವುದು. 1943–46ರ ಮಧ್ಯದಲ್ಲಿ ಅವರ ಅನಾರೋಗ್ಯವು ಸಮಸ್ತ ಭಾರತೀಯರನ್ನು ಕಳವಳಗೊಳಿಸುವುದು. ನೆಹರುಗಳು ಕೆಲಕಾಲ ಸಾಮ್ರಾಟರಂತೆ ಇರುವರು. ಆದರೆ ಅದೇ ಸಮಯದಲ್ಲಿ ಅವರ ವಿರುದ್ಧ ದಂಗೆ, ವಿರೋಧಗಳೂ ಉಂಟಾಗುವವು.'

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ. ಕೆ. ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ ...	ಬೆಲೆ	0—2—6
VI ತರಗತಿ ಅಥವಾ I ಫಾರ್ಮಿಗೆ ...	"	0—3—0
VII ತರಗತಿ ಅಥವಾ II ಫಾರ್ಮಿಗೆ ...	"	0—3—6
VIII ತರಗತಿ ಅಥವಾ III ಫಾರ್ಮಿಗೆ ...	"	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ.

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled.— ***"HINDU" MADRAS.***

ವಿದ್ವಾನ್ ಶ್ರೀ. ಕೆ. ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು:

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ದರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ.

'ಶ್ರೀ. ರೈಗಳು ಆಯಾತರಗತಿಯ ಮಕ್ಕಳಿಗೆಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ. ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು.

ಶಾರದಾ ಛಾಪಖಾನೆ. ಮಂಗಳೂರು.

ಗಾಯಗಳಲ್ಲಿರುವ ಹೊಲಸು ವಿಷಕಾರಿಯಾಗಿ ಪರಿಣಮಿಸಬಹುದು

ಸೂಜಿಯ ಸಣ್ಣ ಒಂದು ಚುಚ್ಚುವಿಕೆಯಾ ಭಯಂಕರವಾದ ಗಾಯ—ಎರಡೂ ಒಂದೇ ಸಮಾನ. ಅಂಥಾ ಚಿಕ್ಕ ದೊಡ್ಡ ಗಾಯಗಳಲ್ಲಿರಬಹುದಾದ ವಿಷಕಾರಿ ಕ್ರಿಮಿಗಳನ್ನು ನಾಶಮಾಡಲು ಕೂಡಲೇ ವಿಷಹಾರಿ ಔಷಧಿಯನ್ನು ತಾಗಿಸದಿದ್ದರೆ ಭಯಂಕರವಾದ ಹಾನಿಯು ದೋರಬಹುದು. ಅಂಥಾ ಗಾಯಗಳನ್ನು ಗಮನಿಸದಿದ್ದರೆ ಅಂಗಾಂಗಗಳಿಗೆ ಹಾನಿಯಾಗುವುದು ಮಾತ್ರವಲ್ಲದೆ ಜೀವಕ್ಕೂ ಕೆಡುಕುಂಟು. ಹಾಗಾದರೆ ಇಲ್ಲದ ಸಂಕಷ್ಟಗಳನ್ನು ಯಾಕೆ ಅನುಭವಿಸಬೇಕು? ಇಂಥ ಬಾಧೆಗಳನ್ನು ಬರಗೊಡದಂತೆ ಮಾಡಲು ಉತ್ತಮವಾದುದೆಂದರೆ ಕುಟ್ಟಿಕೂರಾ ಮುಲಾಮು (cuticura ointment) ಕುಟಿಕೂರಾ (cuticura) ಮುಲಾಮು ತಾಗಿಸಿದ ಭಾಗದ ಕಲೆಗಳು ವಾಸಿಸುವುದಿಲ್ಲ. ಒಂದೂ ಲೋಪವಿಲ್ಲದ ಇಂಥಾ ರಕ್ಷಣೆಯ ಔಷಧಿಯನ್ನು ಉಪಯೋಗಿಸಿದರೆ ಗಾಯಗಳಲ್ಲಿ ರಶಿಗೆಯಾದೀತೆಂಬ ಭಯವೇ ಇರುವುದಿಲ್ಲ.

ಗಜ್ಜಿ, ಗಾಯ, ವ್ರಣ, ಕುರು, ಹುಣ್ಣು, ಚರ್ಮರೋಗ ಮುದ್ದಣ, ವಿಷಕಾರಿ ಗಾಯ, ಬೆಂಕಿಯ ಹುಣ್ಣು ಮೊದಲಾದ ಚರ್ಮರೋಗಗಳನ್ನು ನಾಶಮಾಡಲು ಕುಟಿಕೂರಾ ಮುಲಾಮನ್ನು (cuticura ointment) ಉಪಯೋಗಿಸಿರಿ.

ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಮುಲಾಮು

CUTICURA OINTMENT

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನೂ ಬಲವನ್ನೂ ಕೊಡುತ್ತದೆ

❀ ❀ ❀

ಬೊಂಬುಗಳಲ್ಲಿ ಹಳೆ ಬ್ಲೇಡುಗಳು

ಜಪಾನರು ಬೊಂಬಗಳಲ್ಲಿ ಹಳೆಯ ರೇಜರ್ ಬ್ಲೇಡುಗಳನ್ನಿಡುವರಂತೆ. ಇದರ ಉದ್ದೇಶವೆಂದರೆ ಬೊಂಬಿನ ಪೆಟ್ಟು ಬಿದ್ದು ಜನರು ಸಾಯುವುದು ಮಾತ್ರವಲ್ಲದೆ, ಬದುಕಿ ಉಳಿದವರಿಗೆ ವಿಷಮ ಗಾಯಗಳೂ ಆಗಬೇಕೆಂದು. ಡಾರ್ವಿನ್, ಆಸ್ಟ್ರೇಲಿಯ ಮೊದಲಾದ ಕಡೆಗಳಲ್ಲಿ ಇತ್ತೀಚೆಗೆ ಇಂತಹ ಕೆಲವು ಬಾಂಬುಗಳನ್ನು ಎಸೆದಿರುವರಾಗಿ ವದಂತಿ ಬಂದಿದೆ. ಈ ಬ್ಲೇಡುಗಳೊಡನೆ ಬಾಟ್ಲಿ ಚೂರುಗಳೇ ಮೊದಲಾದವುಗಳೂ ಇರುವವೆಂದೂ ತಿಳಿದಿದೆ.

ರಾಮಕೃಷ್ಣ ಲೀಲಾಪ್ರಸಂಗ

ನಿರ್ವಿಕಲ್ಪ ಮತ್ತು ಸವಿಕಲ್ಪ ಸಮಾಧಿಗಳು

ಅದ್ವೈತ ಭಾವೋಪಲಬ್ಧಿಯ ವಿಚಾರ

ಮೂಲ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

ಅದ್ವೈತ ಭಾವೋಪಲಬ್ಧಿಯ ತಾರತಮ್ಯ

ಪೂರ್ವೋಕ್ತ ರೂಪದಲ್ಲಿ ಅದ್ವೈತ ಭಾವವನ್ನೈದಿದ ನಂತರ ಲೋಕಕಲ್ಯಾಣ ಸಾಧನೆಗೆ ಸಮಾಧಿಯಿಂದ ಇಳಿದು ಬಂದವರ ಮಧ್ಯದಲ್ಲಿ ಅದ್ವೈತ ಭಾವದ ಉಪಲಬ್ಧಿಗಳಲ್ಲಿಯೂ ತಾರತಮ್ಯವಿದೆ. ಅವರಲ್ಲಿ ಕೆಲವರು ಅಂತಹ ಭಾವ ಸಮುದ್ರವನ್ನು ದೂರದಿಂದ ದರ್ಶನ ಮಾಡಿದ್ದಾರಷ್ಟೇ. ಇನ್ನೂ ಕೆಲವರು ಆ ಸಮುದ್ರದ ನೀರು ಅಲ್ಪಸ್ವಲ್ಪ ಕುಡಿದಿದ್ದಾರಷ್ಟೆ. 'ದೇವರ್ಷಿ ನಾರದನು ದೂರದಿಂದ ಆ ಸಮುದ್ರವನ್ನು ನೋಡಿಯೇ ಹಿಂತಿರುಗಿದನು. ಶುಕಮುನಿಯು ಮೂರು ಸಾರಿ ಸ್ಪರ್ಶಮಾಡಿದನು, ಮತ್ತು ಜಗದ್ಗುರು ಶಿವನು ಆ ಸಮುದ್ರದ ಮೂರು ಬೊಕ್ಕಸೆ ನೀರನ್ನು ಕುಡಿದು ಹೆಣದಂತೆ ಬಿದ್ದುಬಿಟ್ಟಿದ್ದಾನೆ!' ಎಂದು ಶ್ರೀ ರಾಮಕೃಷ್ಣ ದೇವರು ಹೇಳುತ್ತಿದ್ದರು. ಇಂತಹ ಅದ್ವೈತ ಭಾವದಲ್ಲಿ ಸ್ವಲ್ಪ ಹೊತ್ತಿನ ತನಕ ತನ್ಮಯವಾಗಿರುವುದಕ್ಕೇನೇ 'ನಿರ್ವಿಕಲ್ಪ ಸಮಾಧಿ' ಎಂದೆನ್ನುತ್ತಾರೆ.

ಶಾಂತ, ದಾಸ್ಯ, ಭಾವಾದಿಗಳು ಗಾಢವಾದರೆ ಸವಿಕಲ್ಪ ಸಮಾಧಿಯಾಗುವುದು

ಅದ್ವೈತ ಭಾವೋಪಲಬ್ಧಿಯಲ್ಲಿ ಹೇಗೆ ತಾರತಮ್ಯವಿದೆಯೋ, ಅದರ ನಿಮ್ನಾವಸ್ಥೆಯ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯಾದಿ ಭಾವಗಳನ್ನು ಅಥವಾ ಅದ್ವೈತ ಭಾವದತ್ತ ಸಾಧಕನಿಗೆ ತಲ್ಪಿಸುವ ಭಾವಸಮೂಹವನ್ನು ಉಪಲಬ್ಧಿ ಮಾಡುವುದರಲ್ಲಿಯೂ ತಾರತಮ್ಯವಿದೆ. ಕೆಲವರು ಅವುಗಳಲ್ಲಿ ಯಾವದೊಂದು ಭಾವವನ್ನಾದರೂ ಸಂಪೂರ್ಣವಾಗಿ ಅನುಭವಿಸಿ ಕೃತಾರ್ಥರಾಗುತ್ತಾರೆ. ಕೆಲವರು ಅದರ ಅಭ್ಯಾಸ ಮಾತ್ರ ಪಡೆಯುತ್ತಾರೆ. ಈ ನಿಮ್ನಾವಸ್ಥೆಯ ಭಾವಗಳಲ್ಲಿ ಒಂದನ್ನಾದರೂ ಸಂಪೂರ್ಣವಾಗಿ ಅನುಭವಿಸಿದರೆ ಅದು 'ಸವಿಕಲ್ಪ ಸಮಾಧಿ' ಎಂದು ಯೋಗ ಶಾಸ್ತ್ರದಲ್ಲಿ ನಿರ್ದೇಶಿಸಿದ್ದಾರೆ.

ಮಾನಸಿಕ ಅಥವಾ ಆಧ್ಯಾತ್ಮಿಕ ಅವಸ್ಥೆಗಳಲ್ಲಿ ದೈಹಿಕ ವಿಕಾರಗಳು ಅಪರಿಹಾರ್ಯ: ಉಚ್ಚ ನೀಚ ಭಾವಸಮಾಧಿ ತಿಳಿಯುವ ವಿಧಿ

ಉಚ್ಚ ಅದ್ವೈತದ ಅಥವಾ ನಿಮ್ನ ಸವಿಕಲ್ಪ ಸಮಾಧಿಯ ಎಲ್ಲ ಭಾವಗಳಲ್ಲಿಯೂ ಸಾಧಕನಿಗೆ ಅಪೂರ್ವ ದೈಹಿಕ ಪರಿವರ್ತನೆ ಮತ್ತು ಅದ್ಭುತ ದರ್ಶನಾದಿಗಳ ಪ್ರಕಾಶವು ಬೇರೆ ಬೇರೆ ಸಾಧಕರಲ್ಲಿ ವಿವಿಧ ಆಕಾರವನ್ನು ಧರಿಸುತ್ತದೆ. ಕೆಲವರಿಗೆ ಸ್ವಲ್ಪ ಉಪಲಬ್ಧಿಯಿಂದಲೇ ದೈಹಿಕ ವಿಕಾರ ಮತ್ತು ದರ್ಶನಾದಿಗಳು ಆಗುತ್ತವೆ. ಇನ್ನು ಕೆಲವರಿಗೆ ಅತೀ ಗಾಢವಾದ ಭಾವೋಪಲಬ್ಧಿಯಿಂದಲೂ ದೈಹಿಕ ವಿಕಾರ ಮತ್ತು ದರ್ಶನಾದಿಗಳು ಅತ್ಯಲ್ಪ ಪರಿಮಾಣದಲ್ಲೇ ಕಾಣಬರುವುವು. 'ಒಂದು ಸಣ್ಣ ಕೊಳದ ಆಳವಿಲ್ಲದ ನೀರಿನಲ್ಲಿ ಒಂದೆರಡು ಆನೆಗಳು ಇಳಿದರೆ, ನೀರು ಅಲ್ಲೋಲ ಕಲ್ಲೋಲವಾಗುತ್ತದೆ, ಆದರೆ ಒಂದು ದೊಡ್ಡ ಸರೋವರದಲ್ಲಿ ಅಂತಹ ಎಂಭತ್ತು ಆನೆಗಳು ಇಳಿದರೂ ಕೂಡ ನೀರು ಕದಡದೆ ಹಾಗೆಯೇ ಇರುವುದು' ಎಂದು ಶ್ರೀ ರಾಮಕೃಷ್ಣ ದೇವರು ಹೇಳುತ್ತಿದ್ದರು. ಆದ್ದರಿಂದ ದೈಹಿಕ ವಿಕಾರ ಮತ್ತು ದರ್ಶನಾದಿಗಳೇ ಭಾವ ಗಭೀರತೆಯ ಧ್ರುವಲಕ್ಷಣಗಳೆಂದು ಹೇಳಲಿಕ್ಕಾಗುವುದಿಲ್ಲ. ಭಾವಗಭೀರತೆಯ ಆಳತೆಯನ್ನು ತಿಳಿಯಬೇಕಾದರೆ ನಾವು ಈ ಮೊದಲು ಹೇಳಿದಂತೆ, ನಿಷ್ಠೆಯನ್ನೂ, ತ್ಯಾಗವನ್ನೂ, ಸದ್ಗುಣಶೀಲತೆಯನ್ನೂ ವಿಷಯಕಾಮನೆಯ ಲೋಪವನ್ನೂ ಇತ್ಯಾದಿ ಕಂಡೇ ಅದರ ಪರಿಮಾಣವನ್ನು ತಿಳಿಯಬೇಕು. ಭಾವಸಮಾಧಿಯ ಪರಿಮಾಣ ಕಂಡುಹಿಡಿಯಬೇಕಾದರೆ ಮೇಲೆ ಹೇಳಿದ ಒರೆಗಲ್ಲಿನಿಂದಲೇ ಪರೀಕ್ಷಿಸಬೇಕು. ಬೇರೇನೂ ಉಪಾಯವಿಲ್ಲ. ಆದ್ದರಿಂದ ಎಲ್ಲ ತರದ ವಿಷಯವಾಸನೆ ತ್ಯಾಗ ಮಾಡಿ ಶುದ್ಧ, ಬುದ್ಧ, ಮುಕ್ತಸ್ವಭಾವ ಪ್ರಾಪ್ತವಾದವರಲ್ಲಿ ಮಾತ್ರ ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಅಥವಾ ಮಧುರ ಭಾವದ ಒಂದು ಸರಿಯಾದ ಮತ್ತು ಸರ್ವಾಂಗ ಸಂಪೂರ್ಣವಾದ ಚಿತ್ರವು ಕಂಡುಬರುವುದೆಂದು ಇದರಿಂದ ತಿಳಿಯಬಹುದು. ಕಾಮ-ಕಾಂಚನಾಸಕ್ತರಾದವರಲ್ಲಿ ಇಲ್ಲ. ಕಾಮಾಂಧನು ಕಾಮದ ಆಕರ್ಷಣೆಯನ್ನೇ ಬಲ್ಲನು, ಕಾಮು ಗಂಧರಹಿತ ಮನಸ್ಸಿನ ಆವೇಗವನ್ನು ಹೇಗೆ ತಾನೆ ಬಲ್ಲನು?

ಸರ್ವ ವಿಧದ ಭಾವಗಳನ್ನು ಸಂಪೂರ್ಣವಾಗಿ ಅನುಭವಿಸಲು ಅವತಾರಪುರುಷರೇ ಸಮರ್ಥರು ಶ್ರೀ ಪರಮಹಂಸರ ಸಮಾಧಿಯ ವಿಷಯವೇ ಇದಕ್ಕೆ ದೃಷ್ಟಾಂತವಾಗಿದೆ

ಭಾವಸಮಾಧಿಯ ದಾರ್ಶನಿಕ ತತ್ವವನ್ನು ಶ್ರೀ ಗುರುಮುಖದಿಂದ ಕೇಳಿದನ್ನೇ ಇಲ್ಲಿ ಸಂಕ್ಷೇಪವಾಗಿ ವಿವರಿಸಲು ನಾವು ಪ್ರಯತ್ನಿಸುತ್ತೇವೆ. ಈ ಸಂಬಂಧವಾಗಿ ಇನ್ನೂ ಕೆಲವು ವಿಷಯಗಳನ್ನು ಇಲ್ಲಿ ಹೇಳುವುದು ಉಚಿತ. ಹಾಗಾದರೆ ವಾಚಕರು ಅದನ್ನು ವಿಶದವಾಗಿ ತಿಳಿಯಬಲ್ಲರು. ಸಾಧಕರಲ್ಲಿ ಶಾಂತದಾಸ್ಯಾದಿಯ ಅಥವಾ ಅದ್ವೈತಭಾವೋಪಲಬ್ಧಿಯ ತಾರತಮ್ಯ ತೋರುವ ವಿಚಾರವಾಗಿ ಈ ಮುಂಚೆ ಹೇಳಿದ ವಿಷಯವನ್ನು ಲಕ್ಷಿಸಿ ಈಶ್ವರಾವತಾರರೂ ಕೂಡ ಭಾವರಾಜ್ಯದ ಒಂದು ಸೀಮಾಬಂಧನದಲ್ಲಿರುವರೆಂದು ಯಾರಾದರೂ ಭಾವಿಸಬಾರದು. ಅವತಾರ ಪುರುಷರು ಶಾಂತದಾಸ್ಯಾದಿಯ ಯಾವತ್ತು ಭಾವವನ್ನು ಅವರ ಇಚ್ಛಾನುಸಾರವಾಗಿ ತಮ್ಮ ಜೀವನದಲ್ಲಿ ಸಂಪೂರ್ಣವಾಗಿ ಬೇಕಾದ ಸಮಯದಲ್ಲಿ ಪ್ರದರ್ಶಿಸಬಲ್ಲರು ಅಲ್ಲದೆ ಅದ್ವೈತಭಾವಾವಲಂಬನದಿಂದ ಶ್ರೀ ಪರಮಾತ್ಮನ ಏಕತ್ವಾನುಭವದಲ್ಲಿ ಅವರು ಎಷ್ಟು ದೂರ ಮುಂದುವರಿಯಬಹುದೆಂದರೆ ಜೀವನ್ಮುಕ್ತರಿಂದಲೂ, ನಿತ್ಯಮುಕ್ತರಿಂದಲೂ ಅಥವಾ ಈಶ್ವರಕೋಟಿ ಪುರುಷರಿಂದಲೂ ಅದು ಸಾಧ್ಯವಾಗಲಾರದು. ರಸಸ್ವರೂಪದ ಮತ್ತು ಆನಂದ ಸ್ವರೂಪದ ಏಕತ್ವದಲ್ಲಿ ಅಷ್ಟು ದೂರ ಮುಂದುವರಿಯುವುದಕ್ಕೂ ಮತ್ತು ಅಲ್ಲಿಂದ ನಾನು ನನ್ನ ಎಂಬ ರಾಜ್ಯಕ್ಕೆ ಪುನಃ ಇಳಿದು ಬರುವುದಕ್ಕೂ ಸಾಮಾನ್ಯ ಜೀವನಿಗೆ ಎಂದಿಗೂ ಸಾಧ್ಯವಿಲ್ಲ. ಅದು ಅವತಾರ ಪುರುಷರಿಗೇನೇ ಸಾಧ್ಯ. ಅವರ ಅಪೂರ್ವ ಉಪಲಬ್ಧಿಗಳನ್ನು ಬರೆದಿಟ್ಟಿದ್ದರಿಂದಲೇ ಆಧ್ಯಾತ್ಮಿಕ ಜಗತ್ತಿನಲ್ಲಿ ವೇದ ಮೊದಲಾದ ಸರ್ವ ಶಾಸ್ತ್ರಗಳ ಉತ್ಪತ್ತಿಯಾಗಿದೆ. ಆದ್ದರಿಂದ ಅವರ ಆಧ್ಯಾತ್ಮಿಕ ಉಪಲಬ್ಧಿಗಳು ಅನೇಕ ಸ್ಥಳಗಳಲ್ಲಿ ವೇದಾದಿ ಶಾಸ್ತ್ರಗಳಲ್ಲಿ ಬರೆದಿಟ್ಟ ಉಪಲಬ್ಧಿಗಳನ್ನು ಅತಿಕ್ರಮಿಸಿರುವುದು ವಿಚಿತ್ರವೇನು? 'ಇಲ್ಲಿಯ ಅವಸ್ಥೆ (ನನ್ನ ಉಪಲಬ್ಧಿಯು) ವೇದವೇದಾಂತಗಳಲ್ಲಿ ಕಾಣಿಸಿದ ಉಪಲಬ್ಧಿಗಿಂತಲೂ ಬಹಳ ಹೆಚ್ಚು ಮಿಕ್ಕಿದೆ' ಎಂದು ಶ್ರೀ ರಾಮಕೃಷ್ಣ ದೇವರು ಅನ್ನುತ್ತಿದ್ದರು. ಶ್ರೀ ರಾಮಕೃಷ್ಣ ದೇವರು ಆ ಶ್ರೇಣಿಯ ಪುರುಷಶ್ರೇಷ್ಠರಾಗಿದ್ದರಿಂದಲೇ ಬಿಡುವಿಲ್ಲದೆ ಆರು ತಿಂಗಳ ತನಕ ಅದ್ವೈತಭಾವದಲ್ಲಿ ಸಂಪೂರ್ಣವಾಗಿ ಅವಸ್ಥಾನ ಮಾಡಿದ ನಂತರವೂ 'ಬಹುಜನ ಹಿತಕ್ಕಾಗಿ' 'ಲೋಕ ಶಿಕ್ಷಾದಾನಕ್ಕಾಗಿ' 'ನಾನು ನನ್ನದೆಂಬ ರಾಜ್ಯಕ್ಕೆ ಇಳಿದುಬರಲು ಸಮರ್ಥರಾಗಿದ್ದರು. ಅದು ಒಂದು ದೊಡ್ಡ ವಿಷಯ. ಆ ಸಂಬಂಧವಾಗಿ ಕೆಲವು ವಿಷಯಗಳನ್ನು ವಾಚಕರಿಗೆ ಇಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಿಕ್ಕಿಲ್ಲ.

ವೇದಾಂತ ವಿಚಾರವನ್ನು ಮಾಡಲು ಭೈರವೀ ಬ್ರಾಹ್ಮಣಿಯ ಆಕ್ಷೇಪಣೆ

ತೋತಾಪುರಿ ಬಳಿಯಿಂದ ಸನ್ಯಾಸ ಗ್ರಹಣ ಮಾಡಿದ ನಂತರ ಮೂರನೇ ದಿವಸದಲ್ಲಿ ಶ್ರೀ ಪರಮಹಂಸರಿಗೆ ವೇದಾಂತ ಶಾಸ್ತ್ರೋಕ್ತ ನಿರ್ವಿಕಲ್ಪ ಸಮಾಧಿ ಅಥವಾ ಶ್ರೀ ಪರಮಾತ್ಮನಲ್ಲಿ ಅದ್ವೈತಭಾವದಲ್ಲಿ ಅವಸ್ಥಾನ ಮಾಡುವ ಉಪಲಬ್ಧಿಯಾಗಿತ್ತು. ಆಗ ತಂತ್ರೋಕ್ತ ಸಕಲ ಸಾಧನೆಗಳನ್ನು ಶ್ರೀ ಪರಮಹಂಸರು ಮಾಡಿ ಮುಗಿಸಿದ್ದಾರೆ, ಅಲ್ಲದೆ ಆ ಸಾಧನೆಗಳಿಗೆ ಬೇಕಾದ ಸಾಮಗ್ರಿಗಳ ಸನ್ನಾಹ ಮಾಡಿಕೊಟ್ಟು ಮತ್ತು ಆ ಸಾಮಗ್ರಿಗಳ ವ್ಯವಹಾರಪ್ರಣಾಲಿಯನ್ನು ಇತ್ಯಾದಿ ತೋರಿಸಿಕೊಟ್ಟು ಅವರಿಗೆ ಸಹಾಯ ಮಾಡಿದ ವಿದುಷಿ ಭೈರವೀ ಬ್ರಾಹ್ಮಣಿಯೂ (ಶ್ರೀ ರಾಮಕೃಷ್ಣ ದೇವರು ಇವರನ್ನು 'ಬ್ರಾಹ್ಮಣಿ' ಎಂದು ಕರೆದು ನಮಗೆ ನಿರ್ದೇಶಿಸುತ್ತಿದ್ದರು) ಕೂಡ ಶ್ರೀ ಪರಮಹಂಸರ ಜೊತೆಯಲ್ಲೇ ದಕ್ಷಿಣೇಶ್ವರದಲ್ಲಿ ವಾಸಿಸುತ್ತಿದ್ದರು. ಆ ಬ್ರಾಹ್ಮಣಿ ಅಥವಾ ಭೈರವಿ ಬ್ರಾಹ್ಮಣಿಯು ತೋತಾಪುರಿಯ ಸಂಗದಲ್ಲಿ ಹೆಚ್ಚಾಗಿರಬಾರದೆಂದು ಶ್ರೀ ಪರಮಹಂಸರನ್ನು ಆದೇಶಿಸುತ್ತಿದ್ದರು. 'ಅಪ್ಪಾ ಅವರ ಸಂಗ ಹೆಚ್ಚಾಗಿ ಮಾಡಬೇಡ, ಅವರ ಭಾವವು ಶುಷ್ಕವಾಗಿದೆ.

(ಕ್ರಮಶಃ)

ಕಡಿಮೆ ಖರ್ಚು

ಮಂಗಳೂರಿನಿಂದ - ಬೆಂಗಳೂರು
ತಿರುಪತಿ, ಮದ್ರಾಸು.

ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರ್ಭಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಶಾತ್ರಿಗೆ, ಥಾವ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊಡಿವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ : —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ".

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ESTD. SWADESHABHIMANI 1906

[ಸಂಪುಟ 16] ತಾರೀಕು 7—8—1942 [ಸಂಚಿಕೆ 31]

'ಹೋರಾಟ! ಇದು ಕೊನೆಯಿಲ್ಲದ ಹೋರಾಟ'

ಕ್ರಿಪ್ಸ್ ಅಮೆರಿಗಳಿಗೆ ನೆಹರುಗಳ ಉತ್ತರ

ಇಂದು, ೧೯೪೨ನೆಯ ಇಸವಿ ಅಗಸ್ಟ್ ಏಳನೆಯ ಈ ದಿನವು ಭಾರತದ ಸ್ವಾತಂತ್ರ್ಯ ಸಂಗ್ರಾಮದ ವೀರೇತಿಹಾಸದಲ್ಲಿ ಉಜ್ವಲವಾಗಿ ಬೆಳಗಿ ತೋರುವ ಮಹಾ ನಿರ್ಧಾರದ ದಿನ' ಮುಂಬಯಿಯಲ್ಲಿ ಗಾಂಧಿಜಿ ಮೊದಲೊಂಡ ಭಾರತದ ಮುಖಂಡರು ಕಾಂಗ್ರೆಸ್ ಮುಂದಾಳುಗಳೆಲ್ಲಾ ಒಂದು ಮಹಾ ನಿರ್ಧಾರ ಮಾಡಲು ಕೂಡಿದ್ದಾರೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಗೆ ರಾಷ್ಟ್ರದ ಮೂಲೆ ಮೂಲೆಗಳಿಂದಲೂ ರಾಷ್ಟ್ರವೀರರು ಹೋಗುತ್ತಿದ್ದಾರೆ ಕಾಂಗ್ರೆಸು ಈ ಸಭೆಯಲ್ಲಿ ವರ್ಧಾದಲ್ಲಿ ಸೇರಿದ ವರ್ಕಿಂಗ್ ಕಮಿಟಿ ನಿರ್ಣಯವನ್ನು ಕಾರ್ಯರೂಪಕ್ಕೆ ತರುವುದೆಂದೇ ಹಲವರ ನಿರೀಕ್ಷೆಯಾಗಿದೆ ದೇಶ ವಿದೇಶಗಳಲ್ಲಿ ಈ ಸಭೆಯ ಕುರಿತು, ಸಭೆಯ ಮುಂದಿರುವ ಇತಿಹಾಸ ಪ್ರಸಿದ್ಧ ನಿರ್ಣಯದ ಕುರಿತು ಬಹಳ ಪ್ರಕ್ಷೋಭವುಂಟಾಗಿದೆ'

ಕೊನೆಯಿಲ್ಲದ ಹೋರಾಟ

ಕ್ರಿಪ್ಸ್ ಅಮೆರಿಯವರು ಹಾಕಿದ ಬೆದರಿಕೆಗೆ ಪಂಡಿತ ನೆಹರುಗಳು 'ಹೋರಾಟ, ಕೊನೆಯಿಲ್ಲದ ಹೋರಾಟ' ಎಂಬುದಾಗಿ ಉತ್ತರವಿತ್ತಿದ್ದಾರೆ. ಎಂದರೆ ಎಷ್ಟೇ ಬೆದರಿಕೆ, ದಬ್ಬಾಳಿಕೆ ನಡೆದರೂ ಈ ಸಲದ ಹೋರಾಟವು ನಿಲ್ಲಲಾರದು ಎಂದು ಅವರ ಖಂಡಿತ ಅಭಿಪ್ರಾಯವಾಗಿದೆ ಇದೇ ಪ್ರಕಾರ ಸರ್ದಾರ ಪಟೇಲರೂ ಕೂಡಾ ಒಂದು ಭಾಷಣದಲ್ಲಿ ಹೀಗನ್ನುತ್ತಾರೆ 'ಕಾಂಗ್ರೆಸು ತನಗಾಗಿ ಅಧಿಕಾರ ಕೇಳುವುದಿಲ್ಲ, ಅಧಿಕಾರವನ್ನು ಮುಸ್ಲಿಂ ಲೀಗಿಗೋ ಹಿಂದುಮಹಾಸಭೆಗೋ ಇನ್ನಾವುದೇ ಪಕ್ಷಕ್ಕೋ ಒಪ್ಪಿಸಿಕೊಡಲಿ, ಅಂತೂ ಭಾರತದ ರಾಜ್ಯಭರಣಾಧಿಕಾರವು ಭಾರತೀಯರಿಗೇ ಬೇಕಾಗಿದೆ, ದೇಶವನ್ನು ಆಕ್ರಮಣಗಾರರಿಂದ ರಕ್ಷಿಸಲು ನಮ್ಮ ಅಧಿಕಾರ ನಮ್ಮ ಕೈಗೆ ಬರಬೇಕಾಗಿದೆ ಈ ಹೋರಾಟದ ನಂತರ ಕಾಂಗ್ರೆಸ್ ಪಕ್ಷವೇ ಇರಲಿಕ್ಕಿಲ್ಲ ಏಕೆಂದರೆ ಸ್ವತಂತ್ರ ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಅವಶ್ಯಕತೆಯಿಲ್ಲ, ಕಾಂಗ್ರೆಸು ಇಂದು ಸ್ವಾತಂತ್ರ್ಯ ಸಂಪಾದನೆಗಾಗಿ ಹೋರಾಡುವ ಸಂಸ್ಥೆ, ಸ್ವಾತಂತ್ರ್ಯ ಸಂಪಾದಿಸಿದರೆ ಅದರ ಉದ್ದೇಶ ವಾಯಿತು'—ಹಾಗಾಗಿ ಈ ಸಲ, ಇದೇ ಕೊನೆಯ ಸಲವಾಗಿ ಕಾಂಗ್ರೆಸು ಕೊನೆಯಿಲ್ಲದ ಹೋರಾಟ ಹೂಡಲು ನಿಶ್ಚಯ ಮಾಡಿದಂತೆ ತೋರುತ್ತದೆ

ಮೊದಲು ಸ್ವಾತಂತ್ರ್ಯ ಸಾರಲಿ!

'ಮೊದಲು ಸ್ವಾತಂತ್ರ್ಯ ಸಾರಲಿ, ಆ ಮೇಲೆ ವಿವರಗಳ ವಿಷಯ ಸಂಧಾನ ಮಾಡಬಹುದು ಆದರೆ ಸ್ವಾತಂತ್ರ್ಯ ಸಾರದೆ ಸಂಧಾನ ಸಾಧ್ಯವೇ ಇಲ್ಲ' ಹೀಗೆಂದು ಪಂಡಿತ ನೆಹರುಗಳು ಸರ್ ಸಪ್ರು ಪ್ರಭೃತಿಗಳು ಸಂಧಾನ ಮಾಡುವರೆ ಉರುಟುಮೇಜಿನ ಪರಿಷತ್ತನ್ನು ಕರೆಯಬೇಕೆಂದು ಸೂಚಿಸಿದ ಅಭಿಪ್ರಾಯಕ್ಕೆ ಉತ್ತರವಿತ್ತಿದ್ದಾರೆ. ಹಿಂದೆ ಅನೇಕ ಸಲ ಉರುಟು ಮೇಜಿನ ಪರಿಷತ್ತುಗಳನ್ನು ಕೂಡಿಸಿ ಆದ ಅಪಮಾನವು ಇನ್ನೂ ಅಳಿಯದಿರುವಾಗ, ಬೇರೊಂದು ಅಂತಹ ಪ್ರಯತ್ನ ಯಾತಕ್ಕೆಂದು ಅವರು ಕೇಳುತ್ತಾರೆ ನಮ್ಮ ಮುಖ್ಯ ಪ್ರಶ್ನೆಯಾದ ಸ್ವಾತಂತ್ರ್ಯವನ್ನು ಸಾರದ ವಿನಾ, ನಮ್ಮನ್ನು ಬ್ರಿಟಿಷರೂ ಅವರ ಮಿತ್ರರೂ ಸಮಾನರೆಂದು ಭಾವಿಸದ ಹೊರತು ಅಮೆರಿಕವಾಗಲಿ ಚೀನವಾಗಲಿ ಮಧ್ಯಸ್ಥಿಕೆ ನಡೆಸಲು ಬಂದರೂ ಪ್ರಯೋಜನವಿಲ್ಲವೆಂದು ಅವರ ಅಭಿಪ್ರಾಯವಿದೆ ಸ್ವಾತಂತ್ರ್ಯವನ್ನು ಒಪ್ಪಿದ ಪಕ್ಷದಲ್ಲಿ ಅದರ ವಿವರಗಳ ಕುರಿತು ಅವಶ್ಯವಾಗಿ ಮಾತುಕತೆ ನಡೆಸಲೇ ಬೇಕೆಂದಿರುವರು 'ನಮ್ಮ ಸ್ವಾತಂತ್ರ್ಯವನ್ನು ಪಡೆಯುವುದು ಮತ್ತು ನಮ್ಮ ಮೇಲೆ ಅಧಿಕಾರ ನಡೆಸುವವರನ್ನು

ಅಶ್ವದಳ

ಹೊರಹಾಕುವುದು ಇದೇ ಇಂದಿನ ನಮ್ಮ ರಾಷ್ಟ್ರಧರ್ಮ ಯುದ್ಧವನ್ನು ಜನತೆಯ ಯುದ್ಧವನ್ನಾಗಿ ಮಾಡಿದರೆ ಮಾತ್ರ ಯುದ್ಧವನ್ನು ಗೆಲ್ಲಬಹುದು, ಹಿಂದುಸ್ತಾನ ಸರಕಾರದ ಪ್ರಯತ್ನ ಏನೂ ಸಾಲದು, ಆಕ್ರಮಣಗಾರರನ್ನೆದುರಿಸಲು ಇಡೀ ರಾಷ್ಟ್ರವನ್ನೇ ಒಂದುಗೂಡಿಸಬೇಕು ಈಗ ನಾವು ತಟಸ್ಥರಾಗಿದ್ದರೆ ಜನರಲ್ಲಿ ಪ್ರತಿಭಟನಾಶಕ್ತಿಯೇ ಕುಂದಿ ಹೋಗುವುದು, ಜನತೆಯಲ್ಲಿ ಹೊಸ ಶಕ್ತಿ ತುಂಬಿಸಲು ನಾವಿಂದು ಬ್ರಿಟಿಷರನ್ನು ಹೊರಹಾಕಿ ದೇಶವನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು' ಎಂದು ನೆಹರು ಘೋಷಿಸಿದ್ದಾರೆ

ಹಾಡಿದ್ದೇ ಹಾಡಿದನಂತೆ!

'ಹಾಡಿದ್ದೇ ಹಾಡಿದನಂತೆ ಕಿಸುಬಾಯಿದಾಸಯ್ಯ' ಇದು ಹಿಂದಿನ ಕಾಲದ ಒಂದು ನಾಣ್ಣುಡಿಯಾಗಿದೆ' ಭಾರತ ಮಂತ್ರಿಯಾಗಿ ಲಂಡನಿನಲ್ಲಿ ಕುಳಿತು ಇಲ್ಲಿನ ಆಡಳಿತ ನಡೆಸುವ ಕರ್ನಲ್ ಅಮೆರಿ ಸಾಹೇಬರೂ ಹಾಡಿದ್ದನ್ನೇ ಹಾಡುತ್ತಾರೆ ಎಂದು ಸಮಸ್ತ ಭಾರತವೇ ಇಂದು ತಿಳಿದುಬಿಟ್ಟಿದೆ' ಕಾಂಗ್ರೆಸು ಸತ್ಯಾಗ್ರಹ ಮಾಡಿದರೆ ಅದನ್ನು ದಬ್ಬಾಳಿಕೆಯಿಂದ ಇದಿರಿಸುವೆವೆಂದು ಹೇಳುತ್ತಾ ತಾವು ಹಿಂದೆ ಎತ್ತಿದ ಶಸ್ತ್ರವನ್ನೇ ಅಮೆರಿ ಹಿಡಿದು ನಿಂತಿದ್ದಾರೆ ಅತ್ತ, 'ಭಾರತದ ಮಿತ್ರ'ನೆಂದು ಹೇಳಿಸಿಕೊಂಡಿದ್ದ ಕ್ರಿಪ್ಸ್ ಸಾಹೇಬರೂ, ಕಾಂಗ್ರೆಸು ಆರಂಭಿಸಲಿರುವ ಸತ್ಯಾಗ್ರಹವನ್ನು ಹತ್ತಿಕ್ಕಲು ಅಮೆರಿಕನರ ಬೆಂಬಲವನ್ನು ಕೇಳಿದ್ದಾರೆ ಬ್ರಿಟಿಷ್ ಪತ್ರಿಕೆಗಳಂತೂ ಉದ್ವೇಗಗೊಂಡು ಕಾಂಗ್ರೆಸಿನ ಮೇಲೆ ನಂಜು ಕಾರುತ್ತಿವೆ! ಬ್ರಿಟಿಷರೊಡನೆ 'ಹೊರಟು ಹೋಗಿರಿ' ಎಂದು ಹೇಳಿದರೆ ಅವರಿಗೆ ಎಂತಹ ಕೋಪವುಂಟಾಗುವುದೆಂದು ಕಾಂಗ್ರೆಸೂ ಬಲ್ಲುದು ರಾಜೇಂದ್ರ ಬಾಬುಗಳು ಈ ಕುರಿತು ವಿವರಿಸುತ್ತಾ, 'ಈ ಸಲ ಸೆರೆಮನೆಗೆ ಹೋಗುವುದು ಮಾತ್ರ ಭಾರತೀಯರ ಕರ್ತವ್ಯವಲ್ಲ, ಗುಂಡು ಹಾಕಬಹುದು, ತಲೆ ಒಡೆಯಬಹುದು, ಆಸ್ತಿ ಒಡವೆಗಳನ್ನು ಜಪ್ತಿ ಏಲಂ ಮಾಡಬಹುದು ಇಂತಹ ಕಠಿಣ ನಿರ್ಬಂಧಗಳನ್ನೆಲ್ಲಾ ಸರಕಾರವು ಕೈಕೊಳ್ಳುವುದು ಸಂಭವವಿರುವುದರಿಂದ ಅವುಗಳನ್ನೆದುರಿಸಬೇಕಾಗಿದೆ, ಈ ಆಂದೋಲನದಲ್ಲಿ ಎಲ್ಲಾ ತರದ ಶಾಸನಭಂಗವೂ ಅಡಕವಾಗುತ್ತದೆ, ಆದ್ದರಿಂದ ಸ್ವಾತಂತ್ರ್ಯಯೋಧರಿಗೆ ಈ ವಿಚಾರ ಚನ್ನಾಗಿ ತಿಳಿದಿರಬೇಕು ಇದು ನಮ್ಮ ಕೊನೆಯ ಸ್ವಾತಂತ್ರ್ಯದ ಹೋರಾಟವಾಗಬೇಕು ರಾಷ್ಟ್ರದ ಸ್ವಾತಂತ್ರ್ಯ ಪಡೆಯಲು ಎಂತಹ ಬಲಿದಾನ ಮಾಡಿದರೂ ಅತ್ಯಲ್ಪವೇ ಎಂಬುದಾಗಿ ಉಪದೇಶಿಸಿದ್ದಾರೆ ಇದೇ ಸಂದರ್ಭದಲ್ಲಿ ಲಂಡನಿನ ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್ ಪತ್ರಿಕೆಯು ಭಾರತೀಯರ ಕೇಳಿಕೆಯನ್ನು ಗಮನಿಸಿ, ಗಂಡಾಂತರವನ್ನು ಪರಿಹರಿಸಬೇಕೆಂದೂ, ಅಮೆರಿಯವರು ದಬ್ಬಾಳಿಕೆಯ ಶಸ್ತ್ರವನ್ನು ಎತ್ತುವ ಮೊದಲು ಹತ್ತು ಸಲ ಆಲೋಚನೆ ಮಾಡತಕ್ಕದ್ದೆಂದೂ, ಗಾಂಧಿಜಿಯ ಪ್ರಭಾವವು ಭಾರತದಲ್ಲಿ ಬಹಳ ಇರುವುದರಿಂದ ಅವರನ್ನೆಲ್ಲಿಯಾದರೂ ಬಂಧಿಸಿದರೆ ಅನರ್ಥವಾದೀತೆಂದೂ ಎಚ್ಚರಿಕೆ ಕೊಡಲು ಮರೆತಿಲ್ಲ

ಇನ್ನೊಂದು ಉರುಟು ಮೇಜು?

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯದಿಂದ ದೇಶವಿದೇಶಗಳಲ್ಲಿ ಕಳವಳ ತಳಮಳಗಳುಂಟಾಗಿವೆ ಕೆಲವರು ವರ್ಧಾಕ್ಕೆ ಹೋಗುತ್ತಿದ್ದಾರೆ ಗಾಂಧಿಜಿಯೊಡನೆ ಮಾತನಾಡುತ್ತಾರೆ, ಹಲವರು ಪತ್ರಿಕೆಗಳಲ್ಲಿ ದೀರ್ಘ ದೀರ್ಘ ಪ್ರಕಟಣೆ ಕೊಡುತ್ತಾರೆ ಈ ಸಂದರ್ಭದಲ್ಲಿ ಸಂಧಾನ ಕುಶಲರೆನಿಸಿದ ಸರ್ ಸಪ್ರುಗಳು ಈ ಸಲವೂ ತನ್ನ ಒಡ್ಡಿವಂತಿಕೆ ಬಿಚ್ಚಲು ಮರೆತಿಲ್ಲ ಇನ್ನೊಂದು 'ಉರುಟುಮೇಜಿನ ಪರಿಷತ್ತು ಕೂಡಿಸಬೇಕೆಂದು ಅವರ ಸೂಚನೆ ಅದರಲ್ಲಿ ಕಾಂಗ್ರೆಸೂ, ಲೀಗೂ ಹಿಂದು ಮಹಾಸಭೆಯೂ ಸಕಲರೂ ಸೇರಿ ಒಂದು ಒಮ್ಮತಕ್ಕೆ ಬರಬೇಕೆಂದೂ, ಅದಕ್ಕೆ ಬ್ರಿಟಿಷರು ಒಪ್ಪಬೇಕೆಂದೂ ಅವರು ಹೇಳುತ್ತಾರೆ' ವೈಸರಾಯ್ ಮಂತ್ರಿಮಂಡಳ ಭೂಷಿತರಾದ ಆಣೆಯವರೂ ಸರ್ಕಾರರೂ ಅಂಬ್ಡೇಕರರೂ ಹಲವು ಸೂಚನೆ ಕೊಟ್ಟಿರುವರು 'ಕ್ರಿಪ್ಸ್ ಸೂಚನೆಗಳು ಅಮೋಘವಾಗಿದ್ದವು, ಅವುಗಳನ್ನು ನಿರಾಕರಿಸಿ ಕಾಂಗ್ರೆಸು ತಪ್ಪು ಮಾಡಿತು ಈಗ ಎಲ್ಲರೂ ಒಟ್ಟಾಗುವುದು ಅವಶ್ಯವಿದೆ, ಎಲ್ಲ ಪಕ್ಷಗಳ ಮುಖಂಡರ ಸಮ್ಮೇಳನವೊಂದು ಕೂಡಿ ಬ್ರಿಟನಿನೊಡನೆ ಸಂಧಾನ ಮಾಡಬೇಕಾಗಿದೆ' ಎಂದು ಆಣೆಯವರು ಹೇಳುತ್ತಾರೆ ಸರ್ಕಾರರು ಕಾಂಗ್ರೆಸು ತನ್ನ ನಿರ್ಣಯವನ್ನು ಪುನರಾಲೋಚಿಸಬೇಕೆಂದು ಹೇಳಿ ಸಂಧಾನದ ಸುದ್ದಿಯೆತ್ತಿದ್ದಾರೆ ಅಂಬ್ಡೇಕರರೂ ಸಂಧಾನಕ್ಕೆ ಬರಬೇಕೆನ್ನುತ್ತಾರೆ ಹೀಗೆ ಸಂಧಾನ ಮಾಡಬೇಕು, ಉರುಟುಮೇಜಿನ ಸುತ್ತು ಸೇರಬೇಕು ಎಂದು ಕೆಲವರು ಹೇಳಿದರೆ ಇದರಲ್ಲಿ ಎಷ್ಟರ ಮಟ್ಟಿಗೆ ಫಲಿತಾರ್ಥವಿದೆ ಎನ್ನುವುದು ಯಾರಿಗೂ ಗೊತ್ತಿಲ್ಲ ಇದಕ್ಕಿಂತ ಹಿಂದೆ ಈ ರೀತಿ ಮಾಡಿದ ಯತ್ನಗಳಿಂದ ಏನು ಫಲ ದೊರೆತಿದೆಯೆಂದು ನೋಡಿದರೆ ಯಾರಿಗೂ ಇದರಲ್ಲಿ ಆಶೆಯುಂಟಾಗುವುದಿಲ್ಲ

KANNADA ILLUSTRATED WEEKLY

ನೋಟಿಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 35/1941 R. E. P. 294/1942
R. E. A. 338/1942

ರುಕ್ಮಿಣಿ ಯಾನೆ ಲಕ್ಷ್ಮಿ ಅಮ್ಮ—
ಅರ್ಜಿದಾರಳು.
ಮತ್ತು
ವೆಂಕಟ್ರಮಣಯ್ಯ ಕೂಡಾ— ಎದ್ರಿರು.

ಇವರೊಳಗೆ ಎದ್ರಿರು 2. ಮಂಗೇಶರಾವ್. 3. ನೀಲಕಂಠ ಶೆಟ್ಟಿ. 4. ಪರಮೇಶ್ವರರಾವ್. 5. ವಿಶ್ವನಾಥರಾವ್. 6. ಚಂದ್ರಶೇಖರರಾವ್. 7. ಗಂಗಾಧರರಾವ್. 1ನೇ ಎದ್ರಿ ವೆಂಕಟ್ರಮಣಯ್ಯನವರ ಮಕ್ಕಳು—ಕಾರ್ಕಳ ಕಸಬಾ ಪೇಟೆಯಲ್ಲಿರುವರು.

ಮೇಲ್ಕಂಡ ಅಮ್ಲ ಜ್ಯಾರಿಯಲ್ಲಿ ಡಿಕ್ರಿಯ ಹಣಕ್ಕೆ ಜಪ್ತಿಯಿರುವ ಸ್ಥಿರಾಸ್ತಿಗಳನ್ನು ಅರ್ಜಿದಾರಳು ಲಿಲಾಂಗೆ ಅಪೇಕ್ಷಿಸಿ ಲಿಲಾಂ ಇಸ್ತಿಹಾರು ದಾಖಲು ಮಾಡಿರುತ್ತಾಳೆ. ಸದ್ರಿ ಲಿಲಾಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಮಾಡಿ ಮಂಜೂರುಮಾಡುವ ಬಗ್ಗೆ ಮತ್ತು ಸದ್ರಿ ಲಿಲಾಂ ಸಮಯ ಅರ್ಜಿದಾರಳಿಗೆ ಲಿಲಾಂಗೆ ನಿಲ್ಲುವರೆಯೂ ಆ ಲಿಲಾಂಗೆ ನಿಶ್ಚಯ್ಯ ಆಯಿವೇಜನ್ನು ಪೈಸ್ಲೆ ಆಯಿವೇಜನಲ್ಲಿ ಮುಜ್ರೆ ಮಾಡುವರೆ ಕೂಡಾ permission ಕೊಡಬೇಕಾಗಿ ಅರ್ಜಿದಾರಳು ದಾಖಲುಮಾಡಿದ ಸದ್ರಿ R. E. A. 338/1942ನೇ ಅರ್ಜಿ ಕುರಿತು ಆಲೋಚಿಸುವ ಬಗ್ಗೆ ಸಹಾ ಸದ್ರಿ ಅಮ್ಲಜ್ಯಾರಿಯು ತಾರೀಕು 15-8-1942ರಲ್ಲು ತಸ್ಲಿಗೆ ಇಟ್ಟಿರುತ್ತದೆ. ಆದ್ದರಿಂದ 2ರಿಂದ 7ನೇ ವರೇಗಿನ ಎದ್ರಿರಾದ ನೀವು ಸ್ವತಃವಾ ಅಗಲೀ ವಕೀಲರ ಮುಖಾಂತರವಾಗಲೀ ಸದ್ರಿ ತಾರೀಕು 15-8-1942ರಲ್ಲು ಹಗಲು 10 ಘಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಿಯದೆ.

ಕೋರ್ಟಿನ ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿದ್ದಾಗಿರುತ್ತದೆ.

ಕಾರ್ಕಳ
4-8-1942. } **K. Vasudeva Kamath**
Advocate for petitioner

NOTICE

In the Court of the District Munsiff of Mangalore.

O. S. No. 150/1942.

Between:
Abbu Hengsu...... *Plaintiff.*
and
Sanku Shetty...... *Defendant.*

To

The Defendant, Sanku Shetty, nephew of Pakeera Shetty, residing Surinje village, Mangalore Taluk.

Whereas the plaintiff has instituted a suit against you for possession of properties leased out to you and also for recovery of rental due by you etc., and the same is posted to 17-8-1942 for disposal, you are hereby summoned to appear before the above court in person or by a pleader on the said date for filing your objections if any. Otherwise the suit will be decided in your absence.

By order

Mangalore, } **B. Manjaya Hegde,**
4-8-1942. } Advocate for plaintiff.

ವಿಜ್ಞಾನ-ವಿಚಿತ್ರ

ನೂತನ ಸಬ್‌ಮೇರಿನ್

೪೦೦,೫೦೦ ಅಡಿ ಉದ್ದದ ಹೊಸ ಸಬ್‌ಮೆರಿನ್ ಒಂದನ್ನು ಜರ್ಮನರು ಉಪಯೋಗಿಸುತ್ತಿದ್ದಾರಂತೆ! ಅದಕ್ಕೆ ಎದುರಾದ ಅಮೆರಿಕನ್ ಹಡಗೊಂದರ ಮೇಲೆ ಅದು ೨೦೦ ಷೆಲ್ ಸುರಿಸಿತಂತೆ. ಸಬ್‌ಮೆರಿನ್ ಹೊರಟುಹೋದ ಎರಡು ಗಂಟೆಗಳ ವರೆಗೆ ಅದರ ಯಂತ್ರ ಶಬ್ದವು ಕೇಳಿ ಬರುತ್ತಿತ್ತಂತೆ. ಜರ್ಮನರು ಯುದ್ಧ ಮಾಡಲಿಕ್ಕೂ ಸಾಧನ ಸಾಮಗ್ರಿ ಕೊಂಡೊಯ್ಯಲಿಕ್ಕೂ ಈ ಸಬ್‌ಮೆರಿನ್ ಉಪಯೋಗಿಸುತ್ತಿದ್ದಾರೆಂದೂ ತಿಳಿದಿದೆ.

ಕಾಗದದ ಹುಟ್ಟು

ಕ್ರಿ. ಪೂ. ೩೦೦ರಲ್ಲಿ ಚೀನದಲ್ಲಿ ಕಾಗದದ ಹುಟ್ಟು ಆಯಿತು. ಒಂದು ಬಗೆಯ ಸಸ್ಯ ಫಲಕಗಳನ್ನು ಈಜಿಪ್ತಿನಲ್ಲಿ ಅದರ ಮೊದಲೇ ಉಪಯೋಗಿಸುತ್ತಿದ್ದರು. ಚೀನರು ಒಂದು ಜಾತಿ ಹಿಪ್ಪನೇರಳೆ ಗಿಡಗಳಿಂದ ಕಾಗದ ತಯಾರಿಸಿದರು. ಕ್ರಿ. ಶ. ೭೫೧ರಲ್ಲಿ ಸಮರ್ ಖಂಡದಲ್ಲೂ ೧೧೫೦ರಲ್ಲಿ ಸ್ಪೈನಿನಲ್ಲೂ ಈ ವಿದ್ಯೆ ಕಲಿಯಲ್ಪಟ್ಟಿತು. ೧೪೯೦ರಲ್ಲಿ ಜಾನ್‌ಟೇಟ್ ಎಂಬವನು ಇಂಗ್ಲೆಂಡಿನಲ್ಲಿ ಕಾಗದ ತಯಾರಿ ಕಾರ್ಖಾನೆ ಪ್ರಾರಂಭಿಸಿದನು. ೧೮೫೮ರ ತನಕ ಈ ಕೈಗಾರಿಕೆಗೆ ವಿಜ್ಞಾನದ ಬೆಂಬಲ ಸಿಗಲಿಲ್ಲ. ೧೮೫೧ರಲ್ಲಿ ಲಂಡನಿನ ಟೈಮ್ಸ್ ಪತ್ರಿಕೆಯು ಬಟ್ಟೆಚೂರುಗಳ ಬದಲು ಬೇರೆ ಮೂಲ ವಸ್ತು ಕಂಡುಹಿಡಿದವರಿಗೆ ೧೦೦೦ ಪವನು ಬಹುಮಾನ ಕೊಡುವುದಾಗಿ ಸಾರಿತು. ಉತ್ತರ ಆಫ್ರಿಕ ಮತ್ತು ಸ್ಪೈನಿನಲ್ಲಿ 'ಎಸ್ಪಾರ್ಟೋ' ಎಂಬ ಒಂದು ಜಾತಿ ಹುಲ್ಲು ಬೆಳೆಯುತ್ತದೆ. ಅದನ್ನು ಬಳಸಲು ಪ್ರಾರಂಭವಾಯಿತು. ಕ್ರಮೇಣ ಮರದ ಕಾಂಡದಿಂದ ಕಾಗದ ತಯಾರಿಸುವುದು ರೂಢಿಗೆ ಬಂತು.

ಪ್ರಮೀಳಾ ರಾಜ್ಯ

ಉತ್ತರ ಅಮೆರಿಕ ದಕ್ಷಿಣ ಅಮೆರಿಕಗಳ ನಡುವೆ ಇರುವ ಕೆರಿಬಿಯನ್ ಸಮುದ್ರದಲ್ಲಿರುವ ಸಾಬಾ ದ್ವೀಪದಲ್ಲಿ ಹೆಂಗುಸರೇ ಹೆಚ್ಚು. ಜನಸಂಖ್ಯೆ ೭೦೦ರಲ್ಲಿ ಕೆಲವೇ ಮಂದಿ ಗಂಡಸರು. ಸ್ತ್ರೀಯರೆಲ್ಲರೂ ಸ್ವರ್ಣಕೇಶಿನಿಯರು. ಯಂತ್ರ ವಿದ್ಯುಚ್ಛಕ್ತಿ ಅಲ್ಲಿಲ್ಲ. ಹಳೇ ಇಂಗ್ಲಿಷ್ ಭಾಷೆ ಅವರದು. ಚೆಲುವೆಯರು ಅವರು; ಚೆಲುವೆಯ ಯುವಕರಿಗೆ ವಿವಾಹಿತೆಯರು ಬೇಗ ಬುದ್ಧಿ ಕಲಿಸುತ್ತಾರೆ. ಅವಿವಾಹಿತೆಯರು ಬೇಗನೇ ವಿವಾಹದ ಆಶೆ ತೋರಿಸುತ್ತಾರೆ. ಪಾಶ್ಚಾತ್ಯ ಲೋಕದ ಒಯ್ಯಾರ ಅಲ್ಲಿಲ್ಲ. ಅಲ್ಲಿನವರೆಲ್ಲ ಕ್ರಿಶ್ಚಿಯನರು: ಧರ್ಮಶ್ರದ್ಧರು. ಕಳೆದ ೧೫೫ ವರ್ಷಗಳಲ್ಲಿ ಒಂದೇ ಒಂದು ಕೊಲೆ ಅಲ್ಲಿ ನಡೆದಿದೆ. ಅಲ್ಲಿ ಮೂವರೇ ಮಂದಿ ಪೋಲೀಸರಿದ್ದಾರೆ. ಅವರ ಕೆಲಸವೋ ಸಕಾಲಕ್ಕೆ ಗಂಟೆ ಬಾರಿಸುವುದು ಮಾತ್ರ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನೂ ಬಲವನ್ನೂ ಕೊಡುತ್ತದೆ

ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಹೊಂದಿದ ಶಾಲಾ ಪಠ್ಯ ಪುಸ್ತಕಗಳು

ಮಾಧ್ಯಮಿಕ ಶಾಲಾ ಲಘು ಗಣಿತ
ಎಂ. ಪಿ. ದೇವರಾವ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಉಡುಪಿ.
Iನೇ ಫೋರ್ಮಿಗೆ 0-12-0 IIನೇ ಫೋರ್ಮಿಗೆ 0-12-0
ಎಂ. ಪಿ. ದೇವರಾವ್ ಬಿ. ಎ. ಎಲ್. ಟಿ. ಮತ್ತು ಭವಾನಿರಾವ್ ಬಿ. ಎ. ಎಲ್. ಟಿ.
IIIನೇ ಫೋರ್ಮಿಗೆ 0-12-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ಬಾಲಕರ ಲಘುಗಣಿತ
ಬಿ. ಭವಾನಿರಾವ್, ಬಿ. ಎ. ಎಲ್. ಟಿ. ಸೈಂಟ್ ಏನ್ಸ್ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0-7-0 ಐದನೇ ದರ್ಜೆಗೆ 0-8-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಸೆಕೆಂಡರಿ ಶಾಲೆಗಳಿಗೆ ಮಂಜೂರಾಗಿದೆ)

ನವೀನ ಭೂವಿವರಣೆ
ಎಂ. ವಾಸುದೇವರಾವ್ ಎಂ. ಎ., ಎಲ್. ಟಿ. (Dip. Geog.)
ನಾಲ್ಕನೇ ದರ್ಜೆಗೆ 0-6-0 ಐದನೇ ದರ್ಜೆಗೆ 0-7-0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಶಾಲೆಗಳಿಗೆ ಮಂಜೂರಾಗಿದೆ)

ಪ್ರಾಥಮಿಕ ಲಘುವಿಜ್ಞಾನ
ಎಸ್. ರಾಮಕೃಷ್ಣಾಚಾರ್, ಬಿ. ಎ. ಎಲ್. ಟಿ. ಬೋರ್ಡ್ ಹೈಸ್ಕೂಲ್, ಕಾರ್ಕಳ.
ಆರನೇ ದರ್ಜೆಗೆ 0-6-0 ಏಳನೇ ದರ್ಜೆಗೆ 0-6-0 ಎಂಟನೇ ದರ್ಜೆಗೆ 0-6-0
(ಡಿಸ್ಟ್ರಿಕ್ಟ್ ಬೋರ್ಡಿನ ಉಡುಪಿ ಕುಂದಾಪುರ ಕಾರ್ಕಳ ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.)

ವ್ಯಾಕರಣ ಮತ್ತು ಪ್ರಬಂಧ
ಕೆ. ಕೆ. ರೈ. ವಿದ್ವಾನ್.
4 ಮತ್ತು 5ನೇ ದರ್ಜೆಗೆ 0-2-0 6ನೇ ದರ್ಜೆಗೆ ಅಥವಾ I ಫೋರ್ಮಿಗೆ 0-3-0
7ನೇ ದರ್ಜೆಗೆ ಅಥವಾ II ಫೋರ್ಮಿಗೆ 0-3-6 8ನೇ ದರ್ಜೆಗೆ ಅಥವಾ III ಫೋರ್ಮಿಗೆ 0-4-0
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಮಕ್ಕಳ ಪದ್ಯಮಂಜರಿ
ಕೆ. ಕೆ. ರೈ. ವಿದ್ವಾನ್.
ಮೊದಲನೆ ಪುಸ್ತಕ ೧, ೨, ೪ನೇ ದರ್ಜೆಗಳಿಗೆ 0-2-0 2ನೇ ಪುಸ್ತಕ ೪, ೫ನೇ ದರ್ಜೆಗಳಿಗೆ 0-2-6
(ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ)

ಸಿವಿಕ್ಸ್
ಎಂ. ಗಣಪತಿರಾವ್ ಐಗಳ್.
3ನೇ ದರ್ಜೆಗೆ 0-1-6 4ನೇ ದರ್ಜೆಗೆ 0-2-0 5ನೇ ದರ್ಜೆಗೆ 0-2-6
ಎಂ. ಗಣಪತಿರಾವ್ ಐಗಳ್ ಮತ್ತು ಕೆ. ಕೆ. ರೈ. ವಿದ್ವಾನ್.
6ನೇ ದರ್ಜೆಗೆ 0-3-0 7ನೇ ದರ್ಜೆಗೆ 0-3-0 8ನೇ ದರ್ಜೆಗೆ 0-3-0
(ಡಿಸ್ಟ್ರಿಕ್ಟ್ ಬೋರ್ಡಿನ ಮಂಗಳೂರು ಪುತ್ತೂರು ಕಾಸರಗೋಡು ತಾಲೂಕುಗಳ ಎಲ್ಲಾ ಹಾಯರ್ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿದೆ.

ಚರಿತ್ರೆ ಮತ್ತು ಕಥೆಗಳು
ಮೂರನೇ ದರ್ಜೆಗೆ 0-2-6 ನಾಲ್ಕನೇ ದರ್ಜೆಗೆ 0-3-0

ನವೀನ ಪ್ರಕೃತಿಶಾಸ್ತ್ರ ಮತ್ತು ತೋಟಗಾರಿಕೆ
ಎಂ. ವಾಸುದೇವರಾವ್ ಎಂ. ಎ. ಎಲ್. ಟಿ. ಗಣಪತಿ ಹೈಸ್ಕೂಲ್, ಮಂಗಳೂರು.
ನಾಲ್ಕನೇ ದರ್ಜೆಗೆ 0-3-0 ಐದನೇ ದರ್ಜೆಗೆ 0-3-6

ಪ್ರಕೃತಿಶಾಸ್ತ್ರ
ಎಂ. ಗಣಪತಿರಾವ್ ಐಗಳ್
ಮೂರನೇ ದರ್ಜೆಗೆ 0-1-6

ಶಾರದಾ ಛಾಪಖಾನೆ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

“ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

7-8-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೭-೮-೧೯೪೨]

ಸಮರಭೂಮಿಯ ಸಂಚಾರ

ರಶ್ಯ ಯುದ್ಧವು ಪ್ರಚಂಡವಾಗಿ ಸಾಗುತ್ತಿದೆ. ರೋಸ್ಟೋವನ್ನು ಕೈವಶಮಾಡಿದ ಬಳಿಕ ಜರ್ಮನ್‌ಸೇನೆ ಕಾಕಸಸ್ ಕಡೆಗೆ ಮುನ್ನುಗ್ಗಿದೆ. ಡಾನ್ ನದಿಯ ದಕ್ಷಿಣ ತೀರದ ಕ್ಲೆಟ್ಸ್ಕಾಯದ ದಕ್ಷಿಣದಲ್ಲಿ ಸಿಮ್ಲ್ಯಾನಸ್ಕಾಯದ ಹತ್ತಿರದಲ್ಲಿ ಮತ್ತು ಡಾನ್ ನದಿಯ ಕೆಳಭಾಗದಲ್ಲಿ ಸಾಲ್ಸ್ಕದಿಂದ ಕುಶ್ಚೆವ್ಸ್ಕಾಯದ ವರೆಗಿನ ವಿಸ್ತಾರ ಪ್ರದೇಶದಲ್ಲಿ ಹೀಗೆ ಮೂರು ಸ್ಥಳಗಳಲ್ಲಿ ಭೀಷಣ ಯುದ್ಧವಾಗುತ್ತಿದೆ. ಉತ್ತರ ಕಾಕಸಸಿನಲ್ಲಿ ಜರ್ಮನರು ಬಲು ದೂರ ಒಳನುಗ್ಗಿರುವರು. ಟ್ರಾನ್ಸ್ ಕಾಕಸಿಯನ್ ರೈಲ್ವೆಯ ಮಹತ್ವದ ಜಂಕ್ಷನಾದ ಸಾಲ್ಸ್ಕ್ ಸುತ್ತಲೂ ಯುದ್ಧ ನಡೆದಿರುವುದು. ವೊರೊನೆಜ್ ಭಾಗದ ಹೋರಾಟವು ಸ್ವಲ್ಪ ಶಾಂತವಾದಂತಿದೆ. ಜರ್ಮನ್ ಸೈನ್ಯವು ನೊವೊರೊಸ್ಸಿಸ್ಕ್ ಸ್ಟಾಲೀನ್‌ಗ್ರಾಡ್ ರೈಲ್ವೆ ಕತ್ತರಿಸಿದೆ. ಕೆಲವು ಸೈನ್ಯ ಕುಶವೆಸ್ಕಾಯದ ಮುಖಾಂತರ ಬಾಕೂ ಎಣ್ಣೆ ಗಣಿ ಕಡೆಗೆ ಸಾಗಿದೆ. ದಕ್ಷಿಣ ರಶ್ಯದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ರಶ್ಯನರ ಪ್ರತಿಭಟನೆ ಜೋರಾಗಿರುವುದರಿಂದ ಜರ್ಮನರು ಹಿಂದೆ ಸರಿದಿರುವರು. ಕ್ಲೆಟ್ಸ್ಕಾಯದ ಹತ್ತಿರ ಒಂದು ವಾರದಿಂದ ಭೀಕರ ಸಂಗ್ರಾಮ ಸಾಗುತ್ತಿದೆ. ಇಜಿಪ್ತ್‌ನಲ್ಲಿಯೂ ಭೂವಾಯು ಯುದ್ಧಗಳು ಆಗುತ್ತಿವೆ. ಚೆಕಿಯಾಂಗ್ ಕರಾವಳಿಯಲ್ಲಿ ಜಪಾನರು ಧಾಳಿಯಿಡುತ್ತಿದ್ದಾರೆ. ಮಂಚೂರಿಯ ಗಡಿನಾಡಿನಲ್ಲಿ ಸುಮಾರು ೧೫೦೦ ಮೈಲು ಪ್ರದೇಶದಲ್ಲಿ ಜಪಾನರು ಅಸಂಖ್ಯಾತ ಸೈನ್ಯಸಂಗ್ರಹಿಸಿರುವರೆಂದು ಸುದ್ದಿ.

ಜೀವನ ಮರಣದ ಸಂಗ್ರಾಮ

ರಶ್ಯವು ಇಂದು ಮುನ್ನುಗ್ಗಿ ಬರುತ್ತಿರುವ ಜರ್ಮನರೆದುರು ಜೀವನ ಮರಣದ ಸಂಗ್ರಾಮ ಹೂಡಿದೆ. ರಶ್ಯಕ್ಕೆ ಯುದ್ಧ ಪ್ರಾರಂಭವಾದ ಬಳಿಕ ಇಂದಿನಂತಹ ಗಂಡಾಂತರ ಒದಗಿರಲಿಲ್ಲ. ವಸಂತಕಾಲದ ಯುದ್ಧ ಆರಂಭವಾದ ವೇಳೆ ಜರ್ಮನರು ರಶ್ಯದ ಅರುವತ್ತು ಸಾವಿರ ಚದುರ ಮೈಲು ಪ್ರದೇಶವನ್ನು ಕೈವಶ ಮಾಡಿಕೊಂಡರು. ಈ ಭಾಗಗಳೆಲ್ಲ ಬಹಳ ಪ್ರಾಮುಖ್ಯವಾದವುಗಳೇ. ಯುಕ್ರೇನ್ ಬಹಳ ಸಂಪದ್ಯುಕ್ತವಾದ ಕಬ್ಬಿಣ ಉಕ್ಕು ಕಲ್ಲಿದ್ದಲುಗಳ ಕೈಗಾರಿಕೆಯ ಪ್ರದೇಶ. ಅದರ ಉತ್ತರದಲ್ಲಿರುವ ಡಾನ್ ಡೊನೆಟ್ಜ್ ಪ್ರದೇಶವು ಸಸ್ಯ ಸಮೃದ್ಧವಾದ ವ್ಯವಸಾಯಭೂಮಿ. ಹೀಗೆ ಕೈಗಾರಿಕಾ, ವ್ಯವಸಾಯ ಪ್ರದೇಶಗಳೇ ಜರ್ಮನರ ಕೈಸೇರಿವೆ. ಕಳೆದ ವರ್ಷದ ಯುದ್ಧ ಮತ್ತು ಈ ವರ್ಷದ ಯುದ್ಧವನ್ನು ಹೋಲಿಸಿ ನೋಡಿದರೆ ರಶ್ಯಕ್ಕೆ ಯಾವ ತರದ ಆಘಾತವುಂಟಾಗಿದೆಯೆಂದು ತಿಳಿದುಬರುತ್ತದೆ. ಕಳೆದ ವರ್ಷದಲ್ಲಿ ಉತ್ತರದಲ್ಲಿ ಲೆನಿನ್‌ಗ್ರಾಡಿನಿಂದ ದಕ್ಷಿಣದಲ್ಲಿ ಒಡೆಸಾದ ವರೆಗೆ ಎಲ್ಲಾ ಪ್ರದೇಶಗಳಲ್ಲಿಯೂ ಏಕಕಾಲದಲ್ಲಿ ಕಾಳಗ ನಡೆಯುತ್ತಿತ್ತು. ಆದರೆ ಈ ವರ್ಷ ಅಂತಿಲ್ಲ. ಒಂದು ಪಟ್ಟಣ ಕೈಸೇರಿದ ಮೇಲೆ ಇನ್ನೊಂದು. ಕಳೆದ ವರ್ಷದಲ್ಲಿ ರಶ್ಯದ ಬಲವನ್ನು ಮುರಿಯುವುದು ಹಿಟ್ಲರನ ಸಾಧನೆಯಾಗಿದ್ದರೆ, ಈ ವರ್ಷ ರಶ್ಯನರ ಸಂಗ್ರಾಮಕ್ಕೆ ಬೇಕಾದ ಎಣ್ಣೆ, ಗೋಧಿ, ಕಬ್ಬಿಣ ಕಲ್ಲಿದ್ದಲು ಮೊದಲಾದ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲು ಸಂಗ್ರಾಮ ಸಾಗಿದೆ. ಆದ್ದರಿಂದಲೇ ಹಿಟ್ಲರನು ಮೋಸ್ಕೋ ಲೆನಿನ್‌ಗ್ರಾಡ್‌ಗಳ ವಿಚಾರವನ್ನು ಬದಿಗೊತ್ತಿ ಯುಕ್ರೇನ್, ಡಾನ್ ಡೊನೆಟ್ಜ್ ಮತ್ತು ಕಾಕಸಸ್‌ಗಳಿಗೆ ಕಾಲಿಟ್ಟಿರುವನು.

ಕಾಕೇಷಿಯದ ಕಾಳಗ

ಜರ್ಮನರ ಸೈನ್ಯವು ಕಾಕೇಷಿಯವನ್ನು ಮುತ್ತಿಗೆಹಾಕಿದೆ. ಉತ್ತರ ಕಾಕೇಷಿಯದ ಅಡ್ಡ ಹರಿಯುವ ಡಾನ್ ನದಿಯನ್ನು ದಾಟಲು ಹಲವು ಕಡೆಗಳಿಂದ ಪ್ರಯತ್ನಮಾಡಲಾಗುತ್ತಿದೆ. ಅಲ್ಲಿನ ಪರಿಸ್ಥಿತಿಯು ವಿಷಮವಿರುವುದು. ಡಾನ್ ನದೀ ರೇಖೆಗೆ ದಕ್ಷಿಣದಲ್ಲಿ ಸರಿಯಾಗಿ ಕ್ರಾಸ್ನಡಾರಿನಿಂದ ಸ್ಟೇಲಿನ್ ಗ್ರಾಡ್ ವರೆಗೆ ರೈಲುಹಾದಿ ಹರಿಯುತ್ತದೆ. ಸ್ಟೇಲಿನ್ ಗ್ರಾಡ್ ಕಡೆಯಿಂದ ಜರ್ಮನರು ಈಗಾಗಲೇ ಈ ಮಾರ್ಗವನ್ನು ಆಕ್ರಮಿಸಿ ಬಂದಿದ್ದಾರೆ. ಹೀಗೆ ಮುನ್ನುಗ್ಗಿರುವುದರಿಂದ ರೊಸ್ಟೋವಿನ ದಕ್ಷಿಣಕ್ಕೆ ಬಹಳ ವಿಪತ್ತು ಉಂಟಾಗಿದೆ. ಜರ್ಮನರ ಸೇನೆಯನ್ನು ಇದಿರಿಸಲಾರದೆ ರಶ್ಯನರು ರೋಸ್ಟೋವನ್ನು ಧ್ವಂಸ ಮಾಡಿ ಶತ್ರುವಶ ಬಿಟ್ಟುಕೊಟ್ಟರು! ಸದ್ಯ ಜರ್ಮನರು ಕ್ರಾಸ್ನಡಾರ್ ಕಡೆಗೆ ಹೋಗುತ್ತಿರುವರು. ಇದು ಪಶ್ಚಿಮ ಕಾಕೇಷಿಯದ ರಾಜಧಾನಿ. ಇದು ವ್ಯವಸಾಯಕ್ಷೇತ್ರವಾಗಿದ್ದು ಇಲ್ಲಿ ತುಂಬಾ ಗೋಧಿ ಬೆಳೆಯುತ್ತದೆ. ಇದನ್ನು ಹಿಡಿದರೆ ಸ್ಟಾಲಿನ್ ಗ್ರಾಡ್ ಮುತ್ತಿಗೂ ಕೇಸ್ಪಿಯನ್ ಸಮುದ್ರ ತೀರದಲ್ಲಿರುವ ಗ್ರೋಜ್ನಿ ಎಂಬ ಎಣ್ಣೆ ಖನಿಯ ಆಕ್ರಮಣಕ್ಕೂ ಅವಕಾಶವಾಗುತ್ತದೆ. ಪ್ರೊಲಿಟನ್ ಸ್ಕ್ಯಾಯ್ ಎಂಬ ಜಂಕ್ಷನ್ ಇಷ್ಟರಲ್ಲೇ ಜರ್ಮನರ ವಶವಾಗಿದೆಯೆಂದು ಸುದ್ದಿಯಿದೆ. ಇದು ನಿಜವಾದರೆ ಕಾಕೇಷಿಯದ ವಿಪತ್ತು ವಿಷಮವಾದಂತೆಯೇ ಸರಿ.

ಸ್ಟೇಲಿನ್ ಗ್ರಾಡ್ ಕಾಪಾಡಲು

ಸ್ಟೇಲಿನ್‌ಗ್ರಾಡ್ ಕಡೆ ಜರ್ಮನರು ನುಗ್ಗುತ್ತಿರುವಂದರೂ, ಅದರ ರಕ್ಷಣೆಗಾಗಿ ಟಿಮೊಶಂಕೋ ಪ್ರಬಲ ಸಾಹಸ ಮಾಡುತ್ತಿದ್ದಾನೆ. ಮೂರು ಕಡೆಗಳಿಂದ ಜರ್ಮನ್ ಸೈನ್ಯವು ಅಲ್ಲಿಗೆ ಸರಿಯುತ್ತಿದೆ. ರಶ್ಯದ ಅಧಿನಾಯಕ ಸ್ಟೇಲಿನ್ ತನ್ನ ಜೀವಿತದಲ್ಲಿ ಎರಡನೆಯ ಸಲ ಈ ನಗರವನ್ನು ರಕ್ಷಿಸಬೇಕಾಗಿ ಬಂದಿದೆ. ಮೊದಲನೆಯ ಬಾರಿ ೧೯೧೮ರಲ್ಲಿ ಈ ಪಟ್ಟಣವನ್ನು ಕೈವಶಪಡಿಸಲು ಕ್ರೂರ ಕಾಳಗ ಹೂಡಬೇಕಾಯಿತು. ಆಗ ಇದರ ಹೆಸರು ‘ಝಾರಿಟ್ಸ್’ ಎಂದಿತ್ತು. ಸ್ಟೇಲಿನ್ ಇದನ್ನು ಜೀವದ ಹಂಗು ತೊರೆದು ಹೋರಾಡಿ ಸ್ವಾಧೀನಪಡಿಸಿಕೊಂಡಮೇಲೆ ಇದಕ್ಕೆ ಸ್ಟೇಲಿನ್ ಗ್ರಾಡ್ ಎಂಬ ನಾಮಕರಣವಾಯಿತು. ಇದು ಪ್ರಮುಖ ಕೈಗಾರಿಕಾ ಕೇಂದ್ರವೂ ಆಗಿದೆ. ವಿಮಾನಗಳು ಟೇಂಕುಗಳು ಅಲ್ಲಿ ನಿರ್ಮಾಣವಾಗುತ್ತವೆ. ಕಾಕಸಸಿನಿಂದ ಎಣ್ಣೆ ಸ್ಟೇಲಿನ್ ಗ್ರಾಡ್ ರೈಲ್ವೆ ಮೂಲಕ ಸಾಗುತ್ತಿದ್ದೆ. ಹೀಗೆ ಸೈನಿಕ, ಆರ್ಥಿಕ, ರಾಜಕೀಯ, ಕಾರಣಗಳಿಂದೆಲ್ಲಾ ಸ್ಟೇಲಿನ್‌ಗ್ರಾಡ್ ರಶ್ಯನರಿಗೆ ಅತ್ಯಂತ ಮಹತ್ವದ್ದಾಗಿದೆ. ಅಂತೆಯೇ ಅದನ್ನು ಸ್ವಾಧೀನಪಡಿಸುವುದು ಜರ್ಮನರಿಗೂ ಈಗ ಅವಶ್ಯವೆನಿಸಿರುವುದು.

ಕಾಕಸಸಿಗೆ ಮುಟ್ಟಿದನು!

ರೋಸ್ಟೋವನ್ನು ಕೈವಶಪಡಿಸಿಕೊಂಡ ಜರ್ಮನರು ಭರದಿಂದ ಕಾಕಸಸ್ ಕಡೆಗೆ ಧಾವಿಸಿದ್ದಾರೆ. ಕಾಕಸಸಿನ ಎಣ್ಣೆಯೆಂದರೆ ರಶ್ಯದ ಯುದ್ಧಯಂತ್ರದ ಜೀವಾಳ. ಅದನ್ನು ಹಿಡಿದು ರಶ್ಯವನ್ನು ಹದಗೊಳಿಸಬೇಕೆಂಬುದೇ ಹಿಟ್ಲರನ ಇಂದಿನ ಉದ್ದೇಶ. ಸ್ಟೇಲಿನ್‌ಗ್ರಾಡನ್ನು ಹಿಡಿದು ವೋಲ್ಗಾ ನದಿಯ ಮೂಲಕ ಜರ್ಮನರು ಮುಂದೊತ್ತಲು ಸಮರ್ಥರಾದರೆ ಕಾಕಸಸನಷ್ಟೇ ಅಲ್ಲ ಇಡೀ ದಕ್ಷಿಣ ರಶ್ಯವನ್ನೇ ಉಳಿದ ರಶ್ಯದಿಂದ ಬೇರ್ಪಡಿಸಿದಂತಾಗುವುದು. ಆದರೆ ಕಾಕಸಸನ್ನು ಸ್ವಾಧೀನಪಡಿಸುವುದು ಸುಲಭವಲ್ಲವೆಂದು ಕೆಲವು ಸೈನಿಕ ವಿಚಕ್ಷಣರು ಹೇಳುತ್ತಾರೆ. ಏಕೆಂದರೆ ಈ ಪ್ರದೇಶದಲ್ಲಿ ಒಂದೇ ಒಂದು ರೈಲು ಹಾದಿಯಿಲ್ಲ. ರಸ್ತೆಗಳೂ ಅನುಕೂಲವಾಗಿಲ್ಲ. ಭೂಮಿಯು ಪರ್ವತ ಪ್ರದೇಶವಾಗಿದೆ. ವಿಮಾನಗಳಿಂದ ಪರ್ವತಗಳನ್ನು ದಾಟಬೇಕಾಗುವುದು. ಅಂತೂ ಇದನ್ನು ಹಿಡಿದುಬಿಡಲು ಜರ್ಮನರು ಹರಸಾಧನೆ ಮಾಡಿ ಹೋರಾಡುತ್ತಿದ್ದಾರೆ. ರಶ್ಯನರು ಉಸಿರಿರುವ ವರೆಗೆ ಕಾಕಸಸನ್ನು ಶತ್ರುವಶ ಬಿಟ್ಟುಕೊಡುವುದು ಸಾಧ್ಯವಿಲ್ಲ. ಏಕೆಂದರೆ ಅಲ್ಲಿನ ಎಣ್ಣೆ ಒದಗದಿದ್ದರೆ ಟಿಮೊಶಂಕೋನ ಸೈನ್ಯದ ರಥಗಳು ಚಲಿಸಲಾರದೆ ಕುಸಿದು ಬೀಳುವವು! ಎಣ್ಣೆಯ ಅಭಾವದಿಂದ ಯುದ್ಧವು ಹೇಗೆ ಅಪಜಯ ಹೊಂದುವುದೋ ಅಂತೆಯೇ ವ್ಯವಸಾಯ ಕೈಗಾರಿಕೆಗಳಿಗೂ ಅಪಾಯವುಂಟು. ಕಾರ್ಖಾನೆಗಳು ಚಲಿಸಬೇಕಾದರೆ ಎಣ್ಣೆ ಬೇಕು. ರಶ್ಯದಲ್ಲಿ ಕೃಷಿ ನಡೆಯುವುದು ‘ಟ್ರೇಕ್ಟರ್’ಗಳ ಮೂಲಕ. ಅವುಗಳು ನಡೆಯಬೇಕಾದರೆ ಎಣ್ಣೆಯಿಲ್ಲದೆ ಸಾಧ್ಯವಿಲ್ಲ. ಯುಕ್ರೇನ್ ಪತನದಿಂದ ಈಗಾಗಲೇ ಆಹಾರದ ಅಭಾವವುಂಟಾಗಿದೆ. ಇದರೊಡನೆ ಕೃಷಿಮಾಡಲು ಕಾಕಸಸಿನ ಪತನವಾಗಿ ಎಣ್ಣೆಯ ಅಭಾವವೂ ಉಂಟಾದರೆ ಮುಂದಿನ ಕಷ್ಟವನ್ನು ಹೇಳುವುದೇ ಬೇಡ.

ಈ ಗಂಡಾಂತರ ಕಾಲದಲ್ಲಿಯಾ?

ರಶ್ಯದ ಈ ಗಂಡಾಂತರ ಕಾಲದಲ್ಲಿ ಮಿತ್ರರು ಮಾಡುತ್ತಿರುವುದೇನು? ಇದನ್ನು ಕಣ್ಣು ಕಣ್ಣು ಬಿಟ್ಟು ನೋಡುವುದೇ? ರಶ್ಯವನ್ನು ಕಾಪಾಡಬೇಕಾದರೆ ದ್ವಿತೀಯ ರಣರಂಗವನ್ನು ತೆರೆಯಬೇಕೆಂದು ಎಷ್ಟೋ ಕಾಲದಿಂದ ಎಲ್ಲಾ ಕಡೆಗಳಿಂದಲೂ ಬೊಬ್ಬೆಯೆದ್ದಿದೆ. ರಶ್ಯವು ಇಂದು ದಣಿದಿದೆ. ಜರ್ಮನರ ಆಘಾತವನ್ನು ಇದೇ ಪ್ರಕಾರ ಬಹುಕಾಲ ಸಹಿಸಲಾರದು. ಈ ಕಾಲದಲ್ಲಿ ರಶ್ಯಕ್ಕೆ ನೆರವೀಯಬೇಕು. ಏನಿದ್ದರೂ ಸಹಾಯವಾಗಬೇಕು. ಸಹಾಯವು ಒದಗಿದಷ್ಟು ಪ್ರಯೋಜನ. ಈ ವಿಷಯದಲ್ಲಿ ನಿರ್ಧರಿಸಿದ್ದರೂ, ಬಹಳ ಅಪಾಯಕಾರಿಯಾದರೂ ಚಿಂತೆಯಿಲ್ಲ. ಈಗಲೇ ಮಿತ್ರರಾಷ್ಟ್ರಗಳು ಬ್ರಿಟನ್ ಅಮೆರಿಕ ಮೊದಲಾದವುಗಳು ಯುರೋಪಿನಲ್ಲಿ ಬೇರೊಂದೆಡೆ ಹೊಸ ರಣರಂಗವನ್ನು ಪ್ರಾರಂಭಿಸಿ ಜರ್ಮನರ ಗಮನವನ್ನು ರಶ್ಯದ ಕಡೆಯಿಂದ ಸಲ್ಪ ನಿವೃತ್ತಿಪಡಿಸಲೇಬೇಕು. ಈ ವಿಚಾರ ಎಲ್ಲರಂತೆ ಬ್ರಿಟಿಷರೂ ಅಮೆರಿಕನರೂ ಒಪ್ಪುತ್ತಾರೆ. ಆದರೆ ಎಂದಾಗ ಎಲ್ಲಿ ದ್ವಿತೀಯ ರಣರಂಗವೆಂದು ಇನ್ನೂ ಯಾರಿಗೂ ತಿಳಿದಿಲ್ಲ. ಕಾಲವಿಂತೆ ಹೋದರೆ ಆಯ ತಪ್ಪಿಹೋದರೆ ಮತ್ತೆ ಚಿಂತಿಸಿ ಫಲವಿಲ್ಲ. ಒಂದು ಪಕ್ಷ ಜರ್ಮನಿಯು ರಶ್ಯವನ್ನು ನೆಲೆಗೊಳಿಸಿಬಿಟ್ಟರೆ ಹಾಗಾದರಲ್ಲಿ ಬಳಿಕ ನಮ್ಮ ಹಾನ್ಯಕೆ. ಆ ವೇಳೆ ದ್ವಿತೀಯ ರಣರಂಗ ಮಾಡಿದರೂ ಪ್ರಯೋಜನ ಹೆಚ್ಚಿನದೇನೂ ಎಣಿಸಲಾಗುವುದಿಲ್ಲ. ದ್ವಿತೀಯ ರಣರಂಗದ ಮಾತು ಒಂದನ್ನೇ ರಶ್ಯ ಯುದ್ಧದ ನಂತರ. ಅದ್ದರಿಂದ ರಶ್ಯದ ಯುದ್ಧವೇ ಎರಡನೇ ಯುದ್ಧರಂಗಕ್ಕೆ ಆಧಾರ. ರಶ್ಯ ಯುದ್ಧವು ತೀರಿದ ಬಳಿಕ ಅವಕಾಶ ಉಳಿಯಲಿಕ್ಕಿಲ್ಲ. ಅನಂತರ ಯುದ್ಧದ ಗತಿಯೇ ಬೇರಾದೀತು. ಅತ್ತ ಜಪಾನ್ ಸೈಬೇರಿಯದ ಮೇಲೆ ಬಿದ್ದು ಅಲ್ಲಿ ರಶ್ಯಕ್ಕೆ ದ್ವಿತೀಯ ರಣರಂಗವನ್ನು ತೆರೆಯುತ್ತದೋ ಎಂಬ ಭೀತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಜಪಾನು ಈಗ ಸೈಬೀರಿಯವನ್ನು ಮುತ್ತಿದರೆ ರಶ್ಯಕ್ಕೆ ಬೆನ್ನಮೇಲೆ ಇರಿದಂತೆಯೇ. ಆ ಪಕ್ಷದಿಂದ ರಶ್ಯ ಮೇಲೆ ಬೀಳುವ ಕಷ್ಟವಾದೀತು. ಹಿಟ್ಲರನು ಜಪಾನನ್ನು ಆ ಕೆಲಸಕ್ಕೆ ಉದ್ರೇಕಿಸದಿರಲಾರನು. ಆದರೆ ಮಿತ್ರರು ಇದನ್ನೆಲ್ಲಾ ನೋಡುತ್ತಾ ಇನ್ನೂ ಸುಮ್ಮಗಿರುವುದೆ?

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ		ತಲ್ಪುವ ಗಂಟೆ	
ಗೂಡ್ಸು ಬಂಡಿ	6 25	ಬೆಳಿಗ್ಗೆ	7 30	ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಸ್ಪೈಲ್)	8 30	ಬೆಳಿಗ್ಗೆ	6 45	ಸಾಯಂ.
ಜಾಲಾರ್ ಪೇಟೆ ಪೆಸೆಂಜರ್	11 30	ಮಧ್ಯಾಹ್ನ	8 45	ಸಾಯಂ
ಕನ್ನನೂರು	6.0	ಸಾಯಂ.	9.30	ಪೂರ್ವಾಹ್ನ

ಮಾರಾಟಕ್ಕೆ ಸಿದ್ಧವಾಗಿದೆ!

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೩ನೆಯ ದರ್ಜೆಯ ಕಥೆಗಳು 0-1-6

ಪ್ರಕಟವಾಗಲಿದೆ

೩ನೆಯ ದರ್ಜೆಯ ಭೂವಿವರಣೆ 0-2-0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಸ್ವದೇಶಾಭಿಮಾನಿ

ತಾರೀಕು 7—8—1942

ಸಂಧಿಕಾಲ!

ಪ್ರತಿಯೊಂದು ರಾಷ್ಟ್ರದ ಇತಿಹಾಸವನ್ನು ಅವಲೋಕಿಸಿದರೂ ಆಗಾಗ ಸಂಧಿಕಾಲಗಳು ಬಂದಿರುವುದು ಕಂಡುಬರುತ್ತದೆ. ಅಂತಹ ಸಂಧಿಕಾಲದಲ್ಲಿ ರಾಷ್ಟ್ರವು ಒಂದು ಮಹಾ ನಿರ್ಣಯವನ್ನು ಕೈಕೊಳ್ಳುತ್ತದೆ. ಆ ಮಹಾ ನಿರ್ಣಯದ ಫಲಿತಾಂಶವು ಏನೆಂಬುದು ಯಾರಿಗೂ ಆರಂಭದಲ್ಲಿ ತಿಳಿಯಲೊಲ್ಲದು; ಅದರಿಂದಾಗುವ ಆಪತ್ತುಗಳೋ ಸಂಪತ್ತುಗಳೋ ಯಾರೂ ನಿಶ್ಚಯ ಹೇಳಲಾರರು. ಆದರೆ ಅಂತಹ ನಿರ್ಣಯವು ಜ್ವಾಲಾಮುಖಿಯಂತೆ ಆಗಿಯೇ ಆಗುವುದು.

ಭಾರತವಿಂದು ಅಂತಹ ಒಂದು ಸಂಧಿಕಾಲಕ್ಕೆ ಬಂದಿದೆ; ಇಡೀ ಪ್ರಪಂಚದಲ್ಲೇ 'ಹೊಸ ಯುಗ'ವೊಂದು ನಿರ್ಮಾಣವಾಗಲಿದೆಯೆಂದು ಇತಿಹಾಸಕಾರರು, ವಿಜ್ಞಾನಿಗಳು, ರಾಜಕಾರಣಿಗಳು ಕೆಲಕಾಲದಿಂದ ಸಾರುತ್ತಿದ್ದಾರೆ. ಯೂರೋಪಿನಲ್ಲಿ, ಇತ್ತ ಏಶ್ಯದ ಕೆಲ ಭಾಗಗಳಲ್ಲಿಯೂ ಕೂಡ ನಡೆಯುತ್ತಿರುವ ನರಮೇಧವನ್ನು, ಮಹಾಯುದ್ಧವನ್ನು—ನೋಡಿದರೆ ಇವೆಲ್ಲವೂ ಅಂತಹ 'ಹೊಸಯುಗ'ದ ನಿರ್ಮಾಣಕ್ಕೆ ಆಧಾರ ಕಾರಣಗಳೆಂಬಂತೆ ತೋರುತ್ತವೆ. ಭಾರತ ಮುಖಂಡರು ಗಾಂಧಿಜಿಯೇ ಮೊದಲಾದ ಕಾಂಗ್ರೆಸ್ ಮುಖಂಡರು 'ಬ್ರಿಟಿಷರೇ ಹೊರಟು ಹೋಗಿರಿ' ಎಂಬ ಕ್ರಾಂತಿಕಾರಕ ನಿರ್ಣಯವನ್ನು ಮಾಡಲು ಈಗ ಮುಂಬಯಿಯಲ್ಲಿ ಬಂದು ಸೇರಿದ್ದಾರೆ.

ಕಾಂಗ್ರೆಸು ಕಳೆದ ಐವತ್ತು ವರ್ಷಗಳಿಂದ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಆಂದೋಲನ ಹೂಡಿದೆ. ಇನ್ನೂರು ವರ್ಷಗಳಿಗೆ ಮೇಲ್ಪಟ್ಟು ಬ್ರಿಟಿಷರು ಭಾರತವನ್ನು ಆಳುತ್ತಾ ಬಂದಿದ್ದಾರೆ. ಇಂದು ಹಿಂದೂದೇಶದ ಯಾವುದೇ ಪ್ರಮುಖ ರಾಜಕೀಯ ಪಂಗಡವಾಗಲಿ ವಿದೇಶೀಯರ ಆಡಳಿತವನ್ನು ಅಪೇಕ್ಷಿಸುವುದಿಲ್ಲ. ಕಾಂಗ್ರೆಸಂತೂ ಕಳೆದ ಇಪ್ಪತ್ತು ವರ್ಷಗಳಿಂದ ಗಾಂಧಿಜಿಯವರ ಮುಂದಾಳುತನದಿಂದ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯದ ಹೋರಾಟ ಹೂಡುತ್ತಾ ಬಂದಿದೆ. ಅಸಹಕಾರ, ಸ್ವದೇಶೀ ಪ್ರೇಮ, ಕರನಿರಾಕರಣೆ, ಉಪ್ಪಿನ ಶಾಸನಭಂಗ ಇಂತಹ ಹಲವಿಧದ ಕಾರ್ಯಕ್ರಮಗಳಿಂದ ದೇಶದಲ್ಲಿ ಸ್ವಾತಂತ್ರ್ಯಪ್ರೇಮವು ಬೆಳೆಯುತ್ತಾ ಬಂದಿದೆ. ಈ ಮಧ್ಯೆ ಬ್ರಿಟಿಷ್ ಪ್ರಭುತ್ವದವರು ದಬ್ಬಾಳಿಕೆಯಿಂದ, ಸಂಧಿಯಿಂದ, ಕುಶಲತೆಯಿಂದ ಕಾಂಗ್ರೆಸಿನ ಆಂದೋಲನಗಳನ್ನು ಇದಿರಿಸುತ್ತಲೂ ಬಂದಿದ್ದಾರೆ.

ಇಂದಿನದು ಒಂದು ಧೀರ ನಿರ್ಧಾರ. 'ಸ್ವಾತಂತ್ರ್ಯಕ್ಕಾಗಿ ಸ್ವಾತಂತ್ರ್ಯ ಬೇಕು, ಪರರ ಆಕ್ರಮಣವನ್ನು ಎದುರಿಸಲೂ ಸ್ವಾತಂತ್ರ್ಯ ಬೇಕು' ಎಂದು ಕಾಂಗ್ರೆಸು ಹೇಳುತ್ತದೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ಕೊಡುವುದು ನಮ್ಮ ಉದ್ದೇಶವೆಂದು ಬ್ರಿಟಿಷ್ ಪ್ರಭುತ್ವದವರೂ ಒಪ್ಪುತ್ತಾರೆ; ಪರರಾಕ್ರಮಣದಿಂದ ದೇಶವನ್ನು ರಕ್ಷಿಸಬೇಕೆಂದು ಅವರೂ ಬಯಸುತ್ತಾರೆ; ಹೀಗಿರುವಾಗ ಕಾಂಗ್ರೆಸಿನ ಇಂದಿನ ಕೇಳಿಕೆ ಮತ್ತು ಬ್ರಿಟಿಷರು ಸಾರಿದ ಉದ್ದೇಶಗಳಲ್ಲಿ ಸಂಧಾನಕ್ಕೆ ಆಸ್ಪದವಿಲ್ಲವೆಂದಿಲ್ಲ. ಬ್ರಿಟಿಷ್ ಪ್ರಭುತ್ವದವರೂ ಕಾಂಗ್ರೆಸಿನವರೂ ವಿವೇಕವನ್ನು ತಾಳಿ ವಿಚಾರವಿನಿಮಯ ಮಾಡಿಕೊಂಡರೆ ಘರ್ಷಣೆಯನ್ನು ತಪ್ಪಿಸಬಹುದು. ಯಾವುದೇ ತರದ ಘರ್ಷಣೆಯುಂಟಾಗದೆ ವಿಚಾರ ವಿನಿಮಯದಿಂದ ದೇಶದ ಹಿತವಾಗಲಿ ಎಂದು ನಮ್ಮ ಬಯಕೆಯಾಗಿದೆ.

ಸ್ಪಷ್ಟೀಕರಣ

'ಬ್ರಿಟಿಷರು ಭಾರತದಿಂದ ಹೊರಟು ಹೋಗಬೇಕು' ಎಂದು ಕಾಂಗ್ರೆಸು ಹೇಳುವುದರಿಂದ, ಒಂದು ಪಕ್ಷ ಹಾಗೆ ಬ್ರಿಟಿಷರು ಹೊರಟುಹೋಗುವುದರಿಂದ ದೇಶದಲ್ಲಿ ಅರಾಜಕತೆಯುಂಟಾಗುವುದೆಂದು ಸರ್ ಕ್ರಿಪ್ಸರಾದಿಯಾಗಿ ಬ್ರಿಟಿಷ್ ಸಾಮ್ರಾಜ್ಯಪೋಷಕ ಪ್ರಭೃತಿಗಳು ಹೇಳುತ್ತಿದ್ದಾರಷ್ಟೆ? ಹೀಗೆ 'ಅರಾಜಕತೆಯುಂಟಾದೀತು' ಎಂದು ಹೇಳುವುದು ಕೇವಲ ಗೊಡ್ಡು ಬೆದರಿಕೆಯಲ್ಲದೆ, ಅದರಲ್ಲಿ ಯಥಾರ್ಥವೇನೂ ಇಲ್ಲವೆಂದೂ, ಅವರು ಹೊರಟುಹೋದ ಕೇವಲ ಇಪ್ಪತ್ತನಾಲ್ಕು ಗಂಟೆಗಳೊಳಗೆ, ಸಕಲ ಪಕ್ಷಗಳ ಸಮನ್ವಯದಿಂದ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸಬಹುದೆಂದೂ ರಾಷ್ಟ್ರಪತಿ ಅಜಾದರು ಸ್ಪಷ್ಟಪಡಿಸಿದ್ದಾರೆ; ಅವರ ಸ್ಪಷ್ಟೀಕರಣದ ವಿವರಗಳು ಈ ರೀತಿಯಾಗಿವೆ:

(೧) ಬ್ರಿಟಿಷರು ಇಲ್ಲಿಂದ ಹೊರಟು ಹೋದರೆ ಗೊಂದಲವಾಗಲಿ, ಅರಾಜಕತೆಯಾಗಲಿ ಉಂಟಾಗಲಾರದು; ಏಕೆಂದರೆ ಭಾರತೀಯರು ತಾತ್ಕಾಲಿಕ ಸರಕಾರವನ್ನು ಸ್ಥಾಪಿಸುವ ವರೆಗೆ, ಬ್ರಿಟಿಷರೇ ಅಧಿಕಾರದಲ್ಲಿ ಉಳಿಯುವುದರಿಂದ ಗೊಂದಲ ಅರಾಜಕತೆಗಳಾಗುವ ಸಂದರ್ಭವೇ ಒದಗುವುದಿಲ್ಲ.

(೨) ಭಾರತೀಯರಿಗೆ ಸ್ವಾತಂತ್ರ್ಯ ಕೊಡುವುದಾಗಿ ಒಪ್ಪಿ ಸಂಯುಕ್ತ ಸರಕಾರಗಳು ಭರವಸೆಯಿತ್ತರೆ ಹಾಗೂ ಭಾರತವು ಸ್ವತಂತ್ರ ರಾಷ್ಟ್ರವೆಂದು ಈಗಿನಿಂದಲೇ ಗಣಿಸಲ್ಪಟ್ಟರೆ, ಈ ಮಧ್ಯಕಾಲದ ವ್ಯವಸ್ಥೆಯ ಬಗ್ಗೆ ಯಾವುದೇ ಯೋಜನೆಗಳನ್ನು ಸಂಯುಕ್ತ ರಾಷ್ಟ್ರಗಳು ಸೂಚಿಸಿದಲ್ಲಿ, ಆ ಸೂಚನೆಗಳ ವಿಷಯ ಕಾಂಗ್ರೆಸು ಸಹಾನುಭೂತಿ ಪರವಾದ ಗಮನ ಕೊಡುವುದು.

(೩) ತಾತ್ಕಾಲಿಕ ಸರಕಾರವನ್ನು ರಚಿಸುವ ಜವಾಬ್ದಾರಿಯನ್ನು ಮುಸ್ಲಿಂ ಲೀಗ್ ಅಥವಾ ಬೇರೆ ಯಾವುದೇ ಇತರ ಪಕ್ಷಕ್ಕಾಗಲಿ ಒಪ್ಪಿಸಿಕೊಡಲು ಕಾಂಗ್ರೆಸು ಸಿದ್ಧವಿರುವುದರಿಂದ 'ಹಿಂದುರಾಜ್ಯ' ಅಥವಾ 'ಕಾಂಗ್ರೆಸ್ ರಾಜ್ಯ'ಗಳನ್ನು ಸ್ಥಾಪಿಸುವ ಅಪವಾದ ಹಾಕುವ ಪ್ರಸಂಗವೇ ಒದಗುವುದಿಲ್ಲ. ಭಾರತವನ್ನು ಸ್ವತಂತ್ರ ಮಾಡುವುದರಿಂದ, ಅನುಕೂಲ ವಾತಾವರಣ ಉಂಟಾದರೆ ಕಾಂಗ್ರೆಸು ಕೇವಲ ಇಪ್ಪತ್ತನಾಲ್ಕು ಗಂಟೆಗಳೊಳಗೆ ತಾತ್ಕಾಲಿಕ ಸರಕಾರವನ್ನು ಸ್ಥಾಪಿಸುವುದು.

ಹೀಗೆ ವಿವರಗಳನ್ನು ಸ್ಪಷ್ಟಪಡಿಸುತ್ತಾ ಅಜಾದರು ಕೊನೆಗೆ, ಬ್ರಿಟಿಷ್ ಸರಕಾರದವರು ನಮಗೆ ಏನು ಕೊಡುತ್ತಾರೆಂಬುದು ಮಹತ್ವದ ವಿಚಾರವಲ್ಲದೆ, ಅದನ್ನು ಯಾರಿಗೆ ಕೊಡುತ್ತಾರೆಂಬುದು ಮಹತ್ವವಲ್ಲವೆಂದಿರುವರು. ಕಾಂಗ್ರೆಸ್ ನಿರ್ಣಯವನ್ನು ನಿರ್ಮಲ ಚಿತ್ತದಿಂದ ಅರ್ಥಮಾಡಿಕೊಳ್ಳಲು ಇದಕ್ಕಿಂತ ಸ್ಪಷ್ಟ ವ್ಯಾಖ್ಯಾನವು ಬ್ರಿಟಿಷರಿಗೆ ಬೇರೆ ಬೇಕಾಗುವುದೆ?

The Canara Industrial & Banking Syndicate, Ltd.

(Incorporated in British India, Liability of shareholders limited)

Estd:] Head Office:—UDIPI (S. India). [1925.

Authorised Capital	...	Rs. 56,00,000.
Suscribed Capital	...	Rs. 14,69,015
Paid up Capital	...	Rs. 6,59,183.
Reserves	...	Rs. 2,11,000.

Savings Bank Accounts are opened and interest allowed With drawals by cheques. Accounts transferred from one Branch to another free of charge Enquire for rules.

heques & Drafts are issued on numerous places and Bills etc negotiated on terms which will be quoted on enquiry.

Advances made at low rates of interest against gold, Government Securities, approved shares, accepted bills life insurance policies and marketable goods

Every business receives quick and courteous attention.

ನೋಟಗಳು....

ಕಾಂಗ್ರೆಸ್ ಮತ್ತು ಸರಕಾರಗಳೊಳಗೆ ಸಂಧಾನವಾಗುವ ಆಶೆ ಹಲವರಿಗಿತ್ತು! ಬೊಂಬಾಯಿಯಲ್ಲಿ ಕಾಂಗ್ರೆಸ್ ಸಭೆ ಸೇರುವ ಮೊದಲೇ ಸರಕಾರದ ಪ್ರಕಟಣೆ ಹೊರಡುವುದೆಂಬ ವದಂತಿಯೂ ಬಂದಿತ್ತು!

卐

ಸಂಧಾನ ಸೂಚನೆಯ ಬದಲು ಸಂಗ್ರಾಮಕ್ಕೆ ಆಹ್ವಾನ ದೊರೆತಂತಿದೆ! ಕಾಂಗ್ರೆಸು, ಚಳವಳ ಹೂಡಿದರೆ ಅದನ್ನು ಸರ್ವ ಶಕ್ತಿಯಿಂದ ಇದಿರಿಸುವೆವೆಂದು ಕ್ರಿಪ್ಸರೂ ಅಮೆರಿಯವರೂ ಹೇಳಿಬಿಟ್ಟರು!

卐

ಪ್ರೆಸಿಡೆಂಟ್ ರೂಸ್‌ವೆಲ್ಟರ ಪರವಾಗಿ ವೆಂಡಲ್ ವೆಲ್ಕಿಯವರು ಭಾರತಕ್ಕೆ ಶಾಂತಿದೂತರಾಗಿ ಬರುವರೆಂಬ ಸುದ್ದಿಯಿತ್ತು! 'ನಾನು ಭಾರತಕ್ಕೆ ಸಂಧಾನಕ್ಕೆ ಹೋಗುವ ಸಂಗತಿ ನನಗೇ ಗೊತ್ತಿಲ್ಲ' ಎಂದು ವಿಲ್ಕಿಯವರೇ ಹೇಳಿದ್ದಾರೆ.

卐

ಚಿಯಾಂಗ್ ಕೈಶೇಕರು ಸಂಧಾನ ಸಾಧಿಸಲು ಭಾರತಕ್ಕೆ ತೆರಳಿದ್ದಾರೆಂದು ವಿಚಿ ಪ್ರಕಟಣೆಯಿತ್ತು! 'ಚಿಯಾಂಗರು ಭಾರತಕ್ಕೆ ತೆರಳಿದ್ದಾರೆಂಬ ವಿಚಿ ಪ್ರಕಟಣೆಯ ಕುರಿತು ಯಾವ ಸುದ್ದಿಯೂ ನಮಗಿಲ್ಲ' ಎಂದು ವಾಶಿಂಗಟನ್ ವಾರ್ತೆ ಸಾರಿದೆ!

卐

ವೈಸರಾಯ್ ವಿಸ್ತೃತ ಕಾರ್ಯಕಾರೀ ಮಂಡಳಿಯ ಪರವಾಗಿ ಶ್ರೀ ಎಂ. ಎಸ್. ಅಣೆಯವರು ವರ್ಧಾಕ್ಕೆ ಹೋಗಿ ಗಾಂಧಿಜಿಯವರನ್ನು ಭೇಟಿಯಾಗಿ ಸಂಧಾನ ಯತ್ನಮಾಡುವರು ಎಂದು ಪತ್ರಿಕೆಗಳಲ್ಲಿ ಪ್ರಕಟವಾಯಿತು! ಅಣೆಯವರು ಪೂನದಿಂದಲೇ ಸ್ವಸ್ಥಾನಕ್ಕೆ ಮರಳಿಹೋದರು!

卐

ರಾಜಾಜಿ ವರ್ಧಾಕ್ಕೆ ಹೋದವರು ಗಾಂಧಿಜಿಯೊಡನೆ ದೀರ್ಘಕಾಲ ಮಾತನಾಡಿದ್ದರಲ್ಲಿ ಸಂಧಾನ ಸೂಚನೆಗಳಿದ್ದುವೆಂದು ನಂಬಲಾಗಿತ್ತು. 'ನಾವು ಮರಣಾಂತ ಉಪವಾಸದಿಂದ ತೊಡಗಿ ಭೂಮಿಯಲ್ಲಿರುವ ಎಲ್ಲಾ ವಿಚಾರಗಳ ಕುರಿತೂ ಮಾತನಾಡಿದೆವು; ಆದರೆ ಆ ವಿಷಯಗಳೆಲ್ಲಾ ಖಾಸಗಿ' ಎಂದು ರಾಜಾಜಿ ಹೇಳಿದ್ದಾರೆ.

卐

ಇಷ್ಟರಲ್ಲಿ ಎ. ಐ. ಸಿ. ಸಿ. ಸಭೆ ಮುಂಬಯಿಯಲ್ಲಿ ಸೇರಿರುವುದು! ಇನ್ನು ಸಂಧಾನವಾಗುವ ಆಶೆ ಅನೇಕರಿಗೆ ಉಳಿದಂತೆ ತೋರುವುದಿಲ್ಲ.

ಹರಿಜನವಾಣಿ

'ದಬ್ಬಾಳಿಕೆಗೆ ಕಾಂಗ್ರೆಸು ಬಗ್ಗುವುದಿಲ್ಲ'

ವಿಚಾರಮಾಡಲು ಗಾಂಧಿಜಿ ವಿನಂತಿ

ಕಾಂಗ್ರೆಸ್ ನಿರ್ಣಯಿಸಿದ ಆಂದೋಲನದ ಬಗ್ಗೆ ಟೀಕೆ ಮಾಡುವವರಿಗೆ ಗಾಂಧಿಜಿ ಈ ಸಲದ 'ಹರಿಜನ'ದಲ್ಲಿ ಹೀಗೆ ಉತ್ತರವಿತ್ತಿರುವರು.

'ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಚಳವಳದ ಬಗ್ಗೆ ಮಾಡಿದ ನಿರ್ಣಯದ ಕುರಿತು ಬ್ರಿಟನು ಅಮೆರಿಕಗಳಲ್ಲಿ ಕಠಿಣ ಟೀಕೆಯಾಗಿದೆ; ಕಾಂಗ್ರೆಸನ್ನು ಬೆದರಿಸಲಾಗಿದೆ. ಆದರೆ ಇದರಿಂದೆಲ್ಲಾ ಕಾಂಗ್ರೆಸು ತನ್ನ ಧ್ಯೇಯವನ್ನು ಬಿಟ್ಟುಬಿಡಲಾರದು. ಈ ವರೆಗೆ ಕಾಂಗ್ರೆಸು ಇತರರ ಪ್ರತಿಬಂಧವಿದ್ದರೂ ಬೆಳೆಯುತ್ತಾ ಬಂದಿದೆ. ಈ ಸಲವು ಅಂತೆಯೇ ಆಗುವುದು. ಅಮೆರಿಕ ಬ್ರಿಟನುಗಳಲ್ಲಿ ನಡೆದ ಆಕ್ರೋಶದಿಂದಾಗಿ ಒಂದು ಪಕ್ಷ ಅಂಥಾ ಪ್ರತಿರೋಧದಿಂದ ಜನತೆ ಅಧೈರ್ಯಗೊಳ್ಳಲೂ ಬಹುದು. ಆದರೆ ಪ್ರಜ್ವಲಿಸಲ್ಪಟ್ಟ ಕ್ರಾಂತಿಯ ಜ್ಯೋತಿಯು ಎಂದಿಗೂ ನಂದಿಹೋಗದು.

'ಬ್ರಿಟಿಷರು ಅಧಿಕಾರ ನಿವೃತ್ತರಾಗಬೇಕೆಂಬ ಕೇಳಿಕೆ ಅನ್ಯಾಯವೆಂದು ಯಾರೂ ಆಕ್ಷೇಪವೆತ್ತಿಲ್ಲ. ಆದರೆ ಈ ಕೇಳಿಕೆಯನ್ನು ಮುಂದಿಟ್ಟ ಸಮಯವು ಯೋಗ್ಯವಲ್ಲವೆಂದು ಅವರೆಲ್ಲರ ಆಕ್ಷೇಪ. ಈಗಲೇ ಈ ನಿರ್ಣಯವನ್ನು ಮುಂಟ್ಟಿದ್ದು ಯಾಕೆಂದು ಕಾಂಗ್ರೆಸಿನ ನಿರ್ಣಯದಲ್ಲಿ ಸ್ಪಷ್ಟವಾಗಿದೆ. ಈ ಯುದ್ಧದಲ್ಲಿ ಭಾರತವು ಪರಿಣಾಮಕಾರೀ ಪಾತ್ರ ವಹಿಸಿಲ್ಲ. ಆದಕ್ಕಾಗಿ ನಮ್ಮಲ್ಲಿ ಹಲವರಿಗೆ ನಾಚಿಕೆಯೆನಿಸಿದೆ. ಪರಕೀಯರ ನಿರ್ಬಂಧವಿರದೆ ಸ್ವತಂತ್ರರಾಗಿದ್ದರೆ ನಾವೂ ಈ ಯುದ್ಧದಲ್ಲಿ ಯೋಗ್ಯ ಪಾತ್ರವಹಿಸುತ್ತಿದ್ದೆವು. ಹಿಂದುಸ್ಥಾನವು ಈಗ ಸ್ವತಂತ್ರವಾಗದಿದ್ದರೆ ಅಡಗಿಕೊಂಡಿರುವ ಈ ಅತೃಪ್ತಿಯು ತಲೆಯೆತ್ತಿ ಜಪಾನರನ್ನು ಸ್ವಾಗತಿಸಲು ಮುಂದಾಗಬಹುದು. ಹೀಗೆ ಭಯಾನಕ ಅನರ್ಥ ಸಂಭವಿಸಬಹುದು. ಹಿಂದುಸ್ಥಾನವು ಸ್ವಾತಂತ್ರ್ಯ ಸಂಪಾದಿಸಿದರೆ ನಾವೀ ಅನರ್ಥವನ್ನು ತಪ್ಪಿಸಬಹುದು.

ಬ್ರಿಟಿಷರು ಹೊರಟುಹೋಗಬೇಕಾದರೆ ಅಧಿಕಾರವನ್ನು ಯಾರಿಗೆ ಒಪ್ಪಿಸಿಕೊಡಬೇಕೆಂದು ಟೀಕಾಕಾರರು ಕೇಳುತ್ತಾರೆ. ಕಾಂಗ್ರೆಸ್ ಅಧ್ಯಕ್ಷ ಅಜಾದರೇ ಈ ವಿಷಯ ಸ್ಪಷ್ಟಮಾಡಿದ್ದಾರೆ. 'ಕಾಂಗ್ರೆಸು ಯಾವಾಗಲೂ ಪ್ರಜಾಪ್ರಭುತ್ವ ರಾಷ್ಟ್ರಗಳಿಗೆ ಸಹಾನುಭೂತಿಪರವಾದುದು. ಬ್ರಿಟನ್ನಿಗೆ ಯುದ್ಧದಲ್ಲಿ ತೊಂದರೆ ಕೊಡಬೇಕೆಂಬ ಇಚ್ಛೆ ಕಾಂಗ್ರೆಸಿಗಿಲ್ಲ. ಜಪಾನರ ಧಾಳಿಯನ್ನೆದುರಿಸುವುದು ನಮ್ಮ ಗುರಿಯಾಗಿದೆ. ಕಾಂಗ್ರೆಸು ತನಗಾಗಿಯೇ ಸ್ವಾತಂತ್ರ್ಯ ಪಡೆಯಬೇಕೆಂದು ಬಯಸುವುದಿಲ್ಲ. ಎಲ್ಲರ ಸಲುವಾಗಿ ಕಾಂಗ್ರೆಸಿನ ಕೈಯಲ್ಲಿ ಅಧಿಕಾರ ಕೊಟ್ಟರೆ ಅದು ನಿಶ್ಚಯವಾಗಿ ಬೇರೆ ಪಕ್ಷದವರನ್ನು ಮನವೊಲಿಸಿಕೊಂಡು ಆಡಳಿತೆ ನಡೆಸುವುದು. ಬ್ರಿಟನು ನಿಜವಾದ ಸ್ವಾತಂತ್ರ್ಯ ಕೊಡುವುದಿದ್ದರೆ ಮುಸ್ಲಿಂ ಲೀಗಿಗಾಗಲಿ ಇತರ ಯಾವುದೇ ಪಕ್ಷಕ್ಕಾಗಲಿ ಸ್ವಾತಂತ್ರ್ಯ ಕೊಟ್ಟರೂ ನಮಗೆ ಆಕ್ಷೇಪವಿಲ್ಲ.' ಸ್ವಾತಂತ್ರ್ಯ ಸಿಕ್ಕಿದ ಯಾವುದೇ ಪಕ್ಷವಾದರೂ ಬೇರೆ ಪಕ್ಷವನ್ನು ಕೂಡಿಕೊಳ್ಳಬೇಕಾಗುವುದು. ಇತರ ಪಕ್ಷಗಳ ಸಹಕಾರವಿಲ್ಲದೆ ಆಡಳಿತವು ಯೋಗ್ಯವಾಗಿ ಸಾಗಲಾರದು. ಯುದ್ಧಕಾಲದಲ್ಲಿ ಶತ್ರು ಧಾಳಿಯನ್ನೆದುರಿಸಲು ಮಿತ್ರರಾಷ್ಟ್ರಗಳ ಸೈನಿಕರು ಇಲ್ಲಿ ಚಟುವಟಿಕೆ ನಡೆಸಬಹುದು. ಆದರೆ ಉಳಿದ ಎಲ್ಲಾ ಅಧಿಕಾರವನ್ನೂ ಬಿಟ್ಟುಕೊಡಬೇಕಾಗಿದೆ. ಭಾರತವು ಬ್ರಿಟನಿನಷ್ಟೇ ಸ್ವತಂತ್ರವಾಗಬೇಕು.

'ಸ್ವತಂತ್ರ ಹಿಂದುಸ್ಥಾನವು ಮಿತ್ರರಿಗೆ ಕೊಡುವ ಬೆಂಬಲವು—ಅದು ಯಾವುದೇ ಇರಲಿ—ಅಮೋಘವಾಗುವುದು. ಜಪಾನರನ್ನು ಸ್ವಾಗತಿಸಲು ಆ ಮೇಲೆ ಯಾವುದೇ ಕಾರಣವುಳಿಯಲಾರದು. ತದ್ವಿರುದ್ಧವಾಗಿ ಧಾಳಿಗಾರರನ್ನೆದುರಿಸಲು ಅವರು ಮಿತ್ರರ ಸಹಾಯವನ್ನೇ ಕೋರುವರು. ಹಿಂದುಸ್ಥಾನದ ರಕ್ಷಣೆಗೆ ಮಿತ್ರಪಕ್ಷದ ಸೈನಿಕರ ಆವಶ್ಯವಿರಲಿ ಇಲ್ಲದಿರಲಿ ಯುದ್ಧ ಮುಗಿವ ವರೆಗೆ ಅವರಿಲ್ಲಿರಬಹುದು. ಇಂತಹ ವಿಚಾರಗಳನ್ನು ಮಿತ್ರಪಕ್ಷದ ಪತ್ರಿಕೆಗಳು ತಿಳಿಕೊಳ್ಳದೆಯೇ ಅವರು ಮಾಡುತ್ತಿರುವ ವಿರೋಧವು ಪ್ರಾಮಾಣಿಕವಲ್ಲ. ಇಂತಹ ಟೀಕೆಗಳಿಂದ ಅವಿಶ್ವಾಸ ಪ್ರತಿಕಾರಗಳೇ ಹೆಚ್ಚಾಗುವವು.'

ಗ್ರಾಮ ಸ್ವರಾಜ್ಯ

ಮಹಾತ್ಮರ ಲೇಖನ

ಮಹಾತ್ಮಾ ಗಾಂಧಿಯವರು 'ಗ್ರಾಮ ಸ್ವರಾಜ್ಯ'ದ ಕುರಿತು ತಮ್ಮ ಅಭಿಪ್ರಾಯವನ್ನು ಹೊರಗೆಡಹಿ, ಒಂದು ಮಾದರಿ ಗ್ರಾಮವು ಹೇಗಿರಬೇಕೆಂಬುದನ್ನು ಈ ರೀತಿ ತಿಳಿಸಿದ್ದಾರೆ.

ಪ್ರಶ್ನೆ—"ದೇಶದಲ್ಲಿ ಯಾವ ಕ್ಷಣಕ್ಕೆ ಏನಾಗುತ್ತದೆಯೊ? ಮೇಲಿನ ಸರಕಾರವೋ ಮತ್ತೊಂದು ಸಂಸ್ಥೆಯೋ ಇಲ್ಲದಿದ್ದಾಗ ಅಥವಾ ಅದರ ಮೇಲೆ ಆಧಾರ ಪಡದೆ, ಹಳ್ಳಿಗಳಲ್ಲಿ ಗ್ರಾಮ ಸ್ವರಾಜ್ಯ ಸಮಿತಿಗಳು ಕೆಲಸಮಾಡುವಂತೆ ಈ ಸಮಿತಿಗಳ ಸ್ವರೂಪ ಹೇಗಿರಬೇಕೋ ಸ್ಥೂಲವಾಗಿ ಈ ವಿಷಯ ತಿಳಿಸುವಿರಾ? ಆ ಸಮಿತಿ ಸಮಸ್ತರ ಪ್ರತಿನಿಧಿ ಆಗುವುದು ಹೇಗೆ? ನಿಷ್ಪಕ್ಷಪಾತವಾಗಿ, ನಿರ್ಭಯವಾಗಿ ಸಮರ್ಥವಾಗಿ ಕೆಲಸಮಾಡುವುದು ಹೇಗೆ? ಅಧಿಕಾರವನ್ನು ನಡೆಸಲು ಸಾಧನವೇನು? ಎಷ್ಟಿರಬೇಕು ಅಧಿಕಾರ? ಅಸಮರ್ಥತೆ, ಲಂಚಬಡಕತನ ಅಥವಾ ಬೇರೆ ಅನರ್ಹತೆಗಾಗಿ ಒಂದು ಸಮಿತಿಯನ್ನೋ ಸದಸ್ಯನನ್ನೋ ತೆಗೆಯಬೇಕಾದರೆ ಯಾವ ರೀತಿ?"

ಉತ್ತರ—"ನನ್ನ ಅಭಿಪ್ರಾಯದಲ್ಲಿ ಗ್ರಾಮ ಸ್ವರಾಜ್ಯವೆಂದರೆ ಸಂಪೂರ್ಣ ಪ್ರಜಾಧಿಕಾರ. ಅತ್ಯಗತ್ಯ ವಿಷಯಗಳಲ್ಲಿ ನೆರೆಹೊರೆಯ ಗ್ರಾಮವನ್ನು ಅವಲಂಬಿಸದೆ, ಸ್ವತಂತ್ರವಾಗಿದ್ದರೂ ಪರಸ್ಪರ ಅವಲಂಬನೆ ಅಗತ್ಯವಾದ ಇನ್ನೂ ಅನೇಕ ವಿಷಯಗಳಲ್ಲಿ ಅನ್ಯೋನ್ಯಾಶ್ರಯ ತಪ್ಪದು. ತನ್ನ ಅನ್ನಕ್ಕಾಗಿ ಧಾನ್ಯ ಬಟ್ಟೆಗಾಗಿ ಹತ್ತಿ ಬೆಳೆಸುವುದು ಪ್ರತಿಯೊಂದು ಹಳ್ಳಿಯ ಮುಖ್ಯ ಕರ್ತವ್ಯ. ಪ್ರತಿ ಗ್ರಾಮಕ್ಕೂ ಒಂದು ಹುಲ್ಲುಗಾವಲು ಹಿರಿಯರಿಗೂ ಮಕ್ಕಳಿಗೂ ವಿಶ್ರಾಂತಿಗೆ—ಆಟಕ್ಕೆ ಒಂದು ಬಯಲು ಬೇಕು. ಇನ್ನೂ ಹೆಚ್ಚು ಭೂಮಿಯಿದ್ದರೆ ಉಪಯೋಗಕರವಾದ ಇತರ ಬೆಳೆ—ಗಾಂಜಾ, ಹೊಗೆಸೊಪ್ಪು, ಅಫೀಮಿನಂತಹವನ್ನು ಬಿಟ್ಟು ಬೆಳೆಸುವುದು. ನಾಟಕಶಾಲೆ, ಪಾಠಶಾಲೆ ಗ್ರಾಮಭವನ ಹಳ್ಳಿಹಳ್ಳಿಗೂ ಬೇಕು. ತನ್ನ ನೀರು ಸರಬರಾಯಿ ಏರ್ಪಾಡು ತಾನೇ ಮಾಡಿ ನಿರ್ಮಲೋದಕ ಒದಗಿಸಬೇಕು. ಕೆರೆ ಬಾವಿಗಳ ಮೇಲ್ವಿಚಾರಣೆಯಿಂದ ಇದು ಸಾಧ್ಯವಾಗುತ್ತದೆ. ಪ್ರಾಥಮಿಕ ಶಿಕ್ಷಣವು ಕೊನೆತನಕ ಬಲಾತ್ಕಾರದಿಂದ ಎಲ್ಲರಿಗೂ ಕಲಿಸಲ್ಪಡಬೇಕು. ಎಲ್ಲ ಕೆಲಸವನ್ನು ಸಾಧ್ಯವಾದ ಮಟ್ಟಿಗೆ ಸಹಕಾರ ಪದ್ಧತಿಯಿಂದ ನಡೆಸಬೇಕು. ಈಗಿರುವ ಜಾತಿ ಕುಲಗಳು ಅಸ್ಪೃಶ್ಯತೆಯ ಅನ್ಯಾಯವೂ ಅದರಲ್ಲಿಲ್ಲ. ಅಹಿಂಸೆ, ಅದರ ಸತ್ಯಾಗ್ರಹ ಪದ್ಧತಿಯೇ ಹಳ್ಳಿಯ ಸಮಾಜದ ಸರ್ವ ಬಲವಾದೀತು. ಹಳ್ಳಿಯ ಹೆಸರುಪಟ್ಟಿ ಇಡಬೇಕು. ಅದರಿಂದ ಸರದಿಯ ಪ್ರಕಾರ ಗ್ರಾಮ ರಕ್ಷಕರನ್ನು ಆರಿಸಬೇಕು. ಗ್ರಾಮ ರಕ್ಷಣೆಯ ಕೆಲಸ ನಿರ್ಬಂಧವಾಗಿರಬೇಕು. ನಿರ್ಣೀತವಾದ ಮತಾಧಿಕಾರವುಳ್ಳ ವಯಸ್ಕರೆಲ್ಲ, ಗಂಡೂ ಹೆಣ್ಣೂ ವರುಷಕ್ಕೊಮ್ಮೆ ಸೇರಿ, ಐದು ಜನ ಪಂಚಾಯಿತರನ್ನಾರಿಸುತ್ತಾರೆ. ಗ್ರಾಮ ಪರಿಪಾಲನೆ ಅವರ ಕೆಲಸ. ಅವರಿಗೆ ಬೇಕಾದ ಅಧಿಕಾರ ಅವಕಾಶವೆಲ್ಲ ಇರಬೇಕು. ಈ ಹೊತ್ತೇ ನಮ್ಮ ಹಳ್ಳಿಗಳು ಈ ರೀತಿ ಪ್ರಜಾ ಪ್ರಭುತ್ವಗಳಾಗಬಹುದು. ಈಗಿನ ಸರಕಾರವು ಅದಕ್ಕೆ ಬಾಧಕವಾಗಲಾರದು. ಅವರಿಗೆ ಬೇಕಾದುದು ಕಂದಾಯ ಮಾತ್ರ. ನೆರೆಹೊರೆಯ ಹಳ್ಳಿಗಳೊಡನೆ ಕೇಂದ್ರವೊಂದಿದ್ದರೆ, ಅದರೊಡನೆ ಎಂಥಾ ಸಂಬಂಧವಿರಬೇಕೋ ನಾನಿಲ್ಲಿ ವಿವರಿಸಿಲ್ಲ. ಸ್ಥೂಲವಾಗಿ ಗ್ರಾಮ ಪರಿಪಾಲನೆಯ ವಿಷಯ ಹೇಳುವುದೇ ನನ್ನ ಉದ್ದೇಶ. ವ್ಯಕ್ತಿ ಸ್ವಾತಂತ್ರ್ಯದ ತಳಹದಿಯ ಮೇಲೆ ಕಟ್ಟಿದ ಪರಿಪೂರ್ಣ ಪ್ರಜಾಪ್ರಭುತ್ವ ಇದು. ಪ್ರತಿಯೊಬ್ಬನೂ ತನ್ನ ತನ್ನ ಆಡಳಿತಕ್ಕೆ ತಾನೇ ಶಿಲ್ಪಿ. ಅವನನ್ನೂ ಅವನ ಆಡಳಿತವನ್ನೂ ಆಳುವುದು ಅಹಿಂಸಾ ಧರ್ಮ. ಇಡೀ ಜಗತ್ತಿನ ಬಲವನ್ನೇ ಅವನೂ ಅವನ ಹಳ್ಳಿಯೂ ತಿರಸ್ಕರಿಸಬಲ್ಲರು. ಕಾರಣ, ಜೀವ ಕೊಟ್ಟಾದರೂ ತನ್ನ ತನ್ನ ಹಳ್ಳಿಯ ಗೌರವ ಕಾಯ್ವೆನು ಎಂಬುದು ಪ್ರತಿಯೊಬ್ಬ ಹಳ್ಳಿಗನ ಧರ್ಮ.

ಓದುಗರು ನನ್ನನ್ನು ಕೇಳಬಹುದು—ನಾನೇ ನನ್ನನ್ನು ಕೇಳುತ್ತಿದ್ದೇನೆ. ಸೇವಾ ಗ್ರಾಮವನ್ನೇಕೆ ಈ ರೀತಿ ಮಾಡಲಿಲ್ಲ? ನನಗೆ ನನ್ನ ಉತ್ತರ ಇಷ್ಟೆ. ನಾನು ಪ್ರಯತ್ನ ಮಾಡುತ್ತಿದ್ದೇನೆ. ಪ್ರತ್ಯಕ್ಷವಾಗಿ ತೋರಿಸುವಂತೆ ಎಲ್ಲೂ ಇಲ್ಲದಿದ್ದರೂ, ಸಫಲತೆಯ ಮಸಮಸಕಾಗಿ ಕಾಣುತ್ತಿದೆ. ಈ ಚಿತ್ರದಲ್ಲಿ ಅಸಾಧ್ಯವಾದುದು ಏನೂ ಇಲ್ಲ. ಅಂತಹ ಹಳ್ಳಿಯನ್ನು ಕಟ್ಟಲು ಒಂದು ಜೀವಮಾನವೇ ಬೇಕಾದೀತು. ಇದು ನಿಜವಾದ ಪ್ರಭುತ್ವ ಮತ್ತು ಗ್ರಾಮ ಜೀವನಗಳಲ್ಲಿ ಒಲವಿದ್ದವರು ಯಾರಾದರೂ ಒಂದು ಹಳ್ಳಿಯನ್ನು ಆರಿಸಿ, ಅದೇ ತಮ್ಮ ಸರ್ವ ಪ್ರಪಂಚ, ಸರ್ವ ಕಾರ್ಯವೆಂದು ಕೆಲಸ ಮಾಡಿದರೆ ಶುಭ ಫಲ ಸಿಕ್ಕೀತು. ಹಳ್ಳಿಯ ಭಂಗಿ, ನೂಲುಗಾರ, ಕಾವಲುಗಾರ, ವೈದ್ಯ, ಉಪಾಧ್ಯಾಯ ಎಲ್ಲವೂ ಅವನೇ ಆಗಬೇಕು. ಅವನ ಬಳಿ ಯಾರೂ ಬರದಿದ್ದರೆ ಬೀದಿಯನ್ನು ಗುಡಿಸಿ ನೂಲುವುದರಲ್ಲಿಯೇ ಅವನು ತೃಪ್ತಿಗೊಂಡಾನು.

ಜಾಂಬಕನ್ನು ಉಪಯೋಗಿಸಿ! ನಿಮ್ಮ ಕಾಲು ನೋವನ್ನು ಗುಣಪಡಿಸಿರಿ.

ಪ್ರತಿರಾತ್ರಿ ಅದನ್ನು ಕಾಲಿಗೆ ತಿಕ್ಕಿರಿ

ಕಾಲುನೋವಿಗೆ ಬಾತುಹೋದ ಗಂಟಿಗೆ ಜಾಂಬಕಿನಷ್ಟು ಉತ್ತಮ ಔಷಧಿ ಬೇರಿಲ್ಲ. ಅದನ್ನು ಮಣಿಗಂಟಿಗೆ ಮೆಲ್ಲನೆ ತಿಕ್ಕಿರಿ. ಕಾಲು ಬೆರಳುಗಳೆಡೆಗೆ ಪ್ರತಿರಾತ್ರಿ ಹಚ್ಚಿರಿ. ಜಾಂಬಕಿನಲ್ಲಿರುವ ಉತ್ತಮ ವನೌಷಧಿಸತ್ವವು ಚರ್ಮಕ್ಕೆ ಬೇಗನೇ ಹೀರಲ್ಪಟ್ಟು ಬೇನೆಯನ್ನು ಕೂಡಲೇ ಗುಣಪಡಿಸುತ್ತದೆ. ಗಾಯ ಕಲೆ ನೋವುಗಳೆಲ್ಲಾ ಗುಣವಾಗಿ ನೀವು ಸುಖಹೊಂದುವಿರಿ. ಜಾಂಬಕಿಗೆ ಒಂದು ರೂಪಾಯಿ ಅಥವಾ ರೂ 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ

ಏಜಂಟ್ಸ್ —

ಮೆಸರ್ಸ್ ದಾಧಾ ಎಂಡ್ ಕೊ.,

ಪಾರ್ಕ್ ಟೌನ್ ಮದರಾಸು

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ: ೧೯೦೬.

ಗಾಂಧೀಜಿಯ ಆಶ್ರಮದಲ್ಲಿ ಮುಸಲ್ಮಾನ ವಿವಾಹ!

ಗಾಂಧಿ ಆಶ್ರಮದಲ್ಲಿ ಮುಸಲ್ಮಾನ್ ವಿವಾಹ

ಗಾಂಧಿ ಆಶ್ರಮದಲ್ಲಿ ಅನೇಕ ಹುಡುಗಿಯರಿಗೆ ಮದುವೆ ಆಗಿದೆ. ಅವರಲ್ಲಿ ಇಬ್ಬರು ಮುಸಲ್ಮಾನ ಹುಡುಗಿಯರು. ಅವರ ತಂದೆ ಪೈಗಂಬರವಾಸಿ ಇಮಾಮ್ ಸಾಹೇಬ್ ಅಬ್ದುಲ್ ಕಾದರ್ ಬವಾಸಿಯವರು. ವಿಶೇಷ ಆಡಂಬರವಿಲ್ಲದೆ ಗಂಭೀರ ರೀತಿಯಿಂದ ವೆಚ್ಚವಿಲ್ಲದೆ ಮದುವೆ ಮಾಡುವುದು ಅಲ್ಲಿನ ಕ್ರಮ. ಮೊನ್ನೆ ಒಂದು ವಿವಾಹ ನಡೆಯಿತು. ಡಾ| ಶಿರೀನಬಾಯಿ ಎಂ. ಬಿ. ಬಿ. ಎಸ್. ಇವರು ಕನ್ಯೆ. ಡಾ| ಯುಸಫ್ ಎಂ. ಬಿ. ಬಿ. ಎಸ್. ಇವರು ವರ. ಡಾ| ಸುಶೀಲ ನಾಯರರು ಒಂದೆರಡು ತಿಂಗಳ ರಜೆಯಲ್ಲಿದ್ದಾಗ ಡಾ| ಶಿರೀನ ಆಶ್ರಮದ ಡಾಕ್ಟರರಾಗಿ ಕೆಲಸಮಾಡಲು ಬಂದಿದ್ದರು. ಡಾ| ಸುಶೀಲಾ ಮತ್ತು ಡಾ| ಶಿರೀನರು ಲೇಡಿ ಹಾರ್ಡಿಂಗ್ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದರು. ಅವರು ಬೇರೆ ಬೇರೆ ಸಿವಿಲ್ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದರು. ಒಂದು ದಿನ ಮುಂಜಾನೆ ಅವರು ಆಶ್ರಮಕ್ಕೆ ಬಂದು ನಾನು ವಿವಾಹವಾಗಿದ್ದೇನೆ. ನನ್ನ ತಂದೆ ಪೈಗಂಬರವಾಸಿಗಳಾಗಿರುವುದರಿಂದ ಗಾಂಧಿಜಿ ನನ್ನ ಪಿತೃವಾಗಿ ಕನ್ಯಾದಾನ ಮಾಡಬೇಕು ಎಂದು ಕೇಳಿದರು. ಗಾಂಧಿಜಿ ಅದಕ್ಕೊಪ್ಪಿದರು. ವರ ಕನ್ಯೆಯರು ಸರಳ ಖಾದೀ ವಸ್ತ್ರ ಧರಿಸಿದ್ದರು. ಲಗ್ನ ಸಮಾರಂಭವು ಕೇವಲ ಹತ್ತು ನಿಮಿಷಗಳಲ್ಲಿ ನಡೆಯಿತು. ವರ್ಧಾದ ಪ್ರಮುಖ ಮುಸಲ್ಮಾನ ಹಿಂದು ಗೃಹಸ್ಥರು ಬಂದಿದ್ದು ವಧೂವರರನ್ನು ಆಶೀರ್ವದಿಸಿದರು. ತಾವೇ ತಂದೆಯೆಂದು ತಿಳಿದುಕೊಂಡ ಒಬ್ಬಳ ಇಚ್ಛೆಯನ್ನು ಪೂರ್ತಿಗೊಳಿಸಿದ್ದಕ್ಕೆ ಗಾಂಧಿಜಿಗೆ ಸಮಾಧಾನವೆನಿಸಿತು. ಮುಸಲ್ಮಾನ ಕಾಯಿದೆಯಂತೆ ಲಗ್ನ ವಿಧಿಗಳು ನೆರವೇರಿದವು. ರಿಜಿಸ್ಟರಿನಲ್ಲಿ ವರ ಕನ್ಯೆಯರ ಸಹಿ ತೆಗೆದುಕೊಳ್ಳಲಾಯಿತು. ಐದು ಜನ ಸಾಕ್ಷಿ ಹಾಕಿದರು. ಗಾಂಧಿಜಿಯೂ ಒಬ್ಬರು. ಕುರಾಣಿನಿಂದ ಸಮಯೋಚಿತ ಗೀತೆ ಹಾಡಿದರು. ಅಲ್ಲಿಗೆ ಬಂದಿದ್ದ ಮುಸಲ್ಮಾನ ಮಿತ್ರರು ಮೌನವಾಗಿ ಪಠಿಸಿದರು.

ಮಹಾತ್ಮರ ೭೪ನೇ ಜನ್ಮದಿನ

೧೦ ಲಕ್ಷ ರೂ. ಕಾಣಿಕೆ

ಮಹಾತ್ಮಾ ಗಾಂಧಿಯವರ ೭೪ನೇ ಜನ್ಮದಿನದ ದಿವಸ (೨—೧೦—೪೨) ಅಖಿಭಾರತ ಚರಖಾ ಸಂಘದವರು ಮಹಾತ್ಮಾ ಗಾಂಧಿಯವರಿಗೆ ೧೦ ಲಕ್ಷ ರೂಪಾಯಿಗಳ ಕಾಣಿಕೆ ಅರ್ಪಿಸುವ ಯೋಚನೆ ಮಾಡಿದ್ದಾರೆ. ಆ ಎಲ್ಲ ಹಣವನ್ನು ಮುಂದೆ ಖಾದಿ ಉತ್ಪಾದನ ಕಾರ್ಯಕ್ಕೆ ಉಪಯೋಗಿಸಲಾಗುವದು. ಚರಖಾ ಸಂಘದ ಬಿಹಾರ ಶಾಖೆಯವರು ೭೪ ಸಾವಿರ ರೂಪಾಯಿ, ಗುಜರಾಥ ಶಾಖೆಯವರು ಬಿಹಾರದ ೫ ಪಾಲು ಕೂಡಿಸುವ ವ್ಯವಸ್ಥೆ ಮಾಡಿದ್ದಾರೆ. ಬಂಗಾಲದಲ್ಲಿಯೂ ಕನಿಷ್ಟ ೭೪ ಸಾವಿರ ರೂಪಾಯಿ ಕೂಡಿಸುವ ಪ್ರಯತ್ನ ಮಾಡಲಾಗುವದು.

ಅಮೆರಿಕದಲ್ಲಿ

ವರ್ಷಕ್ಕೆ ೨ ಕೋಟಿ ವಿಮಾನಗಳು

ಸಂಯುಕ್ತ ರಾಷ್ಟ್ರಗಳ ಸಂಪತ್ತು ಸಮೃದ್ಧವಾಗಿದೆ. ವರ್ಷಕ್ಕೆ ೩,೦೦,೦೦೦ ವಿಮಾನಗಳನ್ನು ಕಟ್ಟಬಹುದು. ಅವಶ್ಯ ಕಂಡರೆ ಅದಕ್ಕೂ ಹೆಚ್ಚು ಕಟ್ಟಬಹುದು—ಎಂಬದಾಗಿ ಬ್ರಿಟಿಶ ಸಂಘದ ಸಮ್ಮೇಳನಕ್ಕೆ ಅಮೆರಿಕದ ಪ್ರತಿನಿಧಿಯಾಗಿ ಬಂದಿದ್ದ ಆರ್ಥರ ನಾಟಮನ್ನರು ತಿಳಿಸಿದ್ದಾರೆ. 'ಇಷ್ಟರಲ್ಲಿಯೇ ಅಮೆರಿಕದ ಒಂದು ವಿಮಾನ ಉತ್ಪಾದನ ಕೇಂದ್ರದಲ್ಲಿ ನಾಲ್ಕು ಎಂಜಿನುಗಳ ಬಾಂಬರ ವಿಮಾನಗಳು ಗಂಟೆಗೊಂದರಂತೆ ತಯಾರಾಗಲಿವೆ' ಎಂದು ಹೇಳಿರುವರು.

'ಅಮೆರಿಗೆ ಅಧೀನನಾಗಿ ನಡೆಯುವುದಿಲ್ಲ'

ಅಮೆರಿಯವರ ಅಧೀನವಾಗಿ ನಡೆಯುವುದಿಲ್ಲ

ಸರ್ ಮುದಲಿಯಾರರ ಹೇಳಿಕೆ

'ಬ್ರಿಟಿಷ ಸರಕಾರದ ಯುದ್ಧಮಂತ್ರಿಮಂಡಳ ಹಾಗೂ ಶಾಂತಸಾಗರದ ಯುದ್ಧಕೌನ್ಸಿಲಿನ ಸಭೆಯಲ್ಲಿ ಭಾರತ ಮಂತ್ರಿ ಅಮೆರಿಯವರ ಅಧೀನನಾಗಿ ಇಲ್ಲವೇ ಸಲಹೆಗಾರನಂತೆ ನಾನು ಕೆಲಸಮಾಡುವುದಿಲ್ಲ; ಅಲ್ಲಿ ಹಿಂದುಸ್ಥಾನ ಸರಕಾರದ ಆದೇಶವನ್ನು ಅದಿಲ್ಲದಿದ್ದರೆ ನನ್ನ ಅಭಿಪ್ರಾಯವನ್ನು ಆ ಸಭೆಗಳಲ್ಲಿ ನಾನು ಮಂಡಿಸುವೆನು' ಹೀಗೆಂದು ಸರ್ ರಾಮಸ್ವಾಮಿ ಮುದಲಿಯಾರರು ತನ್ನ ಹೊಸ ನೇಮಕದ ವಿಚಾರವಾಗಿ ಹೇಳಿದರು.

ಸರ್ ಸಿ. ಪಿ.

ತಿರುವಾಂಕೂರ್ ದಿವಾನರಾಗಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ವೈಸರಾಯ್ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿ ಸುದ್ದಿಖಾತೆಯ ಮಂತ್ರಿಗಳಾದ ಅಧಿಕಾರ ವಹಿಸಿಕೊಂಡಿದ್ದು, ಅವರ ದಿವಾನಗಿರಿಯ ಸ್ಥಾನದಲ್ಲಿ ತಾತ್ಕಾಲಿಕವಾಗಿ ಶ್ರೀ ಜಿ. ಪರಮೇಶ್ವರನ್ ಪಿಳ್ಳೈ ಕೆಲಸಮಾಡುವರು. ಆ ಮೇಲೆ ಸರ್ ಸಿ. ಪಿ. ಯವರೇ ಆ ಸ್ಥಾನಕ್ಕೆ ಮರಳಿ ಬರುವರೆಂದು ತಿಳಿದಿದೆ.

ಕಾಂಗ್ರೆಸಿಗೆ ಸಾವರ್ಕಾರರು ಬೆಂಬಲ ಕೊಡುವರೆ?

'ಹಿಂದುಸ್ಥಾನವನ್ನು ಭಾಗಮಾಡಕೂಡದು, ಆಯಾಯ ಶಾಸನ ಸಭೆಗಳಲ್ಲಿ ಆಯಾ ಜಾತಿ ಜನಸಂಖ್ಯೆಯಂತೆ ಪ್ರಾತಿನಿಧ್ಯ ನೌಕರಿ ಕೊಡಬೇಕು ಎಂಬೀ ರೀತಿ ಹಿಂದು ಮಹಾಸಭೆಯ ತತ್ವಗಳಿಗೊಪ್ಪಿದರೆ ಕಾಂಗ್ರೆಸು ಆರಂಭಿಸುವ ಚಳವಳದಲ್ಲಿ ತನ್ನ ಬೆಂಬಲವಿದೆಯೆಂದು ಸಾವರ್ಕಾರರ ಹೇಳಿಕೆ.

ಕಾಂಗ್ರೆಸಿನ ಹೆಸರು ಕೆಡಿಸಲು ಸರಕಾರದ ಹಂಚಿಕೆಯೆ?

ಗಾಂಧಿಜಿ ಜಪಾನಿನೊಡನೆ ಒಳಸಂಚು ಮಾಡಿದರಂತೆ!

'ಅಗೌರವಕರ ಕುತಂತ್ರ'

ಅಲ್ಲಾಬಾದಿನಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಡೆದಾಗ ಸಿಕ್ಕಿದ ಕೆಲವು ಕಾಗದ ಪತ್ರಗಳನ್ನು ಸರಕಾರವು ಪ್ರಸಿದ್ಧಿಸುವುದಂತೆ. ಕೆಲ ದಿನಗಳ ಹಿಂದೆ ಎ. ಐ. ಸಿ. ಸಿ. ಆಫೀಸನ್ನು ಪೋಲೀಸರು ಜಪ್ತಿಮಾಡುವಾಗ ಆ ಪತ್ರಗಳು ಸಿಕ್ಕಿದುವಂತೆ. ಅದರಲ್ಲಿ ಗಾಂಧಿಜಿ ಹಾಗೂ ಕಾಂಗ್ರೆಸ ಮುಖಂಡರು ಜಪಾನನೊಡನೆ ಒಳಸಂಚು ಮಾಡಲು ಯತ್ನಿಸುತ್ತಿರುವ ವಿಷಯವಿರುವುದಂತೆ. ಅಮೆರಿಕದಲ್ಲಿ ಹಾಗೂ ಇತರ ರಾಷ್ಟ್ರಗಳಲ್ಲಿ ಕಾಂಗ್ರೆಸಿನ ವಿರುದ್ಧ ಪ್ರಚಾರ ಮಾಡಲು ಸರಕಾರವು ಹೀಗೆ ಸೃಷ್ಟನೆ ಮಾಡುತ್ತಿದೆಯೆಂದು ಕೆಲವರ ಊಹೆಯಾಗಿದೆ. ಗಾಂಧಿಜಿ ಮತ್ತು ನೆಹರುಗಳು ಇದನ್ನು 'ಅಗೌರವಕರ ಕುತಂತ್ರ' ವೆಂದು ಹೇಳಿರುವರು.

ಮಹಾತ್ಮರ ಕೊನೆಯ ಸಮರವು ಅತ್ಯಲ್ಪ ಕಾಲದಲ್ಲಿ ಪೂರೈಸುವುದು

ಸರದಾರ ಪಟೇಲರು ಅಹಮ್ಮದಾಬಾದಿನಲ್ಲಿ ವಿದ್ಯಾರ್ಥಿಗಳ ಮುಂದೆ ಭಾಷಣ ಮಾಡುತ್ತಾ 'ಮಹಾತ್ಮರ ಕೊನೆಯ ಹೋರಾಟವು ಬಹು ಅಲ್ಪಕಾಲದಲ್ಲಿ, ಕ್ಷಿಪ್ರದಲ್ಲಿ, ಒಂದು ವಾರದೊಳಗಾಗಿ ಮುಗಿಯುವುದೆಂದು ಹೇಳಿದರು. ಈ ಹೋರಾಟದಿಂದ ಯಾವ ಹಿಂದೀಯನೂ ದೂರ ನಿಲ್ಲಲಾರನೆಂದೂ ಇದು ಒಂದು ನವೀನವಾದ ಹೋರಾಟವಾಗುವುದೆಂದೂ ಹೇಳಿದರು. ವಿದ್ಯಾರ್ಥಿಗಳು ತಮ್ಮ ಓದುಬರೆಯುವುದನ್ನು ಬಿಟ್ಟು ಈ ಆಂದೋಲನವನ್ನು ಸೇರುವರೆಂದೂ ಅವರು ಅಭಿಪ್ರಾಯಪಟ್ಟರು. ವಿದ್ಯಾರ್ಥಿಗಳಲ್ಲಿ ಒಕ್ಕಟ್ಟಿಲ್ಲ. ಒಕ್ಕಟ್ಟನ್ನು ಸ್ಥಾಪಿಸಬೇಕು ಎಂದರು.

ವೆಂಡಲ್ ವಿಲ್ಕಿಯವರು

ಅಧ್ಯಕ್ಷ ರೂಜವೆಲ್ಟರು ಬ್ರಿಟನ್—ಭಾರತಗಳೊಳಗೆ ಸೌಹಾರ್ದವನ್ನುಂಟುಮಾಡಲು ಪ್ರಯತ್ನಿಸಬೇಕೆಂದು ವೆಂಡಲ್ ವಿಲ್ಕಿಯವರನ್ನು ಕೇಳಿಕೊಂಡಿದ್ದಾರೆಂದೂ, ಅಮೇರಿಕದಿಂದ ವಿಲ್ಕಿಯವರು ಹಿಂದುಸ್ಥಾನಕ್ಕೆ ಬರುವರೆಂದೂ ಲಂಡನಿನಲ್ಲಿ ವಾರ್ತೆ ಹರಡಿದೆ. ವಿಲ್ಕಿಯವರು ಚೈನ ರಷ್ಯಗಳನ್ನು ಸಹ ಸಂದರ್ಶಿಸಲಿರುವರಾಗಿ ವದಂತಿಯಿದೆ.

ಹಿಂದುಸ್ಥಾನಕ್ಕೆ ಹೋಗುವ ವಿಚಾರವೇ ತನಗೆ ಗೊತ್ತಿಲ್ಲವೆಂದು ವಿಲ್ಕಿಯವರು ಹೇಳಿದರು.

ಆಂದೋಲನದ ಮೊದಲನೇ ಆಹುತಿ!

'ಹರಿಜನ' ಪತ್ರಿಕೆಯಲ್ಲಿ ಪ್ರಕಟವಾದ ಶ್ರೀ ಮಹಾದೇವಭಾಯಿ ದೇಸಾಯಿಯವರ ಲೇಖದಲ್ಲಿ, ಬಂಗಾಲ ಪ್ರಾಂತದ ಫೆಣಿಯೊಳಗಿನ ಜನರ ದುರವಸ್ಥೆ ವರ್ಣಿಸಲಾಗಿದೆ: ಈ ಜನರಿಗೆ, ಮನೆಗಳನ್ನು ಖಾಲಿಮಾಡಿ ಹೋಗಬೇಕಾಗಿ ಹುಕುಮಾಯಿತು. ಹೊಸ ಮನೆ ಕಟ್ಟಿಕೊಳ್ಳಲು ರೂ. ೩೫ ಕೊಡೋಣಾದವು. ಹೋಗುವಾಗ ಆಸ್ತಿಯನ್ನು ಒಯ್ಯಲಾಗದಿದ್ದರೆ ಅದನ್ನು ಸರಕಾರವು ಕಾಯುವುದೆಂದು ಅಧಿಕಾರಿಗಳು ನಂಬಿಗೆ ಕೊಟ್ಟರು; ಜನರು ಮನೆ ಬಿಟ್ಟು ಹೋದರು; ಖಾಲಿಯಾದ ಮನೆಗಳನ್ನು ಅಧಿಕಾರಿಗಳು ಮುರಿದರು; ಇದ್ದ ಸಾಮಾನನ್ನೆಲ್ಲ ನಾಶಮಾಡಿದರು! ಕೆಲವು ಸಾಮಾನು ಸುಲಿಗೆಗಾರರಿಗೆ ಒಪ್ಪಿಸಲ್ಪಟ್ಟಿತು! ಖಾಲಿ ಮಾಡಲ್ಪಟ್ಟ ಹಳ್ಳಿಗಳಲ್ಲಿ ಸೈನಿಕರು ವಾಸಮಾಡಲಿಲ್ಲ. ಅವು ಸೈನ್ಯ ಇಲಾಖೆಗೆ ಅವಶ್ಯವಿರಲಿಲ್ಲ. ಒಬ್ಬರು ಚಲೋ ಸಂಪತ್ತಿನವರು ಸಾಧಾರಣ ರೂ. ೪೦-೫೦ ಸಾವಿರಯುಳ್ಳವರು ಮನೆಬಿಟ್ಟು ಹೋಗುವಾಗ ಜೊತೆಗೆ ರೂ. ೧೦ ಸಾವಿರ ಮುತ್ತು ಮುತ್ತಿನ ಒಡವೆಗಳನ್ನು ಒಯ್ದಿದ್ದರು. ಅವನ್ನು ಇಡಲು ಸ್ಥಳವಿರಲಿಲ್ಲ. ಕಳ್ಳರು ಬಂದು ಇದನ್ನೆಲ್ಲ ಸುಲಿದೊಯ್ದರು! ಅಧಿಕಾರಿಗಳನ್ನು ನಂಬಿ ಮನೆಯಲ್ಲಿ ಬಿಟ್ಟು ಬಂದ ಆಸ್ತಿಯನ್ನೂ ಕಳ್ಳರು ಲೂಟಿ ಮಾಡಿ ಒಯ್ದರು. ಈಗ ಈ ಶ್ರೀಮಂತರು ನಿರಾಶ್ರಿತರಾಗಿದ್ದಾರೆ!

ಈ ಹಳ್ಳಿಯೊಳಗೆ ಜನಸೇವೆ ಮಾಡಲು, ಶ್ರೀ ಸತೀಶ ಚಂದ್ರ ದಾಸಗುಪ್ತರವರು ಹೋಗಿದ್ದರು. ಅವರು ಹಳ್ಳಿಗರ ಸ್ಥಿತಿಯನ್ನು ಅಧಿಕಾರಿಗಳಿಗೆ ಅರುಹಿಕೊಂಡು ನಿವಾರಣೆ ಮಾಡಲು ಬಯಸುತ್ತಿದ್ದರು. ಇದೇ ಸಮಯ ೫-೬ ಹಳ್ಳಿಗಳ ಜನರು ಒಕ್ಕಟ್ಟಾಗಿ ಮಳೆಗಾಲ ಮುಗಿದ ನಂತರ ಮನೆಗಳನ್ನು ಖಾಲಿ ಮಾಡಿಕೊಡುತ್ತೇವಾಗಿಯೂ, ಸರಕಾರವು ಕೊಡುವ ಪ್ರತಿಫಲ ತೀರ ಕಡಿಮೆಯೆಂದೂ, ಹಣವನ್ನು ಸರಿಯಾಗಿ ಮುಂಗಡ ಕೊಡಬೇಕೆಂದೂ, ಇಲ್ಲದಿದ್ದರೆ ತಾವು ಮನೆಗಳನ್ನು ಖಾಲಿ ಮಾಡಿ ಕೊಡುವದಿಲ್ಲವಾಗಿಯೂ ಗಟ್ಟಿ ಕೂತರು. ಶ್ರೀ ಸತೀಶ ಬಾಬುಗಳೇ ಇವರಿಗೆ ದುರುಪದೇಶ ಮಾಡುತ್ತಾರಾಗಿ ಅಧಿಕಾರಿಗಳ ಅಭಿಪ್ರಾಯವಾಯಿತು! ಭಾರತ ರಕ್ಷಣ ಕಾನೂನಿನನ್ವಯ ಅವರು ಆ ಜಿಲ್ಲೆಯನ್ನು ೨೪ ತಾಸುಗಳಲ್ಲಿ ಬಿಟ್ಟು ಹೋಗತಕ್ಕದ್ದಾಗಿ ಸೇನಾಪತಿಗಳು ಹುಕುಮನ್ನು ಹೊರಡಿಸಿದರು! ಈ ಹುಕುಮನ್ನು ಶ್ರೀ. ಸತೀಶ ಬಾಬುಗಳು ಪಾಲಿಸಲಿಲ್ಲ. ಅದಕ್ಕಾಗಿ ಅವರ ಮೇಲೆ ಖಟ್ಲೆಯಾಗಿ ಅವರಿಗೆ ೨ ವರ್ಷಗಳ ಕಠಿಣ ಶಿಕ್ಷೆಯಾಗಿದೆ. ಇದು ಹೊಸ ಆಂದೋಲನದಲ್ಲಿ ಮೊದಲನೇ ಆಹುತಿಯೆಂದು ಮಹಾತ್ಮರು ಸತೀಶರನ್ನು ಹರಸಿದ್ದಾರೆ.

ನೋಟೀಸು

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 229/1942

ದಿ. ಸಿಟಿ ಪ್ರೆಸ್ಸ್ ಲಿಮಿಟೆಡ್— ವಾದಿ

ಸಿ. ಯಚ್. ಅಬ್ಬಾಸ್‌ಕುಟ್ಟಿ ಸಿಲೋನ್ ಬೇಕರಿಯ ಪ್ರೊಪ್ರೈಟರ್. ಕಾಸರಗೋಡು ತಾಲ್ಲೂಕು ಕಾಸ್ರಗೋಡು ಕಸಬಾ— ಪ್ರತಿವಾದಿ.

ಪ್ರತಿವಾದಿಗೆ ವಾದಿ ಕೂಡೆ ವಹಿವಾಟು ಪ್ರಿಂಟಿಂಗ್ ವಗೈರೆ ಕೆಲಸದ ಬಾಬ್ತು ಪ್ರತಿವಾದಿಯಿಂದ ವಾದಿಗೆ ಅಸ್ಲುಬಡ್ಡಿಯಿಂದ ಬರತಕ್ಕ ರೂಪಾಯಿ 61-8-0 ನ್ನು ಪ್ರತಿವಾದಿಯಿಂದ ಬರಮಾಡಿಕೊಳ್ಳುವರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವನ್ನು ತಾ. 12-8-1942ನೇ ದಿವಸ ತನಿಖೆಗೆ ಇಟ್ಟಿರುವದರಿಂದ ಆ ಕುರಿತು ಆಕ್ಷೇಪವಿದ್ದಲ್ಲಿ ಸದ್ರಿ ತಾ. 12-8-1942ನೇ ದಿವಸ ಪೂರ್ವಾಹ್ನ 10½ ಗಂಟೆಗೆ ಹಾಜರಾಗಿ ತಕ್ಕ ಆಕ್ಷೇಪವನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಸಲಾಗುತ್ತದೆ.

Mangalore, 27-7-2942 | M. Madhava Rau, Vakil for plaintiff

ಮಂಗಳೂರು ಬಾಲಾಜಿ ಟಾಕೀಸಿನಲ್ಲಿ

'ದಿ ಪ್ರೈವೇಟ್ ಲೈವ್ಸ್ ಓಫ್ ಎಲಿಜಬೆತ್ ಎಂಡ್ ಎಸೆಕ್ಸ್'

ಎಂಬೀ ವಾರ್ನರ್ ಬ್ರದರ್ಸ್‌ನವರ ತ್ರಿವರ್ಣರಂಜಿತ ಚಿತ್ರವು ಪ್ರದರ್ಶಿಸಲ್ಪಡುವುದು. ಇದರಲ್ಲಿ ಬೆಟ್ಟಿ ಡೇವಿಸ್ ಮತ್ತು ಏರೋಲ್ ಫ್ಲಿನ್ ಇವರು ಅಭಿನಯಿಸುತ್ತಾರೆ. ಇಂಗ್ಲೆಂಡಿನ ರಾಜಮನೆತನದ ರಮ್ಯ ರೋಮಾಂಚಕ ಪ್ರಣಯ ಘಟನೆಗಳನ್ನು ಇದರಲ್ಲಿ ಕಾಣಬಹುದು. ಇಂಗ್ಲೆಂಡಿನ ರಾಣಿ ಎಲಿಜಬೆತಳು ಎಸೆಕ್ಸಿನ ತರುಣ ರಾಜಕುಮಾರನನ್ನು ಪ್ರೀತಿಸುತ್ತಾಳೆ! 'ದಿ ಎಡ್ವೆಂಚರ್ಸ್ ಓಫ್ ರೋಬಿನ್ ಹುಡ್' ಖ್ಯಾತಿನಿರ್ದೇಶಕ ಮೈಕಲ್ ಕರ್ಟಿಜರಿಂದ ಈ ಚಿತ್ರವು ನಿರ್ದೇಶಿಸಲ್ಪಟ್ಟಿದೆ. ಸಿನೆಮಾ ಪ್ರಿಯರು ನೋಡಲು ಮರೆಯಬಾರದ ಚಿತ್ರ!

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From

7--8--1942

1.	Current	(1% p. a. from Jan. to June.
		(½% p. a. from July to Dec
2.	Savings Bank	2% p. a.
3.	Short-term	1¼% p. a.
4.	Fixed 3 months	1½% p. a.
	6 ,,	2% p. a.
	9 ,,	2½% p. a.
	12 ,,	3% p. a.
	24 ,,	3½% p. a.

Advances aginst approved securities made at very competitive rates.

"ನಾನು ಬ್ರಿಟಿಷರ ಪ್ರಜೆಯಲ್ಲ"

ಗಾಂಧಿಜಿ ಸಾರುವರೆ?

ಮುಂಬಯಿಯಲ್ಲಿ ಸೇರುವ ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ವರ್ಕಿಂಗ್ ಕಮಿಟಿ ನಿರ್ಣಯಕ್ಕೆ ಬೆಂಬಲ ದೊರೆತರೆ ತಾನು ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಯಲ್ಲವೆಂದು ಗಾಂಧಿಜಿ ಸಾರುವರೆಂಬುದಾಗಿ ಕೆಲವು ಕಡೆಗಳಲ್ಲಿ ಊಹಾಪೋಹೆಯುಂಟಾಗಿದೆ.

ಗಾಂಧಿಜಿಯನ್ನು ಬಂಧಿಸಿದರೆ ಅನರ್ಥವಾದೀತು

ಲಂಡನ್ ಪತ್ರಿಕೆಯ ಅಭಿಪ್ರಾಯ

ಲಂಡನಿನ ನ್ಯೂ ಸ್ಟೇಟ್ಸ್‌ಮೇನ್ ಎಂಡ್ ನೇಶನ್ ಪತ್ರಿಕೆಯು ಒಂದು ಲೇಖನ ಬರೆಯುತಾ ಗಾಂಧಿಜಿಯವರ ಪ್ರಭಾವದ ಕುರಿತು ವಿವರಿಸಿ ಈ ಸಂದರ್ಭ ಅವರನ್ನು ಬಂಧಿಸಿದರೆ ಅನರ್ಥವುಂಟಾದೀತೆಂದು ಸರಕಾರಕ್ಕೆ ಎಚ್ಚರಿಕೆಯಿತ್ತಿರುವುದು. ಅಮೆರಿಯವರು ದಬ್ಬಾಳಿಕೆಯ ಶಸ್ತ್ರವನ್ನು ಪಯೋಗಿಸುವ ಮೊದಲು ಚನ್ನಾಗಿ ಆಲೋಚನೆ ಮಾಡಬೇಕೆಂದೂ, ಭಾರತದಲ್ಲಿ [illegible] ಸರಕಾರವು ಸ್ವತಂತ್ರ್ಯ ದಾನದಿಂದ ಯೋಗ್ಯ ಪರಿಹಾರೋಪಾಯ ಮಾಡಬೇಕೆಂದೂ ಅದರಲ್ಲಿ ತಿಳಿಸಲಾಗಿದೆ

ಸಾದರ ಸ್ವೀಕಾರ

ಭರಮಪ್ಪನ ಭೂತ:- ಬರೆದವರು. 'ಶ್ರೀರಂಗ' ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ.

ಚಿಗುರು:-(ಸಣ್ಣ ಕತೆಗಳು) ಬರೆದವರು. ದಿವಂಗತಾ ಗೌರಮ್ಮ. ಮನೋಹರ ಗ್ರಂಥ ಭಂಡಾರ, ಧಾರವಾಡ.

ಸಂತಸಖು:-(ನಾಟಕ) ಲೇಖಕರು ಹರಿದಾಸ, ವಿದ್ವಾನ್, ಕಾರ್ಕಳ.

ಶ್ವೇತ ಕುಮಾರ ಚರಿತ್ರೆ:- (ಯಕ್ಷಗಾನ) ಬರೆದವರು. ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟ

ಹಿಟ್ಲರ್ ಯಾರು?:-ಲೇಖಕ ಆರ್ ಸಿ. ಕೆ ಎನ್ಸರ್. ಆಕ್ಸ್‌ಫರ್ಡ್ ಪ್ರಪಂಚ ಪರಿಚಯ ಮಾಲೆ

ಮಹಾಯುದ್ಧ ನಕ್ಷೆಗಳ ಸಂಗ್ರಹ:-ಆಕ್ಸ್‌ಫರ್ಡ್ ಪ್ರಪಂಚ ಪರಿಚಯ ಮಾಲೆ

— ವಿಮರ್ಶೆಯಥಾವಕಾಶ —

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 263/1942

ವಾದಿ— ಸುರೇಂದ್ರನಾಥ ನ್ಯಾಕ್ & ಕಂಪೆನಿ

ಪ್ರತಿವಾದಿ—ಅಪ್ಪುರಾಯ ಶೆಣೈ-ಕೋಟೇಶ್ವರ ಸುಬ್ಬಣ್ಣ ಶೆಣೈರ ಮಗ, ಹೊಸಂಗಡಿ ಗ್ರಾಮ ಕುಂದಾಪುರ ತಾಲೂಕು

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ವಾದಿ ಕಂಪೆನಿಯವರಿಗೆ ರೂಪಾಯಿ 518-9-6ಕ್ಕೆ ತಾರೀಕು 21-6-1939ರಲ್ಲಿ ಬರ್ಸಿಕೊಂಡ ಡಿಮಾಂಡು ನೋಟಿನ ಅಸಲು ಬಡ್ಡಿ ಹಣಗಳ ಬಗ್ಗೆ ಸದ್ರಿ ವಾದಿಯು ನಿಮ್ಮ ಮೇಲೆ ದಾವೆ ದಾಖಲು ಮಾಡಿರುತ್ತಾರೆ, ಆ ಕುರಿತು ನಿಮಗೇನಾದರೂ ಆಕ್ಷೇಪ ಹೇಳುವುದಿದ್ದರೆ ಖುದ್ದಾಗಲಿ ಯಾ ವಕೀಲ ದ್ವಾರಾಗಲೀ ತಾರೀಕು 18-8-1942ನೇ ದಿವಸ ಪೂರ್ವಾಹ್ನ ಹನ್ನೊಂದು ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಇಲ್ಲವಾದರೆ ನಿಮ್ಮನ್ನು ಏಕ್ಸ ಪಾರ್ಟಿಯಾಗಿ ಮಾಡಿ ಸದ್ರಿ ದಾವೆಯು ಮುಂದಿನ ಕ್ರಮ ನಡೆಯಲಾಪೀತು,

ಕುಂದಾಪುರ 1-8-42 } **K. Raghunath Shenai,** ವಾದಿಯ ಕಡೆ ವಕೀಲ್.



ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿ

ಕಳೆದ ಶನಿವಾರ ಶ್ರೀ. ಎಂ ಡಿ. ಅಧಿಕಾರಿ, ಪ್ರೆಸಿಡೆಂಡ್-ಇನ್-ಛಾರ್ಜು ಇವರ ಅಧ್ಯಕ್ಷತೆಯಲ್ಲಿ ಸೇರಿದ ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಯಲ್ಲಿ ಮಹಾತ್ಮಾಜಿಯವರ ಮುಂದಾಳುತನದಲ್ಲಿ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುವ, ವಾರ್ಧಾದಲ್ಲಿ ನಿರ್ಧರಿಸಿದ ಕೊಂಗ್ರೆಸ್ ವರ್ಕಿಂಗ್ ಕಮಿಟಿಯ ಗೊತ್ತುವಳಿಯನ್ನು ಅಕ್ಷರಶಃ ಸ್ವೀಕರಿಸುವ, ಗಾಂಧಿಜಿಯವರು ಆರಂಭಿಸಲಿರುವ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಕಮಿಟಿಯು ಭಾಗವಹಿಸಲು ಸಿದ್ಧವಿರುವ, ಅಂತೇ ಜಿಲ್ಲೆಯ ಜನತೆಯೂ ಮುಂಬರುವ ಈ ಚಳವಳದಲ್ಲಿ ತ್ರಿಕರಣಪೂರ್ವಕವಾಗಿ ಭಾಗವಹಿಸುವಂತೆ ಅವರಲ್ಲಿ ಕೇಳಿಕೊಳ್ಳುವ, ಸ್ವಯಂಸೇವಕ ತರಬೇತಿ ಶಿಬಿರವನ್ನು ಇದೇ ತಾ ೭-೮-೪೨ರಲ್ಲಿ ಕೊಂಗ್ರೆಸ್ ಕಚೇರಿಯಲ್ಲಿ ತೆರೆವಂತೆ ನಿರ್ಧರಿಸುವ, ಕಯ್ಯೂರಿನಲ್ಲಿ ಕಳೆದ ವರ್ಷ ಓರ್ವ ಪೋಲೀಸಿನವನನ್ನು ಕೊಂದರೆಂಬ ಆರೋಪದ ಮೇಲೆ, ಮಡತಿಲ್ ಅಪ್ಪು, ಕುಂಞಂಬು ನಾಯರ್, ಕೊಯಿತಾಟಿಲ್ ಚಿರುಕಂಡನ್ ಅಬೂಬಕರ್ ಈ ನಾಲ್ಕು ಜನರಿಗೆ ದ ಕ. ಜಿಲ್ಲಾ ಸೆಶನ್ಸ್ ಜಡ್ಜರು ಫಾಶಿ ಶಿಕ್ಷೆ ವಿಧಿಸಿದನ್ನು ಹೈಕೋರ್ಟಿನವರು ಖಾಯಂ ಮಾಡಿದ್ದು ಅವರಿಗಾದ ಈ ಮರಣದಂಡನೆಯನ್ನು ರದ್ದುಗೊಳಿಸಬೇಕಾಗಿ ಮಾನ್ಯ ಮದರಾಸು ಗವರ್ನರರನ್ನು ಕೇಳಿಕೊಳ್ಳುವ ಠರಾವುಗಳಾದುವು

ಶಾಂತಿದಲ ತರಬೇತಿ ಶಿಬಿರ

ಶಾಂತಿದಲಕ್ಕೆ ಸ್ವಯಂಸೇವಕರನ್ನು ತರಬೇತಿಗೊಳಿಸುವ ಸಂಬಂಧವಾಗಿ ಒಂದು ಶಿಬಿರವನ್ನು ದ ಕ. ಜಿಲ್ಲಾ ಕೊಂಗ್ರೆಸ್ ಕಮಿಟಿಯವರು ಮಂಗಳೂರಿನಲ್ಲಿ (ಕೊಂಗ್ರೆಸ್ ಕಚೇರಿಯಲ್ಲಿ) ಇದೇ ತಾ ೭-೮ '೪೨ನೇ ದಿನ ತೆರೆಯಲು ನಿಶ್ಚಯಿಸಿರುವರು ಈ ಶಿಬಿರವು ಸ್ವಯಂಸೇವಕ ತರಬೇತಿ ಶಿಬಿರವಾಗಿದೆ ಜಿಲ್ಲೆಯ ಪ್ರತಿ ಸರ್ಕಲಿನಿಂದ ಇಬ್ಬರಂತೆ ಸ್ವಯಂಸೇವಕರನ್ನು ಈ ಶಿಬಿರದಲ್ಲಿ ತರಬೇತಿಗಾಗಿ ಸೇರಿಸಿಕೊಳ್ಳಲಾಗುವದು ಪ್ರತಿಯೊಂದು ಸರ್ಕಲ್ ಕೊಂಗ್ರೆಸ್ ಕಮಿಟಿಯವರು, ತಮ್ಮ ಸರ್ಕಲಿನಿಂದ ಇಬ್ಬರನ್ನು ಈ ಶಿಬಿರಕ್ಕೆ ಕಳಿಸಿಕೊಡಬೇಕೆಂದು ಸೂಚನೆ, ಸ್ವಯಂಸೇವಕರು ತಾ ೭-೮ '೪೨ನೇ ಶುಕ್ರವಾರ ಮಧ್ಯಾಹ್ನದೊಳಗೆ ಮಂಗಳೂರಿಗೆ ತಲಪುವಂತೆ ಹೊರಡಬೇಕು.

ಸ್ವಯಂಸೇವಕರ ಬರುವ ಹೋಗುವ ಖರ್ಚನ್ನೂ, ಎರಡು ಜತೆ ಸಮವಸ್ತ್ರದ ಖರ್ಚನ್ನೂ ಆಯಾಯ ಸರ್ಕಲ್ ಕೊಂಗ್ರೆಸ್ ಕಮಿಟಿಗಳೇ ವಹಿಸತಕ್ಕದು ಶಿಬಿರದೊಳಗಿನ ಊಟ ಮತ್ತು ಉಳಕೊಳ್ಳುವ ವ್ಯವಸ್ಥೆ ಮತ್ತು ಖರ್ಚನ್ನು ಜಿಲ್ಲಾ ಕೊಂಗ್ರೆಸ್ ಕಮಿಟಿಯವರು ವಹಿಸುವರು.

ಸ್ವಯಂಸೇವಕರು ಶಿಬಿರಕ್ಕೆ ಬರುವಾಗ ತರಬೇಕಾದ ವಸ್ತುಗಳು—ಒಂದು ಜತೆ ಸಮವಸ್ತ್ರ (ಎರಡು ನೆವಿಬ್ಲೂ ಖಾದಿ ಚಡ್ಡಿಗಳು, ಎರಡು ಬಿಳೀ ಖಾದಿ ಸ್ಪೋರ್ಟ್ ಶರ್ಟುಗಳು ಮತ್ತು ಎರಡು ಬಿಳೀ ಖಾದಿ ಟೊಪ್ಪಿಗಳು), ಹಾಸಿಗೆ, ಒಂದು ತಂಬಿಗೆ, ಒಂದು ಒಟ್ಟಲು

ಶಿಬಿರವು ತಾ ೭-೮ '೪೨ರಿಂದ ತಾ ೨೨-೮-೪೨ರ ವರೇಗೆ, ಹದಿನೈದು ದಿನಗಳ ವರೆಗೆ ನಡೆಯುವುದು ತರಬೇತಿಗೆ ಬರುವವರು ತಂತಮ್ಮ ಸರ್ಕಲ್ ಕೊಂಗ್ರೆಸ್ ಕಮಿಟಿಗಳಿಗೆ ಬರೆದುಕೊಂಡು, ಆ ಕಮಿಟಿಗಳಿಂದ ಅಧಿಕೃತರಾಗಿ ಬರತಕ್ಕದ್ದು

ಅಪಘಾತ

ತಾ. ೩೧ರಲ್ಲು ಮಂಗಳೂರಿನ ಬರ್ಕೆಹಿತ್ಲು ಎಂಬಲ್ಲಿ ಒಂದು ಮನೆಯು ಕುಸಿದು ಬಿದ್ದು ಆ ವರ್ಷದ ಬಾಲಿಕೆಯು ಅಪಘಾತಕ್ಕೆತುತ್ತಾಗಿ ಕೂಡಲೇ ಆಸ್ಪತ್ರೆಗೆ ಸಾಗಿಸಿ ಅಲ್ಲಿ ಮೃತಳಾದಳೆಂಬ ಶೋಚನೀಯ ಸುದ್ದಿ ಬಂದಿದೆ. ಮನೆಯೊಳಗೆ ಮಲಗಿದ್ದ ಬಾಣಂತಿ ಹೆಂಗುಸಿಗೆ ಮತ್ತು ಶಿಶುವಿಗೂ ಜಖಂ ಆಗಿದೆ.

ಪ್ರೊ. ಎನ್. ಜಿ. ರಂಗ

ಇವರು ಕಳೆದ ಆದಿತ್ಯವಾರ ಪ್ರೊಫೆಸರ್ ಎನ್ ಜಿ. ರಂಗ, ಎಂ. ಎಲ್. ಎ. (ಕೇಂದ್ರ) ಅವರು ಮಂಗಳೂರಿಗೆ ಬಂದು, ಕೆಲ ಎಂ. ಎಲ್. ಎ. ಗಳನ್ನು ಕಂಡು ಮಾತಾಡಿ ಮರುದಿನ ಬೆಳಿಗ್ಗೆ ಹಿಂತಿರಳಿದರು.

ಬಡಜನರಿಗೆ ಅಕ್ಕಿ

ಕೆನರಾ ಚೇಂಬರ್ ಓಫ್ ಕೊಮರ್ಸಿನ ಆಶ್ರಯದಲ್ಲಿ ವೆಬ್‌ಸ್ಟರ್ ಮಾರ್ಕೆಟಿನ ಬಳಿ ಬಡಜನರಿಗೆ ಸೇರಿಗೆ ೦-೨-೬ ದರದಲ್ಲಿ ಅಕ್ಕಿ ಕೊಡಲ್ಪಡುತ್ತಿದ್ದು ಪ್ರತಿದಿನ ೫೦ ಮುಡಿ ಅಕ್ಕಿ ಇಲ್ಲಿ ಮಾರಾಟವಾಗುತ್ತದಾಗಿ ತಿಳಿದಿದೆ. ಉದಾರೀ ಧನಾಢ್ಯರು ಈ ಸತ್ಕಾರ್ಯಕ್ಕೆ ನೆರವಾಗುವುದು ಅವಶ್ಯ

ತಿಲಕ ದಿನಾಚರಣೆ

ತಾ ೧ರಂದು ತಿಲಕ ದಿನಾಚರಣೆಯು ವೈಶ್ಯದಾಸಿನಲ್ಲಿ ಮಂಗಳೂರು ಟೌನ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಜರಗಿ, ಶ್ರೀಗಳಾದ ಕೆ ಕೃಷ್ಣರಾವ್, ಕು ಶಿವರಾವ್, ದಾಮೋದರ ಬಾಳಿಗ ಇವರು ತಿಲಕರ ಜೀವನ, ವ್ಯಕ್ತಿತ್ವ ದೇಶಪ್ರೇಮಗಳ ವಿಷಯ ಭಾಷಣವಿತ್ತರು. ಶ್ರೀ ಈಶ್ವರ ಎಂ ಎಲ್ ಎಯವರು ಧನ್ಯವಾದ ಹೇಳಿದರು ಆ ದಿನ ಶ್ರೀ ಎಂ. ಡಿ. ಅಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದರು

ಟೀಚರ್ಸ್ ಗಿಲ್ಡ್ ಕೌನ್ಸಿಲು

ಈ ಕೌನ್ಸಿಲು ಈಚೆಗೆ ಸ್ಥಳೀಯ ಕೆನರಾ ಹ್ಯಾಸ್ಕೂಲಿನಲ್ಲಿ ಶ್ರೀ. ಎಂ ಎಸ್ ಏಕಾಂಬರರಾವ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗಿಲ್ಡಿನವರು ಮಾಡಿದ ಕೆಲವೊಂದು ಸೂಚನೆಗಳ ಕುರಿತಾಗಿ, ಮದ್ರಾಸಿನ ದ ಹಿಂದುಸ್ಥಾನದ ಟೀಚರ್ಸ್ ಯೂನಿಯನಿನವರು ಮಾಡಿದ ಸೂಚನೆಗಳನ್ನು ಶ್ರೀ. ಎಸ್ ಮುಕುಂದರಾಯರು ವಿವರಿಸಿದರು ಎಲಿಮೆಂಟರಿ ಶಾಲೋಪಾಧ್ಯಾಯರ ಯೂನಿಯನುಗಳನ್ನು ವೃದ್ಧಿಗೊಳಿಸುವ ಯೋಜನೆಯನ್ನು ಸ್ವೀಕರಿಸಲಾಯಿತು ಇದಕ್ಕಾಗಿ ಮಂಗಳೂರಿನಲ್ಲಿ ಒಂದು, ಉಡುಪಿಯಲ್ಲಿ ಒಂದು ಹೀಗೆ ರಡು ತಾಲೂಕು ಪ್ರಚಾರ ಸಮಿತಿಗಳನ್ನೇರ್ಪಡಿಸಲಾಯಿತು ಗಿಲ್ಡಿನವರು ತಮ್ಮದೊಂದು ಮಾಸಪತ್ರಿಕೆಯನ್ನೂ ಪ್ರಕಟಿಸುವಂತೆ ನಿರ್ಧರಿಸಲಾಯಿತು

ನೇಮಕ

ಶ್ರೀ ಗಳಾದ ಕೆ ಕೊರಗಪ್ಪ ಶೆಟ್ಟಿ ಮತ್ತು ಎಂ ಚಂದು ನಾಯರ್ ಇವರು ಕಾಸರಗೋಡಿನ ಒನೆರರಿ ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಕ ಹೊಂದಿದ್ದಾರೆ.

ಶ್ರೀ ಎಂ. ಅಪ್ಪುರಾಯರು ಇಲ್ಲಿಯ ಹಜೂರ್ ಶಿರಸ್ತೆದಾರರಾಗಿ ನೇಮಕಹೊಂದಿರುತ್ತಾರೆ.

ಶ್ರೀ ಜಿ ಎಂ ಶಿಕೇರರು ಕಾಸರಗೋಡಿನ ಎಡಿಶನಲ್ ಮುನ್ಸಿಫರಾಗಿ ನೀಮಿಸಲ್ಪಟ್ಟಿದ್ದಾರೆ.

ದಾನ

ಆಸ್ಸಾಮಿನಿಂದ ಇತ್ತೀಚೆಗೆ, ಮಂಗಳೂರಿಗೆ ಬಂದಿರುವ ಶ್ರೀ ಬಿ ಆರ್ ಕರ್ಕೇರರು, ಶ್ರೀ ಗೋಕರ್ಣನಾಥ ದೇವಸ್ಥಾನದ ಭಂಡರಕ್ಕೆ ಶಿವರಾತ್ರಿ ಮಹೋತ್ಸವದ ಸಮಯದಲ್ಲಿ ನಡೆಯುವ ಸಮಾರಾಧನೆಯ ಉಪಯೋಗಾರ್ಥವಾಗಿ, ವರ್ಷಾವಧಿ ೨೫ ಮುಡಿ ಅಕ್ಕಿಯನ್ನು ಕೊಡುವ ಏರ್ಪಾಡು ಮಾಡಿರುತ್ತಾರೆಂದೂ ಅಲ್ಲದೆ ನಗದಿಯಿಂದ ಸದರ್‍ಹಿ ದೇವಸ್ಥಾನದ ಭಂಡಾರದಲ್ಲಿ ರೂಪಾಯಿ ಎರಡು ಸಾವಿರವನ್ನು ನಿಬಡಿಯಿಂದ ರೇವಣಾತಿಯಾಗಿಟ್ಟಿರುತ್ತಾರೆಂದೂ ತಿಳಿದಿದೆ

ನಗರಸಭೆಗೆ ಮಜೂರವರ್ಗದ ಬಾಧಾ

ನಗರಸಭೆಯು ಉಪಾಧ್ಯಕ್ಷ ಶ್ರೀ. ಎಲ್ ಸಿ. ಪಾಯಸ್ ಅವರ ಅಧ್ಯಕ್ಷತೆಯಲ್ಲಿ ತಾ ೪ರಂದು ಸಂಜೆ ಜರಗಿತು ಸಭಾರಂಭದ ಹೊತ್ತಿಗೆ 'ಕಯ್ಯೂರು ಕೈದಿಗಳನ್ನು ಕಾಪಾಡಿರಿ' 'ಇಂಕ್ವಿಲಾಬ್ ಜಿಂದಾಬಾದ್' ಘೋಷಗಳೊಡನೆ ೫೦೦ ರಕ್ಕೂ ಮಿಕ್ಕಿದ ಮಜೂರರ ಮೆರವಣಿಗೆಯ ಮುಖಂಡರು, ಕೈಯ್ಯೂರು ಕೈದಿಗಳನ್ನು ಕಾಪಾಡುವಂತೆ ಕೇಳುವ ವಿಚಾರದಲ್ಲಿ ನಗರಸಭೆಯು ನಿರ್ಣಯಮಾಡಬೇಕೆಂಬ ಬಿನ್ನಹವನ್ನು ಸಭಾಧ್ಯಕ್ಷರಿಗೆ ಅರ್ಪಿಸಿದರು. ಸದಸ್ಯರ ಅಭಿಪ್ರಾಯದಂತೆ ನಿರ್ಣಯ ಎಜಂಡದಲ್ಲಿಲ್ಲದ ಕಾರಣ, ಸದಸ್ಯರು ವಿಶೇಷ ಸಭೆಯೊಂದನ್ನು ಕರೆಯಲು ಕೇಳಿದರೆ ತಾವು ಹಾಗೆ ಮಾಡುವುದಾಗಿ ಅಧ್ಯಕ್ಷರು ತಿಳಿಸಿದರು. ವಿಶೇಷ ಸಭೆ ಕರೆಯಲು ಸದಸ್ಯರಿಂದ ಕೇಳಿಕೆಪತ್ರ ಕೊಡಲ್ಪಟ್ಟಿತು

ಸಭೆಯು ೧೨೦೦ ರೂ ವೆಚ್ಚದಿಂದ ಹೆಲ್ತ್ ಸಂದರ್ಶಕರೊಬ್ಬರನ್ನೂ ಮೂವರು ದಾದಿಗಳನ್ನೂ ನೇಮಿಸಿತು. ಇಂಡಸ್ಟ್ರಿಯಲ್ ಮ್ಯೂಸಿಯಮ್ಮಿಗೆ ರೂ. ೩೪೦ರಂತೆ ಸಹಾಯಕೊಡಬೇಕೆಂದುದಕ್ಕೆ ಬಜೆಟಿನಲ್ಲಿರುವ ೧೮೦ ರೂ. ಗಳನ್ನು ಕೊಡುವುದೆಂದಾಯಿತು.

ಸ್ಯೆಂಟ್ ಎಲೋಸಿಯಸ್ ಕಾಲೇಜ್ 'ಯೂನಿಯನ್', ಆರಂಭ ಭಾಷಣ

ಕಳೆದ ಶನಿವಾರ ಈ ಯೂನಿಯನಿನ ಆರಂಭ ಭಾಷಣವು ಶ್ರೀ ಬೆನೆಗಲ್ ಸಂಜೀವರಾವ್ ರಿಟಾಯರ್ಡ್ ಐ. ಇ ಎಸ್ ಇವರಿಂದ ಕೊಡಲ್ಪಟ್ಟಿತು ಯೂನಿಯನಿನ ಪ್ರೆಸಿಡೆಂಟರಾದ ಶ್ರೀ ಹರಿದಾಸ ಪುರುಷೋತ್ತಮರು ಅಧ್ಯಕ್ಷತೆ ವಹಿಸಿದ್ದರು ಸಭಾ ಪ್ರಾರಂಭದಲ್ಲಿ ಯೂನಿಯನಿನ ಜನರಲ್ ಸೆಕ್ರೆಟರಿಗಳಾದ ಶ್ರೀ ಕರಿಮುದ್ದೀನರೂ, ಪ್ರೆಸಿಡೆಂಟ್ ಸ್ಥಾನದ ಚುನಾವಣೆಗೆ ಪ್ರತಿಸ್ಪರ್ಧಿಗಳಾಗಿದ್ದ ಶ್ರೀ ಗೋಲ್ಬರ್ಟ್ ರೆಬೆಲ್ಲೋರವರು

ಶ್ರೀ ಹರಿದಾಸ ಪುರುಷೋತ್ತಮ
ಪ್ರೆಸಿಡೆಂಟ್, ಸೈ। ಎ। ಕಾಲೇಜ್ ಯೂನಿಯನ್

ಶ್ರೀ ಹರಿದಾಸ ಪುರುಷೋತ್ತಮರನ್ನು ಆ ಪ್ರೆಸಿಡೆಂಟ್ ಸ್ಥಾನದ ಚುನಾವಣೆಯಲ್ಲಿ ಪ್ರಬಲ ಬಹುಮತದಿಂದ ಚುನಾಯಿತರಾದ ಬಗ್ಗೆ ಅಭಿನಂದಿಸಿ ಮಾತನಾಡಿದರು ಅನಂತರ ಯೂನಿಯನ್ ಪ್ರೆಸಿಡೆಂಟರು ಭಾಷಣಕರ್ತರನ್ನು ಪರಿಚಯಮಾಡಿಸಿದ ಮೇಲೆ ಭಾಷಣಕರ್ತರು 'ಜೀವನವೂ ಸಾಹಿತ್ಯವೂ' ಎಂಬ ವಿಷಯ ವಿದ್ವತ್ಪೂರ್ಣ ಭಾಷಣವಿತ್ತರು ನಿಜವಾದ ಸಾಹಿತ್ಯವು ಆಯಾಯ ಕಾಲದ ಜನತಾ ಜೀವನದ ಪ್ರತಿಬಿಂಬವಾಗಿರುವುದೆಂದು ಭಾಷಣಕರ್ತರು ವಿಸ್ತಾರವಾಗಿ ವಿವರಿಸಿದರು ಕೊನೆಗೆ ಜ್ಯೊಂಟ್ ಸೆಕ್ರೆಟರಿಗಳಾದ ಶ್ರೀ ಭೀಮಯ್ಯನವರು ಕೃತಜ್ಞತಾರ್ಪಣೆ ಮಾಡಿದರು

ಭಗಿನಿ ಸಮಾಜ

ಇದರ ಸಭೆಯು ಕಳೆದ ರವಿವಾರ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಜರಗಿತು ಸಭೆಯಲ್ಲಿ ಭಾಗವಹಿಸುವುದಕ್ಕಾಗಿಯೇ ಒಂದಿದ್ದ ಶ್ರೀಮತಿ ಕಮಲಾದೇವಿಯವರು ಕೊಟ್ಟ ಮಂಗಳೂರಲ್ಲಿ ದುಡಿಯುವವರಾಗಿ ಲೇಬರ್ ವೆಲ್ಫೇರ್ ಸಮಿತಿಯನ್ನು ಸ್ಥಾಪಿಸಬೇಕೆಂಬ ಸೂಚನೆಯು ಸ್ವೀಕರಿಸಲ್ಪಟ್ಟಿತು.

ಪೆರಡಾಲ

ಮಿಡ್ಲ್ ಸ್ಕೂಲ್ ತೆರೆಯುವ ಬಗ್ಗೆ ಪ್ರೆಸಿಡೆಂಟರಲ್ಲಿ ವಿನಂತಿ

ಬದಿಯಡ್ಕ ಬೋ। ಹಿ। ಎಲಿಮೆಂಟರಿ ಶಾಲೆಯನ್ನು ಮಿಡ್ಲ್ ಸ್ಕೂಲಾಗಿ ಮಾರ್ಪಡಿಸುವ ವಿಚಾರದಲ್ಲಿ ಊರವರು ಕಳೆದ ಗುರುವಾರ ಬದಿಯಡ್ಕವನ್ನು ಸಂದರ್ಶಿಸಿದ್ದ ಡಿ। ಬೋ। ಪ್ರೆಸಿಡೆಂಟ್ ಡಾ। ವಿಟ್ಠಲ ಶೆಟ್ರಲ್ಲಿ ಒಂದು ವಿನಂತಿಪತ್ರ ಕೊಂಡರು, ಡಿ। ಬೋ। ಪ್ರೆಸಿಡೆಂಟರು ಈ ವಿಷಯ ಸಮಾಲೋಚನೆ ಮಾಡುವುದಾಗಿ ತಿಳಿಸಿದ್ದಾರೆ.

ನೀಲೇಶ್ವರ

ನಿರ್ಬಂಧಕಾಜ್ಞೆಯು, ಕಯ್ಯೂರು ಮೊಕದ್ದಮೆಯ ವಿಚಾರಣೆಯಾಗುತ್ತಿದ್ದ ಸಮಯದಿಂದ ಆರಂಭವಾಗಿ, ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಸಿ. ಕೆ. ರಾಘವನ್ ನಂಬಿಯಾರರ ಮೇಲೆ ಜಾರಿ ಸಲ್ಪಟ್ಟಿತ್ತು. ಈಗ ಅದು ಹಿಂತೆಗೆಯಲ್ಪಟ್ಟಿರುವುದರಿಂದ ಶ್ರೀಯುತರು ತಮ್ಮ ಗ್ರಾಮವನ್ನು ಬಿಟ್ಟು ಹೊರಬರುವಂತಾಗಿದೆ ಕಳೆದ ಬೋರ್ಡಿನ ಸಭೆಗೆ ಶ್ರೀಯುತರು ಮಂಗಳೂರಿಗೆ ಹೋಗಿದ್ದರು

ಕೇರಳ

ಕಯ್ಯೂರು ದಿನಾಚರಣೆ

ತಾ ೩ರಂದು ಕೇರಳದಲ್ಲೆಲ್ಲ ಕಯ್ಯೂರು ದಿನವು ಆಚರಿಸಲ್ಪಟ್ಟಿದೆ ಕೇರಳದ ಪ್ರಾ ಕಾ ಸಮಿತಿಯೂ ಈ ಕುರಿತು ನಿರೂಪ ಹೊರಡಿಸಿದೆ ಶ್ರೀ। ಕೆ ಮಾಧವ ಮೇನನ್ ಎಂ ಎಲ್ ಸಿ, ಕಮ್ಯೂನಿಸ್ಟ್ ನಾಯಕ ಶ್ರೀ। ಕೃಷ್ಣ ಪಿಳ್ಳೆ, ಇತರ ಎಂ ಎಲ್ ಎ ಗಳು, ಸ್ತ್ರೀ, ಮಜೂರ, ವಿದ್ಯಾರ್ಥಿ ಮುಂತಾದ ಸಂಘಗಳ ಕಾರ್ಯದರ್ಶಿಗಳು ತಮ್ಮ ಹೇಳಿಕೆಗಳಲ್ಲಿ ಚಳವಳವನ್ನು ಬಲಪಡಿಸಬೇಕೆಂದು ಹೇಳಿಕೊಂಡಿದ್ದರು ಹಲ ಸಭೆಗಳು ಜರಗಿದ್ದು ಸಾಮೂಹಿಕ ಮನವಿಗಳು ಕಳುಹಲ್ಪಟ್ಟವು ಕಾಸರಗೋಡು ತಾಲೂಕಿನ ತಿಮಿರಿ, ಕಿಲಾಯಿಕೋಟ್ ಆಂಡೋಲ್ ಮತ್ತು ಮರಿಯಾರ ಈ ಸ್ಥಳಗಳಲ್ಲಿಯೂ ಸಭೆಗಳು ಜರಗಿ, ಮನವಿಗಳು ಗವರ್ನರರಿಗೆ ಕಳುಹಲ್ಪಟ್ಟುವು

ಕಾರ್ಕಳ

ಉದ್ಘಾಟನೆ

ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ನೆಲೆಯಲ್ಲಿ ಹೊಸ ಹಿಂದೀ ತರಗತಿಗಳ ಉದ್ಘಾಟನೆಯು ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ ಕೃಷ್ಣ ಪೈಗಳವರ ಅಧ್ಯಕ್ಷತೆಯಲ್ಲಿ ನಡೆಯಿತು

ಸಭೆಗಳು

ಕಾರ್ಕಳ ಕೇಂದ್ರದ ಉಪಾಧ್ಯಾಯರ ಎರಡು ಸಭೆಗಳು ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಯು ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆದುವು ನೂಲುವ ಪ್ರದರ್ಶನ ಸ್ಪರ್ಧೆಯು ಶ್ರೀ ಕೆ ವಾಮನ ಪೈ ಮತ್ತು ಯಂ ಸಂಜೀವ ಪ್ರಭುಗಳ ಸಂಚಾಲಕತ್ವದಲ್ಲಿ ನಡೆಯಿತು

ಕಟಪಾಡಿ

ಇಲ್ಲಿನ ಸರ್ಕಲ್ ಕಾಂಗ್ರೆಸ್ ಕಮಿಟಿಯು ಶ್ರೀ ಪಿ ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಸೇರಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ವರ್ಧಾ ನಿರ್ಣಯಕ್ಕೆ ಬೆಂಬಲಕೊಡುವ ಗಾಂಧಿಜಿಯವರಲ್ಲಿ ವಿಶ್ವಾಸತೋರಿಸುವ ಜಿಲ್ಲೆಯಲ್ಲಿ ತೆರೆವ ಶಾಂತಿದಳ ಶಿಬಿರಕ್ಕೆ ಪ್ರತಿನಿಧಿಗಳನ್ನು ಕಳುಹಿಸುವ ಮೊದಲಾದ ವಿಚಾರ ನಿರ್ಣಯಗಳಾದುವು.

ಉಡುಪಿ

ಮ್ಯುನಿಸಿಪಲ್ ಕೌನ್ಸಿಲಿನ

ಸಾಮಾನ್ಯ ಸಭೆಯೊಂದು ಚೆಯರ್‌ಮೇನ್ ಶ್ರೀ ಎ ಲಕ್ಷ್ಮೀನಾರಾಯಣ ನಾಯರ ಅಧ್ಯಕ್ಷತೆಯಲ್ಲಿ ಜರಗಿ ಕೀರ್ತಿಶೇಷ ಡಾ। ಯು. ರಾಮಚಂದ್ರರಾಯರ ನಿಧನದ ಕುರಿತು ಸಂತಾಪ ಸೂಚಕ ನಿರ್ಣಯವಾಯಿತು ಕೌನ್ಸಿಲಿನ ಗತವರ್ಷದ ವರದಿಯ ವಿಷಯದಲ್ಲಿ ಜಿಲ್ಲಾ ಕಲೆಕ್ಟರರು ಷರಾ ಬರೆದುದನ್ನು ರಿಕಾರ್ಡು ಮಾಡಲಾಯಿತು

ಗಾಂಧಿಜಿಯವರಲ್ಲಿ ವಿಶ್ವಾಸ

ಶ್ರೀ ಎಮ್. ಡಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ಗಾಂಧಿಜಿಯವರ ನಾಯಕತ್ವದಲ್ಲಿ ಅಚಲ ವಿಶ್ವಾಸವನ್ನು ಪ್ರದರ್ಶಿಸಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಇತ್ತೀಚೆಗಿನ ಠರಾವಿಗೆ ಬೆಂಬಲ ಕೊಟ್ಟಿತು ಬಡಜನರಿಗೆ ನಿತ್ಯೋಪಯೋಗೀ ಆಹಾರ ಸಾಮಗ್ರಿಗಳನ್ನು ಅತ್ಯಂತ ಕಡಿಮೆ ದರದಲ್ಲೀಯುವಂತೆ ಸಾಹುಕಾರರನ್ನು ಕೇಳಿಕೊಳ್ಳಲಾಯಿತು.

'ಚಳವಳವನ್ನು ಅಡಗಿಸಲು ಎಲ್ಲಾ ಉಪಾಯುಗಳನ್ನು ಕೈಕೊಳ್ಳುವೆವು'

— ಅಮೆರಿ ಉವಾಚ —

ಲಂಡನಿನಲ್ಲಿರುವ ಭಾರತ ಮಂತ್ರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಕಾಂಗ್ರೆಸಿನವರು ಹೂಡಲಿರುವ ಚಳವಳವನ್ನು ಎಲ್ಲಾ ಉಪಾಯುಗಳಿಂದ ಸರಕಾರವು ಅಡಗಿಸುವುದೆಂದೂ ಆದ್ದರಿಂದ ಅದಕ್ಕೆ ಬೆಂಬಲ ಕೊಡುವವರಿಗೆ ಈ ವಿಷಯ ಎಚ್ಚರವಿರಲೆಂದೂ ಹೇಳಿದರು ಕ್ರಿಪ್ಸ್ ಸೂಚನೆಯ ವಿಷಯವನ್ನೆತ್ತಿ ಸರಕಾರವು ಇನ್ನು ಮುಂದಾದರೂ ಈ ಯೋಜನೆಯಂತೆ ನಡೆಯಲು ಸಿದ್ಧವಿದೆಯೆಂದೂ ಆದರೆ ಕಾಂಗ್ರೆಸು ಇದನ್ನು ಸಂಪೂರ್ಣ ತಿರಸ್ಕರಿಸಿ, ಭವ್ಯವಾದ ಮುಂದಿನ ಆಡಳಿತ ಯಂತ್ರವನ್ನು ಮುರಿದುಹಾಕಲು ತೊಡಗಿತೆಂದೂ ಹೇಳಿದರು. ಕಾಂಗ್ರೆಸಿನವರ ಉದ್ದೇಶ ಕಾರ್ಯಕ್ರಮಗಳು ಏನೇ ಇದ್ದರೂ, ಬ್ರಿಟಿಷ್ ಸಾರ್ವಭೌಮ ಸರಕಾರದ ಉದಾರ ಧೋರಣವು ಮೊದಲಿನಂತೆಯೇ ಇರುವುದು ಎಂದರು

ಹಿಂದೂದೇಶದ ಸ್ಟೇಂಡಾರ್ಡ್ ಗಂಟೆ

ಒಂದು ತಾಸು ಮುಂದಕ್ಕೆ

ಬರುವ ಆಗಸ್ಟ್ ೩೧ನೇ ತಾರೀಕು ಮಧ್ಯರಾತ್ರಿಯಿಂದ ಹಿಂದೂದೇಶದ ಸ್ಟೇಂಡಾರ್ಡ್ ಗಂಟೆಯನ್ನು ಒಂದು ತಾಸು ಮುಂದಿಡಬೇಕೆಂದು ಸರಕಾರವು ನಿರ್ಣಯಿಸಿರುವ ಸುದ್ದಿ ಬಂದಿದೆ

ರಾಜಾಜಿ ಗಾಂಧಿ ಭೇಟಿ ವಿಚಾರ

ರಾಜಾಜಿ ವರ್ಧಾಕ್ಕೆ ತೆರಳಿ ಗಾಂಧಿಜಿಯೊಡನೆ ಮಾತುಕತೆ ಮಾಡಿದ ವಿಚಾರವಾಗಿ ರಾಜಾಜಿಯೊಡನೆ ಪ್ರಶ್ನಿಸಲು, ಅವರು ನಾವು ಜಗತ್ತಿನಲ್ಲಿರುವ ಪ್ರತಿಯೊಂದು ವಿಷಯವಲ್ಲಿಯೂ ಮಾತನಾಡಿದೆವೆಂದೂ ಕೊನೆಗೆ ಮರಣಾಂತಿಕ ಉಪವಾಸದ ವರೆಗಿನ ಮಾತುಕತೆಯೂ ಅದರಲ್ಲಿತ್ತೆಂದೂ, ಅವೆಲ್ಲಾ ಖಾಸಗಿ ವಿಚಾರವಿರುವುದೆಂದೂ ಹೇಳಿದರು

ಕಾಂಗ್ರೆಸ್ ಚಳವಳಕ್ಕೆ ಅಕಲಿಗರ ಬೆಂಬಲ

ಮುಂಬರುವ ಕಾಂಗ್ರೆಸ್ ಚಳವಳದಲ್ಲಿ ಪ್ರತಿಯೊಬ್ಬ ಅಕಲಿಯೂ ಬೆಂಬಲಕೊಡುವುದಾಗಿ ಅಕಲಿ ಮುಖಂಡರಾದ ಮಾಸ್ಟರ್ ತಾರಾಸಿಂಗರು ಒಂದು ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ ಈಗ ಹೊರಗಿನ ಗಂಡಾಂತರ ಪ್ರಾಪ್ತವಾಗಿರುವುದರಿಂದ ನಮ್ಮಲ್ಲಿ ಒಕ್ಕಟ್ಟು ಅವಶ್ಯವಿರುವುದೆಂದು ಅವರು ತಿಳಿಸಿರುವರು.

ಸಿನೆಮಾ ಸುದ್ದಿ

'ಬಸಂತ'ದಲ್ಲಿ ಸಂಗೀತ ಮತ್ತು ನೃತ್ಯ

ಬೊಂಬಾಯಿ ಟಾಕೀಸಿನವರ ಇತ್ತೀಚೆಯ ಚಿತ್ರ 'ಬಸಂತ'ವು ಸಂಗೀತ ಮತ್ತು ನೃತ್ಯಗಳಿಂದ ಕೂಡಿ ಪ್ರೇಕ್ಷಕರ ಕಣ್ಣು ಕಿವಿಗಳನ್ನು ತಣಿಸುತ್ತದೆ. ಉಲ್ಲಾಸ್ ಮತ್ತು ಮುಮ್ತಾಜ್ ಶಾಂತಿಯವರು ಇದರಲ್ಲಿ ನಾಯಕ ನಾಯಕಿಯರಾಗಿರುವರು. ಇದು ಈಗ ಬೊಂಬಾಯಿಯ ಮೆಜೆಸ್ಟಿಕಿನಲ್ಲಿ ಪ್ರದರ್ಶಿತವಾಗುತ್ತಿರುವುದು. 'ಹಳ್ಳಿ ನೃತ್ಯ'ವನ್ನು ಬಹಳ ಕಲಾಪೂರ್ಣವಾಗಿ ತೋರಿಸಿದ್ದು 'ಬಸಂತ'ದ ಒಂದು ವೈಶಿಷ್ಟ್ಯವಾಗಿರುವುದು. ಮುಮ್ತಾಜ್ ಶಾಂತಿ ಉತ್ತಮ ಗಾಯಕಿ ಮಾತ್ರವಲ್ಲ ನಟಿಯೂ ಆಗಿದ್ದಾಳೆ. ಪ್ರಮೀಳಾ, ಸುರೇಶ್, ಸೀತಾಪಾಲ ಮತ್ತು ಜಗನ್ನಾಥ ಮೊದಲಾದ ನಟನಟಿಯರೂ ಇದರಲ್ಲಿ ನಟಿಸುತ್ತಾರೆ. ಅಮಿಯಾ ಚಕ್ರವರ್ತಿ ಇದರ ಲೇಖಕ-ದಿಗ್ದರ್ಶಕರಾಗಿ ಕೀರ್ತಿ ಶಿಖರಕ್ಕೇರಿದ್ದಾರೆ.

'ಪ್ಯೆಂಟರ'ರಾಗಿದ್ದರೆ?

ನಿರ್ದೇಶಕ ಚೌಧುರಿ ಮತ್ತು ಕದಾರರು, ಒಂದು ಕಾಲದಲ್ಲಿ ಜಾಹಿರಾತುಗಳ 'ಪ್ಯೆಂಟರ'ರಾಗಿದ್ದರೆಂದು ಒಂದು ಸಿನೆಮಾ ಪತ್ರಿಕೆ ಬರೆಯುತ್ತದೆ.

ಮೋದಿ ಸಹೋದರರಿಗೆ ಮದುವೆಯಾಗಿಲ್ಲ?

ಸೋಹ್ರಾಬ್, ಕೇಕಿ ಮತ್ತು ರುಸ್ತುಂ ಈ ಮೂವರು ಮೋದಿ ಸಹೋದರರಿಗೂ ಇದುವರೆಗೆ ವಿವಾಹವಾಗಿಲ್ಲವಂತೆ.

ಪ್ರತಿಮಾ ವಿವಾಹ

ಪ್ರತಿಮಾದಾಸ ಗುಪ್ತಳು ಕೆಪ್ಟನ್ ಹಕ್ಕನೆಂಬ ಮುಸ್ಲಿಂ ತರುಣನೊಡನೆ ವಿವಾಹವಾದಳೆಂದು ತಿಳಿದಿದೆ.

ನೂರ್‌ಜಹಾನ್ ಸನ್‌ರೈಸಿಗೆ

'ಖಾನ್‌ದಾನ್'ನಲ್ಲಿ ಅಭಿನಯಿಸಿದ ಬೇಬಿ-ನೂರ್‌ಜಹಾನಳು 'ಸನ್‌ರೈಸ್ ಪಿಕ್ಚರ್ಸ್'ಗೆ ಕೆಲವು ಚಿತ್ರಗಳ ತಯಾರಿಯ ಕರಾರಿನಲ್ಲಿ ಸೇರಿಕೊಂಡಿರುವಳೆಂದು ತಿಳಿದಿದೆ. ತಿಂಗಳೊಂದರ ೨೫,೦೦೦ ರೂಪಾಯಿ ಸಂಬಳ ಅವಳಿಗೆ ನಿಶ್ಚಯಿಸಲ್ಪಟ್ಟಿರುವುದೆಂದು ಸುದ್ದಿ.

ಶಾಂತಾರಾಮರ ಕಂಪನಿ?

ನಿರ್ದೇಶಕ ಶಾಂತಾರಾಮರು ತಮ್ಮದೇ ಆದ ಹೊಸತೊಂದು ಕಂಪನಿ ಸ್ಥಾಪಿಸುವರೆಂದೂ, ಅದರ ಮೊದಲನೆಯ ಚಿತ್ರದಲ್ಲಿ ಶಾಂತಾ ಆಪ್ಟೆ ಅಭಿನಯಿಸಬಹುದೆಂದೂ ಸುದ್ದಿ.

ಶಾಂತಾ ಆಪ್ಟೆ ನ್ಯೂಥಿಯೇಟರ್ಸಿಗೆ?

ಶಾಂತಾ ಆಪ್ಟೆ ನ್ಯೂಥಿಯೇಟರ್ಸ್‌ನ್ನು ಸೇರುವಳೆಂಬ ವದಂತಿಯೊಂದಿದೆ. ಇದರ ಬಗ್ಗೆ ಏನೂ ಅಧಿಕೃತ ಪ್ರಕಟಣೆಯಿಲ್ಲ. ಇದರಂತೆ ದೇವಕೀ ಬೋಸರೂ ತಿರುಗಿ ನ್ಯೂಥಿಯೇಟರ್ಸನ್ನು ಸೇರುವರೆಂಬ ವಾರ್ತೆಯೂ ಇರುವುದು.

ಹಿಂದು ಮುಸ್ಲಿಂ ಐಕ್ಯಕ್ಕಾಗಿ

ಈ ಉದ್ದೇಶದಿಂದ ಪ್ರೊ॥ ಎಂ. ಎ. ಮೊಮಿನ್ ಎಂಬವರು ಪೂನಾದಲ್ಲಿ ಒಂದು ಚಲಚ್ಚಿತ್ರ ಸಂಸ್ಥೆ ತೆರೆಯುವರೆಂದೂ, 'ಪಾಯಂ ಯಿ ಇಕ್ಬಲ್' ಎಂಬುದು ಅವರ ಮೊದಲನೆಯ ಚಿತ್ರವೆಂದೂ ತಿಳಿದಿದೆ.

ಪುಸ್ತಕಾವಲೋಕನ

ಎರಡು ಕಥಾ ಸಂಗ್ರಹಗಳು

ಧಾರವಾಡದ ಶ್ರೀ ಮೋಪುಂಡಿಮಲ್ಲಾರಿಯವರು 'ಚಿತ್ರ' 'ಬೆಳಕಿನ ಕತ್ತಲೆ' ಎಂಬೀ ಎರಡು ಕಥಾ ಸಂಗ್ರಹಗಳನ್ನು ಬರೆದು ಪ್ರಕಟಿಸಿ, ಕನ್ನಡ ಕಥಾ ಪ್ರಪಂಚವನ್ನು ವಿಸ್ತರಿಸುವ ಕಾರ್ಯದಲ್ಲಿ ನೆರವಾಗಿದ್ದಾರೆ. ಇದರಲ್ಲಿ 'ಚಿತ್ರ' ಎಂಬುದು ಶರಚ್ಚಂದ್ರರ ಬಂಗಾಳೀ ಕಥೆಗಳ ಭಾಷಾಂತರ, 'ಬೆಳಕಿನ ಕತ್ತಲೆ'ಯು ಸ್ವಕೀಯ ಕಥೆಗಳ ಆಯ್ಕೆ. 'ಅಲ್ಲಲ್ಲಿ ಪತ್ರಿಕೆಗಳಲ್ಲಿ ಕಂಡು ಕಾಣೆಯಾಗಿರುವ, ಮನೆಯಲ್ಲಿ ಕಾಣದೆ ಅಡಗಿರುವ' ತನ್ನ 'ಕೆಲ ಕತೆಕವನಗಳನ್ನು ಕೂಡಿ ಹಾಕಿ ಪ್ರಕಟಗೊಳಿಸಲು' ಶ್ರೀ ಮಲ್ಲಾರಿಯವರು ಮನ ಮಾಡಿದ್ದು ಸಂತೋಷದ ಸಂಗತಿಯಾಗಿದೆ.

ಚಿತ್ರ:—ಕ್ರೌನ್ ೧/೮ ಆಕಾರದ ೭೭ ಪುಟಗಳು, ಬೆಲೆ ೧೦ ಆಣೆ.

ಇದರಲ್ಲಿ ಬಂಗಾಳದ ಪ್ರಸಿದ್ಧ ಕತೆಗಾರರಾದ ಶರಚ್ಚಂದ್ರರ ಮೂರು ನೀಳ್ಗತೆಗಳಿವೆ. ಮೊದಲನೆಯದು 'ಚಿತ್ರ' ಎಂಬುದು. ದರಿದ್ರ ಚಿತ್ರಗಾರ ಮತ್ತು ಶ್ರೀಮಂತಳಾದ ಕಲಾವಿ ಇವರ ಪ್ರೇಮ ಸಂಬಂಧವು ಇಲ್ಲಿ ಚಲೋದಾಗಿ ಚಿತ್ರಿತವಾಗಿದೆ. ಹೆಚ್ಚಿನ ಮಟ್ಟಿಗೆ ಇದು ಭಾವನಾಮಯವಾದ ಕಥೆ. ಎರಡನೆಯ ಕಥೆ 'ದಾಯಾದಿಗಳು' ಎಂಬುದು, ದಾಯಾದಿಗಳಲ್ಲಿ ಕಾಣಬರುವ ಕುಟುಂಬ ಕಲಹವನ್ನು ನಾನಾ ಘಟನೆಗಳಿಂದ ಮನೋರಂಜಕವಾಗಿ ಚಿತ್ರಿಸಲಾಗಿದೆ. 'ಅಭಾಗಿನಿಯ ಸ್ವರ್ಗಾರೋಹಣ'ವು ಒಂದು ಬಡ ಜೀವನದ ಹೃದಯ ಸ್ಪರ್ಶಿಯಾದ ಚಿತ್ರ.

ಬೆಳಕಿನ ಕತ್ತಲೆ: ಕ್ರೌನ್ ೧/೮ ಆಕಾರದ ೧೦೬ ಪುಟಗಳು ಬೆಲೆ ೧೨ ಆಣೆ.

ಇದರಲ್ಲಿ ಹತ್ತು ಸ್ವತಂತ್ರ ಕತೆಗಳಿವೆ. 'ಬೆಳಕಿನ ಕತ್ತಲೆ' ಮೊದಲನೆಯ ಕತೆ. ಮಲ್ಲಪ್ಪನ ಮಗ ಕನಕನು ವಿದ್ಯುತ್ತಿನ ಸಂಗಿಗೆ ಕೈಹಾಕಿ ಸತ್ತು ಹೋದ, ಇದೊಂದು ಕರುಣಾಮಯ ಘಟನೆ. ಊರನ್ನೆಲ್ಲಾ ವಿದ್ಯುದ್ದೀಪ ಬಂದು ಬೆಳಗಿದರೆ ಮಲ್ಲಪ್ಪನ ಮನೆಗೆ ಹೀಗೆ ಕತ್ತಲೆ ಕವಿಯಿತು! ಅಣ್ಣನ ಅವಹೇಳನವನ್ನು ಸಹಿಸದೆ ಮನೆಬಿಟ್ಟು ಹೋಗಿ ಕಷ್ಟಪಟ್ಟು ದುಡಿದು ಶ್ರೀಮಂತಿಕೆಗೇರಿದ ಸೋದರನ ಜೀವನ ಸುಖವನ್ನು 'ರತ್ನದ ನಡುಗುಡ್ಡೆ'ಯಲ್ಲಿ ತೋರಿಸಿದೆ. 'ಮಾತನಾಡುವ ದೇವರು' ಎಂಬುದು ಒಂದು ಮೃದು ಹಾಸ್ಯಮಯ ಕತೆ. 'ಲಕ್ಷ್ಮಿ ಹೋದಳೆಲ್ಲಿ?' ಎಂಬುದು ಜೂನ ವನೆಗೆ ಸಿಂತ ಹುರಿಯಾಳಿನ ಅವಸ್ಥೆ ತಿಳಿಸುತ್ತದೆ. 'ಒಡ್ಡರ ಹುಡುಗಿ' ಒಂದು ಪ್ರೇಮ ಕಥೆ. 'ವ—ವಿ' ಎಂಬುದು ಸ್ವಪ್ನ ಕಥೆ. 'ದೇವರ ಸನ್ನಿಧಾನಕ್ಕೆ'! ಇದು ಮತಾಂತರದ ಕುರಿತು ವಿಡಂಬನಾರೂಪವಾಗಿದೆ. 'ಸುಖಸುಂದರಿ'ಯಲ್ಲಿ ಸ್ತ್ರೀ ಹೃದಯದ ಆರಿಣ ಮಹತ್ವಾಕಾಂಕ್ಷೆ ವರ್ಣಿಸಿದೆ. 'ನಾಡಿನ ಹೊರಗೆ' ಒಂದು ದೇಶಪ್ರೇಮ ಪೂರಿತ ಕಥೆ. 'ಲೈವ್ ವಾಟರ್'ನಲ್ಲಿ ಪುತ್ರ ವಾತ್ಸಲ್ಯ ಪೂರ್ಣವಾದ ಪಿತೃಹೃದಯದ ಭಾವನೆ ತುಂಬಿರುವುದು.

ಹೀಗೆ ಈ ಎರಡು ಕಥಾ ಸಂಗ್ರಹಗಳೂ ರಮ್ಯ ವಾಚನೀಯವಿವೆ. ಬಂಗಾಳೀ ಭಾಷಾಂತರವು ಸ್ವತಂತ್ರ ಕಥೆಯಷ್ಟು ಸರಳವಾಗಿ ಹರಿದಿಲ್ಲ. ಶರಚ್ಚಂದ್ರರ ಕತೆಗಾರಿಕೆಯ ಸೌಂದರ್ಯ ತಿಳಿಸುವಷ್ಟು ಭಾಷಾಂತರಕಾರರು ಭಾಷಾಪ್ರಭುತ್ವ ಪಡೆದಿಲ್ಲವೇ ಎಂಬುದು ನಮ್ಮ ಸಂಶಯವಾಗಿದೆ. ಹೇಗಿದ್ದರೂ ಅವರ ಸ್ವತಂತ್ರ ಕಥೆಗಳಲ್ಲಿ ಕಾಣುವ ಮೋಹಕ ಶೈಲಿ ಮನಮೆಚ್ಚಿಸುವುದು. ಕನ್ನಡದ ಕಥಾ ಸಾಹಿತ್ಯವನ್ನು ಅಭ್ಯಸಿಸಬೇಕೆಂದಿದ್ದವರು ಅವಶ್ಯ ಈ ಸಂಗ್ರಹಗಳೆರಡನ್ನು ಓದಬೇಕು.

—ಕಯ್ಯಾರ.

ಶಾಲಾ ಪುಸ್ತಕಗಳು

ಡಿಸ್ಟ್ರಿಕ್ಟ್ ಬೋರ್ಡು ಶಾಲೆಗಳಿಗೆಲ್ಲಾ ಪಠ್ಯಪುಸ್ತಕವಾಗಿದೆ

ವಿದ್ವಾನ್ ಶ್ರೀ ಕೆ ಕೆ ರೈ ವಿರಚಿತ

"ವ್ಯಾಕರಣ ಮತ್ತು ಪ್ರಬಂಧ"

IV ಮತ್ತು V ತರಗತಿಗಳಿಗೆ	ಬೆಲೆ	0—2—6
VI ತರಗತಿ ಅಥವಾ I ಫಾರ್ಮಿಗೆ	"	0—3—0
VII ತರಗತಿ ಅಥವಾ II ಫಾರ್ಮಿಗೆ	"	0—3—6
VIII ತರಗತಿ ಅಥವಾ III ಫಾರ್ಮಿಗೆ	"	0—4—0

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಹಾಯ್ಯರ್ ಎಲಿಮೆಂಟರಿ ಶಾಲೆಗಳಿಗೆ ಪಠ್ಯಪುಸ್ತಕಗಳಾಗಿ ಮಂಜೂರಾಗಿವೆ.

ಕೆಲವು ಅಭಿಪ್ರಾಯಗಳು

'ಈ ಪುಸ್ತಕಗಳು ಗಾತ್ರದಲ್ಲಿ, ಬೆಲೆಯಲ್ಲಿಯೂ ದೊಡ್ಡದಿರದೆ, ವ್ಯಾಕರಣವೆಂದರೆ ಅಂಜುವ ವಿದ್ಯಾರ್ಥಿಗಳೂ ಧೈರ್ಯವಾಗಿ ಕೈಯಲ್ಲಿ ಎತ್ತಿಕೊಳ್ಳಬಹುದಾಗಿವೆ. ಹೇಳಬೇಕಾದುದನ್ನು ಸಂಕ್ಷಿಪ್ತವಾಗಿ ಸುಲಭವಾಗಿ ಹೇಳಿದ್ದಾರೆ. ಪ್ರಬಂಧಪಾಠಗಳನ್ನು ಸೇರಿಸಿರುವುದರಿಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿವೆ.' 'ಕರ್ಮವೀರ' ಹುಬ್ಬಳ್ಳಿ

Starting with the elements of Grammar and Composition in the first book, the author takes the students gradually through the more complex aspects of the subject in the course of the other three books. The subject has been well handled. *"HINDU" MADRAS.*

ವಿದ್ವಾನ್ ಶ್ರೀ ಕೆ ಕೆ. ರೈ ವಿರಚಿತ

ಮಕ್ಕಳ ಪದ್ಯಮಂಜರಿ

ಮೊದಲನೆಯ ಪುಸ್ತಕ ೧, ೨ ಮತ್ತು ೩ನೆಯ ತರಗತಿಗಳಿಗೆ	0-2-0
ಎರಡನೆಯ ಪುಸ್ತಕ ೪ ಮತ್ತು ೫ನೆಯ ತರಗತಿಗಳಿಗೆ	0-2-6

ಡಿಸ್ಟ್ರಿಕ್ಟ್ ಬೋರ್ಡಿನ ಎಲ್ಲಾ ಎಲಿಮೆಂಟರಿ ಶಾಲೆಗಳಿಗೆ ಮಂಜೂರಾಗಿವೆ

ಕೆಲವು ಅಭಿಪ್ರಾಯಗಳು

"ಸಣ್ಣ ಮಕ್ಕಳಿಗೆ ಸಹಜವಾಗಿ ಆತುರವಿರುವಂಥ ವಿಷಯಗಳು, ಸುಲಭವಾದ ಪದಗಳು, ತೊಡಕಿಲ್ಲದ ಪದ ಜೋಡಣೆ, ಮತ್ತು ತಿಳಿಯಾಗಿ ನಗಿಸುವ ರೀತಿ—ಇವುಗಳಿಂದಾಗಿ ಈ ಪುಸ್ತಕಗಳು ಬಾಲಕರಿಗೆ ಪ್ರಿಯವಾಗುವುದರಲ್ಲಿ ಸಂದೇಹವಿಲ್ಲ. ಪುಸ್ತಕಗಳು ರಂಜಕವಾಗಿರುವುದರೊಂದಿಗೆ ಬೋಧಕವೂ ಆಗಿವೆ. ಕನ್ನಡ ನಾಡಿನಲ್ಲಿ ಸಣ್ಣ ಮಕ್ಕಳಿಗಾಗಿ ಪ್ರಸಿದ್ಧವಾಗಿರುವ ಹಲವು ಇಂಥ ಪುಸ್ತಕಗಳಿಗಿಂತ ಈ ಪುಸ್ತಕಗಳು ಮೇಲ್ತರಗತಿಯವೆಂದು ಧಾರಾಳವಾಗಿ ಹೇಳಬಹುದು." "ಕರ್ಮವೀರ," ಹುಬ್ಬಳ್ಳಿ

'ಶ್ರೀ ರೈಗಳು ಆಯಾ ತರಗತಿಯ ಮಕ್ಕಳಿಗಬೇಕಾದ ಸ್ಟೇಂಡಾರ್ಡಿಗನುಸಾರವಾಗಿ ಸುಲಭ ಶೈಲಿಯಲ್ಲಿ ಬರೆದಿದ್ದಾರೆ. ಮುದ್ರಣವೂ ಸೊಗಸಾಗಿದೆ. ಪಠ್ಯಪುಸ್ತಕಗಳ ಕಮಿಟಿಯಿಂದ ಮಂಜೂರಾಗಿದ್ದು ಎಲ್ಲಾ ಶಾಲೆಗಳವರ ಪ್ರೋತ್ಸಾಹಕ್ಕೆ ಅರ್ಹವಾಗಿದೆ. ಪುಸ್ತಕಗಳ ಬೆಲೆಯೂ ಕಡಿಮೆಯಾಗಿದೆ.' 'ರಾಷ್ಟ್ರಬಂಧು' ಮಂಗಳೂರು

ಶಾರದಾ ಛಾಪಖಾನೆ ಮಂಗಳೂರು.



ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ ೨-೮-೦ ರೂ ೪-೨-೦. ರೂ ೬-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ॥ ಪುರೋಹಿತ ಫಾರ್ಮಸಿ, ಕೊಲ್ಲಾಪುರ
ಬೊಂಬೈ ಏಜಂಟ—ಮೆ.ಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

ಅಷ್ಟು ಹೆಚ್ಚಾಗಿ ಅವರ ಸಂಗವಮಾಡಿದರೆ ನಿನ್ನ ಭಾವ ಪ್ರೇಮವು ಉಳಿಯುತ್ತಿಲ್ಲವೆಂದು ಹೇಳುತ್ತಿದ್ದರೆಂದು ನಾವು ಶ್ರೀ ಪರಮಹಂಸರ ಬಾಯಿಂದಲೇ ಕೇಳಿದ್ದೇವೆ. ಪರಂತು ಶ್ರೀ ಪರಮಹಂಸರು ಅವರ ಮಾತನ್ನು ಕೇಳಿ ಹಿಂದಿನಿತು ವಿಚಲಿತರಾಗದೆ, ಆಗ ಹಗಲಿರುಳೂ ವೇದಾಂತವಿಚಾರ ಮತ್ತು ಉಪಲಬ್ಧಿಗಳಲ್ಲಿ ಮಗ್ನರಾಗುತ್ತಿದ್ದರು.

ನಿರ್ವಿಕಲ್ಪ ಸಮಾಧಿಯಲ್ಲೇ ನಿರಂತರವೂ ಇರಲು ಶ್ರೀ ರಾಮಕೃಷ್ಣ ದೇವರ ಸಂಕಲ್ಪ

ನಿರ್ವಿಕಲ್ಪ ಸಮಾಧಿಯ ಸ್ವರೂಪ

ಹನ್ನೊಂದು ತಿಂಗಳು ದಕ್ಷಿಣೇಶ್ವರದಲ್ಲಿದ್ದು ತೋತಾಪುರಿ ಹೊರಟುಹೋದರು. 'ನಾನು ನನ್ನ'ದೆಂಬ ರಾಜ್ಯದಲ್ಲಿರದೆ ನಿರಂತರವೂ ಶ್ರೀ ಪರಮಾತ್ಮನಲ್ಲಿ ಐಕ್ಯವಾಗಿರಲು ಅಂದರೆ ಅದ್ವೈತ ಭಾವದಲ್ಲಿ ಮಗ್ನವಾಗಿರಲು ಶ್ರೀ ಪರಮಹಂಸರು ಆಗ ದೃಢಸಂಕಲ್ಪ ಮಾಡಿದರು, ಮಾತ್ರವಲ್ಲ, ಹಾಗೆಯೇ ಆಚರಿಸಲಾರಂಭಿಸಿದರು. ಅದೊಂದು ಅಪೂರ್ವವಾದ ಸಂಗತಿ! ಆಗ ಅವರಿಗೆ ತಮ್ಮ ದೇಹದ ಅಸ್ತಿತ್ವ ಬೋಧೆಯೂ ಕೂಡ ಇರಲಿಲ್ಲ. ಆಗ ಇತರರ ಸಂಗಡ ಮಾತನಾಡುವುದಿರಲಿ ತಿನ್ನುವುದು, ಮಲಗುವುದು ಅಥವಾ ಶೌಚಾದಿ ಮಾಡುವುದನ್ನೂ ಕೂಡ ಮರೆತಿದ್ದರು. ಆ ಅವಸ್ಥೆಯಲ್ಲಿ 'ನಾನು, ನನ್ನದು' ಇಲ್ಲ ಅಥವಾ ನೀನು ನಿನ್ನದು' ಕೂಡ ಅಲ್ಲ ಎರಡೂ ಇಲ್ಲ, ಒಂದೂ ಇಲ್ಲ! ಏಕಂದರೆ ಎರಡರ ಸ್ಮೃತಿ ಇದ್ದರಲ್ಲವೆ ಒಂದರ ಉಪಲಬ್ಧಿಯಾಗುವುದು. ಅಲ್ಲಿಗೆ ಮನಸ್ಸಿನ ವೃತ್ತಿಗಳೆಲ್ಲವೂ ಸ್ಥಿರವಾಗಿರುತ್ತವೆ. ಶಾಂತವಾಗಿರುತ್ತವೆ.

ಕಿಮಪಿ ಸತತ ಬೋಧಂ ಕೇವಲಾನಂದ ರೂಪಂ ನಿರುಪಮ ಮತಿವೇಲಂ ಪ್ರಖ್ಯಾಮಾಖ್ಯವಿಹೀನಂ। ನಿರವಧಿ ಗಗನಾಭಂ ನಿಷ್ಕಲಂ ನಿರ್ವಿಕಲ್ಪಂ ಹೃದಿ ಕಲಯತಿ ವಿದ್ವಾನ್ ಬ್ರಹ್ಮ ಪೂರ್ಣಂ ಸಮಾಧೌ ॥

ಪ್ರಕೃತಿ – ವಿಕೃತಿಶೂನ್ಯಂ ಭಾವಾತೀತಂಚ ಭಾವಂ। .' (ವಿವೇಕಚೂಡಾಮಣಿ)

ಕೇವಲ ಆನಂದ! ಆನಂದ! ಅದಕ್ಕೆ ದಿಕ್ಕು ಇಲ್ಲ, ದೇಶವಿಲ್ಲ, ಆಧಾರವಿಲ್ಲ, ರೂಪವಿಲ್ಲ, ನಾಮವಿಲ್ಲ! ಕೇವಲ ವಿದೇಹ ಆತ್ಮನು ತನ್ನ ಅನಿರ್ವಚನೀಯ ಆನಂದಮಯ ಅವಸ್ಥೆಯಲ್ಲಿರುತ್ತಾನೆ. ಮನಸ್ಸು ಬುದ್ಧಿಗಳಿಗೆ ಗೋಚರವಾಗುವ ಭಾವರಾಶಿಗಳ ಅತೀತನಾಗಿರುತ್ತಾನೆ ಅಂಥಹ ಅವಸ್ಥೆಗೆ 'ಆತ್ಮನಲ್ಲಿ ಆತ್ಮನು ರಮಿಸುವ ಅವಸ್ಥೆ ಎಂದು ಶಾಸ್ತ್ರವು ಹೇಳುತ್ತದೆ. ಇಂತಹ ಅನಿರ್ವಚನೀಯ ಅವಸ್ಥೆಯ ಉಪಲಬ್ಧಿಯು ಶ್ರೀ ಪರಮಹಂಸರಿಗೆ ಆಗ ನಿರಂತರವೂ ಆಗಿತ್ತು.

ರಾಮಕೃಷ್ಣ ಲೀಲಾಪ್ರಸಂಗ

ಆತ್ಮನಲ್ಲಿ ಆತ್ಮನು ರಮಿಸುವುದು

ಪರಮಹಂಸರಿಗೆ ಈ ಭಾವೋಪಲಬ್ಧಿ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ

ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

ಶ್ರೀ ಪರಮಹಂಸರ ಮನಸ್ಸಿನ ಅದ್ಭುತ ರಚನೆ

ನಿರ್ವಿಕಲ್ಪ ಸಮಾಧಿಯ ಉಪಲಬ್ಧಿಗೆ ಆರೋಹಣ ಮಾಡಲು ಸಾಂಸಾರಿಕ ಯಾವ ವಿಷಯವೂ ಅವರನ್ನು ಆತಂಕಪಡಿಸಲಿಲ್ಲ ಏಕಂದರೆ ಶ್ರೀ ಜಗದಂಬೆಯ ಪಾದಕಮಲಗಳನ್ನು ಸಾಕ್ಷಾತ್ಕಾರ ಮಾಡುವ ನಿಮಿತ್ತವಾಗಿ ಸಕಲ ಭೋಗವಾಸನೆಗಳನ್ನು ತ್ಯಾಗ ಮಾಡಿದ್ದರು. 'ತಾಯಿ, ಇಕೊ ನಿನ್ನ ಜ್ಞಾನ, ಅಜ್ಞಾನ, ಇಕೊ ಧರ್ಮ, ಅಧರ್ಮ, ಇಕೊ ನಿನ್ನ ಶುಭ, ಅಶುಭ, ಇಕೊ ನಿನ್ನ ಪಾಪ, ಪುಣ್ಯ, ಇಕೊ ನಿನ್ನ ಮಾನ, ಅಪಮಾನ, ನಿನ್ನ ಚರಣಕಮಲಗಳಲ್ಲಿ ಶುದ್ಧ ಭಕ್ತಿಯನ್ನೇ ನನಗೆ ದಯಪಾಲಿಸು' ಎಂದು ಪ್ರಾರ್ಥಿಸಿ ಶ್ರೀ ಜಗದಂಬೆಯನ್ನೇ ಪ್ರೀತಿಸಿ ಶ್ರೀ ಪರಮಹಂಸರು ನಿಜವಾಗಿಯೂ ಎಲ್ಲ ತರದ ಮನಸ್ಸಿನ ವಾಸನೆ ಕಾಮನೆಗಳನ್ನು ತ್ಯಜಿಸಿದ್ದರು ಅನನ್ಯ ಪ್ರೇಮ ಭಕ್ತಿಯ ವಿಷಯವನ್ನು ನಾವು ಉಪಲಬ್ಧಿಮಾಡುವುದಿರಲಿ, ಕಲ್ಪನೆಯನ್ನೂ ಕೂಡ ಮಾಡಲಾರೆವು, ನಾವು ಒಂದು ವೇಳೆ 'ದೇವರೇ ನನ್ನದೆಂಬ ಎಲ್ಲ ವಸ್ತುಗಳನ್ನೂ ನೀನೇ ತೆಗೆದುಕೊ' ಎಂದು ಹೇಳಿದರೂ ಕೂಡ ಮರುಕ್ಷಣವೇ ಕಾರ್ಯಕ್ಷೇತ್ರದಲ್ಲಿ ದೇವರನ್ನು ನಮ್ಮ ಹೃದಯದಿಂದ ಹೊರಪಡಿಸಿ ಅವು ತಮ್ಮವುಗಳೆಂದು ಹೇಳಿ ಅದರ ಲಾಭಾಲಾಭದ ಕಡೆಗೆ ದೃಷ್ಟಿಯಿಡುತ್ತೇವೆ! ಪ್ರತಿಯೊಂದು ಕೆಲಸವನ್ನು ಮಾಡುವಾಗ 'ಜನರು ಏನು ಹೇಳುವರೊ' ಎಂದು ಭಾವಿಸಿ ತಲ್ಲಣಗೊಳ್ಳುತ್ತೇವೆ, ಭವಿಷ್ಯಕಾಲದ ಭಾವನೆಯಿಂದ ಒಮ್ಮೊಮ್ಮೆ ದುಃಖಸಾಗರದಲ್ಲಿ ಮುಳುಗುತ್ತೇವೆ, ಇನ್ನೊಮ್ಮೆ ಆನಂದ ಸಾಗರದಲ್ಲಿ ತೇಲಾಡುತ್ತೇವೆ, ಭೂಮಂಡಲವನ್ನು ನಾವು ನಮ್ಮ ಉದ್ಯಮದಿಂದ ಸಂಪೂರ್ಣವಾಗಿ ಪಲ್ಲಟಿಸಲಾಗದಿದ್ದರೆ ಕೊಂಚವಾದರೂ ಬದಲಾಯಿಸಬಲ್ಲೆವೆಂದು ನಮ್ಮ ಮನಸ್ಸಿನಲ್ಲಿ ಸ್ಥಿರ ಮಾಡುತ್ತೇವೆ, ಶ್ರೀ ಪರಮಹಂಸರ ಮನಸ್ಸಿನಲ್ಲಿ ನಮ್ಮಂತೆ ವಂಚನೆ ಮಾಡುವ ಪ್ರವೃತ್ತಿ ಇರಲಿಲ್ಲ,-ಅವರು ಯಾವಕ್ಷಣಕ್ಕೆ 'ತಾಯಿ, ನೀನು ಕೊಟ್ಟದ್ದನ್ನು ನೀನೇ ತೆಗೆದುಕೋ' ಎಂದು ಹೇಳಿದರೋ ಆ ಕ್ಷಣವೇ ಆ ವಸ್ತುಗಳ ಮೇಲಿನ ಲಾಲಸೆಯನ್ನು ತ್ಯಜಿಸಿ ಅವುಗಳ ಯೋಚನೆಯೇ ಮಾಡುತ್ತಿದ್ದಿಲ್ಲ! 'ಹಾಗೆ ಹೇಳಿಬಿಟ್ಟೆನು, ಏನು ಮಾಡಲಿ? ಹೇಳದಿದ್ದರೆ ಒಳ್ಳೇದಿತ್ತು'–ಎಂಬ ಈ ಭಾವನೆಯೂ ಕೂಡ ಅವರ ಮನಸ್ಸಿನಲ್ಲಿ ಹುಟ್ಟುತ್ತಿದಿಲ್ಲ! ಆದ್ದರಿಂದಲೇ ಶ್ರೀ ಪರಮಹಂಸರು ಶ್ರೀ ಜಗದಂಬೆಗೆ ಯಾವಾಗಲಾದರೂ ಏನಾದರೂ ಅರ್ಪಿಸಿದರೋ ಆವಾಗ ಅದು 'ನನ್ನದು' ಎಂಬದಾಗಿ ಇನ್ನೆಂದಿಗೂ ಅವರಿಂದ ಹೇಳಲಾಗಲಿಲ್ಲ.

ಶ್ರೀ ಪರಮಹಂಸರ ಸತ್ಯನಿಷ್ಠೆ

ಇಲ್ಲಿ ಇನ್ನೊಂದು ವಿಷಯವನ್ನು ನಾವು ವಾಚಕರಿಗೆ ಹೇಳಬಿಚ್ಛಿಸುತ್ತೇವೆ ಶ್ರೀ ಪರಮಹಂಸರು ಶ್ರೀ ಜಗದಂಬೆಗೆ ಧರ್ಮಾಧರ್ಮ, ಪಾಪಪುಣ್ಯ, ಹಿತಾಹಿತ, ಮಾನಾಪಮಾನ ಇತ್ಯಾದಿ ದ್ವೈತಿಕ, ಮಾನಸಿಕ ವ್ಯಾಪಾರಗಳನ್ನೆಲ್ಲ ಅರ್ಪಿಸಿದ್ದರೂ 'ತಾಯಿ, ಇಕೊ ನಿನ್ನ ಸತ್ಯ, ಇಕೊ ನಿನ್ನ ಅಸತ್ಯ' ಎಂದು ಇದು ಮಾತ್ರ ಅವರಿಂದ ಹೇಳಲಾಗಲಿಲ್ಲ. ಇದರ ಕಾರಣವನ್ನು ಶ್ರೀ ಪರಮಹಂಸರೇ ಸ್ವತಃ ನಮ್ಮ ಬಳಿಯಲ್ಲಿ ವ್ಯಕ್ತಪಡಿಸಿದ್ದರು, ಅದೇನೆಂದರೆ ಹಾಗೆ ಸತ್ಯವನ್ನು ತ್ಯಾಗ ಮಾಡಿದರೆ 'ಶ್ರೀಜಗನ್ಮಾತೆಗೆ ಸರ್ವಸ್ವವನ್ನೂ ಅರ್ಪಿಸಿದ್ದೇನೆಂಬ ಸತ್ಯತೆಯನ್ನು ಹೇಗೆ ಕಾಪಾಡಲಿ?' ನಿಜವಾಗಿಯೂ ಸರ್ವಸ್ವವನ್ನು ಅರ್ಪಿಸಿಯೂ ಕೂಡ ಆ ಸತ್ಯನಿಷ್ಠೆಯು ಅವರಲ್ಲಿ ಅದ್ಭುತವಾಗಿತ್ತು. ಯಾವ ದಿನ ಯಾವ ಸ್ಥಳಕ್ಕೆ ಹೋಗಬೇಕೆಂದು ಹೇಳಿದರೋ, ಆ ದಿನವೇ ಸರಿಯಾಗಿ ಆ ಸ್ಥಳಕ್ಕೆ ಹೋಗುತ್ತಿದ್ದರು ಯಾರಿಂದ ಯಾವ ವಸ್ತುವನ್ನು ಗ್ರಹಿಸಬೇಕೆಂದು ಹೇಳಿದರೋ, ಅವರಿಂದ ಹೊರತು ಬೇರೆ ಯಾರ ಬಳಿಯಿಂದಲೂ ಆ ವಸ್ತುವನ್ನು ಗ್ರಹಿಸುತ್ತಿದ್ದಿಲ್ಲ ಯಾವ ದಿನ ಯಾವುದಾದರೂ ತಿಂಡಿಯನ್ನು ತಿನ್ನುವುದಿಲ್ಲವೆಂದು ಹೇಳಿದರೊ, ಆ ದಿನದಿಂದಲೇ ಆ ತಿಂಡಿಯನ್ನು ತಿನ್ನುವುದು ಬಿಟ್ಟರು ಯಾವ ದಿನ ಯಾವುದಾದರೊಂದು ಕೆಲಸವನ್ನು ಮಾಡುವುದಿಲ್ಲವೆಂದು ಹೇಳಿದರೊ ಆ ದಿನದಿಂದಲೇ ಇನ್ನು ಆ ಕೆಲಸವನ್ನ ಅವರಿಂದ ಮಾಡಲಾಗಲಿಲ್ಲ 'ಯಾರು ಸತ್ಯನಿಷ್ಠೆಯನ್ನು ಪಾಲನೆಮಾಡುತ್ತಾರೆಯೋ ಅವರು ಸತ್‌ಸ್ವರೂಪನಾದ ಪರಮಾತ್ಮನನ್ನು ಪಡೆಯುತ್ತಾರೆ. ಯಾರಿಗೆ ಸತ್ಯನಿಷ್ಠೆ ಇದೆಯೋ, ಶ್ರೀ ಜಗದಂಬೆಯು ಅವನ ವಚನವನ್ನು ಸುಳ್ಳಾಗಲು ಬಿಡುವುದಿಲ್ಲ' ಎಂದು ಶ್ರೀ ಪರಮಹಂಸರು ಅನ್ನುತ್ತಿದ್ದರು

(ಕ್ರಮಶಃ)

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಕಡಿಮೆ ಖರ್ಚು
ಮಂಗಳೂರಿನಿಂದ - ಬೆಂಗಳೂರು
ತಿರುಪತಿ, ಮದರಾಸು.
ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore.

BRANCHES Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕತೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು — ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitual abortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD SWADESHABHIMANI 1906

[ಸಂಪುಟ 17] ತಾರೀಕು 14—8—1942 [ಸಂಚಿಕೆ 32]

ಕಾಂಗ್ರೆಸ್ ಮುಖಂಡರು ಸೆರೆಮನೆಯಲ್ಲಿ!

ಗಾಂಧಿಜಿ, ಅಜಾದ್, ನೆಹರು ಪ್ರಮುಖರ ಬಂಧನ –

— ಗುಂಡು ಹಾರಿಸಿ ಗುಂಪು ಚದರಿಸಲಾಯಿತು —

ಭಾರತದ ರಾಜಕೀಯದಲ್ಲಿ ಪುನಃ ಈಗ ಅಲ್ಲೋಲ ಕಲ್ಲೋಲವುಂಟಾಗಿದೆ ಮುಂಬಯಿಯಲ್ಲಿ ಗಾಂಧಿಜಿ ಸಹಿತ ನೆಹರು ಅಜಾದ್ ಮೊದಲಾದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರೂ, ಅಖಿಲಭಾರತ ಕಾಂಗ್ರೆಸ್ ಕಮಿಟಿ ಸದಸ್ಯರೂ ಇತರ ಅನೇಕ ರಾಷ್ಟ್ರ ಮುಖಂಡರೂ ಏಳನೇ ತಾರೀಕಿನಂದು ಸೇರಿ ಮಹತ್ವದ ಪರ್ಥಾರ ನಿರ್ಣಯವನ್ನು ಚರ್ಚೆ ಮಾಡುತ್ತಿದ್ದರು ಎಂಟನೆಯ ತಾರೀಕು ಸಂಜೆ ವರೆಗೆ ಕಾರ್ಯಕಲಾಪಗಳು ನಿರಾತಂಕವಾಗಿ ಸಾಗಿದವು ಎ ಇ ಸಿ ಸಿಯಲ್ಲಿಯೂ ಪರ್ಥಾರ ನಿರ್ಣಯವು ಪ್ರಬಲ ಬಹುಮತದಿಂದ ಮಂಜೂರಾಯಿತು ಮುಂದೇನು? ಚಳವಳಿವು ಹೇಗೆ ಆರಂಭವಾಗುವುದು? ಗಾಂಧಿಜಿ ವೈಸರಾಯರಿಗೆ ಏನೆಂದು ಪತ್ರ ಬರೆವರು? ಸಪ್ರುಗಳ ಸಂಧಾನ ಪ್ರಯತ್ನಯ ವಿಷಯವೇನು? ಎಂಬೀ ವಿಷಯಗಳನ್ನು ದೇಶವಿದೇಶಗಳ ಜನರು ಕುತೂಹಲದಿಂದ ನೋಡುತ್ತಿರುವಾಗ, ಅಕಸ್ಮಾತ್ತಾಗಿ ಒಂಬತ್ತನೇ ತಾರೀಕಿನ ದಿನ ಬೆಳಗ್ಗೆ ಐದು ಗಂಟೆಯ ಹೊತ್ತು ಗಾಂಧಿಜಿ, ನೆಹರು ಆಜಾದ್, ಸರ್ದಾರ ಪಟೇಲ್, ಸರೋಜಿನಿ ನಾಯುಡು ಮೊದಲಾದ ಕಾಂಗ್ರೆಸು ಮುಂದಾಳುಗಳನ್ನು ಸರಕಾರವು ಒಮ್ಮೆಲೇ ಸೆರೆಹಿಡಿದು ಬಿಟ್ಟಿತು! ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ ಕೂಡಲೇ ಸರಕಾರವು ಒಂದು ಪ್ರಕಟಣೆ ಹೊರಡಿಸಿ ಎಲ್ಲಾ ಕಾಂಗ್ರೆಸ್ ಕಮಿಟಿಗಳೂ ಅಕ್ರಮ ಸಂಸ್ಥೆಗಳೆಂದು ಸಾರಿತು! ಇದರ ಪ್ರಕಾರ ಈಗ ದೇಶದ ಉದ್ದಗಲದಲ್ಲಿ ಅಖಿಲಭಾರತ ಕಾಂಗ್ರೆಸ್ ಕಮಿಟಿ ಕಚೇರಿಯಿಂದ ಹಿಡಿದು ಜಿಲ್ಲಾ ಕಾಂಗ್ರೆಸ್ ಕಮಿಟಿಗಳೂ ಜಪ್ತಿಯಾಗಲ್ಪಡುತ್ತಿವೆ, ಅನೇಕ ಮಂದಿ ಪ್ರಾಂತದ, ಜಿಲ್ಲೆಗಳ ಮುಖಂಡರೂ ಅಲ್ಲಲ್ಲಿ ಬಂಧಿಸಲ್ಪಟ್ಟಿದ್ದಾರೆ ಅನೇಕ ಕಡೆಗಳಲ್ಲಿ ಐದು ಮಂದಿಗಿಂತ ಹೆಚ್ಚಾಗಿ ಜನರು ಸೇರಬಾರದೆಂಬ ನಿರ್ಬಂಧಕಾಜ್ಞೆ ಹೊರಟಿದೆ ಕೆಲವು ಕಡೆ ಅಂತಹ ನಿರ್ಬಂಧವನ್ನು ಮುರಿದು ಜನರ ಗುಂಪು ಸಭೆ ಸೇರಿಸಲು ನೆರೆದಾಗ ಪೋಲೀಸರು ಲಾಠಿಗಳ ಹೊಡೆತದಿಂದಲೂ, ಗುಂಡುಗಳನ್ನು ಹಾರಿಸುವುದರಿಂದಲೂ ಜನರನ್ನು ಚದರಿಸಿದ್ದಾರೆ. ಇಂಥ ತಿಕ್ಕಾಟದಲ್ಲಿ ಕೆಲವರು ಮರಣ ಹೊಂದಿತ್ತು ಅನೇಕರು ಗಾಯಗೊಂಡಿದ್ದಾರೆ ಹೀಗೆ ಸರಕಾರವು ಕಾಂಗ್ರೆಸ್ ಸಂಸ್ಥೆಗಳ ಮೇಲೆ ಕಾಂಗ್ರೆಸ್ ಮುಖಂಡರ ಮೇಲೆ ಒಮ್ಮೆಲೆ ತೀವ್ರ ಕಾರ್ಯಕ್ರಮವನ್ನು ಕೈಕೊಂಡಿದೆ. ಕಾಂಗ್ರೆಸ್ ಸಮಿತಿಯು ಬೆಂಬಲವಿತ್ತ ಅಸಹಕಾರ ಆಂದೋಲನಕ್ಕೆ ಸಂಬಂಧಿಸಿದ ಸುದ್ದಿಗಳನ್ನು ವರದಿಗಳನ್ನು ಭಾಷಣಗಳನ್ನು ಮತ್ತು ಹೇಳಿಕೆಗಳನ್ನು ಮುದ್ರಿಸದಂತೆ ಮುದ್ರಕರನ್ನು ಪ್ರಕಾಶಕರನ್ನು ಸಂಪಾದಕರನ್ನು ನಿರ್ಬಂಧಿಸುವ ಒಂದು ಹೊಸ ನಿಯಮವನ್ನು ಸರಕಾರವು ಈಗ ಮಾಡಿರುವುದು. ಸರಕಾರವು ಮುನಿಸಿಪಾಲಿಟಿ ಜಿಲ್ಲಾ ಬೋರ್ಡ್ ಮೊದಲಾದ ಸ್ಥಾನಿಕ ಸಂಸ್ಥೆಗಳು ತಮ್ಮ ಹಣವನ್ನು, ನೌಕರರನ್ನೂ ಯುದ್ಧಪ್ರಯತ್ನಕ್ಕೆ ತೊಂದರೆಯಾಗುವಂತೆ ಉಪಯೋಗಿಸಿದರೆ ಅವುಗಳನ್ನು ಅವಶ್ಯವೆನಿಸಿದಷ್ಟು ಕಾಲ ರದ್ದುಪಡಿಸಲು ಪ್ರಾಂತಿಕ ಸರಕಾರಗಳಿಗೆ ಸಂಪೂರ್ಣ ಅಧಿಕಾರವನ್ನು ಕೊಡುವನಿಯಮವೊಂದನ್ನೂ ಹೊಸದಾಗಿ ಸಂರಕ್ಷಣೆಯ ಕಾಯಿದೆಯಲ್ಲಿ ಸೇರಿಸಿದೆ. ಹೀಗೆ ಇಂದು ವಿಶಾಲ ಭಾರತದಲ್ಲಿ ಮಹಾ ಪ್ರಕ್ಷೋಭವೊಂದು ತಲೆಯೆತ್ತಿರುವುದು!

ಲೇಡಿ ಲಿನ್ ಲಿತ್ಗೋರೊಡನೆ ಚಿಯಾಂಗ್ ಕೈಶೇಕ್

ಭಾರತವನ್ನು ಸಂದರ್ಶಿಸಿದ ಚಿಯಾಂಗ್ ಕೈಶೇಕರು ಸ್ವದೇಶಕ್ಕೆ ಮರಳುವ ಸಂದರ್ಭದಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡಿರೆಂದು ಬ್ರಿಟಿಷ್ ಪ್ರಭುತ್ವಕ್ಕೆ ವಿನಂತಿ ಮಾಡಿದ್ದರು

ಕಾಂಗ್ರೆಸ್ ನಿರ್ಣಯವೇನಿತ್ತು?

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ನಿರ್ಣಯದಲ್ಲಿ ಹಿಂದುಸ್ಥಾನವು ಸ್ವತಂತ್ರವಾಗಬೇಕೆಂಬ ಅಗ್ರಹದ ಸೂಚನೆ ಒಡೆದು ಕಾಣುತಿತ್ತು ಏಕೆಂದರೆ ಸ್ವತಂತ್ರ ಹಿಂದುಸ್ಥಾನವು ಮಾತ್ರ ತನ್ನ ಮಹತ್ತಾದ ಶಕ್ತಿ ಸಂಪತ್ತುಗಳನ್ನು ಒಟ್ಟುಗೂಡಿಸಿ, ನಾಜಿಸಂ, ಫೇಸಿಸಂ ಹಾಗೂ ಇಂಪಿರಿಯಲಿಸಂ ಆಕ್ರಮಣದ ವಿರುದ್ಧ ನಡೆಯುವ ಸ್ವಾತಂತ್ರ್ಯದ ಹೋರಾಟದಲ್ಲಿ ಸೇರುವುದೆಂದೂ, ಆದರಿಂದ ವಿಜಯ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಗಳು ಕಾಪಾಡಲ್ಪಡುವವೆಂದೂ, ಹೀಗೆ ಹಿಂದುಸ್ಥಾನವನ್ನು ಸ್ವತಂತ್ರ ಮಾಡುವದರಿಂದ ದಾಸ್ಯ ಹಾಗೂ ಯಾತನೆಗೆ ಗುರಿಯಾದ ಮಾನವವರ್ಗವನ್ನು ಮಿತ್ರರಾಷ್ಟ್ರಗಳ ಕಡೆಗೆ ಒಲಿಸಲು ಸಾಧ್ಯವಾಗುವುದೆಂದೂ ಅದರಲ್ಲಿ ಹೇಳಲಾಗಿತು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಸಾರಲ್ಪಟ್ಟ ಕೂಡಲೇ ಸರ್ವ ಪಕ್ಷಗಳ ಸಮನ್ವಯದಿಂದ ಒಂದು ತಾತ್ಕಾಲಿಕ ಸರಕಾರವು ಸ್ಥಾಪಿತವಾಗುವುದಲ್ಲದೆ ಹಿಂದುಸ್ಥಾನವು ಸಂಯುಕ್ತ ರಾಷ್ಟ್ರಗಳ ಮಿತ್ರರಾಷ್ಟ್ರವಾಗಿ ಅವರ ಅತ್ಯಂತ ಕಷ್ಟಕಾಲದಲ್ಲಿ ಸ್ವಾತಂತ್ರ್ಯದ ಹೋರಾಟದ ಯೋಜನೆಯಲ್ಲಿ ಸಮಭಾಗಿಯಾಗುವುದೆಂದೂ ನಮೂದಿಸಲಾಗಿತ್ತು. ಆಕ್ರಮಣದಿಂದ ಹಿಂದುಸ್ಥಾನವನ್ನು ರಕ್ಷಿಸಲು ತನ್ನ ಶಕ್ತಿ ಸರ್ವಸ್ವವನ್ನು ಎಂದರೆ ಸಶಸ್ತ್ರ ಶಕ್ತಿ ಹಾಗೂ ತನ್ನಲ್ಲಿರುವ ಯಾವತ್ತೂ ಅಹಿಂಸಾತ್ಮಕ ಶಕ್ತಿಯನ್ನು ಉಪಯೋಗಿಸಿ ಮಿತ್ರ ಸೈನ್ಯದೊಡನೆ ಕೂಡಿಕೊಂಡು ಆಕ್ರಮಣವನ್ನು ಪ್ರತಿಭಟಿಸುವುದೆಂದೂ ಸಾರಲಾಗಿತ್ತು, ಚೀನಾ ರಶ್ಯದೇಶಗಳ ರಕ್ಷಣೆಗೆ ತೊಂದರೆಯಾಗಬಾರದೆಂದು, ಆ ದೇಶಗಳ ಸ್ವಾತಂತ್ರ್ಯವು ಅಮೋಘವಾದುದಿದ್ದು ಕಾಯಲ್ಪಡಬೇಕೆಂದೂ, ಸಂಯುಕ್ತ ರಾಷ್ಟ್ರಗಳ ಸಂರಕ್ಷಣ ಶಕ್ತಿಗೆ ಹಾನಿಯಾಗಬಾರದೆಂದೂ ಆ ನಿರ್ಣಯದಲ್ಲಿ ಸ್ಪಷ್ಟಪಡಿಸಲಾಗಿತ್ತು, ಹೀಗೆ ಕಾಂಗ್ರೆಸು ಹಿಂದುಸ್ಥಾನವನ್ನು ಸತಂತ್ರ ಮಾಡಿದರೆ, ಯುದ್ಧದಲ್ಲಿ ಹಿಂಸಾತ್ಮಕ ಹಾಗೂ ಅಹಿಂಸಾತ್ಮಕ ಸಹಾಯವನ್ನು ನೀಡುವುದೆಂದೂ, ತಾತ್ಕಾಲಿಕ ಸರಕಾರವನ್ನಾದರೂ ಸರ್ವ ಪಕ್ಷಗಳ ಸಮನ್ವಯದಿಂದ ರಚಿಸಲೇ ಮಾಡುವುದೆಂದೂ ಸ್ಪಷ್ಟಪಡಿಸುವ ನಿರ್ಣಯವನ್ನು ಮಾಡಿ ಪುನಃ ವಿನಂತಿಸಿಕೊಂಡರೂ ಸರಕಾರವು ಕೇಳದ ಪಕ್ಷದಲ್ಲಿ ಗಾಂಧಿಜಿಯವರ ಮುಂದಾಳುತನದಿಂದ ಮಹಾ ಆಂದೋಲನವೊಂದನ್ನು ಪ್ರಾರಂಭಿಸ ತಕ್ಕದೆಂದೂ ಚಳವಳದ ಒಟ್ಟು ಅಭಿಪ್ರಾಯವು 'ಬ್ರಿಟಿಷರು ಭಾರತದಿಂದ ಹೊರಟು ಹೋಗಬೇಕು' ಎಂಬುದಾಗಿರಬೇಕೆಂದೂ ನಿರ್ಣಯ ಮಾಡಿತು. ಹೀಗೆ ಕಾಂಗ್ರೆಸು ನಿರ್ಣಯ ಮಾಡುವಾಗ ಬ್ರಿಟಿಷರ ಮೇಲೆ ಯಾವುದೇ ತರದ ದ್ವೇಷಭಾವನೆಯನ್ನಿಟ್ಟುಕೊಳ್ಳದೆ ಉಭಯತರ ಹಿತವನ್ನು ಸಾಕ್ಷಿಸಿರುವುದೆಂದು ಮುಖಂಡರು ವ್ಯಕ್ತಮಾಡಿದಾರೆ ಬರ್ಮಾ ಮಲಯಾ ಸಿಂಗಾಪುರಗಳು ಜಪಾನಿನ ವಶವಾದ ಪಾಠವನ್ನು ನೋಡಿಕೊಂಡು, ಆ ಆ ದೇಶಗಳ ಜನರಿಗೆ ಸ್ವಾತಂತ್ರ್ಯ ಸಾರಲ್ಪಡದಿದ್ದರೆ ಹೇಗೆ ದೇಶಗಳು ಆಕ್ರಮಕರ ವಶವಾಗುವವೆಂಬುದನ್ನು ವಿಚಾರಿಸಿ ಹಿಂದೂದೇಶವೂ ಜಪಾನರ ಕೈವಶವಾಗುವಂಥಾ ಪ್ರಸಂಗ ಬರಬಾರದೆಂದು ಉದ್ದೇಶದಿಂದ ಕಾಂಗ್ರೆಸು, ಭಾರತವನ್ನು ಸ್ವತಂತ್ರ ಮಾಡುವ ಧ್ಯೇಯದಿಂದ ವಿದೇಶೀಯರಧಿಕಾರವು ಮಾಯವಾಗಬೇಕೆಂಬರ್ಥದ ಆಂದೋಲನ ಹೂಡಲು ನಿರ್ಧಾರ ಮಾಡಿತ್ತು! ಆದರೆ ಹೀಗೆ ಮಾಡಿದ ನಿರ್ಣಯವನ್ನು ಕಾರ್ಯರೂಪಕ್ಕೆ ತರುವ ಅವಧಿಯನ್ನು ಕೊಡದೆ, ಗಾಂಧಿಜಿ ಹೇಳಿದಂತೆ ವೈಸರಾಯರಿಗೆ ಸ್ಪಷ್ಟಪಡಿಸಲು ಸಂದರ್ಭನೀಡದೆಯದೆ, ಸರಕಾರವು ಒಮ್ಮೆಲೇ ಕಾಂಗ್ರೆಸಿನ ಮೇಲೆ ಮುಂದಾಳುಗಳ ಮೇಲೆ ಉಗ್ರ ಕಾರ್ಯಕ್ರಮವನ್ನು ಕೈಕೊಂಡಿದೆ' –

ಜಪಾನ್ ಪರ ಆಂದೋಲನವಂತೆ!

ಇತ್ತ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಬೊಂಬಾಯಿಯಲ್ಲಿ ಕೂಡಿ, ದೇಶದ ರಾಜಕೀಯ ಸಮಸ್ಯೆಯನ್ನು ಚರ್ಚಿಸುತ್ತಾ, ದೇಶದ ಸ್ವತಂತ್ರವನ್ನು ಸಾಧಿಸಲು ಹಾಗೂ ಆಕ್ರಮಣಗಾರರಾದ ಜಪಾನರನ್ನು ವಿರೋಧಿಸಲು ಯೋಜನೆ ನಡೆಸುತ್ತಿದ್ದಂತೆ ಸರಕಾರವು ಒಂದು ಪ್ರಕಟಣೆ ಹೊರಡಿಸಿತು ಅದರಲ್ಲಿ, ೧೯೪೨ನೇ ಇಸವಿ ಅಗಸ್ತ ತಿಂಗಳ ೧ನೆಯ ತಾರೀಕಿನಂದು ಅಲ್ಲಾಬಾದಿನಲ್ಲಿ ಸೇರಿದ ಎ ಐ ಸಿ ಸಿ ಸಭೆಯಲ್ಲಿ ಸ್ವೀಕೃತವಾದ ನಿರ್ಣಯ ಮತ್ತು ಆ ನಿರ್ಣಯವನ್ನು ತಯಾರಿಸುವಾಗ ನಡೆದ ಚರ್ಚೆಗಳ ಕುರಿತು ವಿವರಗಳುಳ್ಳ ಅಲ್ಲಾಬಾದ್ ಕಾಂಗ್ರೆಸ್ ಕಚೇರಿಯನ್ನು ಪೋಲೀಸರು ಜಪ್ತಿಮಾಡಿದಾಗ ಸಿಕ್ಕಿದ ಕಾಗದಪತ್ರಗಳು ಪ್ರಕಟವಾಗಿದ್ದುವು ಅದರಲ್ಲಿ

(೩ನೇ ಪುಟಕ್ಕೆ ಮುಂದುವರಿದಿದೆ)

ಕಾಂಗ್ರೆಸ್ ಮುಖಂಡರು ಸೆರೆಮನೆಯಲ್ಲಿ

(೧ನೇ ಪುಟದಿಂದ ಮುಂದುವರಿಯುದು)

ಕಾಂಗ್ರೆಸು ಜಪಾನಿಗೆ ಸಹಾಯವಾಗುವಂತೆ ಈ ಆಂದೋಲನವನ್ನು ಆರಂಭಿಸುವುದೆಂದೂ ಅದೇ ಗಾಂಧಿಜಿಯವರ ವಿಶ್ವಾಸವೆಂದೂ ಗಾಂಧಿಜಿ ನೆಹರುಗಳೊಳಗೆ ತೀರಾ ಭಿನ್ನಾಭಿಪ್ರಾಯವಿದೆಯೆಂದೂ ವ್ಯಾಖ್ಯಾನ ಕೊಡಲಾಗಿದೆ. ಅದಕ್ಕೆ ನೆಹರುಗಳು ಖಂಡತುಂಡ ಉತ್ತರ ಕೊಟ್ಟು ಕಾಂಗ್ರೆಸು ಶತ್ರುಗಳಿಗೆ ಜಯವನ್ನು ಕೋರಿಲ್ಲವೆಂದೂ ತಿಳಿಸಿದ್ದಾರೆ. ಇದು ಅಪಮಾನಕರ ಅಗೌರವಕರ ನೀತಿಯೆಂದು ಅವರು ಹೇಳಿರುವರು. ಗಾಂಧಿಜಿಯಾದರೂ ಇದು ಕೇವಲ ಸೃಷ್ಟನೆಯೆಂದು ತಿಳಿಸಿದ್ದಾರೆ ಮಾತ್ರವಲ್ಲದೆ ಪ್ರಕಟಣಾರ್ಹವಲ್ಲದ ವಿಷಯಗಳನ್ನು ಪ್ರಕಟಿಸಿದ್ದು ಅಯೋಗ್ಯವೆಂದಿದ್ದಾರೆ. ಕಾಂಗ್ರೆಸಿನ ಮೇಲೆ ಹಾಗೂ ಗಾಂಧಿಜಿ ಮೊದಲಾದ ಕಾಂಗ್ರೆಸ್ ಮುಖಂಡರ ಮೇಲೆ ಅಂಥಾ ದುರಾರೋಪ ಹೊರಿಸಿದಕ್ಕಾಗಿ ಹಿಂದೂ, ನೇಷನಲ್ ಹೆರಾಲ್ಡ್, ಬೊಂಬಾಯಿ ಕ್ರಾನಿಕಲ್, ಟ್ರಿಬ್ಯೂನ್, ಇಂಡಿಯನ್ ಎಕ್ಸ್‌ಪ್ರೆಸ್, ಹಿಂದುಸ್ಥಾನ ಟೈಮ್ಸ್, ಟೈಮ್ಸ್ ಓಫ್ ಇಂಡಿಯಾ, ಫ್ರೀಪ್ರೆಸ್ ಮೊದಲಾದ ಭಾರತದ ಪ್ರಮುಖ ಪತ್ರಿಕೆಗಳೆಲ್ಲವೂ ಖಂಡನೆಮಾಡಿರುತ್ತವೆ. ರಾಜಾಜಿ ಒಂದು ಹೇಳಿಕೆಕೊಡುತ್ತಾ, ತಾನು ಇಂಡಿಯಾ ಸರಕಾರದಲ್ಲಿದ್ದರೆ ಇಂಥಾ ವಿಷಯವನ್ನು ಪ್ರಕಟಿಸುತ್ತಿರಲಿಲ್ಲ' ಎಂದು ಹೇಳಿದ್ದಾರೆ. ಹಲವು ಪತ್ರಿಕೆಗಳು ಸರಕಾರದವರು ಕೊಟ್ಟ ಆ ಪ್ರಕಟಣೆಯನ್ನು ಮುದ್ರಿಸಲೂ ಕೂಡಾ ನಿರಾಕರಿಸಿವೆ. ಬಂಧನದಲ್ಲಾದರೂ ಹೊರದೇಶದ ವಿಚಾರ ತಿಳಿಯದಂತೆ ಮಾಡಲು; ಭೇಟಿ, ಪತ್ರಿಕೆ, ಕಾಗದಗಳನ್ನು ಕೊಡುವ ರಿಯಾಯತಿಯನ್ನೂ ನಿರ್ಬಂಧಿಸಲಾಗಿದೆಯೆಂದು ವರದಿಯಿದೆ.

ಜನತೆಯಲ್ಲಿ ಪ್ರಕ್ಷೋಭ!

ಗಾಂಧಿಜಿ, ನೆಹರು, ಅಜಾದ್ ಮೊದಲಾದ ರಾಷ್ಟ್ರದ ನಿಷ್ಠಾವಂತ ಮುಂದಾಳುಗಳನ್ನು ಬೊಂಬಯಿಯಲ್ಲಿ ಸೆರೆ ಹಿಡಿದಂದಿನಿಂದ ಆರಂಭವಾಗಿ ದೇಶದ ಅನೇಕ ಕಡೆಗಳಲ್ಲಿ ಜನತೆಯ ಪ್ರಕ್ಷೋಭವುಂಟಾಗಿದ್ದು ಇನ್ನೂ ಸಂಪೂರ್ಣ ನಿಂತಿಲ್ಲ! ರಾಷ್ಟ್ರೀಯ ಮುಖಂಡರನ್ನು ಬಂಧಿಸಿದ್ದರಿಂದ ಜನತೆಯು ಸಂತಾಪಗೊಂಡಿದೆ. ಅಲ್ಲಲ್ಲಿ ಜನರು ಗುಂಪುಸೇರಿ ನಿಷೇಧ ಸಭೆ ಮೆರವಣಿಗೆ ಮೊದಲಾದ್ದ ಪ್ರದರ್ಶನಗಳನ್ನು ಮಾಡುತ್ತಿರುವರು. ಇದನ್ನು ಚದರಿಸಲು ಪೋಲೀಸರು ಲಾಠಿಗಳನ್ನು ಗುಂಡುಗಳನ್ನು ಉಪಯೋಗಿಸುತ್ತಾರೆ. ಹೀಗೆ ಮುಂಬಯಿ ಲಕ್ನೊ, ಮೊದಲಾದ ಕಡೆಗಳಲ್ಲಿ ಕೆಲವು ದಿನಗಳಿಂದ ನಡೆಯುತ್ತಾ ಬಂದ ಜನತೆಯ ಅವಿವೇಕ ಮತ್ತು ಸರಕಾರದ ಉಗ್ರೋಪಾಯಗಳನ್ನು ನೋಡಿದರೆ ಯಾವುದೇ ಪಕ್ಷಕ್ಕೆ ಸೇರದ ದೇಶಾಭಿಮಾನಿಗಾದರೂ ವ್ಯಸನವಾಗುವುದು. ಹಲವು ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಿಟ್ಟು ಹೊರ ಓಡುತ್ತಿದ್ದಾರೆ. ಅನೇಕ ಕಾರ್ಖಾನೆಗಳೂ ಮುಚ್ಚಲ್ಪಟ್ಟಿವೆ. ಪೇಟೆಗಳೂ ಇಂತಹ ಪ್ರಕ್ಷೋಭ ಪರಿಸ್ಥಿತಿಯಲ್ಲಿ ಮುಚ್ಚಲ್ಪಟ್ಟಿವೆ. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳು, ಸಣ್ಣ ಮಕ್ಕಳು ಹೆಂಗುಸರೂ ಗುಂಡಿನೇಟಿಗೆ ಬಲಿಯಾಗಿ ಮೃತರಾಗಿರುವರು! ಇದರಿಂದೆಲ್ಲಾ ಅನೇಕ ಕಡೆಗಳಲ್ಲಿ ಜನರು ತಲೆಕೆಟ್ಟವರಂತೆ ವರ್ತಿಸತೊಡಗಿರುವುದು ವಿಷಾದಕರ! ದಬ್ಬಾಳಿಕೆಯಿಂದ ಪರಿಸ್ಥಿತಿ ಶಾಂತವಾಗಲಾರದೆಂದು ರಾಜಾಜಿ ಹೇಳಿಕೆಯಿತ್ತಿದ್ದಾರೆ. ಕಮ್ಯುನಿಸ್ಟರಿಗೂ ಮುಖಂಡರ ಬಂಧನ ಹಾಗೂ ದಬ್ಬಾಳಿಕೆಯನ್ನು ನೋಡಿ ಸಂತಾಪವಾಗಿರುವುದು. ನೆಹರು ಮೊದಲಾದ ಕೆಲವು ಮುಖಂಡರನ್ನು ಯಾವುದೋ ಗೊತ್ತಿಲ್ಲದ ಸ್ಥಳಕ್ಕೆ ಒಯ್ಯಲಾಗಿದೆಯೆಂದು ವಾರ್ತೆ! ಹೀಗೆ ಕೆಲವೇ ದಿನಗಳಲ್ಲಿ ಭಾರತದ ರಾಜಕೀಯ ಕ್ಷೇತ್ರದಲ್ಲಿ ಮಹಾ ಆಲ್ಲೋಲ ಕಲ್ಲೋಲವುಂಟಾಗಿರುವುದು.

ನೋಟೀಸು

15-7-42

ಪುತ್ತೂರು ತಾಲೂಕು ಕೊಡಾಜೆ ಗ್ರಾಮದ ಕಣಿಯು ಎಂಬಲ್ಲಿರುವ ಮಲ್ಲಿಂಗಗೌಡನ ಮಗ ಚೆನ್ನಪ್ಪ ಗೌಡನು ಎಲ್ಲಾ ಜನರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ತಾ. 7-1-38ರಲ್ಲು ಪುತ್ತೂರು ರಿಜಿಸ್ಟ್ರಿ ಆಫೀಸಿನ ನಂಬ್ರ 26/38ಕ್ಕೆ ರೂ 2 ಸಾವಿರಕ್ಕೆ ಕೊಡಾಜೆ ಗ್ರಾಮದ ಕೃಷ್ಣ ಗೌಡನ ವಿಧವೆ ಹೆನ್ನಕ್ಕೆ ಹೆಂಗ್ಸಿನ ಹೆಸ್ರಲ್ಲಿ ತಿಕ್ಕ ಗ್ರಾಮದ ಕೊಡರೆಟಿ ಮ್ಯಾಲಪ್ಪ ವಗೈರೆರು ಬರಕೊಟ್ಟಯಿಲಿದಾರ್ವಾರು ಆಸ್ತಿ ಹೆನ್ನಕ್ಕೆಯ ಜೀವಮಾನತನಕ ಮಾತ್ರ ಅವಳ ಸ್ವಾಧೀನವಿರಬೇಕಾಗಿಯೂ ಕಾಣದ ಹಕ್ಕು ವ ಆರ್ವಾರಿನ ಹಕ್ಕು ಕೂಡಾ ಅವಳನಂತ್ರ ನನಗೂ ನನ್ನ ಮಕ್ಕಳಿಗೂ ವ ಮೋಂಟೆ ಗೌಡರ ಮಗ ಸಮುಂಣಗೂ ಎಂತ ಸ್ಥಾಪ್ತಿ ತಾ. 18-9-39ರಲ್ಲು ರಿಜಿಸ್ಟ್ರಿ ನಿಶಿಂ ಅವಳೂ ಸಹ ಕೂಡಿ ನಾವೆಲ್ಲರೂ ಮಾಡಿಕೊಂಡ ವ್ಯವಸ್ಥಾ ಪತ್ರದಲ್ಲಿ ಕಂಠೋಕ್ತ ತೋರುವದಲ್ಲದೆ ಕಾಣದ ಐವೇಜು ವಸೂಲ್ ಮಾಡಲು ವ ಆರ್ವಾರು ಅಕ್ಕು ಯಾವ ನಮೂನೆಯಲ್ಲಿಯೂ ಪರಾಧೀನ ಪರಾಭಾರೆ ಮಾಡಲು ಅವಳಿಗೆ ಯಾವ ಹಕ್ಕು ಇಲ್ಲ. ಅವಳೀಗೆ ಕೆಲವು ಸಮಯ ಲಾಗ್ಯಾತು ಬುದ್ಧಿ ಸ್ವಾಸ್ಥತೆ ಇಲ್ಲದೆ ಸದ್ರಿ ರಾಮಣ್ಣ ಗೌಡನ ದುರ್ಭೋದನೆ ವ ಫಿತೂರಿಯಲ್ಲಿರುತ್ತಾಳೆ. ವ ಆರ್ವಾರದು ಹಕ್ಕು ಮೋಸದಿಂದ ಪರಾಧೀನಮಾಡಿಸಲು ರಾಮಣ್ಣನು ಹಟಸಾಧನೆಯಲ್ಲಿರುತ್ತಾನೆ. ಹಾಗೆ ಪರಾಧೀನಮಾಡಿದ್ರೆ ಅದು ಸಿಂಧಲ್ಲ. ನ್ಯಾಯವಾದ್ದಲ್ಲ. ಪರಾಧೀನಕ್ಕೆ ಪಡದವರೀಗೆ ಯಾವ ಹಕ್ಕೂ ಬರಲಿಕ್ಕಿಲ್ಲ. ಯಾರೊಂದೂ ಪರಾಧೀನ ಪಡಿಯದಂತೆ ಸಾಲ ಕೊಡದಂತೆ ವ ಯಾರೂ ಮೋಸಕ್ಕೆ ತುತ್ತಾಗದಂತೆ ಈ ಜಾಹೀರುನಾಮೆ ಪ್ರಕಟಿಸಿಯದೆ. ತಿಳಿದಿರಲಿ:—

III ಈ ಮೂರು ಗೆರೆ ಚೆನ್ನಪ್ಪ ಗೌಡನ ರುಜು.

NOTICE

In the Court of the District Munsif of Mangalore

R. E. P. 307/1942
in
O. S. 465/39
and
R. E. A. 773/1942

Between—

Govindaraya minor by next friend mother Padmavathi-amma ... ... *Petitioner.*

and

Chandu Shetty and others— ... ... *Respondents.*

To,

1. Chandu Shetty 2. Mennu Hengsu—children of Kaveri Shedthi. 6. Paddu Hengsu. 7 Nema Shetty—children of 2nd Respondent Mennu Hengsu. 11 Monu Shetty, son of Bhamu Hengsu 13. Vasu Shetty, minor by guardian 2nd Respondent.

All are residing at Adimara guthu at Kuthethur Village, Mangalore Taluk.

Whereas in the above-named suit, plaintiff the decree holder has applied for the sale of the mortgaged properties. You are thereby informed that the 18th day of August 1942 has been fixed for settling the terms of the sale proclamation, and also for granting permission to bid and set off at the time of sale.

Mangalore 2-8-1242 } K. Balakrishna Rao. Advocate for petitioner

Making West End Watches for you

ನಿಮಗಾಗಿ ವೆಸ್ಟ್ ಎಂಡ್ ವಾಚ್ ಮಾಡುವುದು

ದಿ ಮೈನ್‌ಸ್ಪ್ರಿಂಗ್: ಇದು ವಾಚನ್ನು ನಡೆಸಲು ಶಕ್ತಿಯನ್ನು ಕೊಡುತ್ತದೆ. ಇದು ಒಂದು ಉದ್ದದ ಸಪೂರವಾದ ಸರಿಗೆ, ಹದಗೊಳಿಸಿ ಬೇರಲ್ಲಿಗೆ ಸುತ್ತಲ್ಪಟ್ಟದೆ. ಅದು ತಿರುಗಿಸಲ್ಪಟ್ಟಾಗ ಅದರ ಶಕ್ತಿಯು ವೀಲ್ ಟ್ರೈನಿನಿಂದ ಎಸ್ಕೇಪ್ ವೀಲಿಗೆ ಸೇರುತ್ತದೆ. ವೆಸ್ಟ್ ಎಂಡ್ ಮೈನ್‌ಸ್ಪ್ರಿಂಗ್ ಬಹಳ ದೀರ್ಘಕಾಲ ಬಾಳಿಕೆಯುಳ್ಳದ್ದಾಗಿದೆ. ಏಕೆಂದರೆ ಅದನ್ನು ಆ ಕೆಲಸದಲ್ಲಿ ದೀರ್ಘಕಾಲ ಅನುಭವವಿದ್ದುವವರು ಮಾಡಿರುತ್ತಾರೆ. ಬಹುಕಾಲ ಬಾಳಿಕೆಬರುವಂಥಾ ವೆಸ್ಟ್ ಎಂಡ್ ವಾಚನ್ನೇ ಆರಿಸಿಕೊಳ್ಳಿರಿ. ಕೆಟಲಾಗು ಉಚಿತ.

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಾಯಿ ಮತ್ತು ಕಲ್ಕತ್ತ.



WEST END WATCH CO.
BOMBAY CALCUTTA

ಅಲ್ಲಿಯೋ ಇದ್ದ ಒಬ್ಬ ಮನುಷ್ಯನಿಂದಲೇ ನನಗೆ ತಿಳಿಯಿತು.

ಅವನು ನಿಶ್ಚಯವಾಗಿಯೂ ಅಲ್ಲಿಯೇ ಇದ್ದನೆಂದು ನಿಮಗೆ ಗೊತ್ತುಂಟೆ? ವದಂತಿಗಳನ್ನು ಹರಡಬೇಡಿ ಇದರಿಂದ ಅನಿಶ್ಚತೆ, ದುಃಖ ಮತ್ತು ನಷ್ಟಗಳುಂಟಾಗುತ್ತವೆ. ಈ ವದಂತಿಗಳನ್ನು ನಮ್ಮ ಶತ್ರುಗಳು ವಿಚಾರಹೀನ ಮನುಷ್ಯರ ಮೂಲಕ ಹರಡುತ್ತಾರೆ.

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ರಾಷ್ಟ್ರೀಯ ಯುದ್ಧ ಮುಖವನ್ನು ರಚಿಸಿರಿ.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

14–8–1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೧೪–೮–೧೯೪೨]

ಸಮರಭೂಮಿಯ ಸಂಚಾರ

ಜರ್ಮನರು ಕಾಕಸಸಿನ ಕಡೆ ಮುನ್ನಡೆದಿರುವರು. ಅವರನ್ನು ತಡೆಯಲು ರಷ್ಯನರು ಅತಿ ಸಾಹಸಮಾಡುತ್ತಿರುವರು. ಹಿಂದೆ ಕಾಣದಂಥಾ ಪ್ರಚಂಡ ಪ್ರತಿಭಟನೆ ನಡಯುತ್ತದೆ. ಮೈಕಾಪ್ ಜಿಲ್ಲೆಯ ಪಶ್ಚಿಮದಲ್ಲಿರುವ ಕಪ್ಪು ಸಮುದ್ರ ಮತ್ತು ಕೆಸ್ಪಿಯನ್ ಸಮುದ್ರಗಳ ನಡುವೆ ಇರುವ ಬೆರಕಸ್ಥವಲ್ಲಿ ಭೀಷಣಸಂಗ್ರಾಮ ನಡೆಯುತ್ತದೆ. ಕಪ್ಪು ಕಡಲ ಕರಾವಳಿಯನ್ನು ಸೇರಬೇಕೆಂದು ಜರ್ಮನರು ಅತ್ಯಂತ ಸಾಹಸ ಮಾಡುತ್ತಾರೆ. ಸ್ಟಾಲಿನ್‌ಗ್ರಾಡ್ ಪ್ರಾಂತದಲ್ಲಿ ಜರ್ಮನರು ಸಾಹಸಮಯ ಹೋರಾಟ ನಡೆಸುತ್ತಿದ್ದಾರೆ. ಅದು ಅಷ್ಟು ಯಶಸ್ವಿಯಾಗಿಲ್ಲ. ಜರ್ಮನ್ ಸೈನ್ಯವು ಇನ್ನೂ ಕೂಬಾನ್ ದಾಟಲ್ಲವೆಂದು ವರದಿಯಿದೆ. ಒಟ್ಟಿನಿಂದ ರಷ್ಯನರ ರಣರಂಗವು ಬಹಳ ಉಗ್ರವಾಗಿದೆ. ಜರ್ಮನರ ಕಾಕಸಸ್ ಪ್ರವೇಶದಿಂದ ರಷ್ಯದ ಅವಸ್ಥೆ ವಿಷಮವಾಗಿದೆ. ಇಜಿಪ್ತಿನಲ್ಲಿ ರಣರಂಭನವೇನೂ ಇಲ್ಲ. ಚೀನದಲ್ಲಿ ಅಲ್ಲಲ್ಲಿ ಕೆಲವು ನಗರಗಳ ಮೇಲೆ ಜಪಾನರ ಆಕ್ರಮಣ ನಡೆಯುತ್ತಾ ಇದೆ. ಆಸ್ಟ್ರೇಲಿಯದ ಈಶಾನ್ಯಕ್ಕಿರುವ ಸೊಲೊಮನ್ ದ್ವೀಪದ ಸಲುವಾಗಿ ಜಪಾನಿನೆದುರು ಮಿತ್ರರಾಷ್ಟ್ರಗಳು ಹೋರಾಡುತ್ತಿವೆ!

ಕಾಕಸಸ್ ಕೈಬಿಡುವುದೆ?

ಅನೇಕ ಸಮಯದಿಂದ ಜಗತ್ತು ನಿರೀಕ್ಷಿಸುತ್ತಿದ್ದ, ಜರ್ಮನರು ಹಾರೈಸುತ್ತಲಿದ್ದ ಕಾಕಸಸ್ ಕಾಳಗವು ಇಂದು ಅತ್ಯಂತ ಭರದಿಂದ ಸಾಗುತ್ತಿದೆ. ಸಂಪದ್ಯುಕ್ತವಾದ ಆ ಪ್ರದೇಶದ ಎಣ್ಣೆ ಕಣಿಗಳನ್ನು ಆಕ್ರಮಿಸಿಕೊಳ್ಳಬೇಕೆಂದು ಜರ್ಮನ್ ಸೇನೆಯು ಬೇರೆ ಬೇರೆ ಕಡೆಗಳಿಂದ ಅಲ್ಲಿಗೆ ನುಗ್ಗುತ್ತಿದೆ. ವೋಲ್ಗಾ ನದಿಯ ದಡದಲ್ಲಿರುವ ಸ್ಟಾಲಿನ್‌ಗ್ರಾಡ್, ಕಾಸ್ಪಿಯನ್ ಸಮುದ್ರ ತೀರದಲ್ಲಿರುವ ಅಸ್ಟ್ರಖಾನ್ ಮತ್ತು ತೀರಾ ಕೆಳಗಿರುವ ಕಾಕಸಸ್ ಪರ್ವತಗಳನ್ನು ಸ್ವಾಧೀನಪಡಿಸಿಕೊಳ್ಳುವುದೇ ಇಂದು ಜರ್ಮನರ ಉದ್ದೇಶವಾಗಿದೆ. ಜರ್ಮನರು ಸ್ಟಾಲಿನ್‌ಗ್ರಾಡನ್ನು ನುಗ್ಗಿ ವೋಲ್ಗಾ ನದಿಯನ್ನು ಕತ್ತರಿಸಿಬಿಟ್ಟರೆ ಆ ನದೀ ವ್ಯವಹಾರವೆಲ್ಲಾ ಮುರಿದು ಹೀಗೆ ಅಸ್ಟ್ರಖಾನ್‌ನಿಂದ ಮೋಸ್ಕೋ ಕಡೆ ಹೋಗುವ ರೈಲ್ವೆ ಹಾದಿಯೂ ತುಂಡರಿಸಲ್ಪಡುವುದು. ಹಾಗಾದರೆ ರಷ್ಯಕ್ಕೆ ಒದಗುತ್ತಿದ್ದ ಶೇಕಡಾ ಎಂಬತ್ತೈದರಷ್ಟು ಎಣ್ಣೆಯ ಸರಬರಾಯಿ ಬಂದಾಗುವುದು! ಇದರಿಂದ ದಕ್ಷಿಣ ರಷ್ಯವನ್ನು ರಕ್ಷಿಸುವುದೂ ಕಷ್ಟವಾಗುವುದು. ಕಾಕಸಸ್‌ನ ಅಭೇದ್ಯ ಪರ್ವತಗಳನ್ನು ದಾಟಿ ಹೋಗುವುದು ಜರ್ಮನರಿಗೆ ಕಷ್ಟವಾದೀತು. ಕಾಕಸಸ್ ಪರ್ವತದ ಉತ್ತರದ ಗ್ರೋಜ್ನಿ ಎಣ್ಣೆ ಕಣಿಗಳ ಹತ್ತಿರ ಟಿಮೊಶೆಂಕೋ ಬಹಳ ಸೈನ್ಯ ಸಂಗ್ರಹಿಸಿಟ್ಟಿರುವನೆಂದು ತಿಳಿದಿದೆ. ಪರ್ಶಿಯದ ಕಡೆಯಿಂದ ಬ್ರಿಟಿಷರೂ ಸಹಾಯ ಕಳುಹಿಸುತ್ತಿದ್ದಾರೆಂದು ಸುದ್ದಿ. ಇದೆಲ್ಲಾ ನಿಜವಾದರೆ ಕಾಕಸಸ್ ಹತ್ತಿರ ಇನ್ನೊಂದು ಭೀಷಣ ಸಂಗ್ರಾಮವನ್ನು ನಾವು ನಿರೀಕ್ಷಿಸಬಹುದು. ಅಂತೂ ಇಂದು ಇದ್ದಕ್ಕಿದ್ದಂತೆ ರಷ್ಯದ ಸ್ಥಿತಿ ತೀರಾ ವಿಷಮವಾಗಿದೆ. ಅವರಿಗೆ ಆಹಾರ ಸಾಮಗ್ರಿಗಳ ಕೊರತೆಯೂ ಬಹಳವಾಗಿದೆ. ರಷ್ಯದ ಒಟ್ಟು ೧೭೦೦ ಲಕ್ಷ ಚದುರಮೈಲು ಕೃಷಿ ಪ್ರದೇಶದಲ್ಲಿ ೭೩೦ ಲಕ್ಷ ಚದುರ ಮೈಲು ಪ್ರದೇಶವು ಈಗಾಗಲೇ ಜರ್ಮನರ ಕೈಸೇರಿದೆ. ಉಳಿದ ಸ್ಥಳದಲ್ಲಾದರೂ ವ್ಯವಸಾಯ ಮಾಡಲು, ಟ್ರಾಕ್ಟರುಗಳನ್ನು ನಡೆಸುವರೆ ಎಣ್ಣೆಯಿಲ್ಲ! ರೈಲುಹಾದಿಯಿಲ್ಲದಿರುವುದೂ ಬಹಳ ತೊಂದರೆಗಿಟ್ಟಿದೆ. ಇಷ್ಟರಲ್ಲಿ ಎಣ್ಣೆಯ ನಿಧಿಯಾಗಿರುವ ಕಾಕಸಸೂ ಕೈಬಿಟ್ಟರೆ ಮತ್ತೆ ಕೇಳುವುದೇ ಬೇಡ. ಇಂಥ ಸ್ಥಿತಿಯಲ್ಲಿ ರಷ್ಯವಿಂದು ಜರ್ಮನರೊಡನೆ ಜೀವನ ಮರಣದ ಘೋರ ಸಂಗ್ರಾಮ ಹೂಡುತ್ತಿದೆ!

ರಷ್ಯದ ಮೇಲೆ ಜಪಾನ್?

ಹೀಗಿರುವಾಗ ಇಂಥ ದುಸ್ಥಿತಿಯ ಸಂದರ್ಭದಲ್ಲಿಯೇ ರಷ್ಯದ ಮೇಲೆ ಸೈಬೀರಿಯದಲ್ಲಿ ಜಪಾನೂ ಆಕ್ರಮಣ ಮಾಡುವುದೇ ಎಂಬ ಭೀತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ರಷ್ಯ ಜಪಾನ್ ಗಡಿನಾಡಿನಲ್ಲಿ ಜಪಾನರು ಹಲಕಾಲದಿಂದ ಲಕ್ಷಾಂತರ ಸೈನಿಕರನ್ನು ಒಂದಿರಿಸುವರೆಂದು ವದಂತಿಯಿರುವುದು. ಸೈಬೀರಿಯದಲ್ಲಿ ರಷ್ಯದ ಕೈಗಾರಿಕೆಗಳೂ ಕೆಲವಿರುತ್ತವೆ. ಹೀಗಾಗಿ ರಷ್ಯವನ್ನು ಈಗ ತೀರಾ ಒಗ್ಗಿ ಒಡಿಯಬೇಕಾದರೆ ಅತ್ತ ಜರ್ಮನರು ಕಾಕಸಸ್ ಕಡೆ ನುಗ್ಗುತ್ತಿದ್ದಂತೆ, ಇತ್ತ ಜಪಾನು ಸೈಬೀರಿಯದ ಮೇಲೆಯೂ ಆಕ್ರಮಿಸುವುದು ಅಕ್ಷ ರಾಷ್ಟ್ರಗಳ ದೃಷ್ಟಿಯಿಂದ ಅನುಕೂಲವಾಗಿದೆ. ಇಂಥ ಸಂದರ್ಭವನ್ನು ಜಪಾನ್ ಜರ್ಮನಿಗಳೂ ಕಳಕೊಳ್ಳಲಾರವೆಂದೇ ಹಲವರ ಊಹೆಯಾಗಿದೆ. ಜಪಾನು ಹೀಗೆ ರಷ್ಯದ ಮೇಲೆ ಆಕ್ರಮಣಮಾಡಲು ಇನ್ನೂ ಕೆಲವು ಕಾರಣಗಳಿವೆ. ಎಂದಾದರೂ ಒಂದು ದಿನ ಬ್ರಿಟನು ಅಮೇರಿಕಗಳು ತನ್ನ ಮೇಲೆ ರಷ್ಯವನ್ನು ಹುರಿದುಂಬಿಸಿ ಯುದ್ಧ ಸಾರಬಹುದೆಂದು ಅದು ಅಂಜಿದೆ. ಹಾಗಿರುವಾಗ ರಷ್ಯವು ಇಂದು ದುಸ್ಥಿತಿಯಲ್ಲಿರುವುದರಿಂದ ಈ ಸಂದರ್ಭದ ಸದುಪಯೋಗ ಮಾಡಿಕೊಂಡು ರಷ್ಯವನ್ನು ಬಗ್ಗುಬಡಿಯುವ ಜರ್ಮನಿಗೆ ತಾನೂ ನೆರವಾಗಬೇಕೆಂದು ಜಪಾನು ಮನಮಾಡಬಹುದು. ಈ ಸಂದರ್ಭದಲ್ಲಿ ಸೈಬೀರಿಯದ ಸಂಪದ್ಯುಕ್ತ ಪ್ರದೇಶವೂ ಕೈವಶವಾದರೆ ಜಪಾನಿಗೆ ಅದರಿಂದ ಹೆಚ್ಚಿನ ಪ್ರಯೋಜನವಿದೆ. ಇದು ಮಾತ್ರವಲ್ಲದೆ ಸೈಬೀರಿಯ ಆಕ್ರಮಣ ಮಾಡಿಕೊಂಡರೆ ಟ್ರಾನ್ಸ್‌ಕಕೇಶಿಯ ರೈಲ್ವೆಯನ್ನು ಹಿಡಿದು ಜರ್ಮನರನ್ನು ಹೋಗಿ ಕೂಡಿಕೊಳ್ಳಬಹುದು, ಇಷ್ಟರಲ್ಲಿ ಜಪಾನರು ರಷ್ಯದ ಆಧೀನದಲ್ಲಿರುವ ಮಂಗೋಲಿಯ ರಾಜಧಾನಿಯನ್ನೂ ಆಕ್ರಮಿಸಿಕೊಂಡರೆ, ಅಲ್ಲಿಂದ ಸಂಪದ್ಯುಕ್ತವಾದ ಯೂರಲ್ ಪರ್ವತಗಳ ಬಳಿಯಿರುವ ಕಾರ್ಖಾನೆಗಳ ಮೇಲೆ ಧಾಳಿಯಿಡಲೂ ಅನುಕೂಲವಾಗುತ್ತದೆ. ಈ ಎಲ್ಲಾ ಕಾರಣಗಳಿಂದ ಜಪಾನು ಈಗ ರಷ್ಯದ ಮೇಲೆ ಧಾಳಿಯಿಡುವುದು ಜಪ್ಪಿನ ಮಟ್ಟಿಗೆ ಸಂಭವನೀಯವಾಗಿದೆ!

ಇನ್ನು ಯಾವಾಗ?

ಯೂರೋಪಿನಲ್ಲಿ ಹಿಟ್ಲರನಿಗೆ ದ್ವಿತೀಯ ಯುದ್ಧರಂಗವನ್ನು, ರಷ್ಯವು ಇಷ್ಟೊಂದು ಕಷ್ಟಕಾಲಕ್ಕೆ ಒಂದಿರುವಾಗಲೂ ಮಿತ್ರರು ತೆರೆಯುವ ಸಾಹಸ ಮಾಡದಿದ್ದರೆ! 'ಇನ್ನು ಯಾವಾಗ?' ಎಂದು ರಷ್ಯನರೂ, ರಷ್ಯನರೊಡನೆ ಇಡೀ ಪ್ರಪಂಚವೇ ಎದ್ದು ನಿಂತು ಪ್ರಶ್ನಿಸುತ್ತಿದೆ! ಬ್ರಿಟಿಷರು ದ್ವಿತೀಯ ಯುದ್ಧರಂಗವನ್ನು ತೆರೆದು ನಮಗೆ ಆದರಿಂದ ಇಡೀ ಲೋಕಕ್ಕೇ ಉಪಕಾರ ಮಾಡಬೇಕೆಂದು ಯುದ್ಧಾರಂಭಕಾಲದಲ್ಲೇ ಬಿನ್ನವಿಸಿಕೊಂಡಿದ್ದ ರಷ್ಯನರು, ಮತ್ತೆ ಮಿತ್ರರ ಔದಾಸೀನ್ಯವನ್ನು ನೋಡಿ, ಆ ಆಶೆಯನ್ನು ಬಿಟ್ಟು ಬಿಟ್ಟಿದ್ದರೂ, ಈಗ ತೆರುಗಿ ತಮ್ಮ ಜೀವಸಂಕಟದ ಕಾಲದಲ್ಲಿ ಅದೇ ಮಾತನ್ನು ಎತ್ತುತ್ತಿದ್ದಾರೆ. ಬ್ರಿಟಿಷ್ ಅಮೇರಿಕನರ ಜನತೆಯಲ್ಲಾದರೂ ದ್ವಿತೀಯ ಯುದ್ಧರಂಗವನ್ನು ತೆರೆಯುವಂಥಾ ಉದ್ವೇಗದ ಒತ್ತಾಯವಿದೆಯೆಂಬುದು ಅಲ್ಲಿನ ಪತ್ರಿಕೆಗಳ ಲೇಖನಗಳಿಂದ ವಿದಿತವಾಗುತ್ತದೆ. "ಈಗಲ್ಲದಿದ್ದರೆ ಇನ್ನು ಯಾವಾಗ ಎಂಬುದಾಗಿ ಈಗ ಎಲ್ಲರೂ ಕೇಳತೊಡಗಿದ್ದಾರೆ! ಹಿಟ್ಲರನಿಗೆ ಪರಿಣಾಮಕಾರಿಯಾಗಿ ದ್ವಿತೀಯ ಯುದ್ಧರಂಗವನ್ನು ಕಲ್ಪಿಸಬೇಕಾಗಿದ್ದರೆ ಅದು ಯೂರೋಪಿನಲ್ಲಿ ಮಾತ್ರ ಸಾಧ್ಯ, ಅಲ್ಲಿ ಕಲ್ಪಿಸಿದರೆ ಮಾತ್ರ ಅದರ ಪ್ರಯೋಜನ. ಇದನ್ನು ಹಿಟ್ಲರನೂ ಅರಿಯದವನಲ್ಲ. ನಾರ್ವೆ ಫ್ರಾನ್ಸ್‌ಗಳಲ್ಲಿ ಅವನ ಚಟುವಟಿಕೆ ಸಾಗುತ್ತಲೇ ಇದೆ. ನಾರ್ವೆಯಲ್ಲಿ ದೊಡ್ಡ ಪ್ರಮಾಣದಿಂದ ಆಕ್ರಮಣ ವಿರೋಧ ಶಿಕ್ಷಣ ಸಾಗುತ್ತಿದೆ. ಫ್ರಾನ್ಸಿನಲ್ಲೂ ವಿಶೇಷ ಸಿದ್ಧತೆಗಳಾಗುತ್ತಿವೆ. ಫ್ರೆಂಚ್ ಸೈನಿಕರು ಚಟುವಟಿಕೆಯಿಂದಿದ್ದಾರೆ. ಆಕ್ರಮಣವೇನಾದರೂ ಆದರೆ ಫ್ರೆಂಚ್ ತೀರದಿಂದ ಹಾಗೂ ನಾರ್ವೆ ತೀರದಿಂದ ಆಗಬೇಕು, ಅಲ್ಲಿ ಹಿಟ್ಲರನು ಬಹಳ ಜಾಗರೂಕನಾಗಿಯೇ ಇದ್ದಾನೆ. ಹೀಗೆ ಹಿಟ್ಲರನು ಎಚ್ಚರವಿರುವುದು ಸಹಜವೇ ಆದರೂ ಆದರಿಂದ ಮಿತ್ರರು ಹತಾಶರಾಗದೆ ಮುಂದಡಿಯಿಡಬೇಕಾದದ್ದು ಅವಶ್ಯ. ಇಟ್ಟ ಹಜ್ಜೆಯಲ್ಲಿ ಜರ್ಮನಿ ಬೆದರುವಂತಹ ಭೀಷಣ ಹೋರಾಟ ಹೂಡಬೇಕು. ಅಮೇರಿಕವು ಪ್ರಬಲ ಸಹಾಯವನ್ನೀಯಬೇಕು, ಹೀಗಾದರೆ ರಷ್ಯವು ಇಂದು ಇಷ್ಟು ವಿಷಣ್ಣಾವಸ್ಥೆಗೆ ಬಂದಿದ್ದರೂ ಒಮ್ಮೆ ಉಸಿರು ಬಿಡಬಹುದು, ಜರ್ಮನಿಯ ನಿರಂತರದ ಹೊಡೆತದಿಂದ ರಷ್ಯವು—ಹೀಗೆ ದ್ವಿತೀಯ ರಂಗವನ್ನು ಕಲ್ಪಿಸಿದ್ದರಿಂದ—ಚೇತರಿಸಿಕೊಂಡರೆ ಮತ್ತೆ ಪುನರ್ನವ ಹೊಂದುವುದು, ಹಿಟ್ಲರನನ್ನು ಹೋರಾಡಿ ಹಿಮ್ಮೆಟ್ಟಿಸುವುದು; ಹೀಗಾದರೆ ಮಿತ್ರರ ಯುದ್ಧಕ್ಕೂ ಇದರಿಂದ ಬಹಳ ಸಹಾಯವಾಗುವುದು. ಇದನ್ನೆಲ್ಲಾ ವಿಚಾರಿಸಿಕೊಂಡು ದ್ವಿತೀಯ ರಣರಂಗವನ್ನು ಈಗಲಾದರೂ ಮಿತ್ರರು ಯೂರೋಪಿನಲ್ಲೊಂದೆಡೆ ಕಲ್ಪಿಸಲು ಧೈರ್ಯ ಮಾಡಬೇಕು. ಈಗಿಲ್ಲವಾದರೆ ಮತ್ತೆ ಯಾವಾಗ?

ರಶ್ಯದ ಎಣ್ಣೆ ಗಣಿ

ಪ್ರಚಲಿತ ಯುದ್ಧದಲ್ಲಿ ಎಣ್ಣೆಯು ಎಷ್ಟರ ಮಟ್ಟಿಗೆ ಮಹತ್ವದ್ದಿದೆಯೆಂದು ಎಲ್ಲರೂ ಬಲ್ಲರು, ಕಾಕಸಸಿನ ಗಡಿ ಅತದಿಂದ ರಷ್ಯಕ್ಕಾಗುವ ಅನಾಹುತವೆಂದರೆ ಎಣ್ಣೆಯ ನಿಧಿಯೇ ಕೈತಪ್ಪುವುದು. ರಷ್ಯದಲ್ಲಿ ಈಗ ಪ್ರತಿ ವರ್ಷ ಮೂರು ಕೋಟಿ ಟನ್ನು ಕ್ರೂಡಾಯಿಲ್ ತಯಾರಾಗುತ್ತಿದೆ. ಎಂದರೆ ಇಡೀ ಜಗತ್ತಿನ ಎಣ್ಣೆಯು ೧/೧೦ರಷ್ಟು ಆಯಿತು. ಇದು ಕ್ರೇಟ ತರಗತಿಯ ಎಣ್ಣೆಯಾಗಿದೆ. ಬಾಕೂವಿನ ಹಳೆಯ ಎಣ್ಣೆಯ ಬಾವಿಗಳಿಂದಲೇ ಇನ್ನೂ ಶೇಕಡಾ ಎಪ್ಪತ್ತರಷ್ಟು ಎಣ್ಣೆ ದೊರಕುತ್ತದೆ. ರಷ್ಯದಲ್ಲಿ ಎಣ್ಣೆ ಉದ್ಧಿಮಾಡುವ ಕೇಂದ್ರಗಳಲ್ಲಿ ಶೇಕಡ ಎಪ್ಪತ್ತರಷ್ಟು ಕಾಕಸಸಿನಲ್ಲಿ. ಅದರಲ್ಲಿಯೂ ಬಾಕೂ ಮತ್ತು ಗ್ರೋಜ್ನಿ ಹೊರವಲಯದಲ್ಲಿಯೇ ಇರುತ್ತವೆ. ಕಾಕಸಸಿನಲ್ಲಿರುವ ಮುಖ್ಯ ಎಣ್ಣೆಕ್ಷೇತ್ರಗಳಲ್ಲಿ ೩೩೦ ಲಕ್ಷ ಟನ್ ಎಣ್ಣೆಯು ಮೈಕಾಪ್ ಜಿಲ್ಲೆಯಲ್ಲಿ ಹಾಗೂ ಆಪರೇರಾನ್ ಪೆನಿನ್ಸುಲದ ಹತ್ತಿರ ದೊರಕುತ್ತದೆ. ಅಲ್ಲಿರುವ ಬೇರೆ ಬೇರೆ ಹನ್ನೆರಡು ಟ್ಯಾಂಕುಗಳಲ್ಲಿ ಸುಮಾರು ನೂರಿಪ್ಪತ್ತೈದು ಕೋಟಿ ಟನ್ ಎಣ್ಣೆ ಎಂದರೆ ರಷ್ಯದ ಎಣ್ಣೆ ಸಂಗ್ರಹದಲ್ಲಿ ನೂರಕ್ಕೆ ಮವತ್ತರಷ್ಟು ಅಲ್ಲಿ ಸಂಗ್ರಹಿಸಲಾಗಿದೆ. ಈ ಬಾಕುವಿನ ಎಣ್ಣೆ ಸಂಗ್ರಹಾಲಯವನ್ನು ಬಿಟ್ಟರೆ ಗ್ರೋಜ್ನಿ ಎಣ್ಣೆ ಕ್ಷೇತ್ರವು ಹೆಚ್ಚು ದೊಡ್ಡದಿದೆ. ಇಲ್ಲಿ ಪ್ರತಿ ವರ್ಷ ಇಪ್ಪತ್ತೇಳು ಲಕ್ಷ ಟನ್ ಎಣ್ಣೆ ಸಿಗುತ್ತದೆ. ಒಟ್ಟು ಹದಿನೈದು ಕೋಟಿ ಟನ್ ಎಣ್ಣೆ ಸಂಗ್ರಹಿಸಲಾಗಿದೆ. ಈ ಎಣ್ಣೆ ಕ್ಷೇತ್ರದ ಎಣ್ಣೆಯನ್ನು ಕೇಸ್ಪಿಯನ್ ಸಮುದ್ರದ ಮುಖಾಂತರ ಹಡಗಗಳಲ್ಲಿ ವೋಲ್ಗಾದ ಕಡೆಗೆ ಒಯ್ಯಲಾಗುವುದು. ಅಥವಾ ರೈಲ್ವೆಯಿಂದ ಪಾಯಿಪಲಾಯಿಸ್‌ನಿಂದ ಮಾಸ್ಕೋಪ್ರದೇಶಕ್ಕೆ ಅಥವಾ ಕಪ್ಪು ಸಮುದ್ರದ ಬಟೋಮ್ ನವೋರೊಸಿಸ್ಕ್ ಇಲ್ಲವೇ ಟುಯಾಪೆಜ್ ಬಂದರಗಳಿಗೆ ಕಳುಹಿಸಲಾಗುವುದು. ಈ ಬಂದರಗಳಲ್ಲಿ ಎಣ್ಣೆ ಸಂಗ್ರಹಿಸಿಡಲು ದೊಡ್ಡ ಟ್ಯಾಂಕುಗಳಿವೆ. ರೈಲ್ವೆ ಮಾರ್ಗವಾಗಿ ಸುಮಾರು ೧೬೦ ಲಕ್ಷ ಟನ್, ಸಮುದ್ರ ಮತ್ತು ಕಾಲುವೆ ಮಾರ್ಗವಾಗಿ ೧ ಕೋಟಿ ಟನ್, ಪಾಯಿಪಲಾಯಿಸ್ ಮಾರ್ಗವಾಗಿ ೬೧ ಲಕ್ಷ ಟನ್ ಎಣ್ಣೆಯನ್ನು ಬಂದರಗಳಿಗೆ ಪ್ರತಿ ವರ್ಷ ಒಯ್ಯಲಾಗುವುದೆಂದು ಅಂದಾಜು ಮಾಡಲಾಗಿದೆ. ಹೀಗೆ ಫಲವತ್ತಾದ ಮತ್ತು ಔದ್ಯೋಗಿಕ ಕೇಂದ್ರವಾದ ಯುಕ್ರೇನು ಈಗಾಗಲೇ ಶತ್ರು ವಶವಾಗಿದ್ದು, ಎಣ್ಣೆಯ ನಿಧಿಯೂ ಕಲ್ಲಿದ್ದಲು ಕಬ್ಬಿಣಗಳ ರಾಶಿಯೂ ಆಗಿರುವ ಕಾಕಸಸೂ ಶತ್ರು ವಶವಾಗಿ ಬಿಟ್ಟರೆ ರಷ್ಯದ ಸರ್ವಸ್ವವೂ ಸೂರೆಹೋದಂತೆಯೇ ಆಯಿತು!

ಸ್ವದೇಶಾಭಿಮಾನಿ

ತಾರೀಕು 14—8—1942

ದಂಡನೀತಿ

ಬ್ರಿಟಿಷ್ ಪ್ರಭುತ್ವವು, ಕಾಂಗ್ರೆಸನ್ನು ದಂಡನೀತಿಯಿಂದ ಅಡಗಿಸಲು ನಿಶ್ಚಯಿಸಿದ್ದು ವಿಶೇಷ ವಿಷಾದಕರವಾಗಿದೆ. ಅಕಸ್ಮಾತ್ತಾಗಿ ಗಾಂಧಿಜಿ ಅಜಾದ್ ನೆಹರು ಮೊದಲಾದ ಜನಪ್ರೀತ ಮುಖಂಡರನ್ನು ಬಂಧಿಸಿದ್ದರಿಂದ ದೇಶ ಸರ್ವತ್ರ ಮಹಾ ಕೋಲಾಹಲವೇ ಉಂಟಾಯಿತು! ಹಲವು ಕಡೆಗಳಲ್ಲಿ, ಸಭೆಗಳನ್ನು ಚದರಿಸಲು ಸರಕಾರವು ಕೈಕೊಂಡ ಲಾಠೀ ಪ್ರಹಾರ, ಗುಂಡು ಹಾರಿಸುವಿಕೆ, ಮೊದಲಾದ ಉಗ್ರ ಉಪಾಯಗಳಿಂದ ಜನಮನವು ಮತ್ತಷ್ಟು ಪ್ರಕ್ಷೋಭಗೊಂಡಿದೆ. ಜಪಾನಿನಂತಹ ಸಮಯ ಸಾಧಕ ಶತ್ರುವು, ಭಾರತದ ಬಾಗಿಲಲ್ಲಿ ಬಂದು ಕಾದು ನಿಂತಿರುವೀ ವಿಷಮ ಸಂದರ್ಭದಲ್ಲಿ, ಸರ್ವಥಾ ಭಾರತದ ಜನಮತವನ್ನು ಒಲಿಸಿಕೊಳ್ಳಲು ಯತ್ನಿಸಬೇಕಿತ್ತಲ್ಲದೆ ಹೀಗೆ ದಂಡನೀತಿಯನ್ನು ಕೈಕೊಂಡು ಜನತೆಯನ್ನು ನೋಯಿಸುವುದು ಪ್ರಮಾದಕರ. ವಿರುದ್ಧ ರಾಜಕೀಯ ಪಕ್ಷವನ್ನು ಗುಂಡಿ ನೇಟಿಗೆ ಗುರಿಮಾಡಿ ಬೆದರಿಸುವ ಕಠೋರ ರಾಜನೀತಿಯು ಹಿಟ್ಲರ್ ಶಾಹಿಯ ಕ್ರಮವಲ್ಲದೆ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಿಗಾಗಿ ಹೋರಾಡುತ್ತಿರುವ ಬ್ರಿಟಿಷ್ ಪ್ರಭುತ್ವದ ಉದ್ದಾಮ ರಾಜನೀತಿಗೆ ಭೂಷಣವೆನಿಸುವುದಿಲ್ಲ.

ಕಾಂಗ್ರೆಸು, ತನ್ನ ಕೇಳಿಕೆಯನ್ನು ಸರಕಾರವು ಮನ್ನಿಸದಿದ್ದರೆ ಆಂದೋಲನವನ್ನು ಹೂಡುವುದಾಗಿ ನಿಶ್ಚಯಮಾಡಿದ ಮಾತ್ರದಿಂದ ಸರಕಾರದ ಆಡಳಿತವೇ ಅಡಿಮೇಲಾಗಿ ಹೋಗುವುದೆಂಬಷ್ಟು ಭೀತಿಗೊಳ್ಳುವ ಕಾರಣವಾದರೂ ಇರಲಿಲ್ಲ. ಕಾಂಗ್ರೆಸು ಕೊನೆಯದಾಗಿ ಸಂಯುಕ್ತ ರಾಷ್ಟ್ರಗಳಿಗೆ ಪುನರಪಿ ಬಿನ್ನಹ ಮಾಡಲು ನಿರ್ಧರಿಸಿತ್ತು; ಅಲ್ಲಿಂದ ಉತ್ತರ ಬಂದ ಮೇಲೆ ಕಾರ್ಯಕ್ರಮವನ್ನು ಅದು ಆರಂಭಿಸಬೇಕಿತ್ತು, ಅದರ ಮೊದಲು ಗಾಂಧಿಜಿ ವೈಸರಾಯರಿಗೆ ಕಾಗದ ಬರೆದು ಮಾತುಕತೆ ಪ್ರಾರಂಭಿಸುವುದಾಗಿಯೂ ತಿಳಿಸಿದ್ದರು. ಇದರಿಂದಲೂ ಸಂಧಾನಕ್ಕೆ ಒಂದು ಅವಕಾಶ ಒದಗಿ ಬರುತ್ತಿತ್ತು. ಸರ್ ಸಪ್ರು ಪ್ರಭೃತಿಗಳೂ ಸಂಧಾನ ಸೂಚನೆಯೊಂದನ್ನು ಮುಂದು ಮಾಡಿದ್ದರು ಆ ಮಾರ್ಗದಲ್ಲಿ ವ್ಯವಹರಿಸಲೂ ಆಸ್ಪದವಿತ್ತು. ಗಾಂಧಿಜಿಯೇ ಸರ್ ಸಪ್ರುಗಳಿಗೆ ಅಂತಹ ಸಭೆಯೊಂದನ್ನು ಕರೆದರೆ ತಾನು ಬರುವುದಾಗಿ ತಿಳಿಸಿದ್ದರು. ಇದೆಲ್ಲದಕ್ಕಿಂತಲೂ ಪ್ರಧಾನವಾಗಿ, ಗಾಂಧಿಜಿ ಯಾವ ರೀತಿಯ ಆಂದೋಲನ ಮಾಡುತ್ತಾರೆಂಬುದಾಗಿ ವಿವರಿಸಿಯೂ ಇಲ್ಲ. ಹಾಗಾಗಿ ಹಲವರು ಇನ್ನೂ ಸಂಧಾನ ಸಾಧ್ಯವಿದೆಯೆಂಬ ಆಶಾತುರರಾಗಿದ್ದಾಗ—ಅಂತಹ ಸಂಧಾನಕ್ಕೆ ಒಂದು ಅವಕಾಶವನ್ನೇ ಕೊಡದೆ—ಕಾಂಗ್ರೆಸ್ ಸಭೆ ಪೂರ್ತಿಯಾಗುವ ಮುನ್ನವೇ ಗಾಂಧಿಜಿ ಮೊದಲಾದ ದೇಶದ ಜನಪ್ರೀತ ಮುಂದಾಳುಗಳನ್ನು ಬಂಧನದಲ್ಲಿರಿಸಿದ್ದು, ಮತ್ತು ಕಾಂಗ್ರೆಸ್ ಚಳವಳಿವನ್ನಡಗಿಸಲು ಉಗ್ರೋಪಾಯಗಳನ್ನು ಕೈಕೊಂಡದ್ದು ಸಖೇದಾಶ್ಚರ್ಯವನ್ನುಂಡುಮಾಡುತ್ತದೆ.

ಪ್ರಕ್ಷೋಭಗೊಂಡು, ತಲೆಕೆಟ್ಟ ರೀತಿಯಲ್ಲಿ ವರ್ತಿಸುವ ಹಿಂಸಾತುರರಾದ ಜನರ ನೀತಿಯನ್ನು ನಾವು ಸರ್ವಥಾ ಖಂಡಿಸುತ್ತೇವೆ. ಗಾಂಧಿಜಿ ಮೊದಲಾದ ಕಾಂಗ್ರೆಸ್ ಮುಖಂಡರು, ಅವರ ಬಂಧನದ ಹೆಸರಲ್ಲಿ ಇಂತಹ ಪ್ರಮಾದವಾಗುವುದನ್ನು ಕೇಳಿದರೆ ಸಹಿಸಲಾರದ ಸಂತಾಪ ಪಡುವರು. ಇದರಿಂದ ಕಾಂಗ್ರೆಸಿಗಾಗಲೀ ದೇಶಕ್ಕಾಗಲೀ ಹಿತವಿಲ್ಲ. ಇದು ಅನ್ಯಾಯ ಮಾರ್ಗ, ಅವಿಚಾರದ ವರ್ತನೆ 'ಮುಖಂಡರನ್ನು ಬಿಡುಗಡೆ ಮಾಡಿರಿ' ಎಂದು ಜನತೆ ಕೇಳುವುದು ನ್ಯಾಯವಿರುವುದು; ಆದರೆ ಅದಕ್ಕಾಗಿ ಅನ್ಯಾಯದ, ಹಿಂಸೆಯ, ಆಕ್ರಮದ ಹಾದಿ ಹಿಡಿಯುವುದರಿಂದ ಮುಖಂಡರಿಗಾಗಲಿ ರಾಷ್ಟ್ರಕ್ಕಾಗಲಿ ಲೋಕದ ಶಾಂತಿಗಾಗಲಿ ಖಂಡಿತ ಒಳಿತಲಾಗಲಾರದು. ಆಂದೋಲನದ ಹೆಸರಲ್ಲಿ, ಕಾಂಗ್ರೆಸ್ಸಿನ ಹೆಸರಲ್ಲಿ ಇಂತಹ ಪ್ರಮಾದವನ್ನು ಜನರು ಕೈಕೊಳ್ಳುವುದು ನಾಚಿಕೆಗೇಡು. ಸರಕಾರದವರಾದರೂ ಪರಿಸ್ಥಿತಿಯನ್ನು ಶಾಂತಚಿತ್ತದಿಂದ ವಿಚಾರಿಸಿ ಸುಧಾರಿಸಬೇಕಲ್ಲದೆ, ಕೇವಲ ದಂಡನೀತಿಯನ್ನೇ ಅನುಸರಿಸುವುದು ವಿಷಾದಕರ.

ಕಾಂಗ್ರೆಸಿನಂತಹ ಪ್ರತಿಷ್ಠೆಯುಳ್ಳ ಒಂದು ರಾಜಕೀಯ ಸಂಸ್ಥೆಯನ್ನು ದಂಡನೀತಿಯಿಂದ ಬಗ್ಗುಬಡಿದುಬಿಡುವುದು ಅಷ್ಟೇನೂ ಸುಲಭವಾಗಲಾರದು. ಒಂದು ಪಕ್ಷ ಈಗಾಗಲೇ ಕೈಕೊಂಡಿರುವಂತೆ ಬಂಧನ ಲಾಠೀ ಪ್ರಹಾರ ಗುಂಡು ಹಾರಿಸುವಿಕೆಗಳಿಂದ ಜನರಲ್ಲಿ ಭೀತಿ ಹುಟ್ಟಿಸಿದರೂ, ಅಂತರಂಗದಲ್ಲಿ ಬ್ರಿಟಿಷ್ ದ್ವೇಷವೇ ಹೆಚ್ಚಿಸಲು ಆಸ್ಪದವಾಗುವುದು. ಇಂಥಾ ಸಂದರ್ಭವನ್ನು ಶತ್ರುವು ಉಪಯೋಗಿಸಿಕೊಂಡರೆ ಭಾರತಕ್ಕೂ ಬ್ರಿಟನಿಗೂ ಉಭಯತರಿಗೂ ಮಹಾ ಅನರ್ಥವಾದೀತು! ಇಂಥ ವಿಷಮ ಸಂಧಿಕಾಲದಲ್ಲಿ ಭಾರತದ ರಾಜಕೀಯರಂಗದಲ್ಲಿ ಈ ತರದ ದಾರುಣ ದೃಶ್ಯವು ಕಂಡುಬರುವುದು ದೇಶದ ದೌರ್ಭಾಗ್ಯವೆನ್ನಬೇಕು!

ಅಗೌರವಕರ

ಇತ್ತೀಚೆಗೆ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕಚೇರಿಯನ್ನು ಜಪ್ತಿಮಾಡಿ ಸಿಕ್ಕಿದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಪ್ರಕಟಣಾರ್ಹವಲ್ಲದ ಪತ್ರಗಳನ್ನು ಪ್ರಕಟಿಸಿ, ಸರಕಾರವು (confidential minutes) ಕಾಂಗ್ರೆಸ್ ಮುಖಂಡರ ಕೀರ್ತಿಗೆ ಕಳಂಕ ಹಚ್ಚುವ ಅಗೌರವಕರ ಮಾರ್ಗವನ್ನು ಅವಲಂಬಿಸಿದ ವಿಷಯವು ಇಡೀ ಭಾರತದ ಜನತೆಗೆ ಅತೃಪ್ತಿಯನ್ನುಂಟುಮಾಡಿದೆಯೆಂಬುದು ಈಗಾಗಲೇ ಆ ವಿಷಯದಲ್ಲಿ ಪ್ರಕಟವಾದ ಮುಖಂಡರ, ಪ್ರಮುಖ ಪತ್ರಿಕೆಗಳ ಪ್ರಕಟಣೆಗಳಿಂದ ವಿದಿತವಾಗುತ್ತದೆ. ಈ ಪ್ರಕಟಣೆಯು ಕಾಂಗ್ರೆಸಿನ ನಿರ್ಮಲ ಕೀರ್ತಿಗೆ ಕಳಂಕ ತರುವುದೆಂದು ಸರಕಾರದವರು ಬಗೆದಿದ್ದರೆ ಅದು ಮಹಾ ಪ್ರಮಾದವೆನ್ನಬೇಕಾಗಿದೆ.

ಇದರಲ್ಲಿರುವ ಪ್ರಾಮುಖ್ಯವಾದ ಒಂದೇ ಒಂದು ವಿಚಾರವೆಂದರೆ ಗಾಂಧಿಜಿಯವರು ಜಪಾನಿನೊಡನೆ ಸಂಧಾನ ಮಾಡಲು ತೊಡಗಿದ್ದಾರೆಂಬುದು. ಗಾಂಧಿಜಿ ತನಗೆ ಜಪಾನಿನವರ ಆಕ್ರಮಣದ ವಿಷಯವಾಗಿರುವ ವಿರೋಧ ಭಾವನೆಯನ್ನು ತನ್ನ ಅನೇಕ ಲೇಖನಗಳ ಮೂಲಕ ಭಾಷಣಗಳ ಮೂಲಕ, ಪ್ರಶ್ನೋತ್ತರಗಳ ಮೂಲಕ ಸ್ಪಷ್ಟಪಡಿಸಿದ ಮೇಲೂ ಜನತೆ ಅವರ ಮೇಲೆ ಹೊರಿಸಿರುವ ಈ ನೀಚಾರೋಪವನ್ನು ನಂಬುವುದೆಂದು ನಾವು ತಿಳಿಯುವುದಿಲ್ಲ. ಗಾಂಧಿಜಿಯಾಗಲಿ, ಕಾಂಗ್ರೆಸಿನವರಾಗಲಿ, ಗಾಂಧಿಜಿಯ ಹಾಗೂ ಕಾಂಗ್ರೆಸಿನ ಅನುಯಾಯಿಗಳಾಗಲಿ ಜಪಾನಿನ ಆಕ್ರಮಣದ ಕುರಿತು ತಮಗಿರುವ ವಿರೋಧವನ್ನು ಸಾವಿರ ಸಲ ಸಾರ್ವಜನಿಕವಾಗಿ ಸ್ಪಷ್ಟಪಡಿಸಿರುತ್ತಾರೆ. ಇತ್ತೀಚೆಗೆ ಮಾಡಿದ ನಿರ್ಣಯದಲ್ಲಾದರೂ, ಕಾಂಗ್ರೆಸು, ಭಾರತವನ್ನು ಸ್ವತಂತ್ರಮಾಡಿದರೆ ರಾಷ್ಟ್ರದಲ್ಲಿರುವ ಸಂಪೂರ್ಣ ಶಕ್ತಿ ಸಂಪತ್ತುಗಳನ್ನು ಪಯೋಗಿಸಿ, ತನ್ನಲ್ಲಿರುವ ಅಹಿಂಸಾ ಶಕ್ತಿಯಿಂದ ಮಾತ್ರವಲ್ಲದೆ ಸಶಸ್ತ್ರ ಪ್ರತೀಕಾರದಿಂದಲೂ ಮಿತ್ರಪಕ್ಷದೊಡಗೂಡಿ ಫ್ಯಾಸಿಸ್ಟ್ ಆಕ್ರಮಣವನ್ನು ವಿರೋಧಿಸುವುದಾಗಿ ಕಂಠೋಕ್ತ ಸಾರಿದೆ. ಹೀಗಿರುತ್ತಾ ಗಾಂಧಿಜಿಯ ಹಾಗೂ ಕಾಂಗ್ರೆಸ್ ಮುಖಂಡರ ನಿರ್ಮಲ ಕೀರ್ತಿಗೆ ಕಳಂಕ ತರುವ ಇಂತಹ ನೀಚಾರೋಪವನ್ನುಮಾಡಿದ್ದು ಬ್ರಿಟಿಷ್ ಪ್ರಭುತ್ವದ ಮುತ್ಸದ್ದಿತನವನ್ನು ತೋರಿಸುವಂಥಾದಾಗಿಲ್ಲ. ಪರಕೀಯರ ದಾಸ್ಯದಿಂದ ಬಿಡುಗಡೆ ಹೊಂದಲು ಹೋರಾಡುವ ಗಾಂಧಿಜಿ ಹಾಗೂ ಕಾಂಗ್ರೆಸ್ ಮುಂದಾಳುಗಳು, ಇನ್ನೂ ಪರಕೀಯರ ಸಹಾಯಕ್ಕಾಗಿ ಸಂಧಾನ ಮಾಡುತ್ತಿರುವರೆಂಬುದು ಊಹನಾತೀತ ವಿಚಾರವಿರುವುದು!

The Canara Banking Corporation Ltd.

(Incorporated in British India)

Estd 1906.

Our Rates Of Interest on Deposits From

7--8--1942

1. Current		(1% p. a. from Jan. to June.
		(½% p. a. from July to Dec
2. Savings Bank		2% p. a.
3. Short-term		1½% p. a.
4. Fixed 3 months		1½% p. a.
	6 „	2% p. a.
	9 „	2½% p. a.
	12 „	3% p. a.
	24 „	3½% p. a.

Advances aginst approved securities made at very competitive rates.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಗಾಂಧೀಗೀತ

'ಮುಸ್ಲಿಮರಿಗೆ ಅಧಿಕಾರ ಕೊಟ್ಟರೂ ಅಡ್ಡಿಯಿಲ್ಲ'

ಸ್ವಾತಂತ್ರ್ಯ ಮೊದಲು ಮತ್ತೆ ಪಾಕಿಸ್ಥಾನ

'ನಿಮ್ಮ ಸೇವಕನಾಗಿ ಕೆಲಸ ಕೈಕೊಂಡಿದ್ದೇನೆ'

—ಗಾಂಧಿಜಿ ಭಾಷಣ—

ವರ್ಕಿಂಗ ಕಮಿಟಿಯ ನಿರ್ಣಯವು ಅ ಭಾ ಕಾಂಗ್ರೆಸ ಸಮಿತಿಯಲ್ಲಿ ಪಾಸಾದ ಮೇಲೆ ಗಾಂಧಿಜಿಯವರು ಈ ರೀತಿ ಭಾಷಣಮಾಡಿದರು —

'ನಿಮ್ಮ ಈ ಹೊಸ ಸಂಗ್ರಾಮವನ್ನು ನಡೆಸಲು ನಾನು ಒಪ್ಪಿದ್ದೇನೆ ಆದರೆ ನಿಮ್ಮ ಸೇನಾಪತಿಯೆಂದು ಅಥವಾ ನಿಯಂತ್ರಕನೆಂದು ನಾನು ಈ ಕೆಲಸವನ್ನು ಕೈಕೊಂಡಿಲ್ಲ ನಿಮ್ಮ ಸೇವಕನಾಗಿ ಈ ಕೆಲಸ ಕೈಕೊಂಡಿದ್ದೇನೆ ಯಾರು ಹೆಚ್ಚು ಸೇವೆ ಮಾಡುವರೋ ಅವರೇ ಉತ್ತಮ ನಾಯಕರಾಗುವರು ನಾನು ರಾಷ್ಟ್ರದ ಸೇವಕನು. ನಿಮ್ಮ ಕಷ್ಟನಷ್ಟಗಳಲ್ಲಿ ನಾನೂ ಪಾಲು ತೆಗೆದುಕೊಳ್ಳುವೆನು

'ಈ ಸಮಯದಲ್ಲಿ ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ ಪಾಶ್ಚಾತ್ಯ ರಾಷ್ಟ್ರಗಳೂ ನನ್ನ ಅನೇಕ ಸ್ನೇಹಿತರು ಅದನ್ನು ವಿರೋಧಿಸಬಹುದು ಅನೇಕರ ಪ್ರೀತಿ ವಿಶ್ವಾಸಗಳನ್ನು ಕಳೆದುಕೊಳ್ಳುವಂತಹ ಪ್ರಸಂಗ ನನಗೆ ಬರಬಹುದು ಅನೇಕ ಸ್ನೇಹಿತರು ನನ್ನ ಕೈ ಬಿಡಬಹುದು ಆದರೆ ನನ್ನ ಅಂತರಾತ್ಮನ ಕರೆಯನ್ನು ಮಾತ್ರ ನಾನು ಕೇಳದ್ದೇ ಇರಲಾರೆನು ನನ್ನ ಅಂತರಾತ್ಮನ ಅನುಜ್ಞೆಯಂತೆ ನಾನು ನಡೆಯಲೇಬೇಕು ನಾನೊಬ್ಬನೇ ಇಡೀ ಜಗತ್ತನ್ನು ಎದುರಿಸಬೇಕಾಗುವದೆಂದು ಆ ವಾಣಿಯು ನನಗೆ ಹೇಳುತ್ತದೆ ಇಡೀ ಜಗತ್ತೇ ನಿಮ್ಮನ್ನು ಕೆಂಗಣ್ಣಿನಿಂದ ನೋಡಿದರೂ ನೀವು ಎಲ್ಲವನ್ನೂ ತ್ಯಾಗಮಾಡಬೇಕಾಗುವದು ಹೆಂಡತಿ ಮಕ್ಕಳನ್ನು ಬಿಡಬೇಕಾಗುವದು ಸ್ನೇಹಿತರನ್ನು ತೊರೆಯಬೇಕಾಗುವದು ನನ್ನ ಆಯುಷ್ಯದ ಕೊನೆಯ ವರೆಗೂ ಜೀವಿಸಬೇಕೆಂಬ ಆಶೆ ನನಗಿದೆ ಆದರೆ ನಾನು ಅಷ್ಟು ಬಹಳ ದಿನ ಬದುಕಲಿಕ್ಕಿಲ್ಲ ನಾನು ಹೋದ ಮೇಲೆ ಇಡೀ ಹಿಂದುಸ್ಥಾನವೇ ಸ್ವತಂತ್ರವಾಗುವ್ರದು ಇಷ್ಟೇ ಅಲ್ಲ ಇಡೀ ಜಗತ್ತೇ ಸ್ವತಂತ್ರವಾಗುವ್ರದು

'ಮೊದಲಿನಿಂದಲೂ ಕಾಂಗ್ರೆಸ್ಸು ಅಹಿಂಸಾ ತತ್ವವನ್ನು ಅನುಸರಿಸುತ್ತ ಬಂದಿರುವದು ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಸಂಪೂರ್ಣ ಅಹಿಂಸಾವಾದಿಯಾಗಿರುವನೆಂದು ನಾನು ಹೇಳಲಾರೆನು ಎಷ್ಟೋ ಜನರು ಈ ತತ್ವವನ್ನು ಉಲ್ಲಂಘಿಸಿರುವರೆಂಬದು ನನಗೆ ಗೊತ್ತಿದೆ ಆದರೆ ನಾನು ಅವರಲ್ಲಿ ವಿಶ್ವಾಸವಿಟ್ಟಿದ್ದೇನೆ ಅವರನ್ನು ಹೆಚ್ಚು ಪರೀಕ್ಷೆಗೆ ಗುರಿಮಾಡದೆ ನಂಬಿಕೊಂಡು ಬಂದಿದ್ದೇನೆ ನನ್ನ ಜೀವನದ ಮುಖ್ಯ ಆಚರಣೆಯಾದರೂ ಈ ಬಗೆಯ ವಿಶ್ವಾಸವೇ ಆಗಿರುವದು

'ಇಂಗ್ಲಿಷರೂ ಮಿತ್ರರಾಷ್ಟ್ರಗಳ ಜನರೂ ತಮ್ಮ ಹೃದಯವನ್ನು ಶೋಧಿಸಿಕೊಳ್ಳಲಿ ಈಗ ಸ್ವಾತಂತ್ರ್ಯವನ್ನು ಕೇಳಿ ಕಾಂಗ್ರೆಸ್ಸು ಏನು ತಪ್ಪು ಮಾಡಿತು? ಹಾಗೆ ಕೇಳುವದು ತಪ್ಪೆ? ಚೀನಿ ಸರ್ವಾಧಿಕಾರಿಯಾದ ಜನರಲ್ ಚಿಯಂಗ ಕೈಶೇಕರು ಸಹ ಅದರಲ್ಲಿ ಅವಿಶ್ವಾಸ ವ್ಯಕ್ತಮಾಡಲಿಲ್ಲ ಬೇಕಾದರೆ ಎಲ್ಲ ಮಿತ್ರರಾಷ್ಟ್ರಗಳು ನನ್ನನ್ನು ಎದುರಿಸಲಿ, ಇಡೀ ಹಿಂದುಸ್ಥಾನವೇ ನನ್ನ ಮನಒಲಿಸಲು ಪ್ರಯತ್ನಿಸಲಿ, ನಾನು ಮಾತ್ರ ನನ್ನ ಕರ್ತವ್ಯವನ್ನು ಹಿಂದೆ ಸರಿಯಲಾರೆನು ಜಗತ್ತಿನ ಸಲುವಾಗಿಯಾದರೂ ನಾನು ಮುಂದಡಿಯಿಡಲೇಬೇಕು ನಮ್ಮನ್ನು ಉದ್ರೇಕಗೊಳಿಸಲು ಎಷ್ಟು ಪ್ರಯತ್ನ ನಡೆದರೂ ನಾವು ಮಾತ್ರ ದ್ರೋಹ ಬಗೆವುದಿಲ್ಲ ಇದುವರೆಗೆ ಮರ್ಯಾದೆಯಿಂದ ಸಜ್ಜನರಂತೆ ಪ್ರಗತಿ ಹೊಂದಿದ ನಾವು ಈ ರೀತಿ ಮಾಡುವ್ರದು ಸರಿಯಲ್ಲ ಹಿಂದುಸ್ಥಾನವನ್ನು ಸ್ವತಂತ್ರಮಾಡಿ ತಮ್ಮ ಪ್ರಮಾಣಿಕತೆಯನ್ನು ಸಿದ್ಧಮಾಡಲಿ ಈಗ ಮಿತ್ರರಾಷ್ಟ್ರಗಳಿಗೆ ಅಪೂರ್ವ ಸಂಧಿ ಬಂದಿದೆ ಈ ಸಂಧಿಯನ್ನು ಅವರು ಕಳೆದುಕೊಂಡರೆ ಇಂತಹ ಸಂಧಿ ಇನ್ನೊಮ್ಮೆ ಎಂದೂ ಬರಲಾರದು ಹಿಂದುಸ್ಥಾನದ ಬಗ್ಗೆ ತಮ್ಮ ಕರ್ತವ್ಯವನ್ನು ಪಾಲಿಸಲಿಲ್ಲವೆಂಬ ಕೆಟ್ಟ ಹೆಸರನ್ನು ಅವರು ಹೊರಬೇಕಾಗುವದು ಕಾಂಗ್ರೆಸಿಗೆ ನಾನು ವಚನ ಕೊಟ್ಟಿದ್ದೇನೆ ಕಾಂಗ್ರೆಸು ತನ್ನ ಕರ್ತವ್ಯ ಮಾಡುವದು ಇಲ್ಲವೆ ಈ ಪ್ರಯತ್ನದಲ್ಲಿ ನಿರ್ನಾಮವಾಗುವದು

'ಹಿಂದುಸ್ಥಾನವು ಒಂದಾಗಿ ಎಲ್ಲ ಜಾತಿಗಳವರೂ ಪರಸ್ಪರ ಸೌಹಾರ್ದದಿಂದ ನಡೆದುಕೊಳ್ಳಬೇಕೆಂದು ನಾನು ಮೊದಲಿನಿಂದಲೂ ಹೇಳುತ್ತ ಬಂದಿರುವೆನು ಜಿನ್ನಾಸಾಹೇಬರೂ ಹಿಂದೆ ಕಾಂಗ್ರೆಸ್ಸಿನಲ್ಲಿದ್ದರು ಆದರೆ ಈಗ ಅವರು ಹಾದಿತಪ್ಪಿದಂತೆ ತೋರುತದೆ ಅವರು ಸುಖದಿಂದ ಬಾಳಲಿ ನನ್ನ ನಂತರವೂ ಬಾಳಲಿ ನಾನು ಅವರಿಗಾಗಲಿ ಮುಸಲ್ಮಾನರಿಗಾಗಲಿ ಸ್ವಲ್ಪವೂ ಅಹಿತ ಬಗೆದಿಲ್ಲವೆಂಬದು ಕೆಲವು ದಿನಗಳಲ್ಲಿಯೇ ಅವರಿಗೆ ತಿಳಿಯುವದು ಮುಸಲ್ಮಾನರಲ್ಲಿ ನನಗೆ ಸಂಪೂರ್ಣ ವಿಶ್ವಾಸವಿದೆ ಒಂದು ವೇಳೆ ಅವರು ನನ್ನನ್ನು ಕೊಂದರೂ ನಾನು ಅವರಿಗೆ ಅಹಿತ ಬಗೆಯುವದಿಲ್ಲ, ಪಾಕಿಸ್ಥಾನ ಯೋಜನೆಯು ಸರಿಯಾದುದಲ್ಲ ಆದರೆ ಎಲ್ಲ ಮುಸಲ್ಮಾನರೂ ಅದಕ್ಕೆ ಒಪ್ಪಿದರೆ ಅದನ್ನು ತಡೆಯುವದು ಸಾಧ್ಯವಿಲ್ಲ. ಜಗತ್ತಿನ ಸಂಯುಕ್ತ ಘಟನೆಯನ್ನಾದರೂ ಪರಸ್ಪರ ಒಪ್ಪಿಗೆಯಿಂದಲೇ ರಚಿಸಬೇಕಲ್ಲವೆ? ಆದ್ದರಿಂದ ಯಾವದು ಸರಿ ಮತ್ತು ಯಾವದು ತಪ್ಪೆಂಬದನ್ನು ಅವರೇ ವಿಚಾರಿಸಲಿ ಯೋಗ್ಯ ಮಧ್ಯಸ್ಥಿಕೆಗಾರರನ್ನು ನಿಯಮಿಸಿ ಈ ಪ್ರಶ್ನೆಯನ್ನು ಬಗೆಹರಿಸಿಕೊಳ್ಳುವ ಇದಕ್ಕೆ ಮುಸ್ಲಿಂ ಲೀಗಿನವರು ಒಪ್ಪದಿದ್ದರೆ ಇನ್ನೊಬ್ಬರನ್ನು ಅವರು ಒತ್ತಾಯಪಡಿಸುವದಾದರೂ ಹೇಗೆ? ಅವರು ಹಿಂದೂ ಬಾಂಧವರ ಮನ ಒಲಿಸಲು ಪ್ರಯತ್ನಿಸಬೇಕು ಇಲ್ಲದಿದ್ದರೆ ಅಂತಃಕಲಹವಾಗುವದು ಆ ದುರಂತವನ್ನು ನೋಡುವ ಇಚ್ಛೆ ನನಗಿಲ್ಲ

"ದೇವರು ನನಗೆ ಒಪ್ಪಿಸಿದ ಕಾರ್ಯಮಾಡಲು ಪ್ರಾಣವನ್ನಾದರೂ ಕೊಡಲು ನಾನು ಸಿದ್ಧನಾಗಿದ್ದೇನ ಹಿಂದೂ ಮುಸಲ್ಮಾನರ ಒಕ್ಕಟ್ಟು ನನಗೆ ಬಹಳ ಪ್ರಿಯವಾಗಿದೆ ಪಾಕಿಸ್ತಾನದ ಪ್ರಶ್ನೆ ಈಗ ಬೇಡ ಮೊದಲು ದೇಶವನ್ನು ಸ್ವತಂತ್ರಮಾಡುವ ಪಾಕಿಸ್ತಾನವು ಹಿಂದುಸ್ಥಾನದಿಂದ ಎಲ್ಲೆಲ್ಲಿಯೂ ಹೋಗದು ಎಲ್ಲರೂ ಕೂಡಿ ಮೊದಲು ಸ್ವಾತಂತ್ರ್ಯ ಪಡೆಯುವ ಜಿನ್ನರಿಗೆ ಕಾಂಗ್ರೆಸಿನ ಬೇಡಿಕೆ ಮತ್ತು ಕಾರ್ಯಕ್ರಮಗಳಲ್ಲಿ ವಿಶ್ವಾಸವಿದ್ದಂತೆ ತೋರುವದಿಲ್ಲ ಆದರೆ ಜಿನ್ನರ ಮನಸ್ಸಿನ ಪರಿವರ್ತನೆಯಾಗುವ ವರೆಗೆ ನಾನು ಕಾಯಲಾರೆನು ದೇಶದ ಸ್ವಾತಂತ್ರ್ಯಕ್ಕೆ ಜಾತಿಯ ಒಪ್ಪಂದವು ಅತ್ಯಂತ್ಯ ಅವಶ್ಯವು ಆದರೆ ಈಗ ನಾವು ಕೇಳುವ ಸ್ವಾತಂತ್ರ್ಯವು ಎಲ್ಲರಿಗೂ ಸಂಬಂಧಿಸಿದೆ ಯಾವದೊಂದು ಜಾತಿಯ ಸಲುವಾಗಿ ಅಲ್ಲ ಯಾವ ಜಾತಿಗಾದರೂ ಅಧಿಕಾರ ಕೊಡಿರೆಂದು ಅಝಾದರು ಹೇಳಿರುವದನ್ನು ನಾನು ಮನಃಪೂರ್ವಕವಾಗಿ ಒಪ್ಪುತ್ತೇನೆ ಕೇವಲ ಮುಸಲ್ಮಾನರಿಗೆ ಕೊಟ್ಟರೂ ನಮ್ಮ ಅಡ್ಡಿಯಿಲ್ಲ ಭಾರತ ಮುಸಲ್ಮಾನರ ದೇಶವಲ್ಲವೆ?"

ಬಳಿಕ ಮಹಾತ್ಮರು ತಮ್ಮ ಮಗ ಹೀರಾಲಾಲನು ಇಸ್ಲಾಂ ಧರ್ಮ ಸ್ವೀಕರಿಸಿದ್ದನ್ನು ಉಲ್ಲೇಖಿಸಿ ಬೇರೆ ಧರ್ಮ ಸ್ವೀಕರಿಸಿದ ಮಾತ್ರಕ್ಕೆ ಅವರ ರಾಷ್ಟ್ರೀಯತೆ ಬದಲಾಗ ಪದು ಎಂದು ಹೇಳಿದರು

ನೋಟೀಸು

ದಕ್ಷಿಣ ಕನ್ನಡಾ ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 196/1942.

ಬಜಪೆ ಜಕ್ರಿ ಬ್ಯಾರಿ — ವಾದಿ

ಮತ್ತು

1. ಆಸಮ್ಮ 2 ಹಲೀಮ್ಮ ಕಾದ್ರಿಬ್ಯಾರಿ ಮಗಳು 3 ಹಮ್ಮದೆ ಬ್ಯಾರಿ ಕಾದ್ರಿಬ್ಯಾರಿ ಮಗ 2-3ನೇಯವರು ಮಂಗ್ಳೂರು ತಾಲೂಕು ತೋಕೂರ ಗ್ರಾಮದಲ್ಲಿರುವವರು 4 ಹಲೀಮಮ್ಮ 5 ಹತ್ತಿಜಮ್ಮ ಕಾದ್ರಿಬ್ಯಾರಿ ಮಗಳು ಮಂಗ್ಳೂರು ತಾಲೂಕು ಬೈಕಂಪಾಡಿ ಗ್ರಾಮದಲ್ಲಿರುವವಳು 6 ಹಾಜಬ್ಯಾರಿ 7 ಇಸ್ಮಾಯಿಬ್ಯಾರಿ

8 ಸಾರಮ್ಮ, 9 ಮೈಯದ್ದಿ } ಮೈನರರು ಇವರ ಗಾರ್ಡಿಯನ್ ಯಡ್‌ಲೈಟಮ್ ಆಸಮ್ಮ

10 ಕಾಟುಮ್ಮ 11 ಅಬ್ದುಕ್ರೆಬ್ಯಾರಿ 12 ಬೀಬಿ 13 ಜಯ್ಯಬ್ಯಾರಿ

14 ಬೀಪಾತುಮ್ಮ, 15 ಅಬ್ದುಲ್ ಕಾದ್ರಿ } ಮೈನರರು ಇವರ ಗಾರ್ಡಿಯನ್ ಯಡ್‌ಲೈಟಮ್ ಕಾಟುಮ್ಮ

ಪ್ರತಿವಾದಿಗಳು

ಕಾದ್ರಿಬ್ಯಾರಿ ಕೂಡಾ 2 ಜನರು ಕಾದ್ರಿಬ್ಯಾರಿಗೆ ತಾ 1 27ರಲ್ಲಿ ಬರಕೊಟ್ಟ ಅಡವು ದಸ್ತಾವೇಜಿನ ಹಕ್ಕನ್ನು ತಾ 26 9 35ರಲ್ಲಿ ಟ್ರಾನ್ಸ್‌ಫರ್ ಪಡೆದ ಹಸನೆಬ್ಯಾರಿಯು ತಾ 2 4 1936ರಲ್ಲಿ ಸದ್ರಿ ಮೇಲಿನ ವಾದಿಗೆ ಸದ್ರಿ ಅಡವು ದಸ್ತಾವೇಜಿನ ಹಕ್ಕನ್ನು ಟ್ರಾನ್ಸ್‌ಫರ್ ಮಾಡಿಕೊಟ್ಟ ಮೇರೆಗೆ ಸದ್ರಿ ವಾದಿಗೆ ಸದ್ರಿ ಅಡವು ದಸ್ತಾವೇಜಿನ ಪ್ರಕಾರ ಸದ್ರಿ ಮೇಲಿನ ಪ್ರತಿವಾದಿರಿಂದ ಬರೆಕಕ್ಕ ಅಸಲು ಬಡ್ಡಿ ಕೂಡಾ ಒಟ್ಟು ರೂಪಾಯಿ 161 7 4ಕ್ಕೆ ವ ಮುಂದಿನ ಬಡ್ಡಿ ಕೋರ್ಟ ಕರ್ಚು ವಗೈರೆ ಬರಮಾಡಿಕೊಳ್ಳುವರೆ ದಾವೆ ಮಾಡಿದ ಮೇಲಿಂದ ವ್ಯಾಜ್ಯವು ತಾ 1 9 1942ನೇ ಪೂರ್ವಾಹ್ನ 11 ಗಂಟೆಗೆ ನೇಮಿಸಿದ ಕೋರ್ಟಿನಲ್ಲಿ ದಸ್ತಿಗೆ ಇಟ್ಟಿರುತ್ತದೆ ಸದರಿ ದಿವಸ ಸದ್ರಿ ಮೇಲಿನ 2 3 ಮತ್ತು 5ನೇ ಪ್ರತಿವಾದಿಗಳು ಖುದ್ದಾಗಿ ಯಾ ವಕೀಲರ ಮುಖಾಂತ್ರ ಕೋರ್ಟ ಮುಂದೆ ಹಾಜರಾಗಿ ಆಕ್ಷೇಪಣೆಯಿದ್ದರೆ ಮನವಿ ಮಾಡಿಕೊಳ್ಳಬಹುದು ತಪ್ಪಿದ್ರೆ ಸದ್ರಿ ವ್ಯಾಜ್ಯವು ಅವರ ಗೈರು ಹಾಜರಿಯಿಂದ ತೀರ್ಮಾನವಾಗುವದು ಎಂತ ಕೋರ್ಟ ಹುಕುಂ ಪ್ರಕಾರ ಪ್ರಕಟಿಸಲಾಗಿಯದೆ

ಮಂಗ್ಳೂರು 14 8 42 } P Vasudeva Rao
Advocate for Plaintiff

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ: ೧೯೦೬.

ಪೆಪ್ಸ ಮಾತ್ರೆಗಳ ಕುರಿತು ಒಬ್ಬ ಪ್ರಸಿದ್ಧ ಡಾಕ್ಟರರ ಅಭಿಪ್ರಾಯ

ಡಾ। ಗೋರ್ಡನ್ ಸ್ಟೇಬ್ಲ್ಸ್ ಎಂ ಡಿ ಸಿ ಎಂ ಆರ್ ಎನ್ ಇವರು ಪೆಪ್ಸ ಮಾತ್ರೆಗಳನ್ನು ಸ್ವತಃ ಉಪಯೋಗಿಸಿ ಅದು ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳೆಂದು ಶಿಫಾರಸು ಮಾಡುತ್ತಾ ಹೀಗೆನ್ನುತ್ತಾರೆ

"ಕಫಕ್ಕೆ ಮತ್ತು ಕಂಠ ನೈರ್ಮಲ್ಯಕ್ಕೆ ಶ್ವಾಸನಾಳದ್ವರೋಗಕ್ಕೆ ಇದು ಅತ್ಯುತ್ತಮ ಔಷಧಿ"

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಮಾತ್ರೆಗಳು ಕರಗಿ ಅತ್ಯುತ್ತಮ ವನೌಷಧಿ ಸತ್ವವನ್ನು ಹೊರಗೆಡವುವವು ಅದು ನಿಮ್ಮ ಶ್ವಾಸದ ಮೂಲಕ ಶ್ವಾಸಕೋಶಕ್ಕೆ ಸೇರುವುದು ಹೀಗೆ ಪೆಪ್ಸ ಅಲ್ಲಿನ ವಿಷರೋಗ ಕ್ರಿಮಿಗಳನ್ನು ನಾಶಮಾಡುವವು ಮತ್ತು ಕಫ ಶೀತ ಮೊದಲಾದವುಗಳಿಂದ ರಕ್ಷಿಸುವುದು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರಕುವುದು

ಏಜಂಟ್ಸ್ ಮೆಸರ್ಸ ದಾಧಾ ಎಂಡ್ ಕೊ., ಪಿ. ಟಿ. ಮದರಾಸು.

ಪೆಪ್ಸನ್ನೇ ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

ಗಾಂಧಿಜಿ ಬಿರ್ಲಾರಿಗೆ ಸ್ವಪ್ನದಲ್ಲಿ ಸಂದರ್ಶನವಿತ್ತರು!

ದೇವಿದಾಸರಿಗೆ ತಂದೆಯ ಬಂಧನದ ಕನಸು ಬಿತ್ತು!

ವಾರ್ಧಾದ ಕೆಲವು ವಿಚಿತ್ರ ವಾರ್ತೆಗಳು!

ಸೇವಾ ಗ್ರಾಮದ ಕೆಲವು ವಿಚಿತ್ರ ವಾರ್ತೆಗಳು

ಬಿರ್ಲಾ ದೇವದಾಸರಿಗೆ ಕನಸುಗಳು

ಮಹಾತ್ಮರ ಸೇವಾ ಗ್ರಾಮದಲ್ಲಿ ಬಹಳ ಕಳವಳವುಂಟಾಯಿತು. ಮಹಾತ್ಮರ ಪ್ರಕೃತಿ ಸಶಕ್ತವಿರಲಿಲ್ಲ; ಮಹಾತ್ಮರು ದಿನ ಹೋದ ಹಾಗೆ ನಿಶ್ಶಕ್ತರಾಗುತ್ತಿದ್ದರು. ವಿಶ್ರಾಂತಿ ಕೊಳ್ಳಬೇಕಾಗಿ ಹೇಳುವ ಧೈರ್ಯ ಆಶ್ರಮವಾಸಿಗಳಲ್ಲಿಲ್ಲ. ಆದರೂ ಒಂದು ದಿನ ಆಶ್ರಮವಾಸಿಗಳು ವಿಶ್ರಾಂತಿಕೊಳ್ಳಲು ಮಹಾತ್ಮರಿಗೆ ಹೇಳಿಕೊಂಡರು. "ದೀರ್ಘಕಾಲದ, ಶಾಶ್ವತವಾದ ವಿಶ್ರಾಂತಿಪಡೆಯಲು ನಾನು ಸಿದ್ಧನಾಗುತ್ತಿದ್ದೇನೆ. ಚಿಕ್ಕ ಪುಟ್ಟ ವಿಶ್ರಾಂತಿಗಳಿಂದೇನು ಪ್ರಯೋಜನ?' ಹೀಗೆ ಮಹಾತ್ಮರು ಉದ್ಗರಿಸಿದರು. ಮುಂಜಾನೆ ೪ ಘಂಟೆಗೆ ಮಹಾತ್ಮರು ಏಳುವರು. ಪುನಃ ಒರಗಬೇಕಾದರೆ ರಾತ್ರೆ ೮॥ ಬಡಿಯುತ್ತದೆ. ಮಹಾತ್ಮರು ಹೊರ-ಪ್ರದೇಶದಲ್ಲಿ ಮಲಗುವ ವಾಡಿಕೆ. ಆದರೆ ಮಳೆಗಾಲದಲ್ಲಿ ಆ ಕ್ರಮ ಸಾಧ್ಯವಿಲ್ಲ. ಆದರಿಂದ ಹೊರಜಗಲಿಯ ಮೇಲೆ ಹೊದ್ದುಕೊಳ್ಳದೆ ಬರಿಮೈಯಿಂದ ಮಲಗುತ್ತಾರೆ. ಧಾರೆಯಾಗಿ ಮಳೆ ಸುರಿದರೂ ಮಹಾತ್ಮರಿಗೆ ಶೀತಬಾಧೆಯಾಗುವದಿಲ್ಲ. ಅಷ್ಟು ನಿಸರ್ಗದೊಡನೆ ಮಹಾತ್ಮರು ಬೆರೆತುಹೋಗಿದ್ದಾರೆ. ಮಹಾತ್ಮರು ಮುಂಬಯಿಗೆ ಬಂದ ಬಳಿಕ ಡಾಕ್ಟರರು ಪುನಃ ದೇಹಪರೀಕ್ಷೆ ಮಾಡಿದರು. ಪ್ರಕೃತಿ ಸುಧಾರಿಸುತ್ತಿದೆಯೆಂದೂ ವಿಶ್ರಾಂತಿ ಅವಶ್ಯವಿರುತ್ತದೆಂದೂ ಡಾಕ್ಟರರು ಸಲಹೆ ಕೊಟ್ಟರು. ಆದರೂ ಮಹಾತ್ಮರು ನಿತ್ಯದಂತೆ ಕೆಲಸದಲ್ಲಿ ತೊಡಗಿದರು.

ಮಹಾತ್ಮರು ಸೇವಾ ಗ್ರಾಮದಲ್ಲಿರುವಾಗ ಒಂದೆರಡು ಅಕಲ್ಪಿತ ಸಂಗತಿಗಳು ಘಟಿಸಿದವು. ಕೋಟ್ಯಾಧೀಶರಾದ ಶ್ರೀ। ಘನಶ್ಯಾಮದಾಸ ಬಿರ್ಲಾರವರಿಂದ ಮಹಾತ್ಮರಿಗೆ ತಂತಿ ಮೂಲಕ ರೂ. ೩೦ ಸಾವಿರಗಳ ಮನಿ ಆರ್ಡರು ಬಂತು. ಉಳಿದ ಹಣ ಶೀಘ್ರವೇ ರವಾನಿಸುತ್ತೇವಾಗಿ ಶ್ರೀ ಬಿರ್ಲಾರವರು ತಂತಿಯಲ್ಲಿ ನಮೂದಿಸಿದ್ದರು. ಇದೇನೆಂದು ಮಹಾತ್ಮರಿಗೆ ತಿಳಿಯಲಿಲ್ಲ; ಯಾರಿಗೂ ತಿಳಿಯಲಿಲ್ಲ! ವಿಚಾರಿಸಲು ಅಂದೇ ರಾತ್ರಿ ಶ್ರೀ। ಬಿರ್ಲಾರವರಿಗೆ ಮಹಾತ್ಮರು ಸ್ವಪ್ನದಲ್ಲಿ ಕಾಣಿಸಿಕೊಂಡರೆಂದೂ ರೂ. ೫೦ ಸಾವಿರಗಳನ್ನು ಕೇಳಿದರೆಂದೂ ಅದರಿಂದ ಮರುದಿನ ಮುಂಜಾವಿಗೆ ಶ್ರೀ। ಬಿರ್ಲಾರವರು ಎದ್ದೊಡನೆ ಹಣ ಕಳಿಸಿದರೆಂದೂ ತಿಳಿಯುತ್ತದೆ.

ಮಹಾತ್ಮರ ಮಗ ಶ್ರೀ. ದೇವಿದಾಸಗಾಂಧಿಯವರು ಡಿಲ್ಲಿಯಲ್ಲಿರುತ್ತಾರೆ. ಅಲ್ಲಿಯ 'ಹಿಂದುಸ್ಥಾನ ಟೈಮ್ಸ್' ಪತ್ರಿಕೆಯ ಸಂಪಾದಕರವರು. ಅವರೊಂದು ದಿನ ಅಕಸ್ಮಾತ್ತಾಗಿ ಹೊರಟು ಸೇವಾ ಗ್ರಾಮಕ್ಕೆ ಬಂದರು. ಪೂರ್ವಸೂಚನೆಯಿಲ್ಲದೆ ಅವರು ಬಂದದ್ದನ್ನು ನೋಡಿ ಸೇವಾ ಗ್ರಾಮದವರು ಚಕಿತರಾದರು. ಮಹಾತ್ಮರನ್ನು ಸೆರೆಹಿಡಿದ ಕನಸ್ಸನ್ನು ಶ್ರೀ ದೇವಿದಾಸರು ಕಂಡರಂತೆ! ಹಿಂದೆಯೂ ಮಹಾತ್ಮರನ್ನು ಸೆರೆಹಿದಿದ ಮುಂಚೆ ಶ್ರೀ ದೇವಿದಾಸರು ಕನಸನ್ನು ಕಂಡಿದ್ದರಂತೆ. ಆದದಿಂದ ಶ್ರೀ ದೇವಿದಾಸರು ಸೇವಾ ಗ್ರಾಮಕ್ಕೆ ಬಹು ಬಗೆಯಿಂದ ಹೊರಟರಂತೆ. ಈ ಕನಸಿನ ಮೂಲಕ ಮಹಾತ್ಮರನ್ನು ಸರಕಾರವು ಸದ್ಯಕ್ಕೇ ಸೆರೆ ಹಿಡಿಯಬಹುದೆಂದು ಸೇವಾ ಗ್ರಾಮದವರು ಎಣಿಸಿ ಬಹು ಕಳವಳಗೊಂಡರು. ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಸಭೆಗಾಗಿ ಮುಂಬಯಿಗೆ ಬಂದ ಮಹಾತ್ಮರು ತಿರುಗಿ ಸೇವಾ ಗ್ರಾಮಕ್ಕೆ ಹಿಂತಿರುಗುವ ಸಂಭವವು ಕಡಿಮೆಯೆಂದು ಸೇವಾ ಗ್ರಾಮದವರ ಅಂಜಿಕೆಯಿತ್ತು. ಅದು ಈಗ ನಿಜವಾಯಿತು!

ಯೂ. ಸಾ. ರ ನಿಧನ ಹೊಂದಿಲ್ಲವೆ?

ಬರ್ಮಾದ ಮಾಜಿ ಪ್ರಧಾನ ಮಂತ್ರಿ ಯೂ. ಸಾ. ರವರು ಇಟಲಿಯಲ್ಲಿ ತೀರಿಹೋದರೆಂದು ಸುದ್ದಿ ಪ್ರಕಟವಾಗಿದೆ. ಈಗ ಅದು ನಿಜವಾದ ಸುದ್ದಿಯಲ್ಲವೆಂದೂ ಪ್ರಕಟವಾಗಿದೆ. ಯೂ. ಸಾ. ರವರು ಬರ್ಮಾಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು, ಕೇಳಲು ಚರ್ಚಿಲರನ್ನು ಕಂಡು ಮರಳಿ ನಾಡಿ ನಿರಾಶರಾಗಿ ಅಮೇರಿಕದ ದಾರಿಯಿಂದ ಬರ್ಮಾಕ್ಕೆ ಬರುತಿದ್ದಾಗ, ಅವರು ಜಪಾನಿನೊಡನೆ ಒಳಸಂಚು ನಡೆಸುತ್ತಿದ್ದಾರೆಂಬ ಅಪವಾದದ ಮೇಲೆ ಹೊನಲುಲಿನಲ್ಲಿ ಬಂಧಿತರಾಗಿದ್ದರು. ಯೂ. ಸಾ. ರಿಗೆ ಒಬ್ಬ ಪುತ್ರಿ ಮತ್ತು ಹೆಂಡತಿಯಿದ್ದಾರೆ.

ಪುಸ್ತಕಾವಲೋಕನ

ಯಕ್ಷಗಾನ ಮತ್ತು ನಾಟಕ

ಶ್ವೇತಕುಮಾರ ಚರಿತ್ರೆ: (ಯಕ್ಷಗಾನ) ಗ್ರಂಥಕರ್ತರು ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ. ಕ್ರೌನ್ ೧/೮ ಆಕಾರದ ೩೧ ಪುಟಗಳು. ಬೆಲೆ ೪ ಆಣೆ.

ಇದು ಶಿವಪುರಾಣದೊಳಗಣ ಒಂದು ಕಥಾಂಶವನ್ನು ಆಧರಿಸಿ ಬರೆದ ಯಕ್ಷಗಾನ. ಪಂಚಾಕ್ಷರಿಯ ಮಂತ್ರದ ಪ್ರಭಾವದಿಂದ ಶ್ವೇತಕುಮಾರನೆಂಬ ಪಾಪಾತ್ಮನೂ ಶಿವನ ವಾತ್ಸಲ್ಯಕ್ಕೆ ಪಾತ್ರನಾದ ಕಥೆ ಇದರಲ್ಲಿದೆ. ರುದ್ರಪುರದ ಅರಸು ರತ್ನಶೇಖರನ ಮಗನಾದ ಶ್ವೇತಕುಮಾರನು ಪಟ್ಟಕ್ಕೆ ಬಂದನು- ಅವನು ಕಾಶೀ ರಾಜಪುತ್ರಿ ಶಿವೆಯೆಂಬವಳನ್ನು ಮದುವೆಯಾಗುವನು. ಪಾಪಿಯಾದರೂ ಶ್ವೇತಕುಮಾರನು ಮರಣ ಕಾಲದಲ್ಲಿ 'ಶಿವೆ' ಯೆಂದು ತನ್ನ ಹೆಂಡತಿಯ ಹೆಸರನ್ನುಚ್ಚರಿಸಿದುದರಿಂದ ಯಮಧರ್ಮನ ದಯೆಗೆ ಪಾತ್ರನಾದನು. ಅಲ್ಲಿ ಪಂಚಾಕ್ಷರೀ ಮಂತ್ರವನ್ನು ಜಪಿಸಲು ಶಿವನು ಭಕ್ತನಿಗೊಲಿದು ಆತನ ಎಲ್ಲಾ ಅಭೀಷ್ಟಗಳನ್ನೂ ಸಲ್ಲಿಸುವನು.

ಶ್ರೀ ಕೀರಿಕ್ಕಾಡು ವಿಷ್ಣುಭಟ್ಟರು ಯಕ್ಷಗಾನ ಕ್ಷೇತ್ರದಲ್ಲಿ ದುಡಿದವರು; ಉತ್ಸಾಹವುಳ್ಳವರು. ತನ್ನ ಅರ್ಥಗಾರಿಕೆಯಿಂದ ಯಕ್ಷಗಾನದ ಸ್ವಾರಸ್ಯವನ್ನು ಹತ್ತು ಮಂದಿ ಆಸ್ವಾದಿಸುವಂತೆ ಮಾಡಿದವರು; ಈಗ ತನ್ನಲ್ಲಿರುವ ಕವಿತಾಚಮತ್ಕಾರದಿಂದ ಒಂದು ಯಕ್ಷಗಾನ ಕೃತಿಯನ್ನು ಬರೆದುದು ತುಂಬಾ ಪ್ರಶಂಸನೀಯ. ಪ್ರಥಮ ಕೃತಿಯಾದುದರಿಂದ ಅಲ್ಲಲ್ಲಿ ಕೆಲವುದೋಷಗಳು ಕಂಡುಬಂದರೂ, ಕನ್ನಡದಲ್ಲಿ ಜನಪದ ಸಾಹಿತ್ಯವಾಗಿಯೇ ನೆಲೆನಿಂತಿರುವ ಯಕ್ಷಗಾನದಲ್ಲಿ ಅವು ಕ್ಷಮಾರ್ಹವಾಗಿವೆ. ಒಟ್ಟಿನಿಂದ ಯಕ್ಷಗಾನ ಪ್ರೇಮಿಗಳು ಅವಶ್ಯ ಓದಿ ಆನಂದಿಸಬೇಕಾದ ಪುಸ್ತಕ.

ಸಂತಸಖು-(ನಾಟಕ) ಬರೆದವರು: ಹರಿದಾಸ್ ವಿದ್ವಾನ್, ಕಾರ್ಕಳ. ಕ್ರೌನ್ ೧/೮ ಆಕಾರದ ೨೨ ಪುಟಗಳು. ಬೆಲೆ ಮೂರಾಣೆ.

ಇದು ಶ್ರೀ ಹರಿದಾಸರ ಸಂಪಾದಕತ್ವದಲ್ಲಿ ಪ್ರಕಟವಾಗುವ ವೀಣಾ ಗ್ರಂಥ ಮಾಲೆಯ ಪ್ರಥಮ ಪುಸ್ತಕ. ಇದೊಂದು ಮೂರು ದೃಶ್ಯಗಳಿಂದ ಕೂಡಿದ ಏಕಾಂಕ ನಾಟಕ. ಸಂತಸಖುವಿನ ಕುರಿತು ಪ್ರಚಲಿತವಿರುವ, ಅಲೌಕಿಕತೆಯಿಂದ ಕೂಡಿದ ಕಥಾಘಟನೆಯ ಅಸ್ವಾಭಾವಿಕತೆಯನ್ನು ತಿದ್ದಿ ಅದರ ನೈಜ-ಸ್ವರೂಪವನ್ನು ನಾಟಕಕಾರರು ತಮ್ಮ ವಿಚಾರಕ್ಕೆ ಹೊಳೆದಂತೆ ಸ್ಪಷ್ಟಪಡಿಸಿದ್ದಾರೆ. ಯೋಗಿ ರಾಜನಿಗೂ ನಾಗರಿಕನಿಗೂ ವಾದಗಳಾಗುತ್ತವೆ; ನಾಗರಿಕನು, ಪ್ರಚಲಿತ ಲೋಕದ ಅಂಧಾಚಾರಗಳನ್ನು ನೋಡಿ ಕೆರಳುತ್ತಾನೆ. ಯೋಗಿರಾಜನು ಅದರ ಒಳಗುಟ್ಟನ್ನು ತಿಳಿಸಿ ಸಮಾಧಾನಪಡಿಸುತ್ತಾನೆ. ಎರಡನೆಯ ದೃಶ್ಯದ ಹರಿಕಥೆಯ ಸನ್ನಿವೇಶವು ಮೃದುಹಾಸ್ಯಮಯವಾಗಿದೆ. ಯಾವುದಾದರೊಂದು ಸಾಮಾಜಿಕ ಘಟನೆಯ ನೈಜ ಏಕಾಂಕವನ್ನು ಬರೆಯುವುದು ಹೆಚ್ಚಾಗಿ ಪ್ರಚಲಿತವಾಗಿದ್ದರೂ ಶ್ರೀಯುತರು ಒಂದು ಪ್ರಚಾರ ಉದ್ದೇಶವನ್ನು ಮುಂದಿಟ್ಟುಕೊಂಡು ಇದನ್ನು ಬರೆದಿದ್ದಾರೆ. ನಾಟಕವು ವಾಚನೀಯವಿದೆ. ಶಾಲಾ ವಿದ್ಯಾರ್ಥಿಗಳಿಗೆ ಅಭಿನಯಿಸಲು ಈ ನಾಟಕವು ಯೋಗ್ಯವಾಗಿದೆ.

—ಕಯ್ಯಾರ

ದೇಹದ ಹೊರಭಾಗವನ್ನು ನಿರ್ಮಲಗೊಳಿಸಿರಿ.

ನೀವು ನಿಮ್ಮ ದೇಹವನ್ನು ಶುಚಿಗೊಳಿಸಲು ಯೋಚಿಸುವಾಗಲೆಲ್ಲಾ ದೇಹದೊಳಭಾಗವು ನಿರ್ಮಲವಾಗಿರಬೇಕೆಂಬುದನ್ನು ನೆನಪಿನಲ್ಲಿ ಇಡಿ. ಅದೇ ಆರೋಗ್ಯಕ್ಕೆ ಅತ್ಯಾವಶ್ಯ. ಇದನ್ನು ಗಮನಿಸಿದರೆ ಅಜೀರ್ಣ ಮಲಬದ್ಧತೆ ಮೊದಲಾದ ಬಾಧೆಗಳಿಂದ ನಿವೃತ್ತಿ ಹೊಂದುವಿರಿ.

ದೇಹದೊಳಭಾಗವನ್ನು ನಿರ್ಮಲವಾಗಿರಿಸುವ ದಾರಿ ಸುಲಭ. ರುಚಿಕರವಾದ ಆಂಡ್ರೂಸ್ ಲಿವರ್ ಸಾಲ್ಟನ್ನು ಪ್ರತಿದಿನ ತೆಕ್ಕೊಳ್ಳಿರಿ. ಅದು ಬಾಯಿ ನಾಲಗೆಗಳನ್ನು ಶುಚಿಗೊಳಿಸಿ, ಮಲಕೋಶವನ್ನು ಸರಿಯಾಗಿರಿಸುವುದು. ಮಾತ್ರವಲ್ಲದೆ ಎಂಡ್ರೂಸ್ ಲಿವರ್ ಸಾಲ್ಟು ತಂಪು ಕೊಟ್ಟು, ರಕ್ತವನ್ನು ಶುದ್ಧಗೊಳಿಸಿ, ಆರೋಗ್ಯ ಉಲ್ಲಾಸ ಚೈತನ್ಯಗಳನ್ನು ಇಡೀ ಶರೀರಕ್ಕೆ ಉಂಟುಮಾಡುವುದು.

ದೇಹದೊಳಭಾಗದ ನೈರ್ಮಲ್ಯಕ್ಕೆ
ಪ್ರತಿನಿತ್ಯವೂ ತೆಕ್ಕೊಳ್ಳಿರಿ

ಆರೋಗ್ಯಕರ ಪಾನೀಯ—ಶಕ್ತಿವರ್ಧಕ ಔಷಧ

ANDREWS
LIVER SALT

ಶುಚಿಗೊಳಿಸುವುದು—ತಂಪೀಯುವುದು—ಉಲ್ಲಾಸ ಕೊಡುವುದು—ಶಕ್ತಿ ಹೆಚ್ಚಿಸುವುದು.

ದಕ್ಷಿಣ ಕನ್ನಡ ಜಿಲ್ಲಾ ಮಂಗ್ಳೂರು ಸಬ್ ಕೋರ್ಟು ನಂಬ್ರ 72/1921 ಕ್ರಮ ಅರ್ಜಿ ನಂಬ್ರ 149/1922ನೆ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ ಬಾಬ್ತು ತಾರೀಕು 1-8-1941ರಿಂದ ತಾರೀಕು 30-7-1942ರ ವರೆಗಿನ ಒಂದು ವರುಷದ ಜಮಾ ಖರ್ಚಿನ ವಿವರ.

ಜಮಾ ವಿವರ	ನಗದಿ ರೂ.	ಆ.	ಪೈ	ಬೆಳ್ತಿಗೆ ಮು	ಕ	ಸೆ.	ಮುಸ್ಕುತಿ ಮು.	ಕ	ಸೆ.	ಭತ್ತ ಮು	ಕಾ
ಗುಧಾಸ್ತಾ ಶಿಲ್ಕು	121	15	11			7¾					
ಉಡ್ಪಿ ಡಿ. ಮು ಕೋರ್ಟು ನಂಬ್ರ 504/39ನೆ ಡಿಕ್ರಿ ಬಾಬ್ತು	507	8	0								
ಅಸ್ತಿ ಉತ್ಪತ್ತಿ	328	5	10	21		13	26	1	3	44	365
ಗೇಣಿ ಅಕ್ಕಿ ವಿಕ್ರಿತ ಜಮಾ	170	0	0								
ಅನಂತ ವ್ರತದ ಖರ್ಚಿಗೆ ಬಂದದ್ದು	50	0	0								
ಶ್ರೀ ವೆಂಕಟ್ರಮಣ ದೇವರ ಕಾಣ್ಕೆ ಜಮಾ	20	14	6								
ಶ್ರೀ ಗುರುಗಳವರ ಸಲುವ ಕಾಣ್ಕೆ ಜಮಾ	1	7	0								
ಪ್ರಾಣದೇವರ ಕಾಣ್ಕೆ	1	9	0								
ಕ್ರಯಕ್ಕೆ ಪಡೆದ ಅಕ್ಕಿ ವ ಕ್ವಾ.				23		11					365
ಅಮೃತಪಡಿಗೆ ಬಂದ ಅಕ್ಕಿ.					1	6					
ತಸ್ತಿಕು ಬಾಬ್ತು	18	0	0								
ಜುಮ್ಲಾ.	1219	12	8	45		9¾	26	1	3	44	730

ಖರ್ಚು ವಿವರ	ನಗದಿ ರೂ	ಆ	ಪೈ	ಬೆಳ್ತಿಗೆ ಮು	ಕ	ಸೇ	ಮುಸ್ಕುತಿ ಮು.	ಕ.	ಸೆ.	ಭತ್ತ ಮು.	ಕ್ವಾ
ಅಸ್ತಿಗಳ ತೀರ್ವೆಗೆ	109	5									
ನಿತ್ಯ ವಿನಿಯೋಗದ ಅಕ್ಕಿ ಕ್ವಾ ಯೆಲೆ ಅಡೈ ಬತ್ತಿ ತೆಂಗಿನೆಣ್ಣೆ ಕೂಡಾ ಕ್ರಯ.	412	0	8								
ಸಮಾರಾಧನೆ ಶಂಕ್ರಿತ ಸಂತರ್ಪಣೆ ಕೂಡಾ	167	10	8	1	1	9					
ಉತ್ಸವಗಳ ವಸಂತಗಳ ಕೂಡಾ	166	7	5								
ಅನಂತ ವ್ರತದ ಖರ್ಚು	49	3	11								
ವ್ಯವಹರಣೆ	1	14									
ಸಾದಿಲ್‌ವಾರು ಪ್ರಯಾಣ ವ ಚಿಲ್ಲರೆ ಹಸುರಿ	24	2	7								
ನೌಕರರ ತಲಬು	114										
ಅಮೃತಪಡಿಗೆ ಬಂದ ಅಕ್ಕಿ				43	1						728
ಗೇಣಿ ಅಕ್ಕಿ ಕ್ರಯದ ಅಕ್ಕಿ ವ ಕ್ವಾ ವಿಕ್ರಿತ ಅಕ್ಕಿ ವ ಭತ್ತ							10			44	
ಅಖೈರು ಶಿಲ್ಕು	115				1	¾	16	1	3		2
ಜುಮ್ಲಾ.	1219	12	8	45		9¾	26	1	3	44	730

ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರ ಬಾಬ್ತು 1942-1943ಕ್ಕೆ ಒಂದು ವರ್ಷಕ್ಕೆ ಅಂದಾಜು ಮಾಡಿದ ಜಮ ಮತ್ತು ಅಂದಾಜು ಖರ್ಚುಗಳ ಕೂಡಾ ತೋರಿಸುವ A ಮತ್ತು B ತಖ್ತೆ ಬಜೇಟು

1942-43 ಅಂದಾಜು ಜಮಾ	ಖಾತೆಯ ಹೆಸರು	1942-43 ಅಂದಾಜು ಖರ್ಚು
	ಆರಂಭದ ಶಿಲ್ಕು	
115-0-0	ನಗದಿ	
100-0-0	ಹಾಲಿಯಿರುವ ದವಸಧಾನ್ಯ	
149-2-6	ಗೇಣಿ ಉತ್ಪತ್ತಿ ನಗದಿ	
450-0-0	ಮತ್ತು ದವಸದಾನ್ಯ ಅಕ್ಕಿ ಮುಡಿ 103¾-¼	
66-0-0	ಮಾಮೂಲು ಕಾಣ್ಕೆಗಳು ವ ಹರಿಕೆಗಳು	
400-0-0	ಮಾರಿಗುಡಿ ಭಂಡಾರದಿಂದ ಟ್ರಾನ್ಸಫರ ಬಂದ ಜಮಾ	
6-0-0	ತಸ್ತಿಕು ಜಮಾ	
	ಸರ್ಕಾರಿ ತೀರ್ವೆಗೆ	184-2-0
	ನಿಶ್ಚಿತ ಕಟ್ಲೆ ವಿನಿಯೋಗಗಳ	500-0-0
	ವಿಶೇಷ ಕಟ್ಲೆ ಉತ್ಸವ ಸಮಾರಾಧನೆ ಕೂಡಾ	375-0-0
	ನೌಕರರ ತಲಬು	114-0-0
	ಸಾದಿಲ್‌ವಾರು ಚಿಲ್ಲರೆ ಖರ್ಚು	20-0-0
	ಕಟ್ಟಡ ವಾಹನ ದುರುಸ್ತಿ	40-0-0
	ವ್ಯವಹರಣೆ ಖರ್ಚಿಗೆ	30-0-0
	ಎಂಡೋಮೆಂಟ ಬೋರ್ಡು ಕಮಿಟಿ ಆಫ್ಸಿಗೆ	20-0-0
1286-2-6	ಜುಮ್ಲಾ	1283-2-0

K. Narasimha Shenai, *Manager* 30-7-1942.
ಶ್ರೀಧರ ಶಾನುಭಾಗ, ಪ್ರೆಸಿಡೆಂಟ.

ದಕ್ಷಿಣ ಕನ್ನಡ ಜಿಲ್ಲಾ ಮಂಗ್ಳೂರು ಸಬ್ ಕೋರ್ಟು ಕ್ರಮ ನಂಬ್ರ 47/1921 ಕ್ರಮ ಅರ್ಜಿ ನಂಬ್ರ 142/1922 ನೆ ಸ್ಕೀಮು ರೂಲು ಪ್ರಕಾರ ಕಾಪು ಶ್ರೀ ಹಳೆ ಮಾರೆಮ್ಮ ದೇವರ ಭಂಡಾರದ ಬಾಬ್ತು ತಾರೀಕು 1-8-1941ರಿಂದ ತಾರೀಕು 30-7-1942ರ ವರೆಗೆ ಒಂದು ವರ್ಷದ ಜಮಾ ಖರ್ಚಿನ ವಿವರ

ಜಮಾ ವಿವರ	ನಗದಿ ರೂ.	ಆ.	ಪೈ	ಅಕ್ಕಿ ಮು	ಕ.	ಸೇ.	ಕ್ವಾ	ಶೀಯಾಳ
ಗುದಸ್ತಾ ಶಿಲ್ಕು	275	0	3	16		11		
ಗದ್ದಿಗೆ ಪೂಜಾ ಕಾಣಿಕೆ	1430	6	7					
ಕುಂಕುಮಾರ್ಜನೆ ಕಾಣಿಕೆ	13	8	0					
ನವರಾತ್ರಿ ಬಾಬ್ತು ನಗ್ದಿ, ಅಕ್ಕಿ	5	0	0	1	1	10		
ಮಾರಿಪೂಜೆ ಕಾಣಿಕೆ	307	2	6					
ಅಸ್ತಿ ಉತ್ಪತ್ತಿ ಹುಟ್ಟುವಳಿ	793	15	9	115	1	0	456	486
ಮಾರಿಗುಡಿ ಜೀರ್ಣೋದ್ಧಾರದ ಬಗ್ಗೆ	189	8	0					
ಜುಮ್ಲಾ	3014	9	1	133		7	456	486

ಹರಿಕೆ ಬಂದ ಬಾಬ್ತು ಇಡಿ ಪವನುಗಳು 5, ಅರ್ಧ ಪವನುಗಳು 2, ದಾರೆಮಣಿ 1, ಬೊಟ್ಟುಗಳು 6 ಬೆಂಡೋಲೆ 2, ಮೂಗುತಿಗಳು 6, ಬಿಮ್ಮುಶಿಲೆವರ ಬಾಬ್ತು ಕರಿಮಣಿ 2, ಬೆಳ್ಳಿ ಚೂರುಗಳು ತೊಲೆ 1¼

ಖರ್ಚಿನ ವಿವರ	ನಗದಿ ರೂ	ಆ.	ಪೈ	ಅಕ್ಕಿ ಮು	ಕ	ಸೇ.	ಕ್ವಾ	ಶೀಯಾಳ
ಅಸ್ತಿಗಳ ತೀರ್ವೆಗೆ	199	13	0					
ಗದ್ದಿಗೆ ಪೂಜೆಗಳಿಗೆ	181	7	11				322	460
ನವರಾತ್ರಿ ಬಾಬ್ತು	195	6	7	1	1	10	36	26
ಮಾರಿಪೂಜೆಗಳ ಬಾಬ್ತು	299	13	4	12		½	98	
ಅಸ್ತಿಗಳ ಕೃತದ ಬಾಬ್ತು	233	0	11					
ವ್ಯವಹರಣೆಗಳ ಬಾಬ್ತು	142	3	9					
ನೌಕರರ ತಲಬು	821	12	0	38	1	7		
ಯಂಡೋಮೆಂಟ್ ಬೋರ್ಡು ಮತ್ತು ಕಮಿಟಿ ಆಫೀಸಿಗೆ	350	0	0					
ಬರವಣಿಗೆ ಪ್ರಯಾಣ ಕೆರ್ಸಿನೆಣೆ ಕ್ರಯ ಕೂಡಾ	134	13	11					
ಕೋರ್ಪರೇಶನ್ ಬೇಂಕ್ ಡಿಮಾಂಡ್	300	0	0					
ಮಾರಿಗುಡಿ ಜೀರ್ಣೋದ್ಧಾರ ಬಗ್ಗೆ	75	5	0					
ಅಖೈರು ಶಿಲ್ಕು	80	6	8	81		3¼		
ಜುಮ್ಲಾ	3014	9	1	133		7	456	486

ಕಾಪು ಶ್ರೀ ಹಳೆಮಾರೆಮ್ಮ ದೇವರ ಭಂಡಾರದ ಬಾಬ್ತು 1942-1943ಕ್ಕೆ ಒಂದು ವರ್ಷಕ್ಕೆ ಅಂದಾಜು ಮಾಡಿದ ಜಮಾ ಮತ್ತು ಅಂದಾಜು ಮಾಡಿದ ಖರ್ಚುಗಳು ಕೂಡ ತೋರಿಸುವ A ಮತ್ತು B ತಖ್ತೆ-ಬಜೇಟು

1942-43 ಅಂದಾಜು ಜಮಾ	ಖಾತೆ ಹೆಸರು	1942-43 ಅಂದಾಜು ಖರ್ಚು
175- 0-0	ಆರಂಭದ ಶಿಲ್ಕು. ಪವನು, ಚಿನ್ನ	
80 0-8	ನಗದಿ	
480- 0 0	ಹಾಲಿಯಿರುವ ದವಸಧಾನ್ಯ	
550- 0-0	ತಾ 1-8-41ರ ಶಿಲ್ಕು ಪವನು ಮುಗುತಿ ಚಿನ್ನ ಬೆಳ್ಳಿ ಕೂಡಾ	
1650- 0-0	ನಂಬ್ರ 504/39ನೇ ಡಿಕ್ರಿ ಬಾಬ್ತು ಈ ಭಂಡಾರಕ್ಕೆ ಟ್ರಾನ್ಸ್‌ಫರ ಬರದಂತೆ ವಸೂಲು ಆಗಬೇಕಾದ್ದು	
638-14-0	ಗೇಣಿ ಉತ್ಪತ್ತಿಯಿಂದ ನಗದಿ ಹಿಂದಿನ ಬಾಕಿ ಕೂಡ	
800 -0-0	ಮತ್ತು ದವಸಧಾನ್ಯ	
1800 -0-0	ಗದ್ದಿಗೆ ಪೂಜೆಗಳ ಮಾರಿ ಪೂಜೆಗಳ ಕುಂಕುಮಾರ್ಜನೆ ನವರಾತ್ರಿ ಕೂಡಾ ಕಾಣಿಕೆ	
	ನೌಕರರ ತಲಬು	821-12-0
	,, ,, ಅಕ್ಕಿ ಮುಡಿ 42	175- 0-0
	ಗದ್ದಿಗೆ ಪೂಜೆಗಳ ಮಾರಿ ಪೂಜೆಗಳ ನವರಾತ್ರಿಗೆ ಕೂಡ ಖರ್ಚು	790- 0-0
	ಅಸ್ತಿಗಳ ತೀರ್ವೆಗೆ	244- 4-0
	ವ್ಯವಹರಣೆ	80- 0-0
	ಬರವಣಿಗೆ, ಪ್ರಯಾಣ, ಕೆರ್ಸಿನೆಣ್ಣೆ ಕೂಡ ಖರ್ಚು	125- 0-0
	ಕಳೆದ ವರ್ಷ ಬಜೇಟಿನಲ್ಲಿ ಕಾಣಿಸಿದಂತೆ ಮಾರಿಗುಡಿ ಜೀರ್ಣೋದ್ಧಾರಕ್ಕೆ	3000 0-0
	ಎಂಡೋಮೆಂಟ ಬೋರ್ಡು ಮತ್ತು ಕಮಿಟಿ ಆಫೀಸಿಗೆ	80- 0 0
	ಒಡಿಟರ ಫೀಸು	100- 0-0
	ಈ ಭಂಡಾರದಿಂದ ಶ್ರೀ ವೆಂಕಟರಮಣ ದೇವರ ಭಂಡಾರಕ್ಕೆ ಖರ್ಚು ಟ್ರಾನ್ಸ್‌ಫರ ಬರದಂತೆ ಖರ್ಚು	400- 0-0
	ಮಾರಿಗುಡಿ ಎದುರು ಗೋಪುರಗಳ ಮಧ್ಯ ಮಹಾಸಭೆಯವರು ನಿರ್ಣಯಿಸಿದಂತೆ ಹಂಚಿನ ಮಾಡು ಮಾಡಿಸುವ ಬಗ್ಗೆ ಖರ್ಚು	350- 0-0
6174-4-8	ಜುಮ್ಲಾ	6166-0-0

K. Narasimha Shenai, *Manager*. 30-7-1942.
ಶ್ರೀಧರ ಶಾನುಭಾಗ, ಪ್ರೆಸಿಡೆಂಟ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ. ಕೆ. ಆರ್. ಕಾರಂತರ ಬಂಧನ

ಮದ್ರಾಸ್ ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಕರ್ನಾಟಕದ ಕಾಂಗ್ರೆಸು ಮುಂದಾಳುಗಳೂ ಆದ ಶ್ರೀ. ಕೆ. ಆರ್. ಕಾರಂತ ಎಂ. ಎಲ್. ಎ. ಇವರನ್ನು ತಾ. ೧೧ ರಂದು ಬೆಳಗ್ಗೆ ಏಳೂವರೆ ಘಂಟೆಗೆ ಅವರ ಮನೆಯಲ್ಲಿಯೇ ಬಂಧಿಸಿ ೧೧ ಘಂಟೆಯ ಮೈಲುಗಾಡಿಗೆ ವೆಲ್ಲೂರು ಸೆರೆಮನೆಗೆ ಒಯ್ದಿರುವರು.

ಹರತಾಳ, ಸಾರ್ವಜನಿಕ ಸಭೆ

ಮಂಗಳೂರಲ್ಲಿ ತಾ. ೧೨ರಂದು ಹರತಾಳವು ಆಚರಿಸಲ್ಪಟ್ಟಿತು. ಸಂಜೆ ಮೈದಾನದಲ್ಲಿ ಆರೇಳು ಸಾವಿರಕ್ಕೆ ಮಿಕ್ಕಿದ ಜನಸಂದಣಿ ಸೇರಿ ಕಾಂಗ್ರೆಸಿನ ಮಹಾಜನ ಸಭೆಯೊಂದು ಕೂಡಿತು. ಶ್ರೀ. ಯಂ. ಧರ್ಮರಾಜ ಅಧಿಕಾರಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ದಾಮೋದರ ಬಾಳಿಗರು, ಮತ್ತು ಯಂ. ಡಿ. ಅಧಿಕಾರಿಗಳು ಪ್ರಚಲಿತ ರಾಜಕೀಯದ ವಿಷಯ ಸ್ಫೂರ್ತಿಯುಕ್ತ ಭಾಷಣವಿತ್ತರು. ಶ್ರೀ. ಕೆ. ಈಶ್ವರ ಯಂ. ಯಲ್. ಎ. ಇವರು ಧನ್ಯವಾದಾರ್ಪಣೆ ಮಾಡಿದರು. ವಿದ್ಯಾರ್ಥಿ ಮಹಾ ಜನರಿಂದ ಹಾಗೂ ಮಹಿಳೆಯರಿಂದ ಕೂಡಿದ ಪ್ರಚಂಡ ಮೆರವಣಿಗೆಯೊಂದು ನಗರದ ಪ್ರಾಮುಖ್ಯ ರಸ್ತೆಗಳಲ್ಲಿ ಸಂಚರಿಸಿ, ಜಯಘೋಷದೊಡನೆ ಸಾರ್ವಜನಿಕ ಸಭೆ ಸೇರಿದಲ್ಲಿಗೆ ಬಂದಿತು.

ಕಾಂಗ್ರೆಸ್ ಮುಖಂಡರ ಬಂಧನದ ನಿಮಿತ್ತ ಉಡುಪಿ, ಕಾರ್ಕಳ, ಮೂಲ್ಕಿ, ಬಂಟ್ವಾಳ ಮೊದಲಾದ ತಾಲೂಕು ಗ್ರಾಮ ಕೇಂದ್ರಗಳಲ್ಲಿಯೂ ಹರತಾಳ ಆಚರಿಸಲ್ಪಟ್ಟಿದೆ.

ಮಹಾಜನ ಬಡವರ ಅಕ್ಕಿಬಂಡಾರ

ವೆಬ್‌ಸ್ಟರ್ ಮಾರ್ಕೆಟ್‌ ಳಿ-ಮಂಗಳೂರು

4-8-1942ಕ್ಕೆ ಅಂತ್ಯವಾಗುವ ತಿಂಗಳ ಲೆಕ್ಕ ಪತ್ರದ ಪಟ್ಟಿ ಹೀಗಿದೆ. 5-4-1942 ರಿಂದ 4-8-1942ರ ವರೆಗೆ ಮಾರಟವಾದ ಅಕ್ಕಿ ಮುಡಿ ೧೪೮೩. ಪ್ರತಿ ದಿನಕ್ಕೆ ೪೮ ಮುಡಿಯಂತೆ ವ್ಯಾಪಾರವಾಗಿದೆ. ಈ ತಿಂಗಳ ನಷ್ಟ ರೂ. ೫೬೯-೧-೯ ಈ ತಿಂಗಳಲ್ಲಿ ವಸೂಲಾದ ವಂತಿಗೆ ರೂ. ೧೩೫೯-೪-೦; ಮಾರಾಟ ಸೇರು ಒಂದಕ್ಕೆ ೦-೩-೬ ಯಂತೆ ಎಂಬುದಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ.

ರಾಷ್ಟ್ರೀಯ ಕೇಳಿಕೆಗಳಿಗೆ ಕಮ್ಯುನಿಸ್ಟರ ಬೆಂಬಲ

ತಾ. ೬ರಂದು ಮಂಗಳೂರು ಕಮ್ಯೂನಿಸ್ಟ್ ಪಾರ್ಟಿ (ಅ. ಭಾ. ಕಮ್ಯೂನಿಸ್ಟ್ ಪಾರ್ಟಿಯ ಶಾಖೆ)ಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಮಂಗಳೂರು ಮೈದಾನಿನಲ್ಲಿ ಶ್ರೀ. ಕೃಷ್ಣಶೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಗೆ ಮೊದಲು ಮೆರವಣಿಗೆಯೊಂದು ಪಟ್ಟಣದ ನಾನಾ ಭಾಗಗಳನ್ನೂ ಸಂಚರಿಸಿತು.

ಕೋ. ಕೇಶವ ಕಾಮತ್ ಮತ್ತು ಹರಿದಾಸ ಆಚಾರ್ಯ ಇವರು ಕಮ್ಯೂನಿಸ್ಟ್ ಪಾರ್ಟಿಯ ಇಂದಿನ ಧೋರಣೆಯನ್ನು ವಿವರಿಸಿ ಭಾಷಣಗಳ ನ್ನೀಯುತ್ತಾ, ರಾಷ್ಟ್ರೀಯ ಸರಕಾರದ ರಚನೆಗಾಗಿ ಪ್ರತಿಯೊಬ್ಬ ದೇಶಾಭಿಮಾನಿಯೂ ಇಂದು ದೇಶದಲ್ಲಿ ವಿಶಾಲವಾದ ಐಕ್ಯವನ್ನು ಸಾಧಿಸುವುದು ಅವಶ್ಯಕವೆಂದು ವಿವರಿಸಿದರು.

ಜಿಲ್ಲೆಯ ಕಬ್ಬು ಬೆಳೆಸುವವರ ಸಹಕಾರ ಸಂಘದ

ಸಭೆಯೊಂದು ಇತ್ತೀಚೆಗೆ ಜರಗಿ, ಕಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕೆಂದು ಕೇಳಿಕೊಳ್ಳುವ ನಿರ್ಣಯ ಮಾಡಿ ಗವರ್ನರರಿಗೂ ವೈಸರಾಯರಿಗೂ ತಿಳಿಸಿತು. ಸಂಘವು ಇನ್ನೊಂದು ನಿರ್ಣಯದ ಮೂಲಕ ರಾಷ್ಟ್ರ ಸಭೆಯ ಈಗಿನ ಧೋರಣೆಯನ್ನು ಟೀಕಿಸಿತು.

ಸೋವಿಯೆಟ್ ಮತ್ತು ಚೈನಾ ಸೌಹಾರ್ದ ಸಮಿತಿಯು

ತಾ. ೩ರಂದು ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿ ಕಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕೆಂದು ಕೇಳುವ ಗೊತ್ತುವಳಿಯನ್ನು ಸ್ವೀಕರಿಸಿತು.

ಪ್ರೊ. ಎನ್. ಜಿ. ರಂಗರ ಆಗಮನ

ಆಂಧ್ರದ ಕಿಸಾನ ಮುಂದಾಳಾದ ಪ್ರೊ. ಎನ್. ಜಿ. ರಂಗ ಎಂ. ಎಲ್. ಎ. [ಕೇಂದ್ರ] ಅವರು ಕಳೆದ ರವಿವಾರ ಇಲ್ಲಿಗೆ ಬಂದು ಶ್ರೀ. ಕೆ. ಆರ್. ಕಾರಂತ ಅತಿಥಿಗಳಾಗಿದ್ದರು. ಶ್ರೀ. ಜಿನರಾಜ ಹೆಗ್ಗಡೆ, ಶ್ರೀ. ಎ. ಬಿ. ಶೆಟ್ಟಿ, ಶ್ರೀ. ಎಂ. ಡಿ. ಅಧಿಕಾರಿ, ಡಾ. ಯು. ಪಿ. ಮಲ್ಯ ಮೊದಲಾದವರು ಅವರನ್ನು ಭೇಟಿಯಾದರು. ಕಿಸಾನರ ಸಂಘಟನೆಯನ್ನು ಈ ಜಿಲ್ಲೆಯಲ್ಲೂ ಮಾಡುವುದಕ್ಕಾಗಿ ಪ್ರೊ. ರಂಗರು ಬಂದುದೆಂದು ಗೊತ್ತಾಗಿದೆ.

ಕಯ್ಯೂರ ಕೈದಿಗಳ ಕುರಿತು ಪ್ರೊ. ರಂಗರು ಒಂದು ಹೇಳಿಕೆಯನ್ನಿತ್ತು ಅದರಲ್ಲಿ ಸಾರ್ವಜನಿಕ ಮನವಿಗಳನ್ನು ಸರಕಾರವು ಮನ್ನಿಸುವ ಅವಶ್ಯಕತೆಯನ್ನು ಅವರು ಸೂಚಿಸಿದುದಲ್ಲದೆ, ಒಂದು ಗುಂಪಿನ ಮಧ್ಯದಿಂದ ಇಂತಹರೇ ಕೊಲೆ ಮಾಡಿದರೆಂದು ಆರೋಪ ಹೊರಿಸುವುದು ಅನ್ಯಾಯವೆಂದು ಹೇಳಿ ಮರಣದಂಡನೆಗೆ ಗುರಿಯಾದವರ ಶಿಕ್ಷೆಯನ್ನು ಸರಕಾರವು ತಪ್ಪಿಸಲೇಬೇಕು ಎಂದು ಹೇಳಿರುವರು.

ನಿಧನ



ದಿವಂಗತ ಎಂ. ಅನಂತ ಶೆಣೈಯವರು

ಮಂಗಳೂರು ಮಿಶನ್ ಹೈಸ್ಕೂಲ್ ಅಧ್ಯಾಪಕರಾಗಿದ್ದ ಶ್ರೀ. ಎಂ. ಅನಂತ ಶೆಣೈ ಬಿ. ಎ., ಎಲ್. ಟಿ. ಇವರು ತಾ. ೯—೮—೪೨ನೇ ಆದಿತ್ಯವಾರ ಬೆಳಗ್ಗೆ ೭ ೧/೨ ಗಂಟೆಗೆ ತನ್ನ ೫೨ನೆಯ ವಯಸ್ಸಿನಲ್ಲಿ ಅಕಾಲ ಮರಣ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ದಿವಂಗತರು ಮಿಶನ್ ಶಾಲೆಗಳಲ್ಲಿ ಸುಮಾರು ೨೬ ವರ್ಷಗಳಿಂದ ಅಧ್ಯಾಪಕರಾಗಿದ್ದರು. ಮಂಗಳೂರು ಮಿಶನ್ ಹೈಸ್ಕೂಲಲ್ಲಿಯೇ ೨೨ ವರ್ಷಗಳ ವರೆಗೆ ಅಧ್ಯಾಪಕರಾಗಿದ್ದರಲ್ಲದೆ, ಅದಕ್ಕಿಂತ ಮೊದಲು ಒಂದು ವರ್ಷ ಕಾಸರಗೋಡು ಮಿಶನ್ ಸೆಕೆಂಡರಿ ಶಾಲೆಯಲ್ಲಿಯೂ, ಮೂರು ವರ್ಷ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿಯೂ ಅಧ್ಯಾಪಕರಾಗಿದ್ದರು. ಅವರ ಸೌಜನ್ಯಶೀಲತೆ, ಕರ್ತವ್ಯತತ್ಪರತೆ, ಸರಲಸ್ವಭಾವ, ವಿದ್ಯಾ ಪ್ರೇಮ, ವಿಶಾಲ ಮನೋಭಾವಗಳಿಂದ ಅವರು ತಮ್ಮ ಸಹೋದ್ಯೋಗಿಗಳ ವಿದ್ಯಾರ್ಥಿಗಳ ಹಾಗೂ ಪುರಪ್ರಮುಖರ ಗೌರವಾದರಗಳಿಗೆ ಪಾತ್ರರಾಗಿದ್ದರು. ಅವರ ನಿಧನದ ಪ್ರಯುಕ್ತ ತಾ. ೧೦ನೇ ಸೋಮವಾರ ಬೆಳಗ್ಗೆ ಮಂಗಳೂರು ಮಿಶನ್ ಹೈಸ್ಕೂಲಲ್ಲಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಸಭೆ ಸೇರಿ ಕೀರ್ತಿಶೇಷರ ಗುಣಕಥನವನ್ನು ಮಾಡಿ, ಅವರ ನಿಧನದಿಂದ ತಮಗುಂಟಾದ ಅಪಾರ ದುಃಖವನ್ನು ಸೂಚಿಸಿ, ಅವರ ಕುಟುಂಬಕ್ಕೆ ತಮ್ಮ ಸಹ ಸಂತಾಪವನ್ನು ತಿಳಿಸುವುದಾಗಿ ನಿರ್ಣಯಿಸಿದರು. ದಿವಂಗತರ ನಿಧನದ ಬಗ್ಗೆ ಶಾಲೆಯನ್ನು ಮುಚ್ಚಲಾಯಿತು. ದಿವಂಗತರ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನೀಯಲಿ!

ವಿದ್ಯಾರ್ಥಿಗಳ

ನಿಷೇಧ ಸಭೆ ಮತ್ತು ಮುಷ್ಕರ:

ಮಂಗಳೂರು ವಿದ್ಯಾರ್ಥಿಗಳು ಗಾಂಧೀಜಿ ಮೊದಲಾದ ಮುಖಂಡರ ಬಂಧನದ ನಿಮಿತ್ತ ಕಳೆದ ಸೋಮವಾರ ಒಂದು ಸಾರ್ವಜನಿಕ ನಿಷೇಧ ಸಭೆಯನ್ನು ಮೈದಾನಿನಲ್ಲಿ ನೆರವೇರಿಸಿದರು. ಶ್ರೀ. ಪದ್ಮನಾಭನರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ವಿ. ಕಕ್ಕಿಲಾಯರು ಮಾತನಾಡಿದರು. ವಿದ್ಯಾರ್ಥಿಗಳ ಪ್ರಚಂಡ ಮೆರವಣಿಗೆಯೊಂದು 'ಮುಖಂಡರನ್ನು ಬಿಡುಗಡೆ ಮಾಡಿರಿ! 'ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿರಿ! ಎಂಬ ಜಯಘೋಷದೊಡನೆ ಪೇಟೆಯ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಸಭೆ ಸೇರಿದಲ್ಲಿಗೆ ಬಂದಿತು. ಆ ದಿನ ಸ್ಥಳೀಯ ಗವರ್ನಮೆಂಟ್ ಕಾಲೇಜ್ ಎಲೋಶಿಯಸ್ ಕಾಲೇಜ್ ಇನ್ನೂ ಕೆಲವು ಹೈಸ್ಕೂಲುಗಳಲ್ಲಿಯೂ ವಿದ್ಯಾರ್ಥಿಗಳ ಮುಷ್ಕರವಿತ್ತು.

ನಗರ ಸಭೆ

ನಗರ ಸಭೆಯ ವಿಶೇಷ ಸಭೆಯೊಂದು ಅಧ್ಯಕ್ಷ ಶ್ರೀ. ಬಾಳಿಗರ ಅಧ್ಯಕ್ಷತೆಯಲ್ಲಿ ತಾ. ೬ರಂದು ಸಂಜೆ ಜರಗಿತು. ಕಯ್ಯೂರಿನ ಕುರಿತು ನಿರ್ಣಯ ಮಾಡಬೇಕೆಂದು ಕೇಳಲು ಕಳೆದ ಬಾರಿ ಬರೆದಿದ್ದ ಮಜೂರ ಪಕ್ಷದವರ ಆಶ್ರಯದಂತೆ ಈ ಸಭೆ ಸೇರಿತು. ಡಾ. ಯು. ಪಿ. ಮಲ್ಯ ಅವರಿಂದ ಮುಂದಿಸಲ್ಪಟ್ಟು, ಡಾ. ಎಮ್. ಆರ್. ಭಟ್ಟರಿಂದ ಅನುಮೋದಿಸಲ್ಪಟ್ಟ ಕಯ್ಯೂರು ಕೈದಿಗಳಿಗೆ ಜೀವದಾನ ಮಾಡಬೇಕೆಂದು ಗವರ್ನರರನ್ನು ಕೇಳಿಕೊಳ್ಳುವ ನಿರ್ಣಯವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ

ಇದರ ಸಾಧಾರಣ ಸಭೆಯು ಧಾರವಾಡ ಕಾಂಗ್ರೆಸ್ ಭವನದಲ್ಲಿ ಶ್ರೀ. ಯು. ಶ್ರೀನಿವಾಸ ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿ ಹೋದ ಸಭೆಯ ಕಾರ್ಯ ಕಲಾಪಗಳು ಸ್ವೀಕೃತವಾದವು.

ಕೈಯ್ಯೂರ ಪ್ರಕರಣ:—ದಕ್ಷಿಣ ಕನ್ನಡ ಜಿಲ್ಲಾ ಕೈಯ್ಯೂರ ಗ್ರಾಮದಲ್ಲಿ ಓರ್ವ ಪೋಲೀಸನನ್ನು ಕೊಂದರೆಂಬ ಆಪಾದನೆಯ ಮೇಲೆ ಮಂಗಳೂರ ಜಿಲ್ಲಾ ಜಡ್ಜರು ನಾಲ್ಕು ಜನರಿಗೆ ವಿಧಿಸಿದ ಫಾಶೀ ಶಿಕ್ಷೆಯನ್ನು ಮದ್ರಾಸಿನ ಹಾಯ್‌ಕೋರ್ಟಿನವರು ಕಾಯಂ ಮಾಡಿದ್ದಾರೆ. ಸದ್ರಿಯುವರ ಮೇಲೆ ದಯ ತೋರಿಸಿ ಅವರ ಫಾಶೀ ಶಿಕ್ಷೆಯನ್ನು ರದ್ದುಗೊಳಿಸಬೇಕಾಗಿ ಈ ಸಭೆಯು ಅಭಿಪ್ರಾಯಪಡುತ್ತದೆ.

ಭಾರತದ ಭಾವೀ ರಾಜ್ಯಾಂಗ ರಚನೆಯಲ್ಲಿ ಕರ್ನಾಟಕದ ಏಕೀಕರಣವಾಗಬೇಕಾದರೆ ಅದಕ್ಕೆ ಪ್ರತ್ಯೇಕ ಪ್ರಾಂತದ ಆವಶ್ಯಕತೆ ಇರುವದೆಂಬುದನ್ನು ಈ ಸಭೆಯು ಈ ಹಿಂದೆ ಕೆಲವು ಸಲ ಹೇಳಿದ್ದರೂ ರಾಜಕೀಯ ಬದಲಾವಣೆಯ ಈ ಕಾಲದಲ್ಲಿ ಮತ್ತೊಮ್ಮೆ ಸ್ಪಷ್ಟವಾಗಿ ಸಾರಬಯಸುತ್ತದೆ. ಅಲ್ಲದೆ ಘಟಿಸಲ್ಪಡುವ ಭಾರತದ ಭಾವಿ ಘಟನೆಯಲ್ಲಿ ಅಖಿಲ ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವಿರದಿದ್ದಲ್ಲಿ ಅಂಥ ಘಟನೆಯನ್ನು ಕರ್ನಾಟಕವು ಎಂದೂ ಸ್ವೀಕರಿಸಲಾರದೆಂದು ಭಾರತದ ನಿರ್ಮಾಣಕರರಿಗೆ ಈ ಸಭೆಯು ತಿಳಿಸ ಬಯಸುತ್ತದೆ. ಹಾಗೂ ಅಖಿಲ ಭಾರತದ ಕಾಂಗ್ರೆಸ್ ಕಮಿಟಿಯು ಈ ಬಗ್ಗೆ ಹೆಚ್ಚು ಲಕ್ಷ್ಯ ಪೂರೈಸಬೇಕೆಂದು ಬಿನ್ನವಿಸಿಕೊಳ್ಳುತದೆ.

ಕೇರಳ

ಕಯ್ಯೂರು ಕೈದಿಗಳಿಗೆ ಜೀವದಾನ ಕೊಡುವ ಚಳವಳ

ತಾ. ೨ನೇ ರವಿವಾರವು ಕೇರಳದಲ್ಲಿ ಕಯ್ಯೂರು ದಿನವಾಗಿಯೂ ತಾ. ೪ ಇತರ ಸ್ಥಳಗಳಲ್ಲಿ ಕಯ್ಯೂರು ದಿನವಾಗಿಯೂ ಆಚರಿಸಲ್ಪಟ್ಟವು. ಕಯ್ಯೂರು ಕೈದಿಗಳ ರಕ್ಷಣಾ ಸಮಿತಿಯೊಂದು ಕಲ್ಲಿಕೋಟೆಯಲ್ಲಿ ಶ್ರೀ ಮಾಧವ ಮೇನನ್ ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿದೆ. ಶ್ರೀಯುತರು ಕೇಳಪ್ಪನ್ ಕೃಷ್ಣಪಿಳ್ಳೆ [ಕಮ್ಯೂನಿಷ್ಟರು], 'ಮಾತೃಭೂಮಿ' ಸಂಪಾದಕರು ಮೊದಲಾದವರು ಈ ಸಮಿತಿಯಲ್ಲಿರುವರು — ಕಲ್ಲಿಕೋಟೆ ನಗರ ಸಭೆಯು ಒಂದು ನಿರ್ಣಯವನ್ನು ಮಾಡಿ ಗವರ್ನರರಿಗೆ ಕಳುಹಿದೆ. ಎಂ. ಎಲ್. ಎ. ಗಳೂ ಬೇರೆ ಅಂಕಿಮಾಡಿರುವರು. ಹಲವು ಸ್ಥಳಗಳಿಂದ ತಂತಿಗಳೂ ಸಾಮೂಹಿಕ ಮನವಿಗಳೂ ಕಳುಹಿಸಲ್ಪಡುತ್ತಿವೆ. [ಕಲ್ಲಿಕೋಟೆಯಲ್ಲಿ ತಾ. ೭ರಂದು ಸಾರ್ವಜನಿಕ ಸಭೆ ಜರಗಿದಾಗಲೇ ಎರಡು ವರ್ಷಗಳಿಂದ ಈ ತನಕ ಅಜ್ಞಾತದಲ್ಲಿದ್ದ ಕಮ್ಯೂನಿಸ್ಟ ನಾಯಕ ಶ್ರೀ ಇ. ಎಂ. ಎಸ್. ನಂಬೂದಿರಿಪಾದರು ಕಾಣಿಸಿಕೊಂಡರೆಂದು ತಿಳಿದಿದೆ.]

ಉಡುಪಿ

ಅಕ್ಕಿಯ ಬೆಲೆ ಏರಿದ ಈ ಕಠಿಣ ಸಮಯದಲ್ಲಿ ಶ್ರೀ ಶೀರೂರು ಮಠದ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು ಅಕ್ಕಿ ಸೇರು ೧ರ ೩ ೩/೪ ಪೈಯಂತೆಯೂ ಶ್ರೀಸೋದೆಮಠದ ಶ್ರೀ ವಿಶ್ವೇಂದ್ರ ತೀರ್ಥ ಶ್ರೀಪಾದಂಗಳವರು ೪ ೨ರಂತೆಯೂ ಶ್ರೀ ಫಲಿಮಾರು ಮಠದ ಶ್ರೀ ರಘುಮಾನ್ಯತೀರ್ಥ ಶ್ರೀಪಾದಂಗಳವರು ಸೇರು ೧ರ ೪ ೩/೪ ಪೈಯಂತೆಯೂ ಮಾರಾಟಮಾಡಿಸಲು ಏರ್ಪಾಡು ಮಾಡಿರುವರೆಂದು ತಿಳಿದಿದೆ.

ನಗರ ಸಭೆ

ಕಳೆದ ತಾ. ೩೮ರಲ್ಲಿ ಸೇರಿದ ಉಡುಪಿ ನಗರ ಸಭೆಯಲ್ಲಿ ಮುನಿಸಿಪಲ್ ತೆಂಕಣ ಹುಡುಗಿಯರ ಹಾ. ಎ. ಶಾಲೆಗೆ ಓರ್ವ ಉಪಾಧ್ಯಾಯಿನಿಯ ಇಸಮು ಮಂಜೂರು ಮಾಡಲಾಯಿತು. ಮಂಗಳೂರು ಬಿಷೋಪರು ನಗರಸಭೆಯ ಮೇಲೆ ರೂ. ೫೦೦ಕ್ಕೆ ಮಾಡಿದ ಮಾನನಷ್ಟ ದಾವೆ ಎದುರಿಸಲು ಖರ್ಚು ಮಂಜೂರು ಮಾಡಲಾಯಿತು.

ಪುತ್ತೂರು

ಭಾಷಣ

ಶ್ರೀ. ಅಣ್ಣಾಶೇಷ ಇವರು ಇಲ್ಲಿಯ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಥಮ ವರ್ಷದ ದಿನಾಚರಣೆಯ ನಿಮಿತ್ತ ಇಲ್ಲಿಗೆ ಆಗಮಿಸಿದ್ದು ಈ ಸಂಘದ ಉದ್ದೇಶ, ಚಟುವಟಿಕೆ, ಕರ್ತವ್ಯಗಳ ಕುರಿತು ಭಾಷಣವಿತ್ತರು.

ನಿಧನ

ಸ್ಥಳೀಯ ಬೋ. ಹೈಸ್ಕೂಲಿನ ಉಪಾಧ್ಯಾಯರಾಗಿದ್ದು ೧೮ ವರ್ಷ ಇದೇ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ತಂಕಿಲ ಶ್ರೀನಿವಾಸರಾಯರು ಸುಮಾರು ೨ ತಿಂಗಳ ಕಾಯಿಲೆಯಿಂದ ತಾ. ೬ರಂದು ಸ್ವರ್ಗಸ್ಥರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ!

ಕಾಸರಗೋಡು ತಾಲೂಕು ಜಪಾನೀ ವಿರೋಧ ಸಮಿತಿ

ಯ ಉದ್ಘಾಟನಾ ಸಮಾರಂಭವು ಮಚ್ಚಿಪೋಟ್ ಎಂಬಲ್ಲಿ ತಾ. ೪ರಂದು, ಶ್ರೀ. ಸುಬ್ರಹ್ಮಣ್ಯನ್ ತಿರುಮಂಬು ಅವರಿಂದ ಜರಗಿಸಲ್ಪಟ್ಟಿತು. ಶ್ರೀ. ವಿ. ವಿ. ಕುಂಞಂಬು ಅವರು ಆ ಸಮಯದಲ್ಲಿ ಭಾಷಣವಿತ್ತರು.

ನೀಲೇಶ್ವರ

ಕಯ್ಯೂರು ಕೈದಿಗಳಿಗೆ ಜೀವದಾನಮಾಡಬೇಕೆಂದು ಕೇಳಿಕೊಳ್ಳುವ ನಿರ್ಣಯವು ಶ್ರೀ. ಉಣ್ಣಿ ಕೃಷ್ಣನ್ ತಿರುಮುಂಬು ಅವರ ಅಧ್ಯಕ್ಷತೆಯಲ್ಲಿ ಇಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿತು. ಮುಳಿಯಾರ, ಉದ್ಯಾವರ, ಪನಯಾಲ, ರಾಣೇಶ್ವರ, ಅಜಯ್ಯ, ಆಲಂಪಾಡಿ, ಪಿಲಿಕೋಡ್ ಮತ್ತಿತರ ಗ್ರಾಮಗಳಲ್ಲಿಯೂ ಅದೇ ಉದ್ದೇಶಕ್ಕಾಗಿ ಸಾರ್ವಜನಿಕ ಸಭೆಗಳು ಜರಗಿದುವು.

ಕಿನ್ನಿಗೋಳಿ

ಇಲ್ಲಿ ಒಂದು ವರ್ತಕರ ಸಂಘ ತಾರೀಖು ೨—೮—೪೨ನೇ ಆದಿತ್ಯವಾರ ಮುಲ್ಕಿಯ ಡಾಕ್ಟರ್ ಶ್ರೀ. ಯಂ. ರಾಯಪ್ಪ ಕಮ್ತರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಪೇಟೆಯ ಎಲ್ಲಾ ವ್ಯಾಪಾರಸ್ಥರು ಹಾಜರಿದ್ದರು. ಅಧ್ಯಕ್ಷರು ಸಂಘದ ಉದ್ದೇಶಗಳನ್ನು ತಿಳಿಸಿದ ಮೇಲೆ ಸಂಘಕ್ಕೆ ಬೇಕಾದ ನಿಯಮಾವಳಿಗಳನ್ನು ತಯಾರಿಸುವುದು ಪ್ರತಿ ತಿಂಗಳ ಮೊದಲನೇ ಆದಿತ್ಯವಾರವನ್ನು ರಜಾದಿನವಾಗಿ ಉಪಯೋಗಿಸುವುದು ಎಂಬ ನಿರ್ಣಯಗಳಾದುವು.

ವಿಜ್ಞಾನ - ವಿಚಿತ್ರ

ಹಾರಾಡುವ ಟೇಂಕುಗಳು!

ಹಾರಾಡುವ ಟೇಂಕುಗಳು, ಎಂದರೆ ಹಾರಾಡಿ ಗುಂಡು ಸುರಿಸುವ ಹೊಸ ತರದ ಯಂತ್ರವಿವು. ಇಂದು ನಿರ್ಮಾಣವಾಗಿದ್ದು ವಿಮಾನಗಳನ್ನೂ ಮೀರಿಸಿರುತ್ತವೆ. ಇವುಗಳೇ ಸ್ಟಾಲಿನನ ಗುಪ್ತಾಸ್ತ್ರಗಳು! ರಶ್ಯದಲ್ಲಿ ಇವುಗಳು ನಿರ್ಮಿಸಲ್ಪಟ್ಟಿವೆ. ಇವು ಸ್ಟಾಲಿನನ ಸ್ವಂತ ಸಂಶೋಧನೆಯಂತೆ. ಇದರ ಒಂದು ಪ್ರಯೋಜನವೆಂದರೆ, ವಿಮಾನಗಳನ್ನು ಕೆಳಗಿನಿಂದ ಗುಂಡಿಟ್ಟು ಫಿರಂಗಿಗಳಿಂದ ಹೊಡೆಯಬಹುದು! ಆದರೆ ಈ ಹಾರಾಡುವ ಟೇಂಕುಗಳ ಮೈಗೆ ಯಾವುದೇ ತರದ ಈಗಿನ ಗುಂಡೂ ತಾಗುವುದಿಲ್ಲ! ಅದರಲ್ಲಿರುವ ಒಂದು ಕೋವಿಯ ಗುಂಡು ಕೆಳಗಿರುವ ಯಾವುದೇ ಟೇಂಕನ್ನಾದರೂ ಭೇದಿಸಬಲ್ಲುದು.

'ಹೇಟಿ'ಗಾಗಿ ಮಗುವನ್ನಿತ್ತಳು!

ಲಂಡನಿನಲ್ಲಿ ಒಬ್ಬ ತಾಯಿಯು ತನ್ನ ಏಳು ವಾರಗಳ ಕೂಸೊಂದನ್ನು ಒಂದು 'ಹೇಟ'ಗಾಗಿ, ಮಾರಿದ ಕತೆ ಬಂದಿದೆ. ಆ ತಾಯಿ ತನ್ನ ಮಗುವನ್ನು ತೊಡೆಯಲ್ಲಿಟ್ಟು ಒಂದು ಕಡೆ ಕುಳಿತಿದ್ದಾಗ, ಮಿಸ್ ಹೇಗಿ ಎಂಬವಳು ಅಲ್ಲಿಗೆ ಬಂದಳು. ಅವಳು ಒಂದು ಚಲೋ ಹೇಟ ಧರಿಸಿದ್ದಳು. ಮಗುವನ್ನು ಹೇಗಳು ತಾಯ ತೊಡೆಯಿಂದ ಪ್ರೀತಿಯಿಂದ ಎತ್ತಿ ಹೋದಳು. ನಿನ್ನ ಹೇಟನ್ನು ನನಗೆ ಒಮ್ಮೆ ಧರಿಸಲು ಕೊಟ್ಟರೆ ಮಗುವನ್ನೆತ್ತಿಕೊಳ್ಳಬಹುದೆಂದಳು ಮಗುವಿನ ತಾಯಿ. ಮಿಸ್ ಹೇಗಳು ಹೇಟನ್ನಿತ್ತಳು, ಮಗುವನ್ನೆತ್ತಿಕೊಂಡಳು. ಹೇಟನ್ನು ತಲೆಯಲ್ಲಿಟ್ಟುಕೊಂಡು ಹೋದ ಮಗುವಿನ ತಾಯಿ ಮರಳಿ ಬರಲೇ ಇಲ್ಲ. ಮಿಸ್ ಹೇಗಳು ಮಗುವನ್ನು ಪೋಲೀಸ್ ವಶ ಒಪ್ಪಿಸಿದಳು. ಮುಂದೆ ವಿಚಾರಣೆ ನಡೆಯಿತು. ಅವಳನ್ನು ಹುಡುಕಿ ಹಿಡಿದರು. ಅವಳ ಹೆಸರು ವರ್ಜಿನಿಯ ಇಸಾಕ್ ಎಂಬುದು. ಅವಳು ಹೇಳಿದಳು "ನಾನು ಹೇಟನ್ನು ಕದ್ದುಕೊಂಡದ್ದಲ್ಲ, ಮಗುವನ್ನು ಕೊಟ್ಟು ಪಡಕೊಂಡದ್ದು" ಎಂದು! ಇಸಾಕಳನ್ನು ಹಿಡಿದು ಸೆರೆಯಲ್ಲಿಟ್ಟಿರುವರು! ಮಗು ಬೇಡ- ಅಲಂಕಾರ ಬೇಕೆ?

ಆಕೆ ಕೆನ್ನೆಗೇರಿಸಿದಳು

ಅಮೆರಿಕದಿಂದ ಒಂದು ಸುದ್ದಿ ಬಂದಿದೆ! ಒಂದು ಬಸ್‌ನಲ್ಲಿ ಹೋಗುತ್ತಿದ್ದಾಗ ಪ್ರಯಾಣಿಕಳೊಬ್ಬಳು ಹೀಗೆ ಹೇಳಿದಳು: "ಆಹಾ! ಈ ಯುದ್ಧವು ಬಹುಕಾಲ ಬಾಳಲಿ ನನ್ನ ಗಂಡನಿಗೆ ಯುದ್ಧ ಆರಂಭವಾದ ಮೇಲೆ ಒಳ್ಳೆ ಉದ್ಯೋಗ ಸಿಕ್ಕಿದೆ, ಚೆನ್ನಾಗಿ ಸಂಪಾದಿಸುತ್ತಾನೆ, ನಾವು ಸುಖವಾಗಿದ್ದೇವೆ" ಅವಳ ಬಳಿ ಕುಳಿತಿದ್ದವಳು ಹಾಗೆ ಹೇಳುತ್ತಿದ್ದವಳ ಕೆನ್ನೆಗೆ ಒಂದೇಟು ಏರಿಸುತ್ತಾ 'ಇದು ಪರ್ಲ್ ಹಾರ್ಬರಿನಲ್ಲಿ ಸತ್ತ ನನ್ನ ಒಬ್ಬ ಮಗನ ಸಲುವಾಗಿ' ಎಂದೂ, ಇನ್ನೊಂದು ಕೆನ್ನೆಗೆ ಇನ್ನೊಂದೇಟು ಏರಿಸುತ್ತಾ 'ಇದು ಫಿಲಿಪ್ಪೈನ್ಸಿನಲ್ಲಿ ಸತ್ತ ನನ್ನ ಇನ್ನೊಬ್ಬ ಮಗನಿಗಾಗಿ' ಎಂದೂ ಹೊಡೆಯತೊಡಗಿದಳು ಆಗ ಕುಳಿತಿದ್ದ ಇತರರು ಅವರನ್ನು ರಾಜಿಮಾಡಿದರು. -ಹೀಗೆ ಯುದ್ಧವು ಕೆಲವರಿಗೆ ಲಾಭವಾದರೆ ಕೆಲವರಿಗೆ ಎಂಥಾ ನಷ್ಟವನ್ನೊದಗಿಸುತ್ತದೆ!

ಚಿಮಿಣಿ ಎಣ್ಣೆ ಬದಲು ತರಕಾರಿ ಎಣ್ಣೆ!

ಚಿಮಿಣಿ ಎಣ್ಣೆಯ ಬದಲು ಲಾಟೀನು, ಚಿಮಿಣಿ ದೀಪಗಳಲ್ಲಿ ಹೊತ್ತಿಸುವಂಥಾ ಒಂದು ತರಕಾರಿ ಎಣ್ಣೆಯನ್ನು ಅಖಿಲಭಾರತ ಗ್ರಾಮೋದ್ಯೋಗ ಸಂಘ, ವರ್ಧಾ ಇಲ್ಲಿ ಈಗ ತಯಾರಿಸಿರುತ್ತಾರೆ. ಆ ಣ್ಣೆಗೆ 'ಮಗನ್ ದೀಪ' ಎಂಬ ಹೆಸರಿಡಲಾಗಿದೆ. ಹಿಂದೂದೇಶದಿಂದ ವರ್ಷ ವರ್ಷಕ್ಕೆ ೩೦ ಕೋಟಿ ರೂಪಾಯಿಗಳಿಗಿಂತ ಮೇಲಾಗಿ ಚಿಮಿಣಿ ಎಣ್ಣೆಗಾಗಿ ಹಣ ಹೊರದೇಶಕ್ಕೆ ಹೋಗುತ್ತಿರುವುದಾಗಿ ಈ ಎಣ್ಣೆಯ ಪ್ರಯೋಗದಿಂದ ದೇಶದ ಆರ್ಥಿಕ ಸ್ಥಿತಿಗೆ ಬಹಳ ಸಹಕಾರ ಸಿಗಲಿದೆ.

ಹೊಸತೊಂದು ಯಂತ್ರ ಸಾಧನ

ಮನುಷ್ಯನ ಶರೀರದಲ್ಲಿ ವಿಟೆಮಿನ್ ಎ ಕಡಿಮೆಯುಂಟೋ ಅಥವಾ ಅವನಿಗೆ ಕತ್ತಲಾದ ಮೇಲೆ ಕಾಣದಿರುವ ರೋಗವುಂಟೋ ಎಂಬುದನ್ನು 8 ಮಿನಿಟುಗಳಲ್ಲಿ ಕಂಡುಹಿಡಿಯಬಲ್ಲ ಒಂದು ಹೊಸ ಯಂತ್ರವೀಗ ಅಮೆರಿಕದಲ್ಲಿ ತಯಾರಾಗಿದೆ. ಇದರ ಹೆಸರು 'ಏಡೊಪ್ಟೋಮಿಟರ್' ಎಂದು.

ಮನುಷ್ಯರು ಹುಲ್ಲು ತಿಂದು ಜೀವಿಸಬಹುದೆ?

ಮನುಷ್ಯರು ಹುಲ್ಲು ತಿಂದು ಜೀವಿಸಬಹುದೆಂಬುದು ಇತ್ತೀಚೆಯ ಒಂದು ವೈಜ್ಞಾನಿಕ ಸಂಶೋಧನೆಯಾಗಿದೆ. ಇದನ್ನು ಕಂಡುಹಿಡಿದವರು ನ್ಯೂಯಾರ್ಕಿನ ಬಯೋ ಕೆಮಿಸ್ಟ್ ಕುಸ್ತಾವ್ ಜೆ. ಮಾರ್ಟಿನ್ ಎಂಬವರು. ಮನುಷ್ಯನಿಗೆ ಈ ಅಭ್ಯಾಸವನ್ನು ಕ್ರಮೇಣ ಮಾಡುತ್ತಾ ಹೋಗಿ, ಆಹಾರ ಯೋಗ್ಯ ಹುಲ್ಲುಗಳನ್ನು ಆರಿಸಿ ತಿಂದರೆ ಸಪುಷ್ಟನಾಗಿ ಬೆಳೆಯಬಹುದೆಂದು ಅವರ ಅಭಿಪ್ರಾಯ. ಈಗಾಗಲೇ ಇದನ್ನು ಕೆಲವು ಬಂಧಿವಾನರಿಗೆ ಅವರು ಪ್ರಯೋಗಿಸುವರಂತೆ!

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No 138/1942

ಚಂದಪ್ಪ—ವಾದಿ.

ಮಂಜಪ್ಪ ಶೆಟ್ಟಿ ನಡ್ವಾಲು
ವ್ಯಾಲ ಭಂಡಾರಿಅಳಿಯ ವೀರ } ಪ್ರತಿವಾದಿ
ಕಂಭ ಗ್ರಾಮದ ನಡ್ವಾಲು

ಮೇಲ್ಕಂಡ ವಾದಿಯು ಪ್ರತಿವಾದಿಯಿಂದ ಬರು ನೋಟಿನ ಅಸಲು ಬಡ್ಡಿ ಖರ್ಚು ವಸೂಲು ಕುರಿತು ಮಾಡಿದ ಮೇಲಿನ ದಾವೆಯು ತಾ. 18-8-1942ಕ್ಕೆ ತನಿಖೆಗಿಟ್ಟಿರುವದರಿಂದ ಆ ಕುರಿತು ಪ್ರತಿವಾದಿಯು ಈ ಕೋರ್ಟಿನ ಮುಂದೆ ಹಾಜರಾಗಿ ಉತ್ತರ ಕೊಡತಕ್ಕದ್ದೆಂತಲೂ ತಪ್ಪಿದ್ರೆ ಪ್ರತಿವಾದಿಯ ಗೈರು ಹಾಜರಿಯಿಂದ, ಡಿಕ್ರಿ ಮಾಡಿ ತೀರ್ಮಾನಿಸಲಾಗುವದೆಂತಲೂ ಈ ಮೂಲಕ ತಿಳಿಯಪಡಿಸಲಾಗಿಯದೆ.

Puttur }
23-7-42 }

B. Chidanand Rao,
Pleader for Plaintiff



ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ, ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೬-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಮಾರಾಟಕ್ಕೆ ಸಿದ್ಧವಾಗಿದೆ!

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೨ನೆಯ ದರ್ಜೆಯ ಕಥೆಗಳು 0-1-6

ಪ್ರಕಟವಾಗಲಿದೆ

೩ನೆಯ ದರ್ಜೆಯ ಭೂವಿವರಣೆ 0-2-0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

The Canara Industrial & Banking Syndicate Ltd.

(Incorporated in British India, Liability of Share-holders Limited)

STATEMENT OF AFFAIRS AS ON 30TH JUNE 1942.

LIABILITIES	Rs. As. Ps.	ASSETS	Rs. As. Ps.
Paid-up Capital ...	6,80,843- 0- 0	Cash in hand & with Bankers	10,11,654-13- 5
Reserves	2,11,000- 0- 0	Investments on Govt. Securities ...	14,50,097-15- 6
Deposits	40,00,392- 1- 8	„ on Shares of other Companies ...	1,40,806-10- 0
Due to Bankers	2,33,450-12- 1	Fully Secured Advances	14,69,121- 4- 4
Bills for collection ...	3,55,772- 7- 4	Other advances: Bills discounted etc.	10,04,461- 9- 5
Sundries	6,01,774-12-11	Landed properties, Office premises, Furniture, Safes, fittings etc.	3,88,680- 1- 0
		Bills for collection	3,55,772- 7- 4
		Sundries	2,62,658- 4-11
Total Rs.	60,83,233-2-0	Total Rs.	60,83,233-2-0

"MUKUND NIVAS"
UDIPI
25th July, 1942.

T. M. A. Pai,
Managing Director.

ಜಪಾನಿಯರ ಮಾತುಗಳು ಸ್ನೇಹಭಾವದಿಂದ ಕೂಡಿರುತ್ತವೆ

—ಮತ್ತು ಅವರ ಮಹತ್ವಾಕಾಂಕ್ಷೆಯೂ ಪ್ರಬಲವಾಗಿರುತ್ತದೆ

ಪೂರ್ವಕಾಲದಲ್ಲಿ ಶತೃಗಳು ದ್ವೇಷ ಹುಟ್ಟಿಸುವ ಮಾತುಗಳನ್ನಾಡುತ್ತಾ ಯುದ್ಧಕ್ಕೆ ಬರುತ್ತಿದ್ದರು. ಈಗ ಜಪಾನಿಯರು ಹಾಗೆ ಮಾಡುವುದಿಲ್ಲ. ಸೈನ್ಯವನ್ನು ಕಳುಹಿಸುವುದರಲ್ಲಿ ಲಾಭವಿರುವಂತೆ ಮಾತುಗಳಲ್ಲಿಯೂ ಲಾಭವುಂಟೆಂದು ಅವರಿಗೆ ತಿಳಿದಿದೆ. ಅವರ ಸವಿಮಾತುಗಳು ನಿಮ್ಮನ್ನು ಮೋಸಗೊಳಿಸಿ, ನಿಮ್ಮನ್ನು ಕೆಂಗೆಡಿಸಿ, ನಿಮ್ಮಲ್ಲಿ ಬಲಹೀನತೆಯನ್ನುಂಟುಮಾಡುವುದು. ಇದು ಹೊಸರಣ ಕೌಸಲ್ಯ ಎಚ್ಚರವಿಲ್ಲದ ಜನಗಳ ಮೇಲೆ ದೊಡ್ಡ ಪರಿಣಾಮವನ್ನುಂಟುಮಾಡುವುದು. ಆದರೆ, ರೇಡಿಯೋ ಮೂಲಕ ಜಪಾನಿಯರು ಆಡುವ ಸ್ನೇಹಭಾವದ ಮಾತುಗಳ ಹಿಂದುಗಡೆ, ಮತ್ತು ಊರುಗಳಲ್ಲಿಯೂ ಹಳ್ಳಿಗಳಲ್ಲಿಯೂ ಜಪಾನಿಯರ ಏಜಂಟುಗಳು ಪ್ಲೇಗಿನಂತೆ ಹರಡಿಸುವ ಮಾತುಗಳ ಹಿಂದುಗಡೆ, ಜಪಾನಿಯರ ಈಟಿಗಳೂ ಮತ್ತು ಅವರ ಮಹತ್ವಕಾಂಕ್ಷೆಯೂ ಇಂಡಿಯಾ ದೇಶದ ರಕ್ಷಣಾ ಕಾರ್ಯಕ್ರಮವನ್ನು ತಗ್ಗಿಸುವುವು — ನಿಮ್ಮ ಸೊತ್ತುಗಳು ಅವರೊಲ್ಲ ವಲ್ಲವೇ? ಇಂಡಿಯಾ ದೇಶವು ಫಲವತ್ತಾದ ಜಮೀನಲ್ಲವೇ? ಹೊಸ ಜಯಶಾಲಿಗಳಿಗೆ ಇಲ್ಲಿ ಬೇಕಾದಷ್ಟು ಲೂಟಿ ಸಿಕ್ಕುತ್ತದೆ. ಯುದ್ಧವಿಲ್ಲದೆ ಇಂಡಿಯಾ ದೇಶವನ್ನು ಪ್ರವೇಶಿಸಲು ಯಾರು ತಾನೆ ಜಪಾನಿಯರ ಸೈನ್ಯಕ್ಕೆ ಸೇರಲಾರರು!

ಜಪಾನಿಯರನ್ನು ಎದುರಿಸುವುದಕ್ಕೆ ಇಂಡಿಯಾದೇಶದ ಯುದ್ಧಮುಖವನ್ನು ರಚಿಸಿರಿ

ಸಿನೆಮಾ ಪುಟ

'ಅನಸೂಯ'ದಲ್ಲಿ ಶಾಂತಾ ಆಪ್ಟೆ

ಸನ್‌ರೈಸ್ ಪಿಕ್ಚರ್ಸಿನವರ 'ಅನಸೂಯ' ಎಂಬ ಚಿತ್ರದಲ್ಲಿ ಶಾಂತಾ ಆಪ್ಟೆ ಅಭಿನಯಿಸುವವಳಾಗಿ ತಿಳಿದಿದೆ. ನಾಯಿಕಾ ಪಾತ್ರವನ್ನು ದುರ್ಗಾಖೋಟೆ ವಹಿಸುವಳಂತೆ. ಶ್ರೀ. ವಿ. ಎಂ. ವ್ಯಾಸರು ಇದನ್ನು ನಿರ್ದೇಶಿಸುವರು. ಶಾಂತಾ ಆಪ್ಟೆಗೆ ಇದರ ಅಭಿನಯಕ್ಕಾಗಿ ರೂ. ೪೫೦೦೦ ಕೊಡಲು ಒಪ್ಪಿರುವರೆಂದು ಸುದ್ದಿ.

ಆಚಾರ್ಯ ಆರ್ಟ್ ಪ್ರೊಡಕ್ಷನಿಗೆ ಮೋತಿಲಾಲ್

ಆಚಾರ್ಯ ಆರ್ಟ್ ಪ್ರೊಡಕ್ಷನಿನ ಮೂರನೆಯ ಚಿತ್ರದಲ್ಲಿ ನಾಯಕ ಪಾತ್ರ ವಹಿಸುವುದಕ್ಕೆ ಮೋತಿಲಾಲರು ಒಪ್ಪಿಕೊಂಡಿರುವರು. ಈ ಮೂರನೆಯ ಚಿತ್ರವು ಬಂಗಾಳಿಯ ಪ್ರಸಿದ್ಧ ಕಥೆಯೊಂದರ ಆಧಾರದಿಂದ ಮಾಡಲಾಗುವುದು.

"ಯಾದ್"

ಮಝೂರ್ ಖಾನರಿಂದ ಸ್ಥಾಪಿತವಾದ ಏಶ್ಯಾಟಿಕ ಪಿಕ್ಚರ್ಸ್‌ನ 'ಯಾದ್' ಎಂಬ ಹೊಸ ಚಿತ್ರದ ತಯಾರಿಗೆ ಮುಹೂರ್ತ ಶ್ರೀ ಶಾಂತಾರಾಮರಿಂದ ನೆರವೇರಿಸಲ್ಪಟ್ಟಿತು. ಇದನ್ನು ಮಝೂರ್ ಖಾನ್ ನಿರ್ದೇಶಿಸುವರು. ವೀಣಾ ('ನೇಶನಲ್ಸ್ ಕಸೂಟಿ'ಯಲ್ಲಿ ಅಭಿನಯಿಸಿದ) ಇದರಲ್ಲಿ ನಾಯಕಿ ಪಾತ್ರ ವಹಿಸುವಳು.

ಅದರ ದೃಷ್ಟಾಂತ

ದಕ್ಷಿಣೇಶ್ವರದಲ್ಲಿ ಒಂದು ದಿನ ಪರಮಭಕ್ತಿಮತೀ 'ಗೋಪಾಲನ ತಾಯಿ' ಎಂಬವಳು, ಶ್ರೀ ಪರಮಹಂಸರಿಗೆ ಸ್ವತಃ ಅಡಿಗೆಮಾಡಿ ಉಣ್ಣಿಸಬೇಕೆಂದು ಎಲ್ಲವನ್ನು ಸಿದ್ಧಗೊಳಿಸಿದಳು ಶ್ರೀ ಪರಮಹಂಸರು ಉಣ್ಣಲು ಕುಳಿತುಕೊಂಡರು ಆದರೆ ಅನ್ನ ಸರಿಯಾಗಿ ಬೇಯಲಿಲ್ಲವಾಗಿತ್ತು ಶ್ರೀ ಪರಮಹಂಸರು ಬೇಸರಪಟ್ಟು 'ಈ ಅನ್ನ ನಾನು ಹೇಗೆ ತಿನ್ನಲಿ? ಇನ್ನು ಅವಳ ಕೈಯಿಂದ ನಾನು ಅನ್ನ ತಿನ್ನುವುದಿಲ್ಲ' ಎಂದು ಹೇಳಿಬಿಟ್ಟರು ಶ್ರೀ ಪರಮಹಂಸರ ಬಾಯಿಂದ ಆ ಮಾತನ್ನು ಕೇಳಿ ಗೋಪಾಲನ ತಾಯಿ ಇನ್ನು ಮುಂದೆ ಹಾಗೆ ಮಾಡಬಾರದಾಗಿ ಭಯಪಡಿಸಿದರೆಂದೂ, ಅವಳನ್ನು ಇಷ್ಟು ಪ್ರೀತಿಸಿ ಅವಳ ಕೈಯಿಂದ ಅವರು ಅನ್ನತಿನ್ನುವುದು ಬಿಡಲಿಕ್ಕಿಲ್ಲವೆಂದೂ ಎಲ್ಲರು ಭಾವಿಸಿದ್ದರು ಇನ್ನು ಸ್ವಲ್ಪ ಹೊತ್ತಿನ ಮೇಲೆ ಅವರು ಗೋಪಾಲನ ತಾಯಿಯ ಕ್ಷಮೆ ಬೇಡಿಕೊಳ್ಳುವರೆಂದೂ, ಆ ಮಾತಿನಂತೆ ಆಚರಿಸಲಿಕ್ಕಿಲ್ಲವೆಂದೂ ಭಾವಿಸಿದ್ದರು ಆದರೆ ಕಾರ್ಯಕ್ಷೇತ್ರದಲ್ಲಿ ಸಂಪೂರ್ಣವಾಗಿ ಬೇರೊಂದಾಯಿತು ಏಕೆಂದರೆ ಸ್ವಲ್ಪ ಕಾಲದ ನಂತರವೇ ಶ್ರೀ ಪರಮಹಂಸರಿಗೆ ಗಂಟಲು ನೋವಾಯಿತು ಅದು ಹೆಚ್ಚೆಚ್ಚಾಗಿ, ಶ್ರೀಪರಮಹಂಸರು ಅನ್ನ ತಿನ್ನುವುದನ್ನೇ ಬಿಡಬೇಕಾಯಿತು ಇನ್ನು ಗೋಪಾಲನ ತಾಯಿಯ ಕೈಯಿಂದ ಒಂದು ದಿನವಾದರೂ ಅನ್ನ ತಿನ್ನಲಾಗಲಿಲ್ಲ

ಎರಡನೆಯ ದೃಷ್ಟಾಂತ

ಒಂದಾನೊಂದು ದಿನ ಶ್ರೀ ಪರಮಹಂಸರು ದಕ್ಷಿಣೇಶ್ವರದಲ್ಲಿ ಭಾವಾವಸ್ಥೆಯಲ್ಲಿದ್ದಾಗ, 'ಇನ್ನು ನಾನು ಏನೂ ತಿನ್ನಲಾರೆ, ಪಾಯಸಾನ್ನ ಮಾತ್ರ ತಿನ್ನುವೆನು' ಎಂದು ಹೇಳಿದರು ಶ್ರೀ ಮಾತಾದೇವಿಯು ಆ ಸಮಯ ಶ್ರೀ ಪರಮಹಂಸರಿಗೆ ಊಟ ತೆಗೆದುಕೊಂಡು ಬರುತ್ತಿದ್ದರು ಆ ಮಾತನ್ನು ಕೇಳಿ ಮತ್ತು ಶ್ರೀ ಪರಮಹಂಸರ ಪವಿತ್ರ ಮುಖದಿಂದ ನಿರ್ಗತವಾದ ಮಾತು ಎಂದೂ ನಿರರ್ಥಕವಾಗಲಾರದ್ದರಿಂದ ಅಂಜಿಕೆಪಟ್ಟು "ನಾನು ಪಾಯಸಾನ್ನ ಮಾತ್ರವಲ್ಲ, ಅನ್ನವೂ ಕೂಡ ಅಡಿಗೆ ಮಾಡಿ ಕೊಡುವೆನು. ತಿನ್ನುವಿರಾ ಎಂದು ಕೇಳಿದರು ಶ್ರೀ ಪರಮಹಂಸರು ಭಾವಾವಸ್ಥೆಯಲ್ಲಿ 'ಇಲ್ಲ—ಪಾಯಸಾನ್ನ ಮಾತ್ರ ತಿನ್ನುವೆನು' ಎಂದು ಪುನಃ ಹೇಳಿದರು ಹೀಗೆ ಹೇಳಿದ ಸ್ವಲ್ಪ ಕಾಲದ ನಂತರವೇ ಶ್ರೀಪರಮಹಂಸರ ಗಂಟಲು ನೋವಾದಕಾರಣ ನಿಜವಾಗಿಯೂ ಪಲ್ಯ ಮೊದಲಾದ ವ್ಯಂಜನ ಪದಾರ್ಥಗಳನ್ನು ತಿನ್ನಲಾಗಲಿಲ್ಲ — ಕೇವಲ ಹಾಲು-ಹಣ್ಣು ಅಥವಾ ಹಾಲು ಬಾರ್ಲಿಅಕ್ಕಿ ತಿಂದೇ ದಿನಹರಣೆಮಾಡಬೇಕಾಯಿತು

ರಾಮಕೃಷ್ಣ ಲೀಲಾ ಪ್ರಸಂಗ

ಪರಮಹಂಸರ ಮೂರು ದೃಷ್ಟಾಂತಗಳು

ಜಗದಂಬೆಯ ಕೃಪೆ

ಮೂಲ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

ಮೂರನೆಯ ದೃಷ್ಟಾಂತ

ಕಲ್ಕತ್ತೆಯ ಪ್ರಸಿದ್ಧ ದಾನ ಶೀಲ ಶ್ರೀಮಂತ ಶಂಭುಚಂದ್ರ ಮಲ್ಲಿಕರನ್ನು ಶ್ರೀ ಪರಮಹಂಸರು ಅವರ ನಾಲ್ಕು ಜನ 'ರಸದ್ದಾರ'ರ ಪೈಕಿ ದ್ವಿತೀಯ 'ರಸದ್ದಾರ'ರೆಂದು (ರಸದ್ದಾರರೆಂದರೆ—ಪಡಿಕೊಡುವವರೆಂದರ್ಥ) ನಿರ್ದೇಶಿಸುತ್ತಿದ್ದರು ರಾಣಿರಾಸ್ಮಣಿಯರ ಕಾಳೀ ದೇವಾಲಯದ ಹತ್ತಿರವೇ ಅವರದೊಂದು ತೋಟವಿತ್ತು ಇಲ್ಲಿ ಅವರು ಶ್ರೀ ಪರಮಹಂಸರೊಡನೆ ಭಗವದಾಲಾಪವನ್ನು ಮಾಡಿ ಕಾಲ ಕಳೆಯುತ್ತಿದ್ದರು ಆ ತೋಟದಲ್ಲಿ ಅವರು ಪ್ರತಿಷ್ಠಾಪನೆ ಮಾಡಿದ ಒಂದು ಉಚಿತ ಔಷಧಾಲಯವೂ ಇತ್ತು ಶ್ರೀ ರಾಮಕೃಷ್ಣದೇವರಿಗೆ ಹೊಟ್ಟೆ ರೋಗವು ಯಾವಾಗಲೂ ಆಗಾಗ ಕಾಣಿಸಿಕೊಳ್ಳುತ್ತಾ ಇತ್ತು ಒಂದು ದಿನ ಅವರ ಹೊಟ್ಟೆರೋಗದ ವಿಷಯವಾಗಿ ಶಂಭೂಬಾಬು ತಿಳಿದು, ತುಸು ಆಫೀಮು ತಿನ್ನಲೂ, ರಾಸ್ಮಣಿ ದೇವಾಲಯಕ್ಕೆ ಹಿಂತಿರುಗುವ ಮೊದಲು ಅದನ್ನು ತಮ್ಮ ಬಳಿಯಿಂದ ಪಡೆದುಕೊಂಡು ಹೋಗಲೂ ಹೇಳಿದರು ಶ್ರೀ ಪರಮಹಂಸರು ಅದಕ್ಕೊಪ್ಪಿದರು ನಂತರ ಮಾತನಾಡುತ್ತಾ, ಮಾತನಾಡುತ್ತಾ ಆ ವಿಷಯವನ್ನು ಇಬ್ಬರೂ ಮರೆತು ಬಿಟ್ಟಿದ್ದರು

ಶ್ರೀ ಜಗದಂಬೆಯು "ದಾರಿ ತಪ್ಪಿ ನಡೆಯಲು' ಬಿಡುವುದಿಲ್ಲ

ಶಂಭುಬಾಬುವಿನಿಂದ ರಜಾಪಡೆದು ಹೋಗುತ್ತಾ ದಾರಿಯಲ್ಲಿ ಆದರ ನೆನಪು ಬಂತು ಆಫೀಮನ್ನು ತೆಗೆದುಕೊಳ್ಳಲು ಪುನಃ ಬಂದು ನೋಡುವಾಗ ಶಂಭುಬಾಬು ಒಳಗೆ ಹೋಗಿದ್ದರು ಶ್ರೀ ಪರಮಹಂಸರು ಅದಕ್ಕಾಗಿ ಇನ್ನು ಅವರನ್ನು ಕರೆಯದೆ ಅವರ ಗುಮಾಸ್ತನ ಬಳಿಯಿಂದ ತುಸು ಆಫೀಮನ್ನು ಕೇಳಿ ತೆಗೆದುಕೊಂಡು ರಾಸ್ಮಣಿ ಮಂದಿರದ ತೋಟಕ್ಕೆ ಹೊರಟುಹೋಗುವವರಾದರು ಆದರೆ ದಾರಿ ಹಿಡಿದು ಹೋಗುವಷ್ಟರಲ್ಲಿ, ಶ್ರೀ ಪರಮಹಂಸರಿಗೆ ಏನೋ ಒಂದು ಪ್ರವೃತ್ತಿ ಒಂದು ದಾರಿಕಾಣದೆ ಹೋಯಿತು ದಾರಿಯ ಪಕ್ಕದಲ್ಲಿರುವ ಕಾಲುವೆಯ ಕಡೆಗೆ ಯಾರೋ ತಮ್ಮ ಕಾಲು ಸೆಳೆದೊಯ್ದಂತೆ ಅನುಭವಿಸಿದರು. 'ಇದೇನು? ಇದು ದಾರಿ ಅಲ್ಲವಲ್ಲ?' ಎಂದು ಭಾವಿಸತೊಡಗಿದರು ಅಲ್ಲದೆ ದಾರಿ ಕಂಡು ಹಿಡಿಯಲೂ ಅವರಿಂದಾಗಲಿಲ್ಲ. ದಾರಿ ತಪ್ಪಿರಬೇಕೆಂದು ಪುನಃ ಶಂಭುಬಾಬುವಿನ ತೋಟದ ಕಡೆಗೆ ನೋಟ ತಿರುಗಿಸಿದರು.—ಆ ದಿಕ್ಕಿನ ದಾರಿಯು ಸರಿಯಾಗಿ ಕಾಣುತ್ತದೆ ಮನಸ್ಸಿನಲ್ಲಿ ಸ್ವಲ್ಪ ಹೊತ್ತು ಯೋಚನೆಮಾಡಿ ಪುನಃ ಶಂಭುಬಾಬುವಿನ ಹೆಬ್ಬಾಗಿಲಿನ ವರೆಗೆ ಹಿಂತಿರುಗಿ, ಅಲ್ಲಿಂದ ಚೆನ್ನಾಗಿ ನೋಡುತ್ತ ಪುನಃ ಮೆಲ್ಲನೆ ರಾಸ್ಮಣಿ ಮಂದಿರದ ತೋಟಕ್ಕೆ ತೆರಳಿದರು. ಆದರೆ ಒಂದೆರಡು ಹೆಜ್ಜೆ ಇಟ್ಟಿದ್ದಾರಷ್ಟೆ, ಮೊದಲಿನಂತೆ ದಾರಿಕಾಣದೆ ಹೋಯಿತು ದಾರಿತಪ್ಪಿ ಹೋಗುವ ಪ್ರವೃತ್ತಿಯೇ ಅವರಿಗಾಗುತ್ತಿತ್ತು' ಹಾಗೆಯೇ ಕೆಲವು ಸಾರೆ ಆದ ಬಳಿಕ "ಓಹೋ ಶಂಭುಬಾಬುವು 'ನನ್ನ ಬಳಿಯಿಂದ ಆಫೀಮನ್ನು ಈಸುಕೊಂಡು ಹೋಗಿರಿ' ಎಂದು ಹೇಳಿದ್ದರು ಹಾಗೆ ಮಾಡದೆ ನಾನು ಅವರ ಗುಮಾಸ್ತನ ಬಳಿಯಿಂದ ತೆಗೆದುಕೊಂಡು ಹೋಗುತ್ತಿದ್ದೇನೆ. ಅದ್ದರಿಂದಲೇ ಶ್ರೀ ಜಗದಂಬೆಯು ನನ್ನನ್ನು ಹೋಗಲು ಬಿಡುವುದಿಲ್ಲ ಶಂಭುಬಾಬುರ ಅಪ್ಪಣೆಯ ಹೊರತು ಗುಮಾಸ್ತನಿಗೆ ಕೊಡಲು ಅಧಿಕಾರವಿಲ್ಲ. ನಾನೂ ಕೂಡ ಶಂಭುಬಾಬು ಹೇಳಿದಂತೆ ಅವರ ಬಳಿಯಿಂದಲೇ ತೆಗೆದುಕೊಳ್ಳಬೇಕಿತ್ತು ಈ ರೀತಿಯಾಗಿ ಅಫೀಮು ಈಸುಕೊಂಡು ಬಂದದ್ದರಿಂದ, ಸುಳ್ಳು ಮತ್ತು ಕಳ್ಳತನ ದೋಷಗಳು ನನ್ನ ಮೇಲೆ ಬಂದಿವೆ ಅದ್ದರಿಂದಲೇ ತಾಯಿ ನನ್ನನ್ನು ಹೋಗಲು ಬಿಡುವುದಿಲ್ಲ, ಹಿಂತಿರುಗಿಸುತ್ತಿದ್ದಾಳೆ!" ಎಂದು ಶ್ರೀರಾಮ ಕೃಷ್ಣದೇವರು ಮನಗಂಡು ಶಂಭುಬಾಬುವಿನ ಔಷಧಾಲಯಕ್ಕೆ ಹೋಗಿ ನೋಡಿದರೆ ಆ ಗುಮಾಸ್ತನೂ ಅಲ್ಲಿರಲಿಲ್ಲ ಆತನು ಊಟಮಾಡಲು ಎಲ್ಲಿಯೋ ಹೋಗಿದ್ದನು ಆದ್ದರಿಂದ ಕಿಟಿಕಿ ಕದವನ್ನು ತೆರೆದು ಅಫೀಮಿನ ಸಣ್ಣ ಗಂಟನ್ನು ಔಷದಾಲಯದೊಳಗೆ ಬಿಸಾಡಿ 'ಇಕೊಳ್ಳಿ ನಿಮ್ಮ ಅಫೀಮು ಇಲ್ಲಿಯೇ ಇಟ್ಟಿದ್ದೇನೆ' ಎಂದು ಘಟ್ಟಿಯಾಗಿ ಕೂಗಿ ಹೇಳಿ ರಾಸ್ಮಣಿಯ ಮಂದಿರದ ತೋಟದ ಕಡೆಗೆ ಹೊರಟು ಹೋದರು ಈಗ ಹೋಗುವ ಸಮಯ ಇನ್ನು ಮೊದಲಿನ ಪ್ರವೃತ್ತಿಯು ಬಂದಿಲ್ಲ; ದಾರಿಯೂ ಕೂಡ ಸ್ಪಷ್ಟವಾಗಿ ಕಂಡು ಬಂತು, ಸರಿಯಾಗಿ ನಡೆದು ಹೋದರು

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯವಸ್ಥಿತವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು ಹೊರಡುವ ಗಂಟೆ ತಲುಪುವ ಗಂಟೆ
ಗೂಡ್ಸ್ ಬಂಡಿ 6 2[illegible] ಬೆಳಿಗ್ಗೆ 7 [illegible]0 ರಾತ್ರಿ
ಮಂಗಳೂರು ಎಕ್ಸ್ ಪ್ರೆಸ್ (ಮೈಲ್) 8 30 ಬೆಳಿಗ್ಗೆ [illegible] 4[illegible] ಸಾಯಂಕಾಲ
ಪ್ಯಾಸೆಂಜರ್ 11 30 ಮಧ್ಯಾಹ್ನ 3 4[illegible] ಸಾಯಂ
ಕನ್ನನೂರು
[illegible]0 ಸಾಯಂ [illegible] 30 ಪೂರ್ವಾಹ್ನ

ಕಡಿಮೆ ಖರ್ಚು
ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು.
ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates

One year	4%
Two years or above	4½%

Interest Payable Quarterly.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಥೊಡಿಮ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ:

ಅಮೃಂತಾಂಜನ ಡಿಪ್ಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು - ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂದ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed A specific for threatened or habitual abortion and other uterine troubles Must be commensed soon after conception and continued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ ಎಸ್. ಪ್ರಭು, M. B. B. S. ಸಿ ಪಿ ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1 ಮರಾಠರ ಗಲ್ಲಿ ಹುಬ್ಬಳ್ಳಿ.
2. 36 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 17] ತಾರೀಕು 21—8—1942 [ಸಂಚಿಕೆ 33]

ಮಹಾತ್ಮರ ಪಟ್ಟಶಿಷ್ಯ ಮಹಾದೇವ ದೇಸಾಯಿ

ರಾಷ್ಟ್ರಸೇವೆಯಲ್ಲಿ ಸವೆದ ತಪೋಜೀವ!

ಅಖಿಲ ಜಗತ್ತೇ ಮಹಾತ್ಮಾ ಗಾಂಧಿಜಿಯವರ ವಿಷಯ ಕೇಳಿದ್ದರೂ ಅವರ ಹಿನ್ನೆಲೆಯಲ್ಲಿ—ನೆರಳಿನಂತೆ—ಸರ್ವದಾ ಚಲಿಸುತ್ತಿದ್ದ ಒಬ್ಬ ಮಹಾ ಯೋಗಿಯ ಕುರಿತು ಕೆಲವೇ ಜನರು ತಿಳಿದಿದ್ದರು; ಅವರನ್ನು ಕಂಡವರಂತೂ ಬಹಳ ಕಡಿಮೆ ಜನರಿರಬಹುದು ಪ್ರಪಂಚದ ಬೆಳಕಿಗೆ ಮುನ್ನುಗ್ಗಿ ಬರುವ, ಮುಂದಾಳುತನದ ಮಹತ್ವಾಕಾಂಕ್ಷೆಯಿಲ್ಲದೆ ಭಾರತ ಸೇವೆಯ ತಪಸ್ಸಿನಲ್ಲಿಯೇ ಸವೆದ ಆ ಕರ್ಮಯೋಗಿಯೇ ಮಹಾದೇವ ದೇಸಾಯಿಯವರು ಶುದ್ಧ ಬಿಳಿ ಖಾದೀ ಉಡಿಗೆ ತೊಟ್ಟು ಕೈಯಲ್ಲಿ ನಿರಂತರವೂ ಒಂದು ಲೆಕ್ಕಣಿಗೆ ಮತ್ತು ಕಾಗದ ಹಿಡಿದುಕೊಂಡಿದ್ದು, ಗುರುದೇವನ ಅಮೃತಮಯವಾಣಿಯನ್ನು ತನ್ನ ಬರೆಹದ ಧಾರೆಯಿಂದ ಹರಿಸುವ ಉತ್ಸಾಹಿತರಾಗಿ ಗಾಂಧಿಜಿಯವರ ಸೇವೆಯಲ್ಲಿ ಚೆನ್ನಾಗಿ ಹದಗೊಂಡ ಜೀವರತ್ನ ಮಹಾದೇವ ದೇಸಾಯಿಯವರದಾಗಿತ್ತು, ಗಾಂಧಿಜಿಯವರ ಪಟ್ಟಶಿಷ್ಯನಾಗಿ, ಅವರ ಆಪ್ತ ಸಖನಾಗಿ ತನ್ನ ಜೀವನವನ್ನು ಅವರು ಅಂತಹ ಉಚ್ಚತಪಸ್ಸಿದ್ಧಿಗೆ ಅಣಿಮಾಡಿಕೊಂಡಿದ್ದರು

ಮಹಾತ್ಮರಿಗರ್ಪಿಸಿದ ಜೀವ!

ಯಾವನಾದರೊಬ್ಬನು, ತನ್ನ ಪರಮೋಚ್ಚ ಭಕ್ತಿಯಿಂದ, ತನ್ನ ಒಡೆಯನಿಗೆ ವಿಧೇಯನಾಗಿ ತನ್ನ ಇಡೀ ಜೀವನವನ್ನು ಅರ್ಪಿಸುವುದೆಂದರೆ, ನಿಜವಾಗಿಯೂ ಇದಕ್ಕೆ ಅದ್ಭುತ ಧೈರ್ಯಬೇಕು ನಿಶ್ಚಲ ವ್ರತನಿಯಮನಿಷ್ಠೆ ಬೇಕು, ತನ್ನೊಡೆಯನಲ್ಲಿ ಅಂತಹ ಭಕ್ತಿ ಭಾವನೆ ಬೇಕು ಮಹಾತ್ಮಾಜಿಯವರ ಸೇವೆಗೆ ಮನಸ್ಸು ಮಾಡದೆ, ವಕೀಲವೃತ್ತಿಯಲ್ಲಿ ಅವಲಂಬಿಸಿದ್ದರೆ ಮಹಾದೇವ ದೇಸಾಯಿಯವರು ಖಂಡಿತ ಹೆಚ್ಚು ಲಾಭ ಉತ್ಪತ್ತಿ ಐಶ್ವರ್ಯಗಳನ್ನು ಸಂಪಾದಿಸಬಹುದಿತ್ತು ಎಂ. ಡಿ (ಮ ದ) ಎಂಬ ಹೆಸರಿನಲ್ಲಿ ಅವರು ಹರಿಜನದಲ್ಲಿ ಮಹಾತ್ಮರ ಜೀವನವನ್ನೇ ಒಂದು ಬಗೆಯಿಂದ ಜಗತ್ತಿನೆದುರು ಚಿತ್ರಿಸಿತೋರಿಸುತಿದ್ದರು ಎನ್ನಬಹುದು ಹಿಂದಿನ ಮತ್ತು ಇಂದಿನ ಯಾವನೇ ಪತ್ರಿಕಾ ವ್ಯವಸಾಯಿಯೊಬ್ಬನಿಗಿಂತಲೂ ಅವರು ವಿಶಿಷ್ಟರೂ ಶ್ರೇಷ್ಠರೂ ಎಂದು ಘಂಟಾಘೋಷವಾಗಿ ಸಾರಿ ಹೇಳಬಹುದು

ಕಳೆದ ಸುಮಾರು ಇಪ್ಪತ್ತು ವರ್ಷಗಳಿಂದ ಮಹಾದೇವ ದೇಸಾಯಿಯವರ ಜೀವನವು ಮಹಾತ್ಮರಿಗೆ ಅರ್ಪಿತವಾಗಿತ್ತು, ಆಧುನಿಕ ಭಾರತದಲ್ಲಿ ನಿಜವಾಗಿಯೂ ಗಾಂಧಿಜಿಯವರ ವಿಶ್ವಾಸವನ್ನು ಪಡೆದುಕೊಳ್ಳುವುದೆಂದರೆ, ಯಾರಿಗಾದರೂ ಇನ್ನು ಅದಕ್ಕಿಂತ ಅಧಿಕ ಭಾಗ್ಯವಿರಲಾರದು ಆದರೆ ಮಹಾದೇವ ದೇಸಾಯಿಯವರಂತಹ ವಿಧೇಯ ಪಟ್ಟಶಿಷ್ಯನನ್ನು ಪಡೆಯಬೇಕಿದ್ದರೆ ಗಾಂಧಿಜಿಯವರೇ ಭಾಗ್ಯಶಾಲಿಗಳಾಗಿದ್ದರೆನ್ನಬೇಕು. ಇಬ್ಬರೂ ಅವರವರ ಕಾರ್ಯಕ್ಷೇತ್ರಗಳಲ್ಲಿ ಮಹನೀಯ ವ್ಯಕ್ತಿಗಳೇ ಇದ್ದು, ತಮ್ಮ ಉಭಯ ಜೀವಗಳನ್ನೂ ರಾಷ್ಟ್ರದ, ಜನತೆಯ ಸೇವೆಯ ಸಲುವಾಗಿ ಅರ್ಪಿಸಿದವರು! ಇಂತಹ ಮಹಾತ್ಮರಿಬ್ಬರು ಒಂದು ರೀತಿಯಲ್ಲಿ ಅನ್ಯೋನ್ಯ ಆಕರ್ಷಿತರಾಗಿ ಜೀವಿಸುವಂತೆ ಆದುದರಲ್ಲಿ ನಿಜವಾಗಿಯೂ ಯಾವುದೋ ಅದ್ಭುತ ಆಕರ್ಷಣೆಯಿರಬೇಕು ಗಾಂಧಿಜಿ ಮತ್ತು ಅವರ ಆಪ್ತ ಕಾರ್ಯದರ್ಶಿ ಮಹಾದೇವ ದೇಸಾಯಿಯವರಂತೆ, ಹೀಗೆ ಉಭಯ ಜೀವಗಳು ಆದರದಿಂದ ಜತೆಗೂಡಿದ ಬೇರೊಂದು ಘಟನೆಯನ್ನು ಚರಿತ್ರೆಯು ಎಲ್ಲಿಯೂ ಎತ್ತಿ ಹೇಳುವುದಿಲ್ಲ



ವಿಮಾನಬಲ

ಅಸಮಾನ್ಯ ಕಾರ್ಯದರ್ಶಿ!

ಜಗತ್ತಿನ ವ್ಯವಹಾರದಲ್ಲಿ ಕಾರ್ಯದರ್ಶಿಯೆಂಬ ಶಬ್ದಕ್ಕೆ ಯಾವ ಅರ್ಥವಿದೆಯೋ, ಆ ಅರ್ಥವನ್ನು ಮಹಾದೇವ ದೇಸಾಯಿಯವರಿಗೆ ಹಚ್ಚಿ ನೋಡಬಾರದು ಗಾಂಧಿಜಿಯವರಾದರೂ 'ಅವರನ್ನು' ಒಬ್ಬ ಕಾರ್ಯದರ್ಶಿ ಎಂಬಂತೆ ನೋಡಿಕೊಳ್ಳದೆ ತನ್ನ ಜೀವದ ಗೆಳೆಯನೆಂಗಿ ವಿಚಾರಿಸುತ್ತಿದ್ದರು ರಾಜಕೀಯ ವಿಚಾರ ವ್ಯವಹಾರವಿರಲಿ, ಧ್ಯಾನವಿರಲಿ, ದಿನದ ಎಲ್ಲಾ ಸಮಯ ತನ್ನ ಬೆಂಬಳಿಯಲ್ಲಿಯೇ ನಿಂತು ನೋಡುತ್ತಿರುವ ಈ ವ್ಯಕ್ತಿಯನ್ನು ಗಾಂಧಿಜಿಯವರೂ ಬಹಳ ಗೌರವಿಸುತ್ತಿದ್ದರು.

ಇಂತಹ ಸಮರ್ಥ ಕಾರ್ಯದರ್ಶಿಯ ಸಹಾಯವಿಲ್ಲದೆ ತನ್ನ ದಿನನಿತ್ಯದ ಕಾರ್ಯಗಳನ್ನು ನಡೆಸುವುದು ಗಾಂಧಿಜಿಯವರಿಗೆ ಸಾಧ್ಯವೇ ಇರಲಿಲ್ಲ ಕಾರ್ಯಮಗ್ನನಾಗಿರುವ ಮಹಾದೇವ ದೇಸಾಯಿಯವರನ್ನು ನೋಡುವುದೆಂದರೆ ಇನ್ನೊಬ್ಬ ಗಾಂಧಿಯವರನ್ನು ದರ್ಶನಮಾಡಿದಂತೆಯೇ! ಒಂದು ಮಣ್ಣಿನ ಗೋಡೆಯ ಗುಡಿಸಲೇ ಅವರ ನಿವಾಸ ಸ್ಥಳ, ಜಗತ್ತಿನ ಯಾವುದೇ ಭಾಗದಲ್ಲಿ ಇರಲಾರದ ಅತ್ಯಂತ ಸರಲವಾದ 'ಆಫೀಸು ಆವರಣ' ವರ್ಧಾದ ಹಳ್ಳಿಯವರಿಂದಲೇ ಹೆಣೆಯಲ್ಪಟ್ಟ ಚಾಪೆಯೊಂದರ ಮೇಲೆ ಕುಳಿತುಕೊಂಡು, ಅವರು ಜಗತ್ತಿನ ನಾನಾ ಮೂಲೆಗಳಿಂದ ಗಾಂಧಿಜಿಯವರಿಗೆ ಬರುವ ಕಾಗದ ಪತ್ರವ್ಯವಹಾರಗಳನ್ನು ಓದುತ್ತಾ ಬರೆಯುತ್ತಾ ಇರುವರು ಇವೆಲ್ಲವೂ ಅವರ ಮುಂದೆ ರಾಶಿರಾಶಿಯಾಗಿ ಕ್ಷಣಕ್ಷಣವೂ ಬಿದ್ದುಕೊಂಡಿರುವುವು. ಕಡೆಗೆ ಅವೆಲ್ಲವನ್ನೂ ಒಂದು ಮಾಡಿ ಭದ್ರವಾಗಿ ಜಾಗರೂಕರಾಗಿ ಅವರು ತಮ್ಮ ಮುಂದಿರುವ ಮರದ ಕಪಾಟಿನಲ್ಲಿ ತೆಗೆದಿರಿಸುವರು ಅವರ ಸುತ್ತು ಜಗತ್ತಿನ ಮುಖ್ಯ ಪತ್ರಿಕೆಗಳು ಬಿದ್ದುಕೊಂಡಿರುವುವು. ನಿಜವಾಗಿಯೂ ಅಲ್ಲಿನ ಶುದ್ಧತೆ ಸರಳತೆ ಸಾಮಾನ್ಯತೆಗಳನ್ನು ಕಂಡು ಇದು ಜಗದ್ವಿಭೂತಿ ಪುರುಷರಾದ ಗಾಂಧಿಜಿಯವರ ನಿವಾಸಸ್ಥಳವೇ ಎಂದು ಯಾರಾದರೂ ಬೆಚ್ಚರ ಬೆರಗಾಗಬೇಕಾಗಿತ್ತು ಮಹಾದೇವದೇಸಾಯಿಯವರ ಕಣ್ಣಿನ ಕನ್ನಡಕವೂ ಸರಳತೆಯ ಸ್ವರೂಪವೇ ಎನಬೇಕು, ನಿಕ್ಕಲಿನ 'ಫ್ರೇಮಿ'ನಿಂದ ಅವರ ಮುಖದಲ್ಲಿ ಅದು ಸಹಜ ರಮಣೀಯವಾಗಿ ಶೋಭಿಸುತ್ತಿತ್ತು

ದಿನನಿತ್ಯದ ಕಾರ್ಯಗಳು

ಭೂಲೋಕದ ರಾಜನೀತಿ ವಿಶಾರದರಿಗೆ ಯಾರಿಗೇ ಆದರೂ, ಅವರ ಕಾರ್ಯಗಳನ್ನು ಸಾಧಿಸುವ ಸಲುವಾಗಿ, ಕೆಸರು ದಾರಿಯಲ್ಲಿ ದಿನನಿತ್ಯ ಮೈಲುಮೈಲುಗಳ ತನಕ ಸಂಚಾರವನ್ನೂ ಮಾಡುವ ಕಾರ್ಯದರ್ಶಿಯೊಬ್ಬನು ಸಿಗುವುದು ಅಸಾಧ್ಯ ಮಹಾದೇವ ದೇಸಾಯಿಯವರು ಅಂತಹ ಒಂದು ಅಪೂರ್ವ ವ್ಯಕ್ತಿಯಾಗಿದ್ದರು ವರ್ಧಾದಿಂದ ಶೇಗಾಂಗೆ ಐದು ಮೈಲು ದಿನನಿತ್ಯ ನಡೆದುಹೋಗುವುದು ಅವರ ಪ್ರತಿದಿನದ ಕಾರ್ಯವಾಗಿತ್ತು ಜೋರು ಮಳೆಯು ಮುಸಲಧಾರೆಯಾಗಿ ಸುರಿಯುತ್ತಿದ್ದರೂ, ಮೇಲೆ ಉರಿಕೆಂಡದಂತಹ ಕಿರಣಗಳನ್ನು ಬೀರಿ ಸೂರ್ಯನು ಉಗ್ರನಾಗಿದ್ದರೂ, ದಿನನಿತ್ಯವೂ ಮಹಾತ್ಮರನ್ನು ಸಂದರ್ಶಿಸಲು ಬರುವ ಅತಿಥಿಗಳನ್ನು ಹೋಗಿ ಕರೆದುಕೊಂಡು ಬರುವುದೂ ಬಿಟ್ಟುಕೊಡುವುದೂ ಅವರ ದಿನಚರಿಯಾಗಿತ್ತು

ಪ್ರತಿಯೊಂದು ಕೆಲಸವನ್ನೂ ಅವರು ತಾನಾಗಿಯೇ ಪೂರಾ ಮುಗಿಸುತ್ತಿದ್ದರು ಶೇಗಾಂನಲ್ಲಿ ಜೀವನ ನಡೆಸುವುದೆಂದರೆ ಅದು ಹಂಸತೂಲಿಕಾತಲ್ಪದ ಸುಖಶಯನವೇನೂ ಅಲ್ಲ ಆದರೆ ಅದನ್ನು ಏನನ್ನೂ ವಿಚಾರಿಸದೆ ತನ್ನ ಕರ್ತವ್ಯವನ್ನೇ ಎಡೆಬಿಡದೆ ಮಾಡುತ್ತಿರುವ ದೇಸಾಯಿಯವರಿಗೆ, ಅದು ಕಂಟಕಶಯ್ಯೆಯಾಗಿಯೂ ತೋರಿರಲಿಲ್ಲ ತನ್ನ ಬಟ್ಟೆಯನ್ನು ತಾನೇ ಒಗೆದು ಮಡಿಮಾಡುತ್ತಿದ್ದರು ತನ್ನ ಕೋಣೆಯನ್ನು ತಾನೇ ಗುಡಿಸಿ ನಿರ್ಮಲವಾಗಿಡುತ್ತಿದ್ದರು ಮಹಾದೇವ ದೇಸಾಯಿಯವರಂತೆ ತಮ್ಮ ಜೀವನವನ್ನು ಇಂತಹ ಅಗ್ನಿಪರೀಕ್ಷೆಯಲ್ಲಿ ಪರೀಕ್ಷಿಸಿ ಮುಂದೆ ಸಾಗಿಸಲು ಬಹುಮಂದಿ ಇಚ್ಛಿಸುವವರಿರಲಾರರು ನಿಜವಾಗಿಯೂ ಅಂತಹ ಅಗ್ನಿಪರೀಕ್ಷೆಗೆ ಒಳಗಾಗಿ ನಡೆಯಲೂ ಅತುಲ ಆತ್ಮಶಕ್ತಿಯ ಬಲಬೇಕಾಗುತ್ತದೆ

ಜೀವನ ಒಂದು ಘಟನೆ

ಒಮ್ಮೆ ಒಂದು ಘಟನೆಯಾಯಿತು! ಒಂದು ದಿನ ಬೆಳಗಾಲ ಮುಂಜಾವಕ್ಕೆ, ಎಲ್ಲರೂ ಎದ್ದು, ನಿತ್ಯವಿಧಿ ತೀರಿಸಿ, ಫಲಹಾರ ಮುಗಿಸಿ ನಿಂತಿರಲು ಮಹಾದೇವದೇಸಾಯಿಯವರು, ಅವರೆಲ್ಲರಿಗೂ ಒಂದು ಹಳ್ಳಿಗೆ ಹೋಗಿ ಅಲ್ಲಿನ ಹರಿಜನ ವಸತಿಯಲ್ಲಿ ನೈರ್ಮಲ್ಯಮಾಡಲು ಆದೇಶವಿತ್ತರು. ಸ್ವತಃ ದೇಸಾಯಿಯವರೇ ಹೆಗಲಲ್ಲಿ ಬುಕೆ

(೨ನೆಯ ಪುಟಕ್ಕೆ ಮುಂದುವರಿದಿದೆ)

KANNADA ILLUSTRATED WEEKLY

ಮಹಾತ್ಮರ ಪಟ್ಟಶಿಷ್ಯ ಮಹಾದೇವ ದೇಸಾಯಿ

(೧ನೆಯ ಪುಟದಿಂದ ಮುಂದುವರಿದುದು)

ಯೊಂದನ್ನು ಹೊತ್ತುಕೊಂಡು ಕೈಯಲ್ಲಿ ಹಿಡಿಸೂಡಿ ಹಿಡಿದು ಆ ಸ್ವಯಂಸೇವಕ ದಳವನ್ನು ನಡೆಸಿದರು. ನಿಜವಾಗಿಯೂ ಅದು ಆಕಾಶದಲ್ಲಿ ದೇವತೆಗಳು ನಿಂತು ನೋಡಬಯಸುವಷ್ಟು ದರ್ಶನೀಯವಾದ ನೋಟವಾಗಿತ್ತು. ಉದಯಸೂರ್ಯನು ತನ್ನ ಹೊನ್ನ ಬಣ್ಣದ ಕಿರಣಗಳನ್ನು ಅವರ ಮೇಲೆ ಎರಚಿದ್ದನು; ಉದಯಕಾಲದ ಮಂದಸ್ನಿಗ್ಧ ವಾಯು ಅವರ ಮೇಲೆ ಚೆಲುವಾಗಿ ಬೀಸುತಿದ್ದನು. ಅಷ್ಟರಲ್ಲಿ ಎದುರಿಗೆ ಒಂದು ಟೋಂಗಾದಲ್ಲಿ ಸವಾರಿಮಾಡಿ ಬರುವರೊಬ್ಬರು, ಅಲ್ಲಿಗೆ ಬಂದು, ಆ ಗುಂಪಿನಲ್ಲಿ ಮಹಾದೇವ ದೇಸಾಯಿಯವರು ಯಾರೆಂದು ಪ್ರಶ್ನೆ ಮಾಡಿದರು. ಆ ಪಂಗಡದ ಒಬ್ಬರು, ಹೆಗಲಲ್ಲಿ ಬುಟ್ಟಿ ಹೊತ್ತುಕೊಂಡು, ಕೈಯಲ್ಲಿ ಹಿಡಿಸೂಡಿ ಹಿಡಿದು ನಿಂತಿದ್ದ ವ್ಯಕ್ತಿಯ ಕಡೆಗೆ ಕೈತೋರಿಸಿದರು. ಅವರ ಕಿವಿಯು ಅದನ್ನು ನಂಬಲಾರದಾಯಿತು. ಅಂತಹ ಒಬ್ಬ ಹಳ್ಳಿಗಾಡಿನ ಮನುಷ್ಯನನ್ನು ಅವರ ದೃಷ್ಟಿಯು ನಿಜವಾಗಿಯೂ ಗುರುತಿಸಲಾರದು! ಜಗತ್ತಿನ ಮಹಾ ಪುರುಷರೊಬ್ಬರ ಕಾರ್ಯದರ್ಶಿಯವರನ್ನು ಹುಡುಕಲು ಅವರು ಬಂದಿದ್ದರು. ದೇಸಾಯಿಯವರು ಹಾಗೆ ಇರಬಹುದೇ? ಮರುಮಾತನಾಡದೆ ಆ ಗೃಹಸ್ಥರು ಮುಂದಕ್ಕೆ ಹೊರಟುಹೋದರು.

ಆ ಪಂಗಡವು ಸ್ವಲ್ಪ ಸಮಯದಲ್ಲಿಯೇ ಗೊತ್ತುಮಾಡಿದ ಆ ಹಳ್ಳಿಯನ್ನು ಸೇರಿತು. ಆ 'ಹಳ್ಳಿಗಾಡಿನ ಮನುಷ್ಯ'ನು ಒಂದು ಹೊಂಡವನ್ನು, ಒಂದು ಕೈಯಲ್ಲಿದ್ದ ಹಿಡಿಯಿಂದ ಗುಡಿಸಿದ ಕಸದಿಂದ ಇನ್ನೊಂದು ಕೈಯ ಬುಟ್ಟಿಯಲ್ಲಿ ಸೇರಿಸಿ ತುಂಬಿಸುತಿದ್ದರು. ಸೂಟುಬೂಟುಗಳಲ್ಲಿ ವಿರಾಜಮಾನರಾಗಿದ್ದ ಆ ಗೃಹಸ್ಥರು ಈ ಭವ್ಯ ದೃಶ್ಯವನ್ನು ನೋಡಿ ಬೆರಗಾಗಿ ಹೋದರು. ಆಗ ಮಾತ್ರ ಅವರಿಗೆ ಆ 'ಹಳ್ಳಿಯ ಮನುಷ್ಯ'ನೇ ಗಾಂಧಿಜಿಯವರಂತಹ ಮಹಾ ವ್ಯಕ್ತಿಯ ಕಾರ್ಯದರ್ಶಿಯಾಗಲು ಯೋಗ್ಯನು ಎಂಬ ಮನವರಿಕೆಯಾಯಿತು. ಆ ಘಟನೆಯನ್ನು ಪ್ರತ್ಯಕ್ಷ ಕಂಡ ಆ ಗೃಹಸ್ಥರು ಮುಂದಿನ ತಮ್ಮ ಜೀವನವನ್ನು ಹರಿಜನ ವಸತಿ ನೈರ್ಮಲ್ಯದಂತಹ ಜನಸೇವೆಯ ಕಾರ್ಯದಲ್ಲಿಯೇ ಕಳೆದರು!

ಎಳೆಯರ ಗೆಳೆಯ

ಮಹಾತ್ಮಾಜಿಯವರಂತೆ, ಮಹಾದೇವ ದೇಸಾಯಿಯವರಿಗೂ ಮಕ್ಕಳಲ್ಲಿ ಬಹಳ ಅಕ್ಕರೆ. ಗಾಂಧಿಜಿಯವರು ಪ್ರಯಾಣ ಮಾಡುತ್ತಿದ್ದಾಗ, ಅವರು ದೊಡ್ಡ ಮನುಷ್ಯರನೇಕರನ್ನು ಭೇಟಿಯಾಗುವರು; ಸಹಜವಾಗಿ ದೊಡ್ಡ ವಿಷಯಗಳ ಕುರಿತೇ ಆಗ ಮಾತುಕತೆಗಳು ನಡೆಯುವವು! ಹಿಂದೆ 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆಯುತ್ತಿದ್ದಂತೆ ಈ ಮಾತುಕತೆಗಳ ಕುರಿತು ಮಹಾದೇವ ದೇಸಾಯಿಯವರು ಇತ್ತೀಚೆಗೆ 'ಹರಿಜನ'ದಲ್ಲಿಯೂ ಬರೆಯುತ್ತಾ ಇದ್ದರು. ಅಂತಹ ಸಂದರ್ಭದಲ್ಲಿ, ಇತರ ವಿಷಯಗಳಿಗಿಂತ ಯಾವ ತರದಲ್ಲಿಯೂ ಕಡಿಮೆ ಪ್ರಾಧಾನ್ಯತೆ ಸಲ್ಲಿಸದೆ, ಮಹಾತ್ಮಾಜಿಯವರು ಮಕ್ಕಳೊಡನೆ ಮಾಡಿದ ಮಾತುಕತೆಗಳ ವಿಷಯವಾಗಿಯೂ ದೇಸಾಯಿ ಬರೆದಿರುತ್ತಾರೆ.

ಹೀಗೆ ಮಹಾದೇವ ದೇಸಾಯಿಯವರು ಅದ್ಭುತ ಪ್ರತಿಭಾ ಸಾಮರ್ಥ್ಯಗಳನ್ನು, ವಿಶೇಷ ವ್ಯಕ್ತಿತ್ವವನ್ನೂ ಪಡೆದ ಮಹಾ ವಿಭೂತಿ ಪುರುಷರಾಗಿದ್ದರು. ಜನತಾ ಸೇವೆಯ ಸಲುವಾಗಿ ದಿನ ಒಂದರಲ್ಲಿ ೧೯ ತಾಸುಗಳ ಹೊತ್ತು ಅವರು ದುಡಿಯುತ್ತಿದ್ದರು. ಹಗಲಿನ ಹೊತ್ತು ಅವರ ಕೆಲಸಕ್ಕೆ ಸಾಕಾಗುತ್ತಿರಲಿಲ್ಲ. ಅವರು ಬಹಳ ರಾತ್ರಿಯ ವರೆಗೆ ದೀಪವನ್ನು ಉರಿಸಿ ಇಟ್ಟುಕೊಳ್ಳುತ್ತಿದ್ದರು. ಇಂತಹ ಅದ್ಭುತ ಹಾಗೂ ಕಷ್ಟಸಹಿಷ್ಣುವಾದ ಸಹನಾಮೂರ್ತಿ, ರಾಷ್ಟ್ರಪ್ರೇಮಿಯಾದ ಕಾರ್ಯದರ್ಶಿಯೊಬ್ಬನನ್ನು ಪಡೆದು ಗಾಂಧಿಜಿ ಧನ್ಯರಾಗಿದ್ದರು! ಜಗದ ಮಹಾ ಪುರುಷರಲ್ಲಿಯೂ ಮಹಾತ್ಮನೆನಿಸಿದವರ ಮಹಾಕಾರ್ಯದರ್ಶಿಗೆ ಇರಬೇಕಾದ, ಎಲ್ಲಾ ವ್ಯಕ್ತಿತ್ವ ಗುಣಧರ್ಮಗಳೂ

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No 118/32

R. E. P. No. 450/42

ನಾಗಯ್ಯ ಸೆಟ್ಟಿ — ಅರ್ಜಿದಾರ.

ಮತ್ತು

ಗಿರಿ ಸೆಟ್ಟಿ ಕೂಡಾ — ಎದ್ರಿರು.

ಇವರೊಳಗೆ

ಸದ್ರಿ ವ್ಯವಹರಣೆಯ ಎದ್ರಿರು.

2. 3ನೇ ಪ್ರತಿವಾದಿ ಸಂಕಪ್ಪ ಸೆಟ್ಟಿ, ಶೀನ ಸೆಟ್ಟಿರ ಮಗ, ಉಡ್ಪಿ ತಾಲ್ಲೂಕು ಯಣಗುಡ್ಡೆ ಗ್ರಾಮದ ಕಲ್ಯಾಣಾದಿ ಹೊಸಹಿತ್ಲುನೆಯಲ್ಲಿರುವವರು.

6. ಸುಂದರ ಸೆಟ್ಟಿ, 7. ನಾರಾಯಣ ಸೆಟ್ಟಿ, 9. ಗಿರಿಜ ಸೆಟ್ಟಿ, 10. ಸದಾನಂದ ಸೆಟ್ಟಿ, — ಅಕ್ಕಯ ಸೆಟ್ಟಿರ ಮಕ್ಕಳು.

ಕಾರ್ಕಳ ತಾಲ್ಲೂಕು ಕಾಡೂರು ಗ್ರಾಮದ ಕೂಳದು ಎಂಬಲ್ಲಿರುವವರು—ಈ ಎದ್ರಿಂಗೆ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ದಾವೆಯ ಡಿಕ್ರಿಯ ಮೇರೆ ಅರ್ಜಿದಾರರು ನಿಮ್ಮ ಮೇಲೆ ಕೂಡಾ ಸಿರಾಸ್ತಿ ಏಲಮಿಗೆ ಅಪೇಕ್ಷಿಸಿ ಅಮಲ್ಜಾರಿ ದಾಖಲು ಮಾಡಿರುವದರಿಂದ ಸದ್ರಿ ಅಮಲ್ಜಾರಿಯು ಯಾಕೆ ನಡಿಸಲ್ಪಡದು ಎಂಬದು ಸಬಬು ತೋರಿಸಲಿಕ್ಕೆ ತಾ. 11-9-1942ಕ್ಕೆ ಸದ್ರಿ ಕೋರ್ಟಿನಲ್ಲಿ ಇಡಲ್ಪಟ್ಟಿದೆ. ಆ ದಿವಸ ಬೆಳಗ್ಗೆ 11 ಗಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳದೆ ಇದಲ್ಲಿ ಸದ್ರಿ ವ್ಯವಹರಣೆಯು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲಕ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ಕಾರ್ಕಳ 12-8-42 } ಎಂ. ಎಸ್. ಅಧಿಕಾರಿ, ಅರ್ಜಿದಾರನ ಕಡೆ ವಕೀಲ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. 147/1937

R. I. A. No. 374/1942

ರಾಮಕೃಷ್ಣ ಭಟ್—ವಾದಿ ರಿಸೀವರ್ ಅರ್ಜಿದಾರ.

ಮತ್ತು

ನಾರಾಯಣ ಭಟ್ ಸಹ—ಪ್ರ. ರು ಎದ್ರಿರು.

ಇವರೊಳಗೆ

ಕೋರ್ಟು ಹುಕುಂ ಪ್ರಕಾರ ಸದ್ರಿ ವ್ಯವಹರಣೆ 1ನೆ ಎದ್ರಿ ನಾರಾಯಣ ಭಟ್, ಗುಂಡಪ್ಪ ಯಾನೆ ವೆಂಕಟ್ರಮಣ ಭಟ್ರ ಮಗ, ಸಂಗಬೆಟ್ಟು ಗ್ರಾಮ. 4ನೆ ಎದ್ರಿ ಕಮಲು, ಚನ್ನಪ್ಪಾಳ್ವರ ಹೆಂಡ್ತಿ. 6. ಮೋನಪ್ಪ. ಮ್ಯಾನೇಜರಲು ಬಗ್ಗೆ ಗಾರ್ಡಿಯನ್ 4ನೆ ಎದ್ರಿಲು ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ:—

ರಿಸೀವರನಾದ ಅರ್ಜದಾರನನ್ನು ರಿಸೀವರತನದಿಂದ ಡಿಸ್‌ಚಾರ್ಜ (Discharge) ಮಾಡಬೇಕಾಗಿ ಅರ್ಜದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 24-8-42ಕ್ಕೆ ಇಟ್ಟಿದೆ. ಅದ್ರಿಂದ ಆ ಕುರಿತು ಆಕ್ಷೇಪ ಇದ್ರೆ ಸದ್ರಿ ತಾ. 24-8-42ನೆ ದಿವ್ಸ ಬೆಳಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿ ಎದ್ರಿರ ಆಕ್ಷೇಪದ ಉಜೂರು ಶಿವಾಯಿ ತೀರ್ಮಾನಿಸಲ್ಪಡುತ್ತದೆಂಬ ಸಂಗ್ತಿ ಈ ಮೂಲಕ ತಿಳಿಯದೆ.

ಕಾರ್ಕಳ 10-8-42 } **H. K. Gopalkrishna Rao,** ಅರ್ಜಿದಾರನ ಕಡೆ ವಕೀಲ್.

ಮಹಾದೇವ ದೇಸಾಯಿಯವರಲ್ಲಿ ಸಂಪೂರ್ಣ ಅಡಕವಾಗಿದ್ದವು! ಇಂದು ಮಹಾದೇವ ದೇಸಾಯಿಯವರನ್ನು ಕಳೆಕೊಂಡು ಮಹಾತ್ಮರು ಮಾತ್ರವಲ್ಲ ಅಖಿಲ ಭಾರತವೇ ದೀನ ದರಿದ್ರವಾಗಿದೆ!

K. K. Rai.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 278/1941.

R. I. A. 673/1942.

ವಾದಿರು— ಯಡಮೊಗೆ ನಾಗಪ್ಪಯ್ಯ ಕೂಡಾ

ಪ್ರತಿವಾದಿರು—ವೆಂಕಟ ಸುಬ್ರಾಯ ಹೆಬ್ಬಾರ ಕೂಡಾ

ಇದರಲ್ಲುಂಟು 9ನೇ ಪ್ರತಿವಾದಿ ರಾಮಕೃಷ್ಣ ಉಪಾಧ್ಯ-ಗೋವಿಂದ ಉಪಾಧ್ಯರ ಮಗ ಮೈಸೂರು ಪ್ರಾಂತ್ಯ ಶಿವಮೊಗ್ಗಾ ಡಿಸ್ಟ್ರಿಕ್ಟ್ ತೀರ್ಥಹಳ್ಳಿ ರುವವ.

ಸದ್ರಿ 9ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ವಾದಿರು ಮೂಲಗೇಣಿ ಗೇಣಿ ಬಾಕಿ ಬಗ್ಗೆ ಮಾಡಿದ ಸದ್ರಿ ದಾವೆಯಲ್ಲಿ ನಿಮ್ಮನ್ನು ಸಲ್ಲುಮಂಟಾಗಿ ಸೇರಿಸಿಕೊಳ್ಳಬೇಕಾಗಿ ಸದ್ರಿ R.I.A. 673/1942 ನೇ ಅರ್ಜಿಯನ್ನು ದಾಖಲು ಮಾಡಿರುತ್ತಾರೆ. ಸದ್ರಿ ಅರ್ಜಿಯಲ್ಲಿ ವ ಸದ್ರಿ ದಾವೆಯಲ್ಲಿ ನಿಮ್ಮದೇನಾದರೂ ಆಕ್ಷೇಪವಿದ್ದರೆ ತಾರೀಕು 5—9—1942ನೇ ದಿವಸ ಹಗಲು ಹನ್ನೊಂದು ಗಂಟೆಗೆ ಸದರಿ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಖುದ್ದಾಗಲೀ ಯಾ ವಕೀಲರ ಮೂಲಕವಾಗಲೀ ಜ್ಯಾಹಿರು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮನ್ನು ಎಕ್ಸ ಪಾರ್ಟಿಯಾಗಿ ಮಾಡಿ ಸದ್ರಿ ದಾವೆಯ ವ ಅರ್ಜಿಯ ಮುಂದಿನ ಕ್ರಮ ನಡಿಯಲಾಗುವುದು.

(ಕೋರ್ಟು ಹುಕುಂ ಪ್ರಕಾರ)

ಕುಂದಾಪುರ 17-8-1942 } K. Raghunath Shenai, ವಾದಿರ ಕಡೆ ವಕೀಲ್

ನೋಟೀಸು

ಮಂಗ್ಲೂರು ಡಿ. ಮು. ಕೋರ್ಟಿನಲ್ಲಿ

R. E. P. No. 348/1942

O. S. No. 89/1938

ಭಾಗಿ ಸೆಟ್ಟಿ — ಅರ್ಜಿದಾರಳು.

ಮತ್ತು

ದೇವಪ್ಪ ನಾಯ್ಕ ಸಹಾ—ರೆಸ್ಪೊಂಡೆಂಟರು.

ಇವರೊಳಗೆ

8. ರಾಜಗೋಪಾಲ ಯಾನೆ ರಾಜಾರಾಮರಾವ್_ ಭವಾನಿರಾಯರ ಮಗ, ಮಂಗ್ಳೂರು ತಾಲ್ಲೂಕು ಬಡಗು ಯೆಕ್ಕಾರ ಗ್ರಾಮದಲ್ಲಿರುವವರಿಗೆ—

ಈ ಮೂಲಕ ತಿಳಿಯಪಡಿಸುವುದೇನಂದರೆ:

ಮೇಲ್ಕಂಡ ಅಮಲ್ಜಾರಿ ಅರ್ಜಿ ವ್ಯವಹರಣೆಯಲ್ಲಿ ಅರ್ಜದಾರಳು ಹಾಜ್ರುಪಡಿಸಿದ ಸ್ಥಿರಾಸ್ತಿ ಯಿಲಂ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸುವರೇ ಸದ್ರಿ ಅಮಲ್ಜಾರಿ ಅರ್ಜಿಯು ತಾ. 4-9-42ಕ್ಕೆ ಇಟ್ಟಿರುತ್ತದೆ. ಅದ್ದರಿಂದ ಸದ್ರಿ ದಿವ್ಸ ನೀವು ಖುದ್ದಾಗಲೀ ವಕೀಲರ ಮುಖಾಂತರವಾಗಲೀ ಹಗಲು ಘಂಟೆ 10-30ಕ್ಕೆ ಹಾಜರಾಗಿ ಉದ್ಧರಿಸುವದೆ ತಪ್ಪಿದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲಾಗುವುದು.

By order of Court

Mangalore 15-8-1942 } **M. Janardan Mallya,** Vakil for Petitioner

ರೈಲು ಬಂಡಿಗಳ ಸಮಯ

ಇದೇ ಮೇ ತಾ. 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6.25 ಬೆಳಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.30 ಬೆಳಗ್ಗೆ	6.45 ಸಾಯಂ.
ಜಾಲಾರ್‌ಪೇಟೆ ಪೆಸೆಂಜರ್	11.30 ಮಧ್ಯಾಹ್ನ	3.45 ಸಾಯಂ.
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

ಗಾಂಧಿಜಿ ತಾ. ೨೬ಕ್ಕೆ ಉಪವಾಸ ಕೈಕೊಳ್ಳುವರೆ?

ಎಂಬುದಾಗಿ ಒಂದು ಊಹೆಯಿದೆ. ಆ ವಿಷಯವಾಗಿ ಗಾಂಧಿಜಿ ವರ್ಕಿಂಗ್ ಕಮಿಟಿಯವರೊಡನೆ ಚರ್ಚಿಸಿದ್ದಾರೆಂದೂ ಹೇಳಲಾಗಿದೆ. ಚಳವಳವು ಸರಿಯಾಗಿ ನಡೆದರೆ ಹಾಗೂ ಸ್ವಾತಂತ್ರ್ಯ ಪಡೆಯುವುದರಲ್ಲಿ ಜನರು ಆಸಕ್ತಿ ತೋರಿಸಿದರೆ ಅವರು ಉಪವಾಸ ಮಾಡುವುದಿಲ್ಲವಾಗಿ ತಿಳಿಸಿದ್ದುವರೆಂದೂ ಹೇಳಲಾಗಿದುವುದು. ಗಾಂಧಿಜಿಯವರ ಸಮೀಪ ಮಿತ್ರರೂ ಕೂಡ ಅವರು ಉಪವಾಸ ಮಾಡಬಹುದೆಂದೇ ನಂಬುತ್ತಾರೆ.

ಈ ಸ್ಥಳದ ನಿವಾಸಿಗಳು ಅರ್ಜಿ ಹಾಕಬೇಕಾಗಿಲ್ಲ!

ಜಪಾನಿಯರ ಸ್ವಾಧೀನತೆಯಲ್ಲಿರುವ ಚೈನಾದಲ್ಲಿ ಜಪಾನಿಯರು ವ್ಯಾಪಾರಗಳ ಕಚೇರಿಯಲ್ಲಿ ಮೇಲಿನಿಂದ ಕೆಳಗಿನವರಿಗೂ ಯೋಗ್ಯವಾದ ಕೆಲಸಗಳಲ್ಲಿದ್ದ ಚೈನಾದವರನ್ನು ಹೊರ ಹೊರಡಿಸಿದ್ದಾರೆ. ಈಗ ಅಲ್ಲಿ ಚೈನಾ ಕೈಗಾರಿಕೆಯವರಿಲ್ಲ ಮತ್ತು ಚೈನಾ ಅಂಗಡಿಗಾರರೇ ಆಗಲಿ, ಚೈನಾ ಕಸಬುದಾರರೇ ಆಗಲಿ, ಅಥವಾ ಚೈನಾ ಸಂಕ್ಷೇಪ ಲಿಪಿಗಾರರು ಮತ್ತು ಕರ್ಣಿಕರೇ ಆಗಲಿ ಇಲ್ಲ. ಅಲ್ಲದೆ ಬೀದಿಗಳಲ್ಲಿ ಸಾಮಾನುಗಳನ್ನು ಮಾರುವವರು ಕೂಡ ಇಲ್ಲ ಈ ಕೆಲಸಗಳನ್ನೆಲ್ಲಾ ಜಪಾನಿಯರೇ ಮಾಡುತ್ತಾರೆ-ಜಯಿಸಿದ್ದಕ್ಕೆ ಫಲ. ಜಪಾನಿಯರು ಬಂದರೆ ಹೀಗಾಗುತ್ತದೆ.

ಇಂಡಿಯಾ ದೇಶವೂ ಹೀಗಾಗುವುದನ್ನು ಸುಮ್ಮನೆ ನಿಂತು ನೋಡುತ್ತಿರಬೇಡಿರಿ. ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಯರ ಶಕ್ತಿಯು ನಮ್ಮ ದೇಶದ ರಕ್ಷಣೆಗೆ ಬೇಕಾಗಿದೆ.

ಜಪಾನಿಯರನ್ನು ಎದುರಿಸುವುದಕ್ಕೆ ರಾಷ್ಟ್ರೀಯ ಯುದ್ಧ ಮುಖವನ್ನು ರಚಿಸಿರಿ.

“ನ ಹಿ ... [illegible] ...”

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

21–8–1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೧—೮—೧೯೪೨]

ಸಮರಭೂಮಿಯ ಸಂಚಾರ

ಜರ್ಮನರು ರಶ್ಯದಲ್ಲಿ ಕುಬಾನ್ ನದಿಯನ್ನು ದಾಟಿ ಕಾಕಸಸ್ ಕಡೆಗೆ ಮುನ್ನುಗ್ಗಿರುವರು. ಸ್ಟಾಲಿನ್‌ಗ್ರಾಡಿನ ಹತ್ತಿರ ಭಯಂಕರ ಕಾಳಗವಾಗುತ್ತಿದೆ. ಡಾನ್ ನದಿಯ ಪಶ್ಚಿಮ ತೀರದ ಹತ್ತಿರ ಶತ್ರುವು ಬಂದಿರುವನು. ಇಜಿಪ್ತ್ ರಣರಂಗದಲ್ಲಿಯೂ ವಿಮಾನ ಚಟುವಟಿಕೆ ಜೋರಾಗಿದೆ. ಚರ್ಚಿಲರು ಮೋಸ್ಕೋಗೆ ತೆರಳಿ ಸ್ಟಾಲಿನರೊಡನೆ ಮಾತುಕತೆ ನಡೆಸಿದರು. ಅವರು ಹಲವು ನಿರ್ಣಯಗಳನ್ನು ಮಾಡಿರುವರೆಂದು ತಿಳಿದಿದೆ. ಆ ಸಭೆಗೆ ವೇವಲರು ಮತ್ತು ಹರಿಮೇನರೂ ಬಂದಿದ್ದರು. ಈ ಮಾತುಕತೆಯ ವಿಷಯ ರೂಸ್‌ವೆಲ್ಟ್ ಮತ್ತು ಚಿಯಾಂಗ್ ಕೈಶೇಕರಿಗೆ ತಿಳಿಸಲಾಗಿತೆಂದು ಹೇಳಲಾಗುತ್ತದೆ. ಚರ್ಚಿಲರು ಸ್ಟಾಲಿನರನ್ನು ಕಂಡು ಮಾತನಾಡಿದ ಸಂದರ್ಭವು ರಶ್ಯದ ಇತಿಹಾಸದಲ್ಲಿ ಬಹಳ ವಿಷಮ ಕಾಲವಾಗಿದೆ. ನಿಜವಾಗಿ ಮಿತ್ರರು ಸಹಾಯ ಕೊಡುವುದಿದ್ದರೆ ಈಗ ಕೊಡಬೇಕು. ಅಂಥಾ ಅಭಿಪ್ರಾಯದಿಂದಲೇ ಮಾತುಕತೆ ನಡೆದಿದೆ. ಕೂಟದ ಫಲಿತಾಂಶಗಳೇನೆಂದು ಮುಂದಿನ ಘಟನೆಗಳು ತಿಳಿಸುವವು.

ಕಾಕಸಸಿನ ಕಳವಳ

ಕಾಕಸಸ್ ಎಣ್ಣೆ ಗಣಿಗೆ ಜರ್ಮನರು ಕಳೆದ ವಾರವೇ ಪ್ರವೇಶಿಸಿದ್ದು ಈಗ ಅಲ್ಲಿಂದ ಬರುವ ಸುದ್ದಿಗಳು ನಿರಾಶೆಯನ್ನೇ ಸಾರುತ್ತವೆ. ಉತ್ತರ ಮತ್ತು ಮಧ್ಯ ರಶ್ಯಗಳಲ್ಲಿ ಪರಿಸ್ಥಿತಿಯು ಅಷ್ಟೊಂದು ಚಿಂತಾಜನಕವಾಗಿರದಿದ್ದರೂ, ದಕ್ಷಿಣದಲ್ಲಿ ಅದರಲ್ಲೂ ಡಾನ್ ನದಿಯ ದಕ್ಷಿಣದಲ್ಲಿ ಪರಿಸ್ಥಿತಿ ಹದಗೆಟ್ಟಿರುವುದು. ಮಾರ್ಶಲ್ ಟಿಮೊಶೆಂಕೋ ಈಗ ಕಾಕಸಸನ್ನು ಹೀಗೆ ಜರ್ಮನರ ಪ್ರವೇಶಕ್ಕೆ ತೆರೆದಿಟ್ಟು ಸ್ಟಾಲಿನ್ ಗ್ರಾಡ್, ವೋಲ್ಗಾ ಮತ್ತು ಅಸ್ಟ್ರಾಖಾನ್‌ಗಳ ರಕ್ಷಣೆ ಮಾತ್ರ ವಹಿಸಿಕೊಂಡಿರುವುದು ಎಷ್ಟರ ಮಟ್ಟಿಗೆ ಉಚಿತವೋ ನಮಗೀಗ ಹೇಳಬರುವುದಿಲ್ಲ. ಅಂತೂ ಜರ್ಮನರೀಗ ಕಾಕಸಸಿನಲ್ಲಿ ಭರದಿಂದ ಮುನ್ನುಗ್ಗುತ್ತಿದ್ದಾರೆ. ಉತ್ತರ ಕಾಕಸಸಿನ ಸಮತಟ್ಟಾದ ಕುಬಾನ ಪ್ರದೇಶದಲ್ಲಿ ಮುಂದುವರಿಯುತ್ತಾ ಜರ್ಮನ್ ಸೇನೆ ಸ್ಟಾಲಿನ್ ಗ್ರಾಡ್ ನೊವರೊಸಿಸ್ಕ ರೈಲ್ವೆಯನ್ನು ಮುಟ್ಟಿತು. ಅಲ್ಲಿಂದ ಪ್ರೊಲಟಾರಿಯಾ ಸ್ಕಾಯಾ ಎಂಬಲ್ಲಿಗೆ ಹೋಗಿ, ಅಲ್ಲಿ ಇಬ್ಭಾಗವಾಗಿ ಕೆಲವು ಕಪ್ಪು ಸಮುದ್ರದ ಕಡೆಗೂ ಕೆಲವು ಎಣ್ಣೆ ಕಣಿಗಳ ಕಡೆಗೂ ಹೋದವು. ರಶ್ಯನರು ಕುಶೆಶ್ಚಕಾಯಾ ಮತ್ತು ಮೈಯಾ ನದೀ ತೀರದಲ್ಲಿ ವೀರಾವೇಶದಿಂದ ಹೋರಾಡಿದರು, ಸಾಲ್ಸ್ಕ ಮತ್ತು ಬೆಲಿಯುಗ್ಲಿನಿಗಳಲ್ಲಿ ಕಲಿತನದಿಂದ ಕಾದಿದರು. ಕ್ರಾಪೊಟಕಿನ ಮತ್ತು ಮೊಕ್ರಟಿಸ್ಕಗಳಲ್ಲಿ ರಶ್ಯನ್ ಸೇನೆ ಜರ್ಮನರನ್ನು ಪ್ರತಿಭಟಿಸಿತು. ಆದರೆ ಸಮುದ್ರದ ತರಂಗಗಳಂತೆ ಉಕ್ಕೇರಿ ಬರುತ್ತಿರುವ ಜರ್ಮನ್ ಸೇನೆಯನ್ನು ದಿರಿಸುವುದು ಸಾಧ್ಯವಾಗುವುದಿಲ್ಲ. ಜರ್ಮನರು ಇಂದು ಆ ಕಡೆಯಲ್ಲಿ ಬೆನ್ನಟ್ಟಿ ಬರುತ್ತಿರುವರು. ಅಂತೆಯೇ ಕಾಕಸಸೂ ಕೈಬಿಡುವುದೇ ಎಂಬ ಕಳವಳವೂ ಉಂಟಾಗಿದೆ. ಚೆರ್ಕೆಸ್ಕದ ವರೆಗೆ ಬಂದ ಜರ್ಮನರು ಅಲ್ಲಿಂದ ಮುನ್ನುಗ್ಗಿ ಸುಲಭದಲ್ಲಿ ಗ್ರೋಜ್ನಿ ಎಣ್ಣೆ ಕಣಿಯನ್ನು ಸ್ವಾಧೀನಮಾಡಿಕೊಳ್ಳಬಹುದು. ಪ್ರಸಿದ್ಧ ಎಣ್ಣೆ ಕಣಿಗಳೂ, ಎಣ್ಣೆಯನ್ನು ತೋಡಿಸುವ ಯಂತ್ರಗಳೂ ಇರುವ ಖ್ರಾಸ್ನೋಡಾರ ಮತ್ತು ಎಣ್ಣೆಯನ್ನು ಸಾಗಿಸುವ ಬಂದರವಾಗಿರುವ ನೊವೊರೊಸಿಸ್ಕಗಳೂ ಇದರಿಂದ ಸ್ವಾಧೀನತೆ ತಪ್ಪಬಹುದೆಂಬ ಅಂಜಿಕೆಯಿದೆ. ಬಾಟುಮದಿಂದ ಬಾಕುವಿನ ಕಡೆಗೆ ರೈಲ್ವೆ ದಾರಿಯೂ ಇರುವುದರಿಂದ ಚಲನವೂ ಸುಲಭವಾಗಿದೆ. ಈ ಅನಾಹುತವನ್ನು ತಪ್ಪಿಸಬೇಕಾದರೆ ರಶ್ಯನರು ಜರ್ಮನರನ್ನು ಕಾಕಸಸ್ ಕಣಿವೆಗಳಲ್ಲಿ ಜೋರಾಗಿ ಪ್ರತಿಭಟಿಸಿ ಮುಂದಕ್ಕೆ ಅವರು ಒಂದೇ ಹೆಜ್ಜೆಯೂ ಇಡದಂತೆ ಮಾಡಬೇಕು. ರಶ್ಯನರು ಈ ಸಾಹಸವನ್ನು ಮಾಡದೆ ಬಿಡಲಾರರು.

ಸೊಲೊಮನ್ ಸಮರ

ಆಸ್ಟ್ರೇಲಿಯ ದೇಶದ ಈಶಾನ್ಯಕ್ಕೆ ನ್ಯೂಗಿನಿ ಮತ್ತು ನ್ಯೂ ಬ್ರಿಟನುಗಳ ಸಮೀಪದಲ್ಲಿರುವ ಸೊಲೋಮನ್ ದ್ವೀಪ ಸಮುದಾಯವು ಅತ್ಯಂತ ಪ್ರಾಮುಖ್ಯ ಸ್ಥಳದಲ್ಲಿದೆ. ಜಪಾನರು ಕಳೆದ ಎಪ್ರಿಲ್ ತಿಂಗಳಲ್ಲಿ ನ್ಯೂಗಿನಿಗೆ ಕಾಲಿಟ್ಟಾಗಲೇ ಇಲ್ಲಿಗೂ ಆಕ್ರಮಿಸತೊಡಗಿದ್ದರು. ಈ ದ್ವೀಪಗಳು ಜಪಾನರ ವಶವಾದರೆ ಆಸ್ಟ್ರೇಲಿಯದ ಮೇಲೆ ಆಗಾಗ ಆಕ್ರಮಿಸಲು ಸುಲಭವಾಗುವುದಲ್ಲದೆ ಅಮೆರಿಕ ಆಸ್ಟ್ರೇಲಿಯಗಳೊಳಗಿರುವ ವ್ಯವಹಾರವನ್ನು ತಡೆಯಲೂ ಸುಲಭವಾಗುತ್ತದೆ. ಇದರಿಂದಲೇ ನ್ಯೂಗಿನಿ ನ್ಯೂಬ್ರಿಟನ್ ಮತ್ತು ಸೊಲೋಮನ್ ದ್ವೀಪಗಳಲ್ಲಿ ಕೆಲಕಾಲದಿಂದ ಜಪಾನರು ಸೈನ್ಯ ಸಂಗ್ರಹಿಸಿಡುತ್ತಿದ್ದರು. ಇದು ಅಮೆರಿಕದ ಪರೀಕ್ಷಣೆಗೆ ಬಿತ್ತು, ಇನ್ನು ಸುಮ್ಮಗೆ ಇದ್ದರೆ ಕೆಲಸ ಕೆಟ್ಟು ಹೋದೀತೆಂದು ಗ್ರಹಿಸಿತ್ತು. ಒಂದು ಅಮೆರಿಕನರು ಸೊಲೊಮನ್ ದ್ವೀಪಗಳಿಗೆ ಮುತ್ತಿಗೆ ಹಾಕಿದರು. ಈ ಯುದ್ಧವು ಪ್ರಾರಂಭವಾಗಿ ಈಗ ಹಲವು ದಿನಗಳಾದರೂ ಇಲ್ಲಿನ ಸುದ್ದಿಗಳ ವಿವರವಿನ್ನೂ ತಿಳಿದಿಲ್ಲ. ಸೊಲೊಮನಿನ ಮೂರು ದ್ವೀಪಗಳನ್ನು ಅಮೆರಿಕನರು ವಶಪಡಿಸಿರುವರೆಂದು ಒಂದು ಸುದ್ದಿ. ಸೊಲೊಮನ್ ಕಾಳಗವು ಹೀಗೆ ಜಪಾನು ಅಮೆರಿಕಗಳೊಳಗೆ ಆಗುತ್ತದೆ. ಸೊಲೊಮನ್ ದ್ವೀಪದ ಆಕ್ರಮಣವನ್ನು ಇನ್ನೊಂದು ದೃಷ್ಟಿಯಿಂದ ವಿಚಾರಿಸುವವರಿದ್ದಾರೆ. ಎಂದರೆ ಸದ್ಯಕ್ಕೆ ಭಾರತದಲ್ಲಿ ಆಂದೋಲನ ಆರಂಭವಾಗಿದ್ದು ಆಂತರಿಕ ಗೊಂದಲವುಂಟಾದರೆ ಈ ಇದರ ಪ್ರಯೋಜನವನ್ನು ಪಡೆಯಲು ಜಪಾನು ಭಾರತದತ್ತ ಬಂದುಬಿಡಬಾರದೆಂದು ಅದರ ಲಕ್ಷ್ಯವನ್ನು ಇನ್ನೊಂದು ಕಡೆಗೆ ತಿರುಗಿಸಲು ಈ ಸೊಲೊಮನ್ ಕಾಳಗ ಪ್ರಾರಂಭ ಮಾಡಿರಬೇಕೆಂದು ಅವರ ಅಭಿಪ್ರಾಯವಿದೆ.

ಜಪಾನಿನ ಮುಂದಿನ ಹೆಜ್ಜೆ

ಸೈಬೀರಿಯದ ಗಡಿಯಲ್ಲಿ ಅಸಂಖ್ಯ ಸೈನ್ಯ ಸಂಗ್ರಹಿಸಿಟ್ಟಿರುವ ಜಪಾನು, ರಶ್ಯದ ಈ ಕಷ್ಟಕಾಲವನ್ನು ನೋಡಿಕೊಂಡು ಅದರ ಬೆನ್ನ ಹಿಂದೆ ಇರಿದುಬಿಡುವುದೇ? ಅಥವಾ ನೈಋತ್ಯ ಪೆಸಿಫಿಕ್ಕಿನಲ್ಲಿ ಉತ್ತರ ಆಸ್ಟ್ರೇಲಿಯದ ಸಮೀಪವಿರುವ ಕೆಲವು ದ್ವೀಪಗಳನ್ನು ಆಕ್ರಮಿಸಿಕೊಂಡಿರುವ ಜಪಾನು ಆಸ್ಟ್ರೇಲಿಯಾ ಖಂಡವನ್ನು ಮಹಾಪ್ರಮಾಣದಿಂದ ಮುತ್ತುವುದೇ? ಇಲ್ಲವೇ ಭಾರತದ ಗೊಂದಲಮಯ ರಾಜಕೀಯ ಪರಿಸ್ಥಿತಿಯನ್ನು ನೋಡಿಕೊಂಡು ಬರ್ಮದ ಗಡಿನಾಡಿನ ವರೆಗೆ ಬಂದಿಳಿದಿರುವ ಜಪಾನ್ ಬಲವು ಭಾರತವನ್ನು ಆಕ್ರಮಣ ಮಾಡುವುದೇ? ಈ ಮೂರು ಭಾಗಗಳಲ್ಲಿ ಒಂದೇ ಕಾಲಕ್ಕೆ ಆಕ್ರಮಣ ಮಾಡುವುದು ಸಾಧ್ಯವೇ? ಎಂಬೀ ವಿಷಯಗಳು ಇತ್ತೀಚೆಗೆ ರಾಜಕಾರಣಿಗಳ ವಿಚಾರದಲ್ಲಿ ಗೊಂದಲವನ್ನುಂಟು ಮಾಡಿರುವುವು.

ಈಗಿನ ಯುದ್ಧವು ಭೌಗೋಲಿಕ ಪರಿಸ್ಥಿತಿಯನ್ನು ಅನುಸರಿಸಿಕೊಂಡೇ ಇದೆ. ನ್ಯೂಗಿನಿ ಮತ್ತು ಉತ್ತರ ಆಸ್ಟ್ರೇಲಿಯಗಳ ಮೇಲೆ ಆಗುತ್ತಿದ್ದ ಮುಂಗಾರು ಮಳೆ ಈಗ ಮುಗಿದಿರುವುದರಿಂದ ಜಪಾನು ಆಸ್ಟ್ರೇಲಿಯವನ್ನು ಮುತ್ತಲು ಇದು ಯೋಗ್ಯ ಕಾಲವೆಂದು ಕೆಲವರು ಊಹಿಸುತ್ತಾರೆ. ಸಪ್ಟೆಂಬರ್ ತಿಂಗಳ ಮೇಲೆ ಭಾರತದ ಗಡಿಭೂಮಿಗಳ ಪ್ರಕೃತಿ ಅನುಕೂಲವಿರುವುದರಿಂದ ಆನಂತರ ಭಾರತವನ್ನಾಕ್ರಮಿಸಲೂ ಅಸ್ಪದವಿದೆಯೆಂದು ಬೇರೆ ಕೆಲವರು ಅಭಿಪ್ರಾಯಪಡುತ್ತಾರೆ. ಈಗ ರಶ್ಯವು ಸ್ಟಾಲಿನ್ ಗ್ರಾಡ್ ಕಾಕಸಸ್‌ಗಳ ಯುದ್ಧದಿಂದ ವಿಷಮ ಪರಿಸ್ಥಿತಿಗೆ ಬಂದಿರುವಾಗಲೇ ಸೈಬೀರಿಯದಲ್ಲಿರುವ ಬೈಕಾಲ ಸರೋವರದ ಪಶ್ಚಿಮದ ಆಚೆಯ ರಶ್ಯನರನ್ನು ಓಡಿಸಿಬಿಟ್ಟರೆ ಅನುಕೂಲವುಂಟೆಂದೂ ವ್ಲಾಡಿವಾಸ್ಟೋಕ್ ಮೊದಲಾದ ಪ್ರದೇಶಗಳಲ್ಲಿ ಮಿತ್ರರು ನೌಕಾ ವಿಮಾನ ಬಲಗಳನ್ನಿಟ್ಟಿರುವುದರಿಂದ, ಅಲ್ಲಿಂದ ತಮಗೆ ಧಾಳಿಯ ಭೀತಿಯನ್ನರಿತುಕೊಂಡೂ ಈಗಲೇ ಸೈಬೀರಿಯಕ್ಕೆ ಜಪಾನರು ಬೀಳಲೂಬಹುದೆಂದೂ ಇತರರ ಕಲ್ಪನೆಯಿದೆ. ಅಂತೂ ಜಪಾನು ಈಗ ಸಾಧ್ಯವಾದರೆ ಮೂರು ಕಡೆಗಳಿಂದಲೂ ದಂಡಯಾತ್ರೆಗೆ ಹೊರಡಲೂಬಹುದೆಂಬುದು ಹಲವರ ತರ್ಕವಾಗಿರುವುದು.

ಈಜಿಪ್ತ್ ಯುದ್ಧ

ಜನರಲ್ ರೊಮೆಲನು ಇಜಿಪ್ತಿನಲ್ಲಿ ಎಲಾಮೆನಿನಿಂದ ಮುಂದೆ ಸಾಗಿಲ್ಲ. ಜನರಲ್ ಆಚಿನ್‌ಲೆಕ್ಕರೂ ಈಗ ತಣ್ಣಗಾಗಿದ್ದಾರೆ. ಎಲಾಮೆನ್ ರಣರಂಗದ ಪರಿಸ್ಥಿತಿ ಹೀಗಾಗಲು ಅಲ್ಲಿನ ಭೂಪ್ರದೇಶದ ಅನಾನುಕೂಲವೇ ಕಾರಣ. ಕಟಾರಾದಿಂದ ಸಮುದ್ರದ ವರೆಗಿರುವ ರಣಭೂಮಿಯಲ್ಲಿ ಈಗ ಉಭಯಪಕ್ಷದ ಸೈನ್ಯಗಳೂ ಒಂದನ್ನೊಂದು ಎದುರಿಸಿ ನಿಂತಿವೆ. ಇಲ್ಲಿ ಯಾವುದೇ ಸೈನ್ಯವಾದರೂ ಮುಂದೊತ್ತಬೇಕಾದರೆ ಎದುರು ಪಕ್ಷವನ್ನು ಮುರಿದು ಮುನ್ನುಗ್ಗಬೇಕು. ಸುತ್ತಿನಿಂದ ಎಲ್ಲಿಂದಾದರೂ ಬಂದು ವೈರಿಯನ್ನು ಗೆಲ್ಲುವ ಹಾಗಿಲ್ಲ. ಸಾಕಷ್ಟು ಸೈನ್ಯಸಾಮಗ್ರಿಯಿಲ್ಲದೆ ಒಮ್ಮೆಲೇ ಎದುರಿಸಿ ನಿಂತ ವೈರಿಬಲವನ್ನು ಭೇದಿಸಿಹೋಗಲು ಯಾರೂ ಮನಮಾಡಲಾರರು. ಇದರಿಂದಾಗಿ ಈಗ ಇಜಿಪ್ತ್ ರಣರಂಗದಲ್ಲಿ ಸ್ವಲ್ಪ ತಾಟಸ್ಥ್ಯ ಕಂಡುಬರುತ್ತದೆಯೆಂದು ತಿಳಿದುಕೊಳ್ಳಲು ಅವಕಾಶವಾಗಿದೆ. ಅಂತೂ ಈಗ ಉಭಯಪಕ್ಷದವರೂ ತಮ್ಮ ಬಲವನ್ನು ಹೆಚ್ಚಿಸುವ ಪ್ರಯತ್ನದಲ್ಲಿ ಮಗ್ನರಾಗಿರುವರೆಂದು [illegible]

ಜರ್ಮನಿಯ ಮೇಲೆ ಬಾಂಬು

'ಬ್ರಿಟಿಷ್ ವೈಮಾನಿಕ ದಳದೊಡನೆ ಕೂಡಿಕೊಂಡು ಅಮೇರಿಕನ್ ವಿಮಾನಗಳು ಜರ್ಮನಿಯ ಮೇಲೆ ಬಾಂಬು ಧಾಳಿಯನ್ನು ಈಗ ಶುರು ಮಾಡಲಿವೆ, ಇದರಿಂದಲೇ ಜರ್ಮನಿಯ ಧ್ವಂಸ ಕಾರ್ಯವು ಆರಂಭವಾಗಲಿದೆ' ಎಂಬುದಾಗಿ ಬ್ರಿಟನಿನ ವೈಮಾನಿಕ ದಳಾಧಿಪತಿ ಸರ್ ಚಾರ್ಲ್ಸ್ ಪೋರ್ಟಲ್ ಇವರು ಸಾರಿದರು. ಅವರ ವಿಶ್ವಾಸವೇನೆಂದರೆ ಹೀಗೆ ನಿರಂತರ ಜರ್ಮನಿಯ ಮೇಲೆ ಬಾಂಬು ಸುರಿಸುವುದರಿಂದ ಅಲ್ಲಿನ ಉದ್ಯೋಗ, ಯುದ್ಧ ಶಸ್ತ್ರಾಸ್ತ್ರ ನಿರ್ಮಾಣ ಶಕ್ತಿಯು ಕುಂದಿಹೋಗಿ, ತಮಗಾದ ನಷ್ಟವನ್ನು ಭರ್ತಿ ಮಾಡಿಕೊಳ್ಳಲೂ ಜರ್ಮನಿಗೆ ಸಾಧ್ಯವಾಗಲಾರದೆಂದಾಗಿದೆ. ಹಾಗಿದ್ದರೂ ಇಂದು ಅಮೇರಿಕದಲ್ಲಿ ತಯಾರಾಗುತ್ತಿರುವ ವಿಮಾನಗಳ ಸಂಖ್ಯೆಯನ್ನು ಪರಿಗಣಿಸಿದರೆ ಹಾಗೂ ಬ್ರಿಟಿಷ್ ಅಮೇರಿಕನ್ ಬಾಂಧವ್ಯವನ್ನು ಪರ್ಯಾಲೋಚಿಸಿದರೆ ಜರ್ಮನಿಯೊಡನೆ ನಡೆಯುತ್ತಿರುವ ಇಂದಿನ ಯುದ್ಧವನ್ನು ಗೆಲ್ಲುವಲ್ಲಿ ಮಿತ್ರಪಕ್ಷಗಳು ವಿಮಾನ ಬಲವನ್ನೇ ಪ್ರಧಾನವಾಗಿ ಆಧರಿಸಿಕೊಂಡಿದೆಯೆಂಬುದರಲ್ಲಿ ಸಂಶಯವಿಲ್ಲ. ಆದರೆ ಜರ್ಮನಿಯಂತಹ ವಿಶಾಲ ಪ್ರದೇಶದಲ್ಲಿ ಹರಡಿರುವ ಉದ್ಯಮಗಳನ್ನೂ ಹಾಗೂ ಶಸ್ತ್ರಾಸ್ತ್ರ ತಯಾರಿಯ ಕಾರ್ಖಾನೆಗಳು ಕೇವಲ ಬಾಂಬಿನ ಹೊಡೆತದಿಂದ ಮಿತ್ರರು ಗೆದ್ದುಬಿಡಬಹುದೆಂದು ಯಾರಿಗೂ ಹೇಳಲು ಬರುವುದಿಲ್ಲ. ಇವರ ಬಾಂಬು ಮಾತ್ರ ಸಿಕ್ಕಿಯ ಮೊದಲು ಮೊದಲು ಮಿತ್ರ ವಿಮಾನಗಳು ಕೇವಲ ರಾತ್ರಿ ಹೊತ್ತಿನಲ್ಲಿ ಮಾತ್ರ ಜರ್ಮನಿಯ ಮೇಲೆ ಬಾಂಬು ಸುರಿಸುತ್ತಿದ್ದು ಈಗ ನಡು ಹಗಲಲ್ಲಿಯೇ ಜರ್ಮನಿಗೆ ಹೋಗಿ ಬಾಂಬೆಸೆವ ಸಾಹಸ ಮಾಡುತ್ತಿರುವುದನ್ನು ನೋಡಿದರೆ ಎಷ್ಟರಮಟ್ಟಿಗೆ ಮಿತ್ರಪಕ್ಷದ ವೈಮಾನಿಕ ಶಕ್ತಿ ಬೆಳೆದಿದೆಯೆಂದು ತಿಳಿಯಬಹುದು. ಮಾತ್ರವಲ್ಲದೆ ಹೀಗೆ ಒಂದೇ ಸವನೆ ಜರ್ಮನಿಯ ಮೇಲೆ ಮಿತ್ರರು ಬಾಂಬೆಸೆಯುವ ಸಾಹಸವನ್ನು ಸಾಧಿಸಿದರೆ ಹಿಟ್ಲರನಿಗೆ ಇದರಿಂದ ತನ್ನ ರಾಷ್ಟ್ರವನ್ನು ರಕ್ಷಿಸಿಕೊಳ್ಳುವುದರೊಡನೆ ದ್ವಿತೀಯ ರಣರಂಗವೊಂದನ್ನು ಎದುರಿಸುವ ಸಮಸ್ಯೆಯೂ ಉಂಟಾಗುತ್ತದೆ. ಇದು ನಿಜವಾಗಿಯೂ ಸ್ತುತ್ಯ ಕಾರ್ಯ. ಆದರೆ ಜರ್ಮನಿ ತನಕ ಹೋಗಿ ಅಲ್ಲಿಗೆ ಬಾಂಬೆಸೆದು, ಅಲ್ಲಿ ದ್ವಿತೀಯ ರಣರಂಗವನ್ನು ಕಲ್ಪಿಸುವ ಬದಲು ಮಿತ್ರರು ಸಮೀಪದ ಫ್ರಾನ್ಸಿಗೆ ಧಾಳಿಯಿಟ್ಟು ಅಲ್ಲಿ ದ್ವಿತೀಯ ರಣರಂಗವನ್ನು ಕಲ್ಪಿಸುವುದು ಸುಲಭವೂ ಸಮಯೋಚಿತವೂ ಅಲ್ಲವೆ?

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಸ್ವದೇಶಾಭಿಮಾನಿ

ತಾರೀಕು 21—8—1942

ನಮ್ಮ ವಿನಂತಿ

ಗಾಂಧಿಜಿ ಮೊದಲಾದ ರಾಷ್ಟ್ರೀಯ ಮುಖಂಡರನ್ನು ಬಂಧಿಸಿದ ಮೇಲೆ ಭಾರತದ ರಾಜಕೀಯ ರಂಗದಲ್ಲಿ ಹಲವು ಅನಿರೀಕ್ಷಿತ ಘಟನೆಗಳು ಸಂಭವಿಸುತ್ತಿವೆ. ದೇಶದಾದ್ಯಂತ ಕೋಲಾಹಲವುಂಟಾಗಿದೆ. ಕಾಂಗ್ರೆಸ್ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು ಸೆರೆಮನೆ ಸೇರುತ್ತಿದ್ದಾರೆ; ಅಲ್ಲಲ್ಲಿ ಕೆಲಸಗಾರರು ಮತ್ತು ವಿದ್ಯಾರ್ಥಿಗಳು ಮುಷ್ಕರ ಹೂಡುತ್ತಿದ್ದಾರೆ; ಸಭೆಸೇರಿ ಹರತಾಳ ಮಾಡಿ ಜನತೆ ಮುಂದಾಳುಗಳ ಬಂಧನದಿಂದ ತಮಗಾದ ಅತೃಪ್ತಿಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಸರಕಾರವಾದರೂ ಕೆಲವು ಕಡೆ ಉಗ್ರೋಪಾಯಗಳನ್ನು ಕೈಕೊಂಡಿದೆ; ಕಾಂಗ್ರೆಸ್ ಸಂಸ್ಥೆಗಳನ್ನು ನಿಯಮ ಬಾಹಿರವೆಂದು ಸಾರಿಬಿಟ್ಟಿದೆ; ಜನರು ಗುಂಪುಗೂಡಿ ಸಭೆಸೇರಬಾರದಾಗಿ ಆಜ್ಞೆ ಹೊರಟಿದೆ; ಹರತಾಳ ಮಾಡದಂತೆ ವ್ಯಾಪಾರಿಗಳನ್ನು ನಿರ್ಬಂಧಿಸುವ ಅಪ್ಪಣೆಯಾಗಿದೆ. ಕೆಲವು ಕಡೆಗಳಲ್ಲಿ ಸರಕಾರದ ಉಗ್ರೋಪಾಯವನ್ನಿದಿರಿಸುವಷ್ಟು ಅಹಿಂಸಾಬುದ್ಧಿ ಸಹನೆಗಳಿಲ್ಲದೆ ಜನರು ದಂಗೆಯೇಳುತ್ತಿದ್ದಾರೆ. ರೈಲ್ವೆ ಸ್ಟೇಶನು, ಪೋಸ್ಟಾಫೀಸು ಮೊದಲಾದ ಕಟ್ಟಡಗಳ ತಂತಿ ಟೆಲಿಫೋನ್ ರೈಲುದಾರಿ ಮೊದಲಾದುವುಗಳ ನಾಶಕಾರ್ಯಗಳಾಗುತ್ತಿವೆ; ಕಾಂಗ್ರೆಸಿನವರು ನಿರ್ಬಂಧದಲ್ಲಿರುವುದರಿಂದ, ಸರಕಾರವು ಕಾಂಗ್ರೆಸ್ ಆಂದೋಲನವನ್ನು ನಿರ್ಬಂಧಿಸುವ ಪಂಥದಲ್ಲಿರುವುದರಿಂದ ಕಾಂಗ್ರೆಸ್ ಮತ್ತು ಸರಕಾರಗಳಲ್ಲಿ ಯಾವುದು ಬಗ್ಗಬೇಕೋ ತಿಳಿಯದಾಗಿದೆ. ಇಂತಹ ಗೊಂದಲಮಯ ಸಂದರ್ಭವನ್ನು ಹಲವು ದುಷ್ಟರೂ, ಕುತಂತ್ರಗಾರರೂ ಉಪಯೋಗಿಸಿಕೊಂಡು ದೇಶವನ್ನು ವಿನಾಶದ ಹಾದಿಗೆ ಎಳೆಯುವ ಅನ್ಯಾಯಕ್ಕೆ ಪ್ರವೃತ್ತರಾಗಿರುವರು. ಇಂತಹ ಪರಿಸ್ಥಿತಿಯನ್ನು ನಿಷ್ಕ್ರಿಯರಾಗಿ ನಿಂತು ನೋಡುವುದು ಯಾವುದೇ ಭಾರತೀಯನಿಗಾದರೂ ಭೂಷಣವಲ್ಲ; ನ್ಯಾಯವಲ್ಲ. ಈ ಸಂದರ್ಭದಲ್ಲಿ ಇತರ ರಾಜಕೀಯ ಪಕ್ಷಗಳು ಮುಂದೆ ಬಂದು ಕೆಲಸಮಾಡಬೇಕು. ಬಂದೊದಗಿದ ಬಿಕ್ಕಟ್ಟನ್ನು ಬಗೆಹರಿಸಬೇಕು. ಕಾಂಗ್ರೆಸು ಮತ್ತು ಸರಕಾರಗಳೊಳಗೆ ಸಂಧಾನವಾಗುವಂತೆ ಪ್ರಯತ್ನಿಸಬೇಕು. ಅಧಿಕಾರದಲ್ಲಿರುವ ರಾಷ್ಟ್ರೀಯ ಮನೋಭಾವದ ಪ್ರಭಾವಶಾಲೀ ಮುಖಂಡರು ಸಹಕರಿಸಬೇಕು; ದೇಶವನ್ನು ಅಶಾಂತಿ ಅನ್ಯಾಯಗಳಿಂದ ರಕ್ಷಿಸಬೇಕು ಎಂಬುದು ನಮ್ಮ ವಿನಂತಿಯಾಗಿದೆ.

ಭಾರತೀಯ ಸದಸ್ಯರಲ್ಲಿ!

ವೈಸರಾಯರ ವಿಸ್ತರಿತ ಕಾರ್ಯಕಾರೀ ಮಂಡಳದಲ್ಲಿ ಈಗ ಹನ್ನೊಂದು ಮಂದಿ ಭಾರತೀಯ ಸದಸ್ಯರಿದ್ದಾರೆ. ಅವರಲ್ಲಿ ಹಲವರು ಒಳ್ಳೆಯ ಪ್ರಭಾವಶಾಲಿಗಳು; ಬರಿಯ ಅಧಿಕಾರಲಾಲಸೆಯಿಂದ, ಹಣದಾಸೆಯಿಂದ ಆ ನೌಕರಿಗೆ ಕೈಕೊಟ್ಟವರೆಂದು ದೂರುವಷ್ಟು ಸಾಮಾನ್ಯ ವ್ಯಕ್ತಿಗಳು ಅವರಲ್ಲ; ಸರ್ಕಾರ್, ಅಣೆ, ಸಿ. ಪಿ. ಪ್ರಭೃತಿಗಳು ಒಂದಾನೊಂದು ಕಾಲದಲ್ಲಿ ಉಜ್ವಲ ರಾಷ್ಟ್ರೀಯ ಮನೋವೃತ್ತಿಯವರಿದ್ದರೆಂಬುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಈಗ ಅವರ ಸತ್ವ ಪರೀಕ್ಷೆಯ ಕಾಲ ಬಂದಿದೆ. ಭಾರತದ ಸಮಸ್ಯೆಯನ್ನು ಬಗೆಹರಿಸುವ ಹೆಚ್ಚಿನ ಹೊಣೆಗಾರಿಕೆ ಅವರ ಮೇಲೆ ಬಿದ್ದಿದೆ. ಸರಕಾರವಾದರೂ ಈ ಹನ್ನೊಂದು ಮಂದಿ ಭಾರತೀಯ ಸದಸ್ಯರ ಹೆಸರಲ್ಲಿ ಕಾರ್ಯ ಮಾಡುತ್ತಿರುವಾಗ ತಮ್ಮ ಸ್ಥಾನದ ತಮ್ಮ ಹೆಸರಿನ ಗೌರವವನ್ನು ಕಾಪಾಡಿಕೊಳ್ಳುವ ಕರ್ತವ್ಯ ಅವರದಾಗಿದೆ. ವೈಸರಾಯರ ಮೇಲೆ ಆ ಮೂಲಕ ಬ್ರಿಟಿಷ ಪ್ರಭುತ್ವದ ಮೇಲೆ ಅವರು ಒತ್ತಾಯ ಹಾಕಬೇಕು. ರಾಷ್ಟ್ರೀಯ ಮನೋಭಾವವನ್ನು ಮರ್ದನದಿಂದಲೇ ಅಡಗಿಸಿ ಬಿಡಬಹುದೆಂಬ ನೀತಿಗೆ ಅವರು ಬೆಂಬಲ ಕೊಡುವುದರಲ್ಲಿ ಅರ್ಥವಿಲ್ಲ. ಅದು ಅವರಿಗೆ ಕೀರ್ತಿಯನ್ನೂ ತರಲಿಕ್ಕಿಲ್ಲ. ಕುಂಭಕೋಣದಲ್ಲಿ ವಿದ್ಯಾರ್ಥಿಗಳು ಒಟ್ಟುಗೂಡಿ, ಅಣೆಯವರೊಡನೆ ವೈಸರಾಯರಿಗೆ ಮುಖಂಡರನ್ನು ಬಿಡುಗಡೆ ಮಾಡುವಂತೆ ಒತ್ತಾಯಮಾಡಿರೆಂದು ಕೇಳಿಕೊಂಡರು. ಅಣೆಯವರು ಹಾಗೆ ಮಾಡುವುದಾಗ್ಗಿ ಸಮಾಧಾನ ಹೇಳಿದರೆಂದೂ ಕೇಳುತ್ತೇವೆ. ಡಿಲ್ಲಿಗೆ ಹೋದಾಗ ಅಣೆಯವರು ಈ ವಿಷಯವನ್ನು ಖಂಡಿತ ಮರೆತುಬಿಡಲಾರರೆಂದು ನಾವು ನಂಬುತ್ತೇವೆ. ಸರ್ಕಾರರಾದರೂ ಈಗ ಡಿಲ್ಲಿಗೆ ಬಂದಿದ್ದಾರೆ; ಅವರೂ ವೈಸರಾಯರೊಡನೆ ಚರ್ಚಿಸಲು ಮರೆಯಬಾರದು, ಸರ್ ಸಿ. ಪಿ.ಯವರೂ ಅಲ್ಪಕಾಲದ ಸೇವೆಯ ಸಂದರ್ಭವನ್ನು ರಾಷ್ಟ್ರಹಿತಕ್ಕಾಗಿ ಉಪಯೋಗಿಸಿಕೊಳ್ಳಲು ಮರೆಯಬಾರದು. ಹೀಗೆ ಇತರ ವೈಸರಾಯರ ಕೌನ್ಸಿಲಿನ ಭಾರತೀಯ ಸದಸ್ಯರೆಲ್ಲರೂ ಒಂದು ನಿಶ್ಚಿತ ಅಭಿಪ್ರಾಯಕ್ಕೆ ಬಂದು, ವೈಸರಾಯರಿಗೆ ಸಂಧಾನಮಾಡಲು ಒತ್ತಾಯ ಹಾಕಿದರೆ ಇಂದಿನ ಗೊಂದಲವನ್ನು ಪರಿಹರಿಸಲು ಸಾಧ್ಯವಿದೆಯೆಂದು ನಮ್ಮ ನಂಬಿಕೆಯಿದೆ; ಇದರಿಂದಲೇ ನಿಜವಾಗಿ ಅವರ ಸತ್ವಪರೀಕ್ಷೆಯೂ ಆಗುತ್ತದೆ. ಹಾಗಾಗಿ ಈ ಹನ್ನೊಂದು ಮಂದಿ ಭಾರತೀಯ ಸದಸ್ಯರಲ್ಲಿ ಭಾರತದ ಬಿಕ್ಕಟ್ಟನ್ನು ಬಗೆಹರಿಸಿರೆಂದು ನಮ್ಮ ಆಗ್ರಹದ ವಿನಂತಿಯಿರುವುದು.

ರಾಜಕೀಯ ಪಕ್ಷಗಳಲ್ಲಿ

ದೇಶದ ಸ್ವಾತಂತ್ರ್ಯವನ್ನು ಗಳಿಸಬೇಕೆಂಬ ಸಮಾನ ಧ್ಯೇಯವುಳ್ಳ ಕಾಂಗ್ರೆಸ್ ಭಿನ್ನವಾದ ಇತರ ರಾಜಕೀಯ ಪಕ್ಷಗಳೂ ಇವೆ; ಅವುಗಳು, ಅವುಗಳ ಮುಖಂಡರೂ ಈಗ ಮುಂದೆ ಬಂದು ಕೆಲಸ ಮಾಡಬೇಕಾಗಿದೆ. ಕಾಂಗ್ರೆಸ್ ಮುಖಂಡರನ್ನು ನಿರ್ಬಂಧಿಸಿದ ನಿಮಿತ್ತ ಈಗ ಅವರ ಕೈಕಟ್ಟಿ ಹೋಗಿದೆ; ಹಾಗೂ ಅವರ ಅನುಯಾಯಿಗಳು ಇಂದು ಹೋರಾಟಕ್ಕಿಳಿದಿದ್ದಾರೆ. ಕಾಂಗ್ರೆಸು ಹೋರಾಟಕ್ಕಿಳಿದಿರುವುದಾದರೂ ದೇಶದ ಸ್ವಾತಂತ್ರ್ಯಕ್ಕಾಗಿಯೇ ಎಂಬುದರಲ್ಲಿ ಯಾರೂ ಭಿನ್ನಾಭಿಪ್ರಾಯಪಡಲಾರರು. ಆದರೆ ಅವರು ಹೋರಾಟ ಹೂಡಿದ ಸಂದರ್ಭವು ಯೋಗ್ಯವಲ್ಲವೆಂದೋ ಅವರ ಕೇಳಿಕೆ ಉಗ್ರವಾಗಿತ್ತೆಂದೋ ಹೀಗೆ ಇತರ ಪಕ್ಷಗಳ ಆಕ್ಷೇಪವಿರಬಹುದು. ಹಾಗೆ ಹೇಳುತ್ತಾ ಕುಳಿತುಕೊಳ್ಳಲು ಇದು ಸಮಯವಲ್ಲ; ಸರಕಾರವನ್ನೋ ಕಾಂಗ್ರೆಸನ್ನೋ ಟೀಕಿಸುತ್ತಾ ನಿಷ್ಕ್ರಿಯರಾಗಿ ಬಿದ್ದು ಬಿಡುವುದೂ ಭೂಷಣವಲ್ಲ. ಮುಸ್ಲಿಂಲೀಗು, ಹಿಂದೂ ಮಹಾಸಭೆಗಳಂತಹ ಪ್ರಮುಖ ಸಂಘಗಳೂ ಮುಂದೆ ಬರಬೇಕು. ಮುಸ್ಲಿಂಲೀಗಾದರೂ ಪಾಕಿಸ್ಥಾನದ ಮಂಗಮಸ್ತಿಯನ್ನು ಹಿಡಿದು ನೇತಾಡಬಾರದು. ಹಿಂದೂ ಮಹಾ ಸಭೆಯೂ ಅಖಂಡ ಹಿಂದುಸ್ಥಾನದ ಘೋಷಣೆ ಮಾಡುವುದರಲ್ಲಿಯೇ ಸಮಯಹಾಳುಮಾಡಬಾರದು; ಪಾಕಿಸ್ಥಾನವಾಗಲಿ ಅಖಂಡಹಿಂದುಸ್ಥಾನವಾಗಲಿ ನಮ್ಮ ರಾಷ್ಟ್ರದ ಒಳಗೇ ಇದೆಯಷ್ಟೆ? ರಾಷ್ಟ್ರವು ಸ್ವತಂತ್ರವಾಗುವುದು ಎಲ್ಲರ ಧ್ಯೇಯವಷ್ಟೆ? ಹಾಗಾದರೆ ಎಲ್ಲರೂ ಈಗ ಮುಂದೆ ಬಂದು, ದೇಶದ ಸ್ವಾತಂತ್ರ್ಯವನ್ನು ಸಾಧಿಸುವುದರೊಡನೆ, ಯುದ್ಧ ಯತ್ನಕ್ಕೆ ಆತಂಕವಾಗದಂತಹ ಸೂಚನೆಯೊಂದನ್ನು ಸರಕಾರದ ಮುಂದಿಟ್ಟು ಕೆಲಸಮಾಡುವುದು ಮುತ್ಸದ್ದಿತನ. ನಮ್ಮ ನಮ್ಮೊಳಗಿನ ಸಮಸ್ಯೆಯನ್ನು ನಾವು ನಾವೇ ಪರಿಹರಿಸಿಕೊಳ್ಳಲು ಸಮರ್ಥರಾಗಿಲ್ಲವೆ? ಅಂತೂ ದೇಶದ ಅಶಾಂತಿ ಅನ್ಯಾಯಗಳನ್ನು ತಡೆಗಟ್ಟಲು, ಶತ್ರುವಿಗೆ ಕಾಲಿಡುವರೆ ಆಸ್ಪದವಾಗದಂತೆ ಮಾಡಲು ಈಗ ಇತರ ರಾಜಕೀಯ ಪಕ್ಷದ ಮುಖಂಡರು ಮುಂದೆ ಬಂದು ಕಾರ್ಯರಂಗಕ್ಕಿಳಿಯಬೇಕೆಂದೂ ನಮ್ಮ ವಿನಂತಿಯಾಗಿದೆ.

ಜನತಾ ಜನಾರ್ದನನಲ್ಲಿ

ಭಾರತದ ಹಲವು ಕಡೆಗಳಲ್ಲಿ ವಿನಾಶಕಾರ್ಯಗಳಾಗುವ ವಿಷಾದಕರ ಸುದ್ದಿ ಬಂದಿದೆ. ಇದರಿಂದ ನಿಜವಾಗಿಯೂ ದೇಶಕ್ಕೆ ಹಾನಿಯೇ ಆಗುವುದು. ಶತ್ರುವು ಬಂದಾಗ ಸಂಪತ್ತನ್ನು ಸುಟ್ಟುಹಾಕುವ ರಷ್ಯದ ಧೋರಣೆಯೊಂದು ಉಂಟು; ಅದನ್ನಾದರೂ ನಮ್ಮ ದೇಶದಲ್ಲಿ ಆಚರಣೆಗೆ ತರಬಾರದೆಂದು ಗಾಂಧಿಜಿ ಮೊದಲಾದ ಹಲವು ರಾಷ್ಟ್ರ ಮುಖಂಡರು ವಿನಂತಿಸಿಕೊಂಡಿದ್ದರು; ಹೀಗಿರುತ್ತಾ ಈಗ ಕೆಲವು ಕಡೆ ಆಗುತ್ತಿರುವ ಈ ತರದ ದೊಂಬಿ, ಗಲಭೆಗಳು ತೀರಾ ಖಂಡನೀಯವಿವೆ. ಕಟ್ಟಡಗಳನ್ನು ಸುಡುವುದು, ಜೀವನ ವ್ಯವಹಾರ ಸೌಕರ್ಯ ಸಾಧನಗಳನ್ನು ನಾಶಮಾಡುವುದು ಇದರಿಂದೆಲ್ಲಾ ಮೊದಲೇ ದರಿದ್ರನಾಗಿರುವ ನಮ್ಮ ದೇಶವು ಇನ್ನೂ ದಾರಿದ್ರ್ಯದ ರಸಾತಳಕ್ಕೆ ಅದ್ದಿಹೋಗುವುದು. ಗಾಂಧಿಜಿಯವರಾದರೂ ಈ ತರದ ಹಿಂಸಾಕಾರ್ಯವು ಕಾಂಗ್ರೆಸಿನ ಹೆಸರಲ್ಲಿ ನಡೆಯುತ್ತಿದೆಯೆಂಬ ವಾರ್ತೆ ಕೇಳಿದರೆ ಖಂಡಿತ ಸಂತಾಪಪಡುವರು; ಒಂದು ಪಕ್ಷ ಇದಕ್ಕಾಗಿಯೇ ಮರಣಾಂತ ಉಪವಾಸ ಕೈಕೊಳ್ಳಲೂಬಹುದು. ಇಂದು ದೇಶದ ಉದ್ದಗಲದಲ್ಲಿ ಆಗುತ್ತಿರುವ ಹಿಂಸೆಯ ವಿನಾಶಕಾರ್ಯಗಳು ರಾಷ್ಟ್ರಘಾತುಕವಿವೆ; ಇದನ್ನು ಸರ್ವ ವಿಧದಿಂದಲೂ ಸರ್ವರೂ ನಿಲ್ಲಿಸಲು ನೆರವಾಗಬೇಕೆಂದು ಜನತಾ ಜನಾರ್ದನನಲ್ಲಿ ನಾವು ವಿನಂತಿಸಿಕೊಳ್ಳುತ್ತೇವೆ.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪನೆ: ೧೯೦೬.

ಅಮೆರಿಯವರ ಹೇಳಿಕೆ

"ಸರಕಾರವು ಯೋಗ್ಯ ಕ್ರಮ ಕೈಕೊಂಡಿದೆ"

"ಕಾಂಗ್ರೆಸು ಕೈಕೊಂಡಿದ್ದ ಕಾರ್ಯಕ್ರಮವು ಅನರ್ಥಕಾರಕವಾಗಿದ್ದಿತು"

ಇಂಡಿಯಾ ಸೆಕ್ರೆಟರಿ ಆಫ್ ಸ್ಟೇಟರಾದ ಎಲ್. ಎಸ್. ಅಮೆರಿಯವರು ಲಂಡನಿನಿಂದ ಬ್ರಾಡ್‌ಕಾಸ್ಟ್ ಭಾಷಣ ಮಾಡುತ್ತಾ, ಭಾರತದ ಪರಿಸ್ಥಿತಿಯನ್ನು ಕುರಿತು ತಿಳಿಸಿದರು.

"ಕಾಂಗ್ರೆಸ್ ಪಾರ್ಟಿಯು ಮಾಡಿರುವ ನಿರ್ಣಯ ಮತ್ತು—ಅದರಿಂದ ಉಂಟಾಗಬಹುದಾಗಿದ್ದ ಅನರ್ಥ ಇವುಗಳನ್ನೆಲ್ಲಾ ನೋಡಿಕೊಂಡು ಇಂಡಿಯಾ ಸರಕಾರವು ಈ ಚಳವಳಿವು ಬಲವಾಗುವುದಕ್ಕೆ ಮುಂಚಿತವಾಗಿಯೇ ತ್ವರಿತವಾದ ಮತ್ತು ಬಲವಾದ ಕಾರ್ಯಕ್ರಮ ಕೈಕೊಂಡಿದೆ" ಎಂಬುವಾಗಿ ಅಮೆರಿಯವರು ತಿಳಿಸಿದರು.

"ಹೆಚ್ಚಿನ ಕ್ರಮ ಕೈಕೊಳ್ಳಬಹುದಾಗಿತ್ತು ಆದರೆ ಕೇವಲ ಆಗಬಹುದಾದುದನ್ನು ತಪ್ಪಿಸುವಂತಹ ಕ್ರಮವನ್ನು ಮಾತ್ರ ಕೈಕೊಂಡು ಸರಕಾರವು ಸಮಾಧಾನ ಹೊಂದಿದೆ."

"ನಿಜವಾದ ತೊಂದರೆಯು ಕಾಂಗ್ರೆಸು ಕೇಳುತ್ತಿದ್ದ ಕೇಳಿಕೆಯಲ್ಲ, ಆದರೆ ಅದು ಕೈಕೊಳ್ಳಬೇಕೆಂದು ನಿರ್ಧರಿಸಿದಂತಹ ಮತ್ತು ಕೆಲವು ಕಾಲದಿಂದ ಸಿದ್ಧತೆಯಾಗುತ್ತಿದ್ದಂತಹ ಕಾರ್ಯಕ್ರಮವೇ ಅಪಾಯಕರವಾಗಿದ್ದುದು" ಎಂದು ಅವರೆಂದರು

ಹಿಂದೂದೇಶದ ಒಳಗಲಾಟೆಯಲ್ಲಿ ಅಮೆರಿಕನ್ ಸೈನಿಕರು ಪ್ರವೇಶಿಸಕೂಡದು

ಎಂಬುದಾಗಿ ಅಮೆರಿಕದ ಸರಕಾರೀ ಪ್ರಕಟಣೆ ಹೊರಟಿದೆ. ಹಿಂದೂದೇಶವನ್ನು ಅಕ್ಷರಾಷ್ಟ್ರಗಳ ಆಕ್ರಮಣದಿಂದ ರಕ್ಷಿಸುವುದು ಮಾತ್ರ ಅವರ ಕೆಲಸವಾಗಿದೆಯೆಂದು ಎಚ್ಚರಿಸಲಾಗಿದೆ. ಅಮೆರಿಕನ್ ಪ್ರಜೆಗಳ ಹಾಗೂ ತಟಸ್ಥರಾಗಿರಬೇಕೆಂದೂ ತಿಳಿಸಲಾಗಿದೆ

ಎಡ್ವೊಕೇಟ್ ಜನರಲರ ರಾಜಿನಾಮೆ

ಬಿಹಾರಿನ ಎಡ್ವೊಕೇಟ್ ಜನರಲರಾದ ಶ್ರೀ ಬಲದೇವ ಸಹಾಯರು ತಮ್ಮ ಸರಕಾರೀ ಕೆಲಸಕ್ಕೆ ರಾಜಿನಾಮೆಯಿತ್ತಿರುವರು.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಚರ್ಚಿಲ್ ಸ್ಟಾಲಿನರು ಮೋಸ್ಕೋದಲ್ಲಿ ಭೇಟಿಯಾದರು!

ಚರ್ಚಿಲರು ಮೋಸ್ಕೋಗೆ ತೆರಳಿ ಸ್ಟಾಲೀನರನ್ನು ಕಂಡು ಮಾತನಾಡಿದರು. ಜರ್ಮನರು ಕುಬಾನ್ ನದಿ ದಾಟಿದರು. ಕಾಕಸಸ್ ಕಡೆಗೆ ಜರ್ಮನ್ ಸೇನೆ ಮುನ್ನುಗ್ಗುತ್ತಿದೆ. ಇಜಿಪ್ತ ರಣರಂಗದಲ್ಲಿ ವೈಮಾನಿಕ ಚಟುವಟಿಕೆ ಸಾಗುತ್ತಿದೆ!

ಜರ್ಮನರು ಕುಬಾನ್ ನದಿ ದಾಟಿದರು

ಕಾಕಸಸಿನಲ್ಲಿ ನಾಜಿಗಳ ಮುನ್ನುಗ್ಗುವಿಕೆ

ಅಟ್ಲಾಂಟಿಕ್ ಘೋಷಣೆಯ ವಾರ್ಷಿಕ ದಿನ

ಚರ್ಚಿಲರಿಗೆ ರೂಸ್‌ವೆಲ್ಟರ ಸಂದೇಶ

ತಾ. 14ರಂದು ಅಟ್ಲಾಂಟಿಕ್ ಘೋಷಣೆಯ ವಾರ್ಷಿಕ ದಿನವಾಗಿದ್ದು ಚರ್ಚಿಲರಿಗೆ ರೂಸ್‌ವೆಲ್ಟರು ಈ ಕೆಳಗಿನಂತೆ ಸಂದೇಶ ಕಳುಹಿಸಿದ್ದಾರೆ.

ಒಂದು ವರ್ಷದ ಹಿಂದೆ ಇದೇ ತಾರೀಕಿಗೆ ಎರಡು ಸ್ವತಂತ್ರ ರಾಷ್ಟ್ರಗಳ ಪ್ರತಿನಿಧಿಗಳಾಗಿ ನೀವು ಮತ್ತು ನಾವು ಕೂಡಿ ವಿಚಾರಿಸಿ ಅಟ್ಲಾಂಟಿಕ್ ಘೋಷಣೆ ಮಾಡಿದೆವು. ಈ ದಿನ ಘೋಷಣೆಯಲ್ಲಿ ಅಡಕವಾದ ಮುಖ್ಯ ತತ್ವಗಳ ಸಿದ್ಧಿಗಾಗಿ ಎಲ್ಲರಿಗೂ ಸಮಾನವಾದ ಶತ್ರುವಾಗಿರುವ ಪಾಶವೀ ಶಕ್ತಿಯನ್ನು ಎದುರಿಸಲು ಒಂದಾದ ರಾಷ್ಟ್ರಗಳು ಒಂದಾಗಿವೆ. ಜಯವು ನಮಗೆ ಲಭಿಸಿದೊಡನೆ ನಾವೆಲ್ಲರೂ ಭುಜಕ್ಕೆ ಭುಜವನ್ನು ಜೋಡಿಸಿ ನಮ್ಮ ತತ್ವಗಳಲ್ಲಿ ಅಡಕವಾದ ಆದರ್ಶವನ್ನು ರೂಪಗೊಳಿಸಲು ಯತ್ನಿಸುವ.

ನಹಾಸಪಾಶರ ವ್ಯರ್ಥ ಸಂಧಾನ?

ಜವಾಹರರಿಗೆ ಸೂಚನೆ!

ಇಜಿಪ್ತದ ಮುಖ್ಯ ಮಂತ್ರಿಗಳಾದ ನಹಾಸಪಾಶರವರು ಹಿಂದುಸ್ತಾನದ ಬಿಕ್ಕಟ್ಟಿನಲ್ಲಿ ಸಂಧಾನ ಮಾಡಲು ಕೈಹಾಕಿ ನಿರಾಶರಾದರೆಂದು 'ಅಲ್ ಅಹ್ರಂ' ಎಂಬ ಕೈರೊ ಪತ್ರಿಕೆ ತಿಳಿಸುತ್ತದೆ. ಪಂ. ಜವಾಹರಲಾಲರ ಸ್ನೇಹಿತರಾದ ನಹಾಸಪಾಶಾರು ಬ್ರಿಟನ್ನದ ಬಗ್ಗೆ ಕಾಂಗ್ರೆಸು ತಳೆದಿರುವ ಧೋರಣೆಯನ್ನು ಬದಲಾಯಿಸುವಂತೆ ಪ್ರಯತ್ನಿಸಬೇಕೆಂದು ಜವಾಹರಲಾಲರಿಗೇ ಒತ್ತಾಯಪಡಿಸಿದರಂತೆ. ಈ ಸಂಧಾನವು ವ್ಯರ್ಥವಾದರೂ ಎರಡೂ ಪಕ್ಷದವರು ಈ ಬಗ್ಗೆ ಧನ್ಯವಾದಗಳನ್ನರ್ಪಿಸಿದರಂತೆ.

"ಕೇವಲ ಪೋಲೀಸರನ್ನು ಅವಲಂಬಿಸುವದು ಸರಿಯಲ್ಲ"

ಕಾಂಗ್ರೆಸಿನೊಡನೆ ಸಂಧಾನ ನಡೆಸಲೇ ಬೇಕು

ಬ್ರಿಟಿಶ್ ಪತ್ರಿಕೆಗಳ ಸೂಚನೆ

ಶಾಂತಿ ಸ್ಥಾಪನೆಯ ಸಲುವಾಗಿ ಕೇವಲ ಪೋಲೀಸ, ಮತ್ತು ಸೈನಿಕರನ್ನು ಅವಲಂಬಿಸುವದು ವಿವೇಕಿ ಸರಕಾರದ ಲಕ್ಷಣವಲ್ಲ. ಅದಕ್ಕೂ ಮುಂದೆ ಹೋಗಿ ನಿಜವಾದ ಕಾರಣವನ್ನು ಕಂಡುಹಿಡಿದು ಅದನ್ನು ಬಗೆಹರಿಸಬೇಕು. ಕಾಂಗ್ರೆಸ್ಸಿನೊಡನೆ ಸಂಧಾನ ಮಾಡುವದು ಇನ್ನು ಮುಂದೆ ಶಕ್ಯವೇ ಇಲ್ಲವೆಂದು ತಿಳಿದು ವರ್ತಿಸುವದು ಅಸಹಾಸ್ಯಕರ. ಆದ್ದರಿಂದ ಮೊದಲು ಹಿಂದೀ ಜನರ ಮೂಲ ಬೇಡಿಕೆಗಳನ್ನು ತಿಳಿದುಕೊಂಡು ಅವನ್ನು ಪೂರೈಸಲು ಪ್ರಯತ್ನಿಸಬೇಕು ಮತ್ತು ಹಿಂದುಸ್ಥಾನದ ಪ್ರಶ್ನೆಯನ್ನು ಶಕ್ಯವಿದ್ದಷ್ಟು ಹಿಂದೀಯರೇ ಬಿಡಿಸಲು ಪ್ರಯತ್ನಿಸುವದಕ್ಕೆ ಅವಕಾಶ ಕೊಡಬೇಕು' ಎಂದು ಮ್ಯಾಂಚೆಸ್ಟರ ಗಾರ್ಡಿಯನ ಪತ್ರಿಕೆ ಬರೆದಿರುವದು. ಅಸಹಕಾರ ಚಳವಳಿಯನ್ನು ನಿಲ್ಲಿಸುವಂತೆ ಬ್ರಿಟಿಶ ಕೂಲಿಕಾರ ಪಕ್ಷವು ಕಾಂಗ್ರೆಸ್ಸಿಗೆ ವಿನಂತಿ ಮಾಡಿಕೊಂಡಿರುವದು.

ರಾಷ್ಟ್ರಪತಿ ಅಝಾದರ ಪತ್ರ

ರೂಜವೆಲ್ಟ ಮತ್ತು ಚಿಯಾಂಗ್ ಕೈಶೇಕರಿಗೆ ಕಳಿಸಲಾಯಿತು

ಭಾರತದ ಬೇಡಿಕೆಯನ್ನು ಕುರಿತು ರಾಷ್ಟ್ರಪತಿ ಮೌಲಾನಾ ಅಬುಲ್ ಕಲಂ ಅಝಾದರು ರೂಜವೆಲ್ಟ ಮತ್ತು ಜನರಲ್ ಚಿಯಾಂಗ ಕೈಶೇಕರಿಗೆ ಪತ್ರ ಬರೆಯುವ ಮೊದಲೇ ಸೆರೆ ಹಿಡಿಯಲ್ಪಟ್ಟರಷ್ಟೆ. ಆ ಪತ್ರವನ್ನು ಆಚಾರ್ಯ ಕೃಪಲಾನಿಯವರ ಪತ್ನಿಯವರಾದ ಶ್ರೀಮತಿ ಸುಚೇತಾ ಕೃಪಲಾನಿಯವರು ದಿಲ್ಲಿಯಲ್ಲಿರುವ ಚೀನಿ ಮತ್ತು ಅಮೆರಿಕನ ರಾಯಭಾರಿಗೆ ಕಳಿಸಿ ಅದನ್ನು ರೂಜವೆಲ್ಟರಿಗೂ ಜನರಲ್ ಚಿಯಾಂಗ ಕೈಶೇಕರಿಗೂ ಮುಟ್ಟಿಸುವಂತೆ ಕೇಳಿಕೊಂಡಿರುವರು.

ಮಚ್ಛಲಿಪಟ್ಟಣ ರೈಲ್ವೆ ಸ್ಟೇಶನಿಗೆ ಮುತ್ತಿಗೆ

ಗುಡ್ಸ್‌ಶೆಡ್ಡಿಗೆ ಬೆಂಕಿ ಹಚ್ಚಲಾಯಿತು

ಕಲ್ಕತ್ತಾ, ಗುಂತೂರಗಳಲ್ಲಿ ಗುಂಡುಹಾರಿಸಿದರು

ಎಂ. ಎಸ್. ಎಂ. ರೈಲ್ವೆಯ ತೆನಾಲಿ ಸ್ಟೇಶನದಲ್ಲಿ ನಡೆದ ಗೊಂದಲವು ಪತ್ರಿಕೆಯಲ್ಲಿ ಪ್ರಸಿದ್ಧವಾಗಿದ್ದು ಅದರ ವಿವರಗಳು ಕೆಳಗೆ ಕಂಡಂತಿದ—ಜನತೆಯ ಒಂದು ದೊಡ್ಡ ಸಮೂಹವು ಸ್ಟೇಶನದಲ್ಲಿ ನುಗ್ಗಿ ಹಳಿಗಳನ್ನು ಕಿತ್ತೊಗೆಯುತಲ್ಲದೆ ಗುಡ್ಸ್‌ಶೆಡ್ಡಿಗೆ ಬೆಂಕಿ ಹಚ್ಚಿದರು. ಅದೇ ಸಮಯಕ್ಕೆ ಪುರಿ ಎಕ್ಸ್‌ಪ್ರೆಸ್ ಗಾಡಿಯು ಬರಲು ಜನರು ಅದರಿಂದ ಪ್ರಯಾಣಿಕರು ಇಳಿಯುವವರೆಗೆ ತಡೆದು ಅನಂತರ ಅದಕ್ಕೂ ಬೆಂಕಿ ಹಚ್ಚಿದರು. ಇದೇ ರೀತಿ ಚಿರಾಲ ಸ್ಟೇಶನ್ ಮತ್ತು ಮೆಟಪಾಳ್ಯಂ ಸ್ಟೇಶನ್‌ಗಳಲ್ಲಿಯೂ ಮಾಡಲಾಯಿತು. ತಂತಿ ಟೆಲಿಫೋನುಗಳು ಸಂಪೂರ್ಣವಾಗಿ ಕತ್ತರಿಸಲ್ಪಟ್ಟಿವೆ. ಇದೇ ರೀತಿ ಮತ್ತೆ ಕೆಲವು ಸ್ಟೇಶನುಗಳ ಮೇಲೆ ಧಾಳಿಯಾದ ಸುದ್ದಿ ಬಂದಿದೆ. ಮದ್ರಾಸಿನಿಂದ ಕಲ್ಕತ್ತೆಗೆ ಹೊರಟಿದ್ದ ಮೈಲ್ ಗಾಡಿಯು ಚಿನ್ನಗಂಜಾಂದಲ್ಲಿಯೇ ತಡೆಹಿಡಿಯಲ್ಪಟ್ಟಿರುವುದು.

ಧೂರ್ತ ಕೃತ್ಯದ ಖಂಡನೆ

ಸಿ. ಆರ್. ರ ಹೇಳಿಕೆ

ಜನರು ದೊಂಬಿ ಗಲಭೆ ಮೊದಲಾದುವುಗಳನ್ನು ನಡೆಸುತ್ತಿರುವುದನ್ನು ಖಂಡಿಸಿ ಶ್ರೀ ರಾಜಗೋಪಾಲಾಚಾರ್ಯರು ಹೀಗೆ ಹೇಳುತ್ತಾರೆ. 'ಸಂಪತ್ತನ್ನು ಸುಟ್ಟುಹಾಕುವ' ನೀತಿಯನ್ನು ಕಾಂಗ್ರೆಸ್ ಮುಖಂಡರು ಖಂಡಿಸಿದ್ದು, ಶತ್ರುಗಳು ಮುಂದೆ ಬಂದಾಗ ಅಂತಹ ನೀತಿಯನ್ನಾದರೂ ಕೈಕೊಳ್ಳುವದಿರುತ್ತ್ವ. ಈಗ ಕೆಲವರು ಕಾಂಗ್ರೆಸಿನ ಹೆಸರಲ್ಲಿ ಕಟ್ಟಡಗಳಿಗೆ, ರೈಲ್ವೆ ಸ್ಟೇಶನುಗಳಿಗೆ ಬೆಂಕಿ ಕೊಡುವುದು ಮುಂತಾದ ಕೆಟ್ಟ ಕೆಲಸಗಳನ್ನು ಮಾಡುವುದು ಖಂಡನೀಯವಾಗಿದೆ. ಇಂತಹ ಕೆಲಸದಿಂದ ಗಾಂಧಿಜಿಯವರ ಉದ್ದೇಶವೂ ಸಿದ್ಧಿಸಲಾರದು"

ವ್ಯಾಪಾರಿಗಳು ಹರತಾಳ ಮಾಡಕೂಡದು ಸರಕಾರದ ಕಟ್ಟಾಜ್ಞೆ!

ಹರತಾಳದ ಸಂಧರ್ಭದಲ್ಲಿ ಅಂಗಡಿಗಳನ್ನು ಹಾಗೂ ಕಾಫಿ, ಚಾ ಮತ್ತು ಹೋಟೇಲುಗಳನ್ನು ಮುಚ್ಚುವುದನ್ನು ಸರಕಾರವು ಸಂರಕ್ಷಕ ಕಾಯಿದೆಯನ್ವಯ ನಿರ್ಬಂಧಿಸಿದೆ.

ಜನಜೀವನಕ್ಕೆ ಆಗತ್ಯವುಳ್ಳ ಪೂರೈಕೆಯನ್ನು ಮಾಡುವ ಸಲುವಾಗಿ ಅಂಗಡಿ ಮತ್ತು ಹೋಟೇಲುಗಳ ಮಾಲಕರು ಹರತಾಳವಾದಾಗ ಅಂಗಡಿ ಮತ್ತು ವಿಶ್ರಾಂತಿ ಗೃಹಗಳನ್ನು ತೆರೆದಿಡುವಂತೆ ಹುಕುಂ ಕೊಡಲು ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸಂರಕ್ಷಕ ಕಾಯಿದೆಯನ್ವಯ ಅಧಿಕಾರ ಕೊಡಲಾಗಿದೆ.

ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯ ವಿರುದ್ಧವಾಗಿ ಯಾರಾದರೂ ಅಂಗಡಿ ಅಥವಾ ವಿಶ್ರಾಂತಿ ಗೃಹಗಳನ್ನು ಮುಚ್ಚಿದರೆ ತಮಗೆ ಯುಕ್ತವೆಂದು ಕಂಡವರ ಮೂಲಕ ಅಂಥ ಅಂಗಡಿ ಮತ್ತು ಹೋಟೆಲುಗಳನ್ನು ತೆರೆಯಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ವ್ಯಾಪಾರ ಸಾಗಿಸಬಹುದು. ಅಲ್ಲದೆ ತಮ್ಮ ಹುಕುಮಿನಲ್ಲಿ ನಿರ್ದಿಷ್ಟಗೊಳಿಸಿದ ದರದಲ್ಲಿ ಸಾಮಾನುಗಳನ್ನು ವಿಕ್ರಯಿಸಬಹುದು. ಈ ಹುಕುಮನ್ನು ಉಲ್ಲಂಘಿಸಿದವರಿಗೆ ೩ ವರ್ಷಗಳ ವರೆಗಿನ ಅವಧಿಯ ಶಿಕ್ಷೆ, ದಂಡ ಎರಡನ್ನೂ ವಿಧಿಸಲಾಗುವುದು.

ಪುಂಡ ತೆರಿಗೆಯ ಯೋಜನೆ

ಹೊಸ ಶಾಸನಗಳು

ಮುಖಂಡರ ದಸ್ತಗಿರಿಯನ್ನನುಸರಿಸಿ ಭಾರತದ ಬೇರೆ ಬೇರೆ ಕಡೆಗಳಲ್ಲಿ ಗಲಭೆಯೆದ್ದು, ತಂತಿ ಕಡಿಯೋಣ, ಬೆಂಕಿ ಹಚ್ಚೋಣ ಮೊದಲಾದ ದುರ್ಘಟನೆಗಳು ನಡೆಯುತ್ತಿರುವ ಕಾರಣ ಇಂಡಿಯಾ ಸರಕಾರದವರು ಎರಡು ಹೊಸ ಶಾಸನಗಳನ್ನು ಜಾರಿಗೆ ತರಲಿರುವರು. ಮೊದಲನೆಯ ಕಾಯಿದೆಯನ್ವಯ, ರೈಲ್ವೆ ಮಾರ್ಗಗಳನ್ನೂ ಟೆಲಿಗ್ರಾಫ್—ಟೆಲಿಫೋನ್ ತಂತಿಗಳನ್ನೂ ಕಡಿದವನನ್ನು ಕಠಿನ ಶಿಕ್ಷೆಗೊಳಪಡಿಸುವರು. ಎರಡನೆಯ ಶಾಸನದಂತೆ, ಎಲ್ಲಿ ಇಂತಹ ದುರ್ಘಟನೆಗಳು ನಡೆಯುತ್ತವೆಯೋ ಅಲ್ಲಿಯ ಜನರ ಮೇಲೆ ಪುಂಡ ತೆರಿಗೆ (Punitive tax) ಹೇರಿಸುವರು.

ಮಹಾದೇವ ದೇಸಾಯಿಯವರ ನಿಧನ

ಮಹಾತ್ಮಾಜಿಯವರ ಆಪ್ತಕಾರ್ಯದರ್ಶಿ ಶ್ರೀ ಮಹಾದೇವ ದೇಸಾಯಿಯವರು ತಾ. ೧೫ರಂದು ಬೆಳಗ್ಗೆ ಹೃದಯಸ್ತಂಭನದಿಂದ ಸೆರೆಮನೆಯಲ್ಲಿ ನಿಧನರಾದರೆಂದು ತಿಳಿಯಲು ತುಂಬಾ ವಿಷಾದವಾಗುತ್ತದೆ. ಶ್ರೀ. ದೇಸಾಯಿಯವರ ಶವ ಸಂಸ್ಕಾರವು ಹಿಂದೂ ಪದ್ಧತಿಯಂತೆ ಡಿಟೆನ್ಯೂಸ್ ಮಾಡಿದ ಸ್ಥಳದ ಹತ್ತಿರ ಮಾಡಲಾಯಿತು. ಗಾಂಧಿಜಿ ಆಗ ಹಾಜರಿದ್ದರು.

ಶ್ರೀ. ಮಹಾದೇವ ದೇಸಾಯಿಯವರು ಗಾಂಧಿಜಿ ಶಿಷ್ಯರಾಗುವ ಮೊದಲು ಹೋಮ್ ರೂಲ್ ಚಳವಳಿಯ ಆರ್ಗನೈಸಿಂಗ್ ಸೆಕ್ರೆಟರಿಯಾಗಿದ್ದರು. (೧೯೧೬-೧೭) ಮತ್ತೆ ಗಾಂಧಿಜಿ ಶಿಷ್ಯರಾಗಿ ಅವರ ಪ್ರೈವೆಟ್ ಸೆಕ್ರೆಟರಿಗಳಾದರು, ಅಲ್ಲಾಬಾದಿನ 'ಇಂಡಿಪೆಂಡೆಂಟ್' ಪತ್ರಿಕೆಯ, ಆ ಮೇಲೆ ಗಾಂಧಿಜಿಯವರ 'ಯಂಗ್ ಇಂಡಿಯ' 'ನವಜೀವನ್' 'ಹರಿಜನ್' ಪತ್ರಿಕೆಗಳ ಸಂಪಾದಕರಾಗಿದ್ದರು. ೧೯೨೧, ೩೦, ೧೯೩೨, ೪೦ ಹೀಗೆ ಹಲವು ಸಲ ದೇಶಕ್ಕಾಗಿ ಸೆರೆಮನೆ ಸೇರಿದ್ದರು. ಕಳೆದ ಆಗಸ್ಟ ೯ರಂದು ಗಾಂಧಿಜಿಯೊಡನೆ ಅವರೂ ಬಂಧಿಸಲ್ಪಟ್ಟು ಸೆರೆಮನೆಯಲ್ಲಿಯೇ ಮೃತರಾದರು.

ಬಂಗಾಳ ಮಂತ್ರಿಮಂಡಳ ರಾಜೀನಾಮೆ ಕೊಡಬಹುದು

ಸರಕಾರದ ಇಂದಿನ ಧೋರಣದಲ್ಲಿ ಅತೃಪ್ತಿ ಹುಟ್ಟಿರುವುದರಿಂದ ನಿಷೇಧ ಸೂಚನೆಯಾಗಿ ಬಂಗಾಳ ಮಂತ್ರಿಮಂಡಳವು ರಾಜಿನಾಮೆ ಕೊಡಬಹುದೆಂದು ವಾರ್ತೆಯಿದೆ.

ಮಂಗಳೂರಲ್ಲಿ ವಿದ್ಯಾರ್ಥಿಗಳ ಶಾಲಾ ಬಹಿಷ್ಕಾರ

ವ್ಯಾಪಾರಿಗಳ ಪ್ರಚಂಡ ಹರತಾಳ

ಮಂಗಳೂರು ನಗರದಲ್ಲಿ ತಾ. 18ರಿಂದ ಆರಂಭಿಸಿ ವ್ಯಾಪಾರಸ್ಥರು ಮೂರು ದಿನಗಳ ಪ್ರಚಂಡ ಹರತಾಳವನ್ನು ಆಚರಿಸುತ್ತಿದ್ದಾರೆ. ನಗರದ ಪ್ರಮುಖ ಬೀದಿಗಳ ಅಂಗಡಿಗಳು ಮಾತ್ರವಲ್ಲದೆ ನಗರದಿಂದ ದೂರ ದೂರದ ಬೀದಿಗಳ ಅಂಗಡಿಗಳೂ ಮುಚ್ಚಲ್ಪಟ್ಟಿವೆ.

ಮಂಗಳೂರಿನ ಕಾಲೇಜು ವಿದ್ಯಾರ್ಥಿಗಳು ಹಾಗೂ ಹೈಸ್ಕೂಲು ವಿದ್ಯಾರ್ಥಿಗಳು ತಾ. 19ರಿಂದ ಶಾಲಾ ಬಹಿಷ್ಕಾರವನ್ನು ಪ್ರಾರಂಭಿಸಿದ್ದಾರೆ. ಕಾಲೇಜುಗಳಲ್ಲಿ ಹಾಗೂ ಕೆಲವು ಹೈಸ್ಕೂಲುಗಳಲ್ಲಿಯೂ ಬಹಿಷ್ಕಾರವು ಯಶಸ್ವಿಯಾಗಿರುವುದು. ಯಶಸ್ವಿಯಾಗದ ಶಾಲೆಗಳ ಬಾಗಿಲುಗಳಲ್ಲಿ ವಿದ್ಯಾರ್ಥಿ ಮುಖಂಡರು ನಿಂತುಕೊಂಡು ಪಿಕೆಟಿಂಗ್ ಆರಂಭಿಸಿದ್ದಾರೆ. ಕೆಲವು ಹೈಸ್ಕೂಲುಗಳು ತಾ. 19ರ ಮಧ್ಯಾಹ್ನದ ಮೇಲೆ ಶಾಲೆ ಮುಚ್ಚಿದ್ದವು.

ತಾ. 19ರಂದು ಸಂಜೆಗೆ ವಿದ್ಯಾರ್ಥಿ ಮಹಾಜನರಿಂದ ಕೂಡಿದ ಪ್ರಚಂಡ ಮೆರವಣಿಗೆಯೊಂದು ನಗರದ ಬೀದಿಗಳಲ್ಲಿ ಸಂಚರಿಸಿ 'ನಮ್ಮ ಮುಖಂಡರನ್ನು ಬಿಡಿರಿ' 'ರಾಷ್ಟ್ರೀಯ ಸರಕಾರ ಸ್ಥಾಪಿಸಿರಿ' 'ವಿದ್ಯಾರ್ಥಿಗಳೇ ಮುಷ್ಕರ ಹೂಡಿರಿ' ಎಂಬ ಜಯಘೋಷದೊಡನೆ ನೆಹ್ರೂ ಮೈದಾನಕ್ಕೆ ಸಾರ್ವಜನಿಕ ಸಭೆ ಸೇರುವಲ್ಲಿಗೆ ಹೋಯಿತು. ಮೈದಾನಿನಲ್ಲಿ ಶ್ರೀ. ಕೆ. ನರಸಿಂಹ ಹೊಳ್ಳರ ಅಧ್ಯಕ್ಷತೆಯಿಂದ ಸಭೆ ಸೇರಿ ಶ್ರೀಗಳಾದ ಕೆ. ಎಸ್. ಕಾರಂತ, ಪದ್ಮನಾಭ ಉಳ್ಳಾಲ, ಕೃಷ್ಣ ಇವರು ಭಾಷಣವಿತ್ತರು. ಸುಮಾರು ಹದಿನೈದು ಸಾವಿರದಷ್ಟು ಜನಸಂದಣಿ ನೆರೆದಿತ್ತು.

ಮೊಗವೀರರ ಹರತಾಳ

ಮಂಗಳೂರು ತಾಲೂಕಿನ ಹತ್ತಾರು ಗ್ರಾಮಗಳ ಮೊಗವೀರರು ತಾ. ೨೦ರಂದು ಸಂಪೂರ್ಣ ಹರತಾಳಮಾಡಿರುವರು. ಪೇಟೆಯಲ್ಲಿ ಮೀನಿನ ಮಾರ್ಕೆಟು ವ್ಯಾಪಾರವೂ ಬಂದಾಗಿರುವುದು.

ಉಡುಪಿ

ಉಡುಪಿ ಶ್ರೀ. ಲಕ್ಷ್ಮೀವೆಂಕಟೇಶ ದೇವಸ್ಥಾನದ ಭಜನೆ ಸಪ್ತಾಹ—ಶ್ರೀ. ಸನ್ನಿಧಿಯಲ್ಲಿ ವರುಷಂಪ್ರತಿ ನಡೆದು ಬರತಕ್ಕ ಭಜನೆ ಸಪ್ತಾಹ ಮಹೋತ್ಸವವು ಎಂದಿನಂತೆ ಈ ವರುಷವೂ ಇದೇ ಶ್ರಾವಣ ಶು. ೪ಯು (ತಾ. 16-8-'42) ರವಿವಾರ ಮೊದಲುಗೊಂಡು ಶು. ೧೧ಯು (ತಾ. 23—8—'42ನೇ) ರವಿವಾರ ಪರ್ಯಂತ ನಡೆಯುವುದು. ಈ ವರ್ಷ ಶ್ರೀ ಕಾಶೀಮಠಾಧೀಶರಾದ ಶ್ರೀಮತ್ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಇಲ್ಲಿಯೇ ಚಾತುರ್ಮಾಸ ವ್ರತಾನುಷ್ಠಾನವನ್ನು ಆಚರಿಸಿರುವುದರಿಂದ, ಗುರು ದೇವತಾಸನ್ನಿಧಿಯಲ್ಲಿ ಜರಗಲಿರುವ ಈ ಹರಿಕೀರ್ತನಾಮಹೋತ್ಸವಕ್ಕೆ ತಾವುಗಳು ಸರ್ವರೂ ಸಂತಮಂಡಳಿಯೊಡನೆ ಬಂದು, ಈ ಮಹೋತ್ಸವದಲ್ಲಿ ಸಹಕರಿಸಿ, ಸಾಂಗಗೊಳಿಸಿ, ಶ್ರೀಗುರು ದೇವರ ಶ್ರೀಮುದ್ರಿಗಂಧಪ್ರಸಾದವನ್ನು ಸ್ವೀಕರಿಸಿ, ಕೃತಾರ್ಥರಾಗಬೇಕಾಗಿ ಆತ್ಯಾದರದಿಂದ ಭಜನೆ ಸಪ್ತಾಹ ಮಂಡಳಿಯವರು ಅಪೇಕ್ಷಿಸುತ್ತಾರೆ.

ಮಾರಾಟಕ್ಕೆ ಸಿದ್ಧವಾಗಿದೆ!

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೨ನೆಯ ದರ್ಜೆಯ ಕಥೆಗಳು 0–1–6

ಪ್ರಕಟವಾಗಲಿದೆ

೩ನೆಯ ದರ್ಜೆಯ ಭೂವಿವರಣೆ 0–2–0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಕೆಲ ಪತ್ರಿಕೆಗಳು ಪ್ರಕಟಣೆ ನಿಲ್ಲಿಸಿವೆ

ಸರಕಾರದ ಧೋರಣೆಯ ನಿಷೇಧವಾಗಿ—

ಬಂಧನ, ಲಾಠೀ, ಗುಂಡು, ಗಲಾಟೆಗಳು!

ಕಲ್ಕತ್ತದ ಎಲ್ಲಾ ರಾಷ್ಟ್ರೀಯ ಪತ್ರಿಕೆಗಳು, ಅಮೃತ ಬಜಾರ್, ವಿಶ್ವಮಿತ್ರ, ಯುಗಾಂತರ ಮೊದಲಾದುವುಗಳು ಸರಕಾರದ ಪತ್ರಿಕಾ ನಿರ್ಬಂಧದ ನಿಷೇಧಾರ್ಥ ಪ್ರಕಟಣೆ ನಿಲ್ಲಿಸಿವೆ. ಅಲ್ಲಲ್ಲಿ ಕಾಂಗ್ರೆಸ್ ಮುಖಂಡರ ಬಂಧನ, ಸಭೆ ಚೆದರಿಸಲು ಲಾಠಿ ಗುಂಡುಗಳ ಉಪಯೋಗ, ಜನರ ಗಲಾಟೆಗಳು ನಡೆಯುತ್ತಲಿವೆ.

ಪತ್ರಿಕೆಗಳ ಮೇಲೆ ನಿರ್ಬಂಧ

ನಿಷೇಧ ಸೂಚನೆಗಾಗಿ ಪತ್ರಿಕೆಗಳು ನಿಲ್ಲಿಸಲ್ಪಟ್ಟಿವೆ.

ಮಹಾತ್ಮರು ಆರಂಭಿಸಿದ ಆಂದೋಲನಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಿಸದಂತೆ ಸರಕಾರದವರು ಹೊಸ ನಿರ್ಬಂಧ ಮಾಡಿದ್ದಾರೆ. ಪತ್ರಿಕೆಗಳಿಗೆ ವಾರ್ತೆ ಕೊಡುವವರು ಕಲೆಕ್ಟರರಲ್ಲಿ ತಮ್ಮ ಹೆಸರು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿದೆ. ಹಾಗೆ ರಿಜಿಸ್ಟರ್ ಮಾಡಿಸಿಕೊಂಡವರು ಕೊಟ್ಟ ವರದಿ ಸರಕಾರಕ್ಕೆ ಅಹಿತವೆಂದು ಕಂಡು ಬಂದರೆ ಅವರ ಹೆಸರು ತೆಗೆದುಹಾಕಲಾಗುವುದು. ಅಸೋಸಿಯೇಟೆಡ್ ರ್‍ಯೂಟರ್ ಮೊದಲಾದ ವರ್ತಮಾನಗಳನ್ನು ಮಾತ್ರ ಹಾಕಬಹುದೆಂದು ನಿರ್ಬಂಧಿಸಿರುವುದರಿಂದ ಕಲ್ಕತ್ತದ ಎಲ್ಲಾ ಆಂಗ್ಲ ಭಾಷ ದೇಶಭಾಷ ಪತ್ರಿಕೆಗಳು ತಾವಾಗಿ ಪ್ರಕಟಣೆ ನಿಲ್ಲಿಸಿವೆ. ಮದ್ರಾಸಿನ 'ಇಂಡಿಯನ್ ಎಕ್ಸ್‌ಪ್ರೆಸ್, ಅಲ್ಲಾಬಾದಿನ 'ನೇಶನಲ್ ಹೆರಾಲ್ಡ್', ಹಿಂದುಸ್ಥಾನ ಟೈಮ್ಸ್ ಮೊದಲಾದ ರಾಷ್ಟ್ರೀಯ ಪತ್ರಿಕೆಗಳೂ ಪ್ರಕಟಣೆ ನಿಲ್ಲಿಸಿವೆ.

ಬೆಂಗಳೂರಲ್ಲಿ ನಿರ್ಬಂಧ

ಬೆಂಗಳೂರು ನಗರದಲ್ಲಿ ಸಭೆ ಮೆರವಣಿಗೆ ಮೊದಲಾದವು ನಡೆಯಕೂಡದೆಂದು ನಿರ್ಬಂಧ ಆಜ್ಞೆ ಹೊರಟಿದೆ. ಮಹಾರಾಣಿ ಕಾಲೇಜಿನ ಅಧ್ಯಾಪಕರಾದ ಶ್ರೀಮತಿ ಕೇಸರಿ ಕೇಶವನ್ ಮತ್ತು ಮಿಸೆಸ್ ಮುಲಿಯನ್ ಎಂಬಿಬ್ಬರ ಮೇಲೆ ಬೆಂಗಳೂರು ನಗರಕ್ಕೆ ಪ್ರವೇಶಿಸಬಾರದಾಗಿ ಆಜ್ಞೆ ಹೊರಟಿದೆ. ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯಲ್ಲಿ, ವಿಮಾನ ಕಾರ್ಖಾನೆಯಲ್ಲಿ ಮುಷ್ಕರವಾಗಿದೆ. ಪೋಲೀಸರು ಲಾಠಿ ಚಾರ್ಜ ಮಾಡಿರುವರು. ಮೈಸೂರು ಕಾಂಗ್ರೆಸು ಮುಖಂಡರಾದ ಭಾಷ್ಯಂ, ತಗದರು, ಚಂಗಲರಾಯ ರೆಡ್ಡಿ, ಮೊದಲಾದವರ ಬಂಧನವಾಗಿದೆ.

ಕೈದಿಗಳು

ಸಾಧಾರಣವಾಗಿ ಭಾರತದ ಪ್ರಮುಖ ಕಾಂಗ್ರೆಸ್ ಮುಖಂಡರೆಲ್ಲರೂ ಸೆರೆಮನೆ ಸೇರಿದ್ದಾರೆ. ಕೆಲವರು ರಾಜಾಜಿಯವರ ಪಕ್ಷದವರು ರೇಡಿಕಲ್ಸ್ ಹಾಗೂ ಕಮ್ಯುನಿಸ್ಟರು ಮಾತ್ರ ಹೊರಗಿದ್ದಾರೆ. ಹೀಗಾದದ್ದರಿಂದ ದೇಶದಲ್ಲಿ ಕಾಂಗ್ರೆಸ್ ಮುಖಂಡರಿಲ್ಲದೆ, ಕಾಂಗ್ರೆಸಿನ ಹೆಸರಲ್ಲಿ ಆಗುತ್ತಿರುವ ದಂಗೆಗಳನ್ನು ತಡೆಗಟ್ಟುವ ಮುಂದಾಳುಗಳಿಲ್ಲದೆ ಆಗಿದೆ.

ಗಲಾಟೆಗಳು

ಹಲವು ಕಡೆಗಳಲ್ಲಿ ರೈಲ್ವೆ ಸ್ಟೇಶನುಗಳನ್ನು, ಪೋಸ್ಟಾಫೀಸುಗಳನ್ನು ಸರಕಾರೀ ಕಚೇರಿಗಳನ್ನು ಪುಂಡರು ಸುಟ್ಟುಹಾಕಿದರು. ಕೆಲವು ಕಡೆ ರೈಲ್ವೆ ಕಂಬಗಳನ್ನು, ತಂತಿ ಟೆಲಿಫೋನ್ ತಂತಿಗಳನ್ನು ಕಡಿದು ಹಾಕಿರುವರು; ಇದರಿಂದೆಲ್ಲಾ ಬಹಳ ಅವ್ಯವಸ್ಥೆಯುಂಟಾಗುತ್ತಿದೆ. ಸರಕಾರದವರಾದರೂ ಇದನ್ನು ಉಗ್ರೋಪಾಯದಿಂದ ತಡೆಗಟ್ಟಲು ನಿಶ್ಚಯಿಸಿದ್ದರೂ ಗಲಭೆ ಸಮಾಧಾನಕ್ಕೆ ಬಂದಿಲ್ಲ.

ವಿದ್ಯಾರ್ಥಿಗಳ ಪ್ರಮುಖ ಭಾಗ

ಈ ಸಲದ ಆಂದೋಲನದಲ್ಲಿ ವಿದ್ಯಾರ್ಥಿಗಳು ಪ್ರಮುಖ ಭಾಗ ವಹಿಸುತ್ತಿದ್ದಾರೆ. ಶಾಲೆ ಕಾಲೇಜುಗಳನ್ನು ಬಹಿಷ್ಕರಿಸುತ್ತಿದ್ದಾರೆ. ಸಭೆ ಮೆರವಣಿಗೆ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳು ಪುಂಡಾಟನ ಮಾಡಿದ ಸುದ್ದಿಯೂ ಬಂದಿದೆ. ಕೆಲವು ಕಡೆಗಳಲ್ಲಿ ಶಾಲೆ ಕಾಲೇಜುಗಳಲ್ಲಿ ಶಾಲಾಧಿಕಾರಿಗಳೇ ಮುಚ್ಚಿಬಿಟ್ಟಿದ್ದಾರೆ. ವಿದ್ಯಾರ್ಥಿಗಳು ಮುಚ್ಚದ ಶಾಲೆಗಳ ಬಾಗಿಲುಗಳಲ್ಲಿ ನಿಂತು ಪಿಕೆಟಿಂಗ್ ಮಾಡುವರು ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿ ಕೆಲವರು ಕೊಲಲ್ಪಟ್ಟಿದ್ದಾರೆ!

ಉಪ್ಪಿನ ಸತ್ಯಾಗ್ರಹ

ರಾಮನಾಡ ಜಿಲ್ಲೆಯಲ್ಲಿ ಉಪ್ಪಿನ ಸತ್ಯಾಗ್ರಹ ಪ್ರಾರಂಭವಾಗಿ ತೆನ್ನಾಲಿಯಲ್ಲಿ ವಿದ್ಯಾರ್ಥಿಗಳು ಶಾಲಾ ಬಹಿಷ್ಕಾರ ಮಾಡಿರುವರು. ಪುಂಡರು ತೆನ್ನಾಲಿ ಜಂಕ್ಷನ ರೈಲ್ವೆ ಸ್ಟೇಶನು ಸುಟ್ಟು ಹಾಕಿರುವರು. ರೈಲ್ವೆ ಪಟ್ಟಿ ತೆಗೆದಿರುವರು. ತೆನ್ನಾಲಿ ಗಡಿಬಿಡಿಯಿಂದ ಮದ್ರಾಸ್ ಆಂಧ್ರದೇಶಗಳ ವಾಹನ ವ್ಯವಹಾರ ತಪ್ಪಿಹೋಗಿದೆ.

ಕಲ್ಕತ್ತದಲ್ಲಿಯೂ ಚಳವಳ

ವು ಆರಂಭವಾಗಿದೆ. ಅನೇಕ ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ್ದಾರೆ. ವಿದ್ಯಾರ್ಥಿ ಶಾಲಾ ಬಹಿಷ್ಕಾರ ಪ್ರಾರಂಭಿಸಿರುವರು. ಸಭೆ ಮೆರವಣಿಗೆ ಮಾಡಿರುವರು. ಪೋಲೀಸರು ಬಲ ಪ್ರಯೋಗ ಪ್ರಾರಂಭಿಸಿದ್ದಾರೆ.

ಕಸ್ತೂರಿ ಬಾಯಿಯವರನ್ನು ಕೈದು ಮಾಡಿದಾಗ ಮುಂಬಯಿಯಲ್ಲಿ ಗಲಾಟೆ

ಮುಂಬಯಿಯಲ್ಲಿ ಎ. ಐ. ಸಿ. ಸಿ. ಸಭೆ ಮುಗಿದ ಕೂಡಲೇ ಗಾಂಧಿಜಿ ಭಾಷಣ ಮಾಡುವ ಒಂದು ಕಾರ್ಯಕ್ರಮ ಮೊದಲೇ ನಿಶ್ಚಿತವಾಗಿತ್ತು. ಆಕಸ್ಮಾತ್ತಾಗಿ ಅವರ ಬಂಧನವಾದದ್ದರಿಂದ ಮಹಾತ್ಮರ ಪತ್ನಿ ಶ್ರೀಮತಿ ಕಸ್ತೂರಿ ಬಾಯಿ ಗಾಂಧಿಯವರ ಆ ದಿನದ ಸಭೆಗೆ ಭಾಷಣ ಮಾಡಲು ಹೋಗಿದ್ದರು. ಸಭೆ ಸೇರಬಾರದಾಗಿ ಪೋಲೀಸರು ಆಜ್ಞೆಯಿತ್ತರು. ಸಭಿಕರು ಸಭೆ ಸೇರಲೇ ಬೇಕೆಂದು ಹಠ ಹಿಡಿದರು. ಪೋಲೀಸರಿಗೂ ಸಭಿಕರಿಗೂ ಕೆಲವು ತಾಸುಗಳ ವರೆಗೆ ಮಾರಾಮಾರಿಯಾಯಿತು. ಅಷ್ಟರಲ್ಲಿ ಭಾಷಣ ಮಾಡಲು ಬರುತ್ತಿದ್ದ ಶ್ರೀಮತಿ ಕಸ್ತೂರಿ ಬಾಯಿಯವರನ್ನೂ ಗಾಂಧಿಜಿಯವರ ಇನ್ನೊಬ್ಬ ಕಾರ್ಯದರ್ಶಿ ಪ್ಯಾರೇಲಾಲರನ್ನೂ ಸೆರೆಹಿಡಿಯಲಾಯಿತು. ಆದರಿಂದ ಜನರ ಗಲಭೆ ಹೆಚ್ಚಾಯಿತು. ಆಗ ಪೋಲೀಸರು ಗುಂಡು ಹಾರಿಸಿ ಜನರನ್ನು ಚೆದರಿಸಿದರು.

ಅಮೇರಿ ಅಭಿನಂದಿಸುತ್ತಾರೆ!

ಮಹಾತ್ಮರಾದಿ ರಾಷ್ಟ್ರೀಯ ಸಭೆಯವರನ್ನು ಸೆರೆಹಿಡಿದದ್ದರಿಂದ ದೇಶತುಂಬ ಅವ್ಯವಸ್ಥೆಯಾಗಿರುತ್ತದೆಂಬ ವಾರ್ತೆ ಸಟೆಯೆಂದೂ ಯುದ್ಧಯತ್ನ ಭರದಿಂದ ನಡೆದಿರುವದಾಗಿಯೂ ಲಂಡನಿನ ಭಾರತ ಕಚೇರಿಯಿಂದ ಪ್ರಕಟಣೆ ಹೊರಟಿದೆ. ದಬ್ಬಾಳಿಕೆಯನ್ನು ಕೈಕೊಂಡು ಹಿಂದುಸ್ಥಾನದ ಮೇಲಿನ ಆಪತ್ತನ್ನು ನಿವಾರಿಸಿ ಲೋಕೋದ್ಧಾರ ಕಾರ್ಯ ಮಾಡಿದ ಬಗ್ಗೆ ಭಾರತ ಮಂತ್ರಿಗಳು ಸರ್ವಾಧಿಪತಿ ಲಿನಲಿತಗೋ ದೊರೆಗಳನ್ನು ಹೃತ್ಪೂರ್ವಕ ಅಭಿನಂದಿಸಿದ್ದಾರೆ.

ವಿದೇಶೀ ಸೈನಿಕರಿಗೆ ಸೌಕರ್ಯ

ಸ್ವದೇಶೀ ಸೈನಿಕರ ಗೋಳು!

— ಹರಿಜನ —

"ಸರ್ಚ್‌-ಲೈಟ್" ಪತ್ರಿಕೆಯಲ್ಲಿ ಪ್ರಕಟವಾದ ವಾರ್ತೆಯಂತೆ, ಪೂರ್ವ ರಣಕ್ಷೇತ್ರದ ಸೈನಿಕರಿಗೆ ರಜಾ ಕಾಲವನ್ನು ಕಳೆಯುವುದಕ್ಕೋಸ್ಕರ ಕಲ್ಕತ್ತದಲ್ಲಿ ಅಲ್ಲಲ್ಲಿ ಪ್ರತ್ಯೇಕ ತರದ ಹೊಸ್ಟೇಲುಗಳು ತೆರೆಯಲ್ಪಟ್ಟಿರುವವು. ಸೈನಿಕರ ಆರ್ಥಿಕ ಮಟ್ಟಕ್ಕೆ ತಕ್ಕಂತೆ ಸೌಲಭ್ಯಗಳು ಇವುಗಳಲ್ಲಿವೆ. ಮಾತ್ರವಲ್ಲದೆ ಇವುಗಳು ವಿನೋದ ವಿಹಾರಗಳ ಕೇಂದ್ರಗಳಾಗಿದ್ದು ಸೈನಿಕರಿಗೆ ಯಾವ ಬಗೆಯ ತೊಂದರೆಗಳಿಲ್ಲದೆ ಸುಖದಿಂದ ವಿಶ್ರಾಂತಿ ಪಡೆಯಲು ಅನುಕೂಲವಾಗಿವೆ.

ಇವುಗಳೆಲ್ಲವು ಹಿಂದೀಯರ ಸ್ವಸಂತೋಷದಿಂದ ನೀಡಿದ ಆರ್ಥಿಕ ಸಹಾಯದ ಫಲವಾಗಿವೆ. ಸೈನಿಕರಾದರೂ ಹಿಂದೀಯರ ಈ ಉದಾರತ್ವಕ್ಕೆ ಬಹಳ ಮನಮೆಚ್ಚಿರುವರು. ರಜೆಯಿಂದ ಹಿಂತಿರುಗುವ ಸೈನಿಕರು ಆ ಹೊಸ್ಟೇಲುಗಳಲ್ಲಿ ತಾವು ಕಳೆದ ಸುಖಸಂತೋಷದ ಸಮಯದ ಕುರಿತು ವಿಶೇಷವಾಗಿ ಹೊಗಳುತ್ತಿರುವರು. ಇದರ ಪರಿಣಾಮವಾಗಿ ಕಲ್ಕತ್ತವನ್ನು ಸಂದರ್ಶಿಸಲು ಬಹು ಮಂದಿ ಸೈನಿಕರು ರಜೆಯನ್ನು ಕೇಳಲು ಆರಂಭಿಸಿರುವರು.

ಇದೊಂದು ಸುಖದಾಯಕ ಸಂಗತಿಯಾಯಿತು. ಈಗ ಹಿಂದೀಯರ ದುಃಖಮಯ ಸಂಗತಿಯನ್ನು ಈ ಕೆಳಗೆ ವಿವರಿಸುವೆವು. ವಿಮಾನ ನಿಲ್ದಾಣಗಳನ್ನು ರಚಿಸುವುದಕ್ಕಾಗಿ ತಮ್ಮ ಮನೆಮಠಗಳನ್ನು ತ್ಯಜಿಸಿ ಹೋಗಬೇಕೆಂದು ಆಜ್ಞಾಪಿತರಾದ ಹಳ್ಳಿಗರ ಸಂಕಷ್ಟಗಳನ್ನು ವಿಚಾರಿಸುವುದಕ್ಕೆ ನೇಮಿಸಲ್ಪಟ್ಟವರು ಆ ಕುರಿತು ಈ ರೀತಿ ಬರೆಯುತ್ತಿರುವರು:—

ಆ ಮನೆಗಳಲ್ಲಿ ೯೭ ಮನೆಗಳನ್ನು ವಿಧ್ವಂಸಪಡಿಸಿದರು. ಮನೆಗಳ ಯಜಮಾನರಿಗೆ ಯಾವ ತರದ ಬರಹ ನೋಟೀಸುಗಳನ್ನು ಈ ವಿಷಯದ ಕುರಿತು ಕೊಡಲಿಲ್ಲ. ಮೂರು ದಿನಗಳ ಒಳಗೆ ಕೆಲವು ಮನೆಗಳನ್ನೂ ತ್ಯಜಿಸಿ ಹೋಗಬೇಕೆಂಬುದಾಗಿಯೂ ಇದನ್ನು ಅಲಕ್ಷಿಸಿದಲ್ಲಿ ಬೇರೆ ಕಡೆಗೆ ಒಯ್ಯಲಿಕ್ಕಾಗುವ ಸಾಮಾನುಗಳನ್ನು ಕೂಡ ಮುಟ್ಟುಗೋಲು ಹಾಕುವರೆಂದೂ ಟಿಡ ಗಾರಿಕೆಯಿಂದ ವಿಶ್ರಿತವಾದ ಆಜ್ಞೆಯನ್ನು ಡಂಗೂರ ಮೂಲಕ ಮಾತ್ರ ಸಾರಿದ್ದರು. ಅದೇ ರೀತಿ ಮೂರು ದಿವಸಗಳು ಕಳೆದು ಹೋದ ಕೂಡಲೇ ಅಧಿಕಾರಿಗಳು ಮನೆಗಳನ್ನು ಕಸಕೊಂಡು ಅಲ್ಪ ಸಮಯದೊಳಗೆ ಅವುಗಳೆಲ್ಲವನ್ನು ನೆಲಸಮ ಮಾಡಿರುವರು. ಆ ಮನೆಯ ನಿವಾಸಿಗರಿಗೆ ಉಳಕೊಳ್ಳಲು ಎಲ್ಲಿಯೂ ಏರ್ಪಾಡನ್ನು ನಡೆಸಲಿಲ್ಲ ಮಾತ್ರವಲ್ಲದೆ ಬೇರೆ ಕಡೆಗೆ ಹೋಗಲು ಯೋಗ್ಯ ಅನುಕೂಲತೆಗಳನ್ನು ಒದಗಿಸಿಕೊಡಲಿಲ್ಲ. ಇದರಿಂದಾಗಿ ಹಳ್ಳಿಗರಿಗೆ ಅಲ್ಲಿ ವಾಸ ಮಾಡಿಕೊಂಡಿರಲು ಅಸಾಧ್ಯವಾಗಲು ಕೆಲವರು ಬಹಳ ಕಷ್ಟದಿಂದ ಬೇರೆ ಕಡೆಗಳಿಗೆ ನಡೆದರು. ಆದರೆ ಅವರಲ್ಲಿ ಹೆಚ್ಚು ಮಂದಿಯವರು ಬೇರೆ ಕಡೆಗಳಿಗೆ ಹೋಗಲು ಏನೊಂದು ಉಪಾಯ ಕಾಣದೆ ನೆರೆಹೊರೆಯ ಮರಗಳ ನೆರಳನಡಿಯಲ್ಲಿ ಬಿಸಿಲು ಮತ್ತು ಮಳೆಗಳಿಂದ ಏನೊಂದು ಆಶ್ರಯವಿಲ್ಲದೆ ಅಲ್ಲಿಯೆ ತಮ್ಮ ಮಕ್ಕಳು ಮರಿಗಳೊಂದಿಗೆ ಉಳಕೊಂಡಿರುವರು.

ಇಂಥ ಭೇದಾಭೇದಕ್ಕೆ ಕಾರಣವೇನು? ಭಾರತವು ಒಂದು ವಿದೇಶೀ ಸೈನಿಕರಿಗೆ ಸೇರಿರುವುದಲ್ಲದೇ ಬಡ ಹಿಂದೀಯರಿಗಲ್ಲ.

ಹರಿಜನ ಪತ್ರಿಕೆ

ಮಹಾತ್ಮರ 'ಹರಿಜನ' ಪತ್ರಿಕೆ ನಿನ್ನೆ ಪ್ರಕಟವಾಗಿದೆ. ಗಾಂಧಿ ಸೇವಾಸಂಘದ ಅಧ್ಯಕ್ಷರಾದ ಶ್ರೀ। ಮಶ್ರುವಾಲಾರವರು 'ಹರಿಜನದ' ಹೊಸ ಸಂಪಾದಕರು. ಪರಮಾತ್ಮನ ಅನುಗ್ರಹವಾದರೆ, 'ಹರಿಜನ' ಪತ್ರಿಕೆಯ ಚಾಲಕರು ಸೆರೆಮನೆಯಿಂದ ಹಿಂತಿರುಗುವ ವರೆಗೆ 'ಹರಿಜನ' ಪತ್ರಿಕೆ ನಡೆಸಲ್ಪಡುವದಾಗಿ ಶ್ರೀ। ಮಶ್ರುವಾಲಾರವರು ನಿನ್ನೆನ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಹಿಂದುಸ್ಥಾನ ಸರಕಾರವೊ ಒಡಿಸಾ ಸರಕಾರವೂ ರಾಷ್ಟ್ರೀಯ ಸಭೆಯನ್ನು ನಿರ್ನಾಮಗೊಳಿಸುವದಕ್ಕಾಗಿ ಜುಲೈ ತಿಂಗಳಲ್ಲಿ ಹೊರಡಿಸಿದ ೩ ಗುಪ್ತ ಪರಿಪತ್ರಗಳು ನಿನ್ನೆಯ 'ಹರಿಜನ'ದಲ್ಲಿ ಪ್ರಕಟವಾಗಿವೆ. ಈ ಪ್ರಕಟಣೆಗಳಲ್ಲಿ ರಾಷ್ಟ್ರೀಯ ಸಭೆಯವರ ಆಂದೋಲನ ವಿರುದ್ಧ ಪ್ರಚಾರ ಮಾಡುವ ಕ್ರಮಗಳು ವಿವರಿಸಲ್ಪಟ್ಟಿವೆ. ಪ್ರಚಾರ ಭಾಷಣಗಳನ್ನು ಮಾಡಲು ಸೂಚನೆಯೊಂದು ಕೊಡಲಾಗಿದೆ. ಮುಸಲ್ಮಾನರೂ ಶೀಖರೂ ಕಿಸಾನರೂ ವಿದ್ಯಾರ್ಥಿಗಳೂ ರಾಷ್ಟ್ರೀಯ ಸಭೆಯನ್ನು ವಿರೋಧಿಸುತ್ತಾರೆ; ಯುದ್ಧದಲ್ಲಿ ಬ್ರಿಟಿಶರು ವಿಜಯಿಗಳಾದ ಕ್ಷಣದಲ್ಲಿ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗುತ್ತದೆ; ಶ್ರೀ. ರಾಜಗೋಪಾಲಾಚಾರ್ಯರನ್ನು ಹೊರತಳ್ಳಿದ್ದರ ಮೇಲಿಂದ ರಾಷ್ಟ್ರೀಯ ಸಭೆಯವರು ಮುಸಲ್ಮಾನರೊಡನೆ ಒಪ್ಪಂದ ಮಾಡಿಕೊಳ್ಳಬಯಸುವದಿಲ್ಲವೆಂದು ಸಿದ್ಧವಾಗಿದೆ; ರಾಷ್ಟ್ರೀಯ ಸಭೆಯಲ್ಲಿ ದೊಡ್ಡ ದೊಡ್ಡ ವರ್ತಕರಿದ್ದಾರೆ, ಮಧ್ಯಮ ವರ್ಗದ ಜನರಿದ್ದಾರೆ; ಆದರೆ ಬಡ ಜನರಿಲ್ಲ; ಬಡ ಜನರ ಬಗ್ಗೆ ರಾಷ್ಟ್ರೀಯ ಸಭೆಯು ದುಡಿಯುವದಿಲ್ಲ; ಕ್ರಿಪ್ಸ ರಾಜ್ಯಯೋಜನೆಯನ್ನು ದೋಷೈಕದೃಷ್ಟಿಯಿಂದ ರಾಷ್ಟ್ರೀಯ ಸಭೆಯವರು ವಿಚಾರಿಸಿ ಧಿಕ್ಕರಿಸಿದ್ದಾರೆ; ಬಾದಶಹರ ಸರಕಾರವನ್ನು ಹಿಂದುಸ್ಥಾನದಲ್ಲಿ ನಡಿಸುವ ಶಕ್ತಿ ಹಿಂದುಸ್ಥಾನದಲ್ಲಿ ಯಾರಿಗೂ ಇಲ್ಲ; ಗಾಂಧಿಯವರ ವಿಚಾರಗಳನ್ನು ಪರಾಂಬರಿಸಿದರೆ ಫ್ರಾನ್ಸದಲ್ಲಿ ಪಿಟೇನರು ದುರವಸ್ಥೆ ಮಾಡಿದಂತೆಯೇ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸಭೆಯವರು ಅನವಸ್ಥೆ ಮಾಡುವರು; ಹಿಂದುಸ್ಥಾನವು ಜಪಾನಿ-ಜರ್ಮನರ ಕೈ ಸೇರುವದು; ಹೀಗೆಲ್ಲ ಪ್ರಚಾರ ಮಾಡಬೇಕೆಂದು ಹಿಂದುಸ್ಥಾನ ಸರಕಾರದ ಗುಪ್ತ ಪರಿಪತ್ರದಲ್ಲಿ ಹೇಳಲಾಗಿದೆ.

ದಿಲ್ಲಿಯಲ್ಲಿ ವೈಸರಾಯ್ ಭವನಕ್ಕೆ ಜನರು ಮುತ್ತಿಗೆ ಹಾಕಿದರು. ಪೋಲೀಸರು ಅದನ್ನು ಚೆದರಿಸಿದರು. ಒಬ್ಬ ಪೋಲೀಸನ ಕೊಲೆಯಾಯಿತು. ಪೋಲೀಸ್ ಡಿ। ಕಮಿಶನರ ಮೇಲೆ ಕಲ್ಲು ತಾಗಿತು. ದಿಲ್ಲಿಯ ಮುನ್ಸಿಪಾಲಿಟಿ ಮತ್ತು ಇನ್‌ಕಮ್‌ಟೇಕ್ಸ್ ಆಫೀಸು, ರೈಲ್ವೆ ಲೆಕ್ಕದ ಆಫೀಸನ್ನು ಜನರು ಸುಟ್ಟುಹಾಕಿರುವರು. ಇದರಿಂದ ಬಹಳ ನಷ್ಟ ಆಗಿದೆ. ಡಾಕಾದ ಡಿ। ಜಡ್ಜರಿಗೆ ಪೆಟ್ಟಾಗಿದೆ. ಮುನ್ಸಿಪ್ ಕೋರ್ಟಿನ ರಿಕಾರ್ಡು ಸುಡಲಾಗಿದೆ.

NOTIFICATION

Applications are invited from Registered Midwives for appointment as Nurses for First Aid Posts in the A. R. P. Casualty Service on a pay of Rs. 25 P. M. Applications will be received upto 25-8-1942 by the District Medical Officer South Kanara, Mangalore. Preference will be given to those who have got higher educational qualification

Casualty Staff Officer, A. R. P.

ಜಿಲ್ಲಾ ಸಮಾಚಾರಗಳು

ಮಂಗಳೂರು

ಸಾರ್ವಜನಿಕ ಸಭೆ

ತಾ. 18ರಂದು ಮಂಗಳೂರು ಮೈದಾನಿನಲ್ಲಿ ಸುಮಾರು ಆರೇಳು ಸಾವಿರ ಮಂದಿ ಕೂಡಿ ಒಂದು ಸಾರ್ವಜನಿಕ ಸಭೆ ನೆರವೇರಿತು. ದಿವಂಗತ ಮಹಾದೇವ ದೇಸಾಯಿಯವರ ನಿಧನ ಹಾಗೂ ಪ್ರಚಲಿತ ರಾಷ್ಟ್ರೀಯ ವಿದ್ಯಮಾನಗಳ ಕುರಿತು ಶ್ರೀಗಳಾದ ಎಂ. ಡಿ. ಅಧಿಕಾರಿ ಮತ್ತು ದಾಮೋದರ ಬಾಳಿಗರು ಭಾಷಣವಿತ್ತರು. ಶ್ರೀಮತಿ ನೇರಿ ಜೆ. ಬ್ರಿಟೋ ಅಧ್ಯಕ್ಷತೆ ವಹಿಸಿದ್ದರು.

ಮಂಗಳೂರಲ್ಲಿ ಹರತಾಳ

ವಿದ್ಯಾರ್ಥಿಗಳ ಮುಷ್ಕರ

ಮಂಗಳೂರಲ್ಲಿ ತಾ. 18ರಿಂದ 20ರ ವರೆಗೆ ಹರತಾಳ ಆಯಿತು. ಎಲ್ಲಾ ರಸ್ತೆಗಳಲ್ಲಿ ಎಲ್ಲಾ ತರಹ ಅಂಗಡಿಗಳು ಮುಚ್ಚಲ್ಪಟ್ಟವೆ. ಕೃಷ್ಣ ಭವನ, ತಾಜ್ ಮಹಾಲ್ ಮೊದಲಾದ ಕಾಫಿ ಹೋಟೆಲುಗಳೂ ಮುಚ್ಚಲ್ಪಟ್ಟವೆ.

ವಿದ್ಯಾರ್ಥಿಗಳ ಮುಷ್ಕರ

ಮಂಗಳೂರಿನ ಕಾಲೇಜ್ ಮತ್ತು ಹೈಸ್ಕೂಲುಗಳಲ್ಲಿ ತಾ. 19ರಿಂದ ಮುಷ್ಕರ ಪ್ರಾರಂಭವಾಗಿದೆ. ತಾ. 19ರಂದು ಕಾಲೇಜು ತರಗತಿಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ಇರಲೇ ಇಲ್ಲ. ಹೈಸ್ಕೂಲುಗಳನ್ನು ಮಧ್ಯಾಹ್ನ ನಂತರ ಮುಚ್ಚಿದ್ದರು. ವಿದ್ಯಾರ್ಥಿಗಳು ಶಾಲೆಗಳ ಬಾಗಿಲಲ್ಲಿ ಪಿಕೆಟಿಂಗ್ ಮಾಡುತ್ತಿದ್ದರು.

ಗೋಧಿ–ಸಕ್ಕರೆ–ಚಿಮಿಣಿ ಎಣ್ಣೆ ವ್ಯಾಪಾರಿಗಳಿಗೆ

ಗೋಧಿ ಸಕ್ಕರೆ ಚಿಮಿಣಿ ಎಣ್ಣೆ ವ್ಯಾಪಾರಿಗಳು ಸರಕಾರವು ನಿರ್ಣಯಿಸಿರುವ ಬೆಲೆಯಲ್ಲಿ ಅವುಗಳನ್ನು ಮಾರಾಟ ಮಾಡಬೇಕೆಂಧೂ, ಆ ಬೆಲೆಯ ಪಟ್ಟಿಯನ್ನೆ ಅಂಗಡಿ ಮುಂದೆ ಹಚ್ಚಿಡಬೇಕೆಂಧೂ, ಮಾರಾಟಮಾಡಿದ ವಸ್ತುವಿಗೆ ರಶೀದಿ ಕೊಡಬೇಕೆಂಧೂ ಸರಕಾರವು ವಿಧಿಸಿದೆ.

ಮುನಿಸಿಪಲ್ ಕೌನ್ಸಿಲ್

ತಾ. ೧೭ರಂದು ಸಂಜೆ ಸ್ಥಳೀಯ ಮು। ಕೌನ್ಸಿಲಿನ ಸಭೆ ಅದರ ಕಾರ್ಯಾಲಯದಲ್ಲಿ ಚೇರ್ ಮೇನ್ ಶ್ರೀ. ಬಿ. ವೆಂಕಟರಾವ್ ಬಾಳಿಗ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿದಾಗ ಡಾ. ಎಂ. ಆರ್. ಭಟ್ ಅವರು, ಕೌನ್ಸಿಲ್ ಮೀಟಿಂಗನ್ನು ಮುಂದುವರಿಸಬೇಕೆಂಬ ಸೂಚನೆ ತಂದರು. ಚೇರ್‌ಮೇನರು ಒಂದು ಭಾಷಣ ಮಾಡಿ, ಊರಲ್ಲಿ ಹಬ್ಬಿರುವ ನಿರಾಧಾರವಾದ ಹಲವು ವದಂತಿಗಳಿಗೂ, ಗುಂಪಿನ ಹಿಂಸಾ ಕಾರ್ಯಗಳಿಗೂ ಪ್ರೋತ್ಸಾಹ ಕೊಡಬಾರದೆಂದು ಕೌನ್ಸಿಲರರ ಕರ್ತವ್ಯ ಸೂಚಿಸಿ, ಡಾ. ಭಟ್ಟರ ಠರಾವು ಸರಕಾರದ ಕಾರ್ಯನೀತಿಯನ್ನು ಟೀಕಿಸುವ ಉದ್ದೇಶವುಳ್ಳದಾಗಿದ್ದರೆ, ಅದನ್ನಿಲ್ಲಿ ತರಲು ಬಿಡಲಾಗುವುದಿಲ್ಲವೆಂದು ಮುಂತಾಗಿ ನುಡಿದರು. ಶ್ರೀ. ಎಂ. ಎಸ್. ಶ್ರೇಷ್ಠರು ಠರಾವಿಗೆ ಒಪ್ಪದೆ, ಅದನ್ನು ಮಂಜೂರುಮಾಡುವುದು ಸರಿಯಲ್ಲವೆಂದು ಸಾರಿದರು. ಠರಾವು ಮಂಜೂರಾಗಿ ಮುಂದಿನ ಸಭೆ ಇದೇ ತಾ. ೨೪ಕ್ಕೆಂದು ನಿರ್ಧರಿಸಲಾಯಿತು. 'ಪ್ರಕೃತ ವಿದ್ಯಮಾನಗಳ ಸಂಬಂಧ ಈ ಸಭೆಯನ್ನು ಮುಂದರಿಸಬೇಕೆಂದು ಆ ಠರಾವಿನ ಅಭಿಪ್ರಾಯವಿತ್ತು.

ನೇಮಕ ವರ್ಗಾವರ್ಗಿ

ಗುಂಟೂರು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ರಾವ್‌ಬಹದೂರ್ ಕೆ. ಪಿ. ಜನಾರ್ಧನ ರಾಯರು ಡಿ। ಇನ್ಸ್‌ಪೆಕ್ಟರ್ ಜನರಲಾಗಿ ಬಡ್ತಿ ಹೊಂದಿರುತ್ತಾರೆ.

ಇಲ್ಲಿಯ ಗೌರ್ನಮೆಂಟ್ ಕೊಲೆಜಿನ ಪ್ರಿನ್ಸಿಪಾಲರಾದ ಶ್ರೀ। ಕೆ. ಯಸ್. ಯು. ನಾಯರರು ರಜೆ ಪಡಕೊಂಡಿರುವುದರಿಂದ ಅವರ ಬದಲಿಗೆ ಮುದರಾಸಿನ ಶ್ರೀ ಎ ರಮಾನಾಥ ಒಕ್ಕೆಯವರು ನೇಮಕ ಪಟ್ಟಿದ್ದಾರೆ.

ಹಜೂರು ಹೆಡ್‌ಕ್ಲಾರ್ಕ್ ಶ್ರೀ। ಎ. ಸದಾನಂದ ಪೈ ಇವರು ಕಾರ್ಕಳ ಸಬ್ ಮ್ಯಾಜಿಸ್ಟ್ರೇಟರಾಗಿಯೂ ಪುತ್ತೂರಿನ ಸಬ್ ಮ್ಯಾಜಿಸ್ಟ್ರೇಟ್ ಶ್ರೀ. ಎಂ. ಗೋವಿಂದಾಚಾರ್ಯರು ಹಜೂರ ಹೆಡ್ ಕ್ಲಾರ್ಕರಾಗಿಯೂ, ಶ್ರೀ ಬ್ರೀಕಲ್ ನಾರಾಯಣರಾಯರು ಪುತ್ತೂರು ಸಬ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಹೊಂದಿದ್ದಾರೆ.

ಮದ್ರಾಸ್ ಗವರ್ನಮೆಂಟ್ ಸೆಕ್ರಟರಿಗಳಾದ ಶ್ರೀ। ವಿ. ಎನ್. ಕುಡ್ವರು ಒಂದು ತಿಂಗಳ ರಜೆಯ ಮೇಲೆ ಮಂಗಳೂರಿಗೆ ಬಂದಿರುತ್ತಾರೆ.

ರಜೆ ಮೇಲಿದ್ದ ಶ್ರೀ ಜಿ. ದತ್ತಾತ್ರಯ ರಾಯರು ದಕ್ಷಿಣ ಅರ್ಕಾಡಿನ ಟ್ರೆಜರಿ ಡೆಪ್ಯುಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ತೀಯಾ ಶಕ್ತಿ ಸಂಘ

ದಕ್ಷಿಣಕನ್ನಡಾ ಜಿಲ್ಲಾ ತೀಯಾ ಶಕ್ತಿ ಸಂಘದ ಮಹಾಜನರು ಕಳೆದ ತಾ. ೧೬ನೇ ಆದಿತ್ಯವಾರ ಪ್ರಾತಃಕಾಲ ಶ್ರೀಮಾನ್ ಬಿ. ಆರ್. ಕರ್ಕೇರರವರಿಗೊಂದು ಮಾನಪತ್ರವನ್ನು ಕೊಟ್ಟು ಸನ್ಮಾನಿಸಿದರು. ಈ ಸಮಾರಂಭದ ಕಾಲದಲ್ಲಿ ಶ್ರೀಗಳಾದ ಪಿ. ಲಕ್ಷ್ಮೀನಾರಾಯಣ ಪುಣಿಚಿತ್ತಾಯ, ಮೋಹನ್ ಸುವರ್ಣ, ಮತ್ತು ಬಿ. ಗಂಗಾಧರ್‌ದಾಸ್ ಇವರು ಭಾಷಣಗಳನ್ನು ಮಾಡಿದರು. ಶ್ರೀ. ಕರ್ಕೇರರವರು ಸಂಘಕ್ಕೆ ೧೦೧ ರೂಪಾಯಿಗಳ ಧನ ಸಹಾಯವನ್ನಿತ್ತುದಲ್ಲದೆ ಮಳಯಾಳ ಮಾತೃಭಾಷೆಯಾಗಿರುವ ಬಿಲ್ಲವ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ವರ್ಷಂಪ್ರತಿ ರೂ. ೪೫/-ರ ವಿದ್ಯಾರ್ಥಿ ವೇತನವನ್ನು ಕೊಡಲು ಏರ್ಪಾಡು ಮಾಡಿರುವರು.

ಪಾಣೆಮಂಗಳೂರು

ಹರತಾಳ

ರಾಷ್ಟ್ರೀಯ ಮುಖಂಡರ ದಸ್ತಗಿರಿಯಾದುದಕ್ಕೆ ನಿಷೇಧ ಸೂಚನಾರ್ಥವಾಗಿ ಪಾಣೆಮಂಗಳೂರಲ್ಲಿ ಸಂಪೂರ್ಣ ಹರತಾಳವು ಆಚರಿಸಲ್ಪಟ್ಟಿತು.

ಕಾಸರಗೋಡು

ಯುವಜನ ಸಂಘ

ಇದರ ಮೂರನೆಯ ವರ್ಷದ ಮಹಾಸಭೆಯು ಸೇರಿ ಹೊಸ ವರ್ಷದ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಮುಷ್ಕರ

ತಾ ೧೧-೮-೪೨ರಲ್ಲಿ ಕಾಸರಗೋಡು ಹೈಸ್ಕೂಲು ವಿದ್ಯಾರ್ಥಿಗಳು ರಾಷ್ಟ್ರೀಯ ಮುಖಂಡರ ಬಂಧನದ ನಿಷೇಧ ಸೂಚನಾರ್ಥವಾಗಿ ಶಾಲೆಗೆ ಹೋಗದೆ, ಮೆರವಣಿಗೆ ತೆಗೆದು ಸಭೆ ಜರಗಿಸಿದ್ದರು.

ನೀಲೇಶ್ವರ

ಮುಷ್ಕರ

ನೀಲೇಶ್ವರದಲ್ಲಿ ಕೂಡಾ ಹೈಸ್ಕೂಲಿನ ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮೆರವಣಿಗೆ ತೆಗೆದು ಹರತಾಳ ಆಚರಿಸುತ್ತಾರೆ.

ಬದಿಯಡ್ಕ

ಬದಿಯಡ್ಕದಲ್ಲಿ ಶ್ರೀ। ಯಚ್. ನರಸಿಂಹ ಕಮ್ತಿಯವರು ಮತ್ತು ಶ್ರೀ। ನಾರಾಯಣ ಕಮ್ತಿ ಬ್ರದರ್ಸ್ ಅವರು ಕೂಡಾ ೩೦ ದಿವಸದ ವರೆಗೆ ಸೇರಿಗೆ ೨-೩-೬ ಪ್ರಕಾರ ಬಡ ಜನರಿಗೆ ಅಕ್ಕಿ ಮಾರುವರೆ ಪ್ರಾರಂಭಿಸಿದ್ದು ಶ್ಲಾಘನೀಯವಿರುತ್ತದೆ.

ಪುತ್ತೂರು

ಕೊಲೆ

ಪುಣಚಾ ಗ್ರಾಮದ ಪರಿಯಾಲತಡ್ಕ ಎಂಬಲ್ಲಿ ಕಳೆದ ತಾ. ೫ರಂದು ಇಬ್ಬರು ಆಸಾಮಿಗಳೊಳಗೆ ಜಗಳ ಉಂಟಾಗಿ ಒಬ್ಬನು ಇನ್ನೊಬ್ಬನ ಕುತ್ತಿಗೆಗೆ ಚೂರಿಯಿಂದ ತಿವಿದು ಕೊಂದಿರುತ್ತಾನಾಗಿ ವರ್ತಮಾನವಿದೆ.

ಮುಷ್ಕರ

ಸ್ಥಳೀಯ ಹೈಸ್ಕೂಲಿನ ಹುಡುಗರು ಕಾಂಗ್ರೆಸ್ ಧುರೀಣರನ್ನು ಬಂಧಿಸಿದ ನಿಷೇಧಾರ್ಥವಾಗಿ ಶಾಲೆಗೆ ಹಾಜರಾಗಿಲ್ಲವಾಗಿ ತಿಳಿದುಬಂದಿದೆ.

ಆತಗೆ ಮರಣ ದಂಡನೆ

ಪುತ್ತೂರು ತಾಲೂಕು ಆಲಂಗಾರು ಗ್ರಾಮದಲ್ಲಿ ಶಿವಪ್ಪ ಪೂಜಾರಿ ಎಂಬವನು ತನ್ನ ಹೆಂಡತಿ ಕಾವೇರಿ, ಅಳಿಯ ದೇವು ಮತ್ತು ದೂರದ ಸಂಬಂಧಿಕ ೬೦ ವರುಷ ಪ್ರಾಯದ ಲಿಂಗಪ್ಪ ಎಂಬವರೊಂದಿಗೆ ಇರುತ್ತಿದ್ದನು. ಕಳೆದ ೧೯-೧-೪೨ರಂದು ಶಿವಪ್ಪನಿಲ್ಲದ ದಿನ ರಾತ್ರಿ ಕಾವೇರಿಯೂ ದೇವು ಎಂಬ ೧೨ ವರ್ಷದ ಹುಡುಗನೂ ಮನೆಯಲ್ಲಿ ಮಲಗಿದ್ದ ಸಮಯ ಅಲ್ಲಿ ಲಿಂಗಪ್ಪ ಪೂಜಾರಿಯು ಕೊಟ್ಟಿಗೆಯಲ್ಲಿ ಮಲಗಿದ್ದವನು ಒಳಹೊಕ್ಕು ಕಾವೇರಿಯೊಡನೆ ತನಗೆ ಮನಸ್ಸಾಗಿದೆ ಎಂದು ಹೇಳಿತು. ಅಗ್ನಿ ಆಕಸ್ಮಿಕ ದೇವು ಅವನ ವರ್ತನೆಯನ್ನು ಖಂಡಿಸಿ ಶಿವಪ್ಪನು ಮನೆಗೆ ಬಂದಾಗ ತಾವು ಈ ಸಂಗತಿಯನ್ನು ಆತಗೆ ತಿಳಿಸುವುದಾಗಿ ಹೆದರಿಸಲು ಆಲೆ ಲಿಂಗಪ್ಪ ಪೂಜಾರಿಯು ದೊಡ್ಡದೊಂದು ಕತ್ತಿಯಿಂದ ಕಾವೇರಿಯನ್ನು ಕಡಿದು ಕೊಂದದ್ದಲ್ಲದೆ ದೇವು ಎಂಬವನಿಗೂ ಕಡಿದು ಅನಂತರ ಮನೆಗೆ ಕೂಡಾ ಬೆಂಕಿ ಕೊಟ್ಟು ಸುಟ್ಟುಬಿಟ್ಟನು. ದೇವು ಹೇಗೂ ಎದ್ದು ಮೆಲ್ಲನೆ ಸಮೀಪದ ಕೊರಗಪ್ಪ ಗೌಡನಲ್ಲಿ ಹೋಗಿ ತಪ್ಪಿಸಿಕೊಂಡನು. ಕಾವೇರಿಯ ಶವವು ಮನೆಯೊಂದಿಗೆ ಸುಟ್ಟುಹೋಯಿತು. ಈ ತಕ್ಷೀರಿಗೆ ಲಿಂಗಪ್ಪನ ವಿಚಾರಣೆಯು ಮಂಗಳೂರು ಸೆಶ್ಯನ್ ಕೋರ್ಟಿನಲ್ಲಿ ನಡೆದು ಆತಗೆ ಮರಣ ದಂಡನೆ ವಿಧಿಸಲ್ಪಟ್ಟಿತು. ಮೂವರು ಎಸೆಸರರು ಆಲೆಯು ತಪ್ಪುಗಾರನೆಂತ ಕೊಟ್ಟ ಅಭಿಪ್ರಾಯವನ್ನು ಜಡ್ಜರು ಮಂಜೂರು ಮಾಡಿದರು.

ವಿಟ್ಲ:– ಹರಿಜನರಿಗೆ ಬಟ್ಟೆದಾನ

ವಿಟ್ಲ ಲೇಬರ್ ಶಾಲೆಯಲ್ಲಿ ಡಿ. ಪಂಚಾಯತ ಆಫೀಸರರ ಅಧ್ಯಕ್ಷತೆಯಲ್ಲಿ ಹರಿಜನ ಬಾಲಕರಿಗೆ ಬಟ್ಟೆಬರೆ ಹಂಚಲಾಯಿತು.

ಕಾರ್ಕಳ

ಮಹಾತ್ಮರಿಗೆ ಕಾಣಿಕೆ

ಮಹಾತ್ಮ ಗಾಂಧಿಯವರ ೭೪ನೇ ಜನ್ಮದಿನದ ನೆನಪಿಗಾಗಿ ಇಲ್ಲಿಯ ವಕೀಲರ ಸಂಘದವರು ತಮ್ಮೊಳಗೆ ವಂತಿಗೆ ಹಾಕಿ ೭೪ ರೂಪಾಯಿಗಳನ್ನು ಮಹಾತ್ಮರಿಗೆ ಕಳುಹಿಸಿ ಅವರ ದೀರ್ಘಾಯುರಾರೋಗ್ಯಾದಿಗಳನ್ನು ಪರಮಾತ್ಮನೊಡನೆ ಪ್ರಾರ್ಥಿಸಿರುವರು.

ಸಭೆ

ನೂಲುವ ಸ್ಪರ್ಧೆಯ ದ್ವಿತೀಯಾ ವರ್ಷದ ಬಹುಮಾನ ವಿತರಣ ಸಮಾರಂಭವು ತಾ. ೯ರ ದಿನ ಶ್ರೀ। ಶಾನುಭೋಗ ನಾಯ್ಕರ ಅಧ್ಯಕ್ಷತೆಯಲ್ಲಿ ಕೂಡಿತು.

ಉಡುಪಿ

ಯುದ್ಧ ಸಹಾಯಕ ಸಮಿತಿ ಸದಸ್ಯರಿಗೆ ವಿನಂತಿ

ಶ್ರೀ। ಮಂಜುನಾಥ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ ಸದ್ಯದ ರಾಜಕೀಯ ಪರಿಸ್ಥಿತಿಯ ಕುರಿತು ಶ್ರೀಗಳಾದ ಕೆ. ಕೆ. ಶೆಟ್ಟಿ, ಎಮ್. ವಿಠಲ ಹೆಗ್ಡೆ, ಯು. ನಾಗಪ್ಪ ಕಾಮತರವರ ಭಾಷಣಗಳಾಗಿ ಯುದ್ಧ ಸಹಾಯಕ ಸಮಿತಿಯ ಸದಸ್ಯರು ವಾರ್ ಕಮಿಟಿಗೆ ರಾಜಿನಾಮೆ ಕೊಡಬೇಕಾಗಿ ವಿನಂತಿಸುವ ನಿರ್ಣಯವು ಮಾನ್ಯವಾಯಿತು.

ಕರ್ನಾಟಕ

ಮೈಸೂರು

ಶ್ರೀ ಗೊರೂರು ರಾಮಸ್ವಾಮಯ್ಯಂಗಾರರ ರಾಜೀನಾಮೆ

ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ। ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರವರು ಹಾಸನ ಜಿಲ್ಲಾ ಬೋರ್ಡು, ಹಾಸನಜಿಲ್ಲಾ ಎಜ್ಯುಕೇಶನ್ ಕಮಿಟಿ ಮತ್ತು ಕಾಟೇಜ್ ಇಂಡಸ್ಟ್ರೀಸ್ ಸಮಿತಿಯ ತಮ್ಮ ಸದಸ್ಯತ್ವಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಭಾರತದ ಸ್ವಾತಂತ್ರ್ಯವನ್ನು ಬ್ರಿಟಿಷರು ನಿರಾಕರಿಸಿ, ದಬ್ಬಾಳಿಕೆ ನೀತಿಯನ್ನು ಅನುಸರಿಸುತ್ತಿರುವುದಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸುವುದಕ್ಕೂ ಮೈಸೂರು ಶ್ರೀ ಮನ್ಮಹಾರಾಜರವರು ಪ್ರಜೆಗಳ ಆಶೋತ್ತರಗಳನ್ನು ನೆರವೇರಿಸಬೇಕೆಂದು ಸೂಚಿಸುವುದಕ್ಕಾಗಿಯೂ ಇವರು ಈ ರೀತಿಯಾಗಿ ರಾಜಿನಾಮೆ ಕೊಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ ಗುಂಡು ಹಾರಿಸಿದರು

ಹುಬ್ಬಳ್ಳಿಯಲ್ಲಿ ಹರತಾಳವಾಗಿ, ಸಂಜೆ ಸಭೆ ಸೇರಿರಲು, ಪೋಲೀಸರು ಲಾಠೀ ಚಾರ್ಜಿನಿಂದಲೂ, ಗುಂಡು ಹಾರಿಸಿಯೂ ಸಭೆ ಚೆದರಿಸಿದರು. ಒಬ್ಬನು ಸತ್ತಿರುವನೆಂದು ಹಲವರಿಗೆ ಗಾಯವಾಗಿದೆಯೆಂದೂ ತಿಳಿದಿದೆ.

ಮೂಲವ್ಯಾಧಿಯ ತೊಂದರೆಯನ್ನು ನಿಲ್ಲಿಸಬಾರದೇಕೆ?

ಜಾಂಬಕ್ ಅದ್ಭುತ ಗುಣಕೊಡುತ್ತದೆ.

ಆ ಭಯಂಕರ ನೋವನ್ನುಂಟುಮಾಡುವ ಮೂಲವ್ಯಾಧಿಯಿಂದ ಗುಣಹೊಂದಿರಿ. ದಿನನಿತ್ಯವೂ ಆಗುವ ಆ ಉರಿ ಬೇನೆಯಿಂದ ಹಾಗೂ ರಕ್ತ ಸ್ರಾವದಿಂದ ನರಳಬೇಡಿರಿ. ಈ ಉತ್ತಮ ವನೌಷಧಿ ಸತ್ವದಿಂದ ಕೂಡಿದ ಔಷಧವು ಅದ್ಭುತ ಗುಣಕಾರಿಯಾಗಿದೆ. ಮೂಲವ್ಯಾಧಿಯನ್ನು ನಿರ್ಮೂಲ ಮಾಡುತ್ತದೆ. ಆದ್ದರಿಂದ ಇನ್ನು ಮುಂದೆ ಈ ಬೇನೆಯಿಂದ ನರಳಬೇಡಿರಿ. ಜಾಂಬಕನ್ನು ಉಪಯೋಗಿಸಿರಿ. ಬೆಲೆ ಒಂದು ರೂಪಾಯಿ, ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್:

ಮೆಸರ್ಸ್ ದಾಧಾ ಎಂಡ್ ಕೊ.,

ಪಾರ್ಕ್ ಟೌನ್ ಮದರಾಸು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಸಿನೇಮಾ ಪುಟ

ಕಿಶೋರಶಾಹುವಿನ ದ್ವಿತೀಯ ವಿವಾಹ?

ನಿರ್ದೇಶಕ ನಟ ಕಿಶೋರಶಾಹು ಸ್ನೇಹಪ್ರಭಾಳಿಂದ ಬೇರೆಯಾಗಿ ದ್ವಿತೀಯ ವಿವಾಹವೊಂದನ್ನು ಮಾಡಿಕೊಳ್ಳುವ ಆಲೋಚನೆಯಲ್ಲಿರುವನೆಂದು ಸುದ್ದಿಯಿದೆ. ಈಗ ಅವನಿಗೆ ೨೫ ವರ್ಷ ವ್ಯಾಯ. ಕಿಶೋರ ಶಾಹುವಿನ ಅಜ್ಜಯ್ಯನು ರಾಜಗರ್ ಸಂಸ್ಥಾನದ ದಿವಾನನಾಗಿದ್ದನು. ಶಾಹು ಕುಟುಂಬವು ಕುಲೀನ ಮತ್ತು ಐಶ್ವರ್ಯದ್ದು. ಶಾಹುವಿನ ತಂದೆಗೆ ಮಗನನ್ನು ಲಂಡನಿಗೆ ಕಳುಹಿಸಿ ಬ್ಯಾರಿಸ್ಟರ್ ಮಾಡಬೇಕೆಂದಿತ್ತು. ಆದರೆ ಅದೃಷ್ಟವು ಆತನನ್ನು ಬೇರೆ ಕಡೆ ಎಳೆಯಿತು. ಕಿಶೋರಶಾಹು ಮುಂಬಯಿಗೆ ಬಂದವನೇ ಮೊದಲಾಗಿ ಬೊಂಬಯಿ ಟಾಕೀಸಿಗೆ ಹೋದನು. ಗತಿಸಿದ ಹಿಮಾಂಶುರೈ ಆತನನ್ನು ನೋಡಿ 'ಬಹುಕಾಲದಿಂದ ನಿನ್ನನ್ನು ನಾನು ನಿರೀಕ್ಷಿಸುತ್ತಿದ್ದೆನು' ಎಂದು ಸ್ವಾಗತಿಸಿದನು! ಕೆಲಕಾಲದ ನಂತರ ಅಲ್ಲಿ 'ಪುನರ್ಮಿಳನ'ವು ತಯಾರಾಯಿತು. ಆತನೊಡನೆ ನಟಿಸಿದ ನಟಿ ಆತನ ಜೀವನದೊಡನೆಯೂ ಕೆಲಕಾಲ ನಟಿಸಿದಳು. 'ಬಹುರಾಣಿ'ಯನ್ನು ನೋಡಿ ಸ್ನೇಹಪ್ರಭಾ ಕಿಶೋರನನ್ನು ಮೆಚ್ಚಿದಳು. ಆದರೆ ಈ ಉತ್ಸಾಹೀ ದಂಪತಿಗಳು ಆರು ತಿಂಗಳ ನಂತರ, ಬೇರೆಯಾಗಿ ಬಿಟ್ಟರು! ಕಿಶೋರಶಾಹು ಚಿತ್ರಗಾರನು. ತೈಲ ಚಿತ್ರ, ವಾಟರ್ ಕಲರ್ ಚಿತ್ರ, ಕಾರ್ಟೂನ್ ಮಾಡುವುದು ಅವನ ಅಭ್ಯಾಸ. ವಿದ್ಯಾರ್ಥಿಗಳಲ್ಲಿ ಇವನು ಜನಪ್ರಿಯನು. ಶಾಹು ಲೇಖಕನು, ಗ್ರಂಥಕರ್ತನು ಮತ್ತು ಪತ್ರಿಕಾ ವ್ಯವಸಾಯಿಯಾಗಿದ್ದಾನೆ. ಹಿಂದಿಯಲ್ಲಿ ಉತ್ತಮ ಕತೆಗಾರನಾಗಿದ್ದಾನೆ.

ಸಿಮ್‌ಕಿ ವಿವಾಹ

ಉದಯಶಂಕರನ ನೃತ್ಯ ಜತೆಗಾರ್ತಿ ಶ್ರೀಮತಿ ಸಿಮ್‌ಕಿಯು ಕಳೆದ ೧೫ನೆಯ ತಾರೀಕಿನಂದು ಪ್ರಭಾತ ಕುಮಾರ ಗಂಗೋಳಿಯೊಡನೆ ಅಲ್ಮೋರಾದಲ್ಲಿ ವಿವಾಹವಾದಳೆಂದು ತಿಳಿದಿದೆ

ಶಾಂತಾರಾಮರು ಕೆಲಸ ಬಿಡುವರೆ?

ಶಾಂತಾರಾಮರು ಫಿಲ್ಮ್ ಎಡ್ವೈಸರಿ ಬೋರ್ಡಿನಿಂದ ಕೆಲಸ ಬಿಟ್ಟು ಹೊರಬರುವರೇ ಅಥವಾ ಸರಕಾರವೇ ಅವರನ್ನು ಕೆಲಸದಿಂದ ಮುಕ್ತಮಾಡುವುದೇ ಎಂದು ಒಂದು ಸುದ್ದಿ ಹರಡಿದೆ. ಫಿಲ್ಮ್ ಎಡ್ವೈಸರಿ ಬೋರ್ಡಿನ ಇತ್ತೀಚೆಯ ಚಿತ್ರ 'ವರ್ಲ್ಡ್ ಕೋಂಬೆಟ್' ಎಂಬುದು ಬೊಂಬಯಿ ಫಿಲ್ಮ್ ಸೆನ್ಸರರಿಂದಲೂ, 'ಓಯ್ಸ್ ಓಫ್ ಯುತ್' ಎಂಬುದನ್ನು ಅಖಿಲಭಾರತ ವಿದ್ಯಾರ್ಥಿ ಸಂಘದವರಿಂದಲೂ ಆಕ್ಷೇಪಿತವಾಗಿ ಹಿಂತೆಗೆದುಕೊಳ್ಳಲ್ಪಟ್ಟದ್ದೇ ಕಾರಣವೆಂದು ಊಹೆ. ಅಂತೂ ಶಾಂತಾರಾಮರು ಆ ಕೆಲಸ ಬಿಟ್ಟರೆ ಎಜ್ರಾಮಿರಾರರು ಆಸ್ಥಾನವನ್ನಲಂಕರಿಸುವರೆಂದೂ ವಾರ್ತೆ!

ನ್ಯೂ ಥಿಯೇಟರ್ಸ್ ಚಿತ್ರಗಳು

ನ್ಯೂ ಥಿಯೇಟರ್ಸಿನ 'ಮೀನಾಕ್ಷಿ' ಎಂಬ ಬಂಗಾಳೀ ಚಿತ್ರವು ಕಲ್ಕತ್ತದಲ್ಲಿ ಪ್ರಸಿದ್ಧವಾಗಿದೆ. ಹಿಂದುಸ್ತಾನೀ ಭಾಷಾಂತರವೂ ಸಿದ್ಧವಾಗಿದೆ. ನಾರೀ ಜೀವನದ ಬವಣೆ ಹೋರಾಟಗಳು ಮೀನಾಕ್ಷಿಯಲ್ಲಿ ರಮ್ಯವಾಗಿ ವರ್ಣಿತವಾಗಿದೆ. ಸಾಧನಾ ನಾಯಕಿ ಪಾತ್ರದಲ್ಲಿಯೂ ನಜಾಂ, ಅಹೀನ್ ಚೌಧರಿ, ದೇವಬಾಲಾ, ಪನ್ನಾ, ಕೇ. ಸಿ. ಡೇ ಮೊದಲಾದವರೂ ಇದರಲ್ಲಿ ಅಭಿನಯಿಸುವರು.

ಇವರ 'ಕಾಶಿನಾಥ' ಎಂಬ ಬಂಗಾಳೀ ಹಿಂದುಸ್ತಾನಿ ಉಭಯ ಭಾಷಾ ಚಿತ್ರವು ನಿತಿನ್ ಬೋಸರಿಂದ ದಿಗ್ದರ್ಶಿಸಲ್ಪಟ್ಟು ತಯಾರಾಗಲಿದೆ.

ನಿರ್ದೇಶಕ ಪ್ರೇಮಾಂಕುರ ಅಟೋರ್ತಿಯವರು 'ದಿಕ್ಸ ಲ' ಎಂಬ ಬಂಗಾಳೀ ಚಿತ್ರದ ರಚನೆಯಲ್ಲಿ ನಿರತರಾಗಿದ್ದಾರೆ. ಚೋಬ್ ವಿಶ್ವಾಸ್‌ನೆಂಬ ಬಂಗಾಳದ ಪ್ರಸಿದ್ಧ ರಂಗಭೂಮಿಯ ನಟನೂ ಇದರಲ್ಲಿ ಅಭಿನಯಿಸುವನು.

ಸೈಗಲ್ 'ತಾನ್ ಸೇನ' ಪಾತ್ರದಲ್ಲಿ

ಪ್ರಸಿದ್ಧ ಗಾಯಕ ತಾನ್‌ಸೇನ್‌ನ ಜೀವನ ಚರಿತ್ರೆಯನ್ನೊಳಗೊಂಡು ರಣಜಿತ್ ಕಂಪೆನಿಯವರು ತಯಾರಿಸುವ ಚಿತ್ರದಲ್ಲಿ ಸೈಗಲ್ ತಾನಸೇನನ ಪಾತ್ರವಹಿಸುವನೆಂದು ಸುದ್ದಿ.

ಇಮ್ಮಡಿ ಉದ್ದೇಶವಿರುವ ಈ ಸಾಬೂನನ್ನುಪಯೋಗಿಸಿರಿ

ಛಿದ್ರವಾದ ಚರ್ಮದಿಂದ ರಕ್ಷಿಸಲು ಉತ್ತಮವಾದ ನಿಮ್ಮ ಭದ್ರತೆಯ ಸಾಧನ!

ನಿಮ್ಮ ಮೈಚರ್ಮದ ಮೇಲೆ ಮಚ್ಚೆಯಾ ಚಿಬ್ಬುಗಳಿರುವವೆ, ಚರ್ಮವು ಒರಟಾಗಿರುವುದೇ ಅಥವಾ ತುರಿಗಜ್ಜಿಯಿಂದ ಕಟಿರುವುದೆ? ಅದಕ್ಕೆ ಚರ್ಮವನ್ನು ಸರಿಯಾದ ರೀತಿಯಲ್ಲಿ ಸ್ವಚ್ಛವಾಗಿಡದಿದ್ದುದೇ ಕಾರಣ. ನಿಮ್ಮ ಸೂಕ್ಷ್ಮವಾದ ಚರ್ಮರಂಧ್ರಗಳು ಧೂಳು, ತೈಲ ಮತ್ತು ಬೆವರಿನಿಂದ ಮುಚ್ಚಿಕೊಂಡಿರುತ್ತದೆ. ಯೋಗ್ಯವಾದ ಚರ್ಮದ ಆರೋಗ್ಯ ಮತ್ತು ಸೌಂದರ್ಯತೆಗೆ ನಿಮ್ಮ ಮೈಚರ್ಮವನ್ನು ಯಾವಾಗಲೂ ಕುಟಿಕೂರಾ ಸಾಬೂನಿನಿಂದ (Cuticur Soap) ತೊಳೆಯಿರಿ. ಇದು ಇಮ್ಮಡಿ ಉದ್ದೇಶಗಳನ್ನು ಈಡೇರಿಸುತ್ತದೆ. ಯಾಕೆಂದರೆ ಇದು ಔಷಧಿಯುಕ್ತವಾದುದು ಮತ್ತು ಶೃಂಗಾರಯುಕ್ತವಾದ ಪರಿಮಳ ಸಾಬೂನಾಗಿರುತ್ತದೆ. ಆಗಾಗ ಸೂರ್ಯನ ತಾಪಕ್ಕೆ ಮತ್ತು ಹವೆಗೆ ಮೈಚರ್ಮ ಒಡ್ಡಲ್ಪಟ್ಟರೂ ಇದು ಸೌಂದರ್ಯವನ್ನು ಕೆಡಿಸದು. ಆದಕಾರಣ ಇಮ್ಮಡಿ ಉದ್ದೇಶದ ಈ ಸೌಂದರ್ಯದ ಸಾಬೂನನ್ನು ಇಂದೇ ಉಪಯೋಗಿಸಲು ಪ್ರಾರಂಭಿಸಿರಿ. ಸೌಂದರ್ಯ ಮತ್ತು ಆರೋಗಕರವಾದ ಚರ್ಮವನ್ನು ಪಡೆಯಲು ಇದನ್ನು ಪಯೋಗಿಸುವುದೇ ಉತ್ತಮ ಹಾದಿ. ಕುಟಿಕೂರಾ ಮುಲಾಮು (Cuticura Ointment) ನಿಂದ ಮೊಡ್ಡೆ ಛಿದ್ರ ಗಜ್ಜಿಗಳನ್ನು ನಾಶಮಾಡಿ ಇದರ ವಿಷಹಾರ ಗುಣವು ಕ್ರಿಮಿಗಳನ್ನು ನಾಶಮಾಡಿ ತುರಿಸುವಿಕೆಯನ್ನು ಶಾಂತಗೊಳಿಸಿ ಆಶ್ಚರ್ಯಕರವಾದ ಅತ್ಯಲ್ಪ ಸಮಯದೊಳಗಾಗಿ ಚರ್ಮವನು ಗುಣಪಡಿಸುವುದು. ಸ್ನಾನ ನಂತರ ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಬಹಳ ಶೈತ್ಯಕರವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಅಂಗಡಿಗಳಲ್ಲಿಯೂ ಮಾರಲ್ಪಡುವುದು

ಕುಟಿಕೂರಾ ಸಾಬೂನು
Cuticura Soap

ಕುಟಿಕೂರಾ ಸಾಬೂನುಗಳು ದೊಡ್ಡ ಸೈಜಿನಲ್ಲಿಯೂ (ಸ್ನಾನಕ್ಕೆ) ಸಣ್ಣ ಸೈಜಿನಲ್ಲಿಯೂ (ಪ್ರಚಾರಕ್ಕೆ) ದೊರೆಯುತ್ತದೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ದಮ್ಮು ಗುಣ ಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಆದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ, ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದ ಸೇವಿಸಿಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಒಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦ ರೂ ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ

ಪತ್ತಾ:- ಡಾ. ಪುರೋಹಿತ ಫಾರ್ಮ್ಯಸಿ, ಕೊಲ್ಹಾಪುರ. ಬೊಂಬೈ ಏಜಂಟ - ಮೆ ಸರ್ಸ ಪನಸಾಲಿ, ಭಿಖು ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

ವಿಜ್ಞಾನ - ವಿಚಿತ್ರ

ಮ್ಯಗನ್ ದೀಪ

ಸರಕಾರೀ ಎಣ್ಣೆಯಿಂದ ಲಾಟನು ದೀಪವನ್ನು ಉರಿಸುವ ಹೊಸ ಯೋಜನೆಯೊಂದನ್ನು ವರ್ಧಾದಲ್ಲಿ ಕಂಡುಹಿಡಿದಿರುವ ವಿಷಯವನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿದ್ದೇವೆ. ಮ್ಯಗನ್ ದೀಪವನ್ನು ಮಾಡಲು ಹನ್ನೆರಡಾಣೆ ಕೂಲಿ ಮತ್ತು ನಾಲ್ಕಾಣೆ ಸಾಮಗ್ರಿ ಬೇಕಾಗಿದೆಯೆಂದು ಶ್ರೀ. ಕುಮಾರಪ್ಪನವರು ಬರೆಯುತ್ತಾರೆ. ಹಳೆಯ ಲಾಟನು ದೀಪಗಳನ್ನೊ ಸರಿಮಾಡಿ ಇದನ್ನು ತಯಾರಿಸಬಹುದು. ಈ ದೀಪವನ್ನು ಮಾಡಬೇಕೆಂದಿದ್ದವರು ರೂ. ೫ನ್ನು ವರ್ಧಾದ ಮಗನ್‌ವಾಡಿಯಲ್ಲಿರುವ ಎ. ಐ. ಎ. ಐ. ಎ. ಗೆ ಮನಿಯಾರ್ಡರು ಮಾಡಿ ಕಳುಹಿಸಿ ದೀಪವೊಂದನ್ನು ತರಿಸಬಹುದು. ಈ ದೀಪವನ್ನು ಸಾರ್ವಜನಿಕರು, ಚಿಮ್ನಿ ಎಣ್ಣೆ ಇಲ್ಲದ್ದಕ್ಕಾಗಿ ಉಪಯೋಗಿಸುವುದು ಮಾತ್ರ ಅವಶ್ಯವಲ್ಲ, ದೇಶೀಯ ಕೈಗಾರಿಕೆಯನ್ನು ಬೆಳೆಸಿ ರಾಷ್ಟ್ರದ ಸಂಪತ್ತನ್ನೂ ಹೆಚ್ಚಿಸಲೂ ಇದರಿಂದ ಆಸ್ಪದವಾಗುವುದು.

ಬ್ಲಡ್ ಬೇಂಕ್

ಬ್ರಿಟನಿನಿಂದ ಭಾರತಕ್ಕೆ 'ಬ್ಲಡ್ ಬೇಂಕಿ'ನ (ರಕ್ತವನ್ನು ಕೂಡಿಸುವ ಸಂಸ್ಥೆ) ಸಲಕರಣೆಗಳೂ, ಶಸ್ತ್ರ ಅಸ್ತ್ರ ಉಪಕರಣಗಳೂ ಈಗ ಬಂದಿವೆ. ಪ್ರವೀಣರಾದ ಕೆಲಸಗಾರರೂ ಬಂದಿರುವರು. ಮನುಷ್ಯ ಶರೀರದಿಂದ ರಕ್ತವನ್ನು ತೆಗೆದು, ಯುದ್ಧದ ಗಾಯಾಳುಗಳ ಹಾಗು ನಿಶ್ಶಕ್ತ ಶರೀರಗಳಿಗೆ ರಕ್ತವನ್ನು ಸೇರಿಸಲಾಗುವ ಸುಲಭ ಯಂತ್ರಗಳು ಭಾರತದಲ್ಲಿಯೂ ಈಗ ತಯಾರಾಗುತ್ತಿವೆ. ಮಿಲಟರಿ ಮತ್ತು ಸಿವಿಲ್ ಆಸ್ಪತ್ರೆಗಳಲ್ಲಿ ಇದನ್ನು ಕೊಡಲಾಗುತ್ತದೆ. ಪಂಡಿತ ನೆಹರು, ಬಿ. ಜಿ. ಖೇರ್ ಮೊದಲಾದ ಕಾಂಗ್ರೆಸ್ ಮುಖಂಡರೂ ಕೂಡ ಇಂತಹ ಮಾನವೋಪಕಾರೀ ಸಲಹೆಗೆ ತಮ್ಮ ರಕ್ತವನ್ನು ಕೊಟ್ಟಿರುವರು.

ಒಂದು ಕಾಯಿಯಲ್ಲಿ ಎರಡು ಕೊಬ್ಬರಿ

ಮೈಸೂರು ಬಸವನ ಗುಡಿ ನರಸಿಂಹರಾಜ ಕೊಲೊನಿಯಲ್ಲಿರುವ ಶ್ರೀ ರಾಮಸ್ವಾಮಿಯವರು ದೇವರಿಗೆ ಒಡೆಯುವುದಕ್ಕೋಸ್ಕರ ತೆಂಗಿನಕಾಯಿಯೊಂದನ್ನು ತೆಗೆದುಕೊಂಡು ಹೋಗಿದ್ದರಲ್ಲಿ ಎರಡು ಚಿಪ್ಪು ಇದ್ದು ಬೇರೆ ಬೇರೆ ಎರಡು ಕೊಬ್ಬರಿಗಳೂ ಇದ್ದುವೆಂದು ತಿಳಿದುಬಂದಿದೆ.

ಅಮೆರಿಕದಲ್ಲಿ ನೆಹರು ಪುಸ್ತಕ

'ಮಗಳಿಗೆ ತಂದೆಯ ಓಲೆಗಳು' ಎಂಬ ಪಂಡಿತ ನೆಹರುಗಳ ಪುಸ್ತಕವು ಅಮೆರಿಕದ ವಿದ್ಯಾರ್ಥಿ ಮಂಡಳಿದಲ್ಲಿ ಕೇವಲ ಎರಡೇ ವರ್ಷಗಳಲ್ಲಿ ೬೦,೦೦೦ಕ್ಕೆ ಮಿಕ್ಕಿ ಮಾರಾಟವಾಗಿದೆ. ಕಾಂಗ್ರೆಸು ಮಂತ್ರಿಮಂಡಳದ ಕಾಲದಲ್ಲಿ ಆ ಪುಸ್ತಕವನ್ನು ಭಾರತದಲ್ಲಿ ಕೆಲವು ಪ್ರಾಂತಗಳಲ್ಲಿ ಶಾಲಾ ಪಠ್ಯಪುಸ್ತಕವಾಗಿಡಲಾಗಿತ್ತು. ಆ ಪುಸ್ತಕದ ಪ್ರಿಂಟು ವೆಚ್ಚವಲ್ಲದೆ ತನಗೇನೂ ಅದರಿಂದ ಪ್ರತಿಫಲ ಬೇಡವೆಂದು ನೆಹರು ಹೇಳಿದ್ದರಿಂದ ಅದು ಕೇವಲ ನಾಲ್ಕಾಣೆ ಬೆಲೆಗೆ ದೊರಕುವಂತಾಗಿತ್ತು. ಅದರಲ್ಲಿಯೂ ದೊರೆತ ಲಾಭವು ಬಡ ವಿದ್ಯಾರ್ಥಿಗಳಿಗೆ ಹಂಚಲಾಗಿದೆ. ಒಟ್ಟು ಆ ಲಾಭವು ೩,೦೦೦ಕ್ಕೆ ಮಿಕ್ಕಿರುವುದೆಂದೂ ತಿಳಿದಿದೆ. ಒಟ್ಟು ಒಂದು ಲಕ್ಷಕ್ಕೆ ಮಿಕ್ಕಿ ಮಾರಾಟವಾಗಿದೆ.

ಕೊಳ್ಳಿರಿ

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್‌ಗಳನ್ನು

ಸಹಾಯ ಮಾಡಿರಿ ನಿಮ್ಮ ದೇಶಕ್ಕೆ | ಏರ್ಪಾಟು ಮಾಡಿಕೊಳ್ಳಿ ನಿಮಗಾಗಿ



ನಿಮ್ಮ ಪೋಸ್ಟಾಫೀಸಿನಲ್ಲಿ ದೊರೆಯುತ್ತವೆ. ಪ್ರತಿ ರೂ ೧೦ ಗೆ ರೂ. ೩/೪ ಲಾಭ ಸಿಗುತ್ತೆ.

KN.P 36

ದೇಶೀಯ ಯುದ್ಧಶಕ್ತಿಯನ್ನು ಬೆಳೆಸಿರಿ

ರಾಮಕೃಷ್ಣ ಲೀಲಾ ಪ್ರಸಂಗ

ಸಮಾಧಿ ರಾಜ್ಯದಲ್ಲಿರುವ ಆತಂಕ

ಆದನ್ನು ಪರಿಹರಿಸುವ ಬಗೆ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದರು
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

"ತಾಯಿಯ ಮೇಲೆ ಸಂಪೂರ್ಣವಾಗಿ ಭಾರ ಕೊಟ್ಟಿದ್ದೇವಾದ್ದರಿಂದ ತಾಯಿಯೂ ಕೂಡ ನನ್ನ ಕೈ ಹಿಡಿದಿದ್ದಾಳೆ. ಒಂದಿನಿತು ದಾರಿ ತಪ್ಪಿ ನಡೆಯಲು ಬಿಡುವುದಿಲ್ಲ" ಎಂದು ಶ್ರೀ ರಾಮಕೃಷ್ಣ ದೇವರು ಹೇಳುತ್ತಿದ್ದರು. ಶ್ರೀ ಪರಮಹಂಸರ ಜೀವನದಲ್ಲಿ ನಡೆದ ಇಂತಹ ಎಷ್ಟೋ ದೃಷ್ಟಾಂತಗಳನ್ನು ಕೇಳಿದ್ದೇವೆ ಆಶ್ಚರ್ಯವಾದ ಸಂಗತಿ! ಇಂತಹ ಸತ್ಯ ನಿಷ್ಠೆಯ ಇಂತಹ ಸಂಪೂರ್ಣ ನಿರ್ಭರತೆಯ ವಿಷಯವಾಗಿ ಕಲ್ಪನಾ ಸಹಾಯದಿಂದಲೂ ಕೂಡ ನಮ್ಮಿಂದ ಅನುಭವಿಸಲಸಾಧ್ಯವೇ ಸರಿ! ಶ್ರೀ ಪರಮಹಂಸರು ಹೀಗನ್ನುತ್ತಿದ್ದರು:—'ಆ ದೇಶದಲ್ಲಿ (ಅಂದರೆ ಶ್ರೀ ರಾಮಕೃಷ್ಣ ದೇವರ ಜನ್ಮಸ್ಥಾನ ಕಾಮಾರಪುರಿನಲ್ಲಿ) ಬಯಲಿನ ಮಧ್ಯ ಕಾಲ್ದಾರಿ ಇದೆ ಅದರ ಮಾರ್ಗವಾಗಿ ಹಳ್ಳಿಗರು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗುತ್ತಾರೆ ಕಾಲ್ದಾರಿ ಇಕ್ಕಟ್ಟಾಗಿತ್ತು. ಮಗು ಬಿದ್ದು ಹೋದೀತೆಂಬ ಆಶಂಕೆಯಿಂದ ತಂದೆಯು ಸಣ್ಣ ಮಗುವನ್ನೆತ್ತಿ ಹಿಡಿದಿದ್ದಾರೆ ದೊಡ್ಡ ಮಗು ಚತುರನಾದ್ದರಿಂದ ತಾನೇ ತಂದೆಯ ಕೈಹಿಡಿದು ಹೋಗುತ್ತಿದ್ದಾನೆ ಹೋಗುತ್ತ ಹೋಗುತ್ತ ಗಿಡುಗ ಪಕ್ಷಿ ಅಥವಾ ಇನ್ನು ಏನಾದರೂ ಕಂಡು ಮಕ್ಕಳು ಆನಂದದ ಉಲ್ಲಾಸದಿಂದ ಕೈ ತಟ್ಟುತ್ತಾರೆ ತಂದೆಯ್ನು ಎತ್ತಿ ಹಿಡಿದುಕೊಂಡ ಮಗುವು ಏನೂ ಅಂಜಿಕೆಯಿಲ್ಲದೆ ಆನಂದದಿಂದ ಕೈತಟ್ಟುತ್ತಾ ಹೋಗುತ್ತಿದೆ. ಏಕೆಂದರೆ ತಂದೆಯು ತನ್ನನ್ನು ಹಿಡಿದುಕೊಂಡಿದ್ದಾನೆಂದು ಅದಕ್ಕೆಗೊತ್ತು ತಂದೆಯ ಕೈಹಿಡಿದು ಹೋಗುತ್ತಿದ್ದ ಮಗುವು ಆ ದಾರಿಯ ವಿಷಯವಾಗಿ ಮೈಮರೆತು ಕೈ ತಟ್ಟಲು ಹೋಗಿ ಕೆಳಗೆ ಬಿದ್ದು ಅಳಲಾರಂಭಿಸಿದನು ಹಾಗೆಯೇ ತಾಯಿ ಯಾರ ಕೈ ಹಿಡಿದಿದ್ದಾಳೋ ಆತನಿಗೆ ಭಯವಿಲ್ಲ, ಆದರೆ ಯಾರು ತಾಯಿಯ ಕೈಹಿಡಿದು ಹೋಗುತ್ತಾನೆಯೋ ಆತನಿಗೆ ಭಯ ಉಂಟು—ಕೈಬಿಟ್ಟರೆ ಬೀಳುತ್ತಾನೆ"

ಶ್ರೀ ಪರಮಹಂಸರಿಗೆ ನಿರ್ವಿಕಲ್ಪ ಸಮಾಧಿರಾಜ್ಯಕ್ಕೆ ಏಳುವಾಗ ದಾರಿಯಲ್ಲಿ ಕಂಡುಬಂದ ಆತಂಕ

ಹೀಗೆ ಈಶ್ವರಾನುರಾಗದ ಪ್ರಬಲತೆಯ ದೆಸೆಯಿಂದ ಸಾಂಸಾರಿಕ ಯಾವತ್ತು ವಸ್ತು ಅಥವಾ ವ್ಯಕ್ತಿಯಲ್ಲಿ ಮನಸ್ಸಿನ ಏನೊಂದು ವಿಶೇಷವಾದ ಆಕರ್ಷಣೆ ಅಥವಾ ಸೆಳೆತವು ಇಲ್ಲದಿರುವುದರಿಂದಲೇ ನಿರ್ವಿಕಲ್ಪ ಸಮಾಧಿ ಲಾಭದ ದಾರಿಯಲ್ಲಿ ಯಾವತ್ತು ಸಾಂಸಾರಿಕ ಕಾಮನೆ, ವಾಸನೆಯು ಶ್ರೀ ಪರಮಹಂಸರಿಗೆ ಆತಂಕವಾಗಿರಲಿಲ್ಲ ಶ್ರೀ ಪರಮಹಂಸರು ಯಾರಿಗೆ ಇಷ್ಟು ಕಾಲ ಸಂಪೂರ್ಣ ಭಕ್ತಿಯಿಂದ ಪೂಜೆಮಾಡಿ, ಪ್ರೀತಿಸಿ, 'ಸಾರಾತ್ಸಾರಾ' 'ಪರಾತ್ಪರಾ' ಎಂದು ಧ್ಯಾನಿಸುತ್ತಿದ್ದ ಶ್ರೀ ಜಗದಂಬೆಯು ಆ 'ಸೌಮ್ಯ ಸೌಮ್ಯತರಾಶೇಷ ಸೌಮ್ಯೇಭ್ಯಸ್ತ್ವತಿ ಸುಂದರೀ' ಮೂರ್ತಿಯೇ ಆತಂಕ ಸ್ವರೂಪಳಾಗಿದ್ದಳು. ಶ್ರೀ ಪರಮಹಂಸರು ಹೀಗನ್ನುತ್ತಿದ್ದರು —"ಮನಸ್ಸು ಏಕಾಗ್ರವಾಗಿ ತರುವಷ್ಟರಲ್ಲಿಯೇ ಶ್ರೀ ಜಗಜ್ಜನನಿಯ ಮೂರ್ತಿಯು ಸನ್ಮುಖದಲ್ಲಿ ನಿಲ್ಲುತ್ತಿತ್ತು. ಆಗ ಅವಳನ್ನು ತ್ಯಜಿಸಿ ಇನ್ನು ಅವಳಿಂದಅತೀತವಾಗಲು ಮನಸ್ಸಾಗುವುದಿಲ್ಲ. ಎಷ್ಟು ಸಾರೆ ಮನಸ್ಸಿನಿಂದ ಎಲ್ಲವನ್ನೂ ಹೊರಪಡಿಸಿ ನಿರಾಲಂಬನಾಗಿರಲು ಪ್ರಯತ್ನ ಮಾಡುತ್ತೇನೆಯೋ ಅಷ್ಟೇ ಸಾರೆ ಹಾಗಾಗಿತ್ತು. ಕೊನೆಗೆ ವಿವೇಕದಿಂದ ಮನಸ್ಸನ್ನು ಸ್ಥಿರಪಡಿಸಿ, ಜ್ಞಾನವೆಂಬುದು 'ಒಂದು ಖಡ್ಗವೆಂದು ಭಾವಿಸಿ ಆ ಖಡ್ಗದಿಂದ ಆ ಮೂರ್ತಿಯನ್ನು ಮನಸ್ಸಿನಲ್ಲಿಯೇ ಎರಡು ತುಂಡಾಗಿ ಮಾಡಿದೆನು. ಆಗ ಮನಸ್ಸಿನಲ್ಲಿ ಏನೂ ಉಳಿಯಲಿಲ್ಲ; ಕೂಡಲೇ ಸಂಪೂರ್ಣವಾಗಿ ನಿರ್ವಿಕಲ್ಪ ಅವಸ್ಥೆಗೆ ತಲ್ಪಿದೆನು, "ನಮಗೆ ಈ ಮಾತುಗಳು ಅರ್ಥಹೀನವಾಗಿ ತೋರುತ್ತವೆ. ಏಕೆಂದರೆ ನಾವೆಂದಿಗೂ ಶ್ರೀ ಜಗದಂಬೆಯ ಮೂರ್ತಿ ಅಥವಾ ಭಾವವನ್ನು ದರ್ಶನ ಮಾಡಲಿಲ್ಲ ಯಾರನ್ನಾದರೂ ಈ ವರೆಗೆ ತನು ಮನ ಧನ ಅರ್ಪಿಸಿ ಪ್ರೀತಿಸಲಿಲ್ಲ ನಮಗಿರುವುದು ಪೂರ್ಣ ಪ್ರೀತಿ ಈ ಮಾಂಸ ಪಿಂಡದ ಶರೀರದ ಮತ್ತು ಮನಸ್ಸಿನ ಮೇಲೆ ಮಾತ್ರ ಈ ಪ್ರೀತಿಯು ನಮ್ಮ ಹೃದಯವನ್ನು ಪೂರ್ಣ ಆಕ್ರಮಣ ಮಾಡಿದೆ ಆದ್ದರಿಂದಲೇ ಮರಣಕ್ಕೆ ಅಥವಾ ಮನಸ್ಸಿನ ಆಮೂಲ ಪರಿವರ್ತನೆಗೆ ನಮಗಿಷ್ಟು ಅಂಜಿಕೆ ಶ್ರೀ ಪರಮಹಂಸರಿಗೆ ಅದು ಇದ್ದಿಲ್ಲ ಸಂಸಾರದಲ್ಲಿ ಶ್ರೀ ಜಗದಂಬೆಯು ಸಾಧಕನುಳಿವೇ ಒಂದು ಮಾತ್ರ ಸರ್ವಸ್ವವೆಂದು ಬುದ್ಧಿ ವಿವೇಕದಿಂದಲೂ ತಿಳಿದಿದ್ದರೂ ಅಲ್ಲದೆ ಆ ಸಾಧಕನುಳವನ್ನು ಧ್ಯಾನಿಸಿ ಅವಳ ದಿವ್ಯ ಮೂರ್ತಿಯ ಸೇವೆಯನ್ನೇ ಮಾಡಿ ಹಗಲಿರುಳೂ ಕಾಲಕಳೆಯುತ್ತಿದ್ದರು ಅಷ್ಟರಿಂದಲೇ ಆ ಮೂರ್ತಿಯನ್ನು ಯಾವ ತರದಿಂದಲಾದರೂ ಮನಸ್ಸಿನಿಂದ ಹೊರಪಡಿಸಿದ ಮಾತ್ರವೇ, ಇನ್ನು ಮನಸ್ಸು ಏನನ್ನವಲಂಬಿಸಿ ಈ ಸಂಸಾರದಲ್ಲಿರಬಹುದು" ಸಂಪೂರ್ಣವಾಗಿ ಅವಲಂಬನ ಹೀನವಾಗಿ ವೃತ್ತಿಶೂನ್ಯವಾಗಿ ನಿರ್ವಿಕಲ್ಪ ಅವಸ್ಥೆಯಲ್ಲಿ ನಿಂತಿತು. ಪಾಠಕರೇ ಈ ವಿಷಯ ನಿಮಗೆ ತಿಳಿಯದಿರಬಹುದು, ಒಂದು ಸಲ ಕಲ್ಪನೆಯಾದರೂ ಮಾಡಲು ಪ್ರಯತ್ನಿಸಿರಿ ಹಾಗಾದರೆ ಶ್ರೀ ಪರಮಹಂಸರು ಶ್ರೀ ಜಗನ್ಮಾತೆಯನ್ನು ತಮ್ಮವಳಾಗಿ ಮಾಡಿಕೊಂಡು ಎಷ್ಟು ಹೃತ್ಪೂರ್ವಕವಾಗಿ ಪ್ರೀತಿಸುತ್ತಿದ್ದರೆಂಬದಾಗಿ ನೀವೇ ತಿಳಿಯಬಹುದು

(ಕ್ರಮಶಃ)

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From

7--8--1942

1.	Current	(1% p. a. from Jan. to June.
		(½% p. a. from July to Dec
2.	Savings Bank	2% p. a.
3.	Short-term	1¼% p. a
4.	Fixed 3 months	1½% p. a.
	6 "	2% p. a.
	9 "	2½% p. a.
	12 "	3% p. a.
	24 "	3¼% p. a.

Advances aginst approved securities made at very competitive rates.

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸಾಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency,	**The Joint Booking Office,**
MANGALORE.	KODIALBAIL.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year ... 4%
Two years or above 4½%.

Interest Payable Quarterly

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,—
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threa 1ı ı (orhabitualabortion and other uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸು ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 17] ತಾರೀಕು 28—8—1942 [ಸಂಚಿಕೆ 34]

ಕಲ್ಲೆದೆಯಾಗಿದ್ದರೂ ಕರಗಬೇಕಾಗಿತ್ತು!

ಜಿನ್ನರಿಗೆ 'ಪಾಕಿಸ್ತಾನ'ದ್ದೇ ಹಠ!

ಲೀಗಿನ ನಿರ್ಣಯವನ್ನು ಲತೀಫರು ಖಂಡಿಸುತ್ತಾರೆ.

ಮುಂಬಯಿಯಲ್ಲಿ ಕಳೆದ ೧೬ನೆಯ ತಾರೀಕಿಗೆ ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿಯ ಸಭೆ ಸೇರಿತು, ಇದರಲ್ಲಿ ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸಲು ಏನಾದರೂ ವಿವೇಕಪೂರ್ಣ ವಿಚಾರಗಳು ಹೊರಬೀಳಬಹುದೇ ಎಂದು ಕೆಲವರು ಕಾತುರರಾಗಿದ್ದರು. ಇಂಥಾ ಆಶೆಯಿಂದಲೇ ರಾಜಗೋಪಾಲಾಚಾರ್ಯರಂಥವರು ಲೀಗಿನ ಮನವೊಲಿಸಲು ಸಾಹಸಮಾಡಿದರು 'ಎಷ್ಟೋ ಮಹತ್ತಾದ ಸಿದ್ಧಿಗಳನ್ನು ದೊರಕಿಸಿದೀ ಈ ನಮ್ಮ ದೇಶ, ಇಂದಿನ ಭಾರತದ ರಾಜಕೀಯ ಸಮಸ್ಯೆಯನ್ನು ಹಿಂದುಗಳು ಮುಸ್ಲಿಮರು ಒಂದಾಗಿ ಬಿಡಿಸುವಷ್ಟು ಸಬಲರಿದ್ದಾರೆ. ಆದ್ದರಿಂದ ಲೀಗಿನವರು ಈ ಸಂಧಿಕಾಲದಲ್ಲಿ ದೇಶದ ಅದೃಷ್ಟವನ್ನು ನಿಶ್ಚಯಿಸಲು ಅನುಕೂಲವಾಗುವಂತೆ ಒಂದು ಯೋಗ್ಯ ನಿರ್ಧಾರ ಮಾಡಬೇಕು, ಲೀಗ್ ಮತ್ತು ಕಾಂಗ್ರೆಸಿನವರು ಒಟ್ಟಾಗಿ ಸರಕಾರವನ್ನು ಒತ್ತಾಯಪಡಿಸಿದರೆ ಕಾರ್ಯ ಸಿದ್ಧಿಸುವುದಲ್ಲದೆ, ದೇಶದಲ್ಲಿ ಹಿಂದೆಂದೂ ಇಲ್ಲದಷ್ಟು ಉನ್ನತ ಐಕ್ಯಗಳೂ ನೆಲೆಗೊಳ್ಳುವವು, ಲೀಗಿನವರು ಮಾಡುವ ನಿರ್ಣಯದಿಂದ ಇಂಥಾ ಪರಿವರ್ತನೆಯುಂಟಾದರೆ ಇಡೀ ಜಗತ್ತೇ ಅವರ ನಿರ್ಣಯವನ್ನು ಸ್ವಾಗತಿಸುವುದು' ಎಂಬೀ ರೀತಿಯಲ್ಲಿ ರಾಜಾಜಿ ಬಳ್ಳಿ ಕಳಕಳಿಯಿಂದ ವಿನಂತಿಸಿಕೊಂಡರು. ಲೀಗಿನ ಮುಖಂಡರಲ್ಲೊಬ್ಬರಾದ ಹಜ್ರತ್ ಮೊಹಾನಿಯವರು, ಜಿನ್ನರಿಗೊಂದು ತಂತಿ ಕಳುಹಿಸಿ ಕಾಂಗ್ರೆಸನ್ನು ನಿಂದಿಸುವುದು ತಪ್ಪೆಂದೂ ಒಂದು ಪರಿಹಾರ್ಯ ಸೂಚನೆ ತರಬೇಕೆಂದೂ ತಿಳಿಸಿದ್ದರು. ಪರಿಸ್ಥಿತಿ ಹೀಗಿರುತ್ತಾ ಕಳೆದ ವಾರದ ಒಂದೆರಡು ದಿನಗಳಲ್ಲಿ ಎಲ್ಲಿ ಕಾಂಗ್ರೆಸು ಲೀಗು ಸಂಧಾನವಾಗುವುದೋ, ಗಾಂಧಿಜಿ ಜಿನ್ನಾ ಭೇಟಿಯಾಗುವುದೋ ಕಾಂಗ್ರೆಸ್ ಲೀಗುಗಳ ಸಂಯುಕ್ತ ಕೇಳಿಕೆಗೆ ಬ್ರಿಟಿಷ್ ಪ್ರಭುತ್ವವು ಬಗ್ಗುವುದೋ ಎಂದು ಕೆಲವರು ಆಕಾಶ ಗೋಪುರ ಕಟ್ಟುತ್ತಿದ್ದಂತೆ ಈಗ ಲೀಗಿನ ನಿರ್ಣಯವು ಹೊರಬಿದ್ದು, ಎಲ್ಲವೂ ಧ್ವಂಸವಾಗಿದೆ. ಈಗ ಯುದ್ಧಕಾಲದಲ್ಲೇ ಭರತಖಂಡದ ಆಡಳಿತದ ಅಧಿಕಾರವು ಅರ್ಥವಾಗಬೇಕು. ಯುದ್ಧಾನಂತರ ಪಾಕಿಸ್ತಾನ ಕೊಡಬೇಕು ಎಂಬುದೇ ಜಿನ್ನರು ಕಾಂಗ್ರೆಸಿನೊಡನೆ ಸಹಕರಿಸಲು ಹಾಕಿದ ಶರತ್ತುಗಳು. ಇಂಥ ವಿಷಮ ಸಂಧಿಕಾಲದಲ್ಲಾದರೂ ಲೀಗು ಪ್ರಗತಿ ಪಥದಲ್ಲಿ ಒಂದೇ ಒಂದು ಹಜ್ಜೆಯನ್ನು ಮುಂದಿಡಲು ಮನಸ್ಸು ಮಾಡದೆ ಇರುವುದು ಶೋಚನೀಯ!

ಲೀಗಿನ ಶಕ್ತಿ ಎಷ್ಟಿದೆ?

'ಇಡೀ ಭಾರತದೇಶಕ್ಕೇ ಸ್ವಾತಂತ್ರ್ಯ ಪಡೆಯಲು ಕಾಂಗ್ರೆಸು ಹೋರಾಡುತ್ತಿರುವುದಲ್ಲದೆ, ಸ್ವಂತಕ್ಕಾಗಿಯಲ್ಲ, ಸ್ವಾತಂತ್ರ್ಯ ಸಿಕ್ಕಿದ ಬಳಿಕ ಕಾಂಗ್ರೆಸ್ ಎಂಬ ಸಂಸ್ಥೆಯೇ ಬೇಕಾದರೆ ಉಳಿಬಹುದು, ಆದರೆ ಇಂದು ದೇಶದ ಐಕ್ಯ ಹಾಗೂ ದೇಶದ ಸ್ವಾತಂತ್ರ್ಯವು, ೩೩ ಕೋಟಿ ಭಾರತೀಯರ ಜೀವದ ಪ್ರಶ್ನೆಯೆಂಬುದನ್ನು ಜಿನ್ನರು ಮರೆತು ವರ್ತಿಸುವಂತಿದೆ. ಪಾಕಿಸ್ತಾನ ಹಾಗೂ ಸ್ವತಂತ್ರ ಭಾರತದಲ್ಲಿ ಮುಸ್ಲಿಮರ ಸ್ಥಾನಗಳ ವಿಚಾರವಾಗಿ ಹಲಕಾಲದಿಂದ ಹಲವಾರು ಮುಂದಾಳುಗಳು ಅನೇಕ ರಚನಾತ್ಮಕ ಸೂಚನೆಯಿತ್ತಿರುವರು. ಅವುಗಳೊಂದನ್ನೂ ಕಿವಿಗೆ ಹಾಕಿಕೊಳ್ಳದೆ 'ಪಾಕಿಸ್ತಾನ'ವೊಂದನ್ನೇ ಮುಂಯದಿದ್ದರೂ ಚಿಂತೆಯಿಲ್ಲ' ಎಂದು ಮಹಾತ್ಮರಾದಿ ಕಾಂಗ್ರೆಸು ಧುರೀಣರು ಸಾರುತ್ತಿರುವಾಗ ಜಿನ್ನರು ಮತ್ತೂ ಮತ್ತೂ ಕಾಂಗ್ರೆಸು ಸ್ವಂತಕ್ಕಾಗಿ ಹಾಗೂ ಹಿಂದುಗಳಿಗಾಗಿ ಸ್ವಾತಂತ್ರ್ಯ ದೊರಕಿಸಲು ಹೋರಾಡುತ್ತದೆಯೆನ್ನುವುದರಲ್ಲಿ ಎಷ್ಟರಮಟ್ಟಿಗೆ ಔಚಿತ್ಯವಿದೆಯೋ ತಿಳಿಯದು. ಪಾಕಿಸ್ತಾನವು ಜಿನ್ನರು ಹೇಳುವಂತೆ ೧೦ ಕೋಟಿ ಮುಸ್ಲಿಮರ ಜೀವನದ ಪ್ರಶ್ನೆಯಿದ್ದರೂ ಇರ ದೊಡ್ಡುವ ಜಿನ್ನರ ಅಪ್ರಾಗತಿಕ ಬುದ್ಧಿಯನ್ನು ನೋಡಿ ಮರಗುತ್ತಿದ್ದಾರೆ. ಹಲವರು ಹಿಂದುಗಳು ಮುಸ್ಲಿಮರು ಪರಸ್ಪರ ಒಮ್ಮತಗೊಂಡು ಭಾರತದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಲ್ಲದೆ ತಮ್ಮ ಪಾಕಿಸ್ತಾನಕ್ಕಾಗಿ ಬ್ರಿಟಿಷ್ ಪ್ರಭುತ್ವಕ್ಕೆ ಶರಣಾಗುತ್ತಿರುವುದು ಸ್ವತಂತ್ರ ಮತಿಗಳಾದ ಮುಸ್ಲಿಂ ಲೀಗಿನ ಪ್ರತಿಷ್ಠಿತ ಸದಸ್ಯರಿಗೇ ಭೂಷಣವಾಗಿಲ್ಲ. ಈ ಸಂದರ್ಭದಲ್ಲಿ ನಿಜವಾಗಿಯೂ ಭಾರತದಲ್ಲಿ ಮುಸ್ಲಿಂ ಲೀಗಿನ ಶಕ್ತಿಯೆಷ್ಟಿದೆಯೆಂಬುದನ್ನು ಸ್ವಲ್ಪ ವಿಚಾರಮಾಡಬೇಕಾಗಿದೆ. ಕಳೆದ ಚುನಾವಣೆಯಲ್ಲಿ ಮುಸ್ಲಿಂ ಲೀಗಿನ ಸದಸ್ಯರು ಹಾಗೂ ಲೀಗಿಗೆ ಸೇರದ ಮುಸ್ಲಿಂ ಸದಸ್ಯರು ಬೇರೆ ಬೇರೆ ಪ್ರಾಂತಗಳ ಶಾಸನ ಸಭೆಗಳಲ್ಲಿ ಎಷ್ಟಿದ್ದರು ಎಂಬುದನ್ನು ಗಮನಿಸಿದರೆ ಅಖಂಡ ಭಾರತದಲ್ಲಿ ಮುಸ್ಲಿಂ ಲೀಗಿನ ಪ್ರತಿಷ್ಠೆ ತಿಳಿಯುತ್ತದೆ. ಮದರಾಸು ಪ್ರಾಂತದಲ್ಲಿ ಮುಸ್ಲಿಂ ಲೀಗಿನ ಸದಸ್ಯರ ೧೧, ಇತರ ಮುಸ್ಲಿಂ ಸದಸ್ಯರು ೧೭. ಮುಂಬೈ ಪ್ರಾಂತದಲ್ಲಿ ಮುಸ್ಲಿಂ ಲೀಗಿನವರು ೨೦. ಇತರ ಮುಸ್ಲಿಮರು ೯. ಬಂಗಾಳದಲ್ಲಿ ಮುಸ್ಲಿಂ ಲೀಗಿನವರು ೪೦, ಇತರ ಮುಸ್ಲಿಮರು ೭೭, ಸಂಯುಕ್ತ ಪ್ರಾಂತದಲ್ಲಿ ಮುಸ್ಲಿಂ ಲೀಗಿನವರು ೭೭, ಇತರ ಮುಸ್ಲಿಮರು ೩೭. ಪಂಜಾಬಿನಲ್ಲಿ ಮುಸ್ಲಿಂ ಲೀಗಿನವರು ೧, ಇತರ ಮುಸ್ಲಿಮರು ೮೪, ಅಸ್ಸಾಮಿನಲ್ಲಿ ಮುಸ್ಲಿಂ ಲೀಗಿನವರು ೯, ಇತರ ಮುಸ್ಲಿಮರು ೨೫. ಬಿಹಾರ್, ಮಧ್ಯಪ್ರಾಂತ, [illegible] ಒರಿಸ, ಸಿಂಧಗಳಲ್ಲಿ ಮುಸ್ಲಿಂ ಲೀಗ್ ಸದಸ್ಯರು ಇಲ್ಲ. ಒಟ್ಟಿನಿಂದ ಭಾರತದ ಪ್ರಾಂತೀಯ ಶಾಸನ ಸಭೆಗಳ ೧೫೮೫ ಸ್ಥಾನಗಳ ಪೈಕಿ ಮುಸ್ಲಿಮರಿಗೆ ಮೀಸಲಾಗಿರಿಸಿದ ೪೮೨ ಸ್ಥಾನಗಳಲ್ಲಿ ಕೇವಲ ೧೦೮ ಸ್ಥಾನಗಳು ಮಾತ್ರ ಲೀಗಿಗೆ ದೊರೆತಿದೆ! ಒಟ್ಟು ಮುಸ್ಲಿಂ ಓಟು [illegible] ಇದರ ಮುಸ್ಲಿಂ ಲೀಗಿಗೆ [illegible] ಮಾತ್ರ ಪಾಲು ಭಾಗ ಸಂದಿದೆ! ಮುಸ್ಲಿಂ ಲೀಗಿನ ಸ್ಥಾನವು ಎಷ್ಟರಮಟ್ಟಿಗೆ ಇದೆ ಭಾರತದಲ್ಲಿ ಇದೆಯೆಂದು ಇದರಿಂದಲೇ ಸ್ಪಷ್ಟವಾಗುವುದಿಲ್ಲವೆ? ಇಷ್ಟಾದರೂ ಅನುಯಾಯಿಗಳು ಮುಸ್ಲಿಂ ಪ್ರತಿನಿಧಿ ಸಂಸ್ಥೆಯೆಂದು ಸಾರುತ್ತಿರುವಾಗ ಜಿನ್ನರವರೂ, ಪಾಕಿಸ್ತಾನದ ಪಟ್ಟಗಟ್ಟಿ ಹಿಡಿದಿರುವಾಗ ಅದಕ್ಕಾಗಿ ಭಾರತದ ಜನತೆಯನ್ನು ಅವಲಂಬಿಸುವ ಬದಲು ಜಿನ್ನರು ಆಪರಿಯ ನರನ್ನೆ ಹಿಡಿದು ತೊಳಲಾಡುತ್ತಿರುವುದೇಕೆಂದು ಇದರಿಂದ ತಿಳಿಯದಿರದು.

ಕಲ್ಲೆದೆಯೂ ಕರಗಬೇಕಿತ್ತು

ಗಾಂಧಿಜಿ ಮೊನ್ನೆ ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಮುಕ್ತಾಯದಲ್ಲಿ ಮಹತ್ವದ ಇತಿಹಾಸ ಪ್ರಸಿದ್ಧ ಭಾಷಣದಲ್ಲಿ ಮುಸ್ಲಿಮರಿಗೆ ಮಾಡಿಕೊಂಡ ವಿನಂತಿಯಿಂದ ಎಂಥ ಪರುಷಪಾಷಾಣ ಹೃದಯವಾದರೂ ಕರಗಬೇಕಿತ್ತು. ಗಾಂಧಿಜಿ ಅಂದರು 'ಭಾರತವೇ ನಮ್ಮ ತಾಯ್ನಾಡು ಎಂದು ಪ್ರತಿಯೊಬ್ಬ ಮುಸ್ಲಿಮನೂ ಹೇಳುವ ಕಾಲವೊಂದಿತ್ತು, ಅಲೀಸಹೋದರರು ಹಾಗೆಯೇ ತಿಳಿದಿದ್ದರು. ಬಾಲ್ಯದಿಂದಲೂ ನನಗೆ ಹಿಂದು ಮುಸ್ಲಿಂ ಐಕ್ಯದಲ್ಲಿ ನಿಜವಾದ ನಂಬಿಗೆ ಇದೆ - ನಾನು ಆಫ್ರಿಕಕ್ಕೆ ಹೋದುದು ಮುಸ್ಲಿಂ ಕಡೆಯ ವಕೀಲನಾಗಿ. ಎಷ್ಟೋ ಸಲ ಮುಸ್ಲಿಂ ಪಕ್ಷ ವಹಿಸಿದ್ದೇನೆ. ನಾನವರನ್ನು ಎಂದೂ ನಂಬದಿರಲಿಲ್ಲ. ಅಪಿಕದಿಂದ ನಿರಾಶೆಗೊಂಡು ಸೋತು ಹಿಂತಿರುಗಲಿಲ್ಲ ನಾನು. ನನ್ನ ಮುಸ್ಲಿಂ ಗೆಳೆಯರು ನನ್ನ ಮೇಲೆ ಹೊರಿಸುವ ನಿಂದೆಗಳಿಗಾಗಿ ನಾನು ಚಿಂತಿಸುವುದಿಲ್ಲ. ಅವರಿಗೆ ನೋವಾಗುವಂಥಾದ್ದನ್ನು ನಾನೇನನ್ನು ಮಾಡಿದೆನೋ ತಿಳಿಯೆನು. ನಾನು ಗೋಮಾತೆಯ ಪೂಜಕನೆಂಬುದು ಸರಿ. ಈ ಭೂಮಿಯ ಎಲ್ಲ ಜೀವರಾಶಿಗಳು ದೈವ

(2ನೆಯ ಪುಟವನ್ನು ನೋಡಿ)

ಬ್ರಿಟಿಷ್ ಯುದ್ಧ ಕಾರ್ಖಾನೆಗಳಲ್ಲಿ ಧಾರಾಳವಾಗಿ ಸಿದ್ಧವಾದ ಉಕ್ಕು.

KANNADA ILLUSTRATED WEEKLY

ಕಲ್ಲೆದೆಯಾಗಿದ್ದರೂ ಕರಗಬೇಕಿತ್ತು!

(1 ನೆಯ ಪುಟದಿಂದ ಮುಂದುವರಿದುದು)

ನಿರ್ಮಿತವೆಂಬುದು ನನ್ನ ನಂಬಿಗೆಯಿದೆ. ಮುಸ್ಲಿಮರೊಡನೆ ಸಹಭೋಜನ ಮಾಡುತ್ತೇನೆ ಜಾತಿ ಮತ ಭೇದವಿಲ್ಲದೆ ಎಲ್ಲರ ಪಂಕ್ತಿಯಲ್ಲಿ ಊಟಮಾಡುತ್ತೇನೆ. ಯಾರ ಮೇಲೂ ನನಗೆ ದ್ವೇಷವಿಲ್ಲ. ನನ್ನಲ್ಲಿ ದ್ವೇಷವೆಂಬುದೇ ಇಲ್ಲ ಲಖನೋಗೆ ಹೋದಾಗ ಮೌಲಾನಾ ಬಾರಿಯರ ಮನೆಯಲ್ಲಿ ನನಗೆ ಆತಿಥ್ಯ. ಅವರು ಸಜ್ಜನರು ಅಂಥಾ ಸಂದರ್ಭಗಳಲ್ಲಿ ಪರಸ್ಪರ ಅನುಮಾನ ಅವಿಶ್ವಾಸಗಳಿಲ್ಲ. ಹಿಂದೆ ಜಿನ್ನಾ ಸಾಹೇಬರೂ ಕಾಂಗ್ರೆಸಿನಲ್ಲಿದ್ದರು. ಈಗ ಅವರು ತಪ್ಪು ಹಾದಿ ಹಿಡಿದಂತಿದೆ ಅವರು ಬಹುಕಾಲ ಬಾಳಲಿ ನಾನು ಹೋದ ಮೇಲೂ ಅವರು ಬಾಳಲಿ ಎಂದು ಹಾರೈಸುತ್ತೇನೆ ಅವರಿಗಾದರೂ ನಾನೇನು ದ್ರೋಹ ಮಾಡಿಲ್ಲವೆಂದು ಅವರಿಗೆ ತಿಳಿಯುವ ದಿನ ಬಂದೀತು ಮುಸ್ಲಿಮರ ಪ್ರಾಮಾಣಿಕತನದಲ್ಲಿ ನನಗೆ ಪೂರ್ಣ ವಿಶ್ವಾಸವಿದೆ ನನ್ನನ್ನು ಕೊಂದರೂ ನಾನವರನ್ನು ನಿಂದಿಸಲಾರೆ ಅವರ ಮನಸ್ಸಿಗೆ ತೋಚಿದಂತೆ ತಿಳಿಯಲು ಅವರಿಗೆ ಅಧಿಕಾರವಿದೆ ನಾನು ಮೊದಲಿನಂತೆಯೇ ಇದ್ದೇನೆ ಇಂದಿನ ಉಗ್ರದಲ್ಲಿ ಮೈಮರೆತು ಅವರು ನನ್ನನ್ನು ಬಯ್ದರು ಇಸ್ಲಾಮ್ ಧರ್ಮವು ಬಯ್ಗಳನ್ನು ಕಲಿಸದು ಅವರ ಬಯ್ಗಳು ಗುಂಡಿಗಿಂತಲೂ ತೀವ್ರ ತರವಿವೆ, ಆದರೂ ಅವುಗಳನ್ನು ಸ್ವಾಗತಿಸುತ್ತೇನೆ ಪಾಕಿಸ್ತಾನ ಯೋಜನೆ ಜಿನ್ನಾ ಸಾಹೇಬರ ಜೇಬಿನಲ್ಲಿಯೇ ಇದೆ ಅವರು ಸತ್ಯ ವಿಪರ್ಯಾಸ ಮಾಡಿದ್ದಾರೆ ಆದರೆ ಸತ್ಯವನ್ನು ಬಹುಕಾಲಮುಚ್ಚಿಡಲು ಸಾಧ್ಯವಾದೀತೆ? ಕಾಂಗ್ರೆಸು ಅಸತ್ಯವನ್ನು ಒಪ್ಪಲಾರದು ಮುಸ್ಲಿಮರ ನಾಯಕನು ತಾನು ಎನ್ನುತ್ತಾರೆ ಜಿನ್ನರು ಇದರಿಂದ ಅವರಿಗೆ ತೃಪ್ತಿಯಾದರೆ ನಾನೇನನ್ನು ಹೇಳಲಿ? ಜಿನ್ನರಿಗೆ ಜಂಬ ಬಹಳ ಇದೆ ಎನಿಸುತ್ತದೆ ನನಗೆ ಅದೇ ಅವರಿಗೆ ಶತ್ರುವಾದೀತು ಎಷ್ಟೋ ಜನ ಮುಸ್ಲಿಮರು ನನ್ನ ಬಳಿಗೆ ಬಂದು ಪಾಕಿಸ್ತಾನವು ದೇಶಕ್ಕೆ ಹಾನಿಯೆಂದಿದ್ದಾರೆ ಅದು ಕ್ಷೇಮಕರದ್ದಲ್ಲವೆಂದು ನನಗೂ ತೋರುತ್ತದೆ ಆದರೆ ಮುಸ್ಲಿಂ ಜನರೆಲ್ಲ ಒಂದಾಗಿ ಪಾಕಿಸ್ತಾನ ಬೇಕೆಂದರೆ ಹಿಂದುಗಳು ಅವರನ್ನು ತಡೆಯಲಾರರು ಸಂಯುಕ್ತ ರಾಷ್ಟ್ರವು ಅನ್ಯೋನ್ಯ ಸಮ್ಮತಿಯಿಂದ ಸಾಧ್ಯವಾದೀತು ಯಾವುದು ತಪ್ಪು ಯಾವುದು ಸರಿ ಎಂಬುದನ್ನು ಉದ್ವೇಗವಿಲ್ಲದೆ ವಿಚಾರಮಾಡಿರೆಂದು ನನ್ನ ಮುಸ್ಲಿಂ ಗೆಳೆಯರಿಗೆ ಬೇಡುತ್ತೇನೆ. ಅವರ ಯೋಜನೆಯನ್ನು ದೇಶದ ಗಂಟಲಲ್ಲಿ ತುರುಕುವುದೆ? ದೇಶದ ಜನರನ್ನು ಬೋಧಿಸಲಿ! ಹಾಗೆ ಮಾಡಲು ಸಾಧ್ಯವಾಗದಿದ್ದರೆ ದೇಶದಲ್ಲಿ ಭೀಕರ ಕಲಹವಾದೀತು ಅಂಥ ಘೋರ ದುರಂತವನ್ನು ನೋಡಲು ಬದುಕುವ ಆಶೆ ನನಗಿಲ್ಲ ಯಾರನ್ನು ದ್ವೇಷಿಸೆಂದೂ ಇಸ್ಲಾಂ ಧರ್ಮ ಹೇಳುವುದಿಲ್ಲ. ವಿಶ್ವ ಸಹೋದರತ್ವ ಸಹನೆಗಳನ್ನು ಅದು ಕಲಿಸುತ್ತದೆ ದೇವರು ನನಗೆ ದೌತ್ಯಕೊಟ್ಟಿದ್ದಾನೆ ಅದಕ್ಕಾಗಿ ನನ್ನೆಲ್ಲಾ ಕಾಲಶಕ್ತಿಗಳನ್ನು ಉಪಯೋಗಿಸುತ್ತೇನೆ ಹಿಂದೂ ಮುಸ್ಲಿಂ ಐಕ್ಯ ಜೀವಕ್ಕೆ ಹಿತಪಾದುದು ಪಾಕಿಸ್ತಾನದ ಬಗ್ಗೆ ನನಗೇನೂ ಬೇಸರವಿಲ್ಲ. ಆದರೆ ಈ ದೇಶದೊಳಗೇ ಪಾಕಿಸ್ತಾನವಿಲ್ಲವೆ? ಇಬ್ಬರೂ ಒಟ್ಟಾಗಿ ಮೊದಲಾಗಿ ದೇಶದ ಸ್ವಾತಂತ್ರ್ಯ ಪಡೆಯುವ ಮೌಲಾನಾ ಸಾಹೇಬರು ಹೇಳಿದ್ದಕ್ಕೆ ನನ್ನ ಸಂಪೂರ್ಣ ಸಮ್ಮತಿಯಿದೆ. ಯಾವ ಜಾತಿಗಾದರೂ ಒಪ್ಪಿಸಿಬಿಡಲಿ ಬ್ರಿಟಿಷರು ಭಾರತದ ಅಧಿಕಾರವನ್ನು. ಮುಸ್ಲಿಮರಿಗೆ ಬಿಟ್ಟುಕೊಟ್ಟರೆ ನನಗೇನೂ ದುಃಖವಿಲ್ಲ ಭಾರತವು ಮುಸ್ಲಿಮರಿಗೂ ತಾಯ್ನಾಡಲ್ಲವೆ? ನನ್ನ ಮಗ ಹೀರಾಲಾಲನು ಮುಸ್ಲಿಂ ಜಾತಿಗೆ ಸೇರಿದ ಹಾಗಾದ ಮಾತ್ರಕ್ಕೆ ಅವನೀ ದೇಶದವನಲ್ಲವೆ? ಹಾಗಾದ ಮಾತ್ರಕ್ಕೆ ಅವನಿಗೆ ನಾನು ತಂದೆಯಾಗದೆ ಹೋದೇನೆ?' ಈ ಮಹಾತ್ಮರ ಮಾತುಗಳು ನಿಜವಾಗಿಯೂ ಕಲ್ಲೆದೆಯನ್ನೂ ಕರಗಿಸುವಂಥಾದಿತ್ತು. ಆದರೆ ಜಿನ್ನರಿಗೇಕೋ ಅದೂ ಹಿತವೆನಿಸಲಿಲ್ಲ!

ಲತೀಫರೂ ವಿನಂತಿಸಿದರು

ಪಾಕಿಸ್ತಾನದ ಪ್ರಸ್ತಾಪಕರಲ್ಲೊಬ್ಬರಾದ ಡಾ| ಸಯ್ಯದ್ ಲತೀಫರೆಂಬ ಪ್ರತಿಷ್ಠಿತ ಮುಸ್ಲಿಂ ಗೃಹಸ್ಥರೂ ಜಿನ್ನರೊಡನೆ ಹೀಗೆ ವಿನಂತಿಸಿಕೊಂಡಿದ್ದಾರೆ. 'ಮುಸ್ಲಿಂಲೀಗ್ ವರ್ಕಿಂಗ್ ಕಮಿಟಿಯು ಮಾಡಿದ ನಿರ್ಣಯದಿಂದ ಮುಸ್ಲಿಂ ಹಿತಚಿಂತಕರೆನಾದವನಾದರೂ ವಿಷಾದಿಸಬೇಕಾಗಿದೆ. ಕಾಂಗ್ರೆಸು ಈಗ ರಾಜಕೀಯ ರಂಗದ ತೆರೆಯಲ್ಲಿರುವಾಗ ಮುಸ್ಲಿಂ ಲೀಗಿನ ಹೊಣೆಗಾರಿಕೆ ಹೆಚ್ಚಿನದಾಗಿತ್ತು. ಕಾಂಗ್ರೆಸ್ ಲೀಗುಗಳೊಡನೆ ಹಾಗೂ ಕಾಂಗ್ರೆಸ್ ಲೀಗು ಮತ್ತು ಬ್ರಿಟಿಷ್ ಪ್ರಭುತ್ವದೊಡನೆ ಒಂದು ಸಮಾಧಾನಕರ ನಿರ್ಣಯವಾಗುವ ಮುಂದಾಳುತನವನ್ನು ಮುಸ್ಲಿಂ ಲೀಗು ಈಗ ವಹಿಸಬೇಕಿತ್ತು, ಜಿನ್ನರು ವಹಿಸಬೇಕಿತ್ತು. ಜಿನ್ನರು ಸಂದರ್ಭಕ್ಕೆ ಸರಿಯಾಗಿ ವರ್ತಿಸಬೇಕಾದ ಕಾಲವಿದಾಗಿತ್ತು. ಹಾಗೆ ಜಿನ್ನರು ಮಾಡಿದ್ದರೆ ಮುಸ್ಲಿಂ ಲೀಗಿನ ಪ್ರತಿಷ್ಠೆ ಉಳಿಸಬಹುದಿತ್ತು ಹಾಗೆ ಅವರು ಮಾಡಲಿಲ್ಲ ಇತರ ಪಕ್ಷಗಳು ಅವರಿಗೆ ಬಗ್ಗಬೇಕೆಂದು ಜಿನ್ನರ ಅಪೇಕ್ಷೆಯಿದೆ ತಾತ್ಕಾಲಿಕ ರಾಷ್ಟ್ರೀಯ ಸರಕಾರ ಸ್ಥಾಪಿಸುವ ಮೊದಲು ಬ್ರಿಟಿಷ್ ಪ್ರಭುತ್ವವು ಅವರಿಗೆ ಸ್ಪಷ್ಟಪಡಿಸದಾ ಪಾಕಿಸ್ತಾನವನ್ನು ಕೊಡಬೇಕೆಂದು ಅವರ ಹೇಳಿಕೆ ದೇಶಕ್ಕೆ ಎಂಥಾ ಗಂಡಾಂತರ ಕಾಲ ಬಂದಿದೆಯೆಂಬುದನ್ನಾಗಲಿ ವಿಚಾರಿಸದೆ ಅವರು ಎಲ್ಲರೂ ತನಗೆ ಬಗ್ಗಬೇಕೆಂದು ಬಯಸುತ್ತಾರೆ ಕ್ರಿಪ್ಸ್ ಸೂಚನೆಯ ಮೂಲಕ ಬ್ರಿಟಿಷ್ ಪ್ರಭುತ್ವ ಪಾಕಿಸ್ತಾನ ವಿಚಾರವನ್ನು ಒಪ್ಪಿಕೊಂಡಿದೆ ಕಾಂಗ್ರೆಸಾದರೂ ಪಾಕಿಸ್ತಾನವನ್ನು ಅಲ್ಲಗಳೆದಿಲ್ಲ ಜಿನ್ನರು ಹೇಳುವಂತೆ ಅವರು ಹೇಳಿರಲಿಕ್ಕಿಲ್ಲ ಆದರೆ ಇನ್ನೂ ಹೆಚ್ಚಿನ ವಿವರಣೆ ಹಾರೈಸುವುದು ನಿಜವಾಗಿಯೂ ಇಂಥಾ ಅಮೂಲ್ಯ ಸಂದರ್ಭದಲ್ಲಿ ಅನಾವಶ್ಯಕವಿದೆ ಜಿನ್ನರು ತನ್ನ ಪ್ರತಿಷ್ಠೆ ಇಟ್ಟುಕೊಳ್ಳಬೇಕಾದರೆ, ಒಣ ಹೆಮ್ಮೆ ಇಟ್ಟುಕೊಳ್ಳದೆ ಮಹಾತ್ಮ ಗಾಂಧಿಯವರನ್ನು ಹೋಗಿ ನೋಡಬೇಕು ಇಂಥಾ ಕೆಲಸವನ್ನು ಜಿನ್ನರು ಮಾಡಿಯೂ ಸೋತು ಹೋದರೆ ದೋಷ ಅವರದಾಗುವುದಿಲ್ಲ ಅಂಥಾ ಕರ್ತವ್ಯವನ್ನು ಜಿನ್ನರು ಮಾಡಲೇಬೇಕು" ಈ ಮಾತುಗಳು ಜಿನ್ನರಿಗೆ ಒಳ್ಳೆಯ ಎಚ್ಚರ ಕೊಡುವಂಥವುಗಳು ಅಲ್ಲದೆ ದೇಶದ ಸ್ವಾತಂತ್ರ್ಯಕ್ಕಿಂತಲೂ, ಪಾಕಿಸ್ತಾನವೇ ಮೇಲೆಂದು ಹಠಹಿಡಿವುದು ಜಿನ್ನರಿಗೆ ಗೌರವ ತರುವ ಕಾರ್ಯವಲ್ಲ ಕಾಂಗ್ರೆಸಿನಂಥಾ ಪ್ರತಿಷ್ಠಿತ ರಾಜಕೀಯ ಸಂಸ್ಥೆಯ ಕೊರಳಿಗೆ ನೇಣ ಹಾಕುವ ಬ್ರಿಟಿಷ್‌ಪ್ರಭುತ್ವವು ಜಿನ್ನರ ಪಾಕಿಸ್ತಾನದ ಬೆದರಿಕೆ ಬಗ್ಗುವುದೆಂದು ಅವರು ಭಾವಿಸಿದ್ದರೆ ಅದೊಂದು ಅವರ ಮಹಾ ಪ್ರಮಾದವೆನಬೇಕು!

NOTIFICATION

Dealers, wholesale and retail in cotton yarn are hereby informed that the Government of Madras have in their order Memo No 5980 (M) D/ 42-1 dated 12-8-42 prescribed a monthly statement of stocks, receipts and sales of yarn to be submitted by wholesale and retail licensees to the Yarn Control Officer having local jurisdiction by the 4th of the following month. Printed copies of the form will be distributed to them by the Yarn Commissioner, Madras. They are warned that the failure or neglect to furnish truly and correctly the return prescribed will render the licence liable to cancellation with or without notice in accordance with condition No 9 of the licence.

S. K. Collector's office, Mangalore dated 20—8—1942 — Sd- M. Karamatullah, Collector.

ದಮ್ಮು ಗುಣ ಪಡಲೇಬೇಕು ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ



ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅಧರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ, ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸ್ವಲ್ಪ ಕಾಲವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ. ೨-೮-೦ ರೂ ೪-೨-೦ ರೂ ೭-೦-೦ಗಳಿಗೆ ಸಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತೆ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ — ವೆ ಸರ್ಸ ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

The Canara Banking Corporation Ltd.

(Incorporated in British India)

Estd 1906

Our Rates of Interest on Deposits From 7--8--1942

1. Current		(1% p. a. from Jan. to June.
		(½% p. a from July to Dec
2. Savings Bank		2% p a.
3. Short-term		1¼% p. a.
4. Fixed	3 months	1½% p. a.
	6 „	2% p.a.
	9 „	2½% p. a.
	12 „	3% p. a.
	24 „	3¼% p. a.

Advances aginst approved securities made at very competitive rates.

ಹಿಟ್ಲರ್ ಮುಸ್ಲಿಮರನ್ನು ಸ್ವಾಧೀನ ಮಾಡಿದರೆ?

ಬ್ರಿಟಿಷ್ ಲೇಖಕನ ಹೆದರಿಕೆ

ಕಾಂಗ್ರೆಸಿಗೆ ನಾವು ಭಾರತದ ಅಧಿಕಾರವನ್ನು ಎಲ್ಲಿಯಾದರೂ ಕೊಟ್ಟುಬಿಟ್ಟರೆ, ಅತೃಪ್ತರಾದ ಮುಸ್ಲಿಮರನ್ನು ಹಿಟ್ಲರನು ಕೆರಳಿಸಿ ನಮ್ಮ ವಿರುದ್ಧ ಹೋರಾಡುವಂತೆ ಮಾಡಿಬಿಡಬಹುದು, ಆದ್ದರಿಂದ ಈಗ ಭಾರತದ ರಾಜಕಾರಣದಲ್ಲಿ ಯಾವುದೇ ಆವಸರದ ನಿರ್ಧಾರಕ್ಕೆ ಬರಕೂಡದು ನಮ್ಮ ಸೈನಿಕರಲ್ಲಿ ಹಲವರು ಮುಸ್ಲಿಮರೇ ಇದ್ದಾರೆ ಎಂಬುದಾಗಿ 'ಸಂಡೇ ಟಿಕ್ಟೋರಿಯಲ್' ಪತ್ರಿಕೆಯಲ್ಲಿ ಜೆ. ಎಫ್. ಸಿ. ಫುಲ್ಲರ್ ಎಂಬ ಬ್ರಿಟಿಷ್ ಲೇಖಕರೊಬ್ಬರು ಬರೆಯುತ್ತಾರೆ.

ರೈಲು ಬಂಡಿಗಳ ಸಮಯ

ಇದೇ ಮೇ ತಾ 1ರಿಂದ ವ್ಯತ್ಯಾಸವಾದ ರೈಲು ಬಂಡಿಗಳ ಸಮಯಗಳು ಈ ಕೆಳಗಿನಂತಿವೆ—

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಗೂಡ್ಸು ಬಂಡಿ	6 25 ಬೆಳಗ್ಗೆ	7.30 ರಾತ್ರಿ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8 30 ಬೆಳಗ್ಗೆ	6.45 ಸಾಯಂ.
ಜಾಲಾರ್ ಪೇಟೆ		
ಕನ್ನನೂರು	6.0 ಸಾಯಂ.	9.30 ಪೂರ್ವಾಹ್ನ

"ಸ್ವಕ್ಷಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

28—8—1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ ೨೮—೮—೧೯೪೨]

ಸಮರಭೂಮಿಯ ಸಂಚಾರ

ಬ್ರಿಟಿಷ್ ಪ್ರಧಾನರಾದ ಚರ್ಚಿಲರು ಮೋಸ್ಕೋಗೆ ತೆರಳಿ ರಶ್ಯದ ಅಧಿಪತಿ ಸ್ಟಾಲಿನರೊಡನೆ ನಾಲ್ಕು ದಿನಗಳ ವರೆಗೆ ದೀರ್ಘ ಮಾತುಕತೆ ನಡೆಸಿ ಮರಳಿ ಬಂದರೆಂಬ ಸುದ್ದಿ ಬಂದಿದೆ. ಈ ಮಾತುಕತೆಯ ಕಾಲದಲ್ಲಿ ರಶ್ಯ ಬ್ರಿಟನುಗಳ ಮುಖ್ಯ ಸೇನಾ ನಾಯಕರಲ್ಲದೆ, ಅಮೆರಿಕದ ಪ್ರತಿನಿಧಿ ಅವರೆಲ್ ಹೆರಿಮೆನ್ನರೂ ಸೇನಾನಾಯಕರೂ ಭಾಗವಹಿಸಿದ್ದರೆಂದೂ ತಿಳಿದಿದೆ. ಯಾವುದೋ ಪ್ರಾಮುಖ್ಯ ರಾಜಕೀಯ ವಿಚಾರವನ್ನು ಇಲ್ಲಿ ಅವರು ಚರ್ಚಿಸಿದರೆಂದು ಹೇಳುವುದಕ್ಕೆ ಏನೇನೂ ಅನುಮಾನವಿಲ್ಲ; ಏಕೆಂದರೆ, ಇಂಥಾ ವಿಷಮ ಸಂಧರ್ಭದಲ್ಲಿ ಚರ್ಚಿಲರು ಬ್ರಿಟನು ಬಿಟ್ಟು ತನ್ನ ವೈಯುಕ್ತಿಕ ಕಾರ್ಯಕ್ಕಾಗಿ ಮೋಸ್ಕೋ ವರೆಗೆ ತೆರಳುವುದೇನೂ ಸಂಭವನೀಯವಿಲ್ಲ; ಅಂತೂ ಮಿತ್ರ ರಾಷ್ಟ್ರಗಳ ಸಂಯುಕ್ತ ಯುದ್ಧ ವಿಚಾರವಲ್ಲಿ ಅವರು ಚರ್ಚಿಸಿದರೆಂದು ಪತ್ರಿಕೆಗಳ ವರದಿಗಳು ಸಾರುತ್ತವೆ. ಚರ್ಚಿಲ್ ಪ್ರಯಾಣವು ಕೊನೆಯ ವರೆಗೂ ಬಹಳ ಗುಪ್ತವಾಗಿಯೇ ನಡೆಯಿತು; ಎಂದರೆ ಚರ್ಚಿಲರು ಬ್ರಿಟನಿಗೆ ಮರಳಿದ ನಂತರವೇ ಅವರು ಮೋಸ್ಕೋಗೆ ತೆರಳಿ ಮಾತುಕತೆ ಮಾಡಿದರೆಂದು ತಿಳಿಸಲಾಗಿತ್ತು. ಅಂತೂ ಈಗ ಅವರು ಅಲ್ಲಿ ಚರ್ಚಿಸಿದ ವಿಷಯವೂ ಅಂತೆಯೇ ಗುಪ್ತವಾಗಿಡಲಾಗಿದೆ, ಬಹುಶಃ ಆ ವಿಚಾರವನ್ನು ನಾವು ಮಿತ್ರರ ಮುಂದಿನ ಕಾರ್ಯಕ್ರಮಗಳನ್ನು ನೋಡಿ ಊಹಿಸಿಕೊಳ್ಳಬೇಕೋ ಏನೊ? ಅಂತೂ ಮಿತ್ರ ರಾಷ್ಟ್ರದ ಪತ್ರಿಕೆಗಳೆಲ್ಲಾ ಈ ಮಾತುಕತೆಗೆ ಬಹಳ ಮಹತ್ವ ಕೊಟ್ಟಿವೆ. ಈ ಬೇಟಿಯ ಫಲವಾಗಿ ಬ್ರಿಟನು-ರಶ್ಯ-ಅಮೆರಿಕಗಳೊಳಗೆ ಒಂದು ಹೊಸ ಒಪ್ಪಂದವ ಸಹಿಯಾಯಿತೆಂದೂ ಸುದ್ದಿಯಿದೆ. ಹಿಟ್ಲರ್ ವಿನಾಶಕಾರ್ಯದಲ್ಲಿ ತ್ರಿರಾಷ್ಟ್ರಗಳೂ ಸಮಭಾಗಿಗಳಾಗಿ ಸಮರ ಯೋಜನೆ ಕೈಕೊಳ್ಳಬೇಕೆಂದು ಇದರಲ್ಲಿ ಸಾರಲ್ಪಟ್ಟಿದೆಯಂತೆ!

ಜರ್ಮನರು ಈಗ ರಶ್ಯದಲ್ಲಿ ಒಂದೇ ಸವನೆ ಮುನ್ನುಗ್ಗುತ್ತಾ ಹೋಗುತ್ತಿದ್ದಾರಷ್ಟೆ? ಅದರಿಂದ ರಶ್ಯವು ವಿಪತ್ತಿಗೀಡಾಗಿದೆ. ಎರಡು ತಿಂಗಳ ಹಿಂದೆ ರಶ್ಯದ ಪರದೇಶದ ಮಂತ್ರಿ ಮೊಲೊಟೋವರು ಲಂಡನ್ ವಾಶಿಂಗ್ಟನುಗಳನ್ನು ಸಂದರ್ಶಿಸಿದ್ದರು. ಬಹುಶಃ ಆ ಸಂದರ್ಭದಲ್ಲಿ ರಶ್ಯದ ನಿಜವಾದ ಗಂಡಾಂತರದ ಪರಿಸ್ಥಿತಿಯನ್ನು ಅವರು ಬ್ರಿಟಿಷರಿಗೆ ತಿಳಿಸಿ, ಜಟ್ಟನೆ ಸಹಾಯ ದೊರಕದಿದ್ದರೆ ರಶ್ಯದ ಕತೆ ಕೊನೆಗೊಳ್ಳಬಹುದೆಂದು ಬೇಡಿರಬಹುದೆಂದು ಊಹಿಸಬಹುದು. ಇದೇ ಸಂದರ್ಭದಲ್ಲಿ ಆಂಗ್ಲ ರಶ್ಯ ಒಪ್ಪಂದವಾದ ವಿಷಯವೂ ಜಗಜ್ಜನಿತವಿದೆ. ಹಿಟ್ಲರ್ ವಿರುದ್ಧ ಹೋರಾಟವು ಬ್ರಿಟನ್ ನಿರ್ಧಾರವು ಇದರಿಂದ ಮತ್ತಷ್ಟು ದೃಢೀಕರಿಸಲ್ಪಟ್ಟಿತೆಂಬುದೂ ನಿಜ. ಆದರ ಪರಿಣಾಮವಾಗಿ ರಶ್ಯಕ್ಕೆ ಬ್ರಿಟನು ಯಾವ ಯಾವ ಸಹಾಯ ಕಳುಹಿಸಿತೆಂಬ ವಿವರ ನಮಗೆ ತಿಳಿದಿಲ್ಲವಾದರೂ, ಸಹಾಯ ಕಳುಹಿಸಿರಬಹುದಾಗಿ ನಂಬಲೇಬೇಕಾಗಿದೆ. ರಶ್ಯನರಂತೂ ಹಲವಾರು ದಿಂದ ಬೊಬ್ಬಿಡುತ್ತಾ ಬರುವ ದ್ವಿತೀಯ ರಣರಂಗದ ವಿಚಾರವಾಗಿ ಮಿತ್ರರು ಇನ್ನೂ ಏನೂ ಮಾಡಿಲ್ಲವಷ್ಟೆ? ಹೀಗಾಗಿ ಈ ವಿಚಾರಗಳ ಸಲುವಾಗಿಯೇ ಹಿಂದೆ ಸಂದರ್ಭ ದೊರಕದೆ ಇದ್ದರೂ ಇನ್ನು ಸುಮ್ಮಗಿರಬಾರದೆಂದು ತಿಳಿದು ಈಗ ಚರ್ಚಿಲರು ಮೋಸ್ಕೋಗೆ ಧಾವಿಸಿ ಹೋಗಿರಬೇಕು. ಅಲ್ಲಿ ನಾಲ್ಕು ದಿನಗಳ ತನಕ ಅವರು ದೀರ್ಘ ಮಾತುಕತೆಯೇನೋ ಮಾಡಿದರು, ಆದರೆ ಇದು ವರೆಗೆ ಆ ವಿಷಯದಲ್ಲಿ ಅಧಿಕೃತ ಪ್ರಕಟಣೆಯೇನೂ ಇಲ್ಲದಿರುವುದರಿಂದ ನಾವು ಅವರ ವಿಚಾರ ವಿನಿಮಯವೇನಿರಬಹುದೆಂದು ಊಹಿಸುವ ಬದಲು ಮುಂದಿನ ಮಿತ್ರರ ಕಾರ್ಯಕ್ರಮಗಳನ್ನು ಮಾತ್ರ ನೋಡಿ ಗೊತ್ತು ಹಚ್ಚುವುದು ಆವಶ್ಯವಾಗಿದೆ. ಚರ್ಚಿಲ್ ಸ್ಟಾಲಿನ್ ಬೇಟಿಕಾಲದಲ್ಲಿ ಭಾರತದ ಸೇನಾಪತಿ ವೇವಲರೂ ಇದ್ದರೆಂಬುದು ಗಮನಾರ್ಹವಿಚಾರ.

ದ್ವಿತೀಯ ರಣರಂಗವಲ್ಲ?

ಮಿತ್ರರಾಷ್ಟ್ರದ ಸೈನಿಕರು, ದಿಗಾಲೆಯ ಫ್ರೀ ಫ್ರೆಂಚ್ ಸೈನಿಕರೂ ಕೂಡಿ ಆಕ್ರಮಿತ ಫ್ರಾನ್ಸಿನ ಮೇಲೆ ದೊಡ್ಡದೊಂದು ಧಾಳಿ ನಡೆಸಿದರು! ಒಂಬತ್ತು ತಾಸುಗಳ ತನಕ ಈ ಧಾಳಿಯು ನಡೆದು ಉಭಯ ಪಕ್ಷಕ್ಕೂ ಹಾನಿಯಾಯಿತೆಂದು ತಿಳಿದಿದೆ. ಜರ್ಮನರ ೯೧ ವಿಮಾನಗಳು ಬ್ರಿಟಿಷರ ೯೮ ವಿಮಾನಗಳೂ ನಾಶವಾದುವೆಂದು ಸುದ್ದಿಯಿದೆ. ಈ ಯುದ್ಧವು ಹೀಗೆ ಅನಿರೀಕ್ಷಿತವಾಗಿ ಗುಪ್ತ ಸಿದ್ಧತೆಯಿಂದಲೇ ನಡೆಯಿತು. ಹಾಗಾಗಿ ಈ ಮೂಲಕ ದ್ವಿತೀಯ ರಣರಂಗವನ್ನು ಮಿತ್ರರು ಫ್ರಾನ್ಸಿನಲ್ಲಿ ತೆರೆದರೆ ಎಂದು ಜಗತ್ತಿನ ಜನರೆಲ್ಲರೂ ಬಹಳ ಕುತೂಹಲದಿಂದ ನೋಡುತ್ತಿದ್ದರು. ಆದರೆ ಈಗ ಬ್ರಿಟಿಷರ ಅಧಿಕೃತ ಪ್ರಕಟಣೆ ಸಾರುತ್ತಿದೆ, ಇದು ದ್ವಿತೀಯ ರಣರಂಗವಲ್ಲವೆಂದು ಬ್ರಿಟಿಷರು ಇಷ್ಟು ಉದ್ದೇಶಪೂರ್ವಕವಾಗಿ ಸಾರುತ್ತಿರುವುದರ ಮರ್ಮವಾದರೂ ಏನಿರಬಹುದು? ಎಂದರೆ ಬಹುಶಃ ಇದುವರೆಗೂ ದ್ವಿತೀಯ ರಣರಂಗದ ಸಿದ್ಧತೆ ಪೂರ್ತಿಗೊಂಡಿರಲಿಕ್ಕಿಲ್ಲ. ಅಥವಾ ತಮ್ಮ ರಣನೀತಿಯ ವಿಚಾರ ಶತ್ರುವಿಗೆ ತಿಳಿಯಕೊಡಬಾರದೆಂಬ ಇದ್ದರೂ ಇರಬಹುದು. ಹೀಗೆ ಇಂಗ್ಲಿಷ್ ಫ್ರೆಂಚ್ ಪ್ರಕಟಣೆಗಳಲ್ಲಿ ಮಿತ್ರರು ಇದು ದ್ವಿತೀಯ ರಣರಂಗವಲ್ಲವೆಂದು ಎಷ್ಟು ಸ್ಪಷ್ಟಪಡಿಸಿದರೂ, ಜರ್ಮನರು ಉದ್ದೇಶಪೂರ್ವಕವಾಗಿ ಇದು ಫ್ರಾನ್ಸಿನ ಮೇಲೆ ಬ್ರಿಟನಿನ ದಂಡಯಾತ್ರೆಯೆಂದು ಪ್ರಕಟಿಸುತ್ತಿವೆ. ಅಂತೂ ಈ ಧಾಳಿಯಿಂದ ಶತ್ರುವಿನ ಸಮರ ಸಮಾರಂಭಕ್ಕೆ ಸ್ವಲ್ಪ ಆತಂಕವುಂಟಾಯಿತು, ಆಕ್ರಮಿತ ಫ್ರಾನ್ಸಿನಲ್ಲಿರುವ ಹಲವು ಶತ್ರುಗಳ ವಸ್ತು ಶೇಖರ ಸ್ಥಾನಗಳನ್ನೂ ನಾಶಪಡಿಸಿದಂತಾಯಿತು. ಲಾರ್ಡ್ ಮೌಂಟ್ ಬೇಟನರವರು ಕಳೆದ ಒಂಭತ್ತು ತಿಂಗಳುಗಳಿಂದ ಈ ಧಾಳಿಯ ಸಿದ್ಧತೆಯನ್ನು ಮಾಡಿದು ಬಹಳ ಯಶಸ್ವಿಯಾಗಿ ಇದನ್ನು ಪೂರೈಸಿದರೆನ್ನಬೇಕು. ಇದರಿಂದ ಬ್ರಿಟನಿನ ಹೊಸ ಹೊಸ ಯಂತ್ರ ವಿಮಾನಗಳಿಗೆ, ಅಮೇರಿಕದ ನೂತನ ಶಸ್ತ್ರಾಸ್ತ್ರಗಳಿಗೆ ಒಮ್ಮೆ ಪ್ರಯೋಗಪರೀಕ್ಷೆಯು ಆಯಿತು!

ಕೈಬಿಟ್ಟ ಎಣ್ಣೆ ಕಣಿಗಳು!

ಮಿತ್ರರು ರಶ್ಯಕ್ಕೆ ಬೆಂಬಲ ಕಳುಹಿಸುತ್ತಾರೋ ಇಲ್ಲವೋ ಇದೊಂದನ್ನೂ ಲೆಕ್ಕಿಸದೆ ಜರ್ಮನರು ರಶ್ಯದಲ್ಲಿ ನುಗ್ಗಿ ಮುನ್ನುಗ್ಗಿ ಮುಂದುವರಿಯುತ್ತಿದ್ದಾರೆ. ಸ್ಟಾಲಿನ್‌ಗ್ರಾಡಿನ ಹತ್ತಿರದ ಡಾನ್ ನದಿಯ ಪಕ್ಕದಲ್ಲಿ ಜರ್ಮನರ ಮುನ್ನುಗುವಿಕೆ ಹೆಚ್ಚಾಗುತ್ತಾ ಬಂದಿದೆ. ರಶ್ಯನರು ಹಿಂದೆ ಸರಿದು ಡಾನ್ ಪೂರ್ವದಲ್ಲಿ ಕೊಟೆಲ್ನಿಕೋವೋದಲ್ಲಿ ಬಂದು ತಂಗಬೇಕಾಯಿತು. ದಕ್ಷಿಣದಲ್ಲಿ ಜರ್ಮನರು ಉತ್ತರ ಕಾಕಸಸನ್ನು ಒಗ್ಗಬಡಿದು ಟ್ರಾನ್ಸ್‌ಕಾಕಸಸನ್ನು ನುಗ್ಗಲು ಮುಂದುವರಿದರು. ಕ್ರಾಸ್ನೋಡರ್ ಹತ್ತಿರವಿದ್ದ ಜರ್ಮನ್ ಬಲವು ಕುಬಾನ್ ನದಿಯನ್ನು ದಾಟಿ ಮುನ್ನುಗ್ಗಿರುವುದರಿಂದ ರಶ್ಯನರು ಕ್ರಾಸ್ನೋಡಾರ್ ಬಿಡಬೇಕಾಯಿತು. ಇಲ್ಲಿ ಎಣ್ಣೆಯನ್ನು ಶುದ್ಧಿ ಮಾಡುವ ಅನೇಕ ಕಾರ್ಖಾನೆಗಳಿರುತ್ತವೆ. ಕ್ರಾಸ್ನೋಡಾರ್ ಪತನದ ಬಳಿಕ ರಶ್ಯನರು ನೊವೊರೊಸಿಸ್ಕದ ಆಶ್ರಯ ಪಡೆಯಬೇಕಾಯಿತು, ಆದರೆ ಈಗ ಅಲ್ಲಿಗೂ ಜರ್ಮನರ ಮುತ್ತಿಗೆಯಾಗಿದೆ. ಜರ್ಮನರು ಮೈಕೋಪ್ ಎಣ್ಣೆ ಕೇಂದ್ರವನ್ನೂ ವಶಪಡಿಸಿಕೊಂಡಿರುವರು. ರಶ್ಯದ ಮೂರು ಪ್ರಸಿದ್ಧ ಎಣ್ಣೆ ಕೇಂದ್ರಗಳಲ್ಲಿ ಇದೊಂದಾಗಿದೆ. ಬಾಕೂ ಗ್ರೋಝ್ನಿಗಳು ಇನ್ನೆರಡು, ಪ್ರೊಚ್ಲೋರ್ನಾಯ ದಿಂದ ಆಸ್ಟ್ರಖಾನ್ ವರೆಗೆ ಎಣ್ಣೆ ನಳಿಗೆಗಳಿವೆ. ಈಗ ಶತ್ರು ವಶವಾಯಿತು. ಮೈಕೋಪನ್ನು ವಶಪಡಿಸಿರುವುದರಿಂದ ಈಗ ಅವರು ಗ್ರೋಝ್ನಿಯಿಂದ ಕೇವಲ ನೂರು ಮೈಲು ಅಂತರದಲ್ಲಿದ್ದಾರೆ. ಈ ಭಾಗವೂ ಶತ್ರುವಶವಾದರೆ ಕಾಕಸಸಿನ ಸಂಪತ್ತೇ ಸೂರೆಯಾಯಿತು. ಫಲವತ್ತಾದ, ಪ್ರಯೋಜನಕಾರಿಯಾದ ಪ್ರದೇಶಗಳು ಶತ್ರುವಶ ಹೋಗುವಾಗ ಅವರನ್ನು ರಶ್ಯನರು ಸುಟ್ಟುಹಾಕಿಬಿಡುತ್ತಾರೆಂಬುದೇನೋ ಸರಿ, ಇದರಿಂದ ಶತ್ರುವಿಗೆ ಆ ಸ್ಥಳಗಳನ್ನು ಸ್ವಾಧೀನಪಡಿಸಿ ಹೆಚ್ಚಿನ ಪ್ರಯೋಜನ ದೊರೆಯಲಿಕ್ಕಿಲ್ಲವೆಂಬುದೇನೋ ನಿಜ. ಆದರೆ ಇದರಿಂದ ರಶ್ಯನರಿಗೆ ಬಂದ ಅನರ್ಥವನ್ನು ಯಾರೂ ಅಲ್ಲಗಳೆಯಲಾರರು! ಚರ್ಚಿಲ್ ಸ್ಟಾಲಿನರು ಮಾತುಕತೆ ಮಾಡುತ್ತಿದ್ದಂತೆ ಶತ್ರುವು ಹೀಗೆ ಒಂದೊಂದನ್ನೇ ಸ್ವಾಧೀನಪಡಿಸುತ್ತಾ ಬಂದನು!

ಸ್ಟಾಲೀನ್‌ಗ್ರಾಡ್ ಮುತ್ತಿಗೆ

ಸ್ಟಾಲಿನ್‌ಗ್ರಾಡಿನ ಪರಿಸ್ಥಿತಿಯೂ ಈಗ ಬಹಳ ಕೆಟ್ಟಿದೆಯೆಂದು ಸುದ್ದಿ. ಡಾನ್ ನದಿಯ ವಕ್ರದಲ್ಲಿ ಕ್ಲೆತ್ಸ್ಕಾಯದ ಈಶಾನ್ಯದಲ್ಲಿ ಉಗ್ರ ಯುದ್ಧ ನಡೆಯುತ್ತಿದೆ. ಕೊತೆಲ್ನಿಕೋವೊದ ಈಶಾನ್ಯದಲ್ಲಿ ಜರ್ಮನರು ಸ್ಟಾಲಿನ್‌ಗ್ರಾಡಿನ ಮೇಲೆ ಮುತ್ತಿಗೆ ಹಾಕಿದ್ದಾರೆ. ಅಲ್ಲಿ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಮುನ್ನುಗ್ಗುತ್ತಿದ್ದಾರೆ. ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಿದೆ. ರಶ್ಯನರಾದರೂ ತಮ್ಮ ಶಕ್ತಿ ಸರ್ವಸ್ವವನ್ನುಪಯೋಗಿಸಿ ಡಾನ್ ನದಿ ವಕ್ರದಲ್ಲಿ ಉತ್ತರ ಕಡೆಗಳಲ್ಲಿ ಹೋರಾಡುತ್ತಿದ್ದಾರೆ. ಸ್ಟಾಲಿನ್‌ಗ್ರಾಡಿನ ಬಹಳ ಹತ್ತಿರಕ್ಕೆ ಈಗ ಶತ್ರುಗಳು ಬಂದು ಮುಟ್ಟಿರುವರೆಂದು ತಿಳಿದಿದೆ. ಡಾನ್ ವಕ್ರದಲ್ಲಿ ವೈರಿಗಳು ನದಿಯನ್ನು ದಾಟಲು ಮಹಾ ಪ್ರಯತ್ನ ಮಾಡುತ್ತಿರುವರು. ಅದನ್ನು ಮುಂಚಿತವಾಗಿ ತಿಳಿದ ಕೆಂಪು ಸೈನಿಕರು ಅವರ ಮೇಲೆ ಬಿದ್ದು ವಿಶೇಷ ಹಾನಿಗೊಳಿಸಿದರು. ಆದ್ದರಿಂದ ಅದನ್ನು ದಾಟುವುದು ಸಾಧ್ಯವಾಗಲಿಲ್ಲ. ಪ್ರೋಖಾನೆಜದ ವಾಯವ್ಯದಲ್ಲಿರುವ ಒರೆಲ್ ಪ್ರಾಂತದಲ್ಲಿ ಹೊಸ ಧಾಳಿ ಆರಂಭವಾಗಿದೆ. ಜರ್ಮನರು ಸ್ಟಾಲಿನ್‌ಗ್ರಾಡಿನ ಮೇಲೆ ಎರಡು ಕಡೆಗಳಿಂದ ಮುನ್ನುಗ್ಗುತ್ತಿದ್ದರೆಂದು ತಿಳಿದಿದೆ. ಟಿಮೋಶೆಂಕೋ ಸಾಹಸದಿಂದ ಪ್ರತಿಭಟಿಸುತ್ತಿದ್ದಾನೆ. ಆದರೆ ಡಾನ್ ವಕ್ರದಲ್ಲಿ ಜರ್ಮನರು ಕಾದಿಟ್ಟ ಸೈನ್ಯ ಸಾಧನಗಳು ಈಗ ಸ್ಟಾಲಿನ್‌ಗ್ರಾಡ್ ಮುತ್ತಿಗೆಗಾಗಿ ಬರುತ್ತಿವೆ. ಕಾಕಸಸಿನಲ್ಲಿ ಜರ್ಮನರು ರೈಲ್ವೆ ಮಾರ್ಗವಾಗಿ ಗ್ರೋಝ್ನಿ ಕಡೆಗೆ ಹೊರಟಿರುವರೆಂದು ಸುದ್ದಿಯಿದೆ. ಡಾನ್ ವಕ್ರದ ಪರಿಸ್ಥಿತಿ ಈಗ ಬಹಳ ಚಿಂತಾಜನಕವಾಗುತ್ತಿದೆ. ರಶ್ಯನ್ ಸೈನಿಕರು ಆಗಾಗ ಶತ್ರುಗಳ ಮೇಲೆ ಆಕ್ರಮಣ ಮಾಡಿ ನದಿಯ ದಂಡೆಯ ಮೇಲೆ ಅವರು ಬಿಟ್ಟುಹೋದದಂತೆ ಮಾಡಿ ಚದರಿಸುತ್ತಾರೆ. ಸ್ಟಾಲಿನ್‌ಗ್ರಾಡಿನ ಬಳಿಯ ಕ್ಷೇತ್ರದಲ್ಲಿ ಜರ್ಮನರು ರಶ್ಯನ್ ವ್ಯೂಹಗಳಲ್ಲಿ ನುಸುಳಿರುವರು. ಇಲ್ಲಿ ಭೀಕರ ಕಾಳಗವಾಗುತ್ತಿದೆ. ಕ್ರಾಸ್ನೋಡರ್ ಹತ್ತಿರ ರಶ್ಯನರು ಹಿಂದೆ ಸರಿದರು. ಕಾಕಸಸಿನಲ್ಲಿ ಕೋಸ್ಯಾಕರು ಹೋರಾಡುತ್ತಾ ಹಿಂದೆ ಸರಿಯುತ್ತಿರುವರು.

ಬ್ರೇಜಿಲ್ ಯುದ್ಧ ಘೋಷಣೆ

ಜರ್ಮನಿ ಮತ್ತು ಇಟಲಿಗಳ ಮೇಲೆ ಯುದ್ಧ ಸಾರಬೇಕೆಂದು ಬ್ರೆಜಿಲ್ ಮಂತ್ರಿಮಂಡಲವು ನಿಶ್ಚಯಿಸಿದೆ. ಅಕ್ಷರಾಷ್ಟ್ರಗಳು ನಮ್ಮ ಮೇಲೆ ಯುದ್ಧ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಆಕ್ರಮಣ ರಾಷ್ಟ್ರಗಳಾದ ಜರ್ಮನಿ ಇಟಲಿಗಳ ಮೇಲೆ ಬ್ರೆಜಿಲ್ ಯುದ್ಧ ಸಾರುವುದಾಗಿ ಈಗ ಘೋಷಣೆ ಮಾಡಲಾಗಿದೆ. ಬ್ರೆಜಿಲ್ ಯುದ್ಧ ಸಾರಿದ್ದರಿಂದ ಅಪಾರ ಸಂಪತ್ತುಳ್ಳ ಒಂದು ಪ್ರಾಂತವು ಮಿತ್ರರ ಕಡೆಗೆ ಒಲಿದಂತಾಯಿತು. ಅದರ ವಿಸ್ತೀರ್ಣವು ಅಮೆರಿಕಕ್ಕಿಂತ ದೊಡ್ಡದಿದೆ. ಬ್ರೆಜಿಲಿನ ಹಲವು ಕಚ್ಚಾ ಸಾಮಾನುಗಳು ಯುದ್ಧೋದ್ಯಮಕ್ಕೆ ಅವಶ್ಯವಿದೆ. ಇಲ್ಲಿ ರಬ್ಬರು ವಿಶೇಷವಾಗಿ ಬೆಳೆಯುತ್ತದೆ. ಬ್ರೆಜಿಲಿನ ವಿಮಾನ ಮತ್ತು ಭೂಸೈನ್ಯವು ದೊಡ್ಡದಿದೆ. ನೌಕಾಪಡೆಯು ಬಲವಾಗಿರುವುದು. ಅದರ ಪೂರ್ವತೀರವು ಪಶ್ಚಿಮಾಫ್ರಿಕಕ್ಕೆ ಸಮೀಪವಾಗಿರುವುದು. ನಾತಾಳಿನಿಂದ ಡಾಕಾರವು ೧೭೦೦ ಮೈಲುಗಳಿಗಿಂತ ಕಡಮೆ ಅಂತರದಲ್ಲಿದೆ. ಇಲ್ಲಿ ಹಲಕಾಲದಿಂದ ಜರ್ಮನರ ಸಂಘಟಿತ ಪಂಚಮದಳದ ಪ್ರಚಾರವು ವಿಶೇಷವಾಗಿತ್ತು. ೧೯೪೨ನೆಯ ಇಸವಿ ಜನವರಿ ತಿಂಗಳಲ್ಲಿ ಅಕ್ಷರಾಷ್ಟ್ರಗಳೊಡನಿದ್ದ ರಾಜಕೀಯ ವ್ಯವಹಾರವನ್ನೆಲ್ಲಾ ಬ್ರೇಜಿಲ್ ಕಡಿಮುಬಿಟ್ಟಿತು. ಅಲ್ಲಿ ಪರರಾಷ್ಟ್ರ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳನ್ನು ಇತರ ರಾಜಕೀಯ ಸಂಸ್ಥೆಗಳನ್ನೂ ನಿಲ್ಲಿಸಲಾಯಿತು. ಎಲ್ಲಾ ಕ್ಷೇತ್ರಗಳಲ್ಲಿಯೂ ಮಿಲಿಟರಿ ಸಿದ್ಧತೆಯಿಡಲಾಗಿತ್ತು. ಹಾಗಾಗಿ ಅಲ್ಲಿ ಭರದಿಂದ ನಡೆಯುತ್ತಿದ್ದ ನಾಜೀ ಪಂಚಮದಳದ ಚಟುವಟಿಕೆಗಳು ತಗ್ಗುತ್ತಾ ಬಂದಿದ್ದುವು. ಬ್ರೆಜಿಲ್ ಯುದ್ಧ ಸಾರಿದ ದೀರ ಹೆಜ್ಜೆಗಾಗಿ ರೂಸ್‌ವೆಲ್ಟರು ಅಭಿನಂದನೆ ಕಳುಹಿಸಿದ್ದಾರೆ ಮಾತ್ರವಲ್ಲದೆ ತಮ್ಮ ಸಹಾಯವನ್ನು ಕೊಡುವುದಾಗಿಯೂ ತಿಳಿಸಿರುವರು. ಉರುಗ್ವೇ ಸರಕಾರವೂ ಬ್ರೇಜಿಲಿನೊಡನೆ ಸಹಕಾರ ಸೂಚಿಸಿದೆ. ಇಂಗ್ಲೆಂಡಿನಲ್ಲಂತೂ ಇದರಿಂದ ತುಂಬಾ ಸಮಾಧಾನವುಂಟಾಗಿದೆ.

ಸ್ವದೇಶಾಭಿಮಾನಿ

ತಾರೀಕು 28—8—1942

ಪತ್ರಿಕಾ ನಿರ್ಬಂಧ

ಮುಂಬಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಕೂಡಿ ಮಾಡಿದ ನಿರ್ಣಯದಿಂದಾಗಿ, ಸರಕಾರವು ಗಾಂಧಿಜಿ ಮೊದಲಾದ ರಾಷ್ಟ್ರದ ಮುಖಂಡರನ್ನು ಬಂಧಿಸಿದ ಬಳಿಕ, ಕಳೆದ ಒಂದೆರಡು ವಾರಗಳಲ್ಲಿ ಭಾರತದ ಪತ್ರಿಕಾಲೋಕವು ಅನಿರೀಕ್ಷಿತ ನಿರ್ಬಂಧಗಳಿಗೊಳಗಾಗಿದೆ! ಹಲವು ಪತ್ರಿಕೆಗಳು ಸರಕಾರದ ಹೊಸ ನಿರ್ಬಂಧಕ್ಕೆ ಬಲಿಯಾಗಿವೆ, ಸರಕಾರದವರು ತಮ್ಮ ಹೊಸ ನಿರ್ಬಂಧಕಾಜ್ಞೆಗೆ ಅನುಗುಣವಾಗಿ ಕೆಲವು ಪತ್ರಿಕೆಗಳನ್ನು ನಿಲ್ಲಿಸಿಬಿಟ್ಟಿದ್ದಾರೆ, ಕೆಲವು ಪ್ರಮುಖಪತ್ರಿಕೆಗಳು, ನಿರ್ಬಂಧದ ನಿಷೇಧಕ್ಕಾಗಿ ಸ್ವತಃ ಪ್ರಕಟಣೆಯನ್ನು ನಿಲ್ಲಿಸಿಬಿಟ್ಟಿವೆ ಹೀಗೆ ಭಾರತದ ಪತ್ರಿಕಾಲೋಕವು ಇಂದು ಹಿಂದೆಂದೂ ಒಳಗಾಗದಷ್ಟು ಪರಿಭವಕ್ಕೆ ಇಂದು ಒಳಗಾಗಿದೆ

ಕೆಲವು ಪ್ರಾಂತಿಕ ಅಧಿಕಾರಿಗಳು ಇಂಡಿಯಾ ಸರಕಾರದ ನಿರ್ಬಂಧದ ಮೇಲೆ ತಮ್ಮ ನಿರ್ಬಂಧಗಳನ್ನೂ ಪತ್ರಿಕೆಗಳ ಮೇಲೆ ಹೊರಿಸಿದ್ದಾರೆ. ದಿಲ್ಲಿಯ ಚೀಫ್ ಕಮಿಶ್ನರು 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಯ ದಿಲ್ಲಿ ಕ್ಷೇತ್ರದ ಬಾತ್ಮೀದಾರರ 'ರಿಜಿಸ್ಟ್ರೇಶನ'ನ್ನು ರದ್ದುಗೊಳಿಸಿದ್ದು ಮಾತ್ರವಲ್ಲದೆ, ಅದರ ಸಂಪಾದಕರಿಗೆ, ಪ್ರಕೃತದ ಆಂದೋಲನದ ವಿಷಯ ಪತ್ರಿಕೆಯಲ್ಲಿ ಮೂರು 'ಕಾಲಂ'ಗಳಿಗಿಂತ ಹೆಚ್ಚಾಗಿ ಸುದ್ದಿ ಕೊಡಬಾರದೆಂದೂ ಆಜ್ಞೆ ಹೊರಡಿಸಿದರು! ಪತ್ರಿಕಾ ವ್ಯವಸಾಯದ ಕುರಿತು ಸಾಕಷ್ಟು ಪರಿಜ್ಞಾನವಿಲ್ಲದೆ ಅಧಿಕಾರಿಗಳು ಹೀಗೆ ಮಾಡಿದರೆಂದು ಯಾವನೇ ಪತ್ರಿಕೋದ್ಯಮಿಯಾದರೂ ಹೇಳಬಲ್ಲನು ಆ ನಿರ್ಬಂಧವನ್ನು ಮುರಿದರೆಂದು ಈಗ ಅದರ ಸಂಪಾದಕರನ್ನು ದಂಡಿಸಲಾಗಿದೆ!

ಬಂಗಾಳ ಸಂಯುಕ್ತ ಪ್ರಾಂತ ಸರಕಾರಗಳು ಇದಕ್ಕಿಂತಲೂ ಒಂದು ಹೆಜ್ಜೆ ಮುಂದುವರಿದಂತೆ ತೋರುತ್ತದೆ ಅಲ್ಲಿನ ಸರಕಾರವು ಒಂದು ವಿಶೇಷ ಪ್ರಕಟಣೆಯಲ್ಲಿ ಯಾವ ಪತ್ರಿಕೆಯೂ ಯಾವ ವಿಚಾರಗಳನ್ನೂ ಇಂಥಾ 'ಟೈಪು'ಗಳಿಗಿಂತ ದೊಡ್ಡ ಟೈಪುಗಳಲ್ಲಿ ಮುದ್ರಿಸಕೂಡದೆಂದು ಪ್ರಕಟಿಸಿರುವುದಾಗಿ ತಿಳಿದಿದೆ. ಇಂಡಿಯಾ ಸರಕಾರದ ನಿರ್ಬಂಧಾಜ್ಞೆಯ ಮೇಲೆ ಪ್ರಾಂತಿಕ ಹಾಗೂ ಸ್ಥಳೀಯ ಅಧಿಕಾರಿಗಳು ಹೀಗೆ ಮನಬಂದಂತೆ ನಿರ್ಬಂಧದ ಮೇಲೆ ನಿರ್ಬಂಧ ಹೊರಿಸುವುದು ನಿಜವಾಗಿಯೂ ಪತ್ರಿಕಾ ಕರ್ತರಿಗೆ ಸಂಕಷ್ಟವನ್ನು ಕೊಡುವಂಥಾದ್ದೇ ಆಗಿದೆ

ದೇಶದಲ್ಲಿ ಆಗುತ್ತಿರುವ ಗಲಭೆ ಆಂದೋಲನಗಳ ವಿಷಯದಲ್ಲಿ ಸರಕಾರೀ ಪ್ರಕಟಣೆಗಳೇನೋ ಬರುತ್ತಿವೆ ಆದರೆ ಅಖಂಡ ಭಾರತದ ವಿಸ್ತಾರದಲ್ಲಿ ಆಗುತ್ತಿರುವ ಆಂದೋಲನದ ವಾರ್ತೆಯನ್ನು ಕೊಡಲು ಅಷ್ಟು ಸಂಕ್ಷೇಪ ವರದಿಯನ್ನು ಮಾತ್ರ ಪ್ರಕಟಿಸುವುದರಿಂದ ಪತ್ರಿಕೆಗಳು ಕೊಡುವ ವಾರ್ತೆಗಳ ವಿಷಯದಲ್ಲಿ ಜನರ ಆದರ ಕಡಿಮೆಯಾಗಿ ಊಹಾಪೋಹೆಗಳೇ ಹೆಚ್ಚಾಗಲು ಆಸ್ಪದವಾಗುವುದು. ಸರಕಾರದ ಶಾಂತಿಪಾಲನ ಧರ್ಮಕ್ಕೇ ಇದರಿಂದ ಆತಂಕವುಂಟಾಗಲೂ ಬಹುದು.

ಪತ್ರಿಕೆಗಳು ಪ್ರಜೆಗಳಿಗೂ ಅಂತೇ ಸರಕಾರಕ್ಕೂ ಮಧ್ಯೇ ಇರುವ ರಾಷ್ಟ್ರದ ಹೊಣೆಗಾರಿಕೆ ಸಂಸ್ಥೆಗಳು! ಪತ್ರಿಕೋದ್ಯಮಿಗಳು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡವರು! ದೇಶದ ಶಾಂತಿ ವ್ಯವಸ್ಥೆಯ ಸಲುವಾಗಿಯೇ ಪತ್ರಿಕಾ ಸ್ವಾತಂತ್ರ್ಯವಿರಬೇಕಾದುದು ಅವಶ್ಯ. ಇಷ್ಟರಲ್ಲಿಯೇ ಈ ಕುರಿತು ವಿಚಾರ ಮಾಡುವರೆ ಅಖಿಲ ಭಾರತ ಪತ್ರಿಕಾ ಸಂಪಾದಕರ ಸಭೆ ಕೂಡಿದೆ. ಅವರ ನಿರ್ಣಯವನ್ನು ಸಾವಧಾನಚಿತ್ತದಿಂದ ವಿಚಾರಿಸಿಕೊಂಡು, ಸರಕಾರವು ಈಗ ಹೊರಡಿಸಿದ ಹೊಸ ಶಾಸನದ ವಿಷಯ ಪುನರಾಲೋಚಿಸಿ ನಿರ್ಬಂಧವನ್ನು ರದ್ದುಗೊಳಿಸುವಂತಾಗಲೆಂದು ನಾವು ಹಾರೈಸುತ್ತೇವೆ

'ಬದುಕಿರಲಾರೆ'

'ಎಂಥಾ ವಿಪತ್ತುಗಳು ಬಂದರೂ ನೀವು ಹಿಂಸೆಗೆ ಇಳಿಯಬಾರದು, ಹಿಂಸೆಗೆ ಇಳಿವುದೆಂದರೆ ಅಹಿಂಸೆಗೆ ಅಪಮಾನ ಮಾಡಿದಂತೆ, ಎಂದಾದರೂ ಅಂಥಾ ಪ್ರಮಾದ ಸಂಭವಿಸಿದರೆ, ನಾನದನ್ನು ನೋಡಿ ಬದುಕಿರಲಾರೆ' ಹೀಗೆಂದು ಗಾಂಧಿಜಿ ಮೊನ್ನೆಯ ಎ. ಐ. ಸಿ ಸಿ ಸಭೆಯಲ್ಲಿ ಭಾಷಣ ಮಾಡುತ್ತಾ ಕಾಂಗ್ರೆಸಿನವರನ್ನು ಆ ಮೂಲಕ ಸಮಸ್ತ ಭಾರತೀಯರನ್ನೂ ಎಚ್ಚರಗೊಳಿಸಿದ್ದಾರೆ! ಗಾಂಧಿಜಿಯವರ ಬಂಧನದ ಬಳಿಕ ಅದಕ್ಕೆ ಏನೇ ಕಾರಣವಿರಲಿ, ಇಂದು ದೇಶದ ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿರುವ ಕೆಲವು ಹಿಂಸಾಕಾರ್ಯಗಳ ಸುದ್ದಿಗಳನ್ನು ಓದುವುದರೊಡನೆ ಮಹಾತ್ಮರ ಮೇಲಿನ ಮಾತುಗಳನ್ನು ನೆನಪು ಮಾಡಿಕೊಂಡರೆ ಹೃದಯವು ತತ್ತರಿಸುವಂತೆ ಆಗುತ್ತದೆ!

'ಮಹಾತ್ಮರ ಬಂಧನದ ಬಳಿಕ ದೇಶದ ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿರುವ ಹಿಂಸಾಕಾರ್ಯಗಳು ನಿಜವಾಗಿಯೂ ಖಂಡನೀಯವಿವೆ, ಇಂಥಾ ದೊಂಬಿಗಳನ್ನು ಹಿಂಸೆಗಳನ್ನು ಮಾಡುತ್ತಿರುವ ಜನರು ದೇಶಕ್ಕೆ ಮಹಾಪ್ರಮಾದವನ್ನು ಮಾಡುತ್ತಿರುವರಲ್ಲದೆ ಮಹಾತ್ಮರು ಅವರ ಮೇಲಿಟ್ಟಿರುವ ವಿಶ್ವಾಸದ ಘಾತ-ಗೈಯ್ಯುತ್ತಿದ್ದಾರೆ. ನಾವು ಕೆಲವರು ಗಾಂಧಿಜಿ ಉಪವಾಸ ಮಾಡದಂತೆ ಅವರನ್ನು ಬೇಡಿಕೊಳ್ಳುತ್ತಿದ್ದೇವೆ. ಹಿಂಸಾ ಕಾರ್ಯಗಳನ್ನು ತಡೆಗಟ್ಟುವ ಮೂಲಕ ಉಳಿದವರು ಮಹಾತ್ಮರ ಜೀವವನ್ನು ಉಳಿಸಬಹುದು' ಹೀಗೆಂದು ಪಂಡಿತ ಮಾಲವಿಜಿಯವರು ಭಾರತೀಯರಿಗೆ ಒಂದು ಅಮೂಲ್ಯ ಸಂದೇಶವಿತ್ತಿದ್ದಾರೆ!

ಗಾಂಧಿಜಿಯವರ ಪ್ರಾಣಕ್ಕಿಂತ ದೇಶಾಭಿಮಾನಿಗಳಾದ ಭಾರತೀಯರಿಗೆ ಹೆಚ್ಚು ಪ್ರಿಯವಾದುದು ಇಂದು ಬೇರೆ ಇರಲಾರದು,- ಮಹಾತ್ಮರಿಗೆ ಅಹಿಂಸೆಗಿಂತ ಹೆಚ್ಚಿನ ಆತ್ಮೀಯ ಧರ್ಮವಿಲ್ಲವೆಂಬುದು ಅಖಿಲ ಜಗತ್ತಿಗೇ ಗೊತ್ತು. ಆದ್ದರಿಂದ ಪ್ರತಿಯೊಬ್ಬ ಭಾರತೀಯ ಬಂಧುಭಗಿನಿಯರು ಅಹಿಂಸೆಯನ್ನು ಕಾಪಾಡುವುದರ ಮೂಲಕ, ಹಿಂಸೆಯನ್ನು ನಿರ್ಬಂಧಿಸುವುದರ ಮೂಲಕ ದೇಶದ ಸ್ವಾತಂತ್ರ್ಯವನ್ನು ಗಳಿಸುವುದು ಮಾತ್ರವಲ್ಲದೆ ಮಹಾತ್ಮರ ಪ್ರಾಣವನ್ನೂ ಉಳಿಸುವ ಪುಣ್ಯಕ್ಕೆ ಭಾಗಿಗಳಾಗಬೇಕು!

ಕ್ರಿಪ್ಸ್ ಉವಾಚ

ಕಾಂಗ್ರೆಸಿನ ಮೇಲೆ ಉಗ್ರೋಪಾಯವನ್ನು ಕೈಕೊಂಡು ಕೆಲವು ದಿನಗಳೂ ಇನ್ನೂ ಕಳೆದಿಲ್ಲ, ಇಷ್ಟರಲ್ಲಿಯೇ ಕ್ರಿಪ್ಸ್ ಸಾಹೇಬರು ಸರಕಾರದ್ದ ಧೋರಣೆಯನ್ನು ಪುಷ್ಟೀಕರಿಸಿಕೊಂಡು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಒಂದು ಲೇಖನ ಬರೆದು ಆತ್ಮತೃಪ್ತಿಮಾಡಿಕೊಂಡರು 'ಬ್ರಿಟಿಷರು ಹಿಂದೂ ದೇಶದಿಂದ ಹೊರಗೆ ಹೋದ ಪಕ್ಷದಲ್ಲಿ ಪ್ರತಿಯೊಬ್ಬ ಯೂರೋಪಿಯನನ ಜೀವಕ್ಕೆ ಅಪಾಯ ಒದಗಿದಂತೆಯೇ ಆಗುವುದು ಅಲ್ಲಿರುವ ಪ್ರತಿಯೊಬ್ಬ ಅಮೇರಿಕದ, ಚೀನದ ಸಿಪಾಯಿ ಮತ್ತು ನಾಗರಿಕನ ಪ್ರಾಣಕ್ಕೆ ತೊಂದರೆಯುಂಟಾಗಿ ಇದರಿಂದ ಮಿತ್ರರಾಷ್ಟ್ರಗಳ ಯುದ್ಧಯತ್ನಕ್ಕೇ ಹಾನಿಯೊದಗುತ್ತದೆ' ಎಂಬುದಾಗಿ ಕ್ರಿಪ್ಸರು ವಾದ ಹೂಡಿದ್ದಾರೆ. ಕ್ರಿಪ್ಸ್ ಸಾಹೇಬರು ಹೀಗೆ ಹೇಳುತ್ತಿರುವಾಗ, ಮೊನ್ನೆ ಮೊನ್ನೆ ಅಮೆರಿಕ ಸರಕಾರವು, ಭಾರತದಲ್ಲಿರುವ ಅವರ ಸೈನಿಕರಿಗೂ, ಚೀನ ಸರಕಾರವು ಭಾರತದಲ್ಲಿರುವ ಚೀನ ಸೈನಿಕರಿಗೂ ಮಾಡಿಕೊಂಡ ವಿನಂತಿಯನ್ನು ಮರೆತೇ ಬಿಟ್ಟಂತೆ ತೋರುತ್ತದೆ ಅಮೆರಿಕ ಚೀನ ಸರಕಾರಗಳು ಭಾರತದಲ್ಲಿರುವ ತಮ್ಮ ಸೈನಿಕರಿಗೆ ಉಪದೇಶವೀಯುತ್ತಾ, ಭಾರತದ ಆಂತರಿಕ ರಾಜಕೀಯ ಗೊಂದಲದಲ್ಲಿ ಕೈಹಾಕಲೇಕೂಡದಾಗಿ ಎಚ್ಚರಿಸುತ್ತವೆ ಈ ಎಚ್ಚರಿಕೆಯಿಂದಲೇ ಅಮೆರಿಕ ಚೀನ ಸರಕಾರಗಳು ಭಾರತದಲ್ಲಿರುವ ತಮ್ಮ ಸೈನಿಕರ ಹಾಗೂ ನಾಗರಿಕರ ಜೀವರಕ್ಷಣೆ ಮಾಡಲು ಇಲ್ಲಿನ ರಾಜಕೀಯಕ್ಕೆ ಸೇರದೆಯೇ ಪೂರ್ಣ ಧೈರ್ಯಗೊಂಡಿವೆಯೆಂದು ಅರ್ಥವಾಗುವುದಿಲ್ಲವೆ?

ಕ್ರಿಪ್ಸ್ ಸಾಹೇಬರು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಈ ಲೇಖನ ಬರೆದು ಅಮೆರಿಕದಲ್ಲಿ ಭಾರತದ ವಿಷಯ ತಮ್ಮ ಸಿದ್ಧಾಂತಕ್ಕನುಸಾರವಾಗಿ ಪ್ರಚಾರಮಾಡಲು ತೊಡಗಿದ್ದಾರೆ ಆದರೆ ಅವರ ಪ್ರಭಾವವನ್ನು ಮಾತ್ರ ನಂಬಿಕೊಂಡಿರುವಷ್ಟು ಅಮೆರಿಕನರು ಜಡರಲ್ಲವೆಂಬ ವಿಷಯ, ಅವರ ಈ ಲೇಖನದ ಕುರಿತು ಪತ್ರಿಕೆಯೇ ಬರೆದ ಮಾತುಗಳಿಂದ ಕ್ರಿಪ್ಸರ ಚನ್ನಾಗಿ ಅರ್ಥಮಾಡಿಕೊಳ್ಳಬಹುದು 'ಬ್ರಿಟಿಷ್ ಸರಕಾರವು ಭಾರತದಲ್ಲಿ ವ್ಯವಸ್ಥೆಯನ್ನು ಸ್ಥಾಪಿಸಲು ನಿರ್ಬಂಧವನ್ನು ಜಾರಿಗೆ ತರುವುದರೊಡನೆ, ಭಾರತವನ್ನು ಸ್ವತಂತ್ರ ರಾಜ್ಯಭರಣಕ್ಕೆ ತಯಾರುಗೊಳಿಸಿ, ಒಳ್ಳೆಯ ಫಲದಾಯಕವಾಗಿ ಒಂದು ಸಂಧಾನವನ್ನು ಮಾಡಲೂ ಪ್ರಯತ್ನಿಸಬಹುದು' ಎಂದು ಆ ಪತ್ರಿಕೆ ಕ್ರಿಪ್ಸರಿಗೇ ಹಿತವಚನ ಹೇಳಿರುವುದು ಹೀಗೆ ಬರೆದಿರುವುದರಿಂದ ಸರ್

ನೋಟಗಳು....

ಅಮೇರಿಕನ್ ಪತ್ರಿಕೋದ್ಯಮಿಗಳೊಬ್ಬರು ಜಿನ್ನರೊಡನೆ ನೇರಾದ ಒಂದು ಪ್ರಶ್ನೆ ಹಾಕಿದರು. 'ಜಿನ್ನಾ ಸಾಹೇಬರೇ, ನಿಮಗೆ ದೇಶದ ಸ್ವಾತಂತ್ರ್ಯ ಬೇಕೊ? ಪಾಕಿಸ್ತಾನ ಬೇಕೊ?' ಎಂದು! ಪಾಪ! ಜಿನ್ನರನ್ನು ಪರೀಕ್ಷೆ ಮಾಡುವುದು ಅವರ ಉದ್ದೇಶವಿರಲಿಕ್ಕಿಲ್ಲ; ಸ್ಪಷ್ಟೀಕರಣಕ್ಕಾಗಿ ಅವರು ಹಾಗೆ ಪ್ರಶ್ನೆಹಾಕಿರಬೇಕು. ಆದರೆ ಅದರಿಂದ ಜಿನ್ನರ ಪರೀಕ್ಷೆಯೂ ಆಗಿಯೇ ಬಿಟ್ಟಿತು. ಜಿನ್ನರು ಹೇಳಿದರು 'ಮುಖ್ಯವಾಗಿ ನನಗೆ ಪಾಕಿಸ್ತಾನ ಬೇಕು' ಎಂದು!

卐

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು, ಅಧಿಕಾರ ವಹಿಸಿದ ಒಂದೇ ವಾರದಲ್ಲಿ, ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತರು! ರಾಜಿನಾಮೆಯ ಸುದ್ದಿ ಕೇಳಿ ಹಲವರು ಗಾಬರಿಗೊಂಡರು! ರಾಮಸ್ವಾಮಿ ಅಯ್ಯರರಂಥವರೂ, ಕಾಂಗ್ರೆಸಿನ ಮೇಲಿನ ಸಹಾನುಭೂತಿಯಿಂದ ರಾಜಿನಾಮೆ ಕೊಟ್ಟುಬಿಟ್ಟರೇ ಎಂದು! ಆದರೆ ಈಗ ಅವರ ಸ್ಪಷ್ಟೀಕರಣ ಬಂದಿದೆ, ಕಾಂಗ್ರೆಸಿನೆದುರು ಸಂಸ್ಥಾನಗಳನ್ನು ಸಂಘಟಿಸುವ ಕಾರ್ಯಕ್ಕಾಗಿ ಅವರು ರಾಜಿನಾಮೆಯಿತ್ತಿದ್ದಾರಂತೆ! ಗಾಬರಿಗೊಂಡವರು ಈಗ ಸಮಾಧಾನ ಹೊಂದಬಹುದು!

卐

ಸಿ ಪಿ. ಯವರ ರಾಜಿನಾಮೆಯಿಂದ ಡಾ। ಅಂಬ್ಡೇಕರರಿಗೂ ಒಂದು ಹುರುಪು ಬಂದಂತೆ ತೋರುತ್ತದೆ. ಸಿ ಪಿ ಯವರು ಸಂಸ್ಥಾನಗಳನ್ನು ಸಂಘಟಿಸಲು ರಾಜಿನಾಮೆಯಿತ್ತರೆ, ತಾನು ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನಲ್ಲಿದ್ದು, ದಳಿತ ವರ್ಗದವರಿಗೆ ಹಿತಮಾಡಲು ಸಮರ್ಥನಾಗದಿದ್ದರೆ, ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಡಲೂ ತಯಾರಿದ್ದೇನಾಗಿ ಅವರು ಹೇಳಿದರು! ಅಂಬ್ಡೇಕರರು ರಾಜಿನಾಮೆ ಕೊಡಲು ತಯಾರಿದ್ದೇನೆಂದು ಹೇಳಿದ್ದು ಮಾತ್ರವಲ್ಲದೆ ಇಷ್ಟರವರೆಗೆ ರಾಜಿನಾಮೆಯೇನೂ ಕೊಟ್ಟಿಲ್ಲ

卐

ದಳಿತವರ್ಗದವರು ಹಿಂದುಗಳಲ್ಲಿ ಸೇರಿದ ಒಂದಂಶವಲ್ಲ, ಅವರು ಪ್ರತ್ಯೇಕ ಜನಾಂಗ, ಮುಸಲ್ಮಾನರಂತೆ ಅವರಿಗೂ ಸಮಾನಸ್ಥಾನ ಸಿಗಬೇಕು ಎಂದು ಅಂಬ್ಡೇಕರರ ವಾದ!

卐

ಅಂತೂ ಜಿನ್ನರಿಗೆ 'ಪಾಕಿಸ್ಥಾನ' ಬೇಕು, ರಾಮಸ್ವಾಮಿ ನಾಯಕರಿಗೆ 'ದ್ರಾವಿಡ ಸ್ಥಾನ' ಬೇಕು, ಸಿ. ಪಿ. ಯವರಿಗೆ 'ರಾಜಸ್ಥಾನ' ಬೇಕು; ಅಂಬ್ಡೇಕರರಿಗೆ 'ದಳಿತಸ್ಥಾನ' ಬೇಕು, ಇನ್ನೂ ಯಾರು ಯಾರಿಗೆ ಯಾವ ಯಾವ 'ಸ್ಥಾನ'ಗಳು ಬೇಕೊ?

ಕ್ರಿಪ್ಸರಂಥ ಬ್ರಿಟಿಷ್ ಮುತ್ಸದ್ದಿಗಳು ಮಾಡುವ ಪ್ರಚಾರದ ಸತ್ಯಾಂಶವನ್ನು 'ನ್ಯೂಯಾರ್ಕ್ ಟೈಮ್ಸ್'ನಂಥಾ ಪತ್ರಿಕೆಗಳೇ ನಂಬುವುದಿಲ್ಲವೆಂಬುದು ಖಚಿತವಾಗುವುದಿಲ್ಲವೆ? ಬ್ರಿಟಿಷ ಮುತ್ಸದ್ದಿಗಳು ಹೀಗೆ ಅಮೇರಿಕದ ಸಂತತಿಯನ್ನು ಸಮಾಧಾನಪಡಿಸಲು ಹೋಗುವ ಹವ್ಯಾಸವನ್ನು ಬಿಟ್ಟು ಭಾರತೀಯರನ್ನೇ ಸಮಾಧಾನಗೊಳಿಸಿದರೆ-ಹಾಗೆ ಮಾಡಲು ಅವರಿಗೆ ಸಾಧ್ಯವಿದೆ-ನಿಜವಾಗಿಯೂ ಯುದ್ಧಯತ್ನಕ್ಕೆ ಸಹಾಯವಾಗಲಾರದೆ?

ತುಳುನಾಡಿನಲ್ಲಿ

ಅಪೂರ್ವವಾದೊಂದು ಶಾರದಾ ಮೂರ್ತಿ

ಲೇಖಕರು ಮಂಜೇಶ್ವರ ಗೋವಿಂದ ಪೈ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ, ಮಂಗಳೂರಿಂದ ಸಾಧಾರಣ ೫ ಮೈಲು ದೂರಕ್ಕೆ ನೇತ್ರಾವತಿಯ ತೆಂಕಣ ದಂಡೆಯಲ್ಲಿರುವ ಹರೆಕಳ ಪಾಗಣೆಯ ಅಂಬಲಮೊಗರು ಎಂಬ ಗ್ರಾಮದಲ್ಲಿ ಆ ಹೊಳೆಯಿಂದ ಅರ್ಧ ಮೈಲಷ್ಟರಲ್ಲಿ ಕೋಟೆರಗುತ್ತು ಎಂಬ ಒಂದು ನೆಲೆ ಇದೆ. ಅಲ್ಲಿ ಅದೇ ಹೆಸರಿನ ಗುತ್ತಿನ ಮನೆಯಿಂದ ಅರ್ಧ ಫರ್ಲಾಂಗು ಪಶ್ಚಿಮಕ್ಕೆ ಸುಮಾರು ೫೦ ಅಡಿ ಎತ್ತರವಾದ ದೇವರ ಗುಡ್ಡ ಎಂಬ ದಿನ್ನೆ ಇದೆ. ಅದನ್ನು ನರಹರಿ ಪರ್ವತವೆಂದೂ ಅನ್ನುತ್ತಾರಂತೆ. ಆ ದಿನ್ನೆಯ ಮೇಲೆ ಎರಡು ದೇವಸ್ಥಾನಗಳಿವೆ. ಹೆಚ್ಚು ಕಡಿಮೆ ೩-೪ ತಲೆಮಾರಿನವರ ಹೇಳಿಕೆಯಿಂದ ಅವರು ಕಾಂಬ ಮೊದಲಿಂದಲೆ ಆ ದೇಗುಲಗಳು ಹಾಳು ಬಿದ್ದಿದ್ದುವೆಂದು ತಿಳಿವುದರಿಂದ, ಅವು ಇಂದಿಗೆ ಕನಿಷ್ಠ ಪಕ್ಷಕ್ಕೆ ಸುಮಾರು ೨೫೦ ವರ್ಷಗಳಿಂದಲಾದರೂ ಭಗ್ನಾವಸ್ಥೆಯಲ್ಲಿದ್ದು ಅವುಗಳ ಹೊರಗೊಳಗೂ ಸುತ್ತುಮುತ್ತಲೂ ಮೊನ್ನೆ ಮೊನ್ನೆ ವರೆಗೆ ದಟ್ಟನೆ ಕಾಡು ಬೆಳೆದಿತ್ತು. ಈಗಲಾದರೂ ಅವನ್ನು ಆ ಕೋಟೆರಗುತ್ತು ಮನೆತನದ ಕೈವಾಶ್ರೀ ಕಾಂತಪ್ಪ ಶೆಟ್ಟರವರ ಮೊಮ್ಮಗ ಶ್ರೀ ಸುಬ್ಬಪಕ್ಕಳರು ಜೀರ್ಣೋದ್ಧಾರ ಮಾಡಿಸುತ್ತಾರೆ. ಆ ದೇವಾಲಯಗಳನ್ನು ಕಟ್ಟುವ ಕೆಲಸವು ಮುಗಿಯುತ್ತ ಬರುತ್ತಿದೆ. ಪ್ರಾಯಶಃ ಇದೇ ಚಿತ್ರಭಾನು ಸಂವತ್ಸರದ ಮುಂದಣ ಉತ್ತರಾಯಣದಲ್ಲಿ ಬ್ರಹ್ಮಕಲಶದ ಪುಣ್ಯ ಕಾರ್ಯವು ನೆರವೇರಬಹುದು.

ಆ ೨ ದೇವಾಲಯಗಳಲ್ಲಿ ಹಿರಿಯದು ಬಲಕ್ಕಿದೆ, ಕಿರಿಯದು ಅದರ ಎಡಗಡೆಯಲ್ಲಿದೆ. ಆದರೆ ಅವು ಒಂದೇ ಪ್ರಾಂಗಣದಲ್ಲಿ ಒಂದೇ ಪ್ರಾಕಾರದೊಳಗೆ ಇಲ್ಲದೆ ಬೇರೆ ಬೇರೆಯಾಗಿ ಅಕ್ಕಪಕ್ಕದಲ್ಲಿವೆ. ಎರಡೂ ಪೂರ್ವಾಭಿಮುಖವಾಗಿವೆ. ಹಿರಿಯ ದೇಗುಲದಲ್ಲಿ ಪದ್ಮಾಸನವನ್ನು ಕಟ್ಟಿ ಕುಳಿತಿರುವ ಶ್ರೀ ನರಸಿಂಹ ಸ್ವಾಮಿಯ ಶಿಲಾವಿಗ್ರಹವಿದೆ. ನಿಲವು ಸು ೧ ಕೋಲು ೭॥ ಅಂಗಲ. ಗಂಭೀರವಾದ ಮುಖಮುದ್ರೆ. ನಾಲ್ಕು ಕೈಗಳಲ್ಲಿ ಶಂಖ–ಚಕ್ರ–ಗದಾ–ಪದ್ಮಗಳಿವೆ. ಒಳಿಯಲ್ಲಿ ಶ್ರೀ ಲಕ್ಷ್ಮೀದೇವಿ ಇಲ್ಲ. ಆದ ಕಾರಣ ಅದನ್ನು ಉಗ್ರ ನೃಸಿಂಹ ಮೂರ್ತಿ ಎನ್ನಬೇಕು. ಈ ಮೂರ್ತಿಯನ್ನು ನೋಡಿದ ಕೂಡಲೆ ಹಂಪೆಯಲ್ಲಿರುವ ಪ್ರಖ್ಯಾತವಾದ ಆ ಉಗ್ರ ನರಸಿಂಹನ ಉತ್ತುಂಗವಾದ ಬಗ್ಗಲ್ಲಿನ ಶಿಲಾವಿಗ್ರಹದ ನೆನವಾಗುತ್ತದೆ. ಅದನ್ನು ಕಂಡಾತನ ಕೈಯೇ ಇದನ್ನು ಕೆತ್ತಿರಬೇಕೆಂದೂ ಮನಗಾಣುತ್ತದೆ.

ಮತ್ತಿನ ಚಿಕ್ಕ ಗುಂಡಿಯಲ್ಲಿರುವ ದೇವಿಮೂರ್ತಿಯನ್ನು ನೃಸಿಂಹ ಸ್ವಾಮಿಯ ಪಕ್ಕದ ದೇಗುಲದಲ್ಲಿರುವುದರಿಂದ ಲಕ್ಷ್ಮೀದೇವಿ ಎಂದೂ, ಆ ಕಾರಣ ಆ ನೃಸಿಂಹ ಸ್ವಾಮಿಯನ್ನು ಲಕ್ಷ್ಮೀನರಸಿಂಹ ದೇವರೆಂದೂ ಹೇಳುತ್ತಾರಾದರೂ ಅದು ಸರ್ವಥಾ ಲಕ್ಷ್ಮಿಯ ವಿಗ್ರಹವಲ್ಲ. ಸುಮಾರು ೧೬ ಅಂಗುಲದಷ್ಟು ನಿಲವುಳ್ಳ ಸುಖಾಸೀನವಾದ ಈ ಮೂರ್ತಿಗೂ ನಾಲ್ಕು ಕೈಗಳಿವೆ. ಅವಲ್ಲಿ ಮೇಲಿನ ಬಲಗೈಯಲ್ಲಿ ಅಕ್ಷಮಾಲೆಯೂ, ಮೇಲಿನ ಎಡಗೈಯಲ್ಲಿ ಕಲಶವೂ ಕೆಳಗಣ ಎಡಗೈಯಲ್ಲಿ ಪುಸ್ತಕವೂ ಇವೆ. ಬೆರಳೆತ್ತಿ ಹಿಡಿದ ಕೆಳಗಡೆಯ ಬಲ ಅಂಗೈ ಅಭಯ ಮುದ್ರೆಯನ್ನು ಸೂಚಿಸುತ್ತಿದೆ. ಬಳಿಯಲ್ಲಿ ವಾಹನವಿಲ್ಲ. ಲಕ್ಷ್ಮಿಯ ಯಾವ ವಿಗ್ರಹದಲ್ಲೂ ಮಾಲೆಯೂ ಇಲ್ಲ, ಪುಸ್ತಕವೂ ಇಲ್ಲ. ಈ ಮೂರ್ತಿಯನ್ನು ನೃಸಿಂಹ ಸ್ವಾಮಿಯ ದೇವಾಲಯದ ಸುತ್ತಾಲಯದೊಳಗೂ ಇರಿಸಿಲ್ಲ. ಆದ ಕಾರಣ ಈ ಮೂರ್ತಿ ಸರ್ವಥಾ ಲಕ್ಷ್ಮಿಯದಲ್ಲ ಎಂದು ಸಿದ್ಧವಾಗುವ ಕಾರಣದಿಂದಲೇ ಇದು ಶಾರದಾಂಬೆಯ ಮೂರ್ತಿಯೆಂದೂ ಸಿದ್ಧವಾಗುತ್ತದೆ. ಆದರೆ ಸರಸ್ವತಿಯ ನಿತ್ಯ ಸಹವರ್ತಿಯಾದ ಆ ವೀಣೆ ಈ ಮೂರ್ತಿಯ ಕೈಗಳಲ್ಲಿ ಇಲ್ಲವೇಕೆ? ಹಾಗೂ ಸರಸ್ವತಿಯ ಮೂರ್ತಿಗೆ ಸಾಹಜಿಕವಲ್ಲದ ಕಲಶವು ಈ ಮೂರ್ತಿಯ ಕೈಯಲ್ಲಿದೆ ಏಕೆ?

ನಾನು ಬಲ್ಲಷ್ಟರ ಮಟ್ಟಿಗೆ (ಆದರೆ ನನ್ನ ಅನುಭವವಂತೂ ತೀರ ವಿರಳ) ನಮ್ಮ ತುಳುನಾಡಿನಲ್ಲಿ ಶಾರದೆಯ ದೇವಾಲಯವಿಲ್ಲ ಮಾತ್ರವಲ್ಲ, ಆದ್ಯ ಶ್ರೀ ಶಂಕರಾಚಾರ್ಯರು ಶೃಂಗೇರಿಯಲ್ಲಿ ಶ್ರೀ ಶಾರದಾಂಬೆಯ ದೇವಾಗಾರವನ್ನು ಸ್ಥಾಪಿಸುವ ಮುಂಚೆ ದಕ್ಷಿಣ ಭಾರತದಲ್ಲಿ ಆಕೆಯ ಬೇರೆ ದೇವಾಲಯವಿದ್ದಂತೆಯೂ ತೋರುವುದಿಲ್ಲ, ಅಥವಾ ಒಂದು ವೇಳೆ ಇವೆಯೋ ಆದರೆ ತೀರ ವಿರಳ (ಶ್ರೀ ಶಂಕರಾಚಾರ್ಯರ ಜನ್ಮಕ್ಷೇತ್ರವಾದ ಕೊಚ್ಚಿಯ ರಾಜ್ಯದ ತ್ರಿಚೂರಿನ ಬಳಿಯ ಕಾಲಟಿ ಎಂಬಲ್ಲಿಯ ಶಾರದಾ ಮೂರ್ತಿಯಾದರೂ ಪ್ರತಿಷ್ಠಿಸಲ್ಪಟ್ಟುದು ಕಳೆದ ಸೌಮ್ಯ ಸಂವತ್ಸರದ ಮಾಘಮಾಸದಲ್ಲಿ, ಅಂದರೆ ೧೯೧೦ನೆಯ ಇಸವಿಯ ಫೆಬ್ರುವರಿಯಲ್ಲಿ). ಆದ ಕಾರಣ ಶೃಂಗೇರಿಯ ಆ ಪ್ರಾಚೀನ ಶಾರದಾ ಮೂರ್ತಿಯನ್ನು ಕಂಡೇ ಹರೆಕಳದ ಈ ಶಾರದಾ ಮೂರ್ತಿಯನ್ನು ಮಾಡಿಸಿರಬೇಕೆಂದು ಖಂಡಿತವಾಗಿ ಬಗೆಗಂಡು, ಶೃಂಗೇರಿಯ ಮೂರ್ತಿಯನ್ನು ನಾನು ಕಂಡಿಲ್ಲದ ಕಾರಣ ಅದಕ್ಕೆ ಎಷ್ಟು ಕೈಗಳಿವೆ? ಅವುಗಳಲ್ಲಿ ಯಾವ ಯಾವ ಸಾಧನಗಳಿವೆ? ಎಂದು ಶ್ರೀ ಡಿ ಎಲ್ ನರಸಿಂಹಾಚಾರ್ಯರೊಂದಿಗೆ ವಿಚಾರಿಸಿದಲ್ಲಿ, ಶೃಂಗೇರಿಯ ಶಾರದಾ ಮೂರ್ತಿಯೂ ಸುಖಾಸೀನವಾಗಿದೆ, ಅದಕ್ಕೂ ನಾಲ್ಕು ಕೈಗಳಿದ್ದು ಅವುಗಳಲ್ಲಿ ಅಕ್ಷಮಾಲೆಯೂ, ಅಮೃತ ಕಲಶವೂ, ಅಭಯ ಮುದ್ರೆಯೂ, ಪುಸ್ತಕವೂ ಇವೆ (Mysore Gazetteer, V, ಪು ೧೧೪೭) ಎಂದು ತಿಳಿದು ಬಂದಿರುವುದರಿಂದ, ಹರೆಕಳದ ಶಾರದಾ ಮೂರ್ತಿಯಾದರೊ ಶೃಂಗೇರಿಯ ಶಾರದಾ ಮೂರ್ತಿಯ ಅತ್ತ ಪ್ರತಿಕೃತಿ ಎಂದು ಒಮ್ಮೆಲೇ ಸ್ಪಷ್ಟವಾಗುತ್ತದೆ. ಸ್ವರ ಮೂರ್ತಿಯಾದ ವಾಗ್ದೇವಿಯ ಕೈಯಲ್ಲಿ ಸ್ವರಸುಧಾಸ್ಯಂದಿಯಾದ ವೀಣೆ ಇದೆಯಾದರೆ, ಜ್ಞಾನಮೂರ್ತಿಯಾದ ಪ್ರಕೃತ ದೇವಿಯ ಕೈಯಲ್ಲಿ ಜ್ಞಾನಮಯವಾದ ಅಮೃತ ಕಲಶವಿದೆ. ಅತ ಏವ ಇದು ಸರಸ್ವತಿಯ ವಿಗ್ರಹ ತಾನೆ, ನಮ್ಮ ತುಳುನಾಡಿನಲ್ಲಿ ಅಪೂರ್ವವಾದ, ಪ್ರಾಯಶಃ ಏಕಮಾತ್ರವೂ ಆದ ಶಾರದಾ ದೇವಿಯ ವಿಗ್ರಹ ತಾನೆ.

ಹರೆಕಳದ ಆ ನರಸಿಂಹ ಮೂರ್ತಿಯನ್ನು ಉಡುಪಿಯ ಮಾಧ್ವ ಸಂಪ್ರದಾಯದ ಅಷ್ಟ ಮಠಗಳಲ್ಲಿ ಒಂದಾದ ಫಲಿಮಾರು ಮಠದ ಒಬ್ಬರು ಯತೀಂದ್ರರು ಪ್ರತಿಷ್ಠಿಸಿದರೆಂದೂ, ಆ ಹಿಂದಣ ಕಾಲದಲ್ಲಿ ಅಲ್ಲಿ ಮುನ್ನೂರಾಯ ಎಂಬ ಮನೆತನದವರು ಪೂಜೆ ಮಾಡುತ್ತಿದ್ದರೆಂದೂ ('ಜೀವಾನಂದ ಪದಗಳು' ಅಂಬಲಮೊಗರು, ೧೯೩೫ ಪು ೩೪) ಮಂದಿ ಹೇಳುತ್ತಿರುವ ಐತಿಹ್ಯವಿದೆಯಾದರೂ, ಇಷ್ಟೇ ಮಾತ್ರದಿಂದ ಆ ಮೂರ್ತಿಯ ಪ್ರತಿಷ್ಠಾ ಕಾಲವನ್ನು ಗೊತ್ತುಪಡಿಸಲಾಗುವುದಿಲ್ಲ. ಅದನ್ನಾಗಲಿ ಅದರ ಪಕ್ಕದ ಸರಸ್ವತಿಯ ಮೂರ್ತಿಯನ್ನಾಗಲಿ ಕುರಿತು ಯಾವೊಂದು ಶಾಸನವೂ ಅಲ್ಲಿಲ್ಲ. ಹೀಗಾಗಿ ಆ ಮೂರ್ತಿಗಳನ್ನು ಕುರಿತು ನಿಷ್ಕೃಷ್ಟವಾಗಿ ಕಾಲವಿಚಾರವನ್ನು ಮಾಡಲಿಕ್ಕಿಲ್ಲವಾದರೂ, ಆವೆರಡೂ ಮೂರ್ತಿಗಳಾ ಕ್ರಿ ಶ (೧೬೦೦ರಿಂದ ೧೭೦೦ರೊಳಗಾ) ೧೬ನೆಯ ಶತಮಾನದ ಆಯಾ ಬೇರೆ ಬೇರೆ ವರ್ಷಗಳಲ್ಲಿ ಪ್ರತಿಷ್ಠಿಸಲ್ಪಟ್ಟಿರಬೇಕೆಂದು ನನಗೆ ತೋರುತ್ತದೆ.

ಇವೆರಡು ಮೂರ್ತಿಗಳಲ್ಲದೆ ಶ್ರೀ ನರಸಿಂಹ ಸ್ವಾಮಿಯ ದೇವಾಲಯದ ಎಡ ಬಲದ ಕೈಸಾಲೆಗಳಲ್ಲಿ ಆ ಬಗ್ಗೆ ಕಟ್ಟಿಸಿದ ಕೋಣೆಗಳಲ್ಲಿ ಪ್ರತಿಷ್ಠಿಸಲೆಂದು ಶ್ರೀ ಸುಬ್ಬ ಪಕ್ಕಳರು ಒಂದು ಗಣಪತಿಯ ವಿಗ್ರಹವನ್ನು ತರಿಸಿದ್ದಾರೆ. ಒಂದು ಶಿವ ಲಿಂಗವನ್ನು ದೊರಕಿಸಿಕೊಳ್ಳಲಿಕ್ಕೆ ತಾನೆ ಪ್ರಯತ್ನಿಸುತ್ತಿದ್ದಾರೆ. ಆ ವಿನಾಯಕನ ಮೂರ್ತಿಯೂ ಒಂದು ಅಪೂರ್ವ ಮೂರ್ತಿ, ಶುದ್ಧ ವೈಷ್ಣವ ಮೂರ್ತಿ. ಸುಮಾರು ೧೨ ಅಂಗುಲದಷ್ಟು ನಿಲವುಳ್ಳ ಆ ವಿಗ್ರಹಕ್ಕೆ ೧೦ ಕೈಗಳಿದ್ದು ಅವುಗಳಲ್ಲಿ ಶಂಖ–ಚಕ್ರ–ಗದಾ–ಪದ್ಮಗಳಿವೆ. ವಾಮಾಂಕದಲ್ಲಿ ಲಕ್ಷ್ಮೀದೇವಿಯ ಮೂರ್ತಿಯಿದೆ. ಕೆಳ ತಟ್ಟಿನಲ್ಲಿ ಆತನ ವಾಹನವಾದ ಇಲಿಯೂ ಇದೆ. ಆ ಗಣಪತಿಯ ಮೂರ್ತಿ ಹರೆಕಳದ ನೆರೆಯ ಪಾವೂರಿನ ಬಳಿಯ ಮಲಾರು ಅರಸ್ತಾನದಲ್ಲಿ ದೊರಕಿತಂತೆ.

ಸುಮಾರು ೧೫೦ ವರ್ಷಗಳಿಂದ ಪೂಜಾದಿ ವಿನಿಯೋಗಗಳಿಲ್ಲದೆ ಬರಡುಬಿದ್ದ ಆ ದೇವಾಲಯಗಳನ್ನು ಎಷ್ಟೋ ಮಂದಿ ಕಂಡು ಗೊಡವೆ ಮಾಡದ ಹೊದದ್ದೂ, ಶ್ರೀ ಸುಬ್ಬ ಪಕ್ಕಳರು ಆ ದುರವಸ್ಥೆಯನ್ನು ಕಂಡು ಮನನೊಂದು, ಅವನ್ನು ಹೇರಳ ಹಣ ಮುಟ್ಟಿಸಿ ತೀರ ಮರಳಿ ಕಟ್ಟಿಸಿ, ಆ ಪವಿತ್ರ ವಿಗ್ರಹಗಳನ್ನು ಅಲ್ಲಿ ಪುನಃ ಪ್ರತಿಷ್ಠಿಸಲಿಕ್ಕೆ ಕೈಕೊಂಡಿರುವ ಪುಣ್ಯಕಾರ್ಯವಾದರೊ ತುಂಬ ಶ್ಲಾಘ್ಯವೂ ಸರಿ, ಸನಾತನ ಧರ್ಮಬಂಧುಗಳಿಗೆ ಸಂತೋಷಕರವೂ ಸರಿ, ಆ ಧರ್ಮಸ್ವರೂಪಿಯಾದ ಪರಮಾತ್ಮನ ಅನುಗ್ರಹಕ್ಕೆ ಪಾತ್ರವೂ ಸರಿ. ಇತಿ ಶುಭಂ ಭೂಯಾತ್!

'ಬ್ರಿಟನಿನ ಜಯವೇ ಚಳವಳದ ಉದ್ದೇಶ'

ಗಾಂಧಿಜಿ ಹೇಳಿದರು

ಒಬ್ಬ ಇಂಗ್ಲಿಷ್ ಮಿತ್ರರು ಗಾಂಧಿಜಿಯವರಿಗೊಂದು ಪತ್ರ ಬರೆದು, ಅದರಲ್ಲಿ ಈ ಚಳವಳದಿಂದ ಬ್ರಿಟಿಷರು ಗಾಂಧಿಜಿ ಹಾಗೂ ಕಾಂಗ್ರೆಸಿನ ಮೇಲೆ ರೇಗಿರುವರೆಂದು ತಿಳಿಸಿರುವುದಕ್ಕೆ ಗಾಂಧಿಜಿ ಹೀಗೆ ಉತ್ತರ ಕೊಟ್ಟಿರುವರು. ಆ ಉತ್ತರದಲ್ಲಿ ಬ್ರಿಟನಿನ ಜಯವನ್ನೇ ಉದ್ದೇಶಿಸಿ ತಾನೀ ಚಳವಳ ಹೂಡಿರುವೆನೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

'ನಾನು ನನ್ನ ಕುಟುಂಬದ ಜನರೊಂದಿಗೆ ನನ್ನ ಅಸಹಕಾರದ ಪ್ರಯೋಗ ಸುರು ಮಾಡಿದೆನು. ಆ ಬಗ್ಗೆ ವಿಷಾದ ಪಡಲು ನನಗೇ ಕಾರಣ ಬೀಳಲಿಲ್ಲ. ಏಕೆಂದರೆ ಅವರ ಹಿತಾರ್ಥವಾಗಿಯೇ ಆ ಸಾಹಸ ನಾನು ಕೈಕೊಳ್ಳಬೇಕಾಯಿತು. ಅವರಲ್ಲಿ ಕೆಲವರಿಗೆ ಇದು ಬೇಗನೆ ಹಾಗು ಕೆಲವರಿಗೆ ಹಿಂದುಗಡೆ ಮನವರಿಕೆಯಾಯಿತು. ಪ್ರೇಮ ಹಾಗು ಸತ್ಯ ಇವು ಸರಳ ಇರುವವು. ಆದರೆ ಅವು ಒಮ್ಮೊಮ್ಮೆ ಸಹಿಸಲಾರದಷ್ಟು ಕಠಿಣವಾಗುವವು.

'ಹೋರಾಟವನ್ನು ಕ್ಷೋಭೆಯಿಲ್ಲದೆ ಮುಗಿಸಲು ಉಪಾಯ ಕಂಡು ಹಿಡಿಯಲು ನಾನು ಅನೇಕ ರಾತ್ರಿ ಕಳೆದೆನು. ಆದರೆ ಒಟಿಷರಿಗೆ ಸತ್ಯದ ಮನವರಿಕೆ ಮಾಡಿ ಕೊಡಬೇಕಾದರೆ ಕೆಲವೊಂದು ತರದ ಘರ್ಷಣವು ಅನಿವಾರ್ಯವೆಂದು ನನಗೆ ತೋರಿತು. ಮುಂದಿನ ಘಟನೆಗಳೇ ನನ್ನ ಮಾರ್ಗವು ಸರಿಯಾಗಿರುವದೆಂದೂ ನಾನು ಶುದ್ಧ ಸ್ನೇಹಭಾವದಿಂದ ನಡೆದುಕೊಂಡಿರುವೆನೆಂದೂ ತೋರಿಸಬಲ್ಲವು. ಬ್ರಿಟಿಷ್ ಅಧಿಕಾರಿಗಳು ಚಳವಳವನ್ನು ದಬ್ಬಾಳಿಕೆಯಿಂದ ಹತ್ತಿಕ್ಕಬಹುದು. ಅದರಿಂದ ಜನರಿಗೆ ಕಷ್ಟಗಳು ಸಂಭವಿಸುವುದು ನಿಶ್ಚಿತ. ಆದರೆ ಹೊನೆಯಲ್ಲಿ ಬ್ರಿಟನಿನ ನೈತಿಕ ಅಧಃಪತನವಾಗುವುದು. ಈಗ ಅದು ನಡಿಸಿದುದನ್ನು ಹೀಗೆಯೇ ಬಿಟ್ಟುಗೊಟ್ಟರೆ ಅದರಿಂದ ಅದರ ದಿವಾಳಿ ಹೊರತು ಯುದ್ಧದಲ್ಲಿ ಪರಾಭವನ್ನೂ ಹೊಂದಬಹುದು. ಆದರೆ ನಾನು ಕಾಂಗ್ರೆಸಿಗೆ ಉಪದೇಶಿಸಿದ ಚಳವಳದಿಂದ ಆ ದಿವಾಳಿಗೆ ತಡೆಯುಂಟಾಗುವುದಲ್ಲದೆ ಗ್ರೇಟ್ ಬ್ರಿಟನಿನ ನೈತಿಕ ಉನ್ನತಿಯಾಗಿ ಅದಕ್ಕೂ ಮಿತ್ರರಾಷ್ಟ್ರಗಳಿಗೂ ವಿಜಯ ದೊರೆಯುವುದು.

ಈ ಚಳವಳದ ಹಿಂದುಸ್ಥಾನವು ಸ್ವಾತಂತ್ರ್ಯದ ಗರಿ ಸಂಪಾದಿಸುವದು. ಇದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಇದು ಇಲ್ಲಿ ಅಪ್ರಸ್ತುತವಾಗಿದೆ. ಈ ಚಳವಳದ ಉದ್ದೇಶವು ಬ್ರಿಟನಿಗೆ ಸಹಾಯ ಮಾಡುವದೇ ಇರುತ್ತದೆ. ನಾನ ವಾಯಿಬಡಾಯಿ ಕೊಚ್ಚಿಕೊಳ್ಳುತ್ತಿರುವೆನೆಂದು ಎನಿಸಬಹುದು. ಮುಚಿತ ಹೃದಯದಿಂದ ಬಂದದ್ದೆಂದು ಅದನ್ನು ಮುಂದೆ ಮಾಡಲು ನಾನು ನಾಚುವುದಿಲ್ಲ. ಮುಂದಿನ ಘಟನೆಗಳೇ ನನ್ನ ಹೇಳಿಕೆಯ ಸತ್ಯಾಸತ್ಯತೆ ನಿರ್ಧರಿಸುವವು. ವಿಚಾರ ಸರಣಿ ತಪ್ಪಾಗಬಹುದು. ಆದರೆ ಹೃದಯದ ಕೂಗು ತಪ್ಪಾಗಲಾರದು.

ಶತ್ರುಗಳು ನಿಮ್ಮ ಕಿವಿಯಲ್ಲಿ ಏನಾದರೂ ಊದುತ್ತಿದ್ದಾರೆಯೊ?

ವದಂತಿಗಳೇನಾದರೂ ನಿಮ್ಮ ಕಿವಿಗೆ ಬಿದ್ದರೆ ಅವನ್ನು ಜಪಾನಿಯರು ಹುಟ್ಟಿಸಿದ್ದಾರೆಂದು ತಿಳಿಯಿರಿ. ನಿಮ್ಮ ಮನಸ್ಸಿಗೆ ಕಳಂಕವನ್ನುಂಟುಮಾಡಿ, ನೀವು ಅವರನ್ನು ಎದುರಿಸಲು ನಿಮಗೆ ಶಕ್ತಿ ಇಲ್ಲದ ಹಾಗೆ ಮಾಡಲು ಅವರು ಯತ್ನಿಸಿದ್ದಾರೆ. ಋಜುವಾತಾಗದ ಸಂಗತಿಗಳನ್ನು ನಂಬಿ, ಅವನ್ನು ಹರಡಿ ಶತ್ರುಗಳಿಗೆ ಉಪಕಾರ ಮಾಡಬೇಡಿರಿ.

ವದಂತಿಗಳನ್ನು ನಂಬಬೇಡಿ.

ಜಪಾನಿಯರನ್ನು ಎದುರಿಸುವುದಕ್ಕಾಗಿ ರಾಷ್ಟ್ರೀಯ ಯುದ್ಧಮುಖವನ್ನು ರಚಿಸಿರಿ

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ಕಮ್ಯೂನಿಸ್ಟರ ಸಭೆ

ಕಾಂಗ್ರೆಸಿನ ಮೇಲಿನ ನಿರ್ಬಂಧವನ್ನು ತೆಗೆದು ಹಾಕಿ, ರಾಷ್ಟ್ರದ ಮುಖಂಡರೆಲ್ಲರನ್ನೂ ಬಿಡುಗಡೆ ಮಾಡಿ, ಸರಕಾರವು ರಾಷ್ಟ್ರೀಯ ಸರಕಾರ ಸ್ಥಾಪನೆಗಾಗಿ ಸಂಧಾನ ಹೂಡಬೇಕೆಂದು ಸರಕಾರವನ್ನು ಕೇಳಿಕೊಳ್ಳಲೂ, ಸರಕಾರದ ಈಗಿನ ಕಾರ್ಯನೀತಿಯು ಅಪ್ರಕೃತವೆನ್ನಲೂ ಮಂಗಳೂರು ಕಮ್ಯೂನಿಸ್ಟ್ ಪಾರ್ಟಿ ಮತ್ತು ಮಜೂರ ಕೇಂದ್ರ ಸಮಿತಿಗಳ ಆಶ್ರಯದಲ್ಲಿ ಸಭೆಯೊಂದು ತಾ. ೨೩ನೇ ಆದಿತ್ಯವಾರ ಸಂಜೆ ಮೈದಾನಿನಲ್ಲಿ ಜರಗಿತು. ಶ್ರೀ ಕೇಶವ ಕಾಮತರವರು, ಅಧ್ಯಕ್ಷರಾಗಿದ್ದರು ಅಧ್ಯಕ್ಷರು ಮೇಲಿನ ಅಭಿಪ್ರಾಯದ ಠರಾವನ್ನು ಮಂಡಿಸಿದ ಬಳಿಕ, ಅದರ ಪರವಾಗಿ ಶ್ರೀ ಹರಿದಾಸ್ ಆಚಾರ್ಯರವರು ಮಾತನಾಡಿ, ಮಜೂರ ಮಹಾ ಜನರ ಕರ್ತವ್ಯವನ್ನು ವಿವರಿಸಿದರು. ಅಧ್ಯಕ್ಷರು ಪ್ರಕೃತದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದ ಬಳಿಕ, ಠರಾವು ಮಂಜೂರಾಗಿ, ಸಭಾಂತ್ಯವಾಯಿತು. ಮಜೂರರ ಮೆರವಣಿಗೆಯೂ ಇದ್ದಿತು.

ದ. ಕ. ಜಿಲ್ಲಾ ಅಧ್ಯಾಪಕರ ಗಿಲ್ಡಿನವರ ಸಭೆ

ಈಚೆಗೆ ಈ ಗಿಲ್ಡಿನವರು ಸಭೆ ಸೇರಿ, ಈಗ ಶಾಲಾ ಕೋಲೇಜುಗಳಿಗೆ ಕೆಲವು ದಿನಗಳಿಂದ ಬಾರದಿರುವ ವಿದ್ಯಾರ್ಥಿಗಳು ಮುಂದೆಯಾದರೂ ಬಾರದಿರಬಾರದೆಂದು ವಿನಂತಿಸುವ ಒಂದು ನಿರ್ಧಾರವನ್ನು ಮಾಡಿರುವುದಾಗಿ ತಿಳಿದುಬಂದಿದೆ.

ಗವರ್ನಮೆಂಟು ಕಾಲೇಜು ಮತ್ತು ಎಲೋಶಿಯಸ್ ಕಾಲೇಜ್ ಮತ್ತು ನಗರದ ಇತರ ಹೈಸ್ಕೂಲುಗಳಲ್ಲಿಯೂ ಬಹಳ ಕಡಿಮೆ ಹುಡುಗರು ಕ್ಲಾಸುಗಳಲ್ಲಿ ಹಾಜರಿದ್ದಾರೆ; ಮುಖ್ಯವಾಗಿ ಎಲ್ಲಾ ಶಾಲೆಗಳ ಬಾಗಿಲುಗಳಲ್ಲಿಯೂ ಶಾಂತ ರೀತಿಯಿಂದ ವಿದ್ಯಾರ್ಥಿಗಳು ಪಿಕೆಟಿಂಗ್ ನಡೆಸುತ್ತಿದ್ದಾರೆ ವಿದ್ಯಾರ್ಥಿನಿಯರೂ ಪಿಕೆಟಿಂಗಿನಲ್ಲಿ ಭಾಗವಹಿಸುತ್ತಿದ್ದಾರೆ

ತಾ ೨೧ರಂದು ಸಂಜೆ ವಿದ್ಯಾರ್ಥಿಗಳ ಒಂದು ದೊಡ್ಡ ಮೆರವಣಿಗೆ ಹೊರಟು ಕಂಕನಾಡಿಯಲ್ಲಿ ಸಭೆಕೂಡಿ ಅಲ್ಲಿ ಸಾರ್ವಜನಿಕ ಸಭೆ ಜರಗಿ ಭಾಷಣಗಳಾದುವು.

ಕಾರ್ಕಳದಲ್ಲಿಯೂ ಮೂರು ದಿನಗಳ ಹರತಾಳವಿತ್ತು. ಬಂಟ್ವಾಳದಲ್ಲಿಯೂ ಹರತಾಳವಿತ್ತು ಉಡುಪಿಯಲ್ಲಿ ವಾರದ ಸಂತೆಯೂ ಮುಚ್ಚಲಾಗಿತ್ತು

ಕಾರ್ಕಳ–ಸೋಮೇಶ್ವರ ಮಾರ್ಗದಲ್ಲಿ ಎರಡು ಸಂಕಗಳು ಮುರಿದು, ಕೆಲವು ದೊಡ್ಡ ಮರಗಳು ಮಾರ್ಗಕ್ಕೆ ಬಿದ್ದು ಬಸ್ಸು ಪ್ರಯಾಣವು ಒಂದೆರಡು ದಿನಗಳ ವರೆಗೆ ತಡೆಯಾದಸುದ್ದಿಯಿದೆ. ಕಾರ್ಕಳ ಮಂಗಳೂರು ಮಾರ್ಗದಲ್ಲಿ ಮೂಡಬಿದ್ರಿಯ ಸಮೀಪದಲ್ಲಿ ಒಂದು ಸಂಕ ಹಾಳಾದ ಸುದ್ದಿಯೂ ಇದೆ.

ಉಡುಪಿಯ ಪುಂಜಾಗಿಯರ ಹೈಸ್ಕೂಲಿನ ವಿದ್ಯಾರ್ಥಿನಿಯರು ಮೂರು ದಿನಗಳ ಮುಷ್ಕರ ಹೂಡಿರುವರು

ಉಡುಪಿ ಕುಂದಾಪುರದ ಮಾರ್ಗದಲ್ಲಿ ಉಡುಪಿಯಲ್ಲಿ ಟೆಲಿಗ್ರಾಫ್ ತಂತಿ ತೊಂದರೆಗೊಳಿಸಲ್ಪಟ್ಟ ಸುದ್ದಿಯಿದೆ ಭದ್ರಗಿರಿ ಸೋಮೇಶ್ವರ ಮಾರ್ಗದಲ್ಲಿ ಮತ್ತು ಪೆರ್ಡೂರು ಸೋಮೇಶ್ವರ ಮಾರ್ಗದಲ್ಲಿ ಒಂದೆರಡು ಸಂಕಗಳು ಮುರಿಯಲ್ಪಟ್ಟು ಬಸ್ಸು ಸಂಚಾರಕ್ಕೆ ಅನಾನುಕೂಲವಾದ ವಾರ್ತೆಯೂ ಇದೆ.

ಸಂತಾಪಸೂಚನೆ

ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಸಮಿತಿಯು ತಾ ೧೯ರಂದು ಸಂಜೆ ಡಿ. ಸಿ. ಎಂ. ಶಾಲೆಯಲ್ಲಿ ಶ್ರೀ. ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. 'ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘವು 'ಹರಿಜನ' ಸಂಪಾದಕರಾದ ಶ್ರೀ. ಹರಿಲಾಲ ಮಹದೇವ ದೇಸಾಯರ ಆಕಸ್ಮಿಕ ನಿಧನದ ವಾರ್ತೆಯನ್ನು ಕೇಳಿ ಅತೀವ ದುಃಖಕ್ಕೆ ಈಡಾಗಿದೆ. ಪ್ರಾಮಾಣಿಕ, ನಿರ್ಭೀತ ಮತ್ತು ವಿದ್ವಾಂಸ ಪತ್ರಿಕೋದ್ಯೋಗಿಯಾದ ದಿವಂಗತರ ಮರಣದಿಂದ ಭಾರತದ ರಾಷ್ಟ್ರೀಯ ಪತ್ರಿಕೋದ್ಯಮಕ್ಕೆ ಆಗಿರುವ ನಷ್ಟಕ್ಕಾಗಿ ಸಂಘವು ಬಹಳ ಮರುಗುತ್ತದೆ ಮತ್ತು ತನ್ನ ಹೃತ್ಪೂರ್ವಕ ಸಂತಾಪ ಸಹಾನುಭೂತಿಗಳನ್ನು ದಿವಂಗತರ ಪತ್ನಿಗೂ ಅವರ ಪೂಜ್ಯ ಗುರು ಮ. ಗಾಂಧಿಯವರಿಗೂ ತಿಳಿಸುತ್ತದೆ' ಎಂಬ ನಿರ್ಣಯವು ಸ್ವೀಕರಿಸಲ್ಪಟ್ಟಿತು.

ವಕೀಲ್ ಕ್ಲಾರ್ಕ್ಸ್ ಎಸೋಸಿಯೇಶನ್

ಇದರ ವರ್ಷಾರಂಭದ ಸಭೆಯು ತಾ. ೧೬ರಂದು ಜರಗಿತು. ಹೊಸ ವರ್ಷಕ್ಕೆ ಶ್ರೀ ಶ್ರೀನಿವಾಸ ರಾಯರು ಅಧ್ಯಕ್ಷರಾಗಿಯೂ ಶ್ರೀ ನರ್ಸಪ್ಪಯ್ಯ ಕಾರ್ಯದರ್ಶಿಯಾಗಿಯೂ ಶ್ರೀ. ಪಾಂಡುರಂಗ ಭಕ್ತರು ಕೋಶಾಧಿಕಾರಿಯಾಗಿಯೂ ಇತರ ೯ ಮಂದಿ ಕಾರ್ಯಕಾರಿ ಸಮಿತಿಯಿಂದ ಶ್ರೀ. ಕೇಶವ ನಾಯಕರನ್ನೊಡಗೂಡಿದ ಮೂವರ ಇನ್ನೊಂದು ಉಪ ಸಮಿತಿಯು ಸಂಘಟನಾ ಕಾರ್ಯಕ್ಕಾಗಿ ನೇಮಿಸಲ್ಪಟ್ಟಿತು.

ಅಲೋಶಿಯಸ್ ಕಾಲೇಜಿನಲ್ಲಿ

ಪ್ರತಿ ತರಗತಿಯಲ್ಲಿಯೂ ತಾ ೧೮ರಂದು ಪಾಠಗಳು ಆರಂಭವಾಗುವ ಮೊದಲು ಎರಡೆರಡು ನಿಮಿಷ ಎದ್ದುನಿಂತು ವಿದ್ಯಾರ್ಥಿಗಳು ಮಹದೇವ ದೇಸಾಯರ ನಿಧನದ ಕುರಿತು ದುಃಖ ಸೂಚಿಸಿದರು.

ಕುಪ್ಪೆಪದವು

ಇಲ್ಲಿಯ ಜೈನ ಶ್ರೀಮಂತರೂ, ವ್ಯಾಪಾರಸ್ಥ ಆದ ಶ್ರೀ ಕೆ. ರಘುಚಂದ್ರ ಶೆಟ್ಟಿಯವರು ಇದೇ ತಾ. ೨೧ನೇ ಶುಕ್ರವಾರ ಬೆಳಿಗ್ಗೆ ಸುಮಾರು ೧೦ ಘಂಟೆ ಸಮಯಕ್ಕೆ ಅಕಾಲ ಮರಣಕ್ಕೆ ತುತ್ತಾಗಿರುವರು ಎಂಬುದನ್ನು ತಿಳಿಸುವರೆ ತುಂಬಾ ವಿಷಾದಿಸುತ್ತೇವೆ.

ಕಾಸರಗೋಡು

ದುಃಖಸೂಚಕ ಸಭೆ

ಸಾರ್ವಜನಿಕ ಸಭೆ ಸೇರಿತು ಮಹಾತ್ಮಾ ಗಾಂಧಿಯವರ ಖಾಸಗಿ ಕಾರ್ಯದರ್ಶಿ ಶ್ರೀ. ಮಹದೇವ ದೇಸಾಯರ ಅಕಾಲ ನಿಧನದಲ್ಲಿ ದುಃಖಿತರಾದವರೊಡನೆ ಸಹಭಾಗಿಗಳಾಗುವ ಒಂದು ಠರಾವನ್ನು ಶ್ರೀ. ರಾ. ಕೃ ಶೆಟ್ಟಿ ಅವರು ಮಂಡಿಸಿದರು. ಅನಂತರದಲ್ಲಿ ಶ್ರೀಯುತರು ಕೃಷ್ಣ ಭಟ್, ಪ್ರೊ.ಎಸ್. ಭಟ್, ಎ. ಅಚ್ಯುತನ್ ಮೊದಲಾದವರು ಸಂದರ್ಭೋಚಿತ ಮಾತುಗಳಿಂದ ಪ್ರಕೃತದ ರಾಜಕೀಯ ದಬ್ಬಾಳಿಕೆಯನ್ನು ನಿಷೇಧಿಸಿ ಎಲ್ಲರೂ ದಿವಂಗತರ ಆತ್ಮಕ್ಕೆ ಶಾಂತಿ ಬಯಸಿದ್ದರು. ಸಭೆಯು ಮೌನವಾಗಿ ಚದರಿತು. ಪ್ರತಿ ಬಂಧಕಗಳೇನೂ ಇರಲಿಲ್ಲ.

ನೀಲೇಶ್ವರ

ಅನಿಶ್ಚಿತ ಕಾಲದ ವರೆಗೆ ಮುಷ್ಕರ ಹೂಡಲು ಇಲ್ಲಿನ ರಾಜಾಸ್ ಹೈಸ್ಕೂಲಿನ ವಿದ್ಯಾರ್ಥಿಗಳು ನಿರ್ಧರಿಸಿದರು. ಆದರೆ ಓಣಂ ಹಬ್ಬಕ್ಕೆ ಕೆಲದಿನಗಳಿಗೆ ಮೊದಲೇ ಶಾಲೆಯನ್ನು ಮುಚ್ಚಿ ೩ ವಾರಗಳ ರಜೆ ಕೊಡಲಾಗಿದೆ.

ಕಯ್ಯೂರು ಜೀವರಕ್ಷಾ ಜಾಥಾ

ಎಂಬ ಹೆಸರಿನ ಕಿಸಾನರ ಮೆರವಣಿಗೆಯೊಂದು ಕೈಯ್ಯೂರು ಕೈದಿಗಳನ್ನು ಕಾಪಾಡುವುದರ ಕುರಿತು ಆವಶ್ಯವಿರುವ ಯತ್ನಗಳನ್ನು ಮಾಡಲು, ತಾ. ೧೧ರಂದು ಚರ್ವತ್ತೂರಿನಿಂದ ಹೊರಟಿತು ತಾ ೧೩ರಲ್ಲಿ ಹೊಸದುರ್ಗದ ಫಿರ್ಕಾದಿಂದ ಮೆರವಣಿಗೆ ಹೊರಟು ಅಲಯಿಯಲ್ಲಿ ಸಭೆ ಜರಗಿತು. ತಾ. ೧೪ರಂದು ಹೊಸದುರ್ಗ ಕೋಟಚೇರಿಗಳಲ್ಲಿ ಸಾರ್ವಜನಿಕ ಸಭೆಗಳು ಜರಗಿದವು. ಹೀಗೆ ಹಲವು ಹಳ್ಳಿಗಳನ್ನು ಸುತ್ತಿದ ಬಳಿಕ ತಾ. ೧೭ರಂದು ಪರಿಯೆಂಬಲ್ಲಿ ಈ ಮೆರವಣಿಗೆಯು ಕೊನೆಗೊಂಡಿತು.

ಬಿಡುಗಡೆ

ಹೊಸದುರ್ಗದ ಕಮ್ಯೂನಿಸ್ಟ್ ಕೆಲಸಗಾರರಾದ ಶ್ರೀ. ಕಂದಾಸರು ವೆಲ್ಲೂರು ಜೈಲಿನಿಂದ ನಿರುಪಾಧಿಕವಾಗಿ ಬಿಡುಗಡೆಮಾಡಲ್ಪಟ್ಟಿರುವರು.

ನಿಮಗಾಗಿ ವೆಸ್ಟ್ ಎಂಡ್ ವಾಚ್ ಮಾಡುವುದು

ದಿ ಮೈನ್‌ಸ್ಪ್ರಿಂಗ್ ಇದು ವಾಚನ್ನು ನಡೆಸಲು ಶಕ್ತಿಯನ್ನು ಕೊಡುತ್ತದೆ ಇದು ಒಂದು ಉದ್ದದ ಸಪೂರವಾದ ಸರಿಗೆ, ಹದಗೊಳಿಸಿ ಬೇರಲಿಗೆ ಸುತ್ತಲ್ಪಟ್ಟಿದೆ ಅದು ತಿರುಗಿಸಲ್ಪಟ್ಟಾಗ ಅದರ ಶಕ್ತಿಯು ವೀಲ್ ಟ್ರೈನಿನಿಂದ ಎಸ್ಕೇಪ್ ವೀಲಿಗೆ ಸೇರುತ್ತದೆ ವೆಸ್ಟ್ ಎಂಡ್ ಮೈನ್‌ಸ್ಪ್ರಿಂಗ್ ಬಹಳ ದೀರ್ಘಕಾಲ ಬಾಳಿಕೆಯುಳ್ಳದ್ದಾಗಿದೆ ಏಕೆಂದರೆ ಅದನ್ನು ಈ ಕೆಲಸದಲ್ಲಿ ದೀರ್ಘಕಾಲ ಅನುಭವವಿರುವವರು ಮಾಡಿರುತ್ತಾರೆ ಬಹುಕಾಲ ಬಾಳಿಕೆಬರುವಂಥಾ ವೆಸ್ಟ್ ಎಂಡ್ ನ ಚನ್ನೇ ಆರಿಸಿಕೊಳ್ಳಲಿಕ್ಕೆ ಟೆಲಿಕಾಗು ಉಚಿತ

ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬಾಯಿ ಮತ್ತು ಕಲ್ಕತ್ತ.



WEST END WATCH CO.
BOMBAY · CALCUTTA

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ. ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD. 1906.

ಸಿನೆಮಾ ಪುಟ

ಜ್ಯೋತಿಪ್ರಕಾಶನು ಮುಸ್ಲಿಮ್ ಮತಕ್ಕೆ?

ಆಲ್ ಇಂಡಿಯಾ ರೇಡಿಯೋದ ಕಲ್ಕತ್ತ ಸ್ಟೇಶನ್ ಡೈರೆಕ್ಟರ್ (ಹಿಂದೆ ಮದ್ರಾಸ್ ಸ್ಟೇಶನ್ ಡೈರೆಕ್ಟರನಾಗಿದ್ದ) ವಿಕ್ಟರ್ ಪರಂಜೋತಿಯವರು ಇಸ್ಲಾಂ ಧರ್ಮವನ್ನು ಅಂಗೀಕರಿಸಿದರೆಂಬ ಸುದ್ದಿ ಸ್ವಲ್ಪ ಕಾಲಕ್ಕೆ ಹಿಂದೆ ಪ್ರಕಟವಾಗಿತ್ತು.

ಈಗ ಸಿನಮಾ ನಟ, ಜ್ಯೋತಿ ಪ್ರಕಾಶನು ಇಸ್ಲಾಂ ಧರ್ಮವನ್ನಂಗೀಕರಿಸಿದ ಸುದ್ದಿ ಬಂದಿದೆ. ಕಳೆದ ವರ್ಷ ಜ್ಯೋತಿ ಪ್ರಕಾಶನು, ಮೊದಲನೆಯ ಹೆಂಡತಿ ಮತ್ತು ಅದರಲ್ಲಿ ಒಬ್ಬ ಮಗನು ಇರುತ್ತಾ ದ್ವಿತೀಯ ವಿವಾಹವೊಂದನ್ನು ಮಾಡಿಕೊಂಡಿದ್ದನೆಂದು 'ದೀಪಾಲಿ' ಬರೆದಿತ್ತು. ಈಗ ಆತನು ಮುಸ್ಲಿಂ ಧರ್ಮಕ್ಕೆ ಸೇರಿ ಮೂರನೆ ಮದುವೆ ಮಾಡಿಕೊಂಡ ಸುದ್ದಿಯಿಲ್ಲದಿದ್ದರೂ, ಜ್ಯೋತಿ ಪ್ರಕಾಶ ಭಟ್ಟಾಚಾರ್ಯನೆಂಬ ತನ್ನ ಹೆಸರನ್ನು ಯುಸಫ್ ಖಾನನೆಂದೂ, ಶೀಲಾ ಹಲ್ದಾರ್ ಎಂಬ ತನ್ನ ಪತ್ನಿಯ ಹೆಸರನ್ನು ಸಾಕಿನಾ ಬೀಬಿಯೆಂದೂ ಬದಲಾಯಿಸಿರುವನಾಗಿ 'ಸ್ಟಾರ್ ಓಫ್ ಇಂಡಿಯಾ' ಬರೆಯುತ್ತದೆ.

ಕಾನನ್‌ದೇವಿ

ಬೊಂಬೇ ಟಾಕೀಸ್‌ನವರು ಕಾನನ್ ದೇವಿಯನ್ನು ತಮ್ಮ ಕಂಪನಿಗೆ ಸೇರಿಸಿಕೊಳ್ಳುವ ಹಂಚಿಕೆಯಲ್ಲಿದ್ದಾರೆ. ಆದರೆ ಇದುವರೆಗೆ ಕಾನನಳು 'ಆಗುವುದಿಲ್ಲ' ಎಂದೇ ಉತ್ತರವಿತ್ತಿರುವಳಂತೆ! ನಿರ್ದೇಶಕ ಬರುವರು ತಯಾರಿಸುವ 'ನೆಶ್ ಉತ್ತರ್' ಎಂಬ ಚಿತ್ರದಲ್ಲಿ ಕಾನನ್‌ದೇವಿ ಅಭಿನಯಿಸುವಳು. ಬರುವಾರು ನಾಯಕ ಪಾತ್ರವಹಿಸುವರಂತೆ!

ಒಂದು ಚಿತ್ರದ ನಟನೆಗೆ ೭೮,೦೦೦ ರೂ. ವೇತನ

ಸಿಕ್ರೋ ಕಂಪನಿಯ 'ಅಪ್ನಾಘರ್' ಚಿತ್ರದಲ್ಲಿ ನಟಿಸಿದ ಬಗ್ಗೆ ಶಾಂತಾಆಪ್ಟೆಗೆ ೭೮,೦೦೦ ರೂಪಾಯಿ ವೇತನವೂ, ನಿರ್ದೇಶಕ ದೇವಕೀ ಬೋಸರಿಗೆ ೪೩,೦೦೦ ರೂ. ಸಂಬಳವೂ ಕೊಡಲಾಗಿದೆಯೆಂದು ತಿಳಿದಿದೆ. ಈ ಚಿತ್ರವನ್ನು ಜೋದಪುರದಲ್ಲಿ ಪ್ರದರ್ಶಿಸಬಾರದಾಗಿ ಅಧಿಕಾರಿಗಳು ನಿರ್ಬಂಧಾಜ್ಞೆ ಹೊರಡಿಸಿರುವರೆಂದು ಪ್ರಕಟವಾದ ಸುದ್ದಿ ನಿರಾಧಾರವಾದುದೆಂದು ತಿಳಿಯುತ್ತದೆ.

ಮುಮ್‌ತಾಜ್‌ಶಾಂತಿ

ಬೊಂಬೇ ಟಾಕೀಸಿನ ಈಚೆಯ ಚಿತ್ರ 'ಬಸಂತ'ದಲ್ಲಿ ಪಾತ್ರವಹಿಸಿದ ಮುಮ್ತಾಜ್ ಶಾಂತಿಯ ಹೆಸರು ಇಷ್ಟರಲ್ಲಿಯೇ ಅಖಿಲ ಭಾರತ ಖ್ಯಾತಿ ಪಡೆದಿದೆ. ಈಕೆ ಪಂಜಾಬೀ ಚಿತ್ರ 'ಮಾಂಗ್ತಿ'ಯೆಂಬುದರಲ್ಲಿ ಹಿಂದೆ ನಟಿಸಿದ್ದಾಳೆ. ಅದು ಈಗ ಲಾಹೋರಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದು ಅಲ್ಲಿ ಅದರ ಪ್ರದರ್ಶನದ ರಜತೋತ್ಸವ ನಡೆಯಿತು. ಈ ಚಿತ್ರವನ್ನು ನಿರ್ದೇಶಿಸಿದ ರೂಪ ಕೆ. ಶೋರಿಯವರು ನಿಶಾನಿ ಎಂಬ ಹೊಸ ಚಿತ್ರವೊಂದನ್ನು ತಯಾರಿಸುವರು. ಇದರಲ್ಲಿ ಪಂಜಾಬಿನ ಪ್ರಸಿದ್ಧ ನಟಿ ರಾಗಿಣಿಯು ಅಭಿನಯಿಸುವಳೆಂದು ಸುದ್ದಿ.

ನ್ಯೂಥಿಯೇಟರ್ಸ್

ಇದರ ಸ್ಟುಡಿಯೋಕ್ಕೆ ಕಳೆದ ವಾರ ಚೀನಾ ಸರಕಾರದ ಪ್ರತಿನಿಧಿ ಲೋ ಎಂಬವರು ಭೇಟಿಯಿತ್ತರು. ನಿರ್ದೇಶಕ ಅಥೋರ್ತಿಯವರು 'ದಿಕ್‌ಶೂಲ್' ಚಿತ್ರದ ಒಂದು ಪ್ರದರ್ಶನವನ್ನು ಅವರಿಗೆ ತೋರಿಸಿದರು. ಭಾರತೀಯ ಸಂಗೀತವನ್ನು ಕೇಳಿ ಲೋರವರು ಮನಮೆಚ್ಚಿದರು. ನ್ಯೂಥಿಯೇಟರ್ಸಿನ ಕೆಲವು ನಟನಟಿಯರ ಭಾವಚಿತ್ರಗಳನ್ನು ನೆನಪಿಗಾಗಿ ಕೊಂಡೊಯ್ದಿರುವರು. ನ್ಯೂಥಿಯೇಟರ್ಸಿನವರು ಬಂಗಾಳದ ಪ್ರಸಿದ್ಧ ಕಾದಂಬರಿಕಾರರಾದ ಶರಚ್ಚಂದ್ರ ಚಟರ್ಜಿಯವರ 'ಕಾಶಿನಾಥ' ಕಥೆಯ ದ್ವಿಭಾಷಾ ಚಿತ್ರವನ್ನು ತಯಾರಿಸುವುದಾಗಿ ನಿಶ್ಚಯಿಸಿದ್ದು ನಿತಿನ್ ಬೋಸರು ಆ ಚಿತ್ರವನ್ನು ನಿರ್ದೇಶಿಸುವರು. ಸುನಂದಾದೇವಿ ಮತ್ತು ಅಶಿತ್ ಭರನ್ ಇವರು ಅದರಲ್ಲಿ ನಾಯಿಕಾನಾಯಕರಾಗುವರು.

ನಟಿಯರ ವಿವಾಹಗಳು

ಪಂಜಾಬಿನ ಪ್ರಸಿದ್ಧ ನಟಿ ಬೇಬಿ ನೂರ್ ಜಹಾನಳು ಹೊಥಿ ರಾಜಕುಮಾರ ಅಮೀನ್ ಹಸನನನ್ನು ವಿವಾಹವಾದಳೆಂತು ತಿಳಿದುಬರುತ್ತದೆ. ಬಂಗಾಳದ ತಾರೆ ಲೀಲಾದೇವಿಯು ವಿಮಾನ ಸಂಚಾಲಕಾಧಿಕಾರಿ ದಲೀಪ ಸರ್ದಾರರೆಂಬವರೊಡನೆ ವಿವಾಹವಾದಳೆಂದೂ ಸುದ್ದಿ.

'ಜೂಲಾ' ೩೪ ವಾರ ದಾಟಿತು!

ಬೊಂಬೇ ಟಾಕೀಸಿನ ಜೂಲಾ ಚಿತ್ರವು ಮುಂಬಯಿಯಲ್ಲಿ ೩೪ ವಾರಗಳನ್ನು ದಾಟಿ ಪ್ರದರ್ಶಿತವಾಗುತ್ತಿದೆ. ಇದು ಕಡಿಮೆಪಕ್ಷ ೫೦ ವಾರಗಳ ವರೆಗೆ ಪ್ರದರ್ಶಿತವಾಗುವುದೆಂದು ಅಂದಾಜು ಮಾಡಲಾಗಿದೆ. ಬೊಂಬೇ ಟಾಕೀಸಿನ ಪ್ರಸಿದ್ಧ ಬಂಧನ್ ಚಿತ್ರವು ಮುಂಬಯಿಯಲ್ಲಿ ಕೇವಲ ೩೩ ವಾರ ಮಾತ್ರ ಪ್ರದರ್ಶಿತವಾಗಿತ್ತು. ಇದು ಎಲ್ಲವುಗಳಿಗಿಂತಲೂ ಮಿಕ್ಕಿ ಜನಪ್ರಿಯವಾಗಿದೆ.

'ಅರ್‌ಮನ್' ಹಿಂತೆಗೆದರು!

ಬೊಂಬಯಿಯ ಗಲಾಟೆಯಿಂದಾಗಿ ರಣಜಿತ್‌ನವರು ತಮ್ಮ 'ಅರ್‌ಮನ್' ಚಿತ್ರದ ತಯಾರಿಯನ್ನು ಹಿಂತೆಗೆದು ಅದರ ಬದಲು 'ಪರ್ದೇಶಿ' ಚಿತ್ರವನ್ನು ಪುನಃ ಪ್ರದರ್ಶಿಸುತ್ತಾರೆ.

ಲೀಲಾ ದೇಸಾಯಿ

ಇವಳು 'ಸತಿ ಬಾಹುಲಾ' ಎಂಬ ಚಿತ್ರದಲ್ಲಿ ಅಭಿನಯಿಸುವಳು.

ಪುಸ್ತಕಾವಲೋಕನ

ಭರಮಪ್ಪನ ಭೂತ

ಇದೊಂದು 'ರಹಸ್ಯಾತ್ಮಕ ರಮ್ಯ ಕಾದಂಬರಿ'. ಇದನ್ನು ಬರೆದವರು: ಶ್ರೀರಂಗರು. ಕ್ರೌನ್ ೧/೮ ಆಕಾರದ ೧೧೮+೨ ಪುಟಗಳಿವೆ. ಇದರ ಬೆಲೆ ೧೪ ಆಣೆ. ಮನೋಹರ ಗ್ರಂಥಮಾಲೆಯ ೩೩ನೆಯ ಕುಸುಮವಿದು. ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು ಇದರ ಪ್ರಕಾಶಕರು.

ಈ ಗ್ರಂಥವು ಇಂಗ್ಲ ಭಾಷೆಯಲ್ಲಿರುವ ರಹಸ್ಯಾತ್ಮಕ ಡಿಟೆಕ್ಟಿವ್ ಕತೆಗಳ ಮಾದರಿಯದು. ಕನ್ನಡದಲ್ಲಿ ಇದೊಂದು ನೂತನ ಪ್ರಯೋಗ. ವಿಚಾರ ಶಕ್ತಿಯ ಬೆಳವಣಿಗೆಗೆ ಇಂಥಾ ಪ್ರಯೋಗಗಳು ಆಸ್ಪದಕೊಡುತ್ತವೆ. ಒಟ್ಟಿನಲ್ಲಿ ಇದರಶೈಲಿ ಮೊದಲಿಂದ ಕೊನೆಯ ವರೆಗೆ ವಿಡಂಬನಾತ್ಮಕವಾಗಿ ರಮ್ಯವಾಗಿದೆ. ವಿಡಂಬನಾತ್ಮಕ ಸಾಹಿತ್ಯದಲ್ಲಿ ಹೆಸರಾಂತ ಶ್ರೀರಂಗರು ಈ ಗ್ರಂಥದಲ್ಲಿ ಓದುಗರನ್ನು ಮೊದಲಿಂದ ಕೊನೆವರೆಗೆ ಕುತೂಹಲದಿಂದ ಕರೆದೊಯ್ಯುತ್ತಾರೆ.

ಧಾಗಳ್ಳಿಯ ಒಂದು ಮನೆಯಲ್ಲಿ ಒಂದು ವಿಚಿತ್ರ ಸನ್ನಿವೇಶದಲ್ಲಿ ಧನವಂತ ಭವಾನಿ ಮತ್ತು ಧನಹೀನ ಭರಮಪ್ಪ ಇವರು ವಿಚಿತ್ರವಾಗಿ ಕೂಡಿದರು. ಆ ಮನೆಯಲ್ಲಿ ಇಂದುಮತಿಯೆಂಬ ವಿದ್ಯಾವತಿಯಾದ ತರುಣಿಯೊಡಗೂಡಿ ಭವಾನಿ, ಮೋಹನ, ಅನಂತ, ಬೋಧಿ ಎಂಬೀ ತರುಣ ಮಂಡಲಿ ಬಿಡಾರ ಮಾಡಿತು! ಬಿಡಾರ ಮಾಡಿದ ಎರಡೇ ದಿನಗಳಲ್ಲಿ ಭವಾನಿಯ ಜೀವವೂ ಹೋಯಿತು. ಪೋಲೀಸ್ ವಿಚಾರಣೆಯು ನಡೆಯಿತು. ಭರಮಪ್ಪನನ್ನು ಅವರು ಬಂಧಿಸಿದರು; ಮತ್ತೆ ಬೇಗನೆ ಅವನನ್ನು ಬಿಟ್ಟುಬಿಟ್ಟರು. ಇಷ್ಟರಲ್ಲಿ ಆ ಮನೆಯಲ್ಲಿ ಉಳಿದ ತರುಣ ತರುಣಿಯರು ಕೊಲೆಯ ವಿಚಾರದಲ್ಲಿ ವಿಚಿತ್ರವಾದ ತರ್ಕ ಸರಣಿ ಹಿಡಿದು ವಿಚಾರ ಮಾಡುತ್ತಾರೆ. ಪ್ರತಿಯೊಬ್ಬರೂ, ಎಂದರೆ ಬೋಧಿ, ಅನಂತ, ಮೋಹನ, ಇಂದುಮತಿ ಇವರೆಲ್ಲರೂ ತಮ್ಮ ತಮ್ಮ ಹೇಳಿಕೆಗಳನ್ನು ಕೊಡುತ್ತಾರೆ. ಮೋಹನನು ತನ್ನ ಸೂಕ್ಷ್ಮ ವಿಚಾರಶಕ್ತಿಯಿಂದ ಬೋಧಿಯೇ ಅಪರಾಧಿಯೆಂದು ತಿಳಕೊಳ್ಳುತ್ತಾನೆ. 'ದೆವ್ವಿನ ಮನೆ'ಯೆಂದು ಆ ಮನೆಗೆ ಹೆಸರು ಹಾಕಿ ದೆವ್ವವು ಕೊಂದಿರಬೇಕೆಂದು ಕಲ್ಪಿಸಲು ಬೋಧಿಯು ತನ್ನ ಬುದ್ಧಿ ಮತ್ತೆಯಿಂದ ಸಾಧಿಸಿದ ಹಂಚಿಕೆಗಳನ್ನು ಮೋಹನನು ತನ್ನ ಸೂಕ್ಷ್ಮ ವಿಚಾರಶಕ್ತಿಯಿಂದ ಬಯಲಿಗೆಳೆಯುತ್ತಾನೆ. ಆಗ ಎಲ್ಲರಿಗೂ ಭವಾನಿಯ ಕೊಲೆ ಭೂತದಿಂದಾದುದಲ್ಲವೆಂದು ಖಚಿತವಾಗುತ್ತದೆ. ಕೊನೆಗೆ ಭರಮಪ್ಪನೇ ಹೇಳುತ್ತಾನೆ, 'ಐತೀರಿಬಿಡೀರ, ಈ ಮನಿ ಒಳಗ ಐತಿ ಭರಮಪ್ಪನ ಭೂತ" ಎಂದು. ಇಲ್ಲಿಗೆ ಪುಸ್ತಕ 'ಮುಗಿದುದು.'

ಇದು ಒಟ್ಟಿನಿಂದ ಒಂದು ಶಿಷ್ಟ ರೀತಿಯ ಲೇಖನ. ಇಂಗ್ಲ ಭಾಷೆಯಲ್ಲಿ ಈ ತರದ ಗ್ರಂಥಗಳನ್ನು ಪಠಿಸಿದವರಿಗೆ ಇದರ ಸ್ವಾರಸ್ಯ ಬೇಗನೇ ಹೊಳೆಯುವುದು. ಆದರೆ ಇದೇ ಮೊದಲಾಗಿ ಇದನ್ನು ಓದುವ ಕನ್ನಡಿಗರಿಗೆ ಒಂದು 'ರಹಸ್ಯಾತ್ಮಕ'ವಾಗಿಯೇ ತೋರಿತು ವಿನಾ ಅಷ್ಟೊಂದು 'ರಮ್ಯ'ವಾದೀತೆಂದು ನಾನೆಣಿಸುವುದಿಲ್ಲ. ಹೇಗಿದ್ದರೂ ಇದು ವಿಚಾರವಂತರಿಗೆ, ಸಾಹಿತ್ಯದಲ್ಲಿ ನೂತನಮಾರ್ಗ ನಿರ್ಮಾಪಕರಿಗೆ ತೋರಿಸಿಕೊಟ್ಟ ಹೊಸಹಾದಿ. ಈ ರೀತಿಯ ಗ್ರಂಥಗಳು ಕನ್ನಡದಲ್ಲಿ ಇನ್ನಷ್ಟು ಹುಟ್ಟಬೇಕಾಗಿವೆ. ಇಂಥಾ ಸಾಹಿತ್ಯವನ್ನೇ ಮೆಚ್ಚುವವರ ಒಂದು ಹೊಸ ಗುಂಪು ಆಗ ನಿರ್ಮಾಣವಾದರೂ ಆಗಬಹುದು. ಹಾಗಾಗಿ 'ಶ್ರೀರಂಗ'ರ ಈ ಕಾದಂಬರಿಗೆ ನಾವು ಹೃತ್ಪೂರ್ವಕ ಸ್ವಾಗತ ಬಯಸುತ್ತೇವೆ. ಕನ್ನಡಿಗರು ಈ ಹೊಸ ಗ್ರಂಥವನ್ನೋದಿ ವಿಮರ್ಶೆ ಮಾಡಬೇಕೆಂದೂ ವಿನಂತಿಸುತ್ತೇವೆ.

— ಕಯ್ಯಾರ

ನಾವು ಪ್ರೀತಿಸುತ್ತಿರುವ ಹೆಸರುಗಳು ಬದಲಾಯಿಸಲ್ಪಡುತ್ತಿವೆ

ಜಪಾನಿಯರು ಸಿಂಗಪೂರನ್ನು ಜಯಿಸಿದ ತಕ್ಷಣ, ಪ್ರಸಿದ್ಧವಾದ ಆ ನಗರಕ್ಕೆ, ಜಪಾನಿಯ ಹೆಸರನ್ನು ಕೊಟ್ಟರು. ಜಪಾನಿಯರು ನಮ್ಮ



ಪಟ್ಟಣಗಳನ್ನೂ ಪವಿತ್ರ ಜಾಗಗಳನ್ನೂ ಹಿಡಿಯುವುದರಲ್ಲಿ ಜಯಶೀಲರಾದರೆ ಇಲ್ಲಿಯೂ ಹಾಗೆಯೇ ಮಾಡುವರು. ಐತಿಹಾಸಿಕ ಮತ್ತು ಧರ್ಮ ಸಂಬಂಧಗಳಿಂದ ಕೂಡಿದ ಜಾಗಗಳನ್ನು ಅಪವಿತ್ರ ಮಾಡಿ—ತಮ್ಮ ಕಾನೂನಿನ ಪ್ರಕಾರ—ಜಪಾನಿಯ ಹೆಸರನ್ನಿಡುವರು. ಜಪಾನಿಯರು ಇಂಡಿಯಾ ದೇಶದವರ ಅಭಿಪ್ರಾಯಕ್ಕೆ ಲಕ್ಷ್ಯವಿಡುವುದಿಲ್ಲ. ಈ ಪ್ರಸಿದ್ಧ ದೇಶದ ನಾವು ಬದಲೀಟನ್ನು ಕೊಡದೆ ಹೀಗಾಗುವುದಕ್ಕೆ ಬಿಡುತ್ತೇವೆಯೋ? ಎಂದಿಗೂ ಇಲ್ಲ! ಈ ಕಿರಾತರನ್ನು ನಮ್ಮ ಸಂಯೋಜಿತ ಬಲದಿಂದ ಎದುರಿಸೋಣ.

ಜಪಾನಿಯರನ್ನು ಎದುರಿಸುವುದಕ್ಕೆ ರಾಷ್ಟ್ರೀಯ ಯುದ್ಧಮುಖವನ್ನು ರಚಿಸಿರಿ.

ವಿಜ್ಞಾನ - ವಿಚಿತ್ರ

ಸುಂದರಿ ಮತ್ತು ಸಿಗರೇಟ್

ಬರಿಗನ್‌ನಲ್ಲಿರುವ ಒಂದು ಏಡಿಯುವ ಕೊಳಕ್ಕೆ ಇಳಿದರೆ, ಸಿಗರೇಟು ಎಳೆಯುವವನು, ಅಲ್ಲಿ ನಿಲ್ಲಿಸಿದ ಸುಂದರಿಯರ ಮೇಲೆ ಸಿಗರೇಟು ಅಡಿಸಿ ಸಿಗರೇಟು ಸೇದಬಹುದು! ಎಂದರೆ ಆ ಮೂಯುವ ಕೊಳದ ಬಳಿ, ಮರದಿಂದ ಮಾಡಿದ, ಜೀವಂತ ನಗ್ನ ಸುಂದರಿಯರಂತಿರುವ ಮರದ ಪ್ರತಿಮೆಗಳನ್ನಿಟ್ಟಿರುತ್ತಾರೆ. ಆ ಪ್ರತಿಮೆಗಳ ತುಟಿಯಲ್ಲಿರುವ ವಿದ್ಯುಚ್ಛಕ್ತಿಯಲ್ಲಿ ಬೆಂಕಿ ಹುಟ್ಟುತ್ತದೆ. ಆ ತುಟಿಯ ಬೆಂಕಿಗೆ ಸಿಗರೇಟು ತಾಗಿಸಿ ,ಅದನ್ನು ಸೇದುವುದು ಅಲ್ಲಿನ ಸೌಂದರ್ಯ ಕಲಾರಾಧಕರ ಒಂದು ಚಟವಾಗಿದೆ!

ಪ್ರಣಯಿಗಳ ಬೀದಿ

ನ್ಯೂಯಾರ್ಕಿನ ಗ್ರೀಕ್ ಪೀಲ್ಡ್ ಪಾರ್ಕಿನಲ್ಲಿ ಒಂದು 'ಪ್ರಣಯಿಗಳ ಬೀದಿ' ಯಿದೆ. ಅದರಲ್ಲಿಟ್ಟಿರುವ ಬೆಂಚುಗಳಲ್ಲಿ ಕುಳಿತುಕೊಂಡರೆ ಆ ಬೆಂಚುಗಳು ಕೆಂಪಗಾಗುತ್ತವೆ. ಅವುಗಳಿಂದ ಎದ್ದ ಕೂಡಲೇ ಹಸುರಾಗುತ್ತವೆ!

ಉಗುರು ತೆಗೆವುದರಿಂದ ಮರಣ

ಉಗುರು ಬೆಳೆಯುವುದನ್ನು ಆಗಾಗ ಕತ್ತರಿಸುವುದುಂಟಷ್ಟೆ? ಇದರಿಂದ ಸಾಮಾನ್ಯವಾಗಿ ಅಪಾಯವೇನೂ ಆಗುವುದಿಲ್ಲ. ಆದರೆ ಲಂಡನಿನ ಶೋರೆಡಿಟ್ ಎಂಬಲ್ಲಿನ ಹದಿನಾಲ್ಕು ವರ್ಷ ಪ್ರಾಯದ ಒಬ್ಬ ಹುಡುಗಿಯು ಉಗುರು ತೆಗೆದುದರಿಂದ ಸತ್ತುಹೋದಳೆಂಬ ಸುದ್ದಿಯೊಂದು ಬಂದಿರುವುದು. ಗೇ ಆಸ್ಪತ್ರೆಯ ಡಾ। ಸೆಡ್ರಿಕ್ ಕೀತ್ ಎಂಬವರು ಇದನ್ನು ಪರೀಕ್ಷಿಸಿ ಉಗುರುಗಳನ್ನು ಬಹಳ ಆಳದವರೆಗೆ ತೆಗೆಯುವುದರಿಂದ ಅಪಾಯವುಂಟೆಂದು ಅಭಿಪ್ರಾಯಪಟ್ಟಿದ್ದಾರೆ.

ಟೋರ್ಪೆಡೊ

೨೨ ಪೀಟು ಉದ್ದದ, ೨೧ ಇಂಚು ಅಗಲದ ಟೋರ್ಪೆಡೊವೊಂದನ್ನು ಈಗ ತಯಾರಿಸಿದ್ದಾರೆ. ಇದು ಗಂಟೆಗೆ ೫೦ ಮೈಲುಗಳ ವೇಗವುಳ್ಳದ್ದಾಗಿದೆ. ಇದರಲ್ಲಿ ೬,೦೦೦ ಭಾಗಗಳು ಅಡಗಿರುತ್ತವೆ. ಇದರ ಎಲ್ಲಾ ಭಾಗಗಳು ಸಣ್ಣದಾಗಿ ರಿಸ್ಟ್‌ವಾಚಿನ ಒಳಗಿನ ಭಾಗಗಳಂತೆ ಇವೆ. ಇದಕ್ಕೆ ಪ್ರತಿಯೊಂದು ಟೋರ್ಪೆಡೋಗೆ ೨,೦೦೦ ಪವನು ಬೆಲೆಯಿದೆ. ಟೋರ್ಪೆಡೋಗಳು ಸಮುದ್ರದಲ್ಲಿ ಅಲ್ಲಲ್ಲಿ ಬಿಕ್ಕಟ್ಟು, ಹಡಗಗಳು ಸಂಚರಿಸುತ್ತಿರುವಾಗ ಅಯಸ್ಕಾಂತದಿಂದ ಆಕರ್ಷಿತವಾಗಿ, ಸಂಚರಿಸುವ ಹಡಗಗಳಿಗೆ ಡಿಕ್ಕಿ ಹೊಡೆದು ಇಂದಿನ ಯುದ್ಧದಲ್ಲಿ ಅವುಗಳು ಮಾಡಿದಷ್ಟು ಹಾನಿ ಬೇರಾವುದೂ ಮಾಡಿಲ್ಲ!

ಕ್ರಿಪ್ಸ್ ಸಂತಾನ

ಕ್ರಿಪ್ಸರ ಮಗ ಮತ್ತು ಮೂರು ಹೆಣ್ಣು ಹುಡುಗಿಯರು, ಕ್ರಿಪ್ಸರ ಅಕ್ಕ ಮಿಸೆಸ್ ಎವಿ. ಸ್ಟೀನ್ ಬೇಂಕ್ (ಲೇಡಿ ಕ್ರಿಪ್ಸರ ತಾಯಿ) ಇವಳಿಂದ ಸ್ಥಾಪಿತವಾದ ಒಂದು ನಿಧಿಯಿಂದ ಪ್ರತಿಯೊಬ್ಬರೂ ವರ್ಷ ವರ್ಷವೂ ೧೦,೦೦೦ ಪವನುಗಳಷ್ಟು ಹಣ ಪಡೆಯುತ್ತಾರೆ. ಆಕೆ ಬಹಳ ಸಂಪತ್ತನ್ನು ತನ್ನ ಮಕ್ಕಳ ಹೆಸರಲ್ಲಿ ಇಟ್ಟಿದ್ದಳು. ಆಕೆಗೆ ಕ್ರಿಪ್ಸರ ಪತ್ನಿ ಇಸೊಬೆಲ್ ಕ್ರಿಪ್ಸ್ ಅಲ್ಲದೆ ಇನ್ನೆರಡು ಮಕ್ಕಳೂ ಇದ್ದಾರೆ.

ಗಂಡುಸರಿಗೆ ಮಾತ್ರ

ಮದ್ರಾಸ್ ಕ್ಲಬ್ ಗಂಡುಸರಿಗೆ ಮಾತ್ರ. ಹೆಂಗುಸರು ಬೇರೆ ಕ್ಲಬ್ಬಿಗೆ ಹೋಗಬೇಕು. ಅದರ ಕತೆ ಹೀಗಿದೆ. ಮೊದಲು ಅಲ್ಲಿ ಕ್ಲಬ್ ತೆರೆದಾಗ ಅವರು ಒಬ್ಬ ಸ್ಕೋಚ್ ಹೆಂಗುಸನ್ನು ಅದರ ಏರ್ಪಾಡಿಗಾಗಿ ಕರೆದಿದ್ದರು. ಆಕೆ ಕೊನೆಯ ಕಾಲದಲ್ಲಿ ಹೇಗೆಂದಳು "ನಿಮಗೆ ಇಷ್ಟವಿದ್ದರೆ ಇದೊಂದನ್ನು ಮಾಡಬೇಕು; ನಿಮ್ಮಿಂದಾಗಿ ನಾನು ಬೇಸರಗೊಂಡಿದ್ದೇನೆ" ಹೀಗೆ ಆಕೆ ಹೇಳಿದ್ದರಿಂದ ಮುಂದೆ ಯಾವ ಹೆಂಗುಸಿಗೂ ಬೇಸರ ಮಾಡಬಾರದೆಂದು ಮದ್ರಾಸ್ ಕ್ಲಬ್ ಗಂಡುಸರಿಗೆ ಮಾತ್ರ ಆಗಿದೆ ಎಂದು ಡಾ। ಗಿಲ್ಬರ್ಟ್ ಸ್ಲೇಟರ್ ಎಂಬವರು ಹೇಳುತ್ತಾರೆ.

ಪಂಡರಾಪುರದಿಂದ ಕಾಶಿಗೆ 300 ಜನ ಭಕ್ತರ ಪ್ರಯಾಣ

ಮಹಾರಾಷ್ಟ್ರದ ಸಂತ ಶ್ರೀ. ಗಾಡ್ಗೇ ಮಹಾರಾಜರ ಶಿಷ್ಯ ಶ್ರೀ. ಥಾನ್‌ಪುರ್ ಮಹಾರಾಜರು 300 ಮಂದಿಯೊಂದೊಡಗೂಡಿ 1941 ಅಕ್ಟೋಬರ 31ಕ್ಕೆ ಪಂಡರಾಪುರದಿಂದ ಹೊರಟವರು ಕಾಲ್ನಡಿಗೆಯಿಂದಲೇ ಬಂದು ಈಗ ಕಾಶಿಗೆ ತಲಪಿದ್ದಾರೆ. ಹೊರಡುವಾಗ ಪಂಡರಾಪುರದ ಚಂದ್ರಪ್ರಭಾ ನದಿಯಿಂದ ಅಪಾರು ಎರಡು ಕೊಡ ನೀರು ತೆಕ್ಕೊಂಡು ಹೋಗಿದ್ದವರು ಪೂನಾ, ನಾಸಿಕ, ಇಂದೋರ್, ಉಜ್ಜಯಿನಿ, ಗ್ವಾಲಿಯರ್, ಡಿಲ್ಲಿ ಮೊದಲಾದವುಗಳನ್ನು ಸಂಚರಿಸಿ ಹರಿದ್ವಾರಕ್ಕೆ ಬಂದರು. ಅವರು ಅಲ್ಲಿ ಬದ್ರಿನಾರಾಯಣ ಮೂರ್ತಿಯುಳ್ಳ ಪವಿತ್ರ ಜಲದಲ್ಲಿ ಸ್ನಾನಮಾಡಿ ಅಲ್ಲಿನ ತೀರ್ಥದಿಂದ ಪುನಃ ಕೊಡಕ್ಕೆ ನೀರು ತುಂಬಿಸಿಕೊಂಡು, ಅಯೋಧ್ಯೆ, ಲಕ್ನೋ, ಅಲ್ಲಾಬಾದ್ ದಾರಿಯಾಗಿ ಕಾಶಿಗೆ 1942ನೇ ಜುಲೈ 24 ರಂದು ತಲಪಿರುವರು. ಅಲ್ಲಿ ಕಾಶಿಯ ವಿಶ್ವನಾಥ ದರ್ಶನಕ್ಕೆ ಹೋಗುವ ಅವರನ್ನು ನೋಡಲು ಜನರು ಕಿಕ್ಕಿರಿದು ನೆರೆದಿದ್ದರು. ಪೂಜ್ಯ ಪಂಡಿತ ಮದನಮೋಹನ ಮಾಲವೀಯರು ಅವರಿಗೆ ಕಾಶಿ ಹಿಂದು ವಿಶ್ವ ವಿದ್ಯಾಲಯಕ್ಕೆ ಬರುವಂತೆ ಆಮಂತ್ರಣವಿತ್ತರು. ಪಂಡಿತಜಿಯವರಿಗೆ ಅನಾರೋಗ್ಯವಿತ್ತಾದರೂ ಅವರು ಸ್ವತಃ ಬಂದಿದ್ದರು. ಥಾನ್‌ಪುರ ಮಹಾರಾಜರ ಧಾರ್ಮಿಕ ಬುದ್ಧಿಯನ್ನು ಪಂಡಿತಜಿಯವರು ಕೊಂಡಾಡಿದರು. ಶ್ರೀ ಗಾಡ್ಗೆ ಮಹಾರಾಜರು ಆ ಸಮಯದಲ್ಲಿ ಪಂಡಿತಜಿಯವರ ಅಪೇಕ್ಷೆಯಂತೆ ಒಂದು ಕೀರ್ತನೆ ನೆರವೇರಿಸಿದರು.

ತಪ್ಪನ್ನು ತಿದ್ದಿಕೊಡಲು ಠಾಗೂರರ ಕವಿತೆ

ಈಗ ಠಾಗೂರರು ಕವಿತಾ ಸಾರ್ವಭೌಮರಾಗಿ ಪ್ರಖ್ಯಾತರಷ್ಟೆ? ಆದರೆ ಅವರ ಆರಂಭ ದಿನಗಳಲ್ಲಿ ಪ್ರಾಚೀನ ಪಂಡಿತರಿಂದ ಅವರು ಬಹಳ ಮಟ್ಟಿಗೆ ವಿರೋಧಿಸಲ್ಪಟ್ಟಿದ್ದರಂತೆ. ಪರೀಕ್ಷೆಗಳಲ್ಲಿ ತಪ್ಪು ಕವಿತೆಗಳನ್ನು ತಿದ್ದಲು ಠಾಗೂರರ ಕವಿತೆಗಳನ್ನು ಪರೀಕ್ಷಕರು ಕೊಡುತ್ತಿದ್ದರಂತೆ! ಪ್ರಾಚೀನ ಅರ್ವಾಚೀನವಾದವು ಎಲ್ಲೆಲ್ಲಿಯೂ ಇದೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಅಜೀರ್ಣವನ್ನು ನಿವಾರಿಸಲು ನಾನೇನು ಮಾಡಬಲ್ಲೆ?

ಜೀರ್ಣದ ತೊಂದರೆಯಿದ್ದರೆ ದೇಹದೊಳ ಭಾಗವನ್ನು ನಿರ್ಮಲಗೊಳಿಸುವುದರಿಂದ ಪರಿಹಾರವಾಗುವುದು

ಪ್ರತಿದಿನವೂ ಒಂದು ಗ್ಲಾಸು ಎಂಡ್ರೂಸ್ ಲಿವರ್ ಸಾಲ್ಟನ್ನು ತೆಕ್ಕೊಂಡು, ಆರೋಗ್ಯ ಚೆನ್ನಾಗಿಡಿರಿ; ಶಕ್ತಿವಂತರಾಗಿ, ಆಹಾರವನ್ನು ಸುಖವಾಗಿ ಉಪಯೋಗಿಸಿರಿ, ಅಜೀರ್ಣವನ್ನು ಕಳೆಯಿರಿ, ತಲೆತಿರುಗುವುದನ್ನು ನೀಗಲಾಡಿಸಿರಿ, ಅಥವಾ ಹೊಟ್ಟೆಯನ್ನು ನಿರ್ಮಲಗೊಳಿಸಿ ವಿಷವಸ್ತುಗಳಿಡದಂತೆ ಸರಿಗೊಳಿಸುವುದು; ಹೊಟ್ಟೆಯಲ್ಲಿ ವಿಷಕಾರಕ ದ್ರವ್ಯಗಳಿದುವುದರಿಂದಲೇ ಅಜೀರ್ಣವುಂಟಾಗುತ್ತದೆ. ಅದು ಕಾಲಿಜವನ್ನು ಸರಿಗೊಳಿಸಿ ಆರೋಗ್ಯವನ್ನುಂಟುಮಾಡುವುದು. ಅದು ಮಲಕೋಶವನ್ನು ಸರಿಯಾಗ್ಗಿಡುವುದು. ಹೊಟ್ಟೆಯನ್ನು ಹಾಳುಮಾಡುವ ವಿಷ ಪದಾರ್ಥಗಳನ್ನು ಹೊರಹಾಕುವುದು. ಎಂಡ್ರೂಸ್, ಹೀಗೆ ಸಂಪೂರ್ಣ ದೇಹದೊಳಭಾಗವನ್ನು ಶುಚಿಗೊಳಿಸುವುದು.

ANDREWS LIVER SALT

"ಬಡವರಬಂಧು"

The Friend of the Poor

DAILY

MANGALORE.

The above English Daily News-paper will be out shortly with authorised telegraphic news!

WATCH DATE!

Price 3 pies each Monthly 8 annas!

Publishers:

The Badavara Bandhu Printing Press, Limited

Bolur, MANGALORE.

ಇಪ್ಪತ್ತೊಂದು ದಿನ ಯಾವ ಭಾವದಲ್ಲಿದ್ದರೆ ದೇಹ ಬಿದ್ದು ಹೋಗುವುದೊ ಆ ಭಾವದಲ್ಲಿ ಶ್ರೀ ಪರಮಹಂಸರು ಆರು ತಿಂಗಳು ಇದ್ದರು

ನಿರಂತರವೂ ಈ ನಿರ್ವಿಕಲ್ಪ ಅವಸ್ಥೆಯಲ್ಲಿ ಶ್ರೀ ಪರಮಹಂಸರು ಆರು ತಿಂಗಳ ತನಕ ಇದ್ದರು 'ಯಾವ ಅವಸ್ಥೆಯಲ್ಲಿ ಸಾಧಾರಣ ಮನುಷ್ಯರು ತಲ್ಪಿದರೆ ಇನ್ನು ಮರಳಿ ಬರುವುದಿಲ್ಲವೊ ಇಪ್ಪತ್ತೊಂದು ದಿನ ಮಾತ್ರ ಶರೀರವಿದ್ದು ಶುಷ್ಕ ಎಲೆಯು ಮರದಿಂದ ಹೇಗೆ ಉದಿರಿ ಬೀಳುತ್ತದೆಯೋ ಹಾಗೆಯೇ ಅದು ಪತನವಾಗುತ್ತದೆ ಅಂತಹ ಅವಸ್ಥೆಯಲ್ಲಿ ಆರು ತಿಂಗಳು ಇದ್ದೆನ್ನು! ಹೇಗೆ ರಾತ್ರಿ ದಿನ ಕಳೆಯಿತೆಂಬದಾಗಿ ಗೊತ್ತೇ ಇರಲಿಲ್ಲ! ಸತ್ತ ಹೆಣದ ಬಾಯಿ ಮೂಗಿನಲ್ಲಿ ಹೇಗೆ ನೊಣಗಳು ಪ್ರವೇಶಿಸುತ್ತವೆಯೋ ಹಾಗೆಯೇ ಪ್ರವೇಶಿಸುತ್ತಿದ್ದುವು, ಆದರೆ ನನಗೆ ಅದರ ಜ್ಞಾನವೇ ಇರಲಿಲ್ಲ ಕೂದಲು ಧೂಳು ಒಟ್ಟಾಗಿ ಜಟೆಯಾಗಿತ್ತು ಮೈಮರೆತು ಶೌಚಾದಿ ಆದರೆ, ಅದರ ಗೊಡವೆಯೇ ಇರುತ್ತಿದ್ದಿಲ್ಲ! ಈ ಅವಸ್ಥೆಯಲ್ಲಿ ದೇಹವಿರುತ್ತಿತ್ತೆ? ಇ ವಾಗಲೇ ಪತನಹೊಗುತ್ತಿತ್ತು ಆದರೆ ಆ ಸಮಯದಲ್ಲೇ ಒಬ್ಬ ಸಾಧು ಪುರುಷನು ಬಂದಿದ್ದನು ಆತನ ಕೈಯಲ್ಲಿ ರೂಲು ಕಟ್ಟಿಗೆಯಂತೆ, ಒಂದು ದೊಣ್ಣೆ ಇತ್ತು ನನ್ನ ಅವಸ್ಥೆಯನ್ನು ನೋಡಿಯೇ ಆತನಿಗೆ ತಿಳಿದಿತ್ತು ಏನಂದರೆ ಈ ದೇಹದಿಂದ ಶ್ರೀ ಜಗನ್ಮಾತೆಯ ಕೆಲಸವು ಇನ್ನೂ ಅನೇಕವಿದೆ ಇದನ್ನು ಜೋಕೆಯಿಂದಿಟ್ಟರೆ ಬಹುಜನರಿಗೆ ಉಪಕಾರವಾಗುವುದು' ಆದ್ದರಿಂದಲೇ ಊಟದ ಹೊತ್ತು ತಿಂಡಿಯನ್ನು ತಂದು ಹೊಡೆದು ಹೊಡೆದು ಪ್ರಜ್ಞೆ ಬರುವಂತೆ ಪ್ರಯತ್ನಿಸುತ್ತಿದ್ದನು ಪ್ರಜ್ಞೆ ಬಂತೆಂದು ತಿಳಿದ ಕೂಡಲೇ ತಿಂಡಿಯನ್ನು ಬಾಯಲ್ಲಿ ನುಗ್ಗಿಸುತ್ತಿದ್ದನು' ಈ ತೆರದಲ್ಲಿ ಒಂದೊಂದು ದಿನ ಸ್ವಲ್ಪ ಹೊಟ್ಟೆಯಲ್ಲಿ ಹೋಗುತ್ತಿತ್ತು ಒಂದೊಂದು ದಿನ ಹೋಗುತ್ತಿದ್ದಿಲ್ಲ ಹೀಗೆ ಆರು ತಿಂಗಳು ಕಳೆದಿತ್ತು' ಆ ಮೇಲೆ ಈ ಅವಸ್ಥೆಯಲ್ಲಿದ್ದು ಎಷ್ಟೋ ದಿನಗಳ ನಂತರ ಶ್ರೀ ಜಗಜ್ಜನನಿಯ

ರಾಮಕೃಷ್ಣ ಲೀಲಾ ಪ್ರಸಂಗ

ಶ್ರೀ ಪರಮಹಂಸರ ಭಾವಸಮಾಧಿ

ಆ ವಿಷಯವಾಗಿ ಹೇಳಿಕೆ

ಮೂಲ ಲೇಖಕರು. ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

ವಾಣಿಯು ಕೇಳಿ ಬಂತು ಭಾವಮುಖದಲ್ಲಿರುವ ಲೋಕಶಿಕ್ಷೆಗಾಗಿ ಭಾವಮುಖದಲ್ಲಿರು! ಎಂದು ಆದೇಶಿಸಿದಳು ಅನಂತರ ರೋಗ ಪ್ರಾಪ್ತವಾಯಿತು–ರಕ್ತಾತಿಸಾರವಾಯಿತು, ಹೊಟ್ಟೆಯಲ್ಲಿ ಹಿಂಡುವಂತೆ ತಡೆಯಲಾರದ ವೇದನೆ ಆ ವೇದನೆಯನ್ನು ಆರು ತಿಂಗಳು ಅನುಭವಿಸಿದ ನಂತರ ಮೆಲ್ಲಮೆಲ್ಲನೆ ದೇಹದ ಪ್ರಜ್ಞೆಯು ಬಂದಿತ್ತು ಅಲ್ಲವಾದರೆ ಮನಸ್ಸು ತನ್ನಷ್ಟಕ್ಕೆ ಎದ್ದು ನಿರ್ವಿಕಲ್ಪ ಅವಸ್ಥೆಗೆ ಹೋಗುತ್ತಿತ್ತು

ಶ್ರೀ ಪರಮಹಂಸರ ಸಮಾಧಿಯ ಸಂಬಂಧವಾಗಿ 'ಕೆಪ್ಟನ್' ಎಂಬವರ ಹೇಳಿಕೆ

ನಿಜವಾಗಿಯೂ ಶ್ರೀ ಪರಮಹಂಸರ ದೇಹತ್ಯಾಗದ ಹತ್ತು ಹನ್ನೆರಡು ವರ್ಷಗಳ ಮೊದಲು ಅವರ ದರ್ಶನ ಯಾರಿಗೆ ಲಾಭವಾಗಿದೆಯೋ ಅವರ ಬಾಯಿಂದ ಕೇಳಿದ್ದೇವೇನೆಂದರೆ–ಆಗಲೂ ಶ್ರೀ ಪರಮಹಂಸರ ಮಾತು ಕೇಳಲು ಅವರ ಭಾಗ್ಯದಲ್ಲಿ ಹೆಚ್ಚಾಗಿ ಇದ್ದಿಲ್ಲ' ಇಪ್ಪತ್ತನಾಲ್ಕು ತಾಸೂ ಭಾವಸಮಾಧಿಯಲ್ಲೇ ಮಗ್ನರಾಗುತ್ತಿದ್ದರು! ಮಾತನಾಡುವುದು ಯಾರು? ನೇಪಾಲ ಸರಕಾರದ ಅಫೀಸರ್ ವಿಶ್ವನಾಥ ಉಪಾಧ್ಯಾಯ ಎಂಬವರು ಇವರಿಗೆ ಶ್ರೀ ಪರಮಹಂಸರು 'ಕೆಪ್ಟನ್' ಎಂದು ಕರೆಯುತ್ತಿದ್ದರು. ಶ್ರೀ ಪರಮಹಂಸರನ್ನು ಮೂರು ದಿನ ಬಿಡುವಿಲ್ಲದೆ ಸಮಾಧಿ ಮಗ್ನರಾಗಿದ್ದುದನ್ನು ಸ್ವತಃ ನೋಡಿದ್ದಾರೆಂದು ಹೇಳುತಿದ್ದರು ಬಹಳ ಹೊತ್ತಿನ ತನಕ ಅಂತಹ ಗಾಢವಾದ ಸಮಾಧಿಯಲ್ಲಿದ್ದಾಗ ಶ್ರೀ ಪರಮಹಂಸರ ಪವಿತ್ರ ದೇಹಕ್ಕೆ ಕೊರಳಿನಿಂದ ಮೇರುದಂಡದ ಕೆಳಗಿನ ಭಾಗದ ವರೆಗೆ ಮತ್ತು ತೊಡೆಯಿಂದ ಪಾದದಡಿಯ ವರೆಗೆ ಮೇಲಿನಿಂದ ಕೆಳಗೆ ದನದ ತುಪ್ಪದಿಂದ ಆಗಾಗ ಮರ್ದನ ಮಾಡಬೇಕಾಗುತಿತ್ತು ಹಾಗೆ ಮಾಡಿದರೆ ಸಮಾಧಿಯ ಉಚ್ಚ ಭಾವಭೂಮಿಯಿಂದ ನಾನು ನನ್ನ ಎಂಬ ರಾಜ್ಯಕ್ಕೆ ಮರಳಿ ಇಳಿಯಲು ಅವರಿಗೆ ಅನುಕೂಲವಾಗುತ್ತಿತ್ತು

ಈ ವಿಷಯವಾಗಿ ಪರಮಹಂಸರ ಸ್ವಂತ ಹೇಳಿಕೆ

ಶ್ರೀ ರಾಮಕೃಷ್ಣ ದೇವರು ಸ್ವತಃ ನಮಗೆ ಎಷ್ಟೋ ಸಲ ಹೀಗೆಂದು ಹೇಳಿದ್ದಾರೆ 'ಇಲ್ಲಿಯ (ಶ್ರೀ ರಾಮಕೃಷ್ಣರ) ಮನಸ್ಸಿನ ಸ್ವಾಭಾವಿಕ ಸ್ಥಿತಿಯು ಊರ್ಧ್ವ ದಿಕ್ಕಿಗೆ (ನಿರ್ವಿಕಲ್ಪ ಅವಸ್ಥೆಗೆ) ಸಮಾಧಿಯಾದರೆ ಇನ್ನು ಇಳಿಯುವ ಪ್ರವೃತ್ತಿಯೇ ಬರುತ್ತಿದ್ದಿಲ್ಲ ನಿಮಗಾಗಿಯೇ ಬಲತ್ಕಾರದಿಂದ ಇಳಿಸುತ್ತಿದ್ದೇನೆ—ಏನಾದರೊಂದು ಕೆಳಗಿನ ವಾಸನೆ ಇರಿಸದಿದ್ದರೆ ಇಳಿಯಲಷ್ಟು ಬಲ ಸಿಕ್ಕುವುದಿಲ್ಲವಾದ್ದರಿಂದಲೇ 'ತಂಬಾಕು ಸೇದುತ್ತೇನೆ' 'ನೀರು ಕುಡಿಯುತ್ತೇನೆ' 'ಇವನಿಗೆ ನೋಡುತ್ತೇನೆ' ಮಾತನಾಡುತ್ತೇನೆ–ಈ ತರದೊಂದು ಸಣ್ಣ ಸಣ್ಣ ಇಚ್ಛೆಯನ್ನು ಮನಸ್ಸಿನಲ್ಲಿ ತಂದು ಬಾರಿಬಾರಿಗೂ ಅದನ್ನು ಉಚ್ಚರಿಸಿದರೆ ಮನಸ್ಸು ಮೆಲ್ಲಮೆಲ್ಲನೆ (ದೇಹದ ಮೇಲೆ) ಇಳಿಯುತಿತ್ತು ಪುನಃ ಇಳಿಯುತ್ತಾ ಇಳಿಯುತ್ತಾ ಆ ದಿಕ್ಕನ್ನೇ ಹಿಡಿದು (ಊರ್ಧ್ವಕ್ಕೆ) ವೇಗವಾಗಿ ಓಡುತಿತ್ತು ಪುನಃ ಅಂತಹ ವಾಸನೆಯನ್ನು ಮನಸ್ಸಿನಲ್ಲಿ ತಂದು ತಂದು ಅದನ್ನು ಇಳಿಸಬೇಕಾಗುತಿತ್ತು ಆಶ್ಚರ್ಯಕರವಾದ ಸಂಗತಿ ಇದನ್ನು ಕೇಳಿ ನಾವು ಸ್ತಂಭಿತವಾಗಿ ಕುಳಿತು 'ಅದ್ವೈತ ಜ್ಞಾನವನ್ನು ಅಂಚುಕಟ್ಟಿನಲ್ಲಿ ಕಟ್ಟಿ ಏನು ಬೇಕಾದರೂ ಮಾಡು ಎಂಬ ಮಾತಿನ ಅರ್ಥವು ಇದಾದರೆ ನಮ್ಮ ಜೀವನದಲ್ಲಿ ಅದನ್ನು ಆಚರಿಸಿದ ಹಾಗೆಯೇ ಇದೆ ಮತ್ತೇನು' ಶರಣಾಗತನಾಗುವುದೇ ನಮಗೆ ಇರುವ ಮಾರ್ಗ ಉಪಾಯ ಹಾಗೆ ಮಾಡಲು ಹೋಗಿಯೂ ಕೂಡ ಕೆಲವು ದಿನಗಳ ಮೇಲೆ ಅದು ಬಹಳ ಕಷ್ಟಕರವಾಗುತಿತ್ತು ಈ ದಾರಿಯನ್ನವಲಂಬನ ಮಾಡಿಯೂ ಕೆಟ್ಟ ಮನಸ್ಸು ಮಧ್ಯೆ ಮಧ್ಯೆ ಶ್ರೀ ಪರಮಹಂಸರು ಎಲ್ಲರಕ್ಕಿಂತಲೂ ನನ್ನನ್ನು ಏಕೆ ಪ್ರೀತಿಸುವುದಿಲ್ಲ' ನರೇಂದ್ರನಾಥನಿಗೆ ಪ್ರೀತಿಸಿದಷ್ಟು ನನಗೇಕೆ ಪ್ರೀತಿಸುವುದಿಲ್ಲ' ಇತ್ಯಾದಿ ಯೋಚಿಸುತಿತ್ತು ಈ ಮಾತಂತಿರಲಿ ನಾವು ಮುಂಚಿನ ವಿಷಯವನ್ನು ಅನುಸರಿಸೋಣ

(ಕ್ರಮ ಶಃ)

ಮಾರಾಟಕ್ಕೆ ಸಿದ್ಧವಾಗಿದೆ!

ಅಂದವಾದ ಮುದ್ರಣ—ಸೊಗಸಾದ ಚಿತ್ರಗಳಿಂದ ಕೂಡಿದ

೩ನೆಯ ದರ್ಜೆಯ ಕಥೆಗಳು 0-1-6

ಪ್ರಕಟವಾಗಲಿದೆ

೩ನೆಯ ದರ್ಜೆಯ ಭೂವಿವರಣೆ 0-2-0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ರಾಷ್ಟ್ರೀಯ ವಾರ ಪತ್ರಿಕೆ

ಸ್ವದೇಶಾಭಿಮಾನಿಗೆ

ಇಂದೇ —

ಚಂದಾದಾರರಾಗಿರಿ.

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore. ***BRANCHES*** Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year .. 4%
Two years or above 4½%.

Interest Payable Quarterly.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

ಆ ಕಫ ಮತ್ತು ಶೀತವನ್ನು ನಿಲ್ಲಿಸಿರಿ!

ತೊಂದರೆ ಕೊಡುವ ಕಫ ಮತ್ತು ಕೆಟ್ಟ ಶೀತ ಇವು ನಿಮ್ಮ ಶಕ್ತಿ ಕುಂದಿಸಿ ಎದೆ ಮತ್ತು ಶ್ವಾಸಕೋಶದ ನೋವನ್ನುಂಟುಮಾಡುವವು ಆದ್ದರಿಂದ ಕೂಡಲೇ ವಿಷಹಾರಿ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ಸೇವಿಸಿ ಕಫ ಮತ್ತು ಶೀತಗಳನ್ನು ನಿಲ್ಲಿಸಿರಿ

ಬಾಯಿಗೆ ಹಾಕಿದ ಕೂಡಲೇ ಕರಗಿ ಅದು ಅತ್ಯುತ್ತಮ ಔಷಧಿ ಸತ್ವವನ್ನು ಹೊರೆಗೆಡವಿ, ಶ್ವಾಸದೊಡನೆ ನಿಮ್ಮ ಶ್ವಾಸಕೋಶಕ್ಕೆ ಸೇರುವುದು ಹೀಗೆ ಪೆಪ್ಸ ಮಾತ್ರೆಗಳು ನಿಮ್ಮ ಕಂಠದ ಮತ್ತು ಶ್ವಾಸಕೋಶದ ನೋವನ್ನು ಗುಣಪಡಿಸಿ ಕಫ ಮತ್ತು ಶೀತ ಇಂಫ್ಲುಯೆಂಜ ಗಳಿಗೆ ಪರಿಣಾಮಕಾರೀ ಔಷಧಿಯಾಗಿದೆ, ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರಕುತ್ತದೆ

ಏಜಂಟ್ಸ್

ಮೆಸರ್ಸ್ ದಾಧಾ ಎಂಡ್ ಕೊ.,
ಪಿ. ಟಿ ಮದರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

Edited Printed & Published by A. S. Kamath at the Sharada Press, Car Street, Mangalore.

[ಸಂಪುಟ 36] ತಾರೀಕು 4—9—1942 [ಸಂಚಿಕೆ 35]

ನೆಹರು ದೃಷ್ಟಿಯಲ್ಲಿ ನವೀನಭಾರತ

ಆಂಗ್ಲ ಭಾಷೆಯು ಉಳಿಯುವುದು
ಕ್ರಿಶ್ಚಿಯನ್ ಧರ್ಮವು ಫಲಕಾರಿಯಾಗಲಿಲ್ಲ
ರಾಷ್ಟ್ರೀಯ ಐಕ್ಯ ಆಗಿಯೇ ತೀರುವುದು

"ಪಂಡಿತ ಜವಾಹರಲಾಲ ನೆಹರುಗನೊಡನೆ ಯಾವುದೇ ವಿಷಯದಲ್ಲಾಗಲಿ ಮಾತುಕತೆ ಮಾಡುವುದೆಂದರೆ ಒಂದು ಹೊಸ ಅನುಭವ ಪಡೆದಂತೆ, ಏಕೆಂದರೆ ಆ ಕಾಂಗ್ರೆಸ್ ಮುಂದಾಳುವಿಗೆ ಜಾಗೃತವಾದ ಮತ್ತು ಪ್ರಬೋಧಕ ಬುದ್ಧಿ ಶಕ್ತಿಯಿದೆ ಎಟೋನಿಯನ್ ಕೊರಳ ಪಟ್ಟಿಯನ್ನು ಕಟ್ಟಿಕೊಂಡಿದ್ದ ಬಗ್ಗೆ ನಾನು ಅವರ ಕ್ಷಮೆ ಕೇಳಿದಾಗ, ಪಂಡಿತರ ಕಣ್ಣಿನಲ್ಲಿ ಒಂದು ಮಂದಸ್ಮಿತದ ಮಿನುಗು ನೋಡಿದೆ, ಅಂಥಾ ಹೆರೋವಿಯನನೊಬ್ಬನನ್ನು ಆ ದಿನ ಮುಂಜಾನೆ ನಾನು ಭೇಟಿಯಾಗುವುದಾಗಿ ಮೊದಲೇ ತಿಳಿದಿದ್ದರೆ ನಾನು ಅದನ್ನು ಕಟ್ಟಿಕೊಳ್ಳುತ್ತಿರಲಿಲ್ಲ. ಸಂಭಾಷಣೆ ಮೊದಲುಮಾಡಿದಾಗ ಅವರು ಉದಾಸೀನರಾಗಿದ್ದರು, ಏಕೆಂದರೆ ಆಗ ಅವರ ವಿಚಾರ ಅನ್ಯಾಸಕ್ತವಾಗಿತ್ತು, ಆದರೆ ಒಮ್ಮೆ ನಾವು ಜಗತ್ತಿನ ವಿಚಾರ ಮಾತನಾಡಲು ಸುರುಮಾಡಿದ್ದೇ ತಡ, ಅವರು ಆ ವಿಚಾರದಲ್ಲಿ ತಲ್ಲೀನರಾಗಿಬಿಟ್ಟರು" ಹೀಗೆಂದು 'ಸ್ಪೆಕ್ಟೇಟರ್' ಪತ್ರಿಕೆಯಲ್ಲಿ ಎವೆರಿನ್ ರೆಂಚ್ ಎಂಬವರು ಒಂದು ಲೇಖನದಲ್ಲಿ ಬರೆಯುತ್ತಾರೆ ಅವರು ಆ ದಿನದ ಸಂಭಾಷಣೆಯ ವಿಚಾರ ಮತ್ತೆ ಹೀಗೆಂದು ಅದರಲ್ಲಿ ಬರೆದಿರುವರು

ಇಂದಿನ ಸಮಸ್ಯೆ ಯಾವುದು?

"ಹಿಂದಿನ ಕಾಲದಲ್ಲಿ ನಾವು ಪರಸ್ಪರ ಕೇಳುತ್ತಿದ್ದ ಪ್ರಶ್ನೆಗಳಿಗೆ ಇಂದಿನೀ ಯುದ್ಧವು ಪೂರ್ಣ ವಿರಾಮ ಕೊಟ್ಟಿದೆ ಶಾಂತಿಯಾದಾಗ, ಇಡೀ ಪ್ರಪಂಚವೇ ಹೊಸ ಸಮಸ್ಯೆಗಳಿಂದ ಹೊಸ ಮಾದರಿಯಾಗಿ ಆಗಲಿದೆ ಯುದ್ಧಕ್ಕಿಂತ ಮೊದಲಿದ್ದ ಜಗತ್ತಿನಲ್ಲಿ ಬ್ರಿಟನು, ಪ್ರಾನ್ಸು, ಅಮೇರಿಕಗಳ ಪ್ರಜಾಪ್ರಭುತ್ವಗಳು ಅನೇಕ ಜಗೆಯ ರಾಜಕೀಯ ಸ್ವಾತಂತ್ರ್ಯವನ್ನು ಜಗತ್ತಿಗೆ ಕೊಟ್ಟವು, ಆದರೆ ಪ್ರಗತಿಪಥದಲ್ಲಿ ಚಲಿಸದೆ ಅವುಗಳು ನಿಂತಲ್ಲಿಯೇ ನಿಂತುಬಿಟ್ಟವು ಅವು ವೈಯುಕ್ತಿಕ ಸ್ವಾತಂತ್ರ್ಯವನ್ನು ಸ್ಥಾಪಿಸಲು ಅಸಮರ್ಥವಾದುದಲ್ಲದೆ ನಿರುದ್ಯೋಗ ನಿವಾರಣೆಯಲ್ಲಿಯೂ ಸೋತುಹೋದವು ರಾಜಕೀಯ ಪ್ರಜಾಪ್ರಭುತ್ವ ಮಾತ್ರ ಈ ಸಮಸ್ಯೆಗಳನ್ನು ಬಗೆಹರಿಸಲು ಸಾಕಾಗಲಾರದು ಈಗ ನಿಜವಾಗಿ ಇರುವ ಸಮಸ್ಯೆಯೆಂದರೆ ವೈಯುಕ್ತಿಕ ಸ್ವಾತಂತ್ರ್ಯ ಮತ್ತು ರಕ್ಷಣೆ ಈ ಸಮಸ್ಯಾ ಪರಿಹಾರವು ರಾಜಕೀಯ ಪ್ರಜಾಪ್ರಭುತ್ವವನ್ನು ಆರ್ಥಿಕ ಪ್ರಜಾಪ್ರಭುತ್ವಕ್ಕೆ ವಿಸ್ತರಿಸುವುದರಲ್ಲಿದೆ ಇತ್ತೀಚೆಯ ವರೆಗೆ ಫ್ಯಾಸಿಸ್ಟ್ ರಾಷ್ಟ್ರಗಳು ಮಾತ್ರ ತೀವ್ರಗತಿಯನ್ನು ತೆಗೆದುಕೊಳ್ಳಬಲ್ಲವೆಂದು ಹೇಳುವ ಮಾತಿತ್ತು, ಆದರೆ ಪ್ರಜಾಪ್ರಭುತ್ವಗಳು ಮಂದಗತಿಯನ್ನು ಅವಲಂಬಿಸಿರಬೇಕಾದುದೇನೂ ಅವುಗಳ ಪಾರಂಪರಿಕವಲ್ಲ. ಇಂದಿನ ಬ್ರಿಟನಿನ ಹಾಗಿದ್ದ ರಾಷ್ಟ್ರಗಳ ಆರ್ಥಿಕ ಮತ್ತು ಸಾಮಾಜಿಕ ರಚನೆಗಳು ಸಮಯೋಚಿತವಲ್ಲವೆನ್ನುವುದರಲ್ಲಿ ಏನೇನೂ ಸಂಶಯವಿಲ್ಲ ನಾನು ಸಮತಾವಾದದ ಪ್ರಕಾರ ರೂಪಿತವಾಗುವ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶೇಷ ನಂಬಿಗೆಯುಳ್ಳವನಾಗಿದ್ದೇನೆ"

ರಶ್ಯ ಚೀನಾ ಮತ್ತು ಭಾರತ

ಯುದ್ಧಾನಂತರ, ರಾಷ್ಟ್ರಗಳೊಳಗೆ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳ ತಳಹದಿಯ ಮೇಲೆ ಒಂದು ತರದ ಅಂತರ್ರಾಷ್ಟ್ರೀಯ ಸಂಬಂಧವು ಆಗಲೇಬೇಕೆಂದು ನೆಹರು ನಂಬುತ್ತಾರೆ ಯುದ್ಧ ನಂತರ ಇಲ್ಲವೇ ಸಂಧಿಯ ಕಾಲದಲ್ಲಾದರೂ ಒಂದು ತರದ ಅಧಿಕಾರ ನಿಯಂತ್ರಣ ರೀತಿಯುಂಟಾಗಿ ಅದು ಪ್ರಾಮುಖ್ಯತೆಗೆ ಬರಲಿದೆಯೆಂದು ಅವರ ನಂಬಗೆ ಲೀಗ್ ಓಫ್ ನೇಶನ್ಸ್‌ನ ಸ್ಥಾಪನೆಯ ಉದ್ದೇಶವು ಒಳ್ಳೆಯದಿದ್ದರೂ ಅದು ಕೆಲಸ ಮಾಡಿದ ರೀತಿಯಲ್ಲಿ ತಪ್ಪಿ ಹೋಯಿತೆಂದು ಅವರ ಅಭಿಪ್ರಾಯವಿದೆ ಅಂಥಾ ಒಂದು ಅಂತರಾಷ್ಟ್ರೀಯ ಸಂಘವನ್ನು ಸ್ಥಾಪಿಸುವ ಮೊದಲು, ಯುದ್ಧಕ್ಕೆ ಮೂಲವಾಗುವ ಕಾರಣಗಳನ್ನು ಎಂದರೆ ಸ್ವಂತ ಶಸ್ತ್ರ ತಯಾರಿಯೇ ಮೊದಲಾದವುಗಳನ್ನು ನಿರ್ಬಂಧಿಸಬೇಕಿತ್ತು ಯಾವುದೇ ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ಧಾಳಿ ಮಾಡದಂತೆ ಮಾಡಬೇಕಿತ್ತು, ಪ್ರತಿಯೊಂದು ರಾಷ್ಟ್ರದಲ್ಲಿಯೂ ಕಟ್ಟಾವಣಾಲು ಹೆಚ್ಚಿರಬೇಕಿತ್ತು

'ಇಂಗ್ಲಿಷ್ ಮಾತನಾಡುವ ಜಗತ್ತು ಒಂದು ಕೇವಲ ಪ್ರಬಲ ಶಕ್ತಿಯಾಗುವುದು ಸಾಧ್ಯವಿಲ್ಲವೇ' ಎಂದು ರೆಂಚರು ಪ್ರಶ್ನಿಸಿದರು ಅದಕ್ಕೆ ನೆಹರು ಹೀಗೆಂದರು ಎಲ್ಲಾ ರಾಷ್ಟ್ರಗಳಲ್ಲಿಯೂ ಪ್ರಬಲ ಒಲವಾವಣೆಗಳಾಗಲಿವೆ ರಶ್ಯ, ಚೀನ ಮತ್ತು ಭಾರತಗಳ ಸಂಯುಕ್ತತೆಯನ್ನು ಬಿಟ್ಟು ಬಲವಂತವಾದ ಒಂದು ಬೇರೆ ರಾಷ್ಟ್ರಶಕ್ತಿಯಾಗುವುದು ನನಗೆ ತೋರುವುದಿಲ್ಲ ಬ್ರಿಟಿಷ್ ಕಾಮನ್‌ವೆಲ್ತ್ ಬಹುಕಾಲ ಬಾಳುವಂಥಾದ್ದೆಂದು ನಾನು ನಂಬುವುದಿಲ್ಲ. ಬ್ರಿಟಿಷ್ ಕಾಮನ್‌ವೆಲ್ತ್ ಈ ಯುದ್ಧದಲ್ಲಿ ಬಾಳುವುದೆಂದೂ ನಾನು ತಿಳಿಯಲಾರೆ ಇಡೀ ಜಗತ್ತಿನಲ್ಲಿ ಪ್ರಭಾವಶಾಲಿಯಾಗಿ ನಿಲ್ಲುವ ಒಂದು ರಾಷ್ಟ್ರಗಳ ಸಂಯುಕ್ತ ಶಕ್ತಿಯಾಗುವುದಾದರೆ ಚೀನ, ರಶ್ಯ ಮತ್ತು ಭಾರತಗಳ ಸಂಯೋಜನೆ ಇಡೀ ಮಾನವ ಕುಟುಂಬದ ಮೂರರನೆಯ ಎರಡಂಶದಷ್ಟು ಜನರಿಂದ ಕೂಡಿ, ಸಂಬಂಧವುಳ್ಳ ಗಡಿನಾಡುಳ್ಳದ್ದಾಗಿ, ಒಂದೇ ತರದ ಕೃಷಿಕ ಸಮಸ್ಯೆಯಿಂದ ಕೂಡಿದ್ದಾಗಿ, ಈ ಮೂರು ರಾಷ್ಟ್ರಗಳು ಒಂದು ಸಂಯುಕ್ತ ರಾಷ್ಟ್ರಶಕ್ತಿಯಾಗಿ ಪ್ರಬಲವಾಗುವ ಸಂಭವವಿದೆ. ಚೀನ ಮತ್ತು ರಶ್ಯಗಳೊಂದಿಗೆ ಭಾರತದ ಸಂಬಂಧವು ಪ್ರಕೃತಿ ಸಹಜವಾದದ್ದು ಮತ್ತು ಆತ್ಮೀಯವಾದದ್ದು ಆಗಲಿದೆ ನೆಹರುಗಳು. ಈಗ ಭಾರತದಲ್ಲಿ ಎಷ್ಟೇ ಭಿನ್ನಮತವಿದ್ದರೂ ಕೊನೆಗೆ ರಾಷ್ಟ್ರೀಯ ಐಕ್ಯವು ಆಗಿಯೇ ಆಗುವುದೆಂದು ಧೈರ್ಯದಿಂದ ಹೇಳುತ್ತಾರೆ ಹೀಗೆ ಏಕಗೊಂಡ ರಾಷ್ಟ್ರವು ಚೀನ ರಶ್ಯಗಳ ಬಲದ ಶಕ್ತಿಯಿಂದ ಕೂಡಿ ಅಂತರಾಷ್ಟ್ರೀಯ ಘಟನೆಯಲ್ಲಿ ಪರಿಣಾಮಕಾರಿಯಾದ ಭಾಗವಹಿಸುವುದೆಂದು ಅವರ ನಂಬಿಗೆಯಿದೆ

ಕ್ರೈಸ್ತ ಧರ್ಮದ ಪ್ರಭಾವ

ಕ್ರಿಸ್ತ ಧರ್ಮವು ಮಾನವನ ಜೀವನದಲ್ಲಿ ಹೆಚ್ಚಿನ ಪ್ರಭಾವವನ್ನು ಬೀರಿದೆಯೆ ಎಂಬ ಪ್ರಶ್ನೆಗೆ ನೆಹರು ನಿಷೇಧಾತ್ಮಕ ಉತ್ತರವಿತ್ತರು ಕ್ರೈಸ್ತ ಧರ್ಮವು ಭಾರತದಲ್ಲಿ ಯಾವುದೇ ಪ್ರಧಾನ ಭಾಗವಹಿಸಿಲ್ಲವೆಂದು ಅವರ ಹೇಳಿಕೆಯಿದೆ ಕ್ರಿಸ್ತ ಧರ್ಮವು ಬ್ರಿಟಿಷ್ ರಾಜತ್ವದೊಡನೆ ಸೇರಿಕೊಂಡಿದ್ದರಿಂದ ಮಾತ್ರ ಜನರು ಅದಕ್ಕೆ ಮನ್ನಣೆ ಕೊಡುತ್ತಾ ಬರುತ್ತಿದ್ದರೆಂದೂ, ಚೀನದಲ್ಲಿ ಕ್ರಿಶ್ಚಿಯನ್ ಧರ್ಮವು ಪ್ರಭಾವಶಾಲಿಯಾಗಿರುವುದು, ಅದು ವಿದೇಶೀ ಮಹತ್ವದಿಂದ ಪ್ರಜೆಗಳಿಗೆ ಹೊರಿಸಲ್ಪಡದೆ ತಮ್ಮಿಚ್ಛೆಯಿಂದ ಅಂಗೀಕರಿಸಲ್ಪಟ್ಟ ಕಾರಣವೆಂದೂ, ಹೇಳಿದರು. ಯಾವುದೇ ವ್ಯವಸ್ಥಿತ ಧರ್ಮವು ಭವಿಷ್ಯದ ರಾಜಕೀಯದಲ್ಲಿ ಪ್ರಮುಖ ಭಾಗವಹಿಸುವುದೆಂಬ ವಿಚಾರದಲ್ಲಿ ನೆಹರುಗೆ ವಿಶ್ವಾಸವಿಲ್ಲ ಧರ್ಮವು ವೈಯುಕ್ತಿಕವಾಗಿರತಕ್ಕದ್ದು, ದೇಶದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಯಲ್ಲಿ ಅದು ಏನೂ ಪ್ರಭಾವ ಬೀರಲಾರದು, ಅದು ವ್ಯಕ್ತಿಯ ಜೀವನದಲ್ಲಿ ಮಾತ್ರ ಫಲಿಸುವುದು, ಎಂದೂ ಅವರು ನಂಬುತ್ತಾರೆ 'ವಿಶ್ವದಲ್ಲಿ ಕ್ರಿಶ್ಚಿಯನ್ ಧರ್ಮವು ಹೆಚ್ಚಿನ ಪ್ರಭಾವ ಬೀರಿಲ್ಲ, ರಾಷ್ಟ್ರೀಯತೆಯ ಎಚ್ಚರವನ್ನುಂಟುಮಾಡಲು ಭಾರತದಲ್ಲಿ ಕ್ರಿಶ್ಚಿಯನ್ ಧರ್ಮವು ಏನೂ ಸಹಾಯ ಮಾಡಿಲ್ಲ, ಇಲ್ಲಿರುವ ಏಂಗ್ಲಿಕನ್ ಚರ್ಚುಗಳು ಸರಕಾರದ ಅಂಗವೇ ಆಗಿರುವವು" ಎಂದು ನೆಹರು ಹೇಳಿದರು

ತಿರುಗಿ ಭಾರತದ ಐಕ್ಯದ ವಿಚಾರ ಮಾತುಕತೆ ನಡೆಯಿತು, ಪ್ರತಿಯೊಂದು ಅಲ್ಪ ಸಂಖ್ಯಾಕ ಪಕ್ಷಕ್ಕೂ ಬೇಕಾದ ರಕ್ಷಣೆಯ ಭದ್ರತೆ ಕೊಡಲಾಗುವುದೆಂದೂ, ಭಾರತದಲ್ಲಿರುವ ಯಾವುದೇ ಒಂದು ಪಂಗಡವು, ಭಾರತದ ಐಕ್ಯ ರಾಜ್ಯಾಂಗ ಘಟನೆಯಿಂದ ಬೇರೆಯಾಗಿರಲು ಬಯಸುವುದಿದ್ದರೆ, ಒಂದು ನಿಷ್ಪಕ್ಷಪಾತೀ ಪಂಚಾಯಿತರ ತೀರ್ಮಾನದಂತೆ ಮಾಡಬಹುದೆಂದೂ, ಅವರು ಹೇಳಿದರು ಹಿಂದುಗಳಿಗೂ ಮುಸ್ಲಿಮರಿಗೂ ತಾತ್ವಿಕ ವ್ಯತ್ಯಾಸವಿರುವುದೆಂಬುದನ್ನು ಅವರು ನಂಬುವುದೇ ಇಲ್ಲ ಏಕೆಂದರೆ ಈಗಿನ ಮುಸ್ಲಿಮರಲ್ಲಿ ಶೇಕಡಾ 98 ಮಂದಿ ಹಿಂದು

(2ನೆಯ ಪುಟವನ್ನು ನೋಡಿ)

KANNADA ILLUSTRATED WEEKLY

ನೆಹರು ದೃಷ್ಟಿಯ ನವೀನ ಭಾರತದಲ್ಲಿ-

(1ನೆಯ ಪುಟದಿಂದ ಮುಂದುವರಿದುದು)

ವಂಶ ಪರಂಪರೆಯಿರುವವರೆಂದೂ, ಜಿನ್ನರ ಅಜ್ಜಂದಿರು ಹಿಂದುಗಳಾಗಿದ್ದರೆಂದೂ ಹೇಳಿದರು.

ಬ್ರಿಟನು ಮತ್ತು ಭಾರತ

'ನವೀನ ಭಾರತದಲ್ಲಿ ಬ್ರಿಟನು ಏನಾದರೂ ಪ್ರಮುಖ ಪಾತ್ರ ವಹಿಸಲಿದೆಯೇ' ಎಂದು ಕೇಳಿದ್ದಕ್ಕೆ ನೆಹರು ಖಂಡಿತವಾಗಿಯೂ ಇದೆ ಎಂದರು. ಭಾರತವು ತನ್ನ ರಾಜಕೀಯ ವಿಚಾರ ಜಾಗೃತಿ ವಿಷಯದಲ್ಲಿ, ಹತ್ತೊಂಬತ್ತನೇ ಶತಮಾನದ ಬ್ರಿಟನಿಗೆ ಕೃತಜ್ಞವಾಗಿದೆಯೆಂದೂ, ಬ್ರಿಟನಿನಂತೆ ಆ ವಿಷಯದಲ್ಲಿ ಹದಿನೆಂಟನೆ ಶತಮಾನದ ಫ್ರೆಂಚ್ ಕ್ರಾಂತಿಗೂ ಇಪ್ಪತ್ತನೇ ಶತಮಾನದ ರಶ್ಯನ್ ಕ್ರಾಂತಿಗೂ ಕೃತಜ್ಞವಾಗಿದೆಯೆಂದೂ ಅವರು ಹೇಳಿದರು. 'ಭಾರತಕ್ಕೆ ಬ್ರಿಟನಿನ ಮುಖ್ಯ ಉಪಕಾರವೆಂದರೆ ಇಂಗ್ಲಿಷ್ ಸಾಹಿತ್ಯ ಇಂಗ್ಲಿಷ್ ವಿಚಾರ ಸರಣಿ,' ಎಂದು ಅವರ ಅಭಿಪ್ರಾಯ. ಹಾಗಾಗಿ ಮುಂದಿನ ಭಾರತದಲ್ಲಿ ಆಂಗ್ಲಭಾಷೆಯು ದ್ವಿತೀಯ ಭಾಷೆಯಾಗಿ ನಿಲ್ಲುವುದೆಂದು. ಅದರ ಕಾರಣವೆಂದರೆ ಅದೀಗ ಜಗಜಗತ್ತಿನ ಪ್ರಬಲ ಭಾಷೆಯಾಗಿರುವುದೇ ಎಂದೂ ನೆಹರು ಹೇಳಿದರು.

ಡ್ಯೂಕ್ ಆಫ್ ಕೆಂಟರ ನಿಧನ

ಬ್ರಿಟಿಷ್ ಸಾರ್ವಭೌಮರ ಸಹೋದರರಲ್ಲಿ ಅತಿ ಚಿಕ್ಕವರೂ, ರಾಯಲ್ ಸೇನೆಗಳ ಇನಸ್ಪೆಕ್ಟರ್ ಜನರಲರೂ ಆದ ಡ್ಯೂಕ್ ಆಫ್ ಕೆಂಟರು ವಿಮಾನದಲ್ಲಿ ಐಸ್‌ಲ್ಯಾಂಡಿಗೆ ರಾಜಕಾರ್ಯಗಳ ನಿಮಿತ್ತ ಹೋಗುತ್ತಿದ್ದಾಗ ಉತ್ತರ ಸ್ಕಾಟ್‌ಲ್ಯಾಂಡಿನ ಬಳಿ ವಿಮಾನ ಮುರಿದುಬಿದ್ದು ಮೃತರಾದರು. ಅವರೊಂದಿಗೆ ಇದ್ದ ಇತರ ಮಂದಿಯೂ ಮಡಿದರು. ಅವರಿಗಿನ್ನೂ ೪೦ ವರ್ಷಗಳೂ ಆಗಿರಲಿಲ್ಲ. ಇವರ ಪತ್ನಿ ಗ್ರೀಸಿನ ರಾಜಕುಮಾರಿ. ಇವರಿಗೆ ೩ ಮಂದಿ ಮಕ್ಕಳು. ಈ ಮಹನೀಯರ ಆಕಸ್ಮಿಕ ಮೃತ್ಯುವಿನಿಂದ ಬ್ರಿಟನಿನಲ್ಲಿಯೂ ಸಾಮ್ರಾಜ್ಯದ ಇತರ ಕಡೆಗಳಲ್ಲಿಯೂ ಸಂತಾಪಸೂಚನೆಯಾಗಿದೆ.

ಪರ್ಶಿಯಾ-ಇರಾಖಿನ ಹೊಸ ಸೇನಾಧಿಕಾರ

ಪರ್ಶಿಯಾ-ಇರಾಖಿನ ಮಿಲಿಟರಿ ಕಾರ್ಯಗಳನ್ನು ಜತೆಗೂಡಿಸಿ ಒಬ್ಬ ಸೇನಾನಾಯಕರಿಗೆ ಆ ಕಾರ್ಯಭಾರಗಳನ್ನು ಒಪ್ಪಿಸಲಾಗಿದೆ. ಅಲ್ಲಿಗೆ ಹಲವು ಬಿರುದಾಂಕಿತರಾದ ಜನರಲ್ ಸರ್. ಎಚ್. ಮೈಟ್ಲ್ಯಾಂಡ್ ವಿಲ್ಸನ್ ರವರೇ ಸೇನಾಪತಿಗಳು. ಇದುವರೆಗೆ ಇಲ್ಲಿನ ಮಿಲಿಟರಿ ಕಾರ್ಯಭಾರಗಳು ಜನರಲ್ ವೇವಲ್, ಜನರಲ್ ಒಚಿನ್‌ಲೆಕ್ ಮೊದಲಾದವರ ಕೈಯ್ಯಲ್ಲಿತ್ತು.

ಅಸಾಮಿಗೆ ಹೊಸ ಮಂತ್ರಿಮಂಡಲ

ಸರ್. ಎಂ. ಸಾದುಲ್ಲರವರು ಪ್ರಧಾನರಾಗಿ, ಇನ್ನು ಕೆಲವು ಮಂತ್ರಿಗಳ ಸಹಿತವಾದ ಒಂದು ಮಂತ್ರಿಮಂಡಲವು ಅಸಾಮಿನಲ್ಲಿ ಏರ್ಪಟ್ಟಿದೆ. ಈ ಮಂತ್ರಿಗಳು ಸದ್ಯವೇ ತಮ್ಮ ಉದ್ಯೋಗವನ್ನು ನಿರ್ವಹಿಸಲಿರುವರು.

ಶ್ರೀ। ವಿಂಡಲ್ ವಿಲ್ಕಿಯವರು ಭಾರತವನ್ನೂ ಸಂದರ್ಶಿಸಬಹುದೆಂದು ವದಂತಿ; ಲಾರ್ಡ್ ಹ್ಯಾಲಿಫಾಕ್ಸರೂ ಅಮೇರಿಕದ ಪ್ರೆಸಿಡೆಂಟ್ ರೂಜ್‌ವೆಲ್ಟರೂ ಬೇಗನೆ ಭಾರತದ ಕುರಿತಾಗಿ ಚರ್ಚಿಸಬಹುದೆಂದು ಗೊತ್ತಾಗಿದೆ.

ಬೆಂಗಳೂರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ

'ಮುಂದಿನ ಡಿಸೆಂಬರ್ ತಿಂಗಳು ಶಿವಮೊಗ್ಗದಲ್ಲಿ ನಡೆಯಲಿರುವ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಅಧಿಕೃತಮಂಡಲಿಗಳಿಂದ ಈ ಕೆಳಗಿನ ಹೆಸರುಗಳು ಸೂಚಿತವಾಗಿವೆಯೆಂದು ತಿಳಿಸಲು ಪರಿಷತ್ತು ಸಂತೋಷಪಡುತ್ತದೆ. ಶ್ರೀಗಳಾದ ೧. ಮಂಜೇಶ್ವರ ಗೋವಿಂದ ಪೈ ಅವರು ೨. ತಿರುಮಲೆ ತಾತಾಚಾರ್ಯ ಶರ್ಮರವರು ೩. ದತ್ತಾತ್ರೇಯ ರಾಮಚಂದ್ರ ಬೇಂದ್ರೆ. ೪. ಶ್ರೀ. ಶಿ. ಬಸವನಾಳರು. ೫. ಸಿ. ಕೆ. ವೆಂಕಟರಾಮಯ್ಯನರು" ಎಂದು ಪರಿಷತ್ ಪತ್ರಿಕೆ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗಿದೆ.

ಕಾಲ ಬದಲಾವಣೆ

ಸೆಪ್ಟೆಂಬರ್ ೧ ರಿಂದ ಗಡಿಯಾರಗಳೆಲ್ಲ ಒಂದು ಗಂಟೆ ಮುಂದು!

ಇಂಡಿಯ ಸರಕಾರದವರು ಒಂದಾಜ್ಞೆ ಹೊರಡಿಸಿ, 1942ನೆಯ ಸೆಪ್ಟೆಂಬರ್ 1ನೆಯ ತಾರೀಖಿನಿಂದ ಭಾರತದ ಎಲ್ಲ ಗಡಿಯಾರಗಳನ್ನೂ 1 ಗಂಟೆ ಕಾಲ ಮುಂದಕ್ಕೆ ತಳ್ಳಬೇಕೆಂದು ವಿಧಾಯಕ ಮಾಡಿದ್ದಾರೆ. ಅಂದರೆ ಗ್ರೀನ್ ವಿಚ್ ನಿರ್ಣೀತ ಕಾಲಕ್ಕಿಂತ (ಸ್ಟಾಂಡರ್ಡ್ ಟೈಂ) 5½ ಗಂಟೆ ಮುಂದಿದ್ದ ಭಾರತದ ನಿರ್ಣೀತ ಕಾಲವು ಇನ್ನು ಮುಂದೆ 6½ ಗಂಟೆ ಕಾಲ ಮುಂದಿರುತ್ತದೆ.

ಭಾರತದ ನಿರ್ಣೀತ ಕಾಲವು ಮದರಾಸಿನ ಸ್ಥಳೀಯ ಕಾಲ. ಮದರಾಸು 80ನೆಯ ರೇಖಾಂಶದಲ್ಲಿದೆ. ಆದ್ದರಿಂದ 80ನೆಯ ರೇಖಾಂಶಕ್ಕೆ ಪೂರ್ವದಲ್ಲಿರುವ ಬಿಹಾರ, ಬಂಗಾಳೆ, ಒರಿಸ್ಸ, ಅಸ್ಸಾಂಗಳಲ್ಲಿ ಸೂರ್ಯೋದಯವು ಮದರಾಸಿಗಿಂತ ಮುಂಚೆಯೂ ಪಶ್ಚಿಮಕ್ಕಿರುವ ಮೈಸೂರು, ಮಹಾರಾಷ್ಟ್ರ, ಬೊಂಬಾಯಿ, ಸಿಂಧ್ ಪಂಜಾಬ್ ಮುಂತಾದ ಪ್ರಾಂತಗಳಲ್ಲಿ ಸೂರ್ಯೋದಯವು ತಡವಾಗಿಯೂ ಆಗುತ್ತವೆ. ಈ ಅನಾನುಕೂಲವಾದ ಕಾಲ ನಿಷ್ಕರ್ಷೆಯನ್ನು ತಪ್ಪಿಸಲು ಬಿಹಾರ್, ಒರಿಸ್ಸ, ಅಸ್ಸಾಂಗಳೆಲ್ಲಾ ಅಂದರೆ 83ನೆಯ ರೇಖಾಂಶಕ್ಕೆ ಪೂರ್ವದಲ್ಲಿರುವ ಕಡೆಗಳಲ್ಲೆಲ್ಲ ಪ್ರತ್ಯೇಕವಾದ ನಿರ್ಣೀತ ಕಾಲವನ್ನು ಗೊತ್ತುಮಾಡಲಾಗಿತ್ತು.

ಕಲಕತ್ತೆಯ ಕಾಲ ಮದರಾಸಿನ ಕಾಲಕ್ಕಿಂತ 24 ನಿಮಿಷ ಮುಂಚೆ. ಮದರಾಸಿನಲ್ಲಿ 5 ಗಂಟೆ ಆಗಿದ್ದರೆ, ಕಲಕತ್ತೆಯಲ್ಲಿ 5-24. ಈಗ ಯುದ್ಧಕಾಲ. ಸೈನ್ಯ ಸಂಚಾರ, ಇತರ ವಿಚಾರಗಳ ಸಂಬಂಧವಾಗಿ ಈ ಕಾಲ ವ್ಯತ್ಯಾಸವು ಅವಾಂತರಕ್ಕೆ ಇಟ್ಟುಕೊಳ್ಳುತ್ತದೆ. ಆದ್ದರಿಂದ ಕಲಕತ್ತೆಯ ಸ್ಥಳೀಯ ಸಕಾಲವನ್ನು ಕಿತ್ತು ಹಾಕಿ ಮದರಾಸಿನ ಕಾಲವನ್ನೇ ಕೆಲವು ಕಾಲದ ಹಿಂದೆ ಆಚರಣೆಗೆ ತರಲಾಗಿತ್ತು. ಪೂರ್ವ ಭಾರತದ ಪ್ರಾಂತಗಳಲ್ಲಿ ಮಾತ್ರ ಆಗ ಸೈನ್ಯ ಚಟುವಟಿಕೆಯು ಇತ್ತು.

ಈಗ ಭಾರತದ ಅದ್ಯಂತ ಸೈನ್ಯ ಚಟುವಟಿಕೆಯಿದೆ. ಪಶ್ಚಿಮದಲ್ಲಿರುವ ಅಸ್ಸಾಮಿಗೂ ಸುಮಾರು 1 ಗಂಟೆ ಕಾಲ ಹೆಚ್ಚು ಕಮ್ಮಿ ಇದೆ. ಆದ್ದರಿಂದ ಈ ವ್ಯತ್ಯಾಸದ ಫಜೀತಿಗಳನ್ನೆಲ್ಲ ನಿವಾರಿಸಲು ಭಾರತದ ಸ್ಟಾಂಡರ್ಡ್ ಟೈಂ ಆದ ಮದರಾಸು ಕಾಲವನ್ನೇ 1 ಗಂಟೆ ಕಾಲ ಮುಂದಕ್ಕೆ ತಳ್ಳಿದೆ.

ಇದರಿಂದ ಪ್ರಾತಃಕಾಲ, ಒಂದು ಗಂಟೆ ಮುಂಚಿತವಾಗಿ ಕಾರ್ಯಾರಂಭ ಮಾಡಬೇಕಾದ ಕಾರಣ ಹಗಲು ಹೊತ್ತು 1 ಗಂಟೆ ಹೆಚ್ಚು ಕಾಲವನ್ನು ಗಳಿಸಿ, ಅನ್ಯ ಕಾರ್ಯಗಳಿಗೆ ಬಳಸಿಕೊಳ್ಳಲು ಅನುಕೂಲವಾಗುತ್ತದೆ. ರಕ್ಷಣಾ ಕಾರ್ಯವ್ಯವಸ್ಥೆಗೆ ಪೂರ್ವ ಭಾರತದ ಪ್ರಾಂತಗಳಲ್ಲಿ 1 ಗಂಟೆ ಹೆಚ್ಚು ಕಾಲವು ದೊರೆತಂತೆ ಆಗುತ್ತದೆ.

1942ನೆಯ ಆಗಸ್ಟ್ 31ನೆಯ ತಾರೀಖು ಸೋಮವಾರ ರಾತ್ರಿ 12 ಗಂಟೆಗೆ ಈಗಿನ ನಿರ್ಣೀತ ಕಾಲವು ಮುಗಿದುಹೋಗುತ್ತದೆ. 12 ಗಂಟೆ ಹೊಡೆದ ಕ್ಷಣ, ಭಾರತದಲ್ಲಿರುವ ಎಲ್ಲ ಗಡಿಯಾರಗಳನ್ನೂ 1 ಗಂಟೆ ಮುಂದಕ್ಕೆ ತಳ್ಳಲಾಗುತ್ತದೆ. ಅಂದರೆ, ಆಗಸ್ಟ್ 31ನೆಯ ತಾರೀಖು ರಾತ್ರಿ 12 ಗಂಟೆಯು ಸೆಪ್ಟೆಂಬರ್ 1ನೆಯ ತಾರೀಖು ಪ್ರಾತಃಕಾಲ 1 ಗಂಟೆಯೆಂದು ಭಾವಿಸಲ್ಪಡುತ್ತದೆ.

ಈ ಕಾಲದ ಮಾರ್ಪಾಡು ನಮಗೆ ಹೊಸದು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಇದು ಆಗಾಗ್ಗೆ ಆಗುವುದುಂಟು. ಇದಕ್ಕೆ ಅವರು ಹಗಲು ಹೊತ್ತು ಮಿಗಿಸುವ ಏರ್ಪಾಡೆನ್ನುತ್ತಾರೆ! ವಾಸ್ತವವಾಗಿ, ಇದು ಹಗಲು ಹೊತ್ತು ಪ್ರಾತಃಕಾಲ ಮುಂಚಿತವಾಗಿ ಕಾರ್ಯಾರಂಭಮಾಡಿ ಮಧ್ಯಾಹ್ನಾನಂತರ ಹೆಚ್ಚು ಕಾಲವನ್ನು ಉಳಿಸಿಕೊಳ್ಳುವ ಏರ್ಪಾಡು!!

8 ಗಂಟೆ ಬೆಳಗ್ಗೆ ಕೆಲಸಕ್ಕೆ ಹೋಗುವವರನ್ನು, 7 ಗಂಟೆಗೆ ಬನ್ನಿರೆನ್ನುವ ಬದಲು ಗಡಿಯಾರವನ್ನೇ 7ರಿಂದ 8ಕ್ಕೆ ತಿರುಗಿಸಿ, ಸಂಜೆ 4ಕ್ಕೆ ಅವರನ್ನು ಬಿಡುವ ಬದಲು ಗಡಿಯಾರವನ್ನೆ 4ರಿಂದ 5ಕ್ಕೆ ತಿರುಗಿಸಿ, ಬೇಗ ಕೆಲಸ ಮುಗಿಸಿದ್ದಾಯಿತೆನ್ನುವ ಬದಲು ಒಂದು ಗಂಟೆ ಕಾಲ ಮಿಗಿಸಿದವೆನ್ನುವ ಏರ್ಪಾಡಿದು. ಒಟ್ಟು ದೇಶಕ್ಕೆ ಅನ್ವಯವಾಗುವ ಕಾರಣ ಎಲ್ಲವನ್ನೂ ಬದಲಾಯಿಸುವ ಬದಲು ಕಾಲವನ್ನೆ ಬದಲಾಯಿಸಿದೆ.

WANTED

Secondary Grade Trained Women Teachers of all communities for employment in Board Elementary Schools. Applications containing the following particulars should reach the President by the 11th September 1942.

1. Name and address 2. Community 3. Date of birth 4. Full particulars of the certificates 5. Previous service if any 6. whether married spinster or widow.

Mangalore, 18-8-1942 } Sd: K. Vittal Shetty, President, District Board, South Kanara.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

The Canara Industrial & Banking Syndicate Ltd.

(Incorporated in British India, Liability of Share-holders Limited.)

STATEMENT OF AFFAIRS AS ON 31ST JULY 1942.

LIABILITIES	Rs. As. Ps.	ASSETS	Rs. As. Ps.
Paid-up Capital ...	6,94,140- 0- 0	Cash in hand & with Bankers at call	10,93,039- 5- 0
Reserves	2,11,000- 0- 0	Investments on Govt. Securities ...	14,50,097-15- 6
Deposits	46,01,171- 2- 8	,, on Shares of other Companies ...	1,71,181-10- 0
Due to Banks etc. ...	2,15,639- 3- 0	Fully Secured Advances	16,54,572- 3- 5
Bills for collection ...	4,16,628- 8- 1	Other advances: Bills discounted etc.	9,87,759- 0- 4
Sundries including revenue items ...	4,04,918- 2-11	Landed properties, Office premises, Furniture, Safes, fittings etc.	4,81,009- 3- 7
		Bills for collection	4,16,628- 8- 1
		Sundries including revenue items	2,89,209- 2- 9
Total Rs.	65,43,497- 0 -8	Total Rs.	65,43,497- 0 -8

"MUKUND NIVAS" UDIPI 26th August, 1942.

T. M. A. Pai, Managing Director.

"ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ"

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

4 – 9 – 1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೪—೯—೧೯೪೨

ಸಮರಭೂಮಿಯ ಸಂಚಾರ

ಹದಿನೆಂಟು ವರ್ಷಗಳ ಹಿಂದೆ ಜಾರ ಅರಸನ ಸೈನ್ಯವನ್ನು ಸೋಲಿಸಿ, ರಶ್ಯನ್ ಪ್ರಜೆಗಳು ತಮ್ಮ ದೆಯ ರಕ್ತವನ್ನು ಸುರಿಸಿ ಸ್ಟಾಲಿನ್‌ಗ್ರಾಡ್ ನಗರವನ್ನು ಪುನಃ ನವನೂತನವಾಗಿ ನಿರ್ಮಿಸಿದ್ದರು. ಅದು ಇಂದು ಭೀಕರ ಹೋರಾಟದಲ್ಲಿ ಜರ್ಮನರ ಕೈಸೇರಿ ಬಿಡುವುದೇ ಎಂಬ ಭೀತಿಯುಂಟಾಗಿದೆ. ಇಂದಿನ ಯುದ್ಧ ಇತಿಹಾಸದಲ್ಲಿ ಒಂದೊಂದು ಮಹತ್ವದ ನಗರವನ್ನು ಸ್ವಾಧೀನಮಾಡುವರೆ ಹೂಡಿದ ಹೋರಾಟವು ಚಿರಸ್ಮರಣೀಯವಾಗುವುದು; ಸ್ಟಾಲಿನ್‌ಗ್ರಾಡ್ ಯುದ್ಧವೂ ಅಂತೆಯೇ. ಗೋದಿಯ ಹೊಲಗಳಿಂದ, ಉಕ್ಕು ಕಬ್ಬಿಣ ಮೊದಲಾದ ಖನಿಜಗಳಿಂದ, ವಿಮಾನ ಟೇಂಕ್ ಮೊದಲಾದ ಯುದ್ಧ ಸಾಮಗ್ರಿಗಳನ್ನು ತಯಾರಿಸುವ ಕೈಗಾರಿಕೆಗಳಿಂದ ಕೂಡಿರುವ ಸ್ಟಾಲಿನ್‌ಗ್ರಾಡನ್ನು 'ಉಕ್ಕಿನ ನಗರ' ಎಂಬ ಹೆಸರಿನಿಂದ ಕರೆಯುವುದು ಅನ್ವರ್ಥವಾಗಿದೆ. ವಜ್ರ ಹೃದಯದ ರಶ್ಯನರು, ವೀರ ವಿಭೂತಿಯೆನಿಸಿದ ಸ್ಟಾಲಿನರ ಮುಂದಾಳುತನದಲ್ಲಿ 'ಉಕ್ಕಿನ ನಗರ'ವಿದನ್ನು ರಕ್ಷಿಸಲು ಬಹಳ ಭೀಮ ಭಯಾನಕ ಹೋರಾಟ ಹೂಡುತ್ತಿದ್ದಾರೆ!

ವಿರಾಮವಿಲ್ಲದ ಯುದ್ಧ

ಸ್ಟಾಲಿನ್‌ಗ್ರಾಡ್ ಯುದ್ಧವು ವಿರಾಮವಿಲ್ಲದೆ ಸಾಗುತ್ತಿದೆ. ಮಿಂಚಿನಗತಿಯಿಂದ ಧಾಳಿಯಿಡಲು ಮಾಡಿದ ಜರ್ಮನರ ಪ್ರಯತ್ನವು ಕೃತಾರ್ಥವಾಗಲಿಲ್ಲ. ಈ ವಾರದ ಕೊನೆಗೆ ಸ್ಟಾಲಿನ್‌ಗ್ರಾಡು ತಮ್ಮ ಕೈಸೇರುವುದೆಂದು ಜರ್ಮನ್ ಅಧಿಕಾರಿಗಳು ಹೇಳುತ್ತಿದ್ದಾರೆ. ಸ್ಟಾಲಿನ್‌ಗ್ರಾಡಿನ ವಾಯುವ್ಯದಲ್ಲಿ ನಗರವನ್ನು ಸೇರುವ ಮಾರ್ಗದಲ್ಲಿ ಜರ್ಮನರು ಒಂದೇ ಸಮನೆ ಮುನ್ನುಗ್ಗಿದರು. ಜರ್ಮನ್ ಸೈನ್ಯವು ಈಗಾಗಲೇ ಸ್ಟಾಲಿನ್‌ಗ್ರಾಡನ್ನು ಸಮೀಪಿಸಿ ಕೇವಲ ಇಪ್ಪತ್ತು ಮೈಲುಗಳಂತರ ಮಾತ್ರದಲ್ಲಿರುವುದೆಂದು ತಿಳಿಯಲಾಗಿದೆ. ಒಂದೆಡೆಯಲ್ಲಿ ಜರ್ಮನ್ ಪಾಂಜರ್ ದಲಗಳು ರಶ್ಯನರ ಸಂರಕ್ಷಕ ವ್ಯೂಹವನ್ನು ಭೇದಿಸಿ ಮುಂದೊತ್ತಿದವು. ಸ್ಟಾಲಿನ್‌ಗ್ರಾಡ್ ನೈಋತ್ಯದಲ್ಲಿಯೂ ಅತೀ ತೀವ್ರ ಕಾಳಗವಾಗುತ್ತದೆ. ಕಾಕಸಸಿನಲ್ಲಿ ಯುದ್ಧವು ಸ್ವಲ್ಪ ಸ್ತಬ್ಧವಾಗಿತ್ತು. ಮೋಸ್ಕೋ ನಗರದಿಂದ ೫೦ ಮೈಲು ಪಶ್ಚಿಮಕ್ಕಿರುವ ಜರ್ಮನ್ ಹಸ್ತಗತವಾದ ರೆಝೂವ ವ್ಯೂಹದಲ್ಲಿ ಜರ್ಮನರನ್ನು ರಶ್ಯನರು ಜೋರಾಗಿ ಪ್ರತಿಭಟಿಸಿದರು. ರೆಝೂವದಲ್ಲಿ ಹಲವಾರು ನದಿಗಳು, ರಸ್ತೆಗಳು, ರೈಲ್ವೆಗಳು ಸೇರುವುದರಿಂದ ಇದರ ಪ್ರಾಮುಖ್ಯತೆ ಹೆಚ್ಚಾಗಿದೆ. ಮೋಸ್ಕೋದ ಮೇಲೆ ಮುತ್ತಿಗೆ ಹಾಕಲು ಇದು ಅವಶ್ಯವಿದೆ. ಮೋಸ್ಕೋದಿಂದ ಲಿಟ್ವಿಯಾಕ್ಕೆ ಹೋಗುವ ರಸ್ತೆಯೂ ಇಲ್ಲಿಂದಲೇ ಹಾದುಹೋಗುತ್ತದೆ. ಇದನ್ನು ಸ್ವಾಧೀನಪಡಿಸಿದ ಜರ್ಮನರು ಇದರ ಸುತ್ತು ಈಗ ಭದ್ರವಾದ ಕೋಟೆಯನ್ನು ಕಟ್ಟಿರುವರೆಂದು ಸುದ್ದಿ. ಇದನ್ನು ಭೇದಿಸಲು ರಶ್ಯನರು ಈಗ ಪ್ರಯತ್ನ ಮಾಡುತ್ತಿದ್ದಾರೆ. ರೆಝೂವದ ಮಹತ್ವವನ್ನು ಅರಿತುಕೊಂಡೇ ರಶ್ಯನರು ಈಗ ಜರ್ಮನ್ ಸೈನ್ಯದ ಮೇಲೆ ಪ್ರತಿಧಾಳಿಯಿಡಲೂ ತೊಡಗಿರುವರು.

ಹಿಟ್ಲರನ ಯೋಜನೆ

ರಶ್ಯನ್ ರಣರಂಗದಲ್ಲಿ ಜರ್ಮನರು ಈಗ ಅನೇಕ ವಿಜಯಗಳನ್ನು ಪಡೆದಿದ್ದರೂ, ಅಪಾರ ಪ್ರದೇಶಗಳನ್ನು ಆಕ್ರಮಿಸಿಕೊಂಡಿದ್ದರೂ ಇನ್ನೂ ಹಿಟ್ಲರನ ಯೋಜನೆ ಕೈಗೂಡಿಲ್ಲವೆನ್ನಬೇಕಾಗಿದೆ. ಯುಕ್ರೇನ್ ಮತ್ತು ಮೋಸ್ಕೋ ಪ್ರದೇಶಗಳನ್ನು ಬೇರೆ ಮಾಡಿ, ರಶ್ಯನರಿಗೆ ಹೊರಗಿನಿಂದ ಸಹಾಯ ಬಾರದಂತೆ ಮಾಡುವುದು, ಡಾನ್ ಮತ್ತು ಕಾಕಸಸ್ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದು ಹಿಟ್ಲರನ ಯೋಜನೆಯಾಗಿದೆ. ಈ ಯೋಜನೆ ಇನ್ನೂ ಸಿದ್ಧಿಸಿಲ್ಲ. ಡಾನ್ ವಕ್ರದಲ್ಲಿ ರಶ್ಯನರು ಜರ್ಮನ್ ನಿರೀಕ್ಷೆಗಿಂತ ಜೋರಾಗಿ ಪ್ರತಿಭಟಿಸಿಬಿಟ್ಟರು ಮಾತ್ರವಲ್ಲದೆ ಜರ್ಮನರಿಗೆ ಇದುವರೆಗೆ ವ್ರೊರೊನೆಜದಿಂದ ಮುನ್ನುಗ್ಗಲು ಸಾಧ್ಯವೇ ಆಗಲಿಲ್ಲ. ಆದ್ದರಿಂದ ವಾನ್‌ಬಾಕನ ಸೈನ್ಯವು ಡಾನ್ ನದಿಯಿಂದ ನೇರಾಗಿ ಕಾಕಸಸನ್ನು ನುಗ್ಗಿ ಅಲ್ಲಿಂದ ಸ್ಟಾಲಿನ್‌ಗ್ರಾಡ್ ಕಡೆಗೆ ಚಲಿಸಿತು. ಸ್ಟಾಲಿನ್‌ಗ್ರಾಡಿಗೆ ಎರಡು ಕಡೆಗಳಿಂದ ಧಾಳಿ ನಡೆಯಿತು. ಸ್ಟಾಲಿನ್‌ಗ್ರಾಡನ್ನು ಸುತ್ತುಗಟ್ಟುವಂತೆ ಜರ್ಮನ್ ಸೇನಾ ವ್ಯೂಹ ನಡೆದಿರುವುದು, ಮಾತ್ರವಲ್ಲದೆ ವೋಲ್ಗಾ ನದಿಯಲ್ಲಿ ಹಡಗ ಸಂಚಾರ ತಡೆಯುವ ಪ್ರಯತ್ನವನ್ನೂ ಜರ್ಮನರು ಮಾಡಿರುವರು.

ಕಾಕೇಶಿಯ ಕಾಳಗ

ಕಾಕೇಶಿಯವು ಕ್ರಮ ಪ್ರಕಾರ ರಶ್ಯನರ ಕೈಬಿಡುವಂತೆ ತೋರುತ್ತದೆ. ಮಧ್ಯ ಕಾಕೇಶಿಯ, ದಕ್ಷಿಣ ಕಾಕೇಶಿಯವಾದ ಕಾಕಸಸ್ ತಪ್ಪಲು ಪ್ರದೇಶಗಳಲ್ಲಿ ಜರ್ಮನ್ ಸೈನ್ಯವು ಸರಾಗವಾಗಿ ಸಾಗುತ್ತಿದೆ. ರಾಸ್ಟೋವ್-ಬಾಕು ರೈಲ್ವೆ ಹತ್ತಿ ಮುಂದೊತ್ತಿದ ಜರ್ಮನರು ಕಾಕಸಸ್ ಪರ್ವತದ ತಪ್ಪಲಿನಲ್ಲಿರುವ ಕಣಿವೆಗಳಲ್ಲಿ ಹರಡಿ ಪರ್ವತ ಪಂಕ್ತಿಗಳನ್ನು ಭೇದಿಸಿ ಆಚೆಗೆ ದಾಟುವ ಪ್ರಯತ್ನದಲ್ಲಿದ್ದಾರೆ. ಅಲ್ಲಿ ನೇರವಾಗಿ ಮುನ್ನುಗ್ಗಿ ಗ್ರಾಝ್ನಿ ಎಣ್ಣೆ ಬಯಲನ್ನು ಆಕ್ರಮಿಸಲು ಪ್ರಯತ್ನ ನಡೆಸುತ್ತಿದ್ದಾರೆ. ಗ್ರಾಝ್ನಿ ಎಣ್ಣೆ ಗಣಿಗೂ ವಿಪತ್ತು ಸನ್ನಿಹಿತವಾಗಿದೆ. ಕ್ರಾಸ್ನಡರ್ ಮೈಕೋಪ್ ಪ್ರಾಂತದಲ್ಲಿ ಕಾಕಸಸ್ ದಾಟಿ ನುಗ್ಗಿದ ಜರ್ಮನ್ ಸೈನ್ಯಗಳು ಕಪ್ಪು ಸಮುದ್ರ ತೀರದಲ್ಲಿ ಹರಡಿಕೊಂಡು ಕಾಕಸಸ್ ದಕ್ಷಿಣಕ್ಕಿರುವ ಟ್ರಾನ್ಸ್ ಕಾಕೇಶಿಯದ ಆಕ್ರಮಣ ಕಾರ್ಯದಲ್ಲಿ ನಿರತವಾಗಿವೆ. ಹೀಗೆ ದಕ್ಷಿಣ ರಶ್ಯವು ಎಲ್ಲಾ ಕಡೆಗಳಲ್ಲಿಯೂ ಒತ್ತಲ್ಪಟ್ಟಿದೆ. ಇದೀ ರಶ್ಯದ ಪರಿಸ್ಥಿತಿಯೇ ಇಂದು ಬಹಳ ವಿಷಮವಾಗಿದೆ. ರಶ್ಯನರೇನೋ ದೃಢ ನಿರ್ಧಾರದಿಂದ ಹೋರಾಡುತ್ತಿರುವರೆಂಬುದು ನಿಜ, ಆದರೆ ಯಂತ್ರ, ವಿಮಾನ, ಜನಸಂಖ್ಯೆಗಳಿಗೆ ಲೆಕ್ಕವಿಲ್ಲದೆ ತರಂಗ ತರಂಗವಾಗಿ ಬರುವ ಜರ್ಮನ್ ಸೇನೆಯನ್ನು ಹಿಮ್ಮೆಟ್ಟಿಸುವುದರಲ್ಲಿ ಇನ್ನೂ ರಶ್ಯನರು ಕೃತಾರ್ಥರಾಗಿಲ್ಲ.

ಮಧ್ಯ ಪೂರ್ವದಲ್ಲಿಯೆ?

ಚರ್ಚಿಲ್ ಸ್ಟಾಲಿನ್ ಭೇಟಿಯ ವಿಚಾರವು ಕೆಲವು ದಿನಗಳ ವರೆಗೆ ಗುಟ್ಟಾಗಿ ಇಡಲ್ಪಟ್ಟಿದ್ದರೂ ಈಗ ಅದು ಸ್ವಲ್ಪ ಸ್ವಲ್ಪ ಬಹಿರಂಗವಾಗುತ್ತಿದೆ. ಇದಷ್ಟು ಬೇಗ ಎಂದರೆ ನವಂಬರಕ್ಕಿಂತ ಮೊದಲೇ ದ್ವಿತೀಯ ರಣರಂಗವೊಂದನ್ನು ಕಲ್ಪಿಸಬೇಕೆಂದು ಉಭಯತರೂ ಒಂದು ತೀರ್ಮಾನಕ್ಕೆ ಬಂದಿರುವುದಾಗಿಯೂ, ಇದಲ್ಲದೆ ರಶ್ಯಕ್ಕೆ ಜರ್ಮನರನ್ನೆದುರಿಸುವಲ್ಲಿ ಎಷ್ಟು ವಿಮಾನ ಟೇಂಕು, ಫಿರಂಗಿಗಳು ಬೇಕಾಗುವುವೆಂಬ ವಿಚಾರವು ಚರ್ಚಿಲರಿಗೆ ಭರವಸೆಯಾಗಿರುವುದೆಂದೂ ತಿಳಿದಿದೆ. ಈ ಸಂದರ್ಭದಲ್ಲಿ ಚರ್ಚಿಲರು ಮಧ್ಯಪೂರ್ವದ ರಾಷ್ಟ್ರಗಳಿಗೂ ಈಜಿಪ್ಟಿಗೂ ಸಂದರ್ಶನವಿತ್ತದ್ದು ಮುಖ್ಯ ಗಮನಿಸಬೇಕಾದ ವಿಚಾರ. ಅಲ್ಲಿ ಭಾರತದ ಸೇನಾಪತಿ ವೇವಲರೂ, ಸರ್ ಸಿಕಂದರರೂ ಚರ್ಚಿಲರನ್ನು ಭೇಟಿಯಾಗಿ ಮಾತುಕತೆ ನಡೆಸಿದ ವರ್ತಮಾನ ಇಷ್ಟರಲ್ಲೇ ಪ್ರಕಟವಾಗಿದೆ. ಇವನ್ನೆಲ್ಲಾ ನೋಡಿದರೆಂದರೆ ಮಧ್ಯಪೂರ್ವದಲ್ಲಿ ದ್ವಿತೀಯ ರಣರಂಗವನ್ನು ತೆರೆಯಲು ಚರ್ಚಿಲರು ವಿಚಾರ ಮಾಡಿರುವರೇ ಎಂದು ಊಹಿಸಲು ಎಡೆಯುಂಟು!

ಸೊಲೊಮನ್ ಸಮರ

ಆಸ್ಟ್ರೇಲಿಯದ ಸಮೀಪದಲ್ಲಿರುವ ಸೊಲೊಮನ್ ದ್ವೀಪದಲ್ಲಿ ನಡೆಯುತ್ತಿರುವ ಸಮರವು ಇನ್ನೂ ನಿಂತಿರುವುದಿಲ್ಲ. ಇದು ಜಪಾನ್ ವಶವಾಗಿರುವ ದ್ವೀಪ, ಇದನ್ನು ಆಕ್ರಮಿಸಿಕೊಳ್ಳಬೇಕೆಂದು ಅಮೆರಿಕನರು ಧಾಳಿಯಿಟ್ಟಿರುವರು. ಬಹಳ ಪ್ರಯಾಸದಿಂದ ಕೆಲವು ಪ್ರದೇಶಗಳನ್ನು ಇಷ್ಟರಲ್ಲಿ ಆಕ್ರಮಿಸಿಕೊಂಡೂಬಿಟ್ಟರು. ಇದರ ಆಕ್ರಮಣ ಕಾರ್ಯವು ಕಳೆದ ಒಂದು ತಿಂಗಳ ಹಿಂದೆಯೇ ಆರಂಭವಾಯಿತು. ಮೊದಲು ಮೊದಲು ಜಪಾನರು ಸ್ವಲ್ಪ ಸ್ವಲ್ಪ ಹಿಂದೆ ಸರಿದರು. ಆದರೆ ಕಳೆದ ವಾರದಿಂದ ಜಪಾನರು ಉಗ್ರ ಹೋರಾಟ ಹೂಡುವ ಸುದ್ದಿ ಬಂದಿದೆ. ಅಮೆರಿಕನರನ್ನು ಸರ್ವಥಾ ಅಲ್ಲಿಂದ ಓಡಿಸಲು ಅವರು ಸೊಂಟ ಕಟ್ಟಿದಂತಿದೆ. ಘೋರ ನೌಕಾ ಕದನ ನಡೆಯುತ್ತಿದೆ. ಇಕ್ಕಡೆಗಳಲ್ಲಿ ಅಪಾರ ನಷ್ಟವಾಯಿತು. ಹೀಗೆ ಸೊಲೋಮನ್ ಸಮರವು ಪ್ಯಾಸಿಫಿಕ್ ಯುದ್ಧದಲ್ಲಿ ಅತ್ಯಂತ ಮಹತ್ವದ ಪರಿವರ್ತನೆಯನ್ನುಂಟುಮಾಡಲಿದೆ. ಅಮೆರಿಕವು ಹೀಗೆ ಜಪಾನಿನ ಮೇಲೆ ಮುತ್ತಿಗೆ ಹಾಕಲು ಹೋದದ್ದರಿಂದ ಇದು ಅಕ್ಷ ರಾಷ್ಟ್ರಗಳಿಗೆ ಎಚ್ಚರಿಕೆ ಕೊಟ್ಟಂತಾಯಿತು! ಇದರಿಂದ ಇನ್ನು ಮುಂದೆ ಅಕ್ಷ ರಾಷ್ಟ್ರಗಳು ಎರಡು ಮೂರು ಯುದ್ಧ ಕ್ಷೇತ್ರಗಳಲ್ಲಿ ಕಾದಾಡಬೇಕಾಗಿ ಬರುವುದು. ಅಂತೂ ಜಪಾನು ಈಗ ಅಮೇರಿಕದೊಡನೆ ಬಹಳ ಉಗ್ರವಾಗಿ ಕೈ ಕೈ ಕಾಳಗ ಕೊಡುವ ಸಂದರ್ಭ ಬಂದಿದೆ.

ಜಪಾನಿನ ಭೀತಿ

ಆಸ್ಟ್ರೇಲಿಯಕ್ಕೆ ಜಪಾನಿನ ಭೀತಿ ತಪ್ಪಿಲ್ಲವೆಂದು ರಶ್ಯನ್ ಪತ್ರಿಕೆಯೊಂದು ಬರೆಯುತ್ತದೆ. ನ್ಯೂಗಿನಿಯ ಮೂಲಕ ಜಪಾನರು ಧಾಳಿ ಮಾಡಬೇಕೆಂದಿರುವುದನ್ನು ಅದರಲ್ಲಿ ವಿವರಿಸಲಾಗಿದೆ. ಅಂತೂ ಜಪಾನು ಚೀನದಲ್ಲಿ ಅಷ್ಟೊಂದು ತೀವ್ರ ಹೋರಾಟ ಹೂಡುವುದಿಲ್ಲ. ಚೀನವನ್ನು ಗೆಲ್ಲುವುದಂತೂ ಅದಕ್ಕೆ ಕೇವಲ ಕನಸಿನ ಕೊಪ್ಪರಿಗೆಯೇ ಆಗಿದೆ. ಆದರೆ ಆಸ್ಟ್ರೇಲಿಯಕ್ಕೆ ಇದುವರೆಗೆ ಆಕ್ರಮಣ ಮಾಡದಿದ್ದರೂ ಅಲ್ಲಿನ ಅದರ ಚಟುವಟಿಕೆಯಿಂದ ಜಪಾನಿನ ಭೀತಿ ಆಸ್ಟ್ರೇಲಿಯಕ್ಕೆ ತಪ್ಪಿದ್ದೇನೂ ಅಲ್ಲ. ಇತ್ತ ರಶ್ಯನ್ ಗಡಿಯಲ್ಲೂ ಜಪಾನು ಸೈನ್ಯ ಸಂಗ್ರಹಿಸಿಟ್ಟಿರುವ ವಾರ್ತೆ ಕೆಲ ಕಾಲದಿಂದಲೂ ಇದ್ದೇ ಇದೆ. ಸ್ಟಾಲಿನ್‌ಗ್ರಾಡ್ ಸಂಕಟದ ಸಂದರ್ಭದಲ್ಲಿ ಜಪಾನು ರಶ್ಯದ ಬೆನ್ನ ಮೇಲೆ ಇರಿಯುವ ಕುಹಕತೆಯನ್ನು ಕೈಕೊಂಡರೂ ಕೈಕೊಳ್ಳಬಹುದು, ಇತ್ತ ಭಾರತದ ಗೊಂದಲಮಯ ರಾಜಕೀಯ ಪರಿಸ್ಥಿತಿಯನ್ನು ಉಪಯೋಗಿಸಿ ಭಾರತಕ್ಕೆ ದಂಡಯಾತ್ರೆ ಹೊರಡುವುದೂ ಅಸಾಧ್ಯವೇನೂ ಅಲ್ಲ. ಹಾಗೆ ಆಸ್ಟ್ರೇಲಿಯ, ರಶ್ಯ, ಭಾರತಗಳಿಗೆ ಜಪಾನಿನ ಭೀತಿಯಿದೆ.

ಬೇರೆ ಕಡೆಗಳಲ್ಲಿ

ಬ್ರಿಟಿಷ್ ವಿಮಾನಗಳು ಜರ್ಮನಿ ಮೇಲೆ ಹಾರಿ ಅಲ್ಲಿನ ಪ್ರಮುಖ ಔದ್ಯೋಗಿಕ ಕೇಂದ್ರಗಳಾದ ಸಾರಬ್ರುಕನ್ ಮತ್ತು ನ್ಯೂರೆಂಬರ್ಗಗಳ ಮೇಲೆ ಬಾಂಬು ಚೆಲ್ಲಿದವು. ಇದರಲ್ಲಿ ಬ್ರಿಟಿಷರ ಮೂವತ್ತು ವಿಮಾನಗಳು ಕಾಣೆಯಾಗಿವೆ. ಆಸ್ಟ್ರೇಲಿಯದಲ್ಲಿ ಯುದ್ಧ ಪ್ರಯತ್ನ ಇನ್ನಷ್ಟು ಬಲವಾಗಿರಬೇಕೆಂದು ಅಲ್ಲಿ ಸೈನ್ಯ ಇಲಾಖೆಯ ಮಂತ್ರಿಗಳು ಒಂದು ಎಚ್ಚರವಿತ್ತಿದ್ದಾರೆ. ನ್ಯೂಗಿನಿಯ ಮಿಲ್ನೆ ಉಪಸಾಗರದಲ್ಲಿ ಮಿತ್ರರಿಗೂ ಜಪಾನರಿಗೂ ಭೀಕರ ಕಾಳಗ ನಡೆಯುತ್ತಿದೆ. ಭೂಮಧ್ಯ ಸಮುದ್ರದಲ್ಲಿ ನೌಕಾ ಕಾಳಗವಾಯಿತು. ಮೈತ್ರಿ ವಿಮಾನಗಳು ಕೈರೋ ಮೇಲೆ ಬಾಂಬು ಸುರಿಸಿದ ಹೊಸ ಸುದ್ದಿ. ರೂಸ್‌ವೆಲ್ಟರು ನ್ಯೂಜಿಲೆಂಡ್ ಮಂತ್ರಿ ಪೀಟರ್ ಫ್ರೇಜರೊಡನೆ ಮಾತುಕತೆ ನಡೆಸಿ, ಆಸ್ಟ್ರೇಲಿಯ ನ್ಯೂಜಿಲೆಂಡುಗಳಿಗೆ ಸಾಧನ ಸಾಮಗ್ರಿ ಪೂರೈಕೆ ವಿಚಾರವಾಗಿ ಚರ್ಚಿಸಿದರು. ಸಿಂಗಾಪುರ, ಹಾಂಕಾಂಗುಗಳಲ್ಲಿದ್ದ ಬ್ರಿಟಿಷ್ ಗವರ್ನರರು ಎಲ್ಲಿರುವರೋ ತಿಳಿಯದೆಂದು ಜಪಾನಿನಲ್ಲಿದ್ದ ಬ್ರಿಟಿಷ್ ರಾಯಭಾರಿ ಹೇಳಿದರು. ಈಜಿಪ್ತ ಭೂ ಯುದ್ಧದಲ್ಲಿ ಹೆಚ್ಚಿನ ಚಟುವಟಿಕೆಯಿಲ್ಲ, ವೈಮಾನಿಕ ಚಟುವಟಿಕೆ ಸಾಗಿದೆ. ಚೀನೀಯರು ಚೂಸೇನನ್ನು ಪುನಃ ಕೈವಶ ಮಾಡಿಕೊಂಡರು. ಬ್ರಿಟಿಷ್ ಅಮೆರಿಕ ಪ್ಲಾನ್ಸುಗಳು ಒಟ್ಟಾಗಿ ಕಳೆದ ವಾರ ದಿಪ್ಪೆ ಧಾಳಿ ಮಾಡಿದವು. ಈ ಧಾಳಿಯ ಕಾಲದಲ್ಲಿ ಟೇಂಕುಗಳನ್ನು ವಿಮಾನಗಳಿಂದ ಇಳಿಸಿದ್ದು ಮಹತ್ವದ ವಿಚಾರವಿದ್ದು ಇನ್ನೊಂದು ವಿಚಾರವೆಂದರೆ ತೀರಾ ಹಗಲಲ್ಲೇ ಈ ಧಾಳಿಯೊದಗಿದ್ದು. ಅಂತೂ ದ್ವಿತೀಯ ರಣರಂಗವೊಂದನ್ನು ತೆರೆಯುವ ಆವಶ್ಯಕತೆಯಿರುವಾಗ, ಮಿತ್ರರು ಹೀಗೆ ಸಂಯುಕ್ತ ಸೈನ್ಯ ಸೇರಿಸಿ, ಜರ್ಮನರ ಬಲವನ್ನು ಪರೀಕ್ಷೆ ಮಾಡಿದರೆಂದು ಹೇಳಬಹುದು. ದಿಪ್ಪೆ ಧಾಳಿಯಿಂದ ಮಿತ್ರರು ಅನೇಕ ಪಾಠ ಕಲಿತಿರಬಹುದು.

ಸ್ವದೇಶಾಭಿಮಾನಿ

ತಾರೀಕು 4—9—1942

''ಹಿಂದೀಕರಣ''

ವೈಸರಾಯರ ಕಾರ್ಯಕಾರೀ ಮಂಡಳವನ್ನು ಪೂರ್ಣ ಹಿಂದೀಕರಣ ಮಾಡುವ ವಿಚಾರದಲ್ಲಿ ಡಿಲ್ಲಿ ಲಂಡನ್‌ಗಳೊಳಗೆ ವಿಚಾರ ವಿನಿಮಯ ನಡೆಯುತ್ತಿದೆಯೆಂದು ಡಿಲ್ಲಿಯ ಸುದ್ದಿಗಾರರು ಬರೆಯುತ್ತಾರೆ. ಅಂತೂ ಈಗ ದೇಶದಲ್ಲಿ ದಬ್ಬಾಳಿಕೆಯನ್ನು ಕೈಕೊಂಡಿರುವುದರೊಡನೆ, ಸ್ವಲ್ಪ ಮಟ್ಟಿಗೆ ಸುಧಾರಣೆಯ ಕಡೆಗೂ ಮನಸ್ಸು ಮಾಡುವುದು ಪ್ರಸಂಗೋಚಿತವಾಗಿರುವುದು.

ಹಿಂದೂದೇಶದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಬೇಕೆಂದು ಅಮೆರಿಕ ಚೀನ ರಾಷ್ಟ್ರಗಳು ಉತ್ಸುಕವಾಗಿರುವೆಂದು ತಿಳಿದುಬರುತ್ತದೆ. ಇತ್ತೀಚೆಗೆ ಪ್ರೆಸಿಡೆಂಟ ರೂಸ್‌ವೆಲ್ಟರು ವಾಶಿಂಗ್‌ಟನಿನಲ್ಲಿ ಲಾರ್ಡ ಹೆಲಿಫಾಕ್ಸರೊಡನೆ ಹಿಂದೂದೇಶದ ಕುರಿತು ಮಾತುಕತೆ ನಡೆಸಿದ್ದರೆಂಬ ಸುದ್ದಿ ಇದಕ್ಕೆ ಆಧಾರವಾಗಿದೆ, ಮಾತ್ರವಲ್ಲದೆ ಚೀನದ ದಳಪತಿ ಚಿಯಾಂಗರು ಭಾರತದ ವಿಷಯ ವಿಶೇಷ ಆಸಕ್ತರಾಗಿರುವರೆಂದು ಅವರ ನಡೆನುಡಿಗಳಿಂದ ಚನ್ನಾಗಿ ವ್ಯಕ್ತವಾಗಿದೆ ಅಂತೂ ಬ್ರಿಟನಿಗೆ, ಅಮೆರಿಕ ಚೀನಗಳು ಏನಾದರೂ ಈಗ ಒತ್ತಾಯ ಮಾಡಿದರೆ ಸಮಸ್ಯೆ ಪರಿಹಾರವಾಗಲು ಸಾಧ್ಯವಿದೆ

ಈಗ ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಹನ್ನೊಂದು ಮಂದಿ ಭಾರತೀಯ ಸದಸ್ಯರಿದ್ದಾರೆ ಸರ್ ರೆಜಿನಾಲ್ಡ್ ಮೇಕ್ಸ್‌ವೆಲ್, ಸರ್ ಜೆರ್‌ಮಿರೇಜ್ ಮೆನ್ ಮತ್ತು ಸರ್ ಬಂತಾಲರ ಸ್ಥಳದಲ್ಲಿ ಭಾರತೀಯ ಸದಸ್ಯರನ್ನು ನೇಮಿಸುವ ಘೋಷಣೆಯನ್ನು ಬೇಗನೇ ಮಾಡಲಾಗುವುದೆಂಬ ಸುದ್ದಿ ಪ್ರಸಿದ್ಧವಾಗಿದೆ. ಹೀಗೆ ಇಡೀ ವೈಸರಾಯರ ಕಾರ್ಯಕಾರೀ ಮಂಡಳವೂ ಭಾರತೀಯ ಸದಸ್ಯರಿಂದ ಮಾಡಲ್ಪಟ್ಟಿದಾದರೆ ನಿಜವಾಗಿ ಅದೊಂದು ಪ್ರಶಂಸನೀಯ ಸುಧಾರಣೆಯೆನಬೇಕು.

ಭಾರತದ ಪ್ರಮುಖ ರಾಜಕೀಯ ಸಂಗಡಗಳನ್ನು ಸಮಾಧಾನಪಡಿಸಿ, ಅವುಗಳ ಪ್ರತಿನಿಧಿಗಳನ್ನು ಈ ಅಧಿಕಾರಗಳಲ್ಲಿರಿಸಿದರೆ ಇಂದಿನ ಈ ಗೊಂದಲವೇ ಉಂಟಾಗುತ್ತಿರಲಿಲ್ಲವೆಂಬದು ನಿಶ್ಚಯ. ಡಿಲ್ಲಿ ಹಾಗೂ ಲಂಡನಿನ ರಾಜಕೀಯಾಧಿಕಾರಿಗಳು ಈ ವಿಚಾರವನ್ನು ಮನಸ್ಸಿಗೆ ತಂದುಕೊಂಡು ಮುಂದಿನ ಸುಧಾರಣೆಯನ್ನು ಸಾಂಗಗೊಳಿಸಲಿ ಎಂದು ನಮ್ಮ ಹಾರೈಕೆಯಾಗಿದೆ.

ಮಹಾತ್ಮರ ಆರೋಗ್ಯ

ಮಹಾತ್ಮಾ ಗಾಂಧಿ ಹಾಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯ ಆರೋಗ್ಯದ ಕುರಿತು, ಸೆರೆಮನೆಗೊಯ್ದು ಇಪ್ಪತ್ತೊಂದು ದಿನಗಳ ಅನಂತರ, ಮುಂಬಯಿ ಸರಕಾರವು ಒಂದು ಸಣ್ಣ ಪ್ರಕಟಣೆ ಹೊರಡಿಸಿದೆ. ಅದರಲ್ಲಿ ಮಹಾತ್ಮರ ಹಾಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರ ಆರೋಗ್ಯವು ಚನ್ನಾಗಿರುವುದೆಂದು ಸಾರ್ವಜನಿಕರಿಗೆ ತಿಳಿಸಲಾಗಿದೆ.

''ಗಾಂಧಿಜಿಯವರು ಪ್ರತ್ಯೇಕ ಮನೆಯೊಂದರಲ್ಲಿದ್ದಾರೆ; ಅವರ ಸುಖ ಸೌಕರ್ಯಗಳಿಗೆ,ಬೇಕಾದುದನ್ನೆಲ್ಲಾ ಅವರಿಗೆ ಒದಗಿಸಿ ಕೊಡಲಾಗುತ್ತದೆ. ಅವರಿಗೆ ಬೇಕಾದ ಆಹಾರವನ್ನೂ ಕೊಡಲಾಗುತ್ತದೆ. ಅವರ ಹೆಂಡತಿ, ಅವರ ಅನುಯಾಯಿಗಳು ಹಾಗೂ ಅವರ ಸ್ವಂತ ಡಾಕ್ಟರರು ಅವರ ಬಳಿಯಲಿರುವರು. ವರ್ಕಿಂಗ್ ಕಮಿಟಿ ಸದಸ್ಯರನ್ನೂ ಒಳ್ಳೆಯ ಸ್ಥಳದಲ್ಲಿರಿಸಲಾಗಿದೆ. ವೈದ್ಯಕೀಯ ಇಲಾಖೆ ಅವರ ವಿಷಯ ಎಚ್ಚರ ನೋಡುತ್ತಿದೆ. ಅವರ ಕುಟುಂಬದ ಜನರೊಡನೆ ಖಾಸಗಿ ವಿಷಯ ಪತ್ರವ್ಯವಹಾರ ನಡೆಸಲು ಅವರಿಗೆ ಅವಕಾಶವಿದೆ. ಅವರಿಗೆ ಪತ್ರಿಕೆಗಳನ್ನೂ ಒದಗಿಸಿಕೊಡುತ್ತದೆ ಅವರ ಆರೋಗ್ಯ ಚನ್ನಾಗಿದೆ'

ಹೀಗೆಂದು ಸರಕಾರೀ ಪ್ರಕಟಣೆಯು ತಿಳಿಸುತ್ತದೆ. ಗಾಂಧಿಜಿ ಹಾಗೂ ಇತರ ದೇಶದ ಮುಂದಾಳುಗಳ ಆರೋಗ್ಯ ವಿಚಾರ ತಿಳಿಯಲು ಕಾತರರಾಗಿದ್ದವರು ಸರಕಾರದ ಈ ಪ್ರಕಟಣೆಯಿಂದ ಈಗ ಕುಸುಮಾತ್ರವೂ ಸಮಾಧಾನಪಟ್ಟುಕೊಳ್ಳಬೇಕಾಗಿದೆ ಆದರೆ ಸಾರ್ವಜನಿಕರ ಸಂಪೂರ್ಣ ಸಮಾಧಾನಕ್ಕಾಗಿ, ಸರಕಾರದವರು ಗಾಂಧಿಜಿ, ನೆಹರು, ಮೌಲಾನರೇ ಮೊದಲಾದ ನಿಷ್ಠವಂತ ಮುಖಂಡರ ಭೇಟಿಯಾಗಲು ಸಾರ್ವಜನಿಕರಿಗೆ, ಕನಿಷ್ಠ ಪಕ್ಷ ಪತ್ರಿಕಾ ಪ್ರತಿನಿಧಿಗಳಿಗೆ ಹಾಗೂ ಅವರ ಕುಟುಂಬದವರಿಗಾದರೂ ಅವಕಾಶ ಕಲ್ಪಿಸಿ ಕೊಡುವುದು ವಿಹಿತವಾಗುವುದು.

ಐದು ಡೊಮಿನಿಯನ್‌ಗಳು

ಭಾರತದ ಭಾವೀರಾಜ್ಯಾಂಗ ರಚನೆಯ ವಿಚಾರ ಮಾತನಾಡುತ್ತಾ ವೈಸರಾಯ್ ಕಾರ್ಯಕಾರೀ ಮಂಡಳದ 'ಡಿಫೆನ್ಸ್ ಮೆಂಬರ'ರಾದ ಸರ್ ಪಿರೋಜಖಾನ್ ನೂನರು ಆಲಿಘರ್ ವಿಶ್ವವಿದ್ಯಾನಿಲಯಗಳಲ್ಲಿ ಭಾಷಣ ಮಾಡುತ್ತಾ, ಹಿಂದೂದೇಶವನ್ನು ಐದು ಡೊಮಿನಿಯನುಗಳಾಗಿ (ಸ್ವತಂತ್ರ ರಾಷ್ಟ್ರಗಳಾಗಿ) ಮಾಡಬೇಕೆಂದು ಸೂಚಿಸಿನೆಯುತ್ತರು! ೧. ಬಂಗಾಳ ಮತ್ತು ಅಸ್ಸಾಂ ೨. ಮಧ್ಯ ಪ್ರಾಂತಸಂಯುಕ್ತ ಪ್ರಾಂತಗಳು ಮತ್ತು ಬಿಹಾರ್, ೩. ಮದ್ರಾಸು, ೪. ಬೊಂಬಯಿ, ೫. ಪಂಜಾಬ್, ಬಲೂಚಿಸ್ಥಾನ ಸಿಂಧ್ ಮತ್ತು ಗಡಿನಾಡು ಪ್ರಾಂತ. ಹೀಗೆ ಮಾಡಿದ ಐದು ಡೊಮಿನಿಯಗಳು ನ್ಯೂಜಿಲೇಂಡ್ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಗಳಂತೆ ಸ್ವತಂತ್ರ ರಾಷ್ಟ್ರಗಳಾಗಿರಬಹುದೆಂದು, ಅವರು ಹೇಳಿದರು.

ಸರ್ ನೂನರು ಈ ಐದು ಡೊಮಿನಿಯಗಳ ರಾಜ್ಯಭಾರದ ವಿಷಯ ವಿಸ್ತಾರವಾದ ವ್ಯಾಖ್ಯಾನ ಕೊಟ್ಟಿದ್ದಾರೆ ಈ ಐದು ಡೊಮಿನಿಯನುಗಳಿಗೂ ಮೇಲಾಗಿ ಒಂದು ಕೇಂದ್ರ ಸರಕಾರವಿರಬೇಕೆಂದೂ, ಸೈನ್ಯ ಮತ್ತು ರಕ್ಷಣಾ ವಿಚಾರ, ಸುಂಕ, ವಿದೇಶಾಂಗ ವಿಚಾರ ಹಾಗೂ ನಾಣ್ಯ ಚಲಾವಣೆ ಈ ಇಲಾಖೆಗಳು ಆ ಕೇಂದ್ರ ಸರಕಾರದ ವಶವಿರಬೇಕೆಂದೂ ಈ ಇಲಾಖೆಗಳ ಆಡಳಿತಗಳನ್ನು ನೋಡಿಕೊಳ್ಳಲು, ಐದು ಡೊಮಿನಿಯನುಗಳು ತಮ್ಮ ರಾಜ್ಯಗಳಿಂದ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ, ಕೇಂದ್ರ ರಾಜ್ಯಾಂಗ ಅಧಿಕಾರದಿಂದ ಪ್ರಾಂತಗಳು ಎಂದರೆ ಈ ಡೊಮಿನಿಯನುಗಳು ತಮಗೆ ಇಷ್ಟ ಬಂದರೆ ಪ್ರತ್ಯೇಕವಾಗುವ ಹಕ್ಕು ಇರಬೇಕೆಂದೂ ಅವರು ವಿವರಿಸಿರುವರು

ಹೀಗೆ ಸರ್ ನೂನರು ತಮ್ಮ ಬದ್ಧಿವಂತಿಕೆಯನ್ನುಪಯೋಗಿಸಿ ಭಾರತದ ಮೇಲೆ ಹೊಸತೊಂದು ಬಾಣ ಪ್ರಯೋಗಿಸಿದ್ದಾರೆ ಸಂಸ್ಥಾನಗಳ ಆತಂಕ, ಜಿನ್ನರ ಪಾಕಿಸ್ತಾನದ ಹಠ, ರಾಮಸ್ವಾಮಿ ನಾಯ್ಕರರ ದ್ರಾವಿಡ ಸ್ಥಾನದ ಸೂಚನೆ, ಅಂಬ್ಡೇಕರರ ದಳಿತ ಸ್ಥಾನದ ಕೆಕೆಗಳೊಂದಿಗೆ ಸರ್ ನೂನರ ಈ ಐದು ಡೊಮಿನಿಯನ್ ವಾದವೂ ಸೇರಿ ಭಾರತದ ರಾಜಕೀಯ ರಂಗದಲ್ಲಿ ಇನ್ನಷ್ಟು, ಸಮಸ್ಯೆಯನ್ನುಂಟುಮಾಡಲು ಆಸ್ಪದವಾಗಿದೆ.

ಚರ್ಚಿಲರಿಗೆ ಬಿನ್ನಹ

ಬ್ರಿಟಿಷ್ ಕಮ್ಯುನಿಸ್ಟ ಪಕ್ಷದವರ ಭಾರತದ ಸಮಸ್ಯೆ ವಿಚಾರದಲ್ಲಿ ಚರ್ಚಿಲರಿಗೊಂದು ಪತ್ರ ಬರೆದು, ಬ್ರಿಟನು ಕಾಂಗ್ರೆಸಿನೊಡನೆಯೂ ಇತರ ರಾಜಕೀಯ ಸಂಗಡಗಳೊಡನೆಯೂ ಸಂಧಾನ ಮಾಡಬೇಕೆಂದೂ, ಬ್ರಿಟನು ಭಾರತದ ಸ್ವಾತಂತ್ರ್ಯವನ್ನೊಪ್ಪಬೇಕೆಂದೂ, ಭಾರತದಲ್ಲಿ ಪ್ರಜಾಪ್ರತಿನಿಧ್ಯವುಳ್ಳ ರಾಷ್ಟ್ರೀಯ ಸರಕಾರವೊಂದನ್ನು ರಚಿಸಬೇಕೆಂದೂ, ಇಂತಹ ಸಂಧಾನವು ಫಲಕಾರಿಯಾಗಬೇಕಾದರೆ ಅಮೆರಿಯವರನ್ನು ಭಾರತ ಮಂತ್ರಿಪದವಿಯಿಂದ ತೆಗೆದುಹಾಕಬೇಕೆಂದೂ ಬಿನ್ನಹಮಾಡಿಕೊಂಡಿದ್ದಾರೆ.

ಪ್ರಪಂಚದ ಕಮುನಿಸ್ಟರೆಲ್ಲರೂ ಇಂದು ಫ್ಯಾಸಿಸ್ಟ ಆಕ್ರಮಣವನ್ನು ಇದಿರಿಸುತ್ತಿದ್ದಾರೆ—ಕಾಂಗ್ರೆಸ್ ಮೊದಲಾದ ಭಾರತದ ರಾಜಕೀಯ ಪಕ್ಷಗಳೆಲ್ಲರೂ ಫ್ಯಾಸಿಸ್ಟ ನೀತಿಯನ್ನು ಖಂಡಿಸುತ್ತಿರುವುದರಿಂದ, ಫ್ಯಾಸಿಸಂ ನಿರ್ನಾಮಕ್ಕೆ ಭಾರತದಿಂದ ಪರಿಣಾಮಕಾರಿಯಾದ ಬೆಂಬಲ ಸಿಗಬಹುದೆಂಬ ಆಶೆಯಿಂದ ಬ್ರಿಟಿಷ್ ಕಮುನಿಸ್ಟರು ಈ ವಿನಂತಿಯನ್ನು ಚರ್ಚಿಲರಿಗೆ ಮಾಡಿಕೊಂಡಿದ್ದಾರೆ ಇಂದಿನ ಸಂದರ್ಭದ ಸಮಾಲೋಚನೆ ಮಾಡಿ ಚರ್ಚಿಲರು ಈ ಬಿನ್ನಹವನ್ನು ಮನ್ನಿಸುವುದು ಬುದ್ಧಿವಂತಿಕೆಯಾಗುವುದು.

ನೋಟಗಳು....

ಆಗಸ್ಟ ಮೂವತ್ತೊಂದನೆಯ ತಾರೀಕಿನ ದಿನ ಮಧ್ಯರಾತ್ರಿ ವರೆಗೆ ಕಾದು ಕುಳಿತು ಗಡಿಯಾರದಲ್ಲಿ ಹನ್ನೆರಡು ಹೊಡೆಯುವಾಗ, ಮುಳ್ಳನ್ನು ಒಂದಕ್ಕೆ ತಿರುಗಿಸಿಟ್ಟು, ಕೆಲವರು ಸರಕಾರೀ ಅಪ್ಪಣೆಯನ್ನು ಅಕ್ಷರಶಃ ಪಾಲಿಸಿದರು.

ನಿದ್ರಾಭಂಗ ಮಾಡಲಾರದ ಕೆಲವರು ರಾತ್ರೆ ಮಲಗುವುದಕ್ಕಿಂತ ಮೊದಲೇ ತಮ್ಮ ಗಡಿಯಾರಗಳನ್ನು ಒಂದು ಗಂಟೆ ಮುಂದಕ್ಕೆ ತಿರುಗಿಸಿಟ್ಟು ಸುಖವಾಗಿ ಮಲಗಿ ನಿದ್ರೆ ಮಾಡಿದರು!

ಉಳಿದವರು, ಸಪ್ಟಂಬರ ಒಂದನೆಯ ತಾರೀಕಿನಂದು ಬೆಳಗ್ಗೆ ಎದ್ದೊಡನೆಯೇ ದುಡಿಬಿಡಿಯಿಂದ ಗಡಿಯಾರದ ಕಿವಿ ಹಿಂಡಿ ಅದನ್ನು ಒಂದು ಗಂಟೆ ಮುಂದೆ ಓಡಿಸಿದರು!

ಅಂತೂ ಹೀಗೆ ಸಪ್ಟಂಬರ ತಿಂಗಳಿಂದ ಹಿಂದೂದೇಶದ ಎಲ್ಲಾ ಸಣ್ಣ ದೊಡ್ಡ ಗಡಿಯಾರಗಳ ಮುಳ್ಳುಗಳೂ ಸರಕಾರೀ ಅಪ್ಪಣೆಯಂತೆ ಒಂದು ಗಂಟೆ ಮುಂದ ಹೋಗಿವೆ!

ಯುದ್ಧದಲ್ಲಿ ಮುಂದೆ ಹೋಗುವುದು ವಿಜಯದ ಸೂಚನೆಯಷ್ಟೆ? ಅಂತೆಯೇ ಯುದ್ಧಕಾಲದಲ್ಲಿ ಗಡಿಯಾರಗಳು ಮುಂದೆ ಹೋದದ್ದು ವಿಜಯ ಚಿಹ್ನೆಯೆಂದು ಯಾಕೆ ತಿಳಕೊಳ್ಳಬಾರದು?

ರೈಲು ಬಂಡಿಗಳ ಸಮಯ

ಗಾಡಿಗಳು ಹೊರಡುವ ಗಂಟೆ ತಲ್ಪುವ ಗಂಟೆ

ಮಲಬಾರು ಎಕ್ಸ್‌ಪ್ರೆಸ್ (ಮೈಲ್) 8.5 ಬೆಳಿಗ್ಗೆ 6 5 ಸಾಯಂ.

ಶಟ್ಲ್ (ಪೆಸೆಂಜರ್) ಸಾಯಂ. 5 25 9 55ಬೆ.

ಮಲಬಾರ್ ಎಕ್ಸ್‌ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಪುಸ್ತಕ ದೊರೆಯುವ ಸ್ಥಳ ಬೆಲೆ 1-4-0.

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಜಿಲ್ಲಾ ಸಮಾಚಾರಗಳು

ಮಂಗಳೂರು

ಸಾರ್ವಜನಿಕ ಸಭೆ

ತಾ. ೨೭ರಂದು ಸಂಜೆ ಮೈದಾನಿನಲ್ಲಿ ಒಂದು ಸಾರ್ವಜನಿಕ ಸಭೆ ಸೇರಿ, ಶ್ರೀಗಳಾದ ಕೃಷ್ಣ ಭಂಡಾರಿ, ವಿಜಯ ಸುವರ್ಣ, ಪದ್ಮನಾಭನ್ ಅವರು ಪ್ರಕೃತದ ರಾಜಕೀಯ ವಿಚಾರಗಳ ಕುರಿತು ಮಾತಾಡಿದರು ಮೌಲಾನಾ ಡಾ ಎಫ್. ಎಚ್. ಒಡೆಯರು ಅಧ್ಯಕ್ಷತೆ ವಹಿಸಿದ್ದರು.

ವಿದ್ಯಾರ್ಥಿಗಳ ಮುಷ್ಕರ ಮುಗಿಯಿತು

ಕಳೆದ ಬುಧವಾರ ಸಂಜೆ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ। ಕೆ. ವಿಠ್ಠಲ ಸೆಟ್ರಿ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳ ಮತ್ತು ಶಾಲಾ ಕಾಲೇಜುಗಳ ಹೆಡ್‌ಮಾಸ್ಟರ್, ಪ್ರಿನ್ಸಿಪಾಲರುಗಳ ಒಂದು ಸಭೆ ವಿದ್ಯಾರ್ಥಿಗಳ ಮುಷ್ಕರದ ಸಂಬಂಧವಾಗಿ ಆಲೋಚಿಸಲು ನೆರೆದಿತ್ತೆಂದೂ, ವಿದ್ಯಾರ್ಥಿ ಪ್ರತಿನಿಧಿಗಳು, ಮುಷ್ಕರ ಕಾಲವನ್ನು ರಜಾ ದಿನವಾಗಿ ಎಣಿಸಬೇಕೆಂದೂ, ಆಗ ಆದ ಪಾಠಗಳು ತಿರುಗಿ ಆಗಬೇಕೆಂದೂ, ತ್ರೈಮಾಸಿಕ ಪರೀಕ್ಷೆಯ ಸಮಯವನ್ನು ಮುಂದುವರಿಸಬೇಕೆಂದೂ, ತಾವು ತಾತ್ಕಾಲಿಕವಾಗಿ ಮುಷ್ಕರವನ್ನು ನಿಲ್ಲಿಸುವೆವೆಂದೂ ತಿಳಿಸಿದರೆಂದೂ, ಅಂತೆ ಮುಷ್ಕರವು ಕೊನೆಗೊಂಡು ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಹಾಜರಾಗಿರುವರೆಂದೂ ತಿಳಿದಿದೆ

ಮಂಗಳೂರು ಮುನ್ಸಿಪಲ್ ಕೌನ್ಸಿಲ್

ಕಳೆದ ಸೋಮವಾರ ಸಂಜೆ, ಮುನ್ಸಿಪಲ್ ಕೌನ್ಸಿಲಿನ ಸಭಾಭವನದಲ್ಲಿ ಮು॥ ಕೌ॥ ಸಭೆಯು ಚೇಯರ್‌ಮೆನ್ ಶ್ರೀ। ಬಿ ವೆಂಕಟರಾವ್ ಬಾಳಿಗ ಎಂ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರುಗಿತು, ಶ್ರೀ। ಮಹಾದೇವ ದೇಸಾಯಿಯವರ ನಿಧನದ ಕುರಿತು, ಸಭಾರಂಭ ಕಾಲದಲ್ಲಿ, ಶ್ರೀ। ಎಂ ಮಾಧವರಾಯರು ಪ್ರಸ್ತಾಪಿಸಿ, ಅವರ ಗುಣಕಥನಮಾಡಿ, ಸಂತಾಪ ಸೂಚಿಸಿದ ಮೇಲೆ, ಸಭಾ ಕಾರ್ಯಗಳು ೫ ನಿಮಿಷಗಳ ವರೆಗೆ ಮುಂದುವರಿಸಲ್ಪಟ್ಟವು ಭಗಿನೀ ಸಮಾಜದವರು ಉರ್ವ ಮೈದಾನಿನಲ್ಲಿ ಕೆಲಸಗಾರರ ತರಗತಿಯವರಿಗಾಗಿ ನಿರ್ಮಿಸಬೇಕೆಂದಿರುವ ಒಂದು ಮಾತೃಮಂದಿರ, ಕ್ಲಿನಿಕ್ ಹಾಗೂ ಡಿಸ್ಪೆನ್ಸರಿಗಳ ಬಗಗೆ ತಮಗೆ ಕೊಡಿಸಬೇಕಾಗಿ ಸ್ಥಳವನ್ನು ಅಪೇಕ್ಷಿಸಿ ಅವರೇ ಮಾಡಿಕೊಂಡ ಮನವಿಯ ವಿಚಾರಕ್ಕಾಗಿ ಒಂದು ಕಮಿಟಿಯು ನೇಮಕವಾಯಿತು ಅಲ್ಲದೇ ಕದ್ರಿಯ ವಿದ್ಯಾಬೋಧಿನಿ ಶಾಲೆಯ ಕಟ್ಟಡದ ವಿಸ್ತರಣ ಹಾಗೂ ಒಂದು ಆಟದ ಬಯಲಿಗಾಗಿ ಸ್ಥಳ ಕೊಡಿಸಬೇಕೆಂದು ಮಾಡಿಕೊಳ್ಳಲಾದ ವಿನಂತಿಯ ಸಂಬಂಧ ಅದಕ್ಕಾಗಿ ನೇಮಿಸಲ್ಪಟ್ಟ ಕಮಿಟಿಯ ತೀರ್ಮಾನವನ್ನು—ಕೆಲವು ಶರ್ತಗಳಿಗೊಳಪಟ್ಟು ೭೩ ಸೆಂಟ್ಸ್ ಜಾಗ ಕೊಡಬಹುದೆಂಬ ನಿರ್ಧಾರವನ್ನು—ಕೆಲ ಸದಸ್ಯರು ಸಮರ್ಥಿಸಲಾಗಿ ಶ್ರೀ ಎಂ ಎಸ್ ಶ್ರೀಷರು ಅದನ್ನು ವಿರೋಧಿಸುತ್ತಾ 'ಮೈದಾನಿನಲ್ಲಿ ಹಾಗೆ ಸ್ಥಳ ಕೊಡಕೂಡದು, ಜಿಲ್ಲಾ ಕಲೆಕ್ಟರರೂ ಅದನ್ನು ಮಂಜೂರು ಮಾಡಲಾರರು' ಎಂದು ವಾದಿಸಿದರು ಕೊಂಚ ಚರ್ಚೆ ನಡೆದು—ಮತ ತೆಗೆಯಲಾಗಿ ಪ್ರತಿಕೂಲವಾದ ಒಂದು ಮತದ ಹೊರತು, ಹಾಜರಿದ್ದ ಇತರ ಮೆಂಬರರೆಲ್ಲ ಕಮಿಟಿಯ ತೀರ್ಮಾನದ ಪರವಾಗಿಯೇ ಓಟುಮಾಡಿದರು

ನೇಮಕ ವರ್ಗಾವರ್ಗಿಗಳು

ಡೆ. ಪೊ ಸುಪರಿಂಟೆಂಡೆಂಟ್ ರಾವ್ ಸಾಹೇಬ್ ಗೋಪಾಲ ಅಯ್ಯರರಿಗೆ ತಿರುವತ್ತೂರಿಗೆ ವರ್ಗವಾಗಿರುವುದರಿಂದ ರಾವ್ ಸಾಹೇಬ್ ಜಿ ಆರ್ ದೇವರಾಜ ಅಯ್ಯಂಗಾರ್ಯರು ಇಲ್ಲಿಗೆ ನೇಮಕ ಪಟ್ಟಿದ್ದಾರೆ

"ಮಂಗಳೂರಿನ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಎಸ್ ರಾಜನ್‌ರವರಿಗೂ ಉಡುಪಿ ಸರ್ಕಲ್ ಇನ್ಸ್‌ಪೆಕ್ಟರ್ ಜಿ ಗಣೇಶ ಸುಂದರರಾಯರಿಗೂ ಸೇಲಮಿಗೆ ವರ್ಗವಾಗಿದೆ ಶ್ರೀ. ಸೇತು ಮಾಧವ ಮೆನೋನ್‌ರವರು ಮಂಗಳೂರಿನ ಸರ್ಕಲ್ ಇನ್ಸ್‌ಪೆಕ್ಟರರಾಗಿ ನೇಮಕಪಟ್ಟಿದ್ದಾರೆ.

ಶ್ರೀ. ಎಂ. ಪಿ. ಪೈ. ಐ ಸಿ. ಎಸ್. ಇವರು ೩ ವರ್ಷಗಳ ಬಗ್ಗೆ ವಿಕ್ಟೋರಿಯಾ ಜ್ಯುಬಿಲಿ ಇನ್‌ಸ್ಟಿಟ್ಯೂಟಿನ ಗವರ್ನಮೆಂಟ್ ಮೆಂಬರರಾಗಿ ಆರಿಸಲ್ಪಟ್ಟಿದ್ದಾರೆ.

ಶ್ರೀ ವಿ. ಎನ್. ಕುಡ್ವ, ಎಂ, ಎ. ಐ ಸಿ. ಎಸ್., ಇವರು ಗವರ್ನಮೆಂಟ್ ಲೋಕಲ್ ಎಡ್ಮಿನಿಸ್ಟ್ರೇಶನ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಗಳಾಗಿ ಮೊಳರೂರಾಗಿದ್ದಾರೆ

ಮುನಿಸಿಪಲ್ ಹೆಲ್ತ್ ಆಫೀಸರ್ ಡಾ ಕೆ ಆರ್ ವೆಂಕೋಬರಾಯರು ಬಳ್ಳಾರಿಗೂ, ನೀಲಗಿರಿಯ ಡಾ ಬಾಲಕೃಷ್ಣ ಚೆಟ್ಟಿಯವರು ಮಂಗಳೂರಿಗೂ ವರ್ಗಾಯಿಸಲ್ಪಟ್ಟಿದ್ದಾರೆ

ಡಿಸ್ಟ್ರಿಕ್ ಜಡ್ಜ್ ರಾವ್ ಸಾಹೇಬ್ ಎಲ್ ಎಸ್ ಪಾರ್ಥಸಾರಥಿ ಐಯ್ಯರರು ತಂಜಾವೂರಿಗೂ, ಕಡಪಾ ಜಿಲ್ಲೆಯ ಶ್ರೀ ಎಮ್ ಬಲರಾಮ ರೆಡ್ಡಿಯವರು ಮಂಗಳೂರಿಗೂ ವರ್ಗಾಯಿಸಲ್ಪಟ್ಟಿದ್ದಾರೆ

ನಮ್ಮ ಜಿಲ್ಲೆಯವರಾದ ಶ್ರೀ. ಎಂ ರಾಮಚಂದ್ರರವರು ಚೆಂಗಲ್ಪಟ್ಟಿನಿಂದ ಕಡಪ್ ಡಿಸ್ಟ್ರಿಕ್ಟ್ ಜಡ್ಜರಾಗಿ ನೇಮಕಪಟ್ಟಿದ್ದಾರೆ

ಆರ್ ಆರ್ ತಲ್ಚೇರಿಕರರ ರಾಜಿನಾಮೆ

ಸ್ವತಂತ್ರ ಪಕ್ಷದ ಮುನ್ಸಿಪಲ್ ಕೌನ್ಸಿಲರಾದ ಶ್ರೀ ರಂಗರಾವ್ ತಲ್ಚೇರಿಕರರು ಸರಕಾರದ ದಬ್ಬಾಳಿಕೆಯ ನೀತಿಯನ್ನು ನಿಷೇಧಿಸಿ ತಮ್ಮ ಮುನ್ಸಿಪಲ್ ಸದಸ್ಯತ್ವಕ್ಕೆ ರಾಜಿನಮೆಯಿತ್ತಿರುವರು

ಡಾ। ಗಿರಿಧರರಾಯರು

ನಗರಸಭೆಯ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರೆಂದು ತಿಳಿದಿದೆ ಇವರು ಕಾಂಗ್ರೆಸ್ ಪಕ್ಷದವರು

ಉಪ್ಪಿನಂಗಡಿ

ಕಳೆದ ವಾರ ಜರಗಿದ ಉಪ್ಪಿನಂಗಡಿ ಪಂಚಾಯತ ಬೋರ್ಡು ಮೀಟಿಂಗಿನಲ್ಲಿ ಶ್ರೀ। ಬಿ ವೆಂಕಪ್ಪ ರೈಗಳು ತಂದ ೧ ಮಹಾದೇವ ದೇಸಾಯಿಯವರ ಆಕಸ್ಮಿಕ ಮೃತ್ಯು ಅಕಾಲಿಕ ನಿಧನಕ್ಕಾಗಿ ಸಂತಾಪ ಸೂಚಿಸುವ ಮತ್ತು ೩ ಸರಕಾರವು ಕೈಕೊಂಡ ದಬ್ಬಾಳಿಕೆಯನ್ನೂ ಇದರಿಂದ ದೇಶದಲ್ಲುಂಟಾದ ಹಿಂಸಾತ್ಮಕ ಅನಾಹುತಗಳನ್ನೂ ನಿಷೇಧಿಸುವ ಎರಡು ಠರಾವುಗಳು ಮಂಜೂರಾದುವು

ಕಾಸರಗೋಡು

ಬಿಡುಗಡೆ

ಚರ್ವತ್ತೂರಿನ ಕಮ್ಯೂನಿಸ್ಟ್ ಕೆಲಸಗಾರರಾದ ಶ್ರೀ। ಎನ್ ಎಸ್ ನಂಬೂತಿರಿಯವರು, ವೆಲ್ಲೂರು ಜೈಲಿನಿಂದ ನಿರುಪಾಧಿಕವಾಗಿ ಬಿಡುಗಡೆ ಹೊಂದಿರುವರು

ನಿಷೇಧ ಸೂಚಕ ಸಭೆ

ಕಾಸರಗೋಡು ತಾಲೂಕು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಕಳೆದ ವಾರ ನೀಲೇಶ್ವರ ಮೈದಾನಿನಲ್ಲಿ ಶ್ರೀ। ವಿ ವಿ ಕಂಞಂಬು ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು ಹೊಸದುರ್ಗ, ಪೆರಿಯ, ಮಡಿಕ್ಕೈ, ಚರ್ವತ್ತೂರು, ತ್ರಿಕರಪುರ ಮೊದಲಾದ ಹಲವೆಡೆಗಳಿಂದ ಸಾವಿರಾರು ಮಂದಿ ರೈತರು ಜಾಥಗಳಾಗಿ ಬಂದಿದ್ದರು ಶ್ರೀ। ಸಿ ಎಚ್ ಕಣಾರನ್‌ರವರು, ಸರಕಾರದ ದಬ್ಬಾಳಿಕೆಯನ್ನು ಖಂಡಿಸಿದರು ಅಂದೇ ರೈಲ್ವೇ ಸ್ಟೇಶನಿನ ಬಳಿ ಜೇವೊಂದು ಸಭೆ ಸೇರಿತು ಅಲ್ಲಿ ಶ್ರೀ ಟಿ ಎಸ್ ತಿರುಮುಂಬು ಅವರು ರಾಷ್ಟ್ರೀಯ ಸರಕಾರದ ಸ್ಥಾಪನೆಯ ಅವಶ್ಯಕತೆಯ ಕುರಿತು ಮಾತನಾಡಿ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರ ಕರ್ತವ್ಯಗಳ ಕುರಿತು ಹೇಳಿದರು

ಹೊಸದುರ್ಗ

ನೀಲೇಶ್ವರದಿಂದ ಬೆಳಗ್ಗೆ ಹೊರಟ ಮೆರವಣಿಗೆಯು ಸಂಜೆಗೆ ಇಲ್ಲಿನ ಮೆಜಿಸ್ಟ್ರೇಟ್ ಕೋರ್ಟಿನ ಮೈದಾನಿನಲ್ಲಿ ಸೇರಿದ ಸಭೆಗೆ ಒಂದು ತಲಪಿತು ಶ್ರೀ। ಗೋಪಾಲ ಎಂ ಕುಂಞಂಬು ನಾಯರ್ ಮತ್ತು ನಾರಾಯಣನ್ ನಂಬ್ಯಾರರು ಮಾತನಾಡಿದರು

ಪುತ್ತೂರು

ಕೊಲೆ

ಕಳೆದ ತಾ ೨೪ರಲ್ಲಿ ಇಲ್ಲಿಯ ಬಿಲ್ಲವರಕೇರಿಗೆ ಹೋಗುತ್ತಿದ್ದ ಸುಮಾರು ೬ ವರ್ಷ ಪ್ರಾಯದ ಬಾಲಿಕನೋರ್ವನ ಕುತ್ತಿಗೆ ಹಿಸುಕಿ ಅವನ ಕಿವಿಯಲ್ಲಿದ್ದ ಒಂಟೆಯನ್ನು ಹದಿನೆಂಟು ವರ್ಷ ಪ್ರಾಯದವನೊಬ್ಬನು ಅಪಹರಿಸಿರುತ್ತಾನಾಗಿ ತಿಳಿದುಬಂದಿದೆ ಹುಡುಗನ ದೇಹವನ್ನು ಬಾವಿಗೆ ಹಾಕಿದ್ದನಾಗಿಯೂ ತಿಳಿದುಬರುತ್ತದೆ. ಅಪಾದಿತನನ್ನು ಬಂಧಿಸಿದ್ದಾರೆಂದು ಗೊತ್ತಾಗಿದೆ. ಒಂಟೆಯ ಮೌಲ್ಯವು ಸುಮಾರು ರೂ. ೨ ಇರಬಹುದಂತೆ!



ಬೆಳ್ತಂಗಡಿ

ಕಾಂಗ್ರೆಸ್ ಮುಖಂಡರ ಬಂಧನದ ಕುರಿತು ಇಲ್ಲಿ ಹರತಾಳ ಆಚರಿಸಲ್ಪಟ್ಟು ಮೆರವಣಿಗೆಯು ಜರುಗಿ ಇಲ್ಲಿಯ ಪಂಚಾಯತ ಬೋರ್ಡು ಆಫೀಸು ಕಟ್ಟಡದ ಮುಂದೆ ಶ್ರೀ। ಬಿ ಯನ್ ಭಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಹಲವರ ಭಾಷಣಗಳಾದುವು ಶ್ರೀ। ಮಹಾದೇವ ದೇಸಾಯರ ನಿಧನದ ಕುರಿತು ಸಂತಾಪ ಸೂಚಿಸಿ ಠರಾವೂ ಆಯಿತು

ಕಾರ್ಕಳ

ರಾಜಿನಾಮೆ

ಇಲ್ಲಿಯ ವಕೀಲ ಶ್ರೀ। ಯಂ ಯಸ್ ಅಧಿಕಾರಿಯವರು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಲು ಕುಂದಾಪುರ ಡಿವಿಜನಿನ ಡೆಟ್ ಕನ್ಸಿಲಿಯೇಶನ್ ಬೋರ್ಡಿನ ತಮ್ಮ ಮೆಂಬರಿಕೆಗೆ ರಾಜಿನಮೆಯನ್ನು ಕಳುಹಿಸಿದ್ದಾರೆಂದು ತಿಳಿದುಬರುತ್ತದೆ

ವ್ಯಾಪಾರಿಗಳ ಸಂಘ

ವ್ಯಾಪಾರಿಗಳ ಹಿತ ಶಕ್ತಿಗಳನ್ನು ಕಾಪುಕೊಳ್ಳುವುದರೊಂದಿಗೆ, ಸಮಯಾನುಕೂಲ ದೇಶ ಸೇವೆಯನ್ನು ಮಾಡಬೇಕಾಗಬೇಕೆಂದು ಇಲ್ಲಿಯ ವ್ಯಾಪಾರಿಗಳು ಶ್ರೀ ಕೆ ಗಣಪತಿ ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಕೂಡಿ ತಮ್ಮದೊಂದು ವ್ಯಾಪಾರಿ ಸಂಘವನ್ನು ಸ್ಥಾಪಿಸಿದರು

ಉಡುಪಿ

ನಗರ ಸಭೆ

ಉಡುಪಿ ನಗರ ಸಭೆಯಲ್ಲಿ ದಿವಂಗತ ಶ್ರೀ। ಮಹದೇವ ದೇಸಾಯರ ಆಕಸ್ಮಿಕ ನಿಧನದ ಕುರಿತು ಸಂತಾಪ ಸೂಚಿಸಲಾಯಿತು ದಿವಂಗತರ ಗೌರವಾರ್ಥವಾಗಿ ಸಭಾ ಕಾರ್ಯಗಳೆಲ್ಲವನ್ನೂ ಮುಂದರಿಸಲಾಯಿತು. ಸಭಾರಂಭದ ಪೂರ್ವದಲ್ಲಿ ಮಹಾತ್ಮಾಜಿ ಮತ್ತು ಪಂಡಿತ ನೆಹರುಗಳ ಭಾವಚಿತ್ರಗಳಿಗೆ ಶ್ರೀ। ಆರ್ ಎ ಸ್ವಾಮನ್ನರು ಪುಷ್ಪಮಾಲಿಕೆಗಳನ್ನಿತ್ತು ರಾಷ್ಟ್ರ ಧ್ವಜವನ್ನು ಗೌರವಿಸಿದರು ಸಭಾ ಮಂಟಪದಲ್ಲಿ ಹಾಜರಿದ್ದ ಕಾಂಗ್ರೆಸ್ ಜನರು ರಾಷ್ಟ್ರಗೀತೆಯನ್ನು ಹಾಡಿದರು

ಶ್ರೀ। ಎಮ್ ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ದಿವಂಗತ ಮಹದೇವ ದೇಸಾಯಿಯವರ ಆತ್ಮಕ್ಕೆ ಶಾಂತಿ ಕೋರಲಾಯಿತು

ಸ್ಟೂಡೆಂಟ್ಸ್ ಯೂನಿಯನ್ ಸ್ಥಾಪನೆ

ಸ್ಥಳೀಯ ಬೋರ್ಡ್ ಹೈಸ್ಕೂಲ್ ಕ್ರಿಶ್ಚಿಯನ್ ಹೈಸ್ಕೂಲು ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಗಳ ಸಭೆಯೊಂದು ತಾ ೨೩ರಂದು ಶ್ರೀ। ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ। ಕೆ ಕೆ. ಶೆಟ್ರಿ ಅಧ್ಯಕ್ಷತೆಯಲ್ಲಿ ಜರಗಿ ಉಡುಪಿ ಸ್ಟೂಡೆಂಟ್ಸ್ ಯೂನಿಯನ್ ಸ್ಥಾಪನೆಯಾಯಿತು ಕಾರ್ಯಕಾರಿ ಮಂಡಲಿಯ ರಚನೆಯೂ ಆಯಿತು

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಶ್ರೀ। ಮಂಜೇಶ್ವರ ಗೋವಿಂದ ಪೈಗಳ ಲೇಖನದ ತಲೆಕಟ್ಟಿನಲ್ಲಿ 'ತಮಿಳು ನಾಡಿನಲ್ಲಿ' ಎಂದಿರುವುದನ್ನು 'ತುಳುನಾಡಿನಲ್ಲಿ' ಎಂದು ತಿದ್ದಿ ಓದಬೇಕು,

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ಸಿನೆಮಾ ಪುಟ

ದೇವಿಕಾ ರಾಣಿ ಬೊಂಬೇ ಟಾಕೀಸ್ ಬಿಡುವಳೇ?

ದೇವಿಕಾರಾಣಿ ಬೊಂಬೇ ಟಾಕೀಸನ್ನು ಬಿಟ್ಟು ತನ್ನ ಸ್ವಂತ ಕಂಪೆನಿಯೊಂದನ್ನು ಪ್ರಾರಂಭಿಸುವಳೆ? ತನ್ನ ಪತಿ ಹಿಮಾಂಶುರೈಯಿಂದ ಸ್ಥಾಪಿತವಾದ ಕಂಪೆನಿಯನ್ನು ಬಿಟ್ಟುಬಿಡುವ ಪ್ರಸಂಗ, ಸಂದರ್ಭವು ಹೀಗೆಯೇ ಉಳಿದರೆ_ಆಕೆಗೆ ಬರಲೂ ಬಹುದೆಂದು 'ರೂಪವಾಣಿ' ಪತ್ರಿಕೆಯ ಬೊಂಬೇ ಬಾತ್ಮಿದಾರನ ಹೇಳಿಕೆಯಾಗಿದೆ.

ಹಿಮಾಂಶುರೈ ಗತಿಸಿದ ಬಳಿಕ ಬೊಂಬೇ ಟಾಕೀಸಿನ ಕಡೆಯಿಂದ ಎರಡು ಸಿನೆಮಾ ತಯಾರಿ ಸಂಸ್ಥೆಗಳು ದೇವಿಕಾರಾಣಿ ಮತ್ತು ಶಶಧರ ಮುಖರ್ಜಿ ಇವರ ಆಡಳಿತದಲ್ಲಿ ಸ್ಥಾಪಿತವಾಗಿದ್ದು, ಶಶಧರ ಮುಖರ್ಜಿಯವರು ಇತ್ತೀಚೆಗೆ ಬಹಳ ಆತಂಕ ಮಾಡುತ್ತಿರುವುದರಿಂದಾಗಿ ದೇವಿಕಾರಾಣಿ ರಾಜಿನಾಮೆ ಕೊಡುವ ಸಂದರ್ಭ ಬರಬಹುದೆಂದು ಹೇಳಲಾಗಿದೆ.

ರಾಜಕುಮಾರನು ಸಿನೆಮಾ ತಾರೆಯನ್ನು ಮದುವೆಯಾಗಿ ಪಟ್ಟ ಬಾಹಿರನಾದನೆ?

ಬೇಬಿ ನೂರ್‌ಜಹಾನಳನ್ನು ಹೋಳಿಯ ರಾಜಕುಮಾರನು ಮದುವೆಯಾದ ವಿಷಯವಾಗಿ, ಆತನ ಸನಾತನ ಸಂಪ್ರದಾಯದ ತಂದೆಯು ಸಿಟ್ಟಿಗೆದ್ದಿರುವನೆಂದು ಸುದ್ದಿಯಿದೆ. ಸಿನೆಮಾ ತಾರೆಯೊಡನೆ ಮದುವೆಯಾದ ತನ್ನ ಮಗನು ತನ್ನ ಸಂಸ್ಥಾನದ ಗಡಿಯೊಳಗೆ ಕಾಲಿಡಬಾರದೆಂದು ಅರಸನು ಆಜ್ಞೆ ವಿಧಿಸಿರುವುದಲ್ಲದೆ, ತನ್ನ ಪವಿತ್ರ ಪಟ್ಟಕ್ಕೆ ಆತನಿಗೆ ಅಧಿಕಾರವಿಲ್ಲವೆಂದೂ ಜಾಹೀರು ಮಾಡಿರುವನೆಂದೂ ತಿಳಿದುಬರುತ್ತದೆ

ಆಲ್ಮೋರಾ ನೃತ್ಯಕೇಂದ್ರ

ಆಲ್ಮೋರದಲ್ಲಿರುವ ಉದಯಶಂಕರ ನೃತ್ಯಕೇಂದ್ರದ ವ್ಯವಸ್ಥಾಪಕರಾದ ಶ್ರೀ. ಜೋರ್ಜ್ ಎ. ಬಿರ್ಸೆ ಮತ್ತು ಶ್ರೀಮತಿ ಬಿರ್ಸೆ ಇವರನ್ನು ಅಮೆರಿಕಾ ಸರಕಾರವು ಸ್ವದೇಶಕ್ಕೆ ಬರಲು ಆಹ್ವಾನಿಸಿತ್ತು. ಆದರೆ ಬಿರ್ಸೆಯವರು ಬೊಂಬಾಯಿಗೆ ತೆರಳಿ, ಅಲ್ಲಿಂದ, ತಾವು ಹಿಂದೂದೇಶದಲ್ಲೆ ಇರುವ ವ್ಯವಸ್ಥೆ ಮಾಡಿ ನೃತ್ಯಕೇಂದ್ರಕ್ಕೇ ಮರಳಿರುವರು. ಬಿರ್ಸೆಯವರ ವ್ಯವಸ್ಥಾಪಕತೆಯ ಅನುಭವದ ಪ್ರಯೋಜನವು ಇನ್ನೂ ದೊರಕುವಂತಾಗಿದೆ.

ಪ್ರಭಾತ ಕುಮಾರ ಗಂಗೊಳ್ಳಿಯವರೊಡನೆ ಮೇಡಾಮ್ ಸಿಮ್ಕಿಯ ವಿವಾಹವಾಯಿತಷ್ಟೆ? ಈ ವಿವಾಹ ಸಮಾರಂಭದ ಔತಣ ಕೂಟದಲ್ಲಿ ಉದಯಶಂಕರರು ಮಾತನಾಡುತ್ತಾ ಸಿಮ್ಕಿ ವಿಚಾರವಾಗಿ ಬಹಳ ಪ್ರಶಂಸೆಯ ಮಾತುಗಳನ್ನು ಹೇಳಿದರು "ಸಿಮ್ಕಿ ಬಗೆದಿದ್ದರೆ ಯಾವನೋ ರಾಜಕುಮಾರನನ್ನು ವಿವಾಹವಾಗಬಹುದಿತ್ತು ಐಶ್ವರ್ಯದಲ್ಲಿ ತೇಲಾಡಬಹುದಿತ್ತು. ಆದರೆ ನಮಗೆಲ್ಲರಿಗೂ ಪ್ರಿಯರಾದ ಪ್ರಭಾತ ಕುಮಾರರನ್ನು ಮದುವೆಯಾಗಿ ನೃತ್ಯ ಕೇಂದ್ರದಲ್ಲೇ ಇರಲು ಸಮ್ಮತಿಸಿದ್ದು ನಮ್ಮ ಭಾಗ್ಯ ಎಂದರು. ಸಿಮ್ಕಿ ಯೂರೋಪಿನ ಪ್ರವಾಸದಲ್ಲಿ ಉದಯಶಂಕರರೊಡನೆ ಜತೆಗಾತಿಯಾಗಿ ನೃತ್ಯ ಮಾಡಿದಾಕೆ!

'ತುಟಿಗಳ ಸಂದೇಶ'

ರಣಜಿತ್ ಸ್ಟುಡಿಯೋದವರು 'ತುಟಿಗಳ ಸಂದೇಶ' ಎಂಬ ಚಿತ್ರವನ್ನು ತಯಾರಿಸಲು ಸುರು ಮಾಡಿದ್ದಾರೆ. ಸಾಧನಾ ಮತ್ತು ಸುರೇಂದ್ರ ಇವರು ನಾಯಕ ನಾಯಿಕೆ ಪಾತ್ರ ವಹಿಸುವರು ರಣಜಿತ್ ಕಂಪೆನಿಯವರು ಸುಖದುಃಖ, ಸೂರ್‌ದಾಸ್, ಚಂದನಿ, ತ್ಯಾಗ, ಧೀರಾಜ ಮತ್ತು ನರ್ಸ್ ಎಂಬೀ ಚಿತ್ರಗಳ ದೊಡ್ಡ ಕಾರ್ಯಕ್ರಮ ಕೈಕೊಂಡಿದ್ದಾರೆ.

ನಯಿಾ ಕಹಾನಿ

ಅಹಮ್ಮದ್ ಅಬ್ಬಾಸರ ಕತೆ 'ನಯಿಾ ಕಹಾನಿ' ಯನ್ನು ಪ್ರಭಾತ ಕಂಪನಿಯವರು ಸಿನೆಮಾವಾಗಿ ತಯಾರಿಸುತ್ತಾರೆಂದು ಸುದ್ದಿ. ಶಶ್ಯಕರು ಇದನ್ನು ನಿರ್ದೇಶಿಸುವರು ಇವರ 'ದಸ್ ಬಜೆ' ಚಿತ್ರವು ಪೂರ್ಣವಾಗುತ್ತಲಿದೆ. ರಾಜಾ ನೆನೆಯೆವರು ಇದರ ನಿರ್ದೇಶಕರು. 'ದಸ್ ಬಜೆ'ಯಲ್ಲಿ ಅಭಿನಯಿಸುವವರೆಲ್ಲಾ ಹೊಸ ನಟನಟಿಯರು.

ವಿಜ್ಞಾನ - ವಿಚಿತ್ರ

ವಜ್ರದ ಬಣ್ಣ ಹಸುರೇಕೆ?

ಸರ್ ರಾಮನರ ನೂತನ ಸಂಶೋಧನೆ

'ಸರ್ ಸಿ. ವಿ. ರಾಮನ್ ಇಷ್ಟರವರೆಗೆ ಬೆಳಕು, ಧ್ವನಿ, ಎಕ್ಸ್‌ರೇ, ರೇಡಿಯೋ ಚಲನೆ ಮೊದಲಾದ ವಿಚಾರಗಳಲ್ಲಿ ಅನೇಕ ಸಂಶೋಧನೆ ನಡೆಸಿದ್ದಾರೆ. ಅವರ ಪ್ರಸಿದ್ಧ ಸಂಶೋಧನೆಯಾದ 'ರಾಮನ್ ಇಫೆಕ್ಟ್' ಎಂಬುದರ ಕುರಿತು ಇಷ್ಟರಲ್ಲೇ ಸಾವಿರಾರು ಪ್ರಬಂಧಗಳು ಚರ್ಚೆಗಳು ಆಗಿವೆ 'ನಮ್ಮ ಜೀವನದ ಗುಟ್ಟೇನು?' ಎಂದು ಸರ್ ರಾಮನರನ್ನು ಕೇಳಿದರೆ 'ಸತ್ಯಶೋಧನೆ' ಎಂದುತ್ತರವಿತ್ತರು ಅವರು. 'ವಜ್ರಗಳು ಹಸುರು ಬೆಳಕನ್ನೇಕೆ ಬೀರುವವು?' ಎಂಬೀ ವಿಷಯದಲ್ಲಿ ಈಗ ಸಂಶೋಧನೆ ನಡೆಸಲು ಅವರು ನಿರತರಾಗಿದ್ದು, ಅದಕ್ಕಾಗಿ ಒಂದು ಪ್ರಯೋಗಶಾಲೆಯನ್ನು ನಿರ್ಮಿಸಿದ್ದು ಅಲ್ಲಿ ಪ್ರಯೋಗ ನಡೆಸಲೆಂದೇ ಅವರು ಸಾವಿರಾರು ರುಪಾಯಿ ಬೆಲೆ ಬಾಳುವ ವಜ್ರಗಳನ್ನು ತರಿಸಿಕೊಂಡಿದ್ದಾರೆ" ಎಂದು ಬೊಂಬೇ ಕ್ರಾನಿಕಲಿನಲ್ಲಿ ಒಂದು ಲೇಖನ ಬಂದಿದೆ

ಹೆಸರಿನಲ್ಲಿ ಸಾದೃಶ್ಯ

ಅಮೆರಿಕದ ಉತ್ತರ ಕೆಲಿಫೋರ್ನಿಯೊದಲ್ಲಿರುವ ಕೋಕ್ಸ್ ಎಂಬವರ ಸಂಸಾರದಲ್ಲಿ ಹನ್ನೊಂದು ಮಂದಿ ಗಂಡು ಮತ್ತು ಹೆಣ್ಣು ಮಕ್ಕಳು ಇದ್ದಾರೆ ಅವರೆಲ್ಲರಿಗೂ 'ಝ'ದಿಂದ ಪ್ರಾರಂಭವಾಗುವ ಹೆಸರುಗಳೇ: ಝೀಡಿ, ಝಿಲ್ಪಿಯಾ, ಝುಲ್, ಝೂಡೋಕ್, ಝುಟೇರ್, ಝುನೋಬಿಯ, ಝುರೆಡೀನಿಯಲ್, ಝುಕ್ಷಿ, ಝೂಲಾ, ಝಿರೋ, ಮತ್ತು ಝುಲ್ಬರ್ಟ್ ಎಂದು ಅವರ ನಾಮಮಾಲಿಕೆಗಳು!

ಪ್ರಥಮ ಯುದ್ಧ ವಾರ್ತಾ ವಾಹಕರು!

ಕೋರ್ಟೆಜ್ ಮತ್ತು ಅವನ ಸ್ಪೇನಿಯಾರ್ಡರು ಮೆಕ್ಸಿಕೋವಿಗೆ ಆಕ್ರಮಿಸಿದಾಗ ಅದರ ಅರಸನಾದ ಮೊಂಡಿಜುಮಾನು ಆಕ್ರಮಣಗಾರರ ವಿಚಾರ ವರದಿಮಾಡಲು ಕೆಲವು ವರದಿಗಾರರನ್ನು ಕಳುಹಿಸಿದನು ಅವರಿಗೆ ಬರಹ ಗೊತ್ತಿರಲಿಲ್ಲ. ಅವರೆಲ್ಲರೂ ಚಿತ್ರಗಾರರಾಗಿದ್ದರು ಅವರು ಆಕ್ರಮಣಗಾರರ ಸೈನಿಕರ, ಅವರ ಕುದುರೆಗಳ, ಅವರ ಹಡಗು ಮೊದಲಾದವುಗಳ ಚಿತ್ರಗಳನ್ನು ಬರೆದು ತಂದರು ಆ ಚಿತ್ರಗಳನ್ನು ನೋಡಿ ಮೆಕ್ಸಿಕೋದಲ್ಲಿ ಬಹಳ ಉತ್ತೇಜನವುಂಟಾಯಿತು. ಇವರೇ ಯುದ್ಧ ವಾರ್ತೆ ವರದಿಗಾರರಲ್ಲಿ ಪ್ರಥಮರೆಂದು ಲಂಡನಿನ ಪತ್ರಿಕೆಯೊಂದು ಬರೆಯುತ್ತದೆ ಆಧುನಿಕ ಕಾಲದ ಯುದ್ಧವರದಿಗಾರರಲ್ಲಿ ಪ್ರಥಮನು ಜೋರ್ಜ್ ಬೊರೋ ಗಲರ್ಡ್ರಲ್ಲಿ ಆತನು 'ಮೋರ್ನಿಂಗ್ ಹೆರಾಲ್ಡ್'ನಲ್ಲಿ ಯುದ್ಧ ವಿವರಗಳನ್ನು ಬರೆದನು. 'ಟೈಮ್ಸ್' ಪತ್ರಿಕೆಯು, ಯುದ್ಧ ಸ್ಥಳಗಳಿಗೆ ಸ್ವಂತ ಸುದ್ದಿಗಾರರನ್ನು ಕಳುಹಿಸುವುದರಲ್ಲಿ ಮೊದಲನೆಯ ಪತ್ರಿಕೆಯಾಗಿದೆ.

CHANGE OF OFFICE

Mr A Umanath Rao, B.A., G D.A., R A, Registered Accountant and Auditor has shifted his Office to the Canara Bank Buildings, LightHouseHill, Mangalore as from 1st September, 1942

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

O P No. 30/1942

ಚೆನ್ನಮ್ಮ ಹೆಂಗ್ಸು ಸುಬ್ಬ ಪೂಜಾರಿ ನೊಸೆ ಆರ್ಯಾಪು ಗ್ರಾಮ. ಪುತ್ತೂರು ತಾಲೂಕು—

ಅರ್ಜಿದಾರಳು—ವಾದಿ

ಬೋಮು ಹೆಂಗ್ಸು ಚೆನ್ನಪ್ಪ ಪೂಜಾರಿ ಸೊಸೆ ತಾರಿಕ್ರಾಡಿ ಗ್ರಾಮದ ಯತ್ತಿಬೈಲದಲ್ಲಿ ಪುತ್ತೂರು ತಾಲೂಕು— ಎದುರು ಪ್ರತಿವಾದಿ.

ಎದುರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ ಸುಬ್ಬ ಪೂಜಾರಿಯು ಪಕ್ಕಿಬ್ಯಾರಿಗೆ ತಾರೀಕು 17-4-1921ರಲ್ಲು ಬರಕೊಟ್ಟ ಅಡವಿನ ಹಕ್ಕು ಹರಾಭಾರಿಗೆ ಪಡೆದು ಅರ್ಜಿದಾರಳು ಸದ್ರಿ ಅಡವಿನ ಐವಜು ವಸೂಲು ಮಾಡುವರೆ ನಾಪರ ದಾವಾ ತರುವರೆ ಪರ್ಮಿಶನ್ ಕೊಡಿಸಬೇಕೆಂತ ಅರ್ಜಿದಾರಳು ಅರ್ಜಿ ಮಾಡಿರುತ್ತಾಳೆ ಸದರಿ ಅರ್ಜಿಯನ್ನು ತಾರೀಕು 10-9-42ಕ್ಕೆ ತನ್ಕಿಗೆ ಇಟ್ಟಿರುವದರಿಂದ ನೀವು ಸದರಿ ಮಿಯಾದಿ ದಿನ ಕೋರ್ಟು ಮುಂದೆ ಹಾಜರಾಗಿ ಉದಹರಿಸಿಕೊಳ್ಳಲಿಕ್ಕೆ ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸೋಣಾಗಿದೆ.

B. Shivarama Holla,
Advocate for Petitioner.

ಪುತ್ತೂರು, ತಾ. 25-8-42.

ದಮ್ಮು ಗುಣ ಪಡಲೇ ಬೇಕು

ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ, ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಶಾಶ್ವತವಾಗಿ ಶಕ್ತಿಯು ತುಂಬಿ ಬಂದು ಫುಪ್ಫುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು

ರೂ ೨-೮-೦ ರೂ ೪-೨-೦ ರೂ ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ

ಪುರೋಹಿತ ಶ್ವಾಸಹಾರಿ

The Canara Banking Corporation Ltd.

(Incorporated in British India)

Estd 1906.

Our Rates of Interest on Deposits From 7--8--1942

1	Current	(1% p. a. from Jan. to June.
		(½% p. a from July to Dec.
2.	Savings Bank	2% p a
3.	Short-term	1¼% p. a.
4	Fixed 3 months	1½% p. a.
	6 „	2% p.a.
	9 „	2½% p. a.
	12 „	3% p. a.
	24 „	3¼% p. a.

Advances aginst approved securities made at very competitive rates.

"ಬಡವರಬಂಧು"

The Friend of the Poor

DAILY

MANGALORE

The above English Daily News-paper will be out shortly with authorised telegraphic news!

WATCH DATE!

Price 3 pies each Monthly 8 annas!

Publishers .

The Badavara Bandhu Printing Press, Limited

Bolur, MANGALORE.

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

ಮನಸ್ಸಿನ ಭಾವದಿಂದ ಶರೀರವು ಪರಿವರ್ತನವಾಗುವ ವಿಚಾರವಾಗಿ ಪ್ರಾಚ್ಯ ಮತ್ತು ಪಾಶ್ಚಾತ್ಯರ ಅಭಿಪ್ರಾಯ

ಉಚ್ಚ ಭಾವ ಮತ್ತು ಸಮಾಧಿ ತತ್ವದ ಸಂಬಂಧವಾಗಿ ನಾವು ಶ್ರೀ ಪರಮಹಂಸರಿಂದ ಕೇಳಿ ತಿಳಿದುದನ್ನೇ ಸ್ವಲ್ಪ ಪಾಠಕರಿಗೆ ಹೇಳಿ 'ಭಾವಮುಖ' ಅವಸ್ಥೆ ಎಂಬುದೇನೆಂದು ತಿಳಿಕೊಳ್ಳಲು ಈಗ ಪ್ರಯತ್ನ ಪಡುತ್ತೇವೆ. ಉಚ್ಚ ನೀಚ ಯಾವ ಭಾವನೇ ಆಗಲಿ ಮನಸ್ಸಿನಲ್ಲಿ ಬಂದರೆ ಅದರೊಂದಿಗೆ ಯಾವದಾದರೊಂದು ದೈಹಿಕ ಪರಿವರ್ತನವು ಅನಿವಾರ್ಯವೆಂದು ಮೊದಲೇ ನಾವು ಹೇಳಿದ್ದೇವೆ. ಇದು ಪ್ರತ್ಯಕ್ಷದ ವಿಷಯುವಾದ್ದರಿಂದ ಇನ್ನು ತಿಳಿಸಬೇಕೆಂತಿಲ್ಲ. ಕ್ರೋಧ ಬಂದಾಗ ಒಂದು ಪ್ರಕಾರ, ಪ್ರೀತಿಸುವಾಗ ಇನ್ನೊಂದು ಪ್ರಕಾರ—ಹೀಗೆ ನಿತ್ಯವೂ ಅನುಭವಿಸುವಂತಹ ಸಾಮಾನ್ಯ ಭಾವ ಸಮೂಹದ ಆಲೋಚನೆಯಿಂದಲೇ ಅದನ್ನು ಸುಲಭವಾಗಿ ತಿಳಿಯಬಹುದು. ಸತ್ ಅಥವಾ ಅಸತ್ ಯಾವುದಾದರೊಂದು ಪ್ರಕಾರದ ಚಿಂತನದ ವೈಶಿಷ್ಟ ಆಧಿಕ್ಯವು ಯಾರ ಮನಸ್ಸಿನಲ್ಲಾದರೂ ಇದ್ದರೆ ಆತನ ಶರೀರವೂ ಕೂಡ ಎಷ್ಟು ಪರಿವರ್ತನವಾಗುವುದೆಂದರೆ, ಆತನನ್ನು ನೋಡಿದ ಮಾತ್ರದಿಂದಲೇ ಇಂತಿಂಥ ಸ್ವಭಾವದವನೆಂದು ಜನರು ತಿಳಿಕೊಳ್ಳುತ್ತಾರೆ. "ಇಂಥವನನ್ನು ನೋಡಿದರೆ ಕೋಪಿಷ್ಟನೆಂದೂ ಕಾಮುಕನೆಂದೂ ಅಥವಾ ಸಾಧುವೆಂದೂ ತಿಳಿಯುವಂತೆ ಈ ಮಾತಿನ ನಿತ್ಯ ವ್ಯವಹಾರವಿದ್ದದರಿಂದಲೇ ಆ ವಿಷಯುವು ಪ್ರಮಾಣವಾಗುತ್ತದೆ. ಅಲ್ಲದೆ ರಾಕ್ಷಸನಂತೆ ವಿಕಟಾಕಾರದ ವಿಕೃತಸ್ವಭಾವದ ಮನುಷ್ಯನು ಏನೊ ಕಾರಣದಿಂದ ನಿರಂತರವೂ ಸಚ್ಚಿಂತನದಲ್ಲಿ ಸಾಧು ಭಾವದಿಂದ ಆರು ತಿಂಗಳು ಕಳೆದರೆ, ಆತನ ಆಕಾರ, ಆತನ ಸ್ವಭಾವವು ಮುಂಚಿನಗಿಂತ ಎಷ್ಟೋ ಕೋಮಲ ಮತ್ತು ಸರಳವಾಗುತ್ತಾ ಬರುವುದು. ಇದೂ ಕೂಡ ನಮ್ಮವರ ಪೈಕಿ ಅನೇಕರು ಪ್ರತ್ಯಕ್ಷ ಕಂಡಿರಬಹುದು. ಯಾವ ಪ್ರಕಾರದ ಭಾವವೇ ನಿಮ್ಮ ಮನಸ್ಸಿನಲ್ಲಿ ಬರಲಿ ಅದು ನಿಮ್ಮ ಮಸ್ತಿಷ್ಕದಲ್ಲಿ ಚಿರಕಾಲದ ವರೆಗೆ ಒಂದು ಗುರುತು ಇಡುವುದೆಂದು ಪಾಶ್ಚಾತ್ಯ ದೇಹ ವಿಜ್ಞಾನಿಗಳು ಹೇಳುತ್ತಾರೆ. ಈ ರೀತಿಯಾಗಿ ಹಿತಾಹಿತವೆಂಬ ಎರಡು ಪ್ರಕಾರದ ಗುರುತು ಸಮಷ್ಟಿಯ ಸ್ವಲ್ಪಾಧಿಕ್ಯದ್ದರಿಂದಲೇ ನಿಮ್ಮ ಚರಿತ್ರೆಗಟನ ಮತ್ತು ನೀವು ಒಳ್ಳೆಯವರು ಅಥವಾ ಕೆಟ್ಟವರೆಂದು ಪರಿಗಣಿಸಲ್ಪಡುತ್ತೀರಿ. ಆ ಎರಡು ಪ್ರಕಾರದ ಭಾವಗಳು ಮೆದುಳಿನಲ್ಲಿ ಎರಡು ತರದ ಗುರುತುಗಳನ್ನು ಚಿತ್ರಿಸಿ ಬಿಡುವುದು, ಮಾತ್ರವಲ್ಲ, ಭವಿಷ್ಯತ್ ಕಾಲಕ್ಕೆ ನಿಮ್ಮನ್ನು ಅವುಗಳು ಪುನಃ ಹಿತಾಹಿತ ಕರ್ಮಗಳಲ್ಲಿ ಪ್ರವರ್ತಿಸಬಲ್ಲಂತಹ ಸೂಕ್ಷ್ಮ ಪ್ರೇರಣಾಶಕ್ತಿಯಾಗಿ ಪರಿಣಮಿಸಿ ಮೇರುದಂಡದ ಕೆಳಗಿನ ಭಾಗದಲ್ಲಿರುವ 'ಮೂಲಾಧಾರ'ವೆಂಬ ಮೇರು ಚಕ್ರದಲ್ಲಿ ನಿತ್ಯವೂ ಅವಸ್ಥಾನಮಾಡುವುವು; ಜನ್ಮಜನ್ಮಾಂತರಗಳಲ್ಲಿ ಸಂಚಿತವಾದ ಆ ಪ್ರೇರಣಾಶಕ್ತಿ ಸಮೂಹದ ವಾಸಸ್ಥಾನವು ಅದೇ ಎಂದು ಪ್ರಾಚ್ಯರು ಅಂದರೆ ವಿಶೇಷವಾಗಿ ಭಾರತ ಯೋಗಿ ಋಷಿಗಳು ಹೇಳುತ್ತಾರೆ. ಆ ಪ್ರೇರಣಾಶಕ್ತಿ ಸಮೂಹದ ಹೆಸರು ಸಂಸ್ಕಾರ ಅಥವಾ ಪೂರ್ವ ಸಂಸ್ಕಾರವೆಂದು ಹೇಳುತ್ತಾರೆ. ಅವುಗಳನ್ನು ನಾಶಪಡಿಸಬೇಕಾದರೆ ಒಂದು ಮಾತ್ರ ಉಪಾಯವೇನಂದರೆ ಶ್ರೀ ಪರಮಾತ್ಮನ ಸಾಕ್ಷಾತ್ಕಾರ ಅಥವಾ ನಿರ್ವಿಕಲ್ಪ ಸಮಾಧಿಯನ್ನು ಪಡೆಯಬೇಕು. ಇಲ್ಲವಾದರೆ ಒಂದು ದೇಹದಿಂದ ಇನ್ನೊಂದು ದೇಹ ಪ್ರಾಪ್ತವಾದಾಗ ಜೀವನು ಆ ಸಂಸ್ಕಾರಗಳ ಸಮೂಹವನ್ನು 'ವಾಯುರ್ಗಂಧನಿವಾಶಯಾತ್' ಎಂಬ ಗೀತೆಯ ವಚನದಂತೆ ಜತೆಯಲ್ಲೇ ತೆಗೆದುಕೊಂಡು ಹೋಗುವನು.

ದೇಹಕ್ಕೂ ಮನಸ್ಸಿಗೂ ಇರುವ ಸಂಬಂಧ

ಅದ್ವೈತಜ್ಞಾನ ಅಥವಾ ಶ್ರೀ ಪರಮಾತ್ಮನ ಸಾಕ್ಷಾತ್ಕಾರವಾಗುವ ತನಕ ಈ ಮೊದಲು ಹೇಳಿದ ರೀತಿಯಲ್ಲಿ ಶರೀರಕ್ಕೂ ಮನಸ್ಸಿಗೂ ಪರಸ್ಪರ ಒಂದು ಘನವಾದ ಸಂಬಂಧವಿರುತ್ತದೆ. ದೇಹಕ್ಕೇನಾದರೂ ಆದರೆ ಅದರ ಪರಿಣಾಮವು ಮನಸ್ಸಿನಲ್ಲಿಯೂ ತೋರುತ್ತದೆ. ಮನಸ್ಸಿನಲ್ಲಿ ಏನಾದರೂ ಆದರೆ ಅದರ ಪರಿಣಾಮವು ದೇಹದಲ್ಲಿಯೂ ಅನುಭವಿಸಬಹುದು. ಅಲ್ಲದೆ ವ್ಯಕ್ತಿಯ ದೇಹ ಮನಸ್ಸಿನಂತೆ ಸಮಷ್ಟಿ ವ್ಯಕ್ತಿಗಳ ಅಂದರೆ ಇಡೀ ಮಾನವ ವರ್ಗದ ಶರೀರ ಮನಸ್ಸುಗಳಲ್ಲಿ ಈ ತರದ ಒಂದು ಸಂಬಂಧವಿರುತ್ತದೆ. ನಿಮ್ಮ ಶರೀರ ಮನಸ್ಸಿನ ಘಾತ ಪ್ರತಿಘಾತಗಳು ನನ್ನ ಅಥವಾ ಇತರರೆಲ್ಲರ ಶರೀರ ಮನಸ್ಸುಗಳಿಗೆ ತಾಗುತ್ತವೆ. ಬಾಹ್ಯಾಭ್ಯಂತರ ಸ್ಥೂಲ ಸೂಕ್ಷ್ಮ ಜಗತ್ತು ಈ ತರದ ಪರಸ್ಪರ ಸಂಬಂಧದಲ್ಲಿ ನಿತ್ಯವೂ ವರ್ತಮಾನ, ಮತ್ತು ಪರಸ್ಪರ ಪರಸ್ಪರರಲ್ಲಿ ನಿರಂತರವೂ ಘಾತ ಪ್ರತಿಘಾತಗಳ ಪರಿಣಾಮವು ತೋರುತ್ತದೆ. ಆದ್ದರಿಂದಲೇ ಎಲ್ಲಿ ಸಕಲರೂ ಶೋಕ ಗ್ರಸ್ತರಾಗಿದ್ದಾರೊ ಅಲ್ಲಿಯೇ. ನಿಮ್ಮ ಮನಸ್ಸಿನಲ್ಲಿಯೂ ಕೂಡ ಆ ಶೋಕವು ತಲೆದೋರುತ್ತದೆ; ಎಲ್ಲಿ ಸಕಲರೂ ಭಕ್ತಿವಂತರಾಗಿದ್ದಾರೆಯೋ ಅಲ್ಲಿಯೇ ನಿಮ್ಮ ಮನಸ್ಸಿನಲ್ಲಿಯೂ ಕೂಡ ಪ್ರಯತ್ನವಿಲ್ಲದೆ ಆ ಭಕ್ತಿಭಾವವು ಉದಯವಾಗುವುದು. ಹೀಗೆಯೇ ಇತರ ವಿಷಯಗಳಲ್ಲಿಯೂ ಎಂದು ತಿಳಕೊಳ್ಳಬೇಕು.

(ಕ್ರಮಶಃ)

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ!   ನಿರಾಯಾಸಕರ!!   ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ!   ನೋಟಗಳ ಬದಲಾವಣೆ!   ಜನತೆಯ ಸಂಪರ್ಕ!   ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore. **BRANCHES** Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸ್ಥಾಪನೆಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಆಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD SWADESHABHIMANI 1906

[ಸಂಪುಟ 36] ತಾರೀಕು 11—9—1942 [ಸಂಚಿಕೆ 36]

ವರ್ಣದ್ವೇಷವು ಆತ್ಮಘಾತುಕವಾಗಿದೆ!

ಜಪಾನೀ ಪ್ರಚಾರವು ನಿಶ್ಯನರನ್ನು ಕೆರಳಿಸಿದೆ

ವಿಶ್ವವಿಖ್ಯಾತ ಲೇಖಕಿ ಪರ್ಲ್‌ಬಕ್ಕಳ ಮಾತುಗಳು

"ನಾವೊಂದೇ ಜನಾಂಗದವರೆಂಬ ಜಪಾನಿಯರ ಪ್ರಚಾರವು ಇಂದು ಭಾರತದಲ್ಲಿ ಪರಿಣಾಮಕಾರಿಯಾಗುವ ಸೂಚನೆ ಕಂಡುಬರುತ್ತಿದೆ. ಹೀಗಾಗುವುದು ಆ ಪ್ರಚಾರಕರ್ತರ ಕಾರ್ಯಕುಶಲತೆಯಿಂದಲ್ಲ; ಬ್ರಿಟನು ಮತ್ತು ಅಮೆರಿಕದ ಜನತೆಯಿಂದ ಭಾರತ ಜನತೆ ಪಡೆದ ದೌರ್ಭಾಗ್ಯದಿಂದ ಜಪಾನರು ಹೇಳುತ್ತಾರೆ 'ಬಿಳಿ ಜನರಲ್ಲಿ ಬಣ್ಣಭೇದವು ಇಂದು ಬಹಳವಾಗಿದೆ' ಎಂದು ಬಿಳಿಜನರನ್ನು ಹೊರಹಾಕಿರೆಂದು ಜಪಾನ್ ರೇಡಿಯೋ ಪ್ರತಿದಿನ ಏಶ್ಯದ ಜನರಿಗೆ ಸಂದೇಶ ಸಾರುತ್ತಿದೆ. ಅದಕ್ಕೆ ಅವರು, ಬಿಳಿ ಜನರು ಕಪ್ಪಿನವರ ಮೇಲೆ ಮಾಡಿದ ಸುಲಿಗೆ, ಫಿಲಿಪಿಯನರ ಮೇಲೆ ಅಮೆರಿಕನ್ ಸೈನಿಕರೂ ಮಾಡಿದ ಅತ್ಯಾಚಾರಗಳ ದೃಷ್ಟಾಂತಕೊಡುತ್ತಾರೆ. ನಿಮ್ಮ ಹಿತವು ಜಪಾನರನ್ನು ಆಶ್ರಯಿಸಿದರೆ ಮಾತ್ರ ಒಳ್ಳೇಯದಾಗುವುದಲ್ಲದೆ ಇಂಗ್ಲೆಂಡು ಅಮೆರಿಕದವರ ಆಶ್ರಯದಿಂದಲ್ಲವೆಂದು ಹೇಳುತ್ತಾ ಮಲಯ, ಭಾರತ, ಫಿಲಿಪೈನುಗಳ ಜನರನ್ನು ಹೀಗೆ ಕೆರಳಿಸುವಲ್ಲಿ ಜಪಾನಿಗೆ ಜರ್ಮನಿಯೂ ಸಹಾಯವೀಯುತ್ತದೆ, ಜಪಾನರ ಪ್ರಚಾರವು ಹಲವು ಸಲ, ಸಹಸ್ರ ರೀತಿಯಿಂದ, ಬಿಳಿ ಜನರಿಗೆ ನಮ್ಮ ಮೇಲೆ ಒಣ್ಣ ದ್ವೇಷವಿರುವುದರಿಂದ ಅವರನ್ನು ನಂಬಿದರೆ ನಿಮಗೆ ಎಂದಿಗೂ ಏಳಿಗೆಯಿಲ್ಲವೆಂದು ಘಂಟಾಘೋಷ ಸಾರುತ್ತಲಿದೆ

ಬುದ್ಧಿಯಿಲ್ಲ ನ್ಯಾಯವಿಲ್ಲ

"ಈ ಜಪಾನರ ಪ್ರಚಾರದಲ್ಲಿರುವ ಅಪಾಯವನ್ನು ನಾವು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ ಇದರಲ್ಲಿ ಸತ್ಯಾಂಶವೂ ಇದೆ ಏಕೆಂದರೆ ಪೂರ್ವದೇಶದಲ್ಲಿರುವ ತನ್ನ ಸಮಾನ ಮಾನವ ಜೀವಿಯೊಡನೆ ಬಿಳಿಯನು ಬುದ್ಧಿಶೂನ್ಯನಾಗಿ ಮತ್ತು ನ್ಯಾಯ ನಿಷ್ಠುರನಾಗಿ ಅನೇಕ ಸಲ ವರ್ತಿಸಿರುತ್ತಾನೆ. ನಾವು ಮಾಡಿದ ಈ ಶತಾಪರಾಧವನ್ನು ಇಂದು ನಾವು ಒಪ್ಪಿಕೊಳ್ಳದಿರುವುದು ಆತ್ಮಘಾತುಕವಾದೀತು. ನಮ್ಮಲ್ಲಿ ಯಾರಾದರೂ ಶಾಂಘಾಯಿಯಲ್ಲಿ ಒಬ್ಬ ಚೀನದ ಕೂಲಿಗಾರನಿಗೆ ಬಿಳಿ ಪೋಲೀಸನೊಬ್ಬನು ಹೊಡೆಯುವುದನ್ನು ನೋಡಿದವರು, ಕೋಬೆಯಲ್ಲಿ ಜಪಾನೀಯನೊಬ್ಬನಿಗೆ ಬಿಳಿಯ ನಾವಿಕನೊಬ್ಬನು ಒದೆಯುವುದನ್ನು ಕಂಡವರು, ಹಾಗೂ ಪೌರ್ವಾತ್ಯ ದೇಶದಲ್ಲಿ ಆಗುವ ಅಂಥ ಅತ್ಯಾಚಾರಗಳನ್ನು ಕಂಡವರು ಹಾಗೂ ಹೇಳಿದವರು, ಮತ್ತು ಕಪ್ಪು ಜನರ ಕುರಿತು ಬಿಳಿ ಜನರು ಮಾತನಾಡುವ ಬಣ್ಣಭೇದದ ದ್ವೇಷ ಭಾವನೆಯ ಮಾತುಕತೆಗಳನ್ನು ಕೇಳಿದವರು, ಅಂಥಾ ಕಪ್ಪು ಜನರ ಕರಿಯ ಕಣ್ಣುಗಳಲ್ಲಿ ಆಗ ಪ್ರಜ್ವಲಿಸುವ ಕ್ರಾಂತಿಯ ಕಿಡಿಯನ್ನು ಊಹಿಸಲು ಅಸಮರ್ಥರಾದಾರೆ? ಆ ಕಣ್ಣುಗಳಲ್ಲಿ ಏನು ಭವಿಷ್ಯ ಬರೆದಿದೆಯೆಂದು ನನಗೆ ತಿಳಿಯಲು ಆಗುವುದಿಲ್ಲವೆ? ಚರ್ಮ ಕಪ್ಪಿರುವ ಮಾತ್ರದಿಂದ, ಅವನ ತಲೆಯ ಮೇಲೆ ಅಲ್ಪನಾದ ಬಿಳಿಯನೊಬ್ಬನೂ 'ದೊರೆ'ಯಾಗಿ ಕುಳಿತುಕೊಳ್ಳಬಹುದೆಂದು ಭಾವಿಸುವುದಿದು ಮಹತ್ತಾದ ಅಪಾಯಕಾರೀ ವಿಚಾರವಾಗಿದೆ. ಈ ಅಪರಾಧವನ್ನು ನಮ್ಮಲ್ಲಿ ಕೇವಲ ಹೀನರು ಮಾತ್ರ ಮಾಡುವುದಿದ್ದರೆ ನಾವು ಅದನ್ನು ಅದಷ್ಟು ಬೇಗ ತೊಲಗಿಸಿ ಬಿಡಬಹುದಿತ್ತು, ಆದರೆ ನಮ್ಮಲ್ಲಿ ಕೆಲವರು ಸಂಭಾವಿತರೂ ಎಷ್ಟರಮಟ್ಟಿಗೆ ಕಣ್ಣಿದ್ದು ಕುರುಡರಾಗಿದ್ದಾರೆ!

"ಆದ್ದರಿಂದ, ಜಪಾನಿಯರ ಈ ಪ್ರಚಾರವನ್ನು ನಾವು ಚಿಲ್ಲರೆಯೆಂದು ಅಲ್ಲಗಳೆಯಲಾಗದು. ಈ ವಿಚಾರವು, ಇಂಥಾ ಸಂದರ್ಭದಲ್ಲಿ ಬ್ರಿಟನು ಹಾಗೂ ಅಮೆರಿಕದ ಮಿತ್ರಕೂಟದೊಡನೆ ನಮ್ಮ ಪಕ್ಷಪಾತಿಗಳಾಗಿರುವಂಥಾ ಹಲವು ಮಂದಿ ಕಪ್ಪು ಜನರಿಗೂ ಮನಸ್ಸಿನಲ್ಲಿ ಚೆನ್ನಾಗಿ ಬಹಳ ಅಂಟಿಕೊಂಡಿದೆ, ಈ ವಿಚಾರವು ಮಿತ್ರರಾಜ್ಯದಲ್ಲೇ ಇದ್ದು, ನಮ್ಮ ಪಕ್ಷಪಾತಿಗಳಾಗಿರಬೇಕಾದಂಥಾ ಕಪ್ಪು ಜನರ ಮನಸ್ಸಿನಲ್ಲಿಯೂ ಬಲವಾಗಿ ಅಂಟಿಕೊಂಡಿದೆ, ಅಂಥವರೆಲ್ಲರೂ ನಾಜಿಗಳು ತಮಗೆ ಮರಣವನ್ನೇ ತರುವರೆಂದು ಚೆನ್ನಾಗಿ ತಿಳಿದಿದ್ದರೂ, ಬ್ರಿಟಿಷರಾಗಲಿ, ಅಮೆರಿಕನರಾಗಲಿ, ಇದಕ್ಕಿಂತ ಹಿಂದೆ ನಮಗೇನೂ ಮಾಡಿದ್ದಿಲ್ಲವೆಂದೂ, ಮುಂದೇನೂ ಮಾಡುವಂತಿಲ್ಲವೆಂದೂ ಖಚಿತಗೊಂಡಿದ್ದಾರೆ. ಕರಿಯ ಜನರು ಅಕ್ಷ ರಾಷ್ಟ್ರಗಳೆದುರು ಮಿತ್ರರಾಗಿ ಈಗ ಯುದ್ಧ ಮಾಡುವುದು ವಂಚಿತರಾಗಿಯೂ, ವಿಚಾರಶೂನ್ಯರಾಗಿಯೂ ಅಗಿಲ್ಲ; ಅವರಿಗೆ ಗೊತ್ತು; ಹಿಟ್ಲರು ನಿರ್ನಾಮವಾಗಿ, ನಾಜಿಸಂ ಮುರಿದು, ಜಪಾನರನ್ನು ಹಿಂದಟ್ಟಿದರೂ ತಮ್ಮ ಯುದ್ಧ ಕೊನೆಗಂಡಿಲ್ಲವೆಂದು ಯಾರಪಕ್ಷ ಹಿಡಿದು ತಾವೀಗ ಯುದ್ಧ ಮಾಡುತ್ತೇವೋ ಅಂಥಾ ಬಿಳಿಯರನ್ನು ಹೊರಹಾಕಲು ತಾವು ಮುಂದೆ ಯುದ್ಧ ಮಾಡಬೇಕಾಗಿದೆಯೆಂದೂ ಅವರಿಗೆ ಚೆನ್ನಾಗಿ ಗೊತ್ತಿದೆ.

ಮಿತ್ರರೋ ಶತ್ರುಗಳೋ?

ನಾಜಿವಾದವು ಮುಗಿವ ಕೂಡಲೇ, ಯುದ್ಧವು ಕೊನೆಗೊಳ್ಳಲಿಕ್ಕಿಲ್ಲನೆಂಬೀ ಸತ್ಯವನ್ನು ಈಗಲಾದರೂ ಬಿಳಿ ಜನರು ತಿಳಕೊಳ್ಳಬೇಕು. ಯುದ್ಧ ಮುಗಿದ್ದ ಬಳಿಕ, ನಮ್ಮೊಡಗೂಡಿ ಹೋರಾಡಿದ ಮಿತ್ರ ಕರಿಯಜನರೇ ನಮ್ಮ ಶತ್ರುಗಳಾದಾರು' ಎಂದು ಅವರು, ವಿಚಾರಮಾಡಬೇಕು. ಖಂಡಿತವಾಗಿಯೂ ಅವರು ಭಯಾನಕ ಶತ್ರುಗಳಾಗುವರು, ಇಂದಿನ ಯುದ್ಧದಲ್ಲಿ ಬಿಳಿಯರಂತೆ ಕರಿಯರು ಹೋರಾಡುವುದಿಲ್ಲವಾದರೆ, ಕರಿಯರಲ್ಲಿ ಈ ಯುದ್ಧಾಂತ್ಯದಲ್ಲಿ ಇನ್ನೂ ಶಕ್ತಿ ಉಳಿದಿದ್ದೀತು. ಆದರೆ, ಈ ಯುದ್ಧ ಮುಗಿದ ಬಳಿಕ ಬಿಳಿಯರೊಡನೆ ಕರಿಯರು ಹೂಡುವ ಹೊಸ ಯುದ್ಧಕ್ಕೆ ಏನೂ ಹೆಚ್ಚಿನ ಅಭ್ಯಂತರವಿರಲಿಕ್ಕಿಲ್ಲ. ಸಾಮ್ರಾಜ್ಯ ಹಾಗೂ ಸಾಮ್ರಾಜ್ಯಶಾಹೀ ಧೋರಣೆಯ ತಳಹದಿಯಲ್ಲಿ ಕಟ್ಟಲ್ಪಟ್ಟ ಪ್ರಾಚೀನ ರೀತಿಯ ಜಗತ್ತು ಇನ್ನು ಮುಂದೆ ಉಳಿಯುವುದು ಖಂಡಿತ ಅಸಾಧ್ಯವೆಂಬುದನ್ನು ನಾವು ಬ್ರಿಟಿಷರು ಅಮೆರಿಕನರೆಲ್ಲರೂ ತಿಳಿದಿರಬೇಕು. ಜನತೆಯ ಅನ್ಯೋನ್ಯತೆಯ ಜವಾಬ್ದಾರಿಯಲ್ಲಿ ಎಲ್ಲರ ಶರತಕ್ಕೂ ಅನ್ವಯಿಸುವ ಶುದ್ಧ ಪ್ರಜಾಪ್ರಭುತ್ವ ರೀತಿಯಲ್ಲಿ ನಡೆಯುವ ನಿರ್ಮಲ ನಿರ್ಧಾರ ಮಾಡಬೇಕು. 'ನಾವು ಮೊದಲು ಈ ಯುದ್ಧವನ್ನು ಗೆಲ್ಲುವ' ಎಂದು ಹೇಳಿ ಅಂಥಾ ನಿರ್ಧಾರ ಮಾಡುವುದನ್ನು ಮುಂದೆ ಹಾಕಬಹುದೆ? ನಾವಿನ್ನು ಮುಂದೆ ಕರಿಯ ಜನಾಂಗದವರ 'ದೊರೆ'ಗಳೆಂಬ ಭಾವನೆಯಲ್ಲಿ ವರ್ತಿಸುವುದಿಲ್ಲವೆಂದು ಹೇಳದೆ, ನಮ್ಮೊಡನೆ ಬಹುಪಕ್ಷದಲ್ಲಿ ಮಿತ್ರರಾಗಿ ಹೋರಾಡುತ್ತಿರುವ ಕರಿಯ ಜನರನ್ನು ನಂಬಿಸಲಾರೆವು ಕರಿಯ ಜನರ ಬಹಳ ಆಳವಾದ ತಾಳ್ಮೆ ಇಂದು ಹದಗೆಟ್ಟಿದೆ. ಬ್ರಿಟಿಷರಿಗೆ ಹಾಗೂ ಅಮೆರಿಕನರಿಗೆ ಸ್ವಾತಂತ್ರ್ಯದ ಆಶೆ ಎಷ್ಟು ಬಲವಾಗಿದೆಯೋ ಅಷ್ಟೇ ಅವರಲ್ಲಿಯೂ ಅವರ ಸ್ವಾತಂತ್ರ್ಯದಾಶೆ ಪ್ರತಿಯೊಬ್ಬನಿಗೂ ಇದೆ; ಅದಕ್ಕಿಂತ ಹೆಚ್ಚಿನ ಅವರ ಆಶೆಯೆಂದರೆ, ತಮ್ಮ ತಲೆಮೇಲೆ ತುಳಿಯುತ್ತಿರುವ ಬಿಳಿಯರ ಒದೆತವನ್ನು ತಪ್ಪಿಸಿ, ಅವರನ್ನು ತಮ್ಮಲ್ಲಿಂದ ಹೊರ ಹಾಕಬೇಕೆಂಬುದಾಗಿದೆ ಈ ಅವರ ಅಚಲ ನಿರ್ಧಾರಕ್ಕೆ ಒಂದಿಷ್ಟು ನ್ಯೂನತೆಯೊದಗಲು ಸಾಧ್ಯವಿಲ್ಲ.

ಪ್ರಜಾಪ್ರಭುತ್ವಕ್ಕಾಗಿ ಹೋರಾಟ?

ಆದರೆ ನಾವೀ ಜನಶಕ್ತಿಯನ್ನು, ನಮಗೆ ಬುದ್ಧಿವಂತಿಕೆಯಿದ್ದರೆ ಉಪಯೋಗಿಸಬಹುದು. ಬಿಳಿಯ ಜನರ ಮುಖಂಡರು ಪ್ರಜಾಪ್ರಭುತ್ವಕ್ಕಾಗಿ ಯಾವ ನಿರ್ಧಾರ ಮಾಡಿ ಹೋರಾಡುತ್ತಾರೋ ಅದನ್ನು ಮನಃಪೂರ್ವಕ ಆಚರಣೆಮಾಡಿದರೆ, ದೂರದ ನಮ್ಮ ಬಣ್ಣಭೇದದ ಮಿತ್ರರಾದರೂ ಹಿಂದುಳಿಯಲಾರರು ಇಂಗ್ಲೆಂಡು ಯಾವುದನ್ನು ಹೇಳುತ್ತದೋ ಅದನ್ನು ಮನಃಪೂರ್ವಕ ಮಾಡುವುದಿದ್ದರೆ ನಾವು ಅವರ ಹಿಂಬಲಕ್ಕಿದ್ದೇವೆಂಬ ಅಭಿಪ್ರಾಯ ದೂರ ಪೂರ್ವದ ಜನರಲ್ಲಿದೆ. ಲೋಕದಲ್ಲಿ ಹಲವು ಸರಳ ಸಂಗತಿಗಳೇ ಇವೆ; ಇಂಥಾ ಸಂದರ್ಭದಲ್ಲಿ ಇನ್ನೂ ಸರಳತಮ ಸಂಗತಿಗಳೂ ಇವೆ; ಏನೆಂದರೆ ನಮ್ಮ ದೂರ ಪೂರ್ವದ ಮಿತ್ರರು ನಿಜವಾದ ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು ಅವರ ಶಕ್ತಿ ಉಪಯೋಗಿಸುವರು, 'ಬ್ರಿಟಿಷರು ಮತ್ತು ಅಮೆರಿಕದ ಜನರು ಅವರ ಸ್ವಂತ ಹಿತಕ್ಕೂ, ಎಲ್ಲರ ಬಿಳಿಯರಿಗೂ ನ್ಯಾಯ ಶಾಂತಿಗಳಾಗಿ ಗಂಭೀರ ಜತೆಗೂಡಿ ನಡೆಯುವರು' ಎಂಬ ಚರ್ಚಿಲರ ವಾಶಿಂಗ್‌ಟನ್ ಭಾಷಣದ ಕೊನೆಯ ಮಾತಿನ ರೀತಿಯ ಭರವಸೆ ಸಾಂತ್ವನಗಳೇನೂ ಪ್ರಯೋಜನವಿಲ್ಲ ಒಂದು ಇಂಗ್ಲೆಂಡೂ, ಒಂದು ಅಮೆರಿಕವೂ 'ಗಂಭೀರ ಜತೆಗೂಡಿ' ನಡೆಯುವುದೆಂದರೆ ಏಶ್ಯನರ ದೃಷ್ಟಿಯಲ್ಲಿ, ಜಪಾನೀಯರ ಆಕ್ರಮಣ ಭೀತಿಗಿಂತಲೂ ಅದು ಭಯಾನಕವಾದೊಂದು ಸಾಮ್ರಾಜ್ಯಶಾಹೀ ಉದ್ದೇಶಕ್ಕೆಂಬಂಥಾ ತಿಳುವಳಿಕೆಯಿದೆ.

(ಉತ್ತರಾರ್ಧ ಬರುವ ಸಂಚಿಕೆಯಲ್ಲಿ)

KANNADA ILLUSTRATED WEEKLY

ಆಕಸ್ಮಿಕ ಶೀತವು ನಿಮ್ಮ ಶ್ವಾಸಕೋಶವನ್ನು ನಾಶಗೊಳಿಸುವುದು.

ನಿಮಗೆ ಬೇಗನೆ ಶೀತ ತಗಲುವುದೇ? ನೀವು ಕಂಠ ನೋವಿನಿಂದ ಆಗಾಗ ನರಳುತ್ತೀರಾ? ಕಫ ಮತ್ತು ಶೀತ ಬಾಧೆ ನಿಮ್ಮನ್ನು ಬಾಧಿಸುವುದೇ? ಹಾಗಿದ್ದರೆ ನಿಜವಾಗಿಯೂ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಈ ಉತ್ತಮ ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು, ಶ್ವಾಸಕೋಶದ ಬೇನೆ, ಇಂಫ್ಲುಯೆಂಜಾ, ನ್ಯುಮೋನಿಯಾ, ಮೊದಲಾದ ರೋಗಗಳನ್ನು ನಾಶಮಾಡುವುದು.

ಬಾಯಲ್ಲಿ ಹಾಕಿದ ಕೂಡಲೇ ಪೆಪ್ಸ ಅತ್ಯುತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತದೆ; ಅದು ಶ್ವಾಸದೊಡನೆ ಶ್ವಾಸಕೋಶಕ್ಕೆ ಸೇರುವುದು. ಹೀಗೆ ಶ್ವಾಸಕೋಶದಲ್ಲಿ ಹಾಗೂ ಕಂಠನಾಳದಲ್ಲಿರುವ ರೋಗ ಕ್ರಿಮಿಗಳನ್ನು ಪೆಪ್ಸ ನಾಶಪಡಿಸುವುದು. ಶ್ವಾಸನಾಳವನ್ನು ರಕ್ಷಿಸುವುದು. ಶೀತ ಬಾಧೆಯನ್ನು ತಡೆಯುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರೆಯುತ್ತದೆ.

ಏಜಂಟ್ಸ್:
ಮೆಸರ್ಸ್ ದಾಧಾ ಎಂಡ್ ಕೊ.,
ಪಿ. ಟಿ. ಮದರಾಸು

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.



ನನ್ನ ರಕ್ತವನ್ನು ತಂಪುಗೊಳಿಸುತ್ತದೆ...

ನನ್ನ ತಲೆಯನ್ನು ಹಗುರಮಾಡುತ್ತದೆ...

ನನ್ನ ಶರೀರದಲ್ಲಿ ಚೈತನ್ಯವನ್ನುಂಟು ಮಾಡುತ್ತದೆ.

ನಾನು ಉಲ್ಲಾಸದಿಂದಿರುವಂತೆ ದೇಹದೊಳಭಾಗವನ್ನು ಶುಚಿಗೊಳಿಸುತ್ತದೆ.

ಶರೀರ ಮತ್ತು ಮೆದುಳು ಚುರುಕಾಗಿರಬೇಕಾದರೆ, ದೇಹದೊಳಭಾಗವು ಶುಚಿಯಿರಬೇಕು. ದೇಹದೊಳಭಾಗವು ಶುಚಿಯಾಗಿದ್ದ ಶರೀರವು ಮಾತ್ರ ನಿಶ್ಯಕ್ತಿ, ಮಲಬದ್ಧತೆ, ಅಜೀರ್ಣ ಮೊದಲಾದ ಬಾಧೆಗಳಿಂದ ನಿವೃತ್ತಿ ಹೊಂದಿ ಆರೋಗ್ಯವಾಗಿರುವುದು.

ದಿನನಿತ್ಯವೂ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸುವುದರಿಂದ, ನಿಮ್ಮ ಶರೀರವು ಶುಚಿಯಾಗಿರುವುದು. ಅದು ಶರೀರದಲ್ಲಿರುವ ವಿಷವನ್ನು ಹೊರಹಾಕುವುದು, ಕಾಳಿಜವನ್ನು ಸರಿಗೊಳಿಸುವುದು, ಮಲಕೋಶವನ್ನು ಸರಿಯಾಗಿರಿಸುವುದು, ಅಜೀರ್ಣಕಾರೀ ವಿಷಗಳನ್ನು ಇಲ್ಲದೆ ಮಾಡುವುದು. ಎಂಡ್ರೂಸ್, ತಂಪುಗೊಳಿಸಿ, ರಕ್ತ ಶುದ್ಧಿಗೊಳಿಸಿ ಇಡೀ ಶರೀರದಲ್ಲಿ ಚೈತನ್ಯ ತುಂಬಿಸುವುದು. ಅದು ಉಪಯೋಗಿಸಿದರೆ ಒಂದು ಚಟವಾಗುವುದಿಲ್ಲ. ಖರ್ಚೂ ಕಡಿಮೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ ಉಪಯೋಗಿಸಿರಿ:

ಆರೋಗ್ಯಕರ ಪಾನೀಯ— ಶಕ್ತಿವರ್ಧಕ ಔಷಧ—

ANDREWS LIVER SALT

ತಂಪುಗೊಡುವುದು-ಶುಚಿಗೊಳಿಸುವುದು-ಉಲ್ಲಾಸವೀಯುವುದು-ಚೈತನ್ಯ ಹುಟ್ಟಿಸುವುದು

ದಮ್ಮು ಗುಣ ಪಡಲೇ ಬೇಕು ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ, ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬೈ ಏಜಂಟ— ಮೆಸರ್ಸ್ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.



ಪುರೋಹಿತ ಶ್ವಾಸಹಾರಿ

ಪಂಜ

ಶ್ರೀ. ಮಹಾದೇವ ದೇಸಾಯಿಯವರ ನಿಧನದ ಕುರಿತು ದುಃಖವನ್ನು ಪ್ರದರ್ಶಿಸುವ ಪ್ರಕೃತ ಯುದ್ಧವು ಹಿಂದುಸ್ಥಾನದ ಬಾಗಿಲಿಗೆ ಬಂದಿರುವಾಗ ಹಿಂದುಸ್ಥಾನದ ಜನತೆಯ ಅಭಿಪ್ರಾಯವನ್ನು ಮನ್ನಿಸದೆ ಧುರೀಣರನ್ನು ಬಂಧಿಸಿ ಬ್ರಿಟಿಷ್ ಸರಕಾರವು ದಬ್ಬಾಳಿಕೆಯನ್ನೇ ಮುಂದೆ ತರುವುದನ್ನು ನಿಷೇಧಿಸುವ ಠರಾವುಗಳು ಪಂಜ ಪಂಚಾಯತ ಬೋರ್ಡಿನ ಸಭೆಯಲ್ಲಿ ಮಂಜೂರಾದುವೆಂದು ತಿಳಿದಿದೆ.

ಕಾಸರಗೋಡು
ಪಿಕೆಟಿಂಗ್ ಬಂಧನ

ತಾ. ೩೧ನೇ ಮಧ್ಯಾಹ್ನ ಶ್ರೀ ಕುಂಞಿಕಣ್ಣನವರ ಮುಂದಾಳುತನದಲ್ಲಿ ಬೇರೆ ಮೂವರು ಮುನ್ಸಿಫರ ಕೋರ್ಟನ್ನು ಹೊಕ್ಕು 'ಹಿಂದೂದೇಶವನ್ನು ಬಿಟ್ಟು ಹೋಗಿರಿ' ಎಂದು ಹೇಳುತ್ತಾ ಕರಪತ್ರಗಳನ್ನು ಹಂಚಿ ಅಲ್ಲಿದ್ದವರನ್ನು ಉದ್ದೇಶಿಸಿ ಭಾಷಣ ಮಾಡಿದರು. ಯಾರು ಹೇಳಿದರೂ ಅವರು ಹೊರಗೆ ಹೋಗದಿರಲು ಪೋಲೀಸರು ಬಂದು ನಾಲ್ವರನ್ನೂ ಸೆರೆಹಿಡಿದು ಆ ಮೇಲೆ ಅಪ್ರಾಯಸ್ಥನೆಂದು ಒಬ್ಬನನ್ನು ಬಿಟ್ಟರು. ತಾ. ೧ರಲ್ಲಿ ಅಂತಹ ಒಂದು ದಳವು ಕೋರ್ಟಿನ ಒಳ ಪ್ರವೇಶಿಸಲು ಯತ್ನಿಸಿದಾಗ ಪೋಲೀಸರು ಬಳಬಿಡಲಿಲ್ಲ. ಬಂಧಿಸಲ್ಪಟ್ಟ ಮೂವರಿಗೆ ತಲಾ ಒಂದರ ರೂ. ೨೫ರ ದಂಡನೆ ಇಲ್ಲವೆ ೧ ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ.

ಬೆಳ್ತಂಗಡಿ
ಬಂಧನ—ನಿಷೇಧ ಸಭೆ

ಇಲ್ಲಿ ಶ್ರೀಗಳಾದ ಬಾಲಕೃಷ್ಣ ಕುರೂಪ್, ಮತ್ತು ಬಿ. ವೇದವ್ಯಾಸ ಭಟ್ ಇವರುಗಳು ಡಿಫೆನ್ಸ್ ಕಾನೂನಿನನ್ವಯ ಬಂಧಿಸಲ್ಪಟ್ಟರು. ಬೆಳ್ತಂಗಡಿಯಲ್ಲಿ ಹರತಾಳವಿತ್ತು. ಅಂದೇ ಸಾಯಂ. ಶ್ರೀ ಬಿ. ಎನ್. ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ರಂಗಪ್ಪ ಮೊದಲಾದವರ ಭಾಷಣಗಳಾದುವು.

[illegible] ಧೀರಾಃ

ಸ್ವದೇಶಾಭಿಮಾನಿ

ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ಸ್ಥಾಪಿಸಲ್ಪಟ್ಟಿತು.

11-9-1942] ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ [೧೧-೯-೧೯೪೨.

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡಿಗೆ ಘೋರ ಸಂಕಷ್ಟ ಕಾಲ ಶೀಘ್ರ ಬಂದೊದಗಿದೆ ಡಾನ್ ವಕ್ರದಲ್ಲಿ ಜರ್ಮನ್ ಸೇನೆಗಳು ಅನೇಕ ಕಡೆಗಳಲ್ಲಿ ನದಿಯನ್ನು ದಾಟಿ, ಆಚೆಯ ದಂಡೆಯ ಹಲವು ಕಡೆಗಳಲ್ಲಿ ಶಿಬಿರವನ್ನು ಕಟ್ಟಿಕೊಂಡು ಅಪಾರ ಸೈನ್ಯಸಂಗ್ರಹ ಮಾಡಿದ ಜರ್ಮನರು ಈಗ ಮೂರು ಕಡೆಗಳಿಂದ ಸ್ಟಾಲಿನ್‌ಗ್ರಾಡಿಗೆ ಮುತ್ತಿಗೆ ಹಾಕಿದ್ದಾರೆ ಇದರ ವಾಯುವ್ಯದಲ್ಲಿ ವೈರಿಗಳ ೨೨ ದಳಗಳು ಯುದ್ಧ ನಡೆಸುತ್ತಿವೆ, ದಕ್ಷಿಣಕ್ಕೆ ಇನ್ನೂ ಹೆಚ್ಚಿನ ದಳಗಳಿವೆ, ಮಾತ್ರವಲ್ಲದೆ ಸ್ಟಾಲಿನ್‌ಗ್ರಾಡ್ ವಿರುದ್ಧ ವೈರಿಯು ಸಾವಿರ ವಿಮಾನಗಳನ್ನು ಎರಡು ಸಾವಿರ ಟೇಂಕುಗಳನ್ನೂ ಬಿಟ್ಟಿರುವನು ಮುಂಭಾಗದ ಹಿಂಬದಿಯಲ್ಲಿ ೫೦ ಜರ್ಮನ್ ಸೇನೆಗಳಿವೆ ಕೆಂಪು ಸೈನ್ಯವು ಎದೆಯ ರಕ್ತವನ್ನು ಪ್ರವಾಹವಾಗಿ ಹರಿಸುತ್ತಾ ಸ್ಟಾಲಿನ್ ಗ್ರಾಡನ್ನು ರಕ್ಷಿಸಲು ಹೋರಾಡುತ್ತಿದೆ ವಿಜಯೋನ್ಮತ್ತನಾದ ವೈರಿ ಆಕ್ರಮಿಸಿಕೊಂಡೇ ಬರುತ್ತಾನೆ, ಪರಾಜಯ ಹೊಂದಲಾರೆವೆಂಬ ದೃಢನಿರ್ಧಾರವುಳ್ಳ ರಶ್ಯನರು ವೈರಿಯನ್ನು ತಡೆಗಟ್ಟುತ್ತಾ ಇದ್ದಾರೆ ಇಡೀ ಸ್ಟಾಲಿನ್ ಗ್ರಾಡಿನ ನೈಋತ್ಯ ವಾಯುವ್ಯಗಳಲ್ಲಿಯೂ ಕಾಳಗ ನಡೆಯಿತು ಸುಮಾರು 10 ಲಕ್ಷ ಸೈನಿಕರು ಸ್ಟಾಲಿನ್‌ಗ್ರಾಡ್ ವಶಪಡಿಸಲು ಹೋರಾಡುತ್ತಾರೆ ರಶ್ಯದ ಯುದ್ಧದಲ್ಲಿ ಇಂಥಾ ಮುತ್ತಿಗೆ ಬೇರೆಲ್ಲಿಯೂ ಆಗಿಲ್ಲವೆನಬಹುದು ಸ್ಟಾಲಿನ್ ಗ್ರಾಡಿನ ಮೇಲೆ ಅಸಂಖ್ಯ ಆಕ್ರಮಣ ನಡೆಯಿತು ಜರ್ಮನರು ಈಗಾಗಲೇ ವೋಲ್ಗಾ ನದಿಯನ್ನು ತಟ್ಟಿರುವರೆಂದೂ, ಸ್ಟಾಲಿನ್ ಗ್ರಾಡಿನ ಒಳ ವ್ಯೂಹವನ್ನು ನುಗ್ಗಿರುವರೆಂದೂ ಸುದ್ದಿಯಿದೆ ಸ್ಟಾಲಿನ್‌ಗ್ರಾಡ್ ಸಂಗ್ರಾಮವು ಹಿಂದಿನ ಬೆಲ್ಗ್ರಾಡ್, ರಾಟರ್‌ಡಾಂಗಳ ಘೋರ ಕದನವನ್ನೂ ಮೀರಿಸಿದೆ

ಸ್ಟಾಲಿನ್ ಗ್ರಾಡಿನಂತೆ ಕಾಕಸಸ್ ಕದನವೂ ಈಗ ವಿಷಮತೆಗೇರಿದೆ ನೊವೊರೊಸಿಸ್ಕ ಮತ್ತು ಟುಪಾಪ್ಸೆ ಎಂಬೆರಡು ಬಂದರಗಳನ್ನು ರಕ್ಷಿಸುವುದಕ್ಕಾಗಿ ಕಾಕಸಸ್ ಪರ್ವತದಲ್ಲಿ ನಿಂತು ಹೋರಾಡುತ್ತಿದ್ದ ರಶ್ಯನ್ ಸೈನ್ಯಗಳು ಹಿಂದೆ ಸರಿದವೆಂದು ಸುದ್ದಿಯಿದೆ ಪೂರ್ವ ಕಾಕಸಸಿನಲ್ಲಿ ಕ್ಯಾಸ್ಪಿಯನ್ ಸಮುದ್ರದ ಕಡೆಗೆ ಸಾಗುತ್ತಿರುವ ಜರ್ಮನ್ ಸೇನೆಯು ತಡೆಯಿಲ್ಲದೆ ಮುಂದುವರಿಯುತ್ತಿದೆ ಮಿನರಲಿವೊಡಿಯನ್ನು ಆಕ್ರಮಿಸಿಕೊಂಡು ಜರ್ಮನರು ಗ್ರೊಝ್ನಿ ಕಡೆಗೆ ಹೊರಟಿರುವರು ಕೆಲವು ಜರ್ಮನ್ ಸೈನ್ಯಗಳು ಕಾಕಸಸ್ ಪರ್ವತವನ್ನು ದಾಟಲೂ ಯತ್ನಿಸುತ್ತಿವೆ ಮೋಸ್ಕೋ ರಂಗದಲ್ಲಿ ಜರ್ಮನರು ಅಪಾಯಕಾರೀ ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿ ಕುಳಿತಿದ್ದಾರೆ ಸ್ಟಾಲಿನ್‌ಗ್ರಾಡ್ ಸಂಗ್ರಾಮ ಮುಗಿದ ಬಳಿಕ ಮೋಸ್ಕೋ ರಣರಭಸ ಸುರುವಾದರೂ ಆಗಬಹುದು ಮೋಸ್ಕೋನಿಗೆ ದಕ್ಷಿಣದಲ್ಲಿರುವ ರಜೇವಿನಲ್ಲಿಯೂ ಘೋರ ಯುದ್ಧವಾಗುತ್ತಿದೆ ಹೀಗೆ ಜರ್ಮನರು ರಶ್ಯದ ಅನೇಕ ಮರ್ಮ ಸ್ಥಾನಗಳನ್ನು ಆಕ್ರಮಿಸಿಕೊಂಡು ಮುಂದೆ ಬಂದಿದ್ದರೂ, ರಶ್ಯನರು ತಮ್ಮ ಅನೇಕ ಕೈಗಾರಿಕೆ ವ್ಯವಸಾಯಗಳನ್ನು ಕಳಕೊಂಡರೂ ಇನ್ನೂ ಯಾರೂ ಜಗ್ಗಿಲ, ಉಭಯತರೂ ಭೀಷಣ ಹೋರಾಟ ಹೂಡುತ್ತಿರುವರು.

ರೋಮೆಲ್ಲನ ರಭಸ

ಇಜಿಪ್ತಿನಲ್ಲಿ ರೋಮೆಲನು ಪುನಃ ಧಾಳಿಯಿಟ್ಟು ರಣರಭಸ ಹೆಚ್ಚಿಸಿ ಎಲಾಮೆನಿನಿಂದ ಮುಂದೆ ಸಾಗಿದ್ದಾನೆ ಕೆಲಸಮಯದಿಂದ ಸ್ತಬ್ಧವಾಗಿದ್ದ [illegible] ಕಗೊಂಡಿದೆ ರೊಮೆಲನಿಗೆ ಈ ಸಲ ಪರಿಸ್ಥಿತಿಯು ಅನುಕೂಲವಾಗಿ ದೊರೆತುದು ಮಾತ್ರವಲ್ಲದೆ, ಹನ್ನೆರಡಕ್ಕಿಂತಲೂ ಹೆಚ್ಚಿನ ಸೈನ್ಯಗಳಿಂದ ಕೂಡಿಕೊಂಡು, ಬೇಕಾದಷ್ಟು ಟೇಂಕ, ಡೈವ್ ಬಾಂಬರು ಶಸ್ತ್ರಾಸ್ತ್ರಗಳಿಂದ ಮುಂದುವರಿಯುತ್ತಿರುವ ರಭಸವನ್ನು ಪರ್ಯಾಲೋಚಿಸಿದರೆ ಅಲೆಗ್ಸಾಂಡ್ರಿಯ ಸುವೇಜುಗಳ ವರೆಗೆ ಮುಂದೊತ್ತುವ ಸಾಹಸದಲ್ಲಿರುವನಾಗಿ ತಿಳಿಯಬಹುದು ಬಳಿಗಾಲ ಬರವುದರೊಳಗೆ ಬ್ರಿಟಿಷರನ್ನು ಮೆಡಿಟರೇನಿಯನ್ ತೀರದಿಂದೆಲ್ಲಾ ಓಡಿಸಿ ಸುವೇಸ್ ಮೂಲಕ ಕಾಕಸಸ್ ವರೆಗೂ ನುಗ್ಗಬೇಕೆಂದು ರೋಮೆಲನಿಗೆ ಹಿಟ್ಲರನ ಆಜ್ಞೆಯೂ ಇದೆಯಂತೆ ಇದು ಮಹತ್ವದ ಯುದ್ಧವೊ, ಅಥವಾ ಕೇವಲ ಶತ್ರು ಶಕ್ತಿ ಪರೀಕ್ಷೆ ಮಾತ್ರವೋ ಎಂದು ಇನ್ನೂ ಹಲವರಿಗೆ ಕುತೂಹಲವೇ ಇದೆ ರಶ್ಯಕ್ಕೆ ಹೋಗಿದ್ದ ಚರ್ಚಿಲರು, ಈಜಿಪ್ತಿಗೆ ಬಂದು ಅಲ್ಲಿನ ಸೇನಾಪತಿಗಳಲ್ಲಿ ಬದಲಾವಣೆ ಮಾಡಿ ಸೈನ್ಯ ಸಾಮಗ್ರಿ ಸಹಾಯವನ್ನೂ ಒಟ್ಟುಗೂಡಿಸುತ್ತಿದ್ದು ದ್ವಿತೀಯ ರಣರಂಗವನ್ನೇ ಕಲ್ಪಿಸುತ್ತಿರುವರೆಂದು ಸುದ್ದಿ ಬಂದಿರುವಾಗ, ವೈರಿಗಳು ತನ್ನ ಮೇಲೆ ಬೀಳುತ್ತಿರುವರೆಂದು ತಿಳಿದುಕೊಂಡು, ಅವರಿಗೆ ಅವಕಾಶ ಕೊಡದೆ ಸ್ವತಃ ತಾನೇ ಮುಂಚಿತವಾಗಿ ಅವರ ಮೇಲೆ ಧಾಳಿಯಿಟ್ಟನು ರೋಮೆಲನ ರಣ ಚಮತ್ಕಾರವಿದ್ದರೂ ಇರಬಹುದು ಈಗಿನ ರಶ್ಯನ್ ಯುದ್ಧವು ಇದೇ ರಭಸದಲ್ಲಿ ಮುಂದುವರಿದು ಜರ್ಮನರು ಕಾಕಸಸನ್ನು ಗೆದ್ದು ಇರಾಕ್ ಇರಾನ್‌ಗಳಲ್ಲಿ ಕಾಲಿಟ್ಟರೆ ಇಲ್ಲಿನ ಬ್ರಿಟಿಷ್ ಸೈನ್ಯಗಳ ಅವರನ್ನು ಎದುರಿಸಬಹುದು ಎಂದರೆ ಇಜಿಪ್ತಿನಲ್ಲಿ ಆಗ 'ಅಷ್ಟಮದಳ'ವೊಂದೇ ಕಾದಾಡಬೇಕಾಗುತ್ತದೆ ಆ ಸಂದರ್ಭದಲ್ಲಿ ಅಷ್ಟಮದಳವನ್ನೂ ಸೋಲಿಸಿಬಿಟ್ಟರೆ ಇಡೀ ಇಜಿಪ್ತೇ ತನ್ನ ವಶವಾಗುವುದಲ್ಲದೆ ಸಿರಿಯ ಇರಾಕ್ ಇರಾನ್‌ಗಳನ್ನು ಆಕ್ರಮಿಸುವುದೂ ತನಗೆ ಸುಲಭವಾದೀತೆಂದು ಹಿಟ್ಲರ್‌ನ ಯೋಜನೆ ಇರಬೇಕು ಹೀಗಾದರೆ ಅಪಾಯೋಸಂಭವಿಸೀತು! ಹಾಗಾಗಿ ಬ್ರಿಟಿಷರು ಈಗ ರೊಮೆಲನ ಗತಿಯನ್ನು ಹಿಂತಿರುಗಿಸಲೇಬೇಕು ಭೂಮಧ್ಯ ಸಮುದ್ರ ಮತ್ತು ಮಧ್ಯ ಏಶ್ಯಗಳು ಬ್ರಿಟಿಷರ ಕೈಯಲ್ಲಿಯೇ ಉಳಿದರೆ, ಕಾಕಸಸದ ಜರ್ಮನರನ್ನೂ ತಡೆಯಲು ಅನುಕೂಲವಾಗುತ್ತದೆ ಹಾಗಾಗಿ ಇಂದು ಇಜಿಪ್ತಿನಲ್ಲಿ ಪ್ರಾರಂಭವಾದ ರೊಮೆಲನ ರಣ ರಭಸವು ಅತ್ಯಂತ ಮಹತ್ವವೆನ್ನದೆ ನಿರ್ವಾಹವಿಲ್ಲ

ಟೋಗೋ ರಾಜಿನಾಮೆ

ಜಪಾನಿನ ಮುಖ್ಯ ಮಂತ್ರಿ ಟೋಜೋ ಎಂಬುದು ಎಲ್ಲರಿಗೂ ಗೊತ್ತು ಟೋಗೋ ಎಂದರೆ ಜಪಾನಿನ ವಿದೇಶಾಂಗ ಸಚಿವ ಟೋಜೋ ಟೋಗೋರೊಳಗೆ ಈಗ ಅಂತಃಕಲಹವುಂಟಾಗಿ ಟೋಗೋ ತನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದಾರೆ ಜಪಾನಿನ ಮುಖ್ಯಮಂತ್ರಿ ಟೋಜೋ ಸೈನ್ಯದ ಬಲಾತ್ಕಾರದಿಂದ ದೇಶದ ಆಡಳಿತ ನಡೆಸುವವರು, ಟೋಗೋವನ್ನು ಉಳಿದ ಮಿಕ್ಕವರೆಲ್ಲರು ಟೋಜೋ ಪಂಥವರು, ಹೀಗಾಗಿ ಸೈನ್ಯಶಕ್ತಿಯಿಂದ ಆಡಳಿತ ನಡೆಸುವವರಿಗೂ ಅದರಿಂದ ವಿರಹಿತ ರಾಜನೀತಿಯವರಿಗೂ ಈಗ [illegible] ಪಡಬೇಕಾದ ವಿಷಯವಿಲ್ಲ ಟೋಗೋರವರ ರಾಜಿನಾಮೆಯಿಂದ ಈಗ ಇಡೀ ಮಂತ್ರಿಮಂಡಳವೇ ಸೈನಿಕ ನೀತಿಯ ಮಂತ್ರಿಮಂಡಳವಾಗಿ ಪರಿಣಮಿಸಿತು ಹೀಗೆ ಅವರು ರಾಜಿನಾಮೆಯಿತ್ತುದರಿಂದ ವಿದೇಶ ನೀತಿಯಲ್ಲಿ ಮಹತ್ವದ ಬದಲಾವಣೆಯಾದರೂ ಆಗಲೇ ಬೇಕೆಂದು ಹಾಗೂ ಇಲ್ಲವೆಂದು ಟೋಕಿಯೋ ಸಾರಿದ್ದರೂ ನಾವು ಊಹಿಸಿಕೊಳ್ಳಲು ಪ್ರಯಾಸವಿಲ್ಲ ಇಷ್ಟರಲ್ಲಿಯೇ ಸೈಬೀರಿಯದ ಮೇಲೆ ಜಪಾನು ಆಕ್ರಮಣ ಮಾಡುವ ವಿಚಾರ ನಿರ್ಧಾರವಾಗಿರಬೇಕು, ಪೆಸಿಫಿಕ್ಕಿನಲ್ಲಿ ಮಿತ್ರರ ಚಟುವಟಿಕೆಗಳನ್ನು ಬೆಳೆಯಿಸಿಟ್ಟರೆ, ಒಂದು ಪಕ್ಷ ಜಪಾನಿನ ಮೇಲೆಯೇ ಆಕ್ರಮಣವಾದೀತೆಂಬ ಭೀತಿ ಜಪಾನಿಗಿದ್ದೇ ಇದೆ ಹಾಗಾಗಿ ಸಮದ ರಶ್ಯದ ಪರಿಸ್ಥಿತಿಯನ್ನೂ ನೋಡಿಕೊಂಡು, ಬಹುಶಃ ಈಗಲೇ ಸೈಬೇರಿಯದ ಮೇಲೆ ಜಪಾನು ಧಾಳಿಯಿಡುವ ಆಲೋಚನೆ ಮಾಡಬಹುದು ಹಿಂದೆ ಎರಡು ವರ್ಷಗಳ ವರೆಗೆ ರಶದಲ್ಲಿ ಜಪಾನೀ ರಾಯಭಾರಿಗಳಾಗಿದ್ದ ಟೋಗೋ ಬಹುಶಃ ರಶ್ಯದ ಬೆನ್ನ ಹಿಂದೆ ಇರಿಯುವ ಈ ಕುಹಕ ಒಪ್ಪಿಯನು ಒಪ್ಪದ ನಿಮಿತ್ತವೇ ಈಗ ರಾಜಿನಾಮೆ ಕೊಡುವ ಪ್ರಸಂಗ ಬಂದಿರಬೇಕೆಂದ ನಾವು ಊಹಿಸಬಹುದಾಗಿದೆ

ಟರ್ಕಿ ಎಚ್ಚೆತ್ತಿದೆ?

ಜರ್ಮನ್ ಸೇನೆಯು ಕಾಕಸಸಿನಲ್ಲಿ ಹೀಗೆ ಮುಂದರಿಯುತ್ತಿರುವುದನ್ನು ತಟಸ್ಥ ಟರ್ಕಿಯು ವಿಶೇಷ ಕುತೂಹಲ ದೃಷ್ಟಿಯಿಂದ ಪ್ರತೀಕ್ಷಿಸುತ್ತಿದೆಯೆಂದು ಲಂಕಾರಾದ ಸುದ್ದಿ. ವಿದ್ಯೋಕ್ತ ಸುದ್ದಿ ಪ್ರಕಾರ ಟರ್ಕಿಯ ಉತ್ತರ ಪ್ರದೇಶವೆಲ್ಲಾ ಇಷ್ಟರಲ್ಲೇ ಸೈನಿಕ ಶಿಬಿರವಾಗಿ ಪರಿವರ್ತನೆಗೊಂಡಿದ್ದು, ಅಲ್ಲಿ ಯಾವನೇ ವಿದೇಶೀಯನೂ ಸಂಚರಿಸಲಾರದವನಾಗಿರುವನೆಂದು ತಿಳಿದುಬರುತ್ತದೆ ಇದರಿಂದ ನಮಗೆ ತೋರುವುದೇನೆಂದರೆ ಟರ್ಕಿಯು ಕೂಡಾ ಮುಂದೆ ಯಾವುದೇ ಸಂಘರ್ಷವನ್ನಾದರೂ ಎದುರಿಸಲು ಸಿದ್ಧತೆ ಮಾಡುತ್ತಿದೆಯೆಂದು [illegible] ಟರ್ಕಿ [illegible] ಮಾಡುತ್ತಿರುವುದೆಂಬ ಸುದ್ದಿಯ ಸ್ಪಷ್ಟತೆ [illegible] ಧಾಳಿವರ ಕತೆಯಾದರೂ [illegible] ವನ್ನು ನಾವು ತುಸು ವಿಚಾರಿಸಬೇಕು ಜರ್ಮನರು ಕಾಕಸಸಿನಲ್ಲಿ ಇದೇ ತರದಲ್ಲಿ ಮುಂದೊತ್ತಿದರಾದರೆ ಕಾಕಸಸ್ ಗಡಿ ಭೂಮಿಯಲ್ಲಿರುವ ಟರ್ಕಿಯ ಕರಾವಳಿ ಪ್ರದೇಶಕ್ಕೆ ಜರ್ಮನರ ಅಪಾಯದ ಭೀತಿಯುಂಟು ಇಲ್ಲವೇ ಜರ್ಮನರಿಂದ ಒತ್ತಲ್ಪಟ್ಟ ರಶನ್ ಸೇನೆಯು ಜೀವ ರಕ್ಷಣೆಗೆ ಟರ್ಕಿ ಗಡಿನಾಡಿಗೆ ಕಾಲಿಡಲೂ ಬಹುದು ಈ ಎರಡು ವಿಚಾರಗಳೂ ಕೇವಲ 'ಬಹುದು' ಎಂದು ನಾವು ಹೇಳಬಹುದಲ್ಲದೆ, ಹಾಗೆಯೇ ಆದೀತು ಇಲ್ಲವೇ ಆಗದು ಎಂದೂ ಹೇಳಲಾರೆವು ಹಾಗಾಗಿ ಟರ್ಕಿಯಾದರೂ ತಾನು ತಟಸ್ಥ ರಾಷ್ಟ್ರವೆಂದು ಈಗ ಸುಮ್ಮಗಿರಲು ಸಾಧ್ಯವಿಲ್ಲ ಏಕೆಂದರೆ ಇಂದಿನ ಯುದ್ಧದಲ್ಲಿ ತಟಸ್ಥ ರಾಷ್ಟ್ರಗಳನ್ನೇ ಎಷ್ಟೋ ಸಲ, ಆಕ್ರಮಣಗಾರರು ನಿರ್ಹೇತುಕವಾಗಿಯೂ ಆಕ್ರಮಿಸಿದ್ದಾರೆ ಈ ಪರಿಹಾರವು ಟರ್ಕಿಯನ್ನೂ ಇಂದು ಎಚ್ಚೆತ್ತಿರುವಂತೆ ಮಾಡಿದ್ದರೂ ಮಾಡಿರಬಹುದು

ಬ್ರೆಜಿಲ್‌ನ ಮಹತ್ವ

ಬ್ರೆಜಿಲ್ ಅಕ್ಷ ರಾಷ್ಟ್ರಗಳೆದುರು ಯುದ್ಧ ಸಾರಿದ ಮೇಲೆ ಅದರ ಕುರಿತು ರಾಜಕಾರಣಿಗಳು [illegible] ಬ್ರೆಜಿಲಿನ ಮಹತ್ವವೇನೆಂದು ಚರ್ಚಿಸತೊಡಗಿದ್ದಾರೆ ಬ್ರೆಜಿಲ್ ಇಂದಿನ ಪ್ರಗತಿ ಪಥದಲ್ಲಿಯೇ ಮುಂದುವರಿದಿದ್ದರೆ ಮುಂದಿನ ಕಾಲು ಶತಮಾನದೊಳಗ ಜಗತ್ತಿನ [illegible] ಕೈಗಾರಿಕೆಯ [illegible] ಭೂಮಿಯಾಗಬಹುದಾಗಿದೆ ಬ್ರೆಜಿಲಿನ ಭೂವಿಸ್ತಾರವೊಂದೇ ಅತ್ಯಂತ ಗಣನೀಯವಾಗಿದೆ ಅಮೆರಿಕದ ಸಂಯುಕ್ತ ರಾಷ್ಟ್ರಗಳಿಗಿಂತ ಅದು ಸ್ವಲ್ಪ ದೊಡ್ಡದೆ ಇಡೀ ಅಸ್ಟ್ರೇಲಿಯಕ್ಕಿಂತಲೂ [illegible] ವಿಸ್ತಾರವಾಗಿದೆ, [illegible] ಇಮ್ಮಡಿ [illegible] ನಾಲ್ಕುಪಟ್ಟು ವಿಸ್ತಾರವಾದುದಿದೆ ಹಾಗೂ ಬ್ರೆಜಿಲ್ [illegible] ಮೂರು ವರ್ಷಗಳ ಹಿಂದಿನ ವರೆಗೆ ಬ್ರೆಜಿಲ್ ಬರೇ ಕಚ್ಚಾ ಮಾಲುಗಳನ್ನು ಮಾತ್ರ ಒದಗಿಸುತ್ತಿತ್ತು ಈಗ ಅಲ್ಲಿ ಕೈಗಾರಿಕೆಯ [illegible] ಆರಂಭವಾಗಿದೆ [illegible] ಬ್ರೆಜಿಲ್ ಸರಕಾರವು [illegible] ಪಂಚವಾರ್ಷಿಕ ಯೋಜನೆ [illegible] ವೃದ್ಧಿ [illegible] ಬ್ರೆಜಿಲಿನ [illegible] ಜರ್ಮನಿ [illegible] ಕಚ್ಚಾ [illegible] ಬ್ರೆಜಿಲ್ [illegible] ೧೨೦೦೦೦ [illegible] ೧೦೦೦೦೦ [illegible] ಪ್ರತಿ ವರ್ಷ [illegible] ಈಗ ಅದು [illegible] ಬೇಕಾದ [illegible] ಅಲ್ಲಿನ [illegible] ಅಲ್ಲಿ [illegible], ಹತ್ತಿ ಕಬ್ಬಿಣ ಕಾಫಿ [illegible], ಸಕ್ಕರೆ ಫಲ, ಹಣ್ಣು ಎಣ್ಣೆ ಹಾಗೂ ಇತರ ಅನೇಕ [illegible] ಅಲ್ಲಿ [illegible] ಹುಟ್ಟುತ್ತವೆ ಅಲ್ಲಿ ನದಿಗಳಿಂದ [illegible] ವಿದ್ಯುಚ್ಛಕ್ತಿಯನ್ನು ಹುಟ್ಟಿಸಬಹುದಾಗಿದೆ ಹೀಗಾಗಿ ಇಷ್ಟು ಸಂಪತ್ಸಮೃದ್ಧಿಯುಳ್ಳ ಈ ದೇಶವನ್ನು ಕೈವಶಪಡಿಸಿಕೊಳ್ಳಬೇಕೆಂದು ಕೆಲವು ವರ್ಷಗಳಿಂದ ವಿದೇಶೀಯರು ಪ್ರಯತ್ನ ಮಾಡುತ್ತಿದ್ದಾರೆ. ಬ್ರಿಟನು ಇವರಲ್ಲಿ ಕನಿಷ್ಠ ಪಾತ್ರ ವಹಿಸಿತ್ತು, ಆದರೆ ಜರ್ಮನಿ, ಜಪಾನುಗಳು ಹಾಗೂ ಇಟಲಿಯೂ ಕೂಡ ಅದನ್ನು ಸ್ವಾಧೀನಮಾಡಿಕೊಳ್ಳಲು ಬಹಳ ಆತುರವುಳ್ಳವುಗಳಾದುವು. ಹಾಗಾಗಿ ಇತ್ತೀಚಿಗೆ ಈ ವಿಷಯವನ್ನು ತಿಳಕೊಂಡ ಬ್ರೆಜಿಲ್ ಸರಕಾರವು ಇಂತಹ ವಿದೇಶೀಯರ ಚಟುವಟಿಕೆಗಳ ಮೇಲೆ ನಿರ್ಬಂಧ ಹಾಕತೊಡಗಿತು. ಹಾಗೂ ಈಗ ಪ್ರತ್ಯಕ್ಷವಾಗಿ ಅಕ್ಷರಾಷ್ಟ್ರಗಳೊಡನೆ ಯುದ್ಧ ಸಾರಿದೆ.

ಸ್ವದೇಶಾಭಿಮಾನಿ

ತಾರೀಕು 11—9—1942

ಡಿಲ್ಲಿಯ ವಿಚಾರವೇನು?

ಭಾರತದಲ್ಲಿ ರಾಜಕೀಯ ಗೊಂದಲವುಂಟಾಗಿರುವ ನಿಮಿತ್ತ, ಈಗ ಡಿಲ್ಲಿಯ ಅಧಿಕಾರೀ ಮಂಡಳದ ಕಡೆಗೆ ಜನತೆಯ ದೃಷ್ಟಿಹರಿದಿದೆ. ವೈಸರಾಯರ ಎಕ್ಸಿಕ್ಯುಟಿವ್ ಕೌನ್ಸಿಲ್‌ನಲ್ಲಿರುವ ಭಾರತೀಯ ಸದಸ್ಯರ ಕಾರ್ಯಕ್ರಮವೇನು? ಕೇಂದ್ರ ಅಸೆಂಬ್ಲಿಯ ವಿಶೇಷ ಅಧಿವೇಶನದ ಮಹತ್ವವೇನು? ಈಗ ನಡೆಯುತ್ತಿರುವ ದಬ್ಬಾಳಿಕೆಯ ಪರಿಣಾಮವೇನು? ಸೆರೆಮನೆಯಲ್ಲಿರುವ ರಾಷ್ಟ್ರೀಯ ಮುಖಂಡರ ಬಂಧವಿಮೋಚನೆ ಯಾವಾಗ? ಹಿಂದು ಮಹಾಸಭೆಯ ಸಂಧಾನ ಯಶಸ್ವಿಯಾದೀತೆ? ಈ ಹಲವು ಪ್ರಶ್ನೆಗಳು ವಿಚಾರವಂತರ ಮನಸ್ಸನ್ನು ಕದಡಿಸಿವೆ.

ಸರಕಾರದ ಧೋರಣವಂತೂ ಇಷ್ಟರಲ್ಲೇ ತಿಳಿಯಬಹುದಾಗಿದೆ. ಅಧಿಕಾರವನ್ನು ಯಥಾಸ್ಥಿತಿಯಲ್ಲಿ ಭಾರತೀಯರಿಗೆ ಒಪ್ಪಿಸಿಕೊಡುವ ಸಂಭವ ತೋರುವುದಿಲ್ಲ ಹಾಗಿದ್ದರೆ ಹಿಂದು ಮಹಾಸಭೆ ಲೀಗು ಕಾಂಗ್ರೆಸುಗಳು ಇಂದಿನ ಮಹಾಸಭೆಯವರ ಪ್ರಯತ್ನದಿಂದ ಒಂದು ಒಡಂಬಡಿಕೆಗೆ ಬಂದಲ್ಲಿ ಭಾರತೀಯರಿಗೆ ಬ್ರಿಟಿಷರು ಅಧಿಕಾರ ಕೊಡುವರೋ ಎಂಬ ವಿಚಾರ, ಅದಕ್ಕಿಂತ ಮೊದಲು ಎಲ್ಲಾ ಪಕ್ಷಗಳ ಒಡಂಬಡಿಕೆಯು ಹೇಗೆ ಸಾಧ್ಯವಾದೀತೋ ನೋಡಬೇಕು. ಯಾರು ಏನೆಂದರೂ ಜಿನ್ನರು 'ಪಾಕಿಸ್ಥಾನ'ವೇ ಎಲ್ಲದಕ್ಕಿಂತಲೂ ಮೊದಲು ಬೇಕೆಂದರೆ ಒಡಂಬಡಿಕೆ ಆಗುವುದು ಅಸಂಭವವಿದೆ; ಜಿನ್ನರಾದರೂ ಅದಕ್ಕಿಂತ ಒಂದಿಂಚು ಕದಲುವ ಹಾಗೆ ಕಾಣುವುದಿಲ್ಲ. ಹಾಗಾದರೆ ಸಂಧಾನದಲ್ಲಿ ಆಶೋದಯವಾಗುವುದಿಲ್ಲ.

ಕೇಂದ್ರ ಎಸೆಂಬ್ಲಿಯ ವಿಶೇಷಾಧಿವೇಶನ ಬೇಡನೆ ಕೊಡುತ್ತದೆ. ಹೆಚ್ಚು ಮಂದಿ ಕಾಂಗ್ರೆಸ ಸದಸ್ಯರು ಸೆರೆಮನೆ ಸೇರಿರುವುದರಿಂದ, ಚುನಾಯಿತ ಪ್ರತಿನಿಧಿಗಳ ಸಂಖ್ಯೆ ಅಲ್ಲಿ ಕಡಿಮೆ. ಸರಕಾರದವರು ಆ ಅಧಿವೇಶನದಲ್ಲಿ ತಮ್ಮ ಇಂದಿನ ದಬ್ಬಾಳಿಕೆ ನೀತಿಯನ್ನೇ ಸಮರ್ಥಿಸುವ ಸೂಚನೆ ತರಲಿರುವರಂತೆ! ಹಾಗಾದರೆ ಅದರಿಂದಲೂ ಪರಿಸ್ಥಿತಿ ಸುಧಾರಿಸುವಂತೆ ತೋರಲಾರದು.

ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಭಾರತೀಯ ಸದಸ್ಯರು ಇದುವರೆಗೆ ಏನೂ ಬಿಕ್ಕಟ್ಟು ಬಿಡಿಸುವ ಮಹತ್ವದ ಕಾರ್ಯ ಮಾಡಿಲ್ಲ. ವೈಟ್ ಹಾಲಿನಿಂದ ಬರುವ ಸೂಚನೆಗಳ ಕಡೆಗೆ ಅವರು ಕಾಯುವಂತಿದೆ. ಅಣೆ ಸರ್ಕಾರರಂಥಾ ಉಜ್ವಲ ರಾಷ್ಟ್ರೀಯ ಮನೋಭಾವದವರೂ ಇಂದು ಸಪ್ಪೆಯಾಗಿದ್ದಾರೆ. ಸರ್ ನೊಸೆರಂತೂ ಪಂಚ ಪ್ರಾಂತಗಳ ಬೇರೆಯೇ ಶ್ರುತಿ ಹಿಡಿದಿದ್ದಾರೆ. ಅಂಬೇಡ್ಕರರು ದಳಿತ ಸ್ಥಾನಕ್ಕಾಗಿ ಕೂಗುತ್ತಿದ್ದಾರೆ. ಸರ್ ಸಿ. ಪಿ.ಯವರು ಎರಡೇ ವಾರಗಳೊಳಗೆ ಹೊರಬಂದಿದ್ದಾರೆ. ಹೀಗಿರುವಾಗ ಅವರಿಂದ ಬಿಕ್ಕಟ್ಟು ಬಿಡಿಸುವಲ್ಲಿ ಹೆಚ್ಚಿನ ಕಾರ್ಯವಾಗುವುದೆಂಬ ಭರವಸೆಯಿಲ್ಲ.

ಹೀಗೆ ಪ್ರತಿಯೊಂದು ಪಂಗಡದವರಲ್ಲಿಯೂ ಹೆಚ್ಚಿನ ಕಾರ್ಯಭರವಸೆ ತೋರದಿದ್ದರೂ ಎಲ್ಲರೂ ಸ್ವಲ್ಪಸ್ವಲ್ಪ ಉದಾರ ಮನಸ್ಸು ತೋರಿಸಿ ಹೃತ್ಪೂರ್ವಕ ಪ್ರಯತ್ನಿಸಿದರೆ ಏನಾದರೂ ಒಂದು ಸಮಸ್ಯಾ ಪರಿಹಾರವಾದೀತು. ಸರಕಾರದವರೂ ಆಗ ಅನುಕೂಲರಾಗಬಹುದೆಂದು ನಂಬಬಹುದಾಗಿದೆ.

ಹಿಂದು ಮಹಾಸಭೆ

ಭಾರತದ ಎಲ್ಲಾ ರಾಜಕೀಯ ಪಂಗಡದ ಮುಖಂಡರನ್ನು ಕಂಡು ಮಾತನಾಡಿ ಸರಕಾರದೊಡನೆ ಒಂದು ಒಪ್ಪಂದಕ್ಕೆ ಬಂದು ರಾಷ್ಟ್ರದ ಸಮಸ್ಯೆಯನ್ನು ಪರಿಹರಿಸಬೇಕೆಂಬ ನಿರ್ಧಾರದಿಂದ ಹಿಂದು ಮಹಾಸಭೆಯ ಮುಖಂಡರನೇಕರು ಮುಂದಾಳುತನ ವಹಿಸಿ ಕೆಲಸಮಾಡುತ್ತಿದ್ದಾರೆ.

ಹಿಂದು ಮಹಾಸಭೆಯ ವರ್ಕಿಂಗ್ ಕಮಿಟಿಯು ಸಭೆಸೇರಿ, ಕೂಡಲೇ ಭಾರತದ ಸ್ವಾತಂತ್ರ್ಯವನ್ನು ಸಾರಬೇಕೆನ್ನುವ, ರಾಷ್ಟ್ರದ ಮುಖಂಡರನ್ನು ಬಿಡುಗಡೆಮಾಡಬೇಕೆನ್ನುವ, ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆನ್ನುವ ನಿರ್ಣಯವನ್ನು ಮಾಡಿತು.

ಹಿಂದು ಮಹಾಸಭೆಯ ಈ ನಿರ್ಣಯದಲ್ಲಿ ರಾಜನೀತಿ ಪರಿಜ್ಞಾನದ ಅಂಶವಿದೆ ಮತ್ತು ಇದು ಗಂಭೀರವಿದೆ. ಮುಸ್ಲಿಂ ಲೀಗಿನಂತೆ ಅದು ಹಿಂದುಜಾತಿಗಾಗಿ ಮಾತ್ರ ಅಧಿಕಾರ ಬರಬೇಕೆನ್ನುವ ಈ ರೀತಿಯ ಸಂಕೋಚ ಬುದ್ಧಿಯ ನಿರ್ಣಯವನ್ನು ಮಾಡಿಲ್ಲ. ಮುಸ್ಲಿಂ ಲೀಗಿನಂತೆ ಜಾತೀಯತೆಯ ನಿರ್ಣಯವೊಂದನ್ನು ಮಾತ್ರ ಮಾಡಿ, ಕಟಸ್ಥ ಕುಳಿತುಕೊಳ್ಳುವ ಭಾವನೆಯು ಹಿಂದು ಮಹಾಸಭೆ ಮುಖಂಡರು ಕೈಹಾಕಿದ್ದು ಬಹಳ ಪ್ರಶಂಸನೀಯವಾಗಿದೆ.

ಹಿಂದು ಮಹಾಸಭೆ ತತ್ವತಃ ಒಂದು ಜಾತೀಯ ಸಂಸ್ಥೆ; ಆದರೆ ಇತ್ತೀಚೆಯ ಅದರ ನಿರ್ಣಯದಲ್ಲಿ ಜಾತೀಯ ಸಂಕುಚಿತತೆಯನ್ನು ದೂರಮಾಡಿ ವಿಶಾಲ ಕಾರ್ಯ ರಂಗಕ್ಕಿಳಿದಿದೆ. ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಿ ಯುದ್ಧಾನಂತರ ಪಾಕಿಸ್ತಾನದ ವಿಚಾರ ಮಾಡಬಹುದೆಂದು ಡಾ॥ ಮುಖರ್ಜಿಯವರು ಜಿನ್ನರಿಗೂ ಭರವಸೆಯಿತ್ತಿದ್ದಾರೆ. ಈಗಾಗಲೇ ಮಾತುಕತೆಗಳು ಪ್ರಾರಂಭವಾಗುತ್ತಿವೆ. ಸರ್ ಸಪ್ರು ಜಯಕರ್ ಪ್ರಭೃತಿಗಳು ಜಿನ್ನ ರಾಜಾಜಿ ಮೊದಲಾದವರಿಗೆ ಆಮಂತ್ರಣ ಹೋಗಿದೆ, ವೈಸರಾಯನ್ನೂ ಮಹಾಸಭೆ ಮುಖಂಡರು ಮಾತನಾಡಿಸಲಿದ್ದಾರೆ. ಸಂಧಾನ ಕಾರ್ಯವು ಸಫಲವಾಗಲಿ ಎಂಬುದು ನಮ್ಮ ಹಾರೈಕೆಯಾಗಿದೆ.

ಒಪ್ಪಂದದ ಸೂಚನೆಗಳು

ಹಿಂದು ಮಹಾಸಭೆಯ ಕಾರ್ಯಾಧ್ಯಕ್ಷ ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಬೇರೆ ಬೇರೆ ರಾಜಕೀಯ ಮುಖಂಡರ ಹಾಗೂ ಸರಕಾರದ ಮುಂದೆ ಇಡಲು, ಬ್ರಿಟನು ಮತ್ತು ಭಾರತಗಳ ಮಧ್ಯೆ ಆಗಬೇಕಾದ ಒಪ್ಪಂದದ ಹತ್ತು ಸೂಚನೆಗಳನ್ನು ಈಗ ಪ್ರಕಟಿಸಿದ್ದಾರೆ. ಅವುಗಳು ಈ ಪ್ರಕಾರವಿವೆ.

(೧) ಭಾರತಕ್ಕೆ ಸ್ವಾತಂತ್ರ್ಯ ಕೊಡಲಾಗಿದೆಯೆಂದು ಔಪಚಾರಿಕವಾಗಿ ಬ್ರಿಟಿಷ್ ಸರಕಾರವು ಪ್ರಕಟಿಸಬೇಕು. (೨) ವೈಸರಾಯರಿಗೆ ಅಥವಾ ಬ್ರಿಟಿಷ್ ಪ್ರಭುತ್ವದಿಂದ ಅಧಿಕಾರ ಪಡೆದವರಿಗೆ, ಮುಂದೆ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವಂತೆ ಜವಾಬ್ದಾರಿ ವಹಿಸಿಕೊಳ್ಳುವ ಭಾರತದ ರಾಜಕೀಯ ಪಕ್ಷದೊಡನೆ ಮಾತುಕತೆ ನಡೆಸಲು ಅಧಿಕಾರಕೊಡಬೇಕು. (೩) ಭಾರತದ ರಾಷ್ಟ್ರೀಯ ಸರಕಾರವು ಅಕ್ಷ ರಾಷ್ಟ್ರದೊಡನೆ ಯುದ್ಧ ಸಾರಿ, ಶತ್ರುವಿನೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳುವುದಿಲ್ಲವೆಂದು ಸ್ಪಷ್ಟ ಮಾಡಬೇಕು. (೪) ಭಾರತದ ಪ್ರತಿನಿಧಿಯನ್ನೊಳಗೊಂಡು ರಚಿತವಾದ ಮಿತ್ರರ ಯುದ್ಧ ಸಮಿತಿಯಲ್ಲಿ ನಿರ್ಣಯವಾದ ಧೋರಣೆಯಂತೆ ಭಾರತದ ಯುದ್ಧ ನೀತಿಯಿರಬೇಕು. (೫) ಭಾರತ ಯುದ್ಧ ನಿರ್ವಹಣಾಧಿಕಾರವು ಕಮಾಂಡರ್ ಇನ್ ಚೀಫರ ವಶವಿರಬೇಕು. ಮಿತ್ರರ ಯುದ್ಧ ಸಮಿತಿಯ ಧೋರಣೆಗೆ ಹೊಂದಿಕೊಂಡು ಭಾರತದ ಯುದ್ಧನೀತಿ ಸಾಗಬೇಕು. ಭಾರತದ ರಾಷ್ಟ್ರೀಯ ಸರಕಾರಕ್ಕೆ ಭಾರತೀಯ ಸೈನ್ಯ ರಚನೆಯು ಶಕ್ಯವಿರುವುದರಿಂದ ಆಂತರಿಕ ಸಂರಕ್ಷಣೆ ಮತ್ತು ಪರಕೀಯ ಆಕ್ರಮಣವನ್ನು ಪ್ರತಿಭಟಿಸಿ ಹೋರಾಡುವ ಉದ್ದೇಶವನ್ನಿಟ್ಟುಕೊಂಡೇ ಸೈನ್ಯ ರಚನೆಯಾಗಬೇಕು. (೬) ರಾಷ್ಟ್ರೀಯ ಸರಕಾರದಲ್ಲಿ ದೇಶದ ಮುಖ್ಯ ಮುಖ್ಯ ರಾಜಕೀಯ ಸಂಸ್ಥೆಗಳ ಪ್ರತಿನಿಧಿಗಳಿದ್ದು ಪ್ರಾತಿನಿಧಿಕವಿರಬೇಕು. (೭) ಇದೇ ರೀತಿಯಲ್ಲಿ ಪ್ರಾಂತಿಕ ಮಂತ್ರಿಮಂಡಳದ ರಚನೆಯೂ ಆಗತಕ್ಕದ್ದು, ಕೇವಲ ಶಾಸನ ಮಂಡಲದ ಸದಸ್ಯರಿಂದಲೇ ಅದರ ರಚನೆಯಾಗಿರದೆ, ದೇಶದಲ್ಲಿ ವರ್ಚಸ್ಸು ಬೀಳಬಲ್ಲ ಇತರರನ್ನೂ ತೆಗೆದುಕೊಂಡು ಅದರ ರಚನೆಯಾಗಬೇಕು; ಇದರಿಂದ ಯುದ್ಧಕಾಲದಲ್ಲಿ ವಿಶೇಷ ಸಹಾಯವಾಗುವುದು. (೮) ಯಶಸ್ವಿಯಾಗ ಯುದ್ಧೋದ್ಯಮವು ನಡೆಯುವಂತೆ, ಭಾರತದ ಆರ್ಥಿಕ ಪರಿಸ್ಥಿತಿ ಉನ್ನತಿಹೊಂದಲು ಕೈಗಾರಿಕೆ ಉದ್ಯೋಗಗಳನ್ನು ಅಭಿವೃದ್ಧಿಗೊಳಿಸುವುದು. ರಾಷ್ಟ್ರೀಯ ಸರಕಾರದ ಒಂದು ಉದ್ದೇಶವಿರಬೇಕು. (೯) ಲಂಡನಿನಲ್ಲಿರುವ ಇಂಡಿಯಾ ಆಫೀಸು ರದ್ದಾಗಬೇಕು. (೧೦) ಭಾರತದ ಭಾವೀರಾಜ್ಯಘಟನೆಯ ವಿಷಯದಲ್ಲಿ ಮುಂದಕ್ಕೆ ಭಾರತೀಯ ರಾಷ್ಟ್ರೀಯ ಸರಕಾರವು ರಾಷ್ಟ್ರ ಘಟನಾ ಸಮಿತಿಯನ್ನು ರಚಿಸಬೇಕು.

ಹೀಗೆ ಭಾರತ ಬ್ರಿಟನುಗಳ ನಡುವೆ ಒಪ್ಪಂದವಾಗುವಂತೆ ಸೂಚನೆಗಳು ಮುಂದಿಟ್ಟು ಮಾತುಕತೆ ಡಿಲ್ಲಿಯಲ್ಲಿ ಪ್ರಾರಂಭವಾಗಿದೆ. ಅಲ್ಪ ಸಂಖ್ಯಾಕರ ವಿಷಯ ಅಗತ್ಯ ಬಿದ್ದರೆ ಅಂತರ್ ರಾಷ್ಟ್ರೀಯ ಪಂಚ ಮಂಡಲದ ಮಧ್ಯಸ್ಥಿಕೆ ಮೊದಲಾದ ವಿಚಾರಗಳು ಇದರಲ್ಲಿ ಅಡಕವಾಗಿವೆ. ಡಾ॥ ಮುಖರ್ಜಿಯವರ ಸೂಚನೆಗಳ ವಿಷಯ ದೇಶದಾದ್ಯಂತ ವಿಚಾರ ಪ್ರವಾಹವುಂಟಾಗಿದೆ.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

ಸುದ್ದಿಗಳು

ಕಮಲಾದೇವಿಯರ ಕೈದು

ಶ್ರೀಮತಿ ಕಮಲಾದೇವಿಯರನ್ನು ಬೆಂಗಳೂರು ಬಸವನ ಗುಡಿಯಲ್ಲಿ ಕೈದುಮಾಡಿದ್ದಾರೆ.

ಡಾ॥ ಜೀವರಾಜ ಮೇಥಾರ ಕೈದು

ಬೊಂಬಯಿ ಕಿಂಗ್ ಎಡ್ವರ್ಡ್ ಮೆಮೋರಿಯಲ್ ಆಸ್ಪತ್ರೆಯ ನಾಜಿಮರಾದ ಡಾ॥ ಜೀವರಾಜ ಮೇಥಾರನ್ನು ಕೈದುಮಾಡಿದ್ದಾರೆ.

ದೇಸಾಯಿಯವರ ಸಮಾಧಿಗೆ ಗಾಂಧಿಜಿಯ ಬಾಷ್ಪಾಂಜಲಿ

ಮಹಾದೇವ ದೇಸಾಯಿಯವರ ಸಮಾಧಿಗೆ ಗಾಂಧಿಜಿಯ ಪುಷ್ಪಾಂಜಲಿ!

ಮಹಾದೇವ ದೇಸಾಯಿಗೆ ನಾನೇ ತಂದೆ, ನಾನೇ ಮಗ

ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ಮುಂಬೈ ನಗರದ ವಿಶೇಷ ಸುದ್ದಿಗಾರರು ಮಹಾತ್ಮಾ ಗಾಂಧಿಯವರಿಗೆ ಮಹಾದೇವ ದೇಸಾಯಿಯವರ ನಿಧನದಿಂದುಂಟಾದ ಸಂತಾಪ ಹಾಗೂ ಅವರು ನಿತ್ಯ ಮಾಡುತ್ತಿರುವ ಸಮಾಧಿ ಸೇವೆಯನ್ನು ಕುರಿತು ಈ ರೀತಿ ಬರೆದಿದ್ದಾರೆ:

'ಗಾಂಧಿಜಿಯವರನ್ನು ಸ್ಥಾನಬದ್ಧರನ್ನಾಗಿ ಇರಿಸಲಾದ ಆಗಾಖಾನರ ಬಂಗಲೆಯು ಯರವಾಡ ಜೈಲಿನಿಂದ ಸುಮಾರು ಒಂದು ಮೈಲು ದೂರವಿದ್ದು ಮುಳಮುಠಾ ನದಿಯ ಎಡದಂಡೆಯಲ್ಲಿದೆ. ಅದೇ ೪ ಅಂತಸ್ತಿನ ಖಾಸಗಿ ಅರಮನೆಯಲ್ಲಿಯೇ ಸ್ಥಾನಬದ್ಧರಾಗಿ ಇರಿಸಲ್ಪಟ್ಟ ಗಾಂಧಿಜಿಯವರ ಡಾಕ್ಟರರಾದ ಸುಶೀಲಾ ನಾಯರರು ಗಾಂಧಿಜಿಯವರ ಪ್ರಕೃತಿಯನ್ನು ಕುರಿತು ಹೆಚ್ಚಿನ ಆಸಕ್ತಿಯಿಂದ ನೋಡಿಕೊಳ್ಳುವದಲ್ಲದೆ ಪುಣೆಯ ಸಿವಿಲ್ ಸರ್ಜನರಾದ ಕರ್ನಲ್ ಪ್ರಾಲ್‌ರು ಪ್ರತಿನಿತ್ಯವೂ ಮಹಾತ್ಮರ ದೇಹ ಪ್ರಕೃತಿಯನ್ನು ಪರೀಕ್ಷಿಸುತ್ತಿದ್ದಾರೆಂದು ನನಗೆ ತಿಳಿದು ಬಂದಿದೆ.

'ಮಹಾತ್ಮಾಜಿ, ಶ್ರೀಮತಿ ಕಸ್ತೂರಿಬಾಯಿ ಗಾಂಧಿ, ಡಾ|| ಸುಶೀಲಾ ನಾಯರ್, ಮೀರಾಬೆನ್, ಶ್ರೀಮತಿ ಸರೋಜಿನಿ ನಾಯುಡು ಈ ಐದು ಮಂದಿ ಮಾತ್ರವೇ ಇಷ್ಟು ದೊಡ್ಡ ಅರಮನೆಯಲ್ಲಿರುವದಾದರೂ ಅವರ ಮೇಲೆ ಪ್ರಬಲವಾದ ಹಾಗು ಭದ್ರವಾದ ಸಶಸ್ತ್ರ ಪೋಲೀಸ ಕಾವಲು ಇದೆ. ಗಾಂಧಿಜಿಯವರ ಆರೋಗ್ಯದ ಸಂಬಂಧವಾಗಿ ಸರಕಾರದವರು ಹೊರಡಿಸಿದ ಪ್ರಕಟಣೆಯನ್ನು ಸ್ವಾಗತಿಸಲಾಗಿದೆಯೆಂಬುದು ನಿಜವಾದರೂ ಇನ್ನು ಮುಂದೆ ಭೆಟ್ಟಿ ಸಂಬಂಧದ ನಿರ್ಬಂಧವನ್ನು ಕಿತ್ತು ಹಾಕಬೇಕೆಂದು ಕಾಂಗ್ರೆಸ್ಸೇತರ ಮುಂದಾಳುಗಳೂ ಸಹ ಅಭಿಪ್ರಾಯಪಟ್ಟಿದ್ದಾರೆ.

ಮಹಾದೇವ ದೇಸಾಯಿಯವರ ನಿಧನದಿಂದುಂಟಾದ ಅತೀವ ದುಃಖವನ್ನು ಗಾಂಧಿಜಿಯವರು ಬಹಳ ತಾಳ್ಮೆಯಿಂದ ಸಹಿಸಿಕೊಂಡಿದ್ದಾರೆ. ತಮ್ಮ ಕೀರ್ತಿಶೇಷ ಕಾರ್ಯದರ್ಶಿಯ ಸವಿನೆನಪನ್ನು ಅವರು ಬಹಳ ಹೃದಯ ಸ್ಪರ್ಶವಾದ ರೀತಿಯಲ್ಲಿ ಕಾಯ್ದಿಟ್ಟುಕೊಂಡಿದ್ದಾರೆ. ಪ್ರತಿನಿತ್ಯ ಸೂರ್ಯೋದಯವಾಗಿ ದಿಗಂತದಿಂದ ಸೂರ್ಯಬಿಂಬವು ಮೇಲೇರಿದೊಡನೆ ಕೀ. ಶೇ. ಮಹಾದೇವ ದೇಸಾಯರ ಅಂತ್ಯ ವಿಧಿಯಾದ ಸ್ಥಳಕ್ಕೆ ತಾವು ನಡೆದುಕೊಂಡು ಹೋಗಿ ಸಮಾಧಿಗೆ ಹೂವನ್ನು ಬಿಡಿಸಿ ಅರ್ಪಿಸಿ ಅವರ ಆತ್ಮಕ್ಕೆ ಶಾಂತಿಯಾಗಲೆಂದು ಮಹಾತ್ಮಾ ಗಾಂಧಿಯವರು ಕೆಲ ನಿಮಿಷಗಳ ವರೆಗೆ ಪ್ರಾರ್ಥಿಸುವ ದೃಶ್ಯವು ಅತೀವ ಹೃದಯಸ್ಪರ್ಶಿಯಾಗಿದೆ. ಈ ಕೆಲಸವನ್ನು ಪ್ರತಿನಿತ್ಯವೂ ಮಹಾತ್ಮಾ ಗಾಂಧಿಯವರು ತಪ್ಪದೆ ಮಾಡುತ್ತಿದ್ದಾರೆ. ಅದು ಅವರ ನಿತ್ಯ ಕಾರ್ಯಕ್ರಮಗಳಲ್ಲೊಂದು.. ಕೀ. ಶೇ. ಶ್ರೀ ಮಹಾದೇವ ದೇಸಾಯರ ಅಂತ್ಯ ವಿಧಿಯನ್ನು ಮಹಾತ್ಮಾ ಗಾಂಧಿಯವರೇ ಸ್ವತಃ ಮಾಡಿದರು. ಅವರ ಶವವನ್ನು 'ಬಂಡ್ ಗಾರ್ಡನ್ ಸ್ಮಶಾನ'ಕ್ಕೆ ಒಯ್ದು ಅಲ್ಲಿ ಶವಸಂಸ್ಕಾರ ಮಾಡಬೇಕೆಂದು ಸರಕಾರದ ಉದ್ದೇಶವಿತ್ತು. ಆದರೆ ಶವಸಂಸ್ಕಾರದ ಕಾಲದಲ್ಲಿ ತಾವು ಅಲ್ಲಿ ಇದ್ದೇ ತೀರಬೇಕೆಂದು ಗಾಂಧಿಜಿಯವರು ತಮ್ಮ ಆಶೆಯನ್ನು ವ್ಯಕ್ತ ಮಾಡಿದರು.

"ಜೈಲಿನ ಅಧಿಕಾರಿಗಳು ಈ ಸಂಬಂಧದಲ್ಲಿ ಮೇಲಧಿಕಾರಿಗಳ ಸಲಹೆಯನ್ನು ಕೇಳಿದರು. ಡಿಲ್ಲಿಗೂ ತಿಳಿಸಿ ಸಲಹೆಯನ್ನು ಕೇಳಿದರು. ಕೊನೆಗೆ "ಬಂಡ್‌ಗಾರ್ಡನ್ಸ್"ನಲ್ಲಿರುವ ಹಿಂದು ಸ್ಮಶಾನಕ್ಕೆ ಮಹಾತ್ಮಾಗಾಂಧಿಯವರನ್ನು ಹೋಗಗೊಡಬಾರದೆಂದು ನಿರ್ಧಾರವಾಯಿತು. ಆದ ಕಾರಣ ಆಗಾಖಾನರ ಅರಮನೆಯ ವಿಸ್ತಾರವಾದ ಉದ್ಯಾನದ ಒಂದು ಕೊನೆಯಲ್ಲಿ ಶವಸಂಸ್ಕಾರವಾಯಿತು. ಯರವಾಡದಿಂದ ಆ ಸಂಬಂಧ ೮ ಮಂದಿ ಬ್ರಾಹ್ಮಣರನ್ನು ಹಾಗೂ ಓರ್ವ ಪುರೋಹಿತರನ್ನು ಕರೆಯಿಸಲಾಗಿತ್ತು. ಸನಾತನೀಹಿಂದೂ ಪದ್ಧತಿಯ ಮೇರೆಗೆ ಅಂತ್ಯ ವಿಧಿಯು ಜರುಗಿತು. ಆ ಚಿತೆಗೆ ತಮ್ಮ ಕೈಯಲ್ಲಿ ತಾವೇ ಬೆಂಕಿ ಕೊಡುವಾಗ "ಮಹಾದೇವ ದೇಸಾಯಿಗೆ ನಾನೇ ತಂದೆ ನಾನೇ ಮಗ" ಎಂದು ಮಹಾತ್ಮರು ಉದ್ಗರಿಸಿದರು."

"ಶ್ರೀಮತಿ ಕಸ್ತೂರಿಬಾಯಿ, ಗಾಂಧಿ, ಡಾ. ಸುಶೀಲ ನಾಯರ್, ಮಿರಾಬೇನ್, ಶ್ರೀಮತಿ ಸರೋಜಿನಿ ನಾಯುಡು ಮತ್ತು ಜೈಲುಗಳ ಇನ್ಸಪೆಕ್ಟರ ಜನರಲರಾದ ಕರ್ನಲ್ ಭಂಡಾರಿಯವರು ಅಂತ್ಯ ವಿಧಿಯ ಕಾಲದಲ್ಲಿ ಅಲ್ಲಿ ಹಾಜರಿದ್ದರು.

ಟ್ರಿಬ್ಯೂನ್ ಪತ್ರಿಕೆಯ ಬಾತ್ಮಿದಾರರ ಬರೆಹ

ಸ್ವದೇಶ ಸಮಾಚಾರಗಳು

ಒಂದು ಲಕ್ಷ ೧೩ ಸಾವಿರ ಪೌಂಡು ಕಂದಾಯ

ವನ್ನು ಮಧ್ಯಪ್ರಾಂತದ ಪಟ್ಟಣಗಳ ಮತ್ತು ಗ್ರಾಮಗಳ ಮೇಲೆ ಹೊರಿಸಲಾಗಿದೆ. ಜನರು ದೌರ್ಜನ್ಯ ಕೃತ್ಯಗಳನ್ನು ನಡೆಸಿದರೆಂದು ಈ ತೆರಿಗೆ, ಮಧ್ಯಪ್ರಾಂತದಲ್ಲಿ ನಡೆದ ದೊಂಬಿಗಳಲ್ಲಿ ೧೩ ಪಟ್ಟಣ ಮತ್ತು ಗ್ರಾಮಗಳ ಜನರು ಭಾಗವಹಿಸಿದರೆಂದು, ತಂತಿಟೆಲಿಫೋನು, ಮಾರ್ಗಗಳನ್ನು ನಾಶಮಾಡಿದರೆಂದೂ, ಸರಕಾರೀ ಕಟ್ಟಡಗಳಿಗೆ ಬೆಂಕಿ ಕೊಟ್ಟರೆಂದೂ, ದೊಂಬಿಕಾರರಿಗೆ ಆಶ್ರಯ ಸಹಾಯ ಕೊಟ್ಟರೆಂದೂ ಸರ್ಕಾರದವರು ಪ್ರಕಟಿಸಿ ಈ ತೆರಿಗೆ ಶಿಕ್ಷೆ ಮಾಡಿರುವರು.

ವೈಸರಾಯರ ಕೌಲೆಯ ಪ್ರಯತ್ನ ನಡೆಯಲಿಲ್ಲ

ಎಂದು ಸರಕಾರವು ಪ್ರಕಟಿಸಿ, ಆತ್ಮ ರೇಡಿಯೋ ಕೊಟ್ಟ ಆ ವಾರ್ತೆಯು ಸುಳ್ಳು ಸುದ್ದಿಯೆಂದು ತಿಳಿಸಿದೆ.

ಪೋಲೀಸರ ಮನೆಯನ್ನು ಸುಡುವುದು

ಪುಣೇನಲ್ಲಿ ನಡೆಯಿತೆಂದೂ, ಡಿಪ್ಯೂಟಿ ಕಲೆಕ್ಟರರ ಕಚೇರಿಗೆ ಬೆಂಕಿ ಹಚ್ಚಲು ಪ್ರಯತ್ನವಾಯಿತೆಂದೂ, ಸರಕಾರದ ಪ್ರಕಟಣೆ ತಿಳಿಸುತ್ತದೆ.

ಕಾಶಿ ವಿಶ್ವವಿದ್ಯಾಲಯದಿಂದ ಸೈನಿಕರು ಹೊರಗೆ

ಹೋಗಿದ್ದಾರೆಂದು ತಿಳಿದಿದೆ. ಒಳಗೆ ಹೋಗಬೇಕಾದರೆ ಅಪ್ಪಣೆ ಚೀಟು ಕೊಡಬೇಕೆಂದು ನಿಯಮವಾಗಿರುವುದು. ಪೋಲೀಸು ಕಾವಲು ಇಡಲಾಗಿದೆ.

ಆನೆಗಳನ್ನು ರಿಜಿಸ್ಟರ್ ಮಾಡಬೇಕು

ಎಂದು ಅಸ್ಸಾಮ ಪ್ರಾಂತದ ಆನೆ ಮಾಲಿಕರಿಗೆ ಸರಕಾರದ ಅಪ್ಪಣೆಯಾಗಿದೆ.

ಗಾಂಧಿಜಿಯನ್ನು ವಿಮಾನದಲ್ಲೊಯ್ವರೆ?

ಈಗ ಹಲವು ತರದ ವಾರ್ತೆ ಹರಡುತ್ತಿವೆ. ಅದರಲ್ಲಿ ಇದೊಂದು. ಚರ್ಚಿಲರು ಡಿಲ್ಲಿಗೆ ಬಂದಿದ್ದು ಗಾಂಧಿಜಿಯವರನ್ನು ವಿಮಾನದಲ್ಲಿ ಕೊಂಡೊಯ್ದಿರುವರೆಂದು ಬೊಂಬಾಯಿಯಲ್ಲಿ ಒಂದು ಸುದ್ದಿಯಿದೆಯೆಂದು 'ಫ್ರೀ ಇಂಡಿಯಾ' ಪತ್ರಿಕೆ ಬರೆಯುತ್ತದೆ.

ಕೊಡಗಿನಲ್ಲಿ ಚಳವಳ

ನಡೆಯುತ್ತಿದೆ.. ಶ್ರೀಗಳಾದ ಬೆಳಿಯಪ್ಪ ಪೂಣಚ್ಚ, ಕರುಂಬಯ್ಯ ಮೊದಲಾದ ಕಾಂಗ್ರೆಸು ಮುಖಂಡರು ಬಂಧಿತರಾಗಿದ್ದಾರೆ. ಶಾಲಾ ವಿದ್ಯಾರ್ಥಿಗಳು ಮುಷ್ಕರ ಹೂಡಿ ಹಳ್ಳಿಗಳಿಗೆ ಹೋಗಿ ಕಾರ್ಯ ಮಾಡುತ್ತಿದ್ದಾರೆ. ವಿದ್ಯಾರ್ಥಿನಿಯರೂ ಈ ಚಳವಳದಲ್ಲಿ ಭಾಗವಹಿಸಿರುವರು.

ಮೈಸೂರಲ್ಲಿ ಚಳವಳ

ಮೈಸೂರು ಪ್ರಾಂತದ ಭಾಷ್ಯಂ ಮೊದಲಾದ ಕಾಂಗ್ರೆಸು ಮುಖಂಡರು ಬಂಧಿತರಾಗಿದ್ದಾರೆ. ಬೆಂಗಳೂರು, ಕೋಲಾರ, ಚಿಕ್ಕಮಗಳೂರು ಶಿವಮೊಗ್ಗ ದಾವಣಗೆರೆಗಳಲ್ಲಿಯೂ ಬಂಧನ ಮುಷ್ಕರಗಳಾಗಿವೆ. ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಚಳವಳದಲ್ಲಿ ಭಾಗವಹಿಸಿದ್ದಾರೆ.

ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಪರಿಷತ್ತಿನಲ್ಲಿ ಭಾರತದ ಸ್ವಾತಂತ್ರ್ಯದಾನ

ವಿಷಯ ನಿರ್ಣಯವು ಮಂಜೂರಾಗಿದೆ. ಇದು ವಾಶಿಂಗ್‌ಟನ್ನಿನಲ್ಲಿ ಸೇರಿದೆ. ಭಾರತೀಯ ವಿದ್ಯಾರ್ಥಿ ಮುಖಂಡರಾದ ಶ್ರೀ. ಚಂದ್ರಶೇಖರರು ಆ ಪರಿಷತ್ತಿನಲ್ಲಿ ಭಾರತದ ಸ್ವಾತಂತ್ರ್ಯದಾನದ ವಿಷಯ ಸ್ಫೂರ್ತಿಯುತ ಮಾತನಾಡಿದರು.

ಬೆಂಗಳೂರು.

ಬೆಂಗಳೂರು ಸಂಪಾದಕರ ಕೈದು

ಡೈಲಿ ನ್ಯೂಸ್, ತಾಯಿನಾಡು, ವಿಶ್ವಕರ್ನಾಟಕ ಮತ್ತು ಜನವಾಣಿ, ಈ ಪತ್ರಿಕೆಗಳ ಸಂಪಾದಕರಾದ ಶ್ರೀಗಳಾದ ಪಿ. ಆರ್. ರಾಮಯ್ಯ, ಸಿ. ಪಿ. ಶ್ರೀನಿವಾಸನ್, ಸಿದ್ಧವ್ವನ ಹಳ್ಳಿ ಕೃಷ್ಣಶರ್ಮ ಮತ್ತು ಗುಪ್ತ ಇವರನ್ನು ತಾ. ೯ರಂದು ಕೈದುಮಾಡಿದ್ದಾರೆ. ವಿಶ್ವಕರ್ನಾಟಕದ ಮೆನೇಜಿಂಗ್ ಡೈರೆಕ್ಟರರೂ, ಇತ್ತೀಚೆಯ ವರೆಗಿನ ಅದರ ಸಂಪಾದಕರೂ ಆಗಿದ್ದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರನ್ನೂ ಬಂಧಿಸಲಾಗಿದೆ.

ಆಣೆಯವರ ಮನೆಯ ಮುಂದೆ ವಿದ್ಯಾರ್ಥಿನಿಯರ ಪಿಕೆಟಿಂಗ್

ಮಾಡಿ, ನೀವು ರಾಜೀನಾಮೆ ಕೊಡಿರಿ ಇಲ್ಲವೇ ಧುರೀಣರನ್ನು ಬಿಡುಗಡೆಮಾಡಿಸಿರಿ ಎಂದು ಬಹಳ ಉದ್ರೇಕಕರ ರೀತಿಯಲ್ಲಿ ಹೇಳಿದರು. ಕೆಲ ಬಾಲಿಕೆಯರು ಮನೆಯ ಮುಂದೆ ನಿಂತು ಘೋಷಣೆ ಮಾಡುತ್ತಿದ್ದರು. ಸರಕಾರದ ಮನೆಯ ಮುಂದೆಯೂ ಇದೇ ರೀತಿ ಪಿಕೆಟಿಂಗ್ ನಡೆಯಿತು. ಮಳೆ ಬರುತ್ತಿದ್ದರೂ ಪಿಕೆಟಿಂಗ್ ಮಾಡುತ್ತಿದ್ದ ಬಾಲಿಕೆಯರು ಲೆಕ್ಕಿಸಲಿಲ್ಲ. ಶ್ರೀ ಅಣೆಯವರು ಮತ್ತು ಸರಕಾರರು ರಾಷ್ಟ್ರೀಯ ಮನೋವೃತ್ತಿಯವರಾಗಿದ್ದು ವೈಸರಾಯರ ವಿಸ್ತೃತ ಕೌನ್ಸಿಲಿನ ಸಭಾಸದರಾಗಿದ್ದಾರೆ. ಆಣೆಯವರ ಮನೆಯಲ್ಲಿ ಏರ್ಪಡಿಸಿದ್ದ ಸಂತೋಷ ಕೂಟದ ಸಮಯಕ್ಕೆ ಸಾಮಾನು ಹೊರಿಸಿ ಹೋಗುತ್ತಿದ್ದ ಮೋಟರನ್ನು ಮನೆಬಾಗಿಲಲ್ಲೇ ಪಿಕೆಟರರು ತಡೆದು ನಿಲ್ಲಿಸಿದರು.

ಹಿಂದೂ ಮಹಾಸಭೆಯ ಸಂಧಾನ ಪ್ರಯತ್ನ

ನಡೆಯುತ್ತಲಿದೆ. ಇತ್ತೀಚೆಗೆ ಸೇರಿದ ವರ್ಕಿಂಗ್ ಕಮಿಟಿ ಸಭೆಯಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪನೆ, ಮುಖಂಡರ ಬಿಡುಗಡೆ ವಿಷಯ ಕೇಳಿಕೆಗಳಿದ್ದುವಲ್ಲದೆ, ಈಗ ಕಾಂಗ್ರೆಸು ಮುಖಂಡರು ಸೆರೆಮನೆಯಲ್ಲಿರುವುದರಿಂದ ಸಂಧಾನದ ಮಾತುಕತೆಗಾಗಿ ಹಿಂದೂ ಮಹಾ ಸಭಾ ಮುಖಂಡರು, ಕಾಂಗ್ರೆಸು ಲೀಗು ಮುಖಂಡರನ್ನು ನೋಡಿ ಸಂಧಾನದ ಸೂಚನೆ ಮಾಡುತ್ತ ಪ್ರಯತ್ನಿಸುತ್ತಿದ್ದಾರೆ. ಯುದ್ಧ ಮುಗಿದ ಬಳಿಕ ಪಾಕಿಸ್ಥಾನದ ವಿಚಾರ ಮಾಡಬಹುದೆಂದು ಮಹಾಸಭೆಯ ಕಡೆಯಿಂದ ಲೀಗಿಗೆ ಡಾ|| ಮುಖರ್ಜಿಯವರು ಭರವಸೆ ಕೊಟ್ಟಿದ್ದಾರೆ.

೩೦ ಸಾವಿರ ರೂಪಾಯಿ ಪುಂಡು ಕಂದಾಯ

ವನ್ನು ಸೂರತ್ ಮತ್ತು ಬಾರ್ದೋಲಿ ಜಿಲ್ಲೆಗಳಲ್ಲಿ ಹೊರಿಸಲಾಗಿದೆ. ಈ ಗ್ರಾಮದ ಮುಸ್ಲಿಮರು, ಸರಕಾರೀ ಅಧಿಕಾರಿಗಳೂ ಇತರರೂ ಜನರ ಗಲಭೆ ನಿಲ್ಲಿಸಲು ಯತ್ನಿಸಿದ್ದರಿಂದ ಈ ತೆರಿಗೆ ಹೇರಲಾಗಿದೆ. ಗುಜರಾತ್ ಜಿಲ್ಲೆಯಲ್ಲಿ ಒಂದು ಲಕ್ಷ ರೂಪಾಯಿ ಪುಂಡು ಕಂದಾಯ ಹಾಕಲಾಗಿದೆ.

'ಸ್ವಾತಂತ್ರ್ಯದ ಆಶ್ವಾಸನ ಕೊಡಿರಿ'

ಎಂದು ಲಂಡನಿನ ನ್ಯೂ ಸ್ಟೇಟ್ಸ್‌ಮನ್ ಪತ್ರಿಕೆ ಭಾರತದ ಬಿಕ್ಕಟ್ಟನ್ನು ಪರಿಹರಿಸಬೇಕೆಂದೂ, ಮಧ್ಯಸ್ತಗಾರರ ಹೆಸರನ್ನು ರೂಸ್‌ವೆಲ್ಟರು ಸೂಚಿಸಬೇಕೆಂದೂ ಬರೆದಿದೆ.

ಡಾಕಾ ಜೈಲಲ್ಲಿ ದಂಗೆ

ಆಗಸ್ಟ ತಾ. ೨೫ರಂದು ಆಗಿದೆ. ಜೈಲಲ್ಲಿ ಕೈದಿಗಳು ಗಲಭೆ ಮಾಡಿ, ಜೈಲ್ ಸಿಬಂಧಿಯ ಮೇಲೆ ಕೈ ಮಾಡಬಂದುದರಿಂದ ಗುಂಡು ಹಾರಿಸಲಾಯಿತು. ಇದರಲ್ಲಿ ಹಲವು ಕೈದಿಗಳೂ, ಒಬ್ಬ ಜೈಲರರೂ ಮೃತರಾಗಿ ೧೩೬ ಮಂದಿಗೆ ಗಾಯವಾಗಿದೆಯೆಂದು ಸುದ್ದಿ.

ಉಡುಪಿ

ಶ್ರೀ ಮನ್ಮಧ್ವ ಸಿದ್ಧಾಂತ ಪ್ರಬೋಧಿನೀ ಮಹಾಪಾಠಶಾಲೆಯ ವರ್ಧಂತಿ ಉತ್ಸವ

ಕಳೆದ ತಾ. ೨೮ರಲ್ಲಿ ಶ್ರೀ ಪುತ್ತಿಗೆ ಮಠದ ಆಶ್ರಮ ಜ್ಯೇಷ್ಠ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯಾಸಪೂಜೆ, ವರದಿ ವಾಚನ, ಬಹುಮಾನವಿತರಣಾದಿ ಕಾರ್ಯಕ್ರಮಗಳಾದ ಅನಂತರ ಅಧ್ಯಕ್ಷರು ತಮ್ಮ ಸ್ವಂತ ಖರ್ಚಿನಿಂದಲೇ ಅಧ್ಯಾಪಕ ಹಾಗೂ ವಿದ್ಯಾರ್ಥಿ ವೃಂದಕ್ಕೆ ಒಂದೊಂದು ಜತೆ ಪಂಚೆ ದಾನವನ್ನಿತ್ತರು. ಮಧ್ಯಾಹ್ನ ಮಹತ್ತೋಭಾದ ಶ್ರೀಮದನಂತೇಶ್ವರ ಸ್ವಾಮಿಯ ಸನ್ನಿಧಿಯಲ್ಲಿ ಅನ್ನ ಸಂತರ್ಪಣೆಯನ್ನು ಮಾಡಿದರು.

ಯೆಡ್ಮೇರು

ಕಳೆದ ತಾ. ೬ರಲ್ಲಿ ಯೆಡ್ಮೇರು ಶಾಲಾ ಮಕ್ಕಳ ಹೆತ್ತವರ ಸಂಘದ ಸಭೆಯು ಶ್ರೀ. ಎಸ್. ಎಸ್. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಕೋಲ್ಲಾಟ ಪ್ರದರ್ಶನಗಳಾಗಿ ಬಡ ಮಕ್ಕಳಿಗೆ ಸಂಘದಿಂದ ಸ್ಲೇಟು ಪುಸ್ತಕಗಳನ್ನು ಕೊಡಲಾಯಿತು.

ತಂತಿ ಕಡಿದ ಆರೋಪ

ಕುಂದಾಪುರ ಕೋರ್ಟುಗಳಲ್ಲಿ ಕೈಸೆರೆ

ತಂತಿಗಳನ್ನು ಕಡಿದರೆಂದ ಆರೋಪದ ಮೇಲೆ ಕುಂದಾಪುರದಿಂದ ಏಳು ಮಂದಿ, ಕೋಟದಿಂದ ನಾಲ್ಕು ಮಂದಿ ಮತ್ತು ಪೇತ್ರಿಯಿಂದ ಏಳು ಮಂದಿಯನ್ನು ಬಂಧಿಸಲಾಗಿದೆ. ಇವರೆಲ್ಲರೂ ಉಡುಪಿಗೆ ಕರೆದೊಯ್ಯಲ್ಪಟ್ಟರುವರೆಂದು ತಿಳಿದು ಬಂದಿದೆ.

NOTICE

In the Court of the District Munsif of Mangalore

O. S. No. 213/1942.

Between:—

Duming Gonsalves—*Plaintiff*,

and

Somappa alias Koraga shetty & 4 others— *Defendants*

To

The 4th Defendant Narayana Shetty nephew of Somappa alias Koraga Shetty, Motor Mechanic, Bokkapatna, Mangalore.

The above suit filed for arrear of mulgeni rental etc., due to plaintiff stands posted to 12-9-1942 at 11 A. M. for your appearance. In default of your appearance on the day and hour before mentioned, the suit will be heard and determined in your absence.

(By order of Court)

Mangalore, 6-9-1942. | E. Gonsalves, Vakil for Plaintiff.

ಪುಸ್ತಕಾವಲೋಕನ:

ಚಿಗುರು

ಧಾರವಾಡದಲ್ಲಿ ಶ್ರೀ. ಚುಳಕಿ ಗೋವಿಂದ ರಾಯರ ಸಂಪಾದಕತ್ವದಲ್ಲಿ ಮನೋಹರ ಗ್ರಂಥ ಭಂಡಾರದ ಶ್ರೀ. ದ. ಭಾ. ಕುಲಕರ್ಣಿಯರ ಆಶ್ರಯದಲ್ಲಿ ಲಲಿತ ಸಾಹಿತ್ಯ ಮಾಲೆಯೆಂಬ ಹೊಸ ಪುಸ್ತಕ ಮಾಲೆಯೊಂದು ಪ್ರಾರಂಭವಾಗಿದೆ. 'ಚಿಗುರು' ಈ ಸಾಹಿತ್ಯ ಮಾಲೆಯ ಮೊದಲನೆಯ ಹೊತ್ತಗೆ. ಕೊಡಗಿನ ಕತೆಗಾರ್ತಿ ದಿವಂಗತಾ ಗೌರಮ್ಮನವರ ಕೆಲವು ಕಥೆಗಳ ಸಂಗ್ರಹ ಪುಸ್ತಕವಿದು. ಶ್ರೀ. ಬೇಂದ್ರೆಯವರು ಇದಕ್ಕೆ ಅಂದವಾದ ಮುನ್ನುಡಿ ಬರೆದಿದ್ದಾರೆ. ಒಟ್ಟು ಇದರಲ್ಲಿ ಗೌರಮ್ಮನವರ ಒಂಭತ್ತು ಕತೆಗಳಿವೆ. ಗೌರಮ್ಮನ ಕುರಿತು 'ಹರಿಜನ'ದಲ್ಲಿ ಬಂದ ಒಂದು ಲೇಖನವು ಈ ಪುಸ್ತಕಕ್ಕೆ ಮಕುಟವಿಟ್ಟಿದೆ. ಒಟ್ಟು ಕ್ರಾನ್ ೧/೮ ಆಕಾರದ ೧೧೩+೬ ಪುಟಗಳಿರುವ ಈ ಪುಸ್ತಕದ ಬೆಲೆ ಕದಿನಾಲ್ಕಾಣೆ.

ದಿವಂಗತಾ ಗೌರಮ್ಮನವರ ಮೊದಲನೆಯ ಕಥಾಸಂಗ್ರಹ 'ಕಂಬನಿ' ಇಷ್ಟರಲ್ಲೇ ಜನಪ್ರೀತವಾಗಿದೆ. 'ಕಂಬನಿ'ಗೇ 'ಚಿಗುರು' ಎಂಬ ಹೆಸರಿಡಬೇಕೆಂದು ಕತೆಗಾರ್ತಿಯರ ಸೂಚನೆಯಾಗಿದ್ದರೂ, ಅವರ ಅಕಾಲಮರಣದಿಂದ ಅದು 'ಕಂಬನಿ'ಯಾಗಿ ಪರಿಣಮಿಸಿತೆಂದು ಸಂಪಾದಕರು ಮೊದಲಲ್ಲಿ ತಿಳಿಸಿದ್ದಾರೆ. ಶ್ರೀ. ಬೇಂದ್ರೆಯವರ ಮುನ್ನುಡಿಯಲ್ಲಿ ಪ್ರಕೃತ ಪುಸ್ತಕದ ಹಾಗೂ ಗೌರಮ್ಮನವರ ಕತೆಗಾರಿಕೆಯ ಸುಂದರ ಸ್ವಾರಸ್ಯ ವಿಮರ್ಶಿಯಿದೆ. 'ಸವಿ ನೆನಪು' ಎಂಬುದು 'ಹರಿಜನ'ದಿಂದೆತ್ತಿಕೊಟ್ಟ ಲೇಖನ. ಇದರಲ್ಲಿ ಗಾಂಧಿಜಿ 'ಹರಿಜನ'ಯಾತ್ರೆ ಸಮಯ ಕೊಡಗಿಗೆ ಬಂದಾಗ, ಗೌರಮ್ಮನವರು, ಉಪವಾಸವಾಡಿಯಾದರೂ ಗಾಂಧಿಜಿಯವರನ್ನು ತಮ್ಮ ಮನೆಗೆ ಬರಮಾಡಿಕೊಂಡು ಅವರಿಗೆ ತನ್ನ ಕೈಯ್ಯ ಚಿನ್ನದ ಬಳೆಗಳನ್ನು ಕಾಣಿಕೆಯಾಗಿತ್ತ ಚರಿತ್ರಾರ್ಹವಾದ ಘಟನೆಯೊಂದು ವಿವರಿಸಲ್ಪಟ್ಟಿದೆ. ಹಿ. ವಿ. ಆ.ರವರು ಚಿಗುರಿನ ಕುರಿತು ಒಂದು ಚಿಕ್ಕ ಕವನ ಇದರಲ್ಲಿ ಬರೆದಿದ್ದಾರೆ. ಗೌರಮ್ಮನವರ ಭಾವಚಿತ್ರದಿಂದಲೂ ಪುಸ್ತಕ ಸುಂದರವಾಗಿದೆ.

'ಪುನರ್ವಿವಾಹ' ಮೊದಲನೆಯ ಕತೆ. ಕತೆಗಾರ್ತಿಯ ಮೊಟ್ಟಮೊದಲಿನ ಕತೆಯಿದು. ಪ್ರಾರಂಭದಲ್ಲೇ ಎಷ್ಟು ಸಾಹಜಿಕಶೈಲಿ ಕತೆಗಾರ್ತಿಯರಲ್ಲಿತ್ತೆಂದು ಅರ್ಥವಾಗುತ್ತದೆ; ಇಲ್ಲಿ ಹೆಣ್ಣು ಹೃದಯದ ಗಾಂಭೀರ್ಯ, ಗಂಡುಸಿನ ದೌರ್ಬಲ್ಯಗಳು ಚಿತ್ರಿತವಾಗಿವೆ. 'ಕೆಲವು ಕಾಗದಗಳು' ಪತ್ರಕಥೆ. ಪತ್ರರೂಪದಲ್ಲಿ ಕತೆಬರೆಯುವುದರಲ್ಲಿಯೂ ಜಾಣ್ಮೆಯಿರಬೇಕು. 'ಆಹುತಿ' ಯೆಂಬುದು ವರದಕ್ಷಿಣೆಗೆ ಆಹುತಿಯಾದ ಕನ್ಯೆಯೋರ್ವಳ ಜೀವನದದುರಂತ ಚಿತ್ರ. 'ಒಂದು ಚಿತ್ರ' ಎಂಬುದು 'ಪ್ರೇಮ ವಿವಾಹ'ದ ಕುರಿತು ಒಂದು ಸುಂದರ ವಿಡಂಬನೆ. 'ಪಾಪನ ಮದುವೆ' ಅದೇ ತರದ ಒಂದು ಸುಂದರ ಪ್ರೇಮ ಘಟನೆ. 'ಅದೃಷ್ಟದ ಆಟ'ದಲ್ಲಿಪ್ರೇಮದವಿಷಾದ ಚಿತ್ರವಿದೆ. 'ನನ್ನ ಮದುವೆ' ಕುರುಡಿಯೊಡನೆ ಮದುವೆ. 'ಮರದ ಬೊಂಬೆ' ಕಾಲೇಜ್ ಕುವರಿಯುವರ ವಿನೋದ ಜೀವನ ಚಿತ್ರ. ಕೊನೆಯ ಕತೆ 'ಮುನ್ನಾದಿನ' ಗೌರಮ್ಮನವರು ಇಹಯಾತ್ರೆ ಮುಗಿಸಿದ ಮುನ್ನಾದಿನ ಬರೆದದ್ದು.

ಹೀಗೆ ಒಂಭತ್ತು ಕತೆಗಳೂ ಎಷ್ಟು ಸಹಜವಾಗಿಯೋ ಅಷ್ಟೇ ರಮ್ಯವಿವೆ. ಗಂಡುಹೆಣ್ಣುಗಳ ಅನ್ಯೋನ್ಯ ಆಕರ್ಷಣ, ಪ್ರೇಮಜೀವನ, ಪ್ರೇಮದಿಂದ ಒದಗುವ ಕರುಳು ಕತ್ತರಿಸುವಂಥಾ ಕರುಣೆ; ಸಮಾಜ ಚಿತ್ರದಿಂದ ಅದರ ವಿಡಂಬನೆ, ಇವುಗಳು ಈ ಕತೆಗಳಲ್ಲಿ ಚೆಲುವಾಗಿ ಚಿತ್ರಿತವಾಗುತ್ತವೆ. 'ಪುನರ್ವಿವಾಹ' 'ನನ್ನ ಮದುವೆ' ಇವು ಪ್ರಾರಂಭದ ಕತೆಗಳಾಗಿರುವುದರಿಂದ ಅಷ್ಟೊಂದು ಮೇಲ್ತರಗತಿಯದೆನಲು ಬರುವುದಿಲ್ಲವಾದರೂ ಸ್ವಾರಸ್ಯ ಹೀನವಾಗಿಲ್ಲ. ಇತರ ಕತೆಗಳು ಮೇಲ್ತರಗತಿಯವೇ ಇವೆ. ಅಂತೂ ಕನ್ನಡಿಯಾದ ಈ ಕತೆಗಾರ್ತಿಯರ ಎರಡು ಕಥಾ ಸಂಗ್ರಹಗಳನ್ನು ಪ್ರಕಟಿಸಿದ ಮನೋಹರ ಗ್ರಂಥ ಭಂಡಾರದ ಒಡೆಯರಿಗೆ ಕನ್ನಡಿಗರು ಚಿರಋಣಿಗಳು.

ಶ್ರೀಯಾರ.

NOTICE

In the Court of the District Judge of South Kanara

O. P. 68/1942.

In the matter of letters of administration with the will annexed in respect of the assets of the late Rev. Charles Gojar who died on 4-5-1913.

Mrs. Mary Ananda—*Petitioner*

and

Mrs. Matilda Gojar and others

Respondents

To all whom it may concern

Notice is hereby given that an application has been made by the petitioner for the grant of letters of administration with the will annexed in respect of the estate of Rev. Charles Gojar who died on 4-5-1913 and that 21st day of September 1942 has been appointed for the hearing there of, when you are at liberty to appear and oppose the same.

(By order of the Court)

K. Gopal Rau,
Advocate for Petitioner.

NOTIFICATION.

Whereas it is necessary so to do for maintaining supplies and services essential to the life of the community, I, M. Karamatullah, Esq., I. C. S., Collector of South Kanara, in exercise of the powers under Rule 81 (2) of the Defence of India Rules conferred on me by the Government of Madras in G. O. No. 248, Public (War), dated 21st January 1942, do hereby make the following order:—

No person shall, on or after the 5th September 1942, transport jaggery from any place within the limits of the South Kanara District to any place outside the limits of the Province of Madras.

Any person failing to comply with this order is liable to be punished with imprisonment for a term which may extend to three years or with fine or with both.

South Kanara Collector's Office,
Mangalore, 4th September 1942.

M. Karamatullah,
Collector.

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಮಲಬಾರು ಎಕ್ಸ್ಪ್ರೆಸ್ (ಮೈಲ್)	8.5 ಬೆಳಿಗ್ಗೆ	6.5 ಸಾಯಂ.
ಶಟ್ಲ್ (ಪೆಸೆಂಜರ್)	ಸಾಯಂ. 5.25	9.55ಟೆ.

ಮಲಬಾರ್ ಎಕ್ಸ್ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 290/1942.
R. I. A. 989/1942.

ವಾದಿ ಅರ್ಜಿದಾರಳು— ಲಕ್ಷ್ಮೀಬಾಯಿ.

ಪ್ರತಿವಾದಿ ಎದ್ರಿ. ಸುಬ್ರಾಯ ಕಮ್ತಿ ಹೆಂಗವಳ್ಳಿ ರಾಮಚಂದ್ರ ಕಮ್ತಿರ ಮಗ ಹೊಸಂಗಡಿ ಗ್ರಾಮ

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ವಾದಿಳು ನಿಮ್ಮ ಮೇಲೆ ಆಕೆಗೆ ಬರು ಅಶನಾರ್ಥ ಬಗ್ಗೆರೆ ಬಾಕಿ ಬಗ್ಗೆ ಮೇಲ್ಕಂಡ ವ್ಯಾಜ್ಯ ದಾಕಲು ಮಾಡಿರುತ್ತಾಳೆ. ಮತ್ತು ಸದ್ರಿ ದಾವಾ ಕೈಸೇತಿನ ಋಣಗಳ ವಸೂಲಿ ಬಗ್ಗೆ R. E. P. 1098/41 (S. C. 340/34)ನೇ ವ್ಯವಹರಣೆಯಲ್ಲಿ ಪ್ರತಿವಾದಿಯ ಕ್ರೆಡಿಟಿಗೆ ಈ ಕೋರ್ಟು ಡಿಪೋಜಿಟಿನಲ್ಲಿರುವ ಹಣಗಳನ್ನು ಜಪ್ತಿ ಮಾಡುವರೆ ಮೇಲಿನ R. I. A. 989/42ನೇ ಗೂ ಅರ್ಜಿದಾಕ್ಲು ಮಾಡಿರುತ್ತಾಳೆ. ಆ ಕುರಿತು ನಿಮಗೇನಾದ್ರು ಆಕ್ಷೇಪಣೆ ಇದ್ದ ಪಕ್ಷದಲ್ಲಿ ಅದನ್ನು ಇದೇ ತಾ. 16-9-42ಕ್ಕೆ ಹಗಲು ಘಂಟೆ 10ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ತಿಳಿಸಬೇಕು. ಹಾಗೆ ಹಾಜರಾಗದಿದ್ದರೆ ಸದ್ರಿ ವಿಷಯಗಳಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು, ಎಂಬ ಈ ಮೂಲಕ ತಿಳಿಸಿಯದೆ.

ತಾ. 6-9-1942 ಮೊಕ್ಕಾಂ, ಕುಂದಾಪುರ } **K. Vittaldas Shenai,** Advocate for Plaintiff

NOTICE

In the Court of the Dt. Munsif of Mangalore.

S. C. No. 876/1942.

Between—

Maria Souza alias Tauro— *Plaintiff.*

and

Leo D'souza— *Defendant*

To

The defendant, Leo D'souza son of John D'souza, residing at Falnir Mangalore.

Take notice that a suit has been filed against you in the above Court in respect of a pronote executed by you in favour of the plaintiff's daughter. The suit is posted to 22-9-1942 for hearing. If you fail to appear on that day at 11 o'clock in the above court either in person or through an advocate, the suit will be heard in your absence and will be decided exparte.

(By order of the Court)

Mangalore, 7-9-1942. } **T. V. B. C. Colaco,** Advocate.



ಜಿಲ್ಲಾ ಸಮಾಚಾರಗಳು

ಮಂಗಳೂರು

ಕೋರ್ಟು ಪಿಕೆಟಿಂಗ್

ಹಲವರ ಬಂಧನ! ಲಾಠೀ ಚಾರ್ಜು

ತಾ. 9ರಂದು ಪೂರ್ವಾಹ್ನ ಗಂಟೆ 10ಕ್ಕೆ ಮಂಗಳೂರು ಡಿಸ್ಟ್ರಿಕ್ಟ್ ಕೋರ್ಟಿನ ಮುಂದೆ ಕಾಂಗ್ರೆಸ್ ಸ್ವಯಂಸೇವಕರು ಪಿಕೆಟಿಂಗ್ ಪ್ರಾರಂಭ ಮಾಡಿದರು. ಹೆಚ್ಚಿನ ಮಂದಿ ವಕೀಲರು ಕೋರ್ಟಿಗೆ ಹೋಗಲಿಲ್ಲ. ಸಬ್ ಜಡ್ಜರನ್ನೂ ಪಿಕೆಟ್ ಮಾಡಿದರು. ಮಧ್ಯಾಹ್ನ ಮೇಲೆ ಪೋಲೀಸರು ಬಂದರು. ಪಿಕೆಟ್ ಮಾಡುವವರನ್ನು ಚೆದರಲು ಹೇಳಿದಾಗ, ಅವರು ಚೆದರದಿರುವುದರಿಂದ ಸುಮಾರು 18 ಮಂದಿಯನ್ನು ಕೈದುಮಾಡಿ ಕೊಂಡೊಯ್ದರು. ಅನಂತರ ಸುಮಾರು 14 ಮಂದಿಯ ಇನ್ನೊಂದು ಸ್ವಯಂಸೇವಕ ದಳವು ಪಿಕೆಟ್ ಮಾಡಲು ನಿಂತಿತು. ಅವರನ್ನೂ ಪೋಲೀಸರು ಕೈದಿಮಾಡಿ ಕೊಂಡೊಯ್ದರು.

ಇಷ್ಟರಲ್ಲಿ ಕೋರ್ಟಿನ ಕಾರ್ಯಕ್ರಮವು ಮುಗಿದು ಅಲ್ಲಿನ ಪಿಕೆಟಿಂಗ್ ಕೊನೆಗಂಡಿತು. ಪಿಕೆಟ್ ಮಾಡಿದ ಮೊದಲನೆಯ ಸ್ವಯಂಸೇವಕ ದಳದಲ್ಲಿ ಹಲವು ಮಂದಿ ವಿದ್ಯಾರ್ಥಿಗಳೂ ಇದ್ದದ್ದರಿಂದ ಮುಷ್ಕರ ಸಾರಿ, ಸ್ಥಳೀಯ ಕಾಲೇಜುಗಳಿಂದ ಹಾಗೂ ಕೆಲವು ಹೈಸ್ಕೂಲುಗಳಿಂದ ವಿದ್ಯಾರ್ಥಿಗಳು ಹೊರಹೊರಟು ಬಂದರು. ಅವರೆಲ್ಲರೂ ಎಲೋಶಿಯಸ್ ಕಾಲೇಜ್ ಮೈದಾನದಲ್ಲಿ ಸೇರಿ, ಅಲ್ಲಿಂದ ಸಾಲಾಗಿ ಮೆರವಣಿಗೆಯಿಂದ ನಗರದ ಬೀದಿ ಬೀದಿಗಳನ್ನು ಘೋಷದಿಂದ ತಿರುಗಾಡಿ, ಸಂಜೆ 6 ಗಂಟೆಯ ಹೊತ್ತಿಗೆ ಮೈದಾನಿಗೆ ಬಂದು ಸೇರಿದರು.

ಮೈದಾನಿನಲ್ಲಿ ಪ್ರಾರಂಭದಲ್ಲಿ ಮಹಿಳೆಯರಿಂದ 'ವಂದೇ ಮಾತರಂ' ಗಾನವಾದ ಬಳಿಕ ಶ್ರೀ ಎಂ. ಧರ್ಮರಾಜ ಅದಿಕಾರಿಗಳ ಅಧ್ಯಕ್ಷತೆಯಿಂದ ಸಾರ್ವಜನಿಕ ಸಭೆ ಸೇರಿತು. ಅಧ್ಯಕ್ಷರು ಭಾಷಣ ಮಾಡುತ್ತಿದ್ದಂತೆ, ಪೋಲೀಸರು ಬಂದು ಸಭಿಕರನ್ನು ಚದರಲು ಹೇಳಿ ಲಾಠಿ ಚಾರ್ಜು ಮಾಡಿದರು. ಸಭಿಕರ ಪೈಕಿ ಸುಮಾರು 15 ಮಂದಿಗೆ ವಿಶೇಷ ಜಖಂ ಆಗಿದೆ. ಅನೇಕರಿಗೆ ಪೆಟ್ಟಾಗಿದೆ. ಪೆಟ್ಟಿನಿಂದ ಅಲ್ಲಿಯೇ ಬಿದ್ದುಹೋದ ಸುಮಾರು 10 11 ಮಂದಿಯನ್ನೂ 'ಪೋಲೀಸು ಗಾಡಿ'ಯನ್ನೂ ಸಾಗಿಸಲಾಗಿದೆ. ಇನ್ನೂ ಕೆಲವರು ಆಸ್ಪತ್ರೆಗಳಲ್ಲಿದ್ದಾರೆ.

ತಾ. 10 ರಂದು ಕೋರ್ಟಿನ ಮುಂದೆ ಪಿಕೆಟಿಂಗೂ, ಕೊಡಿಯಾಲಬೈಲು ಮೊದಲಾದ ಕಡೆಗಳಲ್ಲಿ ಲಾಠಿ ಪ್ರಹಾರವೂ ನಡೆದಿತ್ತು. ಕೆಲವರಿಗೆ ವಿಶೇಷ ಜಖಂ ಆಗಿದೆ.

ಶ್ರೀ ಅರ್ಹದ್ದಾಸ ಪಾರ್ಶ್ವಸಾಗರ ಸ್ವಾಮಿಗಳು

ಶ್ರೀ ಹುಂಬುಜ ಮಠದ ಉತ್ತರಾಧಿಕಾರಿಗಳಾದ ಸ್ವಸ್ತಿ ಶ್ರೀ ಅರ್ಹದ್ದಾಸ ಪಾರ್ಶ್ವಸಾಗರ ಸ್ವಾಮಿಗಳವರು ಉತ್ತರದೇಶಕ್ಕೆ ಹೋಗಿ ಶಾಸ್ತ್ರಾಭ್ಯಾಸವನ್ನು ಚೆನ್ನಾಗಿ ಮಾಡಿ ನ್ಯಾಯತೀರ್ಥ ಮೊದಲಾದ ಪರೀಕ್ಷೆಗಳನ್ನು ಕೊಟ್ಟು ಕೆಲವು ದಿನಗಳಿಂದ ನಮ್ಮ ಜಿಲ್ಲೆಯಲ್ಲಿರುತ್ತಾರಷ್ಟೆ? ಇನ್ನು ಕೆಲವು ದಿವಸ ಈ ಪ್ರಾಂತದಲ್ಲಿದ್ದು ಧರ್ಮಪ್ರಚಾರಕ್ಕಾಗಿ ಬೇರೆ ಬೇರೆ ಕಡೆಗಳಿಗೆ ಹೋಗಿ ಧರ್ಮೋಪದೇಶ ಮಾಡುವರೆಂದು ತಿಳಿದುಬರುತ್ತದೆ. ಇಂತಹ ಧರ್ಮಕಾರ್ಯದಲ್ಲಿ ಧನಾರ್ಜನೆ ಮಾಡುವ ಉದ್ದೇಶವಿಲ್ಲ ಎಂಬುದನ್ನು ಕೂಡ ತಿಳಿಯುತ್ತೇವೆ. ಸಮಾಜಬಾಂಧವರು ಧರ್ಮಬುದ್ಧಿಯಿಂದ ಯೋಗ್ಯ ಪ್ರೋತ್ಸಾಹವನ್ನು ಕೊಡುವರೆಂದು ನಂಬುತ್ತೇವೆ.

"ನೇಶನಲ್ ವಾರ್ ಫಂಡ್"

ಇದರ ಅರ್ಗನೈಸರ್ ಶ್ರೀಯುತ ಸತ್ಯನಾರಾಯಣ ಇವರು ಕಳೆದ ತಿಂಗಳಲ್ಲಿ ಮಂಜೇಶ್ವರ, ಪುತ್ತೂರು, ಬೈಂದೂರು, ಸೀದೂರು, ಬ್ರಹ್ಮಾವರ, ಕುಂಬಳೆ, ಹಿರಿಯಡ್ಕ ಮೊದಲಾದ ಕಡೆ ಪ್ರವಾಸ ಮಾಡಿ ಪ್ರಚಾರ ಮಾಡಿದರೆಂದು ತಿಳಿದಿದೆ. ಇದರ ಜಿಲ್ಲಾ ಲೆಕ್ಚರರ್ ಶ್ರೀ. ಎಂ. ಕೆ. ಧರ್ಮರಾಜರವರು ಮಂಗಳೂರು ಬಂಟ್ವಾಳ ಮೊದಲಾದ ಕಡೆ ಸಂಚರಿಸಿ ಪ್ರಚಾರ ಭಾಷಣ ಮಾಡಿದರೆಂದು ಸುದ್ದಿ.

ಭಾಷಣ

ಜಿಲ್ಲಾ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷರಾದ ಶ್ರೀ. ಎಂ. ಡಿ. ಅಧಿಕಾರಿಗಳು ಕಳೆದ ವಾರ ಜಿಲ್ಲೆಯ ನಾನಾ ಭಾಗಗಳಲ್ಲಿ ಸಂಚರಿಸಿ ಕಾಂಗ್ರೆಸ್ ಪ್ರಚಾರ ಭಾಷಣ ಮಾಡಿದರು.

ರಾಜಿನಾಮೆ ಕೊಡಿರಿ

ತಾ. 10ರಲ್ಲು ಸೇರಿದ ಜಿಲ್ಲಾ ಮತ್ತು ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಗಳ ಸಂಯುಕ್ತ ಸಭೆಯಲ್ಲಿ ದ. ಕ. ಜಿಲ್ಲಾ ಬೋರ್ಡು ಸದಸ್ಯರೂ, ಮುನ್ಸಿಪಲ್ ಕೌನ್ಸಿಲ್ ಸದಸ್ಯರೂ ಇತರ ಸ್ಥಳೀಯ ಸಂಸ್ಥೆಗಳ ಸದಸ್ಯರೂ ತಮ್ಮ ಸ್ಥಾನಗಳಿಗೆ, ಸರಕಾರದ ನೀತಿಯ ನಿಷೇಧಾರ್ಥವಾಗಿ ರಾಜಿನಾಮೆ ಕೊಡಬೇಕೆಂಬ ಠರಾವಾಗಿ, ಆ ನಿರ್ಣಯವು ಸಂಬಂಧಪಟ್ಟ ಸದಸ್ಯರಿಗೆಲ್ಲಾ ಕಳುಹಿಸಲಾಗಿದೆ.

ಶ್ರೀ ಕೆ. ಆರ್ ಕಾರಂತರನ್ನು ನಾಗಪುರಕ್ಕೊಯ್ದರು.

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಸೆರೆ ಹಿಡಿಯಲ್ಪಟ್ಟು ವೆಲ್ಲೂರು ಸೆರೆಮನೆಯಲ್ಲಿರಿಸಿದ್ದ ಶ್ರೀ ಕೆ. ಆರ್ ಕಾರಂತ ಎಂ ಎಲ್ ಎ. ರವರನ್ನು ಶ್ರೀಗಳಾದ ... ವೆಂಕಟಸುಬ್ಬೈಯಾ, ಕೋಟಿರೆಡ್ಡಿ, ಜೊಕ್ಕಲಿಂಗ ಚೆಟ್ಟಿಯಾರ್, ಕೇಳಪ್ಪನ್, ದಾಮೋದರ ಮೇನನ್, ಮಾಧವ ಮೇನನ್ ಮೊದಲಾದ ಆಂಧ್ರ ತಮಿಳು ಕೇರಳ ಮುಖಂಡರೊಡನೆ, ವೆಲ್ಲೂರು ಸೆರೆಮನೆಯಿಂದ ಕಳೆದ ತಿಂಗಳ 30ನೆಯ ತಾರೀಕಿನ ದಿನ ನಾಗಪುರ ಸೆರೆಮನೆಗೊಯ್ದಿರುವರೆಂದು ತಿಳಿದಿದೆ.

ಮಹಾಜನ ಬಡವರ ಅಕ್ಕಿ ಭಂಡಾರ

ತಾ. 1ನೇ ಸಪ್ಟಂಬರ 1942ರ ವರೆಗಿನ ಒಂದು ತಿಂಗಳಲ್ಲಿ 1,700 ಮುಡಿ ಅಕ್ಕಿ ದಿನವೊಂದರ ಸರಾಸರಿ 55।। ಮುಡಿಯಂತೆ, ಸೇರಿಗೆ 5।। 6 ಕ್ರಯದಲ್ಲಿ ವಿಕ್ರಿತವಾಗಿದ್ದು, ಒಟ್ಟು ರೂ. 1452 8 10ರಷ್ಟು ನಷ್ಟ ಬಂದಿದೆ, ವಂತಿಗೆಯಿಂದ ಬಂದ ಸಹಾಯಧನ ರೂ 4,382-0-0 ಎಂಬುದಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ.

ಉಳ್ಳಾಲ

ಉಳ್ಳಾಲ ಪಂಚಾಯತ ಬೋರ್ಡಿಗೆ ಶ್ರೀ. ಎ. ಕೃಷ್ಣ ಶೆಟ್ಟಿಯವರು ಅಧ್ಯಕ್ಷರಾಗಿ ಚುನಾಯಿತರಾದರು.

ಯುದ್ಧದ ವಾರ್ಷಿಕೋತ್ಸವ

ಯುದ್ಧಾರಂಭವಾಗಿ 3 ವರ್ಷಗಳು ಸಂದ ವಾರ್ಷಿಕೋತ್ಸವವು ತಾ 4ರಂದು ಸಂಜೆ ಸ್ಥಳೀಯ ಸರಕಾರಿ ಕಾಲೇಜಿನಲ್ಲಿ ಸಂಜ ಶ್ರೀ ಎಂ ಎಸ್ ಶ್ರೀಷ್ಕರ ಅಧ್ಯಕ್ಷತೆಯಲ್ಲಿ ಸೇರಿಯಿತು. ಮಿತ್ರರ ಇಂದಿನ ಯುದ್ಧದ ಸಿದ್ಧತೆ, ಈ ದೇಶದ ಪರಿಸ್ಥಿತಿ ಮೊದಲಾದವುಗಳ ಕುರಿತು ಶ್ರೀಗಳಾದ ನಾಗರಾಜಯ್ಯ, ಎಂ ಹಮ್ಮಬ್ಬ ಇವರು ಮಾತಾಡಿದರು.

ವಿದ್ಯಾರ್ಥಿಗಳ ಸಭೆ

ವಿದ್ಯಾರ್ಥಿಗಳ ಸಭೆಯೊಂದು ಕಳೆದ ವಾರ ಮೈದಾನಿನಲ್ಲಿ ಮೌಲಾನ ಎಫ್ ಎಚ್ ಒಡೆಯರ ಅಧ್ಯಕ್ಷತೆಯಲ್ಲಿ ಸೇರಿ, ಶ್ರೀಗಳಾದ ಪದ್ಮನಾಭನ್ ಕೆ. ಎಸ್ ಕಾರಂತ, ಅಣ್ಣಪ್ಪ ಕೃಷ್ಣ ಭಂಡಾರ್ಕಾರ್ ಮೊದಲಾದವರು ರಾಷ್ಟ್ರೀಯ ಬೇಡಿಕೆಗಳ ಕುರಿತು ಮಾತಾಡಿದರು.

ಶ್ರೀ ಕಾರಂತರ ಬಂಧನದ ನಿಷೇಧ

ಮಂಗಳೂರ ಬಾರ್ ಅಸೋಸಿಯೇಶನಿನ ನಿರ್ಣಯ

ಶ್ರೀ ಕೆ ಸದಾಶಿವ ಆಡಿಗ ಅವರ ಅಧ್ಯಕ್ಷತೆಯಲ್ಲಿ ಶ್ರೀ ಕೆ ಆರ್. ಕಾರಂತರ ಬಂಧನದಿಂದ ಉಂಟಾದ ಪರಿಸ್ಥಿತಿಯ ವಿವೇಚನೆ ಮಾಡಲು ಬಾರ್ ಅಸೋಸಿಯೇಶನಿನ ಸಭೆ ಜರುಗಿತು. ಶ್ರೀ. ಕೆ ಸದಾನಂದ ಹೆಗ್ಡೆಯವರು, 'ಸರಕಾರವು ಈ ಸಂಘದ ಸದಸ್ಯರೊಬ್ಬರನ್ನು ವಿಚಾರಣೆಯಿಲ್ಲದೆ ಸೆರೆಯಲ್ಲಿರಿಸಿದ ಸರಕಾರದ ವರ್ತನೆಯನ್ನು ಖಂಡಿಸುತ್ತದೆ ಮತ್ತು ಕೂಡಲೇ ನಿರುಪಾಧಿಕವಾಗಿ ಅವರನ್ನು ಬಿಡಬೇಕೆಂದು ಕೇಳಿಕೊಳ್ಳುತ್ತದೆ' ಎಂಬ ನಿರ್ಣಯವನ್ನು ಮಂಡಿಸಿದರು. ಅಧ್ಯಕ್ಷರು ಅದಕ್ಕೆ ಸಮ್ಮತಿ ಕೊಡದೆ, ನಿಯಮ ಸೂಚಿಯಲ್ಲಿರುವಂತೆ ಶ್ರೀ. ಕಾರಂತರ ಬಂಧನದಿಂದ ಉಂಟಾದ ಪರಿಸ್ಥಿತಿಯನ್ನು ಮಾತ್ರ ಸಭೆಯಲ್ಲಿ ವಿವೇಚಿಸಬಹುದೆಂದು ಹೇಳಿದರು.

ಶ್ರೀ. ಡಿ. ಮೋಹನರಾಯರು ಇನ್ನೊಂದು ನಿರ್ಣಯವನ್ನು ಮುಂದಿಟ್ಟರು. ಅದರಲ್ಲಿ 'ಶ್ರೀ ಕಾರಂತರಿಗೆ ಹಿರಿದೆ ಬರುತ್ತಿದ್ದ ಕೇಸುಗಳೆಲ್ಲವೂ ಶ್ರೀ ಎಸ್. ವೆಂಕಟ್ರಾಯರಿಗೆ [ಶ್ರೀ ಕಾರಂತರ ಸಂಬಂಧಿಕರು] ಹೋಗಬೇಕು' ಎಂದು ಹೇಳಲಾಗಿತ್ತು. ಶ್ರೀ ಕಾರಂತರ ಬಂಧನದಿಂದುಂಟಾದ ಪರಿಸ್ಥಿತಿಯ ಕುರಿತಾದ ವಿವೇಚನೆಯು ಈ ನಿರ್ಣಯದಲ್ಲಿ ಮಾಡಲ್ಪಟ್ಟಿದೆ ಎಂದು ಅವರು ಸೂಚಿಸಿದರು. ಸ್ವಲ್ಪ ಸಮಯದ ತನಕ ವಾಗ್ವಾದಗಳು ನಡೆದುವು. ಕೊನೆಗೆ ಕಾರಂತರ ಬಂಧನವನ್ನು ನಿಷೇಧಿಸುವ ಮತ್ತು ಕೂಡಲೆ ಅವರನ್ನು ಬಿಡಬೇಕೆಂದು ಅಪೇಕ್ಷಿಸುವ ಬೇರೊಂದು ನಿರ್ಣಯವು ಸ್ವೀಕರಿಸಲ್ಪಟ್ಟಿತು.

ಇನ್ನೊಂದು ನಿರ್ಣಯದ ಮೂಲಕ ಸಂಘವು, ಸಪ್ಟೆಂಬರದಿಂದ ಗಡಿಯಾರ 1 ತಾಸು ಮುಂದೆ ಹೋಗಿರುವುದರಿಂದ ಕೋರ್ಟನ್ನು ಹಿಂದಿನ ಸಮಯದಲ್ಲೇ ಇಡದೆ ಒಂದು ತಾಸು ಮುಂದರಿಸಬೇಕೆಂದು ನ್ಯಾಯಾಧೀಶರನ್ನು ಕೇಳಿಕೊಂಡಿತು.

ಕನ್ನಡ ವ್ಯೋಳಿಯವರ ಸಮಾಜ ಸುಧಾರಕ ಸಂಘ

ಇದರ ಆಶ್ರಯದಲ್ಲಿ ತಾ 3ರಲ್ಲಿ ಶ್ರೀ ಕೃಷ್ಣ ಜನ್ಮದಿನಾಚರಣೆಯು ಶ್ರೀ। ಪಿ. ಕೆ. ನಾರಾಯಣ ವಿದ್ವಾನ್ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಟೈಪೆಂಡ್ ಜಾಸ್ತಿಯಾಗಬೇಕು

ಸ್ಥಳೀಯ ಗವರ್ನಮೆಂಟ್ ಹಾಎ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಉಪಾಧ್ಯಾಯರುಗಳ ಸಭೆಯು ತಾ 3ನೇ ಅಪರಾಹ್ನ ಘಂಟೆ 3 ಕ್ಕೆ ಎಸೋಸಿಯೇಶನ್ ಹೋಲಿನಲ್ಲಿ ಶ್ರೀ। ರಾಮರವರ ಅಧ್ಯಕ್ಷತೆಯಲ್ಲಿ ಜರಗಿತು. ಈಗ ಸಾಮಾನುಗಳ ಬೆಲೆಯು ಒಂದಕ್ಕೆರಡಾಗಿ ಏರಿರುವುದರಿಂದ ನಮಗೆ ಕೊಡುವ ಸ್ಟೈಪೆಂಡ್ ಬಹಳ ಕಡಿಮೆಯಾಗಿ ಕಾಲಕ್ಷೇಪ ಮಾಡಲು ಕಷ್ಟಸಾಧ್ಯವಾಗಿದೆ. ಹಿಂದಿನಂತೆಯೇ 10 ರೂಪಾಯಿ ಸ್ಟೈಯಿಪೆಂಡ್ ಕೊಡಬೇಕೆಂಬದಾಗಿ ವಿದ್ಯಾಂಗದ ಡೈರೆಕ್ಟರರನ್ನು ಕೇಳಿಕೊಳ್ಳಬೇಕಾಗಿದೆ ಎಂಬ ಠರಾವನ್ನು ಶ್ರೀ। ನಾರಾಯಣ ನಾಯ್ಕರು ಸಭೆಯ ಮುಂದಿಟ್ಟರು. ಅದು ಮಂಜೂರಾಯಿತು.

ದ. ಕ. ಜಿ. ಪ್ರೆಸ್ ವರ್ಕರ್ಸ್ ಯೂನಿಯನ್

ಇದರ ಆಫೀಸು, ತಾ 4ರಿಂದ ಕೊಡಿಯಾಲಬೈಲಿನಲ್ಲಿರುವ ದ. ಕ. ಜಿಲ್ಲಾ ಕಾಂಗ್ರೆಸ್ ಆಫೀಸಿನ ಸಮೀಪದ ಕಟ್ಟೋಣಕ್ಕೆ ಒಯ್ಯಲ್ಪಟ್ಟಿದೆ.

ಗುರು ಪೂಜಾ ಮಹೋತ್ಸವ

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವತಿಯಿಂದ ಗುರು ಪೂಜಾ ಸಮಾರಂಭವು ತಾ 1ನೇ ಸಾಯಂಕಾಲ ಕೆನರಾ ಹೈಸ್ಕೂಲಿನಲ್ಲಿ ರಾವ್ ಬಹದ್ದೂರು ಬಿ ಶ್ರೀಪತಿ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಮಹೋತ್ಸವದ ವಿಚಾರವಾಗಿ ಶ್ರೀ ಕೆ ಸದಾಶಿವರಾಯರು ಶ್ರೀ ಅನ್ನಾಜೀಷರು, ಶ್ರೀ ಕೆ ಆಚಾರ್ಯರು ಭಾಷಣವಿತ್ತರು. ಶ್ರೀ ಜನಾರ್ಧನ ಮಲ್ಯರು ವಂದನಾರ್ಪಣೆಗಳನ್ನರ್ಪಿಸಿದರು.

ನೇಮಕ ವರ್ಗಾವರ್ಗಿ

ಮಂಗಳೂರಿನ ಅಸಿ। ಕಮ। ಟ್ಯಾಕ್ಸ್ ಆಫೀಸರ್ ಶ್ರೀ ಪಿ ಎಸ್ ತಿಮ್ಮಪ್ಪ ಸೆಟ್ಟಿ ಬಿ ಎ ಅವರು 3 ತಿಂಗಳ ರಜೆ ಪಡಕೊಂಡುದರಿಂದ ಶ್ರೀ ಎಚ್ ನಾಗಪ್ಪ, ಬಿ ಎ ಅಸಿ। ಕಮ। ಟ್ಯಾಕ್ಸ್ ಆಫೀಸರ್ ಕಾರ್ಕಳ ಅವರು ಮಂಗಳೂರಿನ ಅಸಿ। ಕಮ ಟ್ಯಾಕ್ಸ್ ಆಫೀಸರರಾಗಿಯೂ, ಶ್ರೀ ಯು ಬಿ ಗೋಪಾಲಕೃಷ್ಣರಾವ್ ಬಿ ಎ ಅವರು ಕಾರ್ಕಳದ ಅಸಿ। ಕಮ। ಟ್ಯಾಕ್ಸ್ ಆಫೀಸರರಾಗಿಯೂ ತತ್ಕಾಲವಾಗಿ ನೇಮಕಗೊಂಡಿದ್ದಾರೆ.

ಡಿ। ಜಿಲ್ಲಾ ಕಲೆಕ್ಟರ್ ರಾವ್ ಬಹದೂರ್ ಉದ್ಯಾವರ ರಾಮರಾಯರ ಪುತ್ರ ಶ್ರೀ ಯು. ನಾರಾಯಣರಾವ್, ಎಂ ಎ ಬಾರ್ ಎಟ್ ಲೊ ಮತ್ತು ಮಿ ಡಿ ನೊರೊಂಞಾ, ಬಿ ಎ ಬಿ ಎಲ್ ನಮ್ಮ ಜಿಲ್ಲೆಯವರಾದ ಇವರಿಬ್ಬರೂ ಮುನ್ಸಿಫರ ಸ್ಥಾನಕ್ಕೆ ಚುನಾಯಿಸಲ್ಪಟ್ಟಿರುವರು.

ದ. ಕ. ಜಿಲ್ಲಾ ಬೋರ್ಡು

ಇದರ ಮುಂದಿನ ಸಭೆ ಅದರ ಕಾರ್ಯಾಲಯದಲ್ಲಿ ತಾ. 19ರಂದು ಶನಿವಾರ ಬೆಳಗ್ಗೆ ಗಂಟೆ 11ಕ್ಕೆ ಜರಗುವುದು. ಆ ಸಭೆಯಲ್ಲಿ 1941-42ನೇ ವರ್ಷದ ಜಿಲ್ಲಾ ಬೋರ್ಡು ಹಾಗೂ ಮೇಜರ್ ಪಂಚಾಯತ್ ಬೋರ್ಡುಗಳ ಆಡಳಿತ ವರದಿ ಇಡಲಾಗುವುದು.

ಸಾರ್ವಜನಿಕ ಸಭೆ

ಕಳೆದ ಆದಿತ್ಯವಾರ, ಸಂಜೆ ಮೈದಾನಿನಲ್ಲಿ ಡಾ। ಎಂ. ಆರ್ ಭಟ್ಟರ ಅಧ್ಯಕ್ಷತೆಯಿಂದ ಸಭೆ ಸೇರಿ, ಭಾರತದ ಪ್ರಕೃತ ರಾಜಕೀಯದ ಕುರಿತು, ರಾಷ್ಟ್ರೀಯ ಸರಕಾರ ಸ್ಥಾಪನೆಯ ವಿಚಾರವಾಗಿ ಶ್ರೀಗಳಾದ ಎಂ ಡಿ ಅಧಿಕಾರಿ, ಕೆ ಸದಾಶಿವ ಕಾರಂತ, ವಿಷ್ಣು ಭಟ್ಟ, ಅಚ್ಯುತನ್ ಇವರು ಮಾತನಾಡಿದರು. ಅಂದು ಪ್ರಾತಃಕಾಲ ಪ್ರಭಾತಫೇರಿ ಕಾಂಗ್ರೆಸ್ ಧ್ವಜವಂದನೆಗಳಿದ್ದುವು. ಮೆರವಣಿಗೆಯೂ ನಡೆದಿತ್ತು.

ಪುತ್ತೂರು

ವರ್ತಕರ ನಿರ್ಣಯ

ಪ್ರತಿ ತಿಂಗಳ ಅಂತ್ಯದ ಆದಿತ್ಯವಾರ ರಜಾದಿನವನ್ನಾಗಿ ... ನಿರ್ಧರಿಸಿದ್ದಾರೆ.

ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನಿನ ಆಶ್ರಯದಲ್ಲಿ ಕಳೆದ ವಾರ ಒಂದು ಸಾರ್ವಜನಿಕ ಸಭೆ ಜರುಗಿ, ತಾಲೂಕಿನ ಸ್ಥಳೀಯ ... ಒಂದು ಇಲ್ಲಿ ತೆರೆಯಲ್ಪಟ್ಟಿತು.

ಕಾವು

ಶ್ರೀ। ನರಸಿಂಹ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ। ಜತ್ತಪ್ಪ ರೈಗಳು ರಾಜಕೀಯ ವಿಚಾರದಲ್ಲಿ ಭಾಷಣವಿತ್ತರು.

ವಿಟ್ಲ

ಕಳೆದ ತಾ 28 ಸಂಜೆ ಸ್ಥಳೀಯ ... ಶ್ರೀ ಕೆ ಬಿ ... ಅಧ್ಯಕ್ಷತೆಯಲ್ಲಿ ಶ್ರೀ ಎ. ಜ ... ಈಗಿನ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವೇನು ಎಂಬುದರ ವಿಷಯದಲ್ಲಿ ... ಶ್ರೀ। ಮಹದೇವ ದೇಸಾಯಿಯವರ ನಿಧನದ ಬಗ್ಗೆ ಠರಾವಾಯಿತು.

ಕಾರ್ಕಳ

ಬೈಲೂರು

ಸ್ಥಳೀಯ ಬೋರ್ಡ ಹಾ ಎ ... ಶಾಲೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಸಮಾರಂಭವು ಶ್ರೀ। ಜಾರ್ಕಳ ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ರಾಜಿನಾಮೆಗಳು

ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಕಾಂಗ್ರೆಸ ರಾಜನೀತಿಯನ್ನು ... ವದಕ್ಕೋಸ್ಕರ ಶ್ರೀ ಸಿ ಗೋವಿಂದ ಕಾಮತ್ ಬಿ ಯಸ್ ಸಿ ಯವರು ಶ್ರೀ ವೆಂಕಟ್ರಮಣ ಹ್ಯಾಯರ ಎಲಿಮೆಂಟರಿ ಶಾಲೆಯ ಅಧ್ಯಾಪಕ ವೃತ್ತಿಗೂ, ಪ್ರಕೃತ ಪರಿಸ್ಥಿತಿಯಲ್ಲಿ ಸದಸ್ಯನಾಗಿದ್ದು ಪ್ರಯೋಜನವಿಲ್ಲನೆಂಬುದರಿಂದ ಇಲ್ಲಿಯ ವಿಷದಿ ವ್ಯಾಪಾರಿಗಳ ಶ್ರೀ ವಿ ಎ ಶೆಣೈಯವರು ಯುದ್ಧ ಸಹಾಯ ಸಮಿತಿಯ ಮೆಂಬರಿಕೆಗೂ ರಾಜಿನಾಮೆಗಳನ್ನು ಬರೆದು ಕಳುಹಿಸಿದ್ದಾರೆಂದು ತಿಳಿದಿದೆ.

ಸಮಾರಂಭಗಳು

ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರು ಪೂಜಾ ಮಹೋತ್ಸವವು ತಾ 28ರ ದಿನ ಶ್ರೀ ಲಲಿತ ಕೀರ್ತಿ ಭಟ್ಟಾರಕ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಸತ್ಯಾಗ್ರಹ ಬಲಿದಾನ ದಿನಾಚರಣೆಯು ಸ್ಥಳೀಯ ಆರ್ಯ ಸಮಾಜದಲ್ಲಿ ನೆರೆದು ಶ್ರೀ ಕೇಶವ ರಾಮಚಂದ್ರ ಶೆಣೈಯವರ ಭಾಷಣವಾಯಿತು.

ಬೆಳ್ವಾರೆ

ತಾ 30 8 42ರಂದು ಇಲ್ಲಿನ ಸತ್ಯಾಗ್ರಹ ಸಮಿತಿ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಜತ್ತಪ್ಪ ರೈಗಳ ಅಧ್ಯಕ್ಷತೆಯಿಂದ ಜರಗಿ, ಶ್ರೀಗಳಾದ ಗಣೇಶ ಸುಬ್ಬಪ್ಪಯ್ಯ, ಗೋವಿಂದಯ್ಯ, ವೆಂಕಟ ಸುಬ್ಬರಾವ್, ಸುಬ್ರಾಯ ಪ್ರಾಸುಭಾಗ ಮೊದಲಾದವರು ಸರಕಾರದ ದಬ್ಬಾಳಿಕೆಯ ನೀತಿಯನ್ನು ಖಂಡಿಸಿ ಮಾತನಾಡಿದರು.

ಸಿನೆಮಾ ಪುಟ

'ಏಕ್‌ರಾತ್‌'ನಲ್ಲಿ ನೀನಾ

ನೀನಾ ಹೊಸ ತಾರೆ; ಹೊಸತಾರೆಯೆಂದೇ ಅವಳ ಕುರಿತು ಇಂದು ಸಿನೇಮಾ ಲೋಕವೆಚ್ಚಿಗೆ ತೋರಿಸಿದೆ; ಹೊಸತೆಂಬುದು ಮಾತ್ರ ಅಲ್ಲಿ ಕಾರಣವಲ್ಲ; 'ಏಕ್‌ರಾತ್‌'ನಂತಹ ಚಿತ್ರದ ಉಜ್ವಲ ಯಶಸ್ವಿತೆಗೆ ಅವಳು ಎಷ್ಟರ ಮಟ್ಟಿಗೆ ಕಾರಣಳಾಗಿದ್ದಾಳೋ ಆದರಿಂದ, ಪೃಥ್ವೀರಾಜನಂಥಾ ರಾಜನಟನೊಡನೆ ಆಕೆ ಎಷ್ಟು ಗಂಭೀರವಾಗಿ, ಮನಮೋಹಕವಾಗಿ ಅಭಿನಯಿಸಿ ಪ್ರೇಕ್ಷಕರನ್ನು ಬೆರಗುಗೊಳಿಸಿದಳೋ ಅದರಿಂದ; ಶುದ್ಧ ಮೋಹಕ ಭಾಷಾ ಸರಣಿ, ನೈಸರ್ಗಿಕ ಅಭಿನಯ, ಮುಗ್ಧ ಯೌವನ ಸೌಂದರ್ಯ ರಾಶಿಗಳಿಂದ ಕೂಡಿದ ನೀನಾ ಈಗ ಸಿನೆಮಾಲೋಕದಲ್ಲಿ ಪ್ರಥಮ ಪಂಕ್ತಿಯ ತಾರೆಯೆಂದು, ಮುಂದೆ ಬಂದಿರುವಳು. 'ಶಾಲಿಮಾರ್ ಪಿಕ್ಚರ್ಸ್‌'ನ 'ಏಕ್‌ರಾತ್‌' ಇಂದು ಕರಾಚಿ ಮೊದಲಾದ ಕಡೆಗಳಲ್ಲಿ ವಾರ ವಾರಗಳ ವರೆಗೆ ಪ್ರದರ್ಶಿತವಾಗುತ್ತಿರುವುದೇ ಅದರ ಕೀರ್ತಿಗೆ ಕಳಶವಿಟ್ಟಿದೆ. ನಿರ್ದೇಶಕ ವ್ಯವಸ್ಥಾಪಕ ಅಹಮ್ಮದರವರು ಅದರ ರಚನೆಯಲ್ಲಿ ಅತ್ಯಂತ ಪರಿಶ್ರಮ ವಹಿಸಿದ್ದು ಯಶಸ್ವಿತೆಗೆ ಒಂದು ಕಾರಣ; ಕಥೆಯಲ್ಲಿ, ಸಂಗೀತದಲ್ಲಿ, ಸಂಭಾಷಣೆಯಲ್ಲಿ, ಸಿನೆಮಾ ರಚನಾ ಚಾತುರ್ಯದಲ್ಲಿ ಏಕ್‌ರಾತ್ ಒಂದು ಮೇಲ್ತರಗತಿಯ ಚಿತ್ರ. ಧನವ್ಯಾಧಿಗಳಾದ ಪಿತೃಗಳಿಂದ ವಿವಾಹ ವ್ಯಾಪಾರದಲ್ಲಿ 'ಮಾರಲ್ಪಟ್ಟ' ದೌರ್ಭಾಗ್ಯ ಭಾರತ ಕನ್ನಿಕೆಯೋರ್ವಳ ಜೀವನ ಚಿತ್ರವನ್ನು ಇದರಲ್ಲಿ ಕಾಣಬಹುದು. ಮಂಗಳೂರಿಗೆ ಈ ಚಿತ್ರ ಬೇಗನೆ ಬರುವುದೇ? ಬಾಲಾಜಿ ಟೋಕಿಸಿನಲ್ಲಿ ಇದೇ ತಾ. 11ರಿಂದ ಪ್ರಾರಂಭವಾಗಿದೆ.

ಒಂದು ಗಂಟೆ ಮುಂದೆ ಇಟ್ಟಿದ್ದರಿಂದ

ಸಿನೆಮಾಗಳ ಮಟ್ಟಿಗೆ ಲಾಭವೇ-ಎಂಬುದಾಗಿ 'ಬೊಂಬಾಯಿಯ 'ಮಿರರ್' ಪತ್ರಿಕೆ ಹೇಳುತ್ತದೆ; ಏಕೆಂದರೆ ಸಂಜೆ ಹೊತ್ತಿನಲ್ಲಿ ಜನರಿಗೆ ಎಂದರೆ ವಿದ್ಯಾರ್ಥಿಗಳಿಗೆ, ನೌಕರರಿಗೆ, ಕೆಲಸಗಾರರಿಗೆಲ್ಲಾ ಬೇಗನೇ ಆಫೀಸು ಬಿಡುವುದರಿಂದ, ಹೆಚ್ಚು ವಿರಾಮಕಾಲವು ದೊರಕಿ ಅದನ್ನು ವಿನೋದದಲ್ಲಿ ಕಳೆಯಲು ಸಹಜವಾಗಿ ಮನಸಾಗುವುದರಿಂದ ಹೀಗೆ ಗಂಟೆಯನ್ನು ಮುಂದರಿಸಿದ್ದು ಸಿನೆಮಾ ಪ್ರದರ್ಶಕರಿಗೆ ಲಾಭದಾಯಕವೇ ಆಯಿತೆನಬೇಕು.

ಜಾತಿಯಲ್ಲೇನಿದೆ?

ಎಂಬುದಾಗಿ ಈಗಿನ ಕಾಲದ ಯುವಕ ಯುವತಿಯರು ಸಾಮಾನ್ಯವಾಗಿ ಯೋಚಿಸುವಂತಿದೆ. ಅಂತೆಯೇ ಮೊನ್ನೆ ಮೊನ್ನೆ ಜೋತಿ. ಪ್ರಕಾಶನು ತನ್ನ ಪತ್ನಿ ಶೀಲಾ ಫಲ್ಸಾರ ಸಹಿತ ಇಸ್ಲಾಂಮತಕ್ಕೆ ಸೇರಿದನೆಂದು ಹೇಳಿದರೂ ಹೇಳಬಹುದು, ಇದರಿಂದ ಪ್ರತಿಮಾದಾಸ ಗುಪ್ತಳಿಗೆ ಒಪ್ಪಿಲ್ಲೇ ತನ್ನೆ ಮತದ ವಿಷಯ ನೆನಪಾದಂತೆ ತೋರುತ್ತದೆ. "ನಾನು ಕ್ರಿಶ್ಚಿಯನಳಲ್ಲ; ಹಾಗೆಂದು ಮಾಡಿರುವ ಪ್ರಚಾರವನ್ನು ನಂಬಬೇಡಿ; ನಾನು ಪ್ರಸಿದ್ಧ ಬಂಗಾಳೀ ಹಿಂದೂ ಮನೆತನದಲ್ಲಿ ಹುಟ್ಟಿದೆನು" ಎಂದು ಆಕೆ ಈಗ ಹೇಳುತ್ತಾಳೆ. ಅದರೆ ಪ್ರಸಿದ್ಧ ಹಿಂದೂ ಮನೆತನದಲ್ಲಿ ಹುಟ್ಟಿದ ಆಕೆ; ಮುಸ್ಲಿಂ ಪತಿಯನ್ನು ಮಾಡಿಕೊಂಡ ವಿಷಯವನ್ನು ಏಕೆ ಅಡಗಿಸಿಕೊಂಡಳೋ ತಿಳಿಯದು. ಅಂತೂ ಆ ವಿಷಯವನ್ನು ಬಹಿರಂಗಪಡಿಸಿದರೆ, ಅವರ ಆರಾಧಕರು ಜುಗುಪ್ಸೆ ಪಟ್ಟಾರೆಂಬ ಅಂಜಿಕೆ ಇರಬಹುದೇ ಅವಳಿಗೆ? ಹಾಗೇನೂ ತಿಳಿಯಬೇಕಾಗಿಲ್ಲ; 'ಹಿಂದೂ ಮುಸ್ಲಿಂ ಐಕ್ಯ'ದ ಜೀವಂತ ಆದರ್ಶ ಪತಿಗೂ ಪೂರ್ತಿ ಪ್ರತಿಮಾದಾಸಳೆಂದು ಅವರನ್ನು ಕೊಂಡಾಡಲೇ ಬೇಕು!

ಮೀನಾಕ್ಷಿ ವಿನಾಯಕರು

'ನವಯುಗ ಚಿತ್ರಪಟ'ದ, ಇತ್ತೀಚಿಯ ಸಾಮಾಜಿಕ ಚಿತ್ರ ಕೃತಿಯಾದ 'ಸಂಗಮ'ದಲ್ಲಿ ನಟಿಸುತ್ತಾರೆ. ಮೀನಾಕ್ಷೀ ವಿನಾಯಕ ದ್ವಯವು ಇತ್ತೀಚಿಯ ನವಯುಗ ಚಿತ್ರಪಟ ಚಿತ್ರಗಳಲ್ಲಿ ಒಂದು ತೆಗೆದುಹಾಕಬಹುದಾದ ಅಂಶವಾಗಿದೆಯೆಂದು ಅನೇಕ ಮಂದಿ ಪ್ರೇಕ್ಷಕರು ಅಭಿಪ್ರಾಯಪಡುತ್ತಾರೆ. 'ಅಮೃತ' ಚಿತ್ರದಲ್ಲಿ ಮೀನಾಕ್ಷೀ ವಿನಾಯಕರ ರೋಮಾಂಚ (Romance) ವನ್ನು ಬಿಟ್ಟಿದ್ದರೆ ಸಿನೆಮಾ ಉತ್ತಮವಾಗುತ್ತಿತ್ತೆಂದು ಅನೇಕರು ಹೇಳುತ್ತಾರೆ. 'ಸಂಗಮ'ದಲ್ಲಿ ಇವರ ಸಂಗಮ ಹೋಗಿದೆಯೋ ತಿಳಿಯದು. ಅಂತೂ ವಿನಾಯಕರು ನಿರ್ದೇಶಕರಾದ ಮೇಲೆ ತನ್ನದೇ ಮೆರವಣಿಗೆ ಮಾಡಲು ಹೊರಟದ್ದು ಸ್ವಲ್ಪ ಬೇಸರದ ಸಂಗತಿಯೆನಲೇ ಬೇಕು.

ಶೋಭನ—ಶಾಹು ಚಿತ್ರ

ಶೋಭನಾ ಸಮರ್ಥ ಮತ್ತು ಶಾಹೂ ಮೋಡಕರ ಜತೆಯಿಂದ ಹೊಸತೊಂದು ಚಿತ್ರವು ತಯಾರಾಗುವ ವಾರ್ತೆಯಿದೆ.



ಮಾರಾಟಕ್ಕೆ ಸಿದ್ಧವಾಗಿದೆ!
ಲಘು ವಿಜ್ಞಾನ
ನಾಲ್ಕನೆಯ ಪುಸ್ತಕ — ನಾಲ್ಕನೆಯ ಫೋರ್ಮಿಗೆ
ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ. ಬೋರ್ಡ್ ಹೈಸ್ಕೂಲ್ ಕುಂದಾಪುರ.
ಪುಸ್ತಕ ದೊರೆಯುವ ಸ್ಥಳ: ಬೆಲೆ: 1-4-0.
ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು ಶ್ರೀ ಸ್ವಾಮಿ ಪ್ರಣವೇಶಾನಂದರು

ಭಾವಗಳು ಸಂಕ್ರಮಣಶೀಲವಾದುದರಿಂದಲೇ ಸಾಧುಸಂಗವು ಅನುಶ್ರೇಯವಾದುದು

ಆದ್ದರಿಂದಲೇ ದೈಹಿಕ ಸ್ವಾಸ್ಥ್ಯ ಅಥವಾ ರೋಗಗಳಂತೆ, ಮಾನಸಿಕ ಭಾವ ಅಥವಾ ವಿಕಾರಗಳು ಸಂಕ್ರಮಣಶೀಲವಾಗಿವೆ, ಅವುಗಳೂ ಕೂಡ ಅಧಿಕಾರ ಭೇದದಿಂದ ಸಂಕ್ರಮಣವಾಗುತ್ತವೆ. ಭಗವದನುರಾಗವನ್ನು ಉದ್ದೀಪನ ಮಾಡುವುದಕ್ಕೋಸ್ಕರವೇ ಸಾಧು ಸಂಗದ ಮಹಿಮೆಯನ್ನು ಶಾಸ್ತ್ರವು ಹೊಗಳುತ್ತದೆ ಆದುದರಿಂದಲೇ ಶ್ರೀ ಪರಮಹಂಸರು ತಮ್ಮ ಬಳಿಗೆ ಒಂದು ಸಾರೆ ಬಂದವರನ್ನು ಕುರಿತು 'ಇಲ್ಲಿ ಆಗಾಗ ಬರುತ್ತಾ ಹೋಗಬೇಕು' ಎಂದು ಹೇಳುತ್ತಿದ್ದರು ಆ ಮಾತಂತಿರಲಿ

ಏಕ ನಿಷ್ಠೆಯಿಂದ ದೈಹಿಕ ಪರಿವರ್ತನವಾಗುವ ವಿಷಯು

ಸಾಧಾರಣವಾದ ಮಾನಸಿಕ ಭಾವಗಳಂತೆ ಶ್ರೀ ಪರಮಾತ್ಮನಲ್ಲಿ ಏಕಾಂತ ಏಕನಿಷ್ಠೆಯು ತೀವ್ರ ಅನುರಾಗದಿಂದ ಮನಸ್ಸಿನಲ್ಲಿ ಉದ್ಭವಿಸುವ ಭಾವಗಳೂ ಕೂಡ ಅಪೂರ್ವವಾದ ದೈಹಿಕ ಪರಿವರ್ತನವನ್ನು ತರುವುವು ಹೇಗೆಂದರೆ ಅಂತಹ ಅನುರಾಗವು ಬಂದರೆ ಸಾಧಕನಿಗೆ ರೂಪರಸಾದಿಗಳಲ್ಲಿ ಅಭಿರುಚಿ ಕಡಿಮೆಯಾಗುವುದು, ಹೇಗೆಂದರೆ ಆತನ ಆಹಾರ ನಿದ್ರೆ ಕಡಿಮೆಯಾಗುವುದು–ವಿಶಿಷ್ಟ ತಿಂಡಿಗಳಲ್ಲಿ ರುಚಿ, ಇತರ ತಿಂಡಿಗಳಲ್ಲಿ ರುಚಿ ಇಲ್ಲದಿರುವಿಕೆ–ಸ್ತ್ರೀ ಪುತ್ರರಲ್ಲಿ ಸಾಂಸಾರಿಕ ಸಂಬಂಧವು ಆತನನ್ನು ಶ್ರೀ ಪರಮಾತ್ಮನಿಂದ ದೂರೀಕರಿಸುವುದರಿಂದ ಅವರನ್ನು ವಿಷದಂತೆ ತ್ಯಜಿಸಲು ಇಚ್ಛೆ–ವಾಯು ಪ್ರಧಾನ ಧಾತು ಇತ್ಯಾದಿ 'ಸಾಂಸಾರಿಕ ಜನರ ವಾತಾವರಣವನ್ನು ಸಹಿಸಲಾಗುವುದಿಲ್ಲ ಆತ್ಮೀಯ ಸ್ವಜನರ ಸಂಸರ್ಗದಲ್ಲಿ ಉಸಿರು ಕಟ್ಟಿ ಪ್ರಾಣ ಬಿಟ್ಟು ಹೋಗುವಂತೆ ಆಗುತಿತ್ತು' ಎಂದು ಈ ವಿಷಯವಾಗಿ ಶ್ರೀ ಪರಮಹಂಸರು ಹೇಳುತಿದ್ದರು, 'ಈಶ್ವರನನ್ನು ಚೆನ್ನಾಗಿ ಯಾರು ಸ್ಮರಿಸುತ್ತಾರೆಯೋ, ಅವರ ದೇಹದ ಮಹಾವಾಯುವು ಸರಸರನೆ ಮಸ್ತಕಕ್ಕೆ ಏರುವುದು' ಎಂದು ಅವರು ಇನ್ನೂ ಹೇಳುತಿದ್ದರು

ಭಕ್ತಿ ಮತ್ತು ಯೋಗ ಮಾರ್ಗಗಳ ಸಮನ್ವಯು

ಭಗವದನುರಾಗದ ದೆಶೆಯಿಂದಾಗುವ ಎಲ್ಲ ಮಾನಸಿಕ ಪರಿವರ್ತನಗಳಿಗೆ ಅಥವಾ ಭಾವಗಳಿಗೆ ಬೇರೆ ಬೇರೆ ಒಂದೊಂದು ದೈಹಿಕ ಪ್ರತಿಕೃತಿಯು ಅಥವಾ ರೂಪವುಂಟು ಮಾನಸಿಕ ದೃಷ್ಟಿಯಿಂದ ವೈಷ್ಣವ ತಂತ್ರವು ಆ ಭಾವಗಳನ್ನು ದಾಸ್ಯ, ಸಖ್ಯ, ವಾತ್ಸಲ್ಯ ಮತ್ತು ಮಧುರವೆಂದು ಐದು ವಿಭಾಗಗಳಾಗಿ ಮಾಡಿರುತ್ತದೆ ಮತ್ತು ಆ ಮಾನಸಿಕ ವಿಕಾರಗಳನ್ನು ವಿಕ್ರಯಿಸಿ ಬಂದೊದಗುವ ದೈಹಿಕ ವಿಕಾರಗಳನ್ನು ಲಕ್ಷಕ್ಕೆ ತಂದು ಯೋಗ ಶಾಸ್ತ್ರವು ಮೇರುದಂಡ ಮತ್ತು ಮಸ್ತಿಷ್ಕಾಂತರ್ಗತವಾದ ಕುಲಕುಂಡಲಿನಿ ಶಕ್ತಿ ಅಥವಾ ಷಟ್ ಚಕ್ರಾದಿಗಳ ವರ್ಣನೆಯನ್ನು ಮಾಡಿರುತ್ತದೆ

(ಕ್ರಮಶಃ)

The Canara Banking Corporation Ltd.

(Incorporated in British India)

Estd 1906

Our Rates of Interest on Deposits From

7--8--1942

1. Current		(1% p a. from Jan. to June.
		(½% p. a. from July to Dec
2. Savings Bank		2% p a.
3. Short-term		1¼% p. a
4. Fixed	3 months	1½% p. a.
	6 „	2% p.a.
	9 „	2½% p. a.
	12 „	3% p. a.
	24 „	3¼% p a.

Advances aginst approved securities made at very competitive rates.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st February 1942, fixed deposits will be accepted at the following attractive rates.

One year ... 4%

Two years or above 4½%.

Interest Payable Quarterly.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed .soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಸ್ಟೋ ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.

2, 36 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD SWADESHABHIMANI 1906

[ಸಂಪುಟ 36] ತಾರೀಕು 18—9—1942 [ಸಂಚಿಕೆ 37]

ಭಾರತವನ್ನು ಇಂದು ಸ್ವತಂತ್ರಮಾಡದೆ—

ಮಿತ್ರರು ಯುದ್ಧದಲ್ಲಿ ಜಯಿಸಲಾರರು.

ವಿಶ್ವವಿಖ್ಯಾತ ಲೇಖಕಿ ಪರ್ಲ್‌ಬಕ್ಕಳ ಮಾತುಗಳು

"ಇಂಗ್ಲಿಷ್ ಮಾತನಾಡುವ ಬ್ರಿಟಿಷ್ ಸಾಮ್ರಾಜ್ಯದ ಬಿಳಿ ಜನರೊಳಗೂಡಿದ" ಹಾಗೂ, "ಜತೆಗೂಡಲು ಸಿದ್ಧರಿರುವ ಹಾಗೂ ಸಮರ್ಥರಿರುವ ಇತರ ಜನರಿಂದ" ಕೂಡಿದ "ಅಮೆರಿಕನ್ ಯೂನಿಯನ್" ಒಂದು ಈಗ ಆಗಬೇಕೆಂದು ಹೇಳುವವರು, ನಾವಿದುವರೆಗೆ ಊಹಿಸದಂಥಾ ಭಯಾನಕ ಸಂಗ್ರಾಮದ ಕಡೆಗೆ ನಮ್ಮನ್ನು ನೂಕುತಿದ್ದಾರೆ. 'ಅಮೆರಿಕನ್ ಯೂನಿಯನ್'ನ್ನು ಆರಂಭ ಮಾಡುವಾಗಲೇ ತನ್ನನ್ನು ಬಿಟ್ಟುಬಿಟ್ಟಿರುವಂಥಾ ಪ್ರಾಚೀನವಾದ ಹಾಗೂ ಹೃತ್ಪೂರ್ವಕ ಪ್ರಜಾಪ್ರಭುತ್ವಕ್ಕಾಗಿ ಹೋರಾಡುತ್ತಿರುವ ಚೀನವು ಈ ಯೂನಿಯನ್‌ನ ವಿಷಯ ಏನು ವಿಚಾರ ಮಾಡಬಹುದು? ನಾವು ಅದೇ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಈ ತರದಿಂದ ಅಲ್ಲಗಳೆಯುತ್ತಿರುವ ಜಪಾನನ್ನು ಯುದ್ಧ ಹಡಗಗಳನ್ನು ಮತ್ತು ಬಾಂಬು ಹಾಕುವ ವಿಮಾನಗಳನ್ನೊದಗಿಸುತ್ತಾ ಈ ಯೂನಿಯನ್‌ನಲ್ಲಿ ಸೇರಲು ಸೂಚಿಸಬಹುದು! ಇಂಥಾ ಸಂಕುಚಿತ ಯೂನಿಯನ್‌ನಲ್ಲಿ ಮುಂದಿನ ಯುದ್ಧದ ಬೀಜವಿನ್ಯಾಸವಿದೆಯೆಂಬ ವಿಷಯವನ್ನು ಅತ್ಲಾಂತಿಕ್ ವಿಚಾರದ ಜನರು ಏಕೆ ತಿಳಕೊಳ್ಳಲಾರದಾಗಿದ್ದಾರೆ. ಆದರೆ ಇಂಥಾ ಸಂದರ್ಭದಲ್ಲಿ 'ಅತ್ಲಾಂತಿಕ್ ವಿಚಾರ'ದವರಿಂದಲೇ ಒಂದು ಕಾರ್ಯ ಆಗುವುದು ಸಾಧ್ಯವಿಲ್ಲ.

ಕಾತುರರಾಗಿದ್ದಾರೆ!

"ಈ ಯುದ್ಧದಲ್ಲಿ ಬ್ರಿಟನು ಮತ್ತು ಅಮೆರಿಕಗಳು ಬಹಳ ವಿಷಮ ಸಂಧಿ ಕಾಲದಲ್ಲಿವೆ. ಬಿಳಿಯ ಜನರು ತಮ್ಮ ಕುರಿತು ಯಾವ ಧೋರಣೆಯುಳ್ಳವರಾಗಿದ್ದಾರೆಂದು ತಿಳಿಯಲು ಹಾಗೆಂದು ಅವರು ಸಾರ್ವಜನಿಕವಾಗಿ ಹೇಳಲಿ, ಹೇಳದಿರಲಿ—ನಮ್ಮ ಮಿತ್ರರಾದ ಚೀನದ ಭಾರತದ ಫಿಲಿಪೈನಿನ ಹಾಗೂ ಮಲಯದ ಜನರು ಕಾತುರರಾಗಿದ್ದಾರೆ. ನಾವು ಮಾನವೀಯತೆಯ ನೆಲೆಯಲ್ಲಿ ನಿಂತ ಸಂಪೂರ್ಣ ನ್ಯಾಯ ಸಂಪೂರ್ಣ ಶಾಂತಿ ಪ್ರಜಾಪ್ರಭುತ್ವವನ್ನು ಬಿಟ್ಟು, ಬಿಳಿ ಜನರಿಗೆ ಮಾತ್ರ ಅನ್ವಯಿಸುವ ಪ್ರಜಾಪ್ರಭುತ್ವದ ಆಶ್ರಯ ಮಾಡುತ್ತೇವೆಯೆ? ಇದಕ್ಕೆ ನಾವು ಅದಷ್ಟು ಬೇಗನೇ ಅದಷ್ಟು ಸ್ಪಷ್ಟ ವಾಣಿಯಲ್ಲಿ ಉತ್ತರ ಕೊಡಬೇಕಾಗಿದೆ. ನಾವು ಪ್ರಶ್ನೆಯನ್ನು ತಪ್ಪಿಸಿದರೆ ಅಥವಾ ಉತ್ತರ ಕೊಡಲು ತಡಮಾಡಿದರೆ ಇದರಿಂದ ನಿಷೇದಾತ್ಮಕ ಉತ್ತರ ಬಂತೆಂಬ ಅರ್ಥವೇ ಆಗುತ್ತದೆ. ಇದಕ್ಕಾಗಿ ಅಮೇರಿಕವು ಇಂದು ಮುಂದಾಳುತನ ವಹಿಸಲೇಬೇಕಾಗಿದೆ, ಏಕೆಂದರೆ ನಾವು ಇಂಗ್ಲಿಷ್ ಜನರು ಎಷ್ಟೇ ಮೆಚ್ಚುತ್ತಿದ್ದರೂ ಇಂದು ಅವರನ್ನು ನಂಬಲಾಗುವುದಿಲ್ಲ. ನಾವು ಆಂಗ್ಲ ಧುರೀಣತೆಯು ಎಷ್ಟೇ ಭದ್ರವೆಂದು ಭಾವಿಸಿದರೂ, ನಾವು ಅವರ ಧುರೀಣತೆಯಲ್ಲಿ ವಿಶ್ವಾಸವಿರಿಸಲೂ ಆಗುವುದಿಲ್ಲ. ಪೆಸಿಫಿಕ್ಕಿನಲ್ಲಿ ಅಮೆರಿಕಕ್ಕೆ ಮಿತ್ರರು ಅತ್ಯಂತ ಅವಶ್ಯವಾಗಿ ಬೇಕಾಗಿರುವಾಗ, ನಾವಿಂದು ಅಂಥಾ ಮಿತ್ರರಿಗೆ ಯೋಗ್ಯ ಭರವಸೆ ಕೊಡಬಲ್ಲೆವಾದರೆ, ಪೆಸಿಫಿಕ್ಕಿನಲ್ಲಿ ಅಮೆರಿಕವೇ ನಿರ್ಗತಿಕವಾಗುವ ಸಂದರ್ಭ ಒದಗೀತು.

ಇಂದು ಬಾಗಿಲಲ್ಲಿ ಬಂದು ನಿಂತ ತೋಳನ ಹಿಟ್ಲರನ—ಕುರಿತು ಇಂಗ್ಲೆಂಡು ಎಲ್ಲಕ್ಕಿಂತಲೂ ಹೆಚ್ಚಾಗಿ ವಿಚಾರ ಮಗ್ನವಾಗುವುದು ಸಹಜವಿದೆ. ಜಪಾನಿನಿಂದ ನಮಗೆ ಬಂದಿರುವ ಅಪಾಯವನ್ನು ಆಂಗ್ಲೇಯರು ಗಂಭೀರವಾಗಿ ಯೋಚಿಸಲಾರರೆಂಬುದು ನಿಶ್ಚಯವೇ ಆಗಿದೆ. ನಮ್ಮ ಜನರೇ ಜಪಾನಿನ ಆಕ್ರಮಣಭೀತಿಯನ್ನು ಇನ್ನೂ ಗಂಭೀರವಾಗಿ ತೆಗೆದುಕೊಳ್ಳದಿರುವಾಗ, ವಿಶ್ವದ ಮಿತ್ರರ ವಿಚಾರ ಇನ್ನೂ ನಾವು ಗಂಭೀರ ವಿಚಾರ ಮಾಡದಿರುವಾಗ ಆಂಗ್ಲೇಯರು ನಮ್ಮ ಕುರಿತು ಆಲೋಚಿಸುವುದಿಲ್ಲವೆನ್ನುವುದೇಕೆ? ಪರ್ಲ್ ಹಾರ್ಬರ್ ಮತ್ತು ಮೆನಿಲಗಳು ನಮ್ಮ ಅಜ್ಞಾನದ ಭಯಾನಕ ಸಾಕ್ಷಿಗಳಾಗಿವೆ. ಇಂದಿನ ಯುದ್ಧದಲ್ಲಿ ಇಂಥಂಥಾ ಇನ್ನೂ ಅನೇಕ ತರದ ಸಾಕ್ಷಿಗಳನ್ನು ನಾವು ಮುಂದೆ ನೋಡಲಿದ್ದೇವೆ. ಪೆಸಿಫಿಕ್ಕಿನಲ್ಲಿ ನಮಗೆ ಬಂದಿರುವ ಅಪಾಯವನ್ನು ಇಂಗ್ಲೆಂಡು ನೋಡದಿದ್ದರೆ ನಾವಾದರೂ ಆ ಕುರಿತು ಅಜ್ಞಾನದಿಂದಿರಬೇಕೆ? ಅಮೆರಿಕನರಾದ ನಾವು ಪೂರ್ವ ದೇಶವನ್ನೂ ಪಶ್ಚಿಮ ದೇಶವನ್ನೂ ತಲೆಯೆತ್ತಿ ನೋಡುತ್ತಲಿದ್ದೇವೆ, ನಾವು ಹಾಗೆ ನೋಡುವುದು, ಸೈನ್ಯಶಕ್ತಿಯಿಂದ ಪ್ರಬಲ ಮಾನವ ಸಂತತಿಯನ್ನು ತಲೆ ಮೆಟ್ಟಿ ನಿಂತಿರುವ ಮಹಾದರ್ಪದಿಂದಲ್ಲ. ನಾವು ನಮ್ಮ ಅಧಿಕಾರವನ್ನು ಸ್ಥಾಪಿಸಿದಂಥಾ ಐಕ್ಯವನ್ನು ನೋಡುತ್ತಿದ್ದೇವೆ, ಪೆಸಿಫಿಕ್ಕಿನ ಕುರಿತು ನಮ್ಮದೇ ನಿರ್ಧಾರವನ್ನಲ್ಲದೆ ಬೇರೆ ವಿಚಾರವನ್ನು ಅಂಗೀಕರಿಸುವುದು ತಪ್ಪು, ಪೂರ್ಣ ಪ್ರಜಾ ಪ್ರಭುತ್ವದಲ್ಲಿ ನಾವು ಮುಂದಾಳುಗಳಾಗಿರುವೆವೆಂಬ ಭರವಸೆಯನ್ನು ನಮ್ಮ ದೂರ ಪೂರ್ವದ ಮಿತ್ರರಿಗೆ ನಾವು ನಮ್ಮ ಸಲುವಾಗಿಯಾದರೂ ಕೊಡಲೇಬೇಕಾಗಿದೆ.



ಅಮೆರಿಕದಲ್ಲಿ ಕಟ್ಟಿದ 'ಡೊಗ್ಲಸ್ ಬೋಸ್ಟನ್ III ವಿಮಾನಗಳು ಆರ್ ಎ ಎಫ್‌ನಲ್ಲಿ ಚಟುವಟಿಕೆ ವಹಿಸುತ್ತಿವೆ. ಚಿತ್ರದಲ್ಲಿ ವೈಮಾನಿಕರು ವಿಮಾನಗಳ ಕಡೆಗೆ ಹೋಗುತ್ತಿದ್ದಾರೆ. ಕೆಳಗಡೆ ಸಾಲಾಗಿ ಬಾಂಬುಗಳು ಕಾಣುತ್ತವೆ.

"ಅಮೆರಿಕದ ಕಡೆ ನೋಡಿ"

'ಆದರೆ ಅಮೆರಿಕವು ಅಂಥಾ ಮುಂದಾಳುತನ ವಹಿಸೀತೆ?' ಈ ಪ್ರಶ್ನೆಯನ್ನೇ ದೂರ ಪೂರ್ವದ ಜನರು ಕೇಳುತ್ತಿದ್ದಾರೆ. ನಾವಂಥಾ ಮುಂದಾಳುತನ ವಹಿಸಲು ಸಮರ್ಥರಲ್ಲವೆಂದು ಜಪಾನು ಬಿಡದೆ ಸಾರುತ್ತಿದೆ. ಅಮೆರಿಕವನ್ನು ಆಳುವ ಜನರಿಂದ ಎಂದರೆ ಬಿಳಿಯರಿಂದ, ಕರಿಜನರು ಎಂದಾದರೂ ನ್ಯಾಯವನ್ನು ಹಾರೈಸುವುದು ಬೇಡವೆಂದು ಜಪಾನು, ಚೀನ, ಭಾರತ, ಫಿಲಿಪೈನ್, ಮಲಯ ಹಾಗೂ ರಶ್ಯದಲ್ಲಿಯೂ ಕೂಡಾ ಪ್ರಚಾರ ಮಾಡುತ್ತಲಿದೆ. ಅದಕ್ಕೆ ಉದಾಹರಣೆಯಾಗಿ ವಂಶಪಾರಂಪರ್ಯದಿಂದ ಅಮೆರಿಕದಲ್ಲಿ ಬಂದು ನೆಲೆನಿಂತಿರುವ ಬಣ್ಣ ಭೇದದ ಜನರ ವಿಷಯವಾಗಿ ನಾವು ನಡೆಸುತ್ತಿರುವ ಧೋರಣೆಯನ್ನೇ ಅವರು ಬೆರಳೆತ್ತಿ ತೋರಿಸುತ್ತಿದ್ದಾರೆ. ನಮ್ಮಲ್ಲಿ ಆದ ಪ್ರತಿಯೊಂದು ಕಲಹ, ಪ್ರತಿಯೊಂದು ದೊಂಬಿಯೂ ಜಪಾನೀಯರಿಗೆ ಸಂತೋಷವನ್ನುಂಟುಮಾಡುತ್ತದೆ. ವಿಶ್ವದಲ್ಲಿ ನಮ್ಮ ಶತ್ರುವಾಗಿರುವ ಜಪಾನಿಗೆ ನಾವು ಅಮೆರಿಕದ ಸಿಪಾಯಿ, ನಾವಿಕರೊಳಗೂ ಬೇರೆ ಬಣ್ಣದ ಸಿಪಾಯಿ ನಾವಿಕರೊಳಗೂ ಮಾಡುವ ವ್ಯತ್ಯಾಸವೂ, ತಮ್ಮ ರಕ್ಷಣಾ ಉದ್ಯೋಗದಲ್ಲಿ, ನಮ್ಮ ಟ್ರೇಡ ಯೂನಿಯನ್‌ಗಳಲ್ಲಿ ಹಾಗೂ ನಮ್ಮ ಸಾಮಾಜಿಕ ಆಚಾರಗಳಲ್ಲಿ ಬಣ್ಣ ಭೇದವುಳ್ಳವರ ಕುರಿತು ತೋರಿಸುವ ಭೇದ ಭಾವನೆಗಳು ಬಹಳ ಸಹಾಯಕಾರಿಗಳಾಗಿವೆ. ಜಪಾನು, ತನ್ನ ಮಾತುಗಳನ್ನು ಕೇಳುತ್ತಿರುವ ವಿಲಿಯಾಂತರ ಮಂದಿಯ ಕಿವಿಯಲ್ಲಿ ಹೇಳುತ್ತದೆ 'ಆ ಅಮೆರಿಕವನ್ನು ನೋಡಿ, ಅದು ಎಂದಾದರೂ ನಿಮಗೆ ಸಮಾನತೆ ಕೊಟ್ಟೀತೆ?' ಎಂದು. ಇದಕ್ಕೆ ಯಾರು ಸ್ಪಷ್ಟವಾದ 'ಹೌದು' ಎಂಬ ಉತ್ತರ ಕೊಟ್ಟಾರು? ಬಣ್ಣ ಭೇದದ ಅಮೆರಿಕದ ಜನರೊಡನೆ, ಹಾಗೂ ಬಣ್ಣ ಭೇದದ ದೂರದ ಜನರೊಡನೆ ಅಮೆರಿಕನರು ಅಂದಿನಿಂದ ಇದುವರೆಗೆ ಇಟ್ಟುಕೊಂಡಿರುವ ಸಂಬಂಧವು, ಹಾಗೂ ಬೇಕೆಂದೇ ಮಾಡುವಂತಿರುವ ಕೃತ್ಯಗಳು ನಿಜವಾಗಿ ಅಪಾಯಸೂಚಕಗಳಾಗಿರುವವು. ಇಂದು ವಿಶ್ವದ ಜನರು ಇನ್ನೂ ಕಾಯುತ್ತಿದ್ದಾರೆ, ಇನ್ನೂ ಎದುರು ನೋಡುತ್ತಿದ್ದಾರೆ. ನಮ್ಮ ಕರಿಯ ಮಿತ್ರರು ನಮ್ಮಲ್ಲಿ ನಿಜವಾಗಿ ಪ್ರಜಾಪ್ರಭುತ್ವದ ಬಗ್ಗೆ ಅನುಮಾನಗಳಿಲ್ಲವೆಂದು ತಿಳಿದಿದ್ದರೆ ಯಾರು ತಾನೇ ಅವರನ್ನು ಅದಕ್ಕಾಗಿ ದೂರಬಲ್ಲರು? ಅವರು ಹೇಗೆ ಭಾವಿಸುತ್ತಾರೆಂದು ತಿಳಿಯದೆ ಇರುವಂಥದ್ದೇ ಅಪಾಯಕಾರಿಯಾದುದು. ಫ್ರಾನ್ಸಿನ ಅಜ್ಞಾನವು ಪತನಕಾರಣವೂ ಆಯಿತು. ನಮ್ಮದಿಂದು ನೂತನವಾದ ಅಪಾಯವಾಗಿದೆ, ಏಕೆಂದರೆ ಇದೀ ನಮ್ಮ ಜನಾಂಗದಲ್ಲಿ ಹತ್ತಕ್ಕೆ ಒಂದು ಪಾಲರಷ್ಟು ಭಿನ್ನ ಬಣ್ಣದವರಿದ್ದಾರೆ. ಭಿನ್ನ ಬಣ್ಣದ ಜನರ ವಿಷಯ ಹಾಗೂ ಪ್ರಜಾಪ್ರಭುತ್ವದ ವಿಷಯ ನಮ್ಮ ಸಂಬಂಧ ಆಫ್ರಿಕ ಹಾಗೂ ಭಾರತದ ಜನರಷ್ಟು ದೂರ ಇಲ್ಲ. ಇದು ಈಗ ಬಾಗಿಲಿನ ಹೊರಗೂ ಇದೆ, ಮನೆಯ ಒಳಗೂ ಇದೆ. ಇಂದು ನಮಗೆ ತೋರಿಸುವ ವಿಧೇಯತೆ ಇದು ರಾಷ್ಟ್ರೀಯವಲ್ಲ.

ಅವರಿಗೆ ಸಮಾನತೆಯಿಲ್ಲ?

ಅಮೆರಿಕನರು ಈ ಅಪಾಯ, ಈ ಜವಾಬ್ದಾರಿ ಈ ವಿಷಮ ಸಂಧಿಗಳನ್ನು ತಿಳಕೊಂಡರೂ ನಾವು ಈಗಿನ ಕಾಲಕ್ಕೆ ಅಗತ್ಯವಾದ ಪ್ರಜಾಪ್ರ

(2ನೆಯ ಪುಟವನ್ನು ನೋಡಿರಿ)

KANNADA ILLUSTRATED WEEKLY

ಭಾರತವನ್ನು ಇಂದು ಸ್ವತಂತ್ರಮಾಡದೆ-

(1ನೆಯ ಪುಟದಿಂದ ಮುಂದುವರಿದುದು)

ಭುತ್ವದ ಧುರೀಣತೆಯನ್ನು ವಹಿಸಲು ಸಮರ್ಥರಾದೇವೆ? ನಮ್ಮ ತತ್ವವು, ಅದರ ನಮ್ಮ ಆಚರಣೆಯಲ್ಲಿ ಅದನ್ನು ಕೆಲವಂಗೆ ಮಾತ್ರ ಅನ್ವಯಿಸಿದ್ದೇವೆ; ಇದರ ಅರ್ಥವೇನು? ಇದು ವಂಚಕತ್ವವಲ್ಲವೆ? ನಾವು ಅಮೆರಿಕನರು ಸ್ವಭಾವತಃ ದೊಡ್ಡ ವಂಚಕರಲ್ಲ; ಯಾವನೇ ಕೆಳತರಗತಿಯ ಅಮೆರಿಕನರೊಡನೆ ಮಾತನಾಡಿ ನೋಡಿ; ಆತನು ಪ್ರಜಾಪ್ರಭುತ್ವವು ಸಮಸ್ತರಿಗೆಂದೂ ಸಮಾನತೆ ನ್ಯಾಯಗಳು ಸರ್ವರ ಹಕ್ಕೆಂದೂ ಹೇಳುತ್ತಾನೆ. ಆತನೊಡನೆ ಭಿನ್ನ ಬಣ್ಣದ ಜನರ ವಿಷಯ ಮಾತನಾಡಿ ನೋಡಿ; ನಿಮ್ಮ ಕಿವಿಗಳನು ನೀವೇ ನಂಬಲಿಕ್ಕಿಲ್ಲ. ಅದೇ ಮನುಷ್ಯನು ಈಗ ಮಾತನಾಡುವುದಿಲ್ಲವೆಂದು ನೀವು ಹೇಳಬಹುದು. ಭಿನ್ನಬಣ್ಣದ ಮನುಷ್ಯನಿಗೆ ಬಿಳಿಮನುಷ್ಯನ ಯೋಗ್ಯತೆ ಸಿಗಲಿಕ್ಕಿಲ್ಲವಂತೆ! 'ಯಾಕೆ?' ಎಂದು ನೀವು ಕೇಳಬಹುದು. ಬಿಳಿಯ ಅಮೆರಿಕನು ತಲೆ ತುಗ್ಗಿಸಿ ಹೇಳುತ್ತಾನೆ. 'ಅದು ಹಾಗೆಯೇ, ಹಾಗೆ ನೀನು ಪ್ರಶ್ನಿಸಕೂಡದು' ಎಂದು ಆವನ ಉತ್ತರ ಬರುತ್ತದೆ!

ಈ ಅಮೆರಿಕನು ಹೀಗೇಕೆ ಮಾಡುತ್ತಾನೆ? ಮನುಷ್ಯ ಮನುಷ್ಯನಲ್ಲಿ ಭಿನ್ನಭೇದವೆಣಿಸುವ ವಿಚಾರ ಅವನ ತಲೆಯಲ್ಲಿ ತುಂಬಿದೆಯೆಂದು ಇದರಿಂದ ಖಚಿತವಾಗುತ್ತದೆ. ಅವನ ದೃಷ್ಟಿಯಿಂದ ಅಮೆರಿಕನರು ಎರಡು ವಿಧವಾಗಿದ್ದಾರೆ. ಒಬ್ಬನು ಯೋಗ್ಯ, ಸ್ವಾತಂತ್ರ್ಯ ಪ್ರಿಯ ಮತ್ತು ನ್ಯಾಯಶಾಲಿ, ಇನ್ನೊಬ್ಬನು ಒಂದು ಪ್ರಾಣಿ, ಅವನು ಪ್ರಯೋಜನ ಶೂನ್ಯನಿದ್ದರೂ ಇರಬಹುದು; ಅವನು ಜಾತಿಯಿಂದಾಗಿ ಪ್ರಜಾಪ್ರಭುತ್ವ ಬಾಹಿರನಾಗುತ್ತಾನೆ; ಅದರಿಂದಾಗಿ ಅವನಿಗೆ ಸಮಾನತೆ ನ್ಯಾಯವೊಂದೂ ಉಳಿಯುವುದಿಲ್ಲ; ಹೀಗೆ ಎರಡನೇ ವಿಭಾಗಮಾಡುವುದು ಫಾಸಿಸ್ಟ್ ತತ್ವದಂತೆಯೇ ಆಗುತ್ತದೆ. ಹೀಗೆ ಮನುಷ್ಯನಲ್ಲಿ ದ್ವಿವಿಧ ಕಲ್ಪನೆ ಮಾಡುವ ಅಮೆರಿಕನನ್ನು ಪ್ರಜಾಪ್ರಭುತ್ವಕ್ಕೆ ಯೋಗ್ಯ ಮುಂದಾಳುವಾಗಿ ಯಾರು ತಾನೇ ಇಂದು ಮಾಡಬಲ್ಲರು? ನಾವು ಹೀಗೆ ಪ್ರತಿಯೊಬ್ಬನಲ್ಲಿಯೂ ದ್ವಿವಿಧಮಾನವ ಸ್ವಭಾವವನ್ನು ನೋಡುವುದು ಅಪಾಯಕರವಾಗಿದೆ; ಇದರಿಂದಾಗಿ, ನಾವಿನ್ನು ಮುಂದೆ ಒಮ್ಮೆ ಆಂತರಿಕ ದಂಗೆಯನ್ನೂ ಕಂಡರೂ ಕಾಣಬಹುದು. ನಾವು ಹಿಂದೊಮ್ಮೆ ಆಂತರಿಕ ದಂಗೆಗೊಳಗಾದದ್ದಾದರೂ ಭಿನ್ನ ಬಣ್ಣದ ಜನರಿಗೆ ಸ್ವಾತಂತ್ರ ಹಾಗೂ ಪ್ರಜಾಪ್ರಭುತ್ವ ಕೊಡದಿರುವುದೇ ಕಾರಣದಿಂದಾಗಿದ್ದು, ಇನ್ನು ಮುಂದಿನದ್ದೂ ಅದೇ ಹೇತುವಾಗುತ್ತದೆ. ಹೀಗೆ ಮಾನವನಲ್ಲಿ ಭಿನ್ನತೆ ಕಾಣುವುದು ನಮ್ಮ ದೇಶದ ಹಲವರ ದೃಷ್ಟಿಯಲ್ಲಿದೆ. ನಮ್ಮ ವೈಯುಕ್ತಿಕ ರಚನೆಯಲ್ಲಿ ನಾವು ಭಿನ್ನರಾಗಿದ್ದೇವೆ.

ಈಗ ಪ್ರಜಾಪ್ರಭುತ್ವ

ಹೀಗೆ ನಾವು ಮಾನವ ಭಿನ್ನತೆಯಲ್ಲಿದ್ದರೂ, ಜಗತ್ತಿನ ಮಿಲಿಯಾಂತರ ಮಂದಿ ನಮ್ಮ ಕಡೆಗೆ ಕಣ್ಣೆತ್ತಿ ನಿಜವಾಗಿ ಪ್ರಜಾಪ್ರಭುತ್ವದ ಮುಂದಾಳುತನಕ್ಕಾಗಿ ನಿರೀಕ್ಷಿಸುತ್ತಿದ್ದಾರೆ. ನಾವಿಂದು ಅದಕ್ಕೆ ಅನುಗುಣವಾಗಿ ನಡೆಯದಿದ್ದರೆ ಇನ್ನೊಂದು ಕಡೆಗೆ ಧುರೀಣತೆ ಹೋದೀತು! ಆದರೆ ಇದೊಂದು ನೆನಪಿರಲಿ, ನಾವಿಂದು ಪೂರ್ಣ ಪ್ರಜಾಪ್ರಭುತ್ವದ ಸಲುವಾಗಿ ಇದ್ದೇವೆಯೆಂದು ವಿಶದಪಡಿಸದಿದ್ದರೆ, ನಾವು ಜಗತ್ತನ್ನು ಏನಾಗಿ ಪರಿವರ್ತಿಸಬೇಕೆಂದು ಬಯಸಿದ್ದೆವೋ ಹಾಗೆ ಪರಿವರ್ತಿಸುವ ಸಂದರ್ಭವನ್ನೇ ಕಳಕೊಳ್ಳುತ್ತೇವೆ; ನಮಗೆ ಎಷ್ಟೇ ಸೈನ್ಯಶಕ್ತಿಯಿದ್ದರೂ ಜಗತ್ತಿನಲ್ಲಿ ನಮ್ಮ ಸ್ಥಾನವನ್ನೇ ನಾವು ಕಳಕೊಳ್ಳಬೇಕಾಗಿ ಬರಬಹುದು. ಏಕೆಂದರೆ ಜಗತ್ತಿನ ಬಹುಪಾಲು ಜನಸಂಖ್ಯೆ ಇಂದು ಭಿನ್ನ ಬಣ್ಣದವರಾಗಿದ್ದಾರೆ. ಹಾಗಾದರೆ ನಾವು ನಿಜವಾದ ಪ್ರಜಾಪ್ರಭುತ್ವವನ್ನು ಹೇಗೆ ಉದ್ಧರಿಸಬಲ್ಲೆವು? ನೀವು ಮೊದಲಾಗಿ ಮಾಡಬೇಕಾದದ್ದು ವ್ಯಕ್ತಿ ದ್ವೈವಿಧ್ಯವನ್ನು ಒಂದುಗೂಡಿಸುವುದು, ಹಾಗೂ ಭಿನ್ನತೆಯಿರುವುದನ್ನು ತಿಳಕೊಳ್ಳುವುದು. ಇನ್ನೊಂದು ಪಕ್ಷ ಯೆಂದರೆ ನಾವೇ ಮಹತ್ವರಹಿತರೆಂಬುದನ್ನು ಅಲ್ಲಗಳೆಯುವುದು. ನಾವು ಹೊರಜಗತ್ತಿನ ವಿಷಯಗಳಿಂದ ನಮ್ಮ ಆತ್ಮವನ್ನು ಪರಿಶುದ್ಧಗೊಳಿಸಬೇಕು. ಈ ಯುದ್ಧದ ಅಂತ್ಯವೆಂದರೆ ಇನ್ನೊಂದು ಹೊಸ ಯುಗದ ಆದಿ. ಆ ಹೊಸ ಯುಗದ ಆದಿಯು ಪ್ರಜಾಪ್ರಭುತ್ವದ ಸ್ವರ್ಣಯುಗವಾಗುವುದೋ ಅಲ್ಲವೋ ಎಂಬುದು ಈಗ ನಾವು ಅಂಗೀಕರಿಸುವ ಪ್ರಜಾಪ್ರಭುತ್ವದ ಮುಂದಾಳುತನವನ್ನು ಹೊಂದಿಕೊಂಡಿದೆ. ನಮಗೀವಿಷಯ ಗೊತ್ತಿದ್ದರೂ ನಾವದನ್ನು ಒಪ್ಪಿಕೊಳ್ಳುವುದಿಲ್ಲ. ಬಿಳಿ ಜನರಿಗೆ ವರ್ಣದ್ವೇಷ ಬಹಳ ಇದೆ. ಇದರಿಂದಲೇ ಅವಿಶ್ವಾಸ ಭೀತಿಗಳು ಹೆಚ್ಚಿವೆ. ಇದೇ ದಾರಿಹಿಡಿದು ಇನ್ನೂ ಸಾಗಿದರೆ ಹಿಟ್ಲರನಿಗೆ ಸಹಾಯ ಮಾಡಿದಂತೆ. ಸೈನ್ಯಶಕ್ತಿಯಿಂದಲ್ಲದೆ ಬಿಳಿಯವನು ಜಗತ್ತಿನಲ್ಲಿ ಆಳಲಾರ. ಈ ಗಂಭೀರ ಕಾಲದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ, ಬಿಳಿಯವರು ನಿಜವಾಗಿಯೂ ಹೇಳುವ ಮಾತಿಗೆ ಕೃತಿಯಲ್ಲಿ ಮನ್ನಣೆ ಕೊಡಲು ಮುಂದೆ ಬರಬೇಕು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

R. E. P. 565/1942

O. S. 134/1936

1. ಚಿನ್ನಮ್ಮ ಯಾನೆ ಸುಶೀಲ }
2. ಸದಾನಂದಕೃಷ್ಣ (ಮ್ಯಾನರ) } ಅರ್ಜಿದಾರರು

ಮತ್ತು

ಪಿ. ಗೋವಿಂದರಾವ್, ಯಸ್. ವೆಂಕಟ್ರಾಯರ ಮಗ ಎಡ್ವೋಕೇಟ್_ಕಂಟೋನ್‌ಮೆಂಟ್_ಬೆಂಗಳೂರು, C/o ಡಾಕ್ಟರ್ ನಾರಾಯಣರಾವ್, 8 ಕರ್ವೆ ರೋಡ್, ಬಾಸ್ಕರ್ ಟೌನ್_ಬೆಂಗಳೂರು } ಎದ್ರಿ

ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ:—

1ನೇ ಅರ್ಜಿದಾರಳ ಗಂಡ ವ 2ನೇ ಅರ್ಜಿದಾರನ ತಂದೆಯಾದ ಹಾಲಿ ಮೃತಪಟ್ಟ ಕೆ. ಶ್ರೀನಿವಾಸರಾಯರು ಎದ್ರಿಯ ಮೇಲೆ ಪಡೆದಿದ್ದ ಮೇಲ್ಕಾಣುವ ಡಿಕ್ರಿಯ ಮೇಲೆ ಅವರ ವಾರೀಸುದಾರರಾದ ಅರ್ಜಿದಾರರು ದಾಖಲುಮಾಡಿರುವ ಈ ಅಮುಲ್ಜಾರಿ ಅರ್ಜಿಯು ತಾ. 29-9-1942ಕ್ಕೆ ಇರುವುದರಿಂದ ಆ ಕುರಿತು ಆಕ್ಷೇಪಗಳೇನಾದರೂ ಇದ್ರೆ ಅವುಗಳನ್ನು ಆ ದಿನ ಬೆಳಗ್ಗೆ 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ತಿಳಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರುಹಾಜರು ತಿಳಿದು ಸದ್ರಿ ವ್ಯವಹರಣೆ ಮುಂದರಿಸಲಾಗುವದೆಂತ ತಿಳಿದಿರಲಿ.

(By order of the Court.)

ಕಾರ್ಕಳ 9-9-42 } **P. V. Upadhyaya** (B.A., L.L.B)
Vakil for petitioners.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 280/1942.

ಉಳ್ಳಾಲ ಮಾಧವಅನಂತಕಿಣಿ—ವಾದಿ.

ಅರ್ಜಿದಾರರು

1. ಶೀನಕಾಜವಾ. ಕೋಚುಕಾಜವರ ಮಗ.
2. ಕಾಂತ್ರಯಿ ಹೆಂಗ್ಸು 1ನೇ ಪ್ರತಿವಾದಿ ಹೆಂಡ್ತಿ.

ಮಂಗ್ಳೂರು ತಾಲೂಕು ಕೋಣಾಜೆ ಗ್ರಾಮಸ್ತರು—ಪ್ರತಿವಾದಿರು ರೆಸ್ಪೊಂಡೆಂಟ್ರು.

ಮೇಲ್ಕಂಡ ಅಮ್ಲುಜ್ಯಾರಿಯಲ್ಲಿ ಜಪ್ತಾದ ಪ್ರತಿವಾದಿರ ಮ್ಯಾದಿಗೇಣಿ ವ ಕೃಷದ ಹಕ್ಕಿನ ಆಸ್ತಿಯೇಲಮಿನ ಕುರಿತು ವಾದಿಯು ಹಾಜ್ರುಪಡ್ಸಿದ ಯೇಲಂ ಇಸ್ತಿಹಾರಿನ ಶರ್ತುಗಳು ಮಂಜೂರು ಮಾಡುವ ಬಗ್ಗೆ ತಾ. 26-9-42ನೇ ದಿವ್ಸ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುವುದಾಗಿ ಸದ್ರಿ ರೆಸ್ಪೊಂಡೆಂಟುಗೆ ಈ ಮೂಲಕ ತಿಳಿಸೋಣಾಗುತ್ತದೆ.

Mangalore 16-9-1942 } **M. Madhava Rau,**
Vakil for Petitioners.

ನೋಟೀಸು

ದಿ ಅತ್ತೂರು ಎಂಡ್ ಜವಾಹರ ಬೇಂಕ್ ಲಿಮಿಟೆಡ್,

ಕೆನರಾ ಹೈಸ್ಕೂಲ್ ರೋಡ್, ಮಂಗಳೂರು.

ಈ ಕೆಳಗೆ ಹೆಸರು ಕಾಣಿಸಿದವರು "ದಿ ಅತ್ತೂರು ಎಂಡ್ ಜವಾಹರ್ ಬೇಂಕ್ ಲಿಮಿಟೆಡ್", ಕೆನರಾ ಹೈಸ್ಕೂಲು ರೋಡು, ಮಂಗಳೂರು, ಈ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡನಂತರ ಕ್ಲಪ್ತ ವ್ಯಾಯ್ದೆಗೆ ಬಡ್ಡಿ ಕೊಡದೆ ಬಾಕಿ ಮಾಡಿರುವುದರಿಂದ ಬಡ್ಡಿಯನ್ನು ಕಟ್ಟುವರೆ ಅವರಿಗೆ ಬಿಟ್ಟ ರಜಿಸ್ಟ್ರನೋಟೀಸುಗಳಲ್ಲಿ ಕೆಲವು ಜಾರಿಯಾಗಿಯೂ ಕೆಲವು ಜಾರಿಯಾಗದೆಯೂ ಇನ್ನೂ ಹಲವರು ಮೃತಪಟ್ಟಿರುವುದರಿಂದ ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾ. 24-9-42 ದಿವಸ ಯಾ ಅದಕ್ಕಿಂತ ಮೊದಲೇ ಬೇಂಕಿಗೆ ಸಲ್ಲತಕ್ಕ ಅಸಲು_ಬಡ್ಡಿ, ನೋಟೀಸು ಚಾರ್ಜು ಇತ್ಯಾದಿಗಳನ್ನು ಸಲಾಯಿಸಿ ಬಿಡಿಸಿಕೊಂಡು ಹೋಗದೆ ಇದ್ದರೆ, ಸದ್ರಿಯವರು ಈಡಾಗಿಟ್ಟ ನಗಗಳನ್ನು ಇದೇ ತಾ. 26-9-42 ಯಾ ನಂತರ ನಮಗೆ ಯುಕ್ತಕಂಡ ತಾರೀಕಿನಲ್ಲಿ ಬೇಂಕಿನ ಆಫೀಸಿನಲ್ಲಿ ಮಧ್ಯಾಹ್ನ ಘಂಟೆ 2ಕ್ಕೆ ಬಹಿರಂಗವಾಗಿ ಏಲಂಮಾಡಲ್ಪಡುವುದು.

ಸಾಲದ ನಂಬ್ರ ಮತ್ತು ಅಡವಿಟ್ಟ ತಾರೀಕು		ಸಾಲ ಪಡಕೊಂಡವರ ಹೆಸರು ಮತ್ತು ವಿಳಾಸ	ಅಸ್ಲು ರೂಪ್ಯಾ
1.	215/42 20-2-42	ಹರೇಕಳ ಕೃಷ್ಣ ನ್ಯಾಕ S/o ಶ್ರೀನಿವಾಸ ನ್ಯಾಕ, ಬಾಳ ಗ್ರಾಮ ಮಂಗಳಪೇಟೆ, ಬಜಪೆ ಪೋಸ್ಟು.	450.
2.	318/42 16-3-42	ಹರೇಕಳ ಕೃಷ್ಣ ನ್ಯಾಕ S/o ಶ್ರೀನಿವಾಸ ನ್ಯಾಕ, ಬಾಳ ಗ್ರಾಮ ಮಂಗಳಪೇಟೆ, ಬಜಪೆ ಪೋಸ್ಟು.	192.
3.	1177/40 26-6-40	ಬಿ. ನಾರಾಯಣ ಆಚಾರಿ, ಸರಾಫ್, ಡೊಂಗರಕೇರಿ; ಚಿತ್ರ ಟೋಕಿಸ್ ಬಳಿ; ಮಂಗಳೂರು.	35.
4.	1902/40 16-10-40	ಲಕ್ಷ್ಮಣ S/o ತ್ಯಾಂಪ; ಬಿಜೈ ಇಗರ್ಜಿ ಬಳಿ; ಬಿಜೈ ಪೋಸ್ಟು ಮಂಗಳೂರು.	12.
5.	2216/40 14-12-40	ಕೆ. ಉಮ್ಮರ ಕುಟ್ಟಿ ಮೂಪ S/o ಪೋಕರೆ ಕುಟ್ಟಿ; ಕಂದಕ; ಹಜೂರು ಆಫೀಸಿನ ಕೆಳಗೆ; ಮಂಗಳೂರು.	35.
6.	64/41 13-1-41	ಸಿ. ಯಸ್. ಕುತ್ತೆತ್ತೂರು S/o ಲೇಟ್ ಶಾಂತಪ್ಪ ಶೆಟ್ಟಿ; ಕ್ಲಾರ್ಕು ಡಿಸ್ಟ್ರಿಕ್ಟ್ ಬೋರ್ಡು ಆಫೀಸು, ಮಂಗಳೂರು.	8.
7.	364/41 15-3-41	ಕೈರಂಗಳ ನಾರಾಯಣ ಭಟ್ಟ S/o ಪಟೇಲ್ ನಾರಾಯಣ ಭಟ್ಟ ಕೈರಂಗಳ, ಹೊಸಮನೆ; ಮಂಜೇಶ್ವರ ಪೋಸ್ಟು.	5.
8.	389/41 20-3-41	ಅಮ್ಮದ್ ಬ್ಯಾರಿ S/o ಸಿಯ್ಯೊ ಬ್ಯಾರಿ; ಉಳ್ಳಾಲ, ಅಕ್ಕರಕೆರೆ; ಸುಣ್ಣದ ವ್ಯಾಪಾರಿ; ಉಳ್ಳಾಲ ಪೋಸ್ಟು.	10.
9.	702/41 12-5-41	ಈಶ್ವರ ಭಂಡಾರಿ S/o ದೋಗ್ರ ಭಂಡಾರಿ, ಫರಂಗಿಪೇಟೆ, ಅರ್ಕುಳ ಪೋಸ್ಟು.	9.
10.	834/41 5-6-41	ತಿಮ್ಮಪ್ಪ S/o ಜ್ಯತ; ಲಚ್ಚಿಲು, ಅರ್ಕುಳ; ಸ್ವಾರಿಬ್ಯಾರಿ ಮನೆಬಳಿ, ಫೆಲಿಕ್ಸ್ ಪೈಯವರ ವಕ್ಲು, ಫರಂಗಿಪೇಟೆ ಪೋಸ್ಟು.	7.
11.	950/41 23-6-41	M. ಅಚ್ಯುತ ನ್ಯಾಕ S/o ಯಂ. ಕುಂಞಪ್ಪ ನ್ಯಾಕ, ಟೀಚರ್ ತೆಂಕುಎಡಪದವು ಎಲಿಮೆಂಟರಿಶಾಲೆ, ಶಿಬರಿಕೆರೆ ಪೋಸ್ಟು	10.
12.	1050/41 8-7-41	ಎಸ್. ಘಾಜಿಖಾನ್ S/o ಎಮ್. ಹುಸೈನ್‌ಖಾನ್ ಟೌನ್ ವೆಕ್ಸಿನೇಟರ್, ಮಂಗಳೂರು.	10.
13.	1058/41 9-7-41	ಮಹಮ್ಮದ್ S/o ಬಡವಕುಂಞ ಬ್ಯಾರಿ, ಪಯ್ಯೋಳಿಕೆ, ಕಾಸರಗೋಡು ತಾಲೂಕು, ಪಯ್ಯೋಳಿಕೆ ಪೋಸ್ಟು.	7.
14.	1353/41 25-8-41	ಮಾಮು ಬ್ಯಾರಿ S/o ಇಸ್ಮಾಯಿ ಬ್ಯಾರಿ, ಜಾನುವಾರು ವ್ಯಾಪಾರ ಹೊಸಮನೆ, ತೋಕೂರು ಗ್ರಾಮ, ಬಜಪೆ ಪೋಸ್ಟು.	10.

Office of the Bank
Canara High School Road
Mangalore.

(*Sd*) **A. Vaikunta Prabhu,**
Managing Director.
Attur & Jawahar Bank Ltd, Mangalore.

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From 7--8--1942

1. Current (1% p. a. from Jan. to June.
(½% p. a. from July to Dec.
2. Savings Bank 2% p. a.
3. Short-term 1¼% p. a.
4. Fixed 3 months 1½% p. a.
6 „ 2% p.a.
9 „ 2¼% p. a.
12 „ 3% p. a.
24 „ 3¼% p. a.

Advances aginst approved securities made at very competitive rates.

ಸಮರಭೂಮಿಯ ಸಂಚಾರ

ಈ ದ್ವಿತೀಯ ಮಹಾಯುದ್ಧವು ಪ್ರಾರಂಭವಾಗ್ಗ, ಇದೇ ಸಪ್ಟಂಬರ್ ತಿಂಗಳ ಮೂರನೆಯ ತಾರೀಕಿಗೆ ಮೂರು ವರ್ಷಗಳು ಸಂದವು, ಇದೀಗ ನಾಲ್ಕನೆಯ ವರ್ಷವೂ ಸುರುವಾಗಿದೆ ಶತ್ರುವು ಎಷ್ಟು ಅಬ್ಬರದಿಂದ ಮುಂದೆ ಬಂದರೂ ಒಂದೇ ವರ್ಷದಲ್ಲಿ ನೆಲಸಮವಾಗಿ ಬಿಡುವನೆಂದ್ದೇನೋ ಹಲವರ ಆಶಯವಾಗಿತ್ತು, ಆದರೆ ಶತ್ರುವು ಇಂದಿಗೂ ವೀರ ಘೋಷ ಮಾಡುತ್ತಲೇ ಇದ್ದಾನೆ. ಹಿಟ್ಲರನ ರಣವೇಗದಿಂದ ರಶ್ಯವಿಂದು ತತ್ತರಿಸುತ್ತಿದೆ, ಇತರ ಭೂಖಂಡಗಳೂ ದಿಗ್ಭ್ರಾಂತವಾಗಿವೆ. ಹಾಗಾಗಿ ಇನ್ನೂ ಈ ರಣರಂಗವು ಬೇಗನೇ ಪೂರ್ತಿಗೊಳ್ಳುವಂತೆ ತೋರುವುದಿಲ್ಲ ರಣಕಾಳಿಗೆ ಇನ್ನೂ ನರಬಲಿ ಸಾಕಾಗಲಿಲ್ಲವೇನೊ? ಜರ್ಮನಿಯು ಪೋಲೆಂಡು, ಜೆಕೊಸ್ಲವೇಕಿಯಾ, ಫ್ರಾನ್ಸ್, ಗ್ರೀಸ್, ನಾರ್ವೆ, ಡೆನ್ಮಾರ್ಕ್, ಹಾಲೆಂಡ್ ಮೊದಲಾದ ಸಣ್ಣ ದೊಡ್ಡ ರಾಷ್ಟ್ರಗಳನ್ನು ಮೊಥಲನೆಯ ವರ್ಷದಲ್ಲಿಯೇ ಮಿಂಚಿನ ವೇಗದಿಂದ ಗೆದ್ದಿತು ದ್ವಿತೀಯ ವರ್ಷದಲ್ಲಿ ಪ್ರಬಲ ರಾಷ್ಟ್ರವಾದ ರಶ್ಯದೊಡನೆ ಕಾಳಗ ಮೊದಲಾಯಿತು, ಯುಕ್ರೇನ್ ಪ್ರಾಂತದ ಧಾನ್ಯದ ಕಣಿ ಜರ್ಮನರ ವಶವಾಗಿ ಕೆಲಕಾಲ ಅಲ್ಲಿಯೂ ವಿದ್ಯುದ್ವೇಗದಿಂದ ಅವರು ಮುಂದೊತ್ತಿದರೂ ಮತ್ತೆ ಹಿಮಕಾಲ ಬಂದಾಗ ಹಿಂಜರಿಯಬೇಕಾಯಿತು, ಈ ವರ್ಷ ರುಮೇನಿಯಾ, ಭಲ್ಗೇರಿಯಾ, ಯುಗೊಸ್ಲಾವಿಯಾ ಮೊದಲಾದ ರಾಷ್ಟ್ರಗಳನ್ನು ಬಲಿಗೊಂಡು, ಛಳಿಗಾಲವು ಮುಗಿದ ಬಳಿಕ ಜರ್ಮನರು ತಿರುಗಿ ರಶ್ಯದ ಮೇಲೆರಗಿ ಇದೀಗ ಸ್ಟಾಲಿನ್‌ಗ್ರಾಡನ್ನು ಕೈವಶಪಡಿಸುವ ಘೋರ ಯುದ್ಧ ಸಾಗಿಸುತ್ತಿರುವುದರೊಡನೆ ಕಾಕಸಸನ್ನೂ ಒಳನುಗ್ಗಿದ್ದಾರೆ ಜರ್ಮನಿಗೆ ಸಹಾಯವೆಂದೋ, ಇಷ್ಟರಲ್ಲಿಯೇ ಜಪಾನರು ಪೆಸಿಪಿಕಿನಲ್ಲಿ ಚಲನವಲನಗಳನ್ನು ಹೆಚ್ಚಿಸಿದರು, ಸಿಂಗಾಪುರ, ಮಲಯ, ಒರ್ಮ ಗಳನ್ನು ಆಕ್ರಮಿಸಿಕೊಂಡು ಮುಂದಿನ ಆಕ್ರಮಣ ಸಿದ್ಧತೆಯಲ್ಲೀಗ ನಿರತರಾಗಿದ್ದಾರೆ ಅಂತೂ ಯುದ್ಧವು ಇನ್ನಾದರೂ, ಮೂರರ ವರ್ಷದ ಬಳಿಕವೂ, ಬೇಗನೇ ಕೊನೆಗೊಳ್ಳುವ ಸಂಭವ ತೋರುವುದಿಲ್ಲ ಹೀಗೆ ಯುದ್ಧಾಸಕ್ತವಾದ ರಾಷ್ಟ್ರಗಳಲ್ಲಿ ಬ್ರಿಟನು, ಅಮೆರಿಕ, ಜರ್ಮನಿ, ಜಪಾನು, ಇಟಲಿ ರಶ್ಯಗಳು ಈಗ ಪ್ರಬಲವಾದುವು, ಇವಕ್ಕೆ ಸಹಾಯವಾಗಿ ಕೆಲ ರಾಷ್ಟ್ರಗಳಿವೆ ಇನ್ನು ಕೆಲವು ಈ ಪ್ರಬಲ ರಾಷ್ಟ್ರಗಳ ವಸಾಹತ್ತುಗಳೂ ಯುದ್ಧರಂಗಕ್ಕೆ ಎಳೆಯಲ್ಪಟ್ಟಿವೆ, ಟರ್ಕಿ ಅಯರ್ಲೆಂಡು ಮೊದಲಾದ ಒಂದೆರಡು ರಾಷ್ಟ್ರಗಳೇನೂ ತಟಸ್ಥವೆಂದು ಇರುವವಾದರೂ ಅವುಗಳಿಗೂ ಯುದ್ಧದ ಬಿಸಿ ತಾಗದೆ ಇಲ್ಲ ಒಟ್ಟಿನಿಂದ ಅಖಿಲ ಪ್ರಪಂಚವೇ ಇಂದಿನ ಯುದ್ಧಾಗ್ನಿಯಿಂದ ಒಂದಲ್ಲ ಒಂದು ರೀತಿಯಾಗಿ ಬೇಯುತ್ತಿದೆ

ರಶ್ಯದ ರಣರಂಗ

'ಅಡಿಯ ಮುಂದಿದೆ ಸ್ವರ್ಗ, ಅಡಿಯ ಹಿಂದಿದೆ ನರಕ' ಎಂಬ ಮಾತಿನ ತತ್ವದಂತೆ ಇಂದು ಜರ್ಮನರು ರಶ್ಯನರೂ ರಶ್ಯದ ರಣಭೂಮಿಯಲ್ಲಿ ಹೋರಾಡುತ್ತಿದ್ದಾರೆ ಸ್ಟಾಲಿನ್ ಗ್ರಾಡ್ ಪರಿಸ್ಥಿತಿಯು ದಿನದಿಂದ ದಿನಕ್ಕೆ ವಿಷಮ ಗಭೀರವಾಗುತ್ತಿದೆ ಇತ್ತೀಚೆಯ ಸುದ್ದಿಗಳನ್ನು ಕೇಳಿದರೆ ಇಲ್ಲಿ ಜರ್ಮನರ ಕೈ ಮೇಲಾಗುತ್ತಿದೆಯೆಂದೇ ತಿಳಿಯುತ್ತದೆ ಜರ್ಮನರು ಆಗಾಗ ಅಲ್ಪಸ್ವಲ್ಪ ಅಪಜಯ ಹೊಂದುತ್ತಿದ್ದರೂ, ಅವರ ಕಾದಿಟ್ಟ ಸೈನ್ಯಗಳ ಆಗಮನದಿಂದಾಗಿ ಮತ್ತಷ್ಟು ಹುರುಪು ಹೆಚ್ಚಿ ಹೋರಾಡುತ್ತಾರೆ ಸ್ಟಾಲಿನ್ ಗ್ರಾಡನ್ನು ವಾಯುವ್ಯ, ನೈಋತ್ಯ ಮತ್ತು ಪಶ್ಚಿಮ ಈ ಮೂರು ದಿಕ್ಕುಗಳಿಂದಲೂ ಶತ್ರು ಸೈನ್ಯಗಳು ಮುತ್ತಿವೆ ಜರ್ಮನರು ವೊಲ್ಗಾ ನದಿಯ ದಾರಿಯನ್ನೂ ಮುತ್ತುವ ಭರದಲ್ಲಿರುವರೆಂದು ತಿಳಿದುಬರುವುದರಿಂದ ಅಪಾಯ ಸನ್ನಿಹಿತವಾದಂತೆ, ರಶ್ಯಕ್ಕೆ ಸಾಧನ ಸಾಮಗ್ರಿಗಳು ಬರಬೇಕಾದರೆ ವೊಲ್ಗಾ ನದಿಯ ಮೂಲಕ ಬರಬೇಕು, ಇಲ್ಲಿಯೂ ರಶ್ಯನರ ಪ್ರತಿಭಟನೆಯೇನೋ ಬಲವಂತವಾಗಿದೆ ಸ್ಟಾಲಿನ್‌ಗ್ರಾಡಿನ ಯುದ್ಧವು ವಿಶ್ವದ ರಣೇತಿಹಾಸದಲ್ಲಿಯೇ ಅಭೂತಪೂರ್ವವಾಗಿದೆ. ನೊವೊರಸಿಸ್ಕ್ ಅರ್ಧ ಇಷ್ಟರಲ್ಲೇ ಜರ್ಮನರ ವಶವಾಗಿದೆ ಅತ್ತ ಕಾಕಸಸಿನಲ್ಲಿ ಗೊಝ್ನಿ ಎಣ್ಣೆ ಕಣಿಯ ಕಡೆ ಶತ್ರು ಸೈನ್ಯವು ಧಾವಿಸುತ್ತಿದೆ. ರಶ್ಯನರ ಅರಣ್ಯ ಸೈನ್ಯವು ಬಹಳ ಪರಾಕ್ರಮದಿಂದ ಶತ್ರುವನ್ನೆದುರಿಸುತ್ತಿದೆ. ಕಾಕಸಸ್ ಪರ್ವತವನ್ನು ದಾಟುವ ಪ್ರಬಲ ಪ್ರಯತ್ನವನ್ನೂ ಬಾಕು ಎಣ್ಣೆ ಕಣಿಯನ್ನು ಹಿಡಿವ ಸಾಹಸವನ್ನೂ ಜರ್ಮನರೂ ಭರದಿಂದ ಮಾಡುತ್ತಿದ್ದಾರೆ.

ಇಜಿಪ್ತ್ ಯುದ್ಧ

ರೊಮೆಲನು ಒಮ್ಮೆಲೇ ಗಂಭೀರವಾಗಿ ಇಜಿಪ್ತ ರಣರಂಗದಲ್ಲಿ ಬೆಳಗಿದನು, ಎಲಾಮೆನಿನಿಂದ ಆತನು ಎಂಟು ಮೈಲು ನುಗ್ಗಿ ಮುಂದೆ ಬಂದಿದ್ದನು ಅಂತೆಯೇ ಕೆಲಕಾಲದಲ್ಲಿ ಹಿಂಜರಿದುಹೋಗಿ ಮೊದಲಿನ ಸ್ಥಾನದಲ್ಲಿಯೇ ಈಗ ಬಂದು ನಿಂತಿದ್ದಾನೆ ಇದರಿಂದ ಹಲವರು ಹಲವು ತರದ ಊಹಾಪೋಹೆಗೆ ತೊಡಗಿದ್ದಾರೆ ರೊಮೆಲನು ಪರಾಜಯ ಹೊಂದಿ ಬಿಟ್ಟನೆಂದು ಕೆಲವು ಬ್ರಿಟಿಷ್ ಪತ್ರಿಕೆಗಳು ಹಿಗ್ಗಿ ಬರೆಯುತ್ತಿವೆ ಆದರೆ ಇಷ್ಟರಿಂದಲೇ 'ಹಾಗೆ ಹಿಗ್ಗಿಬಿಡುವುದೂ ತರವಲ್ಲ ಹಿಂದೆ ಅಚಿನ್‌ಲೆಕ್ಕರೂ ಇದೇ ರೀತಿ ಮುನ್ನುಗ್ಗಿ ಹಿಂದೆ ಸರಿದದ್ದುಂಟು, ಅದರಿಂದ ಅವರು ಸೋತುಹೋದ್ದರೆಂದೇನೂ ಆದ್ದದಿಲ್ಲ ಎದುರಾಳಿಯ ಬಲವು ಹೇಗಿದೆಯೆಂದು ಪರೀಕ್ಷಿಸಲು ರೊಮೆಲನು ಒಂದು ಸಾಹಸ ಮಾಡಿದ್ದರೂ ಮಾಡಿರಬಹುದು, ಬ್ರಿಟಿಷ್ ಬಲ ಬಹಳ ಪ್ರಬಲವಿದೆಯೆಂದು ತಿಳಿದು ಈಗ ರೊಮೆಲನು ತತ್ಕಾಲಕ್ಕೆ ಹಿಂಜರಿದಿದ್ದರೂ ಇರಬಹುದು ಕಾಕಸಸ್ ಕಾಳಗ ಮುಗಿವ ವರೆಗೆ ರೊಮೆಲನು ತಟಸ್ಥನಾಗಿರಲೂ ಸಾಕು. ಇತ್ತೀಚೆಗೆ ಅಮೆರಿಕದ ವಿಮಾನಗಳು ಇಜಿಪ್ತ ರಣಭೂಮಿಗೆ ಬಂದಿವೆಯೆಂದ್ದೂ ತಿಳಿದುಬರುತ್ತದೆ ಕಳೆದ ೧೦ ವಾರಗಳಲ್ಲಿ ಒಟ್ಟು ಇಜಿಪ್ತ ರಣಭೂಮಿಯ ಮೇಲೆ ಮಿತ್ರರು 4007 ವಿಮಾನ ಹಾರಿಸಿ 120 ಲಕ್ಷ ಪವನು ಬೆಲೆ ಬಾಳುವಷ್ಟು ಬಾಂಬು ಸುರಿಸಿದರೆಂದು ಹೇಳಲಾಗಿದೆ ಅಂತೂ ಈಜಿಪ್ತಿನಿಂದ ವೈರಿಯನ್ನು ಬೆನ್ನಟ್ಟಲು ಮಿತ್ರರು ಈಗ ಆಗ್ರಹ ತೊಟ್ಟಿರುವಂತೆ ತೋರುತ್ತದೆ

ಪ್ಯಾಸಿಫಿಕ್ ಸಮರ

ಸೊಲೊಮನ್‌ನಲ್ಲಿ ಜಯ ಸಿಗದಿರುವುದನ್ನು ಕಂಡು ಜಪಾನರು ನ್ಯೂಗಿನಿಗೆ ಎರಗಿದ್ದಾರೆ ಸೊಲೊಮನಿನಂತೆ ನ್ಯೂಗಿನಿಯವರು ಪುನರಾಕ್ರಮಣ ಮಾಡಿದರೆ, ಜಪಾನರಿಗೆ ಪೆಸಿಪಿಕ್ಕಿನಲ್ಲಿ ಬಹಳ ಕಷ್ಟವಾದೀತೆಂದು ತಿಳಿದು ಮೊದಲೇ ಹೀಗೆ ಆಕ್ರಮಣ ಆರಂಭಿಸಿರಬೇಕು ಎರಡು ವಾರಗಳ ಹಿಂದೆ ಮಿಲ್ನೆ ಉಪಸಾಗರದಲ್ಲಿ ಜಪಾನರು ಸೈನ್ಯವನ್ನಿಳಿಸಲು ಸಾಹಸ ಮಾಡಿದರು, ಅಲ್ಲಿಂದ ಮೊರೆಸಬೆ ಬಂದರದಲ್ಲಿ ಹೊಸ ಧಾಳಿ ಪ್ರಾರಂಭಿಸಬೇಕೆಂದು ಅವರ ಅಭಿಪ್ರಾಯವಿತ್ತು ಮಿತ್ರರ ಪ್ರತಿಭಟನೆಯಿಂದ ಅದು ಸಾಧ್ಯವಾಗಲಿಲ್ಲ ಹೀಗೆ ನಿರಾಶೆಗೊಂಡ ಜಪಾನರು ಬೂನಾ, ಕಕೋಡಾ ಪ್ರದೇಶಗಳಿಂದ ಆಕ್ರಮಿಸಲು ಆರಂಭಿಸಿರುವರು ಓವೆನ್ ಸ್ಟಾನ್ಲೆ ಕಣಿವೆ ಕಡೆಗೆ ಈಗಾಗಲೇ ಜಪಾನರ ಈ ಸೈನ್ಯ ಬಂದಿದೆ ಇಲ್ಲಿಂದ ಮೊರೆಸಬಿ ಬಂದರ ಕೇವಲ 40 ಮೈಲು ದೂರದಲ್ಲಿದೆ. ಆ ಕಣಿವೆಯನ್ನು ದಾಟಿ ಮುಂದೆ ಬರುವುದು ಬಹಳ ಕಷ್ಟ ಅಂತೂ ಬೇಗನೇ ನ್ಯೂಗಿನಿಯಲ್ಲಿ ಭಾರೀ ಯುದ್ಧವಾಗುವ ಸಂಭವವಿದೆ.

ಚೀನದ ಪೂರ್ವತೀರದ ಚೆಕಿಯಾಂಗ್ ಕಿಯಂಗಸಿಯಲ್ಲಿಯೂ ಮಹತ್ವದ ಸಂಗ್ರಾಮ ಸಾಗುತ್ತಿದೆ. ಜಪಾನಿನ ಮೇಲೆ ಧಾಳಿಯಾಗದಂತೆ, ಹಾಗೂ ಪೂರ್ವ ಏಶ್ಯದಲ್ಲಿ ತಮ್ಮ ಸೈನ್ಯ ಸಾಮಗ್ರಿಗಳನ್ನು ಸರಾಗವಾಗಿ ಸಾಗಿಸಲು ಜಪಾನರು ಪೂರ್ವ ಚೀನದ ರೈಲ್ವೆ ರಸ್ತೆಗಳನ್ನು ವಶಪಡಿಸುವುದರಲ್ಲಿದ್ದಾರೆ ಇತ್ತೀಚೆಗೆ ಜಪಾನ್ ಸೈನ್ಯವು ಉತ್ತರ ಚೀನ ಮಂಚುಕೋವ್ ಗಡಿನಾಡುಗಳಿಗೆ ಸಾಗಿದೆಯೆಂದು ಸುದ್ದಿ ಸೈಬೇರಿಯದ ಮೇಲೆ ಜಪಾನರ ಆಕ್ರಮಣ ವಾರ್ತೆ ಬಹಳ ಕಾಲದಿಂದಲೇ ದುಮುದುಮಿಸುತ್ತಿದೆ.

ರಕ್ಷಣೆ ಮಾತ್ರವಲ್ಲ?

ಇದುವರೆಗೆ ಬ್ರಿಟನು ಅಮೆರಿಕಗಳು ರಕ್ಷಣೆ ಮಾತ್ರದ ಸಮರ ವ್ಯವಹಾರ ಮಾಡಿದ್ದರು, ಇನ್ನು ಮುಂದೆ ವೈರಿಯ ಮೇಲೆ ಆಕ್ರಮಣ ಮಾಡುವ ತರೋಣವನ್ನು ಮಾಡುವೆವೆಂದು ಇತ್ತೀಚೆಯ ಚರ್ಚಿಲ್ ರೂಸ್‌ವೆಲ್ಟ್‌ದ್ವಯರ ಭಾಷಣಗಳಿಂದ ಸ್ಪಷ್ಟವಾಗುತ್ತದೆ ಅಂತೂ ಜರ್ಮನಿಯನ್ನು ಇದುವರೆಗೆ ಆಕ್ರಮಿಸಲು ಬಿಟ್ಟು, ಅಸುರ ಶಕ್ತಿ ಕುಂದುತ್ತಾ ಬರುತ್ತಿರುವಾಗ ಹೀಗೆ ಯುದ್ಧದ ನಾಲ್ಕನೆಯ ವರ್ಷದಲ್ಲಿ ವೈರಿಯ ಮೇಲೆ ಆಕ್ರಮಣ ಮಾಡಬೇಕೆಂದು ಮಿತ್ರರು ಈಗ ಮನವಮಾಡಿದ್ದು ಸಂತೋಷದ ಸಂಗತಿಯೇ ಆಗಿದೆ ಅಂತೂ ದ್ವಿತೀಯ ರಣರಂಗವನ್ನು ತೆರೆವ ವಿಚಾರವು ಈಗ ಏನೂ ಕಂಡುಬರುವುದಿಲ್ಲವೆಂಬುದು ಖಚಿತ ಇತ್ತೀಚೆಗೆ ಆ ಮಾತುಕತೆಯನ್ನೇ ಅನೇಕರು ಬಿಟ್ಟುಬಿಟ್ಟಿದ್ದಾರೆ. ಅಂತೂ ಆಕ್ರಮಣ ಮಾಡುವುದಿದ್ದರೆ, ಜರ್ಮನಿ ಮೇಲೆ, ಜರ್ಮನ್ ಆಕ್ರಮಿತ ಪ್ರದೇಶಗಳ ಮೇಲೆ ಬ್ರಿಟಿಷ್ ಅಮೆರಿಕನ್ ವಿಮಾನಗಳು ಸಾಗುವ ಸಾಹಸಕ್ಕೆ ಬೇಗನೇ ತೊಡಗಬೇಕು ಹೀಗೆ ಮಿತ್ರರು ಆಕ್ರಮಣ ಕಾರ್ಯದ ಸಿದ್ಧತೆಯಲ್ಲಿರುವಾಗ ರಶ್ಯದ 'ಇತಿಶ್ರೀ ಯಾಗಿ ಬಿಡುವುದೇ' ಎಂದು ಹಲವರು ನಿಟ್ಟುಸಿರಿಡುತ್ತಾರೆ ರಶ್ಯವನ್ನು ರಕ್ಷಿಸುವಂತೆ ಮಿತ್ರರ ಆಕ್ರಮಣ ಕಾರ್ಯಕ್ರಮ ತೀವ್ರದಲ್ಲಿ ತೊಡಗಿದ್ದರೆ ಬಹಳ ಉಪಕಾರವಿತ್ತು. ರಶ್ಯವು ಸೋದರೆ ಒಂದು ಜೀವಂತ ಜನಾಂಗವೇ ಅಳಿದು ಹೋದಂತೆ, ಒಂದು ಸಂಸ್ಕೃತಿಯೇ ನಾಶವಾದಂತೆ ಆಗುವುದು, ಮಿತ್ರರು ಹೃತ್ಪೂರ್ವಕ ಸಾಹಸಮಾಡಿದರೆ ಅಂಥಾ ಗಂಡಾಂತರವನ್ನು ತಪ್ಪಿಸಲೂಬಹುದು

ಎಂದು ಕೊನೆಗೊಂಡೀತು?

ಈ ಘೋರ ಮಹಾಯುದ್ಧವು ಎಂದು ಕೊನೆಗೊಂಡೀತು? ಮೊದಲನೆಯ ಮಹಾಯುದ್ಧದ ಇತಿಹಾಸವು ಈ ಸಲವೂ ಪುನರಾವರ್ತಿತವಾಗುವುದೆ? ಕಳೆದ ಸಲದಂತೆ, ಸದ್ಯ ಪ್ರಾರಂಭವಾದ ನಾಲ್ಕನೆಯ ವರ್ಷದಲ್ಲಿ ಯುದ್ಧದ ಇತಿಮಿತಿಯು ನಿಶ್ಚಯವಾದೀತೆ? ಅಂದು 1914ರಿಂದ ತೊಡಗಿ ಮುಂದಿನ ವರ್ಷಗಳಲ್ಲಿ ಜಯದಿಂದ ವಿಜಯದ ಕಡೆಗೆ ಧಾವಿಸುತ್ತಿದ್ದ ಜರ್ಮನರು 1918ರಲ್ಲಿ ನೆಲಕ್ಕಪ್ಪಳಿಸಿ ಹೋದರು ಅಂತೆ, 1943ನೆಯ ಇಸವಿಯಲ್ಲಿಯೂ ಆದೀತೆ? ಹೀಗೆ ಹಲವರು ತರ್ಕಿಸುತ್ತಿದ್ದಾರೆ. ಕೆಲವರು ಕಾರಣ ಕೊಡಲು ಸಾಧ್ಯವಿಲ್ಲದಿದ್ದರೂ ಹಿಂದಿನ ಇತಿಹಾಸವು ಪುನಃ ಆವೃತ್ತಿಯಾದೀತೆಂದೇ ನಂಬಿದ್ದಾರೆ. ಕೆಲವರು, ನಿಷ್ಕಾರಣವಾಗಿಯೂ ಸಕಾರಣವಾಗಿಯೂ ಮುಂದೆ ಹಿಂದಿನದಕ್ಕಿಂತಲೂ ಮಹಾ ವಿಪತ್ತು ಕಾದಿದೆಯೆಂದು ಕನವರಿಸುತ್ತಿದ್ದಾರೆ.

1943ರ ಒಳಗೆ ಯುದ್ಧವು ಕೊನೆಗಾಣಲಾರದೆಂದು ಹೇಳುವುದಕ್ಕೂ ಏನೂ ಆಧಾರವಿಲ್ಲ ಆದರೆ ಇಂದು ರಶ್ಯದಲ್ಲಿ ಕಾಕಸಸ್ ಸ್ಟಾಲಿನ್ ಗ್ರಾಡ್‌ಗಳಲ್ಲಿ ಹೋರಾಡುತ್ತಿರುವ ಹಿಟ್ಲರನು, ಅದನ್ನು ಸ್ವಾಧೀನಪಡಿಸಿಕೊಂಡ ಬಳಿಕ ಮತ್ತೊಂದು ಪ್ರಬಲ ಆಕ್ರಮಣಕ್ಕೂ ಸಿದ್ಧತೆಮಾಡಿರಬಹುದೆಂದು ಇಂದಿನ ಅವನ ರಣರಭಸವನ್ನು ನೋಡಿದರೆ ಊಹಿಸಬಹುದು ಅಂತೂ ಕಾಕಸಸ್ ಯುದ್ಧದ ಕಾಲದಲ್ಲಿಯೇ ಅವನಿಗೆ ಪ್ರಬಲ ಪ್ರತಿಭಟನೆಕೊಟ್ಟರೆ ಮುಂದಿನ ಸಾಹಸ ಮಾಡಲಾರದೆ ಮಾಗ್ಗುರಿಸಿ ಬೀಳಲೂಬಹುದು ಹಿಟ್ಲರನಿಗೇನೋ ಬ್ರಿಟನಿನ ಮೇಲೆ ಬೀಳುವುದೊಂದು ಮಹತ್ವಾಕಾಂಕ್ಷೆ ಬಹಳ ಕಾಲದಿಂದ ಇದ್ದದ್ದು ಅದು ಆರಂಭದಲ್ಲಿ ಬಹಳವಾಗಿದ್ದು ಮಧ್ಯೇ ಆ ಕುರಿತು ಮಾಡಿದ ಪ್ರಯತ್ನಗಳು ವ್ಯರ್ಥವಾದುದರಿಂದ ರಶ್ಯದ ಕಡೆಗೆ ತಿರುಗಿ ಹೋದನು ಪುನಃ ಈಗ ರಶ್ಯದ ಯುದ್ಧ ಮುಗಿಸಿ ಬ್ರಿಟನಿನ ಮೇಲೆ ಆತನು ಬೀಳಲು ಹೊರಡುವ ಸಂಭವವಿದೆ ಆಗ ನೋಡಬೇಕು ಯಾರ ಪರಾಕ್ರಮ ಜಗುವುದೆಂದು, ಎಂದ ಭೂಕಂಪವಾಗಿ ಏನು ಬದಲಾವಣೆಯುಂಟಾಗುವುದೆಂದು, ಯಾರು ಗೆದ್ದು ಎಂಥಾ ಪ್ರಭುತ್ವ ಪ್ರಸ್ಥಾಪಿತವಾಗುವುದೆಂದು ಬ್ರಿಟನಿನ ಮೇಲೆ ಹಿಟ್ಲರನು ಇನ್ನೊಂದು ಕೊನೆಯ ಸಾಹಸ ಮಾಡುವನೆಂದೂ, ಅದರಲ್ಲಿ ಯುದ್ಧದ ಕೊನೆಯ ನಿರ್ಣಯ ನಿರ್ಣಯವಾಗುವುದೆಂದೂ ನಮ್ಮ ಇಂದಿನ ಊಹೆಯಾಗಿದೆ

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡಯಬಹುದು.

CANARA BANK, LIMITED.

ESTD: 1906

NOTICE BY SUBSTITUTED SERVICE.

In the Court of the District Munsiff of Mangalore

O S. No 252/1942.

Between

Devakiamma — *Plaintiff*

and

Krishna Bhatta & others — *Defendants*

To

Deft - 4. Krishna Bhatta, son of Mullunja Ganapathy Bhatta, 5 Narayana Bhatta, son of Mullunja Ganapathy Bhatta, Both are residing in Nadu village, Mangalore Taluk

Whereas the plaintiff has filed the above suit for recovery of Rs 2956-7-5 being the principal amount with interest upto 14-6-1942 in respect of the plaint mortgage together with future interest and costs of suit with interest, and that the suit is posted to 23-9-1942 at 11 a m for hearing in the above Court. You may appear in person or by pleader on the said date and contest the suit, failing which the same will be heard and decided exparte.

Mangalroe, 12-9-1942. — K Keshava Kamath, Vakil for plaintiff.

ಯಾದ ಕಮ್ಯೂನಿಸ್ಟ್ ನಾಯಕ ಸ್ಟಾಲಿನ ರೊಡನೆ ಹೊಸ ಗೆಳೆತನ ಬೆಳೆಸಿ ಕೈಕುಲುಕಿ ಬಂದಿದ್ದಾರೆ! ಹೀಗಿದ್ದರೂ ತನ್ನ ಮಿತ್ರ ರಾಷ್ಟ್ರವಾದ ಭಾರತದ ವಿಷಯ ಇನ್ನೂ ಅವರ ಹೃದಯ ಕರಗದಿರುವುದು ಏನೋ ದೌರ್ಭಾಗ್ಯವಿರಬೇಕು.

ಸ್ವದೇಶಾಭಿಮಾನಿ

ತಾರೀಕು 18—9—1942

ಚರ್ಚಿಲ್ ಹೇಳಿದರು

ಭಾರತದ ಪರಿಸ್ಥಿತಿಯ ಕುರಿತು ಪಾರ್ಲಿಮೆಂಟಿನಲ್ಲಿ ಈ ವಾರ ಚರ್ಚಿಲರೊಂದು ಹೇಳಿಕೆ ಕೊಟ್ಟರು. ಅದರಿಂದ ಭಾರತ ಬ್ರಿಟನುಗಳ ಮಿತ್ರರನೇಕರು ಬಹಳ ನಿರಾಶೆಗೊಂಡರು. ಚರ್ಚಿಲರಷ್ಟು ಹೊಣೆಗಾರಿಕೆ ಹೊತ್ತ ಮುಂದಾಳುಗಳೊಬ್ಬರು ಇಂದಿನ ಕಾಲದಲ್ಲಿಯೂ ಆ ತರದ ಮಾತುಗಳನ್ನು ಹೇಳುವುದು—ಭಾರತೀಯರ ಸ್ವಾತಂತ್ರ್ಯಾಕಾಂಕ್ಷೆಯನ್ನು ಖಂಡಿಸುವುದು ಕೇವಲ ವಿಷಾದಕರವಾಗಿದೆ.

ಭಾರತದಲ್ಲಿ ಆಗುತ್ತಿರುವ ಚಳವಳವು ಶತ್ರು ಪಕ್ಷಪಾತಿಗಳಿಂದ ನಡೆಯುತ್ತಿದೆ ಎಂದು ಚರ್ಚಿಲರು ಸಾರಿದರು. ಗಾಂಧಿಜಿ ಶತ್ರು ಪಕ್ಷಪಾತಿಯಾಗಿ ಚಳವಳ ಆರಂಭಿಸುತ್ತಾರೆಂಬರ್ಥದ ಪ್ರಚಾರವೊಂದು ಮೊನ್ನೆ ಮೊನ್ನೆ ಇಂಡಿಯಾ ಸರಕಾರದಿಂದಲೂ ಹೊರಟಿತ್ತು; ಸಮಗ್ರ ಭಾರತವೇ ಅಂಥ ಪ್ರಕಟಣೆಯನ್ನು ಅಲ್ಲಗಳೆದಿದ್ದರೂ ಚರ್ಚಿಲರು ಪುನಃ ಅದೇ ರಾಗಕ್ಕೆ ಶ್ರುತಿ ಕೊಟ್ಟಿದ್ದಾರೆ!

ಕ್ರಿಪ್ಸ್ ಸೂಚನೆ ಇನ್ನೂ ಇದೆಯೆನ್ನುತ್ತಾರೆ ಅವರು; ಅದೇ ಬ್ರಿಟನಿನ ಉದಾರತೆಯ ಕೊನೆಯ ದಾನವಂತೆ! ಕ್ರಿಪ್ಸ್ ಸೂಚನೆಯನ್ನು ಅದು ನಿಷ್ಪ್ರಯೋಜಕವೆಂದು ಕಾಂಗ್ರೆಸು ಮಾತ್ರ ನಿರಾಕರಿಸಿದ್ದಲ್ಲ; ಭಾರತದ ಪ್ರಮುಖ ಪಂಗಡಗಳೆಲ್ಲವೂ ಅಲ್ಲಗಳೆದಿವೆಯೆಂಬೀ ವಿಷಯವನ್ನು ಚರ್ಚಿಲರು ಇದುವರೆಗೂ ತಿಳ ಕೊಳ್ಳದಿರುವುದು ಒಂದು ಆಶ್ಚರ್ಯಕರ ವಿಷಯ!

ಕಾಂಗ್ರೆಸು, ಭಾರತದ ಪ್ರತಿನಿಧಿ ಸಂಸ್ಥೆಯಲ್ಲವೆನ್ನುತ್ತಾರೆ ಚರ್ಚಿಲ್! ಹಿಂದುಗಳ ಸಿಕ್ಖರ, ಮುಸ್ಲಿಮರ ಕ್ರಿಶ್ಚಿಯನರ ಪಂಗಡಗಳಿರುವವೆಂದು ಪಕ್ಷ ಪಂಗಡಗಳ ಕಡೆಗೆ ಬೆರಳು ತೋರಿಸಿ ಸ್ವಾತಂತ್ರ್ಯದ ಕೇಳಿಕೆಗೆ ಬಾದಿ ಹಾಕುತ್ತಾರೆ ಅವರು! ಭಾರತದಲ್ಲಿರುವ ಯಾವುದೇ ಪಕ್ಷವಾಗಲಿ ಸ್ವಾತಂತ್ರ್ಯದ ಬೇಡಿಕೆಗೆ ಪುಷ್ಟಿ ಕೊಡದವುಗಳಿಲ್ಲ; ಹಾಗಿರುವಾಗ ಇತರ ಪಕ್ಷಗಳನ್ನು ಸಮಾಧಾನ ಪಡಿಸಲು ಚರ್ಚಿಲ್ ಸರಕಾರ ಏನು ಮಾಡಿದೆಯೋ ನಮಗೆ ತಿಳಿಯದು!

ಇಂದಿನ ಯುದ್ಧದಿಂದ ಪ್ರಕೃತಿಯಲ್ಲಿ ಏಷ್ಟೋ ಬದಲಾವಣೆಯಾಗಿದೆ. ಏಕೆ, ಚರ್ಚಿಲರಲ್ಲಿಯೇ ಅಂತಹ ಕೆಲವು ಬದಲಾವಣೆ ಆದುದು ಕಂಡುಬರುತ್ತದೆ. ಸಮತಾವಾದೀ ರಶ್ಯದ ಕುರಿತು "ಕಮ್ಯುನಿಸಮಿ"ನ ಕುರಿತು ಬದ್ಧ ವೈರಿಯಾಗಿದ್ದ ಚರ್ಚಿಲರು ಕಮ್ಯುನಿಸ್ಟರೊಡನೆ ರಾಜಿ ಮಾಡಿಕೊಂಡರು; ಮೋಸ್ಕೋ ವರೆಗೆ ಮೊನ್ನೆ ಮೊನ್ನೆ ಧಾವಿಸಿ ಪ್ರಾಚೀನ ವೈರಿ

ಸೇವಾ ಗ್ರಾಮಕ್ಕೆ ಗಾಂಧಿಯವರ ತಂತಿ

ಶ್ರೀ ದೇಸಾಯಿಯವರ ಬಗ್ಗೆ ಸಂತಾಪ

ಶ್ರೀ ಮಹದೇವ ದೇಸಾಯಿಯವರು ಹೃದಯಸ್ತಂಭನದಿಂದ ವಿಧಿವಶರಾದಾಗ ಮಹಾತ್ಮಾ ಗಾಂಧಿಯವರು ಬಹಳ ಚಕಿತರಾದರು. ಕೊನೆಗೆ ಶ್ರೀಮತಿ ದುರ್ಗಾದೇಸಾಯಿಯವರಿಗೆ ಸಮಾಧಾನಕರ ಒಂದು ತಂತಿಯನ್ನು ಸೇವಾಗ್ರಾಮಕ್ಕೆ ಕಳಿಸಿದರು. ಅದು ಈಗ ಪ್ರಕಟವಾಗಿದೆ.

'ಮಹದೇವ್ ದೇಸಾಯಿಯವರು ಆಕಸ್ಮಾತ್ ವಿಧಿವಶರಾದರು. ಹೀಗಾಗಬಹುದೆಂದು ನಾನು ಎಂದೂ ಎಣಿಸಿರಲಿಲ್ಲ. ನೊದಲನೆ ರಾತ್ರಿ ಅವರು ಬಹಳ ಚೆನ್ನಾಗಿ ನಿದ್ರೆ ಮಾಡಿದ್ದರು. ಬೆಳಗ್ಗಿನ ಉಪಹಾರವನ್ನು ಸ್ವೀಕರಿಸಿ ನನ್ನ ಸಂಗಡ ತಿರುಗಾಡಿದ್ದರು; ಅವರ ಸ್ಥಿತಿ ಸರಿಯಾಗಿಲ್ಲವೆಂದು ಗೊತ್ತಾದಾಗ ಡಾ। ಸುಶೀಲಾರವರು, ಜೈಲಿನ ಡಾಕ್ಟರರೂ ತಮ್ಮ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡಿದರು. ದೈವೇಚ್ಛೆ ಬೇರೆಯಾಗಿದ್ದಿತು. ನಾನು, ಸುಶೀಲಾ ಇಬ್ಬರೂ ಅವರ ಶವವನ್ನು ಸ್ನಾನಮಾಡಿಸಿದೆವು. ಧೂಪವನ್ನು ಹಾಕಿದ್ದೇವೆ. ನಾನೂ, ಸುಶೀಲಾ ಇಬ್ಬರೂ ಗೀತಾ ಪಾರಾಯಣ ಮಾಡಿದೆವು. ಚಿಂತೆಪಡಬೇಕಾದ ಕಾರಣವೇನೂ ಇಲ್ಲವೆಂದು ದುರ್ಗಾ, (ದೇಸಾಯಿಯವರ ಪತ್ನಿ) ಬಾಬ್ಲಾ (ದೇಸಾಯಿಯವರ ಪುತ್ರ) ಸುಶೀಲಾ (ದೇಸಾಯಿಯವರ ಸೋದರರ ಪುತ್ರಿ) ಅವರಿಗೆ ತಿಳಿಸಬೇಕು. ನನ್ನ ಸಮ್ಮುಖದಲ್ಲಿಯೇ ಶವಸಂಸ್ಕಾರ ನಡೆಯಿತು. ದುರ್ಗಾ ಬೆನ್ ಆಶ್ರಮದಲ್ಲಿಯೇ ಇರುವಂತೆ ಸೂಚಿಸಬೇಕು. ಒಂದು ವೇಳೆ ಅವರು ತಮ್ಮ ಬಂಧುಗಳ ಹತ್ತಿರ ಹೋಗಲಿಷ್ಟಪಟ್ಟರೆ ಹೋಗಲಿ. ಬಾಬ್ಲಾ ಧೈರ್ಯದಿಂದ ಇರಬಹುದೆಂದು ಆಶಿಸುತ್ತೇನೆ. ನಲ್ಮೆಯೊಡನೆ, ಬಾಪು.

"ಆಪ್ ಕಾ ದರ್ಶನ್ ಸರಕಾರ್"

ನೆಹರು ಮತ್ತು ಸೈನಿಕರು—

ತ್ರಿವೇಣಿ ಸಂಗಮದ ಪ್ರಯಾಗದಲ್ಲಿ ಸ್ನಾನ ಮಾಡಿಕೊಂಡು, ಪಂಡಿತ ಜವಾಹರಲಾಲ ನೆಹರು ತಮ್ಮ ಭಾವಂದಿರಾದ ಶ್ರೀ ಆರ್. ಎಸ್. ಪಂಡಿತರೊಡನೆ ಕುದುರೆ ಬಂಡಿಯಲ್ಲಿ ಕುಳಿತು ಅವರ ಬಂಧನಕ್ಕೆ ಒಂದು ವಾರದ ಹಿಂದೆ, 'ಆನಂದ ಭವನ'ದ ಕಡೆ ಬರುತ್ತಿದ್ದರು. ಗಾಡಿಯ ಎರಡು ಕಡೆಗಳಲ್ಲಿಯೂ ಮಕ್ಕಳು ಆಡಿ ಹಾಡಿ ಕುಣಿಯುತ್ತಿದ್ದರು. ಗಾಡಿ ನಿಲ್ಲಿಸಿ ನೆಹರು ಅವರಿಗೆಲ್ಲಾ ಹೂಗಳನ್ನು ಹಂಚಿದರು; ಗಾಡಿ ಹೊರಟಿತು; ಮಕ್ಕಳು ಸಂತೋಷದಿಂದ ಘೋಷ ಮಾಡಿದರು.

ಇನ್ನೂ ಒಂದು ಫರ್ಲಾಂಗು ಸಾಗಿರಲಿಲ್ಲ. ಜನರ ಗುಂಪೊಂದು ಬಂದು ಗಾಡಿಯ ಸುತ್ತು ನೆರೆಯಿತು; ಎಲ್ಲಾ ಬಡಜನರು, ಯುದ್ಧಕಾಲದ ಸಂಕಷ್ಟಗಳನ್ನು ನೆಹರುಗಳಲ್ಲಿ ದೂರಿಕೊಂಡರು, ನೆಹರು ಮೌನವಾಗಿ ಕೇಳಿ ಕೊನೆಗೆ ದುಃಖ ಭಾರವಾದ ಹೃದಯದಿಂದ 'ನಾನೀಗ ಏನು ಮಾಡಲೂ ಸಾಧ್ಯವಿಲ್ಲ; ಬೇಗನೇ ಹೊಸ ವ್ಯವಸ್ಥೆ ಆಗಲಿದೆ' ಎಂದರು. ಗಾಡಿ ಹೊರಟಿತು; ಜನರೂ ಜಯ ಘೋಷ ಮಾಡಿದರು.

ಹಿಂಬದಿಯಿಂದ ಒಂದು ಲಾರಿ ಹಾದು ಹೋಯಿತು. ಲಾರಿ ತುಂಬ ಭಾರತೀಯ ಸೈನಿಕರಿದ್ದರು. ನೆಹರುಗಳನ್ನು ಕಂಡವರೇ ನಮಸ್ಕರಿಸಿದರು. ಲಾರಿ ನಿಂತಿತು. ಸೈನಿಕರು ಲಾರಿಯಿಂದ ದಢದಢನೆ ಇಳಿದು ಪಂಡಿತರ ಪಾದಗಳಿಗೆರಗಿದರು. ನೆಹರು ಸೈನಿಕರ ತಲೆಗಳ ಮೇಲೆ ಕೈಯನ್ನಿರಿಸಿ ಮೃದು ವಾಣಿಯಲ್ಲಿ "ಕ್ಯಾ ಹೈ ಭಾಯ್" (ಏನು ಸೋದರರೆ?) ಎಂದು ವಿಚಾರಿಸಿದರು. "ಕುಛ್ ನಹೀ ಸರಕಾರ್, ಆಪ್ ಕಾ ದರ್ಶನ್" (ಏನಿಲ್ಲ ಸರಕಾರ್ ನಿಮ್ಮ ದರ್ಶನ ಬೇಕಿತ್ತು.) ಎಂದು ಉತ್ತರ ಬಂತು. ಒಂದು ನಿಮಿಷ ಎಲ್ಲರೂ ಮೌನವಾಗಿದ್ದರು. ಮತ್ತೆ ಜಟಕಾ ಹೊರಟಿತು.

ದಮ್ಮುಗುಣ ಪಡಲೇಬೇಕು ಎಂದು ಡಾಕ್ಟರರು ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದು ಕೊಳ್ಳಹತ್ತಿದ್ದ ಕೂಡಲೇ ಕೆಮ್ಮು ನಿಲ್ಲುವದು. ಶೌಚದ ತೊಂದರೆ ಉಳಿಯುವದಿಲ್ಲ. ಪಚನಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨—೮—೦. ರೂ. ೪—೨—೦. ರೂ. ೭—೦—೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬೈ ಏಜಂಟ — ಮೆಸರ್ಸ, ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಮಂಗಳೂರು

ಮಂಗಳೂರಲ್ಲಿ 144 ಸೆಕ್ಷನ್

ತಾ. ೧೮ ಮೊದಲ್ಗೊಂಡು ೩ ತಿಂಗಳ ವರೆಗೆ ಮಂಗಳೂರಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿರುವುದಾಗಿ ತಿಳಿದಿದೆ.

ಮುನ್ಸಿಪಲ್ ಮೀಟಿಂಗ್

ಸ್ಥಳೀಯ ಮುನಿಸಿಪಲ್ ಕೌನ್ಸಿಲಿನ ಮೀಟಿಂಗ್ ಅದರ ಕಾರ್ಯಾಲಯದಲ್ಲಿ ಇದೇ ತಾ. ೧೯ನೇ ಶನಿವಾರ ಸಂಜೆ ಗಂಟೆ ೩॥ಗೆ ಜರಗುವುದು.

ನಿಷೇಧ ರಾಜಿನಾಮೆ

ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸಿ ಶ್ರೀ ಮದ್ರಾಸು ಸರಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಎ. ಬಿ. ಶೆಟ್ಟಿ, ಎಂ. ಎಲ್. ಎ. ಇವರು ತನ್ನ ಶಾಸನ ಸಭಾ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು.

ಅದೇ ನಿಮಿತ್ತ ಉಡುಪಿ ಯುದ್ಧ ಸಮಿತಿ ಸದಸ್ಯತ್ವಕ್ಕೆ ಶ್ರೀಗಳಾದ ಡಾ। ಸುಂದರರಾಮಯ್ಯ, ಡಾ। ಟಿ. ಮಾಧವ ಪೈ, ಶ್ರೀ. ಆರ್. ಫೆರ್ನಾಂಡಿಸ್ ಮತ್ತು ಶ್ರೀ. ಪಿ. ರಾಮಕೃಷ್ಣರಾವ್ ಇವರು ರಾಜಿನಾಮೆಯಿತ್ತಿರು.

ಅದೇ ಕಾರಣಕ್ಕಾಗಿ ಶ್ರೀ. ಆಗ್ರಾಲ ಪುರಂದರ ರೈಗಳು ಪುಣಚಾ ಪಂಚಾಯತ ಬೋರ್ಡಿನ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು.

ಅದೇ ಉದ್ದೇಶದಲ್ಲಿ ಬೆಳ್ಮಾರೆ ಪಂಚಾಯತ ಬೋರ್ಡಿನ ಅಧ್ಯಕ್ಷರಾದ ಶ್ರೀ. ಕೆ. ಶಿವರಾಮಯ್ಯ ಮತ್ತು ಜನಾಬ್ ಪಿ. ಕೆ. ಅಬ್ದುಲ್ಲಾ ಬ್ಯಾರಿ ಮೊದಲಾದ ಏಳುಮಂದಿ ಸದಸ್ಯರೂ ತಮ್ಮ ಆಸ್ಥಾನಗಳಿಗೆ ರಾಜಿನಾಮೆಯಿತ್ತಿದ್ದಾರೆ.

ಪಿಕೆಟಿರುಗಳಿಗೆ ದಂಡನೆ

ಸ್ಥಳೀಯ ಕೋರ್ಟುಗಳ ಬಳಿ ಈಚೆಗೆ ಪಿಕೆಟಿಂಗ್ ನಡೆಸಿ ಕೈದಾಗಿದ್ದ ೩೮ ಮಂದಿಯ ವಿಚಾರಣೆಯನ್ನು ಇಲ್ಲಿಯ ಸಬ್ ಡಿ। ಮ್ಯಾಜಿಸ್ಟ್ರೇಟ್ ಶ್ರೀ. ಜೋಗಪ್ಪ ಇವರು ಸ್ಥಳೀಯ ಸಬ್ ಜೈಲಲ್ಲಿ ನಡೆಸಿ, ಇಂಡಿಯಾ ರಕ್ಷಣೆಯ ಕಾನೂನಿನ ಬೇರೆ ಬೇರೆ ಪ್ರಕರಣಗಳಂತೆ ಅವರಲ್ಲಿ ಪ್ರತಿಯೊಬ್ಬರಿಗೂ ೬ ತಿಂಗಳ ಕಠಿಣ ದಂಡನೆ ವಿಧಿಸಿರುವರು. ಇವರದು 'ಸಿ' ಕ್ಲಾಸು. ಇವರನ್ನು ಆಲಿಪುರಂ ಜೈಲಲ್ಲಿ ಇರಿಸುವಂತೆ ತಿಳಿದುಬಂದಿದೆ.

ಶಿಕ್ಷೆಗೆ ಗುರಿಯಾದವರು ಕೆಳಗಿನವರು. ೧. ಕೆ. ಶೇನ ಶೆಟ್ಟಿ, ೨. ಕೆ. ಸದಾಶಿವ ಕಾರಂತ, ೩. ದಾಮೋದರ ಪ್ರಭು, ೪. ಲಕ್ಷ್ಮಣ ಕಾಮತ್, ೫. ಶ್ರೀನಿವಾಸ ಶಾನುಭೋಗ್, ೬. ವಾಸುದೇವ ಬಾಳಿಗಾ, ೭. ಸಂಕಪ್ಪ, ೮. ವಾಸುದೇವ ಕಾಮತ್ ೯. ಕೆ. ಶ್ರೀನಿವಾಸ ಪ್ರಭು, ೧೦. ಉಪೇಂದ್ರ ಪೈ, ೧೧. ಕಮಲಾಕ್ಷ ಕಾಮತ್, ೧೨. ನಾಗೇಶಾಚಾರ್, ೧೩. ಆನಂದ ತಿಂಗಳಾಯ, ೧೪. ಕೆ. ಭೋಜ, ೧೫. ವೈ. ವಿಠ್ಠಲ ಶೆಟ್ಟಿ, ೧೬. ಯೋಗೀಶ್ವರ ಹೊಳ್ಳ ೧೭. ತಿಮ್ಮಣ್ಣ ಭಟ್ಟ, ೧೮. ರಾಮಚಂದ್ರ ಭಟ್ಟ, ೧೯. ಗೋಪಾಲಕೃಷ್ಣ ಭಟ್ಟ, ೨೦. ಶೇಷಗಿರಿ ಶೆಣೈ, ೨೧. ಕೆ. ಗೋವಿಂದ ಭಟ್ಟ, ೨೨. ರೋಹಿದಾಸ ಪೈ, ೨೩. ಕೆ. ಕೃಷ್ಣ, ೨೪. ಯು. ಬಿ. ರಾಮರಾವ್, ೨೫. ನರಸಿಂಹ ಹೊಳ್ಳ, ೨೬. ದಾಮೋದರ ಶೆಣೈ ೨೭. ಸತ್ಯೇಂದ್ರ ನಾಯಕ್, ೨೮. ಎಂ. ಹರೀಂದ್ರನಾಥ.

ಪಂಚಾಯಿತ ಬೋರ್ಡಿನವರ ರಾಜಿನಾಮೆ

ಉಪ್ಪಿನಂಗಡಿ ಪಂಚಾಯಿತ ಬೋರ್ಡಿನ ಅಧ್ಯಕ್ಷೆಯರಾದ ಶ್ರೀಮತಿ ಲಕ್ಷ್ಮೀ, ಬಿ. ಪಿ. ರೈ ಅವರೂ ಬೋರ್ಡಿನ ಇತರ ಮೆಂಬರರೂ ತಮ್ಮ ಸ್ಥಾನಗಳಿಗೆ ರಾಜಿ ಕೊಟ್ಟಿರುವರು. ಸರಕಾರದ ದಮನ ನೀತಿಯ ನಿಷೇಧ ಪ್ರದರ್ಶನಕ್ಕಾಗಿ ಈ ರಾಜೀನಾಮೆ ಎಂದು ತಿಳಿದುಬಂದಿದೆ.

ದಂಡನೆ

ಬೆಳ್ತಂಗಡಿಯಲ್ಲಿ ಈಚೆಗೆ ಕೈದುಮಾಡಲ್ಪಟ್ಟ ಶ್ರೀ. ಬಿ. ವೇದವ್ಯಾಸ ಭಟ್ಟರ ವಿಚಾರಣೆ ಪುತ್ತೂರು ಸಬ್ ಡಿ। ಮ್ಯಾಜಿಸ್ಟ್ರೇಟರಾದ ಶ್ರೀ. ರಾಮುಲು ನಾಯ್ಡು ಇವರ ಮುಂದೆ ನಡೆದು, ಆರೋಪಿಗಳಿಗೆ ೬ ತಿಂಗಳ ಕಠಿಣ ಸಜೆ ವಿಧಿಸಲಾಗಿದೆಯೆಂದೂ ಅವರ ಜತೆಗಾರರಾದ ಶ್ರೀ. ಕುರುಪ್ ಅವರ ವಿಚಾರಣೆ ಇದೇ. ತಾ. ೨೧ಕ್ಕೆ ಇರಿಸಲಾಗಿದೆಯೆಂದೂ ತಿಳಿದಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಸ್ಟೂಡೆಂಟ್ಸ್ ಯೂನಿಯನ್

ಕಳೆದ ವಾರ ಕೆನರಾ ಹೈಸ್ಕೂಲಲ್ಲಿ ಇದರ ಸಭೆಯೊಂದು ಶ್ರೀ ಕೆ ಬಿ. ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಇವರ ಅಧ್ಯಕ್ಷತೆಯಲ್ಲಿ ಜರಗಿತು. ರಾಯಿಸ್ಟ್ ಪಾರ್ಟಿಯ ಶ್ರೀ ಸುಬ್ಬಯ್ಯ ಶೆಟ್ಟಿಯವರು ತಕ್ಕ ಸಮಯದಲ್ಲಿ ಈ ಸಭೆಯ ನೋಟೀಸ್ ಕೊಡದಿದ್ದುದರಿಂದಲೂ ಇದಕ್ಕೆ ಮೊದಲು ಯೂನಿಯನಿನ ಕಾರ್ಯಕಾರಿ ಸಮಿತಿಯ ಸಭೆ ನಡೆದಿರುವುದರಿಂದಲೂ ತಾವು 'ಪಾಯಿಂಟ್ ಆಫ್ ಆರ್ಡರ್'ಗಾಗಿ ಅಪೇಕ್ಷಿಸುತ್ತೇವೆ ಎಂದರು. ಶ್ರೀ ಕೆ ಪದ್ಮನಾಭನ್ ಇವರು ನೋಟೀಸು ತಕ್ಕ ಸಮಯದಲ್ಲಿ ಹೊರಟಿದೆಯೆಂದೂ ಸಭೆ ನಡೆಯಲಿಕ್ಕೆ ಇದರ ಕಾರ್ಯಕಾರಿ ಸಮಿತಿಯೇ ಅಸ್ತಿತ್ವದಲ್ಲಿ ಇರಲಿಲ್ಲವೆಂದೂ ವಿವರಿಸಿದರು ಸಭಿಕರಲ್ಲಿ ಬಹು ಸಂಖ್ಯಕರು ನೋಟೀಸ್ ತಕ್ಕ ಸಮಯದಲ್ಲಿ ಹೊರಟಿದೆ ಎಂದ ಮೇಲೆ ಪ್ರೆಸಿಡೆಂಟರು 'ರೂಲಿಂಗ್' ಕೊಟ್ಟರು. ಶ್ರೀ ಸುಬ್ಬಯ್ಯ ಶೆಟ್ಟರೂ ಇತರ ೧೦-೧೨ ಮಂದಿಯೂ ಸಭೆ ಬಿಟ್ಟು ಹೊರಟು ಹೋದರು

ಬಳಿಕ ಸರ್ವಾನುಮತದಿಂದ ಯೂನಿಯನಿನ ಕಾರ್ಯಕಾರಿ ಸಮಿತಿಯ ಮತ್ತು ಅಧಿಕಾರ ಮಂಡಲದ ಚುನಾವಣೆಯಾಯಿತು ಪ್ರೋ ಪಿ ಜೆ ಜೋಸೆಫ್ ಅಧ್ಯಕ್ಷ, ಶ್ರೀಗಳಾದ ಕೆ ಕರುಮುದ್ದೀನ್ ಉಪಾಧ್ಯಕ್ಷ, ಶ್ರೀ ಕೆ ಪದ್ಮನಾಭನ್ ಜನರಲ್ ಸೆಕ್ರೆಟರಿ, ಶ್ರೀ. ಚಂದ್ರಹಾಸ ಆಳ್ವ ಅಸಿ ಸೆಕ್ರೆಟರಿ, ಕೆ. ಬಿ. ಜಿನರಾಜ ಹೆಗ್ಗಡೆ ಎಂ ಎಲ್ ಎ ಖಜಾನ್ಜಿ, ಕೃಷ್ಣಭಂಡಾರ್ಕಾರ್ ಕಲಾವರ್ಧಕ ಶಾಖೆಯ ಕಾರ್ಯದರ್ಶಿ, ಶ್ರೀ ಶಿವಶಂಕರರಾವ್ ಸಾಮಾಜಿಕ ಸೇವಾ ಭಾಗದ ಕಾರ್ಯದರ್ಶಿ, ಶ್ರೀ ಗೋಪಾಲ ಕುಡ್ವ ವ್ಯಾಯಾಮ ಶಾಖೆಯ ಕಾರ್ಯದರ್ಶಿ ಶ್ರೀ ವಿಜಯ ಸುವರ್ಣ 'ಫ್ರೀ ಟೈಮ್ಸ್' ಪತ್ರಿಕೆಯ ಸಂಪಾದಕ ಇವರಲ್ಲದೆ ಇನ್ನು ಸುಮಾರು ೧೨ ಮಂದಿ ಮೆಂಬರರಿದ್ದರು.

ನೇಮಕ ವರ್ಗಾವರ್ಗಿ

ಪುತ್ತೂರು ತಾಲೂಕಿನ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಮಿ। ಜೂಲಿಯಾನ್ ಅರಂಞಾ ಬಿ ಎ, ಎಲ್ ಎಲ್ ಬಿ ರವರು ಎರಡು ತಿಂಗಳ ರಜೆ ಪಡೆದಿರುವದರಿಂದ ಬಂಟ್ವಾಳ ಡಿಪ್ಯುಟಿ ತಹಶೀಲ್ದಾರ್ ಶ್ರೀ ಸಿ ದೇವರಾವ್ ರವರು ಪುತ್ತೂರು ಅಸಿಸ್ಟೆಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿಯೂ, ಮಿ। ಕೆ ಹುಸ್ಸೇನ್ ಸಾಹೇಬ್ ಬಿ ಎ ರವರು ಬಂಟ್ವಾಳ ಆಕ್ಟಿಂಗ್ ಡಿಪ್ಯುಟಿ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು

ಕಾರ್ಕಳ ಸ್ಟೇಶನರಿ II ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ। ತ್ರಿಮ್ಮೆಂಬಳ ಸದಾನಂದ ಪೈ ಬಿ ಎ ರವರು ಸಾಕ್ಷಿ ರುಜುವಾತುಗಳನ್ನು ಇಂಗ್ಲಿಷಿನಲ್ಲಿ ಬರಕೊಳ್ಳಲು ಗವರ್ನಮೆಂಟಿನಿಂದ ಅಧಿಕಾರ ಹೊಂದಿರುವರು

ನಮ್ಮ ಜಿಲ್ಲೆಯವರಾದ ಶ್ರೀ। ಎಮ್ ರಾಮಚಂದರ್ ಬಿ ಎ, ಬಿ. ಎಲ್ ರವರು ಕೃಷ್ಣಾ ಜಿಲ್ಲೆಯ ಆಕ್ಟಿಂಗ್ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುವರು

ಇಲ್ಲಿಯ ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟ್ ರಾವ್ ಸಾಹೇಬ್ ಡಿ ಎನ್ ಗೋಪಾಲ ಅಯ್ಯರ್‌ರವರು ಅನಂತಪುರ ಜಿಲ್ಲೆಯ ಡಿಪ್ಯುಟಿ ಸುಪರಿಂಟೆಂಡೆಂಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ.

ದ. ಕ. ಜಿಲ್ಲಾ ಬೋರ್ಡ್ ಸಭೆ
ಕಾಂಗ್ರೆಸ್ ಪಾರ್ಟಿ ಬೋರ್ಡ್ ಮೆಂಬರರ
ಪ್ರೆಸಿಡೆಂಟರ ರಾಜಿಕೊಡುವ ನಿರ್ಧಾರ

ಕಳೆದ ಶನಿವಾರ ದ. ಕ ಜಿಲ್ಲಾ ಬೋರ್ಡ್ ಆಫೀಸಿನಲ್ಲಿ, ಬೋರ್ಡ್ ಸಭೆಯು ಅದರ ಅಧ್ಯಕ್ಷರಾದ ಡಾ ಕೆ. ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮತಃ ಅಧ್ಯಕ್ಷರು ಈ ಜಿಲ್ಲಾ ಬೋರ್ಡಿನ, ಮುಖ್ಯ ಪಂಚಾಯತುಗಳ ೧೯೪೦-೪೧ನೇ ಇಸ್ವಿಗೆ ಸಂಬಂಧಿಸಿದ ಆಡಳಿತೆ ವರದಿಯ ಕೆಲ ಮುಖ್ಯಾಂಶಗಳನ್ನೋದಿದರು. ಅನಂತರ ಬೋರ್ಡಿನ ಮೆಂಬರರಾದ ಶ್ರೀ. ಎ. ನಾಗಪ್ಪಯ್ಯ ಅವರು ಬೋರ್ಡಿನ, ಪ್ರೆಸಿಡೆಂಟರ ದಕ್ಷತೆಯ ಆಡಳಿತವನ್ನೂ, ಕಾರ್ಯಕಲಾಪಗಳನ್ನೂ ಪ್ರಶಂಸಿಸುವ ಒಂದು ಠರಾವನ್ನು ಮಂಡಿಸಿದರು. ಅದನ್ನು ಸಮರ್ಥಿಸಿ ಖಾ। ಬಾ। ಮಹಮ್ಮದ್ ಶವ್ನಾಡ್ ಸಾಹೇಬ್ ಬಹದೂರ್ ಎಂ. ಎಲ್. ಎ. ಅವರೂ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀ। ಬಿ ವೈಕುಂಠ ಬಾಳಿಗರೂ ಮಾತಾಡಿದರು. ಬೋರ್ಡ್ ತನ್ನ ೮ ವರ್ಷಗಳ ಆಡಳಿತದ ಕಾಲದಲ್ಲಿ ವಿದ್ಯಾಂಗ, ಸಾರ್ವಜನಿಕ ಕಾರ್ಯಗಳೇ ಮೊದಲಾದ ಯಾವತ್ತು ಭಾಗಗಳಲ್ಲಿಯೂ ತೋರಿದ ಸಮರ್ಪಕ ಅಭಿವೃದ್ಧಿಯ ಕುರಿತು ಕೊಂಡಾಡಿದರು ಅಧ್ಯಕ್ಷರು, ಈ ಎಲ್ಲಾ ಭಾಷಣ ಕರ್ತರಿಗೂ, ತಮ್ಮೊಡನೆ ಸಹಕರಿಸಿದ ಎಲ್ಲರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಿದರು ವರದಿ ಸರ್ವಾನುಮತದಿಂದ ಮಂಜೂರಾಯಿತು

ಅನಂತರ ಶ್ರೀ। ಸಿ ಕೆ ರಂಘವನ್ ನಂಬಿಯಾರರು ಒಂದು ಎಜುರ್ನ್‌ಮೆಂಟ್ ಸೂಚನೆಯನ್ನು ತಂದರು. ಅಧ್ಯಕ್ಷರು ಆಗಲೇ ತಾವು ತಮ್ಮ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಡುವ ಇಚ್ಛೆಯನ್ನು ಪ್ರಕಟಿಸಿದರು ಶ್ರೀ ಎ ನಾಗಪ್ಪಯ್ಯನವರು ಸರಿಯಾದ ನೋಟೀಸ್ ಕೊಡದೆ ಅಧ್ಯಕ್ಷರು ಹೀಗೆ ರಾಜಿನಾಮೆ ಕೊಡುವುದು ಕಾನೂನಿಗೆ ವಿರೋಧವೆಂದು ತಿಳಿಸಿದುದನ್ನು ಖಾ। ಬಾ। ಶವ್ನಾಡರೂ ಸಮರ್ಥಿಸಿದರು. ಹೀಗೆ ಇಬ್ಬರು ಸದಸ್ಯರು ಆಕ್ಷೇಪಿಸಿದುದರಿಂದ, ಪ್ರೆಸಿಡೆಂಟರು, ಇನ್ನು ಕೆಲ ದಿನಗಳಲ್ಲೇ ಬೋರ್ಡಿನ ಒಂದು ಸಭೆ ಕರೆಯಲಾಗುವುದೆಂದೂ, ಅದರಲ್ಲಿ ತಮ್ಮ ರಾಜಿನಾಮೆಯ ಪ್ರಶ್ನೆ ಇತ್ಯರ್ಥವಾಗುವುದೆಂದೂ ತಿಸಿದರು

ಬೋರ್ಡಿನ ಕೊಂಗ್ರೆಸ್ ಪಾರ್ಟಿ ಮೆಂಬರರೆಲ್ಲರೂ ತಮ್ಮ ಸ್ಥಾನಗಳಿಗೆ ರಾಜಿ ಕೊಡುವ ನಿರ್ಧಾರ ಮಾಡಿರುವರೆಂದು ತಿಳಿದುಬರುತ್ತದೆ

ಎಜರ್ನ್‌ಮೆಂಟ್ ಸೂಚನೆ ಈ ಸಂದರ್ಭದಲ್ಲಿ ಮಂಜೂರಾಗಿ ಅಂದಿನ ಸಭೆಯ ಮುಂದಿನ ಕಾರ್ಯಗಳು ಅಷ್ಟರಲ್ಲಿಯೇ ಮುಕ್ತಾಯವಾದುವು

ಮಂಗಳೂರು ಮುನಿಸಿಪಾಟಿಯ ಕಾಂಗ್ರೆಸ್ ಪಕ್ಷದ ಸದಸ್ಯರೂ ರಾಜಿನಾಮೆ ಕೊಡುವರೆಂದು ತಿಳಿದಿದೆ

ದ ಕ ಜಿಲ್ಲಾ ಗಾಣಿಗರ ಸಮಾಜ ಸುಧಾರಕ ಸಂಘ, ಮಂಜೇಶ್ವರ

ಇದರ ಮೆಂಬರರ ಉಪಯೋಗಾರ್ಥವಾಗಿ ತಾ ೧೩ ೯ ೪೨ನೇ ಆದಿತ್ಯವಾರ ದಿವಸ ರೈಲ್ವೆ ಸ್ಟೇಶನಿನ ಬಳಿ ಮಾರ್ಕೆಟ್ ರೋಡಿನಲ್ಲಿ ಒಂದು ವಾಚನಾಲಯ ತೆರೆಯಲ್ಪಟ್ಟಿರುತ್ತದೆ ಉದ್ಧಬಂದ ಉಪ ದಿಗಳಾದ ಮಹಾಜನರು ವಾಚನಾಲಯಕ್ಕೆ ಆವಶ್ಯಪಟ್ಟ ಪತ್ರಿಕೆ ಪುಸ್ತಕ ಇತರ ಸಾಮಗ್ರಿಗಳನ್ನು ಸಹಾಯ ಮಾಡಿ ಸಾರ್ವಜನಿಕ ಕಾರ್ಯಕ್ಕೆ ಸಹಾಯಮಾಡಿ ಸಾರ್ವಜನಿಕ ಕಾರ್ಯಕ್ಕೆ ಸಹಾಯ ಮಾಡಬೇಕಾಗಿ ದಯಾಳು ಜನರನ್ನು ಬೇಡಿಕೊಳ್ಳಲಾಗಿದೆ

WANTED

Applications are invited from Secondary Grade Trained Teachers and B A L Ts' (History Graduates) belonging to the scheduled classes and Muhammadan communities respectively for appointment in leave vacancies in Board Secondary Schools under this Board Particulars regarding the date of birth, previous experience, vernaculars known etc, should be furnished Only those who can teach the subjects in Kanarese need apply

S K District Board Office Mangalore, 4—9—42 | K Vittal Shetty, President, District Board, S K

ಇಂದ್ರಜಾಲದಂತೆ ಚರ್ಮದ ರೋಗಗಳು ಮಾಯವಾಗುವುದು



ಕುಟಿಕೂರಾ ಮುಲಾಮು (Cuticura Ointment) ತನ್ನ ವಾಸಿಮಾಡುವಗಾಯದ ವಿಷಯ ಎಂಥಾ ಕಠಿಣ ಸ್ಪರ್ಧೆಗೂ ನಿಲ್ಲುವುದು ತ್ರಾಸದಾಯಕವಾಗಿ ವೇದನೆಗೊಳಿಸಿ ಪೀಡಿಸುವ ದೀರ್ಘಕಾಲದ ಕಾಲು ಹುಣ್ಣುಗಳನ್ನು ಖಂಡಿತ ಗುಣಪಡಿಸುವುದು. ಕುಟಿಕೂರಾ (Cuticura)ವು ಕ್ರಿಮಿಗಳನ್ನು ನಾಶಮಾಡಿ ಕಾಲ್ಮುರಕನ್ನು ಅಧಿಕಗೊಳಿಸುವ ವಿಷವನ್ನು ನಾಶಮಾಡಿ, ಬಾತುಹೋದ ಭಾಗವನ್ನು ಗುಣಪಡಿಸಿ ವೇದನೆಗೊಳಪಟ್ಟ ದ ಚರ್ಮದ ಬದಲಿಗೆ ಹೊಸ ಚರ್ಮವು ಬರುವಂತೆ ಸಹಾಯವಾಡುವುದು

ಚರ್ಮವ್ಯಾಧಿಯುಳ್ಳವರು ಕುಟಿಕೂರಾ ಸಾಬೂನನ್ನು (Cuticura Soap) ಮಾತ್ರವೇ ಉಪಯೋಗಿಸಬೇಕು ಇದು ಗುಣಗೊಳಿಸುವುದು ಮತ್ತು ಕ್ರಿಮಿನಾಶಕ ಗುಣವುಳ್ಳದ್ದು.

ಕಜ್ಜಿ, ಕುರು, ತುರಿಕಜ್ಜಿ, ಗ ಯ, ಪಟ್ಟು, ಪರಚುವಿಕೆ, ಸುಟ್ಟಗಾಯ, ಮುದ್ದೆ ಇವುಂತಾದ ಎಲ್ಲಾ ಚರ್ಮವ್ಯಾಧಿಗಳಿಗೂ ಕುಟಿಕೂರಾ ಮುಲಾಮನ್ನೇ (Cuticura Ointment) ಉಪಯೋಗಿಸಿರಿ

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರುಗಳಲ್ಲಿಯೂ ಮಾರಲ್ಪಡುತ್ತದೆ

ಕುಟಿಕೂರಾ ಮುಲಾಮು

CUTICURA OINTMENT

ಬಾತು ಹೋಗುವುದನ್ನು ರಕ್ತವು ವಿಷಮವಾಗುವುದನ್ನು ತಡೆಯಿರಿ

ಜಾಂಬಕ್ ಆದರ್ಶಕಾರೀ ವಿಷಹಾರಕ ಔಷಧ

ಗಾಯಕ್ಕೆ ಮದ್ದು ಹಾಗಿಸದೆ ಹಾಗೆಯೇ ಬಿಟ್ಟುಬಿಟ್ಟರೆ ಅದು ಬಹುಕಾಲ ನೋವನ್ನುಂಟುಮಾಡುವುದು. ಜಾಂಬಕ್ ಲೇಪದಿಂದ ಎಲ್ಲಾ ಗಾಯ ಮತ್ತು ಬೇನೆಗಳನ್ನು ಬೇಗನೇ ಗುಣಮಾಡಬಹುದು, ಜಾಂಬಕಿನಲ್ಲಿರುವ ಉತ್ತಮ ವನೌಷಧಿ ಸತ್ವವು ಮೈಗೆ ಬೇಗನೇ ಎಳಕೊಳ್ಳಲ್ಪಟ್ಟು ನೋವನ್ನೂ ಬಾವನ್ನೂ ಕಡಿಮೆ ಮಾಡಿ ಕೆಟ್ಟ ವಸ್ತುಗಳನ್ನೆಲ್ಲಾ ಕೂಡಲೇ ಹೊರಹಾಕುವುದು ಕಲೆ ಉಳಿಯದಂತೆ ಜಾಂಬಕ್ಕಿನಿಂದ ಗಾಯ ಗುಣವಾಗುತ್ತದೆ ಇದು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಒಂದು ರೂಪಾಯಿ ಬೆಲೆ ಅಥವಾ ರೂ 2-4-0ಗೆ ಸಿಗುತ್ತದೆ ಜಾಂಬಕ್ ಸೋಪಿಗೆ ಒಂದು ರೂಪಾಯಿ ಪೌದರಿಗೆ ಒಂದು ರೂಪಾಯಿ

ಏಜಂಟ್ಸ್

ಮೆಸರ್ಸ್ ದಾಧಾ ಎಂಡ್ ಕೊ., ಪಿ ಟಿ ಮದರಾಸು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಸಿನೆಮಾ ಪುಟ

ಶಾರದಾ

ಸಿಕೋರ್ಸ ಸ್ಟುಡಿಯೋದಲ್ಲಿ ಕರ್ದಾರರು 'ಶಾರದಾ' ಎಂಬ ಚಿತ್ರವನ್ನು ತಯಾರಿಸುತ್ತಾರೆ. ಮೆಹತಾಬ್ ನಾಯಿಕೆಯಾಗಿ ನಟಿಸುವಳು.

ಫಜ್ಲೀ ಬ್ರದರ್ಸ

ಇವರ 'ಚೌರಂಘೀ' ಚಿತ್ರವು ಪ್ರದರ್ಶನಕ್ಕೆ ತಯಾರಾಗಿದೆ. ಇವರ ಮುಂದಿನ ಚಿತ್ರ 'ಕಾಲೇಜ್' ಎಂಬುದು. ಇದರಲ್ಲಿ ಮೋತಿಲಾಲ ಮತ್ತು ಚಂದ್ರಮೋಹನ್ ಅಭಿನಯಿಸುವರು.

ಜಾನ್ ಕರ್

ಎಂಬ ಸಾಮಾಜಿಕ ಚಿತ್ರವನ್ನು ಸಿಲ್ವರ್ ಫಿಲ್ಮ್ಸ್, ಮುಂಬಯಿ, ಇವರು ತಯಾರಿಸುತ್ತಿದ್ದಾರೆ. ಕುಮಾರ್, ಚಂದ್ರಮೋಹನ್, ಅಜೂರಿ, ಪ್ರಮೀಳಾ ಮೊದಲಾದವರು ಇದರಲ್ಲಿ ನಟಿಸುವರು.

"ಏಕ್ ರಾತ್"

ಬಾಲಾಜಿ ಟಾಕೀಸಿನಲ್ಲಿ ಎರಡನೆಯ ವಾರ ಪ್ರದರ್ಶಿತವಾಗುತ್ತಿದೆ. ಹಿಂದೂದೇಶದ ಪ್ರಸಿದ್ಧ ಪಟ್ಟಣಗಳಲ್ಲಿ ಪ್ರದರ್ಶಿತವಾಗುತ್ತಿರುವಾಗಲೇ ಇದನ್ನು ನಮ್ಮ ಮಂಗಳೂರಲ್ಲಿಯೂ ಪ್ರದರ್ಶಿಸುವರು.

ರಿಚಾರ್ಡ್ ಗ್ರೀನ್

ಈಗ ಸೈನ್ಯದಲ್ಲಿ ಸೇರಿದ್ದಾನೆ. ಶಾಲೆಯ ವಿದ್ಯಾಭ್ಯಾಸವನ್ನು ಬಿಟ್ಟವನೇ ರಂಗಸ್ಥಳಕ್ಕಿಳಿದು ನಟಿಸಲು ಪ್ರಾರಂಭಿಸಿದನು; ಆತನ ಮೊದಲನೆಯ ಚಲಚ್ಚಿತ್ರ 'ಸಿಂಗ್ ಏಸ್ ವಿಗೋ' ಎಂಬುದು. ಈಗ ಸಿನೆಮಾರಂಗವನ್ನು ಬಿಟ್ಟು ರಣರಂಗದಲ್ಲಿ ನಟಿಸಲು ಹೊರಟಿದ್ದಾನೆ ವೀರ!

ಯೂಸಫ್ ಖಾನ್ ಎಂದರೆ?

ಯಾರು ಗೊತ್ತೆ? ಮುಸ್ಲಿಂ ಜಾತಿಗೆ ಸೇರಿದ ಜ್ಯೋತಿ ಪ್ರಕಾಶನ ಹೆಸರಿದು; ಅದರಿಂದ ಇನ್ನು ಮುಂದೇ ಮುಸ್ಲಿಂ ಮತದಲ್ಲಿರುವವರಿಗೆ ಯೂಸಫ್ ಖಾನ್ ಎಂದೇ ಕರೆಯಬೇಕು. ಯೂಸಫ್ ಖಾನನ ಜೀವನವು ವಿಚಿತ್ರವಾದುದು. ಸಿಪಾಯಿಯಾಗಿದ್ದು, ವೈಮಾನಿಕನಾಗಿದ್ದು, ಬಳಿಕ, ಚಲಚ್ಚಿತ್ರರಂಗಕ್ಕೆ ಕಾಲಿಟ್ಟು, ಮೊದಲನೆ ಹೆಂಡತಿಯಿದ್ದಂತೆ ಶೀಲಾ ಹಲ್ದಾರಳ ವಿವಾಹವಾಗಿ ಈಗ ಮುಸ್ಲಿಂ ಜಾತಿಗೆ ಸೇರಿದ್ದಾನೆ. ಇನ್ನೇನೆಲ್ಲ ವಿಚಿತ್ರ ಮಾಡಲಿಕ್ಕಿದ್ದಾನೋ ನೋಡಬೇಕು.

ಸಿನೆಮಾ ಕೈಗಾರಿಕೆ ಕಲಿಯುವವರು

ಅಬ್ದುಲ್ಲಾ ಫಜಲ್ ಬಾಯ್ ಇನ್ಸ್ಟಿಟ್ಯೂಟ್, ಸೈಂಟ್ ಕ್ಸೇವಿಯರ್ಸ್ ಕಾಲೇಜ್, ಫೋರ್ಟ್

NOTICE

In the Court of the District Munsif of Mangalore

O. S. 259/1942.

Between:-

Saraswathi and others— *Plffs.*

and

Amakka and others-*Defendants*

To,

Ammane 3rd defendant, daughter of Puttakka, residing at Bolar Mangalore Town.

The abovenamed plaintiffs have filed the above suit for partition of the family properties etc., and that the said suit stands posted to 25-9-1942 for your appearance. There fore take notice that you may appear in person or by a pleader and contest the same, failing which the same will be heard exparte.

Mangalore, 12-9/42. K. Balakrishna Rao, Advocate for Plffs.

ನಮ್ಮ ಉದ್ಯೋಗವನ್ನು ಜಪಾನಿಯರಿಗೆ ಬಿಟ್ಟುಕೊಡಲು ನಾವು ಬಯಸುತ್ತೇವೆಯೆ?

ನಮ್ಮ ಇಂದಿನ ಆರ್ಥಿಕ ಹೊಣೆಗಾರಿಕೆಗಳನ್ನು ನಿರ್ವಹಿಸುವುದೇ ನಮಗೆ ಸಾಕಾಗಿದೆ. ಆದರೆ ನಾವು ಜಪಾನಿನ "ಪರಸ್ಪರ ಆರ್ಥಿಕಾಭಿವೃದ್ಧಿ ವ್ಯವಸ್ಥೆ" ಯೊಳಕ್ಕೆ ಸಿಕ್ಕಿಬಿದ್ದರೆ, ನಮ್ಮ ಈ ಹೊಣೆಗಾರಿಕೆ, ನಮ್ಮ ಬೆನ್ನು ಮುರಿಯುವಂತಹ ಹೊರೆಯಾಗುತ್ತದೆ. ಏಷ್ಯಾದ ಇತರ ಭಾಗಗಳಲ್ಲಿ ನಡೆದಿರುವುದನ್ನು ನೋಡಿದರೆ, ಜಪಾನೀಯರ ಉದ್ದೇಶ್ಯ ಹೀಗಿದೆಯೆಂದು ತೋರುತ್ತದೆ:—

ಭೂಸ್ವಾಮಿತ್ವ ಅಪಹರಣ

ಪೌರಾತ್ಯ ಇತಿಹಾಸದ ಅಧ್ಯಾಪಕರಾದ ಡಾ. ಚೆಂಗ್-ಚುನ್ ವಾಂಗ್ ಹೀಗೆ ಹೇಳುತ್ತಾರೆ— ಈಗ್ಗೆ ಮೂವತ್ತು ವರ್ಷಗಳ ಹಿಂದೆ, ಜಪಾನಿಯರಿಂದ ಆಕ್ರಮಿತವಾದ ಕೊರಿಯಾದಲ್ಲಿ ಜಪಾನೀಯರ ಭೂಸ್ವಾಮಿತ್ವ ಆರಂಭದಲ್ಲಿದ್ದುದಕ್ಕಿಂತ ಒಂದಕ್ಕೆ ಏಳುವರೆಯಷ್ಟು ಏರಿದೆ. ಅಕ್ಕಿ ಮತ್ತು ಹತ್ತಿ ಬೆಳೆಗೆ ಅತ್ಯುತ್ತಮವಾದ ಜಮೀನನ್ನು ಒಳಗೊಂಡ ೨೦,೪೦,೦೦೦ ಎಕರೆ ಭೂಮಿ ಇಂದು ಜಪಾನೀಯರ ಕೈಯಲ್ಲಿದೆ. ಕೊರಿಯನ್ನರಿಗೆ ಇಂದು ಅವರ ದೇಶದಲ್ಲಿ ಯಾವವಿಧವಾದ ಸ್ಥಿರಹಕ್ಕುಗಳೂ ಇಲ್ಲ.

ನಮ್ಮ ದೇಶದಲ್ಲಿ ಆಚರಣೆಯಲ್ಲಿರುವ ಭೂ ಅಧಿಕಾರ ಮತ್ತು ಕಂದಾಯವ್ಯವಸ್ಥೆ ದೋಷವಿದೂರವಾಗಿಲ್ಲವೆಂಬುದು ನಿಜ. ಆದರೆ ಕೊರಿಯಾದ ಅನ್ಯಾಯವ್ಯವಸ್ಥೆಯ ಇದಿರು ಈ ದೋಷಗಳು ದೋಷಗಳೇ ಅಲ್ಲ ಎನ್ನಬಹುದು.

ಇಂಡಿಯಾದಲ್ಲಿ ತಮ್ಮ ಆಧಿಪತ್ಯವನ್ನು ಸಾಧಿಸುವುದು ಶಕ್ಯವಾದಲ್ಲಿ, ಜಪಾನೀ ಸೇನೆಗಳು ತಾವು ಕೊರಿಯಾ, ಚೀಣಾಗಳಲ್ಲಿ ಅನುಸರಿಸಿದ ನೀತಿಯನ್ನೇ ಅನುಸರಿಸಿ, ತಮ್ಮ ನಾಡಿನಿಂದ ಲಕ್ಷಾಂತರ ವಲಸೆಗಾರರನ್ನು ಕರೆಸಿ ನಮ್ಮ ನಾಡಿನ ಅತಿಫಲವತ್ತಾದ ಪ್ರದೇಶಗಳನ್ನೆಲ್ಲಾ ಅವರಿಗೆ ಕೊಟ್ಟುಬಿಡುವರು.

ವಾಣಿಜ್ಯ—ಯಾಜಮಾನ್ಯ ಆಕ್ರಮಣ

ಯುದ್ಧ ಆರಂಭವಾಗುವುದಕ್ಕೆ ಮೊದಲು ಚೀಣಾದಲ್ಲಿ ಒಂದುಲಕ್ಷಕ್ಕಿಂತ ಕಡಿಮೆ (ಅಂದರೆ ಪ್ರಕೃತ ಇಂಡಿಯಾದಲ್ಲಿರುವ ಬ್ರಿಟಿಷ್ ಪ್ರಜೆಗಳಷ್ಟು—ಸೈನಿಕರೂ ಸೇರಿ—ಮಂದಿ) ಜಪಾನೀಯರು ಇದ್ದರು. ಆದರೆ, ಈಗ ಚೀಣಾದಲ್ಲಿ ಐದುಲಕ್ಷಮಂದಿ ಜಪಾನೀಯರು ತಮ್ಮ ಜೀವನವನ್ನು ನಡೆಸುತ್ತಾ ಇದ್ದಾರೆ ಎಂದು ೧೯೪೨ ನೇ ಜುಲೈ ೭ ನೇ ತಾರೀಖಿನದಿನ ಟೋಕಿಯೋ ರೇಡಿಯೋ ಹೇಳಿತು. ಜಪಾನೀ ಸೇನೆಗಳು ಫಲವತ್ತಾದ ಭೂಮಿಗಳನ್ನು ಆಕ್ರಮಿಸಿಕೊಂಡದ್ದಲ್ಲದೆ, ಸಾವಿರಾರು ಚೀಣೀಯರ ವ್ಯಾಪಾರ, ವಾಣಿಜ್ಯ, ವೃತ್ತಿಗಳನ್ನು ತಮ್ಮ 'ರಕ್ಷಣೆಗೆ ತೆಗೆದುಕೊಂಡು', ಇಲ್ಲವೆ ಆಕ್ರಮಿಸಿಕೊಂಡು ಅವನ್ನು ಜಪಾನೀ ವಲಸೆಗಾರರಿಗೆ ವಹಿಸಿವೆ.

ಅಂದರೆ, ಬ್ಯಾಂಕ್, ಕಾರ್ಖಾನೆಗಳ ಮೊದಲುಗೊಂಡು, ಬೀದಿವ್ಯಾಪಾರಿಗ್ಗಾರರ ವೃತ್ತಿಯವರಿಗೆ ಎಲ್ಲಾ ವಾಣಿಜ್ಯೋದ್ಯಮಗಳ ಯಾಜಮಾನ್ಯವನ್ನೂ ಜಪಾನೀಯರು ಆಕ್ರಮಿಸಿಕೊಂಡಂತಾಯಿತು.

ಜಪಾನೀಯರು, ಇಂಡಿಯಾವನ್ನು ಆಕ್ರಮಿಸಿಕೊಂಡಲ್ಲಿ ಅವರು ಎಲ್ಲಾ ವೃತ್ತಿಗಳನ್ನೂ ಲೈಸನ್ಸ್ ವ್ಯವಸ್ಥೆಗೆ ಒಳಪಡಿಸಿ, ಹಿಂದೆ ಆ ವೃತ್ತಿಗಳನ್ನು ಅನುಸರಿಸುತ್ತಿದ್ದವರು ಅವನ್ನು ವಲಸಗಾರ ಜಪಾನೀಯರಿಗೆ ಬಿಟ್ಟುಕೊಡುವಂತೆ ಮಾಡುವರು.

ನಿಮ್ಮ ಉದ್ಯೋಗವನ್ನು ಉಳಿಸಿಕೊಳ್ಳಬೇಕೆಂಬ ಅಪೇಕ್ಷೆ ನಿಮಗಿದ್ದರೆ ಜಪಾನೀಯರನ್ನು ದೂರ ಇಟ್ಟಿರುವುದಕ್ಕಾಗಿ ಹೋರಾಡುತ್ತಾ ಇರುವವರಿಗೆ ಬೆಂಬಲಕೊಡಬೇಕು. ಇದರಿಂದ ತಾತ್ಕಾಲಿಕವಾಗಿ ನಿಮ್ಮ ನಿಯಮಗಳಿಗೆ ಭಂಗಬಂದರೂ ಅದನ್ನು ಲಕ್ಷಿಸದೆ ಬೆಂಬಲಕೊಡಬೇಕು.

ನೀವೇ ಯೋಚನೆಮಾಡಿ ನೋಡಿರಿ ಒಂದುಗೂಡಿ ವರ್ತಿಸಿರಿ

ಅಖಿಲ ದೇಶೀಯ ಯುದ್ಧ ಮುಂಚೂಣಿ

CPU-86-KN

ಬೊಂಬೇ ಇಲ್ಲಿ ವಿಚಾರಿಸಬಹುದು. ಅಲ್ಲಿ ತರಗತಿ ತೆರೆಯುವ ಏರ್ಪಾಡು ಆಗಿದೆ.

ರೇಣುಕಾ ದೇವಿ ಯಾರು?

ಆಕೆಯ ಮೂಲ ಹೆಸರು ಖುರ್ಶೀದ್, ಅಬ್ದುಲ್ಲಾ ಎಂದು ತಂದೆ ಹೆಸರು; ಮಿರ್ಜಾ ಎಂದು ಪತಿಯ ಹೆಸರು; ಮೂರು ಹುಡುಗಿಯರ ತಾಯಿ ಈಗ ಆಕೆ; 'ಭಾಬಿ' ಮತ್ತು 'ನಯಾ ಸಂಸಾರ್' ಎಂಬೆರಡು ಚಿತ್ರಗಳಲ್ಲಿದುವರೆಗೆ ನಟಿಸಿದ್ದಾಳೆ.

ಚಂದ್ರಶೇಖರ್

ಎಂಬವರು 'ಪ್ರವಾಸಿ' ಎಂಬ ಸಣ್ಣ ಚಿತ್ರವೊಂದನ್ನು ತಯಾರಿಸಿ ಉತ್ಸಾಹೀ ಸಿನೆಮಾ ರಚಯಿತರು 'ಪ್ರವಾಸಿ'ಯನ್ನು ನೋಡಿ ಅವರ ಚಾತುರ್ಯವನ್ನು ಶಾಂತಾರಾಮರೂ ಹೊಗಳಿದ್ದಾರೆ. ಚಂದ್ರಶೇಖರರು ಒಳ್ಳೆಯ ನಿಪುಣ ಕಲಾವಂತರು. ಅವರ ಉತ್ಸಾಹ, ಆಸಕ್ತಿ, ಕಲಾಪ್ರೇಮಗಳು ಭವಿಷ್ಯದಲ್ಲಿ ಬೆಳಕಿಗೆ ಬರದೆ ಇರಲಾರದು.

ಕುಲಕುಂಡಲಿನಿ ಅಂದರೇನು?

ಕುಲಕುಂಡಲಿನಿಯು ಸುಪ್ತ ಮತ್ತು ಜಾಗ್ರತಾವಸ್ಥೆಗಳು

ಕುಲಕುಂಡಲಿನಿ ಶಕ್ತಿಯ ಸಂಕ್ಷೇಪ ಪರಿಚಯವು ನಾವು ಈ ಮೊದಲೇ ಕೊಟ್ಟಿದ್ದೇವೆ. ಈ ಜನ್ಮದ ಮತ್ತು ಜನ್ಮಜನ್ಮಾಂತರಗಳ ಮಾನಸಿಕ ಪರಿವರ್ತನೆಗಳ ಅಥವಾ ಭಾವಗಳ ಸಮೂಹದ ಸೂಕ್ಷ್ಮ ದೈಹಿಕ ಪ್ರತಿಕೃತಿಯನ್ನವಲಂಬಿಸಿರುವ ಮಹಾ ಓಜಸ್ವಿನೀ ಪ್ರೇರಣಾಶಕ್ತಿಗೆನೇ ಪತಂಜಲಿ ಮೊದಲಾದ ಮಹರ್ಷಿಗಳು ಆ ಹೆಸರನ್ನು ಕೊಟ್ಟಿದ್ದಾರೆ. ಅದು ಬದ್ಧ ಜೀವನಲ್ಲಿ ಪ್ರಾಯಶಃ ಸಂಪೂರ್ಣವಾಗಿ ಸುಪ್ತವಾಗಿ ಅಂದರೆ ಅವ್ಯಕ್ತ ರೂಪದಲ್ಲಿ ಇರುತ್ತದೆ. ಆದರೆ ಸುಪ್ತಾವಸ್ಥೆಯಲ್ಲಿದ್ದಾಗಲೇ ಜೀವನಿಗೆ ಸ್ಮೃತಿ ಕಲ್ಪನೆ ಇತ್ಯಾದಿಯು ಉದ್ಭವವಾಗುತ್ತದೆ. ಅದಕ್ಕೆ ಯಾವ ರೀತಿಯಿಂದಲಾದರೂ ಸಂಪೂರ್ಣವಾಗಿ ಜಾಗ್ರತ ಅಥವಾ ವ್ಯಕ್ತಾವಸ್ಥೆಯು ಪ್ರಾಪ್ತವಾದರೆ, ಜೀವನಿಗೆ ಪೂರ್ಣಜ್ಞಾನ ಲಾಭದ ಪ್ರೇರಣೆ ಹುಟ್ಟಿಸಿ, ಶ್ರೀ ಪರಮಾತ್ಮನ ಸಾಕ್ಷಾತ್ಕಾರ ಕೊಡುವುದು. ಸುಪ್ತಾವಸ್ಥೆಯಲ್ಲಿ ಕುಂಡಲಿನೀ ಶಕ್ತಿಯಿಂದ ಸ್ಮೃತಿ ಕಲ್ಪನೆ ಇತ್ಯಾದಿಯು ಹೇಗಾಗುವುದೆಂದು ನಾವು ಕೇಳಬಹುದು. ಸುಪ್ತಾವಸ್ಥೆಯಲ್ಲಿದ್ದರೂ ಹೊರಗಿನ ರೂಪರಸಾದಿ ವಿಷಯಗಳು ಪಂಚೇಂದ್ರಿಯಗಳ ಮುಖಾಂತರ ನಿರಂತರವೂ ಮಸ್ತಿಷ್ಕಕ್ಕೆ ಆಘಾತ ಕೊಡುವುದರಿಂದ ತುಸುಕ್ಷಣಿಕವಾದ ಚೇತನವು ಅದಕ್ಕೆ ಬಂದೊದಗುತ್ತದೆ. ನಿದ್ರಿತವ್ಯಕ್ತಿಗೆ ಸೊಳ್ಳೆ ಕಚ್ಚಿದರೆ, ಹೇಗೆ ಆತನು ಸೊಳ್ಳೆಗೆ ತನ್ನ ಸ್ವಂತ ಕೈಯಿಂದ ಹೊಡೆಯುತ್ತಾನೆಯೋ ಮತ್ತು ತುರಿಯುತ್ತಾನೆಯೋ ಹಾಗೆಯೇ.

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

ಜಾಗ್ರತ ಕುಂಡಲಿನಿಯ ಗತಿ— ಷಟ್ ಚಕ್ರಭೇದ ಮತ್ತು ಸಮಾಧಿ

ಮಸ್ತಿಷ್ಕ ಮಧ್ಯಭಾಗದಲ್ಲಿರುವ ಬ್ರಹ್ಮರಂಧ್ರದ ಆಕಾಶದಲ್ಲಿ ಅಖಂಡ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನು ಅಥವಾ ಶ್ರೀ ಭಗವಾನನು ಜ್ಞಾನಸ್ವರೂಪದಲ್ಲಿರುತ್ತಾನೆಂದು ಯೋಗಿಗಳು ಹೇಳುತ್ತಾರೆ. ಪೂರ್ವೋಕ್ತ ಕುಂಡಲಿನಿ ಶಕ್ತಿಗೆ ಶ್ರೀ ಪರಮಾತ್ಮನಲ್ಲಿ ಬಹಳ ಅನುರಾಗ, ಅಥವಾ ಶ್ರೀ ಪರಮಾತ್ಮನು ಈ ಶಕ್ತಿಯನ್ನು ನಿರಂತರವೂ ಆಕರ್ಷಿಸುತ್ತಾನೆಂದೂ ಹೇಳಬಹುದು. ಆದರೆ ಜಾಗ್ರತವಾಗದಿದ್ದರೆ ಕುಂಡಲಿನಿ ಶಕ್ತಿಯ ಆ ಆಕರ್ಷಣವು ಅನುಭವಕ್ಕೆ ಬರುವುದಿಲ್ಲ. ಜಾಗ್ರತವಾದೊಡನೆಯೇ ಅದು ಶ್ರೀ ಪರಮಾತ್ಮನ ಆ ಆಕರ್ಷಣೆಯನ್ನು ಅನುಭವಿಸುವುದು ಮತ್ತು ಆತನ ಬಳಿಗೆ ಹೋಗುವುದು. ಕುಂಡಲಿನಿಯು ಶ್ರೀ ಪರಮಾತ್ಮನ ಬಳಿಗೆ ಹೋಗುವ ದಾರಿಯೂ ಕೂಡ ನಮ್ಮ ಪ್ರತಿಯೊಬ್ಬನ ದೇಹದಲ್ಲಿದೆ. ಮಸ್ತಿಷ್ಕದಿಂದ ಆ ಮಾರ್ಗವು ಆರಂಭವಾಗಿ ಮೇರುದಂಡದ ಮಧ್ಯವಾಗಿ ಅದರ ಮೂಲಕ್ಕಿರುವ 'ಮೂಲಾಧಾರ'ವೆಂಬ ಮೇರು ಚಕ್ರದ ವರೆಗೆ ಇರುತ್ತದೆ. ಈ ಮಾರ್ಗಕ್ಕೆನೇ ಸುಷುಮ್ನಾಪಥವೆಂದು ಯೋಗಶಾಸ್ತ್ರದಲ್ಲಿ ಹೇಳಿದೆ. ಪಾಶ್ಚಾತ್ಯ ದೇಹವಿಜ್ಞಾನಿಗಳು ಆ ಮಾರ್ಗಕ್ಕೆ ಮಧ್ಯಪಥ (Canal Centralise)ವೆಂದು ನಿರ್ದೇಶಿಸಿದ್ದಾರೆ ಆದರೆ ಅದರ ಆವಶ್ಯಕತೆಯನ್ನು ಅಥವಾ ಅದರ ಪ್ರಯೋಜನವನ್ನು ಅವರು ಈ ವರೆಗೆ ಕಂಡುಹಿಡಿಯಲಿಲ್ಲ. ಆ ಮಾರ್ಗದಿಂದಲೇ ಕುಂಡಲಿನಿಯು ಮೊದಲು ಶ್ರೀ ಪರಮಾತ್ಮನಿಂದ ಬೇರೆಯಾಗಿ ಮಸ್ತಿಷ್ಕದಿಂದ ಮೇರುಚಕ್ರ ಅಥವಾ ಮೂಲಾಧಾರಕ್ಕೆ ಬಂದು ಸುಪ್ತಾವಸ್ಥೆಯಲ್ಲಿರುತ್ತದೆ. ಪುನಃ ಆ ಮಾರ್ಗದಿಂದಲೇ ಮೇರುದಂಡದ ಮಧ್ಯದಲ್ಲಿ ಊರ್ಧ್ವಮುಖವಾಗಿರುವ ಆರು ಚಕ್ರಗಳನ್ನು ಕ್ರಮವಾಗಿ ಅತಿಕ್ರಮಿಸಿ ಕೊನೆಗೆ ಮಸ್ತಿಷ್ಕಕ್ಕೆ ಬಂದು ಸೇರುವುದು. * ಕುಂಡಲಿನಿಯು ಜಾಗ್ರತಳಾಗಿ ಒಂದು ಚಕ್ರದಿಂದ ಇನ್ನೊಂದು ಚಕ್ರಕ್ಕೆ ಹೋಗಿ ಅವಸ್ಥಾನಮಾಡುವಾಗ, ಜೀವನಿಗೆ ಬೇರೆ ಬೇರೆ ತರದ ಅಪೂರ್ವ ಉಪಲಬ್ಧಿಗಳು ಬರುತ್ತವೆ; ಮತ್ತು ಆ ರೀತಿಯಾಗಿ ಅದು ಮಸ್ತಿಷ್ಕಕ್ಕೆ ತಲ್ಪಿದೊಡನೆಯೇ ಜೀವನಿಗೆ ಧರ್ಮ ವಿಜ್ಞಾನದ ಚರಮೋಪಲಬ್ಧಿಯಿಂದ ಅಥವಾ ಅದ್ವೈತ ಜ್ಞಾನದಿಂದ 'ಕಾರಣಂ ಕಾರಣಾನಾಂ' ಪರಮಾತ್ಮನೊಂದಿಗೆ ತನ್ಮಯ ಪ್ರಾಪ್ತವಾಗುವುದು. ಆಗಲೇ ಜೀವನಿಗೆ ಭಾವದ ಚರಮೋಪಲಬ್ಧಿಯು ಬರುತ್ತದೆ, ಅಂದರೆ ಯಾವ ಮಹಾಭಾವದ ಅವಲಂಬನದಿಂದ ಇತರ ಸಕಲ ಭಾವಗಳು ಮಾನವಮನಸ್ಸಿನಲ್ಲಿ ನಿರಂತರವೂ ಉದ್ಭವವಾಗುತ್ತವೆಯೋ ಆ ಭಾವಾತೀತ 'ಭಾವ'ದಲ್ಲಿ ತನ್ಮಯವಾಗಿದ್ದುಕೊಳ್ಳುವ ಅವಸ್ಥೆಯು ಬರುತ್ತದೆ.

(ಕ್ರಮಶಃ)

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ. ಬೋರ್ಡ್ ಹೈಸ್ಕೂಲ್ ಕುಂದಾಪುರ.

ಪುಸ್ತಕ ದೊರೆಯುವ ಸ್ಥಳ: ಬೆಲೆ: 1-4-0.

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸಾಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE. | The Joint Booking Office, KODIALBAIL.

The Bank of Mangalore Limited

HEAD OFFICE Mangalore.

BRANCHES Moodabidri & Padubidri.

ANNOUNCEMENT

On and from 1st February 1942, fixed deposits will be accepted at the following attractive rates.

One year 4%
Two years or above 4½%.

Interest Payable Quarterly.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ ಹುಳುಕಡ್ಡಿ, ಪಿತ್ಥ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion. andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟೋರ್ಸ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 25—9—1942 [ಸಂಚಿಕೆ 38]

'ಸಂಘಟಿತರಾಗಿರಿ! ಇಲ್ಲವೇ ಸಂಹಾರವಾಗಿರಿ!'

"ಸಂಘಟಿತರಾಗಿರಿ ಇಲ್ಲವೇ ಸಂಹಾರವಾಗಿರಿ" ಎಂಬೀ ಘೋಷವನ್ನು, ಇಂದು ಲೋಕದ ವಿದ್ವಜ್ಜನರು, ವಿಚಾರವಂತರು, ರಾಜನೀತಿಜ್ಞರು ಯುದ್ಧಾಸಕ್ತ ರಾಕ್ಷಸೀ ಮಹತ್ವಾಕಾಂಕ್ಷೆಯ ಜನ ಜನಾಂಗಗಳಿಗೆ ಸಾರುತ್ತಿದ್ದಾರೆ ಲೋಕದ ವಿವಿಧ ರಾಷ್ಟ್ರಗಳು ಒಂದು ಸಂಯುಕ್ತ ರಾಷ್ಟ್ರಸಂಘಟನೆಯನ್ನು (World Fede ration) ಅನ್ಯೋನ್ಯ ಭಾವದಿಂದ ನಿರ್ಮಿಸಿ ಅದರ ನಿಯಮಸೂತ್ರಗಳಂತೆ, ಪ್ರತಿಯೊಂದು ರಾಷ್ಟ್ರವೂ ಸ್ವತಂತ್ರ ಪ್ರಜಾಪ್ರಭುತ್ವ ಮಾರ್ಗದಲ್ಲಿ ಅಭಿವೃದ್ಧಿ ಹೊಂದಬೇಕೆಂಬುದೇ ಅವರ ವಾದ ಸರಣಿಯಾಗಿದೆ ಇಂತಹ ಅಂತರ್ರಾಷ್ಟ್ರೀಯ ಧೀಮಂತ ರಾಜನೀತಿಜ್ಞರಲ್ಲಿ ಪಂಡಿತ ಜವಾಹರಲಾಲ ನೆಹರುಗಳು ಒಬ್ಬರಾಗಿದ್ದಾರೆ ಕೆಲಕಾಲದಿಂದಿತ್ತ ಅವರು ಈ ಸಂಯುಕ್ತ ರಾಷ್ಟ್ರಸಂಘಟನೆಯ ವಿಚಾರವಾಗಿ ಅನೇಕ ಲೇಖನ ಭಾಷಣ ಪ್ರಚಾರವನ್ನುಮಾಡಿದ್ದಾರೆ ಎಷ್ಟರಮಟ್ಟಿಗೆಲಂತಹ ಶಾಂತಿ ಸ್ವಾತಂತ್ರ್ಯ ಸಂದೇಶವು ಇಂದಿನ ಪ್ರಳಯ ತಾಂಡವಾಸಕ್ತ ಜನರಿಗೆ ಆಪ್ಯಾಯಮಾನವಾಗುವುದೋ ನೋಡಲಿಕ್ಕಿದೆ ಇತ್ತೀಚೆಗೆ ಮೋಟರು ಕೈಗಾರಿಕೆಯ ಪ್ರವೃತ್ತಕರಾದ ಹೆನ್ರಿ ಫೋರ್ಡರೂ ತನ್ನ 80ನೆಯ ಹುಟ್ಟಿದ ಹಬ್ಬದ ಸಂದರ್ಭದಲ್ಲಿ ಇದೇ ಅಭಿಪ್ರಾಯದ ಒಂದು ಸಂದೇಶವನ್ನು ಹೇಳಿದರು ಅದನ್ನು ಅಮೇರಿಕದಿಂದ ಲಂಡನಿನ ಸಂಡೇ ಡಿಸ್ಪೇಚ್ ಪತ್ರಿಕೆಗೆ ತಂತಿ ಮಾಡಿ ಕಳುಹಿಸಲಾಗಿದೆ ಅವರು ತನ್ನ ಸಂದೇಶದಲ್ಲಿ ಯುದ್ಧಾನಂತರ ಅನ್ಯೋನ್ಯ ದ್ವೇಷಾಸೂಯೆಗಳು ಮಾಯವಾಗಿ ಎಂತಹ ಭವ್ಯವಾದ ಹೊಸ ಜಗತ್ತಿನ ಸೃಷ್ಟಿಯಾಗಬೇಕಾಗಿದೆಯೆಂಬ ಆಶಯವನ್ನು ವಿವರಿಸಿದ್ದಾರೆ—

ಮಹಾಯುದ್ಧದ ನಂತರ

'ಈ ಮಹಾಯುದ್ಧದ ನಂತರ ಹೊಸ ಜಗತ್ತೊಂದು ಸೃಷ್ಟಿಯಾಗಲಿದೆಯೆಂಬುದು ನನ್ನ ನಂಬಿಕೆಯಾಗಿದೆ ಆ ಹೊಸ ಜಗತ್ತಿನಲ್ಲಿ ಜನಾಂಗ ಜನಾಂಗಗಳ ತಾರತಮ್ಯವು ಮಾಯವಾಗುವುದು, ಅಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳ ಎಲ್ಲಾ ಜನರೂ ಶಾಂತಿ ಅಭ್ಯುದಯಗಳಿಂದ ಬಾಳುವರು ರಾಜನೀತಿಯ ಹೋರಾಟವು ಆಗ ಅಳಿದು ಹೋಗುವುದು, ಇಡೀ ಜಗತ್ತಿಗೇ ಒಂದೇ ರೀತಿಯ ನಾಣ್ಯ ಚಲಾವಣೆ, ಒಂದೇ ತರದ ಹಣಪ್ರಪಂಚ, ಒಂದೇ ತೆರನ ವ್ಯಾಪಾರ ವಹಿವಾಟು ಅಲ್ಲಿ ಆಗಲಿದೆ ಈ ಯುದ್ಧದ ಫಲಿತಾಂಶವಾಗಿ ಅಂತಹ ಒಂದು ಭವ್ಯ ಜಗತ್ತಿನ ಸೃಷ್ಟಿಯಾಗದಿದ್ದರೆ, ಇಂದಿನ ಯುದ್ಧವಾದರೂ ಇನ್ನು ಮುಂದೆಯೂ ಆಗತಕ್ಕ ಇನ್ನೊಂದು ಘೋರ ಯುದ್ಧದ ಪೂರ್ವಾಭಿನಯ ಮಾತ್ರವೆಂದು ತಿಳಿಯಬೇಕು.

'ಆ ತರದ ರಾಷ್ಟ್ರ ಸಂಘಟನೆಯ ಒಂದು ಮಾದರಿಯ ರಾಷ್ಟ್ರವೆಂದರೆ ಇಂದು ಸಂಯುಕ್ತ ರಾಷ್ಟ್ರವಾದ ಅಮೇರಿಕ ನಾವು ಅಮೇರಿಕನರು

ಯೂರೋಪು ಯೂರೋಪಿಯನರನ್ನು ಸೃಷ್ಟಿಸಿಲ್ಲ
ಜಗತ್ತಿಗೆ ಹೆನ್ರಿ ಫೋರ್ಡರ ಶಾಂತಿ ಸಂದೇಶ
ಜಗತ್ತಿನ ನವನಿರ್ಮಾಣ ವಿಚಾರ

ಹಾಗೆ ಸಂಯುಕ್ತ ರಾಷ್ಟ್ರಘಟನೆಯೊಂದನ್ನು ಮಾಡಿಕೊಂಡ ಕಾರಣವಾದರೂ ಅದೆ, ಹಾಗೆ ಮಾಡಿಕೊಳ್ಳದಿದ್ದರೆ ವಿನಾಶಪದದಿಂದ ನಿವೃತ್ತರಾಗುವುದು ನಮಗೆ ಸಾಧ್ಯವಿರಲಿಲ್ಲ ಸಂಯುಕ್ತ ರಾಷ್ಟ್ರಘಟನೆಯೊಂದನ್ನು ನಿರ್ಮಿಸಿ ಇಳ್ಳದಿದ್ದರೆ ಯೂರೋಪಾದರೂ ಬಾಳಲಾರದೆಂಬ ತತ್ವವನ್ನು ಅದು ಇಂದು ಅರಿತುಕೊಳ್ಳುವಂತಾಗಿದೆ ಸಂಯುಕ್ತ ರಾಷ್ಟ್ರವಾದ ಅಮೇರಿಕವು ತನ್ನ ಪ್ರಭಾವವನ್ನು ಯೂರೋಪಿನ ಮೇಲೆ ಬೀರಿದರೆ ಅದು ಕೂಡಾ ಅದೇ ತೆರನ ಸಂಘಟಿತ ರಾಷ್ಟ್ರಶಕ್ತಿಯಾಗಬಹುದು ಅಂತಹ ಸಂಘಟನೆಯನ್ನು ಮಾಡಲು ಯಾವುದೇ ರಾಷ್ಟ್ರವನ್ನಾದರೂ ಒತ್ತಾಯಪಡಿಸಬೇಕಾದ ಅವಶ್ಯವಿಲ್ಲ, ಏಕೆಂದರೆ ಸಂಘಟನೆಯಾಗುವುದರ ಪ್ರಯೋಜನವು ಬೇಗಬೇಗನೇ ಪ್ರತಿಯೊಂದು ರಾಷ್ಟ್ರಕ್ಕೂ ತಾನಾಗಿಯೇ ಹೊಳೆದೀತು ಹಾಗೆ ಒಮ್ಮೆ ಸಂಘಟಿತರಾದರೆ, ಮುಂದೆ ಯಾರಿಗೂ ಸ್ವನ್ನಸಂಗ್ರಹಿಸುವ ತೊಂದರೆಯಿಲ್ಲ, ಏಕೆಂದರೆ ಮುಂದೆ ಯುದ್ಧಮಾಡಬೇಕಾದ ಅವಶ್ಯಕತೆಯೇ ಇರುವುದಿಲ್ಲ ಅಂಥಾ ಸಂಯುಕ್ತ ರಾಷ್ಟ್ರಘಟನೆಯಲ್ಲಿ ಪ್ರತಿಯೊಂದು ಜನಾಂಗವೂ ಇನ್ನೊಂದು ಜನಾಂಗವನ್ನು ತನ್ನ ನೆರೆಕರೆಯ ಆಪ್ತ ಜನಾಂಗವಾಗಿ ಭಾವಿಸುವುದು

ಭವಿಷ್ಯವಾದಿ ಟೆನಿಸನ್

ತಡಮಾಡದೆ ಈಗಲೇ ನಾವು ಅಂತಹ ರಾಷ್ಟ್ರ ಸಂಘಟನೆಗೆ ಕೈಹಾಕಬೇಕೆಂಬುದು ನನ್ನ ವಿಚಾರವಾಗಿದೆ ಇದರಲ್ಲಿ ಎಳ್ಳನಿತೂ ಸಮಯವ ವ್ಯರ್ಥಮಾಡಕೂಡದು ನೂರು ವರ್ಷಗಳ ಹಿಂದೆ ಟೆನಿಸನ್ ಒಂದು ಭವಿಷ್ಯತ್ತನ್ನು ಹೇಳಿದ್ದನು ಮುಂದೆ ಏನೆಲ್ಲಾ ಆಗಲಿವೆಯೆಂಬುದಕ್ಕೆ ಆತನ 'ಲೋಕ್ಸ್ಲೇಹಾಲ್' ಒಂದು ಅದ್ಭುತ ಭವಿಷ್ಯವಾಣಿಯಾಗಿದೆ. ಆತನು, ವಿಮಾನಗಳ ನಿರ್ಮಾಣದ ವಿಷಯ ಹೇಳಿದನು ಅದರಿಂದ ಶಾಂತಿ ಸ್ಥಾಪನೆಗೆ ಸಹಾಯವಾಗುವುದೆಂದು ನುಡಿದಿದ್ದನು ಆ ಮೇಲೆ ಅದೇ ವಿಮಾನವು ಘೋರ ಯುದ್ಧಾಸ್ತ್ರವಾಗಿ ಪರಿಣಮಿಸುವುದನ್ನೂ ಆತನು ಹೇಳಿದ್ದನು, ಅನಂತರ ಯುದ್ಧ ಘೋಷವು ಕಡಿಮೆಯಾಗುತ್ತಾ, ಜನರು ಸದಸದ್ವಿಚಾರಮಾಡಿ ಪ್ರತಿಯೊಬ್ಬನೂ ಉತ್ತಮನಾಗಿ, ಕೊನೆಗೆ ರಾಷ್ಟ್ರಸಂಘಟನೆಯಾಗುವುದೆಂದೂ ನುಡಿದಿದ್ದನು

ಆತನು ಕನಸು ಕಂಡಂತೆ ಪ್ರತಿಯೊಂದು ವಿಚಾರವೂ ಇಂದಿನ ವರೆಗೆ ನಡೆದೇ ಹೋಯಿತು ಆತನು ಹೇಳಿದ ಎರಡು ವಿಚಾರಗಳು ಮಾತ್ರ ಇನ್ನೂ ಆಗಲಿವೆ ಒಂದು ಪ್ರತಿಯೊಬ್ಬನೂ ಉತ್ತಮನಾಗುವುದು ಇನ್ನೊಂದು ರಾಷ್ಟ್ರ ಸಂಘಟನೆಯಾಗುವುದು ಇದು ಆಗಬೇಕಾದ ಸಮಯ ಈಗ ಸನ್ನಿಹಿತವಾಗಿದೆಯೆಂದು ನನ್ನ ಭಾವನೆ [illegible] ಅಮೇರಿಕವು ಪ್ರಮುಖ ಪಾತ್ರ ವಹಿಸಬೇಕಾಗಿದೆ ಅಮೇರಿಕೆ ನನ್ನ [illegible] ಯುದ್ಧದಲ್ಲಿ ಭಾಗವಹಿಸಿದ [illegible] ಜನಾಂಗ [illegible] ತನಗೆ ಬೇಕಾದುದನ್ನು [illegible] ನಾವು ಏನನ್ನೂ [illegible] ಅದರಿಂದ ಏನೂ ಪಡೆಯಲೂ ಇಲ್ಲ ಈ ಸಲವೂ ನಾವೇನನ್ನೂ ಕೇಳುವುದಿಲ್ಲ ನಾವು ಸಾಮಾನುಗಳನ್ನು ಸಾಲ ಒತ್ತಿಯಾಗಿ ಸಾಲ ಕೊಡುತ್ತೇವೆ, ತಿರುಗಿ ನಮಗೆ ಅದರ ಹಣ ಸಿಗಬಹುದೋ ಇಲ್ಲವೋ ಎಂಬ ವಿಚಾರವನ್ನೂ ನಾವೀಗ ಮಾಡುವುದಿಲ್ಲ

ಅವರು ಯೂರೋಪಿಯನರಲ್ಲ!

'ಆದರೆ, ನಾವೂ ಕೂಡಾ ಈ ಯುದ್ಧದಲ್ಲಿ ಪ್ರತಿಫಲವಾಗಿ ಸ್ವಲ್ಪ ಅಂಶ ಕೇಳಬೇಕಾದ ಸಮಯ ಬಂದಿದೆ, ಹಾಗೆ ನಾವು ಕೇಳುವ ಒಂದೇ ಒಂದು ಪ್ರತಿಫಲವೆಂದರೆ ಜಗತ್ತಿನಲ್ಲಿ ಶಾಂತಿ ಸ್ಥಾಪನೆಯಾಗಿ ಅಭಿವೃದ್ಧಿ ಸುಭಿಕ್ಷಗಳು ನೆಲ

(2ನೆಯ ಪುಟವನ್ನು ನೋಡಿ)



'ಫ್ಲೈಯಿಂಗ್ ಫೋರ್ಟ್ರೆಸ್'

ಎಂಬ ವಿಮಾನವು ಅಮೇರಿಕದಲ್ಲಿ ಈಗ ತಯಾರಾಗುತ್ತಿದೆ ಇದು 1200 ಅಶ್ವಶಕ್ತಿಯುಳ್ಳದ್ದಾಗಿದ್ದು, 40,000 ಫೀಟುಗಳ ಸಿಲಿಂಗ್‌ನಿಂದ ಕೂಡಿದೆ 7 ಮೈಲುಗಳಂತರದಿಂದ ಇದು ದೃಷ್ಟಿಗೆ ಅಗೋಚರವಾಗಿ, ನಿಶ್ಶಬ್ದವಾಗಿ ಬಿಂದು ಬಾಂಬು ಹಾಕಬಲ್ಲುದು ಇದರ ಹಾರಾಟದ ದೂರ 2,450 ಮೈಲುಗಳು ವೇಗ ಗಂಟೆಗೆ 305 ಮೈಲುಗಳು 25 000 ಫೀಟಿನ 4 ಟನ್ ಬಾಂಬುಗಳನ್ನು ಇದರಲ್ಲಿ ತುಂಬಿಸಬಹುದು

KANNADA ILLUSTRATED WEEKLY

ಸಂಘಟಿತರಾಗಿರಿ! ಇಲ್ಲವೇ ಸಂಹಾರವಾಗಿರಿ!

(1ನೆಯ ಪುಟದಿಂದ ಮುಂದುವರಿದುದು)

ಸುವಂಥಾ ಕೇಳಿಕೆಯಾಗಿದೆ. ನಾವೇನನ್ನು ಮಾಡಿದ್ದೇವೋ, ಅದನ್ನು ಯೂರೋಪಿನ ಜನರೂ ಮಾಡಬಲ್ಲರು. ನಾವು ಬೇರೆ ಕಡೆ ನೋಡುವಂಥಾ ಜನರಷ್ಟೇ ಯೂರೋಪಿನ ಜನರೂ ಉತ್ತಮರಿದ್ದಾರೆ. ಅವರು ನಮಗಿಂತ ಹೆಚ್ಚು ಯುದ್ಧಾಸಕ್ತರೆನಲಾಗುವುದಿಲ್ಲ; ಆದರೆ ಅವರ ಪ್ರಮಾದವೆಂದರೆ, ಅವರು ಜನಜನರಲ್ಲಿ ವಿಭಾಗವಾಗಿದ್ದಾರೆ; ಅಂಥಾ ವಿಭಾಗದಿಂದ ಲಾಭಪಡೆಯಲು ನೋಡುತ್ತಾರೆ; ಅಂಥಾ ವಿಭಾಗದ ಲಾಭದೃಷ್ಟಿಯೇ ಯುದ್ಧಗಳಿಗೆ ಕಾರಣವಾಗುತ್ತವೆ. ಆದರೆ ಒಮ್ಮೆ ಯೂರೋಪು ಸಂಘಟಿತ ರಾಷ್ಟ್ರ ಘಟನೆಮಾಡಿಕೊಂಡರೆ, ಯುದ್ಧದಿಂದ ಲಾಭ ಪಡೆವ ಜನರು ತಿರುಗಿ ತಮ್ಮ ಟಂಚು ಪ್ರವೇಶ ಮಾಡಲಾಸ್ಪದವುಳ್ಳಯುಲ್ಲಾರದು; ಮುಂದೆ ಅವರ ಯಾವುದೇ ಕುತಂತ್ರವೂ ನಡೆಯಲಾರದು.

'ಇಲ್ಲಿ ನಾವು ತುಸು ವಿಚಾರಿಸಬೇಕು; ಯೂರೋಪು ಯೂರೋಪಿಯನರನ್ನು ಎಂದೂ ಸೃಷ್ಟಿ ಮಾಡಲಿಲ್ಲ. ಯೂರೋಪಿನಲ್ಲಿ ಹುಟ್ಟಿದವರು, ಫ್ರೆಂಚರು, ಜರ್ಮನರು, ರಶ್ಯನರು, ಇಟಲಿಯನರು, ಪೋಲರು, ಬೆಲ್ಜಿಯನರು ಇಂಥ ಭಿನ್ನ ಭಿನ್ನ ಜನಾಂಗದವರೇ. ಹಾಗಾಗಿ ಯೂರೋಪಿನಲ್ಲಿ ಯೂರೋಪಿಯನರು ಹುಟ್ಟಲೇ ಇಲ್ಲ. ಈ ವಿಚಾರದಲ್ಲಿ ವಿಭಾಗದ ವಿಷವಿದೆಯೆಂದು ನಾವು ತಿಳಿಕೊಳ್ಳಬಹುದು. ನಮ್ಮ ಅಮೇರಿಕದಲ್ಲಿ ಎಷ್ಟೇ ಜನಾಂಗಗಳು ಇದ್ದರೂ ಅಮೇರಿಕವು ಅಮೇರಿಕನರನ್ನೇ ಸೃಷ್ಟಿಮಾಡುತ್ತದೆ. ನಾವು ಇಲ್ಲಿನವರೆಲ್ಲರೂ ಅಮೇರಿಕನರಾಗುವುದು ಸಾಧ್ಯವಾದರೆ, ಅವರು ಯೂರೋಪಿನಲ್ಲಿರುವವರು ಯೂರೋಪಿನಯರಾಗುವುದೂ ಸಾಧ್ಯವಿದೆ.

ಸ್ವರ್ಣಮಯ ಧರಿತ್ರಿ

'ಸಂಯುಕ್ತ ರಾಷ್ಟ್ರಘಟನೆಯೆಂದರೆ ಅದೇ. ಈ ಯುದ್ಧದ ಬಳಿಕ ಒಂದು ಹೊಸ ವರ್ಷ ಬರಲಿದೆ; ಅಲ್ಲಿ ಪ್ರತಿಯೊಬ್ಬನೂ ಹಿಂದಿರುಗಿ ನೋಡದೆ ಮುಂದಿನ ಹಾದಿಹಿಡಿದು ಸಾಗುವನು. ಬೇರೆ ರೀತಿಯಿಂದ ನಾವು ಕಲಿಯಲಾಗದ ಪಾಠವನ್ನು ಯುದ್ಧವು ಕಲಿಸುತ್ತದೆಯೆಂದು—ನಾನು ಹಾಗೆಂದೂ ಹೇಳಲಾರೆ—ಕೆಲವರು ಹೇಳುತ್ತಾರೆ. ಈ ಯುದ್ಧವು ಲೋಭದಿಂದ, ಅವಿಚಾರದಿಂದ, ಕಾಪಟದಿಂದ, ಅಧಿಕಾರ ಲಾಲಸೆಯಿಂದ ಹಾಗೂ ಆರ್ಥಿಕ ಸ್ವಾರ್ಥದಿಂದ ಉಂಟಾಗಿದೆ. ಈ ಯುದ್ಧವನ್ನು ಆರಂಭಿಸಲು ಕಾರಣಕರ್ತರಾದವರ ಮಿದುಳು ಸರಿಯಾಗದಿದ್ದರೆ ಯಾವುದೇ ಇತ್ಯರ್ಥವೂ ಆಗಲಾರದು. ಆದರೆ ತನ್ಮಧ್ಯೇ ಇತರರು ವಿಚಾರವಂತರು, ರಾಜಕೀಯ ಹೋರಾಟವನ್ನು ಬದಿಗಿರಿಸಿ, ಜನಾಂಗದ ಮತ್ತು ಜನರ ಶಾಂತಿ ಅಭ್ಯುದಯಸುಭಿಕ್ಷಗಳನ್ನು ಹಾರೈಸಿ ವಿಶ್ವದ ಸಂಯುಕ್ತ ರಾಷ್ಟ್ರಘಟನೆಯೊಂದನ್ನು ನಿರ್ಮಿಸಿಕೊಂಡರೆ ಮುಂದಿನ ಭವಿಷತ್ತು ಭವ್ಯವಾಗಲಿದೆ. ಎಲ್ಲಾ ಜನಾಂಗಗಳಿಗೆ ಎಲ್ಲಾ ಮತ ಧರ್ಮಗಳಿಗೆ ಅಲ್ಲಿ ಎಡೆಯಿದೆ.

'ಯುದ್ಧ ನಿಂತಕೂಡಲೇ ಧರಿತ್ರಿ ಸ್ವರ್ಣಮಯವಾಗುವುದು; ಸಂಪದುತ್ಪತ್ತಿ ಹೆಚ್ಚುವುದು; ಜಗತ್ತೇ ನಿರಂತರ ಉದ್ಯೋಗಶಾಲಿಯಾಗಿ, ಅನ್ಯೋನ್ಯ ಸಹಕಾರ ಬಾಂಧವ್ಯದಿಂದ ಸುಖಜೀವನ ಮಾಡಿ ಬೆಳಗುವುದು; ಯುದ್ಧಕಾಲದಲ್ಲಿ ಅದು ಆಗಲು ಸಾಧ್ಯವಿಲ್ಲ. ಜಗತ್ತಿನ ಎಲ್ಲಾ ಜನಾಂಗಗಳ ಜನರ ಇಷ್ಟಾಪೂರ್ತಿಯಾಗುವಷ್ಟು ಸಾಧನ ಸಂಪತ್ತನ್ನು ನಿರ್ಮಿಸಿ ಸಹಕಾರ ಬುದ್ಧಿಯಿಂದ ಹಂಚಿ ಸುಖಪಡುವುದೇ ಶಾಂತಿಯ ಮಾರ್ಗ.

'ಬಹುಶಃ ಈ ಯುದ್ಧದ ಪರಿಣಾಮವಾಗಿ ಜನರು ವಿಚಾರಮಾಡಲು ತೊಡಗಬಹುದು. ನೀವು ಒಮ್ಮೆ ಜನರಿಗೆ ವಿಚಾರ ಮಾಡಲು ಆಸ್ಪದಕೊಟ್ಟರೆ, ಅವರು ಹಿಂದೆ ಮಾಡಿದ ಪ್ರಮಾದಗಳೆಲ್ಲವನ್ನೂ ತಿಳಿಕೊಂಡು ಮುಂದಿನ ವಿಚಾರವಾಗಿ ಸರಿಯಾದ ತಿಳುವಳಿಕೆಯುಳ್ಳವರಾಗುವರು. ಅದೇ ನಿಜವಾದ ವಿದ್ಯಾಭ್ಯಾಸ. ಅಂತಹ ವಿದ್ಯಾಭ್ಯಾಸದಿಂದಲ್ಲೇ ನಮಗೆ ಸುಖಸಂಪತ್ತುಗಳು ದೊರಕುವವು.

'ಯುದ್ಧದಿಂದಾಗಿ ಕೆಲವು ಉದ್ಯೋಗಗಳು ಹೆಚ್ಚಿದ್ದು, ಅದರಿಂದ ಸ್ತ್ರೀಯರೂ ಧನಾರ್ಜನೆ ಮಾಡುತ್ತಿರುವುದರಿಂದ, ಯುದ್ಧ ನಿಂತಮೇಲೆ ನಮ್ಮ ಗೃಹಜೀವನದಲ್ಲಿ ವ್ಯತ್ಯಾಸವಾಗಲಿದೆಯೆಂಬ ವಿಚಾರ ನನಗೆ ಗೊತ್ತಿದೆ. ಯುದ್ಧಾನಂತರ ನಮ್ಮ ಹೆಂಗುಸರು ಮನೆಸೇರಿ ಅವರ ಗೃಹಿಣಿ ಸ್ಥಾನವನ್ನಲಂಕರಿಸುವರು. ಯುದ್ಧವೂ ಮನುಷ್ಯನ ಎಷ್ಟೋ ಬಯಕೆಗಳನ್ನು ಒದಗಿಸುತ್ತದೆ; ಆದರೆ ಯುದ್ಧಕಾಲದಲ್ಲಿ ಸೃಷ್ಟಿಸಿದ ಯಂತ್ರಗಳು ಯುದ್ಧಾನಂತರವೂ ಪ್ರಯೋಜನಕ್ಕೆ ಬಂದೀತು. ಅಂತಹ ಶಾಂತಿಕಾಲದಲ್ಲಿ, ಜಗತ್ತಿನ ಸಂಯುಕ್ತ ರಾಷ್ಟ್ರಘಟನೆಯಲ್ಲಿ, ಪ್ರತಿಯೊಬ್ಬನೂ ಸುಖವಾಗಿ ಬಾಳಬಹುದು.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 62/42.

ಅರ್ಜಿದಾರರಳು—ದೇವುಹೆಂಗು, ದುಗ್ಗು ಹೆಂಗ್ಸಿನ ಮಗಳು ಕುಂದಾಪುರ ತಾಲೂಕು ವಡೇರ ಹೋಬಳಿಗ್ರಾಮ

ಎದುರುದಾರರು—1. ಬದ್ರ 2. ನೀಲು, ದುಗ್ಗು ಹೆಂಗ್ಸಿನ ಮಕ್ಕಳು ವಡೇರ ಹೋಬಳಿ ಗ್ರಾಮ

ಅರ್ಜಿದಾರಳ ಅಣ್ಣಂದಿರು ಅನಂತ ಮತ್ತು ಮಾಸ್ತಿ ಎಂಬವರು ಹುಲ್‌ಕಲ್ ಗಾಟಿಯಲ್ಲಿ ರಸ್ತೆಯ ಕಂಟ್ರಾಕ್ಟ್ ಕೆಲಸ ವಹಿಸಿಕೊಂಡು ಅವರು ಮೃತಪಟ್ಟಿರುವರು ಎಂತಲೂ, ಅರ್ಜಿದಾರಳು ಮೃತರ ವಾರಸ್ದಾರಳೆಂತಲೂ, ಅವರಿಗೆ ಬರಬೇಕಾದ ಹಣವನ್ನು ತಾನು ವಸೂಲು ಮಾಡುವರೆ ಹಕ್ಕುದಾರಳೆಂತಲೂ, ತನಗೆ ವಾರಿಸ್ ಸರ್ಟಿಫಿಕೇಟನ್ನು ಕೊಡಿಸಬೇಕೆಂತ ಮೇಲ್ಕಂಡ ಕೋರ್ಟಿನಲ್ಲಿ ಬಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 28-9-42ಕ್ಕೆ ತನಿಖೆಗೆ ಇಟ್ಟಿದೆ ಯಾರಾದರೂ ಆಕ್ಷೇಪವಿದ್ದಲ್ಲಿ ಈ ಕೋರ್ಟು ಮುಂದೆ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

ಕುಂದಾಪುರ, 11-9-42. — **V. K. Shetty,** ಅರ್ಜಿದಾರಳ ಕಡೆ ಎಡ್ವಕೇಟ್

WANTED

Wanted for the Rajah's High School, Nileshwar, South Kanara, a fully qualified drawing hand with Malayalam as second language. A working knowledge of Kannada is also necessary. The vacancy is temporary up to next March. Applications to reach the Headmaster before 5-10-1942.

K. Ramakrishna Rao,
Headmaster.
The Rajah's High School
Nileshwar, S. Kanara.

ಸಾದರ ಸ್ವೀಕಾರ

ವಿದ್ಯೋದಯ

ದ. ಕ. ಜಿಲ್ಲಾ ಟೀಚರ್ಸ್ ಗಿಲ್ಡ್ ಮಂಗಳೂರು ಇದರ ಆಶ್ರಯದಲ್ಲಿ 'ವಿದ್ಯೋದಯ' ಎಂಬ ಹೆಸರಿನ ಶಿಕ್ಷಣಿಕ ಮಾಸ ಪತ್ರಿಕೆಯೊಂದು ಹೊರಟಿದೆ. ಸಂಪಾದಕರು ಶ್ರೀ ಎಸ್. ಮುಕುಂದ ರಾಯರು. ವಾರ್ಷಿಕ ವರ್ಗಣಿ ೧-೮-೦. ಈ ಸಂಚಿಕೆಯಲ್ಲಿ ವಿದ್ಯಾ ವಿಷಯಕ ಸೂಚನೆಗಳು, ಸರಕಾರೀ ಪ್ರಕಟಣೆಗಳು ಇನ್ನು ಕೆಲವು ಉಪಯುಕ್ತ ಲೇಖನಗಳು ಇದ್ದು ಶಿಕ್ಷಣ ಕ್ಷೇತ್ರದಲ್ಲಿ ದುಡಿವವರಿಗೆ ಅತೀವ ಪ್ರಯೋಜನಕಾರಿಯಾಗುವುದು. ಹೊಸ ವ್ಯವಸಾಯ ಬಾಂಧವನಿಗೆ ನಮ್ಮ ಸ್ವಾಗತ.



ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

ಸಮರಭೂಮಿಯ ಸಂಚಾರ

ರಷ್ಯದ ರಣರಂಗದಲ್ಲಿ ರಕ್ತದ ಪ್ರವಾಹವೇ ಹರಿಯುತ್ತಿದೆ! ರಾಮರಾವಣರ ಯುದ್ಧಕ್ಕೆ ರಾಮರಾವಣರ ಯುದ್ಧವೇ ಸದೃಶವಾಗಿತ್ತಂತೆ! ಅಂತೆಯೇ ರಷ್ಯನ್ ಜರ್ಮನ್ ಸಂಗ್ರಾಮಕ್ಕೆ ರಷ್ಯನ್ ಜರ್ಮನ್ ಸಂಗ್ರಾಮವೇ ಸಾಟಿಯಾಗಿದೆ ಎನ್ನದೆ ನಿರ್ವಾಹವಿಲ್ಲ. ಏಂದರೆ ಈ ತರದ ಸಮರವು ಬೇರೆಲ್ಲಿಯೂ ಈ ಮಹಾಯುದ್ಧಕಾಲದಲ್ಲಿ ನಡೆದುದಿಲ್ಲ. ತಮ್ಮ ರಾಷ್ಟ್ರದ ವೀರ ದಳಪತಿ ಸ್ಟಾಲಿನನ ಕೀರ್ತಿಯ ಹೆಸರನ್ನು ಹೊತ್ತ ಪಟ್ಟಣವನ್ನು, ಸ್ಟಾಲಿನ್‌ಗ್ರಾಡನ್ನು ರಕ್ಷಿಸಲು ರಷ್ಯನರು ಹೂಡಿದ ಹೋರಾಟವೆಂದರೆ ಸ್ವಾತಂತ್ರ್ಯಯೋಧರು, ಪ್ರಪಂಚದ ಯಾವುದೇ ಭಾಗದಲ್ಲಿರುವ ರಾಷ್ಟ್ರಾಭಿಮಾನಿಗಳಾದರೂ ತಲೆಬಾಗುವಂಥಾದ್ದು! ಅಂತಹ ಧೀರ ನಿರ್ಧಾರದ ರಷ್ಯನ್ ಯೋಧರನ್ನು ಕೆಡಹುತ್ತಾ, ರಕ್ತದ ಹೊಳೆ ಹರಿಸುತ್ತಾ, ಯಂತ್ರಬಲದಿಂದಲೂ, ತಂತ್ರಬಲದಿಂದಲೂ ಕೆಚ್ಚೆದೆಯಿಂದ ಕಾದಾಡಿದ ಜರ್ಮನರ ರಾಕ್ಷಸೀ ರಣರಭಸವಾದರೋ ಭೀಷಣ ಭಯಾನಕವು! ಅಂತೂ ಇಂದು ಸ್ಟಾಲಿನ್‌ಗ್ರಾಡನ್ನು ಜರ್ಮನರು ಭೇದಿಸಿ ಒಳಹೊಕ್ಕರು! ಈಗ ಆ ನಗರದ ಒಳಗಡೆ, ರಸ್ತೆರಸ್ತೆಗಳಲ್ಲಿ ಬೀದಿಬೀದಿಗಳಲ್ಲಿ, ಮನೆಮನೆಗಳಲ್ಲಿ ರಷ್ಯನ್ ಜರ್ಮನ್ ಸೈನಿಕರಿಗೆ ಕೈಕೈಕಾಳಗ ನಡೆಯುತ್ತಿದೆ. ಈ ಯುದ್ಧವು ಕ್ಷಣಕ್ಷಣಕ್ಕೂ ಭೀಷಣವಾಗುತ್ತಿದೆ. ಟೇಂಕು, ಫಿರಂಗಿ, ವಿಮಾನಗಳ ಘನಗರ್ಜನೆಯಿಂದ ಭೂಮ್ಯಾಕಾಶಗಳು ನಡುಗುತ್ತಿವೆ! ಏನು, ಇನ್ನೆಷ್ಟು ದಿನ ಈ ಪರಿಯಲ್ಲಿ ರಷ್ಯನರು ಅಮಿತ ಪರಾಕ್ರಮಿಯಾದ ಶತ್ರುವಿನೆದುರು ಕಾದಾಡಬಲ್ಲರೋ ಎಂದು ಸ್ವಾತಂತ್ರ್ಯಪ್ರೇಮಿಯಾದ ಲೋಕವೆಲ್ಲಾ ಚಿಂತಾಕ್ರಾಂತವಾಗಿದೆ. ರಷ್ಯಕ್ಕೆ ಇದುವರೆಗೆ ಏಕಾಏಕಿ ಹೋರಾಡಿ ಈ ತರದ ವಿಷಮ ಸ್ಥಿತಿಗಿಳಿದ ಇಂದಿನ ನವಯುಗದ ಏಕಮಾತ್ರ ಆಶಾಕಿರಣವಾಗಿದ್ದ ಸಮತಾವಾದೀ ರಾಷ್ಟ್ರಕ್ಕೆ ಇಂದು ಕೊನೆಗಾಲವಲ್ಲವಾದರೂ ಕೈಗೂಡುವ ಮಿತ್ರರು ಯಾರೂ ಇಲ್ಲವೆ? ಇದ್ದರೆ ಏಕೆ ಬರಲೊಲ್ಲರೆಂದು ಪ್ರಪಂಚದ ಅನೇಕಾನೇಕ ಜನಸಂತತಿಯು ನಿಟ್ಟುಸಿರಿಡುತ್ತಿದೆ!

ಪಟ್ಟಣ ಪ್ರವೇಶ!

ಇದೇ ತಿಂಗಳ ತಾರೀಕು ೧೫ನೆಯ ದಿನದಂದು, ಜರ್ಮನರು ಅಮಿತ ಪರಾಕ್ರಮತೋರಿಸಿ, ವೀರಾವೇಶದಿಂದ ಎದುರಿಸಿ ನಿಂತ ರಷ್ಯನ್ ವ್ಯೂಹವನ್ನು ಭೇದಿಸಿ, ಮೊದಲು ವಾಯುವ್ಯಮಾರ್ಗದಿಂದ ಸ್ಟಾಲಿನ್‌ಗ್ರಾಡಿನ ಒಳಹೊಕ್ಕರು! ಒಳಹೊಕ್ಕೊಡನೆ ಅಮಿತ ಕಾಲ್ಬಲ ಸಹಿತ ಅಸಂಖ್ಯಾತ ಟೇಂಕ್ ಸಹಿತ ಎಲ್ಲಾ ಕಡೆಗಳಿಂದಲೂ ಎಲ್ಲಾ ರಸ್ತೆಗಳಲ್ಲಿ ಒಳನುಗ್ಗಿಬಿಟ್ಟರು. ಅಂತೂ ಸ್ಟಾಲಿನ್‌ಗ್ರಾಡ್ ಪರಿಸ್ಥಿತಿಯು ಇದರಿಂದ ಕೆಟ್ಟುಹೋದಂತಾಯಿತು! ಆ ನಗರದ ಮುಖ್ಯ ರಸ್ತೆಗಳೂ ಕೆಲವು ಮುಖ್ಯ ಕಟ್ಟಡಗಳೂ ಇಷ್ಟರಲ್ಲಿಯೇ ಜರ್ಮನರ ವಶವಾಗಿಬಿಟ್ಟವೆ. ಸ್ಟಾಲಿನ್‌ಗ್ರಾಡನ್ನು ವಶಪಡಿಸಿದ ಕೂಡಲೇ ರಜೆ, ಹಣ, ಸುಲಿಗೆ ರೂಪದಲ್ಲಿ ಬಹುಮಾನಗಳನ್ನು ಕೊಡುವುದಾಗಿ ಜರ್ಮನ್ ಸೈನಿಕರನ್ನು ಹಿಟ್ಲರನು ಹುರಿದುಂಬಿಸಿರುವನಂತೆ! 'ತಾಯ್ನಾಡಿನ ಸಲುವಾಗಿ ಪ್ರಾಣವನ್ನಾದರೂ ಕೊಟ್ಟು ವೈರಿಯೊಡನೆ ಹೋರಾಡಿರಿ, ಕೊನೆಯ ರಷ್ಯನನು ಉಳಿವ ವರೆಗೂ ಹೋರಾಡಿರಿ, ರಷ್ಯದ ಮಾನವುಳಿಸಿರಿ' ಎಂದು ಸ್ಟಾಲಿನರು ಕರೆಯಿಸುತ್ತಿದ್ದಾರೆ. ಸ್ಟಾಲಿನ್‌ಗ್ರಾಡಿನ ರಸ್ತೆಯಲ್ಲಿ ಉಭಯ ಸೈನಿಕರಿಗೆ ಅನೇಕ ಸಮಯದ ತನಕ ಹಸ್ತಾಹಸ್ತಿ ಮುಷ್ಟಾಮುಷ್ಟಿ ಕಾಳಗಗಳು ನಡೆದವು. ಸೈಬೇರಿಯದಲ್ಲಿ ಶಿಕ್ಷಣ ಪಡೆದ ಕೆಲವು ಸೈನ್ಯಗಳು ಸ್ಟಾಲಿನ್‌ಗ್ರಾಡ್ ರಕ್ಷಿಸಲು ಬಂದವೆಂದು ತಿಳಿದುಬಂದಿದೆ. 'ಮಿತ್ರರು ಅಪಾರ ಸೈನ್ಯವನ್ನು ತೆಗೆದುಕೊಂಡು ಈಗ ರಷ್ಯದ ರಕ್ಷಣೆಗೆ ಹೋಗದೆ, ಸುಮ್ಮಗೆ ಕುಳಿತಿದ್ದು, ದ್ವಿತೀಯ ರಂಗದ ಮಾತುಕತೆಯಾಡುತ್ತಲಿರುವುದು ಬರೇ ಲಜ್ಜಾಸ್ಪದವಾಗಿದೆ' ಎಂದು ರಾಯಿಟರ್ ಸುದ್ದಿಗಾರನೂ ಉಲ್ಲೇಖಿಸಿದ್ದಾನೆ! ಜರ್ಮನರು ಈಗಲೂ ಹೊಸ ಹೊಸ ಸೈನ್ಯಗಳನ್ನು ತರಿಸುತ್ತಲಿದ್ದಾರೆ. ಸ್ಟಾಲಿನ್‌ಗ್ರಾಡಿನ ವಾಯುವ್ಯ ದಿಕ್ಕಿನ ಉಪನಗರಗಳು ಸತ್ತವರ ಹೆಣರಾಶಿಯಿಂದ ಸ್ಮಶಾನ ಸದೃಶವಾಗಿದೆಯೆಂದು ಸುದ್ದಿ. ಅಲ್ಲಿನ ಪ್ರತಿಯೊಂದು ರಸ್ತೆಯಲ್ಲೂ ಭೀಷಣ ಸಮರವಾಗಿತ್ತು. ಇಡೀ ಊರು ಉರಿಯಿಂದ ಧಗಧಗಿಸುತ್ತಿತ್ತು! 'ಸ್ಟಾಲಿನ್‌ಗ್ರಾಡು ಅತ್ಯಂತ ವಿಸ್ತಾರವಾದ ನಗರವಾಗಿದ್ದು, ಅಲ್ಲಿನ ಕಾರ್ಖಾನೆ ಮತ್ತು ಕೂಲಿಗಾರರು ಬಹಳ ದೂರದಲ್ಲಿರುವರು; ಆದ್ದರಿಂದ ಪಟ್ಟಣವನ್ನು ಭೇದಿಸಿದೊಡನೆಯೇ ಸ್ಟಾಲಿನ್‌ಗ್ರಾಡ್ ಶರಣಾದಂತಾಗಲಿಲ್ಲ' ಎಂದು ಒಬ್ಬ ಯುದ್ಧ ಸುದ್ದಿಗಾರನ ಆಶಾವಾರ್ತೆ. ಡಾನ್ ಮತ್ತು ವೋಲ್ಗಾ ನದಿಗಳ ನಡುವಿನ ಪ್ರದೇಶದಲ್ಲಿ ರಷ್ಯದ ವೀರ ದಳಪತಿ ಟಿಮೊಶೆಂಕೋ ಒಂದು ಅಪ್ರತಿಮ ಪ್ರತಿಘಟನೆಯನ್ನು ಕೊಡುವ ಸಿದ್ಧತೆ ಮಾಡಿರುವನಾಗಿ ಸುದ್ದಿ. ಅಲ್ಲಿಯೂ ಕಾಳಗ ನಡೆದಿದೆ. ಗ್ರೋಝ್ನಿ ಎಣ್ಣೆ ಕಣಿಗಳ ಕಡೆಗೆ ಹೊರಟಿದ್ದ ಜರ್ಮನ್ ಟೇಂಕ್ ಸಮರ ನಿಪುಣ ಸೇನಾಪತಿ ವಾನ್‌ಕ್ಲೈಸ್ಟನು ಯುದ್ಧದಲ್ಲಿ ಸಂಹಾರವಾದನೆಂದು ವರದಿಯಾಗಿದೆ.

ಸ್ಟಾಲಿನ್‌ಗ್ರಾಡಿನ ಪತನವಾದರೆ?

ಸ್ಟಾಲಿನ್‌ಗ್ರಾಡ್ ವೈರಿಗಳ ಕೈಸೇರಿದರೆ ಮುಂದಿನ ಪರಿಣಾಮವೇನೆಂಬುದನ್ನು ಈಗ ವಿಚಾರಿಸುವುದವಶ್ಯ. ಸ್ಟಾಲಿನ್‌ಗ್ರಾಡಿನ ಪತನದಿಂದ ರಷ್ಯಕ್ಕೆ ಪ್ರಧಾನ ಯುದ್ಧ ಕ್ಷೇತ್ರವೊಂದರ ನಷ್ಟ ಮಾತ್ರವೆಂದು ತಿಳಿದುಕೊಳ್ಳಬಾರದು, ಇಡೀ ದಕ್ಷಿಣ ರಷ್ಯಕ್ಕೇ ಇದರಿಂದ ಬಲವಾದ ಆಘಾತವಿದೆ. ವೋಲ್ಗಾ ನದೀ ಮೂಲಕ ಜರ್ಮನ್ [illegible] ರಷ್ಯನರನ್ನು ಬೆನ್ನಟ್ಟಲು ಅವಕಾಶವಾಗುವುದು; ಕಾಕಸಸ್, ಮುಂಡ ಕಡಿದು ಹೋದ ರುಂಡದಂತಾಗಿ ಬಿಡುವುದು; ಗ್ರೋಝ್ನಿ ಮತ್ತು ಬಾಕು ಎಣ್ಣೆ ಕಣಿಗಳ ಅವಸ್ಥೆಯೂ ವಿಷಮವಾದೀತು. ಆದರೆ ಸ್ಟಾಲಿನ್‌ಗ್ರಾಡ್ ಪತನದ ಬಳಿಕ ಜರ್ಮನರ ಓಘವು ಯಾವ ಕಡೆಗೆ ಹೋಗುವುದೆಂದು ತಿಳಿದು ಬರದಿದ್ದರೂ, ಆ ಕಾರಣದಿಂದಲೇ ರಷ್ಯದ ಯುದ್ಧವು ಕೊನೆಗಾಣುವುದೆಂದು ಖಂಡಿತ ಹೇಳಬರುವುದಿಲ್ಲ. ಅಂತೂ ಈಗ ಜರ್ಮನರು ಯಾವ ಕಾಕಸಸ್, ಗ್ರೋಝ್ನಿ ಬಾಕು ಎಣ್ಣೆ ಕಣಿಗಳ ಕಡೆಗೆ ದೃಷ್ಟಿಯಿಟ್ಟು ಸಮರಸಂಚರಿಸುತ್ತಿದ್ದಾರೋ ಆ ದೃಷ್ಟಿಯಿಂದಲೇ ಮುಂದಿನ ಹೋರಾಟವೂ ನಡೆಯುವುದೆಂದು ನಾವು ನಂಬಬಹುದು. ಅಂತೂ ಪ್ರಕೃತ ಕಾಕಸಸ್‌ನಲ್ಲಿ ಎರಡು ಜರ್ಮನ್ ಬಲಗಳು ಮುನ್ನುಗ್ಗುತ್ತಲಿವೆ. ಒಂದು ನೊವೊರೊಸಿಸ್ಕ್ ಬಂದರವನ್ನು ಆಕ್ರಮಿಸಿಕೊಂಡು ಕರಾವಳಿ ದಾರಿಯಾಗಿ ಟುವಾಪ್ಸೆ ಬಂದರದ ಬಳಿ ಬರುತ್ತಿರುವುದು; ಇನ್ನೊಂದು ತೆರೇಕ ನದಿಯನ್ನು ಹಾದು, ಗ್ರೋಝ್ನಿ ಎಣ್ಣೆ ಕಣಿಗಳ ಕಡೆಗೆ ಮುಂದೊತ್ತುತ್ತಿರುವುದು. ಇದು ಮಾತ್ರವಲ್ಲದೆ, ಜರ್ಮನರು ಹೊಸ ಹೊಸ ಸೈನ್ಯವನ್ನು ಈಗಾಗ ತರಿಸಿ ಪ್ರಬಲರಾಗುತ್ತಿದ್ದಾರೆ. ಆದರೂ ಜರ್ಮನರಿಗೆ ಮುಂದೆ ಬಹಳ ಅಪಾಯಕರ ಯುದ್ಧರಂಗವೆಂದರೆ ಕಾಕಸಸ್ ಪರ್ವತ ಪ್ರದೇಶ. ದೇಶೀಯರಾದ ರಷ್ಯನರು ಅಲ್ಲಿ ಚಕಿತ ಚಮತ್ಕಾರದಿಂದ ಹೋರಾಡಬಲ್ಲರಲ್ಲದೆ, ಅವರಿಗೆ ಎದುರಾಗಿ ಬರುವ ಜರ್ಮನರು ಬಹಳ ಅಪಾಯಗಳನ್ನು ಎದುರಿಸಬೇಕಾಗುವುದು. ಕಾಕಸಸ್ ಪರ್ವತವನ್ನು ದಾಟಲು ಕೆಲವು ಕಣಿವೆಗಳೇ ಇವೆ; ಅವುಗಳನ್ನು ವಶಪಡಿಸಿದರೆ ಜರ್ಮನರು ಅಲ್ಲಿ ಗೆದ್ದರೂ ಗೆಲ್ಲಬಹುದು. ಈಗ ತೆರೇಕ ನದೀ ತೀರದಲ್ಲಿರುವ ಜರ್ಮನ್ ಬಲದ ಇದಿರಾಗಿ ಒಸ್ಸೇಶಿಯನ್ ಮತ್ತು ಜಾರ್ಜಿಯನ್ ಎಂಬ ಎರಡು ಕಣಿವೆಗಳು ಇವೆ. ಅವುಗಳನ್ನು ಮೊದಲಾಗಿ ಹಿಡಿಯಲು ಜರ್ಮನರು ಪ್ರಯತ್ನಿಸಬಹುದು. ಇಷ್ಟು ಮಾತ್ರವಲ್ಲದೆ ಈಗಾಗಲೇ ಹಿಮಗಾಲದ ಒಂದು ಅಂಜಿಕೆಯೂ ಇದೆ, ಕಳೆದ ಹಿಮಗಾಲದಲ್ಲಿ ಜರ್ಮನರು ಹೇಗೆ ಹಿಂದೆಗೆಯಬೇಕಾಯಿತು ಎಂಬುದು ನಮಗೆ ತಿಳಿದಿದೆ. ಕಾಕಸಸ್ ಪರ್ವತದಲ್ಲಿ ಅಕ್ಟೋಬರ್‌ನಿಂದ ಮೇ ತಿಂಗಳ ವರೆಗೆ ಹಿಮ ಬೀಳುತ್ತದೆ. ಹೀಗಾಗಿ ಜರ್ಮನರಿಗೆ ಕಾಕಸಸ್ ಒಂದು ಅಪಾಯಕಾರೀ ವಿಷಯವಾಗಿದೆ. ಆದರೆ ಬರುವ ಭಯಾನಕ ಹಿಮಗಾಲದ ಮೊದಲೇ ಕಾಕಸಸ್‌ನ್ನು ವಶಪಡಿಸಿಕೊಳ್ಳಬೇಕೆಂದೇನೋ ಹಿಟ್ಲರನ ಮಹತ್ವಾಕಾಂಕ್ಷೆಯಿದ್ದರೂ ಇರಬಹುದು; ಅದು ಎಷ್ಟರ ಮಟ್ಟಿಗೆ ಯಶಸ್ವಿಯಾದೀತೋ ಹೇಳಲಾಗುವುದಿಲ್ಲ. ಏನೆಂದರೂ ರಷ್ಯನರು ಯಾವುದೇ ಕಡೆಯಲ್ಲಿಯೂ ಇದುವರೆಗೆ ಜರ್ಮನರನ್ನು ಒಮ್ಮೆಲೇ ನುಗ್ಗಬಿಟ್ಟಿಲ್ಲ; ಪ್ರಬಲ ಯಂತ್ರಶಕ್ತಿಯಿಂದ ಜರ್ಮನರು ರಷ್ಯನರನ್ನು ಅನೇಕ ಕಡೆಗಳಲ್ಲಿ ಸೋಲಿಸಿದ್ದರೇನೋ ನಿಜ. ಆದರೆ ರಷ್ಯನರು ತಮ್ಮ ಪ್ರತಿಯೊಂದು ಸೋಲಿಗೂ ತಮ್ಮೆದೆಯ ರಕ್ತವನ್ನು ನೀರಿನಂತೆ ಚೆಲ್ಲಿ ತಮ್ಮ ಸೋಲಿನಿಂದ ನರಕಾಳಿಗೆ ತೃಪ್ತಿಯ ಔತಣವನ್ನೇ ಕೊಟ್ಟಿದ್ದಾರೆ!

ನ್ಯೂಗಿನಿ ಸೊಲೊಮನ್

ಇವುಗಳೆರಡರಲ್ಲಿಯೂ ಪುನಃ ಯುದ್ಧ ಪ್ರಾರಂಭವಾಯಿತು, ನ್ಯೂಗಿನಿಯಲ್ಲಿ ಜಪಾನರು ಮುಂದೆ ಬಂದು ಮೊರೆಸಬಿ ಬಂದರವನ್ನು ಹಿಡಿಯುವುದರಲ್ಲಿದ್ದಾರೆ. ಅಲ್ಲಿನ ಗುಡ್ಡಗಾಡು ಪ್ರದೇಶಗಳಲ್ಲಿ ಅವರನ್ನು ಮಿತ್ರ ಸೈನಿಕರು, ಹೆಚ್ಚಾಗಿ ಆಸ್ಟ್ರೇಲಿಯನರು ಎದುರಿಸುತ್ತಿದ್ದಾರೆ. ಪರ್ವತಪ್ರದೇಶದ ಹೋರಾಟದಲ್ಲಿ ಜಪಾನರನ್ನು ತಡೆಹಿಡಿಯುವುದು ಬಹಳ ದುಸ್ಸಾಧ್ಯವೆಂದು ಆಸ್ಟ್ರೇಲಿಯನ್ ಮಂತ್ರಿಯೊಬ್ಬನೇ ಒಪ್ಪಿಕೊಂಡಿದ್ದಾನೆ. ಸೊಲೊಮನ್‌ನಲ್ಲಿಯೂ ಹೀಗೆ ಯುದ್ಧ ನಡೆಯಿತು. ಅಮೇರಿಕನರು ಗೆದ್ದುಕೊಂಡಿರುವ ಸ್ಥಳಗಳನ್ನು ಪುನಃ ಹಿಡಿಯಬೇಕೆಂಬುದು ಜಪಾನರ ಸಾಹಸವಾಗಿದೆ. ಹಿಂದೆ ಒಂದೆರಡು ಸಲ ಮಾಡಿದ ಈ ಪ್ರಯತ್ನವು ನಿಷ್ಫಲವಾಗಿದ್ದು ಈ ಸಲ ವಿಶೇಷ ಹಟದಿಂದ ಹೋರಾಡುತ್ತಾರೆ. ಅಂತೂ ಸೊಲೊಮನ್ ಕಾಳಗವು ಜಪಾನ್ ಅಮೇರಿಕಗಳ ಶಕ್ತಿ ಪರೀಕ್ಷೆಯೇ ಆಗಿರುವುದು. ನ್ಯೂಗಿನಿ ಸೊಲೊಮನ್‌ಗಳೆರಡನ್ನೂ ಆಕ್ರಮಿಸಿಕೊಂಡು ಆಸ್ಟ್ರೇಲಿಯ ಮತ್ತು ಮಿತ್ರ ರಾಷ್ಟ್ರಗಳೊಳಗಿನ ಸಂಬಂಧವನ್ನು ಕಡಿದುಬಿಡಬೇಕೆಂಬುದು ಜಪಾನಿನ ಉದ್ದೇಶವಾಗಿದೆ. ಇದರಿಂದ ಆಸ್ಟ್ರೇಲಿಯದಲ್ಲಿ ಮಿತ್ರರು ಸೈನ್ಯಸಂಗ್ರಹಿಸುವುದನ್ನೂ ತಡೆದಂತಾಗುವುದು. ಜಪಾನಿಗೆ, ಸದ್ಯ ತನ್ನ ಮೇಲೆ ಆಕ್ರಮಣವಾಗಿ ಬಿಡಬಹುದೆಂಬ ಹೆದರಿಕೆ ಬಲವಂತವಾಗಿರುವುದರಿಂದ ಈಗ ಈ ತರದಲ್ಲಿ ಮಿತ್ರರನ್ನು ತಡೆಗಟ್ಟಲು ಪ್ರಯತ್ನ ಮಾಡಿದೆ. ಅಂತೂ ಸದ್ಯಕ್ಕೆ ಅಲ್ಲಿನ ಪರಿಸ್ಥಿತಿ ಅಷ್ಟೊಂದು ಉಗ್ರತರವೇನಿಲ್ಲ, ಆಗಾಗ ಧಾಳಿಯಾಗುವುದು, ಮತ್ತೆ ಕೆಲಸಮಯ ಶಾಂತವಾಗಿರುವುದೇ ಕಂಡುಬರುತ್ತದೆ. ಹೀಗೆ 'ಬೂದಿ ಮುಚ್ಚಿದ ಕೆಂಡ' ಮತ್ತೆ ಯಾವಾಗ ಉರಿದು ಮನೆಯನ್ನೇ ಸುಡಲು ಉರಿಯ ಕಿಡಿ ಸೂಸುವುದೋ ಮುಂದೆ ನೋಡಬೇಕು!

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. No. 377/42.

ಅರ್ಜಿದಾರ— ಕುಕ್ಕಪ್ಪ ಗೌಡ

ಎದ್ರಿರು—1 ಚನ್ನಯ್ಯ ಗೌಡ, 2. ಸುಬ್ಬಮ್ಮ,

ಉಪ್ಪಿನಂಗಡಿಯಲ್ಲಿರುವ ವೆಂಕಟ್ರಮಣಾಚಾರ್ಯರ ವಿಧವೆ 2ನೇ ಎದ್ರಿ ಸುಬ್ಬಮ್ಮನಿಗೆ ಈ ಮೂಲಕ ತಿಳಿಸುವದೇನೆಂದ್ರೆ

ಅರ್ಜಿದಾರರು ನಿಮ್ಮ 2 ಜನರ ಮೇಲೆ ಕೂಡಾ ಪಡಕೊಂಡ ಡಿಕ್ರಿ ಬಗ್ಗೆ ಈ ಅಮಲ್ದಾರಿ ಮಾಡಿದ್ದು ತಾರೀಕು 2-10 1942ಕ್ಕೆ ತನ್ನಿ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಬೆಳಿಗ್ಗೆ ಘಂಟೆ 11ಕ್ಕೆ ನೀವು ಖುದ್ದು ಯಾ ವಕೀಲರ ಮೂಲಕ ಕೋರ್ಟಿಗೆ ಹಾಜ್ರಾಗಿ ನಿಮ್ಮ ಆಕ್ಷೇಪವಿದ್ದರೆ ದಾಖಲು ಮಾಡತಕ್ಕದ್ದು. ತಪ್ಪಿದರೆ ನಿಮ್ಮನ್ನು ಗೈರ್ಹಾಜರಿ ಮಾಡಿ ಅಮಲ್ದಾರಿ ಮುಂದರಿಸುವರು.

ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಕೊಟ್ಟಿದ್ದಾಗಿರುತ್ತದೆ.

ಪುತ್ತೂರು 21-9-42 } K. Raghunath Rao, Pleader for petitioner.

ಸ್ವದೇಶಾಭಿಮಾನಿ

ತಾರೀಖು 25—9—1942

ಕೇಂದ್ರ ಸಭೆಯಲ್ಲಿ

ಕೇಂದ್ರ ಶಾಸನ ಸಭೆಯಲ್ಲಿ ಭಾರತದ ಪ್ರಕ್ಷುಬ್ಧ ರಾಜಕೀಯ ವಾತಾವರಣದ ವಿಚಾರವಾಗಿ ಕೆಲವು ಮಾತುಕತೆಗಳು ನಡೆದು, ಕೊನೆಗೆ ಆ ಅಧಿವೇಶನವು ಈಗ ಕೊನೆಗೊಂಡಿದೆ. ದೇಶದ ಇಂದಿನ ಗೊಂದಲದ ಪರಿಸ್ಥಿತಿಯಲ್ಲಿ ಏನಾದರೂ ಸಮಸ್ಯಾ ಪರಿಹಾರವಾದೀತೇ ಎಂದು ಹಲವರಲ್ಲ ಊಹಿಸಿದ್ದರೂ ಕೆಲವರು ಹಾರೈಸುತ್ತಿದ್ದರೂ, ಅವರೂ ಈಗ ನಿರಾಶೆಗೊಂಡರು! ಈ ಸಭೆಯು ಸೇರುವ ಮೊದಲು ರಾಷ್ಟ್ರೀಯ ಪರಿಸ್ಥಿತಿ ಎಷ್ಟು ವಿಷಮವಿತ್ತೋ ಇಂದೂ ಹಾಗೆಯೇ ಉಳಿದಿದೆ, ಹೀಗಾಗಿ ಈ ಅಧಿವೇಶನವು ಸೇರಿದ್ದು, ಸರಕಾರೀ ಪಕ್ಷದ ಆತ್ಮ ಸಮರ್ಥನೆಗಾಗಿ ಪರಿಣಮಿಸಿತೇ ವಿನಾ ಅದಕ್ಕಿಂತ ಹೆಚ್ಚಿನದೇನೂ ಆಗಲಿಲ್ಲ.

ಈ ಸಲದ ಕೇಂದ್ರ ಶಾಸನ ಸಭೆಯ ಒಂದು ವೈಶಿಷ್ಟ್ಯವೆಂದರೆ, ಜನತಾ ಪ್ರತಿನಿಧಿಗಳ ಸಂಖ್ಯೆ ಅಲ್ಲಿ ಬಹಳ ಕಡಿಮೆಯಿದ್ದುದು; ಕಾಂಗ್ರೆಸ್ ಪಕ್ಷದವರಂತೂ ಅಲ್ಲಿ ಇರಲೇ ಇಲ್ಲ, ಅವರನ್ನು ಅಲ್ಲಿಗೆ ಬರಿಸುವ ಏರ್ಪಾಡೂ ಆಗಿರಲಿಲ್ಲ. ಸರ್ದಾರ ಸಂತಸಿಂಗ, ನಿಯೋಗಿ, ಜೋಶಿ ಮೊದಲಾದ ಇನ್ನು ಕೆಲವರು ರಾಷ್ಟ್ರದ ರಾಜಕೀಯ ಸಮಸ್ಯೆಯನ್ನು ಪರಿಹರಿಸಬೇಕೆಂದು, ಮುಖಂಡರ ಬಿಡುಗಡೆ, ರಾಷ್ಟ್ರೀಯ ಸರಕಾರ ಸ್ಥಾಪನೆ, ಅಧಿಕಾರ ಬಿಟ್ಟುಕೊಡಬೇಕೆಂಬೀ ವಿಚಾರವಾಗಿ ಖಂಡತುಂಡ ವಾದಿಸಿದರೂ ಅದರಿಂದ ಸರಕಾರದ ಧೋರಣದಲ್ಲಿ ಏನೂ ಫಲಿತಾಂಶವಾಗಲಿಲ್ಲ. ಕೊನೆಗೆ ಚರ್ಚೆಗಿಟ್ಟ ವಿಷಯದ ಕುರಿತ ಮತ ತೆಗೆಯುದಿಲ್ಲದ ಉದ್ದಾಮ ಪದ್ಧತಿಯನ್ನೂ ಅನುಸರಿಸಿಕೊಂಡು, ಸರಕಾರೀ ಪಕ್ಷದವರು ಅಲ್ಲಿ ಕೇವಲ ಆತ್ಮ ಸಮರ್ಥನೆ ಮಾತ್ರ ಮಾಡಿಕೊಂಡರು! ಕಾಂಗ್ರೆಸಿನ ಮೇಲೆ, ರಾಷ್ಟ್ರೀಯ ಮುಖಂಡರ ಮೇಲೆ ಅನೇಕ ಅಪವಾದನೆಗಳನ್ನು ಹೊರಿಸಿದರು!

ಸರ್ ಕ್ರಿಪ್ಸರು ಒಂದೇ ಸಮನೆ ಕಾಂಗ್ರೆಸು ಗಾಂಧಿಜಿ ಮೊದಲಾದವರ ಕುರಿತು ಆರೋಪ ಹೊರಿಸುತ್ತಿರುವುದನ್ನು, ಚರ್ಚಲರೀ ಮೊನ್ನೆ ಕಾಂಗ್ರೆಸಿನ ಕುರಿತು ಕಿಡಿ ಕಾರಿದ್ದನ್ನು, ಅಮೆರಿಯವರು ಆತ್ಮ ಸಮರ್ಥನೆ ಮಾಡಿಕೊಂಡದ್ದನ್ನೆಲ್ಲ ಆಲೋಚಿಸಿದರೆ, ಅವರ ಅಧೀನ ಮಾತ್ರರಾಗಿರುವ ಆಣೆ ಅಂಬ್ಡೇಕರ್ ಪ್ರಭೃತಿಗಳಾದರೂ ಮತ್ತಿನ್ನೇನು ಹೇಳಬಲ್ಲರೆಂದು ನಾವು ಊಹಿಸಕೊಳ್ಳಬಹುದು. ಭಾರತೀಯರೆಲ್ಲರೊಂದಾಗಿ, ಜಪಾನೀ ದಬ್ಬಾಳಿಕೆಯನ್ನಿದಿರಿಸಬೇಕೆಂದು ಘಂಟಾಘೋಷ ಸಾರುತ್ತಿರುವ ಬ್ರಿಟಿಷ್ ಪ್ರಭುತ್ವದವರೂ, ಅವರ ಅಧೀನರಾಗಿ ಕೆಲಸಮಾಡುವ ಆಣೆ ಪ್ರಭೃತಿಗಳೂ ತಾವೇ ಸ್ವತಃ ದಬ್ಬಾಳಿಕೆಯನ್ನು ಕೈಕೊಂಡು ಅದನ್ನು ಸಮರ್ಥಿಸುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಆರ್ಥರ್ ಮೂರರು ಹೇಳಿದಂತೆ 'ತಪ್ಪು ಮಾಡುವುದು, ಮತ್ತೆ ತಾವು ಮಾಡಿದ ತಪ್ಪನ್ನೇ ಸರಿಯೆಂದು ಸಮರ್ಥಿಸುವುದು,' ಇದು ಆತ್ಮವಂಚನೆಯಾಗಿದೆ!

"ಅಪ್ಪಣೆಯಿಲ್ಲ"

ಹಿಂದು ಮಹಾಸಭೆಯ ಕಾರ್ಯಾಧ್ಯಕ್ಷರಾದ ಡಾ| ಎಸ್. ಪಿ. ಮುಖರ್ಜಿಯವರು, ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸುವ ಅತ್ಯುತ್ಸಾಹದಿಂದಲೂ, ಮಹತ್ವಾಕಾಂಕ್ಷೆಯಿಂದಲೂ ಕಳೆದ ಕೆಲವು ದಿನಗಳಿಂದ ಹೆಣಗಾಡಿದರು. ಕಾಂಗ್ರೆಸ್, ಲೀಗ್, ಸರಕಾರಗಳೊಳಗೆ ಒಂದು ಸಂಧಾನ ಮಾಡಿ, ರಾಷ್ಟ್ರೀಯ ಸರಕಾರವನ್ನು ರಚಿಸುವ ಉದ್ದಾಮ ಉದ್ದೇಶದಿಂದ ಕಾರ್ಯ ಪ್ರವೃತ್ತರಾದರು. ಕಾಣಬೇಕಾದವರನ್ನು ಕೆಲವರನ್ನು ಕಂಡರು; ಆಮಂತ್ರಿಸಬೇಕಾದವರನ್ನು ಕೆಲವರನ್ನು ಆಮಂತ್ರಿಸಿದರು. ಮಾತನಾಡುವಂಥಾ ವಿಷಯಗಳನ್ನು ಕೆಲವನ್ನು ಮಾತನಾಡಿದರು. ಇಬ್ಬರು ಮುಸ್ಲಿಂ ಪ್ರಧಾನ ಮಂತ್ರಿಗಳ ಬೆಂಬಲ ಪಡಕೊಂಡರು; ಸರ್ ಸಿಕಂದರ ಸಮ್ಮತಿಯನ್ನೂ ದೊರಕಿಸಿಕೊಂಡರು. ಜಿನ್ನರೊಡನೆಯೂ ಮಾತುಕತೆ ನಡೆಯಿತು; ರಾಜ ಗೋಪಾಲಾಚಾರ್ಯರನ್ನೂ ವಿಚಾರಿಸಿ ಆಯಿತು. ಕೊನೆಗೆ ಕಾಂಗ್ರೆಸ ಮುಖಂಡರನ್ನೂ, ಗಾಂಧಿಜಿಯನ್ನೂ ಕಾಣುವುದಷ್ಟು ಬಾಕಿಯುಳಿದಿತ್ತು, ಆಷ್ಟಾದರೆ, ಸಂಧಾನವು ಯಶಸ್ವಿಯಾದೀತೆಂಬ ಪ್ರಬಲ ಆಶೆಯೂ ಅವರದಾಗಿತ್ತು; ಆದರೆ, ಗಾಂಧಿಜಿಯನ್ನು ಭೇಟಿಮಾಡಬಿಡಬೇಕೆಂದು ಕೇಳಿದ ಅವರ ವಿನಂತಿ ಇಂದು ನಿರಾಕರಿಸಲ್ಪಟ್ಟಿದೆ! ಗಾಂಧಿಜಿಯನ್ನು ನೋಡಲು 'ಅಪ್ಪಣೆಯಿಲ್ಲ' ಎಂಬ ವೈಸರಾಯರ ನಕಾರ ಬಂದು, ಈಗ ಅವರ ಉತ್ಸಾಹಕ್ಕೆ ತಣ್ಣೀರೆರಚಿದ ಹಾಗಾಗಿದೆ. ಡಾ| ಮುಖರ್ಜಿಯವರಿಗು ಹಾಗೂ ಹಿಂದು 'ಮಹಾ ಸಭೆಯವರು ಇದರಿಂದ ಅಪಮಾನಿತರಾದರೆ? ಅಥವಾ ಭಾರತೀಯರಿಗೆ ಯಾರಿಗೂ ತೋರಿಸದ ಗಾಂಧಿಜಿಯನ್ನು ತಮಗೆ ತೋರಿಸಬೇಕೆಂದು ಕೇಳಿದ ಡಾ| ಮುಖರ್ಜಿ ಹಾಗೂ ಹಿಂದು ಮಹಾ ಸಭೆಯವರು ಅಧಿಕಪ್ರಸಂಗ ಮಾಡಿದ್ದರೆ?

ಆರ್ಥರ್ ಮೂರರ ಬುದ್ಧಿವಾದ

ಬ್ರಿಟನು ಭಾರತಗಳೊಳಗೆ ಒಂದು ಗೌರವಯುತ ಸಂಧಾನವಾಗಿ, ಇಂದಿನೀ ಗಂಡಾಂತರ ಕಾಲದಲ್ಲಿ ಭಾರತದ ಶಕ್ತಿಯು ಆಕ್ರಮಣಗಾರ ರಾಷ್ಟ್ರದೆದುರು ಹೋರಾಡುವಲ್ಲಿ ಉಪಯೋಗಿಸಲ್ಪಡಬೇಕೆಂದೂ, ಬ್ರಿಟಿಷರಿಗೆ ಬುದ್ಧಿಯಿದ್ದರೆ ಇಷ್ಟನ್ನು ಮಾಡಬಹುದೆಂದೂ ಕಲ್ಕತ್ತೆ 'ಸ್ಟೇಟ್ಸ್ ಮೇನ್' ಪತ್ರಿಕೆಯ ಆರ್ಥರ್ ಮೂರರೆಂಬ ಐರೋಪ್ಯ ಸದ್ಗೃಹಸ್ಥರೀಗ ಬ್ರಿಟಿಷರಿಗೆ ಸಮಯೋಚಿತ ಬುದ್ಧಿವಾದ ಹೇಳಿದ್ದಾರೆ. ಭಾರತದ ಜನತೆಯ ಬೆಂಬಲ ಪಡೆದು ನಾವು ಶತ್ರುವಿನೆದುರು ಯುದ್ಧ ಹೂಡಬೇಕಾದರೆ, ಇಂದು ಬ್ರಿಟಿಷರು ಮೊತ್ತಮೊದಲಾಗಿ ಮಾಡತಕ್ಕ ಕರ್ತವ್ಯವು ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಬಿಡುವುದಾಗಿದೆಯೆಂದು ಅವರು ಸರಳ ಸೂಚನೆಯಿತ್ತಿದ್ದಾರೆ. ಜಿನ್ನರಿಗಾದರೂ ಈಗ ಅಧಿಕಾರ ಬಿಟ್ಟುಕೊಟ್ಟರೆ, ಅವರು ನೆಹರು ರಾಜಾಜಿ ಮೊದಲಾದವರನ್ನು ಕೂಡಿಕೊಂಡು ರಾಷ್ಟ್ರೀಯ ಸರಕಾರ ಸ್ಥಾಪಿಸುವರೆಂದೂ, ಗಾಂಧಿಜಿಯನ್ನು ಬಿಡುಗಡೆಮಾಡಿ ಮುಂದೆ ಅವರು ಚಳವಳಿ ನಿಲ್ಲಿಸುವಂತೆಮಾಡಬಹುದೆಂದೂ ಆರ್ಥರ್ ಮೂರರು ತಿಳಿಸಿರುವರು. ನಾವೀಗ ಬರ್ಮದಿಂದ ಬುದ್ಧಿ ಕಲಿಯಬೇಕಾಗಿದೆ ಈಗ ಸಮಯ ಹಾಳುಮಾಡತಕ್ಕಕಾಲವಲ್ಲ; ತಪ್ಪು ಮಾಡಿ ಅದನ್ನೇ ಸಮರ್ಥಿಸುವುದು ಸರಿಯಲ್ಲ' ಎಂದು ಅವರ ಹೇಳಿಕೆಯಾಗಿದೆ. 'ಭಾರತೀಯರಲ್ಲಿ ಭೇದವಿದೆಯೆನ್ನುವುದು ಕೇವಲ ಬ್ರಿಟಿಷರು ಹೇಳುವ ನೆವನ; ನಿಜವಾಗಿ ನೋಡಿದರೆ ಬ್ರಿಟಿಷರಿಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲ ಎಂದು ಅವರು ಸತ್ಯ ಸಂಗತಿ ಸಾರಿದ್ದಾರೆ. ಬ್ರಿಟಿಷ್ ಪ್ರಭುತ್ವದವರು ಈ ಸಮಯೋಚಿತ ಬುದ್ಧಿವಾದದ ಕಡೆಗೆ ಕಿವಿಗೊಡಲು ಮರೆತಾರೆ?

ಸ್ವದೇಶ ಸಮಾಚಾರ

ಕೇಂದ್ರ ಎಸೆಂಬ್ಲಿಯಲ್ಲಿ

ಕೇಂದ್ರ ಎಸೆಂಬ್ಲಿ ಮುಂದಿರದ ಹೊರಗಡೆ ಪಿಕೆಟ್ ಮಾಡಿದ ಮಹಿಳಾ ಸ್ವಯಂಸೇವಕರ ಮೇಲೆ ಡಿಲ್ಲಿ ಪೋಲೀಸರು ಬಲ ಪ್ರಯೋಗ ನಡೆಸಿದ ವಿಚಾರದಲ್ಲಿ ಅಸೆಂಬ್ಲಿಯಲ್ಲಿ ಚರ್ಚೆ ಬಂದರೂ ಅಧ್ಯಕ್ಷರು ಅದು ಕ್ರಮಕ್ಕೆ ವಿರೋಧವೆಂದು ಅದನ್ನು ತೆಗೆದುಹಾಕಿದರು. ಆದು ಸರ್ದಾರ್ ಸಂತಸಿಂಗರು ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದಾನದ ವಾಗ್ದಾನ ಕೊಡಬೇಕು, ಕಾಂಗ್ರೆಸ್ ಸಂಸ್ಥೆಗಳ ಮೇಲಿನ ಬಹಿಷ್ಕಾರ ತೆಗೆದು ಹಾಕಿ ಮಹಾತ್ಮರೇ ಮೊದಲಾದವರನ್ನು ಬಿಡಬೇಕು, ರಾಷ್ಟ್ರೀಯ ಸರಕಾರ ಸ್ಥಾಪನೆಯಾಗಬೇಕೆಂದು ಮುಂತಾಗಿ ಸೂಚಿಸಿ ತಂದ ಸೂಚನೆ ಬಿದ್ದುಹೋಯಿತು. ಈಚೆಗಿನ ಗಲಭೆಯಲ್ಲಿ ಪೋಲೀಸರ ಗೋಳೀಬಾರಿನಿಂದ ಸತ್ತ ಮಂದಿ ೩೪೦, ಗಾಯಗೊಂಡವರು ೬೩೦ ಎಂದೂ, ಮಿಲಿಟರಿಯವರ ಗುಂಡಿನೇಟಿನಿಂದ ಸತ್ತವರು ೩೧೮, ಗಾಯಗೊಂಡವರು ೧೫೩ ಮಂದಿ ಎಂದೂ ಇದು ಪೂರ್ಣವಾದ ಅಂಕೆ ಸಂಖ್ಯೆಯಲ್ಲವೆಂದೂ ಸರಕಾರದ ಕಡೆಯಿಂದ ಹೇಳಲಾಗಿದೆ.

ಮಹಿಳೆಯರ ಕೈದು

ಸಮಗ್ರ ಭಾರತ ಹರಿಜನ ಸೇವಕ ಸಂಘದ ಉಪಾಧ್ಯಕ್ಷಿಣಿಯರಾದ ಶ್ರೀಮತಿ ರಾಮೇಶ್ವರಿ ನೆಹರು ಮತ್ತು ಮೂವರು ಸ್ವಯಂಸೇವಕಿಯರನ್ನು ಲಾಹೋರಲ್ಲಿ ಇಂಡಿಯಾ ರಕ್ಷಣೆಯ ಕಾನೂನಿನಂತೆ ಕೈದುಮಾಡಲಾಗಿದೆ.

ನೆಹರುಗಳ ಖಾಸಗಿ ಲೆಖ್ಖ ಶೋಧನೆ

ಮುಂಬಯಿಯ ಮೆಸರ್ಸ್ ಬಚ್ಚರಾಜ ಕಂಪನಿಯಲ್ಲಿರುವ ಪಂಡಿತ ಜವಾಹರಲಾಲರ ಖಾಸಗಿ ಲೆಖ್ಖವನ್ನು ಪೋಲೀಸರು ಪರಿಶೀಲಿಸಿದರು. ಈ ಕಂಪನಿಯಲ್ಲಿ ಅಖಿಲಭಾರತ ಕಾಂಗ್ರೆಸ್ ಕಮಿಟಿ ಹೆಸರಲ್ಲಿ ಇಟ್ಟಿರುವ ಹಣವನ್ನು ಸರಕಾರದ ಅಪ್ಪಣೆ ಪಡೆಯದೆ ಬೇರೆ ಕಡೆ ವರ್ಗಾಯಿಸಕೂಡದೆಂದೂ ಆಜ್ಞೆ ಹೊರಡಿದೆ.

ಮಿಲಿಟರಿ ಮೇಲೆ ಮುತ್ತಿಗೆ

ಪಾಟ್ನಾದ ಶಹಾಬಾದ ಜಿಲ್ಲೆಯ ಆಸಾರಿಯಲ್ಲಿ ತಾ 15ರಂದು ಚೌಕಿದಾರನ ಮುಂದಾಳುತ್ವದಿಂದ ಜನರ ತಂಡವೊಂದು ಮಿಲಿಟರಿಯವರ ಮೇಲೆ ಮುತ್ತಿಗೆ ಹಾಕಿದರು, ಪರಿಣಾಮವಾಗಿ ಅವರಲ್ಲಿ ಆರು ಜನರು ಸತ್ತಿರುವರು; ಅನೇಕರಿಗೆ ಗಾಯವಾಗಿದೆ.

ಇನ್‌ಕಮ್‌ಟೇಕ್ಸ್ ಆಫೀಸಿಗೆ ಬೆಂಕಿ

ಹಚ್ಚಿರುವರೆಂದು ಆಗ್ರಾದಿಂದ ಸುದ್ದಿ ಬಂದಿದೆ; ಜನರ ಗುಂಪು ಈ ಕೆಲಸಮಾಡಿತು, ವಿಶೇಷ ಹಾನಿಯಾಗಿರಬೇಕೆಂದು ತಿಳಿದಿದೆ.

ಶರತ್ ಬೋಸರ ಬಿಡುಗಡೆ

ವಿಷಯವಾಗಿ ಬಂಗಾಳ ಶಾಸನ ಸಭೆಯಲ್ಲಿ ಬಹಳ ವಾದವುಂಟಾಗಿ, ಮಂತ್ರಿಮಂಡಳದ ಕಡೆಯಿಂದ ಅವರನ್ನು ಬಿಡುಗಡೆ ಮಾಡುವ ಪ್ರಯತ್ನ ನಡೆಸುವುದಾಗಿ ಭರವಸೆ ದೊರೆತಿದೆ, ಶರತ್ ಬೋಸರೀಗ ಮಡಿಕೇರಿಯಲ್ಲಿದ್ದಾರೆ. ಅವರ ಆರೋಗ್ಯ ಅಷ್ಟು ಚನ್ನಾಗಿಲ್ಲದೆಂದು ಎಸೆಂಬ್ಲಿಯಲ್ಲಿ ಹೇಳಲಾಗಿದೆ

ನೆಹರುಕುಟುಂಬದ ಬಂಧನ!

ನೆಹರು ಭಾವಂದಿರಾದ ಶ್ರೀ. ಆರ್. ಪಂಡಿತರನ್ನು ಬಂಧಿಸಲಾಗಿದೆ ನೆಹರು ಪುತ್ರಿ ಇಂದಿರಾ ಗಾಂಧಿ ಮತ್ತು ಅವರ ಪತಿಯು ಫಿರೋಜ ಗಾಂಧಿ ಇವರನ್ನೂ ಬಂಧಿಸಿರುವರು, ಫಿರೋಜ ಗಾಂಧಿಯವರು ಶಿಕ್ಷೆಗೊಳಗಾಗಿದ್ದಾರೆ. ನೆಹರು ಸೋದರಿ ವಿಜಯ ಲಕ್ಷ್ಮಿ ಪಂಡಿತರೂ ಸೆರೆಯಲ್ಲಿದ್ದಾರೆ.

ಸಪ್ರು ಜಯಕರರ ಹೇಳಿಕೆ

ತಿರುಗಿ ಈಗ ಹೊರಟಿದೆ; ಅದರಲ್ಲಿ ಚರ್ಚಿಲ್ ಅಮೆರಿಯವರ ಈಚೆಯ ಹೇಳಿಕೆಗಳಿಂದ ಪರಿಸ್ಥಿತಿಗೆ ಸಹಾಯವಾಗುವ ಬದಲು ಕೆಟ್ಟುಹೋಗುವ ಸಂಭವವಿದೆಯೆಂದು ವಿಷಾದ ಸೂಚಿಸಿರುವರು. ಕಾಂಗ್ರೆಸ್ ಜನತೆಯ ಪ್ರತಿನಿಧಿಯಲ್ಲವಾದರೆ, ಹಿಂದು ಮಹಾಸಭೆ ಮುಸ್ಲಿಂ ಲೀಗುಗರಿಗೇಕೆ ಅಧಿಕಾರ ಬಿಟ್ಟುಕೊಡಬಾರದೆಂದು ಕೇಳಿರುವರು. ಸರ್ ಕ್ರಿಪ್ಸರು ಕಾಂಗ್ರೆಸ್‌ಗೆ ತಮ್ಮ ಸಂಧಾನದಲ್ಲಿ ಅಷ್ಟು ಮಹತ್ವ ಕೊಟ್ಟಿರುವುದಕ್ಕೂ ಚರ್ಚಿಲರ ಕಾಂಗ್ರೆಸ್ ತಿರಸ್ಕಾರಕ್ಕೂ ಸಂಬಂಧವೇನು ಎಂದು ಪ್ರಶ್ನಿಸಿರುವರು. ವೈಸರಾಯರ ಕೌನ್ಸಿಲಿನಲ್ಲಿ ಹೆಚ್ಚು ಹಿಂದೀ ಪ್ರತಿನಿಧಿಗಳನ್ನು ಮಾಡಿದರೂ, ಆ ಕೌನ್ಸಿಲರ ಅಭಿಪ್ರಾಯದಂತೆ ವೈಸರಾಯರು ನಡೆಯಲು ಬದ್ಧರಾಗಿಲ್ಲವೆಂದಿರುವರು. ಈಗ ಭಾರತದಲ್ಲಿ ಆಗುತ್ತಿರುವ ಗಲಭೆಯ ಕುರಿತು ಅವರು ವಿಷಾದ ಸೂಚಿಸಿ, ಇದನ್ನು ತಪ್ಪಿಸಲಾಗುತ್ತಿತ್ತೆಂದೂ, ವೈಸರಾಯರು ಗಾಂಧಿಜಿಯರ ಪತ್ರ ವ್ಯವಹಾರ ಕೇಳಿಕೆಯನ್ನು ಅಲ್ಲಗಳೆಯಬಾರದಿತ್ತೆಂದೂ ಹೇಳಿ, ಚಳವಳಿವನ್ನಡಗಿಸಬೇಕೆಂಬ ಉದ್ದೇಶದಿಂದ ಇಡೀ ಹಿಂದುಸ್ತಾನವನ್ನು ದಂಗೆಗಾರ ದೇಶದಂತೆ ನಡೆಸುವುದು ಸರಿಯಲ್ಲವೆಂದು ಹೇಳುತ್ತಾ, ಹಿಂದಿನ ಮಂತ್ರಿಗಳು ಇಂದು ಕೈದಿಗಳಾಗುವ ಪರಿಸ್ಥಿತಿಯನ್ನು ನೋಡಿ ಜನರ ಮನಸ್ಸು ತಳಮಳಗೊಳ್ಳುವುದೆಂದೂ ಎಚ್ಚರಿಸಿ, ಬ್ರಿಟಿಷರು ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಕೊಟ್ಟು ರಾಷ್ಟ್ರೀಯ ಸರಕಾರ ಸ್ಥಾಪಿಸಲು ಸಹಕರಿಸಬೇಕೆಂದಿರುವರು.

ಕ್ರಿಪ್ಸರೂ ಅರ್ಸ್ಕಿನರೂ ಸುಳ್ಳು ಹೇಳುತ್ತಾರೆ!

ಎಂದು ರಾಜಾಜಿ ಪ್ರಕಟಣೆಯೊಂದರಲ್ಲಿ ಹೇಳಿರುವರು. ಮದ್ರಾಸಿನ ಮಂತ್ರಿಮಂಡಳ ರಚಿಸುವಾಗ, ಗಾಂಧಿಜಿ ನಡುವೆ ಕೈಹಾಕಿ ಅಧಿಕಾರ ಸ್ವೀಕರಿಸದಂತೆ ಮಾಡಲು ಯತ್ನಿಸಿದರೆಂದು ಹಿಂದಿನ ಮದ್ರಾಸಿನ ಗವರ್ನರರಾದ ಲಾರ್ಡ್ ಅರ್ಸ್ಕಿನರು ಹೇಳಿದ ಹೇಳಿಕೆಯನ್ನು ರಾಜಾಜಿ ಖಂಡಿಸುತ್ತಾ, ಅರ್ಸ್ಕಿನರು ಸುಳ್ಳು ಹೇಳುತ್ತಾರೆಂದೂ, ಗಾಂಧಿಜಿ ಸೆರೆಮನೆಯಲ್ಲಿದ್ದು ಅವರಿಗೆ ಉತ್ತರ ಕೊಡಲು ಆಸ್ಪದವಿಲ್ಲದಿರುವಾಗ ಹೀಗೆ ಹೇಳುವುದು ಸರಿಯಲ್ಲವೆಂದೂ ನುಡಿದಿರುವರು. ಹೀಗೆಯೇ ಕ್ರಿಪ್ಸರು (ತಮ್ಮ ಸಂಧಾನವು ಗಾಂಧಿಜಿ ಕೈಹಾಕದಿದ್ದರೆ ಕೃತಾರ್ಥವಾಗುತ್ತಿದ್ದಿತೆಂದು ಹೇಳಿದ ಮಾತನ್ನೂ ರಾಜಾಜಿ ಅಲ್ಲಗಳೆದು ಗಾಂಧಿಜಿ ಸಂಧಾನ ಮುರಿಯಲು ಪ್ರಯತ್ನಿಸಲ್ಲವೆಂಬ ನಿಚ್ಚಾರ್ಥ ತನಗೆ ತಿಳಿದಿದೆಯೆನ್ನುತ್ತಾ, ಕ್ರಿಪ್ಸರು ಈಗ ಗಾಂಧಿಜಿಯನ್ನು ದೂರುವುದು ನ್ಯಾಯವಲ್ಲವೆಂದಿದ್ದಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ನಿರ್ಬಂಧಕಾಜ್ಞೆ

ಇದೇ ತಾ. ೧೮ರಿಂದ ಮೊದಲ್ಗೊಂಡು ಎರಡು ತಿಂಗಳ ವರೆಗೆ ಇಡೀ ಜಿಲ್ಲೆಯಲ್ಲಿ ಯಾವುದೇ ಸಭೆ ಹಾಗೂ ಮೆರವಣಿಗೆಗಳನ್ನೂ, ಅಪ್ಪಣೆ ಪಡೆಯದೆ ನಡೆಸಕೂಡದಾಗಿ ದ. ಕ. ಜಿಲ್ಲಾ ಕಲೆಕ್ಟರರ ಪ್ರಕಟಣೆಯಿದೆ.

ORDER

Whereas for the public safety and the maintenance of public order it is necessary so to do:

Now, therefore, in exercise of powers under Rule 56 (1) of the Defence of India Rules conferred on me in G. O. No.Ms.759, Public Department dated 10th April, 1940, I., M. Karamatullah, Esq., I. C. S., the District Magistrate of South Kanara, hereby prohibit throughout the district of South Kanara the holding of or taking part in public processions, meetings or assemblies for a period of two months from this date, except such processions, meetings or assemblies as may be specifically permitted by an order in writing of the District Magistrate or sub-Divisional Magistrate and subject to such restrictions and conditions as may be imposed in such order.

Dated this 18th day of September, 1942.

M. Karamatullah,
District Magistrate.

ಮುನ್ಸಿಪಲ್ ಕೌನ್ಸಿಲು

ಚೇರ್‌ಮೇನರ ಮತ್ತು ಕಾಂಗ್ರೆಸ್ ಪಕ್ಷದ ಕೌನ್ಸಿಲರ ರಾಜಿನಾಮೆ

ತಾ. 19ರಂದು ಸ್ಥಳೀಯ ಮುನ್ಸಿಪಲ್ ಸಭೆಯು ಚೇರ್‌ಮೇನರಾದ ಶ್ರೀ. ಬಿ. ವೆಂಕಟ್ರಾವ್ ಬಾಳಿಗ ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಯು. ಪಿ. ಮಲ್ಯರು ಕಳೆದ ತಾ. 15ರಲ್ಲಿ ಶ್ರೀ. ಬಿ. ವೆಂಕಟರಾಯ ಬಾಳಿಗ ಅವರು ಈ ಮುನ್ಸಿಪಲ್ ಕೌನ್ಸಿಲಿನ ಅಧ್ಯಕ್ಷ ಪದವಿಗೆ ರಾಜಿ ಕೊಟ್ಟಿರುವೆವೆಂದು ಬರೆದು ಕಳುಹಿಸಿದ ಪತ್ರದ ವಿಚಾರ ಆಗಬೇಕೆಂದು ಅಪೇಕ್ಷಿಸಿದರು. ಆಗ ಅಧ್ಯಕ್ಷರು ಕೆಲ ವಾರ್ಡು ಕೌನ್ಸಿಲರುಗಳಿಂದ ಶ್ರೀ. ಆರ್. ಆರ್. ತಲ್ಲೇರಿಕಾರ್ (ಸ್ವತಂತ್ರ ಪಕ್ಷದವರು) ಡಾ. ಕೆ. ಗಿರಿಧರರಾವ್, ಶ್ರೀ. ಪಿ. ಪಾಂಡುರಂಗ ಭಂಡಾರಿ, ಶ್ರೀ. ಎಂ. ಮಾಧವರಾವ್ ಮತ್ತು ಶ್ರೀ. ಸಿ. ಜೆ. ಪಿ. ರೇಗೊ (ಕಾಂಗ್ರೆಸ್ ಪಕ್ಷದವರು) ಇವರಿಂದ ತಮ್ಮ ಕೌನ್ಸಿಲ್ ಸ್ಥಾನಗಳಿಗೆ ರಾಜಿಕೊಟ್ಟಿರುವುದಾಗಿ ಬಂದ ಪತ್ರಗಳ ಕುರಿತು ಪ್ರಸ್ತಾಪಿಸಿ ತಮ್ಮ ಸ್ಥಾನದ ರಾಜೀನಾಮೆಯನ್ನೂ ಪ್ರಕಟಪಡಿಸುತ್ತಾ ಇದುವರೆಗೆ ತಮ್ಮ ಕಾರ್ಯಗಳಲ್ಲಿ ಸಹಕರಿಸಿದ ಮುನ್ಸಿಪಲ್ ಕೌನ್ಸಿಲರುಗಳು, ಮುನ್ಸಿಪಲ್ ಸಿಬ್ಬಂದಿ ಮೊದಲಾದವರಿಗೆ ತಮ್ಮ ವಂದನೆಗಳನ್ನು ಸಲ್ಲಿಸಿದರು. ಬಳಿಕ ಕಾಂಗ್ರೆಸ್ ಪಕ್ಷದ ಮುನ್ಸಿಪಲ್ ಕೌನ್ಸಿಲರುಗಳಲ್ಲಿ ಹಾಜರಿದ್ದವರು ತಮ್ಮ ಸ್ಥಾನಗಳಿಗೆ ರಾಜಿ ಕೊಟ್ಟಿದ್ದೇವೆ ಎಂಬುದಾಗಿ ರಾಜಿ ಪತ್ರಗಳನ್ನೊಪ್ಪಿಸಿ ಹೊರ ನಡೆದರು.

ಇದುವರೆಗೆ ತಮ್ಮ ಸ್ಥಾನಗಳಿಗೆ ರಾಜಿಕೊಟ್ಟ ಕಾಂಗ್ರೆಸ್ ಪಕ್ಷದ ಕೌನ್ಸಿಲರರು-ಈ ಕೆಳಗಿನವರು: ಚೇರ್‌ಮೇನ್ ಶ್ರೀ. ಬಿ. ವೆಂಕಟರಾವ್ ಬಾಳಿಗ, ಎಂ. ಎಲ್. ಎ. ವೈಸ್ ಚೇರ್‌ಮೇನ್ ಶ್ರೀ. ಎಲ್. ಸಿ. ಪ್ಯಾಸ್, ಮುನ್ಸಿಪಲ್ ಕಾಂಗ್ರೆಸ್ ಪಕ್ಷದ ಮುಂದಾಳು ಶ್ರೀಮತಿ ಲೀಲಾಬಾಯಿ ಏಕಾಂಬರ ರಾವ್, ಕಾಂಗ್ರೆಸ್ ಪಕ್ಷದ ಉಪಮುಂದಾಳು ಡಾ. ಎನ್. ಉಪೇಂದ್ರ ಪೈ, ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಡಾ. ಯು. ಪಿ. ಮಲ್ಯ, ಶ್ರೀಮತಿ ಮೇರಿ ಜೆ. ಬ್ರಿಟೋ, ಡಾ. ವಿಠ್ಠಲ ಸೆಟ್ಟಿ, ಡಾ. ಅಡಪ್ಪ, ಶ್ರೀಗಳಾದ ಯು. ಲಕ್ಷ್ಮಣ ಶೆಣೈ, ಆಂದ್ರಾಡೆ, ನಾಗಣ್ಣ ಹೆಗ್ಗಡೆ, ಮೂಸಬ್ಬ ಸಾಹೇಬ್, ಕುಂಞಂಬು ಸಾಹೇಬ್, ಜೋರ್ಜ್ ಐಮನ್, ಫೆಲಿಕ್ಸ್ ಅಲ್ಬುಕರ್ಕ್, ಎಚ್. ಕೆ. ತಿಂಗಳಾಯ ಮತ್ತು ಡಾ. ಎಂ. ಆರ್. ಭಟ್, ಈ 18 ಮಂದಿ, ಸಭೆಯ ಕಾಲದಲ್ಲಿ ರಾಜಿಯನ್ನು ಕೊಟ್ಟವರು. ಹಿಂದೆಯೇ ರಾಜಿಕೊಟ್ಟ 5 ಮಂದಿಯಲ್ಲಿ ನಾಲ್ವರು ಕಾಂಗ್ರೆಸ್‌ಪಕ್ಷದವರು. ಇನ್ನು ಉಳಿದ 7 ಮಂದಿ ಕಾಂಗ್ರೆಸ್ ಮೆಂಬರರೂ ರಾಜಿನಾಮೆ ಕೊಡಲಿರುವರೆಂದು ತಿಳಿದಿದೆ.

ಬಂಧನ ಶಿಕ್ಷೆ

ತಾ. ೬ರಂದು ಮೈದಾನಿನಲ್ಲಿ ಲಾಠಿ ಪ್ರಯೋಗವಾದಾಗ ಗಾಯಗೊಂಡಿದ್ದ ೧೨ ಮಂದಿಯನ್ನೂ ಜತೆಗೊಂಡು ವೆನ್‌ಲಾಕ್ ಆಸ್ಪತ್ರೆಯಲ್ಲಿದ್ದ ಸ್ವಯಂಸೇವಕ ದಳಪತಿ ಶ್ರೀ। ರಾಮರಾಯ ಕಿಣಿಯವರನ್ನೂ ಬಂಧಿಸಿದ್ದು ಅವರ ವಿಚಾರಣೆ ತಾ. ೧೫ರಂದು ಜರಗಿತು. ಶ್ರೀಯುತರು ಕೆ. ಈಶ್ವರ ಎ. ಎಲ್. ಎ. ರಾಮರಾಯ ಕಿಣಿ, ಪ್ರಭಾಕರ ಸೆಟ್ಟಿ, ಕೃಷ್ಣ ಭಂಡಾರ್ಕರ್ ಮತ್ತು ಬೊಮ್ಮಯ್ಯ ಇವರಿಗೆ (ತಲಾ ೪ ತಿಂಗಳ ಸಶ್ರಮ ಸಜೆ ವಿಧಿಸಲ್ಪಟ್ಟಿತು. ಕೆನರಾ ಹೈಸ್ಕೂಲಿನ ಹಿಂದೀ ಅಧ್ಯಾಪಕರಾದ ಶ್ರೀ. ಕೆ. ಈಶ್ವರ ಭಟ್ಟರು ಎರಡು ತಿಂಗಳ ಸಶ್ರಮ ಸಜೆಗೂ ಶ್ರೀ. ಬಾಲಪ್ಪನವರು ಒಂದು ತಿಂಗಳ ಸಶ್ರಮ ಸಜೆಗೂ ಗುರಿಯಾದರು. ಎಲ್ಲರಿಗೂ 'ಸಿ' ತರಗತಿ ಕೊಡಲಾಗಿದೆ.

ಬಂಧಿತರಲ್ಲಿ ಉಳಿದ ಹನ್ನೊಂದು ಮಂದಿ– ಶ್ರೀಯುತರು ಬೋನಿಫೆಸ್ ಸಾಲ್ಡಾನಾ, ಎಸ್. ಆರ್ ಬಂಗೇರ, ವೈಕುಂಠ ಕಾಮತ್, ಗಂಗಾಧರ ರಾವ್, ಇಬ್ರಾಹಿಮ್, ಕೆ. ರಾಮಚಂದ್ರ ಭಟ್, ಪುರ್ಪಪ್ಪ ಪ್ರಭು, ನಾರಾಯಣ ಪೈ, ದೇವದಾಸ ಬಂಗೇರ, ಕೃಷ್ಣಪ್ಪ ಶೆಟ್ಟಿ ಮತ್ತು ವಿಠಲ ಶೆಣೈ ಇವರು ಒಳ್ಳೆ ನಡತೆಯ ಜಾಮೀನಿನ ಮೇಲೆ ಬಿಡಲ್ಪಟ್ಟರು.

ಶ್ರೀ. ಎಂ. ಡಿ. ಅಧಿಕಾರಿಯವರು ನರ್ಸಿಂಗ್ ಹೋಮಿನಲ್ಲಿದ್ದು ಅವರು ಇನ್ನೂ ಸುಧಾರಿಸದೆ ಇರುವುದರಿಂದ ಅವರ ಮೇಲೆ ಇದ್ದ ಮೊಕದ್ದಮೆಯನ್ನು ಮುಂದುವರಿಸಲಾಗದೆ.

ತಾ. ೧೫ರಂದು ಶ್ರೀಯುತರು ಅಣ್ಣು ಶೆಟ್ಟಿ, ವಿಠಲ ಶೆಟ್ಟಿ, ಬಾಬು ಗಾಣಿಗ ಮತ್ತು ಸತೀಶ ಎಂಬ ಹುಡುಗರು ತಾಲೂಕು ಕಛೇರಿಯ ಮುಂದೆ ಪಿಕೆಟು ನಡೆಸಿದರು. ಅವರನ್ನು ಬಂಧಿಸಿ ಆ ದಿನ ಲಾಕಪ್ಪಿನಲ್ಲಿ ಇಡಲಾಯಿತು. ಮರುದಿನ ಅವರ ವಿಚಾರಣೆ ನಡೆದು ಆ ದಿನ ಕೋರ್ಟು ಏಳುವ ತನಕ ಪೋಲೀಸರ ವಶವಿರಬೇಕೆಂಬ ಶಿಕ್ಷೆ ವಿಧಿಸಲ್ಪಟ್ಟಿತು.

ಮಂಗಳೂರಲ್ಲಿ ಕೋರ್ಟು ಪಿಕೆಟ್ ಮಾಡಿ ಬಂಧಿತರಾದ ಶ್ರೀ. ಎಮ್. ಗಣಪತಿ ಕಾಮತರ ವಿಚಾರಣೆಯಾಗಿ ೨ ತಿಂಗಳ ಕಠಿಣ ಶಿಕ್ಷೆ ಮತ್ತು 'ಸಿ' ಕ್ಲಾಸು ವಿಧಿಸಲಾಗಿದೆ.

ಪಾಣೆಮಂಗಳೂರು

ಇಲ್ಲಿನ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ಮಾಧವ ಪಡಿಯಾರರನ್ನು ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ಬಂಧಿಸಲಾಗಿದೆ.

ಬಂಟ್ವಾಳ

ಬಂಟ್ವಾಳದಲ್ಲಿ ಸಬ್ ಮೆಜಿಸ್ಟ್ರೇಟ್ ಕೋರ್ಟಿನ ಮುಂದೆ ಪಿಕೆಟ್ ಮಾಡಿದ ಇಬ್ಬರನ್ನು ತಾ. ೧೬ರಂದು ಬಂಧಿಸಲಾಗಿದೆ.

ಕಾಸರಗೋಡು

ಶಿಕ್ಷೆ

ತಾ. ೧೨ರಲ್ಲಿ ಆರು ಜನ ಪಿಕೆಟರುಗಳನ್ನು ಸೆರೆ ಹಿಡಿದರು. ಸಬ್ ಮೆಜಿಸ್ಟ್ರೇಟರು ಪ್ರತಿಯೊಬ್ಬರಿಗೂ ಎರಡು ತಿಂಗಳ ಸಾದಾ ಶಿಕ್ಷೆ ವಿಧಿಸಿದರು.

ತಾ. ೧೪ರಲ್ಲಿ ಡಿಕ್ಟೇಟರ್ ಎಮ್. ನಾರಾಯಣ ನಂಬಿಯಾರರನ್ನು ರಾಜ್ಯರಕ್ಷಣಾ ಕಾನೂನು ಅನ್ವಯ ಸೆರೆಹಿಡಿದಿದ್ದಾರೆ.

ಇಲ್ಲಿನ ಕಾಂಗ್ರೆಸ್ ಶಿಬಿರ ಮತ್ತು ಶ್ರೀನಿವಾಸ ಪ್ರೆಸ್ ಇವನ್ನು ಜಪ್ತಿ ಮಾಡಿ ಕರಪತ್ರಗಳಿವೆಯೋ ಎಂದು ಶೋಧಿಸಲಾಯಿತು. ಪ್ರೆಸ್ಸಿನಲ್ಲಿ ಏನೂ ದೊರಕಲಿಲ್ಲವೆಂದೂ ಕಾಂಗ್ರೆಸ್ ಶಿಬಿರದಲ್ಲಿ ಕೆಲವು ಕರಪತ್ರಗಳು ಸಿಕ್ಕಿದುವೆಂದೂ ತಿಳಿದಿದೆ.

ತಾ. ೧೫ರಂದು ಕಾಸರಗೋಡಿನ ಮಾಜಿ ಬೆಂಚ್ ಮ್ಯಾಜಿಸ್ಟ್ರೇಟರಾದ ಶ್ರೀ। ದೇವಪ್ಪ ಆಳ್ವರ ಕೈಸೆರೆಯಾಯಿತು. ಇತರ ೪ ಮಂದಿ ಸ್ವಯಂಸೇವಕರನ್ನೂ ಸೆರೆ ಹಿಡಿದಿದ್ದಾರೆ.

ತಾ. ೧೬ರಲ್ಲಿ ಶ್ರೀ। ಎ. ಅಚ್ಯುತನ್ ಅವರನ್ನು ನೇಕಾರ ಸಂಘದ ಮಠಾರದಿಂದ ಸೆರೆಹಿಡಿಯಲಾಗಿದೆ.

ಕಾಸರಗೋಡಿನಲ್ಲಿ ತಾ. ೮ರಂದು ಕೋರ್ಟು ಮುಂದೆ ಪಿಕೆಟ್ ಮಾಡಿದ್ದಕ್ಕೆ ಶ್ರೀ. ವೇಣುಗೋಪಾಲ ಕಾಮತ್ ಹಾಗೂ ಶ್ರೀ. ಕೆ. ಕೆ. ಗೋಪಾಲಕೃಷ್ಣ ಕುರುಪ್ ಇವರಿಗೆ ೨೫ ರೂ. ಜುಲ್ಮಾನೆ ಇಲ್ಲವೇ ೧॥ ತಿಂಗಳ ಶಿಕ್ಷೆ ವಿಧಿಸಲಾಗಿದೆ. ತಾ. ೮ರಂದು ಪಿಕೆಟ್ ಮಾಡಿದ ಶ್ರೀಗಳಾದ ಕೆ. ದೇವದಾಸ ಕಾಮತ್ ಮತ್ತು ಶ್ರೀ ಕುಂಞಿಕಣ್ಣನ್ ನಾಯರ್ ಹಾಗೂ ವಿ. ಕುಂಞಿಕಣ್ಣನ್ ಇವರು ಬಂಧಿಸಲ್ಪಟ್ಟಿರುವರು.

ಕುಂಬಳೆ ಸರ್ಕಲಿನ ಕಾಂಗ್ರೆಸ್ ಪಕ್ಷದ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಶ್ರೀ ಒಂಬ್ರಾಣ ಗುಡ್ಡಪ್ಪ ರೈಗಳು ತಮ್ಮ ಬೋರ್ಡ್ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವರು.

ಕಾಸರಗೋಡಿನಲ್ಲಿ ತಾ. ೭ರಂದು ಪಿಕೆಟ್ಟು ಮಾಡಿ ಬಂಧಿತರಾದ ೩ ಜನರಿಗೆ ೨ ತಿಂಗಳ ಕಠಿಣ ಶಿಕ್ಷೆ ಮತ್ತು ತಾ. ೮ರಂದು ಪಿಕೆಟು ಮಾಡಿದ ೩ ಜನರಿಗೆ ರೂ ೨೫ ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಸಾದಾ ಶಿಕ್ಷೆ ವಿಧಿಸಲಾಗಿದೆ.

ನೀಲೇಶ್ವರದಲ್ಲಿ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರಾದ ಶ್ರೀ. ಸಿ. ಕೆ. ರಾಘವನ್ ನಂಬಿಯಾರರನ್ನು ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ತಾ. ೨೭ರಂದು ಬಂಧಿಸಿ ಅಂದು ಸಂಜೆ ಕಾಞಂಗಾಡಿಗೆ ತಂದಿರುವರು. ಶ್ರೀಗಳಾದ ಎನ್. ಕೆ. ಬಾಲಕೃಷ್ಣನ್, ಪರಮೇಶ್ವರನ್ ತಿರುಮುಂಬು ಮತ್ತು ವಿ. ಪಿ. ಕುಂಞಿಕೃಷ್ಣನ್ ನಾಯರ್‌ನಾರ್ ಇವರನ್ನು ತಾ. ೧೬ರಂದು ನೀಲೇಶ್ವರದಲ್ಲಿ ಬಂಧಿಸಿ ಕಾಞಂಗಾಡಿಗೆ ತರಲಾಗಿದೆ. ಕೋಟಚ್ಚೇರಿಯ ಶ್ರೀ. ಕೆ. ಅಚ್ಯುತ ಶೆಣೈಯವರನ್ನು ತಾ. ೧೪ರಂದು ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಿಂದ ಬಂಧಿಸಿ ಕಾಞಂಗಾಡಿನಲ್ಲಿ ರಿಮಾಂಡಿನಲ್ಲಿಡಲಾಗಿದೆ. ನೀಲೇಶ್ವರದಲ್ಲಿ ಬಂಧಿತರಾದವರನ್ನು ಕಾಞಂಗಾಡಿಗೆ ತರುವಾಗ, ತಾ. ೧೬ರಲ್ಲು ಜನರ ಗುಂಪೊಂದು ಸೇರಿ ಘೋಷಣೆ ಮಾಡುತ್ತಾ ಅವರೊಡನೆ ಮುಂದುವರಿದು ಬರುತ್ತಿರಲು, ಪೋಲೀಸರು ಅವರನ್ನು ಚದರಿಸಿದರು. ಮರುದಿನ ಕಾಞಂಗಾಡ್ ಪೋಲೀಸ್ ಸ್ಟೇಶನಿನಲ್ಲಿ ಬಂಧಿತರಾದವರನ್ನು ನೋಡಲು ನೆರೆದ ಜನರ ಗುಂಪನ್ನು ಪೋಲೀಸರು ಚದರಿಸಬೇಕಾಯಿತು. ಗಾಯಗೊಂಡ ಶ್ರೀ ಹರಿದಾಸ ಎಂಬವರನ್ನು ಬಂಧಿಸಿ ವಿಚಾರಣೆ ಮಾಡಿ ನ್ಯೂಸೆನ್ಸ್ ಆಕ್ಟು ಪ್ರಕಾರ ರೂ ೨೫ ಜುಲ್ಮಾನೆ ವಿಧಿಸಲಾಗಿದೆ.

ಅದೇ ದಿನ ಶ್ರೀಯುತರಾದ ಪೆರಡಾಲಿನ ಕೆ. ಟಿ. ಶಂಕರ, ಬೀರು ಶೆಟ್ಟಿ ಇವರನ್ನೂ ಶ್ರೀ. ಕೆ. ವಿ. ರಾಮುನ್ ಮತ್ತು ನಾರಾಯಣ ನಾಯರ್ ಇವರನ್ನೂ ಕೋರ್ಟು ಪಿಕೆಟಿಂಗ್ ನಿಮಿತ್ತ ಕಾಸರಗೋಡಿನಲ್ಲಿ ಬಂಧಿಸಲಾಗಿದೆ. ತಾ. ೧೭ರಂದು ಶ್ರೀ. ರಾಮದಾಸ ನಾಯಕರನ್ನು ಬಂಧಿಸಲಾಗಿದೆ.

ಹರಿಜನಸೇವೆ

ಇಲ್ಲಿನ ಹರಿಜನ ಸೇವಕ ಆಶ್ರಯದಲ್ಲಿ ನಡೆಸುತ್ತಿರುವ ವಿದ್ಯಾರ್ಥಿ ಭವನದ ಹುಡುಗರಿಗೆ ಪರಿದಾಸ ಶ್ರೀ। ಕೆ. ರಂಗರಾಯರು ಸುಮಾರು ೧೫ ರೂ. ಬೆಲೆ ಬಾಳುವ ವಸ್ತ್ರ ದಾನವನ್ನೂ ಗಣೇಶ ಚತುರ್ಥಿಯ ದಿನ ಅವರಿಗೆ ಔತಣವನ್ನೂ ಮಾಡಿಸಿ ಉಪಚರಿಸಿದ್ದಾರೆಂದೂ ಈ ಸಂಸ್ಥೆಯವರು ಒಬ್ಬ ಅನಾಥ ಹರಿಜನ ಬಾಲಕನನ್ನು ಉದ್ಧರಿಸಿದ್ದಾರೆಂದೂ ತಿಳಿದುಬರುತ್ತದೆ. ಇದು ಸ್ತುತ್ಯ.

ರಾಜಿನಾಮೆ

ಪುತ್ತೂರು ಸರ್ಕಲಿನ ದ. ಕ. ಜಿಲ್ಲಾ ಬೋರ್ಡ್ (ಕಾಂಗ್ರೆಸ್ ಪಕ್ಷದ) ಸದಸ್ಯರಾದ ಶ್ರೀ. ಮೊಳಹಳ್ಳಿ ಶಿವರಾಯರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರೆಂದು ತಿಳಿದುಬರುತ್ತದೆ.

ಮೂಡುಬಿದ್ರೆ

ಇಲ್ಲಿಯ ಪಂಚಾಯತ್ ಬೋರ್ಡು ಮೆಂಬರುಗಳಾದ ಶ್ರೀ। ಗೋಪಾಲ ಪೈ, ಶ್ರೀ। ಮಂಜೇಶ್ವರ ಪಾಚಪ್ಪ ಶೆಟ್ಟರು, ಮತ್ತು ಶ್ರೀ। ಬೆಟ್ಕೇರಿ ಚಂದಪ್ಪ ಇಂದ್ರ ಇವರು ತಮ್ಮ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರೆಂದು ತಿಳಿಯುತ್ತೇವೆ.

ಕಾರ್ಕಳ

ಕೋರ್ಟು ಪಿಕೆಟಿಂಗ್ ಮಾಡಿ ಕೈದಿಗಳಾದ ಶ್ರೀ. ಕೆ. ರಾಘವೇಂದ್ರ ನಾಯಕ್ ಮತ್ತು ಶ್ರೀ. ಯಸ್. ಮಂಜುನಾಥ ಕುಡ್ವರವರ ವಿಚಾರಣೆ ಕುಂದಾಪುರ ಕಲೆಕ್ಟರರ ಮುಂದೆ ನಡೆದು ಅವರಿಗೆ ನಾಲ್ಕು ತಿಂಗಳ ಸಶ್ರಮ ಸಜೆಯನ್ನು ವಿಧಿಸಲಾಗಿದೆ.

ಶ್ರೀ. ಕೆ. ಪಿ. ಶೇಷಗಿರಿ ಪ್ರಭುಗಳವರು ಜಿಲ್ಲಾ ಯುದ್ಧ ಸಹಾಯ ಸಮಿತಿ ಮತ್ತು ತಾಲೂಕು ಯುದ್ಧ ಸಹಾಯ ಸಮಿತಿಯ ತಮ್ಮ ಎರಡೂ ಸದಸ್ಯ ಸ್ಥಾನಗಳಿಗೂ, ಶ್ರೀ। ವಿ. ವಿ. ಶೆಣೈಯವರು ಯುದ್ಧ ಸಹಾಯ ಸಮಿತಿಗೆ ಮಾತ್ರವಲ್ಲದೆ ಗೌರವ ಬೆಂಚ್ ಮೆಜಿಸ್ಟ್ರೇಟ ಸ್ಥಾನಕ್ಕೂ ರಾಜಿನಾಮೆ ಕಳುಹಿಸಿದ್ದಾರೆ.

ಉಡುಪಿ

ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯೊಂದು ಕಳೆದ ವಾರ ಚೆಯರ್‌ಮೇನ್ ಶ್ರೀ। ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಕುಂದಾಪುರ ಡಿವಿಜನಿನ ಎಕ್ಸೈಜ್ ಎಡ್ವೈಸರಿ ಕಮಿಟಿಗೆ ಶ್ರೀ ಆರ್. ಎ. ಸ್ವಾಮಿಯವರನ್ನು ನಗರ ಸಭೆಯ ಪ್ರತಿನಿಧಿಯಾಗಿ ಒಮ್ಮತದಿಂದ ಆರಿಸಲಾಯಿತು. ಸ್ಥಳೀಯ ಬೋರ್ಡು ಹೈಸ್ಕೂಲಿನ ಎಕೆಡೆಮಿ ಹಾಲಿನ ನಿರ್ಮಾಣದ ಬಗ್ಗೆ ಧನಸಹಾಯವೀಯಬೇಕಾಗಿ ಶಾಲಾ ಹೆಡ್ಮಾಸ್ತರರ ವಿನಂತಿ, ಹಿಂದುಸ್ಥಾನ ಸ್ಕಾಟ್ ಎಸೋಸಿಯೇಶನಿಗೆ ವಂತಿಗೆಯ ಕೇಳಿಕೆ, ಮುನಿಸಿಪಲ್ ಸಿಬ್ಬಂದಿಗೆ ಸೇಕಡಾ ೨೦ರಂತೆ ಬತ್ತಿ ಸಂಬಳ ಕೊಡುವರೆ ಅನುಗ್ರಹಿಸಬೇಕಾಗಿ ಮಾಡಿದ ಮನವಿಗಳಿಗೆಲ್ಲಾ ವಿಷಾದ ಪ್ರದರ್ಶಿಸಿ, ನಗರ ಸಭೆಯು 'ನಾಕಾರ' ಸೂಚಿಸಿತ್ತು.

ಉಡುಪಿ ತಾಲೂಕಿನ ನೇಕಾರರು ತಾ. ೧೪ರಲ್ಲಿ ಶ್ರೀ। ಪಿ. ಶೀನ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಗೂಡಿ ತಮ್ಮ ಸಂಕಷ್ಟ ಪರಂಪರೆಗಳ ನಿವಾರಣೆ ಬಗ್ಗೆ ಸಮಾನವಾಗಿ ಮಿತ ದರದಲ್ಲಿ ನೂಲು ಸಿಗುವಂತೆ ವ್ಯವಸ್ಥೆಯಾಗಬೇಕೆಂದು ಮದ್ರಾಸು ಸರಕಾರಕ್ಕೆ ದೂರಿತ್ತರು. ಈ ಸಂದರ್ಭದಲ್ಲಿ ನೇಕಾರರ ಸಂಘವೂ ಸ್ಥಾಪಿಸಲ್ಪಟ್ಟಿತು.

ಉಡುಪಿಯಲ್ಲಿ ಪಿಕೆಟಿಂಗ್ ಮಾಡಿದ ಶ್ರೀ. ಕೆ. ಮಾಧವ ಶೆಣೈಯವರಿಗೆ ಬಂಧನವಾಗಿ ೩ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ.

ಬೈಂದೂರು

ಬೈಂದೂರಲ್ಲಿ ತಂತಿ ಸರಿಗೆ ಕಡಿದ ಆರೋಪದ ಸಂಬಂಧ ಶ್ರೀಗಳಾದ ಅಣ್ಣಪ್ಪ, ವೀರಪ್ಪ, ಪುತ್ತು ಮಾಲಿಂಗ ಇವರು ಶಿಕ್ಷಿಸಲ್ಪಟ್ಟಿರುವರು.

ಟೆಲಿಗ್ರಾಫ್ ತಂತಿ ಕಡಿದ ಆರೋಪದಿಂದ ಬೈಂದೂರಲ್ಲಿ ಬಂಧಿತರಾದ ನಾಲ್ಕು ಜನರಿಗೆ ಕುಂದಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ತಾ. ೧೭ರಂದು ೨೦ ಛಡಿ ಏಟಿನ ಶಿಕ್ಷೆ ವಿಧಿಸಿದರು.

ಕನ್ನಡ ಸಾಹಿತ್ಯಪರಿಷತ್

ಅಧ್ಯಕ್ಷ ಸ್ಥಾನಕ್ಕೆ

ಪರಿಷತ್ ಮಂಡಲಿಯಿಂದ ಸೂಚಿತರಾದವರಲ್ಲಿ ಶ್ರೀ। ಮಂಜೇಶ್ವರ ಗೋವಿಂದ ಪೈಗಳು ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿ ನಿಲ್ಲಲು ತಮಗೆ ಇಷ್ಟವಿಲ್ಲವೆಂದು ತಿಳಿಸಿದ್ದಾರಾಗಿ ಪರಿಷತ್ತಿನ ವಾರಪತ್ರಿಕೆಯಾದ 'ಕನ್ನಡ ನುಡಿ'ಯಲ್ಲಿ ಪ್ರಕಟವಾಗಿದೆ.

ಮಂಗಳೂರು
ಜಿಲ್ಲಾ ಬೋರ್ಡು

ದ. ಕ. ಜಿಲ್ಲಾ ಬೋರ್ಡಿನ ೧೯೪೧-೪೨ರ ವಾರ್ಷಿಕ ವರದಿಯ ಕೆಲ ಅಂಕೆ ಸಂಖ್ಯೆಗಳು ಹೀಗಿವೆ:—

ಹೊಸ ವರ್ಷದ ಬಜೆಟು ೧೯೪೦ರಲ್ಲಿ ಆರಂಭವಾದಾಗ ೪೫,೪೯೧ ರೂ. ಗಳ ಶಿಲ್ಕು ಇದ್ದಿತು. ಆಯ: ರೂ. ೬,೯೯,೩೭೪, ವ್ಯಯ: ರೂ. ೭,೩೯,೬೭೫. ವರ್ಷಾಂತ್ಯದ ಉಳಿತಾಯ ರೂ. ೭,೮೯೦. ಬೋರ್ಡು ೧,೩೯೦ ಮೈಲು ಉದ್ದ ರಸ್ತೆಯನ್ನು ರೂ. ೩,೭೫,೯೯೫ ವೆಚ್ಚಮಾಡಿ ಪಾಲಿಸಿತು. ಡಿ. ಬೋರ್ಡು ಪ್ರದೇಶಗಳಲ್ಲಿ ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ೩೧೪,-೨೯೭. ಇವರಲ್ಲಿ ೧೨೮,೧೪೫ ಮಂದಿ ನಿರ್ಗತಿಕರು. ವರ್ಷಾಂತ್ಯದಲ್ಲಿ ಶಾಲೆಗಳ ಸಂಖ್ಯೆ ೧,೧೯೩, ಇವುಗಳಲ್ಲಿ ೧೦೯ ಹುಡುಗಿಯರಿಂಗಾಗಿ, ೫೪೩ ಶಾಲೆಗಳನ್ನು (೫೩ ಹುಡುಗಿಯರಿಂಗೆ) ರೂ. ೫,೩೩,೩೩೦ ವೆಚ್ಚದಲ್ಲಿ ಬೋರ್ಡು ನಡೆಸಿತು. ಆರ್ಥಿಕ ಅಡಚಣೆಯಿಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡಿಸಲಿಕ್ಕೆ ಆಗಲಿಲ್ಲ. ಆದರೆ ೫ನೇ ತರಗತಿ ತನಕ ಎ. ಬೋ. ಶಾಲೆಗಳಲ್ಲಿ ಉಚಿತ ವಿದ್ಯಾಭ್ಯಾಸ ಕೊಡಲಾಯಿತು. ರೂ. ೩೯,೪೭೬—೦-೧೧ ವೆಚ್ಚಮಾಡಿ ಬೋರ್ಡು ಏಳು ಸೆಕೆಂಡರಿ ಶಾಲೆಗಳನ್ನು ನಡೆಸಿತು. ಒಟ್ಟು ೪೫,೭೪೦ ಜನನಗಳೂ ೩೭,೪೮೧ ಮರಣಗಳೂ ಇದ್ದುವು.

ಹರಿಜನವಾರ

ಹರಿಜನ ವಾರವನ್ನು ಎಂದಿನಂತೆ ತಾ. ೨೪-೯-೪೨ರಿಂದ ೨-೧೦-೪೨ರ ವರೆಗೆ (೯ ದಿನ) ಈ ವರ್ಷವೂ ಜರಗಿಸುವುದಾಗಿ ನಿರ್ಣಯಿಸಿರುತ್ತೇವೆ. ಸಪ್ಟೆಂಬರ್ ತಾ. ೨೪ ಹರಿಜನ ಸಂಬಂಧವಾಗಿ ಪೂನಾ ಒಪ್ಪಂದವಾದ ದಿನವು. ಅದರ ಜನ್ಮದಾತರಾದ ಮಹಾತ್ಮಾ ಗಾಂಧಿಯವರ ಜನ್ಮದಿನವು ಅಕ್ಟೋಬರ್ ತಾ. ೨. ಈ ವರ್ಷ ಗಾಂಧೀಯವರ ೭೩ನೇ ಪ್ರಾಯವು ಕಳೆದು ಅವರ ೭೪ನೇ ದಿನಾಚರಣೆಯು ನಡೆಯಲಿಕ್ಕಿರುತ್ತದೆ.

ಇಂದಿಗೆ ೧೦ ವರ್ಷಗಳಿಂದ ಕೆಲಸಮಾಡುತ್ತಿರುವ ನಮ್ಮ ಜಿಲ್ಲಾ ಸಂಘವು ಈ ಮೊದಲೇ ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ೩ ಹರಿಜನ ವಿದ್ಯಾರ್ಥಿ ಭವನಗಳನ್ನು ನಡೆಸಿಕೊಂಡು ಬಂದಿದ್ದು ಈ ವರ್ಷ ಕಾಸರಗೋಡು ಮತ್ತು ಪುತ್ತೂರು ತಾಲೂಕುಗಳಲ್ಲಿ ಎರಡು ಭವನಗಳನ್ನು ಹೊಸತಾಗಿ ತೆರೆದು, ತನ್ನ ಕಾರ್ಯಕ್ರಮವು ಇಡೀ ಜಿಲ್ಲೆಯಲ್ಲಿ ವ್ಯಾಪಕವಾಗುವಂತೆ ಮಾಡಿಕೊಂಡು ಹೆಚ್ಚಿನ ಜವಾಬ್ದಾರಿಯನ್ನು ಹೊತ್ತಿದೆ. ಮೇಲಿನ ೫ ಭವನಗಳಲ್ಲಿ ಒಟ್ಟು ೪೪ ವಿದ್ಯಾರ್ಥಿಗಳು ಆಶ್ರಯ ಪಡೆದಿರುತ್ತಾರೆ. ಶಾಲೆಗೆ ಹೋಗುವ ೪೭ ಮಕ್ಕಳಿಗೆ ಪ್ರತ್ಯೇಕವಾಗಿ ಮಧ್ಯಾಹ್ನದ ಊಟ ಕೊಡುತ್ತಿದೆ. ಹಲವು ವಿದ್ಯಾರ್ಥಿಗಳಿಗೆ ಶಾಲಾ ಸಂಬಳ, ಪುಸ್ತಕ ಮತ್ತು ಬಟ್ಟೆಗಳನ್ನು ಒದಗಿಸಿ ಕೊಟ್ಟಿರುತ್ತದೆ. ಅಲ್ಲದೆ ಕೆಲವರಿಗೆ ಮದ್ದಿನ ಮತ್ತು ಇತರ ಸಹಾಯಗಳನ್ನು ಒದಗಿಸಿರುತ್ತದೆ. ಈ ಎಲ್ಲಾ ಕೆಲಸಗಳಿಗೆ ಸರಕಾರದಿಂದ ಜಿಲ್ಲಾ ಬೋರ್ಡಿನಿಂದ ಮತ್ತು ಮಂಗಳೂರು ಮುನಿಸಿಪಾಲಿಟಿಯಿಂದ ಸಹಾಯವು ದೊರೆಯುತ್ತಿದ್ದರೂ, ಅದು ಅತ್ಯಂತ ಕಡಿಮೆಯಿದ್ದು ನಮ್ಮ ಹೆಚ್ಚಿನ ಭಾರವು ಜನತೆಯನ್ನೇ ಸೇರಿಕೊಂಡಿದೆ. ಆದ್ದರಿಂದ ಊರಿನ ಉದಾರ ಮಹಿಳೆಯರೂ ಮಹನೀಯರೂ ಈ ವರ್ಷ ಎಂದಿಗಿಂತಲೂ ಹೆಚ್ಚಾಗಿ ಕೈಮೀರಿ ಸಹಾಯ ಕೊಟ್ಟು, ಹರಿಜನ ಸೇವೆಗೆ ನೆರವಾಗಬೇಕೆಂದು ಕೇಳಿಕೊಳ್ಳುತ್ತೇವೆ ಎಂದು ಶ್ರೀ ಎ. ಬಿ. ಶೆಟ್ಟಿ, ಅಧ್ಯಕ್ಷ ದ. ಕ. ಜಿಲ್ಲಾ ಹರಿಜನ ಸೇವಕ ಸಂಘ ಇವರು ತಿಳಿಸುತ್ತಾರೆ.

ನಿಷೇಧ—ರಾಜಿನಾಮೆ

ತಾ. 19ರ ಮಂಗಳೂರು ಮುನ್ಸಿಪಲ್ ಕೌನ್ಸಿಲ್ ಸಭೆಯಲ್ಲಿ ಹಾಜರಿರದ ಶ್ರೀಗಳಾದ ಜೆ. ಗುರುವ (ಹರಿಜನ ಕೌನ್ಸಿಲರ್) ಎ. ಆರ್. ಡಿ. ಸೋಜ, ಎಚ್. ರಾಘವೇಂದ್ರ ಪೈ, ಪಂಡಿತ ಗಜಾನನ ರಾವ್, ಮುಟ್ಟಾದೋ ಈ ಕಾಂಗ್ರೆಸ್ ಪಕ್ಷದವರೂ ಇವರು ತಮ್ಮ ಕೌನ್ಸಿಲರ್ ಸ್ಥಾನಗಳಿಗೆ ರಾಜಿನಾಮೆಯಿತ್ತಿರುವರಾಗಿ ತಿಳಿದು ಬರುತದೆ.

ಸಿನೆಮಾ ಸುದ್ದಿ
'ಝೂಲಾ'

ಝೂಲಾ ಎಂದರೆ ಉಯ್ಯಾಲೆ; ತರುಣ ತರುಣಿಯರು, ಪ್ರಣಯಿ ಪ್ರಣಯಿನಿಗಳು ಉಯ್ಯಾಲೆಯಾಡುತ್ತಾರೆ. ಅಂತೆಯೇ ಬೊಂಬೇ ಟಾಕೀಸಿನ ಝೂಲಾ ಚಿತ್ರದಲ್ಲಿ ಲೀಲಾಚಿಟ್ನೆಸ್ ಅಶೋಕ ಕುಮಾರರು ತೂಗುಯ್ಯಾಲೆಯಾಡಿದರು.

ಇಬ್ಬರು ತರುಣರು, ಸೋದರ ಸಮಾನರು, ಒಬ್ಬಳೇ ನಲ್ಲೆಯಲ್ಲಿ ಅನುರಕ್ತರಾದರು. ಒಬ್ಬನಿಗೆ ಇನ್ನೊಬ್ಬನ ಮೋಹ ತಿಳಿಯದು. ಲೀಲಾ ಚಿಟ್ನಿಸ್ (ಗೀತಾ) ನಲ್ಲೆ; ಅಶೋಕ ಕುಮಾರ್ (ರಮೇಶ) ಮತ್ತು ಷಾನವಾಜ್ ನಲ್ಲೆಗೆ ಎಡೆ ಸೋತವರು; ಮೊತ್ತಮೊದಲು ಷಾನವಾಜನೊಡನೆ ಲೀಲಾಳ ಸಲಿಗೆ ಬೆಳೆಯಿತು; ಅವನು ಅವಳ ಫೋಟೋ ತೆಗೆದ; ಲೀಲಾ ರೋಮಾಂಚಿತಳಾದಳು; ತಂದೆಯು ಸೋದರರಿಬ್ಬರಿಗೂ ಆಸ್ತಿಯನ್ನು ಪಾಲು ಮಾಡಿ ವೀಲು ಬರೆದಿದ್ದ. ಷಾನವಾಜನಿಗೆ ತನ್ನ ಆಸ್ತಿಗೆ ಇನ್ನೊಬ್ಬ ಪಾಲುಗಾರನಾದುದು ಸರಿತೋರಲಿಲ್ಲ. ಮೃದು ಹೃದಯಿ ಅಶೋಕ ಕುಮಾರನಿಗೆ ಆಸ್ತಿಗಾಗಿ ಕಾದಾಡಬೇಕೇ ಎಂದು ಇದರಿಂದ ಸಂಕಟವಾಯಿತು; ಆತನು ಷಾನವಾಜನಿಗೇ ಎಲ್ಲವನ್ನೂ ಬಿಟ್ಟುಕೊಟ್ಟು ಗತಿಯಿಲ್ಲದೆ ಮನೆಬಿಟ್ಟು ಹೊರಟುಹೋದ; ಊರೂರು ಅಲೆದ; ಪೋಸ್ಟ್‌ಮೇನ್ ಕೆಲಸವೂ ಮಾಡಬೇಕಾಯಿತು! ಪೋಸ್ಟ್‌ಮೇನ್ ಅಶೋಕ ಕುಮಾರನು ಲೀಲಾಳನ್ನು ಸಂಧಿಸಿದ; ಅವರಲ್ಲಿ ಸಲಿಗೆ ಬೆಳೆಯಿತು; ಪ್ರೇಮಾಂಕುರವಾಯಿತು. ಷಾನವಾಜ್ ಬಂದು ತನ್ನ ಹಿಂದಿನ ಪ್ರೇಮದ ನೆನಪು ಮಾಡಿದ. ಲೀಲಾಳ ಹೃದಯ ಅಶೋಕ ಕುಮಾರನಿಗೆ ಸಂದಿತು. ಆದರೆ ಧೂರ್ತ ಷಾನವಾಜ್ ಇಲ್ಲಿ ಕಲಹದ ಬೀಜವನ್ನು ಬಿತ್ತಿದನು; ಪ್ರಣಯಿ ಪ್ರಣಯಿನಿಗಳಲ್ಲಿ ಸಂಶಯ ಹುಟ್ಟುವುದು; ಲೀಲಳ ತಂದೆ ಷಾನವಾಜನಿಗೇ ಮಗಳನ್ನು ಕೊಡುವ ಇಷ್ಟವುಳ್ಳವ; ಪ್ರೇಮದ ಹಗಡೆ ಯಾವ ಕಡೆಗೆ ತಿರುಗುವುದು; ಹೇಗೆ ಕಥೆಯು ಸುಖಾಂತ್ಯವಾಗುವುದು ಎಂಬುದು ಮನೋಹರವಾಗಿ ಝೂಲಾದಲ್ಲಿ ಚಿತ್ರಿತವಾಗಿದೆ. ಇದು ಸದ್ಯದಲ್ಲೇ ಬಾಲಾಜಿ ಟೋಕಿಸಿನಲ್ಲಿ ಪ್ರದರ್ಶಿಸಲ್ಪಡುವುದು.

ನೋರ್ಮಾ ಶೀರರ್

ಇತ್ತೀಚೆಯ ಚಿತ್ರಗಳಲ್ಲಿ ವಿಷಾದಮಯ ಪಾತ್ರಗಳನ್ನೇ ವಹಿಸುತ್ತಿದ್ದಳು. ಆದರೆ ಇತ್ತೀಚೆಯ ಅವಳ ಕೃತಿ 'ವಿವೇಲ್ ಡಾನ್ಸಿಂಗ್'ನಲ್ಲಿ ಆಕೆ ಹಿಂದಿನ ಉಲ್ಲಾಸದಿಂದ ಮೆರೆದಿದ್ದಾಳೆ. ಅದರಲ್ಲಿ ಮೆಲ್ವಿನ್ ಡೋಗ್ಲಾಸನೊಡನೆ ಆಕೆ ಪ್ರೇಮಮಾಡುತ್ತಾಳೆ;

ಮದುವೆಯಾದ ಮತ್ತೆ

ಇದು ಹೇಮಂತಗುಪ್ತರ ಹೊಸ ಚಿತ್ರದ ಹೆಸರು. ನ್ಯೂ ಥಿಯೇಟರ್ಸ್‌ನವರ ಆಶ್ರಯದಲ್ಲಿ ಇದು ತಯಾರಾಗುತ್ತಿದೆ. ಇದರ ಮುಹೂರ್ತ ಸಮಾರಂಭವು ಮೊನ್ನೆ ತಾನೇ ಕಲ್ಕತ್ತದ ಕಾಲೀ ಫಿಲ್ಮ್ ಸ್ಟುಡಿಯೋದಲ್ಲಿ ಜರಗಿತು. ಸಾಧನಾ ಬೋಸ್, ಪದ್ಮಾ ಮಾಣಿಕಾ ಗಂಗೊಳ್ಳಿ, ಮಾಧು ಬೋಸ್, ಅಮಿಯಾಸೇನ್ ಗುಪ್ತ, ಧೀರೇನ್ ಗಂಗೊಳ್ಳಿ, ಹೇಮಂತಗುಪ್ತ, ಸುಕುಮಾರದಾದಗುಪ್ತ ಮತ್ತು ಅಹೀಂದ್ರ ಚೌಧುರಿ ಮೊದಲಾದ ಕಲಾವಿದರು ಅಂದು ನೆರೆದಿದ್ದರು.

ಆಕೆಯ ಕೊನೆಯ ಚಿತ್ರ

ಜ್ಯೋತಿ ಬಂಗಾಳದ ಪ್ರಸಿದ್ಧ ತಾರೆ, ಕಾಲನು ಆವಳನ್ನು ಇಂದು ಕಣ್ಮರೆ ಮಾಡಿದ್ದಾನೆ; 'ಜೀಬನ್ ಸಂಗಿನಿ' ಚಿತ್ರವು ಅವಳ ಕೊನೆಯ ಚಿತ್ರ. ಅನೇಕ ಚಿತ್ರಗಳಲ್ಲಿ ಅಭಿನಯಿಸಿ ಆಕೆ ಸಿನೆಮಾ ಪ್ರಿಯರನ್ನು ಮೆಚ್ಚಿಸಿದ್ದಾಳೆ. 'ಜೀಬನ್ ಸಂಗಿನಿ' ಭಾರತ್‌ಲಕ್ಷ್ಮೀ ಚಿತ್ರ. ಅಹೀಂದ್ರಚೌಧುರಿ ಮತ್ತು ಪ್ರತಿಮಾದಾಸ ಗುಪ್ತರು ಇದರಲ್ಲಿ ನಟಿಸುತ್ತಾರೆ.

ಬಿಲ್ಲವ ಎಸೋಸಿಯೇಶನ್ ಮುಂಬಾಯಿ

ಬಿಲ್ಲವರ ಎಸೋಸಿಯೇಶನಿನ ನೇತೃತ್ವದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ದೇವರ ಜನ್ಮದಿನಾಚರಣೆಯು ಶ್ರೀ. ಬಿ. ಆರ್. ಕರ್ಕೇರರ ಅಧ್ಯಕ್ಷತೆಯಿಂದ ಜರಗಿತು. ಭಜನೆ, ಗುರುಪೂಜೆ, ಗುರು ಸ್ತೋತ್ರ ಭಾಷಣಗಳಾದುವು.

ದಮ್ಮು ಗುಣ ಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಬಮ್ಮಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತೆಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦, ರೂ. ೪-೨-೦, ರೂ. ೬-೨-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮೆತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ



ನಿಮ್ಮ ಕಂಠ ಮತ್ತು ಶ್ವಾಸ ಕೋಶವನ್ನು ಸಂರಕ್ಷಿಸಿರಿ.

ನೀವು ಕಫ, ಶೀತ, ಹಿಮಬಾಧೆ, ಎದೆನೋವು, ಹಾಗೂ ಕಂಠ ನೋವುಗಳಿಂದ ನರಳುವಿರಾದರೆ ವಿಷಹಾರೀ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ಉಪಯೋಗಿಸಿದರೆ ಖಂಡಿತ ಗುಣ ಹೊಂದುವಿರಿ.

ಪೆಪ್ಸ ಮಾತ್ರೆಗಳು ಬಾಯಿಗೆ ಹಾಕಿದ ಕೂಡಲೇ ಕರಗಿ ಒಳ್ಳೆಯ ಔಷಧಿರಸವನ್ನು ಹೊರಗೆಡವುತ್ತವೆ; ಅದು ಶ್ವಾಸಕೋಶಕ್ಕೆ ಹೋಗಿ, ಅಲ್ಲಿರುವ ವಿಷಕ್ರಿಮಿಗಳನ್ನು ನಾಶಗೊಳಿಸುವವು. ಶ್ವಾಸ ನಾಳದ ನೋವನ್ನು ಗುಣಪಡಿಸುವವು. ಎಂತಹ ಕಫ ಶೀತ ಬಾಧೆಗಳನ್ನು ಇಲ್ಲದೆ ಮಾಡುವವು. ಪೆಪ್ಸ ಮಾತ್ರೆಗಳು ಕಂಠ ನಾಳವನ್ನು ಸರಿಗೊಳಿಸುವವು. ಹೀಗೆ ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಉತ್ತಮ ಆರೋಗ್ಯವನ್ನುಂಟುಮಾಡುವವು. ಪೆಪ್ಸ ಮಾತ್ರೆಗಳು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಒಂದು ರೂಪಾಯಿಗೆ ದೊರೆಯುವವು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಕ ಶ್ವಾಸನೀಯ ಗುಳಿಗೆಗಳು

ಸಿನೆಮಾ ಲೇಖಕರ ಸಂಪಾದನೆ?

ಎಷ್ಟೆಂಬುದು ಹಲವರಿಗೆ ಸಮಸ್ಯೆ. ಸಿನೆಮಾಕ್ಕೆ ಕಥೆ, ಸಂಗೀತ ಬರೆದರೆ ಪ್ರಯೋಜನವುಂಟೇ ಎಂದು ಕೆಲವರು ಕೇಳುತ್ತಾರೆ. ಪಂಡಿತ ಇಂದ್ರರ ಉದಾಹರಣೆ ಅವರಿಗೆ ಸಮಾಧಾನಕರವಾಗಿ ತೋರೀತು. ಪಂಡಿತ ಇಂದ್ರರು ೧೯೩೭ರಲ್ಲಿ ತಿಂಗಳ ೧೩೫ ರೂ. ಸಂಬಳದಲ್ಲಿ ಸೊಲಿಸಿಟರ್ ಕ್ಲಾರ್ಕ ಆಗಿ ದುಡಿಯುತ್ತಿದ್ದರು. ಈಗ ಕಳೆದ ೫ ವರ್ಷಗಳಿಂದ ಸಿನೆಮಾ ಲೇಖಕರಾಗಿ ಸರಾಸರಿ ತಿಂಗಳ ೧೫೦೦ ರೂ. ವೇತನಗಳಿಸುತ್ತಿದ್ದಾರೆ. ಇಷ್ಟರಲ್ಲೇ ಪಂಡಿತ ಇಂದ್ರರು ೨೪ ಕಂಪನಿಗಳಿಗೆ ಬರೆದಿದ್ದಾರೆ. ೬೫ರಿಂದ ಮೇಲಿನ ಚಿತ್ರಗಳಿಗೆ ಕಥೆ, ಸಂಭಾಷಣೆ, ಪದ್ಯರೂಪವಾಗಿ ಸಹಾಯ ಮಾಡಿದ್ದಾರೆ. ಹೀಗೆ ಅಹಮ್ಮದ್ ಅಬ್ಬಾಸರೂ ಪ್ರಸಿದ್ಧಲೇಖಕರು ಹಲವರು ಧನ್ಯಾಗಿ ಸಂಪಾದಿಸುತ್ತಿದ್ದಾರೆ.

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

* ಯೋಗಶಾಸ್ತ್ರದಲ್ಲಿ ಈ ಆರು ಮೇರು ಚಕ್ರಗಳ ಹೆಸರುಗಳನ್ನೂ ಸ್ಥಾನಗಳನ್ನೂ ನಿರ್ದೇಶಿಸಿರುತ್ತಾರೆ. ಹೇಗೆಂದರೆ–ಮೇರುದಂಡದ ಕೆಳಗಿನ ಭಾಗದಲ್ಲಿ 'ಮೂಲಧಾರ' 1) ಅದರ ಮೇಲಿನ ಲಿಂಗ ಮೂಲದಲ್ಲಿ 'ಸ್ವಾಧಿಷ್ಠಾನ' 2) ಅದರ ಮೇಲೆ ನಾಭಿಸ್ಥಾನದಲ್ಲಿ 'ಮಣಿಪುರ' 3) ಅದರ ಮೇಲೆ ಹೃದಯದಲ್ಲಿ 'ಅನಾಹತ' 4) ಅದರ ಮೇಲೆ ಕಂಠದಲ್ಲಿ 'ವಿಶುದ್ಧ' 5) ಅದರ ಮೇಲೆ ಹಣೆಯಲ್ಲಿ 'ಆಜ್ಞಾ' 6) ಈ ಆರು ಚಕ್ರಗಳು ಮೇರುದಂಡದ ಮಧ್ಯದಲ್ಲಿರುವ ಸುಷುಮ್ನಾ ಪಥದಲ್ಲಿಯೇ ಇವೆ. ಆದ್ದರಿಂದ 'ಹೃದಯ' 'ಕಂಠ' ಇತ್ಯಾದಿ ಶಬ್ದಗಳು ಮೇರುದಂಡದಲ್ಲಿರುವ ಸ್ಥಾನಗಳನ್ನೇ ನಿರ್ದೇಶಿಸುತ್ತವೆಂದು ತಿಳಿಯಬೇಕು.

ಈ ವಿಷಯ ಶ್ರೀ ರಾಮಕೃಷ್ಣದೇವರ ಅನುಭವ

ಯೋಗದ ಈ ಎಲ್ಲ ತಿಳಿಯಲಸಾಧ್ಯವಾದ ತತ್ವಗಳನ್ನು ಶ್ರೀ ಪರಮಹಂಸರು ಬಹಳ ಸುಲಭ ಮಾತಿನಿಂದ ನಮಗೆ ತಿಳಿಸುತ್ತಿದ್ದರು. ನೋಡು ಸರಸರನೆ ಏನೋ ಒಂದು ಪಾದದಡಿಯಿಂದ ತಲೆಗೆ ಏರುತ್ತದೆ! ಅದು ತಲೆಗೆ ಏರದಿರುವ ತನಕ ಪ್ರಜ್ಞೆ ತಪ್ಪುವುದಿಲ್ಲ; ಆದರೆ ಅದು ತಲೆಗೆ ಏರಿದೊಡನೆಯೇ ನಾನು ಸಂಜ್ಞಾಶೂನ್ಯನಾಗುತ್ತೇನೆ–ಆಗ ನೋಡುವುದಕ್ಕೂ ಕೇಳುವುದಕ್ಕೂ ಆಗುವುದಿಲ್ಲ, ಮಾತನಾಡುವುದಕ್ಕೂ ಆಗುವುದಿಲ್ಲ–ಮಾತನಾಡುವುದಾದರೂ ಯಾರು?–'ನಾನು' 'ನೀನು' ಎಂಬ ಬುದ್ಧಿಯೂ ಕೂಡ ಲೋಪವಾಗುತ್ತದೆ! ಅದು ಏರುತ್ತಾ ಏರುತ್ತಾ ಎಷ್ಟೋ ದರ್ಶನಗಳಾಗುತ್ತವೆ—ಅವುಗಳನ್ನು ನಿಮಗೆಲ್ಲಾ ಹೇಳಬೇಕೆಂದು ಭಾವಿಸುತ್ತೇನೆ. ಅದು ಇಲ್ಲಿ (ಹೃದಯ ಮತ್ತು ಕಂಠವನ್ನು ತೋರಿಸಿ) ಬರುವ ತನಕ ಅಥವಾ ಹೆಚ್ಚಾದರೆ ಇಲ್ಲಿ (ಕಂಠವನ್ನು ತೋರಿಸಿ) ಬರುವ ತನಕ ಮಾತನಾಡಬಹುದು, ಮತ್ತು ನಾನೂ ಕೂಡ ಮಾತನಾಡುತ್ತೇನೆ; ಆದರೆ ಅದು ಇದನ್ನು (ಕಂಠವನ್ನು ತೋರಿಸಿ) ಬಿಟ್ಟು ಹೋದೊಡನೆಯೇ ಯಾರೋ ನನ್ನ ಬಾಯಿ ಮುಚ್ಚಿದಂತೆ ಆಗುತ್ತದೆ ಮತ್ತು ಸಂಜ್ಞಾಶೂನ್ಯನಾಗುತ್ತೇನೆ–ಅದನ್ನು ತಡೆಗಟ್ಟಲಾಗುವುದಿಲ್ಲ! (ಕೊರಳನ್ನು ತೋರಿಸಿ) ಇದರ ಮೇಲೆ ಹೋದಾಗ ಕಂಡ ದರ್ಶನವೆಲ್ಲ ಹೇಳಬೇಕೆಂತ ಭಾವಿಸುತ್ತಿದ್ದೇನೆ–ಮನಸ್ಸು ತಕ್ಷಣವೇ ಮೇಲಕ್ಕೇರುತ್ತದೆ. ಇನ್ನು ಹೇಳಲಾಗುವುದಿಲ್ಲ!

(ಕ್ರಮಶಃ)

ಸಾದರ-ಸ್ವೀಕಾರ

೮ನೇ ತರಗತಿಯ ಸರಕಾರೀ ಪರೀಕ್ಷೆಯ ಕನ್ನಡ ಪಠ್ಯದ ಟಿಪ್ಪಣಿ:

ಸಂಧಿ, ಕ್ಲಿಷ್ಟಾರ್ಥ, ಸರಳಾನುವಾದ, ಪೂರ್ವಕಥೆ, ಸಾರಾಂಶ, ಪ್ರಶ್ನೆ, ವ್ಯಾಕರಣ, ಛಂದಸ್ಸು ವಿಚಾರಗಳಿಂದ ಸಹಿತವಾದ ಈ ಟಿಪ್ಪಣಿ ಪುಸ್ತಕವು ಶ್ರೀ ವಿದ್ವಾನ್ ಎಂ. ಆರ್. ಶಾಸ್ತ್ರಿಯವರಿಂದ ಬರೆಯಲ್ಪಟ್ಟು, ಮಂಗಳೂರು ರಥಬೀದಿ ಬಾಳಿಗಾ ಎಂಡ್ ಸನ್ಸ್ ಇವರಿಂದ ಪ್ರಕಾಶಿತವಾಗಿದೆ. ಅಂದವಾದ ಮುದ್ರಣವುಳ್ಳ ಕ್ರೌನ್ ⅛ ಆಕಾರದ ೯೮ ಪುಟಗಳ ಈ ಪುಸ್ತಕದ ಬೆಲೆ ೯ ಆಣೆ. ಇದು ಸರಕಾರೀ ಪರೀಕ್ಷೆಗೆ ಓದುವ ೮ನೇ ತರಗತಿಯ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನಕಾರಿಯಾಗಿದೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

The Canara Banking Corporation Ltd.
(Incorporated in British India)
Estd. 1906.

Our Rates of Interest on Deposits From 7--8--1942

1. Current		(1% p. a. from Jan. to June. (½% p. a. from July to Dec.
2. Savings Bank		2% p. a.
3. Short-term		1¼% p. a.
4. Fixed	3 months	1½% p. a.
	6 „	2% p. a.
	9 „	2½% p. a.
	12 „	3% p. a.
	24 „	3½% p. a.

Advances aginst approved securities made at very competitive rates.

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

HEAD OFFICE — Mangalore.

BRANCHES — Moodabidri & Padubidri.

ANNOUNCEMENT

On and from 1st February 1942, fixed deposits will be accepted at the following attractive rates.

One year ... 4%

Two years or above 4½%.

Interest Payable Quarterly

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿದು ಬೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು — ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ — ಬೆಂಗಳೂರು — ಮಂಗಳೂರು

ಮದರಾಸು — ತ್ರಿವೇಂಡ್ರಂ — ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy, where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಫೈ, ರಥಬೀದಿ. (3) ದಿ ಕರ್ನಾಟಿಕ ಸ್ಟೋರ್ ವರ್ಕ್ಸ್, ರಥಬೀದಿ.. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

ESTD. SWADESHABHIMANI 1906

[ಸಂಪುಟ 36] ತಾರೀಕು 2—10—1942 [ಸಂಚಿಕೆ 39]

'ಅಧಿಕಾರವನ್ನು ಈಗಲೇ ಬಿಟ್ಟುಕೊಡಿರಿ'

ಜಪಾನನ್ನು ಯುದ್ಧದಲ್ಲಿ ಸೋಲಿಸಬೇಕಾದರೆ-

ಬ್ರಿಟಿಷ್ ಗೃಹಸ್ಥರೇ ಬ್ರಿಟಿಷ್ ಪ್ರಭುತ್ವಕ್ಕೆ ಸಾರಿ ಹೇಳುತ್ತಾರೆ!

— ಆರ್ಥರ ಮೂರರ ಉಜ್ವಲ ಲೇಖನ —

ಕಲ್ಕತ್ತ ಸ್ಟೇಟ್ಸ್‌ಮನ್ ಪತ್ರಿಕೆಯ ಪ್ರಸಿದ್ಧ ಸಂಪಾದಕರಾಗಿದ್ದ ಆರ್ಥರ್ ಮೂರರು ವಿಶಾಲ ಮನೋಭಾವದ ಐರೋಪ್ಯ ಸದ್ಗೃಹಸ್ಥರು; ರಾಜನೀತಿ ವಿಶಾರದರು, ತಪ್ಪು ಹಾದಿ ಹಿಡಿದವರನ್ನು ಖಂಡತುಂಡ ಟೀಕಿಸುವ ಎದೆಗಾರರು, ಅವರು, ಬ್ರಿಟಿಷರು ಭಾರತದ ವಿಷಯ ಅನ್ಯಾಯ ಮಾಡುತ್ತಿರುವುದನ್ನು ಖಂಡಿಸುತ್ತಿದ್ದಾರೆ ಇಂದಿನೀ ಸಂಧಿಕಾಲದಲ್ಲಿ ಭಾರತೀಯರಿಗೆ ಅಧಿಕಾರವನ್ನು ಬಿಟ್ಟುಕೊಡುವುದರಲ್ಲಿಯೇ ಬ್ರಿಟಿಷರ ಬುದ್ಧಿವಂತಿಕೆಯಿದೆಯೆಂದೂ, ಇಲ್ಲವಾದರೆ ಗಂಡಾಂತರವೊದಗಲಿದೆಯೆಂದೂ ತಿಳಿಸಿ ಅವರು ಇತ್ತೀಚೆಗೆ ಒಂದು ಧೀರ ಸೂಚನೆಯನ್ನು ಸರಕಾರದ ಮುಂದಿಟ್ಟಿರುವರು, ಅದರ ವಿವರ ಇಂತಿದೆ

ಪ್ರಮಾದವನ್ನು ಅಳಿಸಬಹುದು

'ಭಾರತದಲ್ಲಿರುವ ಆಂತರಿಕ ವೈಷಮ್ಯವಳಿದು, ಭಾರತ ಮತ್ತು ಬ್ರಿಟನುಗಳೊಳಗಿನ ಕಲಹವು ಕೊನೆಗೊಂಡು, ಭಾರತದ ಶಕ್ತಿಯು, ಭಾರತ ಮತ್ತು ಚೀನಾ ಇವೆರಡು ರಾಷ್ಟ್ರಗಳ ವೈರಿಗಳಾದ ಜಪಾನ್ ಜರ್ಮನ್ ರಾಷ್ಟ್ರಗಳ ವಿರುದ್ಧ ಒಂದುಗೂಡಬೇಕೆಂಬ ಅತ್ಯಂತವಾದೀ ಅಭಿಲಾಷೆಯು ಮಿತ್ರರಾಷ್ಟ್ರಗಳಲ್ಲಿ ಎಲ್ಲೆಲ್ಲಿಯೂ ಕಂಡುಬರುತ್ತದೆ ಇದನ್ನು ನೆರವೇರಿಸಲೂ ಸಾಧ್ಯವಿದೆ, ಈಗ ಉಂಟಾದೀ ಪ್ರಮಾದವನ್ನು ಕೆಲವೇ ವಾರಗಳಲ್ಲಿ ಅಳಿಸಬಹುದು ತಂತಿಮಾರ್ಗಗಳನ್ನು ಪುನಃ ಸರಿಗೊಳಿಸಬಹುದು, ಸಮುಷ್ಕರಗಳು ನಿಂತಾವು, ಉದ್ಯೋಗ ಕೈಗಾರಿಕೆಗಳು ಹೆಚ್ಚಾದಾವು, ಜನತೆಯ ಬೆಂಬಲವುಳ್ಳ ನಿಜವಾದ ಯುದ್ಧಾತುರ ಸರಕಾರವೊಂದನ್ನು ಭಾರತದಲ್ಲಿ ನಾವು ನೋಡಬಹುದು ಆದರೆ ಇಂದಿನ ಸಮಸ್ಯೆಗಳಿಗೆಲ್ಲಾ ಪರಿಹಾರ ಉಪಾಯವು ಒಂದೇ ಒಂದಾಗಿದೆ ಅದೆಂದರೆ, ಬ್ರಿಟಿಷರು ಕೆನಡಾ ಆಸ್ಟ್ರೇಲಿಯಾ ಸರಕಾರಗಳಿಗಿರುವಷ್ಟರ ಮಟ್ಟಿನ ಸ್ವಾತಂತ್ರ್ಯವನ್ನು, ಭಾರತದ ರಾಷ್ಟ್ರೀಯ ಸರಕಾರಕ್ಕೆ ಬಿಟ್ಟುಕೊಡುವುದು ಜಿನ್ನರನ್ನು ಆಮಂತ್ರಿಸಿ ಅವರೊಡನೆ ರಾಷ್ಟ್ರೀಯ ಸರಕಾರ ರಚಿಸ ಹೇಳಬೇಕು. ಜಿನ್ನರು ಆ ಕೆಲಸದಲ್ಲಿ ಯಶಸ್ವಿಯಾದಾರು ಪಂಡಿತ ನೆಹರು ಮತ್ತು ರಾಜಗೋಪಾಲಾಚಾರ್ಯರು ಜಿನ್ನರೊಡನೆ ಸಹಕರಿಸುವರು ಗಾಂಧಿಜಿಯನ್ನು ಬಿಡುಗಡೆಮಾಡಬೇಕು, ಅವರೂ ಮುಂದೆ ತೊಂದರೆ ಕೊಡಲಾರರು ಆಗ ಇಡೀ ದೇಶವೇ ಉತ್ಸಾಹಿತವಾಗಿ ಯುದ್ಧಯತ್ನದಲ್ಲಿ ಪೂರ್ಣ ಬೆಂಬಲಕೊಡುವುದು ಬ್ರಿಟಿಷ್ ಸರಕಾರವು ಕೈಕೊಂಡ ಧೋರಣದ ಪರಿಣಾಮವೇನೆಂಬ ವಿಚಾರದಲ್ಲಿ ಹಿಂದೆ ನಾನು ಹೇಳಿದ್ದು ಸರಿಯಾಗಿದ್ದರೆ, ಅದನ್ನು ನಿವೃತ್ತಿಪಡಿಸಲು ನಾನೀಗ ಹೇಳುವ ಉಪಾಯವೂ ಸರಿಯಾದೀತೆಂದೇ ನನ್ನ ವಿಶ್ವಾಸ. ನಾನು ಈಗ ಇರುವೀ ಗಂಡಾಂತರವನ್ನು ಕೆಲಕಾಲ ಹಿಂದೆಯೇ ತಿಳಿದು, ಇದಕ್ಕೆ ಕಾರಣಕರ್ತರಾದವರನ್ನೆಲ್ಲಾ ಎಚ್ಚರಿಸಿದ್ದೆನು. 1937ರಲ್ಲಿ ಫೇಸಿಸ್ಟ್ ಶಕ್ತಿಗಳೊಡನೆ ರಾಜಿಯಿಂದಿರುವ ಬ್ರಿಟಿಷ್ ಸರಕಾರದ ಆಶ್ರಯದಲ್ಲಿ ಪ್ರಾಂತಿಕ ಆಡಳಿತ ವಹಿಸುವುದು, ಸರಿಯಲ್ಲವೆಂದು ಕಾಂಗ್ರೆಸ್ ಮಂತ್ರಿ ಮಂಡಳದ ವಿಚಾರದಲ್ಲಿ ವಿರುದ್ಧಾಭಿಪ್ರಾಯವಿಟ್ಟು ವಾದಿಸುತ್ತಿದ್ದ ಕಾಂಗ್ರೆಸು ಮುಖಂಡರೊಡನೆ ನಾನು ಹೀಗೆ ಹೇಳಿದೆನು 'ನಿಜವಾಗಿಯೂ ಬ್ರಿಟನು ಫೇಸಿಸ್ಟ್ ವಿರೋಧಿಯೆಂದು ಭಾವಿಸಿರಿ, ಹಾಗೂ ಫೇಸಿಸ್ಟ್ ವಿರೋಧ ಯುದ್ಧದಲ್ಲಿ ಮುಂದೆ ಸಹಕರಿಸುವುದೆಂದು ಭಾವಿಸಿರಿ, ಇಲ್ಲವೇ ಬ್ರಿಟನು ರಷ್ಯೆಗಳು ಸೇರಿ ಫೇಸಿಸಮ್ ವಿರೋಧ ಹೋರಾಡುವವೆಂದು ಭಾವಿಸಿರಿ, ಆಗ ನೀವು ಸಹಕರಿಸಲಾರಿರೇ?' ಎಂದು ನಾನು ಅವರಿಗೆ ತಿಳಿಸಿದ್ದೆ

ಹಿಂದಿನ ಯತ್ನಗಳು

ಆ ವೇಳೆ, ಆರ್ಥರ್ ಮೂರರು, 1939ನೇ ಎಪ್ರಿಲ್‌ನಲ್ಲಿ ಬರಲಿರುವ ಯುದ್ಧದ ಗಂಡಾಂತರವನ್ನು ಮುಂಗಂಡು, ಯುದ್ಧಕಾಲದ ಭಾರತದ ಸಮಸ್ಯಾ ಪರಿಹಾರವಾಗುವಂಥಾ ಒಂದು ಸೂಚನೆ ಕೊಟ್ಟ ವಿಷಯ, ಅದಕ್ಕೆ ಗಾಂಧಿಜಿಯಿತ್ತ ಉತ್ತರ ಮೊದಲಾದವುಗಳನ್ನು ವಿವರಿಸಿ, ಯುದ್ಧ ಪ್ರಾರಂಭವಾದ ಮೇಲೆ ವೈಸರಾಯರಿಗೆ ಒಂದು ಮನವಿ ಒಪ್ಪಿಸಿದ್ದನ್ನು ತಿಳಿಸುತ್ತಾ, ಹೀಗೆಂದಿರುವರು 'ಯುದ್ಧ ಪ್ರಾರಂಭವಾದ ಕೂಡಲೇ ನನಗೆ ಭಾರತೀಯರೆಲ್ಲರೂ ಒಂದಾಗಿ ಕೇಳಿದರೂ ಏನು ಮಾಡಿದರೂ ಬ್ರಿಟನು ಅಧಿಕಾರವನ್ನು ಅವರಿಗೆ ಬಿಟ್ಟುಕೊಡುವುದಿಲ್ಲ ಎಂಬ ಅಧಿಕಾರಯುತ ವಾರ್ತೆ ದೊರಕಿತು ನಾನು, ಭಾರತೀಯರೆಲ್ಲರೂ ಐಕ್ಯಗೊಂಡು ತಮ್ಮ ಕೇಳಿಕೆಯನ್ನು ಸರಕಾರದ ಮುಂದಿಡಬೇಕೆಂದು ಭಾರತೀಯರಿಗೆ ತಿಳಿಸುತ್ತಾ ಇದ್ದೆ ಯುದ್ಧ ಒಂದು ವರ್ಷ ದಾಟಿತು, ಬ್ರಿಟಿಷರು ಅಧಿಕಾರವನ್ನು ಬಿಟ್ಟುಕೊಡುವಂತೆಯೂ ಕಂಡುಬರಲಿಲ್ಲ, ಭಾರತೀಯರು ತಮ್ಮ ಭಿನ್ನತೆಯನ್ನು ಸರಿಗೊಳಿಸಿದಂತೆಯೂ ಕಂಡುಬರಲಿಲ್ಲ ಹೀಗಿರುವಾಗ ಖಂಡಿತ ಗಂಡಾಂತರ ಒದಗೀತೆಂದು ತಿಳಿದು, 1940 ಜೂನ್ ತಿಂಗಳಲ್ಲಿ ನಾನು ಈ ವಿಚಾರವಾಗಿ ವೈಸರಾಯರಿಗೊಂದು ಮನವಿಮಾಡಿದೆ ಅದರಲ್ಲಿ ನಾನು, ಭಾರತವನ್ನು ಮಿತ್ರರಾಷ್ಟ್ರವಾಗಿ ಮಾಡಿಕೊಳ್ಳಬೇಕೆಂದೂ, ಅದರ ಸ್ವಾತಂತ್ರ್ಯವನ್ನು ಒಪ್ಪಿಕೊಂಡು, ತತ್ಕಾಲಕ್ಕೆ ರಾಷ್ಟ್ರೀಯ ಸರಕಾರ ಸ್ಥಾಪಿಸಿ, ಯುದ್ಧ ಮುಗಿದ ಬಳಿಕ ತಮ್ಮ ರಾಷ್ಟ್ರಘಟನೆಯನ್ನು ಭಾರತೀಯರೇ ನಿರ್ಮಿಸಬಹುದೆಂಬ ಭರವಸೆಯಿತ್ತು, ಲಂಡನಿನ ಸೂಚನೆಯಿಲ್ಲದೆ, ಸಾರ್ವಭೌಮರ ಪ್ರತಿನಿಧಿಯ ಅಭಿಪ್ರಾಯ ಕೇಳಿಕೊಂಡು ರಾಷ್ಟ್ರೀಯ ಸರಕಾರವು ಯುದ್ಧದಲ್ಲಿ ಸಹಕರಿಸಬೇಕೆಂಬ ವಿಚಾರ ಸೂಚಿಸಿದ್ದ ಆ ಮನವಿಯಲ್ಲಿ ಆರ್ಥರ್ ಮೂರರು ಮತ್ತೆ ಪ್ರತಿಪಾದಿಸಿದ್ದರು 'ಭಾರತೀಯರಿಗೆ ಅಧಿಕಾರ ಬಿಟ್ಟು ಕೊಡದೇ ಇರುವಲ್ಲಿ ನಾವು ಮುಂದಿಟ್ಟಿರುವ ಕಾರಣಗಳೇ ಇನ್ನು ಮುಂದೆಯೂ ಉಳಿದರೆ 1857ರಲ್ಲಿ ಒದಗಿದ ಭಯಾನಕ ದಂಗೆಯನ್ನು ನಾವಿನ್ನೊಮ್ಮೆಯೂ ಭಾರತದಲ್ಲಿ ಅನುಭವಿಸಬೇಕಾಗುವುದು. ಅಂಥಹ ಆಂತರಿಕ ದಂಗೆಯು ಇದೀಗ ಯುದ್ಧದಲ್ಲಿ ಎಲ್ಲಿಯಾದರೂ ಉದ್ಭವಿಸಿದರೆ, ಹಿಂದಿಗಿಂತಲೂ ಅದು ಭಯಾನಕವಾಗದಿರದು. ಅಂಥಹ ಸಂಭವವೊದಗಿದರೆ ನಾವು ಯಾವ ಕಾರಣಕ್ಕಾಗಿ ಯುದ್ಧಮಾಡುತ್ತೇವೋ ಆ ಕಾರ್ಯದ ಗೌರವವೇ ಉಳಿಯಲಾರದು. ಅಂತಹ ಪ್ರಮಾದವನ್ನು ನಾವು ಮಾಡಿದರೆ ಅಮೇರಿಕವೋ ರಷ್ಯವೋ ನಮ್ಮನ್ನು ಎಚ್ಚರಿಸಿ ನಮ್ಮ ಧೋರಣೆಯನ್ನು ಬದಲಾವಣೆ ಮಾಡುವಂತೆ ಒತ್ತಾಯಪಡಿಸುವ ಸಂಭವವುಂಟು ಹಾಗೂ ಭಾರತೀಯರಲ್ಲಿ ಬ್ರಿಟಿಷ್ ಪ್ರಭುತ್ವದ ವಿಷಯ ಅವಿಶ್ವಾಸವಿರುವುದು ಈಗ ಭಾರತದಲ್ಲಿರುವ ಸರಕಾರವು ಎಲ್ಲಾ ಪಕ್ಷಗಳ ಹಾಗೂ ಭಾರತದಲ್ಲಿರುವ ಜನರನ್ನೂ ವಿಶ್ವಾಸ ಪಡೆಕೊಂಡಿಲ್ಲ ಭಾರತದಲ್ಲಿರುವ ರಾಜನಿಷ್ಠರಾಗಲಿ ಸೈನಿಕರಾಗಲಿ ಪೋಲೀಸರಾಗಲಿ ರಾಷ್ಟ್ರವೇನೂ ವಿರಹಿತರಾಗಿಲ್ಲ ಇಂಡಿಯಾ ಸರಕಾರವು ಜನಪ್ರಿಯವಾಗಿಲ್ಲ ಅದಕ್ಕೆ ಸಾರ್ವಜನಿಕಾಭಿಪ್ರಾಯ ಸೂಚನಾರಂಗವೇ ಇಲ್ಲ. ಇಂದು ಪ್ರಚಾರವೂ ಕಾಣುವುದಿಲ್ಲ. ಇಂದಿನ ಯುದ್ಧವನ್ನು ಗೆಲ್ಲಬೇಕಾದರೆ ಸತ್ವಪೂರ್ಣ ಪರಿಣಾಮಕಾರಕವೂ ಆದ ಪ್ರಚಾರ ಬೇಕು, ಆದರೆ ಇಂಡಿಯಾ ಸರಕಾರದ ಪ್ರಚಾರಕಾರ್ಯದ ವ್ಯಕ್ತಿ ಯಾರು? ಆತನ ಹೆಸರೇನು? ಮಹಾತ್ಮಾ ಗಾಂಧಿ ಆತನ ಮಾತಿನ ಬೆಲೆಯೇನೆಂದು ಜನರು ತಿಳಿದೇ ಇಲ್ಲ ಹಾಗೆ ಮಾಡುವ ಬದಲು ಭಾರತದ ನಿಜವಾದ ಪ್ರತಿನಿಧಿಗಳನ್ನು ಅಧಿಕಾರಕ್ಕೇರಿಸಿದರೆ ಯಶಸ್ವಿಯಾಗಿ ನಾವು ಯುದ್ಧ ಗೆಲ್ಲಬಹುದು. ಅದನ್ನು ಬಿಟ್ಟು, ಡಿಫೆನ್ಸ್ ಕಾನೂನನ್ನು ಬಲಪಡಿಸಿ, ಈ ಸರಕಾರದ ವಿರುದ್ಧ ಮಾತನಾಡುವವರನ್ನೆಲ್ಲಾ ಬೀಗದಲ್ಲಿಟ್ಟು, ಪೋಲೀಸು ಪಡೆಯನ್ನು ಮಾತ್ರ ನಂಬಿ ಯುದ್ಧ ಮುಂದುವರಿಸಬೇಕೆಂಬ ನಿರ್ಧಾರ ಮಾಡಿರುವುದು ಈ ತರದ ಗಂಡಾಂತರ ಕಾಲದಲ್ಲಿ ಭೀಷಣ ಅಪಾಯ ನಾವು ಯಾವ ಸ್ವಾತಂತ್ರ್ಯ ಪ್ರಜಾಸ್ವಾತಂತ್ರ್ಯಗಳ ಸಲುವಾಗಿ ಹೋರಾಡುತ್ತೇವೋ ಅವನ್ನೇ ನಾವು ಭಾರತೀಯರಿಗೆ ಕೊಡಬೇಕಾಗಿದೆ'

ಬರ್ಮದಿಂದ ಬುದ್ಧಿ ಕಲಿಯಬೇಕು

ಆದರೆ ನನ್ನ ಎಚ್ಚರವನ್ನು ಅಂದು ಯಾರೂ ಕೇಳಲಿಲ್ಲ 1941ರಲ್ಲು ಜಪಾನು ಯುದ್ಧರಂಗಕ್ಕಿಳಿದಾಗ ಪುನಃ ನಾನು ವೈಸರಾಯರಿಗೆ ಈ ಕುರಿ

(2ನೆಯ ಪುಟವನ್ನು ನೋಡಿ)

ಜರ್ಮನ್ ಯುದ್ಧ ಕೈದಿಗಳು

KANNADA ILLUSTRATED WEEKLY

ಅಧಿಕಾರವನ್ನು ಈಗಲೇ ಬಿಟ್ಟುಕೊಡಿರಿ'

(1ನೆಯ ಪುಟದಿಂದ ಮುಂದುವರಿದುದು)

ತು ಸೂಚನೆಯಿತ್ತಿದ್ದೆ, ಭಾರತೀಯರಿಗೆ ಅಧಿಕಾರ ಬಿಟ್ಟುಕೊಡಿರಿ ಎಂದು ಹೇಳಿದೆ. ಆ ಮಾತೂ ಅಲ್ಲಗಳೆಯಲ್ಪಟ್ಟಿತು. ನಾವು ಬರ್ಮದ ಪಾಠದಿಂದ ಬುದ್ಧಿಕಲಿಯಬೇಕಾಗಿದೆ. ಈಗ ಸಮಯ ಹಾಳುಮಾಡಲು ಅವಕಾಶವಿಲ್ಲ. ತಪ್ಪು ಮಾಡಿ ಅದನ್ನೇ ಸರಿಯೆಂದು ವಾದಿಸುವುದು ಯುದ್ಧಕಾಲದ ನೀತಿಯಲ್ಲ. ಇತ್ತೀಚೆಗೆ ಚರ್ಚಿಲರೂ ಅಮೆರಿಯವರೂ, ಭಾರತೀಯರ ಮೇಲೆ ದಬ್ಬಾಳಿಕೆ ಮಾಡಿ, 'ಭಾರತವನ್ನು ಕಾಪಾಡಿರುವುದಾಗಿ' ತಿಳಿಸಿದ್ದು ಬರಿಯ ಭ್ರಮೆಯು ಮಾತಾಗಿದೆ. ಚರ್ಚಿಲರು ತನ್ನೀಚೆಯ ಭಾಷಣದಲ್ಲಿ ಒಂದೇ ಕಡೆಯಾದರೂ ಚೀನದ ವಿಷಯ ಹೇಳದಿರುವುದು ಅತ್ಯಂತ ಗಮನಾರ್ಹವಿದೆ.

ಅದು ಕೇವಲ ನೆವನ-

ಬ್ರಿಟಿಷ್ ಸಾರ್ವಜನಿಕರೊಡನೆ ನಾವು ಹೇಳುವುದು, ಭಾರತೀಯರಲ್ಲಿ ಭಿನ್ನಭೇದವಿದೆಯೆಂದು; ಅದು ಸ್ವಾತಂತ್ರ್ಯ ಕೊಡಲು ಕೇವಲ ನಾವು ಕಲ್ಪಿಸುವ ನೆವನ; ನಿಜವಾಗಿ ನೋಡಿದರೆ ನಮಗೆ ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲ. ನಾವು ಇದುವರೆಗೂ ಅಧಿಕಾರ ಬಿಟ್ಟುಕೊಡುವ ಇಚ್ಛೆಮಾಡಿಯೂ ಇಲ್ಲ. ಭಾರತೀಯರೊಂದಾದರೂ ನಾವು ಅಧಿಕಾರ ಬಿಟ್ಟುಕೊಡುವ ಹಾಗೆ ಕಾಣುವುದಿಲ್ಲ. ಈ ವಿಷಯವು ನನಗೆ ಅಧಿಕಾರೀ ಕೂಟದಿಂದಲೇ ತಿಳಿದುಬಂದಿದೆ.

ಇನ್ನಾದರೂ ನಾವೀ ಪರಿಸ್ಥಿತಿಯನ್ನು ಸರಿಗೊಳಿಸಬಹುದು. ಕಾಂಗ್ರೆಸೂ ಬುದ್ಧಿನೀತಿ ಕಲಿತಿದೆ. ಮುಸ್ಲಿಮರನ್ನು ಬಿಟ್ಟು ಅದು ಅಧಿಕಾರ ವಹಿಸಲಾರದು. ಆದ್ದರಿಂದಲೇ ಕಾಂಗ್ರೆಸು ಈಗ ಮುಸ್ಲಿಂ ಲೀಗು ಸರಕಾರ ರಚಿಸಿದರೂ ರಚಿಸಲಿ ಎಂದು ತಿಳಿಸಿದೆ. ಜುಲೈ ಆಗಸ್ಟ್ ತಿಂಗಳಲ್ಲಿ ಈ ವಿಚಾರವನ್ನು ನಾವು ಬ್ರಿಟಿಷ್ ಅಮೇರಿಕನ್ ಸಾರ್ವಜನಿಕರಿಗೆ ತಿಳಿಯದಂತೆ ಮಾಡಿದೆವು. ಆದರೆ ಸಪ್ಟಂಬರಿನಲ್ಲಿ ಎಲ್ಲಾ ವಿಷಯವೂ ಎಲ್ಲರಿಗೂ ಬಹಿರಂಗವಾಗಿದೆ. ನಾವೀಗ ಅಧಿಕಾರ ಬಿಟ್ಟುಕೊಡಲು ಸಿದ್ಧರಾದರೆ, ಗಾಂಧಿಜಿ ಸತ್ಯಾಗ್ರಹವನ್ನು ನಿಲ್ಲಿಸುವರೆಂದು ಅವರ ಪರವಾಗಿ ನಾನು ಹೇಳಬಲ್ಲೆ. ಅವರ ಬ್ರಿಟಿಷ್ ವಿರೋಧ ಬುದ್ಧಿಯೂ ಅದರಿಂದ ತೃಪ್ತಿ ಹೊಂದೀತು; ಅವರು ಮತ್ತೆ ಹಿಂದೂ ಮುಸ್ಲಿಂ ಐಕ್ಯ ಕಾರ್ಯಕ್ಕೆ ತೊಡಗುವರು. ಅವರ ಅಹಿಂಸಾಪರರಾದ ಹಿಂಬಾಲಕರನ್ನು ಕೆಲವರನ್ನು ಅವರು ಇಡೀ ಜಗತ್ತಿನ ಹಿತಕ್ಕಾಗಿ ದುಡಿಯಲು ಹೇಳುವರು. ಗಾಂಧಿಜಿ ಮತ್ತು ನನ್ನೊಳಗೆ ಆಳವಾದ ಭಿನ್ನಾಭಿಪ್ರಾಯವಿತ್ತು; ಆದ್ದರಿಂದಲೇ ನಾವು ಅನ್ಯೋನ್ಯ ಬಹಳ ವಾದ ಮಾಡಿದ್ದೇವೆ. ಆ ಕಾರಣದಿಂದಲೇ ಅವರ ಅಭಿಪ್ರಾಯವೇನೆಂದು ನಾನು ಹೀಗೆ ತಿಳಿಸಬಲ್ಲವನಾಗಿದ್ದೇನೆ.

ಜಿನ್ನರೂ ಅವರ ಅಭಿಪ್ರಾಯವನ್ನು ನನಗೆ ತಿಳಿಸಿದ್ದಾರೆ. 'ಯುದ್ಧದಲ್ಲಿ ಮುಸ್ಲಿಂ ಲೀಗು ಹೃತ್ಪೂರ್ವಕ ಬೆಂಬಲ ಕೊಡಲಾರದೇಕೆಂದರೆ, ಬೆಂಬಲ ಕೊಡುವ ಜನರಿಗೆ ಈ ದೇಶದ ಆಡಳಿತದಲ್ಲಿ ಏನಾದರೂ ಅಧಿಕಾರಬೇಕು. ಆ ಪಕ್ಷಕ್ಕೆ ಈ ಪಕ್ಷಕ್ಕೆ ಅಧಿಕಾರ ಕೊಡಬೇಕೆಂಬ ವಿಚಾರ ನಾನೀಗ ಹೇಳುವುದಿಲ್ಲ. ಆದರೆ ಯಾರಿಗಾದರೂ ಆ ಅಧಿಕಾರವು ನಿಜವಾದುದೆಂಬ ವಿಶ್ವಾಸವಿರಬೇಕಾದರೆ ಇಡೀ ಜನತೆಯ ಬೆಂಬಲಬೇಕು' ಎಂದು ಜಿನ್ನರೇ ನುಡಿದಿದ್ದಾರೆ. ಈ ಸಂದರ್ಭದಲ್ಲಿ ಅವಕಾಶ ಕೊಟ್ಟರೆ ಜಿನ್ನರು ಯಶಸ್ವಿಯಾದಾರು. ಬ್ರಿಟಿಷ್ ಸರಕಾರವು ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಕೊಡುತ್ತದೆಯೆಂದು ಖಚಿತವಾಗದ ವಿನಾ ಅವರು ಪ್ರಯತ್ನ ಮಾಡಲಿಕ್ಕೇ ಇಲ್ಲ; ಪ್ರಯತ್ನ ಮಾಡಿದರೂ ಪ್ರಯೋಜನವಿಲ್ಲ. ನಾವು ಜಪಾನನ್ನು ಗೆಲ್ಲಬೇಕೆಂದು ಇಚ್ಛಿಸುತ್ತೇವೋ? ಅಥವಾ ಇಲ್ಲವೋ?

ಯುದ್ಧದಲ್ಲಿ ಸತ್ತ ಭಾರತೀಯರ ಸಂಖ್ಯೆ

ಕೌನ್ಸಿಲ್ ಒಫ್ ಸ್ಟೇಟಿನಲ್ಲಿ ಚರ್ಚೆಯಾದಾಗ ಸರಕಾರೀ ಕಡೆಯಿಂದ ಬೇರೆ ಬೇರೆ ಯುದ್ಧ ವ್ಯೂಹಗಳಲ್ಲಿ ಸತ್ತ ಹಿಂದೀಯರ ಅಂಕೆ ಸಂಖ್ಯೆಗಳು ಹೀಗೆ ವಿವರಿಸಲ್ಪಟ್ಟಿವೆ. "೨೦೪೬ ಜನರು ಸತ್ತರು; ೭೫೨೦ ಜನರು ಗಾಯಗೊಂಡರು. ೨೬೪೮ ಜನರು ಸೆರೆಯಾದರು; ೬೪೪೩೪ ಮಂದಿ ಕಣ್ಮರೆಯಾದರು. ಒಟ್ಟು ಗಾಯಗೊಂಡ ಹಾಗೂ ಸತ್ತವರ ಸಂಖ್ಯೆ ೯೮೩೮೯. ಅಲ್ಲದೆ ಇಜಿಪ್ತಿನಲ್ಲಿ ೯೦೮ ಜನರು ಸತ್ತರು; ೧೭೬೫ ಮಂದಿ ಗಾಯಗೊಂಡರು; ೧೨೧೩೮ ಮಂದಿ ಕಣ್ಮರೆಯಾದರು. ಸೂಡಾನ್ ಎರಿಟ್ರಿಯಾದಲ್ಲಿ ೭೦೬ ಜನರು ಸತ್ತರು; ೩೯೯೪೨ ಜನರು ಗಾಯಗೊಂಡರು. ಫ್ರಾನ್ಸ್ ಮತ್ತು ಬ್ರಿಟನಿನಲ್ಲಿ ೪ ಜನರು ಸತ್ತರು; ೬೪ ಜನರು ಗಾಯಗೊಂಡರು; ೩೨೬ ಜನರು ಬಂಧಿತರಾದರು. ಬರ್ಮಾದಲ್ಲಿ ೫೧೬ ಜನರು ಹತರಾದರು; ೧೧೬೩ ಜನರು ಗಾಯಗೊಂಡರು; ೩೩೨೬ ಜನರು ಕಣ್ಮರೆಯಾದರು; ಮಲಯದಲ್ಲಿ ೨೦೮ ಜನರು ಹತರಾದರು. ೬೨೧ ಜನರು ಗಾಯಗೊಂಡರು; ಹಾಂಕಾಂಗಿನಲ್ಲಿ ೪೧೮೬ ಜನರು ಕಣ್ಮರೆಯಾದರು; ಒಟ್ಟು ೭೦ ಸಾವಿರ ಮಂದಿ ಕಣ್ಮರೆಯಾಗಿದ್ದರು.

ಆಣೆಯುವರಿಗೆ ಅವರ ಪಕ್ಷವೇ ವಿರುದ್ಧ

ನಿಂತಿತು! ಎಂದರೆ ಸೆಂಟ್ರಲ್ ಎಸೆಂಬ್ಲಿ ಅಧಿವೇಶನದಲ್ಲಿ 'ವಿದೇಶಗಳಲ್ಲಿ ಹಿಂದೀಯರಿಗೆ ನಿರ್ಬಂಧಗಳು ಹೇರಲ್ಪಡುತ್ತಿದ್ದರೆ, ಹಿಂದೂದೇಶದಲ್ಲಿ ಆ ವಿದೇಶೀಯರ ಮೇಲೂ ಅದೇ ನಿರ್ಬಂಧ ಹಾಕಬೇಕೆಂಬ' ಠರಾವನ್ನು ಮುಂದೆ ಹಾಕಬೇಕೆಂದು ಆಣೆಯುವರು ಪ್ರಯತ್ನಿಸಿದರು. ಆದರೆ ರಾಷ್ಟ್ರೀಯ ಪಕ್ಷ ಸಹಿತವಾದ ಸರಕಾರೇತರ ಸದಸ್ಯರೆಲ್ಲರೂ, ಒಂದಾಗಿ ಅದನ್ನು ಪರಿಶೀಲಕ ಸಮಿತಿಗೆ ಒಪ್ಪಿಸುವಂತೆ ಮಾಡಿದರು.

ಬಾಂಬು ಒಡೆದವು

ಮುಂಬಯಿ ಚರ್ಚ್ ಗೇಟಿನ ಬಳಿ ರೈಲೆ ಸ್ಟೇಶನಿನಲ್ಲಿ ನಿಂತಿದ್ದ ಬಿ. ಬಿ. ಸಿ. ಆಯ್ ಕಂಪೆನಿಯ ಪೆಸೆಂಜರ್ ಗಾಡಿಯ ಎರಡನೆಯ ವರ್ಗದಲ್ಲಿ ಒಂದು ಬಾಂಬು ಸ್ಫೋಟನವಾಯಿತೆಂದು ತಿಳಿದಿದೆ. ಇದಕ್ಕಿಂತ ಹಿಂದೆ ಮುಂಬಯಿಯಲ್ಲಿ ಪೋಲೀಸ್ ಗಾಡಿ ಮೇಲೆ ಒಂದು ಸಣ್ಣ ಬಾಂಬು ಸ್ಫೋಟವಾಗಿತ್ತು. ಅಹಮ್ಮದಾಬಾದ್ ನಡಿಯಾದದಲ್ಲಿ ಒಂದು ಪೋಲೀಸು ಮೋಟಾರಿನ ಮೇಲೆ ಬಾಂಬು ಒಗೆಯಲಾಯಿತು. ಸಂಯುಕ್ತ ಪ್ರಾಂತದ ರಣಜಾಜಸಿಂಗ ಬಲವಂತಸಿಂಗ ಎಂಬ ಭಯ್ಯನನ್ನು ಮುಂಬಯಿ ದಾದರ ಸ್ಟೇಶನಿನಲ್ಲಿ ಹಿಡಿದು ವಿಚಾರಣೆ ನಡೆಸಿದಾಗ, ಅವನ ಕಡೆ ಇದ್ದ ಮದ್ದಿನ ವಿಷಯವಾಗಿ, ನಾನೀ ಮದ್ದನ್ನು ಬಾಂಬು ಮಾಡಲು ಒಯ್ಯುತ್ತಿರುವೆನು ಎಂದು ಹೇಳಿದನು. ಅವನನ್ನು ಬಂಧಿಸಲಾಗಿದೆ. ಹೀಗೆ ಅಲ್ಲಲ್ಲಿ ದೇಶೀಯ ಬಾಂಬುಗಳು ಸಿದ್ಧವಾಗುವ ಸೂಚನೆ ಕೇಳಿಬರುತ್ತದೆ.

ಕತ್ತೆಗಳನ್ನು ಬಂಧಿಸಿದರು!

ಡಿಲ್ಲಿಯ ನಯೂಸಡಕಿನಲ್ಲಿ ಒಂದು ಮೆರವಣಿಗೆಯಲ್ಲಿದ್ದ ಹನ್ನೊಂದು ಕತ್ತೆಗಳನ್ನು ಬಂಧಿಸಿದ್ದು ಅವುಗಳನ್ನು ಬಿಡುಗಡೆ ಮಾಡಬೇಕಾಗಿ ಅವುಗಳ ಒಡೆಯನು ಸಿಟಿ ಮೇಜಿಸ್ಟ್ರೇಟರಿಗೆ ವಿನಂತಿ ಮಾಡಿಕೊಂಡಿರುವನಂತೆ. ಕತ್ತೆಗಳು ಮೆರವಣಿಗೆಯಲ್ಲಿದ್ದ ಮಾತ್ರಕ್ಕೆ ಅವುಗಳು ೧೪೪ನೇ ಸೆಕ್ಷನು ಮೀರಿದಂತೆ ಆಗುತ್ತವೆಯೋ ಎಂಬ ಪ್ರಶ್ನೆಯನ್ನು ನ್ಯಾಯಾಧೀಶರು ಬಿಡಿಸಬೇಕಾಗಿದೆ!

ಕನ್ನಡ ಸಾಹಿತ್ಯ ಸಮ್ಮೇಳನ ಮುಂದುವರಿಯಿತು

ಈ ವರ್ಷ ಶಿವಮೊಗ್ಗದಲ್ಲಿ ಜರಗಬೇಕಾಗಿದ್ದ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರಗಿಸುವುದು ಹಾಗೂ ಅದಕ್ಕೆ ಬೇಕಾದ ನಿಧಿ ಸಂಗ್ರಹ ಮೊದಲಾದುವುಗಳನ್ನು ಮಾಡುವುದೂ, ಈಗಿನ ಸ್ಥಳೀಯ ಪರಿಸ್ಥಿತಿಯಲ್ಲಿ ಅಸಾಧ್ಯವೆಂದು ಅಲ್ಲಿನ ಸಮ್ಮೇಳನ ಸ್ವಾಗತ ಸಮಿತಿಯವರು ನಿಶ್ಚಯಿಸಿ, ಅದರ ಅವಧಿ ಮುಂದುವರಿಸುವಂತೆ, ಅಧ್ಯಕ್ಷರ ಆಯ್ಕೆಯ ಅವಧಿಯನ್ನು ಕೆಲಕಾಲಕ್ಕೆ ಕೇಳಿಕೊಂಡು ಸಾಹಿತ್ಯ ಪರಿಷತ್ತಿಗೆ ಬರೆದಂತೆ, ಮುಂದುವರಿಸಲಾಗಿದೆಯೆಂದು ತಿಳಿದಿದೆ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ



ಆದರೆ ದೇಹದೊಳಗಿನ ನೈರ್ಮಲ್ಯವು ಆರೋಗ್ಯಕ್ಕೆ ಮೊದಲನೆಯ ಸಾಧನ

ನೀವು ಮಲಬದ್ಧತೆ, ಅಜೀರ್ಣ, ಹೊಟ್ಟೆಯ ಅಮ್ಲವಸ್ಥೆ ಮೊದಲಾದ ರೋಗಗಳಿಂದ ನರಳುತ್ತಿರುವಿರಾದರೆ, ನೀವು ದೇಹದೊಳಭಾಗವನ್ನು ನಿರ್ಮಲವಾಗಿಸಲು ಪ್ರಯತ್ನಿಸಬೇಕು. ದಿನನಿತ್ಯ ವ್ಯಾಯಾಮ ತೆಗೆದುಕೊಳ್ಳಿರಿ. ಶುದ್ಧ ಗಾಳಿ ಸೇವಿಸಿರಿ; ಹದಮೀರದಷ್ಟು ಉಣ್ಣಿರಿ; ಕುಡಿಯಿರಿ. ಆದರೆ ಎಲ್ಲದಕ್ಕಿಂತಲೂ ವಿಶೇಷವಾದುದೆಂದರೆ ನಿಮ್ಮ ದೇಹದೊಳಭಾಗದ ನೈರ್ಮಲ್ಯ.

ಪ್ರತಿದಿನವೂ ಎಂಡ್ರೂಸ್ ಲಿವರ್ ಸಾಲ್ಟನ್ನು ತೆಗೆದುಕೊಳ್ಳುವುದರಿಂದ, ನಿಮ್ಮ ದೇಹದೊಳಭಾಗವು ಶುಚಿಯಾಗುವುದು. ಇದರ ರುಚಿಯೂ ಚೆನ್ನಾಗಿದೆ; ಉಪಯೋಗಿಸಲು ಹೆಚ್ಚು ವೆಚ್ಚವಿಲ್ಲ; ಇದು ಒಂದು ಬಿಡಲಾರದ ಚಟವೂ ಆಗುವುದಿಲ್ಲ. ಎಂಡ್ರೂಸ್ ನಿಮ್ಮ ಅನಾರೋಗ್ಯಕ್ಕೆ ಕಾರಣವಾಗುವ ವಿಷವಸ್ತುಗಳನ್ನು ಹೊರಹಾಕುವುದು. ಅದು ಹೊಟ್ಟೆಯನ್ನು ನಿರ್ಮಲ ಮಾಡುವುದು; ಮಲಶೋಧನೆ ತೃಪ್ತಿಕರವಾಗುವುದು. ತಂಪುಗೊಡುವುದು ರಕ್ತವನ್ನು ಶುದ್ಧಿಮಾಡುವುದು. ಇಡೀ ಶರೀರಕ್ಕೆ ಹೊಸ ಚೈತನ್ಯ ಕೊಟ್ಟು ಉಲ್ಲಾಸ ತುಂಬಿಸುವುದು.

ದೇಹದೊಳಗಿನ ನೈರ್ಮಲ್ಯಕ್ಕೆ ದಿನನಿತ್ಯವೂ ನಿಮ್ಮ

ANDREWS
LIVER SALT

ಆರೋಗ್ಯಕರ ಪಾನೀಯ ಮತ್ತು ಧಾತುಪುಷ್ಟಿಕರವಾದ ಇದನ್ನು ತೆಗೊಳ್ಳಿರಿ.
ಶುದ್ಧಮಾಡುವುದು-ತಂಪುಕೊಡುವುದು-ಸಂತೋಷ ಕೊಡುವುದು-
ಚೈತನ್ಯ ತುಂಬಿಸುವುದು.

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ. ಬೋರ್ಡ್ ಹೈಸ್ಕೂಲ್ ಕುಂದಾಪುರ.

ಪುಸ್ತಕ ದೊರೆಯುವ ಸ್ಥಳ: ಬೆಲೆ: 1-4-0.

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಸಮರಭೂಮಿಯ ಸಂಚಾರ

ಡಾನ್‌ನದಿಯ ಮುಂದೆ ಜರ್ಮನರೂ, ವೋಲ್ಗಾ ನದಿಯ ಮುಂದೆ ರಶ್ಯನರೂ, ನಿಂತು ಹೀಗೆ ಉಭಯ ಪ್ರವಾಹಗಳ ನಡುವಿನಲ್ಲಿ ಉಭಯ ರಾಷ್ಟ್ರಗಳ ವೀರರು ಕಳೆದ ಒಂದು ತಿಂಗಳಿಂದ ಹೋರಾಡುತ್ತಾ ರಕ್ತದ ಮೂರನೆಯ ಹೊಳೆಯೊಂದನ್ನು ಹರಿಯಬಿಟ್ಟರು! ಈ ಘನಸಂಗ್ರಾಮದಲ್ಲಿ ಜರ್ಮನರೇ ಮೇಲುಗೈಯಾಗಿದ್ದಾರೆ. ಸ್ಟಾಲಿನ್‌ಗ್ರಾಡ್ ಆಕ್ರಮಣಮಾಡುವ ಮೊದಲೇ ಜರ್ಮನ್ ದಳಪತಿ ವಾನ್‌ಬಾಕನು ಸುಮಾರು ಇಪ್ಪತ್ತು ಮೈಲು ವಿಸ್ತಾರದ ರಣಕ್ಷೇತ್ರದಲ್ಲಿ ಸೈನ್ಯಗಳನ್ನು ಪುನರ್ಘಟಿಸಿಕೊಂಡು ಹೋರಾಟ ಕೈಕೊಂಡನೆಂದು ಹೇಳಲಾಗಿದೆ. ಹಾಗಾಗಿ ಅಮಿತ ಸೈನ್ಯ, ಅಸಂಖ್ಯ ಟೇಂಕು ವಿಮಾನ ಫಿರಂಗಿಗಳ ಎದುರಲ್ಲಿ ರಶ್ಯನ್ ಜನಶಕ್ತಿ ಜಗ್ಗಿಹೋಯಿತು! ಜರ್ಮನರು ರಶ್ಯನರನ್ನು ಹಿಂದಕ್ಕಟ್ಟುತ್ತಾ ಸ್ಟಾಲಿನ್‌ಗ್ರಾಡ್ ಉಪನಗರದ ವರೆಗೆ ಹಿನ್ನೂಕಿದರು. ರಶ್ಯನರು ಕೇವಲ ಕಿರಿದಾದ ರಣಭೂಮಿಯಲ್ಲಿ ಹೋರಾಡಬೇಕಾಗಿ ಬಂದುದರಿಂದ ಅವರಿಗೆ ಅಲ್ಲಿ ಗೆಲವುಂಟಾಗಲಿಲ್ಲ. ವೋಲ್ಗಾ ನದಿಯ ಮೂಲಕ ತರಿಸಬೇಕಾಗಿದ್ದ ಸೈನ್ಯಸಾಧನಗಳಿಗೂ ಜರ್ಮನರ ಆತಂಕವು ಬಲವಾಯಿತು! ಸ್ಟಾಲಿನ್‌ಗ್ರಾಡೆಂದರೆ ಬಹಳ ದೊಡ್ಡ ಪಟ್ಟಣ; ವಿಶಾಲವಾದೊಂದು ಉದ್ಯೋಗ, ಕೈಗಾರಿಕೆಗಳ ಕೇಂದ್ರ ನಗರ. ಇದನ್ನು ಭೇದಿಸಿ ಜರ್ಮನರು ಒಳಹೊಕ್ಕದ್ದು ಬಹಳ ಗಂಡಾಂತರವೇ ಆಯಿತು. ಸ್ಟಾಲಿನ್‌ಗ್ರಾಡನ್ನು ವೈರಿಗಳು ಭೇದಿಸಿ ಒಳಹೊಕ್ಕರೇನೋ ಸಹಜ; ಆದರೆ ಇನ್ನೂ 'ಉಕ್ಕಿನ ನಗರ'ದಲ್ಲಿ ಹೋರಾಟ ನಡೆಯುತ್ತಿದೆ. ಅಲ್ಲಿ ಒಂದು ಕಾರಖಾನೆಯೂ ಇಲ್ಲ; ಅಸಂಖ್ಯಾತ ಕಟ್ಟಡಗಳೂ ನೆಲಸಮವಾಗಿವೆ. ಈ ಹಾಳಾದ ಪಟ್ಟಣದ ನಗರ ಬೀದಿಗಳಲ್ಲಿಯೇ ರಶ್ಯನರೂ ಜರ್ಮನರೂ ಕೈಕೈಕಾಳಗ ಮಾಡುತ್ತಿದ್ದಾರೆ! ಸ್ಟಾಲಿನ್‌ಗ್ರಾಡಿನ ಪ್ರತಿಯೊಂದು ಮನೆ, ಪ್ರತಿಯೊಂದು ರಸ್ತೆಯಲ್ಲಿಯೂ ಹೋರಾಟ ನಡೆಯುತ್ತಿದೆ! ಸ್ಟಾಲಿನ್‌ಗ್ರಾಡಿನ ಯುದ್ಧ ಮುಗಿದರೂ ಈಗ ವೋಲ್ಗಾ ನದಿಯ ಯುದ್ಧವೂ ಪ್ರಾರಂಭವಾಗಿರುವುದು.

ಸ್ಟಾಲಿನ್‌ಗ್ರಾಡ್ ಹೋದರೂ ರಶ್ಯದ ಕಾಳಗ ಕೊನೆಗಾಣುವದಿಲ್ಲ; ರಶ್ಯನರು ಪ್ರತಿಭಟನೆ ನಿಲ್ಲಿಸುವುದೂ ಸಾಧ್ಯವಿಲ್ಲ. ದಕ್ಷಿಣದಲ್ಲಿ ಒಂದು ಪಕ್ಷ ರಶ್ಯನರ ಪ್ರತಿಭಟನೆ ಕುಗ್ಗಿದರೂ, ಉತ್ತರದಲ್ಲಿ ವೊರೊನೆಜ್, ರ್ಜೆಫ್, ಲೆನಿನ್‌ಗ್ರಾಡ್ ಮತ್ತು ಕೆರೆಲಿಯ ರಣರಂಗಗಳಲ್ಲಿ ಯುದ್ಧ ಸಾಗೀತು. ಮೋಸ್ಕೋ ಲೆನಿನ್‌ಗ್ರಾಡುಗಳಂತೂ ರಶ್ಯನ್ ಯುದ್ಧಾರಂಭವಾದ ಮೊದಲ್ಗೊಂಡೇ ಜರ್ಮನರಿಗೆ ಬಗ್ಗಿಲ್ಲ! ಅಲ್ಲಿ ರಶ್ಯನರು ಪ್ರಬಲ ಹೋರಾಟ ಹೂಡಿಯೇ ಹೂಡುವರು. ಹೀಗಿರುವಾಗ ಸ್ಟಾಲಿನ್‌ಗ್ರಾಡ್ ಪತನವಾದರೂ, ರಶ್ಯವು ಜರ್ಮನರ ಕೈವಶವಾಯಿತೆಂದು ಯಾರೂ ಕಳವಳಗೊಳ್ಳುವ ಕಾರಣವಿಲ್ಲ. ಒಂದು ಪಕ್ಷ ಹಿಟ್ಲರನು ರಶ್ಯನರನ್ನು ಸಂಪೂರ್ಣ ಸೋಲಿಸಬಿಡಬೇಕೆಂದಾದರೆ, ಹಿಮಕಾಲ ಬರುವುದರೊಳಗೆ, ಕಾಕೆಸಸ್, ಮೋಸ್ಕೋ, ಲೆನಿನ್‌ಗ್ರಾಡ್‌ಗಳಿವಿಷ್ಟನ್ನೂ ಕೈವಶಪಡಿಸಿಕೊಂಡು, ರಶ್ಯನರನ್ನು ಯೂರಲ್ ಪರ್ವತದಾಚೆ ದೂಡಿ ಬಿಡಬೇಕು; ಹಿಮಗಾಲವು, ಇನ್ನೇನು, ಇಂದೋ ನಾಳೆಯೋ ಬಂದೇ ಬಿಡುತ್ತದೆ; ಅಷ್ಟರಲ್ಲಿಯೇ ಅವೆಲ್ಲಾ ಕೆಲಸಗಳನ್ನೂ ಪೂರೈಸುವುದು ಹಿಟ್ಲರನಿಂದಲ್ಲ ಪ್ರಳಯರುದ್ರನಿಂದಲೂ ಸಾಧ್ಯವೇ ಇಲ್ಲ!

ಗುಣವಂತನಾದ ಹೇಮಂತ!

ರಶ್ಯವು ಹೀಗೆ ಘೋರ ವಿಪತ್ತಿಗೊಳಗಾಗಿರುವಾಗಲೂ, ಮಿತ್ರರು ದ್ವಿತೀಯ ರಣರಂಗವನ್ನು ತೆರೆಯುವ ಸಾಧ್ಯಾಸಾಧ್ಯತೆಯ ವಿಚಾರ ಇನ್ನೂ ಯಾವ ನಿರ್ಧಾರವನ್ನೂ ಮಾಡಿರದಿದ್ದರೂ, ರಶ್ಯದ ಪ್ರಾಕೃತಿಕ ಮಿತ್ರ—ಗುಣವಂತನಾದ ಹೇಮಂತನು—ಅದರ ಸಹಾಯಕ್ಕೀಗ ಬಂದೇ ಬಂದಿದ್ದಾನೆ! ಎಲ್ಬ್ರುಸ್ ಪರ್ವತಾವಳಿಯ ಮಹೋನ್ನತ ಶಿಖರದಿಂದ ಮೊದಲ್ಗೊಂಡು, ಅತ್ಯವನತ ಕಾಕ್‌ಸಸ್ ಪ್ರದೇಶದ ತನಕ ಹಿಮಗಾಲದ ಪ್ರಭಾವ ಪಸರಿಸುತ್ತಿದೆ; ಮಂಜು ಹನಿಗಳು ರಾಶಿರಾಶಿಯಾಗಿ ರಶ್ಯದ ಎಲ್ಲೆಡೆಗಳಲ್ಲಿಯೂ ಇಂದು ಎಡೆಬಿಡದೆ ಹಬ್ಬುತ್ತಿವೆ. ದಕ್ಷಿಣ ಭಾಗದಲ್ಲಿ ಹೇಮಂತನು ಈಗಾಗಲೇ ಕಾಲು ಚಾಚಿ ಜರ್ಮನರನ್ನು ಹಿಂದಟ್ಟುತ್ತಿರುವನು. ಡಾನ್ ಭಾಗದಲ್ಲಿಯೂ ಹವೆ ಬದಲಾಗಿದೆ; ಹಿಮಪೂರಿತ ವರ್ಷವು ಸುರಿಯುತ್ತದೆ; ರಣರಂಗಗಳಲ್ಲೆಲ್ಲಾ ಜರ್ಮನರೇನೋ ವಿಜಯೋನ್ಮತ್ತರಾಗಿದ್ದಾರೆ. ಆದರೆ ಬಿಸಿಯೇರಿದ ಅವರ ರಕ್ತವು ಹೆಪ್ಪುಗಟ್ಟುವಂಥಾ ಗಂಡಾಂತರದ ಕಾಲವಿದು; ರಶ್ಯದಲ್ಲಿ ಅಕ್ಟೋಬರ್ ಮಧ್ಯಕಾಲಕ್ಕೆ ಯಾವಾಗಲೂ ಭೀಕರವಾದ ಛಳಿಗಾಳಿ ಬೀಸತೊಡಗುವುದು. ಜರ್ಮನ್ ಸೈನಿಕರ ರಕ್ತವು ಹೆಪ್ಪುಗಟ್ಟುವುದರೊಡನೆ ಅವರ ಟೇಂಕು, ಫಿರಂಗಿ, ಬಾಂಬುಗಳ ಮದ್ದೂ ಹೆಪ್ಪುಗಟ್ಟಿತೆಂದರೆ ಮುಂದೆ ಅವರ ಸಾಹಸ ವ್ಯರ್ಥವೇ ಸರಿ; 'ಒಂದು ಸೈನ್ಯವು ವಿಫಲವಾದರೆ, ಅಲ್ಲಿಗೆ ಹತ್ತು ಸೈನ್ಯ ಕಳುಹಿಸುತ್ತೇನೆ; ಹತ್ತೂ ಸೋತರೆ ನೂರು ಸಾಗಿಸುತ್ತೇನೆ' ಎಂದು ಹಿಟ್ಲರನೇನೋ ಆರ್ಭಟಿಸಬಹುದು; ಆದರೆ ಎಂಥಾ ಮಾನವೀ ದರ್ಪವಾದರೂ, ಎಂಥಾ ಯಾಂತ್ರಿಕ ಆರ್ಭಟೆಯಾದರೂ ಪ್ರಕೃತಿಯ ಮುಂದೆ ತಲೆತಗ್ಗಿಸಲೇ ಬೇಕು; ಹೇಮಂತನ ಮುಂದೆ ಹಿಟ್ಲರನ ಆಟ ಸಾಗಲಾರದು; ಹೀಗಾಗಿ ರಶ್ಯನ್ ರಣರಂಗದಲ್ಲಿ ಇಂದು ಬದಲಾವಣೆಯಾಗುವ ಸಮಯವೊಂದು ಸನ್ನಿಹಿತವಾಗಿದೆ. ಕಳೆದ ವರ್ಷವಾದರೂ, ಹಿಟ್ಲರನ ಹಂಚಿಕೆಗಳೆಲ್ಲವೂ ಹೇಮಂತ ಕಾಲದಲ್ಲಿ ಅಡಿಮೇಲಾಗಿಬಿಟ್ಟವು. ಜರ್ಮನರು 'ಸಂಭ್ರಮದಿಂದ ಹಿಂಜರಿಯ' ಬೇಕಾಯಿತು! ಈ ಸಲವಾದರೂ ಜರ್ಮನರಿಗೆ ಅದೇ ಅವಸ್ಥೆ ಬಂದೊದಗುವುದು!

ಮಿತ್ರರಿಂದ ರಶ್ಯಕ್ಕೆ ಯಾವುದು ಮಾಡಲು ಆಗಲಿಲ್ಲವೋ ಅದನ್ನಿಂದು ಹೇಮಂತ ವೀರನು ಮಾಡುತ್ತಿದ್ದಾನೆ; ಜರ್ಮನರನ್ನು ಹಿಂದಟ್ಟಲು ಹುಮ್ಮಸಿನಿಂದ ಮುಂದೆ ಬರುತ್ತಿದ್ದಾನೆ. ಹೇಮಂತ ಕಾಲದ ಪ್ರಭಾವದಿಂದ ಸ್ಟಾಲಿನ್‌ಗ್ರಾಡ್ ಉಳಿದೀತೇ ಎಂಬುದು ಪ್ರಶ್ನೆ. ಅದನ್ನು ಜರ್ಮನರಿಗೆ ಎಣಿಸಿದಷ್ಟು ಬೇಗ ಸ್ವಾಧೀನಮಾಡಲಂತೂ ಆಗಲಿಲ್ಲ. ಈ ತಿಂಗಳ ಪ್ರಾರಂಭದಲ್ಲಿಯೇ ಸ್ಟಾಲಿನ್‌ಗ್ರಾಡ್ ಉರುಳಿತು ಎಂದು ಜರ್ಮನ್‌ರೇಡಿಯೋದಲ್ಲಿ ಬೊಬ್ಬೆಯಿದ್ದರೂ, ಅದನ್ನು ಇಂದಿನ ವರೆಗೆ ರಶ್ಯನರು ಉಳಿಸಿಕೊಂಡಿದ್ದರು. ರಶ್ಯನರಿಗೆ ಇದುವರೆಗೆ ಒದಗಿದಂತೆ, ಸ್ಟಾಲಿನ್‌ಗ್ರಾಡಿನ ಸೋಲು ಬಂದು ಬಿಡಲೂಬಹುದು; ಯುದ್ಧದಲ್ಲಿ ಸೋಲು ಇಲ್ಲವೇ ಗೆಲವು ಯಾವುದಾದರೊಂದು ಆಗಲೇ ಬೇಕು; ಆದರೆ ಹೇಮಂತನು ಇಂದು ರಶ್ಯದ ಬೆಂಬಲಕ್ಕೆ ಬಂದಿದ್ದಾನೆ ಎಂಬುದು ಹೆಚ್ಚಿನ ಆಶಾದಾಯಕವಾದ ವಾರ್ತೆಯಾಗಿದೆ.

ಎಂದಾದರೂ ಶರಣಾದಾರೆ?

ಜರ್ಮನರ ರಾಕ್ಷಸೀ ಯಂತ್ರಶಕ್ತಿಯ ಎದುರು, ರಶ್ಯವು ಎಷ್ಟು ಕಾಲದ ತನಕ ಎದೆಗೊಟ್ಟು ನಿಂತೀತು? ರಶ್ಯವು ಕೊನೆಗೆ ಜರ್ಮನಿಗೆ ಶರಣಾದೀತೆ? ವಿಶ್ವ ಸಮತಾವಾದ ನಂದಾದೀಪವು ನಂದೀಹೋದೀತೆ? ಕಳೆದ ಕಾಲು ಶತಮಾನದಿಂದ, ತಾವು ಕಂಡುಂಡ ಸ್ವಾತಂತ್ರ್ಯದ ಸವಿಯಮೃತದ ಬಟ್ಟಲನ್ನು ವೈರಿಗೆ ಅಪಹರಿಸಲು ಎಡೆಗೊಟ್ಟು ರಶ್ಯನ್ ಸ್ವಾತಂತ್ರ್ಯವೀರರು ಮುಂದೆ ನಾಯಿ ಬಾಳು ಬಾಳಲು ಒಪ್ಪಿಕೊಂಡಾರೆ? ಈ ಪ್ರಶ್ನೆಗಳು ಈಗ ಸಹಜವಾಗಿ ಪ್ರತಿಯೊಬ್ಬನನ್ನೂ ಚಿಂತಾಪರನನ್ನಾಗಿ ಮಾಡಿವೆ. ಇದಕ್ಕೆಲ್ಲಾ ಒಂದೇ ಒಂದು ಉತ್ತರವೆಂದರೆ, ವೀರ ರಶ್ಯನರು ಸ್ವಾತಂತ್ರ್ಯದ ಯಜ್ಞಕುಂಡದಲ್ಲಿ ತಮ್ಮನ್ನು ಕೊನೆಯ ವ್ಯಕ್ತಿಯವರೆಗೆ ಬಲಿದಾನವಿತ್ತಾರೇ ವಿನಾ ಎಂದೆಂದೂ ಶರಣಾಗಲಾರರೆಂಬುದು; ಪರದಾಸ್ಯವನ್ನು ಒಪ್ಪಿಕೊಳ್ಳಲಾರರೆಂಬುದು. ಸ್ವತಂತ್ರ ಜನಾಂಗವಾಗಿ ಲೋಕದೆದುರು ಎತ್ತಿ ಹಿಡಿದ ತಮ್ಮ ತಲೆಯನ್ನು ಎಂತಹ ದರ್ಪದ ಮರ್ದನಕ್ಕಾದರೂ ಹೆದರಿ ತಗ್ಗಿಸಲಾರರೆಂಬುದು! ರಶ್ಯನರ ಇದುವರೆಗಿನ ಪ್ರಚಂಡ ಹೋರಾಟವನ್ನು, ರಶ್ಯನ್ ಕ್ರಾಂತಿಯಿಂದ ಮೊದಲ್ಗೊಂಡು ಅವರ ಧೀರ ಸಂಘಟನೆಯನ್ನು ಆ ಬಳಿಕ ನವೋಲ್ಲಾಸದಿಂದ ನವೀನ ಸಮಾಜ ಸೃಷ್ಟಿ ಮಾಡಿ, ಹತ್ತು ಜನರೊಡನೆ ಸುಖದುಃಖಗಳನ್ನು ಹಂಚಿ ಉಂಡು, ಆನಂದಿಸಿದ ಅವರ ದಿವ್ಯ ಜೀವನವನ್ನು ಒಂದೊಂದನ್ನೇ ವಿಚಾರ ಮಾಡಿದರೆ, ಸ್ಟಾಲಿನನಂತಹ 'ಉಕ್ಕಿನ ಮನುಷ್ಯನ' ಧೀರ ಧುರೀಣತೆಯಲ್ಲಿ, ಅದ್ಭುತ ಜಾಗೃತ ಶಕ್ತಿಯುಳ್ಳ ರಶ್ಯದ ಜನಸಂಪತ್ತನ್ನು ಪರಿಭಾವಿಸಿದರೆ ಈ ವಿಷಯವು ಸ್ಪಷ್ಟವಾಗುತ್ತದೆ.

ಜರ್ಮನರು ಇಂದು ಪಡೆದ—ಅಸಂಖ್ಯ ನಷ್ಟನಾಶದಿಂದ ಪಡೆದ—ಕೆಲಕೆಲವು ವಿಜಯಗಳನ್ನು ನಾವು ಮಹತ್ತಾಗಿ ಎಣಿಸಬೇಕಾಗಿಲ್ಲ; ಜರ್ಮನಿಗೆ ಸಹಾಯವಾಗಿ ಜಪಾನಾದರೂ ಒಪ್ಪಂದವನ್ನು ಮುರಿದು ಸೈಬೇರಿಯದ ಮೂಲಕ ರಶ್ಯದ ಬೆನ್ನಿಗಿರಿದು ಬಿಡಬಹುದೆಂಬುದನ್ನೂ ನಾವು ಗಣಿಸಬೇಕಾದುದಿಲ್ಲ; ರಶ್ಯಕ್ಕೆ ಸಂಯುಕ್ತರಾಷ್ಟ್ರಗಳು, ಮಿತ್ರರಾಷ್ಟ್ರಗಳು ಸಾಕಷ್ಟು ಬೆಂಬಲಕೊಡಲಾರದೆ, ಅದು ಏಕಾಏಕಿ ಹೋರಾಡಬೇಕಾಯಿತು ಎಂಬುದೂ ಘನವಿಚಾರವಲ್ಲ; ಇಲ್ಲಿ ನಾವು ನೋಡಬೇಕಾದುದು ರಶ್ಯನ್ ಸಮಾಜನೀತಿ; ರಶ್ಯನ್ ಸ್ವಾತಂತ್ರ್ಯಪ್ರೇಮ; ರಶ್ಯನ್ ಸಂಘಟನೆ ಮತ್ತು ಸಂಗ್ರಾಮ ಸಾಹಸಗಳನ್ನು. ಭಾರತದಂಥಾ ಒಂದು ರಾಷ್ಟ್ರವು ಕಳೆದ ಇನ್ನೂರು ವರ್ಷಗಳಿಂದ ಪರಕೀಯರ ಪದತಳದಲ್ಲಿ ತಿಕ್ಕಿ ತುಳಿಯಲ್ಪಟ್ಟು ನಿಕೃಷ್ಟತನದ ಸ್ಥಿತಿಗಳಿದ್ದರೂ, ಇಂದು ಇಲ್ಲಿನ ಜನತೆಯ ಹೃದಯದಲ್ಲಿ ಉಕ್ಕೇರಿ ಬರುತ್ತಿರುವ ಸ್ವಾತಂತ್ರ್ಯದಾಹ, ಅದಕ್ಕಾಗಿ ಭಿನ್ನಭೇದವಿಲ್ಲದೆ ಏಕಮುಖವಾಗಿ ಕೇಳುತ್ತಿರುವ ರಾಷ್ಟ್ರೀಯ ಜನತಾ ಧ್ವನಿ, ಅದರ ಸಲುವಾಗಿ ಆಗುವ ಅಮಿತ ಬಲಿದಾನಗಳನ್ನು ಕಿಂಚಿತ್ ವಿಚಾರಿಸಿಕೊಂಡರೆ, ಭಾರತೀಯರಂತೆ ನಿಕೃಷ್ಟಾವಸ್ಥೆಗಿಳಿಯದೆ, ಕಳೆದ ಕಾಲು ಶತಮಾನದಿಂದ ಮೇಲ್ಪಟ್ಟು ಸ್ವಾತಂತ್ರ್ಯದ ಸವಿಯಮೃತವನ್ನುಂಡು ತೇಗಿದ, ಹಿಂದೊಮ್ಮೆ ಕ್ರೂರ ಝಾರ್ ಪ್ರಭುತ್ವದೊಡನೆ ಹೋರಾಡಿ ಸ್ವಾತಂತ್ರ್ಯವನ್ನು ಸರ್ವಥಾ ಸ್ವಾಧೀನಮಾಡಿಕೊಂಡ, ಭಾರತೀಯರಿಗಿಂತ ವಿದ್ಯೆಯಲ್ಲಿ, ಉದ್ಯೋಗದಲ್ಲಿ, ಸಂಘಟನೆಯಲ್ಲಿ, ಸ್ವಾತಂತ್ರ್ಯ ಜಾಗೃತಿಗಳಲ್ಲಿ ನೂರಾರು ಪಾಲು ಮಿಗಿಲಾಗಿರುವ ರಶ್ಯನರು ವೈರಿಗಳಿಗೆ ಎಂದಾದರೂ ಶರಣಾದಾರೆ?

ಇನ್ನು ಭಾರತದತ್ತ?

ಭೋರೆಂದು ಭೋರ್ಗರೆದು ಸುರಿವ ಮಳೆಗಾಲವು ಮುಗಿಯಿತು; ಆಕಾಶವು, ಮುಸುಕಿದ್ದ ಮೋಡಗಳು ಮರೆಯಾಗಲು ಈದೀಗ ಶುಭ್ರವಾಗಿದೆ. ಇಂತಹ ಸುಂದರ ಪ್ರಕೃತಿಯು ಸನ್ನಿಹಿತವಾಗಲು, ಆಕ್ರಮಣ ಮಾಡುವರೆ ಸಿದ್ಧತೆ ಮಾಡುತ್ತಿರುವ ಶತ್ರುವಿಗೆ ಅನುಕೂಲವಾಯಿತು; ಇನ್ನು ಭಾರತದತ್ತ ಶತ್ರು ಆಕ್ರಮಣ ಮಾಡುವನೇ ಎಂಬ ಭೀತಿಯೀಗ ಉಂಟಾಗಿದೆ. ಗಡಿನಾಡಾದ ಬರ್ಮಾದಲ್ಲಿ ಜಪಾನು ಸೈನ್ಯ ಸಂಗ್ರಹಿಸಿಟ್ಟಿದೆ, ಬರ್ಮಾದ ಗಡಿಯನ್ನು ದಾಟಿ ಬರುವುದೇ ತಡ, ಭಾರತದ ಆಕ್ರಮಣ ಕಾರ್ಯವು ಆರಂಭವಾದಂತೆಯೇ ಎನಬೇಕು. ಆಕ್ರಮಣ ಮಾಡಿ ಪ್ರಯೋಜನವುಂಟೇ ಇಲ್ಲವೇ ಎಂಬ ವಿಚಾರ ಬೇರೆ, ಆದರೆ ಅಂತಹ ಗಂಡಾಂತರವನ್ನುಂಟು ಮಾಡಬೇಕೆಂಬ ದುರ್ಬುದ್ಧಿಯಿದ್ದರೆ—ದುರ್ಬುದ್ಧಿ ಇಲ್ಲವೆಂದು ನಾವು ಹೇಳಲಾರೆವು—ಅದನ್ನು ಕೈಕೊಳ್ಳಲು ಈಗಿನ ಪ್ರಕೃತಿಯು ಜಪಾನಿಗೆ ಅನುಕೂಲವೇ ಆಗಿದೆ. 'ಶಾಂಗಾಯ್ ಬಂದರದಲ್ಲಿ ಎಪ್ಪತ್ತು ಸಾವಿರ ಸೈನಿಕರಿಂದೊಡಗೂಡಿದ ಎರಡು ಜಪಾನೀ ದಲಗಳು ಸಿದ್ಧವಾಗಿವೆ'ಯೆಂದು ಚೀನದ ಸೈನಿಕ ತಜ್ಞನು ಹೇಳುತ್ತಾನೆ. ಇದರಿಂದಲೂ ಶತ್ರುವಿಗೆ ಪೂರ್ವಾಭಿಮುಖವಾಗಿ ಅಭಿಯೋಗ ಮಾಡುವ ಆಗ್ರಹವುಂಟೆಂದೇ ಯೋಚಿಸಲು ಆಸ್ಪದವಾಗಿದೆ. ಇದು ಮಾತ್ರವಲ್ಲದೆ ಅನೇಕ ಸಮಯದಿಂದಿತ್ತ ಸಮರತಜ್ಞರಾದವರು, ಜಪಾನು ಒಡನೆ ಭಾರತದತ್ತ ಇಲ್ಲವೇ ಸೈಬೇರಿಯದತ್ತ ಬೇಗನೇ ಆಕ್ರಮಣ ಆರಂಭಿಸಬಹುದೆಂಬ ಅಭಿಪ್ರಾಯ ನೀಡುತ್ತಲೇ ಇದ್ದಾರೆ. ರಶ್ಯದ ಸ್ಥಿತಿಯಂತೂ ಇಂದು ವಿಷಮವಿದ್ದು, ಅದು ಹಿಟ್ಲರನೊಬ್ಬನಿಂದಲೇ ಪೂರೈಸುವುದಾದರೆ, ಜಪಾನು ಮಿತ್ರರನ್ನು ಹೊಸತೊಂದು ಪೇಚಾಟದಲ್ಲಿ ಹಾಕಬೇಕೆಂಬ ಅಭಿಲಾಷೆಯಿಂದ, ಸೈಬೇರಿಯಕ್ಕೆ ಹೋಗದೆ ಭಾರತದತ್ತ ತಿರುಗಿದರೂ ತಿರುಗಬಹುದು. ಅಂತೂ 'ಘನ ಏಶ್ಯ'ದ ಸಾರ್ವಭೌಮತ್ವದ ಮಹತ್ವಾಕಾಂಕ್ಷೆಯಿಟ್ಟಿರುವ ಜಪಾನು, ಸೈಬೇರಿಯಾ ಹಾಗೂ ಭಾರತ ಈ ಎರಡು ಕಡೆಗಳಲ್ಲಿ ಒಂದೇ ಸಮಯ ಸಂಗ್ರಾಮ ಹೂಡುವ ಹವ್ಯಾಸಕ್ಕೆ ಹೋಗದೆ ಏಶ್ಯದಲ್ಲಿ ಪ್ರಾಮುಖ್ಯ ರಾಷ್ಟ್ರವಾದ ಭಾರತದತ್ತ ಬರುವುದೇ ಹೆಚ್ಚಿನ ಸಂಭವವೆನಬೇಕು. ಆದರೆ ಈ ವಿಷಯ ನಿರ್ಧಾರವಾಗಬೇಕಾದರೆ, ಸ್ಟಾಲಿನ್‌ಗ್ರಾಡ್ ಪರಿಸ್ಥಿತಿ, ಅಲ್ಲಿನ ಹಿಮಗಾಲದ ಜರ್ಮನರ ಯುದ್ಧನೀತಿ ಇವುಗಳನ್ನು ನೋಡಿಕೊಳ್ಳಬೇಕು; ಏಕೆಂದರೆ ಜರ್ಮನ್—ಜಪಾನ್ ಯುದ್ಧಕಾರ್ಯವು ಅನ್ಯೋನ್ಯ ವಿಚಾರ ವಿನಿಮಯದಿಂದ ನಡೆಯುತ್ತಿರುವುದೆಂದು ಯಾರಾದರೂ ಈಗ ಒಪ್ಪಲೇ ಬೇಕು; ಹೀಗಿರುವಾಗ ಸ್ಟಾಲಿನ್‌ಗ್ರಾಡಿನ ಪರಿಸ್ಥಿತಿ ಜರ್ಮನರ ಮುಂದಿನ ರಶ್ಯನ್ ಸಂಗ್ರಾಮ ನೀತಿಗಳನ್ನು ಸ್ಪಷ್ಟವಾಗಿ ತಿಳಿಕೊಳ್ಳದೆ ಜಪಾನು ಒಮ್ಮೆಲೇ ಭಾರತದತ್ತ—ಬರಬೇಕೆಂಬ ಆಶೆಯಿದ್ದರೂ—ದುಡುಕಲಾರದು. ಆದರೆ ಭಾರತದ ಆಕ್ರಮಣವು ತಪ್ಪಿಸಲಸಾಧ್ಯವಾದೊಂದು ಗಂಡಾಂತರವೆಂದು ಅನೇಕ ರಾಜನೀತಿಜ್ಞರು ಅಭಿಪ್ರಾಯಪಡುತ್ತಾರೆ. ಇಷ್ಟರಲ್ಲಿ ಇನ್ನೊಂದು ವಿಚಾರವೂ ಇದೆ. ಏಂದರೆ ಭಾರತದಂತಹ ಸಂಪತ್ ಸಮೃದ್ಧ ರಾಷ್ಟ್ರದ ಮೇಲೆ ಜಪಾನಿನಂತೆ ಜರ್ಮನಿಗೂ ದೃಷ್ಟಿಯಿದೆ. ಸ್ಟಾಲಿನ್‌ಗ್ರಾಡ್ ಸಮರವನ್ನು ಕೊನೆಗಾಣಿಸಿ, ಕಾಕಸಸ್ ಧಾಳಿಯನ್ನು ಮುಗಿಸಿದ ಬಳಿಕ ಜರ್ಮನಿಯಾದರೂ ಭಾರತದತ್ತ ದಂಡೆತ್ತಿ ಬರಲು ಮನಸ್ಸು ಮಾಡಬಹುದು. ಅಥವಾ ಒಂದೇ ಸಮಯದಲ್ಲಿ ಜಪಾನು ಜರ್ಮನಿಗಳೆರಡೂ ಭಾರತವನ್ನು ಆಕ್ರಮಣ ಮಾಡುವ ಕಾರ್ಯಕ್ರಮವಿಟ್ಟಿದ್ದರೂ ಇರಬಹುದು. ಈ ವಿಚಾರಗಳನ್ನು ಅರಿತುಕೊಂಡೇ, ಭಾರತದ ರಕ್ಷಣಾಕಾರ್ಯದಲ್ಲಿ ಬ್ರಿಟನಾದರೂ ಬಹಳ ಮುಂಜಾಗ್ರತೆ ವಹಿಸಿಕೊಂಡೇ ಇದೆ. ಭಾರತದ ಗಡಿನಾಡಿನ ಹಾಗೂ ಕರಾವಳಿ ಪಟ್ಟಣಗಳೆಲ್ಲಾ ಸೈನಿಕ ಸಜ್ಜಿತವಾಗಿ ವೈರಿಯನ್ನು ಎದುರಿಸಲು ಸಿದ್ಧವಾಗಿವೆ. ಭಾರತವನ್ನು ವೈರಿಯ ಆಕ್ರಮಣದಿಂದ ನಾವು ಭದ್ರವಾಗಿ ಕಾಪಾಡುವೆವೆಂದು ಪಾರ್ಲಿಮೆಂಟಿನಲ್ಲಿ ಹೇಳುತ್ತಾ ಅಮೇರಿಯವರು ಭರವಸೆಯಿತ್ತಿದ್ದಾರೆ.

ಇತರ ರಣರಂಗಗಳಲ್ಲಿ

ಆರ್ಕಟಿಕ್ ಸಮುದ್ರದಲ್ಲಿ ಇತ್ತೀಚೆಗೆ ನಡೆದ ನೌಕಾಕಾಳಗದಲ್ಲಿ ಮಿತ್ರರಿಗೂ ಶತ್ರುಗಳಿಗೂ ಕೆಲವು ಹಾನಿಯಾಗಿವೆ. ಮಿತ್ರರ ಸೋಮಾಲಿ ಎಂಬ ವಿನಾಶಿಕೆ ಮತ್ತು ಲೀನಾ ಎಂಬ ಮಯಿನ್ ಸ್ವೀಪರುಗಳು ಟೋರ್ಪೆಡೋದಿಂದ ಮುಳುಗಿಸಲ್ಪಟ್ಟವೆಂದು ತಿಳಿಯುತ್ತದೆ. ಅಂತೆಯೇ ಶತ್ರು ಯೂ ಬೋಟುಗಳು ಮಿತ್ರರ ಕೆಲವು ಕನ್ವಾಯಿಗಳನ್ನು ಮುಳುಗಿಸಿದವು. ಈಗ ಆರ್ಕಟಿಕಿನಲ್ಲಿ ಭೀಕರ ನೌಕಾ ಸಂಗ್ರಾಮವಾಗಿ ಕೆಲವು ಕನ್ವಾಯಿಗಳು, ಧವಗಗಳು, ಯೂ ಬೋಟುಗಳು ನಾಶವಾಗಿವೆ. ಚೀನಾ ಯುದ್ಧದಲ್ಲಿ, ಈಗ ಜಪಾನರು ಅಷ್ಟೊಂದು ಮುಂದುವರಿಯುತ್ತಲಿಲ್ಲ. ಚೀನೀಯರು ಇತ್ತೀಚೆಗೆ ಮೊದಲು ಕಳಕೊಂಡ ಪ್ರದೇಶಗಳೊಂದೊಂದನ್ನು ತಿರುಗಿ ಸ್ವಾಧೀನಪಡಿಸುತ್ತಿರುವರು. ಫೂಕೀನ ಪ್ರಾಂತದ ಕರಾವಳಿಯಲ್ಲಿ ಜಪಾನ್ ಆಕ್ರಮಣದ ಭೀತಿಯುಂಟಾಗಿದೆ, ಆದ್ದರಿಂದ ಅಲ್ಲಿ ಚೀನಿಯರು ಧ್ವಂಸ ಕಾರ್ಯವನ್ನು ಸುರುಮಾಡಿದ್ದಾರೆ. ಪಾಮುಸುಯಿ, ದಕ್ಷಿಣ ಯೂನಾನದಲ್ಲಿಯೂ ಜಪಾನ್ ಅಭಿಯೋಗ ನಡೆಯಿತು. ಬರ್ಮದ ಮಾರ್ಗವಾಗಿ ಜಪಾನ್ ಸೈನ್ಯವು ಪಶ್ಚಿಮ ಚೀನದ ಹಾದಿ ಹಿಡಿದಿರುವುದು. ಚೀನ ಸೈನಿಕರೊಡನೆ ಅಮೇರಿಕನ್ ಸೈನಿಕರೂ ಸಹಕರಿಸಿ ಕಾದಾಡುತ್ತಿದ್ದಾರೆ. ಫೇಸಿಫಿಕ್ಕಿನಲ್ಲಿ ಮಿತ್ರರ ಜೋರು ಹೆಚ್ಚುತ್ತಿದೆ. ನ್ಯೂಗಿನಿ ಹತ್ತಿರ ಜಪಾನ್ ವಿಮಾನಗೃಹದ ಮೇಲೆ ಧಾಳಿಯಿದಲಾಯಿತು. ಓವೆನ್ ಸ್ಟಾನ್ಲೆಗೆ ಜಪಾನರ ಅನ್ನಸಾಮಗ್ರಿ ಹೋಗುತ್ತಿರುವಾಗ ಮಿತ್ರರು ಅದನ್ನು ನಾಶಪಡಿಸಿದರು. ಜಪಾನರ ೨೨ ಯುದ್ಧನೌಕೆಗಳು ಮುಳುಗಿಸಲ್ಪಟ್ಟವೆ. ಪೋರ್ಚುಗೀಸ್ ತಿಮೋರಿನಲ್ಲಿ ಆಸ್ಟ್ರೇಲಿಯನರು ಒಂದು ಬಲಿಷ್ಠ ಕೋಟೆ ಕಟ್ಟಿ ಅಲ್ಲಿಂದ ಜಪಾನರ ಮೇಲೆ ಅಭಿಯೋಗ ಕೈಕೊಂಡಿರುವರು. ಸಲೋಮನ್ ದ್ವೀಪದ ಕಡೆಗೆ ಚೀನಾ ಸಮುದ್ರದೊಳಗಿಂದ ನಾಲ್ಕು ಯುದ್ಧ ನೌಕೆಗಳು ಹೋದ ಸುದ್ದಿ ಬಂದಿದೆ. ಅಂತೂ ಫೇಸಿಫಿಕ್ ಯುದ್ಧವನ್ನು ಮುಗಿಸಿಬಿಡಬೇಕೆಂದು ಜಪಾನರೇನೋ ಹಠತೊಟ್ಟಿದ್ದರೂ, ಅಲ್ಲಿ ಮಿತ್ರರ ಪ್ರತಿಭಟನೆ ಪ್ರಬಲವಾಗುತ್ತಲೇ ಇದೆ.

ಸ್ವದೇಶ ಸಮಾಚಾರ

ಸ್ವದೇಶಾಭಿಮಾನಿ

ತಾರೀಕು 2—10—1942

ಅಮೆರಿಕದಲ್ಲಿ ಅಭಿಪ್ರಾಯ

'ಚರ್ಚಿಲ್ ಮತ್ತು ಅಮೆರಿಯವರ ಹೇಳಿಕೆಗಳಿಂದ ಅಮೇರಿಕದ ಹಲವು ಜನರಲ್ಲಿ ಅತೃಪ್ತಿ ಹುಟ್ಟಿದೆ. ಬ್ರಿಟಿಷ್ ಪ್ರಭುತ್ವದ ಈ ಧೋರಣೆಯು 'ಅಟ್ಲಾಂಟಿಕ್ ಶಾಸನದ ಧೋರಣೆಗೆ ಹಾಗೂ ಯುದ್ಧದ ಮಹತ್ವವಾದ ಉದ್ದೇಶ ಸಾಧನೆಗೆ ಅನುಕೂಲವಾಗಿರುವುದಿಲ್ಲವೆಂದು ಅನೇಕ ಅಮೇರಿಕನರು ಅಭಿಪ್ರಾಯ ಪಡುತ್ತಾರೆ. ವಿಚಾರ ವಿನಿಮಯಗಳೆಲ್ಲ ಸಂಪೂರ್ಣ ನಿಷ್ಪ್ರಯೋಜನವಾಗದೆ—ಹಾಗೆ ಇನ್ನೂ ಆಗಿಲ್ಲ—ದಬ್ಬಾಳಿಕೆಯ ನೀತಿಯನ್ನು ಅನುಸರಿಸಿದ್ದು ಸರಿಯಲ್ಲವೆಂದು ಅವರ ಮತ. ದಬ್ಬಾಳಿಕೆಯ ಧೋರಣೆಯೆಂಬುದು ಬುದ್ಧಿವಂತಿಕೆಯದ್ದಲ್ಲ. ಏಕೆಂದರೆ ಇಂದು ಭಾರತೀಯರ ಹೃತ್ಪೂರ್ವಕ ಬೆಂಬಲ ಬೇಕಾಗಿದೆ. ದಬ್ಬಾಳಿಕೆಯಿಂದ ಅದು ತಪ್ಪುವುದು. ಜಪಾನ್ ಅಭಿಯೋಗದಿಂದ ಭಾರತವನ್ನು ತಪ್ಪಿಸಲಿಕ್ಕೆ ಭಾರತೀಯರ ಹೃತ್ಪೂರ್ವಕ ಸಹಾಯ ಅಗತ್ಯ. ಒಟ್ಟಿನಿಂದ ಹೇಳಬೇಕಾದರೆ ಬ್ರಿಟಿಷ್ ಸರಕಾರ ಇಂದಿನ ದಮನ ಧೋರಣಕ್ಕೆ ಬಹುಜನ ಅಮೇರಿಕನ ಸಮ್ಮತಿಯಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆ' ಹೀಗೆಂದು 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಅಮೇರಿಕದ (ವಾಶಿಂಗ್ಟನ್) ಬಾತ್ಮೀದಾರರು ಬರೆಯುತ್ತಾರೆ!

'ಚರ್ಚಿಲರ ಹೇಳಿಕೆಯ ಕುರಿತು ವಿಚಾರಮಾಡಲು ಬೇಕಾದಷ್ಟು ಅವಕಾಶವು ಅಮೇರಿಕನರಿಗೆ ದೊರೆತಿದೆ; ಅಮೇರಿಕದಲ್ಲಿರುವ ಬ್ರಿಟಿಷರು ಅತ್ಯಂತ ಮಿತ್ರರೆನಿಸಿದವರು ಕೂಡಾ ಬ್ರಿಟಿಷ್ ಕಾರ್ಯಕಲಾಪ ಮತ್ತು ನಡತೆಯ ವಿಷಯ ವಿಶ್ವಾಸ ಕಳಕೊಳ್ಳುತ್ತಿದ್ದಾರೆ. ಬ್ರಿಟನಿನ ಉತ್ತಮ ಗುಣಗಳನ್ನೇ ತಿಳಿಸಿದ ಹಾಗೂ ಯುದ್ಧ ನಿರ್ವಹಣ ಕಾರ್ಯದಲ್ಲಿ ನ್ಯಾಯವಾದ ಧೋರಣನನ್ನು ವಹಿಸಿದ ಅಮೆರಿಕನ್ ಪತ್ರಿಕೆಗಳು ಮೊದಲಾದವುಗಳ ಅಭಿಪ್ರಾಯವನ್ನೇ ನಾನಿಲ್ಲಿ ತಿಳಿಸುತ್ತೇನೆ' ಎಂಬುದಾಗಿ ಬ್ರಿಟಿಷ್ ಕೂಲಿಗಾರರ ಪತ್ರಿಕೆಯಾದ 'ಡೈಲಿ ಹೆರಾಲ್ಡ್'ನ ಅಮೇರಿಕದ (ನ್ಯೂಯಾರ್ಕ್) ಸುದ್ದಿಗಾರರು ಉಲ್ಲೇಖಿಸಿದ್ದಾರೆ. 'ಭಾರತದ ಸದ್ಯದ ಪರಿಸ್ಥಿತಿಯು ಅತ್ಯಂತ ಸೈನಿಕ ಗಂಡಾಂತರದ್ದಾಗಿದೆ ಮಾತ್ರವಲ್ಲದೆ ನೈತಿಕ ದೃಷ್ಟಿಯಿಂದಲೂ ಕಳಂಕ ಪ್ರಾಯವಿದೆ' ಎಂದು 'ಸಂಡೆ ಟೈಮ್ಸ್' ಪತ್ರಿಕೆಯ ಅಮೆರಿಕದ (ವಾಶಿಂಗ್ಟನ್) ಬಾತ್ಮಿದಾರರ ಬರೆಹವಾಗಿದೆ.

'ಕ್ರಿಪ್ಸರು ಮೊದಲು ಮುಂದಿಟ್ಟ ಸೂಚನೆಗಳನ್ನು ಬಳಿಕ ಹಿಂತೆಗೆದುಕೊಂಡದ್ದರಿಂದ, ಕ್ರಿಪ್ಸ್ ಸಂಧಾನವು ಮುರಿಯಿತು;

ಪತ್ರಿಕೆಗಳ ಮೇಲೆ ಪುನಃ ನಿರ್ಬಂಧ

ಕಾಂಗ್ರೆಸ್ ಚಳವಳಿಕ್ಕೆ ಸಂಬಂಧಿಸಿದ ಸುದ್ದಿ ಚಿತ್ರ, ಫೋಟೋ, ಭಾಷಣ ಮತ್ತು ಹೇಳಿಕೆಗಳನ್ನು ಪ್ರಸಿದ್ಧಿಸುವ ಮೊದಲು ಸ್ಥಳೀಕ ಅಧಿಕಾರಿಗಳಿಗೆ ತೋರಿಸಬೇಕೆಂದೂ ಅವರ ಸಮ್ಮತಿ ಪಡೆದ ವರ್ತಮಾನಗಳನ್ನು ಮಾತ್ರ ಪ್ರಕಟಿಸಬಹುದೆಂದೂ 'ಮದ್ರಾಸು' ಸರಕಾರವು ಒಂದು ಹೊಸ ಆಜ್ಞೆ ಹೊರಡಿಸಿದೆ. ಈ ಹೊಸ ಆಜ್ಞೆ ಪ್ರಕಾರ ಬಾತ್ಮಿದಾರರನ್ನು ರಿಜಿಸ್ಟರ್ ಮಾಡುವ ಆವಶ್ಯಕತೆಯಿಲ್ಲ.

ಜನರ ಮೇಲೆ ವಿಮಾನವೇರಿ ಗುಂಡುಹಾಕಲಾಗಿದೆ.

ಎಂಬ ವಿವರವನ್ನು ಪಂಡಿತ ಕುಂಜ್ರುಗಳುಗಳು ಕೌನ್ಸಿಲ್ ಓಪ್ ಸ್ಟೇಟಿನಲ್ಲಿ ಕೇಳಿದ ಪ್ರಶ್ನೆಗೆ ಡೆಪ್ಯುಟಿ ಕ್ರಮಾಂಡರ್ ಇನ್‌ಚೀಫರು ಸರ್ ಅಲನ್ ಹಾರ್ಟ್ಲೆಯವರು ಉತ್ತರ ಕೊಡುತ್ತಾ ತಿಳಿಸಿದರು. ಪಾಟ್ನಾ ಬಾಗಲಪುರ ಮೊದಲಾದ ಐದು ಕಡೆಗಳಲ್ಲಿ ಗುಂಪುಕೂಡಿದ ಜನರನ್ನು ಚದರಿಸಲು ವಿಮಾನವೇರಿ ಬಂದು ಮಶಿನ್ ಗನ್ನುಗಳ ಮೂಲಕ ಗುಂಡು ಹಾರಿಸಿರುವುದಾಗಿ ಅವರೇ ಒಪ್ಪಿದ್ದಾರೆ.

ಕ್ರಿಪ್ಸ್ ಸಂಧಾನ ಮುರಿದದ್ದೇಕೆ? ಬ್ರಿಟೀಷರೇ ಸೂಚನೆ ಹಿಂತೆಗೆದುಕೊಂಡು

ಎಂಬುದಾಗಿ, ಅಮೇರಿಕದ 'ನೇಶನ್' ಪತ್ರಿಕೆಯಲ್ಲಿ ಅಮೇರಿಕನ್ ಲೇಖಕ ಹಾಗೂ ಪ್ರೊಫೆಸರ್ ಲೂವಿಫಿಶರರೆಂಬವರು ಲೇಖನ ಬರೆದು ತಿಳಿಸಿದ್ದಾರೆ. ಮೊದಲು ಕ್ರಿಪ್ಸರು ಒಪ್ಪಿದ ಸಂಗತಿಗಳನ್ನು, ಕೊನೆಗೆ ಹಿಂತೆಗೆದುಕೊಂಡ ವಿಷಯವು ಅಜಾದರು ಕ್ರಿಪ್ಸರಿಗೆ ಬರೆದ ಪತ್ರದಲ್ಲಿ ಸ್ಪಷ್ಟವಾಗುವುದೆಂದು ಅವರು ತಿಳಿಸಿದ್ದಾರೆ. "ನೀವು ಮೊದಲನೆಯ ಭೇಟಿಕಾಲದಲ್ಲಿ ನಮ್ಮ ಮುಂದಿಟ್ಟ ಸುಂದರ ಚಿತ್ರವು ನಮ್ಮ ಮುಂದೆ ಆಡಿದ ಮಾತುಗಳು ಇಂದು ತೀರಾನಾಶವಾಗಿ ಕಣ್ಮರೆಯಾಗಿವೆ" ಎಂದು ಅಜಾದರು ಬರೆದಿರುವರು. ಹೀಗೆ ಒಟ್ಟಿನಲ್ಲಿ ಬ್ರಿಟಿಷರು ಮಿಲಿಟರಿ ಅಧಿಕಾರಿಗಳ ಸೂಚನೆಯಂತೆ, ಮಾತನ್ನು ಹಿಂತೆಗೆದು ಕೊಂಡಿದ್ದರಿಂದ ಕ್ರಿಪ್ಸ್ ಸಂಧಾನ ಮುರಿಯಿತೆಂಬ ವಿವರದ ಲೇಖನ ಬರೆದಿರುವುದನ್ನು, ರಾಯ್ಟರ್ ಸುದ್ದಿಗಾರನು ಹಿಂದೂದೇಶಕ್ಕೆ ಕಳುಹಿಸದಿದ್ದರೂ, ಅದನ್ನು ಸಿಲೋನ್ ಪತ್ರಿಕೆಯಿಂದ 'ಹಿಂದೂ' ಪತ್ರಿಕೆ ತೆಗೆದುಕೊಂಡು ಪ್ರಸಿದ್ಧಿಸಿದೆ.

ಈ ವಿಷಯ ಕ್ರಿಪ್ಸ್ ಅಜಾದ್ ಪತ್ರ ವ್ಯವಹಾರದಲ್ಲಿ ಸ್ಪಷ್ಟವಾಗುತ್ತದೆ' ಎಂದು ಅಮೆರಿಕದ 'ನೇಶನ್' ಪತ್ರಿಕೆಯಲ್ಲಿ ಅಲ್ಲಿನ ಪ್ರಸಿದ್ಧ ಲೇಖಕರೂ ಪ್ರೊಫೆಸರರೂ ಆದ ಲುಯಿ ಫಿಶರರೆಂಬವರು ಬರೆದು ಕ್ರಿಪ್ಸ್ ಸಂಧಾನದ ಗುಟ್ಟನ್ನು ಅಮೆರಿಕದಲ್ಲಿ ಬಹಿರಂಗ ಮಾಡಿದ್ದಾರೆ. ಅಂತೂ ಮೇಲಿನ ಈ ಮಾತುಗಳಿಂದ, ಭಾರತದಲ್ಲಿ ಬ್ರಿಟಿಷ್ ಪ್ರಭುತ್ವವು ತಳೆದ ಧೋರಣದ ಬಗ್ಗೆ ಅಮೆರಿಕದ ಜನಮತವು ಅನುಕೂಲವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಆದರೆ ರಾಯಿಟರ್ ಸುದ್ದಿ ಸಂಸ್ಥೆಯವರು ಇಂತಹ ಸುದ್ದಿಗಳನ್ನು ಭಾರತಕ್ಕೆ ಕಳುಹಿಸಲಿಲ್ಲ. ಮದ್ರಾಸಿನ 'ಹಿಂದೂ' ಪತ್ರಿಕೆಯು ಸಿಲೋನ್ ಪತ್ರಿಕೆಯಿಂದ ಉದ್ಧರಿಸಿ ಇದನ್ನು ಪ್ರಕಟಿಸಿರುತ್ತದೆ. ಸತ್ಯಾಂಶಗಳನ್ನು, ಜನತಾ ಅಭಿಪ್ರಾಯಗಳನ್ನು ಪ್ರಕಟಿಸಲು ಹೀಗೆ ನಿರ್ಬಂಧವೇಕೋ, ಪ್ರಕಟಿಸಿದರೆ ಆಗುವ ಪ್ರಮಾದವೇನೋ ನಮಗೆ ತಿಳಿಯಲಾರದು! ಅಮೆರಿಕನರ ಈ ಮಾತುಗಳಿಂದ ಬ್ರಿಟಿಷರೂ ಭಾರತೀಯರೂ ಬುದ್ಧಿನೀತಿ ಕಲಿಯತಕ್ಕದ್ದಿದೆ.

ಪೋಲಿಸ್ ವರ್ತನೆಯ ವಿಚಾರಣೆಯಿಲ್ಲ

ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ. ನಿಯೋಗಿಯವರು ಒಂದು ಸೂಚನೆ ತಂದು, ಇತ್ತೀಚೆಗೆ ಪೋಲೀಸರು ಮತ್ತು ಮಿಲಿಟರಿಯವರು ಮಿತಿಮೀರಿ ಮಾಡಿದ ಕೃತ್ಯಗಳ ವಿಚಾರಣೆ ನಡೆಯಬೇಕೆಂದು ಹೇಳಿದ್ದಕ್ಕೆ ವಿಚಾರಣೆಮಾಡಲು ಇದು ಸಮಯವಲ್ಲ ಆದರಿಂದ ತಿಸ್ತು ಕೆಡುತ್ತದೆ; ಎಂದು ಉತ್ತರ ದೊರಕಿತು. ಕೌನ್ಸಿಲ್ ಓಫ್ ಸ್ಟೇಟಿನಲ್ಲಿಯೂ ಇದೇ ಉತ್ತರ ಬಂತು.

ಹರದಯಾಳನಾಗರ ನಿಧನ

ಬಂಗಾಳದ ಕಾಂಗ್ರೆಸು ಭಕ್ತರೂ, ಮುಂದಾಳುಗಳೂ ಶ್ರೀ. ಹರದಯಾಳನಾಗರು ತನ್ನ 90ನೆಯ ವರ್ಷ ಪ್ರಾಯದಲ್ಲಿ ದೈವಾಧೀನರಾದರು.

ಸಾವರ್ಕರ್ ಹೇಳುತ್ತಾರೆ

'ಭಾರತವನ್ನು ಸ್ವತಂತ್ರರಾಷ್ಟ್ರವೆಂದು ಜಗತ್ತು ಮಾನ್ಯ ಮಾಡಬೇಕೆಂದು ಹಿಂದುಸ್ಥಾನವು ಏಕಮುಖದಿಂದ ಹೇಳಿರುವುದನ್ನು ಬ್ರಿಟಿಷರು ಒಪ್ಪಲಿ, ಒಪ್ಪದಿರಲಿ, ಭಾರತೀಯರು ರಾಷ್ಟ್ರೀಯ ಸರಕಾರ ಸ್ಥಾಪಿಸಲು ಯತ್ನಿಸಬೇಕು, ಆದರೆ ಬ್ರಿಟನು ಏನು ಮಾಡಿದರೂ ನಮ್ಮ ಬೇಡಿಕೆಯನ್ನು ಪೂರ್ಣ ಮಾಡುವುದಿಲ್ಲ' ಎಂದು ಸಾವರ್ಕರರು ದಿಲ್ಲಿ ಸಂಧಾನದ ಕುರಿತು ಹೇಳಿದರು.

'ಬ್ರಿಟಿಷ್ ಸಾಮ್ರಾಜ್ಯದ ಬಿರುದುಗಳನ್ನು ಧರಿಸಲಾರೆ'

ವೈಸರಾಯರಿಗೆ ಅಲ್ಲಾಭಕ್ಷರ ಪತ್ರ

ಸಿಂಧಿನ ಪ್ರಧಾನ ಮಂತ್ರಿ ಅಲ್ಲಾಭಕ್ಷರು ತನ್ನ ಖಾನಬಹದ್ದೂರ್ ಮತ್ತು ಓ. ಬಿ. ಇ. ಬಿರುದುಗಳನ್ನು ಹಿಂತಿರುಗಿ ಕಳುಹಿಸುತ್ತಾ, ವೈಸರಾಯರಿಗೆ ಪತ್ರ ಬರೆದು, ಅದರಲ್ಲಿ ಬ್ರಿಟಿಷರು ಭಾರತದ ವಿಷಯ ತಳೆದ ದಬ್ಬಾಳಿಕೆಯ ಧೋರಣದಿಂದಾಗಿ ಬ್ರಿಟಿಷ್ ಸಾಮ್ರಾಜ್ಯದ ಬಿರುಗಳನ್ನು ತಾನು ಧರಿಸಲಾರೆನೆಂದೂ, ಅನೇಕ ಕಾಲದಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹಿಂದೂದೇಶವನ್ನು ಮಿತ್ರರು ಯುದ್ಧ ಆರಂಭವಾದ ಮೇಲಾದರೂ, ತಾವು ಸಾರುವ ಸ್ವಾತಂತ್ರ್ಯ ಸಾಧನೆಯ ಮಾತಿಗನುಗುಣವಾಗಿ ಸ್ವತಂತ್ರ ಮಾಡದಿರುವ ವಿಷಯ ವಿಷಾದಪಡುತ್ತೇನೆಂದೂ ಭಾರತವು ಸ್ವತಂತ್ರವಾಗಲು ಪೂರ್ಣ ಯೋಗ್ಯವಿದೆಯೆಂದೂ ಆದರೆ ಬ್ರಿಟಿಷರು ಈ ವೇಗವನ್ನು ದಾಸ್ಯದಲ್ಲಿಡಲು ಪ್ರಯತ್ನಿಸುತ್ತಾ, ಜಾತಿ ಭೇದದ ಭೇದ ನೀತಿಯನ್ನು ಪಯೋಗಿಸಿ ಸಾಮ್ರಾಜ್ಯ ಲಾಲಸೆಯ ತೃಷ್ಣೆಯನ್ನು ಬೆಳೆಸುತ್ತಿರುವರೆಂದೂ ಚರ್ಚಿಲರ ಇತ್ತೀಚಿನ ಭಾಷಣದಿಂದ ತಾನು ತೀರಾ ಅಸಂತುಷ್ಟನಾಗಿರುವೆನೆಂದೂ ಆದ್ದರಿಂದ ಬ್ರಿಟಿಷ್ ಸರಕಾರವು ಕೊಟ್ಟ ಬಿರುದುಗಳನ್ನು ಹಿಂದೆ ಕಳುಹಿಸುತ್ತಿರುವೆನೆಂದೂ ತಿಳಿಸಿರುವರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಇಡೀ ಜಿಲ್ಲೆಯಲ್ಲಿ ಸಭೆ ಕೂಟಗಳಿಗೆ ಮೆರವಣಿಗೆಗಳಿಗೆ ನಿರ್ಬಂಧ—

— ಸಾರ್ವಜನಿಕ ರಕ್ಷಣೆ ಮತ್ತು ಶಿಸ್ತು ಕ್ರಮಗಳ ಪಾಲನೆಯ ಬಗ್ಗೆ ಡಿಫೆನ್ಸ್ ಓಫ್ ಇಂಡಿಯಾ ನಿಬಂಧನೆಗಳ ೫೬ (೧)ನೇ ನಿಯಮದಂತೆ ಅಧಿಕಾರ ಹೊಂದಿದ ದ. ಕ. ಜಿಲ್ಲಾ ಮೆಜಿಸ್ಟ್ರೇಟರು, ತಮ್ಮ ಯಾ ಸಬ್ ಡಿವಿಜನಲ್ ಮೆಜಿಸ್ಟ್ರೇಟರಿಂದ ಬರಹ ಮೂಲಕ ಅಪ್ಪಣೆ ಪಡೆದ ಹೊರತು ಹಾಗೂ ನಮೂದಿಸಲಾದ ಶರತ್ತುಗಳಿಗೆ ಒಳಪಟ್ಟ ಹೊರತು, ಇದೇ ಸಪ್ಟಂಬರ ತಾ. ೧೪ರಿಂದ ೩ ತಿಂಗಳು ಕಾಲ ಈ ಜಿಲ್ಲೆಯ ಯಾವ ಕಡೆಯಲ್ಲಿಯೂ ಸಾರ್ವಜನಿಕ ಮೆರವಣಿಗೆ, ಸಭೆ ಯಾ ಕೂಟ ಜರಗಕೂಡದೆಂದು ನಿರ್ಬಂಧಕಾಜ್ಞೆ ಹೊರಡಿಸಿದ್ದಾರೆ.

ಜಾಮೀನಿನಲ್ಲಿ ಬಿಡುಗಡೆ

ತಾ. ೧೯ರಂದು ಕಾಂಗ್ರೆಸ್ ಧ್ವಜದಡಿಯಲ್ಲಿ ಪೆಟ್ಟು ತಿಂದು ಬಿದ್ದು ಶಿಕ್ಷೆಗೆ ಗುರಿಯಾದ ಕೆನರಾ ಹೈಸ್ಕೂಲ್ ಅಧ್ಯಾಪಕ ಶ್ರೀ ಈಶ್ವರ ಭಟ್ಟರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ

ಅಂಗಡಿಗಳ ಝಡ್ತಿ

ಚಿಮಿಣಿ ಎಣ್ಣೆ ಮತ್ತು ಸಕ್ಕರೆ ಇವುಗಳು ದೊರಕುವುದು ಇತ್ತೀಚೆಗೆ ಬಹಳ ಕಷ್ಟವಾದದ್ದರಿಂದ, ಸರಕಾರೀ ಅಧಿಕಾರಿಗಳು ಆ ವಿಷಯ ತನಿಖೆ ನಡೆಸುವ ಸಲುವಾಗಿ ಕೆಲವು ಮನೆ ಮತ್ತು ಅಂಗಡಿಗಳನ್ನು ಶೋಧಿಸಲು ಮಂಗಳೂರಲ್ಲಿ ಕೆಲವು ಟಿನ್ ಎಣ್ಣೆ ಮತ್ತು ಕೆಲವು ಗೋಣಿ ಸಕ್ಕರೆ ಸಿಕ್ಕಿತು ಕಳೆದ ವಾರ ಇಲ್ಲಿಯ ಡಿವಿಜನಲ್ ಮ್ಯಾಜಿಸ್ಟ್ರೇಟರು ಮತ್ತು ಪೋಲೀಸ್ ಇನಸ್ಪೆಕ್ಟರು ಪೋಲೀಸ್ ಕೌನ್ಸ್ಟೇಬಲರೊಡನೆ ಜಡ್ತಿ ಮಾಡಲು, ಬಂದರದಲ್ಲಿ ಒಂದು ಅಂಗಡಿಯಲ್ಲಿ ಆಗ ತಾನೇ ಬಾಯಿ ತೆರೆದ ೩೨ ಖಾಲಿ ಚಿಮಿಣಿ ಎಣ್ಣೆ ಡಬ್ಬಿಗಳೂ ಸುಮಾರು ೨೦ ಟಿನ್ ಎಣ್ಣೆ ತುಂಬಿದ ಡಬ್ಬಿಗಳೂ ದೊರೆತುವೆಂದು ಗೊತ್ತಾಗಿ, ಆ ಸಂಬಂಧ ಇಬ್ಬರ ಕೈದಾಗಿದೆ ಬೇರೊಂದು ಗೋಡೌನಿನಿಂದ ಸಾಗುತ್ತಿದ್ದ ೩ ಗೋಣಿ ಸಕ್ಕರೆಯನ್ನು ಹಿಡಿದು ೫ ಮಂದಿಯ ಕೈದಾಗಿದೆ. ಇವರೆಲ್ಲರನ್ನೂ ಜಾಮೀನಿನ ಮೇಲೆ ಬಿಡಲಾಗಿದೆ.

ಈಗ ನಗರದಲ್ಲಿ ಕೆಲವು ವ್ಯಾಪಾರಿಗಳು ಮಿತಿಯಾದ ಬೆಲೆಗೆ ಎಣ್ಣೆಯನ್ನು ಮಾರತೊಡಗಿದ್ದಾರೆ.

ಗುರುಪುರದಲ್ಲಿ ಕಳೆದ ತಾ. ೨೩ರಲ್ಲಿ ೪ ಅಂಗಡಿ ಝಡ್ತಿ ಮಾಡಿ ಸುಮಾರು ೨೭೩ ಟಿನ್ ಎಣ್ಣೆಯನ್ನು ವಶಮಾಡಿಕೊಂಡರೆಂದೂ ಕಾಸರಗೋಡು ಕಾರ್ಕಳ ಮೊದಲಾದ ಕಡೆಗಳಲ್ಲಿಯೂ ಝಡ್ತಿಯಾಗಿವೆಯೆಂದೂ ತಿಳಿದಿದೆ

ತಾ ೩೮ರಂದು ಮಂಗಳೂರಲ್ಲಿ ಕೈಗಾಡಿಯಲ್ಲಿ ಮೂರು ಚೀಲ ಸಕ್ಕರೆ ಸಾಗಿಸುವುದನ್ನು ಪೋಲೀಸರು ಹಿಡಿದು, ಈ ಸಂಬಂಧದಲ್ಲಿ ಐದು ಮಂದಿಯನ್ನು ಬಂಧಿಸಿದರೆಂದೂ, ಕೊಡಲೇ ಅವರ ಬಿಡುಗಡೆಯಾಯಿತೆಂದೂ ತಿಳಿಯುತ್ತದೆ.

ಶಾಲಾ ಅಧಿಕಾರಿಗಳ ಎಚ್ಚರಿಕೆ

ಮುಷ್ಕರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ರಕ್ಷಕರಿಗೆ ಶಾಲಾ ಅಧಿಕಾರಿಗಳು ಎಚ್ಚರಿಕೆಯ ಮಾತುಗಳನ್ನು ಕಳಿಸಿರುವರು. 'ನಿಮ್ಮ ಹುಡುಗನ ಚಟುವಟಿಕೆಯ ಕುರಿತು ನಿಮಗೆ ತಿಳಿಸುವುದು ಅವಶ್ಯವಿದೆ, ಸರಕಾರವು ಈ ಚಟುವಟಿಕೆಗಳ ಕುರಿತು ಬಲವಾದ ಕಾರ್ಯಕ್ರಮ ಕೈಗೊಳ್ಳುವುದು. ವಿದ್ಯಾರ್ಥಿವೇತನ, ಅರ್ಧ ಸಂಬಳ ಪಡೆಯುವ ಹುಡುಗರಿಂದ ಅವುಗಳನ್ನು ತೆಗೆದುಹಾಕಲಾಗುವುದು. ಸರಕಾರವು ದಂಡ ಹೊರಿಸಬಹುದು; ಹಾಜರಿ ತೆಗೆದುಹಾಕಬಹುದು ಮತ್ತು ದೀರ್ಘ ಕಾಲ ಗೈರಹಾಜರಾದರೆ ಹಾಜರುಪಟ್ಟಿಯಿಂದ ಅವರ ಹೆಸರನ್ನು ತೆಗೆಯಲಾಗುವುದು' ಎಂದು ಹೇಳಲಾಗಿದೆ.

೭ಳನೆಯ ಚರಖಾ ಜಯಂತಿ ಕಾಣಿಕೆ

ಈ ವರ್ಷ, ಚರಖಾ ಜಯಂತಿ ಸಮಯದಲ್ಲಿ ಅಂದರೆ ಅಕ್ಟೋಬರ ೭ನೆಯ ತಾರೀಕು ವರೆಗೆ ಎಲ್ಲ ಕಡೆಯಲ್ಲಿ ಖಾದಿ ಕಾರ್ಯಕ್ಕಾಗಿ ಧನಸಹಾಯ ಕೂಡಿಸತಕ್ಕದ್ದೆಂದು ಈ ಮೊದಲೇ (ಪ್ರಕಟವಾದುದು) ಮಹಾ ಜನರ ತಿಳುವಳಿಕೆಗೆ ಬಂದಿರಬಹುದು. ಖಾದಿ ಕಾರ್ಯದ ವಿಸ್ತರಣೆಯು ಈಗಿನ ಸನ್ನಿವೇಶದಲ್ಲಿ ಎಷ್ಟು ಮಹತ್ವದ್ದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ನಮ್ಮ ಜಿಲ್ಲೆಯಿಂದಲೂ ಸಾಧ್ಯವಿದ್ದಷ್ಟು ಹಣವನ್ನು ಒಟ್ಟುಗೂಡಿಸಿ ಕಳಿಸಿಕೊಡುವರೆ ಜಿಲ್ಲೆಯ ಮಹಾ ಜನರೆಲ್ಲರೂ ನೆರವಾಗಬೇಕಾಗಿ ವಿನಂತಿ. ವಂತಿಗೆ ಹಣವನ್ನು ಕೊಡಿಯಾಲ ಬೈಲಲ್ಲಿರುವ ಖಾದಿ ಭಂಡಾರದಲ್ಲಿ ಮತ್ತು ಮಂಗಳೂರು ಸ್ವದೇಶಿ ಸ್ಟೋರಿನಲ್ಲಿ ಕೊಟ್ಟು ಪಾವತಿ ಪಡಕೊಳ್ಳಬಹುದು, ಎಂದು ಶ್ರೀ ಬಿ. ನಾರಾಯಣ ರೈ, ಮೆನೇಜರ್, ಖಾದಿ ಭಂಡಾರ, ಮಂಗಳೂರು, ಇವರು ತಿಳಿಸುತ್ತಾರೆ.

ವಿದ್ಯಾರ್ಥಿ ಸಭೆ

ಕೆನರಾ ಹೈಸ್ಕೂಲಲ್ಲಿ ಜರಗಿದ ವಿದ್ಯಾರ್ಥಿ ಸಭೆಯಲ್ಲಿ ವಾಕ್ ಔಟ್ ಮಾಡಿದ ಮಂದಿ ಕೇವಲ ೧೨ ಮಾತ್ರವಲ್ಲ, ಅದಕ್ಕಿಂತ ಹೆಚ್ಚಾಗಿತ್ತು ಎಂದು ಮಂಗಳೂರು ರಾಯಿಸ್ಟ್ ಪಾರ್ಟಿಯವರ ಹೇಳಿಕೆಯಿದೆ.

ನೇಮಕ— ವರ್ಗಾವರ್ಗಿ

ಶ್ರೀ ನವಣಾಲ್ ಕೃಷ್ಣರಾವ್, ಬಿ. ಎ. ಆನರ್ಸ್ ಇವರು ದ. ಕ. ಜಿಲ್ಲೆಯ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿಯೂ, ಶ್ರೀ ಎಮ್. ಆರ್. ಶಂಕರರಾವ್, ಎಮ್. ಎ. ಇವರು ಮಲಬಾರಿನ ಕ. ಟೇಕ್ಸ ಆಫೀಸರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಮಲಬಾರಿನ ಕ. ಟೇಕ್ಸ್ ಆಫೀಸರರಾಗಿದ್ದ ಶ್ರೀ ಯು. ಕುಮಾರಯ್ಯ, ಬಿ. ಎ. ಇವರು ತಿನ್ನವೆಲ್ಲಿ ಜಿಲ್ಲೆಯಲ್ಲಿ ಆಕ್ಟಿಂಗ್ ಡಿಪ್ಯುಟಿ ಕಲೆಕ್ಟರರಾಗಿ ನೇಮಕಪಟ್ಟಿದ್ದಾರೆ.

ಜಿಲ್ಲಾ ರಿಜಿಸ್ಟ್ರಾರರಾಗಿದ್ದ ಶ್ರೀ ಎಮ್. ರಾಮಪ್ಪ, ಬಿ. ಎ. ಇವರು ಕೆಲಸದಿಂದ ನಿವೃತ್ತರಾಗಿರುವುದರಿಂದ ಶ್ರೀ ವಿಶ್ವನಾಥರಾವ್ ಬಿ. ಎ. ಇವರು ದ. ಕ. ಜಿಲ್ಲಾ ರಿಜಿಸ್ಟ್ರಾರರಾಗಿ ನೇಮಕಪಟ್ಟಿದ್ದಾರೆ.

ಮಂಜೇಶ್ವರ

ಚಿಮಿಣಿ ಎಣ್ಣೆ ಅಪಹರಣ

ಮಂಜೇಶ್ವರದಿಂದ ಮಂಗಳೂರಿಗೆ ಬರುತ್ತಿದ್ದ ಸುಮಾರು ೨೪ ಚಿಮಿಣಿ ಎಣ್ಣೆ ಡಬ್ಬಿಯುಳ್ಳ ಒಂದು ಗಾಡಿಯನ್ನು ಜನರು ಮುತ್ತಿ ಎಣ್ಣೆ ತೆಗೆದುಕೊಂಡರೆಂದು ತಿಳಿದುಬಂದಿದೆ.

ಕಾಸರಗೋಡು

ಶಿಕ್ಷೆ—ಬಂಧನ

ಹಿಂದಿನವಾರ ಬಂಧಿತರಾದವರ ವಿಚಾರಣೆಯಾಗಿ ಶ್ರೀ ಮೇಲ್ತೊಟ್ಟು ನಾರಾಯಣ ನಾಯರರಿಗೆ ಒಂದು ವರ್ಷ ಕಠಿನಶಿಕ್ಷೆ, ಮಾಜಿ ಒನರರಿ ಬೆಂಚ್ ಮ್ಯಾಜಿಸ್ಟ್ರೇಟ್ ಶ್ರೀ ಬಿ ದೇವಪ್ಪಾಳ್ವರಿಗೆ ೯ ತಿಂಗಳ ಕ ಶಿಕ್ಷೆ, ಶ್ರೀ ಇ. ಮಾಧವನ್ ನಾಯರರಿಗೆ ೯ ತಿಂಗಳ ಕಠಿನ ಶಿಕ್ಷೆ, ಶ್ರೀ ಕುಳೂರು ರಾಮದಾಸ ನಾಯ್ಕರಿಗೆ ೬ ತಿಂಗಳ ಕಠಿನ ಶಿಕ್ಷೆ, ಶ್ರೀ ಕೆ. ಟಿ. ಶಂಕರರಿಗೆ ೫ ತಿಂಗಳ ಕಠಿನ ಶಿಕ್ಷೆ, ಶ್ರೀ ಪಿ. ನಾರಾಯಣ ನಾಯರರಿಗೆ ೫ ತಿಂಗಳ ಕಠಿನ ಶಿಕ್ಷೆ, ವಿಧಿಸಲಾಗಿದೆ. ಇವರನ್ನು ಬಳ್ಳಾರಿ ಜಿಲ್ಲೆಯ ಆಲಿಪುರಂ ಜೈಲಿಗೆ ಕಳುಹಿಸಿರುವುದಾಗಿ ತಿಳಿಯುತ್ತದೆ ಶ್ರೀಗಳಾದ ಕೆ. ದೇವದಾಸ ಕಾಮತ್, ಪಿ. ಅಚ್ಯುತ, ಪಿ. ವಿ. ಕೇಶವ ಇವರನ್ನೂ ಬಂಧಿಸಲಾಗಿದೆ.

ಬಂಧನ

ಕಾಸರಗೋಡಿನ ಕಾಂಗ್ರೆಸ ಚಳವಳಿಯ ಏಳನೆಯ ಸರ್ವಾಧಿಕಾರಿ ಶ್ರೀ. ಸಿ ಕೆ. ಶಂಕರನ್ ನಂಬಿಯಾರರನ್ನು ಶ್ರೀ. ಸಿ. ಸಿ. ಕುಂಞಂಬುನಾಯರ್ ಎಂಬವರನ್ನು ಚರ್ವತ್ತೂರಿನಲ್ಲಿ ಡಿಫೆನ್ಸ್ ಕಾನೂನಿನನ್ವಯ ಕಾಸರಗೋಡಲ್ಲಿ ಸೆರೆಹಿಡಿದಿರುವರು.

ಶ್ರೀ ರಾಮದಾಸ ನಾಯ್ಕರನ್ನು ರಾಜ್ಯರಕ್ಷಣಾ ಕಾನೂನಿನನ್ವಯ ಸೆರೆಹಿಡಿದರು.

ಚಿಮಿಣಿ ಎಣ್ಣೆಯ ಜಡ್ತಿ

ಇಲ್ಲಿನ ಜನರಿಗೆ ಸಾಕಾದಷ್ಟು ಸೀಮೆಯೆಣ್ಣೆ, ನಿಯಂತ್ರಣದ ಪ್ರಮಾಣದಲ್ಲೂ ಸಿಕ್ಕದೆ ಇದ್ದುದರಿಂದ ಅನಾನುಕೂಲತೆಯನ್ನು ಹೋಗಲಾಡಿಸುವ ಉದ್ದೇಶದಿಂದ ತಹಶಿಲ್ದಾರ್ ಜನಾಬ್ ಖಳ್ಳಿಬ್ಯಾರಿಯವರು ಇಲ್ಲಿನ ಕೆರೋಸಿನ್ ಏಜೆಂಟರ ಡಿಪೋವನ್ನು ಜಡ್ತಿಮಾಡಿ ಇಲ್ಲಿ ಇರಬೇಕಾಗಿದ್ದ ಪ್ರಮಾಣಕ್ಕಿಂತಲೂ ಮಿಕ್ಕಿ ಇದ್ದ ಎಣ್ಣೆಗೆ ಮುಟ್ಟುಗೋಲು ಹಾಕಿದ್ದಾರೆ. ಸಕ್ಕರೆಯ ಅಭಾವವೂ ಕೂಡ ಇದರಂತೆ ಗಲಭೆಗೆ ಕಾರಣವಾಗಿದೆ.

ರಾಜಿನಾಮೆ

ಇಲ್ಲಿನ ಪಂಚಾಯತಬೋರ್ಡಿನ ಮೆಂಬರರಾದ ಡಾ. ಪಿ. ಎನ್. ಭಟ್ ಅವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಬರೆದು ಕೊಟ್ಟಿದ್ದಾರೆ.

ಇಲ್ಲಿನ ಮೆಜಿಸ್ಟ್ರೇಟರ ಕೋರ್ಟಿನ ಒಳಗೆ ಮೂರು ಜನ ಕಾಂಗ್ರೆಸ್ ಸ್ವಯಂಸೇವಕರು ಸುಗ್ಗಿ ಜೈಕಾರವನ್ನು ಹಾಕಿ ರಾಜಿಕೊಡಿರೆಂದು ಮೆಜಿಸ್ಟ್ರೇಟರನ್ನು ವಿನಂತಿಮಾಡಿಕೊಂಡರು. ಅವರನ್ನು ಕೂಡಲೆ ಸೆರೆಹಿಡಿದು ರಿಮಾಂಡಿನಲ್ಲಿರಿಸಲಾಗಿದೆ. ತಾ ೨೨ರಲ್ಲಿ ಶ್ರೀ ಕೆ. ವಿಟ್ಠಪ್ಪ ಕಾಮತ್ ಎಂಬವರು ತಾಲೂಕು ಕಚೇರಿಯೊಳಕ್ಕೆ ಹೋಗಿ ಜೈಕಾರವನ್ನು ಹಾಕಿದರು. ಅವರನ್ನು ಬಂಧಿಸಿ ರಿಮಾಂಡಿನಲ್ಲಿರಿಸಿದ್ದಾರೆ.

ಸುರತ್ಕಲ್ ಅಗ್ಗಿದಕರಿ ಯೈಡೆಡ್ ಶಾಲೆ

ಇಲ್ಲಿಯ ತಿಂಗಳ ಹಬ್ಬವು ತಾ ೧೯ರಂದು ಶ್ರೀ ಎಸ್. ಸೋಮಸುಂದರರವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳಿಗೆ ಇನಾಂ ಹಂಚಿದ ಮೇಲೆ ಸಭೆಯು ಮುಕ್ತಾಯವಾಯಿತು.

ಬಂಟ್ವಾಳ

ಶಿಕ್ಷೆ

ಬಂಟ್ವಾಳದ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಪಿಕೆಟ್ ಮಾಡಿದ ಪತ್ತುಮುಡಿ ವಾಸುದೇವಯ್ಯ (ಮಾಜಿ ಪ್ಯಾನುಭಾಗ) ಅವರ ವಿಚಾರಣೆ ನಡೆದು ಕ್ರಿಮಿನಲ್ ಕಾನೂನು ಪ್ರಕಾರ ಅವರಿಗೆ ೬ ತಿಂಗಳ ಕಠಿನ ಶಿಕ್ಷೆ ವಿಧಿಸಿದೆ.

ಉಜಿರೆ

ಇಲ್ಲಿಯ ಶ್ರೀ ಜನಾರ್ಧನ ಎಯಿಡೆಡ್ ಶಾಲೆಯ ವಿದ್ಯಾರ್ಥಿಗಳ ಹೆತ್ತವರ ದ್ವಿತೀಯ ಮಹಾಸಭೆಯು ಸದ್ರಿ ಶಾಲಾ ಮಠದಲ್ಲಿ ತಾ ೨೩ರಲ್ಲಿ ಶ್ರೀ. ಬಿ ಎ ಮೂಡಣ್ಣಾಯರ ಅಧ್ಯಕ್ಷತೆಯಲ್ಲಿ ಸೇರಿತು ಶ್ರೀಗಳ ವ ಕೆ. ಎಸ್ ಕಾಮತ್, ಎಂ. ಪಿ. ಕಾಮತ್, ಮೊದಲಾದವರು ಭಾಷಣವಿತ್ತರು.

ಕಾರ್ಕಳ

ಸಭೆ ಸಮಾಚಾರಗಳು

ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರಿಗೆ ತುಟ್ಟಿ ಭತ್ತೆಯನ್ನು ಕೊಡುವಂತೆ ಸರಕಾರವು ಬೋರ್ಡನ್ನು ಒತ್ತಾಯಿಸ ಬೇಕೆಂದು ಕೇಳಿಕೊಳ್ಳುವ ಒಂದು ಠರಾವು ಈ ಉಪಾಧ್ಯಾಯರ ತಾಲೂಕು ಯೂನಿಯನಿನ ಮೊನ್ನೆಯ ಸಭೆಯಲ್ಲಿ ಮಂಜೂರಾಗಿದೆ ಶ್ರೀ. ಎ. ಸೀತಾರಾಮರಾಯರು ಈ ಸಭೆಯ ಅಧ್ಯಕ್ಷರಾಗಿದ್ದರು ಕರ್ನಾಟಕ ಸಾಹಿತ್ಯ ಸಂಘದ ಓರಿದು ಸಭೆ ಕಾಸ್ಮೋಪೊಲಿಟನ್ ಕ್ಲಬ್ಬಿನಲ್ಲಿ ಕೂಡಿ ಶ್ರೀ ಯಂ ಕೃಷ್ಣರಾಯರು ಸಾಹಿತ್ಯ ಮತ್ತು ಸಂಗೀತದ ಕುರಿತು ಭಾಷಣವನ್ನಿತ್ತರು ಅನಂತರ ಶ್ರೀ. ಕೆ ಸದಾಶಿವರಾಯರ ಸುಶ್ರಾವ್ಯ ಸಂಗೀತ ಖಚೇರಿ ನಡೆಯಿತು.

ಹರಿಜನ ಸಪ್ತಾಹ

ಹಿಂದಿನ ವರ್ಷಗಳಂತೆ ಈ ವರ್ಷವು ಇಲ್ಲಿ ಸ್ಥಳೀಯ ಹರಿಜನ ಸೇವಾ ಸಂಘದ ನೆಲೆಯಲ್ಲಿ ಹರಿಜನ ಸಪ್ತಾಹವು ಆಚರಿಸಲ್ಪಟ್ಟಿದೆ. ಆದರೆ ಊರಿನಲ್ಲಿ ಸಾರ್ವಜನಿಕ ಸಭೆ ಮೆರವಣಿಗೆಗಳಿಗೆ ಸರಕಾರ ನಿರ್ಬಂಧವಿರುವ ಕಾರಣದಿಂದ ತಾ. ೨—೧೦—೪೨ರ ದಿನ ಗಾಂಧಿ ಜಯಂತಿ ಸಂಬಂಧ ಈ ಸಪ್ತಾಹದ ಅಂಗವಾಗಿ ನಡೆಯಬೇಕಾದ ಸಭೆಯನ್ನು ಹರಿಜನ ಸೇವಾ ಸಂಘವು ಮುನ್ನಾ ಮಾಡಿದೆ.

ಶಾಲೆಗೆ ಸಂದರ್ಶನ

ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ವೆಂಕಟಸುಬ್ಬರಾವ್‌ರವರು ತಾ. ೨೪ರ ದಿನ ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಗೆ ಅನಿರೀಕ್ಷಿತ ಸಂದರ್ಶನೆಯನ್ನಿತ್ತು, ಅದರ ಕಾರ್ಯಕಲಾಪ ಮತ್ತು ಪ್ರಗತಿಯ ಕುರಿತು ತಮ್ಮ ಸಂತೋಷವನ್ನು ವ್ಯಕ್ತ ಮಾಡಿದ್ದಾರೆ.

ಉಡುಪಿ

ಎಯಿಡೆಡ್ ಶಾಲಾ ಮಾಸ್ತರುಗಳಿಗೆ ತುಟ್ಟಿ ಭತ್ತೆ

ಇತ್ತೀಚೆಗೆ ಜರಗಿದ ಉಡುಪಿ ತಾಲೂಕು ಎಯಿಡೆಡ್ ಶಾಲಾ ಮಾಸ್ತರುಗಳ ಯೂನಿಯನ್ ಮಹಾಸಭೆಯಲ್ಲಿ ಖಾಸಗಿ ಶಾಲಾ ಅಧ್ಯಾಪಕ ಅಧ್ಯಾಪಿಕೆಯರಿಗೆ ಯುದ್ಧ ಮುಗಿಯುವ ತನಕವಾದರೂ ಅವರವರ ಗ್ರೇಡುಗಳನ್ನು ಲಕ್ಷಿಸದೆ ಸರಾಸರಿ ತಿಂಗಳೊಂದರ ನಾಲ್ಕು ರೂಪಾಯಿಯಂತೆ ತುಟ್ಟಿ ಭತ್ತೆ/ಗ್ರಾಂಟಿನೊಂದಿಗೆ ಸೇರಿಸಿ ಕೊಡುವಂತೆ ಸರಕಾರವನ್ನು ಪ್ರಾರ್ಥಿಸಲಾಯಿತು. ತ್ರೈಮಾಸಿಕ ಗ್ರಾಂಟಿನ ಬದಲಾಗಿ ಪ್ರತಿ ತಿಂಗಳಲ್ಲೂ ಗ್ರಾಂಟ್ ಬಟ್ವಾಡೆಯ ಏರ್ಪಾಡು ಶಾಲಾ ದಿನಗಳನ್ನು ೨೨೦ ರಿಂದ ೨೦೦ಕ್ಕೆ ಇಳಿಸುವುದು, ಎಂಟನೆ ಇಯತ್ತೆಯ ಸರಕಾರೀ ಪರೀಕ್ಷೆಗೆ ಇಂಗ್ಲಿಷನ್ನು ಐಚ್ಛಿಕ ವಿಷಯವಾಗಿರಿಸಿ ಅದರಲ್ಲಿ ತೇರ್ಗಡೆ ಹೊಂದಿದವರಿಗೆ ನಿರಾತಂಕವಾಗಿ ಹ್ಯಾಸ್ಕೂಲು ಕ್ಲಾಸುಗಳಿಗೆ ಪ್ರವೇಶ ದೊರಯುವಂತಾಗುವ ಇತ್ಯಾದಿ ಠರಾವುಗಳಾದುವು. ತದನಂತರ ಕಾರ್ಯಕಾರೀ ಮಂಡಳಿಯ ಚುನಾವಣೆ ನಡೆಯಿತು ಶಾಲಾಸೀನಿಯರ್ ಡಿ. ಇನ್ಸ್‌ಪೆಕ್ಟರ್ ಶ್ರೀ ಸಂಜೀವ ಭಟ್ಟರು ಅಧ್ಯಕ್ಷತೆ ವಹಿಸಿದ್ದರು.

'ನವಯುಗ' ಸಂಪಾದಕರ ಕೈದು

ಉಡುಪಿ 'ನವಯುಗ' ವಾರಪತ್ರಿಕೆಯ ಸಂಪಾದಕರಾದ ಶ್ರೀ ಕೆ ಕೆ ಶೆಟ್ಟರನ್ನು ನಿರ್ಬಂಧಕಾಜ್ಞೆ ಮೀರಿದ ಅಪಾದನೆ ಮೇರೆ ಬಂಧಿಸಲಾಗಿದೆ. ಶ್ರೀ ಹಂಗಾಳ ಲಕ್ಷ್ಮೀನಾರಾಯಣ ನಾಯಕರನ್ನೂ ಇದೇ ಅಪಾದನೆಯಲ್ಲಿ ಕೈದುಮಾಡಿರುತ್ತದೆ.

ಕುಂದಾಪುರ

ರಾಜಿನಾಮೆ

ಕುಂದಾಪುರ ಡಿವಿಜನಿನ ನೇಶನಲ್ ವಾರ್ ಫ್ರಂಟಿನ ಒನರರಿ ಆರ್ಗನೈಜರರಾದ ಶ್ರೀ ಕೆ ಎಲ್ ಭಂಡಾರಿ ಅವರು ತಮ್ಮ ಸ್ಥಾನಕ್ಕೆ ರಾಜಿನಾಮಾ ಇತ್ತಿರುವರೆಂದು ತಿಳಿಯುತ್ತದೆ

ಅಕ್ಕಿ ಗಿರಣಿ ಲೂಟಿ

ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದ ಕಂಡ್ಲೂರಲ್ಲಿ ೧೪ನೆಯ ತಾರೀಕಿನಂದು ರಾತ್ರಿ ಸುಮಾರು ೩೦೦ ಒಕ್ಕಲರು ಸೇರಿ ಒಂದು ಅಕ್ಕಿಯ ಗಿರಣಿಯನ್ನು ಆಕ್ರಮಿಸಿ ಅಕ್ಕಿ ಚೀಲ ಚಿಮಿಣಿ ಎಣ್ಣೆಗಳನ್ನು ಒಯ್ದುದಲ್ಲದೆ, ಗಿರಣಿಯ ಕೆಲವು ಭಾಗಗಳನ್ನು ನಾಶಪಡಿಸಿರುವರೆಂದೂ ತಿಳಿಯುತ್ತದೆ

ಬೈಂದೂರು

ಪುನಃ ಶಿಕ್ಷೆ

ಬೈಂದೂರಲ್ಲಿ ಸಪ್ಟಂಬರ ೪ರಂದು ಒಂದಿಷ್ಟು ಟೆಲಿಗ್ರಾಫ್ ತಂತಿ ಕಡಿದ ಆರೋಪದಲ್ಲಿ ೩೦ ಛಡಿ ಏಟುಗಳ ಶಿಕ್ಷೆಗೆ ಗುರಿಯಾದ ಐದು ಮಂದಿಯನ್ನು ತಿರುಗಿ ಕುಂದಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರು, ಕಳ್ಳಿನಂಗಡಿಯನ್ನು ಲೂಟಿಮಾಡಿದ ಆರೋಪ ಪ್ರಕಾರ ಬೈಂದೂರಲ್ಲಿ ವಿಚಾರಣೆ ನಡೆಸಿ, ಅವರಲ್ಲಿ ಒಬ್ಬನಿಗೆ ೨ ವರ್ಷಗಳ ಕಠಿಣ ಶಿಕ್ಷೆ, ಮಿಕ್ಕುಳಿದ ಮೂರು ಜನರಿಗೆ ಪ್ರತಿಯೊಬ್ಬನಿಗೂ ೧೮ ತಿಂಗಳ ಕಠಿಣ ಶಿಕ್ಷೆಗಳನ್ನು ವಿಧಿಸಿರುವರು.

ಕೋಟೆಕಾರು

ತಾ ೧೯ರಲ್ಲಿ ಜರಗಿದ ಈ ಕೇಂದ್ರದ ಉಪಾಧ್ಯಾಯರ ಸಭೆಯಲ್ಲಿ ೧. ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡುವ ಏರ್ಪಾಡು ಮಾಡಬೇಕೆಂದೂ, ೨. ಆಹಾರ ಜೀನಸುಗಳಿಗೆಲ್ಲಾ ಧಾರಣೆ ಏರಿ ಉಪಾಧ್ಯಾಯನಿಗೆ ಜೀವನ ನಿರ್ವಹಿಸಲಿಕ್ಕೆ ಅತಿ ಕಷ್ಟವಾದ ಕಾರಣ, ಉಳಿದ ಎಲ್ಲಾ ಖಾತೆಯ ನೌಕರರಿಗೆ ದೊರೆಯುವಂತೆ ಉಪಾಧ್ಯಾಯರಿಗೂ ಗ್ರಾಂಟಿನಲ್ಲಿ 'Dearness allowance" ನ್ನು ಸೇರಿಸಿ ಕೊಡಬೇಕೆಂದೂ ಠರಾವುಗಳಾದುವು

ಸಿನೆಮ ಸುದ್ದಿ

ನಾಯಿ ಬೊಗಳಿದರೆ?

ಸ್ವರ್ಗಲೋಕಹಾಳಾದೀತೆ! ಎಂದು ಹೇಳುವ ನಾಣ್ನುಡಿಯುಂಟು; ಹೇಗಿದ್ದರೂ, ಬಲು ಕೆಳಗಿನ ಮಾನವ ಲೋಕದಿಂದ ನಾಯಿ ಎಷ್ಟು ಗಟ್ಟಿ ಬೊಗಳಿದರೂ ನಿತ್ತರದ ಸ್ವರ್ಗಲೋಕದ ಸಿಂಹ ಖಂಡಿತ ಗಾಬರಿಗೊಳ್ಳಲಿಕ್ಕಿಲ್ಲ. 'ಫಿಲ್ಮ್ ಎಸ್ಸ ಸರಿ ಬೋರ್ಡಿನ ಮಾಜಿ ನಿರ್ಮಾಪಕರಾದ ಅಲೆಕ್ಸಾಂಡ ಶಿರವರು ಈಗ ಬ್ರಿಟನಿಗೆ ಹೋದ ಮೇಲೆ ಒಂದೇಸವನೆ ಭಾರತೀಯ ಸಿನೆಮಾ ಕೈಗಾರಿಕೆಯ ವಿಷಯ ದೂಷಣೆ ಮಾಡುತ್ತಿದ್ದಾರೆಂಬುದಕ್ಕೆ ಉತ್ತರಕೊಡುತ್ತಾ ಪ್ರಸಿದ್ಧ ಭಾರತೀಯ ಸಿನೆಮಾ ಪ್ರವೀಣ ರಾಯಿಬಹದ್ದೂರ್ ಚುನಿಲಾಲರು 'ಫಿಲ್ಮ್ ಇಂಡಿಯ'ದಲ್ಲಿ ಅವರ ಸ್ವಭಾವವನ್ನು ಬರೆದು ಅಲೆಕ್ಸಾಂಡರ ನಿಜರೂಪ ಚಿತ್ರಿಸಿದ್ದಾರೆ. ಪ್ರಚಾರ ಚಿತ್ರವನ್ನು ಮಾಡುವಲ್ಲಿ ನಿಪುಣರೆಂದು ಅಲೆಕ್ಸಾಂಡರರನ್ನು ಆರಿಸಿ ಕಳುಹಿಸಿದ ಬ್ರಿಟಿಷ್ ಅಧಿಕಾರೀ ವರ್ಗದವರ ಯೋಗ್ಯತೆಯನ್ನೂ ಅದರಿಂದ ಬ್ರಿಟನಿನ ಸಿನೆಮಾ ರಚಯಿತರ ಯೋಗ್ಯತೆಯನ್ನೂ ಇದರಿಂದಲೇ ತಿಳಿಯಬಹುದೆಂದು ಅವರು ಬರೆದಿರುವರು. ಅವರನ್ನು, ಅವರ ಪತ್ನಿಯರನ್ನು ಬಹುಕಾಲ ಸಾಕಿಸಲಹಿದ ಭಾರತಕ್ಕೆ ಈಗ ಅವರಿಂದ ಇಂತಹ ಪ್ರತಿಫಲ ಸಲ್ಲುವುದು ಆ ರೀತಿಯ ಜನರ ಸ್ವಭಾವಕ್ಕೆ ಅನುಗುಣವಾಗಿದೆ.

ಲೀಲಾದ್ವಯರನ್ನು

ರಮಣ್ಲೇಕ್ ಕಂಪನಿಯವರು ಸೇರಿಸಿಕೊಳ್ಳುವರೆಂಬದೊಂದು ವದಂತಿ. ಈಗಾಗಲೇ ತಿಂಗಳೊಂದರ ರೂ. ೩೦,೦೦೦ ಸಂಬಳ ನಿಶ್ಚಯವಾಗಿ ಲೀಲಾದೇಸಾಯಿಯನ್ನು ಸೇರಿಸಿಕೊಂಡಿದ್ದಾರಂತೆ! ಲೀಲಾ ಚಿಟ್ನಿಸಳ ವಿಚಾರವೂ ನಿರ್ಧಾರವಾಗಿದೆಯಂತೆ! ಅದರೆ ಲೀಲಾದೇಸಾಯಿ ಅಭಿನಯಿಸುವ ಲಕ್ಷ್ಮಿ ಪ್ರೊಡಕ್ಶನ್ನಿನವರು ಆಕೆ ನಮ್ಮೊಡನೆ ಮಾಡಿಕೊಂಡ ಕರಾರಿನಂತೆ ನಮ್ಮಲ್ಲಿಯೇ ಇರುವಳೆಂದೂ ತಿಳಿಸುತ್ತಾರೆ.

"ಪೃಥ್ವೀ ವಲ್ಲಭ"

ಎಂಬ ಚಿತ್ರವನ್ನು ಸೊಹ್ರಾಬ್ ಮೋದಿಯವರು ತಯಾರಿಸುವ ಸಿದ್ಧತೆಯಲ್ಲಿದ್ದಾರೆ. ಅವರೇ ಆದರಲ್ಲಿ ಮುಖ್ಯಪಾತ್ರ ವಹಿಸುವರು. ಚಂಗೀಸ್ ಖಾನ್' 'ಪ್ರಕಾಶ'- 'ಭಕ್ತ ರೋಹಿದಾಸ' ಇವು ಅವರ ಮುಂದಿನ ಕಾರ್ಯಕ್ರಮಗಳು.

ಶಾಂತಾ ಆಪ್ಟೆ ಇನ್ನೊಂದು "ಶಕುಂತಳಾ"

ಚಿತ್ರದಲ್ಲಿ ಅಭಿನಯಿಸುವಳೆಂದೂ, ಅದನ್ನು ಶಾಂತಾರಾಮರು ನಿರ್ದೇಶಿಸುವರೆಂದೂ, ಇಷ್ಟರಲ್ಲೇ ಮುಂಬಯಿಯ ನೇಶನಲ್ ಸ್ಟುಡಿಯೋ …ನ್ನು ಶಾಂತಾರಾಮರು ಪ್ರಯತ್ನಿಸಿದರು ಬೆಂದರೆಂದೂ ತಿಳಿದಿದೆ.

ಶಾಹು-ಪ್ರಧಾನರು

ಇದು ವರೆಗೆ ಕಾನೂನು ಪ್ರಕಾರದ ವಿವಾಹ ವಿಚ್ಛೇದ ಮಾಡಿಕೊಳ್ಳಲಿಲ್ಲವೆಂದು 'ಫಿಲ್ಮ್ ಇಂಡಿಯಾ' ಬರೆಯುತ್ತದೆ. ಆದರೆ ಮದುವೆಯಾದ ಆರು ತಿಂಗಳಲ್ಲಿಯೇ ಅವರ ರೋಮಾಂಚಗಳು (Romances) ನಿಂತುಹೋದುದು ನಿಜವಂತೆ. ಕಿಶೋರ ಶಾಹು ಸ್ನೇಹಪ್ರಭಾಳ ವಿಷಯವಾಗಿ ಈಗ ಮಾತನಾಡುವುದೇ ಇಲ್ಲವಂತೆ! ಹೊಸ ಪರಿಣಯದ ಆಲೋಚನೆ ಮಾಡಿರುತ್ತಾನೆಂಬುದು ಒಂದು ಸುದ್ದಿ. ಪ್ರೇಮ ಭಗ್ನನಾಗಿ ವೈರಾಗ್ಯಗೊಂಡಿರುವನೆಂದೂ ಕೆಲವರು ಹೇಳುತ್ತಾರೆ!

ಪ್ರೇಮ ಅದೀಬನ ಪ್ರಣಯ

ವಿಚಾರವಾಗಿ ಕಳೆದ ವರ್ಷ ಬಹಳ ಪ್ರಚಾರವೆತ್ತಷ್ಟೆ? ಅಂತೆ ಬೊಂಬಯಿಯಲ್ಲಿ ಕಳೆದ ಹೇಮಂತ ಕಾಲದಲ್ಲಿ ಅವನ ವಿವಾಹ ನಿಶ್ಚಯವೂ ಆಗಿದ್ದರೂ ಏನೋ ಕಾರಣದಿಂದ ಅದು ನಡೆಯಲಿಲ್ಲ. ಅದಾಗಿ ಆತನು ಇನ್ನೂ ಅವಿವಾಹಿತ ಬ್ರಹ್ಮಚಾರಿಯಾಗಿಯೇ ಉಳಿದಿದ್ದಾನೆ.

ಚಂದ್ರಮೋಹನ್

'ರೋಟಿ'ಯಲ್ಲಿ ಅಭಿನಯಿಸಿದ ಮೇಲೆ 'ಜಾಂಕರ್' (ಸಿಲ್ವರ್ ಫಿಲ್ಮ್ಸನ) ದಲ್ಲಿ ಹಾಗೂ "ದ ಕೊಲೇಜ್" (ಪಜ್ಜ ಬ್ರದರ್ಸನ) ಈ ಚಿತ್ರಗಳಲ್ಲಿ ಅಭಿನಯಿಸುವನಾಗಿ ತಿಳಿದಿರುತ್ತದೆ.

ಕರ್ನಾಟಕ

ಮುನವಳ್ಳಿಯವರ ಬಿಡುಗಡೆ ಮತ್ತು ಬಂಧನ

ರಾಮದುರ್ಗ ದುರಂತದ ಸಂಬಂಧ ಶಿಕ್ಷೆಯಲ್ಲಿದ್ದ ಶ್ರೀ. ಮುನವಳ್ಳಿ ವಕೀಲರ ಶಿಕ್ಷೆ ಅವಧಿ ಮುಗಿದು, ಅವರ ೧೦೦೦ ರೂಪಾಯಿ ಜುಲ್ಮಾನೆಯನ್ನು ಸಾರ್ವಜನಿಕ ನಿಧಿಯೊತ್ತಿ ಕಟ್ಟಿದ್ದರಿಂದ ಅವರ ಬಿಡುಗಡೆಯಾಗಿ, ಕೂಡಲೇ ಡಿಫೆನ್ಸ್ ಒಫ್ ಇಂಡಿಯಾ ಕಾನೂನಿನಂತೆ ತಿರುಗಿ ಬಂಧನದಲ್ಲಿಡಲಾಗಿದೆ.

ಅಕ್ಟೋಬರ ೧೭ರೊಳಗಾಗಿ ಹಾಜರಾಗತಕ್ಕದ್ದು

ಶ್ರೀ. ದಿವಾಕರ ಮೊದಲಾದವರಿಗೆ ಸರಕಾರದ ನೋಟೀಸು

ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಆರ್. ಎಸ್. ಹುಕ್ಕೇರಿಕರ್, ಎಸ್. ಎಲ್. ಕರ್ತಕೋಟಿ, ಟಿ. ವಿ. ಬಾರ್ಲಿ, ಎನ್. ಟಿ. ದಾಬಡೆ, ಸಿ. ಜೆ. ಅಂಬಲಿ, ವಿ. ವಿ. ಪಾಟೀಲ, ಕೆ. ಬಿ. ದುಂಡೂರ, ವಿ. ಜಿ. ಮಾಗಡಿ, ಆರ್. ಆರ್. ದಿವಾಕರ್ ಮತ್ತು ವಿ. ಬಿ. ಕಡಮುದಕರ ಇವರನ್ನು ಸರಕಾರವು ಬೆಳಗಾವಿ ತುರಂಗದಲ್ಲಿ ಸ್ಥಾನಬದ್ಧತೆಯಲ್ಲಿ ಇಡಬೇಕೆಂದು ಆಗಸ್ಟ್ ೯ನೇ ತಾರೀಖಿನ ದಿನ ಹುಕುಮು ಹೊರಟಿದ್ದು, ಅಂದಿನಿಂದ ಇಂದಿನ ವರೆಗೆ ಈ ಕಾರ್ಯಕರ್ತರು ಎಲ್ಲಿಯೂ ಸಿಕ್ಕಲ್ಲವಾದ್ದರಿಂದ ಅವರು ಇದೇ ಅಕ್ಟೋಬರ ೧೭ರೊಳಗಾಗಿ ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟ್, ಮಾಮಲೇದಾರ್ ಇಲ್ಲವೆ ಪೋಲೀಸ ಸಬ್ ಇನಸ್ಪೆಕ್ಟರ್ ಇವರ ಮುಂದೆ ಹಾಜರಾಗಬೇಕೆಂದು ಮುಂಬಯಿ ಸರಕಾರ ಪ್ರಸಿದ್ಧಿಸಿದೆ.

ಕೈದ್ಯೂರ ಕೈದಿಗಳಿಗೆ ಜೀವದಾನ ಮಾಡಿರಿ

ಎಂಬುದಾಗಿ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಕಿಸಾನ ಕೇಂದ್ರ ಕೌನ್ಸಿಲಿನವರು ಒಂದು ಠರಾವ ಮಾಡಿ ಅದನ್ನು ಮುದ್ರಾಸು ಗವರ್ನರರ ಕಡೆಗೆ ಕಳುಹಿಸಿರುವರು.

ಕಾಂಗ್ರೆಸ್ ಪ್ರಕಟಣೆ ಮುದ್ರಿಸುತ್ತಿದ್ದ ಪ್ರೆಸ್ ಜಪ್ತಿಮಾಡಲಾಯಿತು

ಮುಂಬಯಿಯಲ್ಲಿ ಬೇರೆ ಬೇರೆ ನಾಲ್ಕು ಭಾಷೆಗಳಲ್ಲಿ ಕಾಂಗ್ರೆಸು ಪ್ರಕಟಣೆಗಳನ್ನು ಪ್ರಕಟಿಸುತ್ತಿದ್ದ ಒಂದು ಪ್ರೆಸ್ಸನ್ನು ಪೋಲೀಸರು ಹಿಡಿದಿರುವರು. ಈ ಸಂಬಂಧ ಒಬ್ಬ ಕಾಲೇಜ್ ಪ್ರೊಫೆಸರ್ ಸಹಿತ ಹನ್ನೆರಡುಮಂದಿ ಬಂಧಿಸಲ್ಪಟ್ಟಿದ್ದಾರೆ. ಸಂಯುಕ್ತ ಪ್ರಾಂತದಲ್ಲಿ ಆಕ್ಷೇಪಾರ್ಹಕರ ಪತ್ರಗಳನ್ನು ಮುದ್ರಿಸುತ್ತಿರುವರೆಂಬ ಆರೋಪದ ಮೇಲೆ ಹನ್ನೆರಡು ಪ್ರೆಸ್ಸುಗಳಿಗೆ ಸರಕಾರದವರು ಬೀಗಹಾಕಿದ್ದಾರೆ.



ಲೋಕಪ್ರಸಿದ್ಧವಾದ ಚರ್ಮರೋಗ ನಿವಾರಕ

ಜಾಂಬುಕ್ ಸುಟ್ಟಗಾಯ, ಗಾಯ, ಬಾವುಗಳನ್ನು ಗುಣಪಡಿಸುವುದು.

ಚರ್ಮದ ರೋಗಗಳಿಗೆ ಮತ್ತು ಗಾಯಗಳಿಗೆ ಇಡೀ ಲೋಕದಲ್ಲೇ ಪ್ರಖ್ಯಾತವಾಗಿರುವ ಔಷಧವೆಂದರೆ ಜಾಂಬಕ್. ಗಾಯವಾದರೆ ಇಲ್ಲವೇ ಕಜ್ಜಿಯಾದರೆ ಇದನ್ನು ಅದರ ಮೇಲೆ ಮೆಲ್ಲಗೆ ತಾಗಿಸಿರಿ; ಅದು ಕೂಡಲೇ ಸುಲಭದಲ್ಲಿ ಗುಣವಾಗುವುದು. ಜಾಂಬಕಿನಲ್ಲಿರುವ ಅಮೂಲ್ಯ ವನೌಷಧಿ ಸತ್ವವು ಚರ್ಮದ ನರಗಳಲ್ಲಿ ಕೂಡಲೇ ಹೀರಿಕೊಂಡು, ಬೇನೆಯನ್ನು ಕಡಿಮೆಮಾಡುವುದು. ಬಾವನ್ನು ಇಳಿಸುವುದು, ಒಣಗುವಂತೆ ಮಾಡಿ ಗುಣಕೊಡುವುದು, ಕಲೆಯುಳಿಯದಂತೆ ಜಾಂಬಕ್ ಗುಣಮಾಡುತ್ತದೆ. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಇಲ್ಲವೇ ರೂ. 2-4-0, ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಏಜಂಟ್ಸ್:

ಮೆಸರ್ಸ್ ದಾಧಾ ಎಂಡ್ ಕೊ.,
ಪಿ. ಟಿ. ಮದರಾಸು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅವಶ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From 7--8--1942

1.	Current	(1% p. a. from Jan. to June. (½% p. a. from July to Dec
2.	Savings Bank	2% p. a.
3.	Short-term	1¼% p. a.
4.	Fixed 3 months	1½% p. a.
	6 „	2% p.a.
	9 „	2½% p. a.
	12 „	3% p. a.
	24 „	3½% p. a.

Advances aginst approved securities made at very competitive rates.

ಶ್ರೀ ಪರಮಹಂಸರು ನಿರ್ವಿಕಲ್ಪ ಸಮಾಧಿ ಸಮಯದಲ್ಲಿ ತಾವು ಪ್ರತ್ಯಕ್ಷಿಸುವ ಅನುಭವಗಳನ್ನು ಹೇಳಲು ಪಡುವ ಪ್ರಯತ್ನ

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು: ಶ್ರೀ ಸ್ವಾಮಿ ಪ್ರಣವೇಶಾನಂದರು

ಎಷ್ಟೋ ಸಲ ಶ್ರೀ ಪರಮಹಂಸರು ತಮ್ಮ ಕಂಠದ ಮೇಲಿನ ಚಕ್ರದಲ್ಲಿ ಮನಸ್ಸು ಎದ್ದರೆ ತಾವು ಅನುಭವಿಸುವ ದರ್ಶನಾದಿಗಳ ವಿಷಯವಾಗಿ ನಮಗೆ ಹೇಳಬೇಕೆಂದು ಬಹಳ ಪ್ರಯತ್ನಪಟ್ಟರೂ ಅವರಿಂದಾಗಲಿಲ್ಲ. ನಮ್ಮ ಸ್ನೇಹಿತರೊಬ್ಬರು ಹೀಗನ್ನುತ್ತಿದ್ದರು—ಒಂದಾನೊಂದು ದಿನ ಚೆನ್ನಾಗಿ ನಿರ್ಧರಿಸಿ, ಈ ಹೊತ್ತು ನಿಮಗೆ ಎಲ್ಲ ವಿಷಯಗಳನ್ನು ಹೇಳುತ್ತೇನೆ. ಒಂದಿಷ್ಟಾದರೂ ಮರೆಮಾಚುವುದಿಲ್ಲ ಎಂದು ಹೇಳಿ ಪ್ರಾರಂಭಿಸಿದರು. ಹೃದಯ ಮತ್ತು ಕಂಠದ ವರೆಗಿನ ಚಕ್ರಾದಿಗಳ ವಿಷಯವಾಗಿ ಸರಿಯಾಗಿ ಹೇಳಿದರು. ಅನಂತರ ಹುಬ್ಬು ತೋರಿಸಿ 'ಇಲ್ಲಿ ಮನಸ್ಸು ಎದ್ದ ಕ್ಷಣವೇ ಪರಮಾತ್ಮನ ದರ್ಶನವಾಗುತ್ತದೆ. ಮತ್ತು ಜೀವನು ಸಮಾಧಿಮಗ್ನನಾಗುತ್ತಾನೆ. ಆಗ ಪರಮಾತ್ಮನಿಗೂ ಜೀವಾತ್ಮನಿಗೂ ನಡುವೆ ತೆಳುವಾದ ಪರದೆಯ ಒಂದು ವ್ಯವಧಾನ ಮಾತ್ರವಿರುತ್ತದೆ. ಆಗ ಆತನು ಈ ರೀತಿಯಾಗಿ ಅನುಭವಿಸುತ್ತಾನೆ' ಎಂದು ಹೇಳಿ ಪರಮಾತ್ಮನ ದರ್ಶನದ ವಿಷಯವಾಗಿ ಹೇಳಲು ಪ್ರಾರಂಭಿಸಿದರು. ಆಗಲೇ ಸಮಾಧಿಮಗ್ನರಾದರು! ಸಮಾಧಿ ಭಂಗವಾದನಂತರ ಪುನಃ ಹೇಳಲು ಪ್ರಯತ್ನಿಸಿದರು. ಪುನಃ ಸಮಾಧಿ ಮಗ್ನರಾದರು! ಹೀಗೆ ಮತ್ತೆಮತ್ತೆ ಪ್ರಯತ್ನಮಾಡಿದ ನಂತರ ಕಂಬನಿ ಸುರಿಯುತ್ತ 'ನಿಮಗೆಲ್ಲ ಒಂದಿನಿತಾದರೂ ಮರೆಮಾಚದೆ ಹೇಳಬೇಕೆಂದು ನಿರ್ಣಯಿಸಿದೆನು. ಆದರೆ ಶ್ರೀ ಜಗಜ್ಜನನಿಯು ಹೇಳಲು ಬಿಡುವುದಿಲ್ಲ. ನನ್ನ ಬಾಯಿ ಮುಚ್ಚಿಬಿಟ್ಟಳು! ಅಂದರು. ನಮಗೆ ಬಹಳ ಆಶ್ಚರ್ಯವಾಯಿತು. 'ಅವರು ಹೇಳಬೇಕೆಂದು ಎಷ್ಟೋ ಪ್ರಯತ್ನವನ್ನೂ ಕಷ್ಟವನ್ನೂ ಪಡೆಯುತ್ತಾರೆ. ಆದರೆ ಎಷ್ಟು ಮಾತ್ರಕ್ಕೂ ಅವರಿಂದಾಗಲಿಲ್ಲ. ಶ್ರೀ ಜಗಜ್ಜನನಿಯು ದುಷ್ಟಳೇ ಸೈ! ಒಳ್ಳೆ ಪ್ರಸಂಗ, ಭಗವತ್ಪ್ರಸಂಗ ಹೇಳುವಾಗ ಬಾಯಿ ಮುಚ್ಚಿಡುವುದು ಏಕೆ? ಎಂದು ಭಾವಿಸುತ್ತಿದ್ದೆವು. ಮನಸ್ಸು ಬುದ್ಧಿಗಳ ಸಹಾಯದಿಂದ ಮಾತನಾಡಬಹುದೆಂದೂ, ಅವುಗಳ ಶಕ್ತಿಯೂ ಅಷ್ಟೇ ಎಂದೂ, ಅವುಗಳನ್ನೇ ಅತಿಕ್ರಮಿಸಿ ಹೋಗದಿದ್ದರೆ ಪರಮಾತ್ಮನ ಸಂಪೂರ್ಣ ದರ್ಶನವಾಗಲಾರದೆಂದೂ ಆಗ ನಮಗೆ ತಿಳಿಯಲಿಲ್ಲ. ಶ್ರೀ ಪರಮಹಂಸರು ನಮ್ಮ ಮೇಲಿನ ಅತಿಶಯ ಪ್ರೇಮದಿಂದ ಅಸಾಧ್ಯವಾದುದನ್ನು ಸಾಧ್ಯವನ್ನಾಗಿ ಮಾಡಲು ಪ್ರಯತ್ನಿಸುತ್ತಾರೆಂದು ನಮಗೆ ತಿಳಿಯಲಿಲ್ಲ.

(ಕ್ರಮಶಃ)

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.5 ಬೆಳಿಗ್ಗೆ	6.5 ಸಾಯಂ.
ಶಟ್ಲ್ (ಪೆಸೆಂಜರ್)	ಸಾಯಂ. 5.25	9.55 ಬೆ.

ಮಲಬಾರ್ ಎಕ್ಸ್‌ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

The Canara Industrial & Banking Syndicate, Ltd.

(Incorporated in British India. Liability of shareholders limited)

Estd:] Head Office:— UDIPI (S. India). [1925.

Authorised Capital ...	...	Rs. 50,00,000.
Subscribed Capital ...	...	Rs. 15,17,349.
Paid up Capital ...	...	Rs. 7,05,489.
Reserves	....	Rs. 2,11,000.

Savings Bank Accounts are opened and interest allowed With drawals by cheques. Accounts transferred from one Branch to another free of charge Enquire for rules.

Cheques & Drafts are issued on numerous places and Bills etc negotiated on terms which will be quoted on enquiry.

Advances made at low rates of interest against gold, Government Securities, approved shares, accepted bills life insurance policies and marketable goods

Every business receives quick and courteous attention.

25–9–42

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

Regd. No. M 3460

ತಾರೀಖು 3—10—1942

The Bank of Mangalore Limited

ESTD: 1931

HEAD OFFICE Mangalore.

BRANCHES Moodabidri & Padubidri

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%.
24 months or over 4%.
Current: ½% from July to December.
1% from January to June.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ, ಉಪದ್ರವ, ಕರೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra' Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಕ್ರಾಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

[ಸ್ಥಾಪಿತ] SWADESHABHIMANI [1906]

[ಸಂಪುಟ 36] ತಾರೀಖು 9—10—1942 [ಸಂಚಿಕೆ 40]

ಗಾಂಧಿಜಿ ಯೇಸುವಿನ ಅವತಾರವೇ ಆಗಿದ್ದಾರೆ!

ರೋಮನ್ ರೋಲೆಂಡರು ಕೊಂಡಾಡಿದರು!

ವಿಶ್ವವಿಖ್ಯಾತ ಮೇಧಾವಿಗಳೆಲ್ಲಾ ಪ್ರಶಂಸಿರುವರು!

ಅಕ್ಟೋಬರ ೨ ಅಖಿಲಭಾರತದಲ್ಲಿ ಮಹಾ ಪುಣ್ಯದಿನ, ಭಾರತ ಭಾಗ್ಯವಿಧಾತನಾದ ಮಹಾ ತ್ಯಾಗಿ ಹುಟ್ಟಿದ ದಿನ, ಗಾಂಧಿಜಿಗೆ ಈ ಅಕ್ಟೋಬರ ೨ನೆಯ ದಿನದಂದು ೭೩ ವರ್ಷ ಪ್ರಾಯ ತುಂಬಿ ೭೪ನೆಯ ವರ್ಷ ಆರಂಭವಾಗುವುದು ಈ ಸಲದ ಗಾಂಧಿ ಜಯಂತಿ "ಜೈಲು ಜಯಂತಿ"ಯಾಗಿದೆ ಗಾಂಧಿಜಿಗೆ ಸೆರೆಮನೆಯೆಂದರೆ ಅಂಜಿಕೆಯಿಲ್ಲ, ಅನಾದರವಿಲ್ಲ; ಆತಂಕವಿಲ್ಲ ಅವರು ಈ ಯುಗದ ರಾಜಕೀಯ ತಪಸ್ವಿ ಸತ್ಯ ಅಹಿಂಸೆಗಳ ಆಧಾರದ ಮೇಲೆ ಹೊಸತೊಂದು ಸೃಷ್ಟಿಯನ್ನು ಶಾಂತಿ ಲೋಕದ ನವೀನ ಸೃಷ್ಟಿಯನ್ನು ಮಾಡುವ ಹೊಂಗನಸು ಕಾಣುತ್ತಾ ಅವರು ತಮ್ಮಾಯುಷ್ಯದ ಕೊನೆಯ ದಿನಗಳನ್ನು ಸೆರೆಮನೆಯಲ್ಲಿಯೇ ಕಳೆಯುತ್ತಿದ್ದಾರೆ ಗಾಂಧಿಜಿಯೆಂದರೆ ಭೂತಳದ ಮಿಲಿಯನಾಂತರ ಮಂದಿ ರೋಮಾಂಚಿತರಾಗುತ್ತಾರೆ ಅವರ ಸಂದೇಶ ಕೇಳಿ ಸಾವಿಗಂಜದೆ ಮುನ್ನಡೆವ ಮಹಾ ಸೈನ್ಯವೊಂದನ್ನೇ—ಸತ್ಯಾಗ್ರಹಿದಲವನ್ನು ಗಾಂಧಿಜಿ ನಿರ್ಮಿಸಿದ್ದಾರೆ ಬ್ರಿಟಿಷರು ಅಹಿಂಸೆ ಅಸಹಕಾರ ಅಂಗೀಕರಿಸಲಿ, ಹಿಟ್ಲರನೆದುರು ನಾನೇಕಾಕಿಯಾಗಿ ಅಹಿಂಸಾ ಸಮರ ಹೂಡುತ್ತೇನೆ ಎಂದುರು ಗಾಂಧಿಜಿ ಯುದ್ಧಾರಂಭಕಾಲದಲ್ಲಿ! ಇದಕ್ಕಾಗಿ ಕೆಲವರು ಗಾಂಧಿಜಿಯನ್ನು ಅಪಹಾಸ್ಯ ಮಾಡಿದರು ಆದರೆ ಮಹಾತ್ಮರು ಅದನ್ನು ಲೆಕ್ಕಿಸುವವರಲ್ಲ, ಗಾಂಧಿಜಿಯ ಕೀರ್ತಿ ಪ್ರಭೆ ದೇಶವಿದೇಶಗಳ ಮೇಧಾವಿಗಳಲ್ಲಿ ಹೇಗೆ ಪಸರಿಸಿದೆಯೆಂಬುದು ಕೆಳಗಿನ ಮಹನೀಯರ ಮಾತುಗಳಿಂದ ಸ್ಪಷ್ಟವಾಗುವುದು

ದ್ವೇಷಕ್ಕೆ ಪ್ರತಿದ್ವೇಷವೆ?

'ದ್ವೇಷಕ್ಕೆ ಪ್ರತಿಯಾಗಿ ದ್ವೇಷವೇ ಹುಟ್ಟುವುದಾದರೆ, ಈ ದ್ವೇಷ ಸಾಧನೆಯ ಅಂತ್ಯವು ಹೇಗಾಗಬೇಕು, ಎಂದಾಗಬೇಕು?' ಭಗವಾನ್ ಬುದ್ಧದೇವನು ಶತಮಾನಗಳ ಹಿಂದೆ ಈ ಪ್ರಶ್ನೆ ಕೇಳಿದ್ದನು ಇಂದಿನೀ ಘೋರ ಹಿಂಸಾಮಯ ಸಂಗ್ರಾಮ ಕರ್ತರಿಗೆ, ಗಾಂಧಿಜಿಯೂ ಅದೇ ಪ್ರಶ್ನೆ ಕೇಳುತ್ತಿದ್ದಾರೆ ಪೌರ್ವಾತ್ಯ ಜಗತ್ತು ಹಿಂಸೆಗೆ ಪ್ರತಿಹಿಂಸೆ ಮಾಡುತ್ತಾ ಪ್ರಳಯ ಪಥವನ್ನು ಹಿಡಿದು ನಡೆದರೆ, ಅದರ ವಿರೋಧವಾಗಿ ಭಾರತದಲ್ಲಿ ಮಹಾತ್ಮಾ ಒಂದು ಪ್ರಬಲ ಶಕ್ತಿಯುತ ಅಹಿಂಸಾ ಆಂದೋಲನ ಹೂಡಿ ನಿಂತಿದ್ದಾರೆ ಒಂದು ಪಕ್ಷ ಯುದ್ಧದ ಬಿಸಿ ಭಾರತದತ್ತವೂ ತಾಗಿ, ಶಾಂತಿಯುತವಾಗಿದ್ದ ಚೀನವು ಕ್ರಾಂತಿಗಿಳಿದಂತೆ, ಭಾರತೀಯರೂ ಕೈಯಲ್ಲಿ ಕತ್ತಿ ಹಿಡಿದು ಹೋರಾಡಲು ಹೊರಡುವುದೂ ಸಾಧ್ಯವಿದೆ, ಏಕೆಂದರೆ ಅಲ್ಲಿಯೂ ಯುದ್ಧಾತುರವಾದ ನರವಂಶಗಳು ಇದ್ದೇ ಇವೆ ಆದರೆ ಅವರನ್ನು ಮುನ್ನಡೆಸಲು ಮಹಾತ್ಮ ಇದ್ದರೆ ಅಂಥಾ ಹಾದಿಯನ್ನು ಅವರು ಹಿಡಿಯಲಾರರು, ಗಾಂಧಿ ಇಂದು ದಾರ್ಶನಿಕ ವ್ಯಕ್ತಿ; ಧೀರ ಏಕಾಂಗವೀರ, ಶುದ್ಧ ಹೃದಯದ ಶಾಂತಿ ದೂತ ತಾನೇ ತಾನೆಯಾಗಿಯಾದರೂ ಎದುರೊಡ್ಡಿ ಪ್ರಪಂಚದ ಕ್ರಾಂತಿಯನ್ನು ಎದುರಿಸುವೆನೆಂದು ಎದೆಗೊಟ್ಟು ನಿಂತು, ಇಂದು ಅಹಿಂಸಾತ್ಮಕ ಸಂಗ್ರಾಮವನ್ನು ನಡೆಸುತ್ತಿರುವ ಸಮರ್ಥ ಅಹಿಂಸೆಯು ಹಿಂದುಗಳ ಧರ್ಮಗತವಾದುದಾಗಿ ಅವರಲ್ಲಿ ಅದು ಆಂತರಿಕ ಶಕ್ತಿಯಾಗಿ ನೆಲೆನಿಂತಿದ್ದ, ಕೊನೆಗೆಂದರೆ, ಗಾಂಧಿಜಿ ಮಾನವ ಜೀವನೇತಿಹಾಸದಲ್ಲಿ ಮಹಾವ್ಯಕ್ತಿಯಾಗಿ ಚಿರಚಿರಂತನ ಕಾಲದತನಕ ನಿಲ್ಲುವವರು, ಏಕೆಂದರೆ ಅವರಲ್ಲಿ ಪ್ರಾಮಾತ್ರ ಅಲ್ಲ, ಗಾಂಧಿಜಿಯ ಪವಿತ್ರನಾಮವು ಪ್ರಪಂಚದ ಮಿಲಿಯಾಂತರ ಮಂದಿಯ ನಾಲಿಗೆಯಲ್ಲಿ ಅಜರಾಮರವಾಗಿ ಉಳಿಯುವಂಥದ್ದು ಗಾಂಧಿಜಿ ಭಾರತೀಯರ ಚೈತನ್ಯ ಜಾಗೃತಶಕ್ತಿಯ ಕುರುಹು ಮಾತ್ರವಲ್ಲ, ಅವರ ಗುರುತರ ಐಕ್ಯಸಾಧಕ ಮಾತ್ರವಲ್ಲ, ಅವರ ಸ್ವಾತಂತ್ರ್ಯಸಾಧಕ ಶಕ್ತಿ ಮಾತ್ರವಲ್ಲ, ಅದಕ್ಕಿಂತ ಮಿಗಿಲಾದ ಮಹಾನುಭಾವರಾಗಿದ್ದಾರೆ ಗಾಂಧಿಜಿ ಪಶ್ಚಿಮದ ಜನರಿಗೆ ಮರೆತು ಹೋಗಿದ್ದ ಹಾಗೂ ನಷ್ಟಗೊಳಿಸಿದ ಯೇಸುಸ್ವಾಮಿ ಸಂದೇಶವನ್ನು ಪುನಃ ಸಾರಿ ಹೇಳಿ ಎಚ್ಚರಿಸಿದರು ಅವರು ತಮ್ಮ ಸಬೇಕೆಂದು ಸಾರುವ ಈ ಮಹಾ ಪುರುಷನು ಪಲವರಿಗೆ ಟಾಲ್‌ಸ್ಟಾಯಿಯಂತೆ ಜೀಸ್ ಜಿಕಸ್ ಕಾಸೋ ಅಂತೆಯೂ ಕಾಣುತ್ತಾರೆ' ಹೀಗೆಂದು ಪ್ರಪಂಚದಲ್ಲೇ ಪ್ರಸಿದ್ಧ ಸಾಹಿತಿಯೆನಿಸಿದ ರೋಮನ್ ರೋಲೆಂಡರು ಗಾಂಧಿಜಿಯನ್ನು ಕೊಂಡಾಡುತ್ತಾರೆ

ಜಗತ್ತಿಗೇ ಒಬ್ಬ ಮಹಾತ್ಮಾ

'ಗಾಂಧಿ ಅಖಿಲ ಜಗತ್ತಿನ ಒಬ್ಬ ಮಹಾತ್ಮಾ' ಎಂದು ಇಪ್ಪತ್ತು ವರ್ಷಗಳ ಹಿಂದೆ, ನಾನು ನಮ್ಮ ದೇಶದ ಜನರಿಗೆ ಹೇಳಿದೆ ಆಗ ಅವರಲ್ಲಿ ಹೆಚ್ಚಿನ ಮಂದಿಗೆ ಈ ಗಾಂಧಿ ಎಂದರೆ ಯಾರೆಂದೇ ತಿಳಿಯದು ಆಗ ಪಾಶ್ಚಾತ್ಯ ಲೋಕದಲ್ಲಿ ಅವರ ಹೆಸರು ಒಪ್ಪಿತ ಕವಿಮೆ ಪ್ರಚಾರದ



ಕೈವಶವಾದ ಶತ್ರು ವಿಮಾನ!

ಚೀನ ಅರ್ವಾಚೀನಗಳ ಸಮರತೆಯಿದೆ ಗಾಂಧಿಜಿ ಭಾರತದ ತಪಸ್ವಿಗಳ ಅವತಾರರಾಗಿರುವಂತೆ ಇಂದಿನ ರಾಜಕಾರಣಿಗಳನ್ನೂ ಗೆಲ್ಲಬಲ್ಲ, ಧೀಮಂತ, ಕರ್ತೃತ್ವಶಾಲಿಯಾದ ಜನತಾ ಮುಂದಾಳುವಾಗಿದ್ದಾರೆ ಇನ್ನು ಮುಂದಿನ ಹೊಸ ಮನುಷ್ಯನು ಪೂರ್ಣ ಮಾನವನಾಗಬೇಕು, ಆತನಲ್ಲಿ ಆಧ್ಯಾತ್ಮಿಕತೆಯಂತೆ ಪಾರ್ಥಿವತೆಯೂ ಇರಬೇಕು ಇಡೀ ಜಗತ್ತಿನಲ್ಲಿ ಅಂಥಾ ಓರ್ವ ಮಹಾತ್ಮ ಇದ್ದರೆ ಅದು ಗಾಂಧಿಜಿ' ಹೀಗೆಂದು ಆಧುನಿಕ ಯೂರೋಪಿನ ಪ್ರಸಿದ್ಧ ತತ್ವಜ್ಞಾನಿಯಾದ ಕೌಂಟ್ ಕಿಸಿರ್ಲಿಂಗರು ಮಹಾತ್ಮರ ವಿಷಯವಾಗಿ ತಮ್ಮ ಅಭಿಪ್ರಾಯ ತಿಳಿಸಿದ್ದಾರೆ'

'ಕ್ರೈಸ್ತ ಜೀವಂತನಾಗಿ ಬಂದ'!

'ಗಾಂಧಿಜಿ ಕೇವಲ ಭಾರತದ ಮುಂದಾಳು ಹೆಸರನ್ನು ವಿಶ್ವದ ಮಹಾ ತಪಸ್ವಿಗಳ ಸಾಲಿನಲ್ಲಿ ಕೆತ್ತಿಸಿಕೊಂಡರು ಅವರ ವ್ಯಕ್ತಿತ್ವದ ಜ್ಯೋತಿಯು ಇಡೀ ಲೋಕದ ಮೇಲೆಲ್ಲಾ ತನ್ನ ವಿಪುಲ ಪ್ರಭಾವಳಿ ಪಸರಿಸಿದೆ ಯೂರೋಪು, ದಾರಿದ್ರ್ಯ ಹಾಗೂ! ನಿರಾಶೆ ತುಂಬಿದ ಘೋರಾಂಧಕಾಲದಲ್ಲಿ ಯಾವುದೇ ಬೆಳಕಿನ ಚಿಹ್ನೆ ತೋರದೆ ಕಂಗೆಟ್ಟು ಕಳವಳ ಪಡುತ್ತಿರುವಾಗ ಗಾಂಧಿಜಿ, ದಿಗಂತದಂತದಲ್ಲಿ ಉದಿಸಿ ಬಂದದ್ದು ಪಾಶ್ಚಾತ್ಯರನ್ನೆಲ್ಲಾ ದಿಗಿಲುಗೊಳಿಸಿಬಿಟ್ಟಿತು ಅನೇಕರ ದೃಷ್ಟಿಯಲ್ಲಿ ಅವರು ಯೇಸುವಿನ ಅವತಾರವೇ ಆಗಿದ್ದಾರೆ ಜಗತ್ತಿನ ಅನ್ಯಾಯ ವಂಚನೆಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾ, ಪಶುಬುದ್ಧಿಯಿಂದ ಪ್ರಾಕೃತಿಕ ಚೇತನಕ್ಕೆ ವ್ಯಕ್ತಿಯು ಬಂದು, ಸರಲಸುಖ ಆರೋಗ್ಯದ ಜೀವನ ನಡೆಸಿತ್ತು ಆದರೆ ಆ ಮೇಲೆ ಇಡೀ ಯೂರೋಪಿನಲ್ಲಿ ಪ್ರಸಿದ್ಧರಾಗಿರುವ ವಿಶ್ವದ ಮಹಾ ವಿಭೂತಿಪುರುಷರಲ್ಲಿ ಗಾಂಧಿಯೋರ್ವರೆಂಬುದು ಎಲ್ಲರಿಗೂ ತಿಳಿದಿದೆ 'ಗಾಂಧಿ ಮಹಾತ್ಮ ಎಂಬುದು ಗೊತ್ತಾಗಿದೆ ಗಾಂಧಿಗೆ ಈ ಕೀರ್ತಿ ಬಂದದ್ದು ಒಂದೇ ವಿಚಿತ್ರ ವೈಶಿಷ್ಟ್ಯಶಕ್ತಿಯಿಂದ ಅವರ ಬಳಿ ಸೈನ್ಯವಿಲ್ಲ, ರಾಜ್ಯವಿಲ್ಲ, ಅವರು ರಾಷ್ಟ್ರವನ್ನು ಆಳುವಂತಹ ಅಂತಹ ಅಧಿಕಾರದಲ್ಲಿಯೂ ಇಲ್ಲ, ಅವರು ತತ್ವಜ್ಞಾನಿಯಾಗಲಿ ತಪಸ್ವಿಯಾಗಲಿ ಅಲ್ಲ ದೊಡ್ಡ ದೊಡ್ಡ ಪುಸ್ತಕಗಳನ್ನೋ ಕವಿತೆಗಳನ್ನೋ ಬರೆದಿಲ್ಲ ಕೊನೆಗೆಂದರೆ ಹತ್ತು ಮಂದಿ ನೋಡಿ ಕೊಂಡಾಡುವಂಥಾ ರೂಪವೂ ಇಲ್ಲ ವೈಶಿಷ್ಟ್ಯ ಮತ್ತು ಪ್ರಭಾವ ಇರುವುದು ಅ

(೨ನೇ ಪುಟಕ್ಕೆ ಮುಂದುವರಿದಿದೆ)

ಗಾಂಧಿಜಿ ಯೇಸುವಿನ ಅವತಾರವೇ ಆಗಿದ್ದಾರೆ!

(೧ನೆಯ ಪುಟದಿಂದ ಮುಂದುವರಿದಿದೆ)

ವರ ಆತ್ಮಶಕ್ತಿಯಲ್ಲಿ. ಅದೇ ಅವರನ್ನು ಉನ್ನತಿಯಿಂದ ಉನ್ನತಿಗೆ ಏರಿಸಿತೆನಬೇಕು. ಮುಂದೆ ಭಾರತವು ಸ್ವತಂತ್ರವಾದಾಗ, ಅದಕ್ಕೆ ಕಾರಣಕರ್ತರಾಗಿ ಸ್ಮರಿಸುವ ವ್ಯಕ್ತಿಗಳಲ್ಲಿ ಗಾಂಧಿಜಿ ಪ್ರಧಾನರಾಗಿರುವರು. ಭಾರತದ ಜನತೆಯಲ್ಲಿ ಸ್ವಾತಂತ್ರ ಜಾಗೃತಿ ಹುಟ್ಟಿಸಿ, ಅವರ ಸಂಸ್ಕೃತಿಯಲ್ಲಿ ಪ್ರೇಮ ಹುಟ್ಟಿಸಿ, ಅವರಲ್ಲಿ ಆತ್ಮಗೌರವ, ಶಿಸ್ತು, ಸ್ವಾರ್ಥತ್ಯಾಗ ಸಹನೆ ಮೊದಲಾದ ಗುಣಗಳನ್ನು ತುಂಬಿಸಿ ಅಧ್ಯಾತ್ಮಿಕ ಮತ್ತು ರಾಜನೀತಿಗಳ ಎರಡು ದಡಗಳಲ್ಲಿ ಅವರ ಜೀವನ ಪ್ರವಾಹವನ್ನು ಸಹಜವಾಗಿ ಸಾಗಿಸಿದ ವ್ಯಕ್ತಿ ಗಾಂಧಿ! ಸಾವಿರಾರು ವರ್ಷಗಳಿಂದ ದಲಿತರಾಗಿ, ಅಸ್ಪೃಶ್ಯರಾಗಿದ್ದ ಒಂದು ಜಾತಿಯನ್ನು ಉದ್ಧರಿಸಲು ಕೈಕೊಂಡ ಅವರ ಕೆಲಸವೊಂದೇ ಸಾಕು ಅವರನ್ನು ಕೀರ್ತಿಶಾಲಿಯಾಗಿ ಮಾಡಲು! 'ಅಹಿಂಸೆ'ಯೆಂಬ ಆಯುಧವನ್ನು ಸ್ವಾತಂತ್ರ್ಯ ಸಾಧನೆಗಾಗಿ ಉಪಯೋಗಿಸಿದ. ಅವರ ನವೀನ ರಾಜನೀತಿಯೊಂದು ಅವರನ್ನು ಜಗತ್ತಿನ ನ್ಯಾಯ, ಸುಖ ಶಾಂತಿದೂತನನ್ನಾಗಿ ಮಾಡಿದೆ. ಇತರರು ವೈಯುಕ್ತಿಕ ಮೋಕ್ಷಕ್ಕಾಗಿ ಯಾವ ತತ್ವಗಳನ್ನು ಬೋಧಿಸಿದರೋ ಗಾಂಧಿಜಿ ಅದನ್ನು ಜಗತ್ತಿನ ಮೋಕ್ಷಕ್ಕಾಗಿ ಇಡೀ ಮಾನವ ಸಮಾಜಕ್ಕೇ ಬೋಧಿಸುತ್ತಿದ್ದಾರೆ. ಗಾಂಧಿ ನೀತಿವಂತರು, ಗುಣವಂತರು, ಶಾಂತ ಸ್ವಭಾವದವರು, ದಯಾಮೂರ್ತಿ, ಮೃದು ವಚನಗಾರ, ಸರಲಜೀವಿ, ಗೌರವಶಾಲಿ, ಧೀರ ವ್ಯಕ್ತಿ, ಆತ್ಮಶುದ್ಧದವರು. ನ್ಯಾಯದ ಸಲುವಾಗಿ ತನ್ನನ್ನೇ ಬಲಿದಾನವೀಯಲು ಸಮರ್ಥರು. ಜಗತ್ತಿನ ಸ್ವಾರ್ಥಸುಖ ಆಕಾಂಕ್ಷೆಗಳಿಂದ ವಿರಹಿತರು. 'ನನ್ನ ಧರ್ಮವೆಂದರೆ ಈಶಸೇವೆ, ಅದೇ ದೇಶಸೇವೆ, ಸೇವೆಯೆಂದರೆ ನಿರ್ಮಲ ಪ್ರೇಮ' ಹೀಗೆಂದು ಗಾಂಧಿ ಹೇಳುತ್ತಾರೆ' ಎಂದು ಜೆ. ಎಚ್. ಹೋಲ್ಮ್ಸ್ ಎಂಬ ಪ್ರಖ್ಯಾತ ಅಮೇರಿಕನ್ ಲೇಖಕರು ಸಾರುತ್ತಾರೆ.

'ಗಾಂಧಿಜಿ ಅಸದೃಶ ವ್ಯಕ್ತಿ'

'ರಾಜಕೀಯ ಇತಿಹಾಸದಲ್ಲಿಯೇ ಗಾಂಧಿಜಿ ಅಸದೃಶ ವ್ಯಕ್ತಿ; ಪರದಾಸ್ಯದಿಂದ ತುಳಿಯಲ್ಪಟ್ಟ ಜನರನ್ನು ಬಿಡುಗಡೆ ಮಾಡಲು, ಅವರು ಹೊಸ ತರದ ಒಂದು ಆಂದೋಲನವನ್ನು ಆರಂಭಿಸಿದರು; ಆ ಪ್ರಯೋಗವನ್ನು ತನ್ನ ಅನುಪಮ ಶಕ್ತಿ ಸಾಹಸಗಳಿಂದ ಮುಂದುವರಿಸಿ ಮುನ್ನಡೆದರು. ಇಂದಿನ ಪಾಶವಿಕ ಶಕ್ತಿಯ ಕಾಲದಲ್ಲಿ ನಾವು ಗಾಂಧಿಜಿಯ ವ್ಯಕ್ತಿತ್ವವನ್ನು ವಿಚಾರ ಮಾಡುವುದಕ್ಕಿಂತಲೂ, ಮುಂದಿನ ಇತಿಹಾಸದಲ್ಲಿ, ಆ ಕಾಲದ ವಿಚಾರವಂತರಲ್ಲಿ ಗಾಂಧಿಜಿಯ ಮಹಿಮೆ ಇನ್ನಷ್ಟು ಘನತರವಾಗುವುದು. ನಿಜವಾದ ರಾಜಕೀಯ ವಿಭೂತಿ ಪುರುಷರ ಯೋಗ್ಯತೆಯಿರುವುದು ಎಲ್ಲಿ ಎಂದರೆ, ಅವರ ಸ್ವಕೀಯ ಬಲಿದಾನ ಆದರ್ಶಗಳಿಂದ ಅವರ ದೇಶದವರಲ್ಲಿ, ಅವರ ಹಿಂಬಾಲಕರಲ್ಲಿ ಪ್ರಭಾವ ಬೀರಿ, ಅವರನ್ನೆಲ್ಲಾ ಕಾರ್ಯೋದ್ಯುಕ್ತರನ್ನಾಗಿ ಮಾಡುವುದರಲ್ಲಿ. ಗಾಂಧಿಜಿ ಈ ಕೆಲಸ ಕೈಗೂಡಿಸಿದ್ದಾರೆ. ನಮ್ಮ ಜೀವಿತ ಕಾಲದಲ್ಲಿಯೇ ಇಂತಹ ಒಬ್ಬ ಅಸದೃಶ ಮಹಾ ಪುರುಷನನ್ನು ಜಗತ್ತಿಗೆ ಕೊಟ್ಟ ಕಾರಣಕ್ಕಾಗಿ ನಾವು ವಿಧಿಗೆ ಕೃತಜ್ಞರಾಗಿರಬೇಕು; ನಿಜವಾಗಿಯೂ ಕೃತಜ್ಞರಾಗಿದ್ದೇವೆ' ಎಂಬುದಾಗಿ, ಡಾ॥ ಅಲ್ಬರ್ಟ್ ಇನ್‌ಸ್ಟಿನ್ ಎಂಬ ವಿಶ್ವವಿಖ್ಯಾತ ವೈಜ್ಞಾನಿಕರು ಮುಕ್ತಕಂಠದ ಪ್ರಸಂಶೆ ಮಾಡಿರುವರು.

ಗಾಂಧಿ, ಒಂದು ಸಮಸ್ಯೆ

'ಮಹಾತ್ಮಾ ಗಾಂಧಿಯವರಲ್ಲಿ ಯೇಸು, ಚಾಣಕ್ಯ ಮತ್ತು ಬಾಪು (ಎಲ್ಲರನ್ನೂ ತಂದೆಯಂತೆ ಪ್ರೀತಿಸುವ ವ್ಯಕ್ತಿ) ಈ ಮೂವರ ಅದ್ಭುತ ಮಿಶ್ರಣವಿದೆ, ಬುದ್ಧನ ತರುವಾಗ ಅವರೇ ಪ್ರಪಂಚಕ್ಕೆ ಮಹಾ ವ್ಯಕ್ತಿ. ಈ ಪ್ರಪಂಚದಲ್ಲಿ ಅವರಿಗಿಂತ ಹೆಚ್ಚಿನ ತಂತ್ರಗಾರನಿರುವುದೂ ಸಾಧ್ಯವಿಲ್ಲ, ನಾನಿದನ್ನು ಅನಾದರ ಭಾವದಿಂದ ಹೇಳುವುದಿಲ್ಲ. ಯಾರದೇ ಹಿಡಿತದಲ್ಲಿ ಸಿಗಲಾರದವರವರು. ಒಂದೇ ಕಾಲದಲ್ಲಿ ಒಂದು ವ್ಯಕ್ತಿಯು ಮಹಾತ್ಮಾ, ಮಾನುಂಡ, ಅವತಾರೀಪುರುಷ, ಹಾಗೂ ಅತ್ಯಂತ ಪ್ರತಾಪಶಾಲಿಯಾದ ವಾಕ್ಪಟು ಆಗಿರುವುದು ಮಾನವೀಯಮುಕ್ಕೆ ವಿರುದ್ಧ. ಆತ್ಮ ಅಹಿಂಸೆ ಅಸಹಕಾರಗಳಲ್ಲಿ ಗಾಂಧಿಜಿ ಅಚಲ ವಿಶ್ವಾಸವುಳ್ಳವರು. ಆದರೆ ಯುದ್ಧದಲ್ಲಿ ಇಂಗ್ಲೆಂಡಿಗೆ ಸಹಾಯ ಮಾಡಲೂ ಅವರು ಸಿದ್ಧರೆ. ಸೆರೆಮನೆಯಲ್ಲಿರುವಾಗ ಅವರು ನೈತಿಕ ವಿಚಾರಕ್ಕಾಗಿ ಉಪವಾಸ ಮಾಡಿದರು. ಆದರೆ ಅದೇ ಉಪವಾಸವು ಅವರ ಬಿಡುಗಡೆಗೂ ಸಾಧನವಾಯಿತು. ಆದರೆ ಬಿಡುಗಡೆ ಅವರ ಉದ್ದೇಶವಿರಲಿಲ್ಲ; ಅವರಿಗೆ ಅವಶ್ಯವೂ ಇರಲಿಲ್ಲ. ಸ್ವೀಕೃತ ಸಿದ್ಧಾಂತದಿಂದ ಅವರು ಎಂದೆಂದಿಗೂ ಕದಲುವುದಿಲ್ಲ.' ಹೀಗೆಂದು ಅಮೇರಿಕಾ ದೇಶದ ಪ್ರಸಿದ್ಧ ಗ್ರಂಥಕರ್ತರಾದ ಜಾನ್‌ಗಂಥರ್ ಹೇಳುತ್ತಾರೆ.'

ವೀರರಲ್ಲಿ ಮಹಾವೀರ

'ಗಾಂಧಿಜಿಯವರ ಪರಿಚಯ ನನಗಿರುವುದೆಂಬುದು ನನ್ನ ಜೀವನದಲ್ಲಿ ನನಗೊಂದು ಭಾಗ್ಯ; ಈ ಜೀವಲೋಕದಲ್ಲಿ ಗಾಂಧಿಯವರಿಗಿಂತ ಶುದ್ಧವಾದ, ಗೌರವಪೂರ್ಣವಾದ, ಧೀರವಾದ, ಪವಿತ್ರವಾದ ಆತ್ಮವುಳ್ಳವರು ಬೇರೆ ಸಿಗಲಾರರು. ಗಾಂಧಿಯವರು ಮನುಷ್ಯರಲ್ಲಿ ಒಬ್ಬ ದೇವತಾ ಮನುಷ್ಯರಾಗಿದ್ದಾರೆ; ವೀರರಲ್ಲಿ ಒಬ್ಬ ಮಹಾವೀರರಾಗಿದ್ದಾರೆ. ದೇಶಭಕ್ತರಲ್ಲಿ ಒಬ್ಬ ಉಜ್ವಲ ದೇಶಭಕ್ತರಾಗಿದ್ದಾರೆ.' ಎಂದು ಗೋಪಾಲಕೃಷ್ಣ ಗೋಖಲೆಯವರು ಮಹಾತ್ಮರನ್ನು ಕೊಂಡಾಡಿರುವರು!

NOTICE

The Bombay Life Assurance Company, Limited.

Notice having been given of the loss of Policies No: 51236 & 16474 on the life of Sri. B K. Venkappa a duplicate policies will be issued unless objection is lodged with us within one month from this date.

Bombay, 6-10-42. | **Jyotendra L. Mehta,** Managing Director.

NOTICE

The Bombay Life Assurance Company, Limited.

Notice having been given of the Loss of Policy No. 84133 on the Life of Mrs. Attavar Bhandarmane Jathamma a duplicate policy will be issued unless objection is lodged with us within one month from this date.

Bombay, 7-10-1942. | **Jyotendra L. Mehta,** *Managing Director.*

ವಿದ್ಯುಚ್ಛಕ್ತಿ ನಿರ್ಬಂಧ

ಇದೇ ತಾ. ೧ರಿಂದ ಮಂಗಳೂರಿನ ಸಿನೆಮಾ ಕಂಪೆನಿಗಳು ಪ್ರಥಮ ದೇಖಾವೆ ೫-೩೦ಕ್ಕೂ ಎರಡನೇ ದೇಖಾವೆ ರಾತ್ರಿ ೯ಕ್ಕೂ (ಇಂಡಿಯನ್ ಸ್ಟೆಂಡರ್ಡ್ ಸಮಯ) ಪ್ರದರ್ಶನ ನಡೆಸುವವು. ಭಾರತ ಸಂರಕ್ಷಣಾ ಕಾಯಿದೆಯನ್ವಯ ಜಿಲ್ಲಾಧಿಕಾರಿಗಳು, ರಾತ್ರೆ ೧೨-೩೦ರಿಂದ ಮುಂಜಾನೆ ೬ರ ತನಕ ವಿದ್ಯುತ್ ಶಕ್ತಿಯನ್ನು ಉಪಯೋಗಿಸಬಾರದಾಗಿ ಆಜ್ಞೆ ಹೊರಡಿಸಿರುವ ಕಾರಣ ಮೇಲ್ಕಂಡ ರೀತಿಯಲ್ಲಿ ಸಮಯ ಬದಲಾವಣೆ ಮಾಡಲಾಗಿದೆ. ವಿದ್ಯುತ್ ಶಕ್ತಿಯನ್ನು ಉತ್ಪಾದಿಸುವ ಯಂತ್ರಗಳಿಗೆ ಅವಶ್ಯವಿರುವ ಡೈಸಿಲ್ ತೈಲವು ಯಥೇಚ್ಛ ಉಪಯೋಗಿಸಲು ಸಿಗುತ್ತಿಲ್ಲವೆಂದೂ ಈ ತೈಲಕ್ಕೆ ರೇಶನಿಂಗ್ ಹಾಕಿದ ಕಾರಣ ವಿದ್ಯುಚ್ಛಕ್ತಿಯನ್ನು ನಿರ್ಬಂಧಿಸಬೇಕಾಯಿತೆಂದೂ ತಿಳಿದುಬರುತ್ತದೆ.



ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, ILMITE.D

ESTD: 1906

ಸಮರಭೂಮಿಯ ಸಂಚಾರ

'ಪಿತೃಭೂಮಿಗಾಗಿ ನಾವು ಹೂಡಿದೀ ಹೋರಾಟದಲ್ಲಿ ಸ್ಟಾಲಿನ್ ಗ್ರಾಡ್ ಸಂಗ್ರಾಮವು ಅತ್ಯಂತ ಭಯಾನಕವಾದುದು. ರಶ್ಯನ್ ಸ್ವಾತಂತ್ರ್ಯ ವೀರರೇ, ಸ್ಟಾಲಿನ್ ಗ್ರಾಡನ್ನು ರಕ್ಷಿಸುವಲ್ಲಿ ಮರ ಣ ಬಂದರೂ ಮುಂಗಳೆಂದೇ ತಿಳಿದು ದೃಢಚಿತ್ತರಾಗಿ ಹೋರಾಡಿರಿ; ಈ ಕಾಳಗದಿಂದ ನಮ್ಮ ವೀರ ಚೇತನವು ಜಗತ್ತನ್ನೇ ಬೆರಗುಗೊಳಿಸೀತು. ಬಂದದ್ದು ಬರಲಿ, ಮೃತ್ಯುವಿಗಂಜದೆ ಸಂಗ್ರಾಮ ರಂಗದಲ್ಲಿ ಮುಂದೊತ್ತಿ ಶತ್ರುವನ್ನು ನಮ್ಮ ರಾಷ್ಟ್ರದಿಂದ ಹೊಡೆದೋಡಿಸಿರಿ' ಹೀಗೆಂದು ರಶ್ಯದ ಅಧಿಕಾರಿ ಪತ್ರಿಕೆ 'ಪ್ರವ್ದಾ' ತನ್ನ ಈಚೆಯ ಅಗ್ರಲೇಖವೊಂದರಲ್ಲಿ ಬರೆದು ರಶ್ಯನ್ ಸ್ವಾತಂತ್ರ್ಯವೀರರನ್ನು ಹುರಿದುಂಬಿಸಿದೆ. ಸ್ಟಾಲಿನ್ ಗ್ರಾಡಿನಲ್ಲಿ, ಬೀದಿ ಬೀದಿಗಳಲ್ಲಿ, ಮನೆ ಮನೆಗಳಲ್ಲಿ, ಅಂತರಾಂತರಗಳಲ್ಲಿ ಆಗುತ್ತಿರುವ ಸಮರವನ್ನು ನೆನೆದರೆಯೇ ನಾವು ನಡುಗಬೇಕು! ಜರ್ಮನರು ಸ್ಟಾಲಿನ್ ಗ್ರಾಡ್ ಬೀದಿಗೆ 'ಹೆಣದ ಹಾದಿ'ಯೆಂದು ಹೆಸರಿಟ್ಟಿದ್ದಾರೆ. ನೆಲದಿಂದ, ಬಾನಿಂದ ಟೀಂಕು ಫಿರಂಗಿ ವಿಮಾನಗಳಿಂದ ಭಯಾನಕ ಸಿಡಿ ಗುಂಡುಗಳು ಅಹರ್ನಿಶಿ ಸುರಿಯುತ್ತಿವೆ. ಪಟ್ಟಣದ ಸುತ್ತುಮುತ್ತಲೂ ಹಬ್ಬಿದ ಹೊಗೆ ಕಾರ್ಮೋಡದಂತೆ ಕಾಣುತ್ತಿದೆ. ಶತ್ರುವನ್ನಿದಿರಿಸುವುದು, ಶತ್ರುವನ್ನು ಓಡಿಸುವುದು, ಶತ್ರುವಿನೊಡನೆ ಹೋರಾಡುವುದು ಇದೇ ರಶ್ಯನ್ ವೀರರ ಇಪ್ಪತ್ತನಾಲ್ಕು ತಾಸುಗಳ ಕಾರ್ಯಕ್ರಮವಾಗಿದೆ. ಜರ್ಮನರಾದರೂ ಹೊಸ ಹೊಸ ಸೈನ್ಯಗಳನ್ನು ತಂದು ವೀರಾವೇಶದಿಂದ ಮುನ್ನುಗ್ಗುತ್ತಲೇ ಇದ್ದಾರೆ. ಜರ್ಮನರು ಸ್ಟಾಲಿನ್ ಗ್ರಾಡನ್ನು ಭೇದಿಸಿ ಒಳಹೊಕ್ಕು ಎರಡು ವಾರಗಳು ದಾಟಿದರೂ, ಇನ್ನೂ ಅದು ಶತ್ರುವಶವಾಗಿಲ್ಲ!

ಸ್ಟಾಲಿನ್ ಕರೆಕೇಳದೆ?

ಕಳೆದ ಹದಿನೈದು ತಿಂಗಳಿಂದ, ಪ್ರಬಲರಾದ ಜರ್ಮನರ ಭೈರವೀರಣಶಕ್ತಿಯೆದುರು ಹೋರಾಡುತ್ತಾ ಸ್ವಾತಂತ್ರ್ಯ ಸಂಗ್ರಾಮವನ್ನು ಮುನ್ನಡೆಸುತ್ತಿರುವ ರಶ್ಯದ ಜನನಾಯಕನಾದ ಸ್ಟಾಲಿನನು ಅಮೇರಿಕದ ಪತ್ರಿಕೋದ್ಯಮಿಗಳೊಡನೆ ಮಾತನಾಡುತ್ತಾ ಮಿತ್ರರಿಂದ ತನಗೆ ಸಿಗುವ ಸಹಾಯದ ವಿವರವನ್ನು ಸ್ಪಷ್ಟಭಾಷೆಯಲ್ಲಿ ಹೇಳಿದ್ದಾನೆ. ಇಂದು ಸ್ಟಾಲಿನ್ ಗ್ರಾಡು ಪತನದ ಹಾದಿ ಹಿಡಿದಿರುವಂಥಾ ರಶ್ಯದ ಗಂಡಾಂತರ ಕಾಲದಲ್ಲಿ, ಮಿತ್ರರಿಂದ ಪರಿಣಾಮಕಾರಿಯಾದ ಸಹಾಯ ಬರಲಿಲ್ಲವಲ್ಲಾ ಎಂದು ಸ್ಟಾಲಿನ್ ಘೋಷಿಸುವುದಿದ್ದರೆ ಅದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರ ರಾಯಭಾರಿಯಾಗಿ ಬಂದಿರುವ ವೆಂಡೆಲ್ ವಿಲ್ಕಿ ಮೊನ್ನೆ ಮೊನ್ನೆ ರಶ್ಯದ ಗಂಡಾಂತರವನ್ನು ಮನಗಂಡು ದ್ವಿತೀಯ ರಣರಂಗವನ್ನು ಸದ್ಯ ತೆರೆಯದಿದ್ದರೆ ನಿರ್ವಾಹವಿಲ್ಲವೆಂದು ಹೇಳಿದ ಮಾತಿಗೂ ಈಗ ಸ್ಟಾಲಿನನು ಮಿತ್ರರು ದ್ವಿತೀಯ ರಣರಂಗ ತೆರೆಯಬೇಕೆಂದು ಹೇಳಿದ ಮಾತಿಗೂ ಎಷ್ಟರ ಮಟ್ಟಿಗೆ ಹೋಲಿಕೆಯಿದೆಯೆಂಬುದನ್ನು ವಿಚಾರಿಸಿದರೆ ಮಿತ್ರರು ರಶ್ಯಕ್ಕೆ ಮಾಡಿದ ಉಪಕಾರವೆಷ್ಟೆಂಬುದು ಸ್ಪಷ್ಟವಾಗುವುದು. ವೆಂಡೆಲ್ ವಿಲ್ಕಿಯವರು ರಶ್ಯನರಿಗಾದ ವಿಪತ್ತನ್ನು ಮನಕರಗುವಂತೆ ವಿವರಿಸಿ ಅಮೇರಿಕನರನ್ನು ಎಚ್ಚರಿಸಿದ್ದಾರೆ. ಕಳೆದ ಹದಿನೈದು ತಿಂಗಳ ಘೋರ ಸಂಗ್ರಾಮದಲ್ಲಿ ರಶ್ಯವು ಎಂತಹ ಅಪಾಯಕ್ಕೀಡಾಗಿದೆಯೆಂಬುದನ್ನು ಅವರು ಕೊಟ್ಟಿರುವ ಅಂಕೆ ಸಂಖ್ಯೆಗಳಿಂದ ತಿಳಿದುಕೊಳ್ಳಬಹುದು. ಇಷ್ಟರಲ್ಲಿ ರಶ್ಯದ ಐದು ಮಿಲಿಯ ಸ್ವಾತಂತ್ರ್ಯ ಯೋಧರು ಸಮರ ಯಜ್ಞದಲ್ಲಿ ಆಹುತಿಯಾದರು, ಅರುವತ್ತು ಮಿಲಿಯ ರಶ್ಯನರು ಜರ್ಮನರ ಪದಾಕ್ರಾಂತರಾಗಿ ಕೊತ್ತಳ ತುಳಿಯಲ್ಪಡುತ್ತಿದ್ದಾರೆ, ಆಹಾರ ಮತ್ತು ಯುದ್ಧೋಪಯುಕ್ತ ಸಾಧನ ಸಾಮಗ್ರಿಗಳು ಅವರಿಗೆ ದುರ್ಲಭವಾಗಿದೆ, ಮುಂಬರುವ ಹಿಮಗಾಲದಲ್ಲಿ ರಶ್ಯನರು ಅತ್ಯರಕ್ಷನೆ ಮಾಡಿಕೊಳ್ಳುವುದು ಮಾತ್ರವಲ್ಲದೆ ಶತ್ರುವನ್ನು ಹಿಮ್ಮೆಟ್ಟಿಸಲೂ ಬೇಕಾಗಿದೆ. ಇದುವರೆಗೇ ರಶ್ಯವು ಅನೇಕ ಫಲ ಸಂಪತ್ಸಮೃದ್ಧಿಯುಳ್ಳ ಭೂಭಾಗಗಳನ್ನು ಕಳಕೊಂಡಿದೆ, ವ್ಯಾಪಾರ ವಹಿವಾಟು ಮೋಸ್ಕೋ, ಕೌಕಸಸ್ ಮಾರ್ಗ ಸೌಕ ರ್ಯಾದಿಗಳೂ ಪ್ರತಿಬಂಧಿಸಲ್ಪಟ್ಟಿವೆ. ಸ್ಟಾಲಿನ್ ಗ್ರಾಡ್ ಪತನೋನ್ಮುಖವಾಗಿದೆ. ಇಂಥಾ ವಿಪತ್ಪರಂಪರೆ ಬಂದಿರುವಾಗ್ಯ, ವೈರಿಯು ಇನ್ನೂ ರಣ ರಥನದಿಂದ ಮುಂದೊತ್ತಲೇ ಇರುವಾಗ, ಸ್ಟಾಲಿನ್ ಮಿತ್ರರಿಂದ ತನಗೆ ಸಾಕಷ್ಟು ಸಹಾಯ ಸಿಗಲಿಲ್ಲವಲ್ಲಾ ಎಂದು ಹೇಳಿದರೆ ಅದರಲ್ಲಿ ತಪ್ಪೇನಿದೆ?

ಮಿತ್ರರಾದರೋ ಅಪಾಯಕರವಾದ, ಅರ್ಕಟಿಕ ಹಾದಿಯಿಂದ ರಶ್ಯಕ್ಕೆ ಅಲ್ಪ ಸ್ವಲ್ಪ ಸಹಾಯಕಳುಹಿಸಿದರೆಂಬುದನ್ನು ನಾವು ಮರೆಯಲಾಗುವುದಿಲ್ಲ. ಅಂತಹ ಸಹಾಯವು ಏನೋ ಕಿಂಚಿತ್ ಪ್ರಯೋಜನ ಕೊಟ್ಟಿರಬಹುದು. ಆದರೆ ಇಂದಿನೀಕಾಲದಲ್ಲಿ ಸಿಗಬೇಕಾದ 'ಸಹಾಯ'ವೆಂದರೆ ಅಂತಿಂತಹ ಅಲ್ಪ ಸ್ವಲ್ಪ ಸಹಾಯವಲ್ಲ. ಶತ್ರುವನ್ನು ಬಗ್ಗುಬಡಿಯಲು, ಮಿತ್ರರು ಸಾವಿರಾರು ವಿಮಾನಗಳನ್ನೇರಿ ಒಮ್ಮೆಲೇ ಅಕ್ಷನ ಮೇಲೆ ಬಾಂಬಿನ ಕೆಂಡದ ಮಳೆ ಕರೆದು ಬೆದರಿಸಿ ಬಿಟ್ಟಿಟ್ಟಬೇಕು. ರಶ್ಯದಲ್ಲಿ ಮಾತ್ರವಲ್ಲ ಇಡಿಯ ಪ್ರಪಂಚದಲ್ಲಿಯೇ ಶತ್ರುವಿನ ಹೆಸರು ನಿರ್ನಾಮವಾಗಬೇಕು! ಒಂದುಕಡೆಯಿಂದ ರಶ್ಯನ್ ಸ್ವಾತಂತ್ರ್ಯವೀರರು ಜರ್ಮನಿಗೆ ಈ ತರದ ಪ್ರತಿಭಟನೆ ಕೊಡುತ್ತಿರುವಾಗ, ಇನ್ನೊಂದು ಕಡೆ ಮಿತ್ರರೂ ಶತ್ರುವನ್ನು ಘೋರರೂಪದಿಂದ ಎದುರಿಸಿ ನಿಂತರೆ ಆಗ ಮಾತ್ರ ಯುದ್ಧವನ್ನು ಯಶಸ್ವಿಯಾಗಿ ಗೆಲ್ಲಬಹುದು. ಇದರಿಂದ ರಶ್ಯಕ್ಕೆ ಮಾತ್ರ ಉಪಯೋಗವಲ್ಲ, ಮಿತ್ರರೂ ಬದುಕುವ ದಾರಿಯೆಂದರೆ ಇದೇ ಆಗಿದೆ. ರಶ್ಯ ಮತ್ತು ಜರ್ಮನರ ಈ ಯುದ್ಧದಲ್ಲಿ ರಶ್ಯನರು ಮುಂದೆ ಗೆಲ್ಲುವರೋ ಸೋಲುವರೋ ಎಂಬುದು ಸ್ಟಾಲಿನ್ ಚಿಂತೆಯಿಂದಿಲ್ಲ. ಅಂತೂ ಪ್ರಪಂಚವನ್ನೇ ನುಂಗಬೇಕೆಂದು ಬಂದ ನಾಜಿ ಶಕ್ತಿಯನ್ನು ಕಳೆದ ಹದಿನೈದು ತಿಂಗಳಿಂದ ಪ್ರತಿಭಟಿಸಿ, ವೈರಿಗ ಅಪಾರ ನಷ್ಟಕಷ್ಟಗಳನ್ನು ಕೊಟ್ಟ ತನ್ನ ವೀರ ಸೈನಿಕರ ಸಾಹಸವನ್ನು ಸ್ಟಾಲಿನ್ ಕೊಂಡಾಡಿದನು. ಸ್ಟಾಲಿನನೆಂದೇನು, ಇಡಿಯ ಪ್ರಪಂಚವೇ ಇದಕ್ಕಾಗಿ ರಶ್ಯನರನ್ನು ಇಂದು ಕೊಂಡಾಡುತ್ತದೆ! ಲೋಕ ಸ್ವಾತಂತ್ರ್ಯದ ಒಂದಂಗವಾಗಿ ರಶ್ಯವು ಜಗತ್ತಿನೆದುರು ಮಾಡಿ ತೋರಿದ ಸಾಹಸದಬಲಿದಾನವೆಂದರೆ ಇತಿಹಾಸದಲ್ಲಿ ಚಿರಸ್ಮರಣೀಯವಾದುದು. ಆದರೆ ಇಂಥಾ ಸಮಯದಲ್ಲಿ ದ್ವಿತೀಯ ರಣರಂಗವೊಂದನ್ನು ತೆರೆದು ಈ ಅಂತರ್‌ರಾಷ್ಟ್ರೀಯ ಗಂಡಾಂತರವನ್ನು ತಪ್ಪಿಸಲು ಮುಂದೆ ಬನ್ನಿ ಎಂದು ಕರೆಯೀಯುದಿ ಸ್ಟಾಲಿನನ ಸ್ವಾತಂತ್ರ್ಯದ ಕರೆಗೆ ಮಿತ್ರರು ಮನ್ನಣೆ ಕೊಡಲಾರರೆ? ಮನ್ನಣೆ ಕೊಡದಿದ್ದರೆ ಅಂತ್ಯ ಜಯವು ತಮಗೇ ಸಿಕ್ಕಿತೆಂಬ ಧೈರ್ಯವೆಂತು ಹೇಗೆ?

ಹಿಟ್ಲರ್ ಭಾಷಣದಲ್ಲಿ

'ಬೃಹತ್ ಜರ್ಮನಿಯ ಹಣೆಬರಹವನ್ನು ಜರ್ಮನರು ತಮ್ಮೆದೆಯ ರಕ್ತದಿಂದ ಬರೆದಿದ್ದಾರೆ, ಅದನ್ನು ಯಾರಿಗೂ ಎಂದೆಂದಿಗೂ ಅಳಿಸಿಬಿಡುವುದು ಸಾಧ್ಯವಿಲ್ಲ. ಜರ್ಮನ್ ಜನತೆಯೆಲ್ಲಾ ಒಂದಾಗಿ ಗೌರವ ಮತ್ತು ಸ್ವಾತಂತ್ರ್ಯದ ಸಲುವಾಗಿ ಹೋರಾಡುತ್ತದೆ' ಹೀಗೆಂದು ಹಿಟ್ಲರ್ ಕಳೆದ ೩ನೇ ತಾರೀಕಿನ ದಿನ ಬ್ಬರ್ಲಿನನಲ್ಲಿ ಸ್ಪೋರ್ಟ್ ಪಲೇಸ್ಸಿನಲ್ಲಿ ಮಾಡುತ್ತಾ ಘನಗರ್ಜನೆಗೈದನು! ಹಿಟ್ಲರ್ ಮಿತ್ರ ರಾಷ್ಟ್ರಗಳನ್ನು ಹಂಗಿಸಿದನು 'ರಶ್ಯದಲ್ಲಿ ನಾವು ಡಾನ್ ನದಿಯನ್ನು ದಾಟಿ ವೋಲ್ಗಾ ನದಿಯನ್ನು ಮುಟ್ಟಿದೆವು, ಸ್ಟಾಲಿನ್ ಗ್ರಾಡಿಗೆ ಧಾಳಿಯಿಟ್ಟೆವು ಅದನ್ನೂ ಸ್ವಾಧೀನ ಮಾಡುವುದು ಖಂಡಿತ. ರಶ್ಯದಲ್ಲಿ ನೂರಕ್ಕೆ ಐವತ್ತು ಅರುವತ್ತರಷ್ಟರ ಕಬ್ಬಿಣ ನಮ್ಮ ಕೈಸೇರಿದೆ. ನಮಗೆ ಅಲ್ಲಿ ಗೋಧಿ ಸಿಕ್ಕಿತು, ಎಣ್ಣೆ ಸಿಕ್ಕಿತು. ಇದು ನಮ್ಮ ಮಹತ್ವದ ವಿಜಯವಲ್ಲವೆಂದು ಬ್ರಿಟಿಷರು ಬೇಕಾದರೆ ಹೇಳಲಿ. ಡಿಪ್ಪೆ ಮೇಲೆ ವಿಮಾನವೇರಿ ಬಂದು ಹಾಕಿದ ಬಾಂಬುಗಳ ವಿಷಯ ತಮ್ಮ ಸಾಹಸ ಕೊಚ್ಚಿಕೊಳ್ಳಲಿ' ಅವರ ದೃಷ್ಟಿಯಲ್ಲಿ ನಮ್ಮ ವಿಜಯವೇನೂ ಮಹತ್ವದಿಲ್ಲದಿರಬಹುದು, ನಾವು ಮಾತ್ರ ಅವರ ದ್ವಿತೀಯ ರಣರಂಗವೊಂದನ್ನೂ ಲೆಕ್ಕಿಸದೆ ಮುನ್ನಡೆವೆವು, ಯುದ್ಧದ ಮೂರು ವರ್ಷಗಳ ಘಟನೆಗಳು ನಮಗೆ ಅಭಿಮಾನವೆನಿಸಿದೆ. ನಮ್ಮ ಉದ್ದೇಶವನ್ನು ಕ್ರಮಪ್ರಕಾರ ನಾವು ಸಾಧಿಸಿಕೊಳ್ಳುವೆವು' ಎಂದು ಹಿಟ್ಲರ್ ಮೂದಲಿಸಿದನು. ಈ ಸಲದ ಛಳಿಕಾಲದಲ್ಲೂ ಜರ್ಮನರು ಹೋರಾಡುವರೆಂಬುದನ್ನು ಹೇಳುತ್ತಾ, ಕಳೆದ ಸಲದೊರೆದ ಅನುಭವದಿಂದ ಈ ಸಲ ಅದಕ್ಕೆ ಬೇಕಾದ ಪ್ರತಿಕಾರ ಸಿದ್ಧಮಾಡಿರುವೆವೆಂದೂ, ಈ ಹಿಮಗಾಲದಲ್ಲಿ ರಶ್ಯನರಿಗೆ ಹೊದೆಯುವ ಬಟ್ಟೆ ಉಣ್ಣುವ ಆಹಾರವೇ ಇಲ್ಲವಾದೀತೆಂದೂ ಜರ್ಮನ್ ಸರ್ವಾಧಿಕಾರಿ ಘೋಷಿಸಿದನು!

ರಶ್ಯದ ಸಮರವನ್ನೂ ಹಿಟ್ಲರ್ ಭಾಷಣವನ್ನೂ ತುಲನೆಮಾಡಿ ನೋಡಿದರೆ ಕೆಲವು ವಿಷಯಗಳು ಹೊಳೆಯದಿರವು. 'ಕೆಲವೇ ತಿಂಗಳಲ್ಲಿ ಡಾನ್ ನದಿಯನ್ನು ದಾಟಿ ವೋಲ್ಗಾ ನದಿವರೆಗೆ ಬಂದು ಸ್ಟಾಲಿನ್ ಗ್ರಾಡನ್ನೂ ಮುತ್ತಿದ್ದೇವೆ, ಇನ್ನೇನು ಬೇಕು?' ಎಂದು ಅತನ ಪ್ರಶ್ನೆಯಾಗಿದೆ. ಎಂದರೆ ಅದಕ್ಕಿಂತ ಮುಂದೊತ್ತಿ ಹೋಗುವುದು ಈ ಸಲ ಆತನಿಗೆ ಪೂರೈಸುವುದಿಲ್ಲ ವೆಂಬುದೂ ಅರ್ಥವಾಗುತ್ತದೆ. ಒಂದೇ ಒಂದು ಕಡೆಯಲ್ಲಿಯೂ ಮೋಸ್ಕೋ ಲೆನಿನ್ ಗ್ರಾಡ್‌ಗಳ ವಿಷಯ ಹೇಳಿಲ್ಲ. ಅಂತೂ ಅವನ್ನು ಕೈವಶಪಡಿಸಿಕೊಳ್ಳುವುದೂ ಸಾಧ್ಯವಾಗಲಾರದು. ನಾವು ಹಳೆದ ಸಲ ಬರೆದಂತೆ ಇಷ್ಟರಲ್ಲಿಯೇ ಹಿಮವಾಪಿಸಿ ರಶ್ಯದಲ್ಲಿ ಹರಿಯತೊಡಗುವುದರಿಂದ, ಹಿಟ್ಲರನು ಸ್ಟಾಲಿನ್ ಗ್ರಾಡನ್ನು ಮುತ್ತಿರುವುದೊಂದು ತೃಪ್ತಿಯನ್ನು ಮಾತ್ರ ಪಟ್ಟುಕೊಳ್ಳಬೇಕಲ್ಲದೆ ಮತ್ತೇನೂ ಆಗುವಂತೆ ತೋರುವುದಿಲ್ಲ. ಹಾತ್ರವಲ್ಲದೆ ಹಿಂದಿನ ಸಲದಂತೆ ಹಿಟ್ಲರನ ಈ ಸಲದ ಭಾಷಣದಲ್ಲಿ ರಶ್ಯವನ್ನು ನಿರ್ನಾಮ ಮಾಡಿಬಿಡುತ್ತೇನೆಂಬ ಅಟ್ಟಹಾಸವೂ ಇಲ್ಲ. ಹಿಟ್ಲರನಂತ ಗೂಬೆಲ್ಸನೂ ಹಿಮಗಾಲದ ಭೀತಿಗೆ ಬೆದರಿರುವನೆಂಬುದು ಆತನು ಈ ಸಲ ಮಾಡಿದ ಭಾಷಣದಿಂದಲೂ ವ್ಯಕ್ತವಾಗುತ್ತದೆ. ಅಂತೂ ರಶ್ಯವನ್ನು ನಿರ್ನಾಮ ಮಾಡಿಬಿಡುವ ಧೈರ್ಯ ಹಿಟ್ಲರನಿಗೆ ಇಲ್ಲದಿರುವಾಗ, ರಶ್ಯವು ಇನ್ನೂ ವೀರಾವೇಶದಿಂದ ಹೋರಾಡುತ್ತಾ ಶತ್ರುವನ್ನು ಹಿಮ್ಮೆಟ್ಟಿಸುವ ಹುರುಪಿನಿಂದ ಇರುವಾಗ, ಕಾಕಸಸ್‌ನಂತ ಎಣ್ಣೆಯ ಗಣಿ ಮೋಸ್ಕೋ, ಲೆನಿನ್ ಗ್ರಾಡ್‌ಗಳಂತಹ ನಗರಗಳು ಇನ್ನೂ ರಶ್ಯನರ ಕೈಯಲ್ಲಿ ಉಳಿದಿರುವಾಗ, ರಶ್ಯವು ಹಿಟ್ಲರನ ಹೊಡೆತಕ್ಕೆ ಅಪ್ಪಳಿಸಿ ಹೋದೀತೆಂದು ಹೇಳಿದರೆ ಯಾರು ನಂಬುವರು?

ಚೀನದ ಮೇಲೆ ಮರುಕ!

ಒಮ್ಮಿಂದೊಮ್ಮೆಲೇ ಈಗ ಯುರೋಪಿನ ರಾಷ್ಟ್ರಗಳಿಗೆ ಚೀನದ ಮೇಲೆ ಮರುಕ ಹುಟ್ಟಿದೆ! ಅದು ಜಪಾನಿನವರು ಹೂಡಿದ ಹೋರಾಟವನ್ನು ಜಾಯಿತುಂಬಾ ಹೊಗಳುವ ಸಾಹಸವಾಗಲ ಗುತ್ತಿದೆ. ಜಪಾನಿನ ಪ್ರಚಂಡ ಶಕ್ತಿಯೆದುರು ಕಳೆದ ನಾಲ್ಕೈದು ವರ್ಷಗಳಿಂದ ಚೀನವು ಮಾಡಿದ ಭೀಷಣ ಸಂಗ್ರಾಮವನ್ನು ವಿಚಾರಿಸಿದರೆ ಯುರೋಪಿಯನರು ಮಾತ್ರವೇನೇನು ಇಡಿಯ ಪ್ರಪಂಚವೇ ಬೆರಗಾಗಬೇಕಾದುದೂ ಸರಿಯೆ. ಆದರೆ ಯುರೋಪಿಯನರು ಬೆರಗಾಗಲು ಇನ್ನೊಂದು ಕಾರಣವೂ ಇದೆ. ಯಾವ ಜಪಾನೀಯರು ಬ್ರಿಟನು ಅಮೇರಿಕಗಳಂಥಾ ಪ್ರಬಲ ರಾಷ್ಟ್ರಗಳೂ ಎದೆಗುಟ್ಟುವಷ್ಟೊಳಗಾದರೋ ಅಂತಹ ಕುತಂತ್ರಶಾಲೀ ಪ್ರಚಂಡ ರಾಷ್ಟ್ರವನ್ನು ಚೀನವೊಂದೇ ಕಳೆದ ನಾಲ್ಕು ವರ್ಷಗಳಿಂದ ವಿರೋಧಿಸಿ ಎದುರಿಸುವುದು ಅದ್ಭುತವಲ್ಲದೇ ಬೇರೆ. 'ಚೀನದ ಸ್ವಾತಂತ್ರ್ಯಕ್ಕಾಗಿ ಇಂದು ಚೀನೀಯರು ಹೋರಾಡುತ್ತಿರುವುದರೊಡನೆ, ಇಡಿಯ ಜಗತ್ತಿನ ಸ್ವಾತಂತ್ರ್ಯಕ್ಕಾಗಿಯೂ ಅವರು ಹೆಣಗಾಡುತ್ತಿದ್ದಾರೆ, ಬರ್ಮದ ಯುದ್ಧದಲ್ಲಿ ಚೀನದ ವೀರರು ಕೊಟ್ಟ ಸಂಗ್ರಾಮವನ್ನು ನೋಡಿ ಯಾರಾದರೂ ತಲೆದೂಗಬೇಕು! ಬರ್ಮದೇಶದಲ್ಲಿ ಹಾಗೆ ಹೋರಾಡಲು ಅವರಿಗೆ ನೈಯುಕ್ತಿಕ ಕಾರಣವೊಂದೂ ಇತ್ತು, ಬರ್ಮಾ ರಸ್ತೆಯನ್ನು ಉಳಿಸಿಕೊಂಡರೆ ತಮ್ಮ ದೇಶಕ್ಕೆ ಸಾಧನ ಸಾಮಗ್ರಿಗಳನ್ನು ಸಾಗಿಸಲು ಅನುಕೂಲವಾಗುವುದೆಂಬ ಮಹದಾಶೆ ಅವರದಾಗಿತ್ತು. ಬರ್ಮಾ ರಸ್ತೆ ಜಪಾನಿನ ವಶವಾದ ಬಳಿಕ ಅವರ ಕೈಕಟ್ಟಿಹೋಗಿದೆ. 'ಬರ್ಮಾ ರಸ್ತೆ ಹೋದರೂ ನಾವು ಆಸಾಂ ರಸ್ತೆ ಮಾಡಿದ್ದೇವೆ, ಅದರಿಂದಲೂ ಸಾಗಿಸಲು ಆಗದಿದ್ದರೆ ಆಕಾಶದ ಮೂಲಕ ಸಾಗಿಸುತ್ತೇವೆ' ಎಂದು ಬ್ರಿಟಿಷರೂ ಅಮೇರಿಕನರೂ, ಚೀನೀಯರಿಗೆ ಬಾಯಿ ಭರವಸೆಯಿತ್ತರೇನೋ ಸರಿ. ಆಮೇರಿಕದಲ್ಲಿ ಯುದ್ಧೋದ್ಯಮ ಹೆಚ್ಚುತ್ತಿದ್ದರೂ ಚೀನಕ್ಕೆ ಬರುವುದು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ ಎಂದು ಚೀನೀ ಸುದ್ದಿವಾತೆಯ ಪ್ರತಿನಿಧಿಯೊಬ್ಬನು ಮೊನ್ನೆಮೊನ್ನೆ ದಿಲ್ಲಿಯಲ್ಲಿ ಹೇಳಿದನು. ವಿಶ್ವದಲ್ಲಿ ಜಪಾನಿನ ಅಬ್ಬರವನ್ನು ನಿಲ್ಲಿಸಬೇಕೆಂಬ ಹೃತ್ಪೂರ್ವಕ ಉದ್ದೇಶವಿದ್ದರೆ, ಬ್ರಿಟನು ಅಮೇರಿಕಗಳು ಈಗಲೀಗಲೇ ಚೀನಕ್ಕೆ ಇನ್ನಷ್ಟು ಸಹಾಯ ಕಳುಹಿಸಬೇಕು. ಚೀನೀಯರು ಗೆಲ್ಲುವಂತೆ ಮಾಡಬೇಕು. ಚೀನವು ಸೋತರೆ—ಹಾಗಾಗದಿರಲಿ ಎಂದು ನಮ್ಮ ಪ್ರಾರ್ಥನೆ—ಇದೇ ವಿಶ್ವವೇ ಜಪಾನಿನ ತೆಕ್ಕೆಕ್ಕೆ ಸಿಕ್ಕಿದಂತೆ! ಬೇಗಬೇಗನೇ ಬರ್ಮವನ್ನು ಪುನಃ ಸ್ವಾಧೀನಪಡಿಸಬೇಕೆಂದು ಹೇಳಿದ್ದಾರೆ. ಭಾರತದಿಂದ ಬರ್ಮದ ಮೇಲೆ ಧಾಳಿಯಿಡುವ ಯೋಜನೆ ಮಾಡಿರುವರೇ ಹೇಗಲು ಎಂಬುದು ನೋಡಬೇಕು, ಚೀನಕ್ಕೆ ಸಾಕಷ್ಟು ಸಾಧನ ಸಾಮಗ್ರಿ ಕಳುಹಿಸುವುದರೊಡನೆ ಇತ್ತ ಬರ್ಮವನ್ನು ಪುನಃ ಸ್ವಾಧೀನಪಡಿಸಿಕೊಂಡರೆ, ಈ ಇಷ್ಟರಲ್ಲಿ ಯುದ್ಧದಲ್ಲಿ ಜಪಾನು ಜರ್ಜರವಾಗುವುದು ಖಂಡಿತ. ಬರ್ಮವನ್ನು ವಶ ಪಡೆದರೆ ಬರ್ಮಾ ರಸ್ತೆಯೂ ಸ್ವಾಧೀನವಾಗಿ ಚೀನೀಯರು ಇಮ್ಮಡಿ ಸಾಹಸದಿಂದ ಹೋರಾಡುವರು. ಕೇವಲ ಚೀನದ ಮೇಲೆ ಮರುಕಪಡುವುದೂ, ಚೀನೀಯರನ್ನು ಕೊಂಡಾಡುವುದೂ ಯುದ್ಧಕಾಲದ ಉದ್ದೇಶವಂತಿಯಲ್ಲ.

ನೋಟೀಸು

ಕಾರ್ಕಳ ಡಿ ಮು ಕೋರ್ಟಿನಲ್ಲಿ

O P No 74/1942

1 ಸುಶೀಲಾ ಬ್ಯಾ
2 ಗಣೇಶ ಸ್ವಂತದು ಒಗ್ಗೆ next
3 ವೇಣುಗೋಪಾಲ friend ನಾನು
ಚಂದ್ರ B A L T ಕಾರ್ಕಳ ಕೃಷಿಯಲ್ಲಿ ದುಡಿವವರು . ಅರ್ಜಿದಾರರು

ಮತ್ತು

ತಳಿ ಬ್ಯಾಷ್ಟೆ, ಪ್ರಸ್ನ ಹೆಂಡ್ತಿ ಮೈಸೂರು ಸಂಸ್ಥಾನಡ ಶಿವಮೊಗ್ಗ ಟೌನ್ ತಿಗಳಕೇರಿಯಲ್ಲಿ ಒಳ್ಳಿರುವವಳು ಎದುರಾಳಿ.

ಸದ್ರಿ ಎದುರಾಳಿಗೆ ಪ ಕಕರ ಸವ ಸ್ತರೀ ಕೊಡೂ ಈ ಮುಂದಿನ ತಿಳಿಯಪಡಿಸುವದೇನೆಂದರೆ —

ಕಾರ್ಕಳ ತಾಲೂಕು ಕಾರ್ಕಳ ಕೃಷಿಯಲ್ಲಿದ್ದು ಮೃತರಾದ ಶೀನಯ್ಯ ಶೆಟ್ಟಿಯಾರ್ ಸ್ಟ್ರೋಪ್ಸ್ ಮುಂತಾದ ಸೇಕು ಬಾಬತಿನ ಒದಗಿದ ಹಾಳಿ ಸಾಲ ವಗೈರೆಗಳನ್ನು ವಸೂಲುಮಾಡುವರೆ ಅವರು ಬರದಿಟ್ಟ ವೀಲು ಪ್ರಕಾರ ತಾವು ಪಡೆದುದರೆ ತಾ sec 372 of Act X of 1925 ಪ್ರಕಾರ ದಾವಿಸು ಸರ್ಟಿಫಿಕೇಟು ತಮಗೆ ಕೊಡಬೇಕೆಂತ, ಅರ್ಜಿದಾರರು ಅರ್ಜಿ ಕೊಟ್ಟಿರುವುದರಿಂದ ಈ ಕುರಿತು ತುಟ್ಟಿಕ್ಕೇನ ಉಳ್ಳಂತವರು ತಾ 26-10-1942ನೇ ಹಗಲು 10 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜ್ರಾಗಿ, ತಮ್ಮ ಆಕ್ಷೇಪಗಳನ್ನು ದಾಖಲು ಮಾಡಿ ರುಜುಪಡಿಸತಕ್ಕದ್ದು. ತಪ್ಪಿದ್ರೆ ಸದ್ರಿ ವ್ಯವಹಾರವು ಅರ್ಜಿದಾರರ ಗುರ್ತಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸಲಾಗುತ್ತದೆ.

ಕಾರ್ಕಳ 7-10 42 } K Mahabala Hegde, B A, B L
ಅರ್ಜಿದಾರನ ವಕೀಲ್

ರೈಲು ಬಂಡಿಗಳ ಸಮಯ

ಗಾಡಿಗಳು ಹೊರಡುವ ಗಂಟೆ ತಪ್ಪುವ ಗಂಟೆ

ಮೆಲಬಾರು ಎಕ್ಸ್

ಪ್ರೆಸ್ (ಮೈಲ್) 8 5 ಬೆಳಿಗ್ಗೆ 6.5 ಸಾಯಂ.
ಬೆಸ್ಸ (ಪೆಸೆಂಜರ್) ಸಾಯಂ 5 20 9.55ಬೆ.

ಮಲಬಾರ್ ಎಕ್ಸ್‌ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಸ್ವದೇಶಾಭಿಮಾನಿ

ತಾರೀಕು 9—10—1942

ಪಾರ್ಲಿಮೆಂಟಿನಲ್ಲಿ ಹೊಸ ಮಸೂದೆ

ಹಿಂದುಸ್ಥಾನದ ಆಡಳಿತವನ್ನು ಸಾಗಿಸಲು, ಬ್ರಿಟಿಷ್ ಸರಕಾರವು, ತಾತ್ಕಾಲಿಕವಾಗಿ ಒಂದು ಹೊಸ ಮಸೂದೆಯನ್ನು ತಯಾರಿಸಿ ಪಾರ್ಲಿಮೆಂಟಿನಲ್ಲಿ ಮಂಡಿಸಿದೆ. ಇದರ ಪ್ರಥಮ ವಾಚನವು ಇಷ್ಟರಲ್ಲಿಯೇ ನಡೆದಿದ್ದು, ದ್ವಿತೀಯ ವಾಚನವು ಬೇಗನೇ ಪ್ರಾರಂಭವಾಗಲಿದೆ. ಈ ದ್ವಿತೀಯ ವಾಚನದ ಕಾಲದಲ್ಲಿ ದೀರ್ಘ ಚರ್ಚೆ ನಡೆಯಲಿರುವುದೆಂದು ಹಾರೈಸಲಾಗಿದೆ. ಅಂತೂ, ಪಾರ್ಲಿಮೆಂಟಿನ ಸ್ವತಂತ್ರ ಕೂಲಿಗಾರ ಪಕ್ಷದ ಸದಸ್ಯರು ಕೆಲವರು ಆ ಮಸೂದೆಯನ್ನು ನಿರಾಕರಿಸಬೇಕೆಂಬ ಒಂದು ನಿರ್ಣಯವನ್ನು ಮಂಡಿಸಲಿರುವರು.

೧೯೩೫ನೆಯ ಇಸವಿಯ ಇಂಡಿಯಾ ಏಕ್ಟಿನ ೯೩ನೆಯ ಕಲಮಿನಂತೆ, ಪ್ರಾಂತಗಳ ಗವರ್ನರರು, ಕಾಂಗ್ರೆಸು ಪ್ರಾಂತಗಳ ಆಡಳಿತವನ್ನು ವಹಿಸಿಕೊಂಡು ಈಗ ಮೂರು ವರ್ಷಗಳು ಸಮೀಪಿಸುತ್ತಾ ಬಂದಿವೆ. ಈ ಅವಧಿಯಲ್ಲಿ ಹೊರಡಿಸಿದ ಪ್ರಕಟಣೆಗಳಿಗೆ, ಪ್ರತಿವರ್ಷ ಪಾರ್ಲಿಮೆಂಟಿನಲ್ಲಿ ನಿರ್ಣಯ ಮಂಜೂರು ಮಾಡಿ ಜೀವದಾನ ಕೊಡಲಾಗಿತ್ತು. ಆದರೆ, ಅಂತಹ ಪ್ರಕಟಣೆಗಳ ಅವಧಿ ಮೂರು ವರ್ಷಗಳಿಂದಲೂ ಮಿಕ್ಕಬಾರದೆಂದು ೯೩ನೇ ಕಲಮಿನಲ್ಲಿರುವುದರಿಂದ ಯುದ್ಧಾನಂತರ ೧೨ ತಿಂಗಳ ವರೆಗೆ ಆ ಅವಧಿಯನ್ನು ಮುಂದುವರಿಸುವರೆ ಈ ಹೊಸ ಮಸೂದೆ ತರಲಾಗುತ್ತದೆ. ಇದು ಮಾತ್ರವಲ್ಲದೆ, ಎಮರ್ಜನ್ಸಿ ಕೋರ್ಟುಗಳಿಂದ ಘಾತಿ ಶಿಕ್ಷೆ ವಿಧಿಸಲ್ಪಟ್ಟು ಹೈಕೋರ್ಟಿನವರು ಇಲ್ಲವೇ ಹೈಕೋರ್ಟು ನ್ಯಾಯಾಧೀಶರು ಆ ಶಿಕ್ಷೆಯನ್ನು ಕಾಯಂ ಮಾಡಿದ್ದರೆ, ಅಂಥ ಶಿಕ್ಷೆ ವಿರುದ್ಧ ಪ್ರಿವಿಕೌನ್ಸಿಲಿನಲ್ಲಿ ಅಪೀಲು ಮಾಡುವ ಹಕ್ಕನ್ನೂ ಈ ಹೊಸ ಮಸೂದೆಯ ಪ್ರಕಾರ ರದ್ದು ಮಾಡಲಾಗುವುದು. ಇವಲ್ಲದೆ ಇನ್ನೂ ಕೆಲವು ಸಣ್ಣ ಪುಟ್ಟ ವಿಚಾರಗಳಿವೆ. ಅಂತೂ ಗವರ್ನರ ಏಕತಂತ್ರಾಧಿಕಾರಕ್ಕೆ ಬೆಂಬಲ ಹಾಗೂ ಪ್ರಜಾಸತ್ತೆಯ ಬದಲು ಅಧಿಕಾರಸತ್ತೆಯ ಸ್ಥಾಪನೆಗೆ ಇದರಿಂದ ಅವಕಾಶ ಕೊಟ್ಟಂತಾಗುವುದು.

ಹೇಗೂ ಈಗ ಈ ಹೊಸ ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದ ವಿಚಾರ, ಮೊನ್ನೆ ಮೊನ್ನೆ ಅಮೆರಿ ಚರ್ಚಿಲರು ಮಾಡಿದ ಭಾಷಣ, ದೇಶ ಸರ್ವತ್ರ ನಡೆಯುತ್ತಿರುವ ದಬ್ಬಾಳಿಕೆಗಳನ್ನೆಲ್ಲಾ ಪರಿಶೀಲಿಸಿದರೆ ಬ್ರಿಟಿಷ ಪ್ರಭುತ್ವ ಪಕ್ಷವು ಭಾರತದ ಮನವೊಲಿಸುವುದರಲ್ಲಿಲ್ಲವೆಂದೇ ಸ್ಪಷ್ಟವಾಗುತ್ತದೆ. ಸ್ವತಂತ್ರ ಕೂಲಿಗಾರ ಪಕ್ಷದವರು ನಿರಾಕರಣೆಯ ನಿರ್ಣಯ ತಂದು ಎಷ್ಟು ತೀವ್ರ ಚರ್ಚೆ ಮಾಡಿದರೂ, ಕನ್ಸರ್ವೆಟಿವ್ ಬಹುಮತವುಳ್ಳ ಪಾರ್ಲಿಮೆಂಟಿನಲ್ಲಿ ಅಮೆರಿ ಚರ್ಚಿಲರದೇ ಪಂಥ ಗೆಲ್ಲುವುದೆಂಬುದು ಖಂಡಿತ.

ಸ್ವದೇಶ ಸಮಾಚಾರ

ರೂಸ್‌ವೆಲ್ಟರು ಮಧ್ಯಸ್ಥಿಕೆ ಮಾಡುವರು

ಮಹಾತ್ಮರ ಇಚ್ಛೆಯೆ?

ಅಮೇರಿಕ ಲಂಡನುಗಳಲ್ಲಿ ಪ್ರಚಾರ

ಕ್ರಿಪ್ಸ್ ಸಂಧಾನ ಕಾಲದಲ್ಲಿ ಹಿಂದುಸ್ಥಾನದಲ್ಲಿದ್ದ ಅಮೇರಿಕದ ಪ್ರಸಿದ್ಧ ಲೇಖಕ ಲೂಯಿ ಫಿಶರರು, ಅಮೇರಿಕಕ್ಕೆ ಮರಳಿ ಬರುವಾಗ, ಗಾಂಧಿಜಿಯವರಿಂದ, ಅಧ್ಯಕ್ಷ ರೂಸ್‌ವೆಲ್ಟರಿಗೆ ಒಂದು ಪತ್ರ ತಂದಿದ್ದರೆಂದೂ ಅದನ್ನು ಈಗ ಅವರು ರೂಸ್‌ವೆಲ್ಟರಿಗೆ ಇತ್ತಿರುವರೆಂದೂ, ಅದರಲ್ಲಿ, ಭಾರತದ ಸಮಸ್ಯೆ ಬಿಡಿಸಲು ರೂಸ್‌ವೆಲ್ಟರು ಮಧ್ಯಸ್ಥಿಕೆ ಮಾಡಬೇಕೆಂದು ಗಾಂಧಿಜಿ ಇಚ್ಛಿಸುವರೆಂದೂ. ಈಗ ಒಂದು ಸುದ್ದಿ ಬಂದಿದೆ. ಈ ಗಾಂಧಿಜಿಯವರ ಇಚ್ಛೆಗೆ ಬೆಂಬಲಕೊಟ್ಟು ಅಮೇರಿಕದಲ್ಲಿರುವ 'ಇಂಡಿಯಾ ಲೀಗಿ'ನ ಅಧ್ಯಕ್ಷ ಸರದಾರ ಜೆ. ಜೆ. ಸಿಂಗರು ಒಂದು ಪ್ರಕಟಣೆಯಿತ್ತಿರುವರೆಂದು ತಿಳಿದಿದೆ. ಇಂಡಿಯಾ ಲೀಗಿನ ಆಶ್ರಯದಲ್ಲಿ ಬರಮ ಸಾರ್ವಜನಿಕ ಸಭೆ ಸೇರಿ, ಅದರಲ್ಲಿ ರೂಸ್‌ವೆಲ್ಟರೂ ಚಿಯಾಂಗ್ ಕೈಶೇಕರೂ ಮಧ್ಯಸ್ಥಿಕೆ ನಡೆಸಿ ಭಾರತದ ಸಮಸ್ಯೆ ತೀರಿಸಬೇಕೆಂದು ಕೇಳಿಕೊಳ್ಳುವ ನಿರ್ಣಯವೊಂದು ಮಂಜೂರಾಯಿತು. ಆ ಸಭೆಯಲ್ಲಿ ಸರದಾರ್ ಜೆ. ಜೆ. ಸಿಂಗ, ಮಿಸ್ ಪರ್ಲ್ ಬಕ್ಸ್ ಇವರೇ ಮೊದಲಾದವರು ಮಾತನಾಡಿದರು. ಲಂಡನಿನ 'ಇಂಡಿಯಾ ಲೀಗಿ'ನ ಸಭೆಯಲ್ಲಿಯೂ, ಕೂಡಲೇ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದೂ, ಚರ್ಚಿಲ್ ಹೇಳಿಕೆಗೆ ವಿಷಾದ ವ್ಯಕ್ತಮಾಡುವ ನಿರ್ಣಯವೂ ಮಂಜೂರಾಗಿ, ಈ ನಿರ್ಣಯವನ್ನು ಕೂಲಿಗಾರ ಪಕ್ಷದ ಸೊರೆನ್‌ಸೆನರು ಪಾರ್ಲಿಮೆಂಟಿನಲ್ಲಿ ಮಂಡಿಸಿದರು.

ರಾಜಾಜಿಯವರಿಗೆ ಲಂಡನಿನಿಂದ ತಂತಿ

ಭಾರತದ ಬಿಕ್ಕಟ್ಟು ಬಿಡಿಸಲು ಆತುರ

'ಭಾರತದ ಸದ್ಯದ ಬಿಕ್ಕಟ್ಟು ಅಪಾಯಕಾರಿಯಾದುದು. ಇನ್ನಾದರೂ ಈ ತೊಡಕನ್ನು ಬಿಡಿಸಲು ಹಾದಿಯಿದೆ. ಆದ್ದರಿಂದ ಈ ತೊಡಕನ್ನು ಬಿಡಿಸುವವರಿಗೆ ನಮ್ಮ ಬೆಂಬಲವಿದೆ. ಚರ್ಚಿಲರ ಹೇಳಿಕೆಯಿಂದ ಪರಿಸ್ಥಿತಿ ಕೆಟ್ಟಿದೆ. ಕಾಂಗ್ರೆಸನ್ನು ಎದುರಿಸುವುದೇ ಅವರ ಉದ್ದೇಶವೆಂದು ಸ್ಪಷ್ಟವಾಗಿದೆ. ಕಳೆದ ಕೆಲವು ವಾರಗಳಲ್ಲಿ ವಿವಿಧ ರಾಜಕೀಯ ಪಂಗಡಗಳು ಮಾಡಿದ ಹೇಳಿಕೆಗಳಿಂದ ಜಪಾನು ಆಕ್ರಮಣವನ್ನೆದುರಿಸುವುದೇ ಭಾರತದ ಗುರಿಯೆಂದು ಸ್ಪಷ್ಟವಾಗಿದೆ. ಕಾಂಗ್ರೆಸು ಕೂಡಿ ಮುಸ್ಲಿಂ ಲೀಗು, ಹಿಂದು ಮಹಾಸಭೆ ಹಾಗೂ ಇನ್ನಿತರ ಪಕ್ಷಗಳು ರಾಷ್ಟ್ರೀಯ ಸರಕಾರ ರಚಿಸಬೇಕೆಂದೂ ಅವರ ಕೈಯಲ್ಲಿ ಸಂರಕ್ಷಣೆಯಿರಬೇಕೆಂದೂ ಸ್ಪಷ್ಟಮಾಡಿವೆ' ಎಂಬಿತ್ಯಾದಿಯಾದಿ ಲಾರ್ಡ್ ಮಾರ್ಲೆ, ಲಾರ್ಡ್ ಸ್ನೆಲರ್ (ಪಾರ್ಲಿಮೆಂಟ್ ಸದಸ್ಯರು) ಸಿ. ಜೆ. ಅಮನ, ಇ. ಜೆ. ಬೆಲ್ಲೆಂಜರ್, ಜೆ. ಜೆ. ಜೆ. ಎಡನ್ಸ್, ಜೆ. ಹಡನ್ ಗೆಸ್ಟ್, ಹೆರಾಲ್ಡ್ ಲಾಸ್ಕಿ ಮೊದಲಾದ ಮಹನೀಯರು ಡೆಮೊಕ್ರಟಿಕ್ ಕಂಟ್ರೋಲ್ ಯೂನಿಯನಿನ ಪರವಾಗಿ ರಾಜಗೋಪಾಲಾಚಾರ್ಯರಿಗೆ ಒಂದು ತಂತಿ ಕಳುಹಿಸಿ, ಅವರು ತೊಡಕನ್ನು ಬಿಡಿಸಲು ಯತ್ನಿಸಬೇಕೆಂದೂ ವಿನಂತಿಸಿಕೊಂಡಿದ್ದಾರೆ.

ನ್ಯೂಯಾರ್ಕಿನಲ್ಲಿ ಗಾಂಧಿ ಜಯಂತಿ

ನ್ಯೂಯಾರ್ಕಿನಲ್ಲಿ ತಾ. ೨ರಂದು ಗಾಂಧಿ ಜಯಂತಿ ಆಚರಿಸಲ್ಪಟ್ಟಿತು. ಆಗ ಏರ್ಪಡಿಸಿದ ಭೋಜನ ಸಮಾರಂಭದಲ್ಲಿ ಭಾರತದ ಸ್ವಾತಂತ್ರ್ಯದ ಬಗ್ಗೆ ಪ್ರತಿಜ್ಞೆ ಮಾಡಲಾಯಿತು. ಗಾಂಧಿಜಿಗೆ ಅಭಿನಂದನೆ ಕಳುಹಿಸಬೇಕೆಂದೂ ನಿರ್ಣಯವಾಯಿತು.

ಪುಂಡು ಕಂದಾಯದಿಂದ ಹಿಂದುಗಳಿಗಾದ ಅನ್ಯಾಯ

ಹಿಂದು ಮಹಾಸಭೆಯಲ್ಲಿ ಚರ್ಚೆ

ಹೊಸ ದಿಲ್ಲಿಯಲ್ಲಿ ಸೇರಿದ ಹಿಂದು ಮಹಾಸಭೆಯ ವರ್ಕಿಂಗ್ ಕಮಿಟಿಯಲ್ಲಿ ಸರಕಾರವು ಇತ್ತೀಚಿಗೆ ಹೇರಿದ ಪುಂಡು ಕಂದಾಯದಿಂದ ಹಿಂದು ಹಿತಕ್ಕೆ ಆದ ಧಕ್ಕೆಯ ಕುರಿತು ಆಲೋಚಿಸಲಾಯಿತು. ಇನ್ನೊಂದು ಠರಾವಿನಲ್ಲಿ ಹಿಂದು ಮಹಾಸಭೆ ಸದ್ಯದ ಧೋರಣವನ್ನು ಬದಲಾಯಿಸುವ ವಿಚಾರವೂ ಮಾಡಲಾಗಿದೆ.

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ! ಆದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೧-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತೆ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬೈ ಏಜಂಟ— ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ನಿಮ್ಮ ಎದೆನೋವನ್ನು ಗುಣಪಡಿಸಿರಿ.

ನಿಮಗೆ ಬಹುಬೇಗನೇ ಶೀತಬಾಧೆಯಾಗುವುದೆ? ನೀವು ಕಫ ಬಾಧೆಯಿಂದ ಹಾಗೂ ಶ್ವಾಸಕೋಶವನ್ನು ದುರ್ಬಲಗೊಳಿಸುವ ಶೀತಬಾಧೆಯಿಂದ ನರಳುತ್ತಿರುವಿರಿ? ಹಾಗಾದರೆ ಅದಕ್ಕೆ ಅತ್ಯುತ್ತಮ ಔಷಧಿಯಾಗಿರುವ ವಿಷಹಾರೀ ಶ್ವಾಸಯೋಗ್ಯ ಪೆಪ್ಸು ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ ಅತ್ಯುತ್ತಮ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಗೆಡವುತ್ತದೆ. ಅದು ಶ್ವಾಸದೊಂದಿಗೆ ಸೇರಿ ಶ್ವಾಸಕೋಶಕ್ಕೆ ಹೋಗುವುದು; ಹೀಗೆ ಪೆಪ್ಸು ಹಾನಿಕಾರಕ ಕ್ರಿಮಿಗಳನ್ನು ನಾಶಪಡಿಸುವುದು. ನೋವನ್ನು ಕಡಿಮೆಮಾಡುವುದು. ಶೀತ, ಕಂಠನೋವು ಇವುಗಳನ್ನು ಗುಣಮಾಡುವುದು. ಎದೆನೋವು ಅಸ್ತಮಾ ಮತ್ತು ಇನ್ಫ್ಲುಯೆಂಜಗಳಿಗೆ ಇದು ಅತ್ಯುತ್ತಮ ಔಷಧ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುತ್ತದೆ.



ಪೆಪ್ಸು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಾಲಿಟಿ ರಾಜಿನಾಮೆ

ಮಂಗಳೂರು ಮುನಿಸಿಪಾಲಿಟಿಯ ೨೯ ಮಂದಿ ಕೊಂಗ್ರೆಸ್ ಸದಸ್ಯರ ಪೈಕಿ ೨೭ ಮಂದಿ ರಾಜಿನಾಮೆ ಕೊಟ್ಟಿದ್ದರಷ್ಟೆ? ಕೊಂಗ್ರೆಸ್ ಸದಸ್ಯರ ಪೈಕಿ ರಾಜಿನಾಮೆ ಕೊಡಲು ಬಾಕಿಯುಳಿದಿದ್ದವರು ಶ್ರೀ ಜೆ. ಬಿ ಮಚಾಡೋ ಮತ್ತು ಶ್ರೀ ಎಫ್. ಎಕ್ಸ್ ಡೇನಿಸ್ ಪಿಂಟೋ ಇವರು ಊರಲ್ಲಿಲ್ಲದ ಕಾರಣ ಅವರ ರಾಜಿನಾಮೆಯ ವಿಚಾರವು ಹಾಗೆಯೇ ಉಳಿದಿದ್ದು, ಈಗ ಅವರಿಬ್ಬರೂ ರಾಜಿನಾಮೆ ಕೊಟ್ಟಿರುವುದಾಗಿ ತಿಳಿದಿದೆ. ಕೊಂಗ್ರೆಸ್ಸೇತರ ಸದಸ್ಯರು ಈ ಮೂವರು: ೧. ಶ್ರೀ ಕೈತಾನ್ ಲೋಬೊ ೨ ಶ್ರೀ. ಎಮ್. ಎಸ್ ಶ್ರೆಷ್ಟ ಮತ್ತು ೩ ಶ್ರೀ ಜೋನ್ ಗೋನ್ಸಾಲ್ವಿಸ್

ಅಸಿಸ್ಟೆಂಟ ತಹಶಿಲ್ದಾರರು

ನಮ್ಮ ಜಿಲ್ಲೆಯ ಆರು ತಾಲೂಕುಗಳ ಪೈಕಿ ಮಂಗಳೂರು, ಉಡುಪಿ ಮತ್ತು ಕಾರ್ಕಳ ತಾಲೂಕುಗಳಿಗೆ ಒಬ್ಬೊಬ್ಬ ಅಸಿಸ್ಟೆಂಟ್ ತಹಶೀಲ್ದಾರರಂತೆ ೬ ತಿಂಗಳ ಮಟ್ಟಿಗೆ ಹೊಸ ನೇಮಕಗಳಾಗಿವೆ. ಮಂಗಳೂರು ತಾಲೂಕಿಗೆ ಶ್ರೀ ಎಫ್ ಎಮ್ ಪಿಂಟೋರವರೂ ಕಾಸರಗೋಡು ತಾಲೂಕಿಗೆ ಶ್ರೀ ಟಿ. ಡಿ. ವೇಲ್ಯುತರವರೂ ಪುತ್ತೂರು ತಾಲೂಕಿಗೆ ಶ್ರೀ ಎ ಸದಾನಂದ ಪೈಗಳವರೂ ನೇಮಕವಾಗಿದ್ದಾರೆ

ಸ್ವದೇಶಿ ಸ್ಟೋರ್ಸ್ ಕಳವು

ಮಂಗಳೂರು ಸ್ವದೇಶಿ ಸ್ಟೋರ್ಸಿನಲ್ಲಿ ಇದೇ ತಾ ೧ನೇ ರಾತ್ರಿ ಕಳವಾಗಿದೆ ಕಳ್ಳರು, ಬಾಗಿಲಿಗೆ ಹಾಕಿದ ಅಡ್ಡವನ್ನು ಕಡಿದು ಬಾಗಿಲು ತೆರೆದು ಒಳಗೆ ನುಗ್ಗಿದಂತೆ ತಿಳಿದು ಬಂದಿದೆ. ಸುಮಾರು ರೂ ೪೬೦/- ಬೆಲೆ ಬಾಳುವ ಖಾದಿ ವಸ್ತ್ರವು ಕಳವಾಗಿದೆಯಾಗಿ ಅಂದಾಜು ಹ ಕಿರುವದು ಪೋಲೀಸ್ ಅಧಿಕಾರಿಗಳು ತಾ ೨ನೇ ಅಪರಾಹ್ನ ಬಂದು, ವಿಚಾರಣೆ ನಡೆಸಿ ಹೋದರು.

ನಿಧನೋತ್ಸವ

ಸ್ಥಳೀಯ ಬ್ರಹ್ಮ ಸಮಾಜ ಮಂದಿರದಲ್ಲಿ ಇದೇ ತಾ ೨೭ನೇ ಸಾಯಂ ೭ ಘಂಟೆಗೆ ದಿವಂಗತ ರಾಜಾ ರಾಮಮೋಹನ ರಾಯರುಗಳ ೧೦೯ನೇ ನಿಧನೋತ್ಸವವು ಶ್ರೀಯುತ ಯಂ ವಾಮೋದರ ಕಿಣಿಯವರ ಅಧ್ಯಕ್ಷತೆಯಲ್ಲಿ ಜರುಗಿತು

ನೇಮಕ-ವರ್ಗಾವರ್ಗಿ

ಶ್ರೀ ಕೆ ವೆಂಕಪ್ಪನವರು ಕುಂದಾಪುರಕ್ಕೂ ಶ್ರೀ ಯು ಲಿಂಗಪ್ಪಯ್ಯನವರು ಕಾರ್ಕಳಕ್ಕೂ ಮಿ| ಎಲ್ ಫೆರ್ನಾಂಡಿಸರು ಉಡುಪಿಗೂ ಸ್ಪೆಶಲ್ ಸಬ್ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲ್ಪಟ್ಟಿರುತ್ತಾರೆ

ಜಿಲ್ಲಾ ಬೋರ್ಡು ಸಭೆ

ದ ಕ ಜಿಲ್ಲಾ ಬೋರ್ಡು ಸಭೆಯು ಇದೇ ತಾ ೧೭ರಂದು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಪೂರ್ವಾಹ್ನ ೧೧ ಗಂಟೆಗೆ ಜರುಗುವುದು ಈ ಸಭೆಯ ಮುಂದಿಡಲು ಸರಕಾರವು ರಾಷ್ಟ್ರೀಯ ಮುಖಂಡರನ್ನು ಹಾಗೂ ಗಾಂಧಿಜಿಯವರನ್ನು ಬಂಧಿಸಿದ್ದನ್ನು ನಿಷೇಧಿಸುವ ನಿರ್ಣಯವೊಂದು ಬಂದಿರುವುದು

ಜಿಲ್ಲಾ ರಿಜಿಸ್ಟ್ರಾರರು

ಜಿಲ್ಲಾ ರಿಜಿಸ್ಟ್ರಾರರಾಗಿದ್ದ ಶ್ರೀ ಯಂ ರಾಮಪ್ಪ ಬಿ ಎ ಅವರು ಸದ್ಯದಲ್ಲಿಯೇ ಕೆಲಸದಿಂದ ನಿವೃತ್ತರಾಗಲಿರುವುದರಿಂದ ಶ್ರೀ ವಿಶ್ವನಾಥರಾವ್ ಬಿ. ಎ ಅವರು ದ ಕನ್ನಡ ಜಿಲ್ಲಾ ರಿಜಿಸ್ಟ್ರಾರರಾಗಿ ನೇಮಕ ಹೊಂದಿದ್ದಾರೆ

ವಿದ್ಯಾಂಗದ ಡೈರೆಕ್ಟರರು

ಮದ್ರಾಸ್ ಸಂಸ್ಥಾನದ ವಿದ್ಯಾ ಇಲಾಖೆಯ ಡೈರೆಕ್ಟರರು ಮಂಗಳೂರಿಗೆ ಬಂದು ಎರಡು ದಿವಸವಿದ್ದು ಮದ್ರಾಸಿಗೆ ಹಿಂತೆರಳಿದ್ದಾರೆ

ಮಂಗಳೂರು ನಗರ ಸಭೆ

ಇಲ್ಲಿಯ ನಗರ ಸಭೆಯ ಒಂದು ಸಭೆಯು ರಾಜಿನಾಮೆ ಕೊಟ್ಟ ನಗರ ಸಭಾಧ್ಯಕ್ಷರ ಸ್ಥಾನಕ್ಕೆ ನಗರ ಸಭಾಧ್ಯಕ್ಷರನ್ನು ಆರಿಸುವ ಬಗ್ಗೆ ತಾ. ೧ನೇ ಸಾಯಂಕಾಲ ನಗರ ಸಭಾಭವನದಲ್ಲಿ, ಮಂಗಳೂರಿನ ರೆವಿನ್ಯೂ ಡಿವಿಜನಲ್ ಆಫೀಸರರಾದ ಶ್ರೀ. ಬಿ. ಜೋಗಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತು. ಹಿಂದೆ ಕಾಂಗ್ರೆಸ್ ಪಕ್ಷದ ವ್ಹಿಪ್ ಆಗಿದ್ದ ಶ್ರೀ ಸಿ ಎಲ್. ಲೋಬರು ಸಭೆಗೆ ಸಕಾಲದಲ್ಲಿ ಬಂದಿದ್ದರು ಐದುಮುಕ್ಕಾಲು ಗಂಟೆಗೆ ಶ್ರೀ. ಯಂ. ಎಸ್. ಶ್ರೇಷ್ಠರು ಬಂದರು. ಮತ್ತೆ ಯಾರೂ ಬರುವ ಸಂಭವ ತೋರದ ಕಾರಣ ಸಭೆಯು ಮುಂದರಿಸಲಾಯಿತು. ಲೋಕಲ್ ಬೋರ್ಡುಗಳ ಆಕ್ಟಿನಂತೆ ಕೌನ್ಸಿಲಿನ ಕಾರ್ಯಭಾರವನ್ನು ನಡಿಸಲು ಕನಿಷ್ಟಪಕ್ಷ ಆರು ಮಂದಿ ಹಾಜರಿರಬೇಕಾಗಿದ್ದು ಕನಿಷ್ಟ ಸಂಖ್ಯೆ ಈಗ ಇರುವುದಿಲ್ಲವಾದ್ದರಿಂದ ಈಗಿರುವ ನಿಯಮದಂತೆ ನಗರ ಸಭೆಯ ಆಡಳಿತವನ್ನೂ ಸರಕಾರವೇ ವಹಿಸಬೇಕಾಗುವುದೆಂದು ತಿಳಿದುಬರುತ್ತದೆ

ವಿದ್ಯಾರ್ಥಿಗಳ ಅಶಾಂತತೆ

ಅಕ್ಟೋಬರ ೨ರಂದು ವಿದ್ಯಾರ್ಥಿಗಳು ಮಂಗಳೂರ ಹೈಸ್ಕೂಲು ಕಾಲೇಜುಗಳಿಗೆ ಹಾಜರಾಗಿದ್ದರೂ, ಕ್ಲಾಸು ನಡೆಯುತ್ತಿದ್ದಾಗ, ಜಯಘೋಷ ಮೊದಲಾದ ಪ್ರದರ್ಶನ ಮಾಡುತ್ತಿದ್ದುದರಿಂದ ಉಪಾಧ್ಯಾಯರಿಗೆ ಪಾಠ ನಡೆಸಲು ಕಷ್ಟವಾಗಿತ್ತು ಕೆನರಾ ಹೈಸ್ಕೂಲು, ಗಣಪತಿ ಹೈಸ್ಕೂಲು, ಗವರ್ನಮೆಂಟ್ ಕಾಲೇಜ್ ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಅಶಾಂತತೆ ಹೆಚ್ಚಾಗಿತ್ತು ಎಲೋಶಿಯಸ್ ಕಾಲೇಜಿನಲ್ಲಿ ಈ ಸಂಬಂಧ ಕೆಲವು ವಿದ್ಯಾರ್ಥಿಗಳನ್ನು ಶಾಲಾಧಿಕಾರಿಗಳು ಎಚ್ಚರಿಸಿರುವರೆಂದು ತಿಳಿದಿದೆ

ಗಾಂಧಿ ಜಯಂತಿ

ಇದೇ ತಾ ೨-೧೦ ೪೨ರಿಂದ ಮಂಗಳೂರಲ್ಲಿ ಗಾಂಧಿ ಜಯಂತಿಯು ಆರಂಭವಾಗಿದೆ ಖಾದಿ ಮಾರಾಟ, ಬಡಜನರಿಗೆ ಅನ್ನದಾನ ಈ ಕಾರ್ಯಕ್ರಮಗಳು ನಡೆದಿವೆ

ಶ್ರೀ ಎಂ. ಡಿ ಅಧಿಕಾರಿಗಳಿಗೆ ಒಂದು ವರ್ಷ ಶಿಕ್ಷೆ

ಶ್ರೀ ಎಂ ಡಿ ಅಧಿಕಾರಿ, ಅಧ್ಯಕ್ಷ ದ ಕ ಜಿಲ್ಲಾ ಕೊಂಗ್ರೆಸ್ ಕಮಿಟಿ ಇವರ ವಿಚಾರಣೆಯು ಇದೇ ತಾ ೧ರಲ್ಲಿ ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ನಡೆದು, ಡಿಫೆನ್ಸ್ ಓಫ್ ಇಂಡಿಯಾ ಕಾನೂನು ಮೇರೆಗೆ ಒಂದು ವರ್ಷದ ಕಠಿಣ ಶಿಕ್ಷೆ ವಿಧಿಸಿದರು. ಶ್ರೀ ಅಧಿಕಾರಿಯವರನ್ನು ತಾ. ೩-೧೦-೪೨ನೇ ಬೆಳಗ್ಗೆ ಮೈಲ್ ಬಂಡಿಯಲ್ಲಿ ಆಲಿಪುರಮ್ ಜೈಲಿಗೆ ಒಯ್ದಿರುವರು.

ಕಾಸರಗೋಡು

ಮುಳಿಯಾರ್ II ಗ್ರಾಮದಲ್ಲಿ ಅಕ್ಟೋಬರ ೧ರಂದು ಸಾರ್ವಜನಿಕ ಸಭೆ ಸೇರಿಸಿ ಭಾಷಣವನಿತ್ತ ಶ್ರೀಗಳಾದ ಪಿ ಮಾಧವನ್ ನಾಯರ್ ಮತ್ತು ಕೆ ಕೋರನ್‌ನಾಯರ್ ಇವರನ್ನು ಬಂಧಿಸಿ ರಿಮಾಂಡಿನಲ್ಲಿರಿಸಲಾಗಿದೆ.

ಅಕ್ಟೋಬರ ೩ರಂದು ನೀಲೇಶ್ವರದಲ್ಲಿ ಶ್ರೀಗಳಾದ ಶ್ರೀಧರ ನಾಯರ್ ಮತ್ತು ಗೋಪಾಲಕೃಷ್ಣ ಸರಳಾಯ ಇವರನ್ನು ಡಿಫೆನ್ಸ್ ಓಫ್ ಇಂಡಿಯಾ ಕಾನೂನು ಮೇರೆಗೆ ಬಂಧಿಸಿ ಹೊಸದುರ್ಗದಲ್ಲಿ ರಿಮಾಂಡಿನಲ್ಲಿಡಲಾಗಿದೆ

ನೀಲೇಶ್ವರ

ಜಪ್ತಿ ತಾ ೨೫ನೇ ಬೆಳಗ್ಗೆ ಹೊಸದುರ್ಗ ಪೋಲೀಸ್ ಇನ್ಸ್‌ಪೆಕ್ಟರರು ಕೆಲವು ರಿಸರ್ವ ಮತ್ತು ಲೋಕಲ್ ಪೋಲೀಸರಿಂದೊಡಗೂಡಿ ಸ್ಥಳೀಯ ಕೊಂಗ್ರೆಸ್ ಕೇಂಪನ್ನು ಜಪ್ತಿ ಮಾಡಿ ಆಗ ಅಲ್ಲಿದ್ದ ಶ್ರೀಗಳಾದ ಎನ್. ಶಿವರಾಯ ಕಾಮತ್, ಕುಂಞಿಕಣ್ಣನ್ ನಂಬ್ಯಾರ್, ಕೆ ವಿ ಕಣ್ಣನ್, ಸಿ ಕುಂಞಿಕೃಷ್ಣನ್ ನಾಯರ್ ಮತ್ತು ಇತರ ಕೆಲವು ವಿದ್ಯಾರ್ಥಿಗಳನ್ನು ವಶಗೊಳಿಸಿ, ತಮ್ಮ ಬಂಗ್ಲೆಗೆ ಕೊಂಡೊಯ್ದರು ಸಾಯಂಕಾಲ ವಿದ್ಯಾರ್ಥಿಗಳನ್ನೆಲ್ಲಾ ಬಿಡುಗಡೆಮಾಡಿ, ಶ್ರೀಗಳಾದ ಎನ್ ಶಿವರಾಯ ಕಾಮತ್, ಕುಂಞಿಕಣ್ಣನ್ ನಂಬ್ಯಾರ್, ಕೆ ವಿ ಕಣ್ಣನ್, ಸಿ ಕುಂಞಿಕೃಷ್ಣನ್ ನಾಯರ್, ಪಿ ಅಂಬು ಎಂಬವರನ್ನು ಹೊಸದುರ್ಗಕ್ಕೆ ಕೊಂಡೊಯ್ದು ರಿಮಾಂಡಿನಲ್ಲಿಟ್ಟಿರುವರು

ಕ್ರಿಕೆಟ್

ಮಂಗಳೂರಿನಿಂದ ಬಂದ ಕ್ರಿಕೆಟ್ ಆಟಗಾರರು ಇಲ್ಲಿಯ ಯಂಗ್‌ಮೆನ್ಸ್ ಕ್ರಿಕೆಟ್ ಎಸೋಸಿಯೇಶನ್‌ನವರೊಂದಿಗೆ ಪಂದ್ಯಾಟವಾಡಿ ಪರಾಜಯ ಹೊಂದಿದರು ಮಂಗಳೂರಿನವರಿಗೆ ೯೧, ಕಾಸರಗೋಡಿನವರಿಗೆ ೧೦೭ ರನ್ಸ್‌ಗಳು ಸಿಕ್ಕಿವೆ

ನೀವು ಸುಖ ಆರೋಗ್ಯ ಮತ್ತು ಉಲ್ಲಾಸಯುತರಾಗಿ ಏಕೆ ಇರಬಾರದು?

ನೀವು ಕಳೆದುಕೊಂಡ ಚೈತನ್ಯವನ್ನು ಸುಲಭದಲ್ಲಿ ತಿರುಗಿ ಸಂಪಾದಿಸಬಹುದು, ಉಲ್ಲಾಸದಿಂದ ಕೂಡಿದ್ದು ಪುನಃ ಯೌವನಶಾಲಿಗಳಾಗಿರಬಹುದು. ಹಾಗಾಗ ಬೇಕಾದರೆ ಪ್ರತಿದಿನರಾತ್ರಿ ತಪ್ಪದೆ ಎರಡು ಬೈಲ್ ಬೀನ್ಸ್‌ಗಳನ್ನು ತೆಗೆದುಕೊಳ್ಳುವ ಸಂಪ್ರದಾಯವಿಟ್ಟುಕೊಳ್ಳಿರಿ ಬೈಲ್ ಬೀನ್ಸು ಶುದ್ಧ ವನಸ್ಪತಿಗಳಿಂದ ಮಾತ್ರ ತಯಾರು ಮಾಡಿದಾಗಿದೆ ಆದರಿಂದ ಆಹಾರ ಜೀರ್ಣಾಂಗಗಳು ಸರಿಯಾಗಿ, ರಕ್ತವು ಶುದ್ಧವಾಗುವುದು, ಕೊಬ್ಬು ಬೆಳೆಯುವುದಿಲ್ಲ ಹೀಗೆ ಇದು ನಿಮ್ಮನ್ನು

ಸುಖ, ಆರೋಗ್ಯ ಮತ್ತು ಉಲ್ಲಾಸಯುತರನ್ನಾಗಿ ಮಾಡುವುದು

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿ ಬೈಲ್ ಬೀನ್ಸು ಬಾಟ್ಲಿ ಒಂದರ 1 ರೂಪಾಯಿ ಬೆಲೆಗೆ ಸಿಗವುದು

BILE BEANS

ಬೈಲ್ ಬೀನ್ಸು ನಿಮ್ಮನ್ನು ದೃಢ ಆರೋಗ್ಯವಂತರಾಗಿ ಮಾಡುವುದು

ಸ್ವಾಟು ದಿನಾಚರಣೆ ಮುಂದರಿಸಲಾಯಿತು

ಜಿಲ್ಲಾ ಕಲೆಕ್ಟರರು ಹಿಂದೂಸ್ಥಾನ್ ಸ್ಕೌಟ್ ವಾರವನ್ನಾಚರಿಸಲು ಅಪ್ಪಣೆ ಕೊಡದ ಕಾರಣ ತಾ. ೧ರಲ್ಲಿ ಆಚರಿಸಬೇಕೆಂದಿದ್ದ ಸ್ಕೌಟ್ ದಿನಾಚರಣೆಯನ್ನು ಮುಂದರಿಸಲಾಗಿದೆ.

ಪುತ್ತೂರು

ಗುಂಡಿನೇಟಿನಿಂದ ಕೊಲೆ

ಕಳೆದ ತಾ. ೨೧ರಲ್ಲಿ ಪಳಿನೇಡಿಂಕಿ ಗ್ರಾಮದ ಆರಚ್ಚಿಗೆ ಎಂಬಲ್ಲಿ ಯಾರೋ ಒಬ್ಬನು ಗೌಡ ಜಾತಿ ಯುವನೋರ್ವನಿಗೆ ಗುಂಡುಹೊಡೆದು ಕೊಲೆಗೈದಿರುತ್ತಾನಾಗಿಯೂ, ಅಪರಾಧಿಯ ಪತ್ತೆಯಾಗಿದೆ ಎಂದೂ ತಿಳಿದು ಬಂದಿದೆ

ರಾಜಿನಾಮೆ

ಸುಳ್ಯ ಪಂಚಾಯತ ಬೋರ್ಡು ಮೆಂಬರರಾದ ಶ್ರೀಮಾನ್ ಯಂ ಐತಪ್ಪ ರೈಗಳು ಸರಕಾರದ ದಬ್ಬಾಳಿಕೆಯ ನೀತಿಯನ್ನು ನಿಷೇಧಿಸಿ ತಮ್ಮ ಮೆಂಬರಿಕೆಗೆ ರಾಜಿಕೊಟ್ಟಿರುವರು

ಬೆಳ್ತಂಗಡಿ

ಬಂಧನ

ಶ್ರೀ. ಕೆ ಕೆ ಪಿ ರಾಮ ಪ್ರಭುವಾಳರನ್ನು ಬೆಳ್ತಂಗಡಿಯಲ್ಲಿ ಡಿಫೆನ್ಸ್ ಕಾನೂನಿನ ಪ್ರಕಾರ ಬಂಧಿಸಲಾಗಿದೆ.

ಕಾರ್ಕಳ

ಪ್ರಚಾರ

ಹಳ್ಳಿಗಳಲ್ಲಿ ವಿಧಾಯಕ ಕಾರ್ಯಕ್ರಮದ ಪ್ರಚಾರ ಕಾರ್ಯವನ್ನು ಕೈಕೊಂಡಿರುವ ಶ್ರೀಯನ್ ಶಾಮರಾಯ ನಾಯಕ ಮತ್ತು ಶ್ರೀ ಸಿ ಗೋವಿಂದ ಕಾಮತರು ಇವರು ಭೋಳ, ನಂದಳಿಕೆ ಗ್ರಾಮಗಳಿಗೆ ಹೋಗಿ ಅಲ್ಲಿ ಆಹಾರ ಸಾಮಗ್ರಿಗಳ ಕುರಿತು ಸ್ವಯಂ ಪೂರ್ಣತೆಯನ್ನು ಸಾಧಿಸಿ ಸ್ವಾವಲಂಬಿಗಳಾಗಬೇಕೆಂದು ಜನರಿಗೆ ಬೋಧಿಸಿದರು

ಉಡುಪಿ

ಶ್ರೀ ಕೃಷ್ಣ ಮಠದ ಚಂದ್ರಶಾಲೆ

ಇಲ್ಲಿ ಶ್ರೀ ಪುತ್ತಿಗೆ ಮಠದ ಹಿರೆ ಸ್ವಾಮಿಗಳವರು ಚಾತುರ್ಮಾಸ ಕಾಲದಲ್ಲಿ ಸಂಜೆ ಪುರಾಣ ವಾಚನ ಸಂಕೀರ್ತನೆ, ವಿದ್ವತ್ಸೇವೆಗಳ ಏರ್ಪಾಡು ಮಾಡಿರುವರು

ರಾಜಿನಾಮೆ

ದ ಕ ಜಿಲ್ಲಾ ಬೋರ್ಡಿನ ಕಟ್ಟಾಡಿ ಸರ್ಕಲಿನ ಪ್ರತಿನಿಧಿಯಾದ ಶ್ರೀ ವಾರಂಬಳ್ಳಿ ಉಪೇಂದ್ರ ಶ್ರೀನಿವಾಸ ನಾಯಕರು ಸರಕಾರದ ಈಗಿನ ಧೋರಣೆಯ ಹಾಗೂ ರಾಷ್ಟ್ರ ಮುಖಂಡರ ಬಂಧನದ ನಿಷೇಧಾರ್ಥವಾಗಿ ತಮ್ಮ ಮೆಂಬರಿಕೆಗೆ ರಾಜಿನಾಮೆ ಕೊಟ್ಟಿರುವರು.

ಹಿರಿಯಡ್ಕ

ಇಲ್ಲಿ ಒಡಬಾಂಡಿಗೆ ಕಡಿಮೆ ದರದಲ್ಲಿ ಅಕ್ಕಿಯನ್ನು ಒದಗಿಸಲು ಒಂದು ರಿಲೀಫ್ ಸಮಿತಿಯನ್ನು ಪೇಟೆಯವರು ಇತರ ಮಹನೀಯರ ಸಹಾಯದಿಂದ ಸ್ಥಾಪಿಸಿದರು ಸೇರು ೧ರ ೨ ಆಣೆ ದರದಲ್ಲಿ ೧೨೧ ಮುಡಿ ಅಕ್ಕಿ ವಿಕ್ರಯಿಸಲಾಯಿತೆಂದು ತಿಳಿದಿದೆ

ಪ್ರಚಾರಕ್ಕೆ ಅನುಮತಿ

ಶ್ರೀ ಟಿ ಸುಬ್ರಹ್ಮಣ್ಯನ್ ತಿರುಮಂಬು (ಕಮ್ಯೂನಿಸ್ಟ ಪಕ್ಷದವರು) ಜಾಥಾಗಳನ್ನೂ ಸಭೆಗಳನ್ನು ನಡೆಸಲು ತನಗೆ ಪ್ರತ್ಯೇಕ ಅನುಮತಿಯನ್ನು ಕೊಡಬೇಕಾಗಿ ಜಿಲ್ಲಾ ಕಲೆಕ್ಟರರಿಗೆ ಬರೆದಿರುವರಾಗಿ ತಿಳಿದು ಬಂದಿದೆ.

NOTIFICATION

Whereas the Government of Madras have themselves in their order G O No. M 2.., dated 5th September 1942, prohibited the export of jaggery to places outside the Province, the notification dated 4-9-1942 issued by me on the subject is hereby cancelled as redundant.

S K Collector's Office Mangalore 25th September 1942 — M Karamatullah, Collector.

ಕಾಸರಗೋಡು
ಗಾಂಧಿ ಜಯಂತಿ
ಬಂಧನ ಮತ್ತು ಪೆಟ್ಟು

ನೀಲೇಶ್ವರದಲ್ಲಿ ಆಕ್ಟೋಬರ ೨ರಂದು ಶಾಲಾ ವಿದ್ಯಾರ್ಥಿಗಳು ಶಾಲೆಯ ಗಂಟೆ ಹೊಡೆವ ಹೊತ್ತಿಗೆ ಸರಿಯಾಗಿ ಹೈಸ್ಕೂಲಿನ ಎದುರಿನಲ್ಲಿ ಸೇರಿ ಕಾಂಗ್ರೆಸ್ ಧ್ವಜವೇರಿಸಿ, ವಂದೇಮಾತರಂ ಹಾಡಿ ಸಭೆಕೂಡಿಸಲು, ಪೋಲೀಸರು ಬಂದು ಅವರನ್ನು ಪೆಟ್ಟುಕೊಟ್ಟು ಚದರಿಸಿದರು. ಆ ಸಂಬಂಧ ಕಾಸರಗೋಡಿನ ವಿದ್ಯಾರ್ಥಿ ಮುಖಂಡ ಶ್ರೀ ಸರಳಾಯರನ್ನು ಮತ್ತು ಇನ್ನು ಕೆಲವು ನೀಲೇಶ್ವರದ ವಿದ್ಯಾರ್ಥಿಗಳನ್ನೂ ಸೆರೆಹಿಡಿಯಲಾಗಿದೆ.

ಸಕ್ಕರೆ ಮತ್ತು ಚಿಮಿಣಿ ಎಣ್ಣೆಗೆ ಅಭಾವ

ಸ್ಥಳೀಯ ರೆವಿನ್ಯೂ ಇನ್ಸ್‌ಪೆಕ್ಟರರು ಕೆಲವು ಅಂಗಡಿಗಳನ್ನು ಜಪ್ತಿಮಾಡಿ ಚಿಮಿಣಿ ಎಣ್ಣೆ ಡಬ್ಬಾನುಗಳನ್ನು ಕಂಡುಹಿಡಿದು ಚಿಲ್ಲರೆಯಾಗಿ ಸರಕಾರದವರು ನಿರ್ಧರಿಸಿದ ಬೆಲೆಗೆ ಎಣ್ಣೆಯನ್ನು ಮಾರಾಟ ಮಾಡಲು ವ್ಯಾಪಾರಸ್ಥರನ್ನು ನಿರ್ಬಂಧಿಸಿರುವರಾಗಿ ತಿಳಿದುಬಂದಿದೆ.

ಶಿಕ್ಷೆ

ಶ್ರೀಗಳಾದ ದೇವದಾಸ್ ಕಾಮತ್, ಎ. ಅಚ್ಯುತನ್, ಪಿ. ವಿ. ಕೇಶವ, ಕೆ. ವಿಠೋಬ ಕಾಮತ್ ಮತ್ತು ಎಚ್. ವಾಸುದೇವ ಇವರನ್ನು ತಾ. ೨೯ನೇ ದಿನ ಪುತ್ತೂರಿಗೊಯ್ದು ೧ನೇ ತಾ. ದಿನ ವಿಚಾರಣೆಯಾಗಿ ಶ್ರೀ ದೇವದಾಸ ಕಾಮತರಿಗೆ ೧ ವರ್ಷ ಕಠಿನ ಶಿಕ್ಷೆ, ಶ್ರೀ ವಿಠೋಬ ಕಾಮತರಿಗೆ ೯ ತಿಂಗಳ ಕಠಿಣ ಶಿಕ್ಷೆ, ಶ್ರೀ ಅಚ್ಯುತರಿಗೆ ೯ ತಿಂಗಳ ಕಠಿಣ ಶಿಕ್ಷೆ, ಉಳಿದ ಇಬ್ಬರಿಗೆ ೬, ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ, ಎಲ್ಲರಿಗೂ ಸಿ ಕ್ಲಾಸು ಶಿಫಾರಸಾಗಿ ಆಲಿಪುರಂಗೆ ಕಳುಹಿಸಲಾಗುವುದು

ಕುಂದಾಪುರ
ಗಾಂಧಿಜಯಂತಿ-ವಿದ್ಯಾರ್ಥಿಗಳನ್ನು ಚದರಿಸಲಾಯಿತು

ಆಕ್ಟೋಬರ್ ೨ರಂದು ಕುಂದಾಪುರದಲ್ಲಿ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು. ಹೈಸ್ಕೂಲು ವಿದ್ಯಾರ್ಥಿಗಳು ಆ ದಿನ ಶಾಲೆಗೆ ಹೋಗದೆ ಇದ್ದು, ಸಭೆ ಸೇರಿಸಲು ಪ್ರಯತ್ನ ಮಾಡುತ್ತಿದ್ದಾಗ ಪೋಲೀಸರು ಬಂದು ಅವರನ್ನು ಚದರಿಸಿದರು.

ಸರಕಾರದ ಮೇಲೆ ಸಂಪಾದಕ ಸಮಿತಿಯ ಆರೋಪ

"ನಮ್ಮ ಉದ್ಯೋಗ ಸ್ವಾನಮಾನಗಳಿಗೆ ಕಳಂಕ ತರುವಂಥಾ ಯಾವ ನಿರ್ಬಂಧಗಳಿಗೂ ನಾವು ತಲೆ ತಗ್ಗಿಸಲಾರೆವು. ಸುದ್ದಿಗಳನ್ನು ಮೊದಲಾಗಿ ಪರೀಕ್ಷಿಸುವ ಹೊಸ ನಿರ್ಬಂಧವು ಅಖಿಲಭಾರತ ಸಂಪಾದಕ ಸಮಿತಿಗೂ ಸರಕಾರಕ್ಕೂ ಆದ ಧಿಲ್ಲಿ ಒಪ್ಪಂದಕ್ಕೆ ವಿರುದ್ಧವಾಗಿದೆ. ಈ ನಿರ್ಬಂಧಗಳನ್ನು ಸರಕಾರವು ಹಿಂತೆಗೆಯಬೇಕು. ಪತ್ರಿಕಾ ಸ್ವಾತಂತ್ರ್ಯವು ದೇಶ ಸ್ವಾತಂತ್ರ್ಯಕ್ಕೆ ಸಂಬಂಧಿಸಿದೆ" ಎಂದು ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಸಂಪಾದಕ ಪರಿಷತ್ತಿನ ಅಧ್ಯಕ್ಷರ ಭಾಷಣ ಮಾಡುತ್ತಾ ಶ್ರೀ ಕೆ. ಶ್ರೀನಿವಾಸನರು ಹೇಳಿದರು. ಪರಿಷತ್ತಿನ ಸ್ವಾಗತ ಮಾಡಿ ಶ್ರೀ. ಹಾರ್ನಿಮನರೂ ಸರಕಾರದ ಈ ನಿರ್ಬಂಧವನ್ನು ಖಂಡಿಸಿದರು. ಶ್ರೀ ಆರ್ಥರ್ ಮೂರರ ಸೇವೆಯನ್ನು ಕೊಂಡಾಡಿ ಒಂದು ನಿರ್ಣಯವಾಯಿತು. ಕೆಲವು ಪ್ರಾಂತಿಕ ಸರಕಾರಗಳು ಪತ್ರಿಕೆಗಳೊಡನೆ ಸ್ಪರ್ಧಿಸಿ ತಾವೇ ಪತ್ರಿಕೆ ಹೊರಡಿಸುವುದನ್ನೂ ಖಂಡಿಸಲಾಯಿತು.

ನೋಟೀಸು
ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮನಂಬ್ರ 426/39.

R. I. A. 1164/42

ಮಾರ್ಶೆಲ್ ಬುತ್ರೆಲ್ಲೊ ... ವಾದಿ.

Vs.

1. ಯುಪ್ರೋಜೀನಾ ವಾಸಬಾಯಿ—2. ಪ್ರೆಡ್ರಿಕ ಶಿಲ್ವಾ—3. ಲುಬ್ರಿಸ್ ಶಿಲ್ವಾ ಬಾಯಿ—4. ಲೀನಾ ಶಿಲ್ವಾ ಬಾಯಿ—5. ವ್ಯಾನರ ಗ್ಲೋಬರ್ಟ ಶಿಲ್ವಾ ಕುಂದಾಪುರ ತಾಲೂಕು ತ್ರಾಸಿ ಗ್ರಾಮ— } ಪ್ರತಿವಾದಿಗಳು

ಸದ್ರಿ 2-4ನೇ ಯಾದ್ರಿಯರಿಗೆ—

ಮೇಲ್ಕಂಡ ಅರ್ಜಿಯ ವ್ಯವಹರಣೆಯಲ್ಲಿ ವಾದಿಯು ಪ್ರತಿವಾದಿರ ಮೇಲೆ ಪರ್ಸನಲ್ ಡಿಕ್ರಿಯ ಕುರಿತು ಮೇಲ್ಕಂಡ ಅರ್ಜಿ ದಾಖಲ್ ಮಾಡಿ ಸದ್ರಿ ಅರ್ಜಿಯು 16-10-42ಕ್ಕೆ ಇಟ್ಟಿರುವದಾಗಿ ಈ ಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ 9-10-42 } G. Sanjiva Rao B.A.L.L.B. ವಾದಿಯ ಕಡೆ ವಕೀಲ್.

ರಾಮಕೃಷ್ಣ ಲೀಲಾ ಪ್ರಸಂಗ

ಮೂಲ ಲೇಖಕರು: ಶ್ರೀ ಸ್ವಾಮಿ ಶಾರದಾನಂದಜಿ
ಅನುವಾದಕರು:—ಶ್ರೀ ಸ್ವಾಮಿ ಪ್ರಣವೇಶಾನಂದರು

ಕುಂಡಲಿನಿಯು ಐದು ಪ್ರಕಾರವಾಗಿ ಏರುತ್ತದೆ–

ಕುಂಡಲಿನಿಯ ಶಕ್ತಿಯು ಸುಷುಮ್ನಾ ಮಾರ್ಗವಾಗಿ ಏರುವಾಗ ಸಾಧಕನಿಗಾಗುವ ಬೇರೆಬೇರೆ ಅನುಭವಗಳ ವಿಷಯವಾಗಿ ಶ್ರೀ ಪರಮಹಂಸರು ಇನ್ನೂ ವಿಶೇಷವಾಗಿ ವಿವರಿಸುತ್ತಿದ್ದರು—"ನೋಡು, ಏನೋ ಒಂದು ತಲೆಗೆ ಸರಸರನೆ ಏರುತ್ತದಲ್ಲ, ಅದು ಯಾವಾಗಲೂ ಒಂದೇ ಪ್ರಕಾರವಾಗಿ ಏರುವುದಿಲ್ಲ. ಅದು ಐದು ಪ್ರಕಾರವಾಗಿ ಏರುತ್ತದೆಂದು ಶಾಸ್ತ್ರದಲ್ಲಿದೆ–ಹೇಗೆಂದರೆ, ಪಿಪೀಲಿಕಗತಿ–ಇರುವೆಗಳು ತಿಂಡಿಯನ್ನು ಬಾಯ್ಲಲ್ಲಿ ಹಿಡಿದು ಸಾಲುಸಾಲಾಗಿ ಸರಸರನೆ ಹೋಗುವಂತೆ ಏನೋ ಒಂದು ಪಾದದಡಿಯಿಂದ ಸರಸರನೆ ಎದ್ದು ಕ್ರಮೇಣ ಮೆಲ್ಲಮೆಲ್ಲನೆ ಏರುತ್ತಿರುತ್ತದೆ. ಮಸ್ತಕದ ವರೆಗೆ ಎದ್ದ ಸಮಾಧಿಯುಂಟಾಗುತ್ತದೆ; ಭೇಗತಿ–ಕಪ್ಪೆಗಳು ಹೇಗೆ ಎರಡುಮೂರಾವರ್ತಿ ಹಾರಿ ಹಾರಿ ನಿಂತು ಪುನಃ ಹಾಗೆಯೇ ಹಾರಿ ಹಾರಿ ಹೋಗುವಂತೆ, ಏನೋ ಒಂದು ಪಾದದಡಿಯಿಂದ ಎದ್ದು ತಲೆಗೆ ಏರುವುದನ್ನು ಅನುಭವಿಸಬಹುದು,–ಅದು ತಲೆಗೆ ಎದ್ದ ಕ್ಷಣವೇ ಸಮಾಧಿ; ಸರ್ಪಗತಿ–ಹಾವು ಹೇಗೆ ಉದ್ದಕ್ಕೆ ಅಥವಾ ಸುತ್ತಿ ಕೊಂಡು ಸುಮ್ಮಗೆ ಬಿದ್ದುಕೊಂಡಿರುತ್ತದೆ. ಕೊಳ್ಳೆ ಕಂಡ ಕ್ಷಣವೇ ಅಥವಾ ಭಯಗೊಂಡೊಡನೆಯೇ ಸರಸರನೆ ಓರೆಕೋರೆಯಾಗಿ ಹೋಗುವಂತೆ ಏನೋ ಒಂದು ಮಸ್ತಕಕ್ಕೆ ಎದ್ದ ಕೂಡಲೇ ಸಮಾಧಿ; ಪಕ್ಷಿಗತಿ–ಹಕ್ಕಿಯು ಹೇಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹಾರಿಹೋಗುವಾಗ. 'ಹುಸ್' ಎಂದೆದ್ದು ಒಮ್ಮೆ ಸ್ವಲ್ಪ ಎತ್ತರದಲ್ಲಿಯೂ ಮತ್ತೊಮ್ಮೆ ಕೆಳಗೂ ಹಾರುತ್ತ ಎಲ್ಲಿಯೂ ವಿಶ್ರಮಿಸದೆ ಇರುತ್ತದೆಯೊ ಮತ್ತು ಯಾವ ಸ್ಥಾನದಲ್ಲಿ ಕುಳಿತುಕೊಳ್ಳಬೇಕೆಂದು ಮನಸ್ಸು ಮಾಡಿದಂತೆ ಅಲ್ಲೇ ಕುಳಿತುಕೊಳ್ಳುತ್ತದೆಯೊ ಹಾಗೆಯೇ ಅದು ತಲೆಗೇರುತ್ತದೆ ಮತ್ತು ಸಮಾಧಿಯುಂಟಾಗುತ್ತದೆ; ಕಪಿಗತಿ–ಕಪಿಯು ಹೇಗೆ ಒಂದು ಮರದಿಂದ ಇನ್ನೊಂದು ಮರಕ್ಕೆ ಹೋಗುವಾಗ ಒಂದು ಕೊಂಬೆಯಿಂದ ಮತ್ತೊಂದು ಕೊಂಬೆಗೆ ಹಾರಿ ಹಾರಿ, ಕೊನೆಗೆ ಎರಡು ಮೂರು ಲಾಗಹಾಕಿ ಎಲ್ಲಿ ಹೋಗಬೇಕೆಂದು ನಿರ್ಧಾರ ಮಾಡಿರುತ್ತದೆಯೋ ಅಲ್ಲಿಯೇ ಹೋಗಿರುವಂತೆ ಅದೂ ಕೂಡ ಎರಡು ಮೂರು ಸಲ ಹಾರಿ ಹಾರಿ ತಲೆಗೆದ್ದ ಕ್ಷಣವೇ ಸಮಾಧಿ!

(ಕ್ರಮಶಃ)

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

The Canara Banking Corporation Ltd.
(Incorporated in British India)
Estd. 1906.

Our Rates of Interest on Deposits From 7--8--1942

1. Current		(1% p. a. from Jan. to June. (½% p. a. from July to Dec
2. Savings Bank		2% p. a.
3. Short-term		1¼% p. a.
4. Fixed 3 months		1¾% p. a.
6	,,	2% p.a.
9	,,	2½% p. a.
12	,,	3% p. a.
24	,,	3¼% p. a.

Advances aginst approved securities made at very competitive rates.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು
ಮಂಗಳೂರು ಕೊಡಿಯಾಲಬೈಲು

ಶ್ರೀ ತುಲಾಕಾವೇರಿ ಸಂಕ್ರಮಣ ಜಾತ್ರೆ ಪುಣ್ಯತೀರ್ಥ ಸ್ನಾನಮಾಡುವ ಸುಸಂಧಿ

ತಾರೀಕು 17--10--1942ನೇ ಶನಿವಾರ ಮುಹೂರ್ತಕಾಲ. ಸ್ಟೆಂಡಾರ್ಡ್ 1-53 P. M.

ಟಿಕೇಟು ಚಾರ್ಜು

ಮಂಗಳೂರಿನಿಂದ ಮಡಿಕೇರಿಗಾಗಿ ಬಾಗಮಂಡಲ **Rs. 4-0-0.** ಮಂಗಳೂರು ಅರಂತೋಡು **Rs. 2-1-6.**

JOINT MANAGERS,

The Combined Booking Agency, MANGALORE.
The Joint Booking Office, KODIALBAIL.

The Bank of Mangalore Limited

ESTD. 1931

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%.
24 months or over 4%
Current: ½% from July to December.
1% from January to June.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು. ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು,

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ
ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—
ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra' Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ಛ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ESTD. SWADESHABHIMANI 1906

[ಸಂಪುಟ 36] ತಾರೀಕು 16—10—1942 [ಸಂಚಿಕೆ 41]

ಅಲ್ಲಾಭಕ್ಷರನ್ನು ಅಧಿಕಾರದಿಂದ ತಳ್ಳಿಬಿಟ್ಟರು!

ಸರಕಾರದ ಗೌರವವನ್ನು ನಿರಾಕರಿಸಿದುದಕ್ಕೆ!

ರೂಸ್‌ವೆಲ್ಟ್ ಚಿಯಾಂಗ್ ಕೈಶೇಕರಿಗೆ ವಿನಂತಿ ಹೋಗಿದೆ!

ಆಣೆ ಅತೃಪ್ತಿ ಪಟ್ಟಿರುವರೆ?

ಈ ವಾರದ ಭಾರತದ ರಾಜಕೀಯದಲ್ಲಿ ಅಲ್ಲಾಭಕ್ಷರನ್ನು ಸಿಂಧದ ಗವರ್ನರರು ಅಧಿಕಾರದಿಂದ ತಳ್ಳಿಹಾಕಿದ ವಿಷಯ ಬಹಳ ಮಹತ್ವದ್ದಾಗಿದೆ. ಕಾಮನ್ಸಿನಲ್ಲಿ ನಡೆದ ಚರ್ಚೆಯೇನೋ ತುಸು ಮಟ್ಟಿಗೆ ಆಶಾದಾಯಕವಾಗಿದ್ದರೂ, ಚರ್ಚಿಲ್ ಆಮೆರಿಯವರು ಅಧಿಕಾರದಲ್ಲಿರುವವರೆಗೆ ಭಾರತದ ಹಿತವು ಆಗಲಿಕ್ಕಿಲ್ಲವೆಂದು ಅನೇಕರು ಈಗಾಗಲೇ ಟೀಕಿಸಿದ್ದಾರೆ. ಈ ಮಧ್ಯೆ ಹಿಂದು ಮಹಾ ಸಭೆಯವರು ತಿರುಗಿ ಸಂಧಾನ ಯತ್ನಕ್ಕೆ ಕೈಹಚ್ಚಿರುವಂತೆ ತೋರುತ್ತದೆ. ರೂಸ್‌ವೆಲ್ಟರಿಗೂ ಚಿಯಾಂಗ್ ಕೈಶೇಕರಿಗೂ ಒಂದು ವಿನಂತಿ ಕಳುಹಿಸಿ ಅವರು ಭಾರತದ ವಿಷಯ ಮಧ್ಯಸ್ಥಿಕೆ ವಹಿಸಬೇಕೆಂದು ಕೇಳಿಕೊಂಡಿರುವರು. ಅತ್ತ ಆಣೆಯವರೂ ಬ್ರಿಟಿಷ ಸರಕಾರದ ಧೋರಣದ ವಿಷಯ ಅತೃಪ್ತಿಪಟ್ಟಂತೆ ಅವರ ಈಚೆಯ ಮಾತಿನಿಂದ ಸ್ಪಷ್ಟವಾಗುತ್ತದೆ.

ಅಲ್ಲಾ ಭಕ್ಷರನ್ನು ತಳ್ಳಿಹಾಕಿದರು!

ಸಿಂಧದ ಮುಖ್ಯ ಮಂತ್ರಿ ಅಲ್ಲಾ ಭಕ್ಷರನ್ನು ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಪ್ರಯೋಗಿಸಿ ಮುಖ್ಯ ಮಂತ್ರಿ ಪದವಿಯಿಂದ ತಳ್ಳಿ ಹಾಕಿದರು. ಇತ್ತೀಚೆಗೆ ಅಲ್ಲಾಭಕ್ಷರು ಸರಕಾರದವರು ತಮಗೆ ಕೊಟ್ಟ ಖಾನ್‌ಬಹದ್ದೂರ್ ಮತ್ತು ಓ. ಬಿ. ಇ ಬಿರುದುಗಳನ್ನು ಸರಕಾರಕ್ಕೆ ಹಿಂದೆ ಕಳುಹಿಸುತ್ತಾ, ವೈಸರಾಯರಿಗೊಂದು ಪತ್ರ ಬರೆದು ಅದರಲ್ಲಿ ಸರಕಾರದ ಭೀಕರ ನೀತಿ, ದಬ್ಬಾಳಿಕೆಗಳನ್ನು ನಿಷೇಧಿಸಿದ್ದು ಬ್ರಿಟಿಷರು ಅಧಿಕಾರ ಬಿಟ್ಟುಕೊಡಲು ಮನಸ್ಸಿಲ್ಲದವರಾಗಿದ್ದಾರೆಂದು ಸ್ಪಷ್ಟ ಹೇಳಿ, ಚರ್ಚಿಲ್ ಭಾಷಣವನ್ನು ಖಂಡಿಸಿ ಇಂತಹ ಸಾಮ್ರಾಜ್ಯವಾದೀ ಸರಕಾರದ ಬಿರುದುಗಳನ್ನು ತಾನಿಟ್ಟುಕೊಳ್ಳಲಾರೆನೆಂದು ತಿಳಿಸಿದ್ದರು. ಹಾಗೆ ಬಿರುದು ಬಿಟ್ಟುದರ ಪ್ರತಿಫಲವಾಗಿ, ಗವರ್ನರರಿಗೆ ಅಲ್ಲಾಭಕ್ಷರಲ್ಲಿ ವಿಶ್ವಾಸವಿಲ್ಲವಾಯಿತಂತೆ! ಹಾಗಾಗಿ ಅಲ್ಲಾಭಕ್ಷರನ್ನು ಗವರ್ನರರು ಕರೆದು, ರಾಜಿನಾಮೆ ಕೊಡುವಂತೆ ಕೇಳಿಕೊಂಡರು. ಅವರು ರಾಜಿನಾಮೆ ಕೊಡದ ಕಾರಣ, ಗವರ್ನರರು ತಮ್ಮ ವಿಶೇಷಾಧಿಕಾರವನ್ನು ಪಯೋಗಿಸಿ ಅಲ್ಲಾಭಕ್ಷರ ಮಂತ್ರಿ ಮಂಡಳವನ್ನು ರದ್ದುಗೊಳಿಸಿ, ಅವರನ್ನು ಪ್ರಧಾನ ಮಂತ್ರಿಸ್ಥಾನದಿಂದ ತಳ್ಳಿಹಾಕಿದರು.

ಇದರಿಂದ ಜನತಾ ಪ್ರತಿನಿಧಿಗಳ ಆಳ್ವಿಕೆ, ಬ್ರಿಟಿಷ ಪ್ರಭುತ್ವದವರಿಗೆ ಬೇಕಾಗಿಲ್ಲವೆಂದೂ, ಏಕತಂತ್ರಾಧಿಕಾರವನ್ನೇ ಅವರು ಬಯಸುತ್ತಾರೆಂದೂ ಅನೇಕರು ಈಗಾಗಲೇ ಹೇಳತೊಡಗಿದ್ದಾರೆ. ಅಲ್ಲಿ ಮುಸ್ಲಿಂ ಲೀಗಿನ ಮಂತ್ರಿ ಮಂಡಳವನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಿದ್ದಾರಂತೆ! ಮುಸ್ಲಿಂ ಲೀಗಿನವರು ಮಂತ್ರಿಮಂಡಳ ಸ್ಥಾಪಿಸಿದರೆ ಅವರಿಗೆ ಅಲ್ಲಾಬಕ್ಷ ಪಕ್ಷದವರು ಹಾಗೂ ಅವರ ಬೆಂಬಲಿಗರು ವಿರೋಧ ನಿಲ್ಲುವರು. ಅವರ ಮೇಲೆ ಅವಿಶ್ವಾಸ ಠರಾವು ತರಲೂಬಹುದು. ಅವಿಶ್ವಾಸ ಠರಾವು ತಂದರೆ, ವಿರೋಧಪಕ್ಷದವರನ್ನು ಡಿಫೆನ್ಸ್ ಕಾನೂನನ್ನುಪಯೋಗಿಸಿ ಬಂಧಿಸುವ ಪ್ರಯತ್ನವೂ ನಡೆಯಬಹುದು. ಅಂತೂ ಬ್ರಿಟನಿನ ಧೋರಣವನ್ನು ಖಂಡಿಸಿದಕ್ಕಾಗಿ ಅಲ್ಲಾಭಕ್ಷರು ತಳ್ಳಲ್ಪಟ್ಟರು.

ರೂಸ್‌ವೆಲ್ಟ್ ಕೈಶೇಕರಲ್ಲಿ ವಿನಂತಿ!

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರೂ, ಚೀನದ ದಳಪತಿ ಚಿಯಾಂಗ್ ಕೈಶೇಕರೂ, ಭಾರತದ ವಿಚಾರ ಮಧ್ಯಸ್ಥಿಕೆ ವಹಿಸಿ, ಇಲ್ಲಿ ಇಂದು ರಾಷ್ಟ್ರೀಯ ಸರಕಾರ ಏರ್ಪಡುವಂತೆ ಸಹಾಯ ಮಾಡಬೇಕೆಂದು, ಹಿಂದು ಮಹಾಸಭೆಯಿಂದ ಸಂಧಾನ ಪ್ರಯತ್ನಮಾಡಲು ಏರ್ಪಟ್ಟ ವಿಶೇಷ ಸಮಿತಿ ಪರವಾಗಿ ಅಧ್ಯಕ್ಷರಾದ ಡಾ। ಶ್ಯಾಮ ಪ್ರಸಾದ ಮುಖರ್ಜಿ ಮೊದಲಾದ ಇತರ ಸದಸ್ಯರು ರೂಸ್‌ವೆಲ್ಟರಿಗೂ ಚಿಯಾಂಗ್ ಕೈಶೇಕರಿಗೂ ತಂತಿ ಮೂಲಕ ವಿನಂತಿ ಮಾಡಿಕೊಂಡಿದ್ದಾರೆ ಆ ತಂತಿಯಲ್ಲಿ ಅವರು ಈ ಅಭಿಪ್ರಾಯವನ್ನು ವಿವರಿಸಿದ್ದಾರೆ.

"ಭಾರತದ ಇಂದಿನ ಅಪಾಯಕರ ಪರಿಸ್ಥಿತಿಯಲ್ಲಿ ಬಿಕ್ಕಟ್ಟನ್ನು ಬಗೆಹರಿಸಲು ಬ್ರಿಟನು ಮುಂದೆ ಬರಬೇಕಾಗಿದೆ. ಭಾರತೀಯರಿಗೆ ಅಧಿಕಾರವನ್ನು ಬಿಟ್ಟುಕೊಟ್ಟು ಶತ್ರುಗಳನ್ನೆದುರಿಸುವ ಸಲುವಾಗಿ ದೇಶವನ್ನು ವ್ಯವಸ್ಥೆಗೊಳಿಸಲು ರಾಷ್ಟ್ರೀಯ ಸರಕಾರವನ್ನು ರಚಿಸಬೇಕಾಗಿದೆ. ಇಂದಿನ ಭಾರತದ ಬಿಕ್ಕಟ್ಟಿಗೆ ಬ್ರಿಟಿಷ್ ಅಧಿಕಾರಿಗಳ ಮನೋವೃತ್ತಿಯೇ ಮುಖ್ಯ ಕಾರಣವಾಗಿದೆ. ನಾವು ಗಾಂಧಿಜಿಯವರನ್ನು ಸಂಧಾನ ನಡೆಸುವರೆ ಭೇಟಿ ಮಾಡಲು ಕೇಳಿದಾಗ, ಸರಕಾರವು ನಮಗೆ ಅನುಮತಿ ಕೊಡಲಿಲ್ಲ. ಚರ್ಚಿಲರು ಕಾಮನ್ಸ್ ಸಭೆಯಲ್ಲಿ ಇತ್ತೀಚೆಗೆ ಮಾಡಿದ ಭಾಷಣವು ಪರಿಸ್ಥಿತಿಯನ್ನು ಮತ್ತಷ್ಟು ದೃಢಪಡಿಸಿತು! ದಬ್ಬಾಳಿಕೆಯನ್ನು ನಡೆಸುವುದರಿಂದಲೇ ಸಮಸ್ಯೆ ಪರಿಹಾರವಾಗಲಾರದು. ಭಾರತದಲ್ಲಿ ಬ್ರಿಟನು ಅನುಸರಿಸುತ್ತಿರುವ ಧೋರಣವು ವೇದನೆಯನ್ನುಂಟುಮಾಡುತ್ತಿರುವುದು ಮಾತ್ರವಲ್ಲದೆ ರೋಷಗೊಳಿಸುತ್ತದೆ. ಯೋಗ್ಯವಾದ ಕಾರ್ಯಕ್ರಮವನ್ನೀಗ ಕೈಕೊಳ್ಳದಿದ್ದರೆ ಬ್ರಿಟನಿಗೂ ಭಾರತಕ್ಕೂ ಮುಂದೆ ಎಂದೆಂದಿಗೂ ಸಂಬಂಧ ನಿಲ್ಲದು. ಭಾರತವು ಮುಖ್ಯ ಮಿಲಿಟರಿ ನಿಲ್ದಾಣವಾಗಿದೆ. ಆದ್ದರಿಂದ ಅದು ಇಂದು ಕೇವಲ ಗೃಹ ಸಮಸ್ಯೆಯಾಗಿರದೆ, ಮಿತ್ರರಾಷ್ಟ್ರಗಳ ದೃಷ್ಟಿಯಿಂದ ಅಂತರಾಷ್ಟ್ರೀಯ ಸಮಸ್ಯೆಯಾಗಿದೆ ಭಾರತದ ವಿಷಯವು ಹೇಗೆ ಇತ್ಯರ್ಥಿಸಲ್ಪಡುವುದೆಂಬುದರ ಮೇಲೆಯೇ ವಿಶ್ವದ ಜನರು ಪ್ರಜಾಪ್ರಭುತ್ವ ಯುದ್ಧೋದ್ದೇಶಕ್ಕೆ ಬೆಂಬಲ ಕೊಡುವ ಅಂಶವನ್ನು ನಿರ್ಧರಿಸುವರು. ಮಿತ್ರರಾಷ್ಟ್ರಗಳ ವಿಜಯಕ್ಕೆ ಸಹಾಯವಾಗುವ ಸಲುವಾಗಿಯೂ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಸಲುವಾಗಿಯೂ ಭಾರತದ ಸ್ವಾತಂತ್ರ್ಯ ಘೋಷಣೆಗಾಗಿಯೂ ನೀವಿಬ್ಬರೂ ಇಂದು ಮಧ್ಯಸ್ಥಿಕೆ ವಹಿಸಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ".

ಆಣೆಯವರಿಗೆ ಅತೃಪ್ತಿ?

ಇಂದಿನ ಸರಕಾರದ ಧೋರಣದಲ್ಲಿ ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರಾದ ಲೋಕನಾಯಕ ಆಣೆಯವರಿಗೇ ತೃಪ್ತಿಯಿಲ್ಲವೆಂದು ಅವರು ಮೊನ್ನೆ ಭಾನುವಾರ ವಿದೇಶೀ ಪತ್ರಿಕೋದ್ಯಮಿಗಳು ಕೊಟ್ಟ ಸತ್ಕಾರಕೂಟದಲ್ಲಿ ಹೇಳಿದ ಮಾತುಗಳಿಂದ ಸ್ಪಷ್ಟವಾಗುತ್ತದೆ. ಆಣೆಯವರು ಆ ದಿನ ಇಂತೆಂದರು,

"ಭಾರತದ ಪರಿಸ್ಥಿತಿ ಇನ್ನೂ ಕೆಟ್ಟು ಹೋಗಲು ಬ್ರಿಟಿಷ್ ಸರಕಾರವು ಅವಕಾಶ ಕೊಡಬಾರದು. ಕಾಂಗ್ರೆಸಿನೊಡನೆ ಕೂಡಲೇ ಬ್ರಿಟನು ಒಪ್ಪಂದಕ್ಕೆ ಬರಲು ತೊಂದರೆಗಳಿದ್ದರೂ ಇರಬಹುದು; ಆದರೆ ಇತರ ಪಂಗಡಗಳೊಡನೆಯಾದರೂ ಈಗ ಸಂಧಾನಮಾಡಿ, ಒಂದು ಒಪ್ಪಂದಕ್ಕೆ ಬರಬೇಕು. ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲಿನ ಇತರ ಸದಸ್ಯರೂ ಇದೇ ಅಭಿಪ್ರಾಯವುಳ್ಳವರಾಗಿದ್ದಾರೆ. ಬ್ರಿಟಿಷ್ ಪ್ರಭುತ್ವವು ಇನ್ನೊಂದು ರಚನಾತ್ಮಕ ಯೋಜನೆಯನ್ನಳವಡಿಸಿ, ಇನ್ನೊಬ್ಬ ಮಧ್ಯಸ್ಥರನ್ನು ಇಲ್ಲಿಗೆ ಕೂಡಲೇ ಕಳುಹಿಸಬೇಕು. ಅಂಥಾ ಸಂಧಾನ ನಡೆಯುತ್ತಿರುವಾಗ, ಕಾಂಗ್ರೆಸು ಕೂಡಾ ಅದರ ವಿಮರ್ಶೆ ಮಾಡಲು ಅವಕಾಶವಾಗುವುದು. ವೆಂಡಲ್ ವಿಲ್ಕಿಯವರು ಭಾರತಕ್ಕೆ ಬಂದು ಇಲ್ಲಿನ ಪರಿಸ್ಥಿತಿಗಳನ್ನೆಲ್ಲಾ ತಿಳಿದುಕೊಂಡಿದ್ದರೆ ಚೆನ್ನಾಗುತ್ತಿತ್ತು. ಅಂತೂ ಭಾರತದ ಬಿಕ್ಕಟ್ಟು ಬಗೆಹರಿಸಲು ಕೂಡಲೇ ಬ್ರಿಟನು ಕಾರ್ಯಕೈಕೊಳ್ಳಬೇಕು" ಹೀಗೆಂದು ಅವರು ಅಭಿಪ್ರಾಯವಿತ್ತು, ಇದನ್ನು ಉಳಿದ ತಮ್ಮ ಸಹೋದ್ಯೋಗಿಗಳ ಪರವಾಗಿಯೂ ಹೇಳಿರುವುದಾಗಿ ತಿಳಿಸಿ ಬಿಕ್ಕಟ್ಟು ಬಗೆಹರಿಸಲು ಕೆಳಗಿನ ಕೆಲವು ಸೂತ್ರಗಳನ್ನು ತಿಳಿಸಿರುವರು: ೧. ಇಂದಿನ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರಕಾರವು ಸುಮ್ಮನಿರದೆ ಬಿಕ್ಕಟ್ಟು ಬಗೆಹರಿಸಲು ಸಂಧಾನ ನಡೆಸಬೇಕು. ೨. ಮಹಾತ್ಮಾಜಿಯವರೊಡನೆ ಪುನಃ ಸಂಧಾನ ಮಾತುಕತೆಗಳ ಆರಂಭವಾಗಬೇಕು, ಭಾರತದ ಅತೃಪ್ತಿ ಅಶಾಂತಿಗಳು ನಿಲ್ಲಬೇಕು. ೩. ಯುದ್ಧಕ್ಕೆ ಜನತೆಯ ಬೆಂಬಲ ದೊರೆತು, ಜನರು ಈ ಯುದ್ಧವು ನಮ್ಮದು, ನಮ್ಮ ಜವಾಬ್ದಾರಿಯಿಂದ ನಡೆಯುವಂಥಾದ್ದು, ವಿಜಯಲಭಿಸಿದರೆ ನಮಗೆ ವಿಜಯ, ಭಾರತದ ರಕ್ಷಣೆ ನಮ್ಮ ಹೊಣೆಗಾರಿಕೆಯದು ಎಂದು ತಿಳಿಯುವಂತಾಗಬೇಕು.' ಎಂಬೀ ಮೂರು ವಿಚಾರಗಳನ್ನು ಆಣೆಯವರು ಮುಂದಿಟ್ಟಿರುವರು. ಕಾಮನ್ಸಿನಲ್ಲಿ ಭಾರತದ ವಿಚಾರ ಚರ್ಚೆ ಮುಗಿದ ಬಳಿಕ, ವೈಸರಾಯರು ತಮ್ಮ ಪ್ರವಾಸದಿಂದ ದಿಲ್ಲಿಗೆ ಮರಳಿದ ಕೂಡಲೇ ವೈಸರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲಿನ ಸದಸ್ಯರೆಲ್ಲರೂ ಒಟ್ಟಾಗಿ ಈ ಬಗೆಯ ಪ್ರಯತ್ನ ನಡೆಸುವರೆಂದು ಹೇಳಲಾಗಿದೆ.

ಗಾಂಧಿ ವೈಸರಾಯರಾಗಲಿ!

ಕಾಮನ್ಸ್ ಸಭೆಯಲ್ಲಿ, ಆಮೆರಿಯವರು ಗವರ್ನರರ ಏಕತಂತ್ರಾಧಿಕಾರಕ್ಕೆ ಯುದ್ಧಾನಂತರ ೧೨ ತಿಂಗಳ ವರೆಗೆ ಜೀವದಾನ ಕೊಡುವ ಹೊಸ ಮಸೂದೆಯನ್ನು ತಂದಾಗ ತೀವ್ರ ಚರ್ಚೆ ನಡೆಯಿತು. ಆ ಹೊಸ ಮಸೂದೆಯನ್ನು ನಿರಾಕರಿಸಬೇಕನ್ನುವ ತಿದ್ದುಪಡಿಯನ್ನು ಸ್ವತಂತ್ರ ಕೂಲಿಕಾರ ಪಕ್ಷದ ಜೇಮ್ಸ್ ಮ್ಯಾಕ್ಸ್‌ಟನರು ಮಂಡಿಸಿ ಭಾಷಣ ಮಾಡಿದರು. ಅವರನ್ನು ಸಮರ್ಥಿಸಿ ಕೇಂಬಲ್‌ಸ್ಟಿಫನರು ಮಾತನಾಡಿದರು. ಆಮೆರಿಯವರು, ಭಾರತದಲ್ಲಿ ತಾವು ಮಾಡಿದ ದಬ್ಬಾಳಿಕೆಯನ್ನು ಸಮರ್ಥಿಸಿಕೊಂಡು, ಕಾಂಗ್ರೆಸು ಹಾಗೂ ಗಾಂಧಿಜಿಯವರನ್ನು ದುರುದ್ದೇಶದವರೆಂದು ನಿಂದಿಸಿ ಮಾತನಾಡಿ ಭಾಷಣವಿತ್ತ ಬಳಿಕ ಈ ಚರ್ಚೆ ಪ್ರಾರಂಭವಾಯಿತು. ನಿರಾಕರಣೆಯ ಮಸೂದೆ ಮಂಡಿಸಿದ ಮ್ಯಾಕ್ಸ್‌ಟನರು ಹೀಗೆ ಹೇಳಿದರು: 'ಭಾರತೀಯರಿಗೆ ಮನಸ್ಸಿಲ್ಲದೆ ಅವರನ್ನು ನಾವು ಯುದ್ಧಕ್ಕೆ ಎಳೆಯಲಾರೆವು; ಅವರಿಗೆ ನಿಶ್ಚಯವಾಗಿ ಸ್ವಾತಂತ್ರ್ಯ ಸಿಗುವ ತನಕ ಹೋರಾಡಲು ಮನಸ್ಸಾಗಲಾರದು. ಒಂದು ವೇಳೆ ಅವರನ್ನು ಒತ್ತಾಯದಿಂದ ಯುದ್ಧಕ್ಕೆ ನಿಲ್ಲಿಸಿದರೂ ಮಲಯ ಬರ್ಮಗಳ ಅವಸ್ಥೆಯೇ ಆಗುವುದು. 'ಇಲ್ಲಿ ನಿಮ್ಮ ಸ್ವಾತಂತ್ರ್ಯವಿದೆ, ತೆಗೆದುಕೊಳ್ಳಿರಿ' ಎಂದು ನಾವೀಗ ಅವರಿಗೆ ಹೇಳಬೇಕು." ಈ ಭಾಷಣವನ್ನು ಸಮರ್ಥಿಸಿ ಕೇಂಬಲ್ ಸ್ಟಿಫನರು ಹೀಗೆಂದರು: "ಭಾರತದ ಪರಿಸ್ಥಿತಿಯಿಂದು ಅತ್ಯಂತ ವಿಷಾದಕರವಿದೆ. ಹಿಂದೀಯ ಬಹು ಸಂಖ್ಯಾಕರನ್ನು ಬಿಟ್ಟು ಬ್ರಿಟಿಷರು ಮುಸಲ್ಮಾನರನ್ನು ನಂಬಿರುವುದನ್ನು ನೋಡಿ ಆಶ್ಚರ್ಯವಾಗುತ್ತದೆ. ಎಲ್ಲಾ ಪಕ್ಷಗಳ ಪ್ರತಿನಿಧಿಗಳನ್ನು ಕೂಡಲೇ ಕರೆದು ಗಾಂಧಿಯವರನ್ನು ವೈಸರಾಯರನ್ನಾಗಿ ನೇಮಿಸುವುದು, ಪರಿಸ್ಥಿತಿಯನ್ನು ಸುಧಾರಿಸಲು ಆಮೆರಿಯವರು ಏನೂ ಮಾಡ

(೨ನೇ ಪುಟಕ್ಕೆ ಮುಂದುವರಿದಿದೆ)

KANNADA ILLUSTRATED WEEKLY

ಅಲ್ಲಾಭಕ್ಷರನ್ನು ಅಧಿಕಾರದಿಂದ ತಳ್ಳಿಬಿಟ್ಟರು!

(೧ನೆಯ ಪುಟದಿಂದ ಮುಂದುವರಿದಿದೆ)

ಇಲ್ಲ. ಬಿಕ್ಕಟ್ಟಿನ ಬಗ್ಗೆ ಸರಕಾರದವರೇನು ಮಾಡುವರೆಂಬುದನ್ನು ತಿಳಿಯಲು ಜನರು ಆತುರರಾಗಿದ್ದರು. ಅಮೆರಿಯವರು ಅದನ್ನೇ ಹೇಳಿಲ್ಲ. "ಚರ್ಚಿಲರು ಮತ್ತು ಕನ್‌ಸರ್ವೇಟಿವರು ಸಾಮ್ರಾಜ್ಯವನ್ನು ಕಳಕೊಳ್ಳುತ್ತಿರುವರು" ಎಂದು ಕೂಲಿಕಾರ ಪಕ್ಷದ ಮಿಲಿಯಂಕೋವರು ಹೇಳಿದರು. ಆರ್ಥರ್‌ಗ್ರೀನ್‌ವುಡ್ಡರೂ ಚರ್ಚಿಲ್ ಅಮೆರಿಯವರ ಧೋರಣೆಯನ್ನು ಟೀಕಿಸಿ ಭಾರತೀಯರ ಸ್ನೇಹವನ್ನು ಗಳಿಸಿಕೊಳ್ಳಬೇಕೆಂದು ಸೂಚನೆಯಿತ್ತರು. ಕೆಲಮಂದಿ ಸದಸ್ಯರೇನೋ ಹೀಗೆ ತೀವ್ರ ಚರ್ಚೆ ಮಾಡಿದರೆಂಬುದು ಸರಿ. ಆದರೆ ಸಾಮ್ರಾಜ್ಯವನ್ನು ಸರ್ವಥಾ ಉಳಿಸಿಕೊಳ್ಳಬೇಕೆಂಬ ಸ್ವಾರ್ಥದ ಕನ್‌ಸರ್ವೇಟಿವ್ ಬಹು ಪಕ್ಷವುಳ್ಳ ಬ್ರಿಟನಿನಲ್ಲಿ, ನಿರಾಕರಣ ಸೂಚನೆ ೧೭ ವಿರುದ್ಧ ೩೬೦ ಮತಗಳಿಂದ ಬಿದ್ದು ಹೋಯಿತು! ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತದ ಹಿತಾಸಕ್ತಿ ನಿರ್ಣಯವಾಗುವ ವರೆಗೆ ಹೀಗೆ ಆಗುವುದರಲ್ಲಿ ಆಶ್ಚರ್ಯವೇನು?

ಬಾಂಬು-ಗುಂಡುಗಳು

ಬಂಧನ—ಶಿಕ್ಷೆಗಳು

ಭಾರತದ ಹಲವು ಸ್ಥಳಗಳಲ್ಲಿ ದೇಶೀಯ ಬಾಂಬುಗಳು ತಯಾರಿಸಲ್ಪಟ್ಟು ಅಲ್ಲಲ್ಲಿ ಸರಕಾರಿ ಕಚೇರಿಗಳಿಗೆ, ಪೋಲೀಸು ದಳದ ಬಳಿ ಮೊದಲಾದವುಗಳಿಗೆ ಹಾಕುವ ಪ್ರಯತ್ನ ಮಾಡಲಾಗುತ್ತಿದೆಯೆಂದೂ ಪೇಶಾವರದಲ್ಲಿ ಕೆಂಪಂಗಿ ದಳದವರು ಪಿಕೆಟಿಂಗ್ ಪ್ರಾರಂಭಿಸಿದ್ದು ಅಲ್ಲಿ ಗುಂಡು ಹಾರಿಸಲಾಯಿತೆಂದೂ, ದೇಶ ಸರ್ವತ್ರ ಬಂಧನ, ಲಾಠಿ ಪೆಟ್ಟು, ಛಡೀ ಏಟು, ಶಿಕ್ಷೆ ಕೆಲವು ಕಡೆ ಗುಂಡು ಹಾರಿಸುವುದೂ ನಡೆದಿದೆಯೆಂದೂ, ಉತ್ತರ ಹಿಂದೂಸ್ಥಾನದ ಪರಿಸ್ಥಿತಿ ವಿಷಮವಾಗಿದೆಯೆಂದೂ ಸರಕಾರೀ ಪ್ರಕಟಣೆಯಿಂದ ತಿಳಿದು ಬರುತ್ತದೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E. P. 544/1942.
O. S. 252/38.

ರುಕ್ಮಿಣಿ ಭಂಡಾರ್ತಿ— ಅರ್ಜಿದಾರಳು

ಮತ್ತು

ಹಮ್ಮದೆ ಬ್ಯಾರಿಕೂಡಾ—ರೆಸ್ಪೊಂಡೆಂಟರು

ರೆಸ್ಪೊಂಡೆಂಟರು: 1. ಹಮ್ಮದೆ ಬ್ಯಾರಿ, 2. ಬೀಪಾತುಮ್ಮ, 4. ಸಲಿಮಮ್ಮ, ಚೆಯ್ಯಬ್ಯಾರಿ ಮಕ್ಕಳು, 5. ಇಬ್ರಾಯಿ ಮ್ಯಾನರ ಇವನ ಗಾರ್ಡಿಯನ್ 1ನೇ ರೆಸ್ಪೊಂಡೆಂಟ ಹಮ್ಮದೆಬ್ಯಾರಿ 9. ಅಲಿಮಮ್ಮ ಪೋಕರೆ ಬ್ಯಾರಿ ಎಥವೆ. 10. ಇಬ್ರಾಯಿ ಬ್ಯಾರಿ, 11. ಅಂಮದೆ ಬ್ಯಾರಿ 13. ಉಮ್ಮರೆ ಬ್ಯಾರಿ, 14. ಐಸಮ್ಮ, ಮ್ಯಾನರ್ ಇವರ ಬಗ್ಗೆ ಗಾರ್ಡಿಯನ್ 10ನೇ ಇಬ್ರಾಯಿ ಬ್ಯಾರಿ. 10ರಿಂದ 14ನೇಯವರು ಪೋಕರೆಬ್ಯಾರಿ ಮಕ್ಕಳು. 1 ಮತ್ತು 5ನೇಯವರು ಪುತ್ತೂರು ತಾಲೂಕು ಚಾರ್ಮಾಡಿ ಗ್ರಾಮದಲ್ಲಿಯೂ ಮತ್ತು 2 ಮತ್ತು 4ನೇಯವರು ಪುತ್ತೂರು ತಾಲ್ಲೂಕು ಗರಡಾಡಿಯಲ್ಲಿಯೂ ಮತ್ತು 9ರಿಂದ 11, 13 ಮತ್ತು 14ನೇಯವರು ಪುತ್ತೂರು ತಾಲೂಕು ಗರಡಾಡಿ ಗ್ರಾಮದ ಕೊಟ್ರೋಡಿಯಲ್ಲಿರುತ್ತಾರೆ.

ಮೇಲ್ಕಂಡ ಅಮ್ಲಜಾರಿಯಲ್ಲಿ ಡಿಕ್ರಿಗೆ ಜವಾಬ್ದಾರಿಯಿರುವ ಆಸ್ತಿಯನ್ನು ಏಲಂ ಮಾಡುವರೇ ತಾವುರು ಪಡಿಸಿದ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ಸದ್ರಿ ಅರ್ಜಿಯು ತಾ. 15-10-42ರಲ್ಲು ಹಗಲು 10½ ಗಂಟೆಗೆ ಸದ್ರಿ ಕೋರ್ಟಿನಲ್ಲಿ ತನ್ಖೆಗೆ ಇಟ್ಟಿರುತ್ತದೆ. ಆ ದಿನ ನೀವು ಖುದ್ದು ಯಾ ವಕೀಲರ ಮುಖಾಂತರ ಹಾಜರಾಗಿ ನಿಮ್ಮ ಉದಾಹರಣೆ ಜಾಹೀರು ಮಾಡಿಕೊಳ್ಳತಕ್ಕದ್ದು ಇಲ್ಲವಾದ್ರೆ ಏಕಪಕ್ಷವಾಗಿ ಸದ್ರಿ ಅಮ್ಲಜಾರಿಯನ್ನು ತೀರ್ಮಾನಿಸಲಾಗುವುದೆಂತ ಈ ಮೂಲಕ ತಿಳಿಸಲಾಗುತ್ತದೆ.

ಮಂಗಳೂರು
7-10-42

K. Suryanarayana Adiga,
Advocate for Petitioner.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 505/1942.
R. I. A. 1475/1942.

1. ಕೆ. ಉಪೇಂದ್ರ ಪುರ್ಸಯ್ಯನ ಮಗ L. F. ಕಂಟ್ರಾಕ್ಟರ್, 2. ರಾಮಚಂದ್ರ, ದೂಮಪ್ಪನ ಮಗ ಕಾಸರಗೋಡು ತಾಲೂಕು ತಳಂಗರೆ ಗ್ರಾಮದ ಕೊರಕ್ಕೋಡಿನಲ್ಲಿರುವವರು — ವಾದಿರು ಅರ್ಜಿದಾರರು

ಮತ್ತು

1. ಕೊರಗು ಯಾನೆ ಮಾಲಿಂಗಾ ಓಟಯ್ಯನವರ ಮಗ 2. ರುಕ್ಮಿಣಿ ಅಮ್ಮ ತಾಳಪ್ಪನ ಹೆಂಡ್ತಿ ಮತ್ತು ಚಿಕ್ತಾರಿ ದುಗ್ಗಪ್ಪನ ಮಗಳು 1ನೇಯವನು ತಳಂಗರೆ ಗ್ರಾಮದ ಕೊರಕ್ಕೋಡಿನಲ್ಲಿಯೂ, 2ನೇಯವರು ಕಳನಾಡು ಗ್ರಾಮದಲ್ಲಿ ಸಹಾ ಇರುವವರು — ಪ್ರತಿವಾದಿ ರೆಸ್ಪೊಂಡೆಂಟು

ಇವರೊಳಗೆ

ಸದ್ರಿ ವ್ಯವಹರಣೆಯು ಅರ್ಜಿದಾರ್ರ ಕಡೆಯಿಂದ ಬರಕೊಂಡ ನೋಟೀಸು.

ಮೇಲ್ಕಂಡ ದಾವೆಯನ್ನು ೧ನೇ ರೆಸ್ಪಾಂಡೆಂಟಿನ ಎಲ್ಲಾ ಕ್ರೆಡಿಟರರ ಬಗ್ಗೆ ವಾದಿರು ದಾಕಲ್ಲು ಮಾಡಿದ್ದಾಗಿದ್ದು ಹಾಗೆ ದಾಕಲ್ಲು ಮಾಡುವರೆ ವಾದಿರಿಗೆ ಪರ್ಮಿಶನ್ ಕೊಡಿಸಬೇಕಾಗಿ ದಾಕಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 17-10-1942ಕ್ಕೆ ತನ್ಖೆ ಬಗ್ಗೆ ಇಟ್ಟಿರುತ್ತದೆ. ಆದ್ದರಿಂದ ಆ ಕುರಿತು ಆಕ್ಷೇಪವಿದ್ದವರು ಆ ದಿವಸ ಹಾಜ್ರಾಗಿ ಉದಹರಿಸತಕ್ಕದೆಂತ ಈ ಮೂಲಕ ತಿಳಿಸಲಾಗಿಯದೆ.

ಕಾಸರಗೋಡು
10-10-42

K. Kamalaksha Kamath
Advocate for Petitioners.

NOTICE

In the Court of the District Munsif of Mangalore.

S. C. No. 548/1942.

Ammembal Sarvothuma Churya Sons and M. Pandu-ranga Devappa Kamath... *Plaintiff.*

Against

Mammade Beary & another *Defendants.*

To

Defendants:—1. Mammade Beary, 2. Abdulrahimane Beary, sons of Kunhippa, Beary traders, residing at Padavu in Chippar village, Kasaragod Taluk.

Whereas the plaintiff has filed a suit against you for recovery of Rs. 200/-with interest at 6¼% from 27-8-1942 together with costs of suit with interest in respect of the dealings carried on by you, and that the above suit is posted for hearing at 11 a. m. on 19-10-1942 in the above Court.

You may appear either in person or by a pleader on or before the said date and contest the suit; failing which the same will be heard and decided exparte.

Mangalore,
10-10-1942.

H. Keshava Kamath,
Vakil for plaintiff.

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ವಸ್ತ್ರವಲದೆ ಶೇಕಡಾ ಹತ್ತರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತರದಲ್ಲಿ ಸ್ವೀಕರಿಸಲ್ಪಟ್ಟದ್ದು. ಮಗುವಿನ ಕೋಮಲವಾದ ಮೈಯ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಮಾಡುತ್ತದೆ. ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ತಾಗಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸರಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ. ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ. ಇದು ಬೆವರನ್ನು ಹೀರಿಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು. ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ.

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM

ದಮ್ಮು ಗುಣಪಡಲೇ ಬೇಕು ಎಂದು ಡಾಕ್ಟರರು ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದಕೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ— ಮೆಸರ್ಸ್ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡ್ ಸಂಗ್ರಾಮವು ಭೀಷಣದಿಂದ ಭಯಾನಕ ಪರಿಸ್ಥಿತಿಗೆ ಬಂದು ಮುಟ್ಟಿದೆ; ಜರ್ಮನರು ಈಗ ನಗರದ ಒಳಹೊಕ್ಕರೇನೋ ಸರಿ, ಆದರೆ ಅದೇ ಅವರಿಗೆ ಮೃತ್ಯುಪ್ರಾಯವೂ ಆಯಿತು; ಸ್ಟಾಲಿನ್‌ಗ್ರಾಡ್ ನಗರದ ಬೀದಿ ಬೀದಿಗಳಲ್ಲಿ ಅಂತರಾಂತರಗಳಲ್ಲಿ ನಡೆಯುತ್ತಿರುವ ರಶ್ಯನರ ರುದ್ರ ರಣರಭಸದಿಂದ ಜರ್ಮನ್ ವೀರರು ಕಂಗೆಟ್ಟಿದ್ದಾರೆ. ಒಂದಿಂಚು ನೆಲ ಮುಂದುವರಿಯಬೇಕಾದರೆ ಜರ್ಮನರು ಸಹಸ್ರ ಸಹಸ್ರ ಸಂಖ್ಯೆಗಳಿಂದ ತಮ್ಮ ಜೀವ ಬಲಿದಾನ ಕೊಡಬೇಕಾಗಿದೆ; ತಮ್ಮೆದೆಯ ಬಿಸಿರಕ್ತವನ್ನು ಪ್ರವಾಹವಾಗಿ ಹರಿಸಬೇಕಾಗಿದೆ. ಇಂತಹ ಬಲಿದಾನದಿಂದ ಒಮ್ಮೆ ಒಂದಿಂಚು ಮುಂದುವರಿದರೆ, ಮರುಕ್ಷಣದಲ್ಲಿಯೇ ಪ್ರಬಲ ರಶ್ಯನರು ಅವರನ್ನು ಹತ್ತು ಮಾರು ಹಿಂದೆ ದೂಡಿಬಿಡುತ್ತಾರೆ. ಪೆಟ್ಟಿಗೆ ಪ್ರತಿಪೆಟ್ಟು, ಗುಂಡಿಗೆ ಪ್ರತಿಗುಂಡು, ಜೀವಕ್ಕೆ ಪ್ರತಿಜೀವ ಕೊಡುತ್ತಾ ಉಭಯ ಪಕ್ಷದ ವೀರರೂ ಸಂಗ್ರಾಮ ಸಾಗಿಸುತ್ತಿರುವರು. ಇಷ್ಟರಲ್ಲಿ ಜರ್ಮನರು ಇನ್ನೊಂದು ಪ್ರಚಂಡ ಆಕ್ರಮಣ ಪ್ರಯತ್ನ ಮಾಡಲಿರುವರೆಂದು ಪ್ರಬಲ ಸುದ್ದಿ ಬಂದಿದೆ, ಅವರ ಹಂಚಿಕೆಯೇನೋ ಇನ್ನೂ ತಿಳಿದಿಲ್ಲ, ಆದರೆ ರಶ್ಯನ್ ವೀರರು ಅದಕ್ಕೆ ಬೇಕಾದ ಸರ್ವ ಸಿದ್ಧತೆ ಮಾಡಿಕೊಂಡಿದ್ದಾರೆ. ಕಾಕಸಸಿನಲ್ಲಿ ಜರ್ಮನರು ಮೊಜಡಕ್ ಭಾಗದಲ್ಲಿ ತುಸು ಮುಂದೊತ್ತುತ್ತಿರುವರು. ನೊವರೊಸಿಸ್ಕ್ ಭಾಗದಲ್ಲಿ ರಶ್ಯನರು ಜರ್ಮನರನ್ನು ಪ್ರತಿಭಟಿಸಿದ್ದಾರೆ. ಅಂತೂ ಜರ್ಮನರು ಇನ್ನೂ ಜೀವದ ಹಂಗು ತೊರೆದು ಹೋರಾಡುವುದನ್ನು ನೋಡಿದರೆ, ಈ ಹಿಮಗಾಲದ ಮುನ್ನ ಸ್ಟಾಲಿನ್‌ಗ್ರಾಡ್ ಕಾಕಸಸ್‌ಗಳನ್ನು ಕೈವಶಪಡಿಸಿಕೊಳ್ಳಬೇಕೆಂಬ ಪಣ ತೊಟ್ಟಂತೆ ತೋರುವುದು. ಅದನ್ನು ತಿಳಿದೇ ರಶ್ಯನರು ಅಸಮ ಸಾಹಸದಿಂದ ಶತ್ರುಗಳನ್ನು ಎಲ್ಲಾ ಕಡೆಗಳಲ್ಲಿಯೂ ಪ್ರತಿಭಟಿಸಿ ಹೋರಾಡುತ್ತಿದ್ದಾರೆ.

ಹಿಟ್ಲರನಿಗೆ ಚರ್ಚಿಲ್ ಉತ್ತರ

ಹಿಟ್ಲರ್ ಮತ್ತು ಚರ್ಚಿಲ್ ಇವರಿಬ್ಬರು ಇಂದಿನ ಪ್ರಚಂಡ ದ್ವಿತೀಯ ಮಹಾ ಸಂಗ್ರಾಮ ರಂಗವನ್ನು ಮುನ್ನಡೆಸುತ್ತಿರುವ ಉಭಯ ಪಕ್ಷಗಳ ಅದ್ವಿತೀಯ ವೀರರು. ಹಿಟ್ಲರ್ ಎಂದರೆ ಚರ್ಚಿಲ್ ಕೆಂಡವಾಗುವಂತೆ, ಚರ್ಚಿಲನೆಂದರೆ ಹಿಟ್ಲರ್ ಉರಿಯುತ್ತಾನೆ! ಇತ್ತೀಚೆಗೆ ಚರ್ಚಿಲ್ ಗೋರಿಂಗ್ ಪ್ರಭೃತಿ ಜರ್ಮನ್ ಮುಖಂಡರು ಭಾಷಣವಿತ್ತು, ಯುದ್ಧ ಪರಿಸ್ಥಿತಿಯ ಕುರಿತು ಟೀಕಾ ಟಿಪ್ಪಣಿ ಮಾಡಿದ್ದಕ್ಕೆ ಪ್ರತ್ಯುತ್ತರವೆಂಬಂತೆ ಚರ್ಚಿಲರೂ ತಾ. ೧೨ರಂದು ಎಡಿನ್‌ಬರೋದಲ್ಲಿ ಒಂದು ಉದ್ದಾಮ ಭಾಷಣವಿತ್ತು ಸಂಗ್ರಾಮ ಪರಿಸ್ಥಿತಿಯನ್ನು ವಿವರಿಸಿದರು. ಚರ್ಚಿಲರು ಹೀಗಂದರು: ಹಿಟ್ಲರ್ ಪ್ರಭೃತಿಗಳು ಮಾಡಿದ ಭಾಷಣದಲ್ಲಿ ಹಲವು ಸತ್ಯಾಂಶಗಳು ಇದ್ದುವು. ಅವರೂ ಅನೇಕ ನಿಜ ಸಂಗತಿಗಳನ್ನು ಒಪ್ಪಿಕೊಂಡಿದ್ದಾರೆ. "ನಾನೆಷ್ಟು ವಿಜಯ ಪಡೆದರೂ, ನನ್ನ ಕಡೆಗೆ ಯಾರೂ ಲಕ್ಷ್ಯ ಕೊಡಲಿಲ್ಲವಲ್ಲಾ" ಎಂದು ಹಿಟ್ಲರ್ ಹೇಳುತ್ತಾನೆ. ಅಂತೂ ಇದರಿಂದ ಜರ್ಮನ್ ಬುದ್ಧಿ ಇತ್ತೀಚೆಗೆ ಹೇಗಿದೆಯೆಂದು ತಿಳಿದುಬರುತ್ತದೆ. ಹಿಟ್ಲರ್ ಎಷ್ಟೇ ವಿಜಯ ಪಡೆದರೂ ಆತನಿಗೆ ಕೊನೆಯ ಜಯವಿಲ್ಲ. ಕಳೆದ ಎರಡು ವರ್ಷಗಳಿಂದ ಆತನು ಗೆಲ್ಲುವ ಲಕ್ಷಣಗಳಾವುವೂ ಕಂಡುಬಂದಿಲ್ಲ, ಆದರೆ ನಮ್ಮ ಪರಿಸ್ಥಿತಿಯೀಗ ಸುಧಾರಿಸಿದ್ದು ನಮ್ಮ ವಿಜಯ ಹಿಂದಿತ್ತ. ಈ ಯುದ್ಧದಲ್ಲಿ ಒಮ್ಮೆ ಅವನತಿಯ ಲಕ್ಷಣ ಕಂಡುಬಂದರೆ ತನ್ನ ಅವನತಿಯೂ ಆಯಿತೆಂದು ಅವನಿಗೆ ತಿಳಿದಿದೆ. ಇದ್ದರಿಂದಲೇ ಆತನು ಕೈದಿಗಳ ಮೇಲೆ ಸೇಡು ತೀರಿಸುತ್ತಿದ್ದಾನೆ. ಅತ್ತ ರಶ್ಯದಲ್ಲಿಯೂ ಅವನ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಲಿದೆ. ಅಲ್ಲಿಂದ ಬೇರೆ ಕಡೆಗೆ ಸೈನ್ಯ ಸಾಗಿಸುವುದು ಅವನಿಂದ ಆಗಿಲ್ಲ. ಅಲ್ಲಿ ನಡೆದ ಮಾನವ ಸಂಹಾರ ಅಸಮಾನವಾದುದು. ಇಷ್ಟುದೊಡ್ಡ ಪ್ರಮಾಣದಲ್ಲಿ ಮಾನವ ಹನನವು ಪಶ್ಚಿಮ ಯುರೋಪಿನಲ್ಲಿ ಬೇರೆಲ್ಲೂ ನಡೆದಿಲ್ಲ. ಜರ್ಮನರು ರಶ್ಯದಲ್ಲಿ ಇದುವರೆಗೆ ೫೪,೦೦೦ ಜನರನ್ನು ಕೊಂದಿದ್ದಾರೆ. ಇಂಥ ಕ್ರೂರರಿಗೆ ಕರುಣೆ ತೋರಿಸಿದರೆ ಅವರು ಮತ್ತಷ್ಟು ಕ್ರೂರವಾಗುವರು.'

ಆ ಮೇಲೆ ಚರ್ಚಿಲರು ಸ್ಟಾಲಿನ್ ಗ್ರಾಡ್ ಕಾಳಗವನ್ನುಲ್ಲೇಖಿಸಿ ರಶ್ಯನ್ ವೀರರ ಸಾಹಸವನ್ನು ಕೊಂಡಾಡಿದರು. "ಜರ್ಮನರ ದುರ್ದೆಸೆ ಮುಂದಿನ ಚಳಿಗಾಲದಲ್ಲಿ ಹೆಚ್ಚಾಗುವುದೆಂದೂ ಬ್ರಿಟಿಷರ ಬಾಂಬಿಗೆ ಅವರು ತಲೆಯೊಡ್ಡಬೇಕಾಗುವುದೆಂದೂ ಹೇಳಿದರು. ನೌಕಾ ಯುದ್ಧದ ವಿಷಯ ಹೇಳುತ್ತಾ ಈ ಸಮಸ್ಯೆಯನ್ನು ಬ್ರಿಟನು ಕೆನಡಾ ಅಮೇರಿಕಗಳು ಇನ್ನೂ ಒಟ್ಟುಗೂಡಿ ನಿಶ್ಚಯಿಸಬೇಕಾಗಿದೆಯೆಂದೂ, ಜರ್ಮನಿ ಮೇಲೆ ಧಾರಾಳ ಬಾಂಬು ಚೆಲ್ಲಲಾಗಿದೆಯೆಂದೂ, ಅನೇಕ ಅಮೇರಿಕನ್ ಸೈನಿಕರು ಸುರಕ್ಷಿತ ಬ್ರಿಟನಿಗೆ ಬಂದಿರುವರೆಂದೂ ಹೇಳುತ್ತಾ ಮಿತ್ರರ ವೈಮಾನಿಕ ಬಲವು ಅಕ್ಷ ರಾಷ್ಟ್ರಗಳ ವೈಮಾನಿಕ ಬಲಕ್ಕಿಂತ ಹೆಚ್ಚಾಗಿರುವುದೆಂದೂ ತಿಳಿಸಿದರು. ಈ ಸಪ್ಟಂಬರದಲ್ಲಿ ಪೇಸಿಫಿಕ್ಕಿನಲ್ಲಿ ಆಸ್ಟ್ರೇಲಿಯನರು ಅಮೇರಿಕನ್ ಮಿತ್ರರ ಸಹಾಯದಿಂದ ನ್ಯೂಗಿನಿಯಲ್ಲಿ ಬಹಳ ಮುಂದೆ ನುಗ್ಗಿರುವರೆಂದು ವಿವರಿಸಿ, ಈಗ ಬ್ರಿಟನು ಒಂದು ದೃಢ ನಿರ್ಧಾರಕ್ಕೆ ಬಂದು ಮುಟ್ಟಿರುವುದರಿಂದ, ಇನ್ನು ಮುಂದೆ ಉತ್ಸಾಹದಿಂದ ಮುಂದೆ ಸಾಗುವೆವೆಂದು ತಿಳಿಸಿದರು. ಹೀಗೆ ಚರ್ಚಿಲರು ಎಂದಿನಂತೆ ಮಾತಿನಲ್ಲಿ ಹಿಟ್ಲರನನ್ನು ಈಗಾಗಲೇ ಗೆದ್ದರು! ಇನ್ನು ನಿಜವಾದ ರಣರಂಗದ ಗೆಲುವು ಮಾತ್ರ ಮುಂದೆ ನಿರೀಕ್ಷಿಸಬೇಕಾಗಿದೆ. ಚರ್ಚಿಲರೆಂದರೆ ಬ್ರಿಟನಿನ ಯುದ್ಧಕಾಲದ ಅಮೃತವಾಣಿ! ಅವರ ಮಾತೇ ಹಲವರನ್ನು ಇದುವರೆಗೆ ಬದುಕಿಸಿದೆ! ಅವರೇ ನಮ್ಮ ಅಪ್ರತಿಮ ನಾಯಕರೆಂದು ಬ್ರಿಟನು ವಿಶ್ವಾಸವಿಟ್ಟಿದೆ! ಚರ್ಚಿಲರು ಸ್ಪಷ್ಟವಕ್ತಾರರೆಂದು ಹೆಸರಾದವರು. ಹಿಟ್ಲರನನ್ನು ಅವರು ಎಷ್ಟು ದ್ವೇಷಿಸುತ್ತಾರೋ, ಹಿಟ್ಲರನ ಪರಾಕ್ರಮವನ್ನೂ ಅಷ್ಟೇ ತಿಳಿಯಬಲ್ಲ ಸಮರ್ಥರು. ಆದಾಗಿ ಬ್ರಿಟನಿನ ಅದೃಷ್ಟ ಚಕ್ರ ಚರ್ಚಿಲರ ಕೈಯಲ್ಲಿದೆ! ಅಂತ್ಯ ಜಯವು ನಮಗೇ ಎಂದು ಬ್ರಿಟನರಿಗೆ ಅವರು ಈಗಲೂ ಭರವಸೆಯಿತ್ತಿದ್ದಾರೆ!

ಹಿಂದೀ ಸಾಗರದ ಮಹತ್ವ

ಸಿಂಗಾಪುರವು ಜಪಾನಿನ ವಶವಾದ ಬಳಿಕ ಹಿಂದೀ ಸಾಗರವು ಸಾಮಾನ್ಯತಃ ಜಪಾನಿನ ಆಕ್ರಮಣ ಸ್ಥಳವಾಗಿ ಬಿಟ್ಟಿದೆ. ಆ ರಣದಿಂದಲೇ ಪೂರ್ವದಲ್ಲಿ ಮಿತ್ರರ ಯುದ್ಧ ಚಟುವಟಿಕೆಯೂ ತೋರುವರೆಗೀಡಾಗುತ್ತದೆ. ಈಗ ಮಡಗಾಸ್ಕರಿನಲ್ಲಿ ನಡೆದ ಯುದ್ಧವನ್ನೂ ಈ ದೃಷ್ಟಿಯಲ್ಲಿ ನೋಡಬೇಕಾಗಿದೆ. ನೌಕಾ ಯುದ್ಧದ ವಿಚಾರದಲ್ಲಿ ನಿಷ್ಣಾತರಾದ ಅಮೇರಿಕದ ಅಲೆಕ್ಸಾಂಡರ್ ಕಿರಲ್ಸಿ ಎಂಬವರು ಹಿಂದೀ ಸಾಗರದ ಮಹತ್ವದ ಕುರಿತು ಏಶ್ಯ' ಪತ್ರಿಕೆಯಲ್ಲಿ ಕೆಲವು ವಿಚಾರಗಳನ್ನು ಹೊರಗೆಡಹಿದ್ದಾರೆ. ಅವರ ಅಭಿಪ್ರಾಯಗಳು ಇಂತಿವೆ: 'ಜಪಾನರು ಮಲಯ ಮತ್ತು ಆಸ್ಟ್ರೇಲಿಯಗಳ ಮಧ್ಯದ ಸಂಚಾರ ಮಾರ್ಗಗಳನ್ನು ವಶಪಡಿಸಿಕೊಂಡದ್ದರಿಂದ ಆಂತರ್‌ರಾಷ್ಟ್ರೀಯ ನೌಕಾ ಸಮಸ್ಯೆಯ ಮೇಲೆಯೇ ದೊಡ್ಡ ಪರಿಣಾಮವುಂಟಾಗಿದೆ. ಈ ಸಂದರ್ಭದಲ್ಲಿ ಮಿತ್ರ ರಾಷ್ಟ್ರಗಳು ಪೇಸಿಫಿಕ್ಕಿನಲ್ಲಿ ಪ್ರಬಲವಾದ ಧಾಳಿಯನ್ನಿಡದಿದ್ದರೆ ಹಿಂದೀ-ಮಹಾಸಾಗರದಲ್ಲಿಯೂ ಹೆಚ್ಚಿನ ಸಂರಕ್ಷಕ ಉಪಾಯ ಕೈಕೊಳ್ಳಬೇಕಾಗುವುದು. ದಕ್ಷಿಣ ಆಫ್ರಿಕಾ ಮಾರ್ಗವಾಗಿ ಆಸ್ಟ್ರೇಲಿಯಕ್ಕೆ ಹೆಚ್ಚಿನ ಸೈನ್ಯ ಸಾಮಗ್ರಿ ಕಳುಹಿಸಬಹುದು. ಹಿಂದೀ ಮಹಾ ಸಾಗರವು ಬಂಗಾಲ ಉಪಸಾಗರ ಮತ್ತು ಸಮುದ್ರಗಳೆಂಬ ಎರಡು ವಾಹಿನಿಗಳಿಂದ ಮಿತ್ರ ರಾಷ್ಟ್ರಗಳಿಗೆ ಒಂದು ಭದ್ರವಾದ ಸರೋವರದಂತಿದೆ. ಈ ಮಹಾ ಸಾಗರದ ಮಾರ್ಗವಾಗಿ ಮಿತ್ರ ರಾಷ್ಟ್ರಗಳು ಚೀನಕ್ಕೆ ಮಧ್ಯಪೂರ್ವ ರಣಭೂಮಿಗೆ ಮತ್ತು ರಶ್ಯಕ್ಕೆ ಬೇಕಾದ ಸಾಮಾಗ್ರಿ ಕಳುಹಿಸಬಹುದಾಗಿತ್ತು. ಆದರೆ ಈಗ ಆ ಭದ್ರತೆ ಹೋಗಿದೆ, ಆದರಿಂದ ಬ್ರಿಟಿಷ್ ಅಮೇರಿಕನ್ ನೌಕಾ ಬಲಕ್ಕೆ ಹೆಚ್ಚಿನ ಆತಂಕವಾಗಿದೆ. ಪೇಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳ ಜೀವ ನಾಡಿಗಳನ್ನು ರಕ್ಷಿಸಲು ಪ್ರಯತ್ನ ಮಾಡಿದಂತೆ ಈಗ ಹಿಂದೀ ಮಹಾ ಸಾಗರದ ರಕ್ಷಣೆ ಮಾಡಲೂ ಸರ್ವ ಸನ್ನಾಹ ಕೈಕೊಳ್ಳಬೇಕಾಗಿದೆ. ಈ ಹೊಸ ಯುದ್ಧ ಭೂಮಿಯಲ್ಲಿ ಇಮ್ಮಡಿ ಸಿದ್ಧತೆ ತೆಗೆದುಕೊಳ್ಳಬೇಕಾಗಿದೆ. ಅಕ್ಷ ರಾಷ್ಟ್ರಗಳನ್ನು ಯಶಸ್ವಿಯಾಗಿ ಪ್ರತಿಭಟಿಸಲು ಹಿಂದೀ ಮಹಾ ಸಾಗರದ ಉತ್ತರ ತೀರಗಳಲ್ಲಿ ಜಪಾನು ಒಂದೇ ವಿಧದಲ್ಲಿ ಮುನ್ನುಗ್ಗುತ್ತಿರುವುದರಿಂದ, ಜಪಾನ್ ಜರ್ಮನ್ ಸೈನ್ಯಗಳು ಒಂದೆಡೆ ಸೇರುವ ಸಂಭವವುಂಟು. ಈ ರೀತಿ ಎರಡೂ ಸೈನ್ಯಗಳು ಸೇರಿಬಿಟ್ಟರೆ ಅಥವಾ ಪಶ್ಚಿಮ ಪೇಸಿಫಿಕ್ಕಿನಂತೆ ಹಿಂದೀ ಮಹಾ ಸಾಗರದಲ್ಲಿಯೂ ಜಪಾನರ ಆಟವು ನಡೆದುಬಿಟ್ಟರೆ ಉತ್ತರ ಆಫ್ರಿಕದಲ್ಲಿ, ಏಶ್ಯದಲ್ಲಿ ಮತ್ತು ರಶ್ಯ ರಣರಂಗದಲ್ಲಿ ಮಿತ್ರ ಸೈನ್ಯಗಳು ಪ್ರತ್ಯೇಕಿಸಲ್ಪಡುವವು. ಅಕ್ಷರಾಷ್ಟ್ರಗಳು ವಿಜೃಂಭಿಸುತ್ತಿರುವೀ ಕಾಲದಲ್ಲಿ ಹೀಗಾಗಬಿಡುವುದು ಬುದ್ಧಿವಂತಿಕೆಯಲ್ಲ. ಮಿತ್ರರಾಷ್ಟ್ರಗಳಿಗೆ ಅಂಡಮಾನ್, ನಿಕೋಬರ್, ಫಿಲಿಪಯಿನ್ ಇವು ಕೈಬಿಟ್ಟದ್ದು ಬಹಳ ಅಪಾಯಕರವಾದುದು. ಇವು ಆಯಕಟ್ಟಿನ ಸ್ಥಳಗಳಾಗಿದ್ದು ಅವುಗಳನ್ನು ಪುನಃ ವಶಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಪರಿಸ್ಥಿತಿ ವಿಷಮವಾಗಬಹುದು. ಯುರೋಪಿನಲ್ಲಿ ಇನ್ನೊಂದು ನಾಜೀ ವಿರೋಧ ರಣರಂಗವೂ, ಏಶ್ಯದಲ್ಲಿ ಜಪಾನ ವಿರೋಧ ದ್ವಿತೀಯ ರಣರಂಗವೂ ಸುರುವಾಗದಿದ್ದರೆ ಮಿತ್ರಪಕ್ಷದವರ ಯುದ್ಧ ನೀತಿಯು ಕೆಟ್ಟುಹೋಗಬಹುದು. ಈ ಎಚ್ಚರಿಕೆಯ ಮಾತುಗಳು ಒಳ್ಳೆಯ ಕಾಲದಲ್ಲಿ ಬಂದಿವೆ. ಮಿತ್ರರು ಹಾಗೂ ಚರ್ಚಿಲರು ಅಂತ್ಯ ಜಯವು ತಮಗೆಂದು ವಿಶ್ವಾಸವನ್ನು ಮಾತ್ರ ಇಟ್ಟುಕೊಂಡಿರದೆ, ಯುರೋಪಿನಲ್ಲಿ ಹಾಗೂ ಏಶ್ಯದಲ್ಲಿ ದ್ವಿತೀಯ ರಣರಂಗಗಳನ್ನು ಕಲ್ಪಿಸುವದು ಸಮಯೋಚಿತವಾಗಿರುವುದು.

ಪೆಸಿಫಿಕ್ ಕಾಳಗ

ಪೆಸಿಫಿಕ್ ಕಾಳಗಕ್ಕೆ ಪುನಃ ಈಗ ಕಳೆಯೇರಿದೆ. ಪೆಸಿಫಿಕ್ ನೈಋತ್ಯ ಪ್ರದೇಶದಲ್ಲಿ ಯುದ್ಧವು ನಡೆಯುತ್ತಿದೆ. ನ್ಯೂಗಿನಿ, ಓವೆನ್, ಸ್ಟಾನ್ಲೆ ಪರ್ವತಗಳಲ್ಲಿದ್ದ ಆಸ್ಟ್ರೇಲಿಯನ್ ಸೈನಿಕರು ಮುನ್ನುಗ್ಗಿ ಹೋಗುತ್ತಿದ್ದಾರೆ. ಅವರು ಕೋಕೋಡಾ ಕಣಿವೆಯನ್ನೂ ದಾಟಿರುವರು. ಮೊರೆಸ್ಬಿಯಿಂದ ಉತ್ತರಕ್ಕೆ ೮೦ ಮೈಲು ದೂರ ಹೋಗಿದ್ದು ಜಪಾನರು ಯುದ್ಧ ಸುರುಮಾಡುವ ಮೊದಲೇ ಅವರು ಆ ಗಡಿ ದಾಟಿ ಹೋಗಿರುವರು. ಅಮೇರಿಕನ್ ಸೈನಿಕರೂ ಇವರ ಬೆಂಬಲವಿರುವರೆಂದು ಹೇಳಲಾಗಿದೆ. ಸಾಲೋಮನ್ ದ್ವೀಪಸ್ತೋಮದ ಗ್ವಾಡಲ್‌ಕೆನಾಲನ್ನು ತಿರುಗಿ ತೆಗೆದುಕೊಳ್ಳಲು ಜಪಾನರು ಬಿಡದೆ ಸಾಹಸ ಮಾಡುತ್ತಿದ್ದಾರೆ. ಅಲ್ಲಿ ಜಪಾನರು ಪ್ರಚಂಡ ಸೈನ್ಯವನ್ನಿಳಿಸುವುದು ಸಾಧ್ಯವಿದೆ. ಸಲೋಮನ್ ಪ್ರದೇಶದಲ್ಲಿ ಜಪಾನ್ ಹಡಗು ಪಡೆಯ ಮೇಲೆ ಅಮೇರಿಕನ್ ನೌಕಾದಳದವರ ಅಭಿಯೋಗ ನಡೆಯಿತು. ಉತ್ತರದಲ್ಲಿ ಅಲ್ಯೂಶಿಯನ್ ದ್ವೀಪ ಸಮುದಾಯದ ಏಡ್ರಿ ನಿವಾಸದಲ್ಲಿ ಅಮೇರಿಕನರಿದ್ದು, ಅಲ್ಲಿಂದ ಕಿಸ್ಕಾದ ಮೇಲೆ ಅವರು ಅಭಿಯೋಗ ನಡೆಸಿರುವರು. ಪಶ್ಚಿಮಭಾಗದ ಅಟ್ಟೂ ಅಗಟ್ಟೂ ದ್ವೀಪಗಳನ್ನು ಜಪಾನರು ಬಿಟ್ಟುಕೊಟ್ಟಿರುವರೆಂದು ತಿಳಿದಿದೆ.

ಪೆಸಿಫಿಕಿನಲ್ಲಿ ಮುಂದಿನ ಯುದ್ಧ ಘಟನೆಗಳು ಬೆಳೆಯಬಹುದೆಂದು ಹಲವರು ಊಹಿಸುತ್ತಿದ್ದಾರೆ. ಬರ್ಮ ದೇಶವನ್ನು ಆಕ್ರಮಿಸಿದ ನಂತರ ಜಪಾನು ಎಲ್ಲಿಯೂ ಮಹತ್ವದ ಅಭಿಯೋಗವನ್ನು ಆರಂಭಿಸಿಲ್ಲ. ಅಂತೂ ಅದು ಕಳೆದ ಕೆಲವು ತಿಂಗಳಲ್ಲಿ ಬೇಕಾದ ಸಿದ್ಧತೆ ಮಾಡುತ್ತಿದ್ದಂತೆಯೂ ಸ್ಟಾಲಿನ್‌ಗ್ರಾಡ್ ಯುದ್ಧಗತಿಯನ್ನು ನಿರೀಕ್ಷಿಸುತ್ತಿದ್ದಂತೆಯೂ ಕಂಡುಬರುತ್ತದೆ. ಆದರೆ ಈಗ ಸ್ಟಾಲಿನ್‌ಗ್ರಾಡ್ ಯುದ್ಧ ಸಾಮಾನ್ಯವಾಗಿ ಕೊನೆಗಂಡಂತೆ ಆಗಿದೆ. ಇನ್ನು ಮುಂದೆ ಜಪಾನು ಎಲ್ಲಿ ಆಕ್ರಮಣ ಕೈಕೊಳ್ಳುವುದು ಎಂಬುದು ಈಗಿನ ವಿಚಾರವಾಗಿದೆ. ಜಪಾನು ಆಸ್ಟ್ರೇಲಿಯಾ, ಸೈಬೀರಿಯಾ, ಭಾರತ ಇವುಗಳಲ್ಲಿ ಯಾವುದಾದರೂ ಒಂದು ಪ್ರದೇಶದ ಮೇಲೆ ಪ್ರಬಲ ಆಕ್ರಮಣ ಮಾಡುವುದು ಸಂಭವನೆಂದು ಅನೇಕ ಕಾಲದಿಂದ ಹೇಳಲಾಗುತ್ತಿತ್ತು. ನ್ಯೂಗಿನಿ, ಸಲಮನ್, ಅಲ್ಯೂಶಿಯನ್ ಧಾಳಿಯೇನೋ ಕೇವಲ ನಟನೆ ಮಾತ್ರದಂತಿದೆ! ಆದರೆ ಇತ್ತೀಚೆಗೆ ಆಸ್ಟ್ರೇಲಿಯಾ ಸೈಬೀರಿಯಗಳ ಕಡೆಗೆ ಜಪಾನಿನ ಚಟುವಟಿಕೆಯ ಸುದ್ದಿಗಳೇನೂ ಇಲ್ಲ. ಭಾರತದ ಪರಿಸ್ಥಿತಿಯೇ ಗಂಡಾಂತರದ್ದೆಂದು ಹಲವರು ತರ್ಕಿಸುತ್ತಾರೆ. ಕಳೆದ ಆರು ತಿಂಗಳಿಂದ ತಾವು ಪಡೆದ ವಿಜಯವನ್ನು ಗಟ್ಟಿ ಮಾಡಿಕೊಂಡು, ಈಗ ಮುಂದಿನ ಆಕ್ರಮಣಕ್ಕೆ ಸರ್ವ ಸಿದ್ಧತೆ ಮಾಡಿ ಜಪಾನು ಹೊರಡುವುದು ಸಾಧ್ಯವಿದೆ. ಈಗ ಮಳೆಗಾಲವೂ ನಿಂತಿದ್ದು ಪ್ರಕೃತಿಯೂ ಅನುಕೂಲವಿದೆ. ಬರ್ಮವು ಜಪಾನರ ವಶವಾದನಂತರ ಅಸಾಮು ಬಂಗಾಳಗಳಿಗೆ ಜಪಾನ್ ಭೀತಿ ಇದ್ದೇ ಇದೆ. ಇತ್ತೀಚೆಗೆ ಬಂಗಾಲದಲ್ಲಿ ವೈರಿ ವಿಮಾನಗಳೆಂದು ಸಂಶಯವುಳ್ಳ ಕೆಲವು ವಿಮಾನಗಳು ಹಾರಿದ ಸುದ್ದಿಯೂ ಬಂದಿದೆ. ಅತ್ತ ಸಾಗರದಲ್ಲಿಯೂ ಜಪಾನರ ಚಟುವಟಿಕೆಯ ವಾರ್ತೆ ಕೇಳಬರುತ್ತಿದೆ. ಅಂತೂ ಜಪಾನರು ಮುಂದೇನು ಮಾಡುವರೆಂಬುದು ಇದುವರೆಗೆ ನಿಶ್ಚಿತ ತಿಳಿದುಬರದಿದ್ದರೂ, ಭಾರತಕ್ಕೆ ಜಪಾನ್ ಭೀತಿ ಇಂದು ಹಿಂದಿಗಿಂತಲೂ ಹೆಚ್ಚಾಗಿರುವುದು.

NOTICE

In the Court of the District Munsiff of Mangalore

Small Cause Suit No 525/1942.

Between

Gaspar Noronha *Plaintiff*

and

Inas Lasrado *Defendant*

Notice to the defendant, Inas Lasrado, son of Salvadore Lasrado, residing at Cheloor, Mangalore Taluk

Notice to the defendant named above is hereby given that the plaintiff has filed the above suit for the recovery of Rs 83-9-2 being the balance principal and interest amount due under the on demand promissory note dated 20-8-1936 for Rs 64 executed by the defendant in favour of the plaintiff and that the 22nd day of October 1942 has been appointed for the hearing of the said suit. In default of his appearance on the day before mentioned the suit will be determined in his absence.

(By order of the Court)

Mangalore, } J Gonsalves B.A. L.L.B
13-10-1942 } Vakil for Plaintiff

WANTED

"Applications are invited from qualified Ayurvedic Medical Practitioners who are willing to be appointed as Medical Practitioners in short leave and other vacancies in Rural Ayurvedic Dispensaries under the South Kanara District Board".

Applications with true copies of diplomas and other certificates if any regarding their experience should reach the President, District Board by the 25th October 1942.

Sd: K Vittal Shetty,
President, Dt Board,
South Kanara.

ಸ್ವದೇಶಾಭಿಮಾನಿ

ತಾರೀಕು 16—10—1942

ಒಂದು ಎಚ್ಚರಿಕೆ!

“ಭಾರತದ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಾ ಹೋಗುತ್ತಿದೆ; ಭಾರತದಲ್ಲಿರುವ ಪ್ರತಿಯೊಬ್ಬ ಆಂಗ್ಲೇಯನೂ, ಆಂಗ್ಲೇಯಳೂ ಇದನ್ನು ಬಲ್ಲರು; ಅವರು ಹೋದ ಹೋದ ಕಡೆ, ಅವರನ್ನು ಕಂಡಕಂಡಲ್ಲಿ ಅವರ ಸುತ್ತುಮುತ್ತಲೂ ಕೂಡಾ ದಿನ ಹೋದಂತೆ ಭಾರತೀಯರಿಗೆ ಅವರ ವಿಷಯ ಅನಾದರ ಹೆಚ್ಚುತ್ತಿದೆಯೆಂಬುದರ ಅನುಭವ ಆಗುತ್ತಿದೆ. ಇದು ಏನಾದರೂ ವ್ಯಕ್ತಿಗತ ದ್ವೇಷವಲ್ಲವೆಂಬುದು ನಮಗೆ ಚನ್ನಾಗಿ ಗೊತ್ತಿದೆ. ಭಾರತೀಯರು,‘ಬ್ರಿಟಿಷರ ಹೃದಯ ಕರಗೀತು, ಅವರು ಸಮಾಧಾನದಿಂದ ಹೊರಟು ಹೋದಾರು, ನಮ್ಮ ಸ್ವಾತಂತ್ರ್ಯ ದೊರಕೀತು’ ಎಂದು ಕಾದು ಕಾದು ಸಾಕಾಗಿ, ಬೇಡಿ ಬೇಡಿ ಸೋತುಹೋಗಿ ಈಗ ಅವರು ಇಂತಹ ನಿರ್ಧಾರಕ್ಕೆ ಬಂದಿದ್ದಾರೆ. ಅಮೆರಿಕದವರಿಗೂ ಈ ವಿಷಯ ತಿಳಿದಿವೆ. ‘ಯುದ್ಧಾನಂತರ ಭಾರತದಲ್ಲಿ ಬ್ರಿಟಿಷರಿಗೆ ಗೆಳೆಯರೊಬ್ಬರೂ ದೊರೆಯಲಿಕ್ಕಿಲ್ಲವೆಂದು ಪ್ರತಿಯೊಬ್ಬ ಬ್ರಿಟಿಷನಿಗೂ ತಿಳಿದಿದೆ’ ಎಂದು ‘ನ್ಯೂಯರ್ಕ್ ಟೈಮ್ಸ್’ನಲ್ಲಿ ಹರ್ಬರ್ಟ್ ಮೆಥ್ಯೂ ಎಂಬವರು ಬರೆದಿರುತ್ತಾರೆ. ‘ಯುದ್ಧಾನಂತರ’ ಎಂದು ಅವರು ಹೇಳಬೇಕಾಗಿಲ್ಲ; ಇಂದಿನ ಪರಿಸ್ಥಿತಿ, ಇನ್ನೂ ಸ್ವಲ್ಪ ಕಾಲ ಹೀಗೆಯೇ ನಡೆಯುತ್ತಾ ಹೋದರೆ, ಯುದ್ಧದ ಕಾಲದಲ್ಲಿಯೇ ನಮಗಿಲ್ಲಿ ಹಿತಚಿಂತಕರು ಯಾರೂ ದೊರೆಕಲಿಕ್ಕಿಲ್ಲ. ನಮ್ಮೊಡನೆ ಸೇರಿ ಯುದ್ಧದಲ್ಲಿ ಹೋರಾಡುವವನು ಇಲ್ಲಿ ಯಾರಾದರೂ ದೊರೆಕುವನೇ ಎಂಬ ವಿಷಯವಂತೂ ಮಾತಾಡುವುದೇ ಬೇಡ. ಕೇಂದ್ರ ಎಸೆಂಬ್ಲಿಯಲ್ಲಿ, ಸರ್ ಫೆಡ್ರಿಕ್ ಜೇಮ್ಸರೇ ಹೇಳಲಿಲ್ಲವೇ, ಇಂದಿನೀ ಅರಾಜಕತೆ, ದಂಗೆ, ರಕ್ತ ಕ್ರಾಂತಿಗಳ ಸಂದರ್ಭದಲ್ಲಿ ನಮಗಿರುವ ಬೆಂಬಲವೆಂದರೆ ಪ್ರತಿಯೊಂದು ಪ್ರಾಂತಗಳಲ್ಲಿನ ಪೋಲೀಸು ದಲ ಮತ್ತು ಅವರಿಗೆ ಸಹಾಯವಾಗಿ ಇಟ್ಟಿರುವ ಮಿಲಿಟರಿ ಎಂದು? ಕ್ರಾಂತಿಯ ಪ್ರವಾಹದೆದುರು ನಿಂತವರೆಂದರೆ ಪೋಲೀಸರು ಮತ್ತು ಮಿಲಿಟರಿಯವರೆಂದು ಅವರೇ ಒಪ್ಪಿಕೊಳ್ಳಲಿಲ್ಲವೆ? ಒಂದು ರಾಷ್ಟ್ರದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಸ್ಥಾಪಿಸಲು ಪೋಲೀಸರು ಮತ್ತು ಸಶಸ್ತ್ರ ಸೈನಿಕರು ಮಾತ್ರ ಇರುವರಾದರೆ, ‘ಭಾರತದ ಪರಿಸ್ಥಿತಿ ಮೊದಲಿನಂತೆ ಶಾಂತವಾಗಿದೆ, ಭಾರತೀಯರು ತೃಪ್ತಿಯಿಂದಿದ್ದಾರೆ; ಆದ್ದರಿಂದ ನಾವು ಯುದ್ಧ ಮುಗಿವ ತನಕ ನಮಗಿಷ್ಟಬಂದಂತೆ ಮಾಡುತ್ತಾ ಹೋಗುವ’ ಎಂದು ಹೇಳುವುದರಲ್ಲಿ ಏನು ಅರ್ಥವಿದೆ?’ ಹೀಗೆಂದು ಕಲ್ಕತ್ತದ ಆಂಗ್ಲೇಯ ಮಹಿಳೆ ಮಿಸ್ ಮಾರ್ಗರೇಟ್ ಪೋಪ್ ಎಂಬಾಕೆ ಬ್ರಿಟಿಷರಿಗೆ ಒಂದು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ.

ಮಿಸ್ ಮಾರ್ಗರೇಟ್ ಭಾರತದ ಪರಿಸ್ಥಿತಿಯನ್ನು ವಿವರಿಸುತ್ತಾ ಮತ್ತೆ ಹೀಗಂದಿರುವರು: “ಭಾರತದ ಕುರಿತು ಬ್ರಿಟನಿನ ಸಾರ್ವಜನಿಕರಿಗೆ ಪುನಃ ಪುನಃ ತಪ್ಪು ಸುದ್ದಿ ಕೊಡಲಾಗುತ್ತಿದೆ. ಪಾರ್ಲಿಮೆಂಟಿನ ಒಳ ಸೇರಿದ ಸದಸ್ಯರು ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಕಣ್ಬಿಟ್ಟು ನೋಡುವುದೇ ಇಲ್ಲ.. ಆದರೆ ನಾವು ಇನ್ನು ಮುಂದೆ ಇದೇ ರೀತಿ ತಪ್ಪು ಹಾದಿ ಹಿಡಿಯಬಾರದು. ನಮ್ಮನ್ನು ಯಾರೂ ವಂಚಿಸಕೂಡದು. ಇಂಗ್ಲೆಂಡೇ! ದೇವರಾಣೆಯಾಗಿ ಈಗ ನೀನು ಎಚ್ಚರಗೊಳ್ಳು! ಇಲ್ಲಿನ ಪರಿಸ್ಥಿತಿಯ ಕುರಿತು ನಿನ್ನ ಕಣ್ಣಿಗೆ ಧೂಳೆರಚಿದವರನ್ನು ಹೊರ ಹಾಕು! ನೀನು ಈಗ ಭಾರತದ ಕುರಿತು ನವೀನ ದೃಷ್ಟಿ ಬೀರು! ಈಗ ಬಹಿರಂಗಕ್ಕೆ ಬಾ! ಭಾರತೀಯರಾದರೂ, ನಾವು ಹೇಗೆ ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆಯೋ, ಅಂತೆಯೇ ಅವರೂ ಅವರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆಂಬುದನ್ನು ಒಪ್ಪಿಕೋ! ಕ್ರಿಪ್ಸ್ ಸೂಚನೆ ಏನಾಯಿತು ಎಂಬ ವಿಷಯ, ಆ ಮೇಲೆ ಅದರ ಕುರಿತು ನಡೆದ ಸುಳ್ಳು ಪ್ರಚಾರಗಳ ವಿಷಯ ಆಲೋಚಿಸಬೇಡ. ಭಾರತವು ಸ್ವತಂತ್ರವಾಯಿತೆಂದು ಜಗತ್ತಿನೆದುರು ಸಾರಿಬಿಡು! ಅಲ್ಲಿನ ರಾಷ್ಟ್ರಾಭಿಮಾನಿಗಳನ್ನು ಸೆರೆಮನೆಯಿಂದ ಬಿಡುಗಡೆಗೈದು ಅವರಿಗೆ ಹಿಂದಿನ ಸಲದಂತೆ ನಿಯಂತ್ರಣವಿರದೆ ಸಂಪೂರ್ಣ ಸ್ವತಂತ್ರ ಅಧಿಕಾರವನ್ನು ಬಿಟ್ಟುಕೊಡುವ ಸ್ಪಷ್ಟ ಸೂಚನೆ ಮಾಡು! ಆದರೆ ಈ ಕಾರ್ಯವು ಕೂಡಲೇ ಆಗಬೇಕು. ಸರಿಯಾದ ಸಮಯದಲ್ಲಿಯೇ ಆಗಬೇಕು— ಈ ಸಮಯದಲ್ಲಿಯೇ ಆಗಬೇಕು!’

ಸ್ವದೇಶ ಸಮಾಚಾರ

“ಕಾಂಗ್ರೆಸನ್ನು ತುಳಿಯುವುದು ಶಕ್ಯವಲ್ಲ”
ಅಮೇರಿಗೆ ರಾಜಾಜಿ ಉತ್ತರ

“ಕಾಂಗ್ರೆಸ್ಸು ಸೈನ್ಯವಲ್ಲ; ಅದು ಒಂದು ರಾಜಕೀಯ ಪಕ್ಷಮಾತ್ರವಲ್ಲ; ಕಾಂಗ್ರೆಸು ಸ್ವಾತಂತ್ರ್ಯದ್ಯೋತಕ. ಭಾರತವು ಗುಲಾಮ ಗುರಿಯಲ್ಲಿರುವವರೆಗೆ ಕಾಂಗ್ರೆಸು ಜೀವಂತವಾಗಿರುವುದು” ಎಂದು ರಾಜಾಜಿಯವರು ಅಮೇರಿಯವರ ಅಬ್ಬರಕ್ಕೆ ಉತ್ತರವಿತ್ತಿದ್ದಾರೆ. ರಾಜಾಜಿಯವರು ಉತ್ತರದಲ್ಲಿ, ಅಮೇರಿಯವರು, ಹಿಂದಿದ್ದ ಒಡಕ್ಕನ್ನು ಮತ್ತಷ್ಟು ಹೆಚ್ಚಿಸಿದರೆಂದು ಹೇಳಿ, ಕಾಂಗ್ರೆಸಿನೊಡನೆ ಸಂಧಾನವಮಾಡುವುದಿಲ್ಲವೆಂದು ಅಮೇರಿ ಹೇಳಿದ್ದರಿಂದ ಭಾರತದೊಡನೆ ರಾಜಿಯಿಲ್ಲವೆಂದು ಹೇಳಿದಂತಾಯಿತೆಂದೂ, ಕಾಂಗ್ರೆಸನ್ನು ತುಳಿಯಲು ಅಮೇರಿ ಸಾಹಸಪಟ್ಟರೆ ಅದರಿಂದ ಮಹಾಗಂಡಾಂತರ ಉಂಟೆಂದು ಎಚ್ಚರಿಸಿ, ಖಾಕಿ ಬಟ್ಟೆ ಬೂಟ್ಸುಗಳಂತೆ ಈ ಯುದ್ಧಕ್ಕೆ ಜನತೆಯ ಬೆಂಬಲವೂ ಅವಶ್ಯವಿಲ್ಲವೇ ಎಂದು ಕೇಳಿದ್ದಾರೆ.

ಚರ್ಚಿಲ್ ಅಮೆರಿಯವರು ಹೋಗಲೇ ಬೇಕು

ಏಕೆಂದರೆ ಅವರಿರುವವರೆಗೆ ಭಾರತದ ಸಮಸ್ಯೆ ಬಗೆಹರಿಯಲಾರದು ಎಂದು ‘ಬೊಂಬೇ ಕ್ರಾನಿಕಲ್’ ಪತ್ರಿಕೆ ಖಂಡ ತುಂಡವಾಗಿ ಬರೆದಿದೆ. ಮುನ್ಷಿಯವರೂ ಅದೇ ಅಭಿಪ್ರಾಯಪಟ್ಟಿದ್ದಾರೆ.

ಬ್ರಿಟಿಷ್ ರಾಜಕಾರಣಿಗಳು ವಿಕ್ಟೋರಿಯಾ, ಎಡ್ವರ್ಡ್ ಕಾಲದಂತೆ ಇಂದೂ ಭಾರತವನ್ನಾಳಲು ನೋಡುವುದು ವಿಷಾದಕರವಿದೆ! ಎಂದು ಅವರಂದಿರುವರು.

ಚಳವಳದಲ್ಲಿ ಒಟ್ಟು ಸತ್ತವರು ೬೫೮ ಮಂದಿ

ಎಂಬುದಾಗಿ ಮೊನ್ನೆ ಪಾರ್ಲಿಮೆಂಟ್ ಚರ್ಚೆ ಕಾಲದಲ್ಲಿ ಅಮೆರಿಯವರು ತಿಳಿಸಿದರು. ಗಾಯಗೊಂಡವರು ಒಟ್ಟು ೨೦೩೪ ಜನರಂತೆ! ಇವರಲ್ಲಿ ೩೦ ಸರಕಾರೀ ನೌಕರರು ಸತ್ತಿರುವರಂತೆ!

ಹಿಂದುಸ್ಥಾನದ ಬಿಶಪರ ಯತ್ನವೆ?

ಹಿಂದುಸ್ಥಾನದ ಬಿಶಪರು ಭಾರತದ ಪರಿಸ್ಥಿತಿ ವಿಚಾರವಾಗಿ ಆಸಕ್ತಿ ವಹಿಸಿ ಸಂಧಾನ ನಡೆಸುವರೆ, ಅಲ್ಲಾಭಕ್ಷರಿಗೂ ರಾಜಾಜಿಯವರಿಗೂ ಆಮಂತ್ರಣವಿತ್ತಿರುವರೆಂದು ಪ್ರಸಿದ್ಧವಾಯಿತು, ಅಲ್ಲಾಭಕ್ಷರಾದರೂ ಆ ಸಂಬಂಧ ತಾನು ಬಿಶಪರನ್ನು ನೋಡಲು ಹೋಗುವೆನೆಂದಿದ್ದರು. ಆದರೆ ಈಗ ಬಿಷಪರು ‘ನಾನು ಅವರಿಗೆ ಆ ರೀತಿ ತಂತಿ ಕಳುಹಿಸಲೇ ಇಲ್ಲ’ ಎಂದು ಹೇಳಿದ್ದಾರೆ! ರಾಜಾಜಿಯವರು ಆ ಬಿಷಪರ ಅಧ್ಯಕ್ಷತೆಯಲ್ಲಿ ತಾ. ೧೫ರಂದು ಭಾರತದ ಪರಿಸ್ಥಿತಿ ವಿಚಾರ ಭಾಷಣಕೊಡುವರು.

ಹಿಂದೂಸ್ಥಾನದಿಂದ ಕ್ವೆಟ್ಟಾ ಕತ್ತರಿಸಲ್ಪಟ್ಟಿದೆ

ಎಂದು ಈಗ ತಿಳಿಯುತ್ತದೆ. ರೈಲ್ವೆ ಮಾರ್ಗಗಳನ್ನು ಕತ್ತರಿಸಿದ್ದರಿಂದ ಕ್ವೆಟ್ಟಾಕ್ಕೆ ಕಳದ ಎರಡು ತಿಂಗಳಿಂದ ಹಿಂದುಸ್ಥಾನದ ಸಂಬಂಧವೇ ಇಲ್ಲವೆಂದು ಬಲೂಚಿಸ್ಥಾನ ಸರಕಾರದವರು ಪ್ರಕಟಿಸಿದ್ದಾರೆ. ಇದರಿಂದ ಕ್ವೆಟ್ಟಾಕ್ಕೆ ಅನೇಕ ಆಹಾರ ಸಾಮಾಗ್ರಿಗಳೇ ದೊರಕದಂತಾಗಿದೆ!

ಮಂಗಳೂರು
ವಿವಾಹ

ಮಂಗಳೂರು ವಕೀಲ್ ಶ್ರೀ. ಕೆ. ಆರ್. ಆಚಾರ್ ಇವರ ಪುತ್ರಿ ಸೌ। ಕಮಲನಿಯನ್ನು ಡಾ। ಯು. ಎಲ್. ನಾರಾಯಣರಾಯರ ಪುತ್ರ ಶ್ರೀ। ಯು. ಶ್ರೀಪತಿರಾಯರಿಗೆ ಕೊಟ್ಟು ತಾ. ೧೫ರಂದು ಪೂರ್ವಾಹ್ನ ಗಂಟೆ೧೧-೧೫ಕ್ಕೆ ಶ್ರೀ। ಕೆ. ಆರ್. ಆಚಾರರ ಕದ್ರಿಯ ಮನೆಯಲ್ಲಿ ವಿವಾಹ ಸಮಾರಂಭ ನಡೆಯಿತು.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಇದು ವಿಷವು ತುರಿಕಜ್ಜಿಯಾಗಿ ಬಿಡುವುದೆ?

ಜಾಂಬಕ್ ಅದನ್ನೂ ಎಲ್ಲಾ ತರದ ಚರ್ಮ ವ್ಯಾಧಿಗಳನ್ನೂ ಗುಣಪಡಿಸುವುದು

ನಿಮ್ಮಯಲ್ಲಿ ಎಲ್ಲಾದರೂ ಸಣ್ಣ ಕಜ್ಜಿಯ ಸ್ಥಳವಿದ್ದರೆ ಚರ್ಮ ದಪ್ಪಗಾಗಿದ್ದು ಒಡೆದಿದ್ದರೆ ಅದೇ ಮುಂದೆ ವಿಷಮ ತುರಿಕಜ್ಜಿಯಾಗಿ ನಿರಂತರ ತೊಂದರೆಕೊಡುವುದು. ಆದ್ದರಿಂದ ಅಂಥಾ ಯಾವುದೇ ಸಣ್ಣ ಬೇನೆಯನ್ನಾದರೂ ಹಾಗೆ ಬಿಟ್ಟು ಬಿಡಬೇಡಿರಿ. ಪ್ರತಿ ದಿನ ರಾತ್ರಿ ಜಾಂಬಕ್ ಸವರಿರಿ. ಜಾಂಬಕಿನಲ್ಲಿರುವ ಉತ್ತಮ ವನೌಷಧಿ ಸತ್ವವು ಚರ್ಮಕ್ಕೆ ಬೇಗನೇ ಹೀರಿಕೊಳ್ಳುವುದು. ನೋವನ್ನೂ ಬಾವನ್ನೂ ಗುಣಪಡಿಸುವುದು ಜಾಂಬಕ್ ವಿಷ ಕ್ರಿಮಿಗಳನ್ನೂ ಪರಿಹರಿಸಿ ಒಂದೇ ಒಂದು ಕಲೆ ಉಳಿಯದಂತೆ ಗುಣಪಡಿಸುವುದು. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಜಾಂಬಕ್ ಒಂದು ರೂಪಾಯಿ ಅಥವಾ ರೂ. 2-4-0 ಬೆಲೆಗೆ ದೊರಲ್ಪಡುವುದು. ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಮ್ಯುನಿಸ್ಟರ ಬಂಧನ

ಮಂಗಳೂರು ಮಜೂರ ಮುಖಂಡರೂ, ಕಮ್ಯುನಿಸ್ಟ್ ಪಕ್ಷದವರೂ ಆದ ಶ್ರೀ. ಕೆ. ಕೇಶವ ಕಾಮತರನ್ನು ೯-೧೦-೪೨ರಂದು ರಾತ್ರಿ ಬಂಧಿಸಿ ರಿಮಾಂಡಿನಲ್ಲಿಟ್ಟಿರುವರು.

ಹಡಗ ಒಡೆದು ದಡಸೇರಿದ ಅಮೇರಿಕನ್ ನಾವಿಕರು

ಸುಮಾರು ೩೦ ಮಂದಿ, ಹಡಗ ಒಡೆದು ದೋಣಿಯಲ್ಲಿ ಬಂದ ಅಮೇರಿಕನ್ ನಾವಿಕರು ಪಳ್ಳಿಕೆರೆಯಲ್ಲಿ ತಾ. ೧೩ರಲ್ಲು ಬಂದು ದಡಸೇರಲು ಅವರನ್ನು ಆ ದಿನ ಮೈಲಿಗೆ ಮಂಗಳೂರಿಗೆ ತಂದಿರುವುದಾಗಿಯೂ ಇವರಲ್ಲಿ ಕೆಲವರು ಬಹಳ ನಿತ್ರಾಣಗೊಂಡಿರುವರೆಂದೂ ಅವರಿಗೆ ತಕ್ಕ ಶುಶ್ರೂಷೆಗಳೂ ನಡೆಯುತ್ತಿವೆಯೆಂದೂ ತಿಳಿದುಬರುತ್ತದೆ.

ಗಾಂಧಿ ಜಯಂತಿ

ಉಕ್ಕಿನಡ್ಕದಲ್ಲಿ ತಾ. ೯ರಂದು ಗಾಂಧಿ ಜಯಂತಿಯು ಮೆರವಣಿಗೆ, ಸಾರ್ವಜನಿಕ ಸಭೆ, ಭಾಷಣಗಳಿಂದ ಆಚರಿಸಲ್ಪಟ್ಟಿತು.

ತಾ. ೯ರಂದು ಬದಿಯಡ್ಕದಲ್ಲಿಯೂ ಮೆರವಣಿಗೆ, ಸಾರ್ವಜನಿಕ ಸಭೆ, ಭಾಷಣಗಳಿಂದ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು.

ಬಂಟ್ವಾಳ

ಇಲ್ಲಿ ಶ್ರೀ. ಅಮ್ಮು ಶೆಟ್ಟಿ ಇವರನ್ನು ಬಂಧಿಸಲಾಗಿದೆ. ಮುರ್ಜೆ ಎಂಬಲ್ಲಿ ಶ್ರೀ ನರಸಿಂಹ ಮಲ್ಯರನ್ನು ಹಸ್ತಗಿರಿ ಮಾಡಿರುವರು. ತಾ. ೪ರಂದು ಶ್ರೀಗಳಾದ ವರದರಾಯ ಶೆಣೈ, ಕೇಶವ ಗೋಪಾಲ ಬಾಳಿಗ, ಮತ್ತಿನ್ನೊಬ್ಬರನ್ನು ಬಂಧಿಸಲಾಗಿದೆ.

ದಸರಾ ಮಹೋತ್ಸವಗಳಿಲ್ಲ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಚೆಗೆ ಹಲವು ವರ್ಷಗಳಿಂದ ವಿವಿಧ ಕಾರ್ಯಕ್ರಮಗಳನ್ನೊಳಗೊಂಡು ಜರಗುತ್ತಿದ್ದ ದಸರಾ ಮಹೋತ್ಸವಗಳು ಈ ವರ್ಷದ ಭಾರತದ ರಾಜಕೀಯದ ನಿಮಿತ್ತ ಹಾಗೂ ರಾಷ್ಟ್ರೀಯ ಮುಖಂಡರ ಬಂಧನ ಮತ್ತು ಸರಕಾರದ ದಬ್ಬಾಳಿಕೆಯ ನಿಷೇಧ ಸೂಚನೆಯ ನಿಮಿತ್ತ ಜರಗುವುದಿಲ್ಲವಾಗಿ ತಿಳಿದುಬಂದಿದೆ. ಪುತ್ತೂರು ದಸರಾ ಮಹೋತ್ಸವ, ಮಂಗಳೂರು ಮಿತ್ರಮಂಡಳಿ ದಸರಾ ಮಹೋತ್ಸವ, ಪೆರ್ಡಾಲ 'ಪ್ರೇಮ ಕೂಟ'ದವರ ದಸರಾ ಮಹೋತ್ಸವ ಇವುಗಳೆಲ್ಲಾ ಈ ವರ್ಷ ಜರಗುವುದಿಲ್ಲ.

ಉಡುಪಿ

ಶ್ರೀ. ಕೆ. ಕೆ. ಶೆಟ್ರಿಗೆ ಒಂದುವರೆ ವರ್ಷ ಕಠಿಣ ಶಿಕ್ಷೆ

ಉಡುಪಿಯ 'ನವಯುಗ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಕೆ. ಶೆಟ್ರನ್ನು ಕಟ್ಪಾಡಿಯಲ್ಲಿ ಕಲೆಕ್ಟರರ ಹುಕುಮನ್ನು ಉಲ್ಲಂಘಿಸಿ ಸಾರ್ವಜನಿಕ ಭಾಷಣ ಮಾಡಿದ ಆರೋಪದ ಮೇಲೆ ಬಂಧಿಸಲ್ಪಟ್ಟದ್ದು ತಾ.-೮ರಂದು ಕುಂದಾಪುರ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ಮೂಡುಬಿದ್ರೆ ಕೇಂಪಿನಲ್ಲಿ ಅವರ ವಿಚಾರಣೆ ನಡೆದು ಒಂದುವರೆ ವರ್ಷ ಕಠಿಣ ಶಿಕ್ಷೆ ವಿಧಿಸಲಾಯಿತು. ಇವರಿಗೆ ಸಿ ಕ್ಲಾಸು ಕೊಡಲಾಗಿದೆ.

ಲಕ್ಷ್ಮೀನಾರಾಯಣ ನಾಯ್ಕರಿಗೆ ಶಿಕ್ಷೆ ಮತ್ತು ಜುಲ್ಮಾನೆ

ಮೇಲಿನ ಆರೋಪದ ಮೇಲೆ ಕಟ್ಪಾಡಿಯಲ್ಲಿ ಬಂಧಿಸಲ್ಪಟ್ಟದ್ದ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯ್ಕರ ವಿಚಾರಣೆಯೂ ಮೇಲಿನವರಿಂದ ಅದೇ ದಿನ ನಡೆದು ಒಂದು ವರ್ಷ ಕಠಿಣ ಶಿಕ್ಷೆ ಮತ್ತು ರೂ. ೩೦೦ ಜುಲ್ಮಾನೆ ತಪ್ಪಿದಲ್ಲಿ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಇವರಿಗೆ ಬಿ ಕ್ಲಾಸು ಕೊಟ್ಟಿರುವರು.

ಮೂಡಬಿದ್ರೆ

೪-ಜನರಿಗೆ ಶಿಕ್ಷೆ

ಮೂಡಬಿದ್ರೆ ಮಂಗಳೂರು ರಸ್ತೆಯಲ್ಲಿ ಸಂಕವನ್ನು ಧಕ್ಕೆಗೊಳಿಸಿದ ಆಪಾದನೆ ಮೇರೆಗೆ ಕುಂದಾಪುರ ಸಬ್-ಡಿವಿಜನಲ್ ಮೆಜಿಸ್ಟ್ರೇಟರು ೪ ಜನರಿಗೆ ೧ ವರ್ಷ ಕಠಿಣ ಶಿಕ್ಷೆ ವಿಧಿಸಿರುವರು.

ಪುತ್ತೂರು

೧೩ ಜನರಿಗೆ ಶಿಕ್ಷೆ

ಬೆಳ್ತಂಗಡಿ, ಕಾಸರಗೋಡು, ಹೊಸದುರ್ಗ, ನೀಲೇಶ್ವರಗಳಲ್ಲಿ ಬಂಧಿಸಿ ತಂದ ೧೩ ಮಂದಿಯ ವಿಚಾರಣೆಯು ತಾ. ೮ರಂದು ಇಲ್ಲಿ ಡಿ ಕಲೆಕ್ಟರ್ ಶ್ರೀ ರಾಮುಲು ನ್ಯಾಡು ಇವರ ಮುಂದೆ ನಡೆದು ಈ ರೀತಿಯಾಗಿ ಶಿಕ್ಷೆ ವಿಧಿಸಲಾಗಿದೆ. ಶ್ರೀಗಳಾದ ಅಚ್ಯುತ ಶೆಣೈ ೧ ವರ್ಷ ಕಠಿಣ ಶಿಕ್ಷೆ, ೩೦೦ ರೂ. ಜುಲ್ಮಾನೆ, ಎನ್. ಕೆ. ಬಾಲಕೃಷ್ಣನ್ ೧ ವರ್ಷ ಕಠಿಣ ಶಿಕ್ಷೆ, ಕೆ. ಕೆ. ಪಿ. ರಾಮಪ್ರಸುವಾಳ್ ೯ ತಿಂಗಳು ಕ. ಶಿ. ಚಾತು ನಂಬಿಯಾರ್ ೯ ತಿಂಗಳು ಕ. ಶಿ ಎಂ. ಕುಂಞಂಬು ನಾಯರ್ ೮ ತಿಂಗಳು ಕ. ಶಿ. ಕುಂಞಿಕಣ್ಣನ್ ನಂಬಿಯಾರ್ ೯ ತಿಂಗಳು ಕ. ಶಿ. ಹರೀಶ್ವರನ್ ಪೆರುಮಾಳ್ ೬ ತಿಂಗಳು ಕ. ಶಿ. ಮತ್ತು ೧೦೧ ರೂ. ಜುಲ್ಮಾನೆ. ಉಳಿದ ಶ್ರೀಗಳಾದ ಎಚ್. ಶಿವರಾಯ ಕಾಮತ್, ಕೆ. ವಿ. ಕಣ್ಣನ್, ಸಿ. ಪಿ. ಕೃಷ್ಣನ್, ಸಿ. ಕೆ. ಶಂಕರನ್ ನಂಬಿಯಾರ್ ವಿ. ಪಿ. ಕೃಷ್ಣನ್, ಮತ್ತು ಕೃಷ್ಣನ್ ನಾಯರ್ ಇವರಿಗೆಲ್ಲಾ ಪ್ರತಿಯೊಬ್ಬರಿಗೆ ೬, ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಶ್ರೀ ಅಚ್ಯುತ ಶೆಣೈ ಇವರನ್ನುಳಿದು ಮಿಕ್ಕವರಿಗೆಲ್ಲಾ ಸಿ. ಕ್ಲಾಸು ಕೊಡಲಾಗಿದೆ. ಇವರನ್ನು ಬಳ್ಳಾರಿಯ ಅಲಿಪುರಂ ಜೈಲಿಗೆ ಕಳುಹಿಸಲಾಗುವುದು.

ಸಹಕಾರಿ ವಾರ್ತೆ

ಶ್ರೀ. ಕೈತಂಜೆ ವೆಂಕಟ್ರಮಣ ಭಟ್ಟರು, ಬ್ರಾಂಚು ಇನ್ಸ್‌ಪೆಕ್ಟರ್ ಇವರಿಗೆ ದ. ಕ. ಕೃ. ಭಂಡಸಾಲೆ, ಮಂಗಳೂರು ಶಾಖೆಗೂ, ಗಂಗೊಳ್ಳಿ ಶಾಖೆಯ ಉಗ್ರಾಣದ ಅಧಿಕಾರಿ ಆಗಿದ್ದ ಶ್ರೀ. ಎನ್. ವೆಂಕಪ್ಪ ರೈಗಳಿಗೆ ಪುತ್ತೂರು ಸರ್ಕಲಿನ ಸೂಪರ್‌ವೈಸರ್ ಶ್ರೀ. ಕೆ. ನಾರಾಯಣ ರೈಯವರಿಗೆ ಸುಳ್ಯ ಪಿರ್ಕದ ಸೂಪರ್‌ವೈಸರರಾಗಿಯೂ ಶ್ರೀ. ಬಿ. ಯಸ್. ಮೊರಸ್ ಇವರಿಗೆ ಸುಳ್ಯದಿಂದ ಮಂಗಳೂರು ಶಾಖೆಗೂ ಇದೇ ತಾ ೧ರಲ್ಲಿ ವರ್ಗವಾಗಿದೆ.

ಸೊತ್ತುಗಳ ಜಪ್ತಿ

ಕಳೆದ ತಿಂಗಳು ತಾ. ೩೦ರಲ್ಲು ಸ್ಥಳೀಯ ತಹಶಿಲ್ದಾರರು ವರ್ತಕರ ಅಂಗಡಿಗಳನ್ನು (ಚಿಮಿಣಿ ಎಣ್ಣೆ ಮತ್ತು ಸಕ್ಕರೆ ಇದೆಯೋ ಎಂದು ನೋಡುವ ಬಗ್ಗೆ) ಜಪ್ತಿ ಮಾಡಿರುತ್ತಾರೆ. ಆದರೆ ಸಾಮಾನುಗಳೇನೂ ಸಿಕ್ಕಲಿಲ್ಲವಾಗಿ ವರ್ತಮಾನವಿದೆ. ಕೆರೋಸಿನ್ ಕಂಟ್ರೋಲ್ ಆರ್ಡರಿನ ಕುರಿತು ಗ್ರಾಮಗಳಿಗೆಲ್ಲ ಪ್ರಚಾರ ನಡೆದಿದೆ.

ವಿಟ್ಲ

ಮಕ್ಕಳ ತಿಂಗಳ ಹಬ್ಬ ದಿನಾಚರಣೆ

ಕಳೆದ ತಾ ೯ರಲ್ಲು ವಿಟ್ಲ ಪಕ್ಕತ್ತೂರು ಪಂಚಾಯತಬೋರ್ಡು ಶಾಲೆಯಲ್ಲಿ ವಿಟ್ಲದ ಶ್ರೀ ರಾವ್ ಸಾಹೇಬ್ ಶ್ರೀ ಲಕ್ಷ್ಮೀನಾಥ ಸ್ವಾಮಿಜಿ ಅರಸು ಇವರ ಅಧ್ಯಕ್ಷತೆಯಲ್ಲಿ ಶಾಲೆಯ ಕಟ್ಟಡದಲ್ಲಿ ಜರಗಿತು ಕಳೆದ ತಿಂಗಳ ಹಬ್ಬದ ವರದಿವಾಚನ, ನರ್ತನ, ಪುರಂದರದಾಸ ಎಂಬ ನಾಟಕ, ಇತ್ಯಾದಿಗಳು ಶಾಲಾ ಮಕ್ಕಳಿಂದ ಮಾಡಿ ತೋರಿಸಲ್ಪಟ್ಟಿತು ಅನೇಕ ಬಹುಮಾನಗಳು ಕೊಡಲ್ಪಟ್ಟಿತು.

ಕಾರ್ಕಳ

ಲಾಠೀ ಬೆತ್ತಗಳ ಪೆಟ್ಟು-ಬಂಧನ

ಗಾಂಧಿ ಮೊದಲಾದ ರಾಷ್ಟ್ರ ಮುಖಂಡರ ಬಂಧನದ ಸ್ಮಾರಕವಾಗಿ ತಾ. ೯ರಂದು ಬೆಳಗ್ಗೆ ಇಲ್ಲಿನ ಅನಂತಶಯನದಿಂದ ಕಾಂಗ್ರೆಸು ಮುಖಂಡರ ಹಾಗೂ ಸಾರ್ವಜನಿಕರ ಮೆರವಣಿಗೆಯೊಂದು ರಾಷ್ಟ್ರಧ್ವಜ ಜಯಕಾರಗಳೊಡನೆ ಹೊರಟಿತು. ಮೆರವಣಿಗೆ ಸುಮಾರು ೧೫೦, ೨೦೦ ಗಜ ಮುಂದುವರಿದು ಗಾಂಧೀ ಮೈದಾನಿನ ಕಡೆ ಸಾಗುತ್ತಿದ್ದಾಗ, ಪೋಲೀಸ ಸರ್ಕಲ್ ಇನ್ಸ್‌ಪೆಕ್ಟರರು ಇತರ ಕಾನ್‌ಸ್ಟೇಬಲರೊಡನೆ, ಶಸ್ತ್ರಾಸ್ತ್ರ ಸನ್ನದ್ಧ ರಿಸರ್ವ್ ಪೋಲೀಸ್ ದಳ ಸಹಿತ ಬಂದು ಅವರನ್ನು ಮಾರ್ಗದಲ್ಲಿ ತಡೆದರು. ಸರ್ಕಲ್ ಇನ್‌ಸ್ಪೆಕ್ಟರರು ಮೆರವಣಿಗೆ ಚದರ ಹೇಳಲು, ಯಾರೂ ಚದರದ್ದರಿಂದ ಕೂಡಲೇ ಲಾಠಿ, ಬೆತ್ತಗಳ ಪೆಟ್ಟು ಆರಂಭವಾಗಲು ಎಲ್ಲರೂ ನೆಲದ ಮೇಲೆ ಬಿದ್ದರು. ಅವರಲ್ಲಿ ಶ್ರೀಗಳಾದ ವೆಂಕಟೇಶ ಪ್ರಭು, ಕೆ. ವಾಮನ ಪೈ, ಸಿ. ಪದ್ಮನಾಭ ಕಾಮತ್, ಯಸ್ ಕೃಷ್ಣ ಪ್ರಭು, ಸಿ. ಶಾರದಾನಾಥ ಕಾಮತ್, ಕೆ. ಸದಾನಂದ ಜೋಶಿ, ಆನಂದ ಶೆಟ್ಟಿ, ಕೆ. ಗಣಪತಿ ಭಟ್ಟ, ಗೋಪಾಲಕೃಷ್ಣ ಕಿಣಿ ಮತ್ತು ಕೆ. ಮಾಧವ ಪುರಾಣಿಕರನ್ನು ಪೋಲೀಸರು ಮತ್ತೆ ತಮ್ಮ ಪೋಲೀಸು ವೇನಿನಲ್ಲಿ ಹಾಕಿ ಕೊಂಡೊಯ್ದರು. ಮೆರವಣಿಗೆಯ ಮುಂಭಾಗದಲ್ಲಿದ್ದ ಮೊದಲಿನ ನಾಲ್ಕು ಮಂದಿಗೆ ತಲೆ, ಮೈ ಕಾಲುಗಳಿಗೆ ವಿಶೇಷ ಜಖಂ ಆಗಿದೆ. ಈ ಸಂಬಂಧ ಪೇಟೆಯಲ್ಲಿ ಹರತಾಳವಿತ್ತು.

ಬಂಧನ-ಶಿಕ್ಷೆ

ಇಲ್ಲಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ. ಕೆ. ಪಿ. ಕೇಶವ ಪ್ರಭುಗಳನ್ನು ಬಂಧಿಸಿದ ನಿಮಿತ್ತ ಪೇಟೆಯಲ್ಲಿ ಹರತಾಳವಿತ್ತು. ಶ್ರೀ ಸಿದ್ಧ ಸಫಲಿಗರಿಗೆ ಒಂದು ವರ್ಷ ಕಠಿಣ ಶಿಕ್ಷೆ ಸಿ ಕ್ಲಾಸು ಕೊಡಲಾಗಿದೆ.

ಗಾಂಧಿ ಜಯಂತಿ-ಸಭೆಗಳು

ತಾ ೧೧ರಂದು ಪಾಣಾಜೆಯ ಸಾರ್ವಜನಿಕ ಸಭೆ ಸೇರಿ ಪ್ರಕೃತ ರಾಜಕೀಯದ ಕುರಿತು ಭಾಷಣ ಕೊಡಲಾಯಿತು.

ಕುಂದಾಪುರ

ಕುಂದಾಪುರ ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಪೋಲೀಸರು ಬೆತ್ತ ಲಾಠಿಗಳಿಂದ ಹೊಡೆದ ನಿಮಿತ್ತ ಸ್ಥಳೀಯ ಹೈಸ್ಕೂಲು ಒಂದು ವಾರ ಮುಚ್ಚಲಾಗಿತ್ತು.

ಇಲ್ಲಿನ ಬಂಟರ ವಿದ್ಯಾರ್ಥಿ ಭವನದ ಒಳಹೊಕ್ಕು ಪೋಲೀಸರು ಹೊಡೆದವರ ಪೈಕಿ ವಿಶೇಷ ಗಾಯಗೊಂಡ ವಿದ್ಯಾರ್ಥಿ ಶ್ರೀ ಎಸ್. ರಾಜೀವ ಶೆಟ್ರು ಚಿಕಿತ್ಸೆ ಹೊಂದುತ್ತಿದ್ದಾರೆ. ವಿದ್ಯಾರ್ಥಿ ಭವನದ ಅಡಿಗೆಯವನಿಗೂ ಪೆಟ್ಟಾಗಿರುವುದಾಗಿ ತಿಳಿದಿದೆ. ಇನ್ನೊಬ್ಬ ವಿದ್ಯಾರ್ಥಿ ಶ್ರೀ. ನ ಸಿಂಹ ಮಯ್ಯರೂ ವಿಶೇಷ ಜಖಂಗೊಂಡಿದ್ದಾರೆ.

ಸರಕಾರೀ ಕಾಗದ ಪತ್ರಗಳ ಕಳವು

ಕೆಲವು ದಿನಗಳ ಹಿಂದೆ ಕುಂದಾಪುರ ತಾಲೂಕು ತಹಶಿಲ್ದಾರರು ವಂಡ್ಸೆ ಗ್ರಾಮದ ಸರಕಾರೀ ಬಂಗ್ಲೆಯಲ್ಲಿ ಪೇದೆಗಳೊಂದಿಗೆ ರಾತ್ರಿ ಮಲಗಿರುವಾಗ, ಯಾರೋ ತಾಲೂಕು ಕಚೇರಿಯ ಮೊಹರವಿರುವ ಹಾಗೂ ಇತರ ರಿಕಾರ್ಡುಗಳಿರುವ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗಿರುವರೆಂದು ಸುದ್ದಿಯಿದೆ.

ಕಾಸರಗೋಡು

ಬಿಡುಗಡೆ

ಕೋರ್ಟು ಪಿಕೆಟಿಂಗ್ ಮಾಡಿ ೧ ತಿಂಗಳ ಶಿಕ್ಷೆಗೆ ಗುರಿಯಾದ ಎಂ. ಕೆ. ರಾಮನ್ ಮತ್ತು ಕೆ. ಗೋಪಾಲಕೃಷ್ಣ ಕುರುಪ್ಪು ಇವರು ಬಿಡುಗಡೆ ಹೊಂದಿರುವರು

ನೀಲೇಶ್ವರದಲ್ಲಿ ಸೆರೆಹಿಡಿಯಲ್ಪಟ್ಟ ಶ್ರೀ ಚಿಲ್ಲಂಬು ಇವರು ಬಿಡುಗಡೆಯಾಗಿರುವರು

ಶಿಕ್ಷೆ

ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರು ನಿಲೇಶ್ವರದ ವಿದ್ಯಾರ್ಥಿ ಶ್ರೀ. ಎನ್ ಕುಂಞಂಬು ನಾಯರ್ ಇವರಿಗೆ ೬ ತಿಂಗಳ ಕಠಿಣ ಶಿಕ್ಷೆಯನ್ನು ಶ್ರೀಗಳಾದ ನಿಟ್ಟೂರು ಕೋರನ್ ನಾಯರ್ ಮತ್ತು ಪಿ ಮಾಧವನ್ ನಾಯರ್ ಇವರಿಗೆ ೯ ತಿಂಗಳು ಮತ್ತು ೬ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದರು. ಕೊನೆಯ ಇಬ್ಬರು ಮುಳಿಯಾರಲ್ಲಿ ಸಾರ್ವಜನಿಕ ಸಭೆ ಸೇರಿಸಿದ ಬಗ್ಗೆ ಕೈದುಮಾಡಲ್ಪಟ್ಟರು. ವಿಚಾರಣೆ ಕಾಸರಗೋಡಲ್ಲಿ ತಾ. ೬ಕ್ಕೆ ನಡೆಯಿತು. ಎಲ್ಲರಿಗೂ 'ಸಿ' ಕ್ಲಾಸು.

ಡಿಸ್ಟ್ರಿಕ್ಟ್ ಬೋರ್ಡು ಮೆಂಬರ್ ಶ್ರೀ ಸಿ. ಕೆ. ರಾಘವನ್ ನಾಯರ್ ಇವರನ್ನು ದಿಗ್ಬಂಧಿಸಿ ಕಾರಾಗಾರದಲ್ಲಿರಿಸಿದ್ದು ತಾ. ೭ರಂದು ಅವರನ್ನು ವೆಲ್ಲೂರು ಜೈಲಿಗೆ ಕೊಂಡುಹೋಗಿ ದಿಗ್ಬಂಧನದಲ್ಲಿಡಲಾಗಿದೆ

ಬದಿಯಡ್ಕ

ಬಿಡುಗಡೆಯಾಗಿ ಬಂದರು

ಕಾಸರಗೋಡಿನಲ್ಲಿ ಕೋರ್ಟು ಪಿಕೆಟಿಂಗ್ ಮಾಡಿ ೧ ತಿಂಗಳ ಸಜೆಗೆ ಗುರಿಯಾದ ಶ್ರೀ ವೇಣುಗೋಪಾಲ ಕಾಮತರು ತಾ. ೭ರಲ್ಲಿ ಬಿಡುಗಡೆಯಾಗಿ ಇಲ್ಲಿಗೆ ಬಂದಿರುವರು.

ಸಿಡಿಲು ಅನಾಹುತ

ಬದಿಯಡ್ಕದ ಅರ್ಥಾಪೈಲು ದೂರದ ಪಿಲಾಂಕಟ್ಟೆ ಎಂಬಲ್ಲಿ ತಾ. ೧೧ರಂದು ಸಂಜೆ ಸಿಡಿಲು ಬಡಿದು ಒಂದು ದನ ೨ ಎತ್ತುಗಳಿಗೆ ತಾಗಿ ಸತ್ತು ಹೋದದ್ದಲ್ಲದೆ, ಮಾಪಿಳ್ಳೆ ಜಾತಿಯವನ ಸ್ಥಾಡಿಗೆ ತಾಗಿ ಸುಟ್ಟು ಹೋಗಿದೆ. ಅಲ್ಲದೆ ಇಬ್ಬರು ಮಾಪಿಳ್ಳೆ ಹುಡುಗರಿಗೂ ತಾಗಿ ಒಬ್ಬನಿಗೆ ವಿಶೇಷ ಜಖಂ ಆಗಿದೆ. ಅದಕ್ಕಿಂತ ಹಿಂದೆಯೂ ಇಲ್ಲಿ ಸಿಡಿಲಿನ ಅನಾಹುತವು ಇತ್ತೀಚೆಗೆ ಉಂಟಾಗಿತ್ತು.

ದ. ಕ. ಜಿಲ್ಲೆಯವರು ಮೈಸೂರಿಂದ ಗಡಿಪಾರು ಮಾಡಲ್ಪಟ್ಟರು

ಶ್ರೀಗಳಾದ ವಿ. ಎಸ್. ಶ್ಯಾಮಭಟ್ಟ ಎಸ್. ನಾರಾಯಣ, ವೆಂಕಟರಾಮನ್ ರಾನಡೆ, ಬಿ. ಕೇಶವಭಟ್ಟ, ವೈ. ಪಾಂಡುರಂಗ ಶಾಸ್ತ್ರಿ, ರಾಮಕೃಷ್ಣ ಭಟ್ಟ, ನಾ. ನಾರಾಯಣ ಭಟ್ಟ, ವಿ. ಎಸ್. ರಾಮಕೃಷ್ಣ ಎಂಬೀ, ದಕ್ಷಿಣ ಕನ್ನಡದಿಂದ ಹೋಗಿ ಮೈಸೂರಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಮೈಸೂರು ಸರಕಾರವು ಗಡೀಪಾರು ಮಾಡಿಸಿ ದಕ್ಷಿಣಕನ್ನಡಕ್ಕೆ ಕಳುಹಿಸಿರುವುದು.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. S. 53/1939.

R. E P 406/1941.

R. I. A. 914/1942.

ಅರ್ಜಿದಾರ—ದಿಡ್‌ವಾಕ್ ಲೋಬ

ಯೆದ್ರಿರು—ಶಿವಾನ್ ಲೋಬ ಕೂಡಾ

3ನೇ ಯದ್ರಿ ಇಜಿಡೊರ ಲೋಬ ಜಂವಾಂ ಮಾರ್ಸೆಲ ಲೋಬರ ಮಗ ಹೊಳ ಗ್ರಾಮ,

ಮೇಲೆ ಹೇಳಿದ ಡಿಕ್ರಿಯ ಪ್ರಕಾರ ಬರತಕ್ಕ ಬಾಕಿ ರೂಪಾಯಿ 79-0-0ಕ್ಕೆ ಪರ್ಸನಲ್ ಡಿಕ್ರಿ ಕೊಡಿಸಬೇಕಾಗಿ ಅರ್ಜಿದಾರನು ದಾಖಲ್ಲು ಮಾಡಿದ ಅರ್ಜಿಯು ತಾ 30-10-1942ಕ್ಕೆ ತಸ್ತಿಗೆ ಇಟ್ಟಿದೆ ಆ ಕುರಿತು ಆಕ್ಷೇಪಣೆಗಳಿದ್ದರೆ ಆ ದಿನ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು.

ಕುಂದಾಪುರ 8-10-42 — K Ramappayya, ಅರ್ಜಿದಾರನ ಎಡ್ವೋಕೇಟ್

NOTICE

In the court of the District Judge of South Kanara

O. P. No 96 1942.

In the matter of minors, Hasanabba Zakaria, Beepathumma and Jainabi

1 Zulaikamma 2 K Mohamad, Children of K. Hasanabba 3 Hussainabba Beary S/o Jakri Beary *Petitioners*

All the petitioners reside in Jumma masjid Road Mangalore Town.

To All those whom it may concern.

Notice is hereby given that the petitioners have filed the above application praying that the 1st petitioner may be appointed as the personal and property guardian of her children, the above named minors and the said application is posted to 30th october 1942.

Any one interested in the matter is at liberty to oppose the same on the said date at 11 A.m before the above court.

B. O.

Mangalore, 14-10-1942. — A. Moosabba, B.A.B.L. Vakil for plaintiffs.

ಸಿನಿಮಾ ಸುದ್ದಿ

ಸೆಂಟ್ರಲ್ ಟಾಕೀಸ್‌ನಲ್ಲಿ 'ಅಪ್ನಾಘರ್'

'ಅಪ್ನಾಘರ್' ಎಂದರೆ ತನ್ನ ಮನೆ, ತನ್ನ ಮನೆ ತನ್ನ ದೇಶ, ಎಂದರೆ ಯಾವನನ್ನು ಪುಳಕಿತನಾಗುವುದಿಲ್ಲ. 'ಅಪ್ನಾಘರ್' ನಲ್ಲಿ ಶಾಂತಾ ಆಪ್ಟೆ ಇಂತಹ ಅಭಿಮಾನವನ್ನು ತನ್ನ ಅಸಮಾನ ನಟನೆಯಿಂದ, ಅಸದೃಶ ಹಾಡಿನಿಂದ ಪ್ರೇಕ್ಷಕರೆಲ್ಲರ ಹೃದಯದಲ್ಲಿಯೂ ತುಂಬಿಸುತ್ತಾಳೆ. ತನ್ನ ನಾಡಿನ ಜನರ, ದೀನದಳಿತರ ಸಂಕಷ್ಟವನ್ನು ಕಂಡು 'ಶಾಂತಾ'ಳ ಮನ ಮರುಗಿತು! ಆದರೆ ಆಕೆಯ ಪತಿ ಚಂದ್ರಮೋಹನನು ಉಗ್ರ ಸ್ವಭಾವದವನು. ಪತ್ನಿಯ ಈ ದೇಶ ಪ್ರೇಮ ಅತನ ರುಚಿಗೆ ಸರಿ ಬೀಳಲಿಲ್ಲ. ಪತಿ ಪತ್ನಿಯರಲ್ಲಿ ಹೀಗೆ ಮನ ಮುರಿದು ಪತ್ನಿ ಮನೆಬಿಟ್ಟು ಹೊರಟಳು, ತನ್ನ ದೇಶ ಬಾಂಧವರ ಸಲುವಾಗಿ ದುಡಿದಳು. ಈ ಚಿತ್ರದ ಕಥೆ, ಪಾತ್ರವರ್ಗ ನಟನೆ ಸಂಗೀತ, ದಿಗ್ದರ್ಶನ ಪ್ರತಿಯೊಂದೂ ಒಂದಕ್ಕಿಂತ ಒಂದು ಮಿಗಿಲು! ವೀರ ಶೃಂಗಾರ, ಕರುಣೆ ಎಲ್ಲವುಗಳೂ ಒಂದು ಕಡೆಯಲ್ಲಿ ಸೇರಿ, ರಸಿಕರನ್ನು ತಲೆದೂಗಿಸುತ್ತವೆ! ಇಂತಹ ಅನುಪಮ ಚಿತ್ರ ಸಿರ್ಕೋ ಪ್ರೊಡಕ್ಷನ್ನಿನ ಅದ್ವಿತೀಯ ಕಲಾಕೃತಿ ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಈ ದಿನ ಮೊದಲ್ಗೊಂಡು ಪ್ರದರ್ಶಿತವಾಗುತ್ತಿದೆ.

ಬಾಲಾಜಿ ಟಾಕೀಸ್‌ನಲ್ಲಿ 'ಝೂಲಾ'

ಬೊಂಬೇ ಟಾಕೀಸಿನ ಚಿತ್ರರತ್ನ 'ಝೂಲಾ' ಈಗ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಕಳೆದ ಒಂದು ವಾರದಿಂದ ಪ್ರದರ್ಶಿಸಲ್ಪಡುತ್ತಿದ್ದು, ಮಂಗಳೂರು ಸಿನಿಮಾ ಪ್ರೇಮಿಗಳ ಕಣ್ಣಿಗೆ ಹಬ್ಬವನ್ನುಂಟುಮಾಡಿದೆ. 'ಬಂಧನ್' ಪ್ರಖ್ಯಾತ ನಟನಟಿಯರು, ಅಶೋಕ ಕುಮಾರ್, ಲೀಲಾ ಚಿಟ್ನಿಸ್, ದೇಸಾಯಿ ಈ ಸಿನೇಮಾ ಲೋಕದ ಉಜ್ವಲ ತಾರೆಗಳು ಇದರಲ್ಲಿಯೂ ಬೆಳಗುತ್ತಿದ್ದಾರೆ. 'ಝೂಲಾ'ದ ಮೊದಲನೆಯ ವಾರದ ಯಶಸ್ವಿತೆಯು 'ಬಂಧನ'ಕ್ಕಿಂತಲೂ ಮಿಗಿಲಾಗಿತ್ತೆಂಬುದರಿಂದಲೇ ಈ ಚಿತ್ರದ ಉತ್ಕೃಷ್ಟತೆಯು ವ್ಯಕ್ತವಾಗುತ್ತದೆ. ಬಂಧನದ ಅನಂತರ ಮಂಗಳೂರು ಮಹಾಜನರಿಗೆ ಬೊಂಬೇ ಟಾಕೀಸ್ ಚಿತ್ರಗಳ ಹುಚ್ಚೇ ಹಿಡಿದಂತಾಗಿದೆ. ಲೀಲಾ ಚಿಟ್ನಿಸ್, 'ಝೂಲಾ'ದಲ್ಲಿ 'ಬಂಧನ'ಕ್ಕಿಂತಲೂ ಆಕರ್ಷಕಳಾಗಿದ್ದಾಳೆ. ಅಶೋಕ ಕುಮಾರನು ಇದರಲ್ಲಿ ಇನ್ನಷ್ಟು ಸುಂದರ ಪುರುಷನಾಗಿರುವನು. ಮುಮ್ತಾಜ್ ಅಲಿ ಮತ್ತು ಷಾಹಜಾದಿ ಇವರ ರಮಣೀಯ ನರ್ತನವು ಪ್ರೇಕ್ಷಕರನ್ನು ತಲ್ಲೀನತೆಯಲ್ಲಿ ತೇಲಿಸುತ್ತದೆ. ಇಂತಹ ಅಪೂರ್ವ ಸಂದರ್ಭವನ್ನು ಸಿನಿಮಾ ಪ್ರೇಮಿಗಳು ಕಳಕೊಳ್ಳಬಾರದು.

BALANCE AND THE BALANCE WHEEL

ಬೇಲೆನ್ಸ್ ಮತ್ತು ಬೇಲೆನ್ಸ್ ಸ್ಪ್ರಿಂಗ್

ವಾಚು ಕೆಲಸ ಮಾಡುವುದಕ್ಕೆ ಇವುಗಳು ಮುಖ್ಯ ಸಾಮಗ್ರಿಗಳು. ಸರಿಯಾದ ಸಮಯ ತೋರಿಸಲು ಬೇಲೆನ್ಸ್ ಸ್ಪ್ರಿಂಗಿನ ಬಲವು ಬೇಲೆನ್ಸ್‌ನ ಭಾರಕ್ಕೆ ತಕ್ಕಂತಿರಬೇಕು. ವೆಸ್ಟ್ ಎಂಡ್ ವಾಚುಗಳು ಹೀಗೆಯೇ ಇವೆ. ಕಾರಣ ಇವುಗಳ ತಯಾರಿಯು ಈಗಿನ ಹೊಸ ವಿಜ್ಞಾನ ರೀತಿಗಳಿಗನುಸರಿಸಿ ನುರಿತ ವಾಚು ಕೆಲಸಗಾರರಿಂದ ಆಗುತ್ತದೆ. ಇವುಗಳಿಗೆ ಉಪಯೋಗಿಸುತ್ತಿರುವ ಎಲ್ಲಾ ವಸ್ತುಗಳು ಅತ್ಯುತ್ತಮವಾದವುಗಳು, ಬಾಳಿಕೆಗೆ ಗೇರಂಟಿಯುಳ್ಳವುಗಳಾಗಿವೆ.

ಸೆಕಂಡಸ್ ಮಿನಿಯೇಚರ್ ರೆಕ್ಟೆಂಗ್ಯು

ಬರ್ ರೋ. ಗೋ. ರೂ. 53, 9 ಕೇರಟ್ ರೂ. 70, 18 ಕೇರಟ್ ರೂ. 95.



ಸೆಕುಂಡಸ್ ಮಿನ್ನಿಯೇಚರ್ ಒಬ್ಲೊಂಗ್

ವೆ. ಎಂ. ಪೇ. ಎ. ಪ್ರ್ಯ. ಸ್ಟೀ. ರೂ. 51, ರೋ. ಗೋ. ರೂ. 53. 18 ಕೇ. ಗ. ಬಂ. ರೂ. 95



ನಿಮಗೆ ಪ್ರಯೋಜನಾರ್ಥವಾಗಿಯೇ ವೆಸ್ಟ್‌ಎಂಡ್ ವಾಚುಗಳನ್ನು ಕೊಳ್ಳಿರಿ. ಕೆಟಲಾಗು ಧರ್ಮಾರ್ಥ.

ವೆಸ್ಟ್ ಎಂಡ್ ವಾಚ್ ಕಂಪೆನಿ

ಮುಂಬಯಿ, — ಕಲ್ಕತ್ತ.

WEST END WATCH Co

BOMBAY CALCUTTA

ದೇಹದ ಒಳಭಾಗವನ್ನು ಶುಚಿಗೊಳಿಸಿರಿ.

ದೇಹದ ಹೊರಭಾಗವನ್ನು ಶುಚಿಮಾಡುವುದು ಅತ್ಯಗತ್ಯ ಆದರೆ ನಿಮ್ಮ ಆರೋಗ್ಯಕ್ಕೆ ಅದಕ್ಕಿಂತಲೂ ಹೆಚ್ಚಿನದು ದೇಹದ ಒಳಭಾಗದ ನೈರ್ಮಲ್ಯ. ನಿಮ್ಮ ದೇಹದ ಒಳಭಾಗವು ಶುಚಿಯಾಗಿದ್ದರೆ ನೀವು ಮಲಬದ್ಧತೆ, ಅಜೀರ್ಣ, ತಲೆಸಿರುಗುವುದೇ ಮೊದಲಾದ ನೋವುಗಳಿಂದ ಗುಣಹೊಂದುವಿರಿ.

ನಿಮ್ಮ ದೇಹದೊಳಭಾಗವನ್ನು ಶುಚಿಯಾಗಿಟ್ಟುಕೊಳ್ಳುವುದು ಬಹು ಸುಲಭ ದಿನನಿತ್ಯವೂ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ. ಅವು ಮಲವಿಸರ್ಜನೆಯನ್ನು ನಿರ್ಮಲವಾಗಿ ಮಾಡಿಸುವುದು; ಅನಾರೋಗ್ಯಕ್ಕೆ ಕಾರಣವಾದ ಎಲ್ಲಾ ಅಶುದ್ಧತೆಯನ್ನು ಹೋಗಲಾಡಿಸಿ, ರಕ್ತವನ್ನು ಶುದ್ಧಿಗೊಳಿಸುತ್ತದೆ. ಎಂಡ್ರೂಸ್ ಉಪಯೋಗಿಸಿದರೆ ಅದೊಂದು ಚಟವಾಗುವುದಿಲ್ಲ ಏಕೆಂದರೆ ಸಣ್ಣ ಡೋಸ್ ಯಾವಾಗಲೂ ಸಾಕಾಗುತ್ತದೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ

ANDREWS LIVER SALT

ಆರೋಗ್ಯಕರ ಹಾಗೂ ಧಾತುಪುಷ್ಟಿಕರ ಪಾನೀಯವಿದನ್ನು ಸೇವಿಸಿರಿ.

ನೈರ್ಮಲ್ಯಗೊಳಿಸುವುದು — ತಂಪುಕೊಡುವುದು — ಉಲ್ಲಾಸಹುಟ್ಟಿಸುವುದು — ಶಕ್ತಿಯುಂಟುಮಾಡುವುದು.

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ,

ನಾಲ್ಕನೆಯ ಪುಸ್ತಕ — ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಪುಸ್ತಕ ದೊರೆಯುವ ಸ್ಥಳ: ಬೆಲೆ: 1-4-0.

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ಮಂಗಳೂರು

ಬ್ರಹ್ಮಸಮಾಜ

ಮಂಗಳೂರು ಬ್ರಹ್ಮಸಮಾಜದ ಎಪ್ಪತ್ತೆರಡನೆಯ ವಾರ್ಷಿಕೋತ್ಸವದ ಸಂಬಂಧ ಇದೇ ಅಕ್ಟೋಬರ ತಾ ೧೧ರಿಂದ ತಾ. ೧೮ರ ವರೆಗೆ ಬೇರೆ ಬೇರೆ ಬ್ರಾಹ್ಮೋ ಸದ್ಗೃಹಸ್ಥರ ಮನೆಗಳಲ್ಲಿ ಪ್ರತಿನಿತ್ಯವೂ ಭಗವದಾರಾಧನೆ, ಭಜನೆ, ಭಾಷಣಾದಿ ಸತ್ಕಾರ್ಯಗಳು ನೆರವೇರಲಿರುವುವು ತಾ. ೧೮ರಲ್ಲಿ ಬ್ರಹ್ಮಸಮಾಜ ಮಂದಿರದಲ್ಲಿ ಬೆಳಗ್ಗೆ ಮತ್ತು ಸಾಯಂಕಾಲ ವಿವಿಧ ಕಾರ್ಯಕಲಾಪಗಳು ನಡೆಯುವುವು.

ಮಹಾಜನ ಬಡವರ ಅಕ್ಕಿ ಬಂಡಾರ

ಇದರ ಜುಲ್ಯ ೫, ೧೯೪೨ರಿಂದ ಸಪ್ಟಂಬರ ೩೦, ೧೯೪೨ರ ವರೆಗಿನ ವರದಿ ಹೀಗಿದೆ ಸೇರಿಗೆ ೦-೨-೬ ಪ್ರಕಾರ ಮಾರಾಟ ಮಾಡಿದ ಒಟ್ಟು ಅಕ್ಕಿಮುಡಿ, ೪,೫೨೬ ಮುಡಿ ಮತ್ತು ೭೪ ಗೋಣಿಗಳು, ಪ್ರತಿಯೊಂದು ದಿನದ ಸರಾಸರಿ ಮಾರಾಟ ೫೩ ಮುಡಿಗಳು; ಖರ್ಚು ಸಹಿತದ ಒಟ್ಟು ನಷ್ಟ ರೂ. ೩,೭೫೩-೧೦-೬; ಈ ಅವಧಿಯಲ್ಲಿ ನಷ್ಟ ಭರ್ತಿಗೆ ದೊರೆತ ವಂತಿಗೆ ರೂ. ೩,೬೭೭-೮-೦ ಎಂದು ಇದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ನವರಾತ್ರಿ ಮಹೋತ್ಸವ

ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡ್ ಮತ್ತು ವಿವೇಕಾನಂದ ಸಭೆಗಳ ಆಶ್ರಯದಲ್ಲಿ ಕೆನರಾ ಹಾಯ್‌ಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ಅಕ್ಟೋಬರ ತಾ ೧೧ನೇ ಆದಿತ್ಯವಾರದಿಂದ ತಾ ೧೮ನೇ ಆದಿತ್ಯವಾರದ ವರೆಗೆ ನವರಾತ್ರಿ ಮಹೋತ್ಸವವು ಈ ವರ್ಷ ಜೋಸಕಾಗಿ ಜರಗುವುದು.

ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ

ಈ ಸಂಘದ ವಾರ್ಷಿಕ ಸಭೆಯು ತಾ. ೪ನೇ ಸಾಯಂಕಾಲ ಶ್ರೀ ಎಚ್. ದಾಮೋದರರಾಯರ ಅಧ್ಯಕ್ಷತೆಯಲ್ಲಿ ಸೇರಿ, ಎಯಿಡೆಡ್ ಶಾಲಾ ಉಪಾಧ್ಯಾಯರಿಗೆ ತುಟ್ಟಿಭತ್ತೆಯನ್ನು ಕೊಡುವಂತೆ ಸರಕಾರದವರನ್ನು ಪ್ರಾರ್ಥಿಸಬೇಕೆಂಬ ಠರಾವು ಮಂಜೂರಾಯಿತು. ಶ್ರೀ ಯು. ಗೋವಿಂದರಾಯರು ಸಭೆಯ ಮುಂದಿಟ್ಟ ವಾರ್ಷಿಕ ವರದಿಯು, ಮತ್ತು ಲೆಕ್ಕಪತ್ರದ ವರದಿಯು ಪರಿಶೀಲಿಸಲ್ಪಟ್ಟು ಮಂಜೂರಾದುವು. ಅನಂತರ ಶ್ರೀ ದಾಮೋದರರಾಯರ ಅಧ್ಯಕ್ಷತೆಯಲ್ಲಿ ಹೊಸ ವರ್ಷದ ಆಡಳಿತೆ ಸಮಿತಿಯು ಏರ್ಪಟ್ಟಿತು.

ಜಿಲ್ಲಾ ಕ್ಷೌರಿಕರ ಯೂನಿಯನ್

ಮಂಗಳೂರು ನಗರ ಕ್ಷೌರಿಕರ ಮಹಾಸಭೆಯೊಂದು ತಾ. ೮ರಂದು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀ. ಕೃಷ್ಣರಾವ್ ಇವರ ಅಧ್ಯಕ್ಷತೆಯಿಂದ ಜರಗಿತು. ಕ್ಷೌರಿಕರ ಸಂಘಟನೆಯ ಕುರಿತು ಶ್ರೀಗಳಾದ ವೆಂಕಣ್ಣ ಎಫ್. ಎಚ್. ಒಡೆಯರ್, ತಿಮ್ಮಪ್ಪ ಮಲ್ಯ, ಗೋವಿಂದ ಭಂಡಾರಿ, ಎಲ್‌ಸನ್ ಹಾರ್ಟ್ ಮೊದಲಾದವರು ಭಾಷಣಮಾಡಿದರು ಆ ಮೇಲೆ ೨೧ ಮಂದಿಯಿಂದ ಕೂಡಿದ ಒಂದು ಕಾರ್ಯಕಾರಿ ಸಮಿತಿ ರಚಿತವಾಯಿತು. ಅಧ್ಯಕ್ಷರು ಶ್ರೀ. ಕೆ. ಕೃಷ್ಣರಾವ್, ಉಪಾಧ್ಯಕ್ಷ ಶ್ರೀ ತಬುರ ಬಿ. ಕೃಷ್ಣಮಲ್ಯ ಕಾರ್ಯದರ್ಶಿ.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, ILMITE.D

ESTD· 1906

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From 7--8--1942

1. Current	(1% p. a. from Jan. to June.	
	(½% p. a. from July to Dec	
2. Savings Bank	2% p a.	
3. Short-term	1¼% p. a.	
4. Fixed 3 months	1½% p. a.	
6 ,,	2% p.a.	
9 ,,	2½% p. a.	
12 ,,	3% p. a.	
24 ,,	3¼% p. a.	

Advances aginst approved securities made at very competitive rates.

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು ಮತ್ತು ದಿ ಜ್ವೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಶ್ರೀ ತುಲಾಕಾವೇರಿ ಸಂಕ್ರಮಣ ಜಾತ್ರೆ ಪುಣ್ಯತೀರ್ಥ ಸ್ನಾನಮಾಡುವ ಸುಸಂಧಿ

ತಾರೀಕು 17--10--1942ನೇ ಶನಿವಾರ ಮುಹೂರ್ತಕಾಲ. ಸ್ಟೆಂಡಾರ್ಡ್ 1-53 P. M.

ಟಿಕೇಟು ಚಾರ್ಜು

ಮಂಗಳೂರಿನಿಂದ ಮಡಿಕೇರಿಗಾಗಿ ಬಾಗಮಂಡಲ **Rs. 4-0-0.** ಮಂಗಳೂರು ಅರಂತೋಡು **Rs. 2-1-6.**

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಸಿನೆಮಾ ಸುದ್ದಿ

ಸೆಂಟ್ರಲ್ ಟೊಕೀಸ್‌ನಲ್ಲಿ 'ಅಪ್ನಾ ಘರ್'

'ಅಪ್ನಾ ಘರ್' ಎಂದರೆ ತನ್ನ ಮನೆ, ತನ್ನ ಮನೆ ತನ್ನ ದೇಶ, ಎಂದರೆ ಯಾವನ ಮೈ ಪುಲಕಿತವಾಗುವುದಿಲ್ಲ, 'ಅಪ್ನಾ ಘರ್' ನಲ್ಲಿ ಶಾಂತಾ ಆಪ್ಟೆ ಇಂತಹ ಅಭಿಮಾನವನ್ನು ತನ್ನ ಅಸಮಾನ ನಟನೆಯಿಂದ, ಅಸದೃಶ ಹಾಡಿನಿಂದ ಪ್ರೇಕ್ಷಕರೆಲ್ಲರ ಹೃದಯದಲ್ಲಿಯೂ ತುಂಬಿಸುತ್ತಾಳೆ. ತನ್ನ ನಾಡಿನ ಜನರ, ದೀನದಲಿತರ ಸಂರಕ್ಷಣವನ್ನು ಕಂಡು 'ಶಾಂತಾ'ಳ ಮನ ಮರುಗಿತು! ಆದರೆ ಆಕೆಯ ಪತಿ ಚಂದ್ರಮೋಹನನು ಉಗ್ರ ಸ್ವಭಾವದವನು. ಪತ್ನಿಯ ಈ ದೇಶ ಪ್ರೇಮ ಆತನ ರುಚಿಗೆ ಸರಿಬೀಳಲಿಲ್ಲ. ಪತಿ ಪತ್ನಿಯರಲ್ಲಿ ಹೀಗೆ ಮನ ವಿರಸ ಬೆಳೆದು ಪತ್ನಿ ಮನೆಬಿಟ್ಟು ಹೊರಟಳು, ತನ್ನ ದೇಶ ಬಾಂಧವರ ಸಲುವಾಗಿ ದುಡಿದಳು. ಈ ಚಿತ್ರದ ಕಥೆ, ಪಾತ್ರವರ್ಗ, ನಟನೆ ಸಂಗೀತ, ದಿಗ್ದರ್ಶನ ಪ್ರತಿಯೊಂದೂ ಒಂದಕ್ಕಿಂತ ಒಂದು ಮಿಗಿಲು! ವೀರ ಶೃಂಗಾರ, ಕರುಣೆ ಎಲ್ಲವುಗಳೂ ಒಂದು ಕಡೆಯಲ್ಲಿ ಸೇರಿ, ರಸಿಕರನ್ನು ತಲೆದೂಗಿಸುತ್ತದೆ! ಇಂತ ಹ ಅನುಪಮ ಚಿತ್ರ ಸಿರ್ಕೋ ಪ್ರೊಡಕ್ಷನಿನ ಅದ್ವಿತೀಯ ಕಲಾಕೃತಿ ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಈ ದಿನ ಮೊದಲ್ಗೊಂಡು ಪ್ರದರ್ಶಿತವಾಗುತ್ತಿದೆ.

ಬಾಲಾಜಿ ಟೊಕೀಸ್‌ನಲ್ಲಿ 'ಝೂಲಾ'

ಬೊಂಬೇ ಟಾಕೀಸಿನ ಚಿತ್ರರತ್ನ 'ಝೂಲಾ' ಈಗ ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಕಳೆದ ಒಂದು ವಾರದಿಂದ ಪ್ರದರ್ಶಿಸಲ್ಪಡುತ್ತಿದ್ದು, ಮಂಗಳೂರು ಸಿನೆಮಾ ಪ್ರೇಮಿಗಳ ಕಣ್ಣಿಗೆ ಹಬ್ಬವನ್ನುಂಟುಮಾಡಿದೆ. 'ಬಂಧನ' ಪ್ರಖ್ಯಾತ ನಟನಟಿಯರು, ಅಶೋಕ ಕುಮಾರ್, ಲೀಲಾ ಚಿಟ್ನಿಸ್, ದೇಸಾಯಿ ಈ ಸಿನೇಮಾ ಲೋಕದ ಉಜ್ವಲ ತಾರೆಗಳು ಇದರಲ್ಲಿಯೂ ಬೆಳಗುತ್ತಿದ್ದಾರೆ. 'ಝೂಲಾ'ದ ಮೊದಲನೆಯ ವಾರದ ಯಶಸ್ವಿತೆಯು 'ಬಂಧನ'ಕ್ಕಿಂತಲೂ ಮಿಗಿಲಾಗಿತ್ತೆಂಬುದರಿಂದಲೇ ಈ ಚಿತ್ರದ ಉತ್ಕೃಷ್ಟತೆಯು ವ್ಯಕ್ತವಾಗುತ್ತದೆ. ಬಂಧನದ ಅನಂತರ ಮಂಗಳೂರು ಮಹಾಜನರಿಗೆ ಬೊಂಬೇ ಟಾಕೀಸ್ ಚಿತ್ರಗಳ ಹುಚ್ಚೇ ಹಿಡಿದಂತಾಗಿದೆ. ಲೀಲಾ ಚಿಟ್ನಿಸ್, 'ಝೂಲಾ'ದಲ್ಲಿ 'ಬಂಧನ'ಕ್ಕಿಂತಲೂ ತರುಣಿಯಾಗಿದ್ದಾಳೆ. ಅಶೋಕ ಕುಮಾರನು ಇದರಲ್ಲಿ ಇನ್ನಷ್ಟು ಸುಂದರ ಪುರುಷನಾಗಿರುವನು. ಮುಮ್ತಾಜ್ ಅಲಿ ಮತ್ತು ಷಾಹಜಾದಿ ಇವರ ರಮಣೀಯ ನರ್ತನವು ಪ್ರೇಕ್ಷಕರನ್ನು ತಲ್ಲೀನತೆಯಲ್ಲಿ ತೇಲಿಸುತ್ತದೆ. ಇಂತಹ ಅಪೂರ್ವ ಸಂದರ್ಭವನ್ನು ಸಿನೆಮಾ ಪ್ರೇಮಿಗಳು ಕಳಕೊಳ್ಳಬಾರದು.

BALANCE
AND THE BALANCE WHEEL

ಬೇಲೆನ್ಸ್ ಮತ್ತು
ಬೇಲೆನ್ಸ್ ಸ್ಪ್ರಿಂಗ್

ವಾಚು ಕೆಲಸ ಮಾಡುವುದಕ್ಕೆ ಇವುಗಳು ಮುಖ್ಯ ಸಾಮಗ್ರಿಗಳು. ಸರಿಯಾದ ಸಮಯ ತೋರಿಸಲು ಬೇಲೆನ್ಸ್ ಸ್ಪ್ರಿಂಗಿನ ಬಲವು ಬೇಲೆನ್ಸ್‌ನ ಭಾರಕ್ಕೆ ತಕ್ಕಂತಿರಬೇಕು. ವೆಸ್ಟ್ ಎಂಡ್ ವಾಚುಗಳು ಹೀಗೆಯೇ ಇವೆ. ಕಾರಣ ಇವುಗಳ ತಯಾರಿಯು ಈಗಿನ ಹೊಸ ವಿಜ್ಞಾನ ರೀತಿಗಳಿಗನುಸರಿಸಿ ನುರಿತ ವಾಚು ಕೆಲಸಗಾರರಿಂದ ಆಗುತ್ತಿದೆ. ಇವುಗಳಿಗೆ ಉಪಯೋಗಿಸುತ್ತಿರುವ ಎಲ್ಲಾ ವಸ್ತುಗಳು ಅತ್ಯುತ್ತಮವಾದವುಗಳು. ಬಾಳಿಕೆಗೆ ಗೇರಂಟಿಯುಳ್ಳವುಗಳಾಗಿವೆ.

ಸೆಕುಂಡಸ್ ಮಿನಿಯೇಚರ್ ರೆಕ್ಟೆಂಗ್ಯುಲರ್ ರೋ. ಗೋ. ರೂ. 53, 9 ಕೇರಟ್ ರೂ. 70, 18 ಕೇರಟ್ ರೂ. 95.

ಸೆಕುಂಡಸ್ ಮಿನಿಯೇಚರ್ ಒಬ್ಲೊಂಗ್
ವಿ. ಎಂ. ಪೇ. ಎ. ಬ್ರೈ. ಸ್ಟೀ. ರೂ. 51, ರೋ. ಗೋ. ರೂ. 53: 18 ಕೇ. ಗ. ಬಂ. ರೂ. 95



ನಿಮಗೆ ಪ್ರಯೋಜನಾರ್ಥವಾಗಿಯೇ ವೆಸ್ಟ್ ಎಂಡ್ ವಾಚುಗಳನ್ನು ಕೊಳ್ಳಿರಿ. ಕಟ್ಟಲಾಗು ಧರ್ಮಾರ್ಥ.

ವೆಸ್ಟ್ ಎಂಡ್ ವಾಚ್ ಕಂಪೆನಿ
ಮುಂಬಯಿ, — ಕಲ್ಕತ್ತ.

WEST END WATCH Co
BOMBAY CALCUTTA

ದೇಹದ ಒಳಭಾಗವನ್ನು ಶುಚಿಗೊಳಿಸಿರಿ.



ದೇಹದ ಹೊರಭಾಗವನ್ನು ಶುಚಿಮಾಡುವುದು ಅತ್ಯಗತ್ಯ. ಆದರೆ ನಿಮ್ಮ ಆರೋಗ್ಯಕ್ಕೆ ಅದಕ್ಕಿಂತಲೂ ಹೆಚ್ಚಿನದು ದೇಹದ ಒಳಭಾಗದ ನೈರ್ಮಲ್ಯ. ನಿಮ್ಮ ದೇಹದ ಒಳಭಾಗವು ಶುಚಿಯಾಗಿದ್ದರೆ ನೀವು ಮಲಬದ್ಧತೆ, ಅಜೀರ್ಣ, ತಲೆತಿರುಗುವುದೇ ಮೊದಲಾದ ನೋವುಗಳಿಂದ ಗುಣಹೊಂದುವಿರಿ.

ನಿಮ್ಮ ದೇಹದೊಳಭಾಗವನ್ನು ಶುಚಿಯಾಗಿಟ್ಟುಕೊಳ್ಳುವುದು ಬಹು ಸುಲಭ ದಿನನಿತ್ಯವೂ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸಿರಿ. ಅವು ಮಲವಿಸರ್ಜನೆಯನ್ನು ನಿರ್ಮಲವಾಗಿ ಮಾಡಿಸುವುದು; ಅನಾರೋಗ್ಯಕ್ಕೆ ಕಾರಣವಾದ ಎಲ್ಲಾ ಅಶುದ್ಧತೆಯನ್ನು ಹೋಗಲಾಡಿಸಿ, ರಕ್ತವನ್ನು ಶುದ್ಧಿಗೊಳಿಸುತ್ತದೆ. ಅಂಡ್ರೂಸ್ ಉಪಯೋಗಿಸಿದರೆ ಅದೊಂದು ಚಟವಾಗುವುದಿಲ್ಲ. ಏಕೆಂದರೆ ಸಣ್ಣ ಡೋಸ್ ಯಾವಾಗಲೂ ಸಾಕಾಗುತ್ತದೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ

ANDREWS
LIVER SALT

ಆರೋಗ್ಯಕರ ಹಾಗೂ ಧಾತುಪುಷ್ಟಿಕರ ಪಾನೀಯವಿದನ್ನು ಸೇವಿಸಿರಿ.
ನೈರ್ಮಲ್ಯಗೊಳಿಸುವುದು – ತಂಪುಕೊಡುವುದು – ಉಲ್ಲಾಸ ಹುಟ್ಟಿಸುವುದು – ಶಕ್ತಿಯುಂಟುಮಾಡುವುದು.

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ
ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.
ಪುಸ್ತಕ ದೊರೆಯುವ ಸ್ಥಳ: ಬೆಲೆ: 1-4-0.
ಶಾರದಾ ಛಾಪಖಾನೆ ರಥಬೀದಿ—ಮಂಗಳೂರು.

ಮಂಗಳೂರು

ಬ್ರಹ್ಮ ಸಮಾಜ

ಮಂಗಳೂರು ಬ್ರಹ್ಮಸಮಾಜದ ಎಪ್ಪತ್ತೆರಡನೆಯ ವಾರ್ಷಿಕೋತ್ಸವದ ಸಂಬಂಧ ಇದೇ ಅಕ್ಟೋಬರ ತಾ. ೧೧ರಿಂದ ತಾ, ೧೮ರ ವರೆಗೆ ಬೇರೆ ಬೇರೆ ಬ್ರಾಹ್ಮೋ ಸದ್ಗೃಹಸ್ಥರ ಮನೆಗಳಲ್ಲಿ ಪ್ರತಿನಿತ್ಯವೂ ಭಗವದಾರಾಧನೆ, ಭಜನೆ, ಭಾಷಣಾದಿ ಸತ್ಕಾರ್ಯಗಳು ನೆರವೇರಲಿರುವುವು ತಾ. ೧೮ರಲ್ಲಿ ಬ್ರಹ್ಮಸಮಾಜ ಮಂದಿರದಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ವಿವಿಧ ಕಾರ್ಯಕಲಾಪಗಳು ನಡೆಯುವುವು.

ಮಹಾಜನ ಬಡವರ ಅಕ್ಕಿ ಬಂಡಾರ

ಇದರ ಜುಲ್ಯಾ ೫, ೧೯೪೨ರಿಂದ ಸಪ್ಟಂಬರ ೩೦, ೧೯೪೨ರ ವರೆಗಿನ ವರದಿ ಹೀಗಿದೆ. ಸೇರಿಗೆ ೭.೨.೬ ಪ್ರಕಾರ ಮಾರಾಟ ಮಾಡಿದ ಒಟ್ಟು ಅಕ್ಕಿಮುಡಿ, ೪,೫೩೬ ಮುಡಿ ಮತ್ತು ೬೪ ಗೋಣಿಗಳು; ಪ್ರತಿಯೊಂದು ದಿನದ ಸರಾಸರಿ ಮಾರಾಟ ೫೩ ಮುಡಿಗಳು; ಖರ್ಚು ಸಹಿತದ ಒಟ್ಟು ನಷ್ಟ ರೂ. ೩,೬೫೩-೧೧-೬; ಈ ಅವಧಿಯಲ್ಲಿ ನಷ್ಟ ಭರ್ತಿಗೆ ದೊರೆತ ವಂತಿಗೆ ರೂ. ೩,೬೬೭-೮-೦ ಎಂದು ಇದರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ನವರಾತ್ರಿ ಮಹೋತ್ಸವ

ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡ್ ಮತ್ತು ವಿವೇಕಾನಂದ ಸಭೆಗಳ ಆಶ್ರಯದಲ್ಲಿ ಕೆನರಾ ಹಾಯ್‌ಸ್ಕೂಲಿನ ಭುವನೇಂದ್ರ ಸಭಾ ಸದನದಲ್ಲಿ ಅಕ್ಟೋಬರ ತಾ. ೧೧ನೇ ಆದಿತ್ಯವಾರದಿಂದ ತಾ ೧೮ನೇ ಆದಿತ್ಯವಾರದ ವರೆಗೆ ನವರಾತ್ರಿ ಮಹೋತ್ಸವವು ಈ ವರ್ಷ ಹೊಸತಾಗಿ ಜರಗುವುದು.

ಎಯಿಡೆಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ

ಈ ಸಂಘದ ವಾರ್ಷಿಕ ಸಭೆಯು ತಾ. ೪ನೇ ಸಾಯಂಕಾಲ ಶ್ರೀ ಎಚ್. ದಾಮೋದರರಾಯರ ಅಧ್ಯಕ್ಷತೆಯಲ್ಲಿ ಸೇರಿ, ಎಯಿಡೆಡ್ ಶಾಲಾ ಉಪಾಧ್ಯಾಯರಿಗೆ ತುಟ್ಟಿಭತ್ತೆಯನ್ನು ಕೊಡುವಂತೆ ಸರಕಾರದವರನ್ನು ಪ್ರಾರ್ಥಿಸಬೇಕೆಂಬ ರೆರಾವು ಮಂಜೂರಾಯಿತು. ಶ್ರೀ ಯು. ಗೋವಿಂದರಾಯರು ಸಭೆಯ ಮುಂದಿಟ್ಟ ವಾರ್ಷಿಕ ವರದಿಯು, ಮತ್ತು ಲೆಕ್ಕಪತ್ರದ ವರದಿಯು ಪರಿಶೀಲಿಸಲ್ಪಟ್ಟು ಮಂಜೂರಾದುವು ಅನಂತರ ಶ್ರೀ ದಾಮೋದರರಾಯರ ಅಧ್ಯಕ್ಷತೆಯಲ್ಲಿ ಹೊಸ ವರ್ಷದ ಆಡಳಿತೆ ಸಮಿತಿಯು ಏರ್ಪಟ್ಟಿತು.

ಜಿಲ್ಲಾ ಕ್ಷೌರಿಕರ ಯೂನಿಯನ್

ಮಂಗಳೂರು ನಗರ ಕ್ಷೌರಿಕರ ಮಹಾಸಭೆಯೊಂದು ತಾ. ೮ರಂದು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀ. ಕೃಷ್ಣರಾವ್ ಇವರ ಅಧ್ಯಕ್ಷತೆಯಿಂದ ಜರಗಿತು. ಕ್ಷೌರಿಕರ ಸಂಘಟನೆಯ ಕುರಿತು ಶ್ರೀಗಳಾದ ವೆಂಕಣ್ಣ ಎಫ್. ಎಚ್. ಒಡೆಯರ್, ತಿಮ್ಮಪ್ಪ ಮಲ್ಯ, ಗೋವಿಂದ ಭಂಡಾರಿ, ಎಲ್‌ಸನ್ ಹಾರ್ಟ್ ಮೊದಲಾದವರು ಭಾಷಣಮಾಡಿದರು ಆ ಮೇಲೆ ೨೧ ಮಂದಿಯಿಂದ ಕೂಡಿದ ಒಂದು ಕಾರ್ಯಕಾರಿ ಸಮಿತಿ ರಚಿತವಾಯಿತು. ಅಧ್ಯಕ್ಷರು ಶ್ರೀ. ಕೆ. ಕೃಷ್ಣರಾವ್, ಉಪಾಧ್ಯಕ್ಷ ಶ್ರೀ ತಬುರ ಬಿ. ಕೃಷ್ಣಮಲ್ಯ ಕಾರ್ಯದರ್ಶಿ

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, ILMITED

ESTD: 1906

The Canara Banking Corporation Ltd.

(Incorporated in British India)

Estd. 1906.

Our Rates of Interest on Deposits From 7--8--1942

1.	Current	(1% p. a. from Jan. to June.
		(½% p. a from July to Dec
2.	Savings Bank	2% p. a.
3.	Short-term	1¼% p. a.
4	Fixed 3 months	1½% p. a.
	6 "	2% p.a.
	9 "	2½% p. a.
	12 "	3% p. a.
	24 "	3¼% p. a.

Advances aginst approved securities made at very competitive rates.

ದಿ ಕಂಬೈನ್ಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ವೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಶ್ರೀ ತುಲಾಕಾವೇರಿ ಸಂಕ್ರಮಣ ಜಾತ್ರೆ ಪುಣ್ಯತೀರ್ಥ ಸ್ನಾನಮಾಡುವ ಸುಸಂಧಿ

ತಾರೀಕು 17--10--1942ನೇ ಶನಿವಾರ ಮುಹೂರ್ತಕಾಲ. ಸ್ಟೇಂಡಾರ್ಡ್ 1-53 P. M.

ಟಿಕೇಟು ಚಾರ್ಜು

ಮಂಗಳೂರಿನಿಂದ ಮಡಿಕೇರಿಗಾಗಿ ಬಾಗಮಂಡಲ Rs. 4-0-0. ಮಂಗಳೂರು ಅರಂತೋಡು Rs. 2-1-6.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited

ESTD: 1931

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%.
24 months or over 4%.
Current: ½% from July to December.
1% from January to June.

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕರಿ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾಖೆ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra' Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 23—10—1942 [ಸಂಚಿಕೆ 42]

ಮಂಗಳ ದೀಪವಿದು—'ಮಗನ್ ದೀಪ!'

: ಆರ್ಥಿಕ ದೃಷ್ಟಿ ಮತ್ತು ರಚನಾವಿಚಾರ :

'ಚಿಮಿಣಿ ಎಣ್ಣೆ ಇಲ್ಲ' ಎಂಬುದು ಇಂದಿನ ನಮ್ಮ ಕೂಗು! ಚಿಮಿಣಿ ದೀಪ ನಮಗೆ ಅಷ್ಟು ಅನಿವಾರ್ಯವಾಗಿ ಬಿಟ್ಟಿದೆ; ಆದರೆ ಒಂದೆರಡು ತಲೆಮಾರುಗಳ ಹಿಂದೆ ನಮ್ಮ ಭಾರತದೇಶದಲ್ಲಿ ಚಿಮಿಣಿ ಎಣ್ಣೆಯ ದೀಪಗಳ ಬಳಕೆಯೇ ಇರಲಿಲ್ಲ. ಹೊನ್ನೆ, ಹರಳು ಮೊದಲಾದ ಬೀಜದೆಣ್ಣೆಗಳನ್ನುಪಯೋಗಿಸಿ ಜನರು ಸುಖಜೀವನ ಮಾಡುತ್ತಿದ್ದರು. ಚಿಮಿಣಿ ಎಣ್ಣೆಯ ಅಭಾವದಿಂದ ಈಗ ನಾವು ತಿರುಗಿ ಒತ್ತಾಯದಿಂದ ಅಂಥಾ ಬೀಜದೆಣ್ಣೆಗಳಿಗೇ ಶರಣು ಬರಬೇಕಾಗಿದೆ. ಆದರೆ ನಾವೀ ಸಂದರ್ಭದಲ್ಲಿ ತುಸು ವಿಚಾರಮಾಡಿಕೊಂಡರೆ, ಬೀಜದೆಣ್ಣೆಗಳ ಉಪಯೋಗವನ್ನು ಎಂದೆಂದೂ ಬಿಟ್ಟುಬಿಡಬಾರದು. ಇಂದು ಸುಮಾರು ೩೦ ಕೋಟಿ ರೂಪಾಯಿಗಳಷ್ಟು ದ್ರವ್ಯವು ನಮ್ಮ ದೇಶದಿಂದ ಚಿಮಿಣಿಎಣ್ಣೆಗಾಗಿ ಹೋಗುತ್ತದೆ. ಇಷ್ಟು ದ್ರವ್ಯ ವ್ಯಯಿಸಿದರೂ ಇದರಿಂದ ನಮ್ಮ ದೇಶದ ಒಬ್ಬ ಪ್ರಜೆಗೂ ಹಿತವಾಗದೆ ಅದೆಲ್ಲವೂ ಪರದೇಶಕ್ಕೆ ರಫ್ತಾಗುವುದು. ಇದು ಮಾತ್ರವಲ್ಲದೆ ಚಿಮಿಣಿ ಎಣ್ಣೆಯನ್ನು ಉರಿಸಲು ಬೇಕಾದ ಲೇಂಪು, ದೀಪ, ಲಾಟೀನುಗಳಿಗೆಂದು ೩೦.೩೫ ಕೋಟಿ ರೂಪಾಯಿ ಪರದೇಶಕ್ಕೆ ಹೋಗುವುದು. ಇದರಿಂದ ದೇಶವು ದಿನದಿಂದ ದಿನಕ್ಕೆ ದರಿದ್ರವಾಗಲು ಕಾರಣವಾಯಿತು. ಇದರ ಬದಲು ನಾವು ಬೀಜದೆಣ್ಣೆಗಳನ್ನುಪಯೋಗಿಸಿದರೆ ನಮ್ಮ ದೇಶದ ಎಷ್ಟೋ ಕುಟುಂಬಗಳನ್ನು ಸುಖಿತವಂತೆ ಆಗುತ್ತದೆ. ಕೃಷಿಕರಿಗೆ ವ್ಯವಸಾಯ, ಗಾಣಿಗರಿಗೆ ಕೆಲಸ, ದನಕರುಗಳಿಗೆ ಹಿಂಡಿ, ನಮ್ಮ ಮನೆ ಮನೆಗಳಲ್ಲಿ ಮಂಗಳ ದೀಪವೂ ಆಗುವುದು. ಮಾತ್ರವಲ್ಲದೆ ಎಣ್ಣೆ ಬೀಜಗಳು ಸಿಕ್ಕಾಬಟ್ಟೆ ಬೆಲೆಗೆ ಪರದೇಶಕ್ಕೆ ಹೋಗುವುದೂ ನಿಂತುಹೋಗುತ್ತದೆ. ನಮ್ಮ ಸ್ವಾವಲಂಬನೆ, ಸ್ವಯಂಪೂರ್ಣತೆ ಇವುಗಳನ್ನೆಲ್ಲಾ ಮರೆತು ತಪ್ಪು ದಾರಿ ಹಿಡಿದ ಭಾರತಕ್ಕೆ ಈ ಸಂದರ್ಭವು ಕಣ್ತೆರೆಯಲು ಅವಕಾಶ ಕಲ್ಪಿಸಿಕೊಟ್ಟಿದೆ!

ಆರ್ಥಿಕ ವಿಚಾರ: ವರ್ಧಾದಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆಯುವ ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು, ಬೀಜದೆಣ್ಣೆಗಳನ್ನು ಆಧುನಿಕ ರೀತಿಯ ಲೇಂಪು, ಲಾಟೀನು ದೀಪಗಳಿಗೆ ಉಪಯೋಗಿಸುವ ರೀತಿಯ ಕುರಿತು ಫಲಕಾರಿಯಾದ ಸಂಶೋಧನೆ ನಡೆಸಿ ಪ್ರಕಟಿಸಿದ್ದಾರೆ. ಬೀಜದ ಎಣ್ಣೆ ಉರಿಯುವ ದೀಪಕ್ಕೆ 'ಮಗನ್ ದೀಪ' ಎಂದು ಹೆಸರಿಟ್ಟಿರುವರು. ಮಗನ್ ದೀಪಕ್ಕೆ ಚಿಮಿಣಿ ಎಣ್ಣೆ ದೀಪಕ್ಕಿಂತ ಶೇಕಡಾ ೩೦ರಷ್ಟು ಕಡಿಮೆ ಬೀಜದೆಣ್ಣೆ ಸಾಕು. ಈ ಆಧಾರದ ಪ್ರಕಾರ, ಪ್ರಕೃತ ನಮ್ಮ ದೇಶಕ್ಕೆ ಬೇಕಾದ ಚಿಮಿಣಿ ಎಣ್ಣೆಯ ಬದಲು ನಾವು ಬೀಜದೆಣ್ಣೆಗಳನ್ನು ಉಪಯೋಗಿಸಿದರೆ, ಸಾಧಾರಣ ೭೩ ಕೋಟಿ ಸೇರು ಬೀಜದೆಣ್ಣೆ ಬೇಕು. ಬೇರೆ ಉಪಯೋಗಕ್ಕೆ ಬೇಕಾದ ಬೀಜದೆಣ್ಣೆಗಳ ಗೋಜಿಗೆ ಹೋಗದೆ, ಪರದೇಶಕ್ಕೆ ರಫ್ತಾಗುವ ಎಣ್ಣೆ ಬೀಜಗಳನ್ನು ಉಳಿಸಿದರೆ ನಮಗೆ ೪೩ ಕೋಟಿ ಸೇರು ಬೀಜದೆಣ್ಣೆ ಒದಗುವುದು. ಇಷ್ಟು ಎಣ್ಣೆ ತೆಗೆಯಲು ಒಂದೂವರೆ ಲಕ್ಷ ಎತ್ತಿನ ಗಾಣಗಳೂ, ಒಂದುವರೆ ಲಕ್ಷ ಗಾಣಿಗರ ಕುಟುಂಬಗಳಿಗೂ ಒಂದು ವರ್ಷದ ಕೆಲಸ ದೊರಕುವುದು. ಇದರಿಂದ ನಾಲ್ಕುವರೆ ಕೋಟಿ ರೂಪಾಯಿ ಬೆಲೆಯ ಹಿಂಡಿ ದೇಶದಲ್ಲಿಯೇ ಉಳಿಯುವುದು. ಹಿಂಡಿ ಬತ್ತಿ ಬಡವಾಗಿರುವ ಜಾನುವಾರುಗಳ ಆಹಾರಕ್ಕೂ, ಮಿಕ್ಕವು ನಿಸ್ಸಾರವಾಗಿರುವ ಭೂಮಿಯ ಗೊಬ್ಬರಕ್ಕೂ ಪ್ರಯೋಜನ ಬೀಳುತ್ತದೆ. ಇದರಿಂದ ಉತ್ಪನ್ನವಾಗುವ ಎಣ್ಣೆಯ ಮೌಲ್ಯ ೧೭॥ ಕೋಟಿ ರೂಪಾಯಿ. ಉಳಿದ ೩೭ ಕೋಟಿ ಸೇರು ಎಣ್ಣೆಯನ್ನು ಆಹಾರಕ್ಕೆ



1. ಎಣ್ಣೆಪಾತ್ರೆ. 2. ನಿಯಂತ್ರಕ. 3. ನಾಳ. 4. ಬತ್ತಿ ಹಿಡಿಕೆ. 5. ಪೂರಕ. 6. ತಿರುಗಣೆ. 7. ಆಧಾರ ಕೈ.

ಉಪಯೋಗಿಸದ ಇತರ ಎಂಣೆಗಳನ್ನು ಉಪಯೋಗಿಸುವುದರಿಂದ ಭರ್ತಿ ಮಾಡಿಕೊಳ್ಳಬಹುದಾಗಿದೆ. ಉಳಿದ ೩೭ ಕೋಟಿ ಸೇರು ಎಂಣೆಯನ್ನು ತೆಗೆವ ಕೈಗಾರಿಕೆಯಿಂದ ಪುನಃ ಒಂದು ಲಕ್ಷ ಗಾಣಿಗರ ಕುಟುಂಬ ಮತ್ತು ಒಂದು ಲಕ್ಷ ಎತ್ತುಗಳಿಗೆ ಜೀವನಮಾರ್ಗವಾಗುವುದು ಮಾತ್ರವಲ್ಲದೆ ಇಷ್ಟು ಕುಟುಂಬಗಳಿಗೆ ಪುನಃ ೩ ಕೋಟಿ ರೂಪಾಯಿ ಕೂಲಿರೂಪದಲ್ಲಿಯೂ ದೊರಕುವುದು. ಲಾಟೀನು, ಲೇಂಪು ದೀಪಗಳ ಕೆಲಸದಿಂದ ೩೦, ೩೫ ಕೋಟಿ ರೂಪಾಯಿ ಪರದೇಶಕ್ಕೆ ಸಾಗುತ್ತದಷ್ಟೆ? ಆದರೆ ಬೀಜದೆಂಣೆಗಳ ದೀಪಗಳಿಗೆ ಬೇಕಾದ ದೀಪ ಲಾಟೀನು ಲೇಂಪುಗಳನ್ನು ನಮ್ಮ ಲೋಹ ಕುಟಿಗರೂ, ಗಾಜಿನ ಕೆಲಸದವರೂ ತಯಾರಿಸಬಹುದು. ಇದರಿಂದಾಗಿ, ಬೇಸಾಯ ಒಂದರಲ್ಲಿಯೇ ಹೊಂದಿಕೊಂಡಿರುವ ಜನಸಂಖ್ಯೆ ಕಡಿಮೆಯಾಗಿ, ಹಲವರಿಗೆ ಹೊಸ ಉದ್ಯೋಗವೂ ಒದಗಿ ಹಳ್ಳಿಗರ ಸರಾಸರಿ ಆದಾಯವೂ ಹೆಚ್ಚುವುದು. ಮಗನ್ ದೀಪದಲ್ಲಿ ಚಿಮಿಣಿ ದೀಪದಂತೆ ಫಕ್ಕನೇ ಬೆಂಕಿ ಹಿಡಿದು ಅನಾಹುತವಾಗುವ ಹೆದರಿಕೆಯೂ ಇಲ್ಲದ್ದರಿಂದ ಇದರಿಂದ ವೈಯುಕ್ತಿಕ ಪ್ರಯೋಜನವೂ ಇದೆ. ಮಗನ್ ದೀಪ, ಚಿಮಿಣಿ ದೀಪಕ್ಕೆ ಸೇಕಡಾ ೧೦ರಷ್ಟು ಕಡಿಮೆ ಪ್ರಕಾಶ ಕೊಡುವುದಾದರೆ, ಮಗನ್ ದೀಪಕ್ಕೆ ಚಿಮಿಣಿ ದೀಪಕ್ಕಿಂತ ಸೇಕಡಾ ೩೦ರಷ್ಟು ಕಡಿಮೆ ಎಂಣೆ ಸಾಕು. ಇದನ್ನೆಲ್ಲಾ ಗಮನಕ್ಕೆ ತಂದರೆ ನಮ್ಮ ಮನೆಮನೆಗಳಲ್ಲಿ ಮಗನ್ ದೀಪವನ್ನು ಉರಿಸಿ ಅಸೌಕರ್ಯವನ್ನು ನೀಗಲಾಗಿಸುವುದರೊಡನೆ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ನಾವು ಯತ್ನಿಸದಿದ್ದರೆ ನಮಗೇ ಅದು ನಾಚಿಕೆಗೇಡು!

ಮಗನ್ ದೀಪ

ಪ್ರಕೃತದ ಪರಿಸ್ಥಿತಿಯಲ್ಲಿ ಹೊಸತಾಗಿ ದೀಪಗಳನ್ನು ಹೇರಳವಾಗಿ ನಿರ್ಮಿಸುವುದು ಬಹು ಕಷ್ಟಸಾಧ್ಯ. ಆದರೆ ಎಂಥಾ ಹಳೇ ಲಾಟೀನನ್ನಾದರೂ ಬೀಜದೆಣ್ಣೆ ಉಪಯೋಗಿಸುವ 'ಮಗನ್' ದೀಪಗಳಾಗಿ ಸುಲಭದಲ್ಲಿಯೇ ಮಾರ್ಪಡಿಸಬಹುದು. ಲಾಟೀನಿನ ಗೂಡು ಮತ್ತು ಅದರ ಬಿರಡೆಯ ಮೇಲ್ಟೊಪ್ಪಿ ಇದ್ದಿದ್ದರೆ ಸಾಕು. ಮೊದಲನೆಯದಾಗಿ ಲಾಟೀನಿನ ಗೂಡಿನ ಕೈಗಳ ಪೈಕಿ ಒಂದನ್ನು ಕತ್ತರಿಸಿ ತೆಗೆದು ಮುಂದೆ, ಕೆಳಗೆ ಸೂಚಿಸಿದ ಭಾಗಗಳನ್ನು ಅಲ್ಲಿಗೆ ಹೊಂದಿಸಬೇಕು. ಚಿಮಿಣಿ ಎಣ್ಣೆ ಉರಿಸುವಾಗ ಈ ಟೊಳ್ಳು ಕೈಗಳ ಮೂಲಕ ಬಿರಡೆಯಲ್ಲಿ ಉರಿಸುವ ಬತ್ತಿಗೆ ಸಾಕಷ್ಟು ವಾಯುವಿನ ಸರಬರಾಯಿಯಾಗುತ್ತದೆ. ಮಗನ್ ದೀಪವಾಗಿ ಮಾರ್ಪಡಿಸುವಾಗ ಈ ಬಗೆಯ ಒಂದು ಕೈ ಹೋದರೂ ಕೂಡಾ ಕೆಳಗಡೆಯ ಎಣ್ಣೆ ತುಂಬಿಸುವ ಹಳೆ ಎಣ್ಣೆ ಪಾತ್ರೆಯ ಬತ್ತಿಗೆ ಉರಿಯಲು ಬೇಕಾದ ವಾಯುವನ್ನೊದಗಿಸುವುದು.

ಮಗನ್ ದೀಪದ ಮುಖ್ಯ ಏಳು ಅಂಗಗಳು ಯಾವುವೆಂದರೆ (ಚಿತ್ರ ನೋಡಿರಿ) 1. ಎಣ್ಣೆ ಪಾತ್ರೆ. 2. ನಿಯಂತ್ರಕ. 3. ನಾಳ. 4. ಪೂರಕ. 5. ಬತ್ತಿ ಹಿಡಿಕೆ. 6. ತಿರುಗಣೆ. 7. ಜ್ಯೋತಿ ಮುಖ. ಈ ಕೆಳಗೆ ಅಲ್ಲಲ್ಲಿ ಸೂಚಿಸಿರುವ ಆಕೃತಿ ಅಂತರಗಳನ್ನು ಕಾರ್ಯಕ್ಕೆ ಅನುಕೂಲವಾಗುವಂತೆ ಮಾರ್ಪಡಿಸಿಕೊಳ್ಳಬಹುದು.

ಎಣ್ಣೆ ಪಾತ್ರೆ: ಚಿಮಿಣಿ ಎಣ್ಣೆಯು ತೆಳುವಾಗಿದ್ದು ಬತ್ತಿಯ ಮೂಲಕ ಕೆಳಗಿನಿಂದ ಮೇಲಕ್ಕೆ ಏರಿ ಉರಿಯುವ ಜ್ಯೋತಿಗೆ ಸರಾಗವಾಗಿ ಸಿಗುವುದು. ಆದರೆ ಬೀಜದೆಣ್ಣೆಗಳು ಜ್ಯೋತಿಗೆ ಸರಾಗವಾಗಿ ಸಿಗಬೇಕಾದರೆ ಎಣ್ಣೆ ಪಾತ್ರೆಯು ಜ್ಯೋತಿಗಿಂತ ಮೇಲ್ಮಟ್ಟದಲ್ಲಿರಬೇಕು. ಒಂದು ಬಹು ಸಪೂರ ಬಾಯಿಯ ಸೀಸೆಯಲ್ಲಿ ನೀರು ತುಂಬಿಸಿ ಅದನ್ನು ಮಗುಚಿ ಹಿಡಿದರೂ ಕೂಡಾ ನೀರು ಚೆಲ್ಲಿ ಹೋಗುವುದಿಲ್ಲ. ಏಕೆಂದರೆ, ಸೀಸೆಯ ಬಾಯಿಯ ಮೇಲೆ ಇರುವ ವಾಯುವಿನ ಮೇಲ್ಮುಖವಾದ ಒತ್ತಡವು ನೀರನ್ನು ಕೆಳಕ್ಕೆ ಹರಿಯಲು ಬಿಡುವುದಿಲ್ಲ. ಈ ಸೂತ್ರವನ್ನು ಮಗನ್ ದೀಪದ ಎಂಣೆ ಪಾತ್ರೆಯ ರಚನೆಯಲ್ಲಿ ಅನುಸರಿಸಲಾಗಿದೆ. ಸಾಧಾರಣ 6 ಇಂಚು ಉದ್ದ 1¼ ಇಂಚು ವ್ಯಾಸದ ತಗಡಿನ ನಳಿಗೆಯ ಮೇಲ್ಬದಿಯು ವಾಯು ಬಿಗಿಯಾಗಿ ಮುಚ್ಚಿರಬೇಕು. ಈ ನಳಿಗೆಯ ಕೆಳ ಕೊನೆಯು ನಿಯಂತ್ರಕದ ಮೇಲ್ಭಾಗದಲ್ಲಿರುವ ಸೆರೆಯ ಮೇಲೆ ವಾಯು ಬಿಗಿಯಾಗಿ ಹೊಂದಿಸಲ್ಪಡಬೇಕು. ಈ ಎಂಣೆ ಪಾತ್ರೆಯ ಪ್ರತಿಯೊಂದು ಸಂದು ಬೆಸಿಗೆಗಳು ವಾಯು ಬಿಗಿಯಾಗಿ ಇದ್ದರೆ, ಯಾವ ರೀತಿಯಿಂದಲೂ ವಾಯು ಒಳಹೋಗದಂತಿರಬೇಕು. ಇಲ್ಲವಾದರೆ ಇದರಲ್ಲಿ ತುಂಬಿದ ಎಂಣೆಯು ತುಂಬುವ ನಾಳದ ಅಥವಾ ಜ್ಯೋತಿಮುಖದ ಮೂಲಕ ಹೊರಕ್ಕೆ ಸುರಿಯುವುದು.

ನಿಯಂತ್ರಕ: ಈ ರಚನೆಯು ಅತೀ ಪ್ರಮುಖ್ಯವಾದುದು. ಪೂರಕದ ಮೂಲಕ ಉರಿಯುವ ಬತ್ತಿಗೆ ಎಂಣೆಯನ್ನು ಒಂದೇ ಸಮನಾಗಿ, ಹೆಚ್ಚು ಕಡಿಮೆಯಾಗದಂತೆ ಒದಗಿಸಿಕೊಡುವ ಕಾರ್ಯಭಾಗವೇ ನಿಯಂತ್ರಕದ್ದಾಗಿದೆ. ನಿಯಂತ್ರಕವು ತಗಡಿನ ಒಂದು ಚಪ್ಪಟೆಯಾದ ಪೆಟ್ಟಿಗೆಯಂತಿದೆ. ಇದರ ಅಳತೆಯು ಹೀಗಿದೆ—1¾ ಇಂಚು ಉದ್ದ, 1¼ ಇಂಚು ಅಗಲ, ¾ ಇಂಚು ಆಳ. ಈ ಪೆಟ್ಟಿಗೆಯ ಮೇಲ್ಭಾಗಕ್ಕೆ ಎಂಣೆ ಪಾತ್ರೆ ಮತ್ತು ಎಂಣೆ ತುಂಬಿಸುವ ನಾಳವನ್ನು ಜೋಡಿಸಬೇಕು. ಕೆಳಭಾಗದಿಂದ ಪೂರಕವು ಬತ್ತಿಗೆ ಎಂಣೆಯನ್ನು ಒದಗಿಸಿಕೊಡುವುದಕ್ಕಾಗಿ ಜೋಡಿಸಲ್ಪಡಬೇಕು. ಎಂಣೆ ಪಾತ್ರೆಯು ಪೂರಕದ ಮೇಲುಭಾಗದಲ್ಲಿ ಇರುವ ಸೆರೆಯ ಮೇಲೆ (ಸೆರೆಯ ನಡುವಿಗೆ ಬರುವಂತೆ) ಸಂಧಿಸಿದೆ ಎಂದು ಹೇಳಿದೆವಷ್ಟೆ! ಈ ಸೆರೆಯು 1 ಇಂಚು ಉದ್ದವಿದ್ದು ಒಂದು ನೂಲಿನಷ್ಟು (⅛") ಅಗಲವಿರಬೇಕು. ಈ ಸೆರೆಯು ಪೆಟ್ಟಿಗೆಯ ಅಡ್ಡಕ್ಕೆ ಸರಿಯಾಗಿದ್ದು, ಅದರ ಹೊರಬದಿಗೆ ಕೂಡಿರಬೇಕು. ಪಾತ್ರೆಯೊಳಕ್ಕೆ ಎಂಣೆ ತುಂಬಿಸಲು, ಲಾಟೀನನ್ನು ಅಡ್ಡ ಹಿಡಿದು ನಾಳದ ಮೂಲಕ ಎಂಣೆಯನ್ನು ನಿಧಾನವಾಗಿ ಹೊಯ್ಯುವಾಗ, ಎಂಣೆ ಪಾತ್ರೆಯೊಳಗಿದ್ದ ವಾಯುವನ್ನು ಹೊರಕ್ಕೆ ತಳ್ಳಿ ಎಂಣೆಯು ಮೇಲಕ್ಕೇರುವುದು.

ನಾಳ: ಇದು ಎರಡು ಕೆಲಸಗಳನ್ನು ಜರಗಿಸುವುದು. ಲಾಟೀನಿನ ಬಿರಡೆಯು ಮೇಲಕ್ಕಿರುವಂತೆ ಎಂಣೆ ಪಾತ್ರೆಯನ್ನು ಅಡ್ಡ ಇರಿಸಿದಾಗ

(೩ನೇ ಪುಟಕ್ಕೆ ಮುಂದುವರಿದಿದೆ)

ಮಂಗಳ ದೀಪವಿದು—

'ಮಗನ್ ದೀಪ!'

(೧ನೆಯ ಪುಟದಿಂದ ಮುಂದುವರಿದುದು)

ಗ. ಈ ನಾಳದ ಮೂಲಕ ಎಂಣೆ ಪಾತ್ರೆಯೊಳಕ್ಕೆ ಎಂಣೆಯನ್ನು ತುಂಬಿಸಬಹುದು. ಬಾಟ್ಲನ್ನು ನೀಟ ಇರಿಸಿದಾಗ ಈ ನಾಳದ ಮೂಲಕ ನಿಯಂತ್ರಕಕ್ಕೆ ವಾಯುವು ಸಿಗುವುದು. ನಿಯಂತ್ರಕದಲ್ಲಿದ್ದ ಎಂಣೆಯು ಉರಿಯುವ ಜ್ಯೋತಿಗೆ ಎಂಣೆ ಒದಗಿಸುವುದಷ್ಟೆ! ಇದರಿಂದಾಗಿ ನಿಯಂತ್ರಕದಲ್ಲಿ ಎಂಣೆಯ ಮಟ್ಟವು ಕೆಳಕ್ಕಿಳಿಯುವುದು. ಆಗ ಒಂದು ವಾಯು ಗುಳ್ಳೆಯು ನಾಳದ ಮೂಲಕ ಎಂಣೆ ಪಾತ್ರೆಯೊಳಕ್ಕೆ ಹೊಕ್ಕು ಒಂದು ತಟಕು ಎಂಣೆಯು ನಿಯಂತ್ರಕದೊಳಗೆ ಹರಿಯುವಂತೆ ಮಾಡುವುದು. ನಾಳದ ಆಕಾರವು "—" ಹೀಗಿದೆ. ಇದರ ನೀಟ ಭಾಗವು 1¼ ಇಂಚು, ಬಾಗಿದ ಭಾಗವು ¼ ಇಂಚು, ಈ ನಳಿಗೆಗಳ ವ್ಯಾಸವು ⅛ ಇಂಚು. ಈ ನಾಳವನ್ನು ನಿಯಂತ್ರಕದ ಮೇಲ್ಭಾಗದಲ್ಲಿ ಮಾಡಲಾದ ⅛ ಇಂಚು ವ್ಯಾಸದ ತೂತಿನ ಮೇಲೆ ಹೊಂದಿಸಲಾಗಿದೆ. ನಾಳದ [illegible] ಗಿರಬೇಕು. 'ನಾಳದ ಬಾಗಿದ' ಮೇಲ್ಭಾಗವು ಸ್ವಲ್ಪ ಕೆಳಮುಖವಾಗಿ ಇದ್ದರೆ ಲೇಸು. ಏಕೆಂದರೆ ಇದರಿಂದಾಗಿ ಮಳೆಗಾಲದಲ್ಲಿ ಬಾಟ್ಲನ್ನು ಹೊರಕ್ಕೊಯ್ಯುವಾಗ ಈ ಭಾಗದಲ್ಲಿ ಸೇರಬಹುದಾದ ಹನಿಗಳು ನಿಯಂತ್ರಕದೊಳಗೆ ಹೋಗುವ ಬದಲು ಹೊರಕ್ಕೆ ಇಳಿಯುವುವು.

ಪೂರಕ: ⅛ ಇಂಚು ವ್ಯಾಸ ಮತ್ತು 3 ಇಂಚು ಉದ್ದವಿರುವ ಈ ನಳಿಗೆಯು ಜ್ಯೋತಿಗೆ ಬೇಕಾದ ಎಂಣೆಯನ್ನು ಒದಗಿಸುತ್ತದೆ. ಇದರ ಒಂದು ತುದಿಯು ನಿಯಂತ್ರಕದ ಅಡಿಭಾಗಕ್ಕೂ ಇನ್ನೊಂದು ತುದಿಯು ಬತ್ತಿಯ ಹಿಡಿಕೆಗೂ ಹೊಂದಿಸಲ್ಪಟ್ಟಿರುವುದು.

ಬತ್ತಿ ಹಿಡಿಕೆ: ಬತ್ತಿಯ ಹಿಡಿತವನ್ನು ಎರಡು ವಿಧಾನದಲ್ಲಿ ರಚಿಸಿಕೊಳ್ಳಬಹುದು. ಹಳೆಯ ದೀಪದಲ್ಲಿ ಇರುವ ಬಿರಡೆಯನ್ನು ಇದ್ದಂತೆ ಉಪಯೋಗಿಸಲು ಮಾರ್ಪಡಿಸಲು ಹೆಚ್ಚು ತೊಡಕಿದೆ. ಆದರೆ, ಮಗನ್ ದೀಪದಲ್ಲಿ ಏರ್ಪಡಿಸುವಂತೆ (ಬತ್ತಿಯ ಹಿಡಿತವನ್ನು) ವಕ್ರಾಕಾರದ ಬತ್ತಿಯ ಹಿಡಿತದ ರಚನೆಯು ಹಲವು ರೀತಿಗಳಲ್ಲಿ ಸರಳವಾಗಿದೆ. ಬತ್ತಿಯ ತಿರುಗಣೆಯ ಅಡ್ಡಕಡ್ಡಿ ಮತ್ತು ಕಬ್ಬಿಣದ ಚಿಕ್ಕ ಚಕ್ರಗಳು ಜ್ಯೋತಿಯ ಮಟ್ಟಕ್ಕಿಂತ ಕೆಳಗಿರುವುದರಿಂದ, ಎಂಣೆಯು ಈ ಸ್ಥಾನದಿಂದ ಹೊರಕ್ಕೆ ಒಸರುವ ಸಂಭವವಿಲ್ಲ. ಆದುದರಿಂದ ಮಗನ್ ದೀಪದ ಈ ರೀತಿಯ ಬತ್ತಿಯ ಹಿಡಿತವು ಬಹು ಸರಳವಾಗಿರುವುದಲ್ಲದೆ, ತುಂಬಾ ಅನುಕೂಲವೂ ಆಗಿದೆ. ಈ ಕಾರಣದಿಂದಾಗಿ ಈ ರೀತಿಯ ಹಿಡಿತವನ್ನೇ ರಚಿಸುವುದು ಉತ್ತಮವೆಂದು ಹೇಳಬಹುದಾಗಿದೆ.

ತಿರುಗಣೆ: ಚಿಮಿಣಿ ಎಂಣೆ ದೀಪದ ಬಿರಡೆಗಳನ್ನು ಉಪಯೋಗಿಸುವಾಗ ಅದರ ತಿರುಗಣೆಯು ಬತ್ತಿಯ ಮಟ್ಟಕ್ಕಿಂತ ಕೆಳಕ್ಕಿರುವುದರಿಂದ ಎಂಣೆಯು ಹೊರಕ್ಕೆ ಒಸರದಂತೆ ಬೇರೆಯೇ ರಚನೆಯ ವಿಧಾನವಿರುವುದು. ಅದನ್ನು ಬೇರೆ ಚಿತ್ರದಲ್ಲಿ ವಿವರಿಸಿದೆ. ಕಟ್ಟಿನ ಚಕ್ರಗಳು ಹೊಂದಿರುವ ತಿರುಗಣೆಯ ಅಡ್ಡಕಡ್ಡಿಯು ಗಿಡ್ಡ. ಕೊನೆಯ ಮೇಲೆ ಒಂದು ಟೊಪ್ಪಿಯನ್ನು ಇಟ್ಟು ಬೆಸಿಗೆ ಮಾಡಬೇಕು. ಇದರ ಇನ್ನೊಂದು ಕೊನೆಯ ಮೇಲೆ ಉದ್ದಕ್ಕೂ ನೂಲು ಸುತ್ತಿ ಅದರ ಮೇಲೆ ಸಾಂಗವಾಗಿ ಬಿಗಿಯಾಗಿ ಹೋಗುವ ಒಂದು ತಗಡಿನ ನಳಿಗೆಯನ್ನು ಹೊಂದಿಸಿರಿ. ಇದರ ಒಂದು ಕೊನೆಯನ್ನು ಬಿರಡೆಗೆ ಬೆಸಿಗೆ ಮಾಡಬೇಕು. ಈ ಒಳ ನಳಿಗೆಯ ಮೇಲೆ ಪುನಃ ಉದ್ದಕ್ಕೂ ನೂಲು ಸುತ್ತಿ, ಪುನಃ ಸ್ವಲ್ಪ ಅಗಲದ ಇನ್ನೊಂದು ನಳಿಗೆಯಿಂದ-ಇದನ್ನು ಎಂಣೆ ಬಿಗಿಯಾಗುವಂತೆ ಮುಚ್ಚಿ ತಿರುಗಣೆಯ ಹಿಡಿತವನ್ನು ಇದರೊಡನೆ ಜೋಡಿಸಿ ಬೆಸಿಗೆ ಮಾಡಿರಿ.

ಜ್ಯೋತಿಮುಖ: ಬತ್ತಿಯ ಹಿಡಿತದ ಉರಿಯುವ ಕೊನೆಯು ಅಂತ್ಯವಾಗುವ ಭಾಗವನ್ನು ಸ್ವಲ್ಪ ಅಗಲಿಸಿ, ಹಣತೆಯಂತೆ ಮಾಡಬೇಕು. ಬತ್ತಿಯ ಮೂಲಕ ಒಸರುವ ಎಂಣೆಯು ಈ ಚಿಕ್ಕ ಹಣತೆಯಲ್ಲಿ ಸೇರಿ ಉರಿಯುವ ಜ್ಯೋತಿಗೆ ಅದನ್ನು ಒದಗಿಸಿ ಕೊಡುತ್ತದೆ. ದೀಪವನ್ನು ಚಿಕ್ಕದಾಗಿ ಉರಿಸುವಾಗ ಈ ಚಿಕ್ಕ ಹಣತೆಯಲ್ಲಿ ಉಳಿದಿರುವ ಎಂಣೆಯು ಬತ್ತಿಯು ಕೆಟ್ಟುಹೋಗದಂತೆ ನೋಡಿಕೊಳ್ಳುತ್ತವೆ.

ಉಪಯೋಗದ ಸೂಚನೆಗಳು:

ಮೇಲೆ ಸೂಚಿಸಿದಂತೆ ಎಂಣೆ ಪಾತ್ರೆಯೊಳಕ್ಕೆ ಎಂಣೆಯನ್ನು ತುಂಬಿರಿ. ಎಂಣೆಯು ಶುದ್ಧವಾಗಿದ್ದು, ಅದನ್ನು ನಿಧಾನವಾಗಿ ನಾಳದೊಳಕ್ಕೆ ಸುರಿಯಬೇಕು. ಇಲ್ಲವಾದರೆ ಪಾತ್ರೆಯಲ್ಲಿದ್ದ ವಾಯು ಒಯ್ಯುವ ಎಂಣೆಯಿಂದಾಗಿ ಗುಳುಗುಳಿಸಿ ಎಂಣೆ ಚೆಲ್ಲಿಹೋಗುವ ಸಂಭವವಿದೆ. ಹಳೇ [illegible] ದೀಪಗಳನ್ನು ಉಪಯೋಗಿಸಬಾರದು. ಬತ್ತಿಯ ಉರಿಯುವ ಕೊನೆಯನ್ನು ದಿನಾಲೂ ಕತ್ತರಿಸಿ ಸ್ವಚ್ಛವಾಗಿರಿಸಬೇಕು. ಅಲ್ಲದೆ ಈ ಕೊನೆಯನ್ನು ಅದರ ಹಾಸುಹೊಕ್ಕುಗಳನ್ನು ಬಿಡಿಸಿ ಅಗಲವಾಗಿರಿಸಿದರೆ ಬತ್ತಿಯು ಬೇಗನೇ ಸುಟ್ಟುಹೋಗುವುದಿಲ್ಲ. ಅಲ್ಲದೆ ಅಗಲವಾದ ಹೆಚ್ಚು ಪ್ರಕಾಶದ ಜ್ಯೋತಿಯೂ ಸಿಗುವುದು.

ದೀಪ ಹೊತ್ತಿಸುವಾಗ ಕಿರಿದ ಕಡ್ಡಿಯನ್ನು ಬತ್ತಿಯ ಒಂದು ಮೂಲೆಗೆ ಹಿಡಿದು ಹೊತ್ತಿಸುವುದು ವಾಸಿ. ದೀಪ ಉರಿಯುತ್ತಲೇ ಇರುವಾಗ ಕೂಡ ನಾಳದ ಮೂಲಕ ಎಂಣೆ ಪಾತ್ರೆಯೊಳಕ್ಕೆ ಎಂಣೆಯನ್ನು ಹೊಯ್ಯಬಹುದು. ದೀಪವನ್ನು ಅತ್ತಿತ್ತ ಕೊಂಡುಹೋಗುವಾಗ ಅನಾವಶ್ಯಕವಾದ ಅಲುಗಾಟವನ್ನು ಕಡಿಮೆಮಾಡಬೇಕು. ಈ ಅಲುಗಾಟದಿಂದ ಎಂಣೆಯು ಹೊರಕ್ಕೆ ಹರಿವ ಅಸ್ಪದ ಅಧಿಕವಾಗುವುದು. ಅಲ್ಲದೆ ನಿಯಂತ್ರಕದಲ್ಲಿನ ಎಂಣೆಯ ಮಟ್ಟವು ಜ್ಯೋತಿಯ ಮಟ್ಟಕ್ಕಿಂತ ಏರಿನಲ್ಲಿದ್ದರೆ ವಿಶೇಷ ಎಂಣೆಯು ಜ್ಯೋತಿಮುಖಕ್ಕೆ ಬಂದು ಜ್ಯೋತಿಯು ಚಿಕ್ಕದಾಗಿ ಪ್ರಕಾಶವು ಕಡಿಮೆಯಾಗುವುದು; ನಂದಿಹೋಗುವ ಸಂದರ್ಭವೂ ಇದೆ.

ಈ ಸೂತ್ರಗಳ ಮರ್ಮವನ್ನರಿತು ಮೇಲಿನ [illegible] ಕೂಗುವ ಹಾಗೂ ಗೋಡೆಯ ದೀಪಗಳನ್ನು ಚತುರನಾದ ಕೆಲಸಗಾರನು ಸುಲಭದಲ್ಲಿ ಮಾಡುವನು. ಹೀಗೆ ನಮ್ಮ ದೇಶದ ಹಳ್ಳಿಹಳ್ಳಿಗಳಲ್ಲಿ ಒದಗುವ ವಸ್ತುಗಳಿಂದ ಅನುಕೂಲವಾದ ದೀಪಗಳನ್ನು ತಯಾರಿಸುವುದು ಸಾಧ್ಯವಿರುವಾಗ, ನಮ್ಮ ಮುನ್ಸಿಪಾಲಿಟಿ, ಪಂಚಾಯತು ಬೋರ್ಡ್ ಮೊದಲಾದ ಸ್ಥಳೀಯ ಸಂಸ್ಥೆಗಳು ಬೀದಿ ದೀಪಗಳನ್ನು ಉಪಯೋಗಿಸಿದಲ್ಲಿ ಅನುಕೂಲವೂ ದೇಶೋದ್ಧಾರವೂ ಆಗುವುದಲ್ಲವೆ?

ಶ್ರೀ. ಬಿ. ದಾಮೋದರ ಬಾಳಿಗರು ವರ್ಧಾ ಅಖಿಲಭಾರತ ಗ್ರಾಮೋದ್ಯೋಗ ಸಂಘದ 'ಮಗನ್ ದೀಪ'ದ ವಿಚಾರವನ್ನು ಅಭ್ಯಸಿಸಿ, ಕೆಲವು ತರದ ದೇಶೀಯ ದೀಪಗಳನ್ನು ತಯಾರಿಸುವ ಕುರಿತು ಒಂದು ಸಚಿತ್ರ ಪುಸ್ತಕ ಬರೆದು ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ. ಅವರ ಆ ಪುಸ್ತಕದಿಂದ ಮೇಲಿನ ಲೇಖನ ಉದ್ಧೃತವಾಗಿದೆ. ದೇಶೀಯ ದೀಪಗಳನ್ನು ಮಾಡಲು ಆತುರಪಡುವವರು ಮೇಲಿನವರೊಡನೆ ಪತ್ರವ್ಯವಹಾರ ನಡೆಸಬಹುದು. ವರ್ಧಾಕ್ಕೆ ಬರೆಯುವವರು, ಅಖಿಲ ಭಾರತ ಗ್ರಾಮೋದ್ಯೋಗ ಸಂಘ, ಮಗನ್ ವಾಡಿ, ವರ್ಧಾ ಇಲ್ಲಿಗೆ ಬರೆಯುವುದು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ರಾತ್ರಿಕಾಲದ ಹಿಮಬಾಧೆಯ ಅಪಾಯವನ್ನು ನಿವಾರಿಸಿರಿ

ನೀವು ಶೀತಗಾಳಿಯುಳ್ಳ ರಾತ್ರಿಯಲ್ಲಿ ಸಂಚರಿಸುವಿರಾದರೆ ನಿಮಗೆ ಶೀತದೋಷವುಂಟಾಗಿ ನಿಮೋನಿಯಾ ಆಗುವ ಸಂಭವವಿದೆ. ಆದ್ದರಿಂದ ಯಾವಾಗಲೂ ವಿಷಹಾರಿ ಶ್ವಾಸಯೋಗ್ಯ ಮಾತ್ರೆ ಪೆಪ್ಸುಗಳನ್ನು ಸೇವಿಸಲು ಮರೆಯದಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ ಉತ್ತಮ ಔಷಧಿ ಸತ್ವವನ್ನು ಹೊರಗೆಡವುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರಿ, ಅಲ್ಲಿ ಸೇರಿರುವ ರೋಗೋತ್ಪಾದಕ ಕ್ರಿಮಿಗಳನ್ನು ನಾಶಪಡಿಸುವುದು. ಮಾತ್ರವಲ್ಲದೆ ನಿಮ್ಮ ಕಂಠ, ಎದೆ, ಶ್ವಾಸಕೋಶಗಳಿಗೆ ರಕ್ಷಣೆಯನ್ನುಂಟುಮಾಡುತ್ತದೆ. ಪೆಪ್ಸು ಕೂಡಲೇ ಕಫ, ಶೀತ, ಇಂಫ್ಲುಯೆಂಜಾ, ಬ್ರೋಂಕಯಿಟ್ಸ್ ಮೊದಲಾದವುಗಳನ್ನು ಗುಣಪಡಿಸುವುದು. ಬೆಲೆ ರೂಪಾಯಿಒಂದು ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು

The Canara Banking Corporation Ltd.

(Incorporated in British India-Liability of members is limited)

Estd. 1906.

Our Rates of Interest on Deposits

Effective From 15--10--1942

Current accounts	(½% from July to Dec (1% from Jan. to June.
Savings Bank	1½% p. a.
Short-term deposits	1% p. a.
Fixed deposits 3 months	1% p. a.
6 ,,	1½% p. a.
9 ,,	2% p. a.
12 ,,	2¼% p. a.
24 ,,	3% p. a.

Advances against approved securities made at favourable rates of interest and banking business of every description under taken

ಸ್ಟಾಲಿನ್ನ ಕೀರ್ತಿಯ ಹೆಸರು ಹೊತ್ತ ಪಟ್ಟಣವನ್ನು ನಾವು ವೈರಿವಶ ಬಿಟ್ಟುಕೊಡೆವು, ಸ್ಟಾಲಿನ್ ಗ್ರಾಡಿನಲ್ಲಿರುವ ಪ್ರತಿಯೊರ್ವ ವ್ಯಕ್ತಿಯೂ ಇಂದು ಶಸ್ತ್ರ ಸನ್ನದ್ಧನಾಗಿ ಕಾದಾಡುತ್ತಿದ್ದಾನೆ ಲೆನಿನ್ ಗ್ರಾಡಿನವರು ಆ ನಗರದ ರಕ್ಷಣೆಗಾಗಿ ಹೋರಾಡಿದಂತೆ ನಾವೂ ನಮ್ಮ ಪಟ್ಟಣವನ್ನುಳಿಸಲು ಕಾದಾಡುವೆವು. ಲೆನಿನ್‌ಗ್ರಾಡನ್ನು ರಕ್ಷಿಸಿದ ಅವರ ಅಪಟು ಕ್ರಾಂತಿಯ ಜೋಗುಳ ಹಾಡಿತು! ಅದೇ ನಮ್ಮನ್ನು ಸ್ಟಾಲಿನ್‌ನ ಹೆಸರು ಹೊತ್ತ ಪಟ್ಟಣವನ್ನು ಉಳಿಸಲು, ರಶ್ಯನ್ ಸ್ವಾತಂತ್ರ್ಯದ ತೊಟ್ಟಿಲಾಗಿರುವ ಜನನಿ ವೊಲ್ಗಾವನ್ನು ರಕ್ಷಿಸಲೂ ನಮ್ಮನ್ನು ಹುರಿದುಂಬಿಸುತ್ತದೆ. ಜರ್ಮನರನ್ನು ಕಡಿದು ಹುಚ್ಚುನೂರುಮಾಡುವೆವು, ನಮ್ಮ ಕ್ರಾಂತಿಯ ಜ್ಯೋತಿಯನ್ನು ನಂದಾದೀಪದಂತೆ ಉರಿಸುವೆವು ನಮ್ಮ ನಗರವನ್ನು ರಕ್ಷಿಸುವ ಈ ಧೀರ ಸಂಗ್ರಾಮವು ಅನಂತಕಾಲದ ವರೆಗೆ ನಡೆಯಲಿ' ಈ ಮಾತುಗಳು ಸ್ಟಾಲಿನ್‌ಗ್ರಾಡ್ ರಕ್ಷಕನಾದ ಓರ್ವ ರಶ್ಯನ್ ವೀರನ ಮಾತುಗಳು! ಎಂಥಾ ಧೈರ್ಯ, ಎಂಥಾ ನಿರ್ಧಾರ ಎಂಥಾ ಪ್ರತಿಜ್ಞೆ, ಎಷ್ಟೊಂದು ದೇಶಾಭಿಮಾನ, ಎಂಥಾ ಸ್ವಾತಂತ್ರ್ಯಪ್ರೀತಿ ರಶ್ಯನರದು! ನಾಜಿಗಳು ಸ್ಟಾಲಿನ್‌ಗ್ರಾಡಿಗೆ ಬಲವಂತವಾದ ಪೆಟ್ಟು ಕೊಡುತ್ತಿದ್ದಾರೆ, ಇದರಿಂದ ದಿನ ಹೋದಂತೆ ನಗರ ಪಾರ್ಶ್ವಗಳು ಜರ್ಜರಿತವಾಗುತ್ತಿವೆ. ಆದರೂ ರಶ್ಯನರ ಸ್ವಾತಂತ್ರ್ಯ ಪ್ರೇಮ ಒಂದಿಷ್ಟು ಕಳೆಕುಂದಿರುವುದಿಲ್ಲ! ಹಾಗೆ ಅತ್ತ ಜರ್ಮನಿ ರಶ್ಯದ ಮೇಲೆ ಅಭಿಯೋಗ ಮಾಡುತ್ತಿದ್ದಂತೆ ಇತ್ತ ಜಪಾನು ಸೊಲಮನ್ ಆಕ್ರಮಣ ಕೈಕೊಂಡಿದೆ! ಗುಡಲ್‌ಕಾನರವಲ್ಲಿ ಇದ್ದೀಗಲೇ ಕೆಲವು ಸ್ಥಳಗಳು ಜಪಾನು ವಶವಾಗಿವೆಯೆಂದು ತಿಳಿಯುತ್ತದೆ ಅಮೇರಿಕನ್ ನೌಕಾವೀರರು ವೈಮಾನಿಕರೂ ಅವರನ್ನು ಸಾಹಸದಿಂದ ಇಲ್ಲಿ ಎದುರಿಸುತ್ತಿದ್ದಾರೆ ಇಜಿಪ್ತ ಮಾತ್ರ ಸದ್ಯ ಸ್ವಲ್ಪಮಟ್ಟಿಗೆ ಸ್ತಬ್ಧವಾಗಿದೆ

ಜರ್ಮನರು ವೊಲ್ಗಾ ದಾಟಿದರು?

ಸ್ಟಾಲಿನ್‌ಗ್ರಾಡ್ ಪರಿಸ್ಥಿತಿ ವಿಷಮವಾಗಿದ್ದಂತೆ ಜರ್ಮನರು ವೊಲ್ಗಾ ನದಿಯನ್ನು ದಾಟಿದರೆಂದೀಗ ಸುದ್ದಿ ಬಂದಿದೆ ವೊಲ್ಗಾದ ಆಚೆ ಜರ್ಮನರು ಒಂದೇ ಸವನೆ ಗುಂಡುಗಳನ್ನೂ ಬಾಂಬುಗಳ ಸುರಿಮಳೆಯನ್ನು ಸುರಿಸುತ್ತಲೇ ಇದ್ದಾರೆ ಹೀಗಾಗಿ ರಶ್ಯನರಿಗೀಗ ಉಭಯ ಸಂಕಟ ಬಂದೊದಗಿದೆ ಒಂದು ಕಡೆಯಿಂದ್ಹ ಸ್ಟಾಲಿನ್‌ಗ್ರಾಡ್ ಪತನವಾಗದಂತೆ ನೋಡಿಕೊಳ್ಳುವುದರೊಡನೆ ಇನ್ನೊಂದು ಕಡೆ ವೊಲ್ಗಾವನ್ನು ಜರ್ಮನರು ದಾಟದಂತೆ ಹೋರಾಟ ಹೂಡಬೇಕಾಗಿದೆ ಏಕೆಂದರೆ ರಶ್ಯನರಿಗೆ ಸಹಾಯವೊದಗಲು ವೊಲ್ಗಾ ಮಾರ್ಗವೊಂದೇ ಇಂದು ಗತಿಯಾಗಿದೆ ಅದೂ ಶತ್ರುವಿನ ಕೈಸೇರಿ ಬಿಟ್ಟರೆ ರಶ್ಯಕ್ಕೆ ವಿಪತ್ತು ವಿಷಮವಾದಂತೆಯೇ ಸ್ಟಾಲಿನ್ ಗ್ರಾಡನ್ನು ಜರ್ಮನರು ಭೇಧಿಸಿ ಒಳಹೊಕ್ಕು ಹೋರಾಡುತ್ತಿದ್ದರೂ ರಶ್ಯನರು ಅಷ್ಟೊಂದು ಅಂಜಿರಲಿಲ್ಲ ಏತಕ್ಕೆಂದರೆ ಅಲ್ಲಿನ ಪ್ರಸಿದ್ಧ ಕೈಗಾರಿಕೆಗಳನ್ನು ಈಗಾಗಲೇ ಅವರು ಬೇರೆ ಕಡೆಗೆ ಸಾಗಿಸಿದ್ದರು ಮಾತ್ರವಲ್ಲದೆ ಇದುವರೆಗೆ ಸ್ಟಾಲಿನ್ ಗ್ರಾಡಿನ ಹಿಂಭಾಗದಲ್ಲಿರುವ ವೊಲ್ಗಾ ನದಿ ದಡದಲ್ಲಿ ಅವರು ಭದ್ರವಾಗಿದ್ದರು ರಶ್ಯದ ಮುಖ್ಯ ರೈಲುದಾರಿ ಮತ್ತು ರಸ್ತೆಗಳೆಲ್ಲವೂ ಇಷ್ಟರಲ್ಲೇ ಜರ್ಮನರ ವಶವಾಗಿ ಬಿಟ್ಟಿದ್ದರಿಂದ, ಈಗ ವೊಲ್ಗಾ ನದಿಯ ದಂಡೆಯೂ ಕೈತಪ್ಪಿಬಿಟ್ಟರೆ, ಉತ್ತರ ಮತ್ತು ದಕ್ಷಿಣ ರಶ್ಯಗಳ ಸಂಬಂಧವೇ ಕಡಿದು ಹೋದಂತಾಗುವುದು. ಮಾತ್ರವಲ್ಲದೆ ಕಾಕಸಸಿನಲ್ಲಿ ರಶ್ಯನರ ಕೈವಶವಿರುವ ಎಣ್ಣೆ ಸಾಗಿಸುವ ಮಾರ್ಗವು ವೊಲ್ಗಾ ನದಿಯೊಂದೇ ಆಗಿದೆ. ಪ್ರತಿದಿನ ಈ ದಾರಿಯಲ್ಲಿ ನೂರಾರು ನೌಕೆಗಳು ಎಣ್ಣೆ ತುಂಬಿಸಿ ರಶ್ಯಕ್ಕೆ ಸಾಗುತ್ತಿವೆಯಾಗಿ ಜರ್ಮನರಿಗೆ ಇದರ ಮೇಲೆ ಬಹಳ ಕಾಲದಿಂದ ದೃಷ್ಟಿಯಿತ್ತು ಹಾಗಾಗಿ ಅದನ್ನು ಸ್ವಾಧೀನಪಡಿಸಲು ಅವರು ಸಾಹಸಪಡುತ್ತಿದ್ದಾರೆ. ಈಗ ಮಾಡಿದ ಹೊಸ ಧಾಳಿಯಿಂದ, ಜರ್ಮನರು ವೊಲ್ಗಾ ನದಿಯನ್ನು ದಾಟಿರುವರೆಂಬ

ಸಮರಭೂಮಿಯ ಸಂಚಾರ

ಚಿಂತಾಜನಕ ಸುದ್ದಿ ಬಂದಿದೆ ಇದರಿಂದ ರಶ್ಯನರ ಶಕ್ತಿ ಬಹುಮಟ್ಟಿಗೆ ಕುಗ್ಗಿದಂತೆ ಆಗುವುದು!

ಅಧಿಕ ವಿಶ್ವಾಸ–ಅಪಾಯ!

ರಶ್ಯನ್ 'ರಕ್ತಸೈನಿಕ'ರ ಹೋರಾಟದ ಆದಟನ್ನು ಹಾಡುವ ಕಾಲವಿದಲ್ಲ; ರಶ್ಯಕ್ಕೆ ಜಯವೆಂದು ಒರೇ ಪಲ್ಲವಿ ನುಡಿಸುವುದು ಸಾಲದು, ಸ್ಟಾಲಿನ್‌ಗ್ರಾಡನ್ನು ರಕ್ಷಿಸಿದ ರಶ್ಯನ್ ಯೋಧರ ಅಮಾನುಷ ಸಾಮರ್ಥ್ಯವನ್ನು ಕೊಂಡಾಡುವುದರಿಂದ ಮಾತ್ರ ಪ್ರಯೋಜನವೇನು? ರಶ್ಯದ ಗೆಲವಿನ ಕುರಿತು ಅಧಿಕ ವಿಶ್ವಾಸವಿಡುವುದೂ ಯೋಗ್ಯವಲ್ಲ, ಈಗ ರಶ್ಯಕ್ಕೆ ಬೇಕಾದುದು ಕೇವಲ ಕೈಚಪ್ಪಾಳೆಯಲ್ಲ, ಬರಿಯ ಬಾಯಿ ಹೊಗಳಿಕೆಯಲ್ಲ, ಒಮ್ಮೊಮ್ಮೆ ಒಂದೊಂದು ಟೇಂಕು, ಒಮ್ಮೊಮ್ಮೆ ಒಂದೊಂದು ವಿಮಾನ, ಆಗಾಗ ಸಾಗಿಸುವ ಒಂದೊಂದು ಹಡಗ, ಇಷ್ಟರಿಂದಾದರೂ ರಶ್ಯಕ್ಕೆ ಪ್ರಯೋಜನವಾಗುವದೆಂಬುದೇನೋ ನಿಜವಾದರೂ, ಇಷ್ಟರಿಂದಲೇ ಮಿತ್ರರು ರಶ್ಯಕ್ಕೆ ವಿಜಯವನ್ನು ಒದಗಿಸಿದಂತೆಯೇ ಆಯಿತೆಂದು ಗ್ರಹಿಸುವುದು ತಪ್ಪು ಕಳೆದ ಹದಿನಾರು ತಿಂಗಳಿಂದ ರಶ್ಯದ ರಕ್ತವು ಜರ್ಮನ್ ಫೇಸಿಸ್ಟ್ ಶಕ್ತಿಯೆದುರು ಅವಿಯಾಗುತ್ತಾ ಬಂದಿದೆ ಸಾವಿರಾರು ಚದುರ ಮೈಲು ಪ್ರದೇಶದ ರಶ್ಯನ್ ನೆಲವು ದಗ್ಧಭೂಮಿಯಾಗಿದೆ, ಐದು ಮಿಲಿಯಾಂತರ ಮಂದಿ ರಣರಂಗದಲ್ಲಿ ಜೀವ ಬಲಿದಾನ ತೆತ್ತಿದ್ದಾರೆ ಕಣಜ, ಖನಿ, ಕಾರ್ಖಾನೆಗಳೆಷ್ಟೋ ಅವರ ಕೈಬಿಟ್ಟಿವೆ, ಅರುವತ್ತು ಮಿಲಿಯ ರಶ್ಯನ್ ಪುತ್ರ ಪುತ್ರಿಯರು ನಾಜೀ ಪಾಪಾಕ್ರಾಂತರಾಗಿ ಬರಬಾರದ ಬನ್ನದಿಂದ ನರಳುತ್ತಿದ್ದಾರೆ, ರಶ್ಯವೇನೋ ಇದುವರೆಗಾದರೂ ಸಂಗ್ರಾಮವನ್ನು ಕೊಡುತ್ತಾ ಬಂದು ತನ್ನನ್ನು ರಕ್ಷಿಸಿಕೊಳ್ಳುವುದರೊಡನೆ ಮಿತ್ರರನ್ನೂ ರಕ್ಷಿಸಿಕೊಂಡು ಬಂದಿದೆ ಆದರೆ ಇನ್ನೆಷ್ಟು ಸಮಯ ಇದೇ ರೀತಿ ರಶ್ಯವು ಅಸದೃಶ ಹೋರಾಟ ಹೂಡುವುದು ಎಂಬುದು ಮಾತ್ರ ವಿಚಾರಾಸ್ಪದವಾಗಿದೆ ರಶ್ಯನರು, ನಾವು ಹೆಚ್ಚಿನ ಸಹಾಯ ಕಳುಹಿಸದಿದ್ದರೂ ದ್ವಿತೀಯ ರಣರಂಗ ತೆರೆಯದಿದ್ದರೂ ಯುದ್ಧದಲ್ಲಿ ಗೆಲ್ವರು ಎಂಬ ಅಧಿಕವಿಶ್ವಾಸವಿಡುವುದು ಅಪಾಯಕರವಾದುದು! ಹಿಮಗಾಲವೇ ನೋಳವರಿಗೆ ಈಗ ಸಹಾಯಕ್ಕೆ ಬಂದಿದೆ, ಅದು ದೇವರು ಕೊಟ್ಟ ದಾನವಲ್ಲದೆ, ಮಿತ್ರರಿಂದಾಗಿ ಸಿಕ್ಕಿದ ಸಹಾಯವಲ್ಲ, ಹಿಮವಂತನಾದರೂ ಅವರಿಗೆ ಶಕ್ತಿ, ಬತ್ತಳಿಕೆ, ಆಹಾರಗಳನ್ನೊದಗಿಸುವುದಿಲ್ಲ ಹಿಮಗಾಲದಲ್ಲಿ ಉಸಿರು ಬಿಡುವಷ್ಟು ಸಮಯ ಸಿಕ್ಕಿದರೂ ರಶ್ಯನರು ಹಿಂದಿನ ಶಕ್ತಿ ಸಾಮರ್ಥ್ಯ, ಜನಸಾಮಗ್ರಿಗಳ ಸಿದ್ಧತೆ ಮಾಡಿಕೊಳ್ಳಬಲ್ಲರೆಂದು ಹೇಗೆ ಹೇಳುವುದು? ಹಾಗಾದರೆ ಈಗ ಮಿತ್ರರ ಕರ್ತವ್ಯವೇನು? ಬ್ರಿಟನು ಅಮೇರಿಕಗಳು ಈಗ ಮುಂದೆ ಬರಲೇಬೇಕು, ಸ್ಟಾಲಿನನ ಹೆಗಲ ಮೇಲಿನ ಭಾರವನ್ನು ತಮ್ಮ ಹೆಗಲ ಮೇಲೆ ಈಗ ಹಾಕಿಕೊಳ್ಳಬೇಕು ಸ್ಟಾಲಿನ್ ಏನೋ ಏಕಾಂಗವೀರನಾಗಿ ಎದೆಗೊಟ್ಟು ನಿಂತಿರಬಹುದು, ಆದರೆ ಅವನ ಚಂದ ನೋಡಿ ಕುಳಿತುಕೊಳ್ಳುವುದು ಮಿತ್ರರಿಗೇ ಒಳ್ಳೆಯದಲ್ಲ, ರಶ್ಯದ ಭವಿಷ್ಯವೇನೋ ಗಂಭೀರ ಗಂಡಾಂತರದಿದೆಯೆಂದು ಇಂದಿನ ಪರಿಸ್ಥಿತಿಗಳು ಸಾರುತ್ತಿವೆ!

ಅನ್ಯೋನ್ಯ ವಿಶ್ವಾಸ ಬೇಕು!

ರಶ್ಯನ ಜರ್ಮನಿಗಳು ತಮ್ಮ ತಮ್ಮೊಳಗೆ ತಲೆ ಬಡಿದುಕೊಂಡು ಅನ್ಯೋನ್ಯ ಮೃತವಾಗಲಿ ಎಂಬೊಂದು ಆಕಾಂಕ್ಷೆ ತುಸು ಹಿಂದೆ ಅನೇಕ ಬ್ರಿಟಿಷ್ ಮುತ್ಸದಿಗಳದಾಗಿತ್ತು, ಏಕೆಂದರೆ ಜರ್ಮನಿಯಂತೆ, ರಶ್ಯದ ತತ್ವವೂ ಅವರಿಗೆ ಅಪಾಯಕಾರಿಯಾಗಿತ್ತು! ಗ್ಲಾಂಡರಲ್ಲು ಬ್ರಿಟನು ಫ್ರಾನ್ಸಗಳು ರಶ್ಯದ ಮೇಲೆ ಯುದ್ಧ ಸಾರುವುದರಲ್ಲಿದ್ದುವು! ಆದರೆ ಸ್ಕೇಂಡಿನೇವಿಯಾ, ಮಿತ್ರ ಸೈನ್ಯಗಳಿಗೆ ಫಿನ್‌ಲೆಂಡಿಗೆ ಮಾರ್ಗ ಬಿಡಲು ಒಪ್ಪದ್ದರಿಂದ ಆ ಸಂಭವ ನಿಂತುಹೋಯಿತು ಈಗ ಜರ್ಮನ್ ರಶ್ಯಗಳು ಅನ್ಯೋನ್ಯ ಹೊಡೆದಾಡಿ ಜೀವನ್ಮರಣದ ಪರಿಸ್ಥಿತಿಗೆ ಬಂದು ಮುಟ್ಟಿರುವಾಗ್ಯ ಮಿತ್ರರು ಇವರ ಚಂದ ನೋಡಿರುವುದಾದರೆ ಇದು ಮಹಾ ಗಂಡಾಂತರ! ಆಂಗ್ಲ–ಅಮೇರಿಕ, ರಶ್ಯಗಳಿಂದು ಅನ್ಯೋನ್ಯ ವಿಶ್ವಾಸಪೂರ್ವಕ ಕಾರ್ಯರಂಗಕ್ಕೆ ತೊಡಗಬೇಕು ದ್ವಿತೀಯ ರಣರಂಗವನ್ನು ತೆರೆಯಿರೆಂದು ಸ್ಟಾಲಿನ್ ಇಡೀ ರಶ್ಯವೇ ಬೊಬ್ಬಿಡುತ್ತಿದ್ದರೂ ಮಿತ್ರರು ಮಾಡುತ್ತಿರುವ ಕಾಲವಿಲಂಬದಿಂದ ಹಲವರು ಹಲ ವಿಧದ ಊಹಾಪೋಹ ಮಾಡಬಹುದು ಆದರೆ ಅಂಥಾ ಊಹೆಗಳಿಗೆ ಇನ್ನು ಮುಂದೆ ಆಸ್ಪದ ಕೊಡುವುದು ಅಪಾಯಕರ ರಶ್ಯಕ್ಕೆ ಟೇಂಕು, ವಿಮಾನ, ಫಿರಂಗಿ, ಹಡಗಗಳನ್ನು ಕಳುಹಿಸುವುದಕ್ಕಿಂತಲೂ, ರಶ್ಯವನ್ನು ಮಿತ್ರರು ಮೊದಲು ನಂಬಬೇಕು, ಜರ್ಮನಿಯನ್ನು ಗೆಲ್ಲುವ ವರೆಗಾದರೂ ನಂಬಲೇಬೇಕು ಇಲ್ಲದಿದ್ದರೆ ಉಭಯತರಿಗೂ ಗಂಡಾಂತರವೊದಗುವುದು, ಇಡೀ ಪ್ರಪಂಚವೇ ಅನರ್ಥದಲ್ಲಿ, ಅಂಧಕಾರದಲ್ಲಿ ಅದ್ದಿಹೋಗುವುದು ದ್ವಿತೀಯ ರಂಗವನ್ನು ಮಿತ್ರರು ತೆರೆಯಲಿಲ್ಲವೆಂಬ ಕುರಿತು ಮಿತ್ರರಿಗೂ ಸ್ಟಾಲಿನನಿಗೂ ಮನೋಕಲ್ಮಷವುಂಟಾದರೆ ಆ ಭಯ ಇತ್ತೀಚೆಯ ಹೇಳಿಕೆಗಳಿಂದ ಅರ್ಥವಾಗುತ್ತದೆ ಚರ್ಚಿಲರು ಮೋಸ್ಕೋಗೆ ಹೋಗಿದ್ದಾಗ ಸ್ಟಾಲಿನ್ ದ್ವಿತೀಯ ರಣರಂಗದ ಕುರಿತು ಒತ್ತಾಯ ಮಾಡಿರಬೇಕು ಆದರೂ ಚರ್ಚಿಲರ ಕಾರ್ಯಕ್ರಮ ಇನ್ನೂ ಹೊರಬಿದ್ದಿಲ್ಲ ಅಮೇರಿಕದ ಅಧ್ಯಕ್ಷರ ರಾಯಭಾರಿ ವೆಂಡಲ್‌ವಿಲ್ಕಿ ಎನರೇನೋ ದ್ವಿತೀಯ ರಣರಂಗ ತೆರೆಯುವ ಬಗ್ಗೆ ಒಂದೆ ಮುಂದೆ ನೋಡುವುದು ತರವಲ್ಲವೆಂದು ಸ್ಪಷ್ಟವಾಗಿ ನುಡಿದಿದ್ದಾರೆ ಅವರೀಗ ಅಮೇರಿಕಕ್ಕೆ ಬಂದು ಅಧ್ಯಕ್ಷರೊಡನೆ ಆಲೋಚನೆ ಮಾಡುತ್ತಿರುವರು ಇತ್ತೀಚೆಗೆ ಅಧ್ಯಕ್ಷ ರೂಸ್‌ವೆಲ್ಟರೂ ಒಂದು ಹೇಳಿಕೆಯಲ್ಲಿ ದ್ವಿತೀಯ ರಣರಂಗದ ಕುರಿತು ಭರವಸೆಯಿತ್ತಿದ್ದಾರೆ ಆದರೆ ಚರ್ಚಿಲರಾದಿಯಾಗಿ ಬ್ರಿಟಿಷ್ ಪ್ರಮುಖರಾರೂ ಈ ವಿಷಯ ಮಾತೇ ಆಡುವುದಿಲ್ಲ ಈ ರೀತಿಯ ಮೌನದ ಅರ್ಥವೇನೆಂದು ತಿಳಿಯಲಾಗುವುದಿಲ್ಲ ಅಂತೂ ಚರ್ಚಿಲರು ಮೌನವಾಗಿದ್ದರೂ ದ್ವಿತೀಯರಣರಂಗವನ್ನು ಕೆಲ್ಲಿಸುವ ವಿಷಯ ಅಮೇರಿಕವು ಬ್ರಿಟನನ್ನು ಒತ್ತಾಯ ಮಾಡುವಂತೆ ಇಂದು ಕಂಡುಬರುತ್ತದೆ ಇದರಿಂದ ರಶ್ಯಕ್ಕೂ ಮಿತ್ರರಿಗೂ ಹಿತವೇ ಆಗಲಿದೆಯೆಂಬುದು ನಿರ್ವಿವಾದ

ಸಿದ್ಧತೆಯೊ? ತಾಟಸ್ಥ್ಯವೊ?

ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದೊಡನೆ ಯುದ್ಧ ಸಾರಿದಾಗ, ಯಾವುದಾದರೂ ಬಂಧು ನಿರ್ಬಂಧಗಳಿರದಿದ್ದರೆ ಮೂರನೆಯ ರಾಷ್ಟ್ರವು ಯುದ್ಧದಲ್ಲಿ ಸೇರದೆ ತಟಸ್ಥವಾಗಿರುವುದು ಸಹಜವಷ್ಟೆ? ಅಂತಯೇ ಬ್ರಿಟನು ಜರ್ಮನಿಗಳೊಳಗೆ ಯುದ್ಧ ಪ್ರಾರಂಭವಾದಾಗ ಹಗೆ ತಟಸ್ಥವಾಗಿ ನಿಂತ ರಾಷ್ಟ್ರಗಳೇನೋ ಹಲವಿದ್ದುವು, ಆದರೆ ಕಳೆದ ಮೂರು ವರ್ಷಗಳ ನಿರಂತರ ಹೋರಾಟದ ಅವಧಿಯಲ್ಲಿ ತಟಸ್ಥರಾಷ್ಟ್ರಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಾ ಬರುತ್ತಿದೆ ಇಡೀ ಯೂರೋಪಿನಲ್ಲಿ ಮೂರು ವರ್ಷಗಳ ತಾಟಸ್ಥ್ಯವನ್ನು ರಕ್ಷಿಸಿ ನಿಂತ ರಾಷ್ಟ್ರಗಳೆಂದರೆ ಕೇವಲ ಐರ್ಲೆಂಡ್, ಸ್ಪೈನ್, ಪೋರ್ಚುಗಲ್, ಸ್ವಿಜರ್ಲೆಂಡ್, ಸ್ವೀಡನ್ ಮತ್ತು ಟರ್ಕಿ ಇವುಗಳಲ್ಲಿ ಯಾವುದೇ ರಾಷ್ಟ್ರಕ್ಕಾದರೂ ಎಷ್ಟು ಕಾಲದ ವರೆಗೆ ಅವುಗಳ ತಾಟಸ್ಥ್ಯ ನಿಂತೀತೋ ಎಂಬ ಭೀತಿ ಇದ್ದೇ ಇರುವುದು ಪ್ರತಿಯೊಂದೂ ಒಂದಲ್ಲ ಒಂದು ಸಮಯ ಹೀಗೆಯೇ ಪರಿಸ್ಥಿತಿ ಮುಂದುವರಿದರೆ ಯುದ್ಧರಂಗಕ್ಕಿಳಿಯಲೇ ಬೇಕಾಗುವ ಸಂಭವವಿದೆ ಹಲವು ಸಲ ಅವುಗಳಿಗೆ ತಮ್ಮ ತಾಟಸ್ಥ್ಯಭಂಗವಾಗುವ ಕಾರಣಗಳೂ ಉಂಟಾದವು ಉದಾಹರಣೆಗೆ ಕಳೆದ ಮೂರು ವರ್ಷದಲ್ಲಿ ಟರ್ಕಿ ಮಹಾಯುದ್ಧರಂಗಕ್ಕೆ ಧುಮುಕುವ ಪ್ರಸಂಗವೊದಗಿತ್ತು ಹಾಗಾದರೂ ಅದು ಇದುವರೆಗೆ ತನ್ನ ತಾಟಸ್ಥ್ಯವನ್ನು ಕಾಪಾಡಿಕೊಂಡಿದೆ, 1943 ನೆಯ ವರ್ಷದಲ್ಲಾದರೂ ತಮಗೆ ವಿಜಯ ದೊರೆಕಲಿ ಎಂದು ಸಂಯುಕ್ತರಾಷ್ಟ್ರಗಳು ಪ್ರಾರ್ಥಿಸುವುದಿದ್ದರೆ, 1943ರಲ್ಲೂ ನಮ್ಮನ್ನು ಯುದ್ಧ ಭೀಷಣತೆಯಿಂದ ದೂರವಿರಿಸು ಎಂದು ಟರ್ಕಿಯು ದೇವರೊಡನೆ ಮೊರೆಯಿಡುತ್ತಿದೆ, ಕಳೆದ ಆಗಸ್ಟ್ ಮೂವತ್ತರಂದು ಟರ್ಕಿಯು ಗ್ರೀಕ್ ಸೈನ್ಯದೊಡನೆ ತಾವು ಪಡೆದ ಅಂದಿನಾ ವಿಜಯದ ಇಪ್ಪತ್ತನೇ ವಾರ್ಷಿಕೋತ್ಸವವನ್ನು ಆಚರಿಸಿತು, ಈ ಸಂದರ್ಭದಲ್ಲಿ ಟರ್ಕಿಯ ಪ್ರೆಸಿಡೆಂಟ್ ಇನ್ನೋನ್ಯುರವರು ಸೇನಾಪತಿ ಸ್ಮಂಕ್‌ಮಾಕರನ್ನು ಅಭಿನಂದಿಸಿ ಒಂದು ತಂತಿ ಕಳುಹಿಸಿದರು ಅದರಲ್ಲಿ ಟರ್ಕಿಯ ಜನಾಂಗವು ತಮ್ಮ ಸ್ವಾತಂತ್ರ್ಯ ರಕ್ಷಣೆಗಾಗಿ ಎಂತಹ ವಿಪತ್ತನ್ನೂ ಎದುರಿಸಲು ಸಿದ್ಧವಾಗಿರುವರೆಂದು ಹೇಳಲಾಗಿತ್ತು ಪ್ರೆಸಿಡೆಂಟರಿಗೆ ರಿಪತಿಯಿತ್ತ ಉತ್ತರದಲ್ಲಿಯೂ ಕೂಡ ಟರ್ಕಿಯ ಸೇನೆಯು ಇಂದು ಹಿಂದಿನಂತ ಪಟ್ಟಿನ ಸಮರಸಿದ್ಧತೆಯಿಂದಿದೆ ಎಂದೂ, ಎಂತಹ ಪ್ರಬಲ ಆಕ್ರಮಣವನ್ನಾದರೂ ಎದುರಿಸಿ ರಾಷ್ಟ್ರದ ಶಾಂತಿಯನ್ನುಳಿಸಲು ಸಜ್ಜಾಗಿದೆಯೆಂದೂ ತಿಳಿಸಲಾಗಿತ್ತು ಇವರಿಂದೆಲ್ಲಾ ಟರ್ಕಿಯ ಜನಾಂಗವು ತನ್ನ ತಾಟಸ್ಥ್ಯವನ್ನುಳಿಸಿ ಎಂದು ಒಂದ ಕಡೆ ದೇವರೊಡನೆ ಮೊರೆಯಿಡುವದರೊಡನೆ ಇನ್ನೊಂದು ಕಡೆಯಲ್ಲಿ ತಾಟಸ್ಥ್ಯಭಂಗವಾದರೆ ಅದಕ್ಕೂ ಬೇಕಾದ ಸಿದ್ಧತೆಮಾಡುತ್ತಿರುವರೆಂದು ಸ್ಪಷ್ಟವಾಗುತ್ತದೆ ಅಂತೂ ಟರ್ಕಿಯ ಮೂರು ವರ್ಷಗಳ ತಾಟಸ್ಥ್ಯವೆಂದರೆ ಮೂರು ವರ್ಷಗಳ ಸಮರಸಿದ್ಧತೆಯೆಂದೂ ಎನಬಹುದಾಗಿದೆ!

ಅನ್ಯ ರಣರಂಗಗಳಲ್ಲಿ

ಜಪಾನ್ ಸಾಲೊಮನ್ ದ್ವೀಪ ಗಳ ಸಮೀಪದ ವಿಮಾನಗಳ ಮೇಲೆ ಗುಂಡಿನ ಮಳೆ ಸುರಿಸುತ್ತಿವೆ ಕೆಲಮಂದಿ ಜಪಾನರು ಆ ದ್ವೀಪದ ಉತ್ತರ ದಿಕ್ಕಿನಲ್ಲಿ ಇಳಿದರೆಂದೂ ಸುದ್ದಿ ಅಂತೂ ಆದನ್ನು ಹಿಡಿಯಲು ಜಪಾನರು ಸರ್ವ ಪ್ರಯತ್ನ ಮಾಡುತ್ತಿದ್ದಾರೆ ಸಾಲೋಮನ್ ದ್ವೀಪದೀಯುದ್ಧದಲ್ಲಿ ಅಮೇರಿಕನರಿಗೂ ಆಸ್ಟ್ರೇಲಿಯನರಿಗೂ ಜಪಾನರಿಗೂ ವಿಶೇಷ ನಷ್ಟವಾದ ಕೆಲವು ಹಡಗಗಳು ಪೇಸಿಫಿಕ್‌ನಲ್ಲಿ ಮುಳುಗಿಸಲ್ಪಟ್ಟಿವು ಗನ್ನೆಲ್ಲನ ದ್ವೀಪದಲ್ಲಿ [illegible] ಯುದ್ಧನಡೆಯಿತು ಸಲೋಮನ್ ದ್ವೀಪಗಳಲ್ಲಿ [illegible] ನೌಕಾ [illegible] ಸೈನ್ಯ ಪೆಸಿಫಿಕ್ ಸಾಗರದ ನಿಯಂತ್ರಣವನ್ನು [illegible] ಎಂದು [illegible] ಇಜಿಪ್ತ ರಣಭೂಮಿಯಾ ಸ್ತಬ್ಧವಾಗಿದೆ ಆದರೆ ಎರಡು ಪಕ್ಷದವರೂ [illegible] ಸಂಗ್ರಾಮಕ್ಕೆ ಸಿದ್ಧರಾಗುತ್ತಿ [illegible] ನೋಡಬೇಕು ರೊಮೆಲ್ ಹಿಟ್ಲರರಲ್ಲಿ ಮಾತಬೇಕಾಗಿ ರೋಮೆಲನು ಇಜಿಪ್ತ ರಣಭೂಮಿಯಲ್ಲಿ ಸ್ತಬ್ಧನಾಗಿರುವನೆಂದು ಒಂದು ವಿಷ್ಟ ಸುದ್ದಿ ಹಬ್ಬಿತು ಆದರೆ ಇದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆಯೋ ನಮಗೆ ತಿಳಿಯದು ಸ್ಟಾಲಿನ್‌ಗ್ರಾಡ್ ಸಂಗ್ರಾಮವನ್ನು ಬೇಗನೆ ತೀರಿಸಿಕೊಳ್ಳಬೇಕೆಂದು ಗ್ರಹಿಸಿ ಹಿಟ್ಲರ್, ರೊಮೆಲನ ಬಲದಿಂದ ಸ್ವಲ್ಪಭಾಗವನ್ನು ರಶ್ಯನರ ರಣರಂಗಕ್ಕೆ ಕರೆದಿದ್ದು, ರೋಮೆಲನೀಗ ಹೊಸ ಸೈನ್ಯ ಸಾಮಗ್ರಿಗಳ ಆಗಮನವನ್ನು ಕಾಯುತ್ತಿದ್ದರೂ ಇರಬಹುದು, ಜರ್ಮನಿಯಲ್ಲಿ ಕೆಲಸ ಮಾಡಲಿಕ್ಕೆಂದು [illegible] ಕೂಲಿಗಾರರನ್ನು ಕಳುಹಿಸಬೇಕೆಂದು ಹಿಟ್ಲರನು ಆಜ್ಞೆಯಿತ್ತುದರಿಂದ ವಿಚಿ ಸರಕಾರಕ್ಕೆ ದೊಡ್ಡ ವಿಪತ್ತುಂಟಾಗಿದೆ ಲಾವಲ್ ಹಿಟ್ಲರನ ಹಿಡಿತದಲ್ಲಿ ಸಿಕ್ಕಿದ್ದರೂ ತನ್ನ ದೇಶದ ಜನರನ್ನು ಸುಲಿಗಾಗಿಯೆ ದೇಶಕ್ಕೆ ಕಳುಹಿಸಲು ಒಪ್ಪುವನೆ? ಒಪ್ಪದಿದ್ದರೆ ಹೇಗೆ? ನಾಜಿಗಳ ವಿಜಯದಿಂದಲೇ ಯೂರೋಪಿನ ಏಳ್ಗೆಯಿದೆಯೆಂದು ಫ್ರೆಂಚರನ್ನು ಈಗ ಹುರಿದುಂಬಿಸಬೇಕಾಗಿದೆ ಇದೆಷ್ಟು ಸಂಕಟಕರ ಆದರೆ ಅನ್ಯರ ದಾಸರಾಗಿ ಬಾಳುವ ಜನಾಂಗದ ಪರಿಸ್ಥಿತಿ ಸರ್ವತ್ರ ಹೀಗೆಯೇ ಅಲ್ಲವೆ

ಸ್ವದೇಶಾಭಿಮಾನಿ

ತಾರೀಕು 23—10—1942

ವಿಲ್ಕಿ ಸಂಚಾರ

ಅಧ್ಯಕ್ಷ ರೂಸ್‌ವೆಲ್ಟರ ರಾಯಭಾರಿ ವೆಂಡಲ್ ವಿಲ್ಕಿಯವರು, ರಶ್ಯಾ, ಚೀನಾ ಮೊದಲ್ಗೊಂಡ ತ್ರಯೋದಶ ರಾಷ್ಟ್ರಗಳ ಸಂಚಾರಗೈದು, ಈಗ ಸ್ವದೇಶಕ್ಕೆ ಮರಳಿ, ರೂಸ್‌ವೆಲ್ಟರೊಡನೆ ವಿಚಾರವಿನಿಮಯ ಮಾಡುತ್ತಿದ್ದಾರೆಂದು ತಿಳಿದುಬಂದಿದೆ. ವಿಲ್ಕಿಯವರು, ತಮ್ಮ ಪ್ರವಾಸಕಾರ್ಯಕ್ರಮದಲಿ, ಭಾರತವನ್ನೂ ಸಂದರ್ಶಿಸುವರೆಂದೂ, ಹಾಗೆ ಸಂದರ್ಶಿಸಿದ್ದರೆ ಭಾರತದ ವಿಚಾರವಾಗಿ ಏನಾದರೂ ಸಮಸ್ಯಾಪರಿಹಾರವಾಗುತ್ತಿತ್ತೋ ಎಂದೂ ಕೆಲವರು ಹಾರೈಸಿದರಾದರೂ, ಅವರಿಗೆ ಯಾವ ಆತಂಕವುಂಟಾಯಿತೋ, ನಮ್ಮ ಭಾರತದ ಸಮಸ್ಯಾ ಪರಿಹಾರಕಾಲವೊದಗಲಿಲ್ಲವೋ, ಅಂತೂ ವಿಲ್ಕಿಯವರು ಇಲ್ಲಿಗೆ ಬರದೆಯೇ ಹಿಂತೆರಳಿದರು! ರಶ್ಯ ಚೀನಗಳ ವಿಚಾರ ವಿಲ್ಕಿಯವರು ಹೇಳಿದ ಮಾತುಗಳು ಕ್ರಾಂತಿಕಾರಕವಾಗಿತ್ತೆಂಬುದರಿಂದ, ಭಾರತಕ್ಕಾದರೂ, ಅವರ ಆಗಮನದಲ್ಲಿ ಆಶೆಯಿದ್ದುದು, ಯಾವುದೋ ನಮಗೆ ತಿಳಿಯದ ಕಾರಣದಿಂದ ಇಂದು ಅದು ಬರಿಯ ಬಯಲಾಸೆಯಾಯಿತು!

ವೆಂಡಲ್ ವಿಲ್ಕಿಯವರು ಈ ಪ್ರವಾಸ ಕಾಲದಲ್ಲಿ ಪ್ರಕಟಿಸಿದ ಕೆಲವು ಹೇಳಿಕೆಗಳು ಮನ್ನನೀಯವಿವೆ. ಒಂದು, ರಶ್ಯದ ರಕ್ಷಣೆಗಾಗಿ ಹಾಗೂ ಮಿತ್ರರ ವಿಜಯದ ಸಲುವಾಗಿ ತಡಮಾಡದೆ ಈಗಾಗಲೇ ದ್ವಿತೀಯ ರಣರಂಗವನ್ನು ತೆರೆಯಬೇಕೆಂದು ಅಮೆರಿಕ ಬ್ರಿಟನುಗಳನ್ನು ಒತ್ತಾಯ ಮಾಡುವಂತೆ ಅವರು ಹೇಳಿದ್ದು; ಇನ್ನೊಂದು ಅಟ್ಲಾಂಟಿಕ್ ಘೋಷಣೆಯು ಪೂರ್ವ ರಾಷ್ಟ್ರಗಳಿಗೂ ಅನ್ವಯಿಸುವುದೆಂದು ಮಿತ್ರರು ಸ್ಪಷ್ಟವಾಗಿ ಸಾರಿ, ಈ ಯುದ್ಧವನ್ನು ಗೆಲ್ಲುವರೆ ಆಶ್ರಿತ ರಾಷ್ಟ್ರಗಳ ವಿಶ್ವಾಸವನ್ನು ಸಂಪಾದಿಸಿಕೊಳ್ಳಬೇಕೆಂದು ನುಡಿದದ್ದು; ಅರ್ಥಾತ್ ಯುದ್ಧಾನಂತರ ಭಾರತವೇ ಮೊದಲಾದ ರಾಷ್ಟ್ರಗಳು ಪೂರ್ಣ ಸ್ವತಂತ್ರವಾಗುವವೆಂಬ ಭರವಸೆ ಆಯಾಯ ದೇಶದ ಜನರಲ್ಲಿ ಹುಟ್ಟುವಂತೆ ಮಾಡಬೇಕೆಂದು ಸಾರಿದ್ದು. ಈ ಎರಡು ವಿಚಾರಗಳು ನಿಜವಾಗಿ ಇಂದಿನ ಯುದ್ಧಮುಖವನ್ನೇ ತಿರುಗಿಸಲು ಸಾಕಾಗಿವೆ. ಮಿತ್ರರು, ಹಿಟ್ಲರ್ ಕಾಲ್ತುಳಿತದಲ್ಲಿ ನರಳುವ ರಾಷ್ಟ್ರಗಳಿಗೆ ಮಾತ್ರ ಸ್ವಾತಂತ್ರ್ಯ ಸಾರಿ ಯುದ್ಧದಲ್ಲಿ ಗೆಲ್ಲುವ ಭರವಸೆ ಮಾಡಿದರೆ ಮಾತ್ರ ಸಾಲದು; ತಮ್ಮ ಪದಾಘಾತದಿಂದ ನೊಂದಿರುವ ಅಧೀನ ರಾಷ್ಟ್ರಗಳಿಗಾದರೂ ಸ್ವಾತಂತ್ರ್ಯ ಕೊಡಬೇಕೆಂಬ ಉದಾರ ಮನೋವೃತ್ತಿ ಮೂಡದಿದ್ದರೆ ಯಾರೂ ಮಿತ್ರರನ್ನು ಹಾರ್ದಿಕವಾಗಿ ನಂಬಲಾರರು.

ಸ್ವದೇಶ ಸಮಾಚಾರ

ಕಾಮನ್ಸಿನಲ್ಲಿ ಅಮೆರಿಯವರ ಉತ್ತರಗಳು

"ಕಾಮನ್ಸ್" ಸಭಾ ಮಂದಿರದಲ್ಲಿ ಭಾರತದ ಸ್ಟೇಟ್ ಸೆಕ್ರೆಟರಿಗಳಾದ ಅಮೆರಿಯವರು ವೈಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಸದ್ಯ ಇಂಗ್ಲಿಷರಿಂದ ತುಂಬಲ್ಪಟ್ಟಿರುವ ಮೂರು ಸ್ಥಾನಗಳಿಗೆ ಹಿಂದೀಯರನ್ನು ನೇಮಿಸಲಾದೀತೇ ಎಂಬ ಪ್ರಶ್ನೆಗೆ "ಇಲ್ಲ" ಎಂದರು. ಹಿಂದಿಯರನ್ನೇ ಮೂರು ಸ್ಥಾನಗಳಿಗೆ ನೇಮಿಸಿ ಸಂಪೂರ್ಣವಾಗಿ ಆ ಕೌನ್ಸಿಲು ಹಿಂದೀಯರದಾದರೆ ಭಾರತೀಯರು ತೃಪ್ತರಾಗಲಾರರೇ ಎಂಬ ಪ್ರಶ್ನೆಗೆ ಉತ್ತರ ಕೊಡಲಿಲ್ಲ.

"ಅಲ್ಲಾಭಕ್ಷರನ್ನು ಅಧಿಕಾರದಿಂದ ತೆಗೆದದ್ದು ಬಿರುದುಗಳನ್ನು ಬಿಟ್ಟು ಕೊಟ್ಟುದಕ್ಕಾಗಿ ಅಲ್ಲ; ಅವರು ವೈಸರಾಯರಿಗೆ ಪತ್ರಬರೆದು, ಕಾಂಗ್ರೆಸಿನೊಡನೆ ಸೇರಿಕೊಳ್ಳುವಂತೆ ನಡೆದುಕೊಂಡುದರಿಂದ" ಎಂದೂ ಅಮೆರಿಯವರು ಹೇಳಿದರು.

ಭಾರತದಿಂದ ದ್ವಿತೀಯ ರಣರಂಗ

ತೆರೆಯುವ ಯೋಜನೆಯಿದೆಯೆಂದು ಬರ್ಮಾವನ್ನು ಪುನಃ ಗೆಲ್ಲುವ ಮಂತ್ರಾಲೋಚನೆ ನಡೆಯುತ್ತಿದೆಯೆಂದೂ, ಜನರಲ್ ಸರ್ ಕ್ಲಾಡ್ ಅಚಿನ್ ಲೆಕ್ಕರ ಮಹತ್ವದ ಉದ್ಯೋಗದ ಕುರಿತು ಬೇಗನೇ ಘೋಷಣೆಯಾಗಲಿದೆಯೆಂದೂ ಡಿಲ್ಲಿಯ ಊಹಾಪೋಹಗಳು. ಇತ್ತೀಚೆಗೆ ವೇವಲರ ಪೂರ್ವ ಗಡಿಯ ನಿರೀಕ್ಷೆ, ಬರ್ಮಾ ಸಂದರ್ಶನ ಅಚಿನ್‌ಲೆಕ್ಕರ ಸಾನ್ನಿಧ್ಯ ಸ್ಟಿಲ್‌ವೆಲ್ಲರ ಆಗಮನಗಳಿಂದಾಗಿ, ಭಾರತದಿಂದ ಎರಡನೇ ರಣರಂಗ ತೆರೆಯುವ ಊಹೆಯಿದೆ.

ಬ್ರಿಟನಿನ ಪ್ರತಿದಿನದ ಯುದ್ಧವೆಚ್ಚ ೧೨೭॥ ಲಕ್ಷ ಪೌಂಡು

ಎಂದು ಕಾಮನ್ಸ್ ಸಭೆಯಲ್ಲಿ ಎಕ್ಸ್‌ಚೆಕ್ಕರ್ ಚಾನ್ಸಲರಾದ ಸರ್ ಕಿಂಗ್ಸ್ ಲೆವುಡರು ಪುನಃ ಯುದ್ಧ ವೆಚ್ಚದ ಸಲುವಾಗಿ ೧೦೦ ಕೋಟಿ ಪೌಂಡಿನ ಬೇಡಿಕೆಯನ್ನು ಮಂಡಿಸುತ್ತಾ ಹೇಳಿದರು. ಈ ಬೇಡಿಕೆ ಮನ್ನಿಸಲ್ಪಟ್ಟರೆ ಒಟ್ಟು ಯುದ್ಧ ವೆಚ್ಚವು ೧೨೦೫ ಕೋಟಿ ಪೌಂಡುಗಳಷ್ಟಾಗುವುದು. ಮೊದಲನೆಯ ಮೂರು ವರ್ಷಗಳ ವೆಚ್ಚಕ್ಕಿಂತ ಈ ವರ್ಷ ೨॥ ಪಾಲಷ್ಟು ವೆಚ್ಚ ಹೆಚ್ಚಿದೆಯೆಂದೂ ತಿಳಿಸಿದರು.

"ಯುದ್ಧ ಮುಗಿದ ಮೇಲೆ ಬ್ರಿಟನು ಅಮೆರಿಕಗಳು ತಮ್ಮ ಅಧೀನದಲ್ಲಿರುವ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಕೊಡುವ ವಿಚಾರವಾಗಿ ಅನೇಕರಿಗೆ ಸಂಶಯವಿದೆ; ಈ ತರದ ಸಂಶಯವಿರುವುದರಿಂದಲೇ ಅಧೀನ ರಾಷ್ಟ್ರಗಳ ಜನರು ನಮ್ಮ ಯುದ್ಧ ಯತ್ನದಲ್ಲಿ ಹಾರ್ದಿಕ ಸಹಕರಿಸುವುದಿಲ್ಲ; ಈ ಜನರ ಸಹಾಯ ಸಹಕಾರವಿಲ್ಲದೆ ಯುದ್ಧವನ್ನು ಗೆಲ್ಲುವುದು ಕಷ್ಟವಾಗುವುದು, ಶಾಂತಿ ಸ್ಥಾಪನೆಯಂತೂ ಅಸಾಧ್ಯವೇ ಆದೀತು" ವಿಲ್ಕಿ ತಮ್ಮ ಪ್ರವಾಸಾನುಭವವಾಗಿ ಈ ತರದ ಸ್ಪಷ್ಟವಾದ ಹೇಳಿಕೆಯಿತ್ತಿದ್ದಾರೆ. ಈ ಹಿತವಚನವನ್ನು ಮಿತ್ರರು ಆಲಿಸುವುದು ಅವಶ್ಯವಾಗಿದೆ. ಲೋಕ ಸ್ವಾತಂತ್ರ್ಯಕ್ಕಾಗಿ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಹೋರಾಡುತ್ತೇವೆಂದು ಬಾಯಿಯಿಂದ ಹೇಳಿಕೊಳ್ಳುತ್ತಾ, ಭಾರತದಂಥಾ ಅಧೀನ ರಾಷ್ಟ್ರಗಳನ್ನು ಇನ್ನೂ ದಾಸ್ಯದಲ್ಲಿ ಕೊಳೆಯಬಿಟ್ಟಿರುವುದು ವಿವೇಕವಲ್ಲ; ವಿಲ್ಕಿಯವರಾದರೂ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಅಮೆರಿಕಗಳ ಬ್ರಿಟನುಗಳ ಪ್ರಭುತ್ವ ಪಕ್ಷದವರ ಮುಂದಿಟ್ಟು ವಾದಿಸುವ ಸಾಹಸ ಮಾಡುವರೇ ನೋಡಬೇಕು.

ಕಾಂಗ್ರೆಸಿನ ಉದ್ದೇಶ ಸರಕಾರ ಅರಿತಿಲ್ಲ

ರಾಜಾಜಿ ಹೇಳಿಕೆ

"ಕಾಂಗ್ರೆಸು, ದೇಶದ ಜನರಿಗೂ, ಸರಕಾರದ ಯಂತ್ರಕ್ಕೂ ಒಂದು ಸಂಬಂಧವೇರ್ಪಡಿಸಲು ಯತ್ನಿಸುತ್ತಿದೆ. ಅದನ್ನು ಸರಕಾರವು ಸರಿಯಾಗಿ ಅರಿತುಕೊಂಡಿಲ್ಲ. ಬ್ರಿಟಿಷರು ತಪ್ಪುಮಾಡಿದರೂ ಭಾರತೀಯರು ತಪ್ಪುಮಾಡಕೂಡದು; ಎಲ್ಲರೂ ಐಕ್ಯಹೊಂದಬೇಕು. ಯುದ್ಧ ಮುಗಿದ ಮೇಲೆ ಭಾರತವನ್ನು ತಮ್ಮ ಕೈಯೊಳಗಿಟ್ಟುಕೊಳ್ಳಬೇಕೆಂದರೂ ಬ್ರಿಟಿಷರಿಗೆ ಅದು ಸಾಗದು. ಭಾರತವು ಯುದ್ಧಾನಂತರ ಸ್ವತಂತ್ರವಾಗುವುದು" ಎಂಬುದಾಗಿ ಕಲ್ಕತ್ತದಲ್ಲಿ ರಾಜಾಜಿ ಭಾಷಣವಿತ್ತರು.

ಭಾರತದ ಬಿಷಪರ ಆಮಂತ್ರಣದಿಂದ ಅವರ ಅತಿಥಿಯಾಗಿ ಬಂದ ರಾಜಾಜಿಯವರು ಇಲ್ಲಿನ ಆರ್ಥರ್ ಮೂರ್ ಮೊದಲಾದ ಯೂರೋಪಿಯನ್ ತಂಡದೊಡನೆಯೂ ಡಾ॥ ಎಸ್. ಪಿ. [illegible] ಭಾರತೀಯ ಮುಖಂಡರೊಡನೆಯೂ ರಾಜಕೀಯ ಸಮಸ್ಯಾ ಪರಿಹಾರದ ಕುರಿತು ವಿಚಾರವಿನಿಮಯ ಮಾಡಿ ಅಲ್ಲಿಂದ ಮರಳಿದರು.

ಸರೋಜಿನಿ ನಾಯಿಡು ಮಗಳ ಬಿಡುಗಡೆ

ಇತ್ತೀಚೆಗೆ ಚಳವಳದ ಸಂಬಂಧ ಬಂಧಿಸಲ್ಪಟ್ಟ ಸರೋಜಿನಿ ನಾಯಿಡು ಮಗಳಾದ ಕುಮಾರಿ ಪದ್ಮಜಾ ನಾಯಿಡು ಬಿಡುಗಡೆ ಹೊಂದಿದ್ದಾರೆ. ಮುನ್ಷಿಯರ ಪುತ್ರಿಯರು ಬಂಧಿತರಾಗಿದ್ದಾರೆ. ಠಾಗೂರರ ಮೊಮ್ಮಗಳೂ ಸೆರೆಮನೆಯಲ್ಲಿದ್ದಾರೆ.

ಹನ್ನೊಂದು ಕತ್ತೆಗಳಿಗಾದ ಶಿಕ್ಷೆ

ವೈಸರಾಯ್ ಎಕ್ಸಿಕುಟಿವ್ ಸದಸ್ಯರಲ್ಲಿ ಭಾರತೀಯರಾಗಿರುವ ೧೧ ಮಂದಿಯ ಹೆಸರ ಚೀಟನ್ನು ಹಚ್ಚಿ ಹೊಸ ಡಿಲ್ಲಿಯಲ್ಲಿ ಶಿವಕುಮಾರರೆಂಬವರು ೧೧ ಕತ್ತೆಗಳನ್ನು ಮೆರವಣಿಗೆ ಮಾಡಿಸಿದ ನಿಮಿತ್ತದಲ್ಲಿ ಶಿವಕುಮಾರರಿಗೆ ೬ ತಿಂಗಳ ಶಿಕ್ಷೆಯಾಗಿದೆ. ಶಿವಕುಮಾರರ ಹಣೆಯ ಮೇಲೆ 'ಮ್ಯಾಕ್ಸ್ ವೆಲ್'ಯೆಂದು ಬರೆದಿತ್ತು! ಹೊಸ ಡಿಲ್ಲಿಯಲ್ಲಿ ೧೦ ಮಂದಿಗಿಂತ ಹೆಚ್ಚಿನ ಜನರು ಮೆರವಣಿಗೆ ಮಾಡಬಾರದೆಂಬ ಹೊರಡಿಸಿದ ಆಜ್ಞೆ ಮೀರಿದ್ದು, ವೈಸರಾಯ್ ಕೌನ್ಸಿಲಿನ ಭಾರತೀಯ ಸದಸ್ಯರನ್ನು ತಮಾಷೆ ಮಾಡಿದ್ದು ಅವರ ಮೇಲೆ ಆರೋಪವಾಗಿದೆ. ಕತ್ತೆಗಳ ಒಡೆಯನು 'ತನ್ನ ಕತ್ತೆಗಳನ್ನು ಯಾಕೆ ತೆಗೆದುಕೊಂಡು ಹೋದರೆಂದು ಗೊತ್ತಿಲ್ಲ. ತಾನು ಅವುಗಳನ್ನು ಬಾಡಿಗೆಗೆ ಕೊಟ್ಟಿರುವೆ'ನೆಂದನು.

ಗೋಪಾಲ ರೆಡ್ಡಿಯವರ ಬಂಧನ

ಮದ್ರಾಸಿನ ಕಾಂಗ್ರೆಸು ಸರಕಾರದ ಮಾಜಿ ಮಂತ್ರಿ ಶ್ರೀ. ಬಿ. ಗೋಪಾಲ ರೆಡ್ಡಿಯವರನ್ನು ಡಿಫೆನ್ಸು ಕಾನೂನಿನಂತೆ ಬಂಧಿಸಿ ಶಿಕ್ಷೆಯಾಗಿರುವದು. ಅವರು ಡಿಸ್ಟ್ರಿಕ್ಟ್ ಬೋರ್ಡು ಪಂಚಾಯತ್ ಬೋರ್ಡುಗಳಿಗೆ, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಠರಾವನ್ನು ಮಂಜೂರು ಮಾಡಿ ನಿರ್ಣಯ ಮಾಡಬೇಕೆಂದು ಪತ್ರ ಕಳುಹಿಸಿದ್ದುದು ಅವರ ಮೇಲಿನ ಆರೋಪ.

"ಆಫೀಸು ನಮಗೆ ಬಿಟ್ಟುಕೊಡಿ"

ಯೆಂದು ಪಾಟ್ನ ಸಬ್ ಡಿವಿಜನಲ್ ಕಚೇರಿ ಒಳಹೊಕ್ಕು ನಾಲ್ವರು ಹೇಳಿ, ನಾವು ರಾಷ್ಟ್ರೀಯ ಸರಕಾರದಿಂದ ಆಡಳಿತ ನಡೆಸಲು ನೇಮಿಸಲ್ಪಟ್ಟವರೆಂದು ತಿಳಿಸಿ ಒತ್ತಾಯಪಡಿಸಲು ಅವರನ್ನು ಬಂಧಿಸಲಾಯಿತು. ಬೀಹಾರಿನಲ್ಲಿ ತಂತಿ ಕಡಿಯುವುದು ಮೊದಲಾದ ಅಶಾಂತತೆ ಇನ್ನೂ ನಿಂತಿಲ್ಲ. ಅಲ್ಲಿ ಅನೇಕ ಸಾಮೂಹಿಕ ದಂಡ ಹಾಕಲಾಗಿವೆ. ಬಂಧನ ಶಿಕ್ಷೆಗಳು ನಡೆಯುತ್ತಿವೆ.

ಚೀನಿಯರ ಒತ್ತಾಯ

ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ವಿಶ್ವ ಭಾರತಿ ಚೀನಾ ಭವನಾಧ್ಯ ಡೈರೆಕ್ಟರ್ ಪ್ರೋ॥ ಟ್ಯಾನ್ ಯೂನ್ ಶಾನರು ಒಂದು ಪ್ರಕಟನೆ ಕೊಡುತ್ತಾ, ಶತ್ರುಗಳ ಸಲುವಾಗಿ, ಅನೇಕ ಕಾರಣಗಳ ಸಲುವಾಗಿ [illegible] ಭಾರತವನ್ನೀಗ ಸ್ವತಂತ್ರವಾಡಬೇಕೆಂದು ಹೇಳಿರುವರು. ಇಂದಿನ ಭಾರತದ ಪರಿಸ್ಥಿತಿಯಿಂದ, ಬ್ರಿಟಿಷರಿಗಾದರೆ, ಭಾರತಕ್ಕಾಗಲಿ ಹಿತವಿರದೆ ಇದು ಆ ಆಕ್ರಮಣಗಾರನಿಗೆ ಒಳಿತೆಂದೂ ಎಚ್ಚರವಿತ್ತಿದ್ದಾರೆ; ಭಾರತವು ಸ್ವತಂತ್ರವಾದಕೂಡಲೇ ಇಲ್ಲಿನ ಒಳ ಜಗಳಗಳು ಮಾಯವಾಗುವವೆಂದಿರುವರು. ಕೇವಲ ಭರವಸೆಯ ಮಾತು ಸಾಲದು; ಕಾರ್ಯತಃ ಭಾರತೀಯರನ್ನು ಸ್ವತಂತ್ರಮಾಡಬೇಕೆಂಬ ಅವರ ವಾದವಿದೆ. ಭಾರತವು ಸ್ವತಂತ್ರವಾದರೆ ಅದು ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗಾಗಿ ಹೋರಾಡುವುದಲ್ಲದೆ, ಜಪಾನಿನೊಡನೆ ಒಪ್ಪಂದ ಮಾಡಲಾರದೆಂದೂ ಅವರು ತಿಳಿಸಿರುವರು.

ಶ್ರೀಮತಿ ಪಟವರ್ಧನರ ಬಂಧನ

ಶ್ರೀ. ಅಚ್ಯುತ ಪಟವರ್ಧನರ ತಾಯಿ ಶ್ರೀಮತಿ ಪಟವರ್ಧನರನ್ನು ಇತರ ನಾಲ್ಕು ಮಂದಿ ಮಹಿಳೆಯರನ್ನು ಆಜ್ಞೆ ಉಲ್ಲಂಘಿಸಿ ನಡೆದರೆಂಬ ಆಪಾದನೆಯ ಪ್ರಕಾರ ಪೂನದಲ್ಲಿ ಬಂಧಿಸಲಾಗಿದೆ.

ಸರಕಾರೇತರ ಕಮಿಟಿಗಳು ವಿಚಾರಿಸಕೂಡದು

ಬೊಂಬಾಯಿ ಆಧಿಪತ್ಯದ ಕೆಲವು ವಕೀಲರ ಸಂಘಗಳು, ಈಗಿನ ಗಲಭೆಯ ಸಂಬಂಧದ ಅಪರಾಧಗಳ ಕುರಿತು ವ್ಯವಹರಿಸುವಾಗ ಕೆಲವು ಮಂದಿ ಸರಕಾರಿ ಅಧಿಕಾರಿಗಳು ನಡೆಸಿರುವರೆಂಬ ಅತಿರೇಕ ಕಾರ್ಯಗಳ ವಿಷಯವಾಗಿ ರುಜುವಾತು ಸಂಗ್ರಹಿಸಲು ಸಮಿತಿಗಳನ್ನು ರಚಿಸಿವೆ ಎಂದು ಅಲ್ಲಿನ ಸರಕಾರದ ತಿಳುವಳಿಕೆಗೆ ಬಂದಿರುವುದರಿಂದ ಆ ಸಮಿತಿಗಳಾಗಲೀ ಇತರ ಸರಕಾರೇತರ ಸಂಘಗಳಾಗಲೀ ಅಂಥ ವಿಚಾರಣೆ ನಡೆಸಬಾರದೆಂದು ಪ್ರಭುತ್ವದ ಆಜ್ಞೆಯಾಗಿದೆ. ಅಧಿಕಾರಿಗಳ ಅತಿರೇಕ ಕಾರ್ಯಗಳು ಇರುವಲ್ಲಿ ಅದನ್ನು ವಿಚಾರಿಸಲು ಸರಕಾರದ ಇಲಾಖಾ ಅಧಿಕಾರಿಗಳೇ ಇರುವರೆಂದೂ ಹೇಳಲಾಗಿದೆ.

ಮಂಗಳೂರು ನವರಾತ್ರಿ ಮಹೋತ್ಸವ

ಫೆಡರಲ್ ಹಿಂದೂ ಸ್ಕೂಲ್ಸ್ ಮತ್ತು ವಿವೇಕಾನಂದ ಸಭೆಗಳ ಆಶ್ರಯದಲ್ಲಿ ನವರಾತ್ರಿ ಮಹೋತ್ಸವವು ಕಳೆದ ತಾ. ೧೧ರಲ್ಲಿ ಸ್ಥಳೀಯ ಕೆನರಾ ಹೈಸ್ಕೂಲಲ್ಲಿ ಆರಂಭವಾಗಿ, ಶ್ರೀಗಳಾದ ಪ್ರಹ್ಲಾದ ಹೆಗ್ಗಡೆ, ಎಂ. ಎಸ್. ಏಕಂಬರರಾವ್, ಕೆ. ಕೃಷ್ಣರಾವ್, ಶ್ರೀಮತಿ ಆನಂದೀ ಬಾಯಿ, ಶ್ರೀ ನಂಜುಂಡ ಸ್ವಾಮಿ, ಶ್ರೀ. ಎಂ. ವಿ. ಶಾಸ್ತ್ರಿ, ಟಿ. ಕೆ. ರಾಮಚಂದ್ರ ಅಯ್ಯರ್, ಶ್ರೀ. ಎಂ. ಕೃಷ್ಣಭಟ್ ಶ್ರೀ. ಎಸ್. ಮುಕುಂದರಾವ್ ಇವರಿಂದ ಭಾಷಣಗಳೂ, ಸಂಗೀತ, ಕೀರ್ತನೆ, ನಾಟಕಾದಿ ವಿವಿಧ ವಿನೋದಗಳೂ ನಡೆದುವು.

ಕುಂದಾಪುರ ಉಪ್ಪಿನ ಕುದ್ರು—ಅನ್ನದಾನ

ಉಪ್ಪಿನ ಕುದ್ರು ಗ್ರಾಮದಲ್ಲಿ ತಾ. ೨೭-೯-೪೨ ರಿಂದ ತಾ. ೯-೧೦-೪೨ರ ವರೆಗೆ ಮತ್ತು ತಾ. ೧೦-೯-೪೨ಕ್ಕೆ ಕೂಡಾ ೧೪ ದಿವಸಗಳು ಬಡಬಗ್ಗರಿಗೆ ಸಾರ್ವಜನಿಕವಾಗಿ ಗಂಜಿದಾನ ಮಾಡಲಾಯಿತು. ದಿವಸವೂ ಸುಮಾರು ೩೦೦ ಜನರು ಸೇರಿದ್ದು ದಿನ ೧ಕ್ಕೆ ರೂ. ೧೫ ಅಂದಾಜು ಖರ್ಚಾದೀತೆಂದು ತಿಳಿದಿದೆ.

ಕರ್ನಾಟಕದಲ್ಲಿ ಒಟ್ಟು ಬಂಧಿತರಾದವರು

ಆಗೋಸ್ತು ೭ರಿಂದು ಇದುವರೆಗೆ ಕರ್ನಾಟಕದಲ್ಲಿ ಒಟ್ಟು ಬಂಧಿತರಾದವರು ೩೬೦೦ ಮಂದಿಯೆಂದೂ ಮೈಸೂರಲ್ಲಿ ೧೮೪೮ ಮಂದಿಯೆಂದೂ ತಿಳಿದುಬರುತ್ತದೆ.

ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಗಂಟೆ	ತಲ್ಪುವ ಗಂಟೆ
ಮಲಬಾರು ಎಕ್ಸ್‌ಪ್ರೆಸ್ (ಮೈಲ್)	8.5 ಬೆಳಿಗ್ಗೆ	6.5 ಸಾಯಂ.
ಶಟ್ಲ್ (ಪೆಸೆಂಜರ್)	ಸಾಯಂ. 5.25	9.55 ಬೆ.

ಮಲಬಾರ್ ಎಕ್ಸ್‌ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ರಾಷ್ಟ್ರೀಯ ಮುಖಂಡರ ಬಂಧನದ ನಿಷೇಧ

ಐದು ಮಂದಿ ಸದಸ್ಯರ ರಾಜಿನಾಮೆ.

ಜಿಲ್ಲಾ ಬೋರ್ಡ್ ಸಭೆ

ತಾ. ೧೭ರಂದು ಪ್ರಾತಃಕಾಲ ೧೦ ಗಂಟೆಗೆ ದ. ಕ. ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಡಾ. ಕೆ. ವಿಠ್ಠಲ ಶೆಟ್ಟರ ಅಧ್ಯಕ್ಷತೆಯಲ್ಲಿ ಬೋರ್ಡ್ ಸಭೆಯು ಜರಗಿತು. 'ಮಹಾತ್ಮರೇ ಮೊದಲಾದ ರಾಷ್ಟ್ರದ ಮುಂದಾಳುಗಳಿಗೆ ವೈಸರಾಯರೊಡನೆ ಸಂಧಿ ಮಾಡಿಕೊಳ್ಳಲೂ ಅವಕಾಶ ಕೊಡದೆ, ಅವರನ್ನು ಕೈದುಮಾಡಿರುದನ್ನು ಈ ಸಭೆ ನಿಷೇಧಿಸುತ್ತದೆ' ಎಂಬೀ ಠರಾವು ಶ್ರೀ ಸುಬ್ಬಣ್ಣಶೆಟ್ರಿಂದ ಸೂಚಿತವಾಗಿ ಶ್ರೀ. ಸರ್ವೋತ್ತಮ ಪೈಗಳಿಂದ ಅನುಮೋದಿತವಾಗಿ ಕೇವಲ ಎರಡು ವಿರೋಧ ಓಟುಗಳಿಂದ ಮಂಜೂರಾಯಿತು. ಠರಾವನ್ನು ವಿರೋಧಿಸಿದ ಯೂರೋಪಿಯನ್ ಸದಸ್ಯರಾದ ಮಿ. ಜೆಫ್ರಿಯವರು ಬೋರ್ಡಿನ ಆಡಳಿತೆಯಲ್ಲಿ ರಾಜಕೀಯ ವಿಷಯಗಳನ್ನು ಬೋರ್ಡ್ ತರುವುದು ಸಮಂಜಸವಲ್ಲವೆಂದರು. ಶ್ರೀ. ನಾಗಪ್ಪಯ್ಯನವರೂ ವಿರೋಧಿಸಿದರು. ಠರಾವಿಗೆ ತಟಸ್ಥರಾಗಿದ್ದವರು, ಶ್ರೀಗಳಾದ ಮಹಾಲಿಂಗ ಶೆಟ್ಟಿ, ಡಾ। ಅನಂತಾಯ, ಎಂ. ಆರ್. ಪೂಂಜ, ರಾಮಣ್ಣ ರೈ, ಕುಮಾರಯ್ಯ ಜೈನಿ ಮತ್ತು ಪ್ರೆಸಿಡೆಂಟರು (ಕಾಂಗ್ರೆಸ್ ಪಕ್ಷದವರು) ಡಾ। ಪಿ. ಜಿ. ಆಚಾರ್, ಮೀರ್ ಹೈದರ್ ಸಾಹೇಬ್ (ಸ್ವತಂತ್ರ ಪಕ್ಷದವರು) ಇವರು. ಶ್ರೀಗಳಾದ ಎಂ. ಅಮೃತ ಕೃಷ್ಣರಾವ್, ಕೆ. ಸುಂದರ, ರಮಾನಾಥ ಮಾರ್ಲ, ಎಫ್. ಪಿ. ಎಸ್. ಅಲ್ಬುಕರ್ಕ್ (ಕಾಂಗ್ರೆಸ್ ಪಕ್ಷದವರು) ಖಾನ್‌ಬಹದ್ದೂರ್ ಮಹಮ್ಮದ್ ಶಮ್ನಾಡ್ ಮತ್ತು ಕುಂಞಿ ಕಳಂದರ್ ಸಾಹೇಬ್ ಬಹದ್ದೂರ್ (ಸ್ವತಂತ್ರ ಪಕ್ಷದವರು) ಇವರು ತಡವಾಗಿ ಬಂದವರು.

ಸಭಾಂತ್ಯದಲ್ಲಿ, ಸಭೆಗೆ ತಡವಾಗಿ ಬಂದ, ಖಾನ್‌ಬಹದ್ದೂರ್ ಮಹಮ್ಮದ್ ಶಮ್ನಾಡರು, ಎಜೆಂಡದಲ್ಲಿ ಕೊನೆಯದಾಗಿರಿಸಲಾದ ರಾಷ್ಟ್ರೀಯ ಮುಖಂಡರ ಬಂಧನದ ನಿಷೇಧ ಠರಾವನ್ನು ಮೊದಲಾಗಿ ಚರ್ಚೆಗೆ ತೆಗೆದದ್ದು ಸರಿಯಲ್ಲವೆಂದು ವಾದಿಸುತ್ತಾ ನಿಷೇಧ ಠರಾವನ್ನು ವಿರೋಧಿಸಿ, ಗಾಂಧಿಯವರೇ ಇಂದಿನ ಅನಾಹುತ, ಸಂಚಾರವಾರ್ಗ ನಿರ್ಬಂಧ, ದುರಂತ ಮೊದಲಾದವುಗಳಿಗೆ ಕಾರಣರೆಂದು ಭಾಷಣಕೊಡುತ್ತಿರುವಾಗ, ಹಲವು ಮಂದಿ ಸದಸ್ಯರು 'ಪ್ಲೋಂಟ್ ಓಫ್ ಆರ್ಡರ್' ಮತ್ತು 'ಹಿಂತೆಗೆಯಿರಿ' ಎಂದು ಕೂಗೆಬ್ಬಿಸಿದರು. ಖಾನ್‌ಬಹದ್ದೂರರು, ಪ್ರತಿಯೊಬ್ಬ ವ್ಯಕ್ತಿಗೂ ಸ್ವಮತ ಪ್ರಕಟಣೆಗೆ ಸ್ವಾತಂತ್ರ್ಯವಿರಬೇಕೆಂದು ನುಡಿಯುತ್ತಿರುವಾಗ, ಅಧ್ಯಕ್ಷರು ಎದ್ದು ನಿಂತು ಖಾನ್‌ಬಹದ್ದೂರರ ಮೇಲಿನ ವ್ಯಕ್ತಿಗತ ಆದರದಿಂದ ಮಾತ್ರ ತಾನು ಅವರನ್ನು ಮಾತನಾಡಲು ಬಿಟ್ಟೆನೆಂದು ಹೇಳಿ, ಸದಸ್ಯರು ಆಪೇಕ್ಷಿಸಿಟ್ಟಲ್ಲಿ ಎಜೆಂಡದಲ್ಲಿರುವ ಯಾವುದೇ ಠರಾವನ್ನು ಯಾವಾಗಲೂ ಚರ್ಚೆಗಿಡಬಹುದೆಂದು ವಿವರಿಸಿ ಅವರನ್ನು ಸಮಾಧಾನ ಪಡಿಸಿದರು.

ಎಲಿಮೆಂಟರಿ ಶಾಲಾ ಉಪಾಧ್ಯಾಯರ ಹೊರತು, ಇತರ ಬೋರ್ಡು ಸಿಬಂದಿಗೆ ಗವರ್ನ್‌ಮೆಂಟ್ ಸ್ಕೇಲಿನ ರೀತಿಯಲ್ಲಿ ತುಟ್ಟಿ ಭತ್ತೆ ಮಂಜೂರಾಯಿತು. ಎಲಿಮೆಂಟರಿ ವಿದ್ಯಾಂಗದ 'ಬಜೆಟ್' ಮಂಜೂರಾಯಿತು. ಉಪಾಧ್ಯಾಯರುಗಳಿಗೆ 'ಇಂಕ್ರಿಮೆಂಟ್' ದೊರಕಿತು; ಸಂಬಳದಲ್ಲಿ ಕಡಿತವಿಲ್ಲ.

ಬೋರ್ಡಿನ ತಮ್ಮ ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀಗಳಾದ ಎಂ. ಶಿವರಾವ್, ಬಿ. ವೈಕುಂಠ ಬಾಳಿಗ, (ಡಿ. ಬೋ. ಕಾಂಗ್ರೆಸ್ ಪಾರ್ಟಿ ಲೀಡರ್) ಗುಡ್ಡಪ್ಪ ರೈ, ಪಿ. ಉಪೇಂದ್ರ ನಾಯಕ್ ಹಾಗೂ ಧರ್ಮ ಸಾಮ್ರಾಜ್ಯಯ್ಯ ಈ ಐವರು. ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಪ್ಪಣೆಯಂತೆ ಈಗಾಗಲೇ ರಾಜಿನಾಮೆ ಕೊಟ್ಟಿರುವರು.

ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದವರು, ಅಧ್ಯಕ್ಷ ಸ್ಥಾನಕ್ಕೆ ರಾಜಿಕೊಡಬಾರದಾಗಿ ತೀರ್ಮಾನಿಸಿದ ಕಾರಣ ಹಿಂದಿನ ಸಭೆಯಲ್ಲಿ ಸೂಚಿಸಿದಂತೆ ತಾವು ಈಗ ರಾಜಿ ಕೊಡಲಿಲ್ಲವಾಗಿ ಅಧ್ಯಕ್ಷರು ಪತ್ರಿಕಾ ಪ್ರತಿನಿಧಿಗಳಿಗೆ ಒಂದು ಹೇಳಿಕೆಯಿತ್ತರು. ಡಿಸ್ಟ್ರಿಕ್ಟ್ ಬೋರ್ಡ್ ಕಾಂಗ್ರೆಸ್ ಪಕ್ಷದವರು, ಮೊದಲು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಪ್ಪಣೆ ಮೇರೆಗೆ ಬೋರ್ಡಿಗೆ ರಾಜಿನಾಮೆ ಕೊಡುವದಾಗಿ ನಿಶ್ಚಯಮಾಡಿದ್ದು, ಈಗ ಆ ಪಕ್ಷದ ಪ್ರಮುಖಸದಸ್ಯರು ಕೆಲವರು ರಾಜಿನಾಮೆ ಕೊಟ್ಟಿದ್ದರಿಂದ ಇನ್ನುಳಿದವರು ರಾಜಿನಾಮೆ ಕೊಡುವುದು ಅವಶ್ಯವಿಲ್ಲವೆಂದು ಮತ್ತೆ ಸೇರಿದ ಪಕ್ಷದ ಸಭೆಯಲ್ಲಿ ನಿರ್ಣಯವಾಯಿತೆಂದು ತಿಳಿದು ಬರುತ್ತದೆ.

ರೂರಲ್ ಡೆವಲಪ್‌ಮೆಂಟ್ ಕಮಿಟಿಯ ಶ್ರೀ ಹೊಳ್ಳರ ಸದಸ್ಯಸ್ಥಾನಕ್ಕೆ ಶ್ರೀ. ರಾಮಚಂದ್ರನವರನ್ನು ಆರಿಸಲಾಯಿತು. ಬೋರ್ಡ್ ಸೆಕೆಂಡರಿ ಶಾಲೆಗಳಿಗೆ ಹೋಗುವ ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಒದಗಿಸುವ ಖರ್ಚಿನ ಮೂರನೇ ಎರಡಂಶವಾದ ರೂ. ೮೦೦ರನ್ನು ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ಬೋರ್ಡಿನಿಂದ ಸೇಂಕ್ಷನ್ ಆಯಿತು.

"ಅಧಿಕಾಹಾರ ಬೆಳೆಸಿರಿ"

ಎಂಬೀ ಕುರಿತು ಪ್ರಚಾರ ಭಾಷಣವೊಂದು ತಾ. ೨೦ರಂದು ಮಂಗಳೂರು ಸೆಂಟ್ರಲ್ ಬೇಂಕಿನಲ್ಲಿ ಶ್ರೀ. ಎಂ. ಎಸ್. ಶ್ರೀಪತಿರ ಅಧ್ಯಕ್ಷತೆಯಿಂದ ನೆರೆದ ಸಭೆಯಲ್ಲಿ ಜರಗಿತು. ಆ ದಿನದ ಸಭೆಯಲ್ಲಿ ಶ್ರೀಗಳಾದ ಯು. ವಿಟ್ಠಲರಾವ್ (ಜಿಲ್ಲಾ ಕೃಷಿ ಇಲಾಖೆ ಆಫೀಸರು) ಯು. ಸತ್ಯನಾರಾಯಣ (ಜಿಲ್ಲಾ ನೇಶನಲ್ ವಾರ್‌ಫ್ರಂಟಿನ ಆರ್ಗನೈಸರರು) ಬಿ. ಜೋಗಪ್ಪ (ಸಬ್ ಡಿವಿಜನಲ್ ಮೆಜಿಸ್ಟ್ರೇಟರು) ಇವರು ಭಾಷಣಮಾಡಿದರು.

ಚಿಲ್ಲರೆ ಸಿಗುವುದಿಲ್ಲ?

ಮಂಗಳೂರು ನೆಗರದಲ್ಲಿ ಅಂಗಡಿಗಳಲ್ಲಿ ರೂಪಾಯಿ ನಾಣ್ಯ ನೋಟುಗಳಿಗೆ ಚಿಲ್ಲರೆ ಸಿಗುವುದಿಲ್ಲವಾಗಿ ತೊಂದರೆಯುಂಟಾಗಿರುವ ದೂರು ಕೇಳಿಬರುತ್ತದೆ.

ಚಿಮಿಣಿ ಎಣ್ಣೆ ಸಿಗುವುದಿಲ್ಲ

ಲೈಸನ್ಸು ಸಿಗುವರೆ ತಡವಾದುದರಿಂದ, ಮಂಗಳೂರು ಪೇಟೆಯಲ್ಲಿ ಚಿಮಿಣಿಯೆಣ್ಣೆ ಸಿಗುವುದು ಬಹಳ ಕಷ್ಟವಾಗಿದೆ. ಪುತ್ತೂರು ಉಡುಪಿ ಮೊದಲಾದ ತಾಲೂಕು ಕೇಂದ್ರಗಳಿಂದಲೂ ಈ ದೂರು ಬಂದಿರುವದು.

ಗೀತಾಸ್ಪರ್ಧೆ

ಮಂಗಳೂರು ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡಿನ ಆಶ್ರಯದಲ್ಲಿ ಗೀತೆಯ II, III IV ಮತ್ತು V ಅಧ್ಯಾಯಗಳಲ್ಲಿ ೧೯೪೩ನೇ ಜನವರಿ ತಿಂಗಳಲ್ಲಿ ಗೀತಾಸ್ಪರ್ಧೆ ನಡೆಯುವುದು. ದಿನವನ್ನು ಮುಂದೆ ಪ್ರಕಟಿಸಲಾಗುವದು. ಈ ಸ್ಪರ್ಧೆಯಲ್ಲಿ ಎಲ್ಲಾ ಹೈಸ್ಕೂಲ್ ಕಾಲೇಜುಗಳ ಎಲ್ಲಾ ಜಾತೀಯ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಉಮೇದ್ವಾರರಾಗಬಹುದು. ಹೈಸ್ಕೂಲ್ ಕ್ಲಾಸಿನ ಹುಡುಗ ಹುಡುಗಿಯರಿಗೆ ಮತ್ತು ಕಾಲೇಜು ಕ್ಲಾಸಿನ ಹುಡುಗ ಹುಡುಗಿಯರಿಗೆ ಹೀಗೆ ಪ್ರತ್ಯೇಕ ನಾಲ್ಕು ಇನಾಮುಗಳಿವೆ. ಉಮೇದ್ವಾರರಾಗಲಿಚ್ಛಿಸುವವರು ಅವರವರ ಶಾಲಾ ಮುಖ್ಯೋಪಾಧ್ಯಾಯ ಮುಖ್ಯೋಪಾಧ್ಯಾಯಿನಿಯರ ಮುಖಾಂತರ ಸೆಕ್ರೆಟರಿ ದಿ ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡ್ ಉಡ್‌ಹೌಸ್, ಕಾರ್ನಾಡ್ ಸದಾಶಿವ ರಾವ್ ರೋಡ್, ಕೊಡಿಯಾಲಬೈಲ್ ಇಲ್ಲಿಗೆ ತಾ. ೧೫ನೇ ನವಂಬರ ೧೯೪೨ರ ಒಳಗೆ ಹೆಸರು ಕಳುಹಿಸಬೇಕು. ರಜಾದಿನಗಳಲ್ಲಿ ಮೇಲಿನ ಗೀತೆಯ ಅಧ್ಯಾಯಗಳ ಕುರಿತು ನುರಿತವರಿಂದ ಭಾಷಣಗಳೇರ್ಪಡಿಸಲಾಗುವದು.

ಸೈ. ಜಾನ್ಸ್ ಆಂಬುಲೆನ್ಸ್ ಎಸೋಸಿಯೇಶನ್

ತಾ. ೧೫-೧೦-೪೨ರಿಂದ ೮ ದಿನಗಳ ವರೆಗೆ ಪ್ರತಿದಿನ ಸಾಯಂ. ೫-೧೫ರಿಂದ ೭ರ ವರೆಗೆ ಪ್ರಥಮ ಚಿಕಿತ್ಸೆಯ ಕುರಿತು ಕ್ಲಾಸುಗಳು ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನಲ್ಲಿ ನಡೆಸಲ್ಪಡುವುವು. ಅನಂತರ ಒಂದು ಪರೀಕ್ಷೆಯು ನಡೆಸಲ್ಪಡುವುದು ಮತ್ತು ಪಾಸಾದವರಿಗೆ ಯೋಗ್ಯತಾಪತ್ರಗಳು ಕೊಡಲಾಗುವುವು.

ಕಾಸರಗೋಡು

ಬಂಧನ

ಶ್ರೀಗಳಾದ ಗಣೇಶ, ಸಿ. ರಾಘವನ್ ಕುರುಪ್ ಮತ್ತು ಪಿ. ವಿ. ವಿಜಯ ನಂಬಿಯಾರ್ ಇವರು ಸಬ್ ರಜಿಸ್ಟ್ರಾರರ ಆಫೀಸಿನ ಮುಂದೆ ಪಿಕೆಟ್ ಮಾಡಿದ ಬಗ್ಗೆ ತಾ. ೧೪ರಂದು ಬಂಧಿಸಲ್ಪಟ್ಟರು. ಈ ಮೂವರಲ್ಲಿ ಶ್ರೀ. ಕೆ. ಗಣೇಶ ಇವರನ್ನು ೩ ದಿನಗಳ ವರೆಗೆ ರಿಮಾಂಡಿನಲ್ಲಿಟ್ಟು ಉಳಿದ ಮೂವರನ್ನು ತಾ ೧೫ರಂದು ಬಿಡುಗಡೆ ಮಾಡಿರುವರು.

ಬಿಡುಗಡೆಯಾಗಿ ಬಂದರು

ಕಾಸರಗೋಡಲ್ಲಿ ಪಿಕೆಟ್ ಮಾಡಿ ೬ ವಾರಗಳ ಶಿಕ್ಷೆಗೆ ಗುರಿಯಾದ ಶ್ರೀ ಸಿ. ಕುಂಞಾರಾಮನ್ ಪುದುವಾಳ್, ಟಿ. ಕೆ. ಗೋವಿಂದನ್ ಮತ್ತು ಸಿ. ನಾರಾಯಣ ಕುರುಪ್ ಇವರು ತಮ್ಮ ಶಿಕ್ಷೆ ಅವಧಿ ಮುಗಿಸಿ ಮಂಗಳೂರು ಸಬ್ ಜೈಲಿಂದ ಬಿಡುಗಡೆಯಾಗಿ ಬಂದಿರುವರು.

ಶ್ರೀ. ರಾಮಮೋಹನರಾವ್ (ಶ್ರೀ. ಎಂ. ಉಮೇಶರಾಯರ ಪುತ್ರ) ಮತ್ತು ಸಿ. ರಾಘವ ಕುರುಪ್ ಇವರು ತಾಲೂಕು ಆಫೀಸಿನೆದುರು ಕರಪತ್ರ ಹಂಚಿದ ಬಗ್ಗೆ ತಾ. ೧೯ರಂದು ಬಂಧಿಸಲ್ಪಟ್ಟು ತಾ. ೧೭ರಂದು ಬಿಡುಗಡೆ ಮಾಡಲ್ಪಟ್ಟರು.

ಪುನಃ ಬಂಧನ

ಕಳೆದ ತಿಂಗಳು ಪಿಕೆಟಿಂಗ್ ಮಾಡಿ ಒಂದು ತಿಂಗಳ ಶಿಕ್ಷೆ ಅನುಭವಿಸಿ ಬಿಡುಗಡೆ ಹೊಂದಿದ, ಕಾಸರಗೋಡು ಸತ್ಯಾಗ್ರಹ ಸಮಿತಿಯ ೧೧ನೇ ಸರ್ವಾಧಿಕಾರಿ ಶ್ರೀ. ಎಂ. ಕೆ. ರಾಮನರು ಅವರ ಮನೆಯಲ್ಲಿ ತಾ. ೧೭ರಂದು ಬಂಧಿಸಲ್ಪಟ್ಟು ರಿಮಾಂಡಿನಲ್ಲಿಡಲ್ಪಟ್ಟಿರುವರು. ಪೋಲೀಸರು ಅವರ ಮನೆ ಶೋಧನೆ ಮಾಡಿ ಕೆಲವು ಕರಪತ್ರಗಳನ್ನು ಒಯ್ದಿರುವರು.

ಶ್ರೀ. ಉಂಣಿ ಕೃಷ್ಣ ತಿರುಮುಂಬು ಇವರ ಮಗ ಶ್ರೀ. ಟಿ. ಹರೀಶ್ವರ ತಿರುಮುಂಬು ಮತ್ತು ಸಿ. ಸಿ. ರಾಘವ ಕುರುಪ್ ಇವರು ತಾಲೂಕು ಆಫೀಸಿನ ಮುಂದೆ ಪಿಕೆಟ್ ಮಾಡಿದ ಬಗ್ಗೆ ತಾ. ೧೯ರಲ್ಲಿ ಬಂಧಿಸಲ್ಪಟ್ಟಿದ್ದಾರೆ. ಕರಪತ್ರಗಳನ್ನು ಹಂಚಿದ ಶ್ರೀ. ಚಂದ್ರನ್ ಇವರನ್ನು ಪೋಲೀಸ್ಸ್ಟೇಶನಿಗೆ ಕರದೊಯ್ದು ಬಿಟ್ಟಿರುವರು.

ಹೊಸದುರ್ಗ

ಇತ್ತೀಚೆಗೆ ಬೊಂಬಯಿಯಿಂದ ಬಂದ ಶ್ರೀ ಅಂಣಪ್ಪ ಕಾಮತರನ್ನು ಕಾಸರಗೋಡು ಸರ್ಕಲ್ ಇನ್ಸ್‌ಪೆಕ್ಟರರು ಅವರ ಮನೆ ಶೋಧಿಸಿ ಅವರನ್ನು ತಾ. ೧೫ರಂದು ಬಂಧಿಸಿದರು. ಒಂದು ಸೈಕ್ಲೋಸ್ಟೈಲ್ ಮಶಿನ್ ಮತ್ತು ಕೆಲವು ಕರಪತ್ರಗಳನ್ನು ಜಪ್ತಿ ಮಾಡಿ ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ಹಾಜರು ಮಾಡಲಾಗಿದೆ. ತಾ. ೨೧ರ ವರೆಗೆ ಅವರನ್ನು ರಿಮಾಂಡಿನಲ್ಲಿರಿಸಲಾಗಿದೆ.

ಚರ್ವತ್ತೂರು

ಶ್ರೀಗಳಾದ ನಾರಾಯಣ ಅಡಿಯೋಡಿ, ಕುಂಞರಾಮನ್ ಅಡಿಯೋಡಿ ಮತ್ತು ಅಂಬು (ಅಕ್ಕಸಾಲಿಗ) ಇವರು ತಾ. ೧೭ರಂದು ಕಾಸರಗೋಡು ಸರ್ಕಲ್ ಇನ್‌ಸ್ಪೆಕ್ಟರಿಂದ ಬಂಧಿಸಲ್ಪಟ್ಟು ಕಾಞಂಗಾಡಿನಲ್ಲಿ ರಿಮಾಂಡಿನಲ್ಲಿರಿಸಲ್ಪಟ್ಟಿದ್ದಾರೆ. ಈ ಮೂವರನ್ನು ಚಂದೇರೆ ಹತ್ತಿರ ತಂತಿ ಕಡಿದ ಸಂಶಯದ ಮೇಲೆ ಬಂಧಿಸಲಾಗಿದೆಯೆಂದು ತಿಳಿದು ಬರುತ್ತದೆ.

ಪಳ್ಳಿಕರೆ—ತುಟ್ಟಿ ಭತ್ತೆ

ಈ ಸೆಂಟರಿನ ಉಪಾಧ್ಯಾಯ ಸಂಘದ ಸಭೆಯು ಬೇಕಲ ಬಿ. ಇ. ಎಂ. ಶಾಲೆಯಲ್ಲಿ ಜರಗಿ ಈಗಿನ ಯುದ್ಧದಿಂದ ಸರಕು ಸಾಮಾನುಗಳಿಗೆ ವಿಪರೀತ ಬೆಲೆಯೇರಿ ಎಲಿಮೆಂಟರೀ ಶಾಲಾ ಉಪಾಧ್ಯಾಯರಿಗೆ ದೊರೆಯುವ ಅಲ್ಪ ತಲಬಿನಲ್ಲಿ ಅವರ ಬಡ ಜೀವನವನ್ನೂ ನಡೆಸಲ್ಕು ಸಾಧ್ಯವಾಗದ್ದರಿಂದ ಎಲ್ಲಾ ನೌಕರರಿಗೆ ಕೊಡುವಂತೆ ಎಲಿಮೆಂಟರೀ ಶಾಲಾ ಉಪಾಧ್ಯಾಯರಿಗೂ ತುಟ್ಟಿ ಭತ್ತೆಯನ್ನು ಕೊಡಲು ವಿದ್ಯಾ ಇಲಾಖೆಯ ಮೇಲಧಿಕಾರಿಗಳೊಡನೆ ಕೇಳಿಕೊಳ್ಳುವಂತೆ ಠರಾವು ಮಾಡಲ್ಪಟ್ಟಿತು.

ಕುರುಡ ಪದವು

ತಾ. ೧೫ರಂದು ಇಲ್ಲಿನ ಎೈಡೆಡ್ ಶಾಲೆಯಲ್ಲಿ ದಸರಾ ಮಹೋತ್ಸವವೂ, ಹೆತ್ತವರ ಕೂಟದ ಸಭೆಯೂ, ಶ್ರೀ. ಬಿ. ತಿಮ್ಮಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಮಂಗಳಪಾಡಿ

ಇಲ್ಲಿನ ಬೋ. ಹಾ. ಎ. ಶಾಲೆಯಲ್ಲಿ ಶಾರದಾ ಪೂಜೆ ತಾ. ೧೮ರಲ್ಲಿ ಜರಗಿಸಲ್ಪಟ್ಟಿತ್ತು. ಬೋರ್ಡಿನವರು ನವೀನವಾಗಿ ಕಟ್ಟಿಸಿದ ಭವ್ಯ ಕಟ್ಟೋಣದ ಪ್ರವೇಶೋತ್ಸವವು ಕೂಡಾ ಇದೇ ದಿನ ಬಹು ವಿಜೃಂಭಣೆಯಿಂದ ಆಚರಿಸಲಾಯಿತು.

ಕಾರ್ಕಳ

ಶಿಕ್ಷೆ

ಕಾರ್ಕಳದಲ್ಲಿ ತಾ. ೯ರಂದು ಮೆರವಣಿಗೆ ಮಾಡಿ ಲಾಠಿ ಪೆಟ್ಟು ತಿಂದು ಕಾಂಗ್ರೆಸ್ ಧ್ವಜದಡಿಯಲ್ಲಿ ಬಿದ್ದು ಬಂಧಿತರಾದ ಶ್ರೀ. ವೆಂಕಟೇಶ ಪ್ರಭು ಮೊದಲಾದ ಹನ್ನೊಂದು ಜನರ ವಿಚಾರಣೆಯಾಗಿ, ಅವರಿಗೆ ಶಿಕ್ಷೆ ವಿಧಿಸಿ ಬಳ್ಳಾರಿಯ ಆಲಿಪುರಂ ಜೈಲಿಗೆ ಸಾಗಿಸಲಾಗಿದೆ

ಮೂಡಬಿದ್ರೆ ರಾಜಕೀಯ ಕೈದಿಗಳು

ಮಂಗಳೂರು ಉಡುಪಿ ಟ್ರಂಕ್ ರೋಡಿನ ಮೂಡುಬಿದ್ರೆಯ ಮೋರಿಯೊಂದನ್ನು ಹಾನಿಪಡಿಸಿದರೆಂಬ ಆರೋಪದ ಮೇಲೆ ಶಿಕ್ಷೆ ವಿಧಿಸಲ್ಪಟ್ಟ ಮೂಡುಬಿದ್ರೆಯ ಶ್ರೀಗಳಾದ ಅಚ್ಯುತ ಶೆಣೈ, ಶೀನ ಕೊಟ್ಯಾರಿ, ಜನಾರ್ಧನ ಶೆಣೈಯವರನ್ನು ಆಲಿಪುರ ಜೈಲಿಗೆ ಒಯ್ಯಲಾಗಿದೆ.

ಪುತ್ತೂರು

ಅನ್ನದಾನ

ಕಳೆದ ತಾ. ೨ರಲ್ಲಿ ವಿಟ್ಲ ಬೋ. ಹ್ಯ. ಎ. ಶಾಲೆಯಲ್ಲಿ ಮಹಾತ್ಮ ಗಾಂಧಿಯವರ ಜನ್ಮ ದಿನ ಆಚರಣೆಯ ಪ್ರಯುಕ್ತ ಸಾಧಾರಣ ೪೦೦ ಮಂದಿ ಹರಿಜನರಿಗೆ ಮಂದಿ ಹರಿಜನರಿಗೆ ಮೃಷ್ಟಾನ್ನ ಭೋಜನವನ್ನು ಈ ಊರ ಮಹನೀಯರು ಏರ್ಪಡಿಸಿದರು.

ಸುಳ್ಯ

ಪ್ರದರ್ಶನ

ಸುಳ್ಯ ಗ್ರಾಮಾಭಿವೃದ್ಧಿ ಕಮಿಟಿಯ ಆಶ್ರಯದಲ್ಲಿ ೧೧ನೇ ವ್ಯವಸಾಯ, ಆರೋಗ್ಯ ಮತ್ತು ಗೃಹಾರಿಗೆ ಪ್ರದರ್ಶನವು ಸುಳ್ಯ ನಾಟಕ ಮಂದಿರದ ಕಟ್ಟಡದಲ್ಲಿ ೧೯೪೩ನೇ ಜನವರಿ ತಾ. ೯, ೧೦, ಮತ್ತು ೧೧ರಲ್ಲಿ ಸುಳ್ಯ ಜಾತ್ರೆ ಸಮಯದಲ್ಲಿ ಜರಗುವುದು. ಪ್ರದರ್ಶನಕ್ಕೆ ಧಾನ್ಯಗಳು ಫಲವಸ್ತು, ಬೀಜಗಳು, ಕೃಷಿ ಉಪಕರಣ, ಮೇಲಿನ ಪೈರುಗಳು ಜಾನುವಾರು, ತರಕಾರಿ, ಗಡ್ಡೆಗೆಣಸು ಕೃಷಿಗಿದ ಹಾಗೂ ಇತರ ಕೈಗಾರಿಕೆ ಸಾಮಾನುಗಳನ್ನು ಕಳುಹಿಸಬಹುದು. ಪ್ರತಿದಿನ ಸಾಯಂಕಾಲ ಕೃಷಿ, ಆರೋಗ್ಯ, ಕೈಗಾರಿಕೆಗಳ ಕುರಿತು ಬಲ್ಲವರಿಂದ ಭಾಷಣಗಳೇರ್ಪಡಿಸಲಾಗುವುವು ಎಂದು ಸಂಬಂಧಪಟ್ಟವರು ಪ್ರಕಟಿಸುತ್ತಾರೆ.

ಉಡುಪಿ

ಕ್ರಿಕೆಟ್ ಪಂದ್ಯಾಟ

ತಾ. ೧೧ರಲ್ಲು ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲ್ ಸೀನಿಯರ್ ಟೀಮಿನವರೊಡನೆ ಸೂಟಿ ಕ್ರಿಕೆಟ್ ಪಂದ್ಯಾಟವನ್ನಾಡಿದರು. ಕೆನರಾ ಹೈಸ್ಕೂಲ್ ಟೀಮಿನವರು ೮೪ ರನ್ಸ್‌ಗಳನ್ನು ತೆಗೆದರು. (ಶ್ರೀ. ವೆಂಕಟ್ರಾಯರು ೫೯ ರನ್ಸುಗಳು) ಬೋರ್ಡು ಹೈಸ್ಕೂಲ್ ಟೀಮಿನವರು ೬೬ ರನ್ಸುಗಳು (ಆರ್ಥರ್ ೪೪ ರನ್ಸುಗಳು) ಮರುದಿನ ಬೋರ್ಡು ಹೈಸ್ಕೂಲ್, ಕಲ್ಯಾಣಪುರ ಮಿಲಾಗ್ರಿಸ್ ಹೈಸ್ಕೂಲ್, ಉಡುಪಿ ಟೌನ್ ಟೀಮುಗಳ ಕಂಬೈಂಡ್ ಆಟಗಾರರೊಡನೆ ಕೆನರಾ ಹೈಸ್ಕೂಲ್ ಟೀಮಿನವರು ಪಂದ್ಯಾಟವಾಡಿ ವಿಜಯಿಗಳಾದರು.

ನೇಕಾರರ ಯೂನಿಯನ್ ಮಹಾಸಭೆಯು

ಇತ್ತೀಚೆಗೆ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿ ನೂಲಿನ ದರವು ಹತೋಟಿಯಲ್ಲಿ ನಿಲ್ಲುವಂತೆ ಹೆಚ್ಚಿನ ಸಿಗ್ಗಾ ತೆಗೆದುಕೊಳ್ಳಬೇಕಾಗಿ ಯಾರ್ನ್ ಕಮೀಶನರರನ್ನು ಪ್ರಾರ್ಥಿಸುವ ನಿರ್ಣಯವಾಯಿತು.

ಸಿನೆಮಾ ಸುದ್ದಿ

ಸಿನೆಮಾ ಸಂಚಾಲಕರ ಕೈದು

ಭಾರತ ಪಿಕ್ಚರ್ಸ್ ಲಿಮಿಟೆಡ್ ಇದರ ಸಂಚಾಲಕ ಶ್ರೀ। ಸುಗುಣಚಂದ ಶಾಹಾಡಿ ಯವರು ದೇಶಭಕ್ತರಾದ ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳು। ಅವರನ್ನು ಭಾರತ ಸಂರಕ್ಷಕ ಕಾನೂನಿನಂತೆ ಈಗ ಕೈದುಮಾಡಲಾಗಿದೆ.

ವನಮಾಲಳ ಗಂಡ ಸೆರೆಮನೆಯಲ್ಲಿ

ಇದ್ದಾರೆ ಅವರ ಹೆಸರು ಶ್ರೀ। ಪಿ. ಕೆ. ಸಾವಂತ್. ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಲ್ಪಟ್ಟಿದ್ದಾರೆ. ಅವರು ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಮತ್ತು ಮುಂಬಯಿ ಕಾರ್ಪರೇಶನ್ ಸದಸ್ಯರು.

ಪಂಚೋಲಿಯ 'ಪ್ರೂಂಜಿ'

ಪಂಚೋಲಿ ಆರ್ಟ್ ಪಿಕ್ಚರ್ಸ್‌ನವರ ಶಾಂತಾ ಆಪ್ಟೆ ಅಭಿನೀತ 'ಜಮೀನ್ದಾರ' ಚಿತ್ರವು ಪೂರ್ತಿಗೊಂಡಿದ್ದು, 'ಪ್ರೂಂಜಿ' ಎಂಬ ಹೊಸ ಚಿತ್ರದ ತಯಾರಿ ಆರಂಭವಾಗಿದೆ. ಇದರಲ್ಲಿ ಇಸ್ಮಾಯಿಲ್ ಮತ್ತು ಮನೋರಮಾ ನಾಯಕ ನಾಯಕಿಯಾಗುವರು.

'ಕಿಸಿ ಸೇ ನ ಕಹನಾ'

ಇದು ಚಿತ್ರಾ ಪ್ರೊಡಕ್ಷನಿನವರ ಎರಡನೆಯ ಚಿತ್ರ. ಇದರ ರಚನೆ ಈಗ ಪೂರ್ತಿಗೊಂಡಿದೆ. ಲೀಲಾ ಚಿಟ್ನಿಸ್ ಮಹಾರಿ ಸನ್ಯಾಲನೊಡನೆ ಇದರಲ್ಲಿ ನಟಿಸುತ್ತಾಳೆ. ಅವರ ಮೂರನೆಯ ಚಿತ್ರ 'ಪ್ರಾತಿಷ್ಠಾ' ಎಂಬುದು. ಮೋತಿಲಾಲನು ಅದರಲ್ಲಿ ನಟಿಸುವನೆಂದು ತಿಳಿದಿದೆ.

ಕುಣಿಯುವ ಕೌಸಲ್ಯೆ

ನೃತ್ಯಗಾರ ಲಚ್ಚುಮಹಾರಾಜ್ ಎಂಬವರ ಕುವರಿ; ಅವಳ ತಂದೆ ಕಥಕ್ಕಳಿ, ಭಾರತ ನಾಟ್ಯ ಮೊದಲಾದ ನೃತ್ಯ ಪ್ರವೀಣರು. ರಾಯ ಸಾಹೆಬ್, ಭರತ್ ಮಿಲಾಪ್, ನರ್ಸಿಭಗತ್‌ಗಳಲ್ಲಿ ಕೌಸಲ್ಯೆಯ ಕುಣಿತವನ್ನು ಅನೇಕ ಸಿನೆಮಾ ಪ್ರೇಕ್ಷಕರು ನೋಡಿ ಇಷ್ಟರಲ್ಲೇ ಮನಮೋಹಿಸಿರಬೇಕು.

'ದಸ್ ಬಜೆ' ದ್ವಿಪ್ರತಿ

'ದಸ್ ಬಜೆ' ಎಂಬ ಪ್ರಭಾತ ಹಿಂದೀ ಸಾಮಾಜಿಕ ಚಿತ್ರವು 'ದಹಾ ವಾ ಜತಾಂ' ಎಂಬ ಮರಾಠೀ ಪ್ರತಿಯಾಗಿಯೂ ತಯಾರಾಗುತ್ತಿದೆ. ಊರ್ಮಿಳಾ ಮತ್ತು ಬೆನರ್ಜಿಯರು 'ದಸ್ ಬಜೇ'ದಲ್ಲಿ, ರತ್ನಮಾಲಾ ಮತ್ತು ಕುಲಕರ್ಣಿಯರು 'ದಹಾ ವಾಜತಾಂ'ದಲ್ಲಿ ನಾಯಕ ನಾಯಕಿಯಾಗಿದ್ದಾರೆ. ಹೊಸ ತಾರೆಗಳು ಎಂತಹ ಬೆಳಕನ್ನು ಬೀರುತ್ತಾರೋ ನೋಡಬೇಕು.

'ನೀನಾ'ಳ ಇನ್ನೊಂದು ಚಿತ್ರ

ಶಾಲಿಮಾರ್ ಪಿಕ್ಚರ್ಸಿನ 'ಏಕ್ ರಾತ್'ನಲ್ಲಿ ಪೃಥ್ವಿರಾಜನೊಡನೆ ಅಭಿನಯಿಸಿ ಹೆಸರುಗೊಂಡ ನೀನಾ ಈಗ 'ಮನ್ ಕೀ ಜೀತ್' ಎಂಬ ಹೊಸ ಚಿತ್ರದಲ್ಲಿ ಪಾತ್ರ ವಹಿಸುವಳೆಂದು ತಿಳಿದಿದೆ.

ರೊಮೊಲಾ

'ಖಜಾಂಚಿ' ಪ್ರಸಿದ್ಧಿಯ ರೊಮೊಲಾ ಮತ್ತೆ 'ಪ್ರೂಸೊಮ್'ನಲ್ಲಿ ಮುಸ್ಲಿಂ ಮಾನಿನಿಯ ಪಾತ್ರ ವಹಿಸಿ, ಈಗ ತಲ್ವಾರ್ ಪ್ರೊಡಕ್ಷನ್ಸ್ 'ಖಮೋಶಿ' ಎಂಬ ಚಿತ್ರದಲ್ಲಿ ರಾಮದುಲಾರಿ, ಗ್ಯಾನಿ, ಶ್ಯಾಮ್, ಸುಂದರ್ ಇವರ ಜತೆಯಲ್ಲಿ ನಟಿಸುತ್ತಿದ್ದಾಳೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 340/42

ಬೀಪಾತುಮ್ಮ . . . . ವಾದಿ.

ಕಾದ್ರಿ ಬ್ಯಾರಿ ಕೂಡಾ . . ಪ್ರತಿವಾದಿರು.

7ನೇ ಪ್ರತಿವಾದಿ ದಸಮ್ಮ, 8ನೇ ಪ್ರತಿವಾದಿ ಹಾಮದ್ ಕೂಡಾ ಇವರಿಗೆ ತಿಳಿಸುವುದೇನಂದ್ರೆ:— ಮೃತಪಟ್ಟ ಶೇಕಬ್ಯಾರಿಯು ರೂಪಾಯಿ 400-0-0 ಕ್ಕೆ ಆಲಿಬ್ಯಾರಿಗಳಿಗೆ ಬರಕೊಟ್ಟ ತೋರಡವಿನ ಹಣ ವಸೂಲಾತಿ ಬಗ್ಗೆ, ಸದ್ರಿ ಅಡವಿನ ಹಕ್ಕನ್ನು ಪರಾಧಾರೆ ಹೊಂದಿದ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ತಾ. 31-10-42ಕ್ಕೆ ತಗ್ಗಿಗಯಿರುವುದರಿಂದ ಸದ್ರಿ ದಾವೆಯಲ್ಲಿ ನಿಮಗೇನಾದರೂ ಆಕ್ಷೇಪಣೆಯುವುದಾದರೆ ನೀವು ಸದ್ರಿ ವಾಯಿದೆ ದಿನ ಕೋರ್ಟಿನ ಮುಂದೆ ಹಗಲು ಗಂಟೆ 10-30ಕ್ಕೆ ಹಾಜರಾಗಿ ಉದಜರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು, ಎಂತ ಈ ಮೂಲಕ ತಿಳಿಸೋಣಾಗಿದೆ.

(By order of the Court)

ಮಂಗಳೂರು 17-10-42 } H. D. Alva, B. A. B. L. Vakil for Plaintiff.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 293/1942

ರಾಮ ತುಂಗ . . . . ವಾದಿ.

ಮತ್ತು

ಕ್ರಿಷ್ಣಭಟ್ಟ ಕೂಡಾ . ಪ್ರತಿವಾದಿರು.

3ನೇ ಪ್ರತಿವಾದಿ ಶಂಭಟ್ಟ, ಕ್ರಿಷ್ಣಭಟ್ಟರ ಮಗ ಕಾಸ್ರಗೋಡು ತಾಲೂಕು ಕೋಳ್ಯೂರು ಗ್ರಾಮದಲ್ಲಿರುವರ.

ಮೇಲ್ಕಂಡ ವಾದಿಯು ಅಡವಿನ ಹಣ ಬರಮಾಡಿಕೊಳ್ಳುವರೆ ದಾಖಲ್ಲುಮಾಡಿದ ಮೇಲಿನ ದಾವೆಯು ತಾ. 24-10-42ಕ್ಕೆ ತಖ್ತಿಯ ಬಗ್ಗೆ ಇಟ್ಟಿದೆ. ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಮೇಲಿನ ಕೋರ್ಟಿನ ಮುಂದೆ ಸದ್ರಿ ದಿವ್ಸ ಹಗಲು 10 ಘಂಟೆಗೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಉದಾಹರಿಸತಕ್ಕದ್ದು. ತಪ್ಪಿದ್ರೆ ನಂಬ್ರವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

(By order of the Court)

ಮಂಗಳೂರು 15-10-42 } S. Narsapaya Vakil for Plaintiff.

NOTIFICATION

Whereas it is necessary so to do for maintaining supplies essential for the life of the community I. M. Karamatullah, Esq., I. C. S. Collector of South Kanara, in exercise of the powers under Rule 81 (2) of the Defence of India Rules conferred on me by the Government of Madras, in G. O. No. 243, Public (WAR), dated 21-1-1942, do hereby make the following order:—

No person shall on or after 17-10-1942 transport paddy or rice from any place within the limits of the South Kanara District to the Malabar District till the end of October 1942.

Any person failing to comply with this order is liable to be punished with imprisonment for a term which may extend to three years or with fine or with both.

S. K. Collector's Office Mangalore 17th October 1942 } M. Karamatullah, Collector.

ಭಾರತದ ಐಕ್ಯತ್ಯ ಪಡಿಸಲು ರಾಷ್ಟ್ರಗಳ ಪ್ರತಿನಿಧಿಗಳು

ಭಾರತದ ಸಮಸ್ಯೆ ಬಿಡಿಸಲು, ಅಮೇರಿಕ, ಬ್ರಿಟನು, ರಷ್ಯ ಮತ್ತು ಚೀನ ಈ ನಾಲ್ಕು ರಾಷ್ಟ್ರಗಳ ಪ್ರತಿನಿಧಿಗಳ ಒಂದು ಸಮಿತಿಯನ್ನು ನೇಮಿಸಬೇಕೆಂದು ಬರ್ಟ್ರಾಂಡ್ ರಸೆಲರು ಹೇಳುತ್ತಾರೆ. ವಿಲ್‌ಬರ್ಟ್, ಲೂಯಿಸ ಫಿಶರ್, ಮೊದಲಾದವರೂ ಈ ತರದ ಅಭಿಪ್ರಾಯವನ್ನಿತ್ತಿರುವರು. ಹೀಗೆಯೇ ಹಿಂದೆ ಹಿಂದೂಸ್ಥಾನ ಸರಕಾರದ ಅರ್ಥಿವ ಸಚಿವನಾಗಿದ್ದ ಸರ್ ಜಾರ್ಜ್ ಶೂಸ್ಟರರೂ ಒಂದು ಹೇಳಿಕೆಯಿತ್ತು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕೆಂದೂ, ಗೃಹ ಮತ್ತು ಅತಿಗ್ರ ಖಾತೆ ಬ್ರಿಟಿಷ್ ಅಧಿಕಾರಿಗಳ ಕೈಯಲ್ಲಿರುವುದು ಅವಶ್ಯವೇ ಎಂದು ಕೇಳಿದ್ದಾರೆ.

ಬೇಕು

ಒಂದು ಪ್ರಶಸ್ತ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪನಿಗೆ ಪ್ರೊವಿಡೆಂಟ್ ಇನ್ಶೂರೆನ್ಸ್ ವಹಿವಾಟುಗಳನ್ನು ವ್ಯವಸ್ಥೆ ಪಡಿಸಲು ಮತ್ತು ಪೊಲಿಸಿ ದೊರಕಿಸಿ ಕೊಡಲು ಯೋಗ್ಯ ಡಿಸ್ಟ್ರಿಕ್ಟ್ ಚೀಫ್ ಏಜಂಟರು ಬೇಕು. ಸರಿಯಾದ ಬಿಜಿನೆಸ್ ಮಾಡಬಲ್ಲವರು ಮಾತ್ರವೇ, ತಮ್ಮ ಹಿಂದಣ ಅನುಭವ, ಜಿಲ್ಲೆಯ ಹೆಸರು ಗೇರಂಟಿ ಮುಂತಾದುವನ್ನು ನಮೂದಿಸಿ ಬರಕೊಳ್ಳುವುದು:—

P. P.
c/o. B. Dattaram & Co.
BOMBAY, 4.

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, ILMITE.D

ESTD: 1906

ಕೋಮಲ ಸೌಂದರ್ಯ ನಿಮಗೆ ಇರಬೇಕೆ?

ನಿಮಗೆ ಶುದ್ಧವಾದ ಮತ್ತು ಕಾಳಾಗದೆ ಕೋಮಲ ಚರ್ಮವಿರಬೇಕೆ? ಈ ಹೊರ ಸೌಂದರ್ಯ ಚಿಹ್ನೆಯು ಆಂತರಿಕ ಆರೋಗ್ಯದಿಂದ ಉಂಟಾಗುತ್ತದೆ. ಹಾಗಾಗ ಬೇಕಾದರೆ; ಪ್ರತಿದಿನ ರಾತ್ರಿ ಎರಡು ಬೈಲ್‌ಬೀನ್ಸುಗಳನ್ನು ಸೇವಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯಿಂದಲೇ ತಯಾರಿಸಿದುದು. ಅದು ಶರೀರವನ್ನು ಸುಸ್ಥಿತಿಯಲ್ಲಿಡುವುದು. ರಕ್ತವನ್ನು ಶುದ್ಧಿಗೊಳಿಸುವುದು; ದಿನಂಪ್ರತಿಯ ಅಶುದ್ಧಾಹಾರವನ್ನು ಹೊರ ಹಾಕುವುದು. ಹೀಗೆ ಪೂರ್ಣ ಆರೋಗ್ಯ ಮತ್ತು ಸೌಂದರ್ಯವನ್ನುಂಟುಮಾಡಿ, ಶರೀರಕ್ಕೆ ಕೋಮಲತೆಯನ್ನುಂಟುಮಾಡುವುದು.

ಎಲ್ಲಾ ಔಷಧಿ ವ್ಯಾಪಾರಿಗಳೂ ಬೈಲ್ ಬೀನ್ಸನ್ನು ಬಾಟ್ಲಿ ಒಂದರ ಒಂದು ರೂಪಾಯಿ ಬೆಲೆಗೆ ಮಾರುವರು.

BILE BEANS

ಬೈಲ್ ಬೀನ್ಸು ನಿಮಗೆ ಇಮ್ಮಡಿ ಸೌಂದರ್ಯ ಕೊಡುವುದು.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ. ಶ್ರೀ ಸ್ವಾಮಿ ಪ್ರಣವೇಶಾನಂದರು

ವೇದಾಂತದ ಸಪ್ತಭೂಮಿ ಮತ್ತು ಪ್ರತಿಯೊಂದು ಭೂಮಿಯಲ್ಲಿ ಸಾಧಕನ ಮನಸ್ಸು ಅವಸ್ಥಾನ ಮಾಡುವಾಗ ಆತನು ಅನುಭವಿಸುವ ಆಧ್ಯಾತ್ಮಿಕ ದರ್ಶನದ ವಿಷಯವಾಗಿ ಶ್ರೀ ಪರಮಹಂಸರ ಹೇಳಿಕೆ

ಕುಲಕುಂಡಲಿನೀ ಶಕ್ತಿಯು ಸುಷುಮ್ನಾ ಮಾರ್ಗವಾಗಿ ಏಳುವಾಗ ಪ್ರತಿಯೊಂದು ಚಕ್ರದಲ್ಲಿ ಆಗುವ ದರ್ಶನದ ವಿಷಯವಾಗಿ ಶ್ರೀ ಪರಮಹಂಸರು ಹೀಗನ್ನುತ್ತಿದ್ದರು —“ವೇದಾಂತದಲ್ಲಿ ಸಪ್ತಭೂಮಿಗಳ ವಿಷಯವನ್ನು ಹೇಳಿರುತ್ತದೆ ಒಂದೊಂದು ಭೂಮಿಯಲ್ಲಿ ಒಂದೊಂದು ಪ್ರಕಾರದ ದರ್ಶನವಾಗುತ್ತದೆ ಮನಸ್ಸು ಸ್ವಾಭಾವಿಕವಾಗಿ ಕೆಳಗಿನ ಮೂರು ಭೂಮಿಗಳಲ್ಲಿ ಅಂದರೆ ಗುದ, ಲಿಂಗ, ಮತ್ತು ನಾಭಿಗಳಲ್ಲಿ ಎದ್ದು ಇಳಿಯುತ್ತದೆ, ಆಗ ಮನುಷ್ಯನು ಆಹಾರ ಮೈಥುನಾದಿಗಳಲ್ಲೇ ನಿರತನಾಗುವನು ಈ ಮೂರು ಭೂಮಿಗಳನ್ನು ಅತಿಕ್ರಮಿಸಿ ಹೃದಯದಲ್ಲಿ ಎದ್ದರೆ, ಆಗ ಆತನಿಗೆ ಜ್ಯೋತಿರ್ದರ್ಶನವಾಗುವುದು. ಪರಂತು ಹೃದಯದಲ್ಲಿ ಎದ್ದರೂ ಆಗಾಗ ಅದು ಕೆಳಗಿನ ಗುದ, ಲಿಂಗ, ನಾಭಿಗಳಲ್ಲಿ ಇಳಿಯುತ್ತದೆ ಹೃದಯವನ್ನು ಬಿಟ್ಟು ಮನುಷ್ಯನ ಮನಸ್ಸು ಕಂಠಕ್ಕೆ ಎದ್ದರೆ ಆತನಿಗೆ ಈಶ್ವರ ಪ್ರಸಂಗ ಹೊರತು ಬೇರೆ ಮಾತು ಅಂದರೆ ಸಾಂಸಾರಿಕ ವಿಷಯಕವಾದ ಮಾತುಗಳು ರುಚಿಸುವುದಿಲ್ಲ ಆಗ ನನ್ನ ಮುಂದೆ ಯಾರಾದರೂ ಸಾಂಸಾರಿಕ ಪ್ರಸಂಗವನ್ನು ಎತ್ತಿದರೆ, ನನ್ನ ತಲೆಯ ಮೇಲೆ ಕೋಲು ಬಡಿದಂತಾಗುತ್ತಿತು

(ಕ್ರಮಶಃ)

ಪುಸ್ತಕಾವಲೋಕನ

ಜಯಶ್ರೀ

‘ಜಯಶ್ರೀ’ ಎಂಬುದಿದು ಜಯಶ್ರೀ, ಕನ್ಯಾಸೆರೆ, ಶಾಂತಿ ಎಂಬೀ ಮೂರು ಸಾಮಾಜಿಕ ನಾಟಕಗಳಿಂದ ಕೂಡಿದ ಪುಸ್ತಕ ಶ್ರೀ. ಚಿ ಸದಾಶಿವಯ್ಯರು ಇದರ ಲೇಖಕರು. ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯ 54ನೆಯ ಪ್ರಕಟಣೆಯಿದು ಕ್ರೌನ್ 1/8 ಆಕಾರದ 220 ಪುಟಗಳುಳ್ಳ ಈ ಪುಸ್ತಕದ ಬೆಲೆ ರೂ 1 12 0. ಶ್ರೀ ಬೇಂದ್ರೆಯವರು ಇದಕ್ಕೆ ಮುನ್ನುಡಿ ಬರೆದಿದ್ದಾರೆ ಕಲಾವಿದರಾದ ಶ್ರೀ. ರಾಘವೇಂದ್ರರ ಚಿತ್ರದಿಂದ ಪುಸ್ತಕವು ಅಂದವಾಗಿದೆ

ಈ ಪುಸ್ತಕದ ಲೇಖಕರಾದ ಶ್ರೀ. ಚಿ ಸದಾಶಿವಯ್ಯರು ಹೆಸರಾದ ಆಧುನಿಕ ನಾಟಕಕಾರರಲ್ಲೊಬ್ಬರು ಮಾತ್ರವಲ್ಲದೆ ಸ್ವತಃ ನಾಟಕಾಭಿನಯ ಕುಶಲರೂ ಆಗಿದ್ದಾರೆ. ತಮ್ಮ ನಾಟಕಗಳನ್ನು ಬೇರೆಬೇರೆ ರಂಗಭೂಮಿಗಳಲ್ಲಿ, ಅಭಿನಯಿಸಿ ಜನರನ್ನು ಮೆಚ್ಚಿಸಿ ಮತ್ತೆ ಈ ಪುಸ್ತಕ ಸಂಗ್ರಹ ಕಾರ್ಯವನ್ನು ಕೈಕೊಂಡಿರುವರು ಅವರ ಈ ಮೂರು ನಾಟಕಗಳು ಕನ್ನಡ ರಂಗಭೂಮಿಯಲ್ಲಿ ವಿಶೇಷ ಜನಪ್ರಿಯವಾಗಲಿವೆಯೆಂಬುದಕ್ಕೆ ಇದು ಸಾಕಷ್ಟು ಆಧಾರವಾಗಿದೆ

‘ಜಯಶ್ರೀ’ ಮೊದಲನೆಯ ನಾಟಕ ಯೋಗೀಶ್ವರರಾವ್ ಪೇಷ್ಕಾರನಂಥಾ ವಿಲಾಸೀ ಧೂರ್ತ ಜನರು ನಮ್ಮ ಸಮಾಜದಲ್ಲಿ ಕೆಲವರಿದ್ದಾರೆ ತನ್ನ ಅಣ್ಣನ ಮಗನಾದ ನಟರಾಜನಿಗೆ ವಿದ್ಯಾಭ್ಯಾಸಕ್ಕೆ ಹಣ ಕೊಡದೆ ಯೋಗೀಶ್ವರನು ಮೂರನೆಯ ವಿವಾಹ ಮಾಡಿಕೊಂಡಿದ್ದೂ, ಮತ್ತೆ ಹೆಣ್ಣು ಎಂದರೆ ಬಾಯ್ನೀರು ಸುರಿಸುತ್ತಿರಲು, ಆತನನ್ನು ನಟರಾಜನ ಮಿತ್ರನಾದ ರಾಜಶೇಖರನೆಂಬ ತರುಣನೂ-ಯೋಗೀಶ್ವರನ ಸೇವಕ ಮಂಜೂನಾಥನೂ ಕೂಡಿ ವಂಚಿಸಿ, ಒಳ್ಳೆಯ ಪಾಠ ಕಲಿಸುತ್ತಾರೆ. ನಾಟಕವಿದು ತುದಿಯಿಂದ ಕೊನೆವರೆಗೆ ಉತ್ತಮ ಹಾಸ್ಯಪೂರ್ಣವಾಗಿದೆ.

‘ಕನ್ಯಾಸೆರೆ’ ಎರಡನೆಯ ನಾಟಕ. ಬಡ ಗೃಹಸ್ಥನಾದ ವೆಂಕಣ್ಣನು ತನ್ನ ಮಗಳು ಶಾರದೆಗೆ ವರನನ್ನು ಹುಡುಕುವ ಭವಣೆಗೊಳಗಾಗಿದ್ದಾಗ, ಆತನ ದಾಯಾದಿ ವಾಸಯ್ಯನು ಅನೇಕ ಕಾಪಟ್ಯಗಳನ್ನು ಮಾಡಿ ವೆಂಕಣ್ಣನನ್ನು ಬರಬಾರದ ಬನ್ನಗಳಿಗೆ ಗುರಿಮಾಡುವನು ಕೊನೆಗೆ ಶಾರದೆಯ ವಿಷಮ ವಿವಾಹವು ತಪ್ಪಿ ಆಕೆ ಪ್ರೀತಿಸಿದ ತರುಣ ರಾಮಚಂದ್ರನೊಡನೆಯೇ ಅವಳ ವಿವಾಹವಾಗುವುದು ಕಾಪಟ್ಯಗಳನ್ನು ಮಾಡಿದ ವೆಂಕಣ್ಣನ ದಾಯಾದಿಗಳು ಶಿಕ್ಷೆಗೆ ಗುರಿಯಾಗುವರು ವೆಂಕಣ್ಣನ ಸಂಕಷ್ಟದೊಡನೆ ಶಾರದೆಯ ಮುಂದಿನ ಬಾಳು ರಾಮಚಂದ್ರನ ಪ್ರೇಮ ಇವುಗಳು ಎಲ್ಲಿ ದುರಂತಕ್ಕೀಡಾಗುವವೋ ಎಂದು ಪ್ರೇಕ್ಷಕರು ಮರುಕಪಡುವಂತೆ ನಾಟಕ ಸುಖಾಂತವಾಗಿ ಪರಿಣಮಿಸಿದೆ

ಮೂರನೆಯ ‘ಶಾಂತಿ’ ಎಂಬುದು ಒಂದು ತತ್ವಪ್ರಧಾನ ನಾಟಕ ಮನುಷ್ಯನು ಶಾಂತಿಯಿಂದಿದ್ದರೆ ಹೇಗೆ ಜೀವನದ ಗಂಡಾಂತರಗಳನ್ನು ತಪ್ಪಿಸಬಹುದು, ಅಶಾಂತನಾದರೆ ಹೇಗೆ ಸಂಸಾರ ಒಡೆದು ಹೋಗುವುದು, ಎಂಬುದಿದು ಲಿಂಗಪ್ಪಯ್ಯ ನಂಜುಂಡಯ್ಯ ಸುಂದರರಾವ್ ಇವರ ಘಟನೆಗಳಿಂದ ಚಿತ್ರಿಸಿದೆ ಓದುವಾಗರಿಗೆ ಮಿಕ್ಕೆರಡು ನಾಟಕಗಳಿಂತಲೂ ಇದು ಉತ್ತಮವೆನಿಸುತ್ತದೆ ಇದರ ಲಿಂಗಪ್ಪಯ್ಯ ನಂಜುಂಡಯ್ಯ ಈ ಎರಡು ಪಾತ್ರಗಳ ಸೃಷ್ಟಿ ಚೆನ್ನಾಗಿದೆ. ಈ ಮೂವರು ಉತ್ತಮ ತರಗತಿಯ ಸ್ವತಂತ್ರ ಸಾಮಾಜಿಕ ನಾಟಕಗಳ ಪ್ರಯೋಜನವನ್ನು ಕನ್ನಡಿಗರು ಅವಶ್ಯ ಪಡೆಯಬೇಕು

—ಕಯ್ಯಾರ

NOTICE

In the Court of the District Munsif of Mangalore

O S No. 352/1942

Between.
Bajanje Krishna Bhatta *Plaintiff*
and
Potail Krishnayya *Defendant*

To

The Defendant Potail Krishnayya, son of Parameshwarayya, Kota Brahmin, residing at Yellija Nadugodu village, Mangalore Taluk

Please take notice that the above suit filed by the plaintiff for recovery of Rs 412 11 0 being the arrears of rent due up to 15-2-1941 under a registered chalgenichit dated 25-2-1940 executed by you in favour of plaintiff together with future interest and costs of suit will come on for hearing on 6-11-1942 at 10 30 A M You may appear either in person or by a pleader on the said date failing which it will be decided in your absence

(By order of Court)

Mangalore 19 10 1942 — **M A Kamath**, Vakil for plaintiff

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE. **The Joint Booking Office.** KODIALBAIL.

The Bank of Mangalore Limited

ESTD: 1931

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st October 1942 deposits will be accepted at the following revised rates.

FIXED:
From 6 to 11 months 2½% From 12 to 23 months 3½%
24 months or over 4%
Current: ½% from July to December.
1% from January to June.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿಮ ನೋದಲಾದ ಎಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು - ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾಪಕರುಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂದ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು: –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 30—10—1942 [ಸಂಚಿಕೆ 43]

'ವಿಮಾನ ದೊರೆತರೆ ವಿಲಾಯತಿಗೆ ಹಾರುತ್ತೇನೆ'

'ಲಿನ್‌ಲಿತ್‌ಗೋ ಗುಪ್ತ ಹಂಚಿಕೆ ಹೂಡಿರುವರು'

ರಾಜಾಜಿ ರಾಷ್ಟ್ರದೂತರಾಗಲು ನಿಶ್ಚಯಿಸಿದ್ದಾರೆ!

'ಗಾಂಧಿ ನೆಹರು ವಾಶಿಂಗ್‌ಟನ್ ಡಿವೆಲರರಂತೆ!'



ವಿಮಾನಗಳೆಲ್ಲಾ ಶತ್ರು ರಾಷ್ಟ್ರಗಳನ್ನು ಸುಡುವ ಸಾಹಸದಲ್ಲಿಯೇ ಇಂದು ಮಗ್ನವಾಗಿವೆ!

'ವಿಮಾನ ಮತ್ತು ಪಾಸ್‌ಪೋರ್ಟ್ ದೊರೆತರೆ ನಾನು ನನ್ನೆಲ್ಲಾ ಕೆಲಸಗಳನ್ನು ಬಿಟ್ಟು ವಿಲಾಯತಿಗೆ ಹೋಗಿ ನನ್ನೀ ಯೋಜನೆಯನ್ನಲ್ಲಿ ವಿವರಿಸುತ್ತೇನೆ; ಬ್ರಿಟಿಷರಿಗೆ ಭಾರತದ ವಿಷಯವಾಗಿ ಇರುವ ತಪ್ಪು ತಿಳುವಳಿಕೆಯನ್ನು ಪರಿಹರಿಸುತ್ತೇನೆ' ಎಂದು ರಾಜಾಜಿಯವರು ಹೊಸ ಡಿಲ್ಲಿಯಲ್ಲಿ ಪತ್ರಿಕೋದ್ಯಮಿಗಳ ಮುಂದೆ ಸಂಧಾನದ ಹೊಸ ಯೋಜನೆಯನ್ನು ವಿವರಿಸುತ್ತಾ ಹೇಳಿದರು. ನಿರ್ದಿಷ್ಟವಾದೊಂದು ಯೋಜನೆಯನ್ನು ಯಾರೂ ಇದುವರೆಗೆ ಮುಂದೆ ಮಾಡಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಚೆವನ್‌ಶೇರ್ ಡ್ಯೂಕರು ಮಾಡಿದ ಆರೋಪಕ್ಕೆ ಉತ್ತರರೂಪವಾಗಿ ರಾಜಾಜಿ ಈ ಯೋಜನೆ ಅಳವಡಿಸಿದ್ದಾರೆ. ಇತ್ತೀಚೆಗೆ ನಡೆದ ಮಾತುಕತೆಗಳ ಅನುಭವದ ಮೇಲಿಂದ ಸಮಸ್ಯೆಗಳ ಸಮಾಲೋಚನೆ ಮತ್ತು ಮಹತ್ತಗಳ ಮೇಲಿಂದ ಹಾಗೂ ಜನರ ಮನೋವೃತ್ತಿಯ ಮೇಲಿಂದ, ಈ ಯೋಜನೆಯನ್ನು ಅಳವಡಿಸಿದ್ದು, ಇದನ್ನು ಕಾಂಗ್ರೆಸಿಗಾಗಲಿ, ಲೀಗಿಗಾಗಲಿ ನಿರಾಕರಿಸಲು ಸಾಧ್ಯವಿಲ್ಲವೆಂದೂ, ಯಾರಾದರೂ ನಿರಾಕರಿಸಿದರೆ, ಅಂಥವರು ಮೂರ್ಖರೆಂದೆನ್ನಿಸಿಕೊಳ್ಳುವರೆಂದೂ ರಾಜಾಜಿ ಹೇಳಿದರು.

ಹೊಸ ಯೋಜನೆ ಯಾವುದು?

ರಾಜಾಜಿ ತನ್ನ ಹೊಸ ಯೋಜನೆ ವಿಚಾರ ಹೀಗೆ ಹೇಳಿದ್ದಾರೆ: 'ಈ ಗಂಡಾಂತರದ ಸಂದರ್ಭವನ್ನು ಪರ್ಯಾಲೋಚಿಸಿಕೊಂಡು, ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರವನ್ನು ಕೂಡಲೇ ರಚಿಸುವಂತೆ, ಸಾರ್ವಭೌಮ ಸರಕಾರವು ವೈಸರಾಯರಿಗೆ ಪೂರ್ಣ ಅಧಿಕಾರ ಕೊಡಬೇಕು. ಅಂದರೆ ಅವರು ಜನಪ್ರೀತರಾಗಿರುವ ಪ್ರತಿನಿಧಿಗಳನ್ನೇ ಆರಿಸುವರು; ಈಗ ಶಾಸನ ಸಭೆಗಳಿಲ್ಲವೆಂಬುದು ಸತ್ಯ; ಆದರೆ ಈಗಲಾದರೂ ಚುನಾವಣೆಯಾದರೆ ಯಾರು ಆರಿಸಿ ಬರುವರೆಂಬುದು ವೈಸರಾಯರಿಗೆ ಚನ್ನಾಗಿ ಗೊತ್ತಿದೆ.' ಆದ್ದರಿಂದ ಅವರಿಗೆ ಆ ಅಧಿಕಾರ ಕೊಟ್ಟರೆ ಯೋಗ್ಯ ಜನರನ್ನೇ ಆರಿಸಿ ಅವರು ರಾಷ್ಟ್ರೀಯ ಸರಕಾರ ಏರ್ಪಡಿಸಬಹುದು. ಕೂಡಲೇ ಅಂಥಾ ಸರಕಾರ ರಚಿಸಬೇಕು. ಅನಂತರ ಚುನಾವಣೆಯ ವ್ಯವಸ್ಥೆ ಮಾಡಬೇಕು. ಪ್ರಾಂತಗಳಿಗೆ ಪ್ರತ್ಯಕ್ಷ ಚುನಾವಣೆ, ಪ್ರಾಂತಿಕ ಶಾಸನ ಮಂಡಳಿಗಳಿಂದ ಕೇಂದ್ರಕ್ಕೆ ಅಪ್ರತ್ಯಕ್ಷ ಚುನಾವಣೆ, 1935ನೆಯ ಇಸವಿಯ ರಾಜ್ಯಘಟನೆಯಂತೆಯೇ ಮಾಡುವುದು. ಈಗ ಚುನಾವಣೆ ಸಾಧ್ಯವಿಲ್ಲವೆಂದು ಹೇಳುವುದು ಸರಿಯಲ್ಲ. ದಬ್ಬಾಳಿಕೆ ಮಾಡಲು ಸಾಧ್ಯವಾದರೆ ಚುನಾವಣೆ ನಡೆಸಲು ಸಾಧ್ಯವಿಲ್ಲವೇ? ಚುನಾವಣೆ ಆಗುವುದು ಅತ್ಯವಶ್ಯ. ಏಕೆಂದರ ಬ್ರಿಟಿಷ್ ಪ್ರಚಾರಕರು ಭಾರತದ ವಿಷಯ ಅಪಪ್ರಚಾರ ಮಾಡುತ್ತಾ ಹೋಗಿದ್ದಾರೆ. ಕಾಂಗ್ರೆಸು ಪ್ರತಿನಿಧಿ ಸಂಸ್ಥೆಯಿರದೆ, ಕೇವಲ ಅಧಿಕಾರ ಲಾಲಸೆಯ ಪಂಗಡವೆಂದಿದ್ದಾರೆ. ಇಂಥದ್ದು ಸ್ಪಷ್ಟವಾಗಬೇಕಾದರೆ ಚುನಾವಣೆಯಾಗಬೇಕು. ಹೀಗೆ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಶಾಸನಮಂಡಲಗಳಿಗೆ ಹೊಣೆಯಾದ ಸರಕಾರವೇ ಆಗಬೇಕು.

ಲೀಗಿನ ಆಕ್ಷೇಪವಾದರೆ?

ಮುಸ್ಲಿಂ ಲೀಗಿನವರು ಆಕ್ಷೇಪಿಸಲಾರರೇ ಎಂದು ಕೆಲವರು ವಾದಿಸಬಹುದು. ಭಾರತವನ್ನು ಎರಡು ಭಾಗಮಾಡುವ ವಿಚಾರವನ್ನೀಗ ಎತ್ತುವುದು ಸಾಧ್ಯವಿಲ್ಲ ಮಾತ್ರವಲ್ಲದೆ ಅದು ಈಗ ಯಾರಿಗೂ ಬೇಕಾಗಿಲ್ಲ. ಮುಸ್ಲಿಮರಾಗಲಿ, ಜಿನ್ನರಾಗಲಿ ಈಗಲೇ ಇಬ್ಭಾಗಿಸಬೇಕೆಂಬ ಇಚ್ಛೆಯಲ್ಲಿದ್ದಾರೆಂದು ಹೇಳುವುದು ಅವರ ಮೇಲೆ ಕುತ್ಸಿತ ಆರೋಪ. ಜಿನ್ನರಿಗೆ ಬೇಕಾದ ವಿಚಾರವನ್ನು ಮುಂದೆ ವಿಚಾರಿಸಲು ಈಗ ಹಾಗೆಯೇ ಇಟ್ಟುಬಿಡಬಹುದು. ಹೀಗೆ ತಾತ್ಕಾಲಿಕ ಸರಕಾರವನ್ನು ರಚಿಸಲು ಸರಕಾರಕ್ಕೆ ಮನಸ್ಸಿದ್ದರೆ; ದೇಶದ ಯಾವ ಭಾಗದಲ್ಲಿ ನಿಂತರೂ ಚುನಾವಣೆಯಲ್ಲಿ ಗೆದ್ದು ಬರುವಂಥಾ ಏದು ಮಂದಿ ಕಾಂಗ್ರೆಸು ಪ್ರಮುಖರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿ ವೈಸರಾಯರು ಆರಿಸಬೇಕು. ಜಿನ್ನರ ಸಂದೇಹ ನಿವಾರಣೆಗಾಗಿ, ಅವರು ಹೇಳುವಷ್ಟು ಜನರನ್ನು ಲೀಗಿನಿಂದ, ಹಾಗೂ ಬೇರೆ ಮೂವರನ್ನು ಬೇರೆ ಪ್ರಮುಖ ಪಕ್ಷಗಳಿಂದ ಆರಿಸಿ ತಾತ್ಕಾಲಿಕ ಸರಕಾರ ರಚಿಸಬೇಕು. ಹೀಗೆ ಮಾಡಿ ಅವರಿಗೆ ಅಧಿಕಾರ ಬಿಟ್ಟುಕೊಡಬೇಕು. ಕೇಂದ್ರದಲ್ಲಿ ತಾತ್ಕಾಲಿಕ ಸರಕಾರ ರಚಿತವಾದ ಮೇಲೆ ಚುನಾವಣೆ ಏರ್ಪಡಿಸಬೇಕು. ಹೊಸ ಕೇಂದ್ರ ಸರಕಾರಕ್ಕೆ ಸರಕಾರದ ಎಲ್ಲಾ ಆಡಳಿತೆ ಅಧಿಕಾರವನ್ನು ಬಿಟ್ಟುಕೊಡಬೇಕು. ರಕ್ಷಣಾ ಇಲಾಖೆ ವಿಚಾರ, ಕ್ರಿಪ್ಸ್ ಸಂಧಾನ ಸಮಯದಲ್ಲಿ ಬಹುಮಟ್ಟಿಗೆ ಏರ್ಪಟ್ಟಿದ್ದ ವ್ಯವಸ್ಥೆಯನ್ನು ಮಾಡಬಹುದು. ಹೀಗಾದರೆ ಈಗ ದೇಶಸೇವೆ ಮಾಡಲು ಸಾಧ್ಯವಾದೀತು. ಹೀಗಾದರೆ ನಾನು ಎಲ್ಲಾ ವಿಧದಿಂದ ಲೀಗ್ ಕಾಂಗ್ರೆಸ್ ಸಂಧಾನಕ್ಕೆ ಎಂಥಾ ಪ್ರಸಂಗವೊದಗಿದರೂ ಪ್ರಯತ್ನಿಸುವೆನು.'

ಸಂರಕ್ಷಣೆಯಲ್ಲಿ ಹೊಣೆ

'ಭಾರತೀಯರಿಗೆ ದೇಶವನ್ನು ಸಂರಕ್ಷಿಸಬೇಕೆಂದಿತ್ತು. ಕಾಂಗ್ರೆಸು ಸಹಜವಾಗಿ ಅದನ್ನು ಘೋಷಿಸಿತು; ಕಾಂಗ್ರೆಸಿನ ಸಹಜ ವರ್ತನೆಯ ವಿಷಯ ಸಂಶಯಗೊಂಡವರು, ಅವರೇ ಸಹಜ ಮನುಷ್ಯರಲ್ಲ. ಕಾಂಗ್ರೆಸು ಸಂರಕ್ಷಣೆಯ ಹೊಣೆ ಕೇಳಿದ್ದು ಅಧಿಕಾರಲಾಲಸೆಯಿಂದಲ್ಲ. ಸಂಭ್ರಮಕ್ಕಾಗಿಯೂ ಇಲ್ಲ; ಅವರಿಗೆ ರಾಷ್ಟ್ರರಕ್ಷಣೆ ಬಲವಂತವಾಗಿರಬೇಕು ಎಂಬ ಇರಾದೆ ಇದ್ದುದರಿಂದ. ದೇಶದ ಜನರು ಆಗುವೀ ಯುದ್ಧದಲ್ಲಿ ಉತ್ಸಾಹಿತರಾಗಿರದಿದ್ದರೆ, ದೇಶವನ್ನು ಬಲವಂತವಾಗಿ ಸಂರಕ್ಷಿಸುವುದಾದರೂ ಹೇಗೆ? ಕಾಂಗ್ರೆಸು ಜನಪ್ರಿಯವಾದ, ಬಲವಂತವಾದ, ಅಪಾಯಕಾರೀ ಬಲವಂತವಾದ ಸಂಸ್ಥೆಯೆಂದು ಬ್ರಿಟಿಷರೇ ಹಿಂದೆ ಅನೇಕ ಸಲ ಒಪ್ಪಿದ್ದಾರೆ. ಈ ಯುದ್ಧವನ್ನು ಗೆಲ್ಲುವ ಸಲುವಾಗಿ, ಅವರು ಕಾಂಗ್ರೆಸನ್ನು ಮೆಚ್ಚದರೂ ಮೆಚ್ಚದಿದ್ದರೂ ಅದರೊಡನೆ ಸ್ನೇಹಸಂಬಂಧ ಬೆಳಸಬಹುದಿತ್ತು. ಕಾಂಗ್ರೆಸು ಸಂಬಂಧ ಬೆಳೆಸಲು ಕಷ್ಟವಾದ ಹುಡುಗಿಯಲ್ಲ (ನಗು) ಅವಳಿಗೇ ಸಂಬಂಧಬೇಕಿತ್ತು; ಆದರೆ ಅದು ತಿರಸ್ಕೃತವಾಯಿತು' ಹೀಗೆಂದು ಕಲ್ಕತ್ತದಲ್ಲಿ ರಾಜಾಜಿಯವರು ಹಿಂದೂ ದೇಶದ ಬಿಶಪರ ಅಧ್ಯಕ್ಷತೆಯಲ್ಲಿ ತಾ. 15ರಂದು ಮಾಡಿದ ಭಾಷಣದಲ್ಲಿ ಹೇಳಿದರು. ಆ ಸಭೆಗೆ ಅನೇಕ ರಾಷ್ಟ್ರೀಯ ಮುಖಂಡರು ಹಾಜರಾಗಿದ್ದರು. ಅವರು ಅಲ್ಲಿ ಹೇಳಿದ ಇನ್ನು ಕೆಲವು ವಿವರಗಳು ಇಂತಿವೆ:

ಜನರನ್ನು ಒಪ್ಪಿಸಲಿಕ್ಕೆ:

'ಇದ್ದ ಹಾಗೆ ಇರಲಿ; ಯುದ್ಧಾನಂತರ ಸ್ವರಾಜ್ಯ ಸಿಗುವುದೆಂಬ ಭರವಸೆ ಈಗ ನಿಮಗೆ ಯಾಕೆ?' ಹೀಗೆಂದು ನನ್ನೊಡನೆ ಅನೇಕ ಆಂಗ್ಲ ಮಿತ್ರರು ಕೇಳುತ್ತಾರೆ. ಆದರೆ ಅವರಿಗೆ ಜನರ ಮನೋವೃತ್ತಿ ಗೊತ್ತಿಲ್ಲ. ಯುದ್ಧಾನಂತರವಾದರೂ ನಮಗೆ ಸ್ವರಾಜ್ಯ ಸಿಗುತ್ತದೆಯೆಂಬ ಭರವಸೆಯಿಲ್ಲವಾದರೆ ಗಾಂಧಿ ನೆಹರುಗಳಿಗಾಗಲಿ; ಕಾಂಗ್ರೆಸಿನ ಇನ್ನು ಯಾವ ಪ್ರಭಾವಶಾಲೀ ವ್ಯಕ್ತಿಗಾಗಲಿ ಜನರನ್ನು ಒಲಿಸಲು ಇಂದು ಸಾಧ್ಯವಿಲ್ಲವಾಗಿದೆ. ಜನರು ತಮ್ಮ ಸರಕಾರಕ್ಕೆ ತಮ್ಮ ಸ್ವಾತಂತ್ರ್ಯಕ್ಕೆ ಹೋರಾಡುತ್ತೇವೆಂದು ಸ್ಪಷ್ಟವಾಗಿ ತಿಳಿಯದೆ ಹೋರಾಡಲಾರರು. ಈ ವಿಷಯದಲ್ಲಿ ಜವಾಹರಲಾಲಜಿ ಬ್ರಿಟಿಷ್ ಏಜೆಂಟರ ಅನೇಕ ಮಾತುಗಳಿಗೆ ತಲೆತಗ್ಗಿಸಿದ್ದರು. 'ಅಕ್ಷರಾಷ್ಟ್ರಗಳನ್ನು ಗೆಲ್ಲಬೇಕೆಂದು ನಾನೊಪ್ಪುತ್ತೇನೆ. ನಮಗೆ ಯುದ್ಧಾನಂತರ ಸ್ವಾತಂತ್ರ್ಯ ಸಿಕ್ಕೀತೆಂದೂ ನಾನು ಒಪ್ಪುತ್ತೇನೆ. ಆದರೆ, ಈ ಯುದ್ಧದಲ್ಲಿ ಸೇರಿ ಜನರು ಬಲಿದಾನ ಮಾಡಲು, ಮನೆಮಠಗಳನ್ನು ಸುಟ್ಟುಕೊಳ್ಳಲು, ಬರಗಾಲದ ಬನ್ನಬರಲು ರಾಷ್ಟ್ರೀಯ ಸರಕಾರವಿಲ್ಲದೆ ಅವರನ್ನು ಒಪ್ಪಿಸಲಾರೆನು.' ಈ ವಿಷಯವಾಗಿ ಮಂಗಮುಷ್ಟಿ ಹಿಡಿಯದೆ, ಆಲೋಚಿಸಬೇಕೆಂದು ಜವಾಹಿರಲಾಲಜಿ ಬ್ರಿಟಿಷ್ ಏಜೆಂಟರೊಡನೆ ಕೇಳಿಕೊಂಡರು. ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸಿನ ಗುಪ್ತ ಮಾತುಕತೆಗಳೂ ಸಿಕ್ಕಿದವು. ಅದರಲ್ಲಿಯೂ ಇದೇ ವಿಷಯ ವಿಶದವಾಗುತ್ತದೆ. ಲಾರ್ಡ್ ಲಿನ್‌ಲಿತ್‌ಗೋರವರು ಈ ಚಳವಳ ಹೂಡಿದವರೊಡನೆ ಗುಪ್ತಹಂಚಿಕೆ ಮಾಡಿದ್ದಾರೆ! (ಕೈಚಪ್ಪಾಳೆ) ನಾನಿದನ್ನು ತಮಾಷೆಗಾಗಿ ಹೇಳಿದ್ದಲ್ಲ; ನಾನು ಪೂರ್ವಕ ಹೇಳಿದ್ದು. ಹೀಗೆ ಬ್ರಿಟಿಷ್ ಸರಕಾರವು ಬೇಕೆಂದೇ ದೇಶದ ಪರಿಸ್ಥಿತಿ ಹದಗೆಟ್ಟಿತು. ಇದು ಬೇಕೆಂದೇ ಮಾಡಿದ ಗುಪ್ತ ಹಂಚಿಕೆ! ನಮಗೆ ನಮ್ಮ ಸ್ವಂತ ಸರಕಾರ ಬೇಕಾಗಿದೆ. ಅದರಿಂದ ಮಾತ್ರ ನಾವು ಜನತೆಯನ್ನು ಉತ್ತೇಜಿಸಬಲ್ಲೆವು. ರಾಷ್ಟ್ರೀಯ ಸರಕಾರ ಕೊಡದೆ ನಮ್ಮ ಜನರನ್ನು ನೀವು ಒತ್ತಾಯಮಾಡಲಾರಿರಿ. ರಾಷ್ಟ್ರೀಯ ಸರಕಾರವಿಲ್ಲದೆ ಎಲ್ಲಾ ತರದ ಜನರನ್ನು, ದೊಡ್ಡ ಹೆಸರುಹೊತ್ತ ಜನರನ್ನೂ ನೀವು ಒಟ್ಟುಗೂಡಿಸಲಾರಿರಿ; ಹಾಗಾಗದಿದ್ದರೆ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾಗುವವು'.

ಸುಳ್ಳು ಸುದ್ದಿಗಳ ಮೊಲುಕಾಟ

'ನಾವು ಹಿಂದು ವಿರೋಧದ ಸುಳ್ಳುಸುದ್ದಿಗಳನ್ನೇ ಮೆಲುಕಾಡುತ್ತಿದ್ದೇವೆ. ಕಾಂಗ್ರೆಸು ಭಾರತದ ಪ್ರತಿನಿಧಿಯಲ್ಲ. ಜಿನ್ನಾ ಬಹಳ ಪ್ರಮುಖ ವ್ಯಕ್ತಿ, ಕಾಂಗ್ರೆಸು ಮುಸ್ಲಿಮರಿಂದಲೂ ಕೂಡಿದೆ ಎಂಬುದು ಸುಳ್ಳು, ಇಂಗ್ಲಿಷರನ್ನು ಭಾರತದಲ್ಲಿ ಬಹಳ ಪ್ರೀತಿಸುತ್ತಾರೆ. ಭಾರತದಲ್ಲಿ ಸುಖಸಂಪತ್ಸಮೃದ್ಧಿಯಿದೆ.' ಎಂದು ನಮ್ಮ ಮನಸ್ಸಮಾಧಾನಕ್ಕಾಗಿ ನಾವು ಹೇಳಿಕೊಳ್ಳಬಹುದು. ಭಾರತಕ್ಕೆ ಸ್ವರಾಜ್ಯ ಕೊಡದಿರುವುದು ಬ್ರಿಟಿಷರಲ್ಲ;

(2ನೆಯ ಪುಟವನ್ನು ನೋಡಿ)

ವಿಮಾನ ದೊರೆತರೆ ವಿಲಾಯತಿಗೆ ಹಾರುತ್ತೇನೆ'

(1ನೆಯ ಪುಟದಿಂದ ಮುಂದುವರಿದುದು)

ಅನ್ಯೋನ್ಯ ಕಲಹದಿಂದ ಭಾರತೀಯರು ಸ್ವರಾಜ್ಯ ಕಳಕೊಂಡರು ಎಂದೂ ಆತ್ಮವನ್ನು ತೃಪ್ತಿಗೊಳಿಸ ಬಹುದು. ಆದರೆ ಈ ಮಿಥ್ಯಾವಿಚಾರಕ್ಕೆ ಅಂಟಿಕೊಂಡು, ಕ್ರಿಪ್ಸ್ ಸಂಧಾನವು ವಿಫಲವಾದ ಬಳಿಕವೂ ನಾವು ಸುಮ್ಮಗೆ ಇಂದಿನ ವರೆಗೆ ಕುಳಿತಿರುವುದರಿಂದ ಇಂಥಾ ಕಲಹವನ್ನು ನಾವು ರೂಪುಗೊಳಿಸಿದ್ದೇವೆ' ಎಂಬುದಾಗಿ ಚೀನದ ಪ್ರಸಿದ್ಧ ಲೇಖಕ ಲಿನ್‌ಯು ತಾಂಗರು 'ಫ್ರೀವರ್ಲ್ಡ್' ಪತ್ರಿಕೆಯಲ್ಲಿ ಬರೆಯುತ್ತಾರೆ. ಈ ಪತ್ರಿಕೆ ಇಂಗ್ಲಿಷ್, ಚೀನೀ, ಸ್ಪೈನ್, ಫ್ರೆಂಚ್ ಭಾಷೆಗಳಲ್ಲಿ ಪ್ರಕಟವಾಗುತ್ತದೆ. ಅವರು ಆ ಲೇಖನದಲ್ಲಿ ಮತ್ತೆ ಹೀಗೆಂದಿರುವರು:

ವಾಶಿಂಗ್‌ಟನ್ ಡಿವೆಲರರಂತೆ!

'ಅಂಥಾ ಭ್ರಾಂತಿ, ಸುಳ್ಳು, ಅಪಪ್ರಚಾರಗಳ ಕಾಲ ಕಳೆದುಹೋಯಿತು. ಅವುಗಳನ್ನು ಅಪ್ಪಿ ಕುಳಿತಿದ್ದುದರ ಫಲನಾವಿಂದು ತಿನ್ನಬೇಕಾಗಿದೆ. ಅಮೆರಿಕದಲ್ಲಿ ಭಾರತೀಯರ ವಿರುದ್ಧ ಹರಡುತ್ತಿರುವ ಸುಳ್ಳು, ಅಬದ್ಧ, ಅನ್ಯಾಯ, ಅಪಪ್ರಚಾರಗಳನ್ನು ತೊಳೆದುಹಾಕಬೇಕು. ಡಿಲ್ಲಿ ಕಲ್ಕತ್ತೆಗಳ ವಾರ್ತಾ ನಿರ್ಬಂಧಕರ ಕನ್ನಡಿ ಮೂಲಕ ವಲ್ಲದೆ ಬೇರೆ ಭಾರತದ ಸುದ್ದಿ ಅಮೆರಿಕನರಿಗೆ ಗೊತ್ತಿಲ್ಲ. ಅವರಿಗೆ ಕಳುಹಿಸುವ ವಿಚಾರ ಅಬದ್ಧ, ಅಸ್ಪಷ್ಟ ಮಾತ್ರವಲ್ಲದೆ ಅನರ್ಥಕಾರಿಯೂ ಆಗಿದೆ. 'ಗಾಂಧಿ ಶಾಂತಿವಾದಿ, ಗಾಂಧಿಗೆ ತಲೆಕೆಟ್ಟಿದೆ; ಗಾಂಧಿಗೆ ಹಿಂದುಮುಂದಿನ ಜ್ಞಾನವಿಲ್ಲ; ಗಾಂಧಿ ಬ್ರಿಟಿಷರು ನಿರ್ನಾಮವಾಗಬೇಕೆಂದು ಬಯಸುತ್ತಾನೆ' ಹೀಗೆ ಅಲ್ಲಿ ಪ್ರಚಾರ ಮಾಡಲಾಗುತ್ತದೆ! ಇವೆಲ್ಲಾ ಸರಿ! ಆದರೆ ಯಾಕೆ ಗಾಂಧಿ ಅಂಥಾ ಹುಚ್ಚ? ನೆಹರು ಮೊದಲಾದ ಕಾಂಗ್ರೆಸು ಮುಂದಾಳುಗಳಾದರೂ ಯಾಕೆ ಹುಚ್ಚರಾಗಿದ್ದಾರೆ? ಅವರನ್ನು ಹಿಂಬಾಲಿಸುವ ಭಾರತೀಯರೇಕೆ ಮರುಳರು? –ಅಂದು ಜಾರ್ಜ್ ವಾಶಿಂಗ್‌ಟನ್ ಯಾತಕ್ಕಾಗಿ ಹೋರಾಡಿದನೋ ಗಾಂಧಿ ಅದಕ್ಕಾಗಿ ಹೋರಾಡುವುದರಿಂದ ಹುಚ್ಚ! ವಾಶಿಂಗಟನ್, ಥಾಮಸ್ ಪೆಯಿನರಂತೆ 'ಸ್ವಾತಂತ್ರ್ಯ'ವೆಂಬ ಈ ಸಣ್ಣ ಶಬ್ದಕ್ಕಾಗಿ ಅಷ್ಟೊಂದು ಚಡಪಡಿಸುವುದರಿಂದ ನೆಹರುವಾದರೂ ಹುಚ್ಚ! ಅಂದಿನ ಅಮೇರಿಕದಂತೆ ಇಂದು ಭಾರತವೂ ಸ್ವಾತಂತ್ರ್ಯ ಬಯಸುತ್ತಿದೆ. ಗಾಂಧಿ ನೆಹರುಗಳು ವಾಶಿಂಗ್‌ಟನ್ ಇದ್ದಂತೆ; ಡಿವೆಲರ ಇರುವಂತೆ! ಭಾರತದಲ್ಲಿ ಇಂದು ನಡೆಯುತ್ತಿರುವಂಥಾ ಅತ್ಯಾಚಾರ ಹಿಂಸೆ ಅಮೆರಿಕ ಅಯರ್ಲೆಂಡುಗಳಲ್ಲಿಯೂ ಹಿಂದೆ ನಡೆದಿದೆ. ಈಗ ಅಮೆರಿಕನರಿಗೆ ಸ್ವಾತಂತ್ರ್ಯ ಸಿಕ್ಕಿರುವ ಕಾರಣ ಅವರು ಸ್ವಾತಂತ್ರ್ಯ ಕಳೆದುಕೊಂಡವರ ಕೂಗಾಟದ ಅರ್ಥವನ್ನೇ ಮಾಡಲಾರದವರಾಗಿದ್ದಾರೆ!

'ಹೋರಾಟ ಬಿಡಬೇಡಿ!'

'ಸ್ವಾತಂತ್ರ್ಯ ಸಂಪಾದನೆಗಾಗಿ ವಾಶಿಂಗ್‌ಟನರು ಯಾವ ಜನತಾ ಬೆಂಬಲ ಪಡೆದುಬಿಟ್ಟಿದ್ದರೋ, ಅದೇ ಬೆಂಬಲ ಇಂದು 'ಗಾಂಧಿಜಿ ನೆಹರೂ ಪಡೆದಿದ್ದಾರೆ. ಎಲ್ಲಾ ರಾಷ್ಟ್ರಗಳ ಸ್ವಾತಂತ್ರ್ಯ ಪಾಲನೆಗಾಗಿ ಹೋರಾಡಬೇಕೆಂದು ಕಾರ್ಡೆಲ್ ಹಲ್ಲರು ಮೊನ್ನೆ ಹೇಳಿದರು. ಭಾರತವು ಅವರ ಮಾತನ್ನು ಪಾಲಿಸುತ್ತದೆ. ಈಗ ಪುನಃ ಹಲ್ಲರು 'ಸ್ವಾತಂತ್ರ್ಯಕ್ಕಾಗಿ ನೀವು ಹೋರಾಡಕೂಡದು' ಎಂದು ಹೇಳಬಲ್ಲರೆ? ಗ್ರೀಸ್, ಯುಗಸ್ಲಾವಿಯಾ, ಆಕ್ರಮಿತ ಫ್ರಾನ್ಸುಗಳ ಸ್ವಾತಂತ್ರ್ಯದ ಬಗ್ಗೆ ನಮಗೆ ಬಹಳ ಸಹಾನುಭೂತಿ! ಆದರೆ ಪ್ರಪಂಚದಲ್ಲಿ ಅತ್ಯಂತ ಹಿರಿಯ ರಾಷ್ಟ್ರವಾದ ಭಾರತದ ಸ್ವಾತಂತ್ರ್ಯದ ವಿಚಾರದಲ್ಲಿ ಕಣ್ಣು ಮುಚ್ಚಿಕೊಂಡಿರುವೆವು! ಭಾರತವಿಂದು ಸ್ವಾತಂತ್ರ್ಯ ಬಯಸುತ್ತದೆ. ಸ್ವತಂತ್ರ ರಾಷ್ಟ್ರವಾಗಿ ಮಿತ್ರರಾಷ್ಟ್ರಗಳೊಡಗೂಡಿ ಹೋರಾಡಬೇಕೆಂದು ಭಾರತದ ಬಯಕೆ. ಸ್ವತಂತ್ರ ರಾಷ್ಟ್ರದ ಸ್ಥಾನ ಸಿಗುವುದಾದರೆ ಮಿತ್ರ ರಾಷ್ಟ್ರಗಳ ಸೈನ್ಯ ಭಾರತದಲ್ಲಿ ಉಳಕೊಂಡು ರಾಷ್ಟ್ರರಕ್ಷಣೆಗೆ ನೆರವಾಗಬಹುದೆಂದು ಕಾಂಗ್ರೆಸು ಸ್ಪಷ್ಟಮಾಡಿದೆ. ಭಾರತವಿಂದು ಏಕಕಂಠದಿಂದ ಸ್ವರಾಜ್ಯ ಕೇಳುತ್ತಿದೆ. ಸ್ವರಾಜ್ಯ ಸಿಗುವ ವರೆಗೆ ಭಾರತೀಯರು ಹೋರಾಟ ಬಿಡಬೇಡರೆಂದು ನಾನು ಅವರನ್ನು ಎಚ್ಚರಿಸುತ್ತೇನೆ. ನಾವು ಭಾರತದಿಂದ ಅಪಹರಿಸಿಕೊಂಡ ಸ್ವಾತಂತ್ರ್ಯವನ್ನು ಪುನಃ ಕೊಡಲು ನಿರಾಕರಿಸಲು ತಕ್ಕ ರಾಜನೀತಿಯೇ ಕಾರಣ, ರಾಜಕಾರಣಿಗಳು ತಮ್ಮ ಬುದ್ಧಿ ವಂತಿಕೆಯಿಂದ ಯುದ್ಧ ಕಾರ್ಯಕ್ಕೆ ಘಾತುಕರಾಗಿದ್ದಾರೆ! ಕಳೆದ ಶತಮಾನದ ಮನೋವೃತ್ತಿ, ಸಾಮ್ರಾಜ್ಯಶಾಹೀ ಬುದ್ಧಿಗಳನ್ನಿಟ್ಟುಕೊಂಡರೆ ನಾವೀ ಯುದ್ಧವನ್ನು ಗೆಲ್ಲಲಾರೆವು. ನಮ್ಮನ್ನು ಮೀಂಟಿ ಇಂದು ಯುದ್ಧದ ಗತಿಯಿದೆ; ನಾವದನ್ನು ಹಿಡಿಯೋಣ!"

ಸಿಂಧ ಮಂತ್ರಿಮಂಡಳ

ದ ರಚನೆ ಈಗ ಆಗಿದೆ. ಅಲ್ಲಾಭಕ್ಷರನ್ನು ಅಧಿಕಾರದಿಂದ ತಳ್ಳಿದ, ಗವರ್ನರರು ಸರ್ ಗುಲಾಂ ಹುಸೇನ್ ಹಿದಯತುಲ್ಲಾ ರವರನ್ನು ಮಂತ್ರಿಮಂಡಳದ ರಚಿಸುವರೆ ಕೇಳಿಕೊಂಡರು. ಇವರೊಡನೆ ಹಿಂದಿನ ಮಂತ್ರಿಮಂಡಳದ ಒಬ್ಬಿಬ್ಬರೂ ಸಹಕರಿಸಿ ಈಗ ಮಂತ್ರಿಮಂಡಳ ಆಗಿದೆ. ಮುಸ್ಲಿಂ ಲೀಗಿನ ಖುರ್ರೋ ಮತ್ತು ಗಾಜದಾರ್ ಇವರು ಅವರೊಡನೆ ಸಹಕರಿಸುವಲ್ಲಿ ತನ್ನ ಒಪ್ಪಿಗೆ ಇಲ್ಲವೆಂದು ಜಿನ್ನರು ಹೇಳಿದ್ದಾರೆ. ಡಾ। ಹೇಮನ್‌ದಾಸ್ ಮತ್ತು ರಾಯ್ ಸಾಹೇಬ್ ಗೋಕುಲ್‌ದಾಸ್ ಎಂಬಿಬ್ಬರು ಹಿಂದೂ ಮಂತ್ರಿಗಳೂ ಈ ಮಂತ್ರಿಮಂಡಳದಲ್ಲಿ ಸೇರಿಕೊಂಡಿದ್ದಾರೆ. ಈ ಹಿಂದೂ ಮಂತ್ರಿಗಳ ಮನೆಯ ಮುಂದೆ ಪಿಕೆಟಿಂಗ್ ನಡೆದಿದೆ. ಪಿಕೆಟಿಂಗ್ ಮಾಡಿದವರನ್ನು ಬಂಧಿಸಿರುವರು.

NOTICE

In the Court of the Subordinate Judge of S. Kanara

O. S. No. 122/1934

Between:

Akku Amma and others–Plffs.

Kaman Nair & others– Defts.

Take notice that as per order of the Sub Court, Mangalore, made on. 21-10-1942, on the memo filed by the Assistant receiver Mr. U. C. S. Bhat, the Assistant receiver will sell by public auction to the highest bidder at 12 noon on the 5th November 1942, at the traveller's bungalow, Hosdurg, the right to collect the arrears of rental due from the various tenants of the Kodoth estate, as shown in schedules Band C of the said Memo in one lot. Further particulars may be had from the assistant receiver or his agent Mr. K. Srinivasa Rao, Kotachery, Hosdurg Kanhangad.

The successful bidders will have to deposit ¼th of the purchase money immediately after the sale and pay the balance in 15 days there from, on which the sale will be confirmed and transfer of the right to collect the arrears will be executed by the assistant receiver at the purchaser's cost. On failure to pay by 15 days as said above the deposit will be forfeited and the bidder will be liable to pay all the damages caused by the resale that may be made by the assistant receiver.

Mangalore 23-10-1942 | U. C. S. Bhat, Assistant Receiver

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

BALANCE AND THE BALANCE WHEEL

ಬೇಲೆನ್ಸ್ ಮತ್ತು ಬೇಲೆನ್ಸ್ ಸ್ಪ್ರಿಂಗ್

ವಾಚು ಕೆಲಸ ಮಾಡುವುದಕ್ಕೆ ಇವುಗಳು ಮುಖ್ಯ ಸಾಮಗ್ರಿಗಳು. ಸರಿಯಾದ ಸಮಯ ತೋರಿಸಲು ಬೇಲೆನ್ಸ್ ಸ್ಪ್ರಿಂಗಿನ ಬಲವು ಬೇಲೆನ್ಸ್‌ನ ಭಾರಕ್ಕೆ ತಕ್ಕಂತಿರಬೇಕು. ವೆಸ್ಟ್ ಎಂಡ್ ವಾಚುಗಳು ಹೀಗೆಯೇ ಇವೆ. ಕಾರಣ ಇವುಗಳ ತಯಾರಿಯು ಈಗಿನ ಹೊಸ ವಿಜ್ಞಾನ ರೀತಿಗಳಿಗನುಸರಿಸಿ ನುರಿತ ವಾಚು ಕೆಲಸಗಾರರಿಂದ ಆಗುತ್ತಿದೆ. ಇವುಗಳಿಗೆ ಉಪಯೋಗಿಸುತ್ತಿರುವ ಎಲ್ಲಾ ವಸ್ತುಗಳು ಅತ್ಯುತ್ತಮವಾದವುಗಳು. ಬಾಳಿಕೆಗೆ ಗೇರಂಟಿಯುಳ್ಳವುಗಳಾಗಿವೆ.

ಸೆಕೆಂಡಸ್ ಮಿನಿಯೇಚರ್ ರೆಕ್ಟಾಂಗ್ಯು

ಬರ್ ವೇ ಎ. ಪೇ. ಎ. ಬ್ರ್ಯಾ. ಸ್ಟೀ. ರೂ. 57, 9 ಕೇ. ರೂ. 60, 18 ಕೇರಟ್ ರೂ. 107.



ಸೆಕೆಂಡಸ್ ಮಿನಿಯೇಚರ್ ಒಬ್ಲಾಂಗ್

ಕ್ರೋ. ಗೋ. ರೂ. 60. 9 ಕೆ. ರೂ. 79 18 ಕೇ. ಗ. ಬಂ. ರೂ. 107.

ನಿಮಗೆ ಪ್ರಯೋಜನಾರ್ಥವಾಗಿಯೇ ವೆಸ್ಟ್ ಎಂಡ್ ವಾಚುಗಳನ್ನು ಕೊಳ್ಳಿರಿ. ಕೆಟಲಾಗು ಧರ್ಮಾರ್ಥ;

ವೆಸ್ಟ್ ಎಂಡ್ ವಾಚ್ ಕಂಪೆನಿ

ಮುಂಬಯಿ, — ಕಲ್ಕತ್ತ.

WEST END WATCH Co

BOMBAY CALCUTTA

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, ILMITE.D

ESTD: 1906.

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡ್ ಇನ್ನೂ ಶತ್ರು ವಶವಾಗಿಲ್ಲ. ರಶ್ಯನ್ ವೀರರಿನ್ನೂ ತಲೆತಗ್ಗಿಸಿಲ್ಲ. ಕಳೆದ ಎರಡು ತಿಂಗಳಿಂದ ಒಂದೇ ಸಮನೆ ಜರ್ಮನ್ ರಶ್ಯನ್ ವೀರರು ಎದೆಗೆ ಎದೆಕೊಟ್ಟು ಜೀವಕ್ಕೆ ಜೀವ ಕೊಟ್ಟು ಹೋರಾಡುತ್ತಾರೆ! ಜರ್ಮನರೀ ಸಂದರ್ಭದಲ್ಲಿ ಸ್ಟಾಲಿನ್‌ಗ್ರಾಡ್ ನಗರವನ್ನು ಭೇಧಿಸಿ ಒಳಹೊಕ್ಕುಬಿಟ್ಟರು; ಆದರೆ ಅಲ್ಲಿಯೂ ಮುಂದೆ ನಗರದ ಬೀದಿಬೀದಿಗಳಲ್ಲಿ ಕೈಕೈಕಾಳಗ ಸಾಗಿತು. ಈಗ ಬಂದ ವಾರ್ತೆಯಿಂದಂತೂ ಅತ್ಯಂತ ಭೀಷಣ ಸಂಗ್ರಾಮವು, ನಿರ್ಣಾಯಕ ಸಮರವೇ ಸಾಗುತ್ತಿದೆ. ಈ ಸಂದರ್ಭದಲ್ಲಿ ಜರ್ಮನರು ಹೊಸದಾಗಿ ಇಪ್ಪತ್ತೈದು ಸಾವಿರ ಸೈನಿಕರನ್ನೂ ೧೦೦ ಯಾಂತ್ರಿಕ ಫಿರಂಗಿಗಳನ್ನೂ ತಂದಿರುವರು. ಬಲವನ್ನು ಪ್ರಬಲಗೊಳಿಸಿ ಜರ್ಮನರು ಕಾದಾಡುತ್ತಾರೆ. ರಶ್ಯನರು ಜೀವದ ಹಂಗು ತೊರೆದು ಅವರನ್ನು ಎದುರಿಸುತ್ತಾರೆ. ಇಷ್ಟರಲ್ಲಿಯೇ ಜರ್ಮನರು ನಗರದ ಒಳಹೊಕ್ಕು ಕೆಲವು ಕಾರ್ಖಾನೆಗಳನ್ನು ವಶಪಡಿಸಿಕೊಂಡರು. ಧಾನ್ಯ ಕೇಂದ್ರ, ಎಣ್ಣೆ ಕೇಂದ್ರ, ಕೈಗಾರಿಕೆ ಕೇಂದ್ರಗಳನ್ನು ನೋಡಿಕೊಂಡೇ ಜರ್ಮನರು ಹೋರಾಡುತ್ತಾರೆ. ಛಳಿಗಾಲ ಬಂತೇನೋ ಸರಿ! ಇಷ್ಟರಲ್ಲಿ ಹಿಮದ ಗಡ್ಡೆ ಸ್ಟಾಲಿನ್‌ಗ್ರಾಡ್ ಬೀದಿಯಲ್ಲಿ ತುಂಬಿರಬೇಕು; ವೋಲ್ಗಾ ಹೆಪ್ಪುಗಟ್ಟಿರಬೇಕು; ಆದರೆ ಜರ್ಮನರ ಆರ್ಭಟವೇನೂ ಕಡಿಮೆಯಾದಂತೆ ಕಾಣುವುದಿಲ್ಲ. ಸ್ಟಾಲಿನ್‌ಗ್ರಾಡಿನ ಅವಸ್ಥೆಯೇನೋ? ರಶ್ಯದ ಗ್ರಹಗತಿ ಹೇಗಿದೆಯೋ? ಎಂದು ಲೋಕದ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳೆಲ್ಲಾ ಮರುಗುತ್ತಿವೆ! ಆದರೆ ಮಿತ್ರರು ಇನ್ನಾದರೂ ದ್ವಿತೀಯ ರಣರಂಗ ತೆರೆಯಲೊಲ್ಲರು!

ಇಜಿಪ್ತಿನಲ್ಲಿ ಪುನಃ ರೌದ್ರ!

ಕಳೆದಸಲ ನಾವು 'ಇಜಿಪ್ತ ಸದ್ಯಕ್ಕೆ ಸ್ತಬ್ಧವಾಗಿದೆ' ಎಂದು ಬರೆದಿದ್ದೆವು. ರೋಮೆಲನ ಬರ್ಲಿನ್ ಪ್ರಯಾಣದ ಕುರಿತು ಪ್ರಚಾರಕರು ಏನೇನೋ ಹೇಳಿಬಿಟ್ಟರು! ಹಿಟ್ಲರ್ ರೋಮೆಲರಲ್ಲಿ ಮತಭೇದವಾಗಿದೆಯೆಂದೂ ಬೊಬ್ಬಿಟ್ಟರು! ಆದರೆ ಈ ವಿಷಯವನ್ನು ನಂಬಲಾಗುವುದಿಲ್ಲವೆಂದೂ, ಹಿಟ್ಲರ್ ಸದ್ಯಕ್ಕೆ ಇಜಿಪ್ತಿನಿಂದ ಸ್ಟಾಲಿನ್‌ಗ್ರಾಡ್ ಸಂಗ್ರಾಮ ಮುಗಿಸಲು ಸ್ವಲ್ಪ ಸೈನ್ಯವನ್ನು ಹಿಂದೆ ಕರೆದಿದ್ದು, ರೋಮೆಲ್ ಹೊಸ ಸೈನ್ಯ ಸಾಮಗ್ರಿಗಳನ್ನು ಕಾಯುತ್ತಿರಬಹುದೆಂದೂ, ಬೇಗನೇ ಇಜಿಪ್ತ ರುದ್ರವಾಗಲಿದೆಯೆಂದೂ ನಾವು ಕಳೆದ ಸಲ ಬರೆದುದನ್ನು ವಾಚಕರು ಮರೆತಿರಲಿಕ್ಕಿಲ್ಲ. ನಮ್ಮ ಮಾತು ಈಗ ಸತ್ಯವಾಯಿತು! ಇಜಿಪ್ತ ರಣರಂಗದಲ್ಲಿ ಪುನಃ ಹೊಸ ರಣಕಹಳೆಯು ಘೋಷಿಸುತ್ತಿದೆ. ವೈರಿಬಲವನ್ನು ಮಿತ್ರರ ಅಷ್ಟಮ ದಳವು ಯಶಸ್ವಿಯಾಗಿ ಪ್ರತಿಭಟಿಸುತ್ತಿದೆ; ಶತ್ರುದಳವನ್ನು ಭೇದಿಸುತ್ತಿದೆ. ಒಮ್ಮೆಲೇ ಆಕಾಶದಲ್ಲಿ ನೆಲದಲ್ಲಿ ವಿಮಾನಗಳಿಂದಲೂ ಟ್ಯಾಂಕುಗಳಿಂದಲೂ ಹೀಗೆ ಎಲ್ಲೆಡೆಗಳಲ್ಲಿಯೂ ಸಂಗ್ರಾಮವೇ ಸಂಗ್ರಾಮವಾಗಿಬಿಟ್ಟಿದೆ! ಬಾಂಬು ಗುಡುಗುತ್ತಿದೆ; ಫಿರಂಗಿ ಸಿಡಿಯುತ್ತಿದೆ. ಎರಡು ಪಕ್ಷಗಳ ಯೋಧರೂ ವೀರಾವೇಶ ಹೆಚ್ಚಿ ಮುನ್ನುಗ್ಗಿ ಹೋರಾಡುತ್ತಿದ್ದಾರೆ. ಕಳೆದ ಒಂದು ವರ್ಷದಿಂದ, ಪ್ರತಿವಾರದಲ್ಲಿಯೂ, ಆರ್. ಎ. ಎಫ್. ವಿಮಾನಗಳನ್ನು ಪಶ್ಚಿಮ ಆಫ್ರಿಕದಿಂದ ಪೂರ್ವ ಮಧ್ಯಪ್ರದೇಶಕ್ಕೆ ಒಂದೇ ಸಮನೆ ಸಾಗಿಸುತ್ತಾ ಬಂದಿದ್ದು ಈಗ ಅಲ್ಲಲ್ಲಿ ಸರಪಳಿಯಂತೆ ಮಿತ್ರವಿಮಾನ ಗೃಹಗಳು ಕಟ್ಟಲ್ಪಟ್ಟಿದ್ದು ತಕ್ಕ ಸಿಬ್ಬಂದಿ ಸಜ್ಜಿತವಾಗಿರುವುದೆಂದು ಮಿತ್ರರು ಘೋಷಿಸುತ್ತಾರೆ. ಜರ್ಮನ್ ರಣಘರ್ಜನೆಯೂ ಅತ್ಯಂತ ಭೀಕರವೇ ಆಗಿದೆ.

ಹೀಗೆ ಇಜಿಪ್ತಿನಲ್ಲಿ ಇಂದು ಪುನಃ ಕಾಳಗಕ್ಕೆ ಕಳೆಯೇರಿದ್ದರಲ್ಲಿ ಏನೇನೂ ಆಶ್ಚರ್ಯಪಡಬೇಕಾದ ವಿಷಯವಿಲ್ಲ. ಕಳೆದ ಎರಡು ವಾರಗಳಿಂದ, ಉಭಯಪಕ್ಷಗಳೂ ಪುನಃ ಶಕ್ತಿ ಪರೀಕ್ಷೆಗಾಗಿ ಸಮರ ಸಿದ್ಧತೆ ನಡೆಸುತ್ತಲೇ ಇದ್ದವು. ರೋಮೆಲ್ ಬರ್ಲಿನಿಗೆ ಹೋಗಿ, ಹಿಟ್ಲರನೊಡನೆ ಮಾತನಾಡಿ, ಹೊಸ ಸೈನ್ಯಕೊಟ್ಟರೆ ಇಜಿಪ್ತನ್ನು ಬೇಗನೇ ಸ್ವಾಧೀನಪಡಿಸುವೆನೆಂದು ಭರವಸೆ ಕೊಟ್ಟು ಬಂದಿರಬೇಕು. ಅಂತೂ ಇತ್ತೀಚಿಯ ಘಟನೆಗಳನ್ನು ಪರ್ಯಾಲೋಚಿಸಿದರೆ, ಜರ್ಮನ್ ದಳಪತಿ ಮಹಾ ಸಂಗ್ರಾಮಸಿದ್ಧತೆ ಮಾಡುತ್ತಿದ್ದನೆಂಬುದು ವ್ಯಕ್ತವಾಗದಿರದು. ಮಾಲ್ಟಾದ ಮೇಲೆ ಬಲವಂತವಾಗಿ ಗುಂಡಿನ ಮಳೆಸುರಿಯುತ್ತಿದ್ದುದು ಈ ವಿಷಯವನ್ನೇ ತಿಳಿಸಿತು. ಜರ್ಮನರು ಬ್ರಿಟಿಷರ ಅಷ್ಟಮ ದಳಕ್ಕೆ ಸಾಮಗ್ರಿ ಸಿಗದಂತೆ ಮಾಡುವುದಕ್ಕಾಗಿ ಕೇಪ್‌ನ ಬಳಿಯಲ್ಲಿಯೂ ಬೋಟುಗಳ ಚಟುವಟಿಕೆ ಹೆಚ್ಚಿಸಿದ್ದಾರೆಂದು ವಾರ್ತೆಯಿದೆ. ಅಷ್ಟಮ ದಳದವರಾದರೂ, ಇಂದಿನೀ ಹೊಸ ಸಂಗ್ರಾಮದಲ್ಲಿ ಮರದಾಳಿಕನ ವಹಿಸಿಕೊಂಡದ್ದು ಪ್ರಶಸ್ತವೇ ಆಯಿತು. ಕಳೆದ ಮೂರು ತಿಂಗಳಿಂದ ಅಷ್ಟಮದಳವು ಎಲ್ ಅಲಮೇನನಲ್ಲಿ ತಳವೂರಿ ರೋಮೆಲನನ್ನು ಎದುರಿಸುತ್ತಾ ನಿಂತಿದೆ! ಹೀಗೆ ಇಜಿಪ್ತಿನಲ್ಲಿ ಹೊಸ ಸಂಗ್ರಾಮ ಆರಂಭವಾದದ್ದರಿಂದ ಇದೀ ಯುದ್ಧ ಪರಿಸ್ಥಿತಿಯಲ್ಲಿಯೇ ಹೊಸತೊಂದು ಪ್ರಸಂಗವೊದಗಿದಂತಾಗಿದೆನ್ನಬಹುದು. ಫೀಲ್ಡ್ ಮಾರ್ಶಲ್ ಸ್ಮಟ್ಸ್ ಮೊದಲಾದವರು ಇಜಿಪ್ತ ಯುದ್ಧರಂಗದ ಪ್ರಾಮುಖ್ಯತೆಯನ್ನು [illegible] ಹೇಳುತ್ತಿದ್ದರು. ದ್ವಿತೀಯ ರಂಗವನ್ನು ತೆರೆಯುವ ಮೊದಲು, ಮಧ್ಯಪೂರ್ವದಲ್ಲಿ ಮತ್ತು ಮೆಡಿಟರೇನಿಯದಲ್ಲಿ ತಮ್ಮ ಸ್ಥಾನಗಳೆಲ್ಲವನ್ನೂ ಭದ್ರಪಡಿಸಿಕೊಳ್ಳಬೇಕೆಂದು ಸಮರತಜ್ಞರು ಸಾರುತ್ತಿದ್ದರು. ಸಾಗರದ ವ್ಯವಹಾರ ಮತ್ತು ಮಾರ್ಗ ಸೌಕರ್ಯಗಳ ಭದ್ರತೆಗೆ ಮಧ್ಯಪೂರ್ವ ಮೆಡಿಟರೇನಿಯನ್‌ಗಳಿಂದ ಶತ್ರುವನ್ನು ಬೆನ್ನಟ್ಟುವುದು ಆವಶ್ಯವಿದೆ. ಹೀಗಾಗಿ ಇಜಿಪ್ತಿನಲ್ಲಿ ಪುನಃ ತೊಡಗಿರುವೀ ಸಂಗ್ರಾಮವು ಯುದ್ಧೇತಿಹಾಸದಲ್ಲಿ ಹೊಸತೊಂದು ಅಧ್ಯಾಯವನ್ನು ತೆರೆಯಲೂ ಸಾಕಾಗಿದೆ!

ಸೊಲೊಮನ್ ಸಂಗರ

ಜಪಾನರು ಪೆಸಿಫಿಕಿನಲ್ಲಿ ಸೊಲೊಮನ್, ನ್ಯೂಗಿನಿ ಮೊದಲಾದ ಕಡೆಗಳಲ್ಲಿ, ಭೀಕರ ರಣಯುದ್ಧ ಮಾಡುತ್ತಿರುವರು. ಗುಡಾಲಕನಾಲದಲ್ಲಿ ಜಪಾನ್ ಅಮೆರಿಕನ್ ಸೈನಿಕರಿಗೆ ಆಕ್ಟೋಬರ ಸೆಲ ನೀರುಗಳಲ್ಲಿ ನಡೆದ ಸಂಗ್ರಾಮವು ಅತ್ಯಂತ ಭೀಷಣವಾದುದು. ಉಭಯಪಕ್ಷದ ಶಕ್ತಿ ಪರೀಕ್ಷೆಯಾಗುವಂಥಾದ್ದು! ಹಿಂದೆ ಕೋರಲ್ ಮಿಡ್ವೇ ದ್ವೀಪಗಳ ಯುದ್ಧದಲ್ಲಿ ಜಪಾನ್ ಅಮೆರಿಕಗಳಿಗೆ ಘರ್ಷಣೆಯುಂಟಾಗಿತ್ತು. ಈ ಸಂಗ್ರಾಮದಿಂದ ಅತಿಪ್ರಮಾಣದಲ್ಲಿ ಮಹತ್ವದ ಪರಿಣಾಮವಾಗಲಿದೆ. ಈ ಯುದ್ಧದಲ್ಲಿ ಜಪಾನ್ ಅಮೆರಿಕಗಳಿಗೆ ಉಭಯ ಪಕ್ಷಗಳಿಗೂ ಆದ ಹಾನಿ ಅಸಂಖ್ಯ. ಆದ್ದರಿಂದಲೇ ಇದು ಶಕ್ತಿಪರೀಕ್ಷೆಯ ಸಂಗ್ರಾಮ. ಗುಡಲಕನಾಲಲ್ಲಿ ಜಪಾನರು ಈ ಯುದ್ಧಾರಂಭ ಮಾಡುವ ಮೊದಲೇ ಸೈನ್ಯವನ್ನು ತಂದಿಳಿಸಿದ್ದು ದ್ವೀಪದ ಸಮೀಪದಲ್ಲಿ ಪ್ರಚಂಡ ನೌಕಾದಳವನ್ನೂ ಸಿದ್ಧತೆಗೊಳಿಸಿದ್ದರು. ಆದ್ದರಿಂದಲೇ ಜಪಾನರು ಇಲ್ಲಿ ವಿಜಯ ಪಡೆಯುತ್ತಿದ್ದಾರೆ. ಜಪಾನ್ ನೌಕಾದಳವು ಬಹಳ ಬಲವಂತವಿದೆ; ಅದು ಅವರ ಭೂಸೈನ್ಯಕ್ಕೆ ಸಹಾಯ ಮಾಡುತ್ತಿದೆ. ವಾಯು ಸೈನ್ಯವೂ ಅಮೆರಿಕನ್ ನೌಕೆಗಳ ಮೇಲೆ ಬಾಂಬು ಸುರಿಸುತ್ತಿರುವುದು. ಅಮೆರಿಕನ್ ವೈಮಾನಿಕರು ಶಾರ್ಟ್‌ಲೇಂಡ್, ಫ್ಲೋರಿಡಾ ದ್ವೀಪಗಳಿಗೆ ಬಾಂಬು ಸುರಿಸುತ್ತಿದ್ದಾರೆ. ಗುಡಾಲಕನಾಲದಲ್ಲಿ ಈಗ ಭೂ ಯುದ್ಧವು ಪುನಃ ಪ್ರಾರಂಭವಾಗಿದೆ. ಜಪಾನರನ್ನು ಅಯೋರಾ ಪಳ್ಳದಿಂದ ಹಿಮ್ಮೆಟ್ಟಿಸಿ ಅವರೀಗ ಓವೆನ್ ಸ್ಟಾನ್ಲೆಯನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಕಾದಾಡುತ್ತಿದ್ದಾರೆಂದು ಮೆಕಾರ್ಥರ ಕಚೇರಿಯ ಸುದ್ದಿ. ಅಂತೂ ಇಲ್ಲಿ ಇಕ್ಕಡೆಯವರಿಗೂ ಕೈಕೈಕಾಳಗ ನಡೆಯಿತು. ಜಪಾನೀಸೈನ್ಯಗಳು ಪಶ್ಚಿಮದಲ್ಲಿ ಅಮೆರಿಕದ [illegible] ಬಹಳ ಸಾಹಸ ಮಾಡಿದವು. ಅಮೆರಿಕನ್ ದಳಪತಿ ಜನರಲ್ ಮೆಕಾರ್ಥರ. ವಿಮಾನಪಡೆಯು ಶತ್ರು ಬಂದರ ಹಾಗೂ ಸಾಮಗ್ರಿಸಾಧನ ಕೇಂದ್ರಗಳಿಗೆ ಎಡೆಬಿಡದೆ ಧಾಳಿಯಿಡುತ್ತಿದೆ. ಪಶ್ಚಿಮ ಭಾಗದಲ್ಲಿ ಟಿಮೋರ ದ್ವೀಪದಲ್ಲಿರುವ ಕೂಪಾಂಗಿನ ಶತ್ರುವಿಮಾನ ಗೃಹಗಳ ಮೇಲೆ ಧಾಳಿಯಿಡಲಾಗಿದೆ. ನ್ಯೂಗಿನಿಯ ಮಿಲ್ನೇಸ್ಸ್ನ ಗುಡ್ಡದಲ್ಲಿ ಈಗಲೂ ಯುದ್ಧ ನಡೆಯುತ್ತಿದೆ. ಅಲ್ಲಿ ಆಸ್ಟ್ರೇಲಿಯನರು ಜಪಾನರೊಡನೆ ಹೋರಾಡುತ್ತಿದ್ದಾರೆ. ಆಸ್ಟ್ರೇಲಿಯನರು, ಕೊಕೊಡದಲ್ಲಿರುವ ಮುಖ್ಯ ಪೂರೈಕೆ ಕೇಂದ್ರದಲ್ಲಿ ಒಂದೇ ಸಮನೆ ಮುಂದೊತ್ತಿ ಹೋಗುತ್ತಿದ್ದಾರೆ. ಬೊಗೇನವಿಲ್ಲೆ ದ್ವೀಪದಲ್ಲಿ ಮಿತ್ರ ವಿಮಾನಗಳು ಧಾಳಿಯಿಡುತ್ತಿವೆ. ಜಪಾನಿ ವಿಮಾನಗಳು ಡಾರ್ವಿನ್ ಬಂದರದ ಮೇಲೆ ಧಾಳಿಯಿಟ್ಟವೆಂದು ಸುದ್ದಿ ಬಂದಿದೆ. ಅಮೆರಿಕದ 'ಹಾರುವ ಕೋಟೆ'ಗಳೆಂಬ ವಿಮಾನಗಳು ನ್ಯೂ ಬ್ರಿಟನ್ನಿನ ರಬೌಲಿನ ಮೇಲೆ ಅಭಿಯೋಗ ನಡೆಸಿದವು. ಅಂತೂ ಕೊನೆಗೆ ಅಮೆರಿಕನರು ಗುಡಲಕನಾಲವನ್ನು ರಕ್ಷಿಸುವಲ್ಲಿ ಎಷ್ಟರಮಟ್ಟಿಗೆ ಕೃತಾರ್ಥರಾಗುವರೋ ಮುಂದೆ ನೋಡಬೇಕು. ಮಿತ್ರಪಕ್ಷದವರ ವಿಮಾನ ಬಲದ ಅದಮ್ಯ ಇಲ್ಲಿ ಪರೀಕ್ಷಿಸಲ್ಪಡುವುದು. ಹಾಗೂ ಜಪಾನರಾದರೂ ಈ ಯುದ್ಧದಲ್ಲಿ ಸೋತುಬಿಟ್ಟರೆ, ಬಲಿಷ್ಠ ಶತ್ರುವಿನೊಡನೆ ಬೇರೆ ರಣರಂಗಗಳಲ್ಲಿ ಹೇಗೆ ಹೋರಾಡಬಲ್ಲರು? ಸೊಲೊಮನಿನ ಈ ಯುದ್ಧವು ಈ ಎಲ್ಲಾ ಸಂಗತಿಗಳಿಂದ ಇಂದು ಬಹು ಮಹತ್ವದ್ದಾಗಿರುವುದು.

ವಿಲ್ಕಿ ಎಚ್ಚರಿಸುತ್ತಾರೆ!

ಪ್ರಯೋಜಕ ರಾಷ್ಟ್ರಗಳ ಪ್ರವಾಸಗೈದು ಅಮೆರಿಕಕ್ಕೆ ಮರಳಿ ಹೋದ ವೆಂಡಲ್ ವಿಲ್ಕಿಯವರು, ಅಮೆರಿಕನರಿಗಾಗಿ ಒಂದು ಉಪದೇಶಾತ್ಮಕ ಭಾಷಣವಿತ್ತು, ಅವರನ್ನು ಎಚ್ಚರಿಸುವ ಯತ್ನ ಮಾಡಿದ್ದಾರೆ. ಅವರ ಭಾಷಣದ ಪ್ರಾಮುಖ್ಯ ಅಂಶಗಳು ಇಂತಿವೆ. (1) ಯೂರೋಪಿನಲ್ಲಿ ಅಮೆರಿಕವೂ ಅದರ ಮಿತ್ರರಾಷ್ಟ್ರದವರೂ ಕೂಡಿ ಒಂದು ದ್ವಿತೀಯ ರಣರಂಗವನ್ನು ತೆರೆಯಬೇಕು. (2) ಭಾರತೀಯರನ್ನು ಸಮಾಧಾನಪಡಿಸಿ, ಜಪಾನಿನ ಆಕ್ರಮಣವಾಗದಂತೆ ತಡೆಯ ಸಾಹಸಮಾಡುವುದು. (3) ಮಿತ್ರರಾಷ್ಟ್ರಗಳಿಗೆ, ಚೀನಾ ರಶ್ಯಗಳಿಗೆ ಅಮೆರಿಕವು ಬೇಕಾದ ಸಾಧನಸಾಮಗ್ರಿ ಸಹಾಯ ಮಾಡುವುದು. (4) ಯುದ್ಧೋದ್ದೇಶವನ್ನು ಸ್ಪಷ್ಟಪಡಿಸಿ, ಭಾರತದಂಥಾ ಅಧೀನ ರಾಷ್ಟ್ರಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಸಾರುವುದು. (5) ಮಿತ್ರರಾಷ್ಟ್ರಗಳಲ್ಲಿ ಪ್ರಥಮ ದ್ವಿತೀಯ ಪಂಕ್ತಿಗಳೆಂಬ ಭೇದವಿಡದೆ ಎಲ್ಲರನ್ನೂ ಸಮಾನ ಸಾಲಿನಲ್ಲಿ ಪರಿಗಣಿಸುವುದು. (6) ಫಿಲಿಪಾಯಿನು ಸ್ವತಂತ್ರವಾಗುವಂತೆ ಮಾಡುವುದು. ಮಿತ್ರರಾಷ್ಟ್ರ [illegible] ಭಾರತದ ವಿಚಾರವು ಅಮೆರಿಕಕ್ಕೂ ಆಗಿರಬೇಕು. (7) ಚೀನಾ ರಶ್ಯದಂಥಾ ರಾಷ್ಟ್ರಗಳಿಗೆ ನಮ್ಮ ಪ್ರತಿನಿಧಿಗಳನ್ನು ಕಳುಹಿಸಿ ಅವರೊಡನೆ ಸಾಮಾಯಿಕ ವಿಚಾರ ನಡೆಸಬೇಕು. (8) ಮುಂದಿನ ಜಗತ್ತಿನಲ್ಲಿ, ಯಾವುದೇ ಅನ್ಯಾಯವಿರದಂತೆ, ಆರ್ಥಿಕ ಅಸಮಾಧಾನವಾಗದಂತೆ, ಸರ್ವರಿಗೂ ಸ್ವಾತಂತ್ರ್ಯವಿರುವಂತೆ ಸ್ಪಷ್ಟ ನೀತಿಯನ್ನಿಟ್ಟುಕೊಳ್ಳುವುದು. ಇಷ್ಟು ವಿಷಯಗಳಲ್ಲಿ ವಿಲ್ಕಿ ಅಮೆರಿಕನರು ಎಚ್ಚರವಾಗಿರುವಂತೆ ಹೇಳಿದರು.

ವಿಲ್ಕಿ ದ್ವಿತೀಯ ರಣರಂಗವನ್ನು ತೆರೆಯುವ ವಿಚಾರವನ್ನು ಈ ಮೊದಲೇ ಹೇಳಿದ್ದರು. ಇದರಿಂದಾಗಿ ಮಿತ್ರ ರಾಷ್ಟ್ರಗಳಲ್ಲಿ ಒಮ್ಮೆ ಕೋಲಾಹಲವೇ ನಡೆಯಿತು. ತರುವಾಗ ಈಗ ಭಾರತದ ವಿಷಯ, ಭಾರತದ ಸ್ವಾತಂತ್ರ್ಯದ ವಿಷಯ ಮಾತನಾಡಿದ್ದು ಗಮನಾರ್ಹವಿದೆ. '[illegible]' ದ ಕರ್ತೃ ರೂಸವೆಲ್ಟರಿಂದ ಬಂದಿರುವ ಇಷ್ಟು ಮಾತುಗಳಿಂದಲೇ, ಅವರು ಇನ್ನು ಸ್ಪಷ್ಟವಾಗಿ ನಿರ್ಮಲವಾಗಿ ಭಾರತದ ವಿಚಾರ ಮಾಡಿರುವರೆಂದು ತೋರುತ್ತದೆ. ಬ್ರಿಟನ್ ಹಾಗೂ ಮಿತ್ರರಾಷ್ಟ್ರಗಳು ಅಮೆರಿಕದ ಅಧೀನವಿದ್ದ ಫಿಲಿಪೈನ್ ಜನಾಂಗದ ಪೂರ್ವಭಾಗಿಯಾಗಿರುವುದರಿಂದ, ಅವರ ಸ್ವಾತಂತ್ರ್ಯವನ್ನು ಪುನಃ ಆದಕ್ಕೊದಗಿಸಲು ಪ್ರತಿಜ್ಞೆ ತೊಟ್ಟು, ಜಪಾನರೊಡನೆ ಹೋರಾಡುತ್ತಾರಷ್ಟೇ! ಹಾಗಾದರೆ, ಜಪಾನಿನ ಆಕ್ರಮಣವು, ಇಂದಾಗಲಿ ನಾಳೆ ಆಗುತ್ತದೋ ಎನ್ನುವಷ್ಟು ಸಮೀಪಕ್ಕೆ ಬಂದಿರುವ ಭಾರತವನ್ನು ಜಪಾನರು ಹೋರಾಡುವಂತೆ ಮಾಡುವುದು ಅಮೆರಿಕನರ ಸಮಸ್ಯೆಯಲ್ಲವೇ? ಅದರಿಂದ ಮಾತ್ರ ಯುದ್ಧ ವಿಜಯವು ಸಾಧ್ಯವಿಲ್ಲವೇ? ಹಾಗಾದರೆ, ಭಾರತವನ್ನು ಜಪಾನಿನೆದುರು ಹೋರಾಡುವಂತೆ ಹುರಿದುಂಬಿಸಬೇಕಾದರೆ, ಭಾರತೀಯರಿಗೆ ಸ್ವಾತಂತ್ರ್ಯ ಸಾರಬೇಕಲ್ಲವೇ? ಮುಂದಿನ ಜಗತ್ತಿನಲ್ಲಿ ಭಾರತವು ಅನಿರ್ಬಂಧಿತ ಸ್ವತಂತ್ರರಾಷ್ಟ್ರವಾಗುವ ಭರವಸೆ ಹುಟ್ಟಿಸಬೇಕಲ್ಲವೇ? ಹೀಗೆ ಸಮಸ್ಯೆಗಳ ಸ್ಪಷ್ಟ ಪರಿಹಾರವನ್ನು ವಿಲ್ಕಿಯವರು ಸೂಚಿಸಿದ್ದು ಅವರ ದೂರದರ್ಶಿತ್ವವನ್ನು ಸೂಚಿಸುತ್ತದೆ. ವಿಲ್ಕಿಯವರು ಭಾರತಕ್ಕೆ ಬರದಿದ್ದರೂ, ಅವರನ್ನು ಇಲ್ಲಿಗೆ ಬರುವಂತೆ ಅಮೆರಿಕದ ಅಧಿಪರು ಹೇಳಿರದಿದ್ದರೂ, ಅಥವಾ ಬಾರದಂತೆಯಾದರೂ ತಡೆದಿದ್ದರೂ, ವಿಲ್ಕಿ ಭಾರತದ ವಿಚಾರವನ್ನು ಮರೆಯುವಷ್ಟು ಅದೂರದರ್ಶಿಯಲ್ಲವೆಂಬುದು ಅವರ ಮಾತಿನಿಂದ ಸ್ಪಷ್ಟವಾಗುವುದು. ರೂಸವೆಲ್ಟರು, ಈ ಮಾತುಗಳಿಗೆ ಕಿವಿಗೊಡದಷ್ಟು ಹಠಕಾರರೂ ಆಗಿರುವರೆಂದು ನಾವು ಸಹಜವಾಗಿಯೂ ನಂಬುವುದಿಲ್ಲ.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ರಾಷ್ಟ್ರೀಯ ವಾರ ಪತ್ರಿಕೆ ಸ್ವದೇಶಾಭಿಮಾನಿಗೆ

— ಇಂದೇ —

ಚಂದಾದಾರರಾಗಿರಿ.

ಸ್ವದೇಶಾಭಿಮಾನಿ

ತಾರೀಕು 30—10—1942

ಯುದ್ಧಾನಂತರ?

"ಯುದ್ಧಾನಂತರ ಸರ್ವರಿಗೂ ಸ್ವಾತಂತ್ರ್ಯ" ಎಂಬುದಾಗಿ ಚೀನದ ದಳಪತಿ ಮಾರ್ಶಲ್ ಚಿಯಾಂಗ್ ಕೈಶೇಕರು, ಚುಂಕಿಂಗ್‌ನಲ್ಲಿ ಸೇರಿದ ಚೀನದ ಯುದ್ಧ ಕಾಲದ ಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು. ಅವರು ಆ ಭಾಷಣದಲ್ಲಿ ಕೆಳಗಿನ ನಾಲ್ಕು ಮಹತ್ವದ ವಿಷಯಗಳನ್ನು ತಿಳಿಸಿದರು: (೧) [illegible] ಟ್ಟವನ್ನು ಮುಟ್ಟಿರುವುದರಿಂದ, ಅವರ ಅಪಜಯ ಖಂಡಿತ. (೨) ಯುದ್ಧವು ದೀರ್ಘ ಸಮಯದ ವರೆಗೆ ಸಾಗುವುದು. (೩) ಮಿತ್ರರಾಷ್ಟ್ರಗಳ ಉತ್ಪಾದನೆಯ ಗತಿ ತೀವ್ರವಿದ್ದು ಅವರಿಗೆ ಅಂತ್ಯ ವಿಜಯ ನಿಶ್ಚಿತ. (೪) ಈ ಯುದ್ಧದ ಪರಿಣಾಮವಾಗಿ ಎಲ್ಲಾ ರಾಷ್ಟ್ರಗಳಿಗೂ ಸ್ವಾತಂತ್ರ್ಯ ದೊರೆಕುವುದು.

ಚಿಯಾಂಗ್ ಕೈಶೇಕರು ಯುದ್ಧಾನಂತರ ಸ್ವಾತಂತ್ರ್ಯ ಖಂಡಿತವೆಂದು ತಿಳಿದಿದ್ದಾರೆ; ಅಂತೆ ಘೋಷಿಸಿದ್ದಾರೆ. ಚೀನೀಯರು ಈ ಮಾತನ್ನು ನಂಬುತ್ತಾರೆ. ಆದರೆ ಭಾರತದ ವಿಷಯ ಅಂತಿಲ್ಲ. ರಾಜಾಜಿ ಹೇಳಿದಂತೆ, ಜವಾಹರಲಾಲರಿಗೆ ಯುದ್ಧಾನಂತರ ಭಾರತವು ಸ್ವತಂತ್ರವಾಗುವುದೆಂಬ ಬಗ್ಗೆ ಖಂಡಿತದ ವಿಶ್ವಾಸವಿರಬಹುದು; ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸಬೇಕೆಂಬ ಹಠವಿರಬಹುದು. ಆದರೆ, ಭಾರತೀಯರು ತಮ್ಮದೇ ಆದ ರಾಷ್ಟ್ರೀಯ ಸರಕಾರವು ಸ್ಥಾಪಿತವಾಗದೆ ಇದು ತಮ್ಮ ಯುದ್ಧವೆಂದು, ಗಾಂಧಿ ನೆಹರು ಯಾರು ಹೇಳಿದರೂ ನಂಬಲಾರರು. ಚಿಯಾಂಗ್ ಕೈಶೇಕರು ಚೀನದ ರಾಷ್ಟ್ರ ಸಮರವನ್ನು ಮುನ್ನಡೆಸುವಂತೆ, ನೆಹರು ಭಾರತದ ಸಮರಾಧಿಪನಾಗಿ ಕಾದಾಡುವ ಪರಿಸ್ಥಿತಿ ಬರಬೇಕು. ಆಗ ನೆಹರುಗಳ ಬಾಯಿಂದ, ಯುದ್ಧಾನಂತರ ನಮಗೆ ಸ್ವಾತಂತ್ರ್ಯವುಂಟೆಂಬ ಘೋಷಣೆ ಕೇಳಿದರೆ ಅದನ್ನು ಚೀನಿಯರಂತೆ ಭಾರತೀಯರೂ ಖಂಡಿತ ನಂಬುವರು.

ರಾಜಿಗಾಗಿ ರಾಜಾಜಿ

ಭಾರತ ಬ್ರಿಟನುಗಳೊಳಗೆ ರಾಜಿಗಾಗಿ ರಾಜಾಜಿ ಈಗ ಪ್ರಯತ್ನ ಮಾಡಲು ಮನಸ್ಸುಮಾಡಿದ್ದಾರೆ. 'ರಾಷ್ಟ್ರದಲ್ಲಿ ಐಕ್ಯ ಸಾಧಿಸಬೇಕು; ಕಾಂಗ್ರೆಸು ಲೀಗುಗಳಲ್ಲಿ ಒಮ್ಮತವಾಗಬೇಕು; ಹಿಂದು ಮುಸ್ಲಿಂ ವಿವಾದ ಕೊನೆಗಾಣಬೇಕು, ಇದರಿಂದ ರಾಷ್ಟ್ರೀಯ ಸರಕಾರ ಸ್ಥಾಪಿತವಾಗಿ, ಶತ್ರುಗಳನ್ನೆದುರಿಸಲು ಭಾರತೀಯರು ಬಲವಂತರಾಗಬೇಕು' ಎಂಬ ಉನ್ನತ ಆಶೆಯಿಂದ ಅವರು ಇತ್ತೀಚೆಗೆ ದುಡಿದರು. ಅದಕ್ಕಾಗಿ ಜಿನ್ನರ ಪಾಕಿಸ್ತಾನ ಸಿದ್ಧಾಂತವನ್ನು ಒಪ್ಪಿಕೊಳ್ಳಬೇಕೆಂಬ ಉದಾರ ಸೂಚನೆ ಮಾಡಿದರು. ಈ ಸಂದರ್ಭದಲ್ಲಿ ಶಿಸ್ತಿನ ಸಲುವಾಗಿ ಕಾಂಗ್ರೆಸನ್ನು ಬಿಟ್ಟಾದರೂ ಐಕ್ಯ ಪ್ರಯತ್ನಕ್ಕೆ ತೊಡಗಿದ್ದರು. ಹಾಗೆ ಅವರು ಮಾಡಿದ ಐಕ್ಯ ಪ್ರಯತ್ನ ಎಷ್ಟರಮಟ್ಟಿಗೆ ಕೃತಾರ್ಥವಾಯಿತು ಎಂಬ ವಿಚಾರ ಬೇರೆ. ಆ ಪ್ರಯತ್ನ ವಿಶೇಷ ಫಲಕಾರಿಯಾಗದಿದ್ದರೂ ರಾಜಾಜಿ ಹತಾಶರಾಗಿಲ್ಲ. ಈಗ ಪುನಃ ಭಾರತದ ಪ್ರತಿನಿಧಿಯಾಗಿ ಬ್ರಿಟನಿಗೆ ಸಂಧಾನದೂತನಾಗಿ ಹೊರಡುವ ಅಭಿಲಾಷೆ ವ್ಯಕ್ತಪಡಿಸಿದ್ದಾರೆ. ಸರ್ವ ಸಮ್ಮತವಾದೀತೆಂದು ಹೊಸ ಸೂಚನೆಯೊಂದನ್ನು ತಯಾರಿಸಿದ್ದಾರೆ. ಹೀಗೆ ಕಾಂಗ್ರೆಸು ಮುಂದಾಳುಗಳೆಲ್ಲಾ ಸೆರೆಯ ಮರೆಯಲ್ಲಿರುವಾಗ, ಮುಸ್ಲಿಂಲೀಗು ಈಗಲೂ ನಿಷ್ಕ್ರಿಯವಾಗಿರುವಾಗ, ಹಿಂದೂ ಮಹಾಸಭೆ ಸಂಧಾನಪ್ರಯತ್ನಮಾಡಿ ಕೈಸುಟ್ಟುಕೊಂಡಿರುವಾಗ, ಬ್ರಿಟಿಷ್ ಪ್ರಭುತ್ವವು ದಬ್ಬಾಳಿಕೆಯನ್ನೇ ಹಿಡಿದೆತ್ತಿ ನಿಂತಿರುವಾಗ, ರಾಜಾಜಿಯಂಥಾ ಧೀಮಂತರಾಜನೀತಿಜ್ಞರು ಸಂಧಾನಕ್ಕಾಗಿ ಪ್ರಯತ್ನಪಡುವುದು ಅವಶ್ಯವಿದೆ. ಸಮಯೋಚಿತವಿದೆ. ರಾಜಾಜಿಯವರು ಈ ರಾಜಿಯ ಪ್ರಯತ್ನದಲ್ಲಿ ಜಯಶಾಲಿಗಳಾಗಲೆಂದು ನಮ್ಮ ಹಾರ್ದಿಕ ಹಾರೈಕೆಯಾಗಿದೆ.

'ಕಾಂಗ್ರೆಸಿಗೆ ಹಣ ಸಹಾಯ ಮಾಡುವುದು ಪಾಪವಲ್ಲ'

ಎಂಬುದಾಗಿ ಶ್ರೀ. ಎಂ. ವಿಶ್ವೇಶ್ವರಯ್ಯನವರು ಮುಂಬಯಿಯಲ್ಲಿ ಒಂದು ಭಾಷಣವಿತ್ತರು.

ದಮ್ಮು ಗುಣಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ: ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಫುಪ್ಫುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತೆ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ ಬೊಂಬೈ ಏಜಂಟ— ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಸ್ವದೇಶ ಸಮಾಚಾರ

ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸು ಸಂಸ್ಥೆ, ಕೆಲಮಂದಿ ಭಾರತೀಯ ಧನಿಕರಿಂದ ತಮ್ಮ ಹಿತಸಾಧನೆ ಸಲುವಾಗಿ ಪೋಷಿಸಲ್ಪಟ್ಟಿದೆ ಎಂದು ಚರ್ಚಿಲರು ಹೇಳಿದ ಮಾತಿಗೆ ಉತ್ತರರೂಪವಾಗಿ ವಿಶ್ವೇಶ್ವರಯ್ಯನವರು ಹಾಗಂದುದು, ಇಂಗ್ಲಿಷರಾದರೂ ತಮ್ಮ 'ಪಕ್ಷ'ಗಳನ್ನು ಬಲಪಡಿಸಲು ಅಲ್ಲಿನ ಧನಿಕರ ಸಹಾಯ ಪಡೆವುದಿಲ್ಲವೆ? ಹಿಂದೂದೇಶದ ಕೈಗಾರಿಕೆ ಮೊದಲಾದ ಸಂಸ್ಥೆ ಕ್ರಿಯಾದರೂ ಉತ್ತಮಗೊಳ್ಳಬೇಕಾದರೆ ಹಣವಂತರ ಸಹಾಯಬೇಕು, ಕಾಂಗ್ರೆಸಿಗೆ ಹಣ ಸಹಾಯ ಮಾಡುವುದೇನೂ ಪಾಪವಲ್ಲ' ಎಂದು ಅವರು ಸ್ಪಷ್ಟವಾಗಿ ಹೇಳಿದರು.

ಕಾಂಗ್ರೆಸು ಜಪಾನ್ ಜರ್ಮನಿಗಳಿಗೆ ಸಹಾಯವಲ್ಲ

ಎಂಬುದಾಗಿ ಸ್ಪಷ್ಟ ಪಡಿಸುತ್ತಾ ಗಡಿನಾಡಿನ ಗಾಂಧಿಯವರು ಡಾ॥ಖಾನ್‌ಸಾಹೇಬರ ಅಧ್ಯಕ್ಷತೆಯಿಂದ ಪೆಶಾವರಿನಲ್ಲಿ ನೆರೆದ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ವಿಶದಪಡಿಸಿದರು. ಜಪಾನ್ [illegible] ಯುದ್ಧ ಮಾಡುವೆವು. ಮೂರುವರ್ಷಗಳ ವರೆಗೆ ನಾವು ಬ್ರಿಟಿಷರಿಗೆ ಆತಂಕಕೊಡಬಾರದೆಂದು ತಟಸ್ಥರಾಗಿದ್ದವು. ಭಾರತೀಯರು ಮುಂದೆ ಬಾರದೆ ನಮ್ಮ ರಾಷ್ಟ್ರರಕ್ಷಣೆ ಸಾಧ್ಯವಿಲ್ಲವಾದರಿಂದ ಭಾರತದ ರಕ್ಷಣೆ ಹೊಣೆಗಾರಿಕೆ ಭಾರತೀಯರಿಗೆ ಕೊಡಬೇಕು' ಎಂದರು.

ಕಸ್ತೂರಿ ಬಾಯಿ ಅನಾರೋಗ್ಯ

ಗಾಂಧಿಜಿ ಪತ್ನಿ ಕಸ್ತೂರಿಬಾಯಿಯವರು ಇತ್ತೀಚೆಗೆ ಸೆರೆಮನೆಯಲ್ಲಿ ಅನಾರೋಗ್ಯದಿಂದ ನರಳುತ್ತಿರುವರೆಂದು ಪ್ರಕಟವಾಗಿದೆ. ಅವರಿಗೆ ಇಂಪ್ಲುಯೆಂಜಾ ಆಗಿತ್ತೆಂದೂ ಈಗ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆಯೆಂದೂ ಅವರು ಮೃತಪಟ್ಟಿರುವರೆಂದು ಹರಡಲಾದ ಸುದ್ದಿ ಅಸತ್ಯವೆಂದೂ ಸರಕಾರದ ಪ್ರಕಟಣೆ.

ಮುಂದಿನ ವೈಸರಾಯ್ ಯಾರು?

"ನನ್ನ ಅಧಿಕಾರದ ಅವಧಿಯು ಮುಗಿಯುತ್ತ ಬಂತು" ಎಂದು ಕೈಟ್ಟಾದಲ್ಲಿ ಭಾಷಣ ಮಾಡುತ್ತಾ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋರವರು ಹೇಳಿದರು. ಇನ್ನು ಲಾರ್ಡ್ ಲಿನ್‌ಲಿತ್‌ಗೋರವರು ಈವರ್ಷದ ಪ್ರಥಮಭಾಗದಲ್ಲಿಯೇ ಅಧಿಕಾರದಿಂದ ನಿವೃತ್ತರಾಗುವರೆಂದು ದಿಲ್ಲಿಯ ಊಹೆ. ಡ್ಯೂಕ್ ಒಫ್ ಡೆವನ್‌ಶೀರರ ಹೆಸರು ಹಲವು ಕಡೆ ನಮ್ಮ ಮುಂದಿನ ವೈಸರಾಯರಾಗಿ ಬರುವ ಸೂಚನೆ ಆಗುತ್ತದೆ. ಅಂತೆಯೇ ಬಟ್ಲರ್, ರೋಜರ್ ಲಮ್ಲೆ, ಲಾರ್ಡ್ ಕ್ರಾನ್‌ಬೋರ್ನ್ ಮೊದಲಾದ ಹೆಸರುಗಳೂ ಸೂಚಿತವಾಗಿರುವವು. ಹಿಂದೆ ಸೂಚಿತವಾಗಿದ್ದ ಸರ್ ಜಾನ್ ಅಂಡರ್‌ಸನ್ನರ ಹೆಸರು ಇತ್ತೀಚೆಗೆ ಕೇಳಿಬರುವುದಿಲ್ಲ.

ಸಿಲೋನಿಗೆ ಕಳ್ಳ ವ್ಯಾಪಾರ

ಸಿಲೋನಿಗೆ ಸುಮಾರು ೭೦ ಸಾವಿರ ರೂಪಾಯಿ ಬೆಲೆಬಾಳುವ ಅಕ್ಕಿ ಮತ್ತು ಬಟ್ಟೆಯ ಕಳ್ಳ ವ್ಯಾಪಾರವು ತಂಜಾವೂರು ಪ್ರದೇಶದ ತೀರ ಪ್ರದೇಶದಲ್ಲಿ ನಡೆಸುವ ಏರ್ಪಾಡಾದುದು ಸರಕಾರಕ್ಕೆ ತಿಳಿದು ಅದನ್ನೀಗ ನಿರ್ಬಂಧಿಸಲಾಗಿದೆ.

'ಸಂತೋಷಕೂಟಗಳಿಗೆ ಧನ ವ್ಯಯ ಮಾಡಬೇಡಿ'

ಎಂಬುದಾಗಿ ತನ್ನ ಸಂಸ್ಥಾನದ ಧನಿಕರಿಗೆ ಹೈದರಾಬಾದ್ ನಿಜಾಮರು ಒಂದು ಪ್ರಕಟಣೆ ಕಳುಹಿಸಿದ್ದಾರೆ. ಹಾಗೆ ಧನವ್ಯಯಮಾಡುವುದನ್ನು ಆಹಾರ ಪದಾರ್ಥಗಳ ಅಭಾವವಿರುವೀಕಾಲದಲ್ಲಿ ಬಡಬಗ್ಗರಿಗೆ ಆಹಾರವೊದಗಿಸಿಕೊಡಲು ಉಪಯೋಗಿಸಿರಿ ಎಂಬುದು ಅವರ ಸೂಚನೆಯಾಗಿದೆ. ಈ ಸೂಚನೆಯನ್ನು ಎಲ್ಲಾ ಕಡೆಯ ಧನಿಕರೂ ಅನುಸರಿಸುವುದು ಯೋಗ್ಯವಿದೆ.

ಅಬ್ದುಲ್ ಗಫರ್ ಖಾನರ ಬಂಧನ

ಮರ್ದಾನ್ ಜಿಲ್ಲೆಯನ್ನು ಹೊರಡಬಾರದೆಂಬ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ನಿರ್ಬಂಧಾಜ್ಞೆಯನ್ನು ಮೀರಿನಡೆದ ಬಗ್ಗೆ ಗಡಿನಾಡಿನ ಗಫರ್ ಖಾನ್ ಅಬ್ದುಲ್ ಗಫರ್‌ಖಾನರನ್ನು ಸರಕಾರವು ಬಂಧಿಸಿದೆ.

ಕತ್ತಿ ಮೆರವಣಿಗೆ ಕೇಸು

ದಿಲ್ಲಿಯಲ್ಲಿ, ಹಸ್ನೊಂದು ಮಂದಿ ವೈಸರಾಯ ಎಕ್ಸಿಕುಟೀವ್ ಕೌನ್ಸಿಲಿನ ಮೆಂಬರರನ್ನು ಅಪಹಾಸ್ಯಮಾಡಿ, ಹನ್ನೊಂದು 'ಕತ್ತಿ'ಗಳ ಮೆರವಣಿಗೆ ಮಾಡಿದ್ದು, ಈಗ ಆ ಕೇಸು ತೀರಿದ ಬಳಿಕ, ಕತ್ತಿಗಳನ್ನು ದೊಡ್ಡಿಯಲ್ಲಿಟ್ಟಷ್ಟು ಕಾಲ ಅವುಗಳನ್ನು ಸಾಕಿದಬಗ್ಗೆ ದೊಡ್ಡಿಯವನಿಗೆ ಮತ್ತು ಪೋಲೀಸಿನವರೊಳಗೆ ವಿವಾದವುಂಟಾಗಿದೆ. ಮೆರವಣಿಗೆಗೆ ಕೊಟ್ಟ ಕತ್ತೆಗಳ ಮಾಲಿಕನು, ಅವುಗಳ ಬಗ್ಗೆ ಬಾಡಿಗೆ ಪಡೆಕೊಂಡಿರುವುದರಿಂದ ಅವುಗಳನ್ನು ಸಾಕಿದ ಖರ್ಚು ಆತನೇ ಕೊಡಬೇಕೆಂದು ಪೋಲೀಸರ ವಾದ. ಆದರೆ ಪೋಲೀಸರು ತನಗೆ ದೊಡ್ಡಿಯಲ್ಲಿಡಲು ಹೇಳಿದ್ದರಿಂದ ಅವುಗಳನ್ನು ಸಾಕಿದ ಖರ್ಚು ಪೋಲೀಸರೇ ಕೊಡಬೇಕೆಂದು ದೊಡ್ಡಿಯವನು ಹೇಳುತ್ತಾನೆ.

ಚಿತಗಾಂಗ್ ಆಸಾಮ್ ವಿಮಾನ ಗೃಹಗಳ ಮೇಲೆ ಜಪಾನರು ಬಾಂಬು ಹಾಕಿದರು!

ಕಳೆದ ವಾರ ಚಿತ್ತಗಾಂಗ್ ವಿಮಾನ ಗೃಹದ ಮೇಲೆ ಹಾಗೂ ಅಸಾಮಿನ ಕೆಲವು ವಿಮಾನ ಗೃಹಗಳ ಮೇಲೆ ಜಪಾನರು ಧಾಳಿಯಿಟ್ಟರು. ಈಶಾನ್ಯ ಅಸಾಮಿನ ಒಂದು ವಿಮಾನ ಗೃಹದ ಮೇಲೆ ಪುನಃ ಧಾಳಿಯಾಯಿತು. ಧಾಳಿಯ ವಿವರಗಳು ಪ್ರಕಟವಾಗಿಲ್ಲ.

ಸಾಹಿತ್ಯ ಪರಿಷತ್ತು ಅನವಧಿಕಾಲ ಮುಂದುವರಿಯಿತು

ಈ ವರ್ಷದ ದಶಂಬರದಲ್ಲಿ ಶಿವಮೊಗ್ಗದಲ್ಲಿ ಜರಗಬೇಕಾಗಿದ್ದ ಕನ್ನಡ ಸಾಹಿತ್ಯ ಪರಿಷತ್ ಸಮ್ಮೇಳನವನ್ನು, ಪ್ರಕೃತದ ರಾಜಕೀಯ ದುರಂತ ಪರಿಸ್ಥಿತಿಯಿಂದಾಗಿ ಅನಿಶ್ಚಿತ ಅವಧಿವರೆಗೆ ಮುಂದುವರಿಸುವಂತೆ, ಸಾಹಿತ್ಯ ಪರಿಷತ್ ಅಧಿಕಾರೀ ಮಂಡಳದೊಡನೆ ಶಿವಮೊಗ್ಗಾ ಸಮ್ಮೇಳನ ಸ್ವಾಗತ ಸಮಿತಿಯವರು ವಿನಂತಿಸಿಕೊಂಡಿದ್ದಾರೆ.

ಜಿಲ್ಲಾ ಸಮಾಚಾರಗಳು

ಗವರ್ನರರಲ್ಲಿ ಮಂಗಳೂರ ಬಡಜನರ ದೂರು

ಮಂಗಳೂರಿಂದ ಸುಮಾರು ಎರಡು ಸಾವಿರ ಮಂದಿಯ ಸಹಿಯುಳ್ಳ ಒಂದು ವಿನಂತಿಯು ಮದ್ರಾಸು ಗವರ್ನರರಲ್ಲಿ ಕಳುಹಿಸಲಾಗಿದೆ ಆ ವಿನಂತಿಯ ವಿಚಾರಗಳು ಇಂತಿವೆ. (೧) ದ. ಕ. ಜಿಲ್ಲಾ ಕಲೆಕ್ಟರರು ಈ ತಿಂಗಳ ಅಂತ್ಯದ ವರೆಗೆ ಜಿಲ್ಲೆಯಿಂದ ಹೊರಗೆ ಅಕ್ಕಿ ಕಳುಹಿಸಬಾರದೆಂದು ವಿಧಿಸಿದ ನಿರ್ಬಂಧವನ್ನು ಶಾಶ್ವತವಾಗಿ ಮಾಡುವುದು. (೨) ಅಕ್ಕಿಗೆ ಮಿತ ದರವನ್ನು ನಿಶ್ಚಯಿಸುವುದು. (೩) ಅಕ್ಕಿ ಮೊದಲಾದ ದಿನನಿತ್ಯದ ಉಪಯೋಗದ ಸಾಮಗ್ರಿಗಳಿಗೆ ಬೆಲೆ ಹೆಚ್ಚಾಗಿರುವುದರಿಂದ ಸರಕಾರದವರು ಅಲ್ಲಲ್ಲಿ 'ಡಿಪೋ' ತೆರೆಯುವ ವ್ಯವಸ್ಥೆ ಮಾಡಿಸುವುದು.

ಇನ್ಸ್‌ಪೆಕ್ಶನ್

ಸ್ಥಳೀಯ ಸಂಸ್ಥೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ. ದೇವಜ್ಞಾನಂ ಇವರು ಕಳೆದ ರವಿವಾರ ಸಾಯಂಕಾಲ ಮಂಗಳೂರಿಗೆ ಬಂದು ಮರುದಿನ ನಗರವನ್ನು ಸಂಚರಿಸಿ ರಸ್ತೆಗಳನ್ನೂ ಮಾರ್ಕೆಟುಗಳನ್ನೂ ಚಟ್ಟಿಗ್ಗಳೆಂದು ಮತ್ತು ಮುನ್ಸಿಪಲ್ ಆಸ್ಪತ್ರೆಗಳನ್ನೂ ಶಾಲೆಗಳನ್ನೂ ಸಂದರ್ಶಿಸಿದರು ಮಂಗಳವಾರ ಮುನ್ಸಿಪಲ್ ಆಫೀಸಿಗೆ ತೆರಳಿ, ಇನ್ಸ್‌ಪೆಕ್ಷನ್ ನಡೆಸಿ, ಮರುದಿನ ಕಾರ್ಕಳ–ಕುಂದಾಪುರ ಪಂಚಾಯತ ಬೋರ್ಡುಗಳ ಇನ್ಸ್‌ಪೆಕ್ಶನ್ ಬಗ್ಗೆ ತೆರಳಿದರು.

ಮುನಿಸಿಪಾಲಿಟಿ

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಎಲ್ಲಾ ಕೊಂಗ್ರೆಸ್ ಸದಸ್ಯರೂ ರಾಜೀನಾಮೆ ಕೊಟ್ಟು ಇನ್ನೂ ಮೂವರು ಕೊಂಗ್ರೆಸೇತರ ಕೌನ್ಸಿಲರರು ಮಾತ್ರ ಉಳಿದಿರುವುದರಿಂದ ಮದರಾಸು ಸರಕಾರದವರು 'ಮಂಗಳೂರು ಕೌನ್ಸಿಲು ಕಾರ್ಯನಿರ್ವಹಣ ಮಾಡಲು ಅಸಮರ್ಥವಾದ ಕಾರಣ ಅದನ್ನೇಕೆ ರದ್ದುಗೊಳಿಸಬಾರದೆಂಬ ಬಗ್ಗೆ ಕಾರಣ ತೋರಿಸಿರಿ' ಎಂದು ಕೌನ್ಸಿಲಿಗೆ ಬರೆದು ಕೇಳಿರುವರಾಗಿ ತಿಳಿದುಬರುತ್ತದೆ

ಗುರುಕಂಬಳ

ಮಂಗಳೂರು ತಾಲೂಕು ಸಾಮುಂಜೂರು ಮಾಗಣೆ ಮೂಡು ಪೆರಾರು ಗ್ರಾಮದ ಗುರುಕಂಬಳದಲ್ಲಿ ಹಜ್ರತ್ ಅಸ್ರದ್ದೀನ್ ಗುರುಗಳವರ ಉರುಸು ಎಂಬ ಕಾರ್ಯವು ಇದೇ ಬರುವ ನವಂಬರ ತಿಂಗಳ ತಾರೀಕು ೩ನೇ ಮಂಗಳವಾರ ದಿನ ಜರಗುವದಾಗಿ ಸದ್ರಿ ಗುರುಗಳವರ ದರ್ಗೆ ಅಡಳಿತೆದಾರರು ತಿಳಿಸುತ್ತಾರೆ

ಜಾಮೀನ್ ಬಿಡುಗಡೆ

ಮಂಗಳೂರ ಕೂಲಿಗಾರ ಮುಖಂಡರೂ ಕಮ್ಯುನಿಸ್ಟ್ ಪಕ್ಷದವರೂ ಆದ ಶ್ರೀ. ಕೆ. ಕೇಶವ ಕಾಮತರನ್ನು ತಾ ೨೭ರಂದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ

ರಾಜಿನಾಮೆ

ದ. ಕ. ಡಿಸ್ಟ್ರಿಕ್ಟ್ ಬೋರ್ಡಿನ ಕಾಂಗ್ರೆಸ್ ಪಕ್ಷದ ಸದಸ್ಯರಾದ ಶ್ರೀ. ಫೆರ್ನಾಂಡಿಸರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ.

ಕಾರ್ಕಳ

ಶಿಕ್ಷೆ ಮತ್ತು ಜುಲ್ಮಾನೆ

ಕಾರ್ಕಳದಲ್ಲಿ ಈರಂದು ಮೆರವಣಿಗೆ ಮಾಡಿ ಲಾಠಿಪೆಟ್ಟು ತಿಂದು ಬಿದ್ದು ಕೈದಾದ ೧೧ ಮಂದಿ ಸದಸ್ಯರಲ್ಲಿ ೧೦ ಮಂದಿಯ ವಿಚಾರಣೆ ಕುಂದಾಪುರದಲ್ಲಿ ಸಬ್ ಕುಂದಾಪುರ ಡಿವಿಜನಲ್ ಮ್ಯಾಜಿಸ್ಟ್ರೇಟರಲ್ಲಿ ನಡೆದು (ಒಬ್ಬರಿಗೆ ಅಸ್ವಸ್ಥ) ಈ ರೀತಿ ದಂಡನೆ ವಿಧಿಸಲ್ಪಟ್ಟಿದೆ — ಶ್ರೀ. ಕೆ ವೆಂಕಟೇಶ ಪ್ರಭು ೬ ತಿಂಗಳ ಕ ಸಜೆ, ರೂ ೫೦೦ ಜುಲ್ಮಾನೆ, ಅಥವಾ ಮತ್ತೆ ೬ ತಿಂಗಳ ಕ ಶಿಕ್ಷೆ, ಶ್ರೀ ಕೆ ವಾಮನ ಪೈ ೯ ತಿಂಗಳ ಕ ಶಿಕ್ಷೆ ರೂ ೧೦೦ ಜುಲ್ಮಾನೆ ಅಥವಾ ಮತ್ತೆ ೩ ತಿಂಗಳ ಕ. ಶಿಕ್ಷೆ, ಶ್ರೀ. ಎಸ್ ಕೃಷ್ಣಪ್ರಭು ೬ ತಿಂಗಳ ಕ ಶಿಕ್ಷೆ, ರೂ ೧೦೦ ಜುಲ್ಮಾನೆ ಅಥವಾ ಮತ್ತು ೩ ತಿಂಗಳ ಕ ಶಿಕ್ಷೆ, ಶ್ರೀಗಳಾದ ಸಿ. ಪದ್ಮನಾಭ ಕಾಮತ್, ಸಿ. ಗೋಪಾಲಕೃಷ್ಣ ಕಾಮತ್, ಕೆ ಸದಾನಂದ ಜೋಶಿ, ಆನಂದ ಶೆಟ್ಟಿ, ಕೆ ಗಣಪತಿ ಭಟ್, ಗೋಪಾಲ ಕೃಷ್ಣ ಕಿಣಿ, ಕ ಮಾಧವ ಪುರಾಣಿಕ್ ಇವರಿಷ್ಟು ಮಂದಿಗೆ ತಲಾ ೬–೬ ತಿಂಗಳ ಕಠಿನ ಶಿಕ್ಷೆ ಶ್ರೀ ವೆಂಕಟೇಶ ಪ್ರಭುಗಳಿಗೆ "ಬಿ" ಕ್ಲಾಸು, ಮಿಕ್ಕರಿಗೆ "ಸಿ" ಕ್ಲಾಸ್ ಇವರನ್ನೆಲ್ಲ ಆಲಿಪುರಂ ಜೈಲಿಗೆ ಕಳುಹಿಸಲಾಗಿದೆ

ಪ್ರಚಾರ

ಕಾಸರಗೋಡು, ಬದಿಯಡ್ಕ, ಕುಂಬಳೆ, ಸುರತ್ಕಲ್ ಕೋಟೇಶ್ವರ, ಬಂಟ್ವಾಳ ಐವರ್ನಾಡು ಹೆಮ್ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ, ಮಂಗಳೂರು ಈ ಕಡೆಗಳಲೆಲ್ಲಾ ಅಧಿಕಾಹಾರ ಬೆಳೆಸುವ ಪ್ರಚಾರ ನಡೆಯಿತು

ಉಡುಪಿ

ಮುನಿಸಿಪಲ್ ನೌಕರರಿಗೆ ತುಟ್ಟಿಭತ್ತೆ

ಕಳೆದ ವಾರ ನಗರ-ಸಭಾಧ್ಯಕ್ಷ ಶ್ರೀ. ಎ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ಮುನಿಸಿಪಲ್ ಕೌನ್ಸಿಲ್ ಮೀಟಿಂಗಿನಲ್ಲಿ ಸಪ್ಟಂಬರ ತಿಂಗಳಿಂದಿಯಿಂದ ತಿಂಗಳೊಂದರ ತೋಟಿ ಮತ್ತು ಪೇದೆಯವರಿಗೆ ರೂ ೧, ಅಧ್ಯಾಪಕ ಅಧ್ಯಾಪಿಕೆಯರಿಗೆ ರೂ, ೨, ಆಫೀಸು ಶಿಬ್ಬಂದಿಗೆ ರೂ ೩ ಮತ್ತು ಓವರ್ಸಿಯರ್ ಹಾಗೂ ಸೆನಿಟರಿ ಇನ್ಸ್‌ಪೆಕ್ಟರರಿಗೆ ರೂ ೫ ಪ್ರಮಾಣದ ತುಟ್ಟಿಭತ್ತೆ ಮಂಜೂರು ಮಾಡಲಾಯಿತು

ರಾಜಿನಾಮೆ

ಶ್ರೀ. ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರು ಉಡುಪಿ ಮುನಿಸಿಪಲ್ ಕೌನ್ಸಿಲಿನ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರುವರು.

ಚಿಲ್ಲರೆಯಿಲ್ಲ

ಕಾಲಾಣೆ, ಅರ್ಧಾಣೆ, ಪೈ ಮೊದಲಾದ ನಾಣ್ಯಗಳ ಅಭಾವದಿಂದಾಗಿ ವ್ಯಾಪಾರ ವಹಿವಾಟಿಗೆ ಬಹಳ ತೊಂದರೆಯಾಗಿದೆ.

ಉಡುಪಿ ತಾಲೂಕು ವರ್ತಕ ಸಂಘ

ಉಡುಪಿ ತಾಲೂಕಿನ ಸಾಹುಕಾರರು ತಾ ೨೧ರಲ್ಲಿ ಕೊರ್ಪರೇಶನ್ ಬೇಂಕಿನ ಮಾಳಿಗೆಯಲ್ಲಿ ಶ್ರೀ. ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಸಭೆಗೂಡಿ ಉಡುಪಿ ತಾಲೂಕು ವರ್ತಕ ಸಂಘವೊಂದನ್ನು ಸ್ಥಾಪಿಸಿದರು ಇಪ್ಪತ್ತಕ್ಕೆ ಮೇಲ್ಪಟ್ಟು ಸದಸ್ಯರಿರುವ ಕಾರ್ಯಕಾರೀ ಮಂಡಳಿಯ ಸ್ಥಾಪನೆಯಾಗಿ ಸಾಹುಕಾರರ ಹಾಲಹವಾಲೆಗಳನ್ನು ಸರಕಾರಕ್ಕೆ ಮನವಿ ಮೂಲಕ ತಿಳಿಸುವರೆ ಉಪಸಮಿತಿಯು ನೇಮಕವಾಯಿತು ವ್ಯಾಪಾರ ವಹಿವಾಟಿನ ಲೈಸನ್ಸುಗಳ ವಿಚಾರವನ್ನು ಹಾಜರಿದ್ದ ಸಾಹುಕಾರರು ತಹಶಿಲ್ದಾರರ ಗಮನಕ್ಕೆ ತಂದರು.

ತಿದ್ದುಪಡಿ

ಕಳೆದ ಸಂಚಿಕೆಯಲ್ಲಿ ಪ್ರಕಟವಾದಂತೆ, ಡಿ ಬೋ. ನ ಸಭೆಯಲ್ಲಿ ಮಹಾತ್ಮರೇ ಮೊದಲಾದ ರಾಷ್ಟ್ರೀಯ ಮುಖಂಡರ ಬಂಧನ ನಿಷೇಧ ಠರಾವನ್ನು ಅನುಮೋದಿಸಿದವರು ಶ್ರೀ ಸರ್ವೋತ್ತಮ ಪೈಗಳೆಂದಿರುವಲ್ಲಿ ಶ್ರೀ ಕೊಡ್ಗಿಯವರೆಂದೂ, ನಿಷೇಧ ಠರಾವಿಗೆ, ತಟಸ್ಥರಾಗಿರುವರೆಂದು ಪ್ರಕಟಿಸಲಾದ ಡಿ ಬೋ ಪ್ರೆಸಿಡೆಂಟರು, ಸಂಪ್ರದಾಯದಂತೆ ಓಟು ಕೊಡಲಿಲ್ಲವೆಂದೂ ತಿದ್ದಿ ಓದಿಕೊಳ್ಳುವುದು

ನೋಟೀಸು

ಕಾರ್ಕಳ ಡಿ. ಮು ಕೋರ್ಟಿನಲ್ಲಿ

R E P 360/42
(O S 457/40).

ದೇವಪ್ಪ ಮಲ್ಯ ಮಂಜುನಾಥ ಮಲ್ಯರ ಮಗ ಮಂಗಳೂರು ತಾಲೂಕು ಕರ್ನಿರೆ ಗ್ರಾಮಸ್ಥ – } ಅರ್ಜಿದಾರ.

ಮತ್ತು

1 ದೂಮ ಪೂಜಾರಿ } ರಾಮು ಹೆಂಗ್ಸಿನ ಮಕ್ಕಳು
2 ದಾರಮ್ಮ ಹೆಂಗ್ಸು }
3 ಪೂವ ಪೂಜಾರಿ ಉಜ್ಜು ಹೆಂಗ್ಸಿನ ಮಗ
4 ಪದ್ದು ಹೆಂಗ್ಸು } ಪಾತು ಹೆಂಗ್ಸಿನ ಮಕ್ಕಳು
5 ದಾದು ಪೂಜಾರಿ }
} ಎದುರು

ಮಂಗ್ಳೂರು ತಾಲ್ಲೂಕು, ಕರ್ನಿರೆ ಗ್ರಾಮದ ಜಂಗಡಮನೆ ಎಂಬಲ್ಲಿರುವವರು

ಇವರೆಲ್ಲರಿಗೆ

ಮೇಲಿನ ಅರ್ಜಿ ವ್ಯವಹಾರದಲ್ಲಿ ಜಪ್ತಾದ ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೂ ಏಲಂ ಸಮಯ ಅರ್ಜಿದಾರನಿಗೆ ವ ಆತನ ಕಡೆ ವಕೀಲರಿಗೆ ಬಿಡ್ ವ ಸೆಟ್ಟಾಫ್ ಮಾಡುವರೆ ಪರ್ಮಿಶನ್ ಕೊಡಬೇಕಾಗಿ ಕೇಳಿದ ಅರ್ಜಿಯ ತೀರ್ಮಾನಕ್ಕೂ, ತಾರೀಕು 9–11–42ಕ್ಕೆ 1, 4, 5ನೇ ಎದುರಿಗೆ ನೋಟೀಸು ಬಗ್ಗೆ ಇಟ್ಟಿರುವುದರಿಂದ ಸದ್ರಿಯವರು ತಾ 9–11–42ಕ್ಕೆ ಮೇಲಿನ ಕೋರ್ಟು ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಉಜ್ರ ಹರಿಸದಿದ್ದರೆ ಸದ್ರಿಯವರನ್ನು ಏಕಪಕ್ಷ ಮಾಡಿ ಇಸ್ತಿಹಾರು ಮಂಜೂರು ಮಾಡಿ ಬಿಡ್ ವ ಸೆಟ್ಟಾಫ್ ಮಾಡುವರೆ ಪರ್ಮಿಶನ್ ಕೊಡಲಾದೀತು

(ಕೋರ್ಟು ಹುಕುಂಪ್ರಕಾರ)

ಮಂಗಳೂರು 29–10–42 } I S Rao
Advocate

NOTICE

In the Court of the District Munsiff of Mangalore

Original Suit No 311 of 1942

Between
John D' Souza *Plaintiff*
and
Adunhi Beary & others *Defeandants*

To,
2nd deft Abdurahiman Beary 3rd deft Ibraya Beary 5th deft Asimma — Children of Idine Beary
6th deft Uggappa, nephew of Budya,
All residing in Permannur village Mangalore Taluk

Notice is hereby given that the plaintiff above named has filed the above suit for possession of the leasehold property belonging to the plaintiff on usufructuary mortgage right and mentioned in the chalgeni lease dated 9 7 1941 entered into between the plaintiff and defendants 1 to 3 and now enjoyed by the defendants and that the 10th day of November 1942 has been appointed for the hearing of the said suit On failure of the abovesaid defendant to appear on the day before mentioned the suit will be heard and determined in their absence

(By Order of the Court)

Mangalore 27 10 1942 } **John Gonsalves,** L L B
Vakil for plaintiff

The Canara Banking Corporation Ltd.

(Incorporated in British India Liability of members is limited)

Estd 1906.

Our Rates of Interest on Deposits
Effective From 15--10--1942

Current accounts	(½% from July to Dec (1% from Jan. to June.
Savings Bank	1½% p. a.
Short-term deposits	1% p. a.
Fixed deposits 3 months	1% p. a.
6 „	1½% p. a.
9 „	2% p. a.
12 „	2¾% p. a.
24 „	3% p. a.

Advances against approved securities made at favourable rates of interest and banking business of every description under taken

ಮಾರಾಟಕ್ಕೆ ಸಿದ್ಧವಾಗಿದೆ.

ಲಘು ವಿಜ್ಞಾನ

೫ ನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ, ಎಲ್ ಟಿ
ಬೋರ್ಡ್ ಹ್ಯಾಸ್ಕೂಲ್, ಮುಲ್ಕಿ

ಮತ್ತು

ಎಸ್ ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ
ಬೋರ್ಡ್ ಹ್ಯಾಸ್ಕೂಲು ಪುತ್ತೂರು

ಬೆಲೆ 2–4–0

ಪುಸ್ತಕಗಳು ಬೇಕಾದಲ್ಲಿ ಬರೆಕೊಳ್ಳಿರಿ.

ಶಾರದಾ ಛಾಪಖಾನೆ
ಮಂಗಳೂರು.

ಸಿನೆಮಾ ಸುದ್ದಿ

ಕಾನನಳ ಇಚ್ಛೆ!

ಮನಮೋಹಿನಿ ಕಾನನ ದೇವಿ 'ಮುಕ್ತಿ' ಎಂಬ ಚಿತ್ರದಲ್ಲಿ ಸ್ತ್ರೀಯಾಗಿ ನಟಿಸಿದ್ದಳು. ಏಂದರೆ ಬ್ರಹ್ಮಚಾರಿಯಾಗಿ ಆವಳನ್ನು ಹಾಗೆ ಮಾಡಲು ಇಚ್ಛೆ ಯಾಗಿತ್ತು; ಕೊನೆಗೆ ಆ ಚಿತ್ರದ ಯಜಮಾನನ್ನು ನನ್ನ ನಿಜವಾದ ಪತ್ನಿ ಆಗುತ್ತೀಯಾ ಎಂದು ಕೇಳಿಬಿಟ್ಟ. ಕಾನನ ದೇವಿ ಅಲ್ಲಿಂದ ಹೊರಬಂದಳು.

ಸುಶಿಲ್ ಮುಜುಮ್‌ದಾರರ 'ಹೊಸ್ಪಿಟಲ್' ಚಿತ್ರದಲ್ಲಿಯೂ ಕಾನನಳ ಅವಸ್ಥೆ ಅಂತೆಯೇ ಆಯಿತು. ಒಂದು ರಾತ್ರಿ ಮಾತ್ರ ಸಿಪಾಯಿಯ ಹೆಂಡತಿಯಾಗಿರಲು ಕಾನನ್ ಒಪ್ಪಬೇಕಾಯಿತು! ಆದರೆ ಆ ಒಂದು ರಾತ್ರಿ ಕೇವಲ ರಜತ ಪರದೆಯಲ್ಲಿ ಮಾತ್ರ!

'ಕಿಸ್ಮೆತ್' ಮುಂಬಾಯಿ ಟಾಕೀಸ್

ಮುಂದಿನ ಚಿತ್ರ ಎಂದು ತಿಳಿದುಬಂದಿದೆ. ಜೂಲಾದ ನಿರ್ದೇಶಕ ಗ್ಯಾನ ಮುಖರ್ಜಿಯೇ ಇದನ್ನು ನಿರ್ದೇಶಿಸುತ್ತಾರೆ. ಸಂತೋಷಿ, ಶಾಹಿದ್ ಲತೀಫ್, ಕವಿ ಪ್ರದೀಪ್ ಇವರೆಲ್ಲ ಲೇಖಕವರ್ಗ. ಅನಿಲ್ ವಿಶ್ವಾಸರೇ ಸಂಗೀತಾಚಾರ್ಯರು. ಅಶೋಕ ಕುಮಾರ್ ಮತ್ತು ಮುಮ್ತಾಜ್ ಶಾಂತಿ ನಾಯಕ ನಾಯಕಿಯರು. ದೇಸಾಯಿ, ಮುಬಾರಕ್, ಶಾನವಾಜ್, ಡೇವಿಡ್, ಪ್ರೀತಮಾಲಾ ಇನ್ನು ಕೆಲವು ಹೊಸ ನಟನಟಿಯರೂ ಇದರಲ್ಲಿ ನಟಿಸುತ್ತಾರೆ.

ಅಕ್ಟೋಬರ್ ೧೦ಕ್ಕೆ 'ದಸ್ ಬಜೇ'

ಚಿತ್ರದ ಪ್ರಥಮ ಪ್ರದರ್ಶನವು ೧೦ ಗಂಟೆ ರಾತ್ರಿಗೆ ನಡೆಯಿತು! ಪ್ರಭಾತದವರು ಶಾಂತಾರಾಮರ ಕೈಚಳಕವಿಲ್ಲದೆ ತಯಾರಿಸಿದ ಚಿತ್ರವಿದು. ಹೊಸ ತಾರೆಗಳೇ ಇದರಲ್ಲಿ ಮಿನುಗಿದವು. 'ದಸ್ ಬಜೆ' ಎಷ್ಟರ ಮಟ್ಟಿಗೆ ಯಶಸ್ವಿಯಾಗುವುದು ಎಂಬುದನ್ನು ನಾವಿನ್ನು ಮುಂದೆ ನೋಡಬೇಕಾಗಿದೆ. ಆದರೆ ಇದುವರೆಗಿನ ಆ ಚಿತ್ರದ ವಿಷಯಕವಾದ ಮಾತುಕತೆಗಳ ವಿಚಾರ ಮಾಡಿದರೆ ಈ ಚಿತ್ರವು ಶಾಂತಾರಾಮರ ಚಿತ್ರಗಳ ಸಾಲಿಗೆ ಸೇರುವಂಥಾದ್ದಿದೆಯೆಂದು ತೋರುತ್ತದೆ. ಅಂತೂ ಇದೊಂದು ಯಶಸ್ವೀ ಚಿತ್ರವಾಗಿಬಿಟ್ಟರೆ, ಪ್ರಭಾತ ಕಂಪೆನಿಗೆ ಶಾಂತಾರಾಮರನ್ನು ಬಿಟ್ಟಿದ್ದರಿಂದ ನಷ್ಟವೇನೂ ಇಲ್ಲವೆಂಬುದು ಸಿದ್ಧಾಂತವಾಗುತ್ತದೆ.

ನವಯುಗ ಚಿತ್ರಗಳು

'ಭಕ್ತ ಪುಂಡಲೀಕ' 'ಫ್ರೈಡ್ ಎಂಡ್ ಪ್ರಿಜುಡೀಸ್' 'ಸಂತ ತುಕಾರಾಮ' ಎಂದು ಮೂರು ಚಿತ್ರಗಳವೆಯೆಂದು ತಿಳಿದಿದೆ. 'ಭಕ್ತ ಪುಂಡಲೀಕ'ದಲ್ಲಿ ಶಾಹು ಮೋಡಕ್ ಪುಂಡಲೀಕನ ಪಾತ್ರ ವಹಿಸುವನು.

ಕಿಶೋರ ಶಾಹು ಕರ್ದಾರ್ ಪ್ರೊಡಕ್ಷನಿಗೆ.

ಸೇರಿರುವನೆಂದು ತಿಳಿದಿದೆ. ಆವನೊಡನೆ ಕಿಶೋರ ಶಾಹುವಿನ 'ಕನ್ಯಾ ದಾನ' ಚಿತ್ರದಲ್ಲಿ ಅಭಿನಯಿಸಿದ್ದ ಪ್ರತಿಮಾದಾಸ ಗುಪ್ತಳೂ ಸೇರಿಕೊಂಡಿರುವಳೆಂದೂ, ಆವರು ಕರ್ದಾರರ ಮುಂದಿನ ಚಿತ್ರ 'ನಮಸ್ತೇ'ಯಲ್ಲಿ ಅಭಿನಯಿಸುವರೆಂದೂ ತಿಳಿಯುತ್ತದೆ.

ನೇಶನಲ್ ಸ್ಟುಡಿಯೋವನ್ನು ಮಾರಿದ ಸೋದರರು.

೯ ಲಕ್ಷ ರೂಪಾಯಿಗೆ ಕೊಂಡುಕೊಂಡರು. ಶಾಂತಾರಾಮರು ಅದನ್ನು ೨೧ ಲಕ್ಷರೂಪಾಯಿಗೆ ಕೇಳಿದ್ದರೆಂದು ಸುದ್ದಿ. ಮೆಹಬೂಬ್ ಮೋದಿಯವರು ವಿನೆರ್ವ ಸ್ಟುಡಿಯೋವನ್ನು ಮಿಲಿಟರಿಯವರಿಗೆ ಬಿಟ್ಟು ಕೊಡಬೇಕಾಗಿ ಬಂದದ್ದರಿಂದ ನೇಶನಲ್ ಸ್ಟುಡಿಯೋ ಕೊಂಡುಕೊಳ್ಳಬೇಕಾಯಿತು!

ಸಾದರ-ಸ್ವೀಕಾರ

ಮೊಗವೀರ ಸಾಂವತ್ಸರಿಕ (೧೯೪೨):

ಮುಂಬಯಿಯಲ್ಲಿ ನೆಲೆನಿಂತ ನಮ್ಮ ಜಿಲ್ಲೆಯ ಮೊಗವೀರ ಯುವಕ ಸಂಘದವರು ಪ್ರತಿವರ್ಷದಂತೆ ಈ ವರ್ಷವೂ ಅಚ್ಚುಕಟ್ಟಾದ ಸಾಂವತ್ಸರಿಕ ಸಂಚಿಕೆಯೊಂದನ್ನು ಪ್ರಕಟಿಸಿದ್ದಾರೆ. ಈ ಸಾಂವತ್ಸರಿಕವು ಜಯಕರ್ನಾಟಕ ಆಕಾರದ ೯೦ ಪುಟಗಳಿಂದ ಕೂಡಿದ್ದು ಸಚಿತ್ರವೂ, ಸುಂದರ ಲೇಖನ ಸಮನ್ವಿತವೂ ಇದ್ದು ಚಿತ್ತಾಕರ್ಷಕವಿದೆ. ಶ್ರೀಗಳಾದ ರಂಗರಾವ್ ಹಲ್ಲೇರಿಕರ್, ಆಲೂರ ವೆಂಕಟರಾವ್, ಯಸ್. ವೆಂಕಟರಾಜ, ಮೋಹನಪ್ಪ ತಿಂಗಳಾಯ, ಶ್ರೀರಂಗ, ಕೆ. ಹೈದರ್ ಮೊದಲಾದ ಲೇಖಕರ, ಶ್ರೀಮತಿಯರಾದ ಮಲ್ಲಮ್ಮ, ಆರ್. ಕಲ್ಯಾಣಮ್ಮ, ಸರಸ್ವತೀಬಾಯಿ ರಾಜವಾಡೆ ಮೊದಲಾದ ಲೇಖಕಿಯರ ಬರಹಗಳಿದ್ದು ವಾಚನೀಯವಿದೆ. ಕಾಗದ ಮುದ್ರಣಗಳ ತುಟ್ಟಿಯ ಕಾಲದಲ್ಲಿ ಇಂಥಾ ಸುಂದರ ಸಾಂವತ್ಸರಿಕವನ್ನು ಪ್ರಕಟಿಸಿದ ಮುಂಬಯಿ ಮೊಗವೀರ ಯುವಕ ಸಂಘದವರು ಪ್ರಶಂಸಾರ್ಹರು. ಮೊಗವೀರ ಯುವಕ ಸ್ವಯಂಸೇವಾದಲ, ಮೊಗವೀರ ಉದ್ಯೋಗಶಾಲೆ, ಮೊಗವೀರ ಧರ್ಮಾರ್ಥ ಸ್ತ್ರೀ ಕೈಗಾರಿಕೆ ಶಾಲೆ ಮೊದಲಾದ ಜಾತೀಯಭ್ಯುದಯ ಕಾರ್ಯಗಳನ್ನು ಈ ಸಂಘದ ಆಶ್ರಯದಲ್ಲಿ ನಡೆಸಿಕೊಂಡು ಬರುತ್ತಿರುವುದು ಅಭಿನಂದನೀಯವಾಗುವುದು.

ದೇಶೀ ದೀಪಗಳು: ಸಂಪಾದಕರು ಶ್ರೀ. ದಾಮೋದರ ಬಾಳಿಗ, ಪ್ರಕಾಶಕರು: ಗ್ರಾಮ ಸೇವಾಸಮಿತಿ ಮಂಗಳೂರು ಕ್ರೌನ್ ೧/೮ ಆಕಾರದ ೧೪ ಪುಟಗಳುಳ್ಳ ಈ ಪ್ರಕಟಣೆಯ ಬೆಲೆ ಎರಡುವರೆ ಆಣೆ. ವರ್ಧಾದ ಅಖಿಲಭಾರತ ಗ್ರಾಮೋದ್ಯೋಗ ಸಂಘದವರ ನೂತನ ಸಂಶೋಧನೆಯಾದ ಮಗನ್ ದೀಪದ (ಚಿಮಿಣಿ ಎಣ್ಣೆ ಇಲ್ಲದೆ ಬೀಜದೆಣ್ಣೆಗಳಿಂದ ಉರಿಸುವ ದೀಪ) ಆದರ್ಶವನ್ನನುಸರಿಸಿ ಕೆಲವು ದೇಶೀಯ ದೀಪಗಳನ್ನು ತಯಾರಿಸುವ ವಿಚಾರವು ಇದರಲ್ಲಿ ಕನ್ನಡ ಭಾಷೆಯಲ್ಲಿ ಸಚಿತ್ರ ವಿವರಿಸಲ್ಪಟ್ಟಿದೆ. ಗ್ರಾಮೋದ್ಯೋಗಗಳನ್ನು ಹೆಚ್ಚಿಸಿ ದೇಶಸೇವೆ ಮಾಡಬೇಕೆಂದಿರುವ ಕೆಲಸಗಾರರಿಗೆ, ಹಾಗೂ ಗೃಹ ಸೌಕರ್ಯವನ್ನು ಒದಗಿಸಿಕೊಳ್ಳಬೇಕೆಂದು ಬಯಸುವ ಪ್ರತಿಯೊಬ್ಬ ಗೃಹಸ್ಥರಿಗೆ ಈ ಪುಸ್ತಕವು ಉಪಯುಕ್ತವಿದೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 366/1942

ಲಿಂಗಪ್ಪ ಭಂಡಾರಿ ಕೂಡಾ—ವಾದಿರು

ಸಂಕಮ್ಮ ವಗೈರೆರು—ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯದಲ್ಲಿ ೫ನೇ ಪ್ರತಿವಾದಿ ಸೇಸಪ್ಪ ಶೆಟ್ಟಿ, ದ್ವಾರ ಹೆಂಗಸಿನ ಮಗ, ಮಂಗಳೂರು ತಾಲೂಕು ಕಟೀಲ ಗ್ರಾಮದಲ್ಲಿರುವವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಮೇಲೆ ಹೆಸರು ಕಾಣಿಸಿದ ವಾದಿರು ನಿಮ್ಮ ಮೇಲೆ, ಕೈಪೇತಿನಲ್ಲಿ ತೋರುವ ನಿವೃತ್ತಿ ಕ್ಷ್ಯೋಸ್ಕರ ಒಂದು ವ್ಯಾಜ್ಯ ದಾಖಲು ಮಾಡಿದ್ದಾರೆ. ಆದಕಾರಣ ಸದ್ರಿ ದಾವೆಗೆ ಉದಾಹರಣೆ ಕೊಡುವ ಬಗ್ಗೆ ನೀವು ಖುದ್ದಾಗಿಯಾಗಲೀ ಯಾ ಕ್ರಮವಾಗಿ ಅಧಿಕಾರ ಹೊಂದಿರುವ ಪ್ಲೀಡರರ ಮೂಲಕವಾಗಿಯಾಗಲೀ 1942ನೇ ಇಸವಿ ನವಂಬರ ತಿಂಗಳ ತಾರೀಕು 14ನೇ ಶನಿವಾರ ದಿವಸ ಹಗಲು 10-30 ಘಂಟೆಗೆ ಸರಿಯಾಗಿ ಈ ಕೋರ್ಟಿನ ಮುಂದೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸದ್ರಿ ವ್ಯಾಜ್ಯವನ್ನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಫೈಸಲು ಮಾಡೋಣಾದೀತೆಂತ ನೀವು ತಿಳಿದಿರತಕ್ಕದ್ದು.

(By order of the court)

Mangalore } **B. Laxminarayana Rai**
28-10-1942 } Advocate for Plaintiff.

ದೇಹದ ಹೊರಭಾಗವನ್ನು ನಿರ್ಮಲವಿರಿಸಿರಿ

ಆದರೆ ನಿಮ್ಮ ಶರೀರದ ಒಳಭಾಗವನ್ನು ನಿರ್ಮಲವಾಗಿರಿಸಲು ನೀವೇನು ಮಾಡುವಿರಿ?

ದೇಹದ ಒಳಭಾಗದ ನೈರ್ಮಲ್ಯವು ಎಲ್ಲದಕ್ಕಿಂತಲೂ ಪ್ರಧಾನವಾದುದೆಂಬುದನ್ನು ನೆನಪಿನಲ್ಲಿಡಿರಿ.

ತನ್ನ ಮತ್ತು ಮಗುವಿನ ಆರೋಗ್ಯ ಚೆನ್ನಾಗಿರಬೇಕೆಂದು ಬಯಸುವ ಪ್ರತಿಯೊರ್ವ ತಾಯಿಯೂ "ದೇಹದೊಳಭಾಗವು ನಿರ್ಮಲವಾಗಿರುವುದು ಆರೋಗ್ಯಕ್ಕೆ ಮುಖ್ಯ; ಎಂಡ್ರೂಸ್ ಲಿವರ್ ಸಾಲ್ಟ್ ದೇಹದೊಳಭಾಗದ ನೈರ್ಮಲ್ಯಕ್ಕೆ ಅತ್ಯುತ್ತಮ" ಎಂಬೀ ಸರಲ ನಿಯಮವನ್ನು ತಿಳಿದಿರಬೇಕು. ನಿಮ್ಮ ಶರೀರದೊಳಭಾಗವನ್ನು ನಿರ್ಮಲವಾಗಿರಿಸಿದರೆ, ದಿನಂಪ್ರತಿ ಸಂಭವಿಸುವ ಅನೇಕ ವಿಧದ ಬೇನೆಗಳಿಂದ ನೀವು ಗುಣಹೊಂದುವಿರಿ. ಪ್ರತಿದಿನವೂ ರುಚಿಕರ ಎಂಡ್ರೂಸ್ ಲಿವರ್ ಸಾಲ್ಟ್ ಒಂದು ಗ್ಲಾಸು ತೆಗೆದುಕೊಳ್ಳುವುದರಿಂದ ನಿಮ್ಮ ಶರೀರದೊಳಭಾಗ ನಿರ್ಮಲವಾಗುವುದು. ಮಲಬದ್ಧತೆಯನ್ನು ಇದು ಗುಣಪಡಿಸುವುದು; ಕಾಳಿಜವನ್ನು ಸರಿಗೊಳಿಸುವುದು; ತಲೆ ತಿರುಗುವುದನ್ನು ನಿಲ್ಲಿಸುವುದು, ಅಜೀರ್ಣವನ್ನು ಹೋಗಲಾಡಿಸುವುದು. ಮಲಕೋಶವನ್ನು ಎಂಡ್ರೂಸ್ ಸಂಪೂರ್ಣ ಶುಚಿಗೊಳಿಸುತ್ತದೆ. ಅದು ಹೊಟ್ಟೆಗೆ ತಂಪನ್ನಿತ್ತು ರಕ್ತವನ್ನು ಶುದ್ಧಿಗೊಳಿಸುತ್ತದೆ. ಇದು ಮಕ್ಕಳಿಗೂ ಪ್ರಾಯಸ್ಥರಿಗೂ ಸಮವಾಗಿ ಉಪಯೋಗಿಸಲು ಯೋಗ್ಯವಾಗಿದೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ಪ್ರತಿನಿತ್ಯವೂ—

ANDREWS
LIVER SALT

ಆರೋಗ್ಯಕರ ಮತ್ತು ಶಕ್ತಿವರ್ಧಕ ಪಾನೀಯವಿದನ್ನು ಸೇವಿಸಿರಿ.

ಶುದ್ಧಿ ಗೊಳಿಸುವುದು—ತಂಪುಗೊಳಿಸುವುದು—ಉಲ್ಲಾಸಗೊಳಿಸುವುದು—ಚೈತನ್ಯಗೊಳಿಸುವುದು.

TO LET

House and Compound situated in T. S. No. 215/2-4 of 20th ward, Pandeswar, Mangalore Town.

Apply for full Particulars to:
Sri M. Venkatraya Kamath,
B. A., B. L.
Advocate for Srimad Anantheshwar Temple Manjeswar.
Karned Sadashiva Road,
Mangalore.

ಕೈಶೇಕರಿಗೆ ಗಾಂಧಿಜಿ ಪತ್ರ

'ಭಾರತವನ್ನು ಬಿಟ್ಟು ಬ್ರಿಟಿಷರು ಹೋಗಬೇಕೆಂಬ ನನ್ನ ಬೇಡಿಕೆಯಲ್ಲಿ, ಜಪಾನೀ ಆಕ್ರಮಣದ ವಿರುದ್ಧ ಬ್ರಿಟಿಷರು ಭಾರತದಲ್ಲಿ ಮಾಡಿರುವ ರಕ್ಷಣೆಯನ್ನು ದುರ್ಬಲಗೊಳಿಸುವುದರ ಮೂಲಕ ನಿಮಗೆ ತೊಂದರೆಯುಂಟುಮಾಡಬೇಕೆಂಬ ಉದ್ದೇಶವಿಲ್ಲ. ನಿಮ್ಮ ಸ್ವಾತಂತ್ರ್ಯವನ್ನು ಅಪಹರಿಸಿ ನಾನು ನನ್ನ ರಾಷ್ಟ್ರದ ಸ್ವಾತಂತ್ರ್ಯ ಬಯಸಲಾರೆ' ಎಂಬುದಾಗಿ ಗಾಂಧಿಜಿ ಚೀನದ ದಳಪತಿ ಚಿಯಾಂಗ್ ಕೈಶೇಕರಿಗೆ ಬರೆದೊಂದು ಪತ್ರವನ್ನು ಲುಯಿಫಿಶರೆಂಬ ಅಮೆರಿಕನ್ ಪತ್ರಿಕೋದ್ಯಮಿಗಳು ಈಗ ಪ್ರಕಟಪಡಿಸಿದ್ದಾರೆ.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ : ಶ್ರೀ ಸ್ವಾಮಿ ಪ್ರಣವೇಶಾನಂದರು

ಬಹುದೂರಕ್ಕೆ ಅಂದರೆ ಪಂಗವಟಿಗೆ ಪಲಾಯನಮಾಡುತ್ತಿದ್ದೆನು. ಏಕೆಂದರೆ ಅಲ್ಲಿ ಇಂತಹಮಾತನ್ನು ಕೇಳಲಾಗುವುದಿಲ್ಲ; ವಿಷಯಿ ಮನುಷ್ಯನನ್ನು ಕಂಡರೆ ಅಂಜಿಕೆಯಿಂದ ಅವಿತುಕೊಳ್ಳುತ್ತಿದ್ದೆನು ಆತ್ಮೀಯ ಸ್ವಜನರು ಹೊಂಡ ಸ್ವರೂಪರೆಂದು ಭಾವಿಸುತ್ತಿದ್ದೆನು. ಅವರು ನನ್ನನ್ನು ಸೆಳೆದು ಗುಣಿಗೆ ಬಿಸಾಟು ಬಿಡುವ ಪ್ರಯತ್ನ ಮಾಡುತ್ತಾರೆಂತಲೂ, ಅದರಲ್ಲಿ ಬಿದ್ದರೆ ಇನ್ನು ಅಲ್ಲಿಂದ ಏಳುವ ಸಂಭವವಿಲ್ಲವೆಂದೂ ಭಾವಿಸುತ್ತಿದ್ದೆನು. ಉಸುರು ಗಟ್ಟಿದಂತಾಗುತ್ತಿತ್ತು, ಪ್ರಾಣವು ದೇಹದಿಂದ ನಿರ್ಗತವಾಗುವಂತೆ ಆಗುತಿತ್ತು. ಅಲ್ಲಿಂದ ಪಲಾಯನ ಮಾಡಿದರೆ ಶಾಂತಿ ಅನುಭವಿಸುತ್ತಿದ್ದೆನು. ಮನಸ್ಸು ಕಂಠಕ್ಕೆದ್ದರೂ, ಗುದ, ಲಿಂಗ, ನಾಭಿಗಳಲ್ಲಿ ಇಳಿಯಬಹುದಾದುದರಿಂದ ಎಚ್ಚರಿಕೆಯಿಂದಿರಬೇಕು ನಂತರ ಕಂಠದಿಂದ ಮನಸ್ಸು ಭೂಮಿಧ್ಯಕ್ಕೇರಿದರೆ ಇನ್ನು ಪತನವಾಗುವ ಭಯವಿಲ್ಲ—ಆಗ ಶ್ರೀ ಪರಮಾತ್ಮನ ದರ್ಶನವಾಗಿ ನಿರಂತರವೂ ಸಮಾಧಿಯಲ್ಲಿರಬಹುದು. ಈ ಚಿತ್ರಕ್ಕೂ ಮತ್ತು ಸಹಸ್ರಾರಕ್ಕೂ ನಡುವೆ ಗಾಜಿನಂತಿರುವ ಒಂದು ಸ್ವಚ್ಛವಾದ ಪರದೆ ಮಾತ್ರವಿದೆ. ಆಗ ಶ್ರೀ ಪರಮಾತ್ಮನು ನಿಕಟವಾಗಿಯೇ ಇದ್ದಾನೆಂದೂ ಆತನಲ್ಲೇ ಐಕ್ಯನಾಗಿದ್ದೇನೆಂದೂ ತೋರುವುದು ಪರಂತು ಆಗಲೂ ಐಕ್ಯ ಹೊಂದಲಿಲ್ಲ. ಇಲ್ಲಿಂದ ಮನಸ್ಸು ಇಳಿದರೆ, ಹೆಚ್ಚಾದರೆ ಅಥವಾ ಹೃದಯದವರೆಗೆ ಇಳಿಯಬಹುದು—ಅದರ ಕೆಳಗೆ ಇಳಿಯುವುದಿಲ್ಲ. ಜೀವ ಕೋಟಿಯವರು ಇಲ್ಲಿಂದ ಇನ್ನು ಇಳಿಯುವುದಿಲ್ಲ. ಅವರು ಇಪ್ಪತ್ತೊಂದು ದಿನ ಬಿಡದೆ ಸಮಾಧಿಮಗ್ನರಾಗಿದ್ದ ನಂತರ ಆ ಪರದೆಯನ್ನು ಛೇದಿಸಿ ಶ್ರೀ ಪರಮಾತ್ಮನಲ್ಲಿ ಐಕ್ಯ ಹೊಂದುವರು. ಸಹಸ್ರಾರದಲ್ಲಿ ಶ್ರೀ ಪರಮಾತ್ಮನೊಂದಿಗೆ ಐಕ್ಯಹೊಂದುವುದೇ ಸಪ್ತಮ ಭೂಮಿಗೇಳುವುದೆಂದನ್ನುತ್ತಾರೆ'

(ಕ್ರಮಶಃ)

NOTICE

In the Court of the District Munsiff of Mangalore.

S. C No 527 of 1942.

Between -
Chandarana Bros. . *Plaintiff*
and
A. S Krishna Rao —*Defendant*

To defendant
A. S. Krishna Rao Care of A Somayya Attavar Mangalore Town.

Notice is hereby given to you that the abovenamed plaintiff filed the above suit for recovery of Rs 114-3-0 together with further interest and costs of suit being the amount due by you on account of dealings carried on by you. You are hereby summoned to appear in the above court in person or by a pleader duly instructed on 3rd day of November 1942 at 10-30 A M failing which the suit will be heard and determined in your absence

(By order of court)

Mangalore. } **U A. Mallya**
21 10-1942 } Vakil for plaintiff

ನಿಮ್ಮ ಕಾಲುಗಳಿಗೆ ಗಾಯವಾಗಿ, ಕುಂಟಾಗದಂತೆ ನೋಡಿರಿ.

ಜಾಂಬಕ್ ನೋವನ್ನು ಇಂದ್ರಜಾಲದಂತೆ ಗುಣಪಡಿಸುವುದು

ಬಾವು, ನೋವು, ಗಾಯ, ತುರಿಕಜ್ಜಿ, ಕಾಲುನೋವು ಮೊದಲಾದವುಗಳಿಗೆ ಜಾಂಬಕ್ ಎಂಥಾ ಅದ್ಭುತ ಔಷಧಿಯೆಂದು ತಿಳಿದರೆ ನೀವು ಆಶ್ಚರ್ಯಪಡುವಿರಿ' ನೀವು ಮಾಡತಕ್ಕದ್ದೇನೆಂದರೆ, ಜಾಂಬಕನ್ನು ನೋವಿದ್ದಲ್ಲಿಗೆ ಸವರುವುದು ಮತ್ತು ಅದರ ಮೇಲೆ ವಸ್ತ್ರಸುತ್ತುವುದು ಜಾಂಬಕಿನಲ್ಲಿರುವ ಶುದ್ಧ ವನಸ್ಪತಿ ಸತ್ವವು ಚರ್ಮದಲ್ಲಿ ಕೂಡಲೇ ಹೀರಲ್ಪಡುವುದು ಹೀಗೆ ನೋವು ಮತ್ತು ಬಾವು ಬೇಗನೇ ಕಡಿಮೆಯಾಗುತ್ತದೆ. ಜಾಂಬಕ್ ಕಲೆ ಉಳಿಯದಂತೆ ಗುಣಕೊಡುವುದು. ಜಾಂಬಕ್ ಲೇಪಕ್ಕೆ ರೂಪಾಯಿ ಒಂದು ಅಥವ ರೂ 2 8-0 ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿಗಳ ಕೊಬ್ಬು ವಿರಹಿತವಾದುದು

ಮಾರಾಟಕ್ಕೆ ಸಿದ್ಧವಾಗಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಪುಸ್ತಕ ದೊರೆಯುವ ಸ್ಥಳ ಬೆಲೆ 1-4 0

ಶಾರದಾ ಛಾಪಖಾನೆ ರಥಬೀದಿ—ಮಂಗಳೂರು

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು ಮತ್ತು ದಿ ಜ್ಯೋಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕಡಿಮೆ ಖರ್ಚು | ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. | ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾನ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited

ESTD: 1931

HEAD OFFICE Mangalore — ***BRANCHES*** Moodabidri & Padubidri

ANNOUNCEMENT

On and from 1st October 1942, deposits will be accepted at the following revised rates

FIXED:
From 6 to 11 months 2½% From 12 to 23 months 3½%
24 months or over 4%
Current ½% from July to December.
1% from January to June.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದವೆಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್ ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದ್ಧಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗ ಬರೆಯಿರಿ: —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ, ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M B B S ಟಿ ಪಿ ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ —1 ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 6—11—1942 [ಸಂಚಿಕೆ 44]

'ಇದು ಜನತಾ ಯುದ್ಧವೆ? ನೀವು ಜನರನ್ನೇ ಕೇಳಿ!'

'ಗಾಂಧೀಜಿ ಜಪಾನ್ ಪಕ್ಷಪಾತಿಯಲ್ಲ'-

ಆಂದೋಲನವೇಕೆ ಆರಂಭವಾಯಿತು?

-ಲುಯಿ ಫಿಶರರ ವಿಚಾರಪೂರ್ಣ ಲೇಖನ-

"ಗಾಂಧಿಜಿಯವರು ಜಪಾನ್ ಪಕ್ಷಪಾತಿ ಎಂದು ಆರೋಪ ಹೊರಿಸುವ ಅಪೇಕ್ಷೆ ಬ್ರಿಟಿಷರಿಗಿದ್ದರೆ ಹಾಗೆ ಮಾಡಬಹುದು ಆದರೆ ಅದರಿಂದ ಭಾರತದ ಸಮಸ್ಯಾ ಪರಿಹಾರವು ಅಸಾಧ್ಯವಾಗುವುದು. ಗಾಂಧಿಜಿ ಜಪಾನ್ ಪಕ್ಷಪಾತಿಯಲ್ಲ. ಮಿಕ್ಕ ಅಕ್ಷರಾಷ್ಟ್ರಗಳ ಪಕ್ಷಪಾತಿಯೂ ಅಲ್ಲ ಅವರು, ಬ್ರಿಟನು, ಚೀನ, ರಶ್ಯ ಮತ್ತು ಅಮೆರಿಕಗಳ ಪಕ್ಷಪಾತಿಯಾಗಿದ್ದಾರೆ ಈ ಯುದ್ಧದಲ್ಲಿ ನಾವು ಗೆಲ್ಲಬೇಕೆಂದು ಬಯಸುತ್ತಾರೆ. ನಮ್ಮ ಯುದ್ಧೋದ್ದೇಶವನ್ನು ಶುದ್ಧೀಕರಿಸಿ ಭಾರತದ ಬೆಂಬಲ ಪಡೆದುಕೊಳ್ಳದೆ ನಾವೀ ಯುದ್ಧದಲ್ಲಿ ಗೆಲ್ಲುವುದು ಅಸಾಧ್ಯ" ಹೀಗೆಂದು ಲೂಯಿ ಫಿಶರರು, ನ್ಯೂಯಾರ್ಕಿನ 'ನೇಶನ್' ಪತ್ರಿಕೆಯಲ್ಲಿ ಒಂದು ವಿಚಾರಪೂರ್ಣ ಲೇಖನ ಬರೆದಿರುವರು ಆ ಲೇಖನದ ಕೆಲವು ವಿವರ ಇಂತಿದೆ

'ಗಾಂಧಿಯೇ ದೊಡ್ಡ ವಸ್ತು'

"ನಾನು ಭಾರತದಲ್ಲಿದ್ದಾಗ, ಅಲ್ಲಿನ ವೈಸರಾಯರಾಗಿರುವ ಲಾರ್ಡ್ ಲಿನ್‌ಲಿತ್‌ಗೋರವರು ನನ್ನೊಡನೆ 'ಇಡೀ ಭರತಖಂಡದಲ್ಲಿ ಗಾಂಧಿಜಿಯಂಥಾ ದೊಡ್ಡ ವಸ್ತು ಬೇರಿಲ್ಲ ಎಂದು ಹೇಳಿದರು ಇಂದು ಅವರೇ ಗಾಂಧಿಜಿಯನ್ನು ಬಂಧಿಸಲು ಆಜ್ಞೆಯಿತ್ತಿದ್ದಾರೆ ಈ ಕೃತ್ಯದ ಪರಿಣಾಮವನ್ನು ನಾವೆಲ್ಲರೂ ಅನುಭವಿಸಬೇಕಾಗುವುದು ಭಾರತದಲ್ಲಿ ಆಗುವ ಆತಂಕದಿಂದ ಯುದ್ಧವು ಇನ್ನಷ್ಟು ದೀರ್ಘ ಬೆಳೆಯುವುದು. ಆದ್ದರಿಂದ ಹಾಗಾಗದಂತೆ ನೋಡುವುದು ಅಮೆರಿಕದ ಕರ್ತವ್ಯ ವೇವಲರು ಭಾರತದಲ್ಲಿ ಬ್ರಿಟಿಷ್ ಸೇನಾಪತಿಯಾಗಿದ್ದಾರೆ ಅವರು ಇಜಿಪ್ತಿನ ಸ್ವಾತಂತ್ರ್ಯವೀರ ಜನರಲ್ ಅಲೆನ್‌ಬೀಯವರ ಇತಿಹಾಸ ಬರೆಯುತ್ತಾರೆ ಇಜಿಪ್ತಿಗೆ ಸ್ವಾತಂತ್ರ್ಯಕೊಡುವ ವಿಚಾರದಲ್ಲಿ ಚರ್ಚಿಲರಷ್ಟು ಆಕ್ಷೇಪಿಸಿದವರು ಬೇರೆ ಯಾರೂ ಇಲ್ಲವೆಂದು ಅವರು ಹೇಳುತ್ತಾರೆ ಚರ್ಚಿಲರು ದೊಡ್ಡ ಸಾಮ್ರಾಜ್ಯಶಾಹೀ ವ್ಯಕ್ತಿ. ಅಮೆರಿಯೂ ಚರ್ಚಿಲ್ ಸ್ವಭಾವದವರೆಂಬುದಕ್ಕೆ ಸಂಶಯವಿಲ್ಲವೆಂದು ವೇವಲರು ನನ್ನೊಡನೆ ಹೇಳಿದರು ಇಂಗ್ಲೆಂಡು ಯುದ್ಧರಂಗಕ್ಕಿಳಿದರೆ ಸರ್ವನಾಶವಾದೀತೆಂದು ಚೆಂಬರ್ಲೆನರಿಗೆ ಹೆದರಿಕೆಯಿತ್ತು ಚರ್ಚಿಲರಿಗದಿಲ್ಲ ಅವರ ಇಂಗ್ಲೆಂಡಿನಲ್ಲಿ ಭಾರತವೂ ಸೇರಿಕೊಂಡಿದೆ!

'ರಾಷ್ಟ್ರೀಯ ಮುಖಂಡರಿಗಿಂತ ಪೋಲೀಸರು ಬಲಶಾಲಿಗಳೋ ಎಂಬುದು ನಮ್ಮ ಮುಖ್ಯ ಪ್ರಶ್ನೆಯಲ್ಲ ನಾವೇನು ಮಾಡುತ್ತಿದ್ದೇವೆ ಎಂಬುದು ಮುಖ್ಯ. ಯುದ್ಧಾನಂತರದ ಜಗತ್ತು ಉತ್ತಮವಾಗುವುದೆಂದು ನಾನು, ಸೇವಾಗ್ರಾಮದಲ್ಲಿದ್ದಾಗ ಗಾಂಧಿಜಿಯವರೊಡನೆ ಹೇಳಿದೆ. ಗಾಂಧಿಜಿ ಹಾಗಾಗುವುದೆಂದು ನನಗೆ ವಿಶ್ವಾಸವಿಲ್ಲವೆಂದರು ಬೇಗನೇ ಈಗ ಆಂಗ್ಲ-ಅಮೆರಿಕನರ ಹೃದಯ ಪರಾವರ್ತನೆಯಾದರೆ, ನಿಮ್ಮ ಭವಿಷ್ಯದ ಕುರಿತು ನಂಬಬಹುದು ಎಂದು ಅವರೆಂದರು ಗಾಂಧಿಜಿ ಬ್ರಿಟಿಷ್ ಮಿತ್ರರು. ಮಿತ್ರಪಕ್ಷದವರು ಗೆಲಬೇಕೆಂದು, ಅವರ ಇಚ್ಛೆ, ಆದರೆ ಭಾರತೀಯರ ಮನವೊಲಿಸಲು ಆ ಅಭಿಪ್ರಾಯದಿಂದ ಶಕ್ಯವಿಲ್ಲವೆಂದು ಅವರು ತಿಳಿದಿದ್ದಾರೆ. ನೆಹರು ಮುಂಬಯಿಯಲ್ಲಿ ೬೦,೦೦೦ ಜನರ ಮುಂದೆ ಭಾಷಣ ಮಾಡುತ್ತಿದ್ದರು. ಅಲ್ಲಿಗೆ ಕೆಲವರು ಕಮ್ಯುನಿಸ್ಟರು ಬಂದು ಗೊಂದಲವೆಬ್ಬಿಸಿ ಇದು 'ಜನತೆಯ ಯುದ್ಧ' ಎಂದು ಕೂಗಿದರು ಸಭಿಕರು ಅದರಿಂದ ಅತೃಪ್ತಿಪಟ್ಟಂತೆ ಕಂಡುಬಂತು, ನೆಹರು ಅವರೊಡನೆ 'ಇದು ಜನತೆಯ ಯುದ್ಧವೇ, ನೀವು ಜನರನ್ನೇ ಕೇಳಿ ಎಂದರು: ಅವರ ಬಾಯಿ ಕಟ್ಟಿತು! ಇದು ಜನತೆಯ ಯುದ್ಧವೆಂದೇ ನನಗೆ ತೋರುತ್ತದೆ ಆದರೆ ಬ್ರಿಟಿಷರ ಧೋರಣದಿಂದಾಗಿ, ಭಾರತೀಯರು ಹಾಗೂ ಅವರ ಮುಂದಾಳುಗಳು ಆ ರೀತಿ ತಿಳಕೊಳ್ಳಲೊಪ್ಪುವುದಿಲ್ಲ

ಇಡೀ ದೇಶ-ಬ್ರಿಟಿಷ್ ದ್ವೇಷ

"ನಾನು ಭಾರತದಲ್ಲಿ ಕಂಡು ಮಾತನಾಡಿದ ಪ್ರತಿಯೊಬ್ಬ ಬ್ರಿಟನನೂ ಹಿಂದೆ ಎಂದೂ ಭಾರತೀಯರು ತಮಗೆ ಈ ರೀತಿ ವಿರುದ್ಧ ನಿಂತಿಲ್ಲವೆಂದು ಒಪ್ಪಿಕೊಳ್ಳುತ್ತಾನೆ ಇದಕ್ಕೆ ಕಾರಣ ಏನೇ ಹೇಳಬಹುದು, ಆದರೆ ಭಾರತದ ವಾತಾವರಣವೇ ಬ್ರಿಟಿಷ್ ವಿದ್ವೇಷಕವಿದೆಯೆಂಬುದಿದು ನಿಶ್ಚಯ ಇಂಥಾ ಸಂದರ್ಭದಲ್ಲಿ, ಗಾಂಧಿಜಿಯನ್ನು ಅಮೆರಿಕದಲ್ಲಿ ದೂರುವುದರಿಂದಾಗಲಿ, ಪುಣೆಯ ಸೆರೆಮನೆಯಲ್ಲಿ ಅವರನ್ನು ಬಂಧಿಸಿಡುವುದರಿಂದಾಗಲಿ ಪರಿಸ್ಥಿತಿ ಸುಧಾರಿಸದು ಬರ್ಮದಲ್ಲಿ ಗಾಂಧಿಜಿಯಿರಲಿಲ್ಲ ಆದರೆ ಅಲ್ಲಿನ ಜನರು ಜಪಾನಿನೊಡನೆ ಸೇರಿಕೊಂಡರೆಂದು ಬ್ರಿಟಿಷರೇ ಒಪ್ಪುತ್ತಾರೆ ಕಾಂಗ್ರೆಸಾಗಲಿ, ಲೀಗಾಗಲಿ, ಯುದ್ಧ ಯತ್ನದಲ್ಲಿ ಬ್ರಿಟಿಷರೊಡನೆ ಸಹಕರಿಸುವುದಿಲ್ಲವೆಂದು ಸ್ಪಷ್ಟ ಸಾರಿದೆ. ಹೀಗಿರುವಾಗ ಲಂಡನ್ ಡಿಲ್ಲಿಗಳ ಅಧಿಕಾರಿಗಳು ಮೊದಲು ಭಾರತದ ಜನತೆಯ ಬೆಂಬಲ ಅವಶ್ಯ ಪಡೆಯಬೇಕಿತ್ತು ಕ್ರಿಪ್ಸರೇನೋ ಪ್ರಯತ್ನ ಮಾಡಿದರು. ಆದರೆ ಇಂಗ್ಲೆಂಡಿನಲ್ಲಿರುವ ಅಧಿಕಾರಿಗಳ ಬೆಂಬಲ ದೊರಕದ್ದರಿಂದ ಅದು ವಿಫಲವಾಯಿತು ಗಾಂಧಿ, ನೆಹರು ಹಾಗೂ ಇತರ ಭಾರತದ ಮುಂದಾಳುಗಳು ಯೋಗ್ಯ ಒಡಂಬಡಿಕೆಗೆ ಒಪ್ಪುತ್ತಿದ್ದರು ಬ್ರಿಟಿಷರು ಗಾಂಧಿಜಿಯ ಜೇಡಿಕೆ ಕಡಿಮೆಯಾಗುವುದನ್ನೇ ಕಾಯುತ್ತಿದ್ದರು ಆದರೂ ಒಪ್ಪಂದ ಶಕ್ಯವಿತ್ತು ಆದರೆ ಬ್ರಿಟಿಷರು ತಮ್ಮ ಹೃದಯ ಮನಸ್ಸುಗಳನ್ನು ಮುಚ್ಚಿಬಿಟ್ಟರು'

"ಗಾಂಧಿಜಿ ಪ್ರಭಾವ ಕಡಿಮೆಯಾಗಿದೆಯೆಂದು ಬ್ರಿಟನಿನ ಅಭಿಪ್ರಾಯ ಈಗಲೇ ಅವರ ಸರ್ವ ಶಕ್ತಿಯನ್ನು ಪುಡಿಮಾಡಿ ಬಿಡಬೇಕೆಂದು ಬ್ರಿಟಿಷ್ ಪ್ರಯತ್ನ ಆದರೆ ಇಂಥಾ ಅಪಾಯಕಾರೀ ಪ್ರಯೋಗಕ್ಕೆ ಇದು ಹೇಳಿದ ಸಮಯವಲ್ಲ ಭಾರತದಲ್ಲಿಂದು ದ್ವಿತೀಯ ರಣರಂಗವೇನು? ಗಾಂಧಿಜಿ ವಿರುದ್ಧ ಈ ದ್ವಿತೀಯ ರಂಗ ಹೂಡಲಾಗಿದೆ! ನಿಜವಾದ ಯುದ್ಧರಂಗದಲ್ಲಿ ಅನೇಕಾನೇಕ ಅಪಜಯಗಳಿಗೆ ಗುರಿಯಾದ ಬ್ರಿಟಿಷರು ಗಾಂಧಿಜಿ ವಿರುದ್ಧ ಹೂಡಿದೀ ಯುದ್ಧದಲ್ಲಾದರೂ ವಿಜಯಿಗಳಾದಾರೆ? ನನಗೊಂದೂ ತಿಳಿಯಲೊಲ್ಲದು. ಮನನೊಂದ ಹಾಗೂ ರೋಷಗೊಂಡ ಭಾರತವು ಬೇಗನೇ ಜಪಾನ್ ಜರ್ಮನಿಗಳಿಗೆ ಆಹುತಿಯಾದೀತು! ಗಾಂಧಿಜಿಯನ್ನು ಸೋಲಿಸುವೀ ದೊಡ್ಡ ಪ್ರಯತ್ನದಿಂದ ಜಗತ್ತಿನ ಅತ್ಯಂತ ಪ್ರಸಿದ್ಧವಾದ ಒಂದು ಸ್ವಾತಂತ್ರ್ಯ ಚಳವಳವೇ ನಾಶಹೊಂದಿದಂತಾಗುವುದು. ಬ್ರಿಟಿಷ್ ಅಧಿಕಾರಿಗಳಿಗೆ ಭಾರತೀಯರ ಬೆಂಬಲ ಬೇಕಿಲ್ಲವೆಂದು ಅವರ ಮಾತಿನಿಂದ ನನಗೆ ತಿಳಿಯಿತು. ಇದು ಅವರ ಪ್ರಮಾದವಾಗಿದೆ. ಮನಸ್ಸಿದ್ದರೆ ಈಗಲಾದರೂ ಮಾರ್ಗವಿದೆ. ಗಾಂಧಿಜಿ ಕ್ಷಮಾ ಸಂಪನ್ನರು. ತಾವೊಮ್ಮೆ ಸ್ವತಂತ್ರ ವ್ಯಕ್ತಿಯಾದರೆ, ಸ್ವತಃ ಪಿಸ್ತೂಲ ಹಿಡಿದು ರಣರಂಗಕ್ಕಿಳಿಯುವೆನೆಂದು ನೆಹರು ಹೇಳಿರುವರು ಇದೇ ಭಾರತದ ಮಹತ್ವದ ವಿಚಾರ ಹೊರಗಿನ ಒತ್ತಾಯದಿಂದ ಬ್ರಿಟನು ಬಗ್ಗಬಹುದು. ಈ ಪ್ರಯತ್ನ ಅಮೆರಿಕ ಮಾಡಬೇಕು ಭಾರತವು ಬ್ರಿಟನಿನ ಗೃಹವಿಚಾರವೆಂದು ಬಿಟ್ಟರೆ ಯುದ್ಧ ಕಾರ್ಯದಲ್ಲಿ ಇದರಿಂದ ಅಮೆರಿಕನ್ನರಿಗೆ ಕೆಡುಕುಂಟಾಗುವುದು ಇಂಥಾ ಮಹತ್ವದ ಹಾಗೂ ಒಟ್ಟು ಜಗತ್ತಿನ ಯುದ್ಧ ಮಾಡುವಾಗ ಅಮೆರಿಕನರು ಭಾರತದ ವಿಚಾರದಲ್ಲಿ ಸುಮ್ಮನಿರುವುದು ಪ್ರಮಾದವೆನಿಸುವುದು.

ರೂಸ್‌ವೆಲ್ಟರು ಪ್ರಯತ್ನಿಸಬೇಕು

'ಭಾರತವು ಯುದ್ಧಪೂರ್ವದ ಪ್ರಾಮುಖ್ಯ ಮತ್ತು ಆಧ್ಯಾತ್ಮಿಕ ಕೇಂದ್ರ ಸ್ಥಳ ಬೇಗನೆ, ಜಾಗ್ರತರಾಗಿ ಧೈರ್ಯದಿಂದ ಯಾರಾದರೂ ಮುಂದೆ ಬಂದು ಅಲ್ಲಿನ ಸಮಸ್ಯಾ ಪರಿಹಾರ ಮಾಡಲು ಕೆಲಸ ಮಾಡಬೇಕಾಗಿದೆ ಅಂಥಾ ಜನ ಎಂದರೆ ರೂಸ್‌ವೆಲ್ಟರು ಬ್ರಿಟಿಷ್ ಸರಕಾರವು ಗಾಂಧಿಜಿಯೊಡನೆ ಎಂದು ಮಾತುಕತೆ ಮಾಡುವಂತೆ ಅವರು ಒತ್ತಾಯ ಮಾಡಲೇಬೇಕು ನೀವೀಗ ಹೇಳಬಹುದು 'ನಾವು ಭಯಂಕರ ಯುದ್ಧದಲ್ಲಿ ತಲ್ಲೀನರಾಗಿದ್ದೇವೆ ಭಾರತದ ರಾಷ್ಟ್ರೀಯ ಜನರು ಹಾಗೂ ಗಾಂಧಿ ನಮಗೆ ತೊಂದರೆ ಕೊಡುವರು ' ಎಂದು ಆದರೆ ಇಂದು ನಿಮಗೆ ಭಾರತದ ಪರಿಸ್ಥಿತಿ ತಿಳಿಯಬೇಕಾದರೆ ಭಾರತೀಯ ದೃಷ್ಟಿಕೋನದಿಂದ ನೋಡಬೇಕು ಭಾರತವು ಭಯಾನಕ ದಾರಿದ್ರ್ಯ ಹಸಿವು, ಬವಣೆಗೊಂಡ ರಾಷ್ಟ್ರ ಹೆಚ್ಚಿನಮಂದಿ ಅಲ್ಲಿ ಅರೆ ಹೊಟ್ಟೆ ಉಣ್ಣುವರು ನಾಲ್ಕರಲ್ಲಿ ಮೂರರಷ್ಟು ಜನ ನಗ್ನರು ನಾನು ರಶ್ಯ ಮತ್ತು ಪಾಶ್ಚಾತ್ಯ ಯೂರೋಪುಗಳನ್ನು ಅವುಗಳ ದುರ್ದಿನಗಳಲ್ಲಿ ನೋಡಿದ್ದೇನೆ, ಅವುಗಳಾದರೂ ಭಾರತವನ್ನು ಹೋಲಿಸಿ ನೋಡಿದರೆ ಸ್ವರ್ಗ ಸಮಾನವೆನಬೇಕು ಭಾರತದ ಜನಸಂಖ್ಯೆ ಪ್ರತಿವರ್ಷಕ್ಕೆ ಐದು ಮಿಲಿಯದಂತೆ ಹೆಚ್ಚುತ್ತಿದೆ ಈಗ ಭಾರತೀಯರು 393 ಮಿಲಿಯ ಮಂದಿ ಇದ್ದಾರೆ ಭಾರತದ ಜನಸಂಖ್ಯೆ ಸೇಕಡಾ 95ರಷ್ಟು ಹಳ್ಳಿಯವರು ಆದರೆ ಭಾರತದ ಕೃಷಿ ಉದ್ಯೋಗಗಳ ಅಭಿವೃದ್ಧಿ ಉತ್ಪತ್ತಿಗಳು ಏನೇನೂ ಹೆಚ್ಚಿಲ್ಲ, ಬದಲಾಗಿ ಗೋದಿ, ಚಾ ಮೊದಲಾದ ಮುಖ್ಯ ಉತ್ಪತ್ತಿಗಳು ಕಡಿಮೆಯೇ ಆಗುತ್ತಿದೆ. ಇಂಗ್ಲೆಂಡಿನಲ್ಲಾಗುವ ಸಾಮಾನುಗಳನ್ನು ಮಾರಾಟಮಾಡುವ ಬುದ್ಧಿಪೂರ್ವಕದ ಬ್ರಿಟಿಷರ ಸುಲಿಗೆಯಿಂದ ಭಾರತೀಯರು ಈ ಅವಸ್ಥೆಗೊಳಗಾಗಿದ್ದಾರೆ ಇಂದಿನೀ ಹೋರಾಟವು ಉದಯಿಸಿದ್ದು ಈ ಬಡತನ, ಈ ಸುಲಿಗೆಗಳಿಂದಲೇ! ಒಂದು ಸಭೆಯಲ್ಲಿ ಭಾರತೀಯ ಪತ್ರಿಕೋದ್ಯಮಿಯೊಬ್ಬ ನನಗೆ ಹೇಳಿದ 'ಬ್ರಿಟಿಷ್ ಫೇಸಿಸಂ ಮತ್ತು ಜಪಾನ್ ಅಥವಾ ಜರ್ಮನ್ ಫೆಸಿಸಂಗಳೊಳಗೆ. ನಾವೇನೂ ಭೇದ ಕಾಣುವುದಿಲ್ಲ' ಎಂದು. ನಾನವನಿಗೆ ಹೇಳಿದೆ ಬ್ರಿಟಿಷರಾಳ್ವಿಕೆಯಲ್ಲಿ ನೀವಿಂಥಾ ಸಭೆ ಜರಗಿಸಬಹುದಷ್ಟೆ? ನೀವು ಜೈಲಿಗೆ ಹೋಗಿ ಮರಳಿ ಬರುತ್ತೀರಷ್ಟೆ? ಆದರೆ ಹಿಟ್ಲರನ ರಾಜ್ಯದಲ್ಲಿ ನೀವು ಇಂಥಾ ಸಭೆ ಕೂಡಿಸಲಾರಿರಿ. ಹಿಟ್ಲರನು ಗುಂಡಿಟ್ಟು ಕೊಲ್ಲುತ್ತಾನೆ' ಎಂದು ' 'ಬ್ರಿಟಿಷರು ನಮ್ಮನ್ನು ಗುಂಡಿಟ್ಟು ಕೊಲ್ಲುವ ಅವಶ್ಯವಿಲ್ಲ. ನಮ್ಮಲ್ಲಿ ಹುಟ್ಟಿದ ಪ್ರತಿಯೊಂದು ಶಿಶುವಿಗೆ ಕೇವಲ 27 ವರ್ಷ ಮಾ

(೨ನೇ ಪುಟಕ್ಕೆ ಮುಂದುವರಿದಿದೆ.)

ಆಂಗ್ಲ ರಾಜದಂಪತಿಗಳು ಸಿಪಾಯಿಗಳಿಗೆ ಸಂದರ್ಶನವಿತ್ತರು.

'ಇದು ಜನತಾ ಯುದ್ಧವೆ? ನೀವು ಜನರನ್ನೇ ಕೇಳಿ!'

(೧ನೇ ಪುಟದಿಂದ ಮುಂದುವರಿದುದು)

ತ್ರ ಆಯುಸ್ಸು. ಇಂಗ್ಲೆಂಡಿನಲ್ಲಿ 55 ವರ್ಷ ಬದುಕುತ್ತಾರೆ' ಎಂದು ಅವರ ಉತ್ತರವಾಗಿತ್ತು. ಇದು ನಿಜವಾದ ಮಾತೇ ಆಗಿದೆ! ಭಾರತದ ನೆಲದಲ್ಲಿ ಇಂಥಾ ದಾರಿದ್ರ್ಯ, ಇಂಥಾ ಬವಣೆ ಇಂದು ಇದೆ.

ಬ್ರಿಟಿಷರೇ ಕಣ್ಣಿಗೆ ಕಾಣುತ್ತಾರೆ!

'ಭಾರತೀಯರಿಗೆ ಅಸಹ್ಯವಾದರೂ ದಿನ ನಿತ್ಯವೂ ಕಣ್ಣಮುಂದೆ ಕಾಣುವುದು ಅಲ್ಲಿ ಶಾಶ್ವತವಾಗಿ ನಿಂತ ಬ್ರಿಟಿಷ್ ಪ್ರಭುತ್ವ. ಅವರ ದೃಷ್ಟಿಯೆನ್ನು ಅದು ಕೆಡಿಸಿಬಿಟ್ಟಿದೆ. ಬ್ರಿಟಿಷರು ಲೋಕವನ್ನು ಆಕ್ರಮಿಸಬಯಸುವವರೆಂದು ಅವರ ತಿಳುವಳಿಕೆ. ಇಂದಿನ ಯುದ್ಧವನ್ನು ಅವರು ಇದೇ ದೃಷ್ಟಿಯಲ್ಲಿ ನಿರೀಕ್ಷಿಸುತ್ತಾರೆ. ಆದ್ದರಿಂದಲೇ ಬ್ರಿಟಿಷರನ್ನು ಹೊರಹಾಕಬೇಕೆಂದು ಅವರ ಬಯಕೆಯಾಗಿದೆ. '1861ರಲ್ಲಿ ಜಾಗೃತವಾದ ಜಪಾನು ಇಂದು ಎಂಥಾ ಬಲಿಷ್ಠರಾಷ್ಟ್ರವಾಗಿದೆ. ಹಾಗಾದರೆ 150 ವರ್ಷದ ಬ್ರಿಟಿಷರ ಆಳುವಿಕೆಯಲ್ಲಿ ಭಾರತವೇಕೆ ಜಾಗೃತವಾಗಿಲ್ಲ. ಬ್ರಿಟಿಷರು ಭಾರತದ ಪ್ರಗತಿ ಹಾಳುಮಾಡಿದರು' ಎಂದು ಅವರು ಹೇಳುತ್ತಾರೆ. ಬ್ರಿಟಿಷರು ತಾವು ಭಾರತದಲ್ಲಿ ಶಾಂತಿ ಸುವ್ಯವಸ್ಥೆ ಮಾಡಿರುವೆವೆನ್ನುವರು. ಆದರೆ 'ಇದು ಸ್ಮಶಾನ ಶಾಂತಿ ಸುವ್ಯವಸ್ಥೆ'ಗಳೆಂದು ಗಾಂಧಿ ನನ್ನೊಡನೆ ಹೇಳಿದರು. 'ಭಾರತವು ಅಭಿವೃದ್ಧಿಯ, ಆಧುನಿಕ ಬಲಿಷ್ಠ ರಾಷ್ಟ್ರವಾಗಲು ಬ್ರಿಟಿಷರು ಏನೂ ಪ್ರಯತ್ನಮಾಡಲಿಲ್ಲ. ಏಕೆ ಹಾಗೆ ಮಾಡಲಿಲ್ಲವೆಂದರೆ ಅದರಿಂದ ಬ್ರಿಟಿಷ ಸಾಮ್ರಾಜ್ಯದ ತಳಹದಿಯೇ ನಡುಗೀತೆಂದು ಅವರು ಅಂಜಿದರು. ಆಳುವವರನ್ನು ಆಳಿಸಿಕೊಳ್ಳುವವರು ಎಲ್ಲೆಲ್ಲೂ ಪ್ರೀತಿಸುವುದಿಲ್ಲ. ಆದರೆ ಭಾರತದಲ್ಲಿ ಈ ಅಪ್ರೀತಿ ಪರಮಾವಧಿಗೆ ಮುಟ್ಟಿದೆ. ಈ ಹಳೆಯ ಅಪ್ರೀತಿ, ಬ್ರಿಟಿಷರು, ಹೊಂಕೊಂಗ್, ಮಲಯ, ಸಿಂಗಾಪುರ, ಬರ್ಮಾಗಳಲ್ಲಿ ಹೊಂದಿದ ಅಪಜಯದಿಂದ ಇನ್ನಷ್ಟು ಹೆಚ್ಚಾಗಿದೆ. 'ಪ್ರಿನ್ಸ್ ಓಫ್ ವೇಲ್ಸ್' ಮತ್ತು 'ರಿಪಲ್ಸ್' ಹಡಗಗಳು ಮುಳುಗಿದ್ದು ಅವರನ್ನು ಬಹಳ ಮಟ್ಟಿಗೆ ಎಚ್ಚರಿಸಿದೆ! ಭಾರತೀಯರೊಡನೆ ನಾನು ಮಾತುಕತೆ ಮಾಡುವಲ್ಲಿ ಅವರು 1904-5ರ ರಶ್ಯ ಜಪಾನ್ ಯುದ್ಧದ ವಿಷಯ ಹೇಳಿದರು. ಇದು ಬಿಳಿಜನರನ್ನು ಕರಿಜನರು ಸೋಲಿಸಿದ ಮೊಲದನೆಯ ಯುದ್ಧ. ಇದರಿಂದ ಭಾರತದ ರಾಷ್ಟ್ರೀಯ ಆಂದೋಲನಕ್ಕೆ ಒಳ್ಳೇ ಹುರುಪು ಹುಟ್ಟಿದ್ದೆಯೆಂದರು. ಆದರೆ ಇದು ಆದದ್ದು ಗಾಂಧಿಯವರ ಮುಂದಾಳುತನದಲ್ಲಿ ಭಾರತದಲ್ಲಿ ರಾಷ್ಟ್ರೀಯ ಆಂದೋಲನ ಆರಂಭವಾಗುವುದಕ್ಕಿಂತ 37 ವರ್ಷ ಮೊದಲು. ಭಾರತದಿಂದ ಅದು ಬಲು ದೂರ ಆದ ಯುದ್ಧ. ಭಾರತ ರಕ್ಷಣೆಗೆ ಅವಶ್ಯವಿರುವ ಹಾಂಕಾಂಗ್, ಸಿಂಗಾಪುರ ಬರ್ಮಾಗಳಲ್ಲಿ ಭಾರತೀಯ ಯೋಧರು ಹೋರಾಡಿದರು, ಶತ್ರುಗಳ ಸೆರೆಯಾಳುಗಳಾದರು. ಅಲ್ಲಿಂದ ಬಂದ 50,000 ಮಂದಿ ನಿರಾಶ್ರಿತರು ಬಣ್ಣಿಸಿದ ಕತೆ ಕರುಣಾಜನಕವಿತ್ತು. ಇದನ್ನು ಶತ್ರು ರೇಡಿಯೋಗಳು ಇನ್ನಷ್ಟು ದೊಡ್ಡದು ಮಾಡಿದವು. ಇದರಿಂದೆಲ್ಲಾ ಬ್ರಿಟಿಷರ ಮೇಲೆ ಭಾರತೀಯ ವಿದ್ವೇಷ ಮತ್ತೂ ಹೆಚ್ಚಿತು. ಭಾರತದಲ್ಲಿ ಬ್ರಿಟಿಷರ ಗೌರವ ಹಿಂದೆಂದೂ ಇಷ್ಟು ಊನವಾಗಲಿಲ್ಲ. 'ಬ್ರಿಟಿಷರು ಭಾರತವನ್ನು ರಕ್ಷಿಸಿಯಾರೆ? ಭಾರತದ ಗಡಿಪ್ರಾಂತಗಳಲ್ಲಿ ಆದಂತೆ ಅವರು ಅಪಜಯ ಹೊಂದದಿದ್ದಾರೆ?' ಇದು ಅವರ ಶಂಕೆಯಾಗಿದೆ. ಬ್ರಿಟಿಷರು ಭಾರತವನ್ನು ರಕ್ಷಿಸಲಾರರೆಂಬುದೂ ಆದರೆ ಜಪಾನು ಆಕ್ರಮಣ ಮಾಡೀತೆಂಬ ಹೆದರಿಕೆಯೂ ಕೂಡಿ, ಭಾರತೀಯರು ತಮ್ಮ ರಾಷ್ಟ್ರವನ್ನು ರಕ್ಷಿಸಲು ನಿಶ್ಚಯಿಸಿದರು. 'ಆದರೆ ನಮ್ಮನ್ನು ತುಳಿಯುವ ಬ್ರಿಟಿಷರೊಡಗೂಡಿ ನಾವು ಯುದ್ಧದಲ್ಲಿ ಹೋರಾಡಲಾರೆವು. ನಮಗೇ ಇಲ್ಲದ ಪ್ರಜಾಪ್ರಭುತ್ವಕ್ಕಾಗಿ ನಾವು ಹೋರಾಡುವುದೆ?' ಇದು ಅವರ ಪ್ರಶ್ನೆಯಾಗಿದೆ! ಅಟ್ಲಾಂಟಿಕ್ ಘೋಷಣೆ ಭಾರತಕ್ಕೆ ಅನ್ವಯಿಸುವುದಿಲ್ಲವೆಂದು ಚರ್ಚಿಲರು ಸ್ಪಷ್ಟೀಕರಿಸಿಬಿಟ್ಟರು, ಹಲಮಂದಿ ಭಾರತೀಯರು ಇದರಿಂದ, 'ನಮಗೆ 150 ವರ್ಷಗಳಿಂದ ಪರಿಚಯವುಳ್ಳ ಹಾಗೂ ನಾವು ದ್ವೇಷಿಸುವ ಒಂದು ಒಡೆತನವನ್ನು ದೂರಮಾಡಿ, ನಮಗೆ ತಿಳಿಯದಿರುವ ಹೊಸ ಒಡೆತನವೊಂದನ್ನು—ಜಪಾನನ್ನು—ಬರಮಾಡುವುದಾದರೂ ಸರಿ' ಎಂದು ಅಭಿಪ್ರಾಯಪಟ್ಟರು. ಪ್ರಸಾಹಸ್ತ್ವದ ಜನರೆ ಈ ಬವಣೆ ತಿಳಿಯದ ಸ್ವಾತಂತ್ರ್ಯ ರಾಷ್ಟ್ರದ ಜನರು ಇದನ್ನು ಬುದ್ಧಿ ಪ್ರಮಾದವೆನಬಹುದು. ಇಂಗ್ಲೆಂಡು ಈಗ ನಮಗೆ ಸ್ವಾತಂತ್ರ್ಯ ಕೊಡುವುದಿಲ್ಲವಾದರೆ ಯುದ್ಧಾನಂತರವಾದರೂ ಕೊಟ್ಟೀತೆಂದು ನಾವೇಕೆ ತಿಳಕೊಳ್ಳಬೇಕು?' ಭಾರತೀಯರು ಹೀಗೆ ನನ್ನೊಡನೆ ಕೇಳಿದರು.

ವೈಸರಾಯ್ ಅಸಡ್ಡೆ ಮಾಡಿದರು

'1942ರ ಪ್ರಾರಂಭದಲ್ಲಿ ಭಾರತದ ಪರಿಸ್ಥಿತಿ ಹೀಗಿತ್ತು. ಚೀನಾ ರಶ್ಯಗಳ ಜನರಲ್ಲಿರುವಂತಹ ರಾಷ್ಟ್ರರಕ್ಷಣೆಯ ಶಕ್ತಿ ಭಾರತೀಯರಲ್ಲಿ ಕಂಡುಬರುತ್ತಿರಲಿಲ್ಲ. ಈಗೇನಾದರೂ ಮಾಡಬೇಕೆಂದು ಲಂಡನಿಗೂ ತಿಳಿಯಿತು. 1942 ಮಾರ್ಚಿಯಲ್ಲಿ ಕ್ರಿಪ್ಸರು ಭಾರತೀಯ ಮುಖಂಡರೊಡನೆ ಸಂಧಾನಮಾಡಲು ಧಾವಿಸಿ ಬಂದರು. ಕ್ರಿಪ್ಸರು ಸೋತರು. ಅವರ ಸೂಚನೆಯನ್ನು ಕಾಂಗ್ರೆಸಾಗಲಿ, ಮುಸ್ಲಿಂ ಲೀಗಾಗಲಿ, ಹಿಂದು ಮಹಾಸಭೆಯಾಗಲಿ ಇನ್ನು ಯಾವುದೇ ಪಕ್ಷವಾಗಲಿ ಒಪ್ಪಲಿಲ್ಲ. ಅವರು ಪರಿಸ್ಥಿತಿ ಸುಧಾರಿಸಲು ಬಂದರು, ಆದರೆ ಅವರ ಬಗೆಬಗೆಯಿಂದ ಪರಿಸ್ಥಿತಿ ಕೆಟ್ಟಿತು. ಹೀಗೆ ಪರಿಸ್ಥಿತಿ ಹದ್ಗೆಡಲು ಗಾಂಧಿಜಿ ಆಂದೋಲನ ಆರಂಭಿಸಬೇಕಾಯಿತು. 'ಬ್ರಿಟಿಷರೇ ಹೊರಟುಹೋಗಿರಿ' ಎಂಬೀ ಅಭಿಪ್ರಾಯವು, ತಮ್ಮ ಸೇವಾಗ್ರಾಮದ ಪರ್ಣಕುಟಿಯಲ್ಲಿ ಮಲಗಿದ್ದಾಗ ಒಂದು ರಾತ್ರಿ ಥಟ್ಟನೇ ತನಗೆ ಹೊಳೆಯಿತೆಂದು ಅವರು ನನ್ನೊಡನೆ ಹೇಳಿದರು. ಕೊನೆಗೆ ಅವರ ಮಿತ್ರರೆಲ್ಲಾ ಚರ್ಚಿಸಿದ ಬಳಿಕ, ಜಪಾನನ್ನೆದುರಿಸುವ ಸಲುವಾಗಿ ಬ್ರಿಟಿಷ್ ಅಮೆರಿಕನ್ ಸೈನ್ಯಗಳು ತಮ್ಮ ನೆಲದಲ್ಲಿ ನಿಲ್ಲಬಹುದೆಂದು ಅವರೊಪ್ಪಿಕೊಂಡರು. ಗಾಂಧಿಗೆ ಈ ಯುದ್ಧಕಾಲದಲ್ಲಿ ತಾತ್ಕಾಲಿಕ ಸ್ವಾತಂತ್ರ್ಯ ಕೊಟ್ಟರೂ ತೃಪ್ತಿಯಿದೆ. ಅವರು ಕನಿಷ್ಠಮಿತಿಗೂ ಒಪ್ಪುವರು. ಆದರೆ ಬ್ರಿಟಿಷ್ ಸರಕಾರವು ಮಾತ್ರ ಗಾಂಧಿಯವರೊಡನೆ ಒಪ್ಪಂದಕ್ಕೆ ಬರಲಿಲ್ಲ. 'ನೀವು ಚೀನಾ, ರಶ್ಯದವರು ವಿನಂತಿಸಿಕೊಂಡರೆ ಈ ಚಳವಳ ನಿಲ್ಲಿಸುವಿರಾ?' ಎಂದು ಗಾಂಧಿಯವರೊಡನೆ ನಾನು ಕೇಳಿದೆ. ಅವರು, ಚಳವಳದ ವಿಷಯ ನನ್ನೊಡನೆ ಮಾತನಾಡಿದ್ದರು. 'ಮೊದಲು ಅವರು ನನಗೆ ಕೇಳಿ ನೋಡಲಿ' ಎಂದರು ಅವರು. 'ನಾನಿದನ್ನು ವೈಸರಾಯರಿಗೆ ಹೇಳಲು ನಿಮ್ಮ ಅನುಮತಿಯಿದೆಯೆ?' ಎಂದು ಕೇಳಿದೆ. ಅವರದಕ್ಕೆ ಒಪ್ಪಿದರು. ನಾನು ಸೇವಾಗ್ರಾಮವನ್ನು ಬಿಡಬೇಕಾದರೆ ಮಹಾದೇವ ದೇಸಾಯಿ ನನ್ನೊಡನೆ, ಗಾಂಧಿ ವೈಸರಾಯ್ ಭೇಟಿಯಾಗುವಂತೆ ಪ್ರಯತ್ನಿಸಿರಿ ಎಂದು ಹೇಳಿದರು. ನಾನು ವೈಸರಾಯರನ್ನು ಕಂಡು ಗಾಂಧಿಜಿ ಒಪ್ಪಂದಕ್ಕೆ ಒಪ್ಪುವರೆಂದು ತಿಳಿಸಿದೆ. ಒಪ್ಪಂದದ ಕೆಲ ಸೂಚನೆಗಳನ್ನು ತಿಳಿಸಿದೆ. ಅವರು ಕಾಂಗ್ರೆಸು ಮುಖಂಡರನ್ನು ಆಮಂತ್ರಿಸಿ ಈ ಕುರಿತು ಮಾತನಾಡಬೇಕೆಂದೂ ತಿಳಿಸಿದೆ. ಆದರೆ ವೈಸರಾಯರು ಈ ವಿಷಯವೆಲ್ಲಾ ಬಹಳ ಮಹತ್ವದ ವಿಷಯವಾದುದರಿಂದ ಸಾಧಕಬಾಧಕ ವಿಚಾರಿಸಿ ನಿರ್ಣಯಿಸಬೇಕೆಂದು ಗಾಂಧಿಜಿಯವರನ್ನಾಗಲಿ ಇನ್ನಾವ ಕಾಂಗ್ರೆಸ್ ಮುಖಂಡರನ್ನಾಗಲಿ ಕರೆಯಲಿಲ್ಲ. ಹಾಗಾಗಿ ಶಾಸನಭಂಗ ಚಳವಳದ ಸಿದ್ಧತೆ ಆಯಿತು. ಇದೆಲ್ಲಾ ನಡೆದದ್ದು ಜೂನಿನಲ್ಲಿ. ಗಾಂಧಿಜಿ ಆಗಸ್ಟ್ ವರೆಗೆ ಇದನ್ನು ಹೊರಗೆಡಹಲಿಲ್ಲ. ಅಮೆರಿಕದ ಮುಖಂಡರು ಯಾರಾದರೂ ಇಂಗ್ಲೆಂಡಿನೊಡನೆ ಮಾತನಾಡಿ ಒಪ್ಪಂದಕ್ಕೆ ಯತ್ನಿಸುವರೇ ಎಂದು ಅವರು ನಿರೀಕ್ಷಿಸುತ್ತಿದ್ದರು. 'ಚಳವಳವಾಗದಂತೆ ತಡೆಯುವುದು ನನಗೆ ಸಮ್ಮತವಿದೆ' ಎಂದು ನಿಮ್ಮ ಪ್ರೆಸಿಡೆಂಡರಿಗೆ ಹೇಳಿ ಎಂದು ನನಗೆ ಗಾಂಧಿಜಿ ಹೇಳಿದ್ದರು. ಸಂಧಾನಕ್ಕೆ ಗಾಂಧಿಜಿ ಯಾವಾಗಲೂ ಸಿದ್ಧರು. ಚಿಯಾಂಗ್ ಕೈಶೇಕರಿಗೂ ಅವರೊಂದು ಕಾಗದ ಬರೆದರು. ಆ ಪತ್ರದಲ್ಲಿ ಅವರು ತಾನು ಜಪಾನ್ ವಿರೋಧಿ ಚೀನಾ ಪ್ರೇಮಿಯೆಂದು ಸ್ಪಷ್ಟಪಡಿಸಿದ್ದರು. ಗಾಂಧಿಜಿ ಕಳೆದ ಯುದ್ಧದಲ್ಲಿ ಬ್ರಿಟಿಷ್ ಸೈನ್ಯಕ್ಕೆ ಜನ ಸೇರಿಸಿದ್ದಾರೆಂಬುದನ್ನಿಲ್ಲಿ ನಾವು ನೆನಪಿನಲ್ಲಿಡಬೇಕು. ಆದರಿಂದ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದೇ ತನಗೆ ದೊರಕುವ ಬಹುಮಾನ ಎಂದು ಅವರು ಬಯಸಿದ್ದರು. ಅವರು ಈಗಾದರೂ ತಿರುಗಿ ಯುದ್ಧಕ್ಕೆ ಬೆಂಬಲ ಕೊಡಬಹುದು. ಗಾಂಧಿಯವರೊಡನೆ ಸಂಧಾನ ಮಾಡುವುದನ್ನುಳಿದು ಬ್ರಿಟಿಷ್ ಪ್ರಭುತ್ವ ಅವರನ್ನು ಸೆರೆಮನೆಯಲ್ಲಿಟ್ಟಿತು. ಭಾರತದಲ್ಲಿ ದಂಗೆ ಅತ್ಯಾಚಾರ ನಡೆಯುತ್ತಿದೆಯೆಂಬ ಸುದ್ದಿ ಬರುತ್ತಿದೆ. ಆದರೆ ಗಾಂಧಿ ದಂಗೆ ಅತ್ಯಾಚಾರ ಮಾಡಲು ಹೇಳುವವರಲ್ಲ. ಹಾಗೆ ಮಾಡಕೂಡದೆಂದೇ ಅವರು ಎಚ್ಚರಿಸಿದ್ದರು. ಆದರೆ ಗಾಂಧಿ ನೆಹರು ಮೊದಲಾದ ಕಾಂಗ್ರೆಸ್ ಮುಖಂಡರ ಬಂಧನಗಳಿಂದ ಭಾರತೀಯರನ್ನು ಬ್ರಿಟಿಷ್ ಬೆಂಬಲಿಗರನ್ನಾಗಿ ಮಾಡಲು ಸಾಧ್ಯವಿಲ್ಲ. ಇದು ನಮ್ಮ ಸಮಸ್ಯೆ. ಇದು ಕಠಿಣ ಸಮಸ್ಯೆ. ಸಂಯುಕ್ತ ರಾಷ್ಟ್ರ ಅಗತ್ಯ ಬಗೆಹರಿಸಬೇಕು. ಮಧ್ಯಪೂರ್ವದ ಪರಿಸ್ಥಿತಿ ವಿಷಮವಿದೆ. ಕಾಕಸಸ್, ಕೈರೋ, ಕಲ್ಕತ್ತೆಗಳ ನಡುವೆ ನಮಗೆ ಗಂಡಾಂತರ ಕಾದಿದೆ. ಆದ್ದರಿಂದ ರೂಸ್‌ವೆಲ್ಟರು ಈಗ ಮುಂಬಂದು ಬ್ರಿಟಿಷ ಸರಕಾರ ಮತ್ತು ಗಾಂಧಿಯವರೊಡನೆ ಮಾತುಕತೆಮಾಡಿಸಬೇಕು. ಗಾಂಧಿ ಸಜ್ಜನರು, ಧರ್ಮಾತ್ಮರು ಎಲ್ಲವನ್ನೂ ಕ್ಷಮಿಸುವವರು, ಸೆರೆಮನೆಯೊಳಗಿದ್ದರೂ ಅವರು ಮಾತನಾಡಲೊಪ್ಪುವರು.

ಈ ಸುದ್ದಿ ಪ್ರಕಟಿಸಲೇ ಇಲ್ಲ

'ತಾತಾ ಕಬ್ಬಿಣ ಕಾರ್ಖಾನೆಯ ಕೆಲಸಗಾರರು ಆಗಸ್ಟ್ ಮೂರನೆ ವಾರ, ಗಾಂಧಿಜಿಯವರನ್ನು ಬಿಡುಗಡೆಮಾಡಬೇಕೆಂದು ಮುಷ್ಕರ ಹೂಡಿದರು. ಇದು ಬ್ರಿಟಿಷ್ ಸಾಮ್ರಾಜ್ಯದಲ್ಲಿರುವ ಅತ್ಯಂತ ದೊಡ್ಡ ಕಬ್ಬಿಣ ಕಾರ್ಖಾನೆಯಾಗಿದೆ. ಆದರೆ ಈ ಸುದ್ದಿ ಯಾವುದೇ ಪತ್ರಿಕೆಯಲ್ಲಿ ಪ್ರಕಟಮಾಡಲು ಬಿಡಲಿಲ್ಲ. ಬ್ರಿಟಿಷ್ ಸರಕಾರವು ಊಹಿಸಿದ್ದಕ್ಕಿಂತ ಹೆಚ್ಚಿನ ಮಟ್ಟಿಗೆ ಇಂದು ದಂಗೆ ಮತ್ತು ಸಂಚಾರಮಾರ್ಗ ನಿರ್ಬಂಧಗಳು ಭಾರತದಲ್ಲಿ ಆಗುತ್ತಿವೆ. ಭಾರತದ ರಾಷ್ಟ್ರ ಪುರುಷರ ಆಲೋಚನೆಯೆಂದರೆ ಶಾಸನ ಭಂಗ ಚಳವಳವು ಇಂದು ಆರಂಭಾವಸ್ಥೆಯಲ್ಲಿ ಮಾತ್ರ ಇದೆಯೆಂದು ಜಿನ್ನರು ನನ್ನೊಡನೆ ಹೇಳಿದ್ದರು. 'ಚಳವಳ ಆರಂಭವಾದರೆ ಹಿಂದು ಮುಸ್ಲಿಂ ದಂಗೆ ಎದ್ದೀತು' ಎಂದು. ಆದರೆ ಇದುವರೆಗೆ ಅಂಥಾ ಒಂದೇ ಒಂದು ದಂಗೆಯಾದ ಸುದ್ದಿ ಇಲ್ಲ. ಇದರಿಂದೇನು ವ್ಯಕ್ತವಾಗುತ್ತದೆಂದರೆ, ಮುಸ್ಲಿಂ ಲೀಗು, ಕಾಂಗ್ರೆಸನ್ನದೆ ಎಲ್ಲರಿಗೂ ದೇಶದ ಸ್ವತಂತ್ರ್ಯ ಬೇಕಾಗಿದೆ, ಅದಕ್ಕಾಗಿ ಅವರಿಂದು ಈ ಹೋರಾಟ ಹೂಡಲು ನಿಶ್ಚಯಿಸಿದ್ದಾರೆಂದು. ಭಾರತದ ಹೊರ ಮತ್ತು ಒಳಗಿನ ಎಲ್ಲಾ ಬ್ರಿಟಿಷರೂ, ಈ ಚಳವಳವನ್ನು ಧ್ವಂಸಮಾಡಬೇಕೆಂಬ ಬುದ್ಧಿಯಿಂದ ಸಂಧಾನಮಾಡಲು ತಿರಸ್ಕರಿಸುತ್ತಾರೆ. ಇಷ್ಟರಲ್ಲೇ ಬರ್ಮಾ, ಸಿಂಗಾಪುರ ಮೊದಲಾದ ಕಡೆಗಳಲ್ಲಿ ದೊರೆತ ಅಪಜಯದಿಂದ, ಕೆಳಮಟ್ಟಕ್ಕೆ ಬಂದ ಬ್ರಿಟಿಷರ ಗೌರವವು ಭಾರತವನ್ನು ಸಮಾಧಾನಪಡಿಸದೋದರೆ ಇನ್ನೂ ಕೆಳಮಟ್ಟಕ್ಕೆ ಬಂದೀತೆಂದು ಅವರು ಹೇಳುತ್ತಾರೆ. ಆದರೆ ಪರಿಸ್ಥಿತಿ ಹೀಗೆಯೇ ಉಳಿದರೆ ಬ್ರಿಟಿಷರು ಈಗಲೇ ಬಗ್ಗುವುದೊಳ್ಳೆಯದು. ಭಾರತದ ಚಳವಳವನ್ನು ಧ್ವಂಸಮಾಡುವಲ್ಲಿ ಬ್ರಿಟಿಷರು ಗೆದ್ದರೂ ಅವರು ಸೋತ ಹಾಗೆ. ಗುಂಡು ಹಾಕುವುದರಿಂದ, ಛಡಿ ಏಟುಗಳಿಂದ ಭಾರತೀಯರನ್ನು ಸ್ವಲ್ಪಕಾಲ ಮೂಕರಾಗಿ ಮಾಡಬಹುದೇನೋ! ಆದರೆ ಇಂಥಾ ಸಂದರ್ಭದಲ್ಲಿ ಅಮೆರಿಕ ಭಾರತದ ಈ ಅವಸ್ಥೆ ನೋಡಿ ನಿಂತಿರುವುದೆ? ಭಾರತೀಯರಿಗೆ ಅವರ ದೇಶರಕ್ಷಣೆ ಮಾಡಬೇಕಾಗಿದೆ. ಕ್ರಿಪ್ಸ್ ಸಂಧಾನದ ವಿಫಲತೆ ಇದನ್ನೇ ವಿವರಿಸಿ ಹೇಳಿತು. ಭಾರತೀಯರಿಗೆ ಹೋರಾಡಲು ಸ್ವಾತಂತ್ರ್ಯ ಸಿಕ್ಕಿದರೆ, ಇಂದಿನ ಧರೆಗೆ ಆಡಗಿ ಸರ್ವಶಕ್ತಿಗೂಡಿ ಅವರು ಯುದ್ಧಕ್ಕೆ ಬೆಂಬಲಿಗರಾಗುವರು. ಇಂಗ್ಲೆಂಡಿನ ಈ ಬುದ್ಧಿಯನ್ನು ನೋಡಿ ಚೈನಕ್ಕೂ ಬೇಸರ ಬಂದಿದೆ. ಚೀನಕ್ಕೆ ಆಂಗ್ಲ ಅಮೆರಿಕಗಳಿಂದ ಸಾಮಾನು ಸಾಗಿಸಲು ಭಾರತವೊಂದೇ ಮಾರ್ಗವಾಗಿದೆ. ಅಕ್ಷರಾಷ್ಟ್ರಗಳಿಗೆದುರು ನಿಂತ ಐಕ್ಯದ ಚಳವಳಕ್ಕೆ ಭಾರತೀಯರ ಸ್ವಾತಂತ್ರ್ಯ ಚಳವಳವನ್ನು ಮರ್ದನಮಾಡುವುದರಿಂದ ಎಂಥಾ ಗಂಡಾಂತರವುಂಟೆಂದು ಅವರು ಬಲ್ಲರು. ಆದ್ದರಿಂದ ಚೈನವೂ ಅಮೆರಿಕ ಮಧ್ಯಸ್ಥಿಕೆಗೆ ಬರಬೇಕೆಂದು ಹೇಳುತ್ತದೆ. ಪರಕೀಯ ಪ್ರಭುತ್ವವನ್ನು ಕಿತ್ತೊಗೆಯಲು ಧೀರ ಸಂಗ್ರಾಮವಿತ್ತ ಚೀನೀಯರು ಭಾರತೀಯರ ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಹಕಾರಿಗಳಾಗುವರು. ಸಾಮ್ರಾಜ್ಯಶಾಹೀ ಬುದ್ಧಿಯನ್ನು ಮಿತ್ರರು ಯುದ್ಧಾನಂತರವಾದರೂ ಬಿಡಲಿಕ್ಕಿಲ್ಲವೆಂಬುದಕ್ಕೆ ಭಾರತದ ಇಂದಿನ ಮರ್ದನವು ಸಾಕ್ಷಿಯಾಗಿದೆ. ಗಾಂಧಿಜಿಯೊಡನೆ ಮಾತುಕತೆ ನಡೆಸಲು ತಿರಸ್ಕರಿಸಿದಕ್ಕಾಗಿ ಅನೇಕ ಅತ್ಯಾಚಾರಗಳ ದೂರು ನಮ್ಮ ಸರಕಾರದ ಮುಂದೆ ಬಂದಿದೆ. ಭಾರತದಲ್ಲಿ ಬ್ರಿಟಿಷರು ತಳೆದ ಧೋರಣೆಯನ್ನು ನಾನು ಖಂಡಿಸುತ್ತೇನೆ. ಅಮೆರಿಕನನು ವ್ಯಕ್ತಿಗತವಾಗಿ ಬ್ರಿಟನನ್ನು ಖಂಡಿಸಬಹುದು. ಆದರೆ ನಮ್ಮ ಪ್ರತಿನಿಧಿ ಸಭೆಯು ಖಂಡಿಸಿದರೆ ಬ್ರಿಟನಿಗೆ ಸಿಟ್ಟು ಬರಬಹುದು. ಆದರೆ ಹೀಗೆ ಬ್ರಿಟನು ಮಾಡಿದರೆ ಯುದ್ಧವು ಇನ್ನೂ ಕೆಲವು ವರ್ಷ ಬಾಳೀತು; ಜಗತ್ತಿಗೆ ಪ್ರಳಯ ಬಂದೀತು. ಆದ್ದರಿಂದ ಭಾರತವಿಂದು ನಮ್ಮ ಸಮಸ್ಯೆ. ಬ್ರಿಟಿಷರು ತಮ್ಮ ಸ್ವಾರ್ಥ ಸುಲಿಗೆಗಳಿಗಾಗಿ ಭಾರತ ಸ್ವಾತಂತ್ರ್ಯ ಚಳವಳವನ್ನು ಮರ್ದಿಸಕೂಡದು. ಆದರಿಂದ ಗಂಡಾಂತರ ಬಂದೀತು. ಅಮೆರಿಕವೀಗ ಮುಂದೆ ಬಂದು ಮಧ್ಯಸ್ಥಿಕೆ ನಡೆಸಲೇಬೇಕಾಗಿದೆ.'

ನೂರಾಟಕ್ಕೆ ಸಿದ್ಧವಾಗಿದೆ.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ.

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ. ಬೋರ್ಡ್ ಹೈಸ್ಕೂಲ್ ಕುಂದಾಪುರ.

ಬೆಲೆ: 1-4-0.

೫ನೆಯ ಪುಸ್ತಕ.

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು:

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ. ಎಸ್. ಸಿ., ಎಲ್. ಟಿ.

ಬೋರ್ಡ್ ಹ್ಯಾಸ್ಕೂಲ್, ಮುಲ್ಕಿ

ಮತ್ತು

ಎಸ್. ರಾಮಕೃಷ್ಣ ಆಚಾರ್ರ್, ಬಿ. ಎ., ಎಲ್. ಟಿ.

ಬೋರ್ಡ್ ಹ್ಯಾಸ್ಕೂಲು ಪುತ್ತೂರು.

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ.

ಶಾರದಾ ಛಾಪಖಾನೆ,

ಮಂಗಳೂರು.

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡಿನಲ್ಲಿ ರಶ್ಯನರು ಜರ್ಮನರನ್ನು ಅಪ್ರತಿಮ ಸಾಹಸದಿಂದ ಪ್ರತಿಭಟಿಸಿ ನಿಂತಿರುವಂತೆ, ಅತ್ತ ಕಾಕಸಸಿನ ಮಧ್ಯಭಾಗದಲ್ಲಿ ಮಾತ್ರ ಗ್ರೊಝ್ನಿ ಕಡೆ ಮುಂದೊತ್ತುತ್ತಿರುವ ಶತ್ರುಸೈನ್ಯದ ಧಾಳಿ ಬಲವಂತವಾಗುತ್ತಿದೆ. ಈ ಭಾಗದಲ್ಲಿ ನಾಲಚಿಕವು ಇಷ್ಟರಲ್ಲಿಯೇ ಶತ್ರುವಶವಾಗಿ ಉರಿಯುತ್ತಿದೆ. ನಾಲಚಿಕದ ಆಗ್ನೇಯದ ಮಧ್ಯ ಕಾಕಸಸಿನಲ್ಲಿ ಈಗ ಘೋರ ಯುದ್ಧವಾಗುತ್ತಿದೆ. ಇಲ್ಲಿಗೆ ಮೊಝ್ದಕ್ ಭಾಗದಿಂದ ಟ್ಯಾಂಕು ಮತ್ತು ವಿಮಾನಗಳು ಒಮ್ಮೆಲೇ ಧಾವಿಸಿ ಬಂದು ಈ ಪರಿಸ್ಥಿತಿಯುಂಟಾಯಿತು. ಈ ಹೊಸ ಧಾಳಿಯ ಉದ್ದೇಶವೇನೆಂದು ಗೊತ್ತಾಗುವುದಿಲ್ಲ. ಗ್ರೊಝ್ನಿ ಕಡೆಗೆ ಹೋಗಲು ಅನುಕೂಲವಿರುವ, ಕಾಕಸಸ್ ರೈಲ್ವೆಯ ದಕ್ಷಿಣಕೊನೆಯನ್ನು ಕೈವಶಪಡಿಸಲು ಈ ಸಾಹಸವೆಂದು ಊಹಿಸಲಾಗಿದೆ. ಪಶ್ಚಿಮ ಕಾಕಸಸಿನಲ್ಲಿ ಇನ್ನೂ ರಶ್ಯನರ ಕೈ ಮೇಲಾಗಿದೆ. ಇಜಿಪ್ಟಿನಲ್ಲಿ ಬ್ರಿಟಿಷ್ ಕಾಲ್ದಳಗಳು ಮುಂದೊತ್ತಿವೆ. ಗುಡಲಕನಾಲದಲ್ಲಿ ಭೀಕರ ಯುದ್ಧವಾಗುತ್ತಿದೆ. ಆಸ್ಟ್ರೇಲಿಯನರು ಕೊಕೊಡಾವನ್ನು ಕೈವಶಪಡಿಸಿಕೊಂಡರು.

ದಂಡಲೇ ರಾಕ್ಷಸೀ ಯಂತ್ರ ಸಿದ್ಧತೆಯ ಜರ್ಮನ್ ಆಕ್ರಮಣವನ್ನು ಎದುರಿಸುವಲ್ಲಿ ರಶ್ಯನರು ಜಯಶಾಲಿಗಳಾಗಿದ್ದಾರೆ. ರಶ್ಯನ್ ನೆಲದಲ್ಲಿ ತಾವು ಮಾಡಿದ ಪ್ರಳಯ ಲೀಲೆಯನ್ನು ನೆನೆದುಕೊಂಡು ನಾಜಿಗಳೇನೋ ಹಿಗ್ಗಬಹುದು. ಆದರೆ ಅದಕ್ಕಾಗಿ ಅವರು ತೆತ್ತ ಪಣವಾದರೂ ಅಲ್ಪವಲ್ಲವೆಂಬುದನ್ನು ಯಾರೂ ಮರೆಯಬಾರದು. ಈಗಂತೂ ಚಳಿಗಾಲ ಬಂದಿರುವುದರಿಂದ ಇನ್ನು ಜರ್ಮನರಿಗೆ ರಶ್ಯದಲ್ಲಿ ಜಯಸಿಗಲಾರದು. ದಕ್ಷಿಣ ರಶ್ಯದಲ್ಲಿ ನಾಜಿಗಳು ಇಂದಿನ ವರೆಗಿನ ಹೋರಾಟದಿಂದಲೂ ತಮ್ಮ ಗುರಿಯನ್ನು ಮುಟ್ಟಲಿಲ್ಲ. ವೋಲ್ಗಾದ ಕಡೆಗೆ, ಇಂದು ಸರಿಯುತ್ತಿರುವ ಜರ್ಮನ್ ಸೇನೆಯನ್ನು ದಶಂಬರದ ತನಕವೂ ರಶ್ಯನರು ಹೀಗೆ ತಡೆದು ನಿಲ್ಲಿಸಿಬಿಟ್ಟರೆ ಮುಂದೆ ವಸಂತಾಗಮನದ ವರೆಗೆ ಜರ್ಮನರು ಅಲ್ಲಿಂದ ಕಾಲ್ತೆಗೆಯಲೇ ಬೇಕು. ಅಷ್ಟರ ತನಕ ರಶ್ಯವಾದರೂ ಬಹಳ ಸಿದ್ಧತೆ ಮಾಡಿಕೊಂಡೀತು. ಮಿತ್ರರಿಗಾದರೂ ಅಷ್ಟರಲ್ಲಿ ದೇವರು ದ್ವಿತೀಯ ರಣರಂಗವನ್ನು ತೆರೆಯುವ ಸದ್ಬುದ್ಧಿ ಕೊಟ್ಟರೂ ಕೊಡಬಹುದು!

ಗಳಲ್ಲಿ ಇಷ್ಟರಲ್ಲಿ ಮೂರು (ಜಪಾನರು ನಾಲ್ಕನ್ನು ತ್ತಾರೆ) ಮುಳುಗಿಸಲ್ಪಟ್ಟದ್ದು ಇನ್ನು ಕೇವಲ ಐದು ಮಾತ್ರ ಉಳಿದಿದೆ. ಅಮೆರಿಕನರನ್ನು ಭೇದಿಸಲು ಜಪಾನರು ಹಲವು ಸಲ ಪ್ರಯತ್ನಿಸಿದರು. ಈಗ ಜಪಾನರು ೨೦ರಿಂದ ೩೦ಸಾವಿರ ಸಂಖ್ಯೆ ಸೈನ್ಯ ಅಲ್ಲಿ ಬಂದಿಳಿದಿರುವುದರಿಂದ, ಪರಿಸ್ಥಿತಿ ಕೆಟ್ಟದೆಯೆಂದು ಒಂದು ವರದಿಯಿದೆ. ಆಸ್ಟ್ರೇಲಿಯಾ ನ್ಯೂಜಿಲೇಂಡು ಮೇಲೆ ಧಾಳಿಯಿಡಲು ಸೊಲಮನ್ ಒಳ್ಳೆಯ ಸ್ಥಳವಾಗಿರುವುದರಿಂದ ಅದನ್ನು ಸರ್ವಥಾ ಹಿಡಿಯಬೇಕೆಂದು ಜಪಾನರು ಹಟತೊಟ್ಟಿರುವರು. ಜಪಾನಿನ ಒಂದು ಬಲಾಢ್ಯ ನೌಕಾ ದಳವು ಪೂರ್ವಕ್ಕೆ ಹೊರಟಿದೆಯೆಂದು ಒಂದು ಸುದ್ದಿಯಿದೆ.

ಇಜಿಪ್ಟಿನಲ್ಲಿ ದಳಪತಿ ಅಲೆಕ್ಸಾಂಡರರ ಮುಂದಾಳುತನದಲ್ಲಿ ಬ್ರಿಟಿಷ್ ಅಷ್ಟಮ ದಳದವರು ಅಭಿಯೋಗವನ್ನು ಆರಂಭಿಸಿದ್ದು, ಅಲ್ಲಿ ಈಗ ಪ್ರಚಂಡ ಟ್ಯಾಂಕು ಯುದ್ಧ ನಡೆಯುತ್ತಿದೆ. ವಿಮಾನ ಯುದ್ಧವೂ ಆಗುತ್ತದೆ. ಒಟ್ಟಿನಿಂದ ಭೂ ವಿಮಾನ ಯುದ್ಧಗಳೆರಡರಲ್ಲಿಯೂ ಮಿತ್ರರೇ ಮೇಲುಗೈಯಾಗಿದ್ದಾರೆಂದೂ ಹೇಳಲಾಗಿದೆ. ಇಜಿಪ್ಟಿನಲ್ಲಿ ಬ್ರಿಟಿಷ್, ಆಸ್ಟ್ರೇಲಿಯ, ನ್ಯೂಜಿಲೆಂಡ, ದಕ್ಷಿಣ ಆಫ್ರಿಕ ಮತ್ತು ಭಾರತದ ಸೈನ್ಯಗಳು ಕೂಡಿರುವವು. ಜರ್ಮನರು ಇಜಿಪ್ಟಿನಲ್ಲಿ ಭದ್ರಸ್ಥಾನ ಮಾಡಿಕೊಂಡಿರುವುದರಿಂದ, ಮಿತ್ರಸೈನ್ಯವು ಮುಂದುವರಿಯ ಬೇಕಾದರೆ ಅತುಲ ಬಲಿದಾನ ಮಾಡಬೇಕಾಗಿದೆ. ಇಜಿಪ್ತಿನಲ್ಲಿ ಜರ್ಮನ್ ಸೈನ್ಯವಾದರೂ ಬಹಳ ಇದೆ. ರೊಮೆಲನ ಮುಂದಾಳುತನದಲ್ಲಿ ಎರಡುವರೆ ಲಕ್ಷ ಸೈನ್ಯವಿದೆಯೆಂದು ಹೇಳಲಾಗಿದೆ. ಅದರಲ್ಲಿ ನಾಲ್ಕು ಸಶಸ್ತ್ರ ಸೈನಿಕ ದಳವಿರುವುದಂತೆ. ಅವರ ನೌಕಾದಳವೂ ಪ್ರಚಂಡವಿದೆ; ಬಹುಶಃ ಸ್ಟಾಲಿನ್‌ಗ್ರಾಡ್ ಯುದ್ಧವು ಸದ್ಯಕ್ಕೆ ಕೊನೆಗಾಣದೆಂದು ಹಿಟ್ಲರನು ಇಜಿಪ್ತಿನಲ್ಲಿ ಹೋರಾಟ ಆರಂಭಿಸುವಂತೆ ರೊಮ್ಮೆಲನಿಗೆ ಹೇಳಿದ್ದರೂ ಇರಬಹುದು. ಅಂತೂ ಒಟ್ಟಿನಿಂದ, ಸೊಲಮನಿನ್ನು ಜಪಾನರಿ

ಗು ಇಜಿಪ್ಟಿನಲ್ಲಿ ಮಿತ್ರರಿಗೂ ವಿಜಯ ದೊರಕಿದೆ.

ಭಾರತದ ಮೇಲೆ ಧಾಳಿ!

ಕೊನೆಗೆ ಭಾರತದ ಮೇಲೂ ವಿಮಾನ ಧಾಳಿಯೊಗ ಆರಂಭವಾಯಿತು. ಪೂರ್ವ ಭಾರತದ ಬಂಗಾಲ ಮತ್ತು ಆಸಾಮ್ ಪ್ರಾಂತಗಳಲ್ಲಿರುವ ವಿಮಾನ ಕೇಂದ್ರ ಸ್ಥಳಗಳ ಮೇಲೆಯೇ ಜಪಾನ್ ವಿಮಾನಗಳು ಬಾಂಬು ಸುರಿಸಿದವು. ಇತ್ತೀಚೆಗೆ ಇದು ದೊಡ್ಡ ಪ್ರಮಾಣದಿಂದಲೇ ಆಗುತ್ತಿದೆ. ಕಳೆದ ತಿಂಗಳ ೨೫ನೇ ತಾರೀಕಿನಂದು ಚಿತಗಾಂಗ್ ಮತ್ತು ಈಶಾನ್ಯ ಆಸಾಮ್‌ಗಳ ಮೇಲೆ ಧಾಳಿಯಾದ ಸುದ್ದಿ ಬಂತು. ಮರುದಿನ ಪುನಃ ಶತ್ರುಗಳು ಧಾಳಿಯಿಟ್ಟರೆಂದು ವಾರ್ತೆ ಬಂತು. ಆಸಾಮಿನಲ್ಲಿರುವ ದಿಬ್‌ಗಡನೆಂಬ ಅಮೆರಿಕನ್ ವಿಮಾನಗೃಹದ ಮೇಲೆ ಐವತ್ತು ಜಪಾನೀ ಬಾಂಬರ್ ವಿಮಾನಗಳು ೪೫ ವಿಮಾನಗಳೂ ೧೪೦೦೦ ಫೀಟು ಎತ್ತರದಿಂದ ಬಂದುವೆಂಬುದರಿಂದ ಈ ಧಾಳಿಯು ಎಷ್ಟರಮಟ್ಟಿಗೆ ಪ್ರಬಲವಾಗಿರಬೇಕೆಂದು ಊಹಿಸಬಹುದಾಗಿದೆ. ಇಬ್ಬರು ಶತ್ರು ಕೊಡೆ ವೈಮಾನಿಕರೂ ಕೆಳಗಿಳಿದುಬಂದಿರುವರೆಂದೂ ಹೇಳಲಾಗಿದೆ. ಹೀಗೆ ಜಪಾನರು ಧಾಳಿಯಿಡುತ್ತಿದ್ದರೆ ಅವರನ್ನು ಪ್ರತಿಭಟಿಸದೆ ಇಲ್ಲ. ಅಮೆರಿಕದ ವೈಮಾನಿಕರು ಹಾರಿ ಹೋಗಿ ಎದುರಾಡಿದರು. ಶತ್ರು ವಿಮಾನಗಳಿಗೆ ಬಹಳ ನಷ್ಟವಾಗಿದೆಯೆಂದೂ, ನಮಗೆ ಅಷ್ಟೊಂದು ಹಾನಿಯಾಗಲಿಲ್ಲವೆಂದೂ ಪ್ರಕಟವಾಗಿದೆ. ಹೀಗೆ ಜಪಾನರು ಧಾಳಿಯಿಡಲು ತೊಡಗಿದ್ದರೂ, ಚಿತಗಾಂಗ್ ಆಸಾಂಗಳ ನಾಗರಿಕರು ಏನೇನೂ ಅಂಜಲಿಲ್ಲವಂತೆ, ಗಾಬರಿಗೊಳ್ಳಲಿಲ್ಲವಂತೆ! ಇದಕ್ಕಾಗಿ ಸರಕಾರ ಅವರನ್ನು ಅಭಿನಂದಿಸಿದೆ. ನಾವಾದರೂ ಅವರನ್ನು ಅಭಿನಂದಿಸದಿರಲಾರೆವು. ಶತ್ರು ಧಾಳಿಯಾದಾಗ ಬೆದರಿ ಕೈಕಾಲು ಬಿಡುವುದು ಆತ್ಮಘಾತುಕವೇ ಆಗಿದೆ. 'ಹೇಡಿ ದವ ಹಲವು ಸಲ ಸಾಯುತ್ತಾನೆ. ಧೀರನು ಸಾಯುವುದು ಒಮ್ಮೆಯೇ!' ಇತ್ತೀಚೆಗೆ ಬರ್ಮ ಭಾರತಗಡಿಯಲ್ಲಿ ಜಪಾನರ ಚಟುವಟಿಕೆಯ ಸುದ್ದಿ ಬಂದಿದೆ. ಚಿನ್ ಪರ್ವತದ ಅಂಚಿನಲ್ಲಿ ಕಾದಾಟವೂ ಆಯಿತು. ಇದರಂತೆ ಸೋಮನ್ಸ್ ಲೇಂಡಿನಲ್ಲಿ, ಅಕ್ಯಾಬ್ ಮತ್ತು ಭಾರತದ ಗಡಿನಾಡು ಪ್ರದೇಶಗಳಲ್ಲಿ ಜಪಾನರು ಗಡಿಬಿಡಿ ಸುರುಮಾಡಿದ್ದಾರೆ. ಅಂತೂ ಇದರಿಂದೆಲ್ಲಾ ಜಪಾನರು ಭಾರತದ ಮೇಲೆ ಸದ್ಯಕ್ಕೆ ತಮ್ಮ ದೃಷ್ಟಿ ಹಾಕಿದ್ದಾರೆಂಬುದು ಖಚಿತವಾಗುತ್ತದೆ. ಜಪಾನರೇನೋ ಸದ್ಯಕ್ಕೆ ಆಸಾಮ್ ಚಿತಗಾಂಗ್‌ಗಳ ಮೇಲೆ ಮಾತ್ರ ಬಾಂಬು ಸುರಿಸಿದ್ದರೂ, ಇಷ್ಟರಿಂದಲೇ ಅವರು ಸುಮ್ಮಗಿರುವರೆನಲಾಗುವುದಿಲ್ಲ. ಮೆಲ್ಲಮೆಲ್ಲನೆ ಉಳಿದ ಪಟ್ಟಣಗಳಿಗೂ ಧಾಳಿಯಿಡಬಹುದು. ಕಲ್ಕತ್ತಕ್ಕಂತೂ ಹೆಚ್ಚಿನ ಪೆಟ್ಟಿಗೆಯ ಭೀತಿಯಿದೆ. ಈಗ ಮಳೆಗಾಲ ಮುಗಿದಿರುವುದರಿಂದ, ಬರ್ಮವನ್ನು ಸೆಳೆಯಲು, ಬ್ರಿಟಿಷರೂ ಸಿದ್ಧತೆ ಮಾಡುತ್ತಿರುವರೆಂದು ಕೇಳಿ ಬರುವುದರಿಂದ, ಈ ತಿಕ್ಕಾಟವು ಮುಂದೆ ಘೋರ ರೂಪವನ್ನು ತಾಳಿದರೂ ತಾಳಬಹುದು!

ರಕ್ತರಂಜಿತ ಲೇಖನ!

ದ್ವಿತೀಯ ಮಹಾಯುದ್ಧದ ಮಹೇತಿಹಾಸವನ್ನು ಇತಿಹಾಸಕಾರನು ಮುಂದೆ ಬರೆಯುವ ಸಂದರ್ಭದಲ್ಲಿ ರಶ್ಯನ್ ವೀರರು ಸ್ಟಾಲಿನ್‌ಗ್ರಾಡಿನಲ್ಲಿ ಜರ್ಮನರನ್ನೆದುರಿಸಿ ನಿಂತ ಸಾಹಸದ ವರ್ಣನೆಯು ರಕ್ತಾಕ್ಷರಗಳಲ್ಲಿ ಲಿಖಿತವಾಗುವುದು ಮಾತ್ರವಲ್ಲದೆ ಹಿಟ್ಲರನ ಲೋಕ ಯುದ್ಧದ ಮುಖವನ್ನೇ ಬದಲಾಯಿಸಿದ ಕೀರ್ತಿ ಆ ರಶ್ಯನ್ ವೀರರದಾಗಿದೆಯೆಂದು ಉಜ್ವಲವಾಗಿ ವಿವರಿಸಲ್ಪಡುವುದು. ಹಿಟ್ಲರ್, ಯೋಚಿಸಿದಂತೆ, ವೋಲ್ಗಾವನ್ನು ನಾಲ್ಕಾರು ವಾರಗಳ ಹಿಂದೆಯೇ ದಾಟಿ ಮುಂದೊತ್ತಿದ್ದರೆ, ಯುದ್ಧ ವೇಗವು ಯಾವ ಗತಿಯನ್ನು ಹೊಂದುತ್ತಿದ್ದಿತೆಂದು ಹೇಳಬರುವುದಿಲ್ಲ. ಅಂತೂ ಇಂದಿನ ಪರಿಸ್ಥಿತಿಗಳಿಲ್ಲವೂ ತಳೆಕೆಳಗಾಗುತ್ತಿದ್ದವೆಂಬುದರಲ್ಲಿ ಏನೇನೂ ಸಂಶಯವಿಲ್ಲ. ಹಿಟ್ಲರನು ಇಷ್ಟರಲ್ಲಿ ರಶ್ಯವನ್ನು ಕಾಕಸಸಿನಿಂದ ಹಾಗೂ ಮಧ್ಯ ಪೂರ್ವದಿಂದ ಬೇರ್ಪಡಿಸುತ್ತಿದ್ದ; ಆ ಮೇಲೆ ಇಜಿಪ್ತಿನಲ್ಲಿರುವ ಬ್ರಿಟಿಷ್ ಸ್ಥಾನಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದ; ಕೊನೆಗೆ, ಮೆಡಿಟರೇನಿಯನಿನಿಂದ ಮಿತ್ರರನ್ನು ಸಂಪೂರ್ಣ ಹೊರಹಾಕಿ ಬಿಡುತ್ತಿದ್ದ; ಪರ್ಶಿಯದಲ್ಲಿಯೋ ಹಿಂದು ಸಾಗರದಲ್ಲಿಯೋ, ಜಪಾನಾದರೂ ತನ್ನ ಗೆಳೆಯ ಜರ್ಮನಿಯೊಡನೆ ಕೈ ಕುಲುಕಿಸಲು ಬರುತ್ತಿತ್ತು; ಹೀಗೆ ಮಿತ್ರರನ್ನು ಹಾನಿಕಾರಿಯಾಗಿ ಎದುರಿಸುವಂಥಾ ಅಕ್ಷರಾಷ್ಟ್ರಗಳ ಕತ್ತರಿ ಚಟುವಟಿಕೆಗಳ ಕಾರ್ಯಕ್ರಮಗಳೆಲ್ಲಾ ಸ್ಟಾಲಿನ್‌ಗ್ರಾಡ್ ವೀರರು, ಆ ಪಟ್ಟಣದಲ್ಲಿ ಜರ್ಮನರನ್ನು ತಡೆದು ನಿಲ್ಲಿಸಿದ ಅಪ್ರತಿಮ ಹೋರಾಟದಿಂದ ಧೂಳೀಪಟವಾದುವು. ಹೀಗಿದ್ದರೂ ಸ್ಟಾಲಿನ್‌ಗ್ರಾಡಿನ ಮೇಲೆ ತಿರುಗಿಯೂ ಉಗ್ರವಾಗಿ ಜರ್ಮನರು ಮೇಲೇರಿ ಹೋಗುತ್ತಿರುವುದರಿಂದ ರಶ್ಯನರು ಪೇಚಿಗೆ ಬಿದ್ದಿದ್ದಾರೆ. ಜುಲ್ಯ ಅಂತ್ಯದ ಬಳಿಕ ಜರ್ಮನರು ಕೇವಲ ಒಂದೇ ತಿಂಗಳಲ್ಲಿ ಖಾರ್ಕೋವಿನಿಂದ ಡಾನ್ ವಕ್ರದ ವರೆಗೆ ರಭಸದಿಂದ ಧಾವಿಸಿದರು. ಆದರೆ ಆ ಮೇಲಿನ ಪ್ರಗತಿ ಬಹಳ ಕಡಿಮೆ. ಆ ಮೇಲೆ ಆಗಸ್ಟ್ ೨೪ರಂದು ಒಂದು ಸಾವಿರ ಜರ್ಮನರು ನಗರವನ್ನು ಮುತ್ತಿ ಬಂದರು. ನಗರದ ಮುಕ್ಕಾಲು ಪಾಲು ಭಾಗವೂ ಇಂದು ನಿರ್ನಾಮವಾಗಿದೆ! ಜರ್ಮನರು ವಿಮಾನ ಧಾಳಿಯನ್ನು ಬಲಪಡಿಸುತ್ತಾ ಬಂದುದರಿಂದ ರಶ್ಯದ ಅವಸಾನ ಬಂತೇ ಎಂದು ಹಲವರು ಬೆಗೆದಿದ್ದರು. ಆದರೆ ಧ್ವಂಸವಾದ ನೆಲದಿಂದ, ಧೂಸರವಾದ ಮನೆಮಠಗಳಿಂದಲೂ ರಶ್ಯನ್ ರಕ್ತ ವೀರರು ಎದ್ದುಬಂದು ಜರ್ಮನರನು ತಮ್ಮ ಪಿತೃಭೂಮಿಯಿಂದ ಹೊರದೂಡಲು ಹೋರಾಡಿದರು. ತೆರೆತೆರೆಗಳಂತೆ ಶತ್ರುವಿನ ಮೇಲೇರಿಹೋದರು; ಗಾಯಗೊಂಡರು; ಹಲವರು ಈ ಸಾಹಸದಲ್ಲಿ ಮಡಿದರು. ರಶ್ಯನರದ್ದು ಆತ್ಮಸಾಕ್ಷಿ ನಿರ್ಮಲವಿತ್ತು. ಆದೇ ಅವರನ್ನು ನಿಮಿಷ ನಿಮಿಷಕ್ಕೂ ಹುರಿದುಂಬಿಸುತ್ತಿತ್ತು; ಜರ್ಮನರನ್ನು ವೋಲ್ಗಾ ದಾಟಲು ಬಿಡಬಾರದೆಂಬುದು ಅವರ ಹಠವಾಗಿತ್ತು; ಅಂಥಾ ಹಠ

ಸೊಲಮನ್ ಇಜಿಪ್ಟುಗಳಲ್ಲಿ

ರಶ್ಯವನ್ನುಳಿದರೆ ಸೊಲಮನ್ ಇಜಿಪ್ಟ್ ಈ ಎರಡು ರಣರಂಗಗಳಲ್ಲಿ ಈಗ ಪ್ರಚಂಡ ಕಾಳಗವಾಗುತ್ತಿದೆ. ಸೊಲಮನ್‌ನಲ್ಲಿ ಯುದ್ಧ ಭೀಕರವಾಗಿದೆ. ಗುಡಾಲಕನಾಲ್, ಬೇಗನ್‌ವಿಲೆ ಮೊದಲಾದ ಕಡೆಗಳಲ್ಲಿ ಯುದ್ಧ ವಿಸ್ತರಿಸಿದ್ದು, ಇದು ಭೂಮಿ, ನೀರು, ಆಕಾಶಗಳಲ್ಲೆಲ್ಲಾ ನಡೆಯುತ್ತಿದೆ. ಗುಡಾಲಕನಾಲ ವಿಮಾನಗೃಹವನ್ನು ಸ್ವಾಧೀನಪಡಿಸಲು, ಜಪಾನರು ಟ್ಯಾಂಕು ಯುದ್ಧ ಹೂಡಿ ಅಮೆರಿಕನ್ ವಿಮಾನರಕ್ಷಕ ದಳವನ್ನು ಭೇದಿಸಲು ಯತ್ನಿಸಿದರು. ಸಪ್ಟಂಬರ್ ೧೫ರಂದು ಅಮೆರಿಕದ ೧೪೫೦೦ ಟನ್ ಭಾರದ ವಾಸ್ಪ್ ಎಂಬ ವಿಮಾನವಾಹಕ ಹಡಗ, ಜಪಾನರಿಂದ ಮುಳುಗಿಸಲ್ಪಟ್ಟು, ಇದರಿಂದ ಪೆಸಿಫಿಕ್ಕಿನಲ್ಲಿ ಅಮೆರಿಕನರ ಚಟುವಟಿಕೆ ಬಹಳ ಧಕ್ಕೆಯುಂಟಾಗಿದೆ. ಅಮೆರಿಕದಲ್ಲಿರುವ ಒಟ್ಟು ವಿಮಾನವಾಹಕ

ನೀವು ನಿಮ್ಮ ಪ್ರಾಯಕ್ಕಿಂತ ತರುಣರಾಗಿ ಯಾಕೆ ಆಗಬಾರದು?

ಪ್ರತಿದಿನ ರಾತ್ರಿ ಎರಡು ಬೈಲ್ ಬೀನ್ಸುಗಳನ್ನು ಸೇವಿಸುವ "ಸುವರ್ಣ ನಿಯಮ"ವನ್ನನುಸರಿಸಿದಿರಾದರೆ, ನೀವು ನಿಮ್ಮ ನಿಜವಾದ ಪ್ರಾಯಕ್ಕಿಂತ ಎಳೆಯವರಾಗಿ ಕಾಣುವುದು ಮಾತ್ರವಲ್ಲ ಸ್ವತಃ ನೀವೇ ಹಾಗೆಂದು ಅನುಭವಿಸುವಿರಿ. ಬೈಲ್ ಬೀನ್ಸು ಶುದ್ಧ ಶಾಕಾಹಾರದಿಂದಲೇ ಮಾಡಿದ್ದು ಅವು ಅವಯವಗಳನ್ನು ಸರಿಗೊಳಿಸುವವು, ರಕ್ತವನ್ನು ಶುದ್ಧಿಗೊಳಿಸುವವು, ದಿನ ನಿತ್ಯದ ಕೊಳೆಯನ್ನು ನಿರ್ಮಲಗೊಳಿಸುವವು. ಹೀಗೆ ನಿಮ್ಮನ್ನು ಆರೋಗ್ಯವಂತರಾಗಿ ತರುಣರಾಗಿ ಮತ್ತು ಆಕರ್ಷಕರಾಗಿ ಮಾಡುವವು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಬೈಲ್ ಬೀನ್ಸು ಬಾಟ್ಲಿ ಒಂದರ ಒಂದು ರೂಪಾಯಿ ಬೆಲೆಗೆ ಮಾರಲ್ಪಡುವುದು.

BILE BEANS

ಬೈಲ್ ಬೀನ್ಸು ನಿಮ್ಮನ್ನು ತರುಣರಾಗಿಯೂ ಆರೋಗ್ಯವಂತರಾಗಿಯೂ ಮಾಡುವವು

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
ಕ್ರಮ ಅಮಲ್ದಾರಿ ನಂಬ್ರ 494/1942
ಕ್ರಮ ನಂಬ್ರ 237/1936.

ಜಲಜಮ್ಮ ಕೂಡಾ ... ಅರ್ಜಿದಾರರು.
ಗಿರಿಜಮ್ಮ ಕೂಡಾ ... ... ಎದ್ರಿರು.

ಸದ್ರಿ ಎದ್ರಿರಿಗೆ ಈ ಮೂಲಕ ತಿಳಿಸುವದೇನಂದ್ರೆ: ಅರ್ಜಿದಾರರು ಎದ್ರಿರ ಬಾಬ್ತು ಮುಂಚಿನ ಅಮಲ್ದಾರಿಯಲ್ಲಿ ಜಪ್ತಾಗಿ ಜವಾ ಊರ್ಜಿತವಿರುವ ಸ್ಥಿರ ಆಸ್ತಿ ಏಲಂಪಡಿಸಬೇಕೆಂತ ಅಮಲ್ದಾರಿ ದಾಕಲುಮಾಡಿರುತ್ತಾರೆ. ಸದ್ರಿ ಅಮಲ್ದಾರಿಯಲ್ಲಿ ನಿಮಗೇನಾದರೂ ಆಕ್ಷೇಪವಿರುವವಾದರೆ ನೀವು ವ್ಯಾಧಿಯಾದ ತಾರೀಕು 9-11-42ಕ್ಕೆ ಹಗಲು ಘಂಟೆ 10ಕ್ಕೆ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನ ಮಾಡಲಾದೀತು ಎಂತ ಈ ಮೂಲಕ ತಿಳಿಸಲಾಗಿಯದೆ.

ಪುತ್ತೂರು 24-10-42 } B. Shivarama Holla, Advocate for petitioner.

ಸ್ವದೇಶಾಭಿಮಾನಿ

ತಾರೀಕು 6—11—1942

ರಶ್ಯನ್ ವೀರರು

ಸ್ವಾತಂತ್ರ್ಯಕ್ಕಾಗಿ ಹೋರಾಡುವ ರಾಷ್ಟ್ರಗಳಿಗೆ ಇಂದು ರಶ್ಯ ಚೀನಗಳು ಉಜ್ವಲ ಆದರ್ಶ ರಾಷ್ಟ್ರಗಳಾಗಿವೆ. ಅಲ್ಲಿನ ಸ್ವಾತಂತ್ರ್ಯವೀರರು ಆದರ್ಶವೀರರಾಗಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಜಪಾನಿನಂಥಾ ರಾಕ್ಷಸೀ ರಾಷ್ಟ್ರದೆದುರು ನಿಂತು ಹೋರಾಡಿದ ಚೀನೀಯ ಯೋಧರನ್ನು ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳೆಲ್ಲಾ ಮುಕ್ತಕಂಠ ಹೊಗಳುತ್ತಿವೆ. ಆದರೆ ಇಂದು ರಶ್ಯನ್ ವೀರರು ಅದನ್ನೂ ಮೀರುವ ಸಾಹಸ, ಸ್ವಾತಂತ್ರ್ಯ ಪ್ರೀತಿ ತೋರಿಸಿ ಜಗತ್ತನ್ನೇ ಬೆರಗುಗೊಳಿಸಿದ್ದಾರೆ. ವಿಶ್ವದ ರಕ್ತರಂಜಿತ ಯುದ್ಧದ ಇತಿಹಾಸದಲ್ಲಿ ಈ ರಶ್ಯನ್ ವೀರರ, ಸ್ಟಾಲಿನ್‌ಗ್ರಾಡ್ ರಕ್ಷಕ ಸ್ವಾತಂತ್ರ್ಯ ಯೋಧರ ಅನುಪಮ ಬಲಿದಾನದ ವಿವರವು ಉಜ್ವಲ ಲಿಪಿಯಿಂದ ಉಲ್ಲಖಿತವಾಗುವುದು. ಜರ್ಮನರ ರಾಕ್ಷಸ ಯಂತ್ರ ಶಕ್ತಿ ಒಂದು ಪಕ್ಷ ರಶ್ಯವನ್ನು ಧ್ವಂಸಮಾಡಲೂಬಹುದು! (ಹಾಗಾಗದಿರಲೆಂದೇ ನಮ್ಮ ಹಂಬಲು) ಆದರೆ ರಶ್ಯನ್ ವೀರರ ಈ ಉಜ್ವಲ ಸ್ವಾತಂತ್ರ್ಯ ಸಂದೇಶವನ್ನು ಜಗತ್ತಿನ ಚಿತ್ತಭಿತ್ತಿಯಿಂದ ಅಳಿಸಿ ಬಿಡುವುದು ಯಾರಿಂದಲೂ ಸಾಧ್ಯವಿಲ್ಲ! ಸ್ವಾತಂತ್ರ್ಯಕ್ಕಾಗಿ ಹೋರಾಡುವುದೆಂದರೆ ರಶ್ಯನ ವೀರರು ಹೋರಾಡಿದಂತೆ! ಸ್ವಾತಂತ್ರ್ಯದ ಸಂಗ್ರಾಮದಲ್ಲಿ ಅಮರರಾಗುವುದೆಂದರೆ ರಶ್ಯನ್ ವೀರರು ಅಮರ್ತ್ಯರಾದಂತೆ!

'ಟೀಕಿಸಬೇಡಿ'

'ನನ್ನ ಯೋಜನೆಯ ಒಂದೊಂದೇ ವಿಷಯಗಳನ್ನೆತ್ತಿ ಈಗ ಟೀಕಿಸಬೇಡಿ, ಬ್ರಿಟಿಷರಾದರೂ ಅಟನ್ನೇ ಕಾದು ಕುಳಿತಿದ್ದಾರೆ. 'ನಿಮ್ಮಲ್ಲೇ ಸರ್ವರಿಗೂ ಸಮ್ಮತವಿರದ ಈ ಯೋಜನೆಯನ್ನು ನಾವು ಹೇಗೆ ಒಪ್ಪಿಕೊಳ್ಳಲಿ?' ಎಂದು ಹೇಳುವ ಸಂದರ್ಭವನ್ನು ಅವರಿಗೆ ನಾವು ಒದಗಿಸಿಕೊಡಬಾರದು. ಈ ಸಲ ನಾವು ಅವರ ಬಾಯಿ ಮುಚ್ಚಿಸಬೇಕು. 'ಸದ್ಯದ ಯುದ್ಧದಲ್ಲಿ ನಾವು ಸಹಕರಿಸುವಂತೆ ನೀವು ಮಾಡಬಲ್ಲಿರಾ?' ಇದು ನಮ್ಮೆಲ್ಲರ ಪ್ರಶ್ನೆಯಾಗಿರಬೇಕು. ಇನ್ನೇನೂ ಉಪಾಯವಿಲ್ಲದೆ 'ಹೌದು!' ಎಂಬ ಉತ್ತರವನ್ನೇ ಅವರು ಕೊಡುವಂತಾದರೆ ನಾವು ಗೆದ್ದೆವು. ನಮ್ಮ ಸಾಮ್ರಾಜ್ಯದೊಳಗಿನ ವ್ಯವಸ್ಥೆಯ ವಿಚಾರವನ್ನು ಮತ್ತೆ ನಾವು ವಿವರವಾಗಿ ಆಲೋಚಿಸುವ' ಹೀಗೆಂದು ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರು, ರಾಷ್ಟ್ರೀಯ ಸರಕಾರ ಸ್ಥಾಪಿಸಲು ಮುಂದೊಡ್ಡಿದ ತಮ್ಮ ಯೋಜನೆ ವಿಚಾರದಲ್ಲಿ ಒಂದು ವಿನಂತಿ ಮಾಡಿಕೊಂಡಿದ್ದಾರೆ! ಚಾಣಕ್ಯನೀತಿಯನ್ನು ಬ್ರಿಟಿಷರಿಗೂ ರಾಜಾಜಿ ಕಲಿಸ ಕಲಿಸಬಲ್ಲರೆ?

ರೂಸ್‌ವೆಲ್ಟರು ಬಾಯ್ಬಿಟ್ಟರು!

ಚರ್ಚಿಲ್ ರೂಸ್‌ವೆಲ್ಟ್ ದ್ವಯರು ಅಟ್ಲಾಂಟಿಕ್ ಸಾಗರ ಮಧ್ಯದಲ್ಲಿ ನಿಂತು ಮಹತ್ವವಾದೊಂದು ಘೋಷಣೆ ಮಾಡಿದರಷ್ಟೆ? ಅದರಲ್ಲಿ ಜಗದ ಪರತಂತ್ರ ರಾಷ್ಟ್ರಗಳಿಗೆಲ್ಲಾ ಸ್ವಾತಂತ್ರ್ಯ ಕೊಡುವ ಭರವಸೆಯಿದೆಯೆಂಬ ಸುದ್ದಿ ಒಮ್ಮೆ ಹಲವರನ್ನು ಹುರಿದುಂಬಿಸಿತು. ಆದರೆ ಕೊನೆಗೆ ಮರ್ಮ ಹೊರಬಿತ್ತು; ಹಿಟ್ಲರ್ ಪದಾಕ್ರಾಂತವಾದ ರಾಷ್ಟ್ರಗಳಿಗೆ–ಬಿಳಿ ಜನಾಂಗಗಳುಳ್ಳ ರಾಷ್ಟ್ರಗಳಿಗೆ ಮಾತ್ರ ಸ್ವಾತಂತ್ರ್ಯ, ಎಂದು ಬ್ರಿಟಿಷ್ ಮುತ್ಸದಿಗಳು ವಿವರಿಸಿದರು. ಅದಕ್ಕೂ ಒಂದು ಹೆಜ್ಜೆ ಮುಂದುವರಿದು 'ಅಟ್ಲಾಂಟಿಕ್ ಘೋಷಣೆ ಭಾರತಕ್ಕೆ ಅನ್ವಯಿಸುವುದೇ ಇಲ್ಲ' ಎಂದು ಚರ್ಚಿಲರು ಒದರಿಯೇ ಬಿಟ್ಟರು! ಈ ಮಾತಿನಿಂದ ದೇಶಕ್ಕೆ ದೇಶವೇ ಎಚ್ಚತ್ತಿತು! ಭಾರತೀಯರು ಚೆನ್ನಾಗಿ ಬುದ್ಧಿ ಕಲಿತರು. ಬ್ರಿಟಿಷರ ಯುದ್ಧೋದ್ದೇಶದಲ್ಲಿ ಭಾರತೀಯರಿಗೆ ಸಂಶಯ ಸಾವಿರಗಳುಂಟಾದುವು. ಅಟ್ಲಾಂಟಿಕ ಶಾಸನವು 'ನೀರಮೇಲಿನ ಲಿಪಿ'ಯಾಯಿತು! ಕೆಲವರು ಆಶಾವಾದಿಗಳು ಇಷ್ಟಾದರೂ ಹತಾಶರಾಗಲಿಲ್ಲ. ರೂಸವೆಲ್ಟರೂ ಈ ಘೋಷಣೆಯ ಒಬ್ಬ ಜನಕರಲ್ಲವೆ? ಅವರೊಡನೆ ಅದರ ವಿವರಣೆ ಕೇಳಬೇಡವೆ? ಅವರೂ ಚರ್ಚಿಲರಂದಂತೆಯೇ ನುಡಿದರೆ ಮತ್ತೆ ನೋಡೋಣ! ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗೆ ಅಮೆರಿಕವಾದರೂ ಎಷ್ಟು ಬೆಲೆ ಕೊಡುತ್ತದೆಯೆಂದು ಮತ್ತೆ ಸಾರೋಣ,–ಹೀಗೆಂದು ತರ್ಕಿಸಿ ಕೆಲವರು ರೂಸವೆಲ್ಟರೊಡನೆ ಅಟ್ಲಾಂಟಿಕ ಘೋಷಣೆಯ ಸ್ಪಷ್ಟೀಕರಣಕ್ಕಾಗಿ ದುಂಬಾಲು ಬಿದ್ದರು! ದುಂಬಾಲು ವರ್ಷ ಒಂದೂ ದಾಟಿತು! ಇನ್ನು ಅವರಿಂದ ಯಾವುದೇ ಸ್ಪಷ್ಟೀಕರಣವೂ ಬರುವ ಹಾರೈಕೆ ಯಾರಿಗೂ ಉಳಿದಿರಲಿಲ್ಲ!

ಅತ್ತ ಅಮೆರಿಕದ ಜನತೆಯಲ್ಲಿ ತುಸು ಗೊಂದಲ ಹುಟ್ಟಿರಬೇಕು. ಭಾರತದಂಥಾ ರಾಷ್ಟ್ರಗಳ ಸ್ವಾತಂತ್ರ್ಯ ಸಾಧಿಸದ್ದರೆ ಯುದ್ಧದಲ್ಲಿ ಮಿತ್ರರಿಗೆ ವಿಜಯವಾಗುವ ಲಕ್ಷಣವಿಲ್ಲವೆಂದು ಅವರಿಗೆ ಕಂಡುಬಂದಿರಬೇಕು. ಬ್ರಿಟಿಷರೇನೋ ಸ್ವಾರ್ಥದಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ಕೊಡದಿರಬಹುದು; ಆದರೆ ಅಮೆರಿಕವೂ ಈ ಯುದ್ಧದಲ್ಲಿ ಪಾಲುಗಾರವಾಗಿರುವುದರಿಂದ ಬ್ರಿಟನಿನ ಈ ಧೋರಣೆಯಿಂದಾಗಿ ಯುದ್ಧ ವಿಜಯಕ್ಕೇ ತೊಂದರೆಯಾಗುವುದರಿಂದ, ಬ್ರಿಟನು ಹೀಗೆ ಮಾಡುತ್ತಾ ಹೋಗುವುದನ್ನು, ಸಹಿಸಿಕೊಂಡಿರಲು ಸಾಧ್ಯವಿಲ್ಲವೆಂದು ಅಲ್ಲಿನ ಜನರು ಉಗ್ರರಾದಂತೆ ಕಂಡು ಬಂತು! ರೂಸ್‌ವೆಲ್ಟರ ರಾಯಭಾರಿಯಾಗಿ ವೆಂಡಲ್ ವಿಲ್ಕಿಯವರು ಹದಿಮೂರು ರಾಷ್ಟ್ರಗಳ ಪ್ರವಾಸಗೈದು ಅಮೆರಿಕಕ್ಕೆ ಮರಳಿ ಹೋಗಿ ಅಲ್ಲಿ ಈಗ ಅನೇಕ ಮಹತ್ವದ ಮಾತುಗಳನ್ನು ಹೇಳಿದ್ದಾರೆ. ಅದರಲ್ಲಿ ದ್ವಿತೀಯ ರಣರಂಗದ ಆವಶ್ಯಕತೆಯಂತೆ ಭಾರತದ ಸ್ವಾತಂತ್ರ್ಯ ವಿಚಾರವೂ ಒಂದಾಗಿದೆ. 'ಭಾರತದ ವಿಷಯ ನಾವು ಮೌನವಾಗಿರುವುದರಿಂದ ಪೂರ್ವದೇಶದಲ್ಲಿ ವಿಜಯದಾಶೆ ಬಿಟ್ಟುಬಿಡಬೇಕು' ಎಂದು ಅವರು ಎಚ್ಚರಿಸಿದರು! ಭಾರತವನ್ನು ಅವರಿಗೆ ಸಂದರ್ಶಿಸಲು, ಯಾತರಿಂದಲೊ ಆಗದಿದ್ದರೂ, ಭಾರತದ ವಿಚಾರವಾಗಿ ಅವರು ಸ್ಪಷ್ಟ ಮಾತುಗಳನ್ನೇ ಹೇಳಿದರು! ಅಂತೂ ವಿಲ್ಕಿಯವರ ಈ ಎಚ್ಚರಿಕೆಯ ನಂತರ ಅಮೆರಿಕದಲ್ಲಿ ಭಾರತದ ಸ್ವಾತಂತ್ರ್ಯ ವಿಚಾರ ವ್ಯಗ್ರತೆ ಹುಟ್ಟಲೇಬೇಕು; ಆದರಿಂದಾಗಿ ರೂಸ್‌ವೆಲ್ಟರ ಮೇಲೆ, ಅಲ್ಲಿನ ಜನತೆ ಒತ್ತಾಯ ಹಾಕಿದ್ದರೆ ಹಾಕಿರಲೂ ಬಹುದು. ಅದರಿಂದಲೇ ಈಗ ರೂಸ್‌ವೆಲ್ಟರು ಬಾಯ್ಬಿಟ್ಟಿದ್ದಾರೇನೊ! 'ಅಟ್ಲಾಂಟಿಕ್ ಘೋಷಣೆ ಇಡೀ ಮಾನವ ಜನಾಂಗಕ್ಕೇ ಅನ್ವಯಿಸುತ್ತದೆ' ಎಂದು ಕೊನೆಗೆ ಅದರೂ, ಈಗ ಹೇಳಿಬಿಟ್ಟಿದ್ದಾರೆ. ಅಂತೂ ವಿಲ್ಕಿಯವರ ಮಾತಿನಿಂದ, ರೂಸ್‌ವೆಲ್ಟರ ಆಶ್ವಾಸನದಿಂದ, ಭಾರತದ ಸ್ವಾತಂತ್ರ್ಯ ವಿಚಾರದಲ್ಲಿ ಅಮೆರಿಕದ ಅಭಿಪ್ರಾಯವು ಸದ್ಯ ಹೊರಬಿದ್ದಂತಾಯಿತು! ಚರ್ಚಿಲರು ಇನ್ನಾದರೂ 'ಅಟ್ಲಾಂಟಿಕ ಘೋಷಣೆ'ಯಲ್ಲಿ ಭಾರತವನ್ನು ಸೇರಿಸಲು ಒಪ್ಪಿಕೊಂಡಾರೇ ಎಂಬ ಬಗ್ಗೆ ನಮಗೆ ಸಂಶಯವೇ ಇದೆ!

"ಕೇಳಿದ್ದು ಬೇರೆ; ಕಂಡದ್ದು ಬೇರೆ"

ಬ್ರಿಟಿಷ್ ಸೈನ್ಯಾಧಿಕಾರಿಯು ಹೇಳುತ್ತಾನೆ

"ನನ್ನ ದೇಶದ ಅಧಿಕಾರಿಗಳಿಂದ ಹಾಗೂ ಪತ್ರಿಕೆಗಳಿಂದ ನಾನು ತಿಳಿದ ನಿಮ್ಮ ದೇಶವು ಬೇರೆ. ಇತರರಂತೆ, ನನಗೆ ಇಂಗ್ಲೆಂಡಿನಲ್ಲಿ ಅವರು ಹೇಳಿದ್ದು, ಭಾರತವು ನಗ್ನ ವೇಷದ ಅಲೆದಾಡುವ ಉಪವಾಸ ಬೀಳುವ ಬರ್ಬರರ ನಾಡೆಂದು. ಆದರೆ, ನಾನಿಲ್ಲಿ ನೋಡಿದ್ದು ಬೇರೆಯೇ, ದೇವರಿಗೆ ನಾನದಕ್ಕೆ ಕೃತಜ್ಞ. ನಾನು ಇಂಗ್ಲೆಂಡಿನಲ್ಲಿ ಪಂಡಿತ ಜವಾಹರಲಾಲ ನೆಹರುಗಳ ಹೆಸರೇ ಕೇಳಲಿಲ್ಲ. ಆದರೆ ಭಾರತಕ್ಕೆ ಬಂದ ಕೂಡಲೇ ನನಗೆ ಮೊದಲಾಗಿ ಮೆಚ್ಚುಗೆಯಾದ ವ್ಯಕ್ತಿ ನೆಹರು. ನಾನವರ ಆತ್ಮಕಥೆಯನ್ನು ಕೊಂಡುಕೊಂಡಿದ್ದೇನೆ. ಅದರಲ್ಲಿ ಅವರ ಕೈಬರಹ ಪಡೆಕೊಳ್ಳಬೇಕೆಂದು ಬಯಸುತ್ತೇನೆ. ಎಂಥಾ ಕರುಣಾಮಯಿ ವ್ಯಕ್ತಿ ಅವರು. ನಾನು ಅವರನ್ನು ನೋಡಬೇಕೆಂದಿದ್ದೇನೆ. ಆದರೆ ಅವರಿಂದು ಸೆರೆಮನೆಯಲ್ಲಿದ್ದಾರೆ!" ಹೀಗೆಂದು 'ಟ್ರಿಬ್ಯೂನ್' ಪತ್ರಿಕೆಯ ಪ್ರತಿನಿಧಿಯೊಡನೆ ಒಬ್ಬ ಬ್ರಿಟಿಷ್ ಸೈನ್ಯಾಧಿಕಾರಿ ಹೇಳಿದರು. ಅವರು ಭಾರತ ವಿಚಾರ ಹೇಳಿದ ಕೆಲವು ಮಾತುಗಳು ಹೃದಯ ಸ್ಪರ್ಶಿಯಿವೆ. ಅವುಗಳ ಕೆಲವು ವಿವರ ಇಂತಿದೆ.

'ಈ ಬಿಕ್ಕಟ್ಟು ಕೊನೆಗಾಣಲೇ ಬೇಕು. ಆಂಗ್ಲೇಯರು ಭಾರತಕ್ಕೆ ಈಗಲೇ ಸ್ವಾತಂತ್ರ್ಯ ಸಾರಬೇಕು. ಈ ವಿಷಯದಲ್ಲಿ ಒಮ್ಮೆ ನಾನು ನನ್ನ ಸಂಗಾತಿಯೊಡನೆ ಜಗಳಾಡಲೂ ಬೇಕಾಯಿತು. ನಾನು ಹೇಳಿದೆ, 'ನಾವು ಬ್ರಿಟಿಷರು; ಇಂಗ್ಲೆಂಡಿನಲ್ಲಿ ನಾಜಿಗಳು ಕಾಲೂರಬಾರದೆಂದು ಬಯಸುವುದಿದ್ದರೆ, ಭಾರತೀಯರಾದರೂ ಇಲ್ಲಿ ಪರಕೀಯರ ಆಳ್ವಿಕೆಯನ್ನು ಸಹಿಸಬೇಕೇಕೆ?' ಇದು ಸರಿಯಾದ ವಾದವಲ್ಲವೆ ಹೇಗೆ?

ಈ ವರ್ಣಭೇದ ಹೋಗಬೇಕು

'ಇಲ್ಲಿ ಎಂಥಾ ಸಿಗರೇಟಾಗಲಿ ಎಂಥಾ ತಿಂಡಿ ತಿನಿಸಾಗಲಿ ಸಿಗುತ್ತದೆ. ಎಂಥಾ ದೇಶವಿದು. ಯುದ್ಧದೀ ಕಾಲದಲ್ಲಿ ಇಂಗ್ಲೆಂಡಿನಲ್ಲಿ ನಿಮಗೀ ಸುಖಗಳೆಲ್ಲಾ ಸಿಗಲಿಕ್ಕಿಲ್ಲ. ನಿನ್ನೆ ನನ್ನ ಹೊಟೇಲಿನಲ್ಲಿ ಆಂಗ್ಲೇಯ ಮಹಿಳೆಯರೂ, ಮಹನೀಯರೂ, ಶೃಂಗಾರಮಾಡಿ ಕುಣಿದಾಡುತ್ತಿದ್ದರು. ಯುದ್ಧವು ಅವರನ್ನು ಸ್ಪರ್ಶಿಸಲೇ ಇಲ್ಲ. ಇಲ್ಲಿ ಇಂಥಾ ದಾರಿದ್ರ್ಯವೇಕೆ? ಈ ಆಂಗ್ಲೇಯರು ಐಶ್ವರ್ಯದಲ್ಲಿ ಹೊರಳಾಡುತ್ತಾರೆ. ಬಂಗಾಳದಲ್ಲಿ ಮಿಲ್ಲುಗಳನ್ನಿರಿಸಿರುವ ಸ್ಕೋಟ್ ದೇಶದ ಜನರು 100% ಡಿವಿಡೆಂಡ್ ಕೊಡುತ್ತಾರೆ. ನನ್ನ ದೇಶದಲ್ಲಿ ಒಬ್ಬ ತೋಟಿಗಾದರೂ 40 ಶಿಲಿಂಗ್ ಸಂಪಾದನೆಯುಂಟು. ಆತನು ಸಿನೆಮಾ ನೋಡುತ್ತಾನೆ. ಮೂರು ಅಥವಾ ನಾಲ್ಕು ಕೋಣೆಗಳುಳ್ಳ ಮನೆಯಿದೆ. ಪ್ರತಿದಿನ ಪತ್ರಿಕೆ ತೆಗೆದುಕೊಳ್ಳುತ್ತಾನೆ; ಹೊಗೆ ಸೇದುತ್ತಾನೆ. ಆದರೆ ಇಲ್ಲಿನ ಜನರು ಯಾಕೆ ಹಾಗಿಲ್ಲ? ಇಲ್ಲಿನ ಪ್ರತಿಯೊಂದು ಪ್ರಾಂತವೂ ಅದರ ಮಟ್ಟಿಗೆ ಸಂಪತ್ಸಮೃದ್ಧವಾಗಿಯೇ ಇದೆಯಲ್ಲಾ!

'ದಕ್ಷಿಣಾಫ್ರಿಕದಲ್ಲಿ ಇನ್ನೂ ವರ್ಣಭೇದವಿದೆಯೆಂದು ನೋಡಿ ನನಗೆ ಮಿಂಚುಬಡಿದಂತಾಯಿತು. ಯುರೋಪಿಯನರಿಗೆ ಪಾಯಿಖಾನೆ; ಯುರೋಪಿಯನರಲ್ಲದವರಿಗೆ ಮಣ್ಣಿನಗೂಡು! ಟೀಕ್ಸಿ ಸ್ಟೇಂಡ್ ಯುರೋಪಿನರಿಗೆ ಮಾತ್ರ! ಯುರೋಪಿಯನರಲ್ಲದವರು ಅದರ ಮಾಡಿನ ಮೇಲೆ ಕುಳಿತುಕೊಳ್ಳಬೇಕು. ನಾನು ಒಂದು ಬಸ್ಸಿನಲ್ಲಿ ಸಂಚರಿಸುತ್ತಿದ್ದಾಗ ಒಬ್ಬ ಜೂಲೂ ಮಹಿಳೆ ಬಂದಳು. ಯುರೋಪಿಯನರ ಬಳಿ ಅವಳನ್ನು ಕುಳಿತುಕೊಳ್ಳಲು ಬಿಡಲಿಲ್ಲ. ನಾನವಳಿಗೆ ನನ್ನ ಸೀಟು ಕೊಟ್ಟೆ. ಅಲ್ಲಿದ್ದ ಆಂಗ್ಲೇಯರು ನನ್ನನ್ನು ಹೆಸರೆತ್ತಿ ಬೈದರು. ಬಸ್ಸಿನಿಂದಿಳಿವಾಗ ನಾನಾಕೆಗೆ ನಮಸ್ಕಾರ ಮಾಡಿ ತೆರಳಿದೆ; ಅವಳಿಗೆ ಅದು ಆಶ್ಚರ್ಯವಾಯಿತು! ನಾನು ನನ್ನ ದೇಶದ ಜನರಿಗೆ ಸಿಟ್ಟಿನಿಂದ ಹೇಳುತ್ತೇನೆ. 'ಈ ವರ್ಣಭೇದ ಹೋಗಲೇಬೇಕು. ಇದರಿಂದಲೇ ನಾವು ಸಾಮ್ರಾಜ್ಯವನ್ನು ಕಳಕೊಳ್ಳುತ್ತೇವೆ!'

ಬಂಗಾಳದಲ್ಲಿ ಭಯಾನಕ ಬಿರುಗಾಳಿ!

೧೧ ಸಾವಿರ ಜನ ಸತ್ತರು!

ಬಂಗಾಳದ ಮಿಡ್ನಾಪುರ ಜಿಲ್ಲೆ ಮತ್ತು ೨೪ ಪರಗಣ ಜಿಲ್ಲೆ ಹೀಗೆ ಎರಡು ಜಿಲ್ಲೆಗಳ ತ್ರಾಣ–ಮತ್ತು ೧೬ರಂದು ಬಿರುಗಾಳಿಯೆದ್ದು ೧೦ ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಜನರು ಮೃತಪಟ್ಟಿರುವರೆಂದೂ, ಜಾನುವಾರುಗಳು ಸತ್ತ ಸಂಖ್ಯೆಗೆ ಲೆಕ್ಕಮಿತಿಯಿಲ್ಲವೆಂದೂ ತಿಳಿದಿದೆ. ಬಿರುಗಾಳಿಯೊಡನೆ ಮಳೆಯೂ ಬಂದಿತ್ತು!

NOTICE

In the Court of the Subordinate Judge of South Kanara

O. P. No. 3/1942.

Between:-

Dr. L. P. Fernandes... *Petitioner*

and

Mrs. Julia M. M. Fernandes and others... ... *Respondents*

To

The 6th Respondent Mrs. Edna D'Souza daughter of J. J. Brito, residing in Nagapada Byculla Bombay.

Please take notice that the above O. P. filed by the petitioner praying that the delay in filing the revised application in L. A. C. No. 8/1936 may be executed and the petition admitted, will come on for hearing on 10-11-1942 at 11 a. m. before the above court and if you fail to appear on that date you will be declared exparte.

(By order)

Mangalore, 5-11-1942. } Sd/ P. D. Souza B.A.B.L. Vakil for Petitioner.

NOTICE

In the Court of the Dt. Munsif of Mangalore

R. E. P. No. 461/1942.
O. S. 89/41.

Between:-

G. B. D'Souza... *Petitioner*

and

J. S. Periera son of Jacob Feriera, Clerk in the Bank of Taiwan, Ltd. Sir Pherozeshaw Mehta Road, Post Box477 Fort Bombay No. 1-*Respondent*

To the Respt.

Notice is hereby given that the plff petr. abovenamed has filed the Ex Petition for sale of mortgaged property, and that the said petition as also the application for permission to bid and setoff stands posted to 16-11-42 for settling the terms of sale proclamation as also for granting permission to bid and set off. You may appear either in person or by pleader and file your objections if any by that date failing which the matter will be decided in your absence.

(By order of the Court)

C. L. Lobo,
Vakil for Petr.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಭತ್ತ ಜಿಲ್ಲೆಹೊರಗೆ ಕಳುಹಿಸ ಕೂಡದು

ಎಂಬುದಾಗಿ ದ. ಕ. ಜಿಲ್ಲಾ ಕಲೆಕ್ಟರರು ಅಕ್ಟೋಬರ್ ಅಂತ್ಯದವರೆಗೆ ವಿಧಿಸಿದ್ದ ಆಜ್ಞೆಯನ್ನು ಪುನಃ ಜನವರಿ ಅಂತ್ಯದವರೆಗೆ ಮುಂದ್ವರಿಸಿದ್ದಾರೆ. ಈ ಆಜ್ಞೆ ಮಿಕ್ಕಿನಡೆದವರಿಗೆ ಶಿಕ್ಷೆ ಜುಲ್ಮಾನೆಗಳು ವಿಧಿಸಲಾಗುವುದೆಂದು ಎಚ್ಚರಿಕೆ ಕೊಡಲಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಮುಂದೆ ಪಿಕೆಟಿಂಗ್

ತಾ. ೨ರಂದು ಶ್ರೀಗಳಾದ ಗಂಗಯ್ಯ ಮತ್ತು ಮಾಧವ ಎಂಬ ಇಬ್ಬರು ಕಾಂಗ್ರೆಸ್ ಸ್ವಯಂಸೇವಕರು ದ. ಕ. ಜಿಲ್ಲಾ ಬೋರ್ಡಿನ ಆಫೀಸಿನ ಮುಂದೆ ಪಿಕೆಟಿಂಗ್ ಮಾಡಿ ಘೋಷಣೆ ಹೇಳುತ್ತಿದ್ದರಿಂದ ಅವರನ್ನು ಕೈದು ಮಾಡಲಾಗಿದೆ.

'ಹೆಡ್ ಕಾನ್ಸ್ಟೇಬಲ್ ಆಕ್ರಮಣ'ದ ಮೊಕದ್ದಮೆ

ಕಳೆದ ತಾ. ೧೦-೯-೪೨ರಂದು ಸ್ಥಳೀಯ ರಥಬೀದಿಯಲ್ಲಿ ಪೋಲೀಸ್ ಹೆಡ್ ಕಾನಸ್ಟೇಬಲರೊಬ್ಬರ ಮೇಲೆ ಆಕ್ರಮಣ ಮಾಡಿದರೆಂದು ಆರೋಪ ಹೊರಿಸಿ ಶ್ರೀ. ಶ್ರೀನಿವಾಸ ಬಾಳಿಗ, ಅನಂತ ಭಟ್ಟ, ಮಂಜುನಾಥ, ಸಂಕಪ್ಪ ಶೆಟ್ಟಿ, ನಾರಾಯಣ ಶೆಟ್ಟಿ, ಕಂಚು ಐತಪ್ಪ ಶೆಟ್ಟಿ, ಪಟೇಲ್ ಸೀತಾರಾಮರಾವ್ (ಕೊನೆಯವರು ಇನ್ನೂ ಸಿಕ್ಕಿಲ್ಲ) ಇವರಿಷ್ಟು ಮಂದಿಯ ಮೇಲೆ ಹೂಡಲಾದ ಮೊಕದ್ದಮೆ ಕಳೆದ ತಾ. ೩೧ರಲ್ಲಿ ಇಲ್ಲಿಯ ಸಬ್ ಡಿ। ಮ್ಯಾಜಿಸ್ಟ್ರೇಟ್ ಶ್ರೀ ಬಿ ಜೂಗಪ್ಪನವರ ಮುಂದೆ ವಿಚಾರಣೆಗೆ ಬಂತು. ಆರೋಪಿಗಳನ್ನು ಇ. ಪಿ ಕೋಡಿನ ೧೪೭, ೩೩೩, ೧೪೯ ಸೆಕ್ಷನುಗಳಿಗೆ ಅನುಸಾರವಾಗಿಯೂ, ಡಿಫೆನ್ಸ್ ಆಫ್ ಇಂಡಿಯಾದ ರೂಲ್ಸುಗಳು ೩೪ (೬) (ಬಿ) (ಎಲ್) ಮತ್ತು ೩೮ (೫) ಅನುಸಾರವಾಗಿಯೂ ಚಾರ್ಜು ಮಾಡಿದ್ದಲ್ಲಿ ಒಂದನೇ ಆರೋಪಿಯ ಪರವಾಗಿ ಡಿಫೆನ್ಸ್ ಸಾಕ್ಷಿಗಳಾಗಿ ಡಾ. ಎಂ. ಕೇಶವ ಪೈ ಹಾಗೂ ಡಾ ನಾಗಪ್ಪ ಆಳ್ವ ಇವರ ಹೇಳಿಕೆಯೂ ಮುಗಿಯಿತು. ಇದರ ಮುಂದಿನ ವಿಚಾರಣೆ ಇದೇ ಅಕ್ಟೋಬರ ತಾ. ೬ಕ್ಕೆ. ಮಂಗಳೂರಿನ ಸಬ್ ಡಿ॥ ಮ್ಯಾಜಿಸ್ಟ್ರೇಟರು, ೧೯೪೨ನೇ ಇಸ್ವಿಯ ಸ್ಪೆಶಲ್ ಕ್ರಿಮಿನಲ್ ಕೋರ್ಟುಗಳ ಆರ್ಡಿನೆನ್ಸ್ ನಂಬ್ರ ೨ರ ಮೇರೆಗೆ ಅಧಿಕಾರ ಪಡೆದ ಸ್ಪೆಶಲ್ ಮ್ಯಾಜಿಸ್ಟ್ರೇಟರ ನೆಲೆಯಲ್ಲಿ ಈ ಮೊಕದ್ದಮೆಯನ್ನು ವಿಚಾರಿಸುತ್ತಿರುವರು.

ಚಿಮಿಣಿ ಎಣ್ಣೆ ಹಿಡಿದರು

ಮಂಗಳೂರಿನ ತಹಶೀಲ್ದಾರ್ ಶ್ರೀ. ಜನಾರ್ದನ ಆವರೂ ಮೂಲ್ಕಿ ಪೋಲೀಸ್ ಅಧಿಕಾರಿಗಳೂ ಎಕ್ಕಾರಿನಲ್ಲಿ ಇಬ್ಬರ ಮನೆಗಳಲ್ಲಿ ಝಡ್ತಿ ನಡೆಸಿ ಒಟ್ಟಿಗೆ ೭೬ ಟಿನ್ ಚಿಮಿಣಿ ಎಣ್ಣೆಯನ್ನು ಹಿಡಿದಿರುವರೆಂದು ತಿಳಿದುಬಂದಿದೆ.

ಬತ್ತವನ್ನು ವೃದ್ಧಿಗೊಳಿಸುವ ಕೃಷಿಯ ಹೊಲ

ಕೃಷಿ ಶಾಖೆಯ ಡೆಪ್ಯುಟಿ ಡೈರೆಕ್ಟರರೂ ಬತ್ತದ ಸ್ಪೆಶಲಿಸ್ಟರೂ ಆದ ಶ್ರೀ ಸಿ. ಆರ್. ಶ್ರೀನಿವಾಸನ್ ಅವರೂ ಜೆಪ್ಪಿನಮೊಗರು ಗ್ರಾಮವನ್ನು ಸಂದರ್ಶಿಸಿ, ಅಲ್ಲಿನ ೨೫ ಎಕ್ಕರೆಗಳ ವಿಸ್ತೀರ್ಣದ ಒಂದು ಹೊಲವನ್ನು 'ಇನಸ್ಪೆಕ್ಷನ್' ಮಾಡಿ 'ಬತ್ತವನ್ನು ವೃದ್ಧಿಗೊಳಿಸುವ ಕೃಷಿಯ ಹೊಲ'ದ ನಿರ್ಮಾಣಕ್ಕಾಗಿ ಆ ಪ್ರದೇಶವನ್ನು 'ಎಕ್ವೈರ್' ಮಾಡಬೇಕೆಂದು ನಿರ್ಧರಿಸಿರುವರು. ಈ ಹೊಸ ಕೃಷಿ ಕ್ಷೇತ್ರಕ್ಕಾಗಿ ನಮ್ಮ ಸರಕಾರದವರು ೫೬ ಸಾವಿರ ರೂಪಾಯಿಗಳನ್ನು ಈಚೆಗೆ ಮಂಜೂರು ಮಾಡಿರುವರು.

ಮೆರವಣಿಗೆ-ಕೈದು

ತಾ. ೩ರಂದು ಮಂಗಳೂರು ಬಸವನಗುಡಿ ಹತ್ತಿರ ಕಾಂಗ್ರೆಸ್ ಧ್ವಜಹಿಡಿದು ಘೋಷಣೆಮಾಡಿ, ಮೆರವಣಿಗೆ ಹೋಗುತ್ತಿದ್ದ ಶ್ರೀಗಳಾದ ರಂಗ ಮತ್ತು ಕೃಷ್ಣ (ಹರಿಜನರು) ಎಂಬ ಇಬ್ಬರು ಕಾಂಗ್ರೆಸ್ ಸ್ವಯಂಸೇವಕರನ್ನು ಬಂಧಿಸಲಾಗಿದೆ.

ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು

ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾದ ಡಾ॥ ವಿಟ್ಠಲ ಶೆಟ್ರು ಆರೋಗ್ಯದ ನಿಮಿತ್ತ ಕೊಯಂಬುತ್ತೂರಿಗೆ ಹೋಗಿರುವುದರಿಂದ, ತಾತ್ಕಾಲಿಕವಾಗಿ, ಬೋರ್ಡಿನ ವೈಸ್ ಪ್ರೆಸಿಡೆಂಟರಾದ ಶ್ರೀ. ಆರೂರು ಲಕ್ಷ್ಮಿನಾರಾಯಣರಾಯರು ಪ್ರೆಸಿಡೆಂಟರ ಕಾರ್ಯ ನಿರ್ವಹಿಸುವರು.

ಚಿಲ್ಲರೆ ಸಿಗದೆ ತೊಂದರೆ

ಮಂಗಳೂರಲ್ಲಿ ಇತ್ತೀಚೆಗೆ ಒಂದೆರಡು ವಾರಗಳಿಂದ ಅಂಗಡಿಗಳಲ್ಲೆಲ್ಲಿಯೂ ಚಿಲ್ಲರೆ ಸಿಗದೆ ಇರುವುದರಿಂದ ಬಹಳ ತೊಂದರೆಯುಂಟಾಗಿದೆ. ಬೇಂಕುಗಳಲ್ಲಿಯೂ ಬೇಕಾದಷ್ಟು ಚಿಲ್ಲರೆ ಸಿಗುವುದಿಲ್ಲವಾಗಿ ದೂರಿದೆ. ಕೆಲವು ಹೋಟೇಲುಗಳ ಬಾಗಿಲುಗಳಲ್ಲಿ 'ಚಿಲ್ಲರೆಯಿದ್ದರೆ ಕಾಫಿ ಕುಡಿಯುವುದು' ಎಂದು ಮೊದಲಾಗಿ ನೋಟೀಸು ಹಚ್ಚಿದ್ದಾರೆ. ಒಮ್ಮೆಗೇ ಚಿಲ್ಲರೆ ಹೀಗೆ ಹೇಗೆ ಕಡಿಮೆಯಾಯಿತೋ ತಿಳಿಯದು. ಅಧಿಕಾರಿಗಳು ಈ ಕುರಿತು ತೀವ್ರ ಗಮನ ಕೊಡದಿದ್ದರೆ ನಾಗರಿಕರು ಬಹಳ ಸಂಕಷ್ಟಗಳಿಗೆ ಗುರಿಯಾಗುವರು.

ನಿಷೇಧ-ರಾಜಿನಾಮೆ

ಬದಿಯಡ್ಕ ಪಂಚ್ಯಾತ ಬೋರ್ಡಿನ ಪ್ರೆಸಿಡೆಂಟ್ ಶ್ರೀ ಈಳಂತೋಡಿ ಕೃಷ್ಣಭಟ್ಟರು, ಮೆಂಬರಾದ ಡಾ॥ ಪಿ. ಎಸ್. ಶಾಸ್ತ್ರಿಗಳೇ ಮೊದಲಾದ ಎಲ್ಲಾ ಮೆಂಬರರೂ ಒಂದು ರಸಾವು ಮಾಡಿ ತಮ್ಮ ಸ್ಥಾನಗಳಿಗೆ ರಾಜಿನಾಮೆಯಿತ್ತಿರುವರು.

ಮಂಜೇಶ್ವರ ಸರ್ಕಲಿನಿಂದ ದ ಕ. ಜಿಲ್ಲಾ ಬೋರ್ಡಿಗೆ (ಕಾಂಗ್ರೆಸ್ ಪಕ್ಷದಿಂದ) ಪ್ರತಿನಿಧಿಗಳಾಗಿ ಆರಿಸಲ್ಪಟ್ಟ ಶ್ರೀ। ಅಮೃತ ಕೃಷ್ಣರಾಯರು ಬೋರ್ಡಿನ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿರುವರಾಗಿ ತಿಳಿದು ಬರುತ್ತದೆ

ದ. ಕ. ಜಿಲ್ಲಾ ಬೋರ್ಡ್ ಸದಸ್ಯ (ಕಾಂಗ್ರೆಸ್ ಪಕ್ಷದ) ರಾದ ಶ್ರೀ ತಿಮ್ಮಪ್ಪ ಅರಿಗ ಜೈನಿ ಇವರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು

ಮುಲ್ಕಿಯ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರ್ (ಕಾಂಗ್ರೆಸ್ ಪಕ್ಷದ) ರಾಮಕೃಷ್ಣ ಕ್ಷೊಂಜರು ತನ್ನ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು

ಕುಂಬಳೆ ಸರ್ಕಲ್ ಕಾಂಗ್ರೆಸ್ ಪಕ್ಷದ ಡಿ. ಬೋ. ಮೆಂಬರರಾದ ಜನಾಬ್ ಎ. ಕೆ. ಶೆರೂಲ್ ಸಾಹೇಬರು ತನ್ನ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು.

ಅನಾಥಾಶ್ರಮಗಳ ಬಗ್ಗೆ ಮಹಾಜನರಲ್ಲಿ ವಿನಂತಿ

ಮಂಗಳೂರಲ್ಲಿ ಹಿಂದೂ ಮಹಿಳೆಯರ ಬಗ್ಗೆ, ಬಾಲಿಕೆಯರ ಬಗ್ಗೆ, ಬಾಲಕರ ಬಗ್ಗೆ ಸ್ಥಾಪಿತವಾದ ಕದ್ರಿ ರೋಡಿನ ಈಶ್ವರಾನಂದ ಮಹಿಳಾ ಸೇವಾಶ್ರಮ, ಕಂಕನಾಡಿಯ ಬಾಲಿಕಾಶ್ರಮ, ಅತ್ತಾವರದ ಬಾಲಕಾಶ್ರಮ ಈ ಮೂರು ಸಂಸ್ಥೆಗಳ ಪರವಾಗಿ ಡಾ॥ ಎಂ. ಕೇಶವ ಪೈಗಳು ಮಹಾಜನರಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡಿರುವರು. ಉದಾರಿಗಳಾದ ಶ್ರೀಮಂತರು ಈ ಸಂಸ್ಥೆಗಳಿಗೆ ಸಹಾಯವಿತ್ತು ಪುಣ್ಯಭಾಗಿಗಳಾಗಬೇಕಾಗಿ ನಮ್ಮ ಸೂಚನೆಯಿದೆ.

ಮನೆ ಮತ್ತು ಪೇಪರ್ ಸ್ಟಾಲ್ ಜಡ್ತಿ

ತಾ. ೧ರಂದು ಶ್ರೀ ಕೈಡೇಲ್ ತಿಮ್ಮಪ್ಪಶೆಟ್ರ ಮನೆಯನ್ನು ಸಂಜೆಹೊತ್ತಿಗೆ ಪೋಲೀಸರು ಜಡ್ತಿ ಮಾಡಿದರು. ಇದೇ ದಿನ ಮಧ್ಯಾಹ್ನ ರಥಬೀದಿಯಲ್ಲಿರುವ ಶ್ರೀ ಕೊಂಚಾಡಿ ನಾರಾಯಣ ಶೆಣ್ಯೆಗಳ 'ಪೇಪರ್ ಸ್ಟಾಲ'ನ್ನೂ ಜಡ್ತಿ ಮಾಡಲಾಯಿತು. ಎರಡು ಕಡೆಗಳಲ್ಲಿಯೂ ಆಕ್ಷೇಪಾರ್ಹವಾದುದೇನೂ ದೊರೆತಿಲ್ಲವೆಂದು ತಿಳಿದು ಬರುತ್ತದೆ.

ಜಾನುವಾರು ಸಂತೆ

ದಕ್ಷಿಣ ಕನ್ನಡಾ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಳುಕುಂದದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ತಾ. ೨೨-೧೧-೪೨ರಿಂದ ತಾ ೮-೧೨ ೪೨ ವರೆಗೆ ಜರಗುವುದು.

ಕಾಸರಗೋಡು

ಬಂಧನ, ಶಿಕ್ಷೆ, ಮನೆಜಡ್ತಿ ಮತ್ತು ಬೆತ್ತದ ಹೊಡೆತ

ಶ್ರೀ. ಉಮೇಶರಾಯರ ಬಂಧನ

ತಾ. ೨೧ರಂದು ಶ್ರೀಗಳಾದ ಸಿ. ನಾರಾಯಣ ಕುರುಪ್, ಮತ್ತು ಪಿ. ಪಿ ವಿಜಯನ್ ನಂಬಿಯಾರ್ ಇವರು ತಾಲೂಕು ಆಫೀಸಿನ ಮುಂದೆ ಪಿಕೆಟಿ ಮಾಡಿದರು. ಆ ಸ್ಥಳಕ್ಕೆ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಬಂದು ಅವರಿಗೆ ಹೊಡೆದು ಅವರನ್ನು ಪೋಲೀಸ್ ಸ್ಟೇಶನಿಗೆ ಕೊಂಡೊಯ್ದು ಅಲ್ಲಿಟ್ಟರು. ಅವರನ್ನು ಮರುದಿನ ಕಾಸರಗೋಡು ಸಬ್ ಮೆಜಿಸ್ಟ್ರೇಟರ ಮುಂದೆ ಹಾಜರು ಮಾಡಿ ೧೦ ದಿನ ರಿಮಾಂಡ್ ಕೊಡಲಾಯಿತು. ಶ್ರೀ ವಿಜಯನ್ ನಂಬಿಯಾರನ್ನು ಬಿಡುಗಡೆ ಮಾಡಲಾಗಿದೆ. ಶ್ರೀ ಕೋಡೋತ್ ಕರುಣಾಕರನ್ ನಾಯರ್ (೧೩ನೇ ಸತ್ಯಾಗ್ರಹ ಸರ್ವಾಧಿಕಾರಿ) ಇವರನ್ನು ತಾ. ೨೮ರಂದು ಬಂಧಿಸಲಾಗಿದೆ.

ತಾ. ೨೮ರಂದು ನೀಲೇಶ್ವರದಲ್ಲಿ ಬಂಧಿಸಲ್ಪಟ್ಟ, ಸತ್ಯಾಗ್ರಹ ಸಮಿತಿಯ ೧೦ನೇ ಸರ್ವಾಧಿಕಾರಿ ಶ್ರೀ ಗೋಪಾಲಕೃಷ್ಣ ಸರಳಾಯರಿಗೆ ಪುತ್ತೂರು ಡಿವಿಜನಲ್ ಮೆಜಿಸ್ಟ್ರೇಟರು ೯ ತಿಂಗಳ ಕಠಿಣ ಶಿಕ್ಷೆ ಮತ್ತು ರೂ. ೨೦೦ ಜುಲ್ಮಾನೆ ತಪ್ಪಿದರೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ತಾ. ೧೪ರಂದು ಸಬ್ ರಿಜಿಸ್ಟ್ರಾರರ ಆಫೀಸು ಮುಂದೆ ಪಿಕೆಟ್ ಮಾಡಿದ ಶ್ರೀ. ಕೆ. ಗಣೇಶರಾಯರಿಗೆ ಅದೇ ಮಜಿಸ್ಟ್ರೇಟರು ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ಬದಿಯಡ್ಕದಿಂದ ಬಂದ ಶ್ರೀ ಅಣ್ಣಪ್ಪ ಶೇಷಗಿರಿ ಕಾಮತರಿಗೆ ೯ ತಿಂಗಳ ಕಠಿಣ ಶಿಕ್ಷೆ ಮತ್ತು ರೂ. ೧೦೦ ಜುಲ್ಮಾನೆ ತಪ್ಪಿದರೆ ೩ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಇವರೆಲ್ಲರನ್ನೂ ಸಿ ಕ್ಲಾಸಿನಲ್ಲಿಡಲಾಗಿದೆ. ಇವರೆಲ್ಲರನ್ನೂ ತಾ. ೨೫ರಂದು ಬಳ್ಳಾರಿಯ ಅಲಿಪುರಂ ಜೈಲಿಗೆ ಸಾಗಿಸಲಾಗಿದೆ.

ಕಾಸರಗೋಡು ಪೋಲೀಸ್ ಸಬ್ ಇನ್ಸ್‌ಪೆಕ್ಟರರು, ಇಬ್ಬರು ಪೋಲೀಸರೊಂದಿಗೆ ವಕೀಲ್ ಶ್ರೀ ಎಂ ಉಮೇಶರಾಯರ ಮನೆಗೆ ಬಂದು ಜಡ್ತಿಮಾಡಿದರು. ಯಾವುದೋ ಒಂದುಹಳೆಯ ಕರಪತ್ರವು ಸಿಕ್ಕಿರುವುದಾಗಿ ತಿಳಿದಿದೆ ಶ್ರೀ ಉಮೇಶರಾಯರ ಮಗ ಶ್ರೀ ರಾಮಮೋಹನರಾಯರನ್ನು ಬಂಧಿಸಿ ಪೋಲೀಸ್ ಸ್ಟೇಶನಿಗೆ ಕರದೊಯ್ದು ೧೦ ದಿನಗಳ ರಿಮಾಂಡ್ ಕೊಡಲಾಗಿದೆ

ತಾ. ೨೨ರಂದು ಶ್ರೀಗಳಾದ ಪಿ. ವಿ ವಿಜಯ ನಂಬಿಯಾರ್ ಮತ್ತು ಕೆ. ಕುಮಾರನ್ ನಾಯರ್ ಇವರು ಕಾಂಗ್ರೆಸ್ ಕರಪತ್ರಗಳನ್ನು ಹಂಚಿದರು, ಆದರೆ ಬಂಧಿಸಲಿಲ್ಲ ತಾ. ೨೩ರಂದು ಶ್ರೀಗಳಾದ ಪಿ. ವಿ. ವಿಜಯ ನಂಬಿಯಾರ್ ಮತ್ತು ಕೆ. ಕುಮಾರನ್ ನಾಯರ್ ಪೋಲೀಸ್ ಇನ್ಸ್‌ಪೆಕ್ಟರರ ಮನೆ ಮುಂದೆ ಪಿಕೆಟಿಂಗ್ ಮಾಡಿ ಕರಪತ್ರಗಳನ್ನು ಹಂಚಿದಾಗ ಅಲ್ಲಿ ಪೋಲೀಸ ಇನ್ಸ್‌ಪೆಕ್ಟರರು ಬಂದು ಅವರನ್ನು ಚೆನ್ನಾಗಿ ಹೊಡೆದು (ಬೆತ್ತದಿಂದ) ಪೋಲೀಸ್ ಸ್ಟೇಶನಿಗೆ ಒಯ್ದು ಮತ್ತೆ ಪೋಲೀಸ್ ಸ್ಟೇಶನಿನಿಂದ ಒಂದು ಫರ್ಲಾಂಗು ದೂಡುತ್ತಾ ಹೋಗಿ ಬಿಟ್ಟುಬಿಟ್ಟರು

ತಾ ೨೬ನೇ ಸಂಜೆಗೆ ಶ್ರೀ. ಎಂ ಉಮೇಶರಾಯರನ್ನು ಕಾಞಂಗಾಡಿನಲ್ಲಿ ಕಾಸರಗೋಡು ಸರ್ಕಲ್ ಇನ್ಸ್‌ಪೆಕ್ಟರರು ಡಿಫೆನ್ಸ್ ಒಫ್ ಇಂಡಿಯಾ ಪ್ರಕಾರ ಕೈದುಮಾಡಿದರು ತಾ ೨೭ ಸಂಜೆ ನೈಲಿಗ ಮಂಗಳೂರಿಗೆ ತಂದು ಸಬ್ ಜೈಲಿನಲ್ಲಿಟ್ಟಿದ್ದಾರೆ ತಾ ೨೭ರಂದು ಕಾಸರಗೋಡಿನಲ್ಲಿ ಸ್ವಯಂಸೇವಕ ಶಿಬಿರವನ್ನು ಮುತ್ತಿ ಅಲ್ಲಿದ್ದ ಮಾಜಿ ಪಟೇಲರಾದ ಶ್ರೀ. ವಿ. ವಿ ಕಸಂಬಿತ್ತಾಯ ಮತ್ತು ನೀಲೇಶ್ವರದ ಶ್ರೀ. ಪ್ರಭಾಕರನ್ ಇವರನ್ನು ಕೈದು ಮಾಡಿದರು.

ಬೊಂಬಾಯಿ

ಕಾಂಗ್ರೆಸ್ ಕೆಲಸಗಾರರಾದ ಶಿರ್ವ ಗೋಪಾಲ ದಾಮೋದರ ಶೆಣೈಯವರನ್ನು ತಾ ೧೯ರಂದು ಕೈದುಮಾಡಿ ತಾ. ೨೭ರಲ್ಲಿ ೩ ತಿಂಗಳ ಸಕ್ರಮ ಸಜೆ ಮತ್ತು ರೂ ೨೦೦ ಜುಲ್ಮಾನೆ ತಪ್ಪಿದರೆ ೨ ತಿಂಗಳ ಶಿಕ್ಷೆ ವಿಧಿಸಲಾಗಿದೆ ಎಂದು ತಿಳಿದುಬರುತ್ತದೆ

WANTED

A clerk for the depres ed classes Mission An S S. L. C with a knowledge of type-writing is prepeired Apply to-

The Hon Secretory
Depressed Classes Mission,
Mangalore

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

Sub Court S C 126/1935.
R E. P. 280/1942.

ಯು. ಮಾಧವ ಅನಂತಶೆಣೈ, ಮಂಗಳೂರು } ವಾದಿ ಅರ್ಜಿದಾರ

ಮತ್ತು

1. ಶೀನ ಕಾಜವಾ ಕೋಚು ಕಾಜವರ ಮಗ
2. ಕಾಂತಯಿ ಹೆಂಗ್ಸು-
1ನೇ ಪ್ರತಿವಾದಿ ಹೆಂಡ್ತಿ.

} ಪ್ರತಿವಾದಿರು ರೆಸ್ಪೋಂಡೆಂಟರು.

ಮಂಗಳೂರು ತಾಲ್ಲೂಕ ಜೋಕಾಜೆ ಗ್ರಾಮಸ್ತರು

ಮೇಲಿನ ಅಮ್ಲಜ್ಯಾರಿಯನ್ನು ಜಪ್ತಾದ ಪ್ರತಿವಾದಿರ ಪ್ಯಾದೆಗೇಣಿ ಹಕ್ಕಿನ ಸಸ್ತಿ ರಾಷ್ಟಿಯ ಯೇಲಂ ಇಸ್ತಿಹಾರಿನ ಶರ್ತಗಳು ನಿರ್ಣಯಿಸುವ ಒಗ್ಗೆ ತಾ. 10 11-1942ನೇ ದಿವ ಪೂರ್ವಾಹ್ನ 10½ ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆಂತ ಸದ್ರಿ ಅಮ್ಲಜ್ಯಾರಿಯ 2ನೇ ರೆಸ್ಪೋಂಡೆಂಟಿಗೆ ಈ ಮೂಲಕ ತಿಳಿಸೋಣಾಗುತ್ತದೆ.

M. Mahava Rao,
Vakil for Petitioner

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡಯಬಹುದು.

CANARA BANK, ILMITE.D

ESTD:- 1906.

ಸಿನೆಮಾ ಪುಟ

ಎರಡು ಕನ್ನಡ ಸಿನೆಮಾಗಳು

ಗುಬ್ಬಿ ಕಂಪನಿಯು 'ಜೀವನ-ನಾಟಕ' ಕಲಾ ಪಾಟಿ ಪಿಲ್ಮ್ಸ ಲಿಮಿಟೆಡಿನ 'ಪ್ರಹ್ಲಾದ' ಎಂಬೀ ಎರಡು ಕನ್ನಡ ಚಿತ್ರಗಳೀಗ ತಯಾರಾಗಿವೆ. 'ಜೀವನ ನಾಟಕ'ವು ದಸರಾ ಕಾಲದಲ್ಲಿ ಮೈಸೂರಲ್ಲಿ ಪ್ರದರ್ಶಿತವಾಗಿ, ಬೇಗನೇ ಧಾರವಾಡ, ಹುಬ್ಬಳ್ಳಿ ಮೊದಲಾದ ಪ್ರಸಿದ್ಧ ಕೇಂದ್ರಗಳಲ್ಲಿ ಪ್ರಕಟವಾಗಲಿದೆ. 'ಪ್ರಹ್ಲಾದ' ದೀಪಾವಳಿಗೆ ಪ್ರಕಟವಾಗುವದೆಂದು ತಿಳಿದು ಬರುತ್ತದೆ. ಜೀವನ ನಾಟಕದಲ್ಲಿ ಶಾಂತಾ ಹುಬ್ಳೀಕರ್, ವೀರಣ್ಣ, ಕೆಂಪರಾಜ, ಜಯಮ್ಮ, ಮೋಹನ ಕುಮಾರಿ, ಇವರೇ ಮೊದಲಾದವರು ನಟವರ್ಗ. ಶ್ರೀ. ಅ. ನ. ಕೃಷ್ಣರಾಯರ ಕಥಾನಕ. 'ಪ್ರಹ್ಲಾದ'ದಲ್ಲಿ ರಾಜಮ್ಮ, ಕುಮಾರಿ ಚಂದ್ರಮ್ಮ, ಶ್ರೀನಿವಾಸ ಮೂರ್ತಿ, ಶೇಷಾಚಾರ್, ಮಾಸ್ಟರ್ ವಿಶ್ವನಾಥ, ಜೋಲಿ ಕಿಟ್ಟಪ್ಪ ಅಯ್ಯರ್, ನಾಗಲಕ್ಷ್ಮಿ ಇವರೇ ಮೊದಲಾದವರು ನಟವರ್ಗ. ನಿರ್ದೇಶಕ ಸುಬ್ರಹ್ಮಣ್ಯಂ. ಇದರ ಸಂಗೀತ ಮತ್ತು ಸಂವಾದ ಶ್ರೀ ಬೆಳ್ಳಾವೆ ನರಹರಿ ಶಾಸ್ತ್ರಿ.

ಶಾಂತಾರಾಮರ 'ರಾಜ್ ಕಮಲ್'

ನಿರ್ದೇಶಕ ಶಾಂತಾರಾಮರು ರಾಜ್ ಕಮಲ್ ಕಲಾ ಮಂದಿರ್ ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಾರೆ. ಅವರ ಸಿನೆಮಾ ಸಂಸ್ಥೆ ರಾಜ್ ಕಮಲ್ ಪಿಕ್ಚರ್ಸ್ ಎಂಬ ಹೆಸರಿನಿಂದ ಕರೆಯಲ್ಪಡುವುದು. ಶಾಂತಾರಾಮರು ತನ್ನೀ ಹೊಸ ಸಂಸ್ಥೆಯ ಆದಾಯವನ್ನು ಅನಾಥರಂಥ ಜನರ ಧರ್ಮಾರ್ಥ ರಕ್ಷಣೆ ಹಾಗೂ ಅನಾಥ ಮಕ್ಕಳ ಧರ್ಮಾರ್ಥ ವಿದ್ಯಾಭ್ಯಾಸದ ಸಲುವಾಗಿ ವಿನಿಯೋಗಿಸಲು ನಿಶ್ಚಯಿಸಿರುವರೆಂದು ಬೊಂಬಯಿಯ ಒಂದು ಸುದ್ದಿ ಇದೆ. 'ರಾಜ್ ಕಮಲ್' ಎಂಬುದು ಶಾಂತಾರಾಮರ ಮಾತಾ-ಪಿತೃಗಳ ಹೆಸರ ಜೋಡಣೆ. ಅವರ ತಂದೆಯ ಹೆಸರು ರಾಜಾರಾಮ್; ತಾಯಿಯ ಹೆಸರು ಕಮಲಾಬಾಯಿ ಎಂದು. ಅವರ ಪ್ರಥಮ ಚಿತ್ರ 'ಶಕುಂತಲಾ' ಇದರ ಕಥೆ ದಿವಾನ್ ಶೇರಾರ್ ಬರೆದುದು.

ಅಶೋಕ-ಲೀಲಾದ್ವಯರು

ಅಶೋಕ ಕುಮಾರ್ ಲೀಲಾ ಚಿಟ್ಟ್ನಿಸರು ಶಿಖು ಜೀಕ ಚಿತ್ರ ಕಂಪನಿಗೆ ಸೇರಿದ್ದು ಅವರ ಪ್ರಥಮ ಚಿತ್ರದಲ್ಲಿಯೇ ಅಭಿನಯಿಸುವರೆಂದು ಈಗ ಅಧಿಕೃತವಾಗಿ ತಿಳಿದುಬರುತ್ತದೆ ಈ ಚಿತ್ರದ ಹೆಸರು, ನಿರ್ದೇಶಕರಾರು ಎಂಬ ವಿವರಗಳಿನ್ನೂ ತಿಳಿದು ಬಂದಿಲ್ಲ.

ದೀಪಾವಳಿ ಸಮಯದಲ್ಲಿ ಕೊಟ್ಟ ಬಹುಮಾನ ಮತ್ತು ಕಾಣಿಕೆಗಳು ಜೀವನ ಪರ್ಯಂತ ಇಟ್ಟುಕೊಳ್ಳುವಂಥವುಗಳು.



ಸೆಕೆಂಡಸ್ ಮಿನಿಯೇಚರ್ ಟೋನು
ಸೀ. ಎವರ್ ಬ್ರೈಟ್ ಸ್ಟೀಲ್ ರೂ 57
ರೋ. ಗೋ. 10 ವರ್ಷ ಶ್ಯಾ. ರೂ. 60
18 ಕೇರಟ್ ಗಟ್ಟಿ ಬಂಗಾರ ರೂ. 101



ಸೆಕೆಂಡಸ್ ನ್ಯೂಕೆಲಿಬ್ರೆ ರೆಕ್ಟೆಂಗುಲರ್
ನಿಕ್ಕಲ್ ಸಿಲ್ವರ್ ರೂ. 51
ರೋಲ್ಡ್ ಗೋಲ್ಡ್ 10 ವರ್ಷ ಶ್ಯಾಲಿಟ ರೂ. 68
9 ಕೇರಟ್ ಗಟ್ಟಿ ಬಂಗಾರ ರೂ. 107
18 ಕೇರಟ್ ಗಟ್ಟಿ ಬಂಗಾರ ರೂ. 155



ಸೆಕೆಂಡಸ್ ಮಿನಿಯೇಚರ್ ಒಬ್ಲೊಂಗ್
ರೋ ಗೋ 10 ವರ್ಷ ಶ್ಯಾ ರೂ. 60
9 ಕೇರಟ್ ಗಟ್ಟಿ ಬಂಗಾರ ರೂ 79
18 ಕೇರಟ್ ಗಟ್ಟಿ ಬಂಗಾರ ರೂ. 107

ಇನ್ನು ಹಲವು ತರದ ಕಾಣಿಕೆ ಮಾದರಿಗಳು ಸಿಗುತ್ತವೆ ಹುಡುಕಿ ತೆಗೆಯಲು ನಮ್ಮ ಉಚಿತ ಚಂದವಾದ ಕೆಲೆಂಡರಿಗೆ ಬರೆಯಿರಿ
ವೆಸ್ಟ್ ಎಂಡ್ ವಾಚ್ ಕಂಪೆನಿ ಬೊಂಬೈ, ಕಲ್ಕತ್ತ

WEST END WATCH Co
BOMBAY — CALCUTTA.

The Canara Banking Corporation Ltd.

(Incorporated in British India-Liability of members is limited)

Estd 1906.

Our Rates of Interest on Deposits
Effective From 15--10--1942

Current accounts	(½% from July to Dec (1% from Jan. to June
Savings Bank	1½% p. a.
Short-term deposits	1% p. a.
Fixed deposits 3 months	1% p. a.
6 „	1½% p. a.
9 „	2% p. a.
12 „	2¾% p. a.
24 „	3% p a.

Advances against approved securities made at favourable rates of interest and banking business of every description under taken

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಶ್ವಾಸ ಸಂಬಂಧ ರೋಗ ಕಫ ಮತ್ತು ಉಬ್ಬಸಗಳಿಗೆ ಪರಿಣಾಮಕಾರೀ ಔಷಧ

ನೀವು ಶ್ವಾಸ ಬಿಡುವಾಗ ಕಂಠ ಮತ್ತು ಶ್ವಾಸಕೋಶದಲ್ಲಿರುವ ಕ್ರಿಮಿಗಳು ತೊಂದರೆ ಕೊಡುವವು ಆದ್ದರಿಂದ ಅದನ್ನು ಪರಿಹರಿಸಲು ಅತ್ಯಂತ ಆದರ್ಶಕರ ಔಷಧಿಯಾದ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ.

ಪೆಪ್ಸ ಬಾಯಿಗೆ ಹಾಕಿದ ಕೂಡಲೇ ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ ಶ್ವಾಸದೊಡನೆ ಚಿತ್ರದಲ್ಲಿ ತೋರಿಸಿದಂತೆ ಸೇರಿಕೊಳ್ಳುವುದು (1) ಶ್ವಾಸಕೋಶದೊಳಗೆ ಸೇರುವುದು, (2) ಪೆಪ್ಸ ಹೀಗೆ ಕಂಠನಾಳವನ್ನು ಗುಣಪಡಿಸಿ ಶ್ವಾಸವನ್ನು ಸರಿಗೊಳಿಸಿ, ಕಫ, ಶೀತ, ಉಬ್ಬಸ ಮೊದಲಾದವುಗಳನ್ನು ಗುಣಪಡಿಸುವುದು ಎಲಾ ಔಷಧಿ ವ್ಯಾಪಾರಿಗಳಲ್ಲಿಯೂ ಇದು ಒಂದು ರೂಪಾಯಿ ಬೆಲೆಗೆ ದೊರೆಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸರೋಗ್ಯ ಮಾತ್ರೆಗಳು.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಶ್ರೀ ಪರಮಹಂಸರ ಏಕಸಂಧಿ ಗ್ರಾಹಿತ್ವ

ಶ್ರೀ ಪರಮಹಂಸರು ಇವೇ ಎಲ್ಲ ವೇದ ವೇದಾಂತದ ಯೋಗವಿಜ್ಞಾನದ ವಚನಗಳನ್ನೆಲ್ಲ ಹೇಳುವುದನ್ನು ಕೇಳಿ ನಮ್ಮಲ್ಲಿ ಕೆಲಕೆಲವರು ಅವರನ್ನು ಆಗಾಗ ಹೀಗೆಂದು ಕೇಳುತ್ತಿದ್ದರು:— "ಮಹಾಶಯರೇ, ನೀವು ಎಂದೂ ವಿದ್ಯೆಯನ್ನು ಕಲಿಯಲೇ ಇಲ್ಲ, ಇದನ್ನೆಲ್ಲ ಎಲ್ಲಿ ಕಲಿಯೋಣವಾಯಿತು?" ಈ ವಿಸ್ಮಯಕರವಾದ ಪ್ರಶ್ನೆಯಿಂದ ಅದ್ಭುತ ಶ್ರೀ ಪರಮಹಂಸರಿಗೇನೂ ಬೇಸರ ಬರಲಿಲ್ಲ. ತುಸು ಹಸನ್ಮುಖಿಯಾಗಿ—"ಸ್ವತಃ ಓದುಬರಹ ಕಲಿಯಲಿಲ್ಲ ನಿಜ. ಪರಂತು ಎಲ್ಲವನ್ನೂ ಚೆನ್ನಾಗಿ ಕೇಳಿದ್ದೇನೆ. ಅದೆಲ್ಲ ಮನಸ್ಸಿನಲ್ಲಿ ಇದೆ. ಬೇರೆಯವರ ಬಾಯಿಂದ, ದೊಡ್ಡದೊಡ್ಡ ಪಂಡಿತರ ಬಾಯಿಂದ ವೇದ ವೇದಾಂತವನ್ನೂ ಪುರಾಣ ಗ್ರಂಥಗಳನ್ನೂ ಕೇಳಿದ್ದೇನೆ. ಕೇಳಿ, ಅವುಗಳ ಸಾರಾಂಶವನ್ನು ಅರಿತು, ಆ ಗ್ರಂಥಗಳ ಮಾಲೆಯನ್ನು ಗ್ರಥಿಸಿಕೊಂಡು ಕೊರಳಿಗೆ ಧರಿಸಿದ್ದೇನೆ—'ಇಕೊ, ನಿನ್ನ ಶಾಸ್ತ್ರ ಪುರಾಣ, ನನಗೆ ಶುದ್ಧಾಭಕ್ತಿಯನ್ನು ದಯಪಾಲಿಸೆಂದು ಶ್ರೀಜಗದಂಬೆಯ ಪಾದಾರವಿಂದಗಳಿಗೆ ಅದನ್ನು ಅರ್ಪಿಸಿದ್ದೇನೆ!" ಅಂದರು.

ಶ್ರೀ ಪರಮಹಂಸರು ಅದ್ವೈತ ಭಾವವೇನೇನೆಂಬುದನ್ನು ಸುಲಭವಾದ ರೀತಿಯಿಂದ ತಿಳಿಸಿದುದು

ವೇದಾಂತದ ಅದ್ವೈತಭಾವದವಿಷಯವಾಗಿ ಹೀಗನ್ನುತ್ತಿದ್ದರು:—"ಅದೊಂದು ಕೊನೆಯ ಮಾತು. ಹೇಗೆಂದರೆ ಒಬ್ಬ ಹಳೇ ಚಾಕರನಿದ್ದಾನೆ. ಒಡೆಯನು ಆತನ ಸೇವೆಗೆ ಮೆಚ್ಚಿ ಆತನ ಮಾತಿನ ಮೇಲೆ ಹೆಚ್ಚಿನ ನಂಬಿಕೆಯಿಡುತ್ತಾನೆ. ಮತ್ತು ಸಕಲ ವಿಷಯಗಳಲ್ಲಿಯೂ ಆತನ ಪರಾಮರ್ಶವನ್ನು ಕೇಳುತ್ತಾನೆ. ಒಂದು ದಿನ ಬಹಳವಾಗಿ ಮೆಚ್ಚಿ ಕೈಹಿಡಿದು ತನ್ನ ಆಸನದ ಮೇಲೆಯೇ ಆತನನ್ನು ಕುಳ್ಳಿರಿಸಿದನು. ಸೇವಕನು ಸಂಕೋಚಪಟ್ಟು 'ಇದೇನು ಮಾಡುತ್ತಿದ್ದೀರಿ' ಎಂದು ಹೇಳಿದರೂ ಒಡೆಯನು ಆತನ ಮಾತನ್ನೇನೂ ಕೇಳದೆ ಬಲಾತ್ಕಾರದಿಂದ ಆತನನ್ನು ಎಳೆದೊಯ್ದು 'ಇಲ್ಲಿಯೇ ಕೂತುಕೋ! ಅದರಿಂದೇನಾಯಿತು? ನೀನೇ ನಾನು, ನಾನೇ ನೀನು' ಎಂದು ಹೇಳಿದಂತಾಗುವುದು" ಅಂದರು.

ಕೀರ್ತಿಶೇಷ ಪಂಡಿತ ತಾರಾನಾಥರು

ಅಕ್ಟೋಬರ ೩೧ನೆಯ ತಾರೀಕಿನ ದಿನ ಮುಂಜಾನೆ, ಕರ್ನಾಟಕದ ಪ್ರಸಿದ್ಧ ವ್ಯಕ್ತಿಗಳೊಬ್ಬರಾದ ಪಂಡಿತ ತಾರಾನಾಥರು ತಮ್ಮ ೫೨ನೇ ವಯಸ್ಸಿನಲ್ಲಿ ದಿವಂಗತರಾದರೆಂಬ ಚಿಂತಾಜನಕ ಸುದ್ದಿ ಬಂದಿದೆ. ದಿವಂಗತರು ದಕ್ಷಿಣ ಕನ್ನಡದವರು. ಇಲ್ಲಿ ಹುಟ್ಟಿ, ಇಲ್ಲಿನ ಮಿಶ್ಯನ್ ಹೈಸ್ಕೂಲ್ ಮತ್ತು ಗವರ್ನಮೆಂಟ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ತೀರಿಸಿ ಮುಂದೆ ಹೈದರಾಬಾದ್ ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಯಾಗಿ ಹೋದರು. ರಾಷ್ಟ್ರದ ರಾಜಕೀಯ ವಾತಾವರಣದಲ್ಲಿ ಅವರು ಶಾಲೆ ಬಿಟ್ಟು, ಕಡೆಗೆ ಹೈದರಾಬಾದನ್ನೇ ಬಿಡಬೇಕಾಗಿ ಬಂತು. ಮುಂದೆ ಅವರು ತುಂಗಭದ್ರೆಯಲ್ಲಿ ಪ್ರೇಮಾಯತನವೆಂಬ ವೈದ್ಯಸಂಸ್ಥೆಯನ್ನು ಸ್ಥಾಪಿಸಿ ಆಯುರ್ವೇದ, ಯುನಾನಿ ಮೊದಲಾದ ಶಾಸ್ತ್ರೀಯ ಶಿಕ್ಷಣ ಕೊಡುತ್ತಾ, ರೋಗಿಗಳ ಶುಶ್ರೂಷೆ ಮಾಡುತ್ತಾ ತಮ್ಮ ಜೀವನದ ಅಮೂಲ್ಯ ದಿನಗಳನ್ನು ದೀನಸೇವೆಯಲ್ಲಿ ಕಳೆದರು. ತಾರಾನಾಥರು ೧೮ ಭಾಷೆಗಳಲ್ಲಿ ಪಂಡಿತರು, ಉಜ್ವಲ ವಾಗ್ಮಿಗಳು, ಅದ್ವಿತೀಯ ಲೇಖಕರು, ಸ್ವತಂತ್ರ ವಿಚಾರಧಾರೆಯ ಪ್ರಗತಿಪರ ಮತಿಗಳು ರಾಜಕೀಯ ಸಾಮಾಜಿಕ ಕ್ಷೇತ್ರಗಳಂತೆ ಸಾಹಿತ್ಯದಲ್ಲಿಯೂ ಅವರು ಶ್ರೇಷ್ಠ ಸ್ಥಾನಗಳಿಸಿದ್ದಾರೆ. ಬೇರೆ ಬೇರೆ ಭಾಷೆಗಳಲ್ಲಿ ಅನೇಕ ಗ್ರಂಥ ಬರೆದಿದ್ದಾರೆ. ಪತ್ರಿಕಾ ವ್ಯವಸಾಯದಲ್ಲಿಯೂ ನುರಿತವರಿದ್ದರು. ಅವರಿಗೆ ಭರತಖಂಡದಲ್ಲಿ ಮಾತ್ರವಲ್ಲ, ಯೂರೋಪು ಮೊದಲಾದ ವಿದೇಶಗಳಲ್ಲಿಯೂ ಅನೇಕ ಮಂದಿ ಮಿತ್ರವರ್ಗವಿದ್ದಾರೆ. ಇಂಥಾ ಮಹನೀಯರ ನಿಧನದಿಂದ ಕನ್ನಡನಾಡಿಗೆ ಅಪಾರವಾದ ನಷ್ಟವುಂಟಾಯಿತು. ತಾರಾನಾಥರು ಇತ್ತೀಚೆಗೆ ರಕ್ತದ ಒತ್ತಡದಿಂದ ನರಳುತ್ತಿದ್ದು, ಅದಕ್ಕಾಗಿ ಬೆಂಗಳೂರಲ್ಲಿಯೇ ಬಂದು ನೆಲಸಿದ್ದರು. ಅವರೀ ಅಕಾಲ ಮರಣದಿಂದ ಅವರ ಅನೇಕ ಬಂಧುಗಳಿಗೆ ಮಿತ್ರರಿಗೆ ಶಿಷ್ಯರಿಗೆ ಹಾಗೂ ಅವರ ಅಭಿಮಾನಿಗಳಿಗಾದ ದುಃಖದಲ್ಲಿ ನಾವೂ ಸಹಭಾಗಿಗಳಾಗಿದ್ದೇವೆ. ಪರಮಾತ್ಮನು ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಸಂದರ್ಶನ

ಮದ್ರಾಸು ಪ್ರಾಂತಿಕ ಸಹಕಾರಿ ಬೇಂಕಿನ ಅಧ್ಯಕ್ಷ ಶ್ರೀ. ಟಿ. ಎ. ರಾಮಲಿಂಗಂ ಚೆಟ್ಟಿಯಾರ್, ಎಂ. ಎಲ್. ಸಿ. ಯವರು ತಾ. ೨೭ರಲ್ಲಿ ಮಂಗಳೂರಿಗೆ ಬಂದು ತಾ. ೨೭ರಲ್ಲಿ ಭೂಮಿ ಅಡವಿನ ಬೇಂಕುಗಳ ಡಿಪ್ಯೂಟೇಶನನ್ನು ಕಂಡು ತಾ. ೨೮ರಲ್ಲಿ ದ. ಕ. ಕೃಷಿಕರ ಭಂಡಸಾಲೆ ಸಂಘದ ಮಂಗಳೂರು ಶಾಖೆ ತಾ. ೨೯ರಲ್ಲು ದ. ಕ. ಸೆ. ಬೇಂಕಿನ ಸಂದರ್ಶನ, ಮೊದಲಾದ ಕಾರ್ಯಗಳನ್ನು ನಮ್ಮ ಜಿಲ್ಲಾ ಬೇಂಕಿನ ಅಧ್ಯಕ್ಷ ಶ್ರೀ. ಎಂ. ಶಿವರಾಯರೊಡನೆ ನೆರವೇರಿಸಿದರು.

ದಮ್ಮು ಗುಣಪಡಲೇ ಬೇಕು ಎಂದು ಡಾಕ್ಟರರು ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ.

"ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ

ಬೊಂಬೈ ಏಜಂಟ—ಮೆಸರ್ಸ್ ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited

ESTD: 1931

HEAD OFFICE	*BRANCHES*
Mangalore.	Moodabidri & Padubidri.

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3¼%.
24 months or over 4%.
Current: ½% from July to December.
1% from January to June.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ತೊಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ :—

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷ್ಟೈ, ರಥಬೀದಿ. (3) ಧಿ ಕರ್ನಾಟಿಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಫಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠಗಲ್ಲಿ ಹುಬ್ಬಳ್ಳಿ.
2—36 ಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇಧಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ

ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 13—11—1942 [ಸಂಚಿಕೆ 45]

'ಭಾರತೀಯ ಸೈನಿಕರಿಗೂ ಸ್ವರಾಜ್ಯವೇ ಬೇಕು!'

ಮಹಮ್ಮದಾಲಿಯವರು ಹೇಳಿದ ಸತ್ಯಕಥೆ—

'ಆಫ್‌ಕಾ ದರ್ಶನ್ ಸರ್‌ಕಾರ್'

'ಹಿಂದುಸ್ಥಾನದ ಸೈನಿಕವರ್ಗವು, ಸ್ವಾತಂತ್ರ್ಯದ ವಿಷಯವಾಗಿ ಅಷ್ಟೊಂದು ಆತುರವಿಲ್ಲವೆಂಬರ್ಥದ ಮಾತುಗಳನ್ನು ಭಾರತೀಯ ಸ್ವರಾಜ್ಯದ ವಿರೋಧಿಗಳು ಇಂಗ್ಲಂಡಿನಲ್ಲಿ ಆಗಾಗ್ಗೆ ಆಡಿ ತೋರಿಸುತ್ತಾರೆ. ಇಂಥ ವಿರೋಧಿಗಳಿಗೆ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮೊನ್ನೆ ಚೊಕ್ಕವಾದ ಉತ್ತರ ಕೊಟ್ಟಿರುವರಲ್ಲದೆ ನಮ್ಮ ದೇಶದ ಸೈನಿಕ ವರ್ಗದ ಸಾರ್ವತ್ರಿಕ ಅಭಿಪ್ರಾಯವನ್ನು ಒರೆಗೆ ಹಚ್ಚಿ ನೋಡುವಂತೆಯೂ ಆಹ್ವಾನ ಕೊಟ್ಟಿದ್ದಾರೆ. ಇದೇ ವಿಷಯವಾಗಿ ಹನ್ನೆರಡು ವರ್ಷಗಳ ಹಿಂದೆ ದುಂಡುಮೇಜಿನ ಪರಿಷತ್ತಿನಲ್ಲಿ ಭಾಷಣ ಮಾಡುವಾಗ ಸ್ವೈ. ವಾ ಮೌಲಾನಾ ಮಹಮ್ಮದ ಅಲಿಯವರು ತಮ್ಮ ಅನುಭವದೊಳಗಿಂದಲೇ ಒಂದು ಸಣ್ಣ ಕಥೆಯನ್ನು ವಿವರಿಸಿ ವಿರೋಧಕರ ಬಾಯಿ ಮುಚ್ಚಿಸಿದ್ದರು ಈಗ ಮತ್ತೆ ಅದೇ ಮಾತಿನ ಬಗ್ಗೆ ವಿವಾದವೆದ್ದಿರುವದರಿಂದ ಮಹಮ್ಮದ ಆಲಿಯವರ ಶಬ್ದಗಳಲ್ಲಿಯೇ ಆ ಕತೆಯನ್ನಿಲ್ಲಿ ಎತ್ತಿ ಕೊಟ್ಟಿದ್ದೇನೆ' ಎಂಬುದಾಗಿ ಶ್ರೀ ಚಿಕ್ಕೋಡಿ ಅನಂತ ರಾಯರು ಸಂಯುಕ್ತ ಕರ್ನಾಟಕದಲ್ಲಿ ಒಂದು ಸ್ವಾರಸ್ಯದ ಐತಿಹಾಸಿಕ ಘಟನೆಯನ್ನೆತ್ತಿ ಕೊಟ್ಟಿದ್ದಾರೆ ಮಹಮ್ಮದಾಲಿಯವರು ಹೇಳಿದ ಕಥೆ ಇಂತಿದೆ—

'ಮಹಾತ್ಮರ ದರ್ಶನಕ್ಕೆ'

"ಹತ್ತು ವರ್ಷಗಳ ಹಿಂದೆ ಡ್ಯೂಕ್ ಆಫ್ ಕೇನಾಟ್‌ರವರು ಹಿಂದುಸ್ಥಾನದ ಹೊಸ ಕಾನೂನು ಮಂಡಲಗಳ ಉದ್ಘಾಟನ ಸಮಾರಂಭವನ್ನು ನೆರವೇರಿಸಲು ಬಂದಿದ್ದರು ಅವರು ಕಲಕತ್ತೆಯಲ್ಲಿರುವಾಗ ನನ್ನ ಮಿತ್ರರಾದ ಚಿತ್ತರಂಜನದಾಸರು ಮಹಾತ್ಮಾ ಗಾಂಧಿಯವರನ್ನೂ ಮೋತಿಲಾಲರನ್ನೂ ನನ್ನನ್ನೂ ಕರೆಯ ಕಳುಹಿಸಿದರು ಮಹಾತ್ಮರೂ ನಾನೂ ದಾಸರ ಅತಿಥಿಗಳಾಗಿ ಅವರ ಮನೆಯಲ್ಲಿಯೇ ಉಳಕೊಂಡಿದ್ದೆವು ನಾನು ಮಹಾತ್ಮಾ ಗಾಂಧಿಯವರ ಪಾರುಪತ್ಯಗಾರನ ಕೆಲಸವನ್ನು ವಹಿಸಿಕೊಂಡಿದ್ದೆನು ಮಹಾತ್ಮರ ದರ್ಶನಕ್ಕಾಗಿ ಮತ್ತು ಅವರ ಪಾದಸ್ಪರ್ಶನಕ್ಕಾಗಿ ಅನೇಕಾನೇಕ ಜನರು ಬಿಡುವಿಲ್ಲದೆ ಬರುತ್ತಲಿದ್ದರು ಇವರೆಲ್ಲರಿಗೂ ಮಹಾತ್ಮರ ದರ್ಶನವಾಗಬೇಕು, ಮಹಾತ್ಮರಿಗೆ ಅದರಿಂದ ಆಯಾಸವಾಗದಂತೆಯೂ ನೋಡಿಕೊಳ್ಳಬೇಕು. ಈ ದ್ವಿವಿಧ ಹೇಚಾಟದಲ್ಲಿ ನಾನು ಸಿಕ್ಕಿಕೊಂಡಿದ್ದೆನು 'ಮಹಾತ್ಮರಿಗೆ ಪರಮಾತ್ಮನು ನೂರು ಪಾದಗಳನ್ನಾದರೂ ಕೊಡಬಾರದಾಗಿತ್ತೆ?' ಹೀಗೂ ಒಮ್ಮೊಮ್ಮೆ ಅಂದುಕೊಳ್ಳುತ್ತಿದ್ದೆನು ಒಂದು ವೇಳೆ ದೇವರು ಇವರಿಗೆ ಅಷ್ಟು ಪಾದಗಳನ್ನು ದಯಪಾಲಿಸಿದ್ದರೂ ಸಾವಿರಾರು ಜನರು ಪಾದ ಸ್ಪರ್ಶಕ್ಕೆ ಗುಂಪುಗುಂಪಾಗಿ ಬಂದು, ಅವೂ ಸಾಲದೆಹೋಗುವ ಪರಿಸ್ಥಿತಿಯಿದ್ದಿತು!!!

ದರ್ಶನಕ್ಕಾಗಿ ಬಂದ ಜನರಲ್ಲಿ ಹತ್ತು ಹನ್ನೆರಡು ಮಂದಿ 'ಫೇಟಾವಾಲ'ರು ಕಾಣಿಸಿದರು. ಅವರು 'ಯುನಿಫಾರ್ಮ್'ನಲ್ಲಿ ಇದ್ದಿಲ್ಲ, ಆದರೂ ಎಲ್ಲರ ಪೋಷಾಕು ಒಂದೇ ವಿಧವಾಗಿದ್ದಿತು. ಇವರು ಪಂಜಾಬಿನಿಂದ ಬಂದ ಸಿ. ಆಯ್. ಡಿ ಗಳಿರಬೇಕೆಂದು ನನ್ನ ಕಲ್ಪನೆಯಾಯಿತು. ನನ್ನ ನೆರೆಯಲ್ಲಿಯೇ ಇರುತ್ತಿದ್ದ ಒಬ್ಬ ಗುಪ್ತಚಾರನ ವರದಿಯ ಮೇಲಿಂದ ಬ್ರಿಟಿಶ್ ಸರಕಾರದವರು 1915ರಲ್ಲಿ ನನ್ನನ್ನು ಸೆರೆಯಲ್ಲಿಟ್ಟಂದಿನಿಂದ ನನ್ನ ಮನಸ್ಸಿನಲ್ಲಿ ಒಂದು ವಿಶಿಷ್ಟ ಭಾವನೆಯು ಬೇರೂರಿಬಿಟ್ಟಿದೆ ಪರಮಾತ್ಮನೂ ಬ್ರಿಟಿಶ ಸರಕಾರದ ಗುಪ್ತಚಾರನೂ ಇಲ್ಲದಿರುವಂಥಾ ಸ್ಥಳವೇ ಎಲ್ಲಿಯೂ ಇಲ್ಲವೆಂಬುದೇ ಆ ಭಾವನೆ! ಅಂದಿನಿಂದ ನಾನು ಏನು ಮಾಡುವೆನೋ ಅದನ್ನೆಲ್ಲ ಎರಡು ಸರ್ವಸಾಕ್ಷಿ ವಸ್ತುಗಳ (ಸರ್ವಶಕ್ತನಾದ ಪರಮಾತ್ಮನೊಬ್ಬ, ಬ್ರಿಟಿಷ ಸರಕಾರದ ಚಾರನು ಇನ್ನೊಬ್ಬ) ಸಾನಿಧ್ಯದಲ್ಲಿಯೇ ಮಾಡುವೆನೆಂದು ತಿಳಿದುಕೊಂಡಿದ್ದೇನೆ ನಾನು ಸಿ. ಆಯ್‌ಡಿಗಳೆಂದು ಕಲ್ಪನೆ ಮಾಡಿಕೊಂಡಿದ್ದ ಆ ಜನರ ಬಳಿಗೆ ಹೋಗಿ "ನಿಮಗೆ ಉಪಯೋಗವಾಗುವಂಥ ಯಾವ ಕಾರ್ಯವನ್ನು ನಾನು ಮಾಡಬೇಕೆಂದು ನಿಮ್ಮ ಇಚ್ಛೆಯಿದೆ? ನಾನು ಮಾಡುತ್ತಿರುವ ರಾಜದ್ರೋಹದ ಕಾರ್ಯವು ನಿಮಗೆ ಎಷ್ಟೋ ಉಪಯೋಗವಾಗುತ್ತದೆ ಮತ್ತೇನಾದರೂ ಬೇಕಾಗಿದ್ದರೆ ಹೇಳಿರಿ' ಎಂದೆ 'ನಾವು ಸಿ ಅಯ್ ಡಿ ಗಳಲ್ಲ, ಸೈನಿಕರಿದ್ದೇವೆ,' ಎಂಬದಾಗಿ ಅವರು ಉತ್ತರ ಕೊಟ್ಟರು 'ಹಾಗಾದರೆ ರಾಜದ್ರೋಹದ ಕಾರಖಾನೆಯಂತಿರುವ ಈ ಮನೆಗೆ ನೀವೇಕೆ ಬಂದಿರಿ?'' ಎಂದೆ ತಾವು ಮಹಾತ್ಮಾ ಗಾಂಧಿಯವರ ದರ್ಶನಕ್ಕೆ ಬಂದವರೆಂದು ಅವರು ಹೇಳಿದರು ಡ್ಯೂಕ್ ದೊರೆಗಳ ಬೆಂಗಾವಲಿನ ಸಲುವಾಗಿ ಪುನೆಯಿಂದ ಕಲಕತ್ತೆಗೆ ತರಲ್ಪಟ್ಟಿರುವ ದಳಕ್ಕೆ ತಾವು ಸೇರಿರುವದಾಗಿಯೂ ತಿಳಿಸಿದರು.

'ನಮಗೂ ಸ್ವರಾಜ್ಯ ಬೇಕು'

ಸ್ವರಾಜ್ಯದ ವಿಷಯ ನಿಮಗೆ ಆಸ್ಥೆಯಿರುವದೆ? ಎಂದು ಮಹಾತ್ಮರು ಆ ಸೈನಿಕರನ್ನು ಕೇಳಿದರು. "ಹೌದು, ಇದೆ' ಎಂದು ಸೈನಿಕರು ಉತ್ತರವಿತ್ತರು. 'ನೀವು ಸೈನಿಕರು; ಬಂಗಾಲ ಪ್ರಾಂತದ ಜನರಮೇಲೆ ಸರಕಾರದ ವಿಶ್ವಾಸವಿಲ್ಲವಾದ್ದರಿಂದ ಡ್ಯೂಕಸಾಹೇಬರ ಸಂರಕ್ಷಣೆಯ ಸಲುವಾಗಿ ಪುನೆಯಿಂದ ಇಲ್ಲಿಯವರೆಗೆ ನಿಮ್ಮನ್ನು ತಂದಿದ್ದಾರೆ; ಇಂಥಾ ನಿಮಗೂ ಸ್ವರಾಜ್ಯದ ಅಭಿಲಾಷೆಯಿರುವುದೆ?" ಎಂದರು ಗಾಂಧಿಜಿ ಅದಕ್ಕೆ ಸೈನಿಕರು—ಮೊನ್ನೆ ಕವಾಯತಿನ ಹೊತ್ತಿನಲ್ಲಿ ನಮ್ಮ ಕರ್ನಲ್ಲನು ತಮ್ಮ ವಿನಯವಾಗಿ ನಗುನಗುತ ' ಕೆಲವು ಮಾತುಗಳನ್ನಾಡಿದನು 'ಆ ಗಾಂಧಿ ಎಂಬ ಬಣಜಿಗನು, ಹಿಂದುಸ್ಥಾನಕ್ಕೆ ಸ್ವರಾಜ್ಯಬೇಕೆಂದು ಹೇಳುತ್ತಿದ್ದಾನೆ, ನಿಮಗೂ ಸ್ವರಾಜ್ಯ ಬೇಕೆಂದೆನಿಸುವದೆ?' ಎಂದು ನಗುತ್ತಲೇ ಕೇಳಿದನು. 'ನಮಗೇನು ಸ್ವರಾಜ್ಯ ಬೇಡ ದೇಹಜ್ಞ' ಎಂದು ನಾವು ಉತ್ತರ ಕೊಡುವೆವೆಂದು ಕರ್ನಲ್ಲನು ತಿಳಿದುಕೊಂಡಿದ್ದನು ಆದರೆ ನಾವೆಲ್ಲ ರೆಜಿಮೆಂಟಿನವರು ಒಟ್ಟಾಗಿ 'ಅಹುದು ನಮಗಾದರೂ ಸ್ವರಾಜ್ಯ ಬೇಕೇಬೇಕು' ಎಂದು ಉತ್ತರಕೊಟ್ಟೆವು ' ಎಂದರು ಸೈನಿಕರ ಉತ್ತರವನ್ನು ಕೇಳಿ ಬೆಪ್ಪಾದ ಕರ್ನಲ್ಲರು 'ನಿಮಗೆ ಸ್ವರಾಜ್ಯ ಏತಕ್ಕೆ ಬೇಕು?' ಎಂದು ಕೇಳಿದನು ಇದಕ್ಕೆ ಆ ಸೈನಿಕರು ಹೇಳಿದ ಉತ್ತರವು ಮನನೀಯವಿದೆ' ಅವರು ಹೇಳಿದರು—

"ಮಹಾಯುದ್ಧದ ಕಾಲಕ್ಕೆ ನಾವು ಯುರೋಪಿನ ರಣಭೂಮಿಗೆ ಹೋಗಿದ್ದೆವು ಅಲ್ಲಿ ನೋಡಿದ ಸಂಗತಿಗಳಿಂದ ನಮ್ಮ ಮನಸ್ಸಿನ ಮೇಲೆ ಬಹಳ ಪರಿಣಾಮವಾಯಿತು ಬೆಲ್ಜಿಯಮ್ ದೇಶದ ಸೈನಿಕರು ಕಾಳಗದಲ್ಲಿ ಸೋತು ಓಡಿ ಬರುವಾಗಲೂ ಯಾರಾದರೂ ಅವರನ್ನು ಕರೆದು 'ನೀವು ಯಾವ ದೇಶದವರು?' ಎಂದು ಕೇಳಿದರೆ ಅವರು ಅಭಿಮಾನದಿಂದ ಎದೆ ಉಬ್ಬಿಸಿ 'ನಾವು ಬೆಲ್ಜಿಯಮ್‌ದವರಿದ್ದೇವೆ' ಎಂದು ದರ್ಪದಿಂದ ಉತ್ತರ ಕೊಡುತ್ತಿದ್ದರು. ಫ್ರೆಂಚರೂ ಒಮ್ಮೊಮ್ಮೆ ಓಡಿ ಬರುತ್ತಿದ್ದರು. ಆಗ ಅವರನ್ನು ಕೇಳಿದರೆ ಅವರಾದರೂ 'ನಾವು ಫ್ರಾನ್ಸ್ ದೇಶದವರು' ಎಂದು ಅಭಿಮಾನದಿಂದ ಹೇಳುತ್ತಿದ್ದರು ಬ್ರಿಟಿಶ ಸೈನಿಕರಾದರೂ ಇದೇ ರೀತಿ. ಆದರೆ ನಮ್ಮ ಪರಿಸ್ಥಿತಿಯೇ ಬೇರೆ ೧೯೧೪ರ ಆಕ್ಟೋಬರಿನಲ್ಲಿ ನಾವು ಅತ್ಯಂತ ಸಾಹಸದಿಂದ ಹೋರಾಡಿ ಫ್ರಾನ್ಸಿನ ಕಡಲ ದಂಡೆಯನ್ನು ಗಂಡಾಂತರದಿಂದ ಉಳಿಸಿಕೊಂಡಿದ್ದೆವು. ಇಂಥ ನಮ್ಮ ವಿಜಯೋತ್ಸಾಹದ ಹೊತ್ತಿನಲ್ಲಿ ಕೂಡ ಯಾರಾದರೂ ನಮ್ಮನ್ನು 'ನೀವು ಯಾವ ದೇಶದವರೆಂ'ದು ಕೇಳಿದರೆ ಅಭಿಮಾನದಿಂದ ಎದೆ ಉಬ್ಬಿಸಿ ಉತ್ತರ ಕೊಡುವ ಧೈರ್ಯ ನಮಗಿದ್ದಿಲ್ಲ ಜೋಲು ಮೋರೆ ಹಾಕಿಕೊಂಡು 'ನಾವು ಬ್ರಿಟಿಶ್ ಪ್ರಜೆಗಳು ಬ್ರಿಟಿಷ ಸರಕಾರದ ಸೈನ್ಯಕ್ಕೆ ಸೇರಿದವರು" ಎಂದು ಹೇಳುವ ಪ್ರಸಂಗ ಬರುತ್ತಿದ್ದಿತು ಬೇರೆಯವರಂತೆ ನಾವಾದರೂ ಮುಖ ಮೇಲಕ್ಕೆತ್ತಿ ಅಭಿಮಾನದಿಂದ 'ನಾವು ಹಿಂದುಸ್ಥಾನದ ಸೈನಿಕರು' ಎಂದು ಹೇಳುವಂತಹ ಪರಿಸ್ಥಿತಿ ಇರಬಾರದೆ ಎಂದೆನ್ನಿಸುತ್ತಿದ್ದಿತು.''

ಪರಮಾತ್ಮನ ಸಾಕ್ಷಿಯಾಗಿ ಹೇಳುತ್ತೇನೆ, ಹಿಂದೀ ಸೈನಿಕರೆಲ್ಲರ ಮನೋಭಾವನೆಯೂ ಇದೇ ರೀತಿಯಾಗಿದೆ ಬೇಕಾದರೆ ಆ ಸೈನಿಕವರ್ಗದ ಮತಪರೀಕ್ಷೆ ಮಾಡಿ ನೋಡಿರಿ ಮತ ಪರೀಕ್ಷೆಯ ಕಾಲಕ್ಕೆ ಪರಮಾತ್ಮನಂತೂ ಇದ್ದೇ ಇರುತ್ತಾನೆ ಸರ್ವಸಾಕ್ಷಿ ಬ್ರಿಟಿಶ್ ಸಿ ಆಯ್ ಡಿ. ಗಳೂ ಇದ್ದಾರೆ' ಆದರೆ ನಮ್ಮೊಳಗಿನ ಕೆಲವರನ್ನೂ ಆ ಹೊತ್ತಿಗೆ ಕರೆಯಿರಿ, ಎಂದರೆ ಸೈನಿಕರ ಭಾವನೆಗಳು ನಿಕ್ಕನರಿಗಿಂತ ನಮಗೇ ಚನ್ನಾಗಿ ಗೊತ್ತಿರುವವೆಂಬದನ್ನು ನಿಮಗೆ ಮನಗಾಣಿಸಿ ಕೊಡುತ್ತೇನೆ '

ಮೌಲಾನಾ ಮಹಮ್ಮದ ಆಲಿಯವರು ತಾ 19-11-1930ನೆಯ ದಿನ ಮ್ಯಾಕ್ಡೊನಾಲ್ಡರೇ ಮೊದಲಾದ ಬ್ರಿಟಿಶ್ ಪ್ರಮುಖರ ಸಮ್ಮುಖದಲ್ಲಿಯೇ ಈ ಕತೆಯನ್ನು ಹೇಳಿದರು ಹನ್ನೆರಡು ವರ್ಷಗಳಾದ ಬಳಿಕ ಬ್ರಿಟಿಶ್ ಮುತ್ಸದ್ದಿಗಳು ಇಂದು ಮತ್ತೆ ಅಂದಿನಂಥ ಮಾತುಗಳನ್ನೇ ಆಡಬೇಕೆ?

—ಭಾರತೀಯ ಸೈನಿಕರು—

'ಆಫ್‌ಕಾ ದರ್ಶನ್ ಸರ್‌ಕಾರ್'

'ತ್ರಿವೇಣೀ ಸಂಗಮದ ಪ್ರಯಾಗದಲ್ಲಿ ಸ್ನಾನಮಾಡಿಕೊಂಡು ಅವರ ಬಂಧಮುಕ್ತತ ಒಂದು ವಾರಕ್ಕೆ ಹಿಂದೆ, ಪಂಡಿತ ಜವಾಹರಲಾಲ ನೆಹರು, ತಮ್ಮ ಬಾವಂದಿರಾದ ಶ್ರೀ ಆರ್. ಎಸ್ ಪಂಡಿತರೊಂದಿಗೆ, ಕುದುರೆ ಬಂಡಿಯಲ್ಲಿ ಕುಳಿತುಕೊಂಡು ಆನಂದ ಭವನದ ಕಡೆ ಬರುತ್ತಿದ್ದರು ಗಾಡಿಯ ಎರಡು ಕಡೆಯಲ್ಲಿಯೂ ಮಕ್ಕಳು ಆಡಿಹಾಡಿ ಕುಣಿಯುತ್ತಿದ್ದವು ಗಾಡಿ ನಿಲ್ಲಿಸಿ ನೆಹರು ಅವರಿಗೆಲ್ಲಾ ಹೂಗಳನ್ನು ಹಂಚಿದರು. ಗಾಡಿ ಹೊರಟಿತು ಮಕ್ಕಳು ಹಿಗ್ಗಿ ಜಯಘೋಷಮಾಡಿದರು ಗಾಡಿ ಇನ್ನೂ ಒಂದು 'ಫರ್ಲಾಂಗು' ಸಾಗಿರಲಿಲ್ಲ ಜನರ ಗುಂಪೊಂದು ಬಂದು ಗಾಡಿಯ ಸುತ್ತು ನೆರೆಯಿತು! ಎಲ್ಲಾ ಬಡಜನರು ಯುದ್ಧಕಾಲದ ಸಂಕಷ್ಟಗಳನ್ನು ನೆಹರುಗಳಲ್ಲಿ ದೂರಿಕೊಂಡರು ನೆಹರು ಮೌನವಾಗಿ ಆಲಿಸಿ, ದುಃಖಭಾರವಾದ ಹೃದಯದಿಂದ, 'ನಾನೀಗ ಏನು ಮಾಡಲೂ ಸಾಧ್ಯವಿಲ್ಲ ಬೇಗನೇ ಹೊಸ ವ್ಯವಸ್ಥೆ ಆಗಲಿದೆ' ಎಂದರು ಮತ್ತೆ ಗಾಡಿ ಹೊರಟಿತು. ಜನರು ಆಗಲೂ ಜಯಘೋಷಮಾಡಿದರು

ಹಿಂಬದಿಯಿಂದ ಲಾರಿಯೊಂದು ಹಾದು ಹೋಯಿತು. ಲಾರಿ ತುಂಬ ಭಾರತೀಯ ಸೈನಿಕರಿದ್ದರು. ನೆಹರುಗಳನ್ನು ಕಂಡವರೇ ನಮಸ್ಕರಿಸಿದರು ಲಾರಿ ಹಿಮ್ಮೆಲೇ ನಿಂತಿತು. ಸೈನಿಕರು ಲಾರಿಯಿಂದ ದಡದಡನೆ ಇಳಿದು ಬಂದು,

(೨ನೇ ಪುಟಕ್ಕೆ ಮುಂದುವರಿದಿದೆ)

(೧ನೇ ಪುಟದಿಂದ ಮುಂದುವರಿದುದು)

ಭಾರತೀಯ ಸೈನಿಕರಿಗೂ ಸ್ವರಾಜ್ಯವೇ ಬೇಕು

ನೆಹರುಗಳ ಪಾದಗಳಿಗೆರಗಿದರು. ನೆಹರು ಸೈನಿಕರ ತಲೆಗಳ ಮೇಲೆ ಕೈಗಳನ್ನಿರಿಸಿ ಮೃದುವಾಣಿಯಲ್ಲಿ 'ಕ್ಯಾಹೈ ಭೈಯ್ಯಾ' (ಏನು ಸೋದರರೆ?) ಎಂದು ವಿಚಾರಿಸಿದರು. 'ಕುಛ್ ನಹೀ ಸರ್ ಕಾರ್, ಆಪ್ ಕಾ ದರ್ಶನ್' (ಏನಿಲ್ಲ ಪ್ರಭೋ! ತಮ್ಮ ದರ್ಶನಬೇಕಿತ್ತು!) ಎಂದು ಒಮ್ಮೆಲೇ ಉತ್ತರಬಂತು! ಒಂದು ನಿಮಿಷ ಎಲ್ಲರೂ ಮೌನವಾಗಿದ್ದರು! ಮತ್ತೆ ಚಟಕಾ ಹೊರಟಿತು! ಭಾರತೀಯ ಸೈನಿಕರಿಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ, ಸ್ವರಾಜ್ಯ ಪಡೆಯುವುದರಲ್ಲಿ ಆದರ ಎಷ್ಟಿದೆ ಎಂಬುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇಕೆ?

ದೇಹದ ಹೊರಭಾಗವನ್ನು ನಿರ್ಮಲಗೊಳಿಸಿರಿ.

ನೀವು ನಿಮ್ಮ ದೇಹವನ್ನು ಶುಚಿಗೊಳಿಸಲು ಯೋಚಿಸುವಾಗಲೆಲ್ಲಾ ದೇಹದೊಳಭಾಗವು ನಿರ್ಮಲವಾಗಿರಬೇಕೆಂಬುದನ್ನು ನೆನಪಿನಲ್ಲಿ ಇಡುವುದು ಆರೋಗ್ಯಕ್ಕೆ ಅತ್ಯಾವಶ್ಯ. ಇದನ್ನು ಗಮನಿಸಿದರೆ ಅಜೀರ್ಣ ಮಲಬದ್ಧತೆ ಮೊದಲಾದ ಬಾಧೆಗಳಿಂದ ನಿವೃತ್ತಿ ಹೊಂದುವಿರಿ.

ದೇಹದೊಳಭಾಗವನ್ನು ನಿರ್ಮಲವಾಗಿರಿಸುವ ದಾರಿ ಸುಲಭ. ರುಚಿಕರವಾದ ಆಂಡ್ರೂಸ್ ಲಿವರ್ ಸಾಲ್ಟನ್ನು ಪ್ರತಿದಿನ ತೆಕ್ಕೊಳ್ಳಿರಿ. ಅದು ಬಾಯಿ ನಾಲಗೆಗಳನ್ನು ಶುಚಿಗೊಳಿಸಿ, ಮಲಕೋಶವನ್ನು ಸರಿಯಾಗಿರಿಸುವುದು. ಮಾತ್ರವಲ್ಲದೆ ಆಂಡ್ರೂಸ್ ಲಿವರ್ ಸಾಲ್ಟು ತಂಪು ಕೊಟ್ಟು, ರಕ್ತವನ್ನು ಶುದ್ಧಗೊಳಿಸಿ, ಆರೋಗ್ಯ ಉಲ್ಲಾಸ ಚೈತನ್ಯಗಳನ್ನು ಇಡೀ ಶರೀರಕ್ಕೆ ಉಂಟುಮಾಡುವುದು.



ದೇಹದೊಳಭಾಗದ ನೈರ್ಮಲ್ಯಕ್ಕೆ
ಪ್ರತಿನಿತ್ಯವೂ ತೆಕ್ಕೊಳ್ಳಿರಿ

ಆರೋಗ್ಯಕರ ಪಾನೀಯ—ಶಕ್ತಿವರ್ಧಕ ಔಷಧ

ANDREWS
LIVER SALT

ಶುಚಿಗೊಳಿಸುವುದು—ತಂಪೀಯುವುದು—ಉಲ್ಲಾಸ ಕೊಡುವುದು—ಶಕ್ತಿ ಹೆಚ್ಚಿಸುವುದು.



ಎಲ್ಲಾ ವಿಧದ ಆಕರ್ಷಣೆಯಿಂದ ಇದು ಹೆಸರು ಹೊಂದಿದೆ.

ನೀವೆಲ್ಲಿಗೆ ಹೋಗಿರಿ, ಅಲ್ಲೆಲ್ಲಾ ಅನೇಕ ಜನರು ವೆಸ್ಟ್ ಎಂಡ್ ವಾಚುಗಳನ್ನೇ ಕಟ್ಟಿಕೊಳ್ಳುವುದನ್ನು ನೀವು ನೋಡುವಿರಿ. ಇದು ಆಕಸ್ಮಿಕವಲ್ಲ; ವೆಸ್ಟ್ ಎಂಡ್ ವಾಚುಗಳು ಉತ್ತಮವಿರುವುದರಿಂದ, ಎಂಥಾ ಹವೆಯಲ್ಲಿಯೂ ಯೋಗ್ಯ ಸಮಯ ಕೊಡುವುದರಿಂದ, ಬಾಳಿಕೆ ಬರುವುದರಿಂದ ಆಕರ್ಷಣೆಯುಳ್ಳದ್ದಾಗಿರುವುದರಿಂದ, ಆಗಿದೆ; ಈ ಗುಣಗಳು ಪ್ರತೀ ವೆಸ್ಟ್ ಎಂಡ್ ವಾಚಿನಲ್ಲಿಯೂ ಇವೆ; ಅವುಗಳ ಕ್ರಯ ಎಷ್ಟೇ ಇದ್ದರೂ ಚಿಂತೆಯಿಲ್ಲ. ಆದ್ದರಿಂದ ನೀವು ಯಾವುದೇ ವೆಸ್ಟ್ ಎಂಡ್ 'ವಾಚನ್ನು' ಪೂರ್ಣ ಭರವಸೆಯಿಂದ ಕೊಂಡುಕೊಳ್ಳಬಹುದು.

ಬೇಕಾದಲ್ಲಿ ಸಚಿತ್ರ ಕಟಲಾಗು ಕಳುಹಿಸಲ್ಪಡುವುದು

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ — ಕಲ್ಕತ್ತ

WEST END WATCH Co
BOMBAY CALCUTTA

The Canara Banking Corporation Ltd.

(Incorporated in British India-Liability of members is limited)

Estd. 1906.

Our Rates of Interest on Deposits Effective From 15--10--1942

Current accounts	($\frac{1}{2}$% from July to Dec. (1% from Jan. to June.
Savings Bank	$1\frac{1}{2}$% p. a.
Short-term deposits	1% p. a.
Fixed deposits 3 months	1% p. a.
6 ,,	$1\frac{1}{2}$% p. a.
9 ,,	2% p. a.
12 ,,	$2\frac{1}{4}$% p. a.
24 ,,	3% p. a.

Advances against approved securities made at favourable rates of interest and banking business of every description under taken

ಉತ್ತರ ಆಫ್ರಿಕದಲ್ಲಿ ಅಮೆರಿಕನ್ ಸೈನ್ಯಗಳು ಧಾಳಿಯಿಟ್ಟ ಮೇಲೆ, ಇಜಿಪ್ಟಿನಲ್ಲಿ ಬ್ರಿಟಿಷರ ಅಷ್ಟಮದಳವು ಪ್ರಚಂಡ ವಿಜಯ ಪಡೆಯುತ್ತಿದ್ದ ಕಾರಣವೂ, ಈಗ ರಶ್ಯನ್ ರಣರಂಗದ ವಾರ್ತೆ ಬರುವುದು ಬಹಳ ಕಡಿಮೆಯಾಗಿದೆ. ಅಂತೂ ರಶ್ಯನ್ ರಣರಂಗದಿಂದ ಶುಭದಾಯಕ ಸುದ್ದಿಯೇ ಬಂದಿದೆ. ಜರ್ಮನರು ಶಕ್ತಿಮೀರಿ ಸಾಹಸ ಮಾಡಿದ್ದರೂ ರಶ್ಯನರನ್ನು ಪರಾಜಯಗೊಳಿಸುವುದು ಅವರಿಂದ ಆಗಲಿಲ್ಲ. ಸ್ಟಾಲಿನ್‌ಗ್ರಾಡ್ ರಣರಂಗದಲ್ಲಿ ನಾಲ್ಕು ಲಕ್ಷ ಜರ್ಮನರು ಹೋರಾಡುತ್ತಿದ್ದಾರೆ. ವಿಮಾನಗಳು ಆಕಾಶ ತುಂಬಾ ಹಾರಾಡುತ್ತಿವೆ. ಒಂದುವರೆ ಎರಡು ಸಾವಿರ ಫಿರಂಗಿಗಳು ಆ ನಗರದ ಮೇಲೆ ಸಿಡಿಗುಂಡುಗಳ ಮಳೆ ಸುರಿಸುತ್ತಿವೆ. ಆದರೂ ರಶ್ಯನರಿದನ್ನು ಎದೆಗೊಟ್ಟು ಎದುರಿಸುತ್ತಿರುವರು. ರಶ್ಯದೀ ಸಂಗ್ರಾಮದಲ್ಲಿ ಎರಡುವರೆ ಲಕ್ಷ ಜರ್ಮನರು ಮಡಿದರೆಂದು ತಿಳಿಯುತ್ತದೆ. ಕೊಕಸಸ್ ಪ್ರದೇಶದಲ್ಲಿ ಒಂದು ಲಕ್ಷ ಜರ್ಮನ್ ಸೇನೆಯು ನಾಲ್ಚೀಕ ಪಟ್ಟಣವನ್ನು ಕೈವಶಪಡಿಸಿಕೊಂಡದ್ದು ಮಾತ್ರವಲ್ಲದೆ ಬಾಕು ಎಣ್ಣೆ ಗನಿಯ ಪ್ರದೇಶವನ್ನೂ ವಶಪಡಿಸಿಕೊಂಡಿದೆ. ಗ್ರೋಜ್ನಿ ಎಣ್ಣೆ ಕಣಿ ಕಡೆಗೂ ಜರ್ಮನರು ಮುನ್ನುಗ್ಗುತ್ತಿದ್ದಾರೆ. ಇಷ್ಟರಲ್ಲಿ ಇನ್ನೊಂದು ಸಂತೋಷದ ಸುದ್ದಿ ಬಂದಿರುವುದು. ರಶ್ಯದಲ್ಲಿ ಉತ್ತರ ಸಾಗರದಿಂದ ಕಾಕಸಸಿನವರೆಗೆ ಈಗ ಹಿಮಬೀಳತೊಡಗಿದೆಯೆಂದೂ ಉತ್ತರದಲ್ಲಿ ನದಿಗಳು ಹೆಪ್ಪುಗಟ್ಟಿರುವುದರಿಂದ ಅವುಗಳ ಮೇಲೆ ಕಾಲಿನಿಂದ ನಡೆದು ಹೋಗಬಹುದೆಂದೂ, ವೋಲ್ಗಾ ನದಿಯ ತೀರದಲ್ಲಿ ಹಿಮಗಾಳಿ ಬೀಸತೊಡಗಿದೆಯೆಂದೂ ಕೇಳಿಬರುತ್ತದೆ. ಹೀಗಾದರೆ ಜರ್ಮನರಿನ್ನು ರಶ್ಯದಲ್ಲಿ ಸೋತಂತೆಯೇ!

ಪುನಃ ಸ್ಟಾಲಿನ್ ಕರೆ!

ರಶ್ಯನ್ ಕ್ರಾಂತಿಯ ಇಪ್ಪತ್ತೈದನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಒಂದು ಉಜ್ವಲ ಭಾಷಣ ಮಾಡುತ್ತಾ ಸ್ಟಾಲಿನ್, ರಶ್ಯನರ ಧೈರ್ಯ ಶೌರ್ಯಗಳನ್ನು ಕೊಂಡಾಡುವುದರೊಡನೆ, ಯೂರೋಪಿನಲ್ಲಿ ದ್ವಿತೀಯ ರಣರಂಗವನ್ನು ತೆರೆಯಲು, ಮಿತ್ರರೊಡನೆ ಪುನಃ ವಿನ್ನವಿಸಿಕೊಂಡಿದ್ದಾನೆ. 'ದ್ವಿತೀಯ ರಣರಂಗವನ್ನು ಇಂದಿಲ್ಲ ನಾಳೆ ಮಿತ್ರರು ತೆರೆಯಲೇ ಬೇಕು. ಏಕೆಂದರೆ ಅದು ನಮಗಿಂತ ಮಿತ್ರರಿಗೇ ಅವಶ್ಯಕವಿಸಿದೆ. ಫ್ರಾನ್ಸ್ ಪತನದ ನಂತರ ಮಿತ್ರರು ದ್ವಿತೀಯ ರಣರಂಗವನ್ನು ತೆರೆಯದಿರುವುದೇ ಅವರಿಗೆ ಗಂಡಾಂತರವನ್ನುಂಟುಮಾಡಿತು. ದ್ವಿತೀಯ ರಣರಂಗ ತೆರೆಯದ್ದರಿಂದಲೇ ಜರ್ಮನರು ಇಷ್ಟೊಂದು ಏರುತ್ತಾ ಹೋದರು. ತಮ್ಮ ಸಾಧನ ಸಂಪತ್ತುಗಳನ್ನು ಸಂಘಟಿಸಿಕೊಂಡರು, ಒಂದೇ ಯುದ್ಧರಂಗದಲ್ಲಿ ಎಲ್ಲಾ ಶಕ್ತಿಯನ್ನೂ ಕೇಂದ್ರೀಕರಿಸಿ ಹೋರಾಡಿದರು. ದ್ವಿತೀಯ ರಂಗ ತೆರೆದಿದ್ದರೆ ಅವರ ಶಕ್ತಿ ಕುಂದುತಿತ್ತು. ಜರ್ಮನರ ವಿನಾಶವಾಗುತ್ತಿತ್ತು' ಎಂದು ಸ್ಟಾಲಿನ್ ಪುನಃ ಎಚ್ಚರಿಸಿದ್ದಾನೆ. ಈ ಎಚ್ಚರಿಕೆಯಲ್ಲಿ 'ಮಿತ್ರರೇ ನೀವು ನಮ್ಮನ್ನು ಬದುಕಿಸಬೇಕೆಂದು ಮಾತ್ರ ದ್ವಿತೀಯ ರಣರಂಗ ತೆರೆಯಬೇಡಿ, ದ್ವಿತೀಯ ರಂಗ ತೆರೆಯದಿದ್ದರೆ ನೀವಾದರೂ ಬದುಕುವುದು ಸಾಧ್ಯವಿದೆಯೇ ನೋಡಿಕೊಳ್ಳಿ' ಎಂಬ ಅರ್ಥದ ಗಂಭೀರ ಪ್ರಶ್ನೆ ಎದ್ದು ತೋರುತ್ತದೆ! ಹೀಗೆ ಸ್ಟಾಲಿನ್ ಎಚ್ಚರಿಸಿದ ವಿಷಯವಾಗಿ ಮಿತ್ರರೇನೂ ಕಳವಳಗೊಳ್ಳಲಿಕ್ಕಿಲ್ಲ. ಏಕೆಂದರೆ ಅವರಿಗಾದರೂ ಈ ವಿಷಯ ತಿಳಿದೇ ಇದೆ. ಇದುವರೆಗೆ ಏನೂ ಉಪಾಯವಿಲ್ಲದ್ದರಿಂದ ದ್ವಿತೀಯ ರಂಗ ತೆರೆಯುವುದು ಸಾಧ್ಯವಾಗದೆ ಇರಬೇಕು. ಬ್ರಿಟಿಷ್ ಮಂತ್ರಿಮಂಡಳದ ಲಾರ್ಡ್ ಪ್ರಿವಿಸೀಲರಾದ ಸರ್ ಸ್ಟಾಫರ್ಡ್ ಕ್ರಿಪ್ಸರಾದರೂ ಮೊನ್ನೆ ಮೊನ್ನೆ ದ್ವಿತೀಯ ರಣರಂಗವನ್ನು ನಾವು ಬೇಗನೇ ತೆರೆಯುತ್ತೇವೆ ಎಂದು ತಿಳಿಸಿದ್ದಾರೆ. ಇಜಿಪ್ಟಿನಲ್ಲಿ ಅಷ್ಟಮದಲದವರು ಪಡೆದ ವಿಜಯದ ಕಡೆಗೆ ಬೆರಳಿಟ್ಟು ತೋರಿಸಿದ್ದಾರೆ. ರಶ್ಯನರ ಮೇಲೆ ಬೀಳುವ ಪೆಟ್ಟಿನಲ್ಲಿ ನಾವೂ ಭಾಗ ತೆಗೆದುಕೊಳ್ಳಬೇಕೆಂದಿದ್ದಾರೆ. ದ್ವಿತೀಯ ರಣರಂಗವೆಂದು, ಅವಸರಗೈದು, ವಿಚಾರಮಾಡದೆ ದುಡುಕುವುದಿಲ್ಲವೆಂದೂ, ಶಸ್ತ್ರಾಸ್ತ್ರ ಸನ್ನದ್ಧರಾದ ನಾವು ಆ ವಿಷಯ ಅವಶ್ಯ ಗಮನಿಸುವೆವೆಂದೂ ಭರವಸೆಯಿತ್ತಿದ್ದಾರೆ! ಸ್ಟಾಲಿನ್, ಕ್ರಿಪ್ಸರ ಈ ಭರವಸೆಯಿಂದೇನೂ ಸಮಾಧಾನಪಟ್ಟುಕೊಳ್ಳಲಿಲ್ಲವೆಂದು, ಆ ಮೇಲಿನ ಅವರ ಭಾಷಣದಿಂದ ವ್ಯಕ್ತವಾಗುತ್ತದೆ.

ಫ್ರೆಂಚ ಆಫ್ರಿಕದಲ್ಲಿ ಅಮೆರಿಕ

ಫ್ರೆಂಚ್ ಉತ್ತರ ಆಫ್ರಿಕದಲ್ಲಿ ಅಮೆರಿಕವು ಆಕ್ರಮಣಕಾರ್ಯ ಕೈಕೊಂಡಿದೆ. ಕರಾವಳಿಯಲ್ಲಿರುವ ಕೆಲವು ಆಯಕಟ್ಟಿನ ಸ್ಥಳಗಳು ಇಷ್ಟರಲ್ಲೇ ಜರ್ಮನ್ ವಶವಾಗಿವೆ. ಅಲ್ಜೀರ್ ಪಟ್ಟಣವೂ ಪೂರ್ಣ ಅವರ ಸ್ವಾಧೀನವಾಗಿದೆ. ಒರಾಣ ನೌಕಾ ಕೇಂದ್ರದ ಒಳಿಯಲ್ಲಿಯೂ ಅಮೆರಿಕನರಿಳಿದಿರುವರು. ಮೊರೊಕ್ಕೋದಲ್ಲಿರುವ ಕ್ಲಸಬ್ಲಾಂಕ ಪಟ್ಟಣವೂ ವಿಪತ್ತಿಗೀಡಾಗಿರುವುದು. ಕ್ಲಸಬ್ಲಾಂಕದ ಮೇಲೆ ಅಮೆರಿಕನ್ ಸೈನಿಕರು ವಿಮಾನದಿಂದಲೂ, ಸಮುದ್ರದಿಂದಲೂ ಗುಂಡು ಹಾರಿಸಿದರು. ಕೆಲವು ಅಮೆರಿಕನ್ ಸೈನಿಕರು ಟುನಿಸಿನ ಬಳಿ ಬಂದಿಳಿದರು. ಅಕ್ಷರಾಷ್ಟ್ರಗಳ ಶಕ್ತಿ ಕುಂದಿಸುವ ಸಲುವಾಗಿ ಟುನಿಸನ್ನೂ ಕೈವಶಮಾಡಿಕೊಳ್ಳಬೇಕೆಂದು ಅವರ ಸಾಹಸವಿದೆ. ಹೀಗೆ ಪಶ್ಚಿಮ ಆಫ್ರಿಕ ಉತ್ತರ ಆಫ್ರಿಕಗಳ ಮೇಲೆ ಒಂದೇ ಸವನೆ ಧಾಳಿಯಾರಂಭವಾಗಿದೆ. ಇದರಿಂದ ಫ್ರೆಂಚ್ ತಾಟಸ್ಥ್ಯ ಮುರಿದ ಹಾಗೆನೋ ಆಯಿತು. ಅಕ್ಷ ರಾಷ್ಟ್ರಗಳೆನ್ನು ಆಕ್ರಮಿಸಿದರೆ, ತಾವು ಎದುರಿಸಬಲ್ಲೆವೆಂದು ಫ್ರೆಂಚರೇನೋ ಹೇಳಿದ್ದರೂ ಅದನ್ನು ನಂಬಿ ಮಿತ್ರರು ತಟಸ್ಥರಾಗಿರುವುದು ಸಮಯೋಚಿತವಿರಲಿಲ್ಲ. ವೈರಿ ಮುನ್ನಡೆವ ಮುನ್ನ ತಾವೇ ಅವನ ಮೇಲೇರಿ ಹೋಗಿ ಆತನ ದರ್ಪ ಮುರಿಯುವ ಕಾರ್ಯವನ್ನಿಂದು ಅಮೆರಿಕ ಕೈಕೊಂಡಿದೆ. ಉತ್ತರ ಆಫ್ರಿಕದ ಫ್ರೆಂಚರಿಗೆ, ಮಿತ್ರರು ಫ್ರಾನ್ಸ್ ಪ್ರದೇಶಗಳನ್ನಾಕ್ರಮಿಸುವ ಉದ್ದೇಶವಿಟ್ಟು ಈ ಧಾಳಿ ಪ್ರಾರಂಭಿಸಿಲ್ಲ. ಶತ್ರುವನ್ನಡಗಿಸಲು ಇಂಥಾ ಕಾರ್ಯಕ್ರಮ ಕೈಕೊಳ್ಳಬೇಕಾಯಿತೆಂದು ಅಮೆರಿಕನ್ ರೇಡಿಯೋಗಳು ಪತ್ರಿಕೆಗಳೂ ಭರವಸೆಯಿತ್ತಿವೆ. "ನಾವು ಧಾಳಿಗಾರರನ್ನು ನಿಮ್ಮ ಪ್ರದೇಶದಿಂದ ಹೊರಗೆ ಹಾಕಲು ಬಂದಿರುವೆವು, ಅಮೆರಿಕ ಫ್ರಾನ್ಸ್‌ಗಳ ಸ್ನೇಹವು ಇತಿಹಾಸ ಪ್ರಸಿದ್ಧವಿದೆ. ನಿಮ್ಮ ವೈರಿಗಳು ನಿಮ್ಮ ದೇಶವನ್ನು ಬಿಟ್ಟು ಓಡಿಹೋದ ಕೂಡಲೆ ನಾವೂ ನಿಮ್ಮೂರನ್ನು ಬಿಟ್ಟುಬಿಡುವೆವು. ಆದ್ದರಿಂದ ಫ್ರೆಂಚರು ನಮಗೀ ಕಾರ್ಯದಲ್ಲಿ ಅಡ್ಡಿಮಾಡಬಾರದು" ಎಂದು ರೂಸ್‌ವೆಲ್ಟರೂ ಒರೆದು ವಿನಂತಿಮಾಡಿಕೊಂಡಿರುವರು. ಸ್ಪೈನಿನ ಸರ್ವಾಧಿಕಾರಿ ಫ್ರಾಂಕೋನಿಗೂ ಒಂದು ವಿನಂತಿ ಕಳುಹಿಸುತ್ತಾ ರೂಸ್‌ವೆಲ್ಟರು, ಉತ್ತರ ಆಫ್ರಿಕದೀ ಹೋರಾಟವು ಸ್ಪೈನ್ ವಿರುದ್ಧವಾಗಿಲ್ಲವೆಂದು ತಿಳಿಸಿದ್ದಾರೆ. ಪೋರ್ಚುಗಲ್ ಅಧ್ಯಕ್ಷ ಕಾರ್ಮೋನೋರವರಿಗೂ ಈ ರೀತಿ ಬಿನ್ನಹ ಹೋಗಿದೆ. ಮೊರೋಕದಲ್ಲಿರುವ ಸಾಫಿ ಎಂಬ ಊರನ್ನು ಮಿತ್ರರು ವಶಪಡಿಸಿದರೆಂದು ಈಗ ತಿಳಿದಿದೆ. ಸಿಸಿಲಿ ಮತ್ತು ಸಾರ್ಡಿನೀಯಗಳಿಂದ ವೈರಿಗಳು ಮಾಡುತ್ತಿದ್ದ ಧಾಳಿಯನ್ನಿದಿರಿಸಲು ಮತ್ತು ಭೂಮಧ್ಯ ಸಮುದ್ರದಲ್ಲಿ ಸಂಚರಿಸುವ ಬ್ರಿಟಿಷ್ ಹಡಗಗಳನ್ನು ರಕ್ಷಿಸಲು, ಆಲ್ಜೀರಿಯ ಕೈವಶಪಡಿಸಿಕೊಂಡದ್ದು ಬಹಳ ಅನುಕೂಲವಾಯಿತು.

ಇಜಿಪ್ಟಿನಲ್ಲಿ ಜಯ

ಇಜಿಪ್ತ್ ರಣರಂಗದಲ್ಲಿ ಕೆಲಕಾಲ ಜರ್ಮನ್ ದಳಪತಿ ರೊಮೆಲನು ಹೂಡಿದ ಉಗ್ರ ಟೇಂಕ್ ಕಾಳಗವು ವೈರಿಗಳ ಎದೆಯನ್ನು ನಡುಗಿಸುವಂಥಾದ್ದಾಗಿತ್ತು. ಬಿರುಗಾಳಿಯಂತೆ ಭರದಿಂದ ಶತ್ರುಗಳ ಮೇಲೇರಿಬಂದ ರೊಮೆಲನು ಬ್ರಿಟಿಷ್ ಸೈನ್ಯವನ್ನು ಎಲ್ ಎಲಾಮೆನ್ ವರೆಗೆ ಹಿಂದೂಡಿ ಬಂದಿದ್ದನು. ಮತ್ತೆ ಕೆಲಕಾಲ ರಣಭೂಮಿ ಸ್ತಬ್ಧವಾಗಿತ್ತು. ಆ ಕಡೆ ಸ್ಟಾಲಿನ್‌ಗ್ರಾಡ್ ಪತನವಾಗಿ, ಜರ್ಮನ್ ಸೇನೆ ಇರಾಣದ ವರೆಗೆ ಬರುವ ತನಕ ರೊಮೆಲನು ಹಾಗೆಯೇ ಬ್ರಿಟಿಷ್ ಸೇನೆಯನ್ನು ತಡೆಗಟ್ಟಿ ನಿಂತಿರಬೇಕೆಂದು ಹಿಟ್ಲರ್ ಬಯಸಿದ್ದನೋ ಏನೋ! ಅಂತೂ ಎಲ್ ಎಲಾಮೆನ್ ಪ್ರದೇಶದಲ್ಲಿ ಉಭಯ ಸೈನ್ಯಗಳು ಸ್ತಬ್ಧವಾಗಿ ಯಾವ ಕಾರ್ಯವೂ ಇಲ್ಲದೆ ನಿಂತಿರುವಾಗ, ಸ್ಟಾಲಿನ್‌ಗ್ರಾಡ್ ಕಾಕಸಸ್‌ಗಳಲ್ಲಿ ತಮ್ಮ ಕಾರ್ಯಾಚರಣೆ ಸಫಲವಾಗದಿರುವುದನ್ನು ಕಂಡು, ಹಿಟ್ಲರನು, ಇಲ್ಲಿಂದ ಸ್ವಲ್ಪ ಸೈನ್ಯವನ್ನು ರಶ್ಯದ ಸಮರಭೂಮಿಗೆ ಕರೆದನು. ಇಂಥಾ ಸಂದರ್ಭದಲ್ಲಿ ಜರ್ಮನ್ ಬಲದ ದೌರ್ಬಲ್ಯವನ್ನು ನೋಡಿಕೊಂಡೇ ಈಗ ಬ್ರಿಟಿಷ್ ಅಷ್ಟಮದಳವು ಇಜಿಪ್ತಿನಲ್ಲಿ ಒಂದೇ ಸವನೆ ಮುನ್ನುಗ್ಗಿ ಶತ್ರುಗಳನ್ನು ಹಿಮ್ಮೆಟ್ಟಿಸುತ್ತಿದೆ! ಕಳೆದ ಒಂದೆರಡು ವಾರಗಳಲ್ಲಿ ಅಷ್ಟಮ ದಳದವರು ಪಡೆದ ವಿಜಯ ಗಣನೀಯವಿದೆ. ಇಷ್ಟರಲ್ಲಿಯೇ ತಮಗೆ ಸಂಪೂರ್ಣ ಗೆಲವು ಬಂದಿತೆಂದೇ ಬ್ರಿಟಿಷರು ಹೇಳುತ್ತಿದ್ದಾರೆ. ಜರ್ಮನ್ ಸೇನೆಯಲ್ಲಿ ಅಪಾರ ಹಾನಿಯುಂಟಾಗಿರುವುದೆಂದೂ ತಿಳಿಸಲಾಗಿದೆ. ಈಗ ಅಮೆರಿಕದ ಸೈನ್ಯಸಹಾಯವೂ ಇಜಿಪ್ತ್ ರಣಭೂಮಿಗೆ ಬಂದೊದಗಿರುವುದು. ಕರಾವಳಿ ಪ್ರದೇಶದಲ್ಲಿ, ದಕ್ಷಿಣಭಾಗದಲ್ಲಿ ಜರ್ಮನರನ್ನು ಬಹಳ ಹಿಂದಟ್ಟಲಾಗಿದೆ. ತಿರುಗಿ ಈಗ ಉಗ್ರ ಟೇಂಕು ಕಾಳಗವೂ ಆರಂಭವಾಗಿರುವುದು. ಇಷ್ಟಾದರೂ ಜರ್ಮನರ ಪಾಂಜರ್ ಸೇನೆ ಮತ್ತು ಇನ್‌ಫೆಂಟ್ರಿ ಪಶ್ಚಿಮದ ಕಡೆ ಮುನ್ನುಗ್ಗುತ್ತಿರುವುದೆಂದೂ, ಕ್ರೀಟ್, ಗ್ರೀಸ್‌ಗಳಿಂದ ಹೊಸ ಸೈನ್ಯಗಳು ಜರ್ಮನರಿಗೆ ಬರುತ್ತಿವೆಯೆಂದೂ ಸುದ್ದಿಯಿದೆ. ಇಜಿಪ್ತಿನಿಂದ ಹಿಂತಿರುಗಿದ ರೊಮೆಲನ ಸೈನ್ಯವು ಈಗ ಲಿಬಿಯವನ್ನು ಹೊಕ್ಕಿರುವುದು. ಉತ್ತರ ಆಫ್ರಿಕದಲ್ಲಿ ಒಂದು ಕಡೆಯಿಂದ ಬ್ರಿಟಿಷರ ಅಷ್ಟಮದಳವೂ, ಇನ್ನೊಂದು ಕಡೆ ಅಮೆರಿಕನರೂ ಮುನ್ನುಗ್ಗಿ ಬಂದಿರುವುದರಿಂದ ರೊಮೆಲನ ಒಮ್ಮೆ ಪರಿಭವಕ್ಕೊಳಗಾಗಿರುವನು. ಅಂತೂ ಸದ್ಯಕ್ಕೆ ಎಲ್ಲರ ದೃಷ್ಟಿಯೂ ಪುನಃ ಇಜಿಪ್ತ್ ಕಾಳಗದ ಕಡೆ ಸರಿದಿದೆ.

ಕೊಕೊಡಾ ಕೈವಶ

ನ್ಯೂಗಿನಿಯಲ್ಲಿ ಆಸ್ಟ್ರೇಲಿಯನ್ ಸೈನಿಕರು ಅರಣ್ಯ ಪ್ರದೇಶವನ್ನು ದಾಟಿ ಕೊಕೊಡಾ ದಾಣ್ಯವನ್ನು ಕೈವಶಪಡಿಸಿಕೊಂಡು ಜಪಾನರನ್ನು ಹಿಂದಕ್ಕಟ್ಟಿದರು. ಒಲಿವೀ ಹಳ್ಳಿಯ ಹತ್ತಿರ ಜಪಾನರು ಸಂರಕ್ಷಕ ಯುದ್ಧ ನಡೆಸುತ್ತಿದ್ದಾರೆ. ಉತ್ತರ ತೀರದಲ್ಲಿ ಬೂನಾ ಬಂದರದಲ್ಲಿ ಜಪಾನರ ಹತ್ತುಸಾವಿರ ಸೈನ್ಯವೂ ಹತ್ತು ಸಾವಿರ ಟನ್ ಯುದ್ಧ ಸಾಹಿತ್ಯವೂ ಬಂದಿಳಿದಿದೆಯೆಂದು ವಾರ್ತೆಯಿದೆ. ನೈಋತ್ಯ ಪೆಸಿಫಿಕ್‌ನ ಸೊಲೊಮನ್ ದ್ವೀಪ ಸಮೂಹದ ಗುಡಲ್‌ಕನಾಲದಲ್ಲಿ ಅಮೆರಿಕನ್ ನೌಕಾ ದಳದವರು ಜಪಾನರ ಮೇಲೆ ಹೊಸ ಸಂಗ್ರಾಮ ಹೂಡಿದ್ದಾರೆ. ಈ ಯುದ್ಧದಲ್ಲಿ ಇತ್ತಂಡಕ್ಕೂ ನೌಕಾ ಹಾನಿ ಬಹಳ ಆಯಿತು. ಇಲ್ಲಿ ಅಮೆರಿಕನ್ ನೈಸಾನಿಕರು ಹೋರಾಡುತ್ತಿದ್ದಾರೆ. ಹೆಂಡರ್‌ಸನ್ ವಿಮಾನ ಕ್ಷೇತ್ರದಲ್ಲಿ, ಕೊಕುಂಬಾನಾ ಎಂಬಲ್ಲಿ ಅಮೆರಿಕನ್ ನೈಸಾನಿಕರಿಗೂ ಜಪಾನ್ ನೈಸಾನಿಕರಿಗೂ ಸ್ಥಿರ ತಿಕ್ಕಾಟ ನಡೆದಿದೆ. ಪೆಸಿಫಿಕ್ ಗಾರ್ಡನ್‌ನಲ್ಲಿರುವ ವಿಶಿ ಸರಕಾರದ ಅಧಿಕಾರಿಗಳು ಯುದ್ಧ ನಿಲ್ಲಿಸುವ ಬಗ್ಗೆ ಹೇಳಿಕೊಂಡದ್ದರಿಂದ ಇಲ್ಲಿ ಯುದ್ಧ ನಿಂತಿರುವುದಾಗಿ ಪ್ರಸಿದ್ಧಿಪಡಿಸಲ್ಪಟ್ಟಿದೆ. ಕಳೆದ ವಾರದಿಂದ ಸೊಲೋಮನ್ ದ್ವೀಪಗಳಲ್ಲಿ ನಡೆಯುತ್ತಿದ್ದ ನೌಕಾ ಕಾಳಗವು ಒಮ್ಮೆಲೇ ನಿಂತುಬಿಟ್ಟಿದೆ. ಜಪಾನಿನ ನೌಕಾ ಬಲವು ಹಿಂದೆ ಸರಿದುದರಿಂದ ಈ ಪರಿಸ್ಥಿತಿಯುಂಟಾಯಿತೆಂದು ಅಮೆರಿಕದ ಕರ್ನಲ್ ನಾಕ್ಸರು ಹೇಳುತ್ತಾರೆ. ಆದರೆ ಜಪಾನ್ ಹಡಗಗಳು ಗುಡಲ್‌ಕನಾಲಿನಲ್ಲಿ ಸೈನ್ಯವನ್ನಿಳಿಸಿ ಹಿಂತೆರಳಿದವೆಂದು ಇನ್ನೊಂದು ಸುದ್ದಿ. ಅಂತೂ ಪೆಸಿಫಿಕ್ ಸಂಗ್ರಾಮದ ಒಂದು ಘಟ್ಟ ಈಗ ಕೊನೆಗಂಡಂತಾಗಿದೆ. ಮುಂದಿನ ಹೊಸ ಸಂಗ್ರಾಮ ನೀತಿಯಾವ ರೀತಿಯಲ್ಲಿ ಪ್ರಾರಂಭವಾಗಲಿರುವುದೋ ನೋಡಬೇಕಾಗಿದೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ-ಬಲವನ್ನೂ ಕೊಡುತ್ತದೆ

ಕಫ, ಎದೆಬೇನೆ ಮತ್ತು
ಇಂಫ್ಲುಯೆಂಜಾ ಗುಣ
ಪಡಿಸಿರಿ.

ನೀವು ಕಫ, ಶೀತ, ಎದೆನೋವು ಕಂಠನೋವು ಇವುಗಳಿಂದ ನರಳುತ್ತಿರುವಾಗ್ಯಾವರೆ ವಿಷಹಾರಿ ಶ್ವಾಸಯೋಗ್ಯ, ನಿಶ್ಚಿತ ಗುಣಕಾರಿ, ಪೆಪ್ಸು ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ ಅತ್ಯುತ್ತಮ ಔಷಧಿ ಸತ್ವವನ್ನು ಹೊರಗೆಡವುದರಿಂದ ಅದು ನೀವು ಶ್ವಾಸ ಎಳಕೊಳ್ಳುವಾಗ ಅದರೊಡನೆ ಸೇರಿಕೊಳ್ಳುವುದು. ಹಾಗಾಗಿ ಪೆಪ್ಸು ಹಾನಿಕಾರಕ ಕ್ರಿಮಿಗಳನ್ನು ಕಂಡು ಹುಡುಕಿ ನಾಶಮಾಡುತ್ತದೆ. ಪೆಪ್ಸು ನೋವನ್ನು ಶಮನಮಾಡಿ ವಿಷಕ್ರಿಮಿಗಳನ್ನು ನಿರ್ಬಂಧಿಸುವುದು. ಪೆಪ್ಸು ಬೇಗನೆ ಕಂಠವನ್ನು ಸರಿಗೊಳಿಸುತ್ತದೆ. ಹಾಗಾಗಿ ಪೆಪ್ಸು ನಿಮ್ಮ ಎದೆಗೆ ಮತ್ತು ಶ್ವಾಸಕೋಶಕ್ಕೆ ಯೋಗ್ಯ ರಕ್ಷಣೆಯನ್ನು ಕೊಡುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸ್ವದೇಶಾಭಿಮಾನಿ

ತಾರೀಕು 18—11—1942

ದ್ವಿತೀಯರಂಗ ೧೯೪೩ರಲ್ಲಿ?

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ತಾ. ೧೦ರಂದು, ಉತ್ತರ ಆಫ್ರಿಕದ ಆಕ್ರಮಣಕ್ಕೆ ಕಾರಣವೇನೆಂಬ ವಿಷಯ ಪತ್ರಿಕಾ ಪರಿಷತ್ತಿನಲ್ಲಿ ಚರ್ಚಿಸುತ್ತಾ, ಬರ್ಲಿನ್ ಬಂದರದ ಧಾಳಿಯಾದ ಎರಡು ವಾರಗಳ ಮೇಲೆ ಈ ಕುರಿತು ಚರ್ಚಿಲರೊಡನೆ ವಿಚಾರವಿನಿಮಯ ಮಾಡಲಾಗಿತ್ತೆಂದೂ, ಸದ್ಯದಲ್ಲಿ ದೊರಕುವ ಸೈನ್ಯ, ಸಮರ ಸಾಮಗ್ರಿ ಮತ್ತು ಇನ್ನಿತರ ಸಲಕರಣೆಗಳನ್ನು ಆಲೋಚಿಸಿಕೊಂಡು, ಬ್ರಿಟಿಷ್ ಕಾಲುವೆಯ ತೀರದಲ್ಲಿ ದೊಡ್ಡ ಪ್ರಮಾಣದ ಧಾಳಿಯಿಡುವ ಯೋಜನೆ ನಡೆಸಿದೆವೆಂದೂ, ಆದರೆ ೧೯೪೨ನೆಯ ಇಸವಿಯಲ್ಲಿ ಇದು ಸಾಧ್ಯವಿಲ್ಲವೆಂದು ನಮಗೆ ತೋರಿದ್ದರಿಂದ, ದ್ವಿತೀಯ ರಣರಂಗದ ಲಘು ಸ್ವರೂಪವಾಗಿ ಉತ್ತರ ಆಫ್ರಿಕಕ್ಕೆ ಆಕ್ರಮಣ ಮಾಡಿದೆವೆಂದೂ ತಿಳಿಸಿ, ಬೆಲ್ಜಿಯಂ ಮತ್ತು ಫ್ರೆಂಚ್ ಕರಾವಳಿಯಲ್ಲಿ ದ್ವಿತೀಯ ರಂಗವನ್ನು ಬರುವ ವರ್ಷದ ವರೆಗೆ ತೆರೆಯಲು ಸಾಧ್ಯವಿಲ್ಲವೆಂದೂ, ಈಗ ಜಗತ್ತಿನಲ್ಲಿ ದ್ವಿತೀಯ ರಂಗವನ್ನು ತೆರೆಯಬೇಕೆಂದು ಬೊಬ್ಬೆಯೆದ್ದಿರುವುದರಿಂದ, ಈ ಮೊದಲೇ ಆ ಕುರಿತು ಬ್ರಿಟನು ಅಮೆರಿಕಗಳೂ ಆಲೋಚಿಸಿದ್ದರಿಂದ, ಸದ್ಯಕ್ಕೆ ಅದು ಸಾಧ್ಯವಾಗದಿದ್ದರೂ ಇಂದಿನ ಉತ್ತರ ಆಫ್ರಿಕದ ಧಾಳಿ ಅದರ ಪೂರ್ವ ರಂಗವೆಂದೂ ಖಚಿತಪಡಿಸಿದರು. ಅಂತೂ ರೂಸ್‌ವೆಲ್ಟರ ಮಾತಿನ ಪ್ರಕಾರ ೧೯೪೩ರಲ್ಲಾದರೂ — ಎಂದರೆ ಇನ್ನೆರಡೇ ತಿಂಗಳು ದಾಟಬೇಕಾಗಿದೆ, ದ್ವಿತೀಯ ರಂಗವನ್ನು ಮಿತ್ರರು ತೆರೆದಾರೆಂದು ನಂಬಬಹುದೆ?

ಫ್ರಾನ್ಸಿಗೆ ಪುನಃ ಗಂಡಾಂತರ!

ಮಿತ್ರರು, ಆಫ್ರಿಕದಲ್ಲಿ ಜಯಘೋಷ ಮಾಡುತ್ತಿರುವಾಗ, ಹಿಟ್ಲರನಾದರೂ ಹೊಸ ಸಾಹಸಕ್ಕೆ ಮನಮಾಡಿ ಜಮ್ಮಲೇ ಅನಾಕ್ರಮಿತ ಫ್ರಾನ್ಸನ್ನೂ, ಕಾರ್ಸಿಕಾವನ್ನು ಆಕ್ರಮಿಸಲು ತನ್ನ ಸೈನಿಕರಿಗೆ ಅಪ್ಪಣೆಯಿತ್ತಿದ್ದಾನೆಂದು ಸುದ್ದಿ ಬಂದಿದೆ. ಫ್ರೆಂಚ ಪ್ರದೇಶವನ್ನು ಅಮೆರಿಕನರು ಮತ್ತು ಬ್ರಿಟಿಷರು ಇನ್ನಷ್ಟು ಆಕ್ರಮಿಸಿದಂತೆ ಈ ರೀತಿ ಪೂರ್ವ ಸಿದ್ಧತೆಯೆಂದು ತಿಳಿಯುತ್ತದೆ. ಅನಾಕ್ರಮಿತ ವಿಚಿ ಫ್ರಾನ್ಸಿನಲ್ಲಿ ಈಗಾಗಲೇ ಜರ್ಮನ್ ಮತ್ತು ಇಟಲಿಯನ್ ಸೈನ್ಯಗಳು ಬಂದಿಳಿದಿವೆ. ಜರ್ಮನರು ಈಶಾನ್ಯ ಕೊನೆಯಿಂದ ಹೊರಟು ಲಾನ್ಸ್, ಲಾಮುಗೋಸ ಮೊದಲಾದ ಪಟ್ಟಣಗಳನ್ನು ಆಕ್ರಮಿಸಿಕೊಂಡು, ಪಿರನೀಸ ಪರ್ವತದ ತಪ್ಪಲಲ್ಲಿರುವ ಬೆಯೊನೆಯ ವರೆಗೂ ಮತ್ತು ದಕ್ಷಿಣ ಫ್ರಾನ್ಸಿನಲ್ಲಿ ವಿಮೊಗೆಸದ ವರೆಗೂ ಬಂದಿರುವರು. ಅತ್ತ ಇಟಲಿಯನರು ಸೆವಾಯ ಪ್ರಾಂತವನ್ನು ಆಕ್ರಮಿಸಿಕೊಂಡಿರುವರು. ಜರ್ಮನರು ಈಗಾಗಲೇ ಮಾರ್ಸೆಲ್ಸ್ ಮತ್ತು ಟೂಲಾಸಗಳನ್ನು ಆಕ್ರಮಿಸಿಕೊಳ್ಳಬಹುದೆಂದು ವರದಿ. ಜರ್ಮನ್ ದಂಡು ವಿಚಿಗೆ ಬಂದು ವಿಚಿ ಸರಕಾರದ ಮುಖ್ಯ ಕಚೇರಿ ಇರುವ ಹೊಟೆಲ್ ಡಿಪಾರ್ಕವನ್ನೂ ಆಕ್ರಮಿಸಿಕೊಂಡಿದೆ. ಮಾರ್ಶಲ್ ಪಿಟೇನರು ಹಿಟ್ಲರನ ಈ ಆಕ್ರಮಣವನ್ನು ರೇಡಿಯೋ ಮೂಲಕ ಪ್ರತಿಭಟಿಸಿದ್ದಾರೆ. ಆದರೆ ವಿಚಿ ಮಂತ್ರಿಮಂಡಳದ ಸಭೆಗೆ ಪಿಟೇನರಾಗಲಿ ಲಾವಲರಾಗಲಿ ಬಂದಿಲ್ಲ. ಡಿಗಾಲಿಯವರು ಮಿತ್ರರಾಷ್ಟ್ರದವರೂ ಫ್ರೆಂಚರನ್ನು ಹುರಿದುಂಬಿಸುತ್ತಿದ್ದಾರೆ. ಹಿಟ್ಲರನಾದರೂ ಈ ಸಂದರ್ಭದಲ್ಲಿ ಫ್ರೆಂಚರನ್ನು ಸಮಾಧಾನಪಡಿಸುವಂಥಾ ಒಂದು ಸಂದೇಶವಿತ್ತಿದ್ದಾನೆ. ಅಂತೂ ವಿಚಿ ಫ್ರಾನ್ಸಿಗೆ ಈಗ ಪುನಃ ಗಂಡಾಂತರ ಬಂದಿದೆ!

ದಮ್ಮು ಗುಣಪಡಲೇ
ಬೇಕು
ಎಂದು ಡಾಕ್ಟರರು
ಅಸಾಧ್ಯ ಅನ್ನುವದಿಲ್ಲ

ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಫುಸ ಗಟ್ಟಿಯಾದ್ದಾಗಿ ದಮ್ಮು ಹೆಕ್ಕುಳಿಯದ ಗುಣವಾಗುವದು.

ರೂ. ೨-೮-೦, ರೂ. ೪-೨-೦, ರೂ. ೭-೭-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:— ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ — ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ, ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಸ್ವದೇಶ ಸಮಾಚಾರ

ಖಾದಿ ಪ್ರೇಮಿಗಳಲ್ಲಿ ವಿನ್ನಹ

ಅಖಿಲಭಾರತ ಚರಕಾ ಸಂಘದವರು ಕೆಳಗಿನ ಸಾರಾಂಶದೊಂದು ವಿನಂತಿ ಪ್ರಕಟಿಸಿದ್ದಾರೆ. 'ಅಖಿಲ ಭಾರತ ಚರಕಾ ಸಂಘದಲ್ಲಿ ೫೦ ಲಕ್ಷ ರೂಪಾಯಿ ಭಂಡವಾಳವಿದೆ. ಈ ಭಂಡವಾಳವೆಲ್ಲಾ ಸಂಘವು ಖಾದಿಕಾರ್ಯಕ್ಕಾಗಿ ವಿನಿಯೋಗಿಸಿದೆ. ಆದರೆ ಖಾದಿ ಪೂರೈಕೆಗೆ ಈ ಭಂಡವಾಳ ಸಾಕಾಗುವುದಿಲ್ಲ. ಗಾಂಧಿ ಜಯಂತಿಯ ಸಮಯ ೧೦ ಲಕ್ಷ ರೂಪಾಯಿ ಸೇರಿಸಿ ಖಾದಿ ಪ್ರಸಾರ ಕೈಕೊಳ್ಳಬೇಕೆಂದು ನಿಶ್ಚಯವಾಗಿತ್ತು. ಆದರೆ ಅಷ್ಟರಲ್ಲಿ ಮಹಾತ್ಮಾದಿ ಮುಖಂಡರನ್ನು ಸರಕಾರವು ಸೆರೆಹಿಡಿದು ಈ ಕಾರ್ಯವನ್ನು ತಡೆದು ಬಿಟ್ಟಿತು. ಇದಲ್ಲದೆ ಇನ್ನೊಂದು ವಿಪತ್ತೂ ಬಂದಿತು. ಕೆಲವು ಪ್ರಾಂತಿಕ ಸರಕಾರಗಳು ಅಲ್ಲಿನ ಖಾದೀ ಭಂಡಾರಗಳನ್ನು ಸ್ವಾಧೀನ ಮಾಡಿಕೊಂಡಿವೆ. ಕೆಲವೆಡೆ ಖಾದೀ ಭಂಡಾರಗಳು ಸುಡಲ್ಪಟ್ಟಿವೆ. ಇನ್ನು ಕೆಲವೆಡೆ ಲೂಟಿಗಳಾಗಿವೆ. ಹೀಗೆ ಸಾಧಾರಣ ೧೪ ಲಕ್ಷ ರೂಪಾಯಿಗಳು ಖಾದಿ ಸಂಘದ ಕೈ ತಪ್ಪಿದೆ. ದೇಶದಲ್ಲಿ ಗಡಿಬಿಡಿಯುಂಟಾಗಿರುವುದರಿಂದ, ಸಾರ್ವತ್ರಿಕ ಖಾದಿ ಒದಗಿಸುವುದು ಸದ್ಯಕ್ಕೆ ಸಾಧ್ಯವಿಲ್ಲವಾಗಿದೆ. ಆದ್ದರಿಂದ ಪ್ರತಿಯೊಬ್ಬ ಖಾದಿದಾರಿಯೂ ಪ್ರತಿಜ್ಞೆಯನ್ನು ಪೂರೈಸಬೇಕಾದರೆ ಗಾಂಧಿಜಿ ಮೊದಲಿಂದಲೇ ಹೇಳುತ್ತಾ ಬರುವಂತೆ ಪ್ರತಿಯೊಬ್ಬರೂ ಸ್ವತಃ ನೂಲು ತೆಗೆದು ಖಾದಿ ತಯಾರಿಸಿಕೊಳ್ಳಬೇಕು. ಸಂಘದವರಿಂದಲೇ ಎಲ್ಲಾ ಜನರಿಗೆ ಎಲ್ಲಾ ಕಡೆಗಳಿಗೂ ಬೇಕಾದಷ್ಟು ಖಾದಿ ಒದಗಿಸಿಕೊಡುವುದು ಸಾಧ್ಯವಾಗಲಾರದು."

ರಾಜಾಜಿ ಜಿನ್ನ ಮಾತುಕತೆ

ತಾ. ೮ರಿಂದ ಆರಂಭಿಸಿ ಮೂರುದಿನಗಳ ವರೆಗೆ ಹೊಸ ದಿಲ್ಲಿಯಲ್ಲಿ ರಾಜಾಜಿ ಜಿನ್ನರೊಳಗೆ ಮಾತುಕತೆ ನಡೆಯಿತು. ಎಲ್ಲರೂ ಅದರಿಂದೇನಾದರೂ ಫಲಿತಾಂಶವಾದಿತೇ ಎಂದು ನಿರೀಕ್ಷಿಸುತ್ತಿದ್ದರು. ಆದರೂ ಸದ್ಯಕ್ಕೇನೂ ಆಶಾದಾಯಕ ವಾರ್ತೆ ಇಲ್ಲ. ರಾಜಾಜಿಯವರ ಯೋಜನೆಯ ಕುರಿತು ಆಲೋಚಿಸಲು ವೈಸರಾಯರಿಂದ ಯಾವ ಆಮಂತ್ರಣ ಬರುವ ಕುರುಹೂ ಕಾಣುವುದಿಲ್ಲ; ಎಲ್ಲಾ ಪಕ್ಷದ ಮುಖಂಡರೂ ಒಂದುಗೂಡಿ, ಸರಕಾರದ ಮುಂದೆ ಒಂದು ಯೋಜನೆಯನ್ನಿಡುವಂತೆ ಮಾಡುವಲ್ಲಿ ಜಿನ್ನರೂ ಒಪ್ಪಬಹುದೆಂದು ಮಾಡಿದ ತರ್ಕವೂ ಇಂದು ನಿಷ್ಪ್ರಯೋಜಕವಾಗಿ ತೋರುತ್ತದೆ. ಯಾರು ಏನು ಮಾತನಾಡಿದರೂ ಜಿನ್ನರು ಹಠ ಬಿಡುವಂತಿಲ್ಲವೆಂದು ಕಾಣುತ್ತದೆ; ಜಿನ್ನಾ ರಾಜಾಜಿ ಮಾತುಕತೆಯಿಂದ ಒಂದು ಸಂಯುಕ್ತ ಯೋಜನೆ ಏರ್ಪಡುವುದೂ ಕಂಡುಬರುವುದಿಲ್ಲ. ರಾಜಾಜಿ ತನ್ನ ಯೋಜನೆ ವಿವರಿಸಿ, ಅದರಿಂದ ಪಾಕಿಸ್ತಾನ ಯೋಜನೆಗೆ ಅಡ್ಡಿಯಾಗುವುದಿಲ್ಲವೆಂದು ವಿವರಿಸಿದಾಗ್ಯೂ ತಿಳಿದಿದೆ. ಜಿನ್ನರು ಯಾವುದೇ ಆಶಾದಾಯಕ ಉತ್ತರ ಕೊಡದಿದ್ದರೂ ರಾಜಾಜಿ ಇನ್ನೂ ತನ್ನ ಪ್ರಯತ್ನ ಮುಂದುವರಿಸುವವರಾಗಿ ತಿಳಿದಿದೆ. ಸಹಕರಿಸಲು ಸಿದ್ಧರಾದ ಅಜದ್ ಮುಸ್ಲಿಮರನ್ನೂ ರಾಜಾಜಿ ಭೇಟಿಯಾದರು. ಇನ್ನಿತರ ಮುಖಂಡರೊಡನೆಯೂ ಅವರು ಮಾತುಕತೆ ನಡೆಸಲಿದ್ದಾರೆ. ಕೆಲವರು, ಗಾಂಧಿಜಿ ಮತ್ತು ಕಾಂಗ್ರೆಸ್ ಮುಖಂಡರನ್ನೂ ರಾಜಾಜಿ ಜೈಲಲ್ಲಿ ಕಾಣಬೇಕೆಂದೂ ಅದರಿಂದ ಲೀಗ್ ಕಾಂಗ್ರೆಸ್ ಒಪ್ಪಂದಕ್ಕೆ ಯತ್ನಿಸಬೇಕೆಂದೂ ಆಗ್ರಹಗೊಳಿಸಿರುವರಂತೆ! ಜಿನ್ನರು ಯಾವುದೇ ಆಶಾದಾಯಕ ಉತ್ತರ ಕೊಡದಿದ್ದರೂ, ಸಂಧಾನಕ್ಕೆ ಎಡೆಯಿಟ್ಟು ಮಾತುಕತೆ ಮುಂದುವರಿಸುವವರಾಗಿ ತಿಳಿಯುತ್ತದೆ. ಸಾಧ್ಯವಾದರೆ ಸರ್ವ ಪಕ್ಷಗಳ ಸಮ್ಮೇಳನವೊಂದೂ ಸೇರಬಹುದು. ಅಂತೂ ಭವಿಷ್ಯವು ಸರಕಾರದ ಧೋರಣೆಯನ್ನವಲಂಬಿಸಿದೆ. ಸರಕಾರವು ಅಧಿಕಾರವನ್ನು ಬಿಟ್ಟು ಕೊಡಬೇಕೆಂಬೀ ವಿಷಯವು ಸರ್ವಪಕ್ಷಗಳ ಒಮ್ಮತದ ಬೇಡಿಕೆಯೆಂಬುದಕ್ಕೆ ಸಂಶಯವಿಲ್ಲ.

ಅಲ್ಲಲ್ಲಿಯ ಸುದ್ದಿಗಳು

ಪೂನಾ, ಬೊಂಬಯಿ, ಬೀಹಾರ ಅಹಮ್ಮದಾಬಾದ್ ಮೊದಲಾದ ಕಡೆಗಳಲ್ಲಿ ದೇಶೀಯ ಬಾಂಬು ಸ್ಫೋಟ, ರೈಲ್ವೆ ಮಾರ್ಗಭಂಗ, ಬಂಧನ, ಲಾಠೀಚಾರ್ಜ ಇತ್ಯಾದಿ ಸುದ್ದಿಗಳು ಬರುತ್ತಾ ಇವೆ. ಉತ್ತರ ಹಿಂದುಸ್ತಾನದಲ್ಲಿ ವಿಶೇಷವಾಗಿ ಬೀಹಾರ ಪ್ರಾಂತದಲ್ಲಿ ಹೆಚ್ಚಿನ ಗೊಂದಲವಿದೆ. ದಕ್ಷಿಣ ಹಿಂದುಸ್ತಾನದಲ್ಲಾದರೂ ಲಾಠೀ ಚಾರ್ಜ ಝಡ್ತಿ, ಬಂಧನ, ಶಿಕ್ಷೆ ಮೊದಲಾದವು ನಡೆಯುತ್ತಲೇ ಇರುವುದು. ಅಲ್ಲಲ್ಲಿ ಸಾವಿರಾರು ರೂಪಾಯಿ ಸಾಮೂಹಿಕ ತೆರಿಗೆ ಹಾಕಲಾಗಿದೆ. ಕೆಲವು ಕಡೆಗಳಲ್ಲಿ ವಸೂಲು ಮಾಡಲಾಗುತ್ತದೆ. ದೇಶಸರ್ವತ್ರ ಚಿಲ್ಲರೆ ಅಭಾವದ ಸುದ್ದಿ ಇದೆ. ಆಹಾರ ಧಾನ್ಯಗಳಿಗೆ ಹಾಗೂ ದಿನ ನಿತ್ಯೋಪಯೋಗದ ವಸ್ತುಗಳಿಗೆ ಕ್ರಯ ಹೆಚ್ಚಾಗಿ ಬಡಜನರು ಕಂಗಾಲಾಗಿರುವರು. ಆಸಾಮ್ ಚಿಟಗಾಂಗ್ ಬಾಂಬು ಧಾಳಿಯ ನಂತರ ಜಪಾನ್ ಚಟುವಟಿಕೆಗಳೇನೂ ಕೇಳಿಬರುವದಿಲ್ಲ. ಬಂಗಾಳದಲ್ಲಿ ಭಯಂಕರ ಬಿರುಗಾಳಿಯ ಅನಾಹುತವಾಗಿ ಜನರು ಬರಲಾರದ ಬನ್ನಕ್ಕೆ ಗುರಿಯಾಗಿದ್ದಾರೆ. ಹಲವು ಸಂಸ್ಥೆಗಳು ಇವರ ಸಂಕಷ್ಟ ಪರಿಹಾರಕ್ಕಾಗಿ ದುಡಿಯುತ್ತಿವೆ.

NOTICE

In the Court of the District Munsif of Mangalore.

O. S. No. 375/1942.

Between:—

Isabella Mary Dias... *Plaintiff*

and—

B. S. Fernandes son of late Mr. F. J. C. Fernandes residing in Kodialbail Mangalore Town... ... ... *Defendant*.

To

The defendant

Please take notice that the abovenamed plaintiff has filed the above suit for recovery of Rs. 1435-4-8 and interest due under the D. P. note executed by you on 6-9-1939 and that the above suit stands posted to 18-11-1942 for your appearance. If you fail to appear on that date the suit will be decided in your absence, and you will be declared exparte.

(By order of Court)

Mangalore, 4-11-1942.

Sd) P. D. Souza, B.A., B.L.
Sd) L. C. Pais, B.A., B.L.
Vakils for plff.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮೆರವಣಿಗೆ, ಲಾಠಿಪೆಟ್ಟು, ಬಂಧನ ಶಿಕ್ಷೆಗಳು.

ತಾ. ೯ರಂದು ಕೆಲವು ಮಂದಿ ಕಾಂಗ್ರೆಸ್ ಸ್ವಯಂಸೇವಕರು ರಾಷ್ಟ್ರಧ್ವಜ ಹಿಡಿದುಕೊಂಡು, ಜಯಘೋಷ ಮಾಡುತ್ತಾ ನಗರದಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಪೋಲೀಸ್ ಸ್ಟೇಶನಿನ ಬಳಿ ಬರಲು, ಅಲ್ಲಿ ಮೆರವಣಿಗೆಗಾರರನ್ನು ಸಶಸ್ತ್ರ ಪೋಲೀಸರು ತಡೆದು, ಅವರಿಗೆ ಲಾಠಿಗಳಿಂದ ಬಡೆದರು. ಅದೇ ದಿನ ಸಂಜೆಗೆ ಇವರ ವಿಚಾರಣೆ ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಶ್ರೀ ಜೂಗಪ್ಪ ಇವರ ಮುಂದೆ ನಡೆದು ಪ್ರತಿಯೊಬ್ಬರಿಗೂ ಒಂದೊಂದು ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ. ಇವರೆಲ್ಲರಿಗೂ ಸಿ ಕ್ಲಾಸು ವಿಧಿಸಿ ಮರುದಿನ ಮೈಲಿಗೆ ಇತರ ಕೆಲವು ರಾಜಕೀಯ ಕೈದಿಗಳೊಡನೆ ಬಳ್ಳಾರಿಯ ಅಲಿಪುರಂ ಜೈಲಿಗೆ ಸಾಗಿಸಲಾಗಿದೆ. ಹೀಗೆ ಪೆಟ್ಟು ತಿಂದು ನೆಲಕ್ಕುರುಳಿ ಬಂಧಿತರಾಗಿ ಶಿಕ್ಷೆಗೊಳಗಾದವರು ಈ ಕೆಳಗಿನವರು:- ಶ್ರೀಗಳಾದ ೧. ನಾರಾಯಣ ಶೆಟ್ಟಿ, ೨. ಹಳ್ಳಿಪಾಡಿ ಆನಂದ ರೈ, ೩. ಮಹಾಬಲೇಶ್ವರ ಭಟ್ಟ, ೪. ವಿಟ್ಠಲ ಶೆಣೈ, ೫. ಉಪೇಂದ್ರ ನಾಯಕ್, ೬. ರೋಹಿದಾಸ್, ೭. ಹರಿಹರ, ೮. ಮಹಾಬಲ ಹೆಗ್ಡೆ, ೯. ತಿಮ್ಮಪ್ಪ ಮಲ್ಲಿ;

ಶ್ರೀಗಳಾದ ಎನ್. ಕೆ. ಬಂಗೇರ ಮತ್ತು ನಾರಾಯಣ ಶೆಟ್ಟಿ ಎಂಬಿಬ್ಬರು ಕಾಂಗ್ರೆಸ್ ಸ್ವಯಂಸೇವಕರು ತಾ. ೪ರಂದು ರಾಷ್ಟ್ರಧ್ವಜ ಹಿಡಿದುಕೊಂಡು, ಘೋಷಣೆಮಾಡುತ್ತಾ ಹೋಗುತ್ತಿರಲು, ರಥಬೀದಿಯ ವೆಂಕಟರಮಣ ದೇವಾಲಯದ ಮುಂದೆ ಪೋಲೀಸರು ಅವರನ್ನು ತಡೆದು ಬಂಧಿಸಿ ಕೊಂಡೊಯ್ದರು.

ಇತರ ಶಿಕ್ಷೆಗಳು

ತಾ. ೯ರಂದು ಮಂಗಳೂರು ಸಬ್ ಡಿ॥ ಮ್ಯಾಜಿಸ್ಟ್ರೇಟರಾದ ಶ್ರೀ. ಜೂಗಪ್ಪ ಇವರು ಕೆಳಗಿನ ರಾಜಕೀಯ ಆರೋಪಿಗಳ ಕುರಿತು ಈ ಕೆಳಗಿನಂತೆ ತಮ್ಮ ತೀರ್ಪುಗಳನ್ನು ಕೊಟ್ಟರು.

ಕಳೆದ ವಾರ ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಪಿಕೆಟ್ ಮಾಡಿದ ಶ್ರೀಗಳಾದ ಗಂಗಯ್ಯ ಸಾಲಿಯಾನ್ ಮತ್ತು ಮಾಧವ ನ್ಯಾಕ್ ಇವರಿಬ್ಬರಿಗೆ ತಲಾ ೧—೧ ವರ್ಷದ ಕಠಿಣ ಶಿಕ್ಷೆ; ಈಚೆಗೆ ಕೆನರಾ ಹೈಸ್ಕೂಲಿನಲ್ಲಿ ಪಿಕೆಟ್ ಮಾಡಿದ ಶ್ರೀಗಳಾದ ವಿಠ್ಠಲ ಶೆಟ್ಟಿ ಮತ್ತು ರಾಮಯ್ಯ ಇವರಿಬ್ಬರಿಗೆ ತಲಾ ೬-೬ ತಿಂಗಳ ಕಠಿನ ಶಿಕ್ಷೆ ವಿಧಿಸಲಾಗಿದೆ.

ರಥಬೀದಿಯಲ್ಲಿ ಒಬ್ಬ ಪೋಲೀಸ್ ಹೆಡ್‌ಕಾನ್ಸ್ಟೇಬಲನ ಮೇಲೆ ಕೈಮಾಡಿದರೆಂಬ ಆರೋಪದ ಮೊಕದ್ದಮೆಯಲ್ಲಿ ಶ್ರೀಗಳಾದ ಶ್ರೀನಿವಾಸ ಬಾಳಿಗ, ಅನಂತಭಟ್, ಸಂಕಪ್ಪಶೆಟ್ಟಿ, ನಾರಾಯಣ ಶೆಟ್ಟಿ, ಮತ್ತು ಐತಪ್ಪ ಶೆಟ್ಟಿ, ಈ ಐದು ಮಂದಿಗೆ ಪಿನಲ್ ಕೋಡ್ ಪ್ರಕರಣ, ಇಂಡಿಯಾ ರಕ್ಷಣೆಯ ರೂಲ್ಸ್ ಪ್ರಕಾರ ಒಟ್ಟಿಗೆ ತಲಾ ೧, ೧ ವರ್ಷದ ಕಠಿನ ಶಿಕ್ಷೆ ವಿಧಿಸಲಾಗಿದೆ.

ಈ ಕೇಸಿನ ಆರೋಪಿಗಳಲ್ಲಿ ಒಬ್ಬರಾದ ಶ್ರೀ ಮಂಜುನಾಥ ಪ್ರಭುಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲಿನ ಶಿಕ್ಷಿತರೆಲ್ಲರಿಗೂ 'ಸಿ' ಕ್ಲಾಸು ವಿಧಿಸಿ, ಅವರೆಲ್ಲರನ್ನೂ ತಾ. ೧೧ರಂದು ಮೈಲಿನಲ್ಲಿ ಬಳ್ಳಾರಿಯ ಅಲಿಪುರಂ ಜೈಲಿಗೆ ಸಾಗಿಸಲಾಗಿದೆ.

ಹಾಜರಾದರು

ಕಳೆದ ಸಪ್ಟಂಬರ ತಾ. ೬ರಲ್ಲಿ ಪಾಣೆಮಂಗಳೂರು ಶ್ರೀ ಮಾಧವ ಪಡಿಯಾರರೊಡನೆ ಭಾಷಣಕೊಟ್ಟ ಶ್ರೀ ಕೇಶವ ಕುಡ್ವರು ತಾ. ೮ರಂದು ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಈ ಕೋರ್ಟಿನ ಮುಂದೆ ಹಾಜರಾದವರನ್ನು ಇದೇ ತಾ. ೧೪ ವರೆಗೆ ರಿಮಾಂಡಿನಲ್ಲಿ ಇರಿಸಲಾಗಿದೆ. ಅಂದು ಅವರ ಜಾಮೀನಿನ ವಿಚಾರ ನಡೆಯಲಿದೆ.

ಬಂಧಿಸಿ ಬಿಟ್ಟರು

ಕಾಂಗ್ರೆಸ್ ಪಕ್ಷದ ಮಾಜಿ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರೂ ಕಮ್ಯುನಿಸ್ಟ್ ಪಕ್ಷದವರೂ ಆದ ಶ್ರೀ. ಎ. ಕೃಷ್ಣಶೆಟ್ಟಿಯವರನ್ನು, ಫೆಲಿಕ್ಸ್ ಬಜಾರಿನಲ್ಲಿ ಪೋಲೀಸರು ತಾ. ೬ರಂದು ಬೆಳಗ್ಗೆ ಬಂಧಿಸಿದರು. ಆ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು. ಈ ಮೊದಲು ಬಂಧಿಸಲ್ಪಟ್ಟ ಮಜೂರ ಮುಖಂಡರಾದ ಶ್ರೀ. ಕೆ. ಕೇಶವ ಕಾಮತರ ವಶ ಶ್ರೀ ಶೆಟ್ಟರ ಒಂದು ಪತ್ರವಿದ್ದು, ಆ ಪತ್ರದ ಆರೋಪದ ಮೇಲೆ ಶ್ರೀ ಶೆಟ್ಟರನ್ನು ಬಂಧಿಸಲಾಯಿತೆಂದೂ ಅವರ ಮೇಲೆ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಇನ್ನೂ ಅಪಾದನೆ ಇರುವುದಾಗಿಯೂ ತಿಳಿದುಬರುತ್ತದೆ.

ಶ್ರೀ. ಮಾಧವ ಪಡಿಯಾರರಿಗೆ ಶಿಕ್ಷೆ

ಪಾಣೆಮಂಗಳೂರಿನ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ. ಮಾಧವ ಪಡಿಯಾರರ ಮೊಕದ್ದಮೆ ತಾ. ೫ರಂದು ಸ್ಥಳೀಯ ಸ॥ ಡಿ॥ ಆಫೀಸರ್ ಶ್ರೀ. ಜೂಗಪ್ಪ ಇವರ ಮುಂದೆ ನಡೆದು, ಶ್ರೀ. ಪಡಿಯಾರರಿಗೆ ೬ ತಿಂಗಳ ಕಠಿನ ಶಿಕ್ಷೆ ವಿಧಿಸಲಾಯಿತು. ಅವರಿಗೆ ಸಿ ಕ್ಲಾಸ್ ಕೊಡಲಾಗಿದೆ. ಅವರನ್ನು ಅಲಿಪುರಂ ಜೈಲಿಗೆ ಕಳುಹಿಸಲಾಗುವುದು.

ನಿಷೇಧ-ರಾಜಿನಾಮೆ

ಹೊಸದುರ್ಗ ಸರ್ಕಲಿನ ದ. ಕ. ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ಹರಿಜನ ಮೆಂಬರರಾದ ಶ್ರೀ. ಕೆ. ಸುಂದರ ಇವರು, ಸರಕಾರದ ದಬ್ಬಾಳಿಕೆಯ ನೀತಿಯನ್ನು ನಿಷೇಧಿಸಿ ತಮ್ಮ ಜಿಲ್ಲಾ ಬೋರ್ಡು ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿರುವರು.

ಕಡಬ ಪಂಚಾಯತಬೋರ್ಡ್ ಪ್ರೆಸಿಡೆಂಟರಾದ ಶ್ರೀ. ಬಿ. ಟಿ. ಅಂಗ ಜೈನಿ ಇವರು ತಮ್ಮ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಸ್ಥಾನಕ್ಕೆ ರಾಜಿನಾಮೆಯಿತ್ತಿರುವರು. ಇವರು ತಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯಸ್ಥಾನಕ್ಕೂ ರಾಜಿನಾಮೆಯಿತ್ತಿರುವರು.

ಸುಳ್ಯ ಸರ್ಕಲಿನ ಕಾಂಗ್ರೆಸ್ ಪಕ್ಷದ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಶ್ರೀ. ಯಂ. ಐತಪ್ಪ ರೈಗಳು ತಮ್ಮ ಡಿ॥ ಬೋ॥ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ.

ಮನೆ ಜಪ್ತಿಗಳು

ತಾ. ೫ರಂದು 'ಪ್ರಭಾತ' ಪತ್ರಿಕೆಯ ಸಂಪಾದಕರೂ, ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿಯೂ ಕಾರ್ಯದರ್ಶಿಗಳೂ ಆದ ಶ್ರೀ ಕುಡ್ವಿ ವಾಸುದೇವ ಶೆಣೈಯವರ ಮನೆಯನ್ನು ಪೋಲೀಸರು ಜಪ್ತಿ ಮಾಡಿದರು. ಕೆನರಾ ಬೇಂಕಿನ 'ಟೈಪಿಸ್ಟ'ರಾದ ಶ್ರೀ ನಂದಾವರ ವಾಸುದೇವ ಪ್ರಭುಗಳ ಮನೆಯನ್ನೂ ಪೋಲೀಸರು ಜಪ್ತಿ ಮಾಡಿದರು. ಶ್ರೀ. ಭಾಸ್ಕರ ಶೈಣೈ ಮನೆಯನ್ನೂ, ಡಿಸ್ಟ್ರಿಕ್ಟ್ ಬೋರ್ಡ್ ಮುಂದೆ ಪಿಕೆಟಿಂಗ್ ಮಾಡಿ ಶ್ರೀಗಳಾದ ಗಂಗಯ್ಯ ಸಾಲಿಯಾನ್ ಮತ್ತು ಮಾಧವ ನ್ಯಾಕ್ ಇವರ ಮನೆಗಳನ್ನೂ ಜಪ್ತಿ ಮಾಡಲಾಗಿದೆ. ಈ ಎಲ್ಲಾ ಕಡೆಗಳಲ್ಲಿಯೂ ಆಕ್ಷೇಪಾರ್ಹವಾದುದೇನೂ ಸಿಗಲಿಲ್ಲ. ತಾ. ೧೦ರಂದು ಗಾಂಧಿಜಿಯವರ ಕೊನೆಯ ಎ. ಐ. ಸಿ. ಸಿ. ಭಾಷಣದ ಕನ್ನಡ ಭಾಷಾಂತರ 'ಚರಮ ಭಾಷಣ'ದ ಪ್ರತಿಗಾಗಿ ಸ್ಥಳೀಯ ಅನೇಕ ಪೇಪರ್ ಸ್ಟಾಲ್‌ಗಳನ್ನು ಜಪ್ತಿ ಮಾಡಿರುವರು.

ಕೈಯ್ಯೂರು ಕೈದಿಗಳಿಗೆ ಜೀವದಾನವಿಲ್ಲ?

ಸ್ಥಳೀಯ ಸೆಶ್ಯನ್ ಕೋರ್ಟಿನಲ್ಲಿ ಕೈಯ್ಯೂರು ಪೋಲೀಸನೊಬ್ಬನನ್ನು ಖೂನಿ ಮಾಡಿದ ಆರೋಪದ ಮೊಕದ್ದಮೆಯಲ್ಲಿ ಫಾಶೀ ಶಿಕ್ಷೆಗೆ ಗುರಿಪಡಿಸಲ್ಪಟ್ಟು, ಅನಂತರ ಮದ್ರಾಸ್ ಹೈಕೋರ್ಟಿನಲ್ಲಿ ಮೂಲ ಕೋರ್ಟಿನ ತೀರ್ಪು ಕಾಯಂ ಆದ ನಾಲ್ವರು ಕೈದಿಗಳಿಗೆ ಜೀವದಾನವಾಗಬೇಕೆಂದು ಇಲ್ಲಿಂದ ಕಳುಹಿಸಿದ್ದ ಹಲವು ವಿನಂತಿಗಳನ್ನು ಮದ್ರಾಸ್ ಗವರ್ನರರು ನಿರಾಕರಿಸಿರುವರೆಂದು ತಿಳಿದುಬಂದಿದೆ. ವೈಸರಾಯರ ತೀರ್ಮಾನವಿನ್ನು ಗೊತ್ತಾಗಬೇಕಾಗಿದೆ!

ಮಹಿಳಾ ಪರಿಷತ್ತು

ಚತುರ್ಥ ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಪರಿಷತ್ತು ತಾ. ೧೪ ಮತ್ತು ೧೫ರಲ್ಲು ಸ್ಥಳೀಯ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಜರಗಲಿದೆ. ಶ್ರೀಮತಿ ಸರಸ್ವತಿಬಾಯಿ ಕೇಶವಪೈಯವರು ಪರಿಷತ್ತಿನ ಉದ್ಘಾಟನೆ ನಡೆಸುವರು. ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಶ್ರೀಮತಿ ಕೆ. ವಿಲಾಸಿನಿ ಶೆಣೈ, ಬಿ. ಎ. (ಆನರ್ಸ್) ಬಿ. ಎಲ್. ಇವರು ವಹಿಸಲಿದ್ದಾರೆ. ತಾ. ೧೫ನೇ ದಿನ ಅಪರಾಹ್ನ ೬ ಗಂಟೆಗೆ ಭಗಿನಿ ಸಮಾಜದ ಆಶ್ರಯದಲ್ಲಿ ನಡೆವ ಶಿಶು ಸಂರಕ್ಷಣಾಕಾರ್ಯದ ಸಹಾಯಾರ್ಥವಾಗಿ ಭಗಿನಿ ಸಮಾಜದ ಸದಸ್ಯೆಯರಿಂದ ವಿವಿಧ ವಿನೋದಾವಳಿಗಳ ಪ್ರದರ್ಶನವಿದೆ.

ಅನ್ನದಾನ

ಸ್ಥಳೀಯ ಪ್ರಸಿದ್ಧ ಜವಳಿ ವ್ಯಾಪಾರಿಗಳಾದ ಮ॥ ವಿಠ್ಠಲ್ಜಿ ಮಾಧವಜೀ ಅವರು, ಈಚೆಗೆ ಮೃತರಾದ ತಮ್ಮ ತೀರ್ಥರೂಪರ ಸ್ಮಾರಕಕ್ಕಾಗಿ ಕಳೆದ ಆದಿತ್ಯವಾರ ಇಲ್ಲಿ ಕೆಲವೆಡೆಗಳಲ್ಲಿ ಅನ್ನಸಂತರ್ಪಣೆ ನಡೆಸಿದರು. ಸ್ಥಳೀಯ ಡಿ. ಸಿ. ಮಿಶನ್ ಹಾಗೂ ಇತರ ಯಾವತ್ತು ಅನಾಥಾಶ್ರಮಗಳಲ್ಲಿ ಈ ಸಂತರ್ಪಣೆ ನಡೆಯಿತು. ಸ್ಥಳೀಕರಾದ ೭ ಮಸೀದಿಗಳಿಗೂ ೭ ಮುಡಿ ಅಕ್ಕಿ ಅನ್ನದಾನ ಕೊಡಲಾಯಿತು. ಅಲ್ಲದೆ ಉರ್ವದ ಮೈದಾನಿನಲ್ಲಿ ಅಂದು ಸಂಜೆ ಸುಮಾರು ೩ ಸಾವಿರ ಮಂದಿ ಬಡ ಬಗ್ಗರಿಗೆ ಅನ್ನ ಸಂತರ್ಪಣೆ ನಡೆಯಿತು.

ದೀಪ ನಿರ್ಬಂಧ

ತಾ. ೬ರಿಂದ ೮ರ ತನಕ ದೀಪಾವಳಿ ದಿನಗಳಲ್ಲಿ ಮಾತ್ರ ದೀಪ ನಿರ್ಬಂಧ ತೆಗೆದುಹಾಕಿರುವುದಲ್ಲದೆ, ಮುಂದಿನ ಯಾವುದೇ ದಿನಗಳಲ್ಲಿ, ಜಾರಿಯಲ್ಲಿರುವ 'ಟ್ರಾನ್‌ಓಟ್' ಕ್ರಮವನ್ನು ಮೀರಿ ಸಾರ್ವಜನಿಕರಾಗಲಿ, ದೇವಸ್ಥಾನದ ಅಧಿಕಾರಿಗಳಾಗಲಿ ಯಾವುದೇ ಹಬ್ಬ ಉತ್ಸವ ಸಮಯದಲ್ಲಾಗಲಿ ದೀಪ ಉರಿಸಬಾರದಾಗಿ ಕಲೆಕ್ಟರರ ನಿರ್ಬಂಧವಿದೆ.

ಮಂಗಳೂರು ಮ್ಯುನ್ಸಿಪಲ್ ಕೌನ್ಸಿಲ್ ರದ್ದಾಯಿತು.

"ಮಂಗಳೂರು ಮ್ಯುನ್ಸಿಪಲ್ ಕೌನ್ಸಿಲಿನಲ್ಲಿ ಒಟ್ಟು ೩೨ ಮಂದಿ ಕೌನ್ಸಿಲರ ಪೈಕಿ ೨೯ ಮಂದಿ ರಾಜಿನಾಮೆ ಕೊಟ್ಟದ್ದರಿಂದ ಅದು ಕಾರ್ಯಾಚರಣೆ ಮಾಡಲು ಅಶಕ್ತವಾಗಿದೆ. ಆದ್ದರಿಂದ ಈಗ ಇರುವ ಕೌನ್ಸಿಲು ಕಾನೂನು ಪ್ರಕಾರ ಕಾರ್ಯ ನಡೆಸಲು ಶಕ್ತವಲ್ಲವೆಂದು ಸರಕಾರದ ಅಭಿಪ್ರಾಯ. ಆದ್ದರಿಂದ ಗವರ್ನರರು ಮದ್ರಾಸ್ ಡಿಸ್ಟ್ರಿಕ್ಟ್ ಮುನ್ಸಿಪಾಲಿಟಿ ಕಾನೂನಿನ ಸೆಕ್ಷನ್ ೪೧೮ ಸಬ್ ಸೆಕ್ಷನ್ (೧)ರ ಪ್ರಕಾರ ಮಂಗಳೂರು ಮುನ್ಸಿಪಲ್ ಕೌನ್ಸಿಲನ್ನು ಈ ನೋಟೀಸು ಪ್ರಕಟಿಸಿದ ದಿನದಿಂದ ರದ್ದು ಮಾಡಿ, ೧೯೪೩ ಜನವರಿ ೩೧ರ ಮಧ್ಯಾಹ್ನದ ನಂತರ ಪುನಃ ರಚಿಸುವುದಾಗಿ ತಿಳಿಸಿದ್ದಾರೆ" ಎಂಬುದಾಗಿ ತಾ. ೧೧ರಲ್ಲು ಮದ್ರಾಸ್ ಸರಕಾರವು ಒಂದು ಪ್ರಕಟಣೆಯಿತ್ತಿದೆ.

ಸತ್ಕಾರಕೂಟ

ತಾ. ೧೧ರಲ್ಲು, ಉತ್ತರಕನ್ನಡ ಬಸ್ ಕಂಪನಿಯ ಮೇನೇಜರರಾಗಿ ವರ್ಗಾಯಿಸಲ್ಪಟ್ಟ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿಯ ಜ್ಯೋಂಟ್ ಮೆನೇಜರರಾದ ಶ್ರೀ ಕೆ. ಶ್ರೀನಿವಾಸ ಭಂಡಾರಿಯವರಿಗೆ, ಕಂಬ್ಯಾಂಡ ಆಫೀಸಿನ ಸಿಬ್ಬಂದಿಯವರು ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು. ಮಾನಪತ್ರವೂ ಕೊಡಲ್ಪಟ್ಟಿತು.

ಕನ್ನಡ ಭಾಷಣ

ಕಳೆದ ಶುಕ್ರವಾರ, ಸ್ಥಳೀಯ ಸೈ॥ ಎ॥ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಶ್ರೀ. ಕೆ. ಶಂಭುಭಟ್ಟರು 'ಕನ್ನಡನುಡಿ' ಎಂಬ ವಿಷಯ ಭಾಷಣವಿತ್ತರು. ಶ್ರೀ. ಮುಳಿಯ ತಿಮ್ಮಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ~~ಶ್ರೀ. ಜಿ. ತ.~~ ಮುತ್ತಣ್ಣ ಇವರು ಧನ್ಯವಾದಾರ್ಪಣೆ ಮಾಡಿದರು.

ರಜೆ

ಜಿಲ್ಲಾ ನೇಶನಲ್ ವಾರ್ ಫ್ರಂಟಿನ ವ್ಯವಸ್ಥಾಪಕರಾದ ಶ್ರೀ. ಯು. ಸತ್ಯನಾರಾಯಣ ಇವರು ಎರಡು ತಿಂಗಳು ಹತ್ತು ದಿನಗಳ ವರೆಗೆ ರಜೆಯ ಮೇಲೆ ತೆರಳಿರುವರು.

ಮೈಸೂರಿನಿಂದ ತಂದ ವಿದ್ಯಾರ್ಥಿಗಳ ಬಿಡುಗಡೆ

ಕೆಲವು ವಾರಗಳ ಹಿಂದೆ, ಮೈಸೂರಲ್ಲಿ ಕಲಿಯುತ್ತಿದ್ದ ದಕ್ಷಿಣಕನ್ನಡದ ಕೆಲವು ವಿದ್ಯಾರ್ಥಿಗಳನ್ನು ಮೈಸೂರು ಸರಕಾರವು ದಕ್ಷಿಣಕನ್ನಡಕ್ಕೆ ತಂದು ಇಲ್ಲಿನ ಪೋಲೀಸು ವಶಪ್ಪೊಪ್ಪಿಸಿದ ಮೇಲೆ ಇಲ್ಲಿ ಅವರನ್ನು ಕೆಲವು ವಾರಗಳ ವರೆಗೆ ರಿಮಾಂಡಿನಲ್ಲಿಟ್ಟದ್ದು, ಈಗ ಅವರಲ್ಲಿ ಕೆಲವು ಮಂದಿಯನ್ನು ಮಾತ್ರ ಬಿಡುಗಡೆ ಮಾಡಲಾಯಿತೆಂದು ತಿಳಿದುಬರುತ್ತದೆ.

ಕಾರ್ಕಳ

ಗಾಂಧಿ ಜಯಂತಿ ದಿನ ಬಂಧಿಸಲ್ಪಟ್ಟ ಶ್ರೀ. ಕೆ. ಪಿ. ಕೇಶವ ಪ್ರಭುಗಳ ವಿಚಾರಣೆ ಕುಂದಾಪುರದ ಸಬ್ ಡಿವಿಜನಲ್ ಮೇಜಿಸ್ಟ್ರೇಟರ ಮುಂದೆ ನಡೆದು, ಅವರಿಗೆ ೬ ತಿಂಗಳ ಶಿಕ್ಷೆ ಮತ್ತು ೫೦೦ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ. ಇವರನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಶ್ರೀ ಬೊಲ್ಪಾಡಿ ಕೃಷ್ಣ ಕಾಮತರನ್ನೂ ಅಲಿಪುರಂ ಜೈಲಿಗೆ ಸಾಗಿಸಲಾಗಿದೆ. ಶ್ರೀ ಕೇಶವ ಪ್ರಭುಗಳ ಜುಲ್ಮಾನೆ ಹಣ ವಸೂಲಾಗಿರುವುದು.

ಈ ಪ್ರಖ್ಯಾತ ಲೇಪವು ಕಲೆ ಉಳಿಯದಂತೆ ಗುಣಪಡಿಸುತ್ತದೆ.



ಈ ಜಾಂಬಕ್ ಪೆಟ್ಟಿಗೆ ಪ್ರತಿಯೊಂದು ಮನೆಯಲ್ಲಿಯೂ ಇರತಕ್ಕದ್ದು.

ನೀವೆಷ್ಟೋ ಜಾಗರೂಕರಾಗಿದ್ದರೂ, ಮನೆಯಲ್ಲಿ ಕೆಲಕೆಲವು ಅಪಾಯಗಳು ಸಂಭವಿಸಿಯೇ ಬಿಡುತ್ತವೆ. ಗಾಯ, ಮೊಣಕಾಲು ಚೀನೆ, ಬಾವು ಇತ್ಯಾದಿಗಳಾಗಿ ಮಕ್ಕಳು ಆಗಾಗ ಬಹಳ ತೊಂದರೆ ಕೊಡುತ್ತವೆ. ಅಂಥಾ ಗಾಯಗಳು ಒಳಗಡೆ ವಿಷಕ್ರಿಮಿ ಹೋಗದಿದ್ದರೆ ಯಾವಾಗಲೂ ಅಪಾಯಕಾರಿಗಳಲ್ಲ. ಅದಕ್ಕಾಗಿಯೂ ನೀವು ಆಗ ಜಾಂಬಕ ತಾಗಿಸಬೇಕು. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವನ್ನು ಚರ್ಮವು ಬೇಗನೇ ಹೀರಿಕೊಂಡು, ನೋವನ್ನು ಗುಣ ಮಾಡಿ, ಬಾವೆನ್ನು ಕಡಿಮೆಮಾಡಿ ರಶಿ ಇತ್ಯಾದಿಗಳನ್ನು ಒಣಗಿಸುವುದು. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಇಲ್ಲವೆ ರೂ. 2—4—0 ಕ್ರಯ. ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.



ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಸಿನಿಮಾ ಪುಟ

ಶಾಂತಾರಾಮರ ಸ್ಥಾನದಲ್ಲಿ

[illegible] ಶ್ರೀ ಎಚ್. [illegible] ಮುಂದೆ ಗೌರವ ಕಾರ್ಯದರ್ಶಿಯಾಗಿರುವರಂತೆ.

ಬೊಂಬೇ ಟಾಕೀಸ್ ವ್ಯಾಜ್ಯ

ಬೊಂಬೇ ಟಾಕೀಸ್‌ನ ಮಹತ್ವದೊಂದು ಮೊಕದ್ದಮೆಯು ಬೇಗನೇ ಬೊಂಬಯಿ ಹೈಕೋರ್ಟಿನಲ್ಲಿ ವಿಚಾರಣೆಯಾಗಲಿದೆ. ಬೊಂಬೇ ಟಾಕೀಸಿನ ಆಡಳಿತ ಮಂಡಳಿಕ್ಕೂ ರಾಯ್‌ಬಹದ್ದೂರ್ ಚುನೀಲಾಲರಿಗೂ ಇತ್ತೀಚೆಗೆ ಉಂಟಾದ ಅಂತಃಕಲಹವೇ ಈ ವ್ಯಾಜ್ಯದ ಕಾರಣ. ಈ ವ್ಯಾಜ್ಯದಲ್ಲಿ ಚುನಿಲಾಲರ ಕಡೆಯಿಂದ ಶ್ರೀ ಸೆಟಲ್‌ವಾಡರೂ, ಆಡಳಿತ ಮಂಡಳಿ ಕಡೆಯಿಂದ ಶ್ರೀ. ಕೆ. ಎಂ. ಮುನ್ಶಿಯವರೂ ವಕೀಲರಾಗಿ ವಾದಿಸುವರು. ಈ ವ್ಯಾಜ್ಯದ ಫಲವಾಗಿ ಬೊಂಬೇ ಟಾಕೀಸು ಮುರಿದುಹೋದೀತೇ ಎಂದು ಹಲವರು ಸಂಶಯ ಪಡುತ್ತಿದ್ದಾರೆ.

ಆಚಾರ್ಯ ಆರ್ಟ್ ಪ್ರೊಡಕ್ಷನ್

ಈ ಹೊಸ ಸಂಸ್ಥೆಯ ನಿರ್ಮಾಪಕ ಶ್ರೀ ಆಚಾರ್ಯರು ಈಗಾಗಲೇ 'ಉಲ್ಝನ್' ಮತ್ತು 'ಕುಂವಾರ್ ಬಾಪ್' ಎಂಬೀ ಎರಡು ಪ್ರಸಿದ್ಧ ಚಿತ್ರಗಳನ್ನು ತಯಾರಿಸಿದ್ದು ಈಗ ಮೂರನೆಯ ಚಿತ್ರದ ತಯಾರಿಗೆ ಕೈಹಚ್ಚಿದ್ದಾರೆ ಪೃಥ್ವಿರಾಜನು ಇದರಲ್ಲಿ ಮುಖ್ಯಪಾತ್ರ ವಹಿಸುವನೆಂದು ಸುದ್ದಿ. ಇತರ ಪಾತ್ರವರ್ಗಗಳ ವಿವರ ತಿಳಿದಿಲ್ಲ ದಿವಾಳಿ ಸಮಯದಲ್ಲಿ ಇದರ ಮುಹೂರ್ತವಾಗಲಿದೆ

ರಾಜಾ ಮುವಿಟೋನ್

ಈ ಹೆಸರಿನಿಂದ ನಟಿ ಜುಹೂರ್ ರಾಜರು ಒಂದು ಹೊಸ ಸಂಸ್ಥೆ ಸ್ಥಾಪಿಸಿದ್ದಾರೆ. ಅವರು ತಯಾರಿಸುವ ಮೊದಲನೆಯ ಚಿತ್ರದ ಹೆಸರು 'ಮಜಾಕ್' ಎಂದು ಕಮಲ ಅಮರೋಹಿ ಇವರ ಕಥಾಲೇಖಕರು ಉತ್ತಮವರ್ಗದ ನಟ ನಟಿಯರನ್ನು ಆರಿಸಿ ಪ್ರಥಮ ಚಿತ್ರವನ್ನೇ ಅತ್ಯಂತ ಯಶಸ್ವಿ ಮಾಡಬೇಕೆಂದು ಜುಹೂರ್ ರಾಜರ ನಿರ್ಧಾರವಾಗಿದೆ

ಬಾಲಾಜಿಯಲ್ಲಿ 'ಮುಖಾಬಿಲಾ'

ನಾಡಿಯಾ ಮತ್ತು ಯಾಕೂಬ್ ಇವರ ಮನೋಹರ ನಟನೆಯುಳ್ಳ, ಹೋಮಿವಾಡಿಯಾರ ಕೃತಿ 'ಮುಖಾಬಿಲ' ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ. 13ರಿಂದ ಪ್ರದರ್ಶಿಸಲ್ಪಡುತ್ತದೆ. ನಾಡಿಯಾಳ ಅದ್ಭುತ ಕಾರ್ಯಗಳು ಸಿನೆಮಾ ಪ್ರಿಯರನ್ನು ಇಷ್ಟರಲ್ಲೇ ರೋಮಾಂಚನಗೊಳಿಸಿವೆ, ಇದರಲ್ಲಿ ಆಕೆಯ ಉಜ್ವಲ ನಟನೆಯಿದ್ದೆ, ಯಾಕೂಬನ ಶ್ರೇಷ್ಠ ನಟನೆಯು ಅದಕ್ಕೆ ಕಳೆಗೊಟ್ಟಿದೆ ಮಾನವ ಬುದ್ಧಿಯ ನ್ಯಾಯಿರೊಂದು ಮಾಡಿದ ಸಾಹಸ ಘಟನೆಗಳನ್ನಿದರಲ್ಲಿ ಕಾಣಬಹುದು ನಾಡಿಯಾಳ ನೃತ್ಯ, ಯಾಕೂಬನ ಗಝುಲ್ ಗಾಯನ ಇವುಗಳ ಸಮ್ಮೇಳ ಯಾರನ್ನಾದರೂ ಆಕರ್ಷಿಸದಿರದು

ಮೊದಲದರ್ಜೆಯ ಸಮಾಜಕಂಟಕರು

ಜಗದ ಹೆಗ್ಗಣ—ಪುಂಡ

ಕೀರ್ತಿಗೆ ಕಡು ಕಳಂಕ!
ಸ್ವಾತಂತ್ರ್ಯಕೆ ಆತಂಕ!
ಸುಲಿಯುವ, ಕೊಲ್ಲುವ, ಕೆಡಿಸುವ—
ಜಗದ ಹೆಗ್ಗಣ—ಪುಂಡ!
ತನ್ನ ಕುಲವನೆ ಕೊಲುವ
ಕೊಡಲಿ—ಕಾವಿನ ತೆರದಿ
ತನ್ನ ಜನರನೆ ಕಾಡಿ
ಪೀಡಿಸುವ ಈ ಪುಂಡು
—ಆಳ್ವರಿಗೆ ಹುಸಿಗುಂಡು!
ಜಗದ ಹೆಗ್ಗಣ—ಪುಂಡ!
ಕಾವ ಭಟರನು ಕಂಡು
ಸುಲಿದ ಒಡವೆಯ ಕೊಂಡು
ಬಡಪಾಯಿಗಳನು ನೂಂ-
ದೂಡುವ, ಓಡುವ, ನಗುತ ನೋಡುವ!
ಜಗದ ಹೆಗ್ಗಣ—ಪುಂಡ!

ಸಾಕಪ್ಪಾ ಈ ಕಷ್ಟಗಳು!

ಪಟ್ಟಣಗಳಲ್ಲಿ ಆಹಾರದ ಕೊರತೆಯಾಗಿದೆ ಮತ್ತು ಧಾರಣೆಗಳು ಏರಿವೆ. ಕೈತರಿಗೆ ವೇತನವಿಲ್ಲ, ಹಣವಿಲ್ಲ ಮನೆತನಗಳು ಅಗಲಿಸಲ್ಪಟ್ಟಿವೆ—ಪರಸ್ಪರ ಭೆಟ್ಟಿಗೆ ಅವಕಾಶವಿಲ್ಲ

ಶಾಲೆ—ಆಸ್ಪತ್ರೆ—ಅಂಚೇಕಚೇರಿಗಳನ್ನು ಕೊಳ್ಳೆಹೊಡೆಯಲಾಗಿದೆ. ಕಾಗದ ಪತ್ರಗಳು—ದಸ್ತೈರುಗಳು ನಾಶಗೊಳಿಸಲ್ಪಟ್ಟುದರಿಂದ ಪಿಂಚಣಿಯ ಹಣ, ಪೋಸ್ಟಿನಲ್ಲಿಟ್ಟ ಹಣ ಮತ್ತು ಭೂಮಿಯ ಸೊತ್ತು—ಇವೆಲ್ಲಕ್ಕೂ ಗಂಡಾಂತರವುಂಟಾಗಿದೆ.

ಪುಂಡರನ್ನು ಪ್ರತಿಭಟಿಸಿರಿ!

ಬರಿ ಅಧಿಕಾರಿಗಳಿಗಿಂತಲೂ
ನಾವೇ ಈ ಗಲಾಟೆಯನ್ನು
ಹತೋಟಿಯಲ್ಲಿ ತರಬಲ್ಲೆವು.

CPU 54 Kn

ಸಾದರ-ಸ್ವೀಕಾರ

ಬಾಲಚಂದ್ರ

(ನವಸಂಪುಟ ೧ ಸಂ. ೧)

ವಿದ್ಯಾ ವಿಷಯಕವಾದ ಮಾಸಪತ್ರಿಕೆ ಬಾಲಚಂದ್ರವು ಈಗ ನವಸಂಪುಟವಾಗಿ ಉಡುಪಿಯಿಂದ ಶ್ರೀಗಳಾದ ಕೆ ಆರ್ ಶೆಟ್ಟಿ ಮತ್ತು ಕೈ ಎಚ್. ಶೆಟ್ಟಿ ಇವರ ಸಂಪಾದಕತ್ವದಿಂದ ಹೊರಡುತ್ತದೆ. ವಿದ್ಯಾ ವಿಷಯಕ ಲೇಖನ, ಸೂಚನೆ, ಕತೆ, ಕವಿತೆಗಳಿಂದ ಈ ಸಂಚಿಕೆ ಮನೋಹರವಾಗಿದೆ—ಕಾಗದದ ಅಭಾವದೀ ಕಾಲದಲ್ಲಿಯೂ ಇಂಥಾ ಸಾಹಸವನ್ನು ಕೈಕೊಂಡ ಸಂಪಾದಕ ಪ್ರಕಾಶಕರನ್ನು ನಾವು ಅಭಿನಂದಿಸುತ್ತೇವೆ. ಇದರ ವಾರ್ಷಿಕ ವರ್ಗಣಿ ರೂ ೧-೮-೦.

ಕಾಗದ-ಕತ್ತರಿ

ಕಾಗದ ಮತ್ತು ಕತ್ತರಿ ಇಷ್ಟಿದ್ದರೆ ಅನೇಕ ಬಗೆಯ ಆಟದ ಸಾಮಾನುಗಳನ್ನು ಮಾಡಬಹುದು. ಇಂಥಾ ಕೆಲಸದಿಂದ ಕೈ ಕಣ್ಣು ಮತ್ತು ಬುದ್ಧಿ ಇವುಗಳಿಗೆ ಯೋಗ್ಯ ಅಭ್ಯಾಸವೂ ಆಗುತ್ತದೆ. ಮಕ್ಕಳು ಸಹಜವಾಗಿ ಚಟುವಟಿಕೆಯಿಂದ ಕೂಡಿರುವವರಾದುದರಿಂದ, ಇಂಥಾ ಕಾಗದ ಕತ್ತರಿ ಪ್ರಯೋಗವನ್ನು ಅವರಿಗೆ ಕಲಿಸಿಕೊಟ್ಟಲ್ಲಿ ಅವರು ಆ ವಿಷಯ ಹೆಚ್ಚಿನ ಆಸಕ್ತಿ ವಹಿಸುವರು. ಗೃಹೈಯು ಶಿಕ್ಷಣ ಮಾಧ್ಯಮವಿರಬೇಕೆಂಬ ಆಧುನಿಕ ಕ್ರಾಂತಿ ಯುಗದಲ್ಲಿ ಈ ಕುರಿತು ಬರೆದ ಪುಸ್ತಕಗಳಿಗೆ ಬಹಳ ಸ್ವಾಗತವಿದೆ ಕನ್ನಡದಲ್ಲಿ ಈ ವಿಷಯವಾಗಿ ಶ್ರೀ ದಾಮೋದರ ಬಾಳಿಗೆರು ಒಂದು ಸಚಿತ್ರ ಪುಸ್ತಕ ಬರೆದು ಪ್ರಕಟಿಸಿದ್ದಾರೆ ಇದರ ಬೆಲೆ ನಾಲ್ಕಾಣೆ. ಕ್ರೌನ್ ೧/೮, ಆಕಾರದ ೩೦ ಪುಟಗಳೂ ಅನೇಕ ಚಿತ್ರಗಳೂ ಇವೆ, ಅಂದವಾದ ತ್ರಿವರ್ಣ ರಂಜಿತ ಹೊದಿಕೆ ಮತ್ತು ಮುದ್ರಣವುಳ್ಳ ಈ ಪುಸ್ತಕವು ಮಂಗಳೂರು ರಥಬೀದಿಯ ಬಾಳಿಗ ಎಂಡ್ ಸನ್ಸ್ ಇಲ್ಲಿ ದೊರಕುವುದು ಶಾಲಾ ಉಪಾಧ್ಯಾಯರು ಅವಶ್ಯ ಈ ಪುಸ್ತಕದ ಪ್ರಯೋಜನ ಪಡೆದುಕೊಳ್ಳಬೇಕೆಂದು ನಾವು ಸೂಚಿಸುವೆವು

ಪ್ರಭಾತ (ದೀಪಾವಳಿ ಸಂಚಿಕೆ)

'ಜಯಕರ್ನಾಟಕ' ಆಕಾರದ ೩೯ ಪುಟಗಳುಳ್ಳ ವಿಶೇಷ ಸಂಚಿಕೆಯನ್ನು ಮಂಗಳೂರು ಪ್ರಭಾತ ವಾರಪತ್ರಿಕೆಯ ವ್ಯವಸ್ಥಾಪಕರು ಪ್ರಕಟಿಸಿದ್ದಾರೆ. ಕಾಗದದ ಕುಟ್ಟಿಯಿಕಾಲದಲ್ಲಿಯೂ ಇಂಥಾ ಪ್ರಯತ್ನ ಕೈಕೊಂಡದ್ದು ಅಭಿನಂದನೀಯ ಪತ್ರಿಕೆ ಸುಂದರವಾಗಿದೆ ಕತೆ, ಕವಿತೆ, ಲೇಖನಗಳಿಂದ ವಾಚನೀಯವಿದೆ

ಪೆಡಾರ್ಾಲು

ಕಾರ್ಯಾಡು ಮಾದರೀ ಕೃಷಿ ಕ್ಷೇತ್ರದಲ್ಲಿ ಕೃಷಿಕಮಂಡಲಿಯ ಮೂರನೆಯ ವಾರ್ಷಿಕೋತ್ಸವವು ನವಂಬರ ತಾ. ೨೭ನೇ ಅಪ್ಪು ೧೦ ರಿಂದ ಕ್ರಮದಂತೆ ಪ್ರದರ್ಶನಾದಿಗಳ ಮೊದಲುಗೊಂಡು ಜರಗಲಿರುವುದು

ಕುಂದಾಪುರ

ಬಿ ಓ ಎಲ್. ತೇರ್ಗಡೆ

ಕುಂದಾಪುರ ಬೋರ್ಡು ಹೈಸ್ಕೂಲಿನ ಹಿಂದೀ ಪಂಡಿತರಾದ ಶ್ರೀ ಕಟೀಲ್ ಗಣಪತಿ ಶರ್ಮ, ಇವರು ಮದ್ರಾಸ್ ಯುನಿವರ್ಸಿಟಿಯ ಬಿ. ಓ. ಎಲ್ ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರಾಗಿ ತಿಳಿದುಬರುತ್ತದೆ

ಕಾಸರಗೋಡು

ಬಿರುಗಾಳಿ ಅನಾಹುತ

ಕಳೆದ ವಾರ ಬಿರುಗಾಳಿ ಬಂದು, ಕೆಲ ಕಡೆಗಳಲ್ಲಿ ನೂರಾರು ಅಡಿಕೆ ಮರಗಳು ಕಿತ್ತು ಹೋಗಿವೆಯೆಂದೂ, ಪಡುಗಡಲಲ್ಲಿ ಇದೇ ಗಾಳಿಗೆ ಒಂದು ಮಂಜು ಮುಳುಗಿ ಹೋಯಿತೆಂದೂ ತಿಳಿದಿದೆ

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು.

ಮತ್ತೊಂದು ದೃಷ್ಟಾಂತ – ಸ್ವಾಮಿ ತುರಿಯಾನಂದನ ವಿಷಯವಾಗಿ

ನಮ್ಮ ಸ್ನೇಹಿತರಲ್ಲೊಬ್ಬನು (ಸ್ವಾಮಿ ತುರಿಯಾನಂದ) ಒಂದಾನೊಂದು ಸಮಯ ವೇದಾಂತ ಚರ್ಚೆಯಲ್ಲಿ ಬಹಳ ಮನಸ್ಸು ಕೊಟ್ಟಿದ್ದನು. ಆಗ ಶ್ರೀ ಪರಮಹಂಸರಿದ್ದರು ಆತನ ಅಖಂಡ ಬ್ರಹ್ಮಚರ್ಯ, ಭಕ್ತಿ, ನಿಷ್ಠೆ ಇತ್ಯಾದಿಗಳನ್ನು ನೋಡಿ ಅತನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ವೇದಾಂತದ ತರ್ಕದಲ್ಲಿಯೂ ಜಪಧ್ಯಾನದಲ್ಲಿಯೂ ನಿರತನಾಗಿ ಆ ಸ್ನೇಹಿತನು ಶ್ರೀ ಪರಮಹಂಸರ ಬಳಿಯಲ್ಲಿ ಮೊದಲು ಮೊದಲು ಬಂದಂತೆ ಆಗ ಸ್ವಲ್ಪ ದಿವಸ ಬರಲಿಲ್ಲ ಶ್ರೀ ರಾಮಕೃಷ್ಣದೇವರ ತೀಕ್ಷ್ಣದೃಷ್ಟಿಗೆ ಅದು ಗೋಚರವಾಗದಿರಲಿಲ್ಲ ಆ ಸ್ನೇಹಿತನೊಂದಿಗೆ ಬರುತ್ತ ಹೋಗುವ ಒಬ್ಬ ವ್ಯಕ್ತಿಯನ್ನು ಶ್ರೀ ಪರಮಹಂಸರು ದಕ್ಷಿಣೇಶ್ವರದಲ್ಲಿ ಒಬ್ಬಂಟಿಗನಾಗಿರುವುದನ್ನು ಕಂಡು 'ಏನಿದು, ನೀನು ಒಬ್ಬಂಟಿಗನಾಗಿದ್ದಿ? ಆತನು ಬರಲಿಲ್ಲವೇನು?' ಎಂದು ಕೇಳಿದರು ಆ ವ್ಯಕ್ತಿಯು ಹೀಗೆಂದನು –'ಆತನೀಗ ವೇದಾಂತ ಚರ್ಚೆಯಲ್ಲೇ ನಿರತನಾಗಿದ್ದಾನೆ, ಹಗಲಿರುಳೂ ಗ್ರಂಥ ಪಠನ, ವಿಚಾರ ತರ್ಕಗಳನ್ನು ಹಿಡಿದಿದ್ದಾನೆ ಸಮಯ ಹಾಳಾಗುತ್ತದೆಂದು ಎಣಿಸಿ ಬಾರದಿರಲೂಬಹುದು' 'ಶ್ರೀ ಪರಮಹಂಸರು ಕೇಳಿ ಮತ್ತೇನೂ ಆ ಹೊತ್ತು ಮಾತನಾಡಲಿಲ್ಲ

ವೇದಾಂತವೆಂದರೆ ಇನ್ನೇನಿದೆ? ಬ್ರಹ್ಮವೇ ಸತ್ಯವಸ್ತು, ಜಗತ್ತು ಮಿಥ್ಯ ವೆಂಬ ಧಾರಣೆಯೇ ವೇದಾಂತ

ಕೆಲಕಾಲದ ನಂತರ, ನಾವು ಯಾರ ವಿಷಯವನ್ನೆತ್ತಿದ್ದೇವೆಯೋ ಆತನೇ ಶ್ರೀ ಪರಮಹಂಸರನ್ನು ಕಾಣಬೇಕೆಂದು ಬಂದಿದ್ದನು. ಆತನನ್ನು ನೋಡಿದ ಮಾತ್ರವೇ 'ಏನಪ್ಪ, ನೀನೀಗ ಬಹಳ ವೇದಾಂತ ವಿಚಾರವನ್ನು ಮಾಡುತ್ತ ಇದ್ದಿಯಂತೆ, ಅದನ್ನು ಮಾಡುವುದು ಉತ್ತಮವೇ ಸರಿ ಆ ವಿಚಾರವು ಬ್ರಹ್ಮಸತ್ಯ, ಜಗತ್ತು ಮಿಥ್ಯವೆಂಬುದರಲ್ಲಿವೆ? ಅಥವಾ ಇನ್ನೇನಾದರೂ ಉಂಟೇ ಎಂದು?' ಕೇಳಿದರು

ನಮ್ಮ ಸ್ನೇಹಿತನು 'ಹೌದು, ಅದೇ ಸರಿ. ಅದರಲ್ಲಿ ಇನ್ನೇನಿರಬಹುದು!' ಎಂದು ಒಪ್ಪಿದರು ನಿಜವಾಗಿಯೂ ಈ ಎರಡು ಮಾತಿನಿಂದ ಶ್ರೀ ಪರಮಹಂಸರು ಆ ದಿನ ವೇದಾಂತ ವಿಷಯವಾಗಿ ಆತನ ಕಣ್ಣನ್ನು ಸಂಪೂರ್ಣವಾಗಿ ತೆರೆದಿದ್ದರು ವಾಸ್ತವವಾಗಿಯೂ ಈ ಎರಡೇ ಮಾತುಗಳನ್ನು ಹೃದಯದಲ್ಲಿ ಧಾರಣೆಮಾಡಿದರೆ ವೇದಾಂತದ ಸಕಲ ವಿಷಯಗಳನ್ನು ತಿಳಿದಂತಾಗುವುದೆಂದು ಅತನು ಶ್ರೀ ಪರಮಹಂಸರ ಮಾತನ್ನು ಕೇಳಿ ವಿಸ್ಮಿತನಾಗಿದ್ದನು

– ಕ್ರಮಶಃ

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK LIMITED.

ESTD 1906

ಮಾರಾಟಕ್ಕೆ ಸಿದ್ಧವಾಗಿವೆ.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ ಎಲ್. ಕಾರಂತ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ

ಬೆಲೆ 1-4-0

೫ ನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ, ಎಲ್ ಟಿ

ಬೋರ್ಡ್ ಹೈಸ್ಕೂಲ್, ಮೂಲ್ಕಿ

ಮತ್ತು

ಎನ್ ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ

ಬೋರ್ಡ್ ಹೈಸ್ಕೂಲು ಪುತ್ತೂರು

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರೆಕೊಳ್ಳಿರಿ

ಶಾರದಾ ಛಾಪಖಾನೆ

ಮಂಗಳೂರು

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ತೀವ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ಸಿನೆಮಾ ಪುಟ

ಶಾಂತಾರಾಮರ ಸ್ಥಾನದಲ್ಲಿ

ಪಲ್ಯಾಣಶ್ಯಗರ ಬೋರ್ಡಿಗೆ ಶ್ರೀ. ಎಚ್. ವಿ. ಬೀರರನ್ನು ಪ್ರೊಡಕ್ಷನ್ ಚೀಫ್ ಆಗಿ ನೇಮಿಸಲಾಗಿದೆ. ಶಾಂತಾರಾಮರು ರಾಜೀನಾಮೆಯಿತ್ತಿರುವ ಮುಂದೆ ಗೌರವ ಕಾರ್ಯಕರ್ತರಾಗಿರುವರಂತೆ.

ಬೊಂಬೇ ಟಾಕೀಸ್ ವ್ಯಾಜ್ಯ

ಬೊಂಬೇ ಟಾಕೀಸ್‌ನವರ ಮಹತ್ವದೊಂದು ಮೊಕದ್ದಮೆಯು ಬೇಗನೇ ಬೊಂಬಯಿ ಹೈ ಕೋರ್ಟಿನಲ್ಲಿ ವಿಚಾರಣೆಯಾಗಲಿದೆ. ಬೊಂಬೇ ಟಾಕೀಸಿನ ಆಡಳಿತೆ ಮಂಡಳಿಕ್ಕೂ ರಾಯ್‌ಬಹದ್ದೂರ್ ಚುನೀಲಾಲರಿಗೂ ಇತ್ತೀಚೆಗೆ ಉಂಟಾದ ಅಂತಃಕಲಹವೇ ಈ ವ್ಯಾಜ್ಯದ ಕಾರಣ. ಈ ವ್ಯಾಜ್ಯದಲ್ಲಿ ಚುನ್ನಿಲಾಲರ ಕಡೆಯಿಂದ ಶ್ರೀ. ಪಟೇಲ್‌ವಾಡರೂ, ಆಡಳಿತೆ ಮಂಡಳಿ ಕಡೆಯಿಂದ ಶ್ರೀ. ಕೆ. ಎಂ. ಮುನ್ಶಿಯವರೂ ವಕೀಲರಾಗಿ ವಾದಿಸುವರು. ಈ ವ್ಯಾಜ್ಯದ ಫಲವಾಗಿ ಬೊಂಬೇ ಟಾಕೀಸು ಮುರಿದುಹೋದೀತೇ ಎಂದು ಹಲವರು ಸಂಶಯ ಪಡುತ್ತಿದ್ದಾರೆ.

ಆಚಾರ್ಯ ಆರ್ಟ್ ಪ್ರೊಡಕ್ಷನ್

ಈ ಹೊಸ ಸಂಸ್ಥೆಯ ನಿರ್ವಾಹಕ ಶ್ರೀ ಆಚಾರ್ಯರು ಈಗಾಗಲೇ 'ಉಲ್ಝನ್' ಮತ್ತು 'ಕುಂವಾರಿ ಬಾಪ್' ಎಂಬೀ ಎರಡು ಪ್ರಸಿದ್ಧ ಚಿತ್ರಗಳನ್ನು ತಯಾರಿಸಿದ್ದು, ಈಗ ಮೂರನೆಯ ಚಿತ್ರದ ತಯಾರಿಗೆ ಕೈಹಚ್ಚಿದ್ದಾರೆ. ಪೃಥ್ವೀರಾಜನು ಇದರಲ್ಲಿ ಮುಖ್ಯಪಾತ್ರ ವಹಿಸುವನೆಂದು ಸುದ್ದಿ. ಇತರ ಪಾತ್ರವರ್ಗಗಳ ವಿವರ ತಿಳಿದಿಲ್ಲ. ದೀವಾಳಿ ಸಮಯದಲ್ಲಿ ಇದರ ಮುಹೂರ್ತವಾಗಲಿದೆ.

ರಾಜಾ ಮೂವಿಟೋನ್

ಈ ಹೆಸರಾಂತ ನಟ ಜುಹೂರ್ ರಾಜರು ಒಂದು ಹೊಸ ಸಂಸ್ಥೆ ಸ್ಥಾಪಿಸಿದ್ದಾರೆ. ಅವರು ತಯಾರಿಸುವ ಮೊದಲನೆಯ ಚಿತ್ರದ ಹೆಸರು 'ಮಜಾಕ್' ಎಂದು. ಕಮಲ ಅಮ್ರೋಹಿ ಇದರ ಕಥಾಲೇಖಕರು. ಉತ್ತಮವರ್ಗದ ನಟನಟಿಯರನ್ನು ಆರಿಸಿ ಪ್ರಥಮ ಚಿತ್ರವನ್ನೇ ಅತ್ಯಂತ ಯಶಸ್ವಿ ಮಾಡಬೇಕೆಂದು ಜುಹೂರ್ ರಾಜರ ನಿರ್ಧಾರವಾಗಿದೆ.

ಬಾಲಾಜಿಯಲ್ಲಿ 'ಮುಖಾಬಿಲಾ'

ನಾಡಿಯಾ ಮತ್ತು ಯಾಕೂಬ್ ಇವರ ಮನೋಹರ ನಟನೆಯುಳ್ಳ ಹೋಮಿವಾಡಿಯಾರ ಕೃತಿ 'ಮುಖಾಬಿಲಾ' ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ತಾ. 13ರಿಂದ ಪ್ರದರ್ಶಿಸಲ್ಪಡುತ್ತದೆ. ನಾಡಿಯಾಳ ಅದ್ಭುತ ಕಾರ್ಯಗಳು ಸಿನೆಮಾ ಪ್ರಿಯರನ್ನು ಇಷ್ಟರಲ್ಲೇ ಈ ಮೇಹಾಂಕನಗೊಳಿಸಿವೆ; ಇದರಲ್ಲಿ ಆಕೆಯ ಉಜ್ವಲ ನಟನೆಯಿದೆ. ಯಾಕೂಬನ ಶ್ರೇಷ್ಠ ನಟನೆಯು ಅದಕ್ಕೆ ಕಳೆಗೊಟ್ಟಿದೆ. ಮಾನವ ಬುದ್ಧಿಯು ನಾಯಿಯೊಂದು ಮಾಡಿದ ಸಾಹಸ ಘಟನೆಗಳನ್ನಿದರಲ್ಲಿ ಕಾಣಬಹುದು. ನಾಡಿಯಾಳ ನೃತ್ಯ, ಯಾಕೂಬನ ಗಝಲ್ ಗಾಯನ ಇವುಗಳ ಸನ್ಮೋಳ ಯಾರನ್ನಾದರೂ ಆಕರ್ಷಿಸದಿರದು.



ಮೊದಲದರ್ಜೆಯ ಸಮಾಜಶತ್ರು

ಜಗದ ಹೆಗ್ಗಣ—ಪುಂಡ

ಕೀರ್ತಿಗೆ ಕಡು ಕಲಂಕ!
ಸ್ವಾತಂತ್ರ್ಯಕೆ ಆತಂಕ!
ಸುಲಿಯುವ, ಕೊಲ್ಲುವ, ಕೆಡಿಸುವ—
ಜಗದ ಹೆಗ್ಗಣ—ಪುಂಡ!
ತನ್ನ ಕುಲವನೆ ಕೊಲುವ
ಕೊಡಲಿ—ಕಾವಿನ ತೆರದಿ
ತನ್ನ ಜನರನೆ ಕಾಡಿ
ಪೀಡಿಸುವ ಈ ಪುಂಡು
—ಆಳ್ವರಿಗೆ ಹುಸಿಗುಂಡು!
ಜಗದ ಹೆಗ್ಗಣ—ಪುಂಡ!
ಕಾವ ಭಟರನು ಕಂಡು
ಸುಲಿದ ಒಡವೆಯ ಕೊಂಡು
ಬಡಪಾಯಿಗಳನು ಮುಂ
ದೂಡುವ, ಓಡುವ, ನಗುತ ನೋಡುವ!
ಜಗದ ಹೆಗ್ಗಣ—ಪುಂಡ!

ಸಾಕಪ್ಪಾ ಈ ಕಷ್ಟಗಳು!

ಪಟ್ಟಣಗಳಲ್ಲಿ ಆಹಾರದ ಕೊರತೆಯಾಗಿದೆ ಮತ್ತು ಧಾರಣೆಗಳು ಏರಿವೆ. ರೈತರಿಗೆ ಪೇಟೆಯಿಲ್ಲ, ಹಣವಿಲ್ಲ. ಮನೆತನಗಳು ಅಗಲಿಸಲ್ಪಟ್ಟಿವೆ—ಪರಸ್ಪರ ಬೆಟ್ಟಿಗೆ ಅವಕಾಶವಿಲ್ಲ.

ಶಾಲೆ—ಆಸ್ಪತ್ರೆ—ಅಂಚೇಕಚೇರಿಗಳನ್ನು ಕೊಳ್ಳೆಹೊಡೆಯಲಾಗಿದೆ. ಕಾಗದ ಪತ್ರಗಳು—ದಪ್ತರುಗಳು ನಾಶಗೊಳಿಸಲ್ಪಟ್ಟುದರಿಂದ ಪಿಂಚಣಿಯ ಹಣ, ಪೋಸ್ಟಿನಲ್ಲಿಟ್ಟ ಹಣ ಮತ್ತು ಭೂಮಿಯ ಸೊತ್ತು—ಇವೆಲ್ಲಕ್ಕೂ ಗಂಡಾಂತರವುಂಟಾಗಿದೆ.

ಪುಂಡರನ್ನು ಪ್ರತಿಭಟಿಸಿರಿ!

ಬರಿ ಅಧಿಕಾರಿಗಳಿಗಿಂತಲೂ
ನಾವೇ ಈ ಗಲಾಟೆಯನ್ನು
ಹತೋಟಿಯಲ್ಲಿ ತರಬಲ್ಲೆವು.

CPU.54.Kn

ಸಾದರ-ಸ್ವೀಕಾರ

ಬಾಲಚಂದ್ರ

(ನವಸಂಪುಟ 1 ಸಂ. 1)

ವಿದ್ಯಾ ವಿಷಯಕವಾದ ಮಾಸಪತ್ರಿಕೆ ಬಾಲಚಂದ್ರವು ಈಗ ನವಸಂಪುಟವಾಗಿ ಉಡುಪಿಯಿಂದ ಶ್ರೀಗಳಾದ ಕೆ. ಆರ್. ಶೆಣೈ ಮತ್ತು ಕೆ. ಎಚ್. ಶೆಟ್ಟಿ ಇವರ ಸಂಪಾದಕತ್ವದಿಂದ ಹೊರಡುತ್ತದೆ. ವಿದ್ಯಾ ವಿಷಯಕ ಲೇಖನ, ಸೂಚನೆ, ಗದ್ಯ, ಕವಿತೆಗಳಿಂದ ಈ ಸಂಚಿಕೆ ಮನೋಹರವಾಗಿದೆ. ಕಾಗದದ ಅಭಾವದೀ ಕಾಲದಲ್ಲಿಯೂ ಇಂಥಾ ಸಾಹಸವನ್ನು ಕೈಕೊಂಡ ಸಂಪಾದಕ ಪ್ರಕಾಶಕರನ್ನು ನಾವು ಅಭಿನಂದಿಸುತ್ತೇವೆ. ಇದರ ವಾರ್ಷಿಕ ವರ್ಗಣಿ ರೂ. 1-8-0.

ಕಾಗದ-ಕತ್ತರಿ

ಕಾಗದ ಮತ್ತು ಕತ್ತರಿ ಇದ್ದಿದ್ದರೆ, ಅನೇಕ ಬಗೆಯ ಆಟದ ಸಾಮಾನುಗಳನ್ನು ಮಾಡಬಹುದು. ಇಂಥಾ ಕೆಲಸದಿಂದ ಕೈ, ಕಣ್ಣು ಮತ್ತು ಬುದ್ಧಿ ಇವುಗಳಿಗೆ ಯೋಗ್ಯ ಅಭ್ಯಾಸವೂ ಆಗುತ್ತದೆ. ಮಕ್ಕಳು ಸಹಜವಾಗಿ ಚಟುವಟಿಕೆಯಿಂದ ಕೂಡಿರುವವರಾದುದರಿಂದ, ಇಂಥಾ ಕಾಗದ ಕತ್ತರಿ ಪ್ರಯೋಗವನ್ನು ಅವರಿಗೆ ಕಲಿಸಿಕೊಟ್ಟಲ್ಲಿ ಅವರು ಆ ವಿಷಯ ಹೆಚ್ಚಿನ ಆಸಕ್ತಿ ವಹಿಸುವರು. ಸ್ವಯ್ಯೋಯ ಶಿಕ್ಷಣ ಮಾಧ್ಯಮ ವಿದಬೇಕೆಂಬ ಆಧುನಿಕ ಕ್ರಾಂತಿ ಯುಗದಲ್ಲಿ ಈ ಕುರಿತು ಬರೆದ ಪುಸ್ತಕಗಳಿಗೆ ಬಹಳ ಸ್ವಾಗತವಿದೆ. ಕನ್ನಡದಲ್ಲಿ ಈ ವಿಷಯವಾಗಿ ಶ್ರೀ. ದಾಮೋದರ ಬಾಳಿಗರು ಒಂದು ಸಚಿತ್ರ ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಇದರ ಬೆಲೆ ನಾಲ್ಕಾಣೆ. ಕ್ರೌನ್ 1/8 ಆಕಾರದ 40 ಪುಟಗಳೂ ಅನೇಕ ಚಿತ್ರಗಳೂ ಇವೆ. ಅಂದವಾದ ತ್ರಿವರ್ಣ ರಂಜಿತ ಹೊದಿಕೆ ಮತ್ತು ಮುದ್ರಣವುಳ್ಳ ಈ ಪುಸ್ತಕವು ಮಂಗಳೂರು, ರಥಬೀದಿಯ ಬಾಳಿಗ ಎಂಡ್ ಸನ್ಸ್ ಇಲ್ಲಿ ದೊರಕುವುದು. [illegible] ಈ ಪುಸ್ತಕದ ಪ್ರಯೋಜನ ಪಡೆದುಕೊಳ್ಳಬೇಕೆಂದು ನಾವು ಸೂಚಿಸುವೆವು.

ಪ್ರಭಾತ (ದೀಪಾವಳಿ ಸಂಚಿಕೆ)

'ಜಯಕರ್ನಾಟಕ' ಆಕಾರದ 48 ಪುಟಗಳುಳ್ಳ ವಿಶೇಷ ಸಂಚಿಕೆಯನ್ನು ಮಂಗಳೂರು ಪ್ರಭಾತ ವಾರಪತ್ರಿಕೆಯ ವ್ಯವಸ್ಥಾಪಕರು ಪ್ರಕಟಿಸಿದ್ದಾರೆ. ಕಾಗದದ ಕುಟ್ಟಿಯ ಕಾಲದಲ್ಲಿಯೂ ಇಂಥಾ ಪ್ರಯತ್ನ ಕೈಕೊಂಡದ್ದು ಅಭಿನಂದನೀಯ. ಪತ್ರಿಕೆ ಸುಂದರವಾಗಿದೆ. ಕತೆ, ಕವಿತೆ, ಲೇಖನಗಳಿಂದ ವಾಚನೀಯವಿದೆ.

ಪೆರ್ಡೂರಾಲು

ಕಾರ್ಕಳ ಮೂಡರೀ ಕೃಷಿ ಕ್ಷೇತ್ರದಲ್ಲಿ ಕೃಷಿಕ ಮಂಡಲಿಯ ಮೂರನೆಯ ವಾರ್ಷಿಕೋತ್ಸವವು ನವಂಬರ ತಾ. 26ನೇ ಪೂ. 10 ರಿಂದ ಕ್ರಮದಂತೆ ಪ್ರದರ್ಶನಾದಿಗಳ ಮೊದಲುಗೊಂಡು ಜರಗಲಿರುವುದು.

ಕುಂದಾಪುರ

ಬಿ. ಓ. ಎಲ್. ತೇರ್ಗಡೆ

ಕುಂದಾಪುರ ಬೋರ್ಡ್ ಹೈಸ್ಕೂಲಿನ ಹಿಂದೀ ಪಂಡಿತರಾದ ಶ್ರೀ. ಕಟೀಲ್ ಗಣಪತಿ ಶರ್ಮ, ಇವರು ಮದ್ರಾಸ್ ಯುನಿವರ್ಸಿಟಿಯ ಬಿ. ಓ. ಎಲ್. ಡಿಗ್ರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರಾಗಿ ತಿಳಿದುಬರುತ್ತದೆ.

ಕಾಸರಗೋಡು

ಬಿರುಗಾಳಿ ಅನಾಹುತ

ಕಳೆದ ವಾರ ಬಿರುಗಾಳಿ ಬಂದು, ಕೆಲ ಕಡೆಗಳಲ್ಲಿ ನೂರಾರು ಅಡಿಕೆ ಮರಗಳು ಕಿತ್ತು ಹೋಗಿವೆಯೆಂದೂ, ಷಡುಗಡಲಲ್ಲಿ ಇದೇ ಗಾಳಿಗೆ ಒಂದು ಮಂಜಿ ಮುಳುಗಿ ಹೋಯಿತೆಂದೂ ತಿಳಿದಿದೆ.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಮತ್ತೊಂದು ದೃಷ್ಟಾಂತ – ಸ್ವಾಮಿ. ತುರಿಯಾನಂದನ ವಿಷಯವಾಗಿ

ನಮ್ಮ ಸ್ನೇಹಿತರಲ್ಲೊಬ್ಬನು (ಸ್ವಾಮಿ ತುರಿಯಾನಂದ) ಒಂದಾನೊಂದು ಸಮಯ ವೇದಾಂತ ಚರ್ಚೆಯಲ್ಲಿ ಬಹಳ ಮನಸ್ಸು ಕೊಟ್ಟಿದ್ದನು. ಆಗ ಶ್ರೀ ಪರಮಹಂಸರಿದ್ದರು. ಆತನ ಅಖಂಡ ಬ್ರಹ್ಮಚರ್ಯ, ಭಕ್ತಿ, ನಿಷ್ಠೆ ಇತ್ಯಾದಿಗಳನ್ನು ನೋಡಿ ಅತನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ವೇದಾಂತದ ತರ್ಕದಲ್ಲಿಯೂ ಜಪಧ್ಯಾನದಲ್ಲಿಯೂ ನಿರತನಾಗಿ ಆ ಸ್ನೇಹಿತನು ಶ್ರೀ ಪರಮಹಂಸರ ಬಳಿಯಲ್ಲಿ ಮೊದಲು ಮೊದಲು ಬಂದಂತೆ ಆಗ ಸ್ವಲ್ಪ ದಿವಸ ಬರಲಿಲ್ಲ. ಶ್ರೀ ರಾಮಕೃಷ್ಣದೇವರ ತೀಕ್ಷ್ಣದೃಷ್ಟಿಗೆ ಅದು ಗೋಚರವಾಗದಿರಲಿಲ್ಲ. ಆ ಸ್ನೇಹಿತನೊಂದಿಗೆ ಬರುತ್ತ ಹೋಗುವ ಒಬ್ಬ ವ್ಯಕ್ತಿಯನ್ನು ಶ್ರೀ ಪರಮಹಂಸರು ದಕ್ಷಿಣೇಶ್ವರದಲ್ಲಿ ಒಬ್ಬಂಟಿಗನಾಗಿರುವುದನ್ನು ಕಂಡು 'ಏನಿದು, ನೀನು ಒಬ್ಬಂಟಿಗನಾಗಿದ್ದಿ? ಅತನು ಬರಲಿಲ್ಲವೇನು?' ಎಂದು ಕೇಳಿದರು. ಆ ವ್ಯಕ್ತಿಯು ಹೀಗೆಂದನು:—'ಆತನೀಗ ವೇದಾಂತ ಚರ್ಚೆಯಲ್ಲೇ ನಿರತನಾಗಿದ್ದಾನೆ, ಹಗಲಿರುಳೂ ಗ್ರಂಥ ಪಠನ, ವಿಚಾರ ತರ್ಕಗಳನ್ನು ಹಿಡಿದಿದ್ದಾನೆ. ಸಮಯವು ಹಾಳಾಗುತ್ತದೆಂದು ಎಣಿಸಿ ಬಾರದಿರಲೂಬಹುದು.' ಶ್ರೀ ಪರಮಹಂಸರು ಕೇಳಿ ಮತ್ತೇನೂ ಆ ಹೊತ್ತು ಮಾತನಾಡಲಿಲ್ಲ.

ವೇದಾಂತವೆಂದರೆ ಇನ್ನೇನದೆ? ಬ್ರಹ್ಮವೇ ಸತ್ಯವಸ್ತು, ಜಗತ್ತು ಮಿಥ್ಯ ವೆಂಬ ಧಾರಣೆಯೇ ವೇದಾಂತ

ಕೆಲಕಾಲದ ನಂತರ, ನಾವು ಯಾರ ವಿಷಯವನ್ನೆತ್ತಿದ್ದೇವೆಯೋ ಅತನೇ ಶ್ರೀ ಪರಮಹಂಸರನ್ನು ಕಾಣಬೇಕೆಂದು ಬಂದಿದ್ದನು. ಅತನನ್ನು ನೋಡಿದ ಮಾತ್ರವೇ 'ಏನಪ್ಪ, ನೀನೀಗ ಬಹಳ ವೇದಾಂತ ವಿಚಾರವನ್ನು ಮಾಡುತ್ತ ಇದ್ದಿಯಂತೆ, ಅದನ್ನು ಮಾಡುವುದು ಉತ್ತಮವೇ ಸರಿ. ಆ ವಿಚಾರವು ಬ್ರಹ್ಮಸತ್ಯ, ಜಗತ್ತು ಮಿಥ್ಯವೆಂಬುದರಲ್ಲಿವೆ? ಅಥವಾ ಇನ್ನೇನಾದರೂ ಉಂಟೇ ಎಂದು?' ಕೇಳಿದರು.

ನಮ್ಮ ಸ್ನೇಹಿತನು 'ಹೌದು, ಅದೇ ಸರಿ, ಅದರಲ್ಲಿ ಇನ್ನೇನಿರಬಹುದು?' ಎಂದು ಒಪ್ಪಿದರು. ನಿಜವಾಗಿಯೂ ಈ ಎರಡು ಮಾತಿನಿಂದ, ಶ್ರೀ ಪರಮಹಂಸರು ಆ ದಿನ ವೇದಾಂತ ವಿಷಯವಾಗಿ ಅತನ ಕಣ್ಣನ್ನು ಸಂಪೂರ್ಣವಾಗಿ ತೆರೆದಿದ್ದರು. ವಾಸ್ತವವಾಗಿಯೂ ಈ ಎರಡೇ ಮಾತುಗಳನ್ನು ಹೃದಯದಲ್ಲಿ ಧಾರಣೆಮಾಡಿದರೆ ವೇದಾಂತದ ಸಕಲ ವಿಷಯಗಳನ್ನು ತಿಳಿದಂತಾಗುವುದೆಂದು ಅತನು ಶ್ರೀ ಪರಮಹಂಸರ ಮಾತನ್ನು ಕೇಳಿ ವಿಸ್ಮಿತನಾಗಿದ್ದನು.

ಕ್ರಮಶಃ

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

ಮಾರಾಟಕ್ಕೆ ಸಿದ್ಧವಾಗಿವೆ.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಬೆಲೆ 1-4-0.

೫ ನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ, ಎಲ್ ಟಿ

ಬೋರ್ಡ್ ಹ್ಯಾಸ್ಕೂಲ್, ಮುಲ್ಕಿ

ಮತ್ತು

ಎಸ್. ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ.

ಬೋರ್ಡ್ ಹ್ಯಾಸ್ಕೂಲು ಪುತ್ತೂರು

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ.

ಶಾರದಾ ಛಾಪಖಾನೆ

ಮಂಗಳೂರು

ದಿ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿ ಮಂಗಳೂರು ಮತ್ತು ದಿ ಜ್ಯೊಂಟ್ ಬುಕ್ಕಿಂಗ್ ಆಫೀಸು ಕೊಡಿಯಾಲಬೈಲು

ಕಡಿಮೆ ಖರ್ಚು — ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. — ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

[illegible] 0—1—6 Regd. No. M 3460

ತಾರೀಖು 13—11—1942

The Bank of Mangalore Limited

ESTD: 1931

HEAD OFFICE Mangalore — **BRANCHES** Moodabidri & Padubidr

ANNOUNCEMENT

On and from 1st October 1942, deposits will be accepted at the following revised rates

FIXED:
From 6 to 11 months 2½%. From 12 to 23 months 3½%.
24 months or over 4%
Current: ½% from July to December
1% from January to June.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕಜ್ಜೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ
ದೊರೆಯುವುದು

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾಪಕರಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು: —
(1) ಡಾಕ್ಟರ್ ವಿ. ಪಿ. ಕಾಮತ್, ರಥವೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಿಕ ಸ್ನಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M B B S ಪಿ ಪಿ ಪಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ —1 ಮರಾಠೆ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್ ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 20—11—1942 [ಸಂಚಿಕೆ 46]

'ಕ್ರಿಪ್ಸರು ಕೊಟ್ಟಮಾತಿಗೆ ತಪ್ಪಿ ನಡೆದರು'

ಯಾರಿಗೂ ಆ ಯೋಜನೆ ಸಮ್ಮತವಾಗಲಿಲ್ಲವೇಕೆ?

ಲೂಯಿ ಫಿಶರರು ಬಹಿರಂಗಪಡಿಸುತ್ತಾರೆ!

ಕ್ರಿಪ್ಸ್ ಸಂಧಾನಕಾಲದಲ್ಲಿ ಭಾರತದಲ್ಲಿದ್ದ ಅಮೆರಿಕದ ಪ್ರಸಿದ್ಧ ಗ್ರಂಥಕರ್ತರೂ, ಲೇಖಕರೂ ಆದ ಲೂಯಿ ಫಿಶರರು, ಅಮೆರಿಕಕ್ಕೆ ಮರಳಿ ಹೋದನಂತರ, ಅಲ್ಲಿನ 'ನೇಶನ್' ಪತ್ರಿಕೆಯಲ್ಲಿ ಭಾರತದ ಕುರಿತು ನಾಲ್ಕು ವಿಚಾರ ಪರಿಪ್ಲುತ ಲೇಖನಗಳನ್ನು ಬರೆದರು. ಅವುಗಳಲ್ಲಿ ಮೂರರ ಸಾರಾಂಶವನ್ನು ನಾವು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ನಾಲ್ಕನೆಯ ಸವಿಸ್ತಾರ ಲೇಖನ ಕ್ರಿಪ್ಸ್ ಸಂಧಾನಕ್ಕೆ ಸಂಬಂಧಿಸಿದ್ದು. ಅದರಲ್ಲಿ ಕ್ರಿಪ್ಸರು ಹೇಗೆ ಕೊಟ್ಟಮಾತಿಗೆ ತಪ್ಪಿ ನಡೆದರು, ಕಾಂಗ್ರೆಸಿನವರು ಸಂಧಾನಕ್ಕೆ ಹೇಗೆ ಆತುರರಿದ್ದರು, ಭಾರತೀಯರು ಜಪಾನಿನೆದುರು ಹೋರಾಡಲು ಬಯಸಿದರೆ, 'ಭಾರತೀಯರು ಸೈನಿಕರಿಗೆ ಹೊಟೇಲುಗಳನ್ನಿಡಿರಿ' ಎಂದು ಹೇಗೆ ಬ್ರಿಟಿಷ್ ಪ್ರಭುತ್ವ ಹೇಳಿತು ಎಂದು ಸ್ಪಷ್ಟಸ್ಪಷ್ಟವಾಗಿ ಬರೆದಿದ್ದಾರೆ. ಆ ಪತ್ರಾಲೇಖನದ ಸಾರಾಂಶವಿಲ್ಲಿ ಕೊಡಲಾಗಿದೆ:

ಕೊಟ್ಟ ಮಾತಿಗೆ ತಪ್ಪಿದರು

'ಕ್ರಿಪ್ಸರು ಕೂಡಲೇ ಇಲ್ಲಿ ಬ್ರಿಟಿಷ್ ಮಂತ್ರಿಮಂಡಳದಂತಿರುವ ಒಂದು ರಾಷ್ಟ್ರೀಯ ಸರಕಾರ ಸ್ಥಾಪನೆಯಾಗುವುದೆಂದೂ, ವೈಸರಾಯರು ಬ್ರಿಟಿಷ್ ಮಂತ್ರಿಮಂಡಳದಲ್ಲಿ ಚಕ್ರವರ್ತಿಯಂತೆ ಇರುವರೆಂದೂ, ಮೊದಲು ತಿಳಿಸಿ, ಭಾರತ ಕಚೇರಿಯನ್ನು ಸಾಮಂತ ಕಚೇರಿಗೆ ವರ್ಗಾಯಿಸಬೇಕೆಂದೂ ಅವರೇ ಸೂಚಿಸಿ ಕಡೆಗೆ ಆ ಮಾತನ್ನು ನಿರಾಕರಿಸಿ, ಕೊಟ್ಟಮಾತಿಗೆ ತಪ್ಪಿದ ವಿಷಯವು ರಾಷ್ಟ್ರಪತಿ ಅಜಾದರ ಪತ್ರದಿಂದ ಸ್ಪಷ್ಟವಾಗುತ್ತದೆ. ಸಂರಕ್ಷಣೆಯ ವಿಚಾರವಾಗಿ ಸಮಾಧಾನಕರವಾದ ಒಪ್ಪಿಗೆ ಆಗಿದ್ದರೂ, ವೈಸರಾಯರ ಅಧಿಕಾರದ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದು ಮಾತುಕತೆ ಮುರಿಯಿತೆಂದು ರಾಜಾಜಿಹೇಳಿದ್ದಾರೆ. ಮೊದಲು ಕ್ರಿಪ್ಸರು ಭಾರತೀಯರಿಗೆ ರಾಷ್ಟ್ರೀಯ ಸರಕಾರದ ಭರವಸೆ ಕೊಟ್ಟ ಮೇಲೆ ವೈಸರಾಯರೂ, ವೇವಲರೂ ಅದನ್ನು ಪ್ರತಿಭಟಿಸಿದ್ದರಿಂದ, 'ಬ್ರಿಟಿಷ್ ಸರಕಾರದವರು, ತಾವೇ ಮೊದಲಿನ ವಚನವನ್ನು ಹಿಂತೆಗೆದುಕೊಳ್ಳುವಂತೆ ಕ್ರಿಪ್ಸರಿಗೆ ಹೇಳಬೇಕಾಯಿತೆಂದೂ ತಿಳಿದುಬಂದಿದೆ. ಅಂತೂ ಮೊದಲು ಕ್ರಿಪ್ಸರು ಮಾತುಕೊಟ್ಟಿದ್ದರೆಂಬುದಕ್ಕೆ ಬ್ರಿಟನ್ ಅಮೆರಿಕನ್ ಸರಕಾರಗಳ ಹತ್ತಿರ ಬೇಕಾದಷ್ಟು ಆಧಾರಗಳು ಇವೆ. 'ಕ್ರಿಪ್ಸರಿಗೆ ಮೊದಲು ಅಧಿಕಾರಕೊಟ್ಟು, ಆ ಮೇಲೆ ಅದನ್ನು ಕಿತ್ತುಕೊಂಡದ್ದರಿಂದ, ಅವರಿಗೆ ಕೆಟ್ಟ ಹೆಸರು ತರಬೇಕೆಂದು ಬ್ರಿಟಿಷ್ ಪ್ರತಿಗಾಮಿಗಳ ಉದ್ದೇಶವಿದ್ದಂತೆ ತೋರುತ್ತದೆ!' ಎಂಬ 'ಸ್ಟೇಟ್ಸ್‌ಮನ್' ಬರೆದಿದೆ. ಪ್ರೊ। ರೆಜಿನಾಲ್ಡ್ ಕೌಪ್ಲೆಂಡ್ ಎಂಬವರು ಕ್ರಿಪ್ಸರೊಡನೆ ಬಂದಿದ್ದು, ಅವರೂ ಈ ರೀತಿ ಬರೆದಿದ್ದಾರೆ. ಅಂತೂ ತೆರೆಯಮರೆಯಲ್ಲಿ ಏನೋ ನಡೆದೂ ಕ್ರಿಪ್ಸರನ್ನು ಹಿಂದಿನಿಂದ ಯಾರೋ ಕುಡಿದೆಳೆದರು.

ಎಲ್ಲರೂ ಏಕೆ ನಿರಾಕರಿಸಿದರು?

'ಕ್ರಿಪ್ಸರು ತಮ್ಮ ಮಾತಿನಂತೆ ನಡೆದಿದ್ದರೆ ಎಲ್ಲರಿಗೂ ಸಮ್ಮತವಾಗುತಿತ್ತು. ರಾಷ್ಟ್ರೀಯ ಸರಕಾರವನ್ನು ಯಾವುದೇ ಪಕ್ಷವಾಗಲಿ ಬೇಡವೆನ್ನುತ್ತಿರಲಿಲ್ಲ. 'ರಾಷ್ಟ್ರೀಯ ಸರಕಾರದಲ್ಲಿ ಕಾಂಗ್ರೆಸಿನೊಡನೆ ಸಹಕರಿಸುವುದಾಗಿ ಜಿನ್ನರೂ ಒಪ್ಪಿದ್ದಾರೆ. ಅಂತೂ ಬ್ರಿಟಿಷರು ಮನಸ್ಸುಮಾಡಿದ್ದರೆ ಕೇವಲ ಇಪ್ಪತ್ತನಾಲ್ಕು ತಾಸಿನಲ್ಲಿ, ಭಾರತದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾಗುತಿತ್ತು. ಕ್ರಿಪ್ಸರು ಸಂಧಾನಕ್ಕಾಗಿ ತೆರಳಿದ ಕಾಲವೂ ದುರ್ಧರವಿತ್ತು. ಹಾಂಕಾಂಗ್, ಮಲಯ ಸಿಂಗಾಪುರ ರಂಗೂನುಗಳ ಪತನವಾಗಿತ್ತು. ಎಲ್ಲಿ ನೋಡಿದರೂ ಬ್ರಿಟಿಷರು ನಿರಾಶರಾಗಿದ್ದರು, ಆದ್ದರಿಂದ ಭಾರತೀಯರನ್ನು ಸಮಾಧಾನಪಡಿಸಿ, ಭಾರತವನ್ನು ರಕ್ಷಿಸಬೇಕೆಂದು ಕ್ರಿಪ್ಸರು ಸಂಧಾನಕ್ಕೆ ಹೊರಟರು. 'ಸ್ವೀಕರಿಸಿದರೆ ಎಲ್ಲವನ್ನೂ ಸ್ವೀಕರಿಸಿ, ಇಲ್ಲವಾದರೆ ಎಲ್ಲವನ್ನೂ ಬಿಟ್ಟುಬಿಡಿ!' ಎಂದು ಕ್ರಿಪ್ಸರು ಹೇಳಿದರು. ಒಂದೊಂದು ಪಕ್ಷಕ್ಕೆ ಒಂದೊಂದು ಸರಿತೋರಲಿಲ್ಲವಾಗಿ ಎಲ್ಲರೂ ಅವರ ಯೋಜನೆಯನ್ನು ನಿರಾಕರಿಸಿಬಿಟ್ಟರು. ಕ್ರಿಪ್ಸರು ಎರಡುಶಬ್ದ ಉಪಯೋಗಿಸಿದರು 'ಹೋರಾಟ ಮುಕ್ತಾಯ' 'ಯುದ್ಧ ಮುಕ್ತಾಯ' ಎಂದು. ಹೋರಾಟ ಮುಕ್ತಾಯವಾದನಂತರ ಯುದ್ಧ ಮುಕ್ತಾಯವಾಗಲು ಒಂದೆರಡು ವರ್ಷ ಬೇಕೆಂದರು. ಅಂತೂ ಕ್ರಿಪ್ಸರ ಈ ಹೊಸ ಯೋಜನೆಯು ಯುದ್ಧಾನಂತರ ಕೆಲವು ವರ್ಷಗಳ ವರೆಗೂ ಜಾರಿಗೆ ಬರಲಾರದೆಂದು ಭಾರತೀಯರು ತಿಳಕೊಂಡರು. ಬ್ರಿಟಿಷ್ ಮಾಂಡಳಿಕರಾದ ನರೇಂದ್ರರಿಗೆ ಮೂರನೇ ಒಂದಂಶ ಸ್ಥಳವನ್ನು ಕೊಟ್ಟರೆ, ಆಡಳಿತವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬಹುದೆಂದು ... ದರು ಹೇಳಿದರು. ಯೋಜನೆಯಲ್ಲಿ ಪಾಕಿಸ್ತಾನ ತತ್ವದ ಒಪ್ಪಿಗೆ ಮಾತ್ರ ಉಂಟಲ್ಲದೆ, ವ್ಯವಹಾರದಲ್ಲಿ ತಮಗೆ ಪಾಕಿಸ್ತಾನ ಸಿಗುವ ಸೂಚನೆಯಿಲ್ಲವೆಂದು ಜಿನ್ನರೂ ನಿರಾಕರಿಸಿದರು. ಶೂರ ಪಂಜಾಬಿಗಳು ತಮ್ಮ ಮಾತೃ ಭೂಮಿಯಾದ ಪಂಜಾಬು, ಭಾರತದಿಂದ ಬೇರ್ಪಡುವುದೆಂದು ತಿಳಿದು ತಿರಸ್ಕರಿಸಿದರು. ಈ ಯೋಜನೆಯಲ್ಲಿ ಮುಸಲ್ಮಾನರಿಗೆ ಅಧಿಕ ಕೊಡಲಾಗಿದೆಯೆಂದು ಹಿಂದುಗಳೂ, ಹಿಂದುಗಳಿಗೆ ಅಧಿಕವಿದೆಯೆಂದು ಮುಸ್ಲಿಮರೂ ಹೇಳಿದರು. ಅಂತೂ ಕ್ರಿಪ್ಸ್ ಸೂಚನೆಯು ಯಾರಿಗೂ ಬೇಡವಾಯಿತು! ಯೋಜನೆಯ ಅಸಂಬದ್ಧತೆಯೇ ಈ ನಿರಾಕರಣಕ್ಕೆ ಕಾರಣವಾಗಿದೆ. ಯೋಜನೆಯ ದೋಷವೆಂದರೆ ಅದರಲ್ಲಿ ಕೇವಲ ಭವಿಷ್ಯದ ವಿಚಾರ ಮಾತ್ರ ಹೇಳಲಾಗಿತ್ತು. ಆದರೆ ಭವಿಷ್ಯಕ್ಕಿಂತ ತಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳಬಹುದೆಂದು ಸರಕಾರದ ಅಪೇಕ್ಷೆಯಿದ್ದುದೂ ನಿರಾಕರಣೆಗೊಂದು ಕಾರಣ. 'ತಮಗೆ ಒಪ್ಪದಿದ್ದರೆ ಬೇಕಾದ ಪ್ರಾಂತ ಬೇರೆಯಾಗಬಹುದೆಂದು ಹೇಳಿದ್ದೂ ಸರಿಯಿರಲಿಲ್ಲ. ಮದುವೆಯಾಗುವ ಮೊದಲೇ ವಿವಾಹ ವಿಚ್ಛೇದ ವಿಚಾರವೇಕೆ ಬೇಕಿತ್ತು? ರಾಜ್ಯಘಟನೆಯಲ್ಲಿ ಕೆಲವು ವರ್ಷ ಕೂಡಿ ನಡೆದು, ಅಲ್ಲಿ ಸರಿಬರದಿದ್ದರೆ ಮತ್ತೆ ಬೇರ್ಪಾಗಬಹುದೆಂಬುದು ಸರಿಯಾಗಿದೆಯೆಂದು ನೆಹರು ಅಜ್ಞಾಲೂ ಭಾರತೀಯರಿಗೆ ಇಂದಿನ ಗಂಡಾಂತರದಲ್ಲಿ ಏನು ಮಾಡತಕ್ಕದ್ದಿದೆಯೆಂಬ ಪ್ರಶ್ನೆ ಹೆಚ್ಚಿನದಾಗಿತ್ತು. ಅನಿಶ್ಚಿತ ಭವಿಷ್ಯದ ಬಗ್ಗೆ ಕೊಟ್ಟ ಆಶ್ವಾಸನದಿಂದ ಕಾಂಗ್ರೆಸು ತೃಪ್ತವಾಗಲಿಲ್ಲ. ಈ ಯೋಜನೆಯಂತೆ ಸ್ವಾತಂತ್ರ್ಯ ಬರಿಯ ಕನಸಿನ ಗಂಟೆಂದು ಅಭಿಪ್ರಾಯವಾಯಿತು.

ಟ್ಯಾಂಕಿನ ಮೇಲೆ ಚರ್ಚಿಲರು ಕುಳಿತಿದ್ದಾರೆ.

ಆದರೂ ಸಹಕರಿಸಿದರು

'ಬ್ರಿಟಿಷ್ ಪ್ರಭುತ್ವದ ಮುತ್ಸದ್ದಿತನ, ಸದುದ್ದೇಶಗಳಲ್ಲಿ ಅವಿಶ್ವಾಸವಿದ್ದರೂ, ಯುದ್ಧಕಾಲದ ವ್ಯವಸ್ಥೆಯಲ್ಲಿ ಸಹಕರಿಸಲು ಕಾಂಗ್ರೆಸು ಮುಂದೆ ಬಂತು. ಕ್ರಿಪ್ಸರು ರಾಷ್ಟ್ರೀಯ ಸರಕಾರದ ಸೂಚನೆ ಮಾಡಿದರು. ಆಗ ಸಂರಕ್ಷಣಾಖಾತೆಯ ವಿಚಾರ ಚರ್ಚೆ ಆಯಿತು. ಅದರಲ್ಲಿ ಗೊಂದಲವುಂಟಾಯಿತು. ಸಂರಕ್ಷಣೆ ವಿಷಯದಲ್ಲಿ ಭಾರತೀಯ ಮಂತ್ರಿಗೆ ಅಧಿಕಾರ ಕೊಡಬೇಕಾದರೆ ಅವರು ವೈಸರಾಯ್ ಮತ್ತು ವೇವಲರನ್ನು ವಿಚಾರಿಸಬೇಕಾಯಿತು. ಇಲ್ಲಿ ಅಮೆರಿಕ ಪ್ರವೇಶವಾಯಿತು. ಅದರಿಂದ ಪರಿಸ್ಥಿತಿ ಕ್ರಿಪ್ಸರ ಕೈ ಜಾರಿಹೋಯಿತು. ಜನರಲ್ ವೇವಲ್, ಜನರಲ್ ಸರ್ ಅಲೆನ್ ಹಾರ್ಟಿಲಿ ಮತ್ತು ಭಾರತದಲ್ಲಿನ ಬ್ರಿಟಿಷ ಸೈನ್ಯದ ಡೆಪ್ಯುಟಿ ಚೀಫ್ ಆದ ಮೇಜರ್ ಜನರಲ್ ಮೊಲ್ಸ್ವರ್ತ್ ಇವರು ವೇವಲರ ಮನೆಯಲ್ಲಿ ಅಜಾದ್ ನೆಹರುಗಳನ್ನು ಭೇಟಿಯಾದರು. ಆಗ ಕ್ರಿಪ್ಸರೇ ಲಂಡನ್ನಿಗೆ ತಂತಿ ಕಳುಹಿಸಿದರು. ಈ ವಿಚಾರವಿನಿಮಯದ ಫಲವಾಗಿ ಕ್ರಿಪ್ಸರು ಹೊಸದೊಂದು ಸೂಚನೆ ಕಳುಹಿಸಿದರು. ಸೇನಾಪತಿಯ ಯುದ್ಧಖಾತೆಯಿಂದ ಕೆಲವು ಅಧಿಕಾರಗಳನ್ನು, ಎಂದರೆ ಸಾರ್ವಜನಿಕ ಸಂಬಂಧ, ಯುದ್ಧಾನಂತರ ಸೈನ್ಯವಿಸರ್ಜನೆ, ಆರ್ಥಿಕ ಪುನರ್ರಚನೆ, ಪೆಟ್ರೋಲ್ ಹಂಚುವಿಕೆ, ಸೈನಿಕರ ಸುಖಸಾಧನ, ಸೈನಿಕರ ಉಪಹಾರಗೃಹ, ಯಂತ್ರೇತರ ವಿಜ್ಞಾನಸಂಸ್ಥೆ, ಪರರಾಷ್ಟ್ರ ಶಿಷ್ಟಮಂಡಳ ಸ್ವಾಗತ, ಅಸ್ತ್ರ ಮೊದಲಾದವುಗಳ ಮುದ್ರಣ, ನಾಗರಿಕ ಸ್ಥಳಾಂತರ, ಆರ್ಥಿಕ ದಿಗ್ಬಂಧನ ಇವುಗಳನ್ನು ಭಾರತೀಯ ಯುದ್ಧ ಮಂತ್ರಿಗೆ ಒಪ್ಪಿಸಲು ಇದರಲ್ಲಿ ಸೂಚನೆಯಿತ್ತು. ಇದನ್ನು ಕೇಳಿ ಭಾರತೀಯರು ನಕ್ಕುಬಿಟ್ಟರು. 'ಸೈನಿಕರಿಗೆ ಹೋಟೆಲನ್ನಿಡುವ, ಅರ್ಜಿ ನಮೂನೆ ಮುದ್ರಿಸುವ ಕೆಲಸ ನಮಗೆ ಕೊಟ್ಟಿದ್ದಾರೆ!' ಎಂದು ಒಬ್ಬ ಭಾರತೀಯ ಮುಖಂಡರು ಹೇಳಿದರು! ಕಾಂಗ್ರೆಸೂ ಇದನ್ನು ನಿರಾಕರಿಸಿತು.

ಜಾನ್ಸನರ ಸಂಧಾನ ಯತ್ನ

ಹೀಗೆ ಮಾತುಕತೆ ಮುರಿಯುವ ಸಂದರ್ಭ ಬಂದಾಗ, ಆಗ ತಾನೇ ಭಾರತಕ್ಕೆ ಬಂದಿದ್ದ ರೂಸ್‌ವೆಲ್ಟರ ಪ್ರತಿನಿಧಿ ಕರ್ನಲ್ ಲೂಯಿ ಜಾನ್ಸನರು ಕ್ರಿಪ್ಸ್ ಮತ್ತು ನೆಹರುಗಳ ಆಮಂತ್ರಣದ ಮೇರೆಗೆ ಸಂಧಾನರಂಗವನ್ನು ಪ್ರವೇಶಿಸಿದರು. ಅವರು ನೆಹರು, ಕ್ರಿಪ್ಸ್, ವೈಸರಾಯ್, ವೇವಲರನ್ನು ಕಂಡು ಮಾತನಾಡಿದರು. ಕೊನೆಗೆ ತಮ್ಮ ಅಧ್ಯಕ್ಷರ ಅಪ್ಪಣೆಯಂತೆ ಒಂದು ಯೋಜನೆ ತಯಾರಿಸಿದರು. ಅದರ ಪ್ರಕಾರ ಸೇನಾಪತಿಗಳ ಯುದ್ಧಖಾತೆಯನ್ನು ಬಿಟ್ಟು ಉಳಿದದ್ದನ್ನೆಲ್ಲಾ ಓರ್ವ ಭಾರತೀಯ ಸಂರಕ್ಷಕ ಮಂತ್ರಿಗೆ ಒಪ್ಪಿಸಬೇಕೆಂದು ಸೂಚಿಸಲಾಗಿತ್ತು, ಕಾಂಗ್ರೆಸಾದರೂ ಇದರಲ್ಲಿ ಸ್ವಲ್ಪ ಬದಲುಮಾಡಿ

(3ನೇ ಪುಟಕ್ಕೆ ಮುಂದುವರಿದಿದೆ)

ಕ್ರಿಪ್ಸರು ಕೊಟ್ಟ ಮಾತಿಗೆ ತಪ್ಪಿ ನಡೆದರು!

(೧ನೇ ಪುಟದಿಂದ)

ತು ಸಂರಕ್ಷಕ ಖಾತೆಯನ್ನು ಓರ್ವ ಭಾರತೀಯ ಮಂತ್ರಿಗೆ ಒಪ್ಪಿಸಬೇಕು. ಆದರೆ ಯುದ್ಧ ನಿರ್ವಹಣದ ಎಲ್ಲಾ ವಿಷಯಗಳನ್ನು, ಯುದ್ಧಾಂತ್ಯದ ವರೆಗೆ ಸೇನಾಪತಿಗೆ ಒಪ್ಪಿಸಬಹುದೆಂದೂ, ಯುದ್ಧ ಚಟುವಟಿಕೆಗಳ ಪೂರ್ಣ ಅಧಿಕಾರ ಅವರ ಕೈಯ್ಯಲ್ಲಿರಬಹುದೆಂದೂ ಕಾಂಗ್ರೆಸು ಸಮ್ಮತಿಸಿತು. ಆದರೆ ಕ್ರಿಪ್ಸರು ಹೊಸ ಘಟನೆ ಜಾರಿಯಲ್ಲಿ ಬರುವ ವರೆಗೆ ಸೇನಾಪತಿಗೆ ಅಧಿಕಾರವಿರಬೇಕೆಂದು ಹೇಳಿದರು. ಸೇನಾಪತಿ ರಾಷ್ಟ್ರೀಯ ಸರಕಾರದ ವಿಶೇಷ ಪ್ರತಿನಿಧಿಯಾಗಿರಬಹುದೆಂದು ಕಾಂಗ್ರೆಸಿನವರೂ ಹೇಳಿದ್ದರು ಅವರು ಕಾರ್ಯಕಾರೀ ಮಂಡಲದ ಸದಸ್ಯರಾಗಿರಬೇಕೆಂದು ಕ್ರಿಪ್ಸರು ಅಭಿಪ್ರಾಯಪಟ್ಟರು ಸೇನಾಪತಿ ಮತ್ತು ಸಂರಕ್ಷಕ ಮಂತ್ರಿಗಳ ವಿಷಯದ ಪಟ್ಟಿಯನ್ನೂ ಕ್ರಿಪ್ಸರು ತಿಳಿಸಲಿಲ್ಲ ಅಂತೂ ಒಂದು ಒಪ್ಪಂದವಾಗುವುದೆಂದು ಎಲ್ಲರೂ ಆಶಿಸಿದ್ದರೂ ಒಮ್ಮೆಲೇ ಕ್ರಿಪ್ಸರು ಭಾರತೀಯರಿಗೆ ರಾಷ್ಟ್ರೀಯ ಸರಕಾರ ಕೊಡಲಾಗುವುದಿಲ್ಲವೆಂದು ತಿಳಿಸಿ ಲಂಡನಿಗೆ ತೆರಳಿ ಬಿಟ್ಟರು! ವೈಸರಾಯರನ್ನು ಕೆಲಸದಿಂದ ತೆಗೆದು ಹಾಕಬೇಕಾಗಿ, ಲಂಡನಿನಿಂದ ತಾನು ಬರುವ ಮುನ್ನ ಚರ್ಚಿಲರಿಗೆ ತಿಳಿಸಿರುವುದಾಗಿ ಕ್ರಿಪ್ಸರು ಹೇಳುತ್ತಿದ್ದರು ಆದರೆ ಸಂಧಾನ ಸಮಯದಲ್ಲಿ ವೈಸರಾಯರಿಂದ ಅನುಕೂಲವೇ ವಿನಾ ಅನಾನುಕೂಲವಿಲ್ಲವೆಂದು ಚರ್ಚಿಲರು ತಿಳಿಸಿದರೆಂದು ಕ್ರಿಪ್ಸರಿಂದಲೇ ತಿಳಿದು ಬಂತು ಸಂರಕ್ಷಣೆ ವಿಷಯದಲ್ಲಂತೂ ವೇವಲರಿಗೇ ಪೂರ್ಣಾಧಿಕಾರವಿತ್ತು. ಆದರೂ ರಾಷ್ಟ್ರೀಯ ಸರಕಾರವನ್ನು ರಚಿಸಲು ತನಗೆ ಅಧಿಕಾರವಿದೆಯೆಂದು ಅವರು ಹೇಳುತ್ತಿದ್ದರು ಆದರೆ ಕೊನೆಗೆ ಅವರಿಗೆ (ಏಪ್ರಿಲ್ ೯ರಂದು) ಲಂಡನಿಂದ ಬಂದ ತಂತಿಯಿಂದ ಆ ಅಧಿಕಾರ ಕಿತ್ತುಕೊಳ್ಳಲ್ಪಟ್ಟಿತು ವೈಸರಾಯ್ ಮತ್ತು ವೇವಲರ ಅನುಮತಿ ಪಡೆಯದೆ, ಬ್ರಿಟಿಷ್ ಸರಕಾರದ ಕರಡನ್ನು ಮೀರಿ ಹೋಗಬಾರದೆಂದು ಅದರಲ್ಲಿ ಕ್ರಿಪ್ಸರಿಗೆ ಸೂಚಿಸಲಾಗಿತ್ತು. ಕ್ರಿಪ್ಸ್ ಸಂಧಾನ ಮುಂದುವರಿಯಲು ಇದೇ ಕಾರಣವಾಯಿತು!

ಕ್ರಿಪ್ಸರ ಕರುಣೆಯ ಕತೆ!

'ಜಪಾನು ಅತಿಪೂರ್ವದಲ್ಲಿ ಪ್ರಗತಿ ಹೊಂದುತ್ತಿರುವುದರಿಂದ ರೂಸ್‌ವೆಲ್ಟರು, ಭಾರತೀಯ ಸಮಸ್ಯೆಯಲ್ಲಿ ಆಸಕ್ತಿಯಿಂದಿದ್ದರು. ಕ್ರಿಪ್ಸರು ಭಾರತಕ್ಕೆ ಬಂದಂದಿನಿಂದ ಅವರು ಸಂಧಾನದ ವಿವರಗಳನ್ನು ನಿರೀಕ್ಷಿಸುತ್ತಿದ್ದರು ಕ್ರಿಪ್ಸರ ಸಂಧಾನ ಭಂಗವಾಯಿತೆಂದು ತಿಳಿದ ಕೂಡಲೇ ಕ್ರಿಪ್ಸರು ಇನ್ನೂ ಸ್ವಲ್ಪಕಾಲ ಭಾರತದಲ್ಲಿದ್ದು ಸಂಧಾನಕ್ಕೆ ಯತ್ನಿಸಲಿ ಎಂದು ರೂಸ್‌ವೆಲ್ಟರು ಚರ್ಚಿಲರಿಗೆ ತಿಳಿಸಿದರು ಆದರೆ ಕ್ರಿಪ್ಸರು ತೆರಳಿಯೇಬಿಟ್ಟರು. ಸಂರಕ್ಷಕಖಾತೆಯ ಬಗ್ಗೆ ಆದ ಮಾತುಕತೆಗಳ ವಿವರವನ್ನು ಆಲೋಚಿಸಿದರೆ, ಭಾರತದ ರಕ್ಷಣೆಗೆ ಬ್ರಿಟಿಷರು ಪ್ರಯತ್ನಿಸುವುದಕ್ಕಿಂತ ಹೆಚ್ಚು ಪ್ರಯತ್ನಿಸಲು ಭಾರತೀಯರೇ ಸಿದ್ಧರೆಂದು ತಿಳಿದುಬರುತ್ತದೆ, ಆದರೆ ಹಾಗೆ ಮುಂದೆ ಬಂದ ಅವರಿಗೆ ಸೈನಿಕರಿಗೆ ಹೋಟೇಲುಗಳನ್ನಿಡಲು, ಅರ್ಜಿ ನಮೂನೆಗಳನ್ನು ಮುದ್ರಿಸಲೂ ಹೇಳಲಾಯಿತು ಕ್ರಿಪ್ಸರು ಈಗೀಗ ಭಾರತದ ಜಾತಿಮತಗಳ ಭೇದವನ್ನು ಮುಂದೊಡ್ಡಿಯೂ ಮಾತನಾಡುತ್ತಾರೆ ಕ್ರಿಪ್ಸರು ಹೇಳುವಂತೆ ಭಾರತದಲ್ಲಿ ಎಂದೂ ಒಗ್ಗಟ್ಟುಂಟಾಗಲಾರದು ಹಿಂದೆ ಇದೇ ಕ್ರಿಪ್ಸರು ಜಾತಿಭೇದದ ವಿಷಯವೆತ್ತಿಕೊಂಡು ಬ್ರಿಟಿಷ್ ಪ್ರಭುತ್ವವು ಭಾರತದಲ್ಲಿ ಮಾಡುವ ಅನ್ಯಾಯವನ್ನು ಖಂಡಿಸಿದ್ದಾರೆ ಇದು ಕ್ರಿಪ್ಸರ ಎಂಥಾ ಕರುಣಾಜನಕ ಕತೆ!

ರೈಲು ಬಂಡಿಗಳ ಸಮಯ

ಗಾಡಿಗಳು ಹೊರಡುವ ಗಂಟೆ ತಲ್ಪುವ ಗಂಟೆ

ಮಲಬಾರು ಎಕ್ಸ್‌ಪ್ರೆಸ್ (ಮೈಲ್) 8 5 ಬೆಳಿಗ್ಗೆ 6 5 ಸಾಯಂ.

ಶಟ್ಲ್ (ಪೆಸೆಂಜರ್) ಸಾಯಂ 5 25 9 55 ಬೆ

ಮಲಬಾರ್ ಎಕ್ಸ್‌ಪ್ರೆಸ್ (ಮೈಲು ಬಂಡಿ) ಉಳ್ಳಾಲ ಅಲ್ಲದೆ ಮಿಕ್ಕ ಎಲ್ಲಾ ಸ್ಟೇಶನುಗಳಲ್ಲಿಯೂ ನಿಲ್ಲುತ್ತದೆ.

ಎಳೆ ಮಕ್ಕಳ ಕೋಮಲ ಚರ್ಮಕ್ಕೆ ಉತ್ತಮವಾದ ಪೌಡರು

ನಿಮ್ಮ ಮಗುವಿನ ಮೈ ಚರ್ಮವು ಎಷ್ಟು ಕೋಮಲವಾದುದೆಂದರೆ ಕೇವಲ ಅತ್ಯಂತ ಸೂಕ್ಷ್ಮವಾದ ಮತ್ತು ಉತ್ಕೃಷ್ಟವಾದ ಪೌಡರು ಮಾತ್ರವೇ ಅದಕ್ಕೆ ತಕ್ಕುದಾಗಿದೆ. ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum) ಬಹಳ ಸೂಕ್ಷ್ಮವಾದದ್ದು ಮಾತ್ರವಲ್ಲದೆ ಶೇಕಡಾ ಹತ್ತರಷ್ಟು ಶುದ್ಧವಾದದ್ದು ಮತ್ತು ಸೌಮ್ಯ ತದಲ್ಲಿ ಸ್ವೀಕರಿಸಲ್ಪಟ್ಟದ್ದು ಮಗುವಿನ ಕೋಮಲವಾದ ಮೈಯ ಚರ್ಮವನ್ನು ಬಹಳ ಸ್ವಚ್ಛವಾಗಿಯೂ ನುಣುಪಾಗಿಯೂ ಮಾಡುತ್ತದೆ ಸ್ನಾನವಾದ ಕೂಡಲೆ ಮಗುವಿನ ಮೈಗೆ ಇದನ್ನು ಹಾಗಿದರೆ ಚರ್ಮವ್ಯಾಧಿಗಳ ರೋಗಾಣುಗಳು ಮಗುವಿನ ಚರ್ಮವನ್ನು ಸೇರದಂತೆ ರಕ್ಷಿಸುತ್ತದೆ.

ಇಡೀ ಜಗತ್ತಿನಲ್ಲಿ ಡಾಕ್ಟರರೂ, ನರ್ಸುಗಳೂ ಕುಟಿಕೂರಾ ಪೌಡರು (cuticura Talcum) ಮಗುವಿನ ಕೋಮಲವಾದ ಚರ್ಮಕ್ಕೆ ಉತ್ತಮವಾದುದೆಂದು ಶಿಫಾರಸು ಮಾಡುತ್ತಿದ್ದಾರೆ ಹೆಂಗಸರು ಕೂಡಾ ಸ್ನಾನವಾದ ಕೂಡಲೇ ಇದನ್ನು ಹಚ್ಚಲು ಸಂತೋಷಪಡುತ್ತಾರೆ ಇದು ಬೆವರನ್ನು ಹೀರಿಕೊಳ್ಳುತ್ತದೆ ಮತ್ತು ಚರ್ಮವನ್ನು ನುಣುಪಾಗಿಯೂ ಪರಿಮಳಯುಕ್ತವಾಗಿಯೂ ಇಡುವುದು ನಿಮ್ಮ ಕೆಮಿಸ್ಟರಿಂದ ಇದನ್ನು ಇಂದೇ ಕೊಂಡುಕೊಳ್ಳಿರಿ

ಮಕ್ಕಳಿಗೆ ಉಪಯುಕ್ತವಾದದ್ದು

ಕುಟಿಕೂರಾ ಟಾಲ್ಕಂ ಪೌಡರು

CUTICURA TALCUM



ದಮ್ಮು ಒಮ್ಮೆಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ ಅದು ತೆಗೆದ. ಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು ಶೌಚದಕೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಫುಪ್ಫುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೪-೦. ರೂ ೪-೨-೦ ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತೆ:—ಡಾ. ಪುರೋಹಿತ ಫಾರ್ಮಸಿ, ಕೊಲ್ಲಾಪುರ ಬೊಂಬೈ ಏಜಂಟ — ವೆ. ಸರ್ಸ ವನಮಾಲಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ್ ಸ್ಟ್ರೀಟ ಬೊಂಬೈ



ಪುರೋಹಿತ ಶ್ವಾಸಹಾರಿ

NOTICE

In the Court of the District Munsiff of Mangalore

S C No 617/1942

Between — Chandarana Bros . . *Plaintiff*

and

Hussain Abdulla Set- *Defendant*

To

Defendant Hussain Abdulla Set Proprietor of the Bambay Agency, Hussain Building, Broadway, Ernakulam.

Notice is hereby given that the above suit filed against you by the aforesaid plaintiff for the purpose of recovering a sum of Rs 200-9-6 being the amount claimed in the plaint with further interest and all costs of suit, stands posted to 23-11-1942 You are hereby summoned to appear in the above court in person or by a pleader duly instructed on the 23rd day of November 1942 at 10-30 A. M. failing which the suit will be heard and determined in your absence.

(By order of court)

Mangalore, 5-11-1942. U A Mallya, Vakil for plaintiff

WANTED

Applications are invited for employment to the following posts in Secondary schools under the South Kanara District Board

L T Assistants Post—

Qualifications B A, L. T. (Science), Scale of pay Rs 65 5/2-100 Candidates belonging to the Mahammadan (Muslim), Anglo Indian or Christian or non-Asiatic who can teach the subjects and correct exercises in Kannada only need apply. applications should reach this office on or before 20-11-1942.

Parttime Sewing Mistresses—

Qualification Group certificates in needle work and dress making issued under the scheme of Government Technical Examinations. Pay Rs. 10/-(Ten) only per mensem Applications should reach this office on or before 20-11 1942.

Mangalore, 11-11-42. Vice President, District Board, South Kanara in Charge.

ಸಮರಭೂಮಿಯ ಸಂಚಾರ

ರಶ್ಯನ್ ರಣರಂಗದಲ್ಲಿ ಸದ್ಯ ಹಿಂದಿನಷ್ಟು ರಣರಭಸವಿಲ್ಲ ಆದರೆ ಜರ್ಮನರೇನೂ ಅಲ್ಲಿಂದ ಹಿಂಜರಿದಿಲ್ಲ ಸ್ಟಾಲಿನ್‌ಗ್ರಾಡ್ ಕಾಕಸಸ್‌ಗಳಲ್ಲಿ ಸೈನ್ಯಗಳನ್ನು ಉಭಯ ಪಕ್ಷದವರೂ ಬಲಗೊಳಿಸುತ್ತಿದ್ದಾರೆ. ಪೂರ್ವ ಕಾಕಸಸಿನಲ್ಲಿ ಜರ್ಮನ್ ವ್ಯೂಹವನ್ನು ರಶ್ಯನ್ ಟೇಂಕುಗಳು ಭೇದಿಸಿದವು ಕಾಕಸಸಿನ ಇನ್ನೊಂದು ಕೊನೆಯಲ್ಲಿ, ಕಪ್ಪು ಸಮುದ್ರದ ಬಳಿ ಟುಪಾಸಿಯ ಮೇಲೆ ಶತ್ರುಗಳು ಮಾಡಿದ ಧಾಳಿಯನ್ನು ಎದುರಿಸಲಾಗಿದೆ ಸ್ಟಾಲಿನ್ ಗ್ರಾಡಿನಲ್ಲಿ ಬೇರೆಬೇರೆ ಭಾಗಗಳಲ್ಲಿ ಹೋರಾಡುತ್ತಾರೆ ಜರ್ಮನರು ಹೆಚ್ಚು ಹೆಚ್ಚಾಗಿ ಕೈಗಾರಿಕೆಯ ಕೇಂದ್ರಗಳನ್ನು ಹಿಡಿಯುವರೆ ಧಾವಿಸುತ್ತಿದ್ದಾರೆ ಸೊಲೊಮನ್ ದ್ವೀಪದಲ್ಲಿರುವ ಗೌಡಲ ಕೆನಾರ ವಿಮಾನಗೃಹವನ್ನಾಕ್ರಮಿಸಿಕೊಳ್ಳಲು ಜಪಾನರು ಮಾಡಿದ ಪ್ರಯತ್ನವನ್ನು ಅಮೆರಿಕನರು ವಿಫಲಗೊಳಿಸಿದರು ಜಪಾನಿಗೆ ಇಲ್ಲಿ ಅಪಾರ ನೌಕಾ ಹಾನಿಯಾಗಿದೆ ಇನ್ನೂ ಕಾಳಗ ಮುಗಿದಿಲ್ಲ ನ್ಯೂಗಿನಿಯಲ್ಲಿ ಮಿತ್ರ ಸೈನ್ಯಗಳು ಎರಡು ದಿಕ್ಕಿನಿಂದ ವೇಗವಾಗಿ ಬೂನಾದ ಕಡೆಗೆ ಸಾಗಿ ಹೋಗುತ್ತಿವೆ ಉತ್ತರದಲ್ಲಿ ಸೈರೋಬ್ಬಿಯದಿಂದ ಮುನ್ನುಗ್ಗುತ್ತಿರುವ ಆಸ್ಟ್ರೇಲಿಯನ್ ಸೈನ್ಯಗಳು ವೈರಿಯ ಕೇಂದ್ರ ಸ್ಥಳಕ್ಕೆ ಸಮೀಪ ಬಂದಿವೆ.

ಈಜಿಪ್ಟಿನಲ್ಲಿ ವಿಜಯ

ಲಿಬಿಯದಲ್ಲಿ ಬಿಟಿಷರು ಒಂದೇ ಸವನೆ ಮುನ್ನುಗ್ಗುತ್ತಿರುವರು ಬ್ರಿಟಿಷ್ ಅಷ್ಟಮದಳದವರು ಶತ್ರುಗಳ ಮೇಲೆ ಒಮ್ಮೆಲೇ ಧಾಳಿಯಿಟ್ಟು, ಅವರನ್ನು ತೋಬ್ರುಕ್ ಬಾರ್ಡಿಯಾಗಳಿಂದಲೂ ಹೊರಕ್ಕಟ್ಟಿದ್ದಾರೆ ಲಿಬಿಯದ ಯುದ್ಧವು ಮೊದಲಿನಿಂದಲೂ ವಿಚಿತ್ರದ್ದೇ ಆಗಿದೆ ಮರುಭೂಮಿಯ ಅವಸ್ಥೆಯೇ ಹಾಗೆ ಅಲ್ಲಿ ಯಾರಾದರೂ ಒಮ್ಮೆ ಮುಂದುವರಿದರೆ ಸಾಕು, ಅವರು ಬಹಳ ಮುಂದುವರಿದುಬಿಡುತ್ತಾರೆ, ಅಂತೆಯೇ ಹಿಂಜರಿದವರು ಹಿಂದೆ ಹಿಂದೆ ಹೋಗಬೇಕಾಗುತ್ತದೆ ಉಭಯಪಕ್ಷದವರೂ ಒಂದೆರಡು ಸಲ ಹಿಂದೆ ಹೋಗಿ ಮುಂದುವರಿದು ಕಾದಾಟ ಹೂಡಿದ್ದರು ಕಳೆದ ಕೆಲ ಸಮಯದಿಂದ ಜರ್ಮನರು ಬ್ರಿಟಿಷರನ್ನು ಅಲೆಗ್ಸಾಂಡ್ರಿಯದ ವರೆಗೆ ಹೊಡೆದೋಡಿಸಿ ಹಲವು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿ ನೆಲೆಯೂರಿದ್ದವರು ಈಗ ಪರಾಭವಗೊಂಡಿದ್ದಾರೆ ಬ್ರಿಟಿಷ್ ಸೈನಿಕರು ಹೀಗೆ ನುಗ್ಗುತ್ತಾ ಈಗಾಗಲೇ ತೋಬ್ರುಕಿನಿಂದ ಬಹಳ ಮುಂದೆ ಬಂದಿದ್ದು ಬೆಂಗಾಜಿವರೆಗೂ ಬರಬಹುದೆಂದು ತಿಳಿದಿದೆ ಹಾಗೂ ಮೂರು ವರ್ಷಗಳ ಯುದ್ಧತೆಯ ನಂತರ ಮಿತ್ರರೀಗ ರಣರಭಸವನ್ನಾರಂಭಿಸಿದಂತೆ ತೋರುವುದು. ಕಾಕಸಸಿನಿಂದ ಜರ್ಮನ್ ಸೇನೆ ಇರಾಣನ್ನು ಹೊಕ್ಕಮೇಲೆ ತಾನೂ ಮುನ್ನುಗ್ಗಬಹುದೆಂದು ಯೋಚಿಸಿ ಎಲಾಮೆನಲ್ಲಿ ಭದ್ರವಾಗಿ ತಳವೂರಿದ್ದ ರೊಮೆಲನ ಯೋಜನೆ ಸ್ಟಾಲಿನ್‌ಗ್ರಾಡ್ ಸಂಗ್ರಾಮದಿಂದ ತಲೆಕೆಳಗಾಯಿತು ಸ್ಟಾಲಿನ್‌ಗ್ರಾಡಿನಲ್ಲಿ ವಿಜಯ ಸಿಗದಿರುವುದರಿಂದ ಉದ್ರೇಕಗೊಂಡ ಹಿಟ್ಲರನು ಇಜಿಪ್ತಿನಿಂದ ಸ್ವಲ್ಪ ಸೇನೆಯನ್ನು ರಶ್ಯನ್ ರಣರಂಗಕ್ಕೆ ಕರೆಸಿಕೊಂಡನು ಈಗ ಈಜಿಪ್ಟಿನಲ್ಲಿ ರೋಮೆಲನ ಕೈಕೆಳಗೆ ಸೈನ್ಯವು ಕಡಿಮೆಯಾಗಿದೆಯೆಂಬುದನ್ನು ತಿಳಿದುಕೊಂಡು ಒಂದೇ ಸವನೆ ಮಿತ್ರರು ಮುನ್ನುಗ್ಗಿ ಹೋರಾಡಿ ರೊಮೆಲನನ್ನು ಹಿಂದಕ್ಕಟ್ಟಿದರು ಮಧ್ಯದಲ್ಲಿ ಎಲ್ಲಿಯೂ ಭದ್ರವಾದ ದುರ್ಗವಿಲ್ಲದಿದ್ದುದರಿಂದ ರೊಮೆಲನು ತೋಬ್ರುಕನ್ನಾದರೂ ಬಿಟ್ಟುಕೊಡಬೇಕಾಯಿತು ಬೆಂಗಾಜಿ ವರೆಗಾದರೂ ಯೋಗ್ಯ ದುರ್ಗವಿಲ್ಲದಿರುವುದರಿಂದ ಅಲ್ಲಿ ತನಕವೂ ಅವರನ್ನು ಓಡಿಸಬಹುದು ಆದರೆ ಬೆಂಗಾಜಿ ಹತ್ತಿರ ರೊಮೆಲನು ಪುನಃ ಧಾಳಿ ಪ್ರಾರಂಭಿಸಲು ಶಕ್ತನಾಗುವನು ಡೆರ್ನಾವನ್ನು ಶತ್ರುಗಳೀಗ ಖಾಲಿಮಾಡಿದ್ದಾರೆ ಮಿತ್ರರ ಸೈನ್ಯ ಡೆರ್ನಾ ಮತ್ತು ಮೆಕಿಲಿಯನ್ನು ಈಗ ಆಕ್ರಮಿಸಿವೆ ಮೆಕಿಲಿ ಬೆಂಗಾಜಿಗೆ ಹೋಗುವ ಒಳರಸ್ತೆಯಲ್ಲಿ ಮೂರನೇ ಒಂದಂಶ ದೂರದಲ್ಲಿದೆ ಕೂಡಲೇ ಶತ್ರುಗಳು ಬಿಟ್ಟುಹೋದ ಸಿರೆಸಾಯಿಕವನ್ನು ಕೈವಶಪಡಿಸಿಕೊಳ್ಳಬೇಕೆಂದು ಮಿತ್ರರ ಯೋಜನೆಯಿದೆ ಹೀಗೆ ಇಜಿಪ್ಟಿನಲ್ಲಿ ಮಿತ್ರರು ಮುಂದುವರಿಯುತ್ತಿದ್ದಾಗ ರೊಮೆಲನು ಮಾತ್ರ ಅಲ್ಲಿ ಇಲ್ಲವೆಂದು ತಿಳಿಯುತ್ತದೆ ಇಜಿಪ್ಟ್ ರಣರಂಗವು ಪ್ರಾಮುಖ್ಯವಲ್ಲವೆಂದು ಜರ್ಮನ್ ಸೇನಾಪತಿ ಭಾವಿಸಿದ್ದಾನೇನೊ? ರೊಮೆಲನು ಹಿಟ್ಲರ್ ಗೋರಿಂಗನನ್ನು ಭೇಟಿಯಾಗಿ ಕೆಲವಂದಿ ಇಟಲಿಯನ್ ದಳಪತಿ ಸಮೇತ ರೋಮಿಗೆ ತೆರಳಿರುವನೆಂದು ಸುದ್ದಿ. ಅಂತೂ ಅಲ್ಲಿ ಮಂತ್ರಾಲೋಚನೆ ನಡೆಯುತ್ತಲಿದೆ! 'ಉತ್ತರ ಆಫ್ರಿಕದ ವಿಜಯದಿಂದ ಹಿಗ್ಗಬೇಡಿ, ಇನ್ನೂ ನಮಗೆ ಕೊನೆಯ ವಿಜಯ ಆಗಿಲ್ಲ' ಎಂದು ಬ್ರಿಟಿಷರನ್ನು ಜನರಲ್ ಅಲೆಗ್ಸಾಂಡರರು ಎಚ್ಚರಿಸಿದ್ದಾರೆ!

ಟುನಿಶಿಯ ಕಾಳಗ

ಇದೇ ಸಂದರ್ಭದಲ್ಲಿ ಫ್ರೆಂಚ ಉತ್ತರ ಆಫ್ರಿಕದಲ್ಲಿ ಅಮೆರಿಕನ್ ಸೈನ್ಯವು ಬಹಳ ವಿಜೃಂಭಿಸಿ ಹೋರಾಡುತ್ತಿದೆ ಫ್ರೆಂಚ್ ಮೊರೊಕ್ಕೋದಿಂದ ಅಲ್ಜೀರಿಯದ ವರೆಗಿನ ಕರಾವಳಿಯೆಲ್ಲ ಅವರ ಸ್ವಾಧೀನವಾಗಿದೆ ಕಸಬ್ಲಾಂಕಾ, ರಬಾಟ್, ಮೊಜಡಿಯರ್ ಮತ್ತು ಅಲ್ಜೀರ್ಸ್ ಮೊದಲಾದ ಉತ್ತಮ ಬಂದರಗಳೂ ಮಿತ್ರರ ಕೈಸೇರಿವೆ ಹೀಗೆ ಕೇವಲ ಕೆಲವೇ ದಿನಗಳಲ್ಲಿ ಇಡೀ ಫ್ರೆಂಚ ಉತ್ತರ ಆಫ್ರಿಕವು ಮಿತ್ರರ ಕೈವಶವಾಗಲು, ಅವರ ಅಧಿಕ ಬಲ ಮತ್ತು ಆಶ್ಚರ್ಯಕರ ಆಕ್ರಮಣಗಳೇ ಕಾರಣವು ಇದಕ್ಕಿಂತಲೂ ವಿಶೇಷವಾದೊಂದು ಕಾರಣವೆಂದರೆ ಹಿಂದೆ ಬ್ರಿಟಿಷ್ ದ್ವೇಷಿಯಾಗಿದ್ದ ಎಡ್ಮಿರಲ್ ಡಾರ್ಲಾನರು ಮಿತ್ರರ ಕಡೆ ಸೇರಿರುವುದು ಇತ್ತೀಚೆಗೆ ಡಾರ್ಲಾನರಿಗೂ ಲಾವಲರಿಗೂ ಅಧಿಕಾರದ ವಿಷಯ ಅಂತಸ್ತಾಪಗಳುಂಟಾಗಲು, ಜರ್ಮನರು ಲಾವಲರಿಗೆ ಬೆಂಬಲ ಕೊಟ್ಟು, ಡಾರ್ಲಾನರಿಂದ ಅಧಿಕಾರದಿಂದ ಕಿತ್ತೊಗೆದ ಕಾರಣ, ಅವರು ಉತ್ತರ ಆಫ್ರಿಕಕ್ಕೆ ಹೋಗಿ ಅಲ್ಲಿ ವಿಚಿ ಸರಕಾರದ ವಿರುದ್ಧ ಕೆಲಸ ಮಾಡುತ್ತಿದ್ದರು ಉತ್ತರ ಆಫ್ರಿಕದಲ್ಲಿ ಮಿತ್ರರ ಒಳಸಂಚೂ ನಡೆಯುತ್ತಲೇ ಇತ್ತು ಫ್ರೆಂಚ್ ಆಫ್ರಿಕದಲ್ಲಿ ಯಾರೂ ಮಿತ್ರರನ್ನು ಪ್ರತಿಭಟಿಸಬಾರದೆಂದು ಡಾರ್ಲಾನರು ಆಕಾಶವಾಣಿಯಲ್ಲಿ ಹೇಳಿದ್ದರಿಂದ ಅಲ್ಲಿನ ಯುದ್ಧ ನಿಂತಂತಾಗಿದೆ

ಹೀಗೆ ಉತ್ತರ ಫ್ರೆಂಚ ಆಫ್ರಿಕವನ್ನು ಸ್ವಾಧೀನಪಡಿಸಿ ಅಮೆರಿಕನ್ ಸೈನ್ಯವು ಈಗ ಟ್ಯುನಿಶಿಯದ ಕಡೆಗೆ ಧಾವಿಸಿದೆ ಟ್ಯುನಿಶಿಯದ ಬಿಝರ್ಟಾ ಬಂದರದ ಹತ್ತಿರ ಮಿತ್ರರು ಜರ್ಮನರನ್ನು ಮುತ್ತಿದ್ದಿದ್ದಾರೆ ಜರ್ಮನ್ ಇಟಲಿಗಳವರೂ ಇಲ್ಲಿಗೆ ಹೆಚ್ಚು ಹೆಚ್ಚು ಸೈನಿಕರನ್ನು ಜಲ ಆಕಾಶ ಮಾರ್ಗಗಳಿಂದ ತಂದಿಳಿಸುತ್ತಿದೆ ಕೊನೆಯ ವರೆಗೂ ಹೋರಾಡಿ ಟುನಿಶಿಯವನ್ನುಳಿಸಬೇಕೆಂದು ಹಿಟ್ಲರನ ಆಜ್ಞೆಯಾಗಿದೆ ಈಗಾಗಲೇ ಟುನಿಶಿಯದ ಕಾಳಗ ಪ್ರಾರಂಭವಾಗಿದೆ ಅಮೆರಿಕನ್ ಹಾಗೂ ಬ್ರಿಟಿಷ್ ಸೈನ್ಯಗಳು ಇಲ್ಲಿ ಏರಿ ಹೋಗುತ್ತಿವೆ. ಅಡ್ಮಿರಲ್ ಡಾರ್ಲನರು ಇಲ್ಲಿಯೂ ಫ್ರೆಂಚರನ್ನು ಹುರಿದುಂಬಿಸಿ ಜರ್ಮನರನ್ನೆದುರಿಸುವಂತೆ ಬಿನ್ನವಿಸಿದ್ದಾರೆ ಜನರಲ್ ವೇಗಾನರನ್ನು ಜರ್ಮನರ ಆಜ್ಞೆಯಿಂದ ಬಂಧಿಸಲಾಗಿದೆಯೆಂದು ಒಂದು ಸುದ್ದಿ. ಅಲ್ಜೀರಿಯದ ಹತ್ತಿರ ನೌಕಾಕಾಳಗವಾಗುತ್ತಿದೆ. ಭೂಮಧ್ಯ ಸಮುದ್ರದ ಒಳಗೆ ಮತ್ತು ಹೊರಗೆ ಇರುವ ಯೂಬೋಟುಗಳ ಮೇಲೆ ಮುತ್ತಿಗೆ ಇದೆ ಟುನಿಶಿಯದಿಂದ ಲಿಬಿಯವನ್ನು ಪ್ರವೇಶಿಸಿ ರೊಮೆಲನ ಸೈನ್ಯವನ್ನು ಹೊರಹಾಕುವುದೇ ತಮ್ಮ ಉದ್ದೇಶವೆಂದೂ, ತಾವು ಅಷ್ಟಮದಲವನ್ನು ಬೇಗನೇ ಸೇರಿಕೊಳ್ಳುವೆವೆಂದೂ ಟುನಿಶಿಯದ ಬ್ರಿಟಿಷ್ ಸೇನಾಪತಿ ಜನರಲ್ ಅಂಡರ್‌ಸನರು ಹೇಳಿದರು

ನವೆಂಬರಿನ ನಂತರ?

"ಚಿತಗಾಂಗ್ ಆಸಾಮ್‌ಗಳ ಮೇಲೆ ಬಾಂಬೆಸೆದು ಕೆಲದಿವಗಳೇ ಹೋದಾಟಿದವು. ಅನಂತರದ ಜಪಾನಿನ ಚಟುವಟಿಕೆಗಳೇನೂ ಕಂಡುಬರುವುದಿಲ್ಲ ಭಾರತವನ್ನಾಕ್ರಮಿಸಲು ಮನಸ್ಸಿಲ್ಲದಿದ್ದರೆ ಆಸ್ಟ್ರೇಲಿಯದ ಕಡೆಗಾಗಲಿ ಸೈಬೇರಿಯಕಾಗಲಿ ಜಪಾನು ಧಾಳಿಯಿಡಲಿಲ್ಲ ಅಂತೂ ಸದ್ಯಸ್ತಬ್ಧವಾದ ಜಪಾನ್ ಚಟುವಟಿಕೆಗಳು ಹಲವು ಊಹಾಪೋಹೆಗಳಿಗೆ ಎಡೆಮಾಡಿವೆ ಜಪಾನು ಆಸ್ಟ್ರೇಲಿಯವನ್ನು ಮುತ್ತುವದೆಂದು ಹಲವು ಕಾಲದಿಂದಲೇ ಪ್ರಚಾರಪಡಿಸಲಾಗಿತ್ತು ಆದರೆ ಆಸ್ಟ್ರೇಲಿಯದ ಆಕ್ರಮಣವಾಡಲು ಜಪಾನಿಗೆ ವ್ಯಾವಹಾರಿಕ ಆತಂಕಗಳು ಕೆಲವಿವೆ ಆಸ್ಟ್ರೇಲಿಯದ ಸುತ್ತುವಳಯದಲ್ಲಿರುವ ದ್ವೀಪಪಂಕ್ತಿಗಳನ್ನು ಆಕ್ರಮಿಸಿ, ಭದ್ರಗೊಳಿಸದ ವಿನಾ ಜಪಾನ್ ಆಸ್ಟ್ರೇಲಿಯವನ್ನು ಮುತ್ತಲು ಮನಸ್ಸುಮಾಡುವುದು ಸಾಧ್ಯವಿಲ್ಲ ಅದಾಗಿಯೇ ತತ್ಕಾಲಕ್ಕೆ ಆ ಕಡೆಗೆ ಜಪಾನ್ ಧಾಳಿ ಅಸಂಭವವಿದೆ ಒಂದು ವಕ್ಷ ಆಸ್ಟ್ರೇಲಿಯದ ಆಕ್ರಮಣ ಕೈಕೊಳ್ಳಬೇಕಾದರೂ ಜಪಾನು 500,000 ಬಲವಾದ ಶಸ್ತ್ರಾಸ್ತ್ರ ಸಿದ್ಧವಾದ ವಿಮಾನಗಳನ್ನು ತಯಾರುಮಾಡಿ ಆ ಮೇಲೆ ಆಲೋಚನೆಮಾಡಬೇಕು ಜಪಾನಿನ ಶಕ್ತಿ ಅಷ್ಟರಮಟ್ಟಿಗೆ ಇಲ್ಲವೆಂದು ಹೇಳಬರುವುದಿಲ್ಲವಾದರೂ, ಇಂದು ಆ ಕಡೆಯಲ್ಲಿ ಅಷ್ಟೊಂದು ಶಕ್ತಿಪರೀಕ್ಷೆಮಾಡಲು ಜಪಾನು ತಯಾರಾಗಿಲ್ಲ ಹಾಗಾಗಿ ಆಸ್ಟ್ರೇಲಿಯದ ಆಕ್ರಮಣವು ತಡವಾಗಿಯೋ, ಇನ್ನು ಕೆಲಕಾಲ ಮುಂದೆಯೋ ಆಗಬಹುದು ಅಥವಾ ಆ ಸಾಹಸವನ್ನು ಜಪಾನು ಕೈಕೊಳ್ಳದಿದ್ದರೂ ಇರಬಹುದು

ಆದರೆ ಜಪಾನು ಭಾರತದತ್ತ ತಿರುಗುವುದು, ಅದು ಕೂಡಾ ನವೆಂಬರ ದಾಟಿದ ಕೂಡಲೇ, ಹೆಚ್ಚಿನ ಮಟ್ಟಿಗೆ ಸಂಭವವಿರುತ್ತದೆ ಇದಕ್ಕೆ ಕೆಲವು ಕಾರಣಗಳಾದರೂ ಇವೆ ಭಾರತದತ್ತ ಜಪಾನ್ ಧಾಳಿಯಾದ ಪಕ್ಷದಲ್ಲಿ ಅದು ಬರೀ ವಿಮಾನ ಮೂಲಕ, ಪೂರ್ವಭಾಗದಲ್ಲಿ ಕಲ್ಕತ್ತದ ಮೇಲೆ ಮಾತ್ರ ಆದೀತೆಂದು ಭಾವಿಸುವುದು ತಪ್ಪು ಜಪಾನು ನೆಲ, ಜಲ, ಆಕಾಶ ಈ ಮೂರು ಮಾರ್ಗಗಳಿಂದಲೂ ಭಾರತವನ್ನಾಕ್ರಮಿಸಲು ಬರಬಹುದು ವಿಜಾಗಪಟ್ಟಣ, ಸಿಲೋನ್‌ಗಳಿಗೆ ಹಾಕಿದ ಬಾಂಬು ಕೇವಲ ಅಭ್ಯಾಸಮಾತ್ರಕ್ಕಾಗಿ ಎನ್ನಬೇಕು ಪಶ್ಚಿಮಕರಾವಳಿಯಲ್ಲಿರುವ ಗೋವೆಯ ಸ್ಥಾನವನ್ನೂ, ವಿಜಾಗಪಟ್ಟಣದ ಸ್ಥಾನವನ್ನು ನಾವು ಲಕ್ಷ್ಯದಲ್ಲಿಡಬೇಕು ಇನ್ನು ಮುಂದಾದರೂ ವಿಜಾಗ ಪಟ್ಟಣದ ಮೇಲೆ ಧಾಳಿಯಾದೀತೆಂದು ಊಹಿಸಬಹುದು ಪೂರ್ವ ಕರಾವಳಿಯಲ್ಲಿ ವಿಜಾಗ ಪಟ್ಟ ಮತ್ತು ಮದ್ರಾಸು, ದಕ್ಷಿಣದಲ್ಲಿ ಸಿಲೋನು, ಗೋವದ ಉತ್ತರ ತೀರ ಪ್ರದೇಶಗಳು, ಪಶ್ಚಿಮಕರಾವಳಿಯಲ್ಲಿ ಅಲಪ್ಪಿ ಈ ಪ್ರದೇಶಗಳೆಲ್ಲಾ ಗಂಡಾಂತರ ಪ್ರದೇಶಗಳಾಗಿವೆ ಇಂಥಾ ಗಂಡಾಂತರ ಪ್ರಸಂಗವು ಭಾರತಕ್ಕೆ ಬರುವುದಿದ್ದರೆ ನವಂಬರ ತಿಂಗಳು ಕಳೆದ ನಂತರ ಏಕೆಂದರೆ ಆಗ ಭೂಮಿ, ವಾಯು, ಸಮುದ್ರ ಈ ಮೂರು ಭಾಗಗಳಲ್ಲಿಯೂ ಜಪಾನರಿಗೆ ವಾತಾವರಣವು ಅನುಕೂಲವಾಗಿ ದೊರಕುತ್ತದೆ ಭಾರತದೀಕಡೆಯಿಂದ ತಮಗಿರುವ ಅಪಾಯವನ್ನು ಪರ್ಯಾಲೋಚಿಸಿಕೊಂಡು, ಜಪಾನರು ಇಲ್ಲಿಗೆ ಪೂರ್ಣ ಮನಸ್ಸಿನಿಂದ ಧಾಳಿಯಿಡಲು ಹೆ[illegible] ಸಮಯ [illegible]ಯಲಾರರು ಇಂಥಾ ಸಮಯದಲ್ಲ ಆಸ್ಟ್ರೇಲಿ[illegible]ದಲ್ಲಿಯೂ ಸೈಬೇರಿಯದಲ್ಲಿಯ[illegible] ಅವರ ಅಲ್ಪಸ್ವಲ್ಪ ಚಟುವಟಿಕೆಗಳ ನಡೆಯಲೂ ಬಹುದು [illegible]ಂದು [illegible] ಜಪಾನು ಸೈಬೇರಿಯಕ್ಕೇ ಧಾಳಿಯಿಟ್ಟರೂ ಭಾರತದ ಗಂಡಾಂತರ ತಪ್ಪಿತೆಂದು ನಾವು ತಿಳಕೊಳ್ಳಕೂಡದು [illegible] ಮಂಚೂರಿಯ ಕೊರಿಯಗಳಲ್ಲಿರುವ ಅವರ ಸೈನ್ಯದಿಂದ ಸೈಬೇರಿಯ ಧಾಳಿಯನ್ನೂ, ಬರ್ಮಾ ಥಾಯಿಲೆಂಡ್ ಇಂಡೋಚೀನ, ಮಲಯ ಜಾವಗಳ [illegible] ಭಾರತವನ್ನೂ ಜಪಾನರು ಒಂದೆ ಸಮಯದಲ್ಲಿ ಆಕ್ರಮಿಸಬಹುದು ಅಪಾಯ [illegible] ಭಾರತವನ್ನು ಹಿಂದೆ ಬಿಟ್ಟು ಜಪಾನರು [illegible] ಉತ್ತರಕ್ಕೆ ಧಾವಿ[illegible] ಸೈಬೇರಿಯಕ್ಕೆ [illegible] ಧಾಳಿಯಿಟ್ಟಾರೆಂದಾಗಲಿ, ಆಸ್ಟ್ರೇಲಿಯ [illegible] ಅವರು ತಮ್ಮ ಸರ್ವ ಶಕ್ತಿಯನ್ನೂ ಪ್ರಯೋಗಿಸುವರೆಂದಾಗಲಿ ಊಹಿಸುವುದು ಪ್ರಮಾದವಾದೀತೆಂದು ಪ್ರಸಿದ್ಧ ಪತ್ರಿಕೋದ್ಯಮಿ ಶ್ರೀ [illegible] ವೈದ್ಯರು ಒಂದು ಲೇಖನದಲ್ಲಿ ವಿವರಿಸಿದ್ದಾರೆ

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906.

ಹಳನೇ ದನಗಳ ಪ್ರದರ್ಶನ
ಹಾಸನ ಟವನ್ ಮುನ್ಸಿಪಾಲಿಟಿ
ಪ್ರಸಿದ್ಧ ಪತ್ರಿಕೆ

ಇದೇ ಟವನಿನಲ್ಲಿ [illegible] ಲಾಗಾಯ್ತು [illegible] ದನಗಳ ಜಾತ್ರೆಯನ್ನು ಮಾಮೂಲು ನಡೆಯುತ್ತಿದ್ದ ಪ್ರದರ್ಶನವು ಅಂದರೆ [illegible] ಆಕ್ಷಪಕ್ಷ [illegible] ಜ[illegible] ಮತ್ತು [illegible] ಜಾಗಾಗಳಲ್ಲಿ ನಡೆಸಲು ಏರ್ಪಾಡು ಇಷ್ಟಿರುತ್ತೆ

ಸದರಿ ಪ್ರದರ್ಶನವು ನಮ್ಮ ಸಂಸ್ಥಾನದಲ್ಲಿ ಎಲ್ಲಾ ಪ್ರದರ್ಶನಗಳಿಗಿಂತ ಮಿಗಿಲಾಗಿ ನಡೆಯುತ್ತದೆ ಸದರಿ ಪ್ರದರ್ಶನಕ್ಕೆ ೩೦ ಸಾವಿರ ದನಗಳಿಗೆ ಮೀರಿ ಬಂದು ಭಾರಿ ವ್ಯಾಪಾರ ನಡೆಯುತ್ತದೆ ಮತ್ತು ಹೊರ ಪ್ರಾಂತ್ಯಗಳಿಂದಲೂ ಬಹು ಜನರು ವ್ಯಾಪಾರಕ್ಕಾಗಿ ಬರುತ್ತಾರೆ ದನಗಳಿಗೆ ಬೇಕಾಗುವ ಹುಲ್ಲು ನೀರು ಮತ್ತು ಸ್ಥಳ ವಸತಿಯೂ ತುಂಬಾ ಅನುಕೂಲವಾಗಿರುತ್ತದೆ.

ಉತ್ತಮ ರಾಸುಗಳಿಗೆ ಬಹುಮಾನ ಕೊಡಲ್ಪಡುತ್ತದೆ.

ಅಂಗಡಿಗಳಿಗೂ, ಹೋಟೇಲುಗಳಿಗೂ ಮತ್ತು ಇತರ ವಿಧವಾದ ಆಟ ಪಾಟಗಳಿಗೂ ಸ್ಥಳ ಅನುಕೂಲವಾಗಿ ಕಂಗಡಿಸಿರುತ್ತದೆ

ಜಾನುವಾರುಗಳ ಚಿಕಿತ್ಸೆಗೆ ಅನುಕೂಲವಾಗಿ ಪಶು ವೈದ್ಯಶಾಲೆಯೂ ಸಹಾ ಇರುತ್ತದೆ.

ತಾರೀಕು 5 11 42 } (ಸಹಿ) ಎ ಎಸ್ ಮಲ್ಲಪ್ಪ
ಪ್ರೆಸಿಡೆಂಟ್,
ಹಾಸನ ಟೌನ್ ಮುನ್ಸಿಪಾಲಿಟಿ.

ಸ್ವದೇಶಾಭಿಮಾನಿ

ತಾರೀಕು 20—11—1942

ಪುನಃ ಅಪ್ಪಣೆಯಿಲ್ಲ!

ಸಂಧಾನಕಾರ್ಯಕ್ಕೆ ಕೈ ಹಾಕಿದ ರಾಜಗೋಪಾಲಾಚಾರ್ಯರಿಗೆ ಗಾಂಧಿಜಿಯನ್ನು ಭೇಟಿ ಮಾಡುವರೆ, ವೈಸರಾಯರು ಅಪ್ಪಣೆಯಿಲ್ಲವೆಂದರು! ಮೊನ್ನೆ ತಾನೇ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು, ಇದೇ ರೀತಿ ಸಂಧಾನ ಯತ್ನವನ್ನು ಮಾಡಿದ್ದು ಅವರಿಗೂ ಗಾಂಧಿಜಿಯ ಭೇಟಿಮಾಡಲು ವೈಸರಾಯರು ಇದೇ ತರದಲ್ಲಿ ತಿರಸ್ಕಾರಮಾಡಿರುವರೆಂಬುದನ್ನು ನಾವಿಲ್ಲಿ ನೆನಪುಮಾಡಿಕೊಳ್ಳಬೇಕು. ಹೀಗೆ ರಾಷ್ಟ್ರದ ಸದ್ಯದ ಗೊಂದಲವನ್ನು ಪರಿಹರಿಸುವ ಕಾರ್ಯಕ್ಕಾಗಿ, ಪ್ರಭಾವಶಾಲಿಗಳಾದ ಮುಖಂಡರು ಮುಂದೆ ಬಂದು ಸಂಧಾನಕ್ಕೆ ಯತ್ನಿಸುತ್ತಿರುವಾಗ ವೈಸರಾಯರು ನಿರಾಕರಿಸುತ್ತಾ ಹೋದರೆ ಇದರ ಪರಿಣಾಮವು ಒಳ್ಳೆಯದಾದೀತೆಂದು ನಾವು ಎಣಿಸುವುದಿಲ್ಲ.

ರಾಜಾಜಿ, ತೀಕ್ಷ್ಣ ಬುದ್ಧಿಯ ಪ್ರಭಾವಶಾಲೀ ರಾಜಕೀಯ ಮುಖಂಡರು. ಇಂದಿನೀ ಪ್ರಯತ್ನದಲ್ಲಿ ಜಿನ್ನರ ಸಹಕಾರವನ್ನು ಪಡೆಯುವ ಭರವಸೆಯೂ ಅವರಿಗಿತ್ತು. ಹೀಗಿರುತ್ತಾ ಸಂಧಾನದ ಮುಂದಿನ ಕೆಲಸಗಳ ಸಲುವಾಗಿ ಗಾಂಧಿಜಿ ಭೇಟಿ ಅವರಿಗೆ ಅವಶ್ಯವಿರಲು ಅದನ್ನು ವೈಸರಾಯರು ನಿರಾಕರಿಸಿದ್ದು ಅಸಮಂಜಸವಾಗಿದೆ. ಇದರಿಂದ ಸರ್ವಥಾ ಸರಕಾರಕ್ಕೆ ಸಂಧಾನಮಾಡುವ ಅಭಿಪ್ರಾಯವಿಲ್ಲವೆಂದು ತಿಳಿಕೊಳ್ಳಲು ಆಸ್ಪದವಾಗುತ್ತದೆ. ರಾಜಾಜಿ, ಸಂಧಾನ ಯತ್ನದಲ್ಲಿ ಕೃತಾರ್ಥರಾಗುತ್ತಿದ್ದರೋ ಎಂಬ ಪ್ರಶ್ನೆ ಬೇರೆ. ಆದರೆ ಅಂಥಾ ಪ್ರಯತ್ನ ಮಾಡುವವರಿಗೆ ಅನುಕೂಲವೊದಗಿಸುವುದರಿಂದ ಸರಕಾರದ ಶಾಂತಿ ವ್ಯವಸ್ಥೆಗೆ ಏನಾದರೂ ಹಾನಿ ತಟ್ಟುತ್ತಿತ್ತೆಂದು ನಮಗನಿಸುವುದಿಲ್ಲ.

ಗಾಂಧಿಜಿ ಮೊದಲಾದ ಕಾಂಗ್ರೆಸು ಮುಖಂಡರು ಇದುವರೆಗೂ ತಮ್ಮ ಧೋರಣೆ ಬದಲಾಯಿಸಿಲ್ಲವಾದ್ದರಿಂದ ಭೇಟಿಗೆ ಅನುಮತಿ ಕೊಡಲಿಲ್ಲವೆಂದು ವೈಸರಾಯರು ಹೇಳುವುದು ಬಹಳ ಆಶ್ಚರ್ಯವನ್ನುಂಟುಮಾಡುತ್ತದೆ. ಬಂಧನದಲ್ಲಿರಿಸುವುದರಿಂದ ಗಾಂಧಿಜಿ ಮೊದಲಾದ ಕಾಂಗ್ರೆಸುಮುಖಂಡರನ್ನು ಬಲಾತ್ಕರಿಸಿ ಅವರ ಧೋರಣೆ ಬದಲು ಮಾಡಿಸಬಹುದೆಂದು ಸರಕಾರವು ತಿಳಿದಿದ್ದರೆ ಅದು ಪ್ರಮಾದಕರವಿದೆ. ಸಂಧಾನಕ್ಕೆ ಗಾಂಧಿಜಿ ಸದಾ ಸಿದ್ಧರು. ಜಿನ್ನರಾದರೂ ರಾಷ್ಟ್ರೀಯ ಸರಕಾರ ಸ್ಥಾಪಿಸುವಲ್ಲಿ ಕಾಂಗ್ರೆಸಿನೊಡನೆ ಸಹಕರಿಸಲೊಪ್ಪಿದ್ದಾರೆ. ರಾಜಾಜಿಯುಂತೂ ಸಂಧಾನವು ಯಶಸ್ವಿಯಾದೀತೆಂಬ ಧೈರ್ಯದಿಂದ ಮುಂದೆ ಬಂದಿದ್ದಾರೆ. ಇಂಥಾ ಸಂದರ್ಭದಲ್ಲಿ ರಾಜಾಜಿಗೆ ಗಾಂಧಿಜಿಯ ದರ್ಶನವನ್ನು ತಿರಸ್ಕರಿಸಿ ಸಂಧಾನದ ಬಾಗಿಲನ್ನು ಸರಕಾರವೇ ಮುಚ್ಚಿಬಿಟ್ಟಿತು!

ನಿಮ್ಮ ಆರೋಗ್ಯವನ್ನು ಅಭಿವೃದ್ಧಿಗೊಳಿಸಬಾರದೇಕೆ?

ಪ್ರತಿದಿನ ರಾತ್ರೆ ಎರಡು ಬೈಲ್‌ಬೀನ್ಸುಗಳನ್ನು ಸೇವಿಸುವ 'ಸುವರ್ಣ ನಿಯಮ'ವನ್ನು ಅನುಸರಿಸಿದರೆ ನೀವು ಆರೋಗ್ಯ, ಸುಖವಂತರಾಗಿ, ಸುಂದರ ಶರೀರರಾಗಿ, ದೃಢಕಾಯರಾಗಿ ಇರಬಹುದು. ಬೈಲ್ ಬೀನ್ಸು ಶುದ್ಧ ವನಸ್ಪತಿಯಿಂದ ತಯಾರಿಸಿದ್ದು. ಶರೀರಾಂಗಗಳನ್ನು ಸರಿಗೊಳಿಸಿ ಅವು ರಕ್ತವನ್ನು ಶುದ್ಧಿಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು. ಹೀಗೆ ನಿಮ್ಮ ಆರೋಗ್ಯವನ್ನು ಉತ್ತಮಗೊಳಿಸಿ ವರ್ಣವನ್ನು ಚಂದಗೊಳಿಸಿ ನಿಮ್ಮನ್ನು ಆಕರ್ಷಕರಾಗಿಯೂ, ನವಯುವಕರಾಗಿಯೂ ಯೋಗ್ಯರಾಗಿಯೂ ಮಾಡುವವು.

ಎಲ್ಲಾ ಔಷಧಿ ವ್ಯಾಪಾರಿಗಳೂ ಬೈಲ್ ಬೀನ್ಸನ್ನು ಬಾಟ್ಲಿಗೆ ಒಂದು ರೂಪಾಯಿ ಬೆಲೆಗೆ ಮಾರಾಟ ಮಾಡುವರು.

BILE BEANS

ಬೈಲ್‌ಬೀನ್ಸು ನಿಮ್ಮ ಆರೋಗ್ಯ ಮತ್ತು ಶರೀರವನ್ನು ಉತ್ತಮಗೊಳಿಸುವುದು.

ಸ್ವದೇಶ ಸಮಾಚಾರ

ಪೂರ್ಣ ಬೆಳ್ಳಿ ರೂಪಾಯಿಗಳೆಲ್ಲಾ ಹಿಂದೆಗೆಯಲ್ಪಡುವುವು

ವಿಕ್ಟೋರಿಯಾ ಮತ್ತು ಏಳನೇ ಎಡ್ವರ್ಡ್ ರೂಪಾಯಿ ಅರ್ಧ ರೂಪಾಯಿ ನಾಣ್ಯಗಳನ್ನು ಕ್ರಮವಾಗಿ ೧-೪-೪೧ ಮತ್ತು ೧-೬-೪೧ರಿಂದ ರದ್ದುಮಾಡಿತ್ತು. ರಿಜರ್ವ್ ಬೇಂಕಿನ ಮುಂಬಯಿ, ಕಲ್ಕತ್ತ, ಮದ್ರಾಸು ನಾಣ್ಯ ಕಚೇರಿಗಳಲ್ಲಿ ಮಾತ್ರ ಅವು ನಡೆಯುತ್ತಿದ್ದವು. ಇದನ್ನು ತಾ. ೧-೫-೪೨ರಿಂದ ನಿಲ್ಲಿಸಿಬಿಡಲಾಗುವುದೆಂದು ಸರಕಾರೀ ಪ್ರಕಟಣೆಯಿದೆ. ಮಾತ್ರವಲ್ಲದೆ ೫ ಮತ್ತು ೬ನೇ ಜಾರ್ಜ್ ರೂಪಾಯಿಗಳು ೧-೫-೪೨ರಿಂದ ನಡೆಯಲಾರವು. ರಿಸರ್ವ್ ಬೇಂಕು, ಪೋಸ್ಟ್ ರೈಲ್ವೆ ಮತ್ತು ಸರಕಾರೀ ಖಜಾನೆಗಳಲ್ಲಿ ಅವುಗಳನ್ನು ತಾ. ೧-೧೧-೪೨ರಿಂದ ಸ್ವೀಕರಿಸಲಾಗುವುದಿಲ್ಲ. ಈ ಪ್ರಕಟಣೆಯಿಂದ ಅರ್ಧ ಬೆಳ್ಳಿಯ ನಾಣ್ಯಗಳು ನಿಲ್ಲುವುದಿಲ್ಲ. ಪೂರ್ಣ ಬೆಳ್ಳಿಯ ವಿಕ್ಟೋರಿಯಾ, ೭ನೇ ಎಡ್ವರ್ಡ್, ೫ನೇ ಮತ್ತು ೬ನೇ ಜಾರ್ಜರ ಕೆಲವು ನಾಣ್ಯಗಳು ಮಾತ್ರ ನಿಲ್ಲಿಸಲ್ಪಡುವವು.

ಚಿಮೂರು ದುರಂತದಲ್ಲಿ ೧೯ ಜನರಿಗೆ ಫಾಶಿ!

ಮಧ್ಯಪ್ರಾಂತದ ಚಿಮೂರು ಗ್ರಾಮದಲ್ಲಿ ಜನರು ದಂಗೆಯೆದ್ದು ಪೋಲೀಸ ಇನ್‌ಸ್ಪೆಕ್ಟರ್, ಪೋಲೀಸ್ ಶಿಪಾಯಿ ಮತ್ತೊಬ್ಬ ಅಧಿಕಾರಿಗಳನ್ನು ಕೊಂದ ಆರೋಪದಲ್ಲಿ ಚಾಂದಾ ಸ್ಪೆಶಲ್ ಜಜ್ ಕೋರ್ಟಿನಲ್ಲಿ ೨ ಖಟ್ಲೆಗಳು ನಡೆದು ೧೯ ಜನರಿಗೆ ಫಾಶಿ ಶಿಕ್ಷೆ; ೪೩ ಜನರಿಗೆ ಜೀವಾವಧಿ ಸೆರೆಮನೆವಾಸ ಶಿಕ್ಷೆ ವಿಧಿಸಲಾಗಿದೆ. ಚಿಮೂರು ರಕ್ಷಣೆಗೆ ಹೋದ ಸೈನಿಕರೂ ಪೋಲೀಸರೂ ಅಲ್ಲಿನ ಹೆಂಗುಸರ ಮೇಲೆ ಬಲಾತ್ಕಾರ ಮಾಡುವ ಹಲವು ದೂರುಗಳಿವೆ. ಈ ಬಗ್ಗೆ ಅಣೆಯವರಿಗೆ ಸೇವಾ ಗ್ರಾಮದ ಪ್ರೊ|| ಬನ್ಸಾಲಿಯವರ ದೂರು ಹೋಯಿತು. ಇದಕ್ಕೆಲ್ಲಾ ಗಾಂಧಿ ಕಾರಣರೆಂದು ಅಣೆ ಹೇಳಿದರು. ವಿಚಾರಣೆ ನಡೆಸುವ ಅಧಿಕಾರವಿಲ್ಲದಿದ್ದರೆ ನೀವು ರಾಜಿನಾಮೆ ಕೊಡಬಾರದೇ ಎಂದು ಹೇಳಿ ಪ್ರೊಫೆಸರರು ಅಲ್ಲಿಂದ ಮರಳಿದರು. ಅವರು ತಿರುಗಿ ಆಶ್ರಮ ಮುಟ್ಟಬೇಕಾದರೆ ವಾರಂಟು ಬಂತು. ಬನ್ಸಾಲಿಯವರೀಗ ಸೆರೆಮನೆಯಲ್ಲಿದ್ದಾರೆ!

ರಾಜಾಜಿ ಇಂಗ್ಲೆಂಡಿಗೆ ಬರುವ ಅವಶ್ಯವಿಲ್ಲ

ಭಾರತದ ಬಿಕ್ಕಟ್ಟು ಬಿಡಿಸಲು ಅನುಮತಿ ದೊರೆತರೆ ತಾನು ವಿಲಾಯಿತಿಗೆ ಹೋಗಿ ಪ್ರಯತ್ನ ಮಾಡುತ್ತೇನೆಂದು ರಾಜಾಜಿ ಹೇಳಿದಕ್ಕೆ ಉತ್ತರವಾಗಿ, ಕಾಮನ್ಸ್ ಸಭೆಯಲ್ಲಿ ಅಮೆರಿಯವರು, ರಾಜಗೋಪಾಲಾಚಾರ್ಯರು ಇಂಗ್ಲೆಂಡಿಗೆ ಬರುವುದು ಅವಶ್ಯವಿಲ್ಲವೆಂದರು.

ಈಸೂರು ವಿಚಾರಣೆ

ಶಿವಮೊಗ್ಗದ ಬಳಿ ಈಸೂರು ಗ್ರಾಮದಲ್ಲಿ, ಆದ ದಂಗೆಯ ನಿಮಿತ್ತ ೫೦ ಜನರ ಮೇಲೆ ಖಟ್ಲೆ ನಡೆದು ವಿಚಾರಣೆ ನಡೆಯುತ್ತದೆ. ಈಸೂರು ಗ್ರಾಮ ನಿವಾಸಿಗಳು ಗ್ರಾಮದ ಪಟೇಲ ಶ್ಯಾನುಭಾಗರನ್ನು ರಾಜಿನಾಮೆ ಕೊಡುವಂತೆ ಒತ್ತಾಯಿಸಿ, ತಾವೇ ಅಮಲ್ದಾರ್ ಮಾಮಲೇದಾರರಾಗಿ ಹುಕುಮ್ ಕೊಟ್ಟು, ಅದನ್ನು ಅವಮಾನ್ಯಮಾಡಿದ ಬಗ್ಗೆ ೧೦ ರೂ. ದಂಡ ವಿಧಿಸಿದರು. ಇದನ್ನು ವಿಚಾರಿಸಲು ಬಂದ ಅಮಲ್‌ದಾರರಿಗೂ, ಪೋಲೀಸ್ ಇನ್ಸ್‌ಪೆಕ್ಟರರಿಗೂ, ಗಾಯಮಾಡಿ ಇಬ್ಬರನ್ನು ಕೊಂದರು. ಅನೇಕರಿಗೆ ಗಾಯವಾಗಿವೆ. ಇದು ಖಟ್ಲೆಯ ಸಾರಾಂಶವಾಗಿದೆ. ಈಸೂರು ವಿಚಾರಣೆಗಾಗಿ ಒಬ್ಬ ಸ್ಪೆಶಲ್ ನ್ಯಾಯಾಧೀಶರನ್ನೇ ನೇಮಿಸಲಾಗಿದೆ.

ಬಂಧನ ಶಿಕ್ಷೆಗಳು

ಮುಂಬಾಯಿ ಮಾಜಿಮಂತ್ರಿ ಡಾ ಗಿಲ್ಡರ್, ಅ. ಭಾ. ಗ್ರಾ. ಸಂಘದ ಶ್ರೀ ಜೆ. ಸಿ. ಕುಮಾರಪ್ಪ, ವಲ್ಲಭಭಾಯಿ ಪಟೇಲರ ಮಗ ಇವರನ್ನು ಬಂಧಿಸಲಾಗಿದೆ. ಹೀಗೆ ದೇಶದ ಆದ್ಯಂತದಲ್ಲಿ ಕಾಂಗ್ರೆಸು ಮುಂದಾಳುಗಳ ಬಂಧನ, ಶಿಕ್ಷೆಗಳು ನಡೆಯುತ್ತಲೇ ಇದೆ.

ಜಯಪ್ರಕಾಶ ನಾರಾಯಣರು ಸೆರೆಮನೆಯಿಂದ ತಪ್ಪಿಸಿದರು!

ಪಾಟ್ನಾ ಹಜಾರಿಬಾಗ್ ಜೈಲಿನಿಂದ ತಾ. ೯ರಂದು ಶ್ರೀ ಜಯಪ್ರಕಾಶ ನಾರಾಯಣ ಬಾಬು ಜೋಗೇಂದ್ರ ಸುಕೂರ್, ರಾಮನಾಥನ್ ಮಿಶ್ರ ಮೊದಲಾಗಿ ಐದು ಮಂದಿ ರಾಜಕೀಯ ಕೈದಿಗಳು ತಪ್ಪಿಸಿರುವರೆಂದು ಸರಕಾರದ ಪ್ರಕಟಣೆಯಿದೆ. ಇವರನ್ನು ಹಿಡಿದು ಕೊಟ್ಟವರಿಗೆ ೨೦ ಸಾವಿರ ಮಿಕ್ಕಿ ಬಹುಮಾನ ಕೊಡುತ್ತೇವೆಂದು ಸರಕಾರ ಪ್ರಕಟಿಸಿದೆ. ಶ್ರೀ. ಜಯಪ್ರಕಾಶ ನಾರಾಯಣರು ಕ್ರಾಂತಿಮಾಡಲುಮನಸ್ಸುಮಾಡಿದ್ದಾರೆಂಬ ಆರೋಪ ಹೊರಿಸಿ ಸರಕಾರವು ಹಿಂದೊಮ್ಮೆ ಒಂದು ಪ್ರಕಟಣೆ ಕೊಟ್ಟಿತ್ತು. ಆಗ ಅದಕ್ಕೆ ಗಾಂಧಿಜಿ ಒಳ್ಳೆ ಉತ್ತರ ಬರೆದಿದ್ದರು. 'ಶ್ರೀ. ಜಯಪ್ರಕಾಶರು ಪಾಶ್ಚಾತ್ಯ ದೇಶಗಳಲ್ಲಿ ಹಲವು ವರ್ಷ ಇದ್ದು ಅಲ್ಲಿನ ರಾಜನೀತಿ ತಿಳಿದವರು; ಪಾಶ್ಚಾತ್ಯ ರಾಜನೀತಿಯಂತೆ ಸರಕಾರದ ವಿರುದ್ಧ ಬಂಡಾಯವೆಬ್ಬಿಸುವುದು ಮಹಾಪರಾಧವಲ್ಲ!' ಎಂದು ಗಾಂಧಿಜಿ ಬರೆದಿದ್ದರು. ಕಳೆದ ಎರಡು ಮೂರು ವರ್ಷಗಳಿಂದ ಜಯಪ್ರಕಾಶರು ಸೆರೆಮನೆಯಲ್ಲಿಯೇ ಇದ್ದಾರೆ. ಅವರನ್ನು ಒಮ್ಮೆ ಮಧ್ಯೇ ಬಿಡುಗಡೆಮಾಡಿ ಕೂಡಲೇ ಬಂಧಿಸಿದರು. ಅವರು ಸಮತಾವಾದೀ ಪಕ್ಷದ ಮುಖಂಡರು, ಉಜ್ವಲ ದೇಶಾಭಿಮಾನಿಗಳಾದ ತರುಣ ನಾಯಕರು!

ಕರ್ನಾಟಕದಲ್ಲಿ ಬರಗಾಲ

ಉತ್ತರ ಕರ್ನಾಟಕದ, ಧಾರವಾಡ, ಬಿಜಾಪುರ ಮೊದಲಾದ ಹಲವು ಜಿಲ್ಲೆಗಳಲ್ಲಿ ಭಯಂಕರ ಬರಗಾಲವಿದೆ. ಜನರು ಸ್ಥಿತಿಸ್ಥಾನಗಳನ್ನು ಕಳೆದುಕೊಂಡು ಅಲೆದಾಡುತ್ತಿದ್ದಾರೆ. ಈಗ ೬, ೭ ವರ್ಷಗಳಿಂದಲೂ ಅಲ್ಪ ಮಳೆಗೆ ತುತ್ತಾಗಿ ಬರಗಾಲವಿತ್ತು. ಆದೀಗ ವಿರಾಡ್ರೂಪ ಹೊಂದಿದೆ. ಯುದ್ಧದ ಪರಿಣಾಮವಾಗಿ ಆಹಾರ ಪದಾರ್ಥಗಳು ದೊರೆಯದಾಗಿವೆ. ಉಡಲು ಬಟ್ಟೆ, ಉಣ್ಣಲು ಅನ್ನ ಇಲ್ಲದೆ ಜನರು ಕಂಗಲಾಗಿದ್ದಾರೆ. ಸರಕಾರದವರು ಬೇಗನೇ ಪರಿಹಾರ ಕಾರ್ಯ ಕೈಕೊಳ್ಳದಿದ್ದರೆ ಈ ಪರಿಸ್ಥಿತಿ ಕೈಮೀರಿ ಹೋಗುವುದು. ಊರಿಗೆ ಊರೇ ನಾಶವಾದೀತು!

ನೆಹರುಗಳ ೫೪ನೇ ಜನ್ಮದಿನ

ಪಂಡಿತ ಜವಾಹರಲಾಲನೆಹರುಗಳ ೫೪ನೇ ಜನ್ಮದಿನ ಈ ಶನಿವಾರ ಬಂದಿದೆ. ಜನ್ಮದಿನಾಚರಣೆ ಎಂದರೆ ನೆಹರುಗಳಿಗೆ ಬಹಳ ಆನಂದ. ಅವರ ಮಗಳ ಜನ್ಮದಿನವನ್ನು ಅವರು ಎಂದೂ ಮರೆಯಲಾರರು. ಏನಾದರೊಂದು ಕಾಣಿಕೆ ಕೊಡಲೇಬೇಕು. ನೆಹರುಗಳಾದರೋ ತಮ್ಮ ಜನ್ಮದಿನ ಹಲವು ಕಾಣಿಕೆ ಪಡೆಯುತ್ತಿದ್ದರು. ಆದರೆ ಈ ಸಲದ ಅವರ ಜನ್ಮದಿನ ಎಲ್ಲಿಯೋ ಒಂದು ಸೆರೆಮನೆಯಲ್ಲಿ! ಬೇಗನೇ ನೆಹರುಗಳ ಸ್ವಾತಂತ್ರ್ಯದ ಬೆಳಕುಳ್ಳ ವಾತಾವರಣಕ್ಕೆ ಬಂದು ಹಲವು ಕಾಣಿಕೆಗಳನ್ನು ಪಡೆಯಲಿ ಎಂದು ನಾವು ಹಾರೈಸುವ!

ಅನಾಥ ಶಿಶು ಸಂರಕ್ಷಣಾಲಯ ಶೇಷಾದ್ರಿರಸ್ತೆ ಬೆಂಗಳೂರು ಸಿಟಿ.

ಪ್ರಕೃತ ಸಂಸ್ಥೆಯಲ್ಲಿ ಅನಾಥರಾದ ೬ ಮಕ್ಕಳಿವೆ. ಹಿಂದೂ ಸಮಾಜದ ಶೋಚನೀಯ ಸ್ಥಿತಿಯನ್ನು ಪರಿಶೀಲಿಸಿದವರಿಗೆ ಕಾರಣಾಂತರಗಳಿಂದ ಪ್ರತಿದಿನವೂ ನಡೆಯುತ್ತಿರುವ ಹಲವು ಭ್ರೂಣಹತ್ಯ, ಶಿಶುಹತ್ಯಗಳ ವಾರ್ತೆಯನ್ನು ಕೇಳುತ್ತಿರುವವರಿಗೆ ಅನಾಥರಾದ ಮಕ್ಕಳು ಅನಾನುಕೂಲಗಳಿಂದ ಬಡತನದ ಬೇಗೆಯಿಂದ ಜೀವಸಹಿತವೆ ಕಸದ ಬುಟ್ಟಿಗೆ ಬೀಳುತ್ತಿರುವುವು ಎಂಬುದನ್ನು ಕೇಳುತ್ತಿರುವವರಿಗೆ ಇಂತಹ ಸಂಸ್ಥೆಗಳ ಅವಶ್ಯಕತೆ ಎಷ್ಟಿದೆ ಎಂಬುದನ್ನು ಹೇಳಬೇಕಾಗಿಲ್ಲ. ಭೂತ ದಯಾ ದೃಷ್ಟಿಯುಳ್ಳ ಮಹನೀಯರು ಸಮಾಜ ಹಿತೈಷಿಗಳು ದೇಶಾಭಿಮಾನಿಗಳು ಈ ಸಂಸ್ಥೆಗೆ ತನುಮನಧನಗಳಿಂದ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ. ಒಂದು ವರ್ಷಕ್ಕೆ ಒಳಪಟ್ಟ ಅನಾಥಮಕ್ಕಳನ್ನು ಗೋಪ್ಯರೀತಿಯಿಂದ ತರಿದು ಕೊಡತಕ್ಕವರಿಗೆ ತಕ್ಕ ಸೌಲಭ್ಯವನ್ನು ಕಲ್ಪಿಸಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಪುನಃ ೨ ತಿಂಗಳ ವರೆಗೆ ನಿರ್ಬಂಧ

ಇಡೀ ದ ಕ. ಜಿಲ್ಲೆಯಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆ, ಕೂಟಗಳಿಗೆ, ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ, ತಾ. ೧೬ ನವಂಬರ ೧೯೪೨ರಿಂದ ಎರಡು ತಿಂಗಳ ವರೆಗೆ ದ ಕ. ಜಿಲ್ಲಾ ಕಲೆಕ್ಟರರು ಪುನಃ ನಿರ್ಬಂಧ ಆಜ್ಞೆ ಹೊರಡಿಸಿರುವರು.

ಶ್ರೀ। ದಾಮೋದರ ಬಾಳಿಗರು ಬಂಧಿಸಲ್ಪಟ್ಟರು

ಮಂಗಳೂರಿನ ಶ್ರೀ। ಬಿ ದಾಮೋದರ ಬಾಳಿಗರು ತಾ ೧೭ರಂದು ಸಂಜೆ ೮ ಗಂಟೆಗೆ ಅವರ ಅಂಗಡಿಯಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ಪ್ರಕಾರ ಬಂಧಿಸಲ್ಪಟ್ಟಿರುವರು. ಅವರನ್ನು ಮರುದಿನ ಮಧ್ಯಾಹ್ನಕ್ಕೆ ಸಬ್ ಜೈಲಿಗೆ ಕರೆದು ಕೊಂಡು ಹೋಗಲಾಗಿದೆ

ಬಿಡುಗಡೆ

ಕೋರ್ಟ್ ಪಿಕೆಟಿಂಗ್ ಮಾಡಿ ಅಂಥಿಪಟ್ಟಿಂದು ಶಿಕ್ಷೆಗೊಳಗಾದ ಶ್ರೀ ಗಣಪತಿ ಕಾಮತರು ತಾ. ೧೪ರಂದು ತಮ್ಮ ಎರಡು ತಿಂಗಳ ಶಿಕ್ಷೆಯನ್ನನುಭವಿಸಿ ಮಂಗಳೂರು ಸಬ್ ಜೈಲಿನಿಂದ ಬಿಡುಗಡೆಹೊಂದಿರುವರು.

ಶಿಕ್ಷೆ

ಕಾಸರಗೋಡಿನ ಸತ್ಯಾಗ್ರಹಿಗಳಾದ ಶ್ರೀ ಎಂ ರಾಮಮೋಹನರಾವ್ (ವಕೀಲ್ ಶ್ರೀ ಎಂ ಉಮೇಶರಾಯರ ಮಗ) ಕರುಣಾಕರನ್ ಮತ್ತಿನ್ನೊಬ್ಬರ ವಿಚಾರಣೆ ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ನಡೆದು ಪ್ರತಿಯೊಬ್ಬರಿಗೂ ೬, ೬ ತಿಂಗಳ ಶಿಕ್ಷೆ ವಿಧಿಸಿ ಕಳೆದ ಶನಿವಾರ ಅವರನ್ನು ಆಲಿಪುರಂ ಜೈಲಿಗೆ ಕಳುಹಿಸಲಾಗಿದೆ

ಕಾರ್ಕಳದ ಶ್ರೀ ಕೆ ಪಿ. ಪುಂಡಲೀಕ ಪ್ರಭುಗಳ ವಿಚಾರಣೆ ಕುಂದಾಪುರ ಸಬ್ ಕಲೆಕ್ಟರರ ಮುಂದೆ ನಡೆದು ಅವರಿಗೆ ೯ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ ಸರಕಾರೀ ನೌಕರರು ತಮ್ಮ ಕೆಲಸಗಳಿಗೆ ರಾಜಿನಾಮೆ ಕೊಡಬೇಕೆಂದು ಪತ್ರ ಬರೆದ ಆರೋಪದ ಮೇಲೆ ಕಳೆದ ತಾ ೧೪ರಲ್ಲಿ ಬಂಧಿತರಾದ ಶ್ರೀ ಕೆ ಶ್ರೀನಿವಾಸ ಕಾಮತರಿಗೆ ತಾ ೨೫ರ ತನಕ ರಿಮ್ಯಾಂಡು ಕೊಡಲಾಗಿದೆ ಅಂದು ಅವರ ವಿಚಾರಣೆ ಕುಂದಾಪುರದಲ್ಲಿ ನಡೆಯುವುದೆಂದು ತಿಳಿಯುತ್ತದೆ

ಪಡ್ರೆ ಗ್ರಾಮದ ಮಾಜಿ ಪಟೇಲರಾದ ಶ್ರೀ. ಪಿ ವಿ ಕಡಂಬಳಿತ್ತಾಯರು ಕಾಸರಗೋಡಲ್ಲಿ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಲ್ಪಟ್ಟಿದ್ದು, ಕೆಲದಿನ ರಿಮಾಂಡಿನಲ್ಲಿ ಕಳೆದ ಬಳಿಕ, ತಾ ೧೬ರಂದು ಅವರ ವಿಚಾರಣೆ ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ನಡೆದು ಅವರಿಗೆ ೯ ತಿಂಗಳ ಕಠಿಣ ಶಿಕ್ಷೆ ಮತ್ತು ಬಿ ಕ್ಲಾಸು ವಿಧಿಸಲಾಯಿತು ಅವರನ್ನು ಬಳ್ಳಾರಿ ಆಲಿಪುರಂ ಜೈಲಿಗೆ ಸಾಗಿಸಲಾಗುವುದು

ರಾಜಿನಾಮೆ

ಬೈಂದೂರು ಸರ್ಕಲಿನ ಕಾಂಗ್ರೆಸ್ ಪಕ್ಷದ ಡಿಸ್ಟ್ರಿಕ್ಟ ಬೋರ್ಡ್ ಮೆಂಬರರಾದ ಶ್ರೀ ಬಿ ಸುಬ್ಬಣ್ಣ ಶೆಟ್ರು ತಮ್ಮ ಸದಸ್ಯತ್ವಕ್ಕೆ, ಸರಕಾರದ ದಬ್ಬಾಳಿಕೆಯ ನೀತಿಯನ್ನು ನಿಷೇಧಿಸಿ ರಾಜಿನಾಮೆ ಯಿತ್ತಿರುವರು.

ಶ್ರೀ ಹಾಣಾಜೆ ಕೃಷ್ಣಭಟ್ಟರ ಬಂಧನ

—ಶ್ರೀ ಹಾಣಾಜೆ ಕೃಷ್ಣಭಟ್ಟರನ್ನು ವಿಟ್ಲದಲ್ಲಿ 'ಡಿಫೆನ್ಸ್ ಓಫ್ ಇಂಡಿಯಾ ಏಕ್ಟಿ'ನ ಪ್ರಕಾರ ಪೋಲೀಸರು ಸೆರೆಹಿಡಿದರು. ಅವರ ಮನೆಯನ್ನು ಜಡ್ತಿಮಾಡಲಾಗಿದೆ, ಕೆಲವು ಕರಪತ್ರಗಳು ದೊರಕಿವೆಯೆಂದು ತಿಳಿಯುತ್ತದೆ.

ಬಂಧನ

ತಾ. ೯ರಲ್ಲು ಕಾರ್ಕಳ ತಾಲೂಕು ಕಚೇರಿಯಲ್ಲಿ ಕರಪತ್ರಗಳನ್ನು ಹಂಚಿದರೆಂಬ ಆಪಾದನೆಯಲ್ಲಿ ಶ್ರೀಗಳಾದ ನೀಲಕಂಠ ಪಾಠಕ, ರಂಗನಾಥ ಪ್ರಭು, ಮತ್ತು ಕೆ. ಪಿ ಪುಂಡಲೀಕ ಪ್ರಭು ಈ ಮೂವರನ್ನು ಪೋಲೀಸರು ಬಂಧಿಸಿದ್ದು ಇವರ ಪೈಕಿ ಮೊದಲಿನ ಇಬ್ಬರನ್ನು ಕರೆದಾಗ ಬರುವಂತೆ ಎಚ್ಚರಿಸಿ ಬಿಡುಗಡೆ ಮಾಡಿದೆ.

ದ. ಕ. ಜಿಲ್ಲಾ ಚತುರ್ಥ ಮಹಿಳಾ ಸಮ್ಮೇಳನ

ತಾ ೧೪ನೇ ಸಂಜೆ ಸ್ಥಳೀಯ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಕಟ್ಟಡದಲ್ಲಿ, ದ. ಕ. ಜಿಲ್ಲೆಯ ಚತುರ್ಥ ಮಹಿಳಾ ಸಮ್ಮೇಳನವು ಶ್ರೀಮತಿ ಕೆ. ವಿಲಾಸಿನಿ ಶೆಣೈ, ಬಿ ಎ, (ಆನರ್ಸ್) ಬಿ. ಎಲ್., ಅವರ ಅಧ್ಯಕ್ಷತೆಯಲ್ಲಿ ಜರುಗಿತು ಸಭಾರಂಭದಲ್ಲಿ ಶ್ರೀಮತಿ ಲೀಲಾಬಾಯಿ ಬಾಳಿಗ ಅವರಿಂದ ಪ್ರಾರ್ಥನೆ ನಡೆದು ಶ್ರೀಮತಿ ಸರಸ್ವತೀ ಬಾಯಿ ಕೇಶವ ಪೈ ಅವರು ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತ ನಮ್ಮ ಮಹಿಳೆಯರಲ್ಲಿ ಅಗತ್ಯವಿರುವ ಸ್ವಸಾಹಾಯ್ಯ ಮೊದಲಾದವುಗಳ ಕುರಿತು ವಿವರಿಸಿದರು

ಅಧ್ಯಕ್ಷೆಯರು ತಮ್ಮ ಭಾಷಣದಲ್ಲಿ ಹಲವು ವಿಚಾರಪೂರಿತವಾದ ವಿಷಯಗಳನ್ನು ವಿವರಿಸಿದರು, ಭಾರತವು ತನ್ನ ಕಲಾ, ಸಾಹಿತ್ಯ, ಆಯುರ್ವೇದ, ವಿಜ್ಞಾನಾದಿಗಳಿಗೂ, ಮಹಾಪುರುಷರ ಜನ್ಮಕ್ಕೂ ಕಾರಣವಾಗಿ ಹೇಗೆ ತನ್ನ ಮಹತ್ವತನ್ನು ಪ್ರದರ್ಶಿಸಿದೆ ಎಂದು ವಿವರಿಸಿ, ಭಾರತದ ಮಹಿಳೆಯೂ ಪುತ್ರಿ, ಪತ್ನಿ, ಮಾತೆಯಾಗಿ ಎಂಥ ಅದ್ವಿತೀಯ ಸ್ಥಾನವನ್ನು ಹೊಂದಿರುವಳೆಂಬುದನ್ನು ನಿರ್ದೇಶಿಸಿ, ಮನೆಯ ಹೊರಗೂ ಒಳಗೂ ಆಕೆಯ ಕರ್ತವ್ಯಗಳು ಯಾವುವೆಂದೂ ತಿಳಿಯಪಡಿಸಿದರು. ಅಹಿಂಸಾವ್ರತ ಜನತಾ ಸೇವೆ ಸಮಾಜ ಸುಧಾರಣೆ ಮಹಿಳಾ ಶಿಕ್ಷಣ ಮಹಿಳಾಯರಿಗೆ ರಾಜಕೀಯ ಸಾಮಾಜಿಕ, ಆರ್ಥಿಕ ಸಮಾನತೆ, ಅನಾಥ ಮಹಿಳೆಯರ, ಮಕ್ಕಳ ಉದ್ಧಾರಕಾರ್ಯ ಮೊದಲಾದ ಸೂಚನೆಗಳುಳ್ಳ ಭಾಷಣ ಮಾಡಿದರು. ಜಾತೀಯ ಭಾವನೆ ಇರಬಾರದೆಂದೂ ಒತ್ತಿ ಹೇಳಿದರು

ಸಮ್ಮೇಳನದ ಯಶಸ್ಸನ್ನು ಹಾರೈಸಿಬಂದ ತಂತಿಗಳನ್ನು ಓದಿದ ತರುವಾಯ, ಅಂದು ಬೆಳಗ್ಗೆ ನಡೆದ ನೂಲುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಶ್ರೀಮತಿ ಡಾ. ಯು ಪಿ ಮಲ್ಯರಿಗೆ ಪ್ರಥಮ ಬಹುಮಾನವೂ, ದ್ವಿತೀಯ ಸ್ಥಾನ ಪಡೆದ ಶ್ರೀಮತಿ ರತ್ನಾ ಬಾಯಿ ಹಾಗೂ ಶ್ರೀಮತಿ ಮಿತ್ರಾ ಬಾಯಿ ಇವರಿಬ್ಬರಿಗೆ ಎರಡನೆಯ ಬಹುಮಾನವೂ ಸಂದವು

ಸಮ್ಮೇಳನದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ, ಬಹುಪತ್ನಿತ್ವ ನಿಷೇಧ, ಅಕ್ಷರಪ್ರಚಾರ, ಜಾತಿಗಳ ಐಕ್ಯ, ಹರಿಜನರ ಸೇವೆ, ಸಾರ್ವತ್ರಿಕ ಭಾಷೆ, ಸ್ವದೇಶೀವ್ರತ ಇವುಗಳ ಕುರಿತಾದ ಠರಾವುಗಳು ಮಂಜೂರಾದವು

ದ. ಕ ಜಿಲ್ಲಾ ಸೆಂಟ್ರಲ್ ಸಹಕಾರಿ ಬೇಂಕ್

ಇದರ ವರ್ಷಾವಧಿ ಮಹಾಸಭೆ ಕಳೆದ ಆದಿತ್ಯವಾರ ಸ್ಥಳೀಯ ಬೇಂಕಿನ ಕಟ್ಟಡದಲ್ಲಿ ಅಧ್ಯಕ್ಷರಾದ ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿ, "ಬ್ಯಾಲಾಸ್"ಗಳ ತಿದ್ದುಪಡಿ, 'ಒಜೆಟು ಹಾಗೂ 'ಆಡಿಟ್' ಆದ ವರದಿ, ಲೆಕ್ಕಪತ್ರಗಳು ಮಂಜೂರಾದುವು ಡೈರೆಕ್ಟರರ ಚುನಾವಣೆ ನಡೆದು ಶ್ರೀಗಳಾದ ಎಂ. ಶಿವರಾವ್, ಎ ಸುಬ್ರಾಯ ಹೆಗ್ಗಡೆ, ಪಿ ಎಸ್. ಭಂಡಾರ್ಕರ್, ಬಿ. ಮಂಗೇಶರಾವ್, ಎಸ್. ನರಸಪ್ಪಯ್ಯ, ಡಿ. ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ, ಎಂ. ಎಸ್. ಭಿಡೆ, ಕೆ. ಸುಬ್ಬಣ್ಣಯ್ಯ, ಎಂ. ಐತಪ್ಪ ರೈ, ಎಂ. ಚಂದು ನಂಬಿಯಾರ್, ಕೆ ಜೆ ಬಲ್ಲಾಳ, ಕೆ. ಎಲ್. ಕುಡ್ವ, ಟಿ. ಶಂಕರ ರಾವ್, ಎ ಎಂ ಮೊಂಟೇರೋ ಮತ್ತು ಆರ್ ಬಿ ಸಿ ಡಿ. ಅಂದ್ರಾದೆಯವರು ಬೇಂಕಿನ ಡೈರೆಕ್ಟರುಗಳಾಗಿ ಚುನಾಯಿಸಲ್ಪಟ್ಟರು.

ಈ ಸಂದರ್ಭದಲ್ಲಿ ಸಹಕಾರ ಸಂಘಗಳ ಡೆ॥ ರಿಜಿಸ್ಟ್ರಾರ್ ಶ್ರೀ. ಕೆ. ಅಚ್ಯುತನ್ ನಾಯರ್ ಅವರು, ಜಿಲ್ಲೆಯಲ್ಲಿ ಈಗಾಗಲೇ ಇರುವ ೧೬ ಕೋ–ಒಪರೇಟಿವ್ ಸ್ಟೋರುಗಳಿಗೆ ಪದಾರ್ಥಗಳನ್ನು ರಖಂ ಗಟ್ಟಲೆಯಾಗಿ ಕೊಂಡು ಅವನ್ನು ಒದಗಿಸುವ ಉದ್ದೇಶದಿಂದ ಸದ್ಯದಲ್ಲೇ ಮಂಗಳೂರಲ್ಲಿ ಸ್ಥಾಪಿಸಬೇಕೆಂದು ಸೂಚಿಸಿದ ಒಂದು "ಸೆಂಟ್ರಲ್ ಕೋಒಪರೇಟಿವ್ ಸ್ಟೋರ್ಸ್"ಗೆ ಜಿಲ್ಲೆಯ ಯಾವತ್ತು ಸಹಕಾರಿ ಸಂಘಗಳೂ ಸೇರಬೇಕೆಂದು ಅಲ್ಲಿ ನೆರೆದ ಜಿಲ್ಲಾ ಸಹಕಾರಿ ಸಂಘಗಳ ಪ್ರತಿನಿಧಿಗಳಲ್ಲಿ ಪ್ರಾರ್ಥಿಸಿಕೊಂಡರು

ಮಂಗಳೂರು ಮುನ್ಸಿಪಾಲಿಟಿ

ಇದರ ಮುನಿಸಿಪಲ್ ಕೌನ್ಸಿಲ್ ವಿಸರ್ಜನೆಯಾದ ಕಾರಣ, ಮುಂದೆ ಕಾರ್ಯಭಾರ ನಿರ್ವಹಿಸಲು 'ಸ್ಪೆಶಲ್ ಆಫೀಸರ'ರಾಗಿ ಈಗ ತಾನೇ ಸರಕಾರದಿಂದ ನೇಮಕ ಹೊಂದಿದ ಈ ಮುನಿಸಿಪಾಲಿಟಿಯ ಕಮಿಶನರ್ ಶ್ರೀ ಕೆ ರಾಮಸ್ವಾಮಿ ಮೊದಲಿಯಾರರು ತಾ ೧೬ರಂದು ಹಿಂದೆ ವಿಲೆಯಾಗದೆ ಉಳಿದ ಕೌನ್ಸಿಲಿನ ಸೂಚಿ ಪತ್ರದ ವಿಷಯಗಳನ್ನೆಲ್ಲ ತೀರ್ಮಾನಿಸಿದರು.

ಪ್ರಕಟಣೆ

ಮೈಸೂರು ಪ್ರಾಂತ್ಯದಲ್ಲಿ ಪ್ಲೇಗು ರೋಗವು ಅಲ್ಲಲ್ಲಿ ಹಬ್ಬಿಕೊಂಡಿರುತ್ತದೆ ಪುತ್ತೂರು ತಾಲೂಕಿನ ಗಡಿಯಲ್ಲಿರುವ ಮೈಸೂರು ಪ್ರಾಂತ್ಯದ ಜಿಲ್ಲೆಯಾದ ಹಾಸನದಲ್ಲಿ ಸಹಾ ಈ ರೋಗವು ಇರುವುದಾಗಿ ನಮ್ಮ ತಿಳುವಳಿಕೆಗೆ ಬಂದಿರುತ್ತದೆ ಸದರಿ ಪುತ್ತೂರು ತಾಲೂಕಿನ ಸುಬ್ರಹ್ಮಣ್ಯದಲ್ಲಿ ಇದೇ ತಾ 22-11 42ರಿಂದ 14 12 42ರ ವರೆಗೆ ನಡೆಯಲಿಕ್ಕಿರುವ ಜಾನುವಾರು ಸಂತೆ ಮತ್ತು ಷಷ್ಠಿ ಉತ್ಸವದ ಸಮಯದಲ್ಲಿ ಮೈಸೂರು ಜಿಲ್ಲೆಯಿಂದ ಬರುವ ಜನ ಜಾನುವಾರುಗಳ ಮುಖಾಂತರ ಈ ಪ್ಲೇಗು ರೋಗವು ನಮ್ಮ ಜಿಲ್ಲೆಗೆ ಪಸರಿಸುವ ಹೆಚ್ಚಿನ ಭಯವು ಇರುವ ಕಾರಣ ಸದ್ರಿ ರೋಗವು ಹಬ್ಬದಂತೆ ಏರ್ಪಾಡು ಮಾಡುವುದರ ಸಂಬಂಧವಾಗಿ ನಮ್ಮ ಜಿಲ್ಲೆಯ ಗಡಿಯಲ್ಲಿರುವ ಬಿಸ್ಲೆ ಘಾಟಿನಲ್ಲಿ ಮತ್ತು ಶಿರಾಡಿಯಲ್ಲಿ ಒಂದೊಂದು ತನಿಖೆ ಡಿಪೋಗಳನ್ನು ತೆರೆಯುವ ಏರ್ಪಾಡು ಮಾಡಿರುತ್ತದೆ ಸದ್ರಿ ಡಿಪೋಗಳಲ್ಲಿ ನೇಮಿಸಿರುವ ಪ್ಲೇಗು ಉದ್ಯೋಗಸ್ಥರು ಮೈಸೂರು ಸಂಸ್ಥಾನ ಅತ್ತ ಕಡೆಯಿಂದ ಬರುವ ಎಲ್ಲಾ ಪ್ರಯಾಣಸ್ಥರನ್ನೂ ಅವರ ಸಾಮಾನುಗಳನ್ನೂ ಸಂಪೂರ್ಣ ತನಿಖೆ ಮಾಡುವರು ಅದಲ್ಲದೆ ಪ್ರಯಾಣಸ್ಥರ ವಸ್ತ್ರಗಳನ್ನೂ ಸಾಮಾನುಗಳನ್ನು ಬಿಸಿಲಿಗೆ ಹಾಕಿ ಒಣಗಿಸುವರು ಈ ಕಾರ್ಯದಲ್ಲಿ ಸರ್ವರೂ ಸಂಬಂಧಪಟ್ಟ ಸರಕಾರಿ ಸಿಬಂದಿಯರಿಗೆ ಅಗತ್ಯವುಳ್ಳ ಎಲ್ಲಾ ಸಹಾಯಗಳನ್ನು ಮಾಡಬೇಕಾಗಿ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರರು ಅಪೇಕ್ಷಿಸುತ್ತಾರೆ

ಕೃಷಿ ಸ್ಪರ್ಧೆ

ಆಹಾರ ಸಾಮಗ್ರಿ ಬೆಳೆಸುವುದನ್ನು ಪ್ರೋತ್ಸಾಹಿಸುವ ಸಲುವಾಗಿ ದ ಕ ಜಿಲ್ಲಾ ಎಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನವರು ಈ ಕೆಳಗಿನ ಸ್ಪರ್ಧೆ ಬಹುಮಾನಗಳನ್ನಿಟ್ಟಿದ್ದಾರೆ–೧ ಡಿಪಾರ್ಟಮೆಂಟಿನಿಂದ ಕೊಡಲಾದ ಸುಧಾರಿತ ಕ್ರಮದ ಭತ್ತದ ಬೀಜಗಳಿಂದ ಒಬ್ಬ ರೈತನು ಮಾಡಿದ ವ್ಯವಸಾಯದ ಅಧಿಕ ಸ್ಥಳಕ್ಕೆ ೨ ಒಬ್ಬ ರೈತನು ಹಸಿರು ಸೊಪ್ಪು ಸ್ಥಳದಲ್ಲಿ ಹಾಕಿ ಬೆಳೆಸಿದ ಅಧಿಕ ಸ್ಥಳಕ್ಕೆ ೩ ಒಬ್ಬ ರೈತನು ಡಿಪಾರ್ಟಮೆಂಟಿನವರು ಸೂಚಿಸಿದ ಸುಧಾರಿತ ಕ್ರಮವನ್ನು ಅಧಿಕ ಸಂಖ್ಯೆಯಿಂದ ಅನುಸರಿಸಿದ್ದಕ್ಕೆ ಹೀಗೆ ಸ್ಪರ್ಧೆಗೆ ನಿಲ್ಲುವವರು ಮಂಗಳೂರಿಂದ ೧೦ ಮೈಲು ವಿಸ್ತೀರ್ಣದಲ್ಲಿರುವವರಾಗಿರಬೇಕು ಅಂಥವರು ೩೧ ದಿಸೆಂಬರ ೪೨ರ ಒಳಗೆ ಮಂಗಳೂರು, ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರರಿಗೆ ವಿಳಾಸ ಸಹಿತ ತಿಳಿಸಬೇಕು

ಹರಿಜನ ಸೇವಕ ಸಂಘ

ಇದರ ವಾರ್ಷಿಕ ಸಭೆ ಮಂಗಳೂರು ಥಿಯೋಸಫಿಕಲ್ ಹಾಲಿನಲ್ಲಿ ಶ್ರೀ ಎ ಬಿ ಶೆಟ್ಟಿ ಅಧ್ಯಕ್ಷತೆಯಿಂದ ಜರಗಿದು ಗತವರ್ಷದ ಆಯವ್ಯಯಗಳ ಮಂಜೂರಾಗಿ ಹೊಸ ವರ್ಷದ ಅಧಿಕಾರೀ ಚುನಾವಣೆಯಾಗಿ ಕಳೆದ ವರ್ಷದವರೇ ಆರಿಸಲ್ಪಟ್ಟರು ಶ್ರೀ ಟಿ ಕೃಷ್ಣ ಮತ್ತು ಶ್ರೀ ಕಾಂತಪ್ಪ ಇವರು ಹೊಸದಾಗಿ ಸದಸ್ಯರಾಗಿ ಚುನಾಯಿತರಾದರು

ಸುಬ್ರಹ್ಮಣ್ಯ

ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಇದೇ ಒಡುವ ತಾ ೩೦-೧೧-೪೨ರಲ್ಲಿ ಉತ್ಸವ ಪ್ರಾರಂಭವಾಗಿ ೭-೧೨-೪೨ಕ್ಕೆ ಲಕ್ಷದೀಪೋತ್ಸವ ತಾ ೯-೧೨-೪೨ಕ್ಕೆ ಶೇಷವಾಹನೋತ್ಸವ ತಾ ೧೦-೧೨-೪೨ಕ್ಕೆ ಮಯೂರವಾಹನೋತ್ಸವ ೧೧-೧೨-೪೨ಕ್ಕೆ ಹೂವಿನ ತೇರು ೧೨-೧೨-೪೨ಕ್ಕೆ ಪಂಚಮಿ ರಥೋತ್ಸವ ೧೩-೧೨-೪೨ಕ್ಕೆ ಚಂಪಾಷಷ್ಠಿ ಮಹಾರಥೋತ್ಸವ ೧೪-೧೨-೪೨ಕ್ಕೆ ಅವಭೃತೋತ್ಸವ ಇವೇ ಮೊದಲಾದ ಉತ್ಸವಗಳು ಶ್ರೀ ದೇವರ ಸನ್ನಿಧಿಯಲ್ಲಿ ಜರಗುವವು

ವರ್ಗಾವರ್ಗಿ

ಕಾರ್ಕಳದ ಡಿಸ್ಟ್ರಿಕ್ಟ್ ಮುನ್ಸಿಪ್ ಶ್ರೀ ಜೆ ಆರ್ ಕೃಷ್ಣಯ್ಯ ಚೆಟ್ಟಿಯಾರ್ ಇವರು ಒಪ್ಪರಿಗೆ ವರ್ಗವಾಗಿ, ಅವರ ಸ್ಥಾನಕ್ಕೆ ಮದ್ರಾಸಿನವರಾದ ಶ್ರೀ ಡಿ ನೊರೋನ್ಹಾ ಇವರು ನೇಮಿಸಲ್ಪಟ್ಟಿದ್ದಾರೆ.

ಚಿಮಿಣಿ ಎಣ್ಣೆ ಕಾನೂನು

ಮೀರಿದ ಆರೋಪದ ಮೇಲೆ ಕಾರ್ಕಳದ ವ್ಯಾಪಾರಿ ಶ್ರೀ ಎಸ್ ರಾಮರಾಯ ಕಿಣಿಯವರಿಗೆ ರೂ ೫೦ ಜುಲ್ಮಾನೆಯಾಗಿದೆ ಇನ್ನೊಬ್ಬ ವ್ಯಾಪಾರಿ ಶ್ರೀ. ಕೆ. ನಾರಾಯಣ ಭಟ್ಟರ ವಿಚಾರಣೆ ತಾ. ೩೦ರಂದು ನಡೆಯಲಿದೆ.

ಉಡುಪಿ

ಜಾಸ್ತಿ ಮಜೂರಿಯ ಕೇಳಿಕೆ

ತಾ ೮ರಲ್ಲಿ ಶ್ರೀ ಯು ರಾಮರಾಯರ ಅಧ್ಯಕ್ಷತೆಯಲ್ಲಿ ಸೇರಿದ ಉಡುಪಿ ತಾಲೂಕು ನೇಕಾರರ ಯೂನಿಯನ್ ಸಭೆಯಲ್ಲಿ ನೇಯಿಗೆ ಮಜೂರಿ ಗಜವೊಂದಕ್ಕೆ ೧೮ ಇಪ್ಪೆಯಿದ್ದುದನ್ನು ೨೪ ಪೈಗೇರಿಸಬೇಕಾಗಿ ಸಂಬಂಧಪಟ್ಟ ಕಾರ್ಖಾನೆ ಮಾಲಿಕರನ್ನು ಪ್ರಾರ್ಥಿಸುವ ನಿರ್ಣಯವಾಯಿತು ಸರಕಾರದವರೇ ಡಿಪೋಗಳನ್ನು ತೆರೆದು ಒಡಜಗ್ಗರಿಗೆ ಮಿತ ದರದಲ್ಲಿ ದವಸ ಧಾನ್ಯಗಳನು ದೊರಕಿಸುವ ವ್ಯವಸ್ಥೆ ಮಾಡಬೇಕಾಗಿ ಸರಕಾರದವರನ್ನು ಪ್ರಾರ್ಥಿಸಲಾಯಿತು



ಸಿನೆಮಾ ಸುದ್ದಿ

ರಷ್ಯಕ್ಕೆ ಜ್ಞಾನೇಶ್ವರ್

ಪ್ರಭಾತದವರ 'ಜ್ಞಾನೇಶ್ವರ್' ಚಿತ್ರವು ಅಮೆರಿಕದಲ್ಲಿ ಪ್ರದರ್ಶಿತವಾಗಿ ತುಂಬಾ ಪ್ರಶಂಸೆ ಪಡೆದಿದೆ. ಈಗ ಆ ಚಿತ್ರವನ್ನು ಚೀನಾ ರಷ್ಯಗಳಿಗೆ ಕಳುಹಿಸುವ ಏರ್ಪಾಡಾಗುತ್ತಿದೆಯೆಂದೂ, ಅದಕ್ಕಾಗಿ ಆ ಚಿತ್ರದ ವಿಶೇಷ ಪ್ರತಿ ತಯಾರಾಗುತ್ತಿದೆಯೆಂದೂ ಸುದ್ದಿ.

ದೇವಕೀ ಬೋಸರು

ನ್ಯೂ ಥಿಯೇಟರ್ಸ್ ಸ್ಟುಡಿಯೋದಲ್ಲಿ 'ರಾಮಾನುಜ' ಚಿತ್ರವನ್ನು ತಯಾರಿಸುವುದರಲ್ಲಿ ತಲ್ಲೀನರಾಗಿದ್ದಾರೆ.

ದಿಲ್‌ಸುಖ ಪಂಚೋಲಿ

ಇವರು 'ಖಾನ್‌ದನ್' 'ಜಮೀನ್ದಾರ್' ಚಿತ್ರಗಳ ಬಳಿಕ 'ಶಿರೀನ್ ಫರ್ಹಾದ್' ಎಂಬೀ ಚಿತ್ರ ತಯಾರಿಸುತ್ತಿದ್ದಾರೆ.

ಜವಾನೀ

ಎಂಬುದು ನೇಶನಲ್ ಸ್ಟುಡಿಯೋದವರ ಈಚೆಯ ಚಿತ್ರ. ಸುರೇಂದ್ರ ಹಸನ್‌ಬಾನು ನಟನೆಯಿಂದ ಕೂಡಿದೆ.

ಹೊಸತೊಂದು ಕನ್ನಡ ಸಿನೆಮಾ ಸಂಸ್ಥೆ

'ಬಿಜಯ ಪಿಕ್ಚರ್ಸ್' ಎಂಬ ಹೆಸರಿನಲ್ಲಿ ಕನ್ನಡ ತಾರೆ ಎಂ. ವಿ. ರಾಜಮ್ಮ ಒಂದು ಹೊಸ ಸಿನೆಮಾ ಸಂಸ್ಥೆ ಹೊರಡಿಸುತ್ತಾಳೆ. ಇದರ ಮೊದಲಿನ ಚಿತ್ರ 'ರಾಧಾ ರಮಣ' ಎಂಬುದು. ಇದರ ದಿಗ್ದರ್ಶಕರು ಜೆ. ಶತ್ತು ಅಯ್ಯರ್. ನ್ಯೂಟೋನ್ ಸ್ಟುಡಿಯೋದಲ್ಲಿ ಚಿತ್ರೀಕರಣವಾಗುವುದು.

ಅಶ್ವತ್ಥಮ್ಮನ ಅಸೌಖ್ಯ

ದಿಂದಾಗಿ, ಆಕೆ ಅಭಿನಯಿಸಿದ್ದ ತಮಿಳು ಚಿತ್ರ 'ಸಖೂಬಾಯಿ'ಯ ಪೂರ್ವಾರ್ಧವು ಬೇರೊಂದು ನಟಿಯಿಂದ ಪೂರ್ಣ ಮಾಡಲ್ಪಟ್ಟಿತು. ಅದರಲ್ಲಿನ ಅಶ್ವತ್ಥಮ್ಮನ ಕೆಲವು ಹಾಡುಗಳೂ ಇತರರಿಂದ ಹಾಡಲ್ಪಟ್ಟವೆಯೆಂದೂ 'ಸಂಡೇ ಟೈಮ್ಸ್' ಬರೆಯುತ್ತದೆ.

೧ ಚಿತ್ರಕ್ಕೆ ೨೦ ಸಾವಿರ ?

ರಮಣೀಕ ಪ್ರೊಡಕ್ಸನಿಗೆ ಲೀಲಾ ಚಿಟ್ನಿಸ್ ಸಹಿತ ಅಶೋಕ್ ಕುಮಾರನೂ ಸೇರಿರುವನಷ್ಟೆ? ಅಶೋಕ ಕುಮಾರನಿಗೆ ಒಂದು ಚಿತ್ರಕ್ಕೆ ೨೦ ಸಾವಿರ ರೂಪಾಯಿ ಸಂಬಳವಂತೆ! ಶಾಂತಾ ಆಪ್ಟೆಯನ್ನೂ ಇದಕ್ಕೆ ಸೇರಿಸಿಕೊಳ್ಳುವರೆಂಬೊಂದು ವದಂತಿಯಿದೆ.

ಜಯಶ್ರೀಗೆ 'ಶಕುಂತಲಾ'

ಶಾಂತಾರಾಮರ ಹೊಸ ಸಂಸ್ಥೆಯ ಮೊದಲನೆಯ ಚಿತ್ರ ಶಕುಂತಲಾದಲ್ಲಿ ಜಯಶ್ರೀಗೆ ಮುಖ್ಯಪಾತ್ರ ಕೊಡಲಾಗಿದೆ. 'ಭಾರತದ ಕರೆ' ಎಂಬುದು ಅವರ ಇನ್ನೊಂದು ಚಿತ್ರ. ಅದರ ಆಂಗ್ಲ ಭಾಷಾಂತರವೂ ಆಗಲಿದೆ.

ನಾಸೀಮ್ ವೈರಾಗ್ಯ?

ರೂಪರಾಣಿ ನಾಸೀಮಳು ಚಲಚ್ಚಿತ್ರ ಲೋಕದಿಂದ ವಿರಕ್ತಳಾಗುವ ಮನಸ್ಸಿನಲ್ಲಿದ್ದಾಳೆಂದು ವದಂತಿ. ಆಕೆಯ ಆರಾಧಕರಿಗೆ ಇದೊಂದು ಸಿಡಿಲುಬಡಿತ!

ಸೆಂಟ್ರಲಿನಲ್ಲಿ 'ಭೇಟಿ'

ರಣಜಿತ್‌ನವರ ಸಂಗೀತ ಮನೋಹರ ಚಿತ್ರ 'ಭೇಟಿ' ತಾ. ೨೦ರಿಂದ ಸ್ಥಳೀಯ ಸೆಂಟ್ರಲ್ ಟಾಕೀಸಿನಲ್ಲಿ ಪ್ರದರ್ಶಿತವಾಗುತ್ತಿದೆ. 'ಖುರ್ಶಿದ್' ವಾಸಂತಿ, ಅರುಣ, ಕೇಸರಿ, ಘೋರಿ ಮೊದಲಾದ ನಟನಟಿಯರು ಇದರಲ್ಲಿ ಅಭಿನಯಿಸುತ್ತಾರೆ. ರಣಜಿತ್ ಚಿತ್ರಗಳಲ್ಲಿ 'ಭೇಟಿ' ಸಂಗೀತ, ನಟನೆ, ಕಥೆ ಈ ಎಲ್ಲಾ ವಿಷಯಗಳಿಂದಲೂ ಪ್ರಖ್ಯಾತವಾಗಿದೆ. ಜಯಂತ್ ದೇಸಾಯಿ ಇದರ ದಿಗ್ದರ್ಶಕರು.

ಏನು, ಇನ್ನೂ ಸಕ್ಕರೆಯ ಹೊರಳೆ?

"ಹೊಗಲಿಬಿಡಿ. ಎಷ್ಟು ಹಣ ಕೊಡಬೇಕೆನ್ನುತ್ತೀರಿ? ಹೇಳಬಿಡಿ."

"ಇಡೀ ಪೇಟೆಯಲ್ಲಿ ಸಕ್ಕರೆಯಿಲ್ಲ. ಪುಂಡರು ರೇಲ್ವೆ ಹಳಿಗಳನ್ನು ಕಿತ್ತೊಗೆದಮೇಲೆ ಅದು ಬರಬೇಕೆಲ್ಲಿಂದ?"

"ಆದರೆ ನೀವು ದೊಡ್ಡ ದೇಶಭಕ್ತರು....ಸರ್ಕಾರಕ್ಕೆ ತೊಂದರೆಯಾಗುವುದರಿಂದ ನಿಮಗೆ ಸಂತೋಷವೇ ಆಗಬೇಕು!"

"ಸರ್ಕಾರ! ಈ ಪುಂಡಾಟಿಕೆಯಿಂದ ಯಾರಿಗೆ ತೊಂದರೆಯಾಗುತ್ತದೆಂದು ನಿಮ್ಮ ಅಭಿಪ್ರಾಯ? ಎಲ್ಲರಿಗಿಂತ ದೇಶಭಕ್ತರಿಗೇ ಇದರ ಕಾಟ ಹೆಚ್ಚಾಗಿದೆ... ಮತ್ತು ನಿಮಗೆ ತರ್ಕಾರಿ ಸಿಗುತ್ತದೆಯೆ?"

"ವಿಪರೀತ ಬೆಲೆಗೆ."

"ಸರಿ ಸುತ್ತುಮುತ್ತಲಿಂದ ನಮ್ಮ ಪೇಟೆಗೆ ಬರುವ ತರ್ಕಾರಿಯಿಂದ ಇಲ್ಲಿಯ ಬೇಡಿಕೆಯನ್ನು ಪೂರೈಸಲಾಗುವುದಿಲ್ಲ. ಅಕ್ಕಿ, ಕಾಳುಕಡಿ, ಬೆಣ್ಣೆ ತುಪ್ಪಗಳದೂ ಅದೇ ಗತಿ!"

"ನನಗೂ ಗೊತ್ತು....ಇನ್ನು ದಸರೆ—ದೀವಾಳಿಗಳು ಬಂದವು. ಬಡ ಬೋಕೇಗೌಡನಿಗೆ ದುಡ್ಡೆಲ್ಲಿಂದ ಬರಬೇಕು? ಕುಯ್ದ ಪೈರನ್ನು ಪೇಟೆಗೆ ಒಯ್ಯಲಾಗದಿದ್ದರೆ, ಮಾರುವ ಬಗೆಹ್ಯಾಗೆ?"

"ಅದನ್ನೇ ನಾನನ್ನುವುದು! ರೈಲ್ವೇ ಹಳಿ ಕೀಳುವುದು, ರೈಲ್ವೆ ಕಟ್ಟಡಗಳನ್ನು ಮತ್ತು ಸಿಗ್ನಲುಗಳನ್ನು ಕೆಡಿಸುವುದು—ಇದರಿಂದ ಅವನ್ನು ಮತ್ತೆ ಸರಿಪಡಿಸಲಿಕ್ಕೆ ತುಂಬಾ ಸಮಯಬೇಕು. ನಡುವೆ ಕಷ್ಟಪಡುವವರು ನಾವು ಸಾಮಾನ್ಯಜನರು. ಪುಂಡರಿಗೇನು? ತಮಾಷೆ—ಮೇಲೆ ಲೂಟಿಯ ಸರಕುಗಳು."

"ನಾವೇನು ಮಾಡಬಲ್ಲೆವು?"

"ನಾನು ನನ್ನ ಏಜಂಟರನ್ನು ಹಳ್ಳಿಗಳಲ್ಲಿ ಕಳಿಸುವವನಿದ್ದೇನೆ; ಮತ್ತು ಪುಂಡರಮೇಲೆ ಕಣ್ಣಿಟ್ಟು, ಅವರು ಹೆಚ್ಚಿನ ಹಾವಳಿ ಮಾಡದಂತೆ ನೋಡಿಕೊಳ್ಳಿರೆಂದು ಅಲ್ಲಿಯ ಜನರಿಗೆ ಹೇಳಿ ಕಳಿಸುವವನಿದ್ದೇನೆ."

"ಬೇಸ್! ಅಲ್ಲಲ್ಲಿಯ ನನ್ನ ಆಪ್ತೇಷ್ಟರಿಗೂ ಇದನ್ನೇ ಹೇಳಿಕಳಿಸುವೆನ್ನು."

ಪುಂಡರನ್ನು ಪ್ರತಿಭಟಿಸಿರಿ!

CPU. 55.KN.

ಮಂಗಳೂರು

ಸ್ಪಷ್ಟೀಕರಣ

ಕಳೆದ ವಾರದ ಜಿಲ್ಲಾ ಸಮಾಚಾರದಲ್ಲಿ ಶ್ರೀ ಭಾಸ್ಕರಪ್ಪೈಗಳ ಮನೆಯನ್ನು ಜಪ್ತಿ ಮಾಡಲಾಯಿತು." ಎಂದು ಪ್ರಕಟವಾದ ಸುದ್ದಿಯ ವಿಷಯವಾಗಿ ನಮಗೆ ಪತ್ರ ಬರೆದು ಶ್ರೀ. ಕೆ. ಭಾಸ್ಕರಪ್ಪೈ, ಮಂಗಳೂರು, ಎಂಬವರು ಜಪ್ತಿಯಾದ ಮನೆ ತಮ್ಮದಲ್ಲವೆಂದು ಸ್ಪಷ್ಟೀಕರಿಸಿದ್ದಾರೆ.

ಚುನಾವಣೆ

ತಾ. ೧೩ರಲ್ಲಿ ಕದ್ರಿ ಪಂ. ಕೋರ್ಟಿಗೆ ನಡೆದ ಚುನಾವಣೆಯಲ್ಲಿ ಶ್ರೀ. ನರಸಪ್ಪಯ್ಯನವರು ಜಯಶೀಲರಾದರು.

ನೇಶನಲ್ ವಾರ್ ಫ್ರಂಟ್ ಓರ್ಗನೈಸರ್

ಜಿಲ್ಲಾ ನೇಶನಲ್ ವಾರ್ ಫ್ರಂಟಿನ ಆರ್ಗನೈ ಸರರಾದ ಶ್ರೀ ಸತ್ಯನಾರಾಯಣರು ರಜೆಯಲ್ಲಿರುವುದರಿಂದ ಅವರ ಸ್ಥಾನದಲ್ಲಿ ಕಾರ್ಕಳದ ಜನಾಬ್ ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ ಇವರು ನೇಮಿಸಲ್ಪಟ್ಟಿದ್ದಾರೆ.

ಮೂಲ್ಯರ ಯಾನೆ ಕುಲಾಲರ ಸಂಘ

ಇದನ್ನು ಮತ್ತು ಅದೇ ಸಮಾಜದ ಶ್ರೀ ರಾಮ ಸೇವಾಸಮಿತಿಯನ್ನು ಒಟ್ಟುಗೂಡಿಸುವ ಮಹಾಸಭೆ ನವಂಬರ ೨೯ರಂದು ಮಂಗಳಾದೇವಿ ದೇವಸ್ಥಾನದಲ್ಲಿ ಜರಗಲಿದೆ.

ಮುಟ್ಲುಪಾಡಿ ಕೇಂದ್ರದಲ್ಲಿ ಹೊಸ ಶಾಲೆ

ತೆರೆಯುವ ಸಮಾರಂಭವು ತಾ. ೬ರಲ್ಲಿ ಸೀ. ಡಿ. ಇನ್ಸ್‌ಪೆಕ್ಟರ್ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ವಿಜಯಾ ಸ್ಟೋರ್ಸ್ ಉದ್ಘಾಟನಾ ಸಮಾರಂಭ

ಶ್ರೀಗಳಾದ ಹೊನ್ನಯ್ಯ ಶೆಟ್ಟಿ ಮತ್ತು ಜಗನ್ನಾಥಶೆಟ್ಟರ 'ವಿಜಯಾ ಸ್ಟೋರ್ಸ್'ನ ಉದ್ಘಾಟನಾ ಸಮಾರಂಭವನ್ನು ವಕೀಲ್ ಶ್ರೀ. ಕೆ. ಜಿ. ಬಲ್ಲಾಳರು ಇದೇ ತಾ. ೯ರಲ್ಲಿ ನೆರವೇರಿಸಿದರು.

ಸ್ವಾಮಿ ದಯಾನಂದರ ನಿರ್ವಾಣ ದಿನಾಚರಣೆ

ಯು ತಾ. ೮ನೇ ಪೂರ್ವಾಹ್ನ ಕ್ಷಿರಿಯಡ್ಕದಲ್ಲಿಯೂ ಸಂಜೆ ಉಡುಪಿ ಆರ್ಯಸಮಾಜ ಮಂದಿರದಲ್ಲಿಯೂ ಆಚರಿಸಲ್ಪಟ್ಟಿತು.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು

ಶ್ರೀ ಪರಮಹಂಸರು ಹೇಳುತ್ತಿದ್ದರೇನಂದರೆ, 'ಶ್ರವಣ, ಮನನ, ನಿದಿಧ್ಯಾಸನ, ಬ್ರಹ್ಮಸತ್ಯ, ಜಗತ್ತು ಮಿಥ್ಯವೆಂದು ಮೊದಲು ಕೇಳಬೇಕು—ಅಂದರೆ ಅದನ್ನು ವಿಚಾರಮಾಡಿ ಮನಸ್ಸಿನಲ್ಲೇ ನಿರ್ಣಯಿಸಬೇಕು, ಆ ಮೇಲೆ ನಿದಿಧ್ಯಾಸನ ಮಾಡಬೇಕು—ಅಂದರೆ ಮಿಥ್ಯಾರೂಪವಾದ ಜಗತ್ತನ್ನು ತ್ಯಾಗಮಾಡಿ ಸದ್ವಸ್ತುವಾದ ಬ್ರಹ್ಮನ ಧ್ಯಾನ ಮಾಡಬೇಕು—ಇದೇ, ಪರಂತು ಇದನ್ನು ಮಾಡದೆ, ಕೇಳಿ ಅರಿತರೂ ಕೂಡ, ಅಸದ್ವಸ್ತುವನ್ನು ತ್ಯಾಗಮಾಡಲು ಪ್ರಯತ್ನ ಪಡೆಯುದಿದ್ದರೆ ಅದೆಲ್ಲ ವ್ಯರ್ಥ. ಅದೆಲ್ಲ ಸಂಸಾರಿಕರ ಜ್ಞಾನ; ಅಂತಹ ಜ್ಞಾನದಿಂದ ಸತ್ಯವಸ್ತು ಲಾಭವಾಗುವುದಿಲ್ಲ. ತ್ಯಾಗಮಾಡಬೇಕು, ಧ್ಯಾನಧಾರಣೆ ಇರಬೇಕು—ಹಾಗಾದರೆ ಸಿದ್ಧಿಲಾಭವಾಗುವುದು. ಹಾಗಲ್ಲದಿದ್ದರೆ ಬಾಯಿಂದ 'ಮುಳ್ಳಿಲ್ಲ, ಚುಚ್ಚುವುದೂ ಇಲ್ಲ'ವೆಂದು ಹೇಳಬಹುದು, ಪರಂತು ಕೈಹಾಕಿದೊಡನೆಯೇ ಮುಳ್ಳು ಚುಚ್ಚಿ ವೇದನೆಯಾಗುವುದು ನಿಶ್ಚಯ; ಬಾಯಿಂದ 'ಜಗತ್ತೇ ಇಲ್ಲ, ಅದೊಂದು ಅಸದ್ವಸ್ತು, ಒಂದು ಮಾತ್ರ ಬ್ರಹ್ಮವೇ ಸದ್ವಸ್ತು,—ಹೇಳಬಹುದು, ಪರಂತು ಆ ಜಗತ್ತಿನ ರೂಪರಸಾದಿ ವಿಷಯಗಳು ಸನ್ಮುಖಕ್ಕೆ ಬಂದೊಡನೆ ಅವುಗಳು ಸತ್ಯವೆಂದು ತಿಳಿದರೆ ಬಂಧನದಲ್ಲಿ ಬೀಳಬೇಕಾಗುತ್ತದೆ. ಪಂಚವಟಿಯಲ್ಲಿ ಒಬ್ಬ ಸಾಧು ಬಂದಿದ್ದನು. ಆತನು ಜನರಿಗೆ ಬಹಳ ವೇದಾಂತದ ವಿಷಯವಾಗಿ ಹೇಳುತ್ತಿದ್ದನು. ಪರಂತು ಒಂದಾನೊಂದು ದಿನ ಕಾಮುಕನಾಗಿ ಪರಸ್ತ್ರೀಸಂಗ ಮಾಡಿದನೆಂದು ಕೇಳಿದೆನು; ನಾನು ಆ ದಿಕ್ಕಿಗೆ ಶೌಚಮಾಡಲು ಹೋಗಿದ್ದೆನು. ಅಲ್ಲಿಯೇ ಆತನು ಕೂತಿದ್ದನು. 'ನೀನು ವೇದಾಂತವನ್ನು, ಜನರಿಗೆ ಹೇಳುತ್ತಿ, ಪರಂತು ಇದೆಲ್ಲ ಮಾಡುವುದೇತಕ್ಕೆ?' ಎಂದು ಕೇಳಿದೆನು. 'ಅದರಿಂದುಂಟಾಗುವುದೇನು? ವೇದಾಂತವನ್ನು ಜನರಿಗೆ ತಿಳಿಸಬೇಕಾಗಿ ಹೇಳುತ್ತೇನೆ. ಅದರಲ್ಲಿ ದೋಷವೇನೂ ಇಲ್ಲ, ಜಗತ್ತೆಂಬುದೇ ಮೂರು ಕಾಲಕ್ಕೂ ಸುಳ್ಳಾದರೆ, ನಾನು ಮಾಡುವಂತಹದ್ದು ಸತ್ಯದಾಗುವುದೇನು? ಅದು ಕೂಡ ಮಿಥ್ಯವೆ' ಅಂದನು. ಅದನ್ನು ಕೇಳಿ ನನಗೆ ಜಿಹಾಸೆ ಒಂದು 'ಸುಡು ನಿನ್ನ ವೇದಾಂತ ಜ್ಞಾನ' ಅಂದೆನು. ಅದೆಲ್ಲ ಸಾಂಸಾರಿಕ ಮನುಷ್ಯರ ಜ್ಞಾನ. ಅಂತಹ ಜ್ಞಾನ, ಯಥಾರ್ಥ ಜ್ಞಾನವಲ್ಲ.' ಇಷ್ಟು ಮಾತನ್ನು ಹೇಳಿ ಮುಗಿಸಿದರೆಂದು ಸ್ನೇಹಿತನು ಹೇಳಿದನು. ಶ್ರೀ ಪರಮಹಂಸರು ಇದನ್ನೆಲ್ಲಾ ಪಂಚವಟಿ ತಲದಲ್ಲಿ ಸಂಚಾರ ಮಾಡುತ್ತ ಮಾಡುತ್ತ ಆತನಿಗೆ ಹೇಳಿದ್ದರು.

(ಕ್ರಮಶಃ)

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD. 1906.

ಮಾರಾಟಕ್ಕೆ ಸಿದ್ಧವಾಗಿವೆ.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ

ಬೆಲೆ 1-4-0

ಐದನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ, ಎಲ್ ಟಿ

ಬೋರ್ಡ್ ಹೈಸ್ಕೂಲ್, ಮೂಲ್ಕಿ

ಮತ್ತು

ಎಸ್ ರಾಮಕೃಷ್ಣ ಆಚಾರ್, ಬಿ ಎ ಎಲ್ ಟಿ

ಬೋರ್ಡ್ ಹೈಸ್ಕೂಲ್ ಪುತ್ತೂರು

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ

ಶಾರದಾ ಛಾಪಖಾನೆ

ಮಂಗಳೂರು

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಕಡಿಮೆ ಖರ್ಚು ಮಂಗಳೂರಿನಿಂದ - ಬೆಂಗಳೂರು ತಿರುಪತಿ, ಮದರಾಸು. ಅತಿ ಶೀಘ್ರ ಪ್ರಯಾಣ

ಬಸ್ಸ್ ಪ್ರಯಾಣವು

ಅತೀ ಸುಖಕರ! ನಿರಾಯಾಸಕರ!! ಮನೋಲ್ಲಾಸಕರವಾಗಿದೆ!!!

ಊರುಗಳ ಬದಲಾವಣೆ! ನೋಟಗಳ ಬದಲಾವಣೆ! ಜನತೆಯ ಸಂಪರ್ಕ! ಆಯಾಸ ಅನುಕೂಲತೆಗಳು!

ಇವೆಲ್ಲವೂ ಬಸ್ಸ್ ಪ್ರಯಾಣದಲ್ಲಿವೆ

ಪ್ರಯಾಣಿಕರ ಹೆಚ್ಚಿನ ಪ್ರೋತ್ಸಾಹದೊಡನೆ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸುವೆವು

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited

ESTD. 1931

HEAD OFFICE Mangalore. *BRANCHES* Moodabidri & Padubidri

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%
24 months or over 4%
Current: ½% from July to December.
1% from January to June.

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು,-ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ.

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited'

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ - ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಪಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೊಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಖು 27—11—1942 [ಸಂಚಿಕೆ 47]

ಕಾಂಗ್ರೆಸ್ ಮುಖಂಡರನ್ನು ಆಫ್ರಿಕಕ್ಕೆ ಒಯ್ಯುವುದು—

ಮೊದಲನೆಯ ಯೋಚನೆ ಆಗಿತ್ತಂತೆ!

ಸಂಧಾನ ಮಾಡಲು ಸರಕಾರಕ್ಕೆ ಮನಸ್ಸಿಲ್ಲವೆ?

ಮುಂಬಾಯಿ ಗವರ್ನರರು, ಮಹಾತ್ಮಾಗಾಂಧಿಯವರನ್ನು ಆಗಾಖಾನ ಬಂಗ್ಲೆಯಲ್ಲಿ ಭೇಟಿಯಾಗಿ, ಈಗ ದೇಶಸರ್ವತ್ರ ನಡೆಯುತ್ತಿರುವ ಗಲಭೆಗಳಿಗೆ ಅವರ ಒಪ್ಪಿಗೆಯುಂಟೇ ಎಂದು ಕೇಳಿದರೆಂದೂ ಅದಕ್ಕೆ ಗಾಂಧಿಜಿ ಸೆರೆಯಲ್ಲಿಟ್ಟಿರುವಾಗ ತಾನೇನೂ ಉತ್ತರ ಕೊಡಲಾರೆನೆಂದು ಸ್ಪಷ್ಟವಾಗಿ ನುಡಿದರೆಂದೂ ಪ್ರಸಿದ್ಧವಾಗಿದೆ. ಯಾವನನ್ನಾದರೂ ಸೆರೆಮನೆಯಲ್ಲಿಟ್ಟು ಅವನೊಡನೆ ಅಭಿಪ್ರಾಯ ಕೇಳುವುದೆಂದರೆ ಆತನನ್ನು ಕಟ್ಟಿಹಾಕಿ ಒತ್ತಾಯದಿಂದ ಅಭಿಪ್ರಾಯ ಕೇಳಿದಂತೆ.' ಸತ್ಯಾಗ್ರಹಿಯಾದವನು ತನ್ನನ್ನು ಸೆರೆಮನೆಗೆ ಸೇರಿಸಿದ ಕೂಡಲೇ ತಾನು ಅರ್ಧ ವ್ಯಕ್ತನಾದಂತೆ ತಿಳಕೊಳ್ಳುವನು. ಅವನನ್ನು ಬಿಡುಗಡೆಮಾಡದೆ ಆತನು ಪೂರ್ಣ ಜೀವಮಾನವನಾಗುವುದಿಲ್ಲವೆಂದು ಆತನ ಗ್ರಹಿಕೆಯಾಗಿದೆ. ಹೀಗಿರುತ್ತಾ ಗಾಂಧಿಜಿ, ಈಗ ಬಂಧನದಲ್ಲಿರುತ್ತಾ ತಮ್ಮ ಅಭಿಪ್ರಾಯ ಕೊಡಲು ಸಮ್ಮತಿಸದಿದ್ದರೆ ಅದು ಅವರ ಸತ್ಯಾಗ್ರಹತತ್ವವನ್ನು ಬಲ್ಲವರಿಗೆ ಆಶ್ಚರ್ಯವೆನಿಸಲಿಕ್ಕಿಲ್ಲ.

ಬಿಸುಳ್ಗುದುರೆಯ ಬೆನ್ನು ಹತ್ತಿ?

ರಾಜಾಜಿ ಬಿಸಿಲ್ಗುದುರೆಯ ಬೆನ್ನು ಹತ್ತಿ ಸವಾರಿಮಾಡುತ್ತಿದ್ದಾರೆ! ಭಾರತದ ರಾಜಕಾರಣದಲ್ಲಿ ಒಂದು ಒಪ್ಪಂದವಾಗಲಿ, ಎಂಬ ಸದ್ಬುದ್ಧಿಯಿಂದ ಪ್ರಯತ್ನಮಾಡಿದ ಅವರಿಗೆ, ಶ್ಯಾಮಪ್ರಸಾದ ಮುಖರ್ಜಿಗಳಂತೆ, ಗಾಂಧಿಜಿ ಭೇಟಿ ತಿರಸ್ಕೃತವಾಯಿತಷ್ಟೆ? ಆದರೆ ಅವರಿನ್ನೂ ಆಶೆ ಬಿಡಲಿಲ್ಲ! 'ಅಪ್ಪಣೆ ದೊರೆತರೆ ವಿಲಾಯತಿಗೆ ಹಾರುತ್ತೇನೆ! ಎಂದು ಅವರು ಹಿಂದೆ ಹೇಳಿದ್ದರು. ಅದಕ್ಕೆ ಅಮೆರಿ 'ರಾಜಾಜಿ ವಿಲ್ಲಾಯತಿಗೆ ಬಂದುಏನೂ ಪ್ರಯೋಜನವಿಲ್ಲ. ಭಾರತೀಯರು ತಮ್ಮತಮ್ಮೊಳಗೆ ರಾಜಿಮಾಡಿಕೊಳ್ಳಲಿ' ಎಂದು ಉತ್ತರ ಕೊಟ್ಟಿದ್ದಾರೆ. ಹೀಗೆ ವೈಸರಾಯರಿಂದ ಮತ್ತು ಅಮೆರಿಯವರಿಂದ ರಾಜಾಜಿಗೆ, ಎರಡು ಕೆನ್ನೆಗಳಿಗೂ ತಪರಾಕು ಬಿದ್ದರೂ ಅವರಿಗೆ ಬುದ್ಧಿ ಬರದಿರುವುದು ಆಶ್ಚರ್ಯಕಾಣುತ್ತದೆ. 'ನಾವು ನಮ್ಮ ಸರಕಾರವನ್ನು ಸ್ಥಾಪಿಸದಿದ್ದರೆ ಯುದ್ಧಾನಂತರ ಜಾಗತಿಕ ಕೌನ್ಸಿಲಿನಲ್ಲಿ ನಮಗೆ ಸ್ಥಾನವೇ ಸಿಗಲಾರದು' ಎಂದು ರಾಜಾಜಿ ಹೇಳುತ್ತಿದ್ದಾರೆ. ಅದಕ್ಕಾಗಿ ಪಕ್ಷಗಳೊಡನೆಯೂ ಮಾತುಕತೆ ನಡೆಸಿ ಸರ್ವ ಪಕ್ಷಗಳ ಸಮ್ಮೇಳನವನ್ನು ಸೇರಿಸುವ ಪ್ರಯತ್ನಮಾಡಿದ್ದಾರೆ. ಇಂತಹ ಪ್ರಯತ್ನಗಳ ಫಲಿತಾಂಶವೇನೆಂದು ನಾವು ಮೊದಲೇ ಊಹಿಸಿಕೊಳ್ಳಲಾಗುತ್ತದೆ.

ರಾಜಾಜಿಗೆ ಹಾಗೂ ಹಿಂದೆ ಶ್ಯಾಮಪ್ರಸಾದ ಮುಖರ್ಜಿಗಳಿಗೆ ಮತ್ತು ಭಾರತದ ಬಿಶಪರಿಗೆ ಗಾಂಧಿಜಿಯನ್ನು ಭೇಟಿಮಾಡಲು ಸರಕಾರವು ನಿಕೆ ಸಮ್ಮತಿಕೊಡಲಿಲ್ಲವೆಂಬ ವಿಚಾರವಾಗಿ, ನ್ಯೂಡಿಲ್ಲಿಯ ಸುದ್ದಿಗಾರರು ಹೀಗೆ ಬರೆಯುತ್ತಾರೆ. "ಕಾಂಗ್ರೆಸು ಚಳವಳ ಆರಂಭವಾಗುವ ಕಾಲಕ್ಕೆ, ಕಾಂಗ್ರೆಸು ಮುಖಂಡರನ್ನೆಲ್ಲಾ ಬಂಧಿಸಿ ಆಫ್ರಿಕಕ್ಕೆ ಕಳಿಸುವ ವಿಚಾರ ಮಾಡಲಾಗಿತ್ತು, ಆದರೆ ಅದಕ್ಕೆ ವೈಸರಾಯ್ ಎಕ್ಸಿಕುಟಿವ್ ಕೌನ್ಸಿಲಿನ ಭಾರತೀಯ ಸದಸ್ಯರು ಅತೃಪ್ತಿ ತೋರಿಸಿದ್ದರಿಂದ, ಕಾಂಗ್ರೆಸ್ ಮುಖಂಡರನ್ನು ಬಂಧಿಸಿ ಭಾರತದಲ್ಲಿಯೇ ಇರಿಸಿ ಅವರ ಗೊತ್ತುಗುರಿ ಭೇಟಿ ಮೊದಲಾದುವುಗಳಾವವೂ ಕೊಡದೆ ಹೊರಪ್ರಪಂಚದ ಸಂಪರ್ಕದಿಂದ ಅವರನ್ನು ಬಾಹಿರರಾಗಿ ಮಾಡಬೇಕೆಂದು ನಿಶ್ಚಯಿಸಿದಂತೆ ಯಾರಿಗೂ ಭೇಟಿ ಕೊಡಿಸಲಿಲ್ಲ". ಅಂತೂ ಹೀಗೆ ಹೊರಪ್ರಪಂಚದಿಂದ ಗಾಂಧಿಜಿ ನೆಹರು ಮೊದಲಾದವರು ತಮಗೆ "ಶರಣು" ಎನ್ನುವ ತನಕ ಬಾಹಿರರಾಗಿರಬೇಕೆಂದು ಸರಕಾರದ ಇಂಗಿತವಿದ್ದಂತೆ ತೋರುತ್ತದೆ!

ಡಾ। ಮುಖರ್ಜಿಯರ ರಾಜಿನಾಮೆ

ಬಂಗಾಳ ಮಂತ್ರಿಮಂಡಳದಿಂದ ಡಾ। ಶ್ಯಾಮಪ್ರಸಾದ ಮುಖರ್ಜಿಯವರು ರಾಜಿನಾಮೆಯಿತ್ತಿದ್ದು, ಅದನ್ನೀಗ ಗವರ್ನರರು ಅಂಗೀಕರಿಸಿರುವರು. ತಾನು ರಾಜಿನಾಮೆಯಿತ್ತದ್ದು ತನಗೆ ಹಾಗೂ ಪ್ರಧಾನ ಮಂತ್ರಿ ಇಲ್ಲವೇ ಇತರ ಮಂತ್ರಿಗಳೊಳಗೆ ಅಥವಾ ಪ್ರಾಗತಿಕ ಸಮ್ಮಿಶ್ರ ಪಕ್ಷದೊಡನೆ ಭಿನ್ನಾಭಿಪ್ರಾಯವುಂಟಾಗಿಯಲ್ಲವೆಂದೂ ಗವರ್ನರರು ಮತ್ತು ವೈಸರಾಯರೊಡನೆ ಆದ ಪತ್ರ ವ್ಯವಹಾರದಂತೆ ಬ್ರಿಟಿಷ್ ಸರಕಾರದ ಇಂದಿನ ಭಾರತದ ಧೋರಣದಲ್ಲಿ ತಾನು ನಿಷೇಧ ಸೂಚಿಸಿ ರಾಜಿನಾಮೆ ಕೊಟ್ಟುದಾಗಿಯೂ ಅವರು ಒಂದು ಹೇಳಿಕೆಯಿತ್ತಿರುವರು. 'ಆಗಸ್ಟ್ ೯ರಿಂದ ದಬ್ಬಾಳಿಕೆಯ ಪ್ರಾರಂಭವಾಯಿತು. ಭಾರತದ ಆಡಳಿತದಲ್ಲಿ ಹೀಗೆ ಹಿಂಸೆಯೂ ತಲೆಯೆತ್ತಿದ್ದು ಕಂಡುಬಂದ ಕೂಡಲೇ ನಾನು ಸರಕಾರದ ಧೋರಣದ ಬಗ್ಗೆ ಅಸಮ್ಮತಿ ಪ್ರಕಟಿಸಿದೆನು. ಜನತೆಯ ಹೃದಯದಲ್ಲಿ ನೆಲೆನಿಂತಿರುವ ಅತೃಪ್ತಿಯ ಚಿಹ್ನೆಗಳನ್ನು ಹೊರಗೆ ತೋರಿಸದಂತೆ, ದಬ್ಬಾಳಿಕೆಯಿಂದ ಮುಚ್ಚಲು ಯತ್ನಿಸುವುದು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸರಕಾರಕ್ಕೆ ಭೂಷಣವಲ್ಲ. ಭಾರತೀಯರ ಮನಸ್ಸಿಗೆ ಬಂದಂತೆ, ಭಾರತದ ಭವಿಷ್ಯವನ್ನು ರೂಪುಗೊಳಿಸಲು ಇಂದು ನಮಗೆ ಅಧಿಕಾರವಿಲ್ಲ. ಯಾವುದೇ ಪರಕೀಯ ರಾಷ್ಟ್ರವಾದರೂ ನಮ್ಮ ಮೇಲೆ ಅಧಿಕಾರ ನಡೆಸುವುದು ನಮಗೆ ಸಮ್ಮತವಿಲ್ಲ. ಆಕ್ರಮಣಗಾರರನ್ನು ಎದುರಿಸುವ ಕಾರ್ಯದಲ್ಲಿ ಭಾರತವು ಮಿತ್ರರಿಗೆ ಸಹಾಯಮಾಡಲು ತುಂಬಾ ಅವಕಾಶವಿದೆ. ಬ್ರಿಟಿಷ್ ಸರಕಾರದ ಇಂದಿನ ಧೋರಣೆ ಬದಲಾಗುವ ವರೆಗೆ ಸದ್ಯದ ಸಮಸ್ಯೆ ಪರಿಹಾರವಾಗಲಾರದು. ಒಪ್ಪಂದಕ್ಕಾಗಿ ಸಾರ್ವಜನಿಕರ ಅನುಕೂಲಾಭಿಪ್ರಾಯಪಡೆಯಲು ಕಳೆದ ಮೂರು ತಿಂಗಳಿಂದ ನಾನು ಎಡೆಬಿಡದೆ ಯತ್ನಿಸಿದರೂ ಸರಕಾರದಿಂದ ಒಂದಿಷ್ಟು ಸಹಾಯ ಸಿಗಲಿಲ್ಲ. ಹನ್ನೊಂದು ತಿಂಗಳ ನನ್ನ ಮಂತ್ರಿ ಪದವಿಯ ಅನುಭವವನ್ನು ಆಲೋಚಿಸಿದರೆ ಇಲ್ಲಿ ಪ್ರಾಂತಿಕ ಸ್ವಾಯತ್ತತೆ ಕೇವಲ ನಟನೆಯಾಗಿದೆ. ಗವರ್ನರರು ಅನೇಕ ಸಲ ಮಂತ್ರಿಗಳ ಸಲಹೆಯನ್ನು ಮೀರಿ ನಡೆಯುತ್ತಾರೆ. ಇಲ್ಲಿ ದ್ವಿವಿಧ ಆಡಳಿತ ನಡೆಯುತ್ತದೆ. ಈ ವಿಷಯವಲ್ಲದೆ ಬೇರೆ ಕೆಲವೂ ಕಾರಣಗಳು ನನಗೆ ತೀರಾ ಅತೃಪ್ತಿ ಹುಟ್ಟಿಸಿದವು. ೧. ಹಿಂದುಗಳಿಗೆ ಮಾತ್ರ ಸಾಮೂಹಿಕ ದಂಡ ತೆರುವುದು. ೨. ಮಿಡ್ನಾಪುರ ಪರಿಸ್ಥಿತಿಯನ್ನು ಸಮಾಧಾನಗೊಳಿಸುವ ವಿಚಾರ. ಸಾಮೂಹಿಕ ದಂಡವನ್ನು ಹಿಂದುಗಳಿಗೆ ಮಾತ್ರ ಹೇರುವುದರಲ್ಲಿ ಏನು ನ್ಯಾಯವಿದೆ! ಮಿಡ್ನಾಪುರದಲ್ಲಿ ದಬ್ಬಾಳಿಕೆ ಮಿತಿಮೀರಿ ನಡೆದಿತ್ತು. ಬಿರುಗಾಳಿ ಬಂದ ಮೇಲೆ ಅವರ ಸಂಕಷ್ಟ ಸಾವಿರಪಾಲು ಹೆಚ್ಚಾದರೂ ದಬ್ಬಾಳಿಕೆ ಕಡಿಮೆ ಆಗಿಲ್ಲ. ಆ ವಿಷಯ ಮಂತ್ರಿಗಳಿಗೆ ಏನು ಮಾಡಲೂ ಅಧಿಕಾರವಿಲ್ಲ. ಅಲ್ಲಿನವರಿಗೆ ಸಹಾಯಮಾಡಲೂ ಸಾಧ್ಯವಿಲ್ಲ. ಪೋಲೀಸರು ಬೇಕಾದ ಹಾಗೆ ಮಾಡುವರು." ಹೀಗೆಂದು ಮೊದಲಾಗಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಹೇಳಿಕೆಯಿತ್ತಿರುವರು. ವೈಸರಾಯರಿಗೂ ಅವರೊಂದು ಈ ಕುರಿತು ಪತ್ರಬರೆದಿರುವರು.

ವಿಷಮ ಸಮಸ್ಯೆಗಳು

ಭಾರತ ದೇಶದ ಉದ್ದಗಲದಲ್ಲಿ ಎಲ್ಲೆಲ್ಲಿಯೂ ಸತ್ಯಾಗ್ರಹ ಪಿಕೆಟಿಂಗ್, ಛಾಟಿಪೆಟ್ಟು ಶಿಕ್ಷೆಗಳು ನಡೆಯುತ್ತಲೇ ಇವೆ. ಇದರೊಂದಿಗೆ ಹಲವು ಸ್ಥಳಗಳಲ್ಲಿ ದೇಶೀಯ ಬಾಂಬುಗಳ ಸಿಡಿತ, ಮಾರ್ಗಸಂಚಾರ ನಿರ್ಬಂಧ, ಸರಕಾರೀ ಆಫೀಸುಗಳ ಸುಡುವಿಕೆ ಮೊದಲಾದ ಘಟನೆಗಳೂ ನಡೆವೆ. ಬ್ರಿಟಿಷ್ ಅಧಿಕಾರಿಗಳು ಇದಕ್ಕೆ ಪ್ರತೀಕಾರ ಮಾಡುವುದರಲ್ಲೇ ಇರುವಲ್ಲದೆ ಸಂಧಿಗೆ ಸಹಾಯಮಾಡುವುದು ಕಂಡುಬರುವುದಿಲ್ಲ. ಯಾವುದೇ ಸಂಧಿ ಪ್ರಸ್ತಾಪಮಾಡಲು ಸಿದ್ಧನಾಗಿಲ್ಲವೆಂದು ಅಮೆರಿ ಪಾರ್ಲಿಮೆಂಟಿನಲ್ಲಿ ಹೇಳಿದರು. ಚರ್ಚಿಲರಂತೂ ತಾನು ಬ್ರಿಟಿಷ್ ಸಾಮ್ರಾಜ್ಯವನ್ನು ಕಳಕೊಳ್ಳುವ ಪ್ರಥಮ ಪ್ರಧಾನ ಮಂತ್ರಿಯಾಗಲಾರೆನೆಂದು ಹೇಳಿಬಿಟ್ಟಿದ್ದಾರೆ. ರಾಜಾಜಿಗೆ ಹೀಗಿದ್ದರೂ ಸಂಧಿಯ ಆಶೆ ಬಿಟ್ಟಿಲ್ಲ. ಪಕ್ಷಗಳು ಮೊನ್ನೆ ದಿಲ್ಲಿಗೆ ಹೋಗಿ ವೈಸರಾಯ್ ಎಕ್ಸಿಕುಟಿವ್, ಕೌನ್ಸಿಲಿನ ಸದಸ್ಯರನ್ನು ಕಂಡು ಮಾತನಾಡಿದರು. ವೈಸರಾಯರ ನಿರ್ಣಯವನ್ನು ಬದಲಾಯಿಸಲು ಅವರಾದರೂ ಶಕ್ತರಲ್ಲವೆಂದು ಪಕ್ಷಗಳಿಗೆ ತಿಳಿದಿಲ್ಲವೋ ಏನೋ! ಅಮೆರಿಕದಲ್ಲಿ ಕೆಲವರಿಗೆ ಬ್ರಿಟಿಷರ ವರ್ತನೆ ಸರಿತೋರುವುದಿಲ್ಲ. ಸಾಮ್ರಾಜ್ಯ ಯುಗವು ತೀರಿತೆಂದೂ, ಸಾಮ್ರಾಜ್ಯವನ್ನು ಕಾಪಾಡಲು ಹೋರಾಡುವುದು ವ್ಯರ್ಥವೆಂದೂ, ಬ್ರಿಟಿಷರು ಭಾರತದಲ್ಲಿ ಅನುಸರಿಸುವ ಧೋರಣೆಯಿಂದ, ಯುದ್ಧೋದ್ದೇಶವು ವಂಚನೆಯಾಗಿದೆಯೆಂದೂ ಅಮೆರಿಕದ 'ಲೈಫ್' ಪತ್ರಿಕಾ ಸಂಪಾದಕರು ಬರೆಯುತ್ತಾರೆ. ದಕ್ಷಿಣ ಆಫ್ರಿಕದ ಸೇನಾಪತಿ ಸ್ಮಟ್ಸರು, ಗಾಂಧಿಜಿಯನ್ನು ಮುಕ್ತಕಂಠವಾಗಿ ಹೊಗಳಿ, ಗಾಂಧಿಜಿ ಜಪಾನು ಪಕ್ಷಪಾತಿಯೆನ್ನುವುದು ಮೂರ್ಖತನವೆಂದು ತಿಳಿಸಿದ್ದಾರೆ. ಆದರೆ ಸ್ಮಟ್ಸರ ಹೇಳಿಕೆಯನ್ನು ಲಂಡನ 'ಟೈಮ್ಸ್' 'ಟೆಲಿಗ್ರಾಫ್' ಪತ್ರಿಕೆಗಳು ಪ್ರಕಟಿಸಲೇ ಇಲ್ಲ! ಬ್ರಿಟಿಷ್ ಪತ್ರಿಕೋದ್ಯಮದ ಬುದ್ಧಿ ಇದರಿಂದ ವ್ಯಕ್ತವಾಗುತ್ತದೆ. ವೆಂಡಲ್ ವಿಲ್ಕಿಯವರೂ ಇತ್ತೀಚೆಗೆ ಭಾರತದ ಕುರಿತು ಸಹಾನುಭೂತಿಪರ ಹೇಳಿಕೆ ಕೊಡುತ್ತಿರುವರು; ಭಾರತ, ಆಫ್ರಿಕಾದಂತಹ ವಸಾಹತುಗಳ ಜನರ ಮನವೊಲಿಸಬೇಕೆಂದು ಸ್ಪಷ್ಟ ಹೇಳುತ್ತಾರೆ. ಆದರೆ ಇದರಿಂದೆಲ್ಲಾ ಭಾರತದ ಕುರಿತು ಬ್ರಿಟನಿನ ಧೋರಣೆಯಲ್ಲಿ ಏನೇನೂ ಬದಲಾದಂತೆ ಕಂಡುಬರುವುದಿಲ್ಲ. ಕಾಂಗ್ರೆಸನ್ನು ಗೌರವಿಸಿದರೆ ತಮ್ಮ ಪ್ರತಿಷ್ಠೆ ಕುಗ್ಗೀತೆಂದು ಚರ್ಚಿಲ್ ಅಮೆರಿಯವರು ಭಯಪಡುವಂತೆ ತೋರುತ್ತದೆ. ಕಾಂಗ್ರೆಸನ್ನು ಬಿಟ್ಟು ಸಂಧಾನ ಸಾಧ್ಯವಿಲ್ಲವೆಂದು ಜಿನ್ನರಾದರೂ ಒಪ್ಪುತ್ತಾರೆ. ಪ್ರೊ। ಲಾಸ್ಕಿಯವರು ಒಂದು ಹೇಳಿಕೆಯಿತ್ತು ಭಾರತದ ಬ್ರಿಟನ್‌ನೀತಿಯನ್ನು ಖಂಡಿಸಿದ್ದಾರೆ. ವೈಸರಾಯರು ಕಾಂಗ್ರೆಸ್ ಮುಖಂಡರನ್ನು ಎಷ್ಟು ತೀವ್ರವಾಗಿ ಸೆರೆಮನೆಗೆ ಸೇರಿಸಿ ಗೊಂದಲ ಉಂಟುಮಾಡಿದರೋ ಅಷ್ಟು ತೀವ್ರವಾಗಿ ಅವರೇ ಸಂಧಾನ ಕಾರ್ಯವನ್ನಾದರೂ ಮಾಡಬಾರದೇ ಎಂದು ಲಾಸ್ಕಿ ಪ್ರಶ್ನಿಸಿರುವರು. ಅಂತೂ ಸದ್ಯ ಭಾರತದ ಸಮಸ್ಯೆ ವಿಷಮವಾಗಿಯೇ ಉಳಿದಿದೆ!

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಬೆಲೆ: 1-4-0.

೫ನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು:

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ. ಎಸ್. ಸಿ., ಎಲ್. ಟಿ.

ಬೋರ್ಡ್ ಹೈಸ್ಕೂಲ್, ಮುಲ್ಕಿ

ಮತ್ತು

ಎಸ್. ರಾಮಕೃಷ್ಣ ಆಚಾರ್, ಬಿ. ಎ., ಎಲ್. ಟಿ.

ಬೋರ್ಡ್ ಹೈಸ್ಕೂಲು ಪುತ್ತೂರು.

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರೆಕೊಳ್ಳಿರಿ.

ಶಾರದಾ ಛಾಪಖಾನೆ ಮಂಗಳೂರು.

ಸ್ವೀಕಾರ–ವಿಮರ್ಶೆ

—ಕನ್ನಡಿಗ—

(ಕೈಬರಹದ ಪತ್ರಿಕೆ) ಕಾಸರಗೋಡು ಬೋರ್ಡ್ ಹೈಸ್ಕೂಲ್ ವಿದ್ಯಾರ್ಥಿಗಳಿಂದ. ಸಂಪಾದಕರು: ರಾಮಕೃಷ್ಣ ಶೆಟ್ಟಿ ಮತ್ತು ಎಂ. ಎಂ. ರಾವ್.

ಅಂದವೂ ಸಚಿತ್ರವೂ ಆದ ಹೊದಿಕೆಯ ಈ ಪತ್ರಿಕೆಯನ್ನು ನೋಡಿದ ಕೂಡಲೇ ಇದನ್ನು ಕೈಗೆತ್ತಿ ನೋಡೋಣ ಎಂಬ ಸಹಜ ಕುತೂಹಲ ಹುಟ್ಟುತ್ತದೆ. ಒಳಗಿನ ಚೆಲುವಾದ ಅಕ್ಷರಗಳು, ಉತ್ತಮವಾದ ಲೇಖನಗಳು ಲೇಖನಗಳ ಮಧ್ಯೆ ಅಲ್ಲಲ್ಲಿ ವರ್ಣವರ್ಣದ ಕಲಾಮಯ ಚಿತ್ರಗಳು ಓದುಗರ ಮನ ಸೆಳೆಯುತ್ತವೆ. ಈ ಪತ್ರಿಕೆಯ ಸಾಹಿತ್ಯ ಮಟ್ಟವು ಬಹಳ ಮೇಲ್ತರಗತಿಯದಿದೆ. ಶ್ರೀಗಳಾದ ಬಿ. ಎಸ್. ಕಕ್ಕಿಲ್ಲಾಯ, ಬಾಬು ಶೆಟ್ಟಿ, ಪುಣಿಂಚತ್ತಾಯ, ಕಯ್ಯಾರ, ಮೈತ್ರೇಯಿ ಸೀತಮ್ಮ ಮೊದಲಾದ ಕಾಸರಗೋಡಿನ ಲೇಖಕರ ಕತೆಗಾರರ ಕವಿಗಳ ಬರಹಗಳನ್ನು ಇದರಲ್ಲಿ ಸೇರಿಸಿದ್ದಾರೆ. ಶ್ರೀಗಳಾದ ರಾಮಕೃಷ್ಣ ಶೆಟ್ಟಿ ಹಾಗೂ ರಾಮಮೋಹನರಾವ್ ಈ ಇಬ್ಬರು ಕಲಾಪ್ರೇಮಿಗಳು ಈ ಪತ್ರಿಕೆಯನ್ನು ಅಂದಗೊಳಿಸಿದ್ದಾರೆ. ಸಾಹಿತ್ಯ ಹಾಗೂ ಕಲಾದೃಷ್ಟಿಯಲ್ಲಿ ಈ ಕೈಬರಹದ ಪತ್ರಿಕೆಯು ಕಾಸರಗೋಡು ವಿದ್ಯಾರ್ಥಿವರ್ಗದ ಮೇಲ್ಮಟ್ಟವನ್ನು ತೋರಿಸುತ್ತದೆ. ಕಾಸರಗೋಡಿನಂಥಾ ಕನ್ನಡದ ಗಡಿನಾಡಿನಲ್ಲಿ ಇಂಥಾ ಚಟುವಟಿಕೆಗಳು ಹೆಚ್ಚುತ್ತಿರುವುದು ಕನ್ನಡನಾಡಿನ ಭಾಗ್ಯ! ವಿದ್ಯಾರ್ಥಿ ಸಂಪಾದಕರ ಈ ಪ್ರಯತ್ನವನ್ನು ನಾವು ಅಭಿನಂದಿಸುವೆವು.



ಶರೀರ ಮತ್ತು ಮೆದುಳು ಚುರುಕಾಗಿರಬೇಕಾದರೆ, ದೇಹದೊಳಭಾಗವು ಶುಚಿಯಿರಬೇಕು. ದೇಹದೊಳಭಾಗವು ಶುಚಿಯಾಗಿದ್ದ ಶರೀರವು ಮಾತ್ರ ನಿತ್ಯದ ಮಲಬದ್ಧತೆ ಅಜೀರ್ಣ ಮೊದಲಾದ ಬಾಧೆಗಳಿಂದ ನಿವೃತ್ತಿ ಹೊಂದಿ ಆರೋಗ್ಯವಾಗಿರುವುದು.

ದಿನನಿತ್ಯವೂ ಎಂಡ್ರೂಸ್ ಲಿವರ್ ಸಾಲ್ಟನ್ನು ಉಪಯೋಗಿಸುವುದರಿಂದ, ನಿಮ್ಮ ಶರೀರವು ಶುಚಿಯಾಗಿರುವುದು. ಅದು ಶರೀರದಲ್ಲಿರುವ ವಿಷವನ್ನು ಹೊರಹಾಕುವುದು, ಕಾಳಿಜವನ್ನು ಸರಿಗೊಳಿಸುವುದು, ಮಲಕೋಶವನ್ನು ಸರಿಯಾಗಿರಿಸುವುದು. ಅಜೀರ್ಣಕಾರೀ ವಿಷಗಳನ್ನು ಇಲ್ಲದೆ ಮಾಡುವುದು. ಎಂಡ್ರೂಸ್, ತಂಪುಗೊಳಿಸಿ, ರಕ್ತ ಶುದ್ಧಿಗೊಳಿಸಿ ಇಡೀ ಶರೀರದಲ್ಲಿ ಚೈತನ್ಯ ತುಂಬಿಸುವುದು. ಅದು ಉಪಯೋಗಿಸಿದರೆ ಒಂದು ಚಟವಾಗುವುದಿಲ್ಲ. ಖರ್ಚೂ ಕಡಿಮೆ.

ದೇಹದೊಳಭಾಗದ ನೈರ್ಮಲ್ಯಕ್ಕೆ ದಿನನಿತ್ಯವೂ ಉಪಯೋಗಿಸಿರಿ:

ಆರೋಗ್ಯಕರ ಪಾನೀಯ – ಶಕ್ತಿವರ್ಧಕ ಔಷಧ –



ANDREWS
LIVER SALT

ತಂಪುಗೊಡುವುದು–ಶುಚಿಗೊಳಿಸುವುದು–
ಉಲ್ಲಾಸವೀಯುವುದು–ಚೈತನ್ಯಹುಟ್ಟಿಸುವುದು



ಎಲ್ಲಾ ವಿಧದ ಆಕರ್ಷಣೆಯಿಂದ ಇದು ಹೆಸರು ಹೊಂದಿದೆ.

ನೀವೆಲ್ಲಿಗೆ ಹೋಗಿರಿ, ಅಲ್ಲೆಲ್ಲಾ ಅನೇಕ ಜನರು ವೆಸ್ಟ್ ಎಂಡ್ ವಾಚುಗಳನ್ನೇ ಕಟ್ಟಿಕೊಳ್ಳುವುದನ್ನು ನೀವು ನೋಡುವಿರಿ. ಇದು ಆಕಸ್ಮಿಕವಲ್ಲ; ವೆಸ್ಟ್ ಎಂಡ್ ವಾಚುಗಳು ಉತ್ತಮವಿರುವುದರಿಂದ, ಎಂಥಾ ಹವೆಯಲ್ಲಿಯೂ ಯೋಗ್ಯ ಸಮಯ ಕೊಡುವುದರಿಂದ, ಬಾಳಿಕೆ ಬರುವುದರಿಂದ ಆಕರ್ಷಣೆಯುಳ್ಳದ್ದಾಗಿರುವುದರಿಂದ, ಆಗಿದೆ. ಈ ಗುಣಗಳು ಪ್ರತೀ ವೆಸ್ಟ್ ಎಂಡ್ ವಾಚಿನಲ್ಲಿಯೂ ಇವೆ; ಅವುಗಳ ಕ್ರಯ ಎಷ್ಟೇ ಇದ್ದರೂ ಚಿಂತೆಯಿಲ್ಲ. ಆದ್ದರಿಂದ ನೀವು ಯಾವುದೇ ವೆಸ್ಟ್ ಎಂಡ್ ವಾಚನ್ನು ಪೂರ್ಣ ಭರವಸೆಯಿಂದ ಕೊಂಡುಕೊಳ್ಳಬಹುದು.

ಬೇಕಾದಲ್ಲಿ ಸಚಿತ್ರ ಕೆಟಲಾಗು ಕಳುಹಿಸಲ್ಪಡುವುದು

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ–ಕಲ್ಕತ್ತೆ

WEST END WATCH Co

BOMBAY CALCUTTA

ಕಂಠ ನೋವಿಗೆ ಇದು ಅಮೂಲ್ಯ ಔಷಧ!

ನಿಮ್ಮ ಕಂಠ ಏನಾದರೂ ಸ್ವಲ್ಪ ವಿಕಾರವಾಗಿ ಸ್ವರ ಬದಲಾವಣೆ ಆದರೆ ವಿಷಹಾರೀ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ತೆಗೆದುಕೊಳ್ಳಿರಿ. ಇದು ನಿಮ್ಮ ಕಂಠದ ಬೇನೆಯನ್ನು ಖಂಡಿತವಾಗಿ ಗುಣಪಡಿಸುವುದು.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ ಅಮೂಲ್ಯ ಔಷಧಿ ರಸವನ್ನು ಹೊರಗೆಡವುತ್ತದೆ. ಹೀಗೆ ಪೆಪ್ಸ ಶ್ವಾಸಕೋಶಗಳಿಗೆ ಹೋಗಿ ಅಲ್ಲಿನ ನರಗಳನ್ನೂ ಕಂಠವನ್ನೂ ಸರಿಗೊಳಿಸಿ, ಶ್ವಾಸಕೋಶ ಹಾಗೂ ಹೃದಯದ ರೋಗವನ್ನು ನಿರ್ಮೂಲ ಮಾಡುವುದು.

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಟಿನ್ನಿಗೆ ದೊರಕುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡಿನ ವಾಯುವ್ಯದಲ್ಲಿ ರಶ್ಯನರು ಸದ್ಯ ಪ್ರಚಂಡ ವಿಜಯ ಪಡೆದರು. ಮೂರು ದಿನಗಳ ಘೋರ ಸಂಗ್ರಾಮದ ಬಳಿಕ ರಶ್ಯನರು ಡಾನ್ ದಂಡೆಯ ಮೇಲಿರುವ ಕಲಾಚ ಪಟ್ಟಣವನ್ನು ಆಕ್ರಮಿಸಿರುವರು. ಇದೇ ಪ್ರದೇಶದಲ್ಲಿ ಎರಡು ರೈಲ್ವೆ ಸ್ಟೇಶನುಗಳೂ ಅವರ ವಶವಾಗಿವೆ. ರಶ್ಯನರೀಗ ಪ್ರಚಂಡ ಪ್ರತಿಧಾಳಿಯೊಂದನ್ನು ಆರಂಭಿಸುವರೆಂದು ಜರ್ಮನ್ ರೋಮ್ ವಿಚಿ ರೇಡಿಯೋಗಳೂ ಒಪ್ಪುತ್ತವೆ. ಸ್ಟಾಲಿನ್‌ಗ್ರಾಡಿನ ಈಶಾನ್ಯ ನೈಋತ್ಯ ದಿಕ್ಕಿನಲ್ಲಿಯೂ ಜರ್ಮನರನ್ನು ಹಿಂದಕ್ಕಟ್ಟಲಾಗಿದೆ. ಮಧ್ಯ ಕಾಕಸಸಿನಲ್ಲಿಯೂ ರಶ್ಯನರು ಮುನ್ನುಗ್ಗುತ್ತಿದ್ದಾರೆ. ಟುನಿಶಿಯದಲ್ಲಿ ಜರ್ಮನರು ಕಂದಕಗಳನ್ನಗೆದು ಅವುಗಳ ಹಿಂದೆ ಭದ್ರವಾಗಿ ತಳವೂರಿದ್ದಾರೆ. ಅವರು ಸುರಂಗಗಳನ್ನು ಹಾಕಿದ್ದಾರೆ. ಬ್ರಿಟಿಷ್ ಅಮೇರಿಕನ್ ಸೈನ್ಯಗಳು ಕೆಲವು ರೈಲ್ವೆಗಳನ್ನು ವಶಪಡಿಸಿ ಕೊಂಡಿವೆ. ಫ್ರೆಂಚರೂ ಹೋರಾಡುತ್ತಾರೆ. ಇಲ್ಲಿ ದೊಡ್ಡ ಯುದ್ಧವಿನ್ನೂ ಆರಂಭವಾಗಿಲ್ಲ. ಜಪಾನರು ನ್ಯೂಗಿನಿಯಲ್ಲಿ ಒಮ್ಮೆ ಸೋತುಹೋದರೂ, ಈಗ ಹೊಸ ಸೈನ್ಯ ತಂದಿಳಿಸುತ್ತಿರುವರು. ಬ್ರಿಟಿಷ್ ಅಷ್ಟಮ ದಲವು ಲಿಬಿಯದಲ್ಲಿ ಎಲ್ ಅಗೇಲಾದ ಕಡೆಗೆ ಮುಂದರಿದಿದೆ. ಟ್ರಿಪೋಲಿ ಬಂದರದ ಮೇಲೆ ಎರಡು ಸಲ ಅಮೇರಿಕನ್ ವೈಮಾನಿಕರು ಧಾಳಿಯಿಟ್ಟರು. ಲಾರ್ಡ್ ಪ್ರಿವಿಸೀಲರೂ, ಕಾಮನ್ಸ್ ಸಭೆಯ ಧುರೀಣರೂ ಆಗಿದ್ದ ಸರ್ ಸ್ಟಾಫರ್ಡ್ ಕ್ರಿಪ್ಸರನ್ನು ವಿಮಾನ ತಯಾರಿಸುವ ಖಾತೆಯ ಮಂತ್ರಿಯಾಗಿ ನಿಯಮಿಸಲಾಗಿದೆ. ಇನ್ನು ಮೇಲೆ ಅವರಿಗೆ ಯುದ್ಧ ಮಂಡಳದಲ್ಲಿಯೂ ಸ್ಥಾನವಿಲ್ಲ!

ರೋಮೆಲನೆಲ್ಲಿದ್ದಾನೆ?

— ಎಲ್ ಅಲಾಮೇನ್‌ನಿಂದ ಬೆಂಗಾಜಿಯು ತನಕ ಕೇವಲ ಮೂರು ವಾರಗಳಲ್ಲಿ ಬ್ರಿಟಿಷ್ ಸೈನ್ಯವು ಮುನ್ನುಗ್ಗಿ ಹೋದ ವಿಜಯದ ಸಂಭ್ರಮವೇ ಸಂಭ್ರಮ! ಈ ಸಂಭ್ರಮದ ಉತ್ಸವಾಚರಣೆಯೆಂದು ಚರ್ಚಿಲರ ಆದೇಶದಂತೆ ಇಂಗ್ಲೆಂಡಿನಲ್ಲಿರುವ ಚರ್ಚ್‌ಗಳಲ್ಲೆಲ್ಲಾ ಕಳೆದ ವಾರ ಗಂಟೆ ಬಾರಿಸಲಾಯಿತು. ಕಳೆದೆರಡು ವರ್ಷಗಳಿಂದ ಮಾಡಿದ ಯುದ್ಧದಲ್ಲಿ ಚಿಂತಾಕ್ರಾಂತರಾಗಿ, ಉದ್ವಿಗ್ನರಾಗಿ, ನಿರಾಶಾಮಯರಾಗಿಯೂ ಇದ್ದ ಹಲವರಿಗೆ ಇಜಿಪ್ತಿನ ಈ ವಿಜಯದಿಂದ ಒಮ್ಮೆ ಉತ್ಸಾಹ ಹುಟ್ಟಿತೇನೋ ನಿಜ! ಆದರೆ 'ಇಂದಿನೀ ಅಲ್ಪ ವಿಜಯದಿಂದ ಉಬ್ಬಿ ವ್ಯಾಮರೆತು ಬಿಡಬೇಡಿ' ಎಂದು ಬ್ರಿಟಿಷರನ್ನು ಬ್ರಿಟನಿನ ಕೆಲವು ರಾಜಕಾರಣಿಗಳೇ ಎಚ್ಚರಿಸಿದ್ದಾರೆ. ಏಕೆಂದರೆ ಹಿಟ್ಲರನ ಭವಿಷ್ಯ ಯೋಜನೆ ಏನುಂಟೋ ಅದನ್ನು ನೋಡಿಕೊಳ್ಳಬೇಕಾಗಿದೆ. ಲಿಬಿಯದಲ್ಲಿ ಬ್ರಿಟಿಷ್ ಸೈನಿಕರು ರೊಮೆಲನನ್ನು ಹಿಂದೆ ಹಿಂದಕ್ಕೆ ದೂಡುತ್ತಾ ಬೆಂಗಾಜಿ ಗಡಿಗೆ ದೂಡಿದರೆನೋ ಸರಿ. ಆದರೆ ಈ ಸಂದರ್ಭದಲ್ಲಿ ರೊಮೆಲನೆಲ್ಲಿದ್ದನೆಂಬುದೊಂದು ಸಮಸ್ಯಾ ವಿಚಾರವಾಗಿದೆ. ರೊಮೆಲನು ರೋಮಿನಲ್ಲಿದ್ದಾನೆಂದೂ, ಮುನಿಕಿನಲ್ಲಿರುವನೆಂದೂ, ಟುನಿಶಿಯಕ್ಕೆ ಬಂದಿರುವನೆಂದೂ ಹೀಗೆ ಹಲವು ವಿಧದ ವಾರ್ತೆಗಳುಂಟು! ಅಂತೂ ಜರ್ಮನ್ ಸೇನೆಯನ್ನು ಬ್ರಿಟಿಷರು ಅಸಮ ಸಾಹಸದಿಂದ ಹಿಂದೂಡುವ ಕಾಲದಲ್ಲಿ ವೈರಿದಲದ ಸೇನಾಪತಿ ಅಲ್ಲಿರಲಿಲ್ಲವೆಂಬುದಿದು ಗಮನೀಯ ವಿಚಾರವಾಗಿದೆ. ರೊಮೆಲನು ರಣಕ್ಷೇತ್ರದಲ್ಲಿರದಿದ್ದರೂ ಅವನ ಸೈನ್ಯ ಹಿಂದೆ ಸರಿದುದರಿಂದ, ಆತನಿಗೆ ಅಪಜಯವೆಂಬುದೇನೋ ನಿಶ್ಚಯ. ಆದರೆ ಹಿಂದೆಯೂ ಎರಡು ಮೂರು ಸಲ ಆತನು ಹಿಂದೆ ಸರಿದಿದ್ದಾನೆ. ಜನರಲ್ ವೇವಲ್ ಮತ್ತು ಆಚಿನ್‌ಲೆಕ್ಕರು ಹಿಂದೆ 'ಎರಡು ಸಲ ರೊಮೆಲನನ್ನು ಬೆಂಗಾಜಿ ವರೆಗೆ ಅಟ್ಟಿಕೊಂಡು ಹೋಗಿದ್ದರು. ಆದರೆ 'ಬಂದ ಹಾದಿಗೆ ಸುಂಕವಿಲ್ಲ'ವಷ್ಟೆ? ಎಷ್ಟು ತೀವ್ರವಾಗಿ ಯಾವ ಮಾರ್ಗವಾಗಿ ಆತನನ್ನು ಅಟ್ಟಿಕೊಂಡು ಹೋಗಿದ್ದರೂ ಅದೇ ವೇಗದಲ್ಲಿ ಅದೇ ಮಾರ್ಗದಲ್ಲಿ ಅವರು ರೊಮೆಲನಿಂದ ಪರಾಜಿತರಾಗಿ ಹಿಂಜರಿದಿದ್ದರು. ಈ ಸಲದ ರೊಮೆಲನ ಪರಾಜಯದಲ್ಲಿ ಆತನಿಗೆ ಉಂಟಾದ ಶಸ್ತ್ರ ಸಾಮುಗ್ರಿಗಳ ಸೋಲನ್ನು ನೋಡಿದರೆ ಆತನ ಸೋಲು ಮಹತ್ವಾದುದೆಂಬುದನ್ನಂತೂ ಒಪ್ಪಿಕೊಳ್ಳಲೇಬೇಕು. ಹೀಗೆ ಸೋಲುಂಟಾದುದನ್ನು ಸ್ವತಃ ರೋಮೆಲನೇ ಒಪ್ಪಿಕೊಂಡಿದ್ದಾನೆ. ಆದರೆ ರೊಮೆಲನು ಈಗ ಎಲ್ಲಿದ್ದಾನೆ, ಯಾವ ಯೋಜನೆ ಆಳವಡಿಸಿದ್ದಾನೆ, ಮುಂದೇನು ಮಾಡಲಿಕ್ಕಿದ್ದಾನೆ ಎಂಬುದಂತೂ ಇನ್ನೂ ಗೊತ್ತಾಗಿಲ್ಲ! ಬ್ರಿಟಿಷರು ಬೆಂಗಾಜಿಯಲ್ಲಿಯೂ ನಿಲ್ಲದೆ ಟ್ರಿಪೋಲಿ ವರೆಗೂ ನುಗ್ಗಿ, ಆ ಕಡೆಯಿಂದ ಬರುತ್ತಿರುವ ಮಿತ್ರ ಸೈನ್ಯವನ್ನು ಸೇರಿಕೊಳ್ಳುವೀ ಸಾಹಸ ಮಾಡುತ್ತಿರುವುದನ್ನು ಕಂಡು ರೊಮೆಲನು ಟುನಿಶಿಯದಲ್ಲಿ ಮಿತ್ರರನ್ನೆದುರಿಸಲು ಸಿದ್ಧತೆಗಳನ್ನು ಮಾಡಿರಬಹುದೆ?

ಟ್ಯುನಿಶಿಯದಲ್ಲಿ ಹ್ಯೂಕ್ಯೆ!

ಬ್ರಿಟಿಷ್ ಬಲದ ಪ್ರಾಬಲ್ಯದಿಂದ ಜರ್ಮನ್ ಸೇನೆಯು, ಹಿಂದೇಸರಿದನೆ ಕಾಲ್ತೆಗೆದು ಭದ್ರವಾಗಿದ್ದ ತೋಬ್ರುಕ್ ದುರ್ಗವೂ ಬ್ರಿಟಿಷ ವಶವಾಗಿ, ಬೆಂಗಾಜಿಯನ್ನೂ ಖಾಲಿಮಾಡುವ ಪ್ರಸಂಗ ಬಂದಿತು. ಅತ್ತ ಅಮೆರಿಕನ್ ಸೇನೆ ಆಲ್ಜಿರ್ಸ್ ಮೊರೊಕೋ ವಶಪಡಿಸಿಕೊಂಡು ಟ್ಯುನಿಶಿಯವನ್ನು ಮುಟ್ಟಿದೆ. ಭೂಮಧ್ಯ ಸಮುದ್ರದ ಕರಾವಳಿ ಪ್ರದೇಶಗಳನ್ನು ವಶಪಡಿಸಿಕೊಳ್ಳಬೇಕೆಂದು ಸಂಯುಕ್ತ ರಾಷ್ಟ್ರಗಳ ಆಲೋಚನೆಯಿರುವಂತೆ ತೋರುವುದು. ಹಾಗಾಗಿ ಇಂದು ಟುನಿಶಿಯದ ಪರಿಸ್ಥಿತಿ ಗಂಭೀರವಾಗಿದೆ. ಉತ್ತರ ಆಫ್ರಿಕದ ವಿಜಯವು ಯಶಸ್ವಿಯಾಗಬೇಕಾದರೆ ಟುನಿಶಿಯಾ ಮಿತ್ರರ ಕೈಗೆ ಬರಬೇಕು. ಏಕೆಂದರೆ ಇದು ಅತ್ಯಂತ ಆಯಕಟ್ಟಿನ ಸ್ಥಳ. ಇದು ಲಿಬಿಯ ಮತ್ತು ಆಲ್ಜೀರಿಯಗಳ ನಡುವೆ ಇದೆ. ಇಲ್ಲಿ ಟುನಿಸ್ ಮತ್ತು ಬಿಜರ್ಟಾ ಎಂಬ ಮುಖ್ಯ ಬಂದರಗಳೂ ಆಗಿದೆ. ಈ ಸ್ಥಳವು ಸಿಸಿಲಿ, ಸಾರ್ಡೀನಿಯಗಳ ಸಮೀಪವೂ ಇದೆ. ಇಲ್ಲಿಂದ ಇಟಲಿಯ ಮೇಲೆ ಬಾಂಬು ಸುರಿಸುವುದು ಸುಲಭವಾಗುವುದು. ಮಾತ್ರವಲ್ಲ ಭೂಮಧ್ಯ ಸಮುದ್ರದಲ್ಲಿ ಸಂಚರಿಸುವ ಮಿತ್ರರ ಹಡಗಗಳನ್ನೂ ರಕ್ಷಿಸಬಹುದು. ಈ ಎಲ್ಲಾ ಕಾರಣಗಳಿಂದ ಮಿತ್ರರು, ಟುನಿಶಿಯ ವಿಚಿ ಸರಕಾರದ ಅಧೀನವಿದ್ದರೂ ಲೆಕ್ಕಿಸದೆ ಅಲ್ಲಿಗೆ ನುಗ್ಗಿ ಸೈನ್ಯ ಸಮೇತ ತಳವೂರಿರುವರು. ಬ್ರಿಟಿಷರ ಪ್ರಥಮ ದಳವು ಕರಾವಳಿಯಿಂದ ಬಿಜರ್ಟಾ ಕಡೆಗೆ ಹೊರಟಿರುವುದು. ಮತ್ತೆ ಕೆಲವು ಸೇನೆ ದಕ್ಷಿಣ ಆಲ್ಜೀರಿಯದಲ್ಲಿರುವ ಟೆಬೆಸ್ಸಾದಿಂದ ನೈಋತ್ಯಕ್ಕೆ ಕಬಾಜದ ಕಡೆಗೆ ನುಗ್ಗಿರುತ್ತದೆ. ಅಲ್ಲಿಂದ ದಕ್ಷಿಣಕ್ಕೆ ತಿರುಗಿ ಲಿಬಿಯ ಕರಾವಳಿಯ ಮಾರ್ಗವಾಗಿ ಟ್ರಿಪೋಲಿವರೆಗೆ ಹೋಗಬೇಕೆಂದು ಮಿತ್ರರ ಉದ್ದೇಶವಿರಬಹುದು. ಅಂತೂ ಇಲ್ಲಿನ ಪರಿಸ್ಥಿತಿ ವಿಷಮವಾಗಿರುವುದರಿಂದ ಹಿಟ್ಲರನು ಎಚ್ಚರಗೊಂಡಿರುವನು. ಹಲವು ಮುಂಜಾಗ್ರತೆಗಳನ್ನು ಮಾಡಿರುವನು. ದಕ್ಷಿಣ ಫ್ರಾನ್ಸನ್ನು ಆಕ್ರಮಿಸಿಕೊಂಡಿರುವನು. ಇತ್ತ ಟುನಿಶಿಯಕ್ಕೆ ಸೈನ್ಯ ಮತ್ತು ಸಾಮಗ್ರಿ ಕಳುಹಿಸುತ್ತಿರುವನು. ಬಿಝರ್ಟಾ ಮತ್ತು ಟುನಿಸ್ ಬಂದರಗಳಲ್ಲಿ ಜರ್ಮನರನ್ನು ಫ್ರೆಂಚ ದಲಗಳೇ ಇದಿರಿಸಿದವು. ಆದರೆ ಈ ಎರಡು ಬಂದರಗಳೂ ಜರ್ಮನ್ ವಶವಾಗಿವೆ. ರಶ್ಯದಲ್ಲಿ ಸದ್ಯ ಯುದ್ಧ ನಿಂತಂತಾಗಿರುವುದರಿಂದ ಹಿಟ್ಲರನು ಇಲ್ಲಿಗೆ ಹೆಚ್ಚು ಸೈನ್ಯ ಕರೆತರಬಹುದು. ಹೀಗೆ ಟುನಿಶಿಯದಲ್ಲಿ ಎರಡೂ ಪಕ್ಷಗಳೂ ಸಜ್ಜಾಗುತ್ತಿವೆ. ಮುಂದಿನ ರಣಭೂಮಿ ಇಲ್ಲಿ ನಿರ್ಮಾಣವಾಗುವುದೆಂದು ಇದರಿಂದ ತಿಳಕೊಳ್ಳಬಹುದು. ಮಿತ್ರರಿಗೂ ಶತ್ರುಗಳಿಗೂ ಇಲ್ಲಿ ಹ್ಯೂಕ್ಯೆ ಆಗಲಿದೆ!

ಇದೊಂದು ಮಹಾ ಯೋಜನೆ?

ಮಿತ್ರರು ಜರ್ಮನಿಯನ್ನು ನಿರ್ಮೂಲನಮಾಡಲು ಇದೊಂದು ಮಹಾ ಯೋಜನೆ ಕೈಕೊಂಡಿರುವಂತೆ ತೋರುತ್ತದೆ. ಆಫ್ರಿಕ ಕರಾವಳಿಯನ್ನು ಕೈವಶಪಡಿಸಿ, ಭೂಮಧ್ಯ ಸಮುದ್ರವನ್ನು ಸ್ವಾಧೀನಮಾಡಿ, ಆ ಮೇಲೆ ಫ್ರಾನ್ಸ್, ಇಟಲಿ, ಗ್ರೀಸ್ ಮತ್ತು ಯುಗಸ್ಲಾವಿಯ ಮೊದಲಾದ ಸ್ಥಳಗಳನ್ನು ನುಗ್ಗಿ ಜರ್ಮನಿಯ ಮೇಲೂ ಕೊನೆಗೆ ಆಕ್ರಮಣ ಕೈಕೊಳ್ಳಬೇಕೆಂದು ಮಿತ್ರರು ಯೋಚಿಸಿರುವಂತೆ ಕಾಣುವುದು. ಗೇಳಿಸರಲ್ಲಿ ಮಿತ್ರರು ಕೈಕೊಳ್ಳಲಿರುವ ದ್ವಿತೀಯ ರಂಗದ ಪೂರ್ವಸಿದ್ಧತೆಯೇನೋ ಲಿಬಿಯದ ಕದನ? ರಶ್ಯದ ಸಂಗ್ರಾಮದಲ್ಲಿ ಬಲವಾಗಿ ಪೆಟ್ಟು ತಿಂದಿರುವ ಹಿಟ್ಲರನು ಇನ್ನು ತಲೆಯೆತ್ತಲಾರನೆಂದು ಮಿತ್ರರು ಯೋಚಿಸಿರಬಹುದು. ಆದರೆ ಎಲ್ಲವೂ ನಾವು ಆಲೋಚಿಸದಂತೆಯೂ ಆಗುವುದಿಲ್ಲ. ಟುನಿಶಿಯದಲ್ಲಿ ಮಿತ್ರಬಲವನ್ನು ಸ್ವಲ್ಪಕಾಲ ತಡೆದುಬಿಟ್ಟರೆ, ಅತ್ತ ಫ್ರಾನ್ಸಿನ ಸೈನ್ಯವನ್ನು ಹಿಟ್ಲರನ್ನು ತನ್ನ ಕಡೆಗೆ ಒಲಿಸಿಕೊಳ್ಳಲು ಯತ್ನಿಸಬಹುದು. ಈ ಯತ್ನದಲ್ಲಿ ಕೃತಾರ್ಥನಾಗಲಾರನೆಂದು ಹೇಳಬರುವುದಿಲ್ಲ. ಉತ್ತರ ಆಫ್ರಿಕದಲ್ಲಿ ಫ್ರೆಂಚ್ ಬಲಗಳು ಮಿತ್ರರಿಗೆ ಸಹಾಯಮಾಡುತ್ತಿವೆಯಾದರೂ, ಬಲವಂತವಾದ ಫ್ರೆಂಚ್ ನೌಕಾಬಲವು ಜರ್ಮನ್ ಸ್ಥಾಪಿತ ವಿಚಿ ಸರಕಾರದ ಸ್ವಾಧೀನವಿದೆ. ಫ್ರೆಂಚ್ ನೌಕಾಬಲವನ್ನು ಹಿಟ್ಲರನು ಬೇಕಾದಂತೆ 'ಉಪಯೋಗಿಸಬಹುದು. ಅತ್ತ ಸ್ಪೈನಿನ ಸರ್ವಾಧಿಪತಿ ಫ್ರಾಂಕೋ ಕೂಡಾ ಸೈನ್ಯ ಸಿದ್ಧತೆ ನಡೆಸುತ್ತಿರುವನು. ಫ್ರಾಂಕೋ ಹಿಂದಿನಿಂದಲೇ ಹಿಟ್ಲರ್ ಮುಸಲಿನಿ ಪಕ್ಷಪಾತಿ. ಅವರ ಸಹಾಯದಿಂದಲೇ ಆತನು ಅಧಿಕಾರಕ್ಕೇರಿದ್ದು. ಸ್ಪೈನನ್ನು ಒಲಿಸಿಕೊಳ್ಳಲು ಮಿತ್ರರೆಷ್ಟು ಸಾಹಸಮಾಡಿದರೂ, ಈಗ ಇರುವ ತಾಟಸ್ಥ್ಯವನ್ನು ಮುರಿದರೆ ಆತನೊಲವು ಬಹುಪಾಲು ಶತ್ರುಪರವಾಗಿದ್ದೀತೆಂದೇ ಹಲವರು ತರ್ಕಿಸುತ್ತಾರೆ. ಹೇಗಿದ್ದರೂ ಸದ್ಯ ಸ್ಪೈನು ತಟಸ್ಥವೇ ಇದೆ. ಹೀಗೆ ಉತ್ತರ ಆಫ್ರಿಕದ ಇಂಗಿನ ಜಯವನ್ನು ನಿರೀಕ್ಷಿಸಿ ಸಂತೋಷವಾದರೂ ಮುಂದಿನ ವಿಷಯಗಳ ಕುರಿತು ಆಲೋಚಿಸಿದರೆ ಇನ್ನೂ ಹಲವು ಸಮಸ್ಯೆಗಳೇ ಏಳುತ್ತವೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ದಮ್ಮುಗುಣ ಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ

ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಆದರಿಂದ ತಾತ್ಪೂರ್ತಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನೊಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ಸಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಫುಪ್ಫುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೬. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ— ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.



ಪುರೋಹಿತ ಶ್ವಾಸಹಾರಿ

ಸ್ವದೇಶಾಭಿಮಾನಿ

ತಾರೀಕು 20—11—1942

ಕ್ರಿಪ್ಸರ ಸೋಲೆ?

ಬ್ರಿಟಿಷ್ ಮಂತ್ರಿಮಂಡಳದಲ್ಲಿ ಮಹತ್ವದ ಬದಲಾವಣೆಯಾಗಿದೆ. ಲಾರ್ಡ್ ಪ್ರಿವಿಸೀಲರೂ, ಕಾಮನ್ಸ್ ಸಭೆಯ ಧುರೀಣರೂ ಆಗಿದ್ದ ಸರ್ ಸ್ಟ್ಯಾಫೋರ್ಡ್ ಕ್ರಿಪ್ಸರನ್ನು ವಿಮಾನ ತಯಾರಿಸುವ ಖಾತೆಯ ಮಂತ್ರಿಯಾಗಿ ನೇಮಿಸಲಾಗಿದೆ. ಇನ್ನು ಮುಂದೆ ಅವರಿಗೆ ಯುದ್ಧ ಮಂಡಳದಲ್ಲಿಯೂ ಸ್ಥಾನವಿಲ್ಲ! ಅವರ ಸ್ಥಾನದಲ್ಲಿ ಗೃಹಮಂತ್ರಿ ಹರ್ಬರ್ಟ್ ಮಾರಿಸನರು ಯುದ್ಧ ಮಂಡಳದ ಸದಸ್ಯರಾಗುವರು. ವಿದೇಶ ಮಂತ್ರಿ ಅಂಥನಿ ಈಡನರು ತಮ್ಮ ಈಗಿನ ಕೆಲಸದೊಂದಿಗೆ ಕಾಮನ್ಸ್ ಸಭೆಯ ಧುರೀಣತ್ವ ವಹಿಸುವರು. ಲಾರ್ಡ್ ಕ್ರ್ಯಾನ್‌ಬರ್ನರು ಲಾರ್ಡ್ ಪ್ರಿವಿಸೀಲರಾಗುವರು. ಆಲಿವರ್ ಸ್ಟ್ಯಾನ್ಲೆಯವರು ವಸಾಹತು ಮಂತ್ರಿಯಾಗುವರು. ಇದುವರೆಗೆ ವಿಮಾನ ಖಾತೆಯ ಮಂತ್ರಿಯಾಗಿದ್ದ ಕರ್ನಲ್ ಲೆವಲಿಯವರು ಅಮೆರಿಕದಲ್ಲಿ ಬ್ರಿಟಿಷ್ ರಾಯಭಾರಿಯಾಗುವರು.

ಅಂತೂ ಕ್ರಿಪ್ಸರ ಕೈಯಿಂದ ಪ್ರಧಾನ ರಾಜಕೀಯ ಕಾರ್ಯಾರ್ಥ ಅಧಿಕಾರಗಳು ಕಿತ್ತುಕೆಗೆಯಲಾಯಿತು. ಕ್ರಿಪ್ಸರು ಕೂಲಿಗಾರಪಕ್ಷದ ಹಾಗೂ ಜನತೆಯ ಒತ್ತಾಯದಿಂದ ಬ್ರಿಟಿಷ್ ಮಂತ್ರಿಮಂಡಳದಲ್ಲಿ ಸೇರಿಸಲ್ಪಟ್ಟರು. ಅವರ ರಶ್ಯಾ ಸಂಧಾನವು ಅವರನ್ನು ಕೀರ್ತಿ ಶಿಖರಕ್ಕೇರಿಸಿತು. ಕ್ರಿಪ್ಸರೇ ಮುಂದಿನ ಬ್ರಿಟಿಷ್ ಪ್ರಧಾನಮಂತ್ರಿಯಾಗುವರೆಂದೂ ಹಲವು ಕಡೆಗಳಿಂದ ಹೊಗಳಿಕೆ ಹೊರಟಿತ್ತು. ಆದರೆ ಕೂಲಿಗಾರ ಪಕ್ಷದ ಈ ವಿಜಯವು ಬ್ರಿಟನಿನ ಇಂದಿನ ಸಾಮ್ರಾಜ್ಯಶಾಹೀ ಅಧಿಕಾರೀ ವರ್ಗಕ್ಕೆ ಎಂದರೆ ಚರ್ಚಿಲ್ ಪಂಗಡಕ್ಕೆ ಏನೇನೂ ಹಿತವೆನಿಸುವುದು ಸಾಧ್ಯವಿಲ್ಲ. ಆದರೂ ಅವರು ಕೆಲಕಾಲ ಸುಮ್ಮಗಿರಬೇಕಾಯಿತು. ಇಂದು ಇಜಿಪ್ತಿನಲ್ಲಿ ವಿಜಯ ದೊರಕಿದೆ! ವಿಜಯದ ಘಂಟಾನಾದವು ಬ್ರಿಟನಿನ ಚರ್ಚ್‌ಗಳಲ್ಲೆಲ್ಲಾ ಘೋಷಿಸಲ್ಪಟ್ಟಿದೆ. ಅಷ್ಟರಲ್ಲಿ ಕ್ರಿಪ್ಸರನ್ನು ಭಾರತಕ್ಕೆ ಸಂಧಾನ ದೂತರಾಗಿ ಕಳುಹಿಸಿ, ಲೂಯಿ ಫಿಶರರು ಹೇಳಿದಂತೆ, ಒಮ್ಮೆ ಕೊಟ್ಟ ಅಧಿಕಾರವನ್ನು ಹಿಂದೆಗೆದು ಅವರನ್ನು ಭಾರತದ ಮುಖಂಡರ ಮುಂದೆ ವಚನ ಭ್ರಷ್ಟರಾಗಿ ಮಾಡಿ, ಆ ಮೂಲಕ ಅವರನ್ನು ಜಗತ್ತಿನ ಮುಂದೆಯೂ ಅಪಹಾಸ್ಯಕ್ಕೀಡು ಮಾಡಿದ್ದೂ ಆಯಿತು. ಇದೇ ಸಂದರ್ಭದಲ್ಲಿ ಇನ್ನು ಮುಂದೆ ಕೂಲಿಗಾರಪಕ್ಷವು ತಲೆಯೆತ್ತಬಾರದೆಂದು, ಸಾಮ್ರಾಜ್ಯಶಾಹೀ ಪಂಗಡವು ಕ್ರಿಪ್ಸರನ್ನು ಪ್ರಧಾನ ರಾಜಕೀಯಾಧಿಕಾರದಿಂದ ಕೆಳತಳ್ಳಿಯೂಬಿಟ್ಟಿತು! ಕ್ರಿಪ್ಸರಿಗೆ ಇದೊಂದು ಮಹತ್ವದ ರಾಜಕೀಯ ಸೋಲಲ್ಲವೆ?

'ಈಗ ನೀವು ಗಣ್ಯ ಸ್ಥಾನದಿಂದ ಕೆಳಗಿಳಿದಂತೆ ಅನಿಸಬಹುದು. ಆದರೆ ಈ ಸಮಯದಲ್ಲಿ ನೀವು ಬೇರೆ ವಿಚಾರವನ್ನು ಮನಸ್ಸಿನಲ್ಲಿ ತಂದುಕೊಳ್ಳಲಿಕ್ಕಿಲ್ಲವೆಂದು ನಂಬುತ್ತೇನೆ.' ಹೀಗೆಂದು, ಕ್ರಿಪ್ಸರಿಗೆ ಚರ್ಚಿಲ್ಲರು ಪತ್ರ ಬರೆದು ಸಮಾಧಾನಪಡಿಸಲು ನೋಡಿದ್ದಾರೆ! ಕ್ರಿಪ್ಸರು ಇದನ್ನು ಮನಸ್ಸಿಗೆ ತಂದುಕೊಳ್ಳುವರೋ ಇಲ್ಲವೋ ಎಂಬುದು ಅವರ ಮುಂದಿನ ಚಟುವಟಿಕೆಗಳಿಂದ ವ್ಯಕ್ತವಾದೀತು!

ಡಾಕ್ಟರರೂ ದಾದಿಗಳೂ ಜಾಂಬಕನ್ನೇ ಉಪಯೋಗಿಸಲು ಹೇಳುತ್ತಾರೆ

ಪ್ರಸಿದ್ಧ ವಿಷಹಾರೀ ಚರ್ಮಲೇಪ

ಜಾಂಬಕ್ ಅರ್ಧ ಶತಮಾನಗಳಿಂದ ಜಗತ್ ಪ್ರಸಿದ್ಧವಾಗಿದ್ದು ಗಾಯ ಮತ್ತು ಜೊಡೆತಗಳಿಗೆ ಇದು ಆದರ್ಶ ಪ್ರಥಮ ಚಿಕಿತ್ಸೆಯಾಗಿದೆ. ಡಾಕ್ಟರರೂ ದಾದಿಯರೂ ಇದನ್ನು ತುರಿಕಜ್ಜಿ, ಬಾವು, ವಿಷಪೂರ್ಣ ಗಾಯ, ಕಾಲುನೋವು, ಮೂಲವ್ಯಾಧಿ ಮೊದಲಾದವುಗಳಿಗೆ ಉಪಯೋಗಿಸ ಹೇಳುತ್ತಾರೆ. ಜಾಂಬಕಿನಲ್ಲಿರುವ ಅತ್ಯುತ್ತಮ ವನೌಷಧಿ ಸತ್ವವು ಸುಲಭವಾಗಿ ಚರ್ಮಕ್ಕೆ ಎಳೆಯಲ್ಪಟ್ಟು ನೋವನ್ನು ಕಡಿಮೆಮಾಡಿ ಬಾವನ್ನು ಗುಣಪಡಿಸಿ, ರೋಗವನ್ನು ನಾಶಮಾಡುವುದು. ಜಾಂಬಕ್ ಕಲೆಯುಳಿಯದಂತೆ ಗುಣಪಡಿಸುತ್ತದೆ. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಅಥವಾ ರೂ. 2-4-0 ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಸ್ವದೇಶ ಸಮಾಚಾರ

ಬಾಂಬು ತಯಾರಿಸುವ ತಂಡದ ಪತ್ತೆ!
ಭಾರತದ ಅನೇಕ ನಗರಗಳಲ್ಲಿ ಶಾಖೆಗಳಿವೆ

ಬಾಂಬು ತಯಾರಿಸುವವರ ತಂಡವೊಂದನ್ನು ನಾಗಪುರ ಪೋಲೀಸರು ಕಳೆದ ವಾರ ಪತ್ತೆಮಾಡಿ ಕಂಡುಹಿಡಿದಿರುತ್ತಾರೆ. ಇದರಲ್ಲಿ ೧೪ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಈ ಪಂಗಡದವರು ಭಾರತದಲ್ಲಿರುವ ಬೇರೆ ಬೇರೆ ಪ್ರಾಂತಗಳಲ್ಲಿ ತಮ್ಮ ತಂಡದ ಶಾಖೆಗಳನ್ನು ಇಟ್ಟುಕೊಂಡಿರುತ್ತಾರೆಂದೂ ತಿಳಿದು ಬಂದಿದೆ. ಈ ಪಂಗಡದವರು ತಮ್ಮ ತಯಾರಿಕೆ ಉದ್ಯಮಗಳನ್ನು ಬೊಂಬಾಯಿ ಕಲ್ಕತ್ತಾ ಮತ್ತು ಔರಂಗಾಬಾದ್ ನಗರಗಳಲ್ಲಿ ನಡೆಸುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆಂದೂ ಇದುವರೆಗೆ ತಿಳಿದುಬಂದಿದೆ. ನಾಗಪುರದಲ್ಲಿ ಈಗ ಪತ್ತೆ ನಡೆದ ಮೇರೆಗೆ ಈ ತಂಡದ ಶಾಲೆಯೊಂದು ಇರುತ್ತದೆ. ಪೋಲೀಸರು ಈ ಉದ್ಯಮಕಾರರ ಮನೆಯೊಂದನ್ನು ಶೋಧಿಸಿ ಏಳು ಬಾಂಬುಗಳನ್ನು ವಶಪಡಿಸಿಕೊಂಡರು. ಈ ಏಳು ಬಾಂಬುಗಳಲ್ಲಿ ಎರಡು ಬಾಂಬುಗಳು ಬೊಂಬಾಯಿಯಲ್ಲಿ ತಯಾರಿಸಿದ್ದೆಂದು ಕಂಡುಹಿಡಿಯಲಾಗಿದೆ.

'ಇನ್ನು ಸಾಕು' ಪುಸ್ತಕಕ್ಕಾಗಿ ಕೈದುಗಳು!

ಮಹಾತ್ಮಾ ಗಾಂಧಿಯವರು ಬರೆದ 'ಕ್ವಿಟ್ ಇಂಡಿಯಾ' ಪುಸ್ತಕವನ್ನು 'ಇನ್ನು ಸಾಕು' ಎಂದು ಭಾಷಾಂತರ ಮಾಡಿದ ಬಗ್ಗೆ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರನ್ನು ಡಿಫೆನ್ಸ್ ಕಾನೂನಿನಂತೆ ಸೆರೆಹಿಡಿಯಲಾಗಿದೆ. ಆ ಪುಸ್ತಕ ಮುದ್ರಿಸಿದ ಸುಭೋದ ಮುದ್ರಣಾಲಯದ ವ್ಯವಸ್ಥಾಪಕರಾದ ಶ್ರೀ. ಎನ್. ರಂಗನಾಥರವರನ್ನೂ ಸೆರೆಹಿಡಿಯಲಾಗಿದೆ.

ಶ್ರೀ। ಗುಪ್ತರ ಕೈದು

ಬೆಂಗಳೂರು 'ಜನವಾಣಿ' ಪತ್ರಿಕೆಯ ಒಡೆಯರೂ 'ಪ್ರಜಾಮತ' ಸಂಪಾದಕರೂ ಆದ ಶ್ರೀ. ಬಿ. ಎನ್. ಗುಪ್ತರನ್ನು ಆಕ್ಷೇಪಾರ್ಹ ವಾಙ್ಮಯವನ್ನಿಟ್ಟುಕೊಂಡಿದುವರೆಂದು ಸೆರೆ ಹಿಡಿದಿರುವರು. ಇವರ ಮೇಲೆ ಹಿಂದಿನ ಒಂದು ಆರೋಪವೂ ಇದೆ.

ಹೊಸ ನಕ್ಷತ್ರವೊಂದರ ದರ್ಶನ!
ಇದರ ರಹಸ್ಯವೇನು?

ಅತ್ಯಂತ ಪ್ರಕಾಶಮಾನ ನಕ್ಷತ್ರವಾದ ಪುನರ್ವಸು ಬಳಿ ಇರುವ ಪ್ಯುಪಿಸ್ ತಾರಾಗಣದಲ್ಲಿ ಪ್ರಕಾಶಮಾನವಾದ ಹೊಸ ನಕ್ಷತ್ರವನ್ನು ನಾರ್ತ್ ವೇಲ್ಸಿನ ಖಗೋಳ ಕುತೂಹಲಿಯು ಕಂಡು ಪ್ರಥಮತಃ ಪ್ರಪಂಚಕ್ಕೆಲ್ಲ ತಿಳಿಸಿದ. ಉತ್ತರ ದೇಶಗಳಿಗಿಂತ ದಕ್ಷಿಣ ದೇಶಗಳಲ್ಲಿ ಈ ನಕ್ಷತ್ರವು ಬಹಳ ಚೆನ್ನಾಗಿ ಕಾಣುತ್ತದೆ. ನಮ್ಮ ದೇಶದಲ್ಲಿ ಅದು ಉಚ್ಚಕ್ಕೆ ಬಂದಾಗ ನಡುತಲೆಯ ಮೇಲೆ ಕೊಂಚ ದಕ್ಷಿಣಕ್ಕೆ ಕಾಣಬಹುದು. ಪ್ರಾತಃಕಾಲ ೪-೫ ಗಂಟೆಯಲ್ಲಿ ಅದನ್ನು ಬಹಳ ಲಕ್ಷಣವಾಗಿ ಕಾಣಬಹುದು. ಪುನರ್ವಸು ನಕ್ಷತ್ರಕ್ಕೆ ಕೊಂಚ ನೈರುತ್ಯಕ್ಕೆ ಇದೆ. ಪುನರ್ವಸು, ಅದಕ್ಕೆ ದಕ್ಷಿಣಕ್ಕಿರುವ 'ಕಾನೋಪಸ್' ತ್ರಿಕೋಣದ ಶಿಖರದಲ್ಲಿದೆ. ಇಂತಹ ಹೊಸ ನಕ್ಷತ್ರಗಳು ಹಠಾತ್ ಪ್ರಕಾಶಮಾನಕ್ಕೆ ಬರುವುದು ಅಪೂರ್ವ. ಖಗೋಳ ಶಾಸ್ತ್ರಜ್ಞನ ಜೀವಮಾನದಲ್ಲಿ ಇಂತಹ ಎರಡು ಮೂರು ಪ್ರಸಂಗಗಳುಂಟಾದರೆ ಅದೇ ಹೆಚ್ಚು. ಹರ್ಕ್ಯುಲಿಸ್ ಗಣದಲ್ಲಿ ಅಂಥದೊಂದು ನಕ್ಷತ್ರ ೧೯೩೪ರಲ್ಲಿ ಕಾಣಿಸಿಕೊಂಡಿತ್ತು. ಈ ಹೊಸ ನಕ್ಷತ್ರ ಕಳೆದ ವಾರವೇ ತನ್ನ ಉಚ್ಚ ಪ್ರಮಾಣದಲ್ಲಿ ಪ್ರಕಾಶವನ್ನು ತಾಳಿದ್ದು ಈಗ ಕಳೆಗುಂದುತ್ತಿದೆ. ಇಂತಹ ನಕ್ಷತ್ರಗಳಂತೆ ಇದೂ ನಡೆದುಕೊಂಡರೆ, ಕ್ರಮೇಣ ಇದು ತೇಜೋಹೀನವಾಗುತ್ತ ಒಂದೆರಡು ತಿಂಗಳಲ್ಲಿ ಕಣ್ಮರೆಯಾಗುತ್ತದೆ. ಅನಂತರ ಅದು ಮತ್ತೆ ಪ್ರಕಾಶಗೊಳ್ಳುವ ಸಂಭವ ಕಡಿಮೆ. ಅಲ್ಲಿಗೆ ಅದರ ವೈಭವದ ಪ್ರದರ್ಶನ ಮುಗಿಯಿತು. ಈ ನಕ್ಷತ್ರಗಳೇಕೆ ಹಠಾತ್ ಸುಪ್ರದೀಪ್ತವಾಗುತ್ತವೆ? ಬಹುಶಃ ಇವುಗಳು ತಮ್ಮ ಒಳ ಹತೋಟಿಯನ್ನು ತಪ್ಪಿಸಿಬಿಟ್ಟದ್ದು, ತಮ್ಮ ಗರ್ಭದಲ್ಲಿ ಅಡಗಿರುವ ಅಗಾಧ ಚೇತನವನ್ನು ಭೀಕರ ವೇಗದಲ್ಲಿ, ಪ್ರಭಾರೂಪದಲ್ಲಿ ಹೊರಚೆಲ್ಲಲು ಪ್ರಾರಂಭಿಸುತ್ತವೆಂದು ಕಾಣುತ್ತದೆ. ಈ ತಾತ್ಕಾಲಿಕ ಪ್ರಭೆ ಸಹಸ್ರ ಪಾಲಿನಷ್ಟು ಅಧಿಕವಾಗಿರಬಹುದು. ಇಂತಹ ನಕ್ಷತ್ರಗಳೆಲ್ಲ ಆಕಾಶದ ಅಮೂಲ್ಯ ಕಂಠಮಾಲೆಯಂತಿರುವ ಸುಘಟಿತ ತಾರಾ ಪಥದಲ್ಲಿಯೋ ಅದರ ಅತಿ ಸಮೀಪದಲ್ಲಿಯೋ ಇರುತ್ತವೆ.

ಹೊಸ ನಕ್ಷತ್ರವು ಜ್ಯೋತಿರ್ಮಾನದಲ್ಲಿ ಒಂದು ಸಹಸ್ರ ವರ್ಷಗಳಷ್ಟು ದೂರದಲ್ಲಿರಬಹುದು. ಅಂದರೆ ಸೆಕೆಂಡ್ ೧ಕ್ಕೆ ಸುಮಾರು ೨ಲಕ್ಷ ಮೈಲು ದೂರ ಓಡುವ ಬೆಳಕು ಸಹಸ್ರ ವರ್ಷಗಳ ಕಾಲ ಹೋಗುವಷ್ಟು ದೂರ.

ಸರ್. ಎಂ. ವಿಶ್ವೇಶ್ವರಯ್ಯನವರ ಹೊಸ ಕೈಗಾರಿಕೆ ಯೋಜನೆ

ಮೈಸೂರಿನ ಮಾಜಿ ದಿವಾನರೂ ಭರತಖಂಡದ ಕೈಗಾರಿಕಾ ಮುಖಂಡರೂ ಪ್ರಸಿದ್ಧ ಕನ್ನಡಿಗರೂ ಆದ ಸರ್ ಎಂ. ವಿಶ್ವೇಶ್ವರಯ್ಯನವರ ಪ್ರಯತ್ನದ ಫಲವಾಗಿ ಮೈಸೂರು ದೇಶದಲ್ಲಿ ಒಂದು ದೊಡ್ಡ ಔದ್ಯೋಗಿಕ ಶಿಕ್ಷಣ ಸಂಸ್ಥೆಯು ಏರ್ಪಾಡಾಗುವುದೆಂದೂ ಈ ಸಂಸ್ಥೆಗೆ ಸರ್. ಎಂ. ವಿ. ರವರು ೧,೫೦,೦೦೦ ರೂಗಳನ್ನು ಮೈಸೂರು ಸರಕಾರದವರು ೯॥ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರೆಂದೂ ತಿಳಿದುಬಂದಿದೆ. ಈ ಸಂಸ್ಥೆಯ ಕಾರ್ಯಕಲಾಪಗಳು ಬೆಂಗಳೂರಿನಲ್ಲಿರುವ ಶ್ರೀ ಕೃಷ್ಣರಾಜೇಂದ್ರ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟನಲ್ಲಿ ನಡೆಯುವುವು. ಅಲ್ಲಿ ವಿದ್ಯಾರ್ಥಿಗಳಿಗೆ ರೇಡಿಯೋ ಮೆಕ್ಯಾನಿಜಮ್, ಮೆಟಲ್ ಟ್ರೇಡ್ಸ್, ಟೇಲರಿಂಗ್, ಪ್ರಿಂಟಿಂಗ್, ಬೈನಿಂಗ್ ಮೊದಲಾದ ಕೈಗಾರಿಕೆಗಳ ಬಗ್ಗೆ ಶಿಕ್ಷಣ ಕೊಡಲಾಗುವುದೆಂದು ತಿಳಿದುಬರುತ್ತದೆ.

ಗ್ರೇಡಿ ವರದಿ ಮಣ್ಣುಮುಕ್ಕಿತು!

ಭಾರತದ ಕೈಗಾರಿಕೆಗಳನ್ನು ಹೇಗೆ ವೃದ್ಧಿಪಡಿಸಬಹುದೆಂಬ ವಿಷಯದಲ್ಲಿ ಅಮೇರಿಕದಿಂದ ಬಂದಿದ್ದ ಗ್ರೇಡಿ ಕಮಿಶನಿನವರು ಒಂದು ವರದಿ ಸಿದ್ಧಪಡಿಸಿದ್ದರು. ಸುಮಾರು ಕಾಲ ಅದನ್ನು ಪರಿಶೀಲಿಸಿ ಈಗಿನ ಪರಿಸ್ಥಿತಿಯಲ್ಲಿ ಅದನ್ನು ಜಾರಿಗೆ ತರುವುದಿಲ್ಲವಾಗಿ ಅಮೇರಿಕ ಸರಕಾರದವರು ನಿರ್ಧರಿಸಿದ್ದಾರೆಂದು ತಿಳಿದುಬಂದಿದೆ. ಯುದ್ಧದ ಪರಿಸ್ಥಿತಿಯಲ್ಲಿ ಆದ ಬದಲಾವಣೆಗಳೇ ಇದಕ್ಕೆ ಕಾರಣ.

'ಕೂಡಲೇ ಬಿಕ್ಕಟ್ಟು ಪರಿಹಾರವಾಗಬೇಕಾಗಿಲ್ಲ'
ಅಂಬೇಡ್ಕರರ ವಿಚಿತ್ರವಾದ!

ವೈಸರಾಯಿಗಳ ಕೌನ್ಸಿಲಿನಲ್ಲಿ ಲೇಬರ್ ಮೆಂಬರರಾದ ಡಾ. ಬಿ. ಆರ್. ಅಂಬೇಡ್ಕರರು ತಮ್ಮದೊಂದು ಹೇಳಿಕೆಯಲ್ಲಿ ಮೇಲಿನ ವಿಚಿತ್ರ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅವರ ಅಭಿಪ್ರಾಯದಲ್ಲಿ ಪ್ರಕೃತ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವ ಆಗತ್ಯವಿಲ್ಲ; ದೇಶದ ಈಗಿನ ರಾಜಕೀಯ ಬಿಕ್ಕಟ್ಟಿಗೆ ಅಧಿಕಸಂಖ್ಯಾಕ ಮತ್ತು ಅಲ್ಪ ಸಂಖ್ಯಾಕ ಪಂಗಡಗಳೊಳಗಿರುವ ಪರಸ್ಪರ ಅಪನಂಬಿಕೆಯೇ ಕಾರಣ; ಆದ್ದರಿಂದ ಹಿಂದುಸ್ಥಾನದ ಭವಿಷ್ಯದ ಕುರಿತು ನಿರ್ಧಾರ ಮಾಡುವುದಕ್ಕೆ ಯುದ್ಧವು ಮುಗಿಯುವ ವರೆಗೆ ಕಾಯುವುದು ಉತ್ತಮ, ಎಂದು ಹೇಳಿದ್ದಾರೆ.

ಪುತ್ತೂರು ಶಿಕ್ಷೆಗಳು

ಶ್ರೀ ಪಾಣಾಜೆ ಕೃಷ್ಣಭಟ್ಟರ ವಿಚಾರಣೆ ಪುತ್ತೂರಲ್ಲಿ ತಾ. ೨೩ರಂದು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ನಡೆದು, ಒಂದು ವರ್ಷ ಕಠಿಣ ಶಿಕ್ಷೆ ಮತ್ತು ೩೦೦ ರೂಪಾಯಿ ಜುಲ್ಮಾನೆ ವಿಧಿಸಲಾಗಿದೆ.

ವಿಟ್ಲದ ಶ್ರೀ ಆನಂದ ರೈಗಳ ಶಿಕ್ಷೆ ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ತಾ. ೨೧ರಂದು ನಡೆದು, ಅವರಿಗೆ ಎರಡು ಆರೋಪಗಳ ಮೇಲೆ ೬ ತಿಂಗಳು ಮತ್ತು ೩ ತಿಂಗಳು ಮತ್ತು ೧೦೦ ರೂ. ಜುಲ್ಮಾನೆ ವಿಧಿಸಲಾಗಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ರಾಜಿನಾಮೆ

'ಹಿರಿಯಡ್ಕ ಸರ್ಕಲಿನಿಂದ ಜಿ. ಬೋರ್ಡಿನ ಕಾಂಗ್ರೆಸ್ ಮೆಂಬರರಾದ ಶ್ರೀ. ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು ಜಿಲ್ಲಾ ಬೋರ್ಡಿನ ಸದಸ್ಯತನಕ್ಕೆ ರಾಜಿನಾಮೆ ಕೊಟ್ಟಿರುವರಾಗಿ ತಿಳಿದು ಬರುತ್ತದೆ.

ವರ್ಗ, ನೇಮಕ

ಸಹಕಾರ ಸಂಘಗಳ ಡಿ. ರಿಜಿಸ್ಟ್ರಾರ್ ಶ್ರೀ ಕೆ. ಅಚ್ಯುತನ್ ನಾಯರರಿಗೆ ವರ್ಗವಾಗಿ, ಅವರ ಬದಲಿಗೆ ಶ್ರೀ. ಕಣನ್ ನಾಯರರು ತಾ ೨೩ರಂದು ಚಾರ್ಜು ವಹಿಸಿರುವರು.

ಮದ್ರಾಸ್ ಸರಕಾರದ ನಿವೃತ್ತ ಟ್ರಾನ್ಸ್‌ಲೇಟರರೂ ಈ ಜಿಲ್ಲೆಯವರೂ ಆಗಿರುವ ರಾವ್ ಸಾಹೇಬ್ ಬಿ. ಎಸ್. ನಿರೋಡಿ ಅವರು ಕುನ್ನೂರಿನ 'ಕಾಯಿಪಲ್ಯ ಕೃಷಿ'ಯ ಸ್ಪೆಶಲ್ ಆಫೀಸರರಾಗಿ ನೇಮಕ ಹೊಂದಿರುತ್ತಾರೆ.

ಭಾಷಣ

ತಾ. ೨೩ರಂದು ಸಂಜೆ ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ಶ್ರೀ ಎ. ಬಿ. ಶೆಟ್ರು ವಿದ್ಯಾರ್ಥಿ ಸಭೆಯಲ್ಲಿ ಭಾಷಣ ಕೊಟ್ಟರು. ಶ್ರೀ ಬಿ. ಎಲ್. ಎಸ್. ರೈಗಳು ಅಧ್ಯಕ್ಷತೆ ವಹಿಸಿದ್ದರು

ಜಿಲ್ಲಾ ಬೋರ್ಡ್ ಅಧಿವೇಶನ

ದ. ಕ. ಜಿಲ್ಲಾ ಬೋರ್ಡ್ ಅಧಿವೇಶನ ಇದೇ ತಾ. ೩೦ನೇ ಸೋಮವಾರ ಬೆಳಗ್ಗೆ ಗಂಟೆ ೧೧ಕ್ಕೆ ಅದರ ಕಾರ್ಯಾಲಯದಲ್ಲಿ ಜರಗಲಿದೆ.

ಮಂಗಳೂರು ಮುನ್ಸಿಪಾಲಿಟಿ.

ಇದರ ಕಾರ್ಯಭಾರಗಳು ತಾ. ೨೩ರಂದು ಬೆಳಗ್ಗೆ ಸ್ಥಳೀಯ ಮುನಿಸಿಪಲ್ ಆಫೀಸಿನಲ್ಲಿ ಇಲ್ಲಿನ ಸ್ಪೆಶಲ್ ಆಫೀಸರರ ವಿಮರ್ಶೆಗೊಳಗಾಗಿ ನಾಗರಿಕರಿಗೆ ಶುದ್ಧ ಹಾಲಿನ ಸರಬರಾಯಿ ಆಗುವ ಹಾಗೆ ಮುನಿಸಿಪಲ್ ಅಧಿಕಾರಿಗಳು ಇನ್ನಷ್ಟು ಜಾಗ್ರತೆ ವಹಿಸಬೇಕೆಂಬ ಸರಕಾರದ ಅಪ್ಪಣೆ ಮಾನ್ಯವಾಯಿತು. ಈ ಸಲದ ಮಂಗಳೂರಿನ ಫಲವಸ್ತು ಪ್ರದರ್ಶನಕ್ಕೆ ರೂ. ೩೫೦ರ ಸಹಾಯಧನ ಕೊಡುವುದೆಂದಾಯಿತು. ಸ್ಥಳೀಯ ಮುನಿಸಿಪಲ್ ಲೈಬ್ರರಿಗೆ ಪುಸ್ತಕಗಳನ್ನು ಕೊಂಡುಕೊಳ್ಳಲು, ಗವರ್ನಮೆಂಟಿನ ಗ್ರಾಂಟಿನ ಮೊತ್ತದಷ್ಟೇ ಆ ಚಾಲ್ತಿ ವರ್ಷಕ್ಕೂ ಈ ಮುನಿಸಿಪಾಲಿಟಿ ವಂತಿಗೆ ತೆರುವುದೆಂದಾಯಿತು. ಎ. ಆರ್. ಪಿ ಮೆಸೆಂಜರರು ಸೈಕಲ್ ತೆರಿಗೆಯಿಂದ ವಿರಹಿತವಾಗಬೇಕೆಂಬ ಎ. ಆರ್. ಪಿ. ಸ್ಪೆಶಲ್ ಆಫೀಸರರ ಕೇಳಿಕೆಯು ಮಾನ್ಯವಾಯಿತು. ತಿಂಗಳಿಗೆ ಗ್ರಾಂಟನ್ನು ರೂ. ೫೦ಕ್ಕೆ ಏರಿಸಬೇಕೆಂದು ವಿನಂತಿಸಿದ ಮಂಗಳೂರಿನ ಭಗಿನೀ ಸಮಾಜದ ಅರಿಕೆಯು ಮಾನ್ಯವಾಗದೆ ಹೋಯಿತು.

ಮೂಡಬಿದ್ರೆ

ಕೈದು

ಶ್ರೀಗಳಾದ ದೇವದಾಸಪ್ರಭು ಮತ್ತು ಕೆ. ಶಶಿಧರ ರಾಯರನ್ನು ತಾ. ೨೨ರಂದು ಆಕ್ಷೇಪಾರ್ಹ ಕರಪತ್ರ ಹಂಚಿದರೆಂದು ಡಿಫೆನ್ಸ್ ಕಾನೂನಿನಂತೆ ಕೈದು ಮಾಡಲಾಗಿದೆಯೆಂದು ತಿಳಿಯುತ್ತದೆ

ಕಾಸರಗೋಡು

ಶಿಕ್ಷೆ

ಕಳೆದ ವಾರ ಪ್ರಕಟಿಸಿದಂತೆ ಶ್ರೀಗಳಾದ ಕರುಣಾಕರ ನಂಬಿಯಾರ್, ದಾಮೋದರನ ಇವರೊಂದಿಗೆ ಪುತ್ತೂರಿನ ಸ. ಡಿ. ಮೇಜಿಸ್ಟ್ರೇಟರೆದುರು ವಿಚಾರಣೆ ನಡೆಸಿ ಪ್ರತಿಯೊಬ್ಬನಿಗೂ ಆರಾರು ತಿಂಗಳ ಸಶ್ರಮ ಶಿಕ್ಷೆ ವಿಧಿಸಲ್ಪಟ್ಟವರಲ್ಲಿ ಮೂರನೆಯವರ ಹೆಸರು ಶ್ರೀ. ಕೆ. ಕುಂಞಿಕಣ್ಣನ್ ಎಂದು. ಇವರೊಂದಿಗೆ ಸೆರೆಸಿಕ್ಕಿದ ಶ್ರೀ ಕೃಷ್ಣನ್ ಅವರನ್ನು ಬಿಡಲಾಗಿದೆ.

ಯುವಜನ ಸಂಘ

ಇದರ ತೃತೀಯ ವಾರ್ಷಿಕೋತ್ಸವವು ತಾ. ೨೨ರಂದು ಸಂಜೆ ಬಿ. ಇ. ಎಂ. ಸೆಕೆಂಡರಿ ಶಾಲೆಯ ಕಟ್ಟಡದಲ್ಲಿ ಕಾಸರಗೋಡು ಎಡಿಶನಲ್ ಡಿ. ಮುನ್ಸಿಫರಾದ ಶ್ರೀ. ಜೆ. ಎಂ. ಸಿಕೇರಾ ಇವರ ಅಧ್ಯಕ್ಷತೆಯಿಂದ ಜರಗಿತು. ಸಭಾ ಪ್ರಾರಂಭದಲ್ಲಿ ಪ್ರಾರ್ಥನೆಯಾದ ಬಳಿಕ ಸಂಘದ ಅಧ್ಯಕ್ಷರಾದ ಡಾ. ಪಿ. ಎಸ್. ಭಟ್ಟರು ಸ್ವಾಗತ ಹೇಳಿ ಅಧ್ಯಕ್ಷ ಚುನಾವಣೆಯಾದ ನಂತರ, ಅಧ್ಯಕ್ಷರ ಪ್ರಾರಂಭ ಭಾಷಣವಾಗಿ, ಕಾರ್ಯದರ್ಶಿ ಶ್ರೀ. ರಾ. ಕೃ. ಶೆಟ್ಟರು ಸಂಘದ ವರದಿವಾಚನ ಮಾಡಿದರು. ಸಂಘವು ಸಾಹಿತ್ಯ, ಅಕ್ಷರತಾಪ್ರಚಾರ, ವಾಚನಾಲಯ ಮೊದಲಾದ ಕಲಾಸಂಸ್ಕೃತಿ, ಸಾಮಾಜಿಕ ಕಾರ್ಯಗಳನ್ನು ಕೈಕೊಳ್ಳುತ್ತಿರುವುದು ಆ ವರದಿಯಿಂದ ತಿಳಿದು ಬಂತು. ಅನಂತರ ಶ್ರೀ. ಕೆ. ಕೆ. ರೈಗಳು ಕನ್ನಡದ ಇಂದಿನ ಕೆಲವು ಸಮಸ್ಯೆಗಳ ವಿಷಯವಾಗಿ ಮಾತನಾಡಿದರು. ಶ್ರೀ ಎಸ್. ಕೆ. ಭಟ್ಟರಿಂದ 'ಭಾರತ ವಾಚನವಾಯಿತು. ಶ್ರೀ. ಪಿ. ಕೆ. ನಾರಾಯಣರವರು ಆಧುನಿಕ ಕನ್ನಡ ಕವಿತೆಗಳ ಕುರಿತು ಭಾಷಣ ಮತ್ತು ವಾಚನ ಮಾಡಿದರು. ಅನಂತರ ಶ್ರೀ. ಜಿ. ಎನ್ ರೆಡ್ಡಿಯವರು ಕೆಲವು ಮಾತುಗಳನ್ನಾಡಿದರು. ಶ್ರೀ. ಬಿ. ಪೈಂದಪ್ಪ ರೈ ಮತ್ತು ಕೂಟದವರಿಂದ ಸಂಗೀತವೂ, ಜನಾಬ್, ಪಿ. ಅಬ್ದುಲ್ ಸಾಹೇಬರಿಂದ ಹಾಸ್ಯ ವಿಡಂಬನೆಗಳೂ ಆದ ಮೇಲೆ ಅಧ್ಯಕ್ಷರ ಭಾಷಣವಾಗಿ ಕಾರ್ಯದರ್ಶಿಗಳ ಕೃತಜ್ಞತಾರ್ಪಣೆಯೊಡನೆ ಉತ್ಸವವು ಕೊನೆಗೊಂಡಿತು.

ಪುತ್ತೂರು

ವರ್ಗ

ಪುತ್ತೂರಿನ ವೆಟರ್ನರಿ ಅಸಿಸ್ಟಂಟ್ ಸರ್ಜನ್ ಶ್ರೀ. ಬೀಕಲ ವೆಂಕಟ್ರಮಣ, ಜಿ. ಎಮ್. ವಿ. ಸಿ. ಇವರು ವೈನಾಡಿಗೂ, ಕಲ್ಲಿಕೋಟೆಯ ಶ್ರೀ ವಿ. ತಯ್ಯಲ್ಲಿ ಮೇನನ್, ಜಿ. ಎಮ್. ವಿ. ಸಿ. ಇವರು ಮಂಚೇರಿಯಿಂದ ಪುತ್ತೂರಿಗೂ ವರ್ಗ ಹೊಂದಿರುತ್ತಾರೆ. ಶ್ರೀ. ಮೆನನ್‌ರವರು ಪುತ್ತೂರಿಗೆ ಬಂದು ಚಾರ್ಜು ವಹಿಸಿಕೊಂಡಿರುವರು.

ಕೈದೂ, ವಿಚಾರಣೆ

ವಿಟ್ಲದ ಶ್ರೀ ಕೆ. ಆನಂದ ರೈ ಮತ್ತು ಶ್ರೀ ಪಿ. ಎಸ್. ಕೃಷ್ಣ ಭಟ್ಟ ಇವರನ್ನು ಕೈದು ಮಾಡಿ ಪುತ್ತೂರಿಗೆ ಕರತಂದಿದ್ದರು. ತಾ. ೧೬ರಲ್ಲಿ ಇವರ ವಿಚಾರಣೆಗೆ ವಾಯಿದೆ ಇಡಲ್ಪಟ್ಟಿತ್ತು.

ಕಾಸರಗೋಡಿನ ಸತ್ಯಾಗ್ರಹಿ ಶ್ರೀ ಎಮ್. ಕೆ. ರಾಘುನ್ ಇವರನ್ನು ಪುತ್ತೂರು I ಕ್ಲಾಸ್ ಮೆಜಿಸ್ಟ್ರೇಟರು ತಾ. ೧೧ರಂದು ವಿಚಾರಣೆ ನಡೆಸಿ ಒಂಭತ್ತು ತಿಂಗಳ ಸಜೆ ವಿಧಿಸಿದರು.

ಕಾಸರಗೋಡಿನ ಶ್ರೀ ಕೆ. ಕೃಷ್ಣ, ಕೆ ಕುಂಞಿಕಣ್ಣನ್ ಆರಬ್ಬ ಚರ್ವತ್ತೂರು ಇವರೆಲ್ಲರ ವಿಚಾರಣೆ ಪುತ್ತೂರಲ್ಲಿ ನಡೆದು, ಸಜೆ ವಿಧಿಸಲ್ಪಟ್ಟು, ಆಲಿಪುರಮ್ ಸೆಂಟ್ರಲ್ ಜೈಲಿಗೆ ಒಯ್ಯಿದರುವರು.

ಕಾರ್ಕಳ

ಕೈದು ಶಿಕ್ಷೆ

ಚಿಮಿಣಿ ಎಣ್ಣೆ ಮಾರಾಟ ಸಂಬಂಧವಾದ ಕಾನೂನು ಮುರಿದ ಬಗ್ಗೆ ಶ್ರೀ. ಕೆ. ನಾರ್‍ಣಾಯಣ ಭಟ್ಟರಿಗೆ ೩೦೦ ರೂ.ಗಳ ದಂಡನೆಯಾಗಿದೆ. ಶ್ರೀ. ಪುರುಷೋತ್ತಮ ಪ್ರಭುಗಳನ್ನು ಕೈದುಮಾಡಿದ್ದಾರೆ. ಸಾಮೂಹಿಕ ರಾಜಕೀಯ ಕಾರ್ಯಗಳಿಗೆ ಸಂಬಂಧಪಟ್ಟು ಶ್ರೀ. ಆರ್. ದೇವರಾಯ ಶೆಣೈಯವರನ್ನು ಪೋಲೀಸರು ತಾ. ೨೨ರಂದು ಕೈದುಮಾಡಿರುವರು.

(೭ನೇ ಪುಟಕ್ಕೆ ಮುಂದುವರಿದಿದೆ)



An R I N ship in north Atlantic waters

ಏನು? ಉತ್ತರಧ್ರುವದಲ್ಲಿ ಹಿಂದುಸ್ಥಾನದ ಸಂರಕ್ಷಣೆಯೆ?

ಹೌದು, ರಾಯಲ್ ಇಂಡಿಯನ್ ನೇವಿಯ ಯುದ್ಧನಾಕೆಗಳು ಕೆಲವು ಸಲ ನಮ್ಮ ದೇಶದಿಂದ ಇಷ್ಟು ದೂರದಲ್ಲಿ ಸಂಚರಿಸುತ್ತಿವೆ. ಆಧುನಿಕ ಯುದ್ಧತಂತ್ರದ ವ್ಯಾಪ್ತಿಯು ಇಷ್ಟು ವಿಶಾಲವಾಗಿದೆ. ಪ್ರತಿದಿನವೂ ಕಷ್ಟಗಳನ್ನೂ ಎದುರಿಸುತ್ತ ಈ ನಾಕೆಗಳು ನಮ್ಮ ಸಾರಿಗೆ ಹಡಗುಗಳನ್ನು ರಕ್ಷಿಸುತ್ತಿವೆ; ಮತ್ತು ಯುದ್ಧದ ಅತ್ಯಾವಶ್ಯಕ ಸಾಧನಗಳು ನಮಗೆ ಸುರಕ್ಷಿತವಾಗಿ ತಲುಪುವಂತೆ ಮಾಡುತ್ತವೆ. ಅವುಗಳ ತೊಂದರೆ ಹೆಚ್ಚಾಗದಂತೆ ನಾವು ನೋಡಬೇಡವೇ? ನಮ್ಮ ಮನೆಯ ಗೋಡೆಗಳಿಗೆ ಹಚ್ಚುವ ಬಣ್ಣಗಳು ನಮ್ಮ ಹಡಗು ಪಡೆಗೆ ಬೇಕಾಗಿರುತ್ತವೆಂದು ತಿಳಿದೂ ಅವನ್ನು ಕೊಳ್ಳುವುದೆಂದರೆ, ಆ ತೊಂದರೆ ಹೆಚ್ಚಿಸಿದಂತೆಯೆ! ಬಣ್ಣ, ಪೆಟ್ರೋಲು, ರಬ್ಬರು, ಉಕ್ಕು, ಹಗ್ಗ—ಇನ್ನೂ ನೂರಾರು ಸಾಮಾನುಗಳು ನಮ್ಮ ಸಂರಕ್ಷಣೆಗೆ ಅತ್ಯಾವಶ್ಯಕವಾಗಿ ಬೇಕಾಗಿವೆ. ಅದರಂತೆಯೆ ಅವುಗಳಿಗಾಗಿ ನಾವು ವೆಚ್ಚಮಾಡುವ ಹಣ. ನಾವು ಪ್ರತಿಯೊಂದು ಸಾಮಾನಿನ ಮೇಲೆ ಮಾಡುವ ವೆಚ್ಚವನ್ನು ಕಡಿಮೆಮಾಡಿ, ಜಯವು ಸಮೀಪಿಸುವಂತೆ ಮಾಡೋಣ;

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್

...ಇಲ್ಲವೆ ಡಿಫೆನ್ಸ್ ಲೋನ್ಸ್

ಸರ್ಟಿಫಿಕೇಟುಗಳು ನಿಮ್ಮ ಅಂಚೇ ಕಚೇರಿಯಲ್ಲಿ ಸಿಗುವವು ೧೦ ರೂ ಗೆ ಹತ್ತು ವರ್ಷಗಳಲ್ಲಿ ರೂ. ೧೫೦ ಲಾಭ ಬರುವುದು

ಇವುಗಳಕ್ಕಿರಚು ಮತ್ತೇನನ್ನೂ ಕೊಳ್ಳುವ ಮೊದಲು ಕೊಂಚ ಯೋಚಿಸಿರಿ.

CPU 25 Kn

ಸಿನೆಮಾ ಸುದ್ದಿ

ಕಳೆದ ಸಲ, ವಿಜಯ ಫಿಲ್ಮ್ ಕಂಪೆನಿಯೆಂಬ ಹೆಸರಿನ ಸಂಸ್ಥೆ ಸ್ಥಾಪಿತವಾಗಿ 'ರಾಧಾರಮಣ' ಎಂಬ ಕನ್ನಡ ಚಿತ್ರ ತಯ್ಯಾರಿಸುವ ಸುದ್ದಿ ನಾವು ತಿಳಿಸಿದ್ದೆವು. ಇದೊಂದು ಪೌರಾಣಿಕ ಚಿತ್ರವೆಂದೂ ಎಂ. ವಿ. ರಾಜಮ್ಮ ಮತ್ತು ಬಿ. ಆರ್. ಪಂತುಲು ಇದರಲ್ಲಿ ನಾಯಿಕಾ ನಾಯಕರಾಗಿರುವರೆಂದೂ ಪಟ್ಟು ಅಯ್ಯಂಗಿ ಸುಬ್ರಹ್ಮಣ್ಯಂ ಸಹಾಯಕ ನಿರ್ದೇಶಕರಾಗಿರುವರೆಂದೂ, ಎಸ್. ಆರ್. ಕುಲಕರ್ಣಿ ಇದರ ಕಥಾ ಲೇಖಕರೆಂದೂ ಈಗ ತಿಳಿದಿದೆ. ಕಳೆದ ವಿಜಯ ದಶಮಿ ದಿವಸ ಈ ಚಿತ್ರ ತಯಾರಿಯ ಪ್ರಾರಂಭ ಕಾರ್ಯ ನ್ಯೂ ಟೋನ್ ಸ್ಟುಡಿಯೋದಲ್ಲಿ ಜರಗಿತು.

* * *

ಮೈಸೂರಿನ ಕೆಲವು ಮಂದಿ ಕಲಾವಂತರು ಹಲವು ಕನ್ನಡ ಚಿತ್ರಗಳನ್ನು ತಯಾರಿಸುವ ಕಾರ್ಯಕ್ರಮ ಕೈಕೊಂಡಿದ್ದು ಈಗಾಗಲೇ 'ಸೌಭಾಗ್ಯ' ಎಂಬ ಸಾಮಾಜಿಕ ಚಿತ್ರವನ್ನು ತಯಾರಿಸುವ ಕೆಲಸ ತೊಡಗಿದ್ದಾರೆಂದೂ, ಕನ್ನಡ ಪ್ರಖ್ಯಾತ ಸಾಹಿತಿಗಳಿಂದ ಈ ಕಥೆ ಬರೆಯಲ್ಪಟ್ಟಿದೆಯೆಂದೂ ಸುದ್ದಿ.

* * *

ಕನ್ನಡ ಸಿನೆಮಾ ಕಾರ್ಯದಲ್ಲಿ ಪ್ರಸಿದ್ಧರಾದ ಶ್ರೀ ಗುಬ್ಬಿ ವೀರಣ್ಣನವರು 'ಜೀವನ ನಾಟಕ' ಮುಗಿದ ಕೂಡಲೇ 'ಹೇಮರಡ್ಡಿ ಮಲ್ಲಮ್ಮ' ಎಂಬ ಕನ್ನಡ ಐತಿಹಾಸಿಕ ಸಿನೆಮಾ ತಯಾರಿಸುವ ಕಾರ್ಯ ಕೈಕೊಂಡಿರುವರೆಂದೂ, ಶ್ರೀ ಪುಟ್ಟಸ್ವಾಮಯ್ಯನವರು ಇದರ ಕಥಾಲೇಖಕರಾಗಿರುವರೆಂದೂ, ಜಯಮ್ಮ ಮತ್ತು ವೀರಣ್ಣನವರು ನಾಯಿಕಾ ನಾಯಕ ಪಾತ್ರ ವಹಿಸುವರೆಂದೂ ವದಂತಿ.

* * *

ಕನ್ನಡ 'ಭಕ್ತ ಪ್ರಹ್ಲಾದ'ವನ್ನು ತಯಾರಿಸಿದ ಮದ್ರಾಸಿನ ಕಲೈವಾಣಿ ಚಿತ್ರ ಸಂಸ್ಥೆಯವರು 'ಭಕ್ತ ಕುಚೇಲ' ಎಂಬ ಕನ್ನಡ ಪೌರಾಣಿಕ ಚಿತ್ರ ತಯಾರಿಸುವುದರಲ್ಲಿದ್ದಾರೆ. ಶ್ರೀ ಬೆಳ್ಳಾವೆ ನರಹರಿ ಶಾಸ್ತ್ರಿಗಳಿಗೂ ಇದರಲ್ಲಿ ಪಾತ್ರವಿರುವುದೆಂದು ತಿಳಿಯುತ್ತದೆ.

* * *

ಟಿ. ಎಸ್. ಮೋಟರ್ ಸರ್ವಿಸಿನ ಮಾಲಕರು ಒಂದು ಚಲಚ್ಚಿತ್ರ ಕಂಪನಿ ಸ್ಥಾಪಿಸಿದ್ದು 'ಪಿಡ್ಲರ್' ಎಂಬ ಕನ್ನಡ ಸಾಮಾಜಿಕ ಚಿತ್ರವನ್ನು ತಯಾರಿಸುವರಂತೆ. ಪ್ರಖ್ಯಾತ ಪಿಡ್ಲರ್ ಶ್ರೀ ಚೌಡಯ್ಯನವರು ಈ ಚಿತ್ರದಲ್ಲಿ ಪಾತ್ರವಹಿಸುವರೆಂದೂ ತಿಳಿಯುತ್ತದೆ.

* * *

೩೪ನೇ ದನಗಳ ಪ್ರದರ್ಶನ

ಹಾಸನ ಟವನ್ ಮುನ್ಸಿಪಾಲಿಟಿ ಪ್ರಸಿದ್ಧ ಪತ್ರಿಕೆ

ಇದೇ ಟವನಿನಲ್ಲಿ ತಾ. ೨೫-೧೨-೧೯೪೨ರ ಲಾಗಾಯ್ತು ೬-೧-೪೩ರ ತನಕ ದನಗಳ ಜಾತ್ರೆಯನ್ನು ಮಾಮೂಲು ನಡೆಯುತ್ತಿದ್ದ ಪ್ರದರ್ಶನಾಲಯ ಅಂದರೆ ಜೈಲುಖಾನೆ ಅಕ್ಕಪಕ್ಕ, ಮುನಿಸಿಪಲ್ ಜಾಗಗಳು ಮತ್ತು ಸಂತೆ ಮಾಳದ ಜಾಗಗಳಲ್ಲಿ ನಡೆಸಲು ಏರ್ಪಾಡು ಇಟ್ಟಿದೆ. - ಸದರಿ ಪ್ರದರ್ಶನವು ನಮ್ಮ ಸಂಸ್ಥಾನದಲ್ಲಿ ಎಲ್ಲಾ ಪ್ರದರ್ಶನಗಳಿಗಿಂತ ಮಿಗಿಲಾಗಿ ನಡೆಯುತ್ತದೆ. ಸದರಿ ಪ್ರದರ್ಶನಕ್ಕೆ ೩೦ ಸಾವಿರ ದನಗಳಿಗೆ ಮೀರಿ ಬಂದು ಭಾರಿ ವ್ಯಾಪಾರ ನಡೆಯುತ್ತದೆ. ಮತ್ತು ಹೊರ ಪ್ರಾಂತ್ಯಗಳಿಂದಲೂ ಬಹು ಜನರು ವ್ಯಾಪಾರಕ್ಕಾಗಿ ಬರುತ್ತಾರೆ. ದನಗಳಿಗೆ ಬೇಕಾಗುವ ಹುಲ್ಲು ನೀರು ಮತ್ತು ಸ್ಥಳ ವಸತಿಯೂ ತುಂಬಾ ಅನುಕೂಲವಾಗಿರುತ್ತದೆ.

ಉತ್ತಮ ರಾಸುಗಳಿಗೆ ಬಹುಮಾನ ಕೊಡಲ್ಪಡುತ್ತದೆ.

ಅಂಗಡಿಗಳಿಗೂ, ಹೋಟೇಲುಗಳಿಗೂ ಮತ್ತು ಇತರ ವಿಧವಾದ ಆಟ ಪಾಟಗಳಿಗೂ ಸ್ಥಳ ಅನುಕೂಲವಾಗಿ ವಿಂಗಡಿಸಿರುತ್ತದೆ.

ಜಾನುವಾರುಗಳ ಚಿಕಿತ್ಸೆಗೆ ಅನುಕೂಲವಾಗಿ ಪಶು ವೈದ್ಯಶಾಲೆಯೂ ಸಹಾ ಇರುತ್ತದೆ.

ತಾರೀಕು 5-11-42 } (ಸಹಿ) ವಿ. ಎಸ್. ಮಲ್ಲಪ್ಪ
ಪ್ರಸಿಡೆಂಟ್,
ಹಾಸನ ಟೌನ್ ಮುನ್ಸಿಪಾಲಿಟಿ.



ಪುಂಡರಿಂದ ನಮಗೇ ಬೇಡ!

ಆಸ್ತಿ ಕೆಡಿಸುವುದು, ಜನರನ್ನು ಸುಲಿಯುವುದು-ಇವು ಪುಂಡರಾಜ್ಯದ ಮುಖ್ಯ ಲಕ್ಷಣಗಳಾಗಿವೆ. ವಿಚಾರಶೀಲ ದೇಶಾಭಿಮಾನಿಗಳು ಇದನ್ನು ಖಂಡಿಸದಿರಲಾರರು. ಪುಂಡಾಟಿಕೆಯಿಂದ ಸ್ವರಾಜ್ಯಪ್ರಾಪ್ತಿಯು ಇನ್ನಿಷ್ಟು ದೂರವಾಗುವುದು



ರಸ್ತೆಗಳು ಕೆಟ್ಟವು ! ಸುಂಕ-ಸೇತುವೆಗಳು ನಾಶಪಟ್ಟವು !

ಈ ಕೃತಿಗಳಿಂದ, ಹೊರಗಿನ ಜಗತ್ತಿನೊಡನೆ ಹಳ್ಳಿಗಳ ಮತ್ತು ಚಿಕ್ಕ ಪಟ್ಟಣಗಳ ಸಂಬಂಧ ತಪ್ಪುವುದು. ಹೊರಗಿನಿಂದ ಮಾಲು ಬರದಂತಾಗುವುದು. ಕುಯ್ದ ಪಯರು ಪೇಟೆ ಕಾಣದೆ, ಇದ್ದಲ್ಲಿಯೆ ಕೊಳೆಯುವುದು ಸಾವುಕಾರನಿಗೆ ಕಂತು ಕೊಡಬೇಕೆಂದರೂ ಕೈಯಲ್ಲಿ ಕಾಸಿಲ್ಲ!

ಒಂದು ಪ್ರದೇಶದಲ್ಲಿ ಪುಂಡರದೇ ಮೇಲ್ಗೈ ಇದೆಯೆಂದು ತಿಳಿಯುವಾಗ ಅಲ್ಲಿ ನಿಮ್ಮ ಆಪ್ತೇಷ್ಟರು ಇರುತ್ತಿದ್ದರೆ, ಅವರ ತಾಪತ್ರಯಗಳನ್ನು ನೀವು ಸುಲಭವಾಗಿ ಊಹಿಸಬಹುದು!

ಬೀಜದಕಾಳಿನ ಉಗ್ರಾಣಗಳಿಗೆ, ಅಂಚೆಯ ಹಾಗೂ ಸರ್ಕಾರಿ ಕಚೇರಿಗಳಿಗೆ ಬೆಂಕಿ !

ಬಿತ್ತಿದರೆ ಬೆಳೆಬಂದೀತು! ಬೀಜದಕಾಳಿಗೆ ಬೆಂಕಿಯಿಟ್ಟರೆ, ಮುಂದೇನುಗತಿ? ಅಂಚೆಯ ಹಾಗೂ ಸರ್ಕಾರಿ ಕಚೇರಿಗಳನ್ನು ಸುಡುವುದರಿಂದ, ಬಡಜನರಿಗೇ ಹೆಚ್ಚು ಹಾನಿಯಾಗುವುದು; ದಫ್ತರುಗಳನ್ನು ಮತ್ತು ಕಾಗದ ಪತ್ರಗಳನ್ನು ನಾಶಗೊಳಿಸುವುದರಿಂದ ಪೋಸ್ಟಿನಲ್ಲಿಟ್ಟ ಹಣ, ಪಿಂಚಣಿಯ ಹಣ, ಭೂಮಿಯ ಸೊತ್ತಿನ ದಾಖಲೆಗಳು-ಇವೆಲ್ಲಾ ಹಾಳಾಗಿಹೋಗುವವು ಸರ್ಕಾರಕ್ಕಾಗುವ ತೊಂದರೆ ಅತ್ಯಲ್ಪ.

ನಾವೆಲ್ಲರೂ ಮನಸ್ಸುಮಾಡಿ ಕೂಡಿಕೊಂಡು ನಡೆದೆವಾದರೆ, ಈ ಪುಂಡರ ಪಿಡುಗನ್ನು ಅಡಗಿಸಬಲ್ಲೆವು. ಬರಿ ಸರ್ಕಾರಿ ಅಧಿಕಾರಿಗಳಿಂದ ಈ ಕೆಲಸವಾಗದು. ನಾವು ಮುಂದೆ ಬಂದರೆ ಇದು ಬಲುಬೇಗ ಆಗುವುದು.

ಸ್ಥಾನಿಕ ಸಂಸ್ಥೆಗಳನ್ನು ಏರ್ಪಡಿಸಿರಿ! ಸ್ವಯಂಸೇವಕ ದಳಗಳನ್ನು ಸಜ್ಜುಗೊಳಿಸಿರಿ.

ಪುಂಡರನ್ನು ಪ್ರತಿಭಟಿಸಿರಿ!

CPU.56.Kn

ಕನ್ನಡ 'ವಸಂತಸೇನಾ' ಸಿನೆಮಾ ಖ್ಯಾತಿಯ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯವರು ಪ್ರಗತಿ ಪಿಕ್ಚರ್ಸ್‌ನವರೊಂದಿಗೆ 'ಸತ್ಯ ಶೋಧನ' ಅಥವಾ 'ಹರಿಶ್ಚಂದ್ರ' ಎಂಬ ಪೌರಾಣಿಕ ಚಿತ್ರ ತಯಾರಿಸುವರು. ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಸಂಗೀತ ವಿದ್ವಾನ್ ರಾಜಯ್ಯಂಗಾರ್, ಕಮಲಾಬಾಯಿ, ಲಕ್ಷ್ಮೀಬಾಯಿ ಮೊದಲಾದವರು ಇದರಲ್ಲಿ ನಟನಟಿಯರು.

* * *

ಬೆಂಗಳೂರಿನ ಬಾಲಾಜಿ ಫಿಲ್ಮ್ಸ್‌ನ ಶ್ರೀ ಕೆ. ವಿ. ಆಚಾರ್ಯರು ಪೂನೆಯಲ್ಲಿ ಭಾಳಾಜಿ ಪೆಂಡಾರ್ಕರರೊಡನೆ ಒಂದು ಕನ್ನಡ ಚಿತ್ರ ತಯಾರಿಸುತ್ತಿದ್ದಾರೆಂದು ಸುದ್ದಿ.

ಅಂತೂ ಯುದ್ಧ ಜೋರಾದಂತೆ ಕನ್ನಡ ಸಿನೆಮಗಳೂ ಜೋರಾಗುತ್ತವೆ!

ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯಕಲಾಪಗಳು

ಜಿಲ್ಲಾ ಹರಿಜನ ಸೇವಕ ಸಂಘದ ಕಳೆದ ವರ್ಷದ ಕಾರ್ಯಕಲಾಪಗಳು ಹೀಗಿವೆ.

ಉಡುಪಿ, ಕಾರ್ಕಳ, ಪುತ್ತೂರು ಮತ್ತು ಕುಂದಾಪುರಗಳಲ್ಲಿ ಹರಿಜನ ವಿದ್ಯಾರ್ಥಿ ಭವನಗಳು ನಡೆಸಲ್ಪಟ್ಟವು. ಕೊನೆಯವೆರಡನ್ನು ಕಳೆದ ವರ್ಷ ನಿರ್ಮಿಸಿದ್ದುದು. ಕಾರ್ಕಳದಲ್ಲಿ ಶಬರಿ ಆಶ್ರಮವೆಂಬ ಇನ್ನೊಂದು ವಸತಿಯೂ ಇದೆ. ಕಾಸರಗೋಡಿಗೆ ಸಮೀಪದ ಶೀತಂಗೋಳಿಯಲ್ಲಿ ಹರಿಜನ ವಸತಿಯೊಂದನ್ನು ತೆರೆಯಲು ಯತ್ನ ನಡೆದಿದೆ.

ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಕೊಡಲು ಒಟ್ಟು ವೆಚ್ಚವಾದುದು ರೂ. ೧೨೦೦. ೩ ಬೋ. ಇದರಲ್ಲಿ ರೂ. ೮೦೦ನ್ನೂ ಮಂಗಳೂರು ನಗರಸಭೆಯು-ರೂ. ೨೫೦ನ್ನೂ ಸಹಾಯಧನವಾಗಿ ಕೊಟ್ಟಿವೆ. ಉಡುಪಿ ವಿದ್ಯಾರ್ಥಿ ಭವನಕ್ಕೆ ಸರಕಾರದಿಂದ ರೂ. ೪೦೦ರ ಸಹಾಯ ಲಭಿಸಿದೆ.

ಇಷ್ಟಲ್ಲದೆ ಹರಿಜನ ವಿದ್ಯಾರ್ಥಿಗಳಿಗೆ ಶಾಲಾ ಫೀಸು, ಪುಸ್ತಕ ಮತ್ತು ಬಟ್ಟೆ ಬರೆಗಳನ್ನು ಸಂಘವು ತೆರುತ್ತ ಬಂದಿದೆ. ಈ ತನಕ ದ್ರವ್ಯ ಸಹಾಯವಿತ್ತು ಸಂಘದ ಸೇವೆಯಲ್ಲಿ ನೆರವಾದವರಿಗೆ ಸಂಘವು ಕೃತಜ್ಞತೆಯನ್ನು ಸಲ್ಲಿಸುತ್ತದಲ್ಲದೆ ಮುಂದಕ್ಕೂ ಉದಾರಿಗಳು ಧನ ಸಹಾಯವಿತ್ತು ಸಂಘಕ್ಕೆ ಬೆಂಬಲವಾಗಿರಬೇಕೆಂದು ಅದು ವಿನಂತಿ ಮಾಡುತ್ತದೆ.

ಫರಂಗಿ ಪೇಟೆ

ಅನ್ನದಾನ. ದಿ। ಪಂ. ತಾರಾನಾಥರ ೧೧ನೆಯ ದಿನ ಅವರ ಶಿಷ್ಯರಾದ ಮೌ. ಡಾ। ಎಫ್. ಎಚ್. ಒಡೆಯರ್ ಅವರು ಬಡಬಗ್ಗರಿಗೆ ಗಂಜಿ ಹಾಕಿಸಿದರು.

(೫ನೇ ಪುಟದಿಂದ)

ಹಿಂದೀ ಪ್ರಚಾರ

ಕಾರ್ಕಳ ತಾಲೂಕ ರಾಷ್ಟ್ರಭಾಷಾ ಪ್ರಚಾರ ಸಂಘದ ನೆಲೆಯಲ್ಲಿ ದಾನಸಾಲೆಯಲ್ಲಿ ಹೊಸ ಹಿಂದೀ ತರಗತಿಗಳು ತೆರೆಯಲ್ಪಟ್ಟಿರುವವು

ಸಭೆ ಸಮಾಚಾರಗಳು

ಉಪಾಧ್ಯಾಯರ ಕೇಂದ್ರ ಸಭೆಯು ಶ್ರೀ. ಯು. ಕೃಷ್ಣರಾವ್ ಮತ್ತು ಉಪಾಧ್ಯಾಯಿನಿಯರ ಸಭೆಯು ಶ್ರೀಮತಿ ಜಲಜಾ ಬಾಯಿಯವರ ಅಧ್ಯಕ್ಷತೆಯಲ್ಲಿ ಕೂಡಿತು

ದಂಡನೆ ಭರ್ತಿ ಬಗ್ಗೆ ಮನೆ ಝಡತಿ

ತುರಂಗವಾಸದಲ್ಲಿರುವ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣನಾಯ್ಕರ ಮೇಲೆ ಹೊರಿಸಲಾಗಿದ್ದ ಮುನ್ನೂರು ರುಪಾಯಿಗಳ ದಂಡನೆ ಭರ್ತಿ ಬಗ್ಗೆ ಪೋಲೀಸರು ತಾ. ೧೪ರಲ್ಲಿ ಕಟಪಾಡಿಯ ಅವರ ಮನೆ ಝಡತಿ ಮಾಡಿ ಭಾವಚಿತ್ರಗಳು, ಹಾಸಿಗೆ ಮೊದಲಾದುವನ್ನು ತಂದರೆಂಗಿ ತಿಳಿದು ಬರುತ್ತದೆ.

ವಿದಾಯು

ನೇಶನಲ್ ವಾರ್ ಫ್ರಂಟಿನ ಜಿಲ್ಲಾ ಪ್ರಚಾರಾಧಿಕಾರಿಗಳಾಗಿ ನೇಮಿಸಲ್ಪಟ್ಟಿರುವ ಜನಾಬ್ ಎಚ್. ಎಸ್ ಹುಸ್ಸೇನ ಸಾಹೇಬ್ ಎಂ ಎಲ್. ಎ. ಇವರಿಗೆ ಅವರ ಕೆಲವು ಜನ ಮಿತ್ರರು ಕೂಡಿ ಟೀಪಾರ್ಟಿಗಳೊಂದಿಗೆ ವಿದಾಯುವನ್ನಿತ್ತರು

ಮಂಗಳೂರು ಕಸಬಾ ಬಜಾರ್ ಪಂಚಾಯತ ಕೋರ್ಟು ಚುನಾವಣೆ

ಈ ಚುನಾವಣೆಗೆ ನಿಂತ ನಾಲ್ವರ ಪೈಕಿ ಶ್ರೀ ಯುಸ್ ಕೇಶವ ನಾಯ್ಕರೂ ಜನಾಬ್ ದಲಾಲ್ ಅಹಮ್ಮದ್‌ರವರೂ ಕ್ರಮವಾಗಿ ೧೦೯ ಮತ್ತು ೧೦೮ ಮತಗಳನ್ನು ಪಡೆದು ಜಯಶೀಲರಾದರು.

ಕೆನರಾ ಹೈಸ್ಕೂಲ್ ಸ್ಥಾಪಕರ ದಿನಾಚರಣೆ

ಕಳೆದ ತಾ. ೧೯-೧೧-೪೨ರ ಬೆಳಗ್ಗೆ ಗಂಟೆ ೮-೧೫ಕ್ಕೆ ಧ್ವಜಾರೋಹಣವು ನಡೆದು ಶಾಲಾ ಬಾಲಿಕೆಯರಿಂದ ಪ್ರಾರ್ಥನೆಯಾಗಿ ಬಿ. ವೈಕುಂಠ ಬಾಳಿಗರು ಅಗ್ರಾಸನ ವಹಿಸಿ, ದಿವಂಗತ ಶ್ರೀ. ಅಮ್ಮೆಂಬಳ ಸುಬ್ರಾಯ ಪೈಗಳ ಗುಣಕಥನ, ಭಾಷಣ ಮಾಡಿ, ಅವರ ಪ್ರತಿಮೆಗೆ ಶಾಲೆಗೆ ಸಂಬಂಧಿಸಿದ ಸಂಘ, ಮತ್ತು ಅವರು ಸ್ಥಾಪಿಸಿದ ಇನ್ನಿತರ ಸಂಘಗಳ ಪರವಾಗಿ ಪುಷ್ಪಮಾಲಿಕೆಗಳನ್ನು ಅರ್ಪಿಸಿ ಮಂಗಳ ಪ್ರಾರ್ಥನೆಯೊಡನೆ ಸಭೆಯು ಕೊನೆಗೊಂಡಿತು.

ಉಡುಪಿ

ಮದ್ರಾಸ್ ಕ್ಷೇತ್ರದ ಸಿವಿಲ್ ಲಿಯನ್‌ಸ್ ಹಾಗೂ ಮಿಲಿಟರಿ ವೆಲ್‌ಫೇರ್ ಆಫೀಸರೂ ಆದ ಮಿ. ಇ. ಓಶಿಯನ್ ಎಡಮ್ಸ್, ಮೇಜರ್ ಅವರು ಇದೇ ತಾ. ೧೪ನೇ ಪೂರ್ವಾಹ್ನ ಹತ್ತುವರೆ ತಾಸಿಗೆ ಉಡುಪಿಗೆ ಚಿತ್ತೈಸಿದರು.

ಸಾದರ ಸ್ವೀಕಾರ

ವಿಕಸಿತಕುಸುಮಗಳು (ಕತೆಗಳ ಸಂಗ್ರಹ) ಪ್ರಕಾಶಕರು ಪ್ರಕಾಶ ಎಸೋಸಿಯೇಶನ್, ಮಂಗಳೂರು, ಬೆಲೆ ೬ ಅಣೆ

ಸಂರಕ್ಷಣೆಯೋ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ, ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD 1906

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕಕೊಳ್ಳಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ಲನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5. 28 ರಾತ್ಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL

The Bank of Mangalore Limited

ESTD: 1931

HEAD OFFICE Mangalore. ***BRANCHES*** Moodabidri & Padubidr

ANNOUNCEMENT

On and from 1st October 1942, deposits will be accepted at the following revised rates:

FIXED:
From 6 to 11 months 2½%. From 12 to 23 months 3½%.
24 months or over 4%
Current: ½% from July to December.
1% from January to June.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿಕ್ಕ ಕುಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಯಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾಪಕರಾಗಿಯೂ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಲ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಬಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ-ನಂಜನಗೂಡು, ಬ್ರಾಂಚ್-ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 4—12—1942 [ಸಂಚಿಕೆ 48]

ಪ್ರಾಂತಿಕ ಆಡಳಿತವು ಕೇವಲ ಅಪಹಾಸ್ಯವಾಗಿದೆ!

ಮಿಡ್ನಾಪುರದ ಅನಾಹುತಗಳು!

ಬಂಗಾಳ ಗವರ್ನರರಿಗೆ ಡಾ| ಮುಖರ್ಜಿಯರ ಪತ್ರ

ಬಂಗಾಳ ಮಂತ್ರಿಮಂಡಳದ ಅರ್ಥ ಸಚಿವರಾದ ಡಾ| ಶ್ಯಾಮಪ್ರಸಾದ ಮುಖರ್ಜಿಯವರು ತನ್ನ ಅಧಿಕಾರಕ್ಕೆ ರಾಜಿನಾಮೆಯಿತ್ತ ವಿಷಯ ನಾವು ಕಳೆದ ಸಲ ಪ್ರಕಟಿಸಿದ್ದೇವೆ. ಅವರು ರಾಜಿನಾಮೆಯಿತ್ತ ಕಾರಣವನ್ನು ವಿವರಿಸಿ ಬಂಗಾಳ ಗವರ್ನರರಿಗೆ ಒಂದು ದೀರ್ಘ ಪತ್ರ ಬರೆದಿದ್ದಾರೆ. ಅದರಲ್ಲಿ ಬ್ರಿಟಿಷ್ ಸರಕಾರ ಹಾಗೂ ಭಾರತ ಸರಕಾರವು ಭಾರತದಲ್ಲಿ ದಬ್ಬಾಳಿಕೆ ನಡೆಸುವ ವಿಷಯ - ಹಾಗೂ ಬಂಗಾಳದ ಗವರ್ನರರು ಮಂತ್ರಿಗಳ ಆಲೋಚನೆ ಕೇಳದೆ ತನ್ನಗಿಷ್ಟ ಬಂದಂತೆ ನಡೆಯುವ ಪ್ರವೃತ್ತಿಯನ್ನು ಖಂಡಿಸುತ್ತಾ, ಮಿಡ್ನಾಪುರದಲ್ಲಿ ರಾಜಕೀಯ ಅಶಾಂತತೆಯನ್ನಡಗಿಸಲು ಅಧಿಕಾರೀ ವರ್ಗವು ನಡೆಸಿದ ಅಮಾನುಷ ಅನಾಚಾರಗಳ ಕುರಿತು ಮತ್ತು ಅಲ್ಲಿ ಬಿರುಗಾಳಿಯ ಪ್ರಳಯವುಂಟಾದ ಮೇಲೆಯೂ ಅಧಿಕಾರಿಗಳು ಸಾರ್ವಜನಿಕರಿಗೆ ಹೋಗಿ ಕೆಲಸಮಾಡಲು ಸಹಾಯ ಸಹಕಾರವೀಯದಿರುವ ವಿಷಯವೂ ತನ್ನ ತೀರಾ ಅತೃಪ್ತಿ ಪ್ರಕಟಿಸಿದ್ದಾರೆ. ಅವರ ಸುದೀರ್ಘ ಪತ್ರದ ಸಾರಾಂಶವಿಲ್ಲಿ ಕೊಡಲಾಗಿದೆ.

ಪ್ರಾಂತಿಕ ಆಡಳಿತ-ಅಪಹಾಸ್ಯ!

"ನನ್ನ ರಾಜಿನಾಮೆಗೆ ಎರಡು ಕಾರಣಗಳಿವೆ. ದೇಶದ ರಾಜಕೀಯ ಪರಿಸ್ಥಿತಿ ವಿಷಯ ಬ್ರಿಟಿಷ್ ಸರಕಾರ ಹಾಗೂ ಭಾರತ ಸರ್ಕಾರವು ತಳೆದ ಧೋರಣವು ನನಗೆ ಸರಿತೋರಲಿಲ್ಲ. ಆದರೆ ಈ ಧೋರಣೆಯ ವಿಷಯದಲ್ಲಿ ಪ್ರಾಂತದ ಗವರ್ನರರಾದ ನಿಮಗೇನೂ ಅಧಿಕಾರವಿಲ್ಲವೆಂದು ನನಗೆ ಗೊತ್ತು. ಎರಡನೆಯ ಕಾರಣವು ನಿಮ್ಮನ್ನೇ ಹೊಂದಿಕೊಂಡಿದೆ. ಮಂತ್ರಿಮಂಡಳದ ಕಾರ್ಯಕಲಾಪಗಳಲ್ಲಿ ಅನಾವಶ್ಯಕ ಕೈಹಾಕಿ ನೀವು ಪ್ರಾಂತಿಕ ರಾಜ್ಯಭರಣವನ್ನು ಉಪಹಾಸ್ಯ ಮಾಡಿದ್ದೀರಿ. ಬಂಗಾಳ ಪ್ರಾಂತ, ಆಗ್ನೇಯ ಸಮರ ರಂಗವಾಗಿರುವುದರಿಂದ ಇಲ್ಲಿನ ಜನರ ವಿಶ್ವಾಸ ಸಹಕಾರಗಳನ್ನು ಸಂಪಾದಿಸಿಕೊಂಡು ದೇಶ ಸಂರಕ್ಷಣೆಯನ್ನು ಯಶಸ್ವಿಯಾಗಿ ಸಾಗಿಸುವ ಸರಳ ಮಾರ್ಗ ನೀವು ಅನುಸರಿಸಬೇಕಿತ್ತು. ಆದರೆ ನೀವು ಹಾಗೆ ಮಾಡದೆ ಮಂತ್ರಿಗಳನ್ನೇ ತಿರಸ್ಕರಿಸಿದಿರಿ. ಕಾಂಗ್ರೆಸ್ ಚಟುವಟಿಕೆಗಳ ವಿರುದ್ಧ ಭಾರತ ಸರಕಾರದ ಧೋರಣವು ನಿಮಗೆ ತಿಳಿದ ಮೇಲೆ ನೀವು ಭಾರತ ಸರಕಾರದಿಂದ ಬಂದ ಪತ್ರವನ್ನು ಮುಖ್ಯ ಮಂತ್ರಿಗಳಿಗೆ ತೋರಿಸಿದಾಗ, ಅವರು ಇಂಥಾ ವಿಷಯಗಳನ್ನು ಮಂತ್ರಿ ಮಂಡಳದವರೊಡನೆ ಚರ್ಚಿಸಿ ನಿರ್ಧರಿಸಬೇಕೆಂದರು. ಈಗ ನೀವು ಮುಖ್ಯ ಮಂತ್ರಿಗಳ ಸೂಚನೆಯನ್ನು ತಿರಸ್ಕರಿಸಿ ಬೇರೆ ಮಂತ್ರಿಗಳಿಗೆ ಈ ವಿಷಯ ತಿಳಿಸಕೂಡದೆಂದಿರಿ. ಕೆಲವು ಸರಕಾರೀ ಅಧಿಕಾರಿಗಳು ಆ ಪತ್ರವನ್ನೋದಿ ಅದರಲ್ಲಿರುವ ವಿಚಾರವನ್ನು ಜಾರಿಗೆ ತರುವ ಯೋಚನೆಯನ್ನೂ ಮಾಡಿದರು. ಅಗಸ್ಟ್ ೯ರಂದು ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ ನಂತರ ಮಂತ್ರಿಮಂಡಳದ ಸಭೆ ಕರೆದು ಸರಕಾರದ ಧೋರಣವನ್ನು ಸ್ವೀಕರಿಸಬೇಕು, ಇಲ್ಲವೇ ರಾಜಿನಾಮೆ ಕೊಡಬೇಕೆಂದೂ ನನ್ನೊಡನೆ ಹೇಳಿದಿರಿ. ಆಗಲೇ ನಾನು ಪ್ರಾಂತಿಕ ರಾಜ್ಯಭರಣವು ಕೇವಲ ಅಪಹಾಸ್ಯವೆಂದು ಹೇಳಿದೆನು. ಇಡೀ ಮಂತ್ರಿಮಂಡಳದ ಮೇಲೆ ಹೊಣೆ ಹೇರಿ ನಿಮಗೆ ಅವರ ಬೆಂಬಲ ದೊರಕಿಸುವ ಯತ್ನ ಮಾಡಿದಿರಿ. ಆದರೆ ಅವರನ್ನು ನೀವು ನಂಬಲಿಲ್ಲ. ಆಗ ನಾನು ಭಾರತ ಸರಕಾರದ ಧೋರಣವನ್ನು ಬಲವಾಗಿ ಟೀಕಿಸಿದೆನು. ಭಾರತದ ಬಿಕ್ಕಟ್ಟನ್ನು ಶಾಂತರೀತಿಯಿಂದ ಬಿಡಿಸಬೇಕಲ್ಲದೆ ದಬ್ಬಾಳಿಕೆಯಿಂದ ಅಡಗಿಸುವುದು ಸರಿಯಲ್ಲವೆಂದು ನನ್ನ ಮತವಿದೆ.

ಸ್ವಾತಂತ್ರ್ಯಕೊಡುವ ಮನಸ್ಸಿಲ್ಲ

"ವೈಸರಾಯರಿಗೆ ಪತ್ರ ಬರೆಯದೆ ನಾನು ಆಗಲೇ ರಾಜಿನಾಮೆ ಕೊಡಲಿಲ್ಲ. ವೈಸರಾಯರಿಂದ ನನಗೆ ಬಂದ ಉತ್ತರ ಪ್ರಕಾರ ಸರಕಾರಕ್ಕೆ ಸಂಧಾನ ಮಾಡುವ ಇಷ್ಟವಿಲ್ಲವೆಂದು ತಿಳಿಯಿತು. ಈ ಸಂದರ್ಭದಲ್ಲಿ ನಾನು ಸುಮ್ಮಗಿರದೆ ಸಂಧಾನಪ್ರಯತ್ನವನ್ನೂ ಮಾಡಿದೆನು. ಸಾರ್ವಜನಿಕಾಭಿಪ್ರಾಯ ನನ್ನ ಸಂಧಾನಕ್ಕೆ ಅನುಕೂಲವಿತ್ತು. ಕಾಂಗ್ರೆಸನ್ನು ಬಿಟ್ಟು ಮಿಕ್ಕೆಲ್ಲಾ ರಾಜಕೀಯ ಪಕ್ಷಗಳ ಅಭಿಪ್ರಾಯ ನಾನು ತಿಳಕೊಂಡಿದ್ದೆನು. ಆದರೆ ಮಹಾತ್ಮಾಜಿಯವರ ಸಂದರ್ಶನಕ್ಕೆ ನನಗೆ ಅನುಮತಿ ತಿರಸ್ಕರಿಸಲಾಯಿತು! ಸದ್ಯದ ಬಿಕ್ಕಟ್ಟನ್ನು ಬಿಡಿಸುವ ಹೊಣೆ ಎಲ್ಲಾ ಸರಕಾರದ ಮೇಲಿದೆಯೆಂದು ನನಗೆ ತೋರುತ್ತದೆ. ಭಾರತೀಯರಿಗೆ ಅಧಿಕಾರ ಬಿಟ್ಟುಕೊಡದೆ ಇಂದಿನ ಬಿಕ್ಕಟ್ಟು ಬಗೆಹರಿಯಲಾರದು. ಎಲ್ಲಾ ಪಕ್ಷಗಳ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಭಾರತವು ಸಂರಕ್ಷಣೆ ಮಾಡಿಕೊಳ್ಳಲು ಶಕ್ತವಾಗುವುದು. ಸರಕಾರವು ಇಂದಿನ ಭೇದ ನೀತಿಯನ್ನು ಬಿಟ್ಟು ಅಧಿಕಾರ ತ್ಯಾಗ ಮಾಡಿದರೆ ಪರಿಸ್ಥಿತಿ ಸುಧಾರಿಸುವುದು. ಆದರೆ ಬ್ರಿಟಿಷ್ ಸರಕಾರವು ಭಾರತವನ್ನು ತನ್ನ ಅಧೀನ ಇಟ್ಟುಕೊಳ್ಳಲು ನಿರ್ಧರಿಸಿದೆ. ಗುಲಾಮ ರಾಷ್ಟ್ರವು ಎಂಥಾ ಉದಾತ್ತ ಧ್ಯೇಯಕ್ಕಾದರೂ ಪೂರ್ಣ ಮನಸ್ಸಿನಿಂದ ಹೋರಾಡಲಾರದು. ಸ್ವತಂತ್ರ ಭಾರತವು ಸ್ವತಂತ್ರ ದೇಶಗಳೊಡನೆ ಮಾನವ ಸ್ವಾತಂತ್ರ್ಯಕ್ಕಾಗಿ ಅಕ್ಷರಾಷ್ಟ್ರಗಳ ವಿರುದ್ಧ ಹೋರಾಡಲು ಸಿದ್ಧವಿದೆ. ಪತಿತ ರಾಷ್ಟ್ರಗಳ ಸ್ವಾತಂತ್ರ್ಯದ ಬೆಲೆ ಎಷ್ಟಿದೆಯೆಂದು ನಿಮಗೆ ತಿಳಿಯಲಾರದು. ಸ್ವಾತಂತ್ರ್ಯವು ಸಿಕ್ಕಿದರೆ ಅದರ ರಕ್ಷಣೆಗಾಗಿಯಾದರೂ ಸಾಯಲು ಸಿದ್ಧರಾಗುವರು. ತನ್ನ ದೇಶವು ಸ್ವತಂತ್ರವಾಗಬೇಕು; ತನ್ನ ರಾಷ್ಟ್ರದಲ್ಲಿ ಪರಕೀಯರ ಅಧಿಕಾರ ಅಳಿಯಬೇಕೆಂದು ಬಯಸುವುದು ದ್ರೋಹವಾದರೆ ನಾವೆಲ್ಲಾ ಭಾರತೀಯರೂ ಅಂಥಾ ದ್ರೋಹಿಗಳೇ ಸರಿ. ಭಾರತದ ಬೀದಿ ಬೀದಿಗಳಲ್ಲಿ ಪಂಚಮ ದಲದವರು ಸಂಚರಿಸುತ್ತಿರುವರೆಂದು ತಿಳಿಯುವ ಅಧಿಕಾರಿಗಳು ಕೆಲವರಿದ್ದಾರೆ. ಭಾರತದ ನಿಜವಾದ ಹಿತಕ್ಕೆ ದ್ರೋಹ ಮಾಡುವುದೇ ಪಂಚಮ ದಲದವರ ಕಾರ್ಯವಾದ್ದರಿಂದ ಹೀಗೆ ತಿಳಿಯುವ ಅಧಿಕಾರೀ ವರ್ಗವೇ ಅಂಥಾ ದಲದವರೆಂದು ನನ್ನ ಅಭಿಪ್ರಾಯ. ಭಾರತೀಯರಿಗೆ ಜಪಾನು ಅಥವಾ ಮಿಕ್ಕ ಅಕ್ಷರಾಷ್ಟ್ರಗಳ ವಿಷಯ ಸಹಾನುಭೂತಿಯಿರಲು ಸಾಧ್ಯವಿಲ್ಲ. ಬ್ರಿಟಿಷರನ್ನು ಹೊರಟುಹೋಗಬೇಕೆನ್ನುವ ಭಾರತೀಯರು ಎರಡನೆಯ ಜಪಾನರನ್ನೇಕೆ ಆಮಂತ್ರಿಸಬೇಕು? ಇದು ತರ್ಕಕ್ಕೆ ಸರಿಯಾಗಿಲ್ಲ. ನಾವು ನಮ್ಮ ರಾಜ್ಯಭಾರ ಮಾಡಬೇಕು. ಭಾರತವು ಸಾಮ್ರಾಜ್ಯಕ್ಕಾಗಿ ವಿಷ್ಟೋ ಸ್ವಾರ್ಥತ್ಯಾಗಮಾಡಿದೆ. ನಮ್ಮ ಹಿತಕ್ಕಾಗಿ ಬ್ರಿಟಿಷ್ ಸರಕಾರವಿರುವುದೆಂಬುದು ಸುಳ್ಳು. ಅದು ಕಾರಣ ಇನ್ನು ಮುಂದೆ ನಮ್ಮ ಕಣ್ಣಿಗೆ ಮಣ್ಣೆರಚುವುದು ಬೇಡ. ಆದ್ದರಿಂದ ಸಹಾನುಭೂತಿಯಿಲ್ಲದ ಸರಕಾರೀ ಅಧಿಕಾರೀ ವರ್ಗ ಹಾಗೂ ಪರಿಸ್ಥಿತಿಯನ್ನು ಹಾಳುಮಾಡುವ ಗವರ್ನರರ ಗೋಜಿಯಿಲ್ಲದೆ ನಮ್ಮ ರಾಜಕೀಯಾಡಳಿತವನ್ನು ನಾವೇ ಮಾಡಬೇಕೆಂದು ನಮ್ಮ ಬೇಡಿಕೆಯಿರುವುದು. ರಶ್ಯ ಚೀನಗಳಂತೆ ಭಾರತೀಯರೂ ಸ್ವತಂತ್ರರಿರುವರೆಂದೂ, ಸ್ವಾತಂತ್ರ್ಯಕ್ಕಾಗಿ ಜೀವವನ್ನು ಕೊಡಲೂ ಸಿದ್ಧರಾಗಿರುವರೆಂದೂ ಅದಾಗದಿದ್ದರೆ, ಭಾರತೀಯರು ಮನಃಪೂರ್ವಕ ಸಹಾಯ ಮಾಡಲಾರರೆಂಬುದನ್ನು ಬ್ರಿಟಿಷರು ತಿಳಿಯುವುದಿಲ್ಲ.

ಮಿಡ್ನಾಪುರದಲ್ಲಿ ಪ್ರಳಯ ಲೀಲೆ!

"ನಿಮ್ಮ ದಬ್ಬಾಳಿಕೆಯು ಸರ್ವಾಧಿಕಾರಿಗಳ ದೇಶಗಳಲ್ಲಿ ನಡೆಯುವ ದಬ್ಬಾಳಿಕೆಯಂತೆ ಇದೆ. ನಿಶ್ಶಸ್ತ್ರರ ಮೇಲೆ ಯುದ್ಧಮಾಡುವುದು ಸುಲಭವಷ್ಟೆ? ಮಿಡ್ನಾಪುರದಲ್ಲಿ ರಾಜಕೀಯ ಅಶಾಂತತೆಯನ್ನು ನಿಲ್ಲಿಸಲು ಸರಕಾರೀ ಅಧಿಕಾರೀ ವರ್ಗದವರು ನಡೆಸಿದ ದಬ್ಬಾಳಿಕೆ ಜರ್ಮನರು ಆಕ್ರಮಿತ ಪ್ರದೇಶಗಳಲ್ಲಿ ನಡೆಸಿದ ದಬ್ಬಾಳಿಕೆಯ ಮಾದರಿಯದಾಗಿತ್ತು. ಅಲ್ಲಿ ನೂರಾರು ಮನೆಗಳು ಸುಡಲ್ಪಟ್ಟವು. ಮಹಿಳೆಯರ ಮೇಲೆ ಅತ್ಯಾಚಾರ ನಡೆಸಿದ ವರದಿಗಳು ನಮಗೆಬಂದಿವೆ. ಮನೆಗಳನ್ನು ಸುಡಬಾರದೆಂದು ನಾವು ಕೊಟ್ಟ ಆಜ್ಞೆ ಮಾನ್ಯವಾಗಲಿಲ್ಲವೆಂದು ನಮಗೆ ಗೊತ್ತಾಗಿದೆ. ಗುಂಡು ಹಾಕುವ ಅನಾಹುತ ಬೇರೆ ಆಗಿವೆ. ಅತ್ಯಾಚಾರವೂ ಬಹಳ ನಡೆದಿದೆ. ಮನೆ ಸುಟ್ಟದ್ದು ಮಾತ್ರವಲ್ಲದೆ ಲೂಟಿಯ ಅನರ್ಥಗಳೂ ಆಗಿದೆ. ಹೀಗೆ ಅಲ್ಲಿ ಅಧಿಕಾರೀ ವರ್ಗದವರಿಂದ ಅನರ್ಥ ಪರಂಪರೆಗಳಾಗುತ್ತಿದ್ದರೂ ನಾವು ನಿಲ್ಲಿಸಲು ಸಮರ್ಥರಾಗಿಲ್ಲ. ಹೀಗೆ ರಾಜಕೀಯ ಅನರ್ಥವಾಗುತ್ತಿದ್ದಂತೆ ಅಲ್ಲಿ ಭೀಕರ ಬಿರುಗಾಳಿ ಬೀಸಿತು. ಅದರಿಂದದಾದ ಪ್ರಾಣನಷ್ಟ, ಧನನಷ್ಟ, ಜಾನುವಾರು ನಷ್ಟ ಚಿತ್ತವೇಧಕವಿದೆ! ಎರಡು ವಾರಗಳ ವರೆಗೆ ಸರಕಾರವು ಆ ಸುದ್ದಿಯನ್ನು ಪ್ರಕಟಿಸಲಿಲ್ಲ! ಬಿರುಗಾಳಿಗೆ ಸಿಕ್ಕಿ [illegible] ಜನರು ಮಡಿದರೆಂದು ಅನಧಿಕೃತ ವಾರ್ತೆಯಿದೆ. [illegible] ಲಕ್ಷ ಜನ ವಾಸಿಸುತ್ತಿದ್ದ ಸುಮಾರು [illegible] ಚದುರ ಮೈಲು ಭೂಮಿ ಈ ಅನಾಹುತಕ್ಕೆ ತುತ್ತಾಗಿದೆಯೆಂದೂ, [illegible] ಗ್ರಾಮಗಳು ಸಂಪೂರ್ಣ ನಾಶವಾಗಿವೆಯೆಂದೂ [illegible] ಪರಗಣಗಳಲ್ಲದೆ ಮಿಡ್ನಾಪುರದಲ್ಲೇ [illegible] ಗ್ರಾಮಗಳು ಹೋಗಿವೆಯೆಂದೂ ಅಲ್ಲಿ ಸಂಚರಿಸಿದ ಇಬ್ಬರು ಮಂತ್ರಿಗಳು ಹೊರಡಿಸಿದ ಪ್ರಕಟಣೆಯಿಂದ ಗೊತ್ತಾಗುತ್ತದೆ. ಶೇಕಡಾ [illegible]ರಷ್ಟು ಜಾನುವಾರುಗಳು ಅಲ್ಲಿ ನಾಶವಾಗಿವೆ. ಉಳಿದ ಜಾನುವಾರುಗಳು ಮಿಡುಕುವವರಿಗೆ ಈಗ ಆಹಾರವಾಗುತ್ತಿವೆ! ಈ ಬಿರುಗಾಳಿಯ ಹೊಡೆತದಲ್ಲಿ ಸಿಕ್ಕಿದ ಎಷ್ಟೋ ಮಂದಿಯ ಪ್ರಾಣಗಳನ್ನುಳಿಸಬಹುದಿತ್ತು. ಆದರೆ ಸರಕಾರೀ ಅಧಿಕಾರಿಗಳ ಈ ಅಮಾನುಷ ವರ್ತನೆಯಿಂದ ಇದು ಸಾಧ್ಯವಾಗಲಿಲ್ಲ. ರಕ್ಷಿಸಿಕೊಳ್ಳಲು ಉಪಾಯವಿಲ್ಲದೆ ನರಳುತ್ತಿದ್ದ ಕೆಲವು ಸ್ತ್ರೀಯರನ್ನು ಮಕ್ಕಳನ್ನೂ ಒಂದು ದೋಣಿಯಲ್ಲಿ ಹಾಕಿ ಅಲ್ಲಿಂದ ಒಯ್ದರೆ ಬದುಕಿಸಬಹುದೆಂದು ಕೆಲವರು ಪ್ರಯತ್ನಪಟ್ಟಾಗ ಅಧಿಕಾರಿಗಳು ಅಲ್ಲಿಗೆ ದೋಣಿಯನ್ನೊಯ್ಯಬಾರದಾಗಿ ನಿಷ್ಠುರರಾಗಿ ನಿರಾಕರಿಸಿದರೆಂಬ ಹೃದಯದ್ರಾವಕ ಸಂಗತಿಯನ್ನು ನಾನು ಕೇಳಿದೆ. ಆ ಸ್ತ್ರೀಬಾಲರೆಲ್ಲರೂ ನೀರಿಗೆ ಪ್ರಾಣಾಹುತಿಯಿತ್ತರು! ಇಂಥ ನಾವಿರಾರು ವಿಚಾರಗಳಿವೆ!

(೨ನೇ ಪುಟಕ್ಕೆ ಮುಂದುವರಿದಿದೆ)

ಮಾರಾಟಕ್ಕೆ ಸಿದ್ಧವಾಗಿವೆ

1943ನೇ ಇಸವಿಯ

ಶಾರದಾ ಪೊಕೆಟ್ ಡೈರಿಗಳು.

ಸಣ್ಣ ಸೈಜು	0-7-0
„ „ ಮುಚ್ಚಳದ್ದು	0-9-0
ದೊಡ್ಡ ಸೈಜು	0-12-0
„ „ ಮುಚ್ಚಳದ್ದು	0-14-0

ಜೇಕಾದಲ್ಲಿ ಕೂಡಲೇ ಬರೆಯಿರಿ.

ಶಾರದಾ ಛಾಪಖಾನೆ,

ರಥಬೀದಿ—ಮಂಗಳೂರು.

ಪ್ರಾಂತಿಕ ಆಡಳಿತವು ಕೇವಲ ಅಪಹಾಸ್ಯವಾಗಿದೆ!

[೧ನೇ ಪುಟದಿಂದ ಮುಂದುವರಿದುದು]

ಬ್ರಿಟಿಷ ಸರಕಾರದ 'ಜಿಜಿಯಾ'

"ಶಾಂತಿಗಳನ್ನು ಕಡಿದ, ಸಂಕಗಳನ್ನು ಒಡೆದ ರಸ್ತೆಗಳನ್ನು ಹಾಳುಗೆಡವಿದ ಅಪರಾಧಕ್ಕಾಗಿ ಹಿಂದುಗಳಿಗೆ ಮಾತ್ರ "ಪುಂಡು ತೆರಿಗೆ" ಹಾಕುತ್ತಾರೆ ಅಂಥಾ ಅನರ್ಥಗಳಾಗದಂತೆ ತಡೆದ ಹಿಂದುಗಳೆಷ್ಟೋ ಇರಬಹುದು ಅಂಥಾ ಕೃತ್ಯಗಳಲ್ಲಿ ಭಾಗವಹಿಸದ ಹಾಗೂ ಅದರ ವಿಚಾರವೇ ತಿಳಿಯದ ಹಿಂದುಗಳೆಷ್ಟೋ ಇರಬಹುದು ಹೀಗಿರುತ್ತಾ, ಪುಂಡುಗಂದಾಯವನ್ನು ಎಲ್ಲಾ ಹಿಂದುಗಳ ಮೇಲೆ ಹಾಕುವ ಕಾರ್ಯವು ನಿಷ್ಠುರದ್ದಾಗಿದೆ. ಇದು ಹಿಂದುಗಳಿಗಾದ ಅನ್ಯಾಯವಾಗಿದೆ. ಇದು ಬ್ರಿಟಿಷರು ಹೊರಿಸಿದ 'ಜಿಜಿಯಾ' ತೆರಿಗೆಯಲ್ಲದೆ ಬೇರಲ್ಲ ನಾವೆಷ್ಟು ಬೇಡಿಕೊಂಡರೂ ನೀವು ಇದನ್ನು ಪರಿಹರಿಸಲಿಲ್ಲ. ಮಿಡ್ನಾಪುರದ ದಬ್ಬಾಳಿಕೆಯ ಬಗ್ಗೆ ವಿಚಾರಣೆಯನ್ನೇರ್ಪಡಿಸಲೂ ತಿರಸ್ಕರಿಸಿದಿರಿ ಬಿರುಗಾಳಿಯ ಪ್ರಳಯದ ಬಗ್ಗೆ ಹೀಗೆ ಅಧಿಕಾರಿಗಳು ಅಸಡ್ಡೆ ಮಾಡುತ್ತಿದ್ದಾರೆ. ಇಂದು ನಾನು ಮಂತ್ರಿಸ್ಥಾನದಲ್ಲಿದ್ದು ನನ್ನ ಜನರಿಗೂ ಗವರ್ನರರಿಗೂ ಪ್ರಯೋಜನವಿಲ್ಲವೆಂದ ಮೇಲೆ ನಾನೇಕೆ ಅಧಿಕಾರದಲ್ಲಿರಬೇಕು?'

ಮೊಗವೀರ ವ್ಯವಸ್ಥಾಪಕ ಮಂಡಳಿ

ಮುಂಬಾಯಿ

ಮುಂಬಾಯಿಯಲ್ಲಿರುವ ಮೊಗವೀರ ವ್ಯವಸ್ಥಾಪಕ ಮಂಡಳಿಯವರು, ಮೊಗವೀರ ಸಮಾಜದ ಸಾಂಪತ್ತಿಕ, ಸಾಮಾಜಿಕ ಮತ್ತು ಧಾರ್ಮಿಕ ರೀತಿ ನೀತಿಗಳನ್ನು ಚರ್ಚಿಸಿ, ಆಲೋಚಿಸುವ ರೆಂತೂ ದ. ಕ. ಮೊಗವೀರ ಮಹಾಜನಸಂಘದ ಮುಂದಾಳುಗಳನ್ನು ಮತ್ತು ಇನ್ನಿತರ ಊರು ಕೂಡುಕಟ್ಟುಗಳ ಪ್ರಮುಖರನ್ನು ಬೆಟ್ಟಿಯಾಗಿ, ಯೋಗ್ಯ ಆಲೋಚನೆಯನ್ನು ಗೈಯ್ಯುವರೆಯೂ ಎಂಟು ಜನ ಪ್ರತಿನಿಧಿಗಳನ್ನು, ನಮ್ಮ ಗುರುಸ್ಥಾನವಾದ (ಬಾರ್ಕೂರು) ಬೆಣ್ಣೆ ಕುದ್ರು ದೇವಸ್ಥಾನದಲ್ಲಿ, ಇದೇ ಬರುವ ಧನು ಸಂಕ್ರಮಣ (15-12-42ರಿಂದ 18-12-42) ನಿಯಮದಂತೆ ವರ್ಷಂಪ್ರತಿ ಜರಗುವ ಮಹೋತ್ಸವ ಸಮಯದಲ್ಲಿ, ಕಳುಹಿಸುತ್ತಾರೆಂಬ ವಾರ್ತೆಯನ್ನು ಕೇಳುತ್ತೇವೆ. ಇವರು ಕೈಕೊಂಡಿರುವ ಈ ಮಹಾ ಯೋಜನೆಗೆ ನಮ್ಮ ಜಿಲ್ಲೆಯ ಮೊಗವೀರರೆಲ್ಲರ ಸಂಪೂರ್ಣ ಬೆಂಬಲ ದೊರೆತು ಅವರ ಕಾರ್ಯವು ಯಶಸ್ವಿಯಾಗಲೆಂದು ನಾವು ಕೂಡಾ ಹಾರೈಸುತ್ತೇವೆ

ಕೀರ್ತಿಶೇಷ ಜಾರಪ್ಪ ನಾಯ್ಕರು

ಬಿಲ್ಲವ ಸಮಾಜದ ಏಳಿಗೆಯ ಸಲುವಾಗಿ ಹೆಣಗಾಡಿ, ತನು, ಮನ, ಧನವನ್ನರ್ಪಿಸಿದ ಶ್ರೀ. ಜಾರಪ್ಪ ನಾಯ್ಕರ ನಿಧನಕ್ಕಾಗಿ ಮುಂಬಯಿ ಬಿಲ್ಲವರ ಎಸೋಸಿಯೇಶನ್ ಸಂತಾಪ ಸೂಚನೆ ಮಾಡುತ್ತದೆ. ದಿವಂಗತರು ಮಂಗಳೂರಿನ ಜಿಲ್ಲಾ ಬಿಲ್ಲವ ಯೂನಿಯನಿನ ಪ್ರಾಮುಖ್ಯ ಸದಸ್ಯರಾಗಿದ್ದು, ಶ್ರೀ ಗೋಕರ್ಣನಾಥ ಕ್ಷೇತ್ರದ ಅಭ್ಯುದಯಕ್ಕಾಗಿ ಹೆಚ್ಚಿನ ಶ್ರದ್ಧೆಯಿಂದ ಸೇವೆಯನ್ನಿತ್ತಿರುವರು. ಹೊರತಾಗಿ ಮುಂಬಯಿಯಲ್ಲಿ ಬಿಲ್ಲವ ಪ್ರಥಮ ಸಂಘ ಸ್ಥಾಪನೆಯ ಕಾರಣ ಪುರುಷರಾಗಿರುವರು

NOTICE

The Bombay Life Assurance Co Ltd

Notice having been given of the loss of Policy No. 12133 on the life of late Mr. Moodabidri Srinivas Naik a duplicate policy will be issued and the claim will be paid unless objection is lodged with us within one month from this date

Bombay, } **Jyotendra L. Mehta,**
2-12-42 } *Managing Director*

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

O S. 314/42
O. P. 37/42.

ಗುಣಪತಿ— ವಾದಿ

ಚನ್ನಮ್ಮ ಕೂಡಾ 4 ಜನರು—ಪ್ರತಿವಾದಿರು

3ನೇ ಪ್ರತಿವಾದಿ ದೇಜಮ್ಮ ಹೆಂಗ್ಸು ಚನ್ನಮ್ಮ ಹೆಂಗ್ಸಿನ ಮಗಳು ಕಾರ್ಕಳ ತಾಲೂಕು ಏಟ್ಟೋಡಿ ಗ್ರಾಮದ ಬರೆಮೇಲುಯೆಂಬಲ್ಲಿರುವ

4ನೇ ಪ್ರತಿವಾದಿಯು ಮಾಡಿದ ಈ ಕೋರ್ಟಿ O S 70/41ನೇ ಡಿಕ್ರಿ ವ ಅದೇ ಕಾರಣವಾದ ಅಡವು ವಾದಿಲ ಕುಟುಂಬಕ್ಕಾಗಲಿ ದಾವಾ ಆಸ್ತಿಗಾಗಲಿ ಬಾಧಕಕ್ಕದಲ್ಲವೆಂತ ಡಿಕ್ಲೇರೇಶನಿಗೂ ಸದ್ರಿ ಡಿಕ್ರಿ ಮೇಲೆ ಅಮಲ್ಜಾರಿ ಮಾಡದಂತೆ ಇಂಜಂಕ್ಷನಿಗೆ ಕೂಡಾ ವಾದಿ ಮಾಡಿದ ಮೇಲಿನ ದಾವೆಯು ತಾ 8-12 42ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮಗೇನಾದ್ರು ಆಕ್ಷೇಪವಿದ್ದರೆ ನೀವು ಆ ದಿನ ಬೆಳಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸದಿದ್ದರೆ ನಿಮ್ಮನ್ನು ಕಿವ್ವಾ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ

ಪುತ್ತೂರು } Sd) **H Pundalik Bhat,**
25-11-45 } Pleader for pltf

ಪ್ರಕಟಣೆ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P No 511/1942
in Ullal Panchayat Court
Suit 81/38

ಕೊರಗ ಮರಕಲ—ವಾದಿ, ಅರ್ಜಿದಾರ

ಮತ್ತು

ರಾಮ ಮರಕಾಲ ಸುಬ್ಬ ಹೆಂಗ್ಸಿನ ಮಗ, ಮಂಗಳೂರು ತಾಲೂಕು ಉಳ್ಳಾಲ ಗ್ರಾಮಸ್ಥ

ಪ್ರತಿವಾದಿ, ರೆಸ್ಪೊಂಡೆಂಟ್

ಸದ್ರಿ ರೆಸ್ಪೊಂಡೆಂಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—ನಿಮ್ಮ ಬಾಬ್ತು ಮೇಲ್ಕಂಡ ಅಮಲ್ದಾರಿಯಲ್ಲಿ ಜಪ್ತಾದ ಮೇಲ್ಪರೆ ಕಟ್ಟೋಣವನ್ನು ಏಲಂ ಪಡಿಸುವ ಬಗ್ಗೆ ಏಲಂ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವ ಬಗ್ಗೆ ಮೇಲ್ಕಂಡ ಅಮಲ್ದಾರಿಯು ಮೇಲ್ಕಂಡ ಕೋರ್ಟಿನಲ್ಲಿ ತಾ 9-12-1942ಕ್ಕೆ ಇಟ್ಟಿರುತ್ತದೆ ಸದ್ರಿ ದಿನ ಹಗಲು 11 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ನಿಮ್ಮ ಉದಾಹರಣೆಯನ್ನು ದಾಖಲು ಮಾಡದೆ ಇದ್ದರೆ ಅದನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ

By order.
Mangalore, } **Ullal Rama Rao,** B A B L
21-11-1942. } Vakil for Petitioner

ನಿಮಗೆ ಸಂಬಂಧಪಟ್ಟ ಪತ್ರಗಳನ್ನೆಲ್ಲ ಪುಂಡರು ನಾಶಪಡಿಸಿ ಬಿಟ್ಟರೆ, ನೀವು ಲೆಕ್ಕವಿಲ್ಲದಷ್ಟು ಸಲ ಕೋರ್ಟು—ಕಚೇರಿಗಳಿಗೆ ಎಡತಾಕಬೇಕಾಗುವುದು ಈ ತರದ "ಚಳವಳಿ"ಯಿಂದ ಸರ್ಕಾರಕ್ಕೆ ಆಗುವ ತೊಂದರೆ ಅಷ್ಟಲ್ಲ; ತೀರ ಬಡಜನರಿಗೇ ಇದರ ಉಪಟಳ ಹೆಚ್ಚು

ಪುಂಡರನ್ನು ಹಿಡಿಯಲು ಪೋಲೀಸರನ್ನೂ ದಂಡನ್ನೂ ಉಪಯೋಗಿಸುವಾಗ, ಓಡಿ ಹೋಗುವವರು ಪುಂಡರು; ತೊಂದರೆಪಡುವವರು ಬಡಗಾಯಿಗಳು ಇದು ಸಾಗುತ್ತಿರುವಷ್ಟು ದಿನ, ಸ್ವಾತಂತ್ರ್ಯ ಹೇಗೆ ಬಂದೀತು?

ಬರಿ ಸರ್ಕಾರಿ ಅಧಿಕಾರಿಗಳೇ ಈ ಪುಂಡರ ಪಿಡುಗನ್ನು ಅಡಗಿಸಲಾರರು. ನಾವು ಮುಂದೆ ಬಂದರೆ, ಅಲ್ಪ ಸಮಯದಲ್ಲಿ ನಿವಾರಿಸಬಲ್ಲೆವು.

ಪುಂಡರನ್ನು ಅಡಗಿಸುವುದು ನಮ್ಮ ಕೈಯಲ್ಲಿದೆ

ಸ್ಥಳೀಯ ಕಾವಲು-ಕೂಟಗಳನ್ನೂ ಸ್ವಯಂಸೇವಕರ ಗಸ್ತಿದಳಗಳನ್ನೂ ಏರ್ಪಡಿಸಿರಿ. ಪ್ರತಿ ಆಯಕಟ್ಟಿನ ಸ್ಥಳದಲ್ಲಿ ಒಬ್ಬನನ್ನು ಕಾಯುವುದಕ್ಕೆ ಇಡಿರಿ. ಆತನ ಕೈಯಲ್ಲಿ ಇಬ್ಬರು ವಾಲೀಕಾರರನ್ನು ಕೊಡಿರಿ—ಪುಂಡರು ಬಂದರೆ ಸಹಾಯ ಪಡೆಯಲು ಅವರನ್ನು ಕಳಿಸಲನುಕೂಲವಾಗುವುದು. ಹತ್ತು ಜನರು ಗಟ್ಟಿ ಮನಸ್ಸು ಮಾಡಿದರೆ, ಕೆಲವು ಜನ ದರೋಡೆಕೋರರನ್ನೂ ಕೊಲೆಗಾರರನ್ನೂ ಖಂಡಿತ ಓಡಿಸಿಬಿಡಬಲ್ಲರು.

ಇವು ಆಯಕಟ್ಟಿನ ಸ್ಥಳಗಳು

ಸರ್ಕಾರಿ ಹಾಗೂ ಅಂಚೆಯ ಕಚೇರಿಗಳು:- ನಿಮ್ಮ ಭೂಮಿಯ ಸೊತ್ತಿನ ದಾಖಲೆಗಳೂ ಹಿಂತಿನಿಯ ಹಾಗೂ ಪೋಸ್ಟಿನಲ್ಲಿಯ ಹಣದ ಆಧಾರ ಇಲ್ಲಿರುತ್ತವೆ. ಅವು ನಾಶವಾಗಬಾರದು.

ಸ್ಟೇಷನುಗಳು ಮತ್ತು ಸಿಗ್ನಲುಗಳು:- ಇವು ಕೆಟ್ಟವೆಂದರೆ ನಿಮ್ಮ ಸಾಗಾಟ-ಸೌಕರ್ಯಗಳು ಕೆಟ್ಟಾಗುವವು, ಅವನ್ನು ಸುಧಾರಿಸಲು ತುಂಬಾ ಸಮಯ ಬೇಕಾಗುವುದು.

ಪುಂಡರನ್ನು ಪ್ರತಿಭಟಿಸಿರಿ!

CPU. 57-Kn

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡ್ ರಣಭೂಮಿಯಲ್ಲಿ ಎರಡು ರಶ್ಯನ್ ಸೇನೆಗಳು ಮುನ್ನುಗ್ಗುತ್ತಿವೆ. ಇವುಗಳಲ್ಲಿ ದೊಡ್ಡ ಸೈನ್ಯವು ನಾಲ್ಕು ಮೈಲು ದೂರ ಮುಂದೊತ್ತಿ ಹಲವು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಂಡಿದೆ. ವೈರಿಗಳು ಬಲವಾಗಿ ಪ್ರತಿಭಟಿಸಿದರು. ಸ್ಟಾಲಿನ್‌ಗ್ರಾಡ್ ದಕ್ಷಿಣ ಉಪನಗರದಲ್ಲಿ ಜರ್ಮನರು ಖಾಲಿಯಾಗಿದ್ದಾರೆ. ಉತ್ತರದ ಕಾರ್ಖಾನೆ ಪ್ರದೇಶದಲ್ಲಿ ವೈರಿಗಳ ಪ್ರತಿಭಟನೆ ಜೋರಾಗಿದೆ. ಮೋಸ್ಕೋದ ಹತ್ತಿರ ರಶ್ಯನರು ವೆಲೂಕ ಮತ್ತು ರಿಜಗಗಳ ಮಧ್ಯಪ್ರದೇಶದಲ್ಲಿ ನುಗ್ಗುತ್ತಿರುವರು. ಅಲ್ಲಿಯೂ ಅನೇಕ ಆಯಕಟ್ಟಿನ ಸ್ಥಳಗಳು ಅವರ ವಶವಾಗಿವೆ. ಆ ಕಡೆಯೂ ಜರ್ಮನರು ಪ್ರತಿಭಟಿಸುತ್ತಿರುವರು. ರೆಜೆವಾ ಪಟ್ಟಣದ ಸಲುವಾಗಿ ಉಗ್ರಕದನವಾಗಿ ರಶ್ಯನರೀಗ ಪಟ್ಟಣವನ್ನು ಪ್ರವೇಶಿಸಿ ಓಣಿಗಳಲ್ಲಿ ಕಾಳಗ ಮಾಡುತ್ತಿರುವರು. ಡಾನ್ ನದಿಯ ಪೂರ್ವತೀರದ ಮೇಲಿರುವ ಭದ್ರವಾದ ಹಲವು ಸ್ಥಳಗಳನ್ನೂ ರಶ್ಯನರು ಆಕ್ರಮಿಸಿಕೊಂಡಿರುವರು. ಜರ್ಮನರಿನ್ನೂ ವಿಮಾನಗಳಿಂದ ಸೈನ್ಯ ತರುತ್ತಿದ್ದಾರೆ. ಅಂತೂ ರಶ್ಯದಲ್ಲೀಗ ಜರ್ಮನರ ಆರ್ಭಟ ಕಡಿಮೆಕಡಿಮೆಯಾಗುತ್ತಿದೆ.

ಟುನಿಸಿಯದಲ್ಲಿರುವ ಜರ್ಮನ್ ವ್ಯೂಹವನ್ನು ಜನರಲ್ ಅಂಡರ್‌ಸನರ ಮೊದಲನೆಯ ದಳವು ಬೇದಿಸಿ ಟುನಿಸ್ ಆಖಾತದ ಕಡೆಗೆ ಸಾಗಿದೆ. ಬಿಜೆರ್ಟಾ ಮುತ್ತುವ ಮೊದಲು ಬ್ರಿಟಿಷರು ಟುನಿಸವನ್ನು ಕೈವಶಪಡಿಸಿಕೊಳ್ಳುವ ಸಾಹಸದಲ್ಲಿದ್ದಾರೆ. ಬಿಜರ್ಟಾದ ಕಡೆಗೂ ಮಿತ್ರರ ಪ್ರಗತಿಯಿದೆ.

ಚರ್ಚಿಲರ ಭಾಷಣ

"ಪ್ರತಿಯೊಂದು ರಣರಂಗದಿಂದಲೂ ಇದೀ ನವಂಬರ ತಿಂಗಳಲ್ಲಿ ನಮಗೆ ಶುಭ ಸಮಾಚಾರವೇ ಬಂದಿದೆ. ಆದರೆ ನಾನೇನೂ ಈಗ ಭರವಸೆ ಕೊಡಲಾರೆ. ಹೀಗೆ ನಮಗೆ ಜಯ ದೊರಕುತ್ತಿರುವಾಗ ನಾವು ಸುಮ್ಮಗಿರಲಾರೆವು. ಮುಂದೇನಾಗುವುದೆಂದು ನಾನು ಹೇಳಲಾರೆನು. ಮುಂದೆ ಇದೇ ರೀತಿಯಾಗಿ ವಿಜಯವೇ ಸಿಗುವುದೆನಲು ಸಾಧ್ಯವಿಲ್ಲ. ಇಂದು ಸಮಗ್ರ ಯೂರೋಪು ಹಿಟ್ಲರನ ಪಾದಾಕ್ರಾಂತವಾಗಿದೆ. ಅವನ ಸಲುವಾಗಿ ಅಸಂಖ್ಯ ಗುಲಾಮರು ಮದ್ದಿನ ಖನಿಗಳಲ್ಲಿ ದುಡಿಯಲು ಸಿದ್ಧರಿದ್ದಾರೆ. 'ಯೂರೋಪು ಉಪವಾಸ ಬಿದ್ದರೂ ಜರ್ಮನಿ ಉಪವಾಸ ಬೀಳಲಾರದು' ಎಂದು ಗೋರಿಂಗನು ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಯುಬೋಟುಗಳ ಹಾವಳಿಯೂ ಕಡಿಮೆ ಆಗಿಲ್ಲ. ಮುಂದೆ ಅವುಗಳನ್ನು ಹದಕ್ಕೆ ತರುವವರೆಗೆ ಗಂಡಾಂತರವು ಕಡಿಮೆಯಾಗದೆಂಬುದನ್ನು ನೆನಪಿನಲ್ಲಿಡಿರಿ. ಇದನ್ನೆಲ್ಲಾ ಯೋಚಿಸುವಾಗ ಇಂದಿನ ಜಯಕ್ಕಿಂತ ಮುಂದಿನ ವಿಜಯವೇ ಮಹತ್ವದ್ದಿದೆಯೆಂದು ತಿಳಕೊಳ್ಳಬಹುದು. ಪೂರ್ವಾಂತ್ಯದ ಯುದ್ಧವು ಕೊನೆಗೊಳ್ಳದೆ ಯೂರೋಪಿನ ಯುದ್ಧವೂ ಕೊನೆಗೊಳ್ಳದು. ಪರಿಸ್ಥಿತಿಗೆ ಹೀಗೆಯೇ ಇದ್ದರೆ ನಾವು ಪೂರ್ವದ ಮಿತ್ರರಿಗೆ ಬೇಕಾದ ಸಹಾಯ ಕಳುಹಿಸಬಹುದು. ಈ ಯುದ್ಧವು ಬೇಗನೇ ಕೊನೆಗಾಣಬಾರದೇಕೆ? ಲೋಕದಲ್ಲಿ ಸುಭಿಕ್ಷೆಯಾಗಬಾರದೇಕೆ? ಈ ಪ್ರಶ್ನೆಗಳಿಗೆ ನನಗೆ ಉತ್ತರವೇ ಸಿಗುವುದಿಲ್ಲ" ಹೀಗೆಂದು ಚರ್ಚಿಲರು ಕಳೆದ ಆದಿತ್ಯವಾರ ರಾತ್ರಿ ಯುದ್ಧ ವಿಮರ್ಶೆಯ ಒಂದು ಭಾಷಣ ಮಾಡುತ್ತಾ ಹೇಳಿದರು. ಅವರ ಮಾತಿನಲ್ಲಿ ಬ್ರಿಟನಿನ ಇಂದಿನ ರಣನೀತಿ ಸ್ಪಷ್ಟಸ್ಪಷ್ಟವಾಗಿ ಚಿತ್ರಿತವಾಗುತ್ತಿದೆ. ಆಫ್ರಿಕಾ ವಿಜಯದಿಂದಾಗಿ ಚರ್ಚಿಲರು ಅತಿರೇಕ ಉಬ್ಬಿ ಹೋಗಿಲ್ಲ. ಶತ್ರುವಿನ ಶಕ್ತಿಯನ್ನು ಅವರು ಮರೆತಿಲ್ಲ. ರಶ್ಯನರು ಸ್ಟಾಲಿನ್‌ಗ್ರಾಡನ್ನು ರಕ್ಷಿಸುತ್ತಿರುವ ಅವರ ಸಾಹಸವನ್ನು ಪ್ರಶಂಸಿಸಿದರು. ಆಫ್ರಿಕದಲ್ಲಿ ಶತ್ರುವನ್ನು ನಾಲ್ನೂರು ಮೈಲು ಬೆನ್ನಟ್ಟಿ ಹೋದ ವಿಜಯವನ್ನು ಎತ್ತಿ ಹೇಳಿದರು. ಟ್ರಿಪೊಲಿಟಾನಿಯದಲ್ಲಿ ಇನ್ನೊಂದು ಮಹತ್ವದ ಕಾಳಗವಾಗುವುದೆಂದರು. ಮಿತ್ರ ಸೈನ್ಯದ ನೌಕಾ ಯುದ್ಧವನ್ನು ಹೊಗಳಿದರು. ನರಕ ಯಾತನೆಗೆ ಗುರಿಯಾದ ಯೂರೋಪಿನ ಜನರನ್ನು ಸಂರಕ್ಷಿಸುವ ಭರವಸೆಯಿತ್ತ ಚರ್ಚಿಲರು ತಮ್ಮ ಪೌರ್ವಾತ್ಯ ಸಾಹಸಗಳ ವಿಷಯ ಒಂದೇ ಒಂದು ಮಾತನ್ನೂ ಹೇಳದಿರುವುದು ಹಲವರಿಗೆ ಸಂಶಯವನ್ನುಂಟುಮಾಡುವುದು. ಯುದ್ಧಾನಂತರವಾದರೂ ಯೂರೋಪಿನ ಜರ್ಮನ್ ಆಕ್ರಮಿತ ರಾಷ್ಟ್ರಗಳಿಗೆ ಮಾತ್ರ ಸ್ವಾತಂತ್ರ್ಯವಲ್ಲದೆ ವಸಾಹತ್ತುಗಳು ಮತ್ತೂ ಹಿಂದಿನ ಹಾಗೆಯೇ ಉಳಿಯಬೇಕೆ? ಚರ್ಚಿಲರು ಸಾಮ್ರಾಜ್ಯಶಾಹಿಗಳಲ್ಲವೆಂಬುದಕ್ಕೆ ಈ ಭಾಷಣದಲ್ಲಾದರೂ ಏನೂ ಭರವಸೆ ಕಾಣುವುದಿಲ್ಲ!

"ಟುನಿಶಿಯ ಬಿಡಬೇಡಿ"

'ಪ್ರಾಣ ಹೋದರೂ ಚಿಂತೆಯಿಲ್ಲ, ಅದರಿಂದ ಜನ್ಮ ಸಫಲವಾಗುವುದು. ಟ್ಯುನಿಶಿಯವನ್ನು ಎಂತಾದರೂ ಬಿಟ್ಟುಬಿಡಬೇಡಿ' ಎಂದು ಹಿಟ್ಲರನು ತನ್ನ ಸೈನಿಕರಿಗೆ ಸಂದೇಶವಿತ್ತಿದ್ದಾನೆ. ರೊಮೆಲನೂ ಟುನಿಶಿಯದಲ್ಲಿ ಬಂದು ಸೈನ್ಯ ಸಜ್ಜಿತನಾಗಿ ತಳವೂರಿದ್ದಾನೆ. ಶತ್ರುಗಳನ್ನು ನೂರಾರು ಮೈಲುಗಳ ವರೆಗೆ ಒಂದೇ ಉಸಿರಲ್ಲಿ ಹಿಮ್ಮೆಟ್ಟಿಸಿದರೂ, ಇಂದು ಟುನಿಶಿಯದಲ್ಲಿ ಬಲವಾದ ಆತಂಕವುಂಟಾಗಿದೆ. ಹಿಟ್ಲರನ ಆವೇಶಪೂರ್ಣ ಸಂದೇಶ, ರೊಮೆಲನ ಸಿದ್ಧತೆ, ಜರ್ಮನರ ಉಗ್ರ ಪ್ರತಿಭಟನೆ ಇವುಗಳನ್ನು ನಿರೀಕ್ಷಿಸಿದರೆ ಟುನಿಶಿಯದಲ್ಲಿ ಮಹತ್ವದ ಕಾದಾಟ ನಡೆಯಲಿರುವುದೆಂದು ತಿಳಿದುಬರುವುದು. ಪೂರ್ವದಲ್ಲಿ ಲಿಬಿಯಾ ಭಾಗದಿಂದ ಬ್ರಿಟಿಷರೂ, ಪಶ್ಚಿಮದಲ್ಲಿ ಆಲ್ಜೀರಿಯಾಭಾಗದಿಂದ ಅಮೆರಿಕನರೂ ಟುನಿಶಿಯದ ಕಡೆಗೆ ಸಾಗುತ್ತಿರುವರು. ಉತ್ತರ ಆಫ್ರಿಕದ ಮರ್ಮಸ್ಥಳ ಟುನಿಸ್‌ಬಂದರ, ಬಿಜರ್ಟಾ ಬಂದರವೂ ಇದಕ್ಕೆ ಹೊಂದಿಕೊಂಡಿದೆ. ಟುನಿಶಿಯವನ್ನು ಮಿತ್ರರು ವಶಪಡಿಸಲಾರರಾದರೆ ಇದುವರೆಗಿನ ಅವರ ವಿಜಯವು ನಿಷ್ಪ್ರಯೋಜಕವಾದೀತು. ಆದ್ದರಿಂದಲೇ ಇಲ್ಲಿ ಮಿತ್ರರೂ ಶತ್ರುಗಳೂ ಜೀವದ ಹಂಗು ತೊರೆದು ಹೋರಾಡುತ್ತಿರುವರು. ಟುನಿಶಿಯಾ ಬಿಜರ್ಟಾಗಳ ರಕ್ಷಣೆಗಾಗಿ ಜರ್ಮನಿ ಇಟಲಿಗಳಿಂದ ದಿನನಿತ್ಯವೂ ಸೈನ್ಯ ಸಾಧನಗಳು ಸಾಗುತ್ತಿವೆ. ಈ ಬಂದರಗಳ ಹೆಬ್ಬಾಗಿಲಿನಂತಿರುವ ಎಲ್ ಅಗೇಲಾದಲ್ಲಿ ರೊಮೆಲನು ಉಗ್ರ ಪ್ರತಿಭಟನೆ ಕೊಡಬಹುದು. ಟುನಿಶಿಯಾ ಎಂದರೆ ಟುನಿಸ್, ಬಿಜರ್ಟಾ ಎಲ್ ಅಗೇಲಾ ಮೊದಲಾದ ಮುಖ್ಯ ಪಟ್ಟಣಗಳುಳ್ಳ ಪ್ರಾಂತ. ಟುನಿಸ್ ಬಂದರವೇ ಇದರ ರಾಜಧಾನಿ. ಇಲ್ಲಿನ ಹೋರಾಟಕ್ಕಾಗಿ ಜರ್ಮನರು ರಶ್ಯನ್ ರಣಭೂಮಿಯಿಂದ ದೊಡ್ಡ ದೊಡ್ಡ ಬಾಂಬು ಬೀಸಾಡು ವಿಮಾನಗಳನ್ನೂ ಹೋರಾಡುವ ವಿಮಾನಗಳನ್ನೂ ತಂದಿರಿಸಿದ್ದಾರಂತೆ! ಇದುವರೆಗೆ ನೂರಾರು ಮೈಲು ಕಣ್ಮುಚ್ಚಿ ತೆರೆಯುವಷ್ಟರಲ್ಲಿ ಮುಂದುವರಿದಿದ್ದರೂ, ಇನ್ನುಮುಂದೆ ಅದು ಸುಲಭವಲ್ಲವೆಂದು ಮಿತ್ರರಿಗೂ ಚೆನ್ನಾಗಿ ಗೊತ್ತಿದೆ. ಟುನಿಸ್ ಬಿಜರ್ಟಾ ಬಂದರಗಳು ಸಿಸಿಲಿಸಾರ್ಡೇನಿಯಗಳಿಂದ ೧೦೦-೨೦೦ ಮೈಲುಗಳ ಅಂತರದಲ್ಲಿರುವುದರಿಂದ ಬೇಕಾದ ಸಾಧನ ಸಾಮುಗ್ರಿ ಒಯ್ಯಲು ಅನುಕೂಲವುಂಟು. ಮಿತ್ರರು ಪಶ್ಚಿಮದಿಂದ ಸಾವಿರಾರು ಮೈಲು ದೂರವಿರುವ ಬ್ರಿಟನು ಅಮೆರಿಕಗಳಿಂದ ಸಾಧನ ಸಾಮುಗ್ರಿ ತರಿಸಿಕೊಳ್ಳಬೇಕಾಗಿದೆ! ಇಷ್ಟು ದೀರ್ಘ ಪ್ರಯಾಣವನ್ನು ಭೂಮಧ್ಯ ಸಮುದ್ರದ ವರೆಗೆ ಸುರಕ್ಷಿತವಾಗಿ ಮಾಡುವುದೂ ಕಷ್ಟಸಾಧ್ಯ. ಅಮೆರಿಕನರು ಮೊರೊಕ್ಕೋ ಅಲ್ಜೀರಿಯಗಳಲ್ಲೀಗ ಅಲ್ಲಿಂದ ಟುನಿಸಿಯಾ ಆಕ್ರಮಣಕ್ಕೆ ಸಾಹಸಪಡುತ್ತಾರೆ. ಭೂಮಧ್ಯ ಸಮುದ್ರದ ಅಪಾಯವನ್ನವಲೋಕಿಸಿ ಅವರು ಒಮ್ಮೆಗೇ ಟುನಿಶಿಯದಲ್ಲಿಳಿಯುವುದು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಅಂತೂ ಜರ್ಮನರು ಒಮ್ಮೆಲೇ ಫ್ರಾನ್ಸ್ ಕರಾವಳಿಯನ್ನಾಕ್ರಮಿಸಿಕೊಂಡು, ಸಾಗರವನ್ನು ದಾಟಿ ಟುನಿಶಿಯವನ್ನು ಸ್ವಾಧೀನಪಡಿಸಿ ಅಲ್ಲಿ ಭದ್ರವಾಗಿ ತಳವೂರಿ ಕಾಳಗ ಕೊಡುತ್ತಿರುವರು. ಇಲ್ಲಿನ ಯುದ್ಧವು ಭೀಷಣವಾಗಲಿದೆಯೆಂದು ಸಮರತಜ್ಞರ ಅಭಿಪ್ರಾಯ.

ಡಾರ್ಲಾನರಿಗೆ ಪಟ್ಟ!

ಇಷ್ಟರತನಕ ಮಿತ್ರರ ವಿರೋಧಿಯಾಗಿದ್ದ ಫ್ರಾನ್ಸಿನ ಡಾರ್ಲನರು ಈಗ ಪಿಟೇನ್ ಲಾವಲರನ್ನು ತೊರೆದು ಮಿತ್ರರ ಕಡೆ ಒಂದಿದ್ದಾರೆ. ಡಾರ್ಲಾನರು ಮಿತ್ರಪಕ್ಷವನ್ನು ಸೇರಿ ಉತ್ತರ ಆಫ್ರಿಕದ ಫ್ರೆಂಚರನ್ನು ಹುರಿದುಂಬಿಸಿ ಜರ್ಮನ್ ಸೇನೆಯೆದುರು ಹೋರಾಡಿಸಿದರು. ಇದರಿಂದ ಮಿತ್ರರಿಗೆ ವಿಶೇಷವಾಗಿ ಅಮೆರಿಕನರಿಗೆ ಬಹಳ ಸಹಾಯವಾಯಿತು. ಆದಾಗಿ ಡಾರ್ಲನರನ್ನು ಪಶ್ಚಿಮ ಆಫ್ರಿಕದಲ್ಲಿ ಫ್ರೆಂಚ್‌ನೌಕಾಧಿಪತಿಯಾಗಿ ನೇಮಿಸಿ ಅವರೇ ಆ ಪ್ರದೇಶದ ಅಧಿಕಾರಿಗಳೆಂದು ಮಿತ್ರರು ಅಧಿಕಾರಪಟ್ಟವನ್ನಿತ್ತಿದ್ದಾರೆ. ಆದರೆ ಇದರಿಂದ ಡಿಗೋಲೆಗೆ ಅಸಮ್ಮತಿಯುಂಟಾಗಿದೆಯೆಂದು ಒಂದು ಸುದ್ದಿ. ಯುದ್ಧಪ್ರಾರಂಭದಲ್ಲಿಯೇ ಫ್ರಾನ್ಸು ಹಿಟ್ಲರನಿಂದ ಆಕ್ರಮಿಸಲ್ಪಡುವಾಗ, ಹೆಂಡತಿ ಮಕ್ಕಳನ್ನು ತೊರೆದು, ದೇಶಬಿಟ್ಟು ಮಿತ್ರರ ಪಕ್ಷ ಸೇರಿದ ಪ್ರಜಾಪ್ರಭುತ್ವವಾದಿಯಾದ ಡಿಗೋಲೆಯನ್ನು ಉಳಿದು ನಿನ್ನೆ ಮೊನ್ನೆ ವರೆಗೆ ಮಿತ್ರರ ದ್ವೇಷಿಯಾಗಿಯೂ, ಸರ್ವಾಧಿಕಾರಿ ಬೆಂಬಲಿಗನಾಗಿಯೂ ಇದ್ದು ಈಗ ತಮ್ಮೊಡನೆ ಸೇರಿದ ಡಾರ್ಲಾನರಿಗೆ ಅಧಿಕಾರಪಟ್ಟ ಕಟ್ಟುವುದರಿಂದ ಮಿತ್ರರು ಗಾಳಿ ಬಂದ ಕಡೆ ತೊತ್ತೆ ತಿರುಗಿಸುವ ಬುದ್ಧಿಯವರೆಂದು ಡಿಗೋಲೆ ಪಕ್ಷದವರು ಊಹಿಸಲು ಆಸ್ಪದವಿದೆ. ಹಿಟ್ಲರನಂತೂ ಪಿಟೇನರನ್ನೂ ಅಲಕ್ಷಿಸಿ ಇಡೀ ಫ್ರಾನ್ಸನ್ನೇ ಸ್ವಾಧೀನಪಡಿಸಿಕೊಂಡು, ಫ್ರಾನ್ಸಿನ ದಕ್ಷಿಣ ಭಾಗದಲ್ಲಿರುವ ಮಹತ್ವದ ಬಂದರವಾದ ಟುಲಾನನ್ನೂ ಸ್ವವಶಮಾಡಿಕೊಂಡಿರುವನು. ಅದರಿಂದ ಫ್ರೆಂಚ್ ನೌಕಾಧಿಕಾರಿಗಳು ಸಿಟ್ಟುಗೊಂಡು ತಮ್ಮ ಹಡಗ ಪಡೆಗಳನ್ನೆಲ್ಲಾ ಭೂಮಧ್ಯ ಸಮುದ್ರದಲ್ಲಿ ಮುಳುಗಿಬಿಟ್ಟರಂತೆ! ಇದೊಂದು ದೊಡ್ಡ ತ್ಯಾಗವೆಂದು ಮಿತ್ರರು ಕೊಂಡಾಡುತ್ತಾರೆ. ಅಂತೂ ಭೂಮಧ್ಯ ಸಮುದ್ರದ ಉತ್ತರಭಾಗವೆಲ್ಲಾ ಈಗ ಹಿಟ್ಲರನ ಕೈವಶದಲ್ಲಿದೆ!

ಚೈತನ್ಯ ಮತ್ತು ಸೌಂದರ್ಯಯುತರಾಗಿರಬಾರದೇಕೆ?

ಸೌಂದರ್ಯವು ಚರ್ಮದ ಚೆಲುವ ಮಾತ್ರವಲ್ಲ, ಆ ಶುಭ್ರ ಕಣ್ಣುಗಳು ಆ ಸುಂದರ ಶರೀರ ಸೌಂದರ್ಯ ಇವು ಶರೀರದ ಆಂತರಿಕ ನೈರ್ಮಲ್ಯದಿಂದ ದೊರಕುತ್ತವೆ. ಆದ್ದರಿಂದ ಪ್ರತಿರಾತ್ರಿ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನು ಅನುಸರಿಸಿರಿ. ಬೈಲ್‌ಬೀನ್ಸು ಶುದ್ಧ ವನಸ್ಪತಿಯದು. ಅವು ಅವಯವಗಳನ್ನು ಸರಿಯಾಗಿಟ್ಟು, ರಕ್ತವನ್ನು ಶುದ್ಧಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು. ಇದರಿಂದ ಸೌಂ



ದರ್ಯ ಶೋಭೆ ಮನೋಹರತೆಗಳುಂಟಾಗುವವು

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್‌ಬೀನ್ಸನು ಬಾಟ್ಲಿ 1ರ 1 ರೂಪಾಯಿ ಬೆಲೆಗೆ ಮಾರುವರು.

BILE BEANS

ಬೈಲ್‌ಬೀನ್ಸು ನಿಮ್ಮನ್ನು ಆರೋಗ್ಯ ಸುಖ ಮತ್ತು ಯೋಗ್ಯತೆಯುಳ್ಳವರಾಗಿ ಮಾಡುವುದು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಪ್ರಾಂತಿಕ ಆಡಳಿತವು ಕೇವಲ ಅಪಹಾಸ್ಯವಾಗಿದೆ!

[೧ನೇ ಪುಟದಿಂದ ಮುಂದುವರಿದುದು]

ಬ್ರಿಟಿಷ ಸರಕಾರದ 'ಜಿಜಿಯಾ'

"ತಂತಿಗಳನ್ನು ಕಡಿದ, ಸಂಕಗಳನ್ನು ಒಡೆದ ರಸ್ತೆಗಳನ್ನು ಹಾಳುಗೆಡವಿದ ಅಪರಾಧಕ್ಕಾಗಿ ಹಿಂದುಗಳಿಗೆ ಮಾತ್ರ "ಪುಂಡು ತೆರಿಗೆ" ಹಾಕುತ್ತಾರೆ. ಅಂಥಾ ಅನರ್ಥಗಳಾಗದಂತೆ ತಡೆದ ಹಿಂದುಗಳೆಷ್ಟೋ ಇರಬಹುದು ಅಂಥಾ ಕೃತ್ಯಗಳಲ್ಲಿ ಭಾಗವಹಿಸದ ಹಾಗೂ ಅದರ ವಿಚಾರವೇ ತಿಳಿಯದ ಹಿಂದುಗಳೆಷ್ಟೋ ಇರಬಹುದು. ಹೀಗಿರುತ್ತಾ ಪುಂಡುಗಂದಾಯವನ್ನು ಎಲ್ಲಾ ಹಿಂದುಗಳ ಮೇಲೆ ಹಾಕುವ ಕಾರ್ಯವು ನಿಷ್ಠುರದ್ದಾಗಿದೆ. ಇದು ಹಿಂದುಗಳಿಗಾದ ಅನ್ಯಾಯವಾಗಿದೆ. ಇದು ಬ್ರಿಟಿಷರು ಹೊರಿಸಿದ 'ಜಿಜಿಯಾ' ತೆರಿಗೆಯಲ್ಲದೆ ಬೇರಲ್ಲ ನಾವೆಷ್ಟು ಬೇಡಿಕೊಂಡರೂ ನೀವು ಇದನ್ನು ಪರಿಹರಿಸಲಿಲ್ಲ. ಮಿಡ್ನಾಪುರದ ದಬ್ಬಾಳಿಕೆಯ ಬಗ್ಗೆ ವಿಚಾರಣೆಯನ್ನೇರ್ಪಡಿಸಲೂ ತಿರಸ್ಕರಿಸಿದಿರಿ. ಬಿರುಗಾಳಿಯ ಪ್ರಳಯದ ಬಗ್ಗೆ ಹೀಗೆ ಅಧಿಕಾರಿಗಳು ಅಸಡ್ಡೆ ಮಾಡುತ್ತಿದ್ದಾರೆ. ಇಂದು ನಾನು ಮಂತ್ರಿಸ್ಥಾನದಲ್ಲಿದ್ದು ನನ್ನ ಜನರಿಗೂ ಗವರ್ನರರಿಗೂ ಪ್ರಯೋಜನವಿಲ್ಲವೆಂದ ಮೇಲೆ ನಾನೇಕೆ ಅಧಿಕಾರದಲ್ಲಿರಬೇಕು?"

ಮೊಗವೀರು ವ್ಯವಸ್ಥಾಪಕ ಮಂಡಳಿ

ಮುಂಬಾಯಿ

ಮುಂಬಾಯಿಯಲ್ಲಿರುವ ಮೊಗವೀರ ವ್ಯವಸ್ಥಾಪಕ ಮಂಡಳಿಯವರು, ಮೊಗವೀರ ಸಮಾಜದ ಸಾಂಪತ್ತಿಕ, ಸಾಮಾಜಿಕ, ಮತ್ತು ಧಾರ್ಮಿಕ ಕ್ಷೇತ್ರ ನೀತಿಗಳನ್ನು ಚರ್ಚಿಸಿ, ಆಲೋಚಿಸುವರಿಯೂ ದ. ಕ. ಮೊಗವೀರ ಮಹಾಜನ ಸಂಘದ ಮುಂದಾಳುಗಳನ್ನು ಮತ್ತು ಇನ್ನಿತರ ಊರು ಕೂಡುಕಟ್ಟುಗಳ ಪ್ರಮುಖರನ್ನು ಬಿಟ್ಟಯೂಗಿ, ಯೋಗ್ಯ ಆಲೋಚನೆಯನ್ನು ಗೈಯ್ಯುವರೆಯೂ ಎಂಟು ಜನ ಪ್ರತಿನಿಧಿಗಳನ್ನು, ನಮ್ಮ ಗುರುಸ್ಥಾನವಾದ (ಬಾರ್ಕೂರು) ಬೆಣ್ಣೆ ಕುದ್ರು ದೇವಸ್ಥಾನದಲ್ಲಿ, ಇದೇ ಬರುವ ಧನು ಸಂಕ್ರಮಣ (15-12-42ರಿಂದ 18-12-42) ನಿಯಮದಂತೆ ವರ್ಷಂಪ್ರತಿ ಜರಗುವ ಮಹೋತ್ಸವ ಸಮಯದಲ್ಲಿ, ಕಳುಹಿಸುತ್ತಾರೆಂಬ ವಾರ್ತೆಯನ್ನು ಕೇಳಿದುತ್ತೇವೆ. ಇವರು ಕೈಕೊಂಡಿರುವ ಈ ಮಹಾ ಯೋಜನೆಗೆ ನಮ್ಮ ಜಿಲ್ಲೆಯ ಮೊಗವೀರರೆಲ್ಲರ ಸಂಪೂರ್ಣ ಬೆಂಬಲ ದೊರೆತು ಅವರ ಕಾರ್ಯವು ಯಶಸ್ವಿಯಾಗಲೆಂದು ನಾವು ಕೂಡಾ ಹಾರೈಸುತ್ತೇವೆ.

ಕೀರ್ತಿಶೇಷ ಜಾರಪ್ಪ ನಾಯ್ಕರು

ಬಿಲ್ಲವ ಸಮಾಜದ ಏಳಿಗೆಯ ಸಲುವಾಗಿ ಹೆಣಗಾಡಿ, ತನು, ಮನ, ಧನವನ್ನರ್ಪಿಸಿದ ಶ್ರೀ. ಜಾರಪ್ಪ ನಾಯ್ಕರ ನಿಧನಕ್ಕಾಗಿ ಮುಂಬಯಿ ಬಿಲ್ಲವರ ಎಸೋಸಿಯೇಶನ್ ಸಂತಾಪ ಸೂಚನೆ ಮಾಡುತ್ತದೆ. ದಿವಂಗತರು ಮಂಗಳೂರಿನ ಜಿಲ್ಲಾ ಬಿಲ್ಲವ ಯೂನಿಯನಿನ ಪ್ರಾಮುಖ್ಯ ಸದಸ್ಯರಾಗಿದ್ದು, ಶ್ರೀ ಗೋಕರ್ಣನಾಥ ಕ್ಷೇತ್ರದ ಅಭ್ಯುದಯಕ್ಕಾಗಿ ಹೆಚ್ಚಿನ ಶ್ರದ್ಧೆಯಿಂದ ಸೇವೆಯನ್ನಿತ್ತಿರುವರು. ಹೊರತಾಗಿ ಮುಂಬಯಿಯಲ್ಲಿ ಬಿಲ್ಲವ ಪ್ರಥಮ ಸಂಘ ಸ್ಥಾಪನೆಯ ಕಾರಣ ಪುರುಷರಾಗಿರುವರು!

NOTICE

The Bombay Life Assurance Co Ltd.

Notice having been given of the loss of Policy No. 12133 on the life of late Mr. Moodabidri Srinivas Naik a duplicate policy will be issued and the claim will be paid unless objection is lodged with us within one month from this date

Bombay, 2-12-42. Jyotendra L Mehta, *Managing Director.*

ನೋಟೀಸು

ಪುತ್ತೂರು ಡಿ। ಮು। ಕೋರ್ಟಿನಲ್ಲಿ

O. S. 314/42.
O. P. 37/42.

ಗುಣಪತಿ— ವಾದಿ

ಜನ್ನಮ್ಮ ಕೂಡಾ 4 ಜನರು—ಪ್ರತಿವಾದಿಗಳು

3ನೇ ಪ್ರತಿವಾದಿ ದೇಜಮ್ಮ ಹೆಂಗ್ಸು ಜನ್ನಮ್ಮ ಹೆಂಗ್ಸಿನ ಮಗಳು, ಕಾರ್ಕಳ ತಾಲೂಕು ನಿಟ್ಟೋಡಿ ಗ್ರಾಮದ ಬರೆಮೇಲುಯೆಂಬಲ್ಲಿರುವ

4ನೇ ಪ್ರತಿವಾದಿಯು ಮಾಡಿದ ಈ ಕೋರ್ಟು O S 70/41ನೇ ಡಿಕ್ರಿ ವ ಅದೇ ಕಾರಣವಾದ ಅಥವ ವಾದಿಳ ಕುಟುಂಬಕ್ಕಾಗಲಿ ದಾವಾ ಆಸ್ತಿಗಾಗಲಿ ಬಾಧಕಕಕ್ಕದಲ್ಲವೆಂತ ಡಿಕ್ಲೇರೇಶನಿಗೂ ಸದ್ರಿ ಡಿಕ್ರಿ ಮೇಲೆ ಅಮಲ್ದಾರಿ ಮಾಡದಂತೆ ಇಂಜಂಕ್ಷನಿಗೆ ಕೂಡಾ ವಾದಿ ಮಾಡಿದ ಮೇಲಿನ ದಾವೆಯು ತಾ 8-12-42ಕ್ಕೆ ಇಟ್ಟಿರುವದರಿಂದ ಆ ಕುರಿತು ನಿಮಗೇನಾದ್ರು ಆಕ್ಷೇಪವಿದ್ದರೆ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸದಿದ್ದರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ

ಪುತ್ತೂರು 25-11-45 Sd) H Pundalik Bhat, Pleader for plff

ಪ್ರಕಟಣೆ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P No 5'1/1942
in Ullal Panchayat Court
Suit 34/38

ಕೊರಗ ಮುರಕಾಲ—ವಾದಿ, ಅರ್ಜಿದಾರ

ಮತ್ತು

ರಾಮು ಮುರಕಾಲ ಸುಬ್ಬ ಹೆಂಗ್ಸಿನ ಮಗ, ಮಂಗಳೂರು ತಾಲೂಕು ಉಳ್ಳಾಲ ಗ್ರಾಮಸ್ಥ

ಪ್ರತಿವಾದಿ, ರೆಸ್ಪೊಂಡೆಂಟ್

ಸದ್ರಿ ರೆಸ್ಪೊಂಡೆಂಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ನಿಮ್ಮ ಬಾಬ್ತು ಮೇಲ್ಕಂಡ ಅಮಲ್ದಾರಿಯಲ್ಲಿ ಜಪ್ತಾದ ಮೇಲ್ಪುರೀ ಕಟ್ಟೋಣವನ್ನು ಏಲಂ ಪಡಿಸುವ ಬಗ್ಗೆ ಏಲಂ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವ ಬಗ್ಗೆ ಮೇಲ್ಕಂಡ ಅಮಲ್ದಾರಿಯು ಮೇಲ್ಕಂಡ ಕೋರ್ಟಿನಲ್ಲಿ ತಾ, 9-12-1942ಕ್ಕೆ ಇಟ್ಟಿರುತ್ತದೆ ಸದ್ರಿ ದಿನ ಹಗಲು 11 ಗಂಟೆಗೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ನಿಮ್ಮ ಉದಾಹರಣೆಯನ್ನು ದಾಖಲ್ಲ ಮಾಡದೆ ಇದ್ದರೆ ಅದನ್ನು ಏಕಪಕ್ಷವಾಗಿ ತೀರ್ಮಾನಿಸೋಹೋಗುತ್ತದೆ

By order.

Mangalore, 21-11-1942. Ullal Rama Rao, B A B L Vakil for Petitioner

ನಾವು ಓಡಿಸಿಬಿಟ್ಟೆವು!

ನಿಮಗೆ ಸಂಬಂಧಪಟ್ಟ ದಸ್ತೈವಜುಗಳನ್ನೆಲ್ಲ ಪುಂಡರು ನಾಶಪಡಿಸಿ ಬಿಟ್ಟರೆ, ನೀವು ಲೆಕ್ಕವಿಲ್ಲದಷ್ಟು ಸಲ ಕೋರ್ಟು—ಕಚೇರಿಗಳಿಗೆ ಎಡತಾಕಬೇಕಾಗುವುದು ಈ ತರದ "ಚಳವಳಿ" ಯಿಂದ ಸರ್ಕಾರಕ್ಕೆ ಆಗುವ ತೊಂದರೆ ಅಲ್ಪಸ್ವಲ್ಪ; ತೀರ ಬಡಜನರಿಗೇ ಇದರ ಉಪಟಳ ಹೆಚ್ಚು.

ಪುಂಡರನ್ನು ತಡೆಯಲು ಪೋಲೀಸರನ್ನೂ ದಂಡನ್ನೂ ಉಪಯೋಗಿಸುವಾಗ, ಓಡಿ ಹೋಗುವವರು ಪುಂಡರು, ತೊಂದರೆಪಡುವವರು ಬಡಪಾಯಿಗಳು ಇದು ಸಾಗುತ್ತಿರುವಷ್ಟು ದಿನ, ಸ್ವಾತಂತ್ರ್ಯ ಹೇಗೆ ಬಂದೀತು?

ಬರಿ ಸರ್ಕಾರಿ ಅಧಿಕಾರಿಗಳೇ ಈ ಪುಂಡರ ಪಿಡುಗನ್ನು ಅಡಗಿಸಲಾರರು. ನಾವು ಮುಂದೆ ಬಂದರೆ, ಅಲ್ಪ ಸಮಯದಲ್ಲಿ ನಿವಾರಿಸಬಲ್ಲೆವು.

ಪುಂಡರನ್ನು ತಗ್ಗಿಸುವುದು ನಮ್ಮ ಕೈಯಲ್ಲಿದೆ

ಸ್ಥಳೀಯ ಕಾವಲು-ಕೂಟಗಳನ್ನೂ ಸ್ವಯಂಸೇವಕರ ರಕ್ಷಾದಳಗಳನ್ನೂ ಏರ್ಪಡಿಸಿರಿ. ಪ್ರತಿ ಆಯಕಟ್ಟಿನ ಸ್ಥಳದಲ್ಲಿ ಒಬ್ಬನನ್ನು ಕಾಯುವುದಕ್ಕೆ ಇಡಿರಿ. ಅವನ ಕೈಯಲ್ಲಿ ಇಬ್ಬರು ವಾಲೀಕಾರರನ್ನು ಕೊಡಿರಿ—ಪುಂಡರು ಬಂದರೆ ಸಹಾಯ ಪಡೆಯಲು ಅವರನ್ನು ಕಳಿಸಲನುಕೂಲವಾಗುವುದು. ಹತ್ತು ಜನರು ಗಟ್ಟಿ ಮನಸ್ಸು ಮಾಡಿದರೆ, ಕೆಲವು ಜನ ದರೋಡೆಕೋರರನ್ನೂ ಕೊಲೆಗಾರರನ್ನೂ ಖಂಡಿತ ಹಿಡಿಸಿಬಿಡಬಲ್ಲರು.

ಇವು ಆಯಕಟ್ಟಿನ ಸ್ಥಳಗಳು

ಸರ್ಕಾರಿ ಹಾಗೂ ಅಂಚೆಯ ಕಚೇರಿಗಳು:- ನಿಮ್ಮ ಭೂಮಿಯ ಸ್ವಾಮ್ಯದ ದಾಖಲೆಗಳೂ ಹಿಂದಿನ ಹಾಗೂ ಪೋಸ್ಟಾಫೀಸಿನಲ್ಲಿಯ ಹಣದ ಆಧಾರ ಇಲ್ಲಿರುತ್ತವೆ. ಇವು ನಾಶವಾಗಬಾರದು.

ಸ್ಟೇಷನುಗಳು ಮತ್ತು ಸಿಗ್ನಲುಗಳು:- ಇವು ಕೆಟ್ಟವೆಂದರೆ ನಿಮ್ಮ ಮಾಲು ಸಾಗಣೆಗಳು ನಿಲ್ಲುತ್ತವೆ; ಅವನ್ನು ಸುಧಾರಿಸಲು ತುಂಬಾ ಸಮಯ ಬೇಕಾಗುವುದು.

ಪುಂಡರನ್ನು ಪ್ರತಿಭಟಿಸಿರಿ!

CPU.57-Kn

ಸಮರಭೂಮಿಯ ಸಂಚಾರ

ಸ್ಟಾಲಿನ್‌ಗ್ರಾಡ್ ರಣಭೂಮಿಯಲ್ಲಿ ಎರಡು ರಶ್ಯನ್ ಸೇನೆಗಳು ಮುನ್ನುಗ್ಗುತ್ತಿವೆ ಇವುಗಳಲ್ಲಿ ದೊಡ್ಡ ಸೈನ್ಯವು ನಾಲ್ಕು ಮೈಲು ದೂರ ಮುಂದೊತ್ತಿ ಹಲವು ಆಯಕಟ್ಟಿನ ಸ್ಥಳಗಳನ್ನು ಆಕ್ರಮಿಸಿಕೊಂಡಿದೆ. ವೈರಿಗಳು ಬಲವಾಗಿ ಪ್ರತಿಭಟಿಸಿದರು ಸ್ಟಾಲಿನ್‌ಗ್ರಾಡ್ ದಕ್ಷಿಣ ಉಪನಗರದಲ್ಲಿ ಜರ್ಮನರು ಹಾಲಿಯಾಗಿದ್ದಾರೆ ಉತ್ತರದ ಕಾರ್ಖಾನೆ ಪ್ರದೇಶದಲ್ಲಿ ವೈರಿಗಳ ಪ್ರತಿಭಟನೆ ಜೋರಾಗಿದೆ ಮೋಸ್ಕೋದ ಹತ್ತಿರ ರಶ್ಯನರು ವೆಲೂಕ ಮತ್ತು ರಿಜಗಗಳ ಮಧ್ಯಪ್ರದೇಶದಲ್ಲಿ ನುಗ್ಗುತ್ತಿರುವರು ಅಲ್ಲಿಯೂ ಅನೇಕ ಆಯಕಟ್ಟಿನ ಸ್ಥಳಗಳು ಅವರ ವಶವಾಗಿವೆ ಆ ಕಡೆಯೂ ಜರ್ಮನರು ಪ್ರತಿಭಟಿಸುತ್ತಿರುವರು ರಿಜೆವಾ ಪಟ್ಟಣದ ಸಲುವಾಗಿ ಉಗ್ರಕದನವಾಗಿ ರಶ್ಯನರೀಗ ಪಟ್ಟಣವನ್ನು ಪ್ರವೇಶಿಸಿ ಓಣಿಗಳಲ್ಲಿ ಕಾಳಗ ಮಾಡುತ್ತಿರುವರು ಡಾನ್ ನದಿಯ ಪೂರ್ವತೀರದ ಮೇಲಿರುವ ಭದ್ರವಾದ ಹಲವು ಸ್ಥಳಗಳನ್ನೂ ರಶ್ಯನರು ಆಕ್ರಮಿಸಿಕೊಂಡಿರುವರು ಜರ್ಮನರಿನ್ನೂ ವಿಮಾನಗಳಿಂದ ಸೈನ್ಯ ತರುತ್ತಿದ್ದಾರೆ ಅಂತೂ ರಶ್ಯದಲ್ಲೀಗ ಜರ್ಮನರ ಆರ್ಭಟೆ ಕಡಿಮೆಕಡಿಮೆಯಾಗುತ್ತಿದೆ ಟುನಿಸಿಯದಲ್ಲಿರುವ ಜರ್ಮನ್ ವ್ಯೂಹವನ್ನು ಜನರಲ್ ಅಂಡರ್‌ಸನರ ಮೊದಲನೆಯ ದಳವು ಭೇದಿಸಿ ಟುನಿಸ್ ಆಘಾತದ ಕಡೆಗೆ ಸಾಗಿದೆ ಬಿಜೆರ್ಟಾ ಮತ್ತು ಮೊದಲು ಬ್ರಿಟಿಷರು ಟುನಿಸವನ್ನು ಕೈವಶಪಡಿಸಿಕೊಳ್ಳುವ ಸಾಹಸ ಲ್ಲಿದ್ದಾರೆ ಬಿಜರ್ಟಾದ ಕಡೆಗೂ ಮಿತ್ರರ ಪ್ರಗತಿಯಿದೆ

ಚರ್ಚಿಲರ ಭಾಷಣ

"ಪ್ರತಿಯೊಂದು ರಣರಂಗದಿಂದಲೂ ಇಡೀ ನವಂಬರ ತಿಂಗಳಲ್ಲಿ ನಮಗೆ ಶುಭ ಸಮಾಚಾರವೇ ಬಂದಿದೆ ಆದರೆ ನಾನೇನೂ ಈಗ ಭರವಸೆ ಕೊಡಲಾರೆ,— ಹೀಗೆ ನಮಗೆ ಜಯ ದೊರಕುತ್ತಿರುವಾಗ ನಾವು ಸುಮ್ಮಗಿರಲಾರೆವು ಮುಂದೇನಾಗುವುದೆಂದು ನಾನು ಹೇಳಲಾರೆನು ಮುಂದೆ ಇದೇ ರೀತಿಯಾಗಿ ವಿಜಯವೇ ಸಿಗುವುದೆನಲು ಸಾಧ್ಯವಿಲ್ಲ ಇಂದು ಸಮಗ್ರ ಯೂರೋಪು ಹಿಟ್ಲರನ ಪಾದಾಕ್ರಾಂತವಾಗಿದೆ ಅವನ ಸಲುವಾಗಿ ಅಸಂಖ್ಯ ಗುಲಾಮರು ಮದ್ದಿನ ಖನಿಗಳಲ್ಲಿ ದುಡಿಯಲು ಸಿದ್ಧರಿದ್ದಾರೆ 'ಯೂರೋಪು ಉಪವಾಸ ಬಿದ್ದರೂ ಜರ್ಮನಿ ಉಪವಾಸ ಬೀಳಲಾರದು' ಎಂದು ಗೋರಿಂಗನು ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಯುಬೋಟುಗಳ ಹಾವಳಿಯೂ ಕಡಿಮೆ ಆಗಿಲ್ಲ ಮುಂದೆ ಅವುಗಳನ್ನು ಹದಕ್ಕೆ ತರುವವರೆಗೆ ಗಂಡಾಂತರವು ಕಡಿಮೆಯಾಗದೆಂಬುದನ್ನು ನೆನಪಿನಲ್ಲಿಡಿರಿ ಇದನ್ನೆಲ್ಲಾ ಯೋಚಿಸುವಾಗ ಇಂದಿನ ಜಯಕ್ಕಿಂತ ಮುಂದಿನ ವಿಜಯವೇ ಮಹತ್ವದ್ದಿದೆಯೆಂದು ತಿಳಕೊಳ್ಳಬಹುದು ಪೂರ್ವಾಂತ್ಯದ ಯುದ್ಧವು ಕೊನೆಗೊಳ್ಳದೆ ಯೂರೋಪಿನ ಯುದ್ಧವೂ ಕೊನೆಗೊಳ್ಳದು ಪರಿಸ್ಥಿತಿಗೆ ಹೀಗೆಯೇ ಇದ್ದರೆ ನಾವು ಪೂರ್ವದ ಮಿತ್ರರಿಗೆ ಬೇಕಾದ ಸಹಾಯ ಕಳುಹಿಸಬಹುದು ಈ ಯುದ್ಧವು ಬೇಗನೆ ಕೊನೆಗಾಣಬಾರದೇಕೆ? ಲೋಕದಲ್ಲಿ ಸುಭಿಕ್ಷೆಯಾಗಲಾರದೇಕೆ? ಈ ಪ್ರಶ್ನೆಗಳಿಗೆ ನನಗೆ ಉತ್ತರವೇ ಸಿಗುವುದಿಲ್ಲ ಹೀಗೆಂದು ಚರ್ಚಿಲರು ಕಳೆದ ಆದಿತ್ಯವಾರ ರಾತ್ರಿ ಯುದ್ಧ ವಿಮರ್ಶೆಯ ಒಂದು ಭಾಷಣ ಮಾಡುತ್ತಾ ಹೇಳಿದರು ಅವರ ಮಾತಿನಲ್ಲಿ ಬ್ರಿಟನಿನ ಇಂದಿನ ರಣನೀತಿ ಸ್ಪಷ್ಟಸ್ಪಷ್ಟವಾಗಿ ಚಿತ್ರಿತವಾಗುತ್ತಿದೆ ಆಫ್ರಿಕಾ ವಿಜಯದಿಂದಾಗಿ ಚರ್ಚಿಲರು ಅತಿರೇಕ ಉಬ್ಬಿ ಹೋಗಿಲ್ಲ ಶತ್ರುವಿನ ಶಕ್ತಿಯನ್ನು ಅವರು ಮರೆತಿಲ್ಲ ರಶ್ಯನರು ಸ್ಟಾಲಿನ್‌ಗ್ರಾಡನ್ನು ರಕ್ಷಿಸುತ್ತಿರುವ ಅವರ ಸಾಹಸವನ್ನು ಪ್ರಶಂಸಿಸಿದರು ಆಫ್ರಿಕದಲ್ಲಿ ಶತ್ರುವನ್ನು ನಾಲ್ನೂರು ಮೈಲು ಬೆನ್ನಟ್ಟಿ ಹೋದ ವಿಜಯವನ್ನು ಎತ್ತಿ ಹೇಳಿದರು ಟ್ರಿಪೋಲಿಟಾನಿಯದಲ್ಲಿ ಇನ್ನೊಂದು ಮಹತ್ವದ ಕಾಳಗವಾಗುವುದೆಂದರು ಮಿತ್ರ ಸೈನ್ಯದ ನೌಕಾ ಯುದ್ಧವನ್ನು ಹೊಗಳಿದರು ನರಕ ಯಾತನೆಗೆ ಗುರಿಯಾದ ಯೂರೋಪಿನ ಜನರನ್ನು ಸಂರಕ್ಷಿಸುವ ಭರವಸೆಯಿತ್ತ ಚರ್ಚಿಲರು ತಮ್ಮ ಔದಾರ್ಯತ್ವ ಸಾಹತುಗಳ ವಿಷಯ ಒಂದೇ ಒಂದು ಮಾತನ್ನೂ ಹೇಳದಿರುವುದು ಹಲವರಿಗೆ ಸಂಶಯವನ್ನುಂಟುಮಾಡುವುದು ಯುದ್ಧಾನಂತರವಾದರೂ ಯೂರೋಪಿನ ಜರ್ಮನ್ ಆಕ್ರಮಿತ ರಾಷ್ಟ್ರಗಳಿಗೆ ಮಾತ್ರ ಸ್ವಾತಂತ್ರ್ಯವಲ್ಲದೆ ವಸಾಹತ್ತುಗಳು ಮತ್ತೂ ಹಿಂದಿನ ಹಾಗೆಯೇ ಉಳಿಯಬೇಕೆ? ಚರ್ಚಿಲರು ಸಾಮ್ರಾಜ್ಯಶಾಹಿಗಳಲ್ಲವೆಂಬುದಕ್ಕೆ ಈ ಭಾಷಣದಲ್ಲಾದರೂ ಏನೂ ಭರವಸೆ ಕಾಣುವುದಿಲ್ಲ!

"ಟುನಿಶಿಯ ಬಿಡಬೇಡಿ"

'ಪ್ರಾಣ ಹೋದರೂ ಚಿಂತೆಯಿಲ್ಲ, ಅದರಿಂದ ಜನ್ಮ ಸಫಲವಾಗುವುದು ಟ್ಯುನಿಶಿಯವನ್ನು ಎಂತಾದರೂ ಬಿಟ್ಟುಬಿಡಬೇಡಿ' ಎಂದು ಹಿಟ್ಲರನು ತನ್ನ ಸೈನಿಕರಿಗೆ ಸಂದೇಶವಿತ್ತಿದ್ದಾನೆ. ರೊಮೆಲನೂ ಟುನಿಶಿಯದಲ್ಲಿ ಬಂದು ಸೈನ್ಯ ಸಜ್ಜಿತನಾಗಿ ತಳವೂರಿದ್ದಾನೆ ಶತ್ರುಗಳನ್ನು ನೂರಾರು ಮೈಲುಗಳ ವರೆಗೆ ಒಂದೇ ಉಸಿರಲ್ಲಿ ಹಿಮ್ಮೆಟ್ಟಿಸಿದರೂ, ಇಂದು ಟುನಿಶಿಯದಲ್ಲಿ ಬಲವಾದ ಆತಂಕವುಂಟಾಗಿದೆ ಹಿಟ್ಲರನ ಆವೇಶಪೂರ್ಣ ಸಂದೇಶ, ರೊಮೆಲನ ಸಿದ್ಧತೆ, ಜರ್ಮನರ ಉಗ್ರ ಪ್ರತಿಭಟನೆ ಇವುಗಳನ್ನು ನಿರೀಕ್ಷಿಸಿದರೆ ಟುನಿಶಿಯದಲ್ಲಿ ಮಹತ್ವದ ಕಾದಾಟ ನಡೆಯಲಿರುವುದೆಂದು ತಿಳಿದುಬರುವುದು ಪೂರ್ವದಲ್ಲಿ ಲಿಬಿಯಾ ಭಾಗದಿಂದ ಬ್ರಿಟಿಷರೂ, ಪಶ್ಚಿಮದಲ್ಲಿ ಆಲ್ಜೀರಿಯಾಭಾಗದಿಂದ ಅಮೆರಿಕನರೂ ಟುನಿಶಿಯದ ಕಡೆಗೆ ಸಾಗುತ್ತಿರುವರು ಉತ್ತರ ಆಫ್ರಿಕದ ಮರ್ಮಸ್ಥಳ ಟುನಿಸ್ ಬಂದರ, ಬಿಜರ್ಟಾ ಬಂದರವೂ ಇದಕ್ಕೆ ಹೊಂದಿಕೊಂಡಿದೆ ಟುನಿಶಿಯವನ್ನು ಮಿತ್ರರು ವಶಪಡಿಸಲಾರರಾದರೆ ಇದುವರೆಗಿನ ಅವರ ವಿಜಯವು ನಿಷ್ಪ್ರಯೋಜಕವಾದೀತು ಆದ್ದರಿಂದಲೇ ಇಲ್ಲಿ ಮಿತ್ರರೂ ಶತ್ರುಗಳೂ ಜೀವದ ಹಂಗು ತೊರೆದು ಹೋರಾಡುತ್ತಿರುವರು ಟುನಿಶಿಯಾ ಬಿಜರ್ಟಾಗಳ ರಕ್ಷಣೆಗಾಗಿ ಜರ್ಮನಿ ಇಟಲಿಗಳಿಂದ ದಿನನಿತ್ಯವೂ ಸೈನ್ಯ ಸಾಧನಗಳು ಸಾಗುತ್ತಿವೆ ಈ ಬಂದರಗಳ ಹೆಬ್ಬಾಗಿಲಿನಂತಿರುವ ಎಲೆ ಅಗೇಲಾದಲ್ಲಿ ರೊಮೆಲನು ಉಗ್ರ ಪ್ರತಿಭಟನೆ ಕೊಡಬಹುದು ಟುನಿಶಿಯಾ ಎಂದರೆ ಟುನಿಸ್, ಬಿಜರ್ಟಾ ಎಲ್ ಅಗೇಲಾ ಮೊದಲಾದ ನಶ್ಪಿ ಪಟ್ಟಣಗಳುಳ್ಳ ಪ್ರಾಂತ ಟುನಿಸ್ ಬಂದರವೇ ಇದರ ರಾಜಧಾನಿ ಇಲ್ಲಿನ ಹೋರಾಟಕ್ಕಾಗಿ ಜರ್ಮನರು ರಶ್ಯನ್ ರಣಭೂಮಿಯಿಂದ ದೊಡ್ಡ ದೊಡ್ಡ ಬಾಂಬು ಬೀಸಾಡು ವಿಮಾನಗಳನ್ನೂ ಹೋರಾಡುವ ವಿಮಾನಗಳನ್ನೂ ತಂದಿರಿಸಿದ್ದಾರಂತೆ! ಇದುವರೆಗೆ ನೂರಾರು ಮೈಲು ಕಣ್ಮುಚ್ಚಿ ತರೆಯುವಷ್ಟರಲ್ಲಿ ಮುಂದುವರಿದಿದ್ದರೂ, ಇನ್ನುಮುಂದೆ ಅದು ಸುಲಭವಲ್ಲವೆಂದು ಮಿತ್ರರಿಗೂ ಚನ್ನಾಗಿ ಗೊತ್ತಿದೆ ಟುನಿಸ್ ಬಿಜರ್ಟಾ ಬಂದರಗಳು ಸಿಸಿಲಿ ಸಾರ್ಡೀನಿಯಗಳಿಂದ ೧೨೦ ಮೈಲುಗಳ ಅಂತರದಲ್ಲಿರುವುದರಿಂದ ಬೇಕಾದ ಸಾಧನ ಸಾಮಗ್ರಿ ಒಯ್ಯಲು ಅನುಕೂಲವುಂಟು ಮಿತ್ರರು ಪಶ್ಚಿಮದಿಂದ ಸಾವಿರಾರು ಮೈಲು ದೂರವಿರುವ ಬ್ರಿಟನು ಅಮೆರಿಕಗಳಿಂದ ಸಾಧನ ಸಾಮಗ್ರಿ ತರಿಸಿಕೊಳ್ಳಬೇಕಾಗಿದೆ! ಇಷ್ಟು ದೀರ್ಘ ಪ್ರಯಾಣವನ್ನು ಭೂಮಧ್ಯ ಸಮುದ್ರದ ವರೆಗೆ ಸುರಕ್ಷಿತವಾಗಿ ಮಾಡುವುದೂ ಕಷ್ಟಸಾಧ್ಯ. ಅಮೆರಿಕನರು ಮೊರೊಕ್ಕೋ ಅಲ್ಜೀರಿಯಗಳಲ್ಲೀಗ ಅಲ್ಲಿಂದ ಟುನಿಸಿಯಾ ಆಕ್ರಮಣಕ್ಕೆ ಸಾಹಸಪಡುತ್ತಾರೆ ಭೂಮಧ್ಯ ಸಮುದ್ರದ ಅಪಾಯವನ್ನವಲೋಕಿಸಿ ಅವರು ಒಮ್ಮೆಗೇ ಟುನಿಶಿಯದಲ್ಲಿಳಿಯುವುದು ಸಾಧ್ಯವಾಗಲಿಲ್ಲವೆಂದು ತೋರುತ್ತದೆ ಅಂತೂ ಜರ್ಮನರು ಒಮ್ಮೆಲೇ ಫ್ರಾನ್ಸ್ ಕರಾವಳಿಯನ್ನಾಕ್ರಮಿಸಿಕೊಂಡು, ಸಾಗರವನ್ನು ದಾಟಿ ಟುನಿಶಿಯವನ್ನು ಸ್ವಾಧೀನಪಡಿಸಿ ಅಲ್ಲಿ ಭದ್ರವಾಗಿ ತಳವೂರಿ ಕಾಳಗ ಕೊಡುತ್ತಿರುವರು ಇಲ್ಲಿನ ಯುದ್ಧವು ಭೀಷಣವಾಗಲಿದೆಯೆಂದು ಸಮರತಜ್ಞರ ಅಭಿಪ್ರಾಯ

ಡಾರ್ಲಾನರಿಗೆ ಪಟ್ಟ!

ಇಷ್ಟರತನಕ ಮಿತ್ರರ ವಿರೋಧಿಯಾಗಿದ್ದ ಫ್ರಾನ್ಸಿನ ಡಾರ್ಲನರು ಈಗ ಪಿಟೇನ್ ಲಾವಲರನ್ನು ತೊರೆದು ಮಿತ್ರರ ಕಡೆ ಒಂದಿದ್ದಾರೆ ಡಾರ್ಲಾನರು ಮಿತ್ರಪಕ್ಷವನ್ನು ಸೇರಿ ಉತ್ತರ ಆಫ್ರಿಕದ ಫ್ರೆಂಚರನ್ನು ಹುರಿದುಂಬಿಸಿ ಜರ್ಮನ್ ಸೇನೆಯೆದುರು ಹೋರಾಡಿಸಿದರು ಇದರಿಂದ ಮಿತ್ರರಿಗೆ ವಿಶೇಷವಾಗಿ ಅಮೆರಿಕನರಿಗ ಬಹಳ ಸಹಾಯವಾಯಿತು ಆದಾಗಿ ಡಾರ್ಲನರನ್ನು ಪಶ್ಚಿಮ ಆಫ್ರಿಕದಲ್ಲಿ ಫ್ರೆಂಚ್ ನೌಕಾಧಿಪತಿಯಾಗಿ ನೇಮಿಸಿ ಅವರೇ ಆ ಪ್ರದೇಶದ ಅಧಿಕಾರಿಗಳೆಂದು ಮಿತ್ರರು ಅಧಿಕಾರಪಟ್ಟವನ್ನಿತ್ತಿದ್ದಾರೆ! ಆದರೆ ಇದರಿಂದ ದಿಗೋಲೆಗೆ ಅಸಮ್ಮತಿಯುಂಟಾಗಿದೆಯೆಂದು ಒಂದು ಸುದ್ದಿ ಯುದ್ಧ ಪ್ರಾರಂಭದಲ್ಲಿಯೇ ಫ್ರಾನ್ಸು ಹಿಟ್ಲರನಿಂದ ಆಕ್ರಮಿಸಲಪಡುವಾಗ, ಹೆಂಡತಿ ಮಕ್ಕಳನ್ನು ತೊರೆದು, ದೇಶಬಿಟ್ಟು ಮಿತ್ರರ ಪಕ್ಷ ಸೇರಿದ ಪ್ರಜಾಪಕ್ಷಪಾತಿಯಾದ ದಿಗೋಲೆಯನ್ನು ಉಳಿದು ನಿನ್ನೆ ಮೊನ್ನೆ ವರೆಗೆ ಮಿತ್ರರ ದ್ವೇಷಿಯಾಗಿಯೂ ಸರ್ವಾಧಿಕಾರಿ ಬೆಂಬಲಿಗನಾಗಿಯೂ ಇದ್ದ ಈಗ ತಮ್ಮೊಡನೆ ಸೇರಿದ ಡಾರ್ಲಾನರಿಗೆ ಅಧಿಕಾರಪಟ್ಟ ಕಟ್ಟುವುದರಿಂದ ಮಿತ್ರರು ಗಾಳಿ ಬಂದ ಕಡೆ ತೊಡೆ ತಿರುಗಿಸುವ ಬುದ್ಧಿಯವರೆಂದು ದಿಗೋಲೆ ಪಕ್ಷದವರು ಊಹಿಸಲು ಆಸ್ಪದವಿದೆ ಹಿಟ್ಲರನಂತೂ ಪಿಟೇನರನ್ನೂ ಅಲಕ್ಷಿಸಿ ಇಡೀ ಫ್ರಾನ್ಸನ್ನೇ ಸ್ವಾಧೀನಪಡಿಸಿಕೊಂಡು, ಫ್ರಾನ್ಸಿನ ದಕ್ಷಿಣ ಭಾಗದಲ್ಲಿರುವ ಮಹತ್ವದ ಬಂದರವಾದ ಟುಲಾನನ್ನೂ ವಶಮಾಡಿಕೊಂಡಿರುವನು ಆದರಿಂದ ಫ್ರೆಂಚ್ ನೌಕಾಧಿಕಾರಿಗಳು ಸಿಟ್ಟುಗೊಂಡು ತಮ್ಮ ಹಡಗು ಪಡೆಗಳನ್ನೆಲ್ಲಾ ಭೂಮಧ್ಯ ಸಮುದ್ರದಲ್ಲಿ ಮುಳುಗಿಸಿ ಬಿಟ್ಟರಂತೆ! ಇದೊಂದು ದೊಡ್ಡ ತ್ಯಾಗವೆಂದು ಮಿತ್ರರು ಕೊಂಡಾಡುತ್ತಾರೆ ಅಂತೂ ಭೂಮಧ್ಯ ಸಮುದ್ರದ ಉತ್ತರಭಾಗವೆಲ್ಲಾ ಈಗ ಹಿಟ್ಲರನ ಕೈವಶದಲ್ಲಿದೆ!

ಚೈತನ್ಯ ಮತ್ತು ಸೌಂದರ್ಯಯುತರಾಗಿರಬಾರದೇಕೆ?

ಸೌಂದರ್ಯವು ಚರ್ಮದ ಚೆಲುವು ಮಾತ್ರವಲ್ಲ, ಆ ಶುಭ್ರ ಕಣ್ಣುಗಳು ಆ ಸುಂದರ ಶರೀರ ಸೌಂದರ್ಯ ಇವು ಶರೀರದ ಆಂತರಿಕ ನೈರ್ಮಲ್ಯದಿಂದ ದೊರಕುತ್ತವೆ ಆದ್ದರಿಂದ ಪ್ರತಿರಾತ್ರಿ ಎರಡು ಬೈಲ್‌ಬೀನ್ಸು ಮಾತ್ರೆಗಳನ್ನು ಸೇವಿಸುವ ಸುವರ್ಣ ನಿಯಮವನ್ನು ಅನುಸರಿಸಿರಿ ಬೈಲ್‌ಬೀನ್ಸು ಶುದ್ಧ ವನಸ್ಪತಿಯದು ಅವು ಅವಯವಗಳನ್ನು ಸರಿಯಾಗಿಟ್ಟು, ರಕ್ತವನ್ನು ಶುದ್ಧಗೊಳಿಸಿ, ದಿನನಿತ್ಯವೂ ಅಶುದ್ಧ ಆಹಾರವನ್ನು ಹೊರಹಾಕುವವು ಇದರಿಂದ ಸೌಂದರ್ಯ ಶೋಭೆ ಮನೋಹರತೆಗಳುಂಟಾಗುವವು

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್‌ಬೀನ್ಸನು ಬಾಟ್ಲಿ 1ರ,1 ರೂಪಾಯಿ ಬೆಲೆಗೆ ಮಾರುವರು

BILE BEANS

ಬೈಲ್‌ಬೀನ್ಸು ನಿಮ್ಮನ್ನು ಆರೋಗ್ಯ ಸುಖ ಮತ್ತು ಯೋಗ್ಯತೆಯುಳ್ಳವರಾಗಿ ಮಾಡುವುದು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಸ್ವದೇಶಾಭಿಮಾನಿ

ತಾರೀಕು 4—12—1942

ಮಿಡ್ನಾಪುರ ನಿರಾಶ್ರಿತರು

ಮಿಡ್ನಾಪುರ ಮತ್ತು ಇಪ್ಪತ್ತನಾಲ್ಕು ಪರಗಣಗಳಲ್ಲಿ ಭೀಕರ ಬಿರುಗಾಳಿಯೆದ್ದು ಉಂಟಾದ ಜನ, ಜಾನುವಾರುಗಳ ಅಸಂಖ್ಯ ಹಾನಿಯ ಸುದ್ದಿಯನ್ನು ಇಷ್ಟರಲ್ಲೇ ನಮ್ಮ ವಾಚಕರು ತಿಳಿದಿರುವರು. ಅಲ್ಲಿ ಆದ ಅನಾಹುತವು ಕ್ವೆಟ್ಟಾ ಭೂಕಂಪಕ್ಕಿಂತಲೂ ಮಿಗಿಲಾಗಿಯೇ ಇದೆಯೆಂದು ಈಗ ಕೇಳಿಬರುತ್ತದೆ. ಮಿಡ್ನಾಪುರದ ಪರಿಸ್ಥಿತಿಯ ಕುರಿತು ನಾವು ಕೆಲವು ವಿವರಗಳನ್ನು ಇದೇ ಸಂಚಿಕೆಯ ಬೇರೆ ಕಡೆಗಳಲ್ಲಿಯೂ ಪ್ರಕಟಿಸಿದ್ದೇವೆ. ಇವುಗಳಿಂದೆಲ್ಲಾ ಅಲ್ಲಿನ ನಿರಾಶ್ರಿತರು ಎಂತಹ ಆಪತ್ತಿಗೊಳಗಾಗಿದ್ದಾರೆಂದು ನಾವು ತಿಳಕೊಳ್ಳಬಹುದು.

ನಮ್ಮ ಸೋದರ ಭಾರತೀಯರು, ಹೀಗೆ ಮನೆಮಾರುಗಳನ್ನು, ಬಂಧು ಬಾಂಧವರನ್ನು ಸರ್ವಸ್ವವನ್ನೂ ಕಳೆದುಕೊಂಡು ಬರಬಾರದ ಬನ್ನಗಳಿಗೆ ತುತ್ತಾಗಿರುವಾಗ ಅವರ ವಿಷಯ ನಾವು ನಮ್ಮ ಹಾರ್ದಿಕ ಸಹಾನುಭೂತಿ ತೋರಿಸುವುದು ಮಾತ್ರವಲ್ಲದೆ ಅವರಿಗೆ ಯಥಾಶಕ್ತಿ ಸಹಾಯವನ್ನು ಕಳುಹಿಸಿ ಅನಾಥರಾಗಿರುವವರಿಗೆ ಅನ್ನ ಬಟ್ಟೆಗಳನ್ನೀಯುವುದೂ ನಮ್ಮ ಕರ್ತವ್ಯವಾಗಿದೆ. ದಕ್ಷಿಣಕನ್ನಡ ಜಿಲ್ಲಾ ಪತ್ರಿಕೋದ್ಯಮಿ ಸಂಘದವರು ಈ ವಿಚಾರದಲ್ಲಿ ಮುಂದಾಳುತನ ವಹಿಸಿ ದುಡಿಯುವುದು ಪ್ರಶಂಸನೀಯವಿದೆ. ಉದಾರಿಗಳೂ ಧರ್ಮಬುದ್ಧಿಯುಳ್ಳವರೂ ಆದ ನಮ್ಮ ಜಿಲ್ಲೆಯ ಮಾತ್ರವಲ್ಲ ಅಖಿಲ ಕರ್ನಾಟಕದ ಮಹನೀಯರು ಈ ನಿರಾಶ್ರಿತ ರಕ್ಷಣಾ ಕಾರ್ಯದಲ್ಲಿ ತಮ್ಮಿಂದಾಗುವ ಎಲ್ಲ ವಿಧದ ತನುಮನಧನ ಸಹಾಯಗಳನ್ನೀಯಬೇಕೆಂದು ನಾವು ವಿನಂತಿಸುತ್ತೇವೆ.

ಸಾಮ್ರಾಜ್ಯಕ್ಕಾಗಿ?

"ಚರ್ಚಿಲರು ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ಹೋರಾಡುತ್ತಿರುವರು; ಫ್ರೆಂಚ್ ಸಾಮ್ರಾಜ್ಯಕ್ಕಾಗಿ ಹೋರಾಡುತ್ತಿರುವರು; ಇಷ್ಟೇ ಅಲ್ಲ ಡಚ್ ಸಾಮ್ರಾಜ್ಯಕ್ಕಾಗಿಯೂ ಹೋರಾಡುತ್ತಿರುವರು; ಆದರೆ ನಾವು ಏಕೆ ಹೋರಾಟಕ್ಕಿಳಿದಿರುವುದು? ಲೋಕವು ಮೊದಲಿನಂತೆಯೇ ಇರಬೇಕೆಂಬುದು ನಮ್ಮ ಯುದ್ಧೋದ್ದೇಶವೆ?" ಹೀಗೆಂದು ಲುಯಿ ಫಿಶರರು ಅಮೆರಿಕದ ರೇಡಿಯೋದಲ್ಲಿ ಅಮೆರಿಕವನ್ನೆಚ್ಚರಿಸಲು ಪ್ರಾರಂಭವಾದ ಉಪನ್ಯಾಸ ಮಾಲೆಯಲ್ಲಿ ಒಂದು ಭಾಷಣ ಕೊಡುತ್ತಾ ಹೇಳಿದರು. ಭಾರತದ ಮುಖಂಡರು, ಈಗಾಗಲೇ ಸ್ವರಾಜ್ಯದೇರ್ಪಾಡಾಗಿ, ಬ್ರಿಟಿಷರು ಭಾರತವನ್ನು ಬಿಟ್ಟುಹೋಗಬೇಕೆಂದು ಹೇಳುವುದಿಲ್ಲ; ಅವರಿಗೀಗ ರಾಷ್ಟ್ರೀಯ ಸರಕಾರ ಬೇಕಾಗಿದೆಯೆಂದೂ, ಗಾಂಧಿಜಿಯಾದರೂ ಫೇಸಿಸ್ಟರೆದುರು ಹೋರಾಡುವಲ್ಲಿ ಇದನ್ನೇ ಕೇಳುತ್ತಿರುವರೆಂದೂ ಅವರು ಆ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಚರ್ಚಿಲರು ಭಾರತವನ್ನು ಬ್ರಿಟಿಷ್ ಸಾಮ್ರಾಜ್ಯಮಾಲೆಯಿಂದ ಕಳಚಿ ಹಾಕಿ 'ಸಾರ್ವಭೌಮರ ಸಾಮ್ರಾಜ್ಯ ಪತನೋತ್ಸವದಲ್ಲಿ ಅಧ್ಯಕ್ಷತೆ ವಹಿಸುವ ಪ್ರಥಮ ಪ್ರಧಾನ ಮಂತ್ರಿಯಾಗಲಾರೆ'ರೆಂಬುದು ಅವರ ಮಾತಿನಿಂದಲೇ ವ್ಯಕ್ತವಾಗಿದೆ. ಅಮೆರಿಕನರಿದಕ್ಕೆ ಏನೆನ್ನುವರು?

ಎದೆನೋವು ಮತ್ತು ಬ್ರೊಂಕೈಟಿಸ್‌ಗಳನ್ನು ಗುಣಪಡಿಸಿರಿ

ನೀವು ಬ್ರೊಂಕೈಟಿಸ್ ಅಥವಾ ಅಂಥಾ ಬೇರೆ ಯಾವುದೇ ಬೇನೆಯಿಂದ ನರಳುವಿರಾದರೆ ಪೆಪ್ಸು ನಿಮಗೆ ಒಳ್ಳೆಯ ಗುಣವನ್ನು ಕೊಡುವುದು. ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು ಎಲ್ಲಾ ತರದ ಎದೆ ಶ್ವಾಸಕೋಶಗಳ ನೋವುಗಳನ್ನು ಗುಣಪಡಿಸುತ್ತವೆ. ಇದರಲ್ಲಿ ಪ್ರಸಿದ್ಧ ಪೈನ್ ಅರಣ್ಯಗಾಳಿಯ ಎಲ್ಲಾ ಗುಣಗಳೂ ಇವೆ.

ಬಾಯಲ್ಲಿ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುತ್ತದೆ. ಹೀಗೆ ಪೆಪ್ಸು ಉಪದ್ರವಕಾರೀ ಎದೆ ಶ್ವಾಸಗಳ ನೋವನ್ನು ಗುಣಪಡಿಸಿ ಶ್ವಾಸವನ್ನು ಸರಿಗೊಳಿಸುವುದು. ಪೆಪ್ಸು ನಿಮ್ಮ ಕಂಠನೋವನ್ನು ಸರಿಗೊಳಿಸುತ್ತದೆ. ರೋಗವು ತಾಗದಂತೆ ಶರೀರದಲ್ಲಿ ಶಕ್ತಿಯನ್ನುಂಟುಮಾಡುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ಒಂದು ರೂಪಾಯಿ ಬೆಲೆಗೆ ದೊರಕುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸ್ವದೇಶ ಸಮಾಚಾರ

ಪ್ರೊ॥ ಬನ್ಸಾಲಿಯರ ಉಪವಾಸ

ಮಧ್ಯಪ್ರಾಂತದ ಚಿಮೂರಿನಲ್ಲಿ ದೊಂಬಿಯಾದ ಬಗ್ಗೆ ಖಟ್ಲೆ ನಡೆದು ಹಲವರನ್ನು ಗಲ್ಲಿಗೇರಿಸಬೇಕೆಂದು ಸೆಶನ್ಸ ಜಡ್ಜರು ತೀರ್ಮಾನಿಸಿದರಷ್ಟೆ! ಚಿಮೂರಿನಲ್ಲಿ ಸೈನಿಕರೂ ಪೋಲೀಸರೂ ಅತ್ಯಾಚಾರ ಮಾಡಿದರೆಂದು ಲೋಕವಾರ್ತೆಯುಂಟು. ಈ ಬಗ್ಗೆ ವಿಚಾರಣೆ ನಡೆಸಬೇಕಾಗಿ ಮಹಾತ್ಮರ ಸೇವಾಗ್ರಾಮದ ಆಶ್ರಯದ ಪ್ರಾಧ್ಯಾಪಕರಾದ ಪ್ರೊ॥ ಬನ್ಸಾಲಿಯವರು ಡಿಲ್ಲಿಗೆ ಹೋಗಿ ಅಹೆಯವರಿಗೆ ಮಾಡಿಕೊಂಡ ವಿನಂತಿ ನಿರರ್ಥಕವಾಯಿತು. ಬನ್ಸಾಲಿಯವರು, ಡಿಲ್ಲಿ ಪಟ್ಟಣವನ್ನು ೩ ತಾಸುಗಳಲ್ಲಿ ಬಿಟ್ಟು ಹೋಗಬೇಕೆಂದು ಡಿಲ್ಲಿಯ ಪೋಲೀಸ ಅಧಿಕಾರಿಗಳು ಹೊರಡಿಸಿದ ಹುಕುಮನ್ನು ಅವರು ಮನ್ನಿಸಲಿಲ್ಲ. ಆದರಿಂದ ಬನ್ಸಾಲಿಯವರನ್ನು ಸೆರೆಹಿಡಿದು ಸೇವಾಗ್ರಾಮಕ್ಕೆ ತಂದು ಬಿಡಲಾಯಿತು. ಬನ್ಸಾಲಿಯವರು ಚಿಮೂರಿಗೆ ಹೋಗಿ ಅಲ್ಲಿಯ ಬಾಲಾಜಿ ದೇವಸ್ಥಾನದಲ್ಲಿ ನವಂಬರ ೧೧ನೇ ತಾರೀಖಿನಿಂದ ಉಪವಾಸ ಪ್ರಾರಂಭಿಸಿದರು. ಅಲ್ಲಿಯೂ ಪೋಲೀಸರು ಅವರನ್ನು ಹಿಡಿದು ಸೇವಾಗ್ರಾಮಕ್ಕೆ ತಂದುಬಿಟ್ಟರು. ೧೯ನೇ ತಾರೀಖಿನ ತನಕ ಬನ್ಸಾಲಿಯವರು ಸೇವಾಗ್ರಾಮದಲ್ಲಿ ಉಪವಾಸ ಮಾಡಿ ಪುನಃ ಆ ದಿನ ಸಂಜೆ ೬ ಘಂಟೆಗೆ ಹೊರಟರು. ಸೇವಾಗ್ರಾಮದಿಂದ ಚಿಮೂರಗ್ರಾಮ ೮೦ ಮೈಲು ದೂರವಿದೆ. ಈ ಪ್ರವಾಸವನ್ನು ಬನ್ಸಾಲಿಯವರು ಪಾದಚಾರಿಗಳಾಗಿ ನಡಿಸಿದರು. ಚಿಮೂರಿಗೆ ೨೩ನೇ ತಾರೀಖಿಗೆ ತಲಪಿದರು. ದಂಡಿ ಯಾತ್ರೆ ಮಾಡುವಾಗ ಮಹಾತ್ಮರು ಒಯ್ದ ದಂಟುಗೋಲನ್ನು ಬನ್ಸಾಲಿಯವರು ಹಿಡಕೊಂಡು ಪ್ರವಾಸ ಮಾಡಿದರು. ಅಲ್ಲಿ ಪುನಃ ಪೋಲೀಸರು ಅವರನ್ನು ಸೆರೆಹಿಡಿದು ವರ್ಧಾಕ್ಕೆ ತಂದುಬಿಟ್ಟರು. ಇನ್ನು ಕೆಲವು ದಿನಗಳಲ್ಲಿ ಬನ್ಸಾಲಿಯವರು ಪುನಃ ಚಿಮೂರಿಗೆ ಹೊರಡುತ್ತಾರಂತೆ!

ಬನ್ಸಾಲಿಯವರು ನಗೆಮೊಗದವರು, ಯಾರಾಗಲೂ ಕಾರ್ಯಮಗ್ನರು. ಸರಿಯಾಗಿ ಬೆಳಗಿನ ೪ ಘಂಟೆಗೆ ಅವರು ಏಳುತ್ತಾರೆ. ಆ ಕಾಲದಿಂದ ಸಂಜೆ ತನಕ ಉದ್ಯೋಗಮಗ್ನರಾಗುತ್ತಾರೆ. ಮಹಾತ್ಮರಂತೆ ಪಂಚೆಯನ್ನುಟ್ಟುಕೊಂಡು ಆಶ್ರಮದಲ್ಲಿ ದುಡಿಯುತ್ತಾರೆ. ದೊಡ್ಡ ವಿದ್ವಾಂಸರು. ಹರಿಜನರಿಗೆ ಪಾಠ ಹೇಳಿಕೊಡುತ್ತಾರೆ; ಆಶ್ರಮವಾಸಿಗಳಿಗೆ ಇಂಗ್ಲಿಷ, ಗುಜರಾಥಿ ಭಾಷೆಗಳನ್ನು ಕಲಿಸುತ್ತಾರೆ. ಖರ್ಜೂರ ಮತ್ತು ಹಾಲು ಇವೇ ಬನ್ಸಾಲಿಯವರ ಆಹಾರ. ಹಿಂದೆರಡು ಬಾರಿ ಅವರು ಉಪವಾಸ ಮಾಡಿದ್ದುಂಟು. ಒಂದು ಸಲ ೧೫ ದಿನಗಳ ತನಕ ನೀರು ಸಹ ತೆಕ್ಕೊಳ್ಳದೆ ಉಪವಾಸ ಮಾಡಿದ್ದಾರೆ. ಇನ್ನೊಂದು ಸಲ ೩೦ ದಿನಗಳ ತನಕ ಆಹಾರ ತೆಕ್ಕೊಳ್ಳದೆ ಉಪವಾಸ ಮಾಡಿದ್ದಾರೆ! ಚಿಮೂರಿಗಾಗಿ ಈಗ ಕೈಕೊಂಡ ಉಪವಾಸ ಮರಣ ಪರ್ಯಂತವಾದದ್ದೆಂದು ಆಪ್ತ ಸಂಗಡಿಗರು ಹೇಳುತ್ತಾರೆ. ಬನ್ಸಾಲಿಯವರು ನಿಶ್ಯಾಂತ ಅಹಿಂಸಾಚಾರಿಗಳು; ಪವಿತ್ರಾತ್ಮರು; ಹುತಾತ್ಮರಾಗಲು ಹೊರಟಿದ್ದಾರೆ! ಬನ್ಸಾಲಿಯವರ ಉಪವಾಸದ ಸುದ್ದಿಯನ್ನು ಜಾನಕೀ ಬಾಯಿ ಬಜಾಜರು ಒಂದು ಪತ್ರ ಬರೆದು ಗಾಂಧಿಜಿ ಕಡೆಗೆ ಕಳುಹಿಸಲು ಸರಕಾರಕ್ಕೆ ಒಪ್ಪಿಸಿದರೆಂದೂ, ಆದರೆ ಆ ಪತ್ರವನ್ನು ಗಾಂಧಿಜಿಗೆ ಕೊಡಲು ಸರಕಾರ ನಿರಾಕರಿಸಿದೆಯೆಂದೂ ಸುದ್ದಿ.

ಆಹಾರ ಪದಾರ್ಥಗಳ 'ರೇಶನಿಂಗ್'

ಮಾಡಬೇಕೆಂದು ಮೈಸೂರು ಸರಕಾರವು ನಿರ್ಧರಿಸಿ ಬೆಂಗಳೂರಲ್ಲಿ ಬೇಗನೇ ಪ್ರಯೋಗಕ್ಕೆ ತರಲಿದೆ. ಇದು ಭಾರತ ಸರಕಾರದ ಯೋಚನೆಯೂ ಆಗಿದೆಯೆಂದು ತಿಳಿದುಬರುತ್ತದೆ. ವಿಪರೀತ ಲಾಭಸಂಪಾದನೆ ಮತ್ತು ಇತರ ಪದ್ಧತಿಗಳನ್ನು ತಪ್ಪಿಸಿ ಆಹಾರ ಪದಾರ್ಥಗಳು ಪೆಟ್ರೋಲ್ ಚಿಮಿಣಿ ಎಣ್ಣೆಗಳಂತೆ ಎಲ್ಲರಿಗೂ ಹಂಚಿ ಸಿಗುವಂತೆ ಮಾಡುವ ಕ್ರಮವೇ 'ರೇಶನಿಂಗ್'.

ಅಧಿಕಾರಿಗಳ ಅತ್ಯಾಚಾರಕ್ಕೆ ಕಾಯಿದೆಯ ಅಭಯ!

ಚಳವಳವನ್ನು ನಿರ್ನಾಮಮಾಡಲು ಅಧಿಕಾರಿಗಳು ಕೈಕೊಂಡ ಅತ್ಯಾಚಾರಗಳಿಗೆ ಕಾಯಿದೆಯ ಅಭಯ ಕೊಡಬೇಕೆನ್ನುವ ಸೂಚನೆಗೆ ಕೇಂದ್ರ ಸರಕಾರದ ಗೃಹ ಮಂತ್ರಿಗಳ ಆಮಂತ್ರಣದ ಮೇರೆಗೆ ದೇಶದ ಪರಿಸ್ಥಿತಿಯನ್ನು ವಿಚಾರಿಸಲು ಹೊಸ ಡಿಲ್ಲಿಗೆ ಬಂದಿದ್ದ ಎಲ್ಲಾ ಪ್ರಾಂತಿಕ ಸರಕಾರಗಳ ಚೀಫ್ ಸೆಕ್ರೆಟರಿಗಳು ಬೆಂಬಲ ಕೊಟ್ಟಿರುವರೆಂದು ತಿಳಿದು ಬರುತ್ತದೆ. ಒಬ್ಬಿಬ್ಬ ಗವರ್ನರರು ಪೋಲೀಸರಿಗೆ ಭರವಸೆ ಕೊಟ್ಟದ್ದರಿಂದ ಹಾಗೆ ಮಾಡಬೇಕಾಯಿತಂತೆ! ೨೦ ವರ್ಷಗಳ ಹಿಂದೆ ನಡೆದ ಸೈನ್ಯದ ಅಳ್ವಿಕೆಯ ನಂತರ ಇಂಥಾ ಕಾಯಿದೆಯನ್ನೀಗ ಮಾಡಲಾಗಿದೆಯೆಂದು ಉಪಮೆ ಕೊಡಲಾಗಿದೆಯಂತೆ!

ತಗಡೂರು ರಾಮಚಂದ್ರರಾಯರ ಉಪವಾಸ

'ಬೊಂಬಾಯಿಯಲ್ಲಿ ಕಳೆದ ಅಗಸ್ಟ್ ತಿಂಗಳ ಮೊದಲನೆ ವಾರದಲ್ಲಿ ಸಂಸ್ಥಾನಗಳ ಪ್ರಜಾಪರಿಷತ್ತಿನ ಅಧಿವೇಶನವು ನಡೆಯಿತು. ಈ ಅಧಿವೇಶನದಲ್ಲಾದ ನಿರ್ಣಯಗಳು ಜಾರಿಯಲ್ಲಿ ತರಲ್ಪಡಬೇಕು' ಎಂಬ ಉದ್ದೇಶದಿಂದ ಶ್ರೀ ತಗಡೂರು ರಾಮಚಂದ್ರರಾಯರು ಇದೇ ಡಿಸೆಂಬರ್ ೨ನೆಯ ತಾರೀಕಿನಿಂದ, ೨೧ ದಿವಸ ಉಪವಾಸ ಮಾಡುವರೆಂದು ತಿಳಿದುಬಂದಿದೆ. ತಮ್ಮ ಉಪವಾಸದ ವಿಚಾರ ಕುರಿತು ಶ್ರೀ ತಗಡೂರು ರಾಮಚಂದ್ರರಾಯರು ಮಹಾಪ್ರಭುಗಳಿಗೆ ಪತ್ರವೊಂದನ್ನು ಬರೆದಿರುವರೆಂದು ಗೊತ್ತಾಗಿದೆ.

ಮಂಗಳೂರು
ನಿಷೇಧ ರಾಜಿನಾಮೆ

ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಸದಸ್ಯತ್ವಕ್ಕೆ ಶ್ರೀಮತಿ ಸುಶೀಲಾಬಾಯಿ, ಶ್ರೀಗಳಾದ ಶಿವರಾಮ ಶೆಟ್ಟಿ, ಮತ್ತು ವೆಂಕಪ್ಪ ಶೆಟ್ಟಿ ಈ ಮೂವರು ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ಸದಸ್ಯತ್ವಕ್ಕೆ ರಾಜಿನಾಮೆಯಿತ್ತಿದ್ದಾರೆ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 261/1939.

R. E. P. 783/1942.

ವಿಟ್ಟಪ್ಪ ಕಿಣಿ—ವಾದಿ. ಅರ್ಜಿದಾರ.

ಮತ್ತು

ವೀರಮ್ಮ ಹೆಂಗ್ಸು- ಪ್ರತಿವಾದಿಳುಎದ್ರಿಳು

ಇವರೊಳಗೆ

ಎದ್ರಿಳು ವೀರಮ್ಮ ಹೆಂಗ್ಸು, ದೇಜಪ್ಪ ಬಂಗೇರ ಹೊಸ, ಕಾರ್ಕಳ ತಾಲೂಕು ನಾರಾವಿ ಗ್ರಾಮಸ್ಥಳು ಹಾಲಿ ಪುತ್ತೂರು ತಾಲೂಕು ಕೊಕ್ಕಡ ಗ್ರಾಮದ ಪರಪ್ಪು ಎಂಬಲ್ಲಿರುವವಳು ಇವರಿಗೆ—

ಮೇಲ್ಕಂಡ ಅಮಲ್ಜಾರಿಯು ಮತ್ತು ಅದರಲ್ಲಿ ನಿಮ್ಮ ಬಾಬ್ತು ಸ್ಥಿರಾಸ್ತಿಗಳನ್ನು ಏಲಮಿಗೆ ಅಪೇಕ್ಷಿಸಿ ಅರ್ಜಿದಾರನು ಬರಕೊಂಡ ಏಲಂ ಇಸ್ತಿಹಾರಿನ ಡ್ರಾಫ್ಟಿನ ಶರತಗಳನ್ನು ನಿರ್ಣಯಿಸುವರೆಯೂ ಮತ್ತು ಸ್ಥಿರಾಸ್ತಿ ಏಲಂ ಸಮಯ ಬಿಡ್ ಮಾಡುವರೆಯೂ ಸೆಟ್‌ಓಫ್ ಬಗ್ಯೆಯೂ ಪರ್ಮಿಶನ್ ಕೇಳಿ ಅರ್ಜಿದಾರನು ಬರಕೊಂಡ R. E. A. 592/1942ನೆ ಅರ್ಜಿಯು ಸಹಾ ಮೇಲ್ಕಂಡ ಕೋರ್ಟಿನಲ್ಲಿ ತಾ. 17-12-1942ಕ್ಕೆ ಇಟ್ಟಿರುವದ್ರಿಂದ ಸದ್ರಿ ಅಮಲ್ಜಾರಿಯ ಇಸ್ತಿಹಾರಿನ ಶರತಗಳ ಮತ್ತು ಬಿಡ್ ಅರ್ಜಿಯ ಕುರಿತು ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ನೀವು ಸದ್ರಿ ದಿನ ದೆಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿವಾಯಿಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಸಂಗ್ತಿಗಳು ತೀರ್ಮಾನಿಸಲ್ಪಡುವವುಯೆಂಬದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸೋಣಾಗಿಯದೆ.

ಕಾರ್ಕಳ 19—11—42 } P. Ramachandra Rao
Pleader for petitioner

ಜಿಲ್ಲಾ ಸಮಾಚಾರಗಳು

ಮಂಗಳೂರು

ಡಿಸ್ಟ್ರಿಕ್ಟ್ ಬೋರ್ಡ್ ಸಭೆ
ಕಾಂಗ್ರೆಸ್ ಸ್ವಯಂಸೇವಕರ ಪಿಕೆಟಿಂಗ್

ತಾ. ೩೦ರಂದು ಪೂರ್ವಾಹ್ನ ಗಂಟೆ ೧೧ಕ್ಕೆ ದ. ಕ. ಜಿಲ್ಲಾ ಡಿಸ್ಟ್ರಿಕ್ಟ್ ಬೋರ್ಡ್ ಸಭೆಯು ಅದರ ಉಪಾಧ್ಯಕ್ಷರಾದ ಶ್ರೀ. ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಜರಗಿತು ಈ ಸಭೆಗೆ ಒಟ್ಟು ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರರ ಸಂಖ್ಯೆ ೪೪ರ ಪೈಕಿ ರಾಜಿನಾಮೆ ಕೊಟ್ಟು ಹಾಗೂ ಗೈರುಹಾಜರಿಯಿಂದ ಸದಸ್ಯತ್ವವನ್ನು ಕಳಕೊಂಡ ೧೬ ಮಂದಿ ಸದಸ್ಯರು ಹೋಗಲಾಗಿ ೨೮ ಮಂದಿ ಸದಸ್ಯರ ಪೈಕಿ ಕೇವಲ ೧೧ ಮಂದಿ ಮಾತ್ರ ಹಾಜರಿದ್ದರು. ಸಭಾ ಪ್ರಾರಂಭದಲ್ಲಿ ಬೋರ್ಡಿನ ಮೂರು ಕಮಿಟಿಗಳಿಗೆ ಮೆಂಬರರನ್ನು (ಖಾಲಿ ಬಿದ್ದ ಸ್ಥಾನಗಳಿಗೆ) ಆರಿಸಲಾಯಿತು. 'ವರ್ಕ್ಸ್ ಮತ್ತು ಕಮ್ಯುನಿಕೇಶನ್' ಕಮ್ಮಿಟಿಗೆ ಶ್ರೀಗಳಾದ ನಾಗಪ್ಪಯ್ಯ, ರಘುಚಂದ್ರ ಬಲ್ಲಾಳ್, ಶ್ರೀ. ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ. ಶ್ರೀ. ಕುಂಞ ಕಲಂದರ ಮತ್ತು ರಾಮಚಂದ್ರ ಅವರನ್ನೂ ವಿದ್ಯಾಂಗದ ಸಮಿತಿಗೆ ಶ್ರೀ. ಮೀರ್ ಹೈದರ್ ಸಾಹೇಬ್, ಶ್ರೀ. ಕುಮಾರಯ್ಯ ಜೈನಿ ಖಾ॥ ಬ॥ ಮ. ಶವ್ಕಾಡ್ ಮತ್ತು ಶ್ರೀ. ನಾಗಪ್ಪಯ್ಯ ಅವರನ್ನೂ, ಸಾರ್ವಜನಿಕ ಆರೋಗ್ಯ ಸಮಿತಿಗೆ ಶ್ರೀಮತಿ ಚಂದ್ರಭಾಗಿ ಹೆಗ್ಗಡ್ತಿ, ಖಾ॥ ಬ॥ ಮ. ಶವ್ಕಾಡ್ ಮತ್ತು ಶ್ರೀ. ಕುಂಞ ಕಲಂದರ ಅವರನ್ನೂ ಆರಿಸಲಾಯಿತು. ಶ್ರೀ. ಮೂಸಬ್ಬ ಸಾಹೇಬರ ಮೆಂಬರಿಕೆಯನ್ನು ಊರ್ಜಿತಗೊಳಿಸಲಾಯಿತು.

ಸ್ಟೆಂಡಿಂಗ್ ಕಮಿಟಿಗೆ ಶ್ರೀಗಳಾದ ಶಿವರಾವ್, ಎಂ. ಆರ್. ಪೂಂಜ, ಎಸ್. ಎನ್. ಹೊಳ್ಳರ ಸ್ಥಾನದಲ್ಲಿ ಸದ್ಯರನ್ನು ಚುನಾಯಿಸುವ ವಿಚಾರ ಚರ್ಚೆಯಾಗಲು ಡಾ॥ ಪಿ ಜಿ ಆಚಾರ್ಯರು ಚುನಾವಣೆ ಮಾಡಕೂಡದೆಂದು ವಾದಿಸಿದರು ಆಗ ನಾಲ್ಕು ಮಂದಿ ಕಾಂಗ್ರೆಸ್ ಸ್ವಯಂ ಸೇವಕರು ಸಭಾ ಸ್ಥಳಕ್ಕೆ ಬಂದು ಕಾಂಗ್ರೆಸ್ ಮೆಂಬರರು ತಮ್ಮ ಸ್ಥಳಗಳಿಗೆ ರಾಜಿನಾಮೆ ಕೊಡಬೇಕೆಂದು ಕೇಳಿಕೊಂಡು ಜಯಘೋಷ ಮಾಡಿದರು ಆಗಲೇ ಕೆಲವು ಮೆಂಬರರು ಸಭೆಯಿಂದ ಹೊರಟು ಹೋಗಿದ್ದುದರಿಂದ ಸಭೆಯು 'ಕೋರಂ' ಇಲ್ಲದೆ ಕೊನೆಗೊಳಿಸ ಬೇಕಾಯಿತು. ಕಾಂಗ್ರೆಸ್ ಸ್ವಯಂ ಸೇವಕರು ಅಲ್ಲಿಂದ ಮತ್ತೆ ಹೊರಟು ಹೋದರು. ಸ್ವಲ್ಪ ಹೊತ್ತಿನಲ್ಲಿ ಕೆಲಮಂದಿ ಪೋಲೀಸರೊಡನೆ ಪೋಲೀಸ್ ಅಧಿಕಾರಿಗಳು ಡಿ. ಬೋ. ಆಪೀಸಿಗೆ ಬಂದು ನೋಡಿದರು ಪೋಲೀಸ್ ಗಾಡಿಯೂ ಬಂತು ಆ ಮೇಲೆ ಅವರನ್ನು ಶ್ರೀಗಳಾದ ಲಕ್ಷ್ಮಣ ಪದ್ಮಪ್ಪ, ಪುಂಡಲೀಕ ನಾಯಿಕ್ ಮತ್ತು ನರಸಿಂಹ ಈ ನಾಲ್ಕು ಜನ ಕಾಂಗ್ರೆಸ್ ಸ್ವಯಂಸೇವಕರನ್ನು ಪೋಲೀಸರು ಹಾದಿಯಲ್ಲಿ ಬಂಧಿಸಿ ಕೊಂಡೊಯ್ದರೆಂದು ತಿಳಿದು ಬರುತ್ತದೆ

ಕೊಂಡೊಯ್ದರು

ಡಿಫೆನ್ಸ್ ಓಪ್ ಇಂಡಿಯಾ ಕಾನೂನಿನಂತೆ ಬಂಧಿಸಿ ಮಂಗಳೂರು ಸಬ್ ಜೈಲಿನಲ್ಲಿರಿಸಿ ಶ್ರೀ ಬಿ. ದಾಮೋದರ ಬ್ರಾಳಿಗರನ್ನು ಕಳೆದ ಶುಕ್ರವಾರ ಮೈಲ್‌ಗಾಡಿಯಲ್ಲಿ ಕೊಂಡೊಯ್ಯಲಾಗಿದೆ, ಅದಕ್ಕೆ ಹಿಂದಿನ ಗುರುವಾರದ ಮೈಲುಗಾಡಿಯಲ್ಲಿ ಶ್ರೀ. ಎಂ. ಉಮೇಶರಾಯರನ್ನು ಕೊಂಡೊಯ್ದಿರುವರು. ಇವರಿಬ್ಬರಿಗೂ 'ಡಿಟೆನ್ಯೂ' ಮಾಡಲಾಗಿದೆಯೆಂದು ತಿಳಿದುಬರುತ್ತದೆ.

ಹೊಸ ಜಡ್ಜರು

ದ. ಕ. ಜಿಲ್ಲಾ ಮತ್ತು ಸೆಶ್ಯನ್ ಜಡ್ಜರಾದ ಶ್ರೀ॥ ಎಂ. ಬಲರಾಮ ರೆಡ್ಡಿ ಅವರು ಇಷ್ಟರಲ್ಲಿಯೇ ಉದ್ಯೋಗ ನಿವೃತ್ತರಾಗುವುದರಿಂದ ಅವರ ಸ್ಥಾನಕ್ಕೆ ಕೊಯಮುತ್ತೂರಿನಲ್ಲಿ ಎಡಿಶನಲ್ ಡಿ॥ ಸೆ॥ ಜಡ್ಜರಾಗಿರುವ ಶ್ರೀ. ಸಿ. ಸಿ ಅಲ್ಲಪ್ಪಿ ಸಾಹೇಬರು ನೇಮಕ ಹೊಂದಿ ಬಂದಿರುವರು.

ಶ್ರೀ. ಸಿ. ಸಿ. ಅಲ್ಲಪ್ಪಿ ಸಾಹೇಬರ ಬದಲಿಗೆ ದಕ್ಷಿಣ ಆರ್ಕಾಟಿನ ಡಿ॥ ಸೆ॥ ಜಡ್ಜರಾಗಿರುವ ಶ್ರೀ. ಜಿ. ಎ. ಪಿಂಟೋ ಅವರು ಕೊಯಮುತ್ತೂರಿಗೆ ವರ್ಗಾಯಿಸಲ್ಪಟ್ಟಿರುವರು. ಅವರು ಮಂಗಳೂರಿನವರು.

ಸಂತಾಪ ಸೂಚನೆಯ ಠರಾವು

ಕರ್ಣಾಟಕದ ಸುಪ್ರಸಿದ್ಧ ಲೇಖಕರೂ, ವಾಗ್ಮಿಗಳೂ, ವೈದ್ಯರೂ ಆಗಿದ್ದ ದಿವಂಗತ ಪಂಡಿತ ತಾರಾನಾಥರ ನಿಧನದಿಂದ ಉಂಟಾದ ಅಪಾರ ಸಂತಾಪವನ್ನು ಸೂಚಿಸಿ, ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘವು, ಒಂದು ಸಂತಾಪ ಸೂಚನೆಯ ಠರಾವನ್ನು ಮಂಜೂರು ಮಾಡಿದೆ.

15 ಕೆಲಸಗಾರರು ಬೇಕು

ದಕ್ಷಿಣಕನ್ನಡ ಸಹಕಾರ ಅಭಿವೃದ್ಧಿ ಸಂಘ, ಮಂಗಳೂರು, ಇವರ ಆಶ್ರಯದಲ್ಲಿ ಮಂಗಳೂರು ಸಹಕಾರ ಸೆಂಟ್ರಲ್ ಬೇಂಕಿನಲ್ಲಿ ತಾ. ೨-೧-೧೯೪೩ರಿಂದ ಸಹಕಾರೀ ಕೆಲಸಗಾರರ ಶಿಕ್ಷಣ ಕ್ಲಾಸುಗಳು ಪುನಃ ಎರಡು ತಿಂಗಳ ತನಕ ಜರಗಲಿದೆ. ಸಹಕಾರೀ ಸ್ಟೋರುಗಳ ಮೆನೇಜರರ ಕೆಲಸಕ್ಕೆ 5 ಮಂದಿ ಉಮೇದ್ವಾರರು ಕೃಷಿಕರ ಬಂಡಸಾಲೆ ಸಂಘದ ಬ್ರಾಂಚು ಏಜಂಟರು ಮತ್ತು ಡಿಪೊ ಕೀಪರ್ ಕೆಲಸಗಳಿಗೆ ೧೦ ಮಂದಿ ಉಮೇದ್ವಾರರು ಹೀಗೆ ೧೫ ಮಂದಿ ಉಮೇದ್ವಾರರನ್ನು ಚುನಾಯಿಸಲಾಗುವುದು ಸ್ಟೋರು ಮೇನೇಜರರಾಗಬಯಸುವ ಉಮೇದ್ವಾರರು S.S.L.C. ಪರೀಕ್ಷೆಯಾದವರಿರಬೇಕು. ಉಳಿದವರು ೮ನೇ ಕ್ಲಾಸು ಅಥವಾ III ಫಾರ್ಮು ಪಾಸಾದವರಿರಬೇಕು. ಶಿಕ್ಷಣ ಸಮಯದಲ್ಲಿ ಒಬ್ಬೊಬ್ಬರಿಗೆ ತಿಂಗಳೊಂದರ ರೂ. ೧೦ರಂತೆ ವಿದ್ಯಾರ್ಥಿವೇತನ ಕೊಡಲಾಗುವುದು.

ಉಮೇದ್ವಾರರು ಇದೇ ದಶಂಬರ ತಾ ೧೫ರೊಳಗೆ ಮುಟ್ಟುವಂತೆ ಕೆಳಗಿನವರಿಗೆ ಅರ್ಜಿ ಬರೆದು ಕಳುಹಿಸತಕ್ಕದ್ದು ಎಂದು ಕಾರ್ಯದರ್ಶಿ, ದ. ಕ. ಜಿಲ್ಲಾ ಸಹಕಾರ ಅಭಿವೃದ್ಧಿ ಸಂಘ ಕೊಡಿಯಾಲಬೈಲು, ಮಂಗಳೂರು ಇವರು ತಿಳಿಸುತ್ತಾರೆ.

ದೀಪ ನಿರ್ಬಂಧ

ತಾ 30-11-42ರಿಂದ ದಕ್ಷಿಣಕನ್ನಡ ಜಿಲ್ಲೆಯ ಕರಾವಳಿ ೨೫ ಮೈಲಿಗಿಂತ ದೂರದಲ್ಲಿರುವ ಸ್ಥಳಗಳ ಮೊದಲಿನ ನಿರ್ಬಂಧವು ತೆಗೆದುಹಾಕಿ ಈ ನಿರ್ಬಂಧ ಮಾಡಲಾಗಿದೆ. (೧) ಎಲ್ಲಾ ದಾರಿದೀಪಗಳನ್ನೂ ಉಪಯೋಗಿಸಬಹುದು. ಆದರೆ ಅದರರ್ಧಭಾಗವನ್ನು ಬ್ರೌನ್ ಶೀಟ್ ಮಾಡಿ ಮುಚ್ಚಬೇಕು (೨) ಖಾಸಗಿ ಮನೆ ಮತ್ತು ಅಂಗಡಿ ಮೊದಲಾದಲ್ಲಿ ನಿರ್ಬಂಧವಿಲ್ಲದೆ ದೀಪ ಉರಿಸಬಹುದು. ಆದರೆ ಅಗತ್ಯಬಿದ್ದರೆ ಉಪಯೋಗಿಸಲು ಬ್ರೌನ್ ಶೀಟ್ ಮುಚ್ಚಳವಿರಬೇಕು (೩) ಮೋಟರ್‌ಕಾರ್ ಮತ್ತು ಇತರ ವಾಹನಗಳು ನಿರ್ಬಂಧವಿಲ್ಲದೆ ದೀಪ ಹತ್ತಿಸಬಹುದು. ಆದರೆ ಅಗತ್ಯಬಿದ್ದರೆ ಉಪಯೋಗಿಸಲು ಒಂದು ಯಾ ಎರಡು ತರದ ಮುಚ್ಚಳಗಳಿರಬೇಕು ಎಂದು ದ. ಕ. ಜಿಲ್ಲಾ ಕಲೆಕ್ಟರರು ತಿಳಿಸುತ್ತಾರೆ.

ಮಿಡ್ನಾಪುರದ ನಿರಾಶ್ರಿತರಿಗೆ ಸಹಾಯ ಕೊಡಿರಿ
ಜಿಲ್ಲಾ ಪತ್ರಿಕೋದ್ಯೋಗಿಗಳ ವಿನಂತಿ.

ದ. ಕ. ಜಿಲ್ಲಾ ಪತ್ರಿಕೋದ್ಯೋಗಿಗಳ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯೊಂದು ತಾ. ೧ರಂದು ಡಿ. ಸಿ. ಎಂ. ಶಾಲೆಯಲ್ಲಿ ಅಧ್ಯಕ್ಷರಾದ ಶ್ರೀ॥ ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬಂಗಾಳದ ಮಿಡ್ನಾಪುರ ಮತ್ತು ೨೪ ಪರ್ಗಣೆಗಳು, ಈ ಜಿಲ್ಲೆಗಳಲ್ಲೂ ಒರಿಸದ ಬಾಲಸೂರಿನಲ್ಲೂ ಬಿರುಗಾಳಿಯು ಹಾವಳಿಯಿಂದ ನಿರಾಶ್ರಿತರಾದವರಿಗೆ ಸಹಾಯ ನೀಡಬೇಕೆಂದು ಪ್ರಾರ್ಥಿಸಿಕೊಂಡು, 'ಕಲ್ಕತ್ತಾ ವೃತ್ತಪತ್ರಿಕೆಗಳ ಬಿರುಗಾಳಿ ನಿರಾಶ್ರಿತರ ಸಹಾಯ ಸಮಿತಿ'ಯವರು ಹೊರಡಿಸಿರುವ ವಿನಂತಿಯು ಓದಲ್ಪಟ್ಟಿತು. ಸಹಾಯ ಸೂಚನೆಯ ಈ ವಿನಂತಿಗೆ ತುಂಬ ಪ್ರಚಾರ ಸಿಗುವಂತೆ ಮಾಡಲು ಜಿಲ್ಲೆಯ ಎಲ್ಲಾ ಪತ್ರಿಕೆಗಳನ್ನು ಕೇಳಿಕೊಳ್ಳಬೇಕೆಂದೂ, ನಿಧಿಯನ್ನು ಸಂಗ್ರಹಿಸಿ ಕಲ್ಕತ್ತದ ಸಹಾಯ ಸಮಿತಿಗೆ ಕಳಿಸಬೇಕೆಂದೂ, ಈ ಕಾರ್ಯಕ್ಕಾಗಿ ದ. ಕ. ಜಿಲ್ಲಾ ಮಹಾಜನ ನೆರೆ ನಿರಾಶ್ರಿತರ ಸಮಿತಿ, ಮಂಗಳೂರು, ಜಿಲ್ಲಾ ನೆರೆ ನಿರಾಶ್ರಿತ ಸಮಿತಿ ಮಂಗಳೂರು ಮತ್ತು ದ. ಕ ಜಿಲ್ಲಾ ನೆರೆ ನಿರಾಶ್ರಿತರ ಸಮಿತಿ, ಉಡುಪಿ, ಇವರು ಒಡನೆಯೇ ಆದಷ್ಟು ಸಹಾಯವೀಯಬೇಕೆಂದು ಕೇಳಿಕೊಳ್ಳಬೇಕೆಂದೂ ಮೂರು ನಿರ್ಣಯಗಳನ್ನು ಸಂಘವು ಮಾಡಿರುವುದು.

ಸಮುದ್ರ ತೀರ ಪ್ರದೇಶಗಳಾದ ಬಂಗಾಳದ ಮಿಡ್ನಾಪುರ ಮತ್ತು ೨೪ ಪರ್ಗಣೆಗಳಲ್ಲೂ ಒರಿಸ್ಸದ ಬಾಲಸೂರಿನಲ್ಲೂ ಬಿರುಗಾಳಿಯು ಮಾಡಿರುವ ಅನಾಹುತವು ಈಗಾಗಲೇ ಮಹಾಜನರ ಗಮನಕ್ಕೆ ಬಂದಿರುವುದು ಬಿರುಗಾಳಿ ಮತ್ತು ಅದರ ಜತೆಯಲ್ಲಿ ಉಕ್ಕಿ ಬಂದ ಸಮುದ್ರದ ನೀರು ಉಂಟುಮಾಡಿರುವ ಹಾವಳಿಯು ಅಪೂರ್ವವಾದುದು. ಈ ಅನರ್ಥ ಪರಂಪರೆಯ ಪರಿಣಾಮ ನಿಜವಾದ ಅಂಕೆ ಸಂಖ್ಯೆಗಳನ್ನು ಗೊತ್ತು ಹಚ್ಚುವುದು ಅಸಾಧ್ಯವಿಲ್ಲವಾದರೂ ಕಷ್ಟದ ಕೆಲಸ ಈ ಪ್ರದೇಶಗಳ ಮೇಲೆ ಹಾರಾಡಿದ ಗವರ್ನರರು 'ಜೀವನದ ಯಾವ ಸುಳಿವೂ ಇಲ್ಲದ, ನೆರೆಯಿಂದ ವಿಛಿನ್ನವಾಗಿ ತುಂಡರಿಸಲ್ಪಟ್ಟಿರುವ ಮತ್ತು ದನ–ಹೊಲಗಳೊಂದೂ ಇಲ್ಲದ ಗ್ರಾಮಗಳನ್ನೂ ವಿಸ್ತೃತ ಪ್ರದೇಶಗಳನ್ನೂ ಕಂಡಿರುವರು ಬಂಗಾಳ ಕಂದಾಯ ಮಂತ್ರಿಗಳು ಈ ತನಕ ದೊರಕಿರುವ ಸಮಾಚಾರದ ಆಧಾರದ ಮೇಲೆ ಸಾಧಾರಣ ಲೆಕ್ಕ ಹಾಕಿ, ಮಿಡ್ನಾಪುರದಲ್ಲಿ ೧೦,೦೦೦ ಮಂದಿಯೂ ೨೪ ಪರಗಣೆಗಳಲ್ಲಿ ೧,೦೦೦ ಮಂದಿಯೂ ಮೃತಪಟ್ಟಿರುವರು; ೬,೦೦,೦೦೦ ಗುಡಿಸಲುಗಳು ನಾಶವಾಗಿ ೧,೫೦೦,೦೦೦ ಜನರು ಅನಾಥರಾಗಿರುವರು ೭೫,೦೦೦ ಉಳಲಿಕ್ಕಾಗುವ ಎತ್ತುಗಳೂ ಹಾಲುಕರೆಯುವ ದನಗಳೂ ನಾಶವಾಗಿವೆ ಎಂದಿರುವರು ಈ ಸಂಖ್ಯೆಗಳು ಬಲಸೂರಿ ನಷ್ಟವನ್ನು ಸೂಚಿಸುವುದಿಲ್ಲ. ಬೆಳೆಗಳು ನಾಶವಾದುದು ಮಾತ್ರವಲ್ಲ, ಹಲವಾರು ಮೈಲುಗಳ ಅಗಲಕ್ಕೆ ಸಮುದ್ರದುದ್ದಕ್ಕೆ ಮಣ್ಣಿನ ಗುಣವೇ ಕಳೆದಿರಲಿಕ್ಕೆ ಸಾಕು— ಕುಡಿಯುವ ನೀರಂತೂ ಉಪ್ಪು ನೀರಾಗಿದೆ ಎಂದೂ ಗವರ್ನರರು ಹೇಳುವರು.

ಈ ಪ್ರದೇಶಗಳ ನಿರಾಶ್ರಿತ ಜನಸಮುದಾಯದ ಸಂಕಷ್ಟಗಳನ್ನು ನಿವಾರಿಸಲು ಸಾಧ್ಯವಾದಷ್ಟು ಮಟ್ಟಿಗೆ ಯತ್ನಿಸುವುದು ಪ್ರತಿಯೊಬ್ಬ ವ್ಯಕ್ತಿಯ ಸಂಘ ಇಲ್ಲವೆ ಸಂಸ್ಥೆಯ ಆದ್ಯ ಕರ್ತವ್ಯವಾಗಿರುತ್ತದೆ. ಈ ಉದ್ದೇಶದಿಂದಲೇ ತಾ. ೧ರಂದು ಸೇರಿದ ದಕ್ಷಿಣ ಕನ್ನಡ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಸಭೆಯು ನಿರಾಶ್ರಿತರಿಗೆ ಸಹಾಯಮಾಡಲು ನಿಧಿಯೊಂದನ್ನು ತೆರೆಯಲು ನಿರ್ಧರಿಸಿದೆ ಬಂಗಾಳದಲ್ಲಿ ಕೂಡ ಕಲ್ಕತ್ತೆಯ ವೃತ್ತಪತ್ರಿಕೆಗಳವರು ಒಂದು ನಿಧಿಯನ್ನು ತೆರೆದಿರುವರು. ಬಂಗಾಳ ಒರಿಸಗಳ ದುಃಖಿತ ಜನರಿಗೆ ನೆರವಾಗುವುದರಲ್ಲಿ ಜಿಲ್ಲೆಯವರು ಉದಾರ ಹಸ್ತದಿಂದ ಸಹಾಯ ಮಾಡುವರೆಂದು ದೃಢ ಭರವಸೆಯು ಸಂಘಕ್ಕಿರುವುದು. ಕಳೆದ ವರ್ಷ ನಮ್ಮ ಜಿಲ್ಲೆಯಲ್ಲಿಯೇ ನೆರೆ ಬಂದಾಗ ಭಾರತದ ಹಲವೆಡೆಗಳಿಂದ ನಮಗೆ ಧನ ಸಹಾಯ ಬಂದಿದ್ದಿತು ಅಂದ ಮೇಲೆ ಬಿಹಾರದ ಭೂಕಂಪಕ್ಕಿಂತಲೂ ಹಿರಿದೆಂದು ಭಾವಿಸಲ್ಪಟ್ಟಿರುವ ಈ ಬಿರುಗಾಳಿಯಿಂದ ಪೀಡಿತರಾದವರ ಸಂಕಷ್ಟದಲ್ಲಿ ನಾವು ಭಾಗಿಗಳಾಗುವುದು ದೊಡ್ಡ ಪ್ರಶ್ನೆಯಲ್ಲ. ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘವು ಆರಂಭಿಸಿರುವ ಈ ಕಾರ್ಯದಲ್ಲಿ ಜಿಲ್ಲೆಯ ಇತರ ಭಾಗಗಳಲ್ಲಿರುವ ಸಂಘದ ಸದಸ್ಯರು ಶ್ರಮ ವಹಿಸಬೇಕೆಂದೂ ಪ್ರತಿಯೊಬ್ಬ ನಾಗರಿಕ ವ್ಯಕ್ತಿಯೂ ಸಂಘ, ಸಂಸ್ಥೆಗಳೂ ನಿಧಿ ಸಂಗ್ರಹವನ್ನು ಮಾಡಬೇಕೆಂದೂ ನಾವು ವಿನಂತಿಸುತ್ತೇವೆ, ಸಂಗ್ರಹವಾದ ನಿಧಿಯನ್ನು ಮಂಗಳೂರಿನ ಜಿಲ್ಲಾ ಸೆಂಟ್ರಲ್ ಕೋ ಅಪರೇಟಿವ್ ಬ್ಯಾಂಕಿನಲ್ಲಿರುವ ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಲೆಕ್ಕಕ್ಕೆ ಇಲ್ಲವೆ, ಟ್ರೆಜರರ್ ಕಲ್ಕತ್ತಾ ನ್ಯೂಸ್ ಪೇಪರ್ಸ್ ಸೈಕ್ಲೋನ್ ರಿಲೀಫ್ ಕಮಿಟಿ, ೧೫ ಕ್ಲೈವ್ ಸ್ಟ್ರೀಟ್ ಕಲ್ಕತ್ತ ಇಲ್ಲಿಗೆ ಕಳಿಸಬಹುದು—ಎಂದು ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದವರು ಬರೆಯುತ್ತಾರೆ. ಸಹಾಯವಿತ್ತವರ ಹೆಸರುಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ಜುಲ್ಮಾನೆ

ಮಂಗಳೂರು ಸಬ್ ಡಿ ಮ್ಯಾಜಿಸ್ಟ್ರೇಟ್ ಶ್ರೀ ಬಿ ಜೋಗಪ್ಪ ಇವರು ತಮ್ಮ ಬಂಟ್ವಾಳ ಕ್ಯಾಂಪಿನಲ್ಲಿ ಚಿಮಿಣಿ ಎಣ್ಣೆ ಡಬ್ಬಿಗಳನ್ನು ಕಾನೂನಿಗೆ ವಿರೋಧವಾಗಿ ಸಂಗ್ರಹಿಸಿದ್ದ ಎರಡು ಮೊಕದ್ದಮೆಗಳನ್ನು ವಿಚಾರಿಸಿ ತೀರ್ಪು ಹೇಳಿದರು ಮೊದಲಿನ ಮೊಕದ್ದಮೆಯಲ್ಲಿ ಆರೋಪಿಗಳಾದ ಶ್ರೀ. ಎಕ್ಕಾರ್ ಲಕ್ಷ್ಮಣ ರಾವ್. ಹಾಗೂ ಶ್ರೀ ಎಕ್ಕಾರು ಗೋಪಾಲಕೃಷ್ಣ ಭಟ್ ಅವರಿಗೆ ಇಂಡಿಯಾ ರಕ್ಷಣೆಯ ರೂಲ್ಸ್ ೮೧ (೪)ರ ಮೇರೆಗೆ ೪೦೦ ರುಪಾಯಿಗಳ ಜುಲ್ಮಾನೆ ತಪ್ಪಿದರೆ ೪ ತಿಂಗಳ ಕಠಿಣ ಸಜೆ, ಎರಡನೆ ಮೊಕದ್ದಮೆಯಲ್ಲಿ ಆರೋಪಿಗಳಾದ ಶ್ರೀ. ಎಕ್ಕಾರ್ ಗೋಪಾಲಕೃಷ್ಣ ಭಟ್ (ಮೊದಲನೆಯ ಮೊಕದ್ದಮೆಯ ಆರೋಪಿ)ರಲ್ಲಿ ಮೊದಲಿನವರಿಗೆ ರೂ. ೧೦೦ ಜುಲ್ಮಾನೆ ತಪ್ಪಿದರೆ ೨ ತಿಂಗಳ ಕಠಿನ ಸಜೆ, ಎರಡನೆಯವರಿಗೆ ರೂ. ೨೦೦ ಜುಲ್ಮಾನೆ ತಪ್ಪಿದರೆ ೪ ತಿಂಗಳ ಕಠಿನ ಸಜೆ (ಇ. ರ ರೂಲ್ಸ್ ೮೧ (೪)ರಂತೆ). ಇವರಲ್ಲಿ ಝಡ್ತಿಯ ಕಾಲದಲ್ಲಿ ಸಿಕ್ಕಿದ ೭೬ ಟಿನ್ನುಗಳು ಸರಕಾರ ಸೆಳೆದುಕೊಂಡು, ಇವರಿಬ್ಬರಿಗೂ ಜುಲ್ಮಾನೆ ತೆರಲು ಡಿಸೆಂಬರ್ ತಾ. ೧೦ ವರೆಗೆ ಸಮಯ ಕೊಟ್ಟಿರುವರು.

ಮುನ್ಸಿಪಾಲಿಟಿ

ಮಂಗಳೂರು ಮುನ್ಸಿಪಲ್ ಸ್ಪೆಶಲ್ ಆಫೀಸರು ಮುನ್ಸಿಪಲ್ ಕಾರ್ಯಾಲಯದಲ್ಲಿ ತಾ. ೧೦ರಂದು ಬೆಳಗ್ಗೆ ಕೆಲವೊಂದು ವಿಷಯಗಳ ವಿಲೆವಾರಿ ಮಾಡಿದರು. ರೂ ೪೯ (ತಿಂಗಳ) ಸಂಬಳದ ವರೆಗಿನ ಮುನಿಸಿಪಲ್ ಸಿಬಂದಿಯವರಿಗೆ ರೂ ೪ರ ತುಟ್ಟಿಭತ್ತೆಯನ್ನೂ ರೂ. ೬೦ರ ವರೆಗಿನ ಸಿಬಂದಿಯವರಿಗೆ ರೂ. ೫ರ (ತಿಂಗಳ) ತುಟ್ಟಿಭತ್ತೆಯನ್ನೂ ಕಳೆದ ಆಗೋಸ್ತು ತಾ. ೧ರಿಂದ ಮಂಜೂರು ಮಾಡಿದರು.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ
ಕೆ. ಎಲ್. ಕಾರಂತ್, ಬಿ.ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.
ಬೆಲೆ. 1-4-0.

೫ನೆಯ ಪುಸ್ತಕ
V ಮತ್ತು VI ನೆಯ ಫೋರ್ಮುಗಳಿಗೆ
ಲೇಖಕರು:
ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್. ಸಿ, ಎಲ್ ಟಿ
ಬೋರ್ಡ್ ಹ್ಯಾಸ್ಕೂಲ್, ಮುಲ್ಕಿ
ಎಸ್. ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ.
ಬೋರ್ಡ್ ಹ್ಯಾಸ್ಕೂಲು ಪುತ್ತೂರು.
ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ.
ಶಾರದಾ ಛಾಪಖಾನೆ ಮಂಗಳೂರು.

ಸಿನೆಮಾ ಸುದ್ದಿ

ಶಕುಂತಳೆ ನಮ್ಮೂರಿನವಳೆ?

ಶಾಂತಾರಾಮರು ರಾಜಕಮಲ್ ಎಂಬ ಹೊಸ ಸಿನೆಮಾ ಸಂಸ್ಥೆ ಪ್ರಾರಂಭಿಸಿದ್ದು ಅದರ ಪ್ರಥಮ ಚಿತ್ರವಾಗಿ ಕಾಳಿದಾಸನ ಪ್ರಖ್ಯಾತ ನಾಟಕ 'ಶಕುಂತಲಾ'ವನ್ನು ಚಿತ್ರಿಸುವರೆಂದು ಇಷ್ಟರಲ್ಲೇ ಪ್ರಸಿದ್ಧವಾಗಿದೆಯಷ್ಟೆ? ಈ ಚಿತ್ರದಲ್ಲಿ ಮುಖ್ಯ ನಾಯಕಿ 'ಶಕುಂತಲೆಯ ಪಾತ್ರವನ್ನು ಯಾರು ವಹಿಸುವರೆಂಬ ಕುರಿತು ಕೆಲ ಸಮಯಗಳಿಂದಲೂ ಊಹನೆಗಳೇಳುತ್ತಿವೆ. ಮೊದಲು ಶಾಂತಾ ಆಪ್ಟೆ ಶಕುಂತಳೆಯಾಗುವಳೆಂದು ಸುದ್ದಿಬಂತು; ಆ ಮೇಲೆ ಶಾಂತಾರಾಮರು ತಮ್ಮ ದ್ವಿತೀಯ ಪತ್ನಿ ಜಯಶ್ರೀಗೆ ಈ ಪಾತ್ರ ಕೊಡುವರೆಂದು ವಾರ್ತೆಯಾಯಿತು. ಸದ್ಯ ಈ ಪಾತ್ರವನ್ನು ಸುಶೀಲಾ ವಹಿಸುವಳೆಂದು ಫಿಲ್ಮ್ ಇಂಡಿಯಾ ಬರೆಯುತ್ತದೆ. ಸುಶೀಲಾ ದಕ್ಷಿಣ ಕನ್ನಡದ ಸಾರಸ್ವತ ಸಮಾಜದ ಮಹಿಳೆ. ಹಾಗಾದರೆ ಶಕುಂತಳಾ ನಮ್ಮೂರಿನವಳಾಗುವಳೆ?

ದಸ್ ಬಜೇ ಕಳೆದ ಶನಿವಾರ

ಬೊಂಬಾಯಿಯಲ್ಲಿ ಪ್ರದರ್ಶಿತವಾಗಿದೆ. ಹತ್ತನೇ ತಿಂಗಳು ಹತ್ತನೆಯ ತಾರೀಕು ಹತ್ತು ಗಂಟೆಗೆ ಪ್ರದರ್ಶಿಸಬೇಕೆಂದು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ದಸ್ ಬಜೆ ಚಿತ್ರವು ಕಾಲೇಜ್ ಹುಡುಗ ಹುಡುಗಿಯರ ಜೀವನ ಚಿತ್ರ. ರಾಜಾ ನೆನೇ ನಿದರ್ಶನ, ಸಂಗೀತ ಪ್ರದರ್ಶನ ಭೋಲೇ, ಊರ್ಮಿಳಾ ಬೆನರ್ಜಿಯವರು ಹಿಂದುಸ್ಥಾನಿಯಲ್ಲಿಯೂ, ರತ್ನಮಾಲಾ ಕುಲಕರ್ಣಿಯವರು ಮರಾಠಿಯಲ್ಲಿಯೂ ಹೀಗೆ ದ್ವಿಭಾಷೆಗಳಲ್ಲಿ ನಾಯಿಕಾ ನಾಯಕ ದ್ವಯರು ಇದರಲ್ಲಿ ಅಭಿನಯಿಸುವರು.

ನ್ಯೂ ಥಿಯೇಟರ್ಸ್ ಮೀನಾಕ್ಷಿ

ಈಗ ಪ್ರದರ್ಶಿತವಾಗುತ್ತಿದೆ. ಇದರಲ್ಲಿ ಸಾಧನಾಬೋಸ್ ನಟಿಸುತ್ತಾಳೆ. ಕೇ. ಸಿ. ಡೇ ಸಂಗೀತ, ಸಾಧನಳ ನರ್ತನಗಳು ಮನಮೋಹಕವಿವೆ. ಸಂಧ್ಯಾ ರಾಣಿ ಎಂಬ ಹೊಸ ತಾರೆ ಇದರಲ್ಲಿ ನಟಿಸುವಳು. ರೂಪದಲ್ಲಿ, ಸಂಗೀತದಲ್ಲಿ ಅಭಿನಯದಲ್ಲಿ ಸಂಧ್ಯಾರಾಣಿ ಮನೋಹರೆಯಾಗಿರುವಳು.

ಲೀಲಾ ಅಶೋಕರು 'ರೇಖಾ'ದಲ್ಲಿ

ಬೊಂಬೇ ಟಾಕೀಸಿನ ಜನಪ್ರಿಯ ದ್ವಯರಾದ ಲೀಲಾ ಚಿಟ್ನಿಸ್ ಮತ್ತು ಅಶೋಕ ಕುಮಾರರು ರಮಣೀಕಲಾಲರ 'ರೇಖಾ' ಚಿತ್ರದಲ್ಲಿ ಅಭಿನಯಿಸುತ್ತಾರೆ. ಇದರ ಚಿತ್ರೀಕರಣ ಪ್ರಾರಂಭವಾಗಿದೆ. ಮಹೇಂದ್ರ ಠಾಕೂರ್ ನಿರ್ಮಾಪಕರು. ನಿರ್ದೇಶಕ ಗುಂಜಾಲ್ ಮತ್ತು ಶಾಹುಮೋಡಕ್ ಇವರೂ ಈ ಸಂಸ್ಥೆಗೆ ಸೇರಿರುವರೆಂದು ತಿಳಿಯುತ್ತದೆ.

ಕನ್ನಡ ಚಿತ್ರ ಪಿಕ್ಚರ್ಸ್

ಎಚ್. ಆರ್. ಜಿ. ಸಿ. ಶ್ರೀ ಪಿಕ್ಚರ್ಸ್ ಎಂಬ ಹೊಸ ಸಿನೆಮಾ ಸಂಸ್ಥೆಯವರು 'ವಾಣಿ' ಅಥವಾ ಪಿಕ್ಚರ್ ಎಂಬ ಕನ್ನಡ ಚಿತ್ರವನ್ನು ತಯಾರಿಸುವರು. ಪಿಕ್ಚರ್ ಚೌಡಯ್ಯನವರು, ಕೆ. ಹಿರಣ್ಣಯ್ಯ, ಮಾಧವರಾವ್, ಎಚ್. ಆರ್. ಶಾಸ್ತ್ರಿ, ಬಳ್ಳಾರಿ ಲಲಿತ, ಕುಮಾರಿ ರತ್ನ, ಇವರು ಇದರಲ್ಲಿ ನಟನಟಿಯರು. ಶ್ರೀ ಎಂ. ಎನ್. ಗೋಪಾಲರು ನಿರ್ದೇಶಕರು. ಶ್ರೀಗಳಾದ ಜಿ. ಆರ್. ರಾಮಯ್ಯ ಮತ್ತು ಸಾಹುಕಾರ್ ಬಿ. ಎಸ್. ಶಿವಬಸವ ಸ್ವಾಮಿ ಇವರು ಈ ಸಂಸ್ಥೆಯ ಸಂಚಾಲಕರು. ಚಿತ್ರ ಸಮಾಚಾರಕ ಶ್ರೀ. ಎಚ್. ಆರ್. ಕೃಷ್ಣಮೂರ್ತಿಯರು ಪ್ರಚಾರ ಕಾರ್ಯಕರ್ತರು.

NOTICE

In the Court of the District Munsif of Mangalore

R. E. P. 525/1942.

Pejavar Shama Rao—*Petitioner*

and

Chekabba... ... *Respondent*

To

Chekabba son of sayadi Beary residing in Kenjar village Mangalore taluk Bajpe Post.

Whereas in the above named suit plaintiff the decree holder has applied for the sale of the charged properties you are hereby informed that the 8th day of December 1942 has been fixed for settling the terms of the sale proclamation and also for granting permission to the petitioner to bid and set off at the time of the sale.

Mangalore, 22-11-42. — U. C. S. Bhatt, Vakil for Petitioner.



ಸೂರ್ಯನ ಕಡೆಗೆ . . .

ಪ್ರತಿದಿನ ನಸುಕಿನಲ್ಲಿ ಹಲವಾರು ವಿಮಾನಗಳು ಹಿಂದೀ ವಿಮಾನತಳಗಳಿಂದ ಪೂರ್ವದಿಕ್ಕಿನ ಕಡೆಗೆ ಹಾರುತ್ತವೆ. ಹೌದು, ಜಪಾನದ ಉದಯಸೂರ್ಯನ ಬಾವುಟ ಹಿಂದುಸ್ಥಾನದಲ್ಲಿ ಎಂದೂ ಹಾರಬಾರದೆಂದು ನಮ್ಮ ವಿಮಾನಗಳ ತಂಡುಗಳು ಪ್ರತಿದಿನವೂ ಹಾರಿಹೋಗುತ್ತವೆ. ನಾವು ಪೇಟೆಯಲ್ಲಿ ಕೊಳ್ಳುವ ಹಾಗೂ ದಿನಾಲು ಉಪಯೋಗಿಸುವ ಬಗೆಬಗೆಯ ನೂರಾರು ಸಾಮಾನುಗಳು, ಈ ವಿಮಾನಗಳನ್ನು ತಯಾರಿಸಲು ಮತ್ತು ವೈಮಾನಿಕರನ್ನು ತರಬೇತುಗೊಳಿಸಲು ಬೇಕಾಗುತ್ತವೆ. ನಾವು ಕಡಿಮೆ ಕೊಂಡಷ್ಟು, ನಮ್ಮ ರಕ್ಷಣೆಗಾಗಿ ಹೋರಾಡುವ ಯುದ್ಧದಲಗಳಿಗೆ ಹೆಚ್ಚು ಒದಗುವುದು. ಅದೇ ಮೇರೆಗೆ ನಾವು ಕಡಿಮೆ ವೆಚ್ಚಮಾಡಿದಷ್ಟು, ದೇಶಕ್ಕೆ ಕಡಕೊಡಲು ಹೆಚ್ಚು ಒದಗುವುದು.

ನಾವು ಕೆಲಸಮಾಡುತ್ತಿರುವಾಗ ಮತ್ತು ಮಲಗಿರುವಾಗ ನಮ್ಮ ಶೂರ ವೈಮಾನಿಕರು ಅಲ್ಲಿ-ಮುಗಿಲಲ್ಲಿ ಕಾವಲು ಮಾಡುತ್ತಿರುವರು; ಆದ್ದರಿಂದ ನಮ್ಮ ಪಾಲಿನ ಕೆಲಸ ನಾವು ಮಾಡೋಣ. ವಿಲಾಸದ ಸಾಮಗ್ರಿಗಳನ್ನು ಆದಷ್ಟು ಕಡಿಮೆ ಕೊಳ್ಳೋಣ ಮತ್ತು ನಾವು ಉಳಿಸುವ ಹಣವನ್ನು ದೇಶಕ್ಕೆ ಸಾಲವಾಗಿ ಕೊಡೋಣ.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್

...ಇಲ್ಲವೆ ಡಿಫೆನ್ಸ್ ಲೋನ್ಸ್

ಸರ್ಟಿಫಿಕೇಟುಗಳು ನಿಮ್ಮ ಅಂಚೇ ಕಚೇರಿಯಲ್ಲಿ ಸಿಗುವವು.
ಗಿ೦ ರೂ.ಗೆ ಹತ್ತು ವರ್ಷದಲ್ಲಿ ರೂ. ೩.೯.೦ ಲಾಭ ಬರುವುದು.

ಇನ್ನೇನಾದರೂ ಮತ್ತೇನನ್ನೂ ಕೊಳ್ಳುವ ಮೊದಲು **ಕೊಂಚ ಯೋಚಿಸಿರಿ.**

CPU-26-KN

ಸುಳ್ಯ ಗ್ರಾಮಾಭಿವೃದ್ಧಿ ಕಮಿಟಿಯ ಆಶ್ರಯದಲ್ಲಿ ಜರಗುವ ಹನ್ನೊಂದನೇ ವ್ಯವಸಾಯ, ಆರೋಗ್ಯ ಮತ್ತು ಕೈಗಾರಿಕೆ ಪ್ರದರ್ಶನ

ಸುಳ್ಯ ವಾಚಕ ಮಂದಿರದ ಕಟ್ಟೋಣದಲ್ಲಿ 1943 ಜನವರಿ 9, 10, 11ರಲ್ಲು ಸುಳ್ಯ ಜಾತ್ರೆಯ ಸಮಯ ಜರಗಲಿದೆ. ಸ್ಪರ್ಧಿಸಲಿಕ್ಕೆ ಇಚ್ಛಿಸುವವರು ತಮ್ಮ ವಸ್ತುಗಳನ್ನು ಸುಳ್ಯ ಸಂಘದ ಆಫೀಸಿಗೆ ತಾ. 7-1-43ರೊಳಗೆ ತಲಪುವಂತೆ ಕಳುಹಿಸಬೇಕು. ಪ್ರದರ್ಶನಕ್ಕೆ ಕಳುಹಿಸುವ ಮತ್ತು ವಾಪಾಸು ತರಿಸಿಕೊಳ್ಳುವ ಖರ್ಚನ್ನು ಉಮೇದ್ವಾರರೇ ಸಹಿಸಿಕೊಳ್ಳಬೇಕು. ಪ್ರದರ್ಶನಕ್ಕೆ ಕಳುಹಿಸಿಕೊಡುವ ವಸ್ತುಗಳು:- ಧಾನ್ಯಗಳು, ಫಲವಸ್ತುಗಳು, ಬೀಜಗಳು, ಕೃಷಿ ಉಪಕರಣಗಳು, ಮೇವಿನ ಪೈರುಗಳು, ಜಾನುವಾರುಗಳು, ಉತ್ತಮಜಾತಿಯ ಕೋಳಿಗಳು, ಉತ್ತಮಜಾತಿಯ ನಾಯಿಗಳು, ತರಕಾರಿಗಳು, ಗಡ್ಡೆಗೆಣಸು, ಕಸಿ ಗಿಡಗಳು ಇತರ ಕೈಗಾರಿಕೆ ಸಾಮಾನುಗಳು. ಪ್ರತಿ ದಿವಸ ಸಾಯಂಕಾಲ ಘಂಟೆ 3ರಿಂದ ಕೃಷಿ, ಕೈಗಾರಿಕೆ, ಗೋವುರಕ್ಷಣೆ, ಸಹಕಾರ, ಆರೋಗ್ಯ ಇವುಗಳ ಕುರಿತು ಬಲ್ಲವರಿಂದ ಭಾಷಣಗಳು ನಡಿಯುವವು.

ಸಹಕಾರಿ ವಾರ್ತೆ

ಕಳೆದ ತಾ. ೨೯ರಲ್ಲು ದ. ಕ. ಜಿಲ್ಲಾ ಸೆಂಟ್ರಲ್ ಕೊಓಪರೇಟಿವ್ ಬೆಂಕ್ ಲಿಮಿಟೆಡ್ ಮಂಗಳೂರು, ಇದರ ಡೈರೆಕ್ಟರರ ಸಭೆಯಲ್ಲಿ ವಕೀಲ್ ಶ್ರೀ. ಮೊಳಹಳ್ಳಿ ಶಿವರಾಯರನ್ನು ಬೇಂಕಿನ ಅಧ್ಯಕ್ಷರನ್ನಾಗಿಯೂ ಶ್ರೀ. ಎ. ಯಮ್. ಮೊಂತೆರೊ ಇವರನ್ನು ಉಪಾಧ್ಯಕ್ಷರನ್ನಾಗಿಯೂ ಸರ್ವಾನುಮತದಿಂದ ಆರಿಸಲಾಗಿದೆ.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು.

ಉಪನಿಷತ್ತು, ಪಂಚದಾಶಿ ಮೊದಲಾದ ಗ್ರಂಥಗಳನ್ನು ಓದದಿದ್ದರೆ ಅಥವಾ ಸಾಂಖ್ಯನ್ಯಾಯಾದಿ ದರ್ಶನಗಳಲ್ಲಿ ನಿಪುಣನಾಗದಿದ್ದರೆ ವೇದಾಂತವೆಂದಿಗೂ ತಿಳಿಯಲಿಕ್ಕಿಲ್ಲ ಮತ್ತು ಮುಕ್ತಿ ಲಾಭವಾಗಲಿಲ್ಲವೆಂದು ಈ ಮೊದಲು ಆತನ ಭಾವನೆಯಾಗಿತ್ತು. ವೇದಾಂತದಲ್ಲಿ ಹೇಳಿರುವ ವಿಚಾರವೆಲ್ಲ ಶ್ರೀ ಪರಮಹಂಸರು ಹೇಳಿದ ಉಪದೇಶವನ್ನು ಹೃದಯದಲ್ಲಿ ದೃಢವಾಗಿ ಧಾರಣೆ ಮಾಡುವುದಕ್ಕೇನೇ ಎಂದು ಆತನಿಗೆ ಅವರ ಮಾತಿನಿಂದ ತಿಳಿಯಿತು. ಎಷ್ಟೋ ದೊಡ್ಡ ದೊಡ್ಡ ದರ್ಶನಗಳನ್ನೋ ಗ್ರಂಥಗಳನ್ನು ಓದಬಹುದು, ಪರಂತು, ಬ್ರಹ್ಮಸತ್ಯ, ಜಗತ್ತು ಮಿಥ್ಯ- ಎಂದು ದೃಢಧಾರಣೆಯಾಗದಿದ್ದರೆ ಅವುಗಳನ್ನು ಓದುವುದೂ, ಓದದಿರುವುದೂ, ಒಂದೇ! ಆ ಸ್ನೇಹಿತನು ಶ್ರೀರಾಮಕೃಷ್ಣದೇವರ ಅನುಜ್ಞೆಯನ್ನು ಪಡೆದು, ಆ ಅವಧಿಯಿಂದ ಗ್ರಂಥಗಳನ್ನು ಓದುವುದಕ್ಕಿಂತ ಸಾಧನೆಭಜನೆಯಲ್ಲೇ ಅಧಿಕವಾಗಿ ಮನಸ್ಸು ಕೊಡಬೇಕೆಂದು ಭಾವಿಸುತ್ತಾ, ಕಲ್ಕತ್ತೆಗೆ ಹೊರಟುಹೋದನು ಹೀಗೆ ಸಾಧನೆಯ ಸಹಾಯದಿಂದ ಶ್ರೀ ಪರಮಾತ್ಮನನ್ನು ಸಾಕ್ಷಾತ್ಕರಿಸಬೇಕೆಂಬ ಸಂಕಲ್ಪವನ್ನು ಸ್ಥಿರೀಕರಿಸಿ ಆ ಅವಧಿಯಿಂದ ತದನುರೂಪವಾಗಿ ಕಾರ್ಯಾಚರಣೆಯಲ್ಲಿ ವಿಶೇಷವಾಗಿ ಮನಸ್ಸು ಕೊಡುವವನಾದನು

— ಶ್ರೀ ಪರಮಹಂಸರು ಕಲ್ಕತ್ತೆಗೆ ಯಾವ ಮನೆಗೆ ಹೋದರೂ, ಸ್ವಲ್ಪ ಹೊತ್ತಿನಲ್ಲೇ ಅವರ ವಿಶಿಷ್ಟಭಕ್ತರು ಆ ವಾರ್ತೆಯನ್ನು ತಿಳಿಯುತ್ತಿದ್ದರು. ಕೆಲವರು ಆ ಕಾರ್ಯದ ಭಾರವನ್ನು ವಹಿಸಿಕೊಂಡು ಎಲ್ಲರಿಗೂ ತಿಳಿಸುತ್ತಿದ್ದರೆಂದಲ್ಲ, ಪರಂತು ಭಕ್ತರು ಅನುದಿನವೂ ಶ್ರೀಪರಮಹಂಸರ ದರ್ಶನಕ್ಕಾಗಿ ಎಷ್ಟು ಉತ್ಕಂಠಿತರಾಗುತ್ತಿದ್ದರೆಂದರೆ, ಮತ್ತು ದಕ್ಷಿಣೇಶ್ವರಕ್ಕೆ ಹೋಗಿ ಅವರ ದರ್ಶನಪಡೆಯಲಾಗದೆ ಪರಸ್ಪರರ ಮನೆಗಳಲ್ಲಿ ನಿರಂತರವೂ ಗಮನಾಗಮನ ಮಾಡಿ ಅವರ ಮಾತನ್ನೇ ಎತ್ತಿ ಅವರಿಗೆ ಎಷ್ಟು ಆನಂದಾನುಭವವಾಗುತ್ತಿತ್ತೆಂದರೆ, ಅವರ ಪೈಕಿ ಯಾರಾದರೊಬ್ಬರು ಯಾವ ರೀತಿಯಿಂದಲಾದರೂ ಶ್ರೀ ಪರಮಹಂಸರ ಆಗಮನ ವಾರ್ತೆಯನ್ನು ಕೇಳಿದರೆ, ಸ್ವಲ್ಪ ಸಮಯದಲ್ಲೇ ಆ ಸುದ್ದಿಯು ಒಬ್ಬರಿಂದೊಬ್ಬರಿಗೆ, ಅನಾಯಾಸವಾಗಿ ಹರಡುತ್ತಿತ್ತು. ಶ್ರೀ ಪರಮಹಂಸರ ಶಕ್ತಿಯಿಂದ ಭಕ್ತರು ಪರಸ್ಪರರಲ್ಲಿ ಏನೋ ಒಂದು ಅನಿರ್ವಾಚನೀಯವಾದ ಪ್ರೇಮ ಬಂಧನದಲ್ಲಿ ಬದ್ಧರಾಗಿದ್ದರು ಅದನ್ನು ಪಾಠಕರಿಗೆ ತಿಳಿಸಲು ದುಷ್ಕರ ಕಲ್ಕತ್ತೆಯಲ್ಲಿ ಬಾಗಬಾಜರು, ಸಿಮ್ಲಾ ಮತ್ತು ಆಹಿಸಿ ಟೋಲಾ ಎಂಬ ಈ ಮೂರು ಸ್ಥಾನಗಳಲ್ಲಿಯೇ ಶ್ರೀ ಪರಮಹಂಸರ ಆಗಮನವು ಅಧಿಕವಾಗಿತ್ತು. ಅವುಗಳ ಪೈಕಿ ಬಾಗಭಾಜಾರಿನಲ್ಲಿ ಅವರ ಆಗಮನವು ಹೆಚ್ಚಾಗುತ್ತಿತ್ತು.

ಕ್ರಮಶಃ

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India-Liability of members is limited)

Head Office: UDIPI

Estd 1906.

ಸಂರಕ್ಷಣೆಯೇ ಸುಭದ್ರತೆ.

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು — ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕಲಾಗಲಾರದು.

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ಲಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5. 28 ರಾತ್ಲಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯು ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ. ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE. — The Joint Booking Office, KODIALBAIL

The Bank of Mangalore Limited

ESTD: 1931

HEAD OFFICE Mangalore. *BRANCHES* Moodabidri & Padubidr.

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%.
— 24 months or over 4%
Current: ½% from July to December.
1% from January to June.

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ವೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.
ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂದ್ರಂ ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶ್ರೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ
ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 36] ತಾರೀಕು 11—12—1942 [ಸಂಚಿಕೆ 49]

‘ಸಾಮ್ರಾಜ್ಯ ಬೇಡ; ಭಾರತದ ಬೆಂಬಲ ಸಾಕು’

—ಗಾಂಧಿಜಿ- ಎಂದರೆ ಕಾಂಗ್ರೆಸು—

— ಎಡ್ಗರ್‌ಸ್ನೋ ಬರೆಯುತ್ತಾರೆ —

— ಬ್ರಿಟನಿನ ಭಾರತ ನೀತಿಯ ದೋಷಗಳು —

‘ಮನುಷ್ಯನಿಂದ ಸಾಧ್ಯವಾದರೆ ಮಿತ್ರಪಕ್ಷಗಳ ಕಡೆಗೆ ಭಾರತವನ್ನು ಒಲಿಸಬೇಕು, ಭಾರತದಲ್ಲಿ ಅಸಂಖ್ಯ ಶಕ್ತಿ ಸಂಪತ್ತು ಸಂಗ್ರಹವಿದೆ ನಮ್ಮ ಸಾಮ್ರಾಜ್ಯಲಾಲಸೆಯ ಬುದ್ಧಿಯನ್ನು ಬಿಟ್ಟುಕೊಟ್ಟು ಭಾರತವನ್ನು ಸ್ವತಂತ್ರಮಾಡಿದರೆ ನಾವು ಭಾರತವನ್ನು ನಮ್ಮ ಕಡೆಗೆ ಒಲಿಸಿಕೊಳ್ಳಬಹುದು ಇಲ್ಲದಿದ್ದರೆ ಅದು ಶತ್ರು ಕೈದಾಟಿ ಹೋಗಬಹುದು’ ಹೀಗೆಂದು ಅಮೆರಿಕನ್ ಪತ್ರಿಕೋದ್ಯಮಿ ಎಡ್ಗರ್‌ಸ್ನೋ ಒಂದು ಲೇಖನದಲ್ಲಿ ಬರೆದಿದ್ದಾರೆ ಅವರ ಲೇಖನದ ಕೆಲವು ಅಂಶ ಇಂತಿವೆ

‘ಭಾರತವು ಶತ್ರುವಶವಾದ ಪಕ್ಷದಲ್ಲಿ ಚೀನಕ್ಕೆ ಸಾಧನಾ ಸಾಮಗ್ರಿ ಕಳುಹಿಸುವ ಹಾದಿಯೇ ತಪ್ಪಿಹೋದಂತಾಗುವುದು ಮಾತ್ರವಲ್ಲ ಚೀನವೂ ಶತ್ರುವಿನ ಒತ್ತಾಯಕ್ಕೆ ಬಲಿಯಾಗುವುದು ಭಾರತದ ಸಹಾಯವಿಲ್ಲದೆ ದೂರ ಪೂರ್ವದ ಹಾಗೂ ಮಧ್ಯಪೂರ್ವದ ಕಡೆಗಳ ರಾಜ್ಯಗಳನ್ನು ಸ್ವಾಧೀನವಿಡುವುದು ಪ್ರಯಾಸಕರ ಭಾರತದ ರಾಷ್ಟ್ರೀಯತೆಗೆ ಉತ್ತರ ಸಿಗಬೇಕಾದರೆ ನಾವು ಸೇವಾಗ್ರಾಮವೆಂಬ ಚಿಕ್ಕ ಹಳ್ಳಿಯ ಕಡೆ ನೋಡಬೇಕು ಅಲ್ಲಿ ವಾಸವಾಗಿರುವ ೩೦ ಸಾವಿರ ಮಂದಿ ತಾವು ಪವಿತ್ರರೆಂದು ತಿಳಕೊಂಡಿದ್ದಾರೆ ಅಲ್ಲೇನೂ ಸ್ವರ್ಗ ಉಂಟೆಂದಲ್ಲ, ಅಲ್ಲಿಯ ಉಷ್ಣ ೧೨೦ ಡಿಗ್ರಿಗೆ ಮಿಕ್ಕಿದೆ ಇದರಿಂದಲೇ ಎಷ್ಟೋ ಮಂದಿ ಅಲ್ಲಿ ಸಾಯುತ್ತಾರೆ ವಾಂತಿಭೇದಿ ಮಲೇರಿಯಾ ಅಲ್ಲಿ ಹಬ್ಬಿವೆ, ಅವರು ಅಭಿಮಾನಪಡುವುದು ದೇವತಾಮೂರ್ತಿ ಗಾಂಧಿಜಿ ತಮ್ಮ ಬಳಿಯಲ್ಲಿರುವರೆಂದು ಗಾಂಧಿಜಿ ಆ ಬಡವರ ಮಧ್ಯದಲ್ಲಿ ಬಡವರಾಗಿ ನೆಲಸಿದ್ದಾರೆ ಭಾರತೀಯರನ್ನು ಅರ್ಥಮಾಡಿಕೊಳ್ಳಬೇಕಾದರೆ ಗಾಂಧಿಜಿಯನ್ನು ಅರ್ಥಮಾಡಿಕೊಳ್ಳಬೇಕು ‘ಕಾಂಗ್ರೆಸ್ ಎಂದರೆ ಗಾಂಧಿಜಿ ಸಾಯುವ ತನಕ ಕಾಂಗ್ರೆಸ್ ಅವರದೇ ಸಂಸ್ಥೆ ಎಂದು ವೈಸರಾಯರೇ ಹೇಳಿದರು ಗಾಂಧಿಜಿಯನ್ನು ಸಂದರ್ಶಿಸುವ ತನಕ ಭಾರತದ ರಾಜಕಾರಣ ನನಗೆ ಅರ್ಥವಾಗಲಿಲ್ಲ ವೈಸರಾಯರೇ ಗಾಂಧಿಜಿಯನ್ನು ನೋಡಲು ನನಗೆ ತಿಳಿಸಿದರು ಗಾಂಧಿಜಿಯನ್ನಾವಾಗಲೂ ಚರ್ಚಿಲರಿಗೆ ತಲೆನೋವು ಹುಟ್ಟುವಂತೆ ಏನಾದರೊಂದು ಯೋಚಿಸಿ ಮಾಡುತ್ತಿದ್ದಾರೆಂಬುದೇನೋ ಸಹಜ ತಮ್ಮ ಅಶ್ರಮಗಳ ರೋಗಿಗಳ ತಲೆನೋವು ನಿವಾರಿಸಲು ಅವರು ಭೇದಿಯ ಮದ್ದು ಕೊಡುತ್ತಾರೆ ಅವರು ವಿಸ್ಮಯ ವ್ಯಕ್ತಿ! ಘನ ಸಿದ್ಧಾಂತಗಳುಳ್ಳವರು ತನ್ನದೇ ಒಂದು ವಿಶಿಷ್ಟ ಸಂಪ್ರದಾಯ ಅವರದು ಅವರು ತೀವ್ರ ಆಶಾವಾದಿ ಅಂತೆಯೇ ಉಗ್ರ ಕರ್ಮವೀರ ನೆಹರುಗಳು ಹೇಳುವಂತೆ ಗಾಂಧಿಜಿಯನ್ನು ಅರ್ಥಮಾಡಬೇಕಾದರೆ ಅವರ ವ್ಯಕ್ತಿವೈಶಿಷ್ಟ್ಯವನ್ನು ರಾಷ್ಟ್ರನಾಯಕತೆಯ ವೈಶಿಷ್ಟ್ಯವನ್ನೂ ಅರಿತುಕೊಳ್ಳಬೇಕು ಗಾಂಧಿಜಿ ಮಾನವ ಶ್ರೇಷ್ಠರು. ಮಹಾಧೀಮಂತರು ಭಾರತೀಯರು ಅವರನ್ನು ಪೂಜಿಸುತ್ತಾರೆ ಅವರನ್ನು ಕಣ್ಣುಮುಚ್ಚಿ, ಹಿಂಬಾಲಿಸುತ್ತಾರೆ ಗಾಂಧಿಜಿ ಹೇಳುವುದು ಸರಿಯಲ್ಲವೆಂದು ನಮಗೆ ಕಂಡುಬಂದರೂ ರಾಷ್ಟ್ರ ಧುರೀಣತೆಯ ಯೋಗ್ಯತೆ ಅವರಿಗಿದೆ ಭಾರತದ ಜನತೆಯ ವಿಚಾರವು ಎತ್ತ ಹರಿಯುತ್ತಿದೆಯೆಂದು ಅವರು ಬಲ್ಲರು ಕಾಂಗ್ರೆಸು ಬ್ರಿಟನಿನ ಧೋರಣದ ವಿಷಯ ಹೇಳುವ ಪ್ರತಿಯೊಂದು ಮಾತನ್ನೂ ಪ್ರಾಯಶಃ ಪ್ರತಿಯೋರ್ವ ವಿದ್ಯಾವಂತ ಭಾರತೀಯನೂ ಅನುಮೋದಿಸುತ್ತಾನೆ ಸಾಮ್ರಾಜ್ಯವನ್ನು ಕಳಕೊಂಡಾದರೂ ಭಾರತವನ್ನು ನಾವಿಂದು ನಮ್ಮ ಕಡೆಗೆ ಒಲಿಸಿಕೊಳ್ಳಬೇಕು’

“ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ ಈ ಯುದ್ಧ ನಡೆಯುತ್ತಲಿಲ್ಲ”

ಮಿನ್ನಿಸೋಟಾದ ಪ್ರತಿನಿಧಿಯಾದ ಮೆಲ್ ಮಿನ್‌ಜೋ ಮಾಸ್‌ರವರು ನ್ಯೂಯಾರ್ಕಿನಲ್ಲಿ ಭಾಷಣ ಮಾಡುತ್ತಾ ಹೀಗೆ ಹೇಳಿದರು

“ಹಿಟ್ಲರನನ್ನೂ ಜಪಾನರ ಯುದ್ಧ ಮಂತ್ರಿಗಳನ್ನು ನಿರ್ಮಿಸಿದ ಕಾರಣಗಳನ್ನು ನಾವು ನಾಶ ಮಾಡಬೇಕು ಯುದ್ಧಕ್ಕೆ ಅವಕಾಶ ಕೊಟ್ಟ ಮೂಲ ಕಾರಣಗಳು ಅಳಿಯಬೇಕು ಪ್ರಪಂಚದಲ್ಲಿ ಸಾಮ್ರಾಜ್ಯ ಪದ್ಧತಿ ಮತ್ತು ಸಾಮ್ರಾಜ್ಯ ಭಾವನೆಗಳು ಹೋಗಬೇಕು ಅಮೆರಿಕವು ಬ್ರಿಟಿಷ್ ಸಾಮ್ರಾಜ್ಯ ರಕ್ಷಣೆಗಾಗಿ ಯುದ್ಧ ಮಾಡುತ್ತಲಿಲ್ಲ ಭಾರತದಲ್ಲಿ ಅಮೆರಿಕವು ಸಾಮ್ರಾಜ್ಯ ಕಟ್ಟುವುದಕ್ಕಾಗಿ ಯುದ್ಧ ಮಾಡುತ್ತಿಲ್ಲ ಭಾರತಕ್ಕೆ ಸ್ವಾತಂತ್ರ್ಯ ದೊರೆಯಬೇಕು ಭಾರತದ ಸ್ವಾತಂತ್ರ್ಯ ಸಮಸ್ಯೆಯಲ್ಲಿ ಬ್ರಿಟನ್ನಿನಂತೆ ಅಮೆರಿಕಕ್ಕೂ ಭಾಗವಹಿಸುವ ಹಕ್ಕಿದೆ ಭಾರತದ ಸಮಸ್ಯೆಯನ್ನು ಪರಿಹರಿಸುವುದು ಅಮೆರಿಕದ ಜವಾಬ್ದಾರಿಯೇ ಆಗಿದೆ.”

“ಅಮೇರಿಕದ ರಾಜಕೀಯ ಅಭಿಪ್ರಾಯದಲ್ಲಿ ಉಂಟಾಗಿರುವ ನೈತಿಕ ತಳಹದಿ ಮತ್ತು ಜವಾಬ್ದಾರಿಯನ್ನು ಬ್ರಿಟನು ತಿಳಿಯಬೇಕು. ಪ್ರಪಂಚದಲ್ಲಿ ಎಲ್ಲಾ ಜನಾಂಗಗಳ ಕ್ಷೇಮಸಾಧನೆ ಮತ್ತು ಸ್ವಾತಂತ್ರ್ಯ ವಿಚಾರವಾಗಿ ಅಮೇರಿಕಾದಲ್ಲಿ ದೊಡ್ಡ ಬದಲಾವಣೆಯುಂಟಾಗಿದೆ. ಅಮೇರಿಕದ ನೈತಿಕ ಜವಾಬ್ದಾರಿಯನ್ನು ಸಮರ್ಥಿಸಲು ಬ್ರಿಟನು ಸಹಾಯ ಮಾಡಬೇಕು ಭಾರತದ ಸಮಸ್ಯೆ ಬಗ್ಗೆ ಅಮೇರಿಕದ ಅಭಿಪ್ರಾಯವು ನೈತಿಕ ಜವಾಬ್ದಾರಿಯಿಂದ ಕೂಡಿದೆ ಬ್ರಿಟನು ಇದನ್ನು ಗಮನಿಸಬೇಕು” ಎಂಬುದಾಗಿ ‘ಲಂಡನ್ ಟೈಮ್ಸ್’ ಪತ್ರಿಕೆಯಲ್ಲಿ ಲೇಖನವೊಂದು ಬಂದಿದೆ

“ಮಿತ್ರ ರಾಷ್ಟ್ರಗಳು ಬರ್ಮಾದ ಮೇಲೆ ಆಕ್ರಮಣ ಯುದ್ಧವನ್ನು ಹೂಡುವ ಮೊದಲು ಭಾರತದ ರಾಜಕೀಯ ಸಮಸ್ಯೆಯನ್ನು ಪರಿಹರಿಸಬೇಕು ಭಾರತದ ಮುಖಾಂತರ ನಾವು ಚೀಣದೊಡನೆ ಸಹಕರಿಸಿ ಯುದ್ಧಮಾಡಬೇಕಾಗುತ್ತದೆ ಭಾರತದ ಸಮಸ್ಯೆ ಪರಿಹಾರವಾದ ನಂತರ ಬರ್ಮವನ್ನು ಜಯಿಸಲು ತೊರೆಡಬೇಕು” ಎಂಬುದಾಗಿ ನ್ಯೂಯಾರ್ಕ್ ಟೈಂಸ್ ಪತ್ರಿಕೆಯಲ್ಲಿ ಭಾರತದ ಬಗ್ಗೆ ಅಮೆರಿಕಾದ ರೌಂಡ್ ಟೇಬಲ್ ಸೆಕ್ರೆಟರಿಯಾದ ರಾಬರ್ಟ್ ನಾರ್ಟನ್‌ರವರು ಲೇಖನವೊಂದನ್ನು ಬರೆದಿರುತ್ತಾರೆ

ನಾಲ್ಕು ದೋಷಗಳು ನಿರ್ಮೂಲವಾಗಬೇಕು

‘ಬ್ರಿಟಿಷ್ ವಸಾಹತುಗಳ ಆಡಳಿತ ಧೋರಣೆ ಬಗ್ಗೆ ಅಥವಾ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಪರಾಧೀನತೆಯಲ್ಲಿರುವ ದೇಶಗಳಲ್ಲಿ ಸೈನ್ಯಗಳಿಗೆ ಜನತೆಯ ಬೆಂಬಲವು ಚೆನ್ನಾಗಿರಬೇಕು ಎಂಬ ಸತ್ಯಾಂಶವನ್ನು ಲಾರ್ಡ್ ಕ್ರಾನ್‌ಬೋರ್ನಿಯವರು ವಾದ ಚತುರತೆಯ ಮೂಲಕ ಮರೆಸಲಾರರು’ ಎಂಬುದಾಗಿ ಶ್ರೀ. ಸಿ ರಾಜಗೋಪಾಲಾಚಾರ್ಯರು ಕಾಮನ್ಸ್ ಸಭೆಯಲ್ಲಿ ಲಾರ್ಡ್ ಕ್ರಾನ್‌ಬೋರ್ನಿಯವರು ಮಾಡಿದ ಭಾಷಣ ಕುರಿತು ಟೀಕೆ ಮಾಡಿರುತ್ತಾರೆ

ಮತ್ತೆ ರಾಜಾಜಿ ಹೀಗೆಂದಿರುವರು

‘ಯುದ್ಧಕ್ಕೆ ಸಂಬಂಧಪಟ್ಟ ರಕ್ಷಣಾಕಾರ್ಯದಲ್ಲಿ ಜನತೆಯು ಸೈನಿಕರ ಹಿಂದುಗಡೆ ‘ಫುಟ್‌ಬಾಲ್’ ಆಟದ ಗೋಲ್‌ಕೀಪರಂತೆ ಇರಬೇಕು ಜನತೆಯ ಅಶಾಂತಿ ಅತೃಪ್ತಿಗಳನ್ನು ಗಮನಿಸದಿದ್ದರೆ ಯುದ್ಧ ಕಾರ್ಯವು ವಿಜಯಿಯಾಗುವುದು ಕಷ್ಟ ಕಾರಣ ಭಾರತದ ರಾಜಕೀಯ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಹರಿಸಬೇಕು ವಿವೇಕತನದ ಹೆಸರಿನಲ್ಲಿ ಸಮಸ್ಯೆಯನ್ನು ವಿಳಂಬ ಮಾಡುವುದು ಸರಿಯಲ್ಲ ಇದರಿಂದ ವಿಪತ್ತುಂಟಾಗುತ್ತದೆ ಭಾರತದ ಸಮಸ್ಯೆ ಪರಿಹರಿಸದೆ ಅದನ್ನು ಮುಂದೂಡುವುದರಲ್ಲಿ ನಾಲ್ಕು ದೊಡ್ಡ ದೋಷಗಳಿವೆ

೧ ಭಾರತೀಯ ಸಮಸ್ಯೆಗೂ ಮಿತ್ರ ಜನಾಂಗಗಳ ಯುದ್ಧನೀತಿಗೂ ಸಂಬಂಧವಿಲ್ಲವೆಂದು ಹೇಳುವುದು ತಪ್ಪು ೨ ಭಾರತದ ಸಮಸ್ಯೆಯು ಬ್ರಿಟಿಷರ ಆಡಳಿತ ಸಮಸ್ಯೆಯೆಂದು ಹೇಳುವುದು ದೊಡ್ಡ ತಪ್ಪು ೩ ಭಾರತದ ಬಿಕ್ಕಟ್ಟು ಭಾರತದಲ್ಲಿರುವ ಜಾತಿಗಳ ಸಂಬಂಧದ ಒಪ್ಪಂದದಿಂದ ಪರಿಹಾರವಾಗುವುದೆಂದು ಹೇಳುವುದು ಮತ್ತೊಂದು ತಪ್ಪು ೪ ಜಾತಿವಾರು ಭಿನ್ನಾಭಿಪ್ರಾಯಗಳನ್ನು ಸಾಮ್ರಾಜ್ಯ ಧೋರಣೆಗಾಗಿ ದುರುಪಯೋಗಪಡಿಸಿಕೊಳ್ಳುವುದು ಮತ್ತೊಂದು ತಪ್ಪು ಭಾರತದ ಸಮಸ್ಯೆಯು ಪರಿಹಾರವಾಗುವುದಕ್ಕೂ ಮಿತ್ರಜನಾಂಗಗಳಿಗೆ ವಿಜಯ ಮತ್ತು ಶಾಂತಿ ಲಭಿಸುವುದಕ್ಕೂ ಬ್ರಿಟನ್ನಿನ ಭಾರತ ಕಾರ್ಯನೀತಿಯಲ್ಲಿ ಈ ನಾಲ್ಕು ದೋಷಗಳು ನಿರ್ಮೂಲವಾಗಬೇಕು”

ಯುದ್ಧಾನಂತರದ ಹೊಸ ವ್ಯವಸ್ಥೆ
ಕಾಮನ್ಸ್ ಸಭೆಯಲ್ಲಿ ಚರ್ಚೆ

ಬ್ರಿಟಿಷ್ ಕಾಮನ್ಸ್ ಸಭೆಯವರು ಯುದ್ಧಾನಂತರದ ವ್ಯವಸ್ಥೆಯನ್ನು ಕುರಿತು ಚರ್ಚೆಗಳು ನಡೆದವು ಆರ್ಥರ್ ಗ್ರೀನ್‌ವುಡ್‌ರವರು ಈ ಚರ್ಚೆಯನ್ನು ಕುರಿತು ಬ್ರಿಟಿಷ್ ಸರಕಾರದವರು ಇತರ ಮಿತ್ರ ರಾಷ್ಟ್ರಗಳೊಡನೆ ಸಹಕರಿಸಿ ಈಗಿನಿಂದಲೇ ಅದನ್ನು ಆಲೋಚಿಸಬೇಕೆಂದೂ, ಸರ್ ವಿಲಿಯಂ ಬೆವರಿಡ್ಜ್‌ರವರು ತಯಾರಿಸಿದ ವರದಿಯನ್ನು ಸರ್ಕಾರದವರು ಪರಿಶೀಲಿಸಬೇಕೆಂದೂ ಈ ವರದಿಯಲ್ಲಿ ಎಲ್ಲರಿಗೂ ಸಮಾಜದಲ್ಲಿ ಸಮಾನ ಅಂತಸ್ತು ಸೂಚಿಸಲ್ಪಟ್ಟಿದೆಯೆಂದೂ ಹೇಳಿದರು

ಈ ಚರ್ಚೆಗೆ ಸರಕಾರದ ಪರವಾಗಿ ಪ್ರತ್ಯುತ್ತರವನ್ನು ಕೊಡುತ್ತಾ ಮೇಜರ್ ಅಟ್ಲೀ ಯವರು ಹೀಗೆಂದರು— “ಯಾವ ವ್ಯವಸ್ಥೆಯನ್ನೇ ಮಾಡಬೇಕಾದರೂ ಮೊದಲು ಯುದ್ಧದಲ್ಲಿ ಪೂರ್ಣವಾದ ವಿಜಯೋತ್ಸವ ಲಭಿಸಬೇಕು ಈ ಮುಖ್ಯೋದ್ದೇಶವನ್ನು ಬಿಟ್ಟು ಬೇರೆ ಕಡೆ ನಮ್ಮ ಮನಸ್ಸನ್ನು ತಿರುಗಿಸಬಾರದು ಆದರೂ ನಮ್ಮ ಬಳಿ ವಿಮರ್ಶೆಗಾಗಿ ಬಂದಿರುವ ವರದಿಗಳನ್ನು ನಾವು ಸಾವಧಾನದಿಂದ ನೋಡುತ್ತೇವೆ ಈ ವರದಿಯ ಮೇಲೆ ಕಾಮನ್ಸ್ ಸಭೆಯಲ್ಲಿ ಚರ್ಚೆಯಾದ ಬಳಿಕ ಸರಕಾರದ ಅಭಿಪ್ರಾಯವನ್ನು ತಿಳಿಸಲಾಗುವುದು” ಎಂದರು

ಮಾರಾಟಕ್ಕೆ ಸಿದ್ಧವಾಗಿವೆ

1943ನೇ ಇಸವಿಯ

ಶಾರದಾ ಪೊಕೆಟ್ ಡೈರಿಗಳು

ಸಣ್ಣ ಸೈಜು	0–7–0
” ” ಮುಚ್ಚಳದ್ದು	0–9–0
ದೊಡ್ಡ ಸೈಜು	0–12 0
” ” ಮುಚ್ಚಳದ್ದು	0–14–0

ಬೇಕಾದಲ್ಲಿ ಕೂಡಲೇ ಬರೆಯಿರಿ.

ಶಾರದಾ ಛಾಪಖಾನೆ,

ರಥಬೀದಿ— ಮಂಗಳೂರು

ಪುಸ್ತಕಾವಲೋಕನ

ವಿಕಸಿತ ಕುಸುಮಗಳು

ಪ್ರಕಾಶಕರು: ಪ್ರಕಾಶ ಏಸೋಸಿಯೇಶನ್, ಮಂಗಳೂರು. ಕ್ರೌನ್ ೧/೮ ಆಕಾರದ ೮೦ ಪುಟಗಳು—ಬೆಲೆ ೯ ಆಣೆ.

ಹನ್ನೆರಡು ಕತೆ ಮತ್ತು ಹರಟೆಗಳಿರುವ ಕೂಡಿದ ಪುಸ್ತಕವಿದು, ಮಂಗಳೂರು ಪ್ರಕಾಶ ಏಸೋಸಿಯೇಶನಿನ ಹನ್ನೆರಡು ಮಂದಿ ತರುಣ ಬರೆಹಗಾರರು ಇದರ ಲೇಖಕರು. ತಾರುಣ್ಯದ ಊಹನೆಗಳು, ಕಲಾಭಾವನೆಗಳು, ಪ್ರಚಲಿತ ರಾಜಕೀಯ ಸಾಮಾಜಿಕ ವಿಚಾರಗಳು ಇಂಥವೇ ಇಲ್ಲಿನ ಬರೆಹಗಳ ವಸ್ತುಗಳು. ಹೆಚ್ಚಿನವು ತರುಣ ಸಹಜವಾಗಿ ಪ್ರೇಮ ಕಥೆಗಳಾಗಿವೆ.

'ಭಾವನರ್ತನ' ಮೊದಲನೆಯ ಕತೆ. ಕಲಾಜೀವನ ಇದರ ಕಥಾವಸ್ತು; ಸುಂದರವಾಗಿ ಚಿತ್ರಿಸಿದ್ದಾರೆ; ಭಾಷಾಂತರದ ಛಾಯೆ ತುಸು ತೋರುತ್ತದೆ. "ಚಂದ್ರಕಾಂತನು ಅದೇ ಸಮಯಕ್ಕೆ ಅಲ್ಲಿ ಬರುವವನಾದನು" ಇಂಥಾ ವಾಕ್ಯಗಳು ಶೈಲಿಯ ಸಹಜತೆಯನ್ನು ಕೆಡಿಸುತ್ತವೆ. 'ಬಾಳಿನ ಚೆಲುವು' ಎರಡನೇ ಕತೆ! ದುರಂತದ ಕಡೆಗೆ ಸಾಗಿದ್ದ, ಓದಿದ್ದ ಹೆಣ್ಣಿನ ಬಾಳು ಕೊನೆಯಲ್ಲಿ ಸುಖಾಂತವಾಗುತ್ತದೆ. ಕತೆಯಲ್ಲಿ ಸ್ವಲ್ಪ ಕೃತ್ರಿಮತೆ ಕಂಡರೂ ಭಾಷೆ ಶುದ್ಧವಾಗಿದೆ. 'ನನ್ನ ರೈಲು ಪ್ರಯಾಣ' ಮೃದು ಹಾಸ್ಯದಿಂದ ಕೂಡಿದ್ದು ಒಂದು ಹರಟೆಯ ರೂಪದಲ್ಲಿದೆ. 'ನೆಗಾಡು' 'ಖರೀದು' 'ಬ್ಯಾಗು' ಇಂಥಾ ಪ್ರಯೋಗಗಳಿಂದ ಭಾಷೆಯ ಚಂದ ಕೆಡುವಂತಿದೆ. 'ಚಿತ್ರಗಾರ' ಆಂಗ್ಲ ವಾತಾವರಣದ್ದು. ಕಲಾಜೀವಿಯ ಬಾಳುವೆ ಇಲ್ಲಿ ಚಿತ್ರಿತವಾಗಿದೆ. 'ಆ ರಾತ್ರಿ' ಹಿಂದೂ ಮುಸ್ಲಿಂ ಪ್ರಶ್ನೆ ಬಿಡಿಸುತ್ತದೆ. ಧರ್ಮಾಂಧರ ಕಣ್ಣನ್ನೂ ತೆರೆಯಿಸಬಹುದು; ಇಂಥಾ ಕತೆಗಳು ಈಗಿನ ಕಾಲದಲ್ಲಿ ತುಂಬಾ ಪ್ರಚಾರವಾಗಬೇಕು. 'ಬೊಂಬು ಬಿದ್ದರೆ?' ನಾವೇನು ಮಾಡುವುದು ಎಂಬುದು ಈಗ ನಮ್ಮೆಲ್ಲರ ಮುಂದಿನ ಪ್ರಶ್ನೆ! ಕಥಾನಾಯಕನು ತೆಂಗಿನಕಾಯಿ ಮಾಡಿಗೆ ಬಿದ್ದ ಶಬ್ದ ಕೇಳಿಯೇ ಮಂಚದಡಿ ಸೇರುತ್ತಾನೆ! ಭಾರತೀಯರ ಅವಸ್ಥೆ ಇಲ್ಲಿಗೆ ಬಂದಿದೆ! 'ಎರಡು ವಿವಾಹ' ಪ್ರೇಮ ಜೀವಿಗಳ ಕತೆ! ಒಂದು ವಿವಾಹ ಪ್ರೇಮ ವಿವಾಹವಾಗಿ ಸುಖಾಂತವಾಯಿತು; ಇನ್ನೊಂದು ವಿವಾಹ ಪ್ರೇಮಿಗಳ ಸಂಯುಕ್ತ ಆತ್ಮಹತ್ಯೆಯಿಂದ ದುಃಖಾಂತವಾಯಿತು. ಇಲ್ಲಿ ಸಾಕಷ್ಟು ಸಹಜತೆ ತೋರದಿದ್ದರೂ ಅಂಥ ಸಮಾಜದ ಮೇಲೆ ಸುಧಾರಕ ಕತೆಗಾರರು ಯೋಗ್ಯವಾದ ಆರೋಪ ಹೊರಿಸಿದ್ದಾರೆ. "ಅಮ್ಮನ ಧರ್ಮ"ದಿಂದ ಮಗನು ಅನ್ಯದ ದಾರಿ ಕಂಡನು. 'ಪಾಕಿಸ್ಥಾನ' 'ಹಿಂದುಸ್ಥಾನ' ವಾದಿಗಳು ಇದನು ಅವಶ್ಯ ಓದಬೇಕು; ಹಳ್ಳಿಯ ಸಮಾಜದಲ್ಲಿ, ಹಿಂದು ಮುಸ್ಲಿಂ ಕುಟುಂಬಗಳಲ್ಲಿ ಎಂಥಾ ಅನ್ಯೋನ್ಯತೆಯಿದೆಯೆಂದು ಅವರು ಆಗಲಾದರೂ ಅರಿತಾರು; ಈ ಕತೆಗಾರರಿಂದ ಮುಂದೆ ಒಳ್ಳೆಯ ಕತೆಗಳನ್ನು ನಾವು ಹಾರೈಸಬಹುದು. 'ಸಂಸಾರವೋ ಸನ್ಯಾಸವೋ?' ಇದೊಂದು ಪ್ರೇಮಭಗ್ನ ಸನ್ಯಾಸಿಯ ಆತ್ಮಕಥೆ. ಸಮಾಜದಲ್ಲಿ ಇಂಥಾ ಸನ್ಯಾಸಿಗಳು ಇರುವುದು ಸಂಭವ; ಕಥನ ಚನ್ನಾಗಿದೆ. 'ಕಣ್ಣೀರು' ಸೂಳೆಯ ಸಂಸಾರದ್ದು, ಮನ ಕರಗುವಂತಿದೆ. 'ನಿರ್ದೋಷಿ' ವಿಷಮ ವಿವಾಹದ ಚಿತ್ರ. ಮಗನನ್ನು ಪ್ರೀತಿಸಿದ ತರುಣಿ ತಂದೆಯೊಡನೆ ಸಂಸಾರಹೂಡಬೇಕಾಯಿತು! ತರುಣಿ ನಿರ್ದೋಷಿಯಾಗಿದ್ದರಿಂದ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳದಿದ್ದರೂ ಆಗುತ್ತಿತ್ತು. 'ಮಿಲನ' ಕೊನೆಯ ಕತೆ. ಸಂಶಯ ಪಿಶಾಚದಿಂದ ಭ್ರಾಂತನಾದ ಗಂಡನು ಹೆಂಡತಿಯನ್ನು ತೊರೆದರೂ ಕೊನೆಗೆ ಅವರ ಮಿಲನವಾಗುತ್ತದೆ; ಕತೆಗಾರಿಕೆಯಲ್ಲಿ ಸಾಕಷ್ಟು ಸಹಜತೆ ಒಡಮೂಡಿಲ್ಲವಾದರೂ ಹೆಂಡತಿಯಾದವಳ ಸಹಿಷ್ಣುತೆಯ ನೀತಿಬೋಧೆ ಇಲ್ಲಿದೆ.

ಹೆಚ್ಚಾಗಿ ಬರೆಹಗಾರರೆಲ್ಲರೂ ಆರಂಭ ಲೇಖಕರೆಂಬುದು ವ್ಯಕ್ತವಾಗುವುದು. ಪ್ರತಿಯೊಬ್ಬ ಬರೆಹಗಾರರಲ್ಲಿಯೂ ಸಾಹಿತ್ಯದ ವಾತಾವರಣ ಒಡಮೂಡಿರುವುದರಿಂದ ಮುಂದೆ ಇವರಿಂದ ಇನ್ನಷ್ಟು ಉತ್ತಮ ಲೇಖನಗಳನ್ನು ನಾವು ಹಾರೈಸಬಹುದು. ಪ್ರಕಾಶ ಏಸೋಸಿಯೇಶನಿನವರು ಕಾಗದದ ಅಭಾವದೀಕಾಲದಲ್ಲಿ ಇಂಥಾ ಪ್ರಯತ್ನ ಕೈಕೊಂಡದ್ದು ಪ್ರಶಂಸನೀಯ. ಕನ್ನಡಿಗರು ಈ ಪ್ರಯತ್ನವನ್ನು ಪ್ರೋತ್ಸಾಹಿಸಿ ಆ ಮೂಲಕ ಇವರಿಂದ ಹೆಚ್ಚಿನ ಸಾಹಿತ್ಯ ಸೇವೆಯನ್ನು ಪಡೆಯಲಿ.

—ಕಯ್ಯಾರ.





ಸಮರಭೂಮಿಯ ಸಂಚಾರ

ರಶ್ಯನ್ ಯುದ್ಧಭೂಮಿಯಲ್ಲಿ ಈಗ ವೋಲ್ಗಾ ಮತ್ತು ಡಾನ್‌ಗಳ ಮಧ್ಯೆ ಇರುವ ಜರ್ಮನ್ ವ್ಯೂಹವನ್ನು ಭೇದಿಸಿ ರಶ್ಯನರು ತಮ್ಮ ಗುರಿಯನ್ನು ಸೇರುತ್ತಿದ್ದಾರೆ. ಜರ್ಮನರ ಪ್ರತಿಭಟನೆಯನ್ನು ರಶ್ಯನರು ಪ್ರಬಲವಾಗಿ ಪ್ರತಿಭಟಿಸುತ್ತಾರೆ. ಈ ಮಧ್ಯೆ ತಾವು ಕೈವಶಪಡಿಸಿಕೊಂಡ ಪ್ರದೇಶಗಳನ್ನು ಭದ್ರಪಡಿಸುತ್ತಿರುವರು. ಕಳೆದು ಹೋದ ಪ್ರದೇಶಗಳನ್ನೆಲ್ಲಾ ಪುನಃ ಸ್ವಾಧೀನಮಾಡಿಕೊಳ್ಳಬೇಕೆಂಬುದು ರಶ್ಯನರ ಸಾಹಸವಾಗಿದೆ. ಈ ಉದ್ದೇಶದಿಂದ ಈಗ ಪೂರ್ವದ ಡಾನ್ ವಕ್ರದಿಂದ ಡಾನ್ ಸ್ಟಾಲಿನ್‌ಗ್ರಾಡ್ ನಡುವಣ ಪ್ರದೇಶ ಮತ್ತು ಸ್ಟಾಲಿನ್‌ಗ್ರಾಡ್‌ನಿಂದ ಕೊತೆಲ್ನಿಕೋವೋ ರೈಲ್ವೆ ಸ್ಟೇಶನ್ ವರೆಗಿನ ಪ್ರದೇಶಗಳ ಮೇಲೆ ೧೨ ಸಾವಿರ ಚದುರ ಮೈಲು ಸ್ಥಳಗಳನ್ನು ಆವರಿಸುವ ಸಲುವಾಗಿ ಧಾಳಿಯಿಟ್ಟಿದ್ದಾರೆ. ಕೆಲ ದಿನಗಳಿಂದ ರಶ್ಯನರ ಮುನ್ನಡೆ ಅಷ್ಟೇನೂ ಕೇಳಿಬರುವುದಿಲ್ಲ. ಅದಕ್ಕೆ ಅವರ ಸಿದ್ಧತೆಯ ಕೆಲಸವೇ ಕಾರಣವಾಗಿರಬಹುದು. ಡಾನ್ ಮತ್ತು ವೋಲ್ಗಾದ ನಡುವೆ ಸಿಕ್ಕಿರುವ ಜರ್ಮನರನ್ನು ಸಂಹರಿಸಲು ಅವರು ಪ್ರಬಲ ಸಾಹಸವಮಾಡುತ್ತಿದ್ದಾರೆ. ಈ ಭಾಗದಲ್ಲಿ ಜರ್ಮನರೂ ಸುಸಜ್ಜಿತರಾಗಿದ್ದಾರೆ. ಈಗಾಗಲೇ ಜರ್ಮನರು ಒಂದು ಸೈನ್ಯವನ್ನು ರೋಸ್ಟೋವದಿಂದ ಮುಂದೊಡ್ಡಿದ್ದಾರೆ. ಈ ಸೈನ್ಯಕ್ಕೆ ಬೇಕಾದಷ್ಟು ಫಿರಂಗಿ, ಕಾಲ್ಬಲ ಟೇಂಕ್ ಬಲಗಳ ಬೆಂಬಲವಿರುವುದರಿಂದ ಸ್ಟಾಲಿನ್‌ಗ್ರಾಡಿನ ಈಶಾನ್ಯದಲ್ಲಿ ರಶ್ಯನರು ಇವರನ್ನು ರೋಷಾವೇಶದಿಂದ ಇದಿರಿಸುತ್ತಿರುವರು. ಸ್ಟಾಲಿನ್‌ಗ್ರಾಡ್ ಮತ್ತು ಮಧ್ಯ ವ್ಯೂಹದಲ್ಲಿ ರಶ್ಯನರಿಗೆ ಪ್ರಗತಿಯಾಗಿದೆ. ಡಾನ್ ವೋಲ್ಗಾ ನಡುವೆ ಜರ್ಮನ್ ಪ್ರತಿಭಟನೆ ಕ್ಷೀಣವಾಗುತ್ತಲಿದೆ. ರಝೇವ, ವಿಲ್ಲಿ ಕಿಲೂಕಿ ಮತ್ತು ವ್ಯಾಜ್ಮಾ ಈ ಮೂರು ನಗರಗಳ ನಡುವೆ ಇರುವ ತ್ರಿಕೋಣಾಕಾರದ ೬೦೦ ಮೈಲು ವಿಸ್ತೀರ್ಣದ ಪ್ರದೇಶದಲ್ಲಿ ಭೀಕರ ಸಂಗ್ರಾಮ ನಡೆಯುತ್ತಿದೆ. ಈ ಭಾಗದಲ್ಲಿ ಜರ್ಮನರ ದುರ್ಗಮವಾದ ದುರ್ಗಗಳಿರುವುದರಿಂದ ಅವರ ಪ್ರತಿಭಟನೆಯೂ ಬಲವಂತವಾಗಿದೆ. ಹೀಗೆ ಇಂದಿನ ಹಿಮಗಾಲದಲ್ಲಿಯಾದರೂ ಜರ್ಮನರನ್ನು ಹಿಮ್ಮೆಟ್ಟಿಸಿ ನೆಲಸಮ ಮಾಡಬೇಕೆಂಬ ಸಾಹಸದಿಂದ ರಶ್ಯನರು ವೀರಾವೇಶಗೊಂಡು ಹೋರಾಡುತ್ತಿರುವರು. ಜರ್ಮನರಾದರೂ ಹಿಮಬಾಧೆಯನ್ನೂ ಲೆಕ್ಕಿಸದೆ, ಹೊಸ ಹೊಸ ಸೈನ್ಯ ಸಾಮಗ್ರಿಗಳನ್ನು ತರಿಸಿ ರಶ್ಯನರ ಮೇಲೇರಿ ಹೋಗುತ್ತಿರುವರು. ಸ್ಟಾಲಿನ್‌ಗ್ರಾಡಿನಲ್ಲಿ ಸಿಕ್ಕಿಬಿದ್ದ ಜರ್ಮನ್ ಸೈನ್ಯಸಂಖ್ಯೆಯೆಷ್ಟೆಂಬುದು ಯಾರಿಗೂ ತಿಳಿದಿಲ್ಲ. ಅಲ್ಲಿ ಅಪರಿಮಿತ ಶಸ್ತ್ರಸಜ್ಜಿತ ಸೈನ್ಯವಿರುವುದೆಂದು ಊಹಿಸಲಾಗಿರುವುದರಿಂದ ಅದು ಬೇಗನೇ ಹಿಂತೆಗೆಯುವುದು ಸಾಧ್ಯವಿಲ್ಲವೆಂದು ಸಮರತಜ್ಞರ ಅಭಿಪ್ರಾಯವಾಗಿದೆ. ಹೀಗಾಗಿ ರಶ್ಯನ್ ಕಾಳಗ ಇನ್ನೂ ದೀರ್ಘವಾಗಿಯೇ ಸಾಗಲಿದೆ.

ಟುನಿಶಿಯದ ಮೇಲೆ ದೃಷ್ಟಿ

ಮಿತ್ರರು ಟುನಿಶಿಯದ ಕಾಳಗಕ್ಕೆ ಸೈನ್ಯಸಂಗ್ರಹ ಮಾಡುತ್ತಿದ್ದಾರೆ. ಟುನಿಸ್ ಮತ್ತು ಬೆಜರ್ಟಾಗಳನ್ನು ಒಮ್ಮೆ ಸ್ವಾಧೀನಪಡಿಸಿಕೊಂಡರೆ, ಪಶ್ಚಿಮದಿಂದ ಟ್ರಿಪೋಲಿಗೆ ದಂಡಯಾತ್ರೆಮಾಡುವುದು ಸುಲಭವಾಗುವುದು. ಆಫ್ರಿಕದ ಈ ಕಡೆಯ ಹೋರಾಟದ ಕುರಿತು ಹಿಟ್ಲರನಾದರೂ ದೃಢನಿರ್ಧಾರ ಮಾಡಿರುವಂತೆ ತೋರುವುದು. ಟ್ರಿಪೋಲಿಟಾನಿಯಲ್ಲಿರುವ ಇಟಲಿ ಜರ್ಮನಿ ಸೈನ್ಯಗಳ ಶಕ್ತಿ ಎಷ್ಟಿದೆಯೆಂಬುದು ಇನ್ನೂ ತಿಳಿದಿಲ್ಲ. ಹೇಗಿದ್ದರೂ ಹೊಸ ಹೊಸ ಸೈನ್ಯಗಳು ಇನ್ನೂ ಬಂದು ಸೇರುತ್ತಿವೆ. ಇಲ್ಲಿ ಒಂದು ಘೋರ ಕಾಳಗವಾದೀತೆಂದು ನಿರೀಕ್ಷೆಯಿದೆ. ಮಿತ್ರರ ಮಿಂಚಿನ ಧಾಳಿ ನಿಂತು ಒಂದು ವಾರವಾಯಿತು. ಟುನಿಸ್ ಲಿಬಿಯ ಯುದ್ಧಗಳು ಸದ್ಯ ಅಷ್ಟೇನೂ ಜೋರಾಗಿ ಸಾಗುತ್ತಲಿಲ್ಲ. ಲಿಬಿಯದಲ್ಲಿ ಜರ್ಮನರು ಎಲ್ ಅಗೇಲಾದಲ್ಲಿ ಮಿತ್ರರನ್ನೆದುರಿಸಲು ಸಿದ್ಧರಾಗಿದ್ದಾರೆ. ಹೀಗೆ ಜರ್ಮನರು ಹೋರಾಟಕ್ಕೆ ಸಿದ್ಧರಾಗಿ ನಿಂತಿರುವಾಗ, ಅವರನ್ನು ಒಮ್ಮೆಲೇ ಕೆಣಕಿದರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲವೆಂದು ಈಗ ಮಿತ್ರರೂ ಸಮರಸಿದ್ಧತೆಯಲ್ಲಿ ತೊಡಗಿರುವಂತೆ ತೋರುವುದು ಬಿಝರ್ಟಾ ಟುನಿಸ್‌ಗಳ ನಡುವೆ ಜರ್ಮನರು ಒಂದು ವ್ಯೂಹವನ್ನು ನಿರ್ಮಿಸಿದ್ದು, ಇದನ್ನು ಭೇದಿಸಲು ಮಿತ್ರರು ಸಾಹಸಪಡುತ್ತಿರುವರು. ಇದು ಸಾಧ್ಯವಾದರೆ ಮಿತ್ರರು ಜರ್ಮನರನ್ನು ಮತ್ತೂ ಸೋಲಿಸಬಹುದು. ಬಿಜರ್ಟ ಮತ್ತು ಟುನಿಸಿಯಗಳಲ್ಲಿ ಮಿತ್ರರಿಗೆ ಅನುಕೂಲತೆಗಳೂ ಚನ್ನಾಗಿವೆ. ಸೈನ್ಯ ಮತ್ತು ಇತರ ಸಾಧನಗಳು ಅವರಲ್ಲಿ ಸಾಕಷ್ಟಿವೆ. ಅಲ್ಜೀರಿಯ ಆಕ್ರಮಣದಿಂದ ಅವರಿಗೆ ವಿಮಾನ ನೌಕಾ ಕೇಂದ್ರಗಳು ದೊರೆತಿವೆ. ಬ್ರಿಟಿಷ್ ನೌಕಾಬಲದ ಬೆಂಬಲವಿದೆ. ಆದರೆ ಇಟಲಿ, ಸಾರ್ಡೀನಿಯ ಮತ್ತು ಸಿಸಲಿಗಳು ಇಲ್ಲಿಗೆ ಸಮೀಪವಿರುವುದರಿಂದ ಶತ್ರುವಿನ ಶಕ್ತಿಯನ್ನೂ ಲೆಕ್ಕಿಸುವುದು ಸಾಧ್ಯವಿಲ್ಲ. ಅಂತೂ ಮುಂದಿನವಾರ ಟುನಿಶಿಯದಲ್ಲಿ ಒಂದು ನಿರ್ಣಯದ ಕಾಳಗವಾಗಬಹುದು.

ಎರಡನೇ ವರ್ಷದಲ್ಲಿ ಜಪಾನು—

ಕಳೆದ ತಾರೀಕು ೮ಕ್ಕೆ ಜಪಾನು ಮಿತ್ರರಾಷ್ಟ್ರಗಳ ಮೇಲೆ ಧಾಳಿಯಿಟ್ಟು ಒಂದು ವರ್ಷ ಪೂರ್ಣವಾಯಿತು. ಜಪಾನಿನ ರಾಯಭಾರಿಯು ವಾಶಿಂಗ್‌ಟನಿನಲ್ಲಿ ಸಂಧಾನ ಮಾತುಕತೆ ನಡೆಸುತ್ತಿದ್ದಂತೆ, ೧೯೪೧ನೇ ಡಿಶಂಬರ ೭ನೇ ತಾರೀಕಿನಂದು ರಾತ್ರೆ ಜಪಾನ್ ವಿಮಾನಗಳು ಪರ್ಲ್ ಬಂಧರದ ಮೇಲೆ ಮುತ್ತಿಗೆ ಹಾಕಿದವು. ಆಕಸ್ಮಿಕವಾದೀ ಅಭಿಯೋಗದಿಂದ ಅಮೆರಿಕಕ್ಕೆ ಬಹಳ ನಷ್ಟವಾಯಿತು. ಮತ್ತೆ ಫಿಲಿಪಯಿನ್ ಮತ್ತು ಹಾಂಕಾಂಗ್ ಮೊದಲಾದ ಬ್ರಿಟಿಷ್ ವಸಾಹತುಗಳ ಮೇಲೆಯೂ ಜಪಾನು ಧಾಳಿ ಇಡುತ್ತಾ ವಿಜಯದ ಮೇಲೆ ವಿಜಯ ಪಡೆಯುತ್ತಾ ಮಿಂಚಿನ ವೇಗದಿಂದ ಮುಂದಿನ ಮೇ ತಿಂಗಳ ವರೆಗಿನ ಕಾಳಗದಲ್ಲಿ ಮಲಯ, ಸಿಂಗಾಪುರ, ಡಚ್ ಈಸ್ಟ್ ಇಂಡೀಸ್, ಬರ್ಮ, ಅಂಡಮಾನ್ ದ್ವೀಪಗಳನ್ನು ಗೆದ್ದುಬಿಟ್ಟಿತು. ಆ ಮೇಲಿನ ಆರು ತಿಂಗಳಲ್ಲಿ ಸೊಲೊಮನ್ ಕಡೆ ಜಪಾನಿನ ಚಟುವಟಿಕೆ ಸಾಗುತ್ತಿದೆ. ಅಂತೂ ಜಪಾನು ಕಳೆದ ಒಂದು ವರ್ಷದಲ್ಲಿ ಅನಿರೀಕ್ಷಿತ ವಿಜಯವನ್ನು ಸಂಪಾದಿಸಿದೆ.

ಎರಡನೇ ವರ್ಷದಲ್ಲಿ ಜಪಾನಿನ ಗತಿಯೇನು ಎಂಬುದಿಂದು ನಮ್ಮ ಮುಂದಿನ ಪ್ರಶ್ನೆ? ಜಪಾನು ಸುಮ್ಮಗೆ ಇರುವುದಂತೂ ಸಾಧ್ಯವಿಲ್ಲ; ಯಾವುದಾದರೊಂದು ಕಡೆ ಬಿದ್ದೇ ತೀರುವುದು; ಅದೆಲ್ಲಿ ಎಂಬುದು ಮಾತ್ರ ಇದುವರೆಗೆ ತಿಳಿದು ಬಂದಿಲ್ಲ. ಭಾರತದ ಮೇಲೊ? ಆಸ್ಟ್ರೇಲಿಯ ಮೇಲೊ? ಯಾವ ಕಡೆ ಜಪಾನು ತಿರುಗುವುದೆಂದು ನೋಡಬೇಕು; ಎರಡು ಕಡೆಗಳಲ್ಲಿಯೂ ಆದರ ಚಟುವಟಿಕೆಗಳೇನೋ ಇಂದು ಲಘು ಪ್ರಮಾಣದಲ್ಲಿ ನಡೆಯುತ್ತಲೇ ಇವೆ. ಜಪಾನಾದರೂ ತನ್ನ ಮಿತ್ರರಿಗೆ ಈಗ ಸಹಾಯ ಮಾಡಲು ಮುಂದೆ ಹೋಗುವುದು ಸಂಭವವಿದೆ. ಹಿಟ್ಲರನಿಗಂತೂ ಆಫ್ರಿಕದಲ್ಲಿ ಸದ್ಯ ಅಪಜಯವೇ ದೊರೆತಿದೆ. ಆದ್ದರಿಂದ ಜಪಾನು ನೈಋತ್ಯ ಶಾಂತಿ ಸಾಗರದ ಕಡೆ ತಿರುಗುವುದೊಂದು ಸಂಭವವಿದೆ. ಆದರೆ ಭಾರತದ ಮೇಲೆ ಆದರ ದೃಷ್ಟಿ ಬಹುಕಾಲದಿಂದಲೇ ಇದೆ. ಮೊನ್ನೆ ಮೊನ್ನೆ ಪುನಃ ಚಿತಗಾಂಗಿನ ಮೇಲೆ ಪುನರಪಿ ಬಾಂಬು ಸುರಿಸಿದೆ. ಜಪಾನರು ಇತ್ತೀಚೆಗೆ ಬರ್ಮ ಮಲಯಗಳಿಗೆ ಹೆಚ್ಚು ಸೈನ್ಯವನ್ನು ಕಳುಹಿಸಿರುವುದನ್ನು ನೋಡಿದರೂ ಭಾರತಕ್ಕೆ ಭೀತಿ ಇದ್ದೇ ಇದೆ. ಆದರೆ ಇದು ಕೇವಲ ಆತ್ಮರಕ್ಷಣೆಗಾಗಿ ಇದ್ದರೂ ಇರಬಹುದು.

ಮಿತ್ರರಾದರೂ ಈಗ ಸುಮ್ಮಗಿಲ್ಲ. ಅಮೆರಿಕವು ಪರ್ಲ್ ಬಂದರದ ಹಾನಿಯನ್ನು ತುಂಬಿಕೊಂಡು ಸಜ್ಜಾಗಿದೆಯೆಂದು ಸರಕಾರೀ ಪ್ರಕಟಣೆ ಬಂದಿದೆ. ಮಿಡ್ವೆ ದ್ವೀಪದ ಕೋರಲ್‌ನಲ್ಲಿ ಮತ್ತು ಸೋಲಮನ್ ಸಮುದ್ರದಲ್ಲಿ ಜಪಾನೀ ನೌಕಾಬಲಕ್ಕೆ ಬಲವಾದ ಪೆಟ್ಟು ಸಿಕ್ಕಿದೆ. ಸೊಲಮನ್ ಗುಡಲ್‌ಕನಾರ್ ಕಾಳಗವು ಜಪಾನಿಗೆ ಹೆಚ್ಚಿನ ನಷ್ಟವನ್ನುಂಟುಮಾಡಿದೆ. ಫಿಲಿಪಯಿನ್ ಬಗ್ಗೆ ಅಮೇರಿಕವೇನು ಮಾಡದಿದ್ದರೂ ನೈಋತ್ಯ ಶಾಂತಿಸಾಗರದಲ್ಲಿ ಜಪಾನ್ ಕಾಲಿಡದಂತೆ ಅದು ತಡೆಯಬಹುದು. ಗುಡಲ್‌ಕನಾರ ಕಾಳಗವಂತೂ ಇನ್ನೂ ಮುಗಿದಿಲ್ಲ. ಹೀಗೆ ಅಮೆರಿಕವು ಎದುರಿಸುತ್ತಿರುವಾಗ ಬ್ರಿಟನು ಜಪಾನಿಗೆ ಏನು ಪ್ರತಿಕಾರ ಯೋಚಿಸಿದೆ? ಜಪಾನಿನ ಚಟುವಟಿಕೆಯಿಂದ ಹೆಚ್ಚಿನ ನಷ್ಟಬಂದದ್ದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಆದ ಉರಿ ಬ್ರಿಟಿಷ್ ಧುರೀಣರಿಗೆ ಆರಿಹೋಗಬಾರದು. ಸಿಂಗಾಪುರ, ಹಾಂಕಾಂಗ್, ಬರ್ಮಾದಂಥಾ ನಷ್ಟವು ತುಂಬಿಕೊಳ್ಳಲಾರದ ನಷ್ಟ. ಈ ನಷ್ಟ ಭರ್ತಿಗೆ ಬ್ರಿಟನು ತಯಾರು ಮಾಡುತ್ತಿದೆಯೆಂದೇನೋ ಕೇಳಿ ಬರುವುದಾದರೂ ಏನೂ ಕಾರ್ಯಕ್ರಮ ಕಾಣುವುದಿಲ್ಲ. ಬರ್ಮವನ್ನು ಪುನಃ ತೆಕ್ಕೊಳ್ಳುವ ಕೇವಲ ಶಪಥವೊಂದು ಹಾಗೆಯೇ ಇದೆ. ಬ್ರಿಟಿಷ್ ಸಾಮ್ರಾಜ್ಯಶಾಹಿಗಳೊಡನೆ ಸ್ವಾತಂತ್ರ್ಯಕ್ಕಾಗಿ ಬೇಡಿ ಬೇಡಿ ನಿರಾಶೆಹೊಂದಿದ ಬರ್ಮೀಯರು, ಕೊನೆಗೇನೋ ಜಪಾನನ್ನಾಲಿಂಗಿಸಿಕೊಂಡರು! ಬ್ರಿಟನಿನ ಯುದ್ಧೋದ್ದೇಶದ ವಿಷಯ ವಸಾಹತುಗಳ ಜನರಿಗೆ ಸಂಪೂರ್ಣ ಭರವಸೆ ಹುಟ್ಟದಿದ್ದರೆ, ಬರ್ಮವು ಪುನಃ ಬ್ರಿಟಿಷರ ಕೈಗೆ ಬರುವುದು ಕಷ್ಟಸಾಧ್ಯ.

NOTICE

Canara High School Old Boys' Association Mangalore.

Notice is hereby given that the annual meeting of the General Body of the Association will be held on Saturday the 26th December 1942 at 3-30 p. m. in the A. Subba Rao Pai, Memorial Hall, Canara High School, Mangalore.

All members of the Association are earnestly requested to be present.

Resolutions to be moved at the meeting should reach the Hon. Secretary by 20th of December 1942.

Canara High School Mangalore 7—12—42. M. Annappa Kamath, M. Venkatesha Pai, Hon. Joint secretaries

The Canara Industrial & Banking Syndicate, Ltd.

Head Office:— UDIPI (S. India).

WANTED

Young men for the posts of Inspectors, Agents and clerks in the service of the Bank. Inspectors: 70-10/2-200; Agents-40-10/2-200; Clerks: 15-6/2-90. Selected candidates will be called for an interview at their own cost and if selected will have to undergo a course of instruction in Banking and allied subjects and thereafter appear for the Associate Examination of the Academy of General Education. The Inspectors and Agents will be appointed from among the candidates who have passed the Associate Examination and those that fail will be appointed as Clerks. The fee for the whole course, which extends over one year, is Rs. 50/- payable in advance. Applications should reach the undersigned with Rs. 50/- by the 20th December, 1942 and accompanied by certificates regarding character,-qualification etc. Students having good family connections will be given preference. Minimum qualification-S. S. L. C. standard. If after interview, they are not selected their amount will de refunded to them.

B. S. Nayak,
Office Manager.

ಸಂರಕ್ಷಣೆಯೋ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906.

ಸ್ವದೇಶಾಭಿಮಾನಿ

ತಾರೀಕು 11—12—1942

ಆಂಗ್ಲೋ ಇಂಡಿಯನರು

'ನಮ್ಮ ಪವಿತ್ರ ಮಾತೃಭೂಮಿಯ ವಿಭಜನೆಯನ್ನು ನಾವು ವಿರೋಧಿಸುವೆವು. ಎಲ್ಲಾ ಅಲ್ಪ ಸಂಖ್ಯಾಕರಿಗೂ ಯೋಗ್ಯ ಸ್ಥಾನಮಾನಗಳುಳ್ಳ ರಾಷ್ಟ್ರೀಯ ಸರಕಾರದ ನೆಲೆಯಲ್ಲಿ ಭಾರತವು ಸ್ವಾತಂತ್ರ್ಯ ಸುಖದಿಂದ ಬೆಳಗಲಿ ಎಂದು ನಾವೂ ಎಲ್ಲಾ ರಾಷ್ಟ್ರ ಪ್ರೇಮಿಗಳೊಡನೆ ಹಾರೈಸುತ್ತೇವೆ.' ಹೀಗೆಂದು ಆಂಗ್ಲೋ ಇಂಡಿಯನ್ ಪಕ್ಷದ ಮುಖಂಡರಾದ ಶ್ರೀ. ಫ್ರಾಂಕ್ ಎಂತೋನಿಯುವರು ಅಲ್ಲಾಬಾದಿನಲ್ಲಿ ಒಂದು ಭಾಷಣವೀಯುತ್ತಾ ಹೇಳಿದರು. ಅವರ ಇನ್ನು ಕೆಲವು ಮಾತುಗಳು ಮನ್ನಿಸೀಯುವಿವೆ.

"ನಮ್ಮ ವಂಶವು ಭಾರತಕ್ಕೊಂದು ಗೌರವ ತಂದಿದೆ; ಆದರೆ ನಮ್ಮನ್ನು ತಿರಸ್ಕರಿಸುವ ಲಕ್ಷಣಗಳು ಮುಖಂಡರ ನಡತೆಗಳಲ್ಲಿ ಕಾಣುತ್ತವೆ. ನಮ್ಮ ಪ್ರಾಕ್ತನ ಪ್ರಮಾದಗಳಿಗಾಗಿ ಅವರು ಹೀಗೆ ಮಾಡುತ್ತಾರೆಯೇ? ನಾವು ಪ್ರಮಾದ ಮಾಡಿರುವೆವೆಂದು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ನಾವು ನಮ್ಮ ವಿಷಾದ ವ್ಯಕ್ತಪಡಿಸುತ್ತೇವೆ. ಈ ಮಾತುಗಳು ಹೃದಯ ಸ್ಪರ್ಶಿಯಾದಂಥಾ ಮಾತುಗಳು. ಆಂಗ್ಲೋ ಇಂಡಿಯನರಿಗೆ ಈಗಲಾದರೂ ದೇವರು ಇಂಥಾ ಸದ್ಬುದ್ಧಿ ಕೊಟ್ಟದ್ದಕ್ಕಾಗಿ ಭಾರತವು ತಮ್ಮ ಪವಿತ್ರ ಮಾತೃಭೂಮಿಯೆಂದು—ನಾವು ಅವರಿಗೆ ಕೃತಜ್ಞರಾಗಿರಬೇಕು.

ವಿಲ್ಕಿಯರ ಕರೆ

ವೆಂಡಲ್ ವಿಲ್ಕಿಯವರು ಚಿಕಾಗೋದಲ್ಲಿ ಒಂದು ಭಾಷಣ ಮಾಡುತ್ತಾ ಅಮೆರಿಕವು ಡಾರ್ಲಾನರೊಡನೆ ಒಪ್ಪಂದ ಮಾಡಿಕೊಂಡದ್ದರಿಂದ ನೈತಿಕ ಬಲವನ್ನು ಕಳಕೊಂಡಿತೆಂದೂ, ಅದರಿಂದ ಅದು ಶಾಂತಿ ಭಂಗವನ್ನಾದರೂ ತಂದುಕೊಳ್ಳಬಹುದೆಂದೂ ಟೀಕಿಸಿದ್ದು ಮಾತ್ರವಲ್ಲದೆ, ಮಸಾಹತ್ತು ಕ್ರಮವು ನಾಶವಾಗಿ ಅಮೆರಿಕದ ಯುದ್ಧೋದ್ದೇಶದ ಬಗ್ಗೆ ಮಸಾಹತ್ತಿನ ಜನರಿಗೆ ವಿಶ್ವಾಸಹುಟ್ಟುವಂತೆ ಮಾಡಬೇಕೆಂದೂ ಹೇಳಿದರು.

"ಜಗತ್ತಿನ ಜನರಿಗೆ ಅಮೆರಿಕವು ನಿರ್ಮಲ ಉದ್ದೇಶಕ್ಕಾಗಿ ಹೋರಾಡುತ್ತಿದೆಯೆಂಬ ಬಗ್ಗೆ ಪುನಃ ಭರವಸೆ ಹುಟ್ಟಿಸಬೇಕಾಗಿದೆ. ಅಮೆರಿಕದ ಯುದ್ಧೋದ್ದೇಶವು ಸರಿಯಾಗಿ ಸ್ಪಷ್ಟೀಕರಣವಾಗಲೇಬೇಕು. ಇಡೀ ಪ್ರಪಂಚದ ಹಾಗೂ ಮಸಾಹತ್ತುಗಳ ಜನರಿಗೆ ನಾವು ಎಲ್ಲರ ಶುದ್ಧವಾದ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗಾಗಿ ಹೋರಾಡುತ್ತೇವೆಂಬ ಬಗ್ಗೆ ಖಂಡಿತವಾಗಬೇಕು. ಯುದ್ಧ ನಡೆಯುತ್ತಿರುವಾಗ ಮಾತ್ರ ನಾವೀ ಉದ್ದೇಶ ಘೋಷಣೆ ಮಾಡುವುದು; ಮುಂದೆ ಸಾಮ್ರಾಜ್ಯಶಾಹೀ ತಕ್ಕ ತರುವೆವೆಂಬ ಅವರ ಅನುಮಾನ ಬಿಟ್ಟು ಹೋಗಬೇಕು. ಅದಕ್ಕೆ ನಾನು ಸಂಚರಿಸಿದ ಆಫ್ರಿಕ, ಮಧ್ಯಪೂರ್ವ, ಚೀನ ಮತ್ತು ಪೂರ್ಣವಾದ ದೂರ ಪೂರ್ವಗಳ ಜನರ ಅಭಿಪ್ರಾಯವೇನೆಂದರೆ ಮಸಾಹತ್ತು ಕ್ರಮವು ಇಂದೇ ಅಳಿಸಿ ಹೋಗಬೇಕೆಂಬುದು" ಅಮೆರಿಕವು ಇಂಥಾ ಕರ್ತವ್ಯವನ್ನು ಪೂರೈಸಬೇಕೆಂಬುದು ವೆಂಡಲ್ ವಿಲ್ಕಿಯವರ ಕರೆಯಾಗಿದೆ.

ಜಾಂಬಕನ್ನುಪಯೋಗಿಸಿ ನಿಮ್ಮ ಪಾದದ ನೋವನ್ನು ಗುಣಪಡಿಸಿರಿ.

ಪ್ರತಿರಾತ್ರಿ ತಪ್ಪದೆ ಇದನ್ನು ಹಚ್ಚಿರಿ.

ನೋವುಳ್ಳ ಪಾದಗಳಿಗೆ ಮತ್ತು ಬಾತುಹೋದ ಮಣಿಗಂಟಿಗೆ ಜಾಂಬಕಿನಷ್ಟು ಉತ್ತಮ ಔಷಧಿ ಬೇರಿಲ್ಲ. ಮಣಿಗಂಟಿಗೆ ಪಾದಕ್ಕೆ ಬೆರಳುಗಳ ಮಧ್ಯಕ್ಕೆ ಇದನ್ನು ಮೆಲ್ಲಗೆ ಹಚ್ಚಿ ಉಜ್ಜಿರಿ. ಇದರಲ್ಲಿರುವ ಉತ್ತಮ ವನೌಷಧಿ ಸತ್ವವು ಚರ್ಮದೊಳಗೆ ಹೀರಲ್ಪಟ್ಟು ನೋವನ್ನು ಕಡಿಮೆಮಾಡಿ ಗಾಯವನ್ನು ಗುಣಪಡಿಸುತ್ತದೆ. ಚರ್ಮ ಗಟ್ಟಿಯಾದದ್ದು ಮೃದುವಾಗುತ್ತದೆ. ಆಳವಾದ ಗಾಯಗಳೂ ಕೂಡುತ್ತವೆ. ನೀವು ಇದರಿಂದ ಸಂತೋಷ ಪಡುವಿರಿ. ಜಾಂಬಕ್ ಒಂದು ರೂಪಾಯಿ ಅಥವಾ ರೂ. 2-4-0, ಸೋಪಿಗೆ ಒಂದು ರೂಪಾಯಿ, ಪೌಡರಿಗೆ ಒಂದು ರೂಪಾಯಿ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು.

ಸ್ವದೇಶ ಸಮಾಚಾರ

ದೊಡ್ಡದೊಂದು ಧೂಮಕೇತು!

ಬರುವ ಜನವರಿ ತಿಂಗಳಲ್ಲಿ ಕಾಣುವುದು!

ಬರುವ ಜನವರಿಗೆ ಬೃಹದಾಕಾರದ ಒಂದು ಧೂಮಕೇತುವು ಕಾಣಿಸಿಕೊಳ್ಳುವುದೆಂದು ವಿಜ್ಞಾನಿಗಳು ಗಣಿತ ಹಾಕಿ ಹೇಳಿದ್ದಾರೆ. ಈ ಧೂಮಕೇತುವಿನ ಬಾಲವು ನಮ್ಮ ಭೂಗೋಲಕ್ಕೆ ಸ್ಪರ್ಶವಾಗುವಷ್ಟು ಉದ್ದವಿದೆಯೆನ್ನುತ್ತಾರೆ. ಪಾಶ್ಚಾತ್ಯರು ಅದಕ್ಕೆ 'ಕನ್ನಿಂಗ್ ಹೆಮ್' ಎಂದು ಹೆಸರಿತ್ತಿದ್ದಾರೆ. ಶುಕ್ರ ಧೂಮಕೇತು—ಎಂದು ಅದನ್ನು ಹಿಂದುಗಳು ಕರೆದಿದ್ದರು. ಇದಕ್ಕೆ ಮುಂಚೆ ಎರಡು ಸಲ ಅದನ್ನು ಕಂಡಂತೆ ಪ್ರತೀತಿ ಇದೆ—ಕಲಿಯುಗ ಪ್ರಾರಂಭವಾದ ಎರಡು ವರ್ಷಗಳಲ್ಲಿ ಒಮ್ಮೆ, ಆ ಮೇಲೆ ಬುದ್ಧದೇವನ ಜನ್ಮಕಾಲದಲ್ಲಿ ಮತ್ತೊಮ್ಮೆ ಮೂರನೆ ಸಲವೆಂದರೆ ಇದೇ ಬಾರಿ ಬರುವ ಜನವರಿ ತಿಂಗಳಲ್ಲಿ ಅದು ನಮ್ಮ ಸೌರವ್ಯೂಹವನ್ನು ಪ್ರವೇಶಿಸಿ ಮಾಯವಾಗುವುದು. ಅನಂತರ ಪುನಃ ಅದರ ದರ್ಶನವಾಗಬೇಕಾದರೆ ೨೫೨೦ ವರ್ಷಗಳ ಅವಧಿ ದಾಟಬೇಕು. ಖಗೋಳ ಶಾಸ್ತ್ರಜ್ಞರಿಗೆ ಧೂಮಕೇತು ದರ್ಶನ ಸಮಯವೆಂದರೆ ಅಪೂರ್ವ ಪರಿಶೋಧನೆಯ ಕಾಲವಾಗಿದೆ. ಈ ಧೂಮಕೇತುಗಳು ಅನಂತ ವಿಶ್ವದ ಯಾವುದೋ ಮೂಲೆಯಿಂದ ಥಟ್ಟನೆ ಬಂದು ದೃಗ್ಗೋಚರವಾಗಿ ಬಹು ಸ್ವಲ್ಪ ಕಾಲ ತಮ್ಮ ರಹಸ್ಯದ ಮಹಾತ್ಮೆಯನ್ನು ಮನುಷ್ಯರಿಗೆ ಸೂಚಿಸಿ ಮತ್ತೆ ಪುನಃ ತಮ್ಮ ಬಹು ದೂರದ ಯಾತ್ರೆಗೆ ಹೊರಟು ಬಿಡುವುವು.

ಸಂಡೇ ಒಬ್ಸರ್‌ವರ್ ಪತ್ರಿಕೆಯ ಮೇಲೆ ರಾಜಾಜಿಯವರ ಮಾನನಷ್ಟ ವ್ಯಾಜ್ಯ

ಸಂಡೇ ಒಬ್ಸರ್‌ವರ್ ಪತ್ರಿಕೆಯ ಸಂಪಾದಕರಾದ ಶ್ರೀ. ಪಿ. ಬಾಲಸುಬ್ರಮಣ್ಯಂ ಮೊದಲಿಯಾರರ ಮೇಲೆಯೂ ಮುದ್ರಣಕಾರರಾದ ಶ್ರೀ ಬಶೀರ್ ಹುಸೇನ್‌ರ ಮೇಲೆಯೂ, ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾನನಷ್ಟದ ಮೊದದ್ದಮೆಯೊಂದನ್ನು ಹೂಡಿದ್ದಾರೆ.

ರಾಜಾಜಿಯವರು ವಿಚಾರಣೆಯಲ್ಲಿ ಹೇಳಿಕೆ ಕೊಡುತ್ತಾ 'ಅಕ್ಟೋಬರ್ ೬ನೆಯ ತಾರೀಕಿನ ಈ ಪತ್ರಿಕೆಯ ಅಗ್ರಲೇಖನದಲ್ಲಿ ಗಾಂಧಿಯವರನ್ನು ನಿಂದಿಸಿ ಲೇಖನವನ್ನು ಬರೆಯಲಾಗಿತ್ತು. 'ಅನಾಹುತಗಳಿಗೆಲ್ಲಾ, ಕೆಟ್ಟದಕ್ಕೆಲ್ಲಾ, ಗಾಂಧೀಜಿಯವರೇ ಮೂಲಕಾರಣ' ಎಂಬ ಶಿರೋನಾಮೆಯಲ್ಲಿ ಒಂದು ಲೇಖನವನ್ನು ಬರೆಯಲಾಗಿತ್ತು. ಈ ಲೇಖನದಲ್ಲಿ ನನ್ನ ಮೇಲೆ ನಿಂದೆ ಮತ್ತು ಅಪಾದನೆ ಮಾಡಲಾಗಿದೆ. ದೌರ್ಜನ್ಯ ಮತ್ತು ಗಲಭೆ ಕೃತ್ಯಗಳಿಗೆ ನಾನು ರಹಸ್ಯದಲ್ಲಿ ಬೆಂಬಲ ಕೊಡುತ್ತಲಿದ್ದೇನೆಂದೂ ನನ್ನ ಕಾರ್ಯನೀತಿಯು ಅಂತರಂಗದಲ್ಲಿ ಒಂದು ರೀತಿ, ಬಹಿರಂಗದಲ್ಲಿ ಮತ್ತೊಂದು ರೀತಿ ಎಂದೂ ಆರೋಪಣೆ ಮಾಡಲಾಗಿದೆ. ಇಂಥಾ ಸುಳ್ಳು ಆರೋಪಣೆಗಳು ನಡೆಯುತ್ತ ಬಂದರೆ ಪ್ರಾಮಾಣಿಕತೆಯುಳ್ಳ ಸಾರ್ವಜನಿಕ ಕೆಲಸಗಾರರಿಗೆ ದೊಡ್ಡ ತೊಂದರೆಯಾಗುತ್ತದೆ. ಬಹಿರಂಗದಲ್ಲಿ ಗಾಂಧಿಜಿಯವರೊಡನೆ ನಾನು ಜಗಳವಾಡಬೇಕೆಂದೂ; ಪಾಕಿಸ್ಥಾನಕ್ಕೆ ಬೆಂಬಲ ಕೊಡಬೇಕೆಂದೂ ಕಾಂಗ್ರೆಸ್ಸಿಗೆ ಮತ್ತು ಗಾಂಧೀಜಿಗೆ ಅಂತರಂಗದಲ್ಲಿ ಬೆಂಬಲ ಕೊಡಬೇಕೆಂದೂ ಮೊದಲೇ ಹಂಚಿಕೆ ಮಾಡಿಕೊಂಡಿದ್ದೆನೆಂದು ಆರೋಪಣೆ ಮಾಡಲಾಗಿದೆ, ಈ ಲೇಖನದಲ್ಲಿ ನನ್ನ ಮೇಲೆ ಈ ರೀತಿ ಹೇಯವಾದ ನಿಂದೆಗಳನ್ನು ಮಾಡಲಾಗಿದೆ" ಎಂದರು. ಈ ವಿಚಾರಣೆಯನ್ನು ಮುಂದುವರಿಸಲಾಗಿದೆ.

'ವಿಶ್ವಕರ್ಣಾಟಕ' ವಾರ ಪತ್ರಿಕೆಯಿಂದ 'ಸೆಕ್ಯೂರಿಟಿ'

ಬೆಂಗಳೂರಿನ 'ವಿಶ್ವಕರ್ಣಾಟಕ' ವಾರ ಪತ್ರಿಕೆಯ ತಾ. ೩೦-೮-೧೯೪೨ನೇ ಸಂಚಿಕೆಯಲ್ಲಿ ಬಂದ ಸಂಪಾದಕೀಯ ಲೇಖನಕ್ಕಾಗಿ ಸರ್ಕಾರದವರು ಆ ಪತ್ರಿಕೆಯಿಂದ ೫೦೦ ರೂ.ಗಳ ಒಂದು ಸೆಕ್ಯೂರಿಟಿಯನ್ನೂ, ೧೦೦೦ ರೂ.ಗಳ ಇನ್ನೊಂದು ಸೆಕ್ಯೂರಿಟಿಯನ್ನೂ ಕೇಳಿದ್ದಾರೆ.

ಪಕ್ಷಾತೀತ ಪರಿಷತ್ತು

ಅಲ್ಲಾಬಾದಿನಲ್ಲಿ ಪಕ್ಷಾತೀತರ ಪರಿಷತ್ತು ವಿಚಾರಿಸಲ್ಪಡುವುದು. ಅದಕ್ಕೆ ರಾಜಾಜಿಯವರೂ ಹೋಗುವರಾಗಿ ತಿಳಿದಿದೆ.

೫೫ ಜನರಿಗೆ ಆಮರಣ ಕಾರಾಗೃಹವಾಸ!

ಉಳಿದ ೯ ಜನರಿಗೆ ೨ರಿಂದ ೫ ವರ್ಷ ಕಠಿಣಶಿಕ್ಷೆ

ವರ್ಧಾದ ಆಷ್ಟಿಯೆಂಬಲ್ಲಿ ಪೋಲೀಸ ಕೊಲೆಯ ಖಟ್ಲೆಯ ವಿಚಾರಣೆಗೆ ನಿಯಮಿಸಲ್ಪಟ್ಟ ಸ್ಪೆಶಲ್ ಜಡ್ಜರು ಖಟ್ಲೆಯ ತೀರ್ಪು ಹೇಳಿ ೧೧ ಜನರಿಗೆ ಗಲ್ಲಿನ ಶಿಕ್ಷೆ (ನೇಣುಹಾಕಿ), ೫೫ ಜನರಿಗೆ ಆಮರಣ ಶಿಕ್ಷೆ ಮತ್ತು ೯ ಜನರಿಗೆ ೨ ವರ್ಷದಿಂದ ೫ ವರ್ಷ ವರೆಗೆ ಬೇರೆ ಬೇರೆ ಅವಧಿಯ ಕಠಿಣ ಶಿಕ್ಷೆ ವಿಧಿಸಿದರು. ೪೪ ಜನರು ನಿರ್ದೋಷಿಗಳಾಗಿ ಬಿಡಲ್ಪಟ್ಟರು. ಅವರಲ್ಲಿ ೧೮ ಜನರನ್ನು ಪುನಃ ಜೈಲಿನಲ್ಲಿ ಅಗಸ್ಟ ೧೬ನೇ ತಾರೀಕಿನ ಕೊಳ್ಳೆ ಅತ್ಯಾಚಾರ ಸಂಬಂಧದಲ್ಲಿ ಸೆರೆಹಿಡಿಯಲಾಯಿತು. ಆಮರಣ ಶಿಕ್ಷೆಗೆ ಗುರಿಯಾದವರಲ್ಲಿ ೧೮ ಜನರಿಗೆ ದಯೆ ತೋರಿಸಬೇಕೆಂದು ಸ್ಪೆಶಲ್ ಜಡ್ಜರು ಶಿಫಾರಸು ಮಾಡಿರುವರು. ಆರೋಪಿತರ ಮೇಲೆ ಕೊಲೆ, ಲೂಟಿ, ಬಂಧಿತರನ್ನು ಓಡಿಸಿಕೊಂಡು ಹೋದದ್ದು ಮೊದಲಾದ ಆರೋಪಗಳು ಇಡಲ್ಪಟ್ಟಿದ್ದವು. ಈ ಖಟ್ಲೆಯಲ್ಲಿ ಪ್ರಾಸಿಕ್ಯೂಶನ್ ಪರವಾಗಿ ೬೫ ಹಾಗು ವಿರುದ್ಧ ಪಕ್ಷದವರ ಪರವಾಗಿ ೩೫ ಸಾಕ್ಷಿಗಳಾದವು.

ಲಿನ್‌ಲಿತ್‌ಗೋ ವೈಸರಾಯಿತ್ವದ ಅವಧಿ ಬೆಳೆಯಿತು

ಪುನಃ ೬ ತಿಂಗಳ ವರೆಗೆ ನೇಮಿಸಲಾಯಿತು

ಸಾರ್ವಭೌಮ ಸರಕಾರದವರು ಹಿಂದುಸ್ಥಾನದ ವ್ಯಾಸರಾಯರಾದ ಲಾರ್ಡ ಲಿನಲಿಥಗೋ ಇವರಲ್ಲಿ ವಿಶ್ವಾಸ ವ್ಯಕ್ತಮಾಡಿ ವಿನಂತಿಸಿದ ಮೇರೆಗೆ ಸಾರ್ವಭೌಮರ ಒಪ್ಪಿಗೆಯಿಂದ ಲಾರ್ಡ ಲಿನ್‌ಲಿಥಗೋ ಇವರ ವ್ಯಾಸರಾಯ ಪದವಿಯನ್ನು ೬ ತಿಂಗಳ ಅಂದರೆ ೧೯೪೩ನೇ ಇಸವಿ ಅಕ್ಟೋಬರ ತಿಂಗಳ ವರೆಗೆ ಬೆಳೆಯಿಸಲಾಯಿತೆಂದು ನಂ. ೧೦ ಡೌನಿಂಗ್ ಸ್ಟ್ರೀಟ್ ಲಂಡನದಿಂದ ತಾ. ೪ರಂದು ಹೊರಟ ಪ್ರಕಟಣೆಯಲ್ಲಿ ಹೇಳಲಾಗಿದೆ.

ಬೆಂಗಳೂರ ಸಂಪಾದಕರ ಮೇಲೆ ಆರೋಪವಿಡಲಾಯಿತು

ಚಳವಳದ ಸುದ್ದಿ ಪ್ರಕಟಿಸಿದ್ದು

ಬೆಂಗಳೂರು ಸಿಟಿ ಮೆಜಿಸ್ಟ್ರೇಟರು ಶ್ರೀಗಳಾದ ರಾಮಯ್ಯ, ಶ್ರೀನಿವಾಸನ್, ಗುಪ್ತ, ತಾತಾಚಾರ್ಯ ಶರ್ಮಾ, ಕೃಷ್ಣಶರ್ಮಾ ಇವರ ಮೇಲೆ ಹಿಂದುಸ್ಥಾನ ಸಂರಕ್ಷಣೆ ಕಾಯಿದೆ ಅನ್ವಯ ಆರೋಪವಿಟ್ಟರು. 'ಡೈಲಿ ನ್ಯೂಜ್' ಪತ್ರಿಕೆಯ ೫ ಹಾಗು ೬ನೇ ನವಂಬರ ಸಂಚಿಕೆಯಲ್ಲಿ ಎ. ಐ. ಸಿ. ಸಿ. ಯಿಂದ ಮಂಜೂರಾದ ಸಾಮೂಹಿಕ ಚಳವಳಿಗೆ ಸಂಬಂಧಿಸಿದ ಘಟನೆಗಳನ್ನು ಮತ್ತು ಅದರ ವಿರುದ್ಧ ಸರಕಾರದವರು ಕೈಕೊಂಡ ಉಪಾಯಗಳನ್ನು ಆ ಸುದ್ದಿ ಯಾರಿಂದ ಬಂತೆಂಬದನ್ನು ಕಾಣಿಸದೆ ಪ್ರಸಿದ್ಧಿಸಿದರೆಂಬ ಎರಡು ಆರೋಪಗಳು ಹಿಂದುಸ್ಥಾನ ಸಂರಕ್ಷಣ ಕಾಯದೆಯ ೧೨೧ ಬಿ ಅನ್ವಯ ರಾಮಯ್ಯನವರ ಮೇಲೆ ಇಡಲ್ಪಟ್ಟಿವೆ. ಉಳಿದವರ ಮೇಲೆ ಇದೇ ತರದ ಮೂರು ಆರೋಪಗಳು ಇಡಲ್ಪಟ್ಟಿರುವವು. ಯಾವತ್ತರೂ ತಾವು ಅಪರಾಧಿಗಳಲ್ಲವೆಂದು ಪ್ರತಿಪಾದಿಸಿದರು. ಮತ್ತೊಂದು ಆರೋಪದಿಂದ ಸೆರೆಹಿಡಿಯಲ್ಪಟ್ಟ ಶ್ರೀ ಕೃಷ್ಣಶರ್ಮಾ ಹಾಗು ರಂಗನಾಥರಾವ್ ಇವರು ೫೦೦ ರೂಪಾಯಿಯ ಎರಡು ಜಾಮೀನುಗಳ ಮೇಲೆ ಬಿಡಲ್ಪಟ್ಟಿದ್ದಾರೆ.

೨೨ ಪೋಲೀಸರಿಗೆ ಶಿಕ್ಷೆ

ದಾಳಿ ನಡೆದಾಗ ಓಡಿಹೋದರು.

ಸರಕಾರೀ ಕೆಲಸದಿಂದ ತಪ್ಪಿಸಿದ್ದಕ್ಕಾಗಿ ವಿಶಾಖ ಪಟ್ಟಣದ ೨೨ ಜನ ಪೋಲೀಸರಿಗೆ ಪ್ರತಿಯೊಬ್ಬರಿಗೆ ೫೦ ರೂ.ಗಳ ದಂಡದಿಂದ ೨ ತಿಂಗಳ ವರೆಗೆ ಶಿಕ್ಷೆಯನ್ನು ವಿಧಿಸಲಾಗಿದೆ. ಇವರು ಕಳೆದ ಎಪ್ರಿಲಿನಲ್ಲಿ ಜಪಾನೀ ವಿಮಾನಗಳು ವಿಶಾಖ ಪಟ್ಟಣದ ಬಂದರದ ಮೇಲೆ ದಾಳಿ ಮಾಡಿದಾಗ ಊರಿಂದ ಓಡಿಹೋಗಿದ್ದರಂತೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಮ್ಯುನಿಸ್ಟರಿಬ್ಬರ ಬಂಧನ

ಕಮ್ಯುನಿಸ್ಟ್ ಪಕ್ಷದ ಮುಖಂಡರಾದ ಶ್ರೀ. ಬಿ. ವಿ. ಕಕ್ಕಿಲ್ಲಾಯ ಇವರನ್ನೂ ಕಾಸರಗೋಡಿನ ಶ್ರೀ. ಕುಂಞಿಕಣ್ಣನ್ ಇವರನ್ನೂ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಿರುವರು.

ಶ್ರೀ ಬಾಲಪ್ಪ ಎಂಬವರನ್ನು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಬಂಧಿಸಿರುವರು.

ಶ್ರೀ. ಪಿ. ರಾಮದಾಸ ನಾಯಕರ ಕೈದು

ತಾ. ೬ರಂದು ಬೆಳಿಗ್ಗೆ ಶ್ರೀ ಪಾಣೆಮಂಗಳೂರು ರಾಮದಾಸ ನಾಯಕರನ್ನು ಶ್ರೀ ರಾಮಕೃಷ್ಣ ನರ್ಸಿಂಗ್ ಹೋಮಿನಿಂದ ಪೋಲೀಸರು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಕೈದುಮಾಡಿ ಕೊಂಡೊಯ್ದಿರುವರು

ಅಕ್ಕಿ ಧಾರಣೆಯ ಕುರಿತು, ಸಾಹುಕಾರರ ನಿರ್ಣಯ

ನವಂಬರ ೨೮ರಲ್ಲಿ ಮಂಗಳೂರು ರೆವಿನ್ಯೂ ಡಿವಿಜನಲ್ ಮೆಜಿಸ್ಟ್ರೇಟರ ಕಚ್ಚೇರಿಯಲ್ಲಿ ಅಕ್ಕಿ ಧಾನ್ಯ ವ್ಯಾಪಾರಿಗಳ ಒಂದು ಸಭೆ ಸೇರಿ, ಅದರಲ್ಲಿ ಅಕ್ಕಿಯ ಕ್ರಯವು ಹೆಚ್ಚುತ್ತಿರುವ ವಿಷಯ ಚರ್ಚೆಯಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಧಾರಣೆಯನ್ನು ನ್ಯಾಯವಾದ ಮಟ್ಟದಲ್ಲಿಡುವ ಕೆಯೂ ಅದಕಾರಣ ಕೆಳಗೆ ನಮೂದಿಸಿದ ದರದಲ್ಲಿ ಅಕ್ಕಿಯನ್ನು ಮಾರಾಟಮಾಡುವುದಾಗಿಯೂ, ಆ ದರದಲ್ಲಿ ಮಾರಾಟಮಾಡಲು ಸಾಧ್ಯವಾಗುವಂತೆ ಅಕ್ಕಿಯನ್ನು ಖರೀದಿ ಮಾಡುವುದಾಗಿಯೂ, 'ಒಂದು ಪಕ್ಷ ಈ' ದರದಲ್ಲಿ ಕೊಂಡುಕೊಂಡು ಅಕ್ಕಿಯನ್ನು ಮಾರಾಟಮಾಡಲು ಸಾಧ್ಯವಿಲ್ಲವೆಂದಾದರೆ, ಆ ದರದಂತೆ ಅಕ್ಕಿ ದೊರೆಯುವ ವರೆಗೆ ಅಕ್ಕಿ ವ್ಯಾಪಾರವನ್ನೇ ನಿಲ್ಲಿಸುವುದಾಗಿಯೂ ಒಂದು ಒಪ್ಪಂದ ತೀರ್ಮಾನವಾಯಿತು. ದರಗಳು ಈ ಪ್ರಕಾರ ನಿರ್ಣಯಿಸಲಾಗಿದೆ. ಹಳೆ ಅಕ್ಕಿ ಅವ್ವಲ್ ಮುಡಿ ೧ಕ್ಕೆ ರೂ ೮-೧೨-೦; ಹಳೆ ಅಕ್ಕಿ ದುಯಂ ಮುಡಿ ೧ರ ರೂ. ೮-೮-೦, ಹಳೆ ಅಕ್ಕಿ ಶೀಯಂ ಮು. ೧ರ ರೂ ೮-೪-೦, ಹೊಸ ಅಕ್ಕಿ ದುಯಂ ಮುಡಿ ೧ರ ರೂ ೭-೧೨-೦, ಹೊಸ ಅಕ್ಕಿ ಶೀಯಂ ಮು ೧ರ ರೂ ೭-೮-೦

ಆರೋಗ್ಯ ಶಿಶು ಸಪ್ತಾಹ

ಮಂಗಳೂರು ಹೆಲ್ತ್ ಇಲಾಖೆಯವರ ನೇತೃತ್ವದಲ್ಲಿ ನಡೆಯುವ ಆರೋಗ್ಯ ಮತ್ತು ಶಿಶು ಸಪ್ತಾಹವು ಕಳೆದ ತಾ ೨೩-೧೧-೪೨ರಲ್ಲಿ ಆರಂಭವಾಗಿ ತಾ ೨೮-೧೧-೪೨ರಲ್ಲಿ ಕೊನೆಗಂಡಿತು. ಈ ಸಪ್ತಾಹದ ಸಂಬಂಧವಾಗಿ ಮಂಗಳೂರಿನ ಮುನಿಸಿಪಲ್ ಎಲಿಮೆಂಟರಿ ಶಾಲೆಗಳಲ್ಲಿ ಆರೋಗ್ಯದ ವಿಷಯದಲ್ಲಿ ಭಾಷಣಗಳು ಕೊಡಲ್ಪಟ್ಟುವು. ಈ ಭಾಷಣಗಳು ಆರೋಗ್ಯ ಮತ್ತು ಶಿಶುಸಪ್ತಾಹದ ಮುಖ್ಯ ಕಾರ್ಯಭಾಗವಾಗಿದ್ದುವು ಕೆಲವು ಶಾಲೆಗಳಲ್ಲಿ ಮಾಯಾಲಾಂದ್ರಗಳ ಪ್ರದರ್ಶನಸಹಿತ ಭಾಷಣಗಳಿದ್ದುವು. ಸಪ್ತಾಹದ ಕೊನೆಯ ದಿನ ಹೆಲ್ತ್ ಓಫೀಸಿನ ವಠಾರದಲ್ಲಿ ಏರ್ಪಡಿಸಿದ ಪ್ರದರ್ಶನ ರಂಗದಲ್ಲಿ ಆಯಾಯಾ ಶಾಲೆಗಳ ವಿದ್ಯಾರ್ಥಿಗಳ ಉತ್ತಮ ಕೃತಿಗಳ ಪ್ರದರ್ಶನವಿತ್ತು. ಇದರಲ್ಲಿ ಒಳ್ಳೆಯ ಕೃತಿಗಳನ್ನು ಕಳಿಸಿದ ಬೊಕ್ಕಪಟ್ಣ ಹಾ. ಎ ಶಾಲೆಗೆ ಪ್ರಥಮ ಬಹುಮಾನವೂ, ರಥಬೀದಿ ಬಾಲಿಕಾ ಪಾಠಶಾಲೆಗೆ ದ್ವಿತೀಯ ಬಹುಮಾನವೂ (ಬೆಳ್ಳಿಯ ಕಪ್ಪುಗಳು) ಕೊಡಲ್ಪಟ್ಟುವು. ಆರೋಗ್ಯ ಸೂತ್ರ ವಿಷಯದ ಮೇಲೆ ಪಂಕಥೆಯಿತ್ತು. ಅತ್ಯಂತ ಪುಷ್ಟ ಆರೋಗ್ಯವಂತ ಶಿಶುಗಳಿಗೆ ಬಹುಮಾನ ಕೊಡಲಾಯಿತು.

ಮಂಗಳೂರು ಮುನಿಸಿಪಾಲಿಟಿ

ಈ ಮುನಿಸಿಪಾಲಿಟಿಯ ಕಾರ್ಯಭಾರಗಳು ತಾ. ೧ರ ಬೆಳಗ್ಗೆ ಗಂಟೆ ೧೧ಕ್ಕೆ ಮುನ್ಸಿಪಲ್ ಕೌನ್ಸಿಲ್ ಭವನದಲ್ಲಿ ಸ್ಪೆಶಲ್ ಆಫೀಸರರಿಂದ ವ್ಯವಹರಿಸಲ್ಪಟ್ಟಿತು. ಜಿಲ್ಲಾ ಕಲೆಕ್ಟರರ ಪತ್ರದ ಮೇರೆಗೆ ದ. ಕ. ಜಿಲ್ಲಾ ಮ್ಯೂಸಿಯಮ್ಮಿಗೆ ೧೯೪೨-೪೩ನೇ ಇಸ್ವಿಗಾಗಿ ಮುನಿಸಿಪಲ್ ನಿಧಿಯಿಂದ ಇನ್ನೂ ಹೆಚ್ಚಿಗೆಯಾಗಿ ರೂ ೭೦ನ್ನು ಸಹಾಯ ಧನದ ರಂತಿಗೆ ಕೊಡುವಂತೆ ನಿರ್ಧರಿಸಲ್ಪಟ್ಟಿತು

ಜಿಲ್ಲಾ ಬೋರ್ಡು ಸಭೆ

ತಾ ೧೩ರಂದು ಪ್ರಾತ ೧೧ ಗಂಟೆಗೆ (ಹೊಸ ಸಮಯ) ಜಿಲ್ಲಾ ಬೋರ್ಡು ಸಭೆಯಿದೆ. ಆ ದಿನದ ಸಭೆಯಲ್ಲಿ ೧೯೪೨-೪೩ರ 'ರಿವೈಸ್ಡ್ ಎಸ್ಟಿಮೇಟು' ಮತ್ತು ೧೯೪೩-೪೪ರ 'ಬಜೆಟ್ ಎಸ್ಟಿಮೇಟು'ಗಳ ವಿಚಾರಣೆಗಳಾಗಲಿವೆ ಮಾತ್ರವಲ್ಲದೆ ಕಳೆದ ತಿಂಗಳ ೩೦ರ ಸಭೆಯಲ್ಲಿ ಕೋರಂ ಇಲ್ಲದೆ ತೀರ್ಮಾನಿಸಲು ಬಾಕಿಯುಳಿದ ವಿಚಾರಗಳೂ ಚರ್ಚೆಗೆ ಬರಲಿರುವವು

ಕಾಂಗ್ರೆಸ್ ಸ್ವಯಂಸೇವಕರಿಗೆ ಶಿಕ್ಷೆ

ತಾ. ೩೦ರಂದು ದ. ಕ. ಜಿಲ್ಲಾ ಬೋರ್ಡು ಸಭೆ ಜರಗುತ್ತಿದ್ದಾಗ ಮಧ್ಯೆ ಬಂದು ಪಿಕೆಟಿಂಗ್ ಮಾಡಿದ ಶ್ರೀಯುತರು ಪುಂಡಲೀಕ ನಾಯಕ, ಪದ್ಮಪ್ಪ, ಲಕ್ಷ್ಮಣ ಮತ್ತು ನರಸಿಂಹ ಇವರ ವಿಚಾರಣೆ ನಡೆದು ಪ್ರತಿಯೊಬ್ಬರಿಗೂ ಆರಾರು ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಗಿದೆ ಅವರನ್ನು ಆಲಿಪುರಂ ಜೈಲಿಗೆ ಒಯ್ಯಲಾಗಿದೆ

ಉಪಾಧ್ಯಾಯರ ಸಭೆ

ಇದೇ ತಾ ೨೫ ಪೂರ್ವಾಹ್ನ ೧೧ ಗಂಟೆಗೆ ಮಂಗಲಪಾಡಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಾಸರಗೋಡು ತಾಲೂಕು ಬೋರ್ಡ್ ಟೀಚರ್ ಯೂನಿಯನ್ನಿನ ಮಹಾಸಭೆಯನ್ನು ಜರಗಿಸಲಾಗುವುದು ಈ ಸಮಯ ವಿದ್ಯಾ ವಿಷಯಕ ಪ್ರದರ್ಶನವೂ ಏರ್ಪಡಿಸಲಾಗಿದೆ ಐದಪ್ರಯುಕ್ತ ಕಾಸರಗೋಡು ತಾಲೂಕಿನ ಎಲ್ಲಾ ಬೋರ್ಡು ಪ್ರಾಥಮಿಕ ಶಾಲಾ ಅಧ್ಯಾಪಕ ಅಧ್ಯಾಪಕಿಯರು ಅಂದು ಹಾಜರಿದ್ದು ಜರಗುವ ಪ್ರದರ್ಶನಕ್ಕೆ ಅವರವರ ಶಾಲೆಗಳಲ್ಲಿರುವ ಚಾರ್ಟುಗಳು ಇತ್ಯಾದಿ ಉಪಕರಣಗಳನ್ನೂ ಕೈಗಾರಿಕಾ ಚಿತ್ರಗಳನ್ನೂ ಕಳಗಿನ ತರಗತಿಗಳಲ್ಲಿ ತಯಾರಿಸಲ್ಪಟ್ಟವುಗಳನ್ನೂ ಮಂಗಲಪಾಡಿ ಶಾಲಾ ಮುಖ್ಯೋಪಾಧ್ಯಾಯರಿಗೆ ತಾ ೨೩-೧೨-೪೨ರೊಳಗೆ ತಲುಪುವಂತೆ ರವಾನಿಸಿ ಪ್ರೋತ್ಸಾಹಿಸಬೇಕಾಗಿ ಸವಿನಯ ವಿಜ್ಞಾಪನೆಗಳು

ಉಡುಪಿ

ನಗರ ಸಭೆಯಲ್ಲಿ ಆದಾಯವೆಚ್ಚಗಳ ಮಂಜೂರಾತಿ

ಕಳೆದ ಸೋಮವಾರ ಚೆಯರ್‌ಮೆನ್ ಶ್ರೀ ಎ ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿದ ಉಡುಪಿ ನಗರ ಸಭೆಯಲ್ಲಿ ಕೌನ್ಸಿಲಿನ ೧೯೪೨-೪೩ರ ತಿದ್ದಿದ ಹಾಗೂ ೪೩-೪೪ ಅಂದಾಜು ಆದಾಯವೆಚ್ಚ ಪರಿಶೀಲಿಸಲ್ಪಟ್ಟು ಮಂಜೂರು ಮಾಡಲ್ಪಟ್ಟವು ಹಣದ ಅಭಾವ ಪೆಟ್ರೋಲ್, ಟಾಯರುಗಳ ತುಟ್ಟಿಯ ದೆಸೆಯಿಂದ ವಾಟರ್ ಲೋರಿಯನ್ನು ಕೊಂಡುಕೊಳ್ಳಲು ಅಸಾಧ್ಯವಾದ ಪ್ರಯುಕ್ತ ರಸ್ತೆಗಳಿಗೆ ನೀರು ಹಾಕುವುದನ್ನು ಕೂಡಲೇ ಮನ್ನಾಮಾಡಬೇಕೆಂದಾಯಿತು. ಬಸ್ ಸ್ಟೇಂಡಿನ ಬಸ್ಸುಗಳ ಫೀಸನ್ನು ಜನವರಿ ತಾ. ೧ರಿಂದ ದಿನ ೧ಕ್ಕೆ ಒಂದಾಣೆ ಆರುಪೈಯಿದ್ದುದನ್ನು ಎರಡಾಣೆಗೇರಿಸಲು ನಿರ್ಧಾರವಾಯಿತು. ವ್ಯಾವಸಾಯಿಕ ಹಾಗೂ ಖಾಲಿ ಜಾಗದ ಮೇಲೆ ವಿದ್ಯಾ ತೆರಿಗೆಯನ್ನು ಹೊರಿಸುವುದು ಬೇಡವೆಂದು ಕೌನ್ಸಿಲಿನ ಒಮ್ಮತದ ಅಭಿಪ್ರಾಯ ಕೊಡಲಾಯಿತು. ೪೨-೪೩ನೇ ವರುಷದ ಉತ್ಪತ್ತಿಯು ರೂಪಾಯಿ ೪೨,೭೯೦, ಖರ್ಚು ೩೯,೧೦೦; ೪೩-೪೪ನೇ ವರುಷದ ಆದಾಯ ೪೦,೭೫೦, ವೆಚ್ಚ ೪೨,೮೭೦ ಎಂದು ಬಜೆಟ್ ಅಂಕೆ ಸಂಖ್ಯೆಗಳಿಂದ ಸೂಚಿಸೋಣಾಗಿಯದೆ.

ತುಟ್ಟಿ ಭತ್ತೆ ಬಗ್ಗೆ ಶಿಫಾರಸು

ತಾ ೧ರಂದು ಪ್ರೆಸಿಡೆಂಟ್ ಶ್ರೀ ಕೆ ಜೆ. ಬಲ್ಲಾಳರ ಅಧ್ಯಕ್ಷತೆಯ ಜರಗಿದ ಉಡುಪಿ ತಾಲೂಕು ಎಜ್ಯುಕೇಶನಲ್ ಎಡ್ವಾಯಿಜರಿ ಕಮಿಟಿ ಸಭೆಯಲ್ಲಿ ಎಲಿಮೆಂಟರಿ ಶಾಲಾ ಅಧ್ಯಾಪಕರಿಗೆ ಗ್ರಾಂಟ್ ವಿನಾ ತಿಂಗಳೊಂದರ ಕನಿಷ್ಠ ಪಕ್ಷ ರೂಪಾಯಿ ನಾಲ್ಕರಂತೆ ತುಟ್ಟಿಭತ್ತೆ ಕೊಡಬೇಕಾಗಿ ಮಾನ್ಯ ಸರಕಾರವನ್ನು ಪ್ರಾರ್ಥಿಸುವ ನಿರ್ಣಯವಾಯಿತು.

ಹಿರಿಯಡ್ಕದಲ್ಲಿ ಜಖಂ ಆಸ್ಪತ್ರೆಯಲ್ಲಿ ಮರಣ

ಮೂವರ ದಸ್ತಗಿರಿ

ಕಳೆದ ತಾ ೨೫ರಂದು ಹಿರಿಯಡ್ಕ ಶರಾಬು ಅಂಗಡಿಯಲ್ಲಿ ರಾತ್ರಿ ಸಮಯ ಮಾತಾ ಪ್ರಾತುಗಳಿಂದ ನಾರಾಯಣ ಸೆಟ್ಟಿ ಎಂಬಾತನಿಗೆ ಆ ಅಂಗಡಿಯ ಲೋಕು ಪೂಜಾರಿ ಮತ್ತು ರಾಜು ಪೂಜಾರಿ ಎಂಬವರು ಚೂರಿ ಹಾಕಿ ತಿವಿದ ಅಪಾದನೆಯ ಮೇಲೆ ಲೋಕು ಪೂಜಾರಿ ರಾಜು ಪೂಜಾರಿ ಮತ್ತು ಗುಂಡು ಯಾನೆ ರಾಮಚಂದ್ರ ಪೈ ಇವರು ಕೈದುಮಾಡಲ್ಪಟ್ಟು ಸ್ಥಳೀಯ ಸಬ್ ಜೈಲಿನಲ್ಲಿ ರಿಮಾಂಡಿನಲ್ಲಿರುವರು ಜಖಂ ಹೊಂದಿದ ನಾರಾಯಣ ಶೆಟ್ಟಿಯನ್ನು ಉಡುಪಿ ಸರಕಾರಿ ಆಸ್ಪತ್ರೆಗೆ ಸಾಗಿಸಿ, ಆತನ ಮರಣ ವಾಗ್ಮೂಲವಾಯಿತು. ತಾ ೨೭ರಲ್ಲಿ ಆತನು ಮಡಿದನು. ಪೋಲಿಸ್ ಇಲಾಖಾ ಅಧಿಕಾರಿಗಳು ವಿಚಾರಣೆ ನಡೆಸುತ್ತಿರುವರು

ಕರ್ನಾಟಕ

ಶ್ರೀ. ತಗಡೂರರ ಉಪವಾಸ

ಹಾಸನ ತಾ ೩ ತಗಡೂರ ರಾಮಚಂದ್ರ ರಾಯರು ಇಲ್ಲಿ ಸಬ್ಜೈಲಿನಲ್ಲಿ ಉಪವಾಸ ಪ್ರಾರಂಭಿಸಿ ಇಂದಿಗೆ ೭ನೇ ದಿನವಾಗಿರುವದು. ಅವರೂ ಅವರೊಂದಿಗೆ ಸಹಾನುಭೂತಿ ತೋರುವದಕ್ಕಾಗಿ ೭ ದಿನ ಉಪವಾಸ ಮಾಡುತ್ತಿರುವ ಶ್ರೀ ಆದಿರಾಜಯ್ಯನವರೂ ಆರೋಗ್ಯದಿಂದ ಕೂಡಿ ಹರ್ಷಚಿತ್ತರಾಗಿರುವರೆಂದು ತಿಳಿಯುತ್ತದೆ.

ಮೈಸೂರು ಪತ್ರಿಕಾಕರ್ತರ ಉಪವಾಸ

ಕಾಗದ ಸರಬರಾಯಿಯಲ್ಲಿ ಅನ್ಯಾಯಕ್ಕಾಗಿ

ಬೆಂಗಳೂರು ತಾ ೯-೧೯೪೨ನೇ ಸಪ್ಟಂಬರ ೬ನೇ ತಾರೀಕಿನಿಂದ ತಮ್ಮ ಪತ್ರಿಕೆಗಳಿಗೆ ಎಮರ್ಜನ್ಸಿ ಪ್ರಿಂಟಿಂಗ್ ಸರಬರಾಯಿಯನ್ನು ಕಾರಣ ತಿಳಿಸದೆ ಒಮ್ಮೆಲೆ ನಿಲ್ಲಿಸಲ್ಪಟ್ಟದ್ದರ ನಿಮಿತ್ತವಾಗಿಯೂ ಮಹಾಜನರ ಲಕ್ಷ್ಯವನ್ನು ಆತ್ತ ಕಡೆ ಎಳೆಯುವದಕ್ಕಾಗಿಯೂ ಮತ್ತು ಸರಕಾರದಲ್ಲಿ ಹೃದಯ ಪರಿವರ್ತನೆ ಉಂಟುಮಾಡಲಿಕ್ಕಾಗಿಯೂ ಶ್ರೀಗಳಾದ ಟಿ ಟಿ. ಶರ್ಮಾ, ಪಿ ಆರ್. ರಾಮಯ್ಯ ಹಾಗೂ ಪಿ ಬಿ. ಶ್ರೀನಿವಾಸನ್ ಇವರು ಈ ಹೊತ್ತು ಸಂಜೆ ೬ ಗಂಟೆಗೆ ಸರಿಯಾಗಿ ಉಪವಾಸ ಪ್ರಾರಂಭಿಸಿ ೧೩ನೇ ತಾ ೧ಕು ಬೆಳಗ್ಗೆ ೮ ಗಂಟೆಗೆ ಉಪವಾಸ ಮುಕ್ತಾಯಗೊಳಿಸುವರೆಂದೂ ಮತ್ತು ೧೦, ೧೧, ೧೨ ಈ ಮೂರು ದಿನ ತಮ್ಮ ಪತ್ರಿಕೆಗಳನ್ನು ನಿಲ್ಲಿಸುವರೆಂದೂ ತಿಳಿಯುತ್ತದೆ

ಈಸೂರ ಕೊಲೆಯ ಮೂವರು ಆರೋಪಿಗಳ ಪತ್ತೆ

ಈಸೂರ ಕೊಲೆಯ ಪ್ರಕರಣದ ೯ ಜನ ಆರೋಪಿಗಳಲ್ಲಿ ಈಸೂರ ಚನ್ನಬಸಪ್ಪ ಗಾಮಳ್ಳಿ ಹೊಳೆ ಬಸಪ್ಪ ಮತ್ತು ಕವಾರಪಟ್ಟಿ ರಂಗ ಇವರು ಪತ್ತೆ ಹಚ್ಚಿ ಬಂಧಿಸಲ್ಪಟ್ಟಿದ್ದಾರೆ ಅವರ ವಿಚಾರಣೆಯು ಬೇಗನೇ ಪ್ರಾರಂಭವಾಗಲಿದೆ

ವಿಜಾಪುರ ಜಿಲ್ಲೆಯಲ್ಲಿ ಬರಗಾಲ

ವಿಜಾಪುರ ಜಿಲ್ಲೆಯಲ್ಲಿ ಕಳೆದ ಕೆಲವು ವಾರಗಳಿಂದ ಭಯಂಕರ ಬರಗಾಲವುಂಟಾಗಿದೆ. ಜನರೂ ಜಾನುವಾರುಗಳೂ ಮೃತ್ಯುವಿನ ಬಾಯಿಗೆ ತುತ್ತಾಗುತ್ತಿವೆ ಇಂಥಾ ಜೀವಿಗಳನ್ನು ಸಂರಕ್ಷಿಸಲು ಸರಕಾರವು ಮುಂದೆ ಬರಬೇಕೆಂದು ಅಲ್ಲಿನ ಬರಗಾಲ ಸಂಕಷ್ಟ ನಿವಾರಣಾ ಸಮಿತಿಯವರು ಸರಕಾರದೊಡನೆ ವಿನಂತಿಸಿಕೊಂಡಿದ್ದಾರೆ

ಕೆಲವು ಜನರು ಬೆಳಗಾವ ತಾಲೂಕ ಸುಳೇಬಾವಿಯಲ್ಲಿ ಕುಲಕರ್ಣಿಯವರ ದಫ್ತರ ಸುಟ್ಟು ಹಾಕಿದರೆಂದೂ ಪ ರಿಶ್ಚಾಡದಲ್ಲಿ ಜನರು ಗುಂಪು ಹೋಗಿ ಅಲ್ಲಿರುವ ಪಾರಿಶ್ ದ ಮೊದಲಾದ ಆರ ಗ್ರಾಮಗಳ ಗೌಡಕುಲಕರ್ಣಿಯರ ದಫ್ತರಗಳನ್ನು ಸುಟ್ಟಿದ್ದಾರೆಂದೂ ಸುದ್ದಿ

ಅಥಣಿಯಲ್ಲಿ ತಾ ೨೬ನೇ ದಿನ ಸಂಜೆ ೬ ಗಂಟೆಗೆ ಮುನಿಸಿಪಾಲಿಟಿ ಎದುರಿಗೆ ಒಂದು ಕಚ್ಚಾ ಬಾಂಬು ಸ್ಫೋಟನೆಯಾಯಿತು ಯಾರಿಗೂ ಗಾಯವಾಗಿಲ್ಲ ಅದರ ಸಪ್ಪಳವು ಮಾತ್ರ ಊರೆಲ್ಲ ಕೇಳಿಸಿತು

ಬೆಳಗಾವಿ ತಾಲೂಕ ಪಾಳಿಗಿ ಮರ್ದಿಯ ಕುಲಕರ್ಣಿಯವರ ದಫ್ತರವನ್ನು ಕಳೆದವಾರ ರಾತ್ರಿ ೮ ಸುಮಾರಕ್ಕೆ ಕೆಲವರು ಬಂದು ತೆಗದುಕೊಂಡು ಹೋಗಿ ಸುಟ್ಟರೆಂದೂ ತಿಳಿದಿದೆ

ಅಂಕೋಲಾ ತಾಲೂಕಿನಲ್ಲಿ ನೂರಾರು ಜನರ ಬಂಧನ

ತಾ. ೫ನೇ ದಿವಸ ಅಂಕೋಲೆಯಲ್ಲಿ ಬಾವಿಕೇರಿ ಕಟಗಿ ಎಂಬ ಇಂಗ್ಲಿಷ ಶಾಲೆಯ ವಿದ್ಯಾರ್ಥಿಯನ್ನೂ ಹಿಚ್ಕಡದಲ್ಲಿ ತಪಾಸಣೆ ನಡಿಸಿ ಇಬ್ಬರನ್ನೂ ಪೋಲೀಸರು ಬಂಧಿಸಿರುವರು. ಇದರಂತೆ ೬ನೇ ತಾರೀಕಿನ ದಿವಸ ಶಿರೂರ ಬೆಳ್ಸೆಯಲ್ಲಿ ಹಲವು ಹಾಲಕ್ಕಿ ಒಕ್ಕಲ ಜನರ ಬಂಧನವಾಗಿದೆ ಅಂತೇ ಹಿಚ್ಕಡದಲ್ಲಿ ಪುನಃ ತಪಾಸ ನಡಸಿ ೩ ಜನ ನಾಡವರನ್ನೂ ೪ ಹರಿಜನರನ್ನೂ ಸೆರೆಹಿಡಿದಿರುವರು. ತಾ ೭ನೇ ದಿವಸ ಅವರಸಗೇರಿಗೆ ಮುತ್ತಿಗೆಹಾಕಿ ೫೦-೬೦ ನಾಡವರು, ಹಾಲಕ್ಕಿ ಒಕ್ಕಲರು ಮತ್ತು ನಾಮಧಾರಿ ಮೊದಲಾದ ಜಾತಿಯವರನ್ನು ಕೈದುಮಾಡಿದ್ದಾರೆ. ಹಿಚ್ಕಡದಲ್ಲಿ ಇನ್ನು ತರುಣಪ್ರಾಯದವರು ಯಾರೂ ಉಳಿದಿಲ್ಲವೆಂದು ಹೇಳಲಾಗುತ್ತದೆ. ಹಳ್ಳಿಗಳಲ್ಲಿ ದಿನಾಲು ಸಶಸ್ತ್ರ ಪೋಲೀಸರ ತಪಾಸು ನಡೆದೇ ಇದೆ.

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಳವನ್ನೂ ಕೊಡುತ್ತದೆ

ಸಿನೆಮಾ ಸುದ್ದಿ

'ಇಂಡಿಯಾ ಇನ್ ಕ್ರೈಸಿಸ್'

ಎಂಬುದು ಯಂಕಿ ಪ್ರೊಡ್ಯೂಸರ್ ಮೋರಿಸ್ ಲಿಂಕ್‌ಸ್ಟರ್ ಎಂಬ ಐರೋಪ್ಯನೊಬ್ಬನು ನಮ್ಮ ನಾಡಿನ ಕುರಿತು ತೆಗೆದ ಚಿತ್ರ. ಭಾರತದ ಕುರಿತು ಅಪಪ್ರಚಾರ ಮಾಡುವುದೇ ಐರೋಪ್ಯ ಚಲಚ್ಚಿತ್ರ ಉದ್ಯಮಿಗಳ ಕಾರ್ಯ. ಏಕೆಂದರೆ ಅದರಿಂದ ಬ್ರಿಟಿಶ್ ಸಾಮ್ರಾಜ್ಯಶಾಹಿಗೆ ಪ್ರಯೋಜನವಾಗುತ್ತದೆ. ಭಾರತದ ವಿವಿಧ ಧರ್ಮ, ಜಾತಿಮತ ಸಾವಿರ ಬವಣೆ, ಸನ್ಯಾಸಿ ಫಕೀರರ ವೇಷ ಇವುಗಳನ್ನೇ ಈ ಚಿತ್ರದಲ್ಲಿ ತೋರಿಸುತ್ತ ಮೋರಿಸನು ಮಹಾಪರಾಧ ಮಾಡಿದ್ದಾನೆ. 'ದಿ ಸ್ಪೆಕ್ಟೇಟರ್' ಪತ್ರಿಕೆಯ ಸಿನೆಮಾ ವಿಮರ್ಶಕನೇ ಇದನ್ನು ನಿಂದಿಸಿದ್ದಾನೆಂದ ಮೇಲೆ ಬೇರೇನು ಹೇಳಬೇಕು? ಪಂಡಿತ ನೆಹರು ಗಾಂಧಿಜಿ ಮೊದಲಾದವರೂ ಈತನ ಕೆಮರಾದ ಮುಂದೆ ನಿಲ್ಲಲು ಒಪ್ಪಿದ್ದು ಮಹಾಶ್ಚರ್ಯ! ರಾಷ್ಟ್ರ ಮುಖಂಡರ ಆಕಾರ ವಿಕಾರವಾಗಿ ಭಾಷಣಮಾಡುವಾಗ ಸ್ವರವಿಲ್ಲದೆ ಇಲ್ಲಿ ಭಾರತ ರಾಷ್ಟ್ರೀಯತೆಗೆ ಅನ್ಯಾಯವಾಗುವಂತೆ ಚಿತ್ರೀಕರಣವಾಗಿರುವುದು.

ಮುಮತ್ತಾಜ್ ಶಾಂತಿ ಅಶೋಕ ಕುಮಾರರು

ಬೊಂಬೇ ಟಾಕೀಸಿನ ಮುಂದಿನ ಚಿತ್ರ 'ಕಿಸ್ಮೆತ್'ನಲ್ಲಿ ಪ್ರಣಯಿಗಳಾಗಿ ಅಭಿನಯಿಸುತ್ತಾರೆ. 'ಬಸಂತ್'ನಲ್ಲಿ ಉಲ್ಲಾಸನೊಡನೆ ಉಲ್ಲಾಸಗೊಂಡು ಅಭಿನಯಿಸಿದ ಮುಮತ್ತಾಜ್ ಶಾಂತಿ ಇಂದು ಸಿನೆಮಾ ಲೋಕದಲ್ಲಿ ಕೀರ್ತಿ ಶಿಖರಕ್ಕೇರಿದ್ದಾಳೆ! ಅವಳ ಹಾಡೇನು, ಅಭಿನಯವೇನು, ನರ್ತನವೇನು, ಬೆಡಗೇನು, ಮುಗ್ಧ ಲಾವಣ್ಯವೇನು? ಬಸಂತ್ ನೋಡಿದವರು ನಿಜವಾಗಿಯೂ ಅವಳಿಗಾಗಿ ಹುಚ್ಚರಾಗಿ ಬಿಟ್ಟಿದ್ದಾರೆ! ಈ ಚಿತ್ರದಲ್ಲಿ ಷಾನವಾಜ್, ಮುಬಾರಕ್, ದೇಸಾಯಿ, ಪೀತಾಂಬರ ಮೊದಲಾದವರೂ ಅಭಿನಯಿಸುವರು. ಬೊಂಬೇ ಟಾಕೀಸಿನ ವ್ಯಾಜ್ಯ ನಡೆಯುತ್ತಿದ್ದರೂ ಚಿತ್ರವು ತಯಾರಾಗುತ್ತಲೇ ಇದೆ. ದೇವಿಕಾರಾಣಿಯವರು ಬೊಂಬೇ ಟಾಕೀಸನ್ನು ದೇವಿಕಾರಾಣಿಗೇ ಬಿಟ್ಟುಕೊಡಲು ಒಪ್ಪಿರುವರಂತೆ!

ಸುಶೀಲಾ ರಾಣಿ

'ಫಿಲ್ಮ್ ಇಂಡಿಯಾ'ದ ಬಾಬೂರಾವ್ ಪಟೇಲರ ಹೊಸ ಕಾರ್ಯದರ್ಶಿ. ಬಾಬೂರಾವ್ ಈಗ ಆಕೆಯ ಕುರಿತು ಬಹಳ ಪ್ರಚಾರ ಮಾಡುತ್ತಿದ್ದಾರೆ. ಫಿಲ್ಮ್ ಇಂಡಿಯದಲ್ಲಿ ಆಕೆಯ ಲೇಖನಗಳ ಮಾಲೆಯೇ ಬರುತ್ತಿದೆ. ಇತ್ತೀಚೆಗೆ ಸುಶೀಲಾ 'ಚುಂಬಿಸುವ' ವಿಷಯ ಒಂದು ಚಲೋ ಲೇಖನ ಬರೆದಿದ್ದಾಳೆ. ಬಹುಶಃ ಬಾಬು ರಾವ್ ಪಟೇಲರಿಗೆ ಈ ಲೇಖನವು ಬಹಳ ಆತ್ಮೀಯವೆನಿಸಿರಬೇಕು.

ಮಜಾರ್ ಖಾನನಿಗೆ ಹಿಂದೂ ಹೆಂಡತಿ

ಪ್ರಸಿದ್ಧ ನಟ ನಿರ್ದೇಶಕ ಮಜಾರ್‌ಖಾನನ ಹೆಂಡತಿ ಹಿಂದೂ ಸ್ತ್ರೀ. ಗಂಡಹೆಂಡಿರು ಇದುವರೆಗೂ ಮತಾಂತರ ಮಾಡಿಕೊಂಡಿಲ್ಲವಂತೆ. ಮಜಾರ್ ಅಚ್ಚ ಮುಸ್ಲಿಮನಾಗಿಯೇ ಉಳಿದಿದ್ದಾನೆ. ಆತನ ಪತ್ನಿ ಹಿಂದೂ ಮತಸ್ಥಳಾಗಿಯೇ ಇದ್ದಾಳೆ! ಮಜಾರ್‌ಖಾನನು ಮತಮತಾಂಧನಲ್ಲವೆಂದು ಆತನ 'ಪಡೋಸಿ'ಯ ಹಿಂದೂ ಗೃಹಸ್ಥನ ಪಾತ್ರನೇ ಜಗತ್ತಿಗೆ ಸಾರಿದೆ! 'ಅನ್ವಾರ್' ಎಂಬುದ ಅವರ ಪುತ್ರನ ಹೆಸರು! ಜಿನ್ನಾ ಮತ್ತು ಸಾವರ್ಕರರಿಬ್ಬರೂ ಅನ್ವಾರನನ್ನು ತಮ್ಮ ತಮ್ಮ ಸಂಸ್ಥೆಗೆ ಸೇರಿಸಿಕೊಳ್ಳಲು ಹೊಡೆದಾಡಲಾರರಷ್ಟೆ?

"ದಿ ಫೋರ್ ಫೆದರ್ಸ್" ಬಾಲಾಜಿಯಲ್ಲಿ

ಅಲೆಕ್ಸಾಂಡರ ಕೋರ್ಡರ ಉತ್ತಮ ಕೃತಿ 'ದಿ ಫೋರ್ ಫೆದರ್ಸ್' ಎಂಬ ನೈಸರ್ಗಿಕ ವರ್ಣಮಯವಾದ ಚಿತ್ರವು ಬಾಲಾಜಿ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಜೋನ್ ಕ್ಲೆಮಂಟ್ಸ್, ರಾಲ್ಫ್ ರಿಚಾರ್ಡ್‌ಸನ್, ಎಲೆನ್‌ಜೇಯ್ಸ್ ಮುಂತಾದ ನಟವರ್ಗದವರು ಇದರಲ್ಲಿ ನಟಿಸುವರು. ಯುದ್ಧ, ಪ್ರೇಮಗಳ ತುಮುಲವನ್ನು ಇಲ್ಲಿ ನೋಡಬಹುದು.

ಈಸೂರು ಮೊಕದ್ದಮೆ

೧೧ ಜನ ಅಪಾದಿತರಿಗೆ ಮರಣದಂಡನೆ!

೧೨ ಜನರಿಗೆ ಆಜೀವ ಪರ್ಯಂತ ಶಿಕ್ಷೆ!

೧೩ ಜನರ ಬಿಡುಗಡೆ

ಸ್ಪೆಷಲ್ ಜಡ್ಜರ ತೀರ್ಪು

ಮೈಸೂರು ಪ್ರಾಂತದ ಶಿವಮೊಗ್ಗದ ಬಳಿಯ ಈಸೂರಿನಲ್ಲಿ ದುರ್ಘಟನೆಯ ಸಂಬಂಧದಲ್ಲಿ ತಾ. ೫ರಂದು ಸ್ಪೆಶಲ್ ಜಡ್ಜರಾದ ಶ್ರೀ ಸುಂದರ ರಾಜಾರಾಯರು ತೀರ್ಪಿತ್ತು ೧೧ ಜನ ಅಪಾದಿತರನ್ನು ಮರಣದಂಡನೆಗೆ ಗುರಿಪಡಿಸಿದ್ದಾರೆ ಎಂದೂ ೧೩ ಜನ ಅಪಾದಿತರಿಗೆ ಆಜೀವ ಪರ್ಯಂತ ಶಿಕ್ಷೆಯನ್ನು ವಿಧಿಸಿದ್ದಾರೆಂದೂ, ೧೩ ಜನ ಅಪಾದಿತರನ್ನು ಬಿಡುಗಡೆ ಮಾಡಲಾಗಿದೆಯೆಂದೂ ತಿಳಿದುಬರುತ್ತದೆ.

ಕಳೆದ ಸೆಪ್ಟೆಂಬರ್ ತಿಂಗಳಿನಲ್ಲಿ ಶಿಕಾರಿಪುರ ತಾಲೂಕು ಈಸೂರು ಗ್ರಾಮದಲ್ಲಿ ಅಮಲ್ದಾರರೂ ಪೋಲಿಸ್ ಸಬ್ ಇನ್‌ಸ್ಪೆಕ್ಟರರೂ ಕೊಲೆಯಾದ ಸಂದರ್ಭದಲ್ಲಿ ಈ ಮೊಕದ್ದಮೆ ನಡೆಯಿತು.

ಈಸೂರು ಖಟ್ಲೆಯಲ್ಲಿ ಫಾಶಿ ಶಿಕ್ಷೆಗೆ ಗುರಿಯಾದವರು

ಈಸೂರು ಕೊಲೆ ಖಟ್ಲೆಯಲ್ಲಿ ಗಲ್ಲಿನ ಶಿಕ್ಷೆಗೆ ಗುರಿಯಾದವರ ಹೆಸರುಗಳು ಕೆಳಗಿನಂತಿವೆ.

೧. ಕನ್ನಾರೆ ಗುರಪ್ಪ, ೨ ನಾಗಪ್ಪ, ೩ ಹಾಲಪ್ಪ, ೪ ಸೂರ್ಯನಾರಾಯಣಾಚಾರಿ, ೫ ಗುರುಶಾಂತಪ್ಪ, ೬ ಹುಚ್ಚರಾಯ, ೭ ಫಣಿಯಪ್ಪಾಚಾರಿ, ೮ ಶಂಕರಪ್ಪ, ೯ ಸಿದ್ದಲಿಂಗಪ್ಪ ೧೦ ನಾಗೇಶಾಚಾರಿ ೧೧ ಚನ್ನಬಸಪ್ಪ.

ಇದೇ ಖಟ್ಲೆಯಲ್ಲಿ ಆಮರಣ ಶಿಕ್ಷೆಗೆ ಗುರಿಯಾದವರು ಕೆಳಗಿನಂತಿರುವರು; ೧ ಹಾಲಪ್ಪ ೨ ಪಾರ್ವತಮ್ಮ ೩ ಸಿದ್ದಮ್ಮ ೪ ದುರ್ಗಪ್ಪ ೫ ರಾಮಣ್ಣ ೬ ಹನುಮಂತ ೭ ನೀಲಕಂಠಪ್ಪ ೮ ಹನುಮಂತಪ್ಪ ೯ ಸುಬ್ಬರಾಯ ೧೦ ವೀರಬಸಪ್ಪ ೧೧ ಲಿಂಗೋಜಿ ೧೨ ಗುರುಶಾಂತಪ್ಪ ೧೩ ರಂಗಪ್ಪ.

ಅಮಲದಾರರಾಗಿ ವರ್ತಿಸಿದ ೯ ವರ್ಷದ ಹುಡುಗನಾದ ಜಯಪ್ಪ ಮೊದಲಾದ ಉಳಿದವರು ಬಿಡುಗಡೆ ಮಾಡಲ್ಪಟ್ಟರು. ಒಟ್ಟು ೫೦ ಜನರ ಮೇಲೆ ಅವರು ಸಪ್ಟಂಬರ ೨೮ಕ್ಕೆ ಅಮಲದಾರ ಹಾಗು ಸಬ್ ಇನ್ಸ್‌ಪೆಕ್ಟರರ ಕೊಲೆ ಮಾಡಿದರೆಂದೂ ಪೋಲೀಸ ಹಾಗು ರೆವಿನ್ಯೂ ಅಧಿಕಾರಿಗಳನ್ನು ಹೊಡೆದು ಗಾಯಪಡಿಸಿದರೆಂದೂ ಆರೋಪವಿಡಲಾಗಿತ್ತು. ೫೦ ಜನರಲ್ಲಿ ೯ ಜನರು ಪರಾರಿಯಾದುದರಿಂದ ಉಳಿದ ೪೧ ಜನರ ಮೇಲೆಯೆ ಖಟ್ಲೆ ನಡೆದಿತ್ತು.

ರಾಮಕೃಷ್ಣ ಲೀಲಾ-ಪ್ರಸಂಗ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು

ಪೂರ್ವೋಕ್ತ ಘಟನೆಯಾಗಿ ಸ್ವಲ್ಪ ಕಾಲವಾದ ನಂತರ ಶ್ರೀ ಪರಮಹಂಸರು ಒಂದಾನೊಂದು ದಿನ ಬಾಗಬಾಜಾರಿನಲ್ಲಿ ಬಲರಾಮ ಬಸು ಮಹಾಶಯರ ಮನೆಗೆ ಶುಭಾಗಮನ ಮಾಡಿದ್ದಾರೆ ಬಾಗಬಾಜಾರು ಪ್ರಾಂತದ ಭಕ್ತರೆಲ್ಲ ವಾರ್ತೆಯನ್ನು ಕೇಳಿ ಅಲ್ಲಿ ಹೋಗಿದ್ದಾರೆ ನಮ್ಮ ಪೂರ್ವೋಕ್ತ ಸ್ನೇಹಿತನ ಮನೆಯೂ ಕೂಡ ಎಳಿಯಲ್ಲೇ ಇತ್ತು. ಶ್ರೀ ಪರಮಹಂಸರು ಆತನ ಮಾತನ್ನು ಎತ್ತಿದೊಡನೆ, ಆ ಪ್ರಾಂತದ ನೆರೆಹೊರೆಯ ಆತನ ಪರಿಚಯವುಳ್ಳ ಒಬ್ಬ ಯುವಕನು ತಕ್ಷಣವೇ ಆತನನ್ನು ಕರೆದೊಯ್ದನು ಬಲರಾಮ ಬಾಬುರವರ ಮನೆ ಮಾಳಿಗೆಯ ಪ್ರಶಸ್ತ ದಿವಾಖಾನೆಯಲ್ಲಿ ಪ್ರವೇಶಿಸಿದೊಡನೆಯೇ ನಮ್ಮ ಸ್ನೇಹಿತನು ಭಕ್ತರಿಂದೊಡಗೂಡಿ ಕುಳಿತಿದ್ದ ಶ್ರೀ ಪರಮಹಂಸರನ್ನು ದರ್ಶನಮಾಡಿದನು ಮತ್ತು ಪ್ರಣಾಮಂಗೈದು ಹತ್ತಿರವೇ ಒಂದು ಪಕ್ಕದಲ್ಲಿ ಕುಳಿತುಕೊಂಡನು ಶ್ರೀ ಪರಮಹಂಸರು ಕೂಡ ಆತನ ಕುಶಲ ಪ್ರಶ್ನೆಯನ್ನು ಕೇಳಿ ಆಗ ಎತ್ತಿದ ಪ್ರಸಂಗವನ್ನೇ ಮುಂದುವರಿಸಿದರು

ಒಂದೆರಡು ಮಾತಿನ ಭಾವದಿಂದಲೇ ಸ್ನೇಹಿತನು ತಿಳಿದನೇನೆಂದರೆ—ಜ್ಞಾನವಾಗಲಿ, ಭಕ್ತಿಯಾಗಲಿ, ದರ್ಶನವಾಗಲಿ, ಏನೇ ಆಗಲಿ, ಈಶ್ವರನ ಕೃಪೆಯಿಂದಲೇ ಆಗಬೇಕು, ಆತನ ಕೃಪೆಯಿಲ್ಲದಿದ್ದರೆ ಆಗುವುದಿಲ್ಲ—ಈ ವಿಷಯವನ್ನು ಶ್ರೀ ಪರಮಹಂಸರು ಅಲ್ಲಿ ನೆರೆದ ಭಕ್ತರಿಗೆ ತಿಳಿಸುತ್ತಿದ್ದರು ಅದನ್ನು ಕೇಳುತ್ತ ಕೇಳುತ್ತ ಶ್ರೀ ಪರಮಹಂಸರು ತನ್ನ ಮನಸ್ಸಿನ ತಪ್ಪು ಅಭಿಪ್ರಾಯವನ್ನು ದೂರೀಕರಿಸುವ ನಿಮಿತ್ತವೇ ಆ ದಿನ ಆ ಪ್ರಸಂಗವನ್ನೆತ್ತಿದ್ದಾರೆರದು ಆತನು ಮನಗಂಡನು ಶ್ರೀ ಪರಮಹಂಸರು ಆ ವಿಷಯವಾಗಿ ಹೇಳುವುದನ್ನೆಲ್ಲ ತನ್ನನ್ನು ಲಕ್ಷ್ಯವಾಗಿಟ್ಟುಕೊಂಡೇ ಹೇಳುತ್ತಾರೆಂದು ಆತನ ಮನಸ್ಸಿಗೆ ಸೂಚಿಸಿತು

ಈಶ್ವರ ಕೃಪೆಯಿಲ್ಲದಿದ್ದರೆ ಈಶ್ವರ ಸಾಕ್ಷಾತ್ಕಾರವಾಗುವುದಿಲ್ಲ

ಶ್ರೀ ಪರಮಹಂಸರು ಹೀಗೆಂದು ಹೇಳುವುದನ್ನು ಆ ಸ್ನೇಹಿತನು ಕೇಳಿದನು—"ಕಾಮ ಕಾಂಚನ ಯಥಾರ್ಥವಾಗಿ ಸುಳ್ಳೆಂದು ಜ್ಞಾನವಾಗುವುದೂ ಅಥವಾ ಜಗತ್ತೆಂಬುದು ಮೂರು ಕಾಲಗಳಲ್ಲಿಯೂ ಸುಳ್ಳೆಂದು ಯಥಾರ್ಥ ಜ್ಞಾನದಲ್ಲಿ ನಂಬಿಕೆಯಾಗುವುದೂ ಸಣ್ಣ ವಿಷಯವಲ್ಲ ಈಶ್ವರನೇ ಕೃಪೆಮಾಡಿ ಆ ಧಾರಣೆಯನ್ನು ಕೊಟ್ಟರಾಗವುದು. ಅದಿಲ್ಲದಿದ್ದರೆ ಮನುಷ್ಯನು ಸಾಧನೆ ಮಾಡಿ ಅದನ್ನು ಧಾರಣೆಮಾಡ ಬಲ್ಲನೇ? ಆತನಿಗೆ ಶಕ್ತಿಯಿರುವುದು ಸ್ವಲ್ಪವೇ, ಆ ಶಕ್ತಿಯಿಂದ ಎಷ್ಟು ಸಾಧನೆ ಮಾಡಬಲ್ಲನು? ಹೀಗೆ ಶ್ರೀ ಪರಮಾತ್ಮನ ಕೃಪೆಯ ವಿಷಯವಾಗಿ ಹೇಳುತ್ತ ಹೇಳುತ್ತ ಶ್ರೀ ಪರಮಹಂಸರು ಸಮಾಧಿ ಮಗ್ನರಾದರು ಸ್ವಲ್ಪ ಹೊತ್ತಿನ ಮೇಲೆ ಅರ್ಧಬಾಹ್ಯ ದೆಶೆಗೆ ಇಳಿದು 'ಒಂದಾದರೂ ಸರಿಯಾಗಿ ಮಾಡಲು ಶಕ್ತಿಯಿಲ್ಲ, ಇನ್ನೊಂದು ಹಿಡಿದಿದ್ದಾನೆ' ಅಂದರು ಈ ಮಾತನ್ನು ಹೇಳಿ ಶ್ರೀ ಪರಮಹಂಸರು ಆ ಭಾವಾವಸ್ಥೆಯಲ್ಲೇ ಹಾಡಿದರು ಹಾಡಿ ಹಾಡಿ ಅವರ ಎರಡು ಕಣ್ಣುಗಳಿಂದಲೂ ಎಷ್ಟು ಕಣ್ಣೀರು ಸುರಿಯಿತೆಂದರೆ ಹಾಸಿಗೆಯ ಮೇಲೆ ಹಾಕಿದ ಬಟ್ಟೆಯು ತುಸು ಒದ್ದೆಯಾಯಿತು

ಆ ಅಪೂರ್ವ ಉಪದೇಶವನ್ನು ಕೇಳಿ, ಸ್ನೇಹಿತನ ಹೃದಯವು ಕರಗಿತು ಆತನು ಕೂಡ ಅತ್ತನು ಸ್ವಲ್ಪ ಹೊತ್ತಿನ ಮೇಲೆ ಇಬ್ಬರೂ ಚೇತನಗೊಂಡರು ಸ್ನೇಹಿತನು ಹೀಗನ್ನುತ್ತಿದ್ದನು—"ಆ ಉಪದೇಶವು ಚಿರಕಾಲಕ್ಕಾಗಿ ನನಗೆ ಹೃದ್ಗತವಾಗಿದೆ ಈಶ್ವರ ಕೃಪೆಯಿಲ್ಲದಿದ್ದರೆ ಎಂದಿಗೂ ಏನೂ ಆಗುವುದಿಲ್ಲವೆಂದು ಆ ಅವಧಿಯಿಂದ ನನಗೆ ತಿಳಿಯಿತು

(ಕ್ರಮಶಃ)

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ
ಕೆ. ಎಲ್. ಕಾರಂತ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ
ಬೆಲೆ 1-4-0

ಐದನೆಯ ಪುಸ್ತಕ
V ಮತ್ತು VI ನೆಯ ಫೋರ್ಮುಗಳಿಗೆ
ಲೇಖಕರು
ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ ಎಸ್ ಸಿ, ಎಲ್ ಟಿ
ಬೋರ್ಡ್ ಹೈಸ್ಕೂಲ್, ಮುಲ್ಕಿ
ಎಸ್. ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ
ಬೋರ್ಡ್ ಹೈಸ್ಕೂಲು ಪುತ್ತೂರು
ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ
ಶಾರದಾ ಛಾಪಖಾನೆ ಮಂಗಳೂರು

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906.

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೋಯಿಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1 ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು. ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ

JOINT MANAGERS,

The Combined Booking Agency, MANGALORE. **The Joint Booking Office, KODIALBAIL**

The Bank of Mangalore Limited

ESTD: 1931

HEAD OFFICE Mangalore.

BRANCHES Moodabidri & Padubidri.

ANNOUNCEMENT

On and from 1st October 1942, deposits will be accepted at the following revised rates.

FIXED:
From 6 to 11 months 2½%. From 12 to 23 months 3½%.
24 months or over 4%
Current: ½% from July to December.
1% from January to June.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಬ್ಬ, ಉಸದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು—ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ (ಲಿಮಿಟೆಡ್)

ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ	ಬೆಂಗಳೂರು	ಮಂಗಳೂರು
ಮದರಾಸು	ತ್ರಿವೇಂಡ್ರಂ	ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commensed soon after conception andcontinued up to the time of delivery.

"ಭುವನೇಂದ್ರ ಗರ್ಭಪಾಲ"

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:— 1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ, ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

ಸ್ವದೇಶಾಭಿಮಾನಿಗೆ ಇಂದೇ ಚಂದಾದಾರರಾಗಿರಿ!

Edited Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 36] ತಾರೀಕು 18—12—1942 [ಸಂಚಿಕೆ 51]

ತಪೋಜೀವಿ ಪ್ರೊಫೆಸರ್ ಬನ್ಸಾಲಿ

ಮರಣಾಂತ ಉಪವಾಸದ ಧೀರ ನಿರ್ಧಾರ—

—ಮಾನಿನಿಯರ ಮಾನರಕ್ಷಣೆಗಾಗಿ—

ಸರಕಾರದ ಸೂತ್ರಧಾರರಲ್ಲಿ ಮುನ್ಶಿಯವರ ಬಿನ್ನಹ

ಚಿಮೂರಲ್ಲಿ ಒಂದು ದುರಂತ ನಡೆಯಿತು ಇದರ ಫಲವಾಗಿ ಎಷ್ಟೋ ಮಂದಿ ಫಾಶಿಗೆ ಗುರಿಯಾದರು, ಎಷ್ಟೋ ಮಂದಿ ಆಜನ್ಮ ಶಿಕ್ಷೆಗೆ ಬಲಿಯಾದರು, ಹಲವರು ಶಿಕ್ಷೆ ಬಂಧನಗಳಲ್ಲಿ ಬಳಲುತ್ತಿರುತ್ತಾರೆ, ಜುಲ್ಮಾನೆ ಪುಂಡುಗಂದಾಯಗಳು ವಸೂಲಾಗುತ್ತಲೇ ಇವೆ ಇವೆಲ್ಲದರೊಡನೆ ಸೈನಿಕರೂ ಪೋಲೀಸರೂ ಅಲ್ಲಿನ ಮಾನಿನಿಯರ ಮಾನಾಪಹಾರ ಮಾಡುವ ದೂರೂ ಬಂದಿತು ವರ್ಧಾದ ಸೇವಾಗ್ರಾಮದಲ್ಲಿರುವ ಗಾಂಧಿಜಿ ಪರಿವಾರದವರಲ್ಲೊಬ್ಬರಾದ ಪ್ರೊಫೆಸರ್ ಬನ್ಸಾಲಿಯವರಿಗೆ ಈ ಹೃದಯದ್ರಾವಕ ಕತೆಯನ್ನು ಕೇಳಿ ಸಹಿಸುವುದಾಗಲಿಲ್ಲ ವೈಸರಾಯರ ಕಾರ್ಯಕಾರೀ ಮಂಡಳದಲ್ಲಿ ಅಣೆ ಪ್ರಭೃತಿಯವರು ಇದ್ದಾರಲ್ಲವೆ? ಅವರ ಹೆಸರಲ್ಲಿ ಸರಕಾರವು ಕಾರ್ಯಕ್ರಮ ನಡೆಸುತ್ತಿದೆಯಲ್ಲವೆ? ಅವರಲ್ಲಿಯೇ ಈ ವಿಷಯ ದೂರು ಹೇಳಿ, ಈ ಆರೋಪದ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕೆಂದು ಪ್ರೊ ಬನ್ಸಾಲಿಯವರು ನವದೆಹಲಿಗೆ ಹೋಗಿ ಅಣೆಯವರೊಡನೆ ದೂರಿಟ್ಟರು ಅಲ್ಲಿ ಅವರಿಗೆ ತಿರಸ್ಕಾರವೇ ಪುರಸ್ಕಾರವಾಯಿತು ಮತ್ತೆ ಬಂಧನವೂ ಒದಗಿತು ಇಂಥಾ ಪ್ರಸಂಗದಲ್ಲಿ ತನಗಿನ್ನೇನೂ ಮಾರ್ಗವಿಲ್ಲವೆಂದು ಅವರು ಆಮರಣ ಉಪವಾಸ ಸಾರಿದರು, ಅಂತೂ ಋಷಿ ಜೀವವೊಂದು ಈಗ ಉದಾತ್ತಧ್ಯೇಯಕ್ಕಾಗಿ ಆಮರಣದ ಘೋರ ಉಪವಾಸ ಕೈಕೊಂಡಿದೆ' ಆ ಕರುಣ ಕತೆಯ ಇತಿಹಾಸ—ಪ್ರೊಫೆಸರ್ ಬನ್ಸಾಲಿಯವರ ಋಷಿ ಜೀವನದ ಪರಿಚಯ—ಅವರ ಪ್ರಾಣರಕ್ಷಣೆ ಮಾಡಿರೆಂದು ಬಿನ್ನಹ—ಇವುಗಳನ್ನೊಳಗೊಂಡ ಒಂದು ಲೇಖನವನ್ನು ಮುಂಬಯಿಯ ಮಾಜಿ ಮಂತ್ರಿಗಳೂ ಭಾರತದ ಪ್ರಸಿದ್ಧ ಮುಖಂಡರೂ ಆದ ಶ್ರೀ ಕನ್ಯಾಲಾಲ ಮುನ್ಶಿಯವರು ಬರೆದು ಪ್ರಕಟಿಸಿದ್ದಾರೆ—ಅದು ಇಂತಿದೆ—

ಪಾವನ—ಜೀವನ

೬೮ ವರ್ಷ ವಯಸ್ಸಿನ ವ್ಯಕ್ತಿ, ಕಪ್ಪು ಛಾಯೆ, ಕ್ರಿಸ್ತನ ಹೋಲಿಕೆಯ ಗಡ್ಡ, ನಂಬಿಕೆಯ ನೇತ್ರಗಳು, ಮಗುವಿನಂತಹ ಸರಳ ಸ್ವಭಾವ, ಚಕಿತಗೊಳಿಸುವ ಸಾಧುತ್ವ, ವರ್ಧಾದ ಬೇಸಿಗೆಯ ಕ್ರೂರ ತಾಪವನ್ನೂ, ಹಿಮಾಲಯ ಝರಿ ನದಿಗಳ ಕೊರೆಯುವ ಚಳಿಯನ್ನೂ ಹಸಿವು ದುಡಿತಗಳನ್ನೂ ತಡೆಯಬಲ್ಲ ಪಟು ಶರೀರ, ಪರ್ವತದಷ್ಟು ಸ್ಥಿರವಾದ ದೇವಭಕ್ತಿ, ಇವರೇ ಪ್ರೊಫೆಸರ್ ಬನ್ಸಾಲಿಯವರು.

ಮುಂಬಯಿ ವಿಶ್ವವಿದ್ಯಾನಿಲಯದ ಎಂ ಎ ಪದವೀಧರರು, ಮತ್ತು ಮಾಜಿ ಪ್ರೊಫೆಸರರು ಯೂರೋಪೆಲ್ಲ ಸಂಚರಿಸಿದ್ದಾರೆ. ಆ ಪರ್ಯಟನಾನಂತರ ಅವರು ಸಂಸಾರ ತ್ಯಜಿಸಿ ಹಿಮಾಲಯಕ್ಕೆ ಕಾಲುನಡಿಗೆಯಲ್ಲಿ ಹೊರಟರು ಅಲ್ಲಿ ಗಿರಿ ಕಂದರಗಳಲ್ಲಿ ವಾಸಿಸಿದರು. ಬೇವಿನ ಎಲೆ ತಿಂದು ಹೊಟ್ಟೆ ತುಂಬಿಕೊಂಡರು. ಬಾಯಿ ಹೊಲಿದುಕೊಂಡು ವರ್ಷಗಳ ಕಾಲ ಕೊಳವೆಯ ಮೂಲಕ ಆಹಾರ ತೆಗೆದುಕೊಳ್ಳುತ್ತಿದ್ದರು. ಶ್ರದ್ಧೆಯಿಂದ ನೂಲುವ ಗಾಂಧಿ ಭಕ್ತರು. ಧರ್ಮಾತ್ಮರು, ರಾಜಕಾರಣದ ಕೋಟಲೆ ಅವರಿಗಿಲ್ಲ. ಮಾನವ ಪ್ರೇಮಿಯಾದ ಪರಿವ್ರಾಜಕ, ದೈವಾತ್ಮನಾದ ಹಠಯೋಗಿ, ಮುನಿ, ಮೌನವೇ ಅವರ ಅನಂತ ಆನಂದ!

ಮಾನಿನಿಯರ ಮಾನ ರಕ್ಷಣೆಗಾಗಿ

'ಮಧ್ಯಪ್ರಾಂತ್ಯದ ಚಿಮೂರ್ ಗ್ರಾಮದಲ್ಲಿ ಸ್ತ್ರೀಯರ ಮೇಲೆ ಸೈನಿಕರು ನಡೆಸಿದ ಮಾನಭಂಗದ ಅಪಾದನೆಯ ಕುರಿತು, ಸರಕಾರದ ಹೇಳಿಕೆ, ಡಾ ಮೂಂಜೆಯವರ ಪ್ರತಿಭಟನೆ ಇವು ಈ ಸಾಧುವಿನ ಬಾಲಕ ಹೃದಯವನ್ನು ಕಲಕಿಬಿಟ್ಟಿತು. ಭಾರತದ ಸ್ತ್ರೀಯರ ಮಾನ ಕಾಯುವುದು ತನ್ನ ಪವಿತ್ರ ಧರ್ಮವೆಂದು ಅವರು ನಿರ್ಧರಿಸಿದರು ಸತೀತ್ವ ಪಾಲನೆಯು ಹಿಂದೂ ಸಂಸ್ಕೃತಿಯ ಶ್ರದ್ಧಾ ಕಾರ್ಯವೆಂದು ಅವರು ತೀರ್ಮಾನಿಸಿದರು ಅದಕ್ಕಾಗಿಯೆ ಅವರು ನವದೆಹಲಿಗೆ ಹೋಗಿ ಶ್ರೀ ಅಣೆಯವರನ್ನು ಕಂಡರು ಚಿಮೂರಿಗೆ ಬಂದು ಅಪಾದನೆಗಳನ್ನು ವಿಚಾರಿಸುವಂತೆ ಅವರೊಡನೆ ಬೇಡಿಕೊಂಡರು

ಮುಂದೇನಾಯಿತೆಂದು ಸಾರ್ವಜನಿಕರಿಗೆ ತಿಳಿದೇ ಇದೆ ಶ್ರೀ ಅಣೆಯವರ ಮನೆಯ ಬಳಿ ಉಪವಾಸವಾರಂಭಿಸಿದರು 'ನಿಮ್ಮ ಪಾದ ತಳದಲ್ಲಿ ಸಾಯುತ್ತೇನೆ'ಂದು ತೀರ್ಮಾನಿಸಿದರು ಅಲ್ಲಿ ಅವರ ಬಂಧನವಾಯಿತು ೪ನೆಯ ನವೆಂಬರ್ ದಿನ ಅವರನ್ನು ಸೇವಾಗ್ರಾಮಕ್ಕೆ ವಾಪಸು ಸಾಗಿಸಲಾಯಿತು. ಚಿಮೂರು ದುರಂತಗಳ ವಿಚಾರಣೆಯು ನಡೆಯುವ ತನಕ ತಾವು ಮರಣಾಂತ ಉಪವಾಸ ಮಾಡುವಂತೆ ಸಂಕಲ್ಪಮಾಡಿದರು. ಅಪಮಾನಕ್ಕಿಂತ ಅಗ್ನಿ ಪ್ರವೇಶವನ್ನು ಸಹಿಸಿದ ಹಿಂದೂ ಸ್ತ್ರೀಯರ ಮಾನಭಂಗವಾಗಿ, ಅಪರಾಧಿಗಳಿಗೆ ಹೇಳುವರು ಕೇಳುವರು ಇಲ್ಲದೆ ಹೋಗಿರುವುದನ್ನು ಸಹಿಸಿಕೊಂಡು ಬದುಕಿರಲು ಅವರಿಗೆ ಸಾಧ್ಯವಾಗಲಿಲ್ಲ!

ಮರಣಾಂತದ ಉಪವಾಸ

'ಚಿಮೂರಿಗೆ ಹೋಗಿ ಅಲ್ಲಿನ ಬಾಲಾಜಿ ದೇವಸ್ಥಾನದಲ್ಲಿ ಮರಣಾಂತ ಉಪವಾಸ ಆರಂಭಿಸಿದರು ಮೂರು ಗಂಟೆಗಳೊಳಗಾಗಿ ಚಿಮೂರು ಬಿಡುವಂತೆ ಆದ ಆಜ್ಞೆಯನ್ನು ಉಲ್ಲಂಘಿಸಲು ಅವರ ಬಂಧನವಾಯಿತು ಸೇವಾಗ್ರಾಮಕ್ಕೆ ತಂದು ೧೫ನೆಯ ತಾರೀಕಿನ ದಿನ ಬಿಟ್ಟುಬಿಟ್ಟರು

ಆದರೆ ಪ್ರೊ ಬನ್ಸಾಲಿಯವರು ಚಿಮೂರಿಗೆ ೧೯ನೆಯ ತಾರೀಕಿನ ದಿವಸ ಕಾಲುನಡಿಗೆಯಲ್ಲಿ ಹೊರಟರು ಉಪವಾಸದಲ್ಲೂ ಈ ಅಸಾಧ್ಯ ವ್ಯಕ್ತಿ ೬೨ ಮೈಲಿ ನಡೆದರು, ಜಲಪಾನ ಸಹ ಮಾಡಲಿಲ್ಲ ಮತ್ತೆ ಪೋಲೀಸಿನವರು ಬಂಧಿಸಿ, ಸೇವಾಗ್ರಾಮಕ್ಕೆ ಕರೆತಂದರು

'ಪ್ರೊ ಬನ್ಸಾಲಿ ಮತ್ತೆ ೨೫ನೆಯ ನವಂಬರ್ ದಿನ ಪ್ರಾತಃಕಾಲ ಎದ್ದು ಚಿಮೂರಿಗೆ ಹೊರಟರು. ಉಪವಾಸ ಪ್ರಾರಂಭವಾಗಿ ೧೫ ದಿನಗಳಾಗಿದ್ದವು ಅವರನ್ನು ಕಾಣಲು ನಾನು ಹೋದೆ ಸಾಧ್ಯವಾದರೆ ಮತ್ತೆ ವಾಪಾಸು ಕರೆತರೋಣವೆಂದು ನನ್ನ ಆಶೆ ೧೨ ಮೈಲು ನಡೆದ ತರುವಾಯ ರಸ್ತೆ ಮಗ್ಗುಲ ಹೊಲದಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದರು ಮೈ ಕುಂದಿತ್ತು ಕಣ್ಣಲ್ಲಿ ಪ್ರೇಮ ಕನಿಕರಗಳಿದ್ದವು 'ಈ ಋಷಿಗಳ ನಾಡಿನಲ್ಲಿ ಮತ್ತಾವ ಸ್ತ್ರೀಯೂ ಅಪಮಾನ ಹೊಂದದಿರಲೆಂದು ನಾನು ಪ್ರಾಣಾರ್ಪಣ ಮಾಡುತಿದ್ದೇನೆ' ಎಂದವರು ಹೇಳಿದರು. ನಾನು ಕೊಟ್ಟ ನೀರನ್ನು ಕುಡಿದರು

'ಆ ವರ್ಧಾ ಮಾರ್ಗದಲ್ಲಿ ನಾನು ನಿಂತೆ ಬನ್ಸಾಲಿಯವರ ಕ್ರಿಸ್ತನ ಹೋಲಿಕೆಯ ಗಡ್ಡವನ್ನೂ ಸುಪ್ರಶಾಂತ ಮುಖವನ್ನೂ ಸಂಧ್ಯಾಸೂರ್ಯನು ಬೆಳಗುತಿದ್ದನು. ಅವರು ಕ್ರಮೇಣ ಸಾವಧಾನವಾಗಿ ನಡೆದು ಹೊರಟು ಹೋದರು. ಊರುಗೋಲಿನ ಮೇಲೆ ತಮ್ಮ ಭಾರವನ್ನು ಹಾಕಿ ನಡೆಯುತ್ತ ಸ್ತ್ರೀಯರ ಮಾನಸಂರಕ್ಷಣೆಯ ಭಾರ ಹೊತ್ತ ಆ ಏಕಾಕಿ ಯಾತ್ರಿಕರು ಅಜ್ಞಾತ ಪದ ಹಿಡಿದು ಹೋದರು

'ಮುಂಬಯಿಗೆ ಬಂದ ಮೇಲೆ ಅವರನ್ನು ಬಂಧಿಸಿ ಮತ್ತೆ ವರ್ಧಾಕ್ಕೆ ಸಾಗಿಸಿದರೆಂದು ನನಗೆ ತಿಳಿಯಿತು ಇನ್ನೂ ಇರುವ ಸಾಧುಸಂತರ ಧರ್ಮಬಲದಿಂದ ಬದುಕುತ್ತಿರುವ ಭಾರತಮಾತೆಯನ್ನು ನೆನಸಿದಾಗ ನನ್ನ ಕಣ್ಣುಗಳು ನೀರಿಟ್ಟವು ಕಾಲಕಾಲಕ್ಕೂ ಇಂತಹ ಸತ್ಪುತ್ರರನ್ನು ಆಕೆಗೆ ನೀಡುತ್ತಿರುವ ಜಗವಂತನನ್ನು ಮೌನಧ್ಯಾನದಲ್ಲಿ ನಾನು ವಂದಿಸಿದೆ

ನೀತಿ ಧರ್ಮ ಕಡೆಗಣಿಸಬೇಡಿ

'ಬನ್ಸಾಲಿಯವರು ಬಯಸಿದ ವಿಚಾರಣೆಯನ್ನು ನಡೆಯಬಹುದು, ಶ್ರೀ ಅಣೆಯವರು ಹೃದಯ ಕರಗಿ ಅವರು ಚಿಮೂರಿಗೆ ಹೋಗಬಹುದು ಅಥವಾ ಬನ್ಸಾಲಿಯವರು ಸಾಯಬಹುದು ಆದರೆ ಇಂತಹ ಕ್ರೂರ ಅಪಾದನೆಯು ಎಂದಿರುವಾಗ ವಿಚಾರಣೆಯನ್ನು ನಡೆಸುವಂತಹ ಸಾಧಾರಣವಾದ ನ್ಯಾಯ ಕಾರ್ಯವನ್ನಾದರೂ ಸರಕಾರವು ಏಕೆ ಅಂಗೀಕರಿಸಕೂಡದೋ ಅರ್ಥವಾಗುವುದಿಲ್ಲ ಶ್ರೀ ಅಣೆಯವರಂತಹ ಭಾರತ ಮಂತ್ರಿಗಳ ಬೆಂಬಲದಿಂದಲೇ ಬ್ರಿಟಿಷ್ ಸರಕಾರವು ಭಾರತದಲ್ಲಿ ನಡೆಯುತ್ತಿದೆಯೆಂದು ಚರ್ಚಿಲರು ಘೋಷಿಸುತ್ತಿದ್ದಾರಲ್ಲ? ಚಿಮೂರಿನ ಪ್ರಜೆಗಳ ಅಪರಾಧವೇನೋ ಅಲ್ಲಿನ ಯುವಕರೆಲ್ಲ ಪ್ರಾಯಶ್ಚಿತ್ತ ಅನುಭವಿಸುತ್ತಿದ್ದಾರೆ ಅನೇಕರ ಬಂಧನ, ಶಿಕ್ಷೆಗಳಾಗಿವೆ ೩೨ ಮಂದಿ ಮರಣದಂಡನೆಗೆ ಗುರಿಯಾಗಿದ್ದಾರೆ ೨೫ ಮಂದಿಗೆ ಆಜೀವ ಶಿಕ್ಷೆ, ಮಿಕ್ಕನೇಕರಿಗೆ ದೀರ್ಘ ಕಠಿಣ ಶಿಕ್ಷೆ, ದಂಡ, ಇನ್ನೂ ಹಲವು ಹಳ್ಳಿಗರ ಮೇಲೆ ವ್ಯವಹಾರ ಇದ್ದೇ ಇದೆ ಪುಂಡುಗಂದಾಯ ಬೇರೆ, ಈಗಲೂ ಸಹ ಚಿಮೂರು ಸ್ಥಿಮಿತಕ್ಕೆ ಬಂದಿಲ್ಲ

'ಕಳೆದ ನಾಲ್ಕು ತಿಂಗಳ ದುರ್ಘಟನೆಗಳಿಂದ ನನ್ನಷ್ಟು ನೊಂದವರು ಮತ್ತಾರೂ ಇರಲಾರರು ಇಂದಿಗೂ ನಾನು ಬ್ರಿಟಿಷ್ ಭಾರತ ಬಾಂಧವ್ಯದಲ್ಲಿ ನಂಬಿಕೆಯುಳ್ಳವನಾಗಿದ್ದೇನೆ ಬ್ರಿಟನನ್ನು ಬಿಟ್ಟರೆ ಭಾರತಕ್ಕೆ ಸದ್ಯ ಗತಿ ಇಲ್ಲವೆಂದು ನನ್ನ ನಂಬಿಕೆ ಈ ಯುದ್ಧವು ಒಟ್ಟಿನಲ್ಲಿ ಪ್ರಜಾತಂತ್ರದ ಯುದ್ಧ ನಾನು ಹುಲು ಮನುಷ್ಯನಾದರೂ ಬ್ರಿಟಿಷರಿಗೂ ಅವರ ಪ್ರತಿನಿಧಿಗಳಿಗೂ ನೀತಿಧರ್ಮ ರಹಿತವಾದ ವರ್ತನೆಗಳ ಮೂಲಕ ಇಲ್ಲಿನ ಅಶಾಂತಿಯನ್ನು ಅಡಗಿಸುವುದರಿಂದ ಭಾರತ ಪರಿಸ್ಥಿತಿಯು ಎರ್ಲೆಂಡನ್ನು ಪೀಡಿಸುವ ಮಟ್ಟಕ್ಕೆ ತಳ್ಳುವಂತಾದೀತೆಂದು ಎಚ್ಚರಿಸ ಬಯಸುತ್ತೇನೆ ರಾಕ್ಷಸನ ಶಕ್ತಿಪಡೆದಿರುವುದು ಒಳ್ಳೆಯದೆ, ಅದನ್ನು ರಾಕ್ಷಸನಂತೆ ಬಳಸುವುದು ಘಾತಕ. ಆದರೆ ನೀತಿ ಧರ್ಮಗಳನ್ನು ಕಡೆಗಾಣುವುದು ಆತ್ಮಹತ್ಯೆಯೆ ಸರಿ!

ಪ್ರಾಣರಕ್ಷಣೆ ಮಾಡಿರಿ!

'ಭಾರತದಲ್ಲಿ ಬ್ರಿಟಿಷರು ಇಂತಹ ಸ್ಥಿತಿಗಿಳಿದಿರುವುದನ್ನು ನನ್ನ ಜೀವನದಲ್ಲಿ ಇದು ಐದನೆಯ

(೨ನೇ ಪುಟಕ್ಕೆ ಮುಂದುವರಿದಿದೆ)

ಮಾರಾಟಕ್ಕೆ ಸಿದ್ಧವಾಗಿವೆ

1943 ನೇ ಇಸವಿಯ

ಶಾರದಾ ಪೋಕೆಟ್ ಡೈರಿಗಳು

ಸಣ್ಣ ಸೈಜು	0-7-0
,, ,, ಮುಚ್ಚಳವುಳ್ಳದ್ದು	0-9-0
ದೊಡ್ಡ ಸೈಜು	0-12-0
,, ,, ಮುಚ್ಚಳವುಳ್ಳದ್ದು	0-14-0

ಬೇಕಾದಲ್ಲಿ ಕೂಡಲೇ ಬರೆಯಿರಿ.

ಶಾರದಾ ಛಾಪಖಾನೆ,

ರಥಬೀದಿ—ಮಂಗಳೂರು.

ತಪೋಜೀವಿ ಪ್ರೊಫೆಸರ್ ಬನ್ಸಾಲಿ

(೧ನೇ ಪುಟದಿಂದ ಮುಂದುವರಿದುದು)

ಹಾರಿ ನಾನು ಕಾಣುತ್ತಿರುವೆನು. ವಂಗವಿಭಜನೆ, ಜಲಿಯನ್‌ವಾಲಾಬಾಗ್, ಬರ್ಡೋಲಿ ಸತ್ಯಾಗ್ರಹ ೧೯೩೦-೩೨ನೆಯ ಶಾಸನಭಂಗ ಚಳವಳಿ ಕಾಲಗಳಲ್ಲಿ ರಾಷ್ಟ್ರಪ್ರೇಮಿಗಳಿಗೂ ಬ್ರಿಟಿಷ್ ಅಧಿಕಾರಿಗಳಿಗೂ ತಿಕ್ಕಾಟವುಂಟಾಗಿತ್ತು. ಆದರೆ ಈಗ ಕಾಲ ಬದಲಾಯಿಸಿದೆ. ಬ್ರಿಟಿಷರೂ ಭಾರತೀಯರೂ ಸಮಾನ ಸ್ಕಂಧರಂತೆ ಕೂಡಿ ಕೆಲಸ ಮಾಡಿದ್ದಾರೆ. ಆದರೆ ಸರ್ವ ಭಾರತೀಯರಿಗೂ ಪವಿತ್ರವೆನಿಸಿರುವ ಕಾರಣಕ್ಕಾಗಿ ಪ್ರೊ. ಬನ್ಸಾಲಿಯವರು ಸಾಯುವುದೇ, ಆದರೆ, ಅದರಿಂದ ಉಂಟಾಗುವ ವ್ಯಗ್ರತೆಯನ್ನು ಕೊಂಚ ಚಿಂತಿಸುವಂತೆ, ಯುದ್ಧ ಮನೋಧರ್ಮದ ಕಾಂಗ್ರೆಸ್ ವಿರೋಧಿ ಬ್ರಿಟಿಷರಿಗೆ ಹೇಳಬಯಸುತ್ತೇನೆ.

'ಬನ್ಸಾಲಿಯವರು ಕೇಳುವುದಾದರೂ ವಿಪರೀತವಾದುದಲ್ಲ; ಚಿಮೂರಿನಲ್ಲಿ ಸರಕಾರಿ ಕಾರ್ಯ ನಿರ್ವಾಹಕರು ನ್ಯಾಯನೀತಿಯಲ್ಲಿಯೆ ವರ್ತಿಸಿದ್ದಿರಬಹುದಾದರೂ, ಮಾನವ ಧರ್ಮಕ್ಕೆ ವಿರುದ್ಧವಾಗಿ ವರ್ತಿಸಿದರೇ ಇಲ್ಲವೇ ಎಂಬುದನ್ನು ವಿಚಾರಣೆಗೆ ಗುರಿಪಡಿಸಬೇಕೆಂದು. ಈ ಅಸಾಧಾರಣ ವ್ಯಕ್ತಿಯ ಪ್ರಾಣರಕ್ಷಣೆಯನ್ನು ಮಾಡಿರೆಂದು ಎಲ್ಲರೊಡನೆ ನಾನು ಪ್ರಾರ್ಥಿಸುತ್ತೇನೆ. ಅಶಾಂತಿ ಅಥವಾ ದ್ವೇಷ ಸಾಧನೆಯ ಬುದ್ಧಿಯಿಂದ ಮನಮಲಿನಗೊಳ್ಳದೆ ಇರುವ ಎಲ್ಲ ಬ್ರಿಟಿಷರೊಡನೆಯೂ ಹೀಗೆ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ತಮ್ಮ ಕಾರ್ಯಭಾರವನ್ನೆಲ್ಲ ಶ್ರೀ ಅಣೆಯಂತಹವರ ಭುಜಬಲದಿಂದ ನಿರ್ವಹಿಸುತ್ತಿರುವಂತೆ ಸರಕಾರದವರು ಹೇಳುತ್ತಿರುವವರೆಲ್ಲರೊಡನೆಯೂ ನಾನು ಹೀಗೆ ಪ್ರಾರ್ಥಿಸಿಕೊಳ್ಳುತ್ತೇನೆ.'

ಘೋರ ಉಪವಾಸದಲ್ಲಿ!

ಪ್ರೊ! ಬನ್ಸಾಲಿಯವರು ಉಪವಾಸ ಪ್ರಾರಂಭಿಸಿ ಕಳೆದ ಶನಿವಾರಕ್ಕೆ ೩೩ನೇ ದಿನಗಳು ದಾಟಿದವು. ಅಣೆಯವರು ಒಂದು ತಂತಿಕೊಟ್ಟು ಉಪವಾಸ ನಿಲ್ಲಿಸಬೇಕೆಂದೂ, ತನ್ನಿಂದ ಆಗುವ ಪ್ರಯತ್ನ ಮಾಡುವೆನೆಂದೂ ತಿಳಿಸಿದರು. ಅದಕ್ಕೆ ಬನ್ಸಾಲಿಯವರು ಮರು ತಂತಿಯಲ್ಲಿ 'ನೀವು ಚಿಮೂರಿಗೆ ಹೋಗಿ ನಿಮ್ಮ ಕೆಲಸವಾಡಿ. ನಾನು ಒಂದು ಪವಿತ್ರಕಾರ್ಯಕ್ಕಾಗಿ ಉಪವಾಸ ಕೈಕೊಂಡಿದ್ದೇನೆ. ಇದಕ್ಕಾಗಿ ಸಾಯುವುದೂ ನನಗೆ ಗೌರವ; ನನ್ನ ಉಪವಾಸದ ಕಾರಣ ಮತ್ತು ನನ್ನ ಜೀವ-ಎರಡೂ ದೈವಾಧೀನ' ಎಂದು ತಿಳಿಸಿದರು. ಅಣೆ ತಿರುಗಿ ಬನ್ಸಾಲಿಯವರಿಗೆ ತಂತಿ ಕಳುಹಿಸಿದ್ದಾರೆ. 'ಖಾಸಗಿಯಾಗಿ ಚಿಮೂರನ್ನು ಸಂದರ್ಶಿಸಿ ಜನರನ್ನು ವೈಯುಕ್ತಿಕವಾಗಿ ಸಮಾಧಾನಪಡಿಸಲು ಯತ್ನಿಸುವೆನು. ವಿಚಾರಣೆ ಮಾಡುವ ಸಲುವಾಗಿ ಅಲ್ಲಿಗೆ ಹೋಗಲಾರೆ. ನಾನು ಅಲ್ಲಿಗೆ ಹೋಗುವಾಗ, ನನ್ನೊಡನೆ ನಿಮ್ಮನ್ನು ಕರೆಕೊಂಡು ಹೋಗಲಾರೆ' ಎಂದು ಅದರಲ್ಲಿ ತಿಳಿಸಿರುವರು. ಅಣೆಯವರು ಖಾಸಗಿಯಾದರೂ ಹೋಗುವ ಕಾಲದಲ್ಲಿ ತನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗಬೇಕೆಂದು ಬನ್ಸಾಲಿಯವರು ಕೇಳಿಕೊಂಡದ್ದೂ ತಿರಸ್ಕೃತವಾಯಿತು. ವಿಚಾರಣೆ ನಡೆಸಲು ಹೋಗುವುದು ಅವಶ್ಯವಿಲ್ಲವೆಂದೂ, ಅನಪೇಕ್ಷಣೀಯವೆಂದೂ ಅಣೆಯವರು ಹೇಳುತ್ತಾರೆ. ಬನ್ಸಾಲಿಯವರ ಬಿನ್ನಹವನ್ನು ಮನ್ನಿಸಿ ಬೇಗನೇ ಅಣೆಯವರು ವರ್ಧಾಕ್ಕೆ ಬರಬೇಕೆಂದು ಶ್ರೀ. ಮುನ್ಶಿಯವರು ಅಣೆಯವರಿಗೆ ತಿಳಿಸಿದ್ದಾರೆ. ಶ್ರೀ. ಅಣೆಯವರು ಬನ್ಸಾಲಿಯವರ ಜೊತೆಯಲ್ಲಿ ಚಿಮೂರನ್ನು ಸಂದರ್ಶಿಸಲು ಒಪ್ಪಿದರೆ ಹಾಗೂ ಸಂತ್ರಸ್ತ ಜನರ ಹೇಳಿಕೆಯನ್ನು ಕೇಳಿಕೊಂಡರೆ ಬನ್ಸಾಲಿಯವರ ಉಪವಾಸವನ್ನು ನಿಲ್ಲಿಸಲು ಯತ್ನಿಸಬಹುದೆಂದು ಮುನ್ಶಿಯವರ ಅಭಿಪ್ರಾಯವಿದೆ. ಮುನ್ಶಿಯವರೂ ವರ್ಧಾಕ್ಕೆ ತೆರಳುವುದರಲ್ಲಿದ್ದಾರೆ. ಬನ್ಸಾಲಿಯವರನ್ನು ತಾ. ೧೦ರಂದು ನಿರೀಕ್ಷಿಸಿದ ಡಾ॥ ತ್ರಿವೇದಿಯವರು, 'ಅವರ ಘೋರ ಉಪವಾಸದದೃಷ್ಟಿಯಿಂದ ಅವರ ಆರೋಗ್ಯ ಇಷ್ಟಿರುವುದೇ ಹೆಚ್ಚು. ತಾ. ೧೯ರಿಂದ ಮೂತ್ರದಲ್ಲಿ 'ಏಸಿಟೋನ್' ಹೋಗುತ್ತದೆ. ಅವರ ದೇಹದ ತೂಕ ೧೧೫ ಪೌಂಡು ಇರುತ್ತಿತ್ತು. ದಶಂಬರ ೫ಕ್ಕೆ ೮೮ಕ್ಕೆ ಇಳಿದಿದೆ. ಅನಂತರ ಅವರನ್ನು ತೂಕ ಮಾಡಲಾಗಲಿಲ್ಲ. ನವಂಬರ ೨೬ರಿಂದ ಅವರಿಗೆ ನಡೆಯುವುದೂ ಆಗುವುದಿಲ್ಲ. ಕಾಲುಬಿದ್ದಿದೆ. ಬಹಳ ನಿತ್ರಾಣ ಹೊಂದಿದ್ದಾರೆ. ಕಳೆದ ಗುರುವಾರದಿಂದ ಅವರನ್ನು ಕುಳಿತುಕೊಳ್ಳಿಸಲೂ ಆಗುವುದಿಲ್ಲ. ತಾ. ೬ಕ್ಕೆ ಅವರ ನಾಡಿ ಬಡಿತ ೬೨ ಇತ್ತು. ೫ ತಾಸು ನಿದ್ರೆ ಬಂದಿತ್ತು. ಮನಸ್ಸು ಮತ್ತು ಉತ್ಸಾಹ ಕಳೆಗೊಂಡಿದೆ' ಎಂದು ಹೇಳಿರುವರು. ತಾ. ೫-೬ನೇ ದಿನಗಳಲ್ಲಿ ಮಧ್ಯಪ್ರಾಂತದ ಬೇರೆ ಬೇರೆ ನಗರಗಳಲ್ಲಿ ಮಹಿಳೆಯರು ಬನ್ಸಾಲಿಯವರ ಉಪವಾಸಕ್ಕೆ ಸಹಾನುಭೂತಿ ತೋರಿಸಿ ಉಪವಾಸ ಆಚರಿಸಿದರು. ಶ್ರೀಮತಿ ಬಜಾಜರು ಇವರ ಉಪವಾಸದ ವಿಷಯಕವಾದೊಂದು ಪತ್ರವನ್ನು ಗಾಂಧಿಜಿಯವರಿಗೆ ಬರೆದಿದ್ದು ಅದನ್ನು ಮಹಾತ್ಮರಿಗೆ ಮುಟ್ಟಿಸಲು ಸರಕಾರವು ನಿರಾಕರಿಸಿದೆಯೆಂದು ತಿಳಿದಿದೆ. ವರ್ಧಾ ನಾಗರಿಕರ ಸಭೆಯೊಂದು ಸೇರಿ ಅಣೆಯವರ ಆಶ್ವಾಸನದಂತೆ ಬನ್ಸಾಲಿಯವರು ಉಪವಾಸ ಬಿಡಬೇಕೆಂದು ಕೇಳಿಕೊಳ್ಳುವ ಅಣೆಯವರು ವರ್ಧಾಕ್ಕೆ ಬಂದು ಬನ್ಸಾಲಿಯವರನ್ನು ಚಿಮೂರಿಗೆ ಸಂಗಡ ಕರೆಕೊಂಡು ಹೋಗುವ ವಿನಂತಿಗಳನ್ನು ಮಾಡಿದೆ.

ನಾವೆಲ್ಲವರೂ ಅದನ್ನು ಉಪಯೋಗಿಸುತ್ತಿದ್ದೇವೆ!

ಅಜ್ಜಿಯಿಂದ ಹಿಡಿದು ಸಣ್ಣ ಮಗುವಿನ ತನಕ ಕುಟುಂಬದ ಸಮಸ್ತರಿಗೂ ತಮ್ಮ ಮೈಯ ಚರ್ಮವನ್ನು ಅಂದವಾಗಿರಿಸಲು ಕುಟಿಕೂರಾ ಟಾಲ್ಕಮ್ ಪೌಡರು (Cuticura Talcum Powder) ಅಗತ್ಯವಾಗಿದೆ. ಕುಟಿಕ್ಯೂರಾ ಟಾಲ್ಕಮ್ (Cuticura Talcum) ಚರ್ಮವನ್ನು ತಂಪಾಗಿರಿಸಿ ಮನಸ್ಸಿಗೆ ಆಹ್ಲಾದವನ್ನುಂಟುಮಾಡುತ್ತದೆ. ಇದಕ್ಕೆ ಇದರ ಔಷಧಿಯುಕ್ತವಾದ ಗುಣವೇ ಕಾರಣವಾಗಿರುತ್ತದೆ. ಮೈಗೆ ತುರಿಗಜ್ಜಿಗಳುಂಟಾದಲ್ಲಿ ಇದು ಕೂಡಲೇ ಗುಣಪಡಿಸಿ ತಂಪಾಗಿರಿಸುತ್ತದೆ ಮಾತ್ರವಲ್ಲದೆ ಬೆವರನ್ನು ಹೀರುವ ಗುಣವುಳ್ಳದ್ದಾಗಿರುತ್ತದೆ. ಸಣ್ಣ ಮಕ್ಕಳಿಗೆ ಇದರಲ್ಲಿ ಉತ್ತಮ ಗುಣವನ್ನು ಕಂಡ ಡಾಕ್ಟರರು ಇದನ್ನೆ ಶಿಫಾರಸು ಮಾಡುತ್ತಾರೆ. ಕುಟಿಕೂರಾ ಪೌಡರಿನ (Cuticura Talcum) ಸುಗಂಧಪೂರಿತ ಪರಿಮಳವು ಅನೇಕ ಗಂಟೆಗಳ ತನಕ ಬಾಳುವುದು.

ನಿಮ್ಮ ಅನುನಿತ್ಯದ ಉಪಯೋಗಕ್ಕೆ ಇದು ಎಷ್ಟು ಪ್ರಯೋಜನಕಾರಿಯೆಂದು ಕಂಡುಕೊಳ್ಳಿರಿ. ಇಂದೇ ಒಂದು ಟಿನ್ನನ್ನು ಕೊಂಡುಕೊಳ್ಳಿರಿ. ಮುಖಕ್ಷೌರದ ನಂತರ ಕುಟಿಕೂರಾ ಟಾಲ್ಕಮ್ (Cuticura Talcum) ಬಹಳ ಹರ್ಷದಾಯಕವಾದುದು.

ಎಲ್ಲಾ ಕೆಮಿಸ್ಟರಲ್ಲಿಯೂ ಬಜಾರಿನಲ್ಲಿಯೂ ಮಾರಲ್ಪಡುತ್ತದೆ.

ಕುಟಿಕೂರಾ ಟಾಲ್ಕಮ 'ಪೌಡರ'

CUTICURA TALCUM POWDER

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ. ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD: 1906

ನಿಮ್ಮ ಎದೆನೋವನ್ನು ಗುಣಪಡಿಸಿರಿ.

ನಿಮಗೆ ಬಹು ಬೇಗನೇ ಶೀತಬಾಧೆಯಾಗುವುದೆ? ನೀವು ಕಫ ಬಾಧೆಯಿಂದ ಹಾಗೂ ಶ್ವಾಸಕೋಶವನ್ನು ದುರ್ಬಲಗೊಳಿಸುವ ಶೀತಬಾಧೆಯಿಂದ ನರಳುತ್ತಿರುವಿರೆ? ಹಾಗಾದರೆ ಅವಕ್ಕೆ ಅತ್ಯುತ್ತಮ ಔಷಧಿಯಾಗಿರುವ ವಿಷಹಾರೀ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸ ಕರಗಿ ಅತ್ಯುತ್ತಮ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಗೆಡವುತ್ತದೆ. ಇದು ಶ್ವಾಸದೊಂದಿಗೆ ಸೇರಿ ಶ್ವಾಸಕೋಶಕ್ಕೆ ಹೋಗುವುದು; ಹೀಗೆ ಪೆಪ್ಸ ಹಾನಿಕಾರಕ ಕ್ರಿಮಿಗಳನ್ನು ನಾಶಪಡಿಸುವುದು. ನೋವನ್ನು ಕಡಿಮೆಮಾಡುವುದು. ಶೀತ, ಕಂಠನೋವು ಇವುಗಳನ್ನು ಗುಣಮಾಡುವುದು. ಎದೆನೋವು ಆಸ್ತ್ಮಾ ಮತ್ತು ಇನ್‌ಫ್ಲುಯೆಂಜಗಳಿಗೆ ಇದು ಅತ್ಯುತ್ತಮ ಔಷಧ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ ಒಂದು ರೂಪಾಯಿ ಬೆಲೆಗೆ ದೊರೆಯುತ್ತದೆ.

ಪೆಪ್ಸ ಕೊಂಡುಕೊಳ್ಳಿರಿ.



PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸಮರ ಭೂಮಿಯ ಸಂಚಾರ

ಹಿಮಗಾಲದಲ್ಲಿ ಹಿಟ್ಲರನು ರಶ್ಯದ ರಣಭೂಮಿಯಿಂದ ಹಿಂದಿರುಗುವನೆಂದು ಕಳೆದ ವರ್ಷದ ಅನುಭವದಿಂದ ಎಲ್ಲರೂ ಹೇಳುತ್ತಿದ್ದರು, ಆದರೆ ಪರಿಸ್ಥಿತಿ ಇಂದು ಹಾಗಿಲ್ಲ ರಶ್ಯದ ಸಂಗ್ರಾಮವನ್ನೇನೂ ಹಿಟ್ಲರನು ಬಿಟ್ಟುಕೊಟ್ಟಿಲ್ಲ ಎಷ್ಟೆಂದರೂ ಜರ್ಮನ್ ಸೇನೆ ಹಿಮಬಾಧೆಯಿಂದ ಕಂಗಾಲಾಗಿದೆಯೆಂಬುದಿಷ್ಟು ಈಗಿನ ಅವರ ಸೋಲಿನಿಂದ ವ್ಯಕ್ತವಾಗುತ್ತದೆ ರಶ್ಯನರು ವೀರ ಪರಾಕ್ರಮದಿಂದ ಹೋರಾಡಿ ಶತ್ರುಗಳನ್ನು ಒಂದೇ ಸವನೆ ಹಿಂದಕ್ಕಟ್ಟುತ್ತಿದ್ದಾರೆ ಕೆಂಪು ಸೈನ್ಯವು ಕೊಟೆಲ್ನಿಕೋವಿನ ವರೆಗೆ ಜರ್ಮನರನ್ನು ಹಿಂದೋಡಿಸುತ್ತಾ ಬಂದು ಅಲ್ಲಿ ಭದ್ರವಾದ ರಕ್ಷಣಾವಲಯವನ್ನು ನಿರ್ಮಿಸಿರುವುದಾಗಿ ತಿಳಿದಿದೆ ಸ್ಟಾಲಿನ್‌ಗ್ರಾಡ್ ದಿಕ್ಕಿನಲ್ಲಿಯೂ, ಡಾನ್ ತೀರದಲ್ಲಿಯೂ ಸೋವಿಯಟ್ ಸೇನೆಯು ಹಲವು ಪ್ರಾಮುಖ್ಯ ಸ್ಥಳಗಳನ್ನು ಸ್ವಾಧೀನಪಡಿಸಿಕೊಂಡಿದೆ ಕೊಟೆಲ್ನಿಕೋವ್ ಭಾಗದಲ್ಲಿ ಜರ್ಮನರು ಟೇಂಕ್ ದಳ ಪದಾತಿದಳಗಳನ್ನು ತಂದಿದ್ದು ಅಲ್ಲಿ ಉಗ್ರ ಹೋರಾಟವಾಗುತ್ತಿದೆ ಡಾನ್ ವೊಲ್ಗಾ ಮಧ್ಯದಲ್ಲಿ ರಶ್ಯನರನ್ನು ಮುರಿದಿಕ್ಕಬೇಕೆಂಬುದು ನಾಜಿಗಳ ಪ್ರಬಲ ಪ್ರಯತ್ನ ಈ ಭಾಗದಲ್ಲಿ ಜರ್ಮನರಿಗೆ ಬೇಕಾದ ರೈಲ್ವೆ ಸೌಕರ್ಯವಿರುವುದರಿಂದ ಅವರು ಸಾಕಷ್ಟು ಸಾಧನ ಸಾಮಗ್ರಿ ತರಿಸಿಕೊಳ್ಳಲೂ ಅನುಕೂಲತೆಯುಂಟು. ಸ್ಟಾಲಿನ್‌ಗ್ರಾಡನ್ನು ಒಳಹೊಕ್ಕ ಜರ್ಮನರು ಗೂಡಿನಲ್ಲಿ ಬಿದ್ದ ಇಲಿಗಳಂತೆ ಆಗಿದ್ದಾರೆಂದು ಮೋಸ್ಕೋ ರೇಡಿಯೋ ಹೇಳುತ್ತದೆ ರ್ಜೆವದ ಪಶ್ಚಿಮದಲ್ಲಿ ಜರ್ಮನ್ ಪದಾತಿ ದಳವು ಸೋವಿಯೆಟ್ ಸೇನೆಯ ಮೇಲೆ ಆಕ್ರಮಣ ಮಾಡಿತು ಆದರೆ ಅಲ್ಲಿ ಸ್ವಲ್ಪಕಾಲದ ಹೋರಾಟದ ಬಳಿಕ ಜರ್ಮನರು ಹಿಂಜರಿಯಬೇಕಾಯಿತು ಇನ್ನೂ ಜರ್ಮನ್ ಟೇಂಕ್ ದಳವು ಅಲ್ಲಿಗೆ ಸಾಗುತ್ತಿದೆ—ಉಕರಿನ್ ಭಾಗದಲ್ಲಿ ರಶ್ಯನ್ ಗೋರಿಲ್ಲಾ ಸೈನ್ಯಗಳು ಜರ್ಮನರ ಹಲವು ರೈಲ್ವೆ ಸಂಚಾರ ಸೌಕರ್ಯಗಳನ್ನು ನಾಶಗೊಳಿಸಿದವು ಮಧ್ಯ ಯುದ್ಧರಂಗದಲ್ಲಿ ರಶ್ಯನ್ ಡೈವ್ ಬಾಂಬರುಗಳು ಬಹಳ ಸಾಹಸದಿಂದ ಹಾರಾಡುತ್ತಿವೆ ಲೇಕ್ ಇಲ್ಮಿನ್ ಭಾಗದಲ್ಲಿ ಸೋವಿಯಟ್ ಸೇನೆಯು ಉಗ್ರ ಹೋರಾಟ ಹೂಡಿ ಪ್ರಾಮುಖ್ಯ ಸ್ಥಳಗಳನ್ನು ಸ್ವಾಧೀನಪಡಿಕೊಂಡಿದೆಯೆಂದು ಸುದ್ದಿಯಿದೆ ಸ್ಟಾಲಿನ್‌ಗ್ರಾಡ್ ಕಾರ್ಖಾನೆ ಭಾಗದಲ್ಲಿಯೂ ಪ್ರಬಲ ಕಾಳಗವಾಗುತ್ತಿದೆ ಕೆಲವು ಕಡೆಗಳಲ್ಲಿ ಜರ್ಮನ್ ಸೇನೆ ಕೆಂಪು ಸೇನೆಯನ್ನು ಹಿಂದೂಡಿಬಿಟ್ಟಿದೆ ಹೀಗೆ ಒಟ್ಟಿನಿಂದ ರಶ್ಯನ್ ಸಂಗ್ರಾಮವು ಈಗಲೂ ಉಗ್ರವಾಗಿಯೇ ನಡೆಯುತ್ತಲಿದೆ

ಎಲ್ ಅಗೇಲೇ ವಿಜಯ

ಆಫ್ರಿಕದ ಹೋರಾಟದಲ್ಲಿಯೂ ಜರ್ಮನರು ಈಗ ಪರಾಜಯ ಪಡೆಯುತ್ತಲಿದ್ದಾರೆ ಎಲ್ ಅಗೇಲೇಯಿಂದಲೂ ರೋಮೆಲನು ಹಿಂಜರಿಯುತ್ತಿರುವ ಸುದ್ದಿಯಿದೆ ಜರ್ಮನ್ ಸೇನೆ ಈ ಕಡೆಯಲ್ಲಿ ಯುದ್ಧವನ್ನೇ ಮಾಡುತ್ತಿರುವಂತ ತೋರುವುದಿಲ್ಲ ಅಷ್ಟಮ ದಳವು ರೊಮೆಲನ ಎಲ್ ಅಗೇಲೇ ರಕ್ಷಣಾದಳವನ್ನು ಭೇದಿಸಿ ಎಲ್ ಭಗಾದ ಕಡೆ ಮುಂದುವರಿದಿದೆ ಈ ಕಡೆ ಶತ್ರು ವಿರೋಧವೇ ಇರಲಿಲ್ಲವಂತೆ ಹೀಗಾಗಿ ಎಲ್ ಅಗೆಲೇ ಯುದ್ಧದಲ್ಲಿ ಬ್ರಿಟಿಷರಿಗೆ ಪೂರ್ಣವಿಜಯವಾಯಿತೆಂದೇ ಹೇಳಬೇಕು ಟ್ರಿಪೊಲಿಟಾನಿಯಾದಲ್ಲಿಯೂ ಇದುವರೆಗೆ ಹೇಳಿಕೊಳ್ಳುವ ಕಾಳಗ ನಡೆದಿಲ್ಲ ರೊಮೆಲನ ಸೈನ್ಯವು ಯಾವುದೇ ಪ್ರತಿಭಟನೆಯನ್ನೂ ಮಾಡದೆ ಪೂರ್ವಭಾಗಕ್ಕೆ ಹಿಂಜರಿಯುತ್ತಾ ಬರುವುದನ್ನು ನೋಡಿದರೆ, ಮುಂದೆ ಯಾವುದಾದರೊಂದು ಸಂರಕ್ಷಿತ ಭದ್ರಸ್ಥಾನದಲ್ಲಿ ನಿಂತು ಆತನು ಘೋರ ಕಾಳಗ ಮಾಡಬಹುದೆಂದೇ ಅನಿಸುತ್ತದೆ ಎಲ್ ಅಗೆಲೇ ಅಕ್ಷಪಕ್ಷದ ಒಂದು ಭದ್ರಸ್ಥಾನವಾಗಿದ್ದು, ಅಲ್ಲಿ ಕಳೆದ ವರ್ಷ ವೇವಲ್ ಸೈನ್ಯಕ್ಕೆ ತೀವ್ರ ಪ್ರತಿಭಟನೆ ದೊರಕಿದ್ದು ಈಗ ಅದನ್ನು ಯಾವ ಹೋರಾಟವೂ ಇಲ್ಲದೆ ರೊಮೆಲನು ಬಿಟ್ಟುಕೊಡುವುದನ್ನು ನೋಡಿದರೆ ರೊಮೆಲನ ಪರಾಕ್ರಮದ ವಿಷಯ, ಸಂಶಯಪಡಲೂ ಆಸ್ಪದವಾಗುತ್ತದೆ ಟ್ರಿಪೊಲಿಟಾನಿಯ ಮತ್ತು ಟುನಿಶಿಯಗಳಲ್ಲಿ ಆಗುವ ಹೋರಾಟವನ್ನು ನಿರೀಕ್ಷಿಸಿದರೆ ಆ ಕಡೆಯಲ್ಲಿ ಸೈನ್ಯಸಾಮಗ್ರಿ ಸಜ್ಜಿತರಾಗಿ ಆಫ್ರಿಕಾಯುದ್ಧವನ್ನು ಮುಂದುವರಿಸುವ ಯೋಚನೆ ಜರ್ಮನರಿಗಿದ್ದರೂ ಇರಬಹುದು ಎನಿಸುತ್ತದೆ. ಹೇಗಿದ್ದರೂ ರೊಮೆಲನ ಸೈನ್ಯ ಇದುವರೆಗೆ ನಷ್ಟವಾಗದೆ ಉಳಿದಿರುವುದರಿಂದ ಮುಂದಿನ ಸಂಗತಿ ಹೇಳಬರುವುದಿಲ್ಲ ಈಗಿನ ಯುದ್ಧವು ಬಿಜರ್ಟಾ—ಟುನಿಸ್—ಟ್ರಿಪೋಲಿ ಭಾಗದಲ್ಲಿ ತೀವ್ರವಾಗುತ್ತಿದೆ ಇದು ಮೆಡಿಟರೇನಿಯನ್ ಸ್ವಾಧೀನತೆಗೆ ಅವಶ್ಯವೂ ಆದುದು ಹೇಗೆ ಎಲ್ ಅಗೇಲಾ ಜಯದಿಂದ ಮಿತ್ರಪಕ್ಷಕ್ಕೆ ಆಫ್ರಿಕದ ಗಂಡಾಂತರ ತಪ್ಪಿತೆಂದು ತಿಳಿದುಕೊಳ್ಳುವುದು ಸಾಧ್ಯವಿಲ್ಲ

ಡಾರ್ಲನ್ ಪ್ರಕರಣ

ಅಮೆರಿಕನರು, ರಶ್ಯನರು, ಮಿತ್ರಪಕ್ಷದವರೂ ಕೂಡಾ, ಡಾರ್ಲನನೊಡನೆ ಮಿತ್ರರು ಒಪ್ಪಂದ ಮಾಡಿಕೊಂಡ ಬಗ್ಗೆ ಪ್ರಬಲ ಆಕ್ಷೇಪವೆತ್ತಿದ್ದಾರೆ ಸ್ವಾರ್ಥಿ, ಬ್ರಿಟಿಷ್ ದ್ವೇಷಿ, ಹಿಟ್ಲರ್ ಮಿತ್ರ ಪ್ರಜಾಪ್ರಭುತ್ವ ವಿರೋಧಿ ಅವಿಶ್ವಾಸದ ಮನುಷ್ಯನಾಗಿದ್ದ ಡಾರ್ಲನನ್ನು ಒಂದೇ ಕ್ಷಣದಲ್ಲಿ ಸಂಪೂರ್ಣ ವಿಶ್ವಾಸಕ್ಕೆ ತೆಗೆದುಕೊಂಡದ್ದು ಅವಿಚಾರವಾಯಿತೆಂದು ಅವರು ದೂರುತ್ತಿದ್ದಾರೆ ಕೆಲವರಂತೂ ಅವನು ಹಿಟ್ಲರ್ ಪರವಾಗಿ ಕೆಲಸಮಾಡಲಿಕ್ಕಾಗಿ ಹಿಸ್ಸನಂತೆ ಬೇಕುಬೇಕೆಂದೇ ಆತ ಮಿತ್ರರ ಶಿಬಿರ ಸೇರಿರಬೇಕೆಂದೂ ಅಲ್ಲಿ ಹಿಟ್ಲರ್ ಗುಪ್ತಚರನಾಗಿ ಹಾಗೂ ಪಂಚಮದಲದವನಾಗಿ ವರ್ತಿಸುತ್ತಿರುವನೆಂದೂ ನಂಬುತ್ತಾರೆ ಅಮೆರಿಕ ಸರಕಾರವು ಡಾರ್ಲನನೊಡನೆ ಮಾಡಿಕೊಂಡೀ ಒಪ್ಪಂದವನ್ನು ವೆಂಡಲ್ ವಿಲ್ಕಿಯವರು ಕಟುವಾಗಿ ಟೀಕಿಸಿ ಇದರಿಂದ ಅಮೆರಿಕದ ನೈತಿಕ ಬಲವು ಕುಂದುವುದೆಂದು ಸ್ಪಷ್ಟ ತಿಳಿಸಿದ್ದಾರೆ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿಯೂ ಈ ಬಗ್ಗೆ ವಾದವಿವಾದಗಳುಂಟಾಗಿವೆ ಪಾರ್ಲಿಮೆಂಟಿನ ಗುಪ್ತ ಸಭೆಯಲ್ಲಿ ಚರ್ಚಿಲರು ಬೇಗನೇ ಡಾರ್ಲನನ ಸ್ಥಾನಮಾನದ ವಿಷಯ ಸ್ಪಷ್ಟೀಕರಿಸುವರೆಂದು ಈಡನರು ಹೇಳಿದರು ಚರ್ಚಿಲರು ಏನು ಹೇಳುವರೋ ನೋಡಬೇಕು ಅಂತೂ ಡಾರ್ಲನನನ್ನು ಮಿತ್ರರು ಹತ್ತಿರ ಮಾಡಿಕೊಂಡಿದ್ದರಿಂದ ಡಿಗೋಲೆಯೂ ಕೆರಳಿರುವನೆಂಬುದು ಸ್ಪಷ್ಟವಾಗುತ್ತದೆ ಫ್ರಾನ್ಸ್ ಪತನವಾಗಿ ಅಲ್ಲಿ ಹಿಟ್ಲರನ ಏಕತಂತ್ರಾಧಿಕಾರವು ನೆಲೆನಿಂತುದನ್ನು ಕಂಡು ಪ್ರಜಾಪ್ರಭುತ್ವ ಪಕ್ಷಪಾತಿಯೆನಿಸಿದ ಡಿಗೋಲೆಯು ಅಲ್ಲಿರಲು ಅವಕಾಶವಿಲ್ಲದೆ, ಇಂಗ್ಲೆಂಡಿಗೆ ಬಂದು ತಳವೂರಿದ್ದು, ಅಲ್ಲಿ ಸ್ವತಂತ್ರ ಫ್ರೆಂಚ ದಳವನ್ನು ಸ್ಥಾಪಿಸಿ ಇದುವರೆಗೆ ಮಿತ್ರರ ಅತ್ಯಂತ ಮಿತ್ರನಾಗಿದ್ದನು ಹೀಗೆ ಮುಂದಕ್ಕೆ ಫ್ರಾನ್ಸು ಹಿಟ್ಲರನ ಭದ್ರಮುಷ್ಟಿಯಿಂದ ಬಿಡುಗಡೆ ಹೊಂದಿದ ಬಳಿಕ ಅಲ್ಲಿ ತನಗೆ ಭದ್ರಪೀಠವು ದೊರಕೀತೆಂದು ಆಶಾತುರನಾಗಿದ್ದ ಡಿಗೋಲೆಗೆ ಮಿತ್ರರು ಡಾರ್ಲನನನ್ನು ಹತ್ತಿರ ಮಾಡಿದ್ದರಿಂದ ಸಹಜವಾಗಿ ಹೊಟ್ಟೆಕಿಚ್ಚು ಹುಟ್ಟಿರಬೇಕು "ಫ್ರೆಂಚ್ ಸ್ವಾತಂತ್ರ್ಯಕ್ಕೆ ಆತಂಕ ತರುವ ಯಾವ ವ್ಯಕ್ತಿಯನ್ನಾದರೂ ರಾಷ್ಟ್ರವು ಮನ್ನಿಸದು, ಫ್ರೆಂಚ್ ಯುದ್ಧದಲ್ಲಿ ಅಪಜಯ ಹೊಂದಿ ಹೀಗೆ ಯಾದವೀ ಯುದ್ಧ ಹಬ್ಬಿಸಲು ಬರುವವರಿಗೆ ಫ್ರೆಂಚರು ಸ್ವಾಗತವೀಯಲಾರರು ಫ್ರೆಂಚ್ ಸಾಹಸಿಗಳು ಯಾರೊಬ್ಬರ ಸೊತ್ತೂ ಅಗಿಲ್ಲ, ಫ್ರೆಂಚ್ ಸೈನಿಕರು ಎಲ್ಲಿ ಹೋರಾಡುತ್ತಿದ್ದರೂ ಯಾವುದೇ ಒಂದು ವ್ಯಕ್ತಿಯ ಸೇವಕರಲ್ಲ, ಇಡೀ ಫ್ರಾನ್ಸಿನ ಸೇವಕರು, ಸಾಹಸಿಗಳ ಬಗ್ಗೆ ಏನುಮಾಡಬೇಕು, ತಮ್ಮ ರಾಜ್ಯಪದ್ಧತಿ ಹೇಗಿರಬೇಕು ಇದನ್ನು ಫ್ರೆಂಚರೇ ನಿರ್ಧರಿಸುವರು' ಎಂದು ಮುಂತಾಗಿ ಈಗ ಡಿಗೋಲೆ ಆಕಾಶ ಭಾಷಣ ಮಾಡಿದ್ದಾನೆ ಅಂತೂ ಒಮ್ಮೆ ಒಬ್ಬನನ್ನು, ಇನ್ನೊಮ್ಮೆ ಇನ್ನೊಬ್ಬನನ್ನೂ ಎತ್ತಿ ಹಿಡಿವ ಮಿತ್ರರ ಧೋರಣದಿಂದ ಹಲವರು ಹಲವು ತರದಲ್ಲಿ ಊಹಿಸಲು ಅವಕಾಶವಾಗಿದೆ

ಚಿತಗಾಂಗಿಗೆ ಅಗ್ನಿವರ್ಷ

ಚಿತಗಾಂಗಿಗೆ ಕಳೆದ ವಾರದಲ್ಲಿ ಎರಡು ಸಲ ಬಾಂಬಿನ ಅಗ್ನಿವರ್ಷವಾಯಿತು. ಮೊದಲನೆಯ ಸಲದ ಬಾಂಬುಗಳು ಹೆಚ್ಚಾಗಿ ನೀರಿಗೇ ಬಿದ್ದುಹೋದವಂತೆ, ಹಾಗಾಗಿ ಹೆಚ್ಚಿನ ಅಪಾಯ ಆಗಿರಲು ಸಾಧ್ಯವಿಲ್ಲವಷ್ಟೆ?—ಎರಡನೆಯ ಸಲದಲ್ಲಿ ಜಪಾನರು ತುಂಬಾ ಬಾಂಬುಗಳನ್ನು ಹಾಕಿದರೂ ಅದರಿಂದ ಆದ ಹಾನಿ ಬಹಳ ಕಡಿಮೆಯೆಂದು ವರದಿಬಂದಿದೆ ಅಂತೂ ಇನ್ನೂ ವಿವರ ತಿಳಿದಿಲ್ಲವಾದರೂ ನಮಗೆ ಆದ ನಷ್ಟವೇನೂ ಕೊಂಚವಾದರೂ ಚಿತಗಾಂಗಿಗೆ ಬಿಡದೆ ಜಪಾನರು ಮುತ್ತಿಗೆ ಹಾಕುತ್ತಿರುವರೆಂಬುದಿಷ್ಟು ಸ್ಪಷ್ಟವಾದುದೆ. ಜಪಾನರ ಚಿತಗಾಂಗಿನ ಈ ಧಾಳಿಯನ್ನು ನಿರೀಕ್ಷಿಸಿದರೆ ಬರ್ಮ ಮಲಯಗಳಲ್ಲಿ ಸೈನ್ಯಸಂಗ್ರಹಿಸುವುದನ್ನು ಪರ್ಯಾಲೋಚಿಸಿದರೆ ಜಪಾನರ ಮುಂದಿನ ಲಕ್ಷ್ಯ ಭಾರತವಲ್ಲವೆಂದು ಹೇಗೆ ಹೇಳುವುದು? ಚರ್ಚಿಲರಾದರೂ ಮೊನ್ನೆ ಮೊನ್ನೆ ಪಶ್ಚಿಮದ ಸಂಗ್ರಾಮವನ್ನು ತೀರಿಸಿ ಪೂರ್ವಕ್ಕೆ ತೆರಳುವ ಎಂದು ಗರ್ಜಿಸಿದ್ದಾರೆ ಶತ್ರುವು ಇದನ್ನು ಮುಂಚಿತವಾಗಿಯೇ ತಿಳಿದು ಮಿತ್ರರು ಪಶ್ಚಿಮದ ಯುದ್ಧವನ್ನು ಮುಗಿಸುವ ಮೊದಲೇ ಪೂರ್ವದಲ್ಲಿ ದಂಡಯಾತ್ರೆಗೆ ಆರಂಭಿಸಲಾರನೆಂದೂ ಹೇಗೆ ಹೇಳುವುದು? ಅಸ್ಸಾಮಿನಲ್ಲಿ ಜಪಾನರ ಒಂದು ವಿಮಾನವನ್ನು ಉರುಳಿಸಲಾಯಿತೆಂದು ವರದಿ ಬಂದಿದೆ ಮಾತ್ರವಲ್ಲದೆ ಅಲ್ಲಿ ಹಲಕೆಲವು ಜಪಾನು ಕೊಡೆ ವಿಮಾನಿಕರು ಇಳಿದಿರುವರೆಂದು ಸರಕಾರೀ ಪ್ರಕಟಣೆಯೇ ಸಾರುತ್ತದೆ. ಹೀಗಾದರೆ ಈಗಾಗಲೇ ಕೆಲವುಂದಿ ಜಪಾನರು ಭಾರತದ ಒಳನುಗ್ಗಲು ಯತ್ನಮಾಡಿರುವಂತೆ ತೋರುವುದು ಚಿತಗಾಂಗಿನಲ್ಲಿಂತೂ ಬಿಡದೆ ಬಾಂಬಿನ ಮಳೆ ಸುರಿಯುತ್ತಲೇ ಇದೆ ಅಸ್ಸಾಮಿನಲ್ಲಿಯೂ ಶತ್ರು ಚಟುವಟಿಕೆ ಕಡಿಮೆಯಾಗಿಲ್ಲವೆಂದು ತಿಳಿಯಲು ಅವಕಾಶವಾಗುವುದು

ಬೇರೆ ರಣಕ್ಷೇತ್ರಗಳಲ್ಲಿ

ನೂಗಿನಿಯದಲ್ಲಿ ಜನರಲ್ ಮೆಕಾರ್ಥರ ಸೈನ್ಯವು ಗೋನಾ ಬೂನಾಗಳೆಂಬ ಎರಡು ಗ್ರಾಮಗಳನ್ನು ಸ್ವಾಧೀನಪಡಿಸಿಕೊಂಡಿತು ನ್ಯೂಗಿನಿಯ ಮೊರ್ಸಬಿ ಬಂದರದ ಮೇಲೆ ಶತ್ರು ವಿಮಾನ ಹಾರಾಡಿತು ನ್ಯೂ ಬ್ರಿಟನಿನ ಗಸ್ಮತಾದಲ್ಲಿ ವಿಮಾನಧಾಳಿ ನಡೆದಿದೆ ಗೋನಾ ಬೂನಾಗಳನ್ನು ಮಿತ್ರರು ಕೈವಶ ಮಾಡಿಕೊಂಡಿರುವುದರಿಂದ ಪಾಪುವಾ ಪ್ರಾಂತವೇ ಈಗ ಮಿತ್ರರ ಸ್ವಾಧೀನವಾಯಿತೆಂದು ಹೇಳಬಹುದು ಸೊಲೊಮನ್ನಲ್ಲಿ ಈಗ ಶಾಂತತೆಯಿದೆ ಗುಡಾಲ್ಕನಾಲ್ ದ್ವೀಪದಲ್ಲಿಯೂ ಹೆಚ್ಚಿನ ಚಟುವಟಿಕೆಯಿಲ್ಲ ಸೆಂಟ್ರಲ್ ಟುನಿಶಿಯದಲ್ಲಿ ಫ್ರೆಂಚರ ಚಟುವಟಿಕೆ ಜೋರಾಗಿರುವುದು ಇಲ್ಲಿ ಫ್ರೆಂಚರು ಸಿದಿಭೌಸಿದಿಯನ್ನು ಕೈವಶಮಾಡಿಕೊಂಡಿರುವರು ಫ್ರೆಂಚ್ ಗೋರಿಲ್ಲಾ ಸೈನ್ಯವೂ ಜೋರಾಗಿ ಕೆಲಸಮಾಡುತ್ತಿದೆ ಹಲವು ಇಟಲಿಯನರನ್ನು ಇಲ್ಲಿ ಸೆರೆಹಿಡಿದಿರುವರು ಹೀಗೆ ಈ ವಾರದಲ್ಲಿ ಜರ್ಮನರಿಗೆ ಎಲ್ಲೆಲ್ಲಿಯೂ ಪರಾಜಯವೇ ಪ್ರಾಪ್ತವಾಗಿದೆ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C ನಂಬ್ರ 631/1941

R E P ನಂಬ್ರ 675/1942

ಪೌಲ್ ಲೊರೆನ್ಸ್ ಜೋನ್ ಲೊಬೊ— ಅರ್ಜಿದಾರ ಎದ್ರು

1 ಅಂತೋನ್ ಲೂವಿಸ್ 2. ಸೊಬಿನಾ ಸೋಜ ಬ್ಯಾ— ರಿಸ್ಪೊಂಡೆಂಟ್ರು

ಮಂಗಳೂರು ತಾಲೂಕು ಪಡವು ಗ್ರಾಮದಲ್ಲಿರುವ ಪೌಲು ಲೂವಿಸರ ಮಗ (1ನೇ ರೆಸ್ಪೊಂಡೆಂಟು) ಅಂತೋನ್ ಲೂವಿಸ್, ಬೋಸ್ತ್ಯಂ ಸೋಜರ ವಿಧವೆ (2ನೆ ರೆಸ್ಪೊಂಡೆಂಟಳು) ಸೊಬಿನ ಸೋಜಾ ಬ್ಯಾ 1 ಕೂಡ ಎರಡು ಜನರಿಗೆ ಈ ಮೂಲಕ ತಿಳಿಸುವದೇನಂದ್ರೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಜಪ್ತಾದ ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿಮಾಡಿದ್ದಾನೆ ಆದುದರಿಂದ ವಿಕ್ರಯದ ಇಸ್ತಿಹಾರಿನ ಸವತುಗಳನ್ನು ನಿರ್ಣಯಿಸಲಿಕ್ಕೆ 1942ನೇ ಇಸವಿ ದಶಂಬರ್ ತಿಂಗಳ 24ನೇ ತಾರೀಕು ನಿಶ್ಚಯಿಸೋಣಾಗಿಯದೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

By order

Mangalore, 14-12-42. | K Gopalakrishna Rao, Vakil for Petitioner.

ಸ್ವದೇಶಾಭಿಮಾನಿ

ತಾರೀಕು 18—12—1942

ಪಕ್ಷಾತೀತ ಪರಿಷತ್ತು

ಅಲ್ಲಾಬಾದಿನಲ್ಲಿ ಸೇರಿದ ಪಕ್ಷಾತೀತ ಪರಿಷತ್ತಿನ ವಿಚಾರ ವಿಮರ್ಶೆಯ ಫಲಿತಾಂಶವಾಗಿ, ಅಧ್ಯಕ್ಷರಾದ ಸರ್ ತೇಜ್ ಬಹದ್ದೂರ್ ಸಪ್ರುಗಳು ಒಂದು ಹೇಳಿಕೆ ಕೊಟ್ಟು, ಅದರಲ್ಲಿ, ಬ್ರಿಟನು ಕೂಡಲೇ ಅಧಿಕಾರವನ್ನು ಭಾರತೀಯರಿಗೆ ಬಿಟ್ಟು ಕೊಡಬೇಕೆಂದೂ, ಭಾರತದ ಸಮಸ್ಯಾ ಪರಿಹಾರಕ್ಕೆ ಅದಲ್ಲದೆ ಬೇರೆ ಮಾರ್ಗವಿಲ್ಲವೆಂದೂ ಎಚ್ಚರಿಸಿದ್ದಾರೆ. 'ಪರದೇಶಗಳಲ್ಲಿ ಬ್ರಿಟಿಷರು ಅಪಪ್ರಚಾರ ಮಾಡುವುದು ನೀತಿಯಲ್ಲ; ಈಗಾಗಲೇ ಹಲವು ಪ್ರಾಂತಗಳಲ್ಲಿ ಗವರ್ನರರ ಏಕತಂತ್ರಾಧಿಕಾರವು ನಡೆದಿದ್ದು, ಆರ್ಡಿನೆನ್ಸುಗಳ ಬಲದಿಂದ ಕಾರಭಾರ ನಡೆಸುವುದು ಉಚಿತವಾದುದಲ್ಲ; ವೈಸರಾಯ್ ಕೌನ್ಸಿಲ್ ಮೆಂಬರರು ವೈಸರಾಯರ ಕೈಕೆಳಗಿನ ನೌಕರರಲ್ಲದೆ ಅವರಿಗೆ ಏನೂ ಅಧಿಕಾರವಿಲ್ಲ; ಈಗಾದರೂ ದೇಶದಲ್ಲಿ ಒಮ್ಮತದ ಕೇಳಿಕೆಯಾದರೆ ಬ್ರಿಟಿಷರು ಅಧಿಕಾರ ಬಿಟ್ಟುಕೊಡುವರೆ? ಸಂಧಾನ ಕಾರ್ಯಕ್ಕಾಗಿ ಮಹಾತ್ಮಾ ಗಾಂಧಿಯವರನ್ನು ಕಾಣಲು ರಾಜಾಜಿ ಮತ್ತು ಮುಖರ್ಜಿಯವರಿಗೆ ಅವಕಾಶ ಕೊಡದಿರುವುದು ಏನನ್ನು ವ್ಯಕ್ತಮಾಡುತ್ತದೆ? ಇಂದು ಬ್ರಿಟಿಷ್ ಸರಕಾರವು ತಳೆದ ಧೋರಣದಿಂದ ಭಾರತೀಯರೆಲ್ಲರಿಗೂ ಅಸಮಾಧಾನವಾಗಿದೆ. ಪುಂಡುಗಂದಾಯವನ್ನು ವಸೂಲುಮಾಡುವಾಗ ತಳೆದ ಧೋರಣವೂ ಖಂಡನೀಯವಿದೆ; ಬ್ರಿಟಿಷ್ ಸೈನಿಕರನ್ನು ಭಾರತದಲ್ಲಿ ಹೆಚ್ಚಾಗಿ ಇಡುವುದರಿಂದ ಬ್ರಿಟಿಷರ ಉದ್ದೇಶ ಫಲಿಸಲಾರದು. ಭಾರತೀಯರಿಗೆ ರಾಜ್ಯ ಸೂತ್ರಗಳನ್ನು ಕೊಟ್ಟು ಸ್ವತಂತ್ರ ಸ್ವರಾಜ್ಯವನ್ನು ಸ್ಥಾಪಿಸಲು ನಾವು ಸಿದ್ಧರಿದ್ದೇವೆಂದು ಬ್ರಿಟಿಷರು ಮನಗಾಣಿಸಿದರೆ ಯುದ್ಧಯತ್ನಕ್ಕೆ ನಿಜವಾದ ಬೆಂಬಲ ದೊರಕುವುದು' ಇಂತು ಸರ್ ಸಪ್ರುಗಳು ತಮ್ಮ ಹೇಳಿಕೆಯಲ್ಲಿ ಸ್ಪಷ್ಟಪಡಿಸಿರುವರು. ಪಕ್ಷಾತೀತ ಪರಿಷತ್ತಿನವರು ಮೊದಲಿಗಿಂತ ವಿಶೇಷವಾದುದೇನನ್ನೂ ಈ ಸಲವೂ ಹೇಳಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ವಿಚಾರವು ಕಳೆದ ಐವತ್ತು ವರ್ಷಗಳಿಂದಲೂ ಮುಖಂಡರು ಹೇಳಿಕೊಂಡು ಬಂದಂಥಾದ್ದೇ. ಆದರೂ ಪಕ್ಷಾತೀತರು ಈಗೊಮ್ಮೆ ಸೇರಿ, ಬ್ರಿಟಿಷರ ಭಾರತದ ಧೋರಣವನ್ನು ಖಂಡಿಸಿದ್ದರಿಂದ ಸ್ವಲ್ಪ ಪ್ರಚಾರವೇನೋ ಆಯಿತು. ಸರ್ ಸಪ್ರುಗಳಂಥಾ ಮಂದ ಪಕ್ಷೀಯರು ಹೇಳಿದ್ದರಿಂದ ಬ್ರಿಟಿಷ್ ಮುಖಂಡರು ಕಿವಿಗೊಡಲೂ ಸಾಕು. ಆದರೆ, ಇಂದಿನ ಬ್ರಿಟಿಷ್ ಧೋರಣವನ್ನು ನಿರೀಕ್ಷಿಸಿದವರಿಗೆ ಪಕ್ಷಾತೀತರ ಮಾತಿಗೆ ಬೆಲೆ ಸಿಗುವುದೆಂಬ ಭರವಸೆಯೇನೂ ತೋರುವುದಿಲ್ಲ.

ದಮ್ಮು ಗುಣಪಡಲೇ ಬೇಕು
ಅಸಾಧ್ಯ ಎಂದು ಡಾಕ್ಟರರು ಅನ್ನುವದಿಲ್ಲ



ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಂದಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಿಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಮುಟ್ಟಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತಾ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ— ಮೆಸರ್ಸ ವನಮಾಳಿ ಭಿಖಾ ಮತ್ತು ಕಂಪೆನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.

ಪುರೋಹಿತ ಶ್ವಾಸಹಾರಿ

ಸ್ವದೇಶ ಸಮಾಚಾರ

ಪ್ರಿವೀ ಕೌನ್ಸಿಲಿನಲ್ಲಿ ಕಯ್ಯೂರ್ ಮೊಕದ್ದಮೆಯ ಅಪೀಲು

ಕಾಮ್ರೆಡ್ ಪ್ರಾಡ್ಲೀಯವರು ಭಾರತದ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಪೀಪಲ್ಸ್ ವಾರ್' ಪತ್ರಿಕೆಗೆ ಕಳುಹಿಸಿದ ಪತ್ರ ಇಂತಿದೆ:—

'ಶ್ರೀ. ಪ್ರಿಟ್ ಕೆ. ಸಿ. ಇವರು ಕಯ್ಯೂರ್ ಮೊಕದ್ದಮೆಯಲ್ಲಿ ಮರಣದಂಡನೆಗೊಳಪಟ್ಟವರ ಪರವಾಗಿ ವ್ಯವಹರಿಸುವರೆ ಸಿದ್ಧರಾಗಿರುವರು. ಅವರು ಸಲಹೆಗಳಿಗಾಗಿ ಕಾಯುತ್ತಿದ್ದಾರೆ. ಸಲಹೆ ಇಲ್ಲದೆ ಯಾವ ವಕೀಲನೂ ವ್ಯವಹರಿಸಲಾಗುವುದಿಲ್ಲ. ಆದುದರಿಂದ ತಂತೀ ಮೂಲಕ ಸಲಹೆ ಕಳುಹಿಸಿರಿ.'

ಸಲಹೆಯನ್ನು ತಂತೀ ಮೂಲಕ ಕಳುಹಿಸಲಾಗಿದೆ ಎಂದೂ ತಿಳಿದು ಬರುತ್ತದೆ. ವಿವರವನ್ನು ನಿರೀಕ್ಷಿಸಲಾಗಿದೆ.

ಮದ್ರಾಸು ರೈತರಿಗೆ ೨೦ ಲಕ್ಷ ರೂಪಾಯಿ ತೀರ್ವೆ ಮಾಫಿ

ಇದೆಯೆಂದು ಸರಕಾರವು ಪ್ರಕಟಿಸುತ್ತದೆ. ಧಾರಣೆಗಳು ಹೆಚ್ಚಾಗಿರುವುದರಿಂದ ರೈತರು ಈ ಪ್ರಯೋಜನ ಪಡೆಯಬೇಕೆಂದು ಲೇಂಡ್ ರೆವೆನ್ಯೂ ಕಮಿಷನ್ ಪರವಾಗಿ ತಿಳಿಯಾಯಿತಿಯಾಗಿದೆ.

ಚಳವಳಕ್ಕೆ ನೆಹರುಗಳ ಒಪ್ಪಿಗೆಯಿತ್ತೆ?

ಇಂದು ನಡೆಯುತ್ತಿರುವ ರಾಷ್ಟ್ರೀಯ ಸಾಮುದಾಯಿಕ ಚಳವಳಕ್ಕೆ ನೆಹರುಗಳ ಒಪ್ಪಿಗೆಯಿರಲಿಲ್ಲವೆಂದು, ಅವರು ಸಂಯುಕ್ತ ಪ್ರಾಂತದಲ್ಲಿ, ಬೊಂಬಯಿಯ ಕಾಂಗ್ರೆಸ್ ಕಮಿಟಿ ಸಭೆಸೇರುವ ಒಂದು ವಾರದ ಮೊದಲು ತಮಗೆ ಹೇಳಿದ್ದಾರೆಂದೂ, ಚೀಣ, ರಶ್ಯಗಳೊಡನೆ ಭಾರತವು ಸಹಕರಿಸಬೇಕೆಂದು ಅವರ ಅಭಿಪ್ರಾಯವಿತ್ತೆಂದೂ ಸಂಯುಕ್ತ ಪ್ರಾಂತದ ಸಮತಾವಾದೀ ಮುಖಂಡರಾದ ಡಾ॥ ಕೆ. ಎಂ. ಅಶ್ರಾಫರು ಬರೆದುದನ್ನು ಖಂಡಿಸಿ, ನೆಹರು ಸೋದರಿ ಶ್ರೀಮತಿ ಹಾತೀಸಿಂಗರು ಒಂದು ಪ್ರಕಟಣೆ ಕೊಟ್ಟು ನೆಹರುಗಳ ಕೀರ್ತಿಗೆ ಈ ಹೇಳಿಕೆ ಕಳಂಕ ತಕ್ಕುವಂಥಾದ್ದಿದೆಯೆಂದೂ, ಗಾಂಧಿಜಿ ಕೈಕೊಂಡ ಕಾರ್ಯಕ್ರಮದಲ್ಲಿ ನೆಹರುಗಳು ಸಂಪೂರ್ಣ ಸಮ್ಮತಿ ವ್ಯಕ್ತಪಡಿಸಿದ್ದರೆಂದೂ ಸ್ಪಷ್ಟಪಡಿಸಿದ್ದಾರೆ.

ವೈಸರಾಯರ ಅಧಿಕಾರಾವಧಿ

ಬರುವ ಜನವರಿಗೆ ಮುಗಿಯುತ್ತ ಬಂದುದರಿಂದ, ಬೇರೆ ವೈಸರಾಯರನ್ನು ನೇಮಿಸಬೇಕಾಗಿ ಬಂದರೂ, ಬ್ರಿಟಿಷ್ ಸರಕಾರವು ಈಗಿನ ವೈಸರಾಯರಾದ ಲಿನ್‌ಲಿತ್‌ಗೋವರ ಅವಧಿಯನ್ನೇ ಇನ್ನಾರು ತಿಂಗಳ ಕಾಲ ಹೆಚ್ಚಿಸಿತು. ಬ್ರಿಟಿಷ್ ಮಂತ್ರಿಮಂಡಳದಲ್ಲಿ ಬದಲಾವಣೆಯಾಗುವುದರಿಂದ ವೈಸರಾಯರು ಬದಲಾಗುವುದು ಸಂಭವನೆಂದೂ, ಸ್ವತಃ ವೈಸರಾಯರೇ ತಾನು ಬೇಗನೇ ನಿವೃತ್ತನಾಗುತ್ತೇನೆಂದು ಹೇಳಿರುವುದರಿಂದಲೂ ಬೇರೊಬ್ಬರು ಬಂದು ಭಾರತದ ಸಮಸ್ಯೆ ಪರಿಹಾರವಾದಿತೇ ಎಂದು ಹಲವರು ಆಶಿಸಿದ್ದು ಇದರಿಂದ ವ್ಯರ್ಥವಾಯಿತು. ಚರ್ಚಿಲ್ ಮಂತ್ರಿಮಂಡಳದಲ್ಲಿ ಬದಲಾವಣೆಯಾಗಲೂ ಇಲ್ಲ. ಇವರು ೧೯೩೬ರಲ್ಲಿ ವೈಸರಾಯ್ ಪಟ್ಟಕ್ಕೆ ಬಂದರು. ೧೯೪೧ರಲ್ಲಿ ಇವರು ಸಂಪ್ರದಾಯದಂತೆ ನಿವೃತ್ತರಾಗಬೇಕಾಗಿತ್ತು. ಆಗಲೂ ಅವರ ಅವಧಿ ಮುಂದುವರಿಸಲಾಗಿತ್ತು. ಇದು ಮೂರನೆಯ ಸಲ. ಲಾರ್ಡ್ ಲಿನ್‌ಗೋರವರು ಅಧಿಕಾರಕ್ಕೆ ಬಂದಮೇಲೆ ಭಾರತ ಬಿಕ್ಕಟ್ಟು ಬೆಳೆಯುತ್ತಾ ಬಂದುದರಿಂದ, ಪಾಕಿಸ್ತಾನ ಕೂಗಿಗೆ ಬಲ ಬಂದುದರಿಂದ, ಅಂತರಂಗ ವೈಷಮ್ಯವೂ ಬೆಳೆಯಲು ಆಸ್ಪದವಾದ್ದರಿಂದ ಈ ವೈಸರಾಯರ ಬದಲಾವಣೆಯಾಗುವುದು ಒಳ್ಳೆಯದಿತ್ತೆಂದು ಹಲವರು ತಿಳಿದಿದ್ದರು. ಆದರೆ ಚರ್ಚಿಲ್ ಅಮೆರಿ ಕಂಪನಿ ಬ್ರಿಟನಿನಲ್ಲಿ ಅಧಿಕಾರದಲ್ಲಿರುವ ವರೆಗೆ ನಮಗೆ ಯಾರು ವೈಸರಾಯ್ ಆಗಿ ಬಂದರೇನೆಂದು ಕೆಲವರು ಉದ್ಗಾರವೆತ್ತಿದ್ದಾರೆ.

ಮುಚ್ಚಿಟ್ಟ ಮಾತುಗಳಿವು!

ವೆಂಡಲ್ ವಿಲ್ಕಿ ಟುಂಕಿಂಗ್‌ನಲ್ಲಿ ಮಾಡಿದ ಭಾಷಣದ ವಿಸ್ತಾರವು ನಮ್ಮ ದೇಶಕ್ಕೆ ಬರಲಿಲ್ಲ. ಅದನ್ನು ಶ್ರೀ. ಡಿ. ಎಫ್. ಕರ್ಕಾರ ಮಿತ್ರರು ಅವರಿಗೆ ಕಳುಹಿಸಿದ್ದಾರೆ. ಅದು ಸೆನ್ಸರ್ ಕಣ್ಣು ತಪ್ಪಿಸಿ ಬಂದಿದೆ. ಅದರಲ್ಲಿರುವ ಕೆಲವು ಮಾತುಗಳು ಹೀಗಿವೆ. ವೆಂಡಲ್‌ವಿಲ್ಕಿ ಹೀಗಂದರು: 'ಏಶ್ಯದಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಸಾಮ್ರಾಜ್ಯ ಪ್ರಭುತ್ವವು ದೀರ್ಘವೂ ಅಕೀರ್ತಿಕರವೂ ಇದೆ. ಅಲ್ಲಿನ ಜನರು ಪಾಶ್ಚಿಮಾತ್ಯರ ಕಾಟ ಇನ್ನು ನಮಗೆ ಬೇಡವೇ ಬೇಡವೆಂದು ನಿರ್ಧರಿಸಿ ಬಿಟ್ಟಿದ್ದಾರೆ. ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರವು ಸವಾರಿಮಾಡಿ ಸಾಮ್ರಾಜ್ಯ ನಡೆಸುವುದು ಕೊನೆಗಾಣಬೇಕೆಂಬುದೇ ನಮ್ಮ ಧ್ಯೇಯ. ನಾವು ಈ ಯುದ್ಧ ಮುಗಿಯುವುದಕ್ಕೆ ಮುಂಚೆ ಈ ವಿಷಯವನ್ನು ಸ್ಪಷ್ಟಪಡಿಸಬೇಕು. ಜಪಾನರ ಆಡಳಿತ ಕೆಟ್ಟದ್ದೂ, ನಮ್ಮ ಆಡಳಿತ ಒಳ್ಳೆಯದು, ಆದ್ದರಿಂದ ನೀವು ನಮ್ಮ ಕಡೆ ಸೇರಿ ಎಂದು ನಾವು ಅಲ್ಲಿನವರಿಗೆ ಹೇಳುತ್ತೇವೆ. ಇದಕ್ಕಿಂತ ಒಳ್ಳೆಯ ಕಾರಣವೇನೂ ಇಲ್ಲ. ಪೂರ್ವ ರಾಷ್ಟ್ರಗಳ ಜನರು ನಮ್ಮ ಪಕ್ಷವಿದ್ದರೂ ಅವರಿಗೆಲ್ಲಾ ನಮ್ಮ ಮೇಲೆ ಪ್ರಬಲ ಸಂಶಯವಿದೆ. ಯುದ್ಧಾನಂತರ ಈ ಮುಖಂಡ ರಾಷ್ಟ್ರಗಳೆಲ್ಲಾ ಜಗತ್ತಿನ ಸ್ವಾತಂತ್ರ ಪ್ರಜಾಪ್ರಭುತ್ವಗಳಿಗಾಗಿ ವಾದಿಸುವವೇ ಎಂಬುದು ಅವರ ಸಂಶಯ. ಈ ಸಂಶಯವೇ ಅವರನ್ನು ಬಾಧಿಸುತ್ತದೆ. ನಾವು ಏಶಿಯ್ಯ, ಆಫ್ರಿಕ, ಪೂರ್ವ ಯೂರೋಪುಗಳ ಪ್ರಪಂಚದ ಮುಕ್ಕಾಲು ಪಾಲು ಜನರಿಗೆ ಸ್ವಾತಂತ್ರ್ಯ ವಾಗ್ದಾನಮಾಡಿಲ್ಲ. ಈಗಲೂ ಮಾಡುವುದಿಲ್ಲ. ಮುಂದೆ ಮಾಡಲೇ ಬೇಕು. ಇಲ್ಲವಾದರೆ ಯುದ್ಧ ಗೆಲಲಾರೆವು.'

NOTICE

In the Court of the Subordinate Judge of South Kanara

O. P. No. 3/1942.

Between:—
Dr. L. P. Fernandes Executor of the will of Rao Saheb J. J. Fernandes deceased—*Petitioner*
and
Mrs. Julia Mary Margeret Fernandes & others *Respondents*

To
The 13th Respondent Mrs. Letitia Brito Widow of the late Mr. Doris Brito residing in Udipi South Kanara.

Please take notice that the above O. P. filed by Petitioner praying that the delay in filing the review application may be executed and the Petition admitted will come on for hearing on 22-12-42 before the above Court at 11 a. m. and if you fail to appear on that day you will be declared exparte and the petition will be decided accordingly.

(By order of Court)

Mangalore, } Sd) P. D'Souza B.A., B.L.
10-12-1942. } Vakil for Petr.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಬೋರ್ಡು ಸಭೆ

ಕಳೆದ ಶನಿವಾರ, ಜಿಲ್ಲಾ ಬೋರ್ಡಿನ ಸಭೆ, ಬೋರ್ಡಿನ ವೈಸ್ ಪ್ರೆಸಿಡೆಂಟ್ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಬೋರ್ಡಿನ ಕಾರ್ಯಾಲಯದಲ್ಲಿ ಜರುಗಿತು ಬೋರ್ಡಿನ ಸದ್ಯದ ೩೪ ಮಂದಿ ಮೆಂಬರರಲ್ಲಿ ವೈಸ್ ಪ್ರೆಸಿಡೆಂಟರೂ ಕೂಡ ೧೩ ಮಂದಿ ಸಭೆಗೆ ಬಂದಿದ್ದರು. 'ಸಭಾ ಮಂದಿರಕ್ಕೆ ಸಾರ್ವಜನಿಕ ಪ್ರವೇಶವಿಲ್ಲ'ವೆಂಬ ಒಂದು ನೋಟೀಸು ಹಚ್ಚಿದ್ದು ಸಭಾ ಕಾರ್ಯಗಳು ಸುರಕ್ಷಿತವಾಗಿ ಸಾಗಿದುವು. ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರ ಅರಿಕೆಯ ಮೇರೆಗೆ ಅವರ ಮೆಂಬರಿಕೆಯನ್ನು ಊರ್ಜಿತಗೊಳಿಸಲಾಯಿತು. ಅಧ್ಯಕ್ಷರು ೧೯೪೩-೪೪ನೇ ಇಸ್ವಿಯ ತಿದ್ದಿದ ಅಂದಾಜುಪಟ್ಟಿಯು ಹಾಗೂ ೧೯೪೪-೪೫ರ ಬಜೆಟ್ ಎಸ್ಟಿಮೇಟುಗಳ ಮುಖ್ಯ ವಿಷಯಗಳ ಕುರಿತು ಪ್ರಸ್ತಾಪಿಸಿ ಬೋರ್ಡಿನ ಕಾರ್ಯಕಲಾಪಗಳ ವಿವರಣೆಯನ್ನು ಸಭೆಯ ಮುಂದಿರಿಸಿದರು. ಖಾ. ಬ. ಕವನ್ನಾಡರೇ ಮೊದಲಾದವರು ಬೋರ್ಡಿನ ಕಾರ್ಯಕಲಾಪಗಳಿಗಾಗಿ ಪ್ರಶಂಸೆ ಸಲ್ಲಿಸಿದರು ಬಳಿಕ ಬೋರ್ಡಿನ ಆದಾಯವನ್ನು ಹೆಚ್ಚಿಸುವ ವಿಷಯಗಳ ಕುರಿತಾಗಿ ಉಪಾಯಗಳನ್ನು ಸೂಚಿಸಿರೆಂಬ ಸರಕಾರದ ಮೆಮೊರೆಂಡಮ್ಮಿನ ಮೇರೆಗೆ ಅಧ್ಯಕ್ಷರು ಈ ಬೋರ್ಡಿನ ಆದಾಯವನ್ನು ಹೇಗೆ ಹೆಚ್ಚಿಸಬಹುದೆಂಬ ವಿಷಯದಲ್ಲಿ ತಕ್ಕ ಸಲಹೆಗಳುಳ್ಳ ವರದಿಯನ್ನು ಓದಿ ಅದನ್ನು ಸರಕಾರದ ಕಡೆಗೆ ಕಳುಹಿಸಲ್ಪಡುವುದೆಂದು ತಿಳಿಸಿದರು.

ಎಡಿಶನಲ್ ಲೋಕಲ್ ಪಂಚಾಯಿತ್ ಆಫೀಸರರನ್ನು ನೇಮಿಸಬೇಕೆಂಬ ವಿಚಾರದಲ್ಲಿ ಅದು ಅಗತ್ಯವಲ್ಲವೆಂದು ತೀರ್ಮಾನವಾಯಿತು ಉಡುಪಿ ಹೈಸ್ಕೂಲಿನ ವಿಚಾರದಲ್ಲಿ ಉಡುಪಿ ಮುನ್ಸಿಪಲ್ ಕೌನ್ಸಿಲಿನೊಡನೆ ಮಾತಾಡಿ ಇತ್ಯರ್ಥಿಸಬೇಕೆಂದು ನೇಮಿಸಲಾದ ಈ ಬೋರ್ಡಿನ ಒಂದು ಸಮಿತಿಯ ಮೆಂಬರರಲ್ಲಿ ಕೆಲವರು ರಾಜಿಕೊಟ್ಟ ಕಾರಣ, ಅವರ ಸ್ಥಾನಗಳಲ್ಲಿ ಶ್ರೀಗಳ ದ ಮಿರ್ ಹೈದರ್ ಸಾಹೇಬ್, ಕೆ ರಘುಚಂದ್ರ ಬಲ್ಲಾಳರನ್ನು ಆರಿಸಲಾಯಿತು. ಹೊಸದುರ್ಗದ ಹಾಯರ್ ಎಲಿಮೆಂಟರಿ ಶಾಲೆಗೊಂದು ನೂತನ ನೇಯುವ ತರಗತಿಯ ಉಪಯೋಗಕ್ಕಾಗಿರುವ ಒಂದು ಕಟ್ಟಡಕ್ಕಾಗಿ ರೂ ೧೩೫೦ನ್ನೂ, ಅದೇ ಶಾಲಾ ಕಟ್ಟಡದ ವಿಸ್ತರಣೆಗಾಗಿ ರೂ. ೧೬೦೦ನ್ನು ಮಂಜೂರು ಮಾಡಲಾಯಿತು ಉದ್ಯಾವರದ ಕಡವನ್ನು ೫ ವರ್ಷಗಳ ಅವಧಿಗೆ ವರ್ಷಕ್ಕೆ ರೂ ೩೬೦೦ರಂತೆ ತಮಗೆ ಗುತ್ತಿಗೆಗೆ ಕೊಡಿಸಬೇಕಾಗಿ ಆ ಕಡವಿನ ಗುತ್ತೆದಾರ ಶ್ರೀ ವೈ. ಮುಹಮ್ಮದ್ ಬ್ಯಾರಿಯವರು ಮಾಡಿಕೊಂಡ ಅರ್ಜಿಯನ್ನು ಸಮರ್ಥಿಸಿ ಅಧ್ಯಕ್ಷರು ಶಿಫಾರಸು ಮಾಡಿದರು ಶ್ರೀ ಮಹಾಲಿಂಗ ಶೆಟ್ಟರು ಅದನ್ನು ವಿರೋಧಿಸಿ ಒಂದೊಂದೇ ವರ್ಷಕ್ಕಾಗಿ ಅದನ್ನು ಗುತ್ತಿಗೆಗೆ ಕೊಡಬೇಕೆಂದರು ಓಟು ತೆಗೆಯಲಾಯಿತು ಒಬ್ಬ ಸದಸ್ಯರು ಎರಡು ಕಡೆಯೂ ಓಟು ಕೊಟ್ಟರೆಂಬ ಕಾರಣದಿಂದ ಅವರಿಗೆ ಈ ವಿಷಯವನ್ನು ವಿವರಿಸಿದ ಬಳಿಕ ತಿರುಗಿ ಓಟು ತೆಗೆಯಲಾಗಿ, ಸಮಾನ ಸಂಖ್ಯೆಯ ಅನುಕೂಲ ಪ್ರತಿಕೂಲ ಓಟುಗಳು ದೊರಕಿದುವು ಕೊನೆಗೆ ಅಧ್ಯಕ್ಷರು, ಕಾನೂನಿನ ಮೇರೆಗೆ, ತಾವೂ ಒಂದು 'ಕಾಸ್ಟಿಂಗ್ ಓಟು' ಕೊಡುವ ಪ್ರಸಂಗ ಒದಗಲು ಅವರು ಬೋರ್ಡಿನ ಈ ಕುರಿತಾದ ಹಿಂದಿನ ಒಂದು ನಿರ್ಣಯವನ್ನು ಮನ್ನಿಸಿ ಅರ್ಜಿಗೆ ವಿರೋಧವಾದ ಓಟು ಕೊಟ್ಟರು ಹಾಗೆ ಶ್ರೀ ಮಹಾಲಿಂಗ ಶೆಟ್ಟರ ಅಭಿಪ್ರಾಯವೇ ಬಹುಮತದಿಂದ ಸ್ವೀಕರಿಸಲ್ಪಟ್ಟಿತು.

ಮಧ್ಯಾಹ್ನದ ಬಳಿಕ ಸೇರಬೇಕಾಗಿದ್ದ ಬೋರ್ಡಿನ ಮೀಟಿಂಗಿಗೆ 'ಕೋರಂ' ಇಲ್ಲದ ಬಳಿಕ್ಕೆ ಉಳಿದ ಕೆಲ ಸಭಾಕಾರ್ಯಗಳು ಮುಂದೆ ಬಿದ್ದುವು

ಶಿಕ್ಷೆ ಮತ್ತು ಜುಲ್ಮಾನೆ

ಕಳೆದ ತಾ. ೩ರಲ್ಲಿ ಮೂಡಬಿದ್ರೆಯಲ್ಲಿ ಮೆರವಣಿಗೆಯನ್ನು ತೆಗೆದುದರ ತಪ್ಪಿಗೆ ಗುರಿಯಾದ ಶ್ರೀ ದೇವದಾಸ ಪ್ರಭುಗಳಿಗೆ ಒಂದು ವರ್ಷದ ಕಠಿನ ಸಜೆ, ಶ್ರೀ ಶಶಿಧರರಾಯರಿಗೆ ಆರು ತಿಂಗಳ ಕಠಿಣ ಶಿಕ್ಷೆ ಮತ್ತು ರೂಪಾಯಿ ೫೦೦ ಜುಲ್ಮಾನೆ ತಪ್ಪಿದ್ದಲ್ಲಿ ಆರು ತಿಂಗಳ ಅಧಿಕ ಶಿಕ್ಷೆಯು ಉಡ್ಪಿ ಮೊಕ್ಕಾಮಿನಲ್ಲಿ ಕುಂದಾಪುರ ಸಬ್ ಕಲೆಕ್ಟರರಿಂದ ವಿಧಿಸಲ್ಪಟ್ಟಿತು. ಇಬ್ಬರನ್ನೂ ಆಲಿಪುರಂ ಜೈಲಿಗೆ ಒಯ್ಯಲಾಗಿದೆ

ಖಾದಿ ಭಂಡಾರ

ಅಖಿಲಭಾರತ ಚರಕಾ ಸಂಘದ ಶಾಖೆಯಾದ ಸ್ಥಳೀಯ ಖಾದಿ ಭಂಡಾರವನ್ನು ಮುಚ್ಚಿದ್ದಾರೆ. ಖಾದಿ ದೊರಕದಿರುವುದೇ ಇದಕ್ಕೆ ಕಾರಣವಾಗಿ ತಿಳಿದುಬರುತ್ತದೆ

ದ ಕ ಜಿಲ್ಲಾ ಕ್ಷೌರಿಕರ ಸಂಘ

ಇದರ ದ್ವಿತೀಯ ವ ಮಹಾಸಭೆಯು ತಾ ೯ನೇ ಸಾಯಂಕಾಲ ಸಂಘದ ಅಧ್ಯಕ್ಷರಾದ ಶ್ರೀ ಕೆ ಕೃಷ್ಣಪ್ಪಯರ ಅಧ್ಯಕ್ಷತೆಯಲ್ಲಿ ಉಳ್ಳಾಲ ರಘುನಾಥಯ್ಯನವರ ಸ್ಮಾರಕ ಭವನದಲ್ಲಿ ಜರಗಿತು. ಅಧ್ಯಕ್ಷರು ಸಿದ್ಧಪಡಿಸಿದ ಘಟನೆಯನ್ನು ಸಭೆಯ ಮುಂದೆ ಓದಿ ವಿವರಿಸಲಾಯಿತು. ಮಾತ್ರವಲ್ಲದೆ ಘಟನೆಯು ಸರ್ವಾನುಮತದಿಂದ ಮಂಜೂರಾಯಿತು ಪಂಡಿತ ತಾರಾನಾಥಜಿಯವರ ಒಗ್ಗೆ ದುಃಖಸೂಚಕ ಠರಾವೊಂದು ಮತ್ತು ಮಿಡ್ನಾಪುರದ ಬಿರುಗಾಳಿಯ ಅನಾಹುತಕ್ಕೆ ತುತ್ತಾದವರಿಗೆ ಸಹಾಯ ನೀಡಬೇಕೆಂಬ ಠರಾವೊಂದು—ಹೀಗೆ ಎರಡು ಠರಾವುಗಳು ಸಭೆಯಲ್ಲಿ ಮಂಜೂರಾದುವು

ಕೈದು

ಟ್ರೊಪ್ಪಿಕಲ್ ಇನ್ಶೂರೆನ್ಸ್ ಕಂಪೆನಿಯ ನೌಕರರಾದ ಶ್ರೀ ಲೋಕಯ್ಯ ಶೆಟ್ರನ್ನು ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ ಪೋಲೀಸರು ಬಂಧಿಸಿರುವರು

ಜುಲ್ಮಾನೆ—ವಸೂಲು

ಪಾಂಗಾಳೆಯ ಶ್ರೀ ಪಿ. ಯಸ್ ಕೃಷ್ಣಭಟ್ಟರ ಜುಲ್ಮಾನೆ ೩೦೦ ರೂಪಾಯಿಗಳನ್ನು ಅವರ ಮನೆಯ ಅಂಗಳದಲ್ಲಿದ್ದ ಹಣ್ಣಡಿಕೆಯನ್ನು ತಾ. ೧೩ರಂದು ಫಿಟ್ಟಿ ಸಬ್ ಇನ್ಸ್‌ಪೆಕ್ಟರರು ಜಪ್ತಿಮಾಡಿ ವಸೂಲು ಮಾಡಿದರಾಗಿ ತಿಳಿದು ಬರುತ್ತದೆ

ಶ್ರೀ ರಾಮದಾಸ ನಾಯ್ಕರಿಗೆ ಶಿಕ್ಷೆ

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಂತೆ, ಆಕ್ಷೇಪಾರ್ಹಕರ ಪತ್ರಗಳಿದ್ದವೆಂಬ ಆರೋಪದಲ್ಲಿ ಬಂಧಿಸಲ್ಪಟ್ಟ, ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಮೆಂಬರರಾದ ಶ್ರೀ ಪಿ. ರಾಮದಾಸ ನಾಯ್ಕರಿಗೆ, ಕಳೆದ ಶುಕ್ರವಾರ ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ವಿಚಾರಣೆ ನಡೆಸಿ, ೧ ವರ್ಷದ ಕಠಿಣ ಶಿಕ್ಷೆ ವಿಧಿಸಿರುವರು ಇವರಿಗೆ 'ಸಿ' ಕ್ಲಾಸು ವಿಧಿಸಿ ಆಲಿಪುರಂ ಜೈಲಿಗೆ ಸಾಗಿಸಲಾಗಿದೆ.

ಮುನಿಸಿಪಾಲಿಟಿ

ತಾ. ೧೪ರಂದು ಬೆಳಗ್ಗೆ ಸ್ಥಳೀಯ ಮುನಿಸಿಪಾಲಿಟಿಯ ಕಾರ್ಯಾಲಯದಲ್ಲಿ ಸ್ಪೆಶಲ್ ಆಫೀಸರರು ಮುನಿಸಿಪಾಲಿಟಿಯ ಕೆಲವೊಂದು ವ್ಯವಹಾರವನ್ನು ತೀರ್ಮಾನಿಸಿದರು ಬಿಜೈ ಇಗರ್ಜಿ ಒಳಿಯ ಮೈದಾನು ಸ್ಥಳದಲ್ಲಿ ಯಾವತ್ತು ಜಾತಿಗಳವರ ಉಪಯೋಗಕ್ಕೂ ಬರುವಂಥ ಒಂದು ಆಟದ ಬಯಲನ್ನು ನಿರ್ಮಿಸಲು ಮಂಜೂರಾಯಿತು. ಸರಕಾರಿ ಟ್ರೇಡ್ ಸ್ಕೂಲ್ ಮಂಗಳೂರು ಇದರಲ್ಲಿನ ಆರು ಮಂದಿ ವಿದ್ಯಾರ್ಥಿಗಳು ೧೯೪೩-೪೪ನೇ ಇಸ್ವಿಗೆ ಸಂಬಂಧಿಸಿದ ವಿದ್ಯಾರ್ಥಿವೇತನದ ಮೊತ್ತವನ್ನು—ರೂ. ೧೮೩-೧೦-೦ನ್ನು ಸರಕಾರದ ಒಪ್ಪಿಗೆಯೊಡನೆ ಕೊಡಲು ನಿರ್ಧಾರವಾಯಿತು. 'ಈ ಮುನಿಸಿಪಾಲಿಟಿಯಲ್ಲಿ ಕಡ್ಡಾಯವಾದ ಎಲಿಮೆಂಟರಿ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆನ್ನುವ ಸೂಚನೆಯನ್ನು ಸದ್ಯಕ್ಕೆ ಬಿಟ್ಟು ಬಿಡಲಾಯಿತು. ಕದ್ರಿ ರಸ್ತೆ ಮತ್ತು ಬಿಜೈ ರಸ್ತೆಗಳ ಅಂಚುಗಳನ್ನು ಕಟ್ಟಿಸಲು ಅನುಕ್ರಮವಾಗಿ ರೂ. ೧೮೭೦ ಮತ್ತು ರೂ. ೯೩೫ ಮಂಜೂರಾಯಿತು — ಎ. ಆರ್. ಪಿ ನಿರ್ಬಂಧಗಳ ಮೇರೆಗೆ ಬೀದಿ ದೀಪಗಳಿಗೆಂದು ಆದ ಹೆಚ್ಚಿನ ಖರ್ಚುವೆಚ್ಚವನ್ನು ಈ ಸ್ಥಳೀಯ ಸಂಸ್ಥೆಯೇ ನಿರ್ವಹಿಸಬೇಕೆಂಬ ಸರ್ಕ್ಯುಲರನ್ನು ಒಪ್ಪಿಕೊಳ್ಳಲಾಯಿತು

ಹರಿಕಥೆ

ಇದೇ ತಾ. 16ರಿಂದ ಒಂದು ತಿಂಗಳ ಪರಿಯಂತರ ಮಂಗಳೂರು ಶ್ರೀ ಕರಂಗಲ್ಪಾಡಿ ಹನುಮಂತ ದೇವಸ್ಥಾನದಲ್ಲಿ, ಶ್ರೀ ಮು ಶ ಸಾಮಗ ಹರಿದಾಸರು 'ಶ್ರೀ ಮುದ್ರಾಮಾಯಣ' ಕಥೆಯನ್ನು ಹರಿಕೀರ್ತನೆ ಮಾಡುವರು.

ವಾರ್ಷಿಕೋತ್ಸವ

ಮಂಗಳೂರು ಸೆಂಟರಿನ ಮುಸ್ಲಿಂ ಟೀಚರ್ಸ್ ಎಸೋಸಿಯೇಶನಿನ ೧೯ನೇ ವಾರ್ಷಿಕೋತ್ಸವವು ಸ್ಥಳೀಕ ಮುನ್ಸಿಪಲ್ ಮಹ್ಮಡನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾರೀಕು ೫ರಂದು ಶ್ರೀ. ಏಕಂಬರರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು ಕಾರ್ಯದರ್ಶಿ ಜನಾಬ್ ಕಾಸಿಂ ಸಾಹೇಬರು ಸಂಘದ ವರದಿಯನ್ನು ಓದಿದ ತರುವಾಯ ಮ. ಮು ಹಾ. ಎ ಸ್ಕೂಲ ಇಸ್ಕಾಲ ಕಬ್ ಪೇಕಿನ ಚಟುವಟಿಕೆಗಳನ್ನೂ, ಬೋಳಾರ ಹಿಂದುಸ್ಥಾನಿ ಶಾಲೆಯ ಮಕ್ಕಳಿಂದ ಸಂಗೀತ ನಟನೆಗಳನ್ನೂ ತೋರ್ಪಡಿಸಿದ ತರುವಾಯ, ಶ್ರೀ. ಮುಕುಂದರಾವ್ ಶ್ರೀ ಬಿ ಅಪ್ಪಯ್ಯ ಜನಾಬ್ ಮೊಹಿದಿನ್‌ಬಿನ್ ಅಹಮದ್ ಸಾಹೇಬ ಇವರು ಮತ್ತು ಇನ್ನಿತರರೂ ಭಾಷಣವಿತ್ತರು ತರುವಾಯ ಅಧ್ಯಕ್ಷ ಭಾಷಣವಾಗಿ ಸಂಘದ ಅಧ್ಯಕ್ಷರಿಂದ ವಂದನೋಕ್ತಿಗಳನ್ನು ಅರ್ಪಿಸಿದ ತರುವಾಯ ಸಭೆಯು ಮುಕ್ತಾಯವಾಯಿತು

ಆಲಿಪುರಂನಿಂದ ಬಿಡುಗಡೆ

ಉಡುಪಿಯಲ್ಲಿ ಕೋರ್ಟು ಪಿಕೆಟಿಂಗ್ ಮಾಡಿ ಸಪ್ಟಂಬರ ೯ಕ್ಕೆ ಮೂರು ತಿಂಗಳ ಶಿಕ್ಷೆಗೊಳಗಾದ ಶ್ರೀ ಪಿ ಮಾಧವ ಶೆಣೈಯವರು ಇದೇ ತಾ. ೮ರಂದು ಆಲಿಪುರಂ ಜೈಲಿನಿಂದ ಬಿಡುಗಡೆಯಾಗಿ ಬಂದಿರುವರು ಜೈಲಿನಲ್ಲಿ ಆಹಾರಾದಿಗಳು ಸಾಮಾನ್ಯ ರೀತಿಯಿಂದಿರುವವೆಂದೂ, ನಮ್ಮ ಜಿಲ್ಲೆಯ ರಾಜಕೀಯ ಕೈದಿಗಳು ಆರೋಗ್ಯ ಕಾಪಾಡಿಕೊಂಡಿರುವರೆಂದೂ, ಅವರ ಭೇಟಿ ಪತ್ರವ್ಯವಹಾರಗಳಿಗೆ ಮಾತ್ರ ಬೇಕಾದ ಸವಲತ್ತು ದೊರಕುವುದಿಲ್ಲವೆಂದೂ, ರಾಜಕೀಯ ಕೈದಿಗಳ ಸಂಬಂಧಿಕರು ಭೇಟಿ ಮೊದಲಾದವುಗಳಿಗೆ ವೆಚ್ಚ ಮಾಡಿ ಅಲ್ಲಿವರೆಗೆ ಹೋಗುವುದು ವ್ಯರ್ಥವಾಗುತ್ತದೆಂದೂ ಅವರು ತಿಳಿಸುತ್ತಾರೆ

ಕಾರ್ಕಳ

ಬೇಸಾಯ ಸಭೆ

ಹೆಬ್ರಿಯ ಗ್ರಾಮೋದ್ಧಾರ ಸಮಿತಿಯ ಆಶ್ರಯದಲ್ಲಿ ಬೇಸಾಯಗಾರರು ಮತ್ತು ಇತರರ ಒಂದು ಸಾರ್ವಜನಿಕ ಸಭೆ ಕೂಡಿ ಡಿಸ್ಟ್ರಿಕ್ಟ್ ಎಗ್ರಿಕಲ್ಚರಲ್ ಆಫೀಸರರು ಮತ್ತು ಕಾರ್ಕಳ ಎಗ್ರಿಕಲ್ಚರಲ್ ಡಿಮೊನ್ಸ್ಟ್ರೇಟರರು ವೆಟ್ ಲೆಂಡ್ ವೀಡರ್ ಎಂಬ ಒಂದು ಆಧುನಿಕ ಹತ್ಯಾರಿನ ಉಪಯೋಗ ಕ್ರಮವನ್ನು ವಿವರಿಸಿ ಭಾಷಣಗಳನ್ನು ಕೊಟ್ಟರು

ಕೈದು ದಂಡನೆ

ಚಿಮಿಣಿ ಎಣ್ಣೆ ಮಾರಾಟ ಸಂಬಂಧವಾದ ಕಾನೂನು ಮುರಿದು ಕೈದಾದ ಶ್ರೀ ಪುರುಷೋತ್ತಮ ಪ್ರಭುಗಳಿಗೆ ಮತ್ತು ಶ್ರೀ ಯಂ ಸದಾನಂದ ಕಾಮತರಿಗೆ ಮುನ್ನೂರು ಮುನ್ನೂರು ರೂಪಾಯಿಗಳ ದಂಡನೆಯಾಗಿದೆ

ಅಧ್ಯಕ್ಷ ಚುನಾವಣೆ

ಕಾರ್ಕಳ ಪಂಚಾಯಿತ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಜನಾಬ್ ಯಚ್ ಯಸ್ ಹುಸೈನರು ರಾಜಿನಾಮೆ ಕೊಟ್ಟುದರಿಂದ ಹೊಸ ಚುನಾವಣೆಯಾಗಿ ಶ್ರೀ. ವಕೀಲ ಡಿ ವಿ. ಭಟ್ಟರು ಸರ್ವಾನುಮತಿಯಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಕೈದು-ಶಿಕ್ಷೆ

ಸಭೆ ಮೆರವಣಿಗೆಗೆ ಸಂಬಂಧವಾದ ಸರಕಾರದ ನಿರ್ಬಂಧಗಳನ್ನು ಮುರಿದು ತಾ. ೯ರ ದಿನ ಸಭೆ ಭಾಷಣಗಳನ್ನು ಕೊಡಲಿಕ್ಕೆ ಪ್ರಯತ್ನಿಸಿದುದಕ್ಕಾಗಿ ಅಂದು ಶ್ರೀ. ಮುದ್ರಾಡಿ ಕೃಷ್ಣಯ್ಯ ಶೆಟ್ಟಿ ಮತ್ತು ಇನ್ನಿಬ್ಬರನ್ನು ಪೋಲೀಸರು ದಸ್ತಗಿರಿ ಮಾಡಿದ್ದರು. ಪರಂತು ಮರುದಿನ ಅವರು ಬಿಡಲ್ಪಟ್ಟರು. ಕಳೆದ ತಿಂಗಳ ತಾ. ೨೫ರ ದಿನ ಕೈದಾದ ಶ್ರೀ. ಕೆ. ಶ್ರೀನಿವಾಸ ಕಾಮತರಿಗೆ ಆರು ತಿಂಗಳ ಶಿಕ್ಷೆಯಾಯಿತೆಂದು ಕೇಳಬರುತ್ತದೆ

ಸುಬ್ರಹ್ಮಣ್ಯ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿದಿಯಲ್ಲಿ ಹೊಸಪೇಟೆಯ ಶ್ರೀ ಸುಬ್ರಹ್ಮಣ್ಯ ಚೆಟ್ಟಿಯಾರರು ಹೇರಳ ಧನವನ್ನು ವ್ಯಯಿಸಿ ಕಟ್ಟಿಸಿ ಕೊಟ್ಟ ಛತ್ರದ ಕಟ್ಟಡದ ಉದ್ಘಾಟನಾ ಸಮಾರಂಭವು ಕಳೆದ ತಾ ೯ನೇ ಪೂರ್ವಾಹ್ನ ರಾ. ಬ. ಬಿ ಶ್ರೀಪತಿರಾಯರ ಹಸ್ತದಿಂದ ನೆರವೇರಿತು

ದೇವಳದ ಆಡಳಿತೆ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ ಆರ್ ಆಚಾರ್ ಅವರು ಅಧ್ಯಕ್ಷರ ಮತ್ತು ಶ್ರೀಮಾನ್ ಸುಬ್ರಹ್ಮಣ್ಯ ಚೆಟ್ಟಿಯಾರರ ಪರಿಚಯವನ್ನೂ ಸಭಿಕರಿಗೆ ಮಾಡಿಕೊಟ್ಟರು ಪುತ್ತೂರಿನ ತಹಶಿಲ್ದಾರರಾದ ಶ್ರೀ ಬಿ ಗಣೇಶ ಅವರು ಭಾಷಣ ಮಾಡುತ್ತಾ ದೇವಳದ ಆಡಳಿತೆ ಸಮಿತಿಯವರ ಕಾರ್ಯದಕ್ಷತೆಯನ್ನು ಪ್ರಶಂಸಿಸಿದರು ಅಧ್ಯಕ್ಷರು ಕಟ್ಟಡದ ಉದ್ಘಾಟನೆಯನ್ನು ಮಾಡುತ್ತಾ ಶ್ರೀ ಸುಬ್ರಹ್ಮಣ್ಯ ಚೆಟ್ಟಿಯಾರರು ಇಂತಹ ಇನ್ನೆಷ್ಟೋ ಕಟ್ಟಡಗಳನ್ನು ಕಟ್ಟಿಸಿ ಧರ್ಮವತ್ತೇವೆ ಮಾಡಲೆಂದು ಹಾರೈಸಿದರು ಅನಂತರ ಶ್ರೀ. ಕ ವ್ಯಾಸರಾಯರು ಧನ್ಯವಾದ ಗಳನ್ನರ್ಪಿಸಿದರು

ದಿವಂಗತ ಶ್ರೀ ಪಿ ಎ ಪೈ ಅವರು

ಕಳೆದ ತಾ ೧೧ರಲ್ಲು ಉಡುಪಿಯ ಶ್ರೀ ಪಿ ಎ ಪೈಗಳವರು ದಿವಂಗತರಾದ ವಿಷಾದಕರ ವಾರ್ತೆ ಬಂದಿದೆ ಶ್ರೀಯುತರು ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಓರ್ವ ಸದ್ಗೃಹಸ್ಥರು.

ದಿವಂಗತರು ವೈಗಾರಿಕೆ ಸಾಹಿತ್ಯಾಭಿವೃದ್ಧಿ ದೇಶಸೇವೆ ಇತ್ಯಾದಿ ಸಾರ್ವಜನಿಕ ಕಾರ್ಯಗಳಲ್ಲಿ ಅನವರತವೂ ದುಡಿದು ತಮ್ಮ ಜೀವನದ ಆದರ್ಶದಿಂದ ಹಲವರಿಗೆ ಸ್ಫೂರ್ತಿಯಾಗಿದ್ದರು ಮೆ ಪಿ ಎ ಪೈ ಬ್ರದರ್ಸ್ ಅವರ ಹಾಗೂ ಅವರ ಕುಟುಂಬದ ಇತರ ಸದಸ್ಯರ ಈ ಅಪಾರ ದುಃಖದಲ್ಲಿ ಸಹಾನುಭೂತಿ ಸಂತಾಪವನ್ನು ಸೂಚಿಸುವೆವು

ಸಾದರ-ಸ್ವೀಕಾರ

ಗೌಡಸಾರಸ್ವತ ಬ್ರಾಹ್ಮಣ ಪರಿಷತ್:

ಇದರ 31-10-42ಕ್ಕೆ ಅಂತ್ಯವಾಗುವ ಮೂರನೆಯ ವರ್ಷದ ವರದಿ

ಹಿಂದೂದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ನೆಲಸಿರುವ ಗೌಡಸಾರಸ್ವತ ಬ್ರಾಹ್ಮಣರ ಪ್ರಾತಿನಿಧಿತ್ವವನ್ನು ಸ್ಥಾಪಿಸಿಕೊಂಡು ಈ ಪರಿಷತ್ತು ಕಳೆದ ಎರಡು ವರ್ಷಗಳಲ್ಲಿ ಹೆಚ್ಚಾಗಿ ಸಂಘಟನೆಯ ಕಾರ್ಯವನ್ನೇ ಕೈಕೊಂಡು ಈ ವರ್ಷದಿಂದ ಕಾರ್ಯಕ್ಷೇತ್ರಕ್ಕಿಳಿದು ಕೆಲಸ ಮಾಡತೊಡಗಿದೆ ಈ ಪರಿಷತ್ತಿನವರು ಅನೇಕ ವಿಧದ ಸಾಮಾಜಿಕ, ಧಾರ್ಮಿಕ ನೈತಿಕ ಕಾರ್ಯಗಳನ್ನು ಕೈಕೊಂಡು ನಡೆಸಲು ಪ್ರಯತ್ನಿಸುವುದಕ್ಕೆ ಜಾತೀಯ ಬಾಂಧವರ ಬೆಂಬಲ ಅವಶ್ಯವಾಗಿದೆ ಈ ಸಂಘದ ಮೂಲಕ ಅತ್ತಾವರದಲ್ಲಿ ಒಂದು ಬಾಲಕಾಶ್ರಮವನ್ನೂ, ಕಂಕನಾಡಿಯಲ್ಲಿ ಒಂದು ಬಾಲಿಕಾಶ್ರಮವನ್ನೂ ಇನ್ನೊಂದು ಅನಾಥಾಶ್ರಮವನ್ನೂ ನಡೆಸುತ್ತಿರುವುದು ಅತ್ಯಂತ ಪ್ರಶಂಸನೀಯವೂ ಪ್ರೋತ್ಸಾಹನೀಯವೂ ಆದ ಕಾರ್ಯವಾಗಿದೆ ಇದು ಮಾತ್ರವಲ್ಲದೆ ಬಾಲಕಬಾಲಕಿಯರಿಗೆ ಕೈಗಾರಿಕೆಯ ಕೇಂದ್ರವನ್ನು ಸ್ಥಾಪಿಸಿ ಔದ್ಯೋಗಿಕ ಶಿಕ್ಷಣವನ್ನು ಕಲ್ಪಿಸುತ್ತಿರುವುದೂ ಎತ್ತಿ ಹೇಳತಕ್ಕ ವಿಷಯ ವ್ಯಾಪಾರಾದಿ ವಿಷಯಗಳಲ್ಲಿ ಮುಂದುವರಿದ ಹಾಗೂ ಐಶ್ವರ್ಯವಂತರಾದ ಮಹನೀಯರಿಂದ ಕೂಡಿದ ಗೌಡಸಾರಸ್ವತ ಸಮಾಜದವರು ಈ ಧಾರ್ಮಿಕ, ಸಾಮಾಜಿಕ, ನೈತಿಕ ಕಾರ್ಯಗಳನ್ನು ಕೈಕೊಳ್ಳುವ ಸಂಸ್ಥೆಗೆ ಉದಾರ ಹಸ್ತದಿಂದ ನೆರವಾಗುವುದು ಅವಶ್ಯ.

ಸಿನೆಮಾ ಸುದ್ದಿ

ಬಾಲಾಜಿಯಲ್ಲಿ 'ಬಸಂತ್'

'ಬಂಧನ್' 'ಝೂಲಾ' ಖ್ಯಾತಿಯ ಬೊಂಬೇ ಟಾಕೀಸಿನ ನೃತ್ಯ ಸಂಗೀತಮಯವಾದ ನೂತನ ಚಿತ್ರ 'ಬಸಂತ್' ಸ್ಥಳೀಯ ಬಾಲಾಜಿ ಟಾಕೀಸಿನಲ್ಲೀಗ ಪ್ರದರ್ಶಿತವಾಗುತ್ತಿದೆ. ದೀನದಾಸಿಯಾಗಿದ್ದ ತರುಣಿಯೋರ್ವಳು ಅದೃಷ್ಟದ ಆಟದಿಂದ ನಟಿ ಸಾಮ್ರಾಜ್ಞಿಯೂ, ಆದರ್ಶಪತ್ನಿಯೂ, ಉತ್ತಮ ಮಾತೆಯೂ ಆಗುವ ರಮ್ಯ ರೋಮಾಂಚಕ ಕಥೆ ಇದರದು. ಮುಮ್ತಾಜ್ ಅಲಿಯ ನೃತ್ಯ ನಿದರ್ಶನವೆಂದರೆ ಕಲಾಪ್ರೇಮಿ ಕಣ್ಣಿಗೆ ಅದೊಂದು ಹಬ್ಬ. ಉಲ್ಲಾಸ, ಮುಮ್ತಾಜ್ ಶಾಂತಿಯರು ಇದರಲ್ಲಿ ಪ್ರಣಯಿಗಳ ಪಾತ್ರ ವಹಿಸುತ್ತಾರೆ. ಅಶೋಕ ಕುಮಾರ ಲೀಲಾರನ್ನು ಮೀರಿಸುವ ಜತೆ ಇವರದು. ರಂಗಭೂಮಿಯದೇ ಕಥೆ, ನೃತ್ಯ ಸಂಗೀತಗಳ ಹಬ್ಬ; ಇವುಗಳಿಂದೆಲ್ಲಾ ಇದು 'ಬಂಧನ್' 'ಝೂಲಾ'ಗಳಷ್ಟೇ ಜನಪ್ರಿಯವಾಗುವುದೆಂದು ಹಾರೈಸಲಾಗಿದೆ.

ಖುರ್ಶಿದ್ ಮತ್ತು ಸೈಗಲ್

ಸೇರಿದರೆಂದರೆ ಸಂಗೀತದ ಸಾಗರವೇ ಮೇರೆ ತಪ್ಪಿದಂತೆ! ಹೌದು ಅವರು ಸೇರಿದ್ದಾರೆ ರಣಜಿತ್ ಚಿತ್ರ 'ಭಕ್ತ ಸೂರದಾಸ'ದಲ್ಲಿ! ಸಂಗೀತಪ್ರಿಯರಿಗದೊಂದು ಆನಂದ-ಕೋಲಾಹಲ!

ರಮ್ಯ ರಮೋಲ್

'ಖಮೋಶಿ' ಚಿತ್ರದಲ್ಲಿ ಅಭಿನಯಿಸುವವಳು. ಇದು ಸುಪ್ರೀಮ್ ಕೃತಿ. ಖಜಾಂಚಿ ಬಳಿಕ ರಮೋಲಾ ಅತ್ಯಂತ ರಮ್ಯಳಾಗಿದ್ದಾಳೆ!

ಗಂಡು ವೇಷದಲ್ಲಿ

ನಳಿನೀ ಜಯವಂತಳನ್ನು ನೋಡಬೇಕು. 'ಅದಾ ಬರ್ಜ್' ಚಿತ್ರದಲ್ಲಿ. ಇದು ಅಮರ ಪ್ರೊಡಕ್ಷನ್ನವರ ಸಾಮಾಜಿಕ ಚಿತ್ರ. ಯಾರಾದರೂ ಈ ರೂಪ ಹೆಂಗುಸಿನ ರೂಪವೆಂದು ಭಾವಿಸಲಾರರು! ಸ್ವಾಮಿ ವಿವೇಕಾನಂದರಂತೆ ಉಡಿಗೆ, ಅಂತೆಯೇ ಉಜ್ವಲ ನೇತ್ರಪಂಕ್ತಿ! ಸುಬ್ಬಲಕ್ಷ್ಮಿಯ ನಾರದ ಎಲ್ಲಿ? ಜಯವಂತಳ ಈ ರೂಪವೆಲ್ಲಿ?

ಶಾಂತಾರಾಮರ ಸಂಸ್ಥೆಯಲ್ಲಿ

ಪ್ರಥಮ ಚಿತ್ರ 'ಶಕುಂತಲಾ'. ಇದರ ನಾಯಕಿಯಾರೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಪುನಃ ಶಾಂತಾ ಆಪ್ಟೆಯನ್ನೇ ಆರಿಸಿರುವರೆಂದು ವದಂತಿಯಿದೆ! ಅವರ ಇನ್ನೆರಡು ಚಿತ್ರಗಳು 'ನಗದ್ ನಾರಾಯಣ್' ಮತ್ತು 'ಸಜ್ನಾ' ಎಂಬಿವುಗಳು. ಕ್ರಮವಾಗಿ ಪೆಂಡಾರ್ಕರ್ ಮತ್ತು ಮೆಹಬೂಬ್ ಇದರ ನಿರ್ದೇಶಕರು.

ಸ್ನೇಹಪ್ರಭಾ

ಪ್ರಧಾನಳು ಕಿಶೋರ ಸಾಹುವನ್ನು ಬಿಟ್ಟು ಹೋದಳಷ್ಟೆ? ಈಗ ಆಕೆ ಸಾಹು ಮೋದಕನ ಜತೆ ಸೇರಿದ್ದಾಳೆ ನವಯುಗ ಚಿತ್ರದ 'ಪಹಿಲಿ ಮಂಗ್ಲಾಗೌರ್' ಚಿತ್ರದಲ್ಲಿ! ಸ್ನೇಹಪ್ರಭಾಳ ಕುರಿತು ಪ್ರಸಿದ್ಧ ಸಿನೆಮಾ-ಲೇಖಕ ಅಹಮದ್ ಅಬ್ಬಾಸನಿಗೆ ಬಹಳ ಆದರವಿದೆಯೆಂದು ಒಂದು ಸುದ್ದಿ.

ಕುಣಿಯುವ ಕೌಸಲ್ಯೆ

ಕೀರ್ತಿ ಪಿಕ್ಚರಿನ 'ಭರತ್' ಚಿತ್ರದಲ್ಲಿ ಅಖ್ತರ್ ಹಸೇನನ ಸಂಗಡ ನಟಿಸುತ್ತಾಳೆ!

೧೯೪೩ರಲ್ಲಿ!

ರಣಜಿತ್‌ನವರು 'ಭಕ್ತ ಸೂರದಾಸ್' 'ತಾನ್‌ಸೇನ್' 'ವಿಷಕನ್ಯಾ' 'ಕಾಳಿದಾಸ್' 'ಶಂಕರ್ ಪಾರ್ವತಿ' 'ರಾಖಿ' 'ಶ್ರವಣ ಕುಮಾರ್' 'ಜಯದೇವ್' ಎಂಬೀ ಎಂಟು ಚಿತ್ರಗಳನ್ನು ತಯಾರಿಸಲು ನಿಶ್ಚಯಿಸಿದ್ದಾರೆ!

'ಶಾರದಾ'

ಇದು ಕರ್ದಾರ್ ಪ್ರೊಡಕ್ಷನ್ ಕೃತಿ. ನಿರ್ಮಲ ಕುಮಾರಿ ಇದರಲ್ಲಿ ನಟಿನಾಯಕಿ. 'ಬಿಂಧ್ಯಾ' 'ನಮಸ್ತೆ' ಎಂಬಿವು ಅವರ ಮುಂದಿನ ಚಿತ್ರಗಳು.

'ದುಃಖ-ಸುಖ'

ಇದು ರಣಜಿತನವರ ಸಾಮಾಜಿಕ ಚಿತ್ರ. ವಸಂತಿ ಮತ್ತು ಸಿತಾರಾ ಇವರು ಅಭಿನಯಿಸಿ ಇದರಲ್ಲಿ ತಮ್ಮ ದುಃಖ-ಸುಖ ಪರಸ್ಪರ ಹೇಳಿಕೊಳ್ಳುತಾರೆ!

ಅವರು ಕೆಲವೇ ಜನ ನಾವು ಹಲವು ಜನ

ಇಷ್ಟು ಸ್ವಲ್ಪ ಜನಸೇರಿ, ಇಷ್ಟು ಹೆಚ್ಚು ಜನರಿಗೆ, ಇಂತಹ ಅಪಾಯವನ್ನುಂಟುಮಾಡಿದ್ದು ಭಾರತದಲ್ಲಿ ಇದೇ ಮೊದಲು. ಜನಾಭಿಪ್ರಾಯವು ಈ ಪಿಡುಗಿನ ವಿರುದ್ಧವಾಗಿ ತಯಾರಾದರೆ, ಅಮೇರಿಕೆಯಲ್ಲಿಯ ಡಕಾಯಿತರ ಗುಂಪುಗಳಂತೆ ಇಲ್ಲಿಯ ಪುಂಡರ ಆಳಿಕೆಯನ್ನೂ ಅಲ್ಪಾವಧಿಯಲ್ಲಿ ನಿರ್ಮೂಲಗೊಳಿಸಬಹುದು.

ರೈಲು-ರಸ್ತೆ-ಅಂಚೆ-ತಂತಿಗಳು ಕಟ್ಟಾಗುವುದರಿಂದ

ನಿಮಗೂ ನಿಮ್ಮ ಆಪ್ತೇಷ್ಟರಿಗೂ ಸಂಬಂಧ ತಪ್ಪುವುದು. ನೀವು ಪಟ್ಟಣವಾಸಿಗಳಾಗಿದ್ದರೆ, ಆಹಾರ ಕೊರತೆಯೂ ತುಟ್ಟಿಯ ಧಾರಣೆಗಳೂ ನಿಮ್ಮನ್ನು ಕಾಡುವವು. ಹಳ್ಳಿಗರು ಬೆಳೆಯನ್ನು ಪೇಟೆಗೆ ಕೊಂಡೊಯ್ಯಲಾರರು; ಆದ್ದರಿಂದ ಈ ದಸರೆ ದೀವಾಳಿಗಳಿಗೆ ಹಣವಿಲ್ಲದಾಗುವುದು.

ಈ ಹಿಂಸಾಸತ್ರದಲ್ಲಿ

ನಿಮ್ಮ ಪ್ರಿಯಜನರು ಅಕಾರಣವಾಗಿ ಸಾವು ನೋವುಗಳಿಗೀಡಾಗಬಹುದು. ಪೋಸ್ಟಿನಲ್ಲಿಯ ಹಣ, ಪಿಂಚಣಿಯ ಹಣ, ಭೂಮಿಯ ಸೊತ್ತು-ಇವೆಲ್ಲವುಗಳ ದಾಖಲೆಗಳು ನಾಶವಾಗಬಹುದು. ನಮ್ಮ ಶಾಲೆ, ಕಾಲೇಜಿಗಳ ಮೇಲೆ ದಾಳಿಯಾಗಿದೆ; ಖಾಸಗಿ ಡಾಕ್ಟರರು ಕೂಡ ದೋಚಲ್ಪಟ್ಟಿದ್ದಾರೆ.

ಪುಂಡರರಾಜ್ಯವೊ? ಸರ್ಕಾರವೊ?

ಯಾವುದು ಬೇಕೆಂಬುದನ್ನು ಕೂಡಲೆ ನಿರ್ಣಯಿಸುವ ಹೊತ್ತು ಬಂದಿದೆ. ಪುಂಡಾಟಿಕೆಯನ್ನು ಗಡಿಪಾಟಿಸಿದ ಹೊರತು, ನಮ್ಮ ನಾಯಕರು ಆಡಳಿತದ ಸೂತ್ರಗಳು ವಹಿಸಲಾರರು. ಇದು ಮುಖ್ಯವಾಗಿ ನಮ್ಮ ಕೆಲಸ. ಬರಿ ಸರ್ಕಾರದವರ ಬಲಪ್ರಯೋಗದಿಂದ ಈ ಹಾವಳಿ ಬೇಗನೆ ಅಡಗದು. ಈ ಕೊಲೆ ಸುಲಿಗೆ ಕೊಳ್ಳಿಗಳಿಂದ ನಮಗೇ ಹೆಚ್ಚಾಗಿ ಅಪಾಯವಾಗಿದೆ; ಸರ್ಕಾರಕ್ಕಾದ ನಷ್ಟ ಅತ್ಯಲ್ಪ.

ಪುಂಡರನ್ನು ಪ್ರತಿಭಟಿಸಿರಿ!

ಸ್ಥಳೀಯ ಸಮಿತಿಗಳನ್ನು ನಿರ್ಮಿಸಿರಿ: ಸ್ವಯಂಸೇವಕರ ಗಸ್ತಿ ದಲಗಳನ್ನು ಸಜ್ಜುಗೊಳಿಸಿರಿ

CPU 59 Kn

ಕಾರ್ಕಳ
ಜಾನುವಾರು ಜಾತ್ರೆ

ದಕ್ಷಿಣಕನ್ನಡ ಜಿಲ್ಲಾ ಕಾರ್ಕಳ ತಾಲೂಕಿನ ಸೋಮೇಶ್ವರದ ಬಳಿ ಸೀತಾನದಿ ಎಂಬಲ್ಲಿ ಕುಂದಾಪುರ ರೆವಿನ್ಯೂ ಡಿವಿಜನಿನ ರೈತರಿಗೆ ಅನುಕೂಲವಾಗುವಂತೆ ಜಾನುವಾರು ಜಾತ್ರೆಯು ವೈಕುಂಠ ಏಕಾದಶಿ ದಿನ ಪ್ರಾರಂಭವಾಗಿ ೧೨ ದಿನಗಳ ತನಕ ಜರಗುವುದು. ಈ ವರ್ಷ ಅದು ಇದೇ ಡಿಸೆಂಬರ ೧೮ನೇ ಶುಕ್ರವಾರ ಬೆಳಗ್ಗೆ ೮ ಘಂಟೆಗೆ ಪ್ರಾರಂಭವಾಗುವುದು. ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನು ಮಾಡಲಾಗುವುದು. ಜಾತ್ರೆಯ ಸ್ಥಳವು ಸೀತಾನದ ಎಂಬ ಪುಣ್ಯ ನದಿಯಿಂದ ೩ ಫರ್ಲಾಂಗಿನೊಳಗಿದ್ದು ಹತ್ತಿರವಿರುವ ರಿಜರ್ವ ಕಾಡಿನಲ್ಲಿ ತುಂಬಾ ಹುಲ್ಲು ದೊರಕುತದೆ. ಜಾತ್ರೆಗೆ ಬರತಕ್ಕ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿಶ್ಚಯಿಸಲಾಗುವ ಜಾನುವಾರುಗಳಿಗೆ ಇನಾಮುಗಳನ್ನು ಕೊಡುವ ಯೋಜನೆ ಇರುತ್ತದೆ, ಎಂದು ಜನಾಬ್ ಕೆ. ಅಬ್ದುಲ್ ಗಫೂರು, ರೆವಿನ್ಯು ಡಿವಿಜನಲ್ ಆಫೀಸರ್, ಕುಂದಾಪುರ ಇವರು ತಿಳಿಸುತ್ತಾರೆ.

ಉಪಾಧ್ಯಾಯರ ಕೂಟ

ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ತಿಂಗಳ ಸಭೆ ಶ್ರೀ. ಯಂ. ಸರ್ವೋತ್ತಮ ಕಾಮತರ ಅಧ್ಯಕ್ಷತೆಯಲ್ಲಿ ಕೂಡಿ ಶ್ರೀ. ಯಂ. ಅನಂತಭಟ್ಟರ ವ್ಯಾಕರಣ ವಿಷಯಕವಾದ ಭಾಷಣ, ಶ್ರೀ. ಭಾಸ್ಕರರಾಯರ ಶಿಶುಗೀತೆಗಳ ವಾಚನ, ಕುಮಾರಿಯರಾದ ಗುಲಾಬಿಯವರ ಮಾದರಿ ಪಾಠ ಮತ್ತು ಮೇರಿ ಸೋಜಾರವರ ತಾಳಬದ್ಧ ಚಟುವಟಿಕೆಗಳು ಆದುವು.

ಪುಣ್ಯತಿಥಿ ಆಚರಣೆ

ಶ್ರೀಮತ್ ಭುವನೇಂದ್ರ ತೀರ್ಥ ಸ್ವಾಮಿಯವರ ಪುಣ್ಯತಿಥಿಯ ಆಚರಣೆಯು ಸ್ಥಳೀಯ ಸಂಸ್ಕೃತ ಕಾಲೇಜು ಮತ್ತು ಶ್ರೀ. ವೆಂಕಟ್ರಮಣ ದೇವಾಲಯದಲ್ಲಿ ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಯವರ ಅಧ್ಯಕ್ಷತೆ ಮತ್ತು ಉಪಸ್ಥಿತಿಯಲ್ಲಿ ಆಚರಿಸಲ್ಪಟ್ಟಿತು.

ಗೀತಾ ಜಯಂತಿ

ಇದೇ ತಾ. ೧೯ರ ದಿನ ನಡೆಯಲಿರುವ ಗೀತಾಜಯಂತಿ ಸಂಬಂಧವಾದ ಗೀತಾ ಕಂಠಪಾಠ ಸ್ಪರ್ಧೆಗಳು ಅದರ ಹಿಂದಿನ ದಿನ ಕಾರ್ಕಳ ಮೂಡಬಿದ್ರೆ ಮತ್ತು ಬಂಟವಾಳಗಳಲ್ಲಿ ಶ್ರೀಗಳಾದ ವಕೀಲ ಕೆ. ವೆಂಕಟೇಶ ಪೈ, ಬಿ. ಸುಬ್ಬರಾವ್ ಮತ್ತು ಬಾಳಿಗರ ನಿರೀಕ್ಷಣೆಯಲ್ಲಿ ನಡೆದು ಪುರಸ್ಕಾರಗಳು ಕೊಡಲ್ಪಡುವವು.

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ: ಶ್ರೀ ಸ್ವಾಮಿ ಪ್ರಣವೇಶಾನಂದರು.

ಶಶಧರ ಪಂಡಿತರು ಶ್ರೀ ಪರಮಹಂಸರನ್ನು ಯೋಗಶಕ್ತಿಯಿಂದ ತಮ್ಮ ರೋಗವನ್ನು ಪರಿಹರಿಸಲು ಹೇಳಿದುದಕ್ಕೆ ಶ್ರೀ ಪರಮಹಂಸರು ಕೊಟ್ಟ ಉತ್ತರ

ಶ್ರೀ ಪರಮಹಂಸರ ಅದ್ವೈತ ಜ್ಞಾನದ ಗಭೀರತೆಯ ಸಂಬಂಧವಾಗಿ ಇನ್ನೊಂದು ವಿಷಯವನ್ನು ನಮಗೆ ಇಲ್ಲಿ ಹೇಳದಿರಲಾಗುವುದಿಲ್ಲ ಶ್ರೀ ಪರಮಹಂಸರಿಗೆ ಆಗ ಮೈ ಸರಿ ಇರಲಿಲ್ಲ ಆಗವರು ಕಾಶೀಪುರದ ಉದ್ಯಾನದಲ್ಲಿದ್ದಾರೆ- ರೋಗ ವೃದ್ಧಿಯಾಗುತ್ತ ಬಂದಿದೆ ಶಶಧರ ತರ್ಕ ಚೂಡಾಮಣಿ ಪಂಡಿತರೂ, ಇನ್ನೂ ಕೆಲವು ಸಂಗಿಯರೂ, ಅವರ ಅವರ ಅನಾರೋಗ್ಯದ ವಿಷಯವಾಗಿ ಕೇಳಿ ಅವರನ್ನು ಕಾಣಬೇಕೆಂದು ಬಂದಿದ್ದಾರೆ ಮಾತುಮಾತಿಗೆ ಪಂಡಿತರು ಶ್ರೀ ಪರಮಹಂಸರನ್ನು ಕುರಿತು ಹೀಗೆಂದರು 'ಮಹಾಶಯರೇ, ನಿಮ್ಮಂತಹ ಪುರುಷರು ಇಚ್ಛಾಮಾತ್ರದಿಂದಲೇ ದೈಹಿಕ ರೋಗವನ್ನು ವಾಸಿಮಾಡಿ ಬಿಡುತ್ತಾರೆಂದು ಶಾಸ್ತ್ರದಲ್ಲಿ ಓದಿದ್ದೇನೆ ವಾಸಿಯಾಗಲೆಂದು ಮನಸ್ಸು ಏಕಾಗ್ರಮಾಡಿ ರೋಗಸ್ಥಾನದಲ್ಲಿಟ್ಟರೆ ಅದು ನಿಂತೇಬಿಡುವುದು. ನೀವು ಒಂದು ಸಾರೆ ಹಾಗೆ ಮಾಡಿದರೆ ಒಳ್ಳೇದೆಂದು ತೋರುತ್ತದೆ '

'ನೀವು ಪಂಡಿತರಾಗಿ ಆ ಮಾತು ನಿಮ್ಮ ಬಾಯಿಂದ ಹೇಗೆ ಬಂತು? ಈ ಮನಸ್ಸನ್ನು ಸಚ್ಚಿದಾನಂದ ಸ್ವರೂಪನಾದ ಶ್ರೀ ಪರಮಾತ್ಮನಿಗೆ ಅರ್ಪಿಸಿದ್ದೇನೆ. ಅದನ್ನು ಅಲ್ಲಿಂದ ಇಳಿಸಿ ಈ ಹೊಲಸು ಎಲುಬು ಮಾಂಸದ ಪಿಂಜರದ ಮೇಲಿಡಲು ಪ್ರವೃತ್ತಿಯಾಗುವುದೇನು?'' ಎಂದು ಶ್ರೀ ಪರಮಹಂಸರು ಉತ್ತರ ಕೊಟ್ಟರು

ಸ್ವಾಮಿ ವಿವೇಕಾನಂದ ಮೊದಲಾದ ಭಕ್ತರು ಶ್ರೀ ಪರಮಹಂಸರನ್ನು ಹಾಗೆ ಮಾಡಿಸಿಕೊಳ್ಳಲು ಅನುರೋಧಿಸಿದ್ದುದು ಅದಕ್ಕೆ ಅವರ ಉತ್ತರ

ಪಂಡಿತರ ಬಾಯಿ ಮುಚ್ಚಿತು, ಆದರೆ ಸ್ವಾಮಿ ವಿವೇಕಾನಂದ ಮೊದಲಾದ ಭಕ್ತರು ಸುಮ್ಮಗಿರಲಿಲ್ಲ ಪಂಡಿತರು ಹೊರಟುಹೋದ ಬಳಿಕವೇ ಹಾಗೆಯೇ ಮಾಡಲು ಇನ್ನೊಮ್ಮೆ ಅನುರೋಧಿಸಿದರು ನಿಮ್ಮ ರೋಗವನ್ನು ನೀವು ವಾಸಿಮಾಡಿಕೊಳ್ಳಲೇ ಬೇಕು. ನಮಗಾಗಿಯಾದರೂ ಅದನ್ನು ವಾಸಿಮಾಡಿಕೊಳ್ಳಲೇಬೇಕು. ಅಂದರು, ಶ್ರೀ ಪರಮಹಂಸರು ರೋಗದಿಂದ ನರಳಬೇಕೆಂದು ನಾನು ಇಚ್ಛಿಸುವುದಿಲ್ಲ, ನಾನು ವಾಸಿಯಾಗಲೆಂದು ಇಚ್ಛಿಸಿದರೆ ವಾಸಿಯಾಗುತ್ತದೇನು? ಅದು ವಾಸಿಯಾಗುವುದು ಶ್ರೀ ಜಗಜ್ಜನನಿಯ ಇಚ್ಛೆ ಸ್ವಾಮಿ ವಿವೇಕಾನಂದರು ಹಾಗಾದರೆ ಶ್ರೀಜಗಜ್ಜನನಿಗೆ ನೀವು ಹೇಳಿ ಅವಳು ನಿಮ್ಮ ಮಾತನ್ನು ಕೇಳಿಯೇ ಕೇಳುವಳು. ಶ್ರೀ ಪರಮಹಂಸರು. ನೀವೆಲ್ಲ ಹೇಳುವುದು ಹೇಳುತ್ತೀರಿ ಆದರೆ ಅಂತಹ ಮಾತು ನನ್ನ ಬಾಯಿಂದ ಹೊರಡುವುದೇ ಇಲ್ಲ. ಸ್ವಾಮಿ ವಿವೇಕಾನಂದರು ಅದಾಗುವುದಿಲ್ಲ, ನೀವು ಹೇಳಲೇ ಬೇಕು ನಮಗಾಗಿಯಾದರೂ ಹೇಳಲೇ ಬೇಕು ಶ್ರೀ ಪರಮಹಂಸರು ಒಳ್ಳೇದು ನೋಡೋಣ, ಆಗುವುದಾದರೆ ಹೇಳುತ್ತೇನೆ ಕೆಲವು ತಾಸುಗಳ ಮೇಲೆ ಸ್ವಾಮಿ ವಿವೇಕಾನಂದರು ಶ್ರೀ ಪರಮಹಂಸರ ಬಳಿಗೆ ಬಂದು ಮಹಾಶಯರೇ, ಕೇಳಿದ್ದಿರೇನು? ಶ್ರೀ ಜಗಜ್ಜನನಿಯು ಏನು ಹೇಳಿದಳು? ಶ್ರೀ ಪರಮಹಂಸರು (ಗಂಟಲ ಹುಣ್ಣು ತೋರಿಸಿ) ಇದರ ದೆಸೆಯಿಂದ ಏನೂ ತಿನ್ನಲಾಗುವುದಿಲ್ಲ ತಾಯಿ, ಸ್ವಲ್ಪ ತಿನ್ನುವ ಹಾಗೆ ಮಾಡೆಂದು ಶ್ರೀ ಜಗದಂಬೆಗೆ ಹೇಳಿದೆನು. ತಾಯಿಯು ನಿಮ್ಮನ್ನೆಲ್ಲ ತೋರಿಸಿ ಏಕೆ? ನೀನು ಎಷ್ಟೋ ಬಾಯಿಗಳಿಂದ ತಿನ್ನುತ್ತಿಯಲ್ಲ! - ಅಂದಳು ನನಗೆ ಲಜ್ಜೆ ಬಂತು, ಇನ್ನೇನೂ ಮಾತೂ ನನ್ನ ಬಾಯಿಂದ ಹೊರಡಲಿಲ್ಲ.

(ಕ್ರಮಶಃ)

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ
ಕೆ ಎಲ್. ಕಾರಂತ್, ಬಿ ಎ ಎಲ್ ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ
ಬೆಲೆ 1-4-0.

೫ನೆಯ ಪುಸ್ತಕ
V ಮತ್ತು VI ನೆಯ ಫೋರ್ಮುಗಳಿಗೆ
ಲೇಖಕರು
ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ. ಎಸ್ ಸಿ, ಎಲ್. ಟಿ
ಬೋರ್ಡ್ ಹೈಸ್ಕೂಲ್, ಮುಲ್ಕಿ
ಎಸ್ ರಾಮಕೃಷ್ಣ ಆಚಾರ್, ಬಿ ಎ, ಎಲ್ ಟಿ.
ಬೋರ್ಡ್ ಹೈಸ್ಕೂಲು ಪುತ್ತೂರು
ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ.
ಶಾರದಾ ಛಾಪಖಾನೆ ಮಂಗಳೂರು

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೈಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1. ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ.

2. ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕಲಾಗಲಾರದು.

3. ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4. ಸ್ಟೇಶನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5. 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6. ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಸರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 36] ತಾರೀಕು 25—12—1942 [ಸಂಚಿಕೆ 52]

ವೈಸರಾಯರನ್ನು 'ಮಿಸ್ಟರ್ ಲಿನ್ಲಿತ್‌ಗೋ' ಎಂದರು!

ಗಾಂಧಿಜಿಯೊಡನೆ ಒಂದು ವಾರ ಕಳೆದರು!

ಲುಯಿಸ್ ಫಿಶರರ ಕುರಿತು ಶ್ರೀ. ಡಿ. ಜಿ. ಟೆಂಡುಲ್ಕರರ ಲೇಖನ

ಒಂದು ಶುಭದಿನ, ಕರಾಚಿ ಬಂದರದಲ್ಲಿ ಅಮೆರಿಕದ ಬಾಂಬರ್ ವಿಮಾನದಿಂದ ಲುಯಿಸ್ ಫಿಶರ್ ಇಳಿದರು. ಅವರು ಬಂದಿಳಿದ ಸುದ್ದಿ ಅವರ ಆಪ್ತಮಿತ್ರರಿಗೂ ತಿಳಿದಿರಲಿಲ್ಲ. ಭಾರತದ ದೊಡ್ಡ ವ್ಯಕ್ತಿಗಳನ್ನು ಸಂದರ್ಶಿಸಲು ಅವರು ಬರುವವರಾಗಿದ್ದರೂ, ಯಾವುದೇ ಪತ್ರಿಕೆಯೂ ಅವರ ಆಗಮನದ ವಿಷಯ ಪ್ರಚುರಪಡಿಸಿರಲಿಲ್ಲ. ಯಾವುದೇ ಪ್ರಚಾರ ಮಾಡಕೂಡದಂತೆ ಅವರು ಬಂದಿದ್ದರು, ಯಾರಿಗೂ ಕಾಣಿಸಿಕೊಳ್ಳದೆ ಇರಬೇಕೆಂದು ಅವರು ಬಯಸಿದ್ದರು. ಕ್ರಿಪ್ಸರು ಬಂದರು ಮತ್ತು ಹೋದರು. ರೂಸ್‌ವೆಲ್ಟರಿಗೆ ವರದಿಯೊಪ್ಪಿಸಲು ಲುಯಿಸ್ ಜಾನ್ಸನರು ಭಾರತದಿಂದ ತೆರಳಿದರು. ಅವರು ತೆರಳುವಾಗ ಕೈರೋದಲ್ಲಿ ಲುಯಿಸ್ ಫಿಶರರ ಕೈ ಕುಲುಕಿ ಹೋದರು, ಭಾರತದಲ್ಲಿ ಈ ಅಧಿಕಾರ ರಹಿತ ವ್ಯಕ್ತಿಯು ತನ್ನ ಕಾರ್ಯವನ್ನು ಮುಂದುವರಿಸುವನೆಂದು ಆ ಮೂಲಕ ವ್ಯಕ್ತಪಡಿಸಿದರು. ಕ್ರಿಪ್ಸ್ ಭಾರತವನ್ನು ಅವಸರದಲ್ಲಿ ಬಿಟ್ಟು ಹೊರಟು ಹೋದದ್ದು, ಭಾರತಕ್ಕೆ ಜಪಾನು ಧಾಳಿ ಉಂಟು ಎಂದೇನೂ ಅಲ್ಲ, ಆದರೆ ಅಮೆರಿಕನರು ಹಾಗೆ ತಿಳಕೊಂಡಿಲ್ಲ. ಅಮೆರಿಕನರ ದೃಷ್ಟಿಯಿಂದ ಭಾರತವೂ ಅಮೆರಿಕದ ಭೂಪಟದ ಅಂತರ್ಗತವಾಗಿದೆ. ಅದ್ದರಿಂದಲೇ 'ನೇಶನ್' ಪತ್ರವು ತನ್ನ ಉತ್ತಮ ವ್ಯಕ್ತಿಯೊಬ್ಬನನ್ನು ಭಾರತದ ವಿಷಯ ವರದಿ ಕೊಡಲು ಭಾರತಕ್ಕೆ ಕಳುಹಿಸಿತು. ಅದು ತನ್ನ ಕೊನೆಯ ಪುಟದಲ್ಲಿ ಲುಯಿಸ್ ಫಿಶರರು ಭಾರತದ ಕುರಿತು ಬರೆವರೆಂದು ಪ್ರಕಟಪಡಿಸಿತು. ಲುಯಿಸ್ ಫಿಶರರು ಭಾರತಕ್ಕೆ ಅವಸರವಸರವಾಗಿ ಹೊರಟು ಬರಬೇಕಾಯಿತು. ಆಗ ಸಂಪ್ರದಾಯಕ್ಕೂ ಅವರು ಮರೆಹೊಗಲಿಲ್ಲ. ಅಂಥಾ ಕಾರ್ಯಗಳಲ್ಲಿ ಸಮಯ ವ್ಯರ್ಥ ಹಾಳುಮಾಡಲು ಅವರಿಗೆ ಸಾಧ್ಯವಿರಲಿಲ್ಲ. ಲುಯಿಸ್ ಫಿಶರರು ಪ್ರಸಿದ್ಧ ಅಮೆರಿಕನ್ ಪತ್ರಿಕೋದ್ಯಮಿಯಾಗಿದ್ದರೂ, ಭಾರತದ ಜನರಿಗೆ ಅವರು ಪ್ರಸಿದ್ಧ ವ್ಯಕ್ತಿಗಳಾಗಿರಲಿಲ್ಲ. ಅವರು ಹೆಚ್ಚು ಬರೆಯುವುದೇ ಇಲ್ಲ. ಹೆಚ್ಚು ಬರೆವ ವಿಷಯ ಅವರಿಗೆ ಆದರವೂ ಇಲ್ಲ. ತನಗೆ ಗೊತ್ತಿಲ್ಲದ ವಿಷಯಗಳಲ್ಲಿ ಅವರು ಬರೆವುದೇ ಇಲ್ಲ. ಅತ್ಯಂತ ಪ್ರಧಾನವೆಂದು ಕಂಡ ವಿಷಯಗಳ ಕುರಿತು ಅವರು ಬರೆಯುತ್ತಾರೆ, ಅದರಲ್ಲಿಯೇ ಅವರ ಬಲವಿದೆ. ಇಂದು ಭಾರತದಲ್ಲಿ ಲುಯಿಸ್ ಫಿಶರರ ಹೆಸರು ಕೇಳದ ಪತ್ರಿಕಾ ವಾಚಕನಿಲ್ಲ. ಆಂಗ್ಲೋ ಇಂಡಿಯನ್ ಪತ್ರಿಕೆ ಕೆಲವನ್ನು ಬಿಟ್ಟರೆ, ಭಾರತದ ಕುರಿತು ಲುಯಿಸ್ ಫಿಶರರು ಬರೆದ ಲೇಖನಗಳಿಗೆ ಪ್ರಚಾರ ಕೊಡದ ಭಾರತೀಯ ಪತ್ರಿಕೆಗಳೇ ಇರಲಿಕ್ಕಿಲ್ಲ. ಪ್ರತಿಯೊಂದು ಭಾರತೀಯ ಭಾಷೆಯಲ್ಲಿಯೂ ಅವರ ಲೇಖನಗಳು ಕ್ರಮಾಂಶವಾಗಿ ಪ್ರಕಟಗೊಂಡಿವೆ.

ಫಿಶರ್ ಯಾರು?

ಲುಯಿಸ್ ಫಿಶರ್ ಪಿಲಾಡೆಲ್ಪಿಯಾದ ಕುಟೀರವೊಂದರಲ್ಲಿ ಬಡತಂದೆತಾಯಿಗಳ ಮಗನಾಗಿ ಜನಿಸಿದರು. ಅವರ ತಂದೆ ಒಂದು ಕಾರ್ಖಾನೆ ಕೆಲಸಗಾರನಾಗಿದ್ದು, ಮುಂದೆ ಮೀನು ಮತ್ತು ಹಣ್ಣುಹಂಪಲು ಮಾರಾಟ ಮಾಡುತ್ತಿದ್ದರು. 'ನಾನೀಗಲೂ ಆತನ 'ಹಣ್ಣುಗಳು—ಹೊಸ ಹಣ್ಣುಗಳು ಬೇಕೇ' ಎಂಬೀ ಶಬ್ದಗಳನ್ನು ಕೇಳುತ್ತೇನೆ' ಎಂದು ಫಿಶರರೇ ತಂದೆಯ ಕುರಿತು ಬರೆದಿದ್ದಾರೆ. ಮನೆಬಾಡಿಗೆ ಕೊಡಲಿಕ್ಕೆ ಹಣ ಇಲ್ಲದಿರುವಾಗ ಕುಟುಂಬವು ಅಲೆದಾಡಬೇಕಾಗಿತ್ತು. ಫಿಶರರು ೧೬ ವರ್ಷ ಪ್ರಾಯಕ್ಕೆ ಬರುವ ವರೆಗೆ ಒಂದು ವಿದ್ಯುದ್ದೀಪ ಮೊದಲಾದ ಸೌಕರ್ಯವುಳ್ಳ ಮನೆಯಲ್ಲಿ ಅವರು ಉಳಕೊಂಡದೆಂದು ಇರಲಿಲ್ಲ. ಎಷ್ಟೋ ಸಮಯ ಅವರು ಉಪವಾಸ ಮಾಡಬೇಕಾಗಿತ್ತು. ಅವರು ಮತ್ತು ಅವರ ಸೋದರಿ ಹಲವು ವರ್ಷಗಳ ವರೆಗೆ ಮಾಡಿದ ಒಳ್ಳೆಯ ಊಟಗಳೆಂದರೆ, ಅವರ ಶ್ರೀಮಂತ ಕುಟುಂಬಸ್ಥಳೊಬ್ಬಳು ಪ್ರತಿ ಶುಕ್ರವಾರ ಸಂಜೆ ಕೊಡುತ್ತಿದ್ದ ಬೋಜನಗಳೇ. ಇಂಥಾ ಬಡತನದ ಬಾಳುವೆಯಲ್ಲಿ ಬೆಳೆದು ಬಂದದ್ದರಿಂದಲೇ ಅವರಿಗೆ ವರ್ಣ ಭೇದ ಭಾವನೆ ಅಳಿಸಿಹೋಗಿದ್ದೆ, ದಳಿತ ಜನರ ಮೇಲೆ ಆದರ ಉಂಟಾಗಿದೆ. ಅವರು ಧೈರ್ಯದಿಂದ ವಿಚಾರಿಸುತ್ತಾರೆ, ಯಾವುದೇ ಅಂಜಿಕೆಯಿಲ್ಲದೆ ಬರೆಯುತ್ತಾರೆ. ತನ್ನ ಭದ್ರತೆಗಾಗಿ ಎಂದೂ ಅವರು ಆಲೋಚಿಸುವುದಿಲ್ಲ. ಅವರಿಗೆ ಬೇಕಾದುದು ಕಡಿಮೆ. ಕುಡಿಯುವುದು ಅಪರೂಪ, ಸೇದುವ ಅಭ್ಯಾಸ ಇಲ್ಲವೇ ಇಲ್ಲ. ಫಿಶರ್‌ರದು ಪತ್ರಿಕೋದ್ಯಮದಲ್ಲಿ ಸಿದ್ಧಹಸ್ತ, ಅಂತರ್ರಾಷ್ಟ್ರೀಯ ಕೀರ್ತಿ ಅವರದು. ವಿದೇಶಗಳಲ್ಲಿ ಬಹುಕಾಲ ಕಳೆದಿದ್ದಾರೆ. ೧೯೧೮ರಲ್ಲಿ ಅವರು ಬ್ರಿಟಿಷರ ಕೆಳಗೆ ಕೆಲಸಮಾಡಿದ್ದರು. "ಹಳೆ ಜಗತ್ತನ್ನು ನನಗೆ ಮೊದಲು ತಿಳಕೊಳ್ಳಲು ಆಗಲೇ ಇಲ್ಲ. ಆಗ ನಾನು ಕೇವಲ ೨೨ ವರ್ಷದವ, ಮೂರು ವರ್ಷಗಳ ಬಳಿಕ ಶಾಂತಿಯ ಯೂರೋಪನ್ನು ನೋಡಲು ನಾನು ಅಮೆರಿಕದಿಂದ ಹೊರಟೆ. ಆ ಸಮಯದಲ್ಲಿ ನಾನು ಇತಿಹಾಸವನ್ನು ಅಭ್ಯಾಸ ಮಾಡಿದೆ. ಇಜಿಪ್ತಿನ ಮರುಭೂಮಿಯಲ್ಲಿ ನಾನು ವರ್ಣಿತ ಒಪ್ಪಂದದ ಪ್ರತಿಯೊಂದು ಶಬ್ದವನ್ನೂ ಬಿಡದೆ ಓದಿದೆ. ಒಂದು ಭೂಪಟವಿಟ್ಟುಕೊಂಡು ಅದನ್ನು ಓದಿದೆ. ರಶ್ಯವು ನನ್ನನ್ನು ಯಾವಾಗಲೂ ಆಕರ್ಷಿಸುತ್ತಿತ್ತು. ನನ್ನ ಯೌವನದಲ್ಲಿ ಟೋಲ್‌ಸ್ಟಾಯರ ಮತ್ತು ಡೊಸ್ಟೋವ್‌ಸ್ಕಿಯವರ ಅನೇಕ ಕಾದಂಬರಿಗಳನ್ನೋದಿದೆನು. ನನ್ನ ತಾರುಣ್ಯದಲ್ಲಿ ನಾನು ರಶ್ಯದ ಕ್ರಾಂತಿಕಾರಕ ಸಾಹಿತ ಸನ್ನೋದಿದೆನು. ಅಲ್ಲಿ ನನಗೆ ಬಡ ದಳಿತ ರಶ ದ ಸಂಪತ್ತು ಮತ್ತು ಕಳೆ ತಿಳಿಯಿತು. ಯುರೋಪಿನ ಇತರ ಭಾಗಗಳಲ್ಲಿರುವ ಗೊಂದಲ, ಅನಕ್ಯ ಮತ್ತು ನಿರಾಶೆಯ ಪ್ರತಿಕ್ರಿಯೆಯಾಗಿ ನನಗೆ ಇಟ್ಟವೊದಲು ರಶ್ಯದ ಮೇಲೆ ಸಹಾನುಭೂತಿ ಹುಟ್ಟಿತು. ನಾನು ರಶ್ಯವನ್ನೊಂದು ಸ್ವರ್ಗವೆಂದೇನೂ ಗ್ರಹಿಸಲಿಲ್ಲ. ೧೯೨೨ರಂದು ನಾನು ಮೊದಲು ರಶ್ಯಕ್ಕೆ ಹೋದಾಗ ಉಪವಾಸದ ಭೂಮಿಗ ನಾನು ಹೋಗುವದೆಂದು ತಿಳಕೊಂಡಿದ್ದೆ. ನನ್ನ ತಾರುಣ್ಯದಲ್ಲಿ 'ನಾನು ಲೇಖನಿ ಕೈಗೆ ಹಿಡಿವಾಗ ಯಾವುದೇ ರಾಷ್ಟ್ರವೂ ನನ್ನ ಆದರ್ಶ ರಾಷ್ಟ್ರವಿರಲಿಲ್ಲ.'

ಮೋಸ್ಕೋ ಭೇಟಿ

ಮೇಲಿನ ಮಾತುಗಳು ಲುಯಿಸ್ ಫಿಶರರ ಆತ್ಮಚರಿತೆಯಿಂದೆತ್ತಿದವು. ಇವು ಅವರ ಜೀವನ, ರಾಜಕೀಯ ವಿಚಾರಗಳನ್ನು ಅರ್ಥಮಾಡಿಕೊಳ್ಳಲು ಸಹಾಯವಾಗಬಹುದು. ಫಿಶರರು ಕೇವಲ ಒಬ್ಬ ಲೇಖಕ ಮಾತ್ರವಲ್ಲ ಅಮೆರಿಕದ ಓರ್ವ ಪ್ರಭಾವಶಾಲೀ ಪ್ರಖ್ಯಾತ ಭಾಷಣಗಾರರೂ ಆಗಿದ್ದಾರೆ. ಅವರ ಆದಾಯದ ಮುಖ್ಯಾಂಶವು ಭಾಷಣರೂಪವಾಗಿ ದೊರಕುವಂಥಾದ್ದು. ೧೯೧೭ರಲ್ಲಿ ಪಿಲಡೆಲ್ಪಿಯಾದಲ್ಲಿ ಅರ್ಥ ವರ್ಷ ಉಪಾಧ್ಯಾಯರಾಗಿದ್ದುದನ್ನು, ೧೯೨೨ರಲ್ಲಿ ನ್ಯೂಯಾರ್ಕಿನಲ್ಲಿ ನ್ಯೂಸ್ ಏಜೆನ್ಸಿ ಕೆಲಸದಲ್ಲಿದ್ದುದನ್ನು ಬಿಟ್ಟರೆ ಆ ಮೇಲೆ ಅವರಿಗೆ ಯಾವಾಗಲೂ ಒಂದು ನೌಕರಿಯೆಂಬುದೇ ಇಲ್ಲ, ಅಂದಾ ನೌಕರಿ ಸಿಗಬೇಕೆಂದು ಅವರು ಬಯಸುವುದೂ ಇಲ್ಲ. ಅವರಿಗೆ ಒಂದು ಟೈಪ್‌ರೈಟರನ್ನುಳಿದು ಬೇರೆ ಸಂಪತ್ತೇ ಇಲ್ಲ. ಯಾವುದೇ ರಾಜಕೀಯ ಪಂಗಡದಲ್ಲಿ ಯಾವುದೇ ಕ್ಲೆಜನಲ್ಲಿ ಅವರು ಸದಸ್ಯರಾಗಿಲ್ಲ. 'ನಾನು ನನ್ನ ಮೇಲೆ ಶಿಸ್ತು ಹಾಕಿಕೊಳ್ಳಬಲ್ಲೆ. ಆದರೆ ಇತರರು ನನ್ನ ಮೇಲೆ ಶಿಸ್ತು ಜಾರಿಮಾಡುವುದನ್ನು ನಾನು ಸಹಿಸಲಾರೆ' ಇದು ಅವರ ಮಾತುಗಳು. ನಾನು ಫಿಶರರ ಸಮೀಪ ಪರಿಚಯ ಮಾಡಿಕೊಂಡದ್ದು ಮೋಸ್ಕೋದಲ್ಲಿ ವಾಸಿರುವಾಗ. ಅವರ ಮನೆಗೆ ನಾನು ಅನೇಕ ಸಲ ಹೋಗುತ್ತಿದ್ದೆ. ಏಕೆಂದರೆ ಅಲ್ಲಿ ತುಂಬಾ ಒಳ್ಳೆಯ ಪುಸ್ತಕಗಳು, ಪತ್ರಿಕೆಗಳು ಮತ್ತು ಬುದ್ಧಿವಂತ ಜೊತೆಗಾರರೂ ಸಿಗುತ್ತಲಿತ್ತು. ಒಮ್ಮೆ ಮೋಸ್ಕೋದ ಪ್ರಖ್ಯಾತ ಲೇಖಕ ಕಲಾವಿದ್ಯ ಪ್ರವಾಸಿಗಳನ್ನು ನಾನು ಅವರ ಮನೆಯಲ್ಲಿ ಪರಿಚಯ ಮಾಡಿಕೊಂಡದ್ದು. ಅವರ ಪತ್ನಿ ಮತ್ತು ಮಕ್ಕಳು ಭಾರತದ ವಿಷಯ ಬಹಳ ಆಸಕ್ತಿಯಿಟ್ಟು ಕೇಳುತ್ತಾರೆ. ಅವರನ್ನು ನಾನು ಭಾರತಕ್ಕೆ ಬರುವಂತೆ ಕೇಳಿಕೊಂಡಿದ್ದೆ. ಅವರ ಒಪ್ಪಿದ್ದರು. ಫಿಶರರು ಕೊಟ್ಟ ಮಾತನ್ನು ಪಾಲಿಸಿದರು, ಪುನಃ ಬೊಂಬಯಿಯಲ್ಲಿ ನಾವು ನಮ್ಮ ಗೆಳೆತನ ಹೆಚ್ಚಿಸಿಕೊಂಡೆವು.

ಗಾಂಧಿಜಿ ಆಶ್ರಮದಲ್ಲಿ

'ಕಡಿಮೆ ಮಾತನಾಡುವವರು ಒಳ್ಳೆಯ ಜನರು' ಎಂದು ಶೇಕ್ಸ್‌ಪಿಯರ್ ಒಂದು ಕಡೆ ಹೇಳಿದಾನೆ. ಬೇಟಿ ಕಾಲದಲ್ಲಿ ಫಿಶರ್ ಈ ವಚನ ಪಾಲಿಸುತ್ತಾರೆ. ಅವರ ಬೇಟಿ ಯಾವಾಗಲೂ ದೀರ್ಘಕಾಲ, ಆದರೆ ಅವರ ಮಾತು ಅಲ್ಲಿ ಕಡಿಮೆ. ಅವರು ಜಗತ್ತಿನ ಪ್ರತಿಯೊಬ್ಬ ಮುಖಂಡನನ್ನು ಬೇಟಿಯಾಗಿದ್ದಾರೆ. ಅವನ ಕಾರ್ಯಕಲಾಪಗಳ ಕುರಿತು ಗಮನಿಸಿದ್ದಾರೆ. ಸ್ಟಾಲಿನನ ದೊಡ್ಡ ಸ್ವಾಗತ ಕೋಣೆಯನ್ನು ಮಧ್ಯಾಹ್ನ ಒಂದು ಘಂಟೆಗೆ ಹೊಕ್ಕವರು, ಅಲ್ಲಿ ಸ್ಟಾಲಿನರೊಡನೆ ಸಂಜೆ ೭–೪೫ರ ವರೆಗೆ ಇದ್ದರು, ಆದರೆ ಅವರ ಅತೀ ದೀರ್ಘಕಾಲದ ಬೇಟಿಯೆಂದರೆ ಗಾಂಧಿಜಿಯೊಡನೆ ಸೇವಾಗ್ರಾಮದಲ್ಲಿ ಫಿಶರರು ಒಂದು ವಾರದ ಮೇಲೆ ಇದ್ದದ್ದು. ಆಶ್ರಮದಲ್ಲಿಯೇ ಅವರು ಉಳಕೊಂಡಿದ್ದರು, ಆಶ್ರಮವಾಸಿಗಳೊಡನೆ ಆಹಾರ ಸ್ವೀಕಾರ ಮಾಡಿದ್ದರು. ಗಾಂಧಿಜಿಯೊಡನೆ 'ಸಂಚಾರ'ಕ್ಕೆ ಹೋಗುತ್ತಿದ್ದರು. ಖಾದಿ ಅಂಗಿ ಮತ್ತು ಪೈಜಾಮು ತೊಡುತ್ತಿದ್ದರು. ಅಲ್ಲಿ ಅವರು ಜವಾಹರಲಾಲರೊಡನೆ ಅಜಾದರೊಡನೆ ರಾತ್ರಿ ಬೆಳದಿಂಗಳ ಆಕಾಶದ ಕೆಳಗೆ ಮಾತನಾಡಿದ್ದಾರೆ. ಗಾಂಧಿಜಿಯೊಡನೆ ಫಿಶರ್ ಹಾಸ್ಯಮಾಡಿದ್ದಾರೆ. ಗಾಂಧಿಜಿಯನ್ನು ಯುದ್ಧಯತ್ನಕ್ಕೆ ಬೆಂಬಲಿಗರನ್ನಾಗಿ ಮಾಡಬೇಕೆಂದು ಪ್ರಯತ್ನಮಾಡಿದ್ದಾರೆ. ಗಾಂಧಿಜಿ ಅಸದೃಶನಾದ ಓರ್ವ ಸ್ವತಂತ್ರ ವಿಚಾರಶಕ್ತಿಯ ವ್ಯಕ್ತಿ ಹಾಗೂ ಪ್ರೀತಿಸತಕ್ಕ ಗುಣ

(೩ನೇ ಪುಟಕ್ಕೆ ಮುಂದುವರಿದಿದೆ)

ಮಾರಾಟಕ್ಕೆ ಸಿದ್ಧವಾಗಿವೆ

1943ನೇ ಇಸವಿಯ

ಶಾರದಾ ಪೊಕೆಟ್ ಡೈರಿಗಳು

ಸಣ್ಣ ಸೈಜು	0–7–0
,, ,, ಮುಚ್ಚಳದ್ದು	0–9–0
ದೊಡ್ಡ ಸೈಜು	0–12–0
,, ,, ಮುಚ್ಚಳದ್ದು	0–14–0

ಬೇಕಾದಲ್ಲಿ ಕೂಡಲೇ ಬರೆಯಿರಿ

ಶಾರದಾ ಛಾಪಖಾನೆ,

ರಥಬೀದಿ—ಮಂಗಳೂರು

ವೈಸರಾಯರನ್ನು 'ಮಿಸ್ಟರ್ ಲಿನ್‌ಲಿತ್‌ಗೋ' ಎಂದರು!

(೧ನೇ ಪುಟದಿಂದ ಮುಂದುವರಿದುದು)

ಗಳುಳ್ಳ ಮಹಾತ್ಮನೆಂದು ಫಿಶರ್ ನನ್ನೊಡನೆ ಹೇಳಿದರು ಭಾರತದ ನರ್ಕೇಂದ್ರವು ಮಥಾ ಆಗಿದೆಯೆಂದು ಅವರಿಗೆ ತಿಳಿದಿತ್ತು. ಭಾರತಕ್ಕೆ ಫಿಶರ್ ಬಂದದ್ದು ಯಾವುದೇ ಪೂರ್ವ ದುರಭಿಪ್ರಾಯವಟ್ಟುಕೊಂಡಲ್ಲ. ಆದರೆ ಖಾಲಿಯಾಗಿ ಬಂದಿದ್ದರೆಂದೂ ತಿಳಿಕೊಳ್ಳಬಾರದು, ಓರ್ವ ಲೋಕದ ರಾಜಕೀಯವನ್ನು ಅಭ್ಯಾಸಮಾಡುವ ವಿದ್ಯಾರ್ಥಿಯಂತೆ ಅವರು ಭಾರತದ ವಿಚಾರ ತುಂಬಾ ಪುಸ್ತಕಗಳನ್ನೋದಿಕೊಂಡು ಬಂದಿದ್ದರು ಎಷ್ಟೋ ವಿಚಾರಗಳನ್ನು ಬರೆದು ತಂದಿದ್ದರು. ಕ್ರಿಪ್ಸರಂಥವರಿಂದ ಅವರು ಪರಿಚಯ ಪತ್ರ ತಂದಿದ್ದರು. ಲಾರ್ಡ್ ಲಿನ್‌ಲಿತ್‌ಗೋ ಮತ್ತು ಜನರಲ್ ವೇವಲರೂ ಅವರಿಗೆ ಭೇಟಿ ಕೊಟ್ಟಿದ್ದರು. ಅವರಿಬ್ಬರೊಡನೆ ಬಹಳ ಪರಿಚಯದ ಮತ್ತು ಆದರದ ಸಂಭಾಷಣೆ ನಡೆಸಿದರು. ಯಾವುದೇ ಸಂಪ್ರದಾಯವನ್ನು ಅವರು ಶರಣು ಹೋಗಲಿಲ್ಲ, ಪ್ರತ್ಯೇಕ ಉಡಿಗೆ ತೊಡಿಗೆಯನ್ನೂ ಹಾಕಿಕೊಳ್ಳಲಿಲ್ಲ ಕೊರಳ ಪಟ್ಟಿಯನ್ನೂ ಕಟ್ಟಿಕೊಳ್ಳಲಿಲ್ಲ ಬಹುಶಃ ಸರಳ ಉಡಿಗೆಯಲ್ಲಿ ಕೊರಳ ಪಟ್ಟಿಯನ್ನೂ ಸಹ ಕಟ್ಟದೆ ಭೇಟಿಗೆ ಹೋಗಿ, ವೈಸರಾಯರನ್ನು ಮಿಸ್ಟರ್ ಎಂದು ಸಂಭೋದಿಸಿದ ವಿದೇಶೀಯ ವ್ಯಕ್ತಿಯೆಂದರೆ ಫಿಶರರೊಬ್ಬರೇ ಇರಬೇಕು. ಲಾರ್ಡ್ ಹೆಲಿಫಾಕ್ಸರನ್ನೂ ಅವರು ಅಮೆರಿಕದಲ್ಲಿ ಮಿಸ್ಟರ್ ಹೆಲಿಫಾಕ್ಸ್ ಎಂದು ಸಂಭೋಧಿಸಿದವರು. ಅವರು ವೈಸರಾಯರೊಡನೆ ಮಾಡಿದ ಮಾತುಕತೆ ಎಷ್ಟರಮಟ್ಟಿಗೆ ಪ್ರಭಾವಶಾಲಿಯಾಗಿತ್ತೆಂದರೆ ವೈಸರಾಯರೇ ಗಾಂಧಿಜಿ ಭಾರತದಲ್ಲಿ ದೊಡ್ಡ ವ್ಯಕ್ತಿ; ವರ್ಧಾವೇ ಭಾರತದಲ್ಲಿ ಪ್ರಾಮುಖ್ಯ ರಾಜಕೀಯ ರಂಗವೆಂದು ಹೇಳುವರತೆ ಆಗಿತ್ತು ಫಿಶರರಿಗೆ ಉತ್ತಮ ಮೇಧಾ ಶಕ್ತಿಯಿದೆ, ಹಾಗಾಗಿ ಅವರು ವೇವಲ್ ಮತ್ತು ಲಿನ್‌ಲಿತ್‌ಗೋರವರೊಡನೆ ಮಾಡಿದ ಸಂಭಾಷಣೆಯ ವಿಚಾರವನ್ನು ಮುಂದೆ ಒಂದು ದಿನ ಬರೆಯಬಹುದು ಆದು ಜಗತ್ತಿಗೆ ಅವರ ಸ್ಪಷ್ಟ ವರ್ತನೆಯನ್ನು ಪ್ರಕಟಿಸೀತು

NOTICE BY SUBSTITUTED SERVICE

In the Court of the District Munsiff of Mangalore.

S C No 659/1942.

Between -

1 Louis Shenava alias Kunha 2. Basthiam Shenava alias Kunha 3 Helen Kodther, 4 Thomas Shenava alias Kunha, 5 Maurice Shenava alias Kunha .. *Plaintiffs*

and

1 D Ramanna Rai 2 Ubbaldu Shenava alias Kunha *Defendants*

To

1st defendant - Deraje Ramanna Rai, son of Maila alias Lakkanna Rai, residing in Rayi village, Mangalore Taluk

Please take notice that the plaintiffs have filed the above suit for recovery of Rs. 230 14-6 being arrears of rental up to 12-4-1942 with interest up to 12-10-42 and costs of registered notices as well as future interest and costs of suit with interest from you and that the above suit is posted for hearing at 11 A. M. on 5-1-1943 in the above Court. You may appear in person or by a Pleader on or before 5-1-1943 and contest the suit, failing which the same will be heard and decided exparte

Mangalore, 21-12-1942. } B M Baliga, Advocate for Pltfs.

ಜಪಾನಿಗೊಂದು ಬಾಂಬಿನೇಟು

ಈ ಯುದ್ಧಕ್ಕೆ ಹಲವುತರದ ಆಯುಧಗಳು ಬೇಕಾಗುತ್ತವೆ ತೋಪುಗಳು, ಕಣಬಂಡಿಗಳು (ಟ್ಯಾಂಕುಗಳು), ವಿಮಾನಗಳು ಹಡಗುಗಳು—ಇವಂತೂ ದೇಶದ ಸಂರಕ್ಷಣೆಗೆ ಬೇಕೇ ಬೇಕು ವಿಶ್ವಾಸ, ನಿರ್ಧಾರ ಧೀತನ್ಯಯ—ಈ ಆಯುಧಗಳ ಪರಿಚಯ ಜನರಿಗಿನ್ನೂ ಸಾಕಷ್ಟಿಲ್ಲ, ಆದರೆ ಅವುಗಳ ಮಹತ್ವ ಸ್ವಲ್ಪವೂ ಕಡಿಮೆಯಲ್ಲ

ಹಿಂದುಸ್ಥಾನದ ಸಂರಕ್ಷಣೆಯ ಸಲುವಾಗಿ, ನಮ್ಮ ಯುದ್ಧದಲಗಳಿಗೆ ಪ್ರತಿಯೊಂದು ಸಾಮಾನೂ ಬೇಕಾಗುತ್ತದೆ. ಟ್ರಕ್ಕು, ರೇಡಿಯೋ ಬಟ್ಟೆ, ಕಲ್ಲಿದ್ದಲು, ಉಕ್ಕು ಬಣ್ಣ ಇಷ್ಟಂತೂ ಸರಿಯೇ—ಸಾಬೂನು ಮತ್ತು ದಂತಮಂಜನ ಇನ್ನೂ ಕೂಡ ಬೇಕಾಗುತ್ತವೆ ನಾವು ದಿನಾಲು ಪೇಟೆಯಲ್ಲಿ ಕೊಳ್ಳುವ ಒಡವೆಗಳಲ್ಲ ಅವರಿಗೆ ಬೇಕು ನಮ್ಮ ರಕ್ಷಕರಿಗೆ ನಾವೇಕೆ ಅಷ್ಟು ಬಯಸೇಕು ' ನಾವು ಆದಷ್ಟು ಕಡಿಮೆ ಸಾಮಾನುಗಳನ್ನು ಉಪಯೋಗಿಸಬೇಕಲ್ಲದೆ, ಯಾವ ಹೊಸ ಒಡವೆಯನ್ನೂ ಕೊಳ್ಳದೆ ಸಾಗುವುದು ನಮ್ಮ ಕರ್ತವ್ಯವಾಗಿದೆ. ಇದರಿಂದಲೆ ನಾವು ಬೇಡಿ ಒಯಸುತ್ತಿರುವ 'ವಿಜಯ'ವೆಂಬ ಬೆಲೆಯುಳ್ಳ ಒಡವೆ ನಮ್ಮ ಕೈಯಲ್ಲಿ ಬಿದ್ದೀತು

ಈ ಯುದ್ಧವು **ಸರ್ವಗ್ರಾಸಿ** ಯುದ್ಧವು. ಇದನ್ನು ನಮ್ಮ ವೈರಿಗಳು ಚೆನ್ನಾಗಿ ಬಲ್ಲರು ಆದರೆ ನಾವು ಇದರ ಮಹತ್ವವನ್ನೇ ಅರಿತಿಲ್ಲ ನಾವು **ಪೂರ್ಣಪ್ರಯತ್ನ** ದಿಂದ ಜಪಾನಿಗಳನ್ನು ಎದುರಿಸುತ್ತಿದ್ದೇವೆಂಬುದು ಒಮ್ಮೆ ಅವರಿಗೆ ಮನವರಿಕೆಯಾದರೆ ಸಾಕು; ನಮ್ಮ ಹೃತ್ಪೂರ್ವಕ ಕಾರ್ಯಸಾಧನೆಯೆ ಜಪಾನಿಗಳಿಗೊಂದು ಬಾಂಬಿನೇಟಾಗುವುದು.

ಡಿಫೆನ್ಸ್ ಸೇವಿಂಗ್ಸ್ ಸರ್ಟಿಫಿಕೇಟ್ಸ್

...ಇಲ್ಲವೆ ಡಿಫೆನ್ಸ್ ಲೋನ್ಸ್.

ಸರ್ಟಿಫಿಕೇಟುಗಳು ನಿಮ್ಮ ಅಂಚೇ ಕಚೇರಿಯಲ್ಲಿ ಸಿಗುವವು ೧೦ ರೂಗೆ ಹತ್ತು ವರ್ಷಗಳಲ್ಲಿ ರೂ. ೩೯೦ ಲಾಭ ಬರುವುದು.

ಇವುಗಳ ಹೊರತು ಮತ್ತೇನನ್ನೂ ಕೊಳ್ಳುವ ಮೊದಲು **ಕೊಂಚ ಯೋಚಿಸಿರಿ.**

CPU 27.KH.

ಮಂಗಳೂರು

ಅಲೆಗೆ ೩ ವರ್ಷ ಕಠಿಣ ಸಜೆ

ಅಸಿಸ್ಟೆಂಟ್ ಸೆಶ್ಯನ್ಸ್ ಜಡ್ಜರಾದ ಶ್ರೀ| ಟಿ ಡಿ. ರಾಮಯ ಪಂತಲು ಅವರ ಕೋರ್ಟಿನಲ್ಲಿ ಕಳೆದ ತಾ ೧೨-೧೨-೪೨ರಲ್ಲಿ ಹಸನಬ್ಬ ಯಾನೆ ಸಂಜೀವ ರೈ ಎಂಬವನ ವಿಚಾರಣೆ ನಡೆದು ಅವನಿಗೆ ಮೂರು ವರ್ಷ ಕಠಿಣ ಸಜೆ ವಿಧಿಸಲ್ಪಟ್ಟಿತು. ಮೊಕದ್ದಮೆಯ ವಿಷಯ ಹೀಗಿದೆ - ಆಲೆ ಹಸನಬ್ಬ ಯಾನೆ ಸಂಜೀವರೈಯೆಂಬವನು ತಾನು ಬಂಟರ ಜಾತಿಯವನೆಂದು ಹೇಳಿಕೊಳ್ಳುತ್ತಾ ಮಾರ್ಕೆಟ್ ರೋಡ್ ಸಮೀಪದ ಪದ್ಮವಿಲಾಸ ಹೋಟೇಲಿನಲ್ಲಿ ಇರುತ್ತಿದ್ದ ಆ ಹೋಟೇಲಿನ ಬಳಿಯಿದ್ದ ಲಕ್ಷ್ಮೀದೇವಿ ಎಂಬವರ ಮಗ ಸುಮಾರು ೭ ವರ್ಷ ಪ್ರಾಯದ ವಿಟ್ಠಲ ಶೆಣೈ ಎಂಬ ಹುಡುಗನೊಡನೆ ಸ್ನೇಹ ಬೆಳೆಸಿ ತಾ ೯-೭-೪೨ರ ಬೆಳಿಗ್ಗೆ ಕಾಫಿ ಕುಡಿಸುವ ನೆವದಿಂದ ಹುಡುಗನನ್ನು ರೈಲ್ವೆ ಸ್ಟೇಶನಿಗೆ ಕರೆದುಕೊಂಡು ಹೋಗಿ ಆತನನ್ನು ಪುಸಲಾಯಿಸಿ ಹುಡುಗನ ಕಿವಿಯಲ್ಲಿದ್ದ ಸುಮಾರು ೧೨ ರೂ. ಬೆಲೆಬಾಳುವ ಬೆಂಡೋಲೆಗಳನ್ನು ಅಪಹರಿಸಿದ್ದನೆಂದು ಆತನ ಮೇಲೆ ಮೊಕದ್ದಮೆ ಹೂಡಲಾಗಿತ್ತು. ಜ್ಯೂರಿಯವರು ಸರ್ವಾನುಮತದಿಂದ ಆಲೆಯು ತಪ್ಪಿತಸ್ಥನೆಂದು ಸೂಚಿಸಿದ ಅಭಿಪ್ರಾಯವನ್ನು ಮನ್ನಿಸಿ ಮಾನ್ಯ ಜಡ್ಜರು ಮೇಲಿನ ರೀತಿ ಆಲೆಗೆ ಐ. ಪಿ. ಸಿ. ಯ ೩೯೦ನೇ ಪ್ರಕರಣದ ಮೇರೆಗೆ ಶಿಕ್ಷೆ ವಿಧಿಸಿದರು

ಸಾದರ—ಸ್ವೀಕಾರ

ದಿ ಡಿಪ್ರೆಸ್ಡ್ ಕ್ಲಾಸ್ ಮಿಶನ್, ಕೊಡಿಯಾಲ್‌ಬೈಲ್, ಮಂಗಳೂರು

೧೮೯೭ರಲ್ಲು ದಿವಂಗತ ಕುದ್ಮಲ್ ರಂಗರಾಯರಿಂದ ಸ್ಥಾಪಿತವಾಗಿ, ಈಗ ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿಯ ಆಡಳಿತದಿಂದ ನಡೆಯುತ್ತಾ ಬರುವ ಈ ಸಂಸ್ಥೆಯ ೧೯೪೧-೪೨ರ ವರದಿಯು ನಮ್ಮ ಹಸ್ತಗತವಾಗಿದೆ. ಈ ಸಂಸ್ಥೆಯು ದಲಿತ ಸಮಾಜವಾದ ಹರಿಜನರಿಗೆ ವಿದ್ಯೆ, ಊಟ, ಉಡುಪು, ವಸತಿ, ಕೈಗಾರಿಕೆಗಳನ್ನು ಕಲ್ಪಿಸುತ್ತಿದೆ ಮಂಗಳೂರಲ್ಲಿ ಒಂದು ಹೈಯ್ಯರ್ ಎಲಿಮೆಂಟರಿ ಶಾಲೆ, ದೇರೆಬೈಲು ಅತ್ತಾವರಗಳಲ್ಲಿ ಎಲಿಮೆಂಟರಿ ಶಾಲೆಗಳು, ಉಡುಪಿ ಪುತ್ತೂರುಗಳಲ್ಲಿ ಎರಡು ಎರಡು ಎಲಿಮೆಂಟರಿ ಶಾಲೆಗಳು ನಡೆಯುತ್ತಿವೆ ಈ ಸಂಸ್ಥೆಯ ಮೂಲಕ ಅನೇಕರು ಉಚ್ಚ ಶಿಕ್ಷಣಾದಿಗಳನ್ನು ಪಡೆಯುತ್ತಲಿದ್ದಾರೆ ಈ ವರದಿಯಲ್ಲಿ ಇದುವರೆಗಿನ ಆಡಳಿತದಲ್ಲಿ ಸಂಸ್ಥೆಗೆ ಒಟ್ಟು ರೂ ೧೨,೦೦೦ ಸಾವಿರದಷ್ಟು ಮೊತ್ತದ ಊನತೆ ಬಿದ್ದದ್ದು, ಅದನ್ನು ಐದು ವರ್ಷಗಳಲ್ಲಿ ತೀರಿಸುವ ಯೋಜನೆ ಕೈಕೊಳ್ಳಬೇಕೆಂದೂ ಅದರೊಡನೆ ಸಂಸ್ಥೆಯನ್ನು ಚಲೋ ರೀತಿಯಿಂದ ನಡೆಸುವಂತೆ ಪ್ರಯತ್ನ ಮಾಡಬೇಕೆಂದೂ ಹೇಳಲಾಗಿದೆ. ಸಾರ್ವಜನಿಕರು, ಮಾನವ ದಯಾಬುದ್ಧಿಯ ಶ್ರೀಮಂತರು, ಇಂಥಾ ಕಾರ್ಯದಲ್ಲಿ ತಮ್ಮ ಸೇವೆಯನ್ನು ಕರ್ತವ್ಯತಾ ಬುದ್ಧಿಯಿಂದ ಸಲ್ಲಿಸಿ ಪುಣ್ಯಭಾಗಿಗಳಾಗಬೇಕೆಂದು ನಾವು ವಿನಂತಿಸಿಕೊಳ್ಳುತ್ತೇವೆ.

ಸಮರಭೂಮಿಯ ಸಂಚಾರ

ಭೂಮಧ್ಯ ಸಮುದ್ರದಲ್ಲಿ ನೌಕಾ ಯುದ್ಧದ ಸಲುವಾಗಿ ಮಿತ್ರರೂ ಶತ್ರುಗಳು ಸಿದ್ಧತೆ ಮಾಡುತ್ತಿರುವರೆಂದು ನ್ಯೂಯಾರ್ಕ್ ರೇಡಿಯೋ ಸಾರುತ್ತದೆ. ಜಿಬ್ರಾಲ್ಟರಿನಲ್ಲಿ ಯುದ್ಧ ಹಡಗ ಮತ್ತು ವಿಮಾನಗಳ ಸಂಗ್ರಹ ಕಾರ್ಯ ನಡೆದಿರುವುದೆಂಬ ಮಾದ್ರಿದಿನ ಸುದ್ದಿಯನ್ನು ಈ ರೇಡಿಯೋ ಸಾರಿದೆ ರೋಸ್ಟೋವನ್ನು ಹಿಡಿದುಕೊಳ್ಳಲು, ಕಾಕಸಿಸಿನಲ್ಲಿರುವ ಜರ್ಮನ್ ಸೇನೆಯನ್ನು ಭೇದಿಸಲು ರಶ್ಯನರು ಬೇಗನೇ ಬಲವಾದೊಂದು ಧಾಳಿಯಿಡುವರೆಂದು ನಿರೀಕ್ಷಿಸಲಾಗಿದೆ. ಡಾನ್ ಮಧ್ಯದಲ್ಲೀಗ ಭಾರೀ ಕಾಳಗ ನಡೆಯುತ್ತಿದೆ ವೊರೆನೆಜ ಮೋಸ್ಕೋ ರೈಲ್ವೆಯನ್ನು ಕೆಂಪು ಸೈನ್ಯವು ಕತ್ತರಿಸಿದೆ ಇತ್ತೀಚೆಗೆ ಜರ್ಮನರು ಬ್ರಿಟನಿನ ಮೇಲೆಯೂ, ಬ್ರಿಟಿಷರು ಜರ್ಮನಿಯ ಮೇಲೆಯೂ ಧಾಳಿಗೆ ಯತ್ನಿಸುತ್ತಿದ್ದಾರೆ ರೋಮೆಲನ ಸೈನ್ಯವು ಟ್ರಿಪೋಲಟಾನಿಯದಲ್ಲಿಯೂ ಹಿಂಜರಿದು ಮಿಸುರಾಟಾವನ್ನು ಮುಟ್ಟಿದವು ಬ್ರಿಟಿಷರ ಬರ್ಮದ ಧಾಳಿ ಬಲವಾಗಿದ್ದು ಅಕ್ಯಾಬಿನ ಮೇಲೆಯೂ ಬಾಂಬು ಸುರಿಸುತ್ತಿದ್ದಾರೆ.

ಚಿತಗಾಂಗ್-ಕಲ್ಕತ್ತಾ ಧಾಳಿ!

ಕಳೆದ ದಶಂಬರಿನಲ್ಲಿ ಜಪಾನರು ಬರ್ಮಮಲಯಗಳಿಗೆ ಧಾಳಿಯಿಟ್ಟಾಗಲೇ, ಯುದ್ಧ ಭಾರತದ ಬಾಗಿಲಿಗೆ ಬಂದಿತ್ತು ಜಪಾನರು ಮೇ ತಿಂಗಳಲ್ಲಿ ಬರ್ಮವನ್ನು ಸ್ವಾಧೀನಪಡಿಸಿದ ಮೇಲಂತೂ, ಮುಂದೆ ಭಾರತವೇ ಅವರ ಗುರಿಯೆಂದು ಹಲವರು ತಿಳಿದಿದ್ದರು ಆಗ ಎಷ್ಟೋ ಮಂದಿ ನಾಗರಿಕರು ಕಲ್ಕತ್ತ, ಬೊಂಬಯಿ, ಮದ್ರಾಸುಗಳಂಥಾ ಪ್ರಸಿದ್ಧ ಪಟ್ಟಣಗಳನ್ನು ಬಿಟ್ಟು ಹೋಗಿಯೂ ಇದ್ದರು. ಆದರೆ ಮತ್ತೆ ಕೆಲವು ತಿಂಗಳ ವರೆಗೂ, ಜಪಾನರ ಚಟುವಟಿಕೆಗಳೇನೂ ಭಾರತದತ್ತ ನಡೆಯದಿದ್ದು, ಅವರು ಪೇಸಿಪಿಕ್ಕಿನ ಕಡೆ ಲಕ್ಷ್ಯ ಕೊಡುತ್ತಿರುವುದನ್ನು ನೋಡಿ, ಭಾರತಕ್ಕೆ ಭೀತಿ ತಪ್ಪಿತೆಂದು ಕೆಲವರು ಬಗೆದರು. ಈ ಸಂದರ್ಭದಲ್ಲಿ ಸರಕಾರದವರು ರಕ್ಷಣಾ ವ್ಯವಸ್ಥೆಯನ್ನೂ ಮೊದಲಿಗಿಂತ ಹೆಚ್ಚು ಬಲಪಡಿಸಲು ಅನುಕೂಲವಾಯಿತು ಸೇನಾಪತಿ ವೇವಲರೂ ಈ ಸಂದರ್ಭದಲ್ಲಿ ಭಾರತೀಯರಿಗೆ ಧೈರ್ಯ ಬರುವ ಸಲುವಾಗಿ, ಜಪಾನರು ಈ ಕಡೆ ಧಾಳಿಯಿಡುವ ಸಂಭವ ಸಾಧ್ಯವಿಲ್ಲವೆಂದು ಭರವಸೆ ಕೊಟ್ಟಿದ್ದರು ಮಾತ್ರವಲ್ಲದೆ ನಾವು ಬರ್ಮವನ್ನು ಪುನಃ ಸ್ವಾಧೀನಪಡಿಸಿಕೊಳ್ಳುವೆವೆಂಬೀ ನಿರ್ಧಾರವನ್ನೂ ಸಾರಿದರು

ಇಂದಿನೀ ಯುದ್ಧಕಾಲದಲ್ಲಿ, ಒಂದು ಪಕ್ಷದ ಭರವಸೆ ನಿರ್ಧಾರಗಳಿಗೆ ಎದುರುಪಕ್ಷದವರು ಏನೇನೂ ಮನ್ನಣೆ ಕೊಡುವಂತೆ ಕಂಡುಬರುವುದಿಲ್ಲ ಭಾರತಕ್ಕೆ ಜಪಾನರ ಭೀತಿಯಿಲ್ಲವೆಂದು ವೇವಲರಾದಿಯಾಗಿ ಅಧಿಕಾರೀ ವರ್ಗ ಹೇಳುತ್ತಿದ್ದಂತೆ ಚಿತಗಾಂಗಿನ ಮೇಲೆ ಬಾಂಬಿನ ಮಳೆ ಎಡೆಬಿಡದೆ ಸುರಿಯತೊಡಗಿತು, ಅಸಾಮಿನಲ್ಲಿ ಕೂಡ ವೈಮಾನಿಕರು ಇಳಿದ ಸುದ್ದಿ ಬಂದಿತು, ಜಪಾನ್ ವಿಮಾನಗಳು ಸುತ್ತ ಹಾರಾಡತೊಡಗಿದವು, ಸಾಲದ್ದಕ್ಕೆ ಈಗ ಭಾರತದ ಪ್ರಾಮುಖ್ಯ ಪಟ್ಟಣವಾದ ಕಲ್ಕತ್ತೆಯ ಮೇಲೆಯೂ ಜಪಾನರು ಧಾಳಿಯಿಡತೊಡಗಿದ್ದಾರೆ ಹೀಗೆ ಭಾರತಕ್ಕೆ ಗಂಡಾಂತರವು ಈಗ ಬಂದಿದೆ, ಜಪಾನರು ಈಗಾಗಲೇ ಭಾರತದಲ್ಲಿ ೩೦ ಮೈಲು ನುಗ್ಗಿರುವರೆಂದು ಪೇರೀಸ್ ಸುದ್ದಿಯೊಂದು ಸಾರುತ್ತದೆ ಆದರೆ ಈ ಸುದ್ದಿಯು ನಿಜವಿರದ್ದೆ, ಮಿತ್ರರಿಂದ ನಿಜವಾದ ವಾರ್ತೆ ತಿಳಿಯಲು ಶತ್ರುಗಳು ಈ ಸುದ್ದಿ ಹರಡಿರಬಹುದೆಂದು ಕರ್ನಲ್ ನಾಕ್ಸರು ಹೇಳುತ್ತಾರೆ ಹೇಗಿದ್ದರೂ ಭಾರತದಲ್ಲಿ ಇಂದು ಯುದ್ಧ ಪ್ರಾರಂಭವಾದಂತೆಯೇ ಆಗಿದೆ ಈ ರೀತಿ ಶತ್ರುಗಳು ಭಾರತದ ಮೇಲೆ ಎರಗಿ ಬರುತ್ತಿರಲು ಇನ್ನೂ ರಾಜಕೀಯ ಸಮಸ್ಯೆ ಬಗೆಹರಿಸದೆ ಇರುವುದು, ರಾಷ್ಟ್ರೀಯ ಮುಖಂಡರನ್ನು ಇನ್ನೂ ಸೆರೆಮನೆಗಳಲ್ಲಿಯೇ ನರಳಿಸುತ್ತಿರುವುದು, ಇನ್ನೂ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸದೆ ಇರುವುದು, ಇನ್ನೂ ಭಾರತದ ಜನತೆಯ ಪೂರ್ಣ ಬೆಂಬಲ ಪಡೆಯಲು ಯತ್ನಿಸದಿರುವುದು, ಆ ಸಂದರ್ಭದಲ್ಲಿಯೂ ಸಾಮ್ರಾಜ್ಯಶಾಹೀ ಬುದ್ಧಿಯನ್ನು ಬಿಟ್ಟು ಬಿಡಲು ಬ್ರಿಟನಿಗೆ ಮನಸ್ಸಿಲ್ಲದಿರುವುದು—ಇದು ರಾಜಕೀಯ ಪ್ರಮಾದವೆನಿಸುವುದೆಂದು ನಾವು ಒತ್ತಿ ಹೇಳದೆ ನಿರ್ವಾಹವಿಲ್ಲ ಇಂಥಾ ಘೋರದಿಂದ ಭಾರತಕ್ಕೆ ನಾಶ ಮಲ್ಲ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಮಾತ್ರವಲ್ಲ ಮಿತ್ರರ ಯುದ್ಧಕಾರ್ಯಕ್ಕೇ ಪ್ರಬಲ ಆತಂಕವುಂಟಾಗದಿರದು! ಈಗಲಾದರೂ ಚರ್ಚಿಲ್ ಅಮೆರಿಕ ಕಂಪನಿಯವರು ಎಚ್ಚರಗೊಳ್ಳುವರೆ?

ವಿವಿಧ ರಣಕ್ಷೇತ್ರಗಳಲ್ಲಿ

ಎಲ್ ಅಗೇಲಾ ವರೆಗೆ ಹಿಂದೋಡಿದ್ದ ರೊಮೆಲನು ಅಲ್ಲಿ ನಿಂತು ಬ್ರಿಟಿಷರ ಅಷ್ಟಮದಳದ ವಿರುದ್ಧ ಹೋರಾಡುವನೆಂದು ಹಲವರೂ ಊಹಿಸಿದ್ದರು ಆದರೆ ಸಕಾಲದಲ್ಲಿ ಸಾಕಷ್ಟು ಸಹಾಯ ಒದಗದಿದ್ದರಿಂದಲೋ, ಟುನಿಶಿಯದಲ್ಲಿ ಜರ್ಮನ್ ಸೇನೆಗೆ ಬೆಂಬಲ ಕೊಡಬೇಕೆಂಬ ಉದ್ದೇಶದಿಂದಲೋ ರೊಮೆಲನು ಎಲ್ ಅಗೇಲಾವನ್ನು ಬಿಟ್ಟು ಟ್ರಿಪೋಲಿಕಡೆ ಹಿಂಜರಿದಿದ್ದಾನೆ ಹೀಗಾಗಿ ಮುಂದೆ ಟ್ಯುನಿಶಿಯ ಯುದ್ಧವೇ ಪ್ರಾಮುಖ್ಯವಾಗಿದೆ. ಟುನಿಶಿಯದಲ್ಲಿ ಮಿತ್ರರು ಟುನಿಸ್ ಬಿಜರ್ಟಾಗಳನ್ನು ಸ್ವಾಧೀನಪಡಿಸಿಕೊಳ್ಳದಂತೆ ನೋಡುವುದು ಅವಶ್ಯವಾದುದು. ಏಕೆಂದರೆ ಇವೂ ಮಿತ್ರರ ವಶವಾದರೆ ರೊಮೆಲನು ಕತ್ತರಿಯಲ್ಲಿ ಸಿಕ್ಕಿಬಿದ್ದಂತಾಗುತ್ತದೆ ಹೀಗಾಗಿ ಮುಂದಿನ ಆಫ್ರಿಕದ ರಣರಂಗವು ಟುನಿಶಿಯದಲ್ಲಿ ಇತ್ಯರ್ಥವಾಗಬಹುದು. ಟುನಿಶಿಯ ಕಾಳಗದ ವಿಷಯವಿಶೇಷ ವಾರ್ತೆಯೇನೂ ಸದ್ಯ ಬಂದಿಲ್ಲ

ರಶ್ಯದ ರಣಭೂಮಿಯಲ್ಲಿ ಇತ್ತೀಚೆಗೆ ಜರ್ಮನರ ಪ್ರತಿಭಟನೆ ಜೋರಾಗುತ್ತಿರುವ ಸುದ್ದಿಯಿದೆ ಹಿಮಗಾಲ ಪ್ರಾರಂಭವಾದ ಕೂಡಲೇ ರಶ್ಯನರು ಹೊಸ ಉತ್ಸಾಹದಿಂದ ಹೋರಾಡಿದರೇನೋ ನಿಜ ಡಾನ್ ವಕ್ರದವರೆಗೆ ಒಂದ ರಶ್ಯನ್ ಸೇನೆಗೆ ಅಲ್ಲಿಂದ ಮುಂದುವರಿವುದು ಆಗಲಿಲ್ಲ ಇದಕ್ಕೆ ಜರ್ಮನರ ಭದ್ರವಾದ ರಕ್ಷಣಾ ವ್ಯವಸ್ಥೆಯು, ರಶ್ಯನರ ಅಸಹಾಯತೆಯೂ ಕಾರಣವಿರಬಹುದು. ಆದರೂ ರಶ್ಯದ ಸಂಗ್ರಾಮವು ನಿರಂತರ ಭೀಕರವಾಗಿ ಸಾಗುತ್ತಲೇ ಇದೆ

ನ್ಯೂಗಿನಿ ಮತ್ತು ಸೊಲೊಮನ್‌ಗಳಲ್ಲಿ ನಡೆಯುತ್ತಿರುವ ಯುದ್ಧವು ಬಹಳ ಮಹತ್ವದ್ದಿದೆ ಜಪಾನರು ಈ ಎರಡು ದ್ವೀಪಗಳಲ್ಲಿ ಭದ್ರವಾಗಿ ತಳವೂರಿದರೆ ಅಲ್ಲಿಂದ ನ್ಯೂ ಹೆಬ್ರಿಡೀಸ್ ನ್ಯೂ ಕೆಲಡೋನಿಯ ಮೊದಲಾದ ದ್ವೀಪಗಳನ್ನು ಆಕ್ರಮಿಸಿಕೊಂಡು ನ್ಯೂಜೀಲಂಡನ್ನು ಮತ್ತು ಆಸ್ಟ್ರೇಲಿಯದ ಮೇಲೆ ಬೀಳುವುದು ಮಾತ್ರವಲ್ಲ ಆಸ್ಟ್ರೇಲಿಯ ಅಮೆರಿಕ ಸಂಬಂಧವನ್ನು ಕತ್ತರಿಸಲೂಬಹುದು ಆದ್ದರಿಂದಲೇ ಜಪಾನರು ನ್ಯೂಗಿನಿ ಸೊಲೊಮನ್‌ಗಳನ್ನು ಳಿಸಿಕೊಳ್ಳಲು ಸಾಹಸಪಡುತ್ತಿದಾರೆ ಮಿತ್ರರ ದೃಷ್ಟಿಯಿಂದಲಾದರೂ, ಈ ದ್ವೀಪಗಳ ದ ಜಪಾನರನ್ನೋಡಿಸಿದರೆ ನ್ಯೂಜೀಲೆಂಡ್ ಆಸ್ಟ್ರೇಲಿಯಗಳ ರಕ್ಷಣೆಯಾಗುವುದು ಮಾತ್ರವಲ್ಲದೆ ಜಪಾನಿನ ಮುತ್ತಿಗೆಯಿಡಲೂ ಅನುಕೂಲವಾಗುವುದು ನ್ಯೂಗಿನಿ ಸೊಲೊಮನ್‌ಗಳಲ್ಲಿ ಈಗ ವಿಕರ ಕೈಯ್ಯೇ ಮೇಲಾಗಿದೆ ಸಾಲದ್ದಕ್ಕೆ ಬ್ರಿಟಿಷ ಸೇನೆಯು ಬರ್ಮದ ಮೇಲೆ ಧಾಳಿಯಿಟ್ಟು ಅಕ್ಯಾಬ್ ಕಡೆಗೆ ಸಾಗುವ ಸಾಹಸ ಮಾಡುತ್ತಿದೆ ಯೆಂದೂ ಕೇಳಿ ಬರುತ್ತದೆ





ಸ್ವದೇಶಾಭಿಮಾನಿ

ತಾರೀಕು 25—12—1942

ವೈಸರಾಯರ ಭಾಷಣ

ಭಾರತದ ವೈಸರಾಯರಾಗಿರುವ ಲಾರ್ಡ್ ಲಿನ್ಲಿತ್‌ಗೋರವರು, ಕಲ್ಕತ್ತದಲ್ಲಿ ಎಸೋಸಿಯೇಟೆಡ್ ಕೆಮರ್ಸ್ ಚೇಂಬರಿನ ವಾರ್ಷಿಕಾಧಿವೇಶನದಲ್ಲಿ ಭಾಷಣ ಮಾಡುತ್ತಾ, ಸಂಪ್ರದಾಯದಂತೆ, ಭಾರತದ ರಾಜಕೀಯ ಪರಿಸ್ಥಿತಿಯ ಕುರಿತು ತಮ್ಮ ವಿವರಣೆಗಳನ್ನು ಕೊಟ್ಟರು. ಅವರ ಭಾಷಣದ ಮುಖ್ಯಾಂಶಗಳು ಇಂತಿವೆ. (೧) ಈ ವರ್ಷದ ಪ್ರಾರಂಭದಲ್ಲಿ ಜಪಾನರ ಬರ್ಮಾ ಮಲಯ ಧಾಳಿಯಿಂದ ಭಾರತಕ್ಕೆ ಗಂಡಾಂತರ ಸಮೀಪಿಸಿತೆಂದು ತೋರಿದ್ದರೂ ಈಗ ಪರಿಸ್ಥಿತಿ ಸುಧಾರಿಸಿದ್ದು ರಕ್ಷಣಾ ವ್ಯವಸ್ಥೆ ಚನ್ನಾಗಿದೆ. (೨) ಕಾಂಗ್ರೆಸು ಹಿಂಸಾಮಯ ಆಂದೋಲನವನ್ನು ಪ್ರಾರಂಭಿಸಿ ಸರಕಾರಕ್ಕೂ ಸಾರ್ವಜನಿಕರಿಗೂ ತೊಂದರೆಯನ್ನುಂಟುಮಾಡಿದ್ದರಿಂದ, ಅದನ್ನು ಉಗ್ರೋಪಾಯದಿಂದ ಇದಿರಿಸಬೇಕಾಯಿತು. (೩) ಆಹಾರ ಸಾಮಗ್ರಿಗಳಿಗೆ ಬೆಲೆಯೇರಿದ್ದರಿಂದ ಉತ್ಪಾದನೆ ಹೆಚ್ಚಿಸಬೇಕಾಗಿದೆ; ಬೆಲೆಯೇರಿದ್ದನ್ನು ನೋಡಿದರೆ ಜನರಲ್ಲಿ ಕೊಳ್ಳುವ ಶಕ್ತಿಯಿದೆಯೆಂದು ವ್ಯಕ್ತವಾಗುತ್ತದೆ; ಈ ಸಮಸ್ಯೆ ಪರಿಹರಿಸಲು ಸಂರಕ್ಷಣಾ ವ್ಯವಸ್ಥೆಗೆ ಸಾರ್ವಜನಿಕರು ಸಾಲ ಕೊಡಬೇಕಾಗಿದೆ. (೪) ಬ್ರಿಟನು ಅಧಿಕಾರ ಬಿಟ್ಟು ಕೊಡುವುದಾಗಿ ಹೇಳಿಬಿಟ್ಟದ್ದರಿಂದ, ಭಾರತದ ರಾಜಕೀಯ ಪಕ್ಷಗಳು ತಮತಮಗೆ ಅಧಿಕಾರ ಸಿಗಬೇಕೆಂದು ಹೊಡೆದಾಟ ಹೂಡಿದ ನಿಮಿತ್ತ ಇಂದಿನೀ ಬಿಕ್ಕಟ್ಟು ಉಂಟಾಗಿದೆ. ಹಾಗಾಗಿ ಬ್ರಿಟನು ಅಧಿಕಾರ ಬಿಟ್ಟುಕೊಡಲು ಸಿದ್ಧವಿಲ್ಲವೆನ್ನುವುದು ಸರಿಯಲ್ಲ. ಭಾರತೀಯರು ಒಕ್ಕಟ್ಟು ಸಾಧಿಸಿದರೆ ಅಧಿಕಾರ ಬಿಟ್ಟುಕೊಡುತ್ತೇವೆ.

ಮೇಲಿನ ಮಾತುಗಳಲ್ಲಿ ಯಾವುದೂ ಹೊಸತಿಲ್ಲ; ಅಧಿಕಾರೀವರ್ಗದ ಬಾಯಿಯಿಂದ ಹೊರಡುವ ಮಾತುಗಳ ಸಂಪ್ರದಾಯಕ್ಕೆ ಸಮತೂಕವೇ ಇದೆ. ತಮ್ಮ ದೇಶದ ರಕ್ಷಣೆ ಚನ್ನಾಗಿದೆಯೆಂದು ಆ ದೇಶವನ್ನು ರಕ್ಷಿಸುವ ಅಧಿಕಾರೀ ವರ್ಗವು ಹೇಳಿಯೇ ತೀರಬೇಕು. ಕಾಂಗ್ರೆಸಿನ ಮೇಲೆ ದಬ್ಬಾಳಿಕೆ ಹೂಡಿದ್ದನ್ನು ಸಮರ್ಥಿಸಲಿಕ್ಕೆ, ಕಾಂಗ್ರೆಸು ಹಿಂಸಾಕಾರ್ಯವನ್ನೂ ಅನ್ಯಾಯವನ್ನೂ ಮಾಡುತ್ತಿದೆಯೆಂದು ವಾದಿಸದೆ ಬೇರೆ ಮಾರ್ಗವಿಲ್ಲ. ಆಹಾರ ಸಾಮಗ್ರಿಗಳಿಗೆ ಬೆಲೆಯೇರಿದರೂ, ಜನರಿಗೆ ಕೊಳ್ಳುವ ಶಕ್ತಿಯುಂಟೆಂದು ಹೇಳಿದರೆ ಮಾತ್ರ ಬ್ರಿಟಿಷ್ ಪ್ರಭುತ್ವವು ಭಾರತದಲ್ಲಿ ಸುಭಿಕ್ಷವನ್ನುಂಟುಮಾಡಿದೆಯೆಂದು ಸಾರುತ್ತಿರುವ ಬ್ರಿಟಿಷ್ ನೀತಿಯನ್ನು ಸಮರ್ಥಿಸಿದ ಹಾಗಾಗುತ್ತದೆ. ಬ್ರಿಟನು ಇದುವರೆಗೂ ಭಾರತದ ಅಧಿಕಾರವನ್ನು ಕೊಡದೆ ಇನ್ನೂ ಬೇಕಾದಷ್ಟು ಕಾಲ ಅಧಿಕಾರವನ್ನು ತನ್ನ ಕೈಯಲ್ಲಿ ಇಟ್ಟುಕೊಳ್ಳಬೇಕಾದರೆ ಭಾರತದಲ್ಲಿ ಐಕ್ಯವಿಲ್ಲವೆಂದು ಹೇಳುವುದು ಒಂದು ಯುಕ್ತಿಯೇ ಆಗಿದೆ. ಹೀಗೆ ವೈಸರಾಯರು ಮಾಡಿದ ಭಾಷಣದಲ್ಲಿ ಹಳೆಗಾಲದ ಪಲ್ಲವಿಯ ಪುನರುಚ್ಚಾರಣೆಯೇ ಕಂಡುಬಂತಲ್ಲದೆ ಬೇರೇನೂ ತೋರಲಿಲ್ಲ. ಭಾರತದ ಜನಮತವು ಈ ಭಾಷಣದಿಂದ ಒಂದಿಷ್ಟೂ ಸಮಾಧಾನ ಹೊಂದುವ ಹಾಗಿಲ್ಲ.



ಲೋಕಪ್ರಸಿದ್ಧವಾದ ಚರ್ಮರೋಗ ನಿವಾರಕ

ಜಾಂಬಕ್ ತುರಿಕಜ್ಜಿ ಗಾಯ ಬಾವುಗಳನ್ನು ಗುಣಪಡಿಸುವುದು.

ಚರ್ಮದ ರೋಗಗಳಿಗೆ ಮತ್ತು ಗಾಯಗಳಿಗೆ, ಇಡೀ ಲೋಕದಲ್ಲೇ ಪ್ರಖ್ಯಾತವಾಗಿರುವ ಔಷಧವೆಂದರೆ ಜಾಂಬಕ್ ಗಾಯವಾದರೆ ಇಲ್ಲವೇ ಕಜ್ಜಿಯಾದರೆ ಇದನ್ನು ಆದರಮೇಲೆ ಮೆಲ್ಲಗೆ ತಾಗಿಸಿರಿ; ಅದು ಕೂಡಲೇ ಸುಲಭದಲ್ಲಿ ಗುಣವಾಗುವುದು. ಜಾಂಬಕಿನಲ್ಲಿರುವ ಅಮೂಲ್ಯ ವನೌಷಧಸತ್ವವು ಚರ್ಮದ ನರಗಳಲ್ಲಿ ಕೂಡಲೇ ಹೀರಿಕೊಂಡು, ಬೇನೆಯನ್ನು ಕಡಿಮೆಮಾಡುವುದು. ಬಾವನ್ನು ಇಳಿಸುವುದು, ಒಣಗುವಂತೆ ಮಾಡಿ ಗುಣಕೊಡುವುದು. ಕಲೆಯುಳಿಯದಂತೆ ಜಾಂಬಕ್ ಗುಣಮಾಡುತ್ತದೆ. ಜಾಂಬಕ್ ಲೇಪಕ್ಕೆ ಒಂದು ರೂಪಾಯಿ ಇಲ್ಲವೆ ರೂ. 2-4-0 ಸೋಪಿಗೆ ಒಂದು ರೂಪಾಯಿ ಪೌಡರಿಗೆ ಒಂದುರೂಪಾಯಿ.



ಯಾವಾಗಲೂ ಜಾಂಬಕನ್ನೇ ಸೇವಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಸ್ವದೇಶ ಸಮಾಚಾರ

'ಬನ್ಸಾಲಿಯವರ ಪ್ರಾಣ ಉಳಿಸಿರಿ'

ಹೀರಾಚಂದರ ವಿನಂತಿ

ಬೊಂಬಯಿಯ ಪ್ರಸಿದ್ಧ ವರ್ತಕರಾದ ಲೀಲಾಚಂದ ಹೀರಾಚಂದರು ಅಣೆಯವರಿಗೆ ಒಂದು ತಂತಿ ಕೊಡುತ್ತಾ, ಚಿಮೂರು ವಿಚಾರಣೆಗೆ ಒಪ್ಪಿಕೊಳ್ಳುವುದರಿಂದ, ಹಾಗೂ ವಿಚಾರಣೆ ಮಾಡುವಾಗ ಪ್ರೊ|| ಬನ್ಸಾಲಿಯವರನ್ನು ಕರೆಕೊಂಡು ಹೋಗಲು ಒಪ್ಪಿಕೊಳ್ಳುವುದರ ಮೂಲಕ ಅವರ ಉಪವಾಸವನ್ನು ನಿಲ್ಲಿಸಬೇಕೆಂದೂ, ಅಖಿಲಭಾರತದ ಜನತೆಯು ಪ್ರೊ|| ಬನ್ಸಾಲಿಯಂಥವರ ಋಷಿ ಜೀವನವನ್ನುಳಿಸುವ ಸಲುವಾಗಿ ಈಗ ನಿಮ್ಮ ಕಡೆ ನಿರೀಕ್ಷಿಸುತ್ತಿದೆಯೆಂದೂ ಬರೆದಿರುವರು. ಬನ್ಸಾಲಿಯವರು ಉಪವಾಸಕ್ಕೆ ತೊಡಗಿ ಕಳೆದ ಶನಿವಾರಕ್ಕೆ ೪೧ ದಿನ ದಾಟಿತು.

ಪೋಲೀಸರು ಮತ್ತು ಕಾನೂನು

ಸಂಶಯದ ಮೇಲೆ ವೇಲೆ ಓರ್ವನನ್ನು ಚಿತ್ರಹಿಂಸೆಗೆ ಗುರಿಮಾಡಿ, ಕಾನೂನು ಮೀರಿ ಕೆಲದಿನ ಅವನನ್ನು ಬಂಧನದಲ್ಲಿಟ್ಟ ತಪ್ಪಿಗಾಗಿ, ಓರ್ವ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಸಹಿತ ಐದು ಮಂದಿ ಪೋಲೀಸಿನವರಿಗೆ, ಲಾಹೋರ್ ಹೈಕೋರ್ಟಿನ ಜಡ್ಜರಾದ ಶ್ರೀ|| ಜಸ್ಟಿಸ್ ರಾಮಲಾಲರು ಕಠಿಣ ಶಿಕ್ಷೆಯ ತೀರ್ಮಾನ ಕೊಟ್ಟು, ತಮ್ಮ ಹೇಳಿಕೆಯಲ್ಲಿ ಕೆಲ ಪೋಲೀಸ್ ನೌಕರರು ಜನರಿಗೆ ಚಿತ್ರಹಿಂಸೆ ಮಾಡುವುದರ ಮೂಲಕ ತಮಗೆ ಉದ್ಯೋಗದಲ್ಲಿ 'ಪ್ರೊಮೋಶನ್' ಸಿಗಲ್ಲಾರದೆಂದು ತಿಳಕೊಂಡಷ್ಟು ಬೇಗ, ಆದರಿಂದ ಪೋಲೀಸ್ ಖಾತೆಗೂ ಸಾರ್ವಜನಿಕರಿಗೂ, ಸರಕಾರದ ಭದ್ರತೆಗೂ ಒಳ್ಳೆಯದು ಆದೀತೆಂದು ವಿವರಿಸಿದ್ದಾರೆ. ಯಾವುದೇ ವ್ಯಕ್ತಿಗೂ ಚಿತ್ರಹಿಂಸೆ ಕೊಟ್ಟು ಆತನಿಂದ ವಿಷಯವನ್ನು ಹೊರಗೆಳಹಿದರೆ, ಅದು ನಿಷ್ಪ್ರಯೋಜಕವಾದ ಆಧಾರವಾಗುತ್ತದೆಂದೂ, ಕೆಳ ಪೋಲೀಸ್ ನೌಕರರು ಇಂಥಾ ದುಷ್ಕೃತ್ಯಗಳನ್ನು ಮಾಡದಂತೆ, ಮೇಲಿನ ಪೋಲೀಸ್ ಅಧಿಕಾರಿಗಳು ನೋಡಿಕೊಳ್ಳುವುದು ಅವರ ಕರ್ತವ್ಯವಾಗಿದೆಯೆಂದೂ, ಪೋಲೀಸರ ವ್ಯವಹರಣೆಯ ವಿಷಯ ಸುಧಾರಣೆ ಆಗುವುದು ಅವಶ್ಯವೆಂದೂ, ಭಾರತದಲ್ಲಿ ಮಾತ್ರ ಇಂಥಾ ಚಿತ್ರಹಿಂಸೆಯ ಪ್ರಮಾಣವು ನಿಷ್ಪ್ರಯೋಜಕವೆಂಬ ವಿಷಯ ಇನ್ನೂ ಯಾಕೆ ಸಮಾಜವು ತಿಳಿಕೊಳ್ಳಲಿಲ್ಲವೋ ಎಂದೂ ಅವರು ತಮ್ಮ ತೀರ್ಮಾನದಲ್ಲಿ ಹೇಳಿ ಕೆಳಕೋರ್ಟಿನಲ್ಲಿ ಕೊಟ್ಟ ಕಡಿಮೆ ಶಿಕ್ಷೆಯಲ್ಲಿ ಹೈಕೋರ್ಟಿನಲ್ಲಿ ಹೆಚ್ಚಿಸಿದ್ದಾರೆ. ಈ ತೀರ್ಮಾನದ ವಿಚಾರವು ಎಲ್ಲಾ ಪ್ರಾಂತಗಳ ಅಧಿಕಾರಿಗಳ ಗಮನಕ್ಕೂ ಅರ್ಹವಾಗಿದೆ.

ಹಿಂದು, ಬೌದ್ಧ, ಕಮ್ಯುನಿಸ್ಟ

ತ್ರಿಪಟಿಕಾಚಾರ್ಯ ರಾಹುಲ ಸಂಕೃತ್ಯಾಯನರು

ಕೆಲವು ತಿಂಗಳ ಹಿಂದೆ ಬಂಧನದಿಂದ ಬಿಡುಗಡೆ ಹೊಂದಿ ಈಗ 'ಹೋರಾಟ' ಎಂಬ ಹಿಂದೀ ವಾರಪತ್ರಿಕೆಯನ್ನು ನಡೆಸುತ್ತಿರುವ ಮಹಾಪಂಡಿತ ತ್ರಿಪಟಿಕಾಚಾರ್ಯ ರಾಹುಲ ಸಂಕೃತ್ಯಾಯನರು, ಜನ್ಮತಃ ಸನಾತನ ಹಿಂದು; ಅಸಮಾನ ಸಂಸ್ಕೃತ ಪಾಂಡಿತ್ಯ ಪಡೆದು ಬೌದ್ಧರಾದರು. ವಿಶ್ವ ಸಂಚಾರ ಮಾಡಿ ಕಾರ್ಲ್ ಮಾರ್ಕ್ಸ್ ಮೆಚ್ಚುಗಾರರಾದರು. ರಷ್ಯಕ್ಕೆ ಹೋಗಿ ಅಲ್ಲಿನ ಯುವತಿಯನ್ನು ಮಧುವೆಯಾಗಿ ಆಕೆಯಲ್ಲಿ ಪುತ್ರನನ್ನು ಪಡೆದಿದ್ದಾರೆ. ಕ್ರಾಂತಿಕಾರರೆಂದು ಸೆರೆವಾಸ ಅನುಭವಿಸಿದ್ದಾರೆ. ಕಾಳಿದಾಸನ ಕಾಲದಿಂದ ಇಂತಹ ದಿಗ್ವಿಜಯದ ಸಂಸ್ಕೃತ ಪಂಡಿತನಿರಲಿಲ್ಲವೆಂದು ಪಂಡಿತರಿಂದ ಮನ್ನಣೆ ಪಡೆದಿದ್ದಾರೆ. ಬೌದ್ಧ ಪ್ರಪಂಚದಲ್ಲಿ ಅವರು ಸುವಿಖ್ಯಾತರು. ನಲಂದಾ ಪುನರುದ್ಧಾರ ಸಮಿತಿಯ ಅಧ್ಯಕ್ಷರವರು. ಸಂಸ್ಕೃತ ಪುಸ್ತಕಗಳನ್ನೂ ಭಾರತೀಯ ಭಾಷೆಗಳನ್ನೂ, ಅವುಗಳ ಭಾಷಾಂತರಗಳನ್ನೂ ಸಂಪೂರ್ಣವಾಗಿ ಪಠಿಸಲು ರಾಹುಲರು ತುರ್ಕಿ, ಇರಾಕ್ ಬಿಟ್ಟು ಏಷಿಯದ ಎಲ್ಲ ರಾಷ್ಟ್ರಗಳನ್ನೂ, ಸ್ಕಾಂಡಿನೇವಿಯ ಬಿಟ್ಟು ಸಮಗ್ರ ಯೂರೋಪನ್ನು ಸಂಚರಿಸಿದ್ದಾರೆ. ಏಷಿಯ, ಯೂರೋಪಿನ ಮುಖ್ಯ ಭಾಷೆಗಳೆಲ್ಲ ಅವರಿಗೆ ಬರುತ್ತವೆ. ಹಿಂದಿಯಲ್ಲಿ ೨೫, ಪಾಳಿ, ಟಿಬೆಟನ್ ಸಂಸ್ಕೃತಗಳಲ್ಲಿ ೩೦ ಪುಸ್ತಕಗಳನ್ನು ಬರೆದಿದ್ದಾರೆ. ಹಿಂದಿಯಲ್ಲಿ ಅವರು ಬರೆದಿರುವ 'ಸೋವಿಯಟ್ ಭೂಮಿ'ಯು ಆಧಾರ ಗ್ರಂಥವಾಗಿದೆ. ರಷ್ಯ ಕುರಿತು ಅವರಷ್ಟು ಪ್ರಮಾಣ ವಚನರು ಭಾರತದಲ್ಲಿಲ್ಲ. ಬರಿ ಪಂಡಿತರಷ್ಟೆ ಅಲ್ಲ. ೧೯೩೪ರಲ್ಲಿ ಬಿಹಾರಿನಲ್ಲಿ ಸಮತಾವಾದ ಪಕ್ಷ ಸ್ಥಾಪಿಸಿದರು. ಅಖಿಲಭಾರತ ಕಿಸಾನ್ ಸಮ್ಮೇಳನಧ್ಯಕ್ಷರಾಗಿದ್ದರು. ಬಿಹಾರಿಗಿರುವ ಅವರೆ ಕಿಸಾನ್ ನಾಯಕರು. ಸ್ವಾಮಿ ಸಹಜಾನರಿದ, ಯದುನಂದನ ಶರ್ಮ, ಕಾರ್ಯಾನಂದ ಶರ್ಮ ಇವರಲ್ಲೂ ಇವರ ಸಹಕಾರಿಗಳಿದ್ದರು.

ಅಲ್ಲಲ್ಲಿಯ ಸುದ್ದಿಗಳು

ದೇಶ ಸರ್ವತ್ರ ಆಂದೋಲನ ನಡೆಯುತ್ತಲೇ ಇದೆ. ಬಂಧನ, ಶಿಕ್ಷೆಗಳೊಂದಿಗೆ ಲಾಠಿ, ಬೆತ್ತಗಳ ಪೆಟ್ಟುಗಳೂ ಗುಂಡು ಹಾರಿಸುವಿಕೆಯೂ ಆಗುತ್ತಿದೆ. ಕಲ್ಕತ್ತಾ ನಗರಕ್ಕೆ ಈಗ ಎಡೆಬಿಡದೆ ಜಪಾನರು ಬಾಂಬು ಹಾಕಲು ತೊಡಗಿದ್ದಾರೆ. ಚಿತಗಾಂಗಿಗೂ ಅದೇ ರೀತಿ ಧಾಳಿ ನಡೆಯುತ್ತಿದೆ. ಭಾರತದ ಕೆಲವು ಕಡೆಗಳ ದೇಶೀ ಬಾಂಬುಗಳ ಸ್ಫೋಟವೂ, ಸ್ವೇರನು ಮೊದಲಾದುವುಗಳ ಸುಡುವಿಕೆಯೂ ನಡೆಯುತ್ತಿದೆ. ಹಿಂಡಲಗಿ ಜೈಲಿನಲ್ಲಿ ಕೊಲೆರಾ ರೋಗ ಹರಡಿದ್ದು ಕೈದಿಗಳಲ್ಲಿ ಕೆಲವರು ಮೃತಪಟ್ಟ ಸುದ್ದಿ ಬಂದಿದೆ. ಮುಂಬಯಿಯಲ್ಲಿ ಆಹಾರ ಸಾಮಗ್ರಿಗಳ ಕೊರತೆಯುಂಟಾಗಿದೆ. ಮಹಾದೇವ ದೇಸಾಯಿಯರ ಮರಣ ದಿನ ಸ್ಮಾರಕವಾಗಿ ಬೊಂಬಾಯಿಯಲ್ಲಿ ಸತ್ಯಾಗ್ರಹ ಆಚರಿಸಲ್ಪಟ್ಟು ಆಂಕ್ಕೆ ಮಿಕ್ಕಿದವರ ಕೈಪಾಗಿದೆ. ಪ್ರಿಸಿಡೆಂಟ್ ರೂಸ್‌ವೆಲ್ಟರು ಫಿಲಿಪ್ಸ್ ಎಂಬವರನ್ನು ಭಾರತಕ್ಕೆ ರಾಯಭಾರಿಯಾಗಿ ಕಳುಹಿಸಿದ್ದಾರೆ.

ಲಘು ವಿಜ್ಞಾನ

ನಾಲ್ಕನೆಯ ಪುಸ್ತಕ ನಾಲ್ಕನೆಯ ಫೋರ್ಮಿಗೆ

ಕೆ. ಎಲ್. ಕಾರಂತ್, ಬಿ.ಎ.ಎಲ್.ಟಿ ಬೋರ್ಡ್ ಹೈಸ್ಕೂಲ್ ಕುಂದಾಪುರ.

ಬೆಲೆ: 1-4-0.

೫ನೆಯ ಪುಸ್ತಕ

V ಮತ್ತು VI ನೆಯ ಫೋರ್ಮುಗಳಿಗೆ

ಲೇಖಕರು:

ಹೆಜಮಾಡಿ ಮುದ್ದಣ್ಣ ಶೆಟ್ಟಿ ಬಿ. ಎಸ್. ಸಿ., ಎಲ್. ಟಿ.

ಬೋರ್ಡ್ ಹೈಸ್ಕೂಲ್, ಮುಲ್ಕಿ

ಎಸ್. ರಾಮಕೃಷ್ಣ ಆಚಾರ್, ಬಿ. ಎ., ಎಲ್. ಟಿ.

ಬೋರ್ಡ್ ಹೈಸ್ಕೂಲು ಪುತ್ತೂರು.

ಬೆಲೆ 2-4-0

ಪುಸ್ತಕಗಳು ಬೇಕಾದಲ್ಲಿ ಬರಕೊಳ್ಳಿರಿ.

ಶಾರದಾ ಛಾಪಖಾನೆ, ಮಂಗಳೂರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಕೇಶವ ಕುಡ್ವರಿಗೆ ಶಿಕ್ಷೆ

ಪಾಣೆಮಂಗಳೂರಿನ ಶ್ರೀ. ಕೇಶವ ಕುಡ್ವರ ವಿಚಾರಣೆ ಮಂಗಳೂರು ಸಬ್ ಡಿ. ಆಫೀಸರ್ ಶ್ರೀ. ಜೂಗಪ್ಪ ಅವರ ಮುಂದೆ ತಾ. ೨೧ರಂದು ನಡೆದು, ಆರೋಪಿಗೆ ೬ ತಿಂಗಳ ಕಠಿನ ಶಿಕ್ಷೆ ವಿಧಿಸಲ್ಪಟ್ಟಿತು. ಕಳೆದ ಸೆಪ್ಟಂಬರ ತಾ. ೬ರಲ್ಲಿ ಆರೋಪಿತರು ಪಾಣೆಮಂಗಳೂರಲ್ಲಿ ಸರಕಾರದ ಆಜ್ಞೆ ಮೀರಿ, ಒಂದು ಮೆರವಣಿಗೆ ನಡೆಸಿ, ಕಾಂಗ್ರೆಸ್ ಜಯಘೋಷ ಮಾಡಿದುದಲ್ಲದೆ, ರಾಜದ್ರೋಹದ ಒಂದು ಭಾಷಣವನ್ನೂ ಮಾಡಿದರೆಂದು ಮುಂತಾಗಿ ಇವರ ಮೇಲೆ ಆರೋಪಗಳು. ಆರೋಪಿತರು ಇಂದೇ ನವಂಬರ ತಾ. ೯ರಂದು ಸ. ಡಿ. ಮ್ಯಾಜಿಸ್ಟ್ರೇಟರ ಮುಂದೆ ಹಾಜರಾದವರು. ಇವರಿಗೆ "ಸಿ" ಕ್ಲಾಸ್ ಕೊಟ್ಟು, ಆಲೀಪುರಂ ಜೈಲಿಗೆ ಸಾಗಿಸಲಾಗುವುದು.

ದಂಡನೆ ತಗ್ಗಿಸಲಾಯಿತು

ಬೈಂದೂರಲ್ಲಿ ಒಂದು ಮದ್ಯದ ಅಂಗಡಿಯ ಬೀಗ ಒಡೆದು, ಪಿಳಸುಗ್ಗಿ ಕಳ್ಳಿನ ಕೆಲವು ಮಡಿಕೆಗಳನ್ನು ಒಡೆದು, ಕೆಲವು ಸಾರಾಯಿನ ಪಾತ್ರಗಳನ್ನು ಅಲ್ಲಿಂದ ಜಾರಿಸಿದರೆಂಬಿತ್ಯಾದಿ ಆರೋಪಗಳಿಗೆ ಬಳಗಾಗಿ, ಕಳೆದ ಸೆಪ್ಟಂಬರ ತಾ. ೧೭ರಲ್ಲಿ ಕುಂದಾಪುರ ಸಬ್ ಡಿ. ಮ್ಯಾಜಿಸ್ಟ್ರೇಟರಿಂದ—ಇ. ಪೆ. ಕೋ. ಸೆಕ್ಷನ್ ೪೫೭, ೪೨೬ ಮತ್ತು ೩೮೦ಗಳಿಗೆ ಅನುಸಾರವಾಗಿ—ಒಟ್ಟಿಗೆ ೩ ವರ್ಷಗಳ ಕಠಿನ ಸಜೆಗೆ ಗುರಿಯಾಗಿದ್ದ ೧ನೇ ಆರೋಪಿತರ ಹಾಗೂ ಒಟ್ಟಿಗೆ ತಲಾ ೧೮ ತಿಂಗಳ ಕಠಿನ ಸಜೆಗೆ ಗುರಿಯಾಗಿದ್ದ ೨, ೩, ೪ನೇ ಆರೋಪಿಗಳಾದ ಮಹಾಲಿಂಗ, ಅಣ್ಣಪ್ಪ ಮತ್ತು ವಾಸುದೇವ ಸೇಟ್ ಇವರ ಅಪೀಲಿನ ವಿಚಾರಣೆ ದ. ಕ. ಜಿಲ್ಲಾ ಜಡ್ಜರ ಮುಂದೆ ನಡೆದು ೧ನೇ ಆರೋಪಿಯ ಸಜೆಯನ್ನು ೧ ವರ್ಷಕ್ಕೂ, ೨, ೩, ೪ನೆಯವರ ದಂಡನೆ ೯ ತಿಂಗಳಿಗೂ ತಗ್ಗಿಸಲಾಗಿದೆ.

ದ. ಕ. ಜಿಲ್ಲಾ ಬೋರ್ಡು

'ಬೋರ್ಡಿನ ಆರ್ಥಿಕ ಪರಿಸ್ಥಿತಿಯು ತೀರ ಶಿಥಿಲವಾಗುತ್ತ ಬಂದಿದೆ. ಯುದ್ಧದ ದೆಸೆಯಿಂದಾಗಿ ವೆಚ್ಚಗಳು ಅಧಿಕವಾಗಿ ಜನತೆಯ ಕೋರಿಕೆಗಳನ್ನೆಲ್ಲ ಮನ್ನಿಸುವುದು ಶಕ್ಯವಾಗಿಲ್ಲ. ೧೯೪೧-೪೨ರ ಬಜೆಟಿನಲ್ಲಿ ರೂ. ೬೮೮೬೨ ಉಳಿತಾಯವಿತ್ತು. ಆದರೆ, ೧೯೪೨-೪೩ರಲ್ಲಿ ಕಡಿಮೆಯಾದ ಭೂಕಂದಾಯದ ಆದಾಯದಿಂದಾಗಿ ಆರ್ಥಿಕ ಪರಿಸ್ಥಿತಿ ಕ್ಲಿಷ್ಟವಂತಾಯಿತು. ಈ ಕಾರಣದಿಂದ ವೆಚ್ಚವನ್ನು ಸಾಧ್ಯವಿದ್ದಷ್ಟು ಕಡಿಮೆ ಮಾಡುವುದು ಅವಶ್ಯವಾಗಿದೆ. ರಿವೈಸ್ಡ್ ಎಸ್ಟಿಮೇಟು ಅತೃಪ್ತಿಕರವಾಗಿದೆಯಷ್ಟೆ ಅಲ್ಲ—ವರ್ಷದ ಬಜೆಟ್ ಎಸ್ಟಿಮೇಟು ಆದಕ್ಕಿಂತಲೂ ಚಿಂತೆಗೆ ಕಾರಣವಾಗಿದೆ. ಭೂಕಂದಾಯದಿಂದ ರೂ. ೧,೮೫,೫೪೩ ಸಿಗಬಹುದೆಂದು ಅಂದಾಜು ಹಾಕಲಾಗಿದೆ. ಇದು ೧೯೪೦-೪೧ರ ನಿಜವಾದ ಸಂಖ್ಯೆಗಿಂತ ರೂ. ೪೬,೬೭೯ ಕಡಿಮೆಯಾಯಿದೆ. ಆದ್ದರಿಂದ ವೆಚ್ಚವನ್ನು ರೂ. ೬,೩೩,೮೬೦ಕ್ಕೆ ಇಳಿಸಬೇಕಾಗಿದೆ' ಹೀಗೆಂದು ಕಳೆದ ದ. ಕ. ಜಿಲ್ಲಾ ಬೋರ್ಡು ಸಭೆಯಲ್ಲಿ ಬೋರ್ಡಿನ ಆಯವ್ಯಯದ ಕುರಿತು ಅಧ್ಯಕ್ಷರು ಹೇಳಿದರು.

ಮುನಿಸಿಪಾಲಿಟಿ

ತಾ. ೧೬ರಂದು ಸಂಜೆ ಸ್ಥಳೀಯ ಮುನ್ಸಿಪಲ್ ಕಾರ್ಯಾಲಯದಲ್ಲಿ, ಸ್ಪೆಶಲ್ ಆಫೀಸರರು ಮುನ್ಸಿಪಲ್ ಕಾರ್ಯಕಲಾಪಗಳ ತೀರ್ಮಾನ ಮಾಡಿದರು. ವೆಟ್‌ಸ್ಟರ್ ಮಾರ್ಕೆಟಿನ ರಿಪೇರಿಗಾಗಿ ರೂ. ೫೬೦, ನಂದೀಗುಡ್ಡ ರಸ್ತೆಯ ಒಂದು ಮೋರಿ ಕಟ್ಟಲು ರೂ. ೩೦೦ ಬಸ್ ಸ್ಟ್ಯಾಂಡಿನಲ್ಲಿ ಮೂತ್ರಿಕೆಗಾಗಿ ರೂ. ೩೦೦ ಇತ್ಯಾದಿ ಮಂಜೂರಾದುವು. ಕಾರ್ನಾಡ್ ಸದಾಶಿವರಾಯರ ರಸ್ತೆಯ ಬಡಾವಣೆ ಸಂಬಂಧ ಹುಟ್ಟಿದ್ದ ವ್ಯಾಜ್ಯದಲ್ಲಿ ಈ ಕೌನ್ಸಿಲು ಸಬ್ ಕೋರ್ಟಿನ ತೀರ್ಪಿನ ವಿರುದ್ಧವಾಗಿ ಹೈ ಕೋರ್ಟಿಗೆ ಅಪೀಲ್ ಮಾಡುವುದಿಲ್ಲವೆಂದಾಯಿತು. ೧೯೪೨-೪೩ನೇ ಇಸವಿಯ ಈ ಮುನಿಸಿಪಾಲಿಟಿಯ ತಿದ್ದಿದ ಅಂದಾಜುಪಟ್ಟಿಯೂ, ೧೯೪೩-೪೪ರ ಬಜೆಟ್ ಎಸ್ಟಿಮೇಟೂ ಕಮಿಷನರರ ಶರಾಗಳೊಂದಿಗೆ ಮಂಜೂರಾದುವು.

ಭಾಷಣ

ವಿದ್ಯಾಂಗದ ಡೆಪ್ಯುಟಿ ಡೈರೆಕ್ಟರ್ ಶ್ರೀ. ಜಿ. ಎಲ್. ಲೋಬೋ ಅವರು ಈಚೆಗೆ ಸ್ಥಳೀಯ ಗವರ್ನಮೆಂಟ್ ಕಾಲೇಜಿನಲ್ಲಿ ಮಂಗಳೂರು ನಗರದ ಯಾವತ್ತು ಎಲಿಮೆಂಟರಿ ಶಾಲಾ ಉಪಾಧ್ಯಾಯ—ಉಪಾಧ್ಯಾಯಿನಿಯರಿಗಾಗಿ, ಸರಕಾರದ ಈಗಿನ ವಿದ್ಯಾಂಗದ ಕಾರ್ಯನೀತಿಯ ಕುರಿತಾಗಿ ಒಂದು ಭಾಷಣ ಕೊಟ್ಟರು.

ಪುನಃ ಏ. ಆರ್. ಪಿ. ಯವರ ಪರೀಕ್ಷಾ ಪ್ರಯೋಗ

ಕಳೆದ ಸೋಮವಾರ ಬೆಳಗ್ಗೆ ಘಂಟೆ ೧೦-೪೦ರಿಂದ ೧೧ರ ವರೆಗೆ ಮಂಗಳೂರಲ್ಲಿ ಸೈರನ್ನಿನ ಸಂಕೇತದೊಡನೆ ಎರಡನೆ ಬಾರಿಯಾಗಿ ಏ. ಆರ್. ಪಿ. ಯವರ ಪರೀಕ್ಷಾ ಪ್ರಯೋಗ ನಡೆಯಿತು.

ಟೌನ್ ಕೋ ಒಪರೇಟಿವ್ ಬೇಂಕ್

ಈ ಬೇಂಕಿನ ವರ್ಷಾವಧಿಯ ಮಹಾ ಸಭೆ ಕಳೆದ ಆದಿತ್ಯವಾರ ಬೆಳಗ್ಗೆ ಆ ಬೇಂಕಿನ ಕಟ್ಟಡದಲ್ಲಿ ಶ್ರೀ. ಕಸ್ತೂರಿ ವಾಸುದೇವ ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಗೀತಾ ಜಯಂತಿ

ಸ್ಥಳೀಯ ಶ್ರೀ ವಿವೇಕಾನಂದರ ಸಭೆಯ ಆಶ್ರಯದಲ್ಲಿ, ಕೆನರಾ ಹೈಸ್ಕೂಲಿನಲ್ಲಿ ಗೀತಾ ಜಯಂತ್ಯುತ್ಸವವು ಶ್ರೀ. ಸ್ವಾಮಿ ಸುವಿಚಾರಾನಂದಜಿ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೧೮ರಲ್ಲಿ ಜರಗಿತು. ಶ್ರೀಗಳಾದ ಎಸ್. ಕೃಷ್ಣ ಭಟ್, ಶ್ರೀಪತಿ ರಾವ್, ಬಿ. ಜೂಗಪ್ಪ ಮೊದಲದವರು ಗೀತಾ ವಿಚಾರದಲ್ಲಿ ಭಾಷಣ ಮಾಡಿದರು. ಅಧ್ಯಕ್ಷರ ಭಾಷಣವಾಗಿ ಪ್ರೊ. ರಾಮಚಂದ್ರ ಅಯ್ಯರರು ಧನ್ಯವಾದಗಳನ್ನು ಅರ್ಪಿಸಿದರು.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಸಭೆಯು

ತಾ ೧೫ರಲ್ಲಿ ಚೆಯರ್‌ಮೇನ್ ಶ್ರೀ ಅಮ್ಮೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲು ಮೆಂಬರರಾದ ಶ್ರೀ ಶಂಬು ಶೆಟ್ಟರ ತೆರಿಗೆಯ ತೀರ್ಮಾನದ ಕುರಿತು ಜಿಲ್ಲಾ ಜಡ್ಜರಲ್ಲಿ ಕೇಳಲು ನಿರ್ಣಯವಾಯಿತು. ರಸ್ತೆಗಳಿಗೆ ನೀರು ಹಾಕುವರೆ 'ಗ್ಯಾಸ್ ಪ್ಲಾಂಟು'ಳ್ಳ ಲೋರಿಯನ್ನು ಪ್ರಯೋಗಿಸುವ ಕುರಿತು ಮಾತುಕತೆ ನಡೆಯುತ್ತಿರುವುದರಿಂದ, ವಾಟರ್ ಲೋರಿಡ್ರೈವರರ ತೆಗೆದು ಹಾಕುವ ವಿಷಯ ಬಾಕಿ ಇಡಲಾಯಿತು. ಮಾರ್ಕೆಟುಗಳಿಗೆ ಬರಬಹುದಾದ ತಲೆ ಹೊರೆ ಒಂದರ ನಾಲ್ಕು ಪೈಗಳಂತೆ ವಸೂಲ್ಮಾಡುವುದನ್ನು ಆರು ಪೈಗೇರಿಸುವ ಮತ್ತು ಗಾಡಿ ಒಂದರ ಎರಡಾಣೆ ಇದ್ದುದನ್ನು ನಾಲ್ಕಾಣೆಗೇರಿಸುವ ಪ್ರಶ್ನೆಯು ತೀರ್ಮಾನಕ್ಕೆ ಬಾಕಿಯಿಡಲಾಯಿತು. ಪ್ರೊವಿಡೆಂಟ್ ಫಂಡಿನ ರೂಪಾಯಿ ೫೦೦೦/- ವನ್ನು ವಾರ್ ಬೋಂಡುಗಳ ಮೇಲಿರಿಸುವುದು ಬೇಡ; ಅದಕ್ಕೆ ಬದಲಾಗಿ ಮದ್ರಾಸಿನ ಸೆಂಟ್ರಲ್ ಲೇಂಡ್ ಮೋರ್ಗೆಜ್ ಬ್ಯಾಂಕಿನ ಡಿಬೆಂಚರುಗಳ ಮೇಲಿರಿಸುವರೆ ಬಹುಮತದ ನಿರ್ಣಯವಾಯಿತು. ಮುನಿಸಿಪಲ್ ಲೈಬ್ರರಿಗೆ ರೂಪಾಯಿ ನಾಲ್ಕುನೂರು ಬೆಲೆಬಾಳುವ ಪುಸ್ತಕಗಳನ್ನು ಪಡೆಯುವರೆ ಸೆಂಕ್ಷನ್ ದೊರೆಯಿತು.

ಹತ್ತು ವರ್ಷಗಳ ತೀರ್ವೆ ಮಾಫಿ ಬೇಡಿಕೆ

ತಾ. ೧೧ರಲ್ಲಿ ಪಡುಕರೆ ಕೇಂದ್ರ ರೈತರ ಸಭೆಯಲ್ಲಿ, ಸರಕಾರದವರು ತೀರ್ವೆ ಮಾಫಿಯಿಂದ ಪಾಲು ಬಿದ್ದಿರುವ ಸ್ಥಳಗಳನ್ನು ಆಹಾರ ಸಾಮಗ್ರಿಗಳನ್ನು ಬೆಳೆಸುವ ಸಲುವಾಗಿ ಮೂರು ವರ್ಷಗಳ ತನಕ ರೈತರಿಗೆ ಕೊಡಬೇಕೆನ್ನುವ ಈ ನಿರ್ಧಾರದಿಂದ ಯಾವ ಪ್ರಯೋಜನವೂ ಸಿಗಲಾರದಾದ ಕಾರಣ ಸರಕಾರವು ಹತ್ತು ವರ್ಷಗಳ ತನಕ ತೀರ್ವೆ ಮಾಫಿಯಿಂದ ರೈತರಿಗೆ ಕೊಡುವ ರಿಯಾಯತಿಯನ್ನು ತೋರಿಸಬೇಕೆಂಬ ನಿರ್ಣಯವಾಯಿತು.

ವಿವಿಧ ಮತಧರ್ಮ ಸಮ್ಮೇಲನ

ಧರ್ಮಸ್ಥಳ

ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಹತ್ತು ವರ್ಷಗಳಿಂದ ಶ್ರೀಮಾನ್ ಮಂಜಯ್ಯ ಹೆಗ್ಡೆ (ಎಮ್. ಎಲ್ ಸಿ.)ಯವರು ಕಾರ್ತಿಕ ಮಾಸದ ಲಕ್ಷದೀಪೋತ್ಸವದ ಸಮಯದಲ್ಲಿ ನಡೆಯಿಸಿಕೊಂಡು ಬರುತ್ತಿರುವ 'ವಿವಿಧ ಮತಧರ್ಮ ಸಮ್ಮೇಲನ'ವು ಈ ವರ್ಷ ಮೈಸೂರಿನ ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ೯-೧೨-೪೨ರಲ್ಲಿ ಮತ್ತು ೬-೧೨-೪೨ರಲ್ಲಿ ನಡೆಯಿತು. ಮೊದಲನೇ ದಿವಸ 'ಕನ್ನಡ ಸಾಹಿತ್ಯದ ವೈಶಿಷ್ಟ್ಯ'ವೆಂಬ ವಿಷಯವೂ ಎರಡನೇ ದಿವಸ ಆತ್ಮಾನಾತ್ಮ ವಿವೇಕವೆಂಬ ವಿಷಯವೂ ಭಾಷಣಕ್ಕೆ ಗೊತ್ತು ಮಾಡಲ್ಪಟ್ಟಿತ್ತು. ಮೊದಲ ದಿನ ಶ್ರೀ ಶಿವರಾಮ ಕಾರಂತರೂ, ಶ್ರೀ॥ ಮುಳಿಯ ತಿಮ್ಮಪ್ಪಯ್ಯನವರೂ ಶ್ರೀ॥ ಉಗ್ರಾಣ ಮಂಗೇಶರಾಯರೂ, ಶ್ರೀ॥ ಲಕ್ಷ್ಮೀನಾರಾಯಣ ಉಪಾಧ್ಯಾಯರೂ, ಶ್ರೀ॥ ಸುಬ್ರಾಯ ಉಪಾಧ್ಯಾಯರೂ, ಶ್ರೀ॥ ಎಂ. ಡಿ. ಬಸವಪ್ಪ ಶಾಸ್ತ್ರಿಗಳೂ ಶ್ರೀ॥ ಎಚ್. ರಾಮರಾಯರೂ, ಮೈಸೂರು ಆಸ್ಥಾನ ಮಹಾ ವಿದ್ವಾನ್ ಶ್ರೀ॥ ಎ. ಶಾಸ್ತ್ರಿಗಳವರೂ ಸಹ ಕನ್ನಡ ಸಾಹಿತ್ಯದ ವೈಶಿಷ್ಟ್ಯವನ್ನು ಕುರಿತು ಭಾಷಣಗಳನ್ನು ಮಾಡಿದರು. ಮರುದಿವಸ 'ಆತ್ಮಾನಾತ್ಮ ವಿವೇಕ'ವೆಂಬ ವಿಷಯವನ್ನು ಕುರಿತು ಶ್ರೀ॥ ಲಕ್ಷ್ಮೀನಾರಾಯಣ ಉಪಾಧ್ಯಾಯರೂ, (ಬೌದ್ಧ) ಮ. ಎಸ್. ಕೆ. ಕರೀಮ ಖಾನ್ ಸಾಹೇಬರೂ, (ಇಸ್ಲಾಂ), ಶ್ರೀ॥ ಜಾರ್ಜ್ ಸೊನ್ಸರೂ, (ಕ್ರೈಸ್ತ), ಶ್ರೀ॥ ಸುಬ್ರಾಯ ಉಪಾಧ್ಯಾಯರೂ (ದ್ವೈತ), ಶ್ರೀ॥ ಆರ್ಯದ್ವಾಸ ಪಾರ್ಶ್ವಸಾಗರ ಸ್ವಾಮಿಗಳವರು (ಜೈನ), ಆಸ್ಥಾನವಿದ್ವಾನ್ ಶ್ರೀ॥ ಪಾ. ಚಂದ್ರಶೇಖರ ಭಟ್ಟರವರೂ (ಅದ್ವೈತ), ಶ್ರೀ॥ ಎಂ. ಡಿ. ಬಸವಪ್ಪ ಶಾಸ್ತ್ರಿಗಳವರೂ (ಶಕ್ತಿವಿಶಿಷ್ಟಾದ್ವೈತ), ಆಸ್ಥಾನ ಮಹಾವಿದ್ವಾನ್ ನ್ಯಾಯತೀರ್ಥ ಶ್ರೀ. ಶಾಂತಿರಾಜ ಶಾಸ್ತ್ರಿಗಳು (ಜೈನ), ಶ್ರೀ॥ ಜಿನರಾಜ ಶಾಸ್ತ್ರಿಗಳು (ಜೈನ) ಭಾಷಣಮಾಡಿದರು.

ಕಾಸರಗೋಡು

ಕಾರ್ಯ್ಯಾಡು

ಬೆಟರ್ ಫಾರ್ಮಿಂಗ್ ಸೊಸೈಟಿಯ (ಕೃಷಿ ಮಂಡಲಿ) ಮಹಾಸಭೆಯು ಶ್ರೀ ಎ ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕೃಷಿ ಸುಧಾರಣೆ, ಮಿತವ್ಯಯ, ಗೋರಕ್ಷಣೆ, ನವೀನ ವಿದ್ಯಾಭ್ಯಾಸ ಮೊದಲಾದ ವಿಷಯಗಳಲ್ಲಿ ಭಾಷಣಗಳು ಜರಗಿದುವು. ಈ ಸಂದರ್ಭದಲ್ಲಿ ಶ್ರೀ. ಗುತ್ತು ಗೋವಿಂದ ಭಟ್ಟರ ಸಂಗೀತ ಕಚೇರಿಯೂ ನಡೆಯಿತು. ಲೋಕದ ಈಗಿನ ಅನ್ಯವಸ್ಥೆಗಾಗಿ ಈ ಸಭೆಯು ವಿಷಾದಪಡುತ್ತದಲ್ಲದೆ ಅದು ಬೇಗನೆ ಕೊನೆಗೊಳ್ಳಲೆಂದು ಪ್ರಾರ್ಥಿಸಲಾಯಿತು.

ಮಂಜೇಶ್ವರ

ತಾ. ೧೯ರಲ್ಲಿ ಈ ಪೇಟೆಯಲ್ಲಿ ಶ್ರೀ॥ ಪಠಾರಿ ಕೇಪ್ರಿ ಒರಿಟಪ್ಪನಾಯ್ಕರು ಒಂದು ಗಾಡಿ ಅಕ್ಕಿ ಮುಡಿಗಳನ್ನು ಧರ್ಮಾರ್ಥ ಬಡಬಗ್ಗರಿಗೆ ಹಂಚಿಸಿದರು.

ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜಸುಧಾರಕ ಸಂಘ

ಈ ವರ್ಷದ ಚತುರ್ದಶ ವಾರ್ಷಿಕೋತ್ಸವವನ್ನು ತಾ: ೯-೧-೪೩ನೇ ಶುಕ್ರವಾರ ದಿನ ಜರಗಿಸುವುದಾಗಿ ಈ ಮೂಲಕ ಸಮಾಜಾಭಿಮಾನಿಗಳೆಲ್ಲರಿಗೂ ತಿಳಿಯಪಡಿಸುತ್ತೇವೆ ಎಂದು ಸಂಘದ ಸಕ್ರೆಟರಿ ಬರೆಯುತ್ತಾರೆ.

ಪೆರಡಾಲ

ವಿದಾಯ ಸತ್ಕಾರ

ಇಲ್ಲಿನ ಬೋರ್ಡು ಹಯ್ಯರ್ ಎಲಿಮೆಂಟರಿ ಶಾಳೆಯ ಸಹಾಯೋಪಾಧ್ಯಾಯರಾದ ಶ್ರೀ ಎಸ್. ಕೃಷ್ಣಭಟ್ಟರು ಉದ್ಯೋಗದಿಂದ ನಿವೃತ್ತರಾಗುವ ಸಂದರ್ಭದಲ್ಲಿ ಅವರಿಗೆ, ವಿದಾಯ ಸತ್ಕಾರವನ್ನೀಯಲು ಒಂದು ಸಭೆಯನ್ನು ಕಳೆದ ಆದಿತ್ಯವಾರ ಸಂಜೆ ಶಾಲಾ ವಠಾರದಲ್ಲಿ, ಇಲ್ಲಿನ 'ಪ್ರೇಮಕೂಟ'ದವರೂ, ಸಹ ಉಪಾಧ್ಯಾಯರೂ, ವಿದ್ಯಾರ್ಥಿಗಳೂ ಕೂಡಿ ಏರ್ಪಡಿಸಿದರು. ಸಂಸ್ಕೃತ ಕಾಲೇಜಿನ ಅಧ್ಯಾಪಕ ಶ್ರೀ. ಎಸ್. ವೆಂಕಪ್ಪ ಶರ್ಮರು ಆ ದಿನದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಕೃಷ್ಣಭಟ್ಟರಿಗೆ ಒಂದು ಬೆಳ್ಳಿಯ ಹರಿವಾಣವನ್ನು ಅರ್ಪಿಸಲಾಯಿತು. ಶ್ರೀ ಕೃಷ್ಣಭಟ್ಟರ ಗುಣಕಥನಮಾಡಿ, ಉಪಾಧ್ಯಾಯರು, ಊರ ಮಹನೀಯರೂ ಹಲವರು ಭಾಷಣಮಾಡಿದರು. ಶ್ರೀಯುತರು ಅದಕ್ಕೆ ಉತ್ತರವಿತ್ತರು. ಸಭಾಂತ್ಯದಲ್ಲಿ ಶ್ರೀ. ಶೇಣಿ ಗೋಪಾಲಕೃಷ್ಣ ಭಟ್ಟರಿಂದ ಹರಿಕಥೆಯಿತ್ತು. ರಾತ್ರಿ ಯಕ್ಷಗಾನವೂ ನಡೆಯಿತು.



ದಮ್ಮು ಒಮ್ಮಿಗಲೇ ಗುಣವಾಗಬೇಕೆಂಬ ಆಶೆಯಿಂದ ಕೆಲವು ಉಷ್ಣವಾದ ಔಷಧಗಳು ತಕ್ಕೊಳ್ಳುತ್ತಾರೆ. ಅದರಿಂದ ತಾತ್ಕಾಲಿಕ್ಕೆ ಗುಣ ಕಂಡು ಬಂದರೂ ಮುಂದೆ ಅದರ ಪರಿಣಾಮ ಬಹಳ ಕೆಡುಕು ಆಗುತ್ತದೆ. "ಪುರೋಹಿತ ಶ್ವಾಸಹಾರಿ"ಯು 'ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿನೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೇ ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವದು. ಶೌಚದತೊಂದರೆ ಉಳಿಯುವದಲ್ಲ. ಪಚನ ಕ್ರಿಯೆ ನೆಟ್ಟಗಾಗುವದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸ ಗಟ್ಟಿಯಾಗಿ ದಮ್ಮು ಹೆಸರುಳಿಯದೆ ಗುಣವಾಗುವದು.

ರೂ. ೨-೮-೦. ರೂ. ೪-೨-೦. ರೂ. ೭-೦-೦ಗಳಿಗೆ ಸಣ್ಣ ದೊಡ್ಡ ಬಾಟ್ಲಿಗಳು ಎಲ್ಲಾ ಕಡೆಯಲ್ಲಿ ಸಿಗುತ್ತವೆ.

ಪತ್ತೆ:—ಡಾ. ಪುರೋಹಿತ ಫಾರ್ಮಸಿ, ಕೊಲ್ಹಾಪುರ
ಬೊಂಬೈ ಏಜಂಟ—ಮೆಸರ್ಸ ವನಮಾಲಿ ಭಿಖಾ ಮತ್ತು ಕಂಪನಿ. ಪ್ರಿನ್ಸೆಸ ಸ್ಟ್ರೀಟ ಬೊಂಬೈ.



ಪುರೋಹಿತ ಶ್ವಾಸಹಾರಿ

ಸಿನೆಮಾ ಸುದ್ದಿ

ಜ್ಯೋತಿ ಪ್ರಕಾಶನ ಆತ್ಮಹತ್ಯೆ!

ಈಚೆಗೆ ಬಂಗಾಳದ ಪ್ರಸಿದ್ಧ ಸಿನೆಮಾ ನಟ ಜ್ಯೋತಿ ಪ್ರಕಾಶನ ಸುದ್ದಿ ಬರುತಲೇ ಇತ್ತು. ಮೊದಲನೆಯ ಹೆಂಡತಿಯಿದ್ದರೂ ಶೈಲಾ ಹೆಲ್ದಾರ್ ಎಂಬ ಮುಸಲ್ಮಾನಯುವತಿಯನ್ನು ಇತ್ತೀಚೆಗೆ ಮದುವೆಯಾಗಿ, ಸಮಾಜದಲ್ಲಿ ಕೋಲಾಹಲ ವೆಬ್ಬಿಸಿದವನು ಜ್ಯೋತಿಪ್ರಕಾಶನು. ಇವನು ಕಳೆದ ಬುಧವಾರ ಆತ್ಮಹತ್ಯೆ ಮಾಡಿಕೊಂಡು ಮೃತಿ ಹೊಂದಿದನೆಂಬ ವಿಷಾದಕರ ವಾರ್ತೆಯೀಗ ಬಂದಿದೆ. ಜ್ಯೋತಿಪ್ರಕಾಶನಿಗೆ ಹೆಂಡತಿ ಮಕ್ಕಳಿದ್ದಾರೆ.

ಜ್ಯೋತಿಪ್ರಕಾಶನು ಭಾವನಾಜೀವಿ. ಅನಾಥನಾಗಿ ಬೆಳೆದನು. ಬಾಲ್ಯದಲ್ಲಿಯೇ ತಂದೆತಾಯಿಗಳನ್ನು ಕಳೆಕೊಂಡು ಚಿಕ್ಕಪ್ಪನು ಇವನನ್ನು ಸಾಕಿದನು. ವಿದ್ಯಾಭ್ಯಾಸ ಮುಗಿದಬಳಿಕ ವಿಮಾನಖಾತೆಗೆ ಸೇರಿದನು. ಅಲ್ಲಿ ನಿರಾಶೆಗೊಂಡು ಚಲಚ್ಚಿತ್ರ ಲೋಕಕ್ಕೆ ಕಾಲಿಟ್ಟನು. ಅಲ್ಲಿ ದೇವಕೀ ಬೋಸರ ಸಹಾಯಕನಾಗಿ ಕೆಲಸಮಾಡಿದನು. ಮೊದಲು 'ಪರಾಜಯ' ಚಿತ್ರದಲ್ಲಿ ಕೆಲಸಮಾಡಿದನು. 'ಡಾಕ್ಟರ್' ಚಿತ್ರದಲ್ಲಿ ಈತನ ಕೀರ್ತಿ ಹೆಚ್ಚಿತು. ಈ ಚಿತ್ರದಲ್ಲಿ ಪ್ರಾಣನಾಥನ ಪಾತ್ರ ವಹಿಸಿ ಜನರ ಮೆಚ್ಚುಗೆಗೆ ಪಾತ್ರನಾದನು. ಬಳಿಕ 'ರಾಜನರ್ತಕಿ'ಯಲ್ಲಿ ಅಭಿನಯಿಸಿದನು. 'ಚಾರಂಘಿ' ಮತ್ತು 'ಮೀನಾಕ್ಷಿ' ಚಿತ್ರಗಳಲ್ಲಿಯೂ ಈತನು ನಟಿಸಿದ್ದಾನೆ. ಇವನ ಪೂರ್ಣ ಹೆಸರು ಜ್ಯೋತಿ ಪ್ರಕಾಶ ಭಟ್ಟಾಚಾರ್‌ಜಿ ಎಂದು.

'ಪೈಗೆನ್'

ಎಂಬುದು ಸಾಧನಾ ಬೋಸಳು ಈಗ ನಟಿಸುತ್ತಿರುವ ಸಿನೆಮಾ. ಅಮರ ಪ್ರೊಡಕ್ಷನ್ಸ್‌ನವರ ಸಾಮಾಜಿಕ ಕೃತಿಯಿದು. 'ರಾಜನರ್ತಕಿ'ಯ ರಾಜನಟಿಯ ನರ್ತನವನ್ನು ಇದರಲ್ಲಿ ಇನ್ನೊಮ್ಮೆ ನೋಡಬೇಕು.

ಮಜಾರ್ ಕೃತಿಗಳು

ನಿರ್ದೇಶಕ ಮಜಾರ್‌ಖಾನನು 'ಯಾದ್' ಚಿತ್ರವನ್ನು ಪೂರ್ಣಗೊಳಿಸುವುದರಲ್ಲಿದ್ದಾನೆ. ಇದರಲ್ಲಿ ಮಜಾರ್, ವೀಣಾ, ಅಜೂರಿ, ಸತೀಶ್ ಶಾಜಾದಿ, ಇಂದಿರಾದೇವಿ ಇವರೇ ಮೊದಲಾದವರು ನಟವರ್ಗ. ಮಜಾರ್ ಇದರಲ್ಲಿ ಒಬ್ಬ ಕಬ್ಬಿಣದ ಕೆಲಸಗಾರನ ಪಾತ್ರ ವಹಿಸಿರುವನು. ಆತನ ಮುಂದಿನ ಚಿತ್ರ 'ದುನಿಯಾ ನ ಮಾನೆ' ಎಂಬುದು. ಇದು ಹಿಂದುಸ್ಥಾನಿ ಮತ್ತು ತೆಲುಗು ಉಭಯ ಭಾಷೆಗಳಲ್ಲಿ ತಯಾರಾಗುತ್ತದೆ. 'ದುನಿಯಾ ನ ಮಾನೆ' ಖ್ಯಾತಿಯ ಮುನ್ಶಿ ಅಜೀಜರು ಇದರ ಕಥೆ ಸಂಭಾಷಣೆ, ಹಾಡುಗಳ ಲೇಖಕರು. ಏಶಿಯಾಟಿಕ್ ಪಿಕ್ಚರ್ಸ್ ಎಂಬುದು ಮಜಾರ್‌ಖಾನ್ ಸಂಸ್ಥೆಯ ಹೆಸರು.

ಬಂಗಾಳದಲ್ಲಿ ಅಕ್ಕಿಗೆ ಅಭಾವ

ಹಿಂದೀ ಸರಕಾರಕ್ಕೆ ಮೊರೆ

ಕಲ್ಕತ್ತದ ಬ್ರಿಟಿಷ್ ಇಂಡಿಯನ್ ಎಸೋಸಿಯೇಶನ್ನಿನವರು ಹಿಂದೀ ಸರಕಾರದ ವಾಣಿಜ್ಯ ಇಲಾಖೆಗೆ ಒಂದು ಮನವಿಯನ್ನು ಕಳುಹಿಸಿದ್ದಾರೆ. ಅದರಲ್ಲಿ ಅಕ್ಕಿಗೆ ಬೆಲೆಯು ಬಹಳವಾಗಿ ಏರುವುದರಿಂದ ಬಂಗಾಳಕ್ಕೆ ಬಂದ ವಿಪತ್ತನ್ನು ವಿವರಿಸಿ ಬಂಗಾಳದಲ್ಲಿ ಕ್ಷಾಮವು ತಲೆದೋರುವ ಭೀತಿಯಿದೆಯೆಂದು ಸೂಚಿಸಿದ್ದಾರೆ. ಈಗಿನ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವನ್ನು ಸೂಚಿಸಿ, ಪ್ರತಿ ತಿಂಗಳಿಗೆ ಕನಿಷ್ಠ ಪಕ್ಷ ೩೦,೦೦೦ ಟನ್ನು ಅಕ್ಕಿಯನ್ನು ಸಿಂಹಳಕ್ಕೆ ಕಳುಹಿಸುವುದಾಗಿ ಒಪ್ಪಿಕೊಂಡ ಬಗ್ಗೆ ಹಿಂದೀ ಸರಕಾರದ ವರ್ತನೆಯನ್ನು ಬಲವಾಗಿ ಟೀಕಿಸಿರುವರು. ಅಲ್ಲದೆ ಪಶ್ಚಿಮ ಕರಾವಳಿಗೆ ಹೆಚ್ಚು ಅಕ್ಕಿಯನ್ನು ಕಳುಹಿಸಲಾಗುತ್ತಿದೆಯೆಂದೂ ಈ ರೀತಿ ಮಾಡುವುದರಿಂದ ಬಂಗಾಳದಲ್ಲಿ ಅಕ್ಕಿಯ ಸರಬರಾಯಿ ಕಡಿಮೆಯಾಗಿ ಜನರಿಗೆ ಕಷ್ಟವಾಗುವುದೆಂದೂ ಸೂಚಿಸಿರುವರು. ಬಂಗಾಳ ಸರಕಾರದವರು ಧಾರಾಳವಾಗಿ ಸಂಗ್ರಹಿಸಿಟ್ಟಿರುವ ಅಕ್ಕಿ ಮತ್ತು ಧಾನ್ಯಾದಿಗಳನ್ನು ಬೇರೆಡೆಗಳಿಗೆ ಕಳುಹಿಸಲು ಮಾಡಿದ ನಿರ್ಧಾರವನ್ನು ಖಂಡಿಸಿ, ಸರಕಾರದ ಈ ನೀತಿಯು ವಿದೇಶೀಯರನ್ನು ಸಾಕಿ ತಮ್ಮ ಜನರನ್ನು ಉಪವಾಸ ಬೀಳುವಂತೆ ಮಾಡುವುದು ಎಂದು ಹೇಳಿರುವರು.

ನಿಜವೇ, ಡಾಕ್ಟರೇ?

"ಲಿಂಗನಗೌಡರು ಹೇಳಿದರು, ನಿಮ್ಮ ತಮ್ಮನು ಪುಂಡರಿಂದ ಪೆಟ್ಟುತಿಂದನೆಂದು. ಇದು ನಿಜವೇ?

"ಹೌದು, ಬ್ಯಾರಿಸ್ಟರಸಾಹೇಬ. ಅವನಿಗೆ ಬಹಳ ನೋವಾಗಿದೆ. ಪುಂಡರು ಅವನ ಔಷಧದ ಸಂಗ್ರಹವನ್ನೆಲ್ಲ ಹಾಳುಮಾಡಿ ಲೂಟಿ ಮಾಡಿದ್ದಾರೆ. ಕೆಲವು ಔಷಧಿಗಳು ಇನ್ನು ಸಿಕ್ಕುವುದೇ ಇಲ್ಲ."

"ಹಾಗೇಕೆ! ಅವರೇನೂ ಐ.ಎಂ.ಎಸ್. ಡಾಕ್ಟರಾಗಲಿ, ಸರ್ಕಾರಿ ಕೆಲಸದಲ್ಲಾಗಲಿ ಇರಲಿಲ್ಲವಷ್ಟೇ!"

"ಎಲ್ಲಿಯ ಸರ್ಕಾರಿಕೆಲಸ? ಅವನು ಖಾಸಗೀ ಪ್ರ್ಯಾಕ್ಟೀಸು ನಡೆಸಿದ್ದ—ನಾಲ್ಕಾರು ಶ್ರೀಮಂತಜನರು ಮಾತ್ರ ಹೆಚ್ಚು ಫೀ ಕೊಡಬಹುದಾದಂಥ ಬಡವಸತಿಯಲ್ಲಿ. ಮತ್ತು ನನ್ನ ತಮ್ಮ ಕಟ್ಟಾ ಕಾಂಗ್ರೆಸಿಗನಿದ್ದ."

"ಇದರಿಂದ ಯಾರಿಗೆ ಏನು ಹಿತವಾಗುವುದೋ—ಕಾಣೆ. ಇದರಿಂದ ಪುಂಡರಿಗೆ ಏನು ಸಿಗುತ್ತದೋ—ದೇವರೇ ಬಲ್ಲ."

"ಮತ್ತೇನೂ ಇಲ್ಲ. ಅದು ಸರ್ವ ಸಂಹಾರದ ದುಷ್ಟ ಲಾಲಸೆಯಾಗಿದೆ. ಮನೋವಿಜ್ಞಾನಿಗಳು ಅದಕ್ಕಿಟ್ಟ ಹೆಸರು—'ಅಧಿಕಾರದ ಅಭಿಲಾಷೆ!"

"ಇದು ಭಯಂಕರವಾಗಿದೆ. ನಾನು ಇನ್ನೂ ಒಂದು ಸುದ್ದಿ ಕೇಳಿದ್ದೇನೆ, ಡಾಕ್ಟರೇ! ಈ ಪುಂಡ ಹೆಗ್ಗಣಗಳು ಕಾಲೇಜಿನ ಪ್ರಯೋಗಶಾಲೆಯನ್ನು ನುಗ್ಗಿ ಧ್ವಂಸಗೊಳಿಸಿವೆಯಂತೆ, ಮತ್ತು ಬಾಲಿಕೆಯರ ಪಾಠಶಾಲೆಯಮೇಲೆ ದಾಳಿಮಾಡಿವೆಯಂತೆ."

"ಇದಕ್ಕೂ ಮುಂದೆ ಹೋಗಿದ್ದಾರೆ, ಬ್ಯಾರಿಸ್ಟರ ಸಾಹೇಬ! ಆ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ. ಆದರೆ ಈ ತಲೆಹೊಯ್ಕ ಕೇಡಿತನವನ್ನು ನಿಲ್ಲಿಸುವ ಉಪಾಯವೇನೂ ಇಲ್ಲವೇ? ನೀವು ಕಾಯದೆ ಪಂಡಿತರು; ದಯವಿಟ್ಟು ಹೇಳಿ!"

"ಇದು ನೋಡಿ! ನಾವು ವಕೀಲರ ಸಂಘದ ಸಭೆಯನ್ನು ನಿನ್ನೆ ಕರೆದಿದ್ದೆವು. ಒಂದು ನಿರ್ಣಯವನ್ನು ಪಾಸುಮಾಡುವವರಿದ್ದೇವೆ—ಒಳ್ಳೇ ತೀವ್ರ ಭಾಷೆಯಲ್ಲಿ. ಅದರಲ್ಲಿ ದೇಶದೊಳಗಿನ ವಕೀಲರೆಲ್ಲಾ ಸ್ಥಳೀಯ ಕಾವಲುಕೂಟಗಳನ್ನೂ, ಗಸ್ತಿದಳಗಳನ್ನೂ ಏರ್ಪಡಿಸಬೇಕೆಂದು ಕೇಳಿಕೊಳ್ಳುವವರಿದ್ದೇವೆ. ಬರಿ ಸರ್ಕಾರದಕ್ಕಿಂತಲೂ ಪುಂಡರ ಪಾರುಪತ್ಯವನ್ನು ನಾವು ಬಲುಬೇಗ ಮಾಡಬಲ್ಲೆವು."

ಪುಂಡರನ್ನು ಪ್ರತಿಭಟಿಸಿರಿ!

CPU.60.KN.

ದನ ಮನುಷ್ಯರಂತೆ ಮಾತನಾಡಿತು!

ಒಂದು ದನವು ಮನುಷ್ಯರಂತೆ ಮಾತನಾಡಿದ ವಿಚಿತ್ರ ಪ್ರಸಂಗದ ವಿಚಾರವಾಗಿ ಮೈಸೂರಿನ ಸಾಧ್ವಿ ಪತ್ರಿಕೆಯ ತಾ. ೧೩ರ ಸಂಚಿಕೆಯಲ್ಲಿ ಈ ರೀತಿ ವರದಿ ಬಂದಿದೆ. 'ಕೃಷ್ಣರಾಜಸಾಗರಕ್ಕೆ ೧೦ ಮೈಲಿ ದೂರದಲ್ಲಿರುವ ಒಂದು ಹಳ್ಳಿಯಲ್ಲಿ ಕೆಳಕಂಡ ವಿಚಿತ್ರ ಪ್ರಸಂಗವೊಂದು ಈಗ ೪-೫ ದಿವಸಗಳ ಹಿಂದೆ ನಡೆಯಿತು:

ಒಂದು ದಿನ ತಿಮ್ಮಯ್ಯ ಎಂಬ ಒಬ್ಬ ರೈತನು ತನ್ನ ಹೊಲವನ್ನು ಉಳುವುದಕ್ಕಾಗಿ ಒಂದು ದನವನ್ನು ನೇಗಲಿಗೆ ಕಟ್ಟಿ ಹೊಲಕ್ಕೆ ಹೋಗಿ ಅಲ್ಲಿ ದನವನ್ನೂ ನೇಗಿಲನ್ನೂ ಬಿಟ್ಟು ನೀರು ಕುಡಿಯಲು ಹೋದನು. ಆ ಸಮಯದಲ್ಲಿ ಹೊಲದಲ್ಲಿ ಯಾರೂ ಇರಲಿಲ್ಲ. ಆಗ ಈ ರೈತನನ್ನು ಯಾರೋ ಕೂಗಿದಂತಾಗಿ ಅವನು ಹಿಂದಿರುಗಿ ಬಂದು ನೋಡುವಲ್ಲಿ ಅಲ್ಲಿ ಯಾರೂ ಇರಲಿಲ್ಲ. ಅವನು ನೇಗಿಲಿಗೆ ಕಟ್ಟಿದ್ದ ದನವು ಮಾತನಾಡುತ್ತಾ 'ನಾನೇ ನಿನ್ನನ್ನು ಕರೆದೆ'ನೆಂದು ಹೇಳಿ ೫ ರೂಪಾಯಿಯನ್ನೂ ಮತ್ತು ಒಂದು ದೊಡ್ಡ ಬಿಂದಿಗೆಯನ್ನೂ ತರಲು ಹೇಳಿ ಕಳುಹಿಸಿತು. ರೈತನು ಈ ದನವು ಮಾತನಾಡಿದ ಆಶ್ಚರ್ಯ ಪ್ರಸಂಗವನ್ನು ಕಂಡು ಮನೆಗೆ ಹೋಗಿ ೫ ರೂ. ಮತ್ತು ಒಂದು ಬಿಂದಿಗೆಯನ್ನು ತೆಗೆದುಕೊಂಡು ಸಂಗತಿಯನ್ನು ಊರಿನ ಇತರರಿಗೆ ತಿಳಿಸಿ ಕೆಲವರನ್ನು ಸಂಗಡ ಕರೆದುಕೊಂಡು ಹೊಲಕ್ಕೆ ಬಂದನು. ಆಗ ದನವು ೫ ರೂಪಾಯಿಯನ್ನು ಬಿಂದಿಗೆಗೆ ಹಾಕುವಂತೆ ಹೇಳಿತು. ರೈತನು ನಾಲ್ಕು ರೂಪಾಯಿಯನ್ನು ಮಾತ್ರ ಹಾಕಿ ಇನ್ನೊಂದು ರೂಪಾಯಿಯನ್ನು ತನ್ನಲ್ಲಿಯೇ ಇಟ್ಟುಕೊಂಡನು. ದನವು ಇದನ್ನು ತಿಳಿದು ಆ ಒಂದು ರೂಪಾಯನ್ನೂ ಅದರಲ್ಲಿ ಹಾಕಬೇಕೆಂದು ಹೇಳಲು ಅವನು ಹಾಗೆಯೇ ಮಾಡಿದನು. ಅನಂತರ ದನವು ಅವನನ್ನು ಹಾಲುಕರೆಯಲು ಹೇಳಿತು. ಅವನು ಹಾಲನ್ನು ಕರೆಯಲು ಆ ದನವು ಎಂದಿಗೂ ಇಲ್ಲದ ಆ ದಿನ ಒಂದು ಬಿಂದಿಗೆ ತುಂಬ ಹಾಲು ಕೊಟ್ಟಿತು, ಮತ್ತೆ ದನವು ಹಾಲನ್ನು ಚೆಲ್ಲಲು ರೈತನಿಗೆ ಹೇಳಿತು. ಅವನು ಎಲ್ಲವನ್ನೂ ಚೆಲ್ಲಿದ ಮೇಲೆ ಬಿಂದಿಗೆಯಲ್ಲಿ ಒಂದು ರೂಪಾಯಿ ಮಾತ್ರ ಉಳಿಯಿತು. ಆಗ ದನವು ರೈತನನ್ನು ಕುರಿತು 'ನೀನು ದನವನ್ನು ನೇಗಿಲಿಗೆ ಕಟ್ಟುವಂತಹ ಪಾಪಕೃತ್ಯದಲ್ಲಿ ನಿರತನಾಗಿದ್ದೆಯಾದ ಕಾರಣ ನಿನ್ನ ಆಸ್ತಿಯಲ್ಲಿ ಇದರಲ್ಲಿ ಒಂದು ಪಾಲು ಮಾತ್ರ ನಿನಗೆ ಉಳಿಯುವುದು' ಎಂದು ಹೇಳಿ ತಾನು ಮೃತಪಟ್ಟಿತು. ಈ ಅದ್ಭುತ ಪ್ರಸಂಗವನ್ನು ನೋಡಿದ ಊರಿನ ಜನರೆಲ್ಲರೂ ಆ ಶವದ ಮೆರವಣಿಗೆಯನ್ನು ಊರಿನಲ್ಲೆಲ್ಲಾ ವಾದ್ಯಸಮೇತ ನಡೆಸಿದರು. ದನವನ್ನು ಊರಿನ ಒಂದು ಸ್ಥಾನದಲ್ಲಿ ಸಮಾಧಿ ಮಾಡಿ ಅದರ ಮೇಲೆ ಒಂದು ಬೃಂದಾವನವನ್ನು ಕಟ್ಟಿಸಿದರು.'

ರಾಮಕೃಷ್ಣ ಲೀಲಾ ಪ್ರಸಂಗ

ಅನುವಾದ ಶ್ರೀ ಸ್ವಾಮಿ ಪ್ರಣವೇಶಾನಂದರು

ಶ್ರೀ ಪರಮಹಂಸರ ಅದ್ವೈತಭಾವದ ಗಂಭೀರತೆ

ಶ್ರೀ ಪರಮಹಂಸರ ವೇದಾತ್ಮ ಬುದ್ಧಿ ಶೂನ್ಯತೆ ಅದ್ಭುತವಾದುದು! ಅವರ ಅದ್ವೈತ ಜ್ಞಾನವು ಅಪೂರ್ವವಾದುದು! ಆಗ ಆರು ತಿಂಗಳಾಗ್ಯಾತು ಶ್ರೀ ಪರಮಹಂಸರ ನಿತ್ಯದ ಆಹಾರ ನಾಲ್ಕೈದು ಚಟಾಕು ಬಾರ್ಲಿ ಮಾತ್ರವಾಗಿತ್ತು, ಅಂತಹ ಅವಸ್ಥೆಯಲ್ಲಿ ಜಗನ್ಮಾತೆಯು 'ನೀನು ಎಷ್ಟೋ ಬಾಯಿಗಳಿಂದ ತಿನ್ನುತ್ತಿ ಅಲ್ಲ?' ಎಂದು ಹೇಳಿದ್ದೆ ತಡ, ತಾನು ಒಂದು ದೊಡ್ಡ ಕುಕರ್ಮ ಮಾಡಿದ್ದೇನೆ ಈ ಕ್ಷುದ್ರ ಶರೀರಕ್ಕೆ 'ನಾನು, ಎಂದು ಹೇಳಿದ್ದೇನಲ್ಲ! ಎಂದು ಶ್ರೀ ಪರಮಹಂಸರು ಲಜ್ಜೆಯಿಂದ ಮುಖ ಕೆಳಗೆ ಹಾಕಿ ಬಾಯಿ ಮುಚ್ಚಿದರು ಪಾಠಕರೇ, ಶ್ರೀ ಪರಮಹಂಸರ ಇಂತಹ ಭಾವದ ವಿಷಯವಾಗಿ ನೀವು ಸ್ವಲ್ಪವಾದರೂ ಕಲ್ಪನೆ ಮಾಡಬಲ್ಲಿರಾ?

ಶ್ರೀ ಪರಮಹಂಸರು ಎಲ್ಲ ತರದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು, ಶ್ರೀ ಪರಮಹಂಸರ ಸಂಗವನ್ನು ದೊರೆತು ಅವರ ಅದ್ಭುತ ಕಾರ್ಯಕಲಾಪವನ್ನು ನೋಡಲು ನಮ್ಮ ಭಾಗ್ಯದಲ್ಲಿ ಒದಗಿತ್ತು ಜ್ಞಾನ, ಭಕ್ತಿ, ಯೋಗ, ಕರ್ಮ, ನವ ಪ್ರಾಚೀನ ಎಲ್ಲ ತರದ ಧರ್ಮಭಾವಗಳ ಒಂದು ಅಪೂರ್ವ ಸಮನ್ವಯವು ನಾವು ಅವರಲ್ಲಿ ಪ್ರತ್ಯಕ್ಷವಾಗಿ ಕಂಡಿದ್ದೇವೆ ಯಥಾರ್ಥ ಬ್ರಹ್ಮಜ್ಞಾನಿ ಪುರುಷನು ಸರ್ವಜ್ಞನೂ ಸತ್ಯಸಂಕಲ್ಪನೂ ಆಗುತ್ತಾನೆ ಸಂಕಲ್ಪ ಅಥವಾ ಇಚ್ಛಾಮಾತ್ರದಿಂದಲೇ ಅವರಿಗೆಲ್ಲವೂ ಕೈಗೂಡುವುದು, ಬಾಹ್ಯ ಜಗತ್ತಿನ ಸಕಲ ಪದಾರ್ಥಗಳೂ, ಸಕಲ ಶಕ್ತಿಯೂ ಅವರಿಗನುಗತವಾಗಿ ನಡೆಯುವುವು- ಆದ್ದರಿಂದ ಅಂತಹ ಪುರುಷನ ಸ್ವಂತ ಶರೀರ ಮನಸ್ಸುಗಳು ಹಾಗೆ ಮಾಡುವುದು ವಿಚಿತ್ರವಲ್ಲ. ಉಪನಿಷತ್ತಿನ ಈ ವಾಣಿಯ ಸತ್ಯಾ ಸತ್ಯತೆಯನ್ನು ಪರೀಕ್ಷಿಸಲು ಸಾಮಾನ್ಯ ಮಾನವನಿಂದಾಗದು, ಆದರೆ ಶ್ರೀ ರಾಮಕೃಷ್ಣ ದೇವರ ಪರೀಕ್ಷೆಯನ್ನು ನಮ್ಮ ಕ್ಷುದ್ರ ಶಕ್ತಿಗೆ ಸಾಧ್ಯವಾದಷ್ಟು ನಿರಂತರವೂ ಎಲ್ಲ ವಿಷಯದಲ್ಲೂ ಮಾಡಿದ್ದೇವೆ, ಹಾಗೆ ಮಾಡಲು ನಾವೇನೂ ಕಡಿಮೆಮಾಡಲಿಲ್ಲ ಅಥವಾ ಮಾಡಲು ಹಿಂಜರಿಯಲಿಲ್ಲ ಆದರೆ ಶ್ರೀ ಪರಮಹಂಸರು ಪ್ರತಿಯೊಂದು ಪರೀಕ್ಷೆಯಲ್ಲೂ ಹಾಸ್ಯಮುಖದಿಂದ ಉತ್ತೀರ್ಣರಾಗಿ ವಿನೋದದಿಂದ ನಮಗೆ ಹೀಗನ್ನುತ್ತಿದ್ದರು—ಈಗಲೂ ಅವಿಶ್ವಾಸ! 'ಯಾವಾತನು ರಾಮನಾಗಿದ್ದನೋ, ಆತನೇ ಈಗ (ತನ್ನ ಶರೀರವನ್ನು ತೋರಿಸಿ) ಈ ಪಂಜರದಲ್ಲಿದಾನೆ' ಆದರೆ ಈ ಸಾರೆ ಗುಪ್ತನಾಗಿ ಒಂದಿದ್ದಾನೆ! ಹೇಗೆಂದರೆ ರಾಜನು ಕಪಟರೂಪವನ್ನು ತಾಳಿ ತನ್ನ ರಾಜ್ಯಸಂಚಾರ ಮಾಡಲು ಹೋಗುತ್ತಾನೆ ಮತ್ತು ಯಾರಿಗಾದರೂ ಆತನ ಪರಿಚಯ ಸಿಕ್ಕಿದರೆ, ತಕ್ಷಣವೇ ಅಲ್ಲಿಂದ ಮಾಯವಾಗುತ್ತಾನೆ ಹಾಗೆಯೇ ಎಂದು ತಿಳಿ ವಿಶ್ವಾಸವನ್ನಿಡು'

ಕ್ರಮಶಃ

ಸಂರಕ್ಷಣೆಯೇ ಸುಭದ್ರತೆ

ಇಂದು ಚಿನ್ನವು ಅತ್ಯಧಿಕ ಬೆಲೆಯುಳ್ಳದ್ದಾಗಿರುತ್ತದೆ. ಇಂಥಾ ಸಮಯದಲ್ಲಿ ಚಿನ್ನಾಭರಣಗಳನ್ನು ಮೈಯಲ್ಲಿ ತೊಟ್ಟುಕೊಳ್ಳುವುದೂ ಮನೆಯಲ್ಲಿ ಇಟ್ಟುಕೊಳ್ಳುವುದೂ ತುಂಬಾ ಅಪಾಯಕರವೇ ಸರಿ. ಈ ಅಪಾಯಗಳಿಗೊಳಗಾಗದಂತೆ ಅತೀ ಸ್ವಲ್ಪ ಹಣವನ್ನು ನೀವು ಅದರ ರಕ್ಷಣಾರ್ಥವಾಗಿ ಕೊಟ್ಟಲ್ಲಿ ನಿಮ್ಮ ಚಿನ್ನಾಭರಣಗಳನ್ನು ಬಲವತ್ತರವಾದ ಉಕ್ಕಿನ ಖಜಾನೆ ಪೆಟ್ಟಿಗೆಯಲ್ಲಿ ಇಟ್ಟು ರಾತ್ರಿ ಹಗಲು ಅದನ್ನು ಸುರಕ್ಷಿತವಾಗಿ ಕಾಪಾಡುವ ಏರ್ಪಾಡನ್ನು ನಾವು ಮಾಡುತ್ತೇವೆ ಮಾತ್ರವಲ್ಲ; ಅಗತ್ಯವಿದ್ದಲ್ಲಿ ರಕ್ಷಣೆಯ ಜತೆಯಲ್ಲಿಯೇ ನೀವು ಚಿನ್ನಾಭರಣಗಳ ಈಡಿನ ಮೇಲೆ ಅತೀ ಸುಲಭ ದರದಲ್ಲಿ ಸಾಲಗಳನ್ನು ಪಡೆಯಬಹುದು.

CANARA BANK, LIMITED.

ESTD 1906

COLLECTION OF BILLS

The Corporation has developed a system for the rapid transfer of funds to meet the needs of individuals and firms everywhere The wide system of branches and agencies assure speed and economy in effecting collections

Let us fit this important service to your needs.

The Canara Banking Corporation Ltd.

(Incorporated in British India Liability of members is limited)

Head Office: UDIPI

Estd 1906

ದಿ ಕಂಬೈಂಡ್ ಬುಕ್ಕಿಂಗ್ ಏಜನ್ಸಿ ಮತ್ತು ದಿ ಜೊಂಟ್ ಬುಕ್ಕಿಂಗ್ ಆಫೀಸು

ಮಂಗಳೂರು ಕೊಡಿಯಾಲಬೈಲು

ಪೆಸೆಂಜರರಿಗೆ ಸೂಚನೆ

1 ಈಗಿನ ಟಾಯರು ದೊರಕುವ ನಿರ್ಬಂಧಗಳಿಂದ ಬಸ್ಸಿನಲ್ಲಿ ಸಾಮಾನನ್ನು ಮಿತಿಮೀರಿ ಹೇರಲು ಅಸಾಧ್ಯವಾಗಿರುತ್ತದೆ

2 ಪ್ರತಿಯೊಬ್ಬ ಪೆಸೆಂಜರರು ಒಂದು ಬೆಡ್ಡಿಂಗ್ ಮತ್ತು ಒಂದು ಬೇಗ್ ಹೊರತು ಹೆಚ್ಚಿನ ಸಾಮಾನನ್ನು ತಂದರೆ ಬಸ್ಸಿನಲ್ಲಿ ಹಾಕೋಣಾಗಲಾರದು

3 ಬೆಡ್ಡಿಂಗ್ ಮತ್ತು ಬೇಗ್ ಒಟ್ಟಿಗೆ 28 ರಾತ್ತಿಲ್ನ 2 ಮಣಕ್ಕಿಂತ ಭಾರವಾದರೆ ನಿರಾಕರಿಸಲಾಗುವುವು

4 ಸ್ಟೇಷನು ಬಿಟ್ಟು ಹಾದಿಯಲ್ಲಿ ಹತ್ತುವ ಪೆಸೆಂಜರರು ತಮ್ಮ ಸಾಮಾನನ್ನು ಮುಂಚಿನ ದಿನ ಸಾಯಂಕಾಲ ಬುಕ್ಕಿಂಗ್ ಆಫೀಸಿನಲ್ಲಿ ತೂಕಮಾಡಿಸಿ ಆಫೀಸಿನಿಂದಲೆ ಆ ಸಾಮಾನುಗಳನ್ನು ಹತ್ತಿಸಬೇಕು ಇಲ್ಲವಾದರೆ ಸಾಮಾನನ್ನು ನಿರಾಕರಿಸಲಾಗುವುದು

5 28 ರಾತ್ತಿಗಿಂತ ಭಾರವಾದ ಸಾಮಾನುಗಳಿಗೆ ಕಂಪೆನಿಯ ನಿಯಮಕ್ಕೆ ಅನುಸಾರವಾಗಿ ಚಾರ್ಜು ಮಾಡಲಾಗುವುದು.

6 ಬಸ್ಸು ಹೊರಡುವ ಸಮಯದ ಅರ್ಧ ಘಂಟೆಯ ಮುಂದಾಗಿ ಸಾಮಾನುಗಳನ್ನು ತಂದು ತೂಕ ಮಾಡಿಸದಿದ್ದರೆ ಸಾಮಾನುಗಳನ್ನು ನಿರಾಕರಿಸಲಾಗುವುದು.

ವಿಶೇಷ ಸೂಚನೆ: ಬಸ್ಸು ವ್ಯವಹಾರದ ಈಗಿನ ಕಠಿಣ ಪರಿಸ್ಥಿತಿಯ ಕಾರಣದಿಂದಾಗಿ ಪೆಸೆಂಜರರ ಅನುಕೂಲತೆಯ ಬಗ್ಗೆಯೇ ಮೇಲಿನ ನಿಯಮಗಳನ್ನು ಮಾಡಿರುತ್ತದೆ ಪೆಸೆಂಜರರು ಈ ನಿಯಮಗಳನ್ನು ಅನುಕರಿಸಿ ಬಸ್ಸು ಕಂಪೆನಿಗಳೊಡನೆ ಸಹಕರಿಸಬೇಕಾಗಿ ಪ್ರಾರ್ಥಿಸುತ್ತೇವೆ

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD 1931
HEAD OFFICE — Mangalore
BRANCHES — Moodabidri & Padubidri
The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ಕಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ . ಶಾ ಕಂಪೆನಿಯಲ್ಲಿ ದೊರೆಯುವುದು.

ಸಂಶಯವೇಕೆ?

ಶತ್ರುಗಳು ವಿಮಾನಗಳ ಮೂಲಕ ಧಾಳಿ ನಡೆಸುವುದರಿಂದಲೂ ಮತ್ತು ಇತರ ವಿಧವಾದ ಶತ್ರು ಚಟುವಟಿಕೆಗಳಿಂದಲೂ ಹಿಂದುಸ್ಥಾನದ ಸಿವಿಲ್ ಪ್ರಜೆಗಳಲ್ಲಿ—ಇದರಲ್ಲಿ ಎ. ಆರ್. ಪಿ. ಕೆಲಸಗಾರರೂ ಸೇರುವರು— ಉಂಟಾಗಬಹುದಾದ ಪ್ರಾಣಹಾನಿಗೆ

ದಿ "ಬಾಂಬೆ ಲೈಫ್" ಪಾಲಿಸಿಗಳು

ಸಂಪೂರ್ಣವಾದ ರಕ್ಷಣೆಯನ್ನು ನೀಡುತ್ತವೆ. ಆದ್ದರಿಂದ ನಿಮ್ಮ ಪ್ರೀತಿಪಾತ್ರರಿಗಾಗಿ
ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ (ಲಿಮಿಟೆಡ್)
ಯಲ್ಲಿ ಪಾಲಿಸಿಗಳನ್ನು ಪಡೆಯುವುದು ನಿಮ್ಮ ತ್ವರಿತ ಕರ್ತವ್ಯವಾಗಿದೆ

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಸಂಸ್ಥಾನಗಳಾದಿಯಾಗಿ ದಕ್ಷಿಣ ಭಾರತಕ್ಕೆ ಪ್ರಾಮುಖ್ಯ ಏಜೆಂಟರು:

ಉಡುಪಿ

—: ಅಥವಾ ಈ ಕೆಳಗಿನ ಇತರ ಆಫೀಸುಗಳಿಗೆ ಬರೆಯಿರಿ: —

ಕಲ್ಲಿಕೋಟೆ ಬೆಂಗಳೂರು ಮಂಗಳೂರು
ಮದರಾಸು ತ್ರಿವೇಂಡ್ರಂ ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ಪೇಠಾರ ಗಲ್ಲಿ ಹುಬ್ಬಳ್ಳಿ.
2. 36 ಸ್ಮಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ಸಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited Printed & Published by A. S. Kamath at the Sharada Press, Car-Street, Mangalore.